Regd. No. M. 3618

Estd: 1921 ಸ್ಥಾಪನೆ

30ನೇ ವರ್ಷ
1-6-1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉದುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ 40

NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 40

ಮನುಷ್ಯ-ಮನಸ್ಸಾಕ್ಷಿ!

"ಯಾವುದನ್ನೇ ಆದರೂ ಅಹಿಂಸಾತ್ಮಕವಾಗಿ ಇದಿರಿಸಬಲ್ಲಿರಾದರೆ ಉತ್ತಮ; ಅದು ನಿಮ್ಮಿಂದ ಅಸಾಧ್ಯವೆಂದಾದಲ್ಲಿ ಹಿಂಸಾತ್ಮಕ ಪ್ರತಿಭಟನೆಯನ್ನಾದರೂ ಕೈಗೊಂಡಿರಿ; ಆದರೆ ಹೇಡಿಗಳಾಗಿ ರಣರಂಗದಿಂದ ಓಡಿ ಹೋಗಬೇಡಿ ಮಾತ್ರ ಅಕ್ಷಮ್ಯ ಅಪರಾಧ"—ಎಂಬುದೇ ಮಹಾತ್ಮಾಜೀಯ ಉಪದೇಶವಾಗಿದ್ದಿತು. ಈ ಗಾಂಧೀ ಉಪದೇಶದ ಒರೆಗಲ್ಲನಲ್ಲಿ ಪರೀಕ್ಷಿಸಿ ಯಾವುದೇ ವರ್ತನೆಯ ಉತ್ತಮ-ಮಧ್ಯಮ-ಅಧಮ ದರ್ಜೆಗಳನ್ನು ಗೊತ್ತುಹಚ್ಚಲು ಸಾಧ್ಯವಿದೆ.

ಇಂದು ಕ್ರಾಂತಿಯ ಹೆಸರಿನಿಂದ ಕೇಡಿತನವನ್ನು—ಅಹಿಂಸೆಯ ಹೆಸರಿನಿಂದ ಹೇಡಿತನವನ್ನು—ಸಂಭಾವಿತನದ ಹೆಸರಿನಿಂದ ಸ್ವಾರ್ಥವನ್ನು—ಪ್ರದರ್ಶಿಸುತ್ತಿರುವವರನ್ನು ಕಾಣುತ್ತಿದ್ದೇವೆ. ಸಂಗತಿಯನ್ನು ತಿರುಗಾಮುರುಗಾ ಹಿಡಿದು, ಆ ನೂಲಕ ತುದಿಯನ್ನೇ ಬುಡವೆಂದು ತೋರಿಸುವವರು ಎಲ್ಲೆಲ್ಲೂ ಕಾಣಸಿಗುತ್ತಿದ್ದಾರೆ. ಪ್ರಪಂಚವೀ ರೀತಿ ವಂಚಿಸಲ್ಪಡುತ್ತಿದೆ. ಗಾಂಧಿ ಸೂತ್ರಾನುಸಾರವಾಗಿ ಉತ್ತಮಾಧಮ ತಾರತಮ್ಯವನ್ನರಿತುಕೊಂಡರೆ ವಂಚನೆಗೆಡೆ ದೊರೆಯದು.

ದುಷ್ಟ ಹೃದಯವನ್ನು ಅಥವಾ ದುರ್ಬುದ್ಧಿಯನ್ನು ಶುದ್ಧೀಕರಿಸಿ, ಅದನ್ನು ಉತ್ತಮ ಸಾಧನವನ್ನಾಗಿ ಮಾಡಿಕೊಳ್ಳುವ ಸಾಧ್ಯವಿದ್ದರೆ ಅದು ಸರ್ವ ರೀತಿಯಿಂದಲೂ ಹಿತಕರ; ಹಾಗಲ್ಲವಾದರೆ, ಅಂತಹವನ್ನು ಭೇದಿಸಿ ನಿವಾರಿಸಿಕೊಳ್ಳುವದೊಂದೇ ದ್ವಿತೀಯ ಉತ್ತಮೋಪಾಯ. ಆದರೆ ಇವೆರಡು ವಿಧಾನಗಳನ್ನನುಕರಿಸುವುದೂ ಅಸಾಧ್ಯವಾದ ಜೆಸಿಯಂದ 'ಶುದ್ಧೀಕರಣ'ವನ್ನೆವ ಹೇಳುತ್ತ ದುರ್ಬುದ್ಧಿ ಅಥವಾ ದುಷ್ಟ ಹೃದಯದ ಸಂಬಂಧವಿಟ್ಟುಕೊಂಡಿರುವುದು ನಿಜಕ್ಕೂ ಹೇಯವಾದುದು.

ಅಹಾರ ಸೇವನೆಯಿಂದ ತೃಪ್ತಿಹಟ್ಟುಕೊಂಡಿರಬಹುದು; ಇಲ್ಲವೇ ಹಸಿವು ನಿವಾರಣೆಯಿಂದಿಷ್ಟು ಪೀಡೆಯಿಂದಿಷ್ಟು ಆಹಾರ ನಿರೀಕ್ಷೆಯಲ್ಲಿರಬಹುದು. ಆದರೆ ಹಸಿವು ನಿವಾರಣೆಗೆಂದು ವಿಷ ವಸ್ತುಗಳನ್ನು ಹೊಟ್ಟೆಯೊಳಗೆ ತುಂಬಿಸಿಕೊಳ್ಳುವುದು ಅಪಾಯಕರ.

ಒಡೆಯನಾಗಿದ್ದು ದುಡಿಯಿಸಬಹುದು; ಇಲ್ಲವೇ ಆಳಾಗಿದ್ದು ದುಡಿಯಬಹುದು. ಆದರೆ ವಸ್ತುಃ ಆಳಾಗಿದ್ದು ವರ್ತನೆ, ಭಾವನೆಗಳಲ್ಲಿ ಅರಸನ ತೀವಿ ಮಾತ್ರವಿದ್ದರೆ, ಅದು ಕೃತಕ ಸ್ಥಿತಿಯೆಂತೂ ಹೌದು; ಇನ್ನು ಮೇಲಾದರೂ ಸುಧಾರಣೆಗೊಳ್ಳುವ ಸಂದರ್ಭ ಕೂಡಾ ಇರದ ಶಾಶ್ವತ ದುಸ್ಥಿತಿಯೇ ಅದು.

ಒಂದೋ ಶುದ್ಧ ಸನ್ಯಾಸಿ ಅಥವಾ ಬ್ರಹ್ಮಚಾರಿಯಿರಬೇಕು; ಇಲ್ಲವಾದರೆ ಸಂಸಾರಿ ಅಥವಾ ಗೃಹಸ್ಥನಿರಬೇಕು. ಆದರೆ ಬ್ರಹ್ಮಚಾರಿಯ ಸ್ಥಿತಿಯೆಲ್ಲಿದ್ದು, ಸಂಸಾರಿಯ ವಿಲಾಸಗಳನ್ನು ಅನುಭವಿಸುವದು ಅತ್ಯದ್ಭೂತ; ಸ್ವಪರ ವಂಚನೆ.

ಒಂದು ಹಕ್ಕನ್ನು ಸೇರಿಕೊಂಡಿದ್ದು ಆದರೆ ಕೈನು ನಿಯಮ, ಶಿಸ್ತುಗನುಗುಣವಾಗಿ ವರ್ತಿಸುವ ಉಚಿತ ವರ್ತನೆಯಿಲ್ಲ; ಅಲ್ಲವಾದರೆ ವಿರುದ್ಧ ಪಕ್ಷೀಯನಾಗಿದ್ದು ಖಂಡನೆ, ಪ್ರತಿಭಟನೆ ಹೂಡುವ ಸ್ವಾಭಾವಿಕ ಆಚರಣೆಯೂ ಇದೆ. ಆದರೆ ತಾನು ಪಕ್ಷದೊಳಗಿದ್ದುಕೊಂಡೇ, ಅದರ ವಿರೋಧವಾಗಿ ಟೀಕೆ, ನಿಂದೆ ನಡೆಸುವುದು ಖಂಡನೀಯ ತ್ರಿಶಂಕು ಸ್ಥಾನ.

ಒಂದು ವಿಷಯ ಅಥವಾ ಸುದ್ದಿಯನ್ನು ಸ್ವಪ್ನವಾಗಿ ತಿಳಿದುಕೊಂಡು, ಇನ್ನೊಬ್ಬರಿಗದನ್ನು ತಿಳಿಸುವ ಸ್ಥಿತಿಯಲ್ಲಿ ಇರಬೇಕು; ಹಾಗಿಲ್ಲವಾದರೆ ಅಂತಹ ಜ್ಞಾನ ಬರುವ ವರೆಗೆ ಅದರ ಗೊಡವೆಯನ್ನೇ ಸರ್ವತಿ ಬಿಟ್ಟಿರಬೇಕು; ಆದರೆ ಯಾವುದನ್ನೇ ಆದರೂ ಅರ್ಧಮರ್ಧ ಅರಿತುಕೊಂಡು ಅಸ್ವಸ್ಥ ವಾರ್ತೆ, ಅರ್ಧ ಮನಸ್ಸಿನ ಅಭಿಪ್ರಾಯ ಕೊಡುವದು ತಪ್ಪು.

ಅಶೆಯನ್ನು ಸಂಪೂರ್ಣವಾಗಿ ದಮನಮಾಡಿಕೊಂಡು ನಿರಾಸಕ್ತನಾಗಿರಲು ಸಾಧ್ಯವಿದ್ದರೆ ಉತ್ತಮ; ಅದಲ್ಲವಾದರೆ ಆಶಾಸಿದ್ಧಿಗಾಗಿ ಶಕ್ತ್ಯಾನುಸಾರ ಪ್ರಯತ್ನಿಸಿ, ಸಿದ್ಧಿಸಿದಷ್ಟರಿಂದ ತೃಪ್ತಿಯಿಂದಿರುವುದು ಲೇಸು. ಆದರೆ ಆಶೆಯನ್ನು ಬಿಡಲೊಲ್ಲದೆ, ಆದಕ್ಕಾಗಿ ಪ್ರಯತ್ನಿಸುವುದೂ ಅಸಾಧ್ಯವಾಗಿ ಬಯಲಾಸೆಯ ಧ್ರಾಂತಿ ಅಥವಾ ನಿರಾಶೆಯ ವೇದನೆಯನ್ನನುಭವಿಸುತ್ತಿರುವುದು ರೋಚನೀಯ ಸ್ಥಿತಿ.

ಪ್ರಪಂಚವು ಅಗಾಧವಾದುದು; ಪ್ರಾಪಂಚಿಕ ಆಗು ಹೋಗುಗಳು ಅಪಾರವಿವೆ. ಅಳತ್ತು ಎಲ್ಲೆಯನ್ನರಿಯಲಾಗದ ಈ ಲೋಕದಲ್ಲಿ ಮಾನವ-ಮಾನವನೊಳಗಿನ ತಾರತಮ್ಯವೆಂಬುದು ಅಗಣ್ಯ. ಅತ್ಯಿತ್ತರದಲ್ಲಿ ಹುಂಬಾಡುವವನಿಗೆ ಕಳಗಡೆಯ ಮನೆ ಮಾಡುಗಳ ಏರು ತಗ್ಗು ವ್ಯತ್ಯಾಸ ತಿಳಿದು ಬಾರದಿರುವಂತೆ, ಅಪಾರ ಪ್ರಾಪಂಚಿಕ ಜ್ಞಾನದೃಷ್ಟಿಯಿಂದ ನೋಡುವವನಿಗೆ ಮನುಷ್ಯ- ಮನುಷ್ಯರೊಳಗಿನ ದೊಡ್ಡಸ್ತಿಕೆ-ಬಡತನಗಳ ತಾರತಮ್ಯವು ಅಗಣ್ಯವನ್ನಿಸೀತು. ವಿಸ್ತಾರವಾದ ಲೋಕ ಚಿಂತ್ಯೆಯುತ್ತುಅಗಾಧ ಪ್ರಪಂಚ ಸಮುದ್ರದಲ್ಲಿ ವ್ಯಕ್ತಿಯ ಮಹಾತ್ಮೆ ಎಷ್ಟೇ ದೊಡ್ಡದಿದ್ದರೂ, ಅದು ಆ ಕಾಲದ ಒಂದು ಅಲೆಯಾಗಿ ಎದ್ದು ಬಿದ್ದು ಹೋದೀತು ಹೊರತು ಶಾಶ್ವತವನ್ನಿಸದು; ಅಲ್ಪ ಜೀರತು ಆ ಕಂಡಿಯ ಬಿಂದುಗಳು ಮಾತ್ರ.

ಅಂತೂ ಹೇಗಿದ್ದರೂ, ಎಂತಹ ಸಂದರ್ಭದಲ್ಲಾದರೂ ಪ್ರಪಂಚವಿದಿರು ಹೆಮ್ಮೆ, ಹೆಗ್ಗಳಿಕೆ ಪ್ರದರ್ಶಿಸುವ ಯೋಗ್ಯತೆ ಮನುಷ್ಯನಿಗಿಲ್ಲ; ಅಂದಮೇಲೆ ಪ್ರಪಂಚವನ್ನು ಒಲಿಸುವ ಅಥವಾ ಅದನ್ನು ತನ್ನೆದನ್ನಾಗಿ ಮಾಡಿಕೊಳ್ಳುವ ಹೊಸ ನೋಟವೂ ಅತನಿಗೆ ಸಲ್ಲದು. ಮನುಷ್ಯನು ನೋಡಬೇಕಾದುದು ಮನಸ್ಸಾಕ್ಷಿಯೊಂದನ್ನೇ—ಅದಕ್ಕೆ ವಿರೋಧವಾಗಿ ಆಚರಿಸದಿದ್ದರಾಯಿತು; ಅತ್ಮ ವಂಚನೆ ಮಾಡಿಕೊಳ್ಳದಿದ್ದರಾಯಿತು. ಸತ್ಯ, ಅಹಿಂಸೆ, ನ್ಯಾಯದ ಮೂಲಕ ಗಾಂಧೀಜೀ ಜನತೆಯಲ್ಲಿ ತುಂಬಿಸಲು ಇಚ್ಛಿಸಿದ್ದ ಆತ್ಮ ಬಲವೆಂದರೆ ಇದೇ. ಯಾವುದೇ ಸಂದರ್ಭ ಅಥವಾ ಯಾವುದೇ ಸಂಗತಿಯಲ್ಲಾದರೂ ಆತ್ಮ ವಂಚಕ ಹೇಡಿಗ ಆಗಬಾರದೆಂಬುದೊಂದೇ.

ಆದರೆ, ಅಂತಹ ಹೇಡಿತನವೇ ಸ್ವತಃ ನಮ್ಮಲ್ಲಿ ನುಳ್ಳು ನಮ್ಮ ಕಣ್ಣಿದಿರಲ್ಲಿ ಕಂಡುಬರುತ್ತಿಲ್ಲವೆ? ನಾವು ನಮ್ಮ ಮನಸ್ಸಾಕ್ಷಿಗನುಗುಣವಾಗಿ ಭಾವನೆ, ಧೋರಣೆ, ಆಚರಣೆಗಳನ್ನು ರೂಪಿಸಿಕೊಳ್ಳುತ್ತಿರುವ ಸಂದರ್ಭಗಳು ಅಧಿಕವೋ-ಸ್ವತಃ ನಮ್ಮ ಸ್ವಾರ್ಥ ಅಥವಾ ಭವಿಷ್ಯದತ್ತ, ಇಲ್ಲವೇ ಅಸುವಾಸಿನರ ಕಡೆಗೆ ನೋಡಿಯೇ ಹಾಗೆ ಮಾಡುತ್ತಿರುವ ಸಂದರ್ಭಗಳೇ ಹೆಚ್ಚಿಗೆಯೋ? ಈ ಮಟ್ಟಿಗೂ ಮನಸ್ಸಾಕ್ಷಿಯನ್ನೇ ವಿಚಾರಿಸಿಕೊಂಡರಾಯಿತು.

ರಾಜಕೀಯದಿಂದಾರಂಭಿಸಿ, ನಿತ್ಯ ಜೀವನದ ವರೆಗಿನ ಪ್ರತಿಯೊಂದು ಆಗು ಹೋಗುಗಳಲ್ಲೂ ಆತ್ಮವಂಚಕ ಧೋರಣೆಗಳು ಈ ಕಾಲದಲ್ಲಿ ಬೇಕಾದಷ್ಟು ಕಂಡು ಬರುತ್ತಿವೆ. ನಿದರ್ಶನಕ್ಕಾಗಿ:-

ಇಂದಿನ ಸರಕಾರೀ ನಾಯಕರು, ತಾವೈಮಾಡುವುದೆಲ್ಲವೂ ಕೇವಲ ಬಡಜನರ ಉದ್ಧಾರಕ್ಕಾಗಿ-ಎಂದು ಆಗಿಂದಾಗ ಘೋಟಾಘೋಷವಾಗಿ ಸಾರುತ್ತಿರುವುದು ಅವರ ಮನಸ್ಸಾಕ್ಷಿಗನುಗುಣವಾಗಿಯೋ? ಅಥವಾ ಅದನ್ನು ಸಂದರ್ಭವರ್ತಾ ಮರೆತು ಬಿಟ್ಟು ಜನತೆಯ ಒಲವನ್ನು ಸಂಪಾದಿಸಿಕೊಳ್ಳಬೇಕೆಂಬ ಹೊರ ನೋಟ ಮಾತ್ರಕ್ಕಾಗಿಯೇ? ಜನತೆಯ ಮನಸ್ಸನ್ನು ಒಲಿಸಿಕೊಳ್ಳುವದಕ್ಕಾಗಿ ತಮ್ಮ ಮನಸ್ಸಾಕ್ಷಿಯನ್ನು ಕದೇಡಿಸಬೇಕಾಗಿ ಬರುವವರು ಅಷ್ಟಂಶ ಸ್ವಪರ ವಂಚನೆ ಮಾಡಿದಂತಲ್ಲವೆ?

ರಾಷ್ಟ್ರಾಧ್ಯಕ್ಷ ಮತ್ತು ಮಂತ್ರಿಗಳಿಂದಾರಂಭಿಸಿ, ಸಾಮಾನ್ಯ ಸರಕಾರೀ ನೌಕರನ ವರೆಗಿನ ಎಲ್ಲರೂ ಕೈಕೊಳ್ಳಬೇಕಾದ ಪ್ರತಿಜ್ಞಾವಿಧಿಗಳಿವೆ. ಅವರೆಲ್ಲರೂ ತಮ್ಮ ಮನಸ್ಸಾಕ್ಷಿಯನ್ನಾಧರಿಸಿ ತಾವು ಕೈಕೊಂಡ ಆ ಪ್ರತಿಜ್ಞೆಗನುಗುಣವಾಗಿ ವರ್ತಿಸುತ್ತಿದ್ದರೆ ಒಡಳಿತೆಯ ಶೋಷಣೋಪಗಳಾವುದನ್ನೂ ಇಂದು ಕಾಣುವದು ಅಸಾಧ್ಯವಾಗುತ್ತಿತ್ತು; ಆದರೆ ಈ ಸಂಬಂಧದಲ್ಲಿ ಅಮೂಲಾಗ್ರ ಆತ್ಮ ವಂಚನೆ ನಡೆದಿರುವು

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connections, please consult us.

ದರ ಪರಿಣಾಮವನ್ನು ರಾಷ್ಟ್ರವೆಂದು ಅನುಭವಿಸುತ್ತಿಲ್ಲವೆ?

ಕಾಲಸ್ಪರ್ಶದ ಪ್ರಭಾವದಿಂದ ತಾರತಮ್ಯಗಳಿಂದ ಹುಟ್ಟಿರುವ ಜಾತಿ, ಮತ, ಪಂಥ, ಪಕ್ಷ, ಸಂಪ್ರದಾಯಗಳಿಲ್ಲದಕ್ಕೆ ಇಂದಿನ ಆಡಳಿತಯನ್ನೇ ಹೊಣೆ ಮಾಡಿ ಜನರ ಮನಸ್ಸನ್ನು ಕೆಡಿಸಲು ಪ್ರಯತ್ನಿಸುತ್ತಿರುವ ವಿರುದ್ಧ ವಸ್ತುಸ್ಥಿತಿಯಾದರೂ ಏನು? ಮಾತುಗಳು ತಮ್ಮ ಮನಸ್ಸಾಕ್ಷಿಗನುಗುಣವಾಗಿಯೇ ಇವೆ ಎಂದು ಹೇಳಬಲ್ಲರೆ? ಸ್ವತಃ ತಮ್ಮ ಅಂತಃಸಾಕ್ಷಿಗೆ ವಿರೋಧ ಹೋಗುವವರು ಅನ್ಯರಿಗೆ ವಿರುದ್ಧ ನಿಂತ ಮಾತ್ರಕ್ಕೆ ಅದರಿಂದ ಏನಾದರೂ ಸತ್ಫರಿಣಾಮವಾಗುವ ಸಂಭವವಿದೆಯೆ?

ಯಾವುದೇ ಪಕ್ಷ, ಪಂಥ, ಧರ್ಮ, ಸಂಗದಪ ಬಿಲ್ಲೆ ಹಚ್ಚಿಕೊಂಡವರಾದರೂ ಸರಿಯೇ–ತಾವು ಆ ಬಿಲ್ಲೆಯು ಸೂಚಿಸುವ ಅರ್ಥಕ್ಕನುಗುಣವಾಗಿ ವರ್ತಿಸುವವರೇ, ಎಂಬ ಕುರಿತು ತಂತಮ್ಮ ಮನಸ್ಸಾಕ್ಷಿಯನ್ನೇ ವಿಚಾರಿಸಿಕೊಳ್ಳುತ್ತಾರಾದರೆ, ಅಲ್ಲಿಯೇ ಸರಿಯಾದ ಉತ್ತರದೊರೆತೀತು.

ಇನ್ನು ಊರ ವಿವಾದಗಳಲ್ಲಿ, ಗೃಹ ಕಲಹಗಳಲ್ಲಿ ದ್ವೇಷಾಸೂಯೆಗಳಿಕ್ಕಿಕೊಂಡು ದುಸ್ಸಾಧನೆ ವ. ತ್ತು ಅಪಸ್ವಾಚಾರಗಳನ್ನು ಮಾಡಿ. ವವರೆಲ್ಲರೂ ತಾವು ಸರಿಯೇ ಎಂಬ ಪ್ರಶ್ನೆಯನ್ನು ತಮ್ಮ ಮನಸ್ಸಾಕ್ಷಿಗೇನೇ ಹಾಕಿಕೊಂಡಲ್ಲಿ ಯೋಗ್ಯ ತೀರ್ಮಾನ ದೊರೆತೀತು ಪ್ರತಿಯೊಬ್ಬನೂ ತನ್ನ ಪ್ರತಿ ಯೊಂದು ನುಡಿ ನಡೆಯನ್ನೂ ಮುಂದಾಗಿ ಈ ಮನಸ್ಸಾಕ್ಷಿಯ ಒರೆಗಲ್ಲಿನಿಂದ ಪರೀಕ್ಷಿಸಿಕೊಳ್ಳುವ ಸಂಪ್ರದಾಯವಿಟ್ಟುಕೊಂಡಲ್ಲಿ ಎಂದೂ ಯಾವ ಅನ್ಯಾಯವೂ ನಡೆಯದಂತಾದೀತು.

ತಾನು ಸಜ್ಜನ, ಸಭ್ಯ, ಸಂಭಾವಿತನೆಂತೆ ತೋರಿಸಿಕೊಳ್ಳುತ್ತಾ ಸ್ವಾರ್ಥಸಾಧನೆ ಮಾಡುತ್ತಿರುವವನು ಎಲ್ಲಾ ಕಾಲದಲ್ಲಿ ಎಲ್ಲರನ್ನೂ ವಂಚಿಸಲಾರನಾದೂ, ಕೆಲ ಕಾಲ ಎಲ್ಲರಿಂದಲೂ ಎಲ್ಲಾ ಕಾಲ ಕೆಲವರಿಂದಲೂ ತನ್ನ ವಂಚನೆಯನ್ನು ಮರೆ ಮಾಡಬಲ್ಲನು; ಆದರೆ ಅಂತಿಮದಲ್ಲಿ ಇಂದೇ ಒಂದು ಕ್ಷಣವಾದರೂ ತನ್ನ ಕೃತ್ಯ ವನ್ನು ತನ್ನ ಮನಸ್ಸಾಕ್ಷಿಗೇನೇ ಮರೆಯಾಗಿಡಲು ಸಾಧ್ಯವಾಗುವಂತಿಲ್ಲ.

ಅಹಿಂಸೆಯ ಹೆಸರಿನಿಂದಲೋ, ನಾಗರಿಕತೆ ಅಥವಾ ತಮ್ಮ ಮೇಲ್ಮಟ್ಟದ ನೆವ ಹೇಳಿಯೋ ಅವಶ್ಯಕ ಹೋರಾಟಗಳ ಗಂಜಿ ಮೈದಡಿದು ಸಿಲ್ಲುವವನ್ನು ಕಾಣು ತಿದ್ದೇವೆ; ತಪ್ಪು ನಿವಾರಣಾ ಚಳವಳ ಅಥವಾ ಸಂಕಷ್ಟ ನಿವಾರಣಾ ಆಂದೋಲನಗಳಿಗಂಜಿ, ಹೇಡಿತನದಿಂದ ದೂರ ಸರಿ ಬೇರೂ ಸ್ವತ್ತು ಪಡಿದು ಸಜ್ಜನ ದೆವರಿಂದಲೆ ಅಂತಿಮ ತೀರ್ಪು ಕೆಲವು ಭಗಳಿಂದ ದೂರ ಹೋಗುವಿಕೆಯು ಸಹಿ ಪಿಸುವರು ಸಾರ್ವಜನಿಕ ಜೀವನದಲ್ಲಿ ಲಿಪಿ, ನಿಜ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ವಿಹರಿಸುತ್ತಿದ್ದಾರೆ. ಈ ಸ್ವಾರ್ಥಪರತೆಯನ್ನು ಪ್ರತಿಭಟಿಸಿ ಜನರನ್ನು ಸಂಘಟಿಸಬಲ್ಲವರು ಬೇರೆ ಇರಲಾರರು; ಆದರೆ ಅಲ್ಲೇ ಪ್ರತಿ ಸ್ವಂತ ಮನಸ್ಸಾಕ್ಷಿಯ ಪೀಠೆಯು ಇಂಥವರಿಗೆ ತಾಗುವಷ್ಟು ಬಲವಾಗಿ ಬೇರೆಯವರಿಗೆ ಸೋಂಕಲಾರದು.

ಈ ದಿನ ಲೋಕದಲ್ಲಿ ಅಸತ್ಯ, ಅನಾಚಾರ, ಹಿಂಸೆ, ದ್ವೇಷಾಸೂಯೆಗಳು ಮಿತಿ ಮೀರಿ ಬೆಳೆದಿರುವನೆ? ಇದಕ್ಕೆ ಕಾರಣವೆಂದರೆ ಮನಸ್ಸಾಕ್ಷಿಯು ಇಂದು ಅನಾಥವಾಗಿರುವುದೇ ಈ ಕಾಲದಲ್ಲಿ ಮನಸ್ಸಾಕ್ಷಿಯನ್ನು ಕಡೆಗಣಿಸಲ್ಪಟ್ಟರೂ–ಅದೇಂತೆ ಮೂಲೆಪಾಲಾಗಿರುವ–ಅದರ ಹೆಸರು ಕೊಳೆತು ನಾರುತ್ತಿರುವ–ದುರ್ದೈವೀ ವಿಷಯ ಪ್ರಪಂಚದಲ್ಲಿ ಬೇರೊಂದಿಲ್ಲ. ಆದ್ದರಿಂದಲೇ ಇಂದು ಸಾಮೂಹಿಕವಾಗಿಯೂ, ಒಳಗಿನ ದೊಡ್ಡ ಸಣ್ಣ ಕ್ಷೇತ್ರಗಳಲ್ಲೂ ಲೋಕ ಶಾಂತಿಯೆಂಬುದಿಲ್ಲ. ಎಲ್ಲಾ ಲೋಕ ನಾಯಕರೂ ತಮ್ಮ ಮನಸ್ಸಾಕ್ಷಿಯನ್ನು ವಂಚಿಸಿ ಮಾತು ಕೃತಿಗಳನ್ನು ಹೂಡುತಿದ್ದಾರೆ; ಎಲ್ಲಾ ಮನುಷ್ಯರೂ ಸ್ವಕಾರ್ಯ ಸಾಧನೆಗೆಂದು ಮನಸ್ಸಾಕ್ಷಿಯನ್ನು ಮರೆತೇ ವರ್ತಿಸುತಿದ್ದಾರೆ.

ಆದ್ದರಿಂದ 'ಲೋಕ ಶಾಂತಿ', 'ಸುಧಾರಣೆ' 'ಉತ್ತಮಕಾಲ' 'ರಾಮರಾಜ್ಯ' ಮುಂತಾಗಿ ಕರೆಯಲ್ಪಡುವ ನಿಜವಾದ 'ಸುಖ'ವೆಂಬುದು ಬರಬೇಕೆ? ಮುಂದಾಗಿ 'ಮನಸ್ಸಾಕ್ಷಿಯ ರಕ್ಷಣೆಯಾಗಬೇಕು; ಪ್ರತಿಯೊಬ್ಬನೂ ಅದನ್ನು ಅಧರಿಸಿ, ಆಶ್ರಯಿಸಿ, ನಡೆಯಬೇಕು ಮನಸ್ಸಾಕ್ಷಿಯೊಂದೇ ಸಾಕ್ಷಿಯಾಗಬೇಕು; ಎಲ್ಲದರ ಕೊನೆಯ 'ಅಪ್ಪೀಲು ಕೋರ್ಟು' ಅದೇ ಆಗಿದ್ದು, ಪ್ರತಿಯೊಂದೂ ಈ ಕೋರ್ಟಿನ ವರೆಗೆ ಹೋಗಿ ಕೊನೆಯು ತೀರ್ಮಾನ ಪಡೆದೇ ಜಾರಿಗೆ ಬರಬೇಕು. ಹಾಗಾದಲ್ಲಿ ಲೋಕದ, ದೇಶದ ಮತ್ತು ಪ್ರತ್ಯೇಕವಾಗಿ ಪ್ರತಿಯೊಬ್ಬನ ಉದ್ಧಾರಕ್ಕೆಂದು ಬೇರೇನೂ ಆಗಬೇಕೆಂದಿಲ್ಲ.

ಮನಸ್ಸಾಕ್ಷಿಗೆ ಜಯವಾಗಲಿ! ಪ್ರತಿಯೊಬ್ಬನೂ ತನ್ನ ಮನಸ್ಸಾಕ್ಷಿಯನ್ನು ಬೆಳಗಿಸಿಕೊಂಡು, ಅದರ ಬೆಳಕಿನಲ್ಲೇ ಬಾಳಲಿ.

ಭಾರತೀಯರ ಹೊಣೆಗಾರಿಕೆ–

ಸ್ವಾತಂತ್ರ್ಯ ಜನ ಸಾಮಾನ್ಯರು, ರಾಷ್ಟ್ರಜೀವನ ಈಗಿನ ಸ್ಥಿತಿಗತಿ ಹೇಗಿದೆಯೆಂಬುದನ್ನೂ, ಈ ಕಾಲದಲ್ಲಿ ತಮ್ಮ ಪಾಲಿನದಾಗಿರುವ ಕರ್ತವ್ಯವೇನೆಂಬುದನ್ನೂ ಲಕ್ಷಿಸಿ ತಾವು ಹೋಗಬೇಕಾದುದು ಅಗತ್ಯವೋ ಪ್ರಾಗಿರಲು ಸರ್ವಶಕ್ತಿಯಿಂದ ಪ್ರಯತ್ನಿಸುವುದು ಅವಶ್ಯವಿದೆ. ಸ್ವಾವಲಂಬನೆಯೆಂಬುದು ಅಧಿಕಾರ, ಆಹಾರ ಮತ್ತು ಆರ್ಥಿಕ ಸ್ಥಿತಿಯಂತಹ ಸಾಮೂಹಿಕ ಕ್ರಮ ವಿಧಾನಗಳಿಗಷ್ಟೇ ಸಂಬಂಧಿಸಿರುವ ತತ್ವವಲ್ಲ. ಅದು ಪ್ರತಿಯೊಬ್ಬನಿಗೂ ಅನ್ವಯಿಸುವಂತಹ ಮೂಲ ಸೂತ್ರ. ಸ್ಥಿತಿ ಮತ್ತು ಮತಿಯಲ್ಲಿ ಪ್ರತಿಯೊಬ್ಬನೂ ಸ್ವಾವಲಂಬಿಯಾಗಿರಬೇಕು; ಸ್ವತಂತ್ರನಿರಬೇಕು ಹಾಗೆ ಸ್ವತಂತ್ರನಿದ್ದು ಕೊಂಡೇ ಸಾರ್ವಜನಿಕ ಸಂಬಂಧದ ಅಥವಾ ಸಾಮಾಜಿಕ, ರಾಷ್ಟ್ರೀಯ ಸಂಬಂಧದ ತನ್ನ ಪಾಲಿನ ಹೊಣೆಗಾರಿಕೆ ಮತ್ತು ಕರ್ತವ್ಯಗಳನ್ನು ನಿರ್ವಹಿಸಬೇಕು. ಇದನ್ನನುಸಾರವಾಗಿ, ಈ ಕಾಲದಲ್ಲಿ ತಾವು ಹೋಗಬೇಕೆಂಬ ಸ್ವಜ್ಞಾನವನ್ನು ಪ್ರತಿಯೊಬ್ಬನೂ ಗಳಿಸಿಕೊಂಡಿರುವುದು ಅಗತ್ಯ.

ಈ ಕಾಲ

ಭಾರತದ ಸ್ಥಿತಿ ಇಂದು ಬಹುಮಟ್ಟಿಗೆ ಶಾಂತವಿದೆ. ಲೋಕದ ಇತರ ರಾಷ್ಟ್ರಗಳಲ್ಲಿರುವ ಅಭಾವ, ಆರ್ಥಿಕ ಅಸ್ವಸ್ಥತೆ, ಅಡೆತಡೆಗಳಂಥವುಗಳಲ್ಲದೆ ಹೆಚ್ಚಿನ ತೊಡಕುಗಳಾವುವೂ ನಮ್ಮ ದೇಶದಲ್ಲಿಲ್ಲ. ನವೋದಿತ ಸ್ವತಂತ್ರ ರಾಷ್ಟ್ರ ಭಾರತವು ಇಷ್ಟರಲ್ಲೇ ಮಿಕ್ಕ ರಾಷ್ಟ್ರಗಳ ಸಮಾನ ಸ್ಥಿತಿಗೆ ಬಂದುದು ಶ್ಲಾಘನೀಯ ಗಳಿಕೆಯೇ ಸರಿ.

ಸ್ವತಂತ್ರ ಜನತಾ ರಾಜ್ಯದ ನವ ರಾಜ್ಯ ಶಾಸನ ತಯಾರಿಸಿಕೊಳ್ಳುವುದರಲ್ಲಿ ಭಾರತವು ಪಡೆದಿರುವ ಪ್ರಗತಿಯಂತೂ ನಿಜಕ್ಕೂ ಅತ್ಯುತ್ತಮವಾದುದು. ಲೋಕ ದೋಷಗಳಿಲ್ಲದ ರಾಜಕೀಯ ಅಥವಾ ಸಂಗತಿಯಾವುದೂ ಪ್ರಪಂಚದಲ್ಲಿಲ್ಲ; ಜನರಾಜ್ಯ ಭಾರತದ ರಾಜ್ಯ ಘಟನೆ ಕೂಡಾ ಇದಕ್ಕೆ ಹೊರತಾದವಾಗಿಲ್ಲವಾದರೂ, ಆದರೆ ಈಗಲೂ ಇನ್ನು ಎಂದೆಂದಿಗೂ ಜನಮತವನ್ನಾಧರಿಸಿ ಇರುವ ಮತ್ತು ಇರಲಾರುವ ಶಾಸನವೇ ಭಾರತೀಯ ಜನತೆಗೆ ದೊರೆತಿದೆ, ಎಂಬುದನ್ನು ಮರೆಯ ಬಾರದು. ಅತ್ಯ ಇದರ ತಲ್ಲಾರೇ ಕಾರ್ಯ, ಇತ್ಯ ರಾಷ್ಟ್ರದ ಆಡಳಿತೆ ನಿರ್ವಹಣ, ಇವೆರಡನ್ನೂ ಅತ್ಯಂತ ಜಯಶೀಲವಾಗಿ ಜರಗಿಸಿದ ಅನುಭವ ನಾಯಕತ್ವವು ರಾಷ್ಟ್ರದ ಪಾಲಿಗಿದ್ದುದು ಹೆಗ್ಗಳಿಕೆ ಪಡುವ ವಿಷಯ. ಆನಂದ ಸಂಗತಿ.

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸೌಹಾರ್ದಕರ ಸಂಬಂಧ ನಿರ್ಮಾಣಗೊಂಡುದರಿಂದ, ಇಕ್ಕೆಡೆಯ ಒಳ ಶುದ್ಧೀಕರಣಕ್ಕೂ ಅನುಕೂಲವಾತಾವರಣ ನಿರ್ಮಾಣಗೊಂಡಿದೆ. ಭಾರತದ ಮಟ್ಟಿಗೆ ಹೇಳುವುದಾದರೆ ಉದ್ವೇಗ-ವೇಶಗಳ ಕಾಲಲೆಗಳನ್ನೆಬ್ಬಿಸಬಲ್ಲಿದ್ದ ಒಂದು ದೊಡ್ಡ ಮೂಲಕಳ ಆಂ ಹೋಗಿ, ಶಾಂತಚಿತ್ತದಿಂದ ತನ್ನ ಪಾಲಿನ ಕೆಲಸಗಳತ್ತ ಲಕ್ಷ್ಯ ಕೊಡಲಾಗುವ ಸುಸಂದರ್ಭ ದೊರೆತಿದೆ.

ಉಳಿದಿರುವುದೊಂದೆ-ಕಾಶ್ಮೀರ. ಈ ವಿವಾದದ ಮಧ್ಯಸ್ಥಗಾರನಾಗಿ ಇಸ್ಲಾಮೇತರ ಒಪ್ಪಿಗೆ ಮತ್ತು ಸಹಕಾರದ ಸ್ವತ್ತನ್ನು ಪಡೆದಿರುವ ಸಂ. ಒನ್ ಡಿಗೆ ರು ಇಷ್ಟರಲ್ಲೇ ನವಢಿಲ್ಲಿಗೆ ಬಂದಿದ್ದಾರೆ. "ಸಂಬಂಧಪಟ್ಟ ಸರ್ಕಾರ ಸೌಹಾರ್ದಯ. ಮೂಲಕ ಕಾಶ್ಮೀರ ಸ್ಯಸ್ಯೆಯು ನಿರ್ಮಾನಿಸಲ್ಪಡುವಂತೆ ಪೂರ್ಣ ಅನುಗಿದೆ" ಎಂದವರು ಭರವಸೆಯಿಂದ ದ್ದಾರೆ. ಕಾಶ್ಮೀರ ವಿವಾದದಲ್ಲಿ ಬೆಡಿದ ಸಮಸ್ಯೆಗಳು ಕಂಡುಬರುತ್ತಿವೆ ದರೂ ಪ್ರಕೃತ ಭಾರತ-ಪಾಕಿಸ್ತಾನ ನಡುವ ಅಂಟುಗಾರುವ ಮೈತ್ರೀ ಸಂಧಿಕ್ಕೂ ಆಜೀವ್ಯವಾಗಬಲ್ಲ ವಿವಾದದೂ ಇವೆರಡು ದೇಶಗಳ ನಡುವೆ ಇದು ನಂಬಿಕೆಯಿಂದಿರಬಹುದು.

ಈ ರೀತಿ ದೇಶದ ಒಳಸ್ಥಿತಿಯು ನಂಶ ಸುವ್ಯವಸ್ಥೆಗೆ ಬಂದಿದ್ದು, ಬಹುಮಟ್ಟಿಗೆ ಶಾಂತವಾಗಿದೆ. ಒಳಗಡೆಯ ದೊಡ್ಡ ಕಂಟಕವಾಗಿ ಕಾಡುವುದೆಂದರೆ ಕಮ್ಯೂನಿಸ್ಟ್ ಒಂದೇ. ಧಾರ್ಮಿಕ ವಾದ, ಭಾಷಾವಾರು ವೈಶಿಷ್ಟ್ಯವಾದಿಗಳ ಧ ಭಿನ್ನ ಪಂಥವಾದಿಗಳ ಆಂದೋಳನೋ ಇವೆ. ಇವುಗಳಲ್ಲಿ ಎಲ್ಲವೂ ಟಕ ಪ್ರಾಯವಾದವುಗಳೇ ಅಲ್ಲ. ನವಜೀವನದ ದ್ಯೋತಕಗಳಾಗಿಯೂ ವೆ. ಒಟ್ಟಿನ ಮೇಲೆ ನವಸ್ವತಂತ್ರ ಕ್ಕೆ ಉಪದ್ರವಕಾರಿಯಾಗಬಲ್ಲ ದ ಳೆಲ್ಲವನ್ನೂ ಇಂದಿನ ಆಡಳಿತೆಯ ಶೀಲನಾಗಿ ದಮನಿಸಿದೆ.

ಆದ್ದರಿಂದ ಈಗಿನ ಜನತಾ ರಾ ಜನತೆಯು ತಮ್ಮ ಪಾಲಿನ ಕಾ ತ್ತು ಜವಾಬ್ದಾರಿಗಳಿವುದೆಂಬು ರ್ಕಾರ ಬುದ್ಧಿಯಿಂದ ಯೋಚಿ ಲಡ್ಡಿಯಿಲ್ಲ. ಇಂತಹ ರಾಂತ, ವಾತಾವರಣವನ್ನು ಸ್ವಾತಂತ್ರ್ಯ ಭಾಗದಲ್ಲೇ ನಿರ್ಮಿಸಲು ಸಹಕರಿ ದ ಎಲ್ಲರನ್ನೂ ಈ ಅವಧಿ ಕೃತಜ್ಞತೆಯಿಂದ ಸ್ಮರಿಸಿ, ಎಂಬುದನ್ನು ಯೋಚಿಸಿ, ನಿರ್ಧರಿಸಿ, ವುದೊಂದೇ ಕರ್ತವ್ಯ.

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
The Moolky Bank Ltd.,
Moolky, S. K.

On this Memorable day
Of the 26th of January in the year 1950 of the inauguration of the Indian Republic, we have the pleasure to announce the birth of our
Vijaya Cash Certificates
"Spend less and Save more" shall be the Motto of every Indian Citizen.
Vijaya Cash Certificates are the safest and best media for a discriminating investor. They mature on the expiry of three years and carry interest at 4½%.
Rules on application at any of our following Offices
Head Office:—Kadri Road, Mangalore.
Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.
B. Manjaya Hegde.
Advocate & President, District Board, S. Kanara.
CHAIRMAN
VIJAYA BANK, LTD.,

ಇಂದು ಮುಂದಿನ ಕಾರ್ಯ.

ನತೆಯ ಹೊಣೆ

ಎಂಡು ಶತಮಾನಗಳಿಂದ ಗುಲಾಮಗಿ
ಯುಲ್ಲಿ ನರಳಾಡುತ್ತಿದ್ದ ಜನಾಂಗವು ಕೇ
ವ ಎರಡೂವರೆ ವರ್ಷಗಳ
ಸ್ವತಂತ್ರ್ಯದಿಂದ ಪಡೆಯಬೇಕಾದುದ
ನ್ನು ಪಡೆಯಲಾರದು; ಪಡೆದಿಲ್ಲ. ಏಏಬೇ
ದ ಮಟ್ಟಕ್ಕೆ ಏರಲಾರದು; ಏರಿಲ್ಲ.
ಹೋರ್ನಾವಧಿಯಿಂದ ಸ್ವಾತಂತ್ರ್ಯ ಹೋ
ಟ ನಡೆದಿದ್ದರೂ ಕೊನೆಯ ಭಾಗದಲ್ಲಿ
ವಂಶ ಅವಸರದಿಂದ ಅದು ಸ್ಥಾಪನೆ
ಂಡುದರ ಪರಿಣಾಮವಾಗಿ ಹಲವು
ರ್ಘಟನೆಗಳು ನಡೆಮಹೋದ ಪ್ರತ್ಯ
ನುಭವ ನಮಗಿದೆ. ಆದ್ದರಿಂದ ಸ್ವಾ
ತ್ರ್ಯದ ಸಕ್ಷಲ ಮತ್ತು ಸ್ವತಂತ್ರ ಜ
ತೆಯ ಮನೋವಟ್ಟ ಇಷ್ಟು ಅಲ್ಪಾವ
ಧಿಯಲ್ಲೇ ಪೂರ್ಣತೆಗೊಳ್ಳಬೇಕೆತ್ತೆಂದು
ಯಸುವುದು ಅಪಾಯಕರ. ಆದು ಕ್ರ
ಶಃ ಜಂಗಡೇಕಾದ ವಿಧಿ; ಜಂಗಿಸವು
ಜನತೆಯ ಕರ್ತವ್ಯ.

ಈ ಕಾಲದಲ್ಲಿ ಜನತೆ ತನ್ನನ್ನು ಕಾಪಾ
ಡುಕೊಳ್ಳುವದೊಂದೇ ಮುಖ್ಯ. ಭಾರ
ತೀಯ ಜನನಾಯಕರು ಅಂದಿನಿಂದಿನವ
ರೂ ಕರ್ತವ್ಯಪಾಲನೆಯಲ್ಲಿ ಹಿಂದೆ ಬೀ
ಳ್ದಾ ಒಂದವರೆಂಬುದನ್ನೂ, ಈ ವರೆಗ
ಿನ ಕೆಲಸಗಳು ಹಚ್ಚಿನಂಶ ಮುಂಚೂಣಿಗೆ
ಬಂದ ಸಾಹಸದ ಪಟಣಾಮಗಳೆಂಬುದ
ನ್ನೂ ಈ ಸಂದರ್ಭದಲ್ಲಿ ಮರೆಯಬಾರದು.
ಗುಲಾಮಗಿರಿಯಿಂದ ಜನತಾ ರಾಜ್ಯದ
ವರೆಗಿನ ಆ ಸುದೀರ್ಘ ಹಾದಿಯಲ್ಲಿ ಕಲ್ಲು
ಮುಳ್ಳುಗಳ ಹಾದಿಯಲ್ಲಿ ಹಿಂದೀ ಜನತೆ
ಯು ಅತೀ ಹಿಂಭಾಗದಲ್ಲಿ ಉಸಿರ್ವಹ
ಸುತ್ತಾ ಹೆಜ್ಜೆಯಿಡುತ್ತಾ ಬಂತೆಂಬುದನ್ನೂ ಮರೆ
ಯಂಭಾಗದ ನಾಯಕ ವರ್ಗವು ತೀವ್ರ
ಗತಿಯಿಂದ ಧಾವಿಸುತ್ತಾ ಮುಂದಾಗಿ ಗುರಿ
ಯಿಟ್ಟೆ ಹಿಂಗಡೆಯವರನ್ನು ಎಳೆದುಕೊಂ
ಡು ಸ್ವಲ್ಪ ದೃಶ್ಯ ತೋರಿತ್ತಿದೆ;
ಇಗ ಹಿಂದೆ ಬದ್ದಿದ್ದ ಜನತೆಗೆ ಹೊ
ಸಾರಿಕೆಯಿಂದ ರಾಜ್ಯವೇ ಇಂದು ಬಂ
ದಿರುವಾಗ ಇಲ್ಲಿ ಆಲೋಚಿಸತಕ್ಕ ಅಂಶ
ಗಳಿವೆ.

ಹೋರಾಟ ಕಾಲದಲ್ಲಿ ಸ್ವಾತಂತ್ರ್ಯದ
ಮೌಲ್ಯವರಿತು ಅದರಲ್ಲಿ ಸಹಭಾಗಿಗಳಾಗಿ
ಸಾರ್ವಜನಿಕರ ಸಂಖ್ಯೆ ತುಲನಾತ್ಮಕ
ವಾಗಿ ಕಡಿಮೆ; ಸ್ವಾತಂತ್ರ್ಯ ದೊರೆತ ಮೇ
ಲಿನದಾ, ಅದರ ಜಾಲನಾಧಿಕಾರಿಗಳು
ನ ಪ್ರತಿನಿಧಿ ಯೋಗ್ಯತೆಯು ಬಲದಿಂದ
ಸ್ಥಾನಗಳಲ್ಲಿರಬೇಕೆಂಬುದನ್ನು ಮರೆತು,
ದವಂ ಸ್ವಂತದ್ದೆಂಬ ಭಾವನೆಯಿಂದ
ಂದೆ ಸ್ಥಿತಿಗಳನ್ನು ಸಲ್ಲಿಸುತ್ತಿರುವವರೇ
ಚ್ಚಾಗಿ. ಇಲ್ಲದೆ ಜನತೆಯ ತಮ್ಮ ಸಾ
ಮಾಜಿಕ ಅಧಿಕಾರವನ್ನು ತಮ್ಮ ಪೈಕಿ ಕೆ
ಲವೇ ಮಂದಿಯ ಪಾಲಿಗೆ ಒಪ್ಪಿಸಿ ಬಿಟ್ಟು,
ತಾವು ಕೇವಲ ಪ್ರೇಕ್ಷಕರಂತಿ ಉಳಿದು
ಕೊಂಡ ನಿಸ್ಸಹಾಯಕ ಸ್ಥಿತಿ; ಸ್ವನಾಶ
ಕಾರಕ ಕೃತಿ.

ಆದರೀಗ ಇಂತಹ ಜನತೆಯ ಪಾಲಿ
ಗೇ ಪೂರ್ಣ ಕೊಣೆಗಾರಿಕೆ ಹೇರಲ್ಪ
ಟ್ಟಿದೆ. ಜನತಾ ರಾಜ್ಯ ಬಂದಿದೆ; ಸ್ವಾತಂ
ತ್ರ್ಯ ಆಥವಾ ಜನ ಪ್ರತಿನಿಧಿ ಸರಕಾರ
ಸ್ಥಾಪನೆಗೊಂಡ ನಂತರವೂ ಆದರಲ್ಲಿ ಅ
ರ್ಹತೆಯಾಗಿ ಕೆಲವೇ ಮಂದಿಯ ಕೈ
ವಾಡವುಳಿದುಕೊಂಡಂತೆ, ಜನತೆಯು ಈ
ಗಿನಂತಿದ್ದರೆ ಜನತಾ ರಾಜ್ಯ ಕೂಡಾ ಹೀ
ಗೆಯೇ ಕೆಲವರ ಸೊತ್ತಾಗಿಯೇ ಉಳಿದು
ಕೊಳ್ಳುವದು ಸಂಭವನೀಯ.

ಹಾಗಾಗದಿರಬೇಕಾದರೆ, ಭಾರತೀಯ
ಜನತೆ ಬ್ರಿಟಿಷ್ ಆಡಳಿತೆಯ ಕಾಲದಲ್ಲಿ
ದ್ದಂತೆ ಗುಲಾಮಜನಾಂಗವಾಗಿಯೂ ಇ
ರಬಾರದು; ಸ್ವಾತಂತ್ರ್ಯ ಚಳವಳಿ ಕಾಲ
ದಿಂದಾರಂಭಿಸಿ ಈ ವರೆಗಿರುವಂತೆ ಪ್ರೇಕ್ಷ
ಕ ಜನರಾಗಿಯೂ ಇರಕೂಡದು; ಒಡೆ
ಯನ ಯೋಗ್ಯತೆ ಮತ್ತು ಅಧ್ಯತೆಯನ್ನು
ಗಳಿಸಿಕೊಂಡು ಯಜಮಾನರಾಗಿಯೇ ಇ
ರಬೇಕು. ಶಾಸನಾನುಗುಣವಾಗಿ ರೂಪು
ಗೊಂಡಿರುವ ಯಜಮಾನಿಕೆಯು ಅನೂ
ಚಾನಾಗ್ರವಾಗಿ ಹಾಗೂ ಅಕ್ಷರಶಃ ಜಾರಿಯ
ಲ್ಲಿರುವಂತೆ ಜನರು ಸ್ವತಃ ಅಂತಹ ಗುಣ
ಯೋಗ್ಯತೆಗಳನ್ನು ತನ್ಮೂಲಿ ಆವಾಹನೆ
ಮಾಡಿಕೊಂಡಿರಬೇಕು.

ಇಂತಹ ಯೋಗ್ಯತೆ ಮೂಡಿ, ಪರಿವ
ರ್ತನಾ ಸ್ಥಿತಿ ತಪ್ಪಿದಾಗ ಅಯಾಯ
ಕಾಲದ ಕರ್ತವ್ಯದ ಅರಿವು ತಾನಾಗಿ ಮೂ
ಡುತ್ತದೆ. ಅಂತೆಯೇ ಜನತಾ ರಾಜ್ಯ ಭಾ
ರತದ ಜನತೆಯ ಪಾಲಿಗೆ ಬಂದಿರುವ ಇಂ
ದಿನ ಪ್ರಾಮುಖ್ಯ ಕರ್ತವ್ಯಗಳವೆ.

ಎರಡು ಹೊಣೆಗಾರಿಕೆಗಳು

ಇಂದು ಹಿಂದೀ ಜನತೆಯ ಪಾಲಿಗೆ
ಮುಖ್ಯವಾಗಿ ಒದಗಿರುವ ಕರ್ತವ್ಯಗಳಲ್ಲಿ
ರಡು. ಆಹಾರಾಭಾವ ನಿವಾರಣೆ ಮತ್ತು
ಭಾವೀ ಮಹಾ ಚುನಾವಣೆ.

ಈ ಎರಡರಲ್ಲೇ ಸಂದರ್ಭಾನುಸಾರ
ಆಗಾಗ ತಿಳಿಸಿರುವಂತೆ ಇವೆರಡು ಪಂಚ
ತಾಚರ್ಯಗಳೂ ಇನ್ನು ಒಂದು ವರುಷ
ದೊಳಗಾಗಿ, ಪ್ರತ್ಯಕ್ಷ ಜನತೆಯಿಂದಲೇ
ಆಗಬೇಕಾಗಿರುವವುಗಳು. ಸಾರ್ವಜನಿ
ಕರು ಈ ಕಾರಿತು ಅಸಡ್ಡೆ ಅಥವಾ ಅಜ್ಞಾ
ನ ಪ್ರದರ್ಶಿಸಿದರೆ, ಅದರ ದುಷ್ಪರಿಣಾಮ
ಗಳು ಸ್ವತಃ ಆ ಕಾರ್ಯಗಳಲ್ಲಿ ಕಂಡುಬರ
ಬೇಕೇ ಹೊರತು ಎಲ್ಲಾ ಜನತೆಯ ಬದ
ಲಿಗೆ, ಅವರ ಪೈಕಿ ಕಾರ್ಯೋತ್ಸಾಹವುಳ್ಳ
ಕೆಲವರಿಂದ ಈ ಕಾರ್ಯಗಳಾವಾವೆಂದು
ನಿರೀಕ್ಷಿಸಲು ಬರುವದಿಲ್ಲ. ಆ ಹಾ ರ
ಸ್ವಾವಲಂಬನೆಯುಂಟಾಗುವಷ್ಟು ಅಧಿ
ಕೋತ್ಪತ್ತಿ ಮಾಡುವದಕ್ಕೂ ಎಲ್ಲರ ಪಂ
ಶವು ಆಗತ್ಯ; ಚುನಾವಣೆಯು ಸಂಸಲಿ
ಜನತಾ ಪ್ರತಿನಿಧಿಗಳನ್ನಾರಿಸಿಕೊಳ್ಳಬೇ
ಕಾದರೂ ಪ್ರಾಮುಖ್ಯವಲ್ಲದೆಲ್ಲರೂ ಮತದಾನ
ಮಾಡಬೇಕಾದುದು ಆಗತ್ಯ.

ಇವೆರಡು ಮಹತ್ಕಾರ್ಯಗಳು ಜನತೆ
ಯ ಯೋಗ್ಯತಾ ಪರೀಕ್ಷೆಯ ಒರೆಗಲ್ಲಿನ ಆ
ಬದಿ, ಈ ಬದಿಯೆಂಬಂತಿವೆ; ಮಾತ್ರವಲ್ಲ,
ಜನತಾರಾಜ್ಯದ ಆಸ್ತಿವಾರವನ್ನಾಧರಿಸಿ
ನಿಲ್ಲುವ ಕವಲು ಗೂಟಗಳಾಗಿಯೂ ಇವೆ.
ಆದ್ದರಿಂದ 'ಜನತಾ ರಾಜ್ಯ ಮತ್ತು ಬಾ
ಳುವೆ ಎಂಬುದಿರಬೇಕಾದರೆ ಜನತೆಯು
ಇವೆರಡು ಗುರಿಗಳನ್ನು ಸಾಧಿಸಲೇಬೇಕು.

1951ನೇ ಇಸವಿಯ ನಂತರ ಹೊರ
ದೇಶಗಳಿಂದ ಆಹಾರ ಧಾನ್ಯಗಳನ್ನು
ಆಮದು ಪಡಿಸಿಕೊಳ್ಳುವಂತಿಲ್ಲವೆಂಬುದು
ಭಾರತ ಸರಕಾರದ ನಿಶ್ಚಿತ ಧೋರಣೆ.
ಈಗ ಅಧಿಕ ಬೆಲೆ ತೆತ್ತು ಹೊರಗಿನಿಂದ
ಧಾನ್ಯಾಮದು ಮಾಡಿಕೊಳ್ಳುತ್ತಿದ್ದರೂ
ಆಹಾರದ ಅಭಾವವಿರುವ ಕಹಿ ಅನುಭವ
ರಾಷ್ಟ್ರಕ್ಕಾಗುತ್ತಿದೆ; ಬರುವ ವರುಷಾ
ನಂತರ ಒಂದು ಕಾಳೂ ಹೊರಗಿನಿಂದ
ಬರುವದಿಲ್ಲವೆನ್ನುವಾಗ ಈಗಿನ ಅಭಾವ
ಮತ್ತು ಹೊರಾಮದುಗಳಲ್ಲದ ಹೆಚ್ಚಿನ
ಕೊರತೆ, ಇವೆಲ್ಲವೂ ತುಂಬ ಬರುವ
ಷ್ಟು ಅಧಿಕ ಆಹಾರೋತ್ಪತ್ತಿ ಇಲ್ಲಿಯೇ ಆ
ಗಬೇಕೆಂಬುದು ಸ್ಪಷ್ಟವಿದೆ.

ವರುಷಾವಧಿಯ ಮುಖ್ಯ ಬೆಳೆಯು ಎ
ರಡು ಬಾರಿ ಕಟಾವಾಗುವುದರೊಳಗೆ ನ
ಮ್ಮ ರಾಜ್ಯದ ಎಲ್ಲಾ ಜನತೆಗೆ ಬೇಕಾಗು
ವಷ್ಟು ಧಾನ್ಯ ಇಲ್ಲಿ ತುಂಬಿಕೊಳ್ಳಬೇಕು.
ಈಗಿನ ಕೊರತೆಯನ್ನು ಮತ್ತಷ್ಟು ಹೆಚ್ಚಿ
ಸಿಕೊಂಡು, ಅದನ್ನು ಅಲ್ಲಿಂದಲ್ಲಿ ಸ್ವಪ್ರಯ
ತ್ನದಿಂದಲೇ ತುಂಬಿಸಿಕೊಳ್ಳುವ ಭಗೀರ
ಥ ಗುರಿಯಿದು; ಭಗೀರಥ ಪ್ರಯತ್ನ ವಿ
ನಹ ಈ ಗುರಿ ಸೇರುವದಸಾಧ್ಯವೆಂಬುದ
ನ್ನು ಪ್ರತ್ಯೇಕ ಹೇಳಬೇಕೆಂದಿಲ್ಲ.

ಇದಕ್ಕಾಗಿ ಪ್ರತಿಯೊಬ್ಬನೂ ಪ್ರತಿ ದಿ
ನವೂ ಪರಿಶ್ರಮಿಸಬೇಕಾದುದು ಮುಖ್ಯ.
ಪ್ರತಿಯೊಂದಿಂಚು ನೆಲವೂ ಹಸನಾಗಬೇ
ಕಾದುದು ಆಗತ್ಯ. ಸಶಕ್ತವಾಲಿನೀ ಭಾರತ
ಭೂಮಿ ಆ ತುದಿಯಿಂದೀತುದಿ ವರೆಗೆ
ಪೈರ ಹೊಲವಾಗಿ ಮಾರ್ಪಡಬೇಕಾದುದು
ಅನಿವಾರ್ಯ.

ಹೀಗೆ ಮಾಡಬಲ್ಲವರು ಸಾರ್ವಜನಿಕ
ರೇ; ಧುರೀಣರ ಭಾಷಣಗಳು-ಯೋಜ
ನಾಂತರ್ಗತ ಸೂಚನಾವಳಿಗಳು- ಆಹಾರ
ಮಿಶನುಗಳು-ಸಂಕಾರೀ ಅಧಿಕಾರಿಗಳು,
ನೌಕರರು– ಇವುಗಳಲ್ಲವುದರಿಂದಲೂ
ಇನರಿಂದಲೂ ನೆಲ ಬೆಳೆ ಕೊಡುವಂತಾ
ಗದು. ಅದಕ್ಕಾಗಿ ಜನರೇ ಪ್ರಯತ್ನ
ಬೇಕು. ಜನ ಸಾಮಾನ್ಯರಿಂದಲೇ ಕೆಲ
ಸವಾಗಬೇಕು.

ಯುದ್ಧದಂತಹ ವಿಶೇಷಾಪತ್ತುಗಳ
ವೇಳೆ ಖಡ್ಗಾಯುಧ ಸೇನಾ ಸಂಗ್ರಹ, ಒ
ತ್ತಾಯದ ಭೂಮಿ ಸೊತ್ತು ಸ್ವಾಧೀನತೆ,
ಇತ್ಯಾದಿಗಳು ನಡೆಯುತ್ತವೆ. ರಾಷ್ಟ್ರ
ದ ಇಸ್ತಿಕೆಗೇನೇ ಕುತ್ತಾರ ಪ್ರಾಯವಾಗು
ವ ಪರಿಸ್ಥಿತಿಯಲ್ಲಿ ಜೀವಳಿಯನ್ನು ನಿವಾರ
ಸುವದಕ್ಕಿಂತ ಪ್ರಾಮು ಖ್ಯದ್ದಾದ ಸಂಗತಿ
ಯಾರೊಬ್ಬನ ಪಾಲಿಗೂ ಬೇರಾವುದೂ
ಇಲ್ಲವೆಂದೇ ಆದರೆ ಆರ್ಥ. ದೇಶದ
ಆರ್ಥಿಕ ಪರಿಸ್ಥಿತಿಯಂತೂ
ಅಂತಹ ಆಕ್ರಮಣಗಾರರ ವಿರೋಧಿಗ
ಳಿಗಿಂತಲೂ ಹೆಚ್ಚು ಗಂಡಾಂತರ ಪ್ರಾಯ
ವಾದುದ; ಅದನ್ನು ನಿರ್ಮೂಲಿಸುವುದು
ತನ್ನ ವಿ.ಕ್ಕೆಲ್ಲಾ ಕೆಲಸಗಳಿಗಿಂತಲೂ
ಮುಂದಾಗಿ ಹಾಗೂ ಮುಖ್ಯವಾಗಿ ನಡೆ
ಯತಕ್ಕದ್ದೆಂಬ.ದನ್ನು ಪ್ರತಿಯೊಬ್ಬನೂ
ತಿಳಿದಿರಬೇಕು.

ಎರಡನೆಯದಾದ ಸಾರ್ವತ್ರಿಕ ಚು
ನಾವಣೆಯಾದರೂ ಅಷ್ಟೇ ಪ್ರಾಮುಖ್ಯ ವಿ
ಷಯವಿದೆ. ಒಂದನೆಯದು ಆಹಾರಕ್ಕೆ
ಸಂಬಂಧಿಸಿರುವಷ್ಟೇ ಎರಡನೆಯದು ಆಧಿ
ಕಾರಕ್ಕೆ ಸಂಬಂಧಿಸಿದೆ.

ಜನ ಪ್ರಾತಿನಿಧ್ಯ, ಜನತಾ ರಾಜ್ಯವೆಂ
ದೊಡನೆ ಎಲ್ಲವನ್ನೂ ಎಲ್ಲರೂ ಮಾಡು
ತ್ತಾ ಹೋಗುವದೆಂಬ ಅರ್ಥವಲ್ಲ. ಇಡೀ
ರಾಷ್ಟ್ರದ ಪಾಲಿನ ಯುದ್ಧವನ್ನಾದರೂ
ಕ್ರಮಬದ್ಧ ಸೈನಿಕರೇ ಹೋರಾಡಬೇಕಾ
ಗುವಂತೆ, ಜನತೆಯು ಹಕ್ಕಿನ ಆಡಳಿತೆ
ಯನ್ನು ಕೂಡಾ ಜನ ಪ್ರತಿನಿಧಿಗಳು ಕೆಲ
ವರೇ ನಿರ್ವಹಿಸಬೇಕಾಗಿದೆ; ಅಂಥವರನ್ನು
ಆರಿಸಿ ಕಳುಹಿಕೊಟ್ಟು, ಆವರ
ಕಾರ್ಯಕಲಾಪಗಳನ್ನು ಯಜ
ಮಾನರಾಗಿ ನಿರೀಕ್ಷಿಸುತ್ತಾ ನಿಲ್ಲುವುದು
ಜನತೆಯ ಪಾಲಿನ ಕರ್ತವ್ಯ. ಈ ಕಾ
ರ್ಯ ನಿರ್ವಹಣಶಕ್ತಿಯಿಯೇ ಜನತೆಯಲ್ಲಿ
ಯೋಗ್ಯತೆ ಮೂಡಬೇಕಾಗಿದೆ. ಹಾಗಿಲ್ಲದ
ಹೋದರೆ ಪಟ್ಟಾದಾರನ ಹೆಸರಿನಿಂದ ಕಿರಿ
ಮೆಂಬರ ತನ್ನಿಚ್ಛೆಯ ವಹಿವಾಟು ನಡೆಸು
ವಂತೆ-ಸಂಗತಿಯಂತಿರುವ ಯಜಮಾನ
ನಿದಿರು ಆಳು ಸ್ವೇಚ್ಛಾವಿಹಾರಿಯಾಗು
ವಂತೆ-ಹೊಣಗಾರ ಮತದಾರರ ಹೆಸರಿ
ನಿಂದ ಮತ್ತವರ ಕೈಕೆಳಗೆ ಪ್ರತಿನಿಧಿ
ಸದಸ್ಯರು ಮನಸೋಚ್ಛೆ ವರ್ತಿಸುವ ಅಪಾ
ಯವಿದೆ; ಇಲ್ಲವೇ ಜನತೆಯ ಅಜ್ಞಾನ,
ದೌರ್ಬಲ್ಯಗಳ ಯಥಾರ್ಥ ಪ್ರತಿನಿಧಿಗಳಾ
ಗಿರುವ ಅಜ್ಞಾನಿಸಿ, ದುಬರಲರೇ ಅರಿಸಲ್ಪ
ಡುವ ಅಧೋಗತಿಯೊದಗಲಿದೆ.

ಆದ್ದರಿಂದ, ಇನ್ನೊಂದು ವರುಷ
ದೊಳಗೆ ನಡೆಯಲಿರುವ ಸಾರ್ವತ್ರಿಕ ಚು
ನಾವಣೆಗನುಗುಣವಾಗಿಯಾದರೂ ಸಾರ್ವ
ಜನಿಕರು ಅಧ್ಯತೆಗಳಿಸಿಕೊಳ್ಳುವುದು ಅಗ
ತ್ಯ. ತಮ್ಮ ಭವಿಷ್ಯವನ್ನು ಯಾರ
ಕೈಗೆ ಕೊಡುವುದು ಹಿತಕರವೆಂಬ ಜ್ಞಾನ
ಸಂಪಾದಿಸಿಕೊಂಡು, ಅದರಂತೆ ವರ್ತಿ
ಸುವ ಧೈರ್ಯ ಮತ್ತು ಜಾಗ್ರತಿಯನ್ನು
ಹೊಂದುವದೊಂದೇ ಈ ಸಂಬಂಧವಾಗಿ
ಜನತೆಯ ಪಾಲಿಗೆ ಒಂದಿರುವ ಹೊಣೆ
ಗಾರಿಕೆ. ಜನತೆ ತಯಾರಾಗಬೇಕು.

ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಸ್ಥೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ಭಾರತೀಯ ಸಪ್ತಾಂಬರ ೧೫ಂಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇವಿಗೆ ಸ್ವೀಕರಿಸಲಾಗುವುದು.

೩ ತಿಂಗಳು ... ... ನೂರಕ್ಕೆ ವರ್ಷಕ್ಕೆ ೨।
೪ ರಿಂದ ೫ ತಿಂಗಳು ... ... ,, ,, ೩
ರೂ. ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೯,೦೦೦ ಕೆಳಗೆ ರೂ. ೫೦೦೦
ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು
ನಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

[1] ಬಂದರ ರೋಡ್, [2] ದೊಂಗರಕೇರಿ,

ಇತರ ಶಾಖೆಗಳು: ಕಾರ್ಕಳ, ಬಂಟ್ವಾಳ, ಮುಲ್ಕಿ, ಕುಂದಾಪುರ, ಉಡುಪಿ,
ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

CANARA BANK, LIMITED
(Estd 1906)

ಹೊಗಳುವವರಿದ್ದಂತೆಯೇ ದೂರುವವರೂ ಇದ್ದರು. ಭಾರತದ ವೈಸರಾಯರಾಗಿ ನೇಮಕಗೊಂಡ ಪ್ರಥಮ ಸೈನಿಕೇತರ ಲೋರ್ಡ್ ವೇವೆಲ್. ಈ ನೇಮಕದ ಕುರಿತು ನಾನಾ ಊಹಾಪೋಹಗಳಿದ್ದುವು. ಆ ಹೊತ್ತಿಗೆ ವೈಸರಾಯ ಮಂಡಲಿಯ ಸದಸ್ಯರಾಗಿದ್ದು ಆಸ್ಟರಿಂದಲೇ ಕೆಲವರು ತನ್ನ ಸ್ವಭಾವ ಪರಿಚಯವನ್ನೂ ಮಾಡಿಕೊಟ್ಟಿದ್ದ ವೇವೆಲರು ಭಾರತೀಯರಿಗೆ ಅಷ್ಟೊಂದು ಮೆಚ್ಚುಗೆಯ ಜನವಾಗಿರಲಿಲ್ಲ. ಭಾರತದ ಸ್ವಾತಂತ್ರ್ಯಾಂದೋಲನವನ್ನು ವಜ್ರ ಹಸ್ತದಿಂದ ದಮನಿಸುವುದಕ್ಕಾಗಿಯೇ ಈ ಸೇನಾಧಿಪತಿಯ ನೇಮಕವಾಗಿರಬೇಕೆಂದು ಆ ಕಾಲದಲ್ಲಿ ಹೆದರಿದವರೂ ಇದ್ದರು. ಆದರೆ ಸೇನಾನಿ ವೇವೆಲ್ ಆಗಲೇ ಹೇಳಿದ್ದರು. 'ನಾನು ಓರ್ವ ನಾಗಂಕನಾಗಿ ನಮ್ಮ ಮತ್ತು ಭಾರತದ ಹಿತ ಸಾಧನೆಯನ್ನು ಉತ್ತಮ ರೀತಿಯಿಂದ ಮಾಡಬಹುದೆಂಬ ಆಶೆ ಕಟ್ಟಿಕೊಂಡು ನನ್ನ ಸಮಯವನ್ನು ಮತ್ತು ಸೇನಾ ಜೀವನವನ್ನು ಕಳಚಿ ಹಾಕಿಕೊಂಡಿದ್ದೇನೆ.' ಈ ಮಾತನ್ನು ಲೋರ್ಡ್ ವೇವೆಲರು ನಿಜಕ್ಕೂ ಪಾಲಿಸಿದ್ದರು; ವ್ಯಯದು ಹೃದಯದ ನಾಗರಿಕನಂತೆ ಹಿಂದೀ ರಾಜಕಾರಣಿಗಳ ನಡುವೆ ವರ್ತಿಸಿದ್ದರು. ಆ ಮಹತ್ವಾಪ ಜವಾಬ್ದಾರಿ ಹೊರಲು ಹೊರಡುವ ಹೊತ್ತಿನಲ್ಲಿ ವೇವೆಲರು ಪ್ರದರ್ಶಿಸುತ್ತಿದ್ದ ಜಾಗರೂಕತೆಯನ್ನು ಕಂಡು, ಅವರನ್ನು ಬೀಳ್ಕೊಟ್ಟ ಚರ್ಚಿಲ್ಲರು "ತಾನು ಶಾಲಿಡವ ನೇತಾವೆಯನ್ನು ಆನೆ ಪರೀಕ್ಷಿಸಿ ನೋಡಿಕೊಳ್ಳುವಂತೆ ವೇವೆಲರೂ ತನ್ನ ಕಾರ್ಯಧಾರಗಳನ್ನು ಅವಲೋಕಿಸುವರಿ" ಎಂದಿದ್ದರು. ಹೇಗಿದ್ದರೂ ಆ ಕಾಲದ ಭಾರತದ ರಾಜಕೀಯ ಸಮಸ್ಯೆಗಳು ವೇವೆಲರಿಗೆ ಮತಾತ್ಮವೆಂದೇನು—ಯಾವನೇ ಒಬ್ಬನ ಹತೋಟಿಗೂ ಸಿಲುಕದಷ್ಟು ಬಿಂಕ ಸ್ವರೂಪಿಗಳಾಗಿದ್ದುವು. ಕಳ್ಳತ್ವ ಮತ್ತು ಬಂಗಾಳದಲ್ಲಿ ಲಕ್ಷಾಧಿಧಿ ಜನರನ್ನು ಅಸುತಿ ಪಡೆದ ಭೀಕರ ಆಹಾರ ಬರಗಾಲ ವ್ಯಾಪಿಸಿದ್ದ ಕಾಲವದು. ವೇವೆಲ್ ವೈಸರಾಯಿಯಾದೊಡನೆ ಕಳ್ಳತ್ವಕ್ಕೆ ಧಾವಿಸಿ, ಆಹಾರಧಾನ್ಯವ ಪೀಡೆಗಳನ್ನು ತಗ್ಗಿಸಲು ಸಮಾವಧಿ ಪ್ರಯತ್ನ ಮಾಡಿದ್ದರು; ಸೈನಿಕರನ್ನು ಕಾರ್ಯಕ್ಕೆಳಿಸಿದರು. ವೈಸರಾಯ ಮಂಡಲಿಯಲ್ಲಿ ಜನ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕೆಂದು ಅವರು ಸಂಕಲ್ಪಿಸಿದ್ದರು. ಆಗ ಕಾಂಗ್ರೆಸ್ಸಹದಲ್ಲಿದ್ದ ಕಾಂಗ್ರೆಸ್ ನಾಯಕರುಗಳನ್ನು ಬಿಡುಗಡೆ ಮಾಡಿಸಿ, ಅವರಿಗೂ ಲೀಗ್ ನಾಯಕರುಗಳಿಗೂ ಆಮಂತ್ರಣಗಳನ್ನು ಕಳುಹಿಸಿದರು. ಆಂತೆಯೇ ಇತರ ಅಲ್ಪಸಂಖ್ಯಾಕ ಸಮಾಜಗಳವರೂ ತಮ್ಮ ಪ್ರತಿನಿಧಿಗಳನ್ನು ಕಳುಹುವಂತೆ ಆಹ್ವಾನಿಸಿದರು. ಸಮ್ಮೇಳನವೇನೋ ಸೇರಿತು; ಆದರೆ ಅದರ ಸಹಭಾಗಿ ಪಕ್ಷಗಳೊಳಗೆ ಒಮ್ಮತವೆಂಬುದ ದೆಸೆಯಿಂದ ಅದು ಪರಾಭವಗೊಂಡಿತು. ಈ ಕಾರ್ಯ ವ್ಯವಸ್ಥೆಗಾಗಿ ವೈಸರಾಯರೇ ವೇವೆಲ್ ಎಂಡೆರಡು ಬಾರಿ ಢಿಲ್ಲಿ ಮತ್ತು ಲಂಡನುಗಳ ನಡುವೆ ಓಡಾಡಿದ್ದರು; ಆ ನಂತರ ಬ್ರಿಟಿಷ್ ಸರಕಾರವು ತನ್ನ ಮೂವರು ಮಂತ್ರಿಗಳ ತ್ರಿಮೂರ್ತಿ ಸಮಿತಿಯನ್ನು ಭಾರತಕ್ಕೆ ಕಳುಹಿ ಕೊಟ್ಟಿತು. ಈ ಸಮಿತಿಯ ಸೂಚನೆಗಳಾ ಭಾರತದ ರಾಜಕೀಯ ಪಕ್ಷಗಳೊಳಗಿನ ಭಿನ್ನಾಭಿಪ್ರಾಯಗಳ ದೆಸೆಯಿಂದ ನಿರ್ಥಕವಾದುವು. ಆ ಮೇಲೆ ಲೋರ್ಡ್ ವೇವೆಲರು ಮತ್ತೊಂದು ಪ್ರಯತ್ನಕ್ಕೆಳಿದು 'ಮಧ್ಯಾವಧಿ ಸರಕಾರ' ರಚಿಸಿಕೊಳ್ಳಲು ಹವಣಿಸಿದ್ದರು. ಅದಕ್ಕಾಗಿ ಕಾಂಗ್ರೆಸ್, ಲೀಗ್ ಮತ್ತಿತರ ಅಲ್ಪಸಂಖ್ಯಾಕ ಪ್ರತಿನಿಧ್ಯವುಳ್ಳ 14 ಮಂದಿಯನ್ನು ಆಹ್ವಾನಿಸಿದರು. ಈ ಪ್ರಯತ್ನವೊಂದು ಬಾರಿಗೆ ಫಲಬಿಟ್ಟಿತು. ಪ್ರಥಮತಃ ನಿರಂಕರಿಸಿದ್ದ ಮುಸ್ಲಿಂ ಲೀಗು ಈ ನಡುಗಾಲಾವಧಿ ಮಂತ್ರಿ ಸಮಿತಿಯಲ್ಲಿ ಸೇರಿಕೊಳ್ಳಲೊಪ್ಪಿತು; ಪಂಡಿತ ನೆಹರುಗಳು ಅದರ ಉಪಾಧ್ಯಕ್ಷನಾದರು. ಆದರೆ ಆ ಮೇಲಿನ ಹಜ್ಜೆಯಿಟ್ಟೊಡನೆಯೇ ಮುಸ್ಲಿಂಲೀಗಿನ ಪ್ರಬಲಾತಂಕ ಬಿದ್ದಿತು; ಘೆಟನಾ ಸಮಿತಿಯ ರಚನೆಗೆ ಒಂಭಿಸಿದ ಕೂಡಲೇ ಮುಸ್ಲಿಂ ಲೀಗ್ ಅದಕ್ಕೆ ಬಹಿಷ್ಕಾರ ಹಾಕಿತು; ತನ್ನು ಮಧ್ಯಾವಧಿಯ ಸಮ್ಮಿಶ್ರ ಸರಕಾರ ಸಮೇತ ಎಲ್ಲವೂ ಕುಸಿದು ಬೀಳುವಂದೆಂದು ಹೆದರಿದ ಬ್ರಿಟಿಷ್ ಸರಕಾರವು ಕಾಂಗ್ರೆಸ್, ಲೀಗ್ ಮತ್ತು ಸಿಖ್ ಪ್ರತಿನಿಧಿಗಳನ್ನು ಕರಕ್ಕೊಂಡು ಲಂಡನ್ನಿಗೆ ಬರುವಂತೆ ವೇವೆಲರನ್ನು ಕರೆಯಿತು. ಇವರೆಲ್ಲರೂ ಹೋಗಿ ಲಂಡನ್ನಿನಲ್ಲಿ ನಡೆಸಿದ ಮಾತುಕತೆ ಕೂಡಾ ಫಲ ಬಿಡಲಿಲ್ಲ; ಭಾರತೀಯರು ಬಿಕ್ಕಟ್ಟು ಬಲಗೊಂಡಿತು. ಇನ್ನೇನೇ ಆದರೂ ತಾವಂತೂ ಕೂಡಲೇ ಅಧಿಕಾರ ವರ್ಗಾಯಿಸುವೆವೆಂದು ಬ್ರಿಟಿಷ್ ಸರಕಾರವು ಘೋಷಿಸಿ, ಲೋರ್ಡ್ ವೇವೆಲರಂ ಬದಲಿಗೆ ಲೋರ್ಡ್ ಮೌಂಟ್ ಬ್ಯಾಟನ್ನರನ್ನು ವೈಸರಾಯಿಯಾಗಿ ಕಳುಹಿಕೊಟ್ಟಿತು. ಮೌಂಟ್‌ಬ್ಯಾಟನ್ ಬಂದವರೇ ರಾಜ್ಯ ವಿಭಜನಾ ಸೂತ್ರಗಳನ್ನು ಮುಂದಿಟ್ಟರು. 1947ನೇ ಆಗೋಸ್ತು 15ರಲ್ಲಿ ಭಾರತ ಮತ್ತು ಪಾಕಿಸ್ತಾನ್ ಸ್ವಾತಂತ್ರ್ಯ ಸ್ವಾಪನೆಗೊಂಡಿತು.

ಭಾರತದ ಇಷ್ಟೆಲ್ಲಾ ಕೆಲಸಗಳನ್ನು ಸಹೃದಯತೆಯಿಂದ ನಿರ್ವಹಿಸಿದ್ದ ಲೋರ್ಡ್ ವೇವೆಲ್ ಮೇ ತಾ. 24ರಲ್ಲಿ ಲಂಡನ್ನಿಲ್ಲಿ ನಿಧನಗೊಂಡರು. ಚಿರಕಾಲ ಭಾರತೀಯರ ಸ್ಮರಣೆಯಲ್ಲುಳಿಯುವ ಕೆಲವೇ ಬ್ರಿಟಿಷ್ ಹೆಸರುಗಳಲ್ಲಿ ವೇವೆಲರದೊಂದು.

ಲಿಯಾಖತರ ಅಮೆರಿಕಾ ಸಂಚಾರದ ಫಲಶ್ರುತಿ.

ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರ ಅಮೆರಿಕಾ ಸಂಚಾರ ಕಾರ್ಯಕ್ರಮವು ಪೂರ್ವ ನಿಶ್ಚಯದಂತೆ ಮೇ ತಾ 26ನೇ ರಾತ್ರಿ ಅಧಿಕೃತ ಮುಕ್ತಾಯಗೊಂಡಿದೆ. ಅಮೆರಿಕಾ-ಪಾಕಿಸ್ತಾನಗಳ ನಡುವಿನ ಮಾಧ್ಯಮವಾಗಿ ಮಿ. ಲಿಯಾಖತ್ ಅಲೀಖಾನರು ಸುಮಾರು ಒಂದು ತಿಂಗಳ ವರೆಗೆ ಅಲ್ಲಿ ನಡೆಸಿದ ವಹಿವಾಟುಗಳ ಸಾರವೇನೆಂಬುದನ್ನು ಯೋಚಿಸುವುದು ಸಂದರ್ಭೋಚಿತವಾದುದು

"ಅಮೆರಿಕನರು ಪಾಕಿಸ್ತಾನನನ್ನು ಸರಿಯಾಗಿ ತಿಳಿದುಕೊಳ್ಳುವಂತೆ ಮಾಡುವುದೊಂದೇ ನಮ್ಮೀ ಸಂಚಾರದ ಉದ್ದೇಶ" ಎಂದು ಮಿ. ಲಿಯಾಖತ್ ಅಲೀಖಾನರು ಅಲ್ಲಿ ಆಗಿಂದಾಗ ಹೇಳಿದ್ದರು; ಇದು ನಿಜವಾಗಿದ್ದರೆ ಮಿ. ಲಿಯಾಖತರ ಆ ಪ್ರವಾಸವು ಜಯಶೀಲವಾಯಿತು ಎಂದು ಒಪ್ಪಿಕೊಳ್ಳಲಡ್ಡಿಯಿಲ್ಲ. ಲಿಯಾಖತರ ಭೇಟಿಯ ಮೊದಲು ಅಮೆರಿಕಾನರಿಗೆ ಪಾಕಿಸ್ತಾನದ ಕುರಿತು ಗೊತ್ತಿಲ್ಲದಿದ್ದುದಕ್ಕಿಂತ ಹೆಚ್ಚಿನದು ಈ ದಿನಗಳಲ್ಲಿ ಗೊತ್ತಾಗಿದೆ.

ಮಿ. ಲಿಯಾಖತರು ಅಮೇರಿಕದಲ್ಲಿತ್ತಿದ್ದ ಹಲವು ಭಾಷಣಗಳಲ್ಲಿ ಬಂದಿದ್ದ ವಿಷಯಗಳಾದೂ ಪಾಕಿಸ್ತಾನದ ಜನನ ಮತ್ತು ಜೀವನಕ್ಕೆ ಸಂಬಂಧಿಸಿದವುಗಳೇ. ಪಾಕಿಸ್ತಾನ್ ನಿರ್ಮಾಣಕ್ಕೆ ಕಾರಣ-ಪಾಕಿಸ್ತಾನವು ತನ್ನನ್ನು ವಿರಿಸಿದ ಅಸಾಧ್ಯ ತೊಡಕುಗಳೆಲ್ಲವನ್ನೂ ನಿವಾರಿಸಿಕೊಂಡ ಬಗೆ-ಪಾಕಿಸ್ತಾನದ ಸುಖಕರ ಆರ್ಥಿಕ ಸ್ಥಿತಿ-ಪಾಕಿಸ್ತಾನದ ಆಯವ್ಯಯ ಸಮಾನತಾ ಬಜೆಟ್-ಪಾಕಿಸ್ತಾನ್ ಸರಕಾರದ ಭದ್ರತೆ ಮತ್ತು ಭವ್ಯತೆ-ಪಾಕಿಸ್ತಾನದಲ್ಲಿರುವ ಆಹಾರ ಉಳಿತಾಯ-ಪಾಕಿಸ್ತಾನದಲ್ಲಿರುವ ವ್ಯಾಪಾರಾನುಕೂಲತೆ-ಮುಂತಾದವಾ ಕಿಸ್ತಾನ್ ಮಹಾತ್ಕೈಗಳೆಲ್ಲವನ್ನೂ ಮಿ. ಲಿಯಾಖತರು ತಾವು ಹೋದಲ್ಲೆಲ್ಲಿಲ್ಲಾ ಪ್ರಚಾರ ಡಂಗುರ ರೂಪದಿಂದಲೇ ವರ್ಣಿಸಿದ್ದರು.

ಅವರು ಅಲ್ಲಲ್ಲಿತ್ತಿದ್ದ ಭಾಷಣಗಳಲ್ಲಿ ಹೆಚ್ಚಿನವು ಬರೆದು ತಂದೋದಿದವುಗಳೇ. ಪ್ರಚಾರ ಮೌಲ್ಯವನ್ನರಿತಿರುವ ಮಿ. ಲಿಯಾಖತರು ತಾನು ಹೋದಲ್ಲೆಲ್ಲಾ ಪತ್ರಿಕಾ ಪ್ರತಿನಿಧಿಗಳ ಕೂಟ ಕರೆದು, ಅಲ್ಲಿ ಮಧುಮಧುರವಾಣಿಯ ಹೇಳಿಕೆಗಳನ್ನು ಕೊಡಲು ಮರೆತಿರಲಿಲ್ಲ. ಒಟ್ಟಿನ ಮೇಲೆ ಮಿ. ಲಿಯಾಖತ್ ಅಲೀಖಾನರು ಅನೇಕರಿಕದ ಲಘ್ವೆನನ್ನ ತನ್ನೆಡೆಗೆ ಎಳೆದುಕೊಳ್ಳುವ ಪ್ರಯತ್ನಕ್ಕೆದಲ್ಲಿ ತಕ್ಕಮಟ್ಟಿಗೆ ಜಯಶೀಲರಾದರೆನ್ನಬಹುದು.

ಆದರೆ ಮಿ. ಲಿಯಾಖತರ ಪ್ರವಾಸವನ್ನು ತೂಕ ಮಾಡಿ ಬೆಲೆ ಹಚ್ಚಲಾಗುವ ಮತ್ತೊಂದು ಪ್ರವಾಸವು ಆ ಪೆಡದಲು ಪಂಡಿತ ನೆಹರುಗಳಿಂದಾಗಿದ್ದಿತು; ಅಂತೆಯೇ ಭಾಷಣ, ಹೇಳಿಕೆಗಳ ಗಾಂಭೀರ್ಯವೆಂತಿದ್ದರೂ ಲಿಯಾಖತ್ ಸಂಚಾರದ ಗೂಢ ಉದ್ದೇಶವೇನೆಂಬುದನ್ನು ಅರಿತುಕೊಳ್ಳುವ ಅಂಶವೂ ಆಲ್ಲಿದೆ.

ಮೂರನೆಯದಿರುವ ಅಮೆರಿಕ ಸರಕಾರವು ಎರಡು ಸ್ವತಂತ್ರ ರಾಷ್ಟ್ರಗಳ ಇಬ್ಬರು ಸ್ವಧಾನಿಗಳ ನಡುವೆ ಯಾವ ಪಕ್ಷಪಾತವನ್ನೂ ಪ್ರದರ್ಶಿಸದಿರಬೇಕಾದುದು ಸ್ವಾಭಾವಿಕ. ಆದರೆ ಅಮೆರಿಕದ ಜನತೆಯ ಪಾಲಿಗೆ ಅಂತಹ ಭೀತಿ ನಿರ್ಬಂಧವಾವುದೂ ಇರಲಿಲ್ಲವಾದ್ದರಿಂದ ಅವರು ನೆಹರು-ಲಿಯಾಖತರೊಳಗಿನ ವ್ಯತ್ಯಾಸಗಳನ್ನು ಅರಿತುಕೊಂಡಿದ್ದರೆನ್ನಬಹುದು.

ಅಮೆರಿಕದ ಜನತೆಯೆಂದರೆ ಲೀಗ್ ಮುಸ್ಲಿಮರ್ ಜನರಂತಲ್ಲ. ಆದ್ದರಿಂದ ಮಿ. ಲಿಯಾಖತ್ ಅಲೀಖಾನರು ಪಾಕಿಸ್ತಾನದ ದಶಕ್ಕೆ ಯೋಗ್ಯತೆಗಳನ್ನು ಮಾತ್ರವೇ ಅತ್ಯಂತ ರಮ್ಯವಾಗಿ ವರ್ಣಿಸುವಾಗ "ಇದು ಒಂದು ಕಡೆಯ ಅತ್ಯುತ್ತಮ ವಕಾಲತು" ಎಂದಲ್ಲದೆ ಹೆಚ್ಚಿಗನ್ನೂ ಕಟ್ಟಿಕೊಳ್ಳುತ್ತಿರಲಿಲ್ಲ; ಆ ಮೊದಲು ಅಲ್ಲಿಗೆ ಹೋಗಿದ್ದ ಪಂಡಿತ ನೆಹರುಗಳು ಭಾರತದಂತೆಯೇ ಪಾಕಿಸ್ತಾನದ ಕಡೆಯ ವಾದಗಳನ್ನೂ ಸಭಿಕರ ಮುಂದಿಟ್ಟು ತೋಲಿಸಿ, ತೀರ್ಮಾನಾಧಿಕಾರವನ್ನು ಸಭೆಗೇನೇ ಬಿಡುತಿದ್ದರು; ಸ್ಥಾಪಂಜಿಕ ಸ್ಥಿತಿಗತಿಗಳನ್ನು ಕೂಡಾ ಅಷ್ಟೇ ಅನಕ್ಷಿಯಂದ ವರ್ಣಿಸಿದ್ದರು. ಅದಕ್ಕನುಗುಣವಾಗಿ ಅಮೆಂಕನ್, ಜನತೆಯು ಪಂಡಿತ ನೆಹರುಗಳ ಮಾತುಗಳನ್ನು 'ಲೋಕದ ಅತಿ ದೊಡ್ಡ ಮನುಷ್ಯರಲ್ಲೊಬ್ಬನ' ಅಭಿಪ್ರಾಯವೆಂದು ಅಲಿಸಿದ್ದರೆ ಮಿ. ಲಿಯಾಖತರ ಮಾತುಗಳಿಗೆ 'ಪಾಕಿಸ್ತಾನದ ಸವರ್ಥ ನಾಯಕನ' ನುಡಿಗಳೆಂಬ ಭಾವನೆಯಿಂದಲೇ ಕಿವಿಗೊಟ್ಟಿದ್ದರು. ನೆಹರೂ ಹೃದಯ ಮತ್ತು ಧೋರಣೆಯು ವಿಶಾಲ ಶುಧಿಯಂತೆ ಅವರಿಗೆ ಕಂಡಿದ್ದರೆ, ಲಿಯಾಖತ ಧೋರಣೆ, ಭಾವನೆಗಳು ತೀವ್ರ ಪ್ರವಾಹದಂತೆ ಕಂಡು ಬಂದಿದ್ದುವು.

ಲಿಯಾಖತ ಪೂರ್ವ ತಯಾರಿಯ ಮತ್ತು ಅತಜಾಗರೂಕತೆಯ ನಡೆ ನುಡಿಗಳು, ನೆಹರುಗಳ ಸರಸ ಸ್ವಭಾವಿಕ ಮಾತು ಕೃತಿಗಳಷ್ಟು ಸುಲಭ ಸ್ವಾಸ್ಥ್ಯವಾಗಿರಲಿಲ್ಲ. ಮಿ. ಲಿಯಾಖತರ ಪಾಕ ಸಿದ್ಧ ಅಭಿಪ್ರಾಯಗಳು ಅಮೆರಿಕದ ಪತ್ರಿಕಾ ಪ್ರತಿನಿಧಿಗಳ ಮನಸೂರೆಗೊಂಡಿದ್ದುವಾದರೂ, ತಮ್ಮ ಸ್ವಭಾವಾನುಸಾರ ರಾಜಕೀಯ ಪತ್ರಿಕೆಯವರು ಹಾಕಿದ ಅಡ್ಡ ಸವಾಲುಗಳಿಲ್ಲಕ್ಕೂ ತೃಪ್ತಿಕರ ಉತ್ತರಕೊಡಲು ಮಿ. ಲಿಯಾಖತರಿಂದಾಗಲಿಲ್ಲ. "ಪಾಕಿಸ್ತಾನದಲ್ಲಿರುವ ಕಮ್ಯೂನಿಸ್ಟ್ ಚಳವಳಿಯ ಬಲಾಬಲಗಳೇನು?" ಎಂದು ಪ್ರಶ್ನಿಸಲ್ಪಟ್ಟಾಗ "ನಾನೇನೂ ಅದರ ಖಾನೇಶುಮಾರಿ ತೆಗೆದಿಲ್ಲ" ಎಂಬಂತಹ ಉತ್ತರಗಳಿಂದ ಮಿ. ಲಿಯಾಖತರು ಜಾರಿಸಿಕೊಳ್ಳುತಿದ್ದು ಅಮೆರಿಕನ್ ಪತ್ರಿಕಾವಾಲರಿಗೆ ಸಂತೋಷವಾಗಿರಲಿಲ್ಲ.

(೬ನೇ ಪುಟ ನೋಡಿರಿ)

ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು-ಳುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ! ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ. 1—0—0

ಪ್ರತಿಗಳು ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ, ಇಲ್ಲಿ ದೊರೆಯುತ್ತವೆ

THE
Canara Banking Corporation Ltd.
(Incorporated in India)
Estd: 1906.
Head Office : UDIPI, (S. I.)

Capital Authorised .... Rs. 25,00,000
Capital Issued, Subscribed &
Paid up .... Rs 20,00,000
Reserves .... Rs. 9,44,765

ಗುರುವಾರ ಉಡುಪಿ ೧೬-೬-೧೯೫೫

ಸಂಯುಕ್ತ ರಾಷ್ಟ್ರ ಸಂಘ!

ಜಾಗತಿಕ ಶಾಂತಿ ಸ್ಥಾಪನೆ ಮತ್ತಿತರ ರಕ್ಷಣೆಗಾಗಿ ಇರುವ ಸಂಯುಕ್ತ ರಾಷ್ಟ್ರಗಳ ಇದುವರೆಗಿನ ಕಾರ್ಯಕಲಾಪಗಳು ಸಮಾಧಾನಕರವಲ್ಲವೆಂಬುದು ನಿಜವಾದರೂ, ಸೂರ್ಣ ನಿರಾಶಾದಾಯಿಯಾಗಿಯೂ ಇಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. ಪಾಲುಗಾರರೊಳಗೆ ಪರಸ್ಪರ ಸ್ಪರ್ಧೆ, ವೈಷಮ್ಯಗಳಿದ್ದಲ್ಲಿ ಯಾವ ಸಂಸ್ಥೆಯೂ ಪರಿಣಾಮಕಾರಿಯಾಗಿ ಕಾರ್ಯ ಮಾಡಲಾರದು; ಅಂತೆಯೇ ಪರಸ್ಪರ ದ್ವೇಷಾಸೂಯೆ ಕಟ್ಟಿಕೊಂಡಿರುವ ರಶ್ಯಾ ಮತ್ತು ಅಮೇರಿಕ, ಬ್ರಿಟನುಗಳೊಳಗೆ ಸಹಭಾಗಿಗಳಾಗಿರುವ ಜಾಗತಿಕ ಸಂಘವು ತನ್ನ ಧ್ಯೇಯ ಘೋಷಣೆಗಳಿಗನುಗುಣವಾದ ಕಾರ್ಯ ಸಾಧಿಸಲಾಗದ ಹಿಂದೆ ಬಿದ್ದಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೂ, ಇವೆರಡು ವಿರುದ್ಧ ಪಕ್ಷಗಳನ್ನು ಒಂದೆಡೆ ಸೇರಿಸಿಟ್ಟುಕೊಂಡಿರುವ ಸಂಸ್ಥೆಯೆಂದರೆ ಜಾಗತಿಕ ಸಂಘವೇ. ಅಮೆರಿಕ-ರಶ್ಯಾಗಳೊಳಗಿನ ಮೇಲಾಟಗಳನ್ನು ತಾಣವಾಗ, ಎಂಥಹ ಗಡಬಡ ನಡೆದಿದ್ದರೂ ಅವೆರಡು ರಾಷ್ಟ್ರಗಳಿಗೊಂದು ನೆಗಳಾಗಿ ಈ ಸಂಘವಿಲ್ಲದಿರುತ್ತಿದ್ದರೆ, ಪರಿಸ್ಥಿತಿ ಇನ್ನೆಷ್ಟು ಭೀಕರವಾಗುತಿತ್ತೋ ಹೇಳಬರುವುದಿಲ್ಲ. ಇದ್ದ ರಂದ ನಿರೀಕ್ಷಿಸಿದಷ್ಟು ಸತ್ಪರಿಣಾಮವಾಗದಿದ್ದರೂ, ಸಂಯುಕ್ತ ರಾಷ್ಟ್ರಕೂಟವಿದ್ದುದರಿಂದ ಅನ್ಯೋನ್ಯ ಸಹಕಾರಕ್ಕೆ ಅನುಕೂಲತೆಗಳೇನೋ ಇದ್ದೇ ಇವೆ. ಮೇಲಾಗಿ ಲೋಕಶಾಂತಿ ಸಾಧನಕ್ಕೆ ಯಾವುದಾದರೊಂದು ಪ್ರಬಲ ಉಪಕರಣ ಬೇಕೇಬೇಕು; ಈಗಿನ ಸಾಧನವು, ಈ ವರೆಗಿಂತಹ ಕೆಲಸಕ್ಕೆ ಬೀಳದೆ ಹೋದರೂ ಅದರಲ್ಲಿರುವ ಲೋಪದೋಷಗಳನ್ನು ನಿವಾರಿಸಿಕೊಂಡರೆ ಇಚ್ಛಿತ ಪರಿಣಾಮ ಹೊಂದಲಡ್ಡಿಯಿಲ್ಲ. ಉಳಿದ ವೊಂದು ಬಾರಿ ಮುಂಡಾದರೆ, ಆದನ್ನು ಸಾಣೆಗೆ ಕೂಟ್ಟು ಉಪಯೋಗಿಸುವಷ್ಟು ಸುಲಭದಲ್ಲಿ ಹೊಸಾಯುಧ ತಯಾರಿಸಿಕೊಳ್ಳಲಾಗುವದಿಲ್ಲ; ತಯಾರಿಸಿಕೊಂಡರೂ, ನ್ಯಮುಖಾಂತ್ಯಗಳ ಇಂದಿನ ಪಾಷಾಣ ಬುದ್ಧಿಗೆ ಪ್ರಯೋಗಿಸುವಾಗ, ಅದು ಕ್ಷಾಡಾ ನೋಡಾಗಲೇ ಬೇಕು. ಲದ್ದರಿಂದ ಸಂಯುಕ್ತ ರಾಷ್ಟ್ರಸಂಘವನ್ನು ಸದ್ವಿನಿಯೋಗ ಮಾಡಿಕೊಳ್ಳುವ ಕಡೆಗೆ, ಸಂಬಂಧಪಟ್ಟ ಎಲ್ಲಾ ರಾಷ್ಟ್ರಗಳ ಲಕ್ಷ್ಯ ಬೀಳಬೇಕಾದುದು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ. ಜಗಳ ಗ್ಗಂಟೇ ಪೌರುಷವಂತರೇ ಇರುವಲ್ಲಿ, ಅರಿತಾಣೇ ಮಧ್ಯಸ್ಥಗಾರನೊಬ್ಬನಿದ್ದರೂ ಕೆಲವಂಶ ಕೆಲಸವಾಗದು ಹೋಗುಂದಿಲ್ಲ. ಇದಕ್ಕೆ ನಿದರ್ಶನವಾಗಿ ಕಾಶ್ಮೀರ ವಿವಾದವನ್ನೇ ತೋರಿಸಬಹುದು. ಕಾಶ್ಮೀರ ಸಮಸ್ಯೆಯ ಕುರಿತು ಸಂಯುಕ್ತ ರಾಷ್ಟ್ರ ಸಂಘವು, ಇದು ವರೆಗೆ ಮಾಡುತ್ತಿತ್ತು ಬಂದಿರುವ ಕಾರ್ಯಗಳಾಗಲೀ, ಅದು ವಹಿಸಿರುವ ಘೋಷಣೆಯಾಗಲೀ ಆ ಸಂಘಕ್ಕೆ ಕೀರ್ತಿ ತರುವಂತಹದಲ್ಲವೆಂಬುದು ನಿಜ; ಸಶಕ್ತ ಪೀಮಾಸನಕರ್ತನಂತೆ ವರ್ತಿಸುವುದ ಅದಕ್ಯಸಾಧ್ಯವಾಗಿ, ಅದೀ ಸಮಸ್ಯೆಯಲ್ಲಿ ಕೈ ಹಾಕಿ ಪೇಚಾಟದಲ್ಲಿರುವುದೂ ನಿಜವೇ. ಆದರೂ, ನಡುವೆ ಜಾಗತಿಕ ಸಂಘವೊಂದಿರುವುದಲ್ಲವಾಗಿದ್ದರೆ, ಕಾಶ್ಮೀರದ ಕಾಳಗವು ಭಾರತ-ಪಾಕಿಸ್ತಾನಗಳನ್ನು ಇಷ್ಟರಲ್ಲೇ ಎಲ್ಲಿ ವರೆಗೆ ಒಯ್ಯುತಿತ್ತೋ ಊಹಿಸುವುದು ಕಷ್ಟ. ಯಾವ ಕಾರಣಕ್ಕಾಗಿಯಾದರೂ, ಎಷ್ಟೇ ಕಡವಾದರೂ ಹೋರಾಟಕ್ಕಿಂತ ಶಾಂತಿಯು ಶ್ರೇಷ್ಠ. ಶಾಂತಿಯಾಸಗೊಂದು ಆಶ್ರಯ ಸ್ಥಾನವಾಗಿ ಸಂಯುಕ್ತ ರಾಷ್ಟ್ರ ಸಂಘ ವಿದ್ದುದರಿಂದಲೇ ಕಾಶ್ಮೀರದ ವಿವಾದ ದೊಡ್ಡ ಸ್ಫೋಟವಾಗಿ ಬೆಳೆಯದೆ ಈ ವರೆಗೂ ಜೀವಿಯೇ ಉಳಿಯುವಂತಾಯಿತೆಂಬ ಮಾದಂಯ ಉಪಕಾರವು ಲೋಕದ ಇತರ ಕಡೆಗಳ ಜಗಳಗಳ ಸಂಬಂಧದಲ್ಲೂ ಸಂಯುಕ್ತ ರಾಷ್ಟ್ರ ಸಂಘದಿಂದಾಗಿದ. ಸಕಾಲದಲ್ಲಿ ಸ್ವಪ್ನ ಪೀಮಾಸನಕೊಡುವ ಮತ್ತದನ್ನು ಜಾರಿಗೆ ತರುವ ಯೋಗ್ಯತೆಯು ಈ ಡಿನ ರಾಷ್ಟ್ರಕೂಟಕ್ಕೆಲ್ಲದಿರಬಹುದು, ಆದರೆ ಅಂತಹ ಯೋಗ್ಯತೆಯನ್ನು ತುಂಬಿಸಿಕೂಡುವದೊಂದೇ ಸಂಬಂಧಪಟ್ಟವರ ಕರ್ತವ್ಯವಾಗಿದ ಹೊರತು, ಇಂದಿನ ಅಯೋಗ್ಯತೆಗಾಗಿ ಆ ಉಪಯುಕ್ತ ಸಂಸ್ಥೆಯನ್ನು ಅಲ್ಲಗಳೆಯುವುದು ಸರಿಯಲ್ಲ.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಇಂದು ಮುಖ್ಯವಾಗಿ ಕಂಡುಬರುತ್ತಿರುವ ದೋಷ ವಾವುದು? ದೋಷಿಗಳಾರು, ಎಂಬ ಪ್ರಶ್ನೆಯೇಳುತ್ತಿದೆ. ಈಗ ಬಹುಮಟ್ಟಿಗೆ ಸ್ಪಷ್ಟವಾಗಿರುವಂತೆ ತಮಗಾಸಂಘದಲ್ಲಿರುವ ಬಹುಮತದ ಬಲದಿಂದ ಅಮೆರಿಕವು ರಶ್ಯದ ವಿರುದ್ಧವಾಗಿ ಅಲ್ಲಿ ಮಾಡುತ್ತಿರುವ ಕೆಲವು ಬೇಡವಾದ ಕಾರ್ಯಗಳೇ ಪರಿಸ್ಥಿತಿಯನ್ನು ಹಾಳು ಮಾಡಿವೆ, ಎನ್ನಬಹುದು. ನಿದರ್ಶನಕ್ಕೆ ಸ್ಪಷ್ಟವಾಗಿ ಜಾಗತಿಕ ಸಂಘದ ಕೆಲವು ಕಮಿಟಿ ಕಛೇರಿಗಳಲ್ಲಿ ಮೇಲೆಂದೆ ಮೇಲೆ ಬಹುಸ್ಥಾನ ಪಾಶ್ಚಾತ್ಯರು ಪ್ರಮುಖ ಜವಾಬ್ದಾರಿಯ ಪ್ರಶ್ನೆಯನ್ನೇ ತೆಗೆದುಕೊಳ್ಳಲಿ. ಆಫ್ರೋ ಏಷ್ಯನ್ ರಾಷ್ಟ್ರಗಳಿಗೂ ಅವಕಾಶ ಕೊಡಬೇಕೆಂಬ ಕೂಗು ಎದ್ದಿರುವುದು ಪಾಶ್ಚಾತ್ಯರಲ್ಲಿ ಕೆಲವರಿಗೆ ಕಿವಿಗೆ ಬಿದ್ದಿಲ್ಲವೆಂದಲ್ಲ. ಆದರೆ ಅವರು ಅಂತಹ ಕೂಗಿಗೆ ಕಿವಿಗೊಡದಂತೆ ನಟಿಸಿ; ತಮ್ಮ ಬಹುಮತೋಪಕ್ಕೆ ಬಾಧ್ಯವಾದುದೆಂಬ ಕಾರಣದಿಂದ ಪಸ್ಥಾನಿಯನ್ನು ಅಲ್ಲಗಳೆಯುವ ಅಧಿಕಾರ ಯಾರಿಗೂ ಇಲ್ಲ; ಆದ್ದರಿಂದಲೇ ಭಾರತ, ಬ್ರಿಟನುಗಳಂತಹ ರಾಷ್ಟ್ರಗಳು ಚೈನದ ಕಮ್ಯೂನಿಸ್ಟ್ ಸರಕಾರಕ್ಕೆ ಮನ್ನಣೆ ಕೊಟ್ಟವೆ. ಆದರೂ ಅಮೆರಿಕದ ಹಠಮಾರಿತನದಿಂದಾಗಿ ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಚೈನದ ಜಾಯಾಂಗ್ ಕೈ ಶೇಕ್ ಸರಕಾರದ ಪ್ರತಿನಿಧಿಯೇ ಸದಸ್ಯನಾಗಿ ಈಗಲೂ ಅಲ್ಲಿ ಉಳಿದು ಕೊಂಡಿದ್ದಾನೆ ಪ್ರತ್ಯಕ್ಷ ಚೈನದಲ್ಲಿ ಅಧಿಕಾರದಿಂದ ಇಳಿದಿರುವವರ ಕಡೆಯ ಮನುಷ್ಯ ಭದ್ರತಾ ಕೌನ್ಸಿಲಿನಲ್ಲಿಯೂ ಕೆಳಗಿಳಿದ, ಅಲ್ಲಿ ಗದ್ದುಗೆಗೇರಿರುವವರ ಪ್ರತಿನಿಧಿಯೇ ಇಲ್ಲಿಯೂ ಅಸನವನ್ನೇರಿರಕ್ಕೆ ದ್ವಂಬ ಸರಳ ನ್ಯಾಯವನ್ನು ಯಾರೂ ಅಲ್ಲಗಳೆಯಲಾರರು. ಆದರೆ, ಅಮೆರಿಕವು ಈ ನ್ಯಾಯ ಪಾಲನೆಗೂ ತಯಾರಿಲ್ಲ; ಈ ನ್ಯಾಯ ದೊರೆಯದೆ, ಜಾಗತಿಕ ಸಂಘದ ಯಾವ ಸಭೆ, ಸಮಿತಿಯಲ್ಲಿಯೂ ತಾನು ಭಾಗ ವಹಿಸಲಾರೆನೆಂದು ರಶ್ಯವು ಮುಷ್ಕರ ಹೂಡಿದೆ. ನ್ಯಾಯ ಪಾಲನೆ ಮತ್ತು ಶಾಂತಿ ರಕ್ಷಣೆಯ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿರುವ ಅಮೆರಿಕವು-ಲೋಕದ ಎಲ್ಲರ ಪಾಲಿನ ನೀತಿಯನ್ನೂ ಎತ್ತಿ ಹಿಡಿಯುವ ಲೋಕ ನಾಯಕ ತಾನೆಂಬ ರೇಂಕಾರ ಹೃದಶಿನ ತ್ತಿರುವ ಅಮೆರಿಕವು-ಇಂತಹ ದುರ್ವಾಜ್ಯ ಹೂಡಿರುವುದ ಕ್ಕೇನೆನ್ನಬೇಕು? ಒಂದೆಡೆಯ ಸ್ಥಿತಿಗತಿ ಚಿತ್ರವು ಬೇರೆ ಕಡೆಗಳವರ ಕಣ್ಣು ಮುಂದೆ ಮೂಡುವುದು ಪ್ರಚಾರ ಮಂತ್ರಕವೇ. ಲೋಕ ಶಾಂತಿ ಭಂಗ ಮತ್ತು ಅನ್ಯಾಯಾಚಂಕೆಗಳೆಲ್ಲವೂ ರಶ್ಯದಿಂದಲೇ ಆಗುತ್ತಿವೆ, ಎಂಬ ಅಮೆರಿಕ. ಬ್ರಿಟನುಗಳಂತಹ ರಾಷ್ಟ್ರಗಳ ವ್ಯವಹಾರ ಪ್ರಪಾಹದಲ್ಲಿ ಪ್ರಪಂಚದ ಗಣ್ಯಭಾಗವಿದೆಂದು ತೀರಾಡುತ್ತಿವೆ. ಹೀಗಾಗಿ ವಸ್ತು ಸ್ಥಿತಿಯು ಹೆಚ್ಚಿನವರ ಕಣ್ಣಿಗೆ ಮರೆಯಾಗಿದೆ; ಆದರೆ ಜೈನಾ ಪ್ರತಿನಿಧ್ಯದ ನ್ಯಾಯದಂಶವುಗಳು ಮುಂದೆ ಬರುವಂಗಲೂ ಲೋಕದ ಕಣ್ಣು ತೆರೆಯದಿರಲು ಸಾಧ್ಯವಿಲ್ಲ. ಯಾವ ಕಡೆಯವರೂ ನಿರ್ದೋಷಿಗಳಲ್ಲವೆಂಬುದು ಸ್ಪಷ್ಟವಾಗುತ್ತಿದೆ. ಇಂತಹ ಹೆರ, ಸ್ವಾರ್ಥ, ದ್ವೇಷಾಸೂಯೆಗಳಿರುವುದರಿಂದಾಗಿಯೇ ಲೋಕ ಶಾಂತಿ ಲಭಿಸಿಲ್ಲ; "ಧಂಡಾ ಸಮರ" ನಡೆದಿದೆ.

ಸಂಯುಕ್ತ ರಾಷ್ಟ್ರ ಸಂಘದ ಮುಖ್ಯ ಕಾರ್ಯದರ್ಶಿ ಎಮ್. ಟ್ರಿಗ್ವಿಲೀ ಅವರು ಈ "ಧಂಡಾ ಯುದ್ಧ"ದ ಮುಕ್ತಾಯ ಹಂಚಿಕೆಗಳನ್ನು ತೀರ್ಮಿಸುವುದಕ್ಕಾಗಿ ಇತ್ತೀಚೆಗೆ ಮೇಸ್ಕೋಕ್ಕೆ ತೆರಳಿ, ಅಲ್ಲಿ ಸ್ಟಾಲಿನರೊಡನೆ ನಡೆಸಿದ ಮಾತುಕತೆಗಳು ನಿಜಕ್ಕೂ ಕತ್ಹಲೆಯೆಡೆಯ ಕಿರಣಗಳಂತೆ. ರಶ್ಯದ ನಾಯಕನೊಡನೆ ಮಾತಾಡಿ ಮರಳುವಾಗಲೀ, ಅವರು ಬ್ರಿಟಿಷ್ ಪ್ರಧಾನ ಮಂತ್ರಿ ಅಟ್ಲಿಗಳ ನೆಲೆ ಸ್ಟೆಂಸ್ ಪ್ರಭುವಿನ ಬಡಿಲ್ಯರನ್ನು ಕಂಡು ವಿಚಾರವಿನಿಮಯ ನಡೆಸಿದ್ದರ ನಿರಸ್ತ್ರೀಕರಣದ ಮೇಲೂ ವಿ ದ್ಯಾಲಿಲ್ಲ. ಇವರಲ್ಲಿ ಲೋಕಶಾಂತಿ ಸಾ ತೆಯ ಜವಾಬ್ದಾರಿಯನ್ನು ಹೊತ್ತುಕೊಂಡಿರುವುದು ನಿ ಕ್ಕಾ ಕುಬ್ಜ ಚಕ್ಷ್ಮೆ. ಆಗಲ್ಲೇ ಅಮೆ ಪ್ರತಿನಿಧಿಗಳು ಬಹುಮತವನ್ನು ಸಂಯುಕ್ತ ರಾ ಕೂಟದ ಮೇಲೆ ಸೋವಿಯೆಟ್ ರಶ್ಯ ಈಗಲೂ ಭರವಸೆಯಿಟ್ಟಿ ಎಂದು ಲೀ ಆ ರಂದಿದ್ದಾರೆ. ಎಷ್ಟೇ ಎಳೆದಾಟ, ದೂ ಟ ನಡೆಸಿದರೂ ಸಂಯುಕ್ತ ರಾಷ್ಟ್ರ ಸ ಳೆದ ನಿಲ್ದಾಣವಿಟ್ಟು ಹೊರಗೆ ಕಾಲಿಡ ಯಾವ ಕಡೆಯವರೂ ಪ್ರಕೃತ ತಯಾ ಲ್ಲವೆಂಬುದು ಸ್ಪಷ್ಟವಿದೆ. ಅಂದಮೇಲೆ ತ್ಯಕ್ಕೂ ಪ್ರಪಂಚಕ್ಕೆಂದು ಅತ್ಯವಶ್ಯ ಗಿರುವ ಶಾಂತಿ ಸ್ಥಾಪನೆಗೆ, ಮೂಲಾ ವಾರವಾಗುವಂತೆ ಈ ಜಾಗತಿಕ ಸಂಘ ನ್ನೆ ಭದ್ರಪಡಿಸಿಕೊಳ್ಳಲು ಸಂಬಂಧಪಟ್ಟ ಸರ್ವರೂ ಏಕೆ ಪ್ರಯತ್ನಿಸಬಾರದೋ ಳಯದು. ಸತ್ಯ, ನ್ಯಾಯ, ಸಮಾನತೆಗಾಗಿ ತಂತಮ್ಮನ್ವಾರ್ಥಮತ್ತು ಸಂಕುಚಿ ಧೋರಣೆಗಳನ್ನು ಬದಿಗೊತ್ತಿಕೊಳ್ಳಲು. ಕ್ಕಡೆಯವರೂ ತಯಾರಾಗಬೇಕಾದುದು ಜಾಗತಿಕಸಂಘದಸಫಲತೆಗಿರುವ ಏಕವ ಕ್ಕುಪಾಯ. ಪರಸ್ಪರ ಅರೋಪಿಸಿಕೊಳ್ಳು ವುದರಲ್ಲಿ ನಿರತವಾಗಿರುವ ರಶ್ಯ-ಅಮೆ ಕಗಳಂತಹ ರಾಷ್ಟ್ರಗಳು ತಮ್ಮೀ ಜವ್ಯ ವನ್ನು ಬಿಟ್ಟು ಅತ್ಯಶ್ಯದ್ಧೀಕರಣ ವಾ ಕೊಳ್ಳುವ ಮೂಲಕ ಇನ್ನಾದರೂ ಲೋ ಕ ಶಾಂತಿ ಸಾಧನೆಗೆ ನೆರವಾಗುವಂತಾಗ ನೀರೀಕ್ಷಿಸಬಹುದಲ್ಲವೆ?

(ಹಿನೇ ಪುಟದಿಂದ ಮುಂದುವರಿದುದು)

ಆದರೆ ಒಂದು ರಾಷ್ಟ್ರದ ಪ್ರಧಾನಿಯ ಇನ್ನೊಂದು ರಾಷ್ಟ್ರಕ್ಕೆ ಪ್ರವಾಸ ಹೋದ ಅವರ ಬಹಿರಂಗ ಭಾಷಣಗಳಿಗಿಂತಲ ಪ ರ ದೆ ಯೊ ಳ ಗೆ ನ ಡೆ ಯು ವ ಒ ವಾ ಟು ಗ ಳಿಗೇನೇ ಹೆಚ್ಚಿ ಪ್ರಾಮುಖ್ಯತೆಯನ್ನೀಯ ಬೇಕಾಗುತ್ತ ಮಿ ಲಿಯಾಪತರ ಪ್ರವಾಸದ ಒಳ ದ್ದೇಶವೇನು? ಮತ್ತವರು ಅಲ್ಲಿ ತೆರೆ ವಂರೆಯಲ್ಲಿ ನಡೆಸಿದ ಸಹವಾಟುಗಳಾ ವು? ಎಂಬುದನ್ನು ಕಡೆಗೆ ಈ ಸಂದರ್ಭ ದಲ್ಲಿ ನೋಟ ಬೀರಬೇಕಾದುದು ಅಗತ್ಯ

ಅಮೆರಿಕದ ಭಂಡವಾಳ ಹೂಡಿಕೆಯ ಪ್ರ ನ್ನಾನದ ಅಭಿವೃದ್ಧಿಯ ಹಂಬಿಕೆ ಹಾ ಬರುವ ಉದ್ದೇಶವು ಮಿ. ಲಿಯಾಪತ ದಿಕ್ಕೆಂದು ತಿಳಿದು ಬರುತ್ತದೆ. ಮುಂ ನ ಹತ್ತು ವರ್ಷಗಳಿಗಾಗಿ ಒಂದು ವಿ ಯ ಡೋಲರುಗಳಿಗೆ ಸಹಾಯವನ್ನು ಪಾ ಸ್ತಾನವು ಅಮೆರಿಕದಿಂದ ಬಯಸುತ್ತಿ ವಂತಿದೆ ಅಮೆರಿಕಾನರ ಖಾಸಗಿ ಭಂ ಒಳವನ್ನು ಹಾಕಲು ಹೇಳಿಸಿದ ಮಾತ ಟೆಂದರೆ ಪಾಕಿಸ್ತಾನವೇ ಹೊರತು ಧಾರ ವಲ್ಲ ಎಂಬುದನ್ನು ಅಲ್ಲಿಯವರ ಮ ಮುಟ್ಟಿಸಲು ಮಿ. ಲಿಯಾಪತರು ವಿಶೇ ಒದ್ದಾಡಿದಂತಿದೆ; ಆದರೆ ಅ ಮೆರಿಕಾನರು ಮಾತ್ರ ಇಂತಹ ಸ್ವಾ ಜಾರದ ಪ್ರವಾಹದಲ್ಲಿ ಕಾಲುಬಿಟ್ಟು ತೇ ಹೋಗಲು ತಯಾರಿಲ್ಲ. ಅವರೀ ಮಟ್ಟಿ ಗೆ ಭಾರತ-ಪಾಕಿಸ್ತಾನಗಳೊಳಗೆ ಯಾ ಪಕ್ಷಪಾತವನ್ನೂ ಮಾಡುವಂತಿಲ್ಲ; ಎ ತ್ಯವಲ್ಲ, ತಾವು ಹೂಡುವ ಭಂಡವಾಳ ಸರಿಯಾದ ಗ್ಯಾರಂಟಿ ದೊರೆಯಬೇಕು ಮತ್ತು ತಾವು ಮುಂದಿಡುವ ಕೆಲವು ಶರ

ಗಳಿಗೊಪ್ಪಬೇಕು; ವಿನಹ ಅಮೆರಿಕದ ಭಂಡವಾಳ ಉತ್ಪಾದಿತ್ತ ಹರಿಯದು.

ಎರಡನೆಯದಾಗಿ ತಮಗೆ ಶಸ್ತ್ರಾಸ್ತ್ರಗಳ ಸಹಾಯವನ್ನು ಅಮೆರಿಕನ್ನು ಒದಗಿಸಬೇಕೆಂದು ಮಿ. ಲಿಯಾಖತರು ಅವೇಕ್ಷಿಸಿದ್ದರಿಂದೂ, ತನ್ನ ಗಡಿಗಳ ರಕ್ಷಣೆಯ ಅಶಾಶ್ವತನೆಯನ್ನು ಅಮೆರಿಕವು ಕೂಡಬೇಕೆಂಬ ಆಂತರ್ಯವನ್ನು ಕೂಡಾ ಅಲ್ಲಿ ಪ್ರಕಟಿಸಿದ್ದರಿಂದೂ ಊಹಿಸಲ್ಪಟ್ಟಿದೆ. ಆದರೆ ಈ ವಿಷಯಗಳೆಕ್ಕೂ ಭಾರತ—ಪಾಕಿಸ್ತಾನಗಳೊಗೆ ಪಕ್ಷಪಾತ ಮಾಡದೆ, ಎರಡು ರಾಷ್ಟ್ರಗಳನ್ನೂ ಸಮಾನತೆಯಿಂದ ಕಾಣುವ ಸಂಕಲ್ಪ ಅಮೆರಿಕದ್ದಿದೆ.

ಅಮೆರಿಕವು ವಿಶೇಷಾಸಕ್ತಿ ವಹಿಸಿದರೆ-ಅರ್ಥಾತ್ ಭಾರತವನ್ನು ಒತ್ತಾಯಿಸಿದರೆ-ಕಾಶ್ಮೀರ ಪ್ರಶ್ನೆ ಕೂಡಾ ಸುಲಭದಲ್ಲಿ ಬಗೆಹರಿಯಬಲ್ಲುದಂಬ ಗುವ್ಯಾಲೋಚನೆಯನ್ನು ಮಿ. ಲಿಯಾಖತರು ಅಮೆರಿಕದ ಅಧಿಕಾರಿಗಳಿಗೆ ಕೊಟ್ಟಿದ್ದರೆಂದು ತಿಳಿದು ಬಂದಿದೆ. ಆದರೆ ಈ ಮಟ್ಟಿಗೂ ಅಮೆರಿಕಾ ಸರಕಾರವು ಅಧಿಕ ಪ್ರಸಂಗಕ್ಕೆ ಹೋಗಲಿಚ್ಛಿಸುವದಿಲ್ಲ. ಆದು ಸರ್ ಓವೆನ್ ಡಿಕ್ಸನ್ರ ಸಂಧಾನ ಯತ್ನಗಳನ್ನು ನಿರೀಕ್ಷಿಸುತ್ತಿದೆ.

ಏನಿಲ್ಲೆಂದರೂ ಅಮೆರಿಕ-ಪಾಕಿಸ್ತಾನಗಳೊಗನ ಸಲುಗೆ ಮತ್ತು ಸಂಬಂಧವು ಲಿಯಾಖತರ ಈ ಬಾರಿಯ ಪ್ರವಾಸದಿಂದ ಹುಚ್ಚಿತೆಂಬುದು ನಿಜ. ಒಂದು ವ್ಯಾಪಾರ ಒಪ್ಪಂದವನ್ನಾದರೂ ಮಾಡಿಕೊಳ್ಳಲಾಗುವ ಅನುಕೂಲ ವಾತಾವರಣವು ಅವೆರಡು ರಾಷ್ಟ್ರಗಳ ನಡುವೆ ಈ ಮೂಲಕ ನಿರ್ಮಾಣಗೊಂಡಿದೆ. ಇಂತಹ ಒಂದು ವ್ಯಾಪಾರ ಒಡಂಬಡಿಕೆಯ ಸೂಚನೆಗಳು ಭಾರತ-ಅಮೆರಿಕಗಳ ನಡುವೆಯೂ ಓಡಾಡಿದ್ದುವು. ಆದರೆ ಭಾರತದಲ್ಲಿ ಉದ್ಯಮಗಳ ರಾಷ್ಟ್ರೀಕರಣವಾಗುವಾಗ ತಮ್ಮ ಉದ್ಯಮಗಳಿಗೆ ಸಮಾಧಾನಕರ ಪರಿಹಾರ ದೊರೆಯಬೇಕು-ಅಮದು ಸುಂಕ ಮೊದಲಾದವುಗಳ ಮಟ್ಟಿಗೆ ಬ್ರಿಟನ್ ಥಾಗೂ ಇತರ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಭಾರತವಿತ್ತಿರುವ ರಿಯಾಯಿತಿಯನ್ನೇ ತಮಗೂ ಕೊಡಬೇಕು, ಎಂದು ಮುಂತಾದ ಶರ್ತಗಳನ್ನು ಅಮೆರಿಕಾನರು ಮುಂದಿಟ್ಟುದರಿಂದ ಸಂಗತಿಯು ಸರ್ವಾಲೋಚನೆಯಲ್ಲಿದೆ.

ಅಮೆರಿಕದಲ್ಲಿ ಮಿ. ಲಿಯಾಖತ್ ಅಲೀ ಖಾನರ ಬಹಿರಂಗ ಪ್ರಚಾರದಿಳಿದ್ದಂತೆಯೇ ಕಿವಿಮಾತುಗಳೂ ಇದ್ದುವು; ಥಿಲ್ಲಿಯ ಒಪ್ಪಂದಕ್ಕೆ ಮೊದಲಿದ್ದ ದ್ವೇಷ ಸಂಬಂಧವೇ ಈ ಕಾಲದಲ್ಲೂ ಭಾರತ-ಪಾಕಿಸ್ತಾನಗಳೊಳಗಿರುತಿದ್ದರೆ, ಪಾಕಿಸ್ತಾನ್ ಪ್ರಧಾನಿಯ ಅಮೆರಿಕ ಪ್ರವಾಸದ ರೂಪವೇ ಬೇರೆ ಯಾಗುತಿತ್ತೆಂಬುದು ಖಂಡಿತ. ಹೇಗಿದ್ದರೂ ಒಡಂಬಡಿಕೆ, ನ್ಯಾಯ ಮತ್ತು ಕ್ರಮದ ಎಲ್ಲೆ ಮೀರಿ ಹೋಗದೆ ಸ್ವಸಮರ್ಥನೆ ಮಾಡಿಕೊಳ್ಳುವ ಅಧಿಕಾರವು ಪ್ರತಿಯೊಬ್ಬರಿಗೂ ಇದ್ದೇ ಇರುವದರಿಂದ ಮಿ. ಲಿಯಾಖತರ ಅಮೆರಿಕಾ ಪ್ರವಾಸದ ಕುರಿತು ಭಾರತವು ನಿಸೇಧ ಸೂಚಿಸುವ ಅಂಶವೇನೂ ಇಲ್ಲ. ಪಾಕಿಸ್ತಾನಿಗಳಾಗಲೀ, ಭಾರತೀಯರಾಗಲೀ ಹುಗ್ಗುವ ಅಥವಾ ಕುಗ್ಗುವ ಸಂಗತಿಗಳು ವುವೂ ಅಲ್ಲಿ ಆಗಿಲ್ಲ.

ಪ್ರಾಪಂಚಿಕ ವಿದ್ಯಮಾನ

ಲೋಕದ ಆಗು ಹೋಗುಗಳೆಲ್ಲವೂ ಯಥಾ ಪ್ರಕಾರ ಸಾಗಿವೆ. ಅಂತರಾಷ್ಟ್ರೀಯ ರಂಗದಲ್ಲಿ ಸಂದರ್ಭಾನುಗುಣವಾಗಿ ಅಲ್ಲೊಮ್ಮೆ ಇಲ್ಲೊಮ್ಮೆ ಕತೋರಾಚಣಿಗಳೂ ಭಯಜನಕ ಹೇಳಿಕೆಗಳೂ ಕಂಡು ಬರುತ್ತಿವೆ; ಲೇಖಕರ ತ್ತಿನ ಆದರೆ ಇವೆಲ್ಲವೂ 'ಥಂಡಾ ಹೋರಾಟ'ದ ಅಂಗಗಳಾಗಿ ನಡೆದಿವೆ ಹೊರತ. ಪ್ರತ್ಯಕ್ಷ ಹೋರಾಟದ ಜಾಗತಿಕ ಮಹಾ ಸ್ಫೋಟಕ್ಕೆ ಪೀಠಿಕೆಯಾಗುವಂತಹವಾಗಿಲ್ಲ.

೦೦

ಇಂಡೋಚೈನದ ಕಮ್ಯೂನಿಸ್ಟ್ ಬಂಡಾಯಗಾರರಿಗಿದಿರಾಗಿ ಅಲ್ಲಿಯ ವೀಟ್‌ನಾಮ್ ಸರಕಾರಕ್ಕೆ ತಾವು ಆರ್ಥಿಕ ಸಹಾಯ ಕೊಡಲಿರಂಭಿಸುವೆವೆಂದು ಆ ಸರಕಾರದ ನಾಯಕ ಬಾವೊದಾಯಿಯನರಿಗೆ ಅಮೆರಿಕ ಸರಕಾರವು ಅಧಿಕೃತ ಭರವಸೆ ಕೊಟ್ಟಿದೆ. ಈಜಿಪ್ಟಿನಿಂದ ಬ್ರಿಟಿಷ್ ಸೈನಿಗಳನ್ನು ಹಿಂದೆಗೆಯುತಕ್ಕದೆಂದು ಈ ಜಿಪ್ಟ್ ಸರಕಾರವು ಮುಂದಿಟ್ಟ ಸೂಚನೆಗಳಿಗೆ, ಬ್ರಿಟನ್ ಮತ್ತು ಈಜಿಪ್ಟುಗಳೊಳಗೆ ಒಂದು ಸೇನಾ ಒಪ್ಪಂದವಾದಲ್ಲಿ ತಾವು ಥಾಗೆ ಮಾಡಿಸಲು ತಯಾರಿರುವೆವೆಂದು ಬ್ರಿಟಿಷ್ ಸರಕಾರವು ಸಶರ್ತ ಒಪ್ಪಿಗೆ ಕೊಟ್ಟಿರುವುದಂದು ತಿಳಿದುಬರುತ್ತದೆ.

೦೦

ಟರ್ಕಿಯಲ್ಲಿ ಸುಮಾರು ಇಲುವತ್ತ ಮಾನಗಳಂದಿದ್ದ ಒಂದು ರೀತಿಯ ಸರ್ವಾಧಿಕಾರವು ಇದೇ ಮೇ 14ರಲ್ಲಿ ನಡೆದ ಪ್ರಜಾಸಕ್ತಾತ್ಮಕ ಸಾರ್ವತ್ರಿಕ ಚುನಾವಣೆಯ ಮೂಲಕ ರದ್ದಾಗಿದೆ. ಟರ್ಕಿಯನ್ನು ಳುತಿದ್ದ ಇನೋನು ನಾಯಕತ್ವದ ರಿಪಬ್ಲಿಕನ್ ಜನತಾ ಪಕ್ಷವು ಈ ಚುನಾವಣೆಯಲ್ಲಿ ಸೋಲಿಸ್ಪಟ್ಟು ಜಲಾಲ್ ಬಾಯರ ನಾಯಕತ್ವದ ಡೆಮೊಕ್ರಟಿಕ್ ಪಕ್ಷವು ಗೆದ್ದು ಬಂದಿದೆ. ಜಲಾಲ್ ಬಾಯರು ಟರ್ಕಿಯ ಅಧ್ಯಕ್ಷರಾಗಿ ಆರಿಸ್ಪಟ್ಟಿದ್ದಾರೆ. ಅತ್ತ ಅಖಿಲ ಜರ್ಮನಿಯನ್ನು ಪುನಃ ಒಂದು ಗೂಡಿಸುವ ಪ್ರಥಮ ಹೆಜ್ಜೆಯಾಗಿ, ಇಡೀ ಜರ್ಮನಿಯಲ್ಲಿ ಏಕರೀತಿಯ ಚುನಾವಣೆ ನಡೆಸುವರೆಗೆ, ಒಂದು ಚುನಾವಣಾ ಶಾಸನ ತಯಾರಿಯಲ್ಲಿ ತಮ್ಮೊಡನೆ ಸಹಭಾಗಿಗಳಾಗಬೇಕೆಂದು ಜರ್ಮನಿಯಲ್ಲಿರುವ ಅಮೆರಿಕ, ಬ್ರಿಟನ್, ಫ್ರಾನ್ಸ್‌ಗಳ ಹೈ ಕಮಿಶನರರುಗಳು ಅಲ್ಲಿಯ ರಷ್ಯನ್ ನಿಯಂತ್ರಣಾ ಹೈ ಕಮಿಶನರನ್ನು ಕೇಳಿಕೊಂಡಿದ್ದಾರೆ

೦೦

ವಾಸ್ಪರ ಹಿತಸಾಧನಾ ಪರ್ಯಾಲೋಚನೆಗಾಗಿ ಬಂಗಿಯೋದಲ್ಲಿ ಫಿಲಿಪ್ಪಾಯಿನ್ಸ್, ಆಸ್ಟ್ರೇಲಿಯ, ಭಾರತ, ಪಾಕಿಸ್ತಾನ್, ಸಿಲೋನ್, ಇಂಡೋನೇಶಿಯಾ, ಥೈಲೇಂಡ್—ಈ ಏಷ್ಯ ರಾಷ್ಟ್ರಗಳ ಸಮ್ಮೇಳನ ನಡೆಯಿದೆ. ಧ್ಯೇಯದಿಂದ ಆಗ್ನೇಯ ಏಷ್ಯಾದ ರಾಷ್ಟ್ರಗಳೊಟ್ಟಿಗೆ ಒಂದೆ ಶಾಶ್ವತ ರಕ್ಷಣಾ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ಆ ಸಮ್ಮೇಳನದಲ್ಲಿ ಫಿಲಿಪ್ಪಾಯಿನ್ಸಿನ ವಿದೇಶ ಕಾರ್ಯದರ್ಶಿ ರೋಮುಲೋ ಆಗ್ರಹ ಪೂರ್ವಕ ಕೇಳಿಕೊಂಡಿದ್ದಾರೆ. ಮಲಯದ ದಂಗೆಗಾರರ ವಿರುದ್ಧ ಕಾರ್ಯ ಪ್ರೇರಣೆಗಾಗಿ ಬ್ರಿಟನಿನ ಯುದ್ಧಮಂತ್ರಿ ಮತ್ತು ವಸಾಹತು ಕಾರ್ಯದರ್ಶಿಗಳು ಮಲಯದಲ್ಲಿ ಸಂಚರಿಸಿ ಅಲ್ಲಿಯ ಹಳ್ಳೀ ರಕ್ತಕ್ರ ದಳವೇ ಮೊದಲಾದವನ್ನು ಹುರಿದುಂಬಿಸಿದ್ದಾರೆ. ಆರ್ಥಿಕವಾಗಿ ಹಿಂದೆ ಬಿದ್ದಿರುವ ಲೋಕ ವಿಭಾಗಗಳಿಗೆ ಮಾರ್ಷಿಲ ಸಹಾಯವನ್ನು ಸ್ಥಾಪಿಸುವ ಸಂಬಂಧದ ಲೋಕ ಸಮ್ಮೇಳನ ವೊಂದನ್ನು ಜಿನಿವಾ ಹಂಚಿಕೆಯನ್ನು ಸಂಯುಕ್ತರಾಷ್ಟ್ರಕೂಟ ತಯಾರಿಸುತ್ತಿದೆ.

೦೦

ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಅಧಿವೇಶನವು ಲೋಂಡಾ ಎಂಬಲ್ಲಿ ಎರಡು ದಿನ ಜರಿ ಗೋವೆಯನ್ನು ಭಾರತ ಕೇಂದ್ರದೊಂದಿಗೆ ಮಿಲನಗೊಳಿಸಿಕೊಳ್ಳುವ ಸರ್ವ ಪ್ರಯತ್ನಗಳನ್ನು ಮಾಡತಕ್ಕು ದೆಂದೂ ನಿರ್ಣಯಿಸಿದೆ.

1950ನೇ ಫೆಬ್ರವರಿ 10ರಿಂದ ಸಿಂಧ ಪ್ರಾಂತ್ಯ ಬಿಟ್ಟು ಭಾರತಕ್ಕೋಡಿ ಹೋಗಿರುವ ಎಲ್ಲಾ ಸಿಂಧಿ ನಿರಾಶ್ರಿತರನ್ನೂ ಮರಳಿ ಪಾಕಿಸ್ತಾನದೊಳಕ್ಕೆ ಸ್ವಾಗತಿಸಿಕೊಳ್ಳಲಾಗುವದಂದು ಪಾಕಿಸ್ತಾನ್ ಸರಕಾರವು ಜಾಹೀರು ಮಾಡಿದೆ. ಆ ತರೀಕಿನಿಂದ ಭಾರತದ ಉತ್ತರ ಪ್ರದೇಶ, ಥಿಲ್ಲಿ ಮತ್ತು ರಾಜಸ್ಥಾನಗಳಗೋಡಿರುವ ಘುಸ್ಲಿಮರನ್ನು ಮರಳಿ ಭಾರತಕ್ಕೆ ಬರಮಾಡಿಸಿಕೊಳ್ಳುವೆನೆಂದು ಭಾರತ ಸರಕಾರವು ಇತ್ತೀಚಿಗೆ ಕೋರಿಸಿದ್ದ ರಿಯಾಯತಿಗೆ ಪ್ರತಿಯಾಗಿ ಪಾಕಿಸ್ತಾನದ ಈ ರಿಯಾಯತಿ.

ಕಾಶ್ಮೀರ ವಿವಾದದ ಮಧ್ಯಸ್ಥಗಾರರನಾಗಿ ಬಂದಿರುವ ಸರ್. ಓವೆನ್ ಡಿಕ್ಸನ್‌ರು ಇದೇ ತಾ. 27ರಲ್ಲಿ ನವಥಿಲ್ಲಿಯಲ್ಲಿ ಭಾರತ ಪ್ರಧಾನಿ ಪಂಡಿತ ನೆಹರೂಗಳನ್ನು ಕಂಡು ಮಾತುಕತೆ ನಡೆಸಿದ್ದಾರೆ. ಅಂತೆಯೇ ಆಧ್ಯಕ್ಷ ರಾಜೇಂದ್ರ ಪ್ರಸಾದರೊಡನೆಯೂ ಸಂಧಾನಿಸಿದ್ದಾರೆ.

ಉಡುಪಿ

ನುನಿಸಿಪಲ್ ಮಿಾಟಿಂಗು:—ಕಳೆದ ತಾ 27ಲ್ಲಿ ಸಂಜೆ ಚಿಯರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಆಧ್ಯಕ್ಷತೆಯಲ್ಲಿ ಜರಿಗಿತು. ದ. ಕ. ಜಿಲ್ಲಾ ಹರಿಜನ ಸೇವಕ ಸಂಘಕ್ಕೆ ರೂಪಾಯಿ 25/- ಸಹಾಯಧನವನ್ನು ಯಲಾಯಿತು. ಸೆಂಟ್ರಲ್ ವಾರ್ಡಿನ ಟ್ಯೂಬ್ ಸ್ಟಾನಿಂಗ್ ಯೋಜನೆಯನ್ನು ಇಸ್ಪರಲ್ಲೇ ನಿಲ್ಲಿಸಿ ಈ ತನಕ ಖರ್ಚು ಮಾಡಿದ ಹಣವನ್ನು ಸಂಬಂಧ ಪಟ್ಟ ತೆರಿಗೆದಾರರಿಂದ ವಸೂಲು ಮಾಡುವರೆ ಅನುಮತಿ ಕೊಡುವಂತೆ ಮದ್ರಾಸು ಸರಕಾರವನ್ನು ಕೇಳಿಕೊಳ್ಳಬೇಕೆನ್ನುವ ಶ್ರೀ ಎ. ಮಂಜುನಾಥರಾಯರ ನಿರ್ಣಯವು ಮಂಜೂರಾಯಿತು.

ಶ್ರೀ ಕೆ. ಕೆ. ಹೆಬ್ಬಾರರಿಗೆ ಸತ್ಕಾರ ಕೂಟ:—ದೇಶವಿದೇಶಗಳಲ್ಲಿ ಕಲಾಸಂಸ್ಕೃತಿಯಲ್ಲಿ ಹೆಸರು ಪಡೆದ ಶ್ರೆಷ್ಠಿಯನ್ನು ಹ್ಯಾನ್ಯೂಬ್ ಇಳೇ ವಿದ್ಯಾರ್ಥಿ ಶ್ರೀ ಕೆ. ಕೆ. ಹೆಬ್ಬಾರರನ್ನು ಗಾರವಿಸುವರೆ ಅದೇ ಶಾಲೆಯ ಹಳೆ ವಿದ್ಯಾರ್ಥಿ ಸಂಘದವರು ಳೆದ ತಾ. 24ರಲ್ಲಿ ಶ್ರೀ ಎ. ಲಕ್ಷ್ಮೀನಾರಾಯಣರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಆರ್. ಆರ್. ಕುಂಜೂರಾಯ ಸ್ವಾಗತ ಭಾಷಣ ಮಾಡಿದ ನಂತರ ಶ್ರೀಗಳಾದ ಟಿ. ಎ. ವೈ. ಕೊಚ್ಚಿಕಾರ್ ಪದನಿಭ ಶ್ರೀ ಯಸ್. ಎಸ್. ಮಂತಾಯಸ್, ಡಬ್ಲ್ಯೂ. ಎ. ಸುಬ್ಬಿತ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು

ಕುಲಾಲ ಸಮಾಜೋದ್ಧಾರಕ ಸಮಿತಿ ಸಭೆ:—ದ. ಕ. ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿಯ ಉಡುಪಿ ರಾಜಿಯ ಮಹಾಸಭೆಯು ಳೆದ ತಾ. 21ರಲ್ಲಿ ಮೊರ್ಡನ್ ಹಾ ಎ ಶಾಲಾ ಕಟ್ಟಡದಲ್ಲಿ ಶ್ರೀ ಟಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಿಗತು. ಕಾರ್ಯಕ್ರಮಸಂತರ ಶ್ರೀ ಬಿ. ಎಸ್. ಕುಲಾಲರು ಸ್ವಾಗತೋಪಣ ಮಾಡಿದ ನಂತರ ಕಾರ್ಯದರ್ಶಿ ಶ್ರೀ ಬಿ. ಚಿಕ್ಕಯ್ಯನವರು ಗತವರುಷದ ವರದಿಯನ್ನೊಪ್ಪಿಸಿದರು. ಶ್ರೀಗಳಾದ ಎಮ್. ಕಾಂತಪ್ಪ, ಶೀನಕುಲಾಲ್, ಬಿ. ಶಿವಪ್ಪನಾಸ್ತರ್, ಎಚ್. ಹಿರಿಯಣ್ಣ, ಎ. ನಕ್ಕನಾಸ್ತರ್, ಚಂದಪ್ಪಶ್ಯಾನುಭೋಗ ಮೊದಲಾದವರು ಸಮಾಜದ ಸಂಗಾಯ ಕುರಿತು ಸಲಹೆಗಳನ್ನಿತ್ತು ಭಾಷಣ ಮಾಡಿದರು. ನಂತರ ಹೊಸ ವರುಷಕ್ಕೆ ಶ್ರೀಗಳಾದ ಬಿ. ಚಿಕ್ಕಯ್ಯ (ಅಧ್ಯಕ್ಷ) ಎಸ್. ಪಿಪ್ಪಕುಲಾಲ (ಉಪಾಧ್ಯಕ್ಷ) ಟಿ. ಕೆ. ಚಂದಪ್ಪ (ಕಾರ್ಯದರ್ಶಿ) ಕೆ. ಶೀನನಾಸ್ತರ್ (ಉಪಕಾರ್ಯದರ್ಶಿ) ಎಚ್. ಹಿರಿಯಣ್ಣ (ಖಜಾಂಚಿ) ಆಯ್ಕೆಯಾದರು. ಅಧ್ಯಕ್ಷರು ಮುಕ್ತಾಯ ಭಾಷಣ, ಕಾರ್ಯದರ್ಶಿಯರಿಂದ ಧನ್ಯವಾದ ಪಣಗಳಾಗಿ ಸಭಾಂತ್ಯವಾಯಿತು.

ಮಹಾಸಭೆ:—ಉಡುಪಿ ಲೋಕಲ್ ಕೋಆಪರೇಟಿವ್ ಯುನಿಯನ್ ಮಹಾಸಭೆಯು ಳೆದ ತಾ. 28ರಲ್ಲಾ ವಕೀಲ್ ಶ್ರೀ ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಿಗತು. ವರದಿವಾಚನ, ಆಡಿಟ್ ರಿಪೋರ್ಟು ಪರಿಶೀಲನೆ, ಬಜೆಟ್ ಮಂಜೂರಾತಿಗಳಾದ ನಂತರ ಶ್ರೀಗಳಾದ ಕೆ. ಜೆ. ಬಲ್ಲಾಳ್, ಪಿ. ವಿ. ಆಚಾರ್, ಕುರ್ಕಾಲು ಗಣಪಯ್ಯಶೆಟ್ಟಿ, ಎಸ್. ಆಣ್ಣಯ್ಯ ಹಗ್ಡೆ, ಸಿ. ವೆಂಕಟಕೃಷ್ಣರಾವ್, ಎ ಎಸ್. ರಾಮಕೃಷ್ಣ ಭಟ್, ಎಸ್. ಎಸ್. ದೇಸಾಯಿಯವರು ಡೈರೆಕ್ಟರ್‌ರಾಗಿ ಕುಲಾಲ ಕಾರ್ಯದರ್ಶಿ ಎಮ್ಮತಡಿಂದ ಆರಿಸಲ್ಪಟ್ಟರು. ನಂತರ ಜರಗಿದ ಡೈರೆಕ್ಟರ್ಸರ ಸಭೆಯಲ್ಲಿ ಶ್ರೀಗಳಾದ ಕೆ. ಜೆ. ಬಲ್ಲಾಳ ಮತ್ತು ಪಿ. ವಿ. ಆಚಾರ್ಯರು ಅಧ್ಯಕ್ಷ, ಕಾರ್ಯದರ್ಶಿಯಾಗಿ ಅನುಕ್ರಮವಾಗಿ ಆಯ್ಕೆಯಾದರು.

ಸ್ತ್ರೀಯರೆಷ್ಟು ಸ್ವಾತಂತ್ರ್ಯ ಪಡೆದರೂ
ಪುರುಷರ ಕುತಂತ್ರವಿಲ್ಲದೆ ನಿಜತಂತ್ರ ನದೆಸಲಾರರು. ಉದಾಹರಣೆ:

ಮಿಸ್. ಮಾಲಿನಿ

ಜಮಿನಿ ಚಿತ್ರ

ಸುಂದರಿ ಬ್ಯಾ, ಪುಷ್ಪವಲ್ಲಿ, ಕೊತ್ತಮಂಗಲಂ ಸುಬ್ಬು,
ತಾರೀಕು 1—6—1950ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರ: ವಾಲ್ ಡಿಸ್ನೆಯವರ "ಫನ್ ಎಂಡ್ ಫೆನ್ಸಿ ಫ್ರೀ"
(ಕಾರ್ಟೂನ್ ವರ್ಣಚಿತ್ರ)

ಉಡುಪಿ ಸರ್ಕಲ್ ಕಾಂಗ್ರೆಸ್ ಪಂಚಾಯತುಗಳಿಗೆ ದಾಖಲಿಲ್ಲಾಡ ಲ್ಪಟ್ಟ ಮತ್ತು ಸಿಂಧುಗೊಳಿಸಲ್ಪಟ್ಟ ನಾಮಪತ್ರಗಳು.

೧ ಪೆರ್ಡೂರು ಕಾಂಗ್ರೆಸು ಪಂಚಾಯತು: 1 ಶ್ರೀಗಳಾದ ಎ. ಕೃಷ್ಣಯ ಹೆಗ್ಡೆ, 2 ಎ. ಬಚ್ಚ ಯಾನೆ ನಾರಾಯಣ ಸೆಟ್ಟಿ, 3 ಎ. ಅನಂತಕೃಷ್ಣ ರಾವ್. ೨ ಮಣಿಪುರ ಮತ್ತು ಅಮ್ಮಾಡಿ: ಕೆ. ನಾರಾಯಣ ಸೆಟ್ಟಿ, 2 ಕೆ. ಬಾಲಕೃಷ್ಣ ಸೆಟ್ಟಿ, 3 ಬಿ. ಸೀನಸೆಟ್ಟಿ. ೩ ಹಿರೆಬೆಟ್ಟು: 1 ಬಿ. ಕೃಷ್ಣಯ್ಯ ಜಗ್ಗೆ, 2 ಎಚ್. ರಾಮಚಂದ್ರ ಹೆಗ್ಡೆ, 3 ಯು. ಕೃಷ್ಣ ಭಟ್ಟ. ೪ ಹೆಗ್ಗ: 1 ಬಿ. ಸದಾಶಿವ ಹೆಗ್ಡೆ, 2 ಎಸ್. ಭವಾಶಂಕರ ಹೆಗ್ಡೆ, 3 ಕೆ. ಆನಂದ ಹೆಗ್ಡೆ. ೫ ಹಿರಿಯಡ್ಕ: 1 ಕೆ. ಮಹಾಬಲ ಹೆಗ್ಡೆ, 2 ಬಿ. ಹಿರಿಯಣ್ಣ ಹೆಗ್ಡೆ, 3 ಬಿ. ಚಂದಯ್ಯ ಹೆಗ್ಡೆ. ೬ ಉಪ್ಪೂರು: 1 ಯು. ವಂಜು ನಾಥ ಕಲ್ಮಾಡಿ, 2 ಯು. ಕೆ. ಕೃಷ್ಣಯ್ಯ ಸೆಟ್ಟಿ, 3 ಎಚ್. ಶ್ರೀನಿವಾಸ ಸೆಟ್ಟಿ. ೭ ಕಲ್ಯಾಣಪುರ: 1 ಜಯರಾಮಕೃಷ್ಣ ಪಡಿಯಾರ್, 2 ಟಿ. ಕೂರಗ ಸೆಟ್ಟಿ. ೮ ಕೆಮ್ಮಣ್ಣು: 1 ಎಸ್. ಪಿ. ಅಗ್ನಿಹೋತ್ರಿ, 2 ಜಿ. ಶ್ರೀನಿವಾಸರಾವ್, 3 ಕೆ. ಮಹಾಬಲ ಸೆಟ್ಟಿ. ೯ ಕಡೆಕಾರು: 1 ಬಿ. ಶ್ಯಾನುಭಾಗ್, 2 ಕೆ. ಗೋಪಾಲ ಸೆಟ್ಟಿ, 3 ಡಾ। ಕೆ. ಅಚ್ಚಣ್ಣ ಸೆಟ್ಟಿ, 4 ಎಚ್. ಶ್ರೀನಿವಾಸ ಕುಡ್ವ. ೧೦ ಬಡಗಬೆಟ್ಟು: ನಂ 76: 1 ಕೆ. ಶ್ಯಾನುಭಾಗ್ ಸೆಟ್ಟಿ, 2 ಯು. ರಾಮು ಶೆಟ್ಟಿ, 3 ಕೆ. ಸುಬ್ಬಣ್ಣ ಭಟ್. ೧೧ ಕುಂಜಿಬೆಟ್ಟು: 1 ಎ. ರಾಮದಾಸ ಪೈ, 2 ಪುಂಜಿ ಉಪೇಂದ್ರ ಶ್ಯಾನುಭೋಗ್, 3 ಯು. ಸುಂದರ ಕಾಮತ್. ೧೨ ಅಜ್ಜರಕಾಡು: 1 ಟಿ. ಸಂಜೀವ ಪೈ, 2 ಪಿ. ಅಚ್ಯುತ ಗೋವಿಂದ ಶೆಣೈ, 3 ರಾಮಚಂದ್ರರಾವ್ ಕುಂಜೂರು. ೧೩ ತೆಂಕಪೇಟೆ: 1 ಯು. ಗೋಪೀನಾಥ ಭಂಡಾರಿ, 2 ಕೆ. ನರಹರಿ ಶಾನುಭಾಗ್, 3 ಕೆ. ನರಸಿಂಹ ಕಾಮತ್. ೧೪ ಸೆಂಟ್ರಲ್: ಎಸ್. ಮಾಮನ ಭಟ್, 2 ಆರ್. ಎಸ್. ಆಂದ್ರಾಡೆ, 3 ಮಿಸ್. ವಿ. ರೋಹಿಣೀ ಬಾಯಿ.

ನೋಟಿನ ಹದಿನಾಲ್ಕು ಪಂಚಾಯತುಗಳ ಪೈಕಿ 13ರಲ್ಲಿ ಸ್ಥಾನಗಳಿರುವಷ್ಟೇ ನಾಮಪತ್ರಗಳು ದಾಖಲಾಗಿರುವುದರಿಂದ ಚುನಾವಣೆಗಳಿಲ್ಲ. ಕಡೇಕಾರು ಪಂಚಾಯತಿನ ಮೂರು ಸ್ಥಾನಗಳಿಗೆ ನಾಲ್ವರು ಉಮೇದ್ವಾರಿಗಳಿರುವುದರಿಂದ ಅಲ್ಲಿ ಚುನಾವಣೆ ನಡೆಯಲಿದೆ.

ಮಂಗಳೂರು

ಜಿಲ್ಲಾ ಕಲೆಕ್ಟರರ ಪ್ರತಿಕಾ ಪರಿಷತ್ತು

ಕಳದ ತಾ. 26ರಲ್ಲು ದಾಖಲಿದಾಗಿ ಈ ಕೆಳಗಿನ ವಿಷಯಗಳುಬೆಳಕಿಗೆ ಬಂದ ವು.

ಜಿಲ್ಲಾ ಕಲೆಕ್ಟರರು ತಮ್ಮ ಆತ್ಮ ಸಂತೋಷದಂತೆ ಸಹಾಯ ಕೊಡಬಹುದಾದ ನಿಧಿಯಿಂದ ಅಜ್ಜಾವರ ಗ್ರಾಮದಲ್ಲಿ ಅಗ್ನಿ ಭಾಧೆಗೊಳಗಾದ ಸ್ಯೊಂದು ಹರಿಜನ ಕುಟುಂಬಗಳಿಗೆ ಎಂದು ನೂಹತ್ತು ರೂಪಾಯಿ ಮಂಜೂರು ಮಾಡಿರುವರು. ಐದುಸಾವಿರ ಮೊಗವೀರರಿಗೆ ರೂ. 50--0--0 ಸಂಭಾವನೆ ಕೊಟ್ಟಿರುವರು.

ಆಂಧ್ರ ನೆರೆಹಾವಳಿ ನಿವಾರಣಾ ನಿಧಿಗೆ ಈ ಜಿಲ್ಲೆಯಿಂದ ಈ ತನಕ ಸಂಗ್ರಹವಾದ ಹಣ ರೂಪಾಯಿ 20729-6-6 ಕೆರೆ ಭಾಗಿ ಸುಧಾರಣೆಗಾಗಿ ಉಡುಪಿ ತಾಲೂಕಿನ ಶಿವಳ್ಳಿ ಗ್ರಾಮದಲ್ಲಿ ರೂ. 420 0-0 ಹೋಬಳಿ ಗ್ರಾಮದಲ್ಲಿ ರೂ. 715-0-0 ಬನ್ನಾಡಿ ಗ್ರಾಮದಲ್ಲಿ ರೂ. 500-0 0 ಬಡಗಬ್ಯಾರುಬೆಟ್ಟಿ ರೂ. 770 0-0. ಪ್ರಾಗಳಕಾಡಿನ ತಾಲೂಕು ಮಾಳೂರು ಗ್ರಾಮದಲ್ಲಿ ರೂ.3200-0-0 ಮಂಜೂರು ಮಾಡಲಾಗಿದೆ. ಉಜ್ಜಯಿಲ್ಲಿನ ಕೆರೆಯೊಸ್ತಿಗಾಗಿ ಶ್ರೀ ಧರ್ಮಸ್ಥಳ ಸಂಜಯ್ಯ ಹೆಗ್ಗಡೆಯವರಿಗೆ ರೂ. 2000/- ಮಂಜೂರು ಮಾಡಲಾಯಿತು.

ರಾಜಕೀಯ ಸಂತ್ರಸ್ತರಿಗೆ:- ಭೂ

ದಾನವಿಲೇಯುವ ಸಭೆಯು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಕಳದ ತಾ. 26ರಲ್ಲು ಜರಗಿತು. ಕಾಸರಗೋಡು ತಾಲೂಕಿನ ಕುಂಬಳೆ ಶ್ರೀಪತಿ ಭಟ್ಟರಿಗೆ ಕಣ್ಣೂರು ಗ್ರಾಮದಲ್ಲಿ 7.45ಎಕ್ರೆ, ಪೆರ್ಡೂರು ಜರೂ ಸೆಟ್ಟಿರಿಗೆ ಪೆರ್ಡೂರ ಗ್ರಾಮದಲ್ಲಿ 8 6ಎಕ್ರೆ, ಮಾರಿತಿನ್ ಕೋಮುಲ್ ಕುಂಞರಾಮನ್‌ರಿಗೆ ಕೊಡಕಾತು ಗ್ರಾಮದಲ್ಲಿ 9 81ಎಕ್ರೆ, ತ್ರಿಕರ ಪುರದ ಎ. ವಿ. ಶ್ರೀಕರ ಪುದುವಾಳರಿಗೆ ಕೊಡಕಾತು ಗ್ರಾಮದಲ್ಲಿ 9-22ಎಕ್ರೆ, ಸಂತ್ಸ್ಥರಿಂದು ರುಜುನಾತು ಕೊಟ್ಟಲ್ಲಿ) ಭೂದಾನ ಮಂಜೂರುಮಾಡಲಾಯಿತು.

ವರ್ಗಾವರ್ಗಿ:—ದ. ಕ. ಜಿಲ್ಲೆಯ

ಸ್ಪೆಶಲ್ ಡೆವಲಪ್‌ಮೆಂಟ್ ಆಫೀಸರರಾಗಿದ್ದ ಶ್ರೀ ಎಮ್. ಕೃಷ್ಣ ಸೆಟ್ಟಿ ಅವರು ಜಿಲ್ಲಾ ಕೋಪರೇಟಿವ್ ಡಿಪ್ಯುಟಿ ರಿಜಿಸ್ಟ್ರಾರರಾಗಿ ಚಾರ್ಜು ನಹಿಸಿದ್ದಾರೆ. ಈ ಮೊದಲು ಇಲ್ಲಿ ಕೋಪರೇಟಿವ್ ಡಿಪ್ಯುಟಿರಿಜಿಸ್ಟ್ರಾರರಾಗಿದ್ದ ಶ್ರೀ ಎಮ್. ಶ್ರೀನಿವಾಸ ವ್ಯಾನುಭಾಗರು ಸ್ಪೆಶಲ್ ಡೆವಲಪ್‌ಮೆಂಟ್ ಆಫೀಸರರಾಗಿ ಬಳ್ಳಾರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಜನತಾ ಎಕ್ಸ್‌ಪ್ರೆಸ್:—ಮೂಂತೆ

ತರಗತಿ ಮಾತ್ರವಿರುವ ಮಂಗಳೂರು-ಮುಂಬಯಿ ಜನತಾ ಎಕ್ಸ್‌ಪ್ರೆಸ್ ರೈಲು ಇದೇ ತಾ. 10ರಿಂದ ಪುನಹ ಪ್ರಾರಂಭವಾಗುವುದು. ಈ ರೈಲು ಸಂಜೆ ಇಲ್ಲಿಂದ ಮುಂಬಯಿಗೆ ಹೊರಟು ಬೆಳಿಗ್ಗೆ ಇಲ್ಲಿಗೆ ಬರುವುದು.

ಕಾಂಗ್ರೆಸ್ ಪೇಚಾಟ್ಲೋಚ್ಚ ಚ್ಚುನಾವಣೆಗಳು:—ಈ

ಜಿಲ್ಲೆಯಲ್ಲಿ ಕೈಗಾರಿಕಾ ಜಗತ್ತಿನಲ್ಲಿ ಸಾರ್ವಜನಿಕ ಚಟುವಟಿಕೆಗಳಿಗೆ ಉತ್ತೇಜನವನ್ನು ಒದಗಿಸಲಾಗಿದೆ ಎಂದು ಆರ್ಥಿಕ ಅಭಿವೃದ್ಧಿಯಪರ ಜಿಲ್ಲಾ ಪಂಚಾಯತ್ ಸದಸ್ಯರುಗಳ ರಜೆಯ ಹೊಣಾಗಾರಿಕೆ ನಡೆಯುತ್ತಿದೆ ಯೆಂದು ತಿಳಿಸಲಾಯಿತು.

ಕಲೆಕ್ಟರ್ಸ್ಸ ಸೀರೆಯಲ್ಲಿ ಶ್ರೀ ಮಾಂಡು ನಾಥ ಭಟ್ಟಾರ್ಯರವರ ನಾಮನಿರ್ದೇಶನವು ಕೆಲವು ತಾ 21ರಲ್ಲಿ ಡಾ। ಬಿ. ಆರ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನಿಧಿ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಿಗಿತು.

ಗೋ ಸಂಪತ್ತು ಬೆಳವಣಿಗೆ ಪ್ರಚಾರ ಕಾರ್ಯವನ್ನು ಕೈ ಕೊಂಡ ಅಖಿಲ ಭಾರತ ಗೋಸೇವಾಸಂಘದ ಜನರಲ್ ಸೆಕ್ರೆಟರಿ ಶ್ರೀ ರಾಧಾಕೃಷ್ಣ ಬಜಾಜರು ದ. ಕ. ಜಿಲ್ಲೆಯ ಪ್ರವಾಸವನ್ನು ಕಳದ ತಿಂಗಳ ಉತ್ತರಾರ್ಧದಲ್ಲಿ ಮುಗಿಸಿದರು. ಮಂಗಳೂರು, ಪುತ್ತೂರು, ಕಾರ್ಕಳ, ಉಡುಪಿ, ಕಟಪಾಡಿ ಕೇಂದ್ರಗಳನ್ನು ಬಜಾಜರು ಸಂದರ್ಶಿಸಿ ಅಲ್ಲಲ್ಲಿ ಗೋವುಗಳ ಪಾಲನೆ, ಬೆಳವಣಿಗೆ, ಆ ಬಗ್ಗೆ ಜನತೆಯು ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನು ವಿವರಿಸಿದರು. ಎಮ್ಮೆ ಹಾಲಿಗಿಂತ ದನದ ಹಾಲು ಆರೋಗ್ಯಕ್ಕೆ ಧೈರ್ಯಿಯಿಂದಲೂ ಶ್ರೇಷ್ಠವಾದುಯೆಂದು ಸೂಚಿಸಿದರು. ಮಾರ ಸಂಸ್ಥಾನದವರು, ಸಿರಿವಂತರು ಈ ಮಹಾ ಕಾರ್ಯದಲ್ಲಿ ಮುಂದಾಳಾಗಿ ನಿಂತರೆ ದ. ಜಿಲ್ಲೆಯಲ್ಲಿ ಗೋಸಂಪತ್ತು ವಿಸೇಷ ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದರು. ಸರ್ವ ವಿಧದಲ್ಲೂ ಮುಂದಾದ ದಕ್ಷಿಣ ಕನ್ನಡ ಜಿಲ್ಲೆಯು ಈ ಕಾರ್ಯದಲ್ಲಿ ಹಿಂದೆ ಬೀಳಲಿಕ್ಕಿಲ್ಲವೆಂದು ನಿರೀಕ್ಷಿಸಿದರು.

ದ. ಕ ಜಿಲ್ಲಾ ಆಯುರ್ವೇದ ಪರಿಷತ್ತು.

ಕಳದ ತಾ. 21ರಲ್ಲು ದ. ಕ. ಜಿಲ್ಲಾ ಆಯುರ್ವೇದ ವೈದ್ಯ ಪರಿಷತ್ತು ಕಾಸರಗೋಡಿನ ಸ್ವಸ್ಯಶ್ರೀತ ಸೇವಾ ಚಿಕಿತ್ಸಾಲಯದ ಡಾಕ್ಟರ್ ಪಿ. ಎಸ್. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಕೇರಳಾಯುರ್ವೇದ ರಸ್ತಿಯವರು ಪ್ರಾರೋಗ್ಯ ಭೂಮಿ ಶಾಲೆಗಳ ಬಗೆಗಿನ ಅಭಿಪ್ರಾಯಗಳನ್ನು ಸಂಸ್ಥೆಗಳಿಗೆ ಸಲಹೆಗಳನ್ನು ಮಾಡಿದರು. ಜಿಲ್ಲೆಯಲ್ಲಿ ಆಯುರ್ವೇದ ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಂದು ಸಮಿತಿಯನ್ನು ರಚಿಸಲಾಯಿತು. ಹಿಂದಿನ ಅಧಿವೇಶನದಲ್ಲಿ ಮಂಡಿಸಿದ ಕೇವಲ ಚಿಕಿತ್ಸೆಯಲ್ಲಿ ಮಾತ್ರ ಕೃಷ್ಣಾನಿರ್ಣಯವನ್ನು ಪರಿಷತ್ತು ಅಂಗೀಕರಿಸಿತು. ಆಯುರ್ವೇದದಲ್ಲಿ ಸಂಶೋಧನೆ, ಪ್ರಾಥೋಧನೆಯಾಗಬೇಕೆಂಬ ಸೂಚನೆಯನ್ನು ಶ್ರೀಗುಣಾದ ಎ. ಬಿ. ಶೆಟ್ಟಿ, ಮದ್ರಾಸ್ ಮಂತ್ರಿ, ಡಿ. ಕೆ. ಭಾಂಧ್ವಾಜ ಮೊದಲಾದವರಿಂದ ಬಂದ ಶುಭಸಂದೇಶಗಳನ್ನು ಓದಿದ ನಂತರ ಅಧ್ಯಕ್ಷರುತ್ತನ ಅಚ್ಚಾದ ಭಾಷಣವನ್ನೊಂದಿದರು. ಆಯುರ್ವೇದ ನಿರೋಧಿಗಳು ದೇಶದ ಜೊಂಗೆ ಮಾತ್ರವಲ್ಲ, ಒಳಗೂ ಇರುವರೆಂದು ಹೇಳಿ ವೈದ್ಯರು ಮುಂದಿನ ಕರ್ತವ್ಯಗಳನ್ನು ವಿವರಿಸಿದರು. ಕಾಸರಗೋಡಿನ ಪಂಡಿತ ಈಶ್ವರ ಭಟ್ಟರು ತ್ರಿದೋಷವಿಜ್ಞಾನದಲ್ಲೊಂದು ಲೇಖನವನ್ನೊಂದಿದರು. ಅಲ್ಲಗೆ ಪೂರ್ವಾಹ್ನದ ಕಾರ್ಯಕ್ರಮ ಮುಗಿಯಿತು.

ಮಧ್ಯಾಹ್ನ ತಿರುಗಿ ಮಹಾ ಅಧಿವೇಶನವು ಜರಗಿ ಶ್ರೀಗಳಾದ ಎಮ್. ವಿ. ಶಾಸ್ತ್ರಿ, ತಿಮ್ಮಪ್ಪ ಪಂಡಿತ ಮೊದಲಾದವರು ಆಯುರ್ವೇದ ಕ್ಷೇತ್ರದಲ್ಲಿ ದುಡಿದು ಕೀರ್ತಿ ಪಡೆದು ಅಕಾಲದಲ್ಲಿ ನಿಧನ ಹೊಂದಿದ ಬಗ್ಗೆ ಸಂತಾಪ ಸೂಚಿಸುವ ಭಾರತಸರಕಾರದ ಆರೋಗ್ಯ ಪ್ರಸರಣಾ ಯೋಜನೆಗೆ ಆಯುರ್ವೇದವು ಪ್ರಧಾನವಾಗಿ ಬೇಕೆನ್ನುವ, ವೈದ್ಯಕೀಯ ವಿದ್ಯಾ ಪಟ್ಟಿಯಲ್ಲಿ ಆಯುರ್ವೇದಕ್ಕೂ ಶಿಕ್ಷಣಬೇಕೆನ್ನುವ, ಮಧ್ಯ ನಿರೋಧಕಾನೂನು ಪ್ರಕಾರ ಅಸವಾರಿಷ್ಟಗಳ ಮೇಲಿರುವ ನಿರ್ಬಂಧಗಳು ಕೂಡಲೇ ಹೋಗಬೇಕೆನ್ನುವ, ಅಸವಾರಿಷ್ಟಗಳ ತಯಾರಿ, ಸಾಗಾಟ, ಮಾರಾಟ ಮತ್ತು ಉಪಯೋಗಗಳಿಗೆ ಬೇರೆಬೇರೆಲೈಸೆನ್ಸುಗಳ ಬದಲಾಗಿ ಒಂದೇ ಲೈಸೆನ್ಸು ಇರುವಂತಾಗಬೇಕೆನ್ನುವ, ವೈದ್ಯರಿಗೆ ಔಷಧ ತಯಾರಿಕೆಗಾಗಿ ಗಿಡಾಂಜ, ಆಫೀಮು, ಭಂಗಿ ಸರಬರಾಯಿ ಆಗಬೇಕೆನ್ನುವ, ಗ್ರಾಮವೈದ್ಯ ತರಬೇತಿ ಶಿಕ್ಷಣದಲ್ಲಿ ನಿರ್ದಿಷ್ಟ ಕಾರ್ಯಕ್ರಮಗಳ ಮತ್ತು ಪುಸ್ತಕಗಳ ಏರ್ಪಾಡಾಗಬೇಕೆನ್ನುವ ನಿರ್ಣಯಗಳಾದುವು. ಡಾ। ಕೊಡ್ಲೆಕ್ಕರ 'ಮನೆ ಮದ್ದು' ಪುಸ್ತಕಕ್ಕೆ ಮದ್ರಾಸು ಸರಕಾರದಿಂದ ಬಹುಮಾನ ದೊರೆತ ಬಗ್ಗೆ ಅವರನ್ನು ಅಭಿನಂದಿಸುವ, ಕೀರ್ತಿಶೇಷ ಎಮ್. ವಿ. ಶಾಸ್ತ್ರಿಗಳ ಸ್ಮಾರಕ ಒಂದನ್ನೇರ್ಪಡಿಸಬೇಕೆನ್ನುವ ರೂವುಗಳೂ ಆದುವು. ಅಧಿವೇಶನ ಅಂತ್ಯದಲ್ಲಿ ಶ್ರೀ ಭುವನೇಂದ್ರ ಪ್ರೌಢಶಾಲೆಯ, ಕಟಪಾಡಿ, ಡಾ। ಕೊಡ್ಲೆಲ್ ಮೊದಲಾದವರಿಗೆ ಪ್ರಥಮ ಪ್ರಶಸ್ತಿ ಪತ್ರಗಳು ಕೊಡಲಾದುವು. ಮುಂದಿನ ಅಧಿವೇಶನವು ಕಾಸರಗೋಡಿನಲ್ಲಿ ಜರಗಿಸುವುದಾಗಿ ನಿರ್ಧರಿಸಲಾಯಿತು. ಜನಾಥ್ ಎಚ್. ಎಸ್. ಹುಸ್ಸೇನ್, ಎಮ್. ಎಲ್. ಎ. ಆನಂ ಧನ್ಯವಾದಾರ್ಪಣೆಯೊಂದಿಗೆ ಪರಿಷತ್ತು ಕೊನೆಗೊಂಡಿತು. ಕುಂದಾಪುರ ಡಿವಿಜನ್ ಸಬ್ ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟಿರೂ ಕಾರ್ಕಳ ತಹಸಿಲ್ದಾರ್ ಶ್ರೀ ಕಿದ್ದಾಯರೂ ಪರಿಷತ್ ಸಮಾರಂಭದ ಉತ್ತರಾರ್ಧದಲ್ಲಿ ಹಾಜರಿದ್ದರು.

ಕೇಂದ್ರ ಸರಕಾರದಿಂದ ರಿಜಿಸ್ಟ್ರಿಸಲ್ಪಟ್ಟ ನಂ. 4672

ರೂ. 24,000

ಎಲ್ಲ ಸರಿಯಾದ 20 ಉತ್ತರಗಳಿಗೆ ಹಂಚಲಾಗುವುದು.

ರೂ. 1200/- ಎಲ್ಲ ಸರಿಯಾದ ಪ್ರತಿ ಉತ್ತರಕ್ಕೆ
ರೂ. 100/- ಎರಡು ಸಾಲು ಸರಿ ಇರುವ " } ಗ್ಯಾರಂಟಿ ಇದೆ.
ರೂ. 20/- ಒಂದು ಇಡೀ ಸಾಲು ಸರಿ ಇರುವ "
ರೂ. 5/-ಎ.ಬಿ. ಅಥವಾ ಎ ಸಿ ಚೌಕದಲ್ಲಿಯ 2 ಸಂಖ್ಯೆ ಸರಿ ಇರುವ ಉತ್ತರಕ್ಕೆ.

ಅತ್ಯಧಿಕ ಉತ್ತರ ಕಳುಹಿಸಿದವರಿಗೆ ರೂ. **200** ಬಹುಮಾನದ ಗ್ಯಾರಂಟಿ ಇದೆ.



ಇದ್ದಿ ಪೋರುವ ಚೌಕದಲ್ಲಿ 11ರಿಂದ 26ರ ವರೆಗಿನ ಅಂಕೆಗಳನ್ನು ಉದ್ದಕ್ಕೆ, ಅಡ್ಡಕ್ಕೆ ಅಥವಾ ಮೂಲೆಯಿಂದ ಮೂಲೆಗೆ ಕೂಡಿಸುವಾಗ ಉತ್ತರ 74 ಬರುವಹಾಗೆ ತುಂಬಿಸಿರಿ. ಒಂದು ಅಂಕೆಯನ್ನು ಒಮ್ಮೆ ಮಾತ್ರ ಬರೆಯಬಹುದು.

ಟಿಪ್ಪಾಲಿಗೆ ಹಾಕುವ ಕೊನೆಯ ತಾ 13—6—1950
ಉತ್ತರ ತಾ. 21—6—1950.

ಪ್ರವೇಶ ಧನ: ಪ್ರತಿ ಉತ್ತರಕ್ಕೆ ರೂ. 1. 3 ಉತ್ತರಗಳಿಗೆ ರೂ. 2.ಅಥವಾ ಪ್ರತಿ ಎಂಟು ಉತ್ತರಗಳಿಗೆ ರೂ. 5.

ನಿಬಂಧನೆ: ಮೇಲೆ ನಮೂದಿಸಿದ ದಿನದಲ್ಲಿ ಪ್ರವೇಶ ಧನದೊಂದಿಗೆ ಪಾಲಿಕಾಗದದಲ್ಲಿ ಎಷ್ಟೂ ಉತ್ತರ ಕಳುಹಬಹುದು. ಹಣವನ್ನು ಮನಿಯಾರ್ಡರ್ ಅಥವಾ ಕ್ರಾಸ್ ಮಾಡದ ಸೋಸ್ವಲ್ ಆರ್ಡರ್ ಮೂಲಕ ದಿಲ್ಲಿಯ ಚಾಂದನಿ ಚೌಕ ಪೋಸ್ಟಾಫೀಸಿನಲ್ಲಿ ಸಿಗುವಂತೆ ಕಳುಹಿಸಬೇಕು. ರೂ. 1200 ಕನಿಷ್ಠ ಬಹುಮಾನವನ್ನು **ದೆಹಲಿಯ ಪ್ರಸಿದ್ಧ ಬೇಂಕೊಂದರಲ್ಲಿ** ಭದ್ರಸಿಟ್ಟಿರುವುದು. ನವ್ಮೊದಿನೆ ಭದ್ರಸಲ್ಪಟ್ಟಿರುವ ಉತ್ತರಕ್ಕೆ ಸರಿ ಹೋಲುವವುಗಳು ಮಾತ್ರ ಸರಿಯಾದ ಉತ್ತರಗಳು. ಉತ್ತರದೆ ಫಲಿತಾಂಶ ಬೇಕಾದ್ದರೆ, ನಿಮ್ಮ ವಿಳಾಸ ಬರೆದು, ಸ್ವಂಪು ಅಂಟಿಸಿದ ಲಕೋಟೆ ಕಳುಹಿಸಿರಿ. ವ್ಯವಸ್ಥಾಪಕರ ನಿರ್ಧಾರವೇ ಕೊನೆಯದು ಮತ್ತು ನ್ಯಾಯಬದ್ಧವಾದದ್ದು.

70 ಪೊತ್ತಿದ ಕಳದ
ಬಾರಿಯ ಬಗೆಹರಿದ ನಿಯರ.

19	10	16	25
24	17	11	18
13	20	22	15
14	23	21	12

ನಿಮ್ಮ ಉತ್ತರ ಮತ್ತು ಪ್ರವೇಶಧನ ಇವರಿಗೆ ಕಳುಹಿಸಿರಿ.

THE ORGANIZER,
Redfort Trading Co (4) Regd.
Katra Neel, DELHI

ESTD. 1926
CROWN RUBBER STAMP CO.
MFRS OF
RUBBER STAMPS & ENGRAVERS
BALMATTA ROAD MANGALORE-SK
Approved form by the Gov. of Mysore
Certificated by the Agent of the Govt of Cylone & Indian.

ಪಂಚಾಯತ ಬೋರ್ಡು, ಗ್ರಾಮ ಕಮಿಟಿ, ಶಾಲಾ ಕೊಲೇಜು ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿ:—
ನವಭಾರತ ಪುಸ್ತಕ ಭಂಡಾರ, ಉಡುಪಿ ಅಥವಾ ನವಯುಗ ಸ್ಟೋರ್ಸ್, ಉಡುಪಿ.

ಕಾರ್ಕಳದಲ್ಲಿ ನಿಖಿಲ ಕರ್ನಾಟಕ ಆಯುರ್ವೇದ ಪರಿಷತ್ತು

ನಿಖಿಲ ಕರ್ನಾಟಕ ಆಯುರ್ವೇದ ಮುಂಡಲ ದ ೧೭ನೆಯ ಸಮ್ಮೇಲನವೂ ಜಿಲ್ಲಾ ಚತುರ್ಥ ಆಯುರ್ವೇದ ಸಮ್ಮೇಲನವೂ ಕಳೆದ ತಾ. 19೦೦ದ 21ರ ವರೆಗೆ ಕಾರ್ಕಳದ ಎಸ್. ವಿ. ಟಿ. ಶಾಲೆಯಲ್ಲಿ ರಚಿಸಲಾಗಿದ್ದ 'ಶಾಸ್ತ್ರಿ ನಗರ' ದಲ್ಲಿ ನೆರವೇರಿದುವು. ಸ್ಥಳೀಯ ಹಾಗೂ ಕರ್ನಾಟಕದ ವಿವಿಧ ಭಾಗಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು.

ತಾ. 19ರಂದು ಬೆಳಿಗ್ಗೆ ಕಟಪಾಡಿಯ ಭುವನೇಂದ್ರ ಪ್ರೌಢಶಾಲೆಯ ದೈರೆಕ್ಟರರೂ ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರೂ ಆದ ಶ್ರೀ। ಪಾಂಗಾಳ ಲಕ್ಷ್ಮೀನಾರಾಯಣ ನಾಯಕರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ರಾಮಕೃಷ್ಣ ಮಠದ ಶ್ರೀ ವಿನುಲಾ ನಂದಜಿಯವರು ಔಷಧೋಪಕರಣಗಳ ಪ್ರದರ್ಶನದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದ್ದರು. ಆಯುರ್ವೇದಕ್ಕೂ ವೇದಕ್ಕೂ ಇರುವ ಪರಸ್ಪರ ಸಂಬಂಧವನ್ನು ವಿವರಿಸಿ, ದೇಶೀಯ ವೈದ್ಯರು ಪಾಶ್ಚಾತ್ಯ ವೈದ್ಯ ವಿಧಾನವನ್ನು ಅನುಸರಿಸುವುದು ಹಿತವಲ್ಲವೆಂದೂ, ಜನಾಬ್ ಎಚ್. ಎಸ್. ಪುಸ್ನೆ ಸಾಹೇಬರು ಭಾಷಣವಿಯತ್ತ 'ಮದ್ರಾಸ್ ಸರಕಾರವು ಆಸವಾರಿಷ್ಟಗಳ ಮೇಲೆ ನಿರ್ಬಂಧ ಹೇರಿರುವ ಕಾರಣ ಪ್ರದರ್ಶನಕ್ಕೆ ಬಂದಿರುವ ಔಷಧಾದಿಗಳು ಕಡಿಮೆಯಾಗಿರಬಹುದು' ಎಂದರು.

ಸ್ವಾಗತ ಭಾಷಣ

ಅನಂತರ ಶ್ರೀ। ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು ಸ್ವಾಗತ ಭಾಷಣವನ್ನಿತ್ತರು:

"ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಾಟಸರಹದ್ದಿನ ತುಲೂನಾಡಿ ಈ ಕಾರ್ಕಳದಲ್ಲಿ ಆಯುರ್ವೇದ ಸಮ್ಮೇಲನವನ್ನು ನಡೆಸುತ್ತಿದ್ದೇವೆ. ಇದ್ದಿಯ ಪ್ರಕೃತಿ ಸೌಂದರ್ಯವನ್ನು ನೋಡಿ ತಿಳಿದು ಅನಂದಿಸಬೇಕಲ್ಲದೆ ಹೇಳಿ ಬರೆದು ಬಣ್ಣಿಸುವಂತಿಲ್ಲ. ನಮ್ಮ ಜಿಲ್ಲೆಯ ಜೈನ ಅರಸರ ಪೂರ್ವ ಕಲಾಸಂಸ್ಕೃತಿಯು ಕಾರ್ಕಳದಲ್ಲಿ ತೋರುವಂತೆ ಬೇರೆ ಕಡೆ ಮೊರಕ್ಕಾರದು, ರಾಮಸಮುದ್ರದಂತಹ ತೋಯರಾಶಿಯು ನೀರಿನ ಅಭಾವದಿಂದ ಹಾತೊರೆಯುವ ಈ ಕಾಲದಲ್ಲಿ ಕಲ್ಪವೃಕ್ಷದಂತೆ ಪೂರ್ವ ಭಾಗದಲ್ಲಿ ನೀಡಿರುವುದು. ಅದು ಈ ನಾಡಿನ ಭಾಗ್ಯ. ಉನ್ನತವಾದ ಮತ್ತು ರಮ್ಯವಾದ ಶ್ರೀ ಬಾಹುಬಲಿ ಮೂರ್ತಿಯು ಪೂರ್ವದ ಶಿಲ್ಪ ಕಲಾಚಾತುರ್ಯವನ್ನು ಕೈಯಿತ್ತಿ ತೋರಿಸುವಂತಿದೆ. ಇಂಥ ಪ್ರದೇಶದಲ್ಲಿ ಮಾನವ ಜೀವಿತ ಕ್ರಮಕ್ಕೆ ಮೂಲಾಧಾರವಾದ ಆಯುರ್ವೇದ ಪರಿಷತ್ತು ಜರಗುವುದು ಎಲ್ಲರಿಗೂ ಸಂತೋಷ. ಆಯುರ್ವೇದವೆಂದರೆ ಶರೀರ ಜೀವಿತ ಕ್ರಮವನ್ನು ಸರಿಯಾಗಿಟ್ಟುಕೊಳ್ಳಲು ಬೇಕಾದ ಒಂದು ಜ್ಞಾನ ಸಂಪತ್ತು. ನಮ್ಮ ಪೂರ್ವ ಋಷಿಗಳಿಂದ ನಮಗೆ ಪಿತ್ರಾರ್ಜಿತವಾಗಿ ಬಂದಿರುವ ಆರೋಗ್ಯ ಶಾಸ್ತ್ರವೆಲ್ಲವೂ ಆಯುರ್ವೇದ ಶಾಸ್ತ್ರವೆನಿಸಲ್ಪಡುವುದು. ಒಂದೊಂದು ಕಾಲದಲ್ಲಿ ಒಬ್ಬೊಬ್ಬ ಋಷಿಯು ಆಥವಾ ಆಚಾರ್ಯನು ದೇಶ ಕಾಲ ಪರಿಸ್ಥಿತಿಗಳಿಗನುಸಾರವಾಗಿ ಒಂದೊಂದು ರೀತಿಯ ವೈದ್ಯಕ್ರಮವನ್ನು ಉಪದೇಶಿಸಿರಬಹುದು. ಅಂಥ ಋಷಿ ಪ್ರಣೀತವಾದ ಶಾಸ್ತ್ರಗಳೆಲ್ಲವೂ ಆಯುರ್ವೇದವು.

ರಸಕ್ಕಾಗಿ ಬೆಳೆದ ದ್ರಾಕ್ಷೆಯು ಆಹಾರವಾಗಿಯೂ ಪರಿಣಮಿಸಿದಂತೆ ದಕ್ಷಿಣ ಕನ್ನಡ ಜಿಲ್ಲಾ ವೈದ್ಯ ಸಮ್ಮೇಲನದ ಪ್ರಯತ್ನವು ನಡೆಯುತ್ತಿದ್ದಾಗ ಪ್ರಾಂತೀಯ ವೈದ್ಯ ಸಮ್ಮೇಳವನ್ನು ನೆರವೇರಿಸುವ ವಿಶೇಷ ಅವಕಾಶ ದೊರೆತುದುದಕ್ಕೆ ತುಂಬಾ ಸಂತೋಷಪಡುತ್ತೇವೆ. ಜಿಲ್ಲಾ ವೈದ್ಯ ಪರಿಷತ್ತುಗಳೇ ಪ್ರಾಂತೀಯ ಸಮ್ಮೇಳನಗಳೀಗ ವಿಶಾಲ ಭಾರತ ಆಸರ್ಸಂಸ್ಕೃತಿಯನು ಪುನರ್ಜೀವನಕ್ಕೆ ನಮ್ಮ ಪಾಲಿನ ಅಳಿಲುಸೇವೆಯನ್ನು ಸಲ್ಲಿಸುತ್ತಿದ್ದೇವೆಂದು ಹೇಳುವರೆ ಅಭಿಮಾನವೆನಿಸುತ್ತದೆ. ದೇಶದ ಪ್ರಗತಿಯು ಆ ದೇಶದ ಆರೋಗ್ಯವಂತ ಜನಬಂಗವನ್ನು ಬಹುಮಟ್ಟಿಗೆ ಹೊಂದಿಕೊಂಡಿರುವುದೆಂಬುದು ನಿತ್ಯಾಂತಸತ್ಯ. ಆದ್ದರಿಂದ ನಮ್ಮ ದೇಶದ ಜನಜೀವನಕ್ಕೆ ಅನುಕೂಲವಾಗಿ ಸುಲಭ ರೀತಿಯ ಹಾಗೂ ಪರಿಣಾಮಕಾರಿಯಾದ ಚಿಕಿತ್ಸಾಪದ್ಧತಿಗಳನ್ನೊಳಗೊಂಡ ಆಯುರ್ವೇದದ ಬಳಕೆಯನ್ನಾವಾವು ಸರ್ವತೋಮುಖವಾಗಿ ಮಾಡಿಕೊಂಡು ಅದರ ವಿಕಾಸಕ್ಕೆ ತಕ್ಕ ಅನುಕೂಲ ಪರಿಸ್ಥಿತಿಯನ್ನೊದಗಿಸಬೇಕು. ಚಿಕಿತ್ಸಕರಲ್ಲಿ ಶಾಸ್ತ್ರೀಯ ವಿಮರ್ಶಾ ದೃಷ್ಟಿ ಬೇಕಾದರೆ ಜನತೆಯು ಅದರ ಅವಶ್ಯಕತೆಯನ್ನು ಉಪಯೋಗದ ಮೂಲಕ ತೋರ್ಪಡಿಸಬೇಕು. ಎಲ್ಲ ರೀತಿಗಳಲ್ಲಿ ಪ್ರಗತಿಗೊಂಡ ಈ ಚಿಕಿತ್ಸಾ ಪದ್ಧತಿಯಿಂದ ಜನಕೋಟಿಯು ತಮ್ಮ ಆಯುರಾರೋಗ್ಯಗಳನ್ನು ಹೆಚ್ಚಿಸಿಕೊಳ್ಳಬಹುದೆಂಬ ವಿಷಯದಲ್ಲಿ ಸಂಶಯವಿಲ್ಲ.

ಇದೀಗ ವಿದೇಶೀ ಆಡಳಿತದ ಮಾಯಿಕ ಮುಸುಕಿನಲ್ಲಿ ಪಾಶ್ಚಾತ್ಯ ಶಿಕ್ಷಣ ಸಂಸ್ಕೃತಿಗಳ ಪ್ರಭಾವವು ಜಯಿಸುಟ್ಟಿಗೆ ನಮ್ಮನ್ನು ಹಿಂದಕ್ಕೆ ತಳ್ಳಿದೆ. ಜೀವನದ ಹಲವು ಮುಖಗಳಲ್ಲಿ ಅನುಕರಣೆಯೇ ಪ್ರಧಾನವಾಗಿ ಕಾಣುತ್ತಿದೆ. ಅಮುಲ್ಯ ದೇಶೀಯ ಪದ್ಧತಿಗಳು ಪ್ರೋತ್ಸಾಹವಿಲ್ಲದೆ ಜಡವಾಗಿವೆ. ಇಂಥ ಆಪತ್ತಿಗೆ ಆಯುರ್ವೇದವೂ ಸಾಕಷ್ಟು ಒಳಗಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಆಂಥ ಸ್ಥಿತಿಯು ಇನ್ನೂ ಮುಂದುರಿಯುವಂತೆ ಆಯುರ್ವೇದದಲ್ಲಿ ಬದ್ಧ ದೀಕ್ಷರಾದ ಶಾಸ್ತ್ರ ಪಟುಗಳು ಬಿಡಬಾರದು. ಶಾಸ್ತ್ರದ ಮುಂದುವರಿಕೆಗೆ ಜನತೆಯ ಜಡತೆಯನ್ನು ಕಳೆಯಲು ಯಾವುದು ಆಗತ್ಯವೊ ಆಂಥ ಸಂಘೋಧನಾಕಾರ್ಯದಲ್ಲಿ ಅವರು ಮುಂದುವರಿಯಬೇಕಾಗಿ ಕೇಳಿಕೊಳ್ಳುತ್ತೇನೆ.'

ಅನಂತರ ಆಯುರ್ವೇದದ ಬೆಳವಣಿಗೆಗೆ ಈ ಕೆಳಗಿನ ಸೂಚನೆಗಳಿತ್ತರು: ಆಯುರ್ವೇದ ಮೂಲಧಾತು ಗ್ರಂಥಗಳು ಪ್ರಾದೇಶಿಕ ಭಾಷಾಂತರಿಸಲ್ಪಡಬೇಕು; ಗ್ರಂಥ. ಜ್ಞಾನ ಪಪ್ಪೆ ಮೂಲಿಕೆಗಳ ಪ್ರತ್ಯಕ್ಷಾನುಭವವೂ ಬೇಕು; ರೋಗ ನಿಧಾನ, ಚಿಕಿತ್ಸಾ ಕ್ರಮ ಇತ್ಯಾದಿಗಳಲ್ಲಿ ತಲೆದೋರಿರುವ ಮತಭೇದಗಳನ್ನು ವಿಚಾರವಿನಿಮಯದ ಮೂಲಕ ಕಡಿಮೆ ಮಾಡಿಕೊಳ್ಳಬೇಕು; ಉಪಕರಣಗಳ ಸಂಶೋಧನೆ ಹಾಗೂ ಉತ್ಪಾದನೆಯಾಗಬೇಕು; ಸರಿಯಾದ ನೈದ್ಯಕೀಯ ತರಬೇತಿ ಕೇಂದ್ರಗಳು ಬೇಕು; ಔಷಧ ವ್ಯವಹಾರದಲ್ಲಿ ವ್ಯಾಪಾರ ದೃಷ್ಟಿ ಹಾಗೂ ಲಾಭ ಬಡಕತನವಿರಬಾರದು.

ಪ್ರಾಂತೀಯ ಸರಕಾರಗಳು ಆಯುರ್ವೇದ ಶಾಸ್ತ್ರೀಕೃತ್ಯ ತಯಾರಿಸುವ ಆಸವಾರಿಷ್ಟಗಳಿಗೆ ಮದ್ಯಪಾನ ನಿರೋಧ ಕಾನೂನಿನನ್ವಯ ನಿರ್ಬಂಧ ಹಾಕಿರುವದು ಯಾವ ಆಧಾರದ ಮೇಲೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಸಾವಿರಾರು ಜನರಿಗೆ ಉಪಯೋಗ ಬೀಳುವ ಆಸವಾರಿಷ್ಟಗಳು ರೋಗ ನಿವಾರಕಗಳೇ ಹೊರತು ಉನ್ಮಾದಕಗಳಲ್ಲ. ಆದ್ದರಿಂದ ಸರಕಾರವು ಈ ಕಡೆಗೆ ಗಮನವಿತ್ತು ಜನತೆಯ ಕೋರಿಕೆಯನ್ನು ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ.

ಉದ್ಘಾಟನೆ

ಅನಂತರ ಜಿಲ್ಲಾ ಜೋರ್ಡಿನ ಅಧ್ಯಕ್ಷರಾದ ಶ್ರೀ। ಬಿ. ಮಂಜಯ್ಯ ಹೆಗ್ಡೆ ಅವರು ಸಮ್ಮೇಲನದ ಉದ್ಘಾಟನೆಯನ್ನು ನೆರವೇರಿಸಿದರು. ದೇಶೀಯ ವೈದ್ಯರಿಂದ ಹಳ್ಳಿಯ ಜನತೆಗಾಗುತ್ತಿರುವ ಉಪಕಾರವನ್ನು ವಿವರಿಸಿ ಜಿಲ್ಲಾ ಬೋರ್ಡಿಗೆ ಈ ವೈದ್ಯರಲ್ಲಿ ಯೋಗ್ಯರಾದವರು ಮುಂದೆ ಬಂದು ಸೇವೆ ಸಲ್ಲಿಸಲು ಸಿದ್ಧರಾಗಬೇಕೆಂದರು.

ಅಧ್ಯಕ್ಷರ ಆಯ್ಕೆ

ಅನಂತರ ಬೆಳಗಾವಿಯ ನೈದ್ಯ ರಾ. ಕೃ. ಕುಲಕರ್ಣಿ ಜನರಾಲ್ಸರ್ ಇವರನ್ನು ಅಧ್ಯಕ್ಷಸ್ಥಾನ ಸ್ವೀಕರಿಸುವಂತೆ ಶ್ರೀ। ಧರ್ಮಸ್ಥಳ ಮಂಜಯ್ಯ ಹೆಗ್ಡೆ ಅವರು ಸೂಚಿಸಿದರು, ಡಾ। ಎಂ. ಆರ್. ಭಟ್, ಕುಮಾರಿ ಲೊಕೂಂಡೆ, ನೈದ್ಯ ಕೇಳು ನಂಬಿಯಾರ್ ಮೊದಲಾದವರು ಇದನ್ನು ಅನುಮೋದಿಸಿದರು.

ಸಮ್ಮೇಲನದ ಕಾರ್ಯಾದರ್ಶಿ ಡಾ। ಕೆ. ವಿ. ಕೆ. ಉಪಾಧ್ಯಾಯರು ಸಮ್ಮೇಲನಕ್ಕೆ ಯಶಸ್ಸು ಕೋರಿ ಶ್ರೀ। ಚಿತ್ರಾಪುರ ಮತ್ತು ಶ್ರೀ ಸೋದೆವಾದರ ಶ್ರೀಗಳವರಿಂದ, ಕೇಂದ್ರ ಮಂತ್ರಿ ದಿವಾಕರರಿಂದ, ಮದ್ರಾಸಿನ ಮಂತ್ರಿಗಳಾದ ಮಾಧವ ಮೆನೂನ್ ಮತ್ತು ಡಾ। ರಾಜನ್, ಬೊಂಬಯಿಯ ಮಂತ್ರಿ ಗಿಲ್ಡರ್ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಯುರ್ವೇದದ ಮಹತ್ವವನ್ನು ಉದಾಹರಣೆಗಳ ಸಹಿತ ವಿವರಿಸಿ, ಜ್ಯೋತಿಶ್ಶಾಸ್ತ್ರವನ್ನು ನಮ್ಮ ಪೂರ್ವಜರು ವೈದ್ಯಿಸಿಕೊಂಡು ಬಂದಂತೆ ಆಯುರ್ವೇದದ ಸಂವರ್ಧನೆಯು ಸರಕಾರದಿಂದಾಗಬೇಕೆಂದರು. ನಾಲ್ಕು ವರ್ಷಗಳ ಹಿಂದೆ, ಮಣಿಪಾಲದಲ್ಲಿ ಜರಗಿದ ಅ. ಭಾ. ಆಯುರ್ವೇದ ಸಮ್ಮೇಳನಕ್ಕೆ ತಾವು ಬಂದಿದ್ದುದನ್ನು ಪ್ರಸ್ತಾವಿಸಿದರು.

ಡಾ। ಎಂ. ಆರ್. ಭಟ್, ಅವರು ಅಧ್ಯಕ್ಷರ ಭಾಷಣವನ್ನು ಇಂಗ್ಲಿಷಿನಲ್ಲಿ ವಿವರಿಸಿದರು.

ಅಪರಾಹ್ನ ತದ್ವಿದ್ಯಾ ಸಂಘಾಶಾ ಪರಿಷತ್ತು ಆಯುರ್ವೇದ ಕುರಿತು ನಿಂದ್ಯಾಸರ ಭಾಷಣಗಳಾದಿಗಳು ನಡೆದುವು.

ಎರಡನೆ ದಿನ

ಮರುದಿನ ಬೆಳಿಗ್ಗೆ ಪಂಡಿತ ಯಂ. ಯಸ್. ಎ. ಶರ್ಮಾಂವರು ಪ್ರಕೃತಿ ಚಿಕಿತ್ಸೆ ಸಂಬಂಧ ಭಾಷಣ ಕೂಟ್ಟು ಆಸನ ಪ್ರಾಣಾಯಾಮ ವಿಧಿಗಳ ಪ್ರದರ್ಶನ ಮಾಡಿದ ಬಳಿಕ ವೈದ್ಯ ಪಾಣಾಜೆ ಶಂಕರನಾರಾಯಣ ಭಟ್ಟರವರು ಹಲವು ಅಮೂಲ್ಯ ಸಸಿ ಗಿಡ ಮೂಲಿಕೆಗಳ ಪರಿಚಯ ಮಾಡಿಸಿ ಅವುಗಳ ಔಷಧಿ ಗುಣಗಳ ಕುರಿತು ಬೋಧಪ್ರದವಾದ ಭಾಷಣವಿತ್ತರು. ಅನಂತರ ವಿಷಯ ನಿಯಾಮಕ ಸಭೆಯೂ ಮಧ್ಯಾಹ್ನ ಸಾಹಾದಿವೇಶನವೂ ಕೂಡಿ ವೈದ್ಯ ಪಾರ್ಥಸಾರಥಿ ಪಂಡಿತ, ವೈದ್ಯ ಮಂಜುನಾಥಯ್ಯ, ವೈದ್ಯ ಗುರುಯಂ. ಆರ್. ಭಟ್ಟ ಮೊದಲಾದವರ ಸಲಹೆಗಳಂತೆ ದಿವಂಗತ ಯಂ. ವಿ. ಶಾಸ್ತ್ರಿ ಮೊದಲಾದ ವೈದ್ಯರ ನಿಧನಕ್ಕಾಗಿ ಶೋಕ ಪ್ರದರ್ಶನದೊಂದಿಗೆ ಕರ್ನಾಟಕ ಏಕೀಕರಣ ಮತ್ತು ಪ್ರತ್ಯೇಕ ಪ್ರಾಂತ ಸ್ಥಾಪನೆಯ ಆಗತ್ಯ; ಕರ್ನಾಟಕ ವಿದ್ಯಾಲಯದಲ್ಲಿ ವೈದ್ಯರಿಗೆ ಪ್ರಾತಿನಿಧ್ಯ ಕೊಡಬೇಕಾದ ಅವಶ್ಯಕತೆ; ಸಂಸ್ಕಾರವು ಆಯುರ್ವೇದಕ್ಕೆ ತೋರಿಸುತ್ತಿರುವ ಆಸಕ್ತಿಯನ್ನು ದೂಂ ಮಾಡಿ ಕೈಯೂತ್ಪಕ ಸಹಾನುಭೂತಿಯನ್ನು ತೋರಿಸಲು ವಿನಂತಿ; ವೈದ್ಯ ಜನಿವಾಳಕರರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಮೂಸ ಅಧಿಕಾರಿ ಬಂಡಲದ ಚುನಾವಣೆ; ಆಸವಾರಿಷ್ಟಗಳ ಮೇಲೆ ಅಬಕಾರಿ ಕಾರ್ಯವನ್ನನುಸರಿಸಿ ಮದರಾಸು ಸರಕಾರವು ಪ್ರಾಂತೀಯ ನಿರ್ಬಂಧವನ್ನು ಅದು ತೆಗೆಯುವಂತೆ ವಿನಂತಿಸುವ ಠರಾವುಗಳು ಸರ್ವಸಮ್ಮತಿಯಿಂದ ಮಂಜೂರಾದುವು.

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ವಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಸಾತುಗಾರಿಕೆಯ ಮಾತುಗಳ ರೂಪದಲ್ಲಿರಿದೆ ಭಟ್ಟಿಯಾಗಿ ಎದ್ದು ಕಾಣುವುದು.

400 ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು
ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ಪವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಕಾ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕಲಿದರೆ ಓಗೊಡುವ ನೌಕರರ ನರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ ನಿಂದಿತನಸು, ಇವುಗಳ ರುಚಿಯುಚಿ ಹೇಳಬೇಕೆ?

ಪ್ರೊಪ್ರಾಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಮಿತಸ್ರಾವ ನಿಂತಿತು

'ಕುಮಾರಿ' ದಲ್ಲಿಗಳನು ಉಪಯೋಗಿಸಿದರೆ ಹದಿಹರೆಯ ಮತುಸ್ರಾವವಾಗುವುದು. ಹಠತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಕೀಸ್ರ ಗುಣಹೊಂದಬಹುದು, ಯಾವ ಬಾಧೆಗಳೂಯಿಲ್ಲ. ಸಾವಿರಾರು ಮಂದಿಗೆ ಪಾತ್ರಿ ಗುಣವಾಗಿದೆ. ಬೆಲೆ; ರೂ ೩-; ಸ್ಪೆಷಲ್ ರೂ. ೫-; ಅಧಿಕಾರಿಕ ಸ್ಪೆಶಲ್ ರೂ. ೫-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.

ಸ್ಯಾಕೆಸ್ಟರು: ಶಕಾರಂಪೆನ್, ಮಂಗಳೂರು

ದ. ಕನ್ನಡ

ಕುಂಬಳೆ.—ಶ್ರೀ ಬಂಬ್ರಾಣ ಶಾಂತಪ್ಪರೈಯವರು ಹೊಸತಾಗಿ ಕಟ್ಟಿಸಿದ ಮೋಡರ್ನ್ ಸಾಪಾಟೇ ಕರ್ನಾಟಕಸಾಲ್ಟ್‌ನ ಉದ್ಘಾಟನಾಸಮಾರಂಭವನ್ನು ತಾರೀಕಿ ಅಪರಾಹ್ನ ೬ ಗಂಟೆಗೆ ನೆರವೇರಿಸಲಾಯಿತ್ತು. ಶ್ರೀ ಏಸ ಭಂಡಾರಿಯವರು ಕೇಳಿಕೊಂಡ ಪ್ರಕಾರ ರೆವರೆಂಡ್ ಪಾದರ್ ಎಡ್ವಾರ್ಡ್ ಸಾಲ್ಡಾನನವರು ಸಭಾ ಸಂಬಂಧವಾಗಿ ಸೇರಿದ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದರು. ಹೆಣ್ಣು ಮಕ್ಕಳ ವಂದೇ ಮಾತರಂ ಹಾಡಿನಿಂದ ಕಾರ್ಯಾರಂಭವು ಪುರುವಾಯ್ತು. ಶ್ರೀ ಬಾಡೂರು ಜಗನ್ನಾಥರೈಯವರು ಎಲ್ಲವರನ್ನೂ ಶ್ರೀ ಶಾಂತಪ್ಪರೈ ಮತ್ತು ಅವರ ಪತ್ನಿ ಭಾಗೀರತಮ್ಮನ ಪರವಾಗಿ ಸ್ವಾಗತಿಸಿದರು. ಬಳಿಕ ಉದ್ಘಾಟನೆಯನ್ನು ಅಧ್ಯಕ್ಷರು ನೆರವೇರಿಸಿದರು. ಚಂದವಾಗಿ ಇದರ ಕೆಲಸವನ್ನು ಪೂರೈಸಿದ ಶ್ರೀ ಗೋಪಾಲನವರಿಗೆ ಚಿನ್ನದ ಪದಕವನ್ನು ಕೊಡಲಾಯಿತು ಆರೋಗ್ಯಂದ ಜನರಿಗುಂಟಾಗುವ ಗುಣವನ್ನೂ ಆರೋಗ್ಯ ರಕ್ಷಣೆಗೆ ಇಂತಹ ಸೌಕರ್ಯದ ಆವಶ್ಯಕತೆಯನ್ನೂ ವಿವರಿಸಿ ಇಂಥಾ ಸೌಕರ್ಯವು ಎಲ್ಲೆಲ್ಲೂ ಹಬ್ಬಲಿ, ಸ್ವಥಮವಾಗಿ ಕುಂಬಳೆಯಲ್ಲಿ ಇಂಥಾ ಸೌಕರ್ಯವನ್ನು ವಿಪರೀಡಿಸಿದ ಈದಂ ಹತಗಳನ್ನು ಬೇರೆಯವರೂ ಅನುಕರಿಸಲಿ ಎಂದು ಶ್ರೀಯುತರಾದ ಎಂ. ಪಿ ಕುಮಾರನ್(ಹೆಲ್ತ್ ಇನ್‌ಸ್ಪೆಕ್ಟರ್) ಜಿಲ್ಲಾ ಬೋರ್ಡ್ ಮೆಂಬರ್ ಶ್ರೀ ಬಿ.ದೇವಪ್ಪ ಆಳ್ವ, ಶ್ರೀ. ಎನ್. ಅಬ್ಬಾಜ್ಜ, ಶ್ರೀ ಕೆ ಪಿ ರಾಮದಾಸ ಕೂಡಾ ಭಾಷಣಮಿತ್ತರು ಅಧ್ಯಕ್ಷರು ತನ್ನ ಭಾಷಣದಲ್ಲಿ ಇಂಥಾಸೌಕರ್ಯದ ಅವಶ್ಯಕತೆಯನ್ನು ಎತ್ತಿ ಭಾಷಣ ಕೊಟ್ಟರು. ಶ್ರೀ ಇಚ್ಲಂಪಾಡಿತ್ಯಾಂಪಣ್ಣರೈಯವರು ಆತಿಥಿಯರ ಪರವಾಗಿ ಪಂದನಾರ್ಪಣೆ ಮಾಡಿದರು ಜನಗಣ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯ್ತು.

ಸುರತ್ಕಲ್.—ರಂಗಯ್ಯ ಸ್ಮಾರಕ ಫಂಡು ನಿತ್ರಪಟ್ಟು, ಈ ಸಂಘದ ನಪ್ತಮ ವಾರ್ಷಿಕೋತ್ಸವವು ತಾರೀಖು 21 5 1950 ರಲ್ಲು ಮುಕ್ಕ ಅಗ್ನಿದಕರಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸುರತ್ಕಲ್ ಗ್ರಾಮದ ಪರಲಾದ ಶ್ರೀ ಉಪೇಂದ್ರ ಕಾಮತರವರ ಅಧ್ಯಕ್ಷತೆಯಲ್ಲಿ ಜರಗಿತು ಇದರ ರಾತ್ರಿ ಶಾ ಬಿಯು 40 ವಯಸ್ಕ ಸದ್ಯಾಸಿಗಳಲ್ಲಿ ಅಧ್ಯಕ್ಷಿ ದ ಹತ್ತದಿಂದ ಕೊಂಡ ಇಂಟು ಪ್ರಾಯದ ಚಿತವಾಗಿ ಕೊಡಿಸಲಟ್ಟಿತು ನೆರೆಗೆ ಸಭಿಕರಲ್ಲಿ ಶ್ರೀಗುರುವ ಏಮ್ ಬಸ್ಟ್ರೀನಾರಾಯಣ ಮಿಸ್.ರಂಗಯ್ಯ, ಎಂ.ಎ. ಕಿ ನಜೆ ಸುತ್ರರವರು ಕೆ ರಾಮಯ್ಯ ಶ್ರೀ ಎಂ ಮತ್ತು ಬೋಜ ಎಸ್ಟ್ರೀರೇ ರೂಪಲಿಪ ವರು ಫಂಡಿನ ಏಳಿಗೆಯ ಇಗೂ ಪ್ರಯತ್ನ ರ ಆವಶ್ಯಕತೆಯ ಮುರಿಂಗಿ ಭಾಷಣ ಮಾಡಿದ ತರುವಾಯ, ಬಾತ್ರಿ ಏಳಿಯ ವಿದ್ಯಾರ್ಥಿಗಳ ವಿವಿಧ ವಿನೋದಾಂಶಗಳಿಂದಿಗೆ ಸಭೆಯು ಮುಕ್ತಾಯವಾಯಿತು.

ಹಿರಿಯಡಕ.—ಇಲ್ಲಿ ಇದೇ ಜೂನ್ ತಿಂಗಳ ಆರಂಭದಲ್ಲಿ ಸರಕಾರದ ಸೆಂಕ್ಷನ್ ನೇರೆಗೆ ದೂನ್ಯಡಿ ಜೋರ್ಡಿನವರಿಂದ ತೆರೆಯಲ್ಪಡಲಿರುವ ಹ್ಯಾಸ್ಕೂಲಿಗೆ ತನ್ನ ಮುಕ್ಕಳನ್ನು ಕಳುಹಿಸಿಕೊಟ್ಟು ವಿದ್ಯಾಪ್ರಯೋಜನವನ್ನು ಹೊಂದಬೇಕಾಗಿ ಅತಿಸಂತ್ರೇಪೆ ಕ್ಲಾಸುಗಳು I ಫೋರ್ಮಿನಿಂದ IV ಫೋರ್ಮಿನ ವರೆಗೆ ಈ ವರುಷವೇ ತರೆಯಲ್ಪಡುತ್ತವೆ. ಅಲ್ಲದೆ ವಿದ್ಯಾರ್ಥಿಗಳಿಗೆ ಉಳಕೊಳ್ಳುವರೆ ತಕ್ಕುದಾದ ನಿವಾಸ ಗೃಹ(ಹೋಸ್ಟೆಲ್) ವನ್ನು ಯೇರ್ಪಡಿಸುತ್ತದೆ. ನಿವಾಸಸ್ತ್ಯದ ಆಗತ್ಯವುಳ್ಳ ಮಕ್ಕಳ ರಕ್ಷಕರು ಮುಂಚಿತವಾಗಿಯೇ ಎಡ್ಮಿಕೇಶನಲ್ ಸೊಸಾಯಟಿ ಕಾರ್ಯದರ್ಶಿಯವರಿಗೆ ಬರಕೊಳ್ಳುವುದು.

ಹರ್ಕಾಳ:—ತಾ. 21-5-50ನೇ ಆದಿತ್ಯವಾರ ಉಡ್ಪಿ ತಾಲೂಕು ಮರಾಟ ಸಮಾಜದ 4ನೇ ಸಭೆಯು ಶ್ರೀ.ಎಮ್ ರಾಮಣ್ಣ ಮಜಕ್ಕಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೌನ ಪ್ರಾರ್ಥನೆಯ ನಂತರ ಅಧ್ಯಕ್ಷರು ತಮ್ಮ ಮುನ್ನುಡಿಯಲ್ಲಿ ಮಾರಾಟಂ ಆಗಿನ ದುಸ್ಥಿತಿಯನ್ನೂ ಇದಕ್ಕೆ ಕಾರಣಗಳನ್ನೂ ಅಲ್ಲದೆ ನಮಾಜದ ಇಂದಿನ ಚರಿತ್ರೆಯ ಸ್ಥೀ ಸಭೆಯ ಮುಂದಿಟ್ಟರು ಈ ಸಮಾಜದ ಈಗಿನ ದಿಕ್ಕಟ್ಟನ್ನೂ, ಇದರ ಏಳಿಗೆಗಾಗಿ ಬ ಸ್ಥೆಗಳ ಅವಶ್ಯಕತೆ ಮತ್ತು ಪ್ರಯತ್ನ ತಲೆ ಕೆಳಗೆ ಮಾಡಿದರು. ಸ್ಥಳೀಯ ಮಾರಾಟ ಸಂಘ ಉಡುಪಿ, ಕಾರ್ಕಳ, ಮುಂಬಯಿ ಕೈಕಂಬ ಮೊದಲಾದ ಸ್ಥಳಗಳಲ್ಲಿ ಸಮಾಜ ಸಂಘಟನೆಯ ಪ್ರಯತ್ನ ಮಾಡಿದ್ದನ್ನೂ ಸ್ಮರಿಸಿದರು. ಕೊನೆಗೆ ಸಮಾಜದ ಸಂಘಟನೆಯ ಪ್ರಯತ್ನ ಮಾಡಲು ಒಂದು ಸಮಿತಿಯನ್ನು ಆರಿಸಿ ಕಳುಹಿಸಬೇಕೆಂದು ಸೂಚಿಸಿದರು. ಅದರಂತೆ ಸಭೆಯು ಒಂದು ಸಮಿತಿಯನ್ನು ಆರಿಸಿ ಕಳುಹಿಸಿತು. ಸಮಿತಿಯು ಸಂಘಟನೆಯ ಪ್ರಯತ್ನ ಮಾಡಿ ಸಭೆಗೆ ವರದಿ ಕೊಡಬೇಕಾಗಿ ಕೇಳಿಕೊಂಡಿತು. ಆಮೇಲೆ ಸಭೆಯು ಸಮಾಜದ ಅಭಿವೃದ್ಧಿಗಾಗಿ ಕೆಲವು ಸೂಚನೆಗಳನ್ನು ಕೊಟ್ಟು ಮುಕ್ತಾಯವಾಯಿತು.

ಹಿರಿಯಡಕ.—ಇಲ್ಲಿ ಇದೇ ಜೂನ್ ತಿಂಗಳ ಆರಂಭದಲ್ಲಿ ಸರಕಾರದ ಸೆಂಕ್ಷನ್ ನೇರೆಗೆ ದೂನ್ಯಡಿ ಜೋರ್ಡಿನವರಿಂದ ತೆರೆಯಲ್ಪಡಲಿರುವ ಹ್ಯಾಸ್ಕೂಲಿಗೆ ತನ್ನ ಮುಕ್ಕಳನ್ನು ಕಳುಹಿಸಿಕೊಟ್ಟು ವಿದ್ಯಾಪ್ರಯೋಜನವನ್ನು ಹೊಂದಬೇಕಾಗಿ ಅತಿಸಂತ್ರೇಪೆ ಕ್ಲಾಸುಗಳು I ಫೋರ್ಮಿನಿಂದ IV ಫೋರ್ಮಿನ ವರೆಗೆ ಈ ವರುಷವೇ ತರೆಯಲ್ಪಡುತ್ತವೆ. ಅಲ್ಲದೆ ವಿದ್ಯಾರ್ಥಿಗಳಿಗೆ ಉಳಕೊಳ್ಳುವರೆ ತಕ್ಕುದಾದ ನಿವಾಸ ಗೃಹ(ಹೋಸ್ಟೆಲ್) ವನ್ನು ಯೇರ್ಪಡಿಸುತ್ತದೆ. ನಿವಾಸಸ್ತ್ಯದ ಆಗತ್ಯವುಳ್ಳ ಮಕ್ಕಳ ರಕ್ಷಕರು ಮುಂಚಿತವಾಗಿಯೇ ಎಡ್ಮಿಕೇಶನಲ್ ಸೊಸಾಯಟಿ ಕಾರ್ಯದರ್ಶಿಯವರಿಗೆ ಬರಕೊಳ್ಳುವುದು.

ಹರ್ಕಾಳ:—ತಾ. 21-5-50ನೇ ಆದಿತ್ಯವಾರ ಉಡ್ಪಿ ತಾಲೂಕು ಮರಾಟ ಸಮಾಜದ 4ನೇ ಸಭೆಯು ಶ್ರೀ.ಎಮ್ ರಾಮಣ್ಣ ಮಜಕ್ಕಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೌನ ಪ್ರಾರ್ಥನೆಯ ನಂತರ ಅಧ್ಯಕ್ಷರು ತಮ್ಮ ಮುನ್ನುಡಿಯಲ್ಲಿ ಮಾರಾಟಂ ಆಗಿನ ದುಸ್ಥಿತಿಯನ್ನೂ ಇದಕ್ಕೆ ಕಾರಣಗಳನ್ನೂ ಅಲ್ಲದೆ ನಮಾಜದ ಇಂದಿನ ಚರಿತ್ರೆಯ ಸ್ಥೀ ಸಭೆಯ ಮುಂದಿಟ್ಟರು ಈ ಸಮಾಜದ ಈಗಿನ ದಿಕ್ಕಟ್ಟನ್ನೂ, ಇದರ ಏಳಿಗೆಗಾಗಿ ಬ ಸ್ಥೆಗಳ ಅವಶ್ಯಕತೆ ಮತ್ತು ಪ್ರಯತ್ನ ತಲೆ ಕೆಳಗೆ ಮಾಡಿದರು. ಸ್ಥಳೀಯ ಮಾರಾಟ ಸಂಘ ಉಡುಪಿ, ಕಾರ್ಕಳ, ಮುಂಬಯಿ ಕೈಕಂಬ ಮೊದಲಾದ ಸ್ಥಳಗಳಲ್ಲಿ ಸಮಾಜ ಸಂಘಟನೆಯ ಪ್ರಯತ್ನ ಮಾಡಿದ್ದನ್ನೂ ಸ್ಮರಿಸಿದರು. ಕೊನೆಗೆ ಸಮಾಜದ ಸಂಘಟನೆಯ ಪ್ರಯತ್ನ ಮಾಡಲು ಒಂದು ಸಮಿತಿಯನ್ನು ಆರಿಸಿ ಕಳುಹಿಸಬೇಕೆಂದು ಸೂಚಿಸಿದರು. ಅದರಂತೆ ಸಭೆಯು ಒಂದು ಸಮಿತಿಯನ್ನು ಆರಿಸಿ ಕಳುಹಿಸಿತು. ಸಮಿತಿಯು ಸಂಘಟನೆಯ ಪ್ರಯತ್ನ ಮಾಡಿ ಸಭೆಗೆ ವರದಿ ಕೊಡಬೇಕಾಗಿ ಕೇಳಿಕೊಂಡಿತು. ಆಮೇಲೆ ಸಭೆಯು ಸಮಾಜದ ಅಭಿವೃದ್ಧಿಗಾಗಿ ಕೆಲವು ಸೂಚನೆಗಳನ್ನು ಕೊಟ್ಟು ಮುಕ್ತಾಯವಾಯಿತು.

ಮಲೆನಾಡು ವಿಚಾರಣಾ ಕಮಿಟಿಯ ಸಂಚಾರ

ಮದರಾಸು ಸರಕಾರದವರು ಪಶ್ಚಿಮಕನ್ನಡ ಜಿಲ್ಲೆಯ ಮಲೆನಾಡುಗಳ ಸಂಕಷ್ಟಗಳನ್ನು ವಿಚಾರಿಸಿ ಸುಧಾರಣೆಯ ಬಗ್ಗೆ ಯೋಗ್ಯ ಸೂಚನೆಗಳನ್ನು ಮಾಡುವಂತೆ ನಿರ್ದೇಶಿಸಿದ "Forest Grievences Enquiry Committee" ಎಂಬ ಹೆಸರಿನ ಕಮಿಟಿಯು ಮಂಗಳೂರು ತಿಂಗಳ 16ನೇ ತಾರೀಕಿನಿಂದ 20 ನೇತಾರೀಕಿನ ವರೆಗೆ ಮುಕ್ಕೂರು ತಾಲೂಕಿನ ಸುತ್ತೂರು, ಸುಳ್ಯ, ಗುತ್ತಿಗಾರು, ಕೊಲ್ಲಮೊಗರು, ಸುಬ್ರಮ್ಮಣ್ಯ, ಕಡಬ, ಕೊಕ್ಕಡ, ಉಪ್ಪಿನಂಗಡಿ, ಬಳ್ತಂಗಡಿ ಮತ್ತು ಮುಂದಾಜೆ ಹೀಗೆ 10 ಕೇಂದ್ರಗಳಲ್ಲಿಯೂ ತಂಗಿ ವಿಚಾರಣೆ ನಡೆಸಿ ಕಾರ್ಕಳ ತಾಲೂಕಿನಲ್ಲಿ ಕಾಲಿಡುವಂತೆಯೇ ಎನ್ನಿಸುವಂತೆ ವೇಣೂರಿನ ಕೆಲಸ ಮುಗಿಸಿ ಮಂಗಳೂರಿಗೆ ಹಿಂತೆರಳಿತು ಕಮಿಟಿಯ ಅಧ್ಯಕ್ಷರಾದ ಕಲೆಕ್ಟರರು ಪುಕ್ಕೂರು, ಸುಳ್ಯ ಸುಬ್ರಮ್ಮಣ್ಯ, ಕೊಕ್ಕಡ ಮತ್ತು ವೇಣೂರುಗಳಲ್ಲಿ ಮಾತ್ರವಿದ್ದರು ಇತರ ಕೇಂದ್ರಗಳಲ್ಲಿ ಉಪಾಧ್ಯಕ್ಷರಾದ ಜಿಲ್ಲಾ ಕೃಷಿಕ ಅಧಿಕಾರಿಗಳಾದ ಶ್ರೀ ಭಂಡಾರಿಗಳು ಅಧ್ಯಕ್ಷತೆಯನ್ನು ವಹಿಸಿ ಕೆಲಸ ಕಾರ್ಯ ನಡಿಸಿದರು ಶ್ರೀ ಶಿವರಾಯರು(ಮೊಗಪಳ್ಳಿ) ಅಸಿಸ್ಟಂಟ್ ಕಲೆಕ್ಟರ ಪ್ರತಿನಿಧಿಯಾಗಿ ಸುತ್ತೂರು ತಾಲೂಕಿನಲ್ಲಿ ಕೆಲಸವನ್ನು ಕಮಿಟಿಯ ರಾಯರು ದರ್ಶಿಯಾಗಿ ನಡಸಿದರು ಶ್ರೀ ಕೆ ವಿ. ಜೋರಾಜ ಹಗ್ಗಡೆಯವರು ಮುಂತಾದ ನೆವು ಗೂನಾಲಿಕರ ಸಂಘ ಮತ್ತು ಮಂಜನಾಡು ಸಹಕಾರಣಾ ಸಂಘಗಳ ಪರವಾಗಿ ಈ ಕಮಿಟಿಯನವರ ಕೃಪೆಯಿಂದ ಸಂಸ್ಥೆಗಳ ಬಾಧಾರಣ ಸುಂಬಾರ ಇವ್ಯವಸ್ಥೆಯನ್ನು ಜಲಾಯಿಸಿ ಈ ಕಮಿಟಿಯು ಯೋಗ್ಯ ಅಭಿಪ್ರಾಯವನ್ನು ತಿಳಿಯುವಂತೆ ಸಹಾಯಂಬರಾಗಲು ಪ್ರಯತ್ನಿಸಿದೆವೆನ್ನಬಹುದು. ಪ್ರತಿಯೊಂದು ಕಡೆಯಲ್ಲಿಯೂ ಜನಸಂದಣಿಯು ಕಿಕ್ಕಿರಿದು ನೆರೆದಿತ್ತು. ಒಟ್ಟು ಸುಮಾರು 70 ಸಾಕ್ಷಿದಾರರ ಹೇಳಿಕೆಗಳನ್ನೂ 25, 30 ಮನವಿಗಳನ್ನೂ ಕಮಿಟಿಯವರು ಸ್ವೀಕರಿಸಿಕೊಂಡಿದ್ದು. ಶ್ರೀ ಶಿವರಾಯರೇ ಈ ಕಮಿಟಿಯನ್ನು ಸಂಪೂರ್ಣ ನಡಿಸಿದವರೆನ್ನಬಹುದು ಕಲೆಕ್ಟರ್ ಸಾಹೇಬರಿಗೆ ಕನ್ನಡ ತಿಳಿಯದಿದ್ದರೂ ಈ ಕಮಿಟಿಯ ಕಾರ್ಯದಲ್ಲಿ ಹೆಚ್ಚಿನ ಶಾತ್ಪರ್ಯ ತೋರಿಸುವದಾದರೂ ಸಾಕ್ಷಿ ವಿಚಾರಣೆಯ ಅಂಶಗಳು ರಿಕಾರ್ಡಿನಿಂದ ಮಾತ್ರ ತಿಳಿಯಬೇಕು ಇತರ ಅಧಿಕಾರಿಗಳು ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟದ್ದಕ್ಕೆ ಮಾತ್ರ ಮನಸ್ಸು ಮಾಡುವರೆಂಬ ಭಾವನೆಯು ನನಗಿರಲ್ಲಿದೆ. ಹೇಗಿದ್ದರೂ ಈ ಕಮಿಟಿಯವರು ಈ ಎಲ್ಲಾ ಕೇಂದ್ರಗಳ ಸಂಚಾರ ಮುಗಿಸಿ ಪುನಃ ಮತ್ತೆತ್ತಮ್ಮಮೇ 24 ಕ್ಕೆ ಜೊಂಟು ಕಾರ್ಕಳ, ಅಜೆಕಾರು, ಶಂಕರನಾರಾಯಣ, ಕುಂದಾಪುರ, ಬ್ರಹ್ಮಾವರ ಹೆಬ್ರಿ ಕೇಂದ್ರಗಳನ್ನು ಮುಗಿಸಿ 26ಕ್ಕೆ ಹಿಂತಿರುಗಿ ಪರಲಿ.

ಈ ವರೆಗಿನ ಸಾಕ್ಷಿಗಳಲ್ಲಿ ಶ್ರೀ ಎಸ್, ಮುದ್ದಪ್ಪ, ಕೂಡಿಗಿನ ಇಜ್ಜಿ ಶ್ರೀ ಧರ್ಮಸ್ಥಳ ಹೆಗ್ಗಡೆಯವರು M. L ಲ. ಶ್ರೀಗಳಾದ ನಂರಾಯಣ ಭಟ್ಟ ಕಿಡೆ, ಉಬ್ರಿ ಕೃಷ್ಣ ಪಡುವೆಲ್ಲೂರಯ, ಎಂ. ಎಂ ಗಿರಿ, ಪುಲ್ಲಿಡ್ಕ ಸುಬ್ರಾಯರು, ಪಿ ಎಸ್. ರಾಮಣ್ಣ ಮುಂತಾದವರ ಸಾಕ್ಷಿಗಳಿಂದ ತುಂಬಾ ವಿಚಾರಗಳು ಕಮಿಟಿಯವರ ಮುಂದಿರಿಸಲ್ಪಟ್ಟವು

ಜೂನ್ 5ಕ್ಕೆ ಈ ಕಮಿಟಿಯವರ ಸಂಚಾರ ಕ್ರಮ ಮುಗಿದ ನಂತರ ಇನ್ನೊಮ್ಮೆ ವರದಿ ಮಾಡುವೆವು M N Bhide

ಬೊಂಬಾಯಿ

ಶ್ರೀ ಶಾರದಾ ವಿಜಯ ಕನ್ನಡ ಇಂಗ್ಲೀಷ್ ಧರ್ಮಾರ್ಥ ರಾತ್ರಿ ಶಾಲೆ ಹರಕೆಸನ್‌ದಾಸ್ ಬಿಲ್ಡಿಂಗ್ 84 ಗಾವಂದೇವಿರೋಡ್ ಮುಂಬಯಿ ನಂಬ್ರ 7 ಈ ಶಾಲೆಯು ರೇಶಿಗೆ ರಜೆಯ ನಂತರ ಜೂನ್ 5 ನೇ ತಾರೀಕಿನಿಂದ ಪುನಃ ತೆರೆಯಲ್ಪಡುವುದು. ಹೊಸ ಪುಡುಗರ ಹೆಸರನ್ನು ಸೊದಾಯಿಸುವ ಕೆಲಸವು ಜೂನ್ 5ರಿಂದ 20ರ ವರೆಗೆ ನಡೆಯುವುದು ಜಾಗೆಗಳು ತುಂಬುವದರೊಳಗಾಗಿ ಹೊಸ ಪಾಗಿ ಸೇರಲು ಬಯಸುವ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ತ್ವರಿತದಿಂದ ಸೊದಾಯಿಸಬೇಕು ಎಂದು ಕಾರ್ಯದರ್ಶಿಯರು ಅಪೇಕ್ಷಿಸುತ್ತಾರೆ.

ಬಂಟರ ಯಾನೆ ನಾಡವರ ಸಂಘ

ದ ಮಹಾಸಭೆಯು ಇದೇ ತಾ. 28ರಲ್ಲು, ಶ್ರೀ ಸೂಡ ಸಂಜೀವ ಶೆಟ್ಟರ ಅಧ್ಯಕ್ಷತೆಯಲ್ಲಿ ಕರ್ನಾಟಕ ಧರ್ಮಾರ್ಥ ಪ್ರೌಢ ರಾತ್ರಿ ಶಾಲಾ ಆವರಣದಲ್ಲಿ (ಜಿ. ಕುಮಟಾ ಬೀದಿ) ಜರಗಲಿರುವುದು

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.

(Established 1934)

Chairman **Sri. M C T M Chidambaram Chattiyar**

A Policy in this progressive Life Office is a good investment, its Agency is a valuable business connection

MANGALORE BRANCH
K S R. Road,
Hampankatta, Mangalore

HEAD OFFICE
United India Life Building,
P B No 142 MADRAS

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು: ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿರೋ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್ ಐ

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ವಾಕಿಸ್ಯರು—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

Wanted

Science or Mathematics graduates trained or untrained to join as teachers in the S. V. High School Gangoli, South Kanara Apply immediately to

The Manager,
S V High School
Gangoli.

ಕಂಬನಿ

ಶ್ರೀ ಕುಂಬಾಕಾಲು ಗಣಪಯ್ಯ ಸಟ್ಟು ಜ್ಯೇಷ್ಠ ಪುತ್ರಿಯೂ, ಕುಂಜಾರು ಶಾಲಾ ಮುಖ್ಯ ಉಪಾಧ್ಯಾಯ ಶ್ರೀ ಕೆ. ವಾಸು ಸಟ್ಟು ಧರ್ಮಪತ್ನಿಯೂ ಆಗಿದ್ದ ಶ್ರೀಮತಿ ಸಂಜೀವಿಬಾಯಿಯು, ಬಂಧುಗಳ ಮನವಿಯ ಬಗ್ಗೆ, ನಂದಿಳಾವ ಗ್ರಾಮದ ತನ್ನ ಕುಟುಂಬದ ಮನೆಗೆ ಹೋಗಿದ್ದವರು, ಈ ಜ್ಞಿಯೇ ನಸ್ಸಾಶಾಧ್ಯರು ಪೀಡಿಂಬಾಗಿ, ಹ ವು ಡಾಕ್ಟರರ ಪರಿಶ್ರಮದಿಂದ ಚಿಕಿತ್ಸೆ ನಡಿಸಿದರೂ, ಫಲಕಾರಿಯಾಗದೆ ಕೆಲನೇ ದಿನ ಸಗಳ ಕಾಯಿಲೆಯಿಂದ ತಾ 17-5-50 ನೇ ದಿನ ಸೂರ್ಯೋದಯಕ್ಕೆ ಅಕಾಲ ಮೃತ್ಯುವಶರಾದರೆಂದು ತಿಸುವಾದ ವಿಷಾದವಾಗುತ್ತದೆ ಮೃತಳಿಗೆ 46 ವರ್ಷ ವಯಸ್ಸಾಗಿದ್ದು, ಕೊನೆಯ ಸಲದ 9 ತಿಂಗಳ ಗಂಡು ಕೂಸು ಒಂದು ಮಾತ್ರ ಇದೆ. ನಿಷ್ಕಾವತಿಯೂ, ಸಾಧ್ವೀಪಣಿಯೂ, ಆತಿಥಿಸೇವಾ ನಿರತಳೂ, ದಾನ ಧರ್ಮ ಪರಾಯಣಳೂ ಎನ್ನಿಸಿದರ್ಶ ಸ್ತ್ರೀಜನ್ಮ ಸದೃಷ್ಟಿಯರಿತಳಾಗಿದ್ದು, ಎಲ್ಲಾ ಪರಿಚಯಸ್ಥರಿಂದ ಮುಖ್ಯವಾಗಿ ಕಂ ರಾಕಾಲ ಗ್ರಾಮಸ್ಥರಿಂದ ಕಂಬನಿ ಬರ ಮಾಡಿಸಿದ, ಸಟ್ಟು ಮನೆ ದೀಪವು ನಂದಿ ಹೋಗಿರುವುದಕ್ಕಾಗಿ ಮಹಿಸಾಗರದಲ್ಲಿ ಬಿದ್ದಿರುವ ಮೃತಳ ಮಾತಾಪಿತೃ, ಪತಿ, ಕೂಡಾ ಬಂಧುವರ್ಗದೊಂದಿಗೆ, ಸಹಭಾಗಿಗಳಾಗಿ ದಿವಂಗತಳ ಆತ್ಮಕ್ಕೆ ನಿತ್ಯಶಾಂತಿಯನ್ನು ಕೋರುತ್ತೇನೆ

ಈ ತಿಂಗಳ ತಾರೀಕು ಹದಿಮೂರರಲ್ಲು ಮೂಲ್ಕಿಯಲ್ಲಿ ನಡೆದ ಪುಷ್ಪತ್ಸವಲ್ಲಿ ನಾನು ಮಾಡಿದ ಭಾಷಣವೆಂದು ಹಲವು ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಗೆರೆಗಳನ್ನೂ ಹಲವು ಟೀಕೆಗಳನ್ನೂ ನಾನು ನೋಡಿದೆ. ಸುಮಾರು ಅರ್ಧ ತಾಸು ಮಾತ್ರ ನಾನು ಆ ದಿನದ ನನ್ನ ಭಾಷಣದ ವಿಷಯಗಳು ಸರಿಯಾಗಿ ತಿಳಿಯಬೇಕಾದರೆ, ಅವುಗಳು ಸಂಪೂರ್ಣ ಅಚ್ಚಾಗಬೇಕಾದರೆ, ಅದನ್ನು ಸ್ವತಃ ಪೂರ್ಣವಾಗಿ ಕೇಳಬೇಕು; ಆಥವಾ ಆ ಭಾಷಣವು ಸಂಪೂರ್ಣವಾಗಿ ಪ್ರಕಟವಾದುದಾಗಿರಬೇಕು. ಹಾಗಿರದೆ, ಪತ್ರಿಕೆಗಳಲ್ಲಿ ಪ್ರಕಟಿಸುವಾಗ ಭಾಷಣದ ನುಡಿಮುತ್ತಾದ ಅಂಂಗಳನ್ನೆಲ್ಲ ಬಿಟ್ಟು ಕೆಲವು ವಾಕ್ಯಗಳನ್ನು ಮಾತ್ರ ಎತ್ತಿ ಬರೆದಲ್ಲಿ ನನ್ನ ಭಾಷಣದ ಅಭಿಪ್ರಾಯವನ್ನು ಅವುಗಳು ಕೊಡಲಾರವು. ಆದುದರಿಂದ ನಾನು ಅಂದು ಹೇಳಿದ್ದ, ಆದರೆ ಪತ್ರಿಕೆಗಳಲ್ಲಿ ಪ್ರಕಟನಾಗದ ಕೆಲವು ಮುಖ್ಯವಾದ ವಿಷಯಗಳು ಯಾವುವೆಂದರೆ:—

"ಈ ಜಿಲ್ಲೆಯ ಕೃಷಿಕರು ಅಪೇಕ್ಷಿಸುತ್ತಿರುವ ಭೂಮಸೂದೆಯನ್ನು ಕೂಡಲೇ ಜಾರಿ ತರಬೇಕೆಂಬುದು 1946ನೆಯ ಇಸ್ವಿಯ ಕಾಂಗ್ರೆಸ್ಸಿನ ಚುನಾವಣೆಯ ಘೋಷಣೆಯಾಗಿದೆ. ಇದು ಒಂದು ಹೊಸತಾದ ವಿಷಯವೇನೂ ಅಲ್ಲ. ಮೊದಲೇ 1939-ಲ್ಲಿ ಮುಂಬಯಿ ಪ್ರಾಂತ್ಯದಲ್ಲಿ ಕಾಂಗ್ರೆಸ್ ಸರಕಾರವು ಮಾಡಿದ ಅಳ್ವಿಕೆ ಇದೆ. ಅನಂತರ ಉತ್ತರ ಪ್ರದೇಶ ಮತ್ತು ಇನ್ನೂ ಇತರ ಕೆಲವು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸು ಸರಕಾರಗಳೇ ಇಂತಹ ಶಾಸನಗಳನ್ನು ಮಾಡಿವೆ. ಮದ್ರಾಸು ಪ್ರಾಂತದ ಆಡಳಿತವನ್ನು 1946ನೇ ಜೂನ್ ತಿಂಗಳಲ್ಲಿ ಪ್ರಕಾಶಂ ಮಂತ್ರಿ ಮಂಡಳವು ವಹಿಸಿಕೊಂಡ ಕೂಡಲೇ ಶ್ರೀ ರಾಘವೇಂದ್ರ ರಾಯರನ್ನು ಈ ವಿಚಾರದಲ್ಲಿ ಕೂಲಂಕಷವಾಗಿ ತನಿಖೆ ನಡೆಯಿಸಿ ವರದಿ ಮಾಡುವ ಬಗ್ಗೆ ಯತ್ನಿಸಿತು. ಅಲ್ಲದೆ, ಅಂತಹ ಕಾನೂನಿನ ಜಾರಿಯನ್ನಾಗುವ ವರೆಗೆ ಗೇಣಿಯನ್ನು ಸರಿಯಾಗಿ ಕೊಡುವಂತಹ ಒಕ್ಕಲುತನವನ್ನು ಭೂಮ್ಯಾಲಕರು ಹೊರಡಿಸದಂತೆ, ತಮ್ಮನುದಾರಿ ಮತ್ತು ಮಲಬಾರಿನ ಬಗ್ಗೆ 1946ರಲ್ಲೇ ಮಾಡಿದ ಕಾನೂನಿನಂತೆ ನಮ್ಮ ಜಿಲ್ಲೆಗೆ ಮತ್ತು ಎಲ್ಲಾ ರೈತವಾರೀ ಕಡೆಗಳಿಗೆ ಆ ಅನ್ವಯಿಸುವಂತಹ ವಿಚ್ಛನ್ನು ಸಿದ್ಧಪಡಿಸುವ ಆದಕ್ಕೆ ದಸ್ತಾವು ಕೂಡಾ ಆಗಿತ್ತು. 1947 ನೆಯ ಸಾರ್ವಜನಿಯಲ್ಲಿ ಆ ಮಂತ್ರಿಮಂಡಲವು ರಾಜೀನಾಮೆ ಅನಂತರ ಆದೇ ಎಪ್ರಿಲಿನಲ್ಲಿ ನಡೆದ ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಆಗಿನ ರೆವಿನ್ಯೂ ಮಂತ್ರಿಗಳಾಗಿದ್ದ (ಈಗ ಕಾಂಗ್ರೆಸ್ಸಿನ ಕಾರ್ಯಕರ್ತರಾಗಿರುವ) ಶ್ರೀ ಕಲಾ ವೆಂಕಟರಾಯರೇ ಒಕ್ಕಲುತನದ ಮಸೂದೆಯನ್ನು ಆದಷ್ಟು ಬೇಗನೆ ಮಂತ್ರಿಮಂಡಲವು ನ್ಯಾಯವಿಧಾಯಕ ಸಭೆಯ ಮುಂದೆ ತಂದು ಹಾಜರು ಮಾಡಬೇಕು" ಎಂಬುದಾಗಿ ತಂದ ಠರಾವು ಏಕಾನುಮತದಿಂದ ನಿರ್ಣಯವಾಗಿತ್ತು. ಆ ನಂತರ ಆದೇ ಇಸ್ಯೆಯ ಆಗೋಸ್ತು ತಿಂಗಳಲ್ಲಿ ಶ್ರೀ ರಾಘವೇಂದ್ರರಾಯರ ವರದಿಯು ಕೂಡಾ ಸರಕಾರಕ್ಕೆ ತಲಪಿತ್ತು. ಮಾತ್ರವಲ್ಲದೆ ಶ್ರೀ ಕಲಾ ವೆಂಕಟರಾಯರೇ 1947 ನುತ್ತು ಘೋಷಣೆಯಾಗಿ ಮಾಡಿದ ಮಸೂದೆಯನ್ನು ಕಾಂಗ್ರೆಸ್ ಸಂಸ್ಥೆಯೇ ಮಾಡಿಸಬೇಕು. ನ್ಯಾಯವಾದ ಮತ್ತು ದೇರವು ಗಳಿಸಿಕೊಂಡ ಸ್ವತಂತ್ರತೆಯನ್ನು ಉಳಿಸಿಕೊಳ್ಳಬೇಕಾದರೆ, ದೇಶದ ಬಹು ಸಂಖ್ಯಾಕರಾದ ಕೃಷಿಕ ವರ್ಗಕ್ಕೆ ಆತೀ ಅವಶ್ಯವಾದ ಈ ಕಾನೂನನು ಕಾಂಗ್ರೆಸ್ಸಿನಿಂದಲೇ ಆಗಬೇಕು-ಎಂಬುದೇ 30 ವರ್ಷಗಳಿಂದಲೂ ಕಾಂಗ್ರೆಸಿನ ನೇತೃತ್ವದಲ್ಲಿ ಕೆಲಸಮಾಡಿದ ನನ್ನ ಆಸೆ. ಅದರ ಈ ಕೆಲಸವನ್ನು ಎಷ್ಟು ಮಾತ್ರಕ್ಕೂ ಮಾಡುವುದಿಲ್ಲವಾದರೆ ಮಾತ್ರ ಕೃಷಿಕ ಒತ್ತಮ್ಮ ಹಿತವನ್ನು ತಾವು ನೋಡಿಕೊಂಡು ತಮ್ಮ ಇಚ್ಛೆಯಂತೆ ನೋಡಿಯಲಿ ಸ್ವತಂತ್ರಿಗಾಗಲಿ, ಕಮ್ಯೂನಿಸ್ಟರಿಗಾಗಲಿ ಅಥವಾ ಬೇರಾವ ಸಂಸ್ಥೆಗೆ ಆಗಲಿ ತನ್ನ ಓಟನ್ನು ಕೊಡುವುದಾದರೆ ನನ್ನ ಅಪ್ಪೇಕ್ಷಣೆಯಿಲ್ಲ".

ಮೇಲಿನ ನನ್ನ ಭಾಷಣದಲ್ಲಿ ಒಂದಕ್ಕೊಂದು ಹೊಂದಿಕೆಯಾಗಿ ಬಂದಿರುವ ವಿಷಯಗಳನ್ನಲ್ಲ ಬಿಟ್ಟು, ಮುಖ್ಯಾಂಶಗಳನ್ನು ಕೊಡಲಿದೆ, ಆದರಲ್ಲೂ ಮೇಲ ಉದಿಗರೆಯನ್ನು ಎಳೆದ ಭಾಗವನ್ನು ಸಂಪೂರ್ಣವಾಗಿ ಬಿಟ್ಟು, ಕೊನೆಯ ಒಂದೆರಡು ವಾಕ್ಯಗಳನ್ನು ಮಾತ್ರ ಪ್ರಕಟಿಸಿ ಟೀಕಿಸಿದಂ ನನ್ನ ಭಾಷಣದ ಅಭಿಪ್ರಾಯವು ತಿಳಿದಂತೆ ಆದೀತೇ? ಎಂಬುದು ಈಗ ಇದನ್ನು ಓದಿದವರಿಗೆ ಚೆನ್ನಾಗಿ ತಿಳಿಯಬಹುದು.

ಇನ್ನೊಂದು ವಿಷಯವನ್ನು ಹೆಚ್ಚಾಗಿ ನಾನು ಇಲ್ಲಿ ಹೇಳಬಯಸುತ್ತೇನೆ. ನಮ್ಮ ಜಿಲ್ಲಾ ಕಾಂಗ್ರೆಸ್ಸು ಕಮಿಟಿಯು ಎಡೆಪಡಿತೆ 1937ರಿಂದ ಮತ್ತು ಕುರಿತಾಗಿ 1946ರಿಂದ ಈ ಮಸೂದೆಯು ಅತಿ ಆಗತ್ಯವೆಂದು ಹೇಳುತ್ತ ಬಂದಿದೆ. ನಮ್ಮ ಜಿಲ್ಲೆಯ ಪಗಡಾರರ ಸಂಘವು ಕೂಡಾ ತಾವು ಈ ಮಸೂದೆಗೆ ವಿರೋಧವಿಲ್ಲವೆಂತ ಈ ಮೊದಲು ಸರಕಾರಕ್ಕೆ ಕೊಟ್ಟ ನುನವಿಯಲ್ಲಿ ತಿಳಿಸಿದ್ದಾರೆ. ಜಿಲ್ಲೆಯ ಎಲ್ಲಾ ನ್ಯಾಯನಿಧಾಯಕ ಸಭೆಯ ಸದಸ್ಯರು ಕೂಡಾ ಈ ಮಸೂದೆಯು ಬೇಕೆಂತ ಪದೇ ಪದೇ ಹೇಳುತ್ತಿದ್ದಾರೆ. ಹೀಗಿರುವಲ್ಲಿ ಕಾಂಗ್ರೆಸು ರಿಸ್ತಿಗೆ ವಿರೋಧವಾದುದು ನಾನು ನನ್ನ ಭಾಷಣದಲ್ಲಿ, ನಡೆದ ವಿಷಯಗಳನ್ನು, ಆ ಸಂಬಂಧವಾಗಿ ದಿನ ನಿತ್ಯವೂ ಸಂಕಲ್ಪ ಪದುತ್ತಿರುವ ಜನರಿಗೆ ಹೇಳಿದುದರಿಂದಲೋ, ಅಥವಾ ಕಾಂಗ್ರೆಸಿನ ಪ್ರತಿಜ್ಞೆಗೆ ಮತ್ತು ಎರಡು ಮಂತ್ರಿ ಮಂಡಲಗಳು ಮಾಡಿದುದಕ್ಕೆ ವ್ಯತಿರಿಕ್ತವಾಗಿ ಆಡಿರುವುದರಿಂದಲೋ, ಆಥವಾ ಕಾಂಗ್ರೆಸಿನ ಮೇಲಧಿಕಾರಿ ಮಂಡಲಿ ಅಲ್ಲದೆ ಯೋ? ಮೇಲ್ಕಂಡ ಕೊಟ್ಟರುವ ಸೃಷ್ಟೀಕರಣವೇ ಮೂಲ್ಕಿ ಪರಿಷತ್ತಿನ ತನ್ನ ಭಾಷಣದ ಮುಖ್ಯ ಸಾರವೆಂದು ಯಥಾರ್ಥವಾದಿ ಶ್ರೀ ಕಾರಂತರಾದರೂ ಖಂಡಿತ ಹೇಳಬಲ್ಲರೇ? ಬದಿಲಿಗೆ, ಆ ಸಮ್ಮೇಳನದ ವಾತಾವರಣದ ದೆಸೆಯಿಂದ ತಕ್ಷಣದ್ದಿದ್ದ ತಾತ್ಕಾಲಿಕ ವೇಗಗಳು ಅಕ್ಷೇಪಣೀಯ ಕಹಿಭಾವನೆಗಳನ್ನು ಪೊರಗೆದಹಿಸಿದುವೆಂಬ ಜಾಗ್ರತಿಯಿಂದಲೇ ಯಿಸಿ, ಆದರ ದೂರಗಾಮಿತನವನ್ನು ಸವಿಮನಸಲು ಕೊನೆಗೆ ಸೃಷ್ಟೀಕರಣವನ್ನು ಶ್ರೀ. ಕಾರಂತರು ಕೊಟ್ಟುವಾಗಿದ್ದಂತೆ, ಮುಂದಕ್ಕಾಗಲೂ ಅಂತಹ ಪ್ರಮಾದಗಳಂಗಲಾವೆಂಬ ಭರವಸೆಯಿಂದ ಅವರ ಈ ಹೇಳಿಕೆಯನ್ನು ಸ್ವಾಗತಿಸುತ್ತೇನೆ

—ಎಂ. ಸ)

ಮೂಲ್ಕಿ ಭಾಷಣದ ಕುರಿತು
ಶ್ರೀ. ಕೆ. ಆರ್. ಕಾರಂತರ ಸೃಷ್ಟೀಕರಣ

1948ರಲ್ಲಿ ಮಾಡಿದ ತಮ್ಮ ಆನೇಕ ಭಾಷಣಗಳಲ್ಲಿ ತಾನು ಕೂಡಲೆ ಆಂತದ ಮಸೂದೆಯನ್ನು ಕರುತ್ತೇನೆಂಬುದಾಗಿ ಹೇಳಿದ್ದರು. ನಮ್ಮ ಜಿಲ್ಲೆಯ ಶ್ರೀ ಎಲ್. ಸಿ. ಪಾಯಸರು ಮತ್ತು ಶ್ರೀ ಕೆ. ಕೆ. ಶೆಟ್ಟರು ಈ ವಿಚಾರದಲ್ಲಿ ಶ್ರೀ ಕಲಾ ವೆಂಕಟರಾಯರನ್ನು ಭೇಟಿಯಾದಾಗ ಅವರು, ಗೇಣಿಯನ್ನು ಸರಿಯಾಗಿ ಕೊಡುತ್ತಿರುವ ಒಕ್ಕಲನ್ನು ಧನಿಗಳಿಗೆ ಹೊರಡಿಸಲು ಅವಕಾಶವಿಲ್ಲದಂತಹ ಮಸೂದೆಯನ್ನು ಮುಂದಿರಿಸಲು ಕೆದಿನೆಟ್ ಮಾಡುವ ಮಾಡುವುದಾಗಿ, ಮಸೂದೆಯನ್ನೂ ಬೇಗನೆ ತರುವುದಾಗಿ ಭಂಪಸೆ ಕೊಟ್ಟಿದ್ದರು. ಇಷ್ಟೇ ಅಲ್ಲದೆ, ಕಾಂಗ್ರೆಸ್ ಅಧ್ಯಕ್ಷರು ನಿಯಮಿಸಿದ ಕೃಷಿ ಸಂಬಂಧವಾದ ಕುಮಾರಪ್ಪ ಕಮಿಟಿಯ ವರದಿಯು ಕೂಡಾ ಪ್ರಕಟವಾಗಿ ಈಗ ಹಲವು ಕಾಲ ಕಳೆಯಿತು.

ಹಿಂದಿನ ಚರಿತ್ರೆಯು ಹೀಗಿರುವಲ್ಲಿ ಅವುಗಳಿಗೆಲ್ಲ ವಿರೋಧವಾಗಿ, ಮುಂಚಿನ ಎಂಡೂ ಮಂತ್ರಿ ಮಂಡಲಗಳು ಒಪ್ಪಿಕೊಂಡಿದ್ದ ಬೇಲನ್ನು ಈಗ ಚುನಾವಣೆಯಾಗಿ ನಾಲ್ಕೈ ವರ್ಷಗಳು ಕಳೆದ ಅನಂತರ, ಮತ್ತು ಈ ಬಗ್ಗೆ ಮದ್ರಾಸು ಸಂಸ್ಕಾರವು ಒಬ್ಬರು ಅಭಿಸರರು ಅಧ್ಯಕ್ಷರಾಗಿರುವ ಮತ್ತು ಒಕ್ಕಲುತನದ ಮಸೂದೆಗೆ ವಿರೋಧವಾಗಿರುವ ಕೆಲವು ವ್ಯಕ್ತಿಗಳು ಕೂಡಿರುವ ಬಂದು ಹೊಸ ಕಮಿಟಿಯನ್ನು ನಿಯಮಿಸಿದುದನ್ನು ನೋಡುವಾಗ ಇದು ಕೇವಲ ಸಮಯವನ್ನು ಕಳೆಯುವ ಮತ್ತು ಅದಷ್ಟು ಶ್ರೀಘ್ರವಾಗಿ ಆಗಬೇಕಿದ್ದ ಈ ಸಂಧಾರಣೆಯನ್ನು ಅದಷ್ಟು ಹಿಂದೆ ತಳ್ಳುವ ಉದ್ದೇಶವೆಂಬುದು ಸ್ಪಷ್ಟವಾಗುವುದು. ಈ ಹೊಸ ಕಮಿಟಿಯವರು ನಿಶ್ಚಯಿಸಬೇಕಾದ ವಿಷಯಗಳು—

೫ಈಗಿರುವ ತೀರ್ವೆಯ ಕ್ರಮದ ಬದಲಾವಣೆ; ಕೃಷಿ ಉತ್ಪತ್ತಿಯ ಮೇಲೆ ಸೇಲ್ಸ್ ಟೇಕ್ಸ್ ಮತ್ತು ಇನ್‌ಕಮ್‌ಟೇಕ್ಸ್; ರೆವಿನ್ಯೂ ಬೋರ್ಡ್ ಬೇಕೋ ಬೇಡವೋ; ಗ್ರಾಮ ಉದ್ಯೋಗಿಸ್ಥರ ಸಂಸ್ಥೆಯನ್ನು ಹೇಗೆ ಬದಲಾಯಿಸಬೇಕು; (ಇವುಗಳಲ್ಲವು 1947-48 ರಲ್ಲಿ ವರದಿಯಾಗಿವೆ) ರೆವೆನ್ಯೂ ರೂಲ್ಸುಗಳನ್ನು ಕಾನೂನು ರೂಪವಾಗಿ ಹೇಗೆ ತರುವುದು; (ಇದಕ್ಕೂ 1947-48ರಲ್ಲಿ ಒಬ್ಬರು ಅಧಿಕಾರಿಗಳ ನೇಮಕವಾಗಿ ಹಣ ವೆಚ್ಚ ಮಾಡಿ ಆಗಿದೆ) ಕೊನೆಯಲ್ಲಿ ಒಕ್ಕಲುತನದ ಮಸೂದೆ ಬೇಕೋ ಬೇಡವೋ ಬೇಕಾದರೆ ಹೇಗೆ ಮಾಡುವುದು, ಇತ್ಯಾದಿ, ಇತ್ಯಾದಿ. ಈಗ ಇದರ ನಿಜವಾದ ಉದ್ದೇಶವೇನೆಂಬುದು ಎಲ್ಲರಿಗೂ ಸ್ಪಷ್ಟವಾದೀತು. ಹೀಗಿರುವಲ್ಲಿ ಕಾಂಗ್ರೆಸ್ಸು ಯಾವಾಗಲೂ ಘಂಟಾಘೋಷವಾಗಿ ಮಾಡಿರುವುದಾಗಿ ಸಾರಿ ಬಂದಿರುವ ಈ ಮಸೂದೆಯನ್ನು ಕಾಂಗ್ರೆಸ್ಸೇ ಮಾಡಿಸಬೇಕು ಎಂಬುದಾಗಿ ನಾನು ಹೇಳಿದ್ದೆನು.

ಈ ಮೇಲಿನ ಕಾರಣಗಳಿಂದ ಮೂಲ್ಕಿಯಲ್ಲಿ ನಾನು ಮಾಡಿದ ಭಾಷಣದಲ್ಲಿ ಕಾಂಗ್ರೆಸ್ಸಿಗೆ ವಿರೋಧವಾಗಿ ಏನೂ ಹೇಳಿಲ್ಲವೆಂಬುದು ಸ್ಪಷ್ಟವಾಗಿದೆ. ಶ್ರೀ ಕಾರಂತರು ತುಲನಾತ್ಮಕ ದೃಷ್ಟಿಯಿಂದ ನೋಡುತ್ತಾ ರಾದರೆ ಮೂಲ್ಕಿ ಪರಿಷತ್ತಿನ ಇಡೀ ಒಂದು ದಿನದ ಕಾರ್ಯಕ್ರಮಗಳ ಸಾರಾಂಶವನ್ನು ಸ್ವೇ ಪ್ರಕಟಿಸಿದ ಪತ್ರಿಕೆಗಳು, ತನ್ನ ಸುಮಾರು ಅರ್ಧ ತಾಸಿನ ಭಾಷಣಕ್ಕೆ ಆ ವರದಿಯಲ್ಲಿ ಕೊಟ್ಟ ಸ್ಥಾನವು ಸಾಕಾಗದೆಂದು ಆಕ್ಷೇಪಿಸಲಾರರು. ನಮ್ಮೊಪ್ಪತ್ಯಕ್ಷದರ್ಶಿಗಳಿಂದಲೂ ಭವದ ಮೇರೆಗೂ ಆ ಭಾಷಣದಲ್ಲಿ ಬಂದಿದ್ದ ಅಭಿಪ್ರಾಯಗಳ ಮೇಲಿಂದಲೂ ಶ್ರೀ ಕಾರಂತರು ಆ ಸಮ್ಮೇಳನದಲ್ಲಿತ್ರ ಭಾಷಣವು ಪೂರ್ವತಯಾರಿಯಾದ್ದಿರಲಿಲ್ಲವೆಂಬುದು ಸ್ಪಷ್ಟವಿದೆ. ಬರಿಪು ತಾಂದೆ, ಸಂದರ್ಭೋಚಿತವಾಗಿ ಮಾಡುವ ಭಾಷಣದ ಅಭಿಪ್ರಾಯವನ್ನು, ಸಂಗ್ರಹೋದ್ದೇಶದಿಂದಲೇ ಲಕ್ಷ್ಯಪೂರ್ವಕ ಕೇಳಿದವರು ಸಂಗ್ರಹಿಸಿದುದಕ್ಕಿಂತಲೂ, ಆ ಭಾಷಣ ಕೊಟ್ಟ ವ್ಯಕ್ತಿಯು ಕೊನೆಗೆ ಜ್ಞಾಪಕ ಬಲದಿಂದ ಬರೆದು ಕಳುಹಿಸಿದುದೇ ಸರಿಯಾದೀತೆಂದು ನಾವು ನಂಬುವದಿಲ್ಲ.ಶ್ರೀ. ಕಾರಂತರು ಎಂಥ ನಯ ಆಕಾರಕ್ಕೆ ತರುಗಿಸಿದರೂ, ಅದೊಂದು ಶರ್ತವನ್ನು ಪಾಲಿಸದಿದ್ದರೆ ಕಾಂಗ್ರೆಸಿಗೆ ಜೋಟು ಕೊಡದಿರಬಹುದೆಂದು ಜನರನ್ನು ತಾನು ಸ್ವೇರೇಕಸಿದುದು ಪೊದೆಂಬುದನ್ನು ಒಪ್ಪಿಕೊಂದಿದ್ದಾರೆ. ತನ್ನ ಭಾಷಣದ ಮುಖ್ಯಾಮುಖ್ಯ ವಿಷಯಗಳು ಇವು, ಎಂದು ಶ್ರೀ ಕಾರಂತರುಸಂದರ್ಭಾನುಗುಣವಾಗಿ ತನಗೆ ಸರಿಕಂಡಂತೆ ವಿಂಗಡಿಸಿ ತೋರಿಸಬಹುದು; ಆದರೆ ತನ್ನ ತಕ್ಕಡಿಯನ್ನೇ ಪತ್ರಿಕಾ ವರದಿಗಾರರೂಹಿಡಿದರಬೇಕೆಂದು ನಿರ್ಬಂಧಿಸಲಾರರೆಂದು ನಂಬುತ್ತೇವೆ. ಕೊನೆಯದಾಗಿ, ಅವನ್ನು ಎಂತೆಮ ದ್ರಾಸಿನಲ್ಲಿಗಿನ್ನ ಕಾಂಗ್ರೆಸ್ ಸರಕಾರವು ಕಾಂಗ್ರೆಸ್ ಪ್ರತಿಜ್ಞೆಗೆ ಮತ್ತು ಹಿಂದಿನ ಎರಡು ಮಂತ್ರಿಮಂಡಲಗಳು ಮಾಡಿದುದಕ್ಕೆ ವ್ಯತಿರಿಕ್ತವಾಗಿ ಆಡಿರುವುದರಿಂದಲೋ, ಆಥವಾ ಕಾಂಗ್ರೆಸ್ ಪಕ್ಷದಲ್ಲಿರುವ, ಕಾಂಗ್ರೆಸ್ ಎ. ಎಲ್. ಎ. ಆಗಿರುವ ಶ್ರೀ. ಕಾರಂತರವರಂಥವರ ಕರ್ತವ್ಯವೆಂದರೆ. ಮೂಲ್ಕಿ ಸಮ್ಮೇಳನದಲ್ಲಿ ಮಾಡಿದಜ್ಞೇ ಏನು? ರೈತ ಸಮ್ಮೇಳನದಂತಹ ಸಭೆಗಳಲ್ಲಿ ಟೀಕ್ಕಸಾವದು ಮತ್ತು ಕಾಂಗ್ರೆಸಿನ ಈಗಿನ ಸರಕಾರದ ಆಪರಾಧಕ್ಕಾಗಿ ಕಾಂಗ್ರೆಸಿಗೆ ಮತಕೊಡದ ಪ್ರಾಯಶ್ಚಿತ್ತಗಳನ್ನು ಪ್ರತ್ಯಕ್ಷ ಜನತೆಯಿಂದಲೇ ಮಾಡಿಸುವುದು ಇವರ ಪಾಲಿಗೆ ಬರಿದಾವ ಕೆಲಸವೆ? ಪ್ರಾಂತಿಕ ಕಾಂಗ್ರೆಸ್ ಸರಕಾರಗಳು ತಪ್ಪು ಮಾಡಿದಲ್ಲಿ, ಆ ಕಾಂಗ್ರೆಸ್ ಪಕ್ಷದ ಸದಸ್ಯರು ಬಹಿರಂಗ ಘರ್ಜನೆ ಮೂಲಕ ಎಚ್ಚರಿಸಿಯೇ ಅದನ್ನು ತಿದ್ದಬೇಕೋ, ಅಥವಾ ಅಂತಹ ತಪ್ಪುಗಾರರನ್ನು ಎಚ್ಚರಿಸುವ ಕಾಂಗ್ರೆಸ್ ಮೇಲಧಿಕಾರಿ ಮಂಡಲಿ ಅಲ್ಲದೆ ಯೋ? ಮೇಲ್ಕಂಡ ಕೊಟ್ಟರುವ ಸೃಷ್ಟೀಕರಣವೇ ಮೂಲ್ಕಿ ಪರಿಷತ್ತಿನ ತನ್ನ ಭಾಷಣದ ಮುಖ್ಯ ಸಾರವೆಂದು ಯಥಾರ್ಥವಾದಿ ಶ್ರೀ ಕಾರಂತರಾದರೂ ಖಂಡಿತ ಹೇಳಬಲ್ಲರೇ? ಬದಿಲಿಗೆ, ಆ ಸಮ್ಮೇಳನದ ವಾತಾವರಣದ ದೆಸೆಯಿಂದ ತಕ್ಷಣದ್ದಿದ್ದ ತಾತ್ಕಾಲಿಕ ವೇಗಗಳು ಅಕ್ಷೇಪಣೀಯ ಕಹಿಭಾವನೆಗಳನ್ನು ಪೊರಗೆದಹಿಸಿದುವೆಂಬ ಜಾಗ್ರತಿಯಿಂದಲೇ ಯಿಸಿ, ಆದರ ದೂರಗಾಮಿತನವನ್ನು ಸವಿಮನಸಲು ಕೊನೆಗೆ ಸೃಷ್ಟೀಕರಣವನ್ನು ಶ್ರೀ. ಕಾರಂತರು ಕೊಟ್ಟುವಾಗಿದ್ದಂತೆ, ಮುಂದಕ್ಕಾಗಲೂ ಅಂತಹ ಪ್ರಮಾದಗಳಂಗಲಾವೆಂಬ ಭರವಸೆಯಿಂದ ಅವರ ಈ ಹೇಳಿಕೆಯನ್ನು ಸ್ವಾಗತಿಸುತ್ತೇನೆ

—ಎಂ. ಸ)

ವಿವಿಧ ಪಾತ್ರೆಗಳು



ರವಾತ್ಯೂ ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿ ದರದಲ್ಲಿ ಯೂಜಿಲ್ಲರಿಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷನರಿಗಳು
ಮೊರೆಯುತ್ತವೆ.
ಬೆಲೆ ರೂ. ೨೦೦
ಸಿದ್ಧಗನ್ನಡ ಅರ್ಧಕೋಶ ೪೮೦
ನವಯುಗ ಪ್ರೆಸ್, ಉಡುಪಿ.

"ಶ್ರೀದೇವೋ ಅಮ್ಮ ಬೆಳಗಾದರೆ ಈ ಹೊತ್ತು ಚನ್ನಾಗಿ ಕಳೆಯಿ ಬೇಕಮ್ಮಾ" ಎಂಬ ಆತಂಕವಿಲ್ಲದ ದಿನವೇ ಇಲ್ಲ ಹೊನ್ನೆ ಆಡಿಗೆ ಮುವನು ಕೆಲಸವಿಟ್ಟು ಹೋದ ನಿನ್ನೆ ಮುಸರೆಯುವಳೂ ಹೋಗಿಬಿಟ್ಟಳು. ನಿನ್ನೆ ಬೆಳಗ್ಗೆ ಹೊಸ ಜವಾನ ಬಂದನೆಲ್ಲಾ ಅನ್ನುವುದರೊಳಗೆ ಈ ಹೊತ್ತು ಪ್ರೈಪರ್ ಚಕ್ಕರ್ ಹೊಡೆದು ಹೊರಟಾಯಿತು ಒಬ್ಬೊಬ್ಬರನ್ನಾಗಿ ಯೋಸಬರನ್ನು ಪುನಃ ಹುಡುಕಿ ನಿಯಮಿಸುವುದರೊಳಗಾಗಿ ಸಾಕಾಗುತ್ತದೆ. ಕೆಲವು ವೇಳೆ ಎಲ್ಲ ಅಳುಗಳೂ ಒಟ್ಟಿಗೆ ಪಲಾಯನ ಆಗಿಬಿಡುತ್ತಾರೆ ಸಾಕಮ್ಮ ಈ ಫಜೀತಿ, ಈ ಸಂಸಾರವನ್ನು ಸಾಗಿಸುವುದಂತೂ ಬಹಳ ಶ್ರಮವಾಗಿದೆ . . 'ಎಂದು ಗೊಣಗುವಗೃಹಣಿಯರು ಎಷ್ಟೋ ಮಂದಿಯನ್ನು ಕಂಡಿದ್ದೇನೆ.

ಆದರೆ ನಮ್ಮ ಮನೆಯಲ್ಲಿ ಮುಂಜೂರೆಯವಳು, ಅಡಿಗೆಯವಳು,ಜವಾನ ಇವರೆಲ್ಲಾ ಬಾಯಂ ಆಗಿ ವರ್ಷಗಟ್ಟಲೆ ಇರುವುದನ್ನು ಕಂಡು ನನ್ನ ಗೆಳತಿಯರಿಗೆಲ್ಲಾ.. ಆದೇಕೆ.. ನನ್ನ ಅತ್ತಂಗಿಯವರಿಗೂ ಕೂಡ ನನ್ನನ್ನು ಕಂಡರೆ ಅಸೂಯೆ ಈ ಕೆಲಸ ಅಷ್ಟೇನೂ ಶ್ರಮವಾದದ್ದಲ್ಲ. ಅಳುಗಳು ನಮ್ಮ ಪತ್ರಂ ಭಯಭಕ್ತಿ ವಿಶ್ವಾಸವುಳ್ಳವರಾಗಿಯೂ ವಿಧೇಯರಾಗಿಯೂ ಇರಬೇಕೆಂದು ನಾವು ಯಾವ ರೀತಿಯಲ್ಲಿ ಆಶಿಸುತ್ತೇವೆಯೋ ಅದೇ ರೀತಿಯಲ್ಲಿ ನಾವು ಸಹ ನಮ್ಮ ಅಳುಗಳ ವಿಷಯಗಳಲ್ಲಿಯೂ ದಯಾಶೀಲರಾಗಿಯೂ, ಧಾರಾಳ ಬುದ್ಧಿಯುಳ್ಳವರಾಗಿಯೂ, ಪಾಪಭೀರುಗಳಾಗಿಯೂ ಇರಬೇಕಾದ ಹೊಣಗಾರಿಕೆಯುಂಟು. ಅಳುಗಳು ನಮ್ಮ ಮನೆಗೆ ಕೆಲಸಕ್ಕೆ ಬಂದಾಕ್ಷಣ ಅವರುಗಳ ತನುಮನಧನ, ಹಳ್ಳು ಬಾಧ್ಯತೆಗಳೆಲ್ಲಾ ನಮ್ಮ ವಶವಾಗಿ ಬಿಟ್ಟಂತಲ್ಲ. ನಮ್ಮ ಗುಲಾಮರಾಗಿ ಬಿಡಲಿಲ್ಲ ಅವರಿಗೂ ನಮ್ಮಂತೆ ಆತ್ಮಗೌರವವುಂಟು. ಅಕೆ ಅಕಾಲ್ದೆಗಳುಂಟು ಬಾಳ್ವೆಯಲ್ಲಿ ಅಭಿರುಚಿಯುಂಟು

ತಮ್ಮ ಳುಟುಂಬವರಿಗೆಲ್ಲ 'A-One' Coffee ಆದರೆ, ಅಡಿಗೆಯವನಿಗೆ ಮಾತ್ರ ಕಲಗಚ್ಚಿನಂತಹ ಕಾಫೀ "ಹಾಲಿನ ಬೆಲೆಯೂ, ಕಾಫೀಬೀಜದ ಬೆಲೆಯೂ ದಿನದಿನಕ್ಕೆ ವಿಪರೀತವಾಗಿ ಏರುತ್ತಿದೆ. ಅಡಿಗೆಯವನಿಗೆ ಕಾಫೀಕೊಟ್ಟು ಪೂರೈಸಿದೆ ಹಾಗೆಯೇ" ಎಂದನ್ನುತ್ತಾ 1½ ಬಟ್ಟಲು ಡಿಕಾಕ್ಷನಿಗೆ ಅರ್ಧಬಟ್ಟಲು ಬಿಸಿನೀರು, ಒಂದು ಸೌಟು ಹಾಲನ್ನು ಬೆರಸಿ, ಕೊಂಚ ಬೆಲ್ಲದ ಪುಡಿ ಹಾಕಿ 'ಸ್ಪೆಶಲ್ ಕಾಫೀ!" ತಯಾರಿಸಿಕೊಡುವ ಗೃಹಣಿಯರನ್ನು ಕಣ್ಣಾರೆಕಂಡಿದ್ದೇನೆ ನಮಸೆ ಮಂದಿಯೆಲ್ಲ 'A-One' Coffee ಕುಡಿಯುವಾಗ ಆ ಒಂದು ಜೀವಕ್ಕೂ ಅದೇ ಕಾ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು,ಶೀತಜಗಳು, ಬಾತುಕೊಳ್ಳುವುದು, ಬೇಧವಿಷಮುಂತಾದವು, ಪಕ್ಷವಾತ,ಮೊಡಿಮೆ ಮೊದಲಾದ ಎಲ್ಲಾರೋಗಳಿಗೂ ಸಿದ್ಧೌಷಧ.



REGD

ಹುಳುಕಡ್ಡಿ,ಮಮ್ಮು,ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಮಹಿಳಾ ಪುಟ

ಶ್ರೀ ಶ್ರೀಕುಗಳು ಸ್ತ್ರೀ

ಲೇಖಕಿ— ಶ್ರೀಮತಿ ಜಯಲಕ್ಷ್ಮಿ ಕೆರೆ (ಶ್ರೀನಿವಾಸ್)

ಫಿ ಒಂದು ಬಟ್ಟಲು ಕೊಟ್ಟರೆ ಇವರ ಮುಖ್ಯ ಬೊಕ್ಕಸ ಖಾಲಿಯಾಗಿ ಬಿಡುವುದನ್ನು. ಒಂದು ಚಮಚ ಸಕ್ಕರೆ, ಅರ್ಧ ಬಟ್ಟಲು ಹಾಲು ಅವನಿಗೆ ಕೊಡಲು ಮನಸ್ಸಿಲ್ಲದೆ ಆಚೆನ ಹೊಟ್ಟೆ ಉರಿಸಿಕೊಳ್ಳುವದರಿಂದ ಬಂದ ಲಾಭವೆಂದರೆ ದಿನಕ್ಕೊಬ್ಬ ಅಡಿಗೆಯವನನ್ನು ಹುಡುಕುವ ಶ್ರಮವೂ, ಕೆಟ್ಟ ಹೆಸರೂ ಮಾತ್ರವೇ

ಸೇವಕನೆಂದು ನಮ್ಮ ಮನೆಗೆ ಒಬ್ಬನು ಬಂದನೆಂದರೆ ಅವನನ್ನೂ ನಮ್ಮ ಮನೆಯವರಲ್ಲಿ ಒಬ್ಬನೆಂದು ಭಾವಿಸಬೇಕು ಕೆಲಸ ಹೇಳುವಾಗ ತಿರಸ್ಕಾರ ಧ್ವನಿಯಲ್ಲಿ ಅನ್ನದೆ ನಯವಾಗಿ ಹಿತವಚನದಲ್ಲಿ ನುಡಿದು ಕೆಲಸ ಮಾಡಿಸಬೇಕು. ಅವನ ಹುಡುಗರಾಗಿ ನಂಗೆ ಏನು ಅಂತ ಅನ್ನಿಸಿದಾಗಲೆ ತಿರಸ್ಕಾರ ಮೂಡುವುದು. ಅವನ ಕೆಲಸವನ್ನು ಸಾಧ್ಯವಾದಷ್ಟು ಸರಳಗೊಳಿಸಿ ಅವನಿಗೆ ಹೆಚ್ಚಿನ ಶ್ರಮವಿಲ್ಲದೆ ಕೆಲಸ ಮಾಡುವಂತೆ ಹೇಳಬೇಕು. ಶ್ರೀಮತಿಯರಲ್ಲಿ ಅಳಿಗೂ ನಿರ್ದಿಷ್ಟವಾದ ಕೆಲಸಗಳನ್ನು ವಹಿಸಿಕೊಟ್ಟು ನಿರ್ದಿಷ್ಟ ಸಮಯದಲ್ಲಿ ಮಾಡಿ ಮುಗಿಸುವಂತೆಯೂ, ನಡುನಡುವೆ ವಿಶ್ರಮಿಸಿಕೊಳ್ಳಲು ಸಾಕಷ್ಟು ಅವಕಾಶ ಹೊಂಚುವಂತೆಯೂ ಕೆಲಸ ಹೇಳಬೇಕೇ ಹೊರತಾಗಿ, ಅಕೆಂದರೆ ಮಾತ್ರ ಅವನು ಬೆಳ್ಳಂ ಬೆಳಿಗ್ಗೆ ಎದ್ದು ಅರ್ಧ ಝಾಮ(ಅರ್ಧ ರಾತ್ರಿ)ದ ನರೆಗೂ ದುಡಿದುದುದು ಸಾಯುವಂತೆ ಅವನ ಕೈಯಲ್ಲಿ ಕೆಲಸ ಮಾಡಿ

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kela Nambiar,

Vaidya

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಪಥ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ನೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ.—ಹರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಸ್ಟ ಚಾರ್ಜು ೧೨ ಆಣೆ.

ಮೂಲಕರು:—ಹಾಲಪ್ಪಾ ಶಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ವಿದಂದೆರು.—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಫಾರ್ಮಸಿ ವಿಜಾಪುರ—ಬಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಜುಡೇಶ್ವರ ಮೂರ್ಕ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ್, ಹಾವೇರಿ ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಶಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡಮಾಲೆ, ಕೈಕಾಲು ಶೂಲಿ, ಅರ್ಧಾಂಗ ಬಾಯು ನಡುನೋಯ-ವದು ಸ್ತ್ರೀಯರ ಬಳಕೆಂಪು ನೆರಗು ಹೋಗುತ್ತಿದ್ದರೆ, ಹೊಲಿಕ-ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧಪೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮೆಣಸಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕರೂ ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ವರ್ಕಿ ಡಾವಣಗೇರಿ.

ಕರ್ತೃವಹಾರ ಮೂಲಕರ ವಿಲಾಸ,

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಸಾಮಾನ್ಯವಾಗಿ ಈ ಕಾಲದಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರು ಸಹ ಶಾಲೆ ಕಾಲೇಜುಗಳಲ್ಲಿ ಓದಿರುವ ಅಂಶವನ್ನು ಸಾಧ್ಯವಿದ್ದಷ್ಟು ಕಂದಿಕೆ ಪ್ರತಿಶತ ಸಾಧಿಸಿದ್ದಾರೆ. ಸ್ವತಂತ್ರ ಭಾರತದ ಪ್ರಜೆಗಳಿಗೆ ಶಿಕ್ಷಣದ ಮಹತ್ವವನ್ನು ಮನಗಂಡು ಭಾರತದ ಪ್ರಥಮ ಶಿಕ್ಷಣ ಮಂತ್ರಿಗಳಾಗಿದ್ದ ಮೌಲಾನಾ ಅಬ್ದುಲ್ ಕಲಾಂ ಆಜಾದರವರು ಹೇಳುವಂತೆ ನಾವು ಪ್ರತಿಯೊಬ್ಬನಿಗೂ ಗಾಂಧಿಜಿಗಿದ ಕಂಡರೆ ಅಂತಹವರು ನಮಗೆ ಗೌರವ ತೋರುವರು

ನಾವು ಆಳಿಗೆ ಹೇಳುವ ಕೆಲಸವನ್ನು ಸ್ಪಷ್ಟವಾಗಿಯೂ ವಿವರವಾಗಿಯೂ ಹೇಳಬೇಕು. ಆಳುಗಳು ಮಾಡುವ ತಪ್ಪುಗಳಿಗೆ ಬಹುಭಾಗ ನಾವೇ ಕಾರಣರಾಗಿರುತ್ತೇವೆ ಯಜಮಾನಿಯ ಅಶ್ರದ್ಧೆಯಾದ ಅಶ್ರದ್ಧೆಯೂ, ಮುಂದಾಲೋಚನೆ ಇಲ್ಲದ ಅಜ್ಞೆಗಳು ಕಾರಣವಾಗುತ್ತವೆ. ಅಂಗಡಿಯಿಂದ ಬದನೇಕಾಯಿ ಕೊಂಡುತರಲು ಕಳುಹಿಸಿದರೆ ಹುಳುಕಿಲ್ಲದ್ದೆ,ಎಳೆಯದಾಗಿರಲಿ, ಬೆಲೆ ಬಹಳ ಜಾಚ್ತಾದರೆ ಕರಬೇಡ, ಗುಂಡು ಬದನೆಕಾಯಿ ತೆಗೆದುಕೊಂಡು ಬಾ.ಈಯಮ್ಮನಗೆರೆ ಬದನೇಕಾಯಿ ಬೇಡ' ಎಂದೆಲ್ಲ ಸ್ಪಷ್ಟವಾಗಿ ಹೇಳಿ ಕಳುಹಿಸಬೇಕು. ಸುಮ್ಮನೆ ಬದನೇಕಾಯಿ ಕೊಂಡುಕೊಂಡು ಬಾರೆಂದು ಅಂದುಬಿಟ್ಟು, ಆ ಬಳಿಕ ಛೂ, ಇದೊಂದು ಪದ್ಧ . ವಿಪರೀತ ಬೆಲೆಕೊಟ್ಟು ತಂದಿದ್ದಾನೆ. ಗುಂಡು ಬದನೆ ತಂದೆ ಈ ಈರಯ್ಯನಗೆರೆ ಬದನೆ ಕಾಯನ್ನು ತಂದಿದ್ದಾನಲ್ಲಾ ಇವರಲ್ಲಿ ಮೊಸರು ಒಜ್ಜಿ ಹ್ಯಾಗೆ ಮಾಡೋದು ...'ಈ ರೀತಿಯಾಗಿಗೊಣಗುವಾದು ನಿಮಗೂ ಬೇಜಾರು, ಅಳಿಗೂ ಬೇಜಾರು ಹೀಗೆ ಮಾತಾಮಾತಿಗೂ ಅಂದರೆ ಅವ ನೆಲ್ಲಿರುತ್ತಾನೆ?

ಇನ್ನೊಂದು ಮಾತು. ನಾವು ಅಜಾಗ್ರತೆಯಾಗಿ ಬಿಲ್ಲರೇ ದುಡ್ಡು, ಬೀಗದ ಕೈ, ಬೆಲೆಬಾಳುವ ಒಡವೆ ವಸ್ತುಗಳನ್ನು ಕಂಡ ಸ್ಥಳಗಳಲ್ಲಿ ಅಜಾಗರೂಕತೆಯಿಂದ ಇಟ್ಟು, ಆ ಬಳಿಕ ಅಳುಗಳನ್ನು ಬೈಯುವುದರಲ್ಲಿ ಅರ್ಥವಿಲ್ಲ. ಎಷ್ಟೇ ಒಳ್ಳೆಯವರಾದರೂ ಕೂಡ ಕೆಟ್ಟದು ಕಲಿಯುವುದು ಸುಲಭ, ಒಳ್ಳೆಯವರಾಗಿರುವುದೇ ಕಷ್ಟ. ನಮ್ಮ ನಮ್ಮ ಜಾಗರೂಕತೆ ನಮಗವಾಗೆ. ಮಕ್ಕಳನ್ನು ನಾವು ಒಳ್ಳೆಯವರಾಗಿಯೂ,ಶೀಲ ಸ್ವಭಾವವುಳ್ಳವರಾಗಿಯೂ ಬೆಳೆಸಲು ಪ್ರಯತ್ನಪಡುವಂತೆ ಅಳುಗಳನ್ನೂ ಶೀಲ ಸಂಪನ್ನರಾಗಿಯೂ, ನಂಬಿಕಸ್ಥರಾಗಿಯೂ, ಪಾಪಂಗ ಕೆಲಸದವರಾಗಿಯೂ ಇರುವಂತೆ ಮಾಡುವುದು ನಮ್ಮ ಕೈಯಲ್ಲಿದೆ.

ನಾವು ಕೊಟ್ಟ ಕೂಲಿಗೆ ಆನಂದನ್ನು ಎಡೆಬಿಡದೆ ದಂಡಿಸಿ ತೀರಬೇಕು ಎಂಬ ಕ್ರೂರ ಬುದ್ಧಿಯಿಲ್ಲದೆ,ಅವರಿಗೆ ಸಮಯೋಚಿತವಾಗಿ ವಿರಾಮ (ರಜೆ)ಕೊಟ್ಟು, ಪದೇ ಪದೇ ಉಚಿತ ಬಹುಮಾನಗಳಿಂದ (Presents) ಕೈಪ್ತಿಗೊಳಿಸುವುದು ಹಿತಕರ ಅವರುಗಳ ಯೋಗಕ್ಷೇಮವನ್ನು ಲಕ್ಷ್ಯಿಸಿ, ಅವರುಗಳಿಗೆ ಲಗುಬಗೆಯಿಲ್ಲದೆ ಹಿತವಾಗಿ ಕೆಲಸ ಹೇಳಿಕೊಟ್ಟು, ಸರಿಯದ್ದವಾಗಿಯೂ ಆರೋಗ್ಯದಿಂದಲೂ ಜೀವಿಸಲು ಶಿಕ್ಷಿಸಬೇಕು ಅವರುಗಳ ಕಷ್ಟಸುಖಕ್ಕೆ ಕೈಲಾದ ಸಹಾಯವನ್ನು ಮಾಡಲು ಮರೆಯಬಾರದು. ಹೊಟ್ಟೆಗೆ, ಬಟ್ಟೆಗೆ, ಧಾರಾಳ ಬುದ್ಧಿ ತೋರಬೇಕು.

ಆಳುಗಳ ವಿಷಯದಲ್ಲಿ ಪ್ರತಿಯೊಬ್ಬ ಗೃಹಿಣಿಯೂ ಕೂಡ ಈ ಸಲಹೆಗಳನ್ನು ಕಾರ್ಯರೂಪಕ್ಕೆ ತಂದರೆ, ಪದೇ ಪದೇ ಆಳುಗಳು ಏಕೆ ಕೆಲಸ ಬಿಟ್ಟು ಓಡಿ ಹೋಗುವರು?

(ವಿದರ್ಶ)

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವಕೀಲರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ,
ನವಯುಗ ಪ್ರೆಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3615 Estd. 1921 ಸ್ಥಾಪನ 8—6—1950

LICENCE No. 31
Licensed to Post without Prepayment

FOUNDER:
Sri A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೪೧

NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 41

ವರ-ಶಾಪ ಎಂದರೇನು?

ಲೌಕ್ಕಿಯತೆ, ಅತ್ಯ ಸಂಬಂಧ, ಹಾರ್ದಿಕತೆ, ಇವು ಕೇವಲ ಬಾಯೀ ಉಪಚಾರಗಳಲ್ಲ; ಶಕ್ತಿ ಸ್ವರೂಪಗಳು. ಅದ್ದರಿಂದ ಆಶೀರ್ವಾದ ಅಥವಾ ಶಾಪ, ಇವೆರಡೂ ಪರಿಣಾಮಕಾರಿಗಳೆಂಬುದನ್ನು ತಿಳಿದಿರಬೇಕು.

ಸುಧಾರಣೆ ಅಥವಾ ಕ್ರಾಂತಿಯ ಭೃಮೆ ಕಟ್ಟಿಕೊಂಡವರು ಹಿತಕರ ಸಂಪ್ರದಾಯಗಳನ್ನಾದರೂ, ತಾವ್ಯುತ್ಸಂಪ್ರದಾಯ ವಿರೋಧಿಗಳಾಗಬೇಕೆಂಬ ಒಂದೇ ಕಾರಣಕ್ಕಾಗಿ ಧಿಕ್ಕರಿಸುವದಿದೆ; ಅಂಥವರಾದರೂ 'ಸಾರ್ವಜನಿಕ ಸಂಬಂಧ' 'ಸಾರ್ವಜನಿಕ ಕಾನುಭೂತಿ' 'ಜನತಾ ಸೌಹಾರ್ದತೆ' ಮೊದಲಾದ ಶಬ್ದಗಳಿಗೆ ಒಪ್ಪುತ್ತಾರೆ. ಇಂತಹ ಸಂಬಂಧಗಳಲ್ಲಿ ಪರಸ್ಪರ ಹೃದಯ ವಿನಿಮಯಗಳಿರಲೇಬೇಕೆನ್ನುವಾಗ್ಯೆಯಾಗಿ ಅಥವಾ ಅಂತಃಕರಣ ಪೂರ್ವಕವಾಗಿ ಕೊಡುವವರ ಅಥವಾ ಕೊಡುವ ಅದರ ಯೋಗ್ಯತಾನುಸಾರವಾಗಿ ಪರಿಸಲೇಬೇಕೆಂಬುದು ನಿರ್ವಿವಾದ.

ಆಕ್ಷೇಯರು ಸಂತೋಷಗೊಂಡಾಗ ಸದಭಿಪ್ರಾಯವೆ ನಮ್ಮ ಹೃದಯದಲ್ಲಾದ್ದು ಚಿತ್ತ ಪ್ರಫುಲ್ಲವಾಗುತ್ತದೆ; ಅಂತೆಯೇ, ನಮ್ಮವರ ದುಃಖದ ಕಥೆಯೆ ನಮ್ಮ ಹೃದಯವಲ್ಲೂ ಮೂಡಿ ಕಣ್ಣೀರು ಬರಿಸುವದಿದೆ. ಯಾವ ಚೇತನಾ ಪ್ರಯತ್ನವೂ ಇಲ್ಲದೆ, ಹೃದಯಿಗಳೇ ಸರಪ್ಪರ ಸಂಬಂಧ ನಡೆಸುವುದೇ ಇದಕ್ಕೆ ಕಾರಣ. ಮನಸ್ಸೇ ಮನುಷ್ಯ — ಮನುಷ್ಯರನ್ನು ಒಂದಾಗಿಸುವ ಸಾಧನ. ಅಂತಃಕರಣ ಒಂದಾಗುವಷ್ಟು ಕೆಲಸ ಈ ಪ್ರಪಂಚದಲ್ಲಿ ಬೇರಾವುದರಿಂದಲೂ ಆಗುವದಿಲ್ಲ. ಅದು ಸರ್ವ: ಚಲನೆಯುಳ್ಳದ್ದು.

ಅದ್ದರಿಂದಲೇ ವರ ಅಥವಾ ಶಾಪ ಅಮೂಲಿದೆ. ಕಣ್ಣಸ್ಪರ್ಶ, ದೃಷ್ಟಿಪೋಷ ಇವಿರುವ ಮಾತ್ರುಗೃತಿಗಳು ಮಾತ್ರವೇ ಪ್ರಪಂಚದಲ್ಲಿರುವವೆಂಬುದನ್ನು ನಂಬುವಂದಿಗೂ ಪ್ರಗತಿಶೀಲತೆಯಾಗದು. 'ಅಂತಃಕರಣ' ಇರುವಾಗ, ಮತ್ತೆದು ಎಲ್ಲಕ್ಕಿಂತ ಹೆಚ್ಚಿನದಿರುವಾಗ, ಅದರ ಕೆಲಸವೂ ಅತಿ ಶ್ರೇಷ್ಠವಾದೇ ಇದೆ.

ಇದಕ್ಕಿ ನಮ್ಮ ನಿತ್ಯಜೀವನದಲ್ಲಿ ಬೇಕಷ್ಟು ನಿದರ್ಶನಗಳು ದೊರೆಯುತ್ತವೆ. ಅಕಾರಣವಾಗಿ, ಮನಸ್ಸು ಉಲ್ಲಾಸಗೊಂಡಿದ್ದರೆ, ಆಸ್ಪದಾರೋ ಆತ್ಯಾನಂದದಿಂದಿರಬೇಕೆಂದು ನೆನಸಬಹುದು; ಅಂತೆಯೇ ಎಲ್ಲಿಯಾದರೂ ಅತಿ ದೊಡ್ಡ ಮೊತ್ತದ ರಕ್ಷ ಸಂಬಂಧಿ ಅಥವಾ ಹೃದಯ ಸಂಬಂಧಿ ವರಣಗೆಗೊಂಡರೆ, ಸುದ್ದಿ ಸುಳಿವಿಲ್ಲದಿದ್ದರೂ ಅದರ ಛಾಯೆ ತಾನಾಗಿ ಹೃದಯಕ್ಕೆ ಬಡಿದು ತಳಮಳ ಪುಂಟಾಗುವ ಕಾರಣಗಳು ಹಲವಿರಿಬಹುದು. ಹೃದಯಶಕ್ತಿ ಹೀಗಾಗುತ್ತದೆಂದ ನೇರಲೆ ಹಾರ್ದಿಕ ವರ ಅಥವಾ ಶಾಪ ತಟ್ಟುವದೇನೂ ಅಸ್ವಾಭಾವಿಕವಲ್ಲ.

ಸಣ್ಣ ದೊಡ್ಡ ಎಲ್ಲರೂ ಅಲ್ಪ ಮಹಾ ಪರಿಣಾಮಗಳಲ್ಲಿ ಒಲವೆ-ನುನಿಸುಗಳನ್ನು ಗಳಿಸಿಕೊಳ್ಳುತ್ತಾರೆ. ಈಸ್ಪೈಕೆ ಮುನಿಸಿಗಿಂತ ಹೆಚ್ಚಿಗೆ ಒಲವನ್ನು ಗಳಿಸಿಕೊಳ್ಳುವವರೇ ಸಜ್ಜನರು, ತದ್ವಿರುದ್ಧ ಸ್ಥಿತಿಯವರು ದುರ್ಜನರು. ಒಬ್ಬನು ಅತಿಸೂಕ್ಷ್ಮಜನನಾಯಕನಾಗುವದು ಅಥವಾ ಆತ ಪೆಚ್ಚಿನ ಭಯ ತಿರಸ್ಕಾರಗಳಿಗೀಡಾಗುವ ಖಳನಾಯಕನಾಗುವದು ಅತನು ಗಳಿಸುವ ಸಹಾನುಭೂತಿ-ಶಾಪಗಳ ಪರಿಣಾಣವನ್ನು ಅಧರಿಸಿರುತ್ತೆ.

ಹಿಟ್ಲರನನ್ನು ಜರ್ಮನರು ಮತ್ತು ಲೋಕದ ಕೆಲವಂತ ಜನರು ಅಂತಃಕರಣವನ್ನು ಒಲಿಸಿಕೊಂಡಿದ್ದರೂ ಅದಕ್ಕಿಂತಲೂ ಹೆಚ್ಚಿನವರು ಅಂತಃಕರಣವನ್ನು ಕೆದಕಿಸಿದ್ದನೆನ್ನಬಹುದು; ಆದೇ ರೀತಿ ಒಂದೂರ ಮುಖಂಡ ಅಥವಾ ಒಂದು ಕುಟುಂಬದ ಯಜಮಾನ ಕೆಲವರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಿರ್ವಂತೆಯೇ ಇನ್ನು ಕೆಲವರ ದ್ವೇಷ ನಿಂದೆಗಳಿಗೂ ಪಾತ್ರನಿರುತ್ತಾನೆ. ಇವೆರಡು ವರ್ಗದ ಹೃದಯಗಳೂ ತಂತಮ್ಮ ಶಕ್ತಾನುಸಾರ ಪರಿಣಾಮ ಮಾಡದೆ ಬಿಡುವದಿಲ್ಲವೆಂಬುದನ್ನು ಮರೆಯಬಾರದು.

'ಅವ ಒಳ್ಳೆಯದಾಗಲಿ' 'ದೇವರು ಅವನನ್ನು ಉದ್ಧರಿಸಲಿ' 'ಅವ ಹಾಳಾಗಿಹೋಗುವದಿಲ್ಲವೆ?' 'ಹೀಗೆ ಮಾಡಿದವ ಒಳ್ಳೆಯದಾದಾನೆ?' ಮುಂತಾದ ಆಶೀರ್ವಾದ-ಶಾಪಗಳು ಕೇಳಲು ಸಿಗುತ್ತವೆ. ಒಂದು ಕಾನೂನನ್ನು ಅಥವಾ ಕಾರ್ಯಕಾರಣ ಸೂತ್ರನಿಯಮವನ್ನು ನಾವು ಗ್ರಹಿಸಿಕೊಳ್ಳುವ ರೀತಿಯಲ್ಲೇ ಇಂತಹ ಹಿತವಚನ ಅಥವಾ ಸಿಟ್ಟಿನ ಮಾತುಗಳಿಗೂ ಅಕ್ಷರಶಃ ಅರ್ಥಕಟ್ಟುವದಿಲ್ಲ; ಹೆಚ್ಚಿನಂಶ ಆವುಗಳನ್ನು ಪೂರ್ತಿ ಕಡೆಗಣಿಸಿ ಬಿಡುತ್ತೇವೆ. ಆದರೂ ಅಂಥವುಗಳನ್ನು ಹೊರಚೆಲ್ಲಿದ ಹೃದಯದ ಶಬ್ದತೆಯ ನಿರುತಗ್ನಿಗನುಸಾರವಾಗಿ ಪರಿಣಾಮವಾಗದೆ ಹೋಗುವದಿಲ್ಲ.

ತಮಗೆ ಅಳಕ್ಕೆ ನೋಡಿದರೆ ಪ್ರಸಂಚದ ಪ್ರತಿಯೊಂದು ಕಾರ್ಯಕ್ಕೂ ಹೃದಯದ ಚಲನವಲನಗಳೇ ಕಾರಣವೆಂಬುದು ಮಂದಟ್ಟುಗುವ ಸಂಗತಿ. ಮನಸ್ಸಿನಲ್ಲಿ ಹುಟ್ಟಿ ಬೆಳೆಯುವ ಭಾವನೆಗಳಿಗನುಗುಣವಾಗಿಯೇ ಕಾರ್ಯಗಳು ಗುತ್ತಾ ಹೋಗುತ್ತವೆ; ಮನಸ್ಸಿನ ಮೇಲೆ ಅನುಕೂಲ ಪ್ರತಿಕೂಲ ಪರಿಣಾಮ ಬೀರುವ ಮೂಲಕವೇ ಆ ಕಾರ್ಯಕಲಾಪಗಳ ಜಯಾಪಜಯಗಳು ತಿಳಿಯುತ್ತವೆ. ಲೋಕದ ಎಲ್ಲಿ ಸಿರಿ ಕಳೆ, ಗುಣ ದೋಷ, ಮೇಲು ಕೀಳುಗಳಿಗೂ ಮನಸ್ಸೇ ಕಾರಣ; ಇಂತಹ ಮನಸ್ಸು ಅರಳಿದರೆ ಅದರ ಸುವಾಸನೆ-ಕೊಳೆತರೆ ಅದರ ದುರ್ವಾಸನೆಯನ್ನು ಇನ್ನೊಂದು ಮನಸ್ಸಿಗೆ ಮುಟ್ಟಿಸುವ ದೂತ ಬೇಕೆಂದಿಲ್ಲ; ಒಂದು ಅದೃಶ್ಯ ಅದರೂ ಕ್ಷಿಪ್ರಗಾಮಿ ಮಾಧ್ಯಮ ಅಲ್ಲಿದೆ.

ಬುದ್ಧಿ ಕೆಟ್ಟರೆ ಅದು ಸ್ವತಃ ಆ ಮನುಷ್ಯನನ್ನು ಹಾಳು ಮಾಡುತ್ತದೆ; ಮನಸ್ಸು ಕೆಟ್ಟರೆ-ಮತ್ತದು ಸಕಾರಣವಾಗಿದ್ದರೆ-ಕೆಡಿಸಿದ ಮನುಷ್ಯನ ಮೇಲೆಯೇ ಅದರ ಪ್ರತಿಕ್ರಿಯೆಯೂಗುತ್ತದೆ. ಅದ್ದರಿಂದ ಅನ್ಯಾಯ ಅಥವಾ ತಪ್ಪು ಮಾಡಿ ಬೇರೆಯವರ ಮನನೋಯಿಸದಂತೆ ವಿಶೇಷ ಜಾಗರೂಕತೆ ವಹಿಸುವದು ಅಗತ್ಯ.

ಇಲ್ಲಿಯೂ ತಾರತಮ್ಯ ನೋಡಿಕೊಳ್ಳಬೇಕೆಂಬುದೇನೋ ನಿಜ. ಗೊಬ್ಬರದ ಕುಳಿಗೆ ಕೆಸರು ಜೆಲ್ಲಿದರೆ, ಅಲ್ಲೇನೂ ಕೊಸ ದುರ್ವಾಸನೆ ಹುಟ್ಟಲಾರದು; ಅಂತೆಯೇ ಮೂಲತಃ ಹಾಳೇ ಇರುವ ಮನಸ್ಸನ್ನು ಕೆಡಿಸಿದ ಶಾಪತಟ್ಟುವಂತಿಲ್ಲ. ಆದರೆ ನಿರ್ಮಲ ಚಿತ್ತವನ್ನು ಕೆಡಿಸಿದರೆ, ಆ ದುಷ್ಕೃತ್ಯದ ದುಷ್ಪರಿಣಾಮವು ಸುಗಂಧದ್ರವ್ಯಕ್ಕೆ ಗೊಬ್ಬರ ನೀರನ್ನು ಬೆರಸಿದಂತೆ ನೈಕ್ಯವಾಗಿಲೇ ಬೇಕು. ಕೆಟ್ಟ ಬುದ್ಧಿಯನ್ನು ಮತ್ತೆ ಕೆಡಿಸುವದೆಂದಿಲ್ಲ; ಶುದ್ಧ ಮನಸನ್ನು ಕೆಡಿಸಬಾರದು.

ಇನ್ನು ಕೆಲವು ವಿಶಿಷ್ಟ ವರ್ಗ, ಮನಸ್ಸುಗಳತ್ತ ವಿಶೇಷ ಲಕ್ಷ್ಯಕೊಡುವ ಅಗತ್ಯವಿದೆ. 'ಗುರುಹಿರಿಯರ ಶಾಪ' ಎಂಬುದು ಮಹಮ್ಮೇರುವಿನಂತಹ ಭಾಗ್ಯ; ವರ್ಚಸ್ಸುಗಳನ್ನಾದರೂ ಕತ್ತರಿಸಿ ಹಾಕಬಲ್ಲ ಬಲ. ಹೀನ ಗೊಡ್ಡು ಸಂಪ್ರದಾಯವಲ್ಲ ನ್ಯಾಯ ಮತ್ತು ಅನುಭವವದಲ್ಲಿ ದೊಡ್ಡವರೆಂಬವರು ನಾವಿನ್ನು ತುಳಿಯಲಿಕ್ಕಿರುವ ಹಾದಿಯನ್ನು ತುಳಿದು ಮುಂದೊಪ್ಪಿ ಹೋದವರು; ನಾವಿನ್ನು ಸ್ವತಃ ಅನುಭವಿಸಲಿಕ್ಕಿರುವುದನ್ನು ಅನುಭವಿಸಿ ಮುಗಿಸಿದವರು. ಅಲ್ಲಿ ನಿಂತುಕೊಂಡು ಪ್ರೀತಿ ಮತ್ತು ಹಾರೈಕೆಯೊಂದಿಗೆ ಅವರು ತಮ್ಮ ಕೆಲಸಗಳನ್ನು ಅಥವಾ ಶಿಷ್ಯರನ್ನು ನೋಡುವ ಸಂದರ್ಭಗಳಲ್ಲಿ; ಇಂತಹ ಸಮಯ ವಿಶೇಷಗಳಲ್ಲಿ ಈ ಗುರು ಹಿರಿಯರ ಹೃದಯ

(ಉಳಿದ ಪುಟ ನೋಡಿರಿ)

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ನರಹರಿ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು-ದಿ। ಹೊಸಕೆರೆ ಚಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲಶ್ಲೋಕ ಇರುವಪ್ರತಿಯ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥಪೂರ್ಣ ಮಾತುಗಾರಿಕೆಯ ಮಾತುಗಳ ರೂಢಿದಲ್ಲಿಲ್ಲದ ಭಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಭಾರತ ಜನತಾರಾಜ್ಯದಲ್ಲಿ-

ಸ್ವಾತಂತ್ರ್ಯ ಪ್ರಾಪ್ತಿಯ ನಿಮಿತ್ತ ಸಂಭ್ರಮಾಚರಣೆಗಳು ಭಾರತದ ಎಲ್ಲ ಕಡೆಗಳಲ್ಲಿಯೂ ಸಂಭ್ರಮದಿಂದ ನಡೆದವು. ಆ ಸಂಭ್ರಮಾಚರಣೆಗಳಲ್ಲಿ ಭಾಗವಹಿಸಿದ ಜನರಲ್ಲಿ ಹೆಚ್ಚಿನವರಿಗೆ ಸ್ವಾತಂತ್ರ್ಯ ಪ್ರಾಪ್ತಿಯ ಅರ್ಥವೇನು ಎಂಬುದು ಸರಿಯಾಗಿ ತಿಳಿದಿರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸ್ವಾತಂತ್ರ್ಯ ಪ್ರಾಪ್ತಿಯ ಅರ್ಥವು ಅವರಿಗೆ ತಿಳಿದಿದ್ದರೆ ಅವರು ಅಷ್ಟು ಸಂಭ್ರಮಾಚರಣೆಗಳಲ್ಲಿ ಭಾಗವಹಿಸಲಾರರ

ಆರಿಹೋದ ಅಭಿಮಾನಗಳು

ದರ ನಿರ್ಮಾಣಕ್ಕಾಗಿ ನಮ್ಮಲ್ಲೆಲ್ಲ- ನೆಹರೂ ವಲ್ಲಭಾಯಿ.ಗಳಂಥವರು ಅದಕ್ಕಾಗಿ ಶಕ್ತಿಮೀರಿ ಪ್ರಯತ್ನಿಸುತಿದ್ದಾರೆ. ಆದರೆ ಗಾಂಧೀಜಿಯಲ್ಲಿದ್ದಂತಹ; ಅದ್ಭುತ ಮೋಹಕ ಶಕ್ತಿಯು ಬೇರಾರಲ್ಲೂ ಮೂಡುವುದು ಅಸಾಧ್ಯ. ಕಾಲ ಹೋದಂತೆ ಮಾನವ ಸ್ವಭಾವ, ಮಾನಸಿಕತ್ವ ವಿಕಾಸಗೊಳ್ಳುತ್ತಾ ಹೋಗುತ್ತಿದೆ; ಲೋಕವು ಎಲ್ಲಾ ವಿಧಾನಗಳಲ್ಲೂ ಆ ಮೂಲೆಯ ವರೆಗೂ ಮೂಲೆ ಎಟಕಲಾಗುವಂತೆ ಕೆರದು ಗೊಳ್ಳುತ್ತಾ ಬರುತ್ತಿದೆ- ಪ್ರಪಂಚದ ಈ ಸ್ವಾಭಾವಿಕ ಅವಸ್ಥಾಂತರಕ್ಕೆ ಪ್ರತಿಕೂಲವಾಗಿರುವ ಯಾವ ಆಚರಣೆಗಳದರೂ ಕಾಲ ಮಾನ್ಯವಾಗುವಂತಿಲ್ಲ- ಹಾಗಾಗಿ ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆಗೆ ಆ ಕಾಲದಲ್ಲಿದ್ದ ಹುಟ್ಟು ಮಿರುಗು ಈ ಕಾಲದಲ್ಲಿಲ್ಲ; ಕೃತಕ ಒತ್ತುಕೊಟ್ಟು ಆ ದಿನ್ನು ನಿರ್ಮಿಸಲು ಪ್ರಯತ್ನಿಸುವುದು ಸಮಂಜಸವಲ್ಲ. ಅದರೂ ಆಡಳಿತೆಯ ಅನುಕೂಲತೆಗಾಗಿ ಭಾರತದಂತಹ ಒಂದು ವಿಶಾಲ ರಾಷ್ಟ್ರವನ್ನು ಒಳಒಭಾಗಗಳಾಗಿ ವಿಂಗಡಿಸುವುದು ಅನಿವಾರ್ಯವಾದ್ದರಿಂದಲೇ ಇಂದು ಪ್ರಾಂತ್ಯಗಳಿವೆ. ಹೀಗೆ ಪ್ರತ್ಯೇಕವಾಗಿ ಜನತೆಯ ಭಾಷೆ, ಸಂಸ್ಕೃತಿ, ಭೌಗೋಳಿಕಾರ್ಥಿಕ ವ್ಯವಸ್ಥಿತಿ, ಸಾಮ್ಯತೆಗಳಿಗನುಸಾರವಾಗಿ ವಿಂಗಡಿಸುವುದು ಹಿತಕರವೆಂಬುದೂ ಖಂಡಿತ; ಈ ನ್ಯಾಯವು ಅಂದಿನಂತೆಯೇ ಇಂದೂ ಉಳಿದುಬಂದಿದೆ. ಆದ್ದರಿಂದಲೇ ಭಾಷಾನ್ವಯ ಪ್ರಾಂತ್ಯರಚನೆಗೆ ಅಂದಿನಿಂದೀ ವರೆಗೂ ವಿವಿಧ ಪ್ರಕಾರ ರಾಷ್ಟ್ರನಾಯಕರ ಸಮ್ಮತಿಯಿದೆ. ಆದರೆ ಪ್ರಸ್ತುತ ಈ ಕಾರ್ಯಕೈಗತ ಹೆಚ್ಚು ಅತ್ಯವಶ್ಯವಾದ ವಸ್ತು ಹೆಚ್ಚು ಮುಖ್ಯವಾದ ಇತರ ಕಾರ್ಯಗಳಿವೆಯಾದ್ದರಿಂದ ಸದ್ಯಕ್ಕೀ ಪ್ರಶ್ನೆಯನ್ನು ಹಿಂದೆ ಹಾಕುವ ಬಯಕೆ ರಾಷ್ಟ್ರನಾಯಕರದು; ಸಮಯ ಸಾಧನೆಗಾಗಿಯೂ ಕೆಲವು ನಿರ್ದೇಶವಾಗಿ ಸಾಗುವಂತೆ ನೋಡುವದಕ್ಕಾಗಿಯೂ ರಾಷ್ಟ್ರದ ಅಧಿನಾಯಕರು ಸ್ವಪ್ರಾಂತ್ಯ ಬೇಡುವ ಭಾಷಾಭಾಗಗಳವರ ಮುಂದೆ ಕೆಲವು ಶರ್ತಗಳನ್ನಿಟ್ಟಿದ್ದಾರೆ. ಈ ಶರ್ತಗಳನ್ನು ಪಾಲಿಸಿಕೊಡುವುದು ಅಸಾಧ್ಯವಾಗಿಯೇನಿಲ್ಲರು, ಕನ್ನಡಿಗರೇ ಮೊದಲಾದವರಿಗೆ ತಮ್ಮ ಪ್ರಾಂತ್ಯ ಹೊಂದಲಾಗಿಲ್ಲ; ಸದ್ಯದ ಸ್ಥಿತಿಗತಿಗಳನ್ನು ಕಾಣುವಾಗ ಈ ಪ್ರಶ್ನೆಯನ್ನು ಬಿರಕಾಲಕ್ಕೂ ಹಿಂದೆ ಬೀಳಬಹುದೆಂಬ ಸಂದೇಹವೇಳುತ್ತಿದೆ. ೮೦ ರ ಪ್ರಾಂತ್ಯವು ಕೈಗೆಟಕುವ ವರೆಗೂ ಈ ಭಾಗದಲ್ಲಿ ಮುಂದುವರಿದ್ದ ಕೆಲಗರ ಕೈಕೂಡಾ ಕೊನೆಯ ಮುಹರ್ತದಲ್ಲಿ ಕಪ್ಪಿ ಹೋಯಿತು. ಭಾಷಾನ್ವಯ ಪ್ರಾಂತ್ಯ ರಚನೆಗಿರುವ ತೊಡಕುಗಳು ಮತ್ತು ಪ್ರಾಂತ್ಯಾಭಿಮಾನದಲ್ಲಿರುವ ಜಾಂಜಿಲ್ಯವು ಇದರಿಂದ ವೇದ್ಯವಾಗುತ್ತಿದೆ. ಮದ್ರಾಸ್ ನಗರದ ಗೊಡವೆ ಬಿಟ್ಟಾದರೂ ಕೂಡಲೇ ಸಂಪಾದಿಸಿಕೊಳ್ಳಬೇಕೆಂಬಷ್ಟು ಒಮ್ಮೆ ಎದ್ದ ಆಂಧ್ರಾಭಿಮಾನವು ಆ ನಗರದ ಸಾಧನೆಗಾಗಿ ಕೆಲಕಾಲ ತಡವಾದರೂ ಚಿಂತಿಲ್ಲವೆನ್ನುವಷ್ಟು ತಗ್ಗಿ ಹೋಯಿತು; ಈಗ ಅದು ಅಲ್ಲೇ ಥಂಡಾಗೊಂಡಿದೆ; ಎಷ್ಟೆಂದರೂ ಆಂಧ್ರೋಳನದ ಮಟ್ಟಿಗೆ ಆಂಧ್ರರಿಗರಡನೆಯದಾದ ಕನ್ನಡಿಗರ ಸ್ವಪ್ರಾಂತ್ಯ ಚಳವಳ ಕೂಡಾ ಆ ದನ್ನನುಸರಿಸಿ ತಣ್ಣಗಾಗಿದೆ. ಏಸೆಂಬ್ಲಿ ಸ್ಥಾನಗಳಿಗೆ ರಾಜೀನಾಮೆ ಎಂಬ ವರೆಗೂ ಒಮ್ಮೆ ಪ್ರಬಲಿಸಿದ್ದ ಕನ್ನಡಿಗರ ಛಲ್ಜನೆಯು ಈಗ ಕೇವಲ ಕವಿ ಮಾತಾಗಿದೆ. ಭಾಷಾವಾರು ಪ್ರಾಂತ್ಯದ ಚಳವಳವೀರೀತಿ ಇಳಿಮೊಗವಾಗಿರುವಾಗಲೇ ಅದನ್ನು ಸದ್ಯಕ್ಕೊನ್ಮೆಂದೆ ಕೆಳಕ್ಕೆ ದೂಡಿಬಿಡೋಣವೆಂದು ನೆಹರೂ ವಲ್ಲಭಾಯಿಗಳಂಥವರು ಕೆಳಗೊತ್ತುತ್ತಿರುವ ನೋಟ ಕಾಣುತ್ತಿದೆ. ಅಂತೂ ಪ್ರಾಂತ್ಯಾಭಿಮಾನಕ್ಕೆ ಪ್ರಕೃತ ಜಾತ್ಯಭಿಮಾನದ ಅದ್ಯವ್ಯವೇ ಒದಗಿದೆ. ಭಾರತದ ಜನತಾ ರಾಜ್ಯದಲ್ಲಿ ಅಡಿಗೊತ್ತಲ್ಪಟ್ಟಿರುವ ಅಭಿಮಾನಗಳಲ್ಲಿ ಇದು ಒಂದು!

ಇತರ ಸಂಗತಿಗಳು

ಭಾರತ ಸ್ವಾತಂತ್ರ್ಯದ ದೆಸೆಯಿಂದ ಪಾತಾಳಗತವಾಗಿ ಹೋದ ಪರಂಪರಾಗತ ಇತರ ಅಭಿಮಾನಗಳೆಷ್ಟೋ ಇವೆ. ಅವುಗಳಲ್ಲಿ ಮುಖ್ಯವಾದುದು ಆಶ್ರಿತ ರಾಜರ ಸ್ವಾತಂತ್ರ್ಯಾಭಿಮಾನ. ಹಿಂದೀ ರಾಜ ಪರಂಪರೆಯು ಶತಮಾನಗಳ ನಾಲುಹಿಡಿದು ಬಂದುದು ಇಲ್ಲಿಯ ರಾಜರ ಗೌರವ, ತೀವಿ ರೇಂಕಾರ, ಮತ್ತು ವಿಲಾಸ ವೈಭವಗಳು ಪ್ರಸಂಗದಲ್ಲೇ ವಿಶಿಷ್ಟ ಗಳಿಸಿದಂತಹವಿವೆ. ಅವೆಲ್ಲವೂ, ಸ್ವತಂತ್ರ ಭಾರತದಲ್ಲಿ ಅಧಿಕಾರ ಕಳಕೊಂಡ ದೆಸೆಯಿಂದ ಪೂರ್ಣ ಮಾಸಿಹೋಗಿವೆ. ಇನ್ನವು ಪುನರ್ ತಾಜಗೊಳ್ಳುವ ಸಂದರ್ಭವಿಲ್ಲವೇ ಇಲ್ಲ; ಪ್ರಜೆಗಳ ಹಣದಿಂದ ಪಾಶ್ಚಿತ್ಯ ರಾಷ್ಟ್ರವು ವಿಲಾಸಮಯೀ ನಗರಗಳಲ್ಲಿ ಮೆರೆದಾಡುತಿದ್ದ ಅಶ್ರಿತ ರಾಜರೀಗ, ಪಡೆಯುತ್ತಿರುವ ವರ್ಷಾಸನದಿಂದ ತಕ್ಕ ಮಟ್ಟಿನ ಶ್ರೀಮಂತ ಜೀವನ ನಡೆಸಬಲ್ಲರೇ ಹೊರತು ಹೆಚ್ಚಿಗೆ ಯಾವ ಅವತಾರ ಪ್ರದರ್ಶನವನ್ನೂ ಮಾಡಲಾರರು. ನಿರಂಕುಶವಾಗಿದ್ದ ರಾಜರ ಅಧಿಕಾರಗಳನ್ನು ಇಷ್ಟರಲ್ಲೇ ಕಿತ್ತು ಕೊಂಡಂತೆಯೇ ಕ್ರಮಶಃ 'ರಾಜತ್ವದ ಅವಶೇಷ ಕೂಡಾ ಕಳೆದು ಹೋಗುವ ವ್ಯವಸ್ಥೆ ಬಂದಿದೆ; ಈಗಿನ ರಾಜ ತಲೆಗಳೊಮ್ಮೆ ಉದುರಿದರೆ, ಆ ಮೇಲೆ ರಾಜ ಶಾಹಿಯ ಚಿಹ್ನೆ ಕೂಡಾ ಭಾರತದಲ್ಲಿಲ್ಲದಂತಾಗುವದು ಸಂಭವನೀಯ.

ರಾಜ ವರ್ಗದ ಗತಿಯೇ ಜಮೀನ್ದಾರ್ ವರ್ಗಕ್ಕೂ ಆವರೂ ತುಂಡರಸರಂತೆ ತಲೆಮಾರುಗಳಿಂದ ಮೆರೆದಾಡುತಿದ್ದವರು, ಆದೇ ಹರಿಮಾಣಕ್ಕನುಸಾರ ವಿಲಾಸ ಜೀವನವನ್ನು ಹುಟ್ಟು ಸ್ವಭಾವವಾಗಿ ನಡೆಸುತ್ತಾ ಬಂದವರು. ಅಂಥವರ ಇರಸ್ತಿಕೆಯೇ ಈಗ ರದ್ದಾಗಿದೆ. ಜಮೀನ್ದಾರ್ ವರ್ಗ ಎಲ್ಲೆಲ್ಲಿದೆಯೋ ಅನೆಲ್ಲಾ ಪ್ರಾಂತ್ಯಗಳ ಸರಕಾರಗಳೂ ಅವರ ಮೇಲೆ ಆರ್ಥ ಚಂದ್ರ ಪ್ರಯೋಗ ಮಾಡಿವೆ. ಇನ್ನವು ಸಂಪೂರ್ಣ ಅಂತರ್ಧಾನಗೊಂಡಂತೆಯೇ.

ಇದೇ ರೀತಿ ಬ್ರಿಟಿಷ್ ಸರಕಾರದಿಂದ ಬಿರುದು ಬಾವಲಿಗಳನ್ನು ಹಡಕೊಳ್ಳುತಿದ್ದವರ ಸಂಖ್ಯೆ ವರ್ಷವರ್ಷವೂ ಆ ಕಾಲದಲ್ಲಿ ಬೆಳೆಯುತ್ತಾ ಹೋಗುತ್ತಿದ್ದಿತು. 'ರಾವ್ ಸಾಹೇಬ್' 'ರಾವ್ ಬಹದ್ದೂರ್' 'ದಿವಾನ್ ಬಹದ್ದೂರ್' 'ಸರ್' ಮುಂತಾದ ಬಿರುದುಗಳು ತೂರ್ಪಡಿತಿದ್ದುವು. ಈ ಕ್ರಮವೇ ಈಗ ರದ್ದಾಗಿದೆ. 'ನೂಜಿ' ಜೋಡಣೆಯೊಂದಿಗೆ ಈ ಬಿರುದುಮಾಲಿಕೆ ಹೆಸರು ಪಟ್ಟೆಗಳನ್ನು ಪ್ರಕಟಿಸುವುದರಲ್ಲಿ ಆದು ದೊಡ್ಡದೇ ಆಗಬಹುದು; ಆದರೆ ಹೊಸತಾಗಿ ಇನ್ನಾವುದಕ್ಕೂ ಎಂದೂ ಯಾವುದೂ ಸೇರಲಾರದು.

ಈ ರೀತಿ ಒಹಿರುಗೆರೂಪೀ ವಿಶೇಷಗಳೆಲ್ಲವೂ ಸ್ವತಂತ್ರ ಭಾರತದಲ್ಲಿ ನ್ಯಾಯವಾಗಿರುವಂತೆಯೇ ಕೆಲವು ಭಾವನೆಗಳೂ ಬಡಿಸುಲಾಗಿ ಹೋಗಿವೆ. ಸ್ಪರ್ಶಾಸ್ಪರ್ಶ ಭೇದ; ಮೇಲು ಕೀಳು ಭಾವನೆ, ಧನಿಕ ದರಿದ್ರ ವ್ಯತ್ಯಾಸ ಮುಂತಾದುವು ಅಲ್ಲೀ ಸವೆಯ ಹೆತ್ತಿ, ಪೂರ್ಣ ಮಾಯಮಾಗುವ ಅವಸ್ಥೆಯಲ್ಲಿವೆ. ಸಾರ್ವಜನಿಕರಲ್ಲಿ ವಿಕಪ್ರಕಾರ ಹರಡಿಕೊಂಡಿರುವ ಈ ಮಾದಂಯ ವಿಶೇಷ ಗ್ರಹಗಳನ್ನು ವರ್ತಮಾನ ಪ್ರತ್ಯೇಕತಾ ಭಾವನೆಯನ್ನು ಮಾಡಿದಂತೆ ತಿದ್ದುಪಡಿ ಮೂಲಕವಾಗಲೀ, ಆಶ್ರಿತರು, ಜಮೀನ್ದಾರರು, ಬಿರುದುವಾಲರೇ ಮೊದಲಾದ ವರನ್ನು ಮಾಡಿದಂತೆ ಶಾಸನ ಮೂಲಕವಾಗಲೀ ಒಮ್ಮೆಗೆ ಸರಿಪಡಿಸಲಾಗುವದಿಲ್ಲ; ಆದರಿಂದು ಸರಿಗೊಳ್ಳುತ್ತಾ ಬರುತ್ತಿದ್ದೆ ಎಷ್ಟೋ ಕಾಲದಿಂದ ಹರಡಿಕೊಂಡಿರುವ ಈ ಅಸ್ವಸ್ಥತೆಗೆಳೆಲ್ಲವೂ ಇನ್ನು ಒಣಗುತ್ತಾ ಹೋಗಬೇಕು ಹೊರತು ಚಿಗುರುವಂತಿಲ್ಲ.

ಅಂತೂ ಜನತಾ ರಾಜ್ಯ ಭಾರತವು ತನ್ನ ಹಳೇ ಪೋಷಾಕು ಮತ್ತು ಚಿಪ್ಪಿಗೆ ಳೆಲ್ಲವನ್ನೂ ಕಳಕೊಂಡು ಹೊಸ ಸೊಡ್ಡಿಗೆ ಧರಿಸುವುದರಲ್ಲಿದೆ. ಅಗಲೇ ಬೇಕಾದ ಮಾರ್ಪಾಟು ಆಗುತ್ತಿದೆ.

ನೋಟೀಸು

ಕಾಸರಗೋಡು ಡಿ.ವಿ.ಒ. ಕೋರ್ಟ್‌ನಲ್ಲಿ

ಕ್ರಮಸಂಖ್ಯೆ 640/49

ತಿಮ್ಮಕ್ಕೆ ಹೆಂಗಸು, ನಾರಾಯಣ ಭಟ್ಟರ ವಿಧವೆ-ಬಿಪ್ಪಾರು ಗ್ರಾಮದ ಹಿರಕ್ಕ್ಯ ಯಂಬಲ್ಲಿರುವವಳು. — ವಾದಿಳು.

ಮತ್ತು

ಈಶ್ವರ ಭಟ್ಟ ಸಹ —ಪ್ರತಿವಾದಿರು.

5ನೇ ಪ್ರತಿವಾದಿಳು — ಗೌರಮ್ಮ, ಪುಟ್ಟಯಾಣಿ ಶೇಷಪ್ಪ ಭಟ್ಟರ ವಿಧವೆ- ತಲಕಳಿ ಗ್ರಾಮದ ಹಾಸಮನೆಯಿಂದಲ್ಲಿರುವವರು.

ವಾದಿಯಳಿಗೆ ಪ್ರತಿವಾದಿಯಿಂದ ಬಹಾ 1947, 1948, 1949ನೇ ವರ್ಷಗಳ ಬಾಬ್ತು ಬಹಾ ಜೀವನಾಂಶವನ್ನು ಬರಮಾಡಿಕೊಳ್ಳುವರೆ ದಾಕ್ಲು ಮಾಡಿದ ನೋಟ್ಯಂಡ ವ್ಯಾಜ್ಯವು 5ನೇ ಪ್ರತಿವಾದಿಯಳ ನೋಟೀಸಿನ ಬಸ್ಲೆ ತಾರೀಕು 10-6-1950ಕ್ಕೆ ಯಿಟ್ಟಿದೆಯೆಂತ ಈ ಮೂಲಕ ಅವಳಿಗೆ ತಿಳಿಸೋಣಾಗಿಯುದೆ.

K. Devadas Shenoy,
Vakil for Plff.

ಕಾಸರಗೋಡು, 2-6-1650

ನೋಟೀಸು

ಕಾಸರಗೋಡು ಡಿ. ಎಂ. ಕೋರ್ಟ್‌ನಲ್ಲಿ.

R. E. P No 550/1949

ಶಂಕರನ್ ನಂಬೂದ್ರಿ —ಅರ್ಜಿದಾರ

ಮತ್ತು

ಗೋವಿಂದನ್ ತಿರ್ನಂಬು ಕೂಡಾ—ರೀರು.

ಇವರೊಳಗೆ

ಸದ್ರಿ ಅರ್ಜಿದಾರನ ಕಡೆ ನೋಟೀಸು.

ಮೇಲ್ಕಂಡ ಅಮ್ಲಜಾರಿಯಲ್ಲಿ ದಿಕ್ಕ್ರಿಸ್ತಕಾರರಕ್ಕೆ ಆ್ಯನೆಜನ್ನು ರೆಸ್ಪಾಂಡೆಂಟನ ಬಾಬ್ತು ಸಬ್ ಕೋರ್ಟು O. S. No. 9/1944ನೇ ವ್ಯಾಜ್ಯದ ಕ್ರೆಡಿಟರೆ ಸದ್ರಿ ಕೋರ್ಟು ಡಿಪೋಜಿಟನಲ್ಲಿರುವ ಆ್ಯನೆಜನ್ನು ಜಪ್ತಿಮಾಡಿಸಬೇಕೆಂಗಿ ವಗೈರೆ ಅರ್ಜಿದಾರನು ದಾಕ್ಲು ಮಾಡಿದ ಮೇಲ್ಕಂಡ ಅಮ್ಲಜಾರಿಯು ತಾ. 12-6-1950ಕ್ಕೆ ಕನ್ಸಿಗೆ ಯಿಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಾಗಿಯುದೆ.

K P. V B. Ejman,
Advocate for Petitioner.

Kasaragod, 31-5-1950

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ವಿಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈದು ವರ್ಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನತಾಗಿದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಋತುಸ್ರಾವ ನಿಂತಿತು

'ಕಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಲು ಹುದು, ಯಾವ ಬಾಧೆಳವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 6- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs P. DEVEE, F DS. (N. J.)
Tollygunge CALCUTTA

ಸ್ವಾಧಿಕಸ್ಥರು: ಶಶಾಕಂಸೆನ್, ಮಂಗಳೂರು

ವಿಶ್ವದ ಪ್ರಬುದ್ಧ ಅಮೆರಿಕದ ಘರ್ಜನೆ-

ಶ್ರೀಹ. ಗಾಳಿಂದಿರಂತಿನ ರಶ್ಯಾ-ಅಮೆರಿಕ ಪುನಃ ಕಷಾಯವು ಅಮೆರಿಕನ್ ನಿಯಂತ್ರಣ ವಿಶೇಷ ಪ್ರಾಂತಾರಂಭಿಸಿ ಮೂಲಕ ಮಹತ್ವಪೂರ್ಣ ಸ್ವತ್ವೆನಾಗಿ ಪ್ರಕಟಿಸಿರುವುದೇ ಕಳವ ಮಾಡಿ ವಿಶೇಷ ಘಟನೆಯೆನ್ನಬೇಕು. ಆತ್ಮಾಯೇ ಭಾರತ-ಸ್ವತಂತ್ರ ರಾಷ್ಟ್ರಗಳಿಂಗಳಿಗೆ ಯಾಚ್ಞೆ ಯದಾಗಿರುವ ಸೌಜನ್ಯಾರ್ಜಿತಿಯನ್ನು ಮತ್ತೆಷ್ಟು ಒಸಿಸಿ ಅಸುಪ ಸಡುಬುಸಿಕೊಳ್ಳು ಅಧಿಕೃತಿಯಿರುವ ರಿಂದ ಬಂದಿರುವುದೇ ಭಾರತದ ಪಾಲಿಗೆ ಕಳದ ದಿನಗಳ ಎಂಹತ್ವಂಗತಿಗಳು. ಸಂಚಾರ ವೀರ ಪ್ರಧಾನಿ ಪಂಡಿತ ನೆಹರುಗಳು ಕೊಚ್ಚಿ ಮಾರ್ಗವಾಗಿ ಇಂಡೋನೇಶಿಯಕ್ಕೆ ಹೊಂಟ ವಿಶೇಷ ಸಂಗತಿಯೂ ಕಳದ ದಿನಗಳಲ್ಲಾಗಿದೆ.

ಅಂತರ್ರಾಷ್ಟ್ರೀಯ

ಅಮೆರಿಕದ ಗೃಹ ಕಾರ್ಯದರ್ಶಿ ಮಿ. ಡೀನ್ ಆಚಿಸನರು, "ರಶ್ಯದ ಶಸ್ತ್ರೀಕರಣವು ಸ್ವತಂತ್ರ ಜಗತ್ತನ್ನು ಅತ್ಯಂತ ಅಪಾಯಕರ ಸ್ಥಿತಿಯಲ್ಲಿಟ್ಟಿದೆ" ಎಂದು ಅಮೆರಿಕದ ಕಾಂಗ್ರೆಸಿನ ಮುಂದೆ ನುಡಿದಿದ್ದಾರೆ. ಅಮೆರಿಕದ ರಕ್ಷಣಾ ಕಾರ್ಯದರ್ಶಿ ಮಿ. ಲುಯಿಸ್ ಜೋನ್ಸನರು, ಸಂಬಂಧಪಟ್ಟ ಸಮಿತಿಯೊಂದರ ಮುಂದೆ ವಾಗ್ಮೂಲವೀಯುತ್ತಾ "ನಾವು ನಮ್ಮ ಮಟ್ಟಿಗೆ ಸಶಕ್ತರಾಗಿರಲು ಹವಣಿಸುವೆವೆಂಬುದು ಪ್ರಪಂಚಕ್ಕೆ ಸ್ಪಷ್ಟವಾಗಿ ಅರ್ಥವಾಗುವಂತೆ ಶಾಂತಿ ಕಾಲದ ಖಡ್ಡಾಯ ಸೇನಾ ಸಂಗ್ರಹಕಾನೂನನ್ನು ವಿಸ್ತರಿಸಬೇಕು"ಎಂದು ಒತ್ತಿ ಕೇಳಿಕೊಂಡಿದ್ದಾರೆ. ಅಮೆರಿಕಾಧ್ಯಕ್ಷ ಟ್ರುಮೇನರು, ನೋವಿಯೆಟ್ ಸೇನೆಗಳ ವಿರುದ್ಧವಾಗಿ ಸ್ವತಂತ್ರ ರಾಷ್ಟ್ರಗಳು ಸಶಸ್ತ್ರೀಕರಣ ಮಾಡಲಾಗುವಂತೆ 1,225,೬೦೦,೦೦೦ ಡೋಲರುಗಳ ಸಹಾಯವನ್ನು ಮುಂದುವರಿಸುವ ಅನುಕೂಲತೆಯೊದಗಿಸಬೇಕೆಂದು ಕಾಂಗ್ರೆಸನ್ನು ಕೇಳಿಕೊಳ್ಳುತ್ತಾ ಸಂದೇಶವಿತ್ತಿದ್ದರು: "ಈ ಹಣದ ಸಂಖರಣೆಯಿಂದೆ ತಡವಾಗಿದರೆ, ಸ್ವತಂತ್ರ ಜಗತ್ತು ನಮ್ಮಿಂದ ಯಾಚಿಸುತ್ತಿರುವ ಶಾಂತಿಯ ನಿರ್ಮಾಣದ ನಮ್ಮ ಎಲ್ಲಾ ಪ್ರಯತ್ನಗಳ ಮೇಲೂ ಅಂತಿಮ ಹೊಡೆತ ಬಿದ್ದಂತಾಗಬಹುದು. ಮತ್ತು ಸ್ವತಂತ್ರವಾಗಿ ಬಾಳುವ ಮತ್ತು ದುಡಿಯುವ ನಮ್ಮ ಸಂಯೋಗವನ್ನೂ ಕಡಿಮೆ ಮಾಡಬಹುದು. ಸ್ವಾತಂತ್ರ್ಯದ ವಿಜಯಕ್ಕೆರುವ ಏಕಮಾತ್ರ ಆಶೆಯೆಂದರೆ ಪರಸ್ಪರ ನಾವುವ ಎದೆಗಾರಿಕೆ ತಳೆವುದೇ" ನೋವಿಯೆಟ್ ರಶ್ಯಕ್ಕು ಸಾಧ್ಯವಾಗುವ ಮಾದಂಯಲ್ಲ ಅಮೆರಿಕಾ ಮತ್ತದರ ಮಿತ್ರ ರಕ್ಷಣಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದೇ" ಎಂಬುದಾಗಿ ಸ್ಪಷ್ಟವಾಗಿ ಸೂಚಿಸಿದ್ದರು.

ಇತ್ತ ಬ್ರಿಟಿಷ್ ಸಮತಾವಾದಿ ನಾಯಕರು ಕೂಡಾ ಅಮೆರಿಕದಕಡೆಗೆ ಅವಲಂಬಿತರಾಗಿದ್ದ ಜಿಗುಪ್ಸೆಯನ್ನು ಬಿಟ್ಟುಕೊಟ್ಟು, ಅಮೆರಿಕವನ್ನು ಶಾಶ್ವತಿಸಹಪತ್ತಿದ್ದಾರೆ ಬ್ರಿಟಿಷ್‌ಕೂಲಿಕಾರ ಪಕ್ಷದಕಾರ್ಯದರ್ಶಿವೋರ್ಗನ್ ಫಿಲಿಪ್ಸರು ಕೋಪೆನ್‌ಹೇಗನ್‌ನಲ್ಲಿ ಸೇರಿದ್ದ ಅಂತರ್ರಾಷ್ಟ್ರೀಯ ಸಮತಾವಾದಿ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿದರು. "ಕಳದೆಂಡು ಶತಮಾನಗಳಿಂದ ಬ್ರಿಟನ್ನು ಮತ್ತು ಸ್ಕೇಂಡಿನೇವಿಯಗಳನ್ನು ಬಿಟ್ಟರೆ ಜಗತ್ತಿನಲ್ಲಿ ಅನೇಕ ರಲ್ಲೇ ಅತ್ಯಂತ ಪ್ರಗತಿಶೀಲ ರಾಷ್ಟ್ರವಾಗಿದೆ. ಅಮೆರಿಕದ ಮಾರ್ಶಲ್ ಸಹಾಯ ಯೋಜನೆ ಮತ್ತು ಚತುರ್ಮುದ್ದೆ ಕಾರ್ಯಕ್ರಮಗಳು ಅಂತರ್ರಾಷ್ಟ್ರೀಯ ಪರಿಮಾಣಾನುಸಾರ ವ್ಯವಹಾರ್ಯ ಸಮತಾವಾದಗಳೇ ಸರಿ. ಯುದ್ಧವು ಸ್ವಾಗತಾರ್ಹವಾದದ್ದಲ್ಲ. ಜಾಗತಿಕ ಒಕ್ಕಟ್ಟು ಮತ್ತು ಶಾಂತಿಯ ಕೇಲಿಕೈಯನ್ನು ಸಮತಾವಾದವು ಹಿಡಿದುಕೊಂಡಿದೆ. ಹೊಸ ಜಾಗತಿಕ ಯುದ್ಧದ ಅಪಾಯವು ಬಹು ತೀಕ್ಷ್ಣವಾಗಿ ರಶ್ಯದಿಂದಾಗಿಯೇ ಎಂದೀಗ ಕಾಣುತ್ತಿದೆ, ಎಲ್ಲಾ ಸ್ವತಂತ್ರ ರಾಷ್ಟ್ರಗಳೂ ಲಭ್ಯವೈದ್ಧಿಹೊಂದಲಾಗುವಂತಹ ಅಂತರ್ರಾಷ್ಟ್ರೀಯ ಜಾಕಟ್ಟೊಂದರ ರಚನೆಯಾಗದಿದ್ದರೆ, ಕಬ್ಬಿಣದ ಪರದೆಯ ಹಿಂದಿನ ಅಪಾಯದ ಹೊಂತೇ ಯದ್ದವು ಒಂದು ಅವಸರದ ಅಪಾಖಿಯಾಗಿ ಪರಿಣಮಿಸಲಿದೆ'.

ಇದ್ದಲು ಮತ್ತು ಉಕ್ಕು ದಾಸ್ತಾನು ಸಂಬಂಧದ ಶ್ಯುಮೇನ್ ಯೋಜನೆಯನ್ನು ಜರ್ಚಿಸಲು ಪ್ಯಾರಿಸಿನಲ್ಲಿ ಐದು ಯುರೋಪು ರಾಷ್ಟ್ರಗಳಿಂಗಳಿಗೆ ಮಾತುಕತೆಗಳು ಮುಂದುವರಿಯುತ್ತಿವೆ. ಮಂತ್ರಿಗಳ ಪ್ರತಿನಿಧಿಗಳ ಸಮಿತಿಯೊಂದು ಮುಂದಾಗಿ ನಡೆಯುಬೇಕೆಂದು ಬ್ರಿಟಿಷ್ ಸರಕಾರವು ತೊನೆಯ ಘಳಿಗೆಯಲ್ಲಿ ಕೊಟ್ಟ ಸೂಚನೆಯನ್ನು ಫ್ರಾನ್ಸ್ ಸರಕಾರವು ನಿರಾಕರಿಸಿ, ಬ್ರಿಟನ್ನನ್ನು ಬಿಟ್ಟೇ ಆ ಮಾತುಕತೆಗಳನ್ನು ಮುಂದೊತ್ತುವುದಾಗಿ ನಿರ್ಧರಿಸಿದೆ. ಆದರೆ ಈ ಸಮ್ಮೇಳನದ ಕಾರ್ಯಕಲಾಪಗಳನ್ನು ಅನುಕ್ರಮವಾಗಿ ಬ್ರಿಟಿಷ್ ಸರಕಾರಕ್ಕೆ ತಿಳಿಸುತ್ತಾ ಹೋಗುವರು.

ಸಿಪ್ರಸ್ ಪ್ರಶ್ನೆಯ ಸಂಬಂಧವಾಗಿ ಗ್ರೀಕ್ ಪ್ರಧಾನ ಮಂತ್ರಿ, ಜನರಲ್ ನಿಕೋಲಾ ಪ್ಲಾಸ್ಟಿರಸರು ಒಂದು ಸೂಚನೆ ಮುಂದಿಟ್ಟಿದ್ದಾರೆ. ಸಿಪ್ರಸಿನ ಜನರಿಗೆ ಗ್ರೀಕ್ ಮತ್ತು ಬ್ರಿಟಿಷ್ ನಾಗರಿಕತೆಯೆರಡನ್ನೂ ಕೊಡುವ ಮೂಲಕ ಆ ಪ್ರಶ್ನೆಯನ್ನು ಬಗೆಹರಿಸಬಹುದೆಂದ್ಹೇತ್ತಾ ಇತರ ಮಾರ್ಗ ಸೂಚನೆಗಳನ್ನೂ ಅವರು ವಂದಿಟ್ಟಿದ್ದಾರೆ.

ಇದೇ ತಾ. 4೮ಲ್ಲಿ ಜಾನಿನ ಕೌನ್ಸಿಲರರ ಸಭೆಯು ಚುನಾವಣೆ ನಡೆದು 132 ಸದಸ್ಯರ ಆರಿಸಲ್ಪಟ್ಟಿದ್ದಾರೆ. ಈ ಸಂಬಂಧವಾಗಿ ಬಹಿರಂಗ ಪ್ರದರ್ಶನವಾವುದೂ ನಡೆಯಬಾರದೆಂದು ಸರಕಾರದ ನಿರೀಕ್ಷಣೆಯಾಗಿದ್ದಿತು; ಇದು 'ಮಾರ್ಶಲ್ ಲಾ' ಸಮಾನವಾದುದೆಂದು ತಿಳಿಯಿಸಿ ಸಮತಾವಾದಿಗಳು ತೀವ್ರವಾಗಿ ನಿಷೇಧ ಸೂಚಿಸಿದ್ದಾರೆ.

ದಕ್ಷಿಣಾಫ್ರಿಕದಲ್ಲಿ ಶ್ವೇತ ವರ್ಣೇತರರ ವಿರುದ್ಧವಾಗಿ ಮಲಾನ್ ಸರಕಾರವು ಮುಂತಂದಿರುವ ಪಂಗಡ ಕ್ಷೇತ್ರಕಾರಿಯಿಸುವ ಮಸೂದೆಯು ಭಾರತ ಮತ್ತು ಪಾಕಿಸ್ತಾನಗಳಿಗೆ ಅಶ್ಚರ್ಯವಾದುವೇನೂ ಅಲ್ಲವೆಂದೂ ಇವೆರಡು ರಾಷ್ಟ್ರಗಳ ಸ್ಪಷ್ಟನಿಧಿಗಳಿಗೆ ಕಳದ ಫೆಬ್ರವರಿ ತಿಂಗಳ ಮಾತುಕತೆಯ ವೇಳೆಯಲ್ಲೇ ಈ ಮಸೂದೆಯ ವಿಷಯವಾಗಿ ತಿಳಿಸಲಾಗಿತ್ತೆಂದೂ ದಕ್ಷಿಣಾಫ್ರಿಕದ ಒಳ ಪ್ರದೇಶ ಮಂತ್ರಿ ಡಾ. ಡೋಂಗೆಸ್ ಹೇಳಿದ್ದಾರೆ, ಆದರೆ ಕೇಪ್ ಟೌನ್ ಮಾತುಕತೆಗಳಲ್ಲಿ ತಮ್ಮೊಡನೆ ಪ್ರಸ್ತಾಪವನ್ನೇ ಎತ್ತಿದ್ದಿಲ್ಲವೆಂದು ಭಾರತ ಪಾಕಿಸ್ತಾನಗಳ ಪ್ರತಿನಿಧಿಗಳಂದಿದ್ದಾ ಈ ಮಸೂದೆಯ ದ್ವಿತೀಯ ವಾಚನವು ದಕ್ಷಿಣಾಫ್ರಿಕದ ಶಾಸನಸಭೆಯಲ್ಲಾಯಿತು. ಈ ಸಂಬಂಧವಾಗಿ ಮೂರು ದಿನಗಳ ವರೆಗೆ ನಡೆದ ಚರ್ಚೆಗೆ ಉತ್ತರಕೊಡುತ್ತಾ ಇದು ಕೇವಲ ಗೃಹ ಪ್ರಶ್ನೆಯೆದ್ದು ದಕ್ಷಿಣಾಫ್ರಿಕ ಕ್ಷೇತ್ರದೊಳಗನದಿರುವದೆಂದೂ, ಅನ್ಯರಾಷ್ಟ್ರಗಳಿಗದಿರಲ್ಲಿ ಯಾವ ಸಂಬಂಧವೂ ಇಲ್ಲವೆಂದೂ ಡೋಂಗೆಸ್ ನುಡಿದಿದ್ದಾರೆ.

ಭಾರತ—ಪಾಕಿಸ್ತಾನ

ವ್ಯಾಪಾರಿಕ ರಂಗದಲ್ಲಿ ಮೊದಲಿನ ಕಹಿ ಕರೆಕರೆತೆಗಳೇ ಮತ್ತಷ್ಟು ಹುಲುಸಾಗಿ ಬೆಳೆದ ಅಹಿತಕಾರಿ ದೃಶ್ಯ ಕಾಣುತ್ತಿರುವಾಗ ಭಾರತ ರಂಗದಲ್ಲಿ ಸ್ಥಿತಿಗತಿಗಳು ಇನ್ನಷ್ಟು ಅನುಕೂಲವಾದ ಹಿತಕರ ನೋಟಗಳೇ ಕಂಡುಬರುತ್ತಿವೆ. ಕಾಶ್ಮೀರ ವಿವಾದದ ಮಧ್ಯಸ್ಥಗಾರನಾಗಿ ಸಂಯುಕ್ತ ರಾಷ್ಟ್ರ ಸಂಘದಿಂದ ನೇಮಿಸಲ್ಪಟ್ಟು, ಢಿಲ್ಲಿಗೆ ಬಂದಿದ್ದ ಸರ್. ಓವೆನ್ ಡಿಕ್ಸನರು, ಭಾರತದ ನಾಯಕರೊಡನೆ ಮಾತನಾಡಿ ಅಭಿಪ್ರಾಯ ಸಂಗ್ರಹಿಸಿಕೊಳ್ಳುವ ಕೆಲಸವೆಲ್ಲವನ್ನೂ ಮುಗಿಸಿಕೊಂಡು ಕರಾಚಿಗೆ ಹೋಗಿ ಪಾಕಿಸ್ತಾನ್ ನಾಯಕರೊಡನೆ ವಿಚಾರ ವಿನಿಮಯ ನಡೆಸುತಿದ್ದಾರೆ. ಕರಾಚಿಯಲ್ಲಿ ನಾಲ್ಕು ದಿನ ನಿಂತು ಆ ಮೇಲೆ ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೆ ಹಾರಲಿದ್ದಾರೆ. ಢಿಲ್ಲಿಯಲ್ಲಿ ನೆಹರು, ವಲ್ಲಭಾಯಿ, ಬಾಬ್ಬಾಯಿ ಮೊದಲಾದವರೊಡನೆ ಸವವರ ಪರ್ಯಾಲೋಚನೆ ನಡೆಸಿದ ನಂತರ ಕಾಶ್ಮೀರ ವಿವಾದದಲ್ಲಿ ಭಾರತದ ಅಭಿಮತವೇನೆಂಬುದು ಸ್ಪಷ್ಟವಾಗಿ ಸರ್. ಡಿಕ್ಸನರಿಗೆ ಮಂದಟ್ಟಾಗಿದೆ. "ಢಿಲ್ಲೀ ಮಾತುಕತೆಯ ನಂತರ ಕಾಶ್ಮೀರ ಪ್ರಶ್ನೆ ಬಿಡಿಸಲ್ಪಡದಿರಲು ಕಾರಣವು ಮತ್ತಷ್ಟು ಕಡಿಮೆಯಾಗಿ ತೋರುತ್ತಿದೆ" ಎಂದು ಸರ್. ಡಿಕ್ಸನರಂದಿದ್ದಾರೆ. ಇದುವರೆಗಿನ ಮಾತುಕತೆಗಳ ರೂಪರೇಖೆ ಯಾವುದೂ ಬಹಿರಂಗವಾಗಿಲ್ಲವಾದರೂ ಭಾರತದ ಧೋರಣೆಯು ಕುರಿತು ಯಾವ ವಿಧದ ತಪ್ಪಭಿಪ್ರಾಯ ಜಿಹ್ವಾ ಸಂದೇಹವೂ ಉಳಿಯದ ರೀತಿಯಲ್ಲಿ ಸಂಗತಿಯೆಲ್ಲವೂ ಸರ್. ಡಿಕ್ಸನರ ಮನಮುಟ್ಟಿದೆಯೆಂದು ತಿಳಿದು ಬರುತ್ತದೆ. ಅತ್ತ ಪಾಕಿಸ್ತಾನದ ಹಸ್ತಕ ಕಾಶ್ಮೀರ ಬಂಡಾಯಗಾರರ 'ಆಝಾದ್ ಕಾಶ್ಮೀರ್' ಸರಕಾರದಲ್ಲೇ ಒಡಕು ಬಿದ್ದು ಇತ್ತಂಡಗಳಾಗಿರುವೆಯೆಂದು ಪ್ರಕಟವಾಗಿದೆ. ಆದರ ಮೂಲ ನಾಯಕ ಸರ್ದಾರ್ ಮುಹಮ್ಮದ್ ಇಬ್ರಾಹೀಮ್ ಖಾನ್ ಸಿಗೂ ಮತ್ತೊಬ್ಬ ನಾಯಕ ಬೌಧರಿ ಗುಲಾಮ್ ಅಬ್ಬಾಸ್ ಖಾನ್‌ಸಿಗೂ ಭಿನ್ನಾಭಿಪ್ರಾಯಗಳುಂಟಾಗಿ ಅಬ್ಬಾಸ್ ಖಾನ್ ಹೊಸ 'ಆಝಾದ್ ಕಾಶ್ಮೀರ್' ಸರಕಾರ ರಚಿಸಿಕೊಂಡಿರುವನೆಂದು ತಿಳಿದು ಬರುತ್ತದೆ.

ಕಳದ ವಾರ ನವದೆಹಲಿಯಲ್ಲಿ ನಡೆದ ಭಾರತ—ಪಾಕಿಸ್ತಾನ್ ಸರಕಾರಗಳೊಳಗಿನ ವ್ಯಾಪಾರ ಮಾತುಕತೆಯ ಫಲಿತಾಂಶವಾಗಿ ಭಾರತಕ್ಕೆ ಪಾಕಿಸ್ತಾನವು ರವಾನಿಸಬೇಕಾದ ನೂರಿನ ಕುರಿತು ಹೊಸ ಕಾರ್ಯಕ್ರಮವು ಶಯಾರಾಗಿರವದೆಂದು ತಿಳಿದು ಬರುತ್ತದೆ. ಈ ಮೊದಲಾಗಿದ್ದ ಕರಾಚಿ ಒಡಂಬಡಿಕೆಯನ್ನು ಪಾಕಿಸ್ತಾನವು ಪಾಲಿಸದಿದ್ದುದೇ ಈ ಹೊಸ ನ್ಯೂನತೆಗೆ ಕಾರಣ. ಕರಾಚಿ ಒಪ್ಪಂದದಲ್ಲಿ ಮೇ ತಾ. 15ಕ್ಕೆ ಮತ್ತು ಮೇ ತಾ 31ಕ್ಕೆ ಹಾ

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕೊಲೇಜು
ಮೊದಲಾದುವುಗಳ
ಲೈಬ್ರೆರಿಗಳಿಗೆ
ಬೇಕಾಗುವ ಕರ್ನಾಟಕದ ಎಲ್ಲಾ
ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ
ದೊರೆಯುತ್ತವೆ.
ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ,
ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

ಕುಲವಿಲ್ಲದ ಹೆಣ್ಣು
(ಸರಸ ಸಾಮಾಜಿಕ ಕಾದಂಬರಿ)
ಬರೆದವರು:—ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.
ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.
ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!
ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.
ದಪ್ಪ ಪುಸ್ತಕ ಬೆಲೆ ರೂ. 1—೦—೦
ಪ್ರತಿಗಳು ಅಂತರಂಗ ಕಾರ್ಯಾಲಯ, ಉಡುಪಿ,
ನವಯುಗ ಪ್ರೆಸ್, ಉಡುಪಿ, ಅಥವಾ ನವಭಾರತ
ಬುಕ್ ಡಿಪೊ, ಉಡುಪಿ. ಇಲ್ಲಿ ದೊರೆಯುತ್ತವೆ

ಭಾರತ ಪಾಕಿಸ್ತಾನಗಳ ಮೈತ್ರಿ ಪ್ರಸಾರ

ಗೂ ಜೂನ್ ಮತ್ತು ಜುಲಾಯಿ ತಿಂಗಳುಗಳಲ್ಲಿ ಹೀಗೆ ಕಂತು ಪ್ರಕಾರ ಪಾಕಿಸ್ತಾನವು ಭಾರತಕ್ಕೆ ರವಾನಿಸಬೇಕಾದ ನಾರಿನ ತೂಕವು ಒಟ್ಟು ೪ ಮಿಲಿಯ ಪೌಂಡುಗಳಾದರೆ ಇದರಲ್ಲಿ ಮೂರು ಮಿಲಿಯ ಪೌಂಡುಗಳಷ್ಟು ನಾರಿನ ಸಾಮಾನನ್ನು ಮಾತ್ರ ಪಾಕಿಸ್ತಾನವೀವರೆಗೆ ಕಳುಹಿಸಿರುವ ಪರಿಮಾಣವು ತೀರಾ ಅಗಣ್ಯವಿದೆ. ಇನ್ನೀ ಬಾರಿ ನಡೆದಿರುವ ಒಡಂಬಡಿಕೆಯು ಅದೃಷ್ಟ ಹೇಗೆ ನಿಲ್ಲುವದೆಂಬುದನ್ನು ನೋಡಲಿಕ್ಕಿದೆ.

ಢಿಲ್ಲೀ ಒಪ್ಪಂದಾನುಸಾರವಾಗಿ ಭಾರತ ಮತ್ತು ಪಾಕಿಸ್ತಾನಗಳಿಂದ ನೇ ಮ ಕ ಗೊಂಡಿರುವ ಅಲ್ಪ ಸಂಖ್ಯಾಕರ ಮಂತ್ರಿಗಳಾದ ಶ್ರೀ ಸಿ. ಸಿ. ಬಿಸ್ವಾಸ್ ಮತ್ತು ಡಾ। ಎ. ಎಮ್. ಮಾಲಿಕರು ಜತೆಯಾಗಿ ಪೂರ್ವ ಬಂಗಾಳದಲ್ಲಿ ಸಂಚರಿಸುತ್ತಾ ಜಾತೀಯ ಸೌಹಾರ್ದತೆಯನ್ನು ಸಂಸ್ಥಾಪಿಸುವ ಕಾರ್ಯನಿರತರಾಗಿದ್ದಾರೆ. ಅವರಿಬ್ಬರೂ, ನಿರಾಶ್ರಿತರಾಗಿ ಓಡಿ ಬಂದಿರುವವರಿಗೆ ಮರಳಿ ಹೋಗುವ ಪ್ರೇರಣೆ ಕೊಡುತ್ತಾ, ಕೇವಲ ಕರಾರುವಾಕ್ಕಾಗಿ ಅಲ್ಲದೆ, ಹಾರ್ದಿಕವಾಗಿಯೇ ಢಿಲ್ಲೀ ಒಪ್ಪಂದದ ಸೂತ್ರಗಳನ್ನು ಪಾಲಿಸಕಕ್ಕೆದ್ದೆಂದು ಒತ್ತಿ ಬೋಧಿಸುತ್ತಾ, ಕೆಲವೆಡೆ 'ಅಗತ್ಯಬಿದ್ದರೆ ಪ್ರಾಣವನ್ನೇ ಕೊಟ್ಟಾದರೂ ಢಿಲ್ಲೀ ಒಪ್ಪಂದದ ಶರ್ತಗಳನ್ನು ಪಾಲಿಸುವೆವು' ಎಂಬ ಪ್ರತಿಜ್ಞೆಯನ್ನು ಸಭಿಕರಿಂದ ಮಾಡಿಸುತ್ತಾ ಸಂಚರಿಸುತಿದ್ದಾರೆ.

ಕಾಲುವೇ ನೀರಿನ ಸಂಬಂಧವಾಗಿ ಭಾರತ ಪಾಕಿಸ್ತಾನಗಳೊಳಗಿರುವ ವಿವಾದವನ್ನು ಇತ್ಯರ್ಥಿಸಿಕೊಳ್ಳುವದಕ್ಕಾಗಿ ಮೇ ತಿಂಗಳಾಂತ್ಯದಲ್ಲಿ ಎರಡು ದಿನ ಇಷ್ಟ ಡೆಯವರೊಳಗೆ ಮಾತುಕತೆಗಳು ನಡೆದರೂ ಅವು ಪೂರ್ಣಗೊಳ್ಳದೆ ಬಾಕಿಯುಳಿದಿವೆ ಎಂದು ತಿಳಿದು ಬರುತ್ತಿದೆ. ಇಂಜನೀಯರಿಂಗ್ ಪರೀಕ್ಷಲನೆ ನಡೆಸಲು ಇತ್ಯಡೆಯವರು ನೇ ಮಿಸಿದ್ದ ಎಂಡು ಸಮಿತಿಗಳು ತಮ್ಮ ವರದಿಯೊಪ್ಪಿಸಿದ್ದುವು. ಈ ವರದಿಯನ್ನಾಧರಿಸಿಯೇ ಎರಡೂ ಕಡೆಯ ಸಂಧಾನ ಸಮಿತಿಗಳು ಎಂಡು ದಿನ ಪರ್ಯಾಲೋಚನೆ ನಡೆಸಿದ್ದುವು.

ನೆಹರೂ ಸಂಚಾರ

ಭಾರತ ಪ್ರಧಾನಿ ಪಂಡಿತ ಜವಾಹರಲಾಲ ನೆಹರುಗಳು ಇಂಡೋನೇಶಿಯಕ್ಕೆ ಹೋಗಲು ಢಿಲ್ಲಿಯಿಂದ ಹೊರಟಿವರು ನೇ ತಾ. 31ರಲ್ಲಿ ತಿರುವಾಂಕೂರಿಗಾಗಮಿಸಿ ತಿರುವಾಂಕೂರು–ಕೊಚ್ಚಿ ಯೂನಿಯನ್ನಿನಲ್ಲಿ ಮೂರು ದಿನಗಳ ಸಂಚಾರ ಕಾರ್ಯಕ್ರಮವನ್ನು ಏರ್ಪಾಸಿಕೊಂಡು ಇದೇ ತಾ. 2ರಲ್ಲಿ 'ಎ. ಯಸ್. ಯಸ್. ಢಿಲ್ಲಿ' ಹಡಗನ್ನಲ್ಲಿ ಇಂಡೋನೇಶಿಯಕ್ಕೆ ಹೊರಟು ಹೋಗಿದ್ದಾರೆ. ಇಂಡೋನೇಶಿಯದಲ್ಲಿ ಆವರಿಗೆ 10 ದಿನಗಳ ಕಾರ್ಯಕ್ರಮಗಳಿವೆ. ಅಲ್ಲಿಂದ ಅವರು ಸಿಂಗಾಪುರವನ್ನು ಸಂದರ್ಶಿಸಿ, ಪ್ರಾಯಶಃ ಬರ್ಮಕ್ಕೂ ಹೋಗಿ ಬರಲಿದ್ದಾರೆ. ಪಂಡಿತಜೀ ಭೇಟಿ ಕೊಡುವ ಸ್ಥಳಗಳೆಲ್ಲೆಲ್ಲಾ ಅವರಿಗೆ ಸಂಭ್ರಮದ ಸ್ವಾಗತ ಸತ್ಕಾರಗಳು ಕಾದಿವೆ. ನವ ಸ್ವತಂತ್ರ ರಾಷ್ಟ್ರ ಇಂಡೋನೇಶಿಯದ ಜಕಾರ್ತಾವಲ್ಲಿರುವ ಅಧ್ಯಕ್ಷ್ಣ ಸೋಯಿಕರ್ನೋ ಅರಮನೆಯ ಮೇಲಂತಸ್ತಿನಿಂದ ಪಂಡಿತಜೀ ಸಾರ್ವಜನಿಕ ಭಾಷಣ ಕೊಡುವ ವ್ಯವಸ್ಥೆಯಾಗಿದೆ. ಈ ಸಭೆಗೆ ಒಂದು ಮಿಲಿಯಕ್ಕೂ ಮಿಕ್ಕಿ ಜನರು ಸೇರಬಹುದೆಂಬ ನಿರೀಕ್ಷೆಯಿದೆ.

ಅವರು ಹೋದಲ್ಲೆಲ್ಲಾ ಅ ಭೂ ತ ಪೂರ್ವ ಪ್ರಚಂಡ ಸ್ವಾಗತ ದೊರೆಯುತ್ತಿದೆ. ತ್ರಿವೇಂದ್ರಮಿನಲ್ಲಿ ಇಳಿಯುವಾಗ ಹಿಂದೂ ಸಂದರ್ಭದಲ್ಲೂ ಆಲ್ಲಿ ಕಂಡು ಬಾರದಿದ್ದಂತಹ ಪ್ರಚಂಡ ಜನ ತೋಸ್ತಾಹ ತೋರಿ ಬಂದಿದ್ದಿತು. ಅಲ್ಲಿಯ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಕಾಂಗ್ರೆಸಿಗರ ಇಂದಿನ ಕರ್ತವ್ಯಗಳೇನೆಂಬುದನ್ನು ಅವರು ವಿವರಿಸಿದ್ದರು. "ಕಾಂಗ್ರೆಸಿಗರು ಎಂದಿಗೂ ಜಾತೀಯತೆಗೆ ಆವಕಾಶ ಕೊಡಬಾರದು. ಕಮ್ಯೂನಿಸ್ಟರ ಧ್ವಂಸಾತ್ಮಕ ಚಟುವಟಿಕೆಗಳು ಖಂಡನೀಯವಿವೆ. ಯಾವ ಸರಕಾರವಾದರೂ ಭಯೋತ್ಪಾದಕ ಕೃತ್ಯಗಳನ್ನು ಸಹಿಸಿ ಸುಮ್ಮಗಿರಲಾರದು. ಪತ್ರಿಕೆಗಳು ಆಯೋಗ್ಯ ಹಾಗೂ ಹೇಯವಾದ ಟೀಕೆಗಳಿಂದ ಬಾರದು. ಒಟ್ಟಿನ ಮೇಲೆ ಭಾರತದ ಪತ್ರಿಕೆಗಳು ಸಂಯಾದ ವಿಧಾನದಿಂದಲೇ ತಮ್ಮ ವರ್ಚಸ್ಸನ್ನು ವಿನಿಯೋಗಿಸುತ್ತಿವೆ. ನಾನೂ ಭಾಷಾನ್ವಯ ಪ್ರಾಂತ್ಯದ ತತ್ವಪ್ರೇಮಿಯಾಗಿ ಮಾರ್ಪಟ್ಟಿದ್ದ ಕಾಲವೊಂದಿತ್ತು. ಆದರೆ ಅದು ಪ್ರತ್ಯೇಕತಾ ಮತ್ತು ಅಲ್ಪ ಭಾವನೆಗಳಿಗೆ ಎಡೆಕೊಡುವಂತಹದೆಂಬುದರಿಂದ ನನ್ನ ಉತ್ಸಾಹವು ಕುಗ್ಗಿಹೋಯಿತು. ಇಂತಹ ವಿಭಾಗವು ಮಿಕ್ಕ ಭಾಗಗಳ ಮೇಲೆ ಹೇಗೆ ಪರಿಣಾಮ ಬೀರುವದೆಂಬುದನ್ನೂ ನಾವು ನೆನಪಿನಲ್ಲಿಡಬೇಕಾಗಿದೆ." ಎಂದು ಮುಂತಾಗಿ ಪಂಡಿತಜೀ ಬೋಧಿಸಿದ್ದರು. ಅಂತೆಯೇ ತ್ರಿವೇಂದ್ರಮಿನ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣವಿಯುಕ್ತ ಜನಸಾಮಾನ್ಯರ ಜೀವನ ಮಟ್ಟವನ್ನು ವೈಲೇಸುವ ಅವಶ್ಯಕತೆಯನ್ನು ತಿಳಿಸಿ ಅಧಿಕ ಉತ್ಪನ್ನಕ್ಕಾಗಿ ಪ್ರೇರೇಪಿಸಿ, ಅಧಿಕಾರದಾಹವನ್ನು ಬಿಡಬೇಕೆಂದರು. ಅದೇ ರೀತಿ ಕೊಚ್ಚಿಗೆ ಹೋಗಿ, ಎರ್ನಾಕ್ಯುಲಮಿನ ಸಭೆಯಲ್ಲಿ ಸಾರ್ವಜನಿಕರ ಕರ್ತವ್ಯಗಳೇನೆಂಬುದನ್ನು ವಿವರಿಸಿ, ಭಾರತದ ಮೂಲಭೂತ ಏಕರೂಪದ ಚಿತ್ರವನ್ನು ಮುಂದಿಟ್ಟರು. ಜಾತೀಯತೆಯನ್ನು ತೀವ್ರವಾಗಿ ಖಂಡಿಸಿ 'ಇದರ ಮಟ್ಟಿಗೆ ನಾನು ಯಾರಿಗಾದರೂ ಎಳ್ಳಷ್ಟೂ ಎಡೆಕೊಡುವಂತಿಲ್ಲ. ಅದೆಲ್ಲಿಯೇ ತಲೆಯೆತ್ತಿದರೂ ಅಲ್ಲಿ ನಾನು ನನ್ನ ಸರ್ವ ಶಕ್ತಿಯಿಂದ ಅದನ್ನು ಪ್ರತಿಭಟಿಸುತ್ತೇನೆ. ಗತಕಾಲದಲ್ಲಿಈ ಜಾತೀಯತೆಗಾಗಿ ಭಾರತವು ಅತಿರೇಕ ಬೆಲೆ ತೆತ್ತಿದ್ದೆ;ಇನ್ನು ಹೆಚ್ಚಿನ ಅಪಾಯ ಬರಮಾಡಿಕೊಳ್ಳಲು ನಾನು ಎಷ್ಟಕ್ಕೂ ತಯಾರಿಲ್ಲ" ಎಂದರು. ಭಾರತದ ಉಪಪ್ರಧಾನ ಸರದಾರ ವಲ್ಲಭಾಯಿಗಳು ಇತ್ತೀಚೆಗೆ ಬಂದು ಹೋಗಿದ್ದ ಕೊಚ್ಚಿ, ತಿರುವಾಂಕೂರುಗಳಿಗೆ ಭಾರತದ ಪ್ರಧಾನಿ ಪಂಡಿತ ನೆಹರು ಗಳೂ ಭೇಟಿ ಕೊಟ್ಟುದರಿಂದ, ಇವೆರಡು ಬಾರಿಯೂ ಎಲ್ಲರ ಲಕ್ಷ್ಯವು ಈ ಕಡೆಗೆ ಬೀಳುವಂತಾಯಿತು. ನೆಹರೂ ವಲ್ಲಭಾಯಿಗಳಿಬ್ಬರೂ ತೆಂಕು ಮೂಲೆಯ ಈ ಸಂಸ್ಥಾನಗಳಿಗೆ ಹೆಚ್ಚಿನ ಪ್ರಶ್ನ ವರುಷಗಳ ನಂತರ ಕೊಟ್ಟ ಭೇಟಿಯಿದು.

ಮಥಾಯಿ ರಾಜೀನಾಮೆ

ಭಾರತದ ಹಣಕಾಸಿನ ಮಂತ್ರಿಗಳಾಗಿದ್ದ ಜೋನ್ ಮಥಾಯಿಗಳು ಪೂರ್ವ ನಿರ್ಧಾರವ್ಯವಸ್ಥೆಯಂತೆ ಮೇ ತಾ. 31ರಲ್ಲಿ ತನ್ನ ಅರ್ಥ ಮಂತ್ರಿ ಸ್ಥಾನವನ್ನು ಡಾ। ದೇಶಮುಖರಿಗೆ ಬಿಟ್ಟುಕೊಡುವ ಕೆಲವೇ ತಾಸುಗಳ ಮೊದಲು ಪತ್ರಿಕಾ ಪ್ರತಿನಿಧಿಗಳ ಮುಂದೆ ತನ್ನ ರಾಜೀನಾಮೆಯ ಕಾರಣವನ್ನು ಹೇಳಿದ್ದಾರೆ. ಸಂಕಾರದ ಆರ್ಥಿಕ ಧೋರಣೆಯ ಕುರಿತು ತನಗೂ ಪ್ರಧಾನ ಮಂತ್ರಿಗಳಿಗೂ ಮೂಲಭೂತ ಭಿನ್ನಾಭಿಪ್ರಾಯಗಳು ಒಂದೆರಡರಿಂದಲೇ ತಾನು ಆ ಸ್ಥಾನವನ್ನು ಬಿಡಬೇಕಾಯಿತೆಂಬುದನ್ನು ವ್ಯಕ್ತ ಪಡಿಸಿದ್ದಾರೆ. ಮುಂದಿನ ಒಂದು ವರುಷವು ಭಾರತದ ಆರ್ಥಿಕ ರಂಗದಲ್ಲಿ ಅತ್ಯಂತ ಬಿಕ್ಕಟ್ಟಿನ ಕಾಲವೆಂದೂ, ತನ್ನ ಭಿನ್ನಾಭಿಪ್ರಾಯಗಳನ್ನು ವಿವರಿಸಿ ಸರಕಾರಕ್ಕೆ ತೊಂದರೆಯೊಡ್ಡುವ ಇಚ್ಛೆ ತನಗಿಲ್ಲವೆಂದೂ ಡಾ. ಮಥಾಯಿಗಳಂದಿದ್ದಾರೆ. ಡಾ. ಜೋನ್ ಮಥಾಯಿಗಳು ಈ ಹೇಳಿಕೆ ಹೊರಟಾಗ ಮಥಾಯಿಗಳ ಹುಟ್ಟೂರಾದ ತ್ರಿವೇಂದ್ರಮಿನಲ್ಲಿದ್ದ ಪಂಡಿತ ನೆಹರು ಗಳು ಈ ಗುಟ್ಟನ್ನು ಒಡೆದು ಹಾಕಿದ್ದಾರೆ. ಜೋನ್ ಮಥಾಯಿಗಳ ರಾಜೀನಾಮೆಗೆ ತಮ್ಮೊಳಗಿನ ಅಭಿಪ್ರಾಯ ಭೇದಗಳೇ ಕಾರಣವೆಂಬುದನ್ನು ಸಮರ್ಥಿಸುತ್ತಾ, ಆದೇನೂ ವ್ಯಾಮುಖ್ಯ ಧೋರಣೆಯ ಸಂಬಂಧವಾಗಿ ಇರಲಿಲ್ಲವೆಂದೂ 'ಪ್ಲೇನಿಂಗ್ ಕಮಿಶನ್' ರಚಿಸಿನ ಪ್ರಿಪ್ರಾಚರಣೆಯ ಸಂಬಂಧದಲ್ಲೇ ವ್ಯತ್ಯಾಸಾಭಿಪ್ರಾಯಗಳಿದ್ದುವೆಂದೂ ಪಂಡಿತ ನೆಹರು ಸ್ಪಷ್ಟೀಕರಿಸಿದ್ದಾರೆ. 'ಯೋಜನಾ ಸಮಿತಿ' ರಚಿಸಿ ಅದರ ಮತ್ತು ಕಾಂಗ್ರೆಸ್ಕಾರ್ಯಕಾರೀ ಸಮಿತಿಯ ಧೋರಣೆಯ ಮೂಲ ಸಾರವನ್ನು ಮುಂದೊತ್ತುವದು, ಆದ್ಯ ಕರ್ತವ್ಯವೆಂದ ನನ್ನ ಅಭಿಮತವಿದ್ದಿತು. ಆದರೆ ಡಾ। ಜೋನ್ ಮಥಾಯಿಗಳಿಗೆ ಈ ವಿಧಾನದ ಕಡೆಗೆ ಸಂಪೂರ್ಣ ಸಹಾನುಭೂತಿಯಿರಲಿಲ್ಲ. ಸದ್ಯ ಸಮಿತಿಯಲ್ಲಿ ಯೋಜನಾ ಕಮಿಶನ್ನನ್ನು ರಚಿಸಿಬಿಟ್ಟಲ್ಲಿ, ಈಡೇರಿಸಿ ಕೊಡಲಾಗದಂತಹ ಅನಗತ್ಯವಾದ ಆಶೆಗಳನ್ನೆದ್ದು ಎಬ್ಬಿಸಬಹುದೆಂದೂ ಪ್ರಕೃತ ನಾವು ನಿಧಾನ ಪೆಚ್ಚೆಯನ್ನೇ ಇಟ್ಟು ನಮ್ಮ ಅನುಕೂಲತೆಗಳನ್ನು ಭದ್ರಪಡಿಸಿಕೊಳ್ಳುವದೊಂದನ್ನೇ ನೋಡಿಕೊಂಡು, ಕಾಲ ಬಂದಾಗ ಕೊನೆಗೆ ಯೋಜನೆಗಳನ್ನು ಹಾಕಿಕೊಂಡರಾಯಿತೆಂದೂ ಡಾ. ಮಥಾಯಿಗಳ ಅಭಿಮತವಿದ್ದಿತು. ಭಂಡಾರಾನುಕೂಲತೆಗಳನ್ನು ಜಲ್ದಾಪಿಲ್ಲಿ ಮಾಡಬಾರದೆಂಬ ಅಭಿಪ್ರಾಯಕ್ಕೆ ನಾನು ಮನ್ನಣೆ ಕೊಡಲೇಬೇಕಾದೂರೂ, ನವ್ಯಲ್ಲಿರುವ ಮಿತಾನುಕೂಲತೆಗಳನ್ನು ಸದುಪಯೋಗ ಪಡಿಸಿಕೊಳ್ಳುವುದಕ್ಕಾಗಿ ನಾವು ಯೋಜನೆಗಳನ್ನು ಹಾಕಿಕೊಳ್ಳಲೇಬೇಕೆಂದು ನನ್ನ ಅಭಿಪ್ರಾಯವಿದೆ" ಎಂದು ಪಂಡಿತಜೀ ಬಹಿರಂಗ ಪಡಿಸಿದ್ದಾರೆ. ಮಂತ್ರಿ ಮಂಡಲವು ಜತೆ ಜವಾಬ್ದಾರಿಯದಾದರೂ ಪ್ರಧಾನ ಮಂತ್ರಿಗೆ ವಿಶಿಷ್ಟ ಜವಾಬ್ದಾರಿಕೆಗಳಿವೆಯೆಂದೂ ಅವರಂದಿದ್ದಾರೆ. ಸುಮಾರು ನಾಲ್ಕು ವರುಷಗಳಿಂದ ಭಾರತದ ಆರ್ಥ ಸಚಿವನಾಗಿ ಡಾ. ಜೋನ್ ಮಥಾಯಿಗಳು ಶ್ಲಾಘನೀಯ ರೀತಿಯಿಂದ ಕೆಲಸ ಮಾಡುತ್ತಾ ಬಂದವರು. ಅವರ ರಾಜೀನಾಮೆಯ ಸುದ್ದಿ ಕೆಲಕಾಲಕ್ಕೆ ಮೊದಲೇ ಹರಡಿದ್ದು ಕೊನೆಗಮ ಖಂಡಿತವೆಂದು ಅಧಿಕೃತವಾಗಿ ತಿಳಿದು ಬಂದಿದ್ದರೂ ನಿಜ ಕಾರಣವೀವರೆಗೆ ವ್ಯಕ್ತವಾಗಿರಲಿಲ್ಲ. ಡಾ। ಮಥಾಯಿಗಳು ಖಾಸಗೀ ಕಾರಣಗಳಿಗಾಗಿಯೇ ರಾಜೀಯೀಯುವರೆಂಬ ವದಂತಿಯಿದ್ದಿತು; ಆದರೀಗ ಸತ್ಯಸ್ಥಿತಿ ಪ್ರಕಟವಾಗಿದೆ. ಸರಕಾರೀ ವೆಚ್ಚದ ಮೇಲೆ ಸಾಕಷ್ಟು ಅಧಿಕ ನಿಯಂತ್ರಣ ಹಾಕಲು ತನಗಸಾಧ್ಯವಾದುದನ್ನೂ, ಹೆಂಚಕೇ ಕಮಿಶನು ನೇಮಕಕ್ಕೆ ಅಡ್ಡಿಯಾಗಿ ನಿಂತಿರುವದನ್ನೂ ಡಾ। ಜೋನ್ ಮಥಾಯಿ ತನ್ನ ರಾಜೀನಾಮೆಯ ಕಾರಣಗಳಾಗಿ ಹೇಳಿದ್ದರು. ಭಾರತದ ವಿದ್ಯಾಮಂತ್ರಿ ಮೌಲಾನಾ ಆಜಾದರು ಈ ಕುರಿತು ಅಭಿಪ್ರಾಯ ಸೂ

(ಮುಂದೆ ಪುಟ ನೋಡಿ)

The Canara Banking Corporation Ltd. Shirva.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಲಿಮಿಟೆಡ್, ಶಿರ್ವ, ದ. ಕ

ನೋಟೀಸು.

ಸರ್ವಸಾಧಾರಣವಾಗಿ ಎಲ್ಲಾ ಜನರೀಗೆ, ಈ ಮೂಲಕ ತಿಳಿಯಪಡಿಸುವದೇನೆಂದ್ರೆ— ದಿವ್ಯಶ್ರೀ ಗ್ರಾಮದ, ನಿಕ್ಕರೆಯಲ್ಲಿರುವ ಹಾಲಿ ಮೃತಪಟ್ಟಿರುವ ಬಸ್ತಾಂಕಾಡ್ತೋಸ ಮತ್ತು ಸದ್ರಿಯವರ ಮಗ ಡಿ. ಎ. ಕಾಡ್ತೋಸ ಕೂಡಾ ಇಬ್ಬರ ಹೆಸರಲ್ಲಿ ಈ ಬ್ಯಾಂಕಿನಲ್ಲಿ ನಂಬ್ರ 288/47ನೇ ಮೇರೆಗೆ, ರೇವಣಾತಿಯಿರುವ ಐವೇಜಿನ ರಶೀದಿಯು ಗೈರುವಿಲೇಯಾಗಿರುವದರಿಂದ, ಸದ್ರಿ ರಶೀದಿಯ 'ಡುಪ್ಲಿಕೇಟ್' (Duplicate) ಒಂದನ್ನು ಅಪೇಕ್ಷಿಸಿ, ಡಿ. ಎ. ಕಾಡ್ತೋಸರು ಅರ್ಜಿಮಾಡಿರುತ್ತಾರೆ.

ಸದ್ರಿ ಅರ್ಜಿ ಪ್ರಕಾರ ಡುಪ್ಲಿಕೇಟ್ ರಶೀದಿಯನ್ನು ಕೊಡುವರೇ, ಯಾರಾದ್ದಾದರೂ ಏನೊಂದೂ ಆಕ್ಷೇಪವಿರುವಲ್ಲಿ, ಶಕಾರಣವಾದ ಆಂಥಾ ಆಕ್ಷೇಪಗಳನ್ನು ತಾ. 20-6-1950ರ ಒಳಗೆ, ಸದ್ರಿ ಬ್ಯಾಂಕಿನ ಅಧಿಸಿನಿಸಲ್ಲಿ ಕ್ರಮವಾಗಿ ಜಾಹೀರಾಯಮಾಡಿಕೊಳ್ಳತಕ್ಕದ್ದು. ಆಗತಕ್ಕುನಲ್ಲಿ ಅರ್ಜಿದಾರರಿಗೆ ಡುಪ್ಲಿಕೇಟ್ ರಶೀದಿಯನ್ನು ಕೊಡಲಾಗುವುದು, ತಿಳಿದಿರುವದು.

Office of the Corporation,
Shirva 8-6-1950.

U. A. Prabhu
Agnet.

ಶ್ರೀ
Canara Banking Corporation Ltd.
(Incorporated in India)
ಕೆನರಾ ಬ್ಯಾಂಕ್
Head Office : UDIPI. (S. I.)

Capital Authorised .... Rs. 25,00,000
Capital Issued, Subscribed & Paid up .... Rs. 20,00,000
Reserves .... Rs. 9,44,765

ಗುರುವಾರ ಉಡುಪಿ ೩೦-೬-೧೯೩೮

ಸ್ವಾನುಭವ

ಹೈದರಾಬಾದ್ ಕಾಂಗ್ರೆಸಿಗರ ಒತ್ತಾಯದ ಬೇಡಿಕೆಗನುಸಾರವಾಗಿ, ಅಲ್ಲಿಯ ವಿಧಾನ ಮಂಡಲದ ಮೂವರು ನಾಗರಿಕಾಧಿಕಾರೀ ಮಂತ್ರಿಗಳನ್ನು ರಾಜೀನಾಮೆ ಕೊಡಿಸಿ ನಾಲ್ಕು ಮಂದಿ ಕಾಂಗ್ರೆಸ್ ಮಂತ್ರಿಗಳನ್ನು ಹೊಸತಾಗಿ ನೇಮಿಸಿಕೊಳ್ಳಲಾಗಿದೆ. ಇಷ್ಟರಿಂದಲೇ ಅಲ್ಲಿಯ ಕಾಂಗ್ರೆಸಿಗರು ಸಫಲ ಮನೋರಥರಾಗಿರುವುದು ಗೋಚರಕ್ಕೆ ಬಂದಿದೆ. ಆದರೆ, ಭಾರತದ ಸ್ವತಂತ್ರಾಡಳಿತಯ ಇದ ವರೆಗಿನ ಅನುಭವದ ಮೇಲಿಂದ ಇಂತಹ ಜನ ಪ್ರಾತಿನಿಧ್ಯ ದೊರೆತ ಮಾತ್ರಕ್ಕೆ ಹಿಗ್ಗುವ ಬದಲಿಗೆ ಗಾಢ ಚಿಂತನೆ ಮಾಡಬೇಕಾದ ಅವಶ್ಯಕತೆಯೇ ಬಹಳವೆನ್ನಬಹುದು. ಹೈದರಾಬಾದ್ ಮಂತ್ರಿ ಮಂಡಲಿಯಲ್ಲಿ ಇಂದಿನಂತೆ ಅರೆವಾಸಿ ಮಾತ್ರ ಜನಪ್ರತಿನಿಧ್ಯವನ್ನು ಕುರುಹಿಸಬೇಕೆಂದಿರಲಿಲ್ಲ. ಪೂರ್ಣ ಪ್ರಜಾಪ್ರತಿನಿಧಿ ಸರಕಾರವನ್ನು ಇಷ್ಟರಲ್ಲೇ ಸ್ಥಾಪಿಸಿ ಬಿಡಬಹುದಿದ್ದಿತು. ಆದರೆ ಅಲ್ಲಿಯ ಸದ್ಯದ ಅಡಳಿತಕ್ಕೆ ಅತಂಕ ಸ್ಥಾಯಿಯಾಗಿ ತೋರಿದುದರಿಂದಲೇ ಇಂತಹ ಮಾಡಿದೆ ಫಿಧಾನಿಸಲಾಗಿದೆ; ಅಂಶ ಮಾತ್ರ ದುರಸ್ತಿ ನಡೆದಿದೆ. ಇದರ ಒಳಗುಟ್ಟನ್ನು ಆಯಲು ಕತ್ತಲೇನೂ ಇಲ್ಲ. ಪ್ರಪ್ರಥಮ ಅಧಿಕಾರ ಕೇಳಿದವರು 'ಜನ ಪ್ರಾತಿನಿಧ್ಯ' 'ಪ್ರಜಾಸತ್ತೆ' ಮುಂತಾದ ತತ್ವಗಳನ್ನು ಪರಿಸುತ್ತಾ ಅಸ್ತಿವಾರ ಭದ್ರತೆಯಾಗುವ ಮೊದಲೇ ಮಾಡಿನ್ನೇರಿಸಿಕೊಳ್ಳಲು ಹವಣಿಸುತಿದ್ದಾರೆ– ಸ್ವತಂತ್ರಾಡಳಿತ ಸ್ಥಾಪನೆಯ ಆದಿಭಾಗದ ಕಾರ್ಯಭಾರಗಳು ಪೂರ್ತಿಗೊಳ್ಳುವ ಮೊದಲೇ ಜನತಾ ಪ್ರಾತಿನಿಧ್ಯದ ಕುರಿತು ಅತುರ ಪ್ರದರ್ಶಿಸುತಿದ್ದಾರೆ. ಇಂತಹ ಅವಸರವು ಸ್ವಾಭಿಮಾನದ ದ್ಯೋತಕವಾಗಿರಬಹುದು; ಆದರೆ ವ್ಯವಹಾರ ದೃಷ್ಟಿಯಿಂದ ಮತ್ತು ಭವಿಷ್ಯದ ದೃಷ್ಟಿಯಿಂದ ಹಿತಕಾವಹವಿಲ್ಲವೆಂಬ ಅಭಿಪ್ರಾಯ ಹೆಚ್ಚಿನವರಲ್ಲಿ ಮೂಡಿದೆ. ಹೊಸ ರಾಜ್ಯ ಶಕ್ತಿ ಮತ್ತು ಅಡಳಿತ ಯೋಗ್ಯತೆ, ಇವೆರಡೂ ಪರಸ್ಪರ ಭಿನ್ನವಾದವುಗಳು. ಯಾವ ರಾಷ್ಟ್ರದಲ್ಲೇ ಆದರೂ ಯಾವ ಕಾರಣಕ್ಕಾಗಿ ಸೇನಾಧಿಕಾರಿಯೇ ಅಡಳಿತದ ನಾಯಕನಾಗಿ ಇರಲಾರನೋ ಅದೇ ಕಾರಣದ ಮೇಲಿಂದ ಸ್ವಾತಂತ್ರ್ಯ ಹೋರಾಟ ಕರ್ತರಾಗಿದ್ದವರಲ್ಲೇ ಸ್ವತಂತ್ರಾಡಳಿತದ ಯೋಗ್ಯತೆಯೂ ಇರಲಾರದು. ಇವೆರಡು ಯೋಗ್ಯತೆಗಳೂ ವಿಕ ಪ್ರಕಾರ ವಿರುವ ನೆಹರೂ, ವಲ್ಲಭಾಯಿಗಳಂಥವರು ರಾಷ್ಟ್ರದಲ್ಲಿ ಒಹಳ ಮಂದಿ ಇಲ್ಲ. ಇಂತಹ ಶಕ್ತಿ-ಯೋಗ್ಯತೆಗಳೆರಡರ ಸಮ್ಮಿಲನ ವಿರುವ ವ್ಯಕ್ತಿಗಳ ಅಭಾವವಿರುವುದೇ ಸ್ವತಂತ್ರಾಡಳಿತದ ಹೆಚ್ಚಿನ ಲೋಪ ದೋಷಗಳಿಗೆ ಮೂಲ ಕಾರಣ. ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದವರು ಕಾಂಗ್ರೆಸಿಗರು; ಬ್ರಿಟಿಷರು ಭಾರತದ ಅಧಿಕಾರವನ್ನು ಇಟ್ಟು ಹೋದದ್ದೂ ಕಾಂಗ್ರೆಸಿಗರ ಕೈಯಲ್ಲೇ; ಅಂತಹ ಕಾಂಗ್ರೆಸಿಗರೇ ಅಧಿಕಾರಿಗಳಾಗಿ ಉಳಿದುಕೊಂಡು ಯಾರಿಗೂ ಅಕ್ಷೇಪಿಸಲಿಡೆಯಿಲ್ಲ. ಪ್ರಾಂತ್ಯಗಳಂತೂ ಮತದಾರರಿಂದ ಬಹುಮತ ಪಡೆದು ಅಧಿಕಾರ ಪಕ್ಷವೆ ಅಧಿಕಾರ ನಡೆಸಬೇಕೆಂಬ ಪ್ರಜಾಸತ್ತಾ ತತ್ವಾನುಸಾರವಾಗಿಯೇ ಕಾಂಗ್ರೆಸ್ ಅಧಿಕಾರದಲ್ಲಿವೆ. ಆದರೂ ಡಾ। ಅಂಬೇಡ್ಕರ್, ಶ್ರೀ. ಪಣ್ಣಿಗಂ ಚೆಟ್ಟಿಯಾರ್, ಡಾ। ಜೋನ್ ಮತ್ತಾಯಿ ಗಳಂತಹ ಕಾಂಗ್ರೆಸೇತರಿಗೆ ತನ್ನ ಮಂಡಲಿಯಲ್ಲಿ ಸೇರಿಸಿಕೊಳ್ಳಲು ಪಂಡಿತ ನೆಹರುಗಳಂತಹ ಕೀರ್ಮಗಾಮಿ ನಾಯಕರೂ ಹಿಂಜರಿಯಲಿಲ್ಲ. ಅಡಳಿತೆಯ ನಿರ್ವಹಣಕ್ಕೆ ಅದಂ ಅನುಭವ ಮತ್ತು ಯೋಗ್ಯತೆಯುಳ್ಳವರು ಬೇಕೆಂಬ ವ್ಯವಹಾರ ದೃಷ್ಟಿಯಿಂದ ಪಂಡಿತ ನೆಹರುಗಳು ಹೊರಗಿನವರನ್ನೂ ಅಮಂತ್ರಿಸಿಕೊಂಡಿದ್ದರು. ಆದರೂ ಕೇಂದ್ರದ ಮಂತ್ರಿ ಎಲ್ಲಾ ಸಂಸ್ಥಾನಗಳ ಅಡಳಿತೆಯು ಬಹುಮತಾನುಸಾರವಾಗಿ ಕಾಂಗ್ರೆಸಿಗರದೇ ಆಗಿದ್ದ ಎಂಬುದನ್ನು ಒಪ್ಪಬೇಕು. ಅಂತೆಯೇ ಅಸುಭವದ ಅಭಾವದಿಂದಾಗಿ ಇಂದಿನ ಅಡಳಿತೆಯಲ್ಲಿ ಎಷ್ಟೋ ಲೋಪ ದೋಷಗಳುಳದುಕೊಂಡಿವೆ,ಎಂಬುದನ್ನು ಕೂಡಾ ಒಪ್ಪಿಕೊಳ್ಳದೆ ನಿರ್ವಾಹವಿಲ್ಲ. ತಾವದರ ಯೋಗ್ಯತೆ ಗಳಿಸಿಕೊಂಡಿಲ್ಲವೆಂಬ ಕಾರಣದಿಂದ, ದೊರೆಯುವ ಲಾಭ ಅಥವಾ ಹಕ್ಕು ಬಾಧ್ಯತೆಗಳನ್ನು ಬಿಟ್ಟು ಕೊಡಲು ಸಾಮಾನ್ಯರ ಮನಸ್ಸು ಒಡಂಬಡಲಾರದು. ಕಾಂಗ್ರೆಸಿಗರೇನೂ ಅಸಾಮಾನ್ಯರೆಲ್ಲವಾದ್ದರಿಂದ ಅವರಿಗೆ ತಮ್ಮ ಸಾಲಿನ ಅಧಿಕಾರವನ್ನು ಎಷ್ಟಿಸಿಕೊಂಡು ಅದನ್ನು ನಿರ್ವಹಿಸುತಿದ್ದಾರೆ. ಅದರೆ ಅಡಳಿತೆಯ ಅನುಭವದ ದೆಸೆಯಿಂದಾಗಿ ಅವರಿಂದ ತಪ್ಪುಗಳಾಗುತ್ತಿವೆ; ಇವೆಲ್ಲವೂ ಸ್ವಾಭಾವಿಕ. ಆದರೆ ಈ ಕಾರಣ ಕ್ಕಾಗಿಯಾದರೂ ಪ್ರಮಾದಗಳಾಗದಂತೆ ನೋಡಬೇಕಾದುದು ಅತ್ಯಗತ್ಯ.

ಆದ್ದರಿಂದ ಇವ್ವಿ ಮುಖ್ಯವಾಗಿ ಕಾಂಗ್ರೆಸಿಗರು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ವಿಶೇಷವೆಂದರೂ ಬ್ರಿಟಿಷ್ ಅಡಳಿತೆಯ ಕಾಲದಲ್ಲಿದ್ದ ಬಿಗುಮಾನವು ಕಾಂಗ್ರೆಸ್ ಅಡಳಿತೆಯಲ್ಲಿ ಕಡಿಮೆಯಾಗಿದೆ ಎಂಬುದೆಂತೂ ನಿರ್ವಿವಾದ. ಆ ಕಾಲದ ಅಧಿಕಾರಿಗಳ ಕಡೆಗಿದ್ದ ಪರಕೀಯ ಭಾವನೆ, ಮತ್ತದಕ್ಕನುಗುಣವಾದ ಭಯಾಸ್ಪರ್ದೆಯು, ಸ್ವಕೀಯರಾದ ಈ ಕಾಲದ ಅಧಿಕಾರಿಗಳ ಕಡೆಗಿಲ್ಲದಿರುವುದು ಕೆಲವಂಶ ಸಹಜವಾದುದೇ; ಪರಕೀಯ ಸ್ವಕೀಯ ಅಧಿಕಾರಿಗಳು ಜನ ಸಾಮಾನ್ಯರೊಡನೆ ಇಟ್ಟುಕೊಳ್ಳುವ ಸಂಬಂಧದಲ್ಲಿ ಕೂಡಾ ಬಿಗು-ಲಗು ವ್ಯತ್ಯಾಸಗಳಿರುವುದು ಸ್ವಾಭಾವಿಕ. ಆದರೆ ಎಲ್ಲಕ್ಕೂ ಮಿತಿಯಿದೆ. ಅಧಿಕಾರದ ಘನತೆ ಕಡಿಸುವಷ್ಟು ಅತ್ಯೀಯತಾ ಸಲುಗೆ ಬೆಳೆಯುವುದು ನಿಜಕ್ಕೂ ಅಪಾಯಕರ ಭಾರತದ ಸ್ವತಂತ್ರಾಡಳಿತೆಯ ವಿಧಾನಗಳು ಕೆಲವಂಶ ಅಡಳಿತೆಗಾರಿಕೆಯಿಂದ, ಇನ್ನು ಕೆಲವಂಶ ಜನತೆಯಿಂದಾಗಿ ಸಡಿಲುಗೊಂಡಿವೆ ಎಂದು ವ್ಯಸನಪೂರ್ವಕ ಹೇಳಬೇಕಾಗಿದೆ ಆಳಿ ಅನುಭವವಿಲ್ಲದವರು-ತತ್ವ ಘೋಷಣೆ ಮಾಡಿ ಮತ್ತು ಹೋರಾಡಿ ಮಾತ್ರ ಜನ ಅನುಭವವಿರುವವರು-ಕವ್ಯ ಸ್ವಭಾವ ಮತ್ತು ಯೋಗ್ಯತಾನುಸಾರವಾಗಿ ಅಡಳಿತಯಂತ್ರದಲ್ಲಿ ಹಲವೆಡೆ ಕೃತಕತೆ ಹಾಗೂ ಸಡಿಲುತನವನ್ನು ನಿರ್ಮಿಸಿದ್ದಾರೆ. ಸ್ವಾತಂತ್ರ್ಯದ ಆದಿಭಾಗದಲ್ಲೇ ಹೀಗಾಗುವುದು ಹಿತಕರವಲ್ಲ; ಇಂದು ಇಳಿಮೊಗವಾಗಿರುವ ಕಾರ್ಯ ಗಾಂಭೀರ್ಯವು ಹೀಗೆಯೇ ಜಾರ ಹತ್ತಿದರೆ ಭವಿಷ್ಯವು ಪೂರ್ಣ ಹಾಳಾಗಬಹುದೆಂಬ ಭಯವಂತೂ ಪ್ರತ್ಯೇಕವಿದೆ. ರಾಷ್ಟ್ರಕ್ಕೆ ಪೂರ್ಣ ಸ್ವಾತಂತ್ರ್ಯ ದೂರವಿದ್ದ ಪ್ರಾಂತಿಕ ಸ್ವಾಯತ್ತೆಯಷ್ಟೇ ಬಂದಿದ್ದ ಆ ಕಾಲದಲ್ಲಿ ಹೊಸತಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸಿಗರಲ್ಲಿ ಕಂಡುಬಂದಿದ್ದ ಕರ್ತವ್ಯ ನಿಷ್ಠೆ ಮತ್ತು ಉತ್ಸಾಹಗಳು ಈ ಕಾಲದ ಕಾಂಗ್ರೆಸ್ ಸ್ವಾಂತ್ಯಾಡಳಿತೆಯಲ್ಲಿ ಎಲ್ಲಿಯೂ ತೋರಿ ಬರುತ್ತಿಲ್ಲವೆಂಬುದು ನಿಜಕ್ಕೂ ವಿಷಾದಕರ. ಸ್ವಾತಂತ್ರ್ಯ ಪ್ರಾಪ್ತಿಯೊಂದಿಗೆ, ಆ ಸ್ವಾತಂತ್ರ್ಯ ಸಂಪಾದನೆಗಾಗಿ ಸ್ವಾರ್ಥ ಸೇವಾಬುದ್ಧಿಯು ವಾಯದೆ ಕಳೆದು ಹೋಯಿತೆಂದೇ ಕಾಂಗ್ರೆಸಿಗರು ಭಾವಿಸಿಕೊಂಡಂತಿದೆ; ಅಂದಿನಿಂದ ಸ್ಥಾನಮಾನ ಸಂಪಾದನೆಗಾಗಿ ಸೋಲಾಟಗಳನ್ನೆಷ್ಟೇ ಕಾಂಗ್ರೆಸಿಗರು ನಡೆಸುತಿದ್ದಾರೆ. ಅಶಿತ ರಾಜ್ಯಗಳಲ್ಲಿ ರಾಜರ ನಿರಂಕುಶಾಧಿಕಾರ ಮುಕ್ತಾಯಗೊಂಡು, ಅದರ ಸ್ಥಾನದಲ್ಲಿ ಮೂಡಿದ ಪ್ರಜಾ ಪ್ರತಿನಿಧಿ ಸರಕಾರಗಳಂತೂ ಸಡಿಲುವರ್ತನೆಯ ದಾಸುಲಿಗಳನ್ನೇ ನಿರ್ಮಿಸಿವೆ. ಇಂತಹ ಸ್ಥಿತಿಚಿತ್ರವು ಕಣ್ಣು ಮುಂದಿರುವಾಗ, ಹೈದರಾಬಾದಿನಂತಹ ಸಂಸ್ಥಾನ ವಲ್ಲಿಯೂ ಸರಕಾರದ 'ಕಾಂಗ್ರೆಸೀಕರಣ' ನಡೆಯ ಹೆತ್ತಿತೆಂಬುದಕ್ಕಾಗಿ ವಿಶೇಷ ಹೆಗ್ಗಳಿಕೆ ಮೂಡುವಂತಿಲ್ಲ.

ಒಂದು ಗಡಿದಾಟಿ, ಬೇರೊಂದು ಕ್ಷೇತ್ರಕ್ಕೆ ಬಂದಿರುವ ಈ ಅವಧಿಭಾಗದಲ್ಲಿ ಕಾಂಗ್ರೆಸಿಗರು ಸಮೇತ ಸಾರ್ವಜನಿಕರಲ್ಲಿ ಕಠಿಣ ಮನೋನಿಗ್ರಹ ತೋರಿಬಾರದಿದ್ದರೆ, ಇಂತಹ ಸ್ಥಿತಿ ನಿರ್ಮಾಣಗೊಳ್ಳುವುದು ಅನಿವಾರ್ಯ, ಹಾಗೂ ಸ್ವಾಭಾವಿಕ. ಅದರೀ ದುರ್ಗತಿಯ ಸ್ವತಂತ್ರಾಡಳಿತೆಗೆ ಎಂದಿಗೂ ಹೇಳಿ ಸಿದ್ದಲ್ಲವಾದ್ದರಿಂದ ಅದನ್ನು ತಪ್ಪಿಸಲು ಇರುವ ಉಪಾಯವಾವುದೆಂಬುದನ್ನು ಯೋಚಿಸಿನೋಡಬೇಕಾಗಿದೆ. ಕಾಂಗ್ರೆಸಿಗರು ಮತ್ತೊಮ್ಮೆ ನಿಸ್ವಾರ್ಥ ಸೇವಕರಾಗ ಬೇಕಾದುದೇ ಮುಂದಾಗಿ ಆಗಬೇಕಾಗಿರುವ ಬದಲಾವಣೆ. ಒಂದು ಯುದ್ಧ ಗೆದ್ದ ಸೋಲ್ಜರಿಗೇನೇ ಆ ಯುದ್ಧದ ಸ್ಥಿತಿಫಲಗಳನ್ನನುಭವಿಸುವ ಅಧಿಕಾರವಲ್ಲ; ಹೋರಾಡುವುದು ಸೈನಿಕರ ಕರ್ತವ್ಯವಾಗಿದ್ದಾರೆ, ಆ ಹೋರಾಟದ ಲಾಭಗಳನ್ನು ಒಂದು ವ್ಯವಸ್ಥೆಗೆ ತರುವುದು ಹೆಚ್ಚಾಗಿ ಮಿಕ್ಕವರ ಕೆಲಸವಾಗಿರುತ್ತದೆ. ಹೋರಾಟ ಫಲವಾಗಿರುವ ಇಂದಿನ ಸ್ವತಂತ್ರಾಧಿಕಾರದ ತನುಭೋಗದ ವಿಚಾರಕ್ಕೆ ಕಾಂಗ್ರೆಸಿಗರೂ ಈ ಯೋಧ ಧರ್ಮದ ಪಾಲನೆ ಮಾಡುವುದು ಅಗತ್ಯ. ಮೂರಿತ ಸ್ವತಂತ್ರ್ಯ ಎಲ್ಲರ ಪಾಲಿನದು-ಎಲ್ಲರಂತೆ ತಮ್ಮ-ತಮ್ಮೆಲ್ಲರ ಪೈಕಿ ಯಾರು ಈ ಸ್ವತಂತ್ರಾಭಿವೃದ್ಧಿ ನಿರ್ವಹಣದ ವಿಶೇಷ ಶಕ್ತಿ ಯೋಗ್ಯತೆಗಳನ್ನು ಹೊಂದಿರುವರೋ ಅವರನ್ನೇ ಮುಂದಕ್ಕೊಡ್ಡಿ ಅವರ ಮುಖಲಕ ಅದನ್ನು ಸಾರ್ಥಕ ಪಡಿಸಲು ಸರ್ವಶಕ್ತಿಯಿಂದ ನೆರವಾಗುವದೊಂದೇ ತಮ್ಮ ಪಾಲಿನ ಕರ್ತವ್ಯ-ಎಂಬ ಮನೋವೃತ್ತಿಯನ್ನು ಕಾಂಗ್ರೆಸಿಗರುಂಡಾದರೆ, ಎಲ್ಲವೂ ಒನ್ಮೆಶುದ್ಧೀಕರಣಗೊಳ್ಳುವದು. ಸ್ವತಂತ್ರ ಭಾರತದಲ್ಲಿ ಹೊಣೆಗಾರಿಕೆಯನ್ನು ಕಲಿಯುವವರಿದ್ದಾರೆ ಹೊರತು, ಅಧಿಕಾರ ಸ್ಥಾನಗಳಿಗಾಗಿ ಸ್ವಾರ್ಥ ದೃಷ್ಟಿಯಿಂದ ಮೇಲಾಡುವವರಲ್ಲ ಎಂದಿರಬೇಕಾದುದೇ ಅಡಳಿತ ಯಂತ್ರದಲ್ಲಿ ಇಂದು ನಡೆಯಬೇಕಾದ ಮುಖ್ಯ ಬದಲಾವಣೆ— ಇಂದಿನ ಸ್ವಾತಂತ್ರ್ಯವು ತಮ್ಮ ಸಂಪಾದನೆಯೆಂದೂ ಹೆಗ್ಗಳಿಕೆ ಸ್ಪರ್ಧಿಸುತ್ತಿರುವ ಕಾಂಗ್ರೆಸಿಗರು ಹಾಗೆ ಸಂಪಾದಿಸಿಕೊಂಡುದನ್ನು ಸಾರ್ಥಕಗೊಳಿಸುವುದು ಕೂಡಾ ತಮ್ಮದೇ ಆಗಿರುವ ಕರ್ತವ್ಯವೆಂದು ನೆನಸಿಕೊಳ್ಳಲಾರದೇ ಈಗ ನಮಿತಿಪ್ರಾಂತ ತುಂಬಿಕೊಂಡಂತಿರುವ ಸ್ವಾರ್ಥ, ಸಂಕೋಚ ಬದ್ಧಿಗಳನ್ನು ಬದಿಗೊತ್ತಿ ಅವುಗಳ ಸ್ಥಾನದಲ್ಲಿ ಸ್ವಾಧಿಕತೆಯ ಜ್ಞಾನ, ಅನುಭವ ಮತ್ತು ದಕ್ಷತೆಯನ್ನು ತುಂಬಿಸಿಕೊಳ್ಳಲಾರರೇ?

(ಹಿಂದೆ ಪುಟದಿಂದ ಮುಂದುವರಿದುದು.)

ಚಿಸುತ್ತಾ "ಪ್ರಧಾನ ಮಂತ್ರಿಗಳು 'ಹಂಚಿಕೇ ಸವಿತೆ'ಯ ನೇಮಕದ ಕುರಿತು ಮೊದಲೇ ಸೂಚಿಸಿದರಲ್ಲದೆ ವಾರ್ಧಿಮೆಂಬರ್ ನಲ್ಲಿಯೂ ಜಾಹೀರುಮಾಡಿದ್ದರು. ಅದು ನಿಶ್ಚಿತ ವಿಷಯವೆಂದು ನಂಬಲಾಗಿತ್ತು. ಆದರೆ ಮಧ್ಯಾಯಿಗಳ ಮತ ಅದಾಗಿ ಬಿಲ್ಲವೆಂದು ಕಡೆಗೆ ತಿಳಿದುಬಂತು. ಆಡಳಿತೆಯ ಆರ್ಥಿಕ ವ್ಯವಸ್ಥೆಯಲ್ಲಿ ಸಂತಿತ ನೆಹರುಗಳು ಸದಾಕಾಲವೂ ಡಾ। ವ ಧ್ಯಾಯಗಳ ಪಕ್ಷ ವಹಿಸಿದ್ದರು" ಎಂದಿದ್ದಾರೆ.

ಇತರ ಘಟನೆಗಳು

ಬರ್ಮದಲ್ಲಿರುವ ಹಿಂದೀ ಭೂಮಾಲಿಕರ ಆಸ್ತಿಗಳನ್ನು ಅಲ್ಲಿಯ ಸರಕಾರವು ಸ್ವಾಧೀನಪಡಿಸಿಕೊಂಡು,ಕೊಡತಕ್ಕ ಪರಿಹಾರ ಪ್ರವ್ಯದ ಸಂಬಂಧವಾಗಿ ವ್ಯವಹರಿಸಲು ಮದ್ರಾಸಿನ ಶಿಷ್ಟಮಂಡಲಿಯೊಂದು ರಂಗೂನಿಗೆ ಹೋಗಿದೆ. ಇದರಲ್ಲಿ ಮದ್ರಾಸಿನ ಇಬ್ಬರು ಮಂತ್ರಿಗಳು ಮತ್ತು ಬರ್ಮಾ ಆಸ್ತಿವಂತರಾದ ಚೆಟ್ಟಿಯಾರರ ಪ್ರತಿನಿಧಿಯೊಬ್ಬ ಇರುವರು. ಬರ್ಮದಲ್ಲಿ ಒಟ್ಟಿಗಿರುವ 12 ಮಿಲಿಯ ಎಕ್ರೆಗಳಷ್ಟೂ ಮಿಕ್ಕಿದ ಸಾಗುವಳ್ಳೀ ಭೂಮಿಯ ಪೈಕಿ ಭಾರತೀಯರದಾಗಿರುವ ಭೂಮಿಯು 2,420,000 ಎಕ್ರೆಗಳು. ಧಾರಣೆಯು ಕೀಳಾ ಕೆಳಗಿದ್ದ ಆ ಕಾಲದಲ್ಲೇ ಈ ಆಸ್ತಿಗಳಲ್ಲಿ ಹೆಚ್ಚಿನವು ಹಿಂದೀಯರ ಕೈಗೆ ಒಂದಿದ್ದವು. ಹಿಂದೀ ಚೆಟ್ಟಿಯಾರಿಂದ ಹಣ ಸಾಲಸಡೆದಿದ್ದ ಬರ್ಮದ ಭೂಮಿವಾಲರಿಗೆ ಕಷ್ಟಕಾಲದಲ್ಲಿ ಮರುಸಂದಾಯ ಮಾಡಲಾಗದ ದೆಸೆಯಿಂದ ಅವರು ತಮ್ಮ ಆಸ್ತಿಗಳನ್ನೇ ಬಿಟ್ಟುಕೊಟ್ಟಿದ್ದರು. ಬರ್ಮವು ಸ್ವತಂತ್ರವಾದ ಮೇಲೆ, ಬೇನಾಯಗಾರರಲ್ಲದವರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಆ ದೂಂದು ಮಿತಿಯನ್ನು ಮೀರಿ ಯಾರಲ್ಲಿಯಾ ಹೆಚ್ಚು ಭೂಮಿ ಇರಬಾರದೆಂದು ನಿಯಂತ್ರಿಸುವ ಕಾನೂನನ್ನು 1948ರಲ್ಲಿ ತಂದಿತು. ಹೀಗೆ ಸ್ವಾಧೀನಪಡಿಸಿಕೊಳ್ಳುವ ಆಸ್ತಿಗಳಿಗೆ ಹೆಚ್ಚೆಂದರೆ ತೀರ್ವೆಯ ಹನ್ನೆರಡು ಪಾಲಷ್ಟು ಪರಿಹಾರ ಹಣ ಕೊಡಬಹುದೆಂದೂ ಆ ಶಾಸನದಲ್ಲಿದೆ. ಈ ಕಾನೂನನ್ನೆಮ್ಮೆ ಒಂದೇ ದಿನದ ಚರ್ಚೆಯ ನಂತರ 1948ರಲ್ಲಿ ಮಂಡಿಸಿದಂತೆ ಪಡೆದಿದ್ದರೂ, 1949ರಲ್ಲೆದ್ದ ಬರ್ಮದ ರಾಜಕೀಯ ಆವಾಂತರಗಳ ದೆಸೆಯಿಂದ ಸಣ್ಣ ಭಾಗವೊಂದರ ಮೇಲಲ್ಲದೆ, ಮಿಕ್ಕೆಡೆಗಳಲ್ಲಿ ಅದು ಜಾರಿಗೆ ಒಂದಿರಲಿಲ್ಲ. ಈ ಸಂಬಂಧದಲ್ಲಿರುವ ಮುಖ್ಯ ಭಾರತೀಯ ಆಕ್ಷೇಪಣೆಯೆಂದರೆ ವಶಪಡಿಸಿಕೊಳ್ಳುವ ಆಸ್ತಿಗೆ ಕೊಡುವ ಪರಿಹಾರದ ಪರಿಮಾಣ ಕಡಮೆಯಾಯಿತೆಂಬುದೇ ಆಗಾಗ್ಗೆ ಬಾವುದಾಡರೂಂದು ನ್ಯಾಯುವನ್ನುಧರಿಸಿ ಹಿಂದೀ ಭೂಮ್ಹಾಲಿಕರಿಗೆ ಪರಿಹಾರಕೊಡುವುದಾದರೆ 50 ಕೋಟಿ ರೂ. ಗಳಿಂದ 90 ಕೋಟಿ ರೂ. ವರೆಗೂ ಕೊಡಬೇಕಾಗುವದು. ಯುದ್ಧ ಪೀಡಿತ ಬರ್ಮಾ ಸರಕಾರವು ಭಾರತ ಸನೇತ ಇತರ ರಾಷ್ಟ್ರಗಳಿಂದ ಅರ್ಥಿಕ ಸಹಾಯ ಪಡೆದೇ ಬಾಳಬೇಕಾದ ಸ್ಥಿತಿಯಲ್ಲಿರುವಾಗ ಇಷ್ಟು ದೊಡ್ಡ ಮೊತ್ತವನ್ನು ತೆರುವುದು ನಿಜಕ್ಕೂ ಅಪಕ್ಯಸಾಧ್ಯ ಒಂದು ಸಾಯದೆಯ ನಂತರ ಸಂದಾಯಮಾಡುವ ಶರ್ತವುಳ್ಳ 'ಬೊಂಡು'ಗಳನ್ನೇ ಪ್ರಸ್ತುತ ಹಿಂದೀ ಭೂಮಾಲಿಕರಿಗೆ ಕೊಟ್ಟರೂಯಿತೆಂಬ ಮಾತು ಕೇಳಿಬರುತ್ತಿದೆ. ಕಲವಂಶವನ್ನು ಕೂಡಲೆಯಾಗಿ ಕೊಟ್ಟು, ಉಳಿದುದನ್ನು ಒಪ್ಪಂದಾನುಸಾರ ಬೋಂಡುಗಳಲ್ಲಿ ಕೊಡಲಿ, ಎಂದೂ ಹಿಂದೀ ಭೂಮ್ಹಾಲಿಕರ ಅಂಬೋಣವಿದೆ. ಈ ಸಂಬಂಧವಾಗಿ ಭಾರತೀಯರಿಗೆ ನ್ಯಾಯು ದೊರಕಿಸಿ ಕೊಡುವುದಕ್ಕಾಗಿಯೇ ಶಿಷ್ಟಮಂಡಲಿ ರಂಗೂನಿಗೆ ಹೋಗಿದೆ.

ಭಾರತೀಯರಿಗೆ ಬರ್ಮಾ, ದಕ್ಷಿಣ ಆಫ್ರಿಕ, ಸಿಲೋನುಗಳಲ್ಲಿ ಆಸ್ತಿ ಸೊತ್ತು ಸಂಬಂಧದ ತಡೆ ತೊಡಕುಗಳಿರುವುದು ವಿಚಾರಾರ್ಹ ವಿಷಯು. ಭಾರತದ ಮತ್ತು ಪಾಕಿಸ್ತಾನದ ಪ್ರಜೆಗಳಿಗೆ ಸಿಲೋನಿನ ನಾಗರಿಕ ಹಕ್ಕುಗಳನ್ನು ಕೊಡುವ ಸಂಬಂಧದಲ್ಲಿ ಆಕ್ಷೇಪು 'ಭಾರತೀಯ ಮತ್ತು ಪಾಕಿಸ್ತಾನೀ ನಿವಾಸೀ ಶಾಸನ'ದಲ್ಲೇ ಕಲವು ನಿರ್ಬಂಧಗಳಿವೆ. ಅದು ಅನಾವಶ್ಯಕವಾಗಿ ತೋರಿ ಸಿಲೋನಿನಲ್ಲಿರುವ ಹಿಂದೀಯರು ಆ ಶಾಸನದನ್ವಯು ನಾಗರಿಕ ಹಕ್ಕು ಪಡಕೊಳ್ಳಲಿಚ್ಛಿಸದೆ, ಬಹಿಷ್ಕಾರ ಹಾಕಿದರು. ಆದರೀಗ ಸಿಲೋನಿನ, ಭಾರತೀಯ ಕಾಂಗ್ರೆಸು ಆ ಬಹಿಷ್ಕಾರವನ್ನು ರದ್ದು ಪಡಿಸಿಕೊಂಡಿರುವುದರಿಂದ ಅಲ್ಲಿರುವ ಹಿಂದೀಯರು ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಹತ್ತಿದ್ದಾರೆ. ಭಾರತ ಸರಕಾರದ ಕಾನೂನು ಮಂತ್ರಿ ಡಾ। ಅಂಬೇಡ್ಕರರೀಗ ಸಿಲೋನಿಗೆ ಹೋಗಿದ್ದು ಅಲ್ಲಿಯ ಭಾರತೀಯರಿಂದ ಸಂಭ್ರಮದ ಸ್ವಾಗತ ಪಡಿದಿದ್ದಾರೆ. ಭಾರತೀಯರ ಸಿಲೋನು ನಾಗರಿಕತೆಯ ಸಂಬಂಧವಾಗಿ ಸಿಲೋನು ಸರಕಾರವು ಮಾಡಿರುವ ಶಾಸನವು ಅನ್ಯಾಯವಾದುದು ಮತ್ತು ಕಷ್ಟದಾಯಕವಾದುದು; ಆದರೆ ಭಾರತದಂತೆಯೇ ಸ್ವತಂತ್ರ ರಾಷ್ಟ್ರವಾಗಿರುವ ಸಿಲೋನಿಗೆ ಸ್ವೇಚ್ಛೆಯಂತೆ ಕಾನೂನು ಮಾಡುವ ಅಧಿಕಾರವಿದೆಯೆಂಬುದನ್ನೂ ಸಿಲೋನು ಸರಕಾರದ ಇತ್ತೀಚೆಗಿನ ಧೋರಣೆಗಳಾಟವನ್ನೂ ಗಮನಿಸಿದರೆ, ಮುಂದಕ್ಕೆ; ಪ್ರಗತಿಯಾದೀತೆಂಬ ಭರವಸೆಗೆಡೆಯಿದೆಸ್ಸು ಹಾಯಿಕ್ಕಾಗಿ ಭಾರತದಪ್ಪ ನೋಡದೆ ಸಿಂಹಳೀಯರ ಭಾವನೆಯೊಂದಿಗೆ ಸಹವರ್ತಿಗಳಾಗಿರಿ"ಎಂದ ಡಾ।ಅಂಬೇಡ್ಕರ್ ಒಬ್ಬಿರುವ ಭಾಂತೀಯರಿಗೆ ಉಪದೇಶವಿತ್ತಿದ್ದಾರೆ.

ಭಾರತದ ಮತ್ತೊಬ್ಬ ಮಂತ್ರಿ ಮಾಲಾನ ಉಜಾದರು ಸದ್ಯದಲ್ಲೇ ಪೂರ್ವ ಪೂರ್ವ ರಾಷ್ಟ್ರಗಳಲ್ಲಿ ಕಂಜರ್ ಹೋಗಲಿದ್ದಾರೆ. ಮುಸ್ಲಿಮ್ ತಲೆಯೊಳಗೆ ಭಾರತದ ಕುರಿತು ಜಿಗುಪ್ಸೆ ಹುಟ್ಟುವಂತೆ ನಡೆದಿದ್ದ ಅಸಹ್ಯಚಾರಗಳ ದೆಸೆಯಿಂದ ಪೂರ್ವ ಪೂರ್ವದ ಅರಬ್ ರಾಷ್ಟ್ರಗಳಲ್ಲಿ ಕೆಲಪೊಂದು ಭುಭ್ಭಾವನೆ ವ್ಯಾಪಿಸಿಕೊಂಡಿದೆ. ಸುಪ್ರಸಿದ್ಧ ಅರಬೀ ಪಂಡಿತ ಮತ್ತು ಅರಬ್ ಸಂಸ್ಕೃತಿ ಮಿಶ್ರ ಸ್ವಭಾವಿ ಮೌಲಾನರು ಈ ದೇಶಗಳಲ್ಲಿ ಸಂಚರಿಸುವುದರಿಂದ ಭಾರತದ ಕುರಿತು ಆಲ್ಲಿ ವ್ಯಾಪಿಸಿರುವ ವಿಷಪ್ಪು ತಿಳುವಳಿಕೆಗಳೆಲ್ಲಿವುಗಳು ಮಾಯವಾಗುವೆವೆಂದು ನಿರೀಕ್ಷಿಸಲಾಗಿದೆ.

ಭಾರತ ಸರಕಾರವು ಭಾರತದ ರೈಲ್ವೆಗಳ ಹೊಸ ಸಂಗಡ ವ್ಯವಸ್ಥೆ ಮಾಡುವದಾಗಿ ಜಾಹೀರು ಮಾಡಿದ. ಈ ನವ ವಿಧಾನವನ್ನು ಉಲ್ಲೇಖಿಸಿರುವ ರೈಲ್ವೇ ಬೋರ್ಡು ತನ್ನ ಸೂಚನಾವಳಿಯಲ್ಲಿ ಭಾರತದ 33000 ಮೈಲುಗಳುದ್ದದ ರೈಲ್ವೆಯನ್ನು ಆರು ಪ್ರಗಡಗಳಾಗಿ ವಿಂಗಡಿಸಿದೆ

• ಹೈದರಾಬಾದ್ ಮಂತ್ರಿಮಂಡಲವು ಪುನರ್ರಚನೆಗೊಂಡಿತು. ನಾಲ್ಕು ಮಂದಿ ಹೈದರಾಬಾದ್ ಕಾಂಗ್ರೆಸಿನ ಪ್ರತಿನಿಧಿಗಳಿರುವ ಹೊಸ ಮಂಡಲಿಯ ನೇಮಕವನ್ನು ಸೂಚಿಸುವ ಫರ್ಮಾನ್ ಒಂದನ್ನು ನಿಜಾಮರು ಜೂನ್ ತಾ. 5ರಲ್ಲಿ ದೊರಕಿಸಿದ್ದಾರೆ. ಈ ವರೆಗಿದ್ದ ಶ್ರೀಗಳಾದ ಡಿ. ಎಸ್. ಭಟ್ಟಿ, ರಾಜಬಹದ್ದೂರ್, ಪಿ ಎಚ್. ಕೃಷ್ಣರಾವ್—ಈ ಮೂವರು ತಮ್ಮ ಮಂತ್ರಿಸ್ಥಾನಗಳಿಗೆ ರಾಜೀನಾಮೆಯಿತ್ತ, ಶ್ರೀಗಳಾದ ಬಗ್ರುಲು ರಾಮಕೃಷ್ಣ ರಾವ್, ವಿನಾಯಕ್ ರಾವ್ ವಿದ್ಯಾಲಂಕಾರ, ಬೆಲ್ಲಂಕೊಂಡ ಬಸವರಾಜು, ಘೂಲ್ ಚಂದ್ ಗಾಂಧಿ—ಈ ನಾಲ್ವರುಕಾಂಗ್ರೆಸಿಗರು ಮಂತ್ರಿಗಳಾಗಿ ನೇಮಿಸಿಲ್ಪಟ್ಟಿದ್ದಾರೆ. ಪುನರ್ರಚಿತ ಮಂಡಲಿಯ ಮೇಲಿನ ನಾಲ್ವರಲ್ಲದೆ ಮುಖ್ಯ ಮಂತ್ರಿ ಎಮ್. ಕೆ ವೆಲ್ಲೋಡಿ, ಎಮ್ ಶೇಷಾದ್ರಿ, ಸಿ. ವಿ ಯಸ್. ರಾವ್, ನವಾಬ್ ಝುಯಾನಾಯಾರ್‌ಝಂಗ್ ಬಹದ್ದೂರ್, ಈ ನಾಲ್ವರುಮಂದಿ ಹಿಂದಿನ ಮಂತ್ರಿಗಳಿವರು. ಹೈದರಾಬಾದ್ ಕಾಂಗ್ರೆಸಿನ ಅಧ್ಯಕ್ಷ ಶ್ರೀ. ಡಿ. ಬೆಂದುಗಳು ಈ ಪುನರ್ರಚನೆಯ ಸಂಬಂಧವಾಗಿ ಸ್ವಧಾನಿ ವೆಲ್ಲೋಡಿಗೊಡನೆ ಸಹಕರಿಸಿ ವ್ಯವಸ್ಥೆ ಸರಿಮಾಡಿದ್ದರು. ಹೈದರಾಬಾದ್ ಕಾಂಗ್ರೆಸಿನ ಹಿಂದಿನ ನಾಯಕ ಸ್ವಾಮಿ ರಮಾನಂದ ತೀರ್ಥರು ಈ ಪುನರ್ರಚನೆಗಾಗಿ ಸಂತೋಷ ಸೂಚಿಸಿದ್ದಾರೆ. ಅಂತೂ ಹೈದರಾಬಾದ್ ವಿಜಯದ ನಂತರ ಅಲ್ಲಿಯ ಕಾಂಗ್ರೆಸಿಗರು ಅತುರದೊಡನೆ ಯಾಚಿಸುತ್ತ ಬಂದಿದ ಸುಧಾರಣೆಯು ಈಗ ಪ್ರತ್ಯಕ್ಷಕ್ಕೆ ಬಂದಿದೆ.

ಭಾರತದ ಪ್ರಚಲಿತ ಸಮಸ್ಯೆಗಳು

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ-

ತಾರೀಕು 7—6—1950ರಿಂದ

ಜಾದು-ಇ-ರತನ್ ಸಾಹಸ ಚಿತ್ರ

ಅನಂತರ:—ಅತ್ಯುತ್ತಮ ಕನ್ನಡ ಚಿತ್ರ,

❋ ಕಲಾವಿದ ❋

ನಿರೀಕ್ಷಿಸಿರಿ:— ಕನ್ನಿಯನ್ ಕಾದಲ್; ಆಗ್, ದಾಸಿ ಅಪರಂಜಿ, ಬಿಲ್ವಮಂಗಲ್ ರಾಮ ಬಾಣ್, ಸಾಂವರಿಯಾ, ಭೂಲ್, ಇತ್ಯಾದಿ

The New Karnataka Provident Insurance Company, Limited.

NOTICE

It is hereby notified that the Registers of members and Share transfer books of the above Company will remain closed from the 11th June 1950 to 1st July 1950, both days inclusive.

(By order of the Board)

Regd. Office, UDIPI, 7-6-1950.

B. Vamana Acharya,
Manager.

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ಮದ್ರಾಸು ಸರಕಾರದಿಂದ
ಈಗತಾನೇ ಸಂಭಾವನೆ ಪಡೆದ

ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'
(HOME REMEDIES)

೨೦೦ ಕಾಜಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೯೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ: ರೂ. ೨
ಪ್ರತಿಗಳು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷ್ನರಿಗಳು
ಪೊರೆಯುತ್ತವೆ.
ಬೆಲೆ ರೂ ೫ ೦ ೦
ಸಿರಿಗನ್ನಡ ಅರ್ಧಕೋಶ ೪ ೮ ೦
ನವಯುಗ ಪ್ರೆಸ್, ಉಡುಪಿ.

ಉಡುಪಿ

ಶ್ರೀಕೃಷ್ಣ ಸ್ತ್ರೀಶಾಕ್ತಿಸಂಘ ಸಂಪ ತಾ ೩೦ರಲ್ಲಿ ಪ್ರತಿಷ್ಠಾ ಹೊಂದಿಸಿ ಕೊಂಡಿರುವ ಶ್ರೀಮತಿ ಲಲಿತಾ ಇನ್ಸ್‌ಪೆಕ್ಟರ್ ಶ್ರೀ ಸುಬ್ರಾಯ ನಾಯ್ಕರಿ ತಿಕ್ಕೆತ್ತೆಯಲ್ಲಿ ಹಿಂ ಗಿತ ಶ್ರೀ ಪರ್ಯಾ ಸ್ವಾಮೀಜಿ ಯವರ ಪೌರೋ ಆಶೀರ್ವಾದ ಪೂರ್ವಕವಾಗಿ ಉದ್ಘಾಟಿಸಲ್ಪಟ್ಟಿತು. ಹರಿಜನರು ಉಪಯೋಗಿಸುವ ಬಾವಿಯಲ್ಲಿ ಎಂಬಾದಾಗಿಯೇ ಅಧ್ಯಕ್ಷರು ಸೂಚಿಸಿದರು, ಸಾಧಾರಣ ಎಸ್ಪತ್ತಕ್ಕೆ ಕಡಿಮೆಯಾಗದ ಮನೆಗಳಿಗಾಗಿ ಪುತ್ತೂರು ಹರಿಜನ ಕೊಲನಿಯಿಂದ ಎಸ್ಪತ್ತು ಮಂದಿಯಾದರೂ ಈ ದಿನಾಚರಣೆಯಲ್ಲಿ ಭಾಗವಹಿಸದಿದ್ದರೆ ಮೂಸಿಕ ಹರಿಜನ ದಿನಾಚರಣೆಯಿಂದೇನು ಪ್ರಯೋಜನ?

ಅಧ್ಯಾಪಕ ಯೂನಿಯನ್ ಮಹಾ ಸಭೆ:—ದ. ಕ. ಜಿಲ್ಲಾ ಬೋರ್ಡಿನ ಉಡುಪಿ ತಾಲೂಕಿನ ಬೋರ್ಡು ಶಾಲಾ ಮಾಸ್ತರರ ಯೂನಿಯನ್ ಮಹಾಸಭೆಯು ಕಳೆದ ತಾ. 28ರಲ್ಲಿ ಜೋಡನ್ ಹಾ ಏ ಶಾಲೆಯಲ್ಲಿ ಶ್ರೀ ಎಚ್. ಸಂಜೀವರಾವ್, ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್, ನೋರ್ತ್ ರೇಂಜ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎಚ್. ಎ ಪಿ. ಕೆದ್ಲಾಯರು ವರದಿವಾಚನ ಮಾಡಿದರು. ನಂತರ ನಿರ್ಣಯಗಳ ಪರಿಶೀಲನೆಯಾಯಿತು. ತಾಲೂಕಿನ ಇಂಟರ್ ಸ್ಕೂಲ್‌ಗಳೊಳಗೆ ಆಟ ಸ್ಪರ್ಧೆಯನ್ನೇರ್ಪಡಿಸುವ ಕಾರ್ಯಕ್ರಮವಿಗಳನ್ನು ತಯಾರಿಸುವರೆಯೂ, ತಾಲೂಕಿನ ಎಲ್ಲಾ ಹೈಯರ್ ಎಲಿಮೆಂಟರಿ ಶಾಲೆಯ ಮೇಲಿನ ತರಗತಿಗಳಿಗೆ ಸರ್ವಸಮ ಪರೀಕ್ಷೆಯನ್ನೇರ್ಪಡಿಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುವರೆಯೂ ಸಬ್ ಕಮಿಟಿಗಳ ನೇಮಕವಾಯಿತು ಸೆಂಟ್ರಲ್ ಪೇ ಕಮಿಷಶನಿನ ಶಿಫಾರಸನ್ನು ನುಸರಿಸಿ ಸಂಬಳ ಸ್ಕೇಲು ಆಗಬೇಕೆನ್ನುವ, ಶಾಲಾ ದಿವಸಗಳನ್ನು ಇನ್ನೂರಕ್ಕೆ ತಗ್ಗಿಸಬೇಕೆನ್ನುವ, ಸೆಕೆಗಾಲದ ರಜಾದಿನಗಳನ್ನು ನಾಲ್ಕತ್ತಕ್ಕೆ ಏರಿಸಬೇಕೆನ್ನುವ, ಹಳೆಯ ರಜಾಸವ್ಲತಿ ಕ್ರಮವನ್ನೇ ಸರ್ವರಿಗೂ ಅನ್ವಯಿಸುವಂತಾಗಿಬೇಕೆನ್ನುವ, ಉಪಾಧ್ಯಾಯ ವೃತ್ತಿಯಿಂದ ನಿವೃತ್ತಿಹೊಂದುವ ಅವಧಿಯನ್ನು ಅರುವತ್ತಕ್ಕೆ ಇರಿಸಬೇಕೆನ್ನುವ, ಬೋರ್ಡು ಶಾಲಾ ಉಪಾಧ್ಯಾಯರ ಮಕ್ಕಳಿಗೆ ಧರ್ಮಾರ್ಥ ಶಿಕ್ಷಣವಿಸಿಕ್ಕಬೇಕೆನ್ನುವ, ಸೆಂಟರ್ ಕ್ಲಾಸ್ ದಿವಸಗಳನ್ನು ಕೆಲಸದ ದಿನಗಳಿಂದು ಪರಿಗಣಿಸಬೇಕೆನ್ನುವ, ಟೋವರ್ ಮತ್ತು ಹಾಯರ್ ಎಲಿಮೆಂಟರಿ ಶಾಲಾ ಹೆಡ್ಮಾಸ್ತರರಿಗೆ ತಾರತಮ್ಯದ ಸಂಬಳದ ಸ್ಕೇಲು ಆಗಬೇಕೆನ್ನುವ, ಹಂಗಾಮಿ ಸುದ್ದಿಯಲ್ಲಿರುವ ಉಪಾಧ್ಯಾಯರನ್ನು ಖಾಯಂ ಆಗಿ ಮಾಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಸ್ಪೆತ್ಯಾಡಕೊಟೆ- ಮಂಗಳೂರಿನ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಬಿ. ವಿಠಲ ರಾಯರಿಗೆ ಎಸ್ಪತ್ತು ವರುಷ ತುಂಬಿದುದರಿಂದ ಅವರನ್ನು ಗೌರವಿಸಲು ಇದೇ ತಾ 7 ರಲ್ಲು ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಶ್ರೀ ಎ. ಬಿ ಕೃಷ್ಣರಂಜರು ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಪತ್ರಿಕ್ ಶ್ರೀ ಎಮ್. ವಿಠಲ್ ಕಾಮತರು ಅಧ್ಯಕ್ಷತೆವಹಿಸಿದ್ದರು. ಮಾನ್ಯ ಅತಿಥಿಗೆ ಶ್ರೀ ರಾಯರು ಗಂಧದ ಆಕರ್ಷಕ ಸ್ತಂಭದ್ವಯಿಸಿದ ಮಾನಪತ್ರವೊಂದನ್ನು ಅರ್ಪಿಸಿದರು. ಶ್ರೀಗಳಾದ ಪಿ.ಎಸ್. ತಿಮ್ಮಪ್ಪ ಸೆಟ್ಟಿ, ಡಿಪ್ಯುಟಿ ಕಲೆಕ್ಟರ್, ಡಾ। ಎಸ್.ಆರ್ ಪೈ ಶ್ರೀಗಳಾದ ಆರ್.ಆರ್. ಕಂಜರ್ಪರ್, ಆರ್. ಸೀತಾರಾಂ ಧಿಸ್, ಬಿ.ಎ ಗಂಗಾಧರನ್, ಕೊಚ್ಚಿಕಾರ್ ಪದ್ಮನಾಭ ಪೈ, ಡಾ। ಟಿ ಮಾಧವ ಪೈ ಮೊದಲಾದವರು ಶ್ರೀರಾಯರ ಸಾರ್ವಜನಿಕ ಕಾರ್ಯಸಾಧನೆಯನ್ನು ಪ್ರಶಂಶಿಸಿ ಮಾತನಾಡಿದರು. ಶ್ರೀ ರಾಯರ ಮತ್ತು ಅಧ್ಯಕ್ಷರ ಮಾತುಗಳಾಗಿ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು. ಸಭಾರಂಭದ ಮೊದಲು ಚಹಾ ಸತ್ಕಾರವಿತ್ತು.

ಜಿಲ್ಲಾ ಸಮಾಚಾರ

ಪುಣಚ. ಇಲ್ಲಿಯ ಹಿಂದೂಸ್ಥಾನೀ ಪ್ರಚಾರ ಸಂಘದ ದ್ವಿತೀಯ ವಾರ್ಷಿಕೋತ್ಸವವು ಕಳೆದ ತಾ. 27ರಲ್ಲು ಶ್ರೀ ಎಸ್. ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಅಜೆಕ್ಕಾರು—ಸ್ಥಳೀಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಏಳನೆತರಗತಿಯನ್ನು ಹೊಸತಾಗಿ ತೆರೆಯುವ ಸಮಾರಂಭವು ಇದೇ ತಾ 1 ರಲ್ಲು ದ. ಕ. ಜಿಲ್ಲಾ ಬೋರ್ಡ್ ಮೆಂಬರ್ ಶ್ರೀ ಎಮ್. ಕೃಷ್ಣಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಕುಂದಾಪುರ: ಸ್ಥಳೀಯ ಮುನ್ಸಿಫ್ ಕೋರ್ಟಿನ ಎಡ್ವೋಕೇಟ್ ಶ್ರೀ ಎಸ್. ಸುಬ್ಬಣ್ಣ ಸೆಟ್ಟರು ದಿ. ಮುನ್ಸೀಪಲಿಟಿಗೆ ಸರ್ವಿಸ್ ಕಮಿಶನ್‌ನವರಿಂದ ಆರಿಸಲ್ಪಟ್ಟರು ವರೆಂದು ತಿಳಿದು ಬಂಗತ್ತದೆ. ಅದೇ ಕೋರ್ಟಿನ ಇನ್ನೊಬ್ಬ ಎಡ್ವೋಕೇಟ್ ಶ್ರೀ ಎಮ್. ಎಮ್. ಹೆಗ್ಡೆರವು ಅಸಿಸ್ಟಾಂಟ್ ಪಬ್ಲಿಕ್ ಪ್ರಾಸಿಕ್ಯೂಟರರಾಗಿ ನೇಮಕ ಹೊಂದಿರುವರು.

ಮದ್ರಾಸು

ವಿಜ್ಞಾನ ನಾಟಕ ಸ್ಪರ್ಧೆ:

ಕರ್ನಾಟಕ ಸಂಘದ ವಾರ್ಷಿಕಾಧಿವೇಶನದ ಅಂಗವಾಗಿ-ಬರೆಯಹಗಾರರಿಗೆ ಪ್ರೊತ್ಸಾಹ ಕೊಡುವ ಉದ್ದೇಶದಿಂದ ಈ ಮೇಲಿನ ಸ್ಪರ್ಧೆಯನ್ನು ನೆಡೆಸಲು ತೀರ್ಮಾನಿಸಿದೆ. ಅಖಿಲ ಕರ್ನಾಟಕದ ಸಾಹಿತ್ಯಾಭಿಮಾನಿಗಳಾದ ಕನ್ನಡಿಗ-ಕನ್ನಡಿತಿಯರೆಲ್ಲಾ ಭಾಗವಹಿಸಬೇಕಾಗಿ ವಿನಂತಿ.

ನಿಯಮಗಳು: 1) ನಾಟಕದ ನೇಲ್ಬಾಗದಲ್ಲಿ ಕರ್ನಾಟಕ ಸಂಘದ ವಿಕಾಂಕ ನಾಟಕ ಸ್ಪರ್ಧೆಗಾಗಿ-ಎಂದು ಬರೆದು ಕೆಳಗೆ ನಾಟಕದ ಹೆಸರನ್ನು ಬರೆಯಬೇಕು. 2) ಪ್ರತಿನಾಟಕದೊಡನೆ ಸ್ಪರ್ಧೆಯ ಪ್ರವೇಶ ಶುಲ್ಕವಾಗಿ ಆಣೆ ಎಂಟನ್ನು ಪೋಸ್ಟಲ್ ಆರ್ಡರ್ ಮೂಲಕ ಕಳುಹಬೇಕು. 3) ನಾಟಕವು ಆಧುನಿಕ ರೀತಿ ನೀತಿಗಳಿಗೆ ಸರಿ ಹೊಂದುವಂತಿದ್ದು ಸ್ವತಂತ್ರವಾಗಿಯೂ ಇರಬೇಕು. 4) ಭುಲ್‌ಸ್ಕೇಪ್ ಸೈಜಿನ ಮೂವತ್ತು ಪುಟಗಳಿಗೆ ವಿಸ್ತರಿಂತೆ ಕಾಗದದ ನಾಲ್ಕು ಬಗಿಗಳಲ್ಲಿಯೂ ಸರಿಯಾಗಿ ಮೂರ್ತೀನು ಇದ್ದು ಒಂದೇ ಪುಟದಲ್ಲಿ ಶಾಯಿಂದ ಸ್ಪಷ್ಟವಾಗಿ ಬರೆದಿರಬೇಕು 5) ಒಬ್ಬರೇ ಒಂದಕ್ಕಿಂತ ಹೆಚ್ಚು ನಾಟಕಗಳನ್ನು ಕಳುಹಬಹುದು. ಆದರೆ ಒಂದಕ್ಕಿಂತ ಹೆಚ್ಚು ನಾಟಕಗಳಿಗೆ ಬಹುಮಾನ ದೊರೆಯಲಾರದು 6) ಪ್ರತಿಯೊಂದು ನಾಟಕದ ಎರಡೆಂಡು ನಕಲುಗಳನ್ನು ಕಳುಹಬೇಕು. ನಕಲುಗಳನ್ನು ಹಿಂದಕ್ಕೆ ಕಳುಹಲಾಗುವುದಿಲ್ಲ. 7) ಬಹುಮಾನ ಪಡೆದ ನಾಟಕವನ್ನು ಪ್ರಕಟಿಸುವುದೇ ಮೊದಲಾದ ಎಲ್ಲಾ ಅಧಿಕಾರವೂ ಸಂಘದ್ದಾಗಿದೆ. 8) ನಾಟಕದ ಪುಟಗಳ ಯಾವುದೇ ಭಾಗದಲ್ಲಿ ಲೇಖಕರು ತಮ್ಮ ಹೆಸರನ್ನಾಗಲಿ ಗುಪ್ತ ನಾಮವನ್ನಾಗಲಿ ಕಾಣಿಸಕೂಡದು. 9) ಲೇಖಕರು ತಮ್ಮ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು ಪ್ರತ್ಯೇಕವಾದ ಕಾಗದದಲ್ಲಿ ಕಾಣಿಸಿ ಸಂಘದ ಎಲ್ಲಾ ನಿಯಮಗಳನ್ನು ಒಪ್ಪಿಕೊಂಡು ನನ್ನ ಸ್ವಂತ ಕೃತಿಯಾದ ಈ ನಾಟಕವನ್ನು ವಿಕಾಂಕ ನಾಟಕ ಸ್ಪರ್ಧೆಗಾಗಿ ಕಳುಹಿದ್ದೇನೆ ಎಂಬ ಪತ್ರವನ್ನು ಬರೆಯಬೇಕು. 10) ನಾಟಕದ ಪ್ರತಿಗಳು 1950ನೇ ಅಗೋಸ್ತು 15ನೇ ದಿನಾಂಕದೊಳಗೆ ಕಾರ್ಯದರ್ಶಿ 'ಕರ್ನಾಟಕ ಸಂಘ' 16 ವೀರಸ್ವಾಮಿ ಪಿಳ್ಳೆ ಬೀದಿ, ಮದ್ರಾಸ್, 8. ಇವರಿಗೆ ಸೇರುವಂತೆ ಕಳುಹಬೇಕು.

ಅತ್ಯುತ್ತಮ ನಾಟಕಗಳಲ್ಲಿ ಮೊದಲನೇ ಬಹುಮಾನ ರೂಪ್ಯಾ 50. ಎರಡನೇ ಬಹುಮಾನ ರೂಪ್ಯಾ 30. ಮೂರನೇ ಬಹುಮಾನ ರೂಪ್ಯಾ 20. ಕೊಡಲಾಗುವುದು. ಬಹುಮಾನ ಯೋಗ್ಯವಾದ ನಾಟಕಗಳು ಬಾರದಿದ್ದಲ್ಲಿ ಬಹುಮಾನವನ್ನು ಕಡಿಮೆ ಮಾಡಲಿಕ್ಕೂ ಸಂಘಕ್ಕೆ ಅಧಿಕಾರವಿದೆ 1951ನೇ ಜನವರಿ ತಿಂಗಳಲ್ಲಿ ನಡೆಯುವ ಸಂಘದ ವಾರ್ಷಿಕಾಧಿವೇಶನದಲ್ಲಿ ಫಲಿತಾಂಶವನ್ನು ಬಹಿರಂಗ ಪಡಿಸಲಾಗುವುದು.

APPOINTMENT OF TEACHERS IN LABOUR SCHOOLS

Applications are invited for the appointment of teachers in the Labour Schools to be newly opened at Nelyadi of Puttur Taluq, Panithadi of Kasaragod Taluq and Halasanad of Coondapur Taluq in South Kanara District from candidates Possessing the following qualifications.

1. Higher Elemontary Grade Trained, or
2. Secondary Grade Trained

The applications with necessary certificates and testimonials should reach the Office of the undersigned on or before 30-6-1950.

Office of the Dt. Welfare Officer, Mangalore, dated 3-6-1950.

(Sd.) **K Venkappa,**
Dt. Welfare Officer.

ಕನ್ನಡಿಗರೆಲ್ಲರ ಕಣ್ಮನ ಸೆಳೆದು ಪ್ರಸಿದ್ಧವಾದ

ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ

25 ಕತೆಗಳು **ಬೆಲೆ ರೂ 3 0 0**

ಸಿಗುವ ಸ್ಥಳಗಳು:-

1 ಕೆರಿಯರ್ ಪ್ರೆಪಂಚ, ಉಡುಪಿ
2 ನವಭಾರತ ಬುಕ್ ಡಿಪೊ, ಉಡುಪಿ
3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

Notice.

ಉಡ್ಪಿ ಡಿ. ಮು ಕೋರ್ಟಿನಲ್ಲಿ

O S. No. 82 of 50.

R. I. A No. 508/50

ಅಂಬೂಜ ಹೆಗ್ಗಡ್ತಿ ಕೂಡಾ —ವಾದಿರು.

ಮತ್ತು

ಚಂದಯ್ಯ ಹೆಗ್ಗಡೆ, ಕೊಲ್ಲು ಹೆಗ್ಗಡ್ತಿಯರ ಮಗ, ಉಡ್ಪಿ ತಾಲ್ಲು ಕುಕ್ಕೆಯಳ್ಳಿ ಗ್ರಾಮ. —ಪ್ರತಿವಾದಿ.

ಯಿನರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯುಪಡಿಸುವದೇನೆಂದ್ರೆ—

ವಾದಿಯು ಪ್ಲೇಂಟು ನಿವೃತ್ತಿಗೋಸ್ಕರ ದಾಖಲು ಮಾಡಿದ ಮೇಲ್ಕಂಡ ನಂಬ್ರವು ತಾರೀಕು 23-6-50ಕ್ಕೆ ತನ್ನಿಗೆ ಯಿಡೋಣಾಗಿಯಿದೆ. ಆದುದರಿಂದ ಈ ಬಾಬಿನಲ್ಲಿ ನಿಮ್ಮ ಆಕ್ಷೇಪಣೆಯೇನಾದರೂ ಯಿದ್ದರೆ ಮೇಲ್ಕಂಡ ತಾ 23-6-50ನೇ ದಿವ್ಸ ಹಗಲು 11 ಗಂಟೆ ಮೇಲ್ಕಂಡ ಕೋರ್ಟಿನಲ್ಲಿ ಕಪ್ಪದೆ ಹಾಜರಾಗಿ ಚ್ಯಾಹಿರು ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ತಪ್ಪಿದರೆ ಸದ್ರಿ ದಾವೆಯು ನಿಮ್ಮ ಯಕ್ಸಪಾರ್ಟಿಯಿಂದ ತೀರ್ಮಾನಿಸಲ್ಪಡುವದು.

ತಾರೀಕು 5-6-50 } **K J Ballal**
ಉಡ್ಪಿ } Vakil for Petr

ಮಾರಾಟಕ್ಕಿವೆ

ಉತ್ತಮ ಜಾತಿಯ ಒಂದು ಜೊತೆ ಓಟದ ಕೋಣಗಳು ಆಪಮ್ಮು ಸುಲಭ ದರದಲ್ಲಿ ಮಾರಾಟಕ್ಕಿವೆ. ಕೊಂಡುಕೊಳ್ಳಲು ಇಚ್ಛಿಸುವವರು ಎರಡು ಹೆಜ್ಜೆಗಳೊಳಗೆ ವಿಳಾಸದಾರರೊಡನೆ ಮುಕ್ತಾ ಮಾತಾಡುವುದು.

ಮಡುಂಬು ಹೊಸಮನೆ
ಲೋಕಯ ಶೆಟ್ಟಿ,
ಇನ್ನಂಜೆ, ದ. ಕ.

ನೋಟಿಸು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O S. No. 71/1950

ಸರಸು ಸೆಟ್ಟಿ —ವಾದಿಳು

ವೀರು ಸೆಟ್ಟಿ ಸಹಾ —ಪ್ರತಿವಾದಿರು ಪ್ರತಿವಾದಿರು—

3) ಲಿಂಗಮ್ಮ ಸೆಟ್ಟಿ. ಚಿಂನ್ನು ಸೆಟ್ಟಿ ಮಗ 5) ಉಗ್ಗ ಸೆಟ್ಟಿ. ದೇಮು ಸೆಟ್ಟಿ ಮಗ ಕಾರ್ಕಳ ತಾಲ್ಲು ಕಲ್ಲಮುಂಡ್ಕೂರು ಗ್ರಾಮದ ಮೂಡುಕೊಟ್ರಶಾಂತಿ ಎಂಬಲ್ಲಿರುವವರು. ಇವರಿಗೆ—

ತೆಂಗಿನ ಫಲ ಮರದ ಫಲಗಳನ್ನು ತೆಗೆದು ಉಂಟುಮಾಡಿದ ನಷ್ಟ ಮತ್ತು ಮರದ ಸ್ವಾಧೀನತೆ ಕೂಡ ರೂಪ್ಯಾ 55-0-0ಕ್ಕೆ ವಾದಿಳು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ದಾವೆಯು ತಾರೀಕು 13-6 1950ಕ್ಕೆ ಇಮೋಣಾಗಿಯಿದೆ. ಆದ್ರಿಂದ ಸದ್ರಿ ದಾವೆಗೆ ನಿಮ್ಮ ಆಕ್ಷೇಪ ಇದ್ದಲ್ಲಿ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟುಮುಂದೆ ಹಾಜರಾಗಿ ಜವಾಬ್ದಾರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಕಿವ್ಯಾಮಾಡಲಾಗುವದು.

P Ramachandra Rao
Pleader for Plaintiff

ತಾರೀಕು 5-6-50 ಕಾರ್ಕಳ

ಮಂಗಳೂರು

ನಗರ ಸಭೆಯು: ಈಚೆಗೆ ನಗರ ಸಭಾಧ್ಯಕ್ಷ ಶ್ರೀ ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ನಗರದ ಹೋಟೆಲ್, ಸೆಲೂನ್ ಇತ್ಯಾದಿಗಳಲ್ಲಿ ರೇಡಿಯೋ "ಲೌಡ್ ಸ್ಪೀಕರ್"ಗಳಿಂದ ಉಂಟಾಗುತ್ತಿರುವ ತೊಂದರೆಯನ್ನು ನಿಲ್ಲಿಸಲಿಕ್ಕಾಗಿ ಕೈಕೊಂಡ ಕಾರ್ಯಕ್ರಮವನ್ನು ನಗರ ಸಭೆಗೆ ತಿಳಿಸಬೇಕೆಂದು ಪೋಲೀಸ್ ಅಧಿಕಾರಿಗಳನ್ನೂ ಕೇಳಿಕೊಳ್ಳಲಾಯಿತು. ಬಲ್ಮರ ಕದ್ರಿ ರಸ್ತೆಗಳನ್ನು ಸಂಧಿಸುವ ಅಡ್ಡ ರಸ್ತೆಗೆ ಆರ್ಯ ಸಮಾಜ ರಸ್ತೆ ಎಂದು ಹೆಸರಿಡಲು ನಗರ ಸಭೆಯು ಒಪ್ಪಿಗೆ ದೊರೆಯಿತು.

ಬಹುಮಾನ: ಕಳೆದ ಜನವರಿ ತಿಂಗಳ ಕೊನೆಯ ದಿವಸ ನೇತ್ರಾವತಿ ನದಿಯಲ್ಲಿ ಚಿಕ್ಕಿಂಗ್ ಕೆಲಸ ನಡೆಸುತ್ತಿದ್ದ ಎಕ್ಸೆಲ್ಸ್ ಇನ್ಸ್‌ಪೆಕ್ಷರರ ದೋಣಿ ಫೀರಿಗೆ ಬಿದ್ದು ಅಪಘಡವಾಗುವ ಸಂಭವವಿತ್ತು. ಸಮಾಜ ದಲ್ಲಿದ್ದ ಐದು ಮಂದಿ ಬೆಸ್ತರು ಕೂಡಲೆ ಅಲ್ಲಿಗೆ ಧಾವಿಸಿ ದೋಣಿಯಲ್ಲಿದ್ದವರನ್ನು ಬದುಕಿಸಿದರು. ಈ ಸ್ತುತ್ಯ ಕಾರ್ಯಕ್ಕಾಗಿ ಸ್ಥಳೀಯೊಬ್ಬರಿಗೂ ರೂಪಾಯಿ ಹತ್ತರಂತೆ ಬಾಬು ಕೋಟಿಯಾನ್, ಪದ್ಮನಾಭ ಮೈಂದನ್, ಶಂಕರ ಸುವರ್ಣ, ಗೋಪಾಲ ಸಾಲಿಯಾನ್, ರಾಮಪ್ಪ ಕರಿಯಾನ್. ಇವರಿಗೆ ಕಲೆಕ್ಟರರು ಬಹುಮಾನ ಕೊಡಿಸಿರುವರು.

ನರಿಕುಂಬು ಗ್ರಾಮದಲ್ಲಿ ಬಾನುವಾರುಗಳನ್ನು ಸೀಡಿಸುತ್ತಿದ್ದ ಒಂದು ಹುಲಿಯನ್ನು ಕೊಂದ ಶ್ರೀ ಮಂಜಯ್ಯ ಸಟ್ಟಿ ಮತ್ತು ಜಂದಪ್ಪ ಪೂಜಾರಿ-ಇವರಿಗೆ ರೂಪಾಯಿ ಹತ್ತರಂತೆ ಬಹುಮಾನ ಕೊಡುವುದಾಗಿ ಕಲೆಕ್ಟರರ ಪ್ರಕಟಿಸಿ ಹೊಂಟಿವೆ.

ಮೋಟಾರ್—ಸ್ಕೂಟರ್ ಢಿಕ್ಕಿ: ಕಳೆದ ತಾ. 27 ರಲ್ಲು ಬೆಳಿಗ್ಗೆ ಸರಕಾರಿ ಮೋಟಾರ್ ವಾಹನವೊಂದು ಶೇಡಿಗುಡ್ಡೆಯಲ್ಲಿ ಸ್ಕೂಟರಿನಲ್ಲಿ ಹಾಲುಕೊಂಡು ಹೋಗುತ್ತಿದ್ದ ಸಾಧಾರಣ ಇಪ್ಪತ್ತೆ ನಾಲ್ಕು ವರ್ಷ ಪ್ರಾಯದ ನಾರಾಯಣ ಎಂಬವನ ಸ್ಕೂಟರಿಗೆ ಢಿಕ್ಕಿ ಹೊಡೆಯಿತು. ತಾಲಿಗೆ ಜಖಂ ಆಗಿ ಬಿದ್ದ ಅವನನ್ನು ಕೂಡಲೇ ಆಸ್ಪತ್ರೆಗೊಯ್ಯಲಾಯಿತು. ಲಾರಿ ಡ್ರೈವರ್ ಎಸ್. ಸಿ. ಥಾಮಸ್ ಎಂಬಾತನನ್ನೂ ಕೈದು ಮಾಡಲಾಗಿದೆ.

ಪರಮಹಂಸ ಮತ್ತು ವಿವೇಕಾನಂದರ ಜನ್ಮ ದಿನೋತ್ಸವ: ಶ್ರೀಯ ಶ್ರೀ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ಜನ್ಮ ದಿನೋತ್ಸವವು ಕಳೆದ ತಾ. 28 ರಲ್ಲು ಉದಯ ಮಂದಿರ ಸ್ವಾಮಿ ಜ್ಞಾನ ಘನಾನಂದರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಅನಂತರಾಮ ಉಡುಪರೇ ಮೊದಲಾದವರಿಂದ ಪ್ರಾರ್ಥನೆಯಾದ ಮೇಲೆ ಡಾ. ಸಿ. ಪಿ. ಕಾಮತರು ಸ್ವಾಗತ ಭಾಷಣ ಮಾಡಿದರು. ಮೈಸೂರು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ಡಿ ಎಲ್. ನರಸಿಂಹಾಚಾರ್ಯರು ಶ್ರೀ ರಾಮಕೃಷ್ಣ ಪರಮಹಂಸರ ಸಾಧನೆಯ ರೀತಿಯನ್ನು ವಿವರಿಸುತ್ತ ಅವರು ಎಲ್ಲ ಧರ್ಮಗಳನ್ನೂ ಅನುಭಾವಿಕ ಜಗತ್ತಿಗೆ ಸರ್ವಧರ್ಮ ಸಮನ್ವಯ ಭಾವವನ್ನು ತೋರಿಸಿ ಕೊಟ್ಟವರು, ಅಂಥವರು ಸರ್ವ ಸಾಮಾನ್ಯ ಮಾನವರಲ್ಲ ವೆಂಬುದನ್ನು ತಿಳಿಸಿದರು. ಶ್ರೀಗಳಾದ ಪಿ. ಕೆ. ನಾರಾಯಣ, ಬಿ. ಅನಂತರಾಜ್, ಡಾ. ಎಮ್. ಎನ್. ಪೈ ಮೊದಲಾದವರು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾರದಾಮಣಿ ದೇವಿಯ ಮತ್ತು ವಿವೇಕಾನಂದರ ಜೀವನದ ಕುರಿತು ಮಾತನಾಡಿದರಲ್ಲದೆ ಪರಮಹಂಸರು ಸಾರಿದ ತತ್ವಗಳನ್ನು ವಿವರಿಸುತ್ತ ತಂದೆ ತಾಯಿಗಳು ತಮ್ಮ ಮಕ್ಕಳು ವೀರ ಪುರುಷರಾಗುವಂತೆ ಮಾಡಬೇಕೆಂದರು. ಶ್ರೀ ಯು. ಶ್ರೀನಿವಾಸ ಕಿಣಿಯರು ಧನ್ಯವಾದಗಳನ್ನರ್ಪಿಸಿದರು.

ವರ್ಷಾವಧಿ ಸಭೆ: ದ. ಕ ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿಯ ವರ್ಷಾವಧಿ ಮಹಾ ಸಭೆಯು ಕಳೆದ ತಾ. 28ರಲ್ಲು ಶ್ರೀ ಬಿ ಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜಾರೋಹಣ ವಂದೇ ವಾಣಿನ, ಭಾಷಣಗಳಾದ ಬಳಿಕ ಹೊಸ ವರುಷದ ಕಾರ್ಯ ಸಮಿತಿಯ ಚುನಾವಣೆ ನಡೆಯಿತು.

ಭತ್ತದ ಪೈರಿಗೆ ನನೆಟೆ ಹುಳದ ಭಾದೆ: ಉಡುಪಿ, ಕಾರ್ಕಳ ಮತ್ತು ಪುತ್ತೂರು ತಾಲೂಕುಗಳ ಕೆಲವು ಗ್ರಾಮಗಳಲ್ಲಿ ಹೊಳೆಕೆಯಿಂದ ಮೇಲೆ ಬರುವ ಒಂದನೆ ಬೆಳೆಯ ನೇಜಿ ನಸಿಗಳಿಗೆ 'ನನೆಟೆ' ಎಂಬ ಹುಳದ ಭಾದೆ ಕಡಿಮೆಯಾಗಿ ವರದಿ ಮಾಡಲಾಗಿದೆ. ಈ ಹುಳಗಳು ಒಂದೂವರೆ ಇಂಚಿನಷ್ಟು ಗಾತ್ರವಿದ್ದು ನೇಜಿಯ ಎಳೆ ನಸಿಗಳನ್ನು ತಿಂದು ಬಿಡುತ್ತವೆ.

ಈ ಹುಳಗಳ ಭಾದೆಯನ್ನಡಗಿಸುವ ಔಷಧವು ಕೃಷಿ ಇಲಾಖೆಯವರಲ್ಲಿ ಈ ಮೊದಲೇ ಇದ್ದ ಕಾರಣ ಹುಳಗಳ ಭಾದೆಯ ವರ್ತಮಾನವು ಸಿಕ್ಕಿದೊಡನೆಯೇ ಇಲಾಖೆಯ ವಾಹನಗಳಲ್ಲಿ ಈ ಔಷಧಿಯನ್ನು ಅಗತ್ಯವಿರುವ ಸ್ಥಳಗಳಿಗೆ ರವಾನಿಸಿ ಕೃಷಿ ಇಲಾಖೆ ಮತ್ತು ರೆವಿನ್ಯೂ ಇಲಾಖೆಯ ನೌಕರರ ಮುಖಾಂತರ ಸಾಮೂಹಿಕವಾಗಿ ಎಚ್ಚರವಾಗಿ "ಡಯ್ಯೋ ಲ ಪುಡಿಕೆ ರಡೆಯಾಣಿಶ್ಟಲ್ಲು" ಎಂದು ಬೈಯೆಯಾಗುತ್ತಿದೆ. ಬೀಗೆ ಕನಸುಗಳು ಮಾನಸಿಕದಿಂದ ಜೈಹಿಕದ ವರೆಗೂ ನುಸುಸ್ಯಸಲ್ಲಿ ಪರಿಣಾಮಕಾರಿಯಾಗುತ್ತವೆ.

ಬಡಜೀವನದಲ್ಲಿ ಬಗೆ ಬಗೆಯಲ್ಲಿ ಬೀಳುವ ಕನಸುಗಳನ್ನು ಶ್ರೀ ಕಾರ್ತಿಕೇಯರು ಸರಸರನೆ ಇಲ್ಲಿ ಸಂಕಲನ ರೂಪವಾಗಿ ಕೊಟ್ಟಿರುತ್ತಾರೆ. ದಾ! ಸಿಗ್ಮಂಡ್ ಫ್ರಾಯಿಡ್, ಸಿ ಜಿ ಯಂಗ್, ಡ್ ರ್ ಬೇಂದ್ರೆ- ನುಂತಾದವರ ಕಲ್ಪನೆಗಳ ನೆರಳನ್ನು ಸಂಥಿಸಿದರೂ ಹೇಳುವ ರೀತಿಯಲ್ಲಿ ನಿಲ್ಲವನ್ನೂ ಕಾತುಹಲ ಪೂರ್ಣವಾಗಿ ಓದುವ ಆಭಿರುಚಿ ತುಂಬಿರುತ್ತದೆ. ಕನಸಿನ ಮಾಲೆಯನ್ನು ಸರಳ ಹಾಗೂ ಮುಗ್ಧ ಶೈಲಿಯಿಂದ ನಮ್ಮ ಮುಂದಿರಿಸಿದ್ದಾರೆ, ಆವರು ಕೈಗೊಂಡ ಕನಸಿನ ಚಿತ್ರ ಇಲ್ಲಿ ಪರಿಪೂರ್ಣವಾಗಿದೆ. ಅತ್ಯಂತ ಕೌತುಕವನ್ನುಂಟುಮಾಡುತ್ತದೆ.

ಬೊಂಬಾಯಿ—ಬಂಟರ ಯಾನೆ ನಾಡವರ ಸಂಘದ 22ನೇ ವಾರ್ಷಿಕ ಮಹಾಸಭೆಯು ಕಳೆದ ತಿಂಗಳ ತಾರೀಕು 28ನೇ ಆದಿತ್ಯವಾರ ಶ್ರೀ ಯಸ್. ಸಂಜೀವ ಶೆಟ್ಟಿ ಅಧ್ಯಕ್ಷತೆಯಲ್ಲಿ ಕುರ್ಲಾ ಸ್ಟೇಟಿನ ಶಾಲಾ ವಠಾರದಲ್ಲಿ ಜರಗಿತು. ಪ್ರಾರ್ಥನೆ, ಅಸ್ಪೃಶ್ಯರ ಚುನಾವಣೆಗಳಾದೊಡನೆ ಕಾರ್ಯದರ್ಶಿಯವರು ಸಂಘದ ಸಂಕ್ಷಿಪ್ತ ಚರಿತ್ರೆಯನ್ನು ಓದಿ ಹೇಳಿದ ನಂತರ ಜೊತ ವರ್ಷದ ಅಡಳಿತ ಮಂಡಳಿಗೆ ಶ್ರೀಗಳಾದ ನಂದನ ಶೆಟ್ಟಿ (ಅಧ್ಯಕ್ಷ) ಡಾ। ಎನ್. ವಿ. ಅಡ್ಯಂತಾಯ(ಉಪಾಧ್ಯಕ್ಷ) ಬಾಳ ಸುಬ್ಬಯ್ಯ ಶೆಟ್ಟಿ (ಗೌ. ಕಾರ್ಯದರ್ಶಿ) ಬಿ. ಜಗನ್ನಾಥ ಹೆಗ್ಡೆ (ಉಪಕಾರ್ಯದರ್ಶಿ) ಡಾ। ಪಿ ಜಗನ್ನಾಥ ಶೆಟ್ಟಿ (ಕೋಶಾಧಿಕಾರಿ) ಸಂಜೀವ ಶೆಟ್ಟಿ (ಉಪಕೋಶಾಧಿಕಾರಿ) ಮತ್ತು ಮೂವತ್ತು ಜನರು ಸದಸ್ಯರಾಗಿ ನೇಮಿಸಲ್ಪಟ್ಟರು.

ಪ್ರಕಟಣೆ

ಹೈಸ್ಕೂಲ್ ವಿದ್ಯಾರ್ಥಿಗಳಿಗೆ-

ಇನ್ನಂಜೆ ರೆಸಿಡೆನ್ಸಿಯಲ್ ಹೈಸ್ಕೂಲ್ ಶ್ರೀ ವಾದಿರಾಜ ಗುರುಕುಲದಲ್ಲಿ ಉಪಾಧ್ಯಾಯರುಗಳ ಮೇಲ್ವಿಚಾರಕ್ಕೊಳಪಟ್ಟ ಯೋಗ್ಯ ವ್ಯವಸ್ಥೆಯಿದೆ ಮೂರು ಊಟ, ವಸತಿ, ದೀಪ ಎಲ್ಲಾ ಸೇರಿ ತಿಂಗಳಿಗೆ ರೂ. 15/-ಮಾತ್ರ. ನಿವಾಸಯುಕ್ತ ಡಾಕ್ಟರರ ಗಮನವೂ ಇದೆ. ಬಡ ವಿದ್ಯಾರ್ಥಿಗಳಿಗೆ ರಿಯಾಯತಿಯೂ ಕೊಡಲಾಗುವುದು ಹೆಚ್ಚಿನ ಮಾಹಿತಿಗೆ ಗುರುಕುಲದ ಸುಪರಿಂಟೆಂಡೆಂಟರಿಗೆ ಬರೆದು ಕೊಳ್ಳಿರಿ

Sri Vadiraja Gurukula Innanje S. K

ESTD. 1926
CROWN RUBBER STAMP Co.
MFRS OF
RUBBER STAMPS
ENGRAVERS
BALMATTA ROAD MANGALORE S.K
Approved form by the Gov. of Mysore
Certificated by the Agent of the Govt of Cylone & Indian.

ಸ್ವೀಕಾರ ವಿಮರ್ಶೆ

೧ ಸ್ವಪ್ನಲೋಕ: ಒಡಿತವರು ಶ್ರೀ 'ಕಾರ್ತಿಕೇಯ' ಪ್ರಕಾಶಕರು ಅಂಚೆವಂಗ ಕಾರ್ಯಾಲಯ ಉಡುಪಿ. ಬೆಲೆ: ೧-೪ ೦.

ಮಾನವನ ಜೀವನದಲ್ಲಿ ಕನಸುಗಳು ಆತಿ ಪ್ರಾಮುಖ್ಯವಾದ ಅಂಶವೆನ್ನಬೇಕು ಪಲವರು ಕನಸುಗಳನ್ನು ಯತಾರ್ಥವಾಗಿ ನಂಬುವುದೂ ಉಂಟು. ದುಃಸ್ವಪ್ನ ಫಲ, ಸುಃಸ್ವಪ್ನ ಫಲ ಎಂದ ಜ್ಯೋತಿಷ್ಯರೂ ಕೂಡಾ ಅದನ ಮಹತ್ವಕ್ಕೆ ಮನ್ನಣೆ ಕೊಡುತ್ತಾರೆ. ಪ್ರಥಮ ಜಾವದಲ್ಲಾದರೆ ಇಂತಿಷ್ಟು ಫಲ; ಮಧ್ಯ ರಾತ್ರಿಯಾದರೆ ಇಂತಿಷ್ಟು ಫಲ; ಬೆಳಗಿನ ಜಾವ ಕ್ಕಾದರೆ ಇಂತಿಷ್ಟು ಫಲವೆಂದು ಲೆಕ್ಕ ಹಾಕುತ್ತಾರೆ. ಬೆಳಗಿನ ಜಾವಕ್ಕೆ ಬಿದ್ದ ಕನಸು ನನಸಾಗುತ್ತದೆಂದು ಪಲವರ ನಂಬಿಕೆಯಿದೆ.

ಶ್ರೀ ಕಾರ್ತಿಕೇಯರು ಹೇಳಿದ ಹಾಗೆ ಸ್ವಪ್ನ ವಿಶೇಷದಿಂದ ಧಾರ್ಮಿಕತೆಪ್ರೇರಿತವಾದ ಕನಸುಗಳು ಈಗಲೂ ಇವೆ. ತಾರಕೇಶ್ವರ ಇದ್ದ ಹಾಗೆಯೆ ಪಶ್ಚಿಮ ಭಾರತದಲ್ಲಿ ಸೋಜೆ, ಮಂತ್ರಾಲಯ ಮುಂತಾದ ಕಡೆಯಲ್ಲಿ ನಾಲ್ಕಾರು ತಿಂಗಳು ಭಕ್ತಿಯಿಂದ ಭಜನೆ ಪ್ರಾರ್ಥನೆ ಮಾಡುತ್ತಾ ಫಲಪ್ರಾಪ್ತಿಯ ಕನಸಿಗಾಗಿ ಹಂಬಲಿಸುವವರಿದ್ದಾರೆ. ರಾತ್ರಿ ಬೀಳಬಯದಾದ ಕನಸುಗಳನ್ನೇ ದೈವೀಕೃಪೆಯೆಂದು ನಂಬಿಕೆಯಿಡುತ್ತಾರೆ. ಕಾಹಿಲೆಗಳೂ ಇತರ ರೀತಿಯ ಧಾರ್ಮಿಕ ಸ್ಥಳಗಳ ಕನಸುಗಳಿಂದ ಈಡೇರಿದ ನಿದರ್ಶನಗಳಿವೆ.

ಕನಸುಗಳು ಮಾನಸಿಕವೋ? ದೈಹಿಕವೊ? ಎನ್ನುವ ಕುರಿತಾಗಿ ಭಿನ್ನಾಭಿಪ್ರಾಯಗಳಿವೆ ಆದರೆ ಹೆಜ್ಜಾಗಿ ನಾವು ಕಾಣುವ ಕನಸುಗಳು ಮಾನಸಿಕ ಯಾತನೆಗಳಿಂದ ಬರತಕ್ಕವು- ಹಗಲೆಲ್ಲ ಯಾವ ಕೆಲಸಕ್ಕಾಗಿ ಚಿಂತಿಸುತ್ತೆವೋ- ಆ ಆಶೆಗಳೆ ಇರುಳಲ್ಲಿ ಕನಸಾಗಿ ಜಿಜ್ಞಾಸೆ ನಡಿಸುತ್ತವೆ. ಹೀಗೆ ಬೀಳಬಹುದಾದ ಕನಸುಗಳಲ್ಲಿಂದೆ ದೇಪಕ್ಕೆ ಕಸ್ಟ ಸುಖಗಳಿದ್ದೂ ಇವೆ, ಕೆಲವು ವೇಳೆ ಭಯಾನಕವಾದ ಕನಸುಗಳಿಂದ ಬೆದರಿ ಮೈಮನಸೆಲ್ಲ ಕಂಪಿಸುತ್ತದೆ; ಕೆಲವೊಮ್ಮೆ ಸುಖಕರವಾದ ಕನಸು ಬಿದ್ದು, ಆಕಸ್ಮಿಕವಾಗಿ ಎಚ್ಚರವಾದರೆ "ಆಯ್ಯೋ ಲ ಪುಡಿಕೆ ರಡೆಯಾಣಿಶ್ಟಲ್ಲು" ಎಂದು ಬೈಯೆಯಾಗುತ್ತದೆ. ಬೀಗೆ ಕನಸುಗಳು ಮಾನಸಿಕದಿಂದ ಜೈಹಿಕದ ವರೆಗೂ ನುಸುಸ್ಯಸಲ್ಲಿ ಪರಿಣಾಮಕಾರಿಯಾಗುತ್ತವೆ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇವರ್ಧಕ ತೈಲ.

Highly perfumed and medicated, worth using daily by one and all, keeps hair black and relieves head-ache etc.

REGD TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.

Notice.

Applications are invited from qualified Registered Medical Practitioners of Modern Medicine (i. e. M.B.B.S, L.M.F.S etc.) to work in Rural Dispensary at Kalavar of Coondapur Taluk.

2. Applications with full particulars regarding name, date of birth, qualifications, place of residence, present appointment etc. and true copies of the qualification certificates should reach the President, District Board, South Kanara before 26-6-1950.

(*Sd*) **K. Sanjiva Shetty,**
For President.

S. K. District Board Office
Mangalore, Dated 3—6—1950

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S K.

ಆಶ್ಚರ್ಯರೇ,
ಸಹೋದರಿಯೆ ಪಶ್ಚಾತ್ತಾಪವೇ.

ನನ್ನ ... ನನ್ನಲ್ಲಿ ತುಂಬಿ ಬಾಳಿ ತೆಯನ್ನು ಶ್ರಾದ್ಧಿಸಿ ಎಂದಾಗ ನನ್ನೆ ಳಿಸ್ಪಿ ತೀವ್ರವಾಗಿ ಬೆಳೆದಿರುವ ಬಲ್ಲೆ ನೆಂದು ಶ್ರದ್ಧಾಸ್ಪದವನ್ನು ಮೋದಿ ನೆಡಿಸಲೇಬೇಕಾಗಿತ್ತು. ಆದರೆ ಈ ಸೇವೆಯಿಂದ ನನ್ನ ಸ್ವಾರ್ಥವು ಸ್ವಲ್ಪವೂ ಇರಲಿಲ್ಲ ವೆಂದು ಧೈರ್ಯವಾಗಿ ಹೇಳಬಲ್ಲೆ. ಯಾಕೆಂದರೆ ನಾನು ಭಗವಂತನಲ್ಲಿ ಕಾರ್ಯಾರ್ಥಿಗಳಿಗೆ ಗೌರವ ಪೂರ್ವಕವಾಗಿ ಕೆಲಸ ಮಾಡಲು ಶಕ್ತಿಯನ್ನು ಕೊಡು ವಂತೆ ಪ್ರಾರ್ಥಿಸಿದ್ದೆನು. ಆದರೆ ನನಗೆ ಗೌರವ, ಸ್ತುತಿ, ಸಿಂದೆ, ಟೀಕೆ ಎಲ್ಲವೂ ಅಷ್ಟೇ. ಸ್ತುತಿಯಿಂದ ನಾನು ಹಿಗ್ಗುವುದೂ ಇಲ್ಲ, ನಿಂದೆಯಿಂದ ಕುಗ್ಗುವುದೂ ಇಲ್ಲ. ಅವೆಲ್ಲ ಮನೋವಿಕಾರಗಳಿಂದ ನಾನು ಮುಕ್ತನಾಗಿದ್ದೇನೆ. ನಾನು ಸಾರ್ವಜನಿಕ ಸೇವೆಯಲ್ಲಿ ಬಿದ್ದ ನಂತರ ಈ ೫೫ ವರ್ಷಗಳಲ್ಲಿ ನನಗೆ ಪ್ರತಿ ಹೆಜ್ಜೆಗೆ ಸ್ತುತಿ, ಅಭಿನಂದನೆ, ಪ್ರೋತ್ಸಾಹ ಮೊದಲಾದವುಗಳ ಸುರಿಮಳೆಯಾಗಿದೆ ಅದೇ ಕಾಲಕ್ಕೆ, ನಿಂದೆ, ಆಪಾದನೆ ತಿರಸ್ಕಾರಗಳೂ ನಡೆದೇ ಇವೆ. ಆದರೆ ನನಗೆ ಎರಡೂ ಅಷ್ಟೇ ಈ ಸ್ತುತಿನಿಂದೆಗಳ ಪಾರ್ಶ್ವಭೂಮಿಯಲ್ಲಿ ನನ್ನ ಧ್ಯೇಯದತ್ತ ಮಾತ್ರ ನಾನು ಅಚಲ ವಿಶ್ವಾಸವನ್ನಿಟ್ಟು ಮುಂದೆ ಸಾಗುತ್ತ ಬಂದಿದ್ದೇನೆ

ನನಗೆ ಇಂಥ ಸಮಾರಂಭಗಳು ಸೇರುವ ದಿಲ್ಲ. ಆದರೆಲ್ಲಿಯೂ ಹೋಗಲು, ಹವನ್ನ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳಂತೂ ಮೊದಲೇ ಸೇರುವದಿಲ್ಲ. ಮತ್ತು ಅಂಥ ಸಮಾರಂಭಗಳಲ್ಲಿ ನನ್ನ ಕೃಷ್ಣಯೂ ಇಲ್ಲ ಹೀಗಿದ್ದರೂ ನನ್ನ ಮಿತ್ರರು ನನ್ನೆದೆಗೆ ಬಂದು ಇವೆಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ನನ್ನನ್ನು ಕೇಳಿಕೊಂಡಾಗ ನಾನು ಮನಸ್ಸಿಲ್ಲದಿದ್ದರೂ, ಒಪ್ಪಬೇಕಾಯಿತು.

ಹೀಗೆ ಒಪ್ಪಿಗೆ ಕೊಡುವದಕ್ಕೆ ನನ್ನ ದೃಷ್ಟಿಯಿಂದ ಎರಡು ಬಲವಾದ ಕಾರಣಗಳೂ ಮುಂದೆ ಬಂದವು. ಮೊದಲನೆಯದಾಗಿ, ವ್ಯಕ್ತಿಯು ಎಷ್ಟೇ ಗಣ್ಯವನಿರಲಿ, ಅವನಿಂದ ದೇಶಕ್ಕೂ, ಜನತೆಗೂ, ಸಮಾಜಕ್ಕೂ ನಿಸ್ವಾರ್ಥ ಸೇವೆ ಸಲ್ಲಿದ್ದೇ ಆದರೆ ಜನತೆಯು ಅವನನ್ನು ಮರೆಯುವುದೇ ಆ ಸೇವೆಯನ್ನೇ ಪೂಜ್ಯದಾಯಿಸಿಕೊಂಡು, ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಗೌರವಿಸುವ ಗುಣ ಗೌರವ ಬುದ್ಧಿ ಜನತೆಯಲ್ಲಿದೆಯೆಂಬುದನ್ನು ಎತ್ತಿ ತೋರಿಸಿಸಬಹುದು; ಮತ್ತು ಸಿರೇಕ್ಷೆ ಬುದ್ಧಿಯಿಂದ, ನಿಸ್ವಾರ್ಥವು ಸೇವೆ ಸಲ್ಲಿಸುವ ಪ್ರತಿಯೊಬ್ಬ ವ್ಯಕ್ತಿಯ ಕಾರ್ಯವನ್ನು ಮೆಟ್ಟುವ ಕಲೆಯನ್ನು ನಮ್ಮ ತರುಣರು ಕಲಿತು ಕೊಳ್ಳಬೇಕೆಂಬುದು. ಅಷ್ಟೇ ಮಹತ್ವದ್ದಾದ ಎರಡನೆಯ ಕಾರಣವೆಂದರೆ ಇಂತಹ ಕಾರ್ಯಕ್ರಮಗಳ ಮೂಲಕವಾಗಿ ನನ್ನ ಗೆಳೆಯರಿಗೆ ಸಂಘಟನೆಯ ಪಾಠವನ್ನು ಸಂಘಟನೆಯ ಮಹತ್ವವನ್ನು ಬ್ರಾಹ್ಮಿಸಿಕೆಯಿಂದ ತಿಳಿಸಿ ಅದರ ಪರೀಕ್ಷೆ ತೆಗೆದುಕೊಳ್ಳುವದು. ಈ ಕಾರಣಗಳಿಗಾಗಿ ನಾನು ಈ ಕಾರ್ಯಕ್ರಮಕ್ಕೆ ಒಪ್ಪಿದ್ದು. ಇದೀಗ ಈ ಕಾರ್ಯಕ್ರಮದ ಪರಿಣಾಮವನ್ನು ನೋಡಿದರೆ ನನ್ನ ಗೆಳೆಯರು ಈ ಪರೀಕ್ಷೆಯಲ್ಲಿ ಪರಿಪೂರ್ಣರಾಗಿದ್ದಿರೆಂದು ತೋರ್ಪಡಿಸಿಕೊಂಡಿರುವರೆಂದು ನೋಳಲು ನನಗೆ ಅಭಿಮಾನವೆನಿಸುತ್ತಿದೆ

ಈ ಕೆಲಸದ ಹೊಣೆ ಹೊತ್ತ ನನ್ನ ಗೆಳೆಯರಲ್ಲಿ ಕೆಲವರು ಅಷ್ಟೇನೂ ಸುಶಿಕ್ಷಿತರಲ್ಲ, ಪದವೀಧರರಂತೂ—ಅಲ್ಲವೇ ಅಲ್ಲ ಕೆಲವರಿಗೆ ಕೇವಲ ಕನ್ನಡ, ಮರಾಠಿ, ಹಿಂದುಸ್ತಾನಿ ಅಥವಾ ಉರ್ದು ಮೊದಲಂಡ ಮಾತೃಭಾಷೆ ಬರುವದುಂಟು ಇಂಗ್ಲೀಷು ಬಲ್ಲವರೂ ಸಹ ಕಡಿಮೆ. ಹೀಗಿದ್ದರೂ ಸಂಘಟನಾ ಕಾರ್ಯದಲ್ಲಿ ಅನೇಕ ಯಾರಿಗಿತಲೂ ಕಡಿಮೆ ಇಲ್ಲವೆಂಬುದನ್ನು ಸಿದ್ಧವಾಡಿ ತೋರಿಸಿದ್ದಾರೆ. ಇದು ನನ್ನ ಹೊಸ ಅನುಭವವೇನೂ ಅಲ್ಲ. ಹಿಂದುಸ್ತಾನೀ ಸೇವಾದಳವನ್ನು ಕಟ್ಟುವಾಗಲೂ ಸಹ ಇದೇ ತರಹದ ಅಲ್ಪ ಶಿಕ್ಷಣ ಪಡೆದ ಕಚ್ಚಾ ಸಾಮಾಗ್ರಿಯನ್ನೇ ತೆಗೆದುಕೊಂಡು ಸೇವಾದಳವನ್ನು ಸ್ಥಾಪಿಸಿ ಬೆಳೆಸಿದ್ದು. ಅಲ್ಪ ಶಿಕ್ಷಿತರಿದ್ದಿರೂ ಸಹಿತ ಹಿಂದುಸ್ತಾನೀ ಸೇವಾದಳದಲ್ಲಿ ಸೇರಿ, ಶಿಕ್ಷಣ ಪಡೆದ ಅನೇಕ ಅನೇಕರು ಇಂದು, ಸರಕಾರೀ ಆಡಳಿತದಲ್ಲಿ ರಾಜಕೀಯ ಆಂದೋಲನದಲ್ಲಿ ಸಾಮಾಜಿಕ ರೈಕ್ಷಣಿಕ, ಶಾಂತಿಕ, ರಾಜಕೀಯ ಚಟುವಟಿಕೆಗಳಲ್ಲಿ ಮುಂದುವರಿಯುತ್ತಿದ್ದಾರೆ. ಆದು ನೊದಲಿನ ಅನುಭವವಾಗಿದ್ದರೆ ಇಂದಿನದು ಅದೇ ಅನುಭವದ ಪುನರಾವೃತ್ತಿ.

ಈ ಕಾರ್ಯಕ್ರಮದ ೬೦ಗವಾದ ಗೌರವ ನಿಧಿ ನನಗೆ ಅರ್ಪಿಸಲು ನನ್ನ ಅನುಮತಿ ಪಡೆಯಲು ನನ್ನ ಗೆಳೆಯರು ನನ್ನ ಕಡೆಗೆ ಬಂದಾಗಿ ಅದು ಯಶಸ್ವಿಯಾಗುವದೆಂಬ ವಿಶ್ವಾಸ ನನಗಿತ್ತು. ಆರವತ್ತೊಂದು ಸಾವಿರದ ವಷ್ಟೇ ಅಲ್ಲ ಇನ್ನೂ ಹೆಚ್ಚು—ಇಮ್ಮಡಿ ಮುಮ್ಮಡಿ ಸಹ ಕೂಡಿಸಲು ಆವರು ಶಕ್ತರಿತ್ತು; ಆದರೆ ಆಗಬೇಕಾದಷ್ಟು ಮಾತ್ರ ಆಗ ಬೇಕಾದ ಹಾಗೆ ಸಂಘಟನೆ, ಯೋಜನೆಗಳು ಆಗದ್ದರಿಂದ ಅಷ್ಟೊಂದು ಕೆಲಸವಾಗಲಿಲ್ಲ ಆ ನನ್ನ ಗೆಳೆಯ ೨ ಇಷ್ಟೊಂದು ಅಲ್ಪಾವಧಿಯಲ್ಲಿ ಇಷ್ಟು ಕೆಲಸ ಮಾಡಿದ್ದು ಸಣ್ಣ ಮಾತಲ್ಲ. ಸಂಘಟಿತರಾಗಿ ಕೆಲಸಮಾಡಿದರೆ ಮತ್ತು ಕೈಕೊಂಡ ಕಾರ್ಯವು ಯೋಗ್ಯವಿದ್ದರೆ ಇಚ್ಛಿತ ಫಲವು ದೊರೆತೇ ತೀರುವದೆಂಬುವದಕ್ಕೆ ಇದೊಂದು ಒಳ್ಳೇ ದೃಷ್ಟಾಂತವಿದೆ

ಈ ನಿಧಿಯನ್ನು ಕೂಡಿಸುವ ಕಾರ್ಯ ನಡೆದಾಗ ಸಂಕಲ್ಪಿತ ನಿಧಿಯಾದ ೬೦ ಸಾವಿರ ರೂಪಾಯಿಗಳು ಕೂಡುವದು ಕೇವಲ ಆ ಶಿಕ್ಷ, ಹಚ್ಚೆಂದರೆ ಹತ್ತೆಂಟು ಸಾವಿರ ರೂಪಾಯಿ ಕೂಡಬಹುದೆಂದು ಅನೇಕರು—ನನ್ನ ಆಪ್ತ ಮಿತ್ರರಲ್ಲಿ ಸಹ ಅನೇಕರು—ಅಂದದ್ದು ನನ್ನ ಕಿವಿಗಳಿಗೆ ಬಂದಿತ್ತು. ನಮ್ಮ ಕೆಲಸಗಾರರ ಕ್ರಿಯಾಶಕ್ತಿಯ ಅರಿವು ಆವರಿಗೆ ಇದ್ದಿಗಲಿಕ್ಕಿಲ್ಲ ಅಂಥವರು ಜಾಗೆ ಅನ್ನುವದು ಸ್ವಾಭಾವಿಕವಾದದ್ದು ಆದರೆ ನನಗೆ ಮಾತ್ರ ನನ್ನ ಗೆಳೆಯರ ಕರ್ತೃತ್ವ ಕ್ಷಯಲ್ಲಿ ಪೂರ್ಣ ವಿಶ್ವಾಸವಿತ್ತು ಇವರು ಕೂಡಿಸಬೇಕೆಂದು ಸಂಕಲ್ಪ ಮಾಡಿದ ೬೦ ಸಾವಿರ ರೂಪಾಯಿಗಳು ಕೂಡಿಯೇ ತೀರುವ ವೆಂಬ ಭರವಸೆ ನನಗೆ ಮೊದಲೇ ಇತ್ತು. ಇಷ್ಟೇ ಅಲ್ಲ, ಆವರು ಇದಕ್ಕೂ ಜೆಚ್ಚು ಹಣ ಕೂಡಿಸಬೇಕೆಂದು ನಿರ್ಧಾರ ಮಾಡಿದ್ದರೆ ಅದನ್ನು ಸಹ ಆವರು ಮಾಡಿಯೇ ತೀರುವ ವೆಂಬ ನಂಬಿಕೆಯೂ ನನಗಿತ್ತು ನನ್ನ ನಿಕಟವರ್ತಿಗಳ ಕೆಲಸ ಮಾಡುವ ಶಕ್ತಿಯ ಅರಿವು ನನಗಿರುವಷ್ಟು ಇತರರಿಗಿರುವುದು ಶಕ್ಯವಿಲ್ಲ. ಆದುದರಿಂದ ಆ ತರಹದ ಆನುಮಾನ ಇತರರಿಗೆ ಬರುವದು ಸ್ವಾಭಾವಿಕ

ನನ್ನ ಗೆಳೆಯರು ನನಗೆ ನಿಧಿಯನ್ನು ಕೊಡುವದೆಂದು ತಿಳಿದ ಗಳೇ ಆದರ ವಿನಿಯೋಗವನ್ನು ಹೇಗೆ ಮಾಡಬೇಕೆಂಬ ಬಗ್ಗೆ ನಾನು ವಿಚಾರಮಾಡಲಾರಂಭಿಸಿದೆ ಮುಂಬಯಿಯಲ್ಲಿ ಜರುಗಿದ ಇದೇ ತಿಂಗಳ ತಾ ೭ ರ ಸಭೆಯಲ್ಲಿ ನಾನು ಹೇಳಿದಂತೆ ಆ ನಿಧಿಯಲ್ಲಿಯ ಒಂದು ಕಾಸನ್ನು ಸಹ ನಾನು ನನ್ನ ಸ್ವಂತಕ್ಕಾಗಿ ಉಪಯೋಗಿಸಿಕೂಡದೆಂಬುದ ನ್ನಲ್ಲದೇ ಕೂಡಲೇ ನಿರ್ಧರಿಸಿದೆ ಮತ್ತು ಆದರಲ್ಲಿಯ ಪ್ರತಿಯೊಂದು ಕಾಸನ್ನೂ ಇಂಥಿಂಥ ಸಾರ್ವಜನಿಕ ಕಾರ್ಯಕ್ಕೆ ವಿನಿಯೋಗಿಸಬೇಕೆಂಬ ಸಂಕಲ್ಪವನ್ನೂ ಅಂದೇ ಮಾಡಿದೆ.

ಯಾವುದೊಂದು ವಿಷಯದ ನಿರ್ಧಾರಕ್ಕೆ ಬರುವ ಮೊದಲು ಆ ಬಗ್ಗೆ ಒಮ್ಮೆ ಬಿಟ್ಟು ಹತ್ತು ಸಲ ಕೂಲಂಕಷವಾಗಿ ವಿಚಾರ ಮಾಡುವದು, ಆ ಮೇಲೆ ನಿರ್ಧಾರಕ್ಕೆ ಬರುವದು, ಒಮ್ಮೆ ನಿರ್ಧಾರಕ್ಕೆ ಬಂದ ನಂತರ ಎಂತಹ ಪ್ರಸಂಗ ಬಂದರೂ ಯಾರು ಏನೇ ಹೇಳಿದರೂ ಆ ನಿರ್ಧಾರದಲ್ಲಿ ಮಾರ್ಪಾಟು ಮಾಡದಿರುವದೂ ನನ್ನ ಸ್ವಭಾವ: ಆದಕ್ಕನುಗುಣವಾಗಿ ನಾನು ಈ ಬಗ್ಗೆ ನಿರ್ಧಾರ ಮಾಡಿದ ನಂತರ ಇತ್ತೀಚೆಗೆ ನನ್ನ ಆನೇಕ ಮಿತ್ರರು ಆ ಹಣದ ವಿನಿಯೋಗವನ್ನು ಹೇಗೆ ಮಾಡಬೇಕೆಂಬುದರ ಬಗ್ಗೆ ಕೆಲವೊಂದು ಸೂಚನೆಗಳನ್ನು ಮಾಡಿದ್ದಾರೆ ಇನ್ನೂ ಅಂಥ ಸೂಚನೆಗಳು ಬರುತ್ತಲೂ ಇವೆ ಮತ್ತೆ ಕೆಲಜನ ಮಿತ್ರರು ಆ ಸಂಸ್ಥೆಗೆ ಇಷ್ಟು ಕೊಡಿರಿ, ಈ ಸಂಸ್ಥೆಗೆ ಇಷ್ಟು ಕೊಡಿರಿ; ಎಂದು ಹೇಳುತ್ತಲೂ ಇದ್ದಾರೆ, ಆದರೆ ಈ ಮೊದಲು ನಾನು ಮಾಡಿದ ನಿರ್ಧಾರದಲ್ಲಿ ಬದಲು ಮಾಡುವದು ನನಗೆ ಶಕ್ಯವಿಲ್ಲ ಹಾಗೆ ಮಾಡಿದರೆ ನನ್ನ ಸಂಕಲ್ಪವನ್ನು ನಾನೇ ಮುರಿದಂತಾಗುವದು, ಆದು ನನ್ನ ಸ್ವಭಾವಕ್ಕೆ ಒಗ್ಗದ ಮಾತು ನನಗೆ ಸೂಚನೆ ಮಾಡಿದ ನನ್ನ

ಉಡುಪಿಗೆ ಹೋಗಬೇಳು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಕಂಡಿತನಸು, ಇವುಗಳ ರುಚಿಯಬಗ್ಗೆ ಹೇಳಬೇಕೆ?

ಪ್ರೋಪ್ರಾಟರ್:— ಕೆ ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

(ಸ್ಥಾಪನೆ 1934)

ಚೆಯರ್‌ಮೆನ್: ಶ್ರೀ. ಎಮ್ ಓಟ ಎಮ್ ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ ಅಂತೆಯೇ ಆದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನ್ಯಾಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟ್ ಬಾಕ್ಸ್ ನಂಬ್ರ 142
ಮದ್ರಾಸು.

ಅಮೃತಾಂಜನ

ತಲನೋವು, ತಿರಿಗೋವೆದನೆ, ಉಳುಕು ನುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಟೀಳಿವಿಷಯುಂತಾದವು, ಪಕ್ಷವಾತ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ[ಮದ್ದು]ನವ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ

ಶರೀರದಲ್ಲಿಯ
ಅನಪೇ ಉಷ್ಣತೆಯನ್ನು
ಇದರಿಂದಲೇ ತೆಗೆದು
ಪಾಕಿರಿ
PEARL
Kadha
PURE HERBAL TONIC
ತುರಾದಾದ ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗೆದು ಹಾಕಿ ಕ್ಷೌತ್ಯವನ್ನು ಕಂಡಾಗುವದು, ಆಪಚನ ಅರ್ಜಾಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿ ಹುನ್ನು ಬೆಳಸುವದು ಧಾತು ಸ್ಥಾನ ಕ್ಷೀಣತೆಯ ಉತ್ತರತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು
ನಮ್ಮ ಹತ್ತಿರದ ಕಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲೆಯನ್ನು ತರಿಸಿ ಸೇವಿಸಲು ಪ್ರಾರಂಭಿಸಿರಿ
ಪರ್ಲ ಎಂಡ್ ಕಂಪನಿ
೧ ಮುಂಬಯಿ ೩೭

ಮಿತ್ರರು ಈ ವಿಷಯದಲ್ಲಿ ತಪ್ಪು ತಿಳಿದು ಕೊಳ್ಳಲಿಕ್ಕಿಲ್ಲೆಂದು ನನಗೆ ಭರವಸೆ ಇದೆ.

ಈ ಬಗ್ಗೆ ಸ್ವಲ್ಪ ವಿಶದವಾಗಿ ಹೇಳುವ ದಾದರೆ ಇದಗ್ಲಿಯ ಕೆಲವೊಂದು ಆಂಶವ ನ್ನು ರಾಷ್ಟ್ರೀಯ ವಿದ್ಯಾರ್ಥಿ ಸೇನೆ (National cadet corps)ಯಲ್ಲಿ ಕರೆ ಬೇತು ಹೊಂದುತ್ತಿರುವ ವಿದ್ಯಾರ್ಥಿಗಳಲ್ಲಿ ಉಚ್ಚ ಕ್ರಮಾಂಕ ಪಡೆದವರಿಗೆ ಪಾರಿತೋ ಷಕವನ್ನು ಕೊಡುವವರ ಸಲುವಾಗಿ ಭಾರತ ದ ಮುಖ್ಯ ಸೇನಾನಿಯಾದ ಜನರಲ್ ಕರಿಯಪ್ಪನವರ ಕಡೆಗೆ ಒಪ್ಪಿಸಬೇಕು; ! ಮತ್ತು ಅದಕ್ಕೆ 'ಜನಾಹರ ಪಾರಿತೋಷಕ' ಎಂದು ಹೆಸರಿಡಬೇಕೆಂಬ ವಿಚಾರವು ನನ್ನಲ್ಲಿ ಮೂಡಿದ್ದನ್ನು ಮುಂಬೈಯಲ್ಲಿ ಜಾಹೀರಪಡಿಸಿರುವೆನು. ಅದಕ್ಕೆ ಬೇಕಾಗುವ ಅನುಮತಿಯನ್ನು ಧೊರಕಿಸಲು ಯತ್ನವು ನಡೆದಿದೆ. ಈ ಕಾರ್ಯಕ್ಕೆ ೧/೪ ಹಣವನ್ನಾದರೂ ಕೊಡುವ ವಿಚಾರವು ನನ್ನಲ್ಲಿದೆ.

ನನ್ನ ಚಟುವಟಿಕೆಗಳಿಗೆ ಸಹಾಯವಾಗ ಬೇಕೆಂದು ಈಗೆರಡು ವರ್ಷಗಳ ಹಿಂದೆ ನನ್ನ ಮಿತ್ರರಲ್ಲಿ ಕೆಲವರು ಸುಮಾರು ೩೫ ಸಾವಿರ ರೂಪಾಯಿ ಕೂಡಿಸಿ ನನಗೆ ಕೊಟ್ಟರು. ಆ ಹಣವನ್ನೂ ನನ್ನ ನೇತೃತ್ವದಲ್ಲಿ ನಡೆಯುತ್ತಿದ್ದ 'ಜಯಹಿಂದ್' ವಾರ ಪತ್ರಿಕೆ ಮತ್ತು ಅದಕ್ಕೆ ಸಂಬಂಧಿಸಿದ ಆಸ್ತಿಗಳೆಲ್ಲವನ್ನೂ ಕೂಡಿಸಿ 'ಹಿಂದ ಸೇವಾಟ್ರಸ್ಟ್' ಎಂಬ ಒಂದು ವಿಶ್ವಸ್ತನಿಧಿ ನಿರ್ಮಿಸಿ, ಅದಕ್ಕೆ ಒಪ್ಪಿಸಿದೆ. ಈ ವಿಶ್ವಸ್ತ ನಿಧಿಯ ಉದ್ದೇಶವಾದರೂ ಜನತೆಯ ಶಿಕ್ಷಣ, ಸಂಘಟನೆ ಮತ್ತು ಉತ್ಕರ್ಷ ಕ್ಕಾಗಿಯೇ ಇರುವದರಿಂದ ಈಗ ನನಗೆ ಕೊಟ್ಟ ಹಣ್ಮಿಜಿಯಲ್ಲಿ ಉಳಿದುದನ್ನು ಹಿಂದ ಸೇವಾ ಟ್ರಸ್ಟಿಗೆ ಒಪ್ಪಿಸುವ ನಿರ್ಧಾರ ಮಾಡಿದ್ದೇನೆ. ನಾನು ಈ ಹಿಂದೆ, ಸೇವಾದಲ ವನ್ನು ನಡೆಸುತ್ತಿದ್ದಾಗ ಅನುಸರಿಸುತ್ತ ಬಂದಂತೆ ಒಂದೇ ಸಂಸ್ಥೆಗೆ ಆಂಟಿಕೊಂಡು ಅದರ ಮುಖಾಂತರವೇ ನನ್ನ ಇತರ ಎಲ್ಲ ಚಟುವಟಿಕೆಗಳನ್ನು ನಡೆಸುವದು ನನಗೆ ಯೋಗ್ಯವೆನಿಸುತ್ತದೆ. ಆದರಂತೆ ಈಗಲಾದರೂ ಇನ್ನು ಮುಂದಾದರೂ ಹಿಂದ ಸೇವಾ ಟ್ರಸ್ಟಿನ ಮುಖಾಂತರವೇ ನನ್ನ ಈಗಿನ ಕ್ಷೇತ್ರದಲ್ಲಿ ಬರುವ ಶ್ರಮಜೀವಿಗಳ ಸಂಘಟನೆ, ಹಳ್ಳಿಗರ ಆರೋಗ್ಯ ಮತ್ತು ಬುದ್ಧಿ ವಿಕಾಸಕ್ಕೆ ಪೋಷಕವಾದ ಗ್ರಂಥಾಲಯ ಇವುಗಳಿಗಾಗಿ ನನಗೆ ತೋರಿದಂತೆ ಸೇವೆ ಸಲ್ಲಿಸಲಾಗುವದು.

ನಾವು ಇಂದು ಪರದಾಸ್ಯದ ನೊಗ ಕಿತ್ತೊಗೆದು ಸ್ವತಂತ್ರರಾಗಿದ್ದೇವೆ. ಆದರೆ ಸುತ್ತಲೂ ನೋಡಿದರೆ, ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದಾಗ ನಮ್ಮಲ್ಲಿ ಬೆಳೆಯುತ್ತ ಬಂದಿದ್ದ ಶೀಲ, ಚಾರಿತ್ರ್ಯ, ತ್ಯಾಗ, ಕಷ್ಟಸಹಿಷ್ಣುತೆ ಗಳು ಇಂದು ನಮ್ಮಲ್ಲಿ ಇಲ್ಲದಾಗಿವೆ. ಎಲ್ಲಿ ನೋಡಿದಲ್ಲಿ ಅಸಂತೋಷವು ಪಸರಿಸುತ್ತಿದೆ. ನಾವು ಸ್ವತಂತ್ರರಾದೆವೆಂದು ಸಮೂಹಾನ ಪಡುವಸ್ಪರಲ್ಲಿ ಅನೇಕ ಬಗೆಯ ವಿಪತ್ತುಗಳ ನಿದರ್ಶನಗಳೂ ಪ್ರದರ್ಶನಗಳೂ ನಮ್ಮ ಕಣ್ಣೆದುರಿಗೆ ಬರಲಾರಂಭಿಸಿವೆ. ಸೂರು ವರ್ಷದ ಹೋರಾಟದಿಂದ ಗಳಿಸಿದ ಸ್ವಾತಂತ್ರ್ಯವನ್ನು ಸೂರೇ ಮೂರು ವರ್ಷಗಳಲ್ಲಿ ಗಳೆದು ಕೊಳ್ಳುವಂತಹ ಭೀಕರ ದೈನ್ಯವು ಕಾಣಿಸಿಕೊಳ್ಳುತ್ತಿದೆ. ಕೇವಲ ಶೀಲ ಬಲದಿಂದ ಪರಕೀಯರ ಗುಂಡು ಬಡಿಗಳನ್ನೆ ದುರಿಸಿದ ಅಂದಿನ ಧೀರ, ವೀರ, ತ್ಯಾಗೀ ಯೋಧರು ಇಂದು ತಮ್ಮ ತ್ಯಾಗವನ್ನು ಪೇಟಿಯಲ್ಲಿ ಲೀಲಾವಿಸಿಟ್ಟುಂತಾಗಿದೆ! ಇಷ್ಟಕ್ಕಾಗಿಯೇ ನಾವು ಸ್ವಾತಂತ್ರ್ಯಗಳಿಸಿದ್ದೇ? ಇದು ಹೀಗೇ ನಡೆದರೆ ನಮ್ಮ ಭವಿತವ್ಯವು ಭೀಕರವಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ. ಮುಂದಿನ ದಿನಗಳಂತೂ ನಮಗೆ ಕಗ್ಗತ್ತಲೆಯಂತೆ ತೋರುತ್ತಿವೆ. ಈಗ ಅನೇಕ ತೊಂದರೆಗಳನ್ನು ಜನತೆ ಅನುಭೋಗಿಸುತ್ತಿದ್ದರೂ ಬರಲಿರುವ ದಿನಗಳಗ್ಲಾಗಬಹುದಾದ ಬೇಗುದಿಯನ್ನು ನೆನೆದು ಕೊಂಡರೆ ಇಂದು ನಾವಿದ್ದುದು ಸುದಿನದಲ್ಲಿಯೇ ಎಂದು ಹೇಳಬೇಕಾಗುವದು.

ಈ ತರಹದ ಪರಿಸ್ಥಿತಿಗೆ ಕಾರಣರಾರು? ಜನತೆ ಕಾರ್ಯಕರ್ತರನ್ನೂ ಸರಕಾರವನ್ನೂ ದೂರುತ್ತಿದೆ. ಕಾರ್ಯಕರ್ತರು ತಮ್ಮವರಲ್ಲದವರನ್ನೂ ಸರಕಾರವನ್ನೂ ಜನತೆಯನ್ನೂ ದೂರಿಕೊಳ್ಳುತ್ತಿದ್ದಾರೆ. ಸರಕಾರವು ಜನತೆ ಸಹಕರಿಸುವದಿಲ್ಲವೆಂದು ಜನತೆಯನ್ನು ದೂರುತ್ತಿದೆ. ಆದರೆ ಹೀಗೆ ಪರಸ್ಪರರ ಮೇಲೆ ದೋಷಾರೋಪಣೆ ಮಾಡಿದರೆ ಪರಿಸ್ಥಿತಿ ಸುಧಾರಿಸಬಲ್ಲದೆ? ಇದು ಕಾರಣವೂ ಇಲ್ಲ; ಉಪಾಯವೂ ಅಲ್ಲ.

ಈ ರೋಗಿಷ್ಠ ಮೂಲವೆಂದರೆ ಜನತೆಯಲ್ಲಿ-ಜನತೆಯೊಂದಿಗೆ ಸರಕಾರ ಕಾರ್ಯಕರ್ತರು. ಸಾಮಾನ್ಯ ಜನತೆ ಎಲ್ಲರೂ ಬರುತ್ತಾರೆ. ಚಾರಿತ್ರ್ಯ, ಶೀಲ, ಕಷ್ಟ ಸಹಿಷ್ಣತೆ ಕಾಣದಂತಾದುದು. ಇವಿಲ್ಲದ ದೇಶವು ಮೊದಲು ಎಷ್ಟೇ ಉತ್ಕರ್ಷದಲ್ಲಿದ್ದರೂ ಅದರ ಅಧೋಗತಿ ಸನಿಹವಿಸ-ತ್ತಿದೆಯೆಂಬುದು ಖಂಡಿತ. ದೇಶವು ಪ್ರಗತಿಶೀಲವಾಗಬೇಕು; ದೇಶದ ಸಂಪದಭ್ಯುದಯವಾಗಬೇಕು; ಜನತೆ ನೆಮ್ಮದಿಯಿಂದ, ಸುಖ ಸಮಾಧಾನಗಳಿಂದ ಜೀವನ ಯಾತ್ರೆ ಸಾಗಿಸಬೇಕು. ಇವೆಲ್ಲವು ಆಗ ಬೇಕಾದರೆ ಜನತೆಯು ಶೀಲ-ಬಲಸಂವರ್ಧನೆ ಯಾಗಬೇಕು. ಕಾಂಚಿಂಬಳವಲ್ಲದಿದ್ದರೂ ರಾಜಕೀಯ ಜೀವನ ಕಲಹದಲ್ಲಿ ಮುಪ್ಪನ್ನು ಕಂಡ ನನ್ನಂತಹನ ಮನಶ್ಚಕ್ಷುವಿನಿಂದಲು ಆ ಭೀಕರ ಭವಿತವ್ಯದ ಕರಾಳ ಚಿತ್ರವು ಬಂದು ನಿಲ್ಲುತ್ತಿದೆ. ಇಂಥ ಪ್ರಸಂಗದಲ್ಲಿ ದೇಶವನ್ನು ಸಂರಕ್ಷಿಸಬಲ್ಲವರೆಂದರೆ ಜಾಗೃತ್ತ ಶೀಲರಾದ ತರುಣರು. ತರುಣರ ಸಂಘಟನೆಯನ್ನೇ ಮೂಲ ಮಂತ್ರವನ್ನಾಗಿಟ್ಟುಕೊಂಡು ನಾನು ಬದುಕಿರುವ ವರಗೆ, ಅದೇ ಕಾರ್ಯವನ್ನೇ ಮುಂದೆ ಸಾಗಿಸುವವನು. ದೇಶದ ತರುಣರು ಚರಿತ್ರಶೀಲರಾಗಿ, ವಾಗ್ಮಿಗಳಾಗಿ, ರಾಜಕಾರಣಿಗಳಾಗಿ, ಯೋದ್ಧರಾಗಿ, ತ್ಯಾಗಿಗಳಾಗಿ, ದೇಶದ ಅಡಳಿತದ ಅಂಗೋಪಾಂಗಗಳನ್ನು ಬಲಿಷ್ಠ ಮಾಡಬೇಕಾದರೆ ತರುಣರಿಗೆ ಯೋಗ್ಯ ಶಿಕ್ಷಣ, ಯೋಗ್ಯ ಅವಸರ, ಯೋಗ್ಯ ಮಾರ್ಗದರ್ಶನ, ಯೋಗ್ಯ ಸಂಘಟನೆ ಇವು ಅವಶ್ಯ.

ಕೊನೆಯದಾಗಿ ದೇಶದಲ್ಲಿಯ ನನ್ನ ಅನೇಕ ಮಿತ್ರರು ನನ್ನ ವಿಷಯಕ್ಕೆ ಆಸಕ್ತಿಯನ್ನು ತೋರಿದ್ದಾರೆ. ಅವೆಲ್ಲವುಗಳಿಗೆ ನಾನು ಆಭಾರನೋ ಅನಭಾರನೋ ನನಗೆ ತಿಳಿಯದು. ಆ ಆಭಾರತೆ ನನ್ನೆಲ್ಲಿ ಬಲಿಯೆಂದು ನಾನು ಪರಮಾತ್ಮನಲ್ಲಿ ಪ್ರಾರ್ಥಿಸುವೆ. ಮತ್ತು ಪಂದೇಶ ಹಾಗು ದೇಶದ ಬೇರೆ ಬೇರೆ ಭಾಗಗಳಲ್ಲಿ ವಾಸಿಸುತ್ತಿರುವ ನನ್ನ ಅನೇಕ ಸ್ನೇಹಿತರು ಸಹಕಾರ್ಯಕರ್ತರು ಮತ್ತು ಅಪ್ತ ಬಾಂಧವರು ಈ ಸಂದರ್ಭ ನಿಮಿತ್ತ ಶುಭ ಸಂದೇಶಗಳನ್ನೂ, ಶುಭಾಶೀರ್ವಾದಗಳನ್ನೂ ಅಭೀಷ್ಟ ಚಿಂತನನನ್ನೂ ಕೋರಿದ್ದಾರೆ. ಅವರೆಲ್ಲರಿಗೂ ನಾನು ಸದಾ ಕೃತಜ್ಞನು.

ನನ್ನ ಈ ೬೦ನೇ ಹುಟ್ಟು ಹಬ್ಬವನ್ನು ನೆರ ನೇರಿಸಬೇಕೆಂದು ಸೂಚಿಸಿದ, ಮತ್ತು ಈ ಸೂಚನೆಯನ್ನು ಕಾರ್ಯರೂಪದಲ್ಲಿ ತರಲು ಹಗಲಿರುಳು ಪಾಡಿದ ಕೇಂದ್ರ ಸಮಿತಿಯ ನನ್ನ ಗೆಳೆಯರಿಗೆ ನಾನು ಋಣಿಯಾದ್ದೇನೆ.

'ಲೋಕಾಸ್ಸಮಸ್ತಾ ಸುಖಿನೋಭವಂತು'

ಜಯಹಿಂದ್!

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಪೂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kela Nambiar,
Vaidya.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಇವರೆ
ನವಜೀವಾತು
ಎಂಬ
ಸೂತಶಿಖಾ ರಸಾಯನ

ಹೆಚ್ಚಿನ ಸೂಹಿತಿಗೆ—ಡಾ॥ ಯಂ. ಸಿ. ಶಾಸ್ತ್ರಿ, ಎಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ವಾಪಕಿಸ್ಥರು:—ಡಾ॥ ಐ. ಕೆ. ಶಿವರಾಮರಾವ್, ಕುಂಜಬೆಟ್ಟು, ಉಡುಪಿ.

— ಮುಕ್ಕಳನ್ನು ಹಡೆಯುವುದು ಸಾಕು —

ಆರೋಗ್ಯ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬೆಳಶೀಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಸ್ರಕಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟು ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಭಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಏಟಿ-

ಶಾಖೆಗಳು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—
ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಸೂರ್ಮಿ ಡಾವಣಗೇರಿ
ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕನಮಡವಾರ ಕೆನಿಸ್ಟ್ರೀ ಪಾವರ್ಸ್ ಬ್ಯಾಂಗ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರದಲ್ಲಿ ಹರದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಜೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಭಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಸ್ಣದಿಂದ ಚೀರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಬೈಕಾಲು ಶೂಲಿ, ಆರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬೆಳಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾತಾ, ಕುಂಬಳಕಾಯಿ, ಒಳೆಣ್ಣೆ ಬಿಡಬೇಕು.

ಡಾಕ್ಟರ್ ೧ಕ್ಕೆ ಕರೂ. ಪೋಸ್ಟ ಚಾರ್ಜ ೮ ಆಣೆ

ಸೂಚೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ
ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ,
ಡಾವಣಗೆರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಸೂರ್ಮಿ ಡಾವಣಗೆರಿ.

ಪತ್ರವ್ಯವಹಾರ ಮಾಡತಕ್ಕ ಸೂಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಸಂಸ್ಕೃತಿ ವಿಭಾಗ

ಪ್ರಾಚೀನ ವ್ಯವಹಾರ ರಂಗ ಮತ್ತು ಸ್ತ್ರೀ

ಲೇಖಕರು- ಶ್ರೀಮತಿ ಎಸ್. ರತ್ನಮ್ಮ, ನಂಜನಗೂಡು

ಪುರುಷನಿಗೆ ಹೆಂಡತಿ ಮತ್ತು ಮಗುವಿಗೆ ತಾಯಿಯಾಗಿ ಮನೆಯ ಒಳಗೆ ಮಾತ್ರ ಸೀಮಿತಳಾಗಿದ್ದ ಸ್ತ್ರೀ ಇಂದು ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಪುರುಷನಿಗೆ ಸಮಾನವಾಗಿ ಕೆಲಸ ಮಾಡುತ್ತಿದ್ದಾಳೆ. ಸಮಾಜದ ಪ್ರಗತಿಗೆ ಸ್ತ್ರೀಯ ಸಹಕಾರ ಅತ್ಯಗತ್ಯವೆಂಬ ಭಾವನೆ ಎಲ್ಲೆಡೆ ಬೆಳೆದಿದೆ. ಸ್ತ್ರೀಯ ಸ್ಥಾನಮಾನಗಳು ಹೆಚ್ಚಿವೆ. ಆದರೆ ಇಂದಿನ ಸ್ತ್ರೀಯ ಸ್ಥಿತಿಗತಿಗಳು ಪ್ರಾಚೀನ ಕಾಲದಲ್ಲಿ ಹೇಗಿದ್ದವು? ಸ್ತ್ರೀಯ ಸ್ಥಾನಮಾನಗಳು ಹೇಗಿದ್ದವು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟಾಗ ಸಿಗುವ ಉತ್ತರಗಳು ಅಷ್ಟಾಗಿ ಸಮಾಧಾನಕರವಾಗಿಲ್ಲ. ಪ್ರಾಚೀನ ಕಾಲದಲ್ಲಿ ಸ್ತ್ರೀಯ ಸ್ಥಾನಮಾನಗಳು ಅಷ್ಟೊಂದು ಉತ್ತಮವಾಗಿರಲಿಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಸ್ತ್ರೀಯ ಸ್ಥಾನಮಾನಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದಿವೆ. ಪ್ರಾಚೀನ ಕಾಲದಲ್ಲಿ ಸ್ತ್ರೀಯ ಸ್ಥಾನಮಾನಗಳು ಹೇಗಿದ್ದವು? ಎಂಬುದನ್ನು ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು. ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಸ್ತ್ರೀಯ ಸ್ಥಾನಮಾನಗಳು ಆಕೆಯ ವ್ಯಕ್ತಿತ್ವ ಮತ್ತು ಜೀವನದ ಬಗೆಗಿನ ಸಮಾಜದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ. ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಸ್ತ್ರೀಯ ಸ್ಥಾನಮಾನಗಳು ಆಕೆಯ ಜೀವನದ ಬಗೆಗಿನ ಸಮಾಜದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ.

ಪ್ರಾಚೀನ ಕಾಲದಲ್ಲಿ ಸ್ತ್ರೀಯರು ಮನೆಯ ಒಳಗೆ ಮಾತ್ರ ಸೀಮಿತರಾಗಿದ್ದರು. ಮನೆಯ ಹೊರಗಿನ ಪ್ರಪಂಚದ ಅರಿವು ಅವರಿಗೆ ಇರಲಿಲ್ಲ. ಮನೆಯ ಹೊರಗಿನ ಪ್ರಪಂಚದ ಅರಿವು ಪುರುಷನಿಗೆ ಮಾತ್ರ ಇತ್ತು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆದು ಮನೆಯ ಒಳಗಿನ ಸ್ತ್ರೀಯರಿಗೆ ಅದನ್ನು ತಿಳಿಸಿ ಹೇಳಬೇಕಾಗಿತ್ತು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪ್ರಾಚೀನ ಕಾಲದಲ್ಲಿ ಸ್ತ್ರೀಯರ ಸ್ವತಂತ್ರ ಜೀವನ

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಸ್ತ್ರೀಯರ ಸಂಸ್ಕೃತಿಯ ಪ್ರಭಾವ

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಸ್ತ್ರೀ ಪುರುಷರ ಗೌರವದ ಚಿಹ್ನೆ

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು. ಪುರುಷನು ಮನೆಯ ಹೊರಗಿನ ಪ್ರಪಂಚದ ಅರಿವನ್ನು ಪಡೆಯಲು ಅನೇಕ ಮಾರ್ಗಗಳಿದ್ದವು.

EDITED, PRINTED & PUBLISHED BY K. H. SHETTY AT THE NAVAYUGA PRESS, UDI I, S. INDIA.

Regd No. M. 3618 Estd: 1921 ಸ್ಥಾಪನೆ 30ನೇ ವರ್ಷ 15-6-1950

LICENCE No. 31
Licensed to Post without Prepayment

FOUNDER:
Sri A B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ 42

NAVAYUGA WEEKLY Post Box No. 22 UDIPI, S. K.

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 42

ಸಂದರ್ಭ ಸಾಧನೆ

ನಮ್ಮ ಜನಜೀವನದಲ್ಲಿ ಬಾಡದಿಂದ ತೊಡಿಯ ವರೆಗೆ– ಅಲ್ಪ ವಿಷಯಗಳಿಂದ ಆರಂಭಿಸಿ ಅತಿ ಮಹತ್ವದ ಸಂಗತಿಗಳ ವರೆಗೆ– ಸಂದರ್ಭವನ್ನುಗುಣವಾಗಿ ಸ್ವಾರ್ಥ ಸಾಧನೆ ಮಾಡುವ ಚಟವೇ ವ್ಯಾಪಿಸಿ ಕೊಂಡಿದೆ.

'ಬಿಸಿಯಿದ್ದಾಗಲೇ ಬಡಿಯಬೇಕು' 'ಹಾಲಿದ್ದಾಗಲೇ ಹಬ್ಬ' 'ಸಂಕ ಮುರಿದಲ್ಲೇ ಸ್ನಾನ' ಮುಂತಾದ ಗಾದೆಗಳು ನಮ್ಮಲ್ಲಿವೆ. ಯೋಗ್ಯ ಸಂದರ್ಭವೊದಗಿದಾಗ ಅಲಸ್ಯ ತಾಳದೆ ಕೆಲಸ ಮಾಡಿ ಬಿಡಬೇಕೆಂಬುದೇ ಇವುಗಳ ತಾತ್ಪರ್ಯ. ಪ್ರಸಂಗಾವಧಾನತೆ– ಸಂದರ್ಭೋಚಿತ ವರ್ತನೆ– ಇರಬೇಕಾದವುಗಳೇ. ಆದರೆ ಉತ್ತಮಾಧಮ ವ್ಯತ್ಯಾಸವು ಇಲ್ಲಿಯೂ ಇದ್ದೇ ಇದೆ. ಸ್ವಾರ್ಥಕ್ಕಾಗಿ ಸಂದರ್ಭ ಸಾಧನೆ ಮಾಡುವ ಮತ್ತು ಕಾರ್ಯ ಸಂದರ್ಭವನ್ನು ಕಳಕಳ್ಳಿದಿರುವ, ಎರಡು ವಿಧಾನಗಳು ಪರಸ್ಪರ ವಿರುದ್ಧವಾದವುಗಳು. ಈ ವೈಕಿ ನಮ್ಮ ಜನಜೀವನದಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವ ದೆಂದರೆ ಅಧಮ ವಿಧಾನವೇ.

'ಕಡ್ಡಿಗಾದರೂ ತಾಲವಿದೆ' ಎಂಬಂತೆ ಎಂತಹ ಅಲ್ಪ ಮನುಷ್ಯ ಅಥವಾ ಅಲ್ಪ ವಸ್ತುವಾದರೂ ಕೆಲಸಕ್ಕೆ ಬೀಳುವ ಸಂದರ್ಭಗಳಿವೆ. ಅಂತಹ ಸಂಧಿಯೊದನಿದಾಗ ಜೀವನ ಸಾರ್ಥಕತೆಯ ದೃಷ್ಟಿಯಿಂದ ಕಾರ್ಯೋಪಯೋಗಕ್ಕೆ ಬೀಳುವದೇ ಉತ್ಕೃಷ್ಟ ವಿಧಾನವಾದರೆ, ಅಪೂರ್ವವಾಗಿ ದೊರೆತ ಆ ಮೆಟ್ಟಿಲೆಯನ್ನು ಸ್ವಾರ್ಥ ಸಾಧನೆಗಾಗಿ ವಿನಿಯೋಗಿಸುವುದು ನಿಕೃಷ್ಟ ವಿಧಾನ. ಇಂತಹ ಉತ್ಕೃಷ್ಟ-ನಿಕೃಷ್ಟ ವರ್ತನೆಗಳ ನಿದರ್ಶನಗಳು ಗತಕಾಲದ ಸ್ಥಿತಿಗತಿಗಳಿಂದಾರಂಭಿಸಿ ಪ್ರಚಲಿತ ಜನ ಜೀವನದ ವರೆಗೂ ಬೇಕಾದಷ್ಟಿವೆ.

ರಾಮಾಯಣ, ಮಹಾಭಾರತದ ರಾಜ ನೀಯವನ್ನು ಅವಲೋಕಿಸಿದರೂ ರಾವಣ, ಕೌರವ, ಮೊದಲಾದವರು ತಮಗೆ ದೊರೆತ ಸಂದರ್ಭಗಳನ್ನು ತಮ್ಮ ದುಸ್ಸಾಧನೆಗಳಿಗಾಗಿ ವಿನಿಯೋಗಿಸಿದ್ದುದು ಕಂಡು ಬರುತ್ತಿದೆ. ರಾವಣನಿಂದಾದ ಸೀತಾಪಹರಣ, ದುರ್ಯೋಧನನಾಡಿದ್ದ ದ್ಯೂತ ಮುಂತಾದವುಗಳೇ ಇದಕ್ಕೆ ನಿದರ್ಶನ.

ಭಾರತದ ರಾಜರು ಪರಸ್ಪರ ದ್ವೇಷಾಸೂಯೆ ಕಟ್ಟಿಕೊಂಡು ತಮ್ಮೊಳಗೆ ಜಗಳಾಡುತಿದ್ದ, ಮತ್ತು ಪರಕೀಯರ ಆಕ್ರಮಣದ ಕುರಿತು ಅಸಡ್ಡೆ ವಹಿಸಿದ್ದ ಸಂದರ್ಭದಲ್ಲೇ; ಇಲ್ಲಿ ಮೊಗಲರ ಪ್ರವೇಶವಾಗಿದ್ದಿತೆಂಬುದು ಚರಿತ್ರೆಯಿಂದ ತಿಳಿದುಬರುತ್ತದೆ. ಆ ಮೇಲೆ ಬ್ರಿಟಿಷರು ಇಲ್ಲಿ ತಳವೂರಿದುದಂತೂ, ವ್ಯಾಪಾರದ ನೆವದಿಂದ ಒಳಪ್ರವೇಶಿಸುವ ಸುಯೋಗ ಮತ್ತು ಹಿಂದೀ ರಾಜರೊಳಗಿನ ಘರ್ಷಣೆಯ ದೆಸೆಯಿಂದ ಒಂದಲ್ಲೊಂದು ಪಕ್ಷ ವಹಿಸಿ ಸುಸಂದರ್ಭದೊರೆತುದರಿಂದಲೇ. ಇದು ಚರಿತ್ರಾಭ್ಯಾಸಿಗಳಿಗೆಲ್ಲರಿಗೂ ಮನನವಾಗಿರುವ ವಿಷಯ.

ಭಾರತವನ್ನು ವಶಪಡಿಸಿಕೊಂಡ ಮೇಲೆ ತಮಗೆ ದೊರೆತ ಪ್ರತಿಯೊಂದು ಸಂದರ್ಭವನ್ನೂ ಬ್ರಿಟಿಷರು ತಮ್ಮ ಆಡಳಿತೆಯ ಸುಸ್ಥಾಪನೆಗಾಗಿ ಯಾವ ರೀತಿ ಉಪಯೋಗಿಸಿಕೊಂಡರೆಂಬುದು ಸರ್ವಶ್ರುತ ಸಂಗತಿ. ಶಸ್ತ್ರ ಅಥವಾ ಕಾನೂನಿನ ಅಧಾರಕ್ಕಿಂತ ಹೆಚ್ಚಾಗಿ ಸಂದರ್ಭ ಸಾಧನೆಯ ಮೂಲಕವೇ ಬ್ರಿಟಿಷರ ಆಡಳಿತೆಯು ಇಲ್ಲಿ ಸರ್ವವ್ಯಾಪಿಯಾಗಿದ್ದಿತು. "ಜೋಹುಕುಂವಾಲ"ವರ್ಗವನ್ನು ನಿರ್ಮಿಸಿ ಹಾಕಿ—ಜಾತಿ ದ್ವೇಷಾಗ್ನಿಗೆ ಗಾಳಿ ಹಾಕಿ—ಅನ್ಯ ಬಿದ್ದಲ್ಲೆಲ್ಲಾ ಲಂಚರೂಪಿ ಸವಲತ್ತು, ಸಲಕರಣೆಗಳನ್ನು ಕೊಟ್ಟು—ವಿವಿಧ ರೀತಿಯ ಮೋಹ, ಮಾಯೆಗಳನ್ನು ಬೀರಿ— ತಮ್ಮ ಅಧಿಕಾರವು ಸುಭದ್ರ ಹಾಗೂ ಸುಪ್ರಧಾನಿಯವಾಗುವಂತೆ ಬ್ರಿಟಿಷರು ತಮಗೆ ದೊರೆತ ಪ್ರತಿ ಸಂದರ್ಭವನ್ನೂ ಸಫಲಗೊಳಿಸಿಕೊಂಡಿದ್ದರು. ಕೊನೆಗಾದರೂ, ಇನ್ನಂತಹ ಸಂದರ್ಭವಿಲ್ಲವೆಂಬುದು ಖಚಿತವಾದ ಮೇಲೆಯೇ ಅವರು ಭಾರತವನ್ನು ಬಿಟ್ಟು ಹೋದರು.

ಕಾಂಗ್ರೆಸಿನಲ್ಲಿರುವ ಸ್ವಾರ್ಥಿ ಸಂದರ್ಭ ಸಾಧಕರ ಕಥೆಗಳಂತೂ ಈ ದಿನಗಳಲ್ಲಿ ನಿತ್ಯದ ಮಾತಾಗಿವೆ. ಹೆಚ್ಚೇಕೆ? ಇಡೀ ರಾಷ್ಟ್ರದ ಇಂದಿನ 'ಸರಕಾರೀ ಶಾಸ್ತ್ರ'ಗಳ ಕಡೆಗೆ ವಿಮರ್ಶಾತ್ಮಕ ದೃಷ್ಟಿ ಬೀರಿದರೆ, ಅಲ್ಲಿ ಸಂದರ್ಭ ಸಾಧಕರೇ ಬಹಳ ಮಂದಿ ಎಂಬುದು ಹೊಳೆಯದಿರದು.

ಈಗ ಕಾಂಗ್ರೆಸ್ ರಾಜ್ಯಭಾರವಿರುವ ದರಿಂದ ಈ ಸಂದರ್ಭದಲ್ಲೇ ತಮ್ಮ ಬೇಳೆ ಬೇಯಿಸಿಕೊಳ್ಳಬೇಕೆಂದು ಸ್ಥಾನ ಮಾನ ಮತ್ತಿತರ ಲಾಭಗಳಿಗಾಗಿ ಸ್ಪರ್ಧೆ, ಸಂಚು, ಹಂಚಿಕೆಗಳೆಷ್ಟೋ ನಡೆದಿವೆ; ನಡೆಯುತ್ತಾ ಇವೆ. ಅಧಿಕಾರದ ದುರುಪಯೋಗ—ಅನಧಿಕಾರಿಗಳು ಕೂಡಾ ಆಡಳಿತೆಯಲ್ಲಿ ಕೈ ಹಾಕುವ ಅಧಿಕಪ್ರಸಂಗ–ತಮಗೆ ಬೇಕಾದವರಿಗೆ ಹುದ್ದೆ, ಲಾಭ ಮುಂತಾದುವುಗಳನ್ನು ದೊರಕಿಸಿ ಕೊಡುವ ಒಳಸಂಚು, ಇತ್ಯಾದಿ, ಇತ್ಯಾದಿ ಇಂದು ಮಿತಿಮೀರಿ ನಡೆದಿರುವಂತೆ ಕಾಣುತ್ತಿದೆ. ಎಲ್ಲವೂ ಸಂದರ್ಭಸಾಧನೆ!

ತಮ್ಮ ಅಧಿಕಾರವು ಸುಭದ್ರವಾಯಿತೆಂದು ಖಂಡಿತವಾಡಿಕೊಂಡವರು ಅಥವಾ ಯಾವುದೇ ರೀತಿಯಿಂದ ಇಷ್ಟಾರ್ಥಸಿದ್ಧಿ ಹೊಂದಿದವರು ಅವಕಾಶದ ಸಂದರ್ಭವಿಲ್ಲವೆಂಬ ವಿಶ್ವಾಸ ಮೊಳೆತೊಡನೆ ಎಂತಹ ನಿರಂಕುಶ ಮನೋವೃತ್ತಿಯನ್ನು ಪ್ರದರ್ಶಿಸಬಹುದಾಗಿರೆಂಬುದು ನಿತ್ಯಾನ ಭವದ ಸಂಗತಿ. ಅಂತೆಯೇ ಜವಾಬ್ದಾರಿ ಸ್ಥಾನಗಳಿಗೆ ಆಯ್ಕೆಯಾಗಿರುವ ನಿಲ್ಲುವ ಸಂದರ್ಭವೊದಗಿದವರು ಎಂತಹ ಸ್ವೇಚ್ಛಾವರ್ತಿಗಳಾಗುತ್ತಾರೆಂಬುದೂ ಸಗೋಚರ ವಿಷಯ. ಎಲ್ಲವೂ ಸಂದರ್ಭಾನುಸಾರವಾಗಿ!

ಕೆಲಸಗಾರ, ಸಾಲಗಾರ, ವ್ಯಾಪಾರ ವಹಿವಾಟುಗಾರ, ಮುಂತಾದವರ ಸಂಬಂಧ ವ್ಯವಹಾರಗಳಲ್ಲೂ ಸಂದರ್ಭಾನುಸಾರವಾಗಿ ಏರುತಗ್ಗುಗಳಾಗುತ್ತಿರುವುದು ಪ್ರಪಂಚದ ಮುಖ್ಯ ಅನುಭವಗಳಲ್ಲೊಂದು. 'ವಿಶೇಷ ಪ್ರಾಯಶಿಯೋಗುವ ಸಂದರ್ಭ ಬಂದಿದೆ'ಎಂದಾದರೆ ಸರಿ–ಆಗ ಯಾರೇ ಆದರೂ, ಯಾವುದೇ ಆದರೂ ಆತ್ಯಪರೂಪ ಅಥವಾ ಅತಿರೇಕ ತುಟ್ಟಿ! 'ಅಭಾವ' 'ಕಳ್ಳಸಂತೆ' ಮುಂತಾದ ಅವಾಂತರಗಳು ಹುಟ್ಟಿರುವುದು ದುಸ್ಸಂದರ್ಭಸಾಧಕರಿರುವುದರಿಂದಾಗಿಯೇ.

ರಥದ ಕೀಲುತಪ್ಪಿ ಮುಗ್ಗರಿಸಿ ಬಿದ್ದಲ್ಲಿಯೇ ಕರ್ಣನನ್ನು ಹೊಡೆಯಲು ಅರ್ಜುನನನ್ನು ಪ್ರೇರೇಪಿಸಿದ ಕೃಷ್ಣನಂತೆ, ತಮಗಾಗದವರು ಆಪತ್ಕಾಲದಲ್ಲಿ ಸಿಲುಕಿಕೊಂಡ ಸಂದರ್ಭ ನೋಡಿ ವೈರ ಸಾಧಿಸಿಕೊಳ್ಳುವವರು–ಸಂದರ್ಭ ನೋಡಿ ಹುಲಿಗೆ, ಪುಸಲಾಯಿಸುವಿಕೆ, ವಂಚನೆಗಳನ್ನು ನಡೆಸುವವರು–ಸಂದರ್ಭೋಚಿತವಾಗಿ ಚಾಡಿ, ತರಳೆ, ಅತಿಶಯೋಕ್ತಿ, ಬಣ್ಣದ ಮಾತುಗಳನ್ನಾಡಿ ಕೆಲಸ ಕೆಡಿಸುವವರು ನಿತ್ಯ ಜೀವನದಲ್ಲಿ ಕಾಣಸಿಗುತಿದ್ದಾರೆ; ಇದಿರು ಬೀಳುತಿದ್ದಾರೆ.

ಕಳ್ಳ ಸಂತೆ ಮೂಲಕ ಅಥವಾ ಕೊಲೆ, ದರೋಡೆ, ವಂಚನೆ ಮುಂತಾದ ದುರ್ವಿಧಾನಗಳಿಂದ ಶ್ರೀಮಂತರಾಗಿ ಮೆರೆದಾಡುವವರೆಲ್ಲರೂ ಸಂದರ್ಭ ನೋಡಿ ಸ್ವಾರ್ಥ ಗಳಿಸಿಕೊಂಡ ಮಹಾನುಭಾವರೇ.

ಈ ರೀತಿ ಸಂದರ್ಭದ ದುರುಪಯೋಗಗಳು ಎಲ್ಲಾ ಕಾಲ ಮತ್ತು ಎಲ್ಲಾ ರಂಗಗಳಲ್ಲಾ ನಡೆದಿವೆ. ಅವೇ ರೀತಿ ಸಂದರ್ಭದ ಸದುಪಯೋಗಗಳ ನಿದರ್ಶನಗಳು ಕೂಡಾ ಅಂದಿನಿಂದೀವರೆಗೂ ಬೇಕಾದಷ್ಟು ಇವೆ.

ಪುರಾಣ, ಚರಿತ್ರೆ ಮತ್ತು ಅಧುನಿಕ ಕಾಲಗಳ ಪ್ರತಿಯೊಬ್ಬ ಮಹಾ ಸ್ತ್ರೀ ಪು

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connections, please consult us.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು 14—6—1950ರಿಂದ

ಮಹಾ ಪತಿವ್ರತೆಯೊಬ್ಬಳು ಮುಂದಿ ತುಳಿದು ಕೋಗುವ ಕಾಡು ಕಲ್ಲಾದಳು.

— ಅವಳ ಕರುಣಕಥೆಯೇ —

ಸತಿ ಅಹಲ್ಯಾ

ಕನ್ನಡ ಕೊಟ್ಟಿಸ್, ಸಪ್ಪು, ಉಲ್ಲಾಸ್, ಕುಕ್ಕೂ ಮೊವಲಾದವರು.

ಬರುವ ಚಿತ್ರ: ಕನ್ನಿಯಿನ್ ಕಾದಲ್

ಅಂಜಲಿದೇವಿ, ಮೋಹನ್, ಲಲಿತಪದ್ಮಿನಿ, ಪುಳಿಮೂಟೆ ಮೊದಲಾದವರು.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು

ಇದೇ ತಾ. 10ರಲ್ಲು ಸಂಜೆ ೪½ಗಂಟೆಯಿಂದ ಮೇನ್ ಶ್ರೀ ಎ. ಬಿ. ಕೃಷ್ಣರಾಜರ ಆಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಹಾಲಿನಲ್ಲಿ ಗಾಂಧಿಜೀ ಮತ್ತು ಡಾ। ರಾಜೇಂದ್ರ ಪ್ರಸಾದರ ಭಾವಚಿತ್ರಗಳನ್ನಿಡಬೇಕೆಂದು ತಿಳಿಸಿದ ಮದ್ರಾಸು ಸರಕಾರದ ಸೂಚನೆಯನ್ನು ಅಂಗೀಕರಿಸಲಾಯಿತು. ಶ್ರೀ ಟಿ. ರಮೇಶ ಸೈಗಳು ಡಾ। ರಾಜೇಂದ್ರ ಪ್ರಸಾದರ ಪರವನ್ನು ಉಚಿತವಾಗಿ ಕೊಡುತ್ತೇನೆಂದು ತಿಳಿಸಿದ ಬಗ್ಗೆ ಅವರಿಗೆ ಧನ್ಯವಾದವೀಯಲಾಯಿತು. [illegible]ಉಡುಪಿ-ಮಂಗಳೂರು- ಧರ್ಮಸ್ಥಳ ರೈಲ್ವೆಮಾರ್ಗ ಈಗ ಹಾಳಲು ಸಾಧ್ಯವಿಲ್ಲವೆಂದು ತಿಳಿಸಿದ ಸರಕಾರಿ ಯಾದಾಸ್ತನ್ನು ರಿಕಾರ್ಡು ಮಾಡಲಾಯಿತು. ಸರಕಾರಿ ಸೂಚನೆಯಂತೆ ಕಳದ ಏಪ್ರಿಲ್ ತಿಂಗಳಿನಿಂದ ವೃತ್ತಿ ಕೆರಿಗೆಯ ಪರವನ್ನು ಜಾಸ್ತಿ ಮಾಡುವದಾಗಿ ನಿರ್ಣಯಿಸಲಾಯಿತು. ಹಳೆ ಪೋಷ್ಟಾಫೀಸು ರಸ್ತೆಗೆ ತಾರು ಹಾಕುವುದೆಂದಾಯಿತು. ಈ ಬಗ್ಗೆ [illegible]ಸರಕಾರದ ವಿಶೇಷ ಸಹಾಯ ಧನವನ್ನೂ ಅಪೇಕ್ಷಿಸಲಾಯಿತು. ಮುನ್ಸಿಪಲ್ ಲಾಯರ್ರಿಗೆ ವಕೀಲ ಶ್ರೀ ಎಮ್. ವಿಠಲ ಕಾಮತರು ಕನ್ನಡ-ಇಂಗ್ಲಿಷು ಪುಸ್ತಕಗಳನ್ನು ಧರ್ಮಾರ್ಥ ಕೊಟ್ಟ ಬಗ್ಗೆ [illegible]ಅವರನ್ನು ಅಭಿನಂದಿಸಲಾಯಿತು.

ಪ್ರಕಟಣೆ

ಉಡುಪಿ ಡಿ ಮುನ್ಸಿ. ಕೋರ್ಟಿನಲ್ಲಿ

S C No 139/1950

ಬೊಗ್ರಸೆಟ್ಟಿ —ವಾದಿ.

ಮತ್ತು

ಯಾಕೋಬ ಸಾಹೇಬ, ಫಕೀರ ಸಾಹೇಬನ ಮಗ, ಉಡ್ಪಿ ತಾಲೂಕು ನಂಬ್ರ 76ನೆ ಬಡಗಬೆಟ್ಟು ಗ್ರಾಮ. —ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಯಿದೂ ಮೂಲ್ಕ ತಿಳಿಸುವದೇನೆಂದರೆ—

ಸದ್ರಿ ಪ್ರತಿವಾದಿಯು ವಾದಿಗೆ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಕೂಡಾ ರೂ. 62-5-6ಕ್ಕೆ ವಾದಿಯು ದಾಖ್ಲು ಮಾಡಿದ ಸೂಟ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಯ ಹಾಜ್ರು ಬಗ್ಗೆ ತಾರೀಕು 7-7-1950ಕ್ಕೆ ಯಿಜೋಡಾಗಿಯುದೆ. ಪ್ರತಿವಾದಿಯು ಅಷ್ಟರೊಳಗೆ ಪಹೇಳತಕ್ಕದ್ದು ಯಿದ್ದಲ್ಲಿ ಆ ದಿವ್ಸ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜಾಬೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಆತನ ಗೈರಹಾಜ್ರಿಯಿಂದ ಸದ್ರಿ ಸಂಬ್ಲ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ಪ್ರಕಟಿಸೋಣವಾಗಿಯಿದೆ.

(By Order of the Court)

N V. Kamath,
Advocate for Plaintiff.

ಉಡ್ಪಿ, 13-6-1950.

ಓದಲೇ ಬೇಕಾದ ಪುಸ್ತಕಗಳು
ಶ್ರೀ. ಕೆ. ಕೆ. ಶೆಟ್ಟರ
ಪ್ರೇಮ ವಿಜಯ
(ಸಾಮಾಜಿಕ ನಾಟಕ)
ಬೆಲೆ ರೂ 1—0—0
ವ್ಯಭಿಚಾರಿಣಿ ಯಾರು
(ಸಾಮಾಜಿಕ ನಾಟಕ)
ಬೆಲೆ ರೂ 1—0—0
ವಿವಿಧ ಕತೆಗಾರರ
ಪ್ರೇಮ ಪ್ರವಾಹ
(ಕಥಾ ಸಂಕಲನ)
ಬೆಲೆ ರೂ 0—8—0
ನವಭಾರತ ಬುಕ್ ಡಿಪೊ,
ಉಡುಪಿ.

ಗಾಂಧಿ ಮೈದಾನದಲ್ಲಿ Mercury Valour Light ಇಡುವಲ್ಲಿ ರೂಪಾಯಿ ನಾಲ್ಕು ನೂರು ಕೊಡುವೆನೆಂದು ಸತ್ಕೃ ಪುಸಲಿಕ ತಿಳಿಸಿದ ಡಾ। ಟಿ. ಮಾಧವ ಪೈಗಳ ಉದಾರಮನಸ್ಕತೆಯನ್ನು ಅಭಿನಂದಿಸಲಾಯಿತು. ಬೀದಿ ದೀಪ ಆಗದ ಕಾರಣ ಜನರಲ್ಲಿ ಟೌನ್ ಪ್ಲಾನಿಂಗ್ ಯೋಜನೆಯನ್ನು ಇನ್ನು ಏದು ವರುಷ ಮುಂದೆ ಹಾಕುವ ಅಭಿಪ್ರಾಯವಿರುವುದು. ಕೋರ್ಟು ರಸ್ತೆಯಲ್ಲಿ ಜಟಕಾ ಸ್ಟೇಂಡನ್ನು ನಿರ್ಮಿಸುವುದಕ್ಕಾಗಿ ಅಪೇಕ್ಷಿಸಿದ ಶ್ರೀ ಆರ್. ಎ ಸ್ಯಾಮುಯೆಲ್ಸರ ಸೂಚನೆಯನ್ನು ಮನ್ನಿಸಿ ಆ ಬಗ್ಗೆ ತಕ್ಕ ನಿಗಾ ಕೊಡುವಲ್ಲಿ ಕಮಿಶನರರನ್ನು ಕೇಳಿಕೊಳ್ಳಲಾಯಿತು. ಯೋಗ್ಯ ಸ್ಥಳಗಳು ದೊರೆತರೆ ನಗರದಲ್ಲಿ ಇನ್ನೂ ಕೆಲವು ವಾಚನಾಲಯಗಳನ್ನು ತೆರೆಯಬಹುದೆಂದಾಯಿತು. ಮುನಿಸಿಪಲ್ ಸೌತ್ ಗರ್ಲ್ಸ್ ಮತ್ತು ನೋರ್ತ್ ಶಾಲೆಗಳಿಗೆ ಸಂಗಮವಾಗಿ ಆತ್ಯಗತ್ಯ ಬಿಂದಿಯನ್ನು ನೇಮಿಸುವರ ಕೌನ್ಸಿಲಿನ ಒಪ್ಪಿಗೆ ದೊರೆಯಿತು.

ಕೋಪರೇಟಿವ್ ರಿಜಿಸ್ಟ್ರಾರ್— ಕೋಪರೇಟಿವ್ ಸೊಸಾಯಿಟಿಗಳ ಜಾಯಿಂಟ್ ರಿಜಿಸ್ಟ್ರಾರ್ ಶ್ರೀ ಜಿ. ವಿಶ್ವನಾಥನ್ ಚೆಟ್ಟಿಯಾರರು ಇದೇ ತಾ. 10ರಲ್ಲು ಉಡುಪಿಗೆ ಬಂದು ಉದ್ಯೋಗರ ಸೊಸಾಯಿಟಿ ಮತ್ತು ಉದ್ಯೋಗರ ಕೊಪರೇಟಿವ್ ಸ್ಟೋರ್ಸನ್ನು ಸಂದರ್ಶಿಸಿದರು. ಸಂತೆ ಮೈದಾನ್ನು ಕೋಲ್ತಾಸ್ಟೋರ್ ಬೌಂಡ್ ಪ್ರೇಂಚಾಗಿ ಮಾರ್ಪಡಿಸುವ ಕಾರ್ಯವನ್ನು ಅಧಿಕಾರಿಗಳೊಡನೆ ಚರ್ಚಿಸಿದರು. ಸಂಘದ ಉದ್ಯೋಗರಿಗೆ ಸಂಘದ ಉಪಾಧ್ಯಕ್ಷರಾದ ಶ್ರೀ ನಲ್ಲಿಪ್ಪೆ ರಾಮ ಇವರ ಸ್ಮರಣಾರ್ಥವಾಗಿ ಶ್ರೀ ಕೃಷ್ಣ ಮಂದಿರ ಪೈಕಾರಿ ಭಗವಾನ್ ಶ್ರೀಕೃಷ್ಣ ಪರ್ಯಾಯ ಪಡೆದು ವಿಶೇಷವಾಗಿ ಕಾಣಿಸಿರುವ ಸಂಗತಿಗಳನ್ನು ಸಂಗ್ರಹಿಸಿ ಸ್ಮರಣ ಸಂಚಿಕೆಯನ್ನು ಪ್ರಕಟಿಸಿದರು. ಧನಾಪಹಿನ ಬಗ್ಗೆ ಕಾರ್ಯಕಲ್ಪಕ್ಕೆ ಪ್ರಯತ್ನ ಬೇಕಾಗಿದೆ. ರಿಜಿಸ್ಟ್ರಾರರ ಇತರ ಸ್ಥಳ್ಳಿ ಜಿಲ್ಲಾ ವಿಭಾಗ ರಿಜಿಸ್ಟ್ರಾರ್ ಶ್ರೀ ಎಮ್. ಕೃಷ್ಣಸೆಟ್ಟರೂ ಶ್ರೀ ಸಂಕಪ್ಪನವರೂ ಬಂದಿದ್ದರು.

ಕೃತಜ್ಞತಾರ್ಪಣೆ—ಶ್ರೀಮತಿ ಎಂ ಪಿ. ಹೆಗ್ಡೆಯರು ಶ್ರೀಮತಿ ಸುಶೀಲೆಯನ್ನು ಇದೇ ಜೂನು ತಾ. 4ರಲ್ಲಿ ಪಣಂಗಡ್ಡೆಯಲ್ಲಿ ವಿವಾಹವಾದರು. ಈ ಕಲ್ಯಾಣ ಸಮಾರಂಭಕ್ಕೆ ಆಗಮಿಸಿ ಆಶೀರ್ವದಿಸಿದ್ದ ಮತ್ತು ಶುಭ ಸಂದೇಶಗಳ ಮೂಲಕ ಹರಸಿದ್ದ ಸರ್ವರಿಗೂ ನವ ದಂಪತಿಗಳು ಹೃತ್ಪೂರ್ವಕ ಕೃತಜ್ಞತೆಯನ್ನು ಸೂಚಿಸುತ್ತಾರೆ.

ಮುಂಬಯಿ

ಉತ್ತರ ಮುಂಬಯಿ ಹೋಟೆಲ್ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು ಇದೇ ಫೆಬ್ರವರಿ ತಾರೀಕು 19-6-50ನೇ ಸೋಮವಾರ ಜಾತ್ಕ ಭೂಮಿ 9ಕ್ಕೆ ಸರಿಯಾಗಿ ಪರೇಲ್ ಪ್ರಾಣೇಶ್ವರ್ ಚಾಳಿನಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ನಲ್ಲಿಪ್ಪೆ ರಾಮ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸಮ್ಮೇಳನದಲ್ಲಿ ಹೆಸ್ಕೋಲ್ ಕೆಲಸಗಾರರು ಬಂದು ಮುಂಬಯಿಯಲ್ಲಿರುವ ಕಾರ್ಯಕರ್ತರುಗಳಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕಾರ್ಯದರ್ಶಿಯವರು ವಿನಂತಿಯಿದೆ.

ಮದ್ರಾಸು

ರೇಡಿಯೋಲಜಿಯು ವಿಶ್ವಪರಿಷತ್ತಿಗೆ ಭಾರತದ ಪ್ರತಿನಿಧಿ

ಮದ್ರಾಸು ಮೆಡಿಕಲ್ ಕಾಲೇಜಿನ 'ರೇಡಿಯೋಲಜಿ ಪ್ರೊಫೆಸರರೂ ಬನರ್ಜಿರ್ಡ್ ಇನ್ಸ್ಟಿಟ್ಯೂಟ್ ಒಫ್ ರೇಡಿಯೋಲಜಿಯ ಡ್ಯಾರೆಕ್ಟರರೂ ಆದ ಡಾ। ಕೆ. ಮಂಜುನಾಥ ರೈ M B B S, F R C S D.M.R, (Lond) ಇವರು, ಜುಲ್ಯಾ ತಿಂಗಳಲ್ಲಿ ಲಂಡನ್ನಿನಲ್ಲಿ ಜರಗಲಿರುವ ಅರನ ಅಂತರ್ರಾಷ್ಟ್ರೀಯ ಕಾಂಗ್ರೆಸ್ ಒಫ್ ರೇಡಿಯೋಲಜಿಗೆ ಇಂಡಿಯನ್ ರೇಡಿಯೋಲಾಜಿಕಲ್ ಎಸೋಸಿಯೇಶನ್ನಿನ ಅಧಿಕೃತ ಪ್ರತಿನಿಧಿಯಾಗಿ ಆಯ್ಕೆಪ್ಪಟ್ಟಿರುವರು.

ಮದ್ರಾಸ್ ಸಂಸ್ಥಾನದ ಕನ್ನಡ ಲೇಖಕರ ಉತ್ತಮ ಮೂರು ಗ್ರಂಥಗಳಿಗೆ ರೂ 500/-ರಂತೆ ಬಹುಮಾನ

ಲೇಖಕರಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಮದ್ರಾಸು ಸರಕಾರವು ಉತ್ತಮವಾದ ಕನ್ನಡ ಪುಸ್ತಕಗಳಿಗೆ ಸಂಘಾಪನೆ ಕೊಡುವ ಸಂದರ್ಭದಲ್ಲಿ ೧೯೫೦ನೇ ಸಾಲಿನ ಬಹುಮಾನಗಳಿಗಾಗಿ ಮದ್ರಾಸ್ ಪ್ರಾಂತದ ಕನ್ನಡ ಲೇಖಕರು ತಮ್ಮ ಸ್ವಂತ ಕೃತಿಗಳ ನಾಲ್ಕು ಪ್ರತಿಗಳನ್ನು—ಕಾರ್ಯದರ್ಶಿ "ಕರ್ನಾಟಕ ಸಂಘ" ೧೬ ವೀರ ಸ್ವಾಮಿ ಸಿಳ್ಳೆ ಸ್ಟ್ರೀಟ್, ಎಗ್ಮೋರ್, ಮದ್ರಾಸ್ 8. ಇವರಿಗೆ ೧೯೫೦ನೇ ಸೆಪ್ಟೆಂಬರ್ ತಿಂಗಳ ಅಂತ್ಯದೊಳಗೆ ಸೇರುವಂತೆ ಕಳುಹಿಸಬೇಕಾಗಿ ಪ್ರಾರ್ಥನೆ. ಕೆಳಗಿನ ವಿಷಯಗಳಲ್ಲಿ ೧೯೫೦ರ ಈಚೆಗೆ ಪ್ರಕಟವಾದ ಅಥವಾ ಕೈ ಬರಹದ ಗ್ರಂಥಗಳನ್ನು ಸ್ವೀಕರಿಸಲಾಗುವುದು.

(1) ಕೃಷಿ. (2) ಆರೋಗ್ಯ. (3) ಶಿಕ್ಷಣ.

ಬಿಳಿ ಕಾಗದ! ನಾಜೂಕಿನ ಬೈಂಡು!
1950ನೇ ಇಸವಿಯ
ಪಾಕೆಟ್ ಡೈರಿಗಳು
ದೊಡ್ಡದು [ಕೆಲಕೊ ಬೈಂಡ್] 1-12-0
" [ಸಾದಾ] 1-8-0
ಸಣ್ಣದು [ಕೆಲಕೊ] 1-4-0
" [ಸಾದಾ] 0-12-0
(ಟಪ್ಪಾಲು ಖರ್ಚು ಪ್ರತ್ಯೇಕ.)
ಸಿಗುವ ಸ್ಥಳಗಳು:—
ನವಭಾರತ ಬುಕ್ ಡಿಪೊ, ಉಡುಪಿ.
ನವಯುಗ ಪ್ರೆಸ್, ಉಡುಪಿ.

'ಅಂತರಂಗ'ಕ್ಕೆ
6 ರೂಪಾಯಿ
ಚಂದಾ ಕೊಟ್ಟು
ಒಂದೇ ವರ್ಷದಲ್ಲಿ
50 ಪುಸ್ತಕಗಳನ್ನು ಪಡೆಯಿರಿ.
'ಅಂತರಂಗ' ಉಡುಪಿ.

The Udipi Bank Ltd., Kallianpur.

ದಿ ಉಡುಪಿ ಬೇಂಕ್ ಲಿಮಿಟೆಡ್, ಕಲ್ಯಾಣಪುರ.

ಜ್ಯಾಹೀರು ನೋಟಿಸು.

ಈ ಕೆಳಗೆ ಹೆಸರು ಕಾಣಿಸಿದವರು, ಈ ಬ್ಯಾಂಕಿನಲ್ಲಿ ಆದಾಯಿತ್ತ ನಗದಿಗೆ ಯೀಡಿನ ಮೇಲೆ ಪಡಕೊಂಡ ಸಾಲಗಳ ಬಾಬ್ತು ಅಸಲು ಐವೇಜು, ಬಡ್ಡಿ ಮತ್ತ ಇತರ ಚಾರ್ಜುಗಳನ್ನು ಕ್ಲೈಪ್ತ ವ್ಯಾದೆಗೆ ಸಲಾಯಿಸಲೆ ಇದ್ದದರಿಂದ ಅವರಿಗೆ ಬಿಟ್ಟು ರಿಜಿಸ್ತ್ರಿ ನೋಟಿಸುಗಳು ಜ್ಯಾರಿಯಾದರೂ ಐವೇಜು ವಸೂಲು ಕೊಡದೆ ಇದ್ದುದರಿಂದಲೂ, ಕೆಲವು ನೋಟಿಸುಗಳು ಜ್ಯಾರಿಯಾದ ವಿಷಯ ತಿಳಿದು ಬಾರದೇ ಇರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿ ಲೋನುಗಳ ಬಾಬ್ತು ಆಡವಟ್ಟ ನಗದಿಗೆ ತಾರೀಕು 19-6-1950ನೇ ಸೋಮವಾರ ಮಧ್ಯಾಹ್ನ ಘಂಟೆ 2ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಯಾವುದೇ ಕಾರಣದಿಂದ ಲಾದರೂ ಏಲಂ ಅದೇ ದಿವಸ ಮಾಡಲು ಅನುಕೂಲವಾಗದಿದ್ದರೆ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುನಃ ನೋಟಿಸು ಕೊಡದೆನೇ ಏಲಂ ಮುಂದರಿಸಲಾಗುವುದು; ತಿಳಿದಿರಲಿ.

ಜಂಜ್ರಾ ನಂಬ್ರ	ಲೋನು ನಂಬ್ರ	ಹೆಸರು ಮತ್ತು ವಿಳಾಸ	ಆಸಲು ಐವೇಜು
1	J. L. No. 286/48	ಟಿ. ಸತೀಶ ಕುಮಾರ ಹೆಗ್ಡೆ, ತೋನ್ಸೆ, ಪೋಸ್ಟ ಕಲ್ಯಾಣಪುರ, ದ. ಕ.	10-0-0
2	J. L. No 388/48	ಯು- ಬಚ್ಚ ಪೂಜಾರಿ, ಪುಟ್ಟ ಪೂಜಾರಿಯ ಮಗ, ಕುದ್ರುಬೆಟ್ಟು, ಉಪ್ಪೂರು, ದ ಕ.	25-0-0
3	J. L. No. 157/49	ತಮ್ಮಯ್ಯ ಆಚಾರಿ, ಗಿರಿಯಪ್ಪ ಆಚಾರಿಯ ಮಗ, ನೆರಂಪಳ್ಳಿ, ಕಲ್ಯಾಣಪುರ, ದ. ಕ.	10-0-0
4	J. L. No. 163/49	ಅಣ್ಣು ಸೆಟ್ಟಿ, ಸುಬ್ಬಣ್ಣ ಶೆಟ್ಟಿರ ಆಳಿಯ, ಪಡುತೋನ್ಸೆ, ಗಾಳಿಬೆಟ್ಟು, ಕೆಮ್ಮಣ್ಣು,	50-0-0
5	J. L. No 201/49	ಶಾಬು ಸಾಹೇಬು, ಹಸನ್ ಸಾಹೇಬರ ಮಗ, ತಿಮ್ಮಣ್ಣ ಕುದ್ರು, ತೋನ್ಸೆ, ಪೋಸ್ಟ ಕೆಮ್ಮಣ್ಣು	125-0-0
6	J. L. No. 285/19	ಟಿ ಗೋಪಾಲಕೃಷ್ಣ ಶೈ, ಆಯುತ ಶೈಯವರ ಮಗ, ಕಲ್ಯಾಣಪುರ.	300-0-0
7	J. L No. 310/49	ಹಸನ್ ಸಾಹೇಬು, ಅದವ್ ಸಾಹೇಬರ ಮಗ, ತಿಮ್ಮಣ್ಣ ಕುದ್ರು, ತೋನ್ಸೆ, ಪೋಸ್ಟ ಕಲ್ಯಾಣಪುರ.	10-0-0
8	J. L No 357/49	ಇಬ್ರಾಹಿಮ್ ಸಾಹೇಬ್, ಮರ್ಚಂಟ್, ಕಲ್ಯಾಣಪುರ.	247-0-0
9	J. L No. 427/49	ಇಬ್ರಾಹಿಮ್ ಸಾಹೇಬ್, ಮರ್ಚಂಟ್, ಕಲ್ಯಾಣಪುರ.	70-0-0
10	J. L. No. 47/50	ಇಬ್ರಾಹಿಮ್ ಸಾಹೇಬ್, ಮರ್ಚಂಟ್, ಕಲ್ಯಾಣಪುರ	35-0-0

ಕಲ್ಯಾಣಪುರ
Dated 13-6-1950

(Sd) **H. M. Shenoy,**
Agent

ಮಂಗಳೂರು

ಕೇಂದ್ರ ಸರಕಾರ ಮಜೂರ ಮಾಸೂದೆಗಳ ಕುರಿತು ಭಾರತ ಪಾರ್ಲಿ ಮೆಂಟ್ ಸದಸ್ಯರಾದ ಶ್ರೀ ವೆಂಕಟರಾಮನ್ ಅವರು ಇದೇ ತಾ. 9ರಲ್ಲು ಕಾಂಗ್ರೆಸ್ ಕಚೇರಿಯಲ್ಲಿ ಜರಗಿದ ಸಭೆಯಲ್ಲಿ ಭಾಷಣವೀಯುತ್ತಾ ಅವುಗಳಿಗೆ ದೊರಬಲವೀಯಬೇಕೆಂದು ಅಪೇಕ್ಷೆಪಟ್ಟರು. ಡಾ। ಯು. ಪಿ. ಮಲ್ಯರು ಮೊದಲ್ ಅತಿಥಿಗಳ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು.

ಶ್ರೀ ವೆಂಕಟರಾಮನ್ ಅವರು ತನ್ನ ಭಾಷಣದಲ್ಲಿ ತಮಿಳುನಾಡಿನಲ್ಲಿ ಕಮ್ಯೂನಿಸ್ಟರು ಮತ್ತು ಸೋಶಲಿಸ್ಟರು ಮಾಡುತ್ತಿರುವ ಕೆಲಸದಿಂದಾಗಿ ತಮಿಳುನಾಡು ಕಾಂಗ್ರೆಸ್ ಕಮಿಟಿಯು ಪ್ರತ್ಯೇಕ ಕಾರ್ಮಿಕ ಸಂಘಟನಾ ಸಮಿತಿಯೊಂದನ್ನು ರಚಿಸಿ, ಅದನ್ನು ಸಂಪೂರ್ಣ ಸ್ವತಂತ್ರ ರೀತಿಯಲ್ಲಿ ಕಾರ್ಯವೆಸಗಲು ಬಿಟ್ಟುದರಿಂದ ಈ ಎರಡು ವರುಷಗಳಲ್ಲಿ 128 ಮಜೂರ ಸಂಘಟನೆಗಳು ಕಾಂಗ್ರೆಸಿನ ನೆರಳಲ್ಲಿವೆಯೆಂದರು. ನಂತರ ಕೇಂದ್ರ ಸರಕಾರವು ತರಲಿರುವ ಮಂಜೂರಿ ಸಂಬಂಧ ಮಾಸೂದೆ ಮತ್ತು ಟ್ರೇಡ್‌ಯುನಿಯನ್ ಮಾಸೂದೆಗಳನ್ನು ವಿವರಿಸುತ್ತ ಮೊದಲನೆಯ ಮಸೂದೆಯಲ್ಲಿ ಕಾರ್ಮಿಕರಿಗೆ ಅತ್ಯಂತ ಹಿತಕಾರಿಯಾದ ಹಲವು ವಿಷಯಗಳಿದ್ದು ಅದರಲ್ಲಿರುವ ಕೆಲವೇ ದೋಷಗಳಿಗಾಗಿ ಅದನ್ನು ಬಹಿಷ್ಕರಿಸಬಾರದೆಂದರು. ಕಾರ್ಮಿಕ ಸಂಘಗಳಿಂದ ಹೊರಗಿನವರು ಹೊರಬರುವುದು ಸಂಘಟನೆಯ ದೃಷ್ಟಿಯಿಂದ ಒಳ್ಳೆತೆಂದರು. ಆದರಂತೆ ಸರಕಾರೀ ನೌಕರರಿಗೂ ಸಾಮಾನ್ಯ ಮಜೂರರಂತಹ ಹಕ್ಕುಗಳಿರಬಾರದೆಂಬುದನ್ನು ವಿವರಿಸುತ್ತಾ ಪ್ರಜಾ ಪ್ರಭುತ್ವದ ಬೆಳವಣಿಗೆಗೆ ಇದು ಆವಶ್ಯವೆಂದರು. ಶ್ರೀ ಕೆ. ಕೆ. ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಸೇವಾಸಮಾಜದ ಕಾರ್ಯಕರ್ತರ ಟ್ರೈನಿಂಗ್ ಕ್ಯಾಂಪ್ ಮಂಗಳೂರಿನಲ್ಲಿ ಪ್ರಾರಂಭವಾಗಿ ಇದೇ ತಾ. 9ರಲ್ಲು ಮುಗಿದಿದೆ. ಈ ಟ್ರೈನಿಂಗ್ ಕ್ಯಾಂಪಿನಲ್ಲಿ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ, ಕಾಸರಗೋಡು ಮತ್ತು ಮಡಿಕೇರಿ ಈ ಆರು ತಾಲೂಕುಗಳಿಂದ ಒಟ್ಟು 30 ಮಂದಿ ಕಾರ್ಯಕರ್ತರು ಭಾಗವಹಿಸಿದ್ದರು. ಈ ಕ್ಯಾಂಪಿನಲ್ಲಿ ಸೇವಾಸಮಾಜದ ಕಾರ್ಯಕರ್ತರಿಗೆ ಸಮಾಜ ಸೇವೆಯ ಬಗ್ಗೆ ಮತ್ತು ಸಮಾಜದ ಕಾರ್ಯಕ್ರಮಗಳ ಬಗ್ಗೆ ಉಪನ್ಯಾಸಗಳು ಮತ್ತು ಚರ್ಚೆಗಳು ನಡೆದವು. ಕಾರ್ಯಕರ್ತರಿಗೆ ಸಮಾಜ ಸೇವೆಯ ಬಗ್ಗೆ ಉತ್ಸಾಹ ಮೂಡಿಸಲು ಈ ಕ್ಯಾಂಪ್ ಸಹಾಯಕವಾಯಿತೆಂದು ಹೇಳಲಾಗಿದೆ.

ಪತ್ರಿಕಾಪರಿಷತ್ತು: ಜಿಲ್ಲಾ ಕಲೆಕ್ಟರರು ಇದೇ ತಾ. 9ರಲ್ಲು ತನ್ನ ಕಚೇರಿಯಲ್ಲಿ ಕರೆದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಈ ರೀತಿಯಾಗಿ ಹೇಳಿದರೆಂದು ಗೊತ್ತಾಗಿದೆ:– ಗ್ರಾಮಾಂತರಗಳಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಸರಕಾರವು ಒಂದು ಸಹಕಾರಿ ಯೋಜನೆಯನ್ನು ಮಂಜೂರು ಮಾಡಿದೆ. ಈ ಯೋಜನೆಯಂತೆ ಕಾರ್ಯವೆಸಗಲು ಆರಿಸಲ್ಪಟ್ಟ ಏಳು ಜಿಲ್ಲೆಗಳಲ್ಲಿ ನಮ್ಮ ಜಿಲ್ಲೆಯು ಒಂದಾಗಿದೆ. ವಿವಿಧ ಉದ್ದೇಶಗಳ ಈ ಸಹಕಾರಿ ಸಂಘವು ರೈತಾಂಗೂ ಅಧಿಕಾರಿಗಳಿಗೂ ಮಧ್ಯ ಸಹಕಾರಿಯಾಗಿರುವುದು.

ಜಿಲ್ಲೆಯಲ್ಲಿ ಈ ತನಕ 59 ಕೆರೆ ಬಾವಿಗಳ ದುರಸ್ತಿಗಾಗಿ ರೂಪಾಯಿ 1,07,535 ಕೊಡಲಾಗಿದೆ. ಇತ್ತೀಚೆಗೆ ಈ ಕೆಳಗಿನಂತೆ ಹಣ ಮಂಜೂರು ಮಾಡಿದೆ. ಉಡುಪಿ ತಾಲೂಕಿನ ಬನ್ನಾಡಿ ಗ್ರಾಮದಲ್ಲಿ ಎರಡು ಕೆರೆಗಳಿಗೆ ರೂ. 320-0-0 ಮತ್ತು 2000-0-0, ತೋನ್ಸಿ ಗ್ರಾಮದಲ್ಲಿ ರೂ. 2395-0-0 ಹೆರಂಜಳ್ಳಿ ಗ್ರಾಮದಲ್ಲಿ ರೂ. 3,800-0-0, ನೀಲಾವರ ಗ್ರಾಮದಲ್ಲಿ ರೂ. 2080-0-0, ಪುತ್ತೂರು ತಾಲೂಕಿನ ಕುದೆಬೆಟ್ಟು ಗ್ರಾಮದಲ್ಲಿ ರೂ. 4000-0-0, ಕಾಸರಗೋಡಿನ ಹೊಸದುರ್ಗದ ರಾಯಬೀಗ ಆಣೆಕಟ್ಟಿಗೆ ಸರಕಾರವು ರೂ. 40,000-0-0 ಮಂಜೂರು ಮಾಡಿದೆ. ಇದರಿಂದ ಒಂದುನೂರು ಎಕ್ರೆ ಭೂಮಿಗೆ ನೀರಿನ ಉಪಯೋಗವಾಗುವುದು. ಭೂಮಿಯನ್ನು ಸುಧಾರಿಸುವವರಿಗೆ ಸಾಲಕೊಡಲೆಂದು ಸರಕಾರವು ಈ ಜಿಲ್ಲೆಗೆ ರೂ. 60,000-

The Udipi Bank Ltd., Padubidri.

ದಿ ಉಡ್ಪಿ ಬೇಂಕ್ ಲಿಮಿಟೆಡ್, ಪಡುಬಿದ್ರೆ.

ಜ್ಯಾಹೀರು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನ ಪಡುಬಿದ್ರೆ ಆಫೀಸಿನಲ್ಲಿ ನಗದಿಗೆ ಈ ದಿನ ಮೇಲೆ ಪಡಕೊಂಡ ಸಾಲಗಳ ಬಾಬ್ತು ಅಸ್ಲು ಏವೇಜು ಬಡ್ಡಿ ಮತ್ತಿತರ ಚಾರ್ಜುಗಳನ್ನು ಕ್ಲುಪ್ತ ವ್ಯಾದೆಗೆ ಸಲ್ಯಾಸಬೆ ಇರುವುದರಿಂದಲೂ, ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳ ಪೈಕಿ ಕೆಲವು ಜ್ಯಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಕೆಲವು ನೋಟೀಸುಗಳು ಜ್ಯಾರಿಯಾದ ವಿಷಯ ತಿಳಿದು ಬಾರದೆ ಇರುವುದರಿಂದಲೂ ಸದರಿ ಲೋನುಗಳ ಬಾಬ್ತು ಈಡಿಟ್ಟ ನಗದುಗಳನ್ನು ಇದೇ ಬರುವ ತಾ. 30-6-1950 ನೇ ಶುಕ್ರವಾರ ಹಗಲು ಗಂಟೆ 11ಕ್ಕೆ ಬ್ಯಾಂಕಿನ ಉಡ್ಪಿ ಆಫೀಸಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವುದೇ ಕಾರಣದಿಂದಲಾದರೂ ಏಲಂ ಅದೇ ದಿನಸ ನಡಾಡಲು ಅನುಕೂಲವಾಗದಿದ್ದರೆ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೆನೇ ಮುಂದರಿಸಲಾಗುವುದು. ತಿಳಿದಿರಲಿ.

ಜಂಜ್ರಾ ನಂಬ್ರ	J. L. No	ಹೆಸರು ಮತ್ತು ನಿಳಾಸ	ಅಸಲು ಹಣ
1	10/44	ಗುಂಡಲಾಡಿ ರಾಮಯ್ಯ ಶೆಟ್ಟಿ, ಚಿನ್ನಯ ಶೆಟ್ಟಿಯ ಅಳಿಯ, ಗುಂಡಲಾಡಿ.	8–0–0
2	95/45	ಅಲ್ಲಿಸಾ ಬ್ಯಾರಿ, ಅಬ್ದುಲ ಖಾದ್ರಿಯವರ ಮಗ, ಎರಮಾಳು.	25–0–0
3	232/45	ಸಾರಾ ಪೂಜಾರಿ, ಪೂವ ಪೂಜಾರಿಯ ಮಗ, ತೆಂಕ ಎರಮಾಳು ಸೋಸ್ಕು.	6–0–0
4	585/46	ಯು, ಅಹಮ್ಮದ ಬ್ಯಾರಿ, ಉಲ್ಲಾ ಹಸನ್ ಬ್ಯಾರಿಯವರ ಮಗ, ತೆಂಕ ಎರಮಾಳು.	36–0–0
5	2/47	ಜಿ. ರಾಮಯ್ಯ ಶೆಟ್ಟಿ, ಚಿನ್ನಯ ಶೆಟ್ಟಿಯ ಅಳಿಯ, ಕಲ್ಸಂಕ ಗುಂಡಲಾಡಿ, ನಡಸಲ್ ಪಡುಬಿದ್ರಿ.	8–0–0
6	375/47	ಹೂವಯ್ಯ ಆಚಾರಿ, ಬಾಬುರಾಯ ಆಚಾರಿಯ ಮಗ, ತೆಂಕ ಎರಮಾಳು.	25–0–0
7	462/47	ಅಣ್ಣು ಶೆಟ್ಟಿ, ಬರಮು ಶೆಟ್ಟಿಯ ಅಳಿಯ, ಬರಂಪಾಡಿ ತೆಂಕ ಸೋಸ್ಕು, ಎರಮಾಳು.	30–0–0
8	49/47	ಕೆ. ಬಿ ಶ್ಯಾಮ ರಾವ್, ರಾಮಚಂದ್ರಯ್ಯನ ಮಗ, ಪಡುಬೆಟ್ಟು, ಪಡುಬಿದ್ರೆ.	10–0–0
9	519/47	ಪಿ. ಶ್ಯಾನು ಶೆಟ್ಟಿ, ರಾಮಣ್ಣ ಶೆಟ್ಟಿಯ ಅಳಿಯ, ಹೊಸವಕ್ಕಲು, ನಡಸಲು, ಪಡುಬಿದ್ರೆ.	15–0–0
10	561/47	ನಾರಾಯಣ ಪೂಜಾರಿ, ದೋಣ ಪೂಜಾರಿಯ ಅಳಿಯ, ಟೈಲರ್, ಪಡುಬಿದ್ರೆ.	30–0–0
11	4/48	ಪಿ. ವಾಸುದೇವ ಆಚಾರಿ, ಚಿನ್ನಪ್ಪ ಆಚಾರಿಯ ಮಗ, ನಡಸಲು, ಪಡುಬಿದ್ರೆ.	50 0–0
12	67/48	ಯುಸೋಫ್ ಸಾಹೇಬ, ಕಬ್ಬುದ್ದಿನ ಸಾಹೇಬರ ಮಗ, ನಡಸಲು, ಪಡುಬಿದ್ರೆ.	40–0–0
13	82/48	ಯುಸೋಫ್ ಸಾಹೇಬ, ಕಬ್ಬುದ್ದಿನ ಸಾಹೇಬರ ಮಗ, ನಡಸಲು ಪಡುಬಿದ್ರೆ.	20–0–0
14	168/48	ಪಿ. ಸಂಜೀವ ಪೂಜಾರಿ, ಮನು ಪೂಜಾರಿಯ ಅಳಿಯ, ನಡಸಲ್ ಗುಂಡಲಾಡಿ ಮನೆ ಪಡುಬಿದ್ರೆ.	20–0–0
15	203/48	ಎಲ್ಲಪ್ಪ ಶೆಟ್ಟಿ, ಸೂರ ಶೆಟ್ಟಿಯ ಅಳಿಯ, ಕುದಬೆಟ್ಟು, ಸಾಂತೂರು ಪೋಸ್ಟು, ಸಾಂತೂರು.	100–0–0
16	230/48	ಪಿ. ಸಂಜೀವ ಪೂಜಾರಿ, ಮನು ಪೂಜಾರಿಯ ಅಳಿಯ, ನಡಸಲ್ ಗುಂಡಲಾಡಿ ಮನೆ ಪಡುಬಿದ್ರೆ.	20–0–0
17	297/48	ವೈ. ಎಸ್. ನಾಗಪ್ಪ ಶೆಟ್ಟಿ, ರಾಮಯ್ಯ ಶೆಟ್ಟಿಯ ಅಳಿಯ, ತೆಂಕಪೋಸ್ಟು ಎರಮಾಳು	375–0–0
18	349/48	ಕಾಂತಾರ ಶೆಟ್ಟಿ, ಮೂವ ಶೆಟ್ಟಿಯ ಮಗ, ಸಾಂತೂರ ಪಡುಮನೆ, ಪೋಸ್ಟು ಕಂಜರ್‌ಕಟ್ಟೆ.	45–0–0
19	412/48	ಪಿ. ಹೈದರ ಸಾಹೇಬ, ಹಸನ್ ಸಾಹೇಬರ ಮಗ, ನಡಸಲು, ಪಡುಬಿದ್ರೆ.	45–0–0
20	414/48	ನೀಲಯ್ಯ ಆಚಾರಿ, ರಾಮಯ್ಯ ಆಚಾರಿಯ ಮಗ, ಸಂತೆಕಟ್ಟೆ, ಪಡುಬಿದ್ರೆ.	23–0–0
21	421/48	ಮುತ್ತು ಬಾಯಿ, ರುಕ್ಕು ಬಾಯಿಯ ಮಗಳು, ಕಾಡಿಪಟ್ಣ, ಪಡುಬಿದ್ರೆ.	35–0–0
22	493/48	ಬಿ. ಕೆ. ರಾಮಚಂದ್ರಯ್ಯ, ಟೈಲ್ ಕೃಷ್ಣಪ್ಪಯ್ಯನವರ ಮಗ, ಬೆಂಗ್ರಿ, ಪಡುಬಿದ್ರೆ.	80–0–0

Udipi,
Dated 11-6-50.

C. Narayana Kamath,
Agent at Udipi.

ಮಂಜೂರು ಮಾಡಿದೆ. ಇದನ್ನು ರೈತರು ಉಪಯೋಗಿಸಿಕೊಳ್ಳಬೇಕೆಂದು ಕಲೆಕ್ಟರರು ಆಶಿಸುತ್ತಾರೆ.

ಹೊಸದುರ್ಗದಲ್ಲಿ ಸಮುದ್ರಪಾಲಾಗುತ್ತಿದ್ದ ಹೆಂಗಸೊಬ್ಬಳನ್ನು ರಕ್ಷಿಸಿದುದಕ್ಕಾಗಿ ಹೊಸದುರ್ಗ ಪೋಲೀಸ್ ಕಂಠೀರವಾಮನ್ ನಂಬಿಯಾರ್ ಮತ್ತು ಮಹಾಲಿಂಗ ಎಂಬ ಪರಂಗಿ ಫಿಶರೀಸ್‌ಶಾಲೆಯ ಅಧ್ಯಾಪಕರಾದ ಶ್ರೀ ಭಾಂತನ್ ಎಂಬವರಿಗೂ ಕಲೆಕ್ಟರರು ಪತ್ತತ್ತು ರೂಪಾಯಿಗಳಂತೆ ಸಾರಿತೋಷ ಕೊಟ್ಟರುತ್ತಾರೆ. ಜಿಲ್ಲೆಯ ಗ್ರಾಮಾಂತರಗಳಲ್ಲಿ ಪಡಿಯಕ್ಕಿಯನ್ನು ಎಂಟು ಔನ್ಸ್ ಇದ್ದುದನ್ನು ಆರು ಔನ್ಸಿಗೆ ಇಳಿಸಿರುತ್ತದೆ. ಈ ಬದಲಾವಣೆಯು ಖಾಯಂ ನಿಲ್ಲುವಂತಹದಲ್ಲ.

ಮೂಲ್ಕಿ ಫಿರ್ಕಾ:—1950–51ನೆ ವರುಷದ ಕಾರ್ಯಕ್ರಮವು ಮೂಲ್ಕಿ ಫಿರ್ಕಕ್ಕೆ ತಯಾರಾಗಿದೆ. ಕಳೆದ ತಾ. 2ರಲ್ಲು ಜರಗಿದ ಗ್ರಾಮಸ್ಥರ ಸಭೆಯಲ್ಲಿ ಅದು ಮಂಜೂರಾಯಿತು. ಮಂಜೇಶ್ವರ ಫಿರ್ಕಾದ ಕಾರ್ಯಕ್ರಮವೂ ತಯಾರಾಗುತ್ತಿದೆ. ಈ ಎರಡು ಫಿರ್ಕಾಗಳಲ್ಲೂ ಅಭಿವೃದ್ಧಿ ಯೋಜನೆ ತಯಾರಿಸುವ ಏರ್ಪಾಡು ಮಾಡಲ್ಪಟ್ಟಿದೆ.

ದ. ಕ ಜಿಲ್ಲೆಯಿಂದ ಚುನಾಯಿತರಾದ ಜಿಲ್ಲಾ ಮುನ್ಸೀಫರು ಮದ್ರಾಸು ಪಬ್ಲಿಕ್ ಸರ್ವಿಸ್ ಕಮಿಶನರವರು ದ. ಕ. ಜಿಲ್ಲೆಯ ಈ ಕೆಳಗಿನ ವಕೀಲ ಮಹಾಶಯರನ್ನು ಡಿಸ್ಟ್ರಿಕ್ಟ್‌ಮುನ್ಸೀಫರಾಗಿ ಆರಿಸಿದವರು; ಶ್ರೀಗಳಾದ ಎಚ್. ಲಕ್ಷ್ಮಣ ಸಾಲಿಯಾನ್ (ಮಂಗಳೂರು), ಕೆ. ಪದ್ಮನಾಭ ಶೆಣೈ ಹೆಗ್ಡೆ (ಮಂಗಳೂರು), ವೈ. ರಘಿರಾಜ (ಪುತ್ತೂರು), ಎಸ್. ಸುಬ್ಬಣ್ಣ ಶೆಟ್ಟಿ (ಕುಂದಾಪುರ), ಸಿ. ಪಿ. ಪಾಪೋದರನ್ ನಾಯರ್ (ಮಂಗಳೂರು)

ಕುಂಬಳೆ ಫಿರ್ಕಾದಲ್ಲಿ ಜರಗಿದ ಮುಖ್ಯ ಕೆಲಸಗಳ ಸಾರಾಂಶ: ಎರಡು ಸರಕಾರಿ ಕೆರೆಗಳ ದುರಸ್ತಿಯ ಕೆಲಸವು ಮುಗಿಸಲ್ಪಟ್ಟಿತು. ಅರಿಕ್ಕಾಡಿ ಮುನೀದಿಯ ವಶವಿರುವ ಒಂದು ನೀರಾವರಿ ಕೆರೆಯ ದುರಸ್ತಿಯನ್ನು ಗ್ರಾಮಸ್ಥರೇ ಮಾಡಿಸಿದ್ದಾರೆ. ಇದರಿಂದ ಐದು ಎಕ್ರೆ ಗದ್ದೆಗಳಲ್ಲಿ ಒಂದು ಹೆಚ್ಚಿನ ಬೆಳೆಯನ್ನು ಬೆಳೆಸಬಹುದೆಂದು ಅಂದಾಜುಮಾಡಲಾಗಿದೆ. ಕಾಟುಕುಕ್ಕೆ ಗ್ರಾಮದ ಸಾಲೆ ಗೋವಿಂದ ಭಟ್ಟರಿಗೆ ಸರಕಾರಿ ಸ್ಥಳಗಳಲ್ಲಿ ಒಂದು ನೀರಾವರಿ ಕೆರೆಯನ್ನು ತನ್ನ ಬರ್ಚಿನಲ್ಲಿ ಕಟ್ಟಿಸಲಿಕ್ಕೆ ಅನುಮತಿಯನ್ನು ಕೊಡಲಾಗಿದೆ. ಇದರಿಂದ ಅಕಾರ ವಸ್ತುಗಳನ್ನು ಬೆಳೆಸಲು ಸಾಧ್ಯವಿದೆ. ಬಾಲ್‌ಗ್ರೋದಿನ ಸಹಾಯದಿಂದ ಸಾಧಾರಣ ಎಂಟು ಎಕ್ರೆ ಜಮೀನನ್ನು ಸಮತಟ್ಟು ಮಾಡಿ ಬೆಳೆಸಲು ಅನುಕೂಲ ಮಾಡಿದೆ. ಉಪ್ಪುನೀರು ಬರುವ ಗದ್ದೆಗಳಲ್ಲಿ ಬೆಳೆಸಲು ಯೋಗ್ಯವಾದ ಭತ್ತದ ಬೀಜವನ್ನು ಪ್ರಯೋಜನಾರ್ಥವಾಗಿ ಹಂಚಲಾಗಿದೆ.

ಮರ್ಕೆ— ತಾ. 1-6-1950ರಲ್ಲು ಮರ್ಕೆ ಎಯ್ಡೆಡ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ರಕ್ಷಕರ ಕೂಟದ ಸಭೆಯು ಮಾಣಿ ಪುರ ಗ್ರಾಮದ ಪಶೇಲರಾದ ಶ್ರೀ. ಪದ್ಮನಾಭ ಭಾಜಾಯರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಬಾಲಕಿಯರಿಂದ ಪಾದುಕಾ ಪಟ್ಟಾಭಿಷೇಕ ಎಂಬ ನಾಟಕವನ್ನು, ಇತರ ಹಲವು ವಿನೋದಾವಳಿಗಳನ್ನೂ ವ್ಯವಸ್ಥೆಸಲ್ಪಟ್ಟಿವು. ಸಭಿಕರ ಸಂಪೂರ್ಣ ಚಿತ್ತವಾತ್ತುಗಳಾದ ನಂತರ ಅಧ್ಯಕ್ಷರು ಇತಿಹಾಸಭಿಗಳನ್ನು ಜರಗಿಸುವಲ್ಲಿ ಉದ್ದೇಶಗಳನ್ನು ವಿವರಿಸುತ್ತಾ, ರಕ್ಷಕರು ಶಾಲೆಯ ಅಭಿವೃದ್ಧಿಯ ಕಡೆಗೆ ಗಮನ ಕೊಡಬೇಕೆಂದರು. ಕಾರ್ಯದರ್ಶಿಯವರು ಧನ್ಯವಾದಗಳನ್ನರ್ಪಿಸಲಾಗಿ, ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

APPOINTMENT OF TEACHERS IN LABOUR SCHOOLS

Applications are invited for the appointment of teachers in the Labour Schools to be newly opened at Nelyadi of Puttur Taluq, Panthadi of Kasaragod Taluq and Halasanad of Coondapur Taluq in South Kanara District from candidates Possessing the following qualifications.

1. Higher Elementary Grade Trained, or
2. Secondary Grade Trained

The applications with necessary certificates and testimonials should reach the Office of the undersigned on or before 30-6-1950

Office of the Dt. Welfare Officer, Mangalore, dated 3-6-1950.

(Sd.) **K Venkappa,**
Dt Welfare Officer.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all keeps hair black and relieves headache etc.

REGD. TRADE MARK

Manufactured by -

Swadeshi Oushadhi Bhandara (Regd.)

KUNJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಪ್ರೈವೇಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಹಿಗೊಡುವ ಸೌಕರ್ಯ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಪಿಂಡಿತನಸು, ಇವುಗಳ ರುಚಿಯು ಹೇಳಬೇಕೆ?

ಪ್ರೊಪ್ರೈಟರ್ — ಕೆ. ವೆಂಕಟ್ರಮಣಭಟ್

For up-to-date Lodging & Boarding

ROYAL MAHAL,

UDIPI, S. Kanara

ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ ವೆಂಕೋಬಾಚಾರ್ಯ, ಬಿ ಎ ಬಿ.ಟಿ

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು-ಕುಸುಮಳು ವೇಶ್ಯಾಪುತ್ರಿಯಾದರೂ ಆವಳು ವೇಶ್ಯೆಯಲ್ಲ! ಆವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ 1-0-0

ಪ್ರತಿಗಳು ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ. ಇಲ್ಲಿ ದೊರೆಯುತ್ತವೆ.

ಪರಿಚಿತ ಪ್ರತಿಭೆಯ

ಸರ್ವೋದಯ ಸಮುದ್ಧಾರಕ್ಕೊಂದು ಪರಿಶೀಲನೆ

— ಗೋಪಾಲಕೃಷ್ಣ

ಗಾಂಧಿಜಿಯು ಪಳಿಯಿಂದ ಬಂದಿಸಿದ ಜಾಗ್ರತ್ಯ ಸಂಸ್ಥೆಗಳ ಪುನರುತ್ಥಾನದಿಂದ ನವಭಾರತ ಮೂಡಬೇಕೆಂಬ ಪಂಡಿತ ಜವಾಹರ ಲಾಲರು ಹಿಂಗೆ ಜೀವಿಸಿದ್ದರು. ವೀರಕ್ಷಯಗಾಗಿದೆ.

"ನೀವು ರಕ್ತ ಮಾಂಸಗಳಲ್ಲಿ ಮನುಷ್ಯ ಜಂತುಗಳೊಡನೆ ವ್ಯವಹರಿಸುತ್ತೀರಿ, ಈ ಮನುಷ್ಯಜಂತುಗಳಿಗೆ ರಕ್ತ ಮಾಂಸಗಳಷ್ಟೇ ಅಲ್ಲದೆ ಇಂದು ಉದ್ರೇಚನೀಯವಾದ ಮನಸ್ಸೂ ಭಾವನೆಗಳೂ ಇವೆ. ಆದುದರಿಂದ ಆ ವಿಷಯವನ್ನು ನೆನಪಿಟ್ಟುಕೊಂಡು ಈ ಸಂಗತಿಗಳನ್ನು ಪರಾಮರ್ಶಿಸಬೇಕು-ಅದು ಔದ್ಯಮಿಕ, ಕೂಲಿಕಾರ ಸಂಬಂಧಿ ಅಥವಾ ಇನ್ನಾವ ಕ್ಷೇತ್ರವಾದರೂ ಸರಿಯೆ.

"ಒಂದು ಸರಕಾರವು ಆ ಮನುಷ್ಯ ವಸ್ತು ವಿನೊಡನೆ ವ್ಯವಹರಿಸಬೇಕು; ಅದಕ್ಕೆ ಉಪಕಾರ ಮಾಡುವದಷ್ಟೇ ಅಲ್ಲದೆ, ಆ ಉಪಕಾರವನ್ನು ಆದು ಅರ್ಥ ಮಾಡಿಕೊಳ್ಳುವಂತೆಯೂ ಮಾಡಬೇಕು ಮತ್ತು ಅದಕ್ಕೂ ಮುಖ್ಯವಾದುದೆಂದರೆ, ತನ್ನ ಕಾರ್ಯದಲ್ಲಿ ಆದು ಭಾಗಿಯಾಗುವಂತೆ ಮಾಡಬೇಕು.

"ವಿಲಕ್ಷಣವಾದ ಸಂಗತಿಯೆಂದರೆ, ಸರಕಾರ ತನಗೆ ತಾನೇ ಉಪಕಾರ ಮಾಡಿಕೊಂಡರೂ ಅದು ಜನೋಪಕಾರವೇ ಆಗುವದು ಜನರಿಗೆ ದಾನ ದಕ್ಷಿಣೆಯನ್ನು ಕೊಟ್ಟು ಉಪಕರಿಸಲು ಸಾಧ್ಯವಿಲ್ಲ. ನಮಗೆ ಹೆಚ್ಚಿನ ಉತ್ಪಾದನೆ ಬೇಕು ಮತ್ತು ಏನೂ ಕೆಲಸಮಾಡದೆ ಕುಳಿತಿರುವ ನಿರುದ್ಯೋಗಿಗಳು ನಮ್ಮಲ್ಲಿ ಅನೇಕರಿದ್ದಾರೆ. ನೋಡನೋಡುತ್ತಲೇ ಇದು ಕರ್ಕಬಾಹಿರ ಎಂದು ತೋರುತ್ತದೆ ಹೇಗಾದರೂ ತಾನೊಬ್ಬ ಬಳಕೆಗಾರನಾಗಿರುವುದರಿಂದ ಎಲ್ಲರದೂ ಏನನ್ನಾದರೂ ಉತ್ಪಾದಿಸುತ್ತಿರಲೇ ಬೇಕು ನಮ್ಮಲ್ಲಿ ಸಾಕಷ್ಟು ಯಂತ್ರಗಳಿಲ್ಲ ಎಂದು ನೀವು ಹೇಳಬಹುದು. ಆದು ಸರಿ. ಆದರೆ ಇತರ ಕಡೆಗಳಲ್ಲಿಯಂತೆ ಇಲ್ಲಿಯೂ ಗಾಂಧಿಯವರು ಒತ್ತಿಹೇಳಿದ ಒಂದು ಚಿಕ್ಕ ವಿಷಯ ಒಳ ಬರುತ್ತದೆ ನಿರುದ್ಯೋಗಿಗೆ ಕೆಲಸ ಮಾಡಲು ಒಂದು ಚಿಕ್ಕ ಅಥವಾ ದೊಡ್ಡ ಯಂತ್ರವಿಲ್ಲದಿರಬಹುದು. ಆದರೆ ಸುವ್ಯವಸ್ಥಿತ ವ್ಯವಹಾರದಲ್ಲಿ ಪ್ರತಿಯೊಬ್ಬನಿಗೂ ತಾನೇ ಸ್ವತಂತ್ರ ಆಥವಾ ಇತರರೊಡನೆ ಯಾವಾಗ ಬೇಕಾದರೂ ತನ್ನ ಉತ್ಪಾದನಾ ಕಾರ್ಯವನ್ನು ಪ್ರಾರಂಭಿಸಬಹುದು ಈ ಮನುಷ್ಯನ ಕಾರ್ಯ ಅಲ್ಪವಲ್ಲವೆಂದು ಅರ್ಥಶಾಸ್ತ್ರಜ್ಞರು ಹೇಳುವರು; ಏಕೆಂದರೆ, ಆ ಕೆಲಸವನ್ನು ಲಕ್ಷಗಟ್ಟಲೆ ಜನರು ಮಾಡಿದರೆ ಬಹಳ ದೊಡ್ಡದಾಗುತ್ತದೆ.

"ಆದುದರಿಂದ ನಮ್ಮ ಉದ್ಯಮೀಕರಣವು ಎಷ್ಟೇ ಶೀಘ್ರವೇಗದ್ದಾಗಲಿ, ನಮ್ಮಲ್ಲಿಯ ಅಸಂಖ್ಯ ಜನರನ್ನು ಆದು ಹೇಗೆ ಕೆಲಸದಲ್ಲಿ ತೊಡಗಿಸುವುದೋ ನಾನಂತೂ ಆರಿಯೆ. ಒಂದು ಉದ್ಯಮದಲ್ಲಿ ನಾವು ೨, ೩ ಅಥವಾ ಹೆಚ್ಚು ಕೋಟಿ ಮನುಷ್ಯರನ್ನು ಕೆಲಸಮಾಡಿಸಬಹುದು. ಆವರೆ ಇನ್ನೂ ವಿಗುವರ ಪಾಡೇನು? ಮನೆಯ ಅಲ್ಪಪ್ರಮಾಣದ ಅಥವಾ ಸಹಕಾರ್ಯವಾದ ಉದ್ಯಮವನ್ನು ಮಿಕ್ಕವರಿಗೆ ನೀವು ಮಾಡಹಚ್ಚಿದ ಹೊರತು ಆದರಿಂದ ನೀವು ಏನನ್ನೂ ಅಥವಾ ಸಾಕಷ್ಟನ್ನು ತೆಗೆದುಕೊಂಡಂತಾಗುವುದಿಲ್ಲ.'

('ಹಿಂದುಸ್ತಾನ್ ಟೈಮ್ಸ್', ೧೩-೩-೫೦)

ಇದೊಂದು ಬಹು ಮುಖ್ಯವಾದ ಕಲ್ಪನೆ. ಇದನ್ನು ಸರ್ವೋದಯ ಸಿದ್ಧಾಂತ ವಿವರಿಸುವ ಕ್ರಮದಲ್ಲಿಯೇ ವಿವರಿಸಲಾಗಿದೆ. ಆದರೆ ದುರ್ದೈವದಿಂದ ಪಂಡಿತರ ಭಾಷಣದ ಈ ಭಾಗದ ಮೇಲೆ ಯಾರೂ ವಿಶೇಷವಾಗಿ ಗಮನವನ್ನೇ ಕೊಡಲಿಲ್ಲ ತದ್ವಿರುದ್ಧವಾಗಿ ಅವರ ಭಾಷಣದ ಮುಖ್ಯಾಂಶವನ್ನು ತತ್‌ಕ್ಷಣದಲ್ಲಿ ತಿರಸ್ಕರಿಸಿ ಶ್ರೀ ಘನಶ್ಯಾಮದಾಸ ಬಿರ್ಲಾ ಅವರು ಒಂದು ಗೊತ್ತುವಳಿಯನ್ನು ಮಂಡಿಸಿದರು

"ಅಧುನಿಕ ಯಂತ್ರದ ಮೂಲಕ ಮಾತ್ರ ಸಂಪೂರ್ಣ ಉದ್ಯೋಗವನ್ನೂ ಸಮೃದ್ಧಿಯನ್ನೂ ಉಂಟುಮಾಡಬಹುದು. ಚರಕವೂ ಸರ್ವೋದಯ ಸಿದ್ಧಾಂತವೂ ಕೂಡ ಉದ್ಯೋಗ ಪೂರ್ಣತೆಯನ್ನು ಉಂಟುಮಾಡಬಹುದೆಂಬುದು ನಿಜ; ಆದರೆ ಜನರು ಚರಕ ಹಿಡಿದರೆ ಮಜೂರಿಯು ಮಟ್ಟು ಏನಾಗಬಹುದು? ದಿನಕ್ಕೆ ನಾಲ್ಕಾಣೆ ಸಿಗಬಹುದು. ಅಥವಾ ಅದೂ ಬಹಳ ಸಂಶಯಾಸ್ಪದ".

(ಟೈಮ್ಸ್ ಆಫ್ ಇಂಡಿಯಾ, ೧೪-೩ ಪಂ)

ಸರ್ವೋದಯ ಸಿದ್ಧಾಂತವನ್ನು ಇಷ್ಟು ಸ್ವಲ್ಪ ಪದಗಳಲ್ಲಿ ಖಂಡಿಸಿರುವುದನ್ನು ನಾನು ಹಿಂದೆ ಎಂದೂ ಕೇಳಿರಲಿಲ್ಲ.

ಆದು ಹೇಗಿದ್ದರೂ ಬಿರ್ಲಾಜಿ ಕೂಡ ಸರ್ವೋದಯ ಸಿದ್ಧಾಂತಕ್ಕೆ ಉದ್ಯೋಗ ಪೂರ್ಣತೆಯ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು. ಹೋಟೆಗೆ ಬರುವುದು, ಈ ಔಷಧ ಸೇವನೆಯಿಂದ ಕೀಲ್ರ ಗುಣಹೊಂದಬಹುದು; ಯಾವ ಗಾಬರಿಯೂ ಇಲ್ಲ. ಸಾವಿರರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶ್ಯಲ್ ರೂ. 5; ಅಧಿಕಾಧಿಕ ಸ್ಪೆಶ್ಯಲ್ ರೂ. ೭-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs P. DEVEE, I DS (N. J.)
Tollygunge CALCUTTA

ಸ್ವಾಕಿಸ್ವರು. ಶಹಾಕಂಪನಿ, ಮಂಗಳೂರು

ಮೂಲ್ಕಿ ಬ್ಯಾಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷನರಿಗಳು

ನೊರೆಯುತ್ತವೆ.

ಬೆಲೆ ರೂ 5 0 0

ಸಂಗನ್ನಡ ಅರ್ಥಕೋಶ 4 8 0

ನವಯುಗ ಪ್ರೆಸ್, ಉಡುಪಿ.



Approved form by the Gov. of Mysore Certificated by the Agent of the Govt of Cylone & Indian.

ಮಂಗಳೂರು

ಕೇಂದ್ರ ಸರಕಾರ ನವೂರ ಮಾ ಸೂದೆಗಳ ಕುರಿತು ಭಾರತ ಪಾರ್ಲಿ

ಮೆಂಟ್ ಸದಸ್ಯರಾದ ಶ್ರೀ ವೆಂಕಟರಾಮನ್ ಅವರು ಇದೇ ತಾ. 9ರಲ್ಲು ಕಾಂಗ್ರೆಸ್ ಕಚೇರಿಯಲ್ಲಿ ಜರಗಿದ ಸಭೆಯಲ್ಲಿ ಭಾಷಣಮಾಡಿಯು ತ್ತಾ ಅವುಗಳಿಗೆ ಬೆಂಬಲಸೂಚಿಸಬೇಕೆಂದು ಅಪೇಕ್ಷಿಸಿದರು. ಡಾ। ಯು. ಪಿ. ಮಲ್ಯರು ಮೊದಲು ಅತಿಥಿಗಳ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು.

ಶ್ರೀ ವೆಂಕಟರಾಮನ್ ಅವರು ತನ್ನ ಭಾಷಣದಲ್ಲಿ ತಮಿಳುನಾಡಿನಲ್ಲಿ ಕಮ್ಯೂನಿಸ್ಟರು ಮತ್ತು ಸೋಶಲಿಸ್ಟರು ಮಾಡುತ್ತಿರುವ ಕೆಲಸದಿಂದಾಗಿ ತಮಿಳುನಾಡು ಕಾಂಗ್ರೆಸ್ ಕಮಿಟಿಯು ಪ್ರತ್ಯೇಕ ಕಾರ್ಮಿಕ ಸಂಘಟನಾ ನ್ಯಾಸವನ್ನು ರಚಿಸಿ, ಅದನ್ನು ಸಂಪೂರ್ಣ ಸ್ವತಂತ್ರ ರೀತಿಯಲ್ಲಿ ಕಾರ್ಯವೆಸಗಲು ಬಿಟ್ಟಿರುವುದಾಗಿ ಈ ವರ್ಷ ಮಾರ್ಚಿಯವರೆಗೆ 128 ಮಜೂರ ಸಂಘಟನೆಗಳು ಕಾಂಗ್ರೆಸಿನ ನೆರಳ್ಳೆವೆಯೆಂದರು. ನಂತರ ಕೇಂದ್ರ ಸರಕಾರವು ತರಲಿರುವ ಮಂಜೂರ ಸಂಬಂಧ ಮಸೂದೆ ಮತ್ತು ಟ್ರೇಡ್‌ಯೂನಿಯನ್ ಮಸೂದೆಗಳನ್ನು ವಿವರಿಸುತ್ತ ಮೊದಲನೆಯ ಮಸೂದೆಯಲ್ಲಿ ಕಾರ್ಮಿಕರಿಗೆ ಅತ್ಯಂತ ಹಿತಕಾರಿಯಾದ ಹಲವು ವಿಚಾರಂ..ಳಿದ್ದು ಅದರಲ್ಲಿರುವ ಕೆಲವೇ ದೋಷಗಳಿಗಾಗಿ ಅದನ್ನು ವಿರೋಧಿಸಬಾರದೆಂದರು. ಕಾರ್ಮಿಕ ಸಂಘಗಳಿಂದ ಹೊರಗಿನವರು ಹೊರಬರುವುದು ಸಂಘಟನೆಯ ದೃಷ್ಟಿಯಿಂದ ಒಳ್ಳೆಯದೆಂದರು. ಅದರಂತೆ ಸರಕಾರೀ ನೌಕರರಿಗೂ ಸಾಮಾನ್ಯ ಮಜೂರರಂತಹ ಹಕ್ಕುಗಳಿರಬಾರದೆಂಬುದನ್ನು ವಿವರಿಸುತ್ತಾ ಪ್ರಜಾ ಪ್ರಭುತ್ವದ ಬೆಳವಣಿಗೆಗೆ ಇದು ಅವಶ್ಯವೆಂದರು. ಶ್ರೀ ಕೆ. ಕೆ. ಸಿಟ್ಟರು ಧನ್ಯವಾದಗಳನ್ನರ್ಪಿಸಿದರು.

ಸೇವಾಸಮಾಜದ ಕಾರ್ಯಕರ್ತರಿ

ಲ್ಲೊಬ್ಬರಾದ ಮದ್ರಾಸಿನ ಶ್ರೀಮತಿ ಕೃಷ್ಣಾಬಾಲರು ಮಂಗಳೂರಿಗೆ ಆಗಮಿಸಿ ಸ್ಥಳೀಯ ಸೇವಾ ಸಮಾಜಗಳ ಚಟುವಟಿಕೆಗಳನ್ನು ಪರಾಂಬರಿಸುತ್ತಿದ್ದಾರೆ.

ಪತ್ರಿಕಾಪರಿಷತ್ತು: ಜಿಲ್ಲಾ ಕಲೆಕ್ಟರರು ಇದೇ ತಾ. 9ರಲ್ಲು ತನ್ನ ಕಚೇರಿಯಲ್ಲಿ ಕರೆದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಈ ರೀತಿಯಾಗಿ ಹೇಳಿದರೆಂದು ಗೊತ್ತಾಗಿದೆ— ಗ್ರಾಪಂಚಾಯತ್‌ಗಳಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಸರಕಾರವು ಒಂದು ಸಹಕಾರಿ ಯೋಜನೆಯನ್ನು ಮಂಜೂರು ಮಾಡಿದೆ. ಈ ಯೋಜನೆಯಂತೆ ಕಾರ್ಯವೆಸಗಲು ಆರಿಸಲ್ಪಟ್ಟ ಏಳು ಜಿಲ್ಲೆಗಳಲ್ಲಿ ನಮ್ಮ ಜಿಲ್ಲೆಯು ಒಂದಾಗಿದೆ. ವಿವಿಧ ಉದ್ದೇಶಗಳ ಈ ಸಹಕಾರಿ ಸಂಘವು ರೈತರಿಗೂ ಅಧಿಕಾರಿಗಳಿಗೂ ಮಧ್ಯ ವರ್ತಿಯಾಗಿರುವುದು.

ಜಿಲ್ಲೆಯಲ್ಲಿ ಈ ತನಕ 59 ಕೆರೆ ಬಾವಿಗಳ ದುರಸ್ತಿಗಾಗಿ ರೂಪಾಯಿ 1,07,535 ಕೊಡಲಾಗಿದೆ. ಇತ್ತೀಚೆಗೆ ಈ ಕೆಳಗಿನಂತೆ ಹಣ ಮಂಜೂರು ಮಾಡಿದೆ. ಉಡುಪಿ ತಾಲೂಕಿನ ಬನ್ನಾಡಿ ಗ್ರಾಮದಲ್ಲಿ ಎರಡು ಕೆರೆಗಳಿಗೆ ರೂ. 320-0-0 ಮತ್ತು 2000-0-0, ತೋನ್ಸಿಗ್ರಾಮದಲ್ಲಿ ರೂ. 2395-0-0 ಪೆರಂಪಳ್ಳಿ ಗ್ರಾಮದಲ್ಲಿ ರೂ. 3,800-0-0, ನೀಲಾವರ ಗ್ರಾಮದಲ್ಲಿ ರೂ. 2080-0-0, ಹುತ್ತೂರು ತಾಲೂಕಿನ ಕುಮಟ್ಟು ಗ್ರಾಮದಲ್ಲಿ ರೂ. 4000-0-0, ಕಾಸರಗೋಡಿನ ಹೊಸದುರ್ಗದ ರಾಯಬೀರ ಅಣಕಟ್ಟೆಗೆ ಸರಕಾರವು ರೂ. 40,000-0-0 ಮಂಜೂರು ಮಾಡಿದೆ. ಇದರಿಂದ ಒಂಬೂರು ಎಕ್ರೆ ಭೂಮಿಗೆ ನೀರಿನ ಉಪಯೋಗವಾಗುವುದು. ಭೂಮಿಯನ್ನು ಸಂಥಾಸುವವರಿಗೆ ಸಾಲಕೊಡಲೆಂದು ಸರಕಾರವು ಈ ಜಿಲ್ಲೆಗೆ ರೂ. 50,000-ಮಂಜೂರು ಮಾಡಿದೆ. ಇದನ್ನು ರೈತರು ಉಪಯೋಗಿಸಿಕೊಳ್ಳಬೇಕೆಂದು ಕಲೆಕ್ಟರರು ಆಶಿಸುತ್ತಾರೆ.

ಹೊಸದುರ್ಗದಲ್ಲಿ ನಮುದ್ರಪಾಲಾಗುತ್ತಿದ್ದ ಜೊಂಗಸೊಬ್ಬನನ್ನು ರಕ್ಷಿಸಿದುದಕ್ಕಾಗಿ ಹೊಸದುರ್ಗ ಪೋಲೀಸ್ ಕಂಠೀರವಾನ್ ನಂಬಿಯಾರ್ ಮತ್ತು ಮಹಾಲಿಂಗ ಎಂಬ ನರಿಗೂ ಶೌರ್ಯಶಾಲೆಯ ಅಧ್ಯಾಪಕರಾದ ಶ್ರೀ ಭಾರತನ್ ಎಂಬವರಿಗೂ ಕಲೆಕ್ಟರು ಹತ್ತು ರೂಪಾಯಿಗಳಂತೆ ಪಾರಿತೋಷಕ ಕೊಟ್ಟಿರುತ್ತಾರೆ. ಜಿಲ್ಲೆಯು ಗ್ರಾಮಾಂತರಗಳಲ್ಲಿ ಪಡಿಯಕ್ಕಯನ್ನು ಏಂಟು ಪೆನ್ಸ್ ಇದ್ದು ದನ್ನು ಆರು ಪೆನ್ಸಿಗಿಳಿಸಿರುತ್ತದೆ. ಈ ಬದಲಾವಣೆಯು ಬಾಯಂ ದಿಲ್ಲುವಂತಹದಲ್ಲ.

ಮೂಲ್ಕಿ ಫಿರ್ಕಾ:—1950-51ನೆ ವರುಷದ ಕಾರ್ಯಕ್ರಮವು ಮೂಲ್ಕಿ ಫಿರ್ಕಾಕ್ಕೆ ತಯಾರಾಗಿದೆ. ಕಳೆದ ತಾ. 2ರಲ್ಲು ಜರಗಿದ ಗ್ರಾಮಸ್ವರಾಜ್ಯ ಸಭೆಯಲ್ಲಿ ಅದು ಮಂಜೂರಾಯಿತು. ನಂಜೇಶ್ವರ ಫಿರ್ಕಾದ ಕಾರ್ಯಕ್ರಮವೂ ತಯಾರಾಗುತ್ತಲಿದೆ. ಈ ಎರಡು ಫಿರ್ಕಾಗಳಲ್ಲೂ ಅಭಿವೃದ್ಧಿ ಯೋಜನೆ ತಯಾರಿಸುವ ಏರ್ಪಾಡು ಮಾಡಿಲ್ಲಾಗಿದೆ.

ದ. ಕ ಜಿಲ್ಲೆಯಿಂದ ಚುನಾಯಿತರಾದ ಜಿಲ್ಲಾ ಮುನ್ಸೀಫರು ಮದ್ರಾಸು ಪಬ್ಲಿಕ್ ಸರ್ವಿಸ್ ಕಮಿಶನರವರು ದ. ಕ. ಜಿಲ್ಲೆಯ ಈ ಕೆಳಗಿನ ವಕೀಲ ಮಹಾಶಯರನ್ನು ಡಿಸ್ಟ್ರಿಕ್ಟ್‌ಮುನ್ಸೀಫರಾಗಿ ಆರಿಸಿದವರು; ಶ್ರೀಗಳಾದ ಎಚ್. ಲಕ್ಷ್ಮಣ ಸಾಲಿಯಾನ್ (ಮಂಗಳೂರು), ಕೆ. ಜಿಂದ್ರ ಶೇಖರ ಹೆಗ್ಡೆ (ಮಂಗಳೂರು), ಬಿ. ರವಿರಾಜ (ಪುತ್ತೂರು), ಎಸ್. ಸುಬ್ಬಣ್ಣ ಶೆಟ್ಟಿ (ಕುಂದಾಪುರ), ಸಿ. ಪಿ. ಪಾಮೋದರನ್ ನಾಯರ್ (ಮಂಗಳೂರು)

ಕುಂಬಳೆ ಫಿರ್ಕಾದಲ್ಲಿ ಜರಗಿದ ಮು

ಖ್ಯ ಕೆಲಸಗಳ ಸಾರಾಂಶ: ಎರಡು ಸರಕಾರಿ ಕೆರೆಗಳ ದುರಸ್ತಿಯ ಕೆಲಸವು ಮುಗಿಸಲ್ಪಟ್ಟಿತು. ಆರಿಕ್ಕಾಡಿ ಮಸೀದಿಯ ವಶವಿರುವ ಒಂದು ನೀರಾವರಿ ಕೆರೆಯ ದುರಸ್ತಿಯನ್ನು ಗ್ರಾಮಸ್ಥರೇ ನಾಡಿಸಿದ್ದಾರೆ. ಇದರಿಂದ ಐದು ಎಕ್ರೆ ಗದ್ದೆಗಳಲ್ಲಿ ಒಂದು ಹೆಚ್ಚಿನ ಬೆಳೆಯನ್ನು ಬೆಳೆಬಹುದೆಂದು ಅಂದಾಜುಮಾಡಲಾಗಿದೆ. ಕಾಟುಕುಕ್ಕೆ ಗ್ರಾಮದ ಸಾಲೆ ಗೋವಿಂದ ಭಟ್ಟರಿಗೆ ಸರಕಾರಿ ಸ್ಥಳಗಳಲ್ಲಿ ಒಂದು ನೀರಾವರಿ ಕೆರೆಯನ್ನು ತನ್ನ ಖರ್ಚಿನಲ್ಲಿ ಕಟ್ಟಿಸಲಿಕ್ಕೆ ಅನುಮತಿಯನ್ನು ಕೊಡಲಾಗಿದೆ. ಇದರಿಂದ ಆಹಾರ ವಸ್ತುಗಳನ್ನು ಬೆಳೆಸಲು ಸಾಧ್ಯವಿದೆ. ಬುಲ್‌ಗ್ರೇಡಿನ ಸಹಾಯದಿಂದ ಸಾಧಾರಣ ಎಂಟು ಎಕ್ರೆ ಜಮೀನನ್ನು ಸಮತಟ್ಟು ಮಾಡಿ ಬೆಳೆಸಲು ಅನುಕೂಲ ಮಾಡಿದೆ ಉಪ್ಪುನೀರು ಬರುವ ಗದ್ದೆಗಳಲ್ಲಿ ಬೆಳೆಸಲು ಯೋಗ್ಯವಾದ ಭತ್ತದ ಬೀಜವನ್ನು ಪ್ರಯೋಜನಾರ್ಥವಾಗಿ ಹಂಚಲಾಗಿದೆ.

ಮನೆ— ತಾ 1-6-1950ರಲ್ಲು ಮಾರ್ಕೆ ಎಂಡ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ರಕ್ಷಕರ ಕೂಟದ ಸಭೆಯು ಮಾಡಿಪುರ ಗ್ರಾಮದ ಪತೇಲರಾದ ಶ್ರೀ. ಪದ್ಮನಾಭಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಬಾಲಕಿಯರಿಂದ ನಾಡುಕಾಪ ಟ್ಯಾಭಿಷೇಕ ಎಂಬ ನಾಟಕವು, ಇತರ ಹಲವು ವಿನೋದಾವಳಿಗಳೂ ಪ್ರದರ್ಶಿಸಲ್ಪಟ್ಟವು. ಸಭಿಕರ ಸಂದರ್ಭೋಚಿತಮಾತುಗಳಾದ ನಂತರ ಅಧ್ಯಕ್ಷರು ಇಂತಹ ಸಭೆಗಳನ್ನು ಜರಗಿಸುವುದರ ಉದ್ದೇಶಗಳನ್ನು ವಿವರಿಸುತ್ತಾ, ರಕ್ಷಕರು ಶಾಲೆಯ ಅಭಿವೃದ್ಧಿಯ ಕಡೆಗೆ ಗಮನ ಕೊಡಬೇಕೆಂದರು. ಕಾರ್ಯದರ್ಶಿಯವರು ಧನ್ಯವಾದಗಳನ್ನರ್ಪಿಸಲಾಗಿ, ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The Udipi Bank Ltd., Padubidri.

ದಿ ಉಡ್ಪಿ ಬೇಂಕ್ ಲಿಮಿಟೆಡ್, ಪಡುಬಿದ್ರೆ.

ಜ್ಯಾಹೀರು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನ ಪಡುಬಿದ್ರೆ ಆಫೀಸಿನಲ್ಲಿ ನಗದಾಗಿ ಈಡಿನ ಮೇಲೆ ಪಡೆಕೊಂಡ ಸಾಲಗಳ ಬಾಬ್ತು ಅಸ್ಲು ಏನೇಜು ಬಡ್ಡಿ ವ ಇನ್ನಿತರ ಚಾರ್ಜುಗಳನ್ನು ಕ್ಲುಪ್ತ ವ್ಯಾದಿಗೆ ಸಲ್ಯಾಸದೆ ಇರುವುದರಿಂದಲೂ, ಸದ್ರಿಯವರಿಗೆ ಚಿಟ್ಟಿ ರಿಜಿಸ್ಟ್ರಿ ನೋಟಿಸುಗಳ ಸೈಕೆ ಕೆಲವು ಜ್ಯಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಕೆಲವು ನೋಟೀಸುಗಳು ಜ್ಯಾರಿಯಾದ ವಿಷಯ ತಿಳಿದು ಬಾರದೆ ಇರುವುದರಿಂದಲೂ ಸದರಿ ಲೋನುಗಳ ಬಾಬ್ತು ಈಡಿಟ್ಟ ನಗದಗಳನ್ನು ಇವೇ ಬರುವ ತಾ. 30-6-1950 ನೇ ಶುಕ್ರವಾರ ಹಗಲು ಗಂಟೆ 11ಕ್ಕೆ ಬ್ಯಾಂಕಿನ ಉಡ್ಪಿ ಆಫೀಸಿನ ವತ್ತಾಂದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವುದೇ ಕಾರಣದಿಂದಲಾದರೂ ಏಲಂ ಅದೇ ದಿವಸ ನಡಾಸಲು ಅನುಕೂಲವಾಗದಿದ್ದರೆ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೆನೇ ಮುಂದರಿಸಲಾಗುವುದು. ತಿಳಿದಿರಲಿ.

ಜಂಜ್ರಾ ನಂಬ್ರ	J. L. No	ಹೆಸರು ಮತ್ತು ವಿಳಾಸ	ಅಸಲು ಹಣ
1	10/44	ಗುಂಡಲಾಡಿ ರಾಮಯ್ಯ ಶೆಟ್ಟಿ, ಚಿನ್ನಯ ಸೆಟ್ಟಿಯ ಅಳಿಯ, ಗುಂಡಲಾಡಿ.	8-0-0
2	95/45	ಅಲ್ಲಿಸಾ ಬ್ಯಾರಿ, ಅಬ್ದುಲ ಖಾದ್ರಿಯವರ ಮಗ, ಎರಮಾಳು.	25-0-0
3	232/45	ಖಾರಾ ಪೂಜಾರಿ, ಪೂವ ಪೂಜಾರಿಯ ಮಗ, ತೆಂಕ ಎರಮಾಳು ಸೋಸ್ವ.	6-0-0
4	585/46	ಯು. ಅಹಮ್ಮದ್ ಬ್ಯಾರಿ, ಉಲ್ಲಾ ಹಸನ್ ಬ್ಯಾರಿಯವರ ಮಗ, ತೆಂಕ ಎರಮಾಳು.	36-0-0
5	2/47	ಜಿ. ರಾಮಯ್ಯ ಶೆಟ್ಟಿ, ಚಿನ್ನಯ ಸೆಟ್ಟಿಯ ಅಳಿಯ, ಕಲ್ಲಂಕ ಗುಂಡಲಾಡಿ, ನಡಸಲ್ ಪಡುಬಿದ್ರಿ.	8-0-0
6	375/47	ಹೂವಯ್ಯ ಆಚಾರಿ, ಬಾಬುರಾಯ ಆಚಾರಿಯ ಮಗ, ತೆಂಕ ಎರಮಾಳು.	25-0-0
7	462/47	ಅಣ್ಣು ಸೆಟ್ಟಿ, ಬರಮು ಸೆಟ್ಟಿಯ ಅಳಿಯ, ಬರಂಪಾಡಿ ತೆಂಕ ಪೋಸ್ವ, ಎರಮಾಳು.	30-0-0
8	49/47	ಕೆ. ಬಿ ಶ್ಯಾಮ ರಾವ್, ರಾಮಚಂದ್ರಯ್ಯನ ಮಗ, ಪಡುಬೆಟ್ಟು, ಪಡುಬಿದ್ರೆ.	10-0-0
9	519/47	ಪಿ. ಶ್ಯಾಮ ಶೆಟ್ಟಿ, ರಾಮಣ್ಣ ಶೆಟ್ಟಿಯ ಅಳಿಯ, ಹೊಸಕಳ್ಳಿಲು, ನಡಸಲು, ಪಡುಬಿದ್ರೆ.	15-0-0
10	561/47	ನಾರಾಯಣ ಪೂಜಾರಿ, ಪೋಜ ಪೂಜಾರಿಯ ಅಳಿಯ, ಟೈಲರ್, ಪಡುಬಿದ್ರೆ.	30-0-0
11	4/48	ಪಿ. ವಾಸುದೇವ ಆಚಾರಿ, ಬಿನ್ನಪ್ಪ ಆಚಾರಿಯ ಮಗ, ನಡಸಲು, ಪಡುಬಿದ್ರೆ.	50 0-0
12	67/48	ಯುಸೋಪ್ ಸಾಹೇಬ, ಕಬ್ಬುದ್ದಿನ ಸಾಹೇಬರ ಮಗ, ನಡಸಲು, ಪಡುಬಿದ್ರೆ.	40-0-0
13	82/48	ಯುಸೋಪ್ ಸಾಹೇಬ, ಕಬ್ಬುದ್ದಿನ ಸಾಹೇಬರ ಮಗ, ನಡಸಲು ಪಡುಬಿದ್ರೆ.	20-0-0
14	168/48	ಪಿ. ಸಂಜೀವ ಪೂಜಾರಿ, ಮನು ಪೂಣಾರಿಯ ಅಳಿಯ, ನಡಸಲ್ ಗುಂಡಲಾಡಿ ಮನೆ ಪಡುಬಿದ್ರೆ.	20-0-0
15	203/48	ಎಲ್ಲಪ್ಪ ಸೆಟ್ಟಿ, ಸೂರ ಸೆಟ್ಟಿಯ ಅಳಿಯ, ಕುಡಬೆಟ್ಟು, ಸಾಂತೂರು ಪೋಸ್ವ, ಸಾಂತೂರು.	100-0-0
16	230/48	ಪಿ. ಸಂಜೀವ ಪೂಜಾರಿ, ಮನು ಪೂಜಾರಿಯ ಅಳಿಯ, ನಡಸಲ್ ಗುಂಡಲಾಡಿ ಮನೆ ಪಡುಬಿದ್ರೆ.	20-0-0
17	297/48	ಪೈ. ಎಮ್. ನಾಗಪ್ಪ ಸೆಟ್ಟಿ, ರಾಮಯ್ಯ ಸೆಟ್ಟಿಯ ಅಳಿಯ, ತೆಂಕಪೋಸ್ವ ಎರಮಾಳು	375-0-0
18	349/48	ಕಾಂತಾರ ಶೆಟ್ಟಿ, ದೂಮ ಸೆಟ್ಟಿಯ ಮಗ, ಸಾಂತೂರ ಪಡುಮನೆ, ಪೋಸ್ವ ಕಂಬರ್ಗಟ್ಟೆ.	45-0-0
19	412/48	ಪಿ. ಹೈದರ ಸಾಹೇಬ, ಹಸನ್ ಸಾಹೇಬರ ಮಗ, ನಡಸಲು, ಪಡುಬಿದ್ರೆ.	45-0-0
20	414/48	ನೀಲಯ್ಯ ಆಚಾರಿ, ರಾಮಯ್ಯ ಆಚಾರಿಯ ಮಗ, ಸಂತೆಕಟ್ಟೆ, ಪಡುಬಿದ್ರೆ.	23-0-0
21	421/48	ಮುತ್ತು ಬಾಯಿ, ದುಕ್ಕು ಬಾಯಿಯ ಮಗಳು, ಕಾಡಿಪಟ್ಣ, ಪಡುಬಿದ್ರೆ.	35-0-0
22	493/48	ಬಿ. ಕೆ. ರಾಮಚಂದ್ರಯ್ಯ, ಬೈಲ್ ಕೃಷ್ಣಪ್ಪಯ್ಯನವರ ಮಗ, ಬೆಂಗ್ರಿ, ಪಡುಬಿದ್ರೆ.	80-0-0

Udipi,
Dated 11-6-50.

C. Narayana Kamath,
Agent at Udipi.

APPOINTMENT OF TEACHERS IN LABOUR SCHOOLS

Applications are invited for the appointment of teachers in the Labour Schools to be newly opened at Nelyadi of Puttur Taluq, Panathadi of Kasaragod Taluq and Halasanad of Coondapur Taluq in South Kanara District from candidates Possessing the following qualifications.

1. Higher Elementary Grade Trained, or
2. Secondary Grade Trained.

The applications with necessary certificates and testimonials should reach the Office of the undersigned on or before 30-6-1950.

Office of the Dt. Welfare Officer, Mangalore, dated 3-6-1950.

(Sd.) **K. Venkappa,**
Dt. Welfare Officer.

BUY INDIAN! ENCOURAGE INDIAN INDUSTRY!

ಅಮಲಕೇ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.



Highly perfumed and medicated, worth using daily by one and all keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉಪ್ಪಿನ ವ್ಯವಸ್ಥೆ ಕರಿದಿತ್ತ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಪಂಡಿತನಸು, ಇವುಗಳ ರುಚಿಪುಟಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!

ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ. 1—0—0

ಪ್ರತಿಗಳು ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ. ಇಲ್ಲಿ ದೊರೆಯುತ್ತವೆ

ಪರಿಜನಪಥಿಂದ

ಸರ್ವೋದಯವು ಸಿದ್ಧಾಂತಕ್ಕೊಂದು ಸವಾಲಾಗಿದೆ

---ಸ್ವಾಮಿ ಆನಂದ

ಆಧುನಿಕ ಮಾನವ ಸಂಸ್ಕೃತಿಯ ಶಿಲ್ಪಿಗಳು ಯಾವ ಮಾನವ್ಯ ಸಂಸ್ಕೃತಿಗಳ ಸಮೀಪ್ಯೋತ್ಕಲಿತ ಸಹಿಷ್ಣುತೆಯಲ್ಲಿ ಮಾನವಸಾಮ್ರುಪ್ತ ಪ್ರಮಿತ ಜಗತ್ಪಥ ಲಾಲನು ಹೀಗೆ ಜೀರಿಡರೆಂದು ಎಲ್ಲರಿಯೊಣಿಸಿ:

"ನೀವು ರಕ್ತ ಮಾಂಸಗಳುಳ್ಳ ಮನುಷ್ಯ ಜಂತುಗಳೊಡನೆ ವ್ಯವಹರಿಸುತ್ತೀರಿ; ಈ ಮನುಷ್ಯ ಜಂತುಗಳಿಗೆ ರಕ್ತ ಮಾಂಸಗಳಷ್ಟೇ ಅಲ್ಲದೆ ಇಂದು ಉದ್ರೇಚನೀಯವಾದ ಮನಸ್ಸೂ ಭಾವನೆಗಳೂ ಇವೆ. ಆದುದರಿಂದ ಆ ವಿಷಯವನ್ನು ನೆನಪಿಟ್ಟುಕೊಂಡು ಈ ಸಾಂಗತಿಗಳನ್ನು ಪರಾಮರ್ಶಿಸಬೇಕು-ಅದು ಬೆದ್ಯ ಮಿಕ, ಕೂಲಿಕಾರ ಸಂಬಂಧಿ ಆಥವಾ ಇನ್ನಾವ ಕ್ಷೇತ್ರವಾದರೂ ಸರಿಯೆ.

"ಒಂದು ಸರಕಾರವು ಆ ಮನುಷ್ಯ ವಸ್ತುವಿನೊಡನೆ ವ್ಯವಹರಿಸಬೇಕು; ಅದಕ್ಕೆ ಉಪಕಾರ ಮಾಡುವದಕ್ಕೇ ಅಲ್ಲದೆ, ಆ ಉಪಕಾರವನ್ನು ಅದು ಆರ್ಥ ಮಾಡಿಕೊಳ್ಳುವಂತೆಯೂ ಮಾಡಬೇಕು ಮತ್ತು ಅದಕ್ಕೂ ಮುಖ್ಯವಾದುದೆಂದರೆ, ತನ್ನ ಕಾರ್ಯದಲ್ಲಿ ಆದು ಭಾಗಿಯಾಗುವಂತೆ ಮಾಡಬೇಕು.

"ವಿಲಕ್ಷಣವಾದ ಸಂಗತಿಯೆಂದರೆ, ಸರಕಾರ ತನಗೆ ತಾನೇ ಉಪಕಾರ ಮಾಡಿಕೊಂಡರೂ ಅದು ಜನೋಪಕಾರವೇ ಆಗುವದು. ಜನರಿಗೆ ಪೂರ್ಣ ದಕ್ಷಿಣೆಯನ್ನು ಕೊಟ್ಟು ಉಪಕರಿಸಲು ಸಾಧ್ಯವಿಲ್ಲ. ನಮಗೆ ಹೆಚ್ಚಿನ ಉತ್ಪಾದನೆ ಬೇಕು ಮತ್ತು ನಿನಗೂ ಕೆಲಸಮಾಡದೆ ಕುಳಿತಿರುವ ನಿರುದ್ಯೋಗಿಗಳು ನಮ್ಮಲ್ಲಿ ಅನೇಕರಿದ್ದಾರೆ. ನೋಡನೋಡುತ್ತಲೇ ಇದು ತರ್ಕಬಾಹಿರ ಎಂದು ತೋರುತ್ತದೆ. ಹೇಗಾದರೂ ತಾಪೆಟ್ಟು ಬಳಕೆಗಾರನಾಗಿರುವುದರಿಂದ ಎಲ್ಲಾದರೂ ಏನನ್ನಾದರೂ ಉತ್ಪಾದಿಸುತ್ತಿರಲೇ ಬೇಕು- ನಿಮ್ಮಲ್ಲಿ ಸಾಕಷ್ಟು ಯಂತ್ರಗಳಿಲ್ಲ ಎಂದು ನೀವು ಹೇಳಬಹುದು. ಅದು ಸರಿ. ಆದರೆ ಇತರ ಕಡೆಗಳಲ್ಲಿಯಂತೆ ಇಲ್ಲಿಯೂ ಗಾಂಧಿಯವರು ಒತ್ತಿ ಹೇಳಿದ ಒಂದು ಚಿಕ್ಕ ವಿಷಯ ಒಳ ಬರುತ್ತದೆ ನಿರುದ್ಯೋಗಿಗೆ ಕೆಲಸ ಮಾಡಲು ಒಂದು ಚಿಕ್ಕ ಅಥವಾ ದೊಡ್ಡ ಯಂತ್ರವಿಲ್ಲದಿರಬಹುದು. ಆದರೆ ಸುಮ್ಮನಿರುವ ವ್ಯಕ್ತಿಗೆ ಅವನಿಗೆ ಎಲ್ಲಿದ್ದರೂ ತಾನೇ ಸ್ವತಃ ಏನಾ ಇಪ್ಪರೆಯಿಲ್ಲದಿಗೂಡಿ ಯಾವಾಗ ಏತೆ ಏನಾದು ಉತ್ಪಾದನಾ ಕಾರ್ಯವನ್ನು ಮಾಡಬಹುದು. ಈ ಮನುಷ್ಯನ ಕಾರ್ಯ ಅಲ್ಪವಲ್ಲವೆಂದು ಅರ್ಥಶಾಸ್ತ್ರಜ್ಞರು ಹೇಳುವರು; ಏಕೆಂದರೆ ಆ ಕೆಲಸವನ್ನು ಲಕ್ಷಗಟ್ಟಲೆ ಜನರು ಮಾಡಿದರೆ ಬಹಳ ದೊಡ್ಡದಾಗುತ್ತದೆ.

"ಆದುದರಿಂದ ನಿನ್ನ ಉದ್ಯಮೀಕರಣವು ಎಷ್ಟೇ ಶೀಘ್ರವೇಗದ್ದಾಗಲಿ, ನಮ್ಮಲ್ಲಿಯ ಅಸಂಖ್ಯ ಜನರನ್ನು ಅದು ಹೇಗೆ ಕೆಲಸದಲ್ಲಿ ತೊಡಗಿಸುವುದೋ ನಾನಂತೂ ಅರಿಯೆ. ಒಂದು ಉದ್ಯಮದಲ್ಲಿ ನಾವು ೨, ೩ ಅಥವಾ ಹೆಚ್ಚು ಕೋಟಿ ಮನುಷ್ಯರನ್ನು ಕೆಲಸಮಾಡ ಹಚ್ಚಬಹುದು. ಆದರೆ ಇನ್ನೂ ಮಿಗುವ ನರ ಪಾಡೇನು? ಮನೆಯ ಅಲ್ಪಪ್ರಮಾಣದ ಅಥವಾ ಸಹಕಾರ್ಯವಾದ ಉದ್ಯಮವನ್ನು ಮಿಕ್ಕವರಿಗೆ ನೀವು ಮಾಡಹಚ್ಚಿದ ಹೊರತು ಅದರಿಂದ ನೀವು ಏನನ್ನೂ ಅರ್ಥವಾ ಸಾಕಷ್ಟನ್ನು ತೆಗೆದುಕೊಂಡಂತಾಗುವುದಿಲ್ಲ.'

('ಹಿಂದುಸ್ತಾನ್ ಟೈಮ್ಸ್,' ೧೪-೩-೫೦)

ಇದೊಂದು ಬಹು ಮುಖ್ಯವಾದ ಕಲ್ಪನೆ. ಇದನ್ನು ಸರ್ವೋದಯ ಸಿದ್ಧಾಂತ ವಿವರಿಸುವ ಕ್ರಮದಲ್ಲಿಯೇ ವಿವರಿಸಲಾಗಿದೆ. ಆದರೆ ದುರ್ದೈವದಿಂದ ಪಂಡಿತರ ಭಾಷಣದ ಈ ಭಾಗದ ಮೇಲೆ ಯಾರೂ ವಿಶೇಷನೆಯನ್ನೇ ಮಾಡಲಿಲ್ಲ. ಕಟ್ಟಿಂಜಿಷ್ಟವಾಗಿ ಅವರ ಭಾಷಣದ ಮುಖ್ಯಾಂಶವನ್ನು ತರ್ಕಕ್ಷಣದಲ್ಲಿ ತಿರಸ್ಕರಿಸಿ ಶ್ರೀ ಘನಶ್ಯಾಮದಾಸ ಬಿರ್ಲಾ ಅವರು ಒಂದು ಗೊತ್ತು ಪಳಿಯನ್ನು ಮಂಡಿಸಿದರು:

"ಆಧುನಿಕ ಯಂತ್ರದ ಮೂಲಕ ಮಾತ್ರ ಸಂಪೂರ್ಣ ಉದ್ಯೋಗವನ್ನೂ ಸಮೃದ್ಧಿಯನ್ನೂ ಉಂಟುಮಾಡಬಹುದು. ಚರಕವೂ ಸರ್ವೋದಯಸಿದ್ಧಾಂತವೂ ಕೂಡ ಉದ್ಯೋಗ ಪೂರ್ಣತೆಯನ್ನು ಉಂಟುಮಾಡಬಹುದೆಂಬುದು ನಿಜ; ಆದರೆ ಜನರು ಚರಕ ಹಿಡಿದರೆ ಮಜೂರಿಯು ಮಟ್ಟು ಏನಾಗಬಹುದು? ದಿನಕ್ಕೆ ನಾಲ್ಕಾಣೆ ಸಿಗಬಹುದು. ಅಥವಾ ಅದೂ ಬಹಳ ಸಂಶಯಾಸ್ಪದ.

(ಪ್ರೆಸ್ ಆಫ್ ಇಂಡಿಯಾ, ೧೪-೩-೫೦)

ಸರ್ವೋದಯ ಸಿದ್ಧಾಂತವನ್ನು ಇಷ್ಟು ಸ್ವಲ್ಪ ಪದಗಳಲ್ಲಿ ಖಂಡಿಸಿರುವುದನ್ನು ನಾನು ಹಿಂದೆ ಎಂದೂ ಕಂಡಿರಲಿಲ್ಲ.

ಆದು ಹೇಗಿದ್ದರೂ ಬಿರ್ಲಾಜಿ ಕೂಡ ಸರ್ವೋದಯ ಸಿದ್ಧಾಂತಕ್ಕೆ ಉದ್ಯೋಗ ಪೂರ್ಣತೆಯ ಸಿದ್ಧಾಂತವನ್ನು ಸೇರಿಸಿದ್ದಾರೆ. ಇದು ಸಿದ್ಧಾಂತಕ್ಕೆ ಒಂದು ಸವಾಲಾಗಿದೆ.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷನರಿಗಳು

ದೊರೆಯುತ್ತವೆ.

ಬೆಲೆ. ರೂ. ೫ ೦ ೦

ಸಿಂಗಸ್ಟಡ ಆರ್ಥರೋಜ್ ೪ ೮ ೦

ನವಯುಗ ಪ್ರೆಸ್, ಉಡುಪಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ESTD. 1926

CROWN RUBBER STAMP CO.

MFRS. OF RUBBER STAMPS ENGRAVERS

FACTORY WORKS IN CALICUT (S.I.)

Approved form by the Gov. of Mysore
Certificated by the Agent of the Govt of Cylone & Indian.

ಭಯತುಸಾಧ್ಯ ನಿಂತಿತು

'ಅಮೃತ' ಬಿಲ್ಲೆಗಳನು ಉಪಯೋಗಿಸಿದರೆ ಪದತಪ್ಪಿ, ಭುತುಸಾಧ್ಯನವಾಗುವುದು, ಹಸಿವಾಗಿ ಬರುವುದು, ಈ ಔಷಧ ಸೇವನೆಯಿಂದ ಕೀಸ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಜಾತ್ರಿ ಗುಣವಾಗಿದೆ-ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs P. DEVEE, F. DS. (N. J.)
Tollygunge CALCUTTA

ಸ್ವಾಕಿಸ್ಪರು: ಶಹಾಕಂಪನಿ, ಮಂಗಳೂರು

ರ್ಣತೆಯನ್ನು ಉಂಟುಮಾಡುವ ಶಕ್ತಿಯುಂಟೆಂಬುದನ್ನು ಒಪ್ಪಿಕೊಂಡರೆಂದಾಯಿತು. ಆದರೆ ಆ ಜೀವನ ಯೋಜನೆಯ ಮೇಲೆ ಅವರು ಕೊಟ್ಟ ತೀರ್ಪು ಸಾಯಿಸುದಾಪದೆ ಸರ್ವೋದಯ ಸಿದ್ಧಾಂತವು ಜೀವನಾರ್ಜನೆಯ ಸನ್ನಿವೇಶಗಳನ್ನಲ್ಲ, ರಾಷ್ಟ್ರದ ಸಂರಚನಾರ್ಜನೆಯ ಸನ್ನಿವೇಶಗಳನ್ನು ಉಂಟುಮಾಡೀತು. ಅವರ ಟೀಕೆಯ ಅರ್ಥ ಇಲ್ಲಿಗೆ ಬರುತ್ತದೆ; ಬಹುಶಃ ಅವರ ತಾತ್ಪರ್ಯ ಇದೇ ಆಗಿರಬೇಕು.

ಚರಕವೆಂದರೊಂದು ಸೂತ್ರ; ಕೃಷಿ, ಗೋರಕ್ಷಣೆ, ಗ್ರಾಮೋದ್ಯೋಗಗಳು ಅದರ ಸುತ್ತಲೂ ತಿರುಗುವ ಗ್ರಹಗಳು ಎನ್ನುತ್ತಿದ್ದರು ಬಾಪು. ಗಾಂಧೀಜಿಯ ನಿಕಟ ಸಹವಾಸಿಗಳಾಗಿದ್ದ ಕಾರಣ ಬಿರ್ಲಾಜಿಗೆ ಗಾಂಧಿಯುವರ ಧ್ಯೇಯ ಕಲ್ಪನೆಯ ಪರಿಚಯ ಪೂರ್ಣವಾಗಿ ಇದೆ. ಆದರಿಂದಲೇ ಅವರು ನ್ಯಾಯವಾಗಿ ಚರಕವನ್ನು ಸರ್ವೋದಯ ತತ್ವಜ್ಞಾನದೊಡನೆ ಹೊಂದಿಸಿದ್ದಾರೆ. ಆದರೆ ಸರ್ವೋದಯ ತತ್ವ ಜ್ಞಾನವನ್ನು ಖಂಡಿಸುವಲ್ಲಿ, ಅವರು ಚರಕವನ್ನು ಕಾರಿತಾಗಿ ಹಳಿದಿದ್ದಾರೆ. ಈ ಕ್ರಮವು ಖಂಡನಾ ಕಾರ್ಯವನ್ನು ಸುಲಭಗೊಳಿಸಿತು; ಆದರೆ ಆ ಖಂಡನೆ ಇಡಿ ಸರ್ವೋದಯ ಸಿದ್ಧಾಂತಕ್ಕೆ ತಕ್ಕ ನ್ಯಾಯವನ್ನು ದೊರಕಿಸಿಕೊಟ್ಟಿಲ್ಲ.

ಇದರ ನಡುವೆ ನವ್ಯ ಕೇಂದ್ರಗಳಲ್ಲಿ ನೂಲುವ ಹೆಂಗಸರಿಗೆ ನಾಲ್ಕಲ್ಲ ಇಡಿ ಎಂಟಾಣೆ ದೊರಕುತ್ತದೆ. ಆದರೆ ಹಣಕ್ಕೆ ಸ್ವಿಮಿತ ಬೆಲೆಯಿಲ್ಲದ್ದರಿಂದ ಶ್ರಮದ ಬೆಲೆಯನ್ನು ಹಣದಿಂದ ನಿರ್ಣಯಿಸುವುದು ತಪ್ಪು. ಶ್ರಮ ಮೂಲ್ಯ ನಿರ್ಣಯದ ಅಂಥ ಕ್ರಮ ಅವೈಜ್ಞಾನಿಕ. ಮೊನ್ನೆ ಯೂರೋ ಕೇಳಿದರು, "ಚರಕವು ಇಡಿ ಒಂದು ದಿನದ ಊಟಕ್ಕೆ ಸಾಕಾಗುವಷ್ಟು ಹಣವನ್ನು ದೊರಕಿಸಿಕೊಡಬಲ್ಲುದೆ?" ನಾನೆಂದೆ: "ಆದು ಒಂದು ಇಡಿ ದಿನದ ಆಹಾರಕ್ಕೂ ಸಾಲದು, ಅಪೂರ್ಣ ಆಹಾರಕ್ಕೂ ಸಾಕಾಗದು. ಒಂದು ಊಟಕ್ಕೆ ಕಾಳು, ತರಕಾರಿ, ಹಾಲು ಮತ್ತು ಹಣ್ಣುಗಳು ಬೇಕು. ಚರಕ ಬಟ್ಟೆಯನ್ನು ತಯಾರಿಸಬಲ್ಲದು. ಹಾಗೆ ಮಾಡಲು ಅದಕ್ಕೆ ದಿನದ ಅಲ್ಪ ಶ್ರಮ ಸಾಕು. ಇಪ್ಪಲ್ಲದೆ ಅರ್ಥಶಾಸ್ತ್ರಜ್ಞ ಹೇಳುವ ದಕ್ಷ ಕೆಲಸಗಾರನ ಶ್ರಮವನ್ನಲ್ಲದೆ ದುರ್ಬಲ ಕೆಲಸಗಾರನ ಶ್ರಮವನ್ನೂ ಆದು ಬಳಸಿಕೊಳ್ಳಬಹುದು. ನಾನು ಚರಕವನ್ನು ವಸ್ತ್ರಪೂರ್ಣದೇವಿ (ವಸ್ತ್ರಾಧಿದೇವತೆ) ಎಂದು ಕರೆದಿದ್ದೇನೆ. ಚರಕವು ವಸ್ತ್ರಾಧಿದೇವತೆ ಎಂದು ನಾನು ಕರೆಯುವಾಗ ನನಗೆ ಗಿರಣಿಯ ಅಸ್ತಿತ್ವ ಚೆನ್ನಾಗಿ ನೆನಪಿನಲ್ಲಿರುತ್ತದೆ. ಗಿರಣಿಯು ವಸ್ತ್ರಾಧಿದೇವತೆಯಲ್ಲ. ಏಕೆಂದರೆ, ಯುದ್ಧಪೂರ್ವದಲ್ಲಿ ಗಿರಣಿಗಳು ತಲೆಗೆ ೧೭ ಡೆದಂಡಗಜಗಳಷ್ಟು ತಯಾರಿಸುತ್ತಿದ್ದರೆ ಈಗ ಅವುಇಷ್ಟು !ಬಂಡವಳ, ತಾಂತ್ರಿಕ ಜ್ಞಾನ ಮತ್ತು ವ್ಯಾಪಾರೀ ಬುದ್ಧಿ ಎಂತಿಯಿದ್ದರೂ ಬರಿ ೧೧ ಡಜನ್ ಗಜದಷ್ಟನ್ನು ಮಾತ್ರ ಉತ್ಪಾದಿಸುತ್ತಿವೆ. ಚರಕದ ಗತಿ ಅಷ್ಟು ಕೆಟ್ಟಿಲ್ಲ ನೆಂದು ನಾನು ಧೈರ್ಯವಾಗಿ ಹೇಳುತ್ತೇನೆ.

ಆದರೆ ಕೃಷಿ, ಗೋರಕ್ಷಣೆ, ಗ್ರಾಮೋದ್ಯಮ, ಗ್ರಾಮ ನೈರ್ಮಲ್ಯ, ನಿಸರ್ಗ ಚಿಕಿತ್ಸೆಗಳನ್ನು ಚರಕದೊಡನೆ !ಹೊಂದಿಸಿದರೆ ಆದರಿಂದ ಸರ್ವಾಂಗಸಹಿತವಾದ ಜೀವನ ಪೂರ್ಣ ದೊರಕೊಮ್ಮುತ್ತದೆ. ಅವನ್ನು ಅಲಕ್ಷ್ಯ ಮಾಡಿದರೆ ಭಾರತವು ಖಂಡಿತವಾಗಿಯೂ ತೊಂದರೆಗಳಲ್ಲಿ ಬೀಳುತ್ತದೆ. ಇಂದು ಸೈನಿಕ ಸಂರಕ್ಷಣೆಗಾಗಿ ನೂರಕ್ಕೆ ಏಳಕ್ಕಿಂತ ಹೆಚ್ಚು ರಾಷ್ಟ್ರಾದಾಯವನ್ನು[ನಿಷ್ಪ್ರಯೋಜಕವಾಗಿ ಸುತ್ತಿದೆ. ಅದಕ್ಕೆ ಭಾರತ ಪಾಕಿಸ್ತಾನಗಳ ನಡುವಣ ಶತ್ರುತ್ವವೇ ಕೊಡೆಯೆಂದು ಹೇಳಲಾಗುತ್ತಿದೆ. ಇಂಡೋ-ಪಾಕಿಸ್ತಾನಗಳ ನಡುವಣ ಸಮಸ್ಯೆ ಪರಿಹಾರವಾದ ಬಳಿಕವೂ ಗ್ರಾಮಾರ್ಥನೀತಿಯನ್ನು ಸ್ವೀಕರಿಸುವ ವರೆಗೆ ಮತ್ತು ಆ ಚರಡೆಗೆ ತರುವ ವರೆಗೆ ಅಂಥ ಇನ್ನೂ ಇಂತರ ಸಮಸ್ಯೆಗಳು ಹುಟ್ಟುವುವು. ಆದರಿಂದ ಸರಕಾರವು ಮಿಕ್ಕ ರಾಷ್ಟ್ರಗಳಂತೆಯೇ ಸೈನಿಕ ಶಕ್ತಿಯನ್ನು ಬೆಳೆಸುವಲ್ಲಿ ಲಕ್ಷ್ಯಹಾಕಬೇಕಾಗುತ್ತದೆ. ಆದುದರಿಂದ ಸರ್ವೋದಯ ಸಿದ್ಧಾಂತವೊಂದೇ ಜೀವನಕ್ಕೆ ಯೋಗ್ಯವಾದ ಪರಿಸ್ಥಿತಿಯನ್ನು ನಿರ್ಮಿಸಬಲ್ಲುದು; ಮಿಕ್ಕೆಲ್ಲ ವೂ ಸಂರಣಕ್ಕೆ ತಕ್ಕ ಸನ್ನಿವೇಶಗಳನ್ನು ತರುವುವು ಎಂಬುದನ್ನು ಚೆನ್ನಾಗಿ ಅರಿತುಕೊಳ್ಳುವುದವಶ್ಯ.

ವರ್ಧಾ, ೩—೪—೫೦ ವಿನೋಬಾ
(೧೯೫೦ನೇಯ ಏಪ್ರಿಲ್ಲಿನ 'ಸರ್ವೋದಯ' ದಿಂದ ಭಾಷಾಂತರಿಸಿದ್ದು) (ಕರ್ಮವೀರ)

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕೊಲೇಜು
ಮೊದಲಾದುವುಗಳ
ಲೈಬ್ರೆರಿಗಳಿಗೆ
ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ,
ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕದಾರರಿಗೆ— ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕ್ಕೌಂಟ್
ಪುಸ ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಥೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವ್ಯ, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಛಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಗಂಡ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯ್ತದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ನೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ನೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಹೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕೆಂಬಳಕಾಯಿ, ಒಳೈಣ್ಣೆ ಬಿಡಬೇಕು.
ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜು ೮ ಆಣೆ
ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್, ನಂಜುಡೇಶ್ವರ ಮೂರ್ತಿ ಡಾವಣಗೇರಿ.
ಕತ್ರನ್ಯಪಹಾರ ಮಾಡತಕ್ಕ ಮಾಲಕರ ವಿಳಾಸ,
ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ-

— ಮಕ್ಕಳನ್ನು ಹಡೆಯುವುದು ಸಾಕು —
ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ್ ರೋಗ ಗೃಹಸ್ಥ ಹೆಜ್ಜು ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೇಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಕಿಮ್ಮತ್ತು:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.
ಹೂಲಕರು:—ಹಾಲಪ್ಪಾ ಹಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-
ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ವಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ಕೆಮಿಸ್ಟ್; ಹಾವೇರಿ ಬ್ಯಾಡಗಿ

"ವೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)
ಗೀತೆಯ ಕೈಗನ್ನಡಿ
(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)
● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●
ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಭಟ್ಟಯಾಗಿ ಎದ್ದು ಕಾಣುವುದು.
400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.
ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.
ಪ್ರತಿಗಳು ಸಿಗುವ ಮುಖ್ಯ ಸ್ಥಳ:—
ನವಯುಗ ಪ್ರೆಸ್, ಉಡುಪಿ, ದ. ಕನ್ನಡ.
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘ ಮಾನ ಪಥುರವ್ಯವ ರಸಾಯನ. ಅಲ್ಪ ಮೌಲ್ಯದಿಂದ ಬಸವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಕೊಡಿಯಾಲಬೈಲು ಪೋಸ್ಟು (ಮಂಗಳೂರು)
ಸ್ಥಾನಿಕರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಸ್ವಾತಂತ್ರ್ಯವೆಂದರೆ ಸ್ವೈರಾಚಾರವಲ್ಲ; ಸಮಾನತೆಯೆಂದರೆ ಗಂಡಸರ ಅನುಕರಣವಲ್ಲ, ಎಂಬ ಹಿಂದಿನ ಲೇಖನಗಳ ಭಾವವನ್ನು ಅನೇಕ ತಂಗಿಯರು ಅಪಾರ್ಥ ಮಾಡಿಕೊಂಡು ರೇಗಿ ನನಗೆ ಪತ್ರ ಬರೆದಿದ್ದಾರೆ, "ವಿದ್ಯಾವತಿಯಾದ ನೀನೇ ಹೀಗೆ ಸ್ತ್ರೀ ಸ್ವಾತಂತ್ರ್ಯದ ವಿರುದ್ಧ ಪ್ರಚಾರ ಮಾಡಿದರೆ ಸಮಗಿನ್ನಾರು ಗತಿ?" ಎಂದು ಕೆಲವರು ಏಟ್ಟುಸಿರಾಗರೆದಿದ್ದಾರೆ. "ಮಕ್ಕಳನ್ನು ಹಡೆಯುವ ಯಂತ್ರವಾಗಿ ಗಂಡಸರ ವಿಲಾಸಕ್ಕಾಗಿ ಮನೆ ಗುಡಿಸಿ, ಆಡಿಗೆ ನೀರುಗಳ ನೂಡೆಯನ್ನು ಹೊರುವ ಚಿರದಾಸಿಯಾಗುವದೇ ಹೆಂಗಸಿನ ಬಾಳಿನ ಗುರಿಯೇ?" ಎಂದು ಕೆಲವರು ಆರ್ಭಟಿಸಿದ್ದಾರೆ. ಅದಾವದೂ ನನ್ನ ಲೇಖನಗಳ ಗುರಿಯಲ್ಲವೆಂದು ಒಂದೇ ವಾಕ್ಯದಲ್ಲಿ ಹೇಳಿ, ಅವರ ತಪ್ಪು ತಿಳುವಳಿಕೆಯ ಬೇರುಗಳನ್ನೇ ಕತ್ತರಿಸಲು ಇಲ್ಲಿ ಕೆಲವು ಜೀವಾಳದ ಮಾತುಗಳನ್ನು ಬರೆದಿದ್ದೇನೆ.

ಮೇಲೆ ಬರೆದಂತೆ ಪ್ರತಿಭಟಿಸದ ನನ್ನ ತಂಗಿಯರಿಗೆ ಮನೆಯೂ ಮಕ್ಕಳೂ ಬೇಡವೇ? ಸಮಾನತೆಯ (?) ರಣಕಹಳೆಯನ್ನು ಊದುತ್ತಿರುವ ಸ್ವೈರಿಣಿಯರು ಕೂಡ ಅವು ಬೇಡವೆನ್ನಲಾರರು. ಏಕೆಂದರೆ ಗಂಡಸರಿಗೂ ಅವು ಬೇಕು ಮನೆ ಮಕ್ಕಳುಗಳನ್ನು ಪಿರಸ್ಕರಿಸುವ, ಮನುಷ್ಯತ್ವದ ದಿವಾಳಿಗಾರರಾದ ಸ್ತ್ರೀ-ಪುರುಷರೂ ಕೆಲವರಿದ್ದಾರೆಂಬುದನ್ನು ನಾನು ಬಲ್ಲೆ. ಆದರೆ ನನ್ನ ತಂಗಿಯರು ಮನುಷ್ಯತ್ವವನ್ನು ಕಳೆಸು ಕೊಂಡಿಲ್ಲವೆಂದು ನಂಬಿದ್ದೇನೆ. ಅತ್ತ ಮನುಷ್ಯರಲ್ಲಿ ಸ್ವೈರ್ಗಿಕರಾಗಿ ಮನೆ ಮತ್ತು ಮಕ್ಕಳ ವಿಷಯಕ ಅಭಿಮಾನವಿರುತ್ತದೆಂಬ ಜೀವ ಶಾಸ್ತ್ರದ ತತ್ವವನ್ನು ಬರ್ಟ್ರಾಂಡ್ ರಸೆಲ್‌ರಂತಹ ಬುದ್ಧಿವಾದಿಗಳು ಕೂಡ ಸಾರಿದ್ದಾರೆ.

ಜೀವಶಾಸ್ತ್ರ [Biology], ಪ್ರಾಣಿಶಾಸ್ತ್ರ [Zoology] ಮತ್ತು ಮನುಷ್ಯಶಾಸ್ತ್ರ [Ahthropology]ಗಳ ದೃಷ್ಟಿಯಿಂದ ನೋಡಿದರೆ, ಮಾನವನ ಆತಿ ಪುರಾತನ ಕಾಲದ ಇತಿಹಾಸವನ್ನು ನೋಡಿದರೆ ಮನೆ ಮತ್ತು ಮಕ್ಕಳ ಅಭಿಮಾನವು ಸ್ತ್ರೀ ಪುರುಷರಲ್ಲಿ ತಪ್ಪು ಮನಗಳ ಅಣುರೇಣುಗಳಲ್ಲಿ ಸೂಕ್ಷ್ಮವಾಗಿ ಸ್ಥಾಪಿಸುತ್ತದೆ ಎಂದು ನ್ಯಕ್ತವಾಗುವದು ಅತ್ಯಂತ ದುರ್ಜನರ ದುಸ್ಥರಾಜ್ಯದ ಕಾಯದೆಗಳಲ್ಲಿಯೂ ಮಕ್ಕಳ ರಕ್ಷಣೆಗೆ ಅವಕಾಶವಿರುತ್ತಿತ್ತು. ಮಕ್ಕಳು ಮೇಲ್ಕೆ ಪಡೆಯಬೇಕೆಂಬ ಹಂಬಲದಿಂದ ಬಡ ತಂದೆ-ತಾಯಿಗಳು ಅರೆ ಹೊಟ್ಟೆಯುಂಡು ಮನ ಮಾರುಗಳನ್ನು ನೂಲಿ ಮಕ್ಕಳಿಗೆ ಶಿಕ್ಷಣವನ್ನು ಕೊಟ್ಟ ಉದಾಹರಣೆಗಳೂ ಅಸಂಖ್ಯವಾಗಿವೆ. ಮನೆಯಿಲ್ಲದ ಮಕ್ಕಳನ್ನು ಅರೈಕೆ ಮಾಡುವದು ಸಾಧ್ಯವಿಲ್ಲವಾದುದರಿಂದಲೆ ಮಕ್ಕಳ ಹೊಣೆಯ ಜೊತೆಗೇ ಮನೆಯ ಹೊಣೆಯೂ ಬಂದು ಬಿಡುತ್ತದೆ. ಸಾರಾಂಶವೇನೆಂದರೆ "ಮನೆ ಬಾಳಿಬೇಕು; ಮಕ್ಕಳು ಬೆಳೆಯಬೇಕು" ಎಂಬುದು ಸ್ತ್ರೀಪುರುಷರಿಬ್ಬರಿಗೂ ಅನಿವಾರ್ಯವಾದ ಬಯಕೆಯಾಗಿದೆ. ಅನಾಗರಿಕ ಸ್ತ್ರೀಪುರುಷರಲ್ಲಿ ಕಾಮ ತೃಪ್ತಿಯೊಂದೇ ಆತ್ಯಂತಿಕ ಪ್ರೇರಣೆಯಾಗಿದ್ದರೆ ಮನುಷ್ಯರು ಮಿಕ್ಕ ಪ್ರಾಣಿಗಳಂತೆ, ಕಾಡು ಸ್ಥಿತಿಯಲ್ಲಿಯೆ ಉಳಿಯುತ್ತಿದ್ದರು. ಹಸಿವಾದಾಗ ಸಿಕ್ಕಿದುದನ್ನು ಸೇವಿಸಿ, ಕಾಮವೆದ್ದಾಗ ಕೈಗೆ ಸಿಕ್ಕ ಸ್ತ್ರೀಪುರುಷರನ್ನು ಭೋಗಿಸಿ ಬಾಳನ್ನು ಮುಗಿಸುತ್ತಿದ್ದರು ಆದರೆ ಅಸ್ಪರಿಂದಲೇ ತ್ಪ ಪ್ರಗಾದೆ ಮನೆ ಕಟ್ಟುವ ಹವ್ಯಾಸಕ್ಕೆ ಮನುಷ್ಯರು ಒಲಿದುದು ಮಕ್ಕಳ ಅಭಿಮಾನದಿಂದಲೇ ಎಂದು ವಿಜ್ಞಾನಿಗಳು ಹೇಳುತ್ತಾರೆ.

ಮನೆ ಮಕ್ಕಳು ಇಬ್ಬರಿಗೂ ಬೇಕಾಗಿದ್ದರೆ ಅವುಗಳ ಹೊಣೆಯನ್ನೂ ಇಬ್ಬರೂ ಹೊರ ಬೇಕೆಂಬುದು ನಿರ್ವಿವಾದವೆ ತಾನೆ? ಮನೆಯಿಂದ ಮಕ್ಕಳಿಗೆ ಆಶ್ರಯ ಸಿಕ್ಕುವುದು, ತಂದೆ ತಾಯಿಗಳಿಗೆ ಮನೆ, ಗಾಳಿ, ಬಿಸಿಲು ಜಳಗಳಿಂದ ಮುಕ್ತರಾಗಲು ಅವಕಾಶ ಸಿಕ್ಕುವುದು; ಆದುದರಿಂದ ಮಕ್ಕಳ ಹಿತದೃಷ್ಟೀ ಮುಖ್ಯವಾಗಿ ಸ್ವಹಿತಕ್ಕಾಗಿಯೂ ಮನೆ ಬೇಕು, ಮತ್ತೆ ಹಿತವೇ ಅಗಬೇಕಾದರೆ ಮನೆಯು ಹಿತಕರವಾಗಿರಬೇಕು. ಬರಿ ನಾಲ್ಕು ಗೋಡೆ, ಮೇಲೊಂದು ಚಪ್ಪರವಾದರೆ ಮನೆಯಾಗದು. ಮನೆಯು ಹಿತಕರವಾಗಬೇಕಾದರೆ ಅದರ ಸ್ಥೂಲ ರೂಪದ ಭದ್ರತೆಯ ಜೊತೆಗೆ ಅಂತರಂಗದ ಅನುಕೂಲತೆಗಳೂ ನೂರಾರು ಇರಬೇಕಲ್ಲವೆ? ಗಂಡಸಾಗಲಿ, ಹೆಂಗಸಾಗಲಿ, ಮಗುವಾಗಲಿ ಹಸಿದಾಗ ಹೊಟ್ಟೆ ತುಂಬಲು, ದಣಿವಾದಾಗ ವಿಶ್ರಮಿಸಲು ನಿದ್ರಿಸಲು, ಬೇನೆ ಬೇಸರಿಕೆಗಳಲ್ಲಿ ಆರೈಸಲು, ಜೀವನದ ಸಾಧನ ಸಲಕರಣಗಳನ್ನು ಸಂಗ್ರಹಿಸಲು ಅನುಕೂಲವುಳ್ಳದ್ದೇ ಮನೆ ಎಂಬ ನಿಸರಿಗೆ ಯೋಗ್ಯವಾಗುವದು ಆದ್ದರಿಂದ ಬರಿ ಮನೆಯಿದ್ದರೆ ಸಾಲದು, ಅದು ಭದ್ರವೂ ಹಿತಕರವೂ ಆಗುವಂತೆ ಅಪನ್ನಿಡುವ ಹೊಣೆಯೂ ಹೊರೈಸಲ್ಪಡಬೇಕಲ್ಲವೇ?

ಹಾಗಾದರೆ ಸ್ತ್ರೀಪುರುಷರಿಬ್ಬರಿಗೂ ಬೇಕಾಗಿರುವ ಮನೆ ಮಕ್ಕಳ ಹೊಣೆಯನ್ನು ಇಬ್ಬರೂ ಕೈಕೊಳ್ಳಬೇಕೆಂದು ಬೇರೆ ಹೇಳಬೇಕಾಗಿಲ್ಲ. ಇದುವರೆಗಿನ ವಿವೇಚನೆಯು ತರ್ಕಶುದ್ಧವಾಗಿದ್ದರೆ ಮನೆ ಮಕ್ಕಳ ಹೊಣೆಯೊಂಬ ಮಾತಿನಿಂದ ತಂಗಿಯರಿಗೆ ಅಪಮಾನವೇನಿಸಬೇಕು? ಆ ಹೊಣೆಯ ನಿರ್ವಹಣವು ಕೀಳೆಂದು ಏಕೆನಿಸಬೇಕು?

ಚುರುಕಾದ ತಂಗಿಯೊಬ್ಬಳು ಸಿಡಮಿನಿಂದ ಕೇಳುತ್ತಾಳೆ "ತತ್ವವೆಲ್ಲಾ ಸರಿ. ಆದರೆ ಆಚರಣೆಗೆ ಪರಿಣಾಮವೇನಾಗಿದೆ? ಮನೆಯ ಹೊಣೆಯನ್ನು ಹೊರಲು ಹೋಗಿ ಹೆಂಗಸು ಪ್ರಪಂಚ ಜ್ಞಾನವಿಲ್ಲದವಳೆಂದಳು. ಮಕ್ಕಳನ್ನು ಹಡೆಯುತ್ತ ಮೈಯೆಂಟುಮು ಆಸ್ಪಿಸಂಜರವಾಯಿತು. ತಲೆಗೆ ತಿಳಿವಿಲ್ಲ, ತನುವಿಗೆ ಬಲವಿಲ್ಲ ಹೆಂಗಸಿಂಪ್ಪೆ ಮನೆ ಮುಕ್ಕಳ ಹೊಣೆಗಳನ್ನು ಗಂಡಸರು ನಿರ್ವಹಿಸಲಿ" ಎಂದು. ತಂಗಿಯ ಸಮಸ್ಯೆ ಸತ್ಯಪೂರ್ಣವಾಗಿದೆ ಆದರೆ ಅವಳು ಕಲ್ಪಿಸಿದ ಸ್ಥಿತಿಯು ಮನೆಮಕ್ಕಳ ಹೊಣೆಯ ಪರಿಣಾಮವೇ ಆಥವಾ ಹೊಣೆಯನ್ನು ನೆರವೇರಿಸುವ ಕ್ರಮದಲ್ಲಿಯು ದೋಷದ ಪರಿಣಾಮವೇ? ಎಂಬುದನ್ನು ಅವಳು ಯೋಚಿಸಿದಂತೆ ಕಾಣುವದಿಲ್ಲ. ಅಪಥ್ಯವಾದ ಆಹಾರದಿಂದ ಬೇನೆ ತಂದುಕೊಂಡು ಊಟವನ್ನು ದ್ವೇಷಿಸುವ, ಅಸ್ವಸ್ಥಸ್ತ್ರೀಯಾಗಿ ನಡೆದು ಎಡವಿ ಕಾಲು ಮುರಿದುಕೊಂಡು ಮಾರ್ಗವನ್ನು ನಿಂದಿಸುವದೂ, ಮನೆ ಮಕ್ಕಳ ಹೊಣೆಯು ಸರಿಯಾದ ಕಲೆಯನ್ನು ತಿಳಿಯದೆ ಉಂಟಾದ ದುಷ್ಪರಿಣಾಮಕ್ಕಾಗಿ ಹೊಣೆಯನ್ನೇ ಹೀಯಾಳಿಸುವದೂ ಒಂದೇ ವರ್ಗದ ದೃಷ್ಟಿದೋಷಗಳಾಗಿವೆ.

ಹಾಗಾದರೆ ಸ್ತ್ರೀಯು ಆವನತಿಯ ಕಾರಣವು ಆವಳು ಮನೆ, ಮಕ್ಕಳ ಹೊಣೆಯನ್ನು ಹೊತ್ತುದಲ್ಲ ಎಂಬುದು ಸ್ಪಷ್ಟವಾಯಿತು ಆದರೆ ಆ ಹೊಣೆಯಕ್ರಿಯಾಕ್ರಮಗಳುತಿಳಿಯದೆ ಉಳಿದುದೇ ಅವಳ ದಾಸ್ಯಕ್ಕೂ ಅಧೋಗತಿಗೂ ಕಾರಣವೆಂಬುದನ್ನು ನನ್ನ ತಂಗಿಯರು ಆವಶ್ಯವಾಗಿ ಗಮನಿಸಬೇಕಾಗಿದೆ ಗಂಡಸು ತನ್ನ ಅಳಿಕೆಯ ಕೊಬ್ಬಿನಲ್ಲಿ ಶತಕಾನುಶತಕಗಳಿಂದ ಹೆಂಗಸಿಗೆ ಮಾಡಿದ ಅನ್ಯಾಯ ಹಿಂಸೆಗಳು ನನಗೆ ಚನ್ನಾಗಿ ತಿಳಿದಿವೆ ಆ ಅನ್ಯಾಯಕ್ಕೆ ಗಂಡಸಿನ ಅಧಿಕಾರ ಮದವೊಂದೇ ಕಾರಣವಲ್ಲ, ಹೆಂಗಸಿನ ಸ್ವತ್ವದ ಮರೆಯೂ ಆ ಕಾರಣಕ್ಕೆ ಪೋಷಕವಾಯಿತೆಂಬುದನ್ನು ನನ್ನ ಸಿಟ್ಟಿನ ಸೋದರಿಯು ನೆನಪಿಸಿಕೊಳ್ಳಬೇಕಾಗಿದೆ ಮಕ್ಕಳ ಹೊಣೆಯೆಂದರೆ ಪಂದಿಗಳಂತೆ ಒಂಬತ್ತು ತಿಂಗಳಿಗೊಂದರಂತೆ ಮಾಂಸದ ಮುದ್ದೆಯೊಂದನ್ನು ಹೆರುವುದಲ್ಲ. ಮನೆ ಸಂಗಿಸುವುದೆಂದರೆ ರೇಲ್ವೆ ಸಾರ್ವಲ್ ಕೋಣೆಗಳಲ್ಲಿ ವಿವಿಧ ವಿಚಿತ್ರ ವಸ್ತುಗಳನ್ನು ಅಸ್ತವ್ಯಸ್ತವಾಗಿ ಚಡ್ಡಿದಂತೆ ಅಲ್ಲ. ಹೆಂಗಸು ಆ ಅಲ್ಲದುದನ್ನು ಮೂರಾರತ್ತ ಬಂದುದರಿಂದಲೆ ಇಂದು ಕ್ಷುಲ್ಲಿಕ ಸ್ಥಾನವನ್ನು ಪಡೆದಿದ್ದಾಳೆ.

ಜಗತ್ತಿನ ಬಹುತರ ಎಲ್ಲ ಮಾನವ ಜನಾಂಗಗಳೂ ಅತಿ ಪ್ರಾಚೀನ ಕಾಲದಲ್ಲಿ ಪೂರ್ವ ಪ್ರಧಾನ (ಹೆಂಗಸೇ ಪ್ರಮುಖ) ವಾಗಿದ್ದವೆಂದು ಇತಿಹಾಸವು ಸಾರುತ್ತದೆ. ಭವಿಷ್ಯದ ಮೇಲ್ಮೆಯನ್ನು ಸಡೆಯಲಿಚ್ಛಿಸುವ ಪ್ರತಿಯೊಬ್ಬ ಹೆಂಗಸೂ ಆ ಹಿಂದಿನ ಹೆಜ್ಜುಗಾರಿಕೆಯನ್ನು ಕಳೆದುಕೊಂಡುದರ ಕಾರಣವನ್ನು ಹುಡುಕಿ ಅದನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಬೇಕು. ಆಗ ಸ್ತ್ರೀಯ ಆವನತಿಯ ಕಾರಣವು ಆವಳು ಮನೆ ಮಕ್ಕಳ ಹೊಣೆಯನ್ನು ಹೊತ್ತುದಲ್ಲ, ಆ ಹೊಣೆಯ ಕ್ರಿಯಾಕ್ರಮಗಳು ತಿಳಿಯದೆ ಉಳಿದುದೇ ಆವಳ ದಾಸ್ಯಕ್ಕೂ ಅಧೋಗತಿಗೂ ಕಾರಣವೆಂಬುದನ್ನು ನನ್ನ ತಂಗಿಯರು ಆವಶ್ಯವಾಗಿ ಗಮನಿಸಬೇಕಾಗಿದೆ ಗಂಡಸು ತನ್ನ ಅಳಿಕೆಯ ಕೊಬ್ಬಿನಲ್ಲಿ ಶತಕಾನುಶತಕಗಳಿಂದ ಹೆಂಗಸಿಗೆ ಮಾಡಿದ ಅನ್ಯಾಯ ಹಿಂಸೆಗಳು ನನಗೆ ಚನ್ನಾಗಿ ತಿಳಿದಿವೆ ಆ ಅನ್ಯಾಯಕ್ಕೆ ಗಂಡಸಿನ ಅಧಿಕಾರ ಮದವೊಂದೇ ಕಾರಣವಲ್ಲ, ಹೆಂಗಸಿನ ಸ್ವತ್ವದ ಮರೆಯೂ ಆ ಕಾರಣಕ್ಕೆ ಪೋಷಕವಾಯಿತೆಂಬುದನ್ನು ನನ್ನ ಸಿಟ್ಟಿನ ಸೋದರಿಯು ನೆನಪಿಸಿಕೊಳ್ಳಬೇಕಾಗಿದೆ ಮಕ್ಕಳ ಹೊಣೆಯೆಂದರೆ ಪಂದಿಗಳಂತೆ ಒಂಬತ್ತು ತಿಂಗಳಿಗೊಂದರಂತೆ ಮಾಂಸದ ಮುದ್ದೆಯೊಂದನ್ನು ಹೆರುವುದಲ್ಲ. ಮನೆ ಸಂಗಿಸುವುದೆಂದರೆ ರೇಲ್ವೆ ಸಾರ್ವಲ್ ಕೋಣೆಗಳಲ್ಲಿ ವಿವಿಧ ವಿಚಿತ್ರ ವಸ್ತುಗಳನ್ನು ಅಸ್ತವ್ಯಸ್ತವಾಗಿ ಚಡ್ಡಿದಂತೆ ಅಲ್ಲ. ಹೆಂಗಸು ಆ ಅಲ್ಲದುದನ್ನು ಮೂರಾರತ್ತ ಬಂದುದರಿಂದಲೆ ಇಂದು ಕ್ಷುಲ್ಲಿಕ ಸ್ಥಾನವನ್ನು ಪಡೆದಿದ್ದಾಳೆ.

ವಿವಿಧ ಪಾತ್ರೆಗಳು



ಯಾವತ್ತು ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಕಂಚು ನೊದಲಾದುವುಗಳ ವಿನಿಧ ಪಾತ್ರೆಗಳೂ ಸಾಮಾನುಗಳೂ ರಾಶಿ ರಾಶಿ ಯಾಗಿಯೂ ದೊರೆಯಬಹುದು.

ಕಲ್ಯಾಂಜಿ ವ್ಯಾಪಾರಾಯರ್ಸ್,
ಬಡಗುಬೀದಿ, ಉಡುಪಿ.

ಮಹಿಳಾ ಪುಟ

ಕರ್ತವ್ಯದಲ್ಲಿ ರೇಲ್ವೆಯೇಕೆ?

ಲೇಖಕಿ—ಶ್ರೀಮತಿ ಕಿಟ್ಟೂರಿ, ಹುಬ್ಬಳ್ಳಿ.

ಅದು ನಿಜ ಸಂಸ್ಕೃತಿಯನ್ನು ಅನ್ವೇಷಿಸಿ ಕು ಕೌಟುಂಬಿಕ ಪರಿಸ್ಥಿತಿ ಬರುವಾ ಸಾಮಾನ್ಯರ ಬಗ್ಗೆ ಪ್ರಯೋಗ ಮಾಡಿ, ಆವರಿಗಾಗಿ ಪರಿಶ್ರಮಿಸಿದ ಸಂಸ್ಥೆಗಳಿಗೆ ದ ಸಂಸ್ಥೆಗಳಿಗೆ ಸಾಮಾನ್ಯರಿಗಿಂತ ಹೆಚ್ಚಿನ ಸಂಪರ್ಕವಿದ್ದ ಕಿಸ್ತಿಯಾನ್ ಮಿಷನರಿಯವರು ಕಾಣುತ್ತಾರೆ.

ನನ್ನ ಮಕ್ಕಳ ಹೊಣೆಯನ್ನು ಆನ್ಯರಿಗೆ ಕೊಟ್ಟು ಹೊರಬಿದ್ದುದರಿಂದ ಹೆಂಗಸರ ಪ್ರಪಂಚ ಜ್ಞಾನವಿಲ್ಲದ ನಿರ್ಲಕ್ಷಿಯಾಗಿಲಾರಳು; ಪರಿಪಕ್ವ ಅವಳು ಮಾತಾ ಜ್ಞಾನಿಯಾಗುವಳು ಮನೆಯನ್ನು ಸುಂದರವಾಗಿ, ನಿರೋಗವಾಗಿ ಇಡಲು, ಆಹಾರವನ್ನು ಪುಷ್ಟಿದಾಯಕರವಾಗಿ, ರೋಗನಾಶಕವಾಗಿ ಸಿದ್ಧಗೊಳಿಸಲು ಮಕ್ಕಳನ್ನು ನಿರೋಗಿಗಳನ್ನಾಗಿಸಲು, ಶಬ್ದಗಳಿಗೆ ಕಲಾಳುಶಲರೂ ಕುಶಲರೂ, ಸಬಲರೂ ಚೇತನಾಭಿಮಾನಿಗಳೂ ಆಗುವಂತೆ ಬೆಳೆಸಲು ಹೆಂಗಸು ಎಷ್ಟು ವಿದ್ಯಾವತಿಯಾದರೂ ಕಡಿಮೆಯೆ. ವಾಸ್ತುಶಿಲ್ಪ, ವೈದ್ಯಶಾಸ್ತ್ರ, ಪಾಕಶಾಸ್ತ್ರ, ಮನಃಶಾಸ್ತ್ರ ಶಿಕ್ಷಣಶಾಸ್ತ್ರ ಮುಂತಾದ ವಿವಿಧ ಕಲೆಗಳನ್ನು ಆವಳು ಕಲಿಯದಿದ್ದರೆ ಮನೆಮಕ್ಕಳನ್ನು ಸಮರ್ಥತೆಯಿಂದ ನಿರ್ವಹಿಸುವದು ಸಾಧ್ಯವಿಲ್ಲ. ಮತ್ತು ಆ ಶಾಸ್ತ್ರಗಳಲ್ಲಿ ಪಂಡಿತಳಾದವಳು ಗೃಹಿಣಿಯಾಗಬಲ್ಲಳೇ? ದುಡ್ಡಿಗಾಗಿ ಗೃಹಿಣಿಯಲ್ಲಿ ಬಿಕ್ಕೆ ಬೇಡುವ ಪ್ರಸಂಗ ಆವಳಿಗೆ ಬಾರದು ಎಂಬುದೇ? ಅಂತಹ ಆವಾಲ ದೈಷ್ಟಿಯಿಂದ ಸಮಾನತೆಯೆಂದರೆ ನೌಕರಿಗಾಗಿ ಮಾತ್ರ ಪಯೋಕ್ತವಾಗಿರುವ ಬಿ ಎ, ಎಂ ಎ ಪದವಿಗಳ ಬೆನ್ನು ಹತ್ತು ವದರಿಂದ ಆಥವಾ ಕಛೇರಿ ಮನೆಗಳ ಆರೋಗ್ಯಹಾರಕ ಸ್ಥಾನವನ್ನು ಗಂಡಸಿನಂತೆ ಮಾರುಗಾಳುವದರಿಂದ ಹೆಣ್ಣು ತನ್ನ ಗೌರವವನ್ನು ತಾನೇ ತೊಳೆದುಕೊಂಡಂತಾಗುವದು

ಬರ್ನಾರ್ಡ್‌ಶಾ ನಂತಹ ಪ್ರಗತಿಶೀಲ ಲೇಖಕರು ಕೂಡ ಒಂದೆರಡು ಮಕ್ಕಳಾ ಹೆಂಗಸಿನ ವ್ಯಕ್ತಿತ್ವದ ಪೂರ್ಣ ವಿಕಾಸವಾದು ಎನ್ನುತ್ತಾರೆ ಹಾಗಾದರೆ ಮನೆ, ಮಕ್ಕಳ ಹೊಣೆಯನ್ನು ಹೇಸಿಕೊಳ್ಳುವದರಿಂದ ಲಾಭವೇನು? ಕರ್ತವ್ಯದಲ್ಲಿ ಕೀಳ್ಮೆಯು ಕಾಣುವದೇ ಅನವತಿಯ ಪಾಠ. ಮನೆ, ಮಕ್ಕಳ ಹೊಣೆಯನ್ನು ಅಬಸ್ಯರವಾಗಿ ನಿರ್ವಹಿಸುವ ಉಪಾಯಗಳ ಬರೆಯುವೆ. (ಸುಧಾ



ಶ್ರೀ ಕೊರಡ್ಕ
ಶ್ರೀನಿವಾಸ
ಯಂತ

'ಸುಲಭದಲ್ಲಿ ಇಂಗ್ಲಿಷ
(ENGLISH MADE EAS
ಮನೆಯಲ್ಲಿ ಏಕಾಂಗಿ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ. ೧—೮—೦

ಮದ್ರಾಸು ಸರಕಾರದಿಂದ
ಈಗತಾನೇ ಸಂಥಾನವನೆ ಪಡೆ
ಡಾಕ್ಟರ್ ಕೊರಡ್ಕಲ್ ವೆಂಕಟರ
'ಮನೆ ಮದ್ದು'
(HOME REMEDIES)
೨೦೦ ಕಾಹಿಲೆಗಳಿಗೆ ಮನೆಯಲ್ಲೇ ವ
ಕೊಳ್ಳಬಹುದಾದ ೧೦೦ ಮದ್ದುಗಳ
ವಿವರವ ಪುಸ್ತಕ. ಬೆಲೆ: ರೂ. ೨
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿ
ಸಿಗದಿದ್ದರೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ
ಉಡುಪಿ

For Life Assurance
CUNSULT
THE NEW GUARDIAN OF INDIA
LIFE ASSURANCE Co LTD.
(Established 1934)
Chairman: Sri. M C. T M Chidambaram Chattiyar
A Policy in this progressive Life Office is a good investment; its Agency is a valuable business connection
MANGALORE BRANCH:
K S R Road,
Hampankatta, Mangalore.
HEAD OFFICE:
United India Life Building,
P B No 142 MADRAS

EDITED, PRINTED & PUBLISHED BY K H SHETTY AT THE NAVAYUGA PRESS, UDIPI, S. INDIA

Regd. No. M. 3618 Estd: 1921 ಸ್ಥಾಪನೆ 22—6—1950

LICENCE No. 31
Licensed to Post
without Prepayment

FOUNDER:
Sri A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೪೩

NAVAYUGA WEEKLY UDIPI, S. K.
Post Box No. 22
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 43

ಸಮರಸ ಭಾವನೆ ಬೇಕು.

ಸಂಕುಚಿತ ಸ್ವಭಾವ ಮತ್ತು ಧೋರಣೆ-ತನ್ನಂತಹ ಇತರರನ್ನು ಮತ್ತು ತನ್ನ ದಾಗಿರುವ ವಿಷಯದಂತಹ ಇತರ ವಿಷಯಗಳನ್ನು ಗಣಿಸದೆ ತಾನೇ ತಾನಾಗಿ ಇರುವ ತೀಂಕಾರ-ಒಬ್ಬನ ಮೇಲೆ ವಿಶಾಲತೆ ಮತ್ತು ಔದಾರ್ಯವಿಲ್ಲದಿರುವಿಕೆಯಿಂದಲೇ ಇಂದು ಜನಜೀವನ ರಂಗದಲ್ಲಿ ಎಲ್ಲೆಲ್ಲೂ ದೋಷಗಳು ತುಂಬಿಕೊಂಡಿವೆ; ಘರ್ಷಣೆ, ದ್ವೇಷಾಸೂಯೆ, ಕಲ್ಮಷ, ಇತ್ಯಾದಿಗಳ ಪ್ರತಿಫಲಗಳಾದ ಅಧೋಗತಿಯುಂಟಾಗಿದೆ.

ಸರ್ವಾಧಿಕಾರಿತ್ವ ಸಲ್ಲದು-ಪ್ರಜಾ ಪ್ರಭುತ್ವವಿರಬೇಕು, ಸಮಾನತಾವಾದವಿರಬೇಕು ಎಂಬ ನಾದವೀಗ ಕೇಳಿ ಬರುತ್ತಿದೆ. ಆದಂದು ಕೇವಲ ರಾಜಕೀಯದ ಮಟ್ಟಿಗಲ್ಲದೆ ನಿತ್ಯಜೀವನ ರಂಗದ ಎಲ್ಲಾ ವಿಭಾಗಗಳಿಗೂ ಅನ್ವಯಿಸುವಂತಹದೆಂಬುದನ್ನು ಹೆಚ್ಚಿನವರು ಅರಿತಿಲ್ಲ. ಸರ್ವಾಧಿಕಾರ ಮನೋವೃತ್ತಿ ಮತ್ತು ವರ್ತನೆ ಇರದೆ, ಪ್ರತಿಯೊಂದು ವಿಷಯದಲ್ಲೂ ಪರಸ್ಪರ ವಿಚಾರ ವಿನಿಮಯವಿಟ್ಟುಕೊಂಡ ಪ್ರಜಾಸತ್ಯಾಧೋರಣೆ ಮತ್ತು ಎಲ್ಲರನ್ನೂ ಸಮಾನತೆಯಿಂದ ಕಾಣುವ ಸಮತಾವಾದ ಇರಬೇಕಾದುದು ಎಲ್ಲಾ ರಂಗಗಳಲ್ಲೂ ಎಲ್ಲಾ ಸಂದರ್ಭಗಳಲ್ಲೂ ಅಗತ್ಯ.

ರಾಜಕೀಯದ ಮಟ್ಟಿಗೆ ಸರ್ವ ಸಮಾನತೆ ಉತ್ತಮ-ತಾನೇ ತಾನಾಗಿರುವ ಸರ್ವಾಧಿಕಾರಿತ್ವ ಅಧಮ ಎನ್ನುವ ದೃಷ್ಟಿಯಲ್ಲಿ ಮುಖ್ಯವಾಗಿ ಪ್ರಚಲಿತ ಸುಖ ದುಃಖಗಳೇ ನಿಂತಿರುತ್ತವೆ. ಆದರೆ ತಾತ್ಕಾಲಿಕ ರಾಜಕೀಯ ಅನುಭೋಗಗಳಿಗೆ ಮಾತ್ರ ಸಂಬಂಧಿಸಿದೆ, ಮೂಲ ಸ್ವಭಾವ ಭಿನ್ನತೆಗೂ ಅನ್ವಯಿಸಿದ್ದು ಸರ್ವ ಕ್ಷೇತ್ರಗಳಲ್ಲೂ ಪರಿಣಾಮ ಮಾಡುವಂತಹದೆಂಬುದು ಸ್ಪಷ್ಟವಿದೆ.

ಲೇಖಕ ಅಥವಾ ಲೇಖವುದೇ ವಿಷಯ ಕಲಾವಿದನಾದರೂ ಸರಿಯೇ-ವಿಷಯ ತಾದಾತ್ಮ್ಯಗೊಳ್ಳುವ ಮೂಲಕ ತನ್ನನ್ನು ತಾನೇ ಮರೆಯದಿದ್ದರೆ ಅತನೆಂದಿಗೂ ಉತ್ತಮ ಲೇಖಕ ಅಥವಾ ಉತ್ತಮ ಕಲಾವಿದನಾಗಲಾರ.

ಕೊನೆಗೆ ಸರ್ವಾಧಿಕಾರಿಗಳಾಗಿ ಮಾರ್ಪಟ್ಟವರ ಚರಿತ್ರೆಯನ್ನೇ ನೋಡಿದರೂ, ಅವರೆಲ್ಲರೂ ಅದಿಭಾಗದಲ್ಲಿ ಜನತೆಯೊಡನೆ ಮಿಲನಗೊಂಡು, ಜನಸೇವೆ ಸಲ್ಲಿಸಿ, ಆ ಮೂಲಕ ಗಳಿಸಿಕೊಂಡ ವರ್ಚಸ್ಸನ್ನು ಕೊನೆಗೆ ಕೇವಲ ತಮ್ಮದೇ ಆದ ಅಧಿಕಾರವಾಗಿ ಮಾರ್ಪಡಿಸಿಕೊಂಡವರೆಂಬುದು ಕಂಡುಬರುತ್ತದೆ. ಸರ್ವಾಧಿಕಾರೀ ಕಳಶವೇ ರಬೇಕಾದರೂ ಜನಪ್ರಿಯತೆಯೇ ಅಸ್ತಿವಾರವಾಗಬೇಕೆಂದ ಮೇಲೆ ಕೇವಲ ತಾನೇ ತಾನಾಗಿ ಯಾರಿಗೂ ಇರಸ್ತಿಕೆಯಿಲ್ಲವೆಂಬುದು ಸ್ಪತಃ ವೇದ್ಯ.

ಪ್ರವಾಹಕ್ಕಿರುವ ತೀವ್ರಗಾಮಿತ್ವ ಸಮುದ್ರಕ್ಕಿಲ್ಲ. ಅಂತೆಯೇ ಸ್ವೇಚ್ಛೆ, ಸಂಕುಚಿತತೆಯು ಧೋರಣೆಗಳಿಂದ ಆಗುವ ಸ್ಪಷ್ಟ ಕಾರ್ಯಕ್ಷಿಪ್ರತೆಯು ಸರ್ವ ಗ್ರಾಹ್ಯ ಸಮಾನತಾ ಧೋರಣೆಯಿಂದ ಆಗುತ್ತಿಲ್ಲವೆಂದು ತೋರಬಹುದು. ಆದರೆ ಶಂಥಿಗಾಂಭೀರ್ಯ ಮತ್ತು ಅಗಾಧತೆಯು ನದಿಗೆ ಹೇಗೆ ಬರಲಾರದೋ ಹಾಗೆಯೇ ಸರ್ವಸಮತಾ ಕಾರ್ಯಭಾರಗಳ ತೂಕವು ಸ್ವೇಚ್ಛಾ ಕಾರ್ಯಗಳಲ್ಲೆಂದಿಗೂ ಇರಲಾರದು.

ಸ್ವಚಿಂತನೆ-ಪಂಥ ಸಂಬಂಧ, ಇವು ಮನುಷ್ಯನ ಮೂಲ ಸ್ವಭಾವಗಳವೆ. ಸ್ವಂತ ಬುದ್ಧಿಯ ಉಪಯೋಗ ಮತ್ತು ತನ್ನ ಶಕ್ತಿಯನ್ನು ಮಾನವೀಯ ಲಕ್ಷಣಗಳಾದರೂ ಜತೆ ಜೀವನ, ಸಂಗಾತಿತನಗಳು ಮಾನವೀಯತೆಗಳೇ ಆಗವೆ. ಇದಕ್ಕೆ ವ್ಯತಿರಿಕ್ತವಿರುವ ಏಕಾಂತವಾಸಿಗಳು, ಮಾನಿಗಳೇ ಮೊದಲಾದವರು ಪ್ರಪಂಚ ಬಾಹಿರವನ್ನಿಸುವಾಗ ಅದೇ ಮರ್ಜಿಯ ಉಗ್ರ ಮಾದರಿಗಳಾಗಿರುವ ಸರ್ವಾಧಿಕಾರಿಗಳೇ ಮೊದಲಾದವರು ಪ್ರಪಂಚ ದ್ರೋಹಿಗಳನ್ನಿಸುತ್ತಾರೆ.

ವಸ್ತುತಃ ಒಬ್ಬಿಬ್ಬರ ಪಾಲಿನದಾಗಿರುವ ಸಂತೋಷ ಸಭಾರಂಭಗಳಲ್ಲಿ ಸರ್ವ ಜನರನ್ನೂ ಕೂಡ ಹಾಕಿ ಅದನ್ನು ಹಿರಿದುಗೊಳಿಸಿಕೊಳ್ಳುವ ಸಂಸ್ಕದಾಯ ನಮ್ಮಲ್ಲಿದೆ: ಅಂತೆಯೇ ಒಬ್ಬನ ದುಃಖದಲ್ಲಿ ಹಲವರು ಸಹಭಾಗಿಗಳಾಗಿ ಅದರ ತೀವ್ರತೆಯನ್ನು ಕಡಿಮೆಮಾಡುವ ಕ್ರಮವೂ ಇದೆ. ಯಾಸ್ತವಾದರೂ ಒಂದು ಕಾರ್ಯಯೋಚನೆ, ಸಂಚಾರ, ಮುಂತಾದುವುಗಳಲ್ಲಿ 'ಒಬ್ಬನಿಗಿಂತ ಇಬ್ಬರು ವಾಸಿ' ಯೆಂಬ ನಾಣ್ನುಡಿ ನಮ್ಮಲ್ಲಿ ಇದೆ. ಇವೆಲ್ಲವೂ ಮಾನವ ಸ್ವಭಾವಬದ್ಧ ಸಹಕಾರಬುದ್ಧಿ, ಸಹಭಾಗಿತ್ವ ಅಥವಾ ಸಾರ್ವಜನಿಕ ಸಮತಾ ಭಾವನೆಯ ಸಾಕ್ಷ್ಯಕ್ಕೆ ನಿದರ್ಶನಗಳು.

ಈ ಮೂಲಭೂತ, ಸರ್ವಗ್ರಾಹ್ಯ ಮತ್ತು ಸರಿಸಮ ಭಾವನೆಯು ಕಡಿಮೆಯಿದ್ದ ಅಂಶ ಪ್ರಕಾರ ಕೆಡುಕಾಗುತ್ತಾ ಹೋಗುವುದು; ಈ ಭಾವನೆಯು ಕಡಿಮೆಯಿದ್ದ ಪರಿವಾರದಲ್ಲೇ ಒಬ್ಬನು ಕಟ್ಟು ಮನುಷ್ಯನಾಗಿರುವನು. ಮನಃಷ್ಯ—ಮನುಷ್ಯ, ಊರೂರು, ದೇಶ—ವಿದೇಶ, ಆ ತ.ದೀ ಮೂಲೆಯಿಂದೀತ್ತಲೀ ಗಡಿಯು ಪರಸ್ಪರ ಸಂಬಂಧವು ತೀರಾ ಹತ್ತಿರವಾಗಿ ಸ್ವಪಂಚವೇ ಕಿರಿಯದಾಗಿರುವ ಈ ಕಾಲದಲ್ಲಂತೂ ಇಂತಹ ಸರ್ವವ್ಯಾಪೀ ಮನೋವೃತ್ತಿಯಿರದೆ ಹೋದರೆ ಹಾನಿ ಹೆಚ್ಚಿಗಿದೆ.

ನಮ್ಮ ರಾಜಕೀಯ ನಾಯಕರಿಂದಾರಂಭಿಸಿ, ಸಾಮಾನ್ಯರ ವರೆಗಿನ ಹೆಚ್ಚಿನವರಲ್ಲಿ ಈ ಸಮರಸ ಭಾವನೆಯು ಕೊರತೆ ಕಾಣುತ್ತಿದೆ. ಕಾವಿರುವ ಕಾಲ ಮತ್ತು ನೆಲೆಯನ್ನು ಮರೆತು, ತಾವು ಹಿಡಿದದ್ದೇ ಬಡಿಗೆಯೆಂಬಂತೆ ವರ್ತಿಸಿ, ಆ ಮೂಲಕ ವಾತಾವರಣದ ಕೇಳು ಸ್ಥಿತಿಗೆ ಕಾರಣರಾಗಿರುವವರು ಬಹುಸಂಖ್ಯಾಕರಾಗಿ ತೋರಿಬರುತ್ತಿದ್ದಾರೆ.

ಇಂದು ಸರಕಾರೀ ಸೂತ್ರ ವಹಿಸಿರುವ ನಾಯಕರಾದರೂ ತಮ್ಮ ಹಿಂದಿನ ಮಾತುಕೃತಿಗಳನ್ನಾಗಲೀ, ಇಂದು ಇತರರು ಇರುವ ಸ್ಥಾನದಲ್ಲಿ ತಾವಿರುತಿದ್ದರೆ ಹೇಗೆ ವರ್ತಿಸುತಿದ್ದೆವೆಂಬುದನ್ನಾಗಲೀ ನಾಕಷ್ಟು ಜ್ಞಾಪಕಕ್ಕೆ ತಂದುಕೊಳ್ಳದೆ ತಾವೇತಾವಾಗಿ ವರ್ತಿಸುತ್ತಿದ್ದಾರೆಂಬುದು ಇಂದಿನ ಆಗುಹೋಗುಗಳಿಂದ ಮುಂದಟ್ಟಾಗುತ್ತಿದೆ. ಅಂತೆಯೇ ಸರಕಾರದ ಕಟು ವಿಮರ್ಶಕರು ಕೂಡಾ, ತಾವು ಈಗ ಅಧಿಕಾರ ಸ್ಥಾನದಲ್ಲಿರುತಿದ್ದರೆ ಹೇಗೆ ವರ್ತಿಸುತಿದ್ದೆವು, ಮುಂದೆ ಅಧಿಕಾರಕ್ಕೆ ಬಂದಲ್ಲಿ ಹೀಗೆ ವರ್ತಿಸಬಲ್ಲೆವು ಎಂಬುದಾವುದನ್ನೂ ದೃಷ್ಟಿಯಿರಿಸುತಂದುಕೊಳ್ಳದೆ, ಮನಸೋಚ್ಛೆ ಟೀಕೆಸುತ್ತಿರುವುದು ಕಂಡು ಬರುತ್ತಿದೆ.

ಸ್ವತಃ ತನಗೆ ಪ್ರಯೋಜನ ದೊರೆಯುವಂತಿದ್ದರೆ, ಓರ್ವ ಬಡವನು ತನ್ನಂತಹ ಮತ್ತೊರ್ವ ಬಡವನ ವಿರುದ್ಧವಾಗಿ-ಓರ್ವ ಕೆಲಸಗಾರನು ತನ್ನಂತಹ ಇತರ ಕೂಲಿಗಾರರಿಗೆ ಪ್ರತಿಕೂಲವಾಗಿ ವರ್ತಿಸುವಂತೆ ಶ್ರೀಮಂತ ಅಥವಾ ಧನಿಯಾಗಿರುವವನು ವರ್ತಿಸಲಾರ. ವರ್ಗ ದ್ವೇಷ ಬೆಳೆದಿರುವ ಈ ಕಾಲದಲ್ಲಾದರೂ ವರ್ಗ ಪ್ರೇಮ ಮಾತ್ರ ಸಾಕಷ್ಟು ಬೆಳೆಯದಿರುವುದೇ ಇದಕ್ಕೆ ಕಾರಣ.

'ಪಾರ್ಥನನ್ನು ದ್ವೇಷಿಸಬೇಕಲ್ಲದೆ ವಾಸಿಯನ್ನಲ್ಲ' 'ಬಡವನನ್ನು ಉದ್ಧರಿಸಬೇಕಲ್ಲದೆ ಒಡತನವನ್ನಲ್ಲ' ಮುಂತಾದ ತತ್ವಗಳು ಮನುಷ್ಯ—ಮನುಷ್ಯರೊಳಗಿರಬೇಕಾದ ಬಿಗುವಾದ ಸಂಬಂಧವನ್ನೇ ಬೋಧಿಸುತ್ತವೆ; ಇಂತಹ ಸಂಬಂಧದ ಅಂಟು ಪರಸ್ಪರ ತಾಗಿಕೊಳ್ಳದಂತೆ ತಡೆಯಾಗಿ ನಿಲ್ಲುವ ಕಲ್ಮಷಗಳನ್ನು ತೊಳೆದುಕೊಳ್ಳಬೇಕಲ್ಲದೆ, ಆ ತಡೆ

"ವೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವನ್ನೆಲ್ಲಿ ಇರುವುದಲ್ಲದೆ ಮೂಲದಲ್ಲಿ ಸಜಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಭಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು
ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಗಳಿರುವ ಕಾರಣದಿಂದ ಮನುಷ್ಯರೇ ಸರಸ್ವರ ದೂರವಾಗಬಾರದೆಂಬ ಉಪದೇಶ ಸಾರ ಇಲ್ಲಿದೆ.

ಈ ಸಮರಸ ಭಾವನೆಯ ಆವಶ್ಯಕತೆಯನ್ನು ಅರಿತವರು ಅನ್ನು ಅಭ್ಯಸಿಸಿ ಹತ್ತಿರುವ ನಿದರ್ಶನಗಳೂ ಕಂಡುಬರುತ್ತಿವೆ. ಭಾರತದಲ್ಲಿ ಕೊನೆಯ ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ಲೋರ್ಡ್ ವೌಂಟ್‌ಬೇಟನರು 'ಜೈ ಹಿಂದ್' 'ಭಾರತ ಮಾತಾಕೀ ಜೈ' ಮುಂತಾದ ಹಿಂದೀ ಘೋಷಣೆಗಳನ್ನು ಉದ್ಗರಿಸಿ, ಹಿಂದೀ ಭಾವನೆಯೊಂದಿಗೆ ತಾದಾತ್ಮ್ಯತೆ ಪ್ರದರ್ಶಿಸಿದ್ದರು. ಇಡೋನೇಶಿಯಕ್ಕೆ ಹೋದಲ್ಲಿ ಸಂದಿತ ನೆಹರುಗಳು, ತನ್ನ ಪ್ರತಿಯೊಂದು ಸಾರ್ವಜನಿಕ ಭಾಷಣಾಂತ್ಯದಲ್ಲೂ ಅಲ್ಲಿಯವರ ಕ್ರಾಂತಿಘೋಷ 'ಮೆರ್ಡೆಕಾ'ವನ್ನು ಉದ್ಗರಿಸಲು ಮರೆತಿರಲಿಲ್ಲ.

ಇಂತಹ ಸವ ಸಂಭಾವನೆಯ ಪ್ರತಿಕೂಲ ಸಂಭಾವನೆಗಳೂ ಇದ್ದುವು; ಇವೆ. ಭಾರತೀಯರ ಮನೋಧರ್ಮ, ಸಂಸ್ಕೃತಿಯನ್ನು ಅಲಕ್ಷಿಸಿ ಬ್ರಿಟಿಷರು ಆ ಕಾಲದಲ್ಲಿ ತೋರಿಸಿದ್ದ ಅಜಗಜಾಂತರ ಜೀಪ್ಸೆಗಳು ಭಾರತೀಯರನ್ನೂ, ಅವರನ್ನೂ ದೂರ ದೂರಗೊಳಿಸಿದ್ದವು. ಇಂದಾದರೂ ದಕ್ಷಿಣಾಫ್ರಿಕದಲ್ಲಿ ನಡೆದಿರುವ ವರ್ಣದ್ವೇಷ ಪೂರಿತ ಕೃತ್ಯಗಳು ಮತ್ತು ಬೇರೆ ಕೆಲವೆಡೆಗಳಲ್ಲಿ ತೋರಿಬರುತ್ತಿರುವ ಜನಾಂಗ ಮೇಲ್ಬವನೆಯ ಅತಿರೇಕಾಚರಣೆಗಳು ಮನುಷ್ಯ-ಮನುಷ್ಯರೊಳಗೆ ಪ್ರಬಲತ ಡೆಗಳಾಗಿ ನಿಂತಿವೆ.

ಭಾರತದ ವಿಭಜನೆಗೆ ಕಾರಣವಾದ ಹಿಂದೂ-ಮುಸ್ಲಿಂ ಭಿನ್ನಾಭಿಪ್ರಾಯ, ಭಾರತಕ್ಕೆ ನೈತಿಕ ಆಧೋಗತಿಯನ್ನೊಡ್ಡಿರುವ ಅಸ್ಪೃಶ್ಯತೆಗೆ-ಈ ಸಮರಸ ಭಾವನೆಯ ಅಭಾವವೇ ಹೇತುವಾಗಿದೆ

ರಾಡುಜನರಲ್ಲಿ,ಅನಾಗರಿಕರಲ್ಲಿ ಭೀಕರೀಕರಿಯ ಕಲಹ, ಹರಿ ಸಾಧನೆಗಳಲು ಕಾರಣವಾದರೂ ಇದೇ ಜನರ ವರ್ತನೆ, ಪೋಷಾಕುಗಳಂತೆಯೇ ಭಾವನೆಯೂ ಜನ್ಮತಃ ಲಭ್ಯವಾದಂತೆ ಹೊರತು ಸಾಕಷ್ಟು ಸುಧಾರಿಸಿರುವುದಿಲ್ಲ; ಸುಸೆಂಸಾರಗೊಂಡಿರುವುದಿಲ್ಲ. ಅಂತಹ ಮನಸ್ಸು ಕೆರಳುವ ಸಂದರ್ಭ ಬಂದಾಗ ಅದಕ್ಕೆ ಕಡಿಯಾಗಿ ಬಲ್ಲ ಸಮರಸವಲ್ಲಲ್ಲದೆ ಅದು ಬೆದೊರಗಾ ಮತ್ತು ಕರೋರ ಸ್ವರೂಪದ್ದಾಗುತ್ತದೆ. ನಾಗರಿಕತೆ, ಸ್ವಸಂಸ್ಕಾರ, ಉಚ್ಚ ಶಿಕ್ಷಣಗಳಿಂದ ಆಗುವ ಮುಖ್ಯ ಸತ್ಪರಿಣಾಮವೆಂದರೆ, ಮನಸ್ಸಿನ ದೊರಗುತನವನ್ನು ಸವೆಯಿಸಿ, ಪರಸ್ಪರ ಹೊಂದಿಕೊಳ್ಳುವ ಸಮರಸ ಭಾವನೆಯನ್ನು ಅಲ್ಲಿ ಹುಟ್ಟಿಸುವುದೇ ಇದೆ.

ಸುಶಿಕ್ಷಿತ ಹಾಗೂ ಸುಸಂಸ್ಕೃತ ವರ್ಗದಲ್ಲಿ ದ್ವೇಷಾಸೂಯೆ, ಕಲಹಗಳು ಕಡಿಮೆಯಿರುವುದಕ್ಕೂ ಅಜ್ಞಾನಿ, ಅಶಿಕ್ಷಿತ ಮತ್ತು ಹಳ್ಳಿಗರಲ್ಲಿ ಜವು ಅಧಿಕ ಪರಿಮಾಣದಲ್ಲಿರುವುದಕ್ಕೂ ಸಮರಸ ಭಾವನೆ ಹೆಚ್ಚಿಗಿರುವ ಮತ್ತು ಕಡಿಮೆಯಿರುವ ಪ್ರತ್ಯಾಸರ್ಗೇ ಕಾರಣ. ಎಷ್ಟೇ ದೊಡ್ಡದಾದ ವಿವಾದಾಂಶವಿದ್ದರೂ ಕೆಲವರು ಪರಸ್ಪರ ಜಗಳಾಡಿಕೊಳ್ಳದಿರುವುದು ಮತ್ತು ಅಲ್ಪ ವಿಷಯಗಳಿಗಾಗಿ ಇನ್ನು ಕೆಲವರು ಹೋರಾಡಿ ಕೊಳ್ಳುತ್ತಿರುವುದು ಇಂತಹ ವ್ಯತ್ಯಾಸದ ಫಸೆಯಿಂದಲೇ.

ಆದ್ದರಿಂದ ಯಾವುದೇ ಆಕಾರ ಅಥವಾ ನಿರ್ಮಾಣದ ಸರ್ವಾಧಿಕಾರಿತ್ವ, ಇಲ್ಲಿಯೇ

ಹೇಗಿದ್ದೇವೆ? — ಹೇಗಿದ್ದಿವು?

ಸ್ವತಂತ್ರ ಜನತಾ ರಾಜ್ಯ ಭಾರತದ ಸ್ಥಿತಿಗತಿಗಳು ಅದರ ಪ್ರತಿಯೊಬ್ಬ ಪ್ರಜೆಯ ಇರಸ್ತಿಕೆ ಮತ್ತು ಭವಿಷ್ಯಕ್ಕೂ ಸಂಬಂಧಿಸಿದವುಗಳಿದ್ದಂರಿಂದ, ಅವುಗಳನ್ನು ಆಗಾಗ ತುಲನೆ ಮಾಡುತ್ತಿರಬೇಕಾದುದು ಇಂದಿನ ಸ್ಥಿತಿಯಲ್ಲಿ ಅತ್ಯಗತ್ಯ. ಈ ದೃಷ್ಟಿಯಿಂದ ರಾಷ್ಟ್ರದ ಪ್ರಚಲಿತ ಆಗು ಹೋಗುಗಳ ಉಚ್ಚ-ನೀಚ ಮಟ್ಟ ಹೇಗಿದೆ ಮತ್ತು ಭವಿಷ್ಯ ಹೇಗಾಗಬಹುದು ಎಂಬ ಕಡೆಗೆ ಇಲ್ಲಿ ನೋಟ ಬೀರಲಾಗಿದೆ.

ಉಚ್ಚ ಸ್ಥಿತಿ

೧. ಜಕೀಯದಲ್ಲಿ ಸರ್ವಸಮಾನತೆ ಮತ್ತು ಕೇಂದ್ರದ ಸರ್ವವ್ಯಾಸೀ ಅಧಿಕಾರವುಳ್ಳ ರಾಜ್ಯಶಾಸನವು ಈಗ ಅಸ್ತಿತ್ವದಲ್ಲಿದೆ.

ಕೆಲ ಕಾಲಕ್ಕೆ ಮೊದಲು ಮಹಾ ಗಂಡಾಂತರವಾಗಿದ್ದ ಸಂಸ್ಥಾನೀ ಸಮಸ್ಯೆಯು ಈಗ ತೀರ್ಮಾನ ಹೊಂದಿದೆ.

ಕೆಲವೇ ವಾರ್ಗಗಳ ಮೊದಲು ಭೀಕರ ರಾಕಾರದಲ್ಲಿದ್ದು, ಮಹಾ ಘರ್ಷಣೆಗೆಡೆಕೊಡುವ ಭಯಬೀರುತಿದ್ದ ಜಾತೀಯತಾ ಗೊಂದಲವು ಈಗ ಸಂಪೂರ್ಣ ಶಮನವಾಗಿದೆ

ಭಾರತ—ಪಾಕಿಸ್ತಾನಗಳೊಳಗಿನ ಥಿಲ್ಲೀ ಒಪ್ಪಂದವು ಅದರ ಹುಟ್ಟು ವಿರೋಧಿಗಳ ಮತ್ತು ಸ್ವಾಭಾವಿಕ ಸಂದೇಹ ಕಟ್ಟಿಕೊಂಡವರೆಲ್ಲರ ಎಲ್ಲಾ ನಿರೀಕ್ಷೆಗಳನ್ನೂ ಹುಸಿಗೊಳಿಸಿ ಅತ್ಯಂತ ಜಯಶೀಲವಾಗಿ ಜಾರಿಗೆ ಬರುತ್ತಿದೆ.

ಥಿಲ್ಲೀ ಒಡಂಬಡಿಕೆಯು ಅದರ ಕಲಮುವಾರಾಗಿ ಮತ್ತು ಕೃತಿಗಳ ರೂಪದಿಂದ ಮಾತ್ರ ಅಸ್ತಿತ್ವದಲ್ಲಿರುವುದಲ್ಲ-ಅದು ತಾನೇ ತಾನಾಗಿ ಇರುವ ಮನೋವೃತ್ತಿಯನ್ನು ಶಕ್ಯವಿದ್ದಷ್ಟು ಕಡಿಮೆ ಮಾಡಿಕೊಂಡು ಪರಸ್ಪರ ಹೊಂದಿಕೊಳ್ಳುವ ಸಮತೋಲನಾ ಬುದ್ಧಿ, ಸಮರಸ ಭಾವನೆ ಮೂಡಬೇಕಾಯಿದು ಅಗತ್ಯ. ಸಣ್ಣ, ದೊಡ್ಡ ಪ್ರತಿಯೊಬ್ಬನೂ, ಅಲ್ಪ, ಮಹಾ ಪ್ರತಿಯೊಂದು ಕಾರ್ಯದಲ್ಲೂ ಈ ಸುಧಾರಣೆಯನ್ನು ಅಭ್ಯಸಿಸಿದರೆ ಎಲ್ಲವೂ ಸುಗಮವಾಗಬಹುದು.

ರಹಿನ್ನಲೆಯಾಗಿದ್ದ ಪೌಹಾದಾಮಿಯ ಸ್ಫೂರ್ತಿಯು ಬಲಗೊಳ್ಳುವ ಸಾಧನ ಕಾರ್ಯಗಳೂ ಆಗುತ್ತಿವೆ. ಒಪ್ಪಂದದಲ್ಲಿ ಸಮಾವಿಸಿರದ ನಿರಾಶ್ರಿತರ ಪಸ್ಸು, ಒತ್ತಿಗಳನ್ನೂ ಸ್ವೇಚ್ಛೆಯಿಂದ ಒಪ್ಪಿಸಿರುವುದು ತಪ್ಪಿ ಬಿದ್ದುಗಡಿದಂಟೆ ಬಂದು ಒಮ್ಮೆ ನಾವುದಾಯಿ ಘರ್ಷಣೆ ಕೂಟ್ಟಿದ್ದರೂ ಕಮ್ಮಿ ಹಿಂದಿನ ಸಂಪ್ರದಾಯಕ್ಕೆ ವಿರುದ್ಧವಾಗಿ ಪಾಕಿಸ್ತಾನ್ ಸೇನಾನಿಗಳು ಕ್ಷವಾಪಣೆ ಕೇಳಿರುವುದು--ಮುಂತಾದ ಆಚರಣೆಗಳೇ ಇದಕ್ಕೆ ನಿದರ್ಶನ.

ಆರ್. ಯಸ್. ಯಸ್. ದಂತಹ ಚಳವಳಿಗಳ ಮೊನೆಯೀಗ ಪೂರ್ಣ ಮುರಿದು ಹೋಗಿದೆ; ಸಮತಾವಾದಿಗಳಂಥವರು ಇದ್ದ ಸ್ಥಿತಿಯಲ್ಲೇ ಇರುವಾಗ, ಅವನ್ನು ಮೊದಲಿಗಿಂತಲೂ ಆಗ್ಯಾರಾಗುವಂತೆ ಕುಗ್ಗಿಸಿ ಹಾಕುವ ವಾತಾವರಣ ನಿರ್ಮಾಣಗೊಳ್ಳುತ್ತಾ ಹೋಗಿದೆ. ಕಮ್ಯೂನಿಸ್ಟ್ ದುರಂತಂಗೋಲನವು ಶೂನ್ಯಫಲೀಯ ರೀತಿಯಿಂದ ದವಸಿಸಲ್ಪಡುತ್ತಿದೆ.

ರೈಲ್ವೇ, ಅಂಚೆ ತಾರೆಗಳಂತಹ ದೇಶ ವ್ಯಾಸೀ ಮಹಾ ಮುಷ್ಕರಗಳ ಸಂದರ್ಭ ವಿನ್ನಿಲ್ಲವೆಂಬ ಭರವಸೆ ಮೊಳೆತಿದೆ. ರಾಷ್ಟ್ರದಲ್ಲಿ ಉಂಟುರೋಗದಂತೆ ಅಲ್ಲೊಮ್ಮೆ, ಇಲ್ಲೊಮ್ಮೆ ತಾಗಿಕೊಂಡು ಸದಾ ಕಾಲವೂ ಕಾಣಿಸುತಿದ್ದ ಸಣ್ಣ ಪುಟ್ಟ ಮುಸ್ಕುರಗಳ ತಂಟೆಗಳಲ್ಲಾವುದೂ ಸದ್ಯಕ್ಕಿಲ್ಲ.

ಒಟ್ಟಿನ ಮೇಲೆ ಜನಜೀವನದ ಪ್ರತಿಯೊಂದು ವಿಭಾಗವೂ ಎಲ್ಲಿಯೂ ಎಲ್ಲೆ ಮೀರದಿದೆ. ಯಾವುದೂ ಹತೋಟಿ ತಪ್ಪಿ ಹೋಗಿಲ್ಲ. ನಿತ್ಯದ ವಾತಾವರಣವೇ ವ್ಯಾಪಿಸಿಕೊಂಡಿದೆ. ಸ್ವಾತಂತ್ರ್ಯ ಪ್ರಾಪ್ತಿಯೊಂದಿಗೆ ಎದ್ದಿದ್ದ ಆಗಾಧ, ಅಸಾಧ್ಯ ಸಮಸ್ಯೆಗಳನ್ನು ಆವಲೋಕಿಸಿದರೆ ಈ ಅವಧಿಯೊಳಗಾಗಿ ಸರ್ವಸಾಮಾನ್ಯ ಪರಿಸ್ಥಿತಿ ನಿರ್ಮಾಣಗೊಂಡುದು ಸರ್ವಾಧಾನಕರವೆನ್ನಬಹುದು.

ನೀಚ ಸ್ಥಿತಿ

ಸ್ಥಾಪನೆಗೊಂಡಿರುವ ಜನತಾ ಸಾರ್ವಭೌಮಾಧಿಕಾರಿ ಸ್ವಾತಂತ್ರ್ಯದ ಶುಭಚಿಹ್ನೆಯು ಜನಸಾಮಾನ್ಯರ ವರ್ತನೆಗಳಲ್ಲಿ ಕಂಡುಬರುವಂತಹ ಸರ್ವವ್ಯಾಪೀ ಅರ್ಥಿಕ ಸುಧಾರಣೆ ಆಗಿಲ್ಲ.

ಸ್ವಾತಂತ್ರ್ಯಪ್ರಾಪ್ತಿಯ ಪ್ರತಿಫಲಗಳಿಗೆ ಕಷ್ಟಸಾಧ್ಯವಾದ ತ್ಯಾಗಗಳಿಂದ ಶುಭ ಸೌಭಾಗ್ಯಗಳನ್ನು ತರುವಬೇಕು ಜನಸಾಮಾನ್ಯರು ಕಟ್ಟಿಕೊಂಡಿದ್ದ ಭವನಸಿಗಳೆಲ್ಲವೂ ಹುಸಿಗೊಂಡು, ಜನತೆಯಲ್ಲಿ ನಿರಾಶಾ ಭಾವನೆ ಕಂಡು ಬರುತ್ತಿದೆ.

ಸ್ವರಾಜ್ಯಾಂದೋಲನ ಕಾಲದಂತೆಯೇ ಈಗಲೂ ರಾಷ್ಟ್ರನಾಯಕರು ಆವಶ್ಯಕತೆಗೆ ಮಿಕ್ಕಿ ಮಾತಾಡುತ್ತಿರುವರು-ಮಾತು ಮತ್ತು ಘೋಷಿತ ಧ್ಯೇಯ, ಧೋರಣೆಗಳ ಎಂಟನೇ ಒಂದಂಶ ಕೂಡಾ ಕಾರ್ಯರೂಪದಲ್ಲಿ ಕಂಡು ಬರುತ್ತಿಲ್ಲ-ಎಂದು ಜನತೆಯಲ್ಲಿ ಸಾರ್ವತ್ರಿಕ ಜಿಗುಪ್ಸೆ ಮೊಳೆತಿದೆ.

ಜನತಾ ಆಡಳಿತ ಯಂತ್ರವು ಇರಬೇಕಾದಷ್ಟು ಬಿಗಿಯಾಗಿಲ್ಲ; ಆಡಳಿತ ವರ್ಗದ ಹೃದಯವು ಆಗಬೇಕಾದಷ್ಟು ಪರಿಶುದ್ಧತೆಗೊಂಡಿಲ್ಲ.

ಸರ್ವರಿ ಪರವಾಗಿ, ಸಾರ್ವಜನಿಕ ಡಂಗುರಗಳನ್ನು ಬಾರಿಸಿ, ಗಳಿಸಿಕೊಂಡ ಸ್ವಾತಂತ್ರ್ಯದ ಆಡಳಿತೆಯಲ್ಲಿ ಸುಯೋಗಿಗಳಾದ ಕೆಲವೇ ಮಂದಿಯ ಒಳ ವಹಿವಾಟು ಮತ್ತು ಅಂತರ್ಗವಿತ್ವಗಳಿಗೇನೇ ಹೆಚ್ಚಿನ ಅವಕಾಶ ದೊರೆತಿದೆ ಎಂಬ ಕಹಿ ಮನಸ್ಸು ಎಲ್ಲೆಲ್ಲೂ ಹುಟ್ಟಿಕೊಂಡಿದೆ.

ಬಡಜನ ವರ್ಗದ ನಿತ್ಯ ಜೀವನ ಸ್ಥಿತಿ ಸುಧಾರಣೆಗೆ ಕ್ಷಿಪ್ರಾವಶ್ಯವಿರುವ ಶಾಸನಗಳಲ್ಲಾವುದೂ ಆಗಬೇಕಾದಷ್ಟು ಅವಸರ ಮತ್ತು ದಕ್ಷತೆಯಿಂದ ರಚಿಸಲ್ಪಡುತ್ತಿಲ್ಲ.

ಚಳವಳಿ ಕಾಲದ ಕಾಂಗ್ರೆಸ್ ಕೀರ್ತಿ ಭಂಡಾರವೆಲ್ಲವೂ ಈಗ ಅತ್ಯಂತ ರಭಸದಿಂದ ದಿಂದು ವ್ಯಯವಾಗುತ್ತಿದೆ 'ಬಿಳಿ ಟೋಪಿ'ಯು ದೇಶ ಸೇವೆಯ ಚಿಹ್ನೆಯೆಂದು ಗೌರವಿಸಲ್ಪಡುತಿದ್ದ ಕಾಲ ಕಳೆದು ಹೋಗಿ, ಅದು ಕಳ್ಳ ಸಂತೆಯ ದ್ಯೋತಕವೆಂಬು ಹೀನಾರ್ಥವನ್ನು ಪಡೆಯುವಂತಾಗಿದೆ.

ಸರ್ವಸಾಮಾನ್ಯವಾಗಿ ಎಲ್ಲರೂ 'ರಾಜಕೀಯ ವ್ಯವಹಾರಿಗಳಾಗಿ' ಮಾರ್ಪಟ್ಟಿದ್ದಾರೆ. ಅಧಿಕ ಪ್ರಸಂಗಿಗಳಾಗಿದ್ದಾರೆ. ದೋಷಾರೋಪಣೆಯು ಹುರುಪು ಮತ್ತು ಅನ್ಯರ ಹುಳುಕುಗಳನ್ನಷ್ಟೇ ಶೋಧಿಸುವ ಬುದ್ಧಿ ಸರ್ವಸಾಮಾನ್ಯವಾಗಿದೆ.

ಜನರಿಗೆ ಸಾಕಷ್ಟು ಪರಿಮಾಣದಲ್ಲಿ ಆಹಾರ ಹತ್ತುಗೆ ದೊರೆಯದಿರುವುದು ಎಲ್ಲಾ ಅಭಾವಗಳ ಮತ್ತು ಎಲ್ಲಾ ಸಂಕಷ್ಟಗಳ ಪೈಕಿ ಅತಿ ಹೆಚ್ಚಿನದು. ಪ್ರಚಲಿತ ಜಾಗತಿಕ ಆಹಾರಾಭಾವ ಮತ್ತು ಭಾರತದ ಆಹಾರ ಧಾನ್ಯಗಳ ಉತ್ಪನ್ನ-ವೆಚ್ಚಗಳ ಮೇಲಿಂದ, ರಾಷ್ಟ್ರದಲ್ಲೇಗ ಸರಕಾರವು ಮಾಡಿರುವ ಆಹಾರ ವ್ಯವಸ್ಥೆಯು ಶೂನ್ಯಫಲೀಯವಿದ್ದರೂ ಈ ಹಿನ್ನೆಲೆಯನ್ನರಿಯಲಾರದ ಜನಸಾಮಾನ್ಯರು ತಮ್ಮ ಪಾಲಿಗೊದಗಿರುವ ಆಹಾರ ಸಂಕಷ್ಟಗಳನ್ನಷ್ಟೇ ಗಮನಿಸಿ ಅಸಹನೆ, ಅತೃಪ್ತಿ ಪ್ರದರ್ಶಿಸುತ್ತಿದ್ದಾರೆ.

ತಮ್ಮ ಉದ್ಯೋಗದಲ್ಲಿ ಹೆಚ್ಚಿನ ಅನುಭವವೀಗ ದೊರೆತಿರುವ ಕಳ್ಳಸಂತೆವಾಲರು ಮೊದಲಿಗಿಂತಲೂ ಹೆಚ್ಚು ಅತಿ, ಭರವಸೆಗಳಿಂದ ವಹಿವಾಟುಗಳನ್ನು ನಾ

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.

Advocate & President, District Board, S. Kanara.

CHAIRMAN

ಹೇಗಾಗಬಲ್ಲೆವು?—ಹೇಗಾದೀತು?

ಶಕ್ತಿಯುಕ್ತಂಕ್ ಕಾಣುತ್ತಿದೆ ಮಿಕ್ಕ ಸಕಾರೇ ದೆನುನೋಟ್ರಾಯಗಳಂತೆಯೇ ಕಾಂಕ್ರೀಟ್ ಫೌಂಡೇಷನ್ ಕೂಡಾ ತತ್ಪರತೆಯೋಷಿಸಲ್ಪಟ್ಟಂತೆ ಕಾರ್ಯತಃ ಆಗುತ್ತಿಲ್ಲ. ಗುಣವಾಗುವ ಆಶೆಯಿಲ್ಲದಿದ್ದರೂ ಂಪ್ರದಾಯಾನುಸಾರ ಚಿಕಿತ್ಸೆ ನಡೆಯುತ್ತಿರುವ ರೋಗದಂತೆ, ರಾಷ್ಟ್ರದಲ್ಲಿಂದು ಕ ವ್ಯಾಪಾರೋದ್ಯಮವು ಚಿರಸ್ಥಾಯಿ ಗಾದಂತಿದೆ.

ಹಣದಾಸೆಯ ಚಲನವಣೆಯು ಮಂದಗಾಮಿತ್ತಾ ಬರುತ್ತಿರುವಾಗ ಜೀವನಾವ್ಯ| ಸಾಮಾನ್ಯಿಗಳ ಬೆಲೆಯು ಏರಿಯೇ ಇರುವ ಮತ್ತು ಏರುತ್ತಾ ಹೋಗುತ್ತಿರುವ ನವೀನ ಕಟುಅನುಭವವು ಜನತೆಯ ನಿತ್ಯಜೀವನದಲ್ಲಿ ಗುತ್ತಿದೆ.

ಒಟ್ಟಿನ ಮೇಲೆ, ಜನಸಾಮಾನ್ಯರಿಗೆ ಮನವಂಕಯಾಗುವ— ಜನತೆಯ ನಿತ್ಯಾಭೋಗಕ್ಕೆ ಬರುವ— ಒಳಪ್ರಭೆಯಾಗಿ ೀರಿಕೊಂಡು ಜನತೆಯ ಹೃದಯ, ಮಾಗಳನ್ನು ಅರಳಿಸುವ—ಸಮಂತೋಷವಾವುದನ್ನೂ ಪೂರ್ಣ ಸ್ವಾತಂತ್ರ್ಯವೆ ಈ ವರೆಗೆ ಕೊಟ್ಟಲ್ಲ.

ಎಲ್ಲಿಂದ ಬಂದಿದ್ದೇವೆ?

ಇಂದಿನ ವಾತಾವರಣದ ವಿರೋತಗ್ಯಾಗಳನ್ನೆಲ್ಲೇ ಗಮನಿಸಿ, ಸುಖದ ಣಿಕ್ಕೀ ತಾಗುವ ಮೊದಲು ನಾವೀ ನೆಲೆಗೆ ಎಲ್ಲಿಂದ ಬಂದವರೆಂಬುದನ್ನು ಗಮನಿಸದೇಕಾದುದು ಅಗತ್ಯ. ನಾವು ಮುಟ್ಟಿದ ಕ್ಷೇತ್ರದ ಉಚಿತಾನುಚಿತತೆಯನ್ನರಿಯಲು, ಹಾದು ಬಂದ ಹಾದಿಯತ್ತ ಒಮ್ಮೆ ಹಿಂದೆ ನೋಡಿಕೊಳ್ಳುವುದು ಅತ್ಯವಶ್ಯವಿದೆ.

ಸ್ವಾತಂತ್ರ್ಯ ದೊರೆತು ಎರಡು ವರುಷ ಹತ್ತು ತಿಂಗಳಾಗುವುದರೊಳಗೇನೇ ಈ ಸ್ವಾತಂತ್ರ್ಯವು ೩೮ ಕೋಟಿ ಜನರಲ್ಲೂ ಸಮಾನತೆಯನ್ನು ಸಾಧಿಸಿ, ಇಷ್ಟರಲ್ಲೇ ಅವರೆಲ್ಲರ ಜೀವನ ಪ್ರಗತಿಯನ್ನೂ ಉಂಟುಮಾಡಬೇಕಿದ್ದಿತೆಂದು ಭಯಸುವುದು ತೀರಾ ಅವ್ಯವಹಾರ್ಯನೇ ಸರಿ. ಇಂದಿನ ಸ್ವಾತಂತ್ರ್ಯವು ರಾಷ್ಟ್ರದ ಎಲ್ಲಾ ಜನತೆಯ ಸಾಮೂಹಿಕ ಅಭಿವೃದ್ಧಿಯನ್ನೇನೂ ಒಲ್ಲವೆಂಬುದು ಇದರ ಕಾರಣಗಳಲ್ಲೊಂದು.

ಹಿಂದೀ ಜನಸಾಮಾನ್ಯರ ಹಕ್ಕಿನ ಸುಖ ಸೌಭಾಗ್ಯಗಳೆಲ್ಲವೂ ಒಮ್ಮೆಗೇ ಲಭಿಸಬೇಕೆಂದು ಆಗ್ರಹಪಡುವವಲ್ಲ, ಇಂದಿನ ಸ್ವಾತಂತ್ರ್ಯಕ್ಕಾಗಿ ನಡೆದಿದ್ದ ದೀರ್ಘಾವಧಿಯ ಹೋರಾಟಗಳಲ್ಲಿ ಕೇವಲ ಒಂದು ಬಾರಿಯಾದರೂ ಹಿಂದೀ ಜನಸಾಮಾನ್ಯರೆಲ್ಲರೂ ಭಾಗವಹಿಸಿದುದಿದೆಯೇ ಎಂದೊಮ್ಮೆ ವಿಚಾರ ಮಾಡಿಕೊಳ್ಳಬೇಕು.

ಶ್ರಮಧಾನಿಗಳಾದವರಿಗೆ ಫಲದಲ್ಲೂ ಪಾಲಿಲ್ಲವೆಂದು ಇಲ್ಲಿಯ ವಾದವಲ್ಲ. ತಮ್ಮ ಮೂಲಭೂತ ಹಕ್ಕಿಗಾಗಿ ಅಂದು ದುಡಿಯಲು ಕಲಿಯದಿದ್ದ ಜನತೆಯು, ಇಂದು ಕೂಡಾ ದುಡಿದೇ ಉಣ್ಣಬೇಕಾದ ಆ ಹಕ್ಕಿನ ಅನುಭೋಗವನ್ನೂ ಅರಿಯದೆ ಸ್ವತಃ ಹಿಂದೆ ಬಿದ್ದಿದ್ದೆ, ಹೊರತು ಜನತೆಯನ್ನು ಬೇರಾರೂ ಹಿಂದೆ ತಾಕಿದ್ದಲ್ಲವೆಂಬುದೇ ತಾತ್ಪರ್ಯ.

ಈಗಿನ ಪ್ರತಿಯೊಂದು ವಿವಾದದ ತೀರ್ಮಾನ ವಿಧಾನವೂ ಗಿಕಂಪುಬರುತ್ತಿರುವ 'ಜನಮತ ಸಂಗ್ರಹ' ಕ್ರಮವನ್ನೇ ಬ್ರಿಟಿಷರು, ಭಾರತದ ಸ್ವಾತಂತ್ರ್ಯದಾನದ ಮಟ್ಟಿಗೆ ಅನುಸರಿಸುತಿದ್ದರೆ ನೇಗಾಗುತಿತ್ತೆಂಬುದನ್ನು ಆಲೋಚಿಸಲಿಕ್ಕಿದೆ. ಹೆಚ್ಚೇಕೆ, 1947ರಲ್ಲೇ 'ಭಾರತೀಯರಾದ ನಿಮಗೆ ಈಗಲೇ ಪೂರ್ಣ ಸ್ವಾತಂತ್ರ್ಯ ಬೇಕೋ ಬೇಡವೋ?" ಎಂಬ ಪ್ರಶ್ನೆಯನ್ನು ಜನಮತದ ತೀರ್ಮಾನಕ್ಕೆಟ್ಟು, ನಮ್ಮ ಚುನಾವಣೆಗಳ ಮರ್ಜಿಯಂತೆ ಬ್ರಿಟಿಷ್ ಸರಕಾರವು ತನ್ನ ಅಧಿಕಾರ ಮತ್ತು ವರ್ಚಸ್ಸೆಲ್ಲವನ್ನು 'ಬೇಡ' ಅನ್ನಿಸುವುದಕ್ಕೆ ಉಸಯೋಗಿಸುತಿದ್ದರೆ 'ಸ್ವಾತಂತ್ರ್ಯ ಬೇಕು" ಎಂಬುದಕ್ಕೆ ಬಹುಮತ ದೊರೆಯುತ್ತಿದ್ದಿತೆಂದು ನಿಸ್ಸಂಕೋಚವಾಗಿ ಹೇಳಲು ಸಾಧ್ಯವಿಲ್ಲ; ಆಸ್ಥಾ ಆಜ್ಞಾನ್ಯ ಅಸ್ಥಿತೆ, ಪರಾವಲಂಬನಾ ಬುದ್ಧಿ ಭಾರತೀಯ ಜನಸಾಮಾನ್ಯರದಿದೆ.

ಆಗಿನ ಅಖಂಡ ಭಾರತದ ಜನತೆಯ ಪೈಕಿ, ಸ್ವಾತಂತ್ರ್ಯ ಚಳವಳಿದಲ್ಲಿ ಪ್ರತ್ಯಕ್ಷವಾಗಿ ಭಾಗ ವಹಿಸಿದವರ ಸಂಖ್ಯೆಯೆಷ್ಟು ಎಂಬುದನ್ನು ಎಂಗಡಿಸಿ ನೋಡಿದಲ್ಲಿ, ಸ್ವಾತಂತ್ರ್ಯದ ಬೇಡಿಕೆಯು ತೀರಾ ಅಲ್ಪ ಸಂಖ್ಯಾಕರದೆಂಬ ನೆವ ಹೇಳಲು ಬಲವಾದ ಕಾರಣವಿದ್ದೇ ಇದೆ.

ಸ್ವತಂತ್ರಾಧಿಕೆಯು ಸತ್ಫಲದಾಯಿಯಾಗಿಲ್ಲವೆಂದು ಈಗ ಟೀಕಿಸುತ್ತಿರುವವರಲ್ಲಿ ಹೆಚ್ಚಿನವರು, ಈ ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮ ಮನಸ್ಸು ಹೇಗಿದ್ದಿತೆಂಬ ಕಡೆಗೊಮ್ಮೆ ಅವಶ್ಯವಾಗಿ ನೋಡಿಕೊಳ್ಳಬೇಕು. ಸ್ವಾತಂತ್ರ್ಯಾದೋಲನಗಾರ ಕಾಂಗ್ರೆಸಿಗರನ್ನು ಆ ಕಾಲದಲ್ಲಿ ಅಲಕ್ಷ್ಯಿಸಿದ್ದವರ ಮತ್ತು ಅವಹೇಳನ ಮಾಡಿದ್ದವರ ಸಂಖ್ಯೆಯೇ ಹೆಚ್ಚಲ್ಲವೆ?

ಸಂಬಳ ಹೆಚ್ಚಿಸಿಕೊಳ್ಳುವುದಕ್ಕಾಗಿ— ಆಗಣ್ಯ, ಅಲ್ಪ ಕಾರಣಗಳಿಗಾಗಿ— ಮುಷ್ಕರ ಹೂಡುವ ಹುರುಪು ಸ್ವಾತಂತ್ರ್ಯಾನಂತರ ಸರಕಾರೀ ನೌಕರರಲ್ಲಿ ಕೂಡಾ ತೋರಿಬಂದಿದ್ದಿತು. ಆದರೆ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಗಾಂಧೀಜೀ ಅಸಹಕಾರ, ಬಹಿಷ್ಕಾರ ಬೋಧನೆ ಕೊಟ್ಟದ್ದಕ್ಕೆ ಆ ಕಾಲದಲ್ಲಿ ಮುಷ್ಕರಕ್ಕಾಗಿ ಮುಂದೆ ಬಂದವರೆಷ್ಟು ಮಂದಿ?

ಕೃಷಿಸಂತೇ ವ್ಯವಹಾರ, ಕರಕಾಯಿದೆಗಳ ವಂಚನೆ ಇತ್ಯಾದಿ ಸ್ವಾರ್ಥಸಾಧನೆಗಳಿಗಾಗಿ ಈ ಕಾಲದಲ್ಲಿ ಜೈಲು, ಜುಲ್ಮಾನೆ ಗೊಳಗಾಗಿರುವವರ ಸಂಖ್ಯೆ ಹೆಚ್ಚೋ? ರಾಷ್ಟ್ರದ ಸ್ವಾತಂತ್ರ್ಯಾಂದೋಲನಗಳಲ್ಲಿ ಭಾಗವಹಿಸಿ, ಆ ಕಾಲದಲ್ಲಿ ಶಿಕ್ಷೆ ದಂಡನೆಗಳಿಗೊಳಗಾದವರ ಸಂಖ್ಯೆ ಅಧಿಕವೊ?

ಭಾರತಕ್ಕಾವ ಸಂಬಂಧವೂ ಇಲ್ಲದ ಎಡನೇ ಜಾಗತಿಕ ಯುದ್ಧದ ದೆಸೆಯಿಂದ ಭಾರತದಲ್ಲೂ ಅಧಿಕ ಅವ್ಯವಸ್ಥೆ, ಸಾಮಾನ್ಯರಿಗೆ ಅಭಾವ ಮುಂತಾದ ಯದ್ವಾತದ್ವಗಳಾರಂಭಿಸಿದಾಗ, ಅನಿವಾರ್ಯವೆಂಬ ಭಾವನೆಯಿಂದ ಅವೆಲ್ಲವನ್ನೂ ಜನಸಾಮಾನ್ಯರು ಮಾನಸಿಕವಾಗಿ ಅನುಭವಿಸಿತಿದ್ದಷ್ಟು ಸಹನೆಯಿಂದಾದರೂ ಸ್ವಾತಂತ್ರ್ಯದ ಆದಿಭಾಗದ ಅನಿವಾರ್ಯ ಅಪತ್ತುಗಳೆಂದು ಇಂದಿನ ಕೊರತೆಗಳನ್ನು ತಾಳಿಕೊಂಡಿರುವರೆ?

ಗಾಂಧೀಜೀ ಯುದ್ಧ ವಿರೋಧಾಂದೋಲನ ಹೂಡಿದಾಗ ಹಣ ಕೆಡುವ ಮೂಲಕ — ಸೈನಿಕರಾಗಿ ಸೇರಿಕೊಂಡು— ಮಾ ಇತ್ಯಾದಿಗಳ ಸರಬರಾಯಿ ಮುಖಾಂತರ —ಬ್ರಿಟಿಷರ ಯುದ್ಧ ಕಾರ್ಯಗಳಲ್ಲಿ ಸಹಕರಿಸುವವರ ಸಂಖ್ಯೆಯೇನು ಕಡಿಮೆಯಿದ್ದಿತೆ?

ಇನ್ನು ರಾಷ್ಟ್ರದ ಯಾವ ಭಾಗದ, ಯಾವ ಜಾತಿಯ ಜನರನ್ನೇ ನೋಡೋಣ—ಆವರು ಅಖಿಲ ರಾಷ್ಟ್ರದ ಬಂಧವಿಮೋಚನಾ ಚಳವಳಿಗಳಲ್ಲಿ ಅತ್ಯಾಸಕ್ತಿಯಿಂದ ಭಾಗ ವಹಿಸಿದುದಕ್ಕಿಂತ ತಮ್ಮ ಸ್ಥಳದ ಅಧವಾ ತಮ್ಮ ಜಾತಿಯ ಪರವಾಗಿ ಹೋರಾಡುವ ಸಂದರ್ಭ ಬಂದಾಗ ಮಾಡಿದ್ದ ಸಾಧನೆಗಳೇ ನಿಜಕ್ಕೂ ಹೆಚ್ಚಲ್ಲವೆ?

ಈ ರೀತಿ, ಗತಕಾಲದಲ್ಲಿ ತಮ್ಮ ಸದಿ ಬಂದಾಗಲೆಲ್ಲಾ ಭಾರತೀಯ ಜನಸಾಮಾನ್ಯರು ತಮ್ಮ ಪಾಲಿನ ಕರ್ತವ್ಯಗಳನ್ನು ನಿರ್ವಹಿಸದೆ ಹಿಂದೆ ಬೀಳುತ್ತಾ ಬಂದಿದ್ದರು. ಹೀಗಿದ್ದರೂ ಕೆಲವಂದಿ ರಾಷ್ಟ್ರನಾಯಕ ಮತ್ತು ರಾಷ್ಟ್ರ ಯೋಧವರ್ಗದ ಪರಿಶ್ರಮದ ಫಲವಾಗಿ ಸ್ವಾತಂತ್ರ್ಯವನ್ನೇನೋ ತುಸು ಆತುಸ್ಥಿಕವಾಗಿಯೇ ದೊರೆಯಿತು. ದೊರೆತರೂ ಆ ವರಿಗಿನ ದೀರ್ಘಾವಧಿಯಲ್ಲಿ ತಾವು ಕಲಿಯದಿದ್ದುದನ್ನು ಒಮ್ಮೆಗೇ ಕಲಿತುಕೊಳ್ಳುವುದು ಹಿಂದೀ ಜನಸಾಮಾನ್ಯರಿಗೆ ಅಸಾಧ್ಯವಾಗಿ, ಅವರೀಗ ಸ್ವಾತಂತ್ರ್ಯಾನುಭೋಗದಲ್ಲೂ ಹಿಂದೆ ಬಿದ್ದಿದ್ದಾರೆ. ತಪ್ಪು ಜಸಕೆಯದೇ!

ಇಂದು—ಮುಂದು

ಭಾರತೀಯ ಜನಸಾಮಾನ್ಯರ ಮನೋಪ್ರಗತಿಯನ್ನು ಹಿಂದೆ ಹಾಕಿ, ಭಾರತದ ರಾಜಕೀಯ ಪ್ರಗತಿಯಾಗಿದೆಯೆಂಬುದು ಮೇಲಿನ ವಿಚಾರಗಳ ವೇಲಿಂದ ಸ್ಪಷ್ಟವಿದೆ. ಕಣ್ಣು ಕಳಕೊಂಡವನು ತನ್ನ ಕಂದೀಹಾವನನ್ನಾದರೂ ತಾನು ಕಾಣದಿರುವಂತೆ—ಪಡ್ಡ ಹುಡುಗನಿಗೆ, ತನ್ನ ಪಾಲಿನ ಪಾಠವೇ ಅರ್ಥವಾಗದಿರುವಂತೆ—ಸಂಗತಿಯರಿಯದವನು ತನ್ನ ತಂಗಿಣದ ದಲ್ಲಿರುವ ನಿಧಿಯನ್ನಾದರೂ ಗುರುತಿಸದಿರುವಂತೆ- ಈ ದಿನ ಭಾರತೀಯ ಜನಸಾಮಾನ್ಯರು ತಮ್ಮ ಹೆಸರಿನಲ್ಲಿರುವ, ತಮ್ಮ ಹಕ್ಕಿನದಾಗಿರುವ ರಾಜ್ಯಸ್ವಾತಂತ್ರ್ಯವನ್ನು ಅರಿಯದಿದ್ದಾರೆ; ಅನುಭೋಗಿಸಲಾರದೆ ದೂರವುಳಿದಿದ್ದಾರೆ.

ಇಂತಹ ಮನೋಮಟ್ಟವಿರುವವರ ಪಾಲಿಗೆ ನಿತ್ಯಜೀವನದ ಸಿಹಿ-ಕಹಿಗಳ ಅನುಭವವೊಂದೇ ಸರ್ವಸ್ವವಾಗಿರುವುದು ಸ್ವಾಭಾವಿಕ. ಅಂತಹ ನಿತ್ಯಸುಖವಾದರೂ ಈ ದಿನ ಭಾರತೀಯ ಜನತೆಗೆ ಸಾಕಷ್ಟು ದೊರೆಯದಿರುವುದರಿಂದ ಉಂಟಾಗಿರುವ ಅತೃಪ್ತ ಭಾವನೆಯನ್ನು ರಾಜಕೀಯದ ಅರಿಜ್ಞಾನ, ಅಜ್ಞಾನವು ಕೆದಡಿಸಿ ಹಾಕಿ, ಕಲಸುಮೇಲೋಗರವಾಗಿ ಮಾರ್ಪಡಿಸಿದೆ. ಇಂತಹ ಸ್ಥಿತಿಯಲ್ಲಿ ಜನಸಾಮಾನ್ಯರ ಮನೋರೋಗಕ್ಕೆ ಚಿಕಿತ್ಸೆ ಮಾಡುವುದೇ ರಾಷ್ಟ್ರ ಹಿತಚಿಂತಕರೆಲ್ಲರ ಆದ್ಯ ಕರ್ತವ್ಯವಾಗಿರಬೇಕು. ತಮ್ಮನ್ನು ತಾವು ಗುಣಪಡಿಸಿಕೊಳ್ಳುವದೊಂದೇ ಜನತೆಯ ಪ್ರಥಮ ಕೆಲಸವಾಗಿರಬೇಕು.

ಜನತೆಯಲ್ಲಿ ಸ್ಥಿತಿಗತಿಗಳ ಸಂಯಾದ ಜ್ಞಾನ, ಕರ್ತವ್ಯ ನಿಷ್ಠೆ ಮತ್ತು ಹೊಣೆಗಾರಿಕೆ ಮೂಡಿದರೆ ಇಂದಿನ ಜನತಾ ರಾಜ್ಯದಲ್ಲಿ ಅವರ ಸಂಕಲ್ಪಕ್ಕೆ ಅಡ್ಡಿಯೊಡ್ಡುವ ಶಕ್ತಿ ಯಾರಿಗೂ ಯಾವುದಕ್ಕೂ ಇಲ್ಲ. ಇಂದು ಜನತಾ ಸಂಕಲ್ಪದಂತೆ ಕಾರ್ಯವಾಗುತ್ತಿಲ್ಲವಾದರೆ, ಆದನ್ನು ಕಲ್ಪಿಸುವ ಯೋಗ್ಯತೆಯೇ ಜನತೆಗೆ ಬಂದಿಲ್ಲವೆಂಬುದರ ಹೊರತು ಬೇರೆ ಕಾರಣವೇ ಇಲ್ಲ.

ಆದ್ದರಿಂದ ಈಗ ನಡೆಯ ಬೇಕಾದುದು ಜನತಾ ಜವಾಬ್ದಾರಿ ಶಿಕ್ಷಣವೊಂದೇ; ಗುಣ ಯೋಗ್ಯತೆಗಳನ್ನು ಗಳಿಸಿಕೊಂಡು ಜನಸಾಮಾನ್ಯರು ಬುದ್ಧಿ ಮತ್ತು ವರ್ತನೆಗಳಲ್ಲಿ ಸ್ವಾವಲಂಬಿಗಳಾಗಿರಬೇಕಾದುದೊಂದೇ. ಆದ್ದರಿಂದ ಸಾರ್ವಜನಿಕರ ಪಾಲಿಗೆ ಆಕ್ಷವಿಮರ್ಶೆ ಮಾಡಿಕೊಳ್ಳುವುದು ಅಗತ್ಯ ಮತ್ತು ಪ್ರಾಮುಖ್ಯವಾದುದು ಬೇರ್ಯ ವಿಮರ್ಶೆ ನಡೆಸುವುದಲ್ಲ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಷ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚೆಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತಿರುನೆಲ್ವೇಲಿ, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈದು ವರುಷಗಳಿಂದ ವಿವಿಧ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನತಾಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನವ್ಯ ಸೇವೆಯನ್ನು ಸಲ್ಲಿಸಿಯೇತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರೀತಿಸಿಧ್ಯ ಪಡೆಯಲಿಕ್ಕಾಗಲೀ
ದಯವಾಗಿ ನಮಗಾಗಲೀ ಅಧವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಜಾಗೆತಿಕ ಪುಟ್ಟೆ-

ಕೋಟ್ಯಾವಧಿ ಜನತೆಯ ಸ್ವಭಾವ ಬದ್ಧ ಹಾಗೂ ಪರಂಪರಾಗತ ಮೌಢ್ಯವನ್ನು, ಜಾಡ್ಯವನ್ನು ನಿವಾರಿಸುವುದೇನೂ ಮಾಡಿದಷ್ಟು ಅಧಮ ಬರೆದಷ್ಟು ಸುಲಭದ ಕೆಲಸವಲ್ಲ. ಅತ್ಯಾಳಕ್ಕೂ ಜೋಡಿ ಬಿಟ್ಟರಿದಿದ್ದರೆ ಮಹಾಯುದ್ಧ, ಸ್ವಾತಂತ್ರ್ಯಾಂದೋಲನ, ಸ್ವಾತಂತ್ರ್ಯ ಪ್ರಾಪ್ತಿ, ಜಾತೀಯ ಗೊಂದಲಗಳಂತಹ ಮಗುಚಾಟಗಳ ಕಾಲದಲ್ಲಿ ಈ ಆಯೋಗೃತೆ, ಅಭಾವಗಳೆಲ್ಲವೂ ಇಷ್ಟರಲ್ಲೇ ಅಡಿಮೇಲಾಗಿ ಹೋಗಬೇಕಿದ್ದಿತು

ಇದುವರೆಗೆ ಕಿಂತಹ ಮಹಾ ಘಟನೆಗಳೂದಗಿದರೂ, ಕೆಲವೆಡೆಗಳಲ್ಲಿ ಅದವ್ಯವಾಗಿ ಸ್ವತಃ ಹುಟ್ಟಿದ್ದ ಜಾತೀಯ ಗೊಂದಲದ ಸ್ಫೂರ್ತಿಯೊಂದನ್ನು ಬಿಟ್ಟರೆ ಜನ ಸಾಮಾನ್ಯರು ಸ್ವಂತ ಪ್ರೇರಣೆಯಿಂದ— ತಮ್ಮ ಆಹಾರವನ್ನು ಸಂಪಾದಿಸಿಕೊಳ್ಳುವಷ್ಟೇ ಆಸಕ್ತಿಯಿಂದ— ಸಾರ್ವತ್ರಿಕವಾಗಿ ಯಾವುದೇ ಮಹತ್ಕಾರ್ಯದಲ್ಲಿ ಈ ವರೆಗೆ ಭಾಗವಹಿಸಿದುದೆಂದಿಲ್ಲ. ಇಂಗ್ಲಾಂಡು, ಜರ್ಮನಿ ಮೊದಲಾದ ರಾಷ್ಟ್ರಗಳ ಜನರಲ್ಲಿ ಯಾರೊಬ್ಬನೂ ಬಾಕಿಯಿರದೆ ಯುದ್ಧ ಕಾರ್ಯಭಾಗಿಯಾದಂತೆ ಭಾರತೀಯರಲ್ಲಿ ಪ್ರತಿಯೊಬ್ಬನೂ ಸಹಭಾಗಿಯಾಗಿ ಮಾಡಿಸಿ ರಾಷ್ಟ್ರ ಕಾರ್ಯವಾವುದೂ ಕಂಡುಬರುವದಿಲ್ಲ.

ಅರೆ ನಿದ್ರಾವಸ್ಥೆಯಲ್ಲಿರುವ ಜನಸಾಮಾನ್ಯರಿಗೆ, ತಮ್ಮ ಸರ್ವಶಕ್ತಿಯಿಂದ ಒಂದು ಮಹತ್ಕಾರ್ಯದಲ್ಲಿ ಭಾಗವಹಿಸಲೇ ಬೇಕಾದ ಸಂದರ್ಭವು ಅನಿವಾರ್ಯವಾಗಿಯಾದರೂ ಒದಗುವಿದ್ದರೆ ಅವರಂತಕ್ಕೆ ಜಾಗೃತವಾಗುತ್ತಿತ್ತು; ಬುದ್ದಿ ಎಚ್ಚರಗೊಳ್ಳುತ್ತಿತ್ತು, ಸ್ವಾತಂತ್ರ್ಯಾಂದೋಲನ ಮತ್ತು ಸ್ವತಂತ್ರಪ್ರಾಪ್ತಿ ಸಂಭ್ರಮೋತ್ಸವಗಳು ಕೆಲವಂಶ ಈ ಕೆಲಸವನ್ನು ಮಾಡಿದ್ದರೂ ರಾಷ್ಟ್ರದ ಜನತೆಯನ್ನು ಇಡಿಯಾಗಿ ಕಾರ್ಯಪ್ರವೃತ್ತಗೊಳಿಸುವ ಸಂದರ್ಭವೆಂದೂ ಬಂದಿರಿಲ್ಲ

ಅಂತಹ ಸಂದರ್ಭವು ಸ್ವತಂತ್ರ ರಾಷ್ಟ್ರ ಪ್ರೊಂದಕ್ಕೆ ಎಂದೂ ಒದಗಬಹುದು. ಆದರೆ ಈ ವಿಶೇಷ ಸಂದರ್ಭಗಳಿಗಾಗಿ ಕಾದು ನಿಲ್ಲದೆ ಕಾಲೋಚಿತವಾಗಿ ಸ್ವಯೋಗೃತೆ ತುಂಬಿಸಿಕೊಳ್ಳುವ ಕೆಲಸ ಮತ್ತು ಸ್ವತಯಾರಿ ಪ್ರಯತ್ನೆ ಸದಾ ಆಗುತ್ತಾ ಹೋಗಬೇಕು

ಮಂದಿನ ಮಹಾ ಜನಾಪಣೆಯು ಜನತೆಯು ಪಾಲಿಗೆ ಹೊಣೆ ನಿರ್ವಹಿಸುವ ಸುಸಂದರ್ಭವಾಗಿರ ವಂತೆಯೇ ಸ್ವತಯಾರೀ ಸುಯೋಗವೂ ಆಗಿದೆ. ಯಾವುದೇ ವಿಧದ ಪ್ರಗತಿ ಚಿಂತಕರೂ ಈ ಆದರೂ ಸಂದರ್ಭಕ್ಕಾಗಿ ಕಾಯಲಾರರು; ಅವರು ತಮ್ಮ ಪಾಲಿನ ಸ್ವತಿಯೊಂದು ಕ್ಷಣವನ್ನೂ ಸುಸಂದರ್ಭವಾಗಿ ತಾನೇ ಮಾರ್ಪಡಿಸಿಕೊಂಡು ಪರಿಶ್ರಮಿಸುತ್ತಾ ಹೋಗುವರು.

ಭಾರತದ ಜನಸಾಮಾನ್ಯರು ಹೀಗಾಗಬೇಕಾದ ಕಾಲವಿದು; ಆಗಲಾರರೆ?

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ— ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಛಾಪ್ಯುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಪತ್ರಿಕೆಯ ಅಭಿಮಾನಿಗಳ ಪೈಕಿ ಎಂದಿನಂತೆ— ಇತ್ತೀಚಿನ ವಿಷಯಗಳಲ್ಲಿ ಮೊದಲಿಗಿಂತಲೂ ಹೆಚ್ಚಾಗಿ— ಒಬ್ಬರು ತೋರುತ್ತಿರುವ ಮತ್ತು ಬೋಧಕ ಹಾಗೂ ಚಿಂತಕರಲ್ಲಿ ಗಾಢ ಯೋಜನೆಯನ್ನು ಉಂಟುಮಾಡಿ ಎವ ವಿಷಯವೆಂದರೆ ಅಮೆರಿಕ–ರಶ್ಯಾ ಹೈಡ್ರೋಜನ್ ಬಾಂಬಿನಂತಹ ವಿನಾಶಕಾರಕ ಯುದ್ಧೋಪಕರಣಗಳ ತಯಾರಿ ಮತ್ತು ಮಿತಿವಿರದ ರಕ್ಷಣಾ ವೆಚ್ಚಗಳನ್ನು ಮಾಡುತ್ತಾ, ಜಾಗತಿಕ ರಂಗದಲ್ಲಿ ತಂತಮ್ಮ ಪ್ರಾಬಲ್ಯವನ್ನು ಬಲಗೊಳಿಸುವುದಕ್ಕಾಗಿ ಸರ್ವರೀತಿಯ ಹೆಂಚಿಕೆಗಳನ್ನು ಕೈಕೊಳ್ಳುತಿದ್ದಾರೆ. ಲೋಕದ ಭವಿಷ್ಯವನ್ನು ಮಾರ್ಪಡಿಸಬಲ್ಲ, ಮತ್ತು ಇಷ್ಟರಲ್ಲೇ ಆರಿಹ್ಯ ಗಂಡಾಂತರಗಳನ್ನನುಭವಿಸಿರುವ ಸ್ವಸಂಚವು ಹಿಂದೆಂದೂ ಕಂಡಿರಯದಂತಹ ಅತಿಭೀಕರ ನವ ಅಣು ಹತ್ಯವನ್ನು ನಿರ್ಮಿಸಬಲ್ಲ.ಈ ಸ್ಪರ್ಧೆಯನ್ನು ನಿಲ್ಲಿಸುವ ಪರಿಣಾಮ ಕಾರೀ ವಿಧಾನವಾವುದೂ ಕೈಕೊಳ್ಳಲ್ಪಟ್ಟಿಲ್ಲವೆಂಬುದು ವಿಷಾದಕರ. ಸಂಯುಕ್ತ ರಾಷ್ಟ್ರಸಂಘದ ಜನರಲ್ ಅಸ್ಸೆಂಬ್ಲಿಯ ವರಂತಹ ಹೊಣೆಗಾರ ವ್ಯಕ್ತಿಗಳ ಶಾಂತಿಯತ್ನ—ಪಂಡಿತ ನೆಹರು ಗಳಂತಹ ಸ್ವಮುಖ ರಾಷ್ಟ್ರವೊಂದರ ನಾಯಕ ಮತ್ತು ಜಾಗತಿಕ ಮುಂದಾಳುವಿನ ಹಿತಬೋಧೆ — ಇಂಥವುಗಳಲ್ಲಾನ್ನದೂ ಅಮರಿಕ ರಶ್ಯಗಳ ಹೃದಯಪರಿವರ್ತನೆಯನ್ನುಂಟುಮಾಡಲು ಶಕ್ತವಾಗಿಲ್ಲವೆಂಬುದು ಚಿಂತನೀಯ ಸಂಗತಿ. ಒಂದುಯುದ್ಧದಲ್ಲಿ ಯಾವುದಾದರೊಂದು ಪಕ್ಷ ಸೋತೊಡನೆ, ಹೃದಯ ಪಾಲಿನ್ಯತೆಯನ್ನು ತೊಳೆಯದೇನೇಯುದ್ಧಹಾನಿಯನ್ನಷ್ಟೇ ತಾತ್ಕಾಲಿಕವಾಗಿ ನಿವಾರಿಸುವಂತಹ ಕೃತಕ ಶಾಂತಿ ಒಡಂಬಡಿಕೆ ಮಾಡಿಕೊಳ್ಳಲು ಅವಸರಿಸುವರು, ಶಾಶ್ವತ ಶಾಂತಿ ಒಡಂಬಡಿಕೆಗಾಗಿ ಶಾಂತಿಕಾಲದಲ್ಲಿ ಸರ್ವಶಕ್ತಿಯಿಂದ ದುಡಿಯಲು ತಯಾರಿಲ್ಲವೇಕ ಎಂಬುದೇ ಇಂದಿನ ಪ್ರಶ್ನೆ. ತಾವಿ ಬಾಗುವ ನೊದಲೇ ಬಾಗಿ ನಡೆಯಲು ಕಲಿಯದವರು ಭಾರತೀಯರು ಮಾತ್ರವಲ್ಲ; ಲೋಕದ ಯಾವ ರಾಷ್ಟ್ರ ನಾಯಕ ಕಳೆದ ಮಹಾಯುದ್ಧ ಕಾಲದಲ್ಲಿ ಮಿತ್ರರಾಷ್ಟ್ರಗಳ ಪರವಾಗಿ ಸಹಕರಿಸಿದ್ದ ಚರ್ಚಿಲ್ ಕೂಡಾ ಈ ವಿಷಯದಲ್ಲಿ ಸಾಕಷ್ಟು ಜಾಗರೂಕರಾಗಿರಲಿಲ್ಲವೆಂಬ ಭಾವನೆಯಿಂದಿಗಿತ ಮಾತನಾಡಿದ್ದಾರೆ.

ಆಂತರಕ್ಷಿಪ್ತೀಯ ರಂಗ

ಅಮೆರಿಕವು ಹೈಡ್ರೋಜೆನ್ ಬೋಂಬು ನಿರ್ಮಾಣವನ್ನೆ ಮತ್ತಷ್ಟು ವಿಸ್ತರಿಸಿಕೊಳ್ಳುವ ಪ್ರಯತ್ನದಲ್ಲಿದೆ. ಅಟಾಮಿಕ್ ಮತ್ತು ಹೈಡ್ರೋಜೆನ್ ಬೋಂಬುಗಳ ಕಾರ್ಯ ವಿಸ್ತರಣಕ್ಕಾಗಿ 200 ಮಿಲಿಯ ಪೌಂಡುಗಳ ನಿಧಿಯನ್ನು ಮೀಸಲಿಡ ಬೇಕೆಂದು ಅಮೇರಿಕದ ಕಾಂಗ್ರೆಸ್ಸನ್ನು ಅಲ್ಲಿಯ 'ಆಟಂ ಶಕ್ತಿ ಸಮಿತಿ'ಯವರು ಕೇಳಿಕೊಳ್ಳಲಿರುವರೆಂದು ಸಾಧಾರವಾಗಿ ತಿಳಿದುಬಂದಿದೆ.

1945ನೇ ಮಳೆಗಾಲದಲ್ಲಿ, ಲೋಕದಲ್ಲೆಗೆಸರ್ವಪ್ರಥಮವಾಗಿ ಅಟಂ ಬೋಂಬು ಧಾಳಿಗೆ ಬಲಿಯಾಗಿದ್ದ ಜಪಾನಿನ ಹಿರೋಷಿಮಾ ನಗರದಲ್ಲಿ ಅಟಂ ಬೋಂಬಿನ ಹೊಡೆತಾನಂತರ ಆಗುವ ಸ್ವತ್ಯಪ್ಪ ಹಾಗೂ ಪರಂಪರಾಗತ ಪರಿಣಾಮಗಳೇನೆಂಬುದನ್ನು ಕಂಡು ಹಿಡಿಯುವ ಶೋಧವೀಗ ಆಲ್ಲಿ ಭರದಿಂದ ನಡೆದಿದೆ. ಬೋಂಬು ಬಿದ್ದ ಕ್ಷೇತ್ರದಲ್ಲಿ 150,000ಕ್ಕೂ ಮಿಕ್ಕಿದಷ್ಟು ಜನಸಾನಿಯಾಗಿದೆ ಎಂಬ ಲೆಕ್ಕವನ್ನು ಇಷ್ಟರಲ್ಲೇ ಕಂಡುಹಿಡಿಯಲಾಗಿದೆ ಧಾಳಿಗೆಳಗಾದವರ ಮಕ್ಕಳು, ಮೊಮ್ಮಕ್ಕಳು ಮತ್ತು ಸಂತಾನ ಪರಂಪರೆಯ ಮೇಲೆ ಆಗುವ ಪರಿಣಾಮಗಳೇನೆಂಬುದನ್ನು ಗೊತ್ತುಹೆಚ್ಚಲು 200,000 ಶಿಶುಗಳನ್ನು ಪರೀಕ್ಷಿಸುವ ಯೋಜನೆಯಿದೆ. ಅಟಂ ಬೋಂಬು ಸ್ಫೋಟದಿಂದ ಬದುಕಿಕೊಂಡವರಲ್ಲಿ ಕೊನೆಗೆ ತೋರಿ ಬರುವ ದುಷ್ಪರಿಣಾಮಗಳೇನೆಂದರೆ ಕಣ್ಣಲ್ಲಿ ಪರೆ ಬರುವುದು ಎಂದು ವಿಜ್ಞಾನ ಸಂಶೋಧನಾ ಕಲಸಗಾರರಿಗೂ ಕಣ್ಣಪರೆ ಬಂದಿರುವ ದೃಷ್ಟಾಂತಗಳು ಅಮೆರಿಕದಲ್ಲಿ ಕಂಡು ಬಂದಿವೆ.

ವಧ್ಯಪ್ರಮಾ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಸಾಗಿಸುವ ಕಾರ್ಯಕ್ರಮವನ್ನು ಪ್ರಾರಂಭಿಸಿರುವುದು ಮಾಡಿರುವ ಕಾರ್ಯಕ್ರಮವನ್ನು ಜೂನ್ ೨೫ನೆಯ ತಾರೀಖಿನಂದು ಕೈಗೊಳ್ಳಲಾಗಿದೆ. ಅಮೆರಿಕದ ಭದ್ರತೆಗಾಗಿಯೇ ಕಂಕಣ ಬದ್ಧರಾಗಿರುವ ಅಮೆರಿಕದ ಸೈನ್ಯ, ನೌಕಾ ಮತ್ತು ವಾಯುಸೈನ್ಯಗಳಿಗೆ ಸಾಕಷ್ಟು ಶಸ್ತ್ರಾಸ್ತ್ರಗಳು ಸಿಕ್ಕಿದ ಮೇಲೆ ಉಳಿದ ಶಸ್ತ್ರಾಸ್ತ್ರಗಳನ್ನು ಮಾತ್ರ ಈ ಕಾರ್ಯಕ್ರಮದಡಿಯಲ್ಲಿ ಕೊಡಲಾಗುವುದೆಂದು ಅಮೆರಿಕದ ಅಧಿಕಾರಿಗಳು ಹೇಳಿದ್ದಾರೆ.

ಅಮೆರಿಕದ ಭದ್ರತೆ ಮತ್ತು ಲೋಕ ಶಾಂತಿಗೆ ಸಂಬಂಧಿಸಿರುವ ಜಾಪಾನಿನ ಸ್ಥಿತಿಗತಿಗಳ ಸ್ವತ್ಯಕ್ಷ ಸಂಚಯ ಮಾಡಿಕೊಳ್ಳುವದಕ್ಕಾಗಿ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲೂವಿಸ್ ಜೋನ್ಸನ್ ಮತ್ತು ಅಮೆರಿಕದ ಜತೆ ಸೇನಾ ನಾಯಕ ಮಂಡಲಿಯ ಅಧ್ಯಕ್ಷ ಜನರಲ್ ಓವಂ ಬ್ರೈಡ್ಲೆಯವರು ಟೋಕಿಯೋವಿಗೆ ಬಂದು, ಜಾಪಾನಿನಲ್ಲಿ ಅಮೆರಿಕನ್ ಮೇಲಧಿಕಾರಿಯಾಗಿರುವ ಜನರಲ್ ಮೇಕಥರ್ ರೊಡನೆ ವಿಚಾರ ವಿನಿಮಯ ನಡೆಸಿದ್ದಾರೆ

ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಕೌನ್ಸಿಲಿನಲ್ಲಿ ಈಗ ಕೊರಿಯಾ ಚೈನಾದ ಕಮ್ಯೂನಿಸ್ಟ್ ಸರಕಾರದ ಪ್ರತಿನಿಧಿಯು ಸದಸ್ಯನಾಗಿ ಇರದೆ, ಹೊಗೆಚಿಯಾಂಗ್ ಕೈಶೇಕ್ ಸರಕಾರದ ಪ್ರತಿನಿಧಿಯೇ ಉಳಿದುಕೊಂಡಿರುವುದರಿಂದ ಆದರ ನಿಷೇಧಾರ್ಥವಾಗಿ ರಶ್ಯವು ಸಂಯುಕ್ತ ರಾಷ್ಟ್ರ ಸಂಘದ ಎಲ್ಲಾ ಸಮಿತಿ ಸಭೆಗಳನ್ನು ಬಹಿಷ್ಕರಿಸುತ್ತಾ ಬಂದಿದೆಯಷ್ಟೆ? ಸಂಘದ ಕಾರ್ಯದರ್ಶಿ ಟ್ರಿಗ್ವಿಲೀ ಅವರು ರಶ್ಯದ ಮಿತ್ರರಾಷ್ಟ್ರಮುಖ್ಯಾಶ್ಚಿತ್ಯರಾಷ್ಟ್ರಗಳ ನಾಯಕರೊಡನೆ ಮಾತಾಡಿದ ನಂತರ, ಈ ವಿವಾದವು ಇನೇ ಜನ್ ಆಥವಾ ಜುಲಾಯಿ ತಿಂಗಳುಗಳಲ್ಲಿಸಮಾಧಾನಕರ ತೀರ್ಮಾನ ಹೊಂದಬಹುದೆಂಬ ಆಶೆಯನ್ನು ವ್ಯಕ್ತಪಡಿಸಿದ್ದರು. ಆದರೆ ಅವರು ಸಂಯುಕ್ತ ರಾಷ್ಟ್ರ ಸಂಘದ ಫ್ರಾನ್ಸ್ ಮತ್ತು ಚೀಜಿನ ಪ್ರತಿನಿಧಿಗಳೊಡನೆ ಕೊನೆಯ ವಿಚಾರ ವಿನಿಮಯ ನಡೆಸಿದ ನಂತರ ಸದ್ಯಕ್ಕೆ ಈ ಪ್ರಶ್ನೆಯನ್ನು ಒತ್ತಾಯಿಸುವುದು ಅನಾವಶ್ಯಕವೆಂದು ತಿಳಿದು ಬಂದಿದೆ.

ಸಂಯುಕ್ತ ರಾಷ್ಟ್ರ ಸಂಘದ ಮಿಲಿಟರಿ ವೆಚ್ಚಗಳು 1947ರಿಂದ 1950ರ ವರೆಗೂ ವರ್ಷವರ್ಷವೂ ಏರುತ್ತಾ ಬಂದಿದ್ದು ಈ ನಿಷ್ಪನ್ನವನ್ನು ಭರ್ತಿ ಮಾಡಿಕೊಳ್ಳುವ ಬಗೆ ಹೇಗೆ, ಎಂಬ ಸಮಸ್ಯೆಗೆ ಎದ್ದಿದೆ. 1947ರಲ್ಲಿ 27 ಮಿಲಿಯ ಡೋಲರುಗಳು, 1948ರಲ್ಲಿ 38,-1949ರಲ್ಲಿ 39,-1950ರಲ್ಲಿ 39 ಮಿಲಿಯ ಡೋಲರುಗಳ ವ್ಯಯವು ಜಾಗತಿಕ ಸಂಘದ ವ್ಯವಸ್ಥೆಗಳಿಗಾಗಿವೆ ಈ ವೆಚ್ಚವನ್ನು ಸಂಘದ ಸದಸ್ಯ ರಾಷ್ಟ್ರಗಳು ಹಿರಬೇಕು. ಸಾಲದುದಕ್ಕೆ ಈ ಸಂಘಕ್ಕೆ ಸಂಬಂಧಿಸಿದ ಕೆಲವು ವಿಶೇಷ ಏಜನ್ಸಿಗಳು ಪ್ರತ್ಯೇಕವಿದ್ದು, ಅವುಗಳ ಪಾಲಿನ ಹೆಚ್ಚಿನ ವೆಚ್ಚವನ್ನು ಅವುಗಳ ಸದಸ್ಯ ರಾಷ್ಟ್ರಗಳು ತೆರ

APPOINTMENT OF TEACHERS IN LABOUR SCHOOLS

Applications are invited for the appointment of teachers in the Labour Schools to be newly opened at Nelyadi of Puttur Taluq, Panathadi of Kasaragod Taluq and Halesinad of Coondapur Taluq in South Kanara District from candidates Possessing the following qualifications.

1. Higher Elementary Grade Trained, or
2. Secondary Grade Trained

The applications with necessary certificates and testimonials should reach the Office of the undersigned on or before 30-6-1950

Office of the Dt. Welfare Officer, Mangalore, dated 3-6-1950.

(Sd.) **K Venkappa,**
Dt Welfare Officer.

-ಭಾರತದಿದಿರ ಪ್ರಶ್ನೆ

ಬೇಕಾಗಿದೆ. ಹೀಗೆ ಹೆಚ್ಚಿಗೆ ತೆರುವ ಹಣವು 1950ರಲ್ಲಿ 75,000,000 ಡೋಲರುಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ಹೀಗಾಗಿ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳಿಗೆ ಆದರ ವೆಚ್ಚ ಭಾರವು ಅಸಹ್ಯವಾಗಿ, ಸಂಘದ ವ್ಯಯ ವಿಭಾಗಗಳನ್ನು ತಗ್ಗಿಸಿಕೊಳ್ಳುವ ಆಲೋಚನೆಯೀಗ ನಡೆದಿದೆ.

ರಶ್ಯಕ್ಕೆ ಆಟಂ ಗುಟ್ಟುಗಳನ್ನು ಕೊಟ್ಟ ಆರೋಪದ ಮೇಲೆ 14 ವರುಷಗಳ ಶಿಕ್ಷೆಯನ್ನು ಅನುಭವಿಸುತ್ತಿರುವ ಡಾ| ಕ್ಲಾಸ್ ಫುಚ್ಸ್‌ರೊಂದಿಗೆ ಸೇರಿಕೊಂಡು ಒಳಸಂಚು ಭಾಗಿಗಳಾಗಿದ್ದರೆಂಬ ಆರೋಪ ಕ್ಕೊಳಗಾಗಿ ಅಮೆರಿಕದ ಆಲ್ಫ್ರೆಡ್ ಡೀನ್ ಸ್ಲೋಕ್ ಎಂಬ ವಿಜ್ಞಾನಿಯು ಈಗ 100,000 ಪೌಂಡುಗಳ ಜಾಮೀನಿನ ಮೇಲಿದ್ದಾರೆ. ಚೈನೀಸ್ ಪೋರ್ಮೋಸದ ಮಾಜಿ ಗವರ್ನರ್ ಮತ್ತು ಜಪಾನ್ ಯುದ್ಧದಲ್ಲಿ ಜಪಾನ್ ಸೇನೆಗಳಿಂದ ಶರಣಾಗತಿಯನ್ನು ಸ್ವೀಕರಿಸಿ ಅಲ್ಲಿಯ ಸೇನಾ ಗವರ್ನರ್ ಆಗಿ ಆಳಿದ್ದ ಜನರಲ್ ಜೆನ್ ಈ, ಇವರು ಚೈನೀ ಕಮ್ಯೂನಿಸ್ಟ್ ಸೇನೆಗಳೊಂದಿಗೆ ಒಳ ಸಂಚು ನಡೆಸಿದ ರೆಂಬ ಅಪವಾದನೆಯಿಂದ ಚೈನೀ ರಾಷ್ಟ್ರೀಯ ಸರಕಾರದಿಂದ ಮರಣದಂಡನೆಗೀಡಾದರು.

ದಕ್ಷಿಣಾಫ್ರಿಕದ ಭಾರತೀಯರೇ ಮೊದಲಾದ ಯುರೋಪೇತರ ಜನಾಂಗಗಳ ಜೀವನವನ್ನೇ ಅಸಹ್ಯ ಮತ್ತು ಅನಾಧ್ಯ ಗೊಳಿಸುವಂತಹದಿದ್ದು ಭಾಂತೀಯರೆಲ್ಲರ ಲ್ಲೂ ತೀವ್ರ ಕ್ರೋಧಾವೇಗಗಳನ್ನು ನಿರ್ಮಿಸಿರುವ ದಕ್ಷಿಣಾಫ್ರಿಕ ಸರಕಾರದ ವರ್ಣದ್ವೇಷಪೂರಿತ 'ಕ್ಷೇತ್ರವಾರು ಮನೆ ಮೂಡಿ'ಯು ಅಲ್ಲಿಯ ಎಸೆಂಬ್ಲಿಯಲ್ಲಿ 78 ಅನುಕೂಲ, 68 ಪ್ರತಿಕೂಲ ವಕ್ತಗಳಿಂದ ಮಂಜೂರಾಗಿ, ಈಗ 'ಸೆನೆಟ್'ನ ಮಂಜೂರಾತಿಗೆ ಹೋಗಿದೆ. ಈ ಮನೆ ಮೂಡಿಯು ದಕ್ಷಿಣಾಫ್ರಿಕದಲ್ಲಿ ಯುರೋಪಿಯನ್ನರಿಗೆ, ಆಫ್ರಿಕನರಿಗೆ ಮತ್ತು ಅವರ್ಣೀಯ ಜನರಿಗೆ ಪ್ರತ್ಯೇಕ ಪ್ರತ್ಯೇಕ ಜೀವನ ವಲಯವನ್ನು ನಿರ್ಮಿಸುವಂತಹದಿದೆ. ವ್ಯಾಪಾರ ಏಜೆನ್ಸಿಟು ಮುಂತಾದ ಹೊರ ಸಂಬಂಧವೆಲ್ಲವೂ ಕತ್ತರಿಸಲ್ಪಟ್ಟು ಕೃತ್ಯೇಕ ಮೂಲೆ ಗುಂಪಾಗಿ ತಮ್ಮುಪ್ಪೆ ತಾವು ಇರಬೇಕಾಗಿ ಭಾರತೀಯರಿಗೆ ಅಲ್ಲಿ ಬಾಳುವೆಯೇ ಅಸಾಧ್ಯವಾಗಲಿದೆಯಾದ್ದರಿಂದ, ಇಂತಹ ಕಠೋರ ಕೃಮವು ಕೈಕೊಂಡಿರುವ ದಕ್ಷಿಣಾಫ್ರಿಕ ಸರಕಾರವು ನಿಯೋಜಿಸಿರುವ ಭಾರತ, ಪಾಕಿಸ್ತಾನ್, ದ. ಆಫ್ರಿಕಾ ಸರಕಾರಗಳ ದುಂಡು ಮೇಜಿನ ಸಮ್ಮೇಳನದಲ್ಲಿ ಕಾವು ಸಹಭಾಗಿ ಗಳಾಗುವದಿಲ್ಲವೆಂದು ಭಾರತ ಸರಕಾರವು ನಿರ್ಧರಿಸಿದೆ. ಈಗ ಲಂಡನ್ನಿನಲ್ಲಿರುವ ಭಾರತ ಸರಕಾರದ ಆರೋಗ್ಯ ಮಂತ್ರಿ ಶ್ರೀಮತಿ ಅಮೃತ ಕೌರರು ಜಾಗತಿಕ ಸಂಘಕ್ಕೆ ಆಹ್ವಾನ ಕೊಡುತ್ತಾ ಯಾವ ದಾನದೊಂದು ಸಾಮಾಜ್ಯೋದ್ದೇಶವನ್ನು ಸಾಧಿಸ ಬೇಕೆಂಬ ಬಯಕೆ ಅದಕ್ಕಿದ್ದರೆ ಅದು ದಕ್ಷಿಣಾಫ್ರಿಕ ಸರಕಾರದ ಈ ವರ್ಣದ್ವೇಷ ಧೋರಣೆಗಳನ್ನು ಅಂಗೀಕರಿಸಿ ಕಾರ್ಯ ಪ್ರವೃತ್ತವಾಗಬೇಕೆಂದು ಎಚ್ಚರಿಸಿದ್ದಾರೆ.

ದಕ್ಷಿಣಾಫ್ರಿಕ ಸರಕಾರವು ಕಮ್ಯೂನಿಸಮಿನ ನಿರ್ಮೂಲನಾರ್ಥವಾಗಿಯೂ ಒಂದು ಮಸೂದೆಯನ್ನು ತಯಾರಿಸಿದ್ದು, ಅಲ್ಲಿಯ ಎಸೆಂಬ್ಲಿಯಲ್ಲಿ ಇದರ ದ್ವಿತೀಯ ವಾಚನ ನಡೆದಾಗ, ಕಮ್ಯೂನಿಸ್ಟರಿಂದ ಪ್ರೇರಿತರಾಗಿ ದಕ್ಷಿಣಾಫ್ರಿಕದ ಮೂಲನಿವಾಸಿಗಳು ನೀರ ಸಬಂಧಿಯಿಗಳಿಗೆ ವಿಷ ಹಾಕುವ, ಸಂಚಾರ ಸರಂಜಾಮು ಸಟ್ಟಗಳನ್ನು ಕತ್ತರಿಸಿ ಹಾಕುವ ಮತ್ತು ತಮಗಡ್ಡ ಬರುವವರನ್ನು ಕೊಲೆಮಾಡುವ ಗುಪ್ತ ಒಳಸಂಚೊಂದನ್ನು ನಡೆಸಿರುವುದೆನ್ನು ಬಹಿರಂಗಪಡಿಸಿ, ಎಚ್ಚರಿಕೆ ಕೊಟ್ಟರು. ಈ ಮಸೂದೆಯೂ ವರ್ಣ ದ್ವೇಷಾಂತಗಳಿಂದ ತುಂಬಿದೆ.

ಈದವಾರ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವ್ಯಾಪಾರೀ ಬಂಡಿಗಳ ಮೇಲಿನ ಮಾಂಟಾಟ ತೆರಿಗೆಯನ್ನು ತೆಗೆದು ಹಾಕತಕ್ಕದ್ದೆಂಬ ಕನ್ಸರ್ವೇಟಿವ್ ಸೂಚನೆಯನ್ನು ಕೂಲಿಗಾರ ಸರಕಾರವು ಬಹುಮತಗಳಿಂದ ಸೋಲಿಸಿದೆ. ಈದವ ಮಾರ್ಚಿ ತಾ. 6ರಲ್ಲಿ ಬ್ರಿಟನ್ನಿನಲ್ಲಿ ಅಧಿಕಾರಕ್ಕೆ ಬಂದ ನಂತರ ಕೂಲಿಗಾರ ಪಕ್ಷವು ಇದಿರಿಸಿದ ಟೋರಿ ಅವಿಶ್ವಾಸ ಸೂಚನೆಗಳ ಪೈಕಿ ಇದು 18ನೆಯದು.

ಭಾರತದ ಪಾಲಿಗೆ

ಕಾಶ್ಮೀರ ವಿವಾದದ ಮಧ್ಯಸ್ಥಗಾರ ಸರ್. ಓವೆನ್ ಡಿಕ್ಸನರು ಭಾರತ, ಪಾಕಿಸ್ತಾನ್, ಕಾಶ್ಮೀರಗಳ ಸರಕಾರೀ ನಾಯಕರ ಅಭಿಮತಗಳನ್ನು ಇಷ್ಟರಲ್ಲೇ ಸಂಗ್ರಹಿಸಿಕೊಂಡಿದ್ದಾರೆ. ಸ್ಥಿತಿ ಚಿತ್ರವು ಈಗ ಅತ್ಯಂತ ಸ್ಪಷ್ಟವಾಗಿ ಸರ್. ಡಿಕ್ಸನರ ದೃಷ್ಟಿಪಥದ ಮುಂದೆ ಬಂದಂತಿದೆ. ಅವರು ಮುಂದಿನ ಹೆಜ್ಜೆಯ ಪರ್ಯಾಲೋಚನೆಯಲ್ಲಿದ್ದಾರೆ.

ಭಾರತ-ಪಾಕಿಸ್ತಾನಗಳೊಳಗಿನ ವಿವಾದಗಳ ಪೈಕಿ ಕೆಲವು ತೀರ್ಮಾನ ಹೊಂದಿ, ಉಳಿದವುಗಳ ಬಿಗುವು ಕಡಿಮೆಯಾಗಿರುವಾಗ ಪೂರ್ವ ಪದ್ಧತಿಗನುಸಾರವಾಗಿ ಜವ್ಯ ಸರಹದ್ದಿನಲ್ಲೊಂದು ದುರ್ಘಟನೆ ನಡೆಯಿತು. ಜೂನ್ ತಾ. 11ರಲ್ಲಿ ಜಮ್ಮು ಜಿಲ್ಲೆಯ ಗುರ್ಬಾರ್ ಎಂಬ ಗಡಿ ವಲಯದಲ್ಲಿದ್ದ ಪಾಕಿಸ್ತಾನ್ ಸೇನಾದಳವೊಂದು ಭಾರತದ ಗಡಿದಾಟಿ 200 ಗಜ ಒಳಗೆ ಬಂದಾಗ ಅದಕ್ಕೂ ಭಾರತ ಸೇನಾದಳಕ್ಕೂ ಘರ್ಷಣೆ ನಡೆಯಿತು. ತತ್ಫಲ ಕಾರಿ ಮತ್ತು ಐದು ಮಂದಿ ಇತರರು ಮಡಿದು, ಒಬ್ಬ ಅಧಿಕಾರಿ ಮತ್ತು ಇತರ ಇಬ್ಬರಿಗೆ ಜಖಮುಗಳಾದವೆಂದೂ ಪಾಕಿಸ್ತಾನ್ ಸೇನೆಯಲ್ಲಿ 10 ಮಂದಿ ಮಡಿದು ಹೆಚ್ಚಿನವರಿಗೆ ಘಾಯಗಳಾಗಿರಬೇಕೆಂದೂ ತಿಳಿದು ಬಂದಿದೆ. ಹಿಂದೀ ಸೇನಾಧಿಕಾರಿಗಳು ಈ ವಿಷಯವನ್ನು ಪಾಕಿಸ್ತಾನ್ ಸೇನಾಧಿಕಾರಿಗಳ ಗಮನಕ್ಕೆ ತಂದೊಡನೆ ಪಾಕಿಸ್ತಾನ್ ಅಧಿಕಾರಿಗಳು ಈ ಪ್ರಮಾದಕ್ಕಾಗಿ ಸಂತಾಪ ಸೂಚನೆ ಮಾಡಿದ್ದಾರೆ.

ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರು ಅಮೆರಿಕದಲ್ಲಿ ಸಂಚರಿಸಿ ನಡೆಸಿದ್ದ ಒಳ ಮಹಿವಾಟುಗಳ ಪ್ರಸನೆ ಮೊದಲೇ ಬಡಿದಿದ್ದಿತು. ಇತ್ತೀಚೆಗೆ ಪಾಕಿಸ್ತಾನಕ್ಕಾಗಿ ಯುದ್ಧ ಸಿಡಿಮದ್ದುಗಳನ್ನು ತುಂಬಿಸಿದ್ದ ಹಡಗುಮೊಂದರಲ್ಲಿ ಅಮೆರಿಕದ ಬಂದರದಲ್ಲಾಗಿದ್ದ ಸ್ಫೋಟವು ಪಾಕಿಸ್ತಾನಕ್ಕೆ ಅಮೆರಿಕದಿಂದ ವಿಶೇಷ ಯುದ್ಧೋಪಕರಣಗಳ ಸರಬರಾಯಿಯಾಗುತ್ತಿರುವ ಗುಟ್ಟನ್ನೂ ಸ್ಫೋಟಗೊಳಿಸಿದ್ದಿತು. ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು, ಅಮೆರಿಕದ ಗೃಹ ಕಾರ್ಯದರ್ಶಿ ಮಿ ಡೀನ್ ಅಚ್ಸನರೊಡನೆ ಈ ಅಮೆರಿಕ-ಪಾಕಿಸ್ತಾನ ಮಹಿವಾಟುಗಳ ಕುರಿತು ಮಾತುಕತೆ ನಡೆಸಿದ್ದರೆಂದೂ ಭಾರತವೊಡನೆ ಇಟ್ಟುಕೊಳ್ಳದ ಮಹಿವಾಟು ಸಂಬಂಧವನ್ನೂ ಅಮೆರಿಕವು ಪಾಕಿಸ್ತಾನದೊಡನಿಟ್ಟುಕೊಂಡಿಲ್ಲ ನೆಂಬ ಆಶ್ವಾಸನೆಯು ಅಮೆರಿಕದ ಗೃಹ ಕಾರ್ಯದರ್ಶಿಯಿಂದ ದೊರೆಯಿತೆಂದೂ ತಿಳಿದುಬರುತ್ತದೆ.

ಭಾರತ-ಪಾಕಿಸ್ತಾನಗಳೊಳಗಿನ ಢಿಲ್ಲೀ ಒಪ್ಪಂದವು ಅತ್ಯಂತ ಜಯಶೀಲವಾಗಿ ಈಗ ಜಾರಿಯಲ್ಲಿದೆ. ಶ್ರೀ ಭೀಮಸೇನ ಸಚಾರರ ನಾಯಕತ್ವದಲ್ಲಿ ಭಾರತದ ಆನ ಧಿಕಾರೀ ಸೌಹಾರ್ದತಾ ಸಮಿತಿಯೊಂದು ಕರಾಚಿಗೆ ಹೋಗಿದ್ದು, ಅಲ್ಲಿ ಅಖಿಲ ಪಾಕಿಸ್ತಾನ ಮುಸ್ಲಿಮ್ ಲೀಗಿನ ಅಧ್ಯಕ್ಷ ಖಲಿಕುಝಾಮನರೇ ಮೊದಲಾದವರಿಂದ ಬೃಹತ್ ಸತ್ಕಾರ ಇತ್ಯಾದಿ ಸಂಭ್ರಮದ ಸ್ವಾಗತಗಳನ್ನು ಪಡೆದಿದ್ದಾರೆ. ಢಿಲ್ಲೀ ಒಪ್ಪಂದವನ್ನು ಜಾರಿಯಲ್ಲಿಡಲು ಪ್ರತಿಯೊಬ್ಬ ಪಾಕಿಸ್ತಾನಿಯೂ ವರಮಾವಧಿ ತ್ಯಾಗವನ್ನು ಮಾಡಲು ತಯಾರಿರುವನೆಂದು ಲೀಗ್ ಅಧ್ಯಕ್ಷ ಖಲಿಕುಝಾಮನರು ಈ ಸಂದರ್ಭದಲ್ಲಿ ಪ್ರತಿಜ್ಞಾಪೂರ್ವಕ ಸಾರಿದ್ದಾರೆ. ಪಾಕಿಸ್ತಾನದ ಅಲ್ಪಸಂಖ್ಯಾಕ ಮಂತ್ರಿಗಳಾದ ಡಾ| ಮಲಿಕರು ಕಲ್ಕತ್ತೆಗೆ ಬಂದಿದ್ದು, ಅಲ್ಲಿಂದ ಆಕಾಶವಾಣಿ ಮಾತುಕತೆಯಾಡುತ್ತಾ ಢಿಲ್ಲೀ ಒಪ್ಪಂದವು ಒಂದು ಕೌತುಕವನ್ನೇ ನಿರ್ಮಿಸಿದೆಯೆಂದೂ, ತಾವೀಗ ಚಿಕಿತ್ಸೆ ನಿಮಿತ್ತರಾಗಿ ರೋಗವು ದೀರ್ಘಾವಧಿಯದಿದ್ದು, ಇಂತಹ ಕಾಯಿಲೆಯ ನಿವಾರಣೆಗೆ ಸಮಯ ತಗಲುವದುಸ್ವಾಭಾವಿಕವಾದರೂ ಅದು ಗುಣವಾಗಬಲ್ಲ ರೋಗವೆಂದೂ ಪರಿಸ್ಥಿತಿಯೀಗ ಪೂರ್ಣ ಹತೋಟಿಯಲ್ಲಿದೆಯೆಂದೂ ನುಡಿದಿದ್ದಾರೆ. ಪಾಕಿಸ್ತಾನ್ ರೇಡಿಯೋ ಜನ್ಮ ತಾಳಿದ ನಂತರ ಇದೇ ಪ್ರಥಮ ಬಾರಿಯಾಗಿ ಸಿಖ್ ನಾಯಕ ನೊಬ್ಬನ ಭಾಷಣವನ್ನು ಇದೇ ತಾ. 17ನೇ ರಾತ್ರಿ ಕರಾಚಿಯಿಂದ ಆದು ಪ್ರಸರಿಸಿತು. ಭಾರತದಿಂದ ಅಲ್ಲಿಗೆ ಹೋಗಿದ್ದ ಸೌಹಾರ್ದತಾ ಸಮಿತಿಯ ಸದಸ್ಯೆ ಸರ್ದಾರ್ ಮೋಹನ್ ಸಿಂಗ್ ಸಾವ್ನೆಯವರೂ ಕರಾಚಿ ಆಕಾಶವಾಣಿಯಿಂದ ಮಾತನಾಡುತ್ತಾ, ಕಳೆದ ಹನ್ನೊಂದು ದಿನಗಳಲ್ಲಿ ತಾವು ಎಲ್ಲಾ ವರ್ಗದ ಜನರೊಡನೆಯೂ ನಡೆಸಿದ ಮಾತುಕತೆಗಳ ಸ್ವಾನುಭವದ ಮೇಲಿಂದ ಪಾಕಿಸ್ತಾನವು ಢಿಲ್ಲೀ ಒಪ್ಪಂದವನ್ನು ಪಾಲಿಸುವ ದೃಢ ಸಂಕಲ್ಪ ಮಾಡಿದೆಯೆಂದು ತಮಗೆ ಸಂಪೂರ್ಣವಾಗಿದೆಯೆಂದು ಸಾರಿದರು. ಅಂತೂ ಭಾರತ-ಪಾಕಿಸ್ತಾನ್ ವೈಕ್ಲ್ಯೇ ಸಂಬಂಧವನ್ನು ಬಲಗೊಳಿಸುವ ಸರ್ವ ಪ್ರಯತ್ನಗಳೂ ಈಗ ಮನಃಪೂರ್ವಕವಾಗಿ ನಡೆಯುತ್ತಿರುವಂತೆ ಕಾಣುತ್ತಿದೆ.

ನೆಹರೂ ಸಂಚಾರ

ಇಂಡೋನೇಶಿಯದ ತನ್ನ ಜಯಶೀಲ ಪ್ರವಾಸಾನಂತರ ಪಂಡಿತ ನೆಹರುಗಳು ಸಿಂಗಾಪುರಕ್ಕೆ ಹೋಗಿದ್ದಾರೆ. ಇಂಡೋನೇಶಿಯದ ಜೋಗ್ಜಕಾರ್ತಾ ರಿಪಬ್ಲಿಕನ್ ಪಾರ್ಲಿಮೆಂಟ್ ಸಮಿತಿಯ ಮುಂದೆ ಅಗ್ನೇಯ ಆಸ್ಯಾದ ಸ್ಥಿತಿಗತಿಗಳನ್ನು ಮನಬಿಚ್ಚಿ ಚರ್ಚಿಸುತ್ತಾ "ಇದು ವಿಶೇಷ ರೀತಿಯ ಅಪಾಯ: ನೆಲೆಯಾಗಿದ್ದು, ಇಲ್ಲಿಯೇ ಮಹಾ ಘರ್ಷಣೆಗಳಾರಂಭಿಸಿ ಪ್ರಪಂಚ ವ್ಯಾಪಿಯಾಗಬಹುದು, ಇತ್ತೀಚೆಗೆ ಸ್ವಾತಂತ್ರ್ಯ ಗಳಿಸಿಕೊಂಡ ಅಗ್ನೇಯ ಆಸ್ಯಾದ ರಾಷ್ಟ್ರಗಳು ಈ ದಿಸೆ ಸಾಕಷ್ಟು ಬಲಶಾಲಿಯಾಗಿಲ್ಲದಿರಬಹುದು; ಜಾಗತಿಕ ಸ್ಥಿತಿಗತಿಗಳ ಮೇಲೆ ವರ್ಚಸ್ಸನ್ನು ಬೀರಲು ಅಶಕ್ತವಾಗಿರಬಹುದು. ಆದರೆ ನಾಳೆ ಅಥವಾ ಆ ಮರುದಿನವಿಂತಹ ಸ್ಥಾನವನ್ನು ಅವು ಗಳಿಸಿಕೊಳ್ಳುವುದಂತೂ ಖಂಡಿತ." ಎಂದರು. ಭಾರತದ ಕಮ್ಯೂನಿಸ್ಟ್ ಚಟುವಟಿಕೆಗಳನ್ನು ಸ್ವಸ್ಥಾಪಿಸುತ್ತಾ ಅವರು ಯಾವುದನ್ನೂ ನಿರ್ಮಿಸದೆ ಪ್ರತಿಯೊಂದನ್ನೂ ನಿರ್ಮೂಲಿಸುವವರೆಂದರು. ತತ್ವತಃ ಕಮ್ಯೂನಿಸಮಿಗೆ ತನ್ನ ವಿರೋಧವೇನೂ ಇಲ್ಲವಾದರೂ ಕಮ್ಯುನಿಸ್ಟರ ಸದ್ಯದ ಚಟುವಟಿಕೆಗಳು ಪ್ರತಿಕ್ರಾಂತಿಯಾಗಿದ್ದು, ಕ್ರಾಂತಿಯ ಮೂಲತತ್ವಗಳಿಗೆ ನೇರ ವಿರುದ್ಧವಿರುವ ಗಲಿಬಿಲಿ ವಾತಾವರಣವನ್ನು ನಿರ್ಮಿಸುತ್ತಿರುವರೆಂದು ಟೀಕಿಸಿದರು. ಜಾವಾದ ದರ್ಶನೀಯ ಸ್ಥಳಗಳಿಗೆಲ್ಲ ಭೇಟಿಕೊಟ್ಟರು. ಅಧ್ಯಕ್ಷ ಸೂಯಿಕರ್ನೋ ರೊಂದಿಗೆ, ಈಗಲೂ ಹಿಂಸೆ, ಗೊಂದಲ ವ್ಯಾಪಿಸಿಕೊಂಡು ನಿಯಂತ್ರಣಕ್ಕೆ ಬಾರದಿರುವ ಪೂರ್ವ ಜಾವಾದ ತೆತ್ತಂದಿ ಬಾಲಿ ದ್ವೀಪಕ್ಕೆ ಹಾರಿದರು.

(ಇನೇ ಸುಟ ನೋಡಿರಿ)

ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು-
ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!
ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ. 1-0-0

ಪ್ರತಿಗಳು ಅಂತರಂಗ ಕಾರ್ಯಾಲಯ, ಉಡುಪಿ,
ನವಯುಗ ಪ್ರೆಸ್, ಉಡುಪಿ, ಅಥವಾ ನವಭಾರತ
ಬುಕ್ ಡಿಪೊ, ಉಡುಪಿ. ಇಲ್ಲಿ ದೊರೆಯುತ್ತವೆ

THE
Canara Banking Corporation Ltd.
(Incorporated in India)
Estd: 1906
Head Office : UDIPI. (S. I.)

Capital Authorised .... Rs. 25·00,000
Capital Issued, Subscribed &
Paid up .... Rs. 20,00,000
Reserves .... Rs. 9,44,765

ಗುರುವಾರ ಉಡುಪಿ ೨೨-೬-೧೯೫೦

ಆಹಾರ ಸ್ಥಿತಿ

ಮದ್ರಾಸ್ ಸಂಸ್ಥಾನದಲ್ಲಿ ಈ ವರುಷ ಉಂಟಾಗಿರುವ ಅಕ್ಕಿಯ ಅಭಾವದ ದೆಸೆಯಿಂದ, ಪ್ರಕೃತ ಪ್ರಾಯಸ್ಥರಿಗೆ ಕೊಡಲ್ಪಡುತ್ತಿರುವ 8 ಔನ್ಸು ಅಕ್ಕೀ ಹಸಗೆಯನ್ನು 7 ಔನ್ಸಿಗೆ ಇಳಿಸುವುದಕ್ಕಾಗಿ ಒಬ್ಬ ಮದ್ರಾಸ್ ಸರಕಾರದ ಸೂಚನೆಯನ್ನು ಮದ್ರಾಸ್ ಸಂಸ್ಥಾನಿಕ ಆಹಾರ ಸಲಹಾ ಸಮಿತಿಯು ಅನುಮೋದಿಸಿದೆ. ಹೀಗೆ ಕಡಿಮೆ ಮಾಡುವ ಒಂದು ಔನ್ಸು ಅಕ್ಕಿಯ ಬದಲಿಗೆ ಇತರ ಧಾನ್ಯಗಳನ್ನು ಕೊಡಲಾಗುವುದು; ಕಾರ್ಡುದಾರರಿಗೆ ಬೊರೆಯುವ ಹಸುಗೆ ಪರಿಮಾಣವಂತೂ ಮೊದಲಿನಂತೆ 12 ಔನ್ಸೇ-ಅದರಲ್ಲಿ ಅಕ್ಕಿಯ ಅಂಶ ಒಂದಾನ್ಸಿನಷ್ಟು ಕಡಿಮೆಯಾಗಿ, ಅಷ್ಟಂಶ ಇತರ ಧಾನ್ಯ ಹೆಚ್ಚಿಗೆ ಬೊರೆಯುವುದು. ಜಿಲ್ಲೆಗಳಲ್ಲಿರುವ ಅಕ್ಕೀ ದಾಸ್ತಾನುಗಳಿಗನುಸಾರವಾಗಿ ಒಂದೋ ಇದೇ ಜೂನ್ 25ಕ್ಕೆ ಆರಂಭವಾಗುವ ವಾರದಿಂದ – ಇಲ್ಲವೇ ಆದರೊತ್ತಿನ, ಜುಲಾಯಿ ತಾ. 2ಕ್ಕೆ ಆರಂಭವಾಗುವ ವಾರದಿಂದ—ಆಯಾಯ ಜಿಲ್ಲೆಗಳಲ್ಲಿ ಈ ಹೊಸ ವಿಧಾನವು ಜಾರಿಗೆ ಬರಲಿದೆ.

'ಅಕ್ಕಿಯ ಅಂಶ ಇನ್ನೂ ಕಡಿಮೆಯಾಗಲಿದೆ!' ಎಂಬ ವಾರ್ತೆಯಿಂದ ಜನ ಸಾಮಾನ್ಯರು ಇಷ್ಟರಲ್ಲೇ ದಿಗಿಲು ಬಿದ್ದಿರುವುದು ಎಲ್ಲೆಲ್ಲೂ ಗೋಚರಕ್ಕೆ ಬರುತ್ತಿದೆ. ಆದರೆ ಹಿನ್ನೆಲೆಯನ್ನು ಮೀರಿತು, ಈ ದಿನ ಉಳಿದುಕೊಂಡಿರುವ ವರಿಸ್ಥಿತಿಯನ್ನಷ್ಟೇ ಗಮನಿಸಿದರೆ ನಿಯೋಜಿತ ಹಸಗೇ ತಿದ್ದುಪಡಿಯು ಅನಿವಾರ್ಯವೆಂಬುದನ್ನು ಒಪ್ಪಲೇಬೇಕು. ಕಳದ ವರುಷ ಆಂಧ್ರದ ಸರಕಾರ್ ಜಿಲ್ಲೆಗಳಲ್ಲಿದ್ದಿದ್ದ ಬರುಗಾಳಿಯು 3.32 ಲಕ್ಷ ಟನ್ನುಗಳಷ್ಟು ಅಕ್ಕಿ ಉತ್ಪನ್ನವಾಗುವ ಬೆಳೆಯನ್ನು ನಾಶ ಮಾಡಿದ್ದಿತೆಂದು ಅಂದಾಜು ಮಾಡಲಾಗಿದೆ. ಹೀಗೆ ಅನಾಹುತ ಪಟಲಾಗಿ ಹೋದ ಗಣ್ಯ ಅಂಶವನ್ನು ಬಿಟ್ಟರೆ, ಈ ವರುಷ ಆಗಿದ್ದ ಧಾನ್ಯ ಸಂಗ್ರಹವು ಕಳದ ವರುಷಕ್ಕಿಂತ ಹೆಚ್ಚಿಗಿದ್ದಿತು. ಆದರೂ ಸಂಸ್ಥಾನದ ಅಕ್ಕೀ ಪರಿಸ್ಥಿತಿಯು ಕಳದ ವರುಷಕ್ಕಿಂತ ಈ ವರುಷ ಹಾಳಾಗಿದೆ. 1949ನೇ ಮೇ 21ರಲ್ಲಿ 4,55,669 ಟನ್ನುಗಳಷ್ಟು ಅಕ್ಕಿಯು ಮದ್ರಾಸ್ ಸಂಸ್ಥಾನದಲ್ಲಿ ದಾಸ್ತಾನಿದ್ದರೆ 1950ನೇ ಮೇ 20ರಲ್ಲಿ 2,37,490 ಟನ್ನುಗಳಷ್ಟೇ ದಾಸ್ತಾನಿಳಿದ್ದಿತು. ಅಂತೂ ಈ ವರುಷ ಮೇ ತಿಂಗಳಿಂದ ದಶಂಬರಾಂತ್ಯದ ವರೆಗೆ-ಈಗಿರುವ ದಾಸ್ತಾನು, ಸಂಸ್ಥಾನದೊಳಗೆ ಇನ್ನು ಸಂಗ್ರಹಿಸಬಹುದಾದ ಧಾನ್ಯ, ಕೇಂದ್ರ ಸರಕಾರದಿಂದಾಗುವ ಸರಬರಾಯಿ, ಇವೆಲ್ಲಾ ಸೇರಿ ಒಟ್ಟಿಗೆ 10,84,000 ಟನ್ನುಗಳಷ್ಟು ಅಕ್ಕಿಸಂಗ್ರಹವಾಗಬಹುದಾದರೆ, ಇದೇ ಅವಧಿಯಲ್ಲಿ ಸಂಸ್ಥಾನದ ಒಟ್ಟು ವೆಚ್ಚಕ್ಕೆ 12,85,000 ಟನ್ನುಗಳಷ್ಟು ಅಕ್ಕಿ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ 10,84,000 ಟನ್ನುಗಳ ಆಯ 12,85,000 ಟನ್ನುಗಳ ವ್ಯಯವೆಂದರೆ ಬರುವ ದಶಂಬರದ ವರೆಗೆ ಮದ್ರಾಸ್ ಸಂಸ್ಥಾನದ ಜನರ ಊಟಕ್ಕೆ 2,01,000 ಟನ್ನುಗಳಷ್ಟು ಅಕ್ಕಿ ಕಡಿಮೆ ಬೀಳುತ್ತದೆಂದಾಯಿತು. ಹೆಚ್ಚು ಕಡಿಮೆ 2 ಲಕ್ಷ ಟನ್ನು ಅಕ್ಕಿಯನ್ನು ಹೇಗಾದರೂ ಹೆಚ್ಚಿಗೆ ಸಂಗ್ರಹಿಸಿಕೊಳ್ಳಲು ಸಾಧ್ಯವಾದರೆ ಮಾತ್ರ ಈ ಸಂಸ್ಥಾನದ 8 ಔನ್ಸು ಅಕ್ಕೀ ಹಸುಗೆಯನ್ನು ಊರ್ಜಿತದಲ್ಲಿಡಲು ಸಾಧ್ಯವಿದೆ. ಆದರೆ ಅಂತಹ ಅನುಕೂಲತೆ ಯಾವುದೂ ಸದ್ಯಕ್ಕೆ ಕಂಡು ಬರುವುದಿಲ್ಲ. ಪಾಲ್ಘಾಟ್ ದೊಳಗಡೆಯ ಸಂಗ್ರಹವನ್ನು ಹೆಚ್ಚಿಸಿ, ಆಥವಾ ಹೊರಗಿನಿಂದ ಅಧಿಕ ಅಮದು ಪಡಿಸಿಕೊಂಡು ಈ ಕೊರತೆಯನ್ನು ತುಂಬಿಸಿಕೊಳ್ಳಬಹುದಲ್ಲದೆ ಮೂರನೇ ಹಾದಿಯಿಲ್ಲ. ಬಳಗಡೆಯಲ್ಲಾಗಿರುವ ಸಂಗ್ರಹವು ಕಳೆದ ವರುಷಕ್ಕಿಂತಲೂ ಈ ವರುಷ ಸಮಾಧಾನಕರವಿದೆ; ಮಾತ್ರವಲ್ಲ, ಈಗಲೂ ಅಕೆಲಸವು ಭರದಿಂದ ನಡೆದಿರುವ ಆನ ಭವವು ಧಾನ್ಯೋತ್ಪಾದಕರಿಗಾಗುತ್ತಿದೆ. ಆದರೂ ಇನ್ನು 2 ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಸಂಸ್ಥಾನದೊಳಗಡೆಯಲ್ಲೇ ಕೂಡ ಹಾಕಬಹುದೆಂಬ ಅಶೆಗೆದೆಯಿಲ್ಲ; ಕೇಂದ್ರ ಸರಕಾರದಿಂದ ಹೆಚ್ಚು ಅಕ್ಕಿ ಬರಬಹುದೆಂಬ ಎರಡನೇ ಹಾದಿ ಕೂಡಾ ಸುಗಮವಾಗಿಲ್ಲ. ಮೂಲತಃ ಮದ್ರಾಸ್ ಸಂಸ್ಥಾನಕ್ಕೆ 300,000 ಟನ್ನುಗಳಷ್ಟೇ ಆಹಾರಧಾನ್ಯಗಳ ಪಾಲನ್ನು ವಿಂಗಡಿಸಿಟ್ಟಿದ್ದ. ಭಾರತ ಸರಕಾರವೀಗ, ಇಲ್ಲಿಯ ಪರಿಸ್ಥಿತಿಯನ್ನು ಲಕ್ಷ್ಯಿಸಿ ಪುನಃ 250,000 ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಹೆಚ್ಚಿಗೆ ರವಾನಿಸಲು ಸಂಕಲ್ಪಿಸಿದೆ. ಆದರೂ ಸಂಸ್ಥಾನದ 8 ಔನ್ಸು ಹಸುಗೆಯನ್ನು ಊರ್ಜಿತದಲ್ಲಿಡಲಾಗುವ್ವ ಅಕ್ಕೀ ಅಂಶವು ಆದರಲ್ಲಿರದೆ, ಕೊನೇ ಪಕ್ಷ 70,000 ಟನ್ನುಗಳಷ್ಟೇ ಅಕ್ಕಿ ಜೂನ್ ಪ. ಬರ್ಸಾದಿಂದ 1 ಲಕ್ಷ ಟನ್ ಕಡಿಮೆಯನ್ನು ಭರಿಸುಪಡಿಸಿಕೊಳ್ಳುವ ಸಂಬಂಧವಾಗಿ ಜಿಲ್ಲೆಯ ಸರಕಾರದೊಡನೆ ಭಾರತ ಸರಕಾರವು ಮಾತುಕತೆ ಹೂಡಿದೆಯೆಂದೂ, ಈ ಬಾರಿಯ ಸಂಚಾರದಲ್ಲಿ ಬಮಂತ್ರಿಗಳ್ಕ ಹೋಗಲಿರುವ ಪಂಡಿತ ನೆಹರುಗಳು ತಲ್ಲಿಯೇ ಈ ಸಂಬಂಧದ ತೀರ್ಮಾನ ಮಾಡಿ ಬರಬಹುದೆಂದೂ ಏನೇಗಾಗಲಿವೆಯೋದರೂ ಯಾವುದೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಒಂದೊಮ್ಮೆಗೆ ಬರ್ಮಾ ಅಕ್ಕಿ ಬಂದರೂ [ಬಂದುದೆಲ್ಲವೂ ಮದ್ರಾಸ್ ಸಂಸ್ಥಾನಕ್ಕೇನೇ ಮೀಸಲೆಂದು ನಿರೀಕ್ಷಿಸುವುದು ಅಸಾಧ್ಯ. ಹೀಗಾಗಿ ಪ್ರಕೃತ ಪರಿಸ್ಥಿತಿಗನುಗುಣವಾದ ಮುನ್ನ ವ್ಯವಸ್ಥೆಯು ಅವಶ್ಯಕತೆ ಬಿದ್ದಿತು– ಆ ಕ್ಕೇ ಹೆಸುಗೆಯಲ್ಲಿ 1 ಔನ್ಸು ಕಡಿಮೆ ಯಾಗುವುದು ಅನಿವಾರ್ಯವಾಯಿತು.

ಅಂತೂ ಪ್ರಚಲಿತ ನಿದ್ಯಮಾನಗಳ ನೇಪಲಿಂದ ಅನಿವಾರ್ಯವಾಗಿ ಈ ಬದಲಾವಣೆಗೆ ಬರಬೇಕಾಯಿತೆನ್ನುವಾಗಲೇ, ಸಕಾಲದಲ್ಲಿ ಪ್ರಯತ್ನಿಸುತ್ತಿದ್ದರೆ ಇಂತಹ ಸ್ಥಿತಿಯೆದಗದಂತೆ ನಿವಾರಿಸುವುದು ಅಸಾಧ್ಯವಿದ್ದಿತೇ ಎಂಬ ಪ್ರಶ್ನೆಯು ಸಹಜವಾಗಿ ಹುಟ್ಟುತ್ತಿದೆ ಬರುವ ವರ್ಷಾಂತ್ಯದೊಳಗೆ, ಹೊರಗಿನಿಂದ ಒಂದು ಕಾಳು ಧಾನ್ಯವನ್ನೂ ಆಮದು ಪಡಿಸಿಕೊಳ್ಳುವ ಅವಶ್ಯಕತೆ ಬೀಳದಂತೆ ರಾಷ್ಟ್ರವು ಆಹಾರ ಸ್ವಾವಲಂಬಿಯಾಗಬೇಕು ಎಂಬ ಶಪಥ ವಿರುವಾಗ, ಕಳದ ಒಂದೆರಡು ವರುಷಗಳಲ್ಲಿ ಕೆಲವೆಡೆ ಭತ್ತ ದೆಳೆಯುತ್ತಿದ್ದ ಕ್ಷೇತ್ರಗಳಲ್ಲೂ ಬೇರೆ ಬೆಳೆಗಳಾಗಿರುವ ಯದ್ವಾತದ್ವಾ ಸ್ಥಿತಿಯುಳಿದಿದೆ. ಬೆಲ್ಲ ಕ್ಕೆರುವ ಅತಿರೇಕ ಧಾರಣೆಯ ವ್ಯಾಮೋಹ ಕ್ಕೇಡಾಗಿ ದಕ್ಷಿಣ ಕನ್ನಡದ ಭತ್ತದ ಗದ್ದೆಗಳಲ್ಲೂ ಕಬ್ಬು ಸಾಗುವಳಿಯಾಗಿರುವ ಸಂಗತಿಯನ್ನು ಇಲ್ಲಿ ಪ್ರತ್ಯೇಕ ಪ್ರಸ್ತಾಪಿಸಬೇಕಾದಿಲ್ಲ. 'ಹೆಚ್ಚಿಚ್ಚು ಸ್ಥಳಗಳಲ್ಲಿ ಆಹಾರ ಧಾನ್ಯ ಬೆಳೆಯಬೇಕು' ಎಂದು ಪ್ರಚಾರಘೋಷಣೆ ಮಾಡುವುದೊಂದಲ್ಲದೆ, ಬೇರೆ ಸ್ಥಳಗಳಲ್ಲೂ ಧಾನ್ಯ ಸಾಗುವಳಿಯಾಗುವಂತೆ ಪ್ರತ್ಯಕ್ಷ ಪ್ರಯತ್ನಿಸುವ ಕೆಲಸವೇನಾ ಸರಕಾರೀ ಅಧಿಕಾರಿಗಳಿಗಿಲ್ಲವೇ—ಇದಕ್ಕೆಂತಲೂ ಹೆಚ್ಚಿನದಾಗಿ, ಕಾಯಂ ಭತ್ತ ಸಾಗುವಳಿಯಾಗುತ್ತಿದ್ದ ಗದ್ದೆಗಳನ್ನು ಅನ್ಯ ಧಾ ಉಪಯೋಗಿಸದಂತೆ ಪ್ರಬಂಧಿಸುವುದು ಸರಕಾರದ ಕರ್ತವ್ಯವಾಗಿರಲಿಲ್ಲವೆ? ಮುಂತಾದ ಪ್ರಶ್ನೆಗಳು ಈ ಸಂದರ್ಭದಲ್ಲಿ ಸಹಜವಾಗಿ ಹುಟ್ಟುತ್ತಿವೆ- ಕಳದ ವರುಷಗಳಲ್ಲಿ ಭತ್ತ ಸಾಗುವಳಿಯಾಗುತ್ತಿದ್ದ ಗದ್ದೆಗಳಲ್ಲಿ ಅನ್ಯ ಧಾನ್ಯ

ಜನತಾ ಸಮಿತಿಗಳಿಂದಾವ ಪರಿಣಾಮಕಾರೀ ಕಾರ್ಯಗಳೂ ಆಗಲಾರವೆಂಬುದು ಅನುಭವಸಿದ್ಧವಿದ್ದರೂ, ನಮ್ಮ ಸರಕಾರಗಳಿಗೆ ಹಿಡಿದಿರುವ ಸಮಿತೀ ನಿರ್ಮಾಣ ಭ್ರಾಂತಿ ಇನ್ನೂ ಬಿಟ್ಟಿಲ್ಲ.

ಸಾಮಾನ್ಯ ಜನರಲ್ಲಾದರೂ ಸರಿಯೇ —ಈಗ ಎಲ್ಲೆಲ್ಲೂ ಕೇಳಿಬರುತ್ತಿರುವ ರಾಜಕೀಯ ಚರ್ಚೆಗಳಲ್ಲಿ ವಿಷಯದ ಗಂಧಗಾಳಿಯಿರಲಿದವನು-ಕೂಡಾತಾನುಸರ್ವಜ್ಞನೆಂಬಂತೆ ತೋರಿಸಿಕೊಂಡು ಬಾಯಿ ಹಾಕಿಸುತ್ತಿರುವುದನ್ನು ಕಾಣಬಹುದು. ಇದೊಂದು ಕೃತಕ ಅಧ್ಯತಾ ಪ್ರದರ್ಶನದ ಸರ್ವಸಾಮಾನ್ಯ ಭ್ರಮೆಯಾಂಟುರೋಗ ಹೊರತು ಬೇರೇನೂ ಅಲ್ಲ.

ಒಂದಿಷ್ಟು ಪತ್ರಿಕಾ ವಾಚನಾಭಿರುಚಿಯಿದ್ದವನು, ಪತ್ರಿಕಾ ಸಂಪಾದಕನೋ ಪ್ರಕಾಶಕನೋ ಆಗಲು ಚಡಪಡಿಸುತ್ತಿರುವ ಸಿದರ್ಶನಗಳೀಗ ಎಲ್ಲೆಲ್ಲೂ ಕಂಡು ಬರುತ್ತಿವೆ ಇಂತಹ ಮನೋವೃತ್ತಿಯ ಸ್ವಾಭಾವಿಕ ಪ್ರತಿಫಲಗಳಾದ ಪತ್ರಿಕಾ ಅಪ್ರಬುದ್ಧತೆ, ಅಶ್ಲೀಲತೆ ಮತ್ತು ಅಪಮೃತ್ಯುಗಳುಂಟಾಗುತ್ತಿವೆ. ಪತ್ರಿಕಾ ಪ್ರತಿಭೆ, ಜ್ಞಾನ ಮತ್ತು ಕಾರ್ಯಿಸ್ಥಯಿಲ್ಲದೆ ಪತ್ರಿಕಾ ಲಾಲಸೆಯಷ್ಟೇ ಬೆಳೆದಿರುವುದರ ಪರಿಣಾಮವಿದು.

ಧನಾಢ್ಯರು, ವರ್ಚಸ್ಸುಳ್ಳವರು ಎಂಥವರೇ ಇದ್ದರೂ ಒಂದಲ್ಲೊಂದು ರೀತಿಯ ಸಕಾರಣ ಅಥವಾ ಅಕಾರಣ ಗೌರವಗಳನ್ನು ಜನತೆಯಿಂದ ಪಡೆಯುತ್ತಾರೆ. ಇಂತಹ ಸ್ಥಾನಮಾನಗಳ ವ್ಯಾಮೋಹವು ಸರ್ವಸಾಮಾನ್ಯವಾಗಿ ಎಲ್ಲರಲ್ಲೂ ಹೇಗೆ ಕುಂಬಿಕೊಂಡಿದೆಯೆಂಬುದಕ್ಕೆ, ವಸ್ತುತಃ ಇಂತಹ ಸ್ಥಿತಿಗೇರದವರು ಕೂಡಾ ಅದೇ ಮಾದರಿಯ ನಟನೆ ಮಾಡುತ್ತಿರುವುದೇ ನಿದರ್ಶನ.

ಮಂತ್ರಿ, ಅಸಹಕಾರ, ಆಸಕ್ತಿ, ಪ್ರತಿಭಟನೆ ಮುಂತಾದ ನೆನ್ನೆಯ ಯಾವುದೇ ಆಂದೋಲನವನ್ನಾದರೂ ಮೂಲತಃ ತೋಧಿಸಿ ನೋಡಿದರೆ, ಅಂತಹ ಆಂದೋಲನಗಾರರಲ್ಲಿ ಗುರಿಮುಟ್ಟಬೇಕೆಂಬ ಬಯಕೆಗಿಂತ ಹೆಚ್ಚಾಗಿ ತಾವೂ ಒಂದು ಆಂದೋಲನ ಹೂಡಿಬಿಟ್ಟೆವೆಂಬ ಹೆಗ್ಗಳಿಕೆಯೇ ತುಂಬಿಕೊಂಡಿರುತ್ತಿದೆ. ಇದೊಂದು ಗೊಂದಲಲಾಲಸೆ ಹೊರತು ಬೇರೇನಲ್ಲ.

ಅಧಿಕಾರಲಾಲಸೆ, ಕೀರ್ತಿಲಾಲಸೆಗಳಿಗಾಗಿ ಮತ್ತು ಸ್ವಾರ್ಥ ಲಾಲಸೆಯಿಂದ ನಮ್ಮ ಜನಜೀವನ ರಂಗದಲ್ಲಿ ಎಂತೆಂತಹ ಕೃತಕ ವೇಷಗಳು ಕಾಣಿದಾಡುತ್ತಿವೆ ಎಂಬುದನ್ನು ಲೆಕ್ಕಿಸುವುದೇ ಅಸಾಧ್ಯ-

ಒಪ್ಪಕ್ಕ ಬೆಲೆಕೊಡುವ ಬದಲು ತಿರುಚನ್ನು ಗೌರವಿಸುವ—ಕೃತಕ ಬೊಜ್ಜು ಬೆಳೆಯಿಸಿಕೊಳ್ಳುವ್ಯದರ ಬದಲಿಗೆ ಸ್ವಾಭಾವಿಕ ಪುಷ್ಟಿಹೊಂದುವ—ಮನೋವೃತ್ತಿಯು ಜನರಲ್ಲಿ ಮೂಡಬೇಕಾಗಿದೆ.

(ಇನೇ ಪುಟದಿಂದ ಮುಂದುವರಿದುದು)

ಬಾಲಿದ್ವೀಪವನ್ನು ಡಾ। ಸೋಯಿಕರ್ಣೋರ ಕಾಲ- ಆಚಾರವಂತೆ ಬ್ರಾಹ್ಮಣ ವಂಶಜ ಮಹಿಳೆ—ಹುಟ್ಟಿದ ಊರು. ಸೋಯಿಕರ್ಣೋರೊಂದಿಗೆ ಆಗಮಿಸಿದ್ದ ಪಂಡಿತ ನೆಹರುಗಳಿಗೆ ಅಲ್ಲಿ ದೊರೆತ ಸ್ವಾಗತವು ಆತ್ಯಾಕರ್ಷಣೀಯ ಮತ್ತು ಮಹಾಸಂಭ್ರಮದ್ದಿದ್ದಿತು. ನೆಹರು ಸೋಯಿಕರ್ಣೋರು ಜತೆಯಾಗಿ ಒಂದು ದಿನ ಪ್ರಾತಃಕಾಲದಿಂದ ಸಂಜೆಯ ವರೆಗೂ ಅಲ್ಲಿಯ ಕಂಬಳಿಯಿಂದ ಕಂಬಳಿಗೆ ಸಂಚರಿಸಿ, ಸ್ಥಳ ಸಂದರ್ಶನ ಮಾಡಿದರು. ಅಲ್ಲಲ್ಲಿ ಡಾ. ಸೋಯಿಕರ್ಣೋರ ಭಾಷಣವಿದ್ದಿತು. ಇನ್ನೂ ಸರಿಯಾಗಿ ನಿಯಂತ್ರಣಕ್ಕೆ ಬಾರದ ಬಾಲೀ ಜನತೆಯ ಮನಸ್ಸೊಲಿಸಿಕೊಳ್ಳಲು ನೆಹರೂ ಭೇಟಿಯು ಈ ಸುಸಂದರ್ಭವನ್ನು ಡಾ. ಸೋಯಿಕರ್ಣೋರು ಉಪಯೋಗಿಸಿಕೊಂಡರು. ಮಿಲಿಯಾವಧಿ ಜನತೆಯು ಪಂಡಿತ ನೆಹರುಗಳ ಭೇಟಿ ಪಡೆದು ಪ್ರದರ್ಶಿಸಿದ್ದ ವಿಶ್ವಾಸ ಗೌರವಗಳು ಹೃದಯ ಸ್ಪರ್ಶಿಯಿದ್ದುವು. ಬೌತಣ ಕೂಟ, ಬಾಲೀಯ ವಿಶಿಷ್ಟ ನರ್ತನ ಪ್ರದರ್ಶನ, ಇತ್ಯಾದಿ ಸಂಭ್ರಮಗಳೂ ಪಂಡಿತಜೀಗಾಗಿ ಆಲ್ಲಿದ್ದುವು. ಇಂಡೋನೇಶಿಯದ ಸ್ವಾತಂತ್ರ್ಯಕ್ಕೆ ಸಹಾಯವಾಗಿ ಭಾರತವು ಮಾಡಿದ್ದ ಪ್ರಯತ್ನಗಳಿಗಾಗಿ ಕೃತಜ್ಞತಾ ಸೂಚನೆಯೆಂದೆ. ಬಾಲೀದ್ವೀಪದ ಕೆಲವು ನರುಗಳು ಪಂಡಿತ ನೆಹರುಗಳಿಗೆ ಒಂದು ಸುವರ್ಣ ಖಡ್ಗವನ್ನು ಅರ್ಪಿಸಿದ್ದರು; ನೆಹರೂ ಪುತ್ರಿ ಇಂದಿರಾ ಗಾಂಧಿ ಮತ್ತು ಸೋಯಿಕರ್ಣೋರ ಸಹಧರ್ಮಿಣಿಗೆ ಭಂಗಾರದ ಬಳೆಗಳನ್ನು ವರು .ಉಡುಗೆರೆಯಿತ್ತಿದ್ದರು ಹಿಂದೂ ದೇವದೇವಿಯರ ವಿಗ್ರಹಗಳ ಪ್ರಚಂಡ ಮೆರವಣಿಗೆಯೊಡನೆ ಈ ಸಮಾರಂಭವಾರಂಭಿಸಿದ್ದಿತು. ಜ್ವಾಲಾಮುಖಿ ಪರ್ವತಗಳು, ಹಿಂದೂ ದೇವಾಲಯ, ಹಿಂದೂ ಸಂಸ್ಕೃತಿ ಚಿಹ್ನೆಗಳುಳಿದಿರವ ನೆಲೆಗಳು ಮುಂತಾದ ದರ್ಶನೀಯ ಸ್ಥಳಗಳೆಲ್ಲವನ್ನೂ ಪಂಡಿತ ನೆಹರು ಸಂದರ್ಶಿಸಿದ್ದರು.

ಅಂತೂ ಇಂಡೋನೇಶಿಯದ ಹತ್ತು ದಿನಗಳ ಸಂಚಾರ ಕಾರ್ಯಕ್ರಮವನ್ನು ಪಂಡಿತ ನೆಹರುಗಳು ಅತ್ಯಂತ ಜಯಶೀಲವಾಗಿ, ಚರಿತ್ರಾರ್ಹ ಆಕರ್ಷಣೆಗೊಡನೆ ನೆರವೇರಿಸಿಕೊಂಡರು ಅಧ್ಯಕ್ಷೆ ಸೋಯಿಕರ್ಣೋರು ಈ ಹತ್ತು ದಿನಗಳಲ್ಲೂ ಪಂಡಿತಜಿಯ ಜತೆಯಲ್ಲೇ ಇದ್ದು, ಪ್ರತಿಯೊಂದು ಸಂದರ್ಭದಲ್ಲೂ ಇಬ್ಬರು ನಾಯಕರು ಏಕಕಂಠದಿಂದಲೇ ಮಾತಾಡಿದ್ದರು. ಜಾವದ ನೆಹರುವನ್ನು ಕಂಡು ಭಾರತ ಮತ್ತು ಇಂಡೋನೇಶಿಯಗಳೊಳಗೆ ಸೇನಾ ಒಪ್ಪಂದವಾಗುವ ದೆಂಬ ವಾರ್ತೆಯನ್ನು ಕೂಡಾ ಕೆಲವರು ಹುಟ್ಟಿಸಿದ್ದರೂ ಪಂಡಿತ ನೆಹರುಗಳು ಅದನ್ನು ನಿರಾಕರಿಸಿದ್ದಾರೆ. ವ್ಯಾಪಾರ ಒಪ್ಪಂದವು ಸಂಭವನೀಯವೆಂದು ತಿಳಿಸಿದ್ದಾರೆ.

ನೆಹರು ಸಿಂಗಾಪುರದಲ್ಲಿ

ಇಂಡೋನೇಶಿಯದ ಸಂಚಾರವನ್ನು ಮುಗಿಸಿಕೊಂಡು ಪಂಡಿತ ಜವಾಹರಲಾಲ ನೆಹರುಗಳು ಇವೇ ತಾ. 17ರಲ್ಲಿ ಸಿಂಗಾಪುರಕ್ಕೆ ಬಂದಿಳಿಯುವಾಗ ಆಗ್ನೇಯ ಆಸ್ಯಾದ ಬ್ರಿಟಿಷ್ ಕಮಿಶನರ್ ಜನರಲ್ ಮಾಲ್ಕೊಮ್ ಮೆಕ್ಡೊನಾಲ್ಡರು ಮಂತ್ರಿತರ ಪ್ರಮುಖರೆಲ್ಲರೂ ಸ್ವಾಗತಕ್ಕೆ ಅಲ್ಲಿ ನೆರೆದಿರುತ್ತಾರೆ. ವಿಮಾನ ನಿಲ್ದಾಣದಲ್ಲಿ ಸಂಭ್ರಮದ ಸ್ವಾಗತ ಪಡೆದು ಸಿಂಗಾಪುರ ನಗರಕ್ಕೆ ಮೆರವಣಿಗೆ ಪ್ರಯಾಣ ಬೆಳೆಸಿ, ಅಲ್ಲಿ ಪತ್ರಿಕಾ ಪ್ರತಿನಿಧಿಗಳ ಮುಂದೆ ಆಗ್ನೇಯ ಆಸ್ಯಾ ಮತ್ತು ಜಾಗತಿಕ ಸ್ಥಿತಿಗತಿಗಳ ಕುರಿತು ಮನನೀಯ ಅಭಿಪ್ರಾಯಗಳನ್ನು ಮುಂದಿಟ್ಟರು. ಚಾರಿತ್ರಿಕವಾಗಿ ಇಪ್ಪತ್ತರಲ್ಲೇ ನಮ್ಮ ದೇಗಿರುವ ವಸಾಹತು ಸದ್ಧತಿಯು ವಸ್ತುತಃ ಈಗ ಒಣಗುತ್ತಿದೆಯೆಂದರು. 'ಭಾರತೀಯ ಕ್ಲಬ್ ಭವನ' ಆಗ್ನೇಯಾ ಆಸ್ಯಾದಲ್ಲಿ ಇದೇ ಪ್ರಥಮವಾದ್ದಾದ 'ಗಾಂಧೀ ಸ್ಮಾರಕ ಭವನ' 'ಸಿಂಗಾಪುರ ಭಾರತೀಯ ಸಂಘ' ಮುಂತಾದುವುಗಳಿಗೆ ಕೆಲರು ಕಲ್ಲನ್ನು ಹಾಕುವ ಕೆಲಸವು ಪಂಡಿತ ನೆಹರುಗಳಿಗೆ ಸಿಂಗಾಪುರದಲ್ಲಿದ್ದಿತ್ತು. ಇವೆಲ್ಲಾ ಸಂದರ್ಭಗಳಲ್ಲೂ ಪಂಡಿತಜೀ ವಿಚಾರಗರ್ಭಿತ ಮಾತುಗಳನ್ನಾಡಿದ್ದರು. "ಚೈನೀಯರು ಶಾಲೆಗಳನ್ನು, ಆಟದ ಬಯಲುಗಳನ್ನು ಮತ್ತು ಕ್ಲಬ್ಬುಗಳನ್ನು ರಚಿಸಿದ್ದರು; ಭಾರತೀಯರು ಅಂತಹದಾವುದನ್ನೂ ಮಾಡಿಲ್ಲ" ಎಂದು ಒಂದೆಡೆ ವಿನೋದ ಪೂರ್ವಕ ತನ್ನ ಜನರನ್ನೇ ಪಂಡಿತಜೀ ಟೀಕಿಸಿದ್ದರು. ಸಿಂಗಾಪುರದ ಚಾಂತ್ರೆಯಲ್ಲೇ ಪ್ರಥಮವಾದ್ದಾದ 'ರಾಜ್ಯ ಸಭಾ'ವು ನೆಹರುಗಳಿಗಲ್ಲಿ ದೊರೆತಿದ್ದಿತು. ಈ ಸಂದರ್ಭದಲ್ಲಿ ಸಿಂಗಾಪುರದ ಗವರ್ನರರು 'ಜಾಗತಿಕ ಮಟ್ಟದ ನಾಯಕ, ನವೀನ ಆಸ್ಯಾದ ನಾಯಕ' ಎಂದು ಪಂಡಿತ ಜವಾಹರಿರಲಾಲರನ್ನು ಕೊಂಡಾಡಿದ್ದರು. 'ಭಾರತೀಯ ಸಂಘ'ದ ಕೆಸರು ಕಲ್ಲು ಹಾಕುವ ಸಂದರ್ಭದಲ್ಲಿ ಬ್ರಿಟಿಷ್ ಕಮಿಶನರ್ ಜನರಲ್ ಮೆಕ್ಡೊನಾಲ್ಡರು ಪಂಡಿತ ನೆಹರುಗಳ ನಾಯಕತ್ವವನ್ನು ಮುಕ್ತಕಂಠದಿಂದ ಶ್ಲಾಘಿಸುತ್ತಾ "ಇಪ್ಪತ್ತನೇ ಶತಮಾನದ ನಿರ್ಮಾಪಕ ಮಹಾನಾಯಕರಲ್ಲಿ ಇವರೊಬ್ಬರು" ಅಂದಿದ್ದರು. "ಆಸ್ಯಾದ ಅಗಾಧ ರಾಜಕೀಯ ಸ್ವಾತಂತ್ರ್ಯದ ವಿಶಿಷ್ಟ ಪ್ರತಿ ಮೂರ್ತಿ; ಭಾರತ ಸ್ವಾತಂತ್ರ್ಯ ಶಿಲ್ಪಿಗಳಲ್ಲೊಬ್ಬ ಮತ್ತು ಆಸ್ಯಾದ ಇತರ ರಾಷ್ಟ್ರಗಳ ಸ್ವಾತಂತ್ರ್ಯ ನಿರ್ಮಾಣಕ್ಕೂ ಸಹಾಯ ನಲ್ಲಿಸಿದವನು; ಆದರೂ ವಿಶಾಲ ಹೃದಯ, ವಿಸ್ತೃತ ಧೋರಣೆಯ ಲೋಕ ನಾಗರಿಕ" ಎಂದು ಮೆಕ್ಡೊನಾಲ್ಡರು ಪಂಡಿತ ಜೀಯನ್ನು ವರ್ಣಿಸಿದ್ದರು. ಆಸ್ಯಾವು ಅನ್ಯಾಕ್ರಮಣಕ್ಕೆಂದಿಗೂ ಮನಸ್ಸುಮಾಡಲಾರದೆಂದೂ, ವಸಾಹತುತನದ ನಿರ್ಮೂಲನವೊಂದೇ ಆದರ ಪ್ರಯತ್ನವೆಂದೂ, ಜಾಗತಿಕ ಶಕ್ತಿಯಾಗಿ ಆಸ್ಯವು ತಲೆಯೆತ್ತಿದುದೇ ಈ ಶತಮಾನದ ಮಹಾಘಟನೆಯೆಂದೂ ಪಂಡಿತ ನೆಹರು ವರ್ಣಿಸಿದ್ದರು. ಸಿಂಗಾಪುರದಲ್ಲಿ ಅದುವರೆಗೆ ಸೇರಿದ್ದ ಸಭೆಗಳ ಪೈಕಿ ದೊಡ್ಡದೆನ್ನಬಹುದಾದ 50000 ಜನರ ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತಾ ಪಂಡಿತ ಜವಾಹರಲಾಲರು, ಮಲಯದ ಭೀತ್ಯುತ್ಪಾದಕ ಚಳವಳಗಾರರ ಕೃತ್ಯಗಳು ಅಸಹ್ಯ, ಅಮಾನುಷವೆಂದು ಟೀಕಿಸಿ, ಭಾರತದ ಸ್ವಾತಂತ್ರ್ಯ ಚಳವಳಿಗಳ ಪರಿಚಯ ಮಾಡಿಕೊಟ್ಟರು. ಗಾಂಧಿಜೀ ಕಲಿಸಿದ್ದ ವಾಕ್ಯಗಳನ್ನು ಒತ್ತಿ ಹೇಳಿ, ಈ ದಿನ ಜಗತ್ತಿನ ಉದ್ಧಾರಕ್ಕೆ ಗಾಂಧೀ ತತ್ವವೊಂದೇ ಹಾದಿಯೆಂದರು.

ಮುಂಬಯಿ ಸ್ಫೋಟನೆಗಳು

ಭಾರತ ಪಾಕಿಸ್ತಾನಗಳೊಳಗಿನ ಮೈತ್ರೀ ಪ್ರಗತಿಗಾಗಿ ಪಾಕಿಸ್ತಾನ್ ಮುಸ್ಲಿಂ ಲೀಗು ಮತ್ತು ಫಿರ್ ಬನಾವೊ ಸಮಿತಿಯ ಆಶ್ರಯದಲ್ಲಿ ಬರುವ ಆಗೋಸ್ತು ತಿಂಗಳಲ್ಲಿ ಕರಾಚಿಯಲ್ಲೊಂದು ಭಾರತ-ಪಾಕಿಸ್ತಾನ್ ಅನಧಿಕಾರೀ ಮಹಾ ಸಮ್ಮೇಳನ ಸೇರುವ ದೆಂದು ತಿಳಿದು ಬರುತ್ತದೆ.

ದಕ್ಷಿಣಾಫ್ರಿಕವು ತನ್ನ ವರ್ಣದ್ವೇಷ ಧೋರಣೆಯನ್ನು ಬದಲಾಯಿಸಿ, ಶ್ವೇತ ವರ್ಣೇಯರಲ್ಲದ ಜನರಿಗೆ ಮಾಡಿರುವ ಅನ್ಯಾಯಗಳನ್ನು ತಿದ್ದಿಕೊಳ್ಳದಿದ್ದರೆ, ಅದನ್ನು ಕಾಮನ್ವೆಲ್ತ್ ಕೂಟದಿಂದಲೇ ಹೊರ ಹಾಕಬೇಕೆಂದು ಟ್ರಾನ್ಸ್ ವಾಲಿನ ಭಾರತೀಯ ಕಾಂಗ್ರೆಸಿನ ಕಾರ್ಯಕಾರೀ ಸಮಿತಿಯು ಎಲ್ಲಾ ಕಾಮನ್ವೆಲ್ತ್ ರಾಷ್ಟ್ರಗಳ ಪ್ರಧಾನಿಗಳಿಗೆ 'ಕೇಬ್ಲ್' ಮಾಡಿದೆ.

ಶೇಕ್ ಅಬ್ದುಲ್ಲರು ಕಾಶ್ಮೀರ ವಿಭಜನೆಗೆ ಸ್ವತ್ಯ ವಿರೋಧವನ್ನು ಈ ಮೊದಲೇ ಹಲವು ಬಾರಿ ವ್ಯಕ್ತಪಡಿಸಿದರು. ಬರಮುಲ್ಲಾದ ದೊಡ್ಡ ಸಾರ್ವಜನಿಕ ಸಭೆಯೊಂದರಲ್ಲಿ ಮಾತಾಡುತ್ತಾ ಕಾಶ್ಮೀರದ ರಿವನ್ಯೂಮಂತ್ರಿ ಮಿರ್ಝಾ ಮಹಮ್ಮದರು ಅದನ್ನೇ ಪುನಃ ಒತ್ತಿ ಹೇಳಿದ್ದಾರೆ- "ಕಾಶ್ಮೀರವು ಬಾಳಬೇಕೋ —ಅದು ಇಂದಿನ ಏಕಾಕಾರದಲ್ಲೇ ಇರಬೇಕು" ಎಂದವರು ಸ್ಪಷ್ಟಪಡಿಸಿದ್ದಾರೆ.

ಮುಂಬರುವ ಮಹಾ ಚುನಾವಣೆಗಳಿಗಾಗಿ ಮತದಾರ ಕ್ಷೇತ್ರಗಳ ಸರಹದ್ದು ಪುನರ್ನಿರ್ಮಾಣ ಕಾರ್ಯದ ವ್ಯವಸ್ಥೆಗಳಾಗ ನಡೆದಿವೆ. ಈ ಕಾರ್ಯದಲ್ಲಿ ಚುನಾವಣಾ ಕಮಿಶನರರೊಂದಿಗೆ ಸಹಕರಿಸುವುದಕ್ಕಾಗಿ ಪ್ರತಿಯೊಂದು ಸಂಸ್ಥಾನಗಳಲ್ಲೂ ಕ್ಷೇತ್ರ ಪುನರ್ರಚನಾ ಕಮಿಟಿಗಳು ರಚನೆ ಹೊಂದುವವು. ಚುನಾವಣಾ ಕಮಿಶನರು ಪ್ರತಿಯೊಂದು ಸಂಸ್ಥಾನದ ರಾಜಧಾನಿಗೂ ಭೇಟಿ ಕೊಡಲಿರುವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು 18—6—1950ರಿಂದ

ಶ್ರೀ ಕನ್ನಯಿನ್ ಕಾದಲ್ ಶ್ರೀ

ಅಂಜಲಿದೇವಿ, ಮಾಧುರಿ, ಲಲಿತಶಕ್ತಿನಿ, ಪುಳಿಮೂಟೆ ಮೊದಲಾದವರು.

ಬರುವ ಚಿತ್ರ: ಆಗ್

ನರ್ಗಿಸ್, ರಾಜಕಪೂರ್, ಮೊದಲಾದವರು.

ನಿರೀಕ್ಷಿಸಿರಿ:— ಶಮಾ, ದಾನಿ ಅಪರಂಜಿ, ರಾಮರಾಜ್ಯ.

ಜಿಲ್ಲಾ ಸಮಾಚಾರ

ಹೊಸ ಟಪ್ಪಾಲು ಕಟ್ಟೆಗಳು: ಕಾಸರಗೋಡು ತಾಲೂಕಿನ ತೆಕ್ಕೆಯಿಯಲ್ಲಿ, ಕುಂದಾಪುರ ತಾಲೂಕಿನ ನಾಡಗ್ರಾಮದಲ್ಲಿ ಮಂಗಳೂರು ತಾಲೂಕಿನ ಕುತ್ತೆತ್ತೂರು ಗ್ರಾಮದಲ್ಲಿ ಬ್ರಾಂಚ್ ಪೋಸ್ಟಾಫೀಸುಗಳು ತೆರೆಯಲ್ಪಟ್ಟವೆ.

ಕಡಂದಲೆ: ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯು ಎಂಟನೆ ದರ್ಜೆಯ ಸರಕಾರಿ ಪರೀಕ್ಷೆಗೆ ಕುಳಿತ ಹತ್ತು ಮಂದಿ ವಿದ್ಯಾರ್ಥಿಗಳು ಇಂಗ್ಲಿಷ್ ಸನ್ನೇತ ತೇರ್ಗಡೆ ಹೊಂದಿರುವರು

ಬೈಂದೂರು: ಇಲ್ಲಿ ಭತ್ತದ ಪೈರಿಗೆ ನವಟೆ [ಬಕಳುಳ] ಬಿದ್ದು ಶೀರೂರು, ಯೆಡ್ತರೆ, ಬೈಂದೂರು, ಅಜಕಾರು, ಪಡುವರಿ ಗ್ರಾಮಗಳ ರೈತರ ಗೋಳು ಹೇಳ ತೀರದೆಂದೂ ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರರು 'ಸ್ಪೈರ್' ಪ್ರಯೋಗವನ್ನು ಮಾಡುತ್ತಿದ್ದಾಗ್ಗೂ ಪ್ರಯೋಜನವೇನೂ ಕಂಡು ಬರುವುದಿಲ್ಲವೆಂದೂ ಒರ್ವ ಬಾಕ್ತಿದಾರರು ತಿಳಿಸುತ್ತಾರೆ.

ಚೇರ್ಕಾಡಿ: ಇಲ್ಲಿಯ ಆರ್. ಕೆ. ಪಾಟ್ಕರ್ ಶಾರದಾ ಹಾ. ಎ ಶಾಲೆಯಿಂದ ಸರಕಾರಿ ಪರೀಕ್ಷೆಗೆ ಕುಳಿತ ಹದಿಮೂರು ಮಂದಿಯೂ ಪಾಸಾಗಿರುತ್ತಾರೆ.

ಕೂಡ್ಲಮೊಗರು: ಸ್ಥಳೀಯ ಶ್ರೀ ವಾಣೀ ವಿಜಯ ಹಾಯರ್ ಎಲಿಮೆಂಟರಿ ಶಾಲೆಯಿಂದ ಸರಕಾರಿ ಪರೀಕ್ಷೆಗೆ ಕುಳಿತ 23 ಮಂದಿಯೂ ತೇರ್ಗಡೆ ಹೊಂದಿರುತ್ತಾರೆ. ಈ ಪೈಕಿ 16 ಮಂದಿ ಇಂಗ್ಲಿಷಿನಲ್ಲಿಯೂ ಪರೀಕ್ಷೆ ಕೊಟ್ಟಿರುವರು.

ಕುಂಬಳೆ, ತಾ. 15, 16ನೇ ತಾರೀಕು ಕುಗಳಲ್ಲಿ ಮುಗು, ಬಾಡೂರು, ಕುಡಾಲ್ ಮೇಕ್ಕಳ ಎಂಬೀ ಕಡೆಗಳಲ್ಲಿ ಹೊಸ ಬ್ರಾಂಚ್ ಪೋಸ್ಟಾಫೀಸುಗಳನ್ನು ತೆರೆಯಲಾಗಿದೆ.

ಇಲ್ಲಿನ ತಾಲೂ ರೇಂಜಿಗೆ ಸೇರಿದ ಶಾಲೆಗಳನ್ನು ಕಾಸರಗೋಡು ನೋರ್ತು ರೇಂಜಿಗೆ ಸೇರಿಸಿ, ಮಂಜೇಶ್ವರದಲ್ಲಿ ಹೊಸ ರೇಂಜಾಗಿ ಇನ್ಲಿಂದವರ್ಗವಾಗಿಹೋಗುವ ತಾಲೂ ಡಿಪ್ಪಿಇನ್‌ಸ್ಪೆಕ್ಟರ್ ಶ್ರೀ-ತಿಮರಾಮಗೌಡರವರನ್ನೂ ಆಮಂ ತಿಬಂದಿಯನ್ನೂ ಗೌರವಿಸುವುದಕ್ಕಾಗಿ ತಾ. 17ರಂದು ಇಲ್ಲಿನ ಕೇಂದ್ರದ ಉಪಾಧ್ಯಾಯರುಗಳು ಫಿರ್ಕಾ ಗೆವಲಪ್‌ಮೆಂಟ್ ಆಫೀಸರ್ ಶ್ರೀ ಬಾಬುವೆಟ್ಟಿರ ಅಧ್ಯಕ್ಷತೆಯಲ್ಲಿ ಸಭೆಯೂ ಸತ್ಕಾರಪೂ ನಡೆಸಲಾಗಿದೆ. ಸಭೆ ಸಮಯ ಶ್ರೀಯುವರಾದ ರಾಮಕೃಷ್ಣ ರಾಟ್, ಶಿವರಾಮಲಾಲ್, ದೇವಪ್ಪ ಅಲ್ವ, ಎನ್. ಅಬ್ದುಲ್ಲಿ, ಪಿ ಎ ಮಮ್ಮುಂಞಿ, ಶಾಂತ ಆಳ್ವ, ಅಣ್ಣಯ್ಯ ಶೆಟ್ಟಿ, ಶಂಕರಭಟ್ಟರು ಕೂಡಾ ಮಾತನಾಡಿದರು. ಶ್ರೀ ಗೌಡರು ಸಮಂಜಿತವಾದ ಉತ್ತರವನ್ನಿತ್ತರು

ಹೊಲ್ಯ ಬಿಲ್ಲವ ಸೇವಾ ಸಂಘದಿಂದ ಎಂದಿನಂತೆ ಬಿಲ್ಲವ ಜಾತಿಯ ಬಡ ಮಕ್ಕಳಿಗೆ ವಿದ್ಯಾರ್ಥಿ-ವೇತನ ಕೊಡಲಾಗುವುದು

ವಿದ್ಯಾರ್ಥಿ ವೇತನವನ್ನು ಬಯಸುವ ಮಕ್ಕಳು ತಮ್ಮ ಮುಖ್ಯೋಪಾಧ್ಯಾಯರ ಸಿಫಾರಸು ಪತ್ರದೊಂದಿಗೆ ಈ ಸಂಘದ ಗೌ. ಕಾರ್ಯದರ್ಶಿಯವರಿಗೆ ಜನವರಿ ತಿಂಗಳ ಅಂತ್ಯದೊಳಗೆ ಅರ್ಜಿ ಬರಕೊಳ್ಳುವುದು.

ಶಿವ ಮಟ್ಟಾರು: ಶಿವ ಗ್ರಾಮದ ಬದಕರೆಗಳಾದ ನುಚ್ಚೂರು, ಹೂಣಿಬೆಟ್ಟು, ಟೊಳಿಂಜಲೆ, ಕಡಲಬು ಇತ್ಯಾದಿ ಕರೆಗಳ ಪ್ರಯೋಜನಾರ್ಥವಾಗಿ ಮಟ್ಟಾರಿನಲ್ಲಿ 'ಮಟ್ಟಾರು' (Mattar) ಎಂಬ ಹೆಸರಿನ ಟಪ್ಪಾಲು ಕಟ್ಟೆಯೊಂದನ್ನು ಉಡ್ಪಿ ಸರ್ಕಲಿನ ಪೋಸ್ಟಲ್ ಇನ್ಸ್‌ಪೆಕ್ಟರರು ತಾ. 14-6-50ರಲ್ಲು ತೆರೆದಿರುವರು. ಈ ಕರೆಯ ಊರ ಮತ್ತು ಪರ ಊರ ಬಳ್ಳಿರುವ ಎಲ್ಲಾ ಜನರು "Mattar" ಎಂಬ ಪೋಸ್ಟನ್ನು ಮುಂದಕ್ಕೆ ಬರಿಯಬೇಕಾಗಿ ಇಲ್ಲಿಯ ಬ್ರಾಂಚ್ ಪೋಸ್ಟ್ ಮಾಸ್ಟರ್ ತಿಳಿಸುತ್ತಾರೆ.

ಬೈಂದೂರು: ಇಸ್ಪೆ ಫೋಲಿಕ್ಟರ್ ಆಗಿದ್ದ ಶ್ರೀ ಯು ಮುನಿಯಪ್ಪನವರಿಗೆ ತಾ ಹುಣಸೋಡು ತಾಲೂಕಿನ ಪರಿಷತ್ತಿನ ಸದಸ್ಯರೂ, ಇಲ್ಲಿಯ ಪ್ರಜೆಗಳಿಂದ ಸಾರ್ವಭೌಮಯಾಧಿಕಾರಿ ಶ್ರೀ ಎಸ್ ನಾರಾಯಣ ಶೆಟ್ಟಿಗಾರ್ ಹೊಸಕೆರೆ ತಾಲೂಕಿನಲ್ಲಿ ಜಿಲ್ಲಾ ಬೋರ್ಡಿನವರಿಂದ ಹೊಸತಾಗಿ ಕ್ರಿಯೆಯಲ್ಪಟ್ಟ ಸುಳ್ಳ ಬೋಸ್ಟಾಫೀಸಿಗೂ ವರ್ಗವಾಗಿರುತ್ತೆ. ಇವರ ಪ್ರೀತರಾಗಿ ಒಂಬತ್ತು ನಾಗರಿಕ ಈ ಇಬ್ಬರು ಮಹನೀಯರ ಗೌರವಾರ್ಥವಾಗಿ ತಾರೀಕು 18 6 50ರಲ್ಲು ಬೈಂದೂರು ಕ್ಲಬ್ಬಿನವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿ ಅಭಿತಗಳ ಗುಣಕಥನಮಾಡಿ, ಲಘು ಉಪಹಾರದೊಂದಿಗೆ ಬೀಳ್ಕೊಟ್ಟರು.

ಕೊರಂಗ್ರಪಾಡಿ-ಇಲ್ಲಿ ಈ ವಲಯದ ಗ್ರಾಮಸ್ವರಾಜ್ಯ ಕಾರ್ಯಕರ್ತರ ತಾ 3-6-50 ರಲ್ಲಿ ಬ್ರಾಂಚ್ ಪೋಸ್ಟಾಫೀಸು ತೆರೆಯಲ್ಪಟ್ಟಿದೆ ಶ್ರೀ ಕೆ. ಮುದ್ದಣ್ಣ ಸೆಟ್ಟರು ಅಲ್ಲಿಯ ಪೋಸ್ಟ್‌ಮಾಸ್ಟರರಾಗಿ ನೇಮಕಗೊಂಡಿದ್ದಾರೆ.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಮಂಗಳೂರಿನ ಪೊಪ್ಯುಲರ್ ಇನ್ಶೂರೆನ್ಸ್ ಕಂಪನಿಯು 1949ನೆ ಇಸವಿ ಡಿಸಂಬರ ತಿಂಗಳಂತ್ಯದ ಇಪ್ಪತ್ತನೆ ವರುಷದ ವರದಿಯನ್ನು ಪಸ್ತುತಮಾಡಿದೆ.

ವರದಿ ವರುಷದಲ್ಲಿ ರೂ 32,92,750/- ರಷ್ಟು ಹೊಸ ಪ್ರೊಪೋಸಲುಗಳು ಬಂದಿದ್ದು ಅವುಗಳಲ್ಲಿ ರೂ. 30,10,150-ರ ಜೊಬಲಿಗಿನ 1795 ಪೊಲಿಸಿಗಳನ್ನು ಕೊಡಲಾಗಿತ್ತು. ಗತ ವರುಷದ ವ್ಯವಹಾರಕ್ಕಿಂತ ವರದಿ ವರುಷದಲ್ಲಿ ನೇಕಡಾ 25ರಷ್ಟು ಜಾಸ್ತಿ ವ್ಯವಹಾರ ನಡೆದುದು ಎತ್ತಿ ಹೇಳತಕ್ಕದ್ದಾಗಿದೆ.

ಜೀವನವಿಮಾ ನಿಧಿಯು ಮೊಬಲಗು ರೂ. 19,10,940-12-3ಕ್ಕೇರಿದೆ ಮರಣದ ಸಂಬಂಧ ಕ್ಲೈಮುಗಳ ಮೊಬಲಗು ರೂ. 68,399-9-0. ಪೊಲಿಸಿಗಳ ಅವಧಿ ಮುಗಿದು ಸಲಟೇಕಾದ ರೂ. 39,540-0-0ರ ಕ್ಲೈಮುಗಳ ಬಟ್ವಾಡೆಯು ಸಕಾಲದಲ್ಲಿ ಆಗುವಂತೆ ಕಂಪೆನಿಯು ನೀಗ ಕೊಡುತ್ತಿರುವುದು ಅಭಿನಂದನೀಯವೆ.

ವ್ಯವಹಾರ ಚತುರರೆ ಡ್ಯಾರೆಕ್ಟರುರವರ ಈ ಜೀವನವಿಮಾ ಸಂಸ್ಥೆಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ಕನ್ನಡ ನಾಡಿನಲ್ಲಿ ಯಾಗೂ ಭದತಬುಂಡದಲ್ಲಿ ಜನಾದರಣೀಯ ವಾಗಿ ಮೆರೆಯಾಡಲೆಂದು ಹಾರೈಸುತ್ತೇವೆ.

ಉಡುಪಿ

ಶಾಸ್ತ್ರ, ಪುರಾಣ ಪ್ರವಚನ-ಸಂಸ್ಕೃತ ಭಾಷೆಯ ಒಕ್ಕ ಪರೀಕ್ಷೆಗಾಗಿ ನಡೆಯಲ್ಪಟ್ಟ ಪರೀಕ್ಷಾ ಫಲಿತಾಂಶ, ತರಗತಿವಾರು ಶೇಕಡಾಕ್ಕೆ ಗಳಿಸಿದ ಅಂಕಗಳ ವಿವರಗಳನ್ನೊಳಗೊಂಡ ಸೂಚನೆಯೊಂದಿಗೆ ಪ್ರಕಟಿಸಲ್ಪಟ್ಟಿದೆ. ಈ ಪರೀಕ್ಷೆಯಲ್ಲಿ ಕರ್ನಾಟಕ ಸಂಸ್ಕೃತ ಪರೀಕ್ಷಾ ಕರ್ನಾಟಕ ಸಂಘಕ್ಕೆ ಇದರಿಂದ ಲಕ್ಷಾಂತರ ರೂಪಾಯಿ ಖರ್ಚು ಬರುವುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ

ಹೆಣ್ಣು ಮಕ್ಕಳಿಗೆ ಪ್ರವೇಶ:- ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಈ ಬಾರಿ ಕೂಡಾ ಕನಿಷ್ಠ ಪಕ್ಷ 20 ಮಂದಿ ಹೆಣ್ಣು ಮಕ್ಕಳಿಗಾದರೂ ಪ್ರವೇಶ ಕೊಡುವ ರಿಯಾಯಿತಿಯನ್ನು ತೋರಿಸಬೇಕಾಗಿ ಮದ್ರಾಸ್ ಸಿಂಡಿಕೇಟಿನ ಪ್ರಿನ್ಸಿಪಾಲರ್ ಅವರನ್ನು ಕೇಳಿಕೊಳ್ಳುವ ನಿರ್ಣಯವನ್ನು ಈಚೆಗೆ ಮುಕುಂದ ನಿವಾಸದಲ್ಲಿ ಕೂಡಿದ ಸಭೆಯಲ್ಲಿ ಮಂಜೂರಾಗಿದೆ. ಕೃಷ್ಣಿ ಎಸ್ ಹ್ಯಾಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಎ. ಎಸ್. ಮತಾಯಸರು ಸಭಾಧ್ಯಕ್ಷತೆ ವಹಿಸಿದ್ದರು. ಕಳೆದ ವರುಷ ಹತ್ತು ಮಂದಿಗೆ ಪ್ರವೇಶವೀಯಲು ಬಯಸಿದಾಗಿ ನಮಲತ್ತು ದೊರೆತಿತ್ತು.

ರೇಶನಿಂಗ್ ಆಫೀಸರರ ಪ್ರಕಟಣೆ

ಇದೇ ತಾ 30ಕ್ಕೆ ಅಂತ್ಯವಾಗುವ ಅರ್ಧ ವರುಷಕ್ಕೆ ರೇಶನ್ ಕಾರ್ಡುಗಳು ಮುಗಿಯುವುದರಿಂದ ಉಡುಪಿ ರೇಶನಿಂಗ್ ಕ್ಷೇತ್ರಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಡುದಾರರು ಅವರವರ ಕಾರ್ಡುಗಳನ್ನು ಅವರವರು ಅಕ್ಕಿ ಪಡೆಯುವ ಸ್ಟೋರುಗಳ ಹೆಸರುಗಳ ಮುಂದೆ ತೋರಿಸಲಾದ ತಾರೀಕುಗಳಲ್ಲಿ ಅವರವರು ಕೊಂಡುಹೋಗತಕ್ಕದ್ದು, ಒಂದು ವೇಳೆ ಮನೆಯ ಯಜಮಾನನಿಗೆ ಕಾರ್ಡು ಕೊಂಡು ಹೋಗುವರೆ ಅಸಾಧ್ಯವಾದಲ್ಲಿ ಬರಹ ನತ ಅವರ ಪ್ರತಿನಿಧಿಯನ್ನು ಕಳುಹಿಸುವಂತೆ ಈ ಮೂಲಕ ತಿಳಿಸಲಾಗಿದೆ. ರೇಶನ್ ಅಕ್ಕಿಯನ್ನು ಕೊಂಡುಹೋಗದ ಭೂಮಾಲಿಕರು ಮತ್ತು ನಾಗುವಳಿದಾರರು ಕೂಡಾ ಅದೇ ಸಮಯ ಅವರ ಕಾರ್ಡುಗಳನ್ನು ಪಡೆದು ದಾಖಲು ಮಾಡಿಕೊಳ್ಳತಕ್ಕದ್ದು.

ರೇಶನ್ ಅಂಗಡಿಗಳ ಹೆಸರು ಮತ್ತು ಕಾರ್ಡುಗಳನ್ನು ಬಟವಾಡೆಮಾಡುವ ದಿನಗಳು ಈ ಕೆಳಗಿನಂತಿವೆ

ಸಂತೆಕಟ್ಟೆ ಸ್ಟೋರು, ಕೋರ್ಟು ರಸ್ತೆ ಸ್ಟೋರು, ಕಿಂಡಿಬೆಟ್ಟು ಸ್ಟೋರು, ರಥಬೀದಿ ಸ್ಟೋರು ಮತ್ತು ಶ್ರೀ ಬಾಬುಶೆಟ್ಟರ ಸ್ಟೋರು ಇದೇ ತಾ 25, 26 ಮತ್ತು 27. ಬನ್ನಂಜೆ, ಕುಂಜಿಬೆಟ್ಟು, ಶ್ರೀ ಟಿ. ಆರ್. ಪೈ ಮತ್ತು ಶ್ರೀ ಎಸ್. ಕೆ. ಮೂರ್ತಿ ಸ್ಟೋರುಗಳು ಇದೇ ತಾ 25, 28 ಮತ್ತು 29

ಎ. 27-50ರಿಂದ ರೇಶನ್ ಬಗ್ಗೆ ಅರ್ಜಿ ಮಾಡುವವರು ಹೊಸಕಾಗಿ ಹಾಕಿದ ಮನೆ ಸಂಖ್ಯೆಗಳನ್ನು ಅರ್ಜಿಯಲ್ಲಿ ಸೂಚಿಸ ಬೇಕಾಗಿಯೂ ತಿಳಿಸಲಾಗಿದೆ.

ತಾಲೂಕು ಆಹಾರ ಸಮಿತಿ:- ಉಡುಪಿ ತಾಲೂಕು ಆಹಾರ ಸಮಿತಿಯ ಸಭೆಯು ಇದೇ ತಾ. 15ರಲ್ಲು ಡಿಪ್ಯುಟಿ ಕಲೆಕ್ಟರ್ ಶ್ರೀ ಸಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹಳ್ಳಿಹಳ್ಳಿಗಳಿಗೆ ಸಕ್ಕರೆ ವಿತರಣೆಯ ಕಾರ್ಯಕ್ರಮಗಳನ್ನು ನಿರ್ಧರಿಸಲಾಯಿತು. ದೇಶದ ಬೆನ್ನೆಲು ಬನಂತಿರುವ ಹಳ್ಳಿ ಜನರಿಗೆ ಸಾಕಷ್ಟು ಜಾಸ್ತಿ ಸಕ್ಕರೆ ಸಿಕ್ಕುವಂತಾಗಬೇಕೆಂದು ಸಭೆಕರ ಅಭಿಪ್ರಾಯವಾಯ್ತು. ಎನ ಮಹೋತ್ಸವ ವನ್ನು ತಾಲೂಕಿನಲ್ಲೆಲ್ಲೂ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಬೇಕೆಂದೂ ಆ ಬಗ್ಗೆ ಫಿರ್ಕಾ ಸಭೆಗಳು ಜರಗಿ ಜನತೆಗೆ ಅದರ ಮಹತ್ವವನ್ನು ತಿಳಿಸಬೇಕೆಂದೂ ನಿರ್ಣಯಿಸಲಾಯಿತು. ಹೊಸ ಬಾವಿ, ಕೆರೆಗಳಿಗಾಗಿ ಸರಕಾರವು ಕೊಡುವ ಹಣವನ್ನು ಪಡೆಯಲು ಸಾಕಷ್ಟು ಅರ್ಜಿಗಳು ಬಂದಿಲ್ಲವಾದುದರಿಂದ ಈ ತಿಂಗಳಾಂತ್ಯದೊಳಗಾದರೂ ಅವೇ ಕ್ಷಿತ ಮಂದಿಯಿಂದ ಅರ್ಜಿಗಳನ್ನು ನಿರೀಕ್ಷಿಸಲಾಯಿತು.

ಉಡುಪಿ

ಉಡ್ಪಿ ಸಬ್ ಡಿವಿಜನಿನ ಜನಪ್ರೀತ ಪೋಸ್ಟಲ್ ಇನ್ಸ್‌ಪೆಕ್ಟರಾದ ಶ್ರೀ ಎಸ್. ಕೆ. ನಾರಾಯಣ ಪ್ರಭುಗಳವರು Special officer for Recruetment Exams Nagpur ಪದವಿಗೆ ನೇಮಕ ಹೊಂದಿದ ಸಂದರ್ಭದಲ್ಲಿ ಉಡ್ಪಿ ಮತ್ತು ಅಸುಪಾಸಿನ ಪೋಸ್ಟಲ್ ನೌಕರರು ಉಡ್ಪಿ ಪೋಸ್ಟಾಫೀಸಿನಲ್ಲಿ ತಾ 7-6 50ರಲ್ಲು ಸಂಜೆ ಶ್ರೀ ಜಿ. ವೇಷಗಿರಿ, ಸಬ್ ಪೋಸ್ಟ್‌ಮಾಸ್ಟರ್ ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಿ ಶ್ರೀಯುತ ಪ್ರಭುಗಳಿಗೆ ಸತ್ಕಾರಕೂಟವನ್ನಿತ್ತು ಸಂಭ್ರಮಿಸಿದರು. ಶ್ರೀಗಳಾದ ಬಿ. ಎಸ್. ರಾವ್, ಎಚ್. ಆರ್. ಹೆಬ್ಬಾರ್, ಎ. ಎಸ್. ಆರ್. ಭಟ್, ಆರ್. ಆರ್. ನಾಯಕ್, ಕೆ ಪದ್ಮ ಭಟ್, ಎ. ಸಿ. ರಾವ್ ಇವರುಗಳು ಶ್ರೀಯುತ ಪ್ರಭುಗಳವರ ಜನಾದರಣೀಯತೆಮತ್ತು ದಕ್ಷತೆಯನ್ನು ಹೊಗಳಿ ಅವರು ಇನ್ನೂ ಮೇಲಿನ ಪದವಿಗೆ ನೇಮಕಪಡಲೆಂದು ಸಂಭಾವಿಸಿದರು. ಲಘು ಉಪಹಾರಾದಿ ಬಳಿಕ ಶ್ರೀವಾಸ್ತವ್ ಪ್ರಭುಗಳು ಉತ್ತರವೀಯುತ್ತಾ ಜನತಾ ಸರಕಾರದಲ್ಲಿ ಜನರ ಸಹಕಾರ, ನೌಕರರ ಸದ್ಭಾವನೆಯನ್ನೂ ಕೋರಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭೆ ಕೊನೆಗೊಂಡಿತು

ಕನ್ನಡಿಗರೆಲ್ಲರ ಕಣ್ಮನ ಸೆಳೆದು ಪಸಿದ್ಧವಾದ

ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ

25 ಕತೆಗಳು ಬೆಲೆ ರೂ 3 0 0

ಸಿಗುವ ಸ್ಥಳಗಳು:-

1 ಕಿರಿಯರ ಪ್ರಪಂಚ, ಉಡುಪಿ
2 ನವಭಾರತ ಬುಕ್ ಡಿಪೊ, ಉಡುಪಿ
3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಉಡ್ಪಿ ಡಿ ಮು. ಕೋರ್ಟಿನಲ್ಲಿ

O. C. No. 124/1950

ನಂದಿಯಪ್ಪ ಶೆಟ್ಟಿ—ವಾದಿ.

ಖಾತ್ತ

ಎಚ್. ಮೋನಪ್ಪ ಸೆಟ್ಟಿ, ಪೊದ್ದುಬಾವು ಸುಬ್ಬೆಶೆಟ್ಟಿ ಆಳಿಯ, ಪರ್ದೂರುಗ್ರಾಮ.

—ಪ್ರತಿವಾದಿ.

ಯಿವರೊಳಗೆ

ವಾದಿಗೆ ಪ್ರತಿವಾದಿಯು ತಾ 19-9-47 ರಲ್ಲಿ ರೂ. 100-0-0ಕ್ಕೆ ಬರಕೊಟ್ಟ ಡಿಮಾಂಡುನೋಟಿನ ಅಸ್ಸಲುಬಿದ್ದಿ ಹಣಗಳ ವಸೂಲಿ ಬಗ್ಗೆ ವಾದಿಯು ದಾಖಲ್ಮಾಡಿದ ಮೇಲಿನ ದಾವೆಯು ತಾರೀಕು 30-6-1950ಕ್ಕೆ ತಸ್ಮಿಗೆ ಇಟ್ಟುದೆ. ಆ ಕಾರಿತು ಅಕ್ಷೇಪಯಿದ್ರೆ ಸದ್ರಿ ದಿವ್ಸ 11ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜಾಬ್ತೀರು ಮಾಡಿಕೊಳ್ಳತಕ್ಕದ್ದು.

ಉಡ್ಪಿ } **B S. Hegde,**
ತಾ 19 6 1950 } ವಾದಿಕಡೆ ವಕೀಲರ್.

ಮಂಗಳೂರು

ವನ ಮಹೋತ್ಸವ ಆಚರಣೆ:– ಯನ್ನು ಜುಲಾಯಿ ತಿಂಗಳ ಪ್ರಥಮವಾರದಲ್ಲಿ ಜಿಲ್ಲೆಯಲ್ಲಿ ಕಾರ್ಯರೂಪಕ್ಕೆ ತರುವ ಸಲುವಾಗಿ ಇದೇ ತಾ. 15 ರಲ್ಲಿ ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಒಂದು ಸಭೆಯು ಜರಗಿತು. ಆ ಬಗ್ಗೆ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ ಜಿಲ್ಲಾ ಕಲೆಕ್ಟರರು ಅಧ್ಯಕ್ಷರಾಗಿಯೂ ಶ್ರೀಗಳಾದ ಕೆ. ಸದಾನಂದ ಹೆಗ್ಡೆ, ಪಿ. ಎಲ್. ಲೋಬೊ, ಡಾ. ಎಚ್. ವಿ. ಆಡಪ್ಪರು ಉಪಾಧ್ಯಕ್ಷರಾಗಿಯೂ ಶ್ರೀ ಎಮ್. ಶಿವರಾಯರು ಕಾರ್ಯದರ್ಶಿಗಳಾಗಿಯೂ ಶ್ರೀ ಗಳಾದ ಎಮ್. ವೆಂಕಟೇಶ ಪೈ, ಡಿ. ಮೋಹನ ರಾವ್ ಮತ್ತು ಎಲ್. ಬಿ. ಯಟ್ಟಿ, ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಹೋಟೆಲ್ ಮಜ್‌ದೂರ್ ಸಭಾ: ಮಂಗಳೂರು ಹೋಟೆಲ್ ವರ್ಕರ್ಸ್ ಯೂನಿಯನ್ನಿನ ಮಹಾಸಭೆಯೊಂದು ಈಚೆಗೆ ಫೆಲಿಕ್ಸ್ ಪೈ ಬಜಾರಿನಲ್ಲಿ ಸೇರಿ ಸಂಘದ ಹೆಸರನ್ನು 'ಹೋಟೆಲ್ ಮಜ್‌ದೂರ್ ಸಭಾ' ಎಂದು ಬದಲಿಸಲು ನಿರ್ಣಯಿಸಿತು. ಬಳಿಕ ಕಾರ್ಯಕಾರಿ ಸಮಿತಿಗೆ ಸದಸ್ಯರ ಚುನಾವಣೆ ನಡೆಯಿತು. ದ. ಕ. ಸೋಶಲಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಎ. ಬಾಲಕೃಷ್ಣನವರು ಸರಕಾರವು ಮಜ್‌ದೂರ ಸುರ್ದನಕ್ಕಾಗಿ ಜಾರಿಗೆ ತರಲು ಪ್ರಯತ್ನಿಸುವ ಮಸೂದೆಗಳನ್ನು ಖಂಡಿಸಿ ಮಾತನಾಡಿದರು.

ಕೆನರಾ ಜೆಂಬರ್ ಆಫ್ ಕೊಮರ್ಸ್: ಇದರ ವಾರ್ಷಿಕೋತ್ಸವವು ಇದೇ ತಾ. 28ರಲ್ಲಿ ಕೇಂದ್ರ ಸರಕಾರದ ಉಪ ಮಂತ್ರಿಗಳಾದ ಶ್ರೀ ಖುರ್ಷಿದ್‌ಲಾಲರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕಾಂಗ್ರೆಸ್ ಚುನಾವಣೆ ಅಧಿಕಾರಿಗಳು: ದಕ್ಷಿಣ ಕನ್ನಡ ಜಿಲ್ಲೆಗೆ ಕೆ. ಪಿ. ಸಿ. ಸಿ. ಚುನಾವಣಾ ಅಧಿಕಾರಿಗಳಾಗಿ ಮಡಿಕೇರಿಯ ಶ್ರೀ ಉಗ್ಗಪ್ಪ ಅಚ್ಚಣ್ಣನವರನ್ನೂ, ಮಡಿಕೇರಿಗೆ ಮಂಗಳೂರಿನ ವಕೀಲ ಶ್ರೀ ಬಿ. ಬಾಲಕೃಷ್ಣ ಶೆಟ್ಟರನ್ನೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ನೇಮಿಸಿರುತ್ತದೆ.

ಕೈಗಾರಿಕಾ ಶಿಕ್ಷಣ ತರಬೇತಿಗೆ ಆಯ್ಕೆ: ಕೇಂದ್ರ ಸರಕಾರದಿಂದ ನಿರ್ಮಿಸಲಾದ ಪಯಸ್ವರ ಕೈಗಾರಿಕೆ ಹಾಗೂ ತಾಂತ್ರಿಕ ತರಬೇತಿ ಚುನಾವಣೆಯ ಸಮಿತಿಯು ಈಚೆಗೆ ಕೊಯಂಬತ್ತೂರಿನಿಂದ ಮಂಗಳೂರಿಗೆ ಬಂದಿದ್ದು ಇಲ್ಲಿನ ಕರ್ನಾಟಕ ಪೊಲಿಟೆಕ್ನಿಕ್ ತರಬೇತಿ ಶಾಲೆಯಲ್ಲಿ ಉಮೇದ್ವಾರರಿಗೆಂದು ಬಂದ 168 ಅರ್ಜಿಗಳನ್ನು ಪರಿಶೀಲಿಸಿ 40 ಮಂದಿಯನ್ನು ಆರಿಸಿತು.

ನಗರ ಸಭೆಯು: ಇದೇ ತಾ. 10 ರಲ್ಲು ಜರಗಿ ಗಣಪತಿ ಶಾಲೆ ರಾಮಾರಾವ್ ಗಲ್ಲಿ, ಬಸ್ತಿ ಮತ್ತು ಕೆನರಾ ಹೈಸ್ಕೂಲ್–ಹೊಂಗರ ಕೇರಿ ರಸ್ತೆಗಳಿಗೆ ತಾರು ಹಾಕಲು ಸರಕಾರವು ಅರ್ಥ ವೆಚ್ಚ ಮಂಜೂರು ಮಾಡಿದ್ದನ್ನು ಅಕಾರ್ಡು ಮಾಡಲಾಯಿತು. ಮುನಿಸಿಪಲ್ ಶಾಲೆಗಳ ಮಕ್ಕಳ ಆರೋಗ್ಯ ಪರೀಕ್ಷೆಯನ್ನು ಈವರೆಗೆ ಮಾಡುತ್ತಿದ್ದ ಡಾಕ್ಟರರು ಆ ಕೆಲಸ ತಮ್ಮಿಂದಾಗದೆಂದು ತಿಳಿಸಿದ್ದರಿಂದ ಅದನ್ನು ಮುನಿಸಿಪಲ್ ಅಧಿಕಾರಿಗಳೇ ಮಾಡಬೇಕೆಂದೂ ಆರೋಗ್ಯವೇ ಮುಂತಾದ ಊನಗಳಿರುವ ಮಕ್ಕಳ ಒಂದು ರಿಜಿಸ್ಟ್ರಿಯನ್ನು ಮುಖ್ಯೋಪಾಧ್ಯಾಯರು ಇಡಬೇಕೆಂದೂ, ಆ ಬಗ್ಗೆ ರೂಪಾಯಿ 3000ಕ್ಕೆ ಹೆಚ್ಚಾಗದಷ್ಟು ಖರ್ಚು ಮಾಡಬಹುದೆಂದೂ ನಿರ್ಣಯಿಸಲಾಯಿತು.

ನೋಟುರ್ ಅವಘಡ: ಇದೇ ತಾ. 17ರಲ್ಲು ಮಂಗಳೂರಿನ ಕಾರ್ನಾರ್ಡ್ ಸದಾ ಶಿವರಾವ್ ರೋಡಿನಲ್ಲಿ ಮುಮ್ಮಾಪ್ಪ MDX 1573 ನಂಬ್ರದ ಮೋಟಾರುಕಾರು ಒಬ್ಬ ಹೆಂಗಸಿಗೆ ಡಿಕ್ಕಿ ಹೊಡೆದು ಹೆಂಗಸಿನ ಒಂದು ಕೈ ಮತ್ತು ಕಾಲಿಗೆ ಪೆಟ್ಟುಬಿಯಿತೆಂದು ವಾರ್ತೆ.

NOTICE

The Municipal Council of Udipi in its resolution No. 5 dated 10–6–1950 are proposing to levy profession tax at the following enhanced rates from 1–4–50. Any objections for the levying of the tax at the enhanced rates received within one month from the date of publication of this notice will be considered by the Council when it takes up the question of confirming its proposal

Half yearly income						Rate Rs	As.	Ps.
1. More than Rs. 15,000						60	0	0
2. More than Rs. 12,000 but not more than 15,000						50	0	0
3.	do	Rs. 9,000	do	Rs. 12,000		35	0	0
4.	do	Rs 6,000	do	Rs. 9,000		25	0	0
5.	do	Rs. 4,800	do	Rs. 6,000		12	8	0
6.	do	Rs. 3,000	do	Rs 4,800		9	8	0
7.	do	Rs. 1,800	do	Rs. 3,000		4	8	0
8.	do	Rs. 1,200	do	Rs. 1,800		3	0	0
9.	do	Rs 600	do	Rs. 1,200		1	8	0
10.	do	Rs 300	do	Rs. 600		0	12	0

Municipal Office, Udipi, Dated 16-6-1950.

Sd. **V. Balagangadharan,** Commissioner.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD

Highly perfumed and medicated, worth using daily by one and all keeps hair black and relieves head-ache etc.

TRADE MARK

Manufactured by:–

Swadeshi Oushadhi Bhandara (Regd.)

KUNJAL P. O. Brahmavar, S. K.

ಊಟಮಾಡಿಗೆ ಹೋಗಬೇಕಾ! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲಿ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಯಬಗ್ಗೆ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಸಲ್ಲು ವೇದನೆಗಳಿಗೂ, ಎದೆನೋವು, ಹೃಯಿಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಸರ್ಪಘಾತ, ನೊಡಿಮಿ ಮೊದಲಾದ ಎಲ್ಲಾರೋಗಳಿಗೂ ಸಿದ್ಧೌಷಧ.



REGD

ಹುಳುಕಡ್ಡಿ/ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಸ್ವೀಕಾರ—ವಿಮರ್ಶೆ

೧ LIGHT (ಪ್ರಚಲಿತವರ್ತಮಾನದ ವಿಮರ್ಶಾತ್ಮಕ ಆಂಗ್ಲ ಮಾಸಪತ್ರಿಕೆ) 231 ಹಾರ್ನಿಬೀ ರೋಡ್, ಮುಂಬಯಿ ೧.

ಈ ಆಂಗ್ಲ ಮಾಸಪತ್ರಿಕೆಯ ಹೆಸರು ಬೆಳಕನ್ನು ಚಿಮ್ಮಿಸಿದರೂ, ಇದನ್ನೋದಿದವರ ಮನಸ್ಸಿಗೆ ಯಾವ ಹೊಸ ಬೆಳಕೂ ಕಾಣಿಸದಿರುವುದು ಶೋಚನೀಯವಾಗಿದೆ. ಎಲ್ಲ ವಿಷಯಗಳ ಕಲಸುಮೇಲೋಗರವು ಯಾರ ಅಭಿರುಚಿಗೆ ಅನುಗುಣವಾಗಿ ಸೇವಿಸಲ್ಪಟ್ಟುದೋ ತಿಳಿಯುವುದಿಲ್ಲ. ಇಲ್ಲವೆಂದಾದರೂ ಪತ್ರಿಕಾಪ್ರಪಂಚಕ್ಕೆ ಏನೂ ನಷ್ಟವಾಗದ ಮಾದರಿಯ ಮಾಸಪತ್ರಿಕೆ ಇದು.

೨ ಭಾರತೀ (ಸಣ್ಣ ಕತೆಗಳ ಪಂಕಲನ ಮಾಸಪತ್ರಿಕೆ) ಪುಟ ೬೪ ಬೆಲೆ ಉತ್ತಮ ಪ್ರತಿ ೬ ಆಣೆ, ಸದಾ ೪ ಆಣೆ ಭಾರತೀ ಪ್ರಕಾಶನ ಮಂದಿರ, ಮುಂಬಯಿ.

ಮಾನಸದ ಮಹಿಮೆ, ಪ್ರಶ್ನೆಪೀಠ, ರಜತರಂಗ ಈ ಮೂರು ಪ್ರಾರಂಭದ ಪುಟಗಳಲ್ಲಿಯೂ, ಕನ್ನಡ, ಆಂಗ್ಲ, ತೆಲುಗು, ಅಮೇರಿಕನ್, ತಮಿಳು ಹೀಗೆ ಬೇರೆ ಬೇರೆ ಭಾಷೆಗಳ ಉತ್ತಮ ಕತೆಗಳ ಸಂಕಲನವು. ಕೊನೆಯದಾಗಿ ವಿಶಿಷ್ಟ ವಿಭಾಗವು ಉಳ್ಳ 'ಭಾರತೀ' ನಾಡಿನ ಇತಿಹಾಸದ ಒಂದು ಸಂಧಿಕಾಲದಲ್ಲಿ ಉದ್ಭವಿಸಿದುದು ಗಮನಾರ್ಹವಾಗಿದೆ ಕನ್ನಡಿಗರೂ, ತೆಲುಗರೂ, ತಮಿಳರೂ, ಗುಜರಾತಿಗಳೂ ಎಲ್ಲರೂ ಒಂಗೆಂಬ ಭಾವನೆ ಬೆಳೆಯಬೇಕಾದರೆ ಪರಸ್ಪರ ತಿಳುವಳಿಕೆ ಮುಖ್ಯವಾಗಿದೆ. ಅಂಥ ತಿಳುವಳಿಕೆಯನ್ನು ಪ್ರತ್ಯಕ್ಷವಾಗಿ ಸಂಪಾದಿಸುವ ಭಾಗ್ಯ ಇಲ್ಲದವರು ಈ ಜನಜೀವನ ಪ್ರೇರಕವಾದ ಕಥೆಗಳಿಂದ ಗುಣಗ್ರಹಣದ ಬುದ್ಧಿಯನ್ನು ಕಲಿಯುಬಹುದಾಗಿದೆ.

ಪ್ರಾರಂಭದ ಪುಟಗಳಿಂದಲೂ, ವಿಶಿಷ್ಟ ವಿಭಾಗದಿಂದಲೂ 'ಭಾರತೀ'ಯನ್ನು ಸರ್ವಾಂಗ ಸುಂದರವಾಗಿ ಮಾಡಲು ಹವಣಿಸಿದ ಸಂಪಾದಕರ ಸಾಹಸವನ್ನು ಹೇಗೆ ಕೊಂಡಾಡಬೇಕೋ ತಿಳಿಯುವುದಿಲ್ಲ. ಕಥೆಗಳ ವಿಮರ್ಶೆಯಾಗಲೀ, ಮಾನಸದ ಮಹಿಮೆಯಾಗಲೀ ಒಟ್ಟು ಸಂಕಲನಕ್ಕೆ ಯಾವ ಮೆರುಗನ್ನೂ ತರಲಾರವು. ಆ ಪುಟಗಳನ್ನು ಇನ್ನೆರಡು ಕತೆ ಸೇರಿಸಲು ಉಪಯೋಗಿಸಿದರೆ ಎಲ್ಲ ದೃಷ್ಟಿಯಿಂದಲೂ ಚೆನ್ನ 'ಭಾರತೀ' ಆಮರವಾಗಲಿ!

—ಈಶಿ

ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ

ಶರೀರದಲ್ಲಿಯ ಒಳಗಿನ ಮತ್ತು ಹೊರಗಿನ ಉರಿಯನ್ನು ತೆಗೆದು ಹಾಕಿ ಶೈತ್ಯತೆಯನ್ನು ತಂದಾಗಿಡುವಷ್ಟು ಅಪರೂಪವಾದ ಔಷಧೀಗುಣಗಳನ್ನು ಸಂಪಾದಿಸುವುದು, ಜೀರ್ಣಿಂದ್ರಿಯ ಮತ್ತು ವಾಸನೆಗಳ ಶಕ್ತಿಯನ್ನು ವೃದ್ಧಿಸುವುದು, ಧಾತು ಸ್ಥಾನ ದೌರ್ಬಲ್ಯ ಉತ್ಪತ್ತಿಯನ್ನು ಹೋಗಲಾಡಿಸಿ ಆರೋಗ್ಯಕರ ಮಾಡುವುದು

ಹಿಮ್ಮು ತ್ತುವರಿದ ಕಮಜೋರಿ ಕಡಿಯಿಂದ ಇಂದೇ ಒಂದು ಬಾಟಲಿಯನ್ನು ತರಿಸಲು ಪ್ರಾರಂಭಿಸಿರಿ

ಪರ್ಲ್ ಎಂಡ್ ಕಂಪನಿ
ಮುಂಬಯಿ ೨೬

ಉಳ್ಳಾಲ ಶಾಲಾ ವರ್ಧಂತಿ ಮತ್ತು ಸಂವರ್ಧನಾ ಸಮಾರಂಭ

ಉಳ್ಳಾಲ ಗ್ರಾಮದಲ್ಲಿ ಸ್ಥಳೀಯ ಮೊಗವೀರ ಸಂಘದವರ ಉದಾರ ಆಶ್ರಯದಲ್ಲಿ ಕಳೆದ 1946 ನೆಯಿಸ್ವಿಯಲ್ಲಿ ಹೊಸದಾಗಿ ಸ್ಥಾಪಿಸಲಾದ ಮೊಗವೀರ ಎಲಿಮೆಂಟರಿ ಶಾಲೆಯ ನಾಲ್ಕನೇ ವರ್ಧಂತ್ಯುತ್ಸವವು ಈ ಶಾಲೆಯ ಹಾಯರ್ ಎಲಿಮೆಂಟರಿ ಸಂವರ್ಧನಾ ಸಮಾರಂಭಗಳು ಇದೇ ತಾ. 11 ರಲ್ಲು ಶ್ರೀಮಾನ್ S.D. ಟೋಬೋ, B A, L T, ಡಿಪ್ಯುಟಿ ಇನ್ಸ್‌ಪೆಕ್ಟರ್ ಆಫ್ ಮಂಗಳೂರು ಸೆಂಟ್ರಲ್ ದೇವರಾಜ್ ಇವರ ಸನ್ನಿಧ್ಯದಲ್ಲಿ ಅತ್ಯಂತ ವಿಜೃಂಭಣೆಯಿಂದ ಯಶಸ್ವಿಯಾಗಿ ಜರಗಿತು. ಈ ಸಮಾರಂಭಕ್ಕೆ ಊರ ಪರವೂರ ಅನೇಕ ಮಹನೀಯರು ಆಗಮಿಸಿದ್ದರಲ್ಲದೆ ಜಿಲ್ಲೆಯ ಡಾಗೂ ಮದ್ರಾಸು, ಮುಂಬಯಿ ಪ್ರಾಂತ್ಯಗಳ ಹಲವು ಸಂಘ ಸಂಸ್ಥೆಗಳಿಂದ ಶಾಲೆಯು ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿ ಹಲವಾರು ಸಂದೇಶಗಳೂ ಬಂದಿದ್ದುವು.

ಪ್ರಾರಂಭದಲ್ಲಿ ಶಾಲೆಯು ಸ್ಥಾಪನೆ, ಉದ್ದೇಶ ಹಾಗೂ ಕಳೆದ ನಾಲ್ಕು ವರುಷಗಳ ಶಾಲೆಯ ಏಳಿಗೆಯ ಕುರಿತಾದ ಸಂಕ್ಷಿಪ್ತ ಇತಿಹಾಸದೊಂದಿಗೆ ಗತವರ್ಷದ ಶಾಲಾ ವರದಿಯನ್ನು ಶಾಲಾ ಮುಖ್ಯೋಪಾಧ್ಯಾಯರು ಸಭೆಗೆ ನಿವೇದಿಸಿದರು. ಶೈಕ್ಷಣಿಕ ಹಾಗೂ ಇನ್ನಿತರ ಚಟುವಟಿಕೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅಧ್ಯಕ್ಷರ ಹಸ್ತದಿಂದ ಬರ್ಯಾಣಗಳ ವಿತರಣೆಯಾದ ಬಳಿಕ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸಿದರು. ಆಮಂತ್ರಿತ ಅತಿಥಿಗಳಾಗಿ ಚಿತ್ರೈಸಿದ್ದ ಶ್ರೀಮಾನ್ ದೇಜು ಉಚ್ಚಿಲ B A, L-T. ಪರ್ಸನಲ್ ಅಸಿಸ್ಟಾಂಟ್ ಆಫ್ D E O. ಆವರು ಧರ್ಮ, ಸಂಸ್ಕೃತಿ, ಸಮಾಜಗಳ ಸುಧಾರಣೆಯ ಕುರಿತು, ವಿದ್ಯಾಮಹತ್ವ ಹಾಗೂ ಪ್ರತ್ಯಕ್ಷದ ನಿದ್ಯಾಭ್ಯಾಸಗಳ ಕುರಿತು ನೆರೆದವರಿಗೆ ಮನದಟ್ಟಾಗುವಂತೆ ವಿವರಿಸಿದಂದಲ್ಲದೆ ಭಗವಾನ್ ಶ್ರೀ ಕೃಷ್ಣನ "ಉದ್ಧಾರೇದಾತ್ಮನಾತ್ಮಾನಂ" ಎಂಬ ಗೀತೋಕ್ತಿಯಂತೆ ಜನರು ಸ್ವಯಂ ಜಾಗೃತರಾಗಿ ಸಮಾಜದ ಉದ್ಧಾರದ ಹೊಣೆಯನ್ನು ತಾವೇ ಹೊರಬೇಕೆಂದು ಕರೆಕೊಟ್ಟರು. ಅತಿಥಿಗಳಾಗಿ ಆಗಮಿಸಿದ್ದ ಶ್ರೀಮಾನ್ ಜೆ. ಎ. ಫೆರ್ನಾಂಡಿಸ್ ವಿದ್ಯಾಭ್ಯಾಸದ ಮಹತ್ವ, ವಿದ್ಯಾಸಂಸ್ಥೆಯ ಅಭಿವೃದ್ಧಿ ಹಾಗೂ ಸಮಾಜ ಸುಧಾರಣೆಯ ಕುರಿತು ತಮ್ಮ ಸಲಹೆಗಳನ್ನು ವಿವರಿಸಿ ಭಾಷಣ ಮಾಡಿದರು. ಶ್ರೀ ವಿಶ್ವನಾಥ ಅನಿಸಿಯರು ನಮ್ಮಲ್ಲಿಯ ಸಂಕುಚಿತ ಭಾವನೆಗಳನ್ನು ತೊಡೆದುಹಾಕಿ ಸಾಮೂಹಿಕ ಏಳಿಗೆಯೊಂದಿಗೆ ವ್ಯಕ್ತಿಯು ತನ್ನ ಏಳಿಗೆಯನ್ನು ಬಯಸಬೇಕಾಗಿ ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಾಲ್ಕೇ ವರುಷಗಳ ಹಿಂದೆ ಸ್ಥಾಪಿಸಲ್ಪಟ್ಟ ಈ ಎಲಿಮೆಂಟರಿ ಶಾಲೆಯು ಇಷ್ಟು ಇಲ್ಲ ಅವಧಿಯಲ್ಲಿ ಹಾಯರ್ ಎಲಿಮೆಂಟರಿ ಶಾಲೆಯಾಗಿ ಸಂವರ್ಧನೆಗೊಂಡುದು ವಿದ್ಯಾಇಲಾಖೆಯ ಇತಿಹಾಸದಲ್ಲೇ ಅತ್ಯಪೂರ್ವ ಘಟನೆ ಎಂದೂ, ಇಪ್ಪು ಶೀಘ್ರದಲ್ಲೇ ಈ ಶಾಲೆಯು ಪ್ರಗತಿ ಪಥದಲ್ಲಿ ಮುಂದುವರಿದು ಏಳಿಗೆ ಹೊಂದಬೇಕಾದರೆ ಶಾಲಾ ಕಮಿಟಿಯವರೂ ಮೊಗವೀರ ಸಂಘದವರೂ, ಎಸ್ಟೊಂದು ನಿಸ್ವಾರ್ಥ ದೃಷ್ಟಿಯಿಂದ ಶ್ರಮ ಪಟ್ಟು ದುಡಿದಿರಬಹುದೆಂಬುದನ್ನೂ ಪ್ರಕಟಿಸಿ, ಜಿಲ್ಲಾ ವಿದ್ಯಾಧಿಕಾರಿಗಳೇ ಮುಂತಾದ ಮಹನೀಯರಿಂದ ಹಿಡಿದು ಪ್ರಾಂತ್ಯದ ವಿದ್ಯಾಮಂತ್ರಿಗಳಿಂದ ಪ್ರಾಸ್ಥಿಕ ಶ್ರೀ ಕ್ಷಿತಿದಾಸ ಪೈಗಳ ಸ್ವಂತದ ಸಂಸ್ಥೆಗಳಿಗೂ ಈ ಶಾಲೆಯ ಸ್ಥಾಪನೆಯಿಂದ ಸಿಗುವ ಸೌಕರ್ಯಗಳನ್ನು ಪ್ರತಿಪಾದಿಸಿ, ಬಡವರಿಗೆ ಉಚಿತ ಪುಸ್ತಕ ಪೆನ್ಸಿಲ್ ಮುಂತಾದವನ್ನು ಪೂರೈಸಿದ ದಾನಿಗಳಿಗೆ ಕೃತಜ್ಞತೆಯನ್ನು ಅರ್ಪಿಸಿದರು. ಬಳಿಕ ಶಾಲಾ ಕಮಿಟಿಯ ಉಪಾಧ್ಯಕ್ಷರಾದ ಶ್ರೀ ಕೆ. ಕೃಷ್ಣಪ್ಪ ಬಂಗೇರ ಇವರು ಧನ್ಯವಾದ ಸಮರ್ಪಣೆ ಮಾಡಿದರು. "ಜನಗಣಮನ" ದೊಂದಿಗೆ ಕಾರ್ಯಕ್ರಮಗಳು ಸಮಾಪ್ತಿಗೊಂಡವು.

ಬೊಂಬಾಯಿ

ಬಗ್ವಾಡಿ ಹೋಬಳಿ ಮೊಗವೀರ ಪುರಾಣ ಸಂಘ, ಮುಂಬಯಿ ಇದರ ಒಂಭತ್ತನೇ ವಾರ್ಷಿಕೋತ್ಸವವು ತಾ. 11-6-50 ನೇ ರವಿವಾರ ಅಪರಾಹ್ನ ಘಂಟೆ 2½ ಸರಿಯಾಗಿ ಕೋಟೆಯೊಳಗಡೆ 136 ಅಕೋಲೋ ರಸ್ತೆಯಲ್ಲಿರುವ ಕೆ ಆರ್. ಕಾಮಾ ಓರಿಯಂಟಲ್ ಇನ್ಸ್ಟಿಟ್ಯೂಟ್ ಹೋಲಿನಲ್ಲಿ, ಮುಂಬಯಿ ಮುನಿಸಿಪಲ್ ಸ್ಟೇಂಡಿಂಗ್ ಕಮಿಟಿಯ ಚಯರ್‌ಮ್ಯಾನರಾದ ಶ್ರೀಮಾನ್ ಬಿ. ಎ. ದಲಾಲ್ B A-L. L B., S. T. S. Advocate, O. S. ಇವರ ಸನ್ನಿಧ್ಯದಲ್ಲಿ ಬಹು ವಿಜೃಂಭಣೆಯಿಂದ ಜರಗಿತ.

ಅತಿಥಿಗಳಾಗಿ ಬಂದಿದ್ದ ಶ್ರೀಗಳಾದ ನಾಥೆಶಾಲ್, ಡಿ. ಪಾರಿಕ್ T-P., ಪಿ. ಎನ್. ಕೋಟ್ಯಾನ್, ಬಿ ಲಕ್ಷ್ಮಣದೇವ ವಿದ್ಯಾರ್ಥಿನಿಯರು ಪಿ. ಕೆ. ಬಂಗೇರ ಇವರುಗಳು ನಂತರ ಪುರೋಭಿವೃದ್ಧಿಯ ಕುರಿತು ಪ್ರಕಂಸಿಸಿದರಲ್ಲದೆ, ಸಂಘವು ಉತ್ತರೋತ್ತರವಾಗಿ ಅಭಿವೃದ್ಧಿಯಾಗುವಂತೆ ಉತ್ತಮ ಸಲಹೆಗಳನ್ನಿತ್ತು ಭಾಷಣ ಮಾಡಿದರು.

ಮುಂಬಯಿ ವಿದ್ಯಾರ್ಥಿನಿ ಸಭಾ ತನ್ನ ಸಭೆಯಿಂದ ವಿದ್ಯಾರ್ಥಿವೇತನವನ್ನು ಪಡೆಯಲಿಚ್ಛಿಸುವ ಬಿಲ್ಲವ ವರ್ಗದ ವಿದ್ಯಾರ್ಥಿನಿವಿದ್ಯಾರ್ಥಿನಿಯರು ಜುಲ್ಯಾ ತಿಂಗಳ ತಾ. 10 ರ ಒಳಗೆ "ಮಾನಾರ್ಥ ಪ್ರಧಾನ್ ಕಾರ್ಯದರ್ಶಿ, ವಿದ್ಯಾದಾಯಿನಿ ಸಭಾ, 3] ರಘುನಾಥ ದಾದಾಜಿ ರಸ್ತೆ, ಕೋಟೆ, ಮುಂಬಯಿ" ಇವರಿಗೆ ಬರೆದು ಅರ್ಜಿ ಹತ್ರವನ್ನು ಪಡಕೊಳ್ಳಬೇಕಾಗಿ ಎನಂತಿ. ವಿದ್ಯಾರ್ಥಿ ವೇತನವನ್ನು ಪಡೆಯುತ್ತಿರುವ ತೇಗರ್ದಡಿ ಜೊಂದಿದ ವಿದ್ಯಾರ್ಥಿಗಳು ಪರೀಕ್ಷೆ ಫಲಿತಾಂಶದೊಡನೆ ಮುಂದರಿಸುವ ಬಗ್ಗೆ ಅರ್ಜಿಯನ್ನು ಕೊಡತಕ್ಕದ್ದು.

ರಜಕ ಸಂಘ— ದಕ್ಷಿಣ ಕನ್ನಡ ಜಿಲ್ಲಾ ಶಾಲೆಗಳಲ್ಲಿ ಕಲಿಯುವ ರಜಕ (ಅಗಸ) ಜಾತಿಯ ಬಾಲಕ ಬಾಲಕಿಯರು ಬಡತನದ ದೆಸೆಯಿಂದ ತಮ್ಮ ವಿದ್ಯೆಯನ್ನು ಮುಂದುವರಿಸಲಾಗದ್ದವಾಗಿರುವ ಸಂದರ್ಭದಲ್ಲಿ ಬೊಂಬಾಯಿಯ ಶ್ರೀ ರಜಕ ಸಂಘಕ್ಕೆ ಶಾಲಾ ಮುಖ್ಯೋಪಾಧ್ಯಾಯರ ಮುಖಾಂತರ ಅರ್ಜಿ ಬರಕೊಂಡಲಿಯೋಗ್ಯ ವಿದ್ಯಾರ್ಥಿಗೆ ವೇತನವನ್ನು ಕೊಡಲಾಗುವುದು. ಅರ್ಜಿಯಲ್ಲಿ, [1] ವಿದ್ಯಾರ್ಥಿಯ ಹೆಸರು. [2] ತರಗತಿ [3] ಅಭಿವೃದ್ಧಿ ದುತ್ತು ನಡತೆ, [4] ಪ್ರಾಯ. [5] ರಕ್ಷಕರ ಹೆಸರು ವಿಳಾಸ ಮತ್ತು ದಸ್ಕತು. [6] ರಕ್ಷಕರ ಕಸಬು ಮತ್ತು ಆದಾಯ. [7] ಪರ್ವದ ಶಾಲಾ ಬಿಟ್ಟುಗಳನ್ನು ಕೊಡಿರಿ. ಅರ್ಜಿಗಳನ್ನು ಬರಾಯಿಸಿ ಗೌರವ ಕಾರ್ಯದರ್ಶಿ, ಶ್ರೀ ರಜಕ ಸಂಘ 8/10 ಬೋಂಬಾ ಬಜಾರ ರಸ್ತೆ, ಕೋಡೆ ನಂಬ್ರ 32, ಕೋಟೆ, ಬೊಂಬಾಯಿ ಆವರಿಗೆ ಕಳುಹಿಸಬೇಕಾಗಿ ವಿನಂತಿಯಿದೆ.

ನೋಟೀಸು

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 53/1950

ಅರ್ಜಿದಾರರು—ಕಮಲಾಕ್ಷಿ ಅಮ್ಮ.

ಎದ್ರಿರು—1 ಮೈನರ ಯು.ವಿಠಲ

2 ,, ಜಲಜಮ್ಮ.

ಯವರ ಗಾರ್ಡಿಯನ್ ಮೊನಾಕ್ಷಿ ಅಮ್ಮ.

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದರೆ —

ಅರ್ಜಿದಾರಳು ಗಂಡನಿಗೆ ಒರಬೇಕಾಗಿರುವ ಯಿನ್ಯೂರೆನ್ಸು ಸೈಸಿ ಎಲ್ಲಾ ಜಣವನ್ನೂ ನ್ಸಲು ಕಡೆಯುವಲ್ಲಿ ತಾನು ಬಾಧ್ಯಸ್ಥಳಾದ ಕಾರಣ ತನಗೆ ಪಾರೀಸು ಸರ್ಟಿಫಿಕೇಟು ಕೊಡ್ಸಿಬೇಕೆಂತ ಅರ್ಜಿದಾರಳು ಅರ್ಜಿ ದಾಖ್ಲು ಮಾಡಿರುತ್ತಾಳೆ. ಈ ಕುರಿತು ಯಾರದ್ದಾದರೂ ಆಕ್ಷೇಪಣೆಯಿರುವುದಾದರೆ ತಾ.22 6 1950 ನೇ ದಿವಸ ಹಗ್ಗು 11 ಗಂಟೆಗೆ ಈ ಕೋರ್ಟು ಮುಂದೆ ಜ್ಯಾಹೀರು ಮಾಡಿಕೊಳ್ಳಬಹುದು

(Sd) **A.V.N Hebbar,**
Pleader for Petr.

Kundapur, 10 6 1950.



Approved form by the Govt of Mysore
Certificated by the Agent of the Govt of
Orissa & Indian

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೀಲುಗಳು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಳಿಯಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮಾರಾ, ಕುಂಬಳಕಾಯಿ, ಬೈಹ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹು.ಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ದೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ-

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಪೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿ ಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರಿವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಪೂಲಕರು:—ಹಾಲಪ್ಪಾ ಭಕೇರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಪಾನಸ್ಪ ಸದ್ಗಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೆರಿ ಡಾ್ಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ್, ಪಾನೇರಿ, ಬ್ಯಾಡಗಿ

Notice.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O P. 58/1950

ಅರ್ಜಿದಾರ—ಮೈನರ ಗೋಪಾಲಕೃಷ್ಣ, ರಕ್ಷಕ ತಂದೆ ಸಾಂದ ರಂಗ ಶೇಟ್, ಕುಂದಾಪುರ.

ಯಾವತ್ತೂ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಅರ್ಜಿದಾರನ ತಾಯಿ ಮೃತ ಶಾಂತಾ ಬಾಯಿಯು ಬಾಬ್ತು ಯಿನ್ಯೂರೆನ್ಸು ಹಣಕ್ಕೆ ತಾನು ಬಾಧ್ಯಸ್ಥನಾದ್ದರಿಂದ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರನು ಅರ್ಜಿ ದಾಖ್ಲು ಮಾಡಿದ್ದಾನೆ. ಆಕ್ಷೇಪಯುರುವವರು ತಾ 29-6-1950 ನೇ ದಿನ ಹಗ್ಗು 11 ಗಂಟೆಗೆ ಈ ಕೋರ್ಟು ಮುಂದೆ ಜ್ಯಾಹೀರು ಮಾಡಿಕೊಳ್ಳಬಹುದು.

A. V. N. Hebbar,
Pleader for Petr-
Kundapur, 11-6-1950

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷ್ನರಿಗಳು
ದೊರೆಯುತ್ತವೆ.
ಬೆಲೆ. ರೂ. 5 0 0
ಸಿರಿಗನ್ನಡ ಆರ್ಥಕೋಶ 4 8 0
ನವಯುಗ ಪ್ರೆಸ್, ಉಡುಪಿ.

ನಮ್ಮಲ್ಲಿ ಬಹುಮಂದಿಗೆ ಹಲ್ಲಿನ ಆರೋಗ್ಯ ಹಾಗೂ ಹಲ್ಲಿನ ವಿಷಯದಲ್ಲಿ ತುಂಬಾ ಜಾಗ್ರತೆ ವಹಿಸುವುದು ಅವಶ್ಯವಾಗಿದೆ ಯೆಂದು ತಿಳಿದಿಲ್ಲ. ವಿದ್ಯಾವಂತರಿಗೆ ಸಹ ಈ ವಿಷಯಗಳಲ್ಲಿ ಸಾಕಷ್ಟು ಜ್ಞಾನವಿರುವಂತೆ ತೋರುವುದಿಲ್ಲ. ಅಮೇರಿಕಾ ದೇಶದ ಶಾಲೆಗಳಲ್ಲಿ ಉಪಯೋಗಿಸುತ್ತಿರುವ ಆರೋಗ್ಯ ಸಂಬಂಧವಾದ ಅನೇಕ ಪಠ್ಯ ಪುಸ್ತಕಗಳನ್ನು ನೋಡಿದಾಗ ಅಲ್ಲಿನ ದಂತ ಸಮಿತಿಯು (Dental Committee) ಪರಿಶೀಲಿಸಿದಾಗ ಹಲ್ಲಿನ ವಿಷಯದಲ್ಲಿ ತುಂಬಾ ಕಪ್ಪು ಅಭಿಪ್ರಾಯ ತಿಳಿದ್ದುದನ್ನು ಕಂಡು ಹಿಡಿದಿದೆ. ಹಲ್ಲಿನ ಆರೋಗ್ಯವಾದರೆ ಗರ್ಭಸಿಂಡದಲ್ಲಿನಯೇ ಹಾಕಲ್ಪಟ್ಟ ಮೆದಿವಾಬುದೂ ಗರ್ಭಿಣಿಸ್ತ್ರೀಯರ ಹಾಗೂ ಹಾಲು ಕುಡಿಸುವ ಮಕ್ಕಳ ಆಹಾರದಲ್ಲಿ ಸಾಕಷ್ಟು ಪೌಷ್ಟಿಕ ಪದಾರ್ಥಗಳಿಲ್ಲದಿದ್ದರೆ ಅದರಿಂದ ಬಲಿಷ್ಠವಾದ ಉತ್ತಮ ಹಲ್ಲುಗಳಿಗೆ ತುಂಬಾ ಬಾಧಕವಿದೆಯೆಂದೂ ನಾವು ನೆನಸಿಕೊಳ್ಳಬೇಕು.

ಮುಖಾಯಿ ಹೆಚ್ಚು ತಿನ್ನಬಾರದು

ಹೆತ್ತವರು ತಮ್ಮ ಚಿಕ್ಕ ಮಕ್ಕಳ ಹಲ್ಲಿನ ಕಡೆಗೆ ಗಮನಕೊಡದೆ ತುಂಬಾ ತಪ್ಪು ಮಾಡುತ್ತಾರೆ. ಅವರ ಹಲ್ಲು ಕೆಲವೇ ವರ್ಷಗಳಲ್ಲಿ ಬಿದ್ದು ಹೋಗುತ್ತದೆಂದೇ ಈ ಅಸಡ್ಡೆ. ಈ ಹಲ್ಲನ್ನು ಆರೋಗ್ಯಕರವಾಗಿರಿಸಿದ್ದರೆ ಹಾಗೂ ಅದು ಬಹು ಬೇಗನೇ ಬಿದ್ದರೆ ದವಡೆಯ ಬೆಳವಣಿಗೆಗೆ ಹಾನಿ ತುಂಬಾಗುತ್ತದೆಂಬುದೂ ಮುಖದ ಚಹರೆ-ಹೊಂದಿಕೆ-ರೂಪಗಳಿಗೆ ಬಾಧಕ ವಾಗಬಹುದೆಂಬುದೂ ಅವರಿಗೆ ತಿಳಿದಿಲ್ಲ. ಈ ಹಲ್ಲು ಬೇಗಲು ಹೆಚ್ಚು ವಿಳಂಬವಾದರೆ ಇಯಾಂ ಹಲ್ಲು ಸರಿಯಾದ ಸ್ಥಳಗಳಲ್ಲಿ ಬಾರದೆ, ಓರೆಕೋರೆಯಾಗಿ ಬರುತ್ತದೆ. ಚಿಕ್ಕ ಮಕ್ಕಳು ಅವರ ಹಲ್ಲನ್ನು ಸ್ವಚ್ಛವಾಗಿರಿಸುವಂತೆ ಮಾಡುವುದು ಸುಲಭವಲ್ಲ ಆವರಿಗೆ ಮುಖಾಯಿ ಇತ್ಯಾದಿ ಸಿಹಿತಿಂಡಿಗಳನ್ನು ಹೆಚ್ಚು ಕೊಡುವುದರಿಂದ ಎರಡು ಮೂರು ವರ್ಷ ಸ್ವಾಯಾವಾಗುವುದಕ್ಕಿಂತ ಮುಂಚೆ ಹಾಲು ಒಂದೆರಡು ಹಲ್ಲುಗಳಲ್ಲಿ ಹುಳುಕು ಕಾಣಿಯುವುದು ಅಶ್ಚರ್ಯವಲ್ಲ. ಹಲ್ಲಿಗೆ ಹುಳುಕು ಹಿಡಿದು ತೂತು ಬೀಳುವುದು ಇಗ ಬಂದು ಸರ್ವಸಾಮಾನ್ಯ ರೋಗವಾಗಿದೆ. ಮಕ್ಕಳ ಹಲ್ಲು ಓರೆಕೋರೆಯಾಗಿರುವುದು, ದವಡೆಗಳು ಸರಿಯಾಗಿ ಹೊಂದಿಕೆಯಲ್ಲಿಲ್ಲದಿರುವುದು, ಇವು ಸಹ ಇಂದು ಸಾಮಾನ್ಯವಾಗಿ ಕಾಣುತ್ತದೆ.

ಮುಖಕ್ಕೆ ಅಲಂಕಾರ

ನಾವೆಲ್ಲರೂ ನಮ್ಮ ಮುಖವು ಚಂದವಾಗಿರಬೇಕೆಂದು ಆಶಿಸುತ್ತೇವೆ. ನಮ್ಮ ಮುಖದ ಮೂರರಲ್ಲಿ ಎರಡು ಪಾಲಷ್ಟು ಅಂಶವು ಹಲ್ಲು-ದವಡೆಗಳಿಂದ ಕೂಡಿದೆಂಬುದನ್ನು ನಾವು ಪ್ರಥಮತಃ ತಿಳಿಯಬೇಕು. ಮುಖ್ಯವಾಗಿ ಸ್ತ್ರೀಯರು ಈ ವಿಷಯದಲ್ಲಿ ಹೆಚ್ಚಿಗೆ ಗಮನಕೊಡಬೇಕು. ಅವರ ಅಂದ ಚಂದದಲ್ಲಿ ಬಿಳಿಯ ಸುರಚಿತ ಹಲ್ಲಿಗಿಂತ ಉತ್ತಮ ಅಲಂಕಾರ ವಸ್ತುವಿಲ್ಲವೆನ್ನಬಹುದು ಎಂತಹ ಶೃಂಗಾರ ವಸ್ತುಗಳಿಗೂ ಹೋಲಿಕೋರೆ-ಆಕೃತಿಯಾಗಿರುವ ಹಲ್ಲನ್ನು ಮೀರಿಸಲು ಸಾಧ್ಯವಾಗುವುದಿಲ್ಲ. ಓರೆಕೋರೆ-ಕ್ರಮ ತಪ್ಪಿರುವ ಹಲ್ಲನ್ನು ಸರಿಗೊಳಿಸುವಂತಹ ದಂತಶಾಸ್ತ್ರವು ಇತ್ತೀಚಿಗೆ ಕೆಲವು ವರ್ಷಗಳಿಂದ ತುಂಬಾ ಪ್ರಗತಿ ಹೊಂದಿದೆ. ಈ ಕೆಲಸದಲ್ಲಿ ನಿಪುಣರಾದ ದಂತವೈದ್ಯರಿಗೆ ಮಕ್ಕಳ ಹಾಗೂ ಯುವಕರ ಹಲ್ಲುಗಳನ್ನು ಸರಿಪಡಿಸುವುದಕ್ಕೂ ಮುಖದ ಸಾಮಾನ್ಯ ರೂಪವನ್ನು ತಿರುಗಿ ಒಪ್ಪಿಗಿಸುವುದಕ್ಕೂ ಸಾಧ್ಯವಿದೆ.

ಹಲ್ಲು ರೋಗದ ಪರಿಣಾಮ

ಹಲ್ಲಿನ ಸ್ಥಿತಿಗತಿಗೂ ದೇಹದ ಸಾಮಾನ್ಯ ಆರೋಗ್ಯಕ್ಕೂ ಇರುವ ನಿಕಟ ಸಂಬಂಧ ವನ್ನು ವೈದ್ಯರೆಲ್ಲರೂ ತಿಳಿದಿರುವರು. ಸಾಮಾನ್ಯ ಜನರು ಹಲ್ಲಿನ ರೋಗಗಳು ಬಾಯಿಯೊಳಗೆ ಮಾತ್ರವಲ್ಲದೆ ಇಡೀ ದೇಹಕ್ಕೆ ಅನ್ವಯಿಸುವುದಿಲ್ಲವೆಂದು ಭಾವಿಸ ಬಹುದು. ಬಾಯಿಯಿಂದ ದೇಹದ ಇತರ ಅವಯವಗಳಿಗೆ ರೋಗವು ತಗಲುತ್ತದೆಂಬುದೂ ಅಲ್ಲಿನ ರೋಗವು ಇತರ ಹಲವಾರು ರೋಗಗಳಿಗೆ ಕಾರಣವಾಗುತ್ತದೆಂಬುದೂ ನಮ್ಮಲ್ಲಿ ಹೆಚ್ಚು ಮಂದಿಗೆ ತಿಳಿದಿಲ್ಲ. ಬಾಯಿಯನ್ನು ಸ್ವಚ್ಛವಾಗಿಡದಿರುವ ಪರಿಣಾಮವಾಗಿ ಹಲ್ಲುಗಳಿಗೂ ವಸಡಿಗೂ ತಗಲುವ ರೋಗಗಳು ಹಲ್ಲನ್ನು ತೆಗೆದು ಬಿಡುವುದರಿಂದಲೂ ವಸಡಿನ ಚಿಕಿತ್ಸೆ ನಡೆಸುವುದರಿಂದಲೂ ನಿವಾರಿಸಲ್ಪಡಬೇಕಾಗುತ್ತದೆ. ಇಂತಹ ಕಠಿಣ ಪರಿಣಾಮಗಳ ಭಯಕ್ಕೆಲ್ಲವಾದರೂ ಬಾಯಿಯನ್ನು ಸದಾ ಸ್ವಚ್ಛವಾಗಿಯೂ ಸುವಾಸನೆಯುಕ್ತವಾಗಿಯೂ ಇಡುವುದು ಯೋಗ್ಯ.

ಪ್ರತಿಬಂಧಕ ಕೆಲಸ

ಉಪಯೋಗ್ಯ ಚಂದ, ಆರೋಗ್ಯ ಇವುಗಳ ದೃಷ್ಟಿಯಿಂದ ಹಲ್ಲಿನ ಕೊರತೆ, ರೋಗದ ಸೋಂಕು, ಇತ್ಯಾದಿಗಳನ್ನು ಕಡೆಯುವುದು ಎಷ್ಟು ಸ್ವಾಮುಖ್ಯವಾದುದೆಂದು ಜನರು ಮನನಮಾಡಬೇಕು. ಹಲ್ಲಿನ ಜಾಗ್ರತೆಯು ಮಗುವಿಗೆ ಮೂರು ವರ್ಷ ವ್ಯಾಯವಾಗುವುದರೊಳಗೆನೇ ಆರಂಭವಾಗಬೇಕೆಂದರೆ ಹೆಚ್ಚಲ್ಲ. ವಿಶ್ವವಿದ್ಯಾಲಯಗಳಲ್ಲಿಯೂ ಶಾಲೆಗಳಲ್ಲಿಯೂ ಮಕ್ಕಳ ಹಲ್ಲು ಪರೀಕ್ಷಿಸುತ್ತಿರುವುದರಿಂದ ಅನೇಕ ಹಲ್ಲಿನ ಭಾವೀ ಕೊಂದರೆಗಳನ್ನು ನಿವಾರಿಸಲು ತುಂಬಾ ಅನುಕೂಲವಾಗುತ್ತದೆ. ನಮ್ಮ ಇಡೀ ಜನತೆಯ ದಂತ ಚಿಕಿತ್ಸೆಗೆ ಸಾಕಷ್ಟು ದಂತ ವೈದ್ಯರನ್ನು ಒದಗಿಸಲು ದೀರ್ಘಕಾಲ ಹಿಡಿಯಬಹುದಾದುದರಿಂದ ಪ್ರತಿಬಂಧಕ ಕೆಲಸದ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ.

ರಾತ್ರಿ ಊಟವಾದ ಮೇಲೆ ಹಲ್ಲುಜ್ಜುವುದು

ಇಂದು ವೈದ್ಯಕೀಯ ಕೆಲಸದಲ್ಲಿ ಪ್ರತಿಬಂಧನೇ ಮುಖ್ಯವಾಹುದು. ಆರೋಗ್ಯ ಶಿಕ್ಷಣದ ಕಡೆಗೂ ಪ್ರತಿಬಂಧಕ ನಿರ್ವಾದುಗಳ ಳಕಡೆಗೂ ಇಂದು ಬತ್ತಾಯಿಸಲಾಗುತ್ತದೆ. ಈಗಿನ ಆಧುನಿಕ ಆಭಿಪ್ರಾಯಗಳ ಪ್ರಕಾರ ಆರೋಗ್ಯ ಶಿಕ್ಷಣವೆಂದರೆ ಬರೇ ಆರೋಗ್ಯ ವಿಷಯಗಳನ್ನು ತಿಳಿಯಪಡಿಸುವುದಲ್ಲ. ಸರಿಯಾದ ಆರೋಗ್ಯ ಅಭ್ಯಾಸಗಳು ಜನರಲ್ಲಿ ಹುಟ್ಟುವಂತೆ ಮಾಡುವುದಾಗಿದೆ. ಪ್ರತಿ ನೈಕ್ತಿಯ ಜೀವನದಲ್ಲಿ ಹಲ್ಲಿನ ಆರೋಗ್ಯ ನಿಯಮವು ಮುಖ್ಯವಾಗಿರಬೇಕು. ಆದಕ್ಕೆ ಬೇಕಾದ ತಳಹದಿಯನ್ನು ಶಿಕ್ಷಣಾಭ್ಯಾಯದಲ್ಲಿಯೇ ಹಾಕಬೇಕು. ಪ್ರಾಥಕ ಕಾಲದಲ್ಲಿ ಹಲ್ಲು ತೊಳೆಯುವುದಕ್ಕಿಂತಲೂ ರಾತ್ರಿಯಲ್ಲಿ ಮಲಗುವುದಕ್ಕಿಂತ ಮುಂಚೆ ಸ್ವಚ್ಛಗೊಳಿಸುವುದು ಮುಖ್ಯವೆಂಬುದು ಎಲ್ಲರಿಗೂ ತಿಳಿದಿರಲಿ. ಪ್ರತಿ ಊಟದ ನಂತರ ಹಲ್ಲು ಸ್ವಚ್ಛಗೊಳಿಸುವುದೇ ಉತ್ತಮ ಕೆಲಸ. ಹಲ್ಲನ್ನು ಸ್ವಚ್ಛಗೊಳಿಸುವುದರಲ್ಲಿ ಸಂಯಮ ಪ್ರಮುಖವಾದುದೆಂದು ಮಕ್ಕಳಿಗೆ ಕಲಿಸಬೇಕಲ್ಲದೆ ಅದನ್ನು ಒಂದು ಆಭ್ಯಾಸವನ್ನಾಗಿಯೇ ಮಾಡಬೇಕು. ಶಾಲೆಗಳಲ್ಲಿ ಹಲ್ಲು ಸ್ವಚ್ಛಗೊಳಿಸುವ ಪ್ರದರ್ಶನಗಳನ್ನೇನೇ ನಡೆಸಬೇಕು. ದೇಹ ಸ್ವೆರ್ಯಲ್ಯದ ಕುರಿತು ಪಾಠ ಹೇಳಿಕೊಡುವುದಕ್ಕಿಂತ ಹೆತ್ತವರ ಹಾಗೂ ಉಪಾಧ್ಯಾಯರ ಕಾರ್ಯತಃ ನಿದರ್ಶನಗಳಿಂದ ಮಕ್ಕಳಿಗೆ ಹೆಚ್ಚು ಪ್ರಯೋಜನವಾಗುವುದು.

ಪ್ರಚಾರ ಕೇಂದ್ರ

ನಮ್ಮ ನೂನ್ಯ ಶ್ರೀ. ಎ. ಬಿ. ಶೆಟ್ಟಿಯವರು ಇತ್ತೀಚೆಗೆ ದಂತಾರೋಗ್ಯ ಪ್ರಚಾರದ ಕೇಂದ್ರವನ್ನು ಉದ್ಘಾಟಿಸಿದರು. ಹಲ್ಲಿನ ಆರೋಗ್ಯಕ್ಕೆ ಸಂಬಂಧವಾದ ವಿಷಯಗಳಲ್ಲಿ ಜನತೆಗೆ ತಿಳುವಳಿಕೆಯನ್ನು ಕೊಡುವುದರಲ್ಲಿ ದೇಶದ ಅಧ್ಯಂತ ಎಲ್ಲಾ ಕಡೆಗಳಲ್ಲಿಯೂ ಇಂತಹ ಕೇಂದ್ರಗಳು ಸ್ಥಾಪಿಸಲ್ಪಟ್ಟರೆ ತುಂಬಾ ಸಹಕಾರಿಯಾಗುವಷ್ಟೆಂಬುದು ಖಂಡಿತ. ಡಾ॥ ಮೆರಿಕ್ ಅವರು ದಂತ ಸಂಬಂಧ ತರಬೇತಿ ಸಂಸ್ಥೆ (Dental Training Institute) ಯನ್ನು ಸ್ಥಾಪಿಸುವುದಕ್ಕೋಸ್ಕರ ನಮ್ಮ ಸರಕಾರಕ್ಕೆ ಒಂದು ಯೋಜನೆಯನ್ನು ತಯಾರಿಸಿರುವರು. ಅಮೇರಿಕದ ದಂತ ಸಂಘದವರು ನಡೆಸಿಕೊಂಡು ಬರುವ ಪ್ರಚಾರ ಕೇಂದ್ರವು ಹಲ್ಲಿನ ಜಾಗ್ರತೆ ತೆಗೆದುಕೊಳ್ಳುವ ಹಾಗೂ ರಕ್ಷಿಸುವ ವಿಷಯದಲ್ಲಿ ಜನತೆಗೆ ಸರಿಯಾದ ಸಲಹೆ ಕೊಡುವುದೆಂದು ನಮ್ಮ ಮಾನ್ಯ ಮಂತ್ರಿಗಳು ಆಶಿಸಿದ್ದಾರೆ. ಜನರು ಹರಿಸ್ಪೆಸಲ್ಪಟ್ಟ ಹಲ್ಲಿನ ಔಷಧಿಗಳನ್ನು ಉಪಯೋಗಿಸುವಂತೆ ಈ ಕೇಂದ್ರವು ತಕ್ಕ ಪ್ರಚಾರ ಮಾಡುವುದು, ಇದರಿಂದ ಜನತೆಯ ಹಾಗೂ ದಂತ ವೈದ್ಯ ವೃತ್ತಿಯವರ ಸೇವೆ ಮಾಡಿದಂತಾಗುತ್ತದೆ. ನಮ್ಮ ಜನರಲ್ಲಿ ಬಹು ಮಂದಿ ಬಡವರಾದುದರಿಂದಲಾಗಿ ಅವರು ಉಪಯೋಗಕ್ಕೆ ಬೇಕಾದ ದಂತರಕ್ಷಕ ವಸ್ತುಗಳನ್ನು ಶಿಫಾರಸು ಮಾಡುವುದರ ಕಡೆಗೂ ಗಮನ ಕೊಡುವುದರಲ್ಲಿ ಸಂಶಯವಿಲ್ಲ.

(ಮ. ಸ.)

ಹಲ್ಲಿನ ಜಾಗ್ರತೆ

ಹಲ್ಲು ಅಚ್ಚುಕಟ್ಟಾಗಿ ನಿರ್ಮಲವಾಗಿದ್ದರೆ ಅನೇಕ ರೋಗಗಳನ್ನು ಗೆಲ್ಲಬಹುದು.

NOTICE

In the Court of the Subordinate Judge, South Kanara

S. E. A 112/1949.
S. E. P. 52/1949.

Between:-

Koraga Marakala ... ...
Claim-Petitioner.
and
A. B. C. D. Andrade & 2 others ... Respondents.

To

The 3rd Respondent Bavjan Saheb, son of Kattangeri Ghouse Saheb and residing at Hangarkatta of Balakudru village, Udipi Taluk.

Please take notice that the above claim petition stands posted to 3-7-1950 for enquiry at 11 A. M. in the above court. You may appear on that day in person or pleader and contest the same, or else it will be decided in your absence.

A. **Shanker Alva,** B.A., B.L.,
Vakil for Petitioner.

Mangalore, Dated 14-6-50.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಜೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಬಿಎಲ್. ಐ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾಪಕರು:—ಡಾ॥ ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಖಂಡಿತ ಸ್ವಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಯತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣವೊಂದಲ್ಲ ಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mis D. DEVEE, F. DS. (N. J.)
Tollygunge CALCUTTA.
ಸ್ಥಾಪಕಿಸ್ತರು: ಶಕಾಂಪೆನಿ, ಮಂಗಳೂರು

ಪಂಚಾಯತ ಬೋರ್ಡ್,
ಗ್ರಾಮ ಕಮಿಟಿ, ಶಾಲಾ ಕಾಲೇಜು
ಮೊದಲಾದುವುಗಳ
ಲೈಬ್ರೆರಿಗಳಿಗೆ
ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ,
ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

ಕುಟುಂಬ

ಕುಟುಂಬವು ನಾಗರಿಕತೆಯಾದ ಹಾಗೂ ಆತ್ಮಾವಶ್ಯಕವಾದ ಸಂಸ್ಥೆಯಾಗಿದೆ ವ್ಯಕ್ತಿಯು ಕುಟುಂಬದ ತಳಪಾಯ; ಕುಟುಂಬವೇ ಸಮಾಜದ ತಳಪಾಯ. ಈ ಸಂಸ್ಥೆಯನ್ನು ನಾವು ಅನಾಗರಿಕ-ನಾಗರಿಕ, ತೀರ ಇತ್ತೀಚಿನ ಜನರಲ್ಲಿ ಕೂಡ ಕಾಣುತ್ತೇವೆ. ಕುಟುಂಬದ ಉಗಮವು ಇಂತಹ ದವನವೇ ಆಯಿತೆಂದು ಹೇಳಲು ಸಾಧ್ಯವಿಲ್ಲ. ಚರಿತ್ರೆಯನ್ನು ಬರೆಯುವಷ್ಟಕ್ಕಿಂತ ಮೊದಲು ಕೂಡ. ಕುಟುಂಬವು ಅಸ್ತಿತ್ವದಲ್ಲಿತ್ತು. ಕುಟುಂಬದ ಉಗಮವನ್ನು ಕಂಡು ಹಿಡಿಯಲು ಎಷ್ಟೋ ಜನರು ಪ್ರಯತ್ನಿಸಿ ಅಯಶಸ್ವಿಗಳಾಗಿದ್ದಾರೆ. ಕುಟುಂಬವು ಹುಟ್ಟಿ ಎಷ್ಟೋ ಸಾವಿರ ವರುಷಗಳಾಗಿರಬಹುದು.

ಮಾನವನು ಹುಟ್ಟಿದಂದಿನಿಂದ(ಮಂದಿಯು ವ ವರೆಗೂ ಎಷ್ಟೋ ವಿಷಯಗಳಲ್ಲಿ ಪರಾವಲಂಬಿ ಮನುಷ್ಯನಲ್ಲಿ ಕೆಲ ಜುಟ್ಟುಗುಣಗಳು ತೀರ ಸ್ವಾಭಾವಿಕವಾಗಿರುವವು. ಮೊದಲನೆಯದಾಗಿ, ಈ ಜಗತ್ತಿನಲ್ಲಿ ಮಾನವನು ಏಕಾಕಿಯಾಗಿ ಜೀವಿಸಲಾರ. ಅವನಿಗೆ ಇದು ಒಗ್ಗದು ಆದಕ್ಕಾಗಿ ಅವನು ಎರಡನೆಯವರ ಸಹವಾಸವನ್ನು ಬಯಸುತ್ತಾನೆ. ಅನ್ನ, ಬಟ್ಟೆ, ಮುಂತಾದವುಗಳನ್ನು ವಿನಾಕಯಾಗಿದ್ದು ಕೊಂಡು ಸಂಪಾದಿಸುವದು ಅಸಾಧ್ಯವೇ ಸರಿ. ಆದುದರಿಂದ ಅನ್ನ, ಬಟ್ಟೆ, ಮುಂತಾದವುಗಳಿಗಾಗಿ ಎರಡನೆಯವರ ಸಹಕಾರ,ಸಹಾಯ ಅವನಿಗೆ ಅತ್ಯಾವಶ್ಯವಾಗಿ ಬೇಕಾಯಿತು. ಒಕ್ಕಲತನವನ್ನು ಕೈಕೊಂಡ ಮೇಲೆ ಒಂದೆಡೆಗೆ ತಳವೂರಬೇಕಾಯಿತು. ಕೆಲಸದ ಭಾರ ಹೆಚ್ಚಾಗಲು ಎರಡನೆಯವರ ಸಹಾಯ ಪಡೆಯಬೇಕಾಯಿತು.

ಕುಟುಂಬವು ಅಸ್ತಿತ್ವದಲ್ಲಿ ಬರಲು ಕೆಲವು ಜೀವನೋಪಯೋಗಿ ಪ್ರಾಣಿ ಗುಣ ಧರ್ಮ ಶಾಸ್ತ್ರಿಯ ಸಂಗತಿಗಳು ಕೂಡ ಕಾರಣವಾಗಿವೆ. ಇವು ಕುಟುಂಬದ ತಳಪಾಯವನ್ನು ಭದ್ರ ಮಾಡುತ್ತವೆ ಮಾನವನು ಗುಂಪು ಕಟ್ಟಿಕೊಂಡು ಅಡ್ಡಾಡುವಾಗ ಅನಿಸಿಗೆ ಅನ್ನ, ಬಟ್ಟೆ, ಮುಂತಾದವುಗಳ ಸಮಸ್ಯೆ ಮುಖ್ಯ ಅತ್ಯಾವಶ್ಯಕ ವಸ್ತುವೆನಿಸಿತು. ಮೂರನೆಯ ದಾಗಿ, ನೂತ್ಯನಾಶ್ಯಲ್ಯ, ಪುತ್ರ ಪ್ರೀತಿಯಂತಹ ಕುಟುಂಬದ ಮಾನಸಿಕ ಸಂಗತಿಗಳು ಕೂಡ ಇದರ ತಳಪಾಯವನ್ನು ಭದ್ರಮಾಡಿದೆ. ಈ ಕಾರಣಗಳು ಎಲ್ಲ ಕುಟುಂಬವು ಆಸ್ತಿತ್ವದಲ್ಲಿ ಬಂತು. ಕುಟುಂಬವು ಇವೆಲ್ಲವುಗಳನ್ನು ಪೂರೈಸುತ್ತದೆ. ಆದುದರಿಂದ ಇವೆಲ್ಲವುಗಳನ್ನು ಪೂರೈಸುವವರೆಗೆ ಕುಟುಂಬವು ಆಸ್ತಿತ್ವದಲ್ಲುಳಿಯುವದು, ಆಧುನಿಕ ಇನ್ನೆಲ್ಲ ಸಂಗತಿಗಳನ್ನು ಪೂರೈಸುವ ಇನ್ನೊಂದು ಸಂಸ್ಥೆಯನ್ನು ಇದರ ಬದಲು ಕಂಡು ಹಿಡಿದಾಗ ಇದು (ಕುಟುಂಬವು) ಅಳಿಯುವದು

ಕುಟುಂಬವು ಇಷ್ಟು ವರುಷಗಳವರೆಗೆ ತಾಳಿ ಬಾಳಿದ್ದರೂ, ಕೆಲ ಮಹತ್ವದ ಸಂಗತಿಗಳು, ಇದರ ತಳಪಾಯವನ್ನು ಮುಗ್ಗರಿಸಿವೆ. ಆರ್ಥಿಕ ಪರಿಸ್ಥಿತಿ ಸಮಾಧಾನಕರವಿಲ್ಲ ಪ್ರತಿಯೊಂದು ಕುಟುಂಬದ ಆರ್ಥಿಕ ಪರಿಸ್ಥಿತಿಯಲ್ಲಿ ಹೊಂದರೆಗಳು ಬಹಳ ಉಂಟು. ಕುಟುಂಬದ ವೆಚ್ಚ ಮಿತ ಮೀರಿ ಬೆಳೆದಿದೆ. ಹೀಗಾಗಿ ಕುಟುಂಬದ ಜನರಿಗೆ ಅನ್ನ ಬಟ್ಟೆಗಳನ್ನು ಹೊಂದಿಸುವದು ಕುಟುಂಬದ ಮುಖ್ಯಸ್ಥನಿಗೆ ಅಸಾಧ್ಯವಾಗಿದೆ. ಆದುದರಿಂದ ಆರ್ಥಿಕ ಪರಿಸ್ಥಿತಿಯು, ಕುಟುಂಬದ ವಿನಾಶಕ್ಕೆ ಮೊದಲನೆಯ ಪ್ರಾಮುಖ್ಯ ಕಾರಣವಾಗಿದೆಯೆಂದು ಹೇಳಬಹುದು. ಭಾರತದ ವಿಷಯದಲ್ಲಂತೂ ಆರ್ಥಿಕ ಪರಿಸ್ಥಿತಿ ಕುಂಠಾ ಶೋತ್ಪನೀಯವಾಗಿದೆ. ನಮ್ಮ ಆರ್ಥಿಕ ಪರಿಸ್ಥಿತಿ ಹದಗೆಡಲು, ಇಂಗ್ಲೆಂಡಿನ ಔದ್ಯೋಗಿಕ ಕ್ರಾಂತಿಯೇ ಮುಖ್ಯ ಕಾರಣವಾಯಿತೆನ್ನಬಹುದು. ಔದ್ಯೋಗಿಕ ಕ್ರಾಂತಿಯಿಂದ ಯಂತ್ರೋಪಕರಣಗಳು ಹೇರಳವಾಗಿ ದೊರೆತು ಕೈಗಂಠಕಯು ಕ್ಷೀಣಿಸುತ್ತ ಹೋಯಿತು ಕಾರ್ಖಾನೆಗಳು ಉಜ್ಜಿಗಿ ಮೊದ್ದ ಗೂದ್ದ ಪಟ್ಟಣಗಳು ಬೆಳೆದವು. ಹಳ್ಳಿಗಳಲ್ಲಿ ಒಕ್ಕಲತನಕ್ಕೆ ಮತ್ತು ಕೈಗಂಠಿಕಗ ನಾಕಷ್ಟು ಪ್ರೋತ್ಸಾಹ್ಯವೊರೆಯಲಿಲ್ಲ ಹೀಗಾಗಿ ಹಳ್ಳಿಗರು ಪಟ್ಟಣಗಳಿಗೆ ಬಂದು, ಕೂಲಿಗಳಾಗಬೇಕಾಯಿತು ಈ ಆರ್ಥಿಕ ಪರಿಸ್ಥಿತಿ, ಕುಟುಂಬಕ್ಕೆ ದೊಡ್ಡ ಆಘಾತವಾಗಿ ಪರಿಣಮಿಸಿತು.

ಎರಡನೆಯದಾಗಿ ರಾಜಕೀಯ ಮತ್ತು ರೈಕ್ಷಣಿಕ ಕ್ರಾಂತಿ ಜನರಲ್ಲಾಗಿ ಕುಟುಂಬದ ಮೇಲೆ ಪ್ರಹಾರ ಮಾಡಿದವು. ಸಾಮೂಹಿಕ ಮಹತ್ವದ ಬದಲು, ವೈಯಕ್ತಿಕ ವ್ಯಕ್ತಿಗೆ ಮಹತ್ವ ಹೆಚ್ಚಾಗಿ ಹಾಗಿರಲು ಪ್ರಾರಂಭಿಸಿತು ಪ್ರತಿಯೊಂದು ವ್ಯಕ್ತಿಯ ಕಲ್ಯಾಣವೇ ಮುಖ್ಯ ಸಮಸ್ಯೆಯಾಯಿತು ವ್ಯಕ್ತಿಗೆ ಮಹತ್ವ ಬಂದುದುಂದ, ಕುಟುಂಬ ಸಮಾಜ ಹಾಳಾಗುವ ಪ್ರಸಂಗ ಒಂದಿತು

ಜನರಲ್ಲಾದ ಧಾರ್ಮಿಕ ಕ್ರಾಂತಿಯು ವಿನಾಶಕ್ಕೆ ಮೂರನೆಯ ಕಾರಣವಾಯಿತು. ಧಾರ್ಮಿಕ ಸಂಪ್ರದಾಯಗಳು ಕುಟುಂಬದ ತಳಪಾಯವನ್ನು ಭದ್ರ ಮಾಡಲು ಸಹಾಯಕವಾಗಿದ್ದವು. ಕುಟುಂಬ ಧರ್ಮದ ಮೇಲೆಯೇ ನಿಂತಿದೆ. ಜನರು ಸಾಂಪ್ರದಾಯದಿಂದ ದವನ್ಮುಖರಲ್ಲಿ ಆಶ್ರದ್ಧೆಯನ್ನು ತಳೆದರು, ಜನರಲ್ಲಿ ನುತ್ತು ಸಮಾಜದಲ್ಲಿ ಕಾನೂನುಗಳಿಂದ ಹೊಸ ಹೊಸ ಸುಧಾರಣೆಗಳಾದವು. ಜನರು ಮೂಢ ನಂಬಿಕೆಗಳನ್ನು ಬಿಟ್ಟರು. ಹೀಗಾಗಿ ಧಾರ್ಮಿಕ ಕ್ರಾಂತಿ ಕುಟುಂಬಕ್ಕೆ ಹಿತಕಾರಿಯಾಗದೆ,ಕುಟುಂಬದ ವಿನಾಶಕ್ಕೆ ದಾರಿಮಾಡಿಕೊಟ್ಟಿತೆ.

ನಾಲ್ಕನೆಯದಾಗಿ, ಕೆಲವು ಪ್ರಸಿದ್ಧ ಜನರು ಕುಟುಂಬದಲ್ಲಿ ಆತ್ಯಾಧುನಿಕ ಸುಧಾರಣೆಗಳನ್ನು ಮಾಡಲು ಪ್ರಯತ್ನಿಸಿದರು. ಈ ಸುಧಾರಣೆಗಳು ಸಮಾಜದಲ್ಲಿ, ಧರ್ಮದಲ್ಲಿ ಸುಧಾರಣೆಗಳನ್ನು ಮಾಡಲು ಯತ್ನಿಸಿದರೂ, ಕುಟುಂಬವು ಕುಸಿದು ಹೋಗುವ ಪ್ರಸಂಗ ಬಂದಿತು. ಪರಣಾಡುಗಳಲ್ಲಿಂತೂ ಅರಿಸ್ಟೋಟಲ್, ಪ್ಲೇಟೋ, ಮೊದಲಾದವರು ಕುಟುಂಬದ ವಿರುದ್ಧ ಪ್ರಚಾರವನ್ನೇ ಪ್ರಾರಂಭಿಸಿದರು.

ಪ್ರತಿಯೊಂದು ವಸ್ತುವಿಗೆ ಎರಡು ಬದಿಗಳಿರುವಂತೆ ಕುಟುಂಬಕ್ಕಾದರೂ ಕೆಲವು ಮಹತ್ವ ಹಿತಾಹಿತಗಳುಂಟು ಕುಟುಂಬದಿಂದ ಲಾಭವೂ ಉಂಟು; ಹಾನಿಯೂ ಕೂಡ ಉಂಟು ಕುಟುಂಬವು ಚಿಕ್ಕ ಮಗುವಿಗೆ ತೀರ ಮಹತ್ವದ ಕೆಲವು ಪಾಠಗಳನ್ನೀಯುತ್ತದೆ. ಎಳೆಮಗು ಕುಟುಂಬದಲ್ಲಿ ಸಹಕಾರ, ಉತ್ತಮ ಜೀವಿತ್ವ, ವಿನಯ, ಸಹಾಯ ಮುಂತಾದ ಮಹತ್ವದ ಗುಣಗಳನ್ನು ಅರಿಸಿ ಕೂಳ್ಳುತ್ತದೆ ಕುಟುಂಬದಲ್ಲಿ ತಾಯಿ ತಂದೆಗಳು ಚಿಕ್ಕ ಮಗುವಿಗಾಗಿ ಆಪರಿಮಿತ ತ್ಯಾಗ, ಸೇವಾ ಮೊದಲಾದವುಗಳನ್ನು ಮಾಡಬೇಕಾಗುತ್ತದೆ, ಚಿಕ್ಕಂದಿನಲ್ಲಿ, ಒಬ್ಬ ಒಳ್ಳೆಯ ಗುಣಗಳು ಬೇರೂರಿದವೆಂದರೆ, ಅವನು ಮುಂದೆ ಒಬ್ಬ ಹಿರಿಮೆಯ ಸುಧಾರಿಸಿದ ನಾಗರಿಕನಾಗಿ ಬಾಳುತ್ತಾನೆ. ಇದಕ್ಕಾಗಿ ಬಾಲ್ಯದಲ್ಲಿಯೇ ಮಗುವಿನ ಮೇಲೆ ಉತ್ತಮ ಗುಣಗಳ ಪ್ರಭಾವವಾಗುವಂತೆ ನೋಡಬೇಕಾಗುತ್ತದೆ ಇಂತಹ ಅಮೂಲ್ಯವಾದ ಗುಣಗಳನ್ನು ಕುಟುಂಬವು ನಮಗೆ ಕೊಡುವದರ ಬದಲು ಒಮ್ಮಲೇ ಅದನ್ನು ನಾಶ ಮಾಡುವದು ಅತ್ಯಂತಕವೇ ಸರಿ. ನಾವು ಇಂತಹ ಗುಣಗಳನ್ನೀಯುವ ಇನ್ನೊಂದು ಸಂಸ್ಥೆ ಹುಟ್ಟಿಸಲು ಯತ್ನಿಸಿ, ಅದು ದೊರತ ಮೇಲೆ, ಇದನ್ನು (ಕುಟುಂಬವನ್ನು) ನಾಶ ಮಾಡಬಹುದು, ಆದರೆ ಇಂತಹ ಸಂಸ್ಥೆ ಈ ವರೆಗೂ ದೊರೆತಿಲ್ಲ, ಹೊರೆಯುವ ಲಕ್ಷಣವಿಲ್ಲ

ಇನ್ನು ಕುಟುಂಬದಿಂದಾಗುವ ಅಹಿತಗಳನ್ನು ನೋಡೋಣ. ಕುಟುಂಬವು ಪ್ರತಿಯೊಬ್ಬನಲ್ಲಿ ಸ್ವಾರ್ಥತೆಯನ್ನು ಬೆಳೆಸಿ, ಅವನ ವಿಶಾಲ ಮನೋಭಾವನೆಗೆ ದೊಡ್ಡ ಆತಂಕವಾಗಿ ಅವನಲ್ಲಿ ಅತಿ ಹೀನವಾದ ಸಂಕೋಭಾವನೆಯನ್ನು ಬೆಳೆಸುತ್ತದೆ. ಇದರಿಂದ ಮಾನವನಿಗೆ ಎಷ್ಟೋ ಕಠಿಣ ಸಮಸ್ಯೆಗಳನ್ನೆದುರಿಸಬೇಕಾಗುತ್ತವೆ. ಈ ಹೀನ ಮನೋಭಾವನೆ ಎಷ್ಟೋ ಸಮಸ್ಯೆಗಳಿಗೆ ತಳಹದಿಯಾಗಿದೆ, ಮತ್ತು ಮಾನವನಲ್ಲಿ ಸ್ವಾರ್ಥತೆ, ತಿರಸ್ಕಾರ, ಹಗೆತನ ಮೊದಲಾದವುಗಳನ್ನು ಬೆಳೆಸಿ ಪ್ರೋತ್ಸಾಹಿಸಲು ಬಹು ಮಟ್ಟಿಗೆ ಕಾರಣನಾಗಿದೆ ಇದು ಇದರ ಒಂದು ದೊಡ್ಡ ದೋಷವೆನ್ನಲಬಹುದು.

ಕುಟುಂಬದ ಭವಿತವ್ಯ (Future)ದ ಬಗ್ಗೆ ಹೇಳುವದಾದರೆ, ಕುಟುಂಬವು ನಾಶವಾಗುವ ಲಕ್ಷಣಗಳು ತೀರ ಕಡಿಮೆಯಿವೆ. ಆದರೆ ಕೆಲ ಜನರು ಇದಕ್ಕೆ ವಿರುದ್ಧವಾಗಿ ಅನ್ನಬಟ್ಟೆಗಳಿಗಾಗಿ ಆರ್ಥಿಕ ಪರಿಸ್ಥಿತಿ ಹದಗೆಟ್ಟು ಕುಟುಂಬದ ಮುಖ್ಯಸ್ಥನ ಮನಸ್ಸಿನ ಮೇಲೆ ಒಂದು ವಿಚಿತ್ರವಾದ ಪರಿಣಾಮವನ್ನುಂಟು ಮಾಡಿ, ನಾಶಕ್ಕೆ ಕುಟುಂಬವು ಎರವಾಗುವದೆಂದು ಅಭಿಪ್ರಾಯಪಡುತ್ತಾರೆ. ಇದನ್ನು ವಿರೋಧಿಸಿ, ಮತ್ತೆ ಕೆಲವರು ಮಾತೃವಾತ್ಸಲ್ಯ, ಪಿತೃಭಕ್ತಿ, ಕುಟುಂಬದ ಅಭೆಮಾನದಂತಹ ಮಾನಸಿಕ ಸಂಗತಿಗಳು ಕುಟುಂಬವನ್ನು ಅಳಿಸದೆ ಉಳಿಸುವವೆಂಬ ಅಭಿಪ್ರಾಯವುಳ್ಳವರಿದ್ದಾರೆ.

ಭಾರತವನ್ನು ತಗೆದುಕೊಂಡರೆ, ನನಗೆ ಕುಟುಂಬ ವಿಷಯವಾಗಿ ನಿರಾಶೆಯ ಕಿರಣಗಳು ತೋರದೆ, ಅಶಾಕಿರಣಗಳೇ ಹೆಚ್ಚಾಗಿ ತೋರುವವು. ಭಾರತದಲ್ಲಿ ಅವಿಭಕ್ತ ಕುಟುಂಬಗಳು (Joint families) ಕುಸಿದು ಹೋಗುವ ಸಂಗತಿ ಎಲ್ಲರಿಗೂ ಈಗಾಗಲೇ ಪರಿಚಿತವಾಗಿ ಹೋಗಿದೆ ಆದರೆ ಕುಟುಂಬದ ಪರಿಸ್ಥಿತಿಗೂ ಇದಕ್ಕೂ ತುಸು ವ್ಯತ್ಯಾಸವಿದೆ. ಮದುವೆಯು ಕುಟುಂಬದ ತಳಹದಿಯಾದ್ದರಿಂದ, ನಮ್ಮ ಭಾರತದಲ್ಲಿ ಕುಟುಂಬವು ಉಳಿಯುವದು. ಸೇಲಾಗಿ ನಮ್ಮ ಸರಕಾರದವರು ಮದುವೆಯ ವಿಷಯಕ್ಕೆ ಉಪಯುಕ್ತವಾದ ಕಾನೂನುಗಳನ್ನು ಮಾಡಿ, ಕುಟುಂಬದ ಬೆಳವಣಿಗೆಗೆ (ಅಸ್ತಿತ್ವಕ್ಕೆ) ಪ್ರೋತ್ಸಾಹವನ್ನಿತ್ತಿದ್ದಾರೆ.

[ಆದರ್ಶ]

ವಿವಿಧ ಪಾತ್ರೆಗಳು



ನೂತನವೂ ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಅಲ್ಯೂಮಿನಿಯಂ ಪಾತ್ರೆಗಳೂ ಲಭ್ಯವಿದೆ.

ಉಡುಪಿಯಲ್ಲಿಯೂ ಮೈಸೂರಿನಲ್ಲಿಯೂ ಇವೆ.

ಕಲ್ಯಾಣಿ ವ್ಯಾಸರಾಯರ್,
ರಥಬೀದಿ, ಉಡುಪಿ

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಕೇವಲವಿಷಕ್ಕಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ. 1934)

ಚೆಯರ್‌ಮೆನ್: ಶ್ರೀ. ಎಸ್. ಸಿಟಿ ಎಸ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟ್ ಬಾಕ್ಸ್ ನಂಬ್ರ 142
ಮದ್ರಾಸು



ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧—೮—೦

ಮದ್ರಾಸು ಸರಕಾರದಿಂದ ಈಗತಾನೇ ಸಂಭಾವನೆ ಪಡೆದ
ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'
(HOME REMEDIES)

೩೦೦ ಕಾಸಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ

ವಿವರಣ ಪುಸ್ತಕ. ಬೆಲೆ. ರೂ. ೨

ಪ್ರತಿಗಳು ನಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

EDITED, PRINTED & PUBLISHED BY K H SHETTY AT THE NAVAYUGA PRESS, UDIPI, S. INDIA.

Regd. No. M. 3618

Estd: 1921 ಸ್ಥಾಪನೆ

30ನೇ ವರ್ಷ
29—6—1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ 44

NAVAYUGA WEEKLY UDIPI, S. K.
Post Box No. 22
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 44

ಜನಸಾಮಾನ್ಯರ ಮನೋಮಟ್ಟ

ಜನ ಸಾಮಾನ್ಯರ ಅಭಿರುಚಿ ಹೇಗಿದೆ, ಮನೋಮಟ್ಟ ಎಂತಹದಿದೆ, ಎಂಬುದನ್ನು ಗಮನಿಸಿದರೆ, ಜನಮತದ ಮೇಲಿಂದ ಯಾವುದಾದರೊಂದಕ್ಕೆ ಬೆಲೆ ಕಟ್ಟುವುದು ಅಸಾಧ್ಯವೆಂದೇ ತೋರುತ್ತದೆ. ಸಾಮಾನ್ಯ ಜನರು ಈ ವರೆಗೂ ಅರ್ಜಿದಾರರ ಸ್ಥಾನದಲ್ಲಿದ್ದಾರೆ ಹೊರತು ನ್ಯಾಯಾಧೀಶ ಪೀಠಕ್ಕೇರಿಲ್ಲ; ವಿದ್ಯಾರ್ಥಿಗಳಾಗಿದ್ದಾರೆಲ್ಲದೆ ಶಿಕ್ಷಕರಾಗಿಲ್ಲ.

ಒಂದೆಡೆಯಲ್ಲಿ ಇಬ್ಬರು ಜಗಳ ಮಾಡಿಕೊಳ್ಳುತಿದ್ದಾರಾದರೆ ಅಲ್ಲಿ ಕೂಡುವಷ್ಟು ಜನ ಸಂದಣಿಯು, ವಿಚಾರಾರ್ಹ ವಿಷಯಗಳನ್ನೆತ್ತಿಕೊಂಡು ನಡೆಯುವ ಚರ್ಚೆಯ ಸ್ಥಳದಲ್ಲಿ ನೆರೆಯುವದಿಲ್ಲ.

ಅಂಕ, ಜೂಜು ಜುಗಾರಿ ಕೂಟಗಳಲ್ಲಿ ಸ್ವಯಂಪ್ರೇರಣೆಯಿಂದ ಒಟ್ಟುಗೂಡುವಷ್ಟು ಜನರನ್ನು ಯಾವುದಾದರೊಂದು ಸಭೆ, ಅಥವಾ ಸಮ್ಮೇಲನಕ್ಕಾಗಿ ಒಟ್ಟು ಕೂಡಿಸಲು ಹಲವು ವಿಧಗಳ ಭಗೀರಥ ಪ್ರಯತ್ನ ಬೇಕಾಗುತ್ತದೆ.

ಓರ್ವನ ಅವಗುಣಗಳ ವರ್ಣನೆಗೆ ಅಥವಾ ಅವಹೇಳನಕ್ಕೆ ಕಿವಿಕೊಡುವಷ್ಟು ಆಸಕ್ತಿಯಿಂದ ಜನರು ಓರ್ವನ ಗುಣ ಕಥನ ಅಥವಾ ಶ್ಲಾಘನೆಯನ್ನು ಆಲಿಸುವುದಿಲ್ಲ. ಓರ್ವನ ದೋಷಗಳು ಜನಜನಿತವಾಗುವಷ್ಟು ತ್ವರ್ಯದಲ್ಲಿ, ಗುಣಗಳ ಸಾರ್ವತ್ರಿಕ ಪರಿಚಯವಾಗುವದಿಲ್ಲ.

ಪ್ರಮಾದವಶಾತ್ ಕಾಲು ಜಾರಿ ಬಿದ್ದರೆ, ಆ ದೃಶ್ಯವನ್ನು ಕಂಡು ವಿನೋದ ಗೊಳ್ಳುವವರೇ ಹೆಚ್ಚಿಗೆ, ಕನಿಕರಪಡುವವರು ಕಡಿಮೆ.

ಯಾವ ವಿಭಾಗವೆಲ್ಲೇ ಆದರೂ, ಒಬ್ಬನು ಪ್ರಗತಿ ಪಡೆದಿದ್ದರೆ ಅದಕ್ಕಾಗಿ ಆನಂದಪಡುವವರ ಹೆಸ್ರು ಪಾಲಷ್ಟು ಮಂದಿ ಅಸೂಯೆ ಪಡುವವರೇ. ತಾವು ಸಹಜ ಪ್ರಗತಿ ಸ್ಪರ್ಧೆಯಲ್ಲೇ ಇನ್ನೊಬ್ಬನನ್ನು ಹಿಂದೆ ಹಾಕಬೇಕೆಂದು ಬಯಸುವವರಿಂತ, ಮುಂದಿದ್ದವರನ್ನು ಹಿಂದಕ್ಕೆಳೆದು ಹಾಕುವ ಮೂಲಕ ತಾವು ಮುಂದಾಗಬೇಕೆಂದು ಚಡಪಡಿಸುವವರೇ ಹೆಚ್ಚಿಗೆ.

ಎಂತಹ ನಿಸ್ವಾರ್ಥಿ, ನಿರಾಸಕ್ತನಂತಿರುವವನೇ ಆದರೂ–ತೋರುವಿಕೆಗೆ ಆತ ಹೇಗೆ ಕಾಣಿಸಿಕೊಂಡರೂ-ತನ್ನ ಶ್ಲಾಘನೆಗಳನ್ನು ಕೇಳಿ ಒಳಗಿಂದೊಳಗೆ ಹಿಗ್ಗುವಂತೆ, ತನ್ನ ವಿಮರ್ಶೆಗಳಿಗಾಗಿ ಆತ್ಮಾನಂದ ಅನುಭವಿಸಲಾರ.

ಅನ್ಯರಿಗೆ ಸಂಬಂಧಿಸಿರುವ ವಿಷಯಗಳಲ್ಲಿ ತಿಲೆ ಹಾಕುವ ಲಾಲಸೆಯು ಹೊಡಿಎಂಬ ಪರಿಮಾಣದ ಹದಿನಾಗನೇ ಒಂದಂಶದಷ್ಟಾದರೂ ಆತ್ಮವಿಮರ್ಶೆಯು ಅಭ್ಯಾಸವಿರುವವರು ಅಪರೂಪ. ಅನ್ಯರ ಅಪಜಯ ಸಾಧನೆಗಾಗಿ ನಡೆಯುತ್ತಿರುವಷ್ಟು ಪ್ರಯತ್ನಗಳು ಸ್ವಂತ ವಿಜಯ ಸಾಧನೆಗಾಗಿ ಆಗುತ್ತಿಲ್ಲ.

ಸರಿ ತಪ್ಪು, ನ್ಯಾಯಾನ್ಯಾಯ, ಮೇಲು ಕೀಳುಗಳ ತುಲನೆಗಾಗಿ ನಡೆಯುವ ವಿಮರ್ಶೆಗಳಿಗಿಂತಲೂ ದೋಷಾರೋಪಣೆಗಾಗಿಯೇ ವಿಮರ್ಶೆಗಳು ಗುತ್ತಿರುವುದು ಹೆಚ್ಚಿಗೆ, ಸಾರ್ವಜನಿಕ ವ್ಯಕ್ತಿ, ವಿಷಯಗಳಿಂದಾರಂಭಿಸಿ ಖಾಸಗೀ ಸಂಬಂಧಗಳ ವರೆಗಿನ ಎಲ್ಲದರಲ್ಲೂ ಇದೇ ಹಾಡು.

ಅಶ್ಲೀಲಪ್ರಣಯಕಥೆಚರಿತ್ರೆಗಳನ್ನು ಓದುವಷ್ಟು ಆಸಕ್ತಿಯಿಂದ ಗಂಭೀರ, ಫನವಿಷಯಗಳನ್ನು ಓದುವವರು ಕಡಿಮೆಯಾಗಿದ್ದಾರೆ; ಲಘು ವಿಷಯಗಳಿಗಾಗಿ ಅನಾಗರಿಕ, ಅಸಭ್ಯ ಟೀಕೆಗಳುಳ್ಳ ಲೇಖನಗಳನ್ನು ಮೆಚ್ಚುವವರಿರುವಷ್ಟು ತುಲನಾತ್ಮಕ ಮಟ್ಟದ, ತೂಕವುಳ್ಳ ಬರಹಗಳನ್ನು ಮೆಚ್ಚುವವರಲ್ಲ. ಆದ್ದರಿಂದಲೇ ಪ್ರಚಾರಾಧಿಕ್ಯಕ್ಕಾಗಿ ಅಶ್ಲೀಲಹಾಗೂ ಅಶಿಷ್ಟೋಕ್ತಿಯ ಲೇಖನಗಳನ್ನು ಕೊಡುತ್ತಿರುವ-ಬಡಾಯಿ ಪತ್ರ, ಬಣ್ಣದ ಹೊರತು ತಿರುಳೇನೂ ಇರದ ಬರವಣಿಗೆಗಳಿಂದ ತುಂಬಿರುವ-ಪತ್ರಿಕೆಗಳು ನವ್ಯಮಲ್ಲಿ ಹೆಚ್ಚಿವೆ.

ಚಲಚ್ಚಿತ್ರಗಳ ಮಟ್ಟಿಗೂ ಇದೇ ಹಾಡು–ನೀತಿಯ ರೀತಿಯ ವಿಷಯಪ್ರಕ್ರಿಯೆಯ ಸ್ಥೈರ್ಯಾತ್ಮಕ ದೃಷ್ಟಿಯಿಂದ ವಿಂಗಡಿಸಿ ಲೆಕ್ಕಿಸುವುದು ಇಂದಿನ ಆದ್ಯ ಕರ್ತವ್ಯ.

ನೆನ್ನೆ ಪ್ರಚೋದಿಸುವ ತೀರಾ ಕೆಳ ಮಟ್ಟದ ಚಿತ್ರಗಳಿಗೆ ದೊರೆಯುವ ಜನತಾ ಪ್ರೋತ್ಸಾಹವು ಉಚ್ಚಾದರ್ಶವನ್ನುಮುಂದಿಡುವ ಮೇಲ್ಮಟ್ಟದ ಚಿತ್ರಗಳಿಗೆ ದೊರೆಯುತ್ತಿಲ್ಲ. ಸಂಗೀತ, ಚಿತ್ರ ಮುಂತಾದ ಇತರ ಕಲೆಗಳಲ್ಲಾದರೂ ವಿಷಯಾಸಕ್ತ ಮನಸ್ಸನ್ನು ರಂಜಿಸಬಲ್ಲ ಕೆಳ ಮಟ್ಟದ ಪೆಗಳಿಗೆ ದೊರೆಯುವ ಜನತಾ ಬೆಂಬಲ ಉಚ್ಚ ಕರಗತಿಯವುಗಳಿಗೆ ಒದಗುತ್ತಿಲ್ಲ.

ಬಲ ಪ್ರಯೋಗ, ಕುಯುಕ್ತಿ ಮುಂತಾದ ದುರ್ವಿಧಾನಗಳಿಂದ ಜನರ ಮೇಲೆ ಶಕ್ಯ ವರ್ಚಸ್ಸನ್ನು ಬೀರಬಲ್ಲ ತಾಮಸ ಬುದ್ಧಿಯ ನಾಯಕರ ಕಡೆಗೆ ಜನಸಾಮಾನ್ಯರ ಗಾರವಾದರಗಳು ಹರಿದಂತೆ, ಶಕ್ತ ವಿದ್ವಜ್ಜನ ಯೋಗ್ಯ ಪಥವನ್ನೇ ಹಿಡಿಯುವ ಸಾತ್ವಿಕ ಬುದ್ಧಿಯವರ ಕಡೆಗೆ ಜನಮತವೊಲಿಯುತ್ತಿಲ್ಲ. ಇಂದಿನ 'ಮುಂದಾಳು' 'ಕಾರ್ಬಾರಿ' ವರ್ಗಗಳಲ್ಲಿ ತಾಮಸ ಪ್ರಕೃತಿಯವರ ಸಂಖ್ಯೆಯೇ ಅಧಿಕವೆನ್ನಬಹುದು.

ಪ್ರಯೋಗಾರ್ಥವಾಗಿ, ಒಂದು ಮುಂಜಾನೆಯಿಂದ ಸಂಜೆಯ ವರೆಗಿನ ಅವಧಿಯನ್ನು ವೀಕ್ಷಿಸಿಟ್ಟರೆ ಸಾಕು-ನಿಮ್ಮನ್ನು ಸಂಧಿಸುವವಂ ಪೈಕಿ ನಿರ್ವಲ ಮನಸ್ಸಿಂದ ನಿಷ್ಕಾ ಹಿತಕೋರಿದವರೆಷ್ಟು, ಅನ್ಯೋದ್ದೇಶ ಕಥವಾ ಕಲ್ಮಷಚಿತ್ತವನ್ನು ಕಟ್ಟಿಕೊಂಡು ಬಂದು ಹೋದವರೆಷ್ಟು, ಎಂಬುದನ್ನು ಗಣಿಸಿದರೆ, ಸ್ಪಷ್ಟಚಿತ್ರವೆಷ್ಟು ಹೊಳೆಗಿದೆ ಎಂಬುದು ಮಂದಟ್ಟಗದಿರದು.

ನವ್ಯಲ್ಲಿ ನಡೆಯುವ ಹಬ್ಬ ಹುಣ್ಣಿಮೆ, ಜಾತ್ರೆ, ಉತ್ಸವ, ಸಭೆ ಸಮ್ಮೇಲನ, ಕೂಟ ಗುಂಪು, ಇತ್ಯಾದಿಗಳಲ್ಲಿ ಆಗತ್ಯ–ಅನಗತ್ಯ, ಉಚ್ಚ-ನೀಚ, ರಚನಾತ್ಮಕ– ಧ್ವಂಸಾತ್ಮಕ ವೈತಾತ್ಯಸಗಳಿದ್ದೇ ಇವೆಯಷ್ಟೆ? ವಿವೇಚ

ಸಿದರೆ, ಆ ಪೈಕಿ ಶೇಳು ಕೆಲಸಗಳಿಗಾಗಿ ಕೂಡುವವರಷ್ಟು ಉಚ್ಚ ಕಾರ್ಯಗಳಿಗಾಗಿ ನೆರೆಯುತ್ತಿಲ್ಲವೆಂಬುದೂ, ಸರ್ವ ಸಾಧಾರಣವಾಗಿ ಪ್ರತ್ಯೇಕತ: ಪ್ರತಿಯೊಬ್ಬನಲ್ಲೂ ಉಚ್ಚ ಭಾವನೆಗಳಿಗಿಂತ ಹೆಚ್ಚಾಗಿ ನೀಚ ಭಾವನೆಗಳು ಹುದುಗಿವೆಯೆಂಬುದೂ ಮನವರಿಕೆಯಾಗದಿರದು.

ಜನಸಾಮಾನ್ಯರ ಅಭಿರುಚಿ ಮತ್ತು ಸಂಸ್ಕೃತಿ ಹೀಗಿದೆ; ತೀರಾ ಕೆಳಮಟ್ಟದ ಮನೋವೃತ್ತಿಯವರೇ ಅತ್ಯಧಿಕ ಸಂಖ್ಯಾಕರಾಗಿರುವಾಗ ಅವರ ನಡುವೆ ಉಚ್ಚಾದರ್ಶ ಜೀವನ ನಡೆಸುವ ಅಪರೂಪದ ವ್ಯಕ್ತಿಗಳು 'ಒಕ್ಕಣ್ಣ ರಾಜ್ಯದಲ್ಲಿ ಎರಡೂ ಕಣ್ಣಾಗಳನ್ನು ತೆರೆದುಕೊಂಡ' ವರಂತಾಗಿ, ಅಂಥವರಿ ಪಾಲಿಗೆ ಅಸಹಜ ವಾತಾವರಣ ದೊರೆಯುತ್ತದೆ; ಅವರು ಪರಕೀಯರಂತಾಗಿ ನಿಸ್ಸಹಾಯಕ ಸ್ಥಿತಿಗೀಡಾಗುತ್ತಾರೆ.

ಆದ್ದರಿಂದ 'ವ್ಯಕ್ತಿ ಸ್ವಾತಂತ್ರ್ಯ'ದ ಹೆಸರಿನಲ್ಲಿ ಕಾರ್ಯಕರ್ತರಿಗೆ, 'ವಿಚಾರ ಸ್ವಾತಂತ್ರ್ಯ'ದ ಹೆಸರಿನಲ್ಲಿ ದುರ್ವಿಚಾರಗಳಿಗೆ, 'ಭಾಷಣ, ಲೇಖನ ಸ್ವಾತಂತ್ರ್ಯ'ದ ಹೆಸರಿನಲ್ಲಿ ಅಶ್ಲೀಲ ಮಾತು, ಬರೆಹಗಳಿಗೆ ಹೇಗೆ ಅವಕಾಶ ಕೊಡಬಾರದೋ, ಹಾಗೆಯೇ 'ಜನಮತ' 'ಬಹುಮತ' ದ ಹೆಸರಿನಲ್ಲಿ ಜನತೆಯು ಹೀನ ಮನೋಮಟ್ಟವನ್ನೇ ಆಧರಿಸಬಾರದು. ಬಹುಮತದ ತೀರ್ಮಾನವೇ ಎಲ್ಲಾ ಸಂದರ್ಭಗಳಲ್ಲೂ ನ್ಯಾಯವಾದುದೆಂದು ಗಣಿಸಬಾರದು.

ತೂಕ ಬಿದ್ದ ವಾಕ್ಯ ತುಂಬಿಕೊಂಡೇ ಇದೆಯೆಂದು–ಕುಸಿದಿರುವ ನಿಲ್ದಾಣದಲ್ಲಿಯೂ ಏರಿ ನಿಂತಿರಾಯಿತೆಂದು-ಅಪ್ರಸ್ತುತ ಜನಮತವು ಅದರಣೀಯವೆಂದು–ನೆನೆಸಾವುದು ಅಪಾಯಕರ ಮತ್ತು ಅಪರಾಧ ಕೂಡ ಸದ್ವ್ಯವಹಾರವಲ್ಲ. ಇವೆಲ್ಲದರಲ್ಲೂ ಮಾರ್ಪಾಟಿಗೆ ಮುಂಚಿತ್ಯಕಾರ್ಯ ಆಗಬೇಕಾಳ್ಳ ಬೇಕಾಗಿದೆ. ಆದ್ದರಿಂದ ಜನ ಮತವನ್ನು ಸುಧಾರಿಸಿ ಮುಂದೆ ಹೋಗೂ ಸಭದ್ರ ಮಟ್ಟಕ್ಕೇರಿಸುವುದು ಇಂದಿನ ಆದ್ಯ ಕರ್ತವ್ಯ.

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connection, please consult us.

ಸ್ಥಾನ ಸಂದರ್ಭಾನುಗುಣವಾಗಿ—

ಕಾಲಾನುಗುಣವಾಗಿ—ಸಂದರ್ಭಾನುಸಾರವಾಗಿ—ವ್ಯಕ್ತಿ ಪ್ರಾಮುಖ್ಯತೆಯುಂಟಾಗುವದಿದೆ. ಆಕಸ್ಮಾತ್ ಮಹತ್ಪ್ರಭೆಗೆ ಮಾಡಿ, ಆ ವರೆಗೆ ಅಪರಿಚಿತರಾಗಿದ್ದವರು ಕೂಡಾ ಪ್ರಸಿದ್ಧರಾಗುವ ನಿದರ್ಶನಗಳಿವೆ; ಅಂತೆಯೇ ಮೊದಲೇ ಪ್ರಸಿದ್ಧರಿದ್ದವರೂ ತಮ್ಮ ಪ್ರಸಿದ್ಧಿಯನ್ನು ಹೆಚ್ಚಿಸಿಕೊಳ್ಳಲು ಅಥವಾ ಉಳಿಸಿಕೊಳ್ಳಲು ಕೇರ್‌ಟಾಯಕ ಕೆಲಸಗಳನ್ನು ಆಗಾಗ ಮಾಡುತ್ತಾ 'ಹೋಗುಬೇಕಾಗುತ್ತದೆ. ಕೇರ್‌ಟಿಯನ್ನು ಚಂಚಲವಾದುದು ಸಂಪತ್ತು ಕೂಡಾ ಅಲ್ಲ. ಒಂದು ಕಾಲದಲ್ಲಿ ಆತ್ಯುನ್ನತ ಕೇರ್‌ಟಿಶಿಖರಕ್ಕೇರಿದ್ದವರು, ಅಜ್ಞಾತರಾಗಿ ಅಂತ್ಯಗೊಂಡ ದೃಷ್ಟಾಂತಗಳು ಭಾರತದ ರಾಜಕೀಯ ಜೀವನದಲ್ಲಿ ಬೇಕಾದಷ್ಟು ದೊರೆಯುತ್ತವೆ; ಅದೇ ರೀತಿ ಜೀವಮಾನವಿಡೀ ಅಜ್ಞಾತರಾಗಿದ್ದರೂ ಧೀರ ಮರಣಗೊಂಡು ಪ್ರಖ್ಯಾತರಾದವರಿಗೂ ಅಭಾವವಿಲ್ಲ. ಗಾಂಧಿಜೀಯಂತೆ, ಅಥವಾ ನೆಹರು, ವಲ್ಲಭಭಾಯಿಗಳಂತೆ ಎಲ್ಲಾ ಕಾಲಗಳಲ್ಲೂ, ಎಲ್ಲಾ ಅವಸ್ಥಾಂತರಗಳಲ್ಲೂ ತಮ್ಮ ಕೇರ್‌ಟಿಯನ್ನು ನಿರಪ್ರಕಾರ ಉಳಿಸಿಕೂಂಡು, ಹೆಚ್ಚಿಸುತ್ತಾ ಬಂಲು ಸಾಧ್ಯವಾದವರು ಭಾರತ ರಂಜಕೀಯ ಚರಿತ್ರೆಯಲ್ಲಿ ಬಹಳ ಮಂದಿ ಕಂಡು ಬರುವದಿಲ್ಲ. ಹೆಸರನ್ನು ರಕ್ಷಿಸಿ ಕೊಳ್ಳುವದಷ್ಟು ಪ್ರಯಾಸಕರವಾದ ಜೋಪಾನವಾದ ಕಾರ್ಯ ಪ್ರಾಯಶಃ ಬೇರೊಂದಿರಲಾರದು. ಮಿತಿ ಮೀರಿದ ಕೇರ್‌ಟಿ ಲಾಲಸೆ ಅಥವಾ ಅತಿ ರೇಕ ಮೆಬ್ಬಯಕೆ ಅನಪೇಕ್ಷಣೀಯವಾದರೂ ಕಾರ್ಯಕಾರೀ ಕೇರ್‌ಟಿ ಅಥವಾ ವರ್ಚಸ್ಸು ಅಗತ್ಯವೇ ಇದೆ. ವ್ಯಕ್ತಿಗತ ಘನತೆ ಅಥವಾ ತೂಕ ಕಡಿಮೆಯಾಗಿಯೇ ಕಾರ್ಯವಿಫಲ್ಯ, ಶಿಸ್ತು ರಾಹಿತ್ಯ, ಅನಾಯಕತ್ವಗಳುಂಟಾಗುವ ಅನುಭವಗಳು ರಾಷ್ಟ್ರ ಜೀವನದಂತೆಯೇ ಪ್ರತಿನಿತ್ಯ ವ್ಯವಹಾರೋದ್ಯಮ ರಂಗಗಳಲ್ಲೂ ಆಗುತ್ತಿವೆ. ಕೇರ್‌ಟಿಯು ನಿಲವಿನ ಬಳಿಕ ತನ್ನ ಯಜಮಾನನನ್ನು ಕಡೆಗಣಿಸುತ್ತಿನ್ನನ್ನು ಲಂಘಿಸುವವನನ್ನಂತಿಗೂ ಒಲಿಯುವ ನಿಷ್ಕಾವಂತ ದೂತ. ಕಾರ್ಯವನ್ನಾಥರಿಸಿ, ಹೆಸರು ಬರುತ್ತದೆ. ಕಾರ್ಯ ಸಾಧಿಸಿ ಹೆಸರುಗಳಿಸಿಕೊಳ್ಳುವ ಸುಯೋಗವು ಸಂದರ್ಭಾನುಸಾರವಾಗಿ ಒದಗುವಂತಹದೆ. ಈ ದಿನಗಳಲ್ಲಿ ಈ ರೀತಿ ವಿಶೇಷತಃ ಹೆಸರು ಕೇಳಿ ಬರುತ್ತಿರುವ ಕೆಲವರ ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ.

ಪಂಡಿತ ನೆಹರು

ಇವರೀನೂ ಈಗಿನ ದಿನಗಳಲ್ಲಷ್ಟೇ ಪ್ರಸಿದ್ಧಿಗೆ ಬಂದವರಲ್ಲ ಅದರೆ ಅವರ ಈ

Approved form by the Gov. of Mysore
Certificated by the Agent of the Govt of Cochin & Indian.

ಬಾರಿಯ ಇಂಡೋನೇಶಿಯ, ಸಿಂಗಾಪುರ, ಬರ್ಮ ಸಂಚಾರಗಳು ಕಾರ್ಯತಃ ಪ್ರಧಾನ ಬೀರಬಲ್ಲ ಹೆಚ್ಚಿನ ಯಶಸ್ಸನ್ನು ಪಂಡಿತಜೀಗೆ ಸಂಪಾದಿಸಿ ಕೊಟ್ಟುವೆನ್ನಬಹುದು. ಅಲ್ಲೆಲ್ಲಾ ನೆಹರುಗಳು ಅಸ್ಯಾದ ಧ್ವನಿಯನ್ನೆತ್ತಿದ್ದರೇ; ಆಸ್ಯಾದ ಸ್ಥಿತಿಗತಿ ಮತ್ತು ಭವಿಷ್ಯದ ಕುರಿತು ಹಲವು ಸ್ಪಷ್ಟ ಸೂಚನೆಗಳನ್ನು ಇತ್ತಿದ್ದರು. ಹಿಂದಿನ ನೆಹರು ಪ್ರಪಂಚಕ್ಕೆ ಪರಿಚಿತ ಮನುಷ್ಯನಾಗಿದ್ದರೆ, ಸ್ವತಂತ್ರ ಭಾರತದ ನಾಯಕ ಸಂಚಾರಿ ನೆಹರುಗಳ ಪ್ರಭಾವ ಪರಿಚಯ ಕೂಡಾ ಪ್ರಪಂಚಕ್ಕಾಗಿದೆ. ಅಗ್ನೇಯ ಆಸ್ಯಾದ ರಾಷ್ಟ್ರಗಳಿಗೆ ಅವರೀ ಬಾರಿ ಕೊಟ್ಟ ಉಪದೇಶಗಳು ಅವರ ಮಿತ್ರರಾದ ಪಾಶ್ಚಾತ್ಯ ರಾಷ್ಟ್ರಗಳ ಮುತ್ಸದ್ದಿಗಳಿಗಾದರೂ ಅಕ್ಷರಶಃ ಸಮ್ಮತವಾಗುವದೆನ್ನುವದು ಅಸಾಧ್ಯ. ನೆಹರೂ ಆಗ್ರಹ ಪೂರ್ವಕ ಅಪೇಕ್ಷಿಸಿದ ಆಸ್ಯಾದ ಒಳಿತಾನ ಮತ್ತು ಶಕ್ತಿ ವರ್ಧನೆಯು ಪಾರಿಶ್ಚಾತ್ಯ ರಾಷ್ಟ್ರಗಳ ಅಂತರಂಗಣಕ್ಕೂ ಸ್ವಾಗತಾರ್ಹ ವಿಷಯವೆಂದು ಹೇಳಲಿಕ್ಕಾಗುವದಿಲ್ಲ. ಪಂಡಿತಜೀಯು ಬೆನ್ನಲ್ಲಿ ಆಸ್ಯಾದ ಪ್ರಮುಖ ರಾಷ್ಟ್ರವೊಂದಿದೆ; ಭಾರತ ಮತ್ತು ನೆಹರುವಿಗೆ ಆಸ್ಯಾ ಧೂರಣತ್ವ ದೊರಕಬಹುದಾದ ಲಕ್ಷಣಗಳೀಗ ಕಾಣುತ್ತಿವೆ ಇಂತಹ ಸ್ಥಿತಿಯಲ್ಲಿ ಜಗತ್ತಿನ ಪಾಳಯ ಕಲಹದ ಮಟ್ಟಿಗೆ ಸುದೃಢ ಶಾಟಸ್ಥ್ಯ ಧೋರಣೆ ವಹಿಸಿರುವ ಪಂಡಿತ ಜವಹರಲಾಲರು ಅಖಿಲ ಆಸ್ಯಾವನ್ನು ತನ್ನ ಹಾದಿಗೆಳೆದುಕೊಳ್ಳುವದು ಅಮೆರಿಕ ಬ್ರಿಟನುಗಳಂತಹ ರಾಷ್ಟ್ರಗಳಿಗೆ ಅಪೇಕ್ಷಣೀಯವಾ ತೋರಲಾರದು. ಹೀಗಾಗಿ, ಉದಾತ್ತ ಜಾಗತಿಕ ನ್ಯಾಯದ ಪ್ರವಾದಿಯೆಂದು ಶ್ಲಾಘನೆ ಪದದಿರುವ ನೆಹರು ಈ ಬಾರಿ ಎಲ್ಲರನ್ನೂ ತುಸು ಚಿಂತಶೀಲರಿಡು ಮಾಡಿ, ಆ ಮೂಲಕ ಲೋಕ ಮಂಡಲದಲ್ಲಿ ಒಂದು ಹೊಸ ಸ್ಥಾನ ಗಳಿಸಿದಂತಿದೆ.

ಸೊಯಿಕನೋ

ನೆಹರೂ ಜತೆ ಸಂಚಾರದ ದೆಸೆಯಿಂದ ಕಳೆದ ದಿನಗಳಲ್ಲಿ ವಿಶೇಷತಃ ಕೇಳಿ ಬರುತ್ತಿದ್ದ ಹೆಸರೆಂದರೆ ಇಂಡೋನೇಶಿಯಾ ರಿಪಬ್ಲಿಕಿನ ಅಧ್ಯಕ್ಷ ಡಾ. ಸೊಯಿಕರ್ನೋ. ಇವರಾದರೂ ಪಂಡಿತ ನೆಹರುಗಳಂತೆಯೇ ತನ್ನ ರಾಷ್ಟ್ರದ ಬಂಧವಿಮೋಚನೆಗಾಗಿ ಹೋರಾಡಿ ಮೊದಲೇ ಕೇರ್‌ಟಿಗಳಿಸಿಕೊಂಡವರು. ಆದರೂ ಹಣ ಮತ್ತು ಯಶಸ್ಸು ಸಕಷ್ಟು ಕಂಬಿ ಬಂಕೆಂಬ ಹೈಸ್ಟೀ ಗಡಿಯೊಂದಿಲ್ಲ, ಇನ್ನಗತ್ಯವಿಲ್ಲ, ಎನ್ನುವ ಮಟ್ಟಿ ಪ್ರಪಂಚದಲ್ಲಿಲ್ಲ. ಡಾ. ಸೊಯಿಕರ್ನೋರಿಗೂ ನೆಹರುಗಳ ಜತೆಯಲ್ಲಿ ತನ್ನ ವರ್ಚಸ್ಸನ್ನು ಅಧಿಕಗೊಳಿಸುವ ಆವಶ್ಯಕತೆಯಿದ್ದಿತು. ಭಾರತೀಯರ ಹೃದಯದಲ್ಲಿ ಪಂಡಿತ ನೆಹರುವಿಗಿರುವ ಸ್ಥಾನವೇ ಜಾವಾದ ಜನತೆಯ ಹೃದಯದಲ್ಲಿ ಡಾ| ಸೊಯಿಕರ್ನೋಗಿದೆ. ಅದರೂ ಡಾ| ಸೊಯಿಕರ್ನೋರ ಅಧ್ಯಕ್ಷತೆಯ ಇಂದಿನ ಸರಕಾರದಿರುವ ಪ್ರತಿಭಟನಾಸಕ್ತಿಯುಳ್ಳ ಜನ ಮತ್ತು ಭಾಗಗಳು ಇಂಡೋನೇಶಿಯದಲ್ಲಿವೆ. ಸ್ವಾತಂತ್ರ್ಯಾನಂತರ ಡಾ| ಸೊಯಿ ಕರ್ನೋ ಸಂದರ್ಶಿಸಿರದ ಕೆಲವು ಭಾಗಗಳು ಜಾವಾದಲ್ಲಿದ್ದುವು ಪಂಡಿತ ನೆಹರುಗಳನ್ನು ಕೂಡಿಕೊಂಡು ಆ ಭಾಗದ ಜನತೆಗೆ ಇನ್ನುಮ್ಮಡಿ ಆಕರ್ಷಣವನ್ನೊದಗಿಸುವ ಮೂಲಕ ತನ್ನ ದರ್ಶನದ ಮಹತ್ವವನ್ನು ದಾಖಲಿಗೊಳಿಸಬೇಕಂಬ ಆತುರವೊ-ದೆದೆ-ದೇಶ ಬಂಧುಗಳ ಹೃದಯದಲ್ಲಿ ತನಗಿರುವ ಸ್ಥಾನವನ್ನು ಪಂಡಿತ ನೆಹರುಗಳಿಗೆ ಮನಗಾಣಿಸಬೇಕೆಂಬ ಆತುರಯನ್ನೊಂದೆಡೆ-ಈ ರೀತಿ ಏಕ ಪ್ರಯತ್ನದಿಂದ ದ್ವಿಫಲಗಳನ್ನು ಹೊಂದಬೇಕೆಂದೇ ಡಾ| ಸೊಯಿಕರ್ನೋ ನೆಹರೂ ಜತೆಯಲ್ಲಿ ಸಂಚಾರ ಹೊರಟಿದ್ದರು. ಈ ಮೂಲಕ ಕಳದ ಕಲವು ದಿನಗಳ ಪತ್ರಿಕೆಗಳಲ್ಲಿ ದಿನೇ-ಪ್ರತಿ ಅವರ ಹೆಸರನ್ನು ಹಲವೆಡೆ ಕಾಣುವಂತಾಗಿದ್ದಿತು. ಮೊದಲೇ ಪ್ರಭಾವಶಾಲಿಗಳಾಗಿದ್ದರೂ ಮತ್ತೂ ಪ್ರಸಿದ್ಧಿ ಹೊಂದುವ ಆವಶ್ಯಕತೆ ಮತ್ತು ಆಶೆ ಡಾ| ಸೊಯಿಕರ್ನೋರಂತಹ ರಾಷ್ಟ್ರಾಧ್ಯಕ್ಷನ ನ್ನಾದರೂ ಬಿಟ್ಟಿಲ್ಲ

ಸಿಂಗಾಪುರದಲ್ಲಿರುವ ಬ್ರಿಟಿಷ್ ಕಮಿಶನರ್ ಮಾಲ್ಕೋಲ್ಮ್ ಮೆಕ್ಡೊನಾಲ್ಡ್, ಬರ್ಮದ ಪ್ರಧಾನಿ ಥಾಕಿನ್ ನ್ಯೂ, ಇವರ ಹೆಸರುಗಳೂ ಈ ಬಾರಿಯ ಸಂಚಾರಿ ನೆಹರೂ ಜತೆ ಹೆಸರಿನ ಜತೆಯಲ್ಲಿ ಹಲವು ಬಾರಿ ಕೇಳಿಬಂದಿದ್ದುವು.

ಲೀ: ಡಿಕ್ಸನ್

ಬಹುಮಟ್ಟಿಗೆ ಅಜ್ಞಾತರಾಗಿದ್ದರೂ ಕೇವಲ ಸ್ಥಾನ ಬಲದಿಂದ ಪ್ರಾಮುಖ್ಯತೆ ಗಳಿಸುವವರೂ ಇದ್ದಾರೆ. ನಿದರ್ಶನಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ಮುಖ್ಯ ಕಾರ್ಯದರ್ಶಿ ಜನರಲ್ ಟ್ರಿಗ್ವಿಲೀ ಮತ್ತು ಕಾಶ್ಮೀರ ವಿವಾದದ ಮಧ್ಯಸ್ಥಗಾರ ಸರ್. ಓವೆನ್ ಡಿಕ್ಸನರನ್ನು ನೋಡಬಹುದು. ಎಮ್ಮ. ಟ್ರಿಗ್ವಿಲೀ, ಇವರು ಯುರೋಪಿನ ಸಣ್ಣ ರಾಷ್ಟ್ರ ನೋರ್ವೇಯರು, ರಾಷ್ಟ್ರ ಸಂಘದ ಕಾರ್ಯದರ್ಶಿಯಾಗುವ ವರೆಗೆ ಪ್ರಪಂಚಕ್ಕವರ ಪರಿಚಯವಿರಲಿಲ್ಲ. ಆದರೆ ಈ ಸ್ಥಾನಕ್ಕೇರಿದ ಮೇಲೆ ಇವರ ನಿತ್ಯದ ಪರಿಚಯ ಮಾತ್ರವಲ್ಲ, ವಿಶೇಷ ಯೋಗ್ಯತೆ ಕೂಡಾ ಪ್ರಕಾಶಗೊಳ್ಳುವಂತಾಯಿತು ಲೀ ಅವರು ತನ್ನ ಸ್ಥಾನಪೂರ್ವಜರಿಗಿಂತ ಹೆಚ್ಚಿನ ಚಟುವಟಿಕೆಗಳನ್ನು ಪ್ರದರ್ಶಿಸುತಿದ್ದಾರೆ. ಲೋಕ ಶಾಂತಿಗಾಗಿ ವೈಮುಖರಿದು ಪ್ರಯತ್ನಿಸುವ ತಟಸ್ಥರು ಕಂಡು ಬರುವದಿಲ್ಲವೆಂಬ ನಿರಾಶೆಯ ರತ್ನಲು ಕವಿದಾಗಲೆಲ್ಲಾ ಎವ್ರ್. ಲೀ ಒಂದು ಆಶಾ ಕಿರಣವಾಗಿ ಮಿಂಚುವದಿದೆ. ಇತ್ತೀಚೆಗೆ ಈ ಪ್ರಯತ್ನಾರ್ಥವಾಗಿಯೇ ಇವರು ಮಾಸ್ಕಿಂಗ್ಟನ್, ಲಂಡನ್, ಪ್ಯಾರಿಸ್, ಮೋಸ್ಕೊ ಗಳಿಗೆ ಹೋಗಿ, ಅಮೆರಿಕ, ಬ್ರಿಟನ್, ಫ್ರಾನ್ಸ್, ರಶ್ಯಗಳ ನಾಯಕರೊಂದಿಗೆ ಹಾರ್ದಿಕ ಮಾತುಕತೆಗಳನ್ನು ನಡೆಸಿ ಮತ್ತೆಪ್ಪು ಪ್ರೀತಿಂಗಾದ್ದಾರೆ. ನೋರ್ವೆಯು ಕಾಲಿಗಾರ ಪಕ್ಷದ ಸದಸ್ಯನಾಗಿದ್ದ ಅವರನ್ನು ಇದೇ ಅಧಿಂದಿಂದ "ನೀವು ಎಂದಾದರೂ ಕವ್ಯೂನಿಸ್ಟ್ ಆಗಿದ್ದಿರಾ?" ಎಂದು ಇತ್ತೀಚೆಗಿನ ಪತ್ರಿಕಾ ಕೂಟದಲ್ಲಿ ಓರ್ವ ಅಮೇರಿಕಾ ನಂದಿಗಾರನು ಪ್ರಶ್ನಿಸಿದಾಗ ಟ್ರಿಗ್ವಿಲೀ ಅಪಮಾನದಿಂದ ಬಿಸಿಯೇರಿದ್ದರು. "ನನ್ನ ಪತ್ರಿಕಾ ಕೂಟವು ಈ ಮಟ್ಟಿಕ್ಕೆಳಿಯುವುದು ನನಗೆ ಸಮ್ಮತವಲ್ಲ"ವೆಂದು ಮಾರ್ಮಿಡಿದ್ದರು. ಮತ್ತಾ ಅದಪ್ರಶ್ನೆಯೊತ್ತಾಯ ಪೂರ್ವಕವಾಗಿ ಬಂದಾಗ ಮತ್ತಷ್ಟು ಕೆರಳಿ "ಓ ದೇವರೇ! ನನ್ನ ಘನತೆಗೊಂದು ಗೌರವ ಇರಬೇಕು ತಾನೇ!" ಎಂದು ಬಿಟ್ಟರು. ಆ ಮೇಲೆ ಈ ಕೂಟತೊಂದು ರೀತಿ ಕೊಡುತ್ತಾ "ಈ ದಿನ ನಾನು ಸಂಯುಕ್ತ ರಾಷ್ಟ್ರ ಸಂಘದ ಎಲ್ಲಾ ಸದಸ್ಯ ರಾಷ್ಟ್ರ ಸರಕಾರಗಳಿಗೂ ಎಲ್ಲಾ ಜನತೆಗೂ ಹೊಣೆಗಾರನಾಗಿದ್ದೇನೆ. ಹೀಗಾಗಿ ಅಂತರ್ರಾಷ್ಟ್ರೀಯ ಅಥವಾ ಅಂತರ್ರಾಷ್ಟ್ರೀಯ ಪಕ್ಷ ರಾಜಕಾರಣಗಳಲ್ಲಾವುದರಲ್ಲೂ ನಾನು ಭಾಗವಹಿಸುವಂತಿಲ್ಲ; ಭಾಗಿಯಾಗಕೂಡದು. ನಾನು ಸಾರುವ ಏಕಮಾತ್ರ ತತ್ವವೆಂದರೆ ಜಾಗತಿಕ ಶಾಂತಿ ವಿಶ್ವ ಪ್ರಗತಿ" ಎಂದಿದ್ದಾರೆ. ಇದು ಸ್ಥಾನ ಮಹಾತ್ಮೆಯೆಂತಹದೆಂಬ ದಕ್ಕೊಂದು ದೃಷ್ಟಾಂತ.

ಸರ್. ಓವೆನ್ ಡಿಸ್ಸನರನ್ನಾದರೂ ಭಾರತ, ಪಾಕಿಸ್ತಾನಗಳವರು ಈ ನೊದಲು ಅರಿತಿದ್ದಿಲ್ಲ. ಆಸ್ಟ್ರೇಲಿಯದ

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office.—**Kadri Road, Mangalore.**

Branches.- City Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara

B Manjaya Hegde

Advocate & President, District Board, S Kanara.

CHAIRMAN

-ಪ್ರಕಾಶಗೊಂಡಿರುವ ಹೆಸರುಗಳು

ವ್ಯಯಾಧಿಕ್ಷರಾಗಿ, ಅವರು ಆ ಸ್ಥಾನದಲ್ಲಿ ಕೇರ್ತಿ ಪಡೆದಿರಬಹುದು. ಆ ಹೆಸರಿಗೆ, ಬೇರೆ ಕೆಲವು ಹೆಸರುಗಳು ಮುಂದೆ ಬರಲಿಕ್ಕಿದ್ದವೆಂದು ಯಾರಿಗೆ ತಾನೆ ಗೊತ್ತಿತ್ತು? ಆದರೆ ಅವೆಲ್ಲವೂ ಈಗ ಪ್ರಕಾಶಗೊಂಡಿವೆ. ಅವುಗಳಲ್ಲಿ ಕೆಲವು ಹೆಸರುಗಳು ಮುಂದೆ ಬರಲಿಕ್ಕಿದ್ದವೆಂದು ಯಾರಿಗೆ ತಾನೆ ಗೊತ್ತಿತ್ತು? ಆದರೆ ಅವೆಲ್ಲವೂ ಈಗ ಪ್ರಕಾಶಗೊಂಡಿವೆ. ಮತದಾರರ ಯಾದಿ ತಯಾರಿ, ಕ್ಷೇತ್ರ ರಚನೆ, ಮತದಾನದ ವಿಧಾನಗಳು, ಆಕಾಶವಾಣಿ ಮುಂತಾದ ಪ್ರಚಾರ ಸಾಧನೆಗಳು, ಸರಕಾರೀ ನೌಕರರೇ ಮೊದಲಾದವರ ಮೂಲಕ ಅಧಿಕಾರದಲ್ಲಿರುವ ಕಾಂಗ್ರೆಸಿನ ಪಕ್ಷಪಾತೀ ಕೆಲಸಗಳಾಗಬಹುದೆಂದೇ ಜೈಪ್ರಕಾಶರು ಚಡ್ಡಿ ನುಡಿದಿದ್ದಾರೆ. ಚುನಾವಣಾ ಕಮಿಶನರ್ ಶ್ರೀ ಯಸ್. ಸೆನ್ನರು ಇಂತಹ ಎಲ್ಲಾ ಸಂದೇಹಗಳನ್ನೂ ನಿವಾರಣೆಗೊಳಿಸುವ ಸ್ಪಷ್ಟ ಆಶ್ವಾಸನೆಗಳನ್ನು ಕೊಡುತ್ತಾ "ಮತದಾರರ ಯಾದಿ ಮತ್ತು ಮತದಾರ ಕ್ಷೇತ್ರಗಳ ಪುನರ್ರಚನೆಯ ಸಂಬಂಧವಾಗಿ ಯಾವುದೇ ಪಕ್ಷ ಅಥವಾ ವ್ಯಕ್ತಿಯಿಂದ ಬರುವ ದೂರು ಅಥವಾ ಸೂಚನೆಗಳಿಗೆಲ್ಲವುಗಳಿಗೂ ಸುಸ್ವಾಗತವಿದೆ. ಅವೆಲ್ಲವುಗಳ ಕುರಿತೂ ಪರಿಶೀಲನೆ ನಡಿಸಲಾಗುವುದು" ಎಂದಿದ್ದಾರೆ. ಸೆನ್ನರು ಇದೇ ಕಾರ್ಯ ಸಂಬಂಧವಾಗಿ ಬೊಂಬಾಯಿಗೆ ಬಂದಿದ್ದಾರೆ. ಜೈಪ್ರಕಾಶ ನಾರಾಯಣರು ಶ್ರೀ ಸೆನ್ನರ ಆಶ್ವಾಸನೆಗಳನ್ನು ಸ್ವಾಗತಿಸಿ, ಬೊಂಬಾಯಿಯಲ್ಲಿ ಅವರೆ ಮುಂದೆ ತಾನು ಕೆಲವು ಸೂಚನೆಗಳನ್ನಿಡುವೆನೆಂದು ಹೇಳಿದ್ದಾರೆ.

ಇತರ ಹೆಸರುಗಳು

ಈಗ ಉತ್ತರ ಕೊರಿಯ ಮತ್ತು ದಕ್ಷಿಣ ಕೊರಿಯಗಳೊಳಗೆ ಯುದ್ಧ ಸ್ಫೋಟಗೊಂಡಿದೆ. ಉತ್ತರ ಕೊರಿಯವು ಕಮ್ಯೂನಿಸ್ಟ್ ಆಡಳಿತೆಯಲ್ಲಿದ್ದರೆ, ದಕ್ಷಿಣ ಕೊರಿಯದ ರಿಪಬ್ಲಿಕ್ ಸರಕಾರವು ಅಮೆರಿಕದ ಆಶ್ರಯದಲ್ಲಿದೆ. ಕೊರಿಯದ ಘರ್ಷಣೆಯು ಯಾವ ಆಕಾರಕ್ಕೆ ತಿರುಗಬಹುದೆಂಬ ಆತಂಕವನ್ನು ನಿರ್ಮಿಸುತ್ತಾ ಈಗ ಹಲವು ಹೆಸರುಗಳು ಪ್ರಖ್ಯಾತವಾದ ಸಾಮಾನ್ಯರ ಪಾಲಿಗೆ ಹೊಳೆಯತೊಡಗಿವೆ. ದಕ್ಷಿಣ ಕೊರಿಯಾ ರಿಪಬ್ಲಿಕ್‌ನ ಅಧ್ಯಕ್ಷ ಸಿಂಗ್‌ಮಾನ್ ರ್ಹೀ, ವಾಷಿಂಗ್ಟನ್ನಿನಲ್ಲಿ ದಕ್ಷಿಣ ಕೊರಿಯದ ರಾಯಭಾರಿಯಾಗಿರುವ ಜೋನ್ ಮ್ಯಾನ್‌ಚಂಗ್, ದಕ್ಷಿಣ ಕೊರಿಯ ಸರಕಾರದ ಸುದ್ದಿ ನಿರ್ದೇಶಕ ಕ್ಲಾರೆನ್ಸ್ ವೀ ಮೊದಲಾದವರು ವಿಶೇಷ ಚರ್ಚೆಗೆ ಬಿದ್ದಿದ್ದಾರೆ. ಈ ಹೆಸರುಗಳ ಸಂಬಂಧ ರಶ್ಯಾ ಅಮೆರಿಕಗಳ ಮತ್ತು ಇಕ್ಕಡೆಯ ನ್ಯಾಯಕರಗಳ ಇನ್ನೂ ಕೆಲವು ಹೆಸರುಗಳು ಮುಂದೆ ಬರುವ ಸಂದರ್ಭಗಳು ಇನ್ನಿವೆ.

ಭೂಮಸೂಚನೆ

ಭೂಮಿಯ ಮೇಲೆ ಸಾಗುವ ಯಾವುದೇ ವಾಹನಗಳಿಗೆ ಸಂಬಂಧಿಸಿದ ಮತದಾರ ಪಟ್ಟಿ, ಮತದಾರ ಕ್ಷೇತ್ರ ರಚನೆ, ಮತದಾನ ಪದ್ಧತಿ, ಚುನಾವಣಾ ಕ್ರಮ ನಿಯಮಗಳ ನಿರ್ಣಯ ಇತ್ಯಾದಿಗಳಿಗಾಗಿ ಅಖಿಲ ಭಾರತದ ಮುಖ್ಯ ಚುನಾವಣಾ ಕಮಿಶನರ್ ಆಗಿ ನೇಮಕಗೊಂಡಿರುವ ಶ್ರೀ ಯಸ್. ಸೆನ್ನರಿಗೆ ಭರದಿಂದ ತನ್ನ ಕಾರ್ಯ ಪ್ರವೃತ್ತಿ ತಾಗಿರುವುದರಿಂದ ಅವರ ಕಡೆಗೆ ರಾಷ್ಟ್ರದ ವಿಶೇಷ ಲಕ್ಷ್ಯ ಬೀಳಹತ್ತಿದೆ. ಪ್ರಾಯಸ್ಥರಿಗೆಲ್ಲಾ ಮತಾಧಿಕಾರ ದೊರೆತು, ಶಾಸನ ಸಭೆಗಳ ಸ್ಥಾನಗಳೂ ತದನುಗುಣವಾಗಿ ಅಧಿಕಗೊಂಡು, ಪ್ರತ್ಯೇಕ ಮತದಾನ ಪದ್ಧತಿ ರದ್ದಾಗಿ ಲೋಕದಲ್ಲೇ ಅತ್ಯಧಿಕ ಸಂಖ್ಯೆಯವರಾದ ಮತದಾರರಿಂದ ನಡೆಯಲಿರುವ ಮಹಾ ಚುನಾವಣೆಯ ವ್ಯವಸ್ಥಾಧಿಕಾರವೆಂಬುದು ಸಾಮಾನ್ಯ ಜವಾಬ್ದಾರಿಯೇನೂ ಅಲ್ಲ. ಇಂತಹ ಮಹತ್ತಾದ ಹೊಣೆಯನ್ನು ಹೊತ್ತಿರುವ ಶ್ರೀ ಯಸ್. ಸೆನ್ನರು ಸ್ವಾಭಾವಿಕವಾಗಿ ಅಖಿಲ ಭಾರತೀಯರ ಗಮನವನ್ನು ತನ್ನೆಡೆಗೆ ಸೆಳೆದಿದ್ದಾರೆ.

ನಾಥಿ ಜೈಪ್ರಕಾಶ ನಾರಾಯಣರು ಭಾರತದ ಎಡ ಪಕ್ಷದ ಸ್ಫುಟವಂತರಾದ ನಾಯಕ. ಸಮಾಜವಾದಿ ಪಕ್ಷದ ಕಾರ್ಯದರ್ಶಿ ಮತ್ತು ಮುಂದಾಳು. ಅವರು ಕೀರ್ತಿ ಕಿರಣಗಳ ಬೆಂಬವಾಗಿ ಭಾರತ ರಾಜಕೀಯಾಕಾಶದಲ್ಲಿ ಮೂಡಿ ಬಹಳ ಕಾಲವಾಗಿದೆಯಾದರೂ ಇತ್ತೀಚೆಗಿನ ದಿನಗಳಲ್ಲಿ ಭೂಮಿ ಚುನಾವಣಾ ಸಂಬಂಧದ ಹೊಸ ಹೆಜ್ಜೆಯೊಂದನ್ನಿಟ್ಟು ದೇಶೀಯರ ವಿಶೇಷ ಸಕ್ತಿಯನ್ನು ಆಕರ್ಷಿಸಿದ್ದಾರೆ. "ಭೂಮಿ ಮಹಾ ಚುನಾವಣೆಯಲ್ಲಿ ಮತಾಧಿಕಾರದ ಪೂರ್ಣ ಸ್ವಾತಂತ್ರ್ಯ, ಸ್ಪರ್ಧೆಯ ಯೋಗ್ಯ ಸಂದರ್ಭ, ಮತ್ತು ನಿಷ್ಪಕ್ಷಪಾತಿ ವರ್ತನೆಗಳಿರುವಂತೆ ನೋಡುವುದಕ್ಕಾಗಿ" ವಿರುದ್ಧ ಪಕ್ಷಗಳ ಸಮ್ಮೇಳನವೊಂದನ್ನು ಇಲ್ಲಿ ಜುಲಾಯಿ ತಾ ೧೫ನೆ ತಾರೀಖು ಬರೆಲ್ಲಿ ಬೊಂಬಾಯಿಯಲ್ಲಿ ಕರೆದಿದ್ದಾರೆ. ಈ ಸಮ್ಮೇಳನಕ್ಕೆ ಕಮ್ಯೂನಿಸ್ಟ್ ಪಕ್ಷ ಮತ್ತು ಕಾಂಗ್ರೆಸ್ ಪಕ್ಷವನ್ನು ಜೈಪ್ರಕಾಶರು ಆಮಂತ್ರಿಸಿಲ್ಲ "ಪ್ರಕೃತ ಕಾಂಗ್ರೆಸಿನ ಏಕ ತಂತ್ರಾಧಿಕಾರವಿದ್ದು, ಈ ಅಧಿಕಾರೀ ಪಕ್ಷವು ಮುಂದಿನ ಚುನಾವಣೆಯನ್ನು ನ್ಯಾಯೋಚಿತ ಯೋಗ್ಯ ವಿಧಾನಗಳಿಂದ ನಡೆಸಲಾರದೆಂಬ ಭಾವನೆಯು ಜನತೆಯಲ್ಲಿ ವ್ಯಾಪಿಸಿ ಹೋಗಿದೆ. ಚುನಾವಣಾ ಸಂಬಂಧದ ವಿಧಾನಗಳನ್ನು ಈ ಸಮ್ಮೇಳನವು ಶಿಫಾರಸು ಮಾಡಲಿದೆ. ಮಂತ್ರಿಗಳು ಚುನಾವಣೆಗೆ ಕೆಲವು ತಿಂಗಳುಗಳಿರುವಾಗಲೇ ರಾಜಿನಾಮೆ ಕೊಡತಕ್ಕದ್ದೆಂಬ ದು ಅಂತಹ ಸೂಚನೆಗಳಲ್ಲೊಂದು" ಎಂದು ಮುಂತಾಗಿ ಜೈಪ್ರಕಾಶರ ಆಂಬೋಣವಿದೆ. ಮತದಾರ ಯಾದಿ ತಯಾರಿ, ಕ್ಷೇತ್ರ ರಚನೆ, ಮತದಾನದ ವಿಧಾನಗಳು, ಆಕಾಶವಾಣಿ ಮುಂತಾದ ಪ್ರಚಾರ ಸಾಧನೆಗಳು, ಸರಕಾರೀ ನೌಕರರೇ ಮೊದಲಾದವರ ಮೂಲಕ ಅಧಿಕಾರದಲ್ಲಿರುವ ಕಾಂಗ್ರೆಸಿನ ಪಕ್ಷಪಾತೀ ಕೆಲಸಗಳಾಗಬಹುದೆಂದೇ ಜೈಪ್ರಕಾಶರು ಚಡ್ಡಿ ನುಡಿದಿದ್ದಾರೆ. ಚುನಾವಣಾ ಕಮಿಶನರ್ ಶ್ರೀ ಯಸ್. ಸೆನ್ನರು ಇಂತಹ ಎಲ್ಲಾ ಸಂದೇಹಗಳನ್ನೂ ನಿವಾರಣೆಗೊಳಿಸುವ ಸ್ಪಷ್ಟ ಆಶ್ವಾಸನೆಗಳನ್ನು ಕೊಡುತ್ತಾ "ಮತದಾರರ ಯಾದಿ ಮತ್ತು ಮತದಾರ ಕ್ಷೇತ್ರಗಳ ಪುನರ್ರಚನೆಯ ಸಂಬಂಧವಾಗಿ ಯಾವುದೇ ಪಕ್ಷ ಅಥವಾ ವ್ಯಕ್ತಿಯಿಂದ ಬರುವ ದೂರು ಅಥವಾ ಸೂಚನೆಗಳಿಗೆಲ್ಲವುಗಳಿಗೂ ಸುಸ್ವಾಗತವಿದೆ. ಅವೆಲ್ಲವುಗಳ ಕುರಿತೂ ಪರಿಶೀಲನೆ ನಡಿಸಲಾಗುವುದು" ಎಂದಿದ್ದಾರೆ. ಸೆನ್ನರು ಇದೇ ಕಾರ್ಯ ಸಂಬಂಧವಾಗಿ ಬೊಂಬಾಯಿಗೆ ಬಂದಿದ್ದಾರೆ. ಜೈಪ್ರಕಾಶ ನಾರಾಯಣರು ಶ್ರೀ ಸೆನ್ನರ ಆಶ್ವಾಸನೆಗಳನ್ನು ಸ್ವಾಗತಿಸಿ, ಬೊಂಬಾಯಿಯಲ್ಲಿ ಅವರೆ ಮುಂದೆ ತಾನು ಕೆಲವು ಸೂಚನೆಗಳನ್ನಿಡುವೆನೆಂದು ಹೇಳಿದ್ದಾರೆ.

ಇತರ ಹೆಸರುಗಳು

ಈಗ ಉತ್ತರ ಕೊರಿಯ ಮತ್ತು ದಕ್ಷಿಣ ಕೊರಿಯಗಳೊಳಗೆ ಯುದ್ಧ ಸ್ಫೋಟಗೊಂಡಿದೆ. ಉತ್ತರ ಕೊರಿಯವು ಕಮ್ಯೂನಿಸ್ಟ್ ಆಡಳಿತೆಯಲ್ಲಿದ್ದರೆ, ದಕ್ಷಿಣ ಕೊರಿಯದ ರಿಪಬ್ಲಿಕ್ ಸರಕಾರವು ಅಮೆರಿಕದ ಆಶ್ರಯದಲ್ಲಿದೆ. ಕೊರಿಯದ ಘರ್ಷಣೆಯು ಯಾವ ಆಕಾರಕ್ಕೆ ತಿರುಗಬಹುದೆಂಬ ಆತಂಕವನ್ನು ನಿರ್ಮಿಸುತ್ತಾ ಈಗ ಹಲವು ಹೆಸರುಗಳು ಪ್ರಖ್ಯಾತವಾದ ಸಾಮಾನ್ಯರ ಪಾಲಿಗೆ ಹೊಳೆಯತೊಡಗಿವೆ. ದಕ್ಷಿಣ ಕೊರಿಯಾ ರಿಪಬ್ಲಿಕ್‌ನ ಅಧ್ಯಕ್ಷ ಸಿಂಗ್‌ಮಾನ್ ರ್ಹೀ, ವಾಷಿಂಗ್ಟನ್ನಿನಲ್ಲಿ ದಕ್ಷಿಣ ಕೊರಿಯದ ರಾಯಭಾರಿಯಾಗಿರುವ ಜೋನ್ ಮ್ಯಾನ್‌ಚಂಗ್, ದಕ್ಷಿಣ ಕೊರಿಯ ಸರಕಾರದ ಸುದ್ದಿ ನಿರ್ದೇಶಕ ಕ್ಲಾರೆನ್ಸ್ ವೀ ಮೊದಲಾದವರು ವಿಶೇಷ ಚರ್ಚೆಗೆ ಬಿದ್ದಿದ್ದಾರೆ. ಈ ಹೆಸರುಗಳ ಸಂಬಂಧ ರಶ್ಯಾ ಅಮೆರಿಕಗಳವರ ಮತ್ತು ಇಕ್ಕಡೆಯ ನ್ಯಾಯಕರಗಳ ಇನ್ನೂ ಕೆಲವು ಹೆಸರುಗಳು ಮುಂದೆ ಬರುವ ಸಂದರ್ಭಗಳು ಇನ್ನಿವೆ.

ಭೂಮಸೂಚನೆ

ಭೂಮಿಯ ಮೇಲೆ ಸಾಗುವ ಯಾವುದೇ ವಾಹನಗಳಿಗೆ ಸಂಬಂಧಿಸಿದ ಮತದಾರ ಪಟ್ಟಿ, ಮತದಾರ ಕ್ಷೇತ್ರ ರಚನೆ, ಮತದಾನ ಪದ್ಧತಿ, ಚುನಾವಣಾ ಕ್ರಮ ನಿಯಮಗಳ ನಿರ್ಣಯ ಇತ್ಯಾದಿಗಳಿಗಾಗಿ ಅಖಿಲ ಭಾರತದ ಮುಖ್ಯ ಚುನಾವಣಾ ಕಮಿಶನರ್ ಆಗಿ ನೇಮಕಗೊಂಡಿರುವ ಶ್ರೀ ಯಸ್. ಸೆನ್ನರಿಗೆ ಭರದಿಂದ ತನ್ನ ಕಾರ್ಯ ಪ್ರವೃತ್ತಿ ತಾಗಿರುವುದರಿಂದ ಅವರ ಕಡೆಗೆ ರಾಷ್ಟ್ರದ ವಿಶೇಷ ಲಕ್ಷ್ಯ ಬೀಳಹತ್ತಿದೆ. ಪ್ರಾಯಸ್ಥರಿಗೆಲ್ಲಾ ಮತಾಧಿಕಾರ ದೊರೆತು, ಶಾಸನ ಸಭೆಗಳ ಸ್ಥಾನಗಳೂ ತದನುಗುಣವಾಗಿ ಅಧಿಕಗೊಂಡು, ಪ್ರತ್ಯೇಕ ಮತದಾನ ಪದ್ಧತಿ ರದ್ದಾಗಿ ಲೋಕದಲ್ಲೇ ಅತ್ಯಧಿಕ ಸಂಖ್ಯೆಯವರಾದ ಮತದಾರರಿಂದ ನಡೆಯಲಿರುವ ಮಹಾ ಚುನಾವಣೆಯ ವ್ಯವಸ್ಥಾಧಿಕಾರವೆಂಬುದು ಸಾಮಾನ್ಯ ಜವಾಬ್ದಾರಿಯೇನೂ ಅಲ್ಲ. ಇಂತಹ ಮಹತ್ತಾದ ಹೊಣೆಯನ್ನು ಹೊತ್ತಿರುವ ಶ್ರೀ ಯಸ್. ಸೆನ್ನರು ಸ್ವಾಭಾವಿಕವಾಗಿ ಅಖಿಲ ಭಾರತೀಯರ ಗಮನವನ್ನು ತನ್ನೆಡೆಗೆ ಸೆಳೆದಿದ್ದಾರೆ.

ನಾಥಿ ಜೈಪ್ರಕಾಶ ನಾರಾಯಣರು ಭಾರತದ ಎಡ ಪಕ್ಷದ ಸ್ಫುಟವಂತರಾದ ನಾಯಕ. ಸಮಾಜವಾದಿ ಪಕ್ಷದ ಕಾರ್ಯದರ್ಶಿ ಮತ್ತು ಮುಂದಾಳು. ಅವರು ಕೀರ್ತಿ ಕಿರಣಗಳ ಬೆಂಬವಾಗಿ ಭಾರತ ರಾಜಕೀಯಾಕಾಶದಲ್ಲಿ ಮೂಡಿ ಬಹಳ ಕಾಲವಾಗಿದೆಯಾದರೂ ಇತ್ತೀಚೆಗಿನ ದಿನಗಳಲ್ಲಿ ಭೂಮಿ ಚುನಾವಣಾ ಸಂಬಂಧದ ಹೊಸ ಹೆಜ್ಜೆಯೊಂದನ್ನಿಟ್ಟು ದೇಶೀಯರ ವಿಶೇಷ ಸಕ್ತಿಯನ್ನು ಆಕರ್ಷಿಸಿದ್ದಾರೆ. "ಭೂಮಿ ಮಹಾ ಚುನಾವಣೆಯಲ್ಲಿ ಮತಾಧಿಕಾರದ ಪೂರ್ಣ ಸ್ವಾತಂತ್ರ್ಯ, ಸ್ಪರ್ಧೆಯ ಯೋಗ್ಯ ಸಂದರ್ಭ, ಮತ್ತು ನಿಷ್ಪಕ್ಷಪಾತಿ ವರ್ತನೆಗಳಿರುವಂತೆ ನೋಡುವುದಕ್ಕಾಗಿ" ವಿರುದ್ಧ ಪಕ್ಷಗಳ ಸಮ್ಮೇಳನವೊಂದನ್ನು ಇಲ್ಲಿ ಜುಲಾಯಿ ತಾ ೧೫ನೆ ತಾರೀಖು ಬರೆಲ್ಲಿ ಬೊಂಬಾಯಿಯಲ್ಲಿ ಕರೆದಿದ್ದಾರೆ. ಈ ಸಮ್ಮೇಳನಕ್ಕೆ ಕಮ್ಯೂನಿಸ್ಟ್ ಪಕ್ಷ ಮತ್ತು ಕಾಂಗ್ರೆಸ್ ಪಕ್ಷವನ್ನು ಜೈಪ್ರಕಾಶರು ಆಮಂತ್ರಿಸಿಲ್ಲ "ಪ್ರಕೃತ ಕಾಂಗ್ರೆಸಿನ ಏಕ ತಂತ್ರಾಧಿಕಾರವಿದ್ದು, ಈ ಅಧಿಕಾರೀ ಪಕ್ಷವು ಮುಂದಿನ ಚುನಾವಣೆಯನ್ನು ನ್ಯಾಯೋಚಿತ ಯೋಗ್ಯ ವಿಧಾನಗಳಿಂದ ನಡೆಸಲಾರದೆಂಬ ಭಾವನೆಯು ಜನತೆಯಲ್ಲಿ ವ್ಯಾಪಿಸಿ ಹೋಗಿದೆ. ಚುನಾವಣಾ ಸಂಬಂಧದ ವಿಧಾನಗಳನ್ನು ಈ ಸಮ್ಮೇಳನವು ಶಿಫಾರಸು ಮಾಡಲಿದೆ. ಮಂತ್ರಿಗಳು ಚುನಾವಣೆಗೆ ಕೆಲವು ತಿಂಗಳುಗಳಿರುವಾಗಲೇ ರಾಜಿನಾಮೆ ಕೊಡತಕ್ಕದ್ದೆಂಬ ದು ಅಂತಹ ಸೂಚನೆಗಳಲ್ಲೊಂದು" ಎಂದು ಮುಂತಾಗಿ ಜೈಪ್ರಕಾಶರ ಆಂಬೋಣವಿದೆ. ಮತದಾರ ಯಾದಿ ತಯಾರಿ, ಕ್ಷೇತ್ರ ರಚನೆ, ಮತದಾನದ ವಿಧಾನಗಳು, ಆಕಾಶವಾಣಿ ಮುಂತಾದ ಪ್ರಚಾರ ಸಾಧನೆಗಳು, ಸರಕಾರೀ ನೌಕರರೇ ಮೊದಲಾದವರ ಮೂಲಕ ಅಧಿಕಾರದಲ್ಲಿರುವ ಕಾಂಗ್ರೆಸಿನ ಪಕ್ಷಪಾತೀ ಕೆಲಸಗಳಾಗಬಹುದೆಂದೇ ಜೈಪ್ರಕಾಶರು ಚಡ್ಡಿ ನುಡಿದಿದ್ದಾರೆ. ಚುನಾವಣಾ ಕಮಿಶನರ್ ಶ್ರೀ ಯಸ್. ಸೆನ್ನರು ಇಂತಹ ಎಲ್ಲಾ ಸಂದೇಹಗಳನ್ನೂ ನಿವಾರಣೆಗೊಳಿಸುವ ಸ್ಪಷ್ಟ ಆಶ್ವಾಸನೆಗಳನ್ನು ಕೊಡುತ್ತಾ "ಮತದಾರರ ಯಾದಿ ಮತ್ತು ಮತದಾರ ಕ್ಷೇತ್ರಗಳ ಪುನರ್ರಚನೆಯ ಸಂಬಂಧವಾಗಿ ಯಾವುದೇ ಪಕ್ಷ ಅಥವಾ ವ್ಯಕ್ತಿಯಿಂದ ಬರುವ ದೂರು ಅಥವಾ ಸೂಚನೆಗಳಿಗೆಲ್ಲವುಗಳಿಗೂ ಸುಸ್ವಾಗತವಿದೆ. ಅವೆಲ್ಲವುಗಳ ಕುರಿತೂ ಪರಿಶೀಲನೆ ನಡಿಸಲಾಗುವುದು" ಎಂದಿದ್ದಾರೆ. ಸೆನ್ನರು ಇದೇ ಕಾರ್ಯ ಸಂಬಂಧವಾಗಿ ಬೊಂಬಾಯಿಗೆ ಬಂದಿದ್ದಾರೆ. ಜೈಪ್ರಕಾಶ ನಾರಾಯಣರು ಶ್ರೀ ಸೆನ್ನರ ಆಶ್ವಾಸನೆಗಳನ್ನು ಸ್ವಾಗತಿಸಿ, ಬೊಂಬಾಯಿಯಲ್ಲಿ ಅವರೆ ಮುಂದೆ ತಾನು ಕೆಲವು ಸೂಚನೆಗಳನ್ನಿಡುವೆನೆಂದು ಹೇಳಿದ್ದಾರೆ.

ಇತರ ಹೆಸರುಗಳು

ಈಗ ಉತ್ತರ ಕೊರಿಯ ಮತ್ತು ದಕ್ಷಿಣ ಕೊರಿಯಗಳೊಳಗೆ ಯುದ್ಧ ಸ್ಫೋಟಗೊಂಡಿದೆ. ಉತ್ತರ ಕೊರಿಯವು ಕಮ್ಯೂನಿಸ್ಟ್ ಆಡಳಿತೆಯಲ್ಲಿದ್ದರೆ, ದಕ್ಷಿಣ ಕೊರಿಯದ ರಿಪಬ್ಲಿಕ್ ಸರಕಾರವು ಅಮೆರಿಕದ ಆಶ್ರಯದಲ್ಲಿದೆ. ಕೊರಿಯದ ಘರ್ಷಣೆಯು ಯಾವ ಆಕಾರಕ್ಕೆ ತಿರುಗಬಹುದೆಂಬ ಆತಂಕವನ್ನು ನಿರ್ಮಿಸುತ್ತಾ ಈಗ ಹಲವು ಹೆಸರುಗಳು ಪ್ರಖ್ಯಾತವಾದ ಸಾಮಾನ್ಯರ ಪಾಲಿಗೆ ಹೊಳೆಯತೊಡಗಿವೆ. ದಕ್ಷಿಣ ಕೊರಿಯಾ ರಿಪಬ್ಲಿಕ್‌ನ ಅಧ್ಯಕ್ಷ ಸಿಂಗ್‌ಮಾನ್ ರ್ಹೀ, ವಾಷಿಂಗ್ಟನ್ನಿನಲ್ಲಿ ದಕ್ಷಿಣ ಕೊರಿಯದ ರಾಯಭಾರಿಯಾಗಿರುವ ಜೋನ್ ಮ್ಯಾನ್‌ಚಂಗ್, ದಕ್ಷಿಣ ಕೊರಿಯ ಸರಕಾರದ ಸುದ್ದಿ ನಿರ್ದೇಶಕ ಕ್ಲಾರೆನ್ಸ್ ವೀ ಮೊದಲಾದವರು ವಿಶೇಷ ಚರ್ಚೆಗೆ ಬಿದ್ದಿದ್ದಾರೆ. ಈ ಹೆಸರುಗಳ ಸಂಬಂಧ ರಶ್ಯಾ ಅಮೆರಿಕಗಳವರ ಮತ್ತು ಇಕ್ಕಡೆಯ ನ್ಯಾಯಕರಗಳ ಇನ್ನೂ ಕೆಲವು ಹೆಸರುಗಳು ಮುಂದೆ ಬರುವ ಸಂದರ್ಭಗಳು ಇನ್ನಿವೆ.

ತ್ವರಿತ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ ಭಾರತದೊಳಗೆ 40 ಕ್ಕಿಂತಲೂ

Nambiar's

ARYA VAIDYA SALA

UDIPI

Ideal House for Ayurvedic Treatment.

ಭುಕ್ತಸ್ರಾವ ನಿರ್ಬಂಧಿಸು

'ಕುಮಾರಿ' ಪಿಲ್ಲೆಗಳನ್ನು ಉಪಯೋಗಿಸಿದರೆ ಹಠಾತ್ತನೆ ಮುಕ್ತಸ್ರಾವವಾಗುವುದು, ಹಠಾತ್ತಿಗೆ ಬರುವುದು, ಈ ಔಷಧ ಸೇವನೆಯಿಂದ ಕೀಲು ಗುಣವಾಗಿಹೋಗಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾರಿಕ ಸ್ಪೆಶಲ್ ರೂ. ೫-[ವಿ. ಪಿ. ಪಸ್ಸೇರಡಾಕೆ ಪ್ರತ್ಯೇಕ.]

Mrs P. DEVEE, F DS. (N. J.)

ಕೊರಿಯದಲ್ಲಿ ಜಾಹೀರು ಯುದ್ಧಾರಂಭ!

ಇದೇ ತಾ. 25ನೇ ಮುಂಜಾನೆ ಕಮ್ಯೂನಿಸ್ಟ್ ಉತ್ತರ ಕೊರಿಯವು, ಅಮೆರಿಕಾ ಪಕ್ಷಪಾತಿ ದಕ್ಷಿಣ ಕೊರಿಯದ ಮೇಲೆ ಧಾಳಿಯಾರಂಭಿಸಿದೆ; ಇವೆರಡು ರಾಷ್ಟ್ರದ ಸೇನೆಗಳೊಳಗೀಗ ಹಲವು ಕಡೆಗಳಲ್ಲಿ ಮುಖಾಮುಖಿ ಹೋರಾಟ ನಡೆದಿದೆ. ದಕ್ಷಿಣ ಕೊರಿಯದ ನಾಯಕರು ಕ್ಷಿಪ್ರ ಸಹಾಯಕ್ಕಾಗಿ ಅಮೆರಿಕಕ್ಕೆ ಮೊರೆಯಿಟ್ಟಿದ್ದಾರೆ. ವಾಷಿಂಗ್ಟನ್‌ನಿನಲ್ಲಿ ವಿಶೇಷ ರೀತಿಯ ಯೋಚನೆ, ಸರಾಮರ್ಶೆಗಳಾಗಿವೆ. ಅಮೆರಿಕವು ಭದ್ರತಾ ಕೌನ್ಸಿಲಿನ ಅವಸರದ ಸಭೆ ಕರೆಯುವಂತೆ ಕೇಳಿಕೊಂಡಿತು ಭದ್ರತಾ ಕೌನ್ಸಿಲಿನ ಈಗಿನ ಅಧ್ಯಕ್ಷ ಭಾರತ ಪ್ರತಿನಿಧಿ ಸರ್. ಬಿ. ಎನ್. ರಾಯರು ಸಂದರ್ಭೋಚಿತ ಅವಸರದಿಂದ ತಾ 25ರಲ್ಲೇ ಭದ್ರತಾ ಕೌನ್ಸಿಲಿನ ಸಭೆ ಕರೆದರು. ಉತ್ತರ ಕೊರಿಯದ ವರ್ತನೆಯು ಆಕ್ರಮಣವೆಂದು ನಿರ್ಧರಿಸಿ, ಅದು ತನ್ನ ಸೇನೆಯನ್ನು ಕೂಡಲೇ ಮೊದಲಿನಂತೆ ಮಧ್ಯ ಗಡಿ ಗೆರೆಯ ಹಿಂಭಾಗಕ್ಕೊಯ್ಯಬೇಕೆಂಬ ಅಮೆರಿಕದ ಸೂಚನೆಯು ಭದ್ರತಾ ಕೌನ್ಸಿಲಿನಲ್ಲಿ ಮಂಜೂರಾಗಿದೆ. ರಶ್ಯವು ಈ ಕೌನ್ಸಿಲ್ ಸಭೆಯನ್ನು ಬಹಿಷ್ಕರಿಸಿದ್ದಿತು. 'ಸಂಧ್ಯವೆಳ್ಳ ಎಲ್ಲಾ ಶಸ್ತ್ರ ಸಹಾಯಗಳನ್ನೂ ಅತ್ಯವಸರದಿಂದ ದ. ಕೊರಿಯಾ ಸರಕಾರಕ್ಕೆ ಕೂಡಬೇಕು' ಎಂಬ ಅಮೆರಿಕಾ ಸರಕಾರದ ಆಜ್ಞೆಯಂತೆ ಜಪಾನಿನಿಂದ ಮೆಕಥರ್ ರು ಒಂದೇ ಸವನೆ ವಿಮಾನ ಮೊದಲಾದವುಗಳನ್ನು ಕಳುಹಿಸಹತ್ತಿದ್ದಾರೆ. ಜಾಗತಿಕ ರಂಗದಲ್ಲಿ ಒಂದು ಗಂಡಾಂತರ ದಾಯಿತ್ವಿಕ ಘಟನೆ ಸ್ಫೋಟಗೊಂಡಿತು. ಎಲ್ಲಿಯಾವ ಪರಿಮಾಣದ ಘರ್ಷಣೆಯೆಳುವುದೋ ಎಂದು ಕಲಕಾಡಿಂದ ನಿರೀಕ್ಷಿಸಿಕೊಂಡಿದ್ದವರ ದೃಷ್ಟಿಯನ್ನು ಕೊರಿಯಾ ತನ್ನೆಡೆಗೆಳೆದುಕೊಂಡು, 'ಮುಂದೇನು?' ಎಂಬ ಆತುರವನ್ನು ನಿರ್ಮಿಸಿದೆ.

ಅಪಾಯ ನೆಲೆ ಕೊರಿಯ

ಏಷಿಯ ಕೊರಿಯವು ಜಾಪಾನು ಮತ್ತು ಮಂಚೂರಿಯಗಳ ನಡುವಣ ಪ್ರಕೃತಿದತ್ತ ಸೇತುವೆಯೋ ಎಂಬಂತೆ ಇರುವ ಅರ್ಧ ದ್ವೀಪ. ಇದು ಸುಮಾರು 85,000 ಚದರ ಮೈಲಿದ್ದು ಇಂಗ್ಲಾಂಡಿನಷ್ಟೇ ದೊಡ್ಡದಿರುವ ಭೂ ವಿ. ಸು ಮಾ ರು 30,000,000 ಜನ ಇಲ್ಲಿ ವಾಸಿಸುತ್ತಿದ್ದಾರೆ. ಟಾರ್ಟರ್, ಮಂಗೋಲ್ ಮತ್ತು ಜಾಪಾನೀ ಭಾಷೆಗಳ ಮಿಶ್ರಣವಾಗಿದ್ದು ಚೈನೀ ಲಿಪಿಯಿರುವ ಭಾಷೆಯನ್ನೇ ಇಲ್ಲಿಯವರಾಡುತ್ತಾರೆ. ಕೊರಿಯದ ಜೀವೋದ್ಯಮ ಬೇಸಾಯ. ಅಕ್ಕಿ, ಬಾರ್ಲಿ ಮತ್ತು ಗೋಧಿಯೇ ಇಲ್ಲಿಯ ಮುಖ್ಯ ಬೆಳೆಗಳು. ಕೆಲವಂಶ ಖನಿಜ ಸಂಪತ್ತೂ ಇಲ್ಲಿದೆ. ಜನತೆಯಲ್ಲಿ ಸೇಕಡಾ 90ರಷ್ಟು ಸಾಗುವಳ್ಳಿಗಾರರಿದ್ದು ಅವರ ಜೀವನ ಮಟ್ಟ ತೀರಾ ಕೆಳ ತರಗತಿಯವಿದೆ. ಕಳೆದ ಮಹಾ ಯುದ್ಧ ಕಾಲದಲ್ಲಿ ಜಾಪಾನೀ ರಾಧೀನದಲ್ಲಿದ್ದ ಕೊರಿಯಾದ ಮೇಲೆ ಉತ್ತರಗಡೆಯಿಂದ ರಶ್ಯ ಮತ್ತು ದಕ್ಷಿಣ ಗಡಯಿಂದ ಅಮೆರಿಕದ ಸೇನೆಗಳು ಮುಂಬೈನ್ನು ಬಂದು ವಶಪಡಿಸಿಕೊಂಡಿದ್ದವು. ಆ ಮೇಲೆ ಯುದ್ಧಾಂತ್ಯ ಭಗದ ರಶ್ಯ-ಅಮೆರಿಕ ಒಪ್ಪಂದವೊಂದರ ಮೂಲಕ ಉತ್ತರ ಕೊರಿಯ-ದಕ್ಷಿಣ ಕೊರಿಯ ವಿಭಾಗ ನಿರ್ಮಾಣಗೆ ಂಡು, ಇವೆರಡರ ಮಧ್ಯ ಸರಹದ್ದಾಗಿ 38ನೇ ಮಧ್ಯಾಂತರ ಗೆರೆಯನ್ನು ಎಳೆಯಲಾಗಿದ್ದಿತು ಆ ನಂತರ ಉತ್ತರ ಕೊರಿಯಾ ಭಾಗವು "ಪೀಪ್ಲ್ಸ್ ರಿಪಬ್ಲಿಕ್" ಎಂಬ ನಾಮದಿಂದ ಕಮ್ಯೂನಿಸ್ಟ್ ಆಡಳಿತೆಯಲ್ಲಿಯೂ ದಕ್ಷಿಣ ಕೊರಿಯವು 'ದಕ್ಷಿಣ ಕೊರಿಯಾ ರಿಪಬ್ಲಿಕ್' ಎಂಬ ಹೆಸರಿನಿಂದ ಪ್ರಜಾ ಸತ್ತಾಡಳಿತೆಯಲ್ಲಿಯೂ ನಡೆದು ಬಂದಿವೆ. ಉತ್ತರ ಕೊರಿಯವನ್ನು ಯುದ್ಧಾಂತ್ಯ ಭಾಗದಿಂದ ಹಿಡಿದುಕೊಂಡಿದ್ದ ರಶ್ಯದ ಸೇನೆಗಳು 1948ನೇ ದ ಶಂಬರನಲ್ಲಿಯೂ, ದಕ್ಷಿಣ ಕೊರಿಯವನ್ನು ಆಕ್ರಮಿಸಿಕೊಂಡಿದ್ದ ಅಮೆರಿಕದ ಸೇನೆಗಳು 1949ನೇ ಜೂನಿನಲ್ಲಿಯೂ ಅಲ್ಲಿಂದ ಹಿಂದೆಗೆದಿದ್ದವು

ಸದಾ ಘರ್ಷಣೆ

ವಿದೇಶೀ ಆಕ್ರಮಣ ಸೇನೆಗಳು ತೊಲಗಿದಂದಿನಿಂದ ಕೊರಿಯದ ಇಕ್ಕಡೆಯ ಸೇನಾ ತುಕಡಿಗಳೊಳಗೆ ಸರಹದ್ದು ಸಮಾಂತರ ಗಡಿಯಲ್ಲಿ ಆಗಿಂದಾಗ ಘರ್ಷಣೆಗಳು ನಡೆಯುತ್ತಲೇ ಬಂದಿದ್ದುವು. ಗುಂಡಿನೆತ, ವೆ ಶಿನ್‌ಗನ್ನು ಹೋರಾಟಗಳೂ ಆಗಿದ್ದುವು. ಉತ್ತರದ ಕಮ್ಯೂನಿಸ್ಟ್ ಗೊರಿಲ್ಲಾಗಳು ತಮ್ಮ ಗಡಿದಾಟಿ ಬಂದು ಧಾಳಿ ಮಾಡಿದುವೆಂದು ದಕ್ಷಿಣ ಕೊರಿಯವೂ ದಕ್ಷಿಣದ ಭೀತ್ಯತ್ವಾದಕರು ಮತ್ತು ಭಕ್ತಯತರು ತಮ್ಮ ಸರಹದ್ದು ಮೀರಿ ಬಂದು ಹಾವಳಿ ಮಾಡಿದರೆಂದು ಉತ್ತರ ಕೊರಿಯವೂ ಮೇಲಿಂದ ಮೇಲೆ ದೂರುವ ಪರಿಪಾಠವಿದ್ದೇ ಇದ್ದಿತು. ಯುದ್ಧಾನಂತರ ಇಬ್ಭಾಗವಾಗಿರುವ ಕೊರಿಯವನ್ನು ಒಂದುಗೂಡಿಸಬೇಕೆಂಬ ಚಳವಳಿವು ಮುಖ್ಯವಾಗಿ ಉತ್ತರ ಕೊರಿಯದವರಿಂದ ನಡೆದೇ ಇದ್ದಿತು. ಹಿಂದಿನ ನೋಸ್ಕೋ ಸಮ್ಮೇಳನವೊಂದರಲ್ಲೂ ಈ ಏಕೀಕರಣ ನಿರ್ಣಯವಾಗಿದ್ದಿತು ಇಂದಿನ ಯುದ್ಧ ಸ್ಫೋಟಕ್ಕೆ ಮೂಲ ಕೆಡಿಯೆನ್ನ ಬಹುದಾದ ಘಟನೆ ಇದೇ ತಿಂಗಳಲ್ಲಿ ನಡೆದಿದ್ದಿತು. ತಮ್ಮ ಪಿಠಿಳ ಭೂ ವಿ ಯ ಏಕೀಕರಣ ಸಾಧಿಸಲು ಮೂವರು ಉತ್ತರ ಕೊರಿಯಾ ರಾಯಭಾರಿಗಳು ಸರಹದ್ದು ಗೆರೆ ದಾಟಿ ದಕ್ಷಿಣ ಕೊರಿಯಕ್ಕೆ ಬಂದರೆಂ ಅವರು ಏಕೀಕರಣ ಸೂಚನೆಗಳನ್ನು ತಂದಿದ್ದರಂತೆ. ದಕ್ಷಿಣ ಕೊರಿಯದ ಅಧಿಕಾರಿಗಳು ಅವರನ್ನು ದಸ್ತಗಿರಿ ಮಾಡಿಟ್ಟರು; ಆ ನೈಕೆ ಇಟ್ಟರು ಕೊನೆಗೆ ದಕ್ಷಿಣ ರಾಜ್ಯಭಾರದ ಭಕ್ತರಾಗಿ ಪರಿವರ್ತನೆಗೊಂಡರೆಂದು ಸುದ್ದಿಯಿದೆ. ಉತ್ತರ ಕೊರಿಯವು ಈ ಮೂವರ ಬಿಡುಗಡೆಯನ್ನು ಕೇಳುತ್ತಾ, ದಕ್ಷಿಣದ ಅಧ್ಯಕ್ಷ ಸಿಂಗ್ ಮೆನ್ ರೀ ಮತ್ತವರ ಅನುಯಾಯಿಗಳು, ಕೊರಿಯದ ಶಾಂತ ಏಕೀಕರಣದ ವಿರುದ್ಧವಾಗಿ ಅಮೆರಿಕದ ಹಿತ ಸಾಧಿಸಲು ಆತ್ಮಹತ್ಯಾ ಸಮಾನ ಅಂತರ್ಯುದ್ಧವನ್ನು ಪ್ರೇರೇಪಿಸುತಿದ್ದಾರೆಂದು ಆರೋಪಿಸತ್ತಾ ಗೃಹ ಭೂಮಿಯ ಏಕೀಕರಣ ಕ್ಕಾಗಿ ರಿಷ್ಯ ವ್ಯಾಪೀ ಹೋರಾಟಕ್ಕೆ ಕರೆಯಿತ್ತಿತು. ಅದನ್ನನ ಸರಿಸಿ ಇದೇ ತಾ 25ರಲ್ಲಿ ಪ್ರತ್ಯಕ್ಷ ಧಾಳಿಯನ್ನೇ ಆರಂಭಿಸಿತು.

ಯುದ್ಧ ಸ್ಫೋಟ

ತಾ. 25ನೇ ಮುಂಜಾನೆ ಉತ್ತರ ಕೊರಿಯವು ವಿಮಾನ, ಟ್ಯಾಂಕು ಮತ್ತು ಸರಸ್ತ್ರ ದಳಗಳ ಸಶಕ್ತ ಧಾಳಿಯನ್ನು ಪ್ರಾರಂಭಿಸಿ ಮಧ್ಯ ಗಡಿಯನ್ನು ದಾಟಿ ದಕ್ಷಿಣ ಕೊರಿಯದ ಹೆಲವೆಡೆ ಮುಂದೊತ್ತಿ ಬಂತು. ಬೇರೊಂದೆಡೆ ಪಡಗಿನ ಮೂಲಕವೂ ಸೇನೆಗಳಳಿದು ವಲ್ಲದೆ, ಮಧ್ಯ ಗಡಿಗೆ ಕೇವಲ 38 ಮೈಲು ದೂರದಲ್ಲಿರುವ ದಕ್ಷಿಣ ಕೊರಿಯದ ರಾಜಧಾನಿ ಸೌಲಿನ ವೇಲ್ಗಡೆ ವೈರಿ ವಿಮಾನಗಳು ಹಾರಾಡ ಹತ್ತಿದವು; ಮತ್ತು ದಕ್ಷಭಿಮುಖವಾಗಿ ವೈರಿ ಸೇನೆಗಳೂ ರಭಸದಿಂದ ಮುಂದೊತ್ತಿ ಬರುತ್ತಿವೆ. ಉತ್ತರ ಕೊರಿಯವು ದಕ್ಷಿಣ ಕೊರಿಯದ ಮೇಲೆ ಆ ದಿನ ಜಾಹೀರಾಗಿ ಯುದ್ಧ ಸಾರಿದೆ. ಕಳೆದ ಮಹಾ ಯುದ್ಧಾನಂತರ ಹಲವೆಡೆ ಎಂತೆಂತಹ ಘರ್ಷಣೆಗಳು ನಡೆದಿದ್ದರೂ ಯುದ್ಧ ಜಾಹೀರಾದುದು ಇದೇ ಪ್ರಥಮ ಬಾರಿ. ದ. ಕೊರಿಯದ ಅಧ್ಯಕ್ಷ ಸಿಂಗ್ಮಾನ್ ರ್ಹೀ, ಅವರು ತನ್ನ ಮಂತ್ರಿ ಮಂಡಲದ ಅವಸರದ ಸಭೆ ಕರೆದಿದ್ದಾರೆ; ಜಾಪಾನಿನಲ್ಲಿರುವ ಅಮೆರಿಕನ್ ಸೇನಾನಿ ಜನರಲ್ ಮೇಕರ್ಥರ್‌ರಿಗೆ ಸಹಾಯಕ್ಕಾಗಿ ಆಗ್ರಹದ ಮೊರೆಯಿಟ್ಟಿದ್ದಾರೆ ಯುದ್ಧ ರಂಗದ ಸ್ಥಿತಿಗತಿಗಳನ್ನ ಪ್ರತ್ಯಕ್ಷ ಕಾಣಲಿಕ್ಕಾಗಿ ಜಪಾನಿನಿಂದ ಅಮೆರಿಕನ್ ಸರಿಪಲಕರು ವಿಮಾನ ಮೂಲಕ ಹೋಗಿದ್ದಾರೆ. ಅಮೆರಿಕದಲ್ಲಿರುವ ದ. ಕೊರಿಯದ ರಾಯಭಾರಿ ಜೋನ್ಮ್ಯೂನ್ ಚಂಗರು ಅಮೆರಿಕದ ಗೃಹೋಪಕಾರ್ಯದರ್ಶಿ ಡೀನ್ ಅಚೆರ್‌ಸನ್‌ರೊಡನೆ ತುರ್ತಿನ ಮಾತುಕತೆ ನಡೆಸಿದ್ದಾರೆ ಉತ್ತರ ಚೈನದ ಕಮ್ಯೂನಿಸ್ಟ್ ಸೇನೆ ಳೂಂದಿಗೆ ರಷ್ಯ ಮಾಡಿ ಇತ್ತೀಚಿಗೆ ಎಂಳಿದ್ದ ಎಂಡು ದಂ ಸೇನೆಗಳ ಸಮೇತ 180,000 ಸೈನ್ಯ ಬಲ, 195 ಸಣ್ಣ ದೊಡ್ಡ ಯುದ್ಧ ವಿಮಾನಗಳ, 17ರ ಸಣ್ಣ ದೊಡ್ಡ ಟ್ಯಾಂಕುಗಳೂ ಕೂಡಿ ಂಂ ಳ್ಳೀಯುತ್ತಿದ್ದ ದಕ್ಷಿಣ ಕೊರಿಯದೆಸ್ಸೆಬ್ಬುವುದು ಎಂದು ತಿಳಿದು ಬಂದಿದೆ. ಈ ದಳಗಳಿಗೆ ರಶ್ಯದ ತರಬೇತಿ ಮತ್ತು ಶಸ್ತ್ರಾಸ್ತ್ರಗಳು ದೊರೆತಿದ್ದುವೆಂದು ನಂಬಲಾಗಿದೆ.

ಮುಂದೇನು?

ಕೊರಿಯದ ದ್ವಿಭಾಗಗಳು ಮಾತ್ರ ಪರಸ್ಪರ ಹೋರಾಡಿಕೊಂಡ ಮಾತ್ರಕ್ಕೆ ಲೋಕಾಪತ್ತು ಏಳುವಂತಿಲ್ಲ. ಯಾವ ಕಡೆಯವರು ಗೆದ್ದರೂ, ರಶ್ಯ ಅಮೆರಿಕಗಳ ಪ್ರತ್ಯರ್ಥವಾಗಿ ಇತ್ತೀಚೆಗೆ ಅನ್ಯಾಯವಾಗಿ ಇಬ್ಭಾಗವಾಗಿದ್ದ ಕೊರಿಯಕ್ಕೆ ಮೊದಲಿನಂತೆ ಒಂದುಗೂಡಿಸಿ ಏಕೀಕರಣ ಲಾಭವಾಗುವುದಂತೂ ಖಂಡಿತ. ಸ್ಥಳೀಯ ಸ್ಥಿತಿಗತಿಗಳ ಮೇಲಿಂದ ಉತ್ತರ ಕೊರಿಯಕ್ಕೇನೇ ಅಲ್ಲಿವಿಜಯ ಭದ್ರವಾಗಿದೆ. ಮೊದಲ ದಿನದ ಹೋರಾಟದಲ್ಲೇ ಇಕ್ಕಡೆಯಲ್ಲೂ ತಲಾ 4,000ದಂತೆ ಸತ್ತಿರಬಹುದು ಎಂಬ ವಾರ್ತೆಯಿರುವಾಗ ಎರಡನೇ ದಿನದ ಹೋರಾಟವು ಸಂಖ್ಯೆಯು ಬಿಗಿಗೊಂಡಿದೆ. ದಕ್ಷಿಣ ಕೊರಿಯವು ಎಲ್ಲಾ ಕದೆಗಳಲ್ಲೂ ಪ್ರತಿ ಧಾಳಿಯನ್ನು ಆರಂಭಿಸಿ ತಮ್ಮಂತಾದ ಧಾನಿಗೆ ಸಮೀಪಿಸುತ್ತಿದ್ದ ವೈರಿ ಸೇನೆಯನ್ನೊಮ್ಮೆ 25 ಮೈಲಷ್ಟು ಹಿಂದಕ್ಕಟ್ಟಿತಾದರೂ ಉತ್ತರ ಕೊರಿಯದ ಸೇನೆಗಳ ಸಾಹಸಿಕ್ಕೆ ಇವ್ವಡಿಗೊಂಡು, ಅವು ಇಚ್ಚುನ್ ಹೊಳೆ ದಾಟಿ ದ ಕೊರಿಯದ ರಾಜಧಾನಿ ಸೌಲಿಯ ವಲಯದ ಎಲ್ಲಾ ಆಯಕಟ್ಟು ಸ್ಥಳಗಳನ್ನೂ ಹಿಡಿದುಕೊಂಡಂತಿದೆ. ಉತ್ತರ ಕೊರಿಯಾ ಪ್ರಧಮ ಯುದ್ಧ ಪ್ರಕಟಣೆಯ ಕಮ್ಯೂನಿಸ್ಟ್ ಶೈಲಿ ಮತ್ತು ಭಾವನೆಯಲ್ಲಿ ಅಸಾಮಾನ್ಯ ಬುದ್ಧಿವಂತಿಕೆ ಮತ್ತು ಕರೋತೆ ಕಂಡು ಬರುತ್ತಿದೆ. 'ದಕ್ಷಿಣ ಕೊರಿಯದ ಗೊಂಬೆ

(ಜನೇ ಪುಟ ನೋಡಿರಿ)

Income Tax

Does this oppress you?

If so consult the undersigned. He will assist you in all matters relating to Income Tax assessments appeal & refunds He can represent your case.

Fees- Moderate.

Office:-Railway Station Road, Hampankatta Post, S. K. Mangalore,

Dated, 21-6-50

H. Narasappa,
Income Tax Practitioner,
(Late of the Income Tax Dept.)

ಇನ್‌ಕಮ್‌ಟ್ಯಾಕ್ಸ್

ಇದರಿಂದ ನಿಮಗೆ ಬೇಜಾರಿವಾಗಿರುವುದೇ?

ಹಾಗಾಗಿದ್ದರೆ ನನ್ನಿಂದ ಅನುಭವವನ್ನು ಪಡೆಯಿರಿ.

ಇನ್‌ಕಮ್‌ಟ್ಯಾಕ್ಸ್ ಅಸೆಸ್‌ಮೆಂಟು, ಅಪೀಲು, ರಿಫಂಡು — ಇವುಗಳ 26 ವರುಷದ ಅನುಭವವು ನಿಮಗಿರುವುದು. ನಾನು ನಿಮಗಾಗಿ ವ್ಯವಹರಿಸಬಹುದು.

ಫೀಸು — ಕಡಿಮೆ

ಆಫೀಸು — ರೈಲ್ವೆಸ್ಟೇಷನ್ ರೋಡ್, ಹಂಪನಕಟ್ಟೆ ಪೋಸ್ಟು, ದ. ಕ.

ಮಂಗಳೂರು
21-6-50

ಎಚ್. ನರಸಪ್ಪ, ಬಿ. ಎ.
ಇನ್‌ಕಮ್‌ಟ್ಯಾಕ್ಸ್ ಪ್ರೇಕ್ಟೀಶನರ್

THE
Canara Banking Corporation Ltd.
(Incorporated in India.)
Estd: 1906.
Head Office : **UDIPI**, (S. I).

Capital Authorised .... Rs. 25,00,000
Capital Issued, Subscribed &
Paid up .... Rs. 20,00,000
Reserves .... Rs. 9,44,765

ನವಯುಗ
ಭಾನುವಾರ ಉಡುಪಿ ೨೯-೬-೧೯೫೦

ಮಹಾ ತಯಾರಿ

ಭಾರತ ಜನತಾರಾಜ್ಯ ಶಾಸನದನ್ವಯ ಚುನಾವಣೆಗಾಗಿ ಭಾರತದ ಮತದಾರರ ಜಾಬಿತೆಯ ಪೂರ್ವತಯಾರಿಯೋಗ ಭರದ ನಡೆಯುತ್ತಿದೆ. ಈ ಸಂಬಂಧವಾ ಪ್ರತಿಯೊಂದು ಸಂಸ್ಥಾನವನ್ನೂ ಸಂದರ್ಶಿಸಲು ಹೊರಟಿರುವ ಮುಖ್ಯ ಚುನಾವಣಾ ಕಮಿಶನರ್ ಶ್ರೀ ಯು. ಸೆನ್ ರವರು ದಕ್ಷಿಣಭಾರತದಲ್ಲಿದ್ದಾರೆ. ಮತದಾರರ ಪಟ್ಟಿಗಳ ತಯಾರಿ, ಮತದಾರ ಪ್ಲೇಟುಗಳ ನಿರ್ಮಾಣ, ಮತದಾನದ ವಿಧಾನ ಇತ್ಯಾದಿಗಳ ಬಗ್ಗೆ ಚುನಾವಣೆ, ಮುಂತಾದ ಕಾರ್ಯಭಾರಗಳು ಸೆನರ ಮೇಲಿನವೆ. ಈ ಕಾರ್ಯದಲ್ಲಿ ಪ್ರೊಡನೆ ಸಹಕರಿಸುವುದಕ್ಕಾಗಿ, ಪಾರ್ಲಿಮೆಂಟ್ ಅಧ್ಯಕ್ಷರಿಂದ ನಿಬಂಧನಾನುಸಾರ ಸಂಸ್ಥಾನೀ ಸಚಿವರಿಗೆ ಇಪ್ಪತ್ತರಲ್ಲೇ ಪತ್ರಗಳಾಗಿವೆ. ಕಾರ್ಯವೆಷ್ಟೇ ಪ್ರಮಾಣವಾಗಿ ನಡೆದರೂ ಇನ್ನೂ ಹಲವು ತಿಂಗಳುಗಳಳಿದಿರುವುದರಿಂದ 1ನೇ ಏಪ್ರಿಲ್-ಮೇ ತಿಂಗಳಲ್ಲಿ ಮಹಾ ಚುನಾವಣೆ ನಡೆಸಲು ಸಾಧ್ಯವಿದೆಯೆಂದು ಸೆನರು ಭರವಸೆಯಿಂದಾಡಿದ್ದಾರೆ. ತದಂತಹ ದೊಡ್ಡ ರಾಷ್ಟ್ರದಲ್ಲಿ ಪತ್ರಗಳಿಲ್ಲರಿಗೂ ಮತಾಧಿಕಾರವಿರುವಾಗ, ಮತದಾರ ಪಟ್ಟಿಗಳನ್ನು ತಯಾರಿಸುವ ಕಾರ್ಯ ಸಂಬಂಧಪಟ್ಟ ಇತರ ಎಲ್ಲಾ ವ್ಯವಸ್ಥೆಗಳನ್ನು ಮಾಡುವ ಕೆಲಸವೆಷ್ಟು ಅಗಾಧವೆಂಬುದನ್ನು ವರ್ಣಿಸಬೇಕೆಂತಿಲ್ಲ. ತನ್ನ ಸಲಹೇ ಸಮಿತಿಗಳ ಮತ್ತು ರಾಜಕೀಯ ಪಕ್ಷಗಳ ಅಭಿಪ್ರಾಯ ಕೇಳಿಕೊಂಡು ಮತದಾರ ಯಾದಿಗಳನ್ನು ತಯಾರಿಸಲು ಮತದಾರ ಪ್ಲೇತ್ರ ಮತ್ತು ಮತದಾನ ಕೇಂದ್ರಗಳನ್ನು ನಿರ್ಣಯಿಸಿ ಚುನಾವಣಾಧಿಕಾರಿಗಳನ್ನು ರಾಷ್ಟ್ರಾಧ್ಯಕ್ಷರಿಗೆ ಶಿಫಾರಸು ಮಾಡಬೇಕು. ಅಧ್ಯಕ್ಷರು ಆ ಸಂಗತಿಗಳನ್ನು ಹೊರಡಿಸುವ ಆಜ್ಞೆಗಳನ್ನು ಹೊರಡಿಸುವವರೆಗೆ ಇವೆಲ್ಲವೂ ಕಾರ್ಯಾಂಶಗಳೇ. ಮತದಾರ ಪಟ್ಟಿಗಳಲ್ಲಿ ಏಕ ಮತಾಧಿಕಾರವೋ, ಸಮಾನ ಮತಾಧಿಕಾರವೋ, ಅಥವಾ ಪ್ರತಿವಾರು ಮತ್ತು ಸ್ಥಳವಾರು ವಿಧಾನಗಳೋ ಎಂಬ ಕುರಿತು ಪಾರ್ಲಿಮೆಂಟೇ ನಿರ್ಣಯಿಸಬೇಕಾಗಿದೆ. ಅಂತೂ ನವರಾಜ್ಯ ಶಾಸನದನ್ವಯ ಸುವ್ಯವಸ್ಥೆ ವತ್ತು ಲಕ್ಷ್ಯಿಸಿಕ್ಕೆ ಸೂಕ್ತ ಕಡೆಯುತ್ತಿರುವ ಈ ಮಹಾ ಸಿದ್ಧತೆಯ ಅಂಶಾಂಶ ವಿಮರ್ಶೆ ನಡೆಸುವ ಕಾಲ ಇದಲ್ಲ. ಪ್ರಪಂಚದ ಬೇರಾವ ರಾಷ್ಟ್ರದಲ್ಲೂ ಇಲ್ಲದಿರುವಷ್ಟು-ಸುಮಾರು 17 ಕೋಟಿ-ಮತದಾರರಿರುವ ಭಾರತ ಜನತಾರಾಜ್ಯದಲ್ಲಿ, 1,000 ಮತದಾರರಿಗೊಂದರಂತೆ ಮತದಾನ ಮಂದಿರಗಳನ್ನು ಬೇಕೆಂಬ ಸಂಕಲ್ಪಸಮೇತ, ಎಲ್ಲಾ ವ್ಯವಸ್ಥೆಗಳೂ ಶ್ರಮಬದ್ಧವಾಗಿ ನಡೆದಿವೆ. ಮುಖ್ಯವಾಗಿ ಮತದಾರ ಯಾದಿಗಳ ರಚನೆ ಮತ್ತು ಮುದ್ರಣಕ್ಕಾಗಿ ಇಪ್ಪತ್ತರಲ್ಲೇ ಸುಮಾರು 6ಕೋಟಿ ರೂಪಾಯಿಗಳು ವ್ಯಯವಾದುವೆನ್ನುವಾಗ ಪೂರ್ಣಸಿದ್ಧತೆ ಮತ್ತು ಭಾವೀ ಚುನಾವಣೆಗೆ ಬೇಕಾಗಬಹುದಾದ ಒಟ್ಟು ವೆಚ್ಚ ಮತ್ತು ಶ್ರಮಾಂದೋಲನಗಳೆಷ್ಟಾಗಬಹುದು ಎಂಬುದನ್ನು ಈಗ ಊಹಿಸುವುದು ಅಸಾಧ್ಯ ಅಂತೂ ಇದೊಂದು ಅತಿ ಪ್ರಾಮುಖ್ಯವಾದ ಮಹತ್ಕಾರ್ಯ; ಇದರ ಸಾಧನೆಯಲ್ಲಿ ತದನುಗುಣವಾದ ಶ್ರಮ, ವೆಚ್ಚ ವಾಗಲೇ ಬೇಕು; ಆಗುತ್ತಾ ಇದೆ. ಮತದಾರ ಪಟ್ಟಿ ತಯಾರಿ ಮತ್ತಿತರ ವಿಧಾನಗಳ ಕುರಿತು ಯಾವುದೇ ಪಕ್ಷ, ವ್ಯಕ್ತಿ, ಸಂಸ್ಥಾನ, ಪ್ರೇತ್ರಗಳಿಂದಾದರೂ ಯಾವುದೇ ದೂರು ಅಥವಾ ಸೂಚನೆ ಬಂದರೂ ಯಾವ ನಿರ್ಬಂಧವೂ ಇಲ್ಲದೆ, ತಾನದಕ್ಕೆ ಸರಿಯಾದ ಲಕ್ಷ್ಯ ವೀಯುವೆನೆಂದು ಚುನಾವಣಾ ಕಮಿಶನರ್ ಶ್ರೀ ಸೆನರಿತ್ತಿರುವ ಆಶ್ವಾಸನೆಯು ಉಪಯೋಗವನ್ನು ಪಡಕೊಳ್ಳುವದೇ ಜನಸಾಮಾನ್ಯರ ಪಾಲಿನ ಇಂದಿನ ಮುಖ್ಯ ಕರ್ತವ್ಯಗಳೆಲ್ಲೊಂದು. ತನ್ನ ಹೆಸರು ಮತದಾರ ಪಟ್ಟಿಗೆ ದಾಖಲಾಗದಿದ್ದರೆ-ಬಿಟ್ಟು ಹೋಗಿದ್ದರೆ-ದುರಸ್ತಿಯಾಗಬೇಕಿದ್ದರೆ, ಜನ, ಸ್ಥಳ, ಅವತಾರ ನೋಡಿಕೊಂಡು ಆಗತ್ಯವುಳ್ಳ ಕೆಲಸವನ್ನು ನೆರವೇರಿಸಿ,-ಪ್ರತಿಯೊಬ್ಬ ಪ್ರಾಯಸ್ಥನೂ ಮತದಾರನಾಗಬೇಕಾದುದೇ ಈಗಿನ ಕರ್ತವ್ಯ.

ತಮ್ಮಿಂದಾವ ತಪ್ಪು ಕಡೆಗಳೂ ಆಗಬಾರದೆಂಬ ಆತುರವು ಈ ಮಹಾ ತಯಾರೀ ಕಾರ್ಯದ ಹೊಣೆ ಹೊತ್ತಿರುವವರಲ್ಲಿ ಕಂಡುಬರುವಂತೆಯೇ ಯಾವುದೇ ಅನ್ಯಾಯ, ಪಕ್ಷಪಾತವೂ ಈ ಮಟ್ಟಿಗಾಗದಂತೆ ಪ್ರತಿಭಟಿಸಬೇಕೆಂಬ ಅಸಕ್ತಿಯು ಜೈಪ್ರಕಾಶ್ ನಾರಾಯಣರಂಥ ವರಲ್ಲಿ ತೋರಿಬರುತ್ತಿರುವುದೂ ಸ್ವಾಗತಾರ್ಹ ವಿಷಯ. ಇದೇ ಉದ್ದೇಶದಿಂದ ಶ್ರೀ ಜೈಪ್ರಕಾಶ್ ನಾರಾಯಣರು ಜುಲಯಿ ತಾ. 1 ಮತ್ತು 2ಕ್ಕೆ ಬೊಂಬಾಯಿಯಲ್ಲಿ ಕರೆದಿರುವ ವಿರುದ್ಧ ಪಕ್ಷಗಳ ಸಮ್ಮೇಲನಕ್ಕೆ ಕಮ್ಯೂನಿಸ್ಟರಂತೆಯೇ ಕಾಂಗ್ರೆಸಿಗರಿಗೂ ಬಹಿಷ್ಕಾರ ಬದ್ಧರಿರುವುದು ಟೀಕೆಗೆಡೆಯಿತ್ತಿದೆ. ಹೇಗಿದ್ದರೂ ಇಂದಿನ ಅಧಿಕಾರೀ ಕಾಂಗ್ರೆಸ್ ಪಕ್ಷಕ್ಕೆ ಸೇರಿರುವ ಹೆಚ್ಚಿನವರ ವಾನೋವೃತ್ತಿಯ ಮೇಲಿಂದ ಚುನಾವಣಾ ಸಂಬಂಧದ ಶುದ್ಧೀಕರಣ ಸೂಚನೆಗಳ ತಯಾರೀ ಕಾರ್ಯದಲ್ಲಿ ಅಂಥವರನ್ನು ಹೊರಗಿಟ್ಟೆದೇ ವಿಹಿತವೆನ್ನಬೇಗು. ಪಟ್ಟ ಸ್ವಾರ್ಥ, ಸಂದರ್ಭ ಸಾಧನೆ ಮುಂತಾದ ಸಂಕುಚಿತ ದೃಷ್ಟಿಗೆ ಯಾವ ವರ್ತನೆ ಸರಿಗೆ ಕಂಡೂ, ಜನತಾರಾಜ್ಯಭಾರದ ತಳಗಟ್ಟಾಗಿರುವ ಪ್ರಾಯಸ್ಥರ ಮತಾಧಿಕಾರವು ಸಂಪೂರ್ಣ ಹಾಗೂ ನಿರಾತಂಕವಾಗಿರುವಂತೆ ನೋಡಲು ಅಗತ್ಯವುಳ್ಳ ಸೂಚನೆಗಳನ್ನು, ಓರ್ವವ್ಯಕ್ತಿ ಮಿಕ್ಕೆಲ್ಲರನ್ನು ಕಡೆಗಣಿಸಿ ಮುಂದಿಟ್ಟರೂ ಅದುದ್ಭವ್ಯನೇ ಸರಿ. ಆದ್ದರಿಂದಲೈಸ್ಕರ್ಕರ ಬೊಂಬಾಯಿ ಸಮ್ಮೇಳನವನ್ನಾಗಲೀ, ಇತರ ಟೀಕೆ, ವಿಮರ್ಶೆಗಳನ್ನಾಗಲೀದೊರುವ ಬದಲಿಗೆ ಅವುಗಳಲ್ಲರಬಹುದಾದ ಉಚಿತಾಂಶಗಳನ್ನು ಅಂಗೀಕರಿಸಿಕೊಳ್ಳಲು ತಯಾರಾಬೇಕಾದುದು ಅಗತ್ಯ; ಶ್ರೀ ಸೆನರು ಇಂತಹ ನ್ಯಾಯ ಪಕ್ಷಪಾತ ಮನೋವೃತ್ತಿಯನ್ನೇ ಪ್ರದರ್ಶಿಸುತ್ತಿರುವುದು ಸಂತೋಷಕರ. ವ.ತಾಧಿಕಾರ ಮತ್ತು ಮತದಾನ ವ್ಯವಸ್ಥೆಗಳ ಈ ಮಹತ್ಕಾರ್ಯದಲ್ಲಿ ಸರ್ವರೂ ನಿರ್ವಿಕಾರ ಬುದ್ಧಿಯಿಂದ, ನಿರ್ವಂಚನೆಯಿಂದ ತಂತಮ್ಮ ಪಾಲಿನ ಕರ್ತವ್ಯಗಳನ್ನು ತಪ್ಪದೆ ನಿರ್ವಹಿಸಲಿ, ಎನ್ನುತ್ತೇವೆ.

ಇನೇ ಪುಟದಿಂದ ಮುಂದುವರಿದುದು

ಸರಕಾರವು ತಾ. 25ನೇ ಮಂಜಾನೆ ಅಕಸ್ಮಿಕ ಧಾಳಿ ನಡೆಸಿ 58ನೇ ಗಡಿ ಸರೆ ವೀರರಿಬಂದು ನಮ್ಮ ಉತ್ತರ ನೆಲೆಗಳ ಮೇಲೆ ನುಗ್ಗಿದುದರ ವಿರುದ್ಧ ಪ್ರಕಂಡರ ಕ್ಷಣ-ಹೋರಾಟ ಕೊಡುತ್ತಾ ನಮ್ಮ ಸೇನೆಯು ವೈರಿಯ ಮುಂಧಾಳಿಯನ್ನು ಗಡಿಯಲ್ಲೇ ತಡೆಗಟ್ಟಿದುವಲ್ಲದೆ, ಸ್ವತಃ ಧಾಳಿ ಹೂಡುತ್ತಾ ಮೇಲೇರಿ ಹೋಗಿದೆ" ಎಂದು ಉತ್ತರ ಕೊರಿಯದ ಪ್ರಕಟಣೆಯು ಇದಿರಾಳಿಯ ತಲೆಯ ಮೇಲೇನೇ ಅಕ್ಕಮುಣಾಪರಾಧದ ಹೊರೆ ಹಾಕಿದೆ.

ಆತುರಕ್ಕವಕಾಶ ಕೊಡುತ್ತಿರುವ ಪ್ರಶ್ನೆಯೆಂದರೆ ಉತ್ತರ-ದಕ್ಷಿಣ ಕೊರಿಯಗಳ ಬೆನ್ನೆಲ್ಲರುವ ರಶ್ಯ-ಅಮೆರಿಕಗಳೇನು ಪಾಡುವವು ಎಂಬುದೇ. ಕಮ್ಯೂನಿಸ್ಟ್ ಕೊರಿಯವು ರಶ್ಯದ ಅನುಯಾಯಿಯೆಂಬುದು ನಿರ್ವಿವಾದ. ಕಳದ ನವಂಬರಿನಲ್ಲಿ ಕೊರಿಯಾಗಳ ಮಧ್ಯ ಗಡಿಯಲ್ಲಿ ತಿರುಗಾಡಿ ಬಂದಿದ್ದ ಅಮೆರಿಕದ ಸಿನೆಟರ್ ವಿಲ್ಲಿಯಮ್ ನೋಲೆಂಡರು: "ಆ ಭೇಟಿಯ ನನ್ನ ಪ್ರತ್ಯಕ್ಷಾನುಭವದಿಂದ ಹೇಳುವದಾದರೆ ಸೋವಿಯೆಟ್ ಯೂನಿಯನಿನ ಬೆಂಬಲ ವಿನಹ ಉತ್ತರ ಕೊರಿಯ ಸರಕಾರವು ಇಂತಹ ಧಾಳಿ ಸಾಹಸಕ್ಕಿಳಿಯುವಂತಿಲ್ಲ" ಎಂದಿದ್ದಾರೆ. ಕಳದ ವಾರ ಸ್ಥಿತಿಗತಿ ಪರಿತೀಲನೆಗಾಗಿ ಸೆವೋಲಿಗೆ ಹೋಗಿದ್ದ ಅಮೇರಿಕವ ಗೃಹಖಾತೆಯ ರಿಪಬ್ಲಿಕನ್ ಸಲಹೆಗಾರ ಜೋನ್ ಫೋಸ್ಟರ್ ಡಲ್ಲೆಸರು ದ. ಕೊರಿಯಾ ಎಸೆಂಬ್ಲಿಯ ಮುಂದೆ "ಮಾನವ ಸ್ವಾತಂತ್ರ್ಯ ಸಮರದಲ್ಲಿ ನೀವು ಯೋಗ್ಯ ಪಾತ್ರ ವಹಿಸಿರುವವರೆಗೆ ನಿಮ್ಮ ರಾಷ್ಟ್ರವು ಎಂದಿಗೂ ವಿಕಾಕಿಯಾಗಿರಲಾರದು" ಎನ್ನುತ್ತಾ ತಾವೂ ಅವರ ಜತೆಗಾರರೆಂಬ ಅಭಯವ ಕೊಟ್ಟಿದ್ದರು. ಸಂಬಂಧಪಟ್ಟ ಅಮೇರಿಕಾಧಿಕಾರಿಯೊಡನೆ ಆಲೋಚಿಸಿದ ನಂತರವೇ ವಿಷಿಂಗ್ಟನಿನಲ್ಲಿರುವ ದ. ಕೊರಿಯದ ರಾಯಭಾರಿ ಜೋನ್-ಮ್ಯೂನ್ ಚಿಂಗರು "ರಶ್ಯದ ದಿಗ್ವಿಶ್ವನ ವಿನಹ ನಡೆಯುಬಾರದ ಆಕ್ರಮಣಾಚಂಡೆಯಿದು. ಪ್ರಜಾಸತ್ತಿಗಾಗಿಯಾದುದು ಅಮೇರಿಕವು ನಮ್ಮನ್ನು ಬಿಟ್ಟು ಹಾಕಲಾರದೆಂದು ನಂಬುತ್ತೇನೆ" ಎಂದಿದ್ದಾರೆ; ಅಮೇರಿಕದಲ್ಲಿ ವಿಶೇಷ ರೀತಿಯ ಆಂತರ್ಯವಹಿವಾಟುಗಳು ನಡೆದಿವೆ. ಜಪಾನಿಗಂತೂ ದ. ಕೊರಿಯಾ ಕಾಗಿ ಕೊಂಡೇ ಇದೆ. ಹೀಗಾಗಿ ರಶ್ಯವು ಆ ಕಡೆ, ಅಮೆರಿಕವು ಈ ಕಡೆ ನಿಂತು ದೊಂಬಲಾಶ್ರಯ ಕೊಡುತ್ತಾ ಮುಂದೆ ಹೋಗಿ ಪ್ರತ್ಯಕ್ಷ ಘರ್ಷಿಸಿಕೊಳ್ಳುವ ಸಂದರ್ಭ ಬರಲಾರದು? ಅಥವಾ, ಅಲ್ಲಿಯ ಯುದ್ಧವು ಸ್ಥಳೀಯಾಕಾರಕ್ಕಿಂತ ಹೆಚ್ಚು ವಿಸ್ತರಿಸದಂತೆ, ಅಂತ್ಯುದ್ಧವನ್ನಿಸುವ ಗಡಿಮೀರದಂತೆ ನೋಡಿಕೊಂಡು, ರಶ್ಯಾ, ಅಮೆರಿಕಗಳು ತಂತಮ್ಮ ಕಡೆಯವರಿಗೆ ಸಾಧ್ಯವಿದ್ದ ಸಹಾಯವನ್ನಷ್ಟೇ ಸಲ್ಲಿಸಿ ದೂರ ವಿರುವವೆ? ಇಲ್ಲನೇ, 'ಶಠಡಡಡಿ ತಿಳಿಯಾಗದು' ಎಂಬ ಗಾದೆಯಂತೆ ಕೊರಿಯಾದಲ್ಲಿ ಈ ರೀತಿ ಕದಡಿದ ಪಸೆಯಿಂದ ರಶ್ಯ ಅಮೆರಿಕಗಳ ಎಲ್ಲಾ ಮನೋಮಾಲಿನ್ಯ ಪೂ ತಿಳಿಗೊಳ್ಳುವ ಸಂದರ್ಭ ಬಂದೀತೆ?-ನೋಡಲಿಕ್ಕಿದೆ! ನೈಸರ್ಗಿಕ ಈ ಹೋರಾಟದಲ್ಲಿ ಉತ್ತರ ಕಡೆಯಿಂದ ರಶ್ಯದ ಟ್ಯಾಂಕು ಸಾರಥಿ, ವಿಮಾನ ಸಾರಥಿಗಳು, ಹಡಗು, ಯುದ್ಧೋಪಕರಣಗಳಂತೆಯೇ ರಶ್ಯದ ದಿಗ್ದರ್ಶನವೂ ಕಂಡುಬರುತ್ತಿರುವಂತೆ ದಕ್ಷಿಣ ಕಡೆಯಿಂದ ಜ.ಹೀರಾಗಿ ಅಮೇರಿಕದ ಪೂರ್ಣ ಸಹಾಯ, ಸಲಕರಣೆ, ಸಾರಥಿ, ದಿಗ್ದರ್ಶಕರು ಪ್ರತ್ಯಕ್ಷ ತೋರಿಬರುತ್ತಿರುವಾಗ ಕೊರಿಯಾ ರಣರಂಗವು ಯಾವ ಚಿಕಾರಕ್ಕೆ ಬೆಳೆಯುವುದೋ ಎಂದು ಲೋಕವಿಡೀ ಆತುರದಿಂದ ನೋಡುತ್ತಿದೆ!

ಉಡುಪಿ

ಉಪಾಧ್ಯಾಯಿನಿಯ ನಿವೃತ್ತಿ-ಉಡುಪಿಯ ಮುನಿಸಿಪಲ್ ಸಾರ್ವತ್ರಿಕ್ಕೆ ಕನ್ನಡ ಶಾಲೆಯಲ್ಲಿ ಅಧ್ಯಾಪಕಿಯರಾಗಿದ್ದು ಕಳೆದ 35 ವರ್ಷಗಳಿಂದ ವಿದ್ಯಾಕ್ಷೇತ್ರದಲ್ಲಿ ದುಡಿದ ಶ್ರೀ. ಯು. ನಾಗಮ್ಮ ಅವರು ಇದೇ ತಾ. 24ರಂದು ತಮ್ಮ ಸೇವೆಯಿಂದ ನಿವೃತ್ತರಾದರು. ಈ ಸಂದರ್ಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿನಿಯರು ಸೇರಿ ಅವರನ್ನು ಅಭಿನಂದಿಸಿ, ಪಾರಿತೋಷಕಗಳನ್ನಿತ್ತು ಸತ್ಕರಿಸಿದರು. ಅಂತೆಯೇ ಶಾಲೆಯ ಈಗಿನ ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಿಕೆಯರು ಪ್ರತ್ಯೇಕವಾಗಿ ಅವರನ್ನು ಬೀಳ್ಕೊಟ್ಟರು. ಶ್ರೀ. ನಾಗಮ್ಮನವರು ತಮಗೆ ತೋರಿಸಿದ ಗೌರವದ ಬಗ್ಗೆ ಧನ್ಯವಾದಗಳನ್ನು ಸಲ್ಲಿಸಿದರು.

BALANCE SHEET OF THE MAHARASHTRA APEX BANK LIMITED, as on 31st December, 1949.

CAPITAL & LIABILITIES	Rs.	A.	P.	Rs.	A.	P.
Capital:—						
AUTHORISED & ISSUED:						
5,00,000 Ordinary Shares of Rs.10/- each				50,00,000	0	0
SUBSCRIBED:						
2,53,518 Ordinary Shares of Rs. 10/- each				25,35,180	0	0
PAID-UP:						
1,07,100 Ordinary Shares fully paid up	10,71,000	0	0			
109 " " @ Rs. 9/- "	981	0	0			
539 " " @ Rs. 8/- "	4,312	0	0			
497 " " @ Rs 7/- "	3,479	0	0			
6,971 " " @ Rs. 6/- "	41,826	0	0			
12,053 " " @ Rs. 5/- "	60,265	0	0			
3,500 " " @ Rs. 4/- "	14,000	0	0			
4,404 " " @ Rs. 3/- "	13,212	0	0			
9,098 " " @ Rs. 2/- "	18,196	0	0			
1,09,247 " " @ Re. 1/- "	1,09,247	0	0	13,36,518	0	0
Reserve Fund:						
Existing prior to Banking Companies Act, 1949 ...	70,000	0	0			
Reserve Fund:						
(Under Section 17 of Banking Companies Act, 1949)	17,000	0	0	87,000	0	0
Contingent Reserve:				15,000	0	0
Deposits & other Accounts:						
Fixed and Time Deposits	4,00,427	4	0			
Savings Bank Deposits	3,54,476	8	3			
Current Accounts & Contingency (Un-adjusted) Accounts	22,63,095	4	5	30,17,999	0	8
Bills Payable:						
D. Ds Payable and Payslips Issued.... ...				19,244	8	6
Bills for Collection being Bills Receivable: (As per contra)						
(i) Payable in the Provinces of India	1,72,480	13	4			
(ii) Payable outside the Provinces of India	Nil.			1,72,480	13	4
Other Liabilities:						
(i) Rebate	2,461	6	8			
(ii) Dividends Unclaimed	5,591	2	4			
(iii) Outstanding Charges	962	6	5			
(iv) Provision for Taxes	10,084	10	0	19,099	9	5
Profit & Loss Account:						
Profit as per last Balance Sheet	85,337	14	2			
Less: appropriations thereof:						
To Reserves 37,000 0 0						
To Dividends 45,666 13 6	82,666	13	6			
	2,671	0	8			
Net Profits for the half year	31,216	1	5	33,887	2	1

PROPERTY & ASSETS	Rs.	A.	P.	Rs.	A.	P.
Cash:						
In hand	4,87,538	4	5			
Balances with other Banks in Current Accounts in the Provinces of India	4,069	11	5	4,91,607	15	10
Bills Discounted & Purchased:						
(i) Payable in the Provinces of India 4,51,498 10 4						
(ii) Payable out-side the Provinces of India ... . Nil.						
PARTICULARS:						
(a) Debts considered good in respect of which the the Bank is fully secured	67,649	13	3			
(b) Debts considered good for which the Bank holds no other security than the debtors' personal security	1,10,521	10	4			
(c) Debts considered good, secured by the personal liabilities of one or more parties in addition to the personal security of the debtors ...	2,73,327	2	9			
(d) Debts considered doubtful or bad not provided for	Nil	.		4,51,498	10	4
(e) Debts due by Directors or Officers of the Bank or any of them either severally or jointly with any other persons .... Nil						
(f) Debts due by Companies or Firms in which the Directors of the Bank are interested as Directors, Partners, or Managing Agents or in the case of private companies as members 10980-0-0						
(g) Maximum total amount of loans including temporary advances made at any time during the year to Directors or Managers or Officers of the Bank .... Nil						
(h) Maximum total amount of loans including temporary advances granted during the year to the Companies or firms in which the Directors of the Bank are interested as Directors, Partners or Managing Agents or in the case of Private Companies as members.... 11,805-14-10						
(i) Due from Banks.... .... Nil						
Investments:						
(i) Securities of Central & Provincial Governments of the face value of 16,10,000/- at cost ... (Approximate Market Value Rs. 15,97,050/-)	16,82,562	8	0			
(ii) Post Office National Savings Certificates at cost	15,000	0	0			
(iii) Shares of other Banks & Companies at cost:						
(a) Ordinary Shares fully paid Rs. 1197 8 0						
(b) Preference Shares fully paid Rs 1,56,656 14 9						
(c) Preference Shares partly paid Rs 4,49,401 15 0	6,07,256	5	9			
(iv) Insurance Policies at cost	289	7	0			
(v) Deposits with other Banks	1,93,880	0	0			
(iv) Reserve Fund Investments as Deposit in a Scheduled Bank						

Auditor's Report.

I have audited the accounts of THE MAHARASHTRA APEX BANK LIMITED, Udipi for the period ended 31st December, 1949 with the books at the Head Office and also with the certified returns from all the four branches within the Provinces of India and have obtained all the information and explanations I have required and further beg to report that:

(a) In my opinion, the above Balance and Profit and Loss Account are drawn up in confirmity with the Law, the Profit & Loss Account showing the true balance of profit for the period under report;

(b) The Balance Sheet exhibits a true and correct view of the state of affairs of the Bank according to the best of my information and explanations given to me, which have been found satisfactory and as shown by the Books and certified Returns from the Branches;

(c) The Returns received from the Branches of the Bank have been found adequate for the purposes of audit; and

(d) In my opinion, the books of accounts have been kept by the Bank as required by Section 130 of the Indian Companies' Act, 1913, and the transactions of the Bank which have come to my notice have been within the powers of the Bank.

MANGALORE, 5t Feb., 1950 } **M. S. Krishna Rao,** F.C.A., Chartered Accountant. } *Auditor.*

Dr. Profit & Loss Account of the Maharashtra Apex Bank Ltd. for the period ending 31st December 1949 Cr.

Expenditure	Rs	As.	Ps	Income	Rs.	As	Ps.
To Interest paid on Deposits	19,578	14	3	By Interest and discount (less bad debts written off)	76177	4	3
,, Salaries & Allowances (including Managing Director's remuneration of Rs.6,000/-) ...	20,098	10	2	,, Commission	9,467	9	2
,, Directors sitting Fees & Allowances ...	2,186	9	0	,, Other receipts	3,659	3	7
,, Rent, Taxes & Lighting	2,188	4	6				
,, Postage, Telegrams & Stamps	1,555	13	3				
,, Audit Fees	400	0	0				
,, Depreciation on furniture	399	3	7				
,, Stationery, Printing and Advertisement .	2,306	13	2				
,, Other Expenditure	6,373	11	8				
,, NET PROFITS	34,216	1	5				
Total Rs. ..	89,304	1	0	Total Rs. ...	89,304	1	0

Ramanjaneya Buildings,
UDIPI.
11th February, 1950

(Sd) K R-V Kamath
Agent at Head office

[Sd] K. Rama Rao
[Sd] H. Ratnakar Shenoy
[Sd] K. Vittal Baliga.

[Sd] K. Panduranga Pai,
[Sd] A Krishnamoorthi Rao,
} Directors

[Sd] Upendra Anantha Pai,
Managing Director.

ಉಡುಪಿ

ಮುನಿಸಿಪಲ್ ಸಭೆಯು: ಇದೇ ತಾ. 24ರಲ್ಲು ನೈಸ್ ಚೆಯರ್‌ಮೆನ್ ಶ್ರೀ ಎ. ಬಿ. ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಮಂಜುನಾಥ ರಾಯರ ಪ್ರಶ್ನೆಗಳಿಗೆ ಉತ್ತರ ಹೊರತ ನಂತರ ವಿದ್ಯಾಸಂಸ್ಥೆಯು ಬಜೆಟಿನ ಕುರಿತು ಬಂದ ಸರಕಾರದ ಸೂಚನೆಗಳನ್ನು ಓದಲಾಯಿತು. ವಿದ್ಯಾಸಂಸ್ಥೆಗೆ ಹೆಚ್ಚಿಸುವ ಕುರಿತು ವರದಿ ಮಾಡುವರೆ ಎಡ್ಮಿನಿಸ್ಟ್ರೇಶನ್ ಕಮಿಟಿಗೆ ಅಧಿಕಾರ ವೀಯಲಾಯಿತು. ನಗರ ಮಹೋತ್ಸವ ಆಚರಣೆ ಸಲುವಾಗಿ ಗಿಡಗಳನ್ನು ನೆಡುವರೆ ರೂಪಾಯಿ ಇನ್ನೂರರ ಖರ್ಚು ಮಾಡಬಹುದೆಂದಾಯಿತು. ಹೋರ್ಡಿಂಗ್ ಹ್ಯಾಸ್ಕೂಲ್ ನಿವೃತ್ತ ಡ್ರಾಯಿಂಗ್ ಮಾಸ್ಟರ್ ಶ್ರೀ ಎಲ್. ಎಮ್. ಜೇಸರನ್ನು ಬಿಲ್ಡಿಂಗ್ ಸರ್ವೆಯರ್ ಆಗಿ ಮುನ್ನಿಸಲು ಒಪ್ಪಿಗೆ ನೊರೆಯಿತು. ಮುನಿಸಿಪಾಲಿಟಿಯ ಗತ ಪಂಚಮ ಆಡಳಿತ ಕರದಿ ಮಂಜೂರು ಮಾಡುವ ಕುರಿತು ಕುಂಟಾ ಚರ್ಚೆ ನಡೆಯಿತು ಕೊನೆಗೆ ಇತ್ಯರ್ಥದ ಬಗ್ಗೆ ಮುಂದಿನ ಸಭೆಗೆ ಬಾಕಿಯಿಡಲಾಯಿತು. ಮುನಿಸಿಪಲ್ ಕ್ಷೇತ್ರದಲ್ಲಿ ಶುದ್ಧ ನೀರು ಮತ್ತು ಚರಂಡಿ ಸ್ವೀಮಿಂಗ್ ಬಗ್ಗೆ ಟೇಕ್ಸ್ ವಸೂಲು ಮಾಡಬೇಕೆಂದು ಸೂಚಿಸಿದ ಸರಕಾರದ ಆರ್ಡನನ್ನು ಮುನ್ನಿಸಲಾಯಿತು.

ನಿಧನ—ಇನ್ಸ್‌ಪೆಕ್ಟರ್ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ. ಕೆ. ನಿ ಮಲ್ಯರ ಸಹೋದರಿಯು ಕೇವಲ 30ನೇ ವಯಸ್ಸಿನಲ್ಲಿ ನಿಧನಾತ ಜ್ವರದಿಂದ ಇದೇ ತಾ. 24-6-50 ರಂದು ವಿಧಿವಶರಾದರೆನ್ನಲು ವಿಷಾದಿಸುತ್ತೇವೆ. ಶ್ರೀಮತಿಯವರು ಸತ್ಕುಲ ಪ್ರಸೂತೆ, ಮತ್ತು ಸದ್ಗುಣಿಯಿದ್ದರು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ದುಃಖಿತರೊಡನೆ ಸಹಾನುತಾಪ ಸೂಚಿಸುತ್ತೇವೆ.

ಉದ್ಘಾಟನೆ. ಸಂಸ್ಥಾರಂಭ: ಸ್ಥಳೀಯ ಪ್ರಸಿದ್ಧ ಪಂಡಿತಶ್ರೀ ಬಿ. ಎನ್. ಕೇಳು ನಂಬಿಯಾರರು ಬ್ರಹ್ಮಗಿರಿಯಲ್ಲಿ ನೂತನವಾಗಿ ಕಟ್ಟಿಸಿದ ಚಿಕಿತ್ಸಾಲಯವನ್ನು ಇಗೇ ತಾ. 23ರಲ್ಲು ಸಂಜೆ ಜಿಲ್ಲಾ ಬಿ ಡಿ ಕ್ಟ್ ಆಫೀಸರ್ ಡಾ. ಎ ಗೋಪಾಲನ್ ನಂಬಿಯಾರರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ. ಟಿ. ಮಾಧವಯ್ಯಗಳು ವಹಿಸಿದ್ದರು. ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಪಂಡಿತ ಕೇಳು ನಂಬಿಯಾರರು ಸ್ವಾಗತ ಭಾಷಣ ಮಾಡಿ ಜನತೆಯ ಸಹಕಾರದಿಂದ ತನ್ನೀ ಯೋಜನೆಯು ಇಂದು ಫಲಕಾರಿಯಾಯಿತೆಂದೂ ಅದರ ಸಂಪೂರ್ಣ ತೆಗಾಗಿ ಮಹಾ ಜನರು ಇನ್ನೂ ಸಹಕರಿಸಿ ಬೇಕೆಂದೂ ಚಿಕಿತ್ಸಾಲಯದ ಉಪಯೋಗವನ್ನು ಸರ್ವರೂ ಪಡೆಯಬೇಕೆಂದರು. ಶ್ರೀಗಳಾದ ಬಿ ಶ್ಯಾಮರಾಯನವರ್ಯ, ಕೊಚ್ಚಿ ಕಾರ್ ಪದ್ಮನಾಭ ಪೈ, ಆರ್. ಆರ್. ಕುಂಬಾರರು, ಡಾ. ವಿ. ಕೆ. ಏಕಾಳ್ ಮೊದಲಾದವರು ಶ್ರೀ ನಂಬಿಯಾರರ ಜನಪ್ರಿಯತೆಯನ್ನು ಕೊಂಡಾಡಿ ಇಡೀ ಕನ್ನಡ ನಾಡಿಗೆನೇ ಅವರು ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು. ಮುಂದೆಯೂ ಚಿಕಿತ್ಸಾಲಯದ ಮೂಲಕ ಶ್ರೀ ನಂಬಿಯಾರರು ಜನತಾ ಸೇವೆಯನ್ನು ಮಾಡುವಂತಾಗಲೆಂದು ಹರಸಿ ಶುಭಾಶಂಸನೆಯನ್ನು ಪ್ರಾರ್ಥಿಸಿದರು ಧನ್ಯವಾದಾರ್ಪಣೆ, ಮಂಗಲ ಗೀತೆಯೊಂದಿಗೆ ಸಭಾಂತ್ಯವಾಯಿತು. ಸಭಾರಂಭ ಪೂರ್ವದಲ್ಲಿ ಚಟುವ ಸತ್ಕಾರವಿತ್ತು.

ದ. ಕನ್ನಡ

ಕುತ್ಯಾರಲ್ಲಿ ಬ್ರಾಂಚ್ ಪೋಸ್ಟ್ ಫೀಸ್—ಇದೇ ತಾ. 15ರಲ್ಲು ಕುತ್ಯಾರು ಪೇಟೆಯಲ್ಲಿ ಕುತ್ಯಾರು ಮತ್ತು ಆಸುಪಾಸಿನ ಬಡ ಗ್ರಾಮಸ್ಥರ ಪರವಾಗಿ ಬ್ರಾಂಚ್ ಪೋಸ್ಟಾಫೀಸ್ ಆಲಾಯವರಿಂದ ತೆರೆಯಲಾಗಿದೆ ಕುತ್ಯಾರು ಶಾಲಾ ಮಾಸ್ಟರ್ ಶ್ರೀ. ಕೆ. ಎಲ್ಲಪ್ಪ ಹೆಗ್ಡೆರು ಬ್ರಾಂಚ್ ಪೋಸ್ಟ್ ಮಾಸ್ತರರಾಗಿ ನೇಮಿಸಲ್ಪಟ್ಟಿರುವರು.

ಫಲಿತಾಂಶ:—ಸ್ಥಳೀಯ ಬೋ। ಹಾ। ಎಲಿಮೆಂಟರಿ ಶಾಲೆಗೆ ಇದೇ ತಿಂಗಳ ತಾ. 17ರಲ್ಲು ಉಡುಪಿ ಸೌತ್ ರೇಂಜಿನ ಡಿ. ಇನ್ಸ್‌ಪೆಕ್ಟರವರು ಸಂದರ್ಶನವನ್ನಿತ್ತು ಶಾಲೆಯಲ್ಲಿ ಉಪಾಧ್ಯಾಯರುಗಳ ಆಭಾವದಿಂದಾಗುವ ಕಷ್ಟಗಳನ್ನು ನೋಡಿ ಕಣಕ್ಕಪಟ್ಟರು. ಚಾಲ್ತಿ ವರ್ಷದ E S-L C. ಪರೀಕ್ಷೆಯಲ್ಲಿ ಈ ಶಾಲೆಯ ಮಕ್ಕಳು ಸೇಕಡಾ 93.೦೦ತೆ ಉತ್ತೀರ್ಣರಾದ ಬಗ್ಗೆ ಶಾಲಾ ಅಧ್ಯಾಪಕ ವಂದಿಯನ್ನು ಪ್ರಶಂಸಿಸಿದರು. ಒಂದು ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳಿರುವ ಉತ್ತಮ ಶ್ರೇಣಿಯಲ್ಲಿ ಕೆಲಸ ಜರಗುವ ಈ ಶಾಲೆಗೆ ಮೂಸ್ಯ ಬೋರ್ಡಿನವರು ಅಧ್ಯಾಪಕರ ಅಭಾವವನ್ನು ಹೋಗಲಾಡಿಸಿ, ಶಾಲೆಗೆ ಬೇಕಾಗುವ ಸಾಹಿತ್ಯ ಸಾಮಗ್ರಿಗಳನ್ನು ಒದಗಿಸಿ ಕೊಡಬೇಕಾಗಿ ಶಾಲಾ ಹಿತೈಷಿಗಳೊಬ್ಬರು ವಿನಂತಿಸುತ್ತಾರೆ.

ಪೆಜಮಾಡಿ, ಕೋಡಿ—ಸ್ಥಳೀಯ ಗವರ್ನಮೆಂಟ್ ಪ್ರಿಪ್ಯರೇಸ್ ಯರ್ಲಿ ಎಲಿಮೆಂಟರಿ ಶಾಲೆಯಲ್ಲಿ ಇ. ಯಸ್. ಯಲ್. ಸಿ. ಪರೀಕ್ಷೆಗೆ ಈ ವರ್ಷ ನಿಂತ ಮಕ್ಕಳಲ್ಲಿ ನಿಲ್ಲರೂ ಉತ್ತೀರ್ಣರಾಗಿರುವುದಲ್ಲದೆ ಒಬ್ಬೇ ಮಾರ್ಕುಗಳನ್ನು ಪಡೆದಿರುತ್ತಾರೆ ಒಬ್ಬ ವಿದ್ಯಾರ್ಥಿಯು ಲೆಕ್ಕದಲ್ಲಿ ಶೇಕಡಾ ನೂರು ಮಾರ್ಕು ಪಡೆದಿರುತ್ತಾನೆ.

ಉಪ್ಪೂರು—ಉಪ್ಪೂರು ಶ್ರೀ ಗೋವಿಂದ ಪಸಟ್ಟರ ಪತ್ನಿ ಶ್ರೀಮದ್ರಾಜೇಶ್ವರಿಯವರಿಗೆದೆ ತಾ 13ರಲ್ಲು ಸಂಜೆ ವಿಷಮಜ್ವರದ ನಿಮಿತ್ತ ತನ್ನ ಇಪ್ಪತ್ತನೆ ವಯಸ್ಸಿನಲ್ಲಿದೈವಾಧೀನರಾದ ಪುದು ಶೋಚನೀಯವಿದೆ. ಮೃತರು ಅವಿದ್ಯಾವಂತರಾದರೂ ತರುಣಿಯೂ ಒಂದು ಆದರ್ಶ ಜೀವನ ನಡೆಸಲು ಸಾಧ್ಯವಿದೆ ಎಂದು ಆದರ್ಶ ಹಾಕಿ ಕೊಟ್ಟಿದ್ದರು. ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಿ ದುಃಖಿತರೊಡನೆ ಸಹಾನುಭಾವ ಸೂಚಿಸುವೆವು.

ಬಂಟಕಲ್ಲು: ಶ್ರೀ ದಗಾ ಸರಸ್ವತೀ ಶ್ರೀ ಎಲಿಮೆಂಟರಿ ಶಾಲೆಯಲ್ಲಿ ತಾರೀಕು 23 6 50ನೇ ಶುಕ್ರವಾರ ದಿನ ಉಡುಪಿ ದಕ್ಷಿಣ ರೇಂಜ್ ಶಾಲೆಗಳ ಮಾಜಿ ಡಿಸ್ಟ್ರಿ ಇನ್ಸ್‌ಪೆಕ್ಟರವರಾದ ಶ್ರೀ ಬಿ. ಶ್ರೀನಿವಾಸ ರಾವ್, ಇವರ ಅಧ್ಯಕ್ಷತೆಯಲ್ಲಿ ಒನೇ ತರ ಗತೆಯ ಪ್ರಾರಂಭೋತ್ಸವವೂ, ಮತ್ತು ಉಡುಪಿ ದಕ್ಷಿಣ ರೇಂಜ್ ಶಾಲೆಗಳ ಡಿಸ್ಟ್ರಿ ಇನ್ಸ್‌ಪೆಕ್ಟರ್ ಶ್ರೀ ಸಿ. ಮಹಾಬಲ ಜಾಲ್ಟ, ಇವರ ದಿವ್ಯ ಹಸ್ತಗಳಿಂದ ಒನೇ ತರಗತಿಯ ಉದ್ಘಾಟನಾ ಸಮಾರಂಭವೂ ಬಹು ವಿಜೃಂಭಣೆಯಿಂದ ನೆಂವೇರಿಸಲ್ಪಟ್ಟಿತು. ಸ್ಥಳೀಯ ನೆರೆಕರೆಗಳ ಮಹನೀಯ ಎಗಳು ನೆರೆದಿದ್ದು ಶಾಲೆಯು ಅಭಿವೃದ್ಧಿಯಾದ ಬಗ್ಗೆ ಸಂತೋಷಗೊಂಡು ಇನ್ನು ಮುಂದಿನ ಏಳಿಗೆಯನ್ನು ಹಾರೈಸುತ್ತಾ ಹಲವರು ಸರಸವಾದ ಭಾಷಣಗಳನ್ನಿತ್ತರು ನಂತರ ಅಧ್ಯಕ್ಷರುಗಳು ಶಾಲಾ ಉನ್ನತಿಯ ಕುರಿತು ಭಾಷಣವಿತ್ತ ತರುವಾಯ ಲಘು ಉಪಹಾರವಾಗಿ, 'ಜನಗಣ' ರಾಷ್ಟ್ರ ಗೀತೆಯೊಡನೆ ಸಭೆ ಮುಕ್ತಾಯಗೊಂಡಿತು.

ಮುಂಬಯಿ

ಉತ್ತರ ಮುಂಬಯಿ ಹೋಟೆಲ್ ಕೆಲಸಗಾರರ ಸಂಘದ ವಾರ್ಷಿಕ ಮಹಾ ಸಭೆಯು ಇದೇ ತಾರೀಕು 19 6-50 ರಂದು ಮುಂಬಯಿಯ ಪರೇಲ್ ದಾಮೋದರ ಹಾಲಿನಲ್ಲಿ ಸಂಘದ ಉಪಾಧ್ಯಕ್ಷರಾದ ಎಲ್ಲಪ್ಪರವರ ಇವರ ಅಧ್ಯಕ್ಷತೆಯಲ್ಲಿ ರಾತ್ರಿ ಜರಗಿತು. ಸಂಘದ ವಾರ್ಷಿಕ ವರದಿ ಹಾಗೂ ಲೆಕ್ಕ ಪತ್ರಗಳ ವಾಚನ ಹಾಗೂ ಮಂಜೂರಾದ ಬಳಿಕ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಯ ಚುನಾವಣೆಯು ನಡೆಯಿತು. ಅಧ್ಯಕ್ಷ ಎಮ್. ಮಾಧವನ್, ಉಪಾಧ್ಯಕ್ಷರು, ಕೆ. ಪಿ. ಪಿ. ನಾಯರ್, ಎಲ್ಲಪ್ಪ ರಾವ್, ಮೊಗ್ವೀರಯ್ಯ, ಪ್ರ ಕಾರ್ಯದರ್ಶಿ, ಜಗನ್ನಾಥ ಸೆಟ್ಟಿ, ಜತೆ ಕಾರ್ಯದರ್ಶಿಗಳು. ಖಾಂತಾರಾಮ್, ಅಬ್ದುಲ್ ರೈಮನ್, ಜೆ. ವಿರಲ ಸೆಟ್ಟಿ, ಕೋಶಾಧ್ಯಕ್ಷ, ಕೆ. ಸಂಜೀವ ಸೆಟ್ಟಿ ಮತ್ತು ವಾರ್ಡ್ ಸಮಿತಿಯ ಸದಸ್ಯರು ಚುನಾಯಿತರಾಗಿಲ್ಪಟ್ಟರು ಮಹಾ ರಾಷ್ಟ್ರದ ನೇತಾ, ಸಾಧುಜೀವಿ ಶಾನೆ ಗುರುಜೀಯವರ ಅಕಾಲ ಮರಣದ ಬಗ್ಗೆ ಸಭೆಯು ಸಂತಾಪ ಸೂಚಕ ಗೊತ್ತುವಳಿಯನ್ನು ಸ್ವೀಕರಿಸಿ ಎರಡು ನಿಮಿಷ ಎದ್ದು ನಿಂತು ಮೌನ ಪ್ರಾರ್ಥನೆಯನ್ನು ಮಾಡಿತು. ಅಧ್ಯಕ್ಷರ ಭಾಷಣವಾದ ಬಳಿಕ ವಂದೇ ಮಾತರಂ ಗೀತೆಯೊಂದಿಗೆ ಸಭೆಯು ಚದರಿತು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ-

ತಾರೀಕು 29—6—1950ರಿಂದ

ಜೆಮಿನಿಯವರ ಚಿತ್ರ

ದಾಸಿ ಅಪರಂಜಿ

ಪುಷ್ಪವಲ್ಲಿ, ಎಂ ಕೆ. ರಾಧಾ, ಸ್ವಾಮಿನಾಥನ್, ಕೂತ್ತಮಂಗಲಂ ಶೀನು, ಸುಂದರಿ ಬಾಯಿ ಮತ್ತಿನ್ನಿತರರು.

ಆನಂತರ: ಸಾಹಸ ಚಿತ್ರ— ಕುರ್‌ಬಾನೀ

ನಿರೀಕ್ಷಿಸಿರಿ: ಬಿಲ್ವಮಂಗಲ, ಸಾಂವರಿಯಾ, ರಾಮಬಾಣ ಇತ್ಯಾದಿ

Kundapoor District Court

O. S. 175/50

Vadi—Anasthiya of Brahmin Disoja Barthi.

Prathivadi—Sadyavathi Hengsu, Puttu Hengina Magalu. Kundapur Kasbeya Lilruvavalu.

Sadri Prathivadige Ee Moulya Thileya Padisuvudenendre—

Nimminda Paadigege Baaki Eeduva Hana Rupaya 144-7-0ge Daakhalumadida Mele Na Daaveyu Taa. 11-7-50ge Tasthige Biduvudu Aa Kuritu Nimmaddeyanadaru Aakshepeyiddare Aa Dinada Hattu Gantege Melina Court Nalli Hajaragi Byaheeru Madikolluvantakkadu. Yavudakke Tappu Dare Nimmannu Yenu Saarte Maadalaagide Endu Tilisiruttade.

By Order of the Court-

Y. Tejappa Shetty,
Advocate for Plaintiff.

Coondapoor, 26-6-50

ಮಂಗಳೂರು

ಜಿಲ್ಲಾ ಆಹಾರ ಸಮಿತಿ ಸಭೆಯು ಇದೇ ತಾ. 22ರಲ್ಲು ಜರಗಿದಾಗ ಜಿಲ್ಲಾ ಸರಬರಾಯಿ ಅಧಿಕಾರಿಯು ತಾ. 17ರ ತನಕದ ಜಿಲ್ಲೆಯ ಆಹಾರಧಾನ್ಯಗಳ ಪರಿಸ್ಥಿತಿಯನ್ನು ವಿವರಿಸುತ್ತಾ, ಈ ಕೆಳಗಿನ ಅಂಕಿ ಸಂಖ್ಯೆಗಳನ್ನು ವರದಿಮಾಡಿದರು. ಅಕ್ಕಿ 2314ಟನ್, ಗೋಧಿ 165ಟನ್, ಮೈದಾ 37ಟನ್, ಕಡಲೆ ಮತ್ತು ಕಡ್ಲೆಬೇಳೆ 4 ಟನ್. ಜಿಲ್ಲೆಗೆ ಈ ತನಕ ಹೊರಗಿನಿಂದ 8905 ಟನ್ ಆಹಾರ ವಸ್ತು ಬಂದಿರುವುದು. ತಾಡುಪಳ್ಳಿಯಿಂದ 3000ಟನ್, ಕೊಚ್ಚಿಯಿಂದ 2000ಟನ್, ಮಧ್ಯಪ್ರದೇಶದಿಂದ 5000ಟನ್ ಅಕ್ಕಿ ಬರಲಿಕ್ಕಿರುವುದು. ತಾಡುಪಳ್ಳಿಯಿಂದ 960ಟನ್ ಅಕ್ಕಿ ಹೊರಟಿದೆ. ಅಲ್ಲದೆ 900ಟನ್ ಗೋಧಿಯೂ ಬರುತ್ತಲಿದೆ.

ಸಂತರ ರೈತರಿಗೆ 'ಬಿ'ಕಾರ್ಡು ಸಿಗದೆ ಅಗುವ ಕಷ್ಟಗಳ ಕುರಿತು ಶ್ರೀ ಜತ್ತಪ್ಪ ರೈಗಳು ಬರೆದ ಕುರಿತು ಚರ್ಚೆಯಾಗಿ ಆ ಕುರಿತು ರೇಷನ್ನಿಂಗ್ ಟೋರ್ಡಿನ ಸೂಚನೆಯಂತೆ ವರ್ತಿಸುವುದೆಂದಾಯಿತು. ಬಳಿಕ ಪ್ರೊಕ್ಯೂರ್‌ಮೆಂಟ್ ಕಾಲದಲ್ಲಿ ನೌಕರರು ಕೊಡುವ ತೊಂದರೆಗಳ ಕುರಿತು ಶ್ರೀ ಜಿನರಾಜ ಹೆಗ್ಡೆಯವರು ಬರೆದ ಪತ್ರದ ಕುರಿತು ಚರ್ಚೆಯಾಗಿ ಅಕ್ಕಿಯನ್ನು ರೈತನಿಂದ ಕೇಳುವಾಗ ಮತ್ತು ಅತನು ಸ್ವಯಂಪ್ರೇರಿತನಾಗಿ ಕೊಟ್ಟಾಗ ನೌಕರರು ಅನುಸರಿಸಬೇಕಾದ ಕೆಲವು ನಿಯಮಗಳ ಚರ್ಚೆಯೂ ನಡೆಯಿತು.

ಆಹಾರೋತ್ಪಾದನಾ ಸಮಿತಿಯ ಸಭೆಯು ಬಳಿಕ ಅದೇ ಸಭೆಯಲ್ಲಿ ಜರಗಿತು. ಕಾಸರಗೋಡು ತಾಲೂಕಿನಲ್ಲಿ ಪಳ್ಳಿಗಳಲ್ಲಿ ಪೋಲೀಸರು ಮಾಡುವ ತೊಂದರೆಗಳನ್ನು ಕಲೆಕ್ಟರರು ನಿಲ್ಲಿಸಬೇಕೆಂದು ಮಾಹಿಮ್ ಚಮ್ಮಾಡಿಯು ಬರೆದ ಪತ್ರದ ಕುರಿತು ಮಾತುಕಥೆ ನಡೆಯಿತು. ಕೆರೆಬಾವಿ ಮುಂತಾದ್ದು ಯೋಜನೆಯಂತೆ ಅದ ಕೆಲಸಗಳನ್ನು ನೋಡಿಕೊಳ್ಳುವ ಅಧಿಕಾರವನ್ನು ಪಂಚಾಯತ ಬೋರ್ಡುಗಳಿಗಿಲ್ಲವೆಂದು ಎಂದು ನಿರ್ಧಾರವಾಯಿತು. ಜಿಲ್ಲೆಯಲ್ಲಿ ಆತ್ಯಧಿಕವಾಗಿ ಪಂಪು ಸೆಟ್ಟುಗಳು ಸಿಗಬೇಕೆಂದೂ ಅದಕ್ಕೆ ಸೇಕಡಾ 50ರಷ್ಟು ಸಹಾಯ ಸಿಗಬೇಕೆಂದೂ ನಿರ್ಣಯಿಸಲಾಯಿತು.

ವನಮಹೋತ್ಸವ— ಜುಲಾಯಿ ಪ್ರಥಮ ವಾರದಲ್ಲಿ ಜಿಲ್ಲೆಯಲ್ಲಿ ಜರಗಲಿರುವ ವನಮಹೋತ್ಸವದ ಸಮಯ ಸನಿನೆಡುವೆ ಕಾರ್ಯಕ್ರಮವು ಯಶಸ್ವಿಯಾಗುವಂತೆ ಸಿಗಳನ್ನು ಮಾಡುವ ಬಿಪೋಗಳನ್ನು ತಾಲೂಕು ಕೇಂದ್ರಗಳಲ್ಲಿ ಕೆರೆಯಲಾಗಿದೆ. ಅಲ್ಲಿಂದ ಮುಹಾಜನರು ತಮಗೆ ಬೇಕಾದ ಸಸಿಗಳನ್ನು ಕೊಂಡುಕೊಳ್ಳಬಹುದು ಗಾಳಿಮರ, ಸಾಗುವಾನಿ, ಕರಿಮರ, ಹೆಬ್ಬಲಸು, ಹಲಸು, ತೆಂಗು ಮುಂತಾದ ಜಾತಿಯ ಗಿಡಗಳು ದೊರೆಯುವವು.

ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸ್ ಚುನಾವಣೆ: ಅಖಿಲ ಭಾರತ ಕಾಂಗ್ರೆಸಿನ ಮುಂದಿನ ಅಧಿವೇಶನದ ಪ್ರತಿನಿಧಿಗಳ ಚುನಾವಣೆಯಲ್ಲಿ ನಾಮಪತ್ರ ಹಾಕಿದ 15 ಸರ್ಕಲುಗಳಲ್ಲಿ ಕೆಲವು ಉಮೇದ್ವಾರಿಗಳು ತಮ್ಮ ಉಮೇದ್ವಾರಿಕೆಯನ್ನು ಹಿಂದೆಗೆದುದರಿಂದ ಈ ಕೆಳಗಿನ ಪತ್ತು ಸರ್ಕಲುಗಳಲ್ಲಿ ಅವಿರೋಧವಾದ ಚುನಾವಣೆಗಳಾದಂತಾಯಿತು.

1. ಕುಂದಾಪುರ ಸರ್ಕಲ್ ಡಾ ಯು. ಪಿ. ಮಲ್ಯ, 2. ಬ್ರಹ್ಮಾವರ–ಬಿ. ಎಸ್. ಸೂರಪ್ಪ ಸೆಟ್ಟಿ, 3. ಉಡುಪಿ–ಬಿ. ಕೃಷ್ಣಯ್ಯ ಹೆಗ್ಡೆ, 4. ಉಪ್ಪಿನಂಗಡಿ–ಕೆ. ವೇಣುಗೋಪಾಲ ನಾಯಕ್, 5. ಕಾಸರಗೋಡು–ಬಿ. ಎಸ್. ಕಕ್ಕಿಲ್ಲಾಯ, 6. ಮೂಡಬಿದ್ರೆ–ಯು. ಶ್ರೀನಿವಾಸ ಮಲ್ಯ, 7. ಕಟಪಾಡಿ–ಎಸ್. ಎಸ್. ಕಲ್ಲೆ, 8. ಮಂಜೇಶ್ವರ–ಕೆ. ಕೆ. ಸೆಟ್ಟಿ 9. ಬಂಟ್ವಾಳ–ಕೆ. ನಾಗಪ್ಪ ಆಳ್ವ, 10. ಮೂಲ್ಕಿ–ಎಫ್. ಎಕ್ಸ್. ಡಿ. ಸಿಂಟೊ.

ಅಕ್ಕಿಯ ರೇಶನ್ ನಲ್ಲಿ ಕಡಿತ— ಜುಲಾಯಿ ತಾ. 2ರಿಂದ ಮದ್ರಾಸು ಸಂಸ್ಥಾನದ ಎಲ್ಲಾ ರೇಶನ್ ಕ್ಷೇತ್ರಗಳಲ್ಲಿ ಅಕ್ಕಿಯ ಪಡಿಯನ್ನು ಎಂಟು ಔನ್ಸ್‌ಗಳಿಂದ ಏಳು ಔನ್ಸ್‌ಗಳಿಗೆ ಇಳಿಸಲಾಗುವುದು. ಒಂದು ಔನ್ಸ್ ಅಕ್ಕಿಯ ಕಡಿತದ ಬದಲು ಅಷ್ಟೇ ಗೋಧಿ ಒದಗಿಸಲಾಗುವುದು.

ಉದಾರಿಗಳ ನಿಧನ—ಶ್ರೀ ಸಾಂತಪ್ಪ ಲಕ್ಷ್ಮಣಪಾಲರು ಮಂಗಳೂರಿನ ಸನ್ಯಾಸಿ ನಾಗರಿಕರೂ ಹಲವಾರು ಸಂಸ್ಥೆಗಳಿಗೆ ಉದಾರದಾನ ಮಾಡಿದವರೂ ಆಗಿದ್ದು ಇದೇ ತಾ. 17ರಲ್ಲು ಹರಲೋಕವಾಸಿಗಳಾ ರೆನ್ನಲು ವಿಷಾದಿಸುತ್ತೇವೆ. ದಿವಂಗತರ ಆತ್ಮಕ್ಕೆ ಚಿರ ಶಾಂತಿ ದೊರೆಯಲಿ!

ದುರ್ಮರಣ—ಕಡ್ರಿಯ ವಿದ್ಯುಚ್ಛೋಧನ ಶಾಲೆಯ ಸಮೀಪದಲ್ಲಿನ ಅಡೊಂದು ಹೊಸಮನೆಯಲ್ಲಿ ಇದೇ ತಾ. 19ರಲ್ಲು ರಾತ್ರಿ ಸುಮಾರು 65 ವರ್ಷ ಪ್ರಾಯದ ಮುದುಕ ನೋರ್ವನು ನೇಣು ಹಾಕಿಕೊಂಡು ದುರ್ಮರಣಕ್ಕೀಡಾದನೆಂದು ತಿಳಿದುಬರುತ್ತದೆ. 'ಪೋಸ್ಟ್‌ಮಾರ್ಟಂ' ಮಾಡಲಾಗಿ ಆತ್ಮಹತ್ಯೆಯೆಂದು ತೀರ್ಮಾನವಾಗಿದೆಯಂತೆ.

ಮಂಜೇಶ್ವರದಲ್ಲಿ ಉದ್ಘಾಟನಾ ಸಮಾರಂಭ ಸ್ಥಳೀಯ ಫಿಶರ್ಕಾಭಿವೃದ್ಧಿ ಯೋಜನೆಯ ಉದ್ಘಾಟನಾ ಸಮಾರಂಭವು ಇದೇ ತಾ. 18ರಲ್ಲು ಮಂಜೇಶ್ವರದಲ್ಲಿ ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಎಚ್. ನರಸಿಂಹರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಫಿಶರೀ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಬಾಬುಸೆಟ್ಟಿರು ಫಿಶರ್ಕಾಭಿವೃದ್ಧಿ ಕಾರ್ಯಕ್ರಮಗಳನ್ನು ವಿವರಿಸಿದರು.

NOTICE

ಉಡ್ಪಿ ಡಿ ಮು. ಕೋರ್ಟಿನಲ್ಲಿ

S. C. No. 125/1950

ಕಾವೇರಮ್ಮ-ಅಡ್ಡ ವೆಂಕಟೇಚಲಯ್ಯನವರ ವಿಧವೆ-ಉಡ್ಪಿ ತಾಲೂಕು ಮಟ್ಟು ಗ್ರಾಮ. —ವಾದಿಳು.

ಮತ್ತು

ಗುಡ್ಡೆ ಪೂಜಾರಿ-ಬಾಬಣ ಪೂಜಾರಿ ಅಲಿಯ, ಉಡ್ಪಿ ತಾಲೂಕು ಮಟ್ಟು ಗ್ರಾಮ. —ಪ್ರತಿವಾದಿ.

ಇವರೊಳಗೆ

ವಾದಿಳಿಗೆ ಪ್ರತಿವಾದಿಯು ರೂ. 50 0-0 ಕ್ಕೆ ತಾ. 14-3-47ರಲ್ಲು ಬರ್ಸಿಕೊಟ್ಟ ದಿ ಮೂಂಡ ನೋಟು ಪ್ರಕಾರ ಬರತಕ್ಕ ಅಸಲು ಬಡ್ಡಿ ರೂ. 59-6-0 ಕೇಳಿ ದಾವಿಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 30-6-50ಕ್ಕೆ ಪ್ರತಿವಾದಿಯ ನೋಟೀಸಿನ ಲಗ್ಗೆ ಯಿಟ್ಟಿದೆ. ಸದ್ರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಯೀ ಕೋರ್ಟ್‌ಮುಂದೆ ಮೇಲ್ಕಂಡ ವ್ಯಾಜ್ಯದಲ್ಲಿ ಹಾಜರಾಗಿ ಮನವಿ ಮಾಡಿಕೊಳ್ಳುವರೇ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವನ್ನು ಪ್ರತಿವಾದಿಯ ಗೈರು ಹಾಜ್ರಿಯಿಂದ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

Gratian Rego,
Vakil for Plaintiff.

ತಾ. 26-6-50.

The Udipi Bank Ltd., Udipi.

ದಿ ಉಡ್ಪಿ ಬೇಂಕ್ ಲಿಮಿಟೆಡ್, ಉಡ್ಪಿ.

ಜ್ಞಾಪೀರ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಅಡವಿಟ್ಟು ನಗಗಳ ಯೀಡಿನ ಮೇಲೆ ಪಡಕೊಂಡ ಸಾಲಗಳ ಬಾಬ್ತು, ಅಸಲು ಐನೇಜು, ಬಡ್ಡಿ, ವ, ಇತರ ಖರ್ಚುಗಳನ್ನು ಕ್ಲಪ್ತ ವ್ಯಾದಿಗೆ ಸಲಾಯಿಸದೆ ಇದ್ದುದರಿಂದ, ಅವರಿಗೆ ಬಿಟ್ಟಿ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿಯಾದರೂ ಐನೇಜು ವಸೂಲು ಕೊಡದೆ ಇದ್ದುದರಿಂದಲೂ, ಸದರಿ ಲೋನುಗಳ ಬಾಬ್ತು ಈಡಿಟ್ಟ ನಗಗಳನ್ನು ಇದೇ ದಿನವ ತಾ. 8-7-1950ನೇ ಶನಿವಾರ ಹಗಲು ಗಂಟೆ 11ಕ್ಕೆ ಬ್ಯಾಂಕಿನ ಉಡ್ಪಿ ಆಫೀಸಿನ ವರಾಂಡದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವುದೇ ಕಾರಣದಿಂದಲಾದರೂ ಏಲಂ ಅದೇ ದಿವಸ ಮಾಡಲು ಅನುಕೂಲವಾಗದಿದ್ದರೆ ಬ್ಯಾಂಕಿಗೆ ಯುಕ್ತ ಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೆ ಮುಂದರಿಸಲಾಗುವುದು. ತಿಳಿದಿರಲಿ.

ಜಪ್ತಿ ನಂಬ್ರ	ಲೋನು ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಐನೇಜು
		ಉಡುಪಿ ಆಫೀಸು	
1	83/48	ವಿ. ಗೋಪಾಲರ್ನ್ ನಂದಿಯಾರ್, ಅಜ್ಜು ಕನ್ ನಂದಿಯಾರರ ಮಗ, ಶಿರಿಬೀಡು, ಉಡ್ಪಿ.	
2	25/48	ಯು. ಎಸ್. ಅಬ್ದುಲ್‌ಖಾದರ್ ಸಾಹೇಬ್, ಯು. ಎಸ್. ಯಿಸ್‌ಮಾಯಿಲ್ ಸಾಹೇಬರ ಮಗ, ಮರ್ಚಂಟ್, ಬಸ್‌ಸ್ಟೇಂಡ್ ಬಳಿ, ಉಡ್ಪಿ.	40 0 0
			140 0 0
		ಪಡುಬಿದ್ರೆ ಆಫೀಸು	
1	328/48	ಮಂಜುನಾಥ ಆಚಾರಿ, ನಾರಾಯಣ ಆಚಾರಿಯ ಮಗ, ಪೋಷ್ಟು ಎಲ್ಲೂರು.	50 0 0
2	455/48	ಅಬಮಾರು ಹೂವಯ್ಯ ಆಚಾರಿ, ಬಾಬ್ರು ಯ ಆಚಾರಿ ಮಗ, ತೆಂಕವಿಲೇಜ್, ಪೋಷ್ಟು ಎರಮಾಳು.	24 0 0
3	411/48	ಎಮ್. ಪದ್ಮನಾಭ ಪ್ರಭು, ಎಮ್. ವಾಸುದೇವ ಪ್ರಭುಗಳ ಮಗ, ಮರ್ಚಂಟ್, ಪಡುಬಿದ್ರೆ.	265 0 0
4	481/48	ವ್ಯಾ. ಮಂಜುನಾಥ ಆಚಾರಿ, ನಾರಾಯಣ ಆಚಾರಿಯ ಮಗ, ಪೋಷ್ಟು ಎಲ್ಲೂರು.	25 0 0
		ಮಂಗಳೂರು ಆಫೀಸು	
1	7/49	ಎಮ್. ಎಮ್. ಮಲ್ಯ, ನಾರಾಯಣ ಮಲ್ಯರ ಮಗ, ಗೋಳಿಕಟ್ಟೆ ಬಜಾರ, ಮಂಗಳೂರು.	100. 0 0
2	8/49	ಎಸ್. ಮಹಮ್ಮದ್, ಎಸ್. ಅಬ್ದುಲ್ ಖಾದರ್ ಸಾಹೇಬರ ಮಗ, ಮರ್ಚಂಟ್ ಅನ್ಸಾರ್ ರೋಡ್, ಮಂಗಳೂರು.	145 0 0
3	10/49	ಎಮ್. ಎಮ್. ಮಲ್ಯ, ನಾರಾಯಣ ಮಲ್ಯರ ಮಗ, ಗೋಳಿಕಟ್ಟೆ ಬಜಾರ ಮಂಗಳೂರು. (ಬಾಕಿಯಿರುವ ಐನೇಜು)	232 0 0
4	12/49	ಎಮ್. ಎಮ್. ಮಲ್ಯ, ನಾರಾಯಣ ಮಲ್ಯರ ಮಗ, ಗೋಳಿಕಟ್ಟೆ ಬಜಾರ, ಮಂಗಳೂರು. (ಬಾಕಿಯಿರುವ ಐನೇಜು)	131 0 0
5	13/49	ಎಮ್. ಎಮ್. ಮಲ್ಯ, ನಾರಾಯಣ ಮಲ್ಯರ ಮಗ, ಗೋಳಿಕಟ್ಟೆ ಬಜಾರ, ಮಂಗಳೂರು. (ಬಾಕಿಯಿರುವ ಐನೇಜು)	210 0 0
6	14/49	ಎಮ್. ಎಮ್. ಮಲ್ಯ, ನಾರಾಯಣ ಮಲ್ಯರ ಮಗ, ಗೋಳಿಕಟ್ಟೆ ಬಜಾರ, ಮಂಗಳೂರು. (ಬಾಕಿಯಿರುವ ಐನೇಜು)	400 0 0

Date 26-6-50 Udipi

C. Narayana Kamath,
Agent at Udipi.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ಕಾಸ್ಯ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಜಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ. ಉಡುಪಿ.

ಪಂಚಾಯತ ಬೋರ್ಡು, ಗ್ರಾಮ ಕಮಿಟಿ, ಶಾಲಾ ಕೊಲೇಜು ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ,
ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಜನತಾ ರಾಜ್ಯದ ಘೋಷಣೆಯಿಂದ ದೇಶದ ಸರ್ವ ಜನರಿಗೂ ಸಮಾನ ಹಕ್ಕು, ನ್ಯಾಯ, ವಿಕಸ್ಪಕಾರವಾದ ಅವಕಾಶ ಸೌಕರ್ಯಗಳು ದೊರೆತು ಜನತಾ ಜೀವನದಲ್ಲಿ ಹೊಸತೊಂದು ಸುಭಿಕ್ಷೆ ಸಮೃದ್ಧಿಯಕಾಲವು ತಲೆದೋರುವುದಾಗಿ ವಿಶ್ವಾಸಕ್ಕೆ ಎಡೆಯಾಯ್ತು. ಆದರೆ ಇನ್ನೂ ಮುಂದುವರಿಯುತ್ತಿರುವ ಸನ್ನಿವೇಶವನ್ನು ವಲ್ಲದೆ ದಿನದಿಂದ ದಿನ ಹದಗೆಡುವ ಹೊಟ್ಟೆಯ ಪ್ರಶ್ನೆಯ ಬಗ್ಗೆ ಸರಕಾರದ ಧೋರಣೆಯಿಂದಾಗಿ ಇದ್ದ ವಿಶ್ವಾಸವು ಮಾಯವಾಗಿ ಕಂಗೆಡುವಂತಾಗಿದೆ.

ಎರಡನೇ ಮಹಾಯುದ್ಧ ಕಾಲದಲ್ಲಿ ಜನ್ಮ ತಾಳಿದ ಆಹಾರ ನಿಯಂತ್ರಣವು ಮಹಾತ್ಮಾ ಜೀಯವರ ಅತ್ಯಾಂತಿಗೋತ್ಸರ ಒಂದು ಬಾರಿ ರದ್ದುಗೊಳಿಸಲ್ಪಟ್ಟು ಜನತೆಯ ಚಿತೆಗೆ ನೇಡಿತನದಿಂದಾಗಿ ಪುನಃ ಜನ್ಮ ತಾಳಿತು. ಆದರೆ ನಿಯಂತ್ರಣವು ಜನತೆಯ ಬೇಳೆ ಬಾಯಿತರದ ಪರಿಣಾಮವನ್ನು ಮಾಡಿರುತ್ತದೆ ಎಂಬುದನ್ನು ನಾವಾತ್ರ ನಮ್ಮ ಜನತಾ ಸರಕಾರವು ಈ ವರೆಗೆ ಗಮನಿಸಿದಂತೆ ತೋರುವುದಿಲ್ಲ. ನಮ್ಮ ಜಿಲ್ಲೆಯ ಮುಖ್ಯ ಬೆಳೆಯಾದ ಭತ್ತದ ಆಕ್ಕಿಯು ಈ ನಿಯಂತ್ರಣದ ದುರಾವ್ಯವಸ್ಥೆಗೆ ಬಲಪಟ್ಟು ಭತ್ತದ ಬೆಳೆಯು ಕ್ಷಯರೋಗಪೀಡಿತವಾದಂತೆ ದಿನೇ ದಿನೇ ಕಡಮೆಯಾಗುತ್ತ ಬಂದು ನಿಯಂತ್ರಣಬಾಹಿರವಾದ ಮತ್ತು ಹಚ್ಚಿನ ಲಾಭದಾಯಕವಾದ ಇತರ ಬೆಳೆಗಳು ಹೆಚ್ಚಾಗಿ ಬೆಳೆಸಲ್ಪಡುವುದು ಗೋಚರಕ್ಕೆ ಬರುತ್ತಿದೆ. ಅದುದರಿಂದ ಸರಕಾರವು ದೇಶದ ಹಿತದೃಷ್ಟಿಯಿಂದ ಇನ್ನಾದರೂ ಈ ರೀತಿಯ ಘಾತುಕವಾದ ನಿಯಂತ್ರಣವನ್ನು ಬೇಗನೆ ರದ್ದುಗೊಳಿಸುವುದು ಹಿತಕರವಾಗಿದೆ.

ಆಹಾರ ನಿಯಂತ್ರಣದ ದೆಸೆಯಿಂದ ಕಳ್ಳ ಪೇಟೆಯು ವ್ಯವಹಾರಕ್ಕೆ ಪ್ರೋತ್ಸಾಹವಿತ್ತಂತಾಯಿತು. ಪೇಟೆಬಟ್ಟಣಗಳಲ್ಲಿರುವ ಜನರಿಗೆ ಮಾತ್ರ ಹೊಟ್ಟೆ ತುಂಬಾ ಊಟಮಾಡುವರೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಂತಾಯಿತು. ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನರಿಗೆ ಮಾತ್ರ ತಾವು ಪರಿಶ್ರಮಿಸಿ ಬೆಳೆಸಿದ ಆಕ್ಕಿಯನ್ನು ಕೂಡ ತಮ್ಮ ಕುಟುಂಬ ಪೋಷಣೆಗೆ ಬೇಕಾದಷ್ಟು ಇಟ್ಟುಕೊಳ್ಳುವರೆ ಅವಕಾಶವಿಲ್ಲದೆ ರೇಶನ್ ಮುಂಲಕ ತಂದು ಉಣ್ಣುವಂತಾಗಿದೆ. ಅದು ಕಾಡಿ ತಮ್ಮ ದುರಿದುಮಿಯ ಜೀವನಕ್ಕೆ ಬೇಕಾಗುವಷ್ಟು ದೊರೆಯದೆ ಅರೆಹೊಟ್ಟೆಯಲ್ಲಿ ದಿನ ಕಳೆಯುಬೇಕಾಗಿದೆ. ಹಂಗಾಗಿ ರೈತಪರ್ಗದವರಲ್ಲಿ ನಿರಾಶೆ ಹುಟ್ಟಿ ಆಕ್ಕಿಯ ಉತ್ಪತ್ತಿಗೆ ಕೊರತೆಯಾಗಲು ಬಹುವಾಹಂದು ಕಾರಣವಾಗಿದೆ.

1947-48ನೇ ಇಸವಿಗಳಲ್ಲಿ ರೈತರಿಗೆ ಬೋನಸಿನ ಆಶೆ ತೋರಿಸಿ, ಅಪರಿ ಅನೇಕ ರೀತಿಯ ತೊಂದರೆಗಳನ್ನನುಭವಿಸಿಯೂ ಕೆಲವು ಕಾಲದಲ್ಲಿ ಆಕ್ಕಿಯನ್ನು ಸ್ಪೋರಿಗೆ ಪಾವತಿ ಮಾಡಿದರೂ ವ್ಯಾದೆಯೊಳಗೆ ಅರ್ಜಿಗಳು ಬಂದಿಲ್ಲವೆಂಬ ನೆಪನದಿಂದ ಬೋನಸ್ ಕಡೆಯದೆ ನಷ್ಟವನ್ನು ಹೊಂದುವಂತಾಯಿತು. 1948ನೇ ಇಸವಿಯ ನವಂಬರ ತಿಂಗಳಲ್ಲಿ ಆಕ್ಕಿಯ ದರವನ್ನು ಏರಿಸಿ ಆ ಮೊದಲು ಸರಕಾರದ ಹುಕುಮಿನ ಮೇರೆಗೆ ತನ್ನ ಕಸ್ಪರ್ನೆಗಿಸದೆ ವ್ಯಾದೆಯೊಳಗೆ ಆಕ್ಕಿಯನ್ನು ತಯಾರಿಸಿ ಸ್ಪೋರಿಗೆ ಪಾವತಿ ಮಾಡಿದವರಿಗೆ ಮುಂಡಿ 1ರ ದರ ರೂ. 11-14-0ರಂತೆಯೂ ವ್ಯಾದೆಗೆ ಆಕ್ಕಿಯನ್ನು ಒಪ್ಪಿಸದೆ ಕ್ರಯವೇರಿದ ಮೇಲೆ ಸ್ಪೋರಿಗೆ ಆಕ್ಕಿಯನ್ನು ಒಪ್ಪಿಸಿದವರಿಗೆ ಮುಂಡಿ 1ರ ರೂ. 14-7-3 ರಂತೆಯೂ ಕ್ರಯ ಕೆಟ್ಟಿರುವುದು. ಇದರಿಂದಾಗಿ ಕ್ಲಪ್ತ ವ್ಯಾದೆಗೆ ಆಕ್ಕಿಯನ್ನು ಒಪ್ಪಿಸಿದ ರೈತರು ತಮಗುಂಟಾದ ಅನ್ಯಾಯವನ್ನು ಸೂಚಿಸಿ ತಾವು ಪಾವತಿ ಮಾಡಿದ ಆಕ್ಕಿಗೆ ಸರಕಾರವು ಏರಿಸಿದ ದರ ದಲ್ಲಿಯಾದರೂ ತಮಗೆ ಕ್ರಯವನ್ನು ಕೊಡಿಸಬೇಕಾಗಿ ಮನವಿ ಮಾಡಿಕೊಂಡರೂ ರೈತರ ಈ ನ್ಯಾಯವಾದ ಬೇಡಿಕೆಗೆ ಸರಕಾರದ ತಿರಸ್ಕಾರವೇ ಗತಿಯಾಯಿತು. ಮಾತ್ರವಲ್ಲದೆ ಆ ಸಮಯದಲ್ಲಿ ನಮ್ಮ ಜಿಲ್ಲೆಯಲ್ಲಿ ನಿರ್ಣಯಿಸಿದಂತೆ ಭಾಗವಾಗುವುದು.

ಅವರಿಗೆ ಸ್ಪೋರಿಗೆ ಒಪ್ಪಿಸಲ್ಪಟ್ಟ ಆಕ್ಕಿಗೂ ಪುನಃ ದರವು ಏರಿಸಲ್ಪಟ್ಟು ಆ ಏರಿಸಿದ ದರವು ಕೂಡ ಸರಕಾರದ ಬೊಕ್ಕಸಕ್ಕೆ ಸೇರಿಸಲ್ಪಟ್ಟಿತು. ನ್ಯಾಯವಾಗಿ ಆಕ್ಕಿಯ ಉತ್ಪಾದಕರಿಗೆ ಸಲ್ಲಬೇಕಾದ ಈ ಹಣವನ್ನು ಅವರಿಗೆ ಪಾವತಿ ನೂಡದೆ ಸರಕಾರದ ಬೊಕ್ಕಸಕ್ಕೆ ಸೇರಿಸಿದ್ದು ನ್ಯಾಯವೆ? ಹೀಗಾದರೆ ಸರಕಾರದ 'ಹೆಚ್ಚಿಗೆ ಬೆಳೆ ಬೆಳೆಸಿರಿ' ಎಂಬ ವಿನಂತಿಗೆ ಹಳ್ಳಿಯ ರೈತರ ಸ್ಪೆಚ್ಛಾ ದೊಂಬಲ ಸಿಗುವ ಬಗೆಯೆಂತು? ರೈತರಲ್ಲಿ ಉತ್ಸಾಹವು ತಲೆದೋರುವ ಬದಲಾಗಿ ಭತ್ತದ ಬೆಳೆಯನ್ನು ಬೆಳೆಸುವುದಕ್ಕೆ ತುಂಬಾ ಜುಗುಪ್ಸೆ ಹುಟ್ಟಿರುವುದು. ಆದುದರಿಂದ ಸರಕಾರದ ಈ ತರದ ಧೋರಣೆಯಿಂದ ಆಹಾರ ಉತ್ಪಾದನೆಯ ಪರಿಸ್ಥಿತಿಯು ಹದಗೆಟ್ಟು ಭೀಕರ ಗಂದಾಂತರವು ಪ್ರಾಪ್ತವಾಗುವ ಮೊದಲೇ ಈ ನಿಯಂತ್ರಣವನ್ನು ರದ್ದುಗೊಳಿಸುವುದು ಲೇಸು ಎಂಬುದನ್ನು ಸರಕಾರವು ಇನ್ನಾದರೂ ಪರಿಶೀಲಿಸಲಿ.

ನಮ್ಮ ಮದ್ರಾಸು ಸರಕಾರದ ಮುಖ್ಯ ಮಂತ್ರಿಗಳು ಕಳೆದ ತಾರೀಕು 4ರಲ್ಲಿ ಎ ಕದಂಬಿನಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಬರುವ ಚುನಾವಣೆಯ ವಿಷಯ ಎತ್ತಿ ಮಾತಾಡಿ ತನ್ನ ಸರಕಾರದ ಕಡೆಗೆ ಜನಾಭಿಪ್ರಾಯವನ್ನು ಆಕರ್ಷಿಸಲು ಮಹಾತ್ಮಾ ಗಾಂಧಿಗುಂಪಲೆ ಸಲಹೆ ಪ್ರಕಾರ ತಾವು ನಿಯಂತ್ರಣಗಳನ್ನು ರದ್ದುಗೊಳಿಸಿದರೂ ಒಕ್ಕೂಟ ಸರಕಾರವು ಬತ್ತಾಯದಿಬಿದ ಆದನ್ನು ತಮ್ಮ ಮೇಲೆ ಹೇರಿತು ಎಂಬುದಾಗಿ ಸಮಾಧಾನವನ್ನು ಮುಂದುಮಾಡಿರುವರು. ಹೀಗೆ ಒಕ್ಕೂಟ ಸರಕಾರದ ಆಜ್ಞೆಗಳನ್ನು ನಮ್ಮ ಮುಖ್ಯ ಮಂತ್ರಿಗಳು ಬಹಿರಂಗವಾಗಿ ಟೀಕಿಸಿದ ಮಾತ್ರಕ್ಕೆ ಆಹಾರ ಅಭಾವದ ಸಮಸ್ಯೆಯು ಬಗೆಹರಿಯುವಂತಿಲ್ಲ.

ಆಹಾರ ವಿತರಣೆಯ ವಿಷಯವಾಗಿ ಪರಿಶೀಲಿಸಿದರೆ ಅದು ಇನ್ನೂ ಹಾಸ್ಯಾಸ್ಪದ ವಿಷಯವಾಗಿ ತೋರುವುದು. ಬೇಟೆ ಪಟ್ಟಣಗಳಿಗೆ ದಿನ 1ರ 12 ಔನ್ಸಿನ ಪ್ರಕಾರ ರೇಶನ್ ಕೊಡಲ್ಪಡುವಾಗ ಹಳ್ಳಿಗರಿಗೆ ಬರೇ 8ಔನ್ಸಿನಷ್ಟನ್ನು ಕೊಡಲಾಗುತ್ತಿದೆ. ಈ ರೀತಿಯ ವ್ಯತ್ಯಾಸವನ್ನು ತಾಳ್ಮೆಯಿಂದ ಸಹಿಸುತಿದ್ದು ದಿನ ಕಳೆಯುತಿದ್ದ ಹಳ್ಳಿಗನ ರೇಶನ್ ಪ್ರಮಾಣವನ್ನು ಪುನಃ 6 ಔನ್ಸಿಗೆ ತಂದಿಳಿಸಿರುವುದನ್ನು ನೋಡಿದರೆ ಎಲ್ಲಾ ಬಗೆಯ ಸಂಕಷ್ಟಗಳಿಗೆ ಹಳ್ಳಿಯವರನ್ನೆ ಬೊದಲು ಬಲಿಗೊಡುವರೆ ನಿರ್ಣಯಿಸಿದಂತೆ ಭಾಸವಾಗುವುದು.

ಹಳ್ಳಿಯವರ ಯಾವ ಆಪರಾಧಕ್ಕಾಗಿ ಈ ರೀತಿಯ ತಾರತಮ್ಯ ಹಾಗೂ ತಾತ್ಸಾರದ ಧೋರಣೆಯೋ ತಿಳಿಯುವುದಿಲ್ಲ. ಹಳ್ಳಿಯ ರೈತರು ಕಷ್ಟಪಟ್ಟು ದುಡಿದು ಬೆಳೆಸಿದ ಆಕ್ಕಿಯನ್ನು ಅವರಿಗೆ ಅರೆ ಹೊಟ್ಟೆಗೂ ಪೇಟೆ ಪಟ್ಟಣಿಗರಿಗೆ ಹೊಟ್ಟೆ ತುಂಬ ಊಟಕ್ಕೂ ಪಾಲು ಹಂಚಿ ಕೊಡುವುದು ನಮ್ಮ ಸರಕಾರದ ನ್ಯಾಯವೆನ್ನಬಹುದೆ? ಇದೇ ರೀತಿ ಪಟ್ಟಣಿಗರಿಗೆ ತಲಾ ಒಂದರ ತಿಂಗಳೊಂದಕ್ಕೆ ಒಂದು ರಾತ್ಲು ಸಕ್ಕರೆಯಂತೆ ಕೊಡಲ್ಪಡುವಾಗ್ಗೆ ಒಬ್ಬ ಹಳ್ಳಿಗನಿಗೆ ತಿಂಗಳೊಂದಕ್ಕೆ ಬರೇ ಇಾಲ್ಕು ತೊಲೆಯಷ್ಟೂ ಸಕ್ಕರೆ ದೊರೆಯದಿರುವುದು ಹಳ್ಳಿಗರ ದುರಾದೃಷ್ಟವೆನ್ನಬೇಕೆ? ಇದರಿಂದಾಗಿ ಹಳ್ಳಿಗರಿಗೆ ಪಟ್ಟಣ ಸೇರುವುದೆ ಲೇಸೆಂಬ ಅಭಿಪ್ರಾಯವಾಗುವುದು ತಪ್ಪಾಗುವುದಾ ಬದಲಿಗೆ ಮಹಾತ್ಮರ ಉಪದೇಶದಂತೆ ಪಟ್ಟಣಿಗರು ಹಳ್ಳಿಗಳನ್ನು ಸೇರಲು ಸಾಧ್ಯವಾದೀತೆ? ಆದುದರಿಂದ ಇನ್ನಾದರೂ ಈ ರೀತಿಯ ಕಸ್ಪಷ್ಟಾತ ಧೋರಣೆಗೆ ಅಸ್ಪದವಾಗದಂತೆ ನಿಯಂತ್ರಣಗಳನ್ನು ರದ್ದುಗೊಳಿಸುವುದು ಜನತಾ ಸರಕಾರದ ಮುಖ್ಯ ಕರ್ತವ್ಯವೆಂಬುದನ್ನು ಸರಕಾರವು ಜ್ಞಾಪ್ತಿಗೆ ತಂದುಕೊಳ್ಳಲಿ. ಇಲ್ಲವಾದರೆ ಈಗಿನ ಸರಕಾರವು ಕೇವಲ "ಹಳ್ಳಿಗನಿಗಾಗಿ ಸರಕಾರ" ಎಂದು ಹಿಂದಿನಂತೆ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುವುದಲ್ಲದೆ ದೇಶದ ಹಿತ ಸಾಧನೆಗೆ ಗಂದಾಂತರವನ್ನು ತಂದೊಡ್ಡಿದಂತಾಗುವುದರಲ್ಲಿ ಸಂದೇಹವಿಲ್ಲ.

—'ಹಳ್ಳಿಯ ರೈತ'

ದ್ವಿತೀಯ ವರ್ಷದಲ್ಲಿ ಉಡುಪಿಯ ಎಂ. ಜಿ. ಎಂ. ಕಾಲೇಜು

ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಿದ್ದು, ಪ್ರಬುದ್ಧ ಬಂದರ ಮತ್ತಿತರ ಹೊಸ ಮಹಾಜನತೆಗಳ ನಿರೀಕ್ಷೆಯಿರುವ ಉಡುಪಿಯಲ್ಲಿ ಆಧ್ಯ ಮಹಾಜನಿಯರ ಮತ್ತು ವಿದ್ಯಾಪ್ರೇಮಿಗಳ ಪರಿಶ್ರಮದ ಫಲವಾಗಿ 1949ನೇ ಜೂನಿನಲ್ಲಿ 'ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು' ಎಂಬ ದ್ವಿತೀಯ ಶ್ರೇಣಿಯ ಕಾಲೇಜು ಸ್ಥಾಪನೆಯಾಗಿ ಜಯಶೀಲವಾಗಿ ನಡೆದುಬಂದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಈ ಕಾಲೇಜು ಇರುವ ಉಡುಪಿ ತಾಲೂಕಿನಂದರಲ್ಲೇ 13 ಹೈಸ್ಕೂಲುಗಳಿವೆ. ಇದೇ ರೀತಿ ಇಡೀ ಜಿಲ್ಲೆಯಲ್ಲಿ ಹೈಸ್ಕೂಲುಗಳ ಸಂಖ್ಯೆಯೂ ದೆ. ಹೀಗಿದ್ದರೂ ಜಿಲ್ಲೆಯ ಪ್ರಾಂತಿನ ಕೇವಲ ಮೂರು ಕಾಲೇಜುಗಳೂ ಮಂಗಳೂರಿನಲ್ಲಿಯೇ ಇರುವುದರಿಂದ ವಿಶೇಷವಾಗಿ ಕುಂದಾಪುರ ಡಿವಿಜನ್ನಿನ ಉಜ್ಜ ಶಿಕ್ಷಣಾಕಾಂಕ್ಷಿ ವಿದ್ಯಾರ್ಥಿಗಳಿಗೆ ಎಂತಹ ತೊಂದರೆಯಾಗುತ್ತಿದ್ದಿತೆಂಬುದನ್ನು ವರ್ಣಿಸುವುದು ಅನಗತ್ಯ. ವಿಶೇಷ ಶ್ರೀಮಂತರ ಮಕ್ಕಳಿಗಲ್ಲದೆ ಈ ಭಾಗದ ಆನ್ಯರಿಗೆ ಎಟಕದ ಶಿಕ್ಷಣವೇ ಆದಾಗಿದ್ದಿತು. ಉಡುಪಿಯಲ್ಲಿ ಎಂ. ಜಿ. ಎಂ. ಕಾಲೇಜು ಸ್ಥಾಪನೆಯಾಗಿ ಈ ಕೊರತೆಯನ್ನು ನಿವಾರಿಸಿ ವಿದ್ಯಾಸೌಕರ್ಯದ ಮಹಾ ಪುಣ್ಯ ಗಳಿಸಿದೆ. ಹೊಸತಾಗಿ ತೆರೆಯಲ್ಪಟ್ಟ ಕಾರಣ, ಈ ಕಾಲೇಜಿನ ಸೌಕರ್ಯಗಳು ಮತ್ತು ಜಾಹ್ಯ ಸೌಂದರ್ಯಗಳು ಇನ್ನೂ ಕೂಡಿ ಬಂದಿಲ್ಲವಾದರೂ, ಕೇವಲ ಒಂದೇ ವರುಷದಲ್ಲಿ ಇದು ಗಳಿಸಿರುವ ಅಂತರಿಕ ಅಭಿವೃದ್ಧಿಯೆಂತಹದೆಂಬುದು, ಅದ್ದು ಅನುಭವಿಸಿರುವ ವಿದ್ಯಾರ್ಥಿಗಳಿಗೆ ಸರಿಯಾಗಿ ಗೊತ್ತಿದೆ. ವಿದ್ಯಾರ್ಥಿಗಳ ಆಸ್ಪತ್ರೆ ಮತ್ತು ಆಸಮ್ಮತಿಗೆಂದೂ ಪಾತ್ರರಾಗದೆ, ಆ ತ್ರೀಯತಾ ಭಾವನೆಯಿಂದಲೇ ಆವರಲ್ಲಿ ಜ್ಞಾನಮತ್ತು ಸಂಸ್ಕಾರವನ್ನು ಸರ್ವತೋಮುಖವಾಗಿ ಬೆಳೆಯಿಸಬಲ್ಲ ಪ್ರಿನ್ಸಿಪಾಲರು ಮತ್ತು ಪ್ರೊಫೆಸರ್ ಮಂಡಳಿಯಿರುವುದೇ ಈ ಕಾಲೇಜಿನ ಆಂತರಿಕ ಪ್ರಗತಿಗೆ ಕಾರಣ. ಇಂತಹ ಒಳಪುಷ್ಟಿಗನುಗುಣವಾದ ಬಾಹ್ಯ ಬೆಳವಣಿಗೆಯೂ ಆಗುವಂತೆ, ಕಾಲೇಜಿನ ಕಟ್ಟಡ ನಿರ್ಮಾಣಕ್ಕೆ ಸರ್ವರೂ ಸಹಕರಿಸಬೇಕೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಅಂತೆಯೇ ಇದೇ ತಾ. 26ರಲ್ಲಿ ಆರಂಭವಾಗಿರುವ, ಅದರ ದ್ವಿತೀಯ ವರುಷದಲ್ಲಿ ವಿದ್ಯಾರ್ಥಿನಿಯರ ಪ್ರವೇಶಕ್ಕೆ ಸರಕಾರದ ಅನುಮತಿ ದೊರೆತಿರುವುದೂ ಅವಶ್ಯಕ್ಕಾಗಿ ಸಾರ್ವಜನಿಕ ವಿಜ್ಞಾಪನೆಗಳು ಹೋಗಿರುವೆಯೆಂದೂ ತಿಳಿದು ಬರುತ್ತದೆ. ಮಂಗಳೂರಲ್ಲಿರುವಂತೆ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ಕಾಲೇಜೇನೂ ಇರದೆ, ಉಜ್ಜ ಶಿಕ್ಷಣಾಪೇಕ್ಷಿಗಳಾದ ವಿದ್ಯಾರ್ಥಿನಿಗಳಿರವ ಈ ಭಾಗಕ್ಕೆ ಏಕ ಮಾತ್ರ ಆಶ್ರಯವಾಗಿರುವ ಉಡುಪಿ, ಎಮ್. ಜಿ. ಯಮ್. ಕಾಲೇಜಿಗೆ ವಿದ್ಯಾರ್ಥಿನಿಗಳಿಗೂ ಪ್ರವೇಶಾನುಮತಿ ದೊರಕುವದೆಂದು ಎಲ್ಲರೂ ಅಶಕ್ತಯಿಂದ ನಿರೀಕ್ಷಿಸುತ್ತಿದ್ದಾರೆ. ಜನತೆಯ ಈ ಬಯಕೆಗೆ ಭಂಗ ಬರಲಾರದೆಸ್ಸೆ!

—'ಶೂಲಪಾಣಿ'

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟ್‌ಗಳಿಗೆ—
ವರ್ತಕದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಕನ್ನಡಿಗರೆಲ್ಲರ ಕಣ್ಮನ ಸೆಳೆದು ಪ್ರಸಿದ್ಧವಾದ

ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ

25 ಕತೆಗಳು ಬೆಲೆ ರೂ 3 0 0

ಸಿಗುವ ಸ್ಥಳಗಳು:-

1 ಕಿರಿಯರ ಪ್ರಪಂಚ, ಉಡುಪಿ
2 ನವಭಾರತ ಬುಕ್ ಡಿಪೊ, ಉಡುಪಿ
3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎಡೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳಿವಿಷಮುಂತಾದವು, ಪಕ್ಷವಾತ, ಮೊದಿಮೆ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ.



REGD

ಹುಳುಕಡ್ಡಿ, ನುಜ್ಜು ನವ್ಯಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಭಾರತದ ಉದ್ಯಮಗಳಲ್ಲಿ ಮಿನಿನ ಉದ್ಯಮವೂ ಒಂದು ಎಂಬುದನ್ನು ನಮ್ಮಲ್ಲಿ ಅನೇಕರು ಅರಿಯದಂತೆ ಕಾಣುವದಿಲ್ಲ. ಒಬ್ಬರೆ ಮೂರು ಸಾವಿರಕ್ಕೆ ಮೇಲ್ಪಟ್ಟಿಸ್ಟು ಮೈಲುಗಳ ಕಡಲಕಿನಿಯುಳ್ಳ ನಮ್ಮ ಭಾರತದಲ್ಲಿ ಮಿನಿನ ಉತ್ಪತ್ತಿ ಮತ್ತು ಉದ್ಯಮಗಳ ಪ್ರಮಾಣವನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗದಿರದು.

ಭಾರತೀಯ ವೈವಸಾಯವನ್ನು ಪರೀಕ್ಷಿಸಿ ಸೂಚನೆಗಳನ್ನು ಮಾಡಿ ಬರೆದ ಯಾವ ಪಾಶ್ಚಿಮಾತ್ಯ ಸಮಿತಿಯವರ ಮಾತುಗಳನ್ನೇ ನೋಡಿರಿ; ಆದರಲ್ಲಿ ಅವರೆಲ್ಲರೂ ಹೇಳುವ ಒಂದು ಸಮಾನವಾದ ಸಂಗತಿಯೆಂದರೆ ಈ ದೇಶದಲ್ಲಿ ಮಿನಿನ ವೈವಸಾಯವನ್ನು ಬೇಕಾದಷ್ಟು ಬೆಳೆಯಿಸಿಕೊಳ್ಳಲಿಕ್ಕೆ ಬರುವಂತಿದ್ದರೂ ಹಾಗೆ ಮಾಡಿಕೊಂಡಿಲ್ಲವೆಂಬ ವಿಚಾರ. ಭಾರತದ ಮಿಕ್ಕ ಎಲ್ಲ ಆಧುನಿಕ ಉದ್ಯಮಗಳಂತೆ ಈ ಮಿನಿನ ವೈವಸಾಯಕ್ಕೂ ಪಡುವಣದ ಒಂದು ಕಾರ್ಯ ಪದ್ಧತಿಯು ನೋಂಕು ತಾಕಿರದಿದ್ದರೂ ನಾವು ನಮ್ಮ ರೀತಿಗಳನ್ನು ಕೂಡ ತಿಳಿದುಕೊಂಡಿಲ್ಲ; ಉಳಿಸಿಕೊಂಡಿಲ್ಲ ಎಂಬುದು ಮತ್ತಷ್ಟು ವಿಷಾದದ ವಿಷಯ.

ಭಾರತೀಯ ಕಡಲಂಚಿನಲ್ಲಿ ಬೇಕಾದಷ್ಟು ದೊಡ್ಡ ಪ್ರಮಾಣದಿಂದ ಈ ಉದ್ಯಮವನ್ನು ಒಂದು ಉದ್ಯಮ ಎಂಬ ಧೋರಣೆಯಿಂದ ನಡೆಯಿಸಿಕೊಂಡು ಹೋಗಲಿಕ್ಕೆ ಬರುತ್ತದೆ. ಆದರೆ ಇಲ್ಲಿಯ ವರೆಗೆ ಆ ದಿಕ್ಕಿನಲ್ಲಿ ಯಾವ ಪ್ರಯತ್ನವೂ ಆಗಿಲ್ಲ; ಪ್ರಯತ್ನ ಪಟ್ಟವರಿಗೆ ಸಾಕಷ್ಟು ಉತ್ತೇಜನವೂ ದೊರೆತಿಲ್ಲ.

ಭಾರತೀಯರು ಹಬ್ಬಾಗಿ ವಾಕಾಸಾಲ್ಗಳಾಗಿದ್ದರೂ ಕಡಲ ಕಡೆಗಳಲ್ಲಿ ಇರುವ ಜನರು ಮತ್ತು ಪಟ್ಟಣಕ್ಕೆ ಹೋಗಿ ನೆಲೆಸಿದವರ ಪಾಯಿದಿಗಳಲ್ಲದೆ ವಿದೇಶದ ಮತ್ತು ವಿಧರ್ಮದ ಜನರು ಮಾಂಸಾಹಾರಿಗಳಾಗಿದ್ದಾರೆ. ಅವರಲ್ಲಿ ಎಲ್ಲರೂ ಅಲ್ಲದೆ ಬೇರೆ ಅನೇಕ ಪಂಗಡಗಳು ನೈಸರ್ಗಿಕವಾಗಿಯೇ ಮಿನನ್ನು ತಮ್ಮ ಆಹಾರವನ್ನಾಗಿಟ್ಟುಕೊಂಡಿದ್ದಾರೆ- ಮಿನು ಆಹಾರ ದೃಷ್ಟಿಯಿಂದ ಹೆಚ್ಚು ಪೌಷ್ಟಿಕವೂ, ಪ್ರೋತ್ಸಾಹಕವೂ, ಅಗಿರುವದಲ್ಲದೆ ಅದು ಸಾಕಷ್ಟು ಸೋಲಿಯಾದ ಆಹಾರವೂ ಕಡಿಮೆ ಪೆಚ್ಚದಿಂದ ಬೇಕಾದಂತೆ ಬೆಳೆಯಿಸಿಕೊಳ್ಳ ಬಹುದಾದ ವಸ್ತುವಾಗಿರುವುದರಿಂದಲೂ, ಆ ಹಾರದ ಕೊರತೆಯು ಈ ದಿನಗಳಲ್ಲಿ ಅದರ ಕಡೆಗೆ ಎಲ್ಲ ಪ್ರಾಂತೀಯ ಮತ್ತು ಕೇಂದ್ರ ಆಧಿಪತ್ಯಗಳ ಲಕ್ಷ್ಯವು ಹೊರಳಬೇಕಾದುದು ಅಗತ್ಯವಾಗಿದೆ.

ನೋಟಿಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O.S. No 211/1949.

R. E. P. No. 616/1949

F.R P.Cannan, ವಾದಿ ಅರ್ಜಿದಾರ.

ಅಂಡಪ್ಪ ಪೂಜಾರಿ, ಪ್ರತಿವಾದಿ, ಎದ್ರಿ.

ಇವರೊಳಗೆ-

ಪ್ರತಿವಾದಿ, ಎದ್ರಿ.

ಅಣ್ಣಪ್ಪ ಪೂಜಾರಿ, ಕುಳ್ಳಯ ಪೂಜಾರಿ ಮಗ, ಕಾರ್ಕಳ ತಾಲ್ಲೂ ಕಾಶಿಪಟ್ಣ ಗ್ರಾಮದ ಮೂಲ್ಕೊಟ್ಟು ಮನೆ ಎಂಬಲ್ಲಿ ಇರುವವ. ಇವರಿಗೆ.

ಸದ್ರಿ ದಿಕ್ರಿ ಹಣ ವಸೂಲಿಗೆ ಎದ್ರಿಯ ಮೇಲೆ ಕೈಹಿಡಿ ವಾರಂಟು ಕೇಳಿ ಅರ್ಜಿದಾರನು ನೆಡ್ಡಿದ ಸದ್ರಿ ಅಮ್ಲಜ್ಯಾರಿಯು ತನ್ನ ಬಗ್ಗೆ ತಾರೀಕು5-7-1950ಕ್ಕೆ ಇಡೋ ನಾಗಿಯದೆ. ಅದ್ರಿಂದ ಆ ಕುರಿತು ನಿಮ್ಮ ಅಕ್ಷೇಪ ಇದ್ದಲ್ಲಿ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸಕ ಪಕ್ಷವಾಗಿ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲಾಗುವದು.

P. Ramachandra Rao,
Pleader for petitioner.

ಕಾರ್ಕಳ, ತಾ- 23-6-1950.

ಮಿನಿನ ಉದ್ಯೋಗ

ಬರೆದವರು:—ಶ್ರೀ ಎಚ್. ಎಸ್. ಪಾಟೀಲ, ಎಂ.ಎ.,ಬಿ.ಕಾಮ್.

ಈಗಿರುವ ಮಿನಿನ ವೈವಸಾಯದಲ್ಲಿ ಪರಂಪರಾಗತವಾಗಿ ಸಾಕಷ್ಟು ಜ್ಞಾನತನ, ಕೌಶಲ್ಯ, ಬಂಡನಲುಗಳು ಕಂಡುಬರುತ್ತಿದ್ದರೂ ಅವು ಈಗಿನ ನಮ್ಮ ಬೇಡಿಕೆಗೆ, ಈಗಿನ ನಮ್ಮ ದೃಷ್ಟಿಗೆ ಸರಿಯಾಗಿ, ಸಮರ್ಪಕವಾಗಿ ಇರುವುದಿಲ್ಲ. ಆ ಕಾರಣ ಮೊದಲಾಗಿ ಮಿನಿನ ವೈವಸಾಯದಲ್ಲಿ ತೊಡಗಿದ ಜನರನ್ನೇ ಬಳಸಿಕೊಂಡು ಅವರಿಗೆ ಸಾಕಷ್ಟು ಸರಕಾರೀ ಸಹಾಯವೂ, ಸಾರ್ವಜನಿಕ ಪ್ರೋತ್ಸಾಹವೂ, ಸಾಮಾಜಿಕ ಸಹಕಾರವೂ, ದೊರೆಯುವಂತೆ ಮಾಡಬೇಕಾದುದು ಅವಶ್ಯವಾರ್ಯ.

ಮೊದಲನೆಯದಾದಿ ಮಿನುಗಾರರು ಉಪಯೋಗಿಸುವ ಉಪಕರಣಗಳು; ಅವರಿಗೆ ಬೇಕಾಗುವ ಉಪ್ಪು, ನಾನಾ ನೊಡಲಾಡಿ ಸಾಮಗ್ರಿಗಳು ಮತ್ತು ನೂರಾಟವನ್ನು ಮೊಡುವುದಕ್ಕಾಗಿ ಅವರಿಗೆ ಅವಶ್ಯಕವಿರುವ ಸೌಕರ್ಯಗಳು, ಇವಲ್ಲದೆ ಆರ್ಥಿಕತ್ವದಿಂದ ಈ ವೈವಸಾಯಕ್ಕೆ ಶಕ್ತ ಬಂದವಲು, ಸಂಶೋಧನ ಸಹಾಯ ಮತ್ತು ಯಂತ್ರೋಪಕರಣಗಳ ಸಹಾಯವು ತೀರ ಅಗತ್ಯವಾಗಿದೆ.

ಮಿನನ್ನು ಹಿಡಿಯುವದು ಹೇಗೆ ಮತ್ತು ಎಲ್ಲಿ ಎಂಬುದರಿಂದ ಮೊದಲು ಮಾಡಿಕೊಂಡು ಅದನ್ನು ತಿನ್ನಲಿಕ್ಕೆ ಯಾವ ರೀತಿಯಿಂದ ಅನುವು ಮಾಡಬೇಕು ಮತ್ತು ಪ್ರಜಾರ ಮಾಡಬೇಕು ಎನ್ನುವ ವರೆಗೆ ಇಂದು ನಾವು ಒಂದು ಹೊಸ ದೃಷ್ಟಿಯಿಂದ ಕಾರ್ಯ ಮಾಡಬೇಕಾಗಿದೆ. ಇಂದಿನ ಮಿನುಗಾರರು ತಮ್ಮದೇ ಆದ ರೀತಿಯಲ್ಲಿ ತಮ್ಮದೇ ಆದ ಸಾಧನಗಳಿಂದ ಆ ಉದ್ಯಮವನ್ನು ಮಾಡಿ ನಡೆಯಿಸಿಕೊಂಡು ಬಂದಿದ್ದಾರೆ. ಆದರೆ ಅವರಿಗೆ ಈಗಿನ ಯಂತ್ರಯುಗದ ಲಾಭವು ಆಗಿ ಅವರ ಕಾರ್ಯವು ಹೆಚ್ಚು ಸುಗಮವೂ, ಪ್ರಯೋಜನಕಾರಕವೂ ಆಗುವಂತೆ ಮಾಡಬೇಕಾಗಿದೆ. ಅವರಿಂದ ಸಮುದ್ರದ ವಿಶಿಷ್ಟ, ಜಂದ್ರನ ಉದಯಾಸ್ತ, ಕಡಲಂಚಿನ ಆಳ, ಉದ್ದ ಮೊದಲಾದ ಪರಂಪರಾಗತ ವಿಷಯದ ವಿವರಗಳನ್ನು ತಿಳಿದುಕೊಂಡು ಅಧುನಿಕ ಸಾಮಗ್ರಿಗಳ ಸಹಾಯದಿಂದ ಅವರು ಹೆಚ್ಚು ಮಿನನ್ನು ಸುಲಭವಾಗಿಯೂ, ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿಯೂ ಪಡೆಯುವಂತೆ ಮಾಡಬೇಕು.

ಆ ಮೇಲೆ ಬರುವದು ಆ ಮೀನಿನ ಸಂಗ್ರಹ ಮತ್ತು ಶುದ್ಧೀಕರಣದ ಕಾರ್ಯ. ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಹೆಚ್ಚು ಬಳಿನ ಕಾರ್ಖಾನೆಗಳೂ, ನಿರ್ಮಲಗೊಳಿಸುವ (Curing) ಕೇಂದ್ರಗಳೂ ಹುಟ್ಟಿ ಅವುಗಳ ಸೇವೆಯಿಂದ ಮತ್ತು ಇಂತಹ ಅನೇಕ ಆಧುನಿಕ ಸೌಕರ್ಯಗಳಿಂದ ನಮ್ಮ ಮಿನಿನ ಉದ್ಯಮವು ಉತ್ಕರ್ಷ ಹೊಂದುವಂತೆ ಮಾಡುವುದು ಉಚಿತವಾಗಿದೆ.

ಕೊನೆಯದಾಗಿ ಬರುವದು ದೊರೆತ ಮೀನಿನ ಮಾರಾಟ ಮತ್ತು ಪ್ರಚಾರ. ಇಂದಿನ ಲೆಕ್ಕದ ಮೇರೆಗೆ ಮಿನಿನ ಉತ್ಪತ್ತಿಯ ಒಂದೆರಡಂಶ ಭಾಗವನ್ನು ಮಾತ್ರ ಮಿನಿನ ವ್ಯವಸಾಯವನ್ನು ಮಾಡುವವರು ಸೇವಿಸುತ್ತಾರೆ. ಆದರೆ ಇನ್ನುಳಿದ ಏಳು ಭಾಗಗಳ ಮಾರಾಟವು ಸರಿಯಾಗಿ ಆಗಲೀ ಲಾಭದಾಯಕವಾಗಿ ಆಗಲೀ ಆಗುತ್ತಿಲ್ಲ.

ಮೊದಲನೆಯದಾಗಿ ಮಿನುಗಳನ್ನು ಪಡೆಯುವಂತೆಯೂ, ಕೆಡೆಯಿಲ್ಲದೆ ಊರಿಂದೂರಿಗೆ ಕಳುಹಿಸುವದಕ್ಕಾಗಿಯೂ ತಕ್ಕ ಸೌಕರ್ಯಗಳಿಲ್ಲ. ಆದಕ್ಕೆ ಬೇಕಾಗುವ ಯಂತ್ರ ಸಾಮಾಗ್ರಿಗಳನ್ನು ಹೆಚ್ಚು ಮಾಡಿಬೇಕಲ್ಲದೆ ಅನುಕೂಲವೂ ಆಗುವಂತೆ ಮಾಡುವದು ಅಗತ್ಯವಾಗಿದೆ. ಆ ಮೇಲೆ ಅದನ್ನು ಮಾರಲಿಕ್ಕೆ ಬೇಕಾಗುವ ಧನಸಹಾಯ ಮತ್ತು ವಾಹನದ ಸೌಲಭ್ಯವು ದೊರೆಯುವುದು ಯೋಗ್ಯವಾಗಿದೆ. ವಿಮಾನಗಳ ಇಂದಿನ ಯುಗದಲ್ಲಿ ಮಿನು ಅಲ್ಪ ಸಮಯದಲ್ಲಿ ಅಸಂಖ್ಯ ಮೈಲು ದೂರ ಇರುವ ಪಟ್ಟಣಗಳಲ್ಲಿ ಸಿಗುವಂತಾದರೆ ಮೀನಿನ ಉಪಯೋಗವು ಹೆಚ್ಚುವದು ಮಾತ್ರವಲ್ಲದೆ ಅಂತಹ ಪೌಷ್ಟಿಕ ಆಹಾರದ ಯೋಗ್ಯ ಉಪಯೋಗವು ಆಗುವದೆಂಬ ಮಾತಿನಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಹಾಗೆಯೇ ಇಂದು ನಮ್ಮ ರಾಷ್ಟ್ರದಿಂದ ಸಾಕಷ್ಟು ಮಿನು ನಿರ್ಯಾತವಾಗುವುದಿಲ್ಲ. ಕೇವಲ ಮೀನು ಇಷ್ಟೇ ಅಲ್ಲದೆ ಮೀನಿನ ಎಣ್ಣೆ, ಡಬ್ಬಿಯಲ್ಲಿ ಹಾಕಿದ ಮಿನು ಮತ್ತು ಮಿನಿನ ಅನೇಕ ಹೊಸ ಹೊಸ ಉತ್ಪಾದನೆಗಳಿಗಾಗಿ ನಮಗೆ ಬೇಕಾದಷ್ಟು ಅನುಕೂಲವಾದ ಪೇಟೆಯು ಸಿಗುವಂತಿಲ್ಲ. ಅಂತೆಯೆ ಅಸ್ಕ ಖಂಡದಲ್ಲಿರುವ ನಮ್ಮ ಶೀಲದ ಸ್ಥಾನಕ್ಕೆ ತಕ್ಕಂತೆ ನಾವು ಈ ಉದ್ಯಮವನ್ನು ಬೆಳೆಯಿಸಿಕೊಳ್ಳುವದು ಉಚಿತ.

ಇನ್ನು ಕನ್ನಡಿಗರಿಗೆ ಈ ವಿಷಯವಾಗಿ ವಿಶೇಷ ಸೌಕರ್ಯಗಳು ಬೇಕಾಗಿವೆ. ಇನ್ನೂರು ಮೈಲು ಇರುವ ಕನ್ನಡದ ಕಡಲಂಚಿನಲ್ಲಿ ಮಿನಿನ ಉದ್ಯಮವು ಹೆಚ್ಚು ಪ್ರಾಸ್ತೀಮು ಪೂರ್ಣವೂ ಅದುದೇ ಅದರೆ ಕರ್ನಾಟಕಕ್ಕೆ ಇದೊಂದು ಒಳ್ಳೆಯ ಲಾಭದಾಯಕವಾದ ಉದ್ಯಮವಾಗಿ ಪರಿಣಮಿಸುವುದು. ಆತ್ತ ಕಡೆಗೆ ನಮ್ಮ ಉದ್ಯಮಗಳ ಲಕ್ಷ್ಯ ಹೋಗುವದಕ್ಕೆ ಇದೀಗ ತಕ್ಕ ಸಮಯ!

— ಮಕ್ಕಳನ್ನು ಹಡೆಯುವುದು ಸಾಕು —

ಆಪರೇಶನ್ ಮಾಡಿಸಿಕೊಂಡ ಸ್ತ್ರೀಯರಿಗೆ

ಬರ್ಥ ಕಂಟ್ರೋಲ್

ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೇಗು, ಪ್ರದರರೋಗ, ಹೊಲಿಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ವೃತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಸಕ್ಕೆ:—ಹರಿವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ವಿಜಂದೆರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೆರೆ ಡಾವಣಗೆರೆ:—ಡಾವಣಗೆರೆ ಪ್ರೆಸ್ಸ್ ಆರ್ ಎಲ್ ಕಮಲಾಪುರ ಕೆಮಿಸ್ಟ್, ಹಾವೇರಿ ಬ್ಯಾಡಗಿ

ಗೊನೋರಿಯಾ ಪರವಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಳಿಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಗು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಆರ್ಧಾಂಗ ವಾಯು ನಡುನೋಯು.ವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ನೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಪದಾರ್ಥ, ಕಾಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಶರೂ. ಪೋಸ್ಟ ಚಾರ್ಜು ೮ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್ಸ್. ನಂಜುಡೇಶ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ನೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O.S. 573/47. R E.P 139/50.

ವಾದಿ- ಮಂಜಯ್ಯ ಶೆಟ್ಟಿ, ಅಕ್ಕಮ್ಮ ಸೆಡ್ತೀರ ಮಗ. ಕುಂದಾಪುರ ತಾಲ್ಲೂಕು ಹೇರೂರು ಗ್ರಾಮದ ಮಂರುಕೋಣೆ ವೀರಣ್ಣ ಶೆಟ್ಟಿ ಮಗ. ಇವರಿಂದ ಸದ್ರಿ ದಿಕ್ರಿ ಹಕ್ಕು ತಾ. 29-6-49ರಲ್ಲಿ ಟ್ರಾನ್ಸ್‌ಫರು ಪಡೆದ ಅರ್ಜಿದಾರ, ಸಬ್ಬಣ್ಣ ಸೆಟ್ಟಿ, ಅಬ್ಬಕ್ಕೆ ಸೆಡ್ತೀರ ಮಗ, ಸದ್ರಿ ಹೇರೂರು ಗ್ರಾಮ.

ಎದ್ರಿರು-1 ಅಕ್ಕಮ್ಮ ಸೆಡ್ತಿ, 2 ಪುಟ್ಟಮ್ಮ ಸೆಡ್ತಿ, 3 ಮಹಾಬಲ ಸೆಟ್ಟಿ, ಪರಮೇಶ್ವರಿ ಸೆಡ್ತೀರ ಮಕ್ಕಳು. ಕುಂದಾಪುರ ತಾಲೂಕು ಹೇರೂರು ಗ್ರಾಮ.

ಸದ್ರಿವಾದಿ ಮತ್ತು 2ನೇ ಎದ್ರಿಗೆ ತಿಳಿಯಪಡಿಸಿದ್ದು.

ಮೇಲಿನ ದಿಕ್ರಿ ಹಕ್ಕು ಸಾಬೀಯು ಅರ್ಜಿದಾರನಿಗೆ ಟ್ರಾನ್ಸ್‌ಫರು ಕೊಟ್ಟಿ ಮೇರೆಗೆ ಸದ್ರಿ ಟ್ರಾನ್ಸ್‌ಫರು ರಜು ಪಡಿಸಿಕೊಂಡು ನಂತರ ಸದ್ರಿ ದಿಕ್ರಿವಿಧಿನಸುರಿಸಿ ಮುಂದಿನ ನಿಯ್ಕತ್ತಿ ಕೊಡಿಸಬೇಕೆಂತ ವಗೈರೆ ಕಾಣ್ಸೆ ಅರ್ಜಿದಾರನು ದಾಕ್ಲು ಮಾಡಿದ ಮೇಲಿನ ಅರ್ಜಿ ತಾ. 6-7-50ಕ್ಕೆ ಯಿಟ್ಟಿದೆ. ಆ ಕುರಿತು ನಿಮ್ಮ ಅಕ್ಷೇಪಯದ್ದರೆ ಸದ್ರಿ ದಿವಸ ಬೆಳಿಗ್ಗೆ ೧೦ಟಿ 11ಕ್ಕೆ ಮೇಲ್ಕಾಣಿಸಿದ ಕೋರ್ಟು ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for Petr.

ತಾರೀಕು25-6-50, ಮೊಕ್ತಾಂ ಕುಂದಾಪುರ.

ಮಹಿಳಾ ಪುಟ

ಪತ್ರಿಕೋದ್ಯಮದಲ್ಲಿ ಮಹಿಳೆಯರು

ಜೀವನದ ನಾನಾರಂಗಗಳನ್ನು ಮಹಿಳೆಯರು ಕ್ರಮ ಕ್ರಮವಾಗಿ ಪ್ರವೇಶಿಸುತ್ತಿದ್ದಾರೆ. ಸ್ತ್ರೀ ಉದ್ಯೋಗದರ್ಶಿಯೂ ಆವರು ಯಶಸ್ವಿಯಾದ ಸೇವೆ ಸಲ್ಲಿಸಬಹುದು ಎಂಬ ವಾದ ಬಲವಾಗುತ್ತಿದೆ. ಮಹಿಳೆಯರ ಪ್ರಗತಿ ಈ ಧಾಟಿಯಲ್ಲಿ ಮುನ್ನಡೆಯುತ್ತಿದೆ. ಅವೆರಿಕಾ ಮತ್ತು ರಷ್ಯಾ—ಇವೇ ಮೊದಲಾದ ಪ್ರಮುಖ ದೇಶಗಳಲ್ಲಿ ಮಹಿಳೆಯರು ತುಂಬಾ ಮುನ್ನಡೆದಿದ್ದಾರೆ. ರಷ್ಯಾದಲ್ಲಂತೂ ಭೂಮಿ ಉಳುವುದರಿಂದ ಹಿಡಿದು ಉನ್ನತ ಆಡಳಿತ ಹಾಗೂ ರಾಜಕೀಯ ಸ್ಥಾನಗಳಲ್ಲೂ ಮಹಿಳೆಯರೂ ಪ್ರಶಸ್ತಿ ಪಡೆದಿದ್ದಾರೆ.

ಪತ್ರಿಕೋದ್ಯಮ—ಒಂದು ಮುಖ್ಯ ಉದ್ಯಮ

ಅಮೇರಿಕದಲ್ಲಿ ಮಹಿಳೆಯರಿಗೆ ಪತ್ರಿಕೋದ್ಯಮ ಒಂದು ಮುಖ್ಯ ಉದ್ಯಮವಾಗಿದೆ. ೧೯ನೇ ಶತಮಾನದ ವರೆಗೆ ಮಹಿಳೆಯರು ಈ ಉದ್ಯಮಕ್ಕೆ ಳಿದಿರಲಿಲ್ಲ. ನೊದಮೊದಲು ಪತ್ರಿಕಾಕರ್ತರ ಪತ್ನಿಯರು ಈ ಉದ್ಯಮ ಕ್ಕೆ ಳಿದರು ಪತಿಯ ಅಕಾಲವಾದ ನಂತರ ಪತ್ರಿಕೆಯನ್ನು ನಡೆಸಿಕೊಂಡು ಹೋಗುವ ಒಂದು ಜವಾಬ್ದಾರಿ ಅವರ ಮೇಲೆ ಬೀಳುತ್ತಿದ್ದುದೇ ಮಹಿಳೆಯರು ಪತ್ರಿಕಾಪ್ರಪಂಚಕ್ಕೆ ಇಳಿಯಲು ಮುಖ್ಯ ಕಾರಣವಾಯಿತು. ಇಂದು ಅಮೇರಿಕಾದಲ್ಲಿ ಸುಮಾರು ೧೧೧೦೦ ಜನ ಗುಮಹಿಳೆಯರು ಪತ್ರಿಕಾವೃತ್ತಿಯಲ್ಲಿದ್ದಾರೆ. ಬ್ರಿಟನ್ನಿನಲ್ಲೂ ಸಹ ಇದೇ ಪ್ರಮಾಣದಲ್ಲಿ ಮಹಿಳೆಯರು ಪತ್ರಿಕೋದ್ಯಮಕ್ಕಿಳಿದಿರುವುದಾಗಿ ಅಂದಾಜಾಗಿದೆ.

ಅಮೇರಿಕಾ, ಬ್ರಿಟನ್‌ಗಳಲ್ಲಿ ಪ್ರಖ್ಯಾತ ಮಹಿಳಾ ಪತ್ರಿಕೋದ್ಯಮಿಗಳು ಇಂದು ಅನೇಕರಿಗೆ ಮಾದರಿಯಾಗಿದ್ದಾರೆ ಎಂದರೆ ತಪ್ಪಾಗದು. ಮಹಿಳೆಯರಿಗಾಗಿಯೇ ಪ್ರತ್ಯೇಕ ತರ ಗತಿಗಳನ್ನು ನಡೆಸುತ್ತಿರುವವರ ಜೊತೆಗೆ ಮಖ್ಯ ಮುಖ್ಯ ವೃತ್ತಪತ್ರಿಕೆಗಳೆಲ್ಲಾ ಪಾತ್ರಿದಾರರಾಗಿಯೂ ಸಹ ಸಂಪಾದಕಿಯರಾಗಿಯೂ ಮಹಿಳಾ ವಿಭಾಗದ ಲೇಖಕಿಯರಾಗಿಯೂ ಹೀಗೆ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕೆಲವು ಸ್ವಾರಸ್ಯ ಕಥೆಗಳು

ಮಹಿಳಾ ಪತ್ರಿಕೋದ್ಯಮ ಸಂಬಂಧದಲ್ಲಿ ಹಲವು ಸ್ವಾರಸ್ಯ ಕಥೆಗಳು ನೆನಪಿಗೆ ಬರುತ್ತಿವೆ. ಆ್ಯನ್‌ರಾಯಲ್, ಬಬ್ಬಿ ಶಿಲ್ಕಿ ತ ಅಮೇರಿಕನ್ ಪತ್ರಿಕೋದ್ಯಮಿ. ಈಕೆ ಅಮೇರಿಕದ ಅಧ್ಯಕ್ಷ ಜಾನ್ ಕ್ವಿನ್ಸಿ ಆಡಮ್ಸ್ ನನ್ನು ಭೇಟಿ ಮಾಡಿದ ಕಥೆ ಪತ್ರಿಕೋದ್ಯಮ ಇತಿಹಾಸದಲ್ಲಿ ಸ್ವಾರಸ್ಯವಾಗಿದೆ. ಅವನನ್ನು ಭೇಟಿಮಾಡುವ ಪ್ರಯತ್ನದಲ್ಲಿ ಅನೇಕ ಪತ್ರಿಕೋದ್ಯಮಿಗಳು ವಿಫಲರಾಗಿದ್ದರು. ಅವನ ಕಚೇರಿಯೊಳಕ್ಕೆ ಹೋಗಲೂ ದುಸ್ತರವಾಗಿತ್ತು. ಆ್ಯನ್‌ರಾಯಲ್‌ಳಿಗೆ ಕೊನೆಗೊಂದು ಉಪಾಯ ಹೊಳೆಯಿತು. ಪೋಟೊಮ್ಯಾಕ್ ನದಿಯಲ್ಲಿಯೇ ಸ್ನಾನ ಮಾಡುವುದು ಅಧ್ಯಕ್ಷ ಆಡಮ್ಸ್‌ನ ಒಂದು ಅಭ್ಯಾಸವಾಗಿತ್ತು. ಒಂದು ದಿನ ಆ್ಯನ್‌ರಾಯಲ್ ನದೀ ತೀರಕ್ಕೆ ಹೋಗಿ ಅಧ್ಯಕ್ಷನು ಮೂಲೆಯಲ್ಲಿರಿಸಿದ್ದ ಬಟ್ಟೆಗಳ ಮೇಲೆ ಠಿಯಾಂಡಾಹಾಕಿಕುಳಿತೇಬಿಟ್ಟಳು. ಸ್ನಾನ ಮಾಡಿ ಹೊರಗೆ ಬಂದ ಅಧ್ಯಕ್ಷನಿಗೆ ಅವಳ ವರ್ತನೆ ವಿಚಿತ್ರವಾಗಿ ಕಂಡಿತು. 'ನನ್ನ ಪ್ರಶ್ನೆಗಳಿಗೆ ಸಮಂಜಸ ಉತ್ತರ ಕೊಡುವವರೆಗೂ ನಾನಿಲ್ಲಿಂದ ಏಳಲಾರೆ' ಎಂದು ಆಕೆ ಸತ್ಯಾಗ್ರಹ ಹೂಡಿಯೇ ಬಿಟ್ಟಳು.

ಅಧ್ಯಕ್ಷ ಸೋಲಬೇಕಾಯಿತು!

ಬ್ರಿಟನ್ನಲ್ಲಿ(?) ಡೊರೊತಿಫಾರ್ನರ್ ಎಂಬ ಹೆಸರಿನ ಮಹಿಳಾಪತ್ರಿಕೋದ್ಯಮಿಗೆ ಸಂಬಂಧಿಸಿದಂತೆ ಒಂದು ಸ್ವಾರಸ್ಯ ಕಥೆಯಿದೆ. ಒಮ್ಮೆಯಂತೆ ಒಂದುಗೊತ್ತಾದ ಉದ್ದೇಶದಿಂದ ಒಂದಾನೊಬ್ಬಳಿಗೆ,ನಿಸಯಸಂಗ್ರಹಣೆಸಲುವಾಗಿ ಹೋಗಿದ್ದಳು. ವಿಷಯ ಸಂಗ್ರಹಿಸಿಯಾಯಿತು. ವರ್ತಮಾನವನ್ನು ತನ್ನ ಕಚೇರಿಗೆ ಕಳುಹಬೇಕಾಯಿತು. ಹತ್ತಿರದ ಪಟ್ಟಣದಲ್ಲಿದ್ದ ತಾರು ಕಚೇರಿಗೆ ಹೋದಳು. ಆದರೆ ಆಲ್ಲೊಂದು 'ಕ್ಯೂ' ನಿಂತಿತ್ತು. 'ಆವರೆಬ್ಬರ ಕೆಲಸ ಮುಗಿಯುವ ವರೆಗೆ ನಿನ್ನ ತಾರನ್ನು ತೆಗೆದುಕೊಳ್ಳಲಾರೆ' ಎಂದು ಅಲ್ಲಿಯ ಗುಮಾಸ್ತ ಹೇಳಿಬಿಟ್ಟ. ಬೇಡಿಕೊಂಡರೂ ಕೇಳಲಿಲ್ಲ. ಇವಳ ಗೊಂದು ಯೋಜನೆ ಹೊಳೆಯಿತು. ಇನ್ನೊಂದು ತಾರನ್ನು ಬರೆದು ಕೊಟ್ಟಳು. 'ಪ್ರಿಯ, ಕಚೇರಿಗೆ ಸುದ್ದಿ ಕಳುಹಿಸಬೇಕಾಗಿದೆ. ಅರ್ಜೆಂಟ್. ಆದರೆ ಈ ಫಿನ್ನ ಸೇವಕ ನನಗೆ ಆತಂಕವೊಡ್ಡಿದ್ದಾನೆ' ಎಂದಿತ್ತು. ಆ ತಂತಿಯಲ್ಲಿ ಆದು ಪೋಸ್ಟ್‌ಮಾಸ್ಟರ್-ಜನರಲ್ ವಿಳಾಸಕ್ಕೆ ರೆದಿತ್ತು. ಅದನ್ನು ನೋಡಿ ಆ ಬಡ ಗುಮಾಸ್ತನಿಗೆ ಗಾಬರಿಯಾಯಿತು. ತನ್ನ ಮೇಲಧಿಕಾರಿ ಅವರ ಪ್ರಿಯತಮನೆಂದು ತಿಳಿದ ಅವನಿಗೆ ಮೈ ನಡುಗಿತು. ಮರುಮಾತಾಡದೆ, ಕ್ಷಮಾಪಣೆ ಕೇಳುತ್ತಾ, ಸುದ್ದಿಯ ತಂತಿಯನ್ನು ಕೂಡಲೆ ರವಾನಿಸಲು ತೆಗೆದು ಕೊಂಡ

ಅವಳ ಅಸ್ಪಾಟಗೂ ಹೊರೋತಿಯ ಮುಖವನ್ನು ಸಹ ಪೋಸ್ಟ್‌ಮಾಸ್ಟರ್ ಜನರಲ್ ಕಂಡಿರಲಿಲ್ಲ!

ಪತ್ರಿಕೋದ್ಯಮಿಗಳಲ್ಲಿರಬೇಕಾದ ಮುಖ್ಯ ಲಕ್ಷಣಗಳೆಲ್ಲ ಮಹಿಳೆಯರಲ್ಲವೆ ಅವುಗಳನ್ನು ಯೋಗ್ಯ ರೀತಿಯಲ್ಲಿ ಬೆಳಸಿಕೊಳ್ಳಬೇಕು.

ಭಾರತದಲ್ಲಿ ಇಂದು ಅಂಥಾ ಉನ್ನತ ದರ್ಜೆಯ ಮಹಿಳಾ ಪತ್ರಿಕೋದ್ಯಮಿಗಳಾರೂ ಇಲ್ಲ. ಮಾಸಪತ್ರಿಕೆಗಳು ಮತ್ತು ವಾರಪತ್ರಿಕೆಗಳಲ್ಲಿ ಮಹಿಳೆಯರ ಸಂಖ್ಯೆ ಈಗಲೆ ಚೆನ್ನಾಗಿದೆ. ಆದರೆ ದೈನಂದಿನ ಪತ್ರಿಕೆಗಳನ್ನು ಅವರಿನ್ನೂ ಪ್ರವೇಶಿಸಿಲ್ಲವೆಂದೇ ಹೇಳಬಹುದು. ಆದರೆ ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಮಹಿಳೆಯರು ತೋರುತ್ತಿರುವ ದಕ್ಷತೆಯನ್ನು ನೋಡಿದರೆ ದೈನಂದಿನ ವೃತ್ತ ಪತ್ರಿಕೆಗಳಲ್ಲೂ ಸಹ ಅವರು ದಕ್ಷ ರೀತಿಯಲ್ಲಿ ಸೇವೆ ಸಲ್ಲಿಸಬಹುದೆಂದು ಹೇಳಬಹುದು.

ಪತ್ರಿಕೋದ್ಯಮ ಮಹಿಳೆಯರಿಗೆ ಒಂದು ಉನ್ನತ ಉದ್ಯಮ, ಭಾರತದಲ್ಲಿ ಮಹಿಳೆಯರು ಜೆಚ್ಚುಹೆಚ್ಚಾಗಿ ಈ ಕ್ಷೇತ್ರವನ್ನು ಪ್ರವೇಶಿಸಬೇಕು. ಮತ್ತು ತಮ್ಮ ಅರ್ಹತೆಯನ್ನು ಜಗತ್ತಿಗೆ ತೋರಬೇಕು. ಭಾರತೀಯ ಮಹಿಳೆಯರು ಈ ಕ್ಷೇತ್ರದಲ್ಲಿ ನಿಜವಾದ ಪ್ರಗತಿಯನ್ನು ಸಾಧಿಸಬಹುದಾಗಿದೆ.

oo

ಪತ್ರಿಕೋದ್ಯಮ ಒಂದು ಗೃಹ ಕೈಗಾರಿಕೆಯಾಗಿಯೂ ಬೆಳೆಯಲು ಸಾಧ್ಯವಿದೆ. ಮನರಂಜನೆ, ಮಹಿಳೆಯರ ಸ್ಪರ್ಧೆ, ಶಿಶು ಸಂರಕ್ಷಣೆ, ಗೃಹ ವಿಜ್ಞಾನ, ರಾಜಕೀಯದಲ್ಲಿ ಮಹಿಳೆಯರ ಪಾತ್ರ-ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಮಹಿಳಾ ಸಂಘಗಳು ಒಂದೊಂದು ಪತ್ರಿಕೆಯನ್ನುಹೊರಡಿಸಬಹುದು. ಜೊತೆಗೆ ಬಡ ಮಹಿಳೆಯರ ಸಹಾಯಾರ್ಥವಾಗಿ ಪ್ರಿಂಟಿಂಗ್ ಪ್ರೆಸ್ಸುಗಳನ್ನು ಗೃಹ ಕೈಗಾರಿಕೆಯ ನಮೂನೆಯಲ್ಲಿ ನಡೆಸಬಹುದು. ಮುದ್ರಣ ಕೆಲಸ, ಪತ್ರಿಕೆಯ ಪ್ರಕಟಣೆ ಇವುಗಳನ್ನು ಒಟ್ಟಿಗೆ ನಡೆಸುವ ಒಂದು ವ್ಯವಸ್ಥೆ ಮಾಡಿದರೆ ಗೃಹ ಕೈಗಾರಿಕೆ ಬೆಳೆಯುವುದೇ ಅಲ್ಲದೆ ಮಾನಸಿಕ ಬೆಳವಣಿಗೆಗೂ ಸಹಾಯವಾಗುವುದು. ಮಹಿಳಾ ಸಂಘಗಳು ಇದನ್ನು ಯೋಚಿಸಬಹುದಾಗಿದೆ. [ಚಿತ್ರಗುಪ್ತ[

ಉಡುಪಿಗೆ ಹೋಗಬೇಕಾ! ತಪ್ಪದೆ ಉಳಿದುಕೊಳ್ಳಬೇಕಾದ ಹೋಟೆಲ್

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವೆಲ್ಲಕ್ಕೂ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ಹಂದಿತಿನಸು, ಇವುಗಳ ರುಚಿಯ ಬಗ್ಗೆ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೊತ್ತದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭನಾಗಿರುವ ದು.

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯ.ಂ ಸಿ. ಶಾಸ್ತ್ರೀ, ಯಲ್. ಐ

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ವಾಕಿಸ್ವರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

For Life Assurance

CUNSULT

THE NEW GUARDIAN OF INDIA

LIFE ASSURANCE Co. LTD.

(Established: 1934)

Chair man: Sri. M. C. T. M. Chidambaram Chattiyar

A Policy in this progressive Life Office is a good investment; its Agency is a valuable business connection.

MANGALORE BRANCH: K, S. R. Road, Hampankatta, Mangalore

HEAD OFFICE: United India Life Building, B No 142 MADRAS.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



REGD

Highly perfumed and medicated, worth using daily by one and all keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618

Estd: 1921 ಸ್ಥಾಪನೆ

30ನೇ ವರ್ಷ
6—7—1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ

ನವ ಯುಗ
ಚಂದಾ ವಿವರ:
(ಮುಂಗಡ
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೪೫

NAVAYUGA WEEKLY UDIPI, S. K.
Post Box No. 22
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ ಬಿ. ಶೆಟ್ಟಿಯಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು.

Vol 30
No. 45

❖ಆದರ್ಶ—ಆಚಾರ.❖

ಈ ಕಾಲದಲ್ಲಿ ಶ್ಲಾಘನೆ, ಪ್ರೋತ್ಸಾಹನ, ಸಹಕಾರದ್ಧಾರಗಳಿಗಿಂತ ಹೆಚ್ಚಾಗಿ ದೋಷಾರೋಪಣೆ, ದೂಷಣೆ, ಟೀಕೆ, ವಿಮರ್ಶೆಗಳೇ ಕಳಕ ಬರುತ್ತಿವೆ; ಸಮ್ಮತಿಗಿಂತ ಅಸಮ್ಮತಿಯೇ ಅಧಿಕವಾಗಿದೆ. ಬಹುಮತ ನುಸಾರ ನಿರ್ಧರಿಸಬೇಕಾದ ಪ್ರಜಾಸತ್ತಾ ತತ್ವದಂತೆ ಇಂದಿನದು ಅಸಂತುಷ್ಟಿಯ ಕಾಲವೆಂದು ಹೇಳಲಡ್ಡಿಯಿಲ್ಲ.

ಒಂದು ಆದರ್ಶ ಅಥವಾ ಗುರಿಯನ್ನು ತೋರಿಸಿ, ಆ ಮಟ್ಟಿಗೆ ಅಧಮ ಗಡಿಗೆ ಮುಟ್ಟಿಲ್ಲವೆಂಬ ಕಾರಣದಿಂದ ಯಾರನ್ನೇ ಆದರೂ ಆರೋಪಿಸುವ, ಅಥವಾ ಯಾವುದರ ಕಡೆಗಾದರೂ ಅಸಂತುಷ್ಟಿ ಪ್ರದರ್ಶಿಸುವ ಅಭ್ಯಾಸವಾಗಿರುವುದೇ ಇಂದಿನ ಸಾರ್ವತ್ರಿಕ ಅತೃಪ್ತಿಗೆ ಮುಖ್ಯ ಕಾರಣ.

ಈ ಅಪಾರ ಜಗತ್ತಿನಲ್ಲಿ ಪೂರ್ಣತೆಯ ಗಡಿ ಮುಟ್ಟಬಲ್ಲ ಮನುಷ್ಯ ಅಥವಾ ವಿಷಯವೇ ಇಲ್ಲವೆನ್ನಬಹುದು ಯಾರೂ ಪೂರ್ಣ ನಿರ್ದೋಷಿಯಾಗಿರಲಾರದು, ಯಾವುದೂ ಪರಿಪೂರ್ಣವಾಗಿರಲಾರದು, ಎಂಬ ವಾಸ್ತವಿಕತೆಯನ್ನು ದೃಷ್ಟಿಪಥದಲ್ಲಿಟ್ಟುಕೊಂಡು ನೀವು—ದೋಷಗಳ ಹೆಚ್ಚು-ಕಡಿಮೆಯನ್ನು ಧಟಿಸಿ ಸ್ವೀಕಾರ-ಧಿಕ್ಕಾರವೆಂದಾದರೆ ಇಂದಿನ ಕರು ಟೀಕೆಗಳ ಕದಡು ನಾತಾವರಣ ತಿಳಿಗೊಳ್ಳಬಹುದು; ವ್ಯವಹಾರ್ಯ ವಿಮರ್ಶೆ, ಸಾಜನೆಗಳೇ ಎಲ್ಲೆಲ್ಲೂ ಎಲ್ಲಾ ಸಂದರ್ಭಗಳಲ್ಲೂ ಮುಂದೆ ಬರಬಹುದು.

ಆದ್ದರಿಂದ, ಯಾವ ವರ್ಗದ ವಿಮರ್ಶಕರೇ ಆದರೂ, ಆದರ್ಶ ಮತ್ತು ಆಚರಣೆಗಳೊಳಗೆ, ಮಾದ ಮತ್ತು ವ್ಯವಹಾರದ ನಡುವೆ ಸ್ವಾಭಾವಿಕ ಅಂತರವಿದೆಯೆಂಬುದನ್ನು ಮುಂದಾಗಿ ತಿಳಿದುಕೊಳ್ಳಬೇಕು; ಪ್ರಪಂಚ ಅಥವಾ ಮಾನವ ಜನಾಂಗವು ಎಂತಹ ಉಚ್ಚ ಮಟ್ಟಿಕ್ಕೇರಿದರೂ ದೋಷ ಅಥವಾ ಕಲ್ಮಷ ಲವಲೇಶವೂ ಇಂದ್ರ ಪೂರ್ಣ ಶುದ್ಧ ಸ್ಥಿತಿಗೆಂದಿಗೂ ಬರಲಾರದೆಂಬುದನ್ನು ಸ್ಪಷ್ಟ ಅರಿತಿರಬೇಕು. ಆದ್ದರಿಂದ ಅಪೂರ್ಣ ವ್ಯಕ್ತಿ, ವಿಷಯ, ವಿದ್ಯಮಾನಗಳ ಕುರಿತು ವಿಧಾಯಕ ಮತ್ತು ವ್ಯವಹಾರ್ಯ ವಿಮರ್ಶೆ, ಸೂಚನೆಗಳನ್ನಷ್ಟೇ ಮುಂದಿಡಬೇಕು.

ಅಧುನಿಕ ಭಾರತದ ಅತ್ಯುತ್ಕೃಷ್ಟ ಪುತ್ರ ಮಹಾತ್ಮಾ ಗಾಂಧಿಯವರಷ್ಟು ಪರಿಪೂರ್ಣ ಹಾಗೂ ಕವಿಕ್ಕ ವ್ಯಕ್ತಿ ಬೇರೊಬ್ಬನಿಲ್ಲವೆಂಬುದು ಭಾರತೀಯರಲ್ಲಿ ಅತ್ಯಧಿಕ ಸಂಖ್ಯಾಕರ ಅಭಿಪ್ರಾಯ. ಆದರೆ ಅನ್ಯರ ತಪ್ಪುಗಳಿಗಾಗಿ ಪಾತ್ರನಲ್ಲ, ತನ್ನ ಶಿಷ್ಯರ ಹಾಗೂ ತನ್ನ ಅಶ್ರಮದ ಪಾಪಗಳಿಗಾಗಿ ಮತ್ತು ಸ್ವತಃ ತನ್ನ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗಿಯೂ ಗಾಂಧಿಜೀ ಉಪವಾಸ ಕೈಕೊಳ್ಳುವ ಸಂದರ್ಭಗಳು ಅವರ ಜೀವನ ಕಾಲದಲ್ಲೆಂದಿದ್ದವು. "ನಾನು ಹಿಮಾಲಯದಂತಹ ಪ್ರಮಾದ ಮಾಡಿದೆ" ಎಂದು ಅವರು ಬಹಿರಂಗವಾಗಿ ಪಶ್ಚಾತ್ತಾಪ ಪೂಜಿಸಿದ್ದ ನಿದರ್ಶನಗಳವೆ.

ತನ್ನ ಸ್ಥಾನದ ವಾರಿಸ್ದಾರನೆಂದು ಗಾಂಧಿಜೀ, ನೆಹರುಟ್ಟಿದ್ದ ಖರಿದಿತ ಜವಾಹರಲಾಲರು ತಾವು ಗಾಂಧೀಜಿಯ ಶಿಷ್ಯರಾಗುವ ಸ್ಪರ್ಧಾತ್ಮದಲ್ಲಿರುವೆವೇ ಹೊರತು ಶಿಷ್ಯರಾಗಿತ್ತವೆಂಬುದನ್ನು ಪೊನ್ನೆ ರಂಗೂ ನಲ್ಲಿನ ಒಪ್ಪಿದ್ದಾರೆ. ಕ್ರಿಕೆಣಪೂರ್ವಕ ಶಾಂತಿ ಮತ್ತು ಅಹಿಂಸಾಚರಣೆಯೇ ಮಹಾಶ್ಮರ ಮುಖ್ಯ ತತ್ವವಾಗಿದ್ದರೆ, ಪಂಡಿತ ನೆಹರುಗಳು ಶಿಷ್ಟ ಕೋಪಿಯಿದ್ದಾರೆ.

ಗಾಂಧೀ ತತ್ವಾನುಕರಣೆಯಿಂದಲೇ ಲೋಕಕ್ಕೆ ಶಾಂತಿ ಮತ್ತು ರಮ್ಯಾಣೆಯೆಂದು ಪದೇ ಪದೇ ಹೇಳುತ್ತಿರುವ ನೆಹರು, ವಲ್ಲಭಭಾಯಿಗಳು ಯಂತ್ರಗಳನ್ನು ಬಹಿಷ್ಕರಿಸಿ, ಖಾದಿ, ಕೈಗಾರಿಕೆಗಳನ್ನೇ ಸರ್ವಸ್ವವಾಗಿ ಮಾಡುವುದಲ್ಲಿ—ನೇಸಿ, ಪೋಲೀಸ್ ಮತ್ತು ರಕ್ಷಣಾವೆಚ್ಚಗಳನ್ನು ವಜಾ ಮಾಡಿ ಬಿಡುವುದರಲ್ಲಿ—ಶಿಕ್ಷಣ, ವೈದ್ಯಕೀಯ, ಸಂಬಳ ಮಟ್ಟ, ನಿಯಂತ್ರಣವೇ ಮೊದಲಾದ ಸಂಗತಿಗಳಲ್ಲಿ—ಸ್ವಪಕ್ಷ ತಾವು ಮತ್ತು ತಮ್ಮ ಸರಕಾರದ ಮೂಲಕ ಗಾಂಧೀ ತತ್ವಾನುಕರಣೆ ಮಾಡುತ್ತಿಲ್ಲ.

ಅಹಿಂಸಾಚಾರ್ಯ ಗಾಂಧಿಜೀ ಕೊಡಾ ಕಾಶ್ಮೀರ-ಕ್ಕೆ ಸಶಾಯುವಾಗಿ ಭಾರತದ ಸೇನೆ ಕಳುಹಿಸುವ ಕೃತ್ಯವನ್ನು ಆ ಕಾಲದಲ್ಲಿ ಆತೀವ್ರವಾದಿಸಿದ್ದರು. ಅಹಿಂಸಾಚರಣೆಯು ಉತ್ತಮ ವಿಧಾನವಾಗಿದ್ದರೂ, ಹೆದರಿ ಓಡಿಪ ಅಧರ್ಮೋಪಾಯಕ್ಕೆಂತ ಹಿಂಸಾತ್ಮಕ ಪ್ರತಿಭಟನೆಯೆ ಮುಖ್ಯವೆಂದು ಹಾದಿ ಪಸಿಯೆಂದು ಗಾಂಧಿಜೀಯೇ ಸೂಚಿಸಿದ್ದರು. ಯಂತ್ರ ವಿರೋಧಿಯಾಗಿದ್ದ ಇವರು ರೈಲು, ಕಾರ್ಖಾನೆಗಳ ಮೂಲಕ ದೇಶ ಸಂಪತ್ತಿ ಹೆಚ್ಚಿದ್ದರಲ್ಲದೆ, ಎತ್ತಿನ ಗಾಡಿಯ ಮೇಲಲ್ಲ!

ನಿಜಕ್ಕೂ ಅತ್ಯುತ್ತಮ ಹಾಗೂ ಆತ್ಯಾವಶ್ಯಕ ಬೋಧನೆಗಳನ್ನು ಕೊಡುವ ಯಾವ ಉಪನ್ಯಾಸಕನಾದರೂ, ತಾನು ಆಡಿದಂತೆ ಸ್ವತಃ ಮಾಡುತ್ತಿರುವನೇ— ಮಾಡಲು ಸಾಧ್ಯವೇ—ಎಂದು ವಿಚಾರಿಸಿದರೆ 'ಇಲ್ಲ' ಎಂಬ ಸ್ಪಷ್ಟ ಉತ್ತರ ದೊರೆಯುತ್ತಿಲ್ಲವೆ? ಹೀಗಿದ್ದರೂ ಉತ್ತಮ ವಿಷಯಗಳ ಬೋಧನೆ ಬೇಡವೆನ್ನಲಾದೀತೆ?

ಎಲ್ಲಾ ಪಕ್ಷ, ವ್ಯಕ್ತಿ, ವಿಷಯಗಳ ಲೋಪದೋಷಗಳನ್ನೂ ಎತ್ತಿ ತೋರಿಸುತ್ತಿರುವ ಪತ್ರಿಕೆಗಳು ಸ್ವತಃ ತಮ್ಮ 'ಪತ್ರಿಕಾಧರ್ಮ'ಕ್ಕೆ ಯಾವುದೇ ರೀತಿಯ ಲೋಪದೋಷಗಳಿಲ್ಲದಂತೆ ವರ್ತಿಸುತ್ತಿರುವವೆ? ಆದರೂ ಪತ್ರಿಕೆಗಳ ವಿಷಯ ಸಾರ್ವತ್ರಿಕ ವಿಮರ್ಶೆಯ ಬೇರೆ ಸಾಧನಗಳಿಲ್ಲದಿರುವಾಗ ತಮ್ಮ ಮೂಲ ಕರ್ತವ್ಯ ವ್ಯಾಗಿರುವ ಪ್ರಜಾತ ವಿಮರ್ಶೆಗಳನ್ನಾದರೂ ನಡೆಸಬಾರದೆಂದ. ಹೇಳಬಹುದೆ?

ತಮ್ಮ ಕೆಲಸಗಳಿಗೆ ಹಿರಿಯರ—ಶಿಷ್ಯರಿಗೆ ಗುರುಗಳು—ದಂಡಿಸಿ ಕಲಿಸುತ್ತಿರುವುದನ್ನಲ್ಲಾ ತಾವೇ ಕಲಿತುಕೊಂಡು ಸ್ವತಃ ಅಚರಿಸುತ್ತಿಲ್ಲವೆಂಬುದು ಬಹುವಟ್ಟಿಗೆ ಖಂಡಿತ. ಹೀಗಿದ್ದರೂ ಅಂತಹ ಹಿರಿಯರ ಮತ್ತು ಗುರುಗಳ ಈ ಕಲಿಸುವಿಕೆಯು ಕೂಡದೆಂಬುದು ನ್ಯಾಯವೆನ?

ಲೋಕದ ರಾಷ್ಟ್ರ ಪಾಳಯಗಳ ಪೈಕಿ ಕಾವು ಯಾವ ಪಕ್ಷಕ್ಕೂ ಸೇರದ ತಟಸ್ಥರಾಗಿರುವೆವೆಂಬುದೇ ಸ್ವತಂತ್ರ ಭಾರತ ಸರಕಾರದ ನಿಶ್ಚಿತ ಘೋಷಣೆ; ಆದರೆ ಇಂದಿನ ಕೊರಿಯಾ ಯುದ್ಧದಲ್ಲಿ ಕಮ್ಯೂನಿಸ್ಟ್ ಪಾಳಯಕ್ಕೆ ವಿರುದ್ಧವಾಗಿ "ದಕ್ಷಿಣ ಕೊರಿಯಾ ಸರಕಾರಕ್ಕೆ ಎಲ್ಲಾ ಸಹಾಯ ಕೊಡಬೇಕು" ಎನ್ನುವ ಸಂಯುಕ್ತ ರಾಷ್ಟ್ರ ಸಂಘದ ನಿರ್ಣಯವನ್ನು ಭಾರತವು ಅಂಗೀಕರಿಸಿಕೊಂಡಿದೆ; ಆ ಮೂಲಕ ಅಮೇರಿಕಾ ಪಾಳಯದ ಪಕ್ಕ ವಹಿಸಿದಂತಾಗಿದೆ. ಆದರೂ ರಾಷ್ಟ್ರ ಸಂಘದ ನಿಷ್ಠೆ ಮತ್ತು ಆಕ್ರಮಣ ವಿರೋಧ ಘೋಷಣೆ ವಹಿಸಿರುವ ಭಾರತವು ಹೀಗೆ ಮಾಡಿದುದು ಸಂಯುಕ್ತವೆನ?

ರಾಷ್ಟ್ರ ವಿಭಜನೆಯು ಕಾಂಗ್ರೆಸ್ ನಾಯಕರಿಗಾಗಿ ಅಪೇಕ್ಷಣೀಯವಿರಲಿಲ್ಲ; ಆದರೂ ಕೊನೆಗೆ ಬಂದ ಪರಿಸ್ಥಿತಿಯ ನೈಜ ಪರಿಣಾಮಕ್ಕೆ ತುಟ್ಟಿದು ತಪ್ಪೆಂದು ಸಮಜಾಯಿಷಿಗಳಿಂದಾದರೂ ಹೇಳಬಲ್ಲರೆ?

ಗಾಂಧೀ ತತ್ವ ಮತ್ತು ಕಾಂಗ್ರೆಸಿನ ಈ ಮೊದಲಿನ ನಿರ್ಣಯವೆಂಬ ಮೇರೆಯಿಂದ ಈಗಿನ ಕಾಂಗ್ರೆಸ್ ಮಂತ್ರಿಗಳು, ಗವರ್ನರುಗಳು ವಿದೇಶಗಳಲ್ಲಿರುವ ರಾಯಭಾರಿಗಳೇ ಮೊದಲಾದವರು ಪಡೆಯುತ್ತಿರುವ ಸಂಬಳ, ಭತ್ತೆ, ಮಂತ್ರಿತಾವುಗಳು ಹೆಚ್ಚಿಗೆ, ಎಂಬುದು ನಿರ್ವಿವಾದ. ಆದರೆ ಎಲ್ಲವೂಗಳ ಭಾರಣೆಯೂ ವಿರುವ ಈ ಕಾಲದಲ್ಲಿ ಇದೊಂದು ಅಧಿಕ್ಯವನ್ನು ಮಾತ್ರ ಖಂಡಿಸಲು ಸಾಧ್ಯವೆ?

ಆದರ್ಶವೊಂದನ್ನೇ ನೋಡುವದು ಬೇರೆ ಮೇಲ್ಪಂಕ್ತಿ ನವೀಕರಿಸುವ ಪ್ರತಿ

(ಪುಟ ೮ರಲ್ಲಿ ನೋಡಿರಿ)

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು—ವಿ. ಹೊಸಕೆರೆ ಚಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಪದಾತುಗಾರಿಕೆಯ ಮಾತುಗಳ ರೂಪದಲ್ಲಿಯೆ ಭಟ್ಟಿಯಾಗಿ ಎದ್ದು ಕಾಣುವುದು.

400 ಕ್ಕೂ ಮಿಕ್ಕ ಪುಟಗಳು ಬೆಲೆ 6—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು
ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ವಾರದ ಪ್ರಸಿದ್ಧರು

ಟ್ರುಮೇನ್-ಮೇಕರ್ಥರ್-ಬಿ. ಯುಸ್. ತಾಲಿವ್-

ಆರ್ಥಿಕ ಹಾಗೂ ಅತಿ ಮಹತ್ವದ ಸಂಘರ್ಷ, ನಮ್ಮ ವೇಶಗಳೇ ಮನುಷ್ಯನ ಯೋಗ್ಯತೆಯನ್ನು ಪರೀಕ್ಷಿಸಿ ತೋರಿಸುವ ಒರೆಗಲ್ಲುಗಳು ಯುದ್ಧ, ಪ್ರಾಣಾವಧಿ ಅಡಚಣಿಗೆ ಆರ್ಥಿಕ ಗಂಡಾಂತರಗಳಲ್ಲಿ ನಿಶ್ಚಿಕೊಂಡಾಗ ಸಂದರ್ಭೋಚಿತ ಚಾತುರ್ಯ ಮತ್ತು ಎದೆಗಾರಿಕೆ ಪ್ರದರ್ಶಿಸಲ್ಲದರೇ ಯೋಗ್ಯರನ್ನಿಸುತ್ತಾರೆ; ಅಂತಹ ಸಂಕಟಕಾಲಗಳಲ್ಲಿ ಎದೆಗೊಟ್ಟು ನಿಲ್ಲಲಾರದವರು ಲೌಕಿಕ ಕಷ್ಟನಷ್ಟಗಳಿಗೀ ಜಾಗುವಂತೆಯೇ ತಮ್ಮ ಆದುವರಿಗಿನ ವರ್ಚಸ್ಸನ್ನೂ ಕಳಕೊಳ್ಳುತ್ತಾರೆ. ಯಾವನೊಬ್ಬನ ಯೋಗ್ಯತೆಯಾದರೂ ಸರ್ವ ಸಾಮಾನ್ಯ ಸ್ಥಿತಿಗತಿಗಳಲ್ಲಿ ತಿಳಿದು ಬರುವುದಕ್ಕಿಂತ ಹೆಚ್ಚಾಗಿ ಅಸಾಮಾನ್ಯ ಕಷ್ಟ ಕಾಲದಲ್ಲೇ ಪ್ರಕಾಶಗೊಳ್ಳಬೇಕು. ನಿದರ್ಶನಕ್ಕಾಗಿ ಈಗಿನ ಕೊರಿಯ ಯುದ್ಧ ಸಂಬಂಧದ ವಿಶೇಷ ವಿದ್ಯಮಾನಗಳಿಗನುಗುಣವಾಗಿ ವರ್ತಿಸಿ, ಹೆಸರು ಗಳಿಸು

(ಇನೇ ಪುಟದಿಂದ ಮುಂದುವರಿದುದು)

ಯೊಂದು ವಿದ್ಯಮಾನದಲ್ಲೂ ಕರ್ತೃರ ಟೀಕೆ ಮತ್ತು ಅರೋಪಗಳಿಗವಕಾಶ ವಿದೆ; ಆದರೆ ಆದರ್ಶವು ಒಮ್ಮೆಗೇ ಮತ್ತು ಎಲ್ಲಾ ಸಂದರ್ಭಗಳಲ್ಲೂ ಅನ್ವಯಿಸಿ ಮಾಡಿಕೊಳ್ಳಲು ಬರುವಂತಿಲ್ಲವೆಂಬುದನ್ನು ಗಮನಿಸಿ,ವ್ಯವಹಾರ್ಯ ದೃಷ್ಟಿಯಿಂದ ನೋಡುವುದಾದರ ಸಹನೆ ಮತ್ತು ಸಮಾಧಾನಕ್ಕೆಡೆಯಿದೆ. ನಮ್ಮ ಜನ ಜೀವನದ ಒಂದು ದೊಡ್ಡ ದುರ್ದೈವ ಹೆಂಬಂತೆ, ಯಾವ ವಿಷಯದಲ್ಲೇ ಆದರೂ ಆಪಾದನಾ ಬುದ್ಧಿಯ ಪ್ರತಿಪಕ್ಷೇಯರು ಮತ್ತು ಅನುಮೋದನಾ ಬುದ್ಧಿಯ ಸ್ವಪಕ್ಷೀಯರು ಅ ಕಡೆ, ಈ ಕಡೆ ಯಿಂದ ಹರಸ್ಸರ ಎಳೆದಾಟದ ಯುದ್ಧದಲ್ಲಿರುವುದು ಕಂಡು ಬರುತ್ತಿದೆ ಹೊರತು ತ್ಯವಹಾರ್ಯ ವಿಮರ್ಶಕರು ಅಪೂರ್ವ ತಾನಿದ್ದಾರೆ.

ತಾನು ಇದಬೇಕಾಗಿದ್ದಂತೆ ಇರುವೆನೆಂಬ ಕಾಣಿಕೆಯಿಲ್ಲವೆಂಬ ಕಾರಣದಿಂದಲೇ ತಾನು ಆತ್ಮಹತ್ಯೆ ಮಾಡಿಕೊಳ್ಳಬಲ್ಲನೆ?–ಎಂಬ ಒರೆಗಲ್ಲನಲ್ಲಿಯೇ ಪ್ರತಿಯೊಬ್ಬನೂ ಯಾವುದೇ ವಿಷಯವನ್ನು ಅಥವಾ ಅನ್ಯರನ್ನು ಪರೀಕ್ಷಿಸುವುದಾದರೆ ಕೇವಲ ಉದರ್ದತ್ವ ತೋರಿಸಿ ವಿನಾಶಾತ್ಮಕ ವಿಮರ್ಶೆ ಅಥವಾ ಖಂಡನೆ ನಡೆಸುವ ಚಟವನ್ನೇ ಬಿಟ್ಟು ಹೋದೀತು. ಈ ತುಲನಾತ್ಮಕ ಬುದ್ಧಿ–ಆತ್ಮ ವಿಮರ್ಶೆ, ಮಿತ ವಿಮರ್ಶೆಯ ಅಭಿರುಚಿ–ಎಲ್ಲರಲ್ಲೂ ಮೂಡೀತೆ?



Approved form by the Gov. of Mysore Certificated by the Agent of the Govt of Mysore & Indian.

ತ್ತಿರುವವರನ್ನು ಕಾಣಬಹುದು; ಫಾರತದ ವಾಲಿಗೊದಗಿದ್ದ ಮತ್ತು ಒದಗಿರುವ ಅಸಾಮಾನ್ಯ ಸ್ಥಿತಿಗತಿಗಳ ವೇಳೆ ಕಾಲೋಚಿತ ಕಲಿತನ ಪ್ರದರ್ಶಿಸಿದ್ದ, ಪ್ರದರ್ಶಿಸುತ್ತಿರುವ, ಸಮರ್ಥರೂ ಇದ್ದಾರು, ಇದ್ದಾರೆ.

ಅಧ್ಯಕ್ಷ ಟ್ರೂಮನ್

ಕೊರಿಯಾ ಯುದ್ಧಾರಂಭಿಸಿದಂದಿನಿಂದ ಈವರೆಗಿನ ಎಂಟು ಹತ್ತು ದಿನಗಳಲ್ಲಿ ವಿಶೇಷವಾಗಿ ಕೇಳಿ ಬರುತ್ತಿರುವ ಹೆಸರು ಅಮೆರಿಕಾಧ್ಯಕ್ಷರದು ಮನಸಿಲ್ಲದಿದ್ದರೆ 'ಅಂತರ್ಯುದ್ಧ' ವೆಂದು ಕಡೆಗಣಿಸಿ ಬಿಡಬಹುದಾಗಿದ್ದ ಕೊರಿಯಾ ಯುದ್ಧಕ್ಕೆ ಟೋಕ್ಯೋ ಪ್ರಾಮುಖ್ಯತೆಯನ್ನು ದೊರಕಿಸಿ ಕೊಟ್ಟವರೆಂದರೆ ನಿಜಕ್ಕೂ ಟ್ರುಮೇನರು. ಈಗ ಕೊರಿಯದಲ್ಲಿ ನಡೆದಿರುವಂತೆಯೇ ಈ ಮೊದಲು ಸ್ಪೈನ್, ಗ್ರೀಸ್ ಮೊದಲಾದ ದೇಶಗಳಲ್ಲಿ ಯೂನೈಸ್ಡ್‌ಳೀಯ ದ್ವಿಪಕ್ಷಗಳೊಳಗೆ ಹೋರಾಟಗಳಾಗಿದ್ದವ್ವು;ಆ ಹೋರಾಟ ನಿರತ ಪಕ್ಷಗಳ ಪೈಕಿಂದಕ್ಕೆ ರಕ್ಷ ಮತ್ತೊಂದಕ್ಕೆ ಅನುಂಕರಣೀಯವ್ಯಗಳು ಸಹಾಯಗಳನ್ನು ಸಲ್ಲಿಸಿದ್ದುವು; ಜೈನಾಯುದ್ಧದಲ್ಲಿ ಕೂಡಾ ಅಲ್ಲಿಯ ಕಮ್ಯೂನಿಸ್ಟರಿಗೆ ರಕ್ಷದ ಪ್ರತ್ಯಕ್ಷ ಬೆಂಬಲವಿದ್ದಾಗ್ಗೆ, ಚಿಯಾಂಗ್‌ಕೈಶೇಕರಿಗೆ ಅಮೆರಿಕಾನರು ಸಾಧ್ಯವಿದ್ದಷ್ಟು ಸಹಾಯ ಸಲ್ಲಿಸಿದ್ದರೆಂಬುದು ಖಂಡಿತ. ಆದರೆ ಇವು ಗಳಲ್ಲಾವುದೂ, ಇಂದಿನ ಕೊರಿಯಾ ಯುದ್ಧದಂತೆ ಮೂರನೇ ಜಾಗತಿಕ ಮಹಾ ಯುದ್ಧದ ಮೂಲಭೂತಗಬಹುದೆಂಬ ಭೀತಿಕಾರಕಾರಕ್ಕೆ ಬೆಳೆದುದಿಲ್ಲ. ಇನ್ನೊಂದಿಗೂ ರಕ್ಷದ ವರ್ಚಸ್ಸು ವಿಸ್ತರಣಕ್ಕೆಡೆ ಕೊಡಬಾರದೆಂಬ ದೃಢ ಸಂಕಲ್ಪದಿಂದಲೇ ಅಮೆರಿಕಾಧ್ಯಕ್ಷ ಟ್ರುಮೇನರು ಕೊರಿಯ ಸಮರವನ್ನು ಜಗ್ಗೊಂದು ಗಂಭೀರಗೊಳಿಸಿದರೆನ್ನಬಹುದು. ಅಮೆರಿಕಾಧ್ಯಕ್ಷರು ನೇರವಾಗಿ ಮಿಲಿಟರಿಯಂದಲೇ ಆರಿಸಲ್ಪಡುವವರು–ಬೇರೆಯ ಪ್ರಜಾಸತ್ತಾ ರಾಷ್ಟ್ರದ ಅಧ್ಯಕ್ಷನಿಗೂ ಇದಿಂತಹ ಸ್ವೇಚ್ಛಾವಿಶೇಷಾಧಿಕಾರವಿರುವ ; ಈ ಅತ್ಯಧಿಕಾರ ಬಲದಿಂದ ಯುದ್ಧದಂತಹ ವಿಶೇಷ ಕಾಲಗಳಲ್ಲಿ, ಅವರು ಸರ್ವ ಸಾಮಾನ್ಯ ನಾಗಿ ಸರ್ವಾಧಿಕಾರಿಯಂತೆ ವರ್ತಿಸಬಲ್ಲ

ವರಾಗಿದ್ದಾರೆ; ಮೇಲಾಗಿ ಅಮೆರಿಕದ ರಾಷ್ಟ್ರಾಧ್ಯಕ್ಷನೇ ರಾಷ್ಟ್ರದ ಬಲಗಳ ಮುಖ್ಯ ಸೇನಾನಿಯಾಗಿರುವುದರಿಂದ ಸಮರ ಸಂದರ್ಭಗಳಲ್ಲಿ ಅವರ ಅಧಿಕಾರವು ಸರ್ವವ್ಯಾಪಿ ಮತ್ತು ಸರ್ವಾನರ್ಗಳವಿರುತ್ತದೆ. ಕೊರಿಯಾ ಯುದ್ಧ ಸ್ಫೋಟಗೊಳ್ಳುವಾದ ಅಧ್ಯಕ್ಷ ಟ್ರೂಮನರು ವಾರದ ವಿಶ್ರಾಂತಿ ಸುಖವನುಭವಿಸಲು ರಾಜಧಾನಿ ಬಿಟ್ಟು ಹೊರಗೆ ಹೋಗಿದ್ದರು. ಸುದ್ದಿ ಮುಟ್ಟಿದೊಡನೆಯೇ ತನ್ನ ರಜೆಯನ್ನು ರದ್ದುಪಡಿಸಿ ಸ್ವಸ್ಥಾನ ಸೇರಿ, ಅವಸರವ ಸರದಿಂದ ಅನಂತರ ಮಾಡಿದ ಮಹತ್ವದ ನಿರ್ಣಯಗಳು ಸಂದರ್ಭದ ಪ್ರಾಮುಖ್ಯತೆಯಂತೆಯೇ ಟ್ರುಮೇನರ ಯೋಗ್ಯತೆಯನ್ನೂ ತೋರಿಸುವಂತಹವಿವೆ. ಒಂದೆಡೆ ಸಂಯುಕ್ತ ರಾಷ್ಟ್ರ ಸಂಘದ ತಮ್ಮ ಪ್ರತಿನಿಧಿಗಳಿಗೆ ಕಾರ್ಯನಿರ್ದೇಶ ಮಾಡಿ, ಮತ್ತೊಂದೆಡೆ ತನ್ನ ಸೇನಾನಿವಂಡಲಿ, ತಜ್ಞ ಸಮಿತಿ ಹಾಗೂ ಸಂಬಂಧಪಟ್ಟ ಇತರ ರಾಷ್ಟ್ರಗಳ ರಾಯಭಾರಿಗಳೊಡನೆ ಸಾಧ್ಯ ವಿಮರ್ಶೆ ನಡೆಸಿ, ಕೂಡಲೇ ಅದೃಷ್ಟ ನಿರ್ಮಾಣಕ ಆಜ್ಞೆಗಳನ್ನು ಒಂದರ ಮೇಲೊಂದರಂತೆ ದೊರಡಿಸಿಬಿಟ್ಟರು; ದಕ್ಷಿಣ ಕೊರಿಯಕ್ಕೆ ನಾವೆ, ವಿಮಾನಗಳ ಬೆಂಬಲ—ಭೂಸೇನೆಗಳ ಸಹಾಯ-ಉತ್ತರ ಕೊರಿಯದ ಮೇಲೆ ಆಕಾಶ ಧಾಳಿ ನಡೆಸಲು ಸವ್ಯತಿ-ಕೆಂಪು ಚೈನದ ಮೇಲಿನ ಧಾಳಿಗಳನ್ನು ನಿಶ್ಚಿಸುವಂತೆ ಚಿಯಾಂಗ್ ಕೈಶೇಕರಿಗೆ ಸಲಹೆಯಿತ್ತು ಚಿಯಾಂಗರಿಯವ ಫೋರ್ಮೋಸಾ ದ್ವೀಪ ರಕ್ಷಣೆಯ ಹೊಣೆ ಅಶ್ವಾಸನೆ- ಫ್ರಾನ್ಸ್ ಮತ್ತು ಇಂಡೋಚೈನಗಳಿಗೂ ಸೈನಾ ಸಹಾಯ-ಇತ್ಯಾದಿ ಅತ್ಯಂತ ಪ್ರಾಮುಖ್ಯ ಆಜ್ಞೆಗಳನ್ನು ಒಂದೇ ದಿವನೆ ಜಾರಿ ಮಾಡಿದುದಲ್ಲದೆ, ಈ ಆಜ್ಞೆಗಳನ್ವಯ ಎಲ್ಲೆಲ್ಲಿಗೆ ವಿಮಾನ, ನಾವೆ, ಸೇನೆಗಳು ಹೋಗಬೇಕೋ ಅಲ್ಲಲ್ಲಿಗೆ ಕೂಡಲೇ ಅವುಗಳನ್ನು ರವಾನಿಸಹತ್ತಿದ್ದಾರೆ. ದ್ವಿತೀಯ ಜಾಗತಿಕ ಯುದ್ಧದ ಅದಿಭಾಗದಲ್ಲಿ ವಿಶ್ವರಾಷ್ಟ್ರಗಳವರ, ಪರ್ಲ್ ಹಾರ್ಬರಿನ ಧಾಳಿಯ ವೇಳೆ ಸ್ವತಃಅಮೆರಿಕವು ತೋರಿಸಿದ್ದ ಅಜಾಗರೂಕತೆ, ಬಲಸ್ಯವಾವುದನ್ನೂ ತೋರಿಸದೆ ಕೊರಿಯಾ ಯುದ್ಧ ಸಂಬಂಧ ವಾಗಿ ಅಧ್ಯಕ್ಷ ಟ್ರುಮೇನರು ಮಿಂಚುವೇಗದಿಂದ ಆದ್ಯಶ್ವಾಯೀ ನಿರ್ಧಾರಗಳನ್ನು ಮಾಡಿದ್ದಾರೆ. ಈ ಮೂಲಕ ಅವರ ಆಂತರ್ಯ ಮತ್ತು ಯೋಗ್ಯತೆಗಳು ಸ್ಪಷ್ಟ ಪ್ರಕಾಶಗೊಂಡಿವೆ.

ಜನರಲ್ ಮ್ಯಾಕರ್ಥರ್

ಕೊರಿಯಾ ಯುದ್ಧ ದೆಸೆಯಿಂದ ಲೋಕದ ಲಕ್ಷ್ಯವನ್ನು ತನ್ನೆಡೆಗೆ ಸೆಳೆದುಕೊಂಡ ಎರಡನೇ ಮುಖ್ಯವ್ಯಕ್ತಿ ಜನರಲ್ ಮ್ಯಾಕರ್ಥರ್. ಇವರು ದ್ವಿತೀಯ ಜಾಗತಿಕ ಯುದ್ಧದಲ್ಲಿ ಪ್ರಸಿದ್ಧಿಗೆ ಬಂದಿದ್ದ ಅಮೆರಿಕದ ಸೇನಾನಿಗಳಲ್ಲಿ ಗಣ್ಯರು; ಪ್ರಾಯಶಃ: ಜನರಲ್ ಈಸೆನೋವರರ ನಂತರದ ಪ್ರಸಿದ್ಧ ಹೆಸರೇ ಜನರಲ್ ಮೇಕರ್ಥರರದು. ಯುದ್ಧಾನಂತರವಂತೂ ಜಪಾನಿನ ಏಕ್ಯಮಿತ ಸೇನಾನಿ ಮತ್ತು ಅಲ್ಲಿಯ ಸಾರ್ವಭೌಮಾಧಿಕಾರಿಯಾಗಿ ಜನರಲ್ ಮೇಕರ್ಥರರು ಪ್ರಕಂಡ ಬಂದಷ್ಟು ಬೇರಾವ ಅಮೆರಿಕದ ಸೇನಾಧಿಕಾರಿಯೂ ತೋರಿಬರುತ್ತಿಲ್ಲ. ಕೊರಿಯಾ ಯುದ್ಧಾರಂಭಿಸಿದ್ದೇ ತಡ, ಮೇಕರ್ಥರರು ಪ್ರಸಂಗಾವಧಾನತೆ ಮತ್ತು ಚುರುಕು ಜಾಣಕತ್ವವು ಅನಿರೀಕ್ಷಿತ ಸರಿಸ್ಪರ್ಧಿಗಳಾಗಿತ್ತು. ದಕ್ಷಿಣ ಕೊರಿಯ ಕ್ಕೆ ಅಮೆರಿಕವು ಕೊಡುವ ಸಹಾಯದ ಮತ್ತು ದಕ್ಷಿಣ ಕೊರಿಯಾ ಸಂಬಂಧದಲ್ಲಿ ಅಮೆರಿಕಕ್ಕೆ ಕೊಡುವ ಸಲಹೆಯು ಹೆಬ್ಬಾಗಿಲೇ ಜನರಲ್ ಮೇಕರ್ಥರ್. ಈ ದ್ವಾರ ಮೂಲಕ ಅ ಅಮೆರಿಕ ಧ್ಯಾಗಳಿಂದರೋ, ಆಶ್ಚರ್ಯಾನಂದದಾಯಕ ಸ್ಪಷ್ಟ ಗತಿಯಲ್ಲಾಗುತ್ತಿವೆ. ಉತ್ತರ ಕೊರಿಯದ ಕಮ್ಯೂನಿಸ್ಟ್ ಸೈನಿಗಳ ಧಾಳಿಯಾರಂಭಿಸಿದ ವಂಡನೆಗೆ ದ. ಕೊರಿಯದರಾಜಧಾನಿಗೆನ್ನುಗ್ಗಿದ್ದವು. ಧಾಳಿಗಾರರಿಗೇನೇ ಅದಿಯಂದೀವರೆಗೂ ಕೊರಿಯಾ ಯುದ್ಧದಲ್ಲಿ ಅನುಕೂಲ ಅಂಶಕಟ್ಟುಗಳು ದೊರಕಿವೆ. ತಾವ್ಯ ಬೆಂಬಲವಾಗಿ ನಿಂತ ದ. ಕೊರಿಯಾದ ವಾಲಿನ ಈ ಪ್ರತಿಕೂಲ ವಿದ್ಯಮಾನದ ಮುಖವನ್ನು ಎರಡಾಗಿಸಿ ಬಿಡಬೇಕೆಂದು ಜನರಲ್ ಮೇಕರ್ಥರರು ಸ್ವತಃ ಕೊರಿಯಕ್ಕೆ ಹಾರಿದ್ದರು. ಹಾಗೆ ಹಾರುವಾಗ, ಮೈಗಾವಲು ಪಡೆಯನ್ನಾಗಲೀ, ಕೊರಿಯಾದಲ್ಲಿ ತಮಗೆ ಮಾರ್ಗ ತೋರಿಸುವಂಥವರನ್ನಾಗಲೀ ಅವರು ಕಟ್ಟಿಕೊಂಡಿರಲಿಲ್ಲ. ಕೊರಿಯದ ರಣರಂಗಗಳ ಮೇಲೆ ಕೂಡಾ ಜ. ಮೇಕರ್ಥರರು ಸೇನಾನಿ ಸಹಜ ಮುಂಜಾಗರೂಕತೆ ಅಥವಾ ಸಂಶ್ಲೇಷೆ ಯಾವುದೂ ಇಲ್ಲದೆ ಏಕಾಕಿಯಾಗಿ ಹಾರಾಡುವ ಜಪಾಯಂತ ಸಾಹಸ ಪ್ರದರ್ಶಿಸಿದ್ದರೆಂದು ತಿಳಿದು ಬರುತ್ತದೆ. ಅಸ್ಯಾದಲ್ಲಿ ಲಕ್ಷ್ಯದಿರಿ ಹೊಡೆವ ಈ ದ್ಯೂತದ ಜಯಾಪಜಯವನ್ನವಲಂಬಿಸಿ ಅಮೆರಿಕದ ವರ್ಚಸ್ಸು ಮತ್ತು ಭವಿಷ್ಯವಿದೆ. ಹೀಗೆ ತಮ್ಮಂಥವ್ಯದ ಅದ್ಯವ್ಯಸ್ಸನ್ನೇ ಪಣಕ್ಕೊಡ್ಡುವವರೀ ಹೊಗ ಕೊರಿಯದ ಸ್ಥಿತಿಗತಿ ಹೇಗಿದೆ, ಎಂಬಿವನ್ನು ಪ್ರತ್ಯಕ್ಷ ಪರಿಶೀಲಿಸಿಕೊಳ್ಳಬೇಕಾಗಿದ್ದಿತ್ತೆಂಥಹ ಸರೀಕ್ಷಾ ಕಾರ್ಯವು ಅವಾಯಪೂರ್ಣವಾಗಿದ್ದರೂ ಜನರಲ್

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.
Advocate & President, District Board, S. Kanara.
CHAIRMAN

—ಕೊರಿಯಾ ಕಮಿಶನ್-ಕೊರಿಯಾ ನ್ಯಾಯಕರು-ರಸ್ಸೆಲ್.

ಮೇಶರ್ಧಾರರು ಎದೆಗಾರಿಕೆಯಿಂದ ಚಿದನ್ನು ನಿರ್ವಹಿಸಿದ್ದರು. ಅಗತ್ಯವುಳ್ಳ ಆಜ್ಞೆ ಬರುವ ವರೆಗೆ ಶಾಂತರಿ, ಕಾಲ ಕೈಸೀಮವು ದೆಂದು ತೋರಿದೊಡನೆ ಜನರಲ್ ಮ್ಯಾಕರ್ಥರರು ಹೇಳಿದೆ ಕೇಳದೆ ಉತ್ತರ ಕೊರಿಯದ ಮೇಲೆ ವಿಮಾನ ಧಾಳಿ ನಡೆಸಿದ್ದರು; ಕೊನೆಗಾಕೃತ್ಯಕ್ಕೆ ಅಧ್ಯಕ್ಷ ಟ್ರುಮೇನರಿಂದ ದೊರೆತ ಅನುಮೋದನೆಯೇ ಆ ಸಂಬಂಧದ ಆಜ್ಞೆಯ ಸ್ಥಾನ ಪಡೆಯ ಬೇಕಾಯಿತು. ಅಂತೂ ದಕ್ಷಿಣ ಕೊರಿಯದ ಬೆಂಗೋಲಾಗಿರುವ ಅಮೆರಿಕದ ಪ್ರತಿನಿಧಿಯಾಗಿ ಜನರಲ್ ಮೇಕರ್ಥರರು ಅತಿ ಹೆಚ್ಚಿನ ಧೈರ್ಯ, ಸಾಹಸ, ಚಾತುರ್ಯಗಳನ್ನು ಪ್ರದರ್ಶಿಸಿ ಕೊಂಡಾಡಲ್ಪಡುತಿದ್ದಾರೆ. ಯುದ್ಧನಿರತ ದ ಕೊರಿಯದ ಜೀವಕಳೆಯೇ ಅವರಾಗಿ ಕಾಣ ತಿದ್ದಾರೆ.

ಸರ್. ಬಿ. ಎನ್. ರಾವ್

ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲಿನ ಈ ತಿಂಗಳ ಅಧ್ಯಕ್ಷ ಪದವು ಆ ಸಂಘದ ಭಾರತ ಪ್ರತಿನಿಧಿ ಮಂಡಲಿಯ ನಾಯಕ ರಾಗೂ ಶಾಶ್ವತ ಸದಸ್ಯನಿರುವ ಸರ್. ಬೆನಗಲ್ ನರಸಿಂಗರಾಯರಿಗೆ ಕೊರಿಯಾ ಯುದ್ಧ ವ್ಯಾಪಾರ ಣದ ದಿನೆಯಿಂದ ವಿಶೇಷ ಪ್ರಾಶಸ್ತ್ಯಕ್ಕೆ ಬಂದಿದ್ದಾರೆ. ಜೂನ್ ೨೭ರಂದಲ್ಲಿ ಅ. ಕೊರಿಯವು ದ. ಕೊರಿಯದ ಮೇಲೆ ಆಕ್ರಮಣ ವಾರಂಭಿಸಿದೊಡನೆಯೇ ಆ ಸಂಬಂಧದ ಪರ್ಯಾಲೋಚನೆಗಾಗಿ ಭದ್ರತಾ ಕೌನ್ಸಿಲಿನ ಅವಸರದ ಸಭೆ ಕರೆಯಿಸಿಂತೆ ಪರ್ಯಾಯಾನುಗುಣ ಅಧ್ಯಕ್ಷ ಶ್ರೀ ಬಿ. ಎನ್. ರಾಯರಿಗೆ ವಿಜ್ಞಾಪನೆ ಬಂದೊಡನೆ ಅವರು ಅಂದೇ ಸಭೆ ಸೇರಿಸಲು ಶಕ್ತರಾದರು. ಭದ್ರತಾ ಕೌನ್ಸಿಲು ಎಂತಹ ಅಲಸ್ಯದ ಕೇಂದ್ರವೆಂಬುದನ್ನು ಪೆಲಸ್ತೈನ್, ಕಾಶ್ಮೀರದಂತಹ ವಿವಾದಗಳ ತೀರ್ಮಾನದ ಸಂಬಂಧವಾಗಿ ಅದು ಮಾಡಿದ್ದ ಕಾಲಹರಣದಿಂದಲೇ ಅರಿಯ ಬಹುದು; ಅಧ್ಯಕ್ಷ ನರಸಿಂಗರಾಯರ ಸಂದರ್ಭೋಚಿತ ಚುರುಕುತನವಲ್ಲವಾಗಿದ್ದರೆ. ಈ ಬಾರಿಯ ಅವಸರದ ಸಭೆ ಯಾದರೂ, ಅದರ ಕಾರಣ ಹುಟ್ಟಿದ ದಿನವೇ ಕೂಡದೇ ಕೆಂದಿರಲಿಲ್ಲ. ಸರ್. ನರಸಿಂಗ ರಾಯರು ಭದ್ರತಾ ಕೌನ್ಸಿಲಿನ ಸಭೆ ಕರೆಯುವುದರಲ್ಲೂ ಅದರ ಕಾರ್ಯಕಲಾಪಗಳನ್ನು ನಿರ್ವಹಿಸುವುದರಲ್ಲೂ ಪ್ರದರ್ಶಿಸಿದ ಜಾಣತನವು ಕೌನ್ಸಿಲ್ ಸದಸ್ಯರೆಲ್ಲರ, ಅದರಲ್ಲೂ ರಾಷ್ಟ್ರೀಯ ಚೈನದ ಪ್ರತಿನಿಧಿ ಡಾ| ಟ್ಸೆಯಾಂಗರ ವಿಶೇಷ ಶ್ಲಾಘನೆಗೆ ಗಳಿಸಿತು. ಪ್ರಥಮ ಸಭೆಯಲ್ಲಿ, ಕೊರಿಯದಲ್ಲಿ ಗಂಡು ಹಂಠಿತ ನಿಲ್ಲಬೇಕೆಂದೂ ಉತ್ತರ ಕೊರಿಯದ ಸೇನೆಗಳು ೩೮ನೇ ಮಧ್ಯಾಂತರ ರೇಖೆಯ ಹಿಂಗಡೆಗೆ ಸರಿಯ ಬೇಕೆಂದೂ ನ್ಯಾಯಬದ್ಧ ತೀರ್ಮಾನ ವಾಯಿತು ಆದರೀ ತೀರ್ಮಾನ ಜಾರಿಗೆ ಬರಲಿಲ್ಲವೆಂದಾದೊಡನೆಯೇ ತಾ. ೨೮ ರಲ್ಲೇ ಭದ್ರತಾ ಕೌನ್ಸಿಲಿನ ದ್ವಿತೀಯ ಸಭೆ ಸೇರಿ ದ್ವಿತೀಯ ನಿರ್ಣಯವಾಯಿತು.. ಉತ್ತರ ಕೊರಿಯದ ವರ್ತನೆಯು ಶಾಂತಿ ದ್ರೋಹವೆಂದು ತೀರ್ಮಾನಿಸಿ, ಅದರ ಧಾಳಿಯನ್ನು ಹಿಮ್ಮೆಟ್ಟಿಸುವುದಕ್ಕಾಗಿ ದಕ್ಷಿಣ ಕೊರಿಯಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳೆಲ್ಲವೂ ಪೂರ್ಣ ಬೆಂಬಲ ವ್ಯಕ್ತಪಡಿಸಬೇಕೆಂಬುದೇ ಆ ನಿರ್ಣಯದ ಸಾರ. ಎರಡು ನಿರ್ಣಯಗಳನ್ನೂ, ಭದ್ರತಾ ಕೌನ್ಸಿಲಿನ ಮುಂದೆ ತಂದಿದ್ದುದು ಅಮೆರಿಕವಾದರೂ, ಅವುಗಳ ಪರ್ಯಾಲೋಚನೆಯು ಸಂದರ್ಭೋಚಿತ ಅವಸರದಿಂದ ಮತ್ತು ಕ್ರಮಬದ್ಧವಾಗಿ ನಡೆಯುವಂತೆ ಚುಕ್ಕಾಣಿ ತಿರುಗಿಸಿದ್ದವನು ಅಧ್ಯಕ್ಷ ಸರ್. ಬೆನಗಲ್ ನರಸಿಂಗರಾಯರೇ. ಕೌನ್ಸಿಲು ದ್ವಿತೀಯ ನಿರ್ಧಾರವನ್ನು ಮಾಡುವ ಹೊತ್ತಿಗೆ ಭಾರತ ಸರಕಾರದ ಅಭಿಸ್ರಾಯವು ತಿಳಿದು ಬಾರದ ದೆಸೆಯಿಂದ ಭಾರತದ ಪ್ರತಿನಿಧಿಗಳು ಈ ನಿರ್ಣಯದ್ವಯಗಳ ಮೇಲೆ ಮತದಾನ ಮಾಡದೆ ತಟಸ್ಥರಾಗಿದ್ದರು. ಆದರೆ ಈಗ ಭಾರತ ಸರಕಾರವು ಭದ್ರತಾ ಕೌನ್ಸಿಲಿನ ಕೊರಿಯಾ ಸಂಬಂಧದ ಸೇನಾ ಸಹಾಯ ನಿರ್ಣಯಕ್ಕೆ ತನ್ನ ಒಪ್ಪಿಗೆಯಿತ್ತಿದೆ. ಭದ್ರತಾ ಕೌನ್ಸಿಲಿನ ನಿರ್ಣಯ ವಿನ್ಯಹಇಮೆರಿಕದಂತಹ ಅದರ ಸದಸ್ಯ ರಾಷ್ಟ್ರವು ಸ್ವೇಚ್ಛೆಯಿಂದ ಯುದ್ಧ ಸಹಾಯ ಕೊಡುತ್ತಿದ್ದರೆ, ಅದು ಅಕ್ರಮ ವರ್ತನೆಯಾಗುತ್ತಿತ್ತು. ಭದ್ರತಾ ಕೌನ್ಸಿಲಿನ ಒಂದೊಂದು ನಿರ್ಣಯವಾಗಲು ಎಷ್ಟೆರಡೇ ದಿನ ತಡವಾಗುತ್ತಾ ಹೋಗುತ್ತಿದ್ದರೂ ಕೊರಿಯಾದ ಪರಿಸ್ಥಿತಿ ಕೈತಪ್ಪುತಂತಾಗುತಿತ್ತು; ಸರ್ ಬಿ. ಎನ್. ರಾಯರ ಸ್ವಚ್ಛ ಮತ್ತು ಅವಸರದ ಕಾರ್ಯಜಾಲಕತ್ವವಿರದ ಹೋಗುತ್ತಿದ್ದರೆ ಕೌನ್ಸಿಲು ನಿರ್ಣಯಗಳು ನಿಧಾನವಾಗಿ ಆಗುತಿದ್ದುವೇನೊ! ಆದ್ದರಿಂದ ಕೊರಿಯಾ ಸಂಬಂಧದ ವ್ಯವಹಾರಗಳಲ್ಲಿ ಗಣ್ಯ ಮತ್ತು ಮಾನ್ಯ ಪಾತ್ರ ವಹಿಸಿದ ಸರ್. ನರಸಿಂಗರು ಯಾರು ಮೆರಿಗಿಂತ ಈಗ ಹೆಚ್ಚು ಪ್ರಕಾಶಮಾನರಾಗಿದ್ದಾರೆ. ಆವರ ಹೆಮ್ಮೆಯ ಕನ್ನಡಿಗರಿರುವುದರಿಂದ ಕನ್ನಡಿಗರು ಅಭಿಮಾನಪಡ ಬಹುದಾದ ಸಂಗತಿಯದು.

ಕೊರಿಯಾ ಕಮಿಶನ್

ರಶ್ಯ-ಅಮೆರಿಕಗಳ ಘರ್ಷಣೆಯ ಅಖಾಯ ನೆಲೆಗಳ ವೈಕೆ ಕೊರಿಯವೂ ಒಂದೆಂದು ಅಲ್ಲಿಯ ಭೌಗೋಲಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಮೇರಿಂದ ಮೊದಲೇ ನಿರ್ಧರಿಸಲ್ಪಟ್ಟಿದ್ದಿತು. ಕ್ವರಕ್ಷಣೆಗಾಗಿ ಅಮೆರಿಕದ ಶಸ್ತ್ರಾಸ್ತ್ರಗಳ ಸಹಾಯಾವಶ್ಯಕತೆಯುಂಟಾಗುವ ಕ್ಷೇತ್ರಗಳಲ್ಲಿ ಕೊರಿಯವೂ ಒಂದೆಂದು ಎಷ್ಟೋ ಕಾಲ ಕ್ಕೆ ಮೊದಲೇ ಗಣಿಸಲ್ಪಟ್ಟಿದ್ದು, "ಕೂಡಲೇ ಸಹಾಯ ಹೋಗದಿದ್ದರೆ ಇನ್ನು ಮೂರು ತಿಂಗಳಾಗಿ ಕೊರಿಯ ದ. ಕೊರಿಯ ಪತನಗೊಳ್ಳಲಿದೆ" ಎಂಬ ಬಹಿರಂಗ ಎಚ್ಚರಿಕೆ ಅಮೆರಿಕದ ಹೊಣೆಗಾರ ವ್ಯಕ್ತಿಗಳಿಂದ ಸುಮಾರು ಒಂದು ತಿಂಗಳ ಮೊದಲೇ ಬಂದಿದ್ದಿತು. ಆಲ್ಲಿ ನಡೆಯುತ್ತಿದ್ದ ಗಡಿ ಘರ್ಷಣೆಗಳ ದೆಸೆಯಿಂದ, ಅಲ್ಲಿಯ ಪರಿಸ್ಥಿತಿಯನ್ನು ಸ್ವತ್ಯಕ್ಷ ಪರೀಕ್ಷಿಸಿ ವರದಿ ಯೊಪ್ಪಿಸಬೇಕೆಂದು ಸಂಯುಕ್ತ ರಾಷ್ಟ್ರ ಸಂಘವು ಒಂದು 'ಕೊರಿಯಾ ಕಮಿಶನ್'ನ್ನು ಈ ಮೊದಲೇ ನೇಮಿಸಿದ್ದು, ಯುದ್ಧ ಸ್ಫೋಟವಾಗುವಾಗ ಈ ಕಮಿಶನಿನ ಸದಸ್ಯರು ದಕ್ಷಿಣ ಕೊರಿಯದ ರಾಜಧಾನಿ ಸೆವೋಲಿನಲ್ಲೇ ಇದ್ದರು. ಭಾರತದ ಸಮೇತ ೭ ರಾಷ್ಟ್ರಗಳ 12 ಮಂದಿ ಸದಸ್ಯರು ಈ ಸಮಿತಿಯಲ್ಲಿದ್ದಾರೆ. ಯುದ್ಧಾರಂಭದ ವೇಳೆ ಸ್ವಲ್ಪ ಹೊತ್ತಿದ್ದ ನಿಷ್ಪಕ್ಷಪಾತಿ ತಟಸ್ಥ ರಾಷ್ಟ್ರಗಳ ಈ ಕಮಿಶನು ಕೊಟ್ಟ ವಾರ್ತೆಗಳನ್ನೇ ಕೊರಿಯಾ ಸಂಬಂಧದ ಮಿಕ್ಕೆಲ್ಲಾ ಸುದ್ದಿಗಳಿಗಿಂತಲೂ ಹೆಚ್ಚಾಗಿ ಲೋಕ ನಂಬಿದೆ. ಜೈನವೊಂದನ್ನು ಬಿಟ್ಟರೆ, ಮಿಕ್ಕೆಲ್ಲಾ ರಾಷ್ಟ್ರಗಳಿಗಿಂತಲೂ ಕೊರಿಯಕ್ಕೆ ಸಮೀಪವಿರುವ ಭಾರತದ ಸರಕಾರವು, ಸತ್ಯಶೋಧನೆ ಮತ್ತು ಸಂಗತಿಗಳ ಸೂಕ್ಷ್ಮ ಪರೀಕ್ಷಣೆ ಮಾಡಿಕೊಳ್ಳದೆ ಅವಸರದಿಂದ ಆ ಸಂಬಂಧದ ಯಾವ ನಿರ್ಣಯವನ್ನೂ ಮಾಡಲಾರದ ಸ್ಥಿತಿಯಲ್ಲಿದ್ದಿತು. ಭಾರತ ಸರಕಾರವು ಭದ್ರತಾ ಕೌನ್ಸಿಲಿನ ದ್ವಿತೀಯ ನಿರ್ಣಯಕ್ಕೆ ಬೆಂಬಲ ಕೊಟ್ಟುದು ತನ್ನ ಪ್ರತಿನಿಧಿಯೂ ಇರುವ ಕೊರಿಯಾ ಕಮಿಶನಿನ ಅಭಿಸ್ರಾಯವನ್ನು ಕೇಳಿಕೊಂಡ ನಂತರವೇ. ಉತ್ತರ ಕೊರಿಯವು ತಮ್ಮ ಭೂಮಿಯ ಮೇಲೆ ಅಕ್ರಮ ಪ್ರವೇಶ ಮಾಡಿದ್ದರಿಂದ ತಾವು ರಕ್ಷಣೆಯುದ್ಧ ಕೊಡಬೇಕಾಯಿತೆಂಬ ದಕ್ಷಿಣ ಕೊರಿಯದ ವಾದವನ್ನೇ 'ದಕ್ಷಿಣ ಕೊರಿಯವು ನಮ್ಮ ಮೇಲೆ ಅಕ್ರಮ ಆಕ್ರಮಣ—' ಎಂಬ ವಿದ್ರೂಪಡಿಯೊಂದಿಗೆ ಉತ್ತರ ಕೊರಿಯದ ಸಂಕಾರವೂ ಮೇಲಿಂದಮೇಲೆ ಪರಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಭಾರತದಂತಹ ನಿಷ್ಪಕ್ಷಪಾತಿ ರಾಷ್ಟ್ರಕ್ಕೆ ಸತ್ಯ ಸಂಗತಿಯನ್ನು ಅರಿತುಕೊಳ್ಳಲು ಕಷ್ಟವಾಗುತಿತ್ತು. ಆ ಕೆಲಸವು ಕೊರಿಯಾ ಕಮಿಶನಿನ ಮೂಲಕ ಮುಂದಾಗಿ ನಡೆದು ಹೋದುದರಿಂದ ಈ ಕಮಿಶನು ಕೀರ್ತಿಗೆ ಪಾತ್ರವಾಯಿತು; ಮಾತ್ರವಲ್ಲ, ಯುದ್ಧದ ಮೊದಲನೇ, ಎರಡನೇ ದಿನಗಳಲ್ಲಿ ಪದ್ಧತಿ ಪ್ರಕಾರ ದ. ಕೊರಿಯವು ವಿಜಯ ಡಂಗುರ ಬಾರಿಸಹತ್ತಿದ್ದರೂ, ಅದರ ಪರಿಸ್ಥಿತಿ ತೀರಾ ವಿಷಮವಾಗಿದೆ ಎಂಬ ಸ್ಪಷ್ಟ ಎಚ್ಚರಿಕೆ ಕೊಟ್ಟು ಲೋಕದ ಕಣ್ಣನ್ನು ತೆರೆಯಿಸಿದವರೂ ಈ ಕಮಿಶನಿನವರೇ. ಈಗ ಇದರ ಸದಸ್ಯರೆಲ್ಲರೂ ಕೊರಿಯಾದಿಂದ ಜಾರಿ, ಜಪಾನಿನ ರಾಜಧಾನಿ ಟೋಕಿಯೋದಲ್ಲಿ ಠೇರೆ ಹೂಡಿದಿದ್ದಾರೆ.

ಕೊರಿಯಾ ಯುದ್ಧಖ್ಯಾತರು

ಕೊರಿಯಾ ಯುದ್ಧ ಜಾಲಕರಂಗಿ ಕೀರ್ತಿ ಸ್ವಕಾಶಗೊಂಡಿರುವವರೆಂದರೆ ಉತ್ತರ ಕೊರಿಯದ ಕಮ್ಯೂನಿಸ್ಟರಿಂದಕಶೋರ ಬೈಗಳನ್ನು ಕೇಳುತ್ತಿರುವ ಮತ್ತು ಸಂದರ್ಭ ದೊರೆತರೆ ಯುದ್ಧಾಪರಾಧಿಯಾಗಿ ದಂಡನೆಗೀಡಾಗಲಿರುವ ದಕ್ಷಿಣ ಕೊರಿ

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಛೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮೂವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S. No. 105/1950

ಅಬ್ದುಲ್ಲ ಬ್ಯಾರಿ —ವಾದಿ.

1 ಉತ್ತೆ ಅಮ್ಮು, ತುಳಚೇರಿ ರಾಮು ನಾಯರ ಸೊಸೆ.

2 ಕುಂಞು ಕಂಣ ನಾಯರ್

3 ಚಂದು ನಾಯರ್

1ನೇ ಪ್ರತಿವಾದಿಗೆ ಮಕ್ಕಳು, ಕಾಸರಗೋಡು ತಾಲೂಕು ಬಂದಡ್ಕ ಗ್ರಾಮದವರು ಆದವರು. —ಪ್ರತಿವಾದಿರು.

ನಾದಿಯು ಪ್ರತಿವಾದಿರ ಮೇಲೆ ಮಾಡಿದ ಪ್ರೊನೋಟಿನ ಬ್ಯಬಜನ ಬಗ್ಗೆ ದಾಖ್ಲು ಮಾಡಿದ ಮೂ ವ್ಯಾಜ್ಯವು ತಾ. 21-7-1950 ಕ್ಕೆ ಯಿಟ್ಟರುವ ಸಲ್ಗಿ ತಿಳಿಸೋಕಾಗಿಯಿದೆ.

(Sd) **P. Ahmad,**
Advocate for Plaintiff.

ಕಾಸರಗೋಡು 24-6-50

ಭಾರತ ಸಂಯುಕ್ತರಾಷ್ಟ್ರ ಪಕ್ಷ-೬



ಸ್ವತಂತ್ರ ಜನತಾರಾಜ್ಯ ಭಾರತದ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಅವರು. ಉತ್ತರ ಕೊರಿಯಾ ಸರಕಾರದ ಪ್ರಧಾನ ಮಂತ್ರಿ ಕಿಮ್ ಇಲ್-ಸೆನ್ ಇವರ ಹೆಸರು ಕಮ್ಯೂನಿಸ್ಟ್ ಚೈನಾ ನಾಯಕನ ದ್ವಿಪ್ರತಿಯೆಂಬಂತೆ ಈಗ ಬೆಳಕಿಗೆ ಬರಹತ್ತಿದೆ. ದಕ್ಷಿಣ-ಉತ್ತರ ಕೊರಿಯದ ರಾಜಧಾನಿಗಳಾದ ಸೆವೋಲ್- ಪ್ಯೋಗ್ಯಾಂಗ್ ನಗರಗಳೂ, ದ.ಕೊರಿಯ ಸರಕಾರವು ಈಗಾಗಲೇ ಜಧಾನಿಮಾಡಿಕೊಂಡಿರುವ ಟಾಯಿಜನ್, ದಕ್ಷಿಣ ಕೊರಿಯದಲ್ಲಿವೈರಿಗಳೊತ್ತಡಅತಿ ಬಿರುಸಾಗಿದ್ದ ಹಾಮ್ಜಿನ್, ಹುನ್ ಹೊ. ಳಿಗೂ ಸಂಘೋನ್ ನಂತಹ ಆಯಕಟ್ಟು ಸ್ಥಳಗಳೂ ವಿಶೇಷ ಹೆಸರಾಗ ಹೆತ್ತಿವೆ. ಇಂತಹ ಅಗ್ರಗಣ್ಯ ನಾಯಕರು ಮತ್ತು ಆಯಕಟ್ಟಿನ ಸ್ಥಳಗಳಷ್ಟೇ ಅಲ್ಲದೆ, ವಿದ್ಯಮಾನಾನುಗುಣವಾದ ವಿಶೇಷಾಚರಣೆಗಳ ಮೂಲಕ ಪ್ರಸಿದ್ಧಿಗೆ ಒಂದಿರುವ ಮತ್ತು ಬರುತ್ತಿರುವ ಸಾಮಾನ್ಯರೂ ಇದ್ದಾರೆ. ಸೆವೋಲಿನಿಂದ ಸಂಘೋನ್ ನಗರಕ್ಕೆ, ಮತ್ತಲ್ಲಿಂದ ಟಾಯಿಜಾನಿಗೆ ಹಿಂದೆಗೆಯುತ್ತಾ ಬಂದು, ಟಾಯಿಜಾನ್ ಮುಟ್ಟುವಾಗ ಮೈವೇಲಿನ ಅರಿವೆ ಮಾತ್ರವುಳಿದಿದ್ದ ಬ್ರಿಗೇಡಿಯರ್ ಜನರಲ್ ಡರ್ಹ್ ಇವರ ನಾಯಕತ್ವದ 250 ಪಂಡ್ರಿಅಮೆರಿಕನ್ ಸೋಲ್ಜರರ ಕಣಾಕಥೆ ಯುದ್ಧದ ಕ್ಲಿಷ್ಟ ದುರಂತಗಳಲ್ಲೊಂದೆನ್ನಿಸಿದೆ. ಟಾಯಿಜನಿಗೆ ಮುಟ್ಟೋದೊಡನೆ ತಾವಿನ್ನು ಇಲ್ಲಿಂದ ಹಿಂದೆ ಹೋಗಬಾರದೆಂದು ಈ ದಳದ ವರಿಷ್ಠರೂ ಪ್ರತಿಜ್ಞೆತೊಟ್ಟಿದ್ದಾರೆ. ಇದೇ ರೀತಿ ವೈರಿಗಳ ಒಳಸಂಚುಗಾರರೆಂದು ದಕ್ಷಿಣ ಕೊರಿಯದಲ್ಲಿ ಮರಣ ಶಿಕ್ಷೆಗೆ ಈಡಾದ 100 ಮಂದಿ ಕಮ್ಯೂನಿಸ್ಟರಂಥವರೂ ಹೆಸರು ಗಳಿಸಿದ್ದಾರೆ ಸವೇಲನ್ನು ಖಾಲಿ ಮಾಡಿ, ದಕ್ಷಿಣಕ್ಕೆ ಹಿಂದೆ ಸರಿಯುವ ಮೊದಲು ದ. ಕೊರಿಯದ ಸೈನಿಕರು ವೈರೀ ಒಕ್ಕಸಂಚುಗಾರಳೆಂದು ಕಂಡುಬಂದಿದ್ದ ಕಿಮ್ಸಾ ಎಂಬ ಮಹಿಳೆಯನ್ನು ಗುಂಡಿಗೆ ಬಲಿಕೊಟ್ಟೇ ಹೋಗಿದ್ದರು. ಇಂತಹ ವಿಶೇಷಾಚರಣೆ, ಅವೈಪ್ಲವಗಳಿಗಿಂತಾಗಿ ಹೆಸರು ಗಳಿಸುವ ನಾಯಕರೂ ಸಾಮಾನ್ಯರೂ ಕೊರಿಯಾ ಯುದ್ಧರಂಗದಲ್ಲಿ ಇನ್ನೂ ಕಂಡು ಬರಬಹುದು.

ಒರ್ಟ್ರಂಡ್ ರಸ್ಸೆಲ್

ಬ್ರಿಟಿಷ್ ತತ್ವವೇತ್ತ, ಗಣಿತತಜ್ಞ, ಗ್ರಂಥಕರ್ತ, ಸಾಮಾಜಿಕ ತತ್ವ ವ್ಯಾಖ್ಯಾನಕರ್ತಸಿರುವ ಪ್ರಸಿದ್ಧ ಬರ್ಟ್ರಾಂಡ್ ರಸ್ಸೆಲರು ಕೊರಿಯಾ ಯುದ್ಧ ಸಂಬಂಧವಾಗಿ ಅಸಾಧಾರಣ ಅಭಿಪ್ರಾಯವೊಂದನ್ನು ಹೊರಗೆಡಹಿ, ಲೇಕದ ಸಂದೇಹಕ್ಕೆ ಸತ್ಯ ಭವಿಷ್ಯದ ಬಣ್ಣ ಕೊಟ್ಟು, ಕೀರ್ತಿಕಿರಣ ಮಂಡಿಯಾಗಿದ್ದಾರೆ. "ರಶ್ಯವು ಯುದ್ಧಕ್ಕೆ ಹೋಡುವುದು. ತೃತೀಯ ಜಾಗತಿಕ ಯುದ್ಧವು ಹತ್ತು ವರ್ಷಗಳವರೆಗೆ ನಡೆಯುವುದು. ಆಸ್ಯಾದಲ್ಲಿ ಮಾಬಟಂಗ ಮಾಡಿಕೊಳ್ಳಲು ರಶ್ಯವು ಸಿದ್ಧವಿಲ್ಲವೆಂದು ನಾನು ನಂಬುವದಿಲ್ಲ ನಾವೀಗಲೆ ತೃತೀಯ ಲೋಕ ಯುದ್ಧದ ಪೀಠಿಕಾರಂಗದಲ್ಲಿದ್ದೇವೆ ಎಂದು ನನ್ನ ಅಭಿಪ್ರಾಯ. ಹೈಡ್ರೋಜನ್ ಬೋಂಬು ಒಂದು ತತ್ವ ಮಾತ್ರವಾಗಿರದೆ ವಸ್ತುಸ್ಥಿತಿಯಾಗಿ ರೂಪುಗೊಳ್ಳುವ ಮುಂದಿನ ಆಸ್ಟ್ರೇ ದಿವೊಂದಕ್ಕಿಂತ ಈಗಲೇ ಅಮೆರಿಕದೊಡನೆ ಖಂಡಾಖಂಡಿ ಯುದ್ಧ ಕೊಡುವ ಉತ್ತಮ ಸಿದ್ಧತೆಯಲ್ಲಿ ತಾನಿದ್ದೇನೆ ಎಂಬ ರಶ್ಯದ ನಂಬಿಕೆಯೇ ನನ್ನೀ ನಿರೀಕ್ಷೆಗೆ ಕಾರಣ ಇತ್ತೀಚೆಗೆ ರಶ್ಯದ ಲ್ಲಾದ ಆಟಂ ಸ್ಫೋಟದ ವಿಷಯ ನೋಡಿದರೆ, ರಶ್ಯದೊಡನೆಯೂ ಅಮಾದರಿಯ ಬೋಂಬುಗಳಿರಬೇಕೆಂದು ವ್ಯಕ್ತವಾಗುತ್ತಿದೆ ಆಟಂ ಬೋಂಬಿನ ಗುಟ್ಟನ್ನು ಕಂಡು ಹಿಡಿಯಲು ಸಂಶೋಧನಾಲಯದಲ್ಲಿ ನಡೆದ ಪ್ರಯತ್ನದ ವೇಳೆ ಈ ಸ್ಫೋಟವು ಅಕಸ್ಮಾತ್ತಾಗಿ ನಡೆದಿದ್ದಿತು. ಇತ್ತೀಚೆಗೆ ರಶ್ಯವು ಆಸ್ಯಾದ ಕಡೆಗೆ ಸಾಕಷ್ಟು ಲಕ್ಷ್ಯ ಕೊಡಹತ್ತಿದೆ ಎಂಬುದು ವಸ್ತುಸ್ಥಿತಿ. ಕೊರಿಯಾ ಆಕ್ರಮಣದ ಕುರಿತು ಅದು ತೋರಿಸಿಕೊಳ್ಳುತ್ತಿರುವ ಬಹಿರಂಗ ಸಂಬಂಧವೆಂತಹದಿದ್ದರೂ, ಸದ್ಯದೀ ಬಿಕ್ಕಟ್ಟಿನಲ್ಲಿ ಅಖಿಲ ಆಸ್ಯಾದ ಕಣ್ಣು ರಶ್ಯದ ಧೋರಣೆಯ ಕಡೆಗಿರುವದಂತೂ ನಿಜ. ತೃತೀಯ ಲೋಕ ಯುದ್ಧವು ಸಂಭವಿಸುವುದಾದರೆ ಅದು ಬಹು ತೀಕ್ಷ್ಣವಾಗಿ ಆಸ್ಯಾ ಮತ್ತು ಯುರೋಪಿನಲ್ಲಿ ಏಕಕಾಲದಲ್ಲೇ ಉಂಟಾಗಬೇಕು. ಮೂಲ ಭೂಮಿ ಆಸ್ಯದಲ್ಲಿ ರಶ್ಯ ಮತ್ತು ಪಾಶ್ಚಾತ್ಯ ಪ್ರಜಾಸತ್ತಾ ರಾಷ್ಟ್ರಗಳೊಳಗೆ ಪೂರ್ಣರೂಪೀ ಯುದ್ಧ ನಡೆಯುವುದಾದರೆ, ಯಾವುದೇ ರಷ್ಟರಾಷ್ಟ್ರವಾದರೂ ಬಿಳಿ ಮನುಷ್ಯನ ಸೈನ್ಯ ವಹಿಸಬಹುದೆಂಬ ಪ್ರಶ್ನೆಯೇಳುತ್ತಿದೆ. ಸಂಭವದಲ್ಲಿ ಉತ್ತರಿಸಲಾಗದ ಪ್ರಶ್ನೆಯಿದು. ದಾರತವು ಆದಿಭಾಗದಲ್ಲಿ ತಟಸ್ಥವಿರಲು ಪ್ರಯತ್ನಿಸುವುದೆಂಗೂ, ಅದು ಅಸಾಧ್ಯವೆಂದು ಸಿದ್ಧವಾದರೆ, ಕೊನೆಗಾದು ನಮ್ಮ ಪಕ್ಷಕ್ಕೆ ಬರಬಹುದೆಂದೂ ನನ್ನ ನಂಬಿಕೆ ಕೇವಲ ಧಾರ್ಮಿಕ ರಂಗದಲ್ಲಿ ಭಾರತವು ಕಮ್ಯೂನಿಸಮಿಗೆ ಒದ್ದ ವಿರೋಧವಿದೆ" ಎಂಬುದೇ ಬರ್ಟ್ರಂಡ್ ರಸ್ಸೆಲರು 'ಸಿಡ್ನೇ ಸನ್' ಪತ್ರಿಕೆಗೆ ಕೊಟ್ಟ ಅಭಿಪ್ರಾಯ.

ಯುದ್ಧವು ಒಂದು ಅಸಾಮಾನ್ಯ, ಅದೃಷ್ಟತ ಹಾಗೂ ಭಯಾಕರ್ಷಣ ತುಂಬಿರುವ ಘಟನೆ. ಅಲ್ಲಿ ಅಸಾಧಾರಣ ಧೈರ್ಯ, ಸಾಹಸ ತೋರಿಸುವವರು, ವಿಶೇಷ ರೀತಿಯವಾದ ಹೊಣೆಯವರು, ಅಳಕರ್ಷಣೀಯ ಭವಿಷ್ಯ ಕೆಲಿಯವರು, ಅನೈಸ್ಯತ್ಯವಿಲ್ಲದೇನೇ ಹೆಸರು ಗಳಿಸಬಲ್ಲರು. ಅಂತಹದೇನೂ ಇರದ ಜನಸಾಮಾನ್ಯರು ಮಾತ್ರ ಯುದ್ಧದ ವಿಷಸ್ಪರ್ಶಾದಿಗಳನ್ನು ಅಂಗೀಕರಿಸಿಕೊಂಡು ಮೌನವಾಗಿ ಅನುಭವಿಸಿದರಾಯಿ ಅಲ!

ತಾರಾನಾಥ ಆಯುರ್ವೇದ ವಿದ್ಯಾಪೀಠ

ಬಳ್ಳಾರಿ

ಈ ವಿದ್ಯಾಪೀಠವು ಎಂದಿನಂತೆ ಜುಲಾಯಿ 15ನೇ ತಾರೀಕಿಗೆ ತೆರೆಯಲ್ಪಡುವುದು. ಹೊಸತಾಗಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಅರ್ಜಿಗಳು ಆ ಮೊದಲು ವಿದ್ಯಾಪೀಠದ ಕಾರ್ಯಾಲಯಕ್ಕೆ ಮುಟ್ಟತಕ್ಕದ್ದು. ವಿದ್ಯಾರ್ಥಿಗಳು ಕಸಿನಸ್ಥ ನೆಟ್ರಿಕ್ ಸರೀಕ್ಷೆ ಪಾಸಾದವರಿರತಕ್ಕದ್ದು. ಅರ್ಹತೆ ಪಡೆದ ವಿದ್ಯಾರ್ಥಿಗಳ ಕುರಿತು ಅವರಿಗೆ ತಿಳಿಸಲಾಗುವುದು

ಬಳ್ಳಾರಿ,
30—6—50

ಕಾರ್ಯದರ್ಶಿ.

ತತೆ, ಅಲಸ್ಯ, ಅಸಡ್ಡೆ, ದಾಕ್ಷಿಣ್ಯಗಳ ವಿರುದ್ಧವಾಗಿ ದಂಗೆಯೆದ್ದಿರುವ ಸಮತಾವಾದಿ ಪಕ್ಷದ ಹೆಜ್ಜೆಗಳ ಕಡೆಗೆ ಜನತೆಯು ನಿಸ್ಸಂಕೋಚವಾಗಿ ಲಕ್ಷ್ಯವೀಯಬೇಕಾಗಿದೆ; ಕಾಂಗ್ರೆಸಿನ ಮತ್ತು ಸಮತಾವಾದಿ ಪಕ್ಷದ ಕಾರ್ಯಕಲಾಪಗಳನ್ನು ತಲನಾತ್ಮಕ ಬುದ್ಧಿಯಿಂದ ವಿಮರ್ಶಿಸಿ ನೋಡಿಯೇ ತೀರ್ಮಾನಕ್ಕೆ ಬರಬೇಕಾಗಿದೆ. ಚುನಾವಣಾ ಸಿದ್ಧಾಂತ ಕಾರ್ಯಕಲಾಪಗಳಲ್ಲಿರುವ ಕುಂದುಕೊರತೆಗಳನ್ನು ತೋರಿಸಿಕೊಟ್ಟು ಯೋಗ್ಯ ಸಲಹೆಗಳನ್ನು ಮಂಡಿಸುವುದಕ್ಕಾಗಿ ಸಮತಾವಾದಿ ನಾಯಕ ಜೈಪ್ರಕಾಶ್ ಆದಿಯಾಗಿ ನಡೆದ ತರ 1 ಮತ್ತು 2ರಲ್ಲಿ ಬೊಂಬಾಯಿಯಲ್ಲಿ 'ವಿರುದ್ಧ ಪಕ್ಷ'ಗಳ ಸಮ್ಮೇಲನ ನಡೆದಿದೆ. ಶುದ್ಧಹಾಗೂ ಪೂರ್ಣ ಜನ ಮತವನ್ನಾಧರಿಸಿಯೇ ಮಂಡಿನ ಜನತಾ ಆಡಳಿತವಿರಬೇಕೆಂದು ಬಯಸುವವರೂ ಇದನ್ನಾಕ್ಷೇಪಿಸದಂತಿಲ್ಲ. ಸಮತಾವಾದಿಗಳು, ಭಾರತವನ್ನು ಕಮ್ಯೂನಿಸ್ಟರಂಜಿಸಿದೇನೇ ಗಾಟಕ್ಕೆ ಸಿಕ್ಕಿಕೊಂಡು ರಾಷ್ಟ್ರ ಸ್ವಾತಂತ್ರ್ಯ ಚಳವಳಿಕ್ಕೆ ಒಸೆ ಕೊಟ್ಟ ನಿದರ್ಶನವಿಲ್ಲವೇ ಇಲ್ಲ. 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಅವರು ವಹಿಸಿದ್ದ ಭಾಗವು ಅತಿ ಹೆಚ್ಚಿನದು. ಇತ್ತೀಚೆಗಿನ ವರೆಗೂ 'ಕಾಂಗ್ರೆಸ್ ಸಮಾಜವಾದಿ'ಗಳಾಗಿ ಕಾಂಗ್ರೆಸಿನೊಳಗೇ ಇದ್ದ ಇವರು 'ಕಾರ್ಯವಾಗುತ್ತಿಲ್ಲ; ಕಾಂಗ್ರೆಸಿನಿಂದಧುಳ್ಳಗುವಂತೆಯೂ ಇಲ್ಲ' ಎಂಬ ನಿರಾಶೆಯಿಂದ ಹೊರ ಬಂದವರು. ಆ ಮೇಲೆ ಈ ವರೆಗೆ ಜನತಾ ಸಂಘಟನೆಗಾಗಿ ಸಾರ್ವಜನಿಕ ರಂಗದಲ್ಲಿ ದುಡಿಯುವ ಶ್ರಮವನ್ನು ಸಾಕಷ್ಟು ವಹಿಸದೆ, ಕಾಂಗ್ರೆಸನ್ನು ಟೀಕಿಸುವ ಕಡೆಗೇನೇ ಹೆಚ್ಚಿನ ಲಕ್ಷ್ಯ ಹರಿಸಿದ್ದಾರೆಂಬುದೊಂದನ್ನು ಬಿಟ್ಟರೆ

ಮೂತ್ರಸ್ರಾವ ನಿಂತಿತು

'ಕುಮಾರಾ' ಬಿಸ್ಕೆಗಳನು ಉಪಯೋಗಿಸಿದರೆ ಹಡತಪ್ಪಿ ಮೂತ್ರಸ್ರಾವವಾಗುವುದು. ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧೆಗಳೂ ಇಲ್ಲ. ಸಾಮಾನ್ಯ ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ, ರೂ 3; ಸ್ಪೆಶಲ್ ರೂ. 5-4 ಅಧಿಕಾಧಿಕ ಸ್ಪೆಶಲ್ ರೂ. 8 [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Miss D. DEVEE, F DS. (N. J.)
Tollygunge CALCUTTA

ಸ್ವಾಕಿಸ್ಕರು: ಶಹಾಕಂಪನಿ ಮಂಗಳೂರು

ಅದರ ನೋಟ ಮತ್ತು ಹೆಜ್ಜೆ.

ರೆ ಸಮತಾವಾದಿ ಪಕ್ಷವನ್ನು ಆರೋಪಿಸಲಾಗುವ ಬೇರೆ ಕಾರಣವಿಲ್ಲ. ಈಗ ಸಮತಾವಾದಿಗಳು ತಮ್ಮ ಹೊಣೆಗಾರಿಕೆಯನ್ನರಿತು ಕಾರ್ಯ ಪ್ರವೃತ್ತರಾದಂತಿದೆ; ಅವರ ಕಾರ್ಯಕಲಾಪಗಳ ಉಚಿತಾನುಚಿತತೆಯನ್ನು ಮಹಾನುಭಾವರ ವಿಮರ್ಶನ ನೋಡುವುದು ಜನತೆಯ ಕರ್ತವ್ಯವಿದೆ.

ಸಮತಾವಾದಿ ಕಾರ್ಯಕ್ರಮ

ತಮ್ಮ ಭೂವೀ ಕಾರ್ಯಕ್ರಮವೆಂದು ಸಮತಾವಾದಿಪಕ್ಷವು ಹದಿನೆಂಟು ವಿಧವಿಧಾನಗಳುಳ್ಳ ಘೋಷಣೆಯೊಂದನ್ನು ತಯಾರಿಸಿದೆ. ರಾಷ್ಟ್ರ ಜೀವನದಲ್ಲಿಯ ಕೊಳೆ ಕಲ್ಮಷಗಳನ್ನು ತೆಗೆದೊಗೆದು ರಾಷ್ಟ್ರೀಯ ಜನರು ಜೀವನಗೊಳಿಸುವುದೇ ಈ ಘೋಷಣೆಯ ಜೀವತಾತ್ಪರ್ಯವಾಗಿ ತೋರಿಬಂದಿದೆ. ಚೈತನ್ಯದಾಯಿ ಗಾಂಧಿಜೀ ಈಗ ಇಲ್ಲದಿರುವುದರಿಂದ, ಇವರಿಂದಲೇ ಸ್ಫೂರ್ತಿ ಪಡೆದು ಅವರ ಆದೇಶ್ಯಕ್ಕನುಸಾರವಾಗಿದ್ದ ಕಾರ್ಯಗಳನ್ನು ನಿರ್ವಹಿಸಬೇಕು. ಸಾರ್ವಜನಿಕರ ಅದರಲ್ಲೂ ವಿಶೇಷತಃ ಯುವಕರು, ಕೂಲಿಗಾರ ಸಂಘಟನೆ, ಕಿಸಾನ್ ಪಂಚಾಯತುಗಳ, ಬುದ್ಧಿವಂತರ ಮತ್ತು ಹರಿಜನರ ಸಹಕಾರಗಳಿಸಬೇಕು — ಪ್ರಾಂತೀಯತೆ, ಜಾತೀಯತೆ, ಭಾಷಾವಾದ ಮೊದಲಾದ ಒಡಕುಗಳು ಪ್ರಶ್ನೆಗಳನ್ನು ಪ್ರತಿಭಟಿಸಿ ನಿರ್ಮೂಲಿಸಬೇಕು— ಹಳ್ಳಿ ಹಾಗೂ ಪಟ್ಟಣಗಳಲ್ಲಿ ರಾಷ್ಟ್ರೀಯ ಪುನರುಜ್ಜೀವನಗಾಂಧೀ ಶಕಂದ್ಯಗಳನ್ನು ತೆರೆಯಬೇಕು— 100ಕ್ಕೆ 9೦ರಷ್ಟು ಬಡವರಿರುವ ಈ ರಾಷ್ಟ್ರವೆಲ್ಲ ಸಂಪತ್ತಿನ ಸಮಾನ ವಿತರಣೆಯಾಗಬೇಕು— ಈಗ ತಿಂಗಳಿಗೆ 20 ರೂ. ಆಯಿಯಿಂದ ಲಕ್ಷಾಧೀಶ್ವರರಿಗೆ ರೂ. ಗಳವರೆಗಿರುವ ಉತ್ಪನ್ನದ ಪರಿಮಾಣಕ್ಕೆ ಕನಿಷ್ಠ ಹಾಗೂ ಪರಮಾವಧಿ ಮಿತಿಯನ್ನು ಹಾಕಬೇಕು— ಸಂಸ್ಥಾನಿಕರಿಗೆ ಕೊಡುತ್ತಿರುವ ಅತಿರೇಕ ವರ್ಷವಾನವಗಳನ್ನು ನಿಲ್ಲಿಸಿ ಅವರ ಭಂಡಾರಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು— ಭೂಮಿಯ ಮೇಲೆ ಸಾಗುವಳ್ಳಿದಾರನ ಒಡೆತನವೇ ಸ್ಥಾಪನೆಯಾಗಬೇಕಲ್ಲದೆ ಯಾವ ರೈತನಿಗೂ 12½ ಎಕ್ರೆಗಿಂತ ಕಡಿಮೆ, ಯಾವನೊಬ್ಬನಿಗೂ 30 ಎಕ್ರೆಗಿಂತ ಹೆಚ್ಚಿಗೆ ಭೂಮಿಯಿರಕೂಡದು— ಸಣ್ಣ ಜಮೀನುದಾರರಿಗೆ ಪುನರ್ನಿವೇಶನ ಪರಿಹಾರ ಹೊರತು, ಯಾವ ಜಮೀನ್ದಾರನಿಗೂ ಜಮೀನ್ದಾರೀ ಬಗ್ಗೆ ಪರಿಹಾರ ವಿಲ್ಲ- ಬೇಕಾ, ಬೇಡ ಮತ್ತು ಮೂಲ ಉದ್ದಿಮೆಗಳೆಲ್ಲವನ್ನೂ ರಾಷ್ಟ್ರೀಕರಣಗೊಳಿಸಬೇಕು- ಕೆಲವು ಮುಖ್ಯ ವ್ಯಾಪಾರಗಳನ್ನು ಸರಕಾರವೇ ನಿರ್ವಹಿಸಬೇಕಲ್ಲದೆ ಎಲ್ಲಾ ವಿದೇಶೀ ವ್ಯಾಪಾರಗಳಲ್ಲೂ ಸರಕಾರದ ನಿಯಂತ್ರಣವಿರಬೇಕು- ಕಳ್ಳ ಹಣವನ್ನೆಲ್ಲಾ ಸರಕಾರವು ವಶಪಡಿಸಿಕೊಂಡು ಉದ್ದಿಮೇದಾರರ ವಂಚನೆಯನ್ನು ನಿರ್ಮೂಲಿಸಲು ಉಗ್ರ ಕಾರ್ಯಕೈಕೊಳ್ಳಬೇಕು- ಲಂಚ ಗುಳಿತನದ ನಿರ್ಮೂಲನಕ್ಕಾಗಿ ಚುನಾವಣಾ ಸಮಿತಿಗಳಂತಹ ಸ್ವತಂತ್ರ ಲಂಚ ನಿರೋಧಕ ಸಮಿತಿಗಳನ್ನು ನೇಮಿಸಬೇಕು.— ಬ್ರಿಟಿಷ್ ಮಾದರಿಯ ಆಡಳಿತ ಮಾರ್ಪಾಡುಗಳನ್ನು ಬದಲಾಯಿಸಿ ನಿರ್ದಿಷ್ಟಾವಧಿಯಲ್ಲಿ ನಿಶ್ಚಿತ ಕೆಲಸವಾಗಲೇಬೇಕೆಂಬ ವಿಧಿಯನ್ನು ಉಚ್ಚಾಟ್ಟಿರವರಿಗಳ ಮೇಲೆ ಹೇರಬೇಕು.— ಖಡ್ಡಾಯ ಹಾಗೂ ಧರ್ಮಾರ್ಥ ಪ್ರಾಥಮಿಕ ಶಿಕ್ಷಣ; ವ್ಯವಸಾಯಿಕ ಹಾಗೂ ತಾಂತ್ರಿಕ ಮಾಧ್ಯಮಿಕ ಶಿಕ್ಷಣ; ಉಚ್ಚಾಭ್ಯಾಸ ಹಾಗೂ ಸಂಶೋಧನೆ ಮಾಡಲಿಚ್ಛಿಸುವವರಿಗೆ ಮಾತ್ರ ವಿಶ್ವವಿದ್ಯಾಲಯ ಶಿಕ್ಷಣ ಇಂತಕ್ಕದ್ದು— ಜನಸಂಖ್ಯೆಯನ್ನು ಮಿತಗೊಳಿಸಲು ವಿವಾಹ ವಯಸ್ಸನ್ನು ಏರಿಸುವುದಲ್ಲದೆ ಸಂತತಿ ಸಂಯಮನ ಕೇಂದ್ರಗಳನ್ನು ರಚಿಸಬೇಕು— ರಾಜ್ಯ ಘಟನೆಯಲ್ಲಿ ನಮೂದಿಸಲ್ಪಟ್ಟಿರುವ ಮಂಡಲಭೂತ ಹಕ್ಕು ಸ್ವಾತಂತ್ರ್ಯಗಳೆಲ್ಲವನ್ನೂ ಜನತೆಯು ಅನುಭವಿಸುತ್ತಿರಬೇಕು— ಯುದ್ಧ, ಬಥವಾ ರಾಷ್ಟ್ರದ ಗಂಡಾಂತರ ಕಾಲಗಳಲ್ಲಿ ಹೊರತು ಬೇರೆಂದೂ ವಿಚಾರಣೆಯಿಲ್ಲದೆ ಯಾರನ್ನೂ ಬಂಧಿಸಬಾರದು— ಮುಂತಾದ ವಿಧಿನಿಯಮಗಳೇ ಸಮತಾವಾದಿ ನಿರೂಪಣೆಯು ನಾರ.

ಜೈಪ್ರಕಾಶರ ವರದಿ

ನೇಪಾಲಿನ ಭೂಮೀ ಕಾರ್ಯಕ್ರಮವು ನಿರೂಪಣೆ ಮತ್ತು ಸಮತಾವಾದಿ ಪಕ್ಷದ ಮುಂದಿನ ವರ್ತಮಾನದ ಧ್ಯೇಯ, ಧೋರಣೆಗಳ ಬಗ್ಗೆ ಬರುವಾರ ಮದ್ರಾಸಿನಲ್ಲಿ ನೆರವಾಲಿರುವ ಪಕ್ಷದ ವಾರ್ಷಿಕ ಸಮ್ಮೇಳನದ ಮುಂದೆ ಬಂದು ನಿರ್ಧಾರಗೊಳ್ಳಿವೆ ಈ ಸಂದರ್ಭದಲ್ಲಿ ಕಾರ್ಯದರ್ಶಿ ಶ್ರೀ ಜೈಪ್ರಕಾಶ್ ನಾರಾಯಣರು ತಯಾರಿಸಿರುವ ವರದಿಯು ಸಮತಾವಾದಿ ಪಕ್ಷದ ಅಂತರಂಗ ಶುದ್ಧಿ ಮತ್ತು ವರ್ತನೆಯ ದಿಗ್ದರ್ಶನ ಮಾಡಿಕೊಡುವುದು. ಘಟನಾತ್ಮಕವೆನ್ನುವ ಬದಲಿಗೆ ಪ್ರಜಾಸತ್ತಾತ್ಮಕ ವಿಧಾನಗಳಿಗೆ ಸಂಪೂರ್ಣವಾಗಿ ಕಟ್ಟುಬಿದ್ದು, ಎಂಥಾ ಪೀಯ ಅಮೂಲ್ಯತೆಗಳಲ್ಲಿ ನಂಬಿಕೆಯಿಟ್ಟು ವರ್ತಿಸಬೇಕೆಂಬುದೇ ಆ ವರದಿಯ ಸಾರ. "ಪ್ರಜಾಸತ್ತಾ ಸಮತಾವಾದದ ಗುರಿಯನ್ನು ಒಪ್ಪಿಕೊಂಡು, ಅದರ ನೀತಿ ಸಜೀವ ವಿಶ್ವಾಸವನ್ನಿಟ್ಟು ವರ್ತಿಸದ ಧೋರಣೆಯು ಪಕ್ಷದ ಸದಸ್ಯರಲ್ಲಿ ಸರ್ವ ಸಾಮಾನ್ಯ ಮತ್ತು ಸರ್ವವ್ಯಾಪಿಯಾಗಿರುವಂತಿದೆ. ಇಂಥವು ಬುದ್ಧಿಯನ್ನಷ್ಟೇ ಸಮತಾವಾದವು ಸಂಶ್ಲೇಷಿಸಿರಬಹುದಲ್ಲದೆ, ತಮ್ಮ ಕೃತ್ಯಕ್ಕಾಗಿ ವಾಸ್ತವ್ಯರಿಂದ ಸಾಕ್ಷಾತ್ಕಾರಣೆ ಮಾಡಿಸುವಂತಹ ಅವೇಶವನ್ನಿದು ನಿರ್ಮಿಸಲಾರದು. ಕೃತ್ಯಗಳನ್ನು ತುಂಬಿಸಿಟ್ಟುಕೊಂಡು, ಅವುಗಳ ಮೌಲ್ಯವನ್ನು ಕಡೆಗಣಿಸುವ ನಿರ್ನೋಕೃತ್ತಿಯೇ ಇದಕ್ಕೆ ಹೇತು. ನಾಲಿಗೇಪಲ್ಲಿಯಲ್ಲಿ ಮಾತ್ರ ಪ್ರಜಾಸತ್ತಾ ಸಮಾಜವಾದವನ್ನು ಕಟ್ಟಿಸುತ್ತಾ, ತಾವು ಯಥಾರ್ಥ ಕ್ರಾಂತಿಕಾರರೆಂಬ ಭ್ರಮೆಯಿಂದಿರುವ ಬಂಧುಗಳು ನಮ್ಮ ಪಕ್ಷ ಬಿಟ್ಟು ಹೋಗತಕ್ಕುದೆಂದು ನೋಟೀಸು ಕೊಡುತ್ತೇನೆ ಅಂತ ಪಕ್ಷೇತರ ಅಧಿಕಾರ ಪಂಗಡಗಳ ಕಲಹಗಳಲ್ಲಿ ಕೂಡಾ ಸುಳ್ಳು, ವಂಚನೆ, ಕೊಲೆ, ಆಸುಪರಣ, ಗುಂಡೆಸೆತಗಳಂತಹ ಆಚರಣೆಗಳನ್ನಂಗೀಕರಿಸಿರುವ ಕಮ್ಯೂನಿಸ್ಟರ ಕೊಳಕ್ಕು, ಕಠೋರ ವಿಧಾನಗಳನ್ನು ಉಜ್ಜಿ ತೆಗೆಯುವ ದೃಢ ನಿರ್ಧಾರ ನಮ್ಮದಂದು ಪುನಃ ಹೇಳುತ್ತೇನೆ."ಎಂದು ಜೈಪ್ರಕಾಶರು ತಮ್ಮ ವಂದಿಯಿಲ್ಲಂದಿದ್ದಾರೆ. ಘಟನಾತ್ಮಕ ಮತ್ತು ಪ್ರಜಾಸತ್ತಾತ್ಮಕ ವಿಧಾನಗಳೆಳೆಸರುವ ಸೂಕ್ಷ್ಮ ವ್ಯತ್ಯಾಸವನ್ನು ಅರ್ಥ ನಿರೂಪಣೆ ಮಾಡುತ್ತಾ "ಪ್ರಜಾಸತ್ತಾತ್ಮಕ ವಿಧಾನಗಳನ್ನೆಯ ಚುನಾವಣೆಗಳ ಮೂಲಕ ಪಾರ್ಲಿಮೆಂಟನ್ನು ವಶಪಡಿಸಿಕೊಂಡು ಸರಕಾರ ಸ್ಥಾಪಿಸಿಕೊಂಡಂತೆಯೇ, ಅಧಿಕಾರ ವ್ಯಾಪ್ತಿಯನಂತರ ಕೂಡಾ ಸಮತಾವಾದಿ ಸರಕಾರದ ಸಹಾಯ ಮತ್ತು ದಿಗ್ದರ್ಶನ ಪಡೆದು ಸ್ವತಃ ಜನತೆಯು ಸಾಮಾಜಿಕ ಕ್ರಾಂತಿಯೊಂದನ್ನು ನಡೆಸಬಹುದು ಎಂದು ಸಮತಾವಾದಿ ಪಕ್ಷ ನಂಬುತ್ತದೆ" ಎಂದಿದ್ದಾರೆ. ಪ್ರಜಾಸತ್ತಾ ಕ್ರಮದಲ್ಲಿ ಅಡಕವಾಗಿದ್ದೇ ತಮ್ಮ ಪಕ್ಷದ ಚಟುವಟಿಕೆಗಳು ಸಂಘಟನೆ, ಪ್ರಚಾರ, ಚಳವಳಿ, ಹೋರಾಟ ಮತ್ತು ವಿಧಾಯಕ ಕಾರ್ಯಗಳೆಂಬ ಪಂಚ ಶಿರಸ್ಸುಗಳಿಂದಿವೆ, ಎಂದು ಜೈಪ್ರಕಾಶರಂದಿದ್ದಾರೆ. "ಚುನಾವಣೆಯನ್ನು ಗೆಲ್ಲುವುದೊಂದೇ ನಮ್ಮ ಇತ್ಯೆಲ್ಲಾ ಚಟುವಟಿಕೆಗಳ ಗುರಿಯಾಗಿಲ್ಲ ಜನತಾ ಸೇವೆ ಮಾಡಿ, ತಮ್ಮ ಹಕ್ಕು ಗುತ್ತು, ಹಿತ ಸಂಬಂಧಗಳಿಗಾಗಿ ಹೋರಾಡುವಂತೆ ಮತ್ತವುಗಳನ್ನು ರಕ್ಷಿಸಿಕೊಳ್ಳುವಂತೆ ಜನತೆಯನ್ನು ಸಂಘಟನೆಗೊಳಿಸಿ, ಕ್ರಮಾನುಗತವಾಗಿ ಸಾಮೂಹಿಕ ಜನತಾ ಪ್ರಯತ್ನದಿಂದ ಒಂದು ಸಮತಾವಾದಿ ರಾಷ್ಟ್ರವನ್ನು ನಿರ್ಮಿಸಲು ಜನತೆಯು ಶಕ್ತವಾಗುವಂತೆ ಮಾಡುವುದೇ ನಮ್ಮ ಉದ್ದೇಶ" ಎಂದೂ ಜಾಮ್ಸೈಡ್ ಜೈಪ್ರಕಾಶರು ಸ್ಪಷ್ಟಪಡಿಸಿದ್ದಾರೆ. "ಫಲಾಪೇಕ್ಷೆಯಿಲ್ಲದೆ ಕರ್ತವ್ಯ ಮಾಡಬೇಕೆಂಬ ಗೀತಾ ಬೋಧೆಯಂತೆ ನಿರಂಸಕ್ತ ಭಾವನೆಯಿಂದ ಎಲ್ಲರೂ ಕಾರ್ಯ ತಲ್ಲಿನತೆ ಹೊಂದಬೇಕೆನ್ನುತ್ತೇನೆ. ಜಯಾಪಜಯಗಳು ನಮ್ಮಲ್ಲಿ ಹೈದಯವಿಭರತ ಇತರತೆಗಳನ್ನು ನಿರ್ಮಿಸದಿರಲಿ. ಚುನಾವಣೆಗಳಲ್ಲಿ ನಮ್ಮ ಪಕ್ಷವು ಅತಿ ಗಣ್ಯತೆ ಗಳಿಸುವುದೆಂಬ ಕಾರಿತು ನನಗನ್ನುವಾನವಿಲ್ಲ. ಒಂದೊಪ್ಪೆಗೆ ಈ ಪಕ್ಷವು ಹೆಲಗೆಯಿಂದಲೇ ಪೂರ್ಣ ಉಜ್ಜಲ್ಪಟ್ಟರೂ ಕೂಡಾ ನನ್ನ ಮೇಲಿ ಅದಾವ ವ್ಯತ್ಯಾಸವನ್ನೂ ಮಾಡಲಾರದು. ನಿಜಕ್ಕೂ ನನ್ನ ಪಾಲಿಗೆ ಅಂತಹ ಪರಾಜಯವು ಒಂದು ಪರಂಧಾಮ್ಯವನಾಗಿದ್ದು, ಇನ್ನೂ ಹೆಚ್ಚಿನ ಪ್ರಯತ್ನಕ್ಕೆ ಪ್ರೇರಣೆಯಾಗುವುದು. ನೀವೆಲ್ಲರೂ ಇದೇ ಸ್ಫೂರ್ತಿ

(೮ನೇ ಪುಟ ನೋಡಿರಿ)

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. P. No. 49/1950

1) ಬೀ ಖಾದುಮ್ಮು, ಮೂಸ ಅಬ್ದುಲ್ ಬ್ಯಾರಿ ಹೆಂಡ್ತಿ.

2) ಸಿ. ಮಹಮ್ಮದ

3) ಆ್ಯನಡಿ

4) ಅಬ್ದುಲ್ ರಹಿಮಾನ್

ಸದ್ರಿ ಮೂಸ ಅಬ್ದುಲ್ ಬ್ಯಾರಿ ಮುಕ್ತಳು.

4ನೇ ಯವನು ಪ್ಯಾನರ, ಗಾರ್ಡಿಯನ್ ತಾಯಿ 1ನೇ ಪ್ರತಿವಾದಿಯಾದ ಕಾಸರಗೋಡು ಕುಣಾ ಪಳ್ಳಿಪಲ್ಲಿರುವವರು— ಅರ್ಜಿದಾರರು 1ನೇ ಅರ್ಜಿದಾರಳಿಗೆ ಸುಮಾರು 2,೨೦೦ ರೂ. 4ನೇ ಯವರ ತಂದೆ ಮೃತಪಟ್ಟ ಮೂಸ ಅಬ್ದುಲ್ ಬ್ಯಾರಿಗೆ ಸಲಬೇಕಾದ ಋಣವನ್ನು ವ್ಯಸಲು ಮಾಡುವರೆ ತಮಗೆ ವಾರ್ಸಿ ಸರ್ಟಿಫಿಕೇಟು ಕೊಡುವೇಕಾಗಿ ಅರ್ಜಿದಾರರು ಕೋರ್ಟ್ಗೆ ಮಾಡಿದ ಸದ್ರಿ ಅರ್ಜಿಯು ತಾ. 21-7 1950ಕ್ಕೆ ತನಗೆ ಯಿಟ್ಟಿರುವ ಸಂಗ್ತಿ ಯೂ ಮೂಲಕ ತಿಳಿಸೋಣಾಗುತ್ತದೆ.

(Sd) **P. Ahmad,**
Advocate for Petitioners.
Kasaragod, 24-6 50.

Notice.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C. 68/1950

ಅಬ್ದುಲ್ಲ ಖಾದರ್ ಹೊಳಲಂಗ, ಮಮಹಮ್ಮದ ಬ್ಯಾರಿಗಳ ಮಗ, ಕಾಸರಗೋಡು ತಾಲೂಕು ಮುಳಿಯಾರು ಗ್ರಾಮದ ಬಾಲನಡ್ಕ ದಲ್ಲಿರುವವ —ವಾದಿ.

ಮತ್ತು

ಬೆಳ್ಳಂಗ,ಆಡ್ಡಕ್ಕಿಲ್ ಬಿಲ್ಲ ಅಪ್ಪೆಗೆ ಜೋಯ್ಸ ಹೆಂಗ್ಸಿನಲ್ಲಿ ಹುಟ್ಟಿದ ಮಗ, ಬೇಡಡ್ಕ ಗ್ರಾಮದಲ್ಲಿ. —ಪ್ರತಿವಾದಿ.

ಸದ್ರಿ ಪ್ರತಿವಾದಿಯು ವಾದಿಯ ಮೇಲ್ಕೀ ಟುದಾರ ಅಬ್ದುಲ್ಲ ಕುಂಞಿ ಬ್ಯಾರಿಗೆ ಬರ ಕೊಟ್ಟ ರೂಪಾಯಿ 100-0-0 ಪ್ರೊ. ನೋಟಿನ ಅಲು ಗುಡ್ಡಿ ಅವಜಿಯ ವ್ಯಸಲು ಪಡಿಯಲು ವಾದಿಯು ದಾಕ್ಲೆ ಮಾಡಿದ ಮೇಲ್ಕಂಡ ವ್ಯಾಜ್ಯವು ತನ್ನ ಬಗ್ಗೆ ತಾರೀಕು 15-7-1950 ಕ್ಕೆ ಯಿಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Sd/ K. Kamalaksha Kamath.
Advocate for Plff.
Kasaragod, 3-7-1950.

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.
(ಸ್ಥಾಪನೆ: 1934)

ಚೇರ್‌ಮೆನ್: ಶ್ರೀ. ಎಸ್. ಶಿಟಿ. ಎಸ್. ಚಿದಂಬರಪ್ಪ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟ್ ಬಾಕ್ಸ್ ನಂಬ್ರ 142
ಮದ್ರಾಸು.

THE
Canara Banking Corporation Ltd.
(Incorporated in India.)
Estd: 1906
Head Office : **UDIPI, (S. I)**

Capital Authorised .... Rs. 25,00,000
Capital Issued, Subscribed &
Paid up .... Rs. 20,00,000
Reserves .... Rs. 9,44,765

ಗುರುವಾರ ಉಡುಪಿ ೬-೭-೧೯೫೦

ಸಸಿ ನೆಡುವ ವಾರ

ಭಾರತದ ಬೇಸಾಯ ಸಂಶೋಧನೆಗಳ ಫಲೋತ್ಪಾದನಾವಾರವಾಗಿ ಇದೇ ಜು. 1 ರಿಂದ 7ರ ವರೆಗಿನ ವಾರದಲ್ಲಿ ದೇಶವಿಡೀ 'ವನ ಮಹೋತ್ಸವ' ವಾಚರಿಸಲ್ಪಡುತ್ತಿದೆ. ಸ್ವಯಶಕ್ತಿಯಲ್ಲಿ ರಾಜಧಾನಿಯಲ್ಲಿರುವ ಗಾಂಧಿಜೀಯ ಸಮಾಧಿಯ ಬಳಿ ತುಳಸೀ ಗಿಡವೊಂದನ್ನು ನೆಡುವ ಮೂಲಕ ಆಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಈ ರಾಷ್ಟ್ರೀಯ ವಾರೋತ್ಸವವನ್ನು ಉದ್ಘಾಟಿಸಿದ್ದರು. ಅಲ್ಲಿಯೇ ಸ್ವಧಾಕ್ಷ ಮಂತ್ರಿ ಪಂಡಿತ ನೆಹರುಗಳಿಂಬಲೂ ಒಂದು ತುಳಸೀ ಗಿಡ ನೆಡಲ್ಪಟ್ಟಿತು. ಇದೇ ರೀತಿ ಪ್ರಮುಖರ ಹಸ್ತದಿಂದ ಸಂಸ್ಥಾನದ ರಾಜಧಾನಿ, ಮತ್ತಿತರ ನಗರಗಳಲ್ಲಿ ಸಸಿ ನೆಡೆವ ಕಾರ್ಯಕ್ರಮಗಳಾಗಿರುವ, ವಾರ್ತೆಗಳಿವೆ. ಅಂತೂ ಭಾರತೀಯರೀಗ ತಮ್ಮ ವಾತಾವರಣ ಒಂದು ಕರ್ತವ್ಯವನ್ನು ಉತ್ಸವ ರೂಪದಿಂದ ಆಚರಿಸ ತಿದ್ದಾರೆ; ರಾಷ್ಟ್ರೀಯ ಮಹೋತ್ಸವ ವಾರದಲ್ಲಿದ್ದಾರೆ. ಈ ಮಂತ್ರಾತ್ಮಕ ಗೊಳ್ಳುವಾಗ ಭಾರತ ಭೂಮಿಯು 2 ಕೋಟಿ ಸಸಿಗಳ ಹೊಸ ಶೃಂಗಾರದಿಂದ ಶೋಭಿಸುವದೆಂಬ ನಿರೀಕ್ಷೆಯಿದೆ.

ಸಸಿ ಸಪ್ತಾಹವು ಒಂದೆರಡು ವರುಷಗಳಿಂದ ನಡೆದು ಬಂದಿದೆಯಾದರೂ-ಕಟ್ಟಡವೇ ಮೊದಲಾದುವುಗಳ ಶಂಕುಸ್ಥಾಪನೋತ್ಸವಗಳ ಅನುಭವ ಜನತೆಗಿದ್ದರೂ-ಮರಗಿಡಗಳನ್ನು ನೆಡುವುದಕ್ಕೂ ಇಂತಹ ಗದ್ದಲಬೇಕೆ, ಎಂದು ಸಾಹಾನ್ಯ ಹಳ್ಳೀ ರೈತ ಈಗ ಕೂಡಾ ಪ್ರಶ್ನಿಸುತಿದ್ದಾನೆ; ವೃಕ್ಷ ಸಸಿಗಳನ್ನು ನೆಡುವ ಹಾಗೂ ಅಧಿಕಾಹಾರ ಬೆಳೆಸುವ ಮೂಲ ಕ್ಷೇತ್ರವು ಹಳ್ಳಿಯಾಗಿದ್ದರೂ, ಅವುಗಳ ಸಂಬಂಧ ಪ್ರದರ್ಶನ ಗೊಂದಲಗಳು ಮಾತ್ರ ಪಟ್ಟಣಗಳಲ್ಲೇ ಎಂಬಂತಹ ಟೀಕೆಗಳೂ ಕೇಳಿ ಬರುತ್ತಿವೆ. ನಮ್ಮ ಜನ ಜೀವನದ ಎಲ್ಲಾ ರಂಗಗಳಲ್ಲೂ ಕೃತಕ ಪ್ರದರ್ಶನವೇ ಹೆಚ್ಚಾಗಿದ್ದು, ಜನತೆಗೆ ಅದೊಂದು ಅಭ್ಯಾಸವಾಗಿರುವಂತೆಯೆ, ಗಾಂಧಿ ವಿಚಾರವೇನನ್ನೂ ಮಾಡದೆ ಬೇಲಿಂದ ಬೆಳೆ ಟೀಕೆಸುವ ಚಟ ಕೂಡಾ ಜನರಲ್ಲಿ ವ್ಯಾಪಿಸಿ ಕೊಂಡಿದೆ ಆದ್ದರಿಂದ ವೃಕ್ಷ ಸಮೃದ್ಧಿ ಧ್ಯೇಯ ಪೂರ್ಣ ವನ ಮಹೋತ್ಸವಾಚರಣೆಯಲ್ಲಿ ಕೃತಕತೆಯಿರಬಾರದೆನ್ನುವಾಗಲೇ, ಆ ಸಂಬಂಧದ ವಿಚಾರ ವಿಮರ್ಶೆಗಳಲ್ಲೂ ಯಥಾರ್ಥತೆ ಇರಬೇಕೆಂಬುದನ್ನು ಮರೆಯಬಾರದು. ಇಡೀ ರಾಷ್ಟ್ರದಲ್ಲಿ ಹತ್ತಿಪ್ಪತ್ತು ಮಿಲಿಯ ಹೊಸ ಸಸಿಗಳು ತಲೆಯೆತ್ತುವಂತೆ ಮಾಡಬೇಕೆಂದೇ ಈ ಮಹೋತ್ಸವಾಚರಣೆಯ ಉದ್ದೇಶವಲ್ಲ; ಹಾಗಿರುವುದಿದ್ದರೆ ಈ ಕೆಲಸವನ್ನು ಪೌನಿಂಗ್ ಸಾಧಿಸಲು ಸರಕಾರಕ್ಕೆ ಸಾಧ್ಯವಿದ್ದಿತು. ಮರಗಳ ಮಹತ್ವವನ್ನು ಜನತೆಗೆ ಮಂದಟ್ಟು ಪಡಿಸುವ ಅವಶ್ಯಕತೆ ಕೂಡಾ ತೀರುವುದರಿಂದಲೇ ಅದು ಇಂದಿನ ಮಾದರಿಯ ಆಚರಣೆಗಳಿದಿದೆ. ಯುದ್ಧಾವಧಿ ಮತ್ತು ಆ ನಂತರದ ವರುಷಗಳಲ್ಲಿ" ಮರವಟ್ಟುಗಳಿಗೆ ಹಾಗೂ ಕಟ್ಟಿಗೆಗೆ ವಿಶೇಷ ಬೆಲೆಯಿದ್ದುದರಿಂದ ಕಾಡು ನಾಶವೆನ್ನೆಂದು ನಿರ್ದಾಕ್ಷಿಣ್ಯವಾಗಿ ನಡೆದಿತ್ತೆಂಬುದು ಸರ್ವರಿಗೂ ಮಾನವಂತೆಯಾಗಿರುವ ವಿಷಯ. ಭಾರತದ 1/5ನೇ ಭಾಗದಷ್ಟು ಭೂಮಿಯು ಕಾಡುಪ್ರದೇಶವೆಂದು ಊಹಿಸಲಾಗಿದೆ ಆ ಪೈಕಿ ಹೆಚ್ಚಿನ ಕಾಡುಗಳು ಮನುಷ್ಯೋಪಯೋಗಕ್ಕೆ ಬಿಲುಕದಂತಿವೆ; ಒಟ್ಟು ಅರಣ್ಯ ಸಂಪತ್ತಿನ ಸುಮಾರು ೨ನೇ ಅಂಶದಷ್ಟಿದ್ದ ಪಾಕಸೀ ಕಾಡುಗಳಂತೂ ಇಪ್ಪತ್ತರೊಳಗೆ ಬೆಚ್ಚಿನಂಶ ನಾಶವಾಗಿವೆ. ಯುದ್ಧ ಕಾಲದ ವಿಪರೀತ ಬೇಡಿಕೆ, ಬಡಜನರು ಹೆಚ್ಚಿರುವ ಮನೆಗಳಿಂದಿರಗಳ ರಚನೆ, ಕಟ್ಟಿಗೆ ಮೊದಲಾದುವುಗಳಿಗಾಗಿ ಕಳದ ವರುಷಗಳಲ್ಲಿ ಬೆಳೆದ ಮತ್ತು ಬೆಳೆಯದ ಮರಗಳ, ಮತ್ತಿತ್ತಮೂಲಕ ಭಾರತದ ಅರಣ್ಯ ಸಂಪತ್ತಿನ ಬುಡಕ್ಕೇನೇ ಕೊಡಲಿ ಬಿದ್ದಿದ್ದಿತು. ನನ್ನು ತಾತ್ಕಾಲಿಕ ಆವಶ್ಯಕತೆ ಮತ್ತು ಆಡಚಣೆಗಳಿದಿರಲ್ಲಿ ವೃಕ್ಷಗಳ ಇರಸ್ತಿಕೆಗೆ ಬೆಲೆಯಿಲ್ಲವೆಂಬ ಭಾವನೆಯಿಂದಲೇ ಇಂತಹ ಸರ್ವವ್ಯಾಪೀ ಪರಿಣಾಮಾವತಾರ ಕಂಡು ಬಂತು! ರಾಷ್ಟ್ರದ ಆರ್ಥಿಕ ಜೀವನ ಮತ್ತು ಆಹಾರ ನಿರ್ಮಾಣರಂಗದಲ್ಲಿ ಮರಗಳಿಗಿರುವ ಪ್ರಾಮುಖ್ಯತೆ ದೊಡ್ಡದಿರುವುದರಿಂದ, ಕಾಡುಗಳ ಅಭಾವದಿಂದಾಗಿ ಈ ಕ್ಷೇತ್ರಗಳಲ್ಲಾಗಿರುವ ಹಾನಿಯನ್ನು ನಿವಾರಿಸಬೇಕಾದರೆ, ವೃಕ್ಷಗಳ ಕಡಿತು ಅಸಹ್ಯ ತುಂಬಿರುವ ಜನಮನೋವೈಶಿಷ್ಟ್ಯವನ್ನು, ಆವುಗಳ ಅಭಿವೃದ್ಧಿಯ ಆಸಕ್ತಿಯಾಗಿ ಬದಲಾಯಿಸಬೇಕಾದುದು ಅಗತ್ಯ. ಅಂತಹ ಬದಲಾವಣೆಗೆ ಅನುಕೂಲವಾಗುವಂತೆ 'ವನಮಹೋತ್ಸವ' ದಂತಹ 'ಪ್ರಚಾರರೂಪೀ ಆಚರಣೆಗಳು ಅವಶ್ಯವಾಗಿ ಬೇಕು. ಈ ಪ್ರಚಾರವಾಹಕರೋ ವೇಟೆಪಟ್ಟಣಗಳಿಗಿಂತ ಹೆಚ್ಚಾಗಿ ಹಳ್ಳಿಗಳಲ್ಲಿ ನಡೆಯಬೇಕಿದ್ದು ತೆಂಗಿನಗಾಯಿ, ಬೆಂದು ಬಾಗಿಲ್ಲದಂತಹ ಕೆಲಸ, ಬೆಂಕಿ ಒಪ್ಪಿಸಿಕೊಂಡರೊ, ನಗರಗಳಲ್ಲಿ ನಡೆಯುವ ಪ್ರಚಾರಗಳಿಂದ ಅವುಗಳ ಸಂಬಂಧವಿರುವ ಹಳ್ಳಿಗರಲ್ಲೂ ಕೆಲವಂಶ ಜಾಗೃತಿಯಾದರೂ ಉಂಟೀತು ಹೊರತು ತೊಂದರೆಯೊದಗದೆಂಬುದಂತೂ ಸತ್ಯ. ಹೀಗಾಗಿ ಹಳ್ಳಿಗಳಲ್ಲಿ ಈ ಕಾರ್ಯ ನಡೆಯುವದು ಅಗತ್ಯವೆನ್ನುವಾಗಲೇ ಪಟ್ಟಣಗಳಲ್ಲಿ ಅನು ನಡೆಯುವ ಅವಶ್ಯಕತೆಯೇ ಇಲ್ಲವೆಂಬ ಅರ್ಥವಲ್ಲ ಇನ್ನೊಂದು ದೃಷ್ಟಿಯಿಂದ ನೋಡಿದಾಗ, ಸಸಿ ನೆಡುವಂತಹ ಕಾರ್ಯ ಜಾಗೃತಿಯನ್ನು ಪಟ್ಟಣಿಗರಲ್ಲಿ ಹುಟ್ಟಿಸುವ ಆವಶ್ಯಕತೆಯಿರುವಷ್ಟು ಹಳ್ಳಿಗರ ಮಟ್ಟಿಗಿಲ್ಲವೆಂದು ಕಾಣುತ್ತಿದೆ. ಹಳ್ಳೀ ರೈತನಲ್ಲದು ಹುಟ್ಟು ಗುಣವಾಗಿ ಬೆಳೆದು ಬಂದಿದೆ. ತಮ್ಮ ಜನ್ಮಸಿದ್ಧ ಕಾರ್ಯಭಾರದ ನಟನೆಯನ್ನು ನಗರವಾಸಿಗಳೂ ಮಾಡುತಿದ್ದಾರೆಂದು ಪಂಡಾಸ್ಯ ಮಾಡುವ ಬದಲಿಗೆ, ಈ ಮಟ್ಟಿಗಾದರೂ ಅವರೂ ತಮ್ಮ ಸಾಲಿಗೆ ಬಂದರೆಂಬ ಹೆಗ್ಗಳಿಕೆಯಿಂದಲೇ ಗ್ರಾಮ ವಾಸಿಗಳು ಯಾವದೇ ಪ್ರಚಾರ, ಪ್ರೋತ್ಸಾಹಗಳಿಗಾಗಿ ಕಾಯದೆ ತಮ್ಮ ಕರ್ತವ್ಯವನ್ನು ಇನ್ನಷ್ಟು ಉತ್ಸಾಹದಿಂದ ನಿರ್ವಹಿಸಬೇಕು; ಆ ಮೂಲಕ ಈ ಮಹೋತ್ಸವವನ್ನು ಪೂರ್ಣ ಜಯಶೀಲ ಗೊಳಿಸಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಬೇಸಾಯ ಗಾರರ ಪಾಲಿಗೆ ಗದ್ದೇ ಸಾಗುವಳಿಯ ಅವಧಿಯಲ್ಲೇ 'ವನ ಮಹೋತ್ಸವ' ವೆಂದೂ ಒಂದಿರುವುದರಿಂದ ಆಚರಣೆಗೆ ತೊಡರುಂಟಾಗಿದೆ. ಇಂಥವಂಟಿಗೆ ವನ ಮಹೋತ್ಸವಾಚರಣೆಯ ಅವಧಿಯನ್ನು ಮುಂದುವರಿಸಿ ಅವರಾಸಾನುಕೂಲತೆಯೊದಗಿಸಲಾಗಿದೆ. ಉತ್ಸವಾನಂತರದ ಉದ್ಯೋಗವನ್ನು ಮರೆತುದರ ಫಲವಾಗಿ ನೆಟ್ಟ ಸಸಿಗಳು ಬೆಸ್ಸಲ್ಲೇ ನಾಶವಾಗಿ ಹೋಗಿದ್ದ ಹಿಂದಿನ ವರ್ಷಗಳ ಅನುಭವದ ಮೇಲಿಂದ, ಈ ಬಾರಿ ಅಲ್ಪಕಾಲ ಕಡೆಗೆ ವಿಶೇಷ ಗಮನ ಕೊಡಲಾಗಿದೆ. ಆದರೂ ವೃಕ್ಷಾಭಿವೃದ್ಧಿ ಚಳವಳಿಯು ಅಧಿಕಾರಿ ರಂಗ ಮತ್ತು ನಗರ ಕ್ಷೇತ್ರಗಳಲ್ಲಿ ಸಾಕಷ್ಟು ಪರಣಾಮಕಾರಿಯಾಗಿ ಮತ್ತು ಅನುಭವವನ್ನು ಧರಿಸಿ ನಡೆದಿದೆ; ಈ ಮಟ್ಟಿಗೆ ಇಂತಹ ಆಂದೋಲನದಿಂದ ಕಲಿಯುವಂತಹ ಅಂಶವನ್ನೂ ಹಳ್ಳಿಗರು ಪಾಲಿಗಿಲ್ಲದಿರುವುದರಿಂದ ಅವರು ಸ್ವೇಚ್ಛೆಯಿಂದ ಕಾರ್ಯಪ್ರವೃತ್ತರಾಗಬಹುದು. ಆದ್ದರಿಂದ ಎಲ್ಲಾ ತಂತ್ರಗಳ ಪಾಲಿನ ಕರ್ತವ್ಯವನ್ನು ನಿರ್ವಹಿಸಿ, ವನಮಹೋತ್ಸವವನ್ನು ಸಂಪೂರ್ಣ ಸಾರ್ಥಕಗೊಳಿಸಲಿ- ಆರಂಭಿಸಿದ ತಾ೧೦ರು ಅಂತ್ಯಗೊಳ್ಳುವನರೊಳಗೆ ಒಂದೊಂದು ಸಸಿ ನೆಡುವ ಮೂಲಕ, ಮತ್ತಿತರ ಆಧ್ಯೆಕೆಯ ಭಾರ ಹೊರುವ ಮೂಲಕ ಪ್ರತಿಯೊಬ್ಬನೂ ಕಾರ್ಯಭಾಗಿಯಾಗುದು ಕಂಡು ಬರಲಿ-ಎಂದು ಹಾರೈಸುತ್ತೇವೆ.

ದಕ್ಷಿಣಕನ್ನಡದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಯ ಫಲಿತಾಂಶ:

ಕಳದ ತಾ. 30ರಲ್ಲು ದಕ್ಷಿಣ ಕನ್ನಡ ಜಿಲ್ಲೆಯ ಐದು ಸರ್ಕಲುಗಳಲ್ಲಿ ನಡೆದ ಚುನಾವಣೆಗಳ ಫಲಿತಾಂಶ:-] ಪುತ್ತೂರು ಸರ್ಕಲ್-ಶ್ರೀ ಕೆ. ಆರ್. ಕಾಂತ, ಎಲ್.ಎಲ್.ಬಿ. 2 ಪಾಣೆಮಂಗಳೂರು ಸರ್ಕಲ್-ಶ್ರೀ ಬಿ. ಅನಂತಯ್ಯ, 3 ಹೊಸಬಂಗಡಿ ಸರ್ಕಲ್-ಶ್ರೀ ಕೇಶವ ಮಿಜಾರ್, 4 ಮಂಗಳೂರು ಸರ್ಕಲ್-ಶ್ರೀ ಬಿ. ಆರ್. ಕರ್ಕೇರ, 5 ಕಾರ್ಕಳ ಸರ್ಕಲ್ ಶ್ರೀ ಎಮ್. ಡಿ. ಅಧಿಕಾರಿ.

ಸ್ವಚ್ಛತೆಯ ಪ್ರಭಾವ!

ಸಾಮಾನ್ಯವಾಗಿ ನಡೆಯುವ ಮಹಾ ಘಟನೆ ಕೂಡಾ ಸರ್ವ ಸಾಮಾನ್ಯವಾಗಿ ಹೀಗೆ ಕಡೆಗಣಿಸಲ್ಪಟ್ಟಿತ್ತು-ಪ್ರಪಂಚ ಗದ್ದಲದೊಡನೆ ನಡೆಯುವ ಅಲ್ಪ ಸಂಗತಿಗಳಾದರೂ ಹೇಗೆ ಮಹತ್ವಾಗಿ ಕಾಣುತ್ತಿದೆ-ಎಂಬುದಕ್ಕೆ ಜೀವಂತ ದೃಷ್ಟಾಂತಗಳು ಈಗ ಕಣ್ಣು ಮುಂದಿವೆ.

ಕೊರಿಯಾ ಯುದ್ಧದತ್ತ ನೋಡುತ್ತಾ, ದಕ್ಷಿಣ ಕೊರಿಯಕ್ಕೆ ಅಮೆರಿಕವು ಕೊಡುತ್ತಿರುವ ನೆಲ, ಜಲ, ಆಕಾಶ ಸೇನೆಗಳ ಸಹಾಯ 53 ರಾಷ್ಟ್ರಗಳ ಬೆಂಬಲ, ಮೊದಲಾದ ವಿಶೇಷ ಸುದ್ದಿಗಳಿಂದ ಉತ್ಕರ್ಷ ಕೊರಿಯದ ಅವಸ್ಥೆ ಮುಗಿದಂತೆಯೇ ಎಂಬ ಭಾವನೆಯುಂಟಾಗಬೇಕು. ಆದರೆ ಪ್ರತ್ಯಕ್ಷ ಯುದ್ಧ ಕಣದಲ್ಲಿ ದ. ಕೊರಿಯದ ರಾಜಧಾನಿ ಮತ್ತು ಪ್ರಾಮುಖ್ಯ ಸ್ಥಳಗಳನ್ನೂ ಆಯಕಟ್ಟು ನೆಲೆಗಳನ್ನೂ ಮಿಂಚು ವೇಗದಿಂದ ವಶಪಡಿಸಿಕೊಂಡು ಉತ್ತರ ಕೊರಿಯ ಸೈನ್ಯವು ಅತಿ ಸುಲಭದಲ್ಲಿ ಮುಂದುಳಿತ್ತಾ ಬಂದಿದೆ. ಈ ವಿಜಯದುನ್ಮಾದಗುಣವಾದ ಸ್ವಪ್ರಚಾರ ಡಂಗುರವು ಕವಚ್ಯಾನಿಸ್ಸ್ ಕಡೆಯಿಂದ ಕೇಳಿ ಬರುತಿದ್ದರೂ ದ. ಕೊರಿಯದ ಕಥೆ ಮುಗಿಯಿತೆಂದು ತೀರ್ಮಾನಿಸಿಕೊಳ್ಳುವಂತಾಗುತಿತ್ತು.

ಅಧ್ಯಕ್ಷ ರೂಸ್‌ವೇಲ್ಟ್ ಸ್ವಸಂದ್ಯು ಮತ್ತು ಪ್ರಧಾನಿ ನೆಹರುಗಳು ರಾಷ್ಟ್ರಪಿತನ ಸಮಾಧಿ ಬಳಿ ತುಳಸೀ ಗಿಡಗಳನ್ನು ನೆಡುವುದರೊಂದಿಗೆ 'ವನಮಹೋತ್ಸವ'ನ್ನಾರಂಭಿಸಿದ್ದರು. ಹಿಂದುಗಳ ಧಾರ್ಮಿಕ ಭಾವನೆಯೆಂದಲ್ಲವೆನ್ನೆ, ವೃಕ್ಷಾಭಿವೃದ್ಧಿ ಕಾರ್ಯಕ್ರಮದಲ್ಲಿ ತುಳಸೀ ಗಿಡಕ್ಕೆನ ಪ್ರಾಮುಖ್ಯ ಸ್ಥಾನವೂ ಇಲ್ಲ. ಈ ಘಟನೆಯು ಹಿಂದೂಮಹಾಸಭೆಯಂಥವರ ಜಳವದ ಪ್ರತಿಫಲವೆಂದು ನಡೆಯುತಿದ್ದರೆ ಎಂತಪ ರೂಪ ಬರುತಿತ್ತೊ!

ಆಶ್ರಿತ ರಾಜರು ಮತ್ತು ಜಮೀನ್ದಾರರ ಹಳ್ಳಿ ಬಾಧ್ಯತೆಗಳನ್ನು ಇಂದಿನಂತೆ ಮೌನ ಕಾರ್ಯಗಳ ಮೂಲಕ ಕಳ್ಳರಿಸಿ ಹಾಕುವ ಬದಲಿಗೆ ಕಮ್ಯೂನಿಸ್ಟರೋ, ಸೋಶಿಯಲಿಸ್ಟರೋ ಕ್ರಾಂತಿಯಬ್ಬಿಸಿ ಸಾಧಿಸುತಿದ್ದರೆ, ಅದೆಂತಹ ಆಧ್ವಾನವನ್ನು ಸೃಷ್ಟಿಸುತ್ತೊ!

'ಉದ್ದಿಮೆಗಳ ರಾಷ್ಟ್ರೀಕರಣ' ಮತ್ತು ಮೂಲ ವಿತರಣ'ಗಳ ಗಂಭೀರ ತತ್ವಗಳ ಗದ್ದಲ ಕೇಳಿ ಬರುತ್ತಿರವಾಗ, ಎಲ್ಲರ ಜಾಲಿನ ಮಿಶ್ರ ಸ್ವಾಮ್ಯಗಳಾಗಿರುವ ಆಹಾರದ ರಾಷ್ಟ್ರೀಕರಣ ಮತ್ತು ಸಮಾನ ವಿತರಣಾ ನಿಯಂತ್ರಣವು ಚಳವಳವೊಂದರ ಪ್ರತಿಫಲವಾಗಿ ಜನರಿಗೆ ಬರುತಿದ್ದರೆ?

ಮುಸ್ಲಿಮರಿಗೆ ಪ್ರತ್ಯೇಕ ಮತಾಧಿಕಾರಕ್ಕಾಗಿ ಹೋರಾಡಿದ್ದ ಚಳವಳ- ಹರಿಜನರಿಗೂ ಪ್ರತ್ಯೇಕ ಮತದಾನದ ಹಕ್ಕು ಕೊಡಲ್ಪಟ್ಟಾಗ ಗಾಂಧೀಜೀ ಕೈಕೊಂಡಿದ್ದ ಸುಗಾಣವಧಿ ಉಪವಾಸ- ಇತ್ಯಾದಿಗಳನ್ನೆಲ್ಲಾ ಜ್ಞಾಪಿಸಿಕೊಂಡರೆ, ಈಗ ಯಾವ ರಂಪಾಟವೂ ಇಲ್ಲದೆ ಪ್ರತ್ಯೇಕ ಮತಾಧಿಕಾರ ಮತ್ತು ಸ್ಥಾನ ಕಾಯ್ದಿರಿಸುವ ಪದ್ಧತಿ ಕೂಡಾ ರದ್ದಾಗಿ ಹೋಗಿರುವ ಬದಲಾವಣೆ ಹೇಗನ್ನಿಸುತ್ತೆ?

ಇಂದು ಅಧಿಕಾರ ಸ್ಥಾನಪಲ್ಲಿರುವವರೂ ನಾವಾ ವೇಷಭೂಷಣಗಳನ್ನು ತೊಡುತ್ತಿರುವುದೂ ಪೆಚ್ಚುಹೆಚ್ಚಾಗಿ ತೋರಿಬರುತ್ತಿದೆ. ಬಿಳಿಜನರೂ 'ಜೈಹಿಂದ್!' ಹಾಕಹತ್ತಿರುವುದು ಕೇಳಿಬರುತ್ತಿದೆ; ತಮ್ಮ ಬಿ.ಬಾ ಬಾವಲಿಗಳನ್ನು ನವೀಕರಿಸಿದ ಸ್ವೇಚ್ಛೆಯಿಂದಲೇ ಸಾಧಾ ಮನುಷ್ಯರಂಗಿರುವವರು ಕಂಡು ಬರುತಿದ್ದಾರೆ. ಇವೆಲ್ಲಾ ಕಾರ್ಯಕರ್ತನೆಗಳಿಗಾಗಿ ಹಿಂದಿನ ಕಾಲದಲ್ಲಾ ನಡೆದಿದ್ದ ಚಳವಳಗಳನ್ನು ನೆನಸುವಾಗ ಈಗ ಮೌನ ಪ್ರಸ್ತುತವಾಗಿರುವ ಈ ಸುಧಾರಣೆಗಳು ಹೇಗೆ ತೋರುತ್ತಿವೆ?

[ಸನೇ ಮುಟ್ಟದಿಂದ ಮುಂದರಿದು]

ಯಿಂದ ಕೆಲಸ ಮಾಡುವಿರೆಂದೂ, ನಿಮ್ಮ ಕರ್ತವ್ಯ ಮಾಡಿದಿರೆಂಬ ಆತ್ಮ ಸಮಾಧಾನವೊಂದನ್ನೇ ನೀವು ಪ್ರತಿಫಲವಾಗಿ ಬಯಸುವಿರೆಂದೂ ನಾನು ಆಶಿಸುತ್ತೇನೆ" ಎಂದು ಜೈಪ್ರಕಾಶರು ತನ್ನ ಪಕ್ಷೇಯರನ್ನು ಹುರಿದುಂಬಿಸಿದ್ದಾರೆ.

ವಿಚಾರಾರ್ಹ ಅಂಶಗಳು

ತಾವು ಅಧಿಕಾರಕ್ಕೆ ಬಂದರೆ ಸಮತಾವಾದಿ ಪಕ್ಷೇಯರು ಜಾರಿಗೆ ತರಲಿಚ್ಛಿಸುವ ಕಾರ್ಯಕ್ರಮಗಳನ್ನು ವೇತ್ತು ಸಮತಾವಾದಿ ಪಕ್ಷಕ್ಕೆ ಕಾರ್ಯಸ್ಫೂರ್ತಿ ಕೊಡುವ ಜೈಪ್ರಕಾಶ್ ನಾರಾಯಣರ ಅಭಿವ್ಯಾಯಗಳನ್ನು ಕಾಂಗ್ರೆಸಿನ ಧ್ಯೇಯ, ಧೋರಣೆ, ಕಾರ್ಯಕ್ರಮಗಳೊಡನೆ ತುಲನೆ ಮಾಡಿಯೇ ತೀರ್ಮಾನಕ್ಕೆ ಬರುವುದು ಸಾರ್ವಜನಿಕರ ಕರ್ತವ್ಯವಿದೆ.

ಕಾಂಗ್ರೆಸಿನ ಕಡೆಗೆ ಎಂತಹ ಆಕ್ಷೇಪ ಇದ್ದರೂ ಅದಕ್ಕೆ ದಿಢೀರಿ, ಸ್ವಪ್ನ ಧ್ಯೇಯ, ಕಾರ್ಯಕ್ರಮಗಳುಳ್ಳ ಶಕ್ತ ಪಕ್ಷವೊಂದು ಕಂಡು ಬರುತ್ತಿಲ್ಲವೆಂಬ ಪರಿಸ್ಥಿತ್ಯಾಸವು ಜನತೆಯಲ್ಲಿ ಹಬ್ಬಿರುವಾಗ ಮೇಲಿನ ಗುರಿ, ಧೋರಣೆ, ಕಾರ್ಯಕ್ರಮಗಳೊಡನೆ ಸಕಾಲದಲ್ಲಿ ಮುಂದೆ ಬಂದ ಜೈಪ್ರಕಾಶ ನಾರಾಯಣರನ್ನು ಮತ್ತವರ ಸಮತಾವಾದಿ ಪಕ್ಷವನ್ನು ಪ್ರಥಮತಃ ಅಭಿನಂದಿಸಬೇಕಾಗಿದೆ. ನಿರಂಕುಶ, ಏಕ ತಂತ್ರಾಧಿಕಾರವು ಪ್ರಜಾಸತ್ತೆಯ ಸಾರ್ಥಕತೆಗೆ ಸಂಚಾರ ನ್ಯಾಯವಿರುವುದರಿಂದ ಇಂತಹ ಇದಿರು ವಾದಿತ್ವವಿರಬೇಕಾದದ್ದು ಅಗತ್ಯ.

ಭೂಮಿ ಅಡಳಿತ ಕಾರ್ಯಕ್ರಮಗಳೆಂಬ ಒಂದು ಗಡಿಯಾಚೆಯ ವಿಧಾನಗಳಾಗಿ ಸಮತಾವಾದಿ ಪಕ್ಷವು ಮುಂದಿಟ್ಟಿರುವ ಸೂತ್ರಗಳು ಪ್ರಗತಿ ಶೀಲವಿರುವಂತೆಯೇ ಆಚರಣೆಗೆ ಸಾಧ್ಯವಿರುವವುಗಳೆಂಬುದೂ ನಿಜ. ಆದರೆ ಕಾಂಗ್ರೆಸಿನ ಧ್ಯೇಯ, ಧೋರಣೆ ಮತ್ತು ಚಿ-ನ-ವಣಾ ಘೋಷಣೆಗಳನ್ನು ಇವುಗಳೊಡನೆ ಪೂರ್ಣ ನೆ ಮಾಡಿ ನೋಡಿದರೆ ಇವೆರಡರೊಳಗೆ ಕರೋರೀ-ಮೃದು ಪದಪ್ರಯೋಗಗಳ ವ್ಯತ್ಯಾಸವನ್ನೇ ಹೊರತು ಅರ್ಥ ವ್ಯತ್ಯಾಸ ಕಾಣುವದಿಲ್ಲ.

ಜವಿನ್ನಾವಿಗಳಿಗಾಗಿ ಜವೀನ್ನಾರರಿಗೆ ಪರಿಹಾರ ಕೊಡಬಾರದು-ಉತ್ಪನ್ನ 'ಭೂಮಾಲಕತ್ವ ಮಂತಾದುವುಗಳಲ್ಲಿ ಕನಿಷ್ಠ ಮತ್ತು ಹರಮಾಪಧಿಯ ಮಿತಿ ನಿರ್ಣಯಿಸಿ ಸಮಾನ ಮಟ್ಟ ಸ್ಥಾಪಿಸಬೇಕು.—ಬೇಂಕು, ಇನ್ಸೂರೆನ್ಸ್ ಮತ್ತಿತರ ಮೂಲೋದ್ಯಮ ವಹಿವಾಟುಗಳ ರಾಷ್ಟ್ರೀಕರಣವಾಗಬೇಕು ಹಾಗೂ ಮಿಕ್ಕ ಉದ್ಯಮವ್ಯಾಪಾರಗಳ ಮೇಲೆ ಸರಕಾರೀ ನಿಯಂತ್ರಣ ಬೇಳಬೇಕು'— ಮುಂತಾದ ಸಮತಾವಾದಿ ವಿಧಾನಗಳು ಕಾಂಗ್ರೆಸಿನ ಪ್ರಗತಿಶೀಲ ಕಾರ್ಯ ರೀತಿಗಳಿಗಿಂತ ಪ್ರಗತಿಶೀಲ ಮತ್ತು ಪ್ರತ್ಯೇಕವಾಗಿರುವುದು ನಿಜವಾದರೂ ಕಾಂಗ್ರೆಸಿನ ನಿಶ್ಚಿತ ಗುರಿ ಕೂಡಾ ಇದೇ ಮಟ್ಟದಲ್ಲಿದೆಯೆಂಬುದನ್ನು ಮರೆಯಬಾರದು. ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳು ಕಾಂಗ್ರೆಸ್—ಸೋವಿಯಾಲಿಸ್ಟ್ ಕಾರ್ಯಕ್ರಮಗಳಲ್ಲಿ ಕಂಡು ಬಂದರೂ ಅವು ಅಷ್ಟು ಗಣ್ಯವಲ್ಲ.

ಆದ್ದರಿಂದ ಕಾಂಗ್ರೆಸಿನ ಗುರಿಗಿಂತ ಅತ್ಯುತ್ಕೃಷ್ಟವಾದ ಗುರಿಯು ಸಮತಾವಾದಿ ಪಕ್ಷದ್ದೆನ್ನಲು ಬರುವುದಿಲ್ಲ. ತರುಳು ಮತ್ತು ಆರ್ಥದಲ್ಲಾದ ಬದಲಾವಣೆಯನ್ನೂ ಮಾಡದೇನೇ ಕಾಂಗ್ರೆಸ್ ಕೂಡಾ ತನ್ನ ಧ್ಯೇಯ, ಧೋರಣೆ, ಕಾರ್ಯಕ್ರಮಗಳ ಸಂಬಂಧವಾಗಿ ಸಮತಾವಾದಿಗಳಷ್ಟೇ ಉಜ್ವಲವಾದ ಘೋಷಣೆಯನ್ನು ಜೊರ ದಿಸಲು ಸಾಧ್ಯವಿದೆ.

ಆಂದ ಮೇಲೆ ಇಷ್ಟೇಗ ಏಳುವ ಪ್ರಶ್ನೆಗಳಿಷ್ಟೇ ಕಾಂಗ್ರೆಸು ತನ್ನ ಆದರ್ಶವಾಗಿ ಇಟ್ಟುಕೊಂಡಿರುವುದನ್ನು ಆಚರಣೆಯಲ್ಲಿ ತರಲು ಅಶಕ್ತವಾಗಿದೆ— ಕಾಂಗ್ರೆಸಿನಲ್ಲಿ ಸ್ವಾರ್ಥಿ, ಶ್ರೀಮಂತರು ಹೆಚ್ಚಾಗಿ ಸೇರಿಕೊಂಡುದರಿಂದಲೇ ಹೀಗಾಯಿತೋ ಅಥವಾ ಪರಿಸ್ಥಿತಿಯ ಮೇಲಿಂದಲೋ ದೊಡ್ಡ ದೊಡ್ಡ ತತ್ವಗಳನ್ನು ಘೋಷಿಸಿದ್ದ ಕಾಂಗ್ರೆಸಿಗರಿಗೆ, ಅವುಗಳನ್ನು ಕಾರ್ಯತಃ ಜಾರಿಗೆ ತರುವ ಸಂದರ್ಭ ಬಂದಾಗ ಹಾಗೆ ಮಾಡಲು ಸಾಧ್ಯವಾಗಿಲ್ಲ, ಅಥವಾ ಮನಸ್ಸುಬಂದಿಲ್ಲ—ಈಗ ಮಹಾಮಹಾ ತತ್ವ ಘೋಷಣೆ ಮಾಡುತ್ತಿರುವ ಸಮತಾವಾದಿಗಳಿಗೆ ಅಂತಹ ಸಂದರ್ಭವೊದಗಿದರೆ ಇವರಿಷ್ಟಕ್ಕೂ ಕಾಂಗ್ರೆಸಿಗರಂತಾಗಲಾರರೆಂಬುದು ನಿಜವೆ?

ಈ ಪ್ರಶ್ನೆಗಳುಳ್ಳ ಪರೀಕ್ಷೆಯಲ್ಲಿ ಸಮತಾವಾದಿಗಳು ನಿಸ್ಸಂದೇಹವಾಗಿ ಪಾಸಾಗುವರೆಂಬ ಭರವಸೆಯಿಲ್ಲ. ಕಾರಣವೆಂದರೆ ಇದು ಯೋಗ್ಯತೆ ಮೇಲಿನ ಪ್ರಶ್ನೆ. ಎಷ್ಟೇ ಹಾಳಾಗಿದ್ದರೂ ಕಾಂಗ್ರೆಸು ಗತಕಾಲದ ಜನತಾ ಸೇವೆಯಿಂದ ಗಳಿಸಿಕೊಂಡಿರುವ ಯೋಗ್ಯತೆ ಮತ್ತು ವರ್ಚಸ್ಸು ಹೆಚ್ಚಿನದು. ನೆಹರು, ವಲ್ಲಭಭಾಯಿಗಳಂತಹ ಜನತಾ ವಿಶ್ವಾಸಪಾತ್ರ ಸಮರ್ಥರಿರುವುದು ಕಾಂಗ್ರೆಸಿನ ಮಹಾನುಕೂಲತೆ. ಈ ದೃಷ್ಟಿಯಿಂದ ಕಾಂಗ್ರೆಸಿನಿದಿರು ಸಮತಾವಾದಿ ಪಕ್ಷವು ತೀರಾ ತೆಂದಾಗಿ ತೋರುತ್ತಿದೆ.

ಆದರೆ ಜೈಪ್ರಕಾಶ್, ಮೆಹತಾ, ನೆರೇಂದ್ರ ದೇವೋರಂತಹ ಸುಯೋಗ್ಯ ಸಮತಾವಾದಿ ನಾಯಕರು ಸಂದರ್ಭ ಬೆರೆತರೆ ತಮ್ಮ ತತ್ವಾನುಗುಣವಾಗಿ ಹೊಸ ನಿರ್ವಹಿಸಬಲ್ಲವರೆಂಬುದು ನಿರ್ವಿವಾದ. ಜನತಾರಂಗದಲ್ಲಿ ಪ್ರತಿಕ್ಷ ದುಡಿದು ಇಡೀ ರಾಷ್ಟ್ರದ ಮೂಲೆಮೂಲೆಗಳ ಜನರ ಹೃದಯದಲ್ಲೂ ತಮ್ಮ ಧೋರಣೆಯ ಮುದ್ರೆಯೊತ್ತಲು ಸಮತಾವಾದಿಗಳು ಶಕ್ತರಾಗಬೇಕಾದುದೇ ಈ ಮಧ್ಯಾವಧಿಯ ಮೂಲ ಅವಶ್ಯಕತೆ.

ಇನ್ನೂ ಕಾಲಾವಕಾಶವಿರುವುದರಿಂದ ಕಾಂಗ್ರೆಸ್—ಸಮತಾವಾದಿ ಸ್ಪಷ್ಟ ತೂಕವನ್ನು ಜನತೆಯ ಕಾಲದಲ್ಲೇ ಮಾಡಬಹುದು.

ಸಮತಾವಾದಿ ನಾಯಕ ಮೆಹರಾಲಿ ತನ್ನ 44ನೇ ವಯಸ್ಸಿನಲ್ಲಿ ಹೃದ್ರೋಗದಿಂದ ಇದೇ ತಾ. 1ರಲ್ಲಿ ಬೊಂಬಾಯಿಯಲ್ಲಿ ನಿಧನಗೊಂದರು.

ಕುಂದಾಪುರ-ಕೋಟೇಶ್ವರೇಟ್ ನೀರು ನಿಯಂತ್ರಣ ಇನ್ಸ್‌ಪೆಕ್ಟರಾಗಿದ್ದು, ಆ ಕ್ಷೇತ್ರದಲ್ಲಿ ಇಡೀ ಜಿಲ್ಲೆಯಲ್ಲೆ ಜನಪ್ರಿಯರಾದ ಶ್ರೀ ಬಿ. ರಮಣಾಚಾರ್, ಅವರು ತನ್ನ 52ನೇ ವಯಸ್ಸಿನಲ್ಲಿ ಇನ್‌ಫ್ಲುಯೆಂಝಾ ಜ್ವರದಿಂದ ಇದೇ ಜುಲಾಯಿ ತಾ. 2ರಲ್ಲಿ ಪರಲೋಕವಾಸಿಗಳಾದರೆನ್ನಲು ವಿಷಾದಿಸುತ್ತೇವೆ.

ಬಿಲ್ಲವರ ಸೇವಾ ಸಂಘ, (ರಜಿಸ್ಟರ್ಡ್) ಉಡುಪಿ.

ಪ್ರಕಟಣೆ

1950ನೇ ಇಸವಿ ಜುಲಾಯಿ ತಿಂಗಳ ತಾ. 2ರಲ್ಲಿ ಉಡುಪಿ ಬಿಲ್ಲವರ ಸೇವಾ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಸಂಘದ ಆಧ್ಯಕ್ಷ ಶ್ರೀ ಸಿ. ಐತಪ್ಪನವರ ಆಧ್ಯಕ್ಷತೆಯಲ್ಲಿ ಮಧ್ಯಾಹ್ನ 2½ ಗಂಟೆಗೆ ಸರಿಯಾಗಿ ಸೇರಿತ್ತು. ಎರಡು ವರುಷಗಳ ಹಿಂದೆ ಸಂಘಕ್ಕೆ ಬಂದ ಒಂದು ಅರ್ಜಿಯನ್ನು ವಿಚಾರಿಸುವರೆ ಈ ದಿನ ನೆರೆಗ್ರಾಮದ ಎಲ್ಲಾ ಗುರಿಕಾರರು ಕೂಡಬೇಕೆಂದು ರಜಿಸ್ಟ್ರಿ ಪತ್ರ ಸೋಟಿಸು ಕೊಟ್ಟ ಪ್ರಕಾರ ಈ ಸಭೆಯು ಸದ್ರಿ ಅರ್ಜಿದಾರರಾದ ಸೀತು ಮತ್ತು ನರ್ಸ ಪೂಜಾರ್ತಿಯರ ಕುಟುಂಬವನ್ನು ತಾರೀಕು 7-7-50ನೇ ರುಕ್ರವಾರ ರುದ್ದಿಕಂಡ ಮಾಡಿ ಸಭೆಗೆ ಸೇರಿಸಿಕೊಳ್ಳಬಹುದೆಂದು ಕೂಡಿದ ಗುರಿಕಾರರು ತೀರ್ಮಾನಿಸಿದುದನ್ನು ಸಭೆಯು ಒಮ್ಮತದಿಂದ ಒಪ್ಪಿಕೊಂಡಿದೆ. ಈ ಸಂಬಂಧ ತಾ. 7—7—50ರಲ್ಲಿ ಮಧ್ಯಾಹ್ನ 2½ ಗಂಟೆಗೆ ಸಂಘದ ಭಜನಾಮಂದಿರದಲ್ಲಿ ಸಭೆ ಸೇರುವುದೆಂದು ಜಾಹೀರು ಮಾಡೋಣಾಗಿಯಿದೆ.

ಪುತ್ತೂರು ಡಿ ಮು ಕೋರ್ಟಿನಲ್ಲಿ

O P. No. 26/1950.

I. ಯಸ್. ಮಂಜುನಾಥ ರೈ 2. ಸುನಂದಾ (ಸುಮಾರು 12 ವರ್ಷ ಪ್ರಾಯದ ಮ್ಯಾನರ) ಕುಂಞಿಕ್ಕೆ ಹೆಂಗ್ಸಿನ ಮಕ್ಕಳು. 2ನೇ ಯವನ ರಕ್ಷಕ ವಂದನೇಯವ. ವಂದನೇಯವನು ತನ್ನ ಭಾಗದ ಕುಟುಂಬದ ಯಜಮಾನ ವ್ಯಆಡಳಿದ್ದಾರೆ. ಪುತ್ತೂರು ತಾಲೂಕು ಸರ್ವ ಗ್ರಾಮದ ಸೊರಕೆ-ಅರ್ಜಿದಾರ್ರು.

ಅರ್ಜಿದಾರರ ಸಹೋದರ ಅಂಣ ಪುತ್ತೂರು ತಾಲೋಕು ಪುಣಚಪಾಡಿ ಬೋರ್ಡು ಎಲಿಮೆಂಟರಿ ಶಾಲಾ ಉಪಾಧ್ಯಾಯನಾಗಿರುತ್ತಿದ್ದ ಹಾರಿ ಮೃತಪಟ್ಟ ಯಸ್. ತೀನಪ್ಪ ರೈಗೆ ಆತ ಮೃತಪಟ್ಟ ವರೆಗಿನ ತಲಂಬಿನ ಬಾಬ್ತು ಆತಗೆ ಸಲ್ಯಾಸುವರಿ ಪುಣಚಪಾಡಿ ಸಂಚ್ಯಾತ ಬೋರ್ಡಿಗೆ ಗವರ್ನಮೆಂಟಿನಿಂದ ಸೆಂಕ್ಷನ್ ಮಾಡಲ್ಪಟ್ಟು ಮೃತ ತೀನಪ್ಪರೈ ಲಿಖಕ್ಕೆ ಪುಣಚಪಾಡಿ ಸಂಚ್ಯಾತ ಬೋರ್ಡು ಪ್ರೆಸಿಡೆಂಟರ ವಶ ಡಿಪೋಜಿಟ್ ಯಿರುವ ರೂಪಾಯ 368 5.0ರ ವಸೂಲಿಯ ಬಗ್ಗೆ ಸದ್ರಿ ತೀನಪ್ಪರೈಯ ವಾರಿಸ್ದಾರರಾದ ಮೇಲ್ಕಂಡ ಅರ್ಜಿದಾರ್ರಗೋಸ್ಕರ ಭಾಗವ ಯಜಮಾನ ವ್ಯಆಡಳಿದ್ದಾರರಾದ ವಂದನೇ ಅರ್ಜಿದಾರ ವಾರಿಗೆ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕಾಕ್ಟು ಮಾಡಿದ ಮೇರಿಗೆ ಅರ್ಜಿಯು ತಾರೀಕು 14-7-1950ನೇ ದಿವಸ ಯೂ ಕೋರ್ಟಿನಲ್ಲಿ ತಕ್ಕಗೆ ಯಿದ್ದದೆ. ಆ ಕುರಿತು ಅಕ್ಷೇಪ ಉಳ್ಳವರು ತಮ್ಮ ಅಕ್ಷೇಪಗಳನ್ನು ಸದ್ರಿ ವ್ಯಾದೆಯ ದಿನ್ನ ಪಗಲು ಘಂಟೆ 11ಕೆ ಯೂ ಕೋರ್ಟು ಮುಂಜಿ ಯುದ್ದು ಯಾವಕಿಲತ ಮುಖಾಂತರ ಹಾಜರಾಗಿ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು ಯೆಂತ ಈ ಮೂಲಕ ತಿಳಿಸೋಡಾಗಿಯಿದೆ.

K, Sanjiva Shetty,
Advocate for Petrs.

ಪುತ್ತೂರು, ತಾರೀಕು 14ನೇ ಜೂನ್ 1950

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 177/1950

ವಾದಿ—ವಿಶ್ವೇಶ್ವರ ಹೊಳ್ಳ.

ಪ್ರತಿವಾದಿರು—ದಾಸ ಸೇರಿಗಾರ ಕೂಡಾ.

ಪ್ರತಿವಾದಿರಿಗೆ ಯೂ ಮೂಲಕ ತಿಳಿಸುವ ದೇನೆಂದರೆ—

1ನೆ ಪ್ರ. ದಾಸ ಸೇರಿಗಾರ, 2ನೆ ಪ್ರ. ಹನುಮಂತ ಸೇರಿಗಾರ, ಅಂಯಸ್ಸು ಸೇರಿಗಾರನ ಮಕ್ಕಳು. 3ನೆ ಪ್ರ ವೆಂಕಟರಮಣ ಸೇರಿಗಾರ, 4ನೆ ಪ್ರ. ನರಸಿಂಹ ಸೇರಿಗಾರ, ಬಾಲ್ಯಸೇರಿಗಾರನ ಮಕ್ಕಳು, ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮಸ್ಥರು.

ನಾವಿಯು ನಿಮ್ಮ ಮೇಲೆ ಪೇಲ್ಕಂಡ ದಾವೆಯಂನು ದಾಖಲು ಮಾಡಿದ್ದಾನೆ. ಸದ್ರಿ ದಾವೆಯು ತಾರೀಕು 18-7-1950ಕ್ಕೆ ತಕ್ಕಗೆ ಯಿದ್ದರುವದ್ರಿಂದ ಆ ದಿವಸ ಪಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರು ಆಗಿ ನಿಮ್ಮ ಉದಾಹರಣೆಯಿದ್ದರೆ ದಾಖಲು ಮಾಡತಕ್ಕದ್ದು. ಮೇಲೆ ನಮೂದಿಸಿರುವ ದಿವಸ ಹಾಜರು ಆಗಲಿಕ್ಕೆ ತಪ್ಪಿದಲ್ಲಿ ಸದ್ರಿ ವ್ಯಾಜ್ಯವನ್ನು ನಿಮ್ಮ ಗೈರಿಹಾಜರಿಯಲ್ಲಿ ಕೇಳಿ ನೈಸಲುಮಾಡೋಡಾದೀತೆಂತ ನೀವು ತಿಳಿದಿರತಕ್ಕದ್ದು.

B. Padmanabha Kolla,
Advocate for Plaintiff.

ತಾರೀಕು 3-7-50 ಮೊಕ್ಕಾಂ: ಕುಂದಾಪುರ

ನೋಟೀಸು

ಕಾಸರಗೋಡು ಡಿ ಮು. ಕೋರ್ಟಿನಲ್ಲಿ

S. I. A. No. 98/1950

S. C. No. 379/1949

ಬೆಪಾರಿ ಕುಂಭಾರಾನು ನಾಯರ್ ಬಗ್ಗೆ ಪವರ್ ಆಫ್ ಎಟರ್ನಿ ಹೋಲ್ಡರ್ ಆಗಿರುವ ಕುಂಭಾಂಬು ನಾಯರ್. —ವಾದಿ.

ಮತ್ತು

1. ಪಂದಾರಕೊಟ್ಟಿ, ಪಂಡಾಂಪುರಯಿಲ್ ಕೊಟ್ಟಿನ ಆಳಿಯ. ಕಾಸರಗೋಡು ತಾಲೂಕು ಉದ್ಯಗ್ರಾಮದಲ್ಲಿರುವವ.

2. ರೆಸೀವರ್, ಎಡ್ಡ ಕೇಟ್, ಕೆ. ಶಂಕರ ರಾನ್. —ಪ್ರತಿವಾದಿರು

ತರವಾಟ್ಟು ಕಾನರವನಾಗಿದ್ದ 1ನೇ ಪ್ರತಿವಾದಿಯು ವಾದಿಗೆ ಬರಕೊಟ್ಟ ಇಂಡಲಗೇಜಿ ಚೀಟು ಪ್ರಕಾರ ಬರತಕ್ಕ ಗೇಣಿ ಬಾಕಿಯ ರೂಪಾಯಿ 137-0-8ನ್ನು, 1ನೇ ಪ್ರತಿವಾದಿಯು ತರವಾಡಿನ ಸೊತ್ತುಗಳಿಂದಲೂ ಕೂಡಾ ವಸೂಲ್ ಪಡಿಯುವ ಹಾಗೆ ಡಿಕ್ರಿ ಕೇಳಿ ವಾದಿಯು ದಾಖಲು ಮಾಡಿದ ಸದರೀ ವ್ಯಾಜ್ಯವು ತಾ 24-7-50ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿದೆ. ಹಾಗೆ ತರವಾಡಿನ ಮೇಲೆ ಡಿಕ್ರಿ ಕೊಡುವಲ್ಲಿ 1ನೇ ಪ್ರತಿವಾದಿಯ ತರವಾಡಿನ ಮೆಂಬರರ ಸೈಕ, ಯಾವನೊಬ್ಬ ನಿಗಾದರೂ ಆಕ್ಷೇಪವಿದ್ದಲ್ಲಿ ಆತನು ಆ ದಿನ ಸದರೀ ಕೋರ್ಟಿನಲ್ಲಿ ಆಪರಾಹ್ನ 11 ಘಂಟೆಗೆ ಹಾಜರಾಗಿ ದಾಖಲು ಮಾಡಬಹುದೆಂಬ ಸಂಗ್ತಿ ಸದರಿ ತರವಾಡಿನ ಎಲ್ಲಾ ಮೆಂಬರರ ತಿಳುವಳಿಕೆಯ ಬಗ್ಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸೋಡಾಗಿಯಿದೆ.

K, Ganesh Rao,
ವಾದಿ ಕಡೆ ವಕೀಲ್

ಕಾಸರಗೋಡು, ತಾ. 2-7-50.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ-

ತಾರೀಕು 7—7—1950ರಿಂದ

ಪ್ರೇಮವು ಕಣ್ಣು ಕಟ್ಟಿತೆಂದು ಕಣ್ಣುಗಳನ್ನೇ ಕುಕ್ಕಿಕೊಂಡ ಮಹಾತ್ಮ

ಸೂರದಾಸನೇ—

ಬಿಲ್ವ ಮಂಗಲ್ (ಪ್ರಕಾಶ ಚಿತ್ರ)

ಅರವಿಂದ ಸುಶ್ರು ಸರಸ್ವತಿ.

ಬರುವ ಚಿತ್ರ ಫಿಲ್ಮ್‌ಸ್ತಾನದವರ "ಖಾಂದರಿಯಾ"

ವೀರಾ ಮತ್ತು ರೆಹಮಾನ್

ಉಡುಪಿ

ವನಮಹೋತ್ಸವ ಆಚರಣೆ:— ಉಡುಪಿಯಲ್ಲಿ ವನಮಹೋತ್ಸವವು ದಿನಾಂಕ 1ರಲ್ಲು ಆಚರಿಸಲು ಪ್ರಾರಂಭವಾಯಿತು. ಆ ದಿನ ಬೆಳಿಗ್ಗೆ ಮುನಿಸಿಪಲ್ ಕ್ಷೇತ್ರದ ಶಾಲಾ ಮಕ್ಕಳು, ಉಪಾಧ್ಯಾಯರು ಮತ್ತಿತರ ನಾಗರಿಕರು ಪೀಪಲ್ಸ್ ಹಾಲಿನಲ್ಲಿ ಕಲೆತು ಸಂತೆಕಟ್ಟೆ ಮಾರ್ಗವಾಗಿ ಮೆರವಣಿಗೆಯಿಂದ ಡಿ. ಮುನ್ಸಿಫ್ ಕೋರ್ಟಿಗೆ ಬಂದರು. ಅಲ್ಲಿ ಭಾರತಾಂಬೆಯ ಪ್ರಾರ್ಥನೆಯಾದ ಬಳಿಕ ಡಿ. ಮುನ್ಸಿಫ್ ಶ್ರೀ ಟಿ. ವಿ. ಜಿ. ಸಿ. ಕುಲಾಸ್ಸೊ, ಅವರು ಸಂದರ್ಭೋಚಿತ ಮಾತುಗಳನ್ನಾಡುತ್ತಾ ದ. ಕ. ಜಿಲ್ಲೆಗೆ ಪರಶುರಾಮನು ಸೃಷ್ಟಿ ಎಂದೂ ಇಲ್ಲಿ ಕ್ಷಾಮ ಬರಲಾರದೆಂದೂ ಹೇಳುವ ವಾಡಿಕೆ ಇದ್ದಾಗ್ಯೂ ಅರಣ್ಯ ಸಂಪತ್ತಿನ ಸೂರೆಯಿಂದಾಗಿ ಪರಶುರಾಮನು ಕೋಪಗೊಂಡುದರಿಂದ ಬರಗಾಲದ ಭೀತಿ ಬರಬಹುದಾದ ಸಂಭವ ವಿರುವುದರಿಂದಲೂ ಜನರು ಹೆಚ್ಚು ಹೆಚ್ಚಾಗಿ ಮರ ಗಿಡಗಳನ್ನು ನೆಡಬೇಕಾಗಿ ವಿನಂತಿಸಿದರು. ಶ್ರೀ ಯು. ಕೃಷ್ಣರಾಯರೂ ಈ ಯೋಚಿತ ಮಾತುಗಳನ್ನಾಡಿದರು. ನಂತರ ಕೋರ್ಟಿನ ಎದುರುಗಡೆಯಲ್ಲಿ, ಎರಡು ಮಾವಿನ ಗಿಡಗಳನ್ನು ಮುನ್ಸಿಫರು ನೆಟ್ಟರು.

ಇಂದಿನ ಸಮಾರಂಭದಲ್ಲಿ ಇತರ ಅಧಿಕಾರಿಯವರೂ ಭಾಗವಹಿಸಿದ್ದರು ಪೊಲೀಸರಿದ್ದರು.

ಕಲಾವೃಂದದ ವಾರ್ಷಿಕೋತ್ಸವ ಸಂದರ್ಭದಲ್ಲಿ ಡಾ. ಕೆ. ಎಲ್. ಐತಾಳರು ಪ್ರಸ್ತಾವಿಸಿದ ದಿ. ಪಂ. ನಂಕಿಟ್ಟು ಮಾಣಾಚಾರ್ಯರ ಸ್ಮಾರಕ ಲೇಖನ ಮತ್ತು ಭಾಷಣ ಸ್ಪರ್ಧೆಗಳು ಇದೇ ತಾ. 15 ಮತ್ತು 16ರಲ್ಲಿ ಅನುಕ್ರಮವಾಗಿ ಜರಗುವುವು. ಸ್ಪರ್ಧೆಯಲ್ಲಿ ಭಾಗವಹಿಸುವವರು ಕಲಾವೃಂದದ ಕಾರ್ಯದರ್ಶಿಯವರಿಗೆ ಇದೇ ತಾ. 12ರೊಳಗಾಗಿ ಬರೆಯಬೇಕು.

ಮಂಗಳೂರು

ದ. ಕ. ಜಿಲ್ಲಾ ಟೋರ್ಡು ಸಭೆ ಯು ಕಳದ ತಾ. 22ರಲ್ಲು ಉಪಾಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ' ಪಿಂಟೊ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಟೋರ್ಡಿನ ಎಡ್ಮಿಕೇರಿನಲ್ ಕಮಿಟಿಗೆ ಶ್ರೀ ಬಿ. ಎಸ್. ಭಾಸ್ಕರ ರೈಗಳನ್ನೂ ಲ್ಯಾಬ್ರೆರಿ ಪ್ರತಿನಿಧಿಯಾಗಿ ಶ್ರೀ ಬಿ. ಎಸ್. ಶ್ರೀಧರ ಕಕ್ಕಿಲ್ಲಾಯರನ್ನೂ ಆರಿಸಲಾಯಿತು. ಇಬ್ಬರು ಡಿಪ್ಯುಟಿ ಪಂಚಾಯತ ಅಧಿಕಾರಿಗಳ ನೇಮಕ, ಬೈಂದೂರು, ಕುಂದಾಪುರ, ಕೋಟೇಶ್ವರ, ಉಡುಪಿ, ಕುತ್ತಾರು, ಕಾಸರಗೋಡು, ಕಾರ್ಕಳ ಹೈಸ್ಕೂಲುಗಳಿಗೆ ಪಿ. ಟಿ. ಮತ್ತು ಸೆಕೆಂಡರಿ ಗ್ರೇಡ್ ಹಾಗೂ ಕನ್ನಡ, ಹಿಂದಿ ಪಂಡಿತರ ನೇಮಕಗಳು ಮಂಜೂರು ಮಾಡಲಾದುವು. ಬೈಂದೂರು ಹೈಸ್ಕೂಲಲ್ಲಿ VI ಫಾರ್ಮನ್ನೂ ಕೋಟೇಶ್ವರದಲ್ಲಿ V ಫಾರ್ಮನ್ನೂ ತೆರೆಯುವಂತೆಯೂ ಸುಳ್ಯ, ಹಿರಿಯಡ್ಕಗಳಲ್ಲಿ ಹೊಸ ಹೈಸ್ಕೂಲುಗಳನ್ನೂ ತೆರೆದು IIIರಿಂದ IV ಫಾರ್ಮುಗಳನ್ನು ತೆರೆಯುವಂತೆಯೂ ನಿರ್ಣಯಿಸಲಾಯಿತು. ಸುಂಕಾಲಕಟ್ಟೆ ಗ್ರಾಮಾಭಿವೃದ್ಧಿ ಸಮಿತಿಯು ಟೋರ್ಡಿಗೆ ಒಪ್ಪಿಸಿದ ಕಟ್ಟಡವನ್ನು ಧನ್ಯವಾದಪೂರ್ವಕ ಸ್ವೀಕರಿಸಲಾಯಿತು. ಹಳ್ಳಿಗಳಲ್ಲಿ ಹಾಯರ್ ಎಲಿಮೆಂಟರಿ ಶಾಲೆಗಳನ್ನು ತೆರೆಯಬೇಕೆಂದು ಗ್ರಾಮಸ್ಥರು ಅಪೇಕ್ಷಿಸಿ, ಒಂದು ವರ್ಷಕ್ಕೆ ತಗಲುವ ಹೆಚ್ಚಿನ ನಿಚ್ಚಿದ ಅರವಾಸಿ ಹಣವನ್ನು ದೇವಸ್ಥಾನಿಯಾಗಿರಿಸಿ, ಶಾಲಾ ಕಟ್ಟಡ ಮತ್ತು ಸಾಮಗ್ರಿಗಳನ್ನೂ ಒದಗಿಸಿ ಕೊಟ್ಟಿರೆ, ಈ ಕುರಿತಾಗಿರುವ ಸರಕಾರದ ನಿಯಮವನ್ನು ಸಡಿಲಿಸುವಂತೆ ಸರಕಾರವನ್ನೊಡನೆ ವಿನಂತಿಸಿ ಬೇಕೆಂದಾಯಿತು. ಕುಂಬಳೆ ಫಿಶರೀಸ ಟೋರ್ಡು ಎಲಿಮೆಂಟರಿ ರಂಜಲಗಳನ್ನು ಬೇಸಿಕ್ ಶಾಲೆಗಳಾಗಿ ಮಾರ್ಪಡಿಸಲು ಒಪ್ಪಿಗೆಯಿತ್ತು. 33 ಮಂದಿ ಉಪಾಧ್ಯಾಯರ ನೇಮಕದ ಶಿಫಾರಸು ಮಾಡಲಾಯಿತು. ಗ್ರಾಮಾಂತರಗಳ ಟೋರ್ಡು ಡಿಸ್ಪೆನ್ಸರಿಗಳಿಗಾಗಿ 1950-51ನೇ ವರ್ಷಕ್ಕೆ ಈ ರೀತಿಯಲ್ಲಿ ಹಣ ಮಂಜೂರು ಮಾಡಲಾಯಿತು: ಮರ್ಕೆ ರೂ. 441, ನಂಜಿ ರೂ. 471, ಸಲಿಮಾರು ರೂ. 542, ಗುತ್ತಿಗಾರು 547, ಪೆರ್ಲ ರೂ. 900, ಅಡೂರು ರೂ. 362, ಶಿರ್ವಾದಿ ರೂ. 342, ಪೇಜಾವರ ರೂ. 545, ಪೆರ್ಲ ರೂ. 535, ಕೊಣ್ಣಿ ರೂ. 560. ಕ್ರಿಶ್ಚಿನ್ ರೂ. ೨೦೦, ಸಾಲ್ಮರ ರೂ. 666, ಹಾಕುಂಜ ಶಾಖೆಗೆ ಸ್ಥಿತಿಸ್ಥಾಪಕಗಳನ್ನಿಡಿ ಪ್ರಾಣಿ ಮಾಲೇರಿಯಾ ನಿವಾರಣೆಗಾಗಿ ರೂ. 20,000 ವಂತಿಗೆ ಕೊಡುವುದೆಂದು ಬೋರ್ಡಿನ ನಿರ್ಣಯವಾಯಿತು. ಪಂಚಾಯತುಗಳು ಇಲ್ಲದ ಸ್ಥಳಗಳಲ್ಲಿ ಬಾಯಿಬಾನಿಗಳಿಗಾಗಿ ಬಂದು ಸಾವಿರ ರೂಪಾಯಿ ಮಂಜೂರಾಯಿತು.

ನಗರಸಭೆಯು: ಕಳದ ತಾ. 24 ರಲ್ಲು ಶ್ರೀ ಎಲ್. ಸಿ. ಫ್ರಾಯಿಸರ ಅಧ್ಯಕ್ಷತೆಯಲ್ಲಿ ಜರಗಿತ್ತು. ಶಾಲೆಗಳ ಹೊಸ ಕಟ್ಟಡಗಳ ಖರ್ಚಿನ ಅಂದಾಜು ಖರ್ಚು ರೂ. 45,730ರಲ್ಲಿ ರೂ. 22,860 ಗ್ರಾಂಟಿನ ಬಗ್ಗೆ ಸರಕಾರಕ್ಕೆ ಬರೆದು ಕೊಳ್ಳುವ ನಿರ್ಧಾರವಾಯಿತು. ಕಾಲ್ಸ್ಟಿನ ಹೊಸ ಜುವಾನಜೆಯು ಇದೇ ಬರುವ ಆಗೋಸ್ತು-ಸಪ್ಟಂಬರ ತಿಂಗಳಲ್ಲಿ ನಡಯಬಹುದಾಗಿ ತಿಳಿದು ಬಂತ್ತದೆ.

ಶ್ರೀ ನಿ. ಎಸ್. ಜೆಜ್ಜಾಡಿಯವರು ವಾಣಿಜ್ಯಾಸು ಸರಕಾರದ ಆಹಾರ ಪೂರೈಕೆಯ ಕಮಿಶನರ್ ಶ್ರೀ ಪಿ. ಎಸ್. ಜೆಜ್ಜಾಡಿಯವರು ಕಳದ ತಾ. 22ರಲ್ಲು ಮಂಗಳೂರಿಗೆ ಆಗಮಿಸಿದ್ದು, ಮಂಡಿನ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿದ ಅಧಿಕಾರಿ ವರ್ಗದ ಸಭೆಯಲ್ಲಿ ಶ್ರೀ ಜೆಜ್ಜಾಡಿಯವರು ಸರಕಾರದ ಆಹಾರ ಧೋರಣೆಯನ್ನು ವಿವರಿಸಿದರು. ಸರಕಾರದ ವಿವಿಧ ಖಾತೆಗಳು ಮಾಡುವ ಕೆಲಸಗಳ ಸಂಬಂಧದ ಮಾಹಿತಿ ಕೊಟ್ಟರು.

ಕಲೆಕ್ಟರರ ಪತ್ರಿಕಾ ಹರಿಷತ್ತು— ಕಳದ ತಾ. 26ರಲ್ಲು ಜರಗಿದಾಗ ಜಿಲ್ಲಾ ಕಲೆಕ್ಟರರು ಈ ಕೆಳಗಿನ ವಿಷಯಗಳನ್ನು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಬಾವಿಕೆರೆ ದುರುಸ್ತಿ: ಉಡುಪಿ ಚಾವಿಕೆರೆ ದುರಸ್ತಿಗೆ ರೂ. 2000, ಮಂಗಳೂರು ತಾಲೂಕಿನ ಪಲಿಮಾರ್ನೂರು ಕೆರೆಗೆ ರೂ. 2100 ಈ ತನಕ 36 ಕೆಲಸಗಳಿಗೆ ರೂ. 90,598 ವಂಜೂರಾಗಿದೆ. 1949-50ರಲ್ಲಿ 1283 ಟನ್ ಬೆಳೆಯಬೇಕೆಂಬ ಮಿತಿಯಿದ್ದು 1960 ಟನ್ ಉತ್ಪತ್ತಿಯಾಗಿದೆ. ಅದರಂತೆ 1950-51ನೇ ವರ್ಷದ ಹೆಚ್ಚಿನ ಬೆಳೆಯ ಮಿತಿಯು 2917 ಟನ್ ಗಳಾಗಿದ್ದು ಹಂಪಸೆಟ್ಟು ಎಣ್ಣೆಯಂತ್ರ, ಟ್ರಾಕ್ಟರುಗಳು, ಉತ್ತಮ ಬೀಜ, ಗೊಬ್ಬರ ಇತ್ಯಾದಿಗಳಿಂದ ಈ ಮಿತಿಯನ್ನು ಮುಟ್ಟಬೇಕಾಗಿದೆ ಇವುಗಳೆಲ್ಲ ರೈತರಿಗೆ ಸಿಗುವ ವ್ಯವಸ್ಥೆಯಾಗಿದೆ. ಅಧಿಕ ಬೆಳೆಸಾಲ ಈ ಮಿತಿಯನ್ನು ಮುಟ್ಟುವುದಕ್ಕೆ ಗೊಬ್ಬರ, ಫಿಕರ್, ಮತ್ತು ತಾಲೂಕುಗಳಾಗಿ ವಿಂಗಡಿಸಿ, ಪ್ರತ್ಯೇಕ ಪ್ರತಿನಿಧಿಗಳನ್ನು ನೇಮಿಸಿ ಕೆಲಸ ಮಾಡಲಾಗುವುದು. ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಸಂಘಗಳಲ್ಲಿ ಸೇರಿ ಕೃಷಿ ಮಾಡುವ ಪದ್ಧತಿಯನ್ನು ಅನುಸರಿಸಬೇಕೆಂದು ಸಲಹೆ ಮಾಡಿದರು. ಸಹಕಾರಿ ಸಂಘಗಳ ಮೂಲಕ ಕೃಷಿ ಮಾಡುವ ಪದ್ಧತಿಯನ್ನು ಸರಕಾರವು ಹೆಚ್ಚು ಪ್ರೋತ್ಸಾಹಿಸುತ್ತಿದೆ. ಇದರಂತೆ ಪ್ರತಿ ಫಿಶರ್ಮನ್‌ಗೆ ಎಡಮ ಕೇಂದ್ರಗಳನ್ನಾಯ್ದು ತರಬೇತಿ ಕೊಡಲಾಗುವುದು. ಕಲಿಯುವವರು ದಿನಕ್ಕೆ ಮೂರು ತಾಸು ಅಭ್ಯಾಸ ಮಾಡಬೇಕು. ಕೃಷಿಗೆ ಸಂಬಂಧಿಸಿದ ಅಧುನಿಕ ಉಪಾಯಗಳನ್ನೆಲ್ಲ ಕಲಿಸಲಾಗುವುದು ಮತ್ತು ತೇರ್ಗಡೆ ಹೊಂದಿದವರಿಗೆ ಸರ್ಟಿಫಿಕೇಟು ಕೊಡಲಾಗುವುದು.

ಜೀಪಿಣಿ ಎಣ್ಣೆ ಕಂಟ್ರೋಲು ರದ್ದು— ಸರಕಾರವು ಜೀಪಿಣಿ ಎಣ್ಣೆಗಿರುವ ನಿಯಂತ್ರಣವನ್ನು ರದ್ದುಗೊಳಿಸುವುದು, ಆದರೂ ಕಾರ್ಡುದಾರರು ತಮ್ಮ ರೇಶನ್ ಕಾರ್ಡುಗಳನ್ನು ತಮ್ಮಲ್ಲಿ ಇಟ್ಟಿದ್ದಬೇಕು, ಜನರಿಗೆ ಎಣ್ಣೆಯು ಸರಿಯಾಗಿ ಸಿಕ್ಕುವಂತೆ ಜಿಪಿಣಿ ಎಣ್ಣೆ ಮಾರಲು ಬಿಲ್ಲರೆ ವ್ಯಾಪಾರಿಗಳಿಗೆ ಲ್ಯಾಸೆನ್ಸು ಕೊಡಲಾಗುವುದು.

ಭೂಕಂದಾಯ ಸುಧಾರಣಾ ಸಮಿತಿ— ಮದ್ರಾಸ್ ಸರಕಾರದಿಂದ ನೇಮಿಸಲ್ಪಟ್ಟ "ಭೂಕಂದಾಯ ಸುಧಾರಣಾ ಸಮಿತಿ"ಯವರು ಪ್ರಶ್ನಾವಳಿಗಳನ್ನು ಹೊರಡಿಸಿ ನಮ್ಮ ಸಂಘದ ಅಭಿಪ್ರಾಯವನ್ನು ತಾ: 30-6-50ರ ಒಳಗೆ ಕೊಡಬೇಕಾಗಿ ಕೇಳಿಕೊಂಡಿದ್ದಾರೆ. ಸಮಯ ಸಂಕೋಚವಾದ್ದರಿಂದ ತಾ. 30-7-50ರ ವಳಗೆ ನಮ್ಮ ಸಂಘದ ಉತ್ತರವನ್ನು ಳಿಸುವಿಸಿಕೊಡುವಪ್ರಯತ್ನ ತಿಳಿಸಿದ್ದೇವೆ. ಉತ್ತರಗಳನ್ನು ಮಂಜೂರು ಮಾಡುವ ಬಗ್ಗೆ ತಾ. 16-7-1950ರಲ್ಲು ಮಂಗ್ಳೂರಲ್ಲಿ ಭೂಮ್ಯಾಲಕರ ಸಭೆಯನ್ನು ಕರೆದಿದ್ದೇವೆ. ಪ್ರಶ್ನಾವಳಿಗಳು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ನೃಕ್ತಿಪರ ಉತ್ತರಗಳನ್ನು ಭೂಮ್ಯಾಲಕರು ಮದ್ರಾಸ್ ಸ್ಟೇಟ್ಸ್ ಸೈಂಟ್ ಜ್ಯೂರ್ಜ್ ಅಫೀಸಿನಲ್ಲಿರುವ ಭೂಕಂದಾಯ ಸುಧಾರಣಾ ಸಮಿತಿಯ ಕಾರ್ಯದರ್ಶಿಯವರಿಗೆ ಕಳುಹಿಸಿ ಕೊಡಬಹುದು. ಮತ್ತು ಮಂಗ್ಳೂರಲ್ಲಿ ಕರೆದ ಸಭೆಗೆ ಭೂ ಮ್ಯಾಲಕರುಬಂದು ಕರ್ಯ ಪಯೂರಿಸಿದ ಉತ್ತರಗಳನ್ನು ಜರ್ಚಿಸಿ ಮಂಜೂರು ಮಾಡಿಸಲು ಶ್ರೀ ಕೆ. ಬಿ ಜೆನರಾಜ ಹೆಗ್ಡೆ ಜತೆ ಕಾರ್ಯದರ್ಶಿ, ದ. ಕ. ಭೂಮ್ಯಾಲಕರ ಸಂಘ, ಮಂಗಳೂರು ಇವರು ವಿನಂತಿಸುತ್ತಾರೆ.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

ಕೈವು ನಂಬ್ರ 157/1949

R. E. P, 124/1950

ಮಂಮುಂಗಿಲಾ ಬಾಲಿಪಾಡಿ, ಆರ್ಜಿದಾರ,

ಉಂಗಿಣ ನ್ಯಾಕ ಕೂಡಾ.

ರೆಸ್ಪಾಂಡೆಂಟ್ರು

ರೆಸ್ಪಾಂಡೆಂಟ್ರು—

1. ಉಂ ಣಾಂಣ ನ್ಯಾಕ, ಮಾಲಿಂಗ ಬಂಟರ ಮಗ.

2. ಸುಬ್ಬಾಯಾ, ನೇಯನ ಮ್ಮಾನರ ಮಗ, ಗಾರ್ಡಿಯನ್ 1ನೇ ರೆಸ್ಪಾಂಡೆಂಟ್.

3. T. Z. ಅಬ್ದುಲ್ ಕುಂಞ— ಟೈನದೀನ್ ಹಾಜಿ ಮಗ.

1-2ನೇಯವರು ಕಾಸರಗೋಡು ಕಸಬೆಯಲ್ಲಿಯೂ 3ನೇಯವನು ಸದ್ರಿ ಕಸಬಾ ತಾಲೂಕಿನಲ್ಲಿ ಸಹಾ ಇರುವವರು.

ನೀಲ್ಯಂಡ ಅಮ್ಮಣ್ಣಾರಿಯಲ್ಲಿ ಮಾರಾಟಕ್ಕೆ ಇಟ್ಟಿರುವ ಆಸ್ತಿಗಳು ಏಲಂ ಬಗ್ಗೆ ದಾಕ್ಲು ಮಾಡಿದ ಏಲಂ ಇಸ್ತಿಹಾರು ಮಂಜೂರು ಪಡಿಸುವರೆ ತಾ. 12-7-1950 ಕ್ಕೆ ಇಟ್ಟಿರುವ ಸಂಗ್ತಿ ತಿಳಿಸೋಕಾಗಿಯದೆ.

Sd. **P. Ahmad**

Advocate for Petitioner.

ಕಾಸರಗೋಡು, 4-7-50

Notice

ಕುಂದಾಪುರ ರೆಂಟ್ ಕಂಟ್ರೋಲರರ

ಕೋರ್ಟಿನಲ್ಲಿ

ಪಡುಬಿದ್ರಿ ಲಕ್ಷ್ಮೀನಾರಾಯಣಾಚಾರ್ಯ -ಸೀತಾರಾಮಾಚಾರ್ಯರ ಮಗ-ನೆಡ್ಡಾಲು ಗ್ರಾಮದಲ್ಲಿರುವವ —ಆರ್ಜಿದಾರ.

ಮತ್ತು

1 ಮುಹಮ್ಮದ್ ಹನೀಫ್ ಸಾಹೇಬ

2 ಮುಹಮ್ಮದ್ ಹಸಬುಲ್ಲಾ ಸಾಹೇಬ, ಇಸ್ಮಾಯಿಲ್ ಸಾಹೇಬರ ಮಕ್ಕಳು, ಉಡುಪಿ ತಾಲ್ಲೂ ನಂಬ್ರ 76ನೆ ಬಡಗಬೆಟ್ಟು ಗ್ರಾಮದಲ್ಲಿರುವವರು. —ಎದ್ರಿರು.

ಎದ್ರಿರು ಆರ್ಜಿದಾರರೆ 10-1-48ರಲ್ಲು ಬರಕೊಟ್ಟ ಬಾಡಿಗೆ ಚೀಟಿಗೆ ಕಾರಣವಾದ ಆರ್ಜಿದಾರನ ಹಕ್ಕಿನ ಉಡ್ಪಿ ಮುನಿಸಿಪಾಲಿಟಿಯ ಬೈಲೂರು ವಾರ್ಡಿಗೆ ಸೇರಿದ Door ನಂಬ್ರ 1682ನೆ ಮನೆ ಕಟ್ಟೋಣ ಸ, ಅದಕ್ಕೆ ಸಂಬಂಧಪಟ್ಟ ಸ್ಥಳ ಸ. ನಂಬ್ರ 85-21ನೆಗೆ ಸೇರಿದ ಸಾಮಾರು ಸುಂಟ್ಲು 30ರ ಸ್ಥಳ ಇದರ ಬಾಬ್ತು ಬಾಡಿಗೆ ಚೀಟಿನ ಲಾಗಾಯ್ತು ಒಟ್ಟು 45 ರುಪ್ಯಾ ಸಾತ್ರ ಬಾಡಿಗೆ ಕೊಟ್ಟಿರುತ್ತ ಮಿಕ್ಕ ಬಾಡಿಗೆ ಆ್ಯವಜು ಬಾಕಿ ಮಾಡಿಕೊಂಡಿರುವುದ್ರಿಂದ ಸದ್ರಿ ಸ್ಥಳ-ವ-ಕಟ್ಟೋಣಗಳ ಸ್ವಾಧೀನತೆ ಬಗ್ಗೆ ಆರ್ಜಿದಾರನು ಸದ್ರಿ ಕೋರ್ಟಿನಲ್ಲಿ ದಾಕ್ಲು ಮಾಡಿದ್ದ ಒರ್ಡರ್ಯು ತಾ. 19-7-50ಕ್ಕೆ ಉಡ್ಪಿ ಪೊಲೀಸ್‌ಠಾಣೆಯಲ್ಲಿ ತನ್ನಿಗೆ ಇಟ್ಟಿದೆ, ಅಬ್ಬುದಿಂದ ತಾ. 19-7-50ನೆ ದಿವ್ಸ ಹಗಲು ಗಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ಎದ್ರಿರು ಹಾಜರಾಗಿ ಅವರಿಗೇನಾದ್ರೂ ಆಕ್ಷೇಪಣೆ ಇದ್ದರೆ ಜ್ಯಾಹೀರುಮಾಡಿ ಕೊಳ್ಳತಕ್ಕದ್ದು. ತಪ್ಪಿದ್ರೆ ಅವರ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

K. L. Aithal,

Vakil for Petitioner.

28-6-50

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಂಆಗಿ ಯಾವಜ್ಜಲರಿಯಾಗಿಯೂ ದೊರೆಯುತ್ತವೆ.

ಕಲ್ಯಂಜಿ ವ್ಯಾಸಾಚಾರ್ಯರ್,

ಪ್ರಭುತ್ವ, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮಾಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಎಲ್. ಐ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ॥ ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ದ. ಕನ್ನಡ

ನೀಲಾವರ:- ಉಡುಪಿ ತಾಲೂಕು ನಂ ಪ್ರ 54ನೇ ನೀಲಾವರ ಗ್ರಾಮದಲ್ಲಿ ತಾ. 25-5-50ರಂದು ಹೊಸತಾಗಿ ಬ್ರೇಂಜು ಪೋ ಸ್ಟಾಫೀಸು ತೆರೆಯಲ್ಪಟ್ಟಿದೆ. ಆದರಿಂದ ಇನ್ನು ಮುಂದೆ ನೀಲಾವರ ಗ್ರಾಮಕ್ಕೆ ಬರೆಯುವ ಕಾಗದಗಳಿಗೆ Post ನೀಲಾವರ ಎಂತ ಬರೆಯಬೇಕಾಗಿದ.

ಕುಂಬಳೆ—ಒಂದೂವರೆ ತಿಂಗಳಿಂದೀಚೆಗೆ ಇಲ್ಲಿನ ಕೇಂದ್ರ ಉಪಾಧ್ಯಾಯ ಉಪಾಧ್ಯಾಯಿನಿಯರಿಗಾಗಿ ನಡೆಸುತ್ತಿದ್ದ ನೂಲು ವಿಕ್ ಕ್ಲಾಸಿನ ಪರೀಕ್ಷೆಯನ್ನು ಕುಂಬಳೆ ಶ್ರೀ ಜಯ ಶಾಲಾ ಡಿಪ್ಟಿ ಇನ್ಸ್‌ಪೆಕ್ಟರವರು ತಾ. ೨೪ರಂದು ಮಾಡಿದರು.

ಕಳದ ತಾ ೨೨ನೇ ದಿನ ಉಂಟಾದ ವಿಪರೀತ ಮಳೆ ನಿಮಿತ್ತ ಇಲ್ಲಿನ ನದಿಗಳಲ್ಲೂ ತೋಡುಗಳಲ್ಲೂ ನೆರೆ ಉಂಟಾಗಿರುವುದಾದ ಒ ಮುರುದಿವಸ ನೀರು ಇಳಿದದ್ದರಿಂದ ನಾ ಶವೇನೂ ಆಗಿಲ್ಲ. ತಾ. ೩೦ರಿಂದ ಈ ವರೆಗೆ ಇಲ್ಲಿ ಮಳೆ ಬೀಳದ್ದನಿಮಿತ್ತ ಬೇಸಾಯದ ಕೆಲಸಕ್ಕೆ ತುಂಬಾ ಕ್ಷೋಭೆ ಉಂಟಾಗಿದೆ.

ರೇಶನ್ ಸಾಮಗ್ರಿಗಳ ಸಂಗ್ರಹವು ಇಲ್ಲಿ ಕಡಮೆಯಾಗುತ್ತಾ ಬರುತ್ತಿದೆ.

ಆದವಮಾರು—ಕಳದ ತಾ. 29ರಂದು ಅಪರಾಹ್ನ ಗಂಟೆ 4ಕ್ಕೆ ಎಲ್ಲೂರು, ಎರ್ಮಾಳ ತೆಂಕ, ಬಡಾ—ಈ ಮೂರು ಗ್ರಾಮಸ್ಥರು ಆದವಮಾರು ಬೋರ್ಡ್ ಹೈಸ್ಕೂಲಿನಲ್ಲಿ ಉಡುಪಿ ಸೌತ್ ರೇಂಜಿನ ಬೆಪ್ಯುಟಿ ಇನ್ಸ್‌ಪೆಕ್ಟರವರಾದ ಶ್ರೀ ಯಂ. ಯಂ. ಚೌಟರ ಅಧ್ಯಕ್ಷತೆಯಲ್ಲಿ ಕೂಡಿಬಂದು, ಈ ಕೇಂದ್ರದ ವನ ಮಹೋತ್ಸವ ಸಮಾರಂಭವನ್ನು ಜರಗಿಸುವರೆ 13ಜನ ಸದಸ್ಯರ ಒಂದು ಕಮಿಟಿಯನ್ನು ಮಾಡಿ, ಶ್ರೀ ಕೆ. ಕೆ. ಮೂರ್ತಿ, ಜಿಲ್ಲಾ ಬೋರ್ಡ್ ಮೆಂಬರ್ ಇವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ವ್ಯಾ.ರಾಂತಿರಾಜಯ್ಯ ಪರೇಲ್, ತೆಂಕ ಇವರನ್ನು ಕಾರ್ಯದರ್ಶಿಯರನ್ನಾಗಿಯೂ ಸರ್ವಾನುಮತದಿಂದ ಆರಿಸಿ, ಇದೇ ತಾ 9-7-50ನೇ ಆದಿತ್ಯವಾರ ಅಪರಾಹ್ನ ಗಂಟೆ 2ಕ್ಕೆ ಈ ಸಮಾರಂಭವನ್ನು ಅತಿ ವಿಜೃಂಭಣೆಯಿಂದ ಆದವಮಾರಿನಲ್ಲಿ ಜರಗಿಸುವುದಾಗಿ ನಿರ್ಣಯಿಸಲಾಗಿದೆ.

ದೇವಡಿಗ ಸುಧಾರಕ ಸಂಘ, ಮುಂಬಾಯಿ— ಇದರ ಕಾರ್ಯಕಾರಿ ಸಮಿತಿಗೆ ಚಾಲ್ತಿ ವರುಷದ ಕಾರ್ಯಕರ್ತರನ್ನಾಗಿ ತಾ. 25-6-50ರಲ್ಲಿ ಜರಗಿದ ಸಭೆಯಲ್ಲಿ ಶ್ರೀಗಳಾದ ಯಂ. ವೆಂಕಟರಾವ್ (ಅಧ್ಯಕ್ಷ) ಬಾಬು ಡಿ. ದೇವಡಿಗ (ಉಪಾಧ್ಯಕ್ಷ) ಎಚ್. ಶ್ರೀನಿವಾಸ ಮತ್ತು ಯಂ. ಶ್ರೀನಿವಾಸರಾವ್ (ಗೌ.ಜೊತೆ ಕಾರ್ಯದರ್ಶಿಗಳು) ಎಚ್. ನಾರಾಯಣ ದೇವಡಿಗ ಮತ್ತು ಇತ್ಯಾದಿ ವೆಂಕಪ್ಪ ದೇವಡಿಗ (ಗೌ. ಜೊತೆ ಕೋಶಾಧಿಕಾರಿಗಳು) ಆರಿಸಲ್ಪಟ್ಟರು.

ಪ್ರಕಟಣೆ

ಭೂಕಂದಾಯ ಮತ್ತು ಭೂಗೇಣಿ ಸುಧಾರಣೆಗಳ ಸಂಬಂಧವಾಗಿ ಸರಕಾರವು ಹೊರಡಿಸಿರುವ ಪ್ರಶ್ನಾವಳಿಗಳನ್ನು ಪರ್ಯಾಲೋಚಿಸಿ, ಯೋಗ್ಯ ಉತ್ತರವನ್ನು ಕಳುಹಿಸುವುದಕ್ಕಾಗಿ ಉಡುಪಿ ತಾಲೂಕು ವರ್ಗದಾರರ ಸಂಘ, ಉಡುಪಿ, ಇದರ ಸಭೆಯೊಂದು ಇದೇ ಜುಲೈಯ ತಾ 9ನೇ ಆದಿತ್ಯವಾರ ಅಪರಾಹ್ನ 2 ಘಂಟೆಗೆ ಉಡುಪಿಯ ಬಡಗಬೆಟ್ಟು ಹೋಪರೇಟಿವ್ ಸೊಸೈಟಿ ಕಟ್ಟಡದಲ್ಲಿ ಸೇರಲಿದೆ. ಆ ಸಭೆಗೆ ಎಲ್ಲಾ ಸದಸ್ಯರು ಹಾಜರಾಗಬೇಕಾಗಿ ವಿಜ್ಞಾಪನೆ.

(ಸಹಿ) ಕೆ. ಜೀ. ಬಲ್ಲಾಳ್,
ಅಧ್ಯಕ್ಷ
ಉಡುಪಿ ತಾಲೂಕು ವರ್ಗದಾರರ ಸಂಘ,
ಉಡುಪಿ.
ಉಡುಪಿ, ತಾ. 3-7-50.

ಜನಮತ

ಮೋಟಾರು ಪ್ರಯಾಣಿಕರ ಕೆಲವು ನಿವಾರ್ಯ ತೊಂದರೆಗಳು

ತಮ್ಮ ನಿರಾತಿಗಳಾದ ಸಾರ್ವಜನಿಕರಿಗೆ ಶಕ್ಯವಿದ್ದ ಸೌಕಾರ್ಯಾನುಕೂಲತೆಗಳನ್ನೂ ದಗಿಸುವುದು ಯಾವುದೇ ಉದ್ದಿಮೇದಾರರ ಆದ್ಯ ಕರ್ತವ್ಯ. ಪ. ಕ. ಜಿಲ್ಲೆಯ ಬಸ್ಸು ಕಂಪೆನಿಗಳವರು ಕೂಡಾ ಇದಕ್ಕಪವಾದವಾಗಿಲ್ಲ. ಆದ್ದರಿಂದ, ತಮಗೆ ಹೆಚ್ಚಿನ ಕಷ್ಟ ನ್ಷವೇನೂ ಇಲ್ಲದ ಈ ಕೆಳಗಿನ ಸೌಕರ್ಯಗಳನ್ನು ಪ್ರಯಾಣಿಕರಿಗೆ ಸಂಬಂಧಪಟ್ಟವರು ಒದಗಿಸಲಾರರೆ?

1 ಸಿಟಿ ಸರ್ವಿಸ್ ಎಂಬ ಹೆಸರಿನಿಂದ ಉಡುಪಿಯಿಂದ ಳಲ್ಕಣಪುರ, ಪಾರ್ಕಳ, ಉದ್ಯಾವರ ಮತ್ತು ಮಲ್ಪೆಗೆ ಹೋಗಿ ಬರುವ ಬಸ್ಸುಗಳು ನಿಜವಾಗಿ ಸಬರ್-ಅರ್ಬನ್ ಬಸ್ಸುಗಳಾಗಿರುತ್ತವೆ. ಇವುಗಳಿಂದ ಅತೀ ಹೆಚ್ಚಿನ ಪ್ರಯೋಜನವನ್ನು ಜನತೆಯು ಹೊಂದಬೇಕಾದರೆ, ಅಕ್ಕಪಕ್ಕಗಳಲ್ಲಿರುವ ಹಳ್ಳಿಗಳಿಂದ ಹಾಲು, ತುಪ್ಪ, ಕಾಯಿಸಳ್ಳು, ಹಣ್ಣುಹಂಪಲು, ಪೇಟೆಗೆ ಬಯ್ಕಲ್ಪಡಬೇಕು; ಅಂತೆಯೇ ಹಳ್ಳಿಗರ ಆವಶ್ಯಕತೆಯು ಸಲಕರಣೆಗಳು ಹಳ್ಳಿಗಳಿಗೆ ಸಾಗಬೇಕು. ಆದ್ದರಿಂದ ಉಡುಪಿ ಸಿಟಿ ಸರ್ವಿಸು ಬಸ್ಸುಗಳಲ್ಲಿ ಪೆಸೆಂಜರರ ಸಾಮಾನುಗಳನ್ನು ಮಿಕ್ಕ ಬಸ್ಸುಗಳಲ್ಲಿ ಸಾಗಿಸಿದಂತೆ ಕೊಂಡೊಯ್ಯಲು ಅನುಕೂಲಪಡಿಸಬೇಕು. ಆದರೆ, ಸಿಟಿ ಸರ್ವಿಸುಗಳ ನೀಸ್ರ ಪ್ರಯಾಣಕ್ಕೆ ಕೊರತೆಯಾಗದಂತೆ ಮತ್ತೆ ಹಾದಿಯಲ್ಲಿ ಸಾಮಾನುಗಳನ್ನು ತೆಗೆಸುಕೊಳ್ಳುವುದಾಗಲೀ ಕಳಕ್ಕೆ ಇಳಿಸುವುದಾಗಲೀ ಇರಕೂಡದು. ಅಂದರೆ, ಉಡುಪಿ ಸ್ಟೇಶನ್ನಲ್ಲಿ ಬಸ್ಸಿಗೆ ಸಾಕಷ್ಟು ಸಾಮಾನುಗಳನ್ನು ಕಲ್ಯಾಣಪುರ, ಪಾರ್ಕಳ, ಉದ್ಯಾವರ ಮತ್ತು ಮಲ್ಪೆಯ ಕೊನೆಯ ನಿಲ್ದಾಣಗಳಲ್ಲಿ ಮಾತ್ರ ಇಳಿಸಬಹುದು. ಹಾಗೆಯೇ ಮೇಲಿನ ನಿಲ್ದಾಣಗಳಲ್ಲಿ ಹಾಕಿದ ಸಾಮಾನುಗಳನ್ನು ಉಡುಪಿ ಸ್ಟೇಶನ್ನಲ್ಲಿ ಮಾತ್ರ ಇಳಿಸಬಹುದು. ಸಂಬಂಧಪಟ್ಟ ಅಧಿಕಾರಿಗಳು, ಹಲವರಿಗೆ ಪ್ರಯೋಜನವಾಗುವ ಮತ್ತು ಯಾರಿಗೂ ತೊಂದರೆಯಾಗದ ಈ ಏರ್ಪಾಡು ಮಾಡಿಸುವರಾಗಿ ನಂಬಲಾಗಿದೆ.

2 ಸಿಟಿಸರ್ವಿಸ್‌ನಿಲ್ದಾಣಗಳಲ್ಲಿಕ್ಯೂ(Que) ಪದ್ಧತಿ ಇರಬೇಕೆಂಬುದು ಸರ್ವರ ಅಭಿಪ್ರಾಯವಾಗಿದೆ. ಆದರೆ ಅದನ್ನು ಜಾರಿಗೆ ತರಬೇಕಾದರೆ ಪ್ರತಿಯೊಂದು ನಿಲ್ದಾಣದಲ್ಲಿಯೂ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಬೇಕಾಗಬಹುದೆಂಬ ಕಾರಣದಿಂದ ಅಧಿಕಾರಿಗಳು ಈ ವ್ಯವಸ್ಥೆಯ ಗೋಜಿಗೆ ಹೋಗದೆ ಇದ್ದಿರಬೇಕು. ಇಲ್ಲಿ ಸೂಚಿಸಿರುವ ಚಿಕ್ಕ ಏರ್ಪಾಡಿನಿಂದ ಪೋಲೀಸು ಸಹಾಯವಿಲ್ಲದೆ Que ಪದ್ಧತಿಯನ್ನು ನಡಿಸಬಹುದೆಂದು ಕಾಣಿಸುತ್ತದೆ:—ಪ್ರತಿ ನಿಲ್ದಾಣದಲ್ಲಿ ಸುಮಾರು 24 ಅಡಿ ಉದ್ದವಿರುವ ಒಂದು ಯಾ ಎರಡು ಮಂಚಗಳನ್ನು ಇಟ್ಟಿರಬೇಕು. ಆದರಲ್ಲಿ 1 ರಿಂದ 24ರ ವರೆಗೆ ನಂಬರನ್ನು ಕಾಣಿಸಬಹುದು. ಪ್ರಯಾಣಿಕರು ನಿಲ್ದಾಣಕ್ಕೆ ಬಂದ ಹಾಗೆ ಕ್ರಮವಾಗಿ 1ರಿಂದ 24ನೇ ವರೆಗಿನ ಸ್ಥಾನಗಳಲ್ಲಿ ಕುಳಿತಿರಬೇಕು. ಒಸ್ಸು ಬಂದೊಡನೆ ಆ ಮಂಚದಲ್ಲಿ ಕುಳಿತವರು ಮಾತ್ರ ಕ್ರಮವಾಗಿ ಟಿಕೇಟುಗಳನ್ನು ಕೊಟ್ಟು ಬಸ್ಸಿಗೆ ಏರಲು ಬಿಡಬೇಕು. ಸ್ತ್ರೀಯರಿಗೆ, ಪ್ರತ್ಯೇಕ ಏರ್ಪಾಡು ಇದರಂತೆಯೇ ಇರಬೇಕು. ಪ್ರಯಾಣಿಕರು ಕೂಡುವವರೆಗೆ ಮಾಡಲು ಇದ್ದರೆ ಬಸ್ಸಿಗೆ ಅನುಕೂಲ. ಈ ಏರ್ಪಾಡನ್ನು ಸ್ಥಳೀಯ ಪಂಚಾಯತ್ ಬೋರ್ಡಿನವರೂ ಮುನ್ಸಿಪಾಲಿಟಿಯವರೂ ಮಾಡಿಸುವುದು ಯುಕ್ತ.

3 ಬಸ್ಸುಗಳಲ್ಲಿ ಮುಂದಿನ ಸೀಟು ಬಹಳ ಅನುಕೂಲವಾಗಿರುವುದರಿಂದ, ಮಂಗಳೂರು, ಉಡುಪಿ ಮುಂತಾದ ಕೇಂದ್ರ ಸ್ಥಳಗಳಲ್ಲಿಯೂ, ನದಿ ತೀರಗಳಲ್ಲಿಯೂ ಮುಂದಿನ ಸೀಟಿನ ಅಕ್ರಮಣದ ಬಗ್ಗೆ ಅನಿಷ್ಟವಾದ ತಿಕ್ಕಾಟಗಳುಂಟಾಗುತ್ತಿವೆ. ಹೆಚ್ಚಿನ ಆನುಕೂಲತೆಯನ್ನು ಅಪೇಕ್ಷಿಸುವವರು ಹೆಚ್ಚು ಬೆಲೆ ಕೊಡಬೇಕೆಂಬ ನ್ಯಾಯಕ್ಕೆ ಸರಿಯಾಗಿ, ಮುಂದಿನ ಸೀಟಿಗೆ ಟಿಕೇಟಿನ ದರ ಹೆಚ್ಚು ಮಾಡಿದಲ್ಲಿ, ಕಂಪೆನಿಗಳಿಗೆ ಆದಾಯವಾಗುವುದು ಮಾತ್ರವಲ್ಲದೆ ಪೆಸೆಂಜರರೊಳಗೆ ಅಸಮಂಜಸವಾದ ಘರ್ಷಣೆಗೆ ಎಡೆ ಇರಲಾರದು.

4 ಇತ್ತೀಚೆಗೆ ಜಾರಿಗೆ ಬಂದಿರುವ [Minimum] ಕನಿಷ್ಠ ಬಸ್ಸು ಚಾರ್ಜು 0-4 0 ಕ್ರಮವು, ಬೈಂದೂರಿಗೆ ಹೋಗುವ ಪ್ರಯಾಣಿಕರಿಗೆ ಪ್ರತ್ಯಕ್ಷ ಅನ್ಯಾಯವನ್ನುಂಟು ಮಾಡಿದೆ. ದಕ್ಷಿಣದಿಂದ ಬೈಂದೂರಿಗೆ ಹೋಗುವ ಪ್ರಯಾಣಿಕರಿಗೆ ಬೈಂದೂರಿನ ವರೆಗೆ ಬಸ್ಸು ಟಿಕೇಟು ಕೊಡದೆ ಉಪ್ಪುಂದ ಹೊಳೆ ಬಾಗಿಲಿಗೆ ಮಾತ್ರ ಕೊಡುತ್ತಾರೆ. ಬೈಂದೂರು ಪಟ್ಟಣಕ್ಕೆ ಹೋಗಬೇಕಾದವರು ಉಪ್ಪುಂದದಿಂದ ಪುನಃ 0-4-0 ಟಿಕೇಟು ಪಡಕೊಳ್ಳಬೇಕು. C. P. C. ಮತ್ತು H. T Co. ಈ ಎರಡು ಕಂಪೆನಿಯವರಿಗೂ ಬೈಂದೂರು ಮುಖಾಂತರ ಉತ್ತರ ಕನ್ನಡದ ವರೆಗೆ! ಕನೆಕ್ಷನ್ ಸರ್ವಿಸುಗಳು ಇರುತ್ತ ಬೈಂದೂರಿಗೆ ಸೀದಾ ಟಿಕೇಟು ಕೊಡಬಾರದೇಕೆ?

ಯಾವುದೇ ಕಾರಣದಿಂದ ಸೀದಾ ಟಿಕೇಟು ಬೈಂದೂರಿಗೆ ಕೊಡಲಾಗದಿದ್ದಲ್ಲಿ, ಉಪ್ಪುಂದದಿಂದ ಬೈಂದೂರಿಗೆ ಮೈಲಿಗೆ 0-1-0 (ಆಣೆ ಒಂದು)ಗಿಂತ ಜಾಸ್ತಿ ಚಾರ್ಜು ತೆಗೆದುಕೊಳ್ಳುವುದು ಶುದ್ಧ ಅನ್ಯಾಯವಾದ್ದರಿಂದ ಇದನ್ನು ನಿಲ್ಲಿಸಬೇಕು.

ಈ ಮಾದರಿಯು ಅನುಚಿತ ಸಪ್ಪವ್ಯಜಿಲ್ಲೆಯ ಇತರ ಕಡೆಗಳಲ್ಲೂ ಉಂಟಾಗುತ್ತಿರಬಹುದಾದ್ದರಿಂದ ಎಲ್ಲೆಡೆಯಲ್ಲೂ ಈ ಅನ್ಯಾಯದ ನಿವಾರಣೆಯಾಗಬೇಕು.

—N. S. B.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಂಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕಾದಿರಿಸಿ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S K.

— ಮಕ್ಕಳನ್ನು ಹಡೆಯುವುದು ಸಾಕು —

ಆಕಸ್ಮಿಕ ಸ್ತ್ರೀಯರಿಗೆ ಬರ್ಥ್ ಕಂಟ್ರೋಲ್ ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ನುಶ್ಕಳ್ಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟುಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ಕಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ೧೫ ಆಣೆ.

ದಾಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಳಿ ಧಾರ್ಮಸ್ಸಿ—ಸುಬ್ಳಿ, ಗದಗ, ಬಾಗಲಕೋಟೆ ಧಾರವಾಡ ನಿಜಾಪುರ—ಚಾವಸ್ಸ ಸಿದ್ಧಲಿಂಗಪ್ಪ ಧಾರವಾಡಕರ ನಂಜುಡೇಶ್ವರ ಸ್ಟೋರ್ಸ ಹಾವಣಗೇರಿ
ಹಾವಣಗೇರಿ:—ಹಾವಣಗೇರಿ ಪ್ರೆಸ್ಸ್ ೬೮ ಎಲ್ ಅನುವಾದ ಚಿಮಸ್ಸ, ಹಾವೇರಿ ಬ್ಯಾಡಗಿ

೧೯೪೯ರಲ್ಲಿ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

೧೯೪೯ರ ಬಿರುದಾವಳಿ [ಎಂ. ವಿ. ಹೆಗ್ಡೆ]	0	2	0
ಹೈದರಾಬಾದ್ ವಿಜಯ [ಯಕ್ಷಗಾನ] ,,	0	3	0
ನೆರೆಯಾಳು [ನೀಳ್ಗತೆ] ಕುಲಕರ್ಣಿ ಬಿಂದುಮಾಧವ	0	4	0
ಗಾಂಧಿ [ಸೂಕ್ಷ್ಮಪರಿಚಯ]ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಿಲಿನಲ್ಲಿ[ನೀಳ್ಗತೆ] ಪ. ಸು. ಭಟ್ಟ	0	3	0
ಬಲಿಪೀಠದಲ್ಲಿ [ನಾಟಕ] ಆರ್. ಕಲ್ಯಾಣಮ್ಮ	0	3	0
ಅಗಲಿದೆ ಅಕ್ಕ ಸರೋಜಿನಿ [ಎಂ. ವಿ. ಹೆಗ್ಡೆ]	0	3	0
ನನ್ನ ಹೆಂಡತಿ[ಕತೆಗಳು]ಮಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ [ನೀಳ್ಗತೆ] ಗಿರಿಬಾಲೆ	0	3	0
ಸುಖದದಾರಿ [ವೈರಾಗ್ಯಶತಕ] ಕೆ. ಎ. ದೇವದಾಸ	0	3	0
ಕಾಲನೇ ಬದಲಾಗಿದೆ [ಕು. ಶಿ ಹರಿದಾಸ ಭಟ್ಟ]	0	3	0
ಸುಕಾಂತ [ಅನುವಾದಿತ ಕತೆ] ವೀ. ಚ- ಹಿತ್ತಲಮನಿ	0	3	0
ಪಂಚಮುಖಿ [5 ಪ್ರಬಂಧಗಳು] ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ [ನೀಳ್ಗತೆ] ಕೆ. ದೇವಕಿ	0	3	0
ಜನಸೇವೆಯ ಸೋಗಿನಲ್ಲಿ [ಕತೆ] ಕೆ. ಶಿವರಾಮ ಶೆಟ್ಟಿ	0	3	0
ನಾ ಕಂಡ ಅವಳು [ಕತೆ] ಶ್ರೀಪತಿ	0	3	0
ಶ್ರೀವೇಣಿ [ಪ್ರಬಂಧಗಳ ಸಂಗ್ರಹ]	0	3	0
ನಿಲುವಂಗಿ [ಕತೆ]ಎಸ್.ಸುಬ್ಬರಾಮಯ್ಯ, ಬಿ.ಎ.(ಆನರ್ಸ್)	0	3	0
ಸರಸ-ವಿರಸ [೪ ವಿನೋದ ಚಿತ್ರಗಳು]	0	3	0
ಹೃದಯೇಶ್ವರಿ [ಕಾದಂಬರಿ]	0	3	0
ವಿವಿಧ ವಿಶಯ ಕೋಶ ಭಾಗ ೨ [ವೈಜ್ಞಾನಿಕ ಸಂಗ್ರಹ]	0	6	0
ಕುಲವಿಲ್ಲದ ಹೆಣ್ಣು[ಪಿ.ವೆಂಕೋಬಾಚಾರ್ಯ ಬಿ.ಎ.,ಬಿ.ಟಿ.]	1	0	0
ಭಾಗ್ಯ ಲಕ್ಷ್ಮಿ [ನಾಟಕ] ಬೆಳ್ತಂಗಡಿ ಲಕ್ಷ್ಮಣರಾವ್	1	0	0
ಯುಗವಾಣಿ [ಕವನ ಸಂಗ್ರಹ] ಕು. ಶಿ. ಹರಿದಾಸಭಟ್ಟ	0	8	0
ಶ್ರೀ ಹೃನಯ— [ವಾಸಂತಿ ಪಡುಕೋಣೆ]	0	3	0
ದ್ವೇಷ- [ಶ್ರೀನಿವಾಸಮೂರ್ತಿ ಗೊರೂರು]	0	3	0
ಪ್ರಜಾಪ್ರಭ್ವವನ್ನು ಕುರಿತು [ಶಿವರಾಮ ಕಾರಂತರು]	0	4	0
ಆಧುನಿಕ ಭಾರತ [ಎಚ್. ಭೀಮರಾವ್]	0	4	0
ಭಾರತದ ಸಾಹಿತ್ಯ ಮತ್ತು ಕಲೆಗಳು [ವಿಘ್ನೇಶ್ವರ ಶರ್ಮ]	0	4	0
ಸ್ತ್ರೀ ಸ್ವಾತಂತ್ರ್ಯ ಬೇಕೆ? [ವೈದ್ಯ ವಿನಾಯಕರಾವ್]	0	3	0

೧೯೫೦ರಲ್ಲಿ ಈವರೆಗೆ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

ಹೆಂಬಲ [ಕೃಷ್ಣಮೂರ್ತಿ ಕಿರೆಂಜೂರ]	0	3	0
ನುಡಿ ಮುತ್ತುಗಳು [ಎಂ. ವಿ. ಹೆಗ್ಡೆ] ಮಾಲೆ ೧	0	3	0
,, ,, ಮಾಲೆ ೨	0	3	0
,, ,, ಮಾಲೆ ೩	0	3	0
ಕಲಾವಿದನ ದಿನಚರಿ [ಯಸ್ಸೆಲ್]	0	3	0
ಕವರು ಹುನೆಯಿಂದ [ನೌಶಾರದಾ ದೇವಿ]	0	3	0
ದೇವರ ನಾಮ ಮತ್ತು ಅದರ ಸಾಧನೆ [ಬಿ ವಿ. ಶರ್ಮ]	0	3	0
ಎರಡು ಕತೆಗಳು	0	3	0
ಬಾಡಿಗೆಯ ಮನೆ ಮತ್ತು ಮುಸುಕು [ನಾಟಕಗಳು]	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ಭಾರತ ಚಿತ್ರದ ಅಂಜೆಚೀಟುಗಳು [ಟಿ. ಚಂದ್ರರಾಜ ಸೆಟ್ಟಿ]	0	3	0
ತ್ರಿಶೂಲ [ನಾಟಕ] ವಸುದೇವ್ ಭೂಪಾಲಂ	0	4	0
ಪುಸ್ತಕ ಪುರಾಣ [ಕು.ಶಿ ಹರಿದಾಸಭಟ್ಟ, ಬಿ ಎ (ಆನರ್ಸ್)]	0	4	0
ಹಳ್ಳಿಯಲ್ಲಿ ನಡೆದ ನಾಟಕ[ಕೆ ಎ. ದೇವದಾಸ,ಶಿರೋಮಣಿ]	0	2	0
ನೆರೆಯ ಗಾಂಧಾರ [ಸುಬ್ರಾವ್ ಕೃಷ್ಣ ಹೆಗಡೆ]	0	3	0
ಮಾತನೆಯುಗದ ಮಹಾ ಪ್ರಭಾವ [ವಿಘ್ನೇಶ್ವರ ಶರ್ಮ]	0	3	0
ವಿಜ್ಞಾನದ ಬೆಳವಣಿಗೆ [ಟಿ. ಚಂದ್ರರಾಜ ಸೆಟ್ಟಿ]	0	4	0
ಡಾ. ಹರ್ಡೀಕರ್ [ನಾಗೇಶ ರಾಮಚಂದ್ರ ದೇನಾಯಿ]	0	4	0
ತೆಂಗಿನ ಪವರು [ಯು ನಾರಾಯಣಭಟ್ಟ, ಕಾನಗೋಡು]	0	4	0
ಪ್ರಭಾ [ಕು. ಪದ್ಮಾ ಉಡುಪಿ]	0	3	0
ಪ್ರಾಯಶ್ಚಿತ್ತ [ಎಂ ಗೋವಿಂದರಾವ್, ಎಂ ಎ]	0	2	0
ಶವಗಳ ಸಾಗಾಟ [ಪತ್ತೆದಾರಿ] ಸುಬ್ರಾವ್ ಕೃಷ್ಣ ಹೆಗಡೆ	0	8	0
ಸ್ವಪ್ನಲೋಕ [ಕಾರ್ತಿಕೇಯ]	0	4	0
ಮನೆಯ ಹೊರಗಿನ ಸುಪ್ತಾಜೀವಗಳು [ಕು ಶಿ ಭಟ್ಟ]	0	4	0
ಶಂಟಮಾರಾ [ಕು. ಶಿ. ಹರಿದಾಸ ಭಟ್ಟ] ಭಾಗ ೧	0	3	0
,, ,, ಭಾಗ ೨	0	3	0
,, ,, ಭಾಗ ೩	0	3	0
,, ,, ಭಾಗ ೪	0	4	0

ಸಿಗುವ ಸ್ಥಳ:—**ಅಂತರಂಗ ಕಾರ್ಯಾಲಯ, ಉಡುಪಿ.**
ಅಥವಾ **ನವಯುಗ ಪ್ರೆಸ್, ಉಡುಪಿ**

ಜ ನ್ನ ಡ

ಅಚ್ಚಾಲಿಯಲ್ಲಿ-ಇಲ್ಲಿಗೆ ೨.೧೦ಮೈಲಿ ಎಂ ಬಲ್ಲಿ ಇವಿಕೇಶಾನಂದ ಬ್ರಹ್ಮಚಾರಿಯ ಶಾಲಾ, ಸಾಳುಮನ-ಅಣ್ಣಾಜಿ ಎಂಬ ಅಭಿಧಾನದ ನೂತನ ಶಾಲೆಯೊಂದು ಶ್ರೀ ಬನ್ನಾಡಿ ಸುಬ್ರಣ್ಣ ಹೆಗ್ಡೆಯವರ ಸಂಚಾಲಕತ್ವದಲ್ಲಿ ಇದೇ ತಾ. 21-6-50ರಂದು ಉಡುಪಿ ಉತ್ತರ ಶ್ರೀಮಠಿಯ ಶಾಲೆಗಳ ಹಿರಿಯ ಪರೀಕ್ಷಾಧಿಕಾರಿಗಳಾದ ಶ್ರೀ ಟಿ. ಎಲ್. ರಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಆ ದಿನ ಪೂರ್ವಾಹ್ನ ಗಂಟೆ 9-30ಕ್ಕೆ ಬನ್ನಾಡಿಯ ಪರಮಹಂಸ ಪ್ರಾಥ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ, ಅಧ್ಯಾಪಕರ ಮತ್ತು ಊರ ಮಹನೀಯರ ಕೂಡುವಿಕೆಯ ಮೆರವಣಿಗೆಯು ಪರಮಹಂಸ ಶಾಲಾ ವರಾಂಡದಿಂದ ಹೊರಟು ವಿದ್ಯಾ ಪ್ರಚಾರಕ ಗೀತೆಗಳನ್ನು ಹಾಡುತ್ತಾ ವಾದ್ಯಘೋಷದೊಡನೆ ಮಧುವನವನ್ನು ಕಲುಪಿತು. ಅಲ್ಲಿ ರಾಷ್ಟ್ರ ಧ್ವಜಾರೋಹಣ, ಧ್ವಜವಂದನೆಗಳಾದ ಬಳಿಕ ನೂತನ ಶಾಲಾ ದ್ವಾರಉದ್ಘಾಟನೆಯು ನೆರವೇರಿತು. ಸಭೆಗೆ ಉಡುಪಿಯ ಉತ್ತರ ಶ್ರೀಮಠಿಯ ಶಾಲೆಗಳ ಕಿರಿಯ ಪರೀಕ್ಷಾಧಿಕಾರಿಗಳಾದ ಶ್ರೀ ರಾಮಚಂದ್ರನವರೂ ಆಗಮಿಸಿದ್ದರು. ಅನುಪಾಸಿನ ಹಳ್ಳಿಗರು ನೆರೆದಿದ್ದರು. ವ್ಯವಸ್ಥಾಪಕರ ಸಂದರ್ಭೋಚಿತ ಭಾಷಣದಾದ ಬಳಿಕ ಹಲವು ಮಂದಿ ಶುಭಕಾಂಕ್ಷೆಗಳು ನೂತನ ಶಾಲೆಗೆ ಶುಭಾಶಯ ಕೋರಿದರು. ಅಧ್ಯಕ್ಷರು, ಶಾಲಾ ವಿಳಿಗೆಯಲ್ಲಿ ಹೆತ್ತವರ ಹೊಣೆಗಾರಿಕೆಯನ್ನು ಮನಗಾಣಿಸಿ ಭಾಷಣ ಮಾಡಿದರು, ರಾಷ್ಟ್ರ ಗೀತೆ ಸಿಹಿ ಹಂಚೋಣಗಳು ಮುಗಿದ ಬಳಿಕ ಸಭೆಯು ವಿಸರ್ಜಿತ.

ಕುಂದಾಪುರ–ಕುಂದಾಪುರದಲ್ಲಿ ವನಮಹೋತ್ಸವ ಉದ್ಘಾಟನಾ ಸಮಾರಂಭವು ತಾ 1-7-50ರ ಬೆಳಿಗ್ಗೆ ಅತೀ ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ಘಂಟೆ 8ಕ್ಕೆ ಸರಿಯಾಗಿ ಸ್ಥಳೀಯ ಎಲ್ಲಾ ಶಾಲಾ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಪುರ ಮಹನೀಯರೂ ಸರಕಾರಿ ಉದ್ಯೋಗಸ್ಥರೂ ಪ್ರಾಥ ಶಾಲಾ ವರಾಂಡದಲ್ಲಿ ನೆರೆದು ಶ್ರೀ. ಬಿ. ಎಸ್. ಶೆಟ್ಟಿ ಮತ್ತು ಶ್ರೀ. ಡಿ. ಬಿ. ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಅಧ್ಯಕ್ಷರು ಸಸಿ ನಡಿಗೆಯ ಪ್ರಾಮುಖ್ಯತೆಯ ಕುರಿತು ಮಾತನಾಡಿದ ನಂತರ, ಶ್ರೀಯುತರಿಂದಲೂ ಡಿಸ್ಟ್ರಿಕ್ಟ್ ಮುನ್ಸಿಫ್ ಎ. ಎಂ. ಜೇಸ, ಇತರರಿಂದಲೂ ಶಾಲಾ ವರಾಂಡದಲ್ಲಿ ಸಸಿ ನಡಿಗೆಯು ಉದ್ಘಾಟನೆಯಾದ ತರುವಾಯ, ಶ್ರೀ. ಎಂ. ಎಂ. ಹೆಗ್ಡೆಯರು ಎಲ್ಲಾ ಶಾಲಾ ಮುಖ್ಯೋಪಾಧ್ಯಾಯರಿಗೆ ನಡಿಗೆಯ ಬಗ್ಗೆ ಸಸಿಗಳ ವಿತರಣೆ ಮಾಡಿದರು. ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಿದ ನಂತರ, ತಹಶೀಲ್ದಾರ್, ಶ್ರೀ ಕೆ. ದೇವೇಂದ್ರ, ಇವರ ಧನ್ಯವಾದ ಕಾರ್ಯಕ್ರಮದೊಂದಿಗೆ ಸಭಾಂತ್ಯವಾಯಿತು. ಉದ್ಘಾಟನೆಗೆ ದೇಣಿಗೆ ಎರಡು ಅತ್ಯುತ್ತಮ ಸಸಿಗಳನ್ನು ಶ್ರೀ ಕೆ. ತೇಜಪ್ಪ ಶೆಟ್ಟಿ, ಎಗ್ಸಿಕ್ಯುಟರ್ ಹೆಮೊನ್ಸ್ಟ್ರೇಟರ್, ಇವರು ವಿತರಿಸಿ ಕೊಟ್ಟಿದ್ದರು. ಈ ಮೇಲೆ ಸರಕಾರಿ ಆಫೀಸುಗಳ ವರಾಂಡದಲ್ಲಿ ಸಸಿನೆಡುವ ಕಾರ್ಯಕ್ರಮವು ನೆರವೇರಿತು.

ಮದ್ರಾಸು:-18-6-50ನೇ ಭಾನುವಾರ ಸಂಜೆ ಕರ್ನಾಟಕ ಸಂಘದ ಆಶ್ರಯದಲ್ಲಿ 'ಭಾಷಣ ಮತ್ತು ವಿವಿಧ ವಿನೋದಾವಳಿಗಳು' ನಡೆದುವು. ಶ್ರೀಮಾನ್ ಎಸ್. ಎಸ್. ಲೋಕೂರ್ ಅವರ ಅಧ್ಯಕ್ಷತೆಯಲ್ಲಿ "ಜನಸಾಮಾನ್ಯ ಸಾಹಿತ್ಯ" ಎಂಬ ವಿಷಯದ ಕುರಿತು ಶ್ರೀ ಸಿ. ಕೆ ಶಿವಾಮುಲೇರವು ಮಾತನಾಡುತ್ತಾ ಹಳೆಯ ಮತ್ತು ಹೊಸ ಕಾವ್ಯ ಕವನಗಳ ಭಾವ, ಅರ್ಥ, ಇಂಪು ಇವುಗಳನ್ನು ಆಯಾ ಕವಿಗಳ ಕೃತಿಗಳ ಕಾವ್ಯ-ಕವನ-ಜನಪದ ಗೀತ-ಜನಪದಗಳ ಭಾಗಗಳನ್ನು ಹಾಡಿ ವಿವರಿಸಿದರಲ್ಲದೆ ಕಾವ್ಯ ಕವನಗಳನ್ನು ಓದುವ ಅಭ್ಯಾಸವನ್ನು ಹೆಚ್ಚಿಸುವ ಅವಶ್ಯಕತೆಯನ್ನು ತಿಳಿಸಿದರು. ಶ್ರೀಮತಿ ರಾಜಲಕ್ಷ್ಮಿ ಕೇಶವ ಭಟ್ ಅವರು ಕೆಲವು ಕವನಗಳನ್ನೂ ಶ್ರೀಮತಿ ಎಸ್. ಬಿ. ಪುಷ್ಪಮ್ಮ ಅವರು ಕೆಲವು ವಚನಗಳನ್ನೂ ಇಂಪಾಗಿ ಹಾಡಿದರು. ಶ್ರೀ ಬಳ್ಳಾರಿ ಹನುಮಂತಾಚಾರ್, ಹಿಂದುಸ್ತಾನಿ ಸಂಗೀತ ಪಾಸ್ಟರ ಅವರು ಮತ್ತು ಶ್ರೀ ಬಳ್ಳಾರಿ ಆರ್. ಎಸ್. ಪರೇಲ್, ಬಿ.ಕಾಂ. ಅವರು ಕೆಲವು ವಚನ ಹಾಗೂ ಇತರ ಕಾವ್ಯಭಾಗಗಳನ್ನು ಇಂಪಾಗಿ ಮತ್ತು ಅರ್ಥಗರ್ಭಿತವಾಗಿ ಹಾಡಿದರು. ಶ್ರೀ ಸಿದ್ದನ ಹಳ್ಳಿ ರಾಜಗೋಪಾಲ್ ಅವರು 'ಬುಡುಬುಡಿಕೆ' ಎಂಬ ವಿಕಾಂಕ ನಾಟಕವನ್ನು ಮನಮುಟ್ಟುವಂತೆ ಓದಿದರು. ಬಳಿಕ ಪಾ. ಪಿ. ವೇಷಗಿರಿರಾವ್ ಮತ್ತು ಗೆಳೆಯರು 'ಗುಂಡೂ ಕಾಟ' ಎಂಬ ಪ್ರಹಸನವನ್ನು ಚೆನ್ನಾಗಿ ಅಭಿನಯಿಸಿ ಸಭಿಕರನ್ನು ನಗೆಗಡಲಲ್ಲಿ ತೇಲಿಸಿದರು. ಕಾರ್ಯದರ್ಶಿಗಳು ವಂದನಾರ್ಪಣೆಯನ್ನು ಸ್ವಸಿದ ಬಳಿಕ ಕಾರ್ಯಕ್ರಮವು ಮುಕ್ತಾಯವಾಯಿತು.

ಮದ್ರಾಸ್ ಸರಕಾರದ ಚೀಫ್ ಇಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ಶ್ರೀ ಕೆ. ವಿ. ಕಾರಂತ ಅವರು ಸಂಘದ ವಾರ್ಷಿಕಾಧಿವೇಶನದ ಆಂಗವಾಗಿ ನಡೆಯಲಿರುವ ಭಾಷಣ ಸ್ಪರ್ಧೆಗೆ ಬಯಮಾನ ಕೊಡುವುದಕ್ಕಾಗಿ ಎವತ್ತು ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನ ಪತ್ರ ಉಪಕರಿಸಿದ್ದಾರೆ.

ನೋಟೀಸು

ಉಡುಪಿ ಡಿ ಮುನ್ಸಿ. ಕೋರ್ಟಿನಲ್ಲಿ
O. P. ನಂಬ್ರ 20/1950.

I. ಮುತ್ತು ಹೆಂಗ್ಸು (ತಂದೆ ಕವರಿನ ಯಜಮಾನ್ರಿಯಾಗಿ) ಕಾಂಚರು ಹೆಂಗ್ಸಿನ ಮಗಳು. ಉಡುಪಿ ತಾಲ್ಲು ಕೋಟೆ ಗ್ರಾಮದಲ್ಲಿ ರುವವಳು.

2. ಭಾಗಿ ಮರಕಾಲ್ತಿ, ಪಿಂಗಳಕ್ಕೆ ಹೆಂಗ್ಸಿನ ಮಗಳು ವ ಕೋಟಿ ಪುದ್ದು ಅಮಿನರ ವಿಧವೆ. ಉಡುಪಿ ತಾಲ್ಲು ಕಡೇಕಾರು ಗ್ರಾಮದ ದಪ್ಪರುವವಳು. —ಅರ್ಜಿದಾರರು.

ಉಡುಪಿ ತಾಲ್ಲು ಕೋಟಿ ಗ್ರಾಮದಲ್ಲಿ ತಾರೀಕು 10-2-1950ರಲ್ಲಿ ಮೃತಪಟ್ಟ ನೇ ಅರ್ಜಿದಾರಳ ಸಹೋದರ ವ 2ನೇ ಅರ್ಜಿದಾರಳ ಗಂಡ ಕೋಟಿ ಪುದ್ದು ಅಮಿನರ ಎಸ್ಟೇಟಿಗೆ ಅರ್ಜಿಯಲ್ಲಿ ವಿವರಿಸಿದ ದಿ.ಫೀನಿಕ್ಸ್ ಲೈಫ್ ಇನ್ಶ್ಯೂರೆನ್ಸ್ ಕಂಪನಿಯ ಪೋಲಿಸಿ ನಂಬ್ರ 3706ರ ಶ್ರಕಾರ ಬಂತಕ್ಕ ಸಾಲದ ಬಾಬ್ತು ಸಮ ಅರ್ಧಾಂಶದ ಲೈವಜು ವಸೂಲಿಗೆ ನೇ ಅರ್ಜಿದಾರಳಿಗೂ ಸಮ ಅರ್ಧಾಂಶದ ಲೈವಜು ವಸೂಲಿಗೆ 2ನೇ ಅರ್ಜಿದಾರಳಿಗೂ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಕೊಟ್ಟಿರುವ ಈ ಅರ್ಜಿಯು ತಾರೀಕು 19-7-1950ಕ್ಕೆ ಯಿಟ್ಟಿರುತ್ತದೆ. ಸದ್ರಿ ಬಾಬಿನಲ್ಲಿ ಆಕ್ಷೇಪ ಹೇಳತಕ್ಕವರು ಸದ್ರಿ ತಾರೀಕು 19-7-1950ನೇ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ನೀಲ್ಮಂಡ ಕೋರ್ಟಿನಲ್ಲಿ ಪಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂದು ಸಂಗ್ತಿ ಈ ಮೂಲಕ ತಿಳಿಸೋಡಾಗುತ್ತದೆ.

V R. Kidyur,
Advocate for Petitioners.
ಉಡುಪಿ, ತಾ. 28 ಜೂನ್, 1950.

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ನೆವಗೆ ಸ್ವಾತಂತ್ರ್ಯ ಲಭಿಸಿದೆ. ಆನಂದ, ಮಹದಾನಂದ. ಆದರೆ, ನಾವು ಸ್ವಾತಂತ್ರ್ಯವೆಂಬ ಸ್ವರ್ಣ ಮಾಳಿಗೆಯನ್ನು ಪಡೆದಿರುವವರೆಲ್ಲರೂ ಆ ಮಾಳಿಗೆಯಲ್ಲಿ ಸ್ವರ್ಗಭೋಗದಿಂದ ಬಾಳಲು ಅರ್ಹರಾಗಿರುವೆವು.

ಪ್ರಸಂಚದ ಇತರ ಸ್ವತಂತ್ರ ರಾಷ್ಟ್ರಗಳಿಗೆ ನಮ್ಮ ರಾಷ್ಟ್ರವನ್ನು ಹೋಲಿಸಿ ನೋಡಿದರೆ ನಮ್ಮ ನಾಡು ಸ್ವಪರಿಪೂರ್ಣತೆ ಹೊಂದಲು ಇನ್ನೂ ಎಷ್ಟೋ ವಿಧಗಳಲ್ಲಿ ಅಭಿವೃದ್ಧಿ ಹೊಂದಬೇಕಾಗಿದೆ. ದೇಶದಲ್ಲಿ ಅಹಾರದ ಬೆಳೆ ಸಾಲದು, ಬಟ್ಟೆಯ ಅಭಾವವಿನ್ನೂ ತೀರದ ಪಾಡಿಲ್ಲ. ಅಂತರ ವೈಷಮ್ಯವೂ, ಅವಿವೇಕವೂ, ಬಡದರಿನವೂ ಕೊಲಗಬೇಕು. ದೇಶದ ಪ್ರಜೆಯೆಂದೆನಿಸಿಕೊಂಡ ಪ್ರತಿಯೊಬ್ಬರೂ ವಿದ್ಯಾವಂತರಾಗಬೇಕು. ದೇಶಾದ್ಯಂತ ಜಾತಿ, ಮತ, ಭೇದ ತೊಲಗಬೇಕು. ಪಟ್ಟಣಿಗ, ಗ್ರಾಮಸ್ಥ, ವಿದ್ಯಾವಂತ, ಅನಕ್ಷರಸ್ಥ, ಶ್ರೀಮಂತ, ಬಡವ ಎಂದು ಒಬ್ಬರನ್ನೊಬ್ಬರು ದ್ವೇಷಿಸುವುದರಿಂದಲೂ, ಅಹಂಕಾರ ಅಸೂಯೆಯಿಂದಲೂ, ತಿರಸ್ಕಾರದಿಂದಲೂ ಕಾಣದೆ, ಎಲ್ಲರೂ ಏಕೈಕ ಮನೋಭಾವದಿಂದಲೂ ಸಹಬಾಳ್ವೆಯಿಂದಲೂ ಕಲೆತು ದೇಶ ಸೇವೆಯಲ್ಲಿ ನಿರತರಾಗಬೇಕು. ಮತ್ತೂ ದೇಶದ ಆರ್ಥಿಕ ಸ್ಥಿತಿ, ಕೈಗಾರಿಕೆ, ಕಲೆ, ಸಾಹಿತ್ಯ, ನಾಗರೀಕತೆ...ಪ್ರತಿಯೊಂದು ಅಭಿವೃದ್ಧಿ ಸೊಂದಿದಲ್ಲವೇ ದೇಶದ ಸಂಸ್ಕೃತಿಯು ನುಟ್ಟು ಹೆಚ್ಚಲು ಸಾಧ್ಯ?

ನವುಲ್ಲಿ ಒಂದು ತಪ್ಪು ಭಾವನೆ ಮೂಡಿದೆ. ಬಿರ ಬೈತಲೆ, ಮುಂಬಕ್ಕಿ ಪೌಡರ್, ತುಟಿಗೆ ಲಿಪ್‌ಸ್ಟಿಕ್, ಕಾಲಿಗೆ ಹೈ ಹೀಲ್ಡ್ ಶೂಸ್ ತೊಟ್ಟು, ೧೯೫೦ ಫೇಶನ್ ಸೀರೆಯುಟ್ಟು ಕೊಂಡು ಒಯ್ಯಾರವಾಗಿ ನಡೆದುಬಿಟ್ಟರೆ ನಾಗರೀಕತೆಯ ಉಚ್ಚ ಸ್ಥಾನವನ್ನು ನಲುಕಿಬಿಟ್ಟಂತೆ ಭಾವನೆ. ಥಾಗಲ್ಲ. ನಿಜವಾಗಿಯೂ ನಾಗರೀಕ ರವಾನೆಯೆಂದರೆ ಸಾಂಸ್ಕೃತಿಕ ಹೊಂದಿದವಳೆಂದು ಅರ್ಥ, ತನ್ನ ತಾಯಿ ನಾಡನ್ನು ಅಭಿವೃದ್ಧಿಗೆ ತಂದು ತಾನೂ ಅಭಿವೃದ್ಧಿ ಹೊಂದಿದವಳೆಂದು ಅಭಿವ್ಯಾಯ. ಕಾರ್ಯದಲ್ಲಿ ಒಂದು ಜಾಹ್ನೆ, ಬುದ್ಧಿಯಲ್ಲಿ ಚುರುಕು, ಗುಣದಲ್ಲಿ ಆಸರಿಜಿ, ದೇಶಸೇವೆಯಲ್ಲೂ ಪರೋಪಕಾರದಲ್ಲಿ ಒಂದು ಆಸಕ್ತಿ,ನಡೆನುಡಿಯಲ್ಲಿ ಒಂದು ಗಾಂಭೀರ್ಯ..? ಇಂತಹವಳೇ ನಾಗರೀಕಳೆನಿಸಿಕೊಳ್ಳುವಳು. ನಮ್ಮ ನಾಡ ಪ್ರತಿಯೊಂದು ಪ್ರಜೆಯೂ ಸಹ ಈ ಶಿಷ್ಟಾಚಾರವನ್ನು ಅನುಸರಿಸಿದರೆ ಮಾತ್ರ ದೇಶ ಮುನ್ನಡೆದು ಸುಸಂಸ್ಕೃತಿಯ ಮಟ್ಟಿವನ್ನು ನಲುಕಲು ಸಾಧ್ಯ. ಒಬ್ಬರಿಗೊಬ್ಬರು ಅಸೂಯೆಪಡುತ್ತಲೋ ಅಥವಾ ದೇಶಕ್ಕೆ ನಾವೇನು ಮಾಡುವುದಿದೆ? ಸರಕಾರವಿದೆ, ನಾಯಕರುಗಳಿದ್ದಾರೆ, ಅದು ಅವರ ಹೊಣೆ ಎಂದು ತನ್ನ ತಮ್ಮ ಪಾಡನ್ನು ನೋಡಿಕೊಂಡರೆ, ಈಗಿನ ಈ ಅನ್ನದ ಅಭಾವ, ಬಡತನ, ಜಾತಿಮತಭೇದ, ಪ್ರಾಂತೀಯ ಜಾಡ್ಯ... ಇಂತಹ ಮಹಾರೋಗಗಳು ಚಿಟ್ಟನೆ ಮಾಯವಾಗಿ ದೇಶ ಸುಭಿಕ್ಷವಾಗುವುದು ಅಸಾಧ್ಯ. ಹಾದು. ದೇಶದ ನಾಯಕರುಗಳೂ ಸರಕಾರವೂ ಆಹಾರ ಆಭಾವವನ್ನೂ ಮತ್ತಿತರ ಕಷ್ಟಕಾರ್ಪಣ್ಯಗಳನ್ನೂ ನೀಗಿಸಲೂ ಜನತೆಯು ಹಿತರಕ್ಷಣೆಗಾಗಿಯೂ ಎಷ್ಟೋ ಯೋಜನೆಗಳನ್ನು ತಂದಿದ್ದಾರೆ. ಆದರೂ ಕೂಡ ಪ್ರತಿಯೊಬ್ಬ ಭಾರತೀಯನೂ, ಭಾರತ ಮಹಿಳೆಯೂ ದೇಶದ ಹಿತಕ್ಕಾಗಿ[illegible]ಗಿಬೂ ಕೈಲಾದ ಸೇವೆ ಸಲ್ಲಿಸಬೇಕು.

ನೋಡಲು ಹೋದರೆ ಸಣ್ಣ ವಿಷಯ, ಆದರೆ ದೇಶಕ್ಕೆ ಈಗ ಒಪಗಿರುವ ಅನ್ನಕ್ಷಾಮ ಕಾಲದಲ್ಲಿ ಒಂದೊಂದು ಆಕ್ಕೀ ಕಾಳು ಸಹ ಒಂದೊಂದು ಸವರಿನ್ ಸಮಾನವಾಗಿದೆ. ಸವರನ್ನನ್ನು ಕೊಂಡುಕೊಳ್ಳುವವ ಇದ್ದರಲ್ಲವೇ ಅದಕ್ಕೆ ಬೆಲೆಯುಂಟು? ಆದರೆ, ಅನ್ನವಿಲ್ಲದೆ ಮನುಷ್ಯ ಬದುಕಬಲ್ಲನೇ? ದೇಶದಲ್ಲಿ ಆಹಾರ ಸಮೃದ್ಧಿಯಾಗಿ ಬೆಳೆಯಿಗಿ ಸಕಲರೂ ಹೊಟ್ಟೆ ತುಂಬ ಉಂಡು ನೈತುಂಬ ಉಟ್ಟು, ನವುಗೆ ಹೆಜ್ಜಾದ ಆಹಾರಸಾಮಗ್ರಿಗಳನ್ನು ಹೊರನಾಡಿಗೆ ರಫ್ತು ಮಾಡಿ ವ್ಯಾಪಾರ ಹೆಚ್ಚಿದರಲ್ಲವೇ ನಾಡು ಸುಭಿಕ್ಷವೊಂದಲು ದಾರಿ?

ಒಂದು ಕಾಲದಲ್ಲಿ ಧನಲಕ್ಷ್ಮಿಯಾಗಿ,ಭಾಗ್ಯಲಕ್ಷ್ಮಿಯಾಗಿ, ಅನ್ನಲಕ್ಷ್ಮಿಯಾಗಿ ಮೆರೆದ ನನ್ನ ತಾಯಿ ಭಾರತಾಂಬೆ ಈಗ ತನ್ನ ಸ್ವಂತ ಮಕ್ಕಳಿಗೆ ಸಾಕಷ್ಟು ಊಟ ಒದಗಿಸಲಾರದೆ ಕೊರಗುತ್ತಿದ್ದಾಳೆ. ಇದು ಅವಳ ತಪ್ಪೇ? ಅಕಯ ನುಕ್ಕಳ ತಪ್ಪು. ಅಕಯ ನುಕ್ಕಳ ಅಲಸ್ಯವೇ ಕಾರಣ. ಇದೀಗ ಒಂದು ಗಜ ನೆಲ ಆಗದು ಒಂದು ಹಿಡಿ ತಿಂಗಳ ಪಾಲಿನ ಬೀಜ ಬಿತ್ತಿ ಶ್ರಮವಾಗಿ ಬೆಂದಿಪ್ಪು ನೀರೆರೆಯುತ್ತ ಬಂದರೆ ಸಾಕು. ಒಂದೇ ತಿಂಗಳಲ್ಲಿ ಫಲ ಕಾಣುವಿರಿ: ನಮ್ಮ ನಾಡಿ ಗವರ್ನರ್ ಜನರಲ್ ಗಣ್ಯ ರಾಜಾಜಿಯವರು ಅಂದಂತೆ ಭೂಮಾತೆ ಕರುಣಾಮಯಿ. ತಿಂಗಳೊಳಗಾಗಿ ನಿವುಗೆ ಗೊಂಡಲುಗೂಂಡಲಾಗಿ ಕಾಯಿ ನೀಡುವಳು. ಒಂದು ಹಿಡಿ ಬೀಜಕ್ಕೂ, ನಮ್ಮ ಅಲ್ಪಸೇವೆಗೂ ಸುಮಾರು ವೀಸೆ ಎರಡು ವೀಸೆ ಹುರುಳಿಕಾಯಿ ಗಿಟ್ಟಿಸುತ್ತಾಳೆ.

ಈಗ ನಮ್ಮ ಸರಕಾರವೂ ದೇಶದ ನಿಯಿಕರುಗಳೂ ನಿನನ್ನು ಸಾರುತ್ತಿದ್ದಾರೆ! "ಹೆಚ್ಚು ಆಹಾರ ಬೆಳೆಯಿರಿ". ನಿಮ್ಮ ದೀನ ಸೋದರ ಸೋದರಿಯರು ಸಾವಿರಾರು ಮಂದಿ ಹೊಟ್ಟೆಗೆ ಒಪ್ಪೊತ್ತೂ ಊಟವಿಲ್ಲದೆ ಸೊರಗುತಿದ್ದಾರೆ. ಹಾಗೆ ನಾಲ್ಕು ಕಾಳು ಸಿಕ್ಕರೂ ಕೂಡ, ಕೊಳ್ಳಲು ಸಾಕಷ್ಟು ಹುಡ್ಡಿಲ್ಲದೆ ಪೇಚಾಡುತ್ತಾರೆ. ಆಹಾರ ಹೆಚ್ಚಾಗಿ ಬೆಳೆದಷ್ಟೂ ಪದಾರ್ಥಗಳ ಬೆಲೆಯು ಇಳಿಯುತ್ತದೆ. ನಿಮ್ಮ ದೀನ ಸೋದರ ಸೋದರಿಯರು ಕಷ್ಟಪಡುತ್ತಿರುವಾಗ ಹಬ್ಬ, ಹುಣ್ಣಿಮೆ, ಔತಣ, ಅದೂ ಇದೂ ಎಂದು ಅನಾವಶ್ಯಕವಾಗಿ ಭರ್ಜರೀ ಊಟಕ್ಕೆ ಹೆಚ್ಚು ಆಹಾರ ಖರ್ಚು ಮಾಡಬೇಡಿ. ಅಧಿಕ ಊಟವನ್ನು ನಿಲ್ಲಿಸಿದರೆ ಆ ಧಾನ್ಯ ನಿಮ್ಮ ಬಡ ಬಾಂಧವರಿಗೆ ಉಪಯೋಗವಾಗಲು ಸಾಧ್ಯ.....ಈ ರೀತಿ ಬಹಳ ಕಳ ಳಿಯಿಂದ ಬೇಡಿಕೊಳ್ಳುವರು.

ಈಗಂತೂ ಸಾಲುಸಾಲಾಗಿ ಹಬ್ಬದ ದಿನಗಳು. ಈ ಹಬ್ಬಕ್ಕೆ ಕಡುಬು, ಆ ಹಬ್ಬಕ್ಕೆ ಹುಗ್ಗಿ, ಮುಂದಿನ ಹಬ್ಬಕ್ಕೆ ಮುಯೋಕ್ಕಿ, ಚಿರೋಟಿ,ಒಬ್ಬಟ್ಟು, ವಿಶೇಷ ಹಬ್ಬವಂತೂ ವರ್ಷಕ್ಕೆ ಒಂದು ಸಲ. ಭರ್ಜರಿಯಾಗಿ ಔತಣ ಮಾಡಿಕೊಂಡಾಡಿದರಾಯಿತು. ಈ ರೀತಿಯಾಗಿ ದಯವಿಟ್ಟು ಯೋಜನೆಗಳನ್ನು ಸಿದ್ಧಗೊಳಿಸಬೇಡಿರಿ ತಾಯಂದಿರಾ,

ಈಗಂತೂ ಉಣ್ಣಲು ಊಟವಿಲ್ಲದೆ ಕೋಟ್ಯಾಂತರ ಮಂದಿ ನಮ್ಮ ದೇಶಬಾಂಧವರು ಸೊರಗುತ್ತಿದ್ದಾರೆ ಎಂದೆನಲ್ಲಾ. ಸರಕಾರವು ಮಾಡಿದ ಎತ್ತುಗಡೆಯ ಫಲವಾಗಿ ನಮಗೀಗ ಹೊಟ್ಟೆಯ ತುಂಬ ಊಟ ಸಿಗುವುದು ಸಾಲದೆ? ಆ ಚಕ್ಕುಲಿ, ಚಿರೋಟಿ, ಹುಗ್ಗಿಗೆ ಉಪಯೋಗಿಸುವ ಅಕ್ಕಿಯನ್ನು ಬಡ ಬಾಂಧವರಿಗೆ ಬಿಟ್ಟುಕೊಡಿ. ಬ್ಲಾಕ್‌ಮಾರ್ಕೆಟ್ ಮುಖವನ್ನೆಂತೂ ನೋಡಲೇಬೇಡಿ. ದನ್ಯವ್ಯಾ- ಮಹಾ ಪಾಪ ಅಮ. ಕೆಲವರಂತೂ "ಬ್ಲಾಕ್ ಮಾರ್ಕೆಟಿಗೆ ಯಾಕೆ ಹೋಗಲಿ? ನಮ್ಮ ಮನೆಯ ರೇಷನ್ ಧಾನ್ಯದಲ್ಲೇ ಕೊಂಚಕೊಂಚವಾಗಿ ಕೂಡಿಸಿಟ್ಟು ಕೊಂಡು ಹಬ್ಬಗಳನ್ನು ಭರ್ಜರಿಯಾಗಿ ಕೊಂಡಾಡುತ್ತೇನೆ, ಆದೂ ಬಾರದೇನು?" ಅಂದದ್ದೂ ಉಂಟು. ಹಾಗಾದರೆ ನಿಮಗೆ ರೇಷನ್ ಹೆಚ್ಚಾಗಿ ಉಳಿತಾಯವಾಗುವಷ್ಟಾದರೆ ಅದನ್ನು ದಯವಿಟ್ಟು ಕಡುಬು, ಚಕ್ಕುಲಿಗಳನ್ನು ತಯಾರಿಸಲು ಉಪಯೋಗಿಸುವದರ ಬದಲು, ನಿಮ್ಮ ರೇಷನ್ ಅಧೀಕರುಗಳಿಗೆ ತಿಳಿಸಿ ಆ ಹೆಚ್ಚುವ ಧಾನ್ಯವನ್ನು ಕೊಳ್ಳದೇ ಬಿಟ್ಟು ಪುಣ್ಯ ಕಟ್ಟಿಕೊಳ್ಳಿ. ಇದಕ್ಕಿಂತ ಮಿಗಿಲಾದ ಪುಣ್ಯ ಬೇರೆ ಇಲ್ಲ.

"ಹಬ್ಬ ಹುಡಿನಗಳಲ್ಲಿ ನವುಗಿಲ್ಲವಾದರೂ ದೇವರ ನೈವೇದ್ಯಕ್ಕಾಬೆರೂ ಒಂದಿಷ್ಟು ಭಕ್ಷ್ಯ ಮಾಡಬೇಡವೆ?" ಎಂದು ನೋದರಿಯರು ಕೇಳಬಹುದು. ದೇವರಿಗೆ ಮನಸಾರೆ ಹಣ್ಣು ಕಾಯಿ ನೈವೇದ್ಯ ನೂಡಿದರೆ ಸಾಕು. ಈ ಕಡುಬು ಚಕ್ಕುಲಿ ಎಲ್ಲ ನಮ್ಮ ಹೊಟ್ಟೆಗಾಗಿ ಅಲ್ಲವೇ! ಹಲವು ಮನೆಗಳಲ್ಲಿ ಕಂಡಿದ್ದೇನೆ. ಹಬ್ಬಕ್ಕೆಂದು ಮಾಡು ವ ಭಕ್ಷ್ಯಗಳೆಲ್ಲ ದೇವರ ನೈವೇದ್ಯಕ್ಕೆ ಪೂಜೆಲೇ ಭಟ್ ಆಗುವುದನ್ನು!

ಇನ್ನೂ ನಿಮ್ಮ ಮನೆಯ ಅಂಗಳದ ಕೈದೋಟಗಳಲ್ಲಿ ಹೂಗಿಡಗಳನ್ನು ಬೆಳೆಸುವುದನ್ನು ನಿಲ್ಲಿಸಿಬಿಡಿ. ಆ ಸ್ಥಳಗಳಲ್ಲಿ ತರಕಾರೀ ಗಿಡಗಳನ್ನು ಬೆಳೆಸಲು ದಯವಿಟ್ಟು ಪ್ರಾರಂಭಿಸಿ, ಮಾರ್ಕೆಟಿನಿಂದ ವಿಪರೀತ ಬೆಲೆಕೊಟ್ಟು ತರಕಾರೀ ಕೊಳ್ಳುವುದೂ ತಪ್ಪುತ್ತೆ. ಮನೆಯಲ್ಲಿ ಬೆಳೆಸಿದ ಹೊಸ ಹೊಸ ತರಕಾರೀ ಹಿಂಜರಿಯದೆ ಧಾರಾಳವಾಗಿ ಅಡಿಗೆ ಮಾಡಿ ದಂಡಿಯಾಗಿ ಬಡಿಸಬಹುದು. ದೇಪಕ್ಕೂ ಪುಷ್ಠಿ. ಮನೆ ಮನೆಯಲ್ಲೂ ಈ ಅಲ್ಪ ಕಾರ್ಯವನ್ನು ತೊಡಗುವದರಿಂದ ಶ್ರಮೇಣ ದೇಶದ ಆಹಾರ ಆಭಾವ ಕೊಲಗಿ ಆರ್ಥಿಕ ಮುಗ್ಗಟ್ಟೂ ಹದಗೆಂಡು ದೇಶ ಸುಭಿಕ್ಷ ಹೊಂದಲು ಸಾಧ್ಯವಾದೀತು. "ಹನಗೂಡಿದರೆ ಹಲ್ಲು". ದೇಶದ ಪ್ರತಿ ಕಾರ್ಯದಲ್ಲಿ ಪ್ರತಿಯೊಬ್ಬ ಪ್ರಜೆಗೂ ಹೊಣೆಗಾರಿಕೆಯುಂಟು. ನಮ್ಮ ನಾಡಲ್ಲಿ ಈ ಆನ್ನ ಆಭಾವ ತೊಲಗಿದರೆ ದೊಡ್ಡ ದೊಂದು ಕಂಟಕ ಕಳೆದಂತೆ. ಆ ಬಳಿಕ ದೇಶದ ನಾಯಕರಿಗೂ, ಸರಕಾರಕ್ಕೂ ಇತರ ಉದಾತ್ತ ಕಾರ್ಯಗಳನ್ನು ಸುಗಮವಾಗಿ ಸಾಧಿಸಲು ಸಮಯ ಒದಗೀತು.

[ಸಂಜೀವನ]

ಮಹಿಳಾ ಪುಟ

"ಆಹಾರ ಬೆಳೆಯಿರಿ" ಕಾರ್ಯದಲ್ಲಿ ಮಹಿಳೆಯ ಪಾತ್ರ

ಶ್ರೀಮತಿ ಜಯಲಕ್ಷ್ಮಿ ಆರ್. ಶ್ರೀನಿವಾಸನ್.

ನೋಟೀಸು

ಕ್.ಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 139/1950.

ವಾದಿ—ತೀನಾಡಿ ಯೆಲ್ಲಂತ ಪ್ರಭು.

ಪ್ರತಿವಾದಿಯು—ಲಕ್ಷ್ಮಿನಾರಾಯಣ ಹಂಡೆ ಕೂಡಾ.

ಪ್ರತಿವಾದಿಯು—

3. ವೇಣಂಡ ಪ್ರಭು, ಪದ್ಮನಾಭ ಪ್ರಭುರ ಮಗ. ಉಡ್ಪಿ ತಾಲ್ಲು ಗಿಳಿಯಾರು ಗ್ರಾಮ. Post Kota.

7. ಮಂಜುನಾಕ ಪ್ರಭು, ರಂಗೈ ಪ್ರಭುಗಳ ಮಗ. ಕುಂಬಾಪುರ ತಾಲ್ಲು ಹೆನ್ಮಾಡಿ ಗ್ರಾಮದ ಜಾಲಾಡಿ. Post Hammadi

9 ರಾಮಚಂದ್ರ ಶೆಟ್ಟಿ ಪ್ರಭು. 10 ಸೋಮಂದ್ರಾಯ ಪ್ರಭು. ವಿಠಲರಾಯ ಪ್ರಭುರ ಮಕ್ಕಳು. ಉಡ್ಪಿ ತಾಲ್ಲು ಗಿಳಿಯಾರು ಗ್ರಾಮ. Post Kota.

ಇವರಿಗೆ

ವಾದಿಯು ಪ್ರತಿವಾದಿರ ಮೇಲೆ ಗಿಳಿಯಾರು ಗ್ರಾಮದ ಸ. ನಂಬ್ರ 204/2ಬ್ಬನೇ ಸ್ಥಳ ಸ್ವಾಧೀನತೆ ಬಗ್ಗೂ ಹುಟ್ಟೆಳ್ಳಿ ಬಗ್ಗೂ ವಾದಿಯು ಪ್ರತಿವಾದಿರ ಮೇಲೆ ಯೀ ಪಾವಾ ದಾವ್ಲು ಮಾಡಿರುವುದರಿಂದ ಆ ಕಾರಿಕು ನಿಮ್ಮ ದೇನಾದ್ದು ಆಕ್ಷೇಪವಿದ್ದಲ್ಲಿ ತಾರೀಕು 14-7-1950ನೇ ದಿವಸ ಪಗಲು 11 ಗಂಟೆಗೆ ಮುಲ್ಕಂದ ಕೋರ್ಟು ನಲ್ಲಿ ಹಾಜ್ರು ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೀ ಕಕ್ಷಿಪ್ರವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಯೀ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai.
Pleader for Plaintiff.
Coondapoor 26-6-1950.

NOTICE.

CANARA BANK, Ltd., UDIPI.

ಕೆನರಾ ಬ್ಯಾಂಕ್ ಲಿಮಿಟೆಡ್, ಉಡ್ಪಿ.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಡಮಿನ ಮೇಲೆ ಪಡೆದ ಸಾಲಗಳ ಆಸಲು, ಬಡ್ಡಿ, ಮೊಬಲಗುಗಳನ್ನು ಪಾವತಿಮಾಡದೆ ಇರುವುದರಿಂದಲೂ, ಸದ್ರಿಯವರಿಗೆ ಬಿಟ್ಟ ನೋಟ್ಸುಗಳು ರಿಜಿಸ್ಟ್ರಿ ನೋಟೀಸು ಅವರು ವಿಳಾಸದಲ್ಲಿ ಇಲ್ಲದಿರುವುದರಿಂದ ಹಿಂತಿರುಗಿಬಂದಿರುವುದರಿಂದಲೂ, ಈ ನೋಟೀಸು ಮೂಲಕ ತಿಳಿಯಪಡಿಸುವುದೇನೆಂದರೆ— ಸದ್ರಿ ಸಾಲಗಳ ಬಾಬ್ತು ಬೇಂಕಿಗೆ ಸಲ್ಲತಕ್ಕ ಆಸಲು ಬಡ್ಡಿ ವಗೈರೆ ಏವೇಜುಗಳನ್ನು ಸದ್ರಿಯವರು ಇದೇ ಬರುವ ತಾ. 24-7-1950ರ ಒಳಗೆ ಬೇಂಕಿಗೆ ತೆತ್ತು ಆಡವಿನ ನಗಗಳನ್ನು ಬಿಡಿಸಿಕೊಂಡು ಹೋಗುವದೇ ತಪ್ಪಿದಲ್ಲಿ ಸದರೀ ನಗಗಳನ್ನು ಇದೇ ಬರುವ ತಾ. 26-7-1950ನೇ ಬುಧವಾರ ದಿನ ಮಧ್ಯಾಹ್ನ ಘಂಟೆ 2ಕ್ಕೆ ಯಾ ತರುವಾಯ ಬೇಂಕಿನವರಿಗೆ ಯಾಕ್ತರೋದಿನ ಇತರ ದಿನ ಮತ್ತು ಸಮಯದಲ್ಲಿ ಪನಹಾ ನೋಟೀಸು ಕೊಡದೆ, ಸದ್ರಿ ಬೇಂಕಿನ ಉಡಿಪಿ ಶಾಖೆಯಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಆಸಲು ಏವೇಜು
G. L 95/48	U. B. Ramachandra Shettigara, Main Road, Kinnimoolky, Udipi.	Rs 70-0-0

ಮತ್ತು ವಿಲಂ ತಾರೀಕು ವರೆಗೆ ಈ ಆಸಲು ಏವೇಜುಗಳ ಮೇಲಾಗುವ ಬಡ್ಡಿ ಮತ್ತು ಖರ್ಚು ಕೂಡಾ:—

Canara Bank, Ltd., UDIPI.

(Sd) **M. A. Bhat,**
Agent.

ಅಮೃತಾಂಜನ

ತಲೆನೋವಿನಿಗೆ, ತಿರೋವೇದನೆಗೆ, ಉಳುಕು ಕುತ್ತಿಗೆ, ಭುಜ ಹಲ್ಲು ನೋವಿನೆಗಳಿಗೂ, ಎದೆ ನೋವು,ಛಾಯಗಳು, ಬಾತುಕೊಳ್ಳುವುದು, ಚೇಳವಿಷನುಂಠಾದವು, ಪಕ್ಷವಾತ,ಮೊಡಿಮೆ ಮೊದಲಾದ ಎಲ್ಲಾರೋಗಳಿಗೂ ಸಿದ್ಧೌಷಧ:-



REGD

ಉಳುಕ್ಕಿದ್ದಿ ನುದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಆರೋಗ್ಯ ವಿಚಾರ

ರಕ್ತ ನಿಧಿ

ರಕ್ತ ದಾನಕ್ಕಿಂತ ಶ್ರೇಷ್ಠ ದಾನಗಳಿಲ್ಲ

ರಕ್ತನಿಧಿ ಎಂದರೆ ಬ್ಯಾಂಕಿನ ಹಾಗೆ ನಮ್ಮಲ್ಲಿ ಹೆಚ್ಚುಳಿಯುವ ಸಂಪಾದನೆಯನ್ನಿಟ್ಟು ನಾವು ನಮ್ಮ ಭವಿಷ್ಯಕ್ಕೋಸ್ಕರ, ನಮ್ಮ ಅನುಪತ್ಯದಲ್ಲಿ ನೆರವಾಗುವಂತೆ ನಾವು ಬ್ಯಾಂಕಿನಲ್ಲಿಡುತ್ತೇವೆ. ಆದೇರೀತಿ ರಕ್ತ ನಿಧಿಯಲ್ಲಿ ಹಣಕ್ಕಿಂತಲೂ ಅಮೂಲ್ಯನಾದ ನಮ್ಮ ರಕ್ತವನ್ನು ನಾವು ಶೇಖರಿಸಿಡುತ್ತೇವೆ. ರಕ್ತವಿಲ್ಲದಿದ್ದರೆ ಜೀವವಿಲ್ಲ. ರಕ್ತ ನಿಧಿಯಲ್ಲಿ ಹರೋಪಕಾರ ಭಾವನೆ, ಕರುಣೆ, ಉದಾರತ್ವಗಳಿವೆ ಸಾಮಾನ್ಯ ಹಣಕಾಸಿನ ಬ್ಯಾಂಕಿನಲ್ಲಿ ಇವಿಲ್ಲ. ರಕ್ತ ನಿಧಿಯಲ್ಲಿ ರಕ್ತ ಕೊಟ್ಟವನಿಗೆ ರಕ್ತ ದೊರೆಯುವುದಲ್ಲ- ರಕ್ತ ಬೇಕಾಗುವ ಇತರ ಅದೃಷ್ಟ ಹೀನರಿಗೆ ಅಪತ್ಕಾಲದಲ್ಲಿ ಒದಗುವುದಾಗಿದೆ. ಸಾಮಾನ್ಯ ಬ್ಯಾಂಕುಗಳಿಗೂ ರಕ್ತ ನಿಧಿಗೂ ಇರುವ ಮುಖ್ಯ ವ್ಯತ್ಯಾಸವೇ ಇದು.

ರಕ್ತ ಚಿಕಿತ್ಸೆಯ ಕುರಿತು ಸ್ವಾರಸ್ಯವಾದ ಇತಿಹಾಸವಿದೆ. ಇದರಿಂದ ಮುಂಚಿನ ಕಾಲದಲ್ಲಿದ್ದ ಅಜ್ಞಾನ, ಮೂಢ ವಿಶ್ವಾಸಗಳು ವ್ಯಕ್ತವಾಗುತ್ತವೆ. ಅಶ್ಚರ್ಯಕರ ಸಂಗತಿಯೆಂದರೆ ಪ್ರಾಚೀನ ಕಾಲದಲ್ಲಿ ಸಪ ಜನರು ರಕ್ತದ ಪ್ರಯೋಜನವನ್ನು ತಿಳಿದಿದ್ದರು ಆದರೆ ರಕ್ತ ಚಿಕಿತ್ಸೆಯು ಆತಿ ವಿಜ್ಞಾನ ಕಾರಿಯಾಗುವಂತೆ ಬೇಕಾದ ಶಾಸ್ತ್ರೀಯ ಕ್ರಮಗಳು ಅವರಿಗೆ ತಿಳಿದಿದ್ದಿಲ್ಲ ಉದಾಪರಣೆಗಾಗಿ ಹೂರ್ವ ಕಾಲದಲ್ಲಿ ಈಜಿಪ್ಷಿನ ರಾಜಕುಮಾರರು ಆರೋಗ್ಯ ಸಂಪಾದನೆಗಾಗಿ ರಕ್ತದಲ್ಲಿ ಸ್ನಾನ ಮಾಡುತ್ತಿದ್ದರು. ರೋಮಿನಲ್ಲಿ ಪ್ರಖ್ಯಾತ ರಣಶೂರ ಯೋಧರು ಸತ್ತೊಡನಯೇ ಅವರ ರಕ್ತ ಕುಡಿಯ ಎಬುದ ಕ್ಕೋಸ್ಕರ ಯ ಎಬಕರು ಮುಂದೆ ಬರುತ್ತಿದ ರಂತೆ ಈ ರಕ್ತವನ್ನು ಕುಡಿಯುವುದರಿಂದ ಮೃತಬಾದ ಯೋಧರ ಧೈರ್ಯ, ಸಾಹಸ, ಶಾದಾದುವ ನೈಪುಣ್ಯಗಳು ಬರುತ್ತವೆಂದು ಅವರ ನಂಬಿಕೆಯಾಗಿತ್ತು ರಕ್ತ ಚಿಕಿತ್ಸೆಯ ವಿಷಯದಲ್ಲಿ ಪ್ರಾಚೀನ ಕಾಲದಲ್ಲಿ ವಿವಿಧ ಸೂಚನೆಗಳಿದ್ದುವಾದರೂ 1616ಕ್ಕಿಂತ ಮುಂಚೆ ರಕ್ತ ಪೂರಣದ ವಿಷಯವನ್ನು ಶಾಸ್ತ್ರೀಯ ಕ್ರಮದಲ್ಲಿ ಕಂಡು ಹಿಡಿಯಲಾಗಿತ್ತೆಂದು ಹೇಳಲು ಸಾಧ್ಯವಿಲ್ಲ. 1616ರಲ್ಲಿ ವಿಲ್ಲಿಯಂ ಹಾರ್ವೆ ಎಂಬವರು ರಕ್ತ ಜಲನೆಯ ಕ್ರಮವನ್ನು ಕಂಡು ಹಿಡಿದು ರಕ್ತ ಹರಿಯುವ ತತ್ವವನ್ನು ಪ್ರಸಿದ್ಧಿಪಡಿಸಿದರು. 1654 ರಲ್ಲಿ ಫ್ರಾನ್ಸಿಸ್ಕೊ ಫೊಲ್ಲಿ ಎಂಬ ಪ್ಲೋರೆಂಟಿನ್ ವೈದ್ಯರೊಬ್ಬರು ಪ್ರಥಮವಾಗಿ ರಕ್ತ ಪೂರಣ ಕ್ರಿಯೆ ನಡೆಸಿದರೆಂದು ನಂಬುತ್ತಾರೆ. ಆದರ ಇದನ್ನು ಸಹ ನಂಬಲು ಸಾಧ್ಯವಿಲ್ಲ. ಬಹುಶಃ ಇವರು ಚಿಕಿತ್ಸೆಯ ಅಧಾರ ಕ್ರಮವನ್ನು ವರ್ಣಿಸಿರಬಹುದು. ಹೇಗೂ ರಕ್ತದ ಗುಣ ನಡತೆಯ ಕುರಿತು ವಿವಿಧ ವಿಷಯಗಳು ಸಾಕಷ್ಟು ತಿಳಿಯದಿದ್ದುದರಿಂದ ಅನೇಕ ಮರಣಗಳಿಗೆ ಕಾರಣವಾಗಿ 19ನೇ ಶತಮಾನದ ವರೆಗೆ ಈ ವಿಷಯದಲ್ಲಿ ಅಸಕ್ತಿಯೂ ಕಡಮೆಯಾಯಿತು. 1818ರಲ್ಲಿ ಜೇಮ್ಸ್ ಬ್ಲಂಡೆಲ್ ಎಂಬ ಇಂಗ್ಲಿಷ್ ವೈದ್ಯರು ತನ್ನ ಸಂಶೋಧನೆಗಳಿಂದ ತಿರುಗಿ ಆಸಕ್ತಿ ಹುಟ್ಟಿಸಿದರು 1900ರಲ್ಲಿ ಲಾಂಡ್ ಸ್ಟೈನರ್ ಎಬವರು ರಕ್ತದ ಮುದ್ದ ಗುಂಪುಗಳನ್ನು ಕಂಡು ಹಿಡಿದರು. ಇದು ಮುಖ್ಯವಾದುದು. ಈ ರೀತಿ ರಕ್ತವನ್ನು ವರ್ಗೀಕರಿಸಿದ ನಂತರವೇ ರಕ್ತ ಪೂರಣವು ಒಂದು ನಿರ್ದಿಷ್ಟ ವಿಜ್ಞಾನವಾದುದು. ವಿಕಾಸ್ಕಿಯೊ ಮತ್ತು ಸ್ಟ್ರುಲಿ ಎಂಬವರು ಸಾಲ್ಕನೇ ಗುಂಪನ್ನು ಸೇರಿಸಿದರು. 1907ರಲ್ಲಿ ಜಾನ್ಸ್ಕೆಯು ರಕ್ತದ ಪ್ರತಿಕ್ರಿಯೆಯನ್ನು ಕಂಡು ಹಿಡಿದರು. 1910ರಲ್ಲಿ ಮೊಸ್ ಎಂಬವರು ಈಗಿರುವ ಪದ್ಧತಿಯಂತೆ ನಾಲ್ಕು ರಕ್ತ ಗುಂಪುಗಳನ್ನು ತಿರುಗಿ ವರ್ಗೀಕರಿಸಿದರು.

ಮನುಷ್ಯರ ರಕ್ತವನ್ನು ಎ.ಬಿ.ಎಬಿ ಒ. ಎಂದು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಕೊನೆಯ ಗುಂಪು ಅತಿ ಸಾಮಾನ್ಯವಾದುದು ಜನರಲ್ಲಿ ಬಹುಸುಂದಿ ಈ ವರ್ಗಕ್ಕೆ ಸೇರಿದವರು ಎಬಿ. ಗುಂಪಿನಲ್ಲಿ ಎ ಮತ್ತು ಬಿ ಗುಂಪುಗಳ ಗುಣಗಳಿವೆ ಆದು ದರಿಂದಲೇ ಆದಕ್ಕೆ ಆ ಹೆಸರು ಕೊಡಲಾಗಿದೆ. ಎ ಬಿ ಎಬಿ. ಗುಂಪಿನಲ್ಲಿ ರಕ್ತವು ಸರ್ವಸಾಧಾರಣವಾಗಿ ದೊರೆಯುವುದಿಲ್ಲ. ಆದರೂ ರಕ್ತ ಸಂಗ್ರಹಿಸುವಾಗ ಈ ನಾಲ್ಕು ಗುಂಪುಗಳ ರಕ್ತವನ್ನು ಸಾಕಷ್ಟು ಪ್ರಮಾಣದಲ್ಲಿ ಟ್ಟುಕೊಳ್ಳಲು ಯತ್ನಿಸಿ ಕೊಳ್ಳಲೇಬೇಕು

ಒಬ್ಬ ಉದಾರಿಯು ರಕ್ತ ಕೊಡುವುದ ಕ್ಕೋಸ್ಕರ ಮುಂದೆ ಬಂದರೆ ಡಾಕ್ಟರರು ಆ ವರಿಂದ ರಕ್ತ ತೆಗೆಯಬಹುದೆಂದು ತೃಪ್ತರಾದರೆ ರಕ್ತ ತೆಗೆಯುವ ಕಾರ್ಯವು ಪ್ರಾರಂಭವಾಗುತ್ತದೆ. ಕೊಡುವವರಿಗೆ ಸ್ವಲ್ಪವೂ ನೋವಾಗದ ರೀತಿಯಲ್ಲಿ ರಕ್ತವನ್ನು ಹೊರ ಹೀರಿ ಸೋಡಿಯಂ ಸಿಟ್ರೇಟ್ ಇರುವ ಬಾಟ್ಲಿಯಲ್ಲಿ ತುಂಬಿಸಲಾಗುತ್ತದೆ. ಸೋಡಿಯಂ ಸಿಟ್ರೇಟ್ ಎಂಬ ಕ್ಷಾರದ್ರವವು ರಕ್ತವು ಹೆಪ್ಪುಗಟ್ಟದಂತೆ ಮಾಡುತ್ತದೆ ಆನಂತರ ರಕ್ತವನ್ನು ಪರೀಕ್ಷಿಸಿ ಅದು ಯಾವ ಗುಂಪಿಗೆ ಸೇರಿದುದೆಂದು ನೋಡಲಾಗುತ್ತದೆ. ರಕ್ತ ತುಂಬಿದ ಈ ಬಾಟ್ಲಿಗಳನ್ನು ಫ್ರಿಜಿಡಯರಿ ಸರ್ಟಿಟ್ಟರೆ, ಹತ್ತು ದಿನಗಳ ವರೆಗೆ ಒದು ಕೆದು ಪುದಿಲ್ಲ. ಅಷ್ಟರೊಳಗೆ ರಕ್ತವು ಉಪಯೋಗಿಸಲ್ಪಡದೆ ಬಾಕಿ ಉಳಿದರೆ ಅದರಿಂದ ಕೆಂಪು ಕಣಗಳನ್ನು ತೆ ದು ಪ್ಲಾಸ್ಮ (ರಕ್ತರಸ) ವನ್ನಾಗಿ ಮಾರ್ಪಡಿಸಬಹುದು. ಈ ರಕ್ತರಸವನ್ನು ಒಂದು ವರ್ಷದ ವರೆಗೆ ಇಟ್ಟರೂ ಅದು ಕೆಡುವುದಿಲ್ಲ.

ವೈದ್ಯಕೀಯ ಚಿಕಿತ್ಸೆ ಳಲ್ಲಿ ರಕ್ತವೂ ರಕ್ತರಸವೂ ಉಪಯೋಗಕ್ಕೆ ಬೀಳುತ್ತವೆ. ಅನ ಘಡಗಳಿಂದ ಗಾಯವಾಗಿ ರಕ್ತ ನಷ್ಟವಾಗಿದ್ದರೆ ರಕ್ತ ಪೂರಣವು ಅವಶ್ಯ. ಹರಿಗೆಯ ಸಮಯ ಅನೇಕ ತಾಯಂ ರಿಂದ ತುಂಬಾ ರಕ್ತ ಸುರಿದು ಅವರಿಗೆ ಸಕಾಲದಲ್ಲಿ ರಕ್ತ ಪೂರಣ ಮಾಡದಿದ್ದರೆ ಮೃತ್ಯುವಾಗುತ್ತಾರೆ ಈಗ ಹೆರಿಗೆ ಆಸ್ಪತ್ರೆಗಳಲ್ಲಿ ರಕ್ತ ಪೂರಣದ ಅತಿ ಆವಶ್ಯಕ ಏರ್ಪಾಡಾಗಿರುವುದರಿಂದ ಅನೇಕ ತಾಯಂದಿ ಪ್ರಾಣ ಉಳಿಯುತ್ತಿದೆ

ಟೈಫಾಯ್ಡ್ ಜ್ವರದಲ್ಲಿರುವಂತೆ ರಕ್ತೋದ್ರೇಕ, ದೇಪ ಸುಡುವುದು, ರಕ್ತದಲ್ಲಿ ಕೆಂಪುಕಣ ಗಳಲ್ಲಿರುವುದು ನೋವಿನಾದ ಅನೇಕ ರೋಗಗಳಿಗೆ ರಕ್ತ ಪೂರಣವು ಬೇಕು. ಕೆಂಪು ರಕ್ತ ಕಣಗಳಿಲ್ಲದ ಸಂದರ್ಭದಲ್ಲಿ ರೋಗಿಗೆ ಎಂದು ವಾ ಮೂರು ತಿಂಗಳುಗಳ ಇತರ ಚಿಕಿತ್ಸೆ ಕ್ರಮ ನಡೆಸುವುದಕ್ಕಿಂತ ಒಂದು ವಾರದಲ್ಲಿ ಎರಡು ವಾ ಮೂರು ರಕ್ತ ಪೂರಣಗಳಿದ್ದರೆ ಹೆಚ್ಚು ಪ್ರಯೋಜನವಿದೆಯೆಂದು ತಿಳಿಯಲಾಗಿದೆ. ಒಕ್ಕಪೂರಣ ವೈದ್ಯ ಶಾಸ್ತ್ರದ ಪರಿಣಾಮವಾಗಿ ಚಿಕಿತ್ಸೆಯು ಕಾ ಲಾನಧಿಯು ತುಂಬಾ ಕಡಮೆಯಾಗುತ್ತಿರುವುದೆಂದು ಈಗ ಎಲ್ಲರೂ ಮನಗಂಡಿರುವರು

ಸಾಂಕ್ರಾಮಿಕ ರೋಗಗಳಿಂದ ಬಳಲುವ ರೋಗಿಗಳಿಗೆ ಅದೇ ರೋ ದಿಂದ ಬಳಲಿ ಗ್ಯಾಣ ಹೊಂದುತ್ತಿರುವವರ ರಕ್ತ ತೆಗೆದು ಪೂರಣ ಮಾಡುವುದರಿಂದ, ರೋಗಿಯ ರಕ್ತದಲ್ಲಿ ಕೆಲವು ರೋಗ ಪ್ರತಿಬಂಧಕ ಶಕ್ತಿಗಳು ವೃದ್ಧಿ ಹೊಂದುವಂತಾಗಿ ರೋಗವನ್ನು ತಡೆಯಲು ಸಹಾಯವಾಗುತ್ತದೆ ಪಾದರಸದ ವಿಷ ಹಾಕಿದ ಸಂದರ್ಭದಲ್ಲಿ ರಕ್ತವು ಅತಿ ಉಪಯೋಗಕಾರಿ. ಪಟ್ಟು ತಗಲಿ ಹೆಚ್ಚು ರಕ್ತ ಹರಿದು ಹೋಗಿದ್ದಾಗ, ಬೆಂಕಿ ತಗಲಿದ ಮುಂತಾದ ಇತರ ಸಂದರ್ಭಗಳಲ್ಲಿ ಕ್ತ ರಸ ಕೊಡಲಾಗುತ್ತದೆ.

ರಕ್ತಪೂರಣ ಸಾಕರ್ಯಗಳಿಂದಾಗಿ "ಸ್ಪೇಶಲ್ ಶಿಶು" ಎಂಬ ಮಾಣಕಾರಿಕ ಅವಾಮಾನವನ್ನು ಸಹ ಜಯಿಸಲಾಗಿದೆ. ತಾಯಿಯು ರಕ್ತದಲ್ಲಿ ಒಂದು ಬಗೆಯ ವಿಷವು ತಲೆದೋರಿ ಅದು ಮಗುವಿನ ರಕ್ತದಲ್ಲಿ ಸೇರಿಕೊಳ್ಳುತ್ತದೆ. ಶಿಶುವಿನ ದೇಹವು ಇದರಿಂದ ನೀಲಿ ವರ್ಣವಾಗುತ್ತದೆ. ಮುಂಚಿನ ಕಾಲದಲ್ಲಿ ಇಂತಹ ಶಿಶುಗಳನ್ನು ಬದುಕಿಸುವ ಉಪಾಯಗಳಿದ್ದಿಲ್ಲ. ಈಗಲಾದರೋ ಮಗುವಿನ ಏರ್ಪಾಡಿಗೆ ರಕ್ತವನ್ನೂ ಹೊಸ ಹೀರಿ ಹೊಸ ರಕ್ತವನ್ನು ರ್ತನಾಳಗಳಲ್ಲಿ ತುಂಬಿಸಲಾಗುತ್ತದೆ. "ಸ್ಪೇಶಲ್ ಶಿಶು"ವನ್ನು ಈಗ ಉಳಿಸಲಾಗುತ್ತದೆ. ರಕ್ತ ನಿಧಿಗಳು ಅತಿ ಪ್ರಯೋಜನಕಾರಿ ಕೆಲಸ ನಿರ್ವಹಿಸುತ್ತಿವೆಯಾದರೂ, ಇವುಗಳ ಕಾರ್ಯಕಲಾಪಗಳ ಕುರಿತು ಅನೇಕ ತಪ್ಪು ತಿಳಿವಳಿಕೆಗಳಿವೆ. ಇವುಗಳಲ್ಲಿ ಕೆಲವು ಇಲ್ಲಿ ಪ್ರಸ್ತಾಪಿಸಲು ಯೋಗ್ಯವಾಗಿವೆ.

ಸ್ತ್ರೀ ಪುರುಷರಿಬ್ಬರಿಗೆ 20 50 ವರ್ಷ ವ್ಯಾಯದೊಳಗಿನವರು ಯಾರಾದರೂ ರಕ್ತ ಕೊಡಬಹುದು. ರಕ್ತ ತೆಗೆಯುವಾಗ ಆಯೆಯ ವ್ಯಕ್ತಿಗೆ ಯಾವುದೇ ಹೆಜ್ಜೆ ಇಕ್ಕುವಿಕೆಗಳಲ್ಲಿ ಡಾಕ್ಟರರು ರಕ್ತ ಕೊಡಲು ಮುಂದೆ ಬಂದ ವರನ್ನು ಬಾಗ್ಯತೆಯಿಂದ ಪರೀಕ್ಷಿಸುತ್ತಾರೆ. ಶರೀರಿಂ ರಕ್ತ ಸಾಕಷ್ಟಿದೆ, ವ್ಯಕ್ತಿಯು ಯಾವುದೇ ಯಾಗಿಯೂ ಯೋಗ್ಯ ಬಂದು ಪೂರಣದ ಮಾತ್ರ ರಕ್ತವೂಡಲು ಪಡಲಾಗುತ್ತದೆ.

ರಕ್ತ ತೆಗೆಯುವುದರಿಂದ ಕೊಟ್ಟ ಮನುಷ್ಯನು ನಿರ್ಬಲನಾಗುವುದಿಲ್ಲ ಆವನ ಜೀವಕ್ಕೂ ಆಪಾಯವಿಲ್ಲ ಕ್ತ ತೆಗೆಯುವ ಕೆಲಸ ಅತಿ ಬೇಗನೇ ಮುಗಿಯುತ್ತದ ಕೆಲವು ನಿಮಿಷಗಳ ವಿಶ್ರಾಂತಿ ಪಡೆದ ನಂತರ ಅವನು ತನ್ನ ಕೆಲಸಕ್ಕೆ ಎಂದಿನಂತೆ ಹೋಗಬಹುದು. ರಕ್ತ ಕೊಡುವುದರಿಂದ ಅವನಿಗೆ ಯಾವ ರೀತಿಯಲ್ಲಿಯೂ ಅಡಚಣೆಯಾಗುವುದಿಲ್ಲ.

ಮದ್ರಾಸು ಸಂಸ್ಥಾನದಲ್ಲಿರುವ ರಕ್ತನಿಧಿಗಳು ರಕ್ತಕೊಡಲು ಮುಂದೆ ಬರುವ ಪ್ರತಿ ಮನುಷ್ಯನಿಂದ ಮೂರು ತಿಂಗಳಿಗೊಮ್ಮೆ ಮಾತ್ರ ರಕ್ತ ತೆಗೆಯುತ್ತವೆ ಜೀವನ ಪರ್ಯಂತವು ಉತ್ತಮವಾಗಿರುವ ಆರೋಗ್ಯ ದೀರ್ಘಕಾಲದಲ್ಲಿ ಇದಕ್ಕಿಂತಲೂ ಬಹಳ ಬಹಳ ರಕ್ತ ತೆಗೆಯಲಾಗುತ್ತದೆ. ಅಷ್ಟು ಒಂದು ಸಲ ತೆಗೆಯುವಾಗ ಸುಮಾರು ಪ್ರಮಾಣದಲ್ಲಿ ತೆಗೆಯಲಾಗುತ್ತದೆ. ಮದ್ರಾಸು ಪ್ರಾಂತದಲ್ಲಿ ಇನಿಷ್ಟ ಪ್ರಮಾಣದಲ್ಲಿ ರಕ್ತ ತೆಗೆಯುವುದಿಲ್ಲ ರಕ್ತ ಕೊಡುವ ಬಾತಂ ನಸ್ಸಾದ ರಕ್ತವನ್ನು ತಿರುಗಿ ಭರ್ತಿ ಮಾಡಿಕೊಳ್ಳಲು ತುಂಬಾ ಸಮಯ ದೊರೆಯುತ್ತದೆ.

ಮದ್ರಾಸು ನಗರದಲ್ಲಿ ಮೂರು ರಕ್ತ ನಿಧಿಗಳಿವೆ ಇತರ ಭಾಗಗಳಲ್ಲಿ ಸಣ ಳು ಇವೆ.ನಗರದಲ್ಲಿರುವ ರಕ್ತ ನಿಧಿಗಳು ನಗರದಲ್ಲಿರುವ ಮುಖ್ಯ ಸಂಸ್ಥಾರಿ ಆಸ್ಪತ್ರೆಗಳಲ್ಲಿ ಉಪಯೋಗಿಸುವಂತೆ, ರಕ್ತ, ರಕ್ತರಸಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತವಲ್ಲದೆ. ಇತರ ಆಸ್ಪತ್ರೆಗಳಿಗೂ ಬೇಕಾಗಿ ಚಿಕಿತ್ಸಾಲಯಗಳಿಗೂ ಡಾಕ್ಟರರಿಗೂ ಸಲಹ್ಯಾದ ಇತರ ಒಡೆಗಳಲ್ಲಿರುವ ಆಸ್ಪತ್ರೆಗಳಿಗೂ ಸಂಬಂಧಾಯ ಮಾಡುತ್ತವೆ. ರಕ್ತವು ಹೆಚ್ಚಿಟ್ಟು ಬೇಕಾಗಿರುವುದರಿಂದ ಹೆಚ್ಚಿಟ್ಟು ಜನರು ಕ್ರಮವಾ ತಪ್ಪದೆ ಆಗಾಗ ರಕ್ತ ಕೊಡುವ ತಮ್ಮ ಜೀವವನ್ನು ಕೆಡಿಸಿಕೊಳ್ಳದಂತೆ ಸರಕಾರವು ತುಂಬಾ ಜಾಗ್ರತೆ ತೆಗೆದುಕೊಳ್ಳಬೇಕಾಗಿದೆ.

ಸ್ವಲ್ಪ ಸಮಯದ ಹಿಂದೆ ಪಂಡಿತ ನೆಹರು ಗಳವರು ಕಲ್ಕತ್ತಾದಲ್ಲಿ ರಕ್ತ ನಿಧಿಗೋಸ್ಕರ ತನ್ನ ರಕ್ತವನ್ನು ಕೊಟ್ಟು ಮಾರ್ಗದರ್ಶಕರಾಗಿದ್ದಾರೆ. ವಿವೇಕಗಳಾಪ ಜನರು ರಕ್ತ ನಿಧಿಗಳ ಅವಶ್ಯಗಳನ್ನು ಸರಿಯಾಗಿ ತಿಳಿದು ಕೊಂಡರೆ ಸ್ವಸಂತೋಷದಿಂದ ಮುಂದೆ ಬಂದು ಕೊಡುವ ರಕ್ತದಿಂದಲೇ ನಮ್ಮ ಸಂಸ್ಥಾನಕ್ಕೆ ಸಾಕಷ್ಟು ರಕ್ತ, ರಕ್ತರಸಗಳು ದೊರೆಯುವವೆಂಬುದರಲ್ಲಿ ಸಂದೇಹವಿಲ್ಲ. ಹಣ ಕೊಟ್ಟು ರಕ್ತ ಪಡೆಯಬೇಕಾಗಿಲ್ಲ.

(ಮದ್ರಾಸು ಸಮಾಚಾರ)

ಗೋಜಾರಿಯೊ ಹರಪಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೆಲವು ಬರುತ್ತಿದ್ದರೆ, ಕೋತರಕ್ಕೆ ಹೆಳಬೀ ಡಾಗು ಹತ್ತುತ್ತಿದ್ದರೆ, ಕರೀರದಿಂದ ಬಾವು, ಶರೀರದ ತೊಗಲು ಹೀದಕ್ಕೆ ಸರಿಯಾದಿದ್ದರೆ, ಶರೀರದ ಸುತ್ತ ಳಿಯವಾಗಿದ್ದರೆ,....ಚಟ್ಟು ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಗು ಅಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುಗುನೋಯುವದು ಸ್ತ್ರೀಯರ ಬಿಳಿಕಂವು ಸೆರಗು ಹೋಗುತ್ತಿದ್ದರೆ, ಹೊಲಿಕ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಳೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನಿನಲ್ಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ:- ಹುಳಿಖಾರ, ಕಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ವರ್ಕಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ಮಾಲಿಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೆರೆ,

ಆಯುರ್ವೇದ ಔಷಧಾಲಯ, ಗದಗ-

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618

Estd. 1921 ಸ್ಥಾಪನೆ

30ನೇ ವರ್ಷ
13—7—1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ 46

NAVAYUGA WEEKLY Post Box No. 22 UDIPI, S. K.

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 46

ಮನೋಬಲವೇ ಮೂಲಬಲ

ಯಾವುದೇ ಸುಖ ದುಃಖ, ಲಾಭ ನಷ್ಟ, ಜಯಾಪಜಯಗಳಿಗೆ ಸರ್ವಸಮಾನವಾದ ಪರಿಮಾಣಮೆಂಬುದಿಲ್ಲವೇ ಇಲ್ಲ. ಅವುಗಳ ಸಂಬಂಧದ ಹಿಗ್ಗುವಿಕೆ ಕುಗ್ಗುವಿಕೆ, ಸಂತೋಷ ಸಂತಾಪಗಳು ಅವರವರ ಮನೋಬಲವನ್ನವಲಂಬಿಸಿವೆ ಹೊರತು ಎಲ್ಲಾ ಹೃದಯಗಳಲ್ಲೂ ಏಕಪ್ರಕಾರ ಭಾವತ ಇಳಿತಗಳನ್ನವು ನಿರ್ಮಿಸಲಾರವು

ಅಲ್ಪ ಪರಾಭವ ಮಾತ್ರದಿಂದ ಶರಣು ಬರುವವರು—ನಾಮ ಮಾತ್ರ ನಷ್ಟಕ್ಕಾಗಿ ಒಮಾಳಿ ತೆಗೆಯುವವರು—ತೀರಾ ಸಣ್ಣ ನೋವಿಗಾಗಿ ಅಳುವವರು—ಪೂತನಿಯ ಮೊಲೆ ಮಾತ್ರದಿಂದ ಪುನರ್ಜನ್ಮವಿದುಕೊಂಡೆವವರು—ಇದ್ದಾರೆ; ಅಂತೆಯೇ ನೆಲೆದಪ್ಪಿಸುವ ಸೋಲು, ಅಪಾರ ನಷ್ಟ, ಅಸಹ್ಯ ಅಪಮಾನಗಳನ್ನು ಕಡೆಗಣಿಸಿ ಎದ್ದು ಬೆಳೆದು ವರ್ತಿಸುವವರೂ ಇದ್ದಾರೆ. ಎಲ್ಲಿಗುಲಗು ಮಾನಸಿಕ ಶಕ್ತಿಗಳೇ ಇಂತಹ ಅನಂತಮ್ಯವನ್ನು ನಿರ್ಮಿಸುತ್ತಿವೆ ಹೊರತು, ಸಂಬಂಧಪಟ್ಟ ಸಂಗತಿಗಳಲ್ಲ.

ಸ್ವತಂತ್ರಾಡಳಿತೆಯು ನಾಗರಿಕರ ಸಮಾಧಾನಕರವಾಗಿ ನಡೆಯುತ್ತಿದೆ ಎಂದು ತೃಪ್ತಿಯಿಂದಿರುವ ಪರಂತೆಯೇ ಸ್ವಾತಂತ್ರ್ಯ ದೊರೆತು ಎಲ್ಲ ಕೆಟ್ಟೆಕೆಂಬ ಅತೃಪ್ತಿಯಿಂದಿರುವವರೂ ಇದ್ದಾರೆ. ದೇಶದ ವಾತಾವರಣವಲ್ಲಿರ ಪಾಲಿಗೊಂದೇ ಆದರೂ ಅವರವರ ಮನೋಮಟ್ಟವಿರುವಂತೆ ಈ ಭಿನ್ನಾಭಿಪ್ರಾಗಳವೆ.

ಸ್ವಾತಂತ್ರ್ಯಕ್ಕಾಗಿ ಗಾಂಧಿಜೀ ಹೂಡಿದ ಆ ಕಾಲದ ಹೋರಾಟಗಳಲ್ಲಿ ಪ್ರತಿಯೊಂದೂ ಜಾಹೀರು ರಂಗದಲ್ಲಿ ಅಪಜಯಗೊಂಡಿದ್ದಿತ್ತು; ಆದರೆ ಪ್ರತಿ ಬಾರಿಯ ಪರಾಭವವನ್ನೂ ವಿಜಯವೆಂದೇ ಗಣಿಸಿ, ಎದ್ದು ಪುನಃ ಮುಂದೊತ್ತಿದುದರಿಂದಲೇ ಸ್ವಾತಂತ್ರ್ಯ ಸಿದ್ಧಿಸಿತು. ಮನೋಬಲದಿಂದೇ ಹೊರತು ಬ್ರಿಟಿಷ್ ಆಡಳಿತೆಗಿದಿರಾಡ್ಡಲಾಗುವ ಬೇರೆ ಶಕ್ತಿಯಾವುದೂ ಆಗ ಭಾರತೀಯರಲ್ಲಿರಲಿಲ್ಲ.

'ಆರೆ ಬತ್ತಲೆ ಫಕೀರ'ನೆಂದು ಜಬ್ಬಿಸಲ್ಪಟ್ಟ ಸಹಜ ಬಿರುದು ಗಳಿಸಿದ್ದರೂಲೋಕ ಪೂಜ್ಯನಾಗಿರುವ ಗಾಂಧಿಜೀಯಲ್ಲಿದ್ದುದೂ ಮನೋಬಲವೊಂದೇ. ಸಾಮ್ರಾಜ್ಯ ಬಲ, ಶಸ್ತ್ರ ಬಲಗಳು ತನ್ನಿದಿರಾಗಿಗಳಿಸಿಕೊಂಡ ಲೌಕಿಕ ವಿಜಯಗಳಲ್ಲಾವುದೂ ನಿಜ್ಜ ಕನ್ನ ಪರಾಭವವೆಂದು ಗಣಿಸುವ ಬದಲಿಗೆ, ಸ್ವಬಲವರ್ಧಕ ಉಪಕರಣಗಳೆಂದು ನೆನಸಿದುದರಿಂದಲೇ ಮಹಾತ್ಮಾಜೀ ಹಾಗಿದ್ದರು.

ಕಳೆದ ಮಹಾ ಯುದ್ಧದ ಆದಿ ಭಾಗದಲ್ಲಿ ಹಿಟ್ಲರನ ಮೇಲ್ಮೈಯಿದಿರಲ್ಲಿ ಬ್ರಿಟಿಷರು ಸರ್ವಸ್ವವನ್ನೂ ಕಳಕೊಂಡಂತೆ ಮನೋಬಲವನ್ನೂ ಕಳಕೊಳ್ಳುತಿದ್ದರೆ ಲೋಕ ಭವಿಷ್ಯವೇ ಬೇರಾಗುತಿತ್ತು. ಆ ಕಾಲದಲ್ಲಿ ತಮ್ಮ ರಾಜ್ಯಾಧಿಕಾರ ಕೈ ಬಿಟ್ಟು ಲಂಡನ್ನಿನಲ್ಲಿ ಬಂದು ಕುಳಿತಿದ್ದರೂ, ಅಲ್ಲಿಯೂ ತಾವೇ ತಮ್ಮ ರಾಜ್ಯಾಧಿಕಾರಿಗಳೆಂಬ ದೃಢಚಿತ್ತದಿಂದ ಸರಕಾರ / ರಚಿಸಿಕೊಂಡು ನಿಂತ ಪೋಲೆಂಡ್, ಫ್ರಾನ್ಸ್ ಮುಂತಾದ ರಾಷ್ಟ್ರಗಳ ನಾಯಕರು ಕೊನೆಗಾ ಬಲದಿಂದಲೇ ಇಷ್ಟ ಸಿದ್ಧಿಗೊಂಡರು.

ಯುದ್ಧಾಪರಾಧಿಗಳೆಂದು ಮರಣದಂಡನೆಗೀಡಾಗಿದ್ದ ಜರ್ಮನಿ, ಜಪಾನುಗಳ ಯುದ್ಧ ನಾಯಕರು ಫಾಶಿ ಕಂಭಕ್ಕೇರುವಾಗಲೂ ಉಲ್ಲಾಸದಿಂದಿದ್ದ ವಾರ್ತೆ ಲೋಕಕ್ಕಿದೆ. ತಮ್ಮ ರಾಜ್ಯ, ಅಧಿಕಾರ, ಕೊನೆಗೆ ತಮ್ಮ ಪ್ರಾಣವೇ ಅಪಹರಿಸಲ್ಪಡುವಾಗಲೂ ಗಟ್ಟಿ ಮನಸ್ಸಿನ ನಲ್ಲಿದ್ದುದರಿಂದಲೆ, ಅವರ ಪಾಲಿನ ಯಾತನೆಗಳೆಂದು ಮಿಕ್ಕವರು ಊಹಿಸಿದ್ದುದು ಸ್ವತಃ ಅವರಿಗೆಸೆಸಿಂಕಿದಲ್ಲಿಲ್ಲ; ಅವರಿಂದ ಸಂಕಟವನ್ನೂ ಅನುಭವಿಸಿರಲಿಲ್ಲ. ರಾಜ್ಯಾವಹಾರ, ಪತ್ನಿಯ ಅಪಹಾರ, ವಿದ್ಯಾಪಹಾರದಂತಹ ಪರಮಾವಧಿ ಕೆಲಸವಾ ವಿದ್ಯಮಾನಗಳಲ್ಲಿಯೂ ಗಲಿಬಿಲಿಗೊಳ್ಳದೆ ಶಾಂತ ದೃಢಚಿತ್ತದಿಂದ ತಮ್ಮ ಧರ್ಮ, ಕರ್ತವ್ಯ ಮತ್ತು ಶಿಸ್ತು ನಿಯಮಗಳನ್ನು ಪಾಲಿಸಲು ಶಕ್ತರಾದುದರಿಂದಲೇ ರಾಮ ಮತ್ತು ಪಾಂಡವರು ಕೊನೆಯ ವಿಜಯಗಳನ್ನು ಗಳಿಸಿದರಲ್ಲದೆ, ಪುರಾಣ ಪುರುಷರಾದರು. ಸಮೀಪದಲ್ಲೇ ಅಕಸ್ಮಾತ್ ಭಯಂಕರ ಸ್ಫೋಟನಾಗಲೂ ವಾಗಲೂ ಕೈಯ್ಯ ಜಡಾ ತಟ್ಟಿಯಲ್ಲಿ ಅಲುಗೇಳುವಷ್ಟು ಕಂಪನ ಕೂಡಾ ಇರದ ಮನೋಬಲವಿದ್ದುದರಿಂದಲೇ ನೆಪೋಲಿಯನ್ ಲೋಕೈಕ ವೀರನನ್ನಿಸಿದ್ದ.

ಭಾರತದ ಸ್ವಾತಂತ್ರ್ಯ ಹೋರಾಟ ಚರಿತ್ರೆಯಿಂದಾರಂಭಿಸಿ, ಲೋಕದ ಯಾವುದೇ ಸಾಧ್ಯ ಅಥವಾ ಇತರ ಸನ್ನಿವೇಶಗಳ ವರೆಗಿನ ಪ್ರತಿಯೊಂದ್ಯರಲ್ಲೂ ಪ್ರಾಣ ದಾಸೆ ಬಿಟ್ಟು ಕರ್ತವ್ಯ ನೆರವೇರಿಸುವ ದೃಢ ಮನಸ್ಸಿದ್ದವರು ಮಾತ್ರ ಧೀರರನ್ನಿಸಿದ್ದಾರೆ.

ಇಂದಿನ ವ್ಯಾಜ್ಯ, ನೋಕದ್ದಮೆಗಳಿಗೆ, ಕಲಹ ಕಾದಾಟಗಳಿಗೆ ಹೇತುವಾಗಿರುವವುಗಳಿಗಿಂತ ದೊಡ್ಡ ದೊಡ್ಡ ಎಷ್ಟೋ ವಿವಾದಗಳು ಅಂತಹವಿಂಗಳ್ಕೆ ಬಾರದೇ ನೇ ತೀರ್ಮಾನಿಸಲ್ಪಟ್ಟಿರಬಹುದು ಅಥವಾ ಆಲ್ಲಿಂದಲ್ಲೇ ವಜಾ ಕೊಂದಿರಬಹುದು. ಆಸಹನೆ ಮತ್ತು ಸಹನೆಯ ಮನೋ ನೈತ್ಯಾಶವನ್ನಾಧರಿಸಿಯೇ ಈ ಕಲಹ ಮತ್ತು ಶಾಂತಿ.

ಹಗ್ಗವನ್ನು ತಿಳಿದು ಹಾವೆಂದು ನೆನೆಸಿದ ಮಾತ್ರದಿಂದವಿಷವೇರಿದಂತಾದವರು, ಹಾವನ್ನು ತುಳಿದರೂ ಹಗ್ಗವೆಂದು ಭಾವಿಸಿಕೊಂಡ ಬಲದಿಂದ ಸ್ವಸ್ಥ ಇದ್ದವರು ಮನೋಬಲವೇ ಮೂಲಬಲ ವೆಂಬುದಕ್ಕೆ ನಿದರ್ಶನವಾಗಿದ್ದಾರೆ. ಕೇವಲ ವಿಶ್ವಾಸಬಲದಿಂದ ನೀರು ಮಣ್ಣು ರೂಪದ ನೆವನಾತ್ರ ಔಷಧ ತಾಗಿ ಕಠಿಣ ಕಾಹಿಲೆಗಳು ಗುಣ ಹೊಂದಿರುವಂತೆಯೇ, "ರೋಗಿ; ಅಸಾಧ್ಯ ರೋಗಿ" ಎಂದು ಬೋಧಿಸಿಯೇ ನಿರೋಗಿಯನ್ನು ಮಾಡಿಗೆ ಹಿಡಿಸಬಹುದೆಂದು ತಜ್ಞ ವೈದ್ಯರು ಪ್ರಯೋಗದಿಂದ ಕಂಡು ಬಂದಿವೆ ಅಪ್ಪೈಶ್ವರ್ಯವಿದ್ದೂ ಸದಾ ಕೊರಗುತ್ತಿರುವವರು ಮತ್ತು ಅತಿ ದರಿದ್ರರಿದ್ದೂ ಸದಾಸಂತೋಷಿಗಳಾಗಿರುವವರು ಅಪರೂಪವಲ್ಲ.

ಸತ್ಯಾಗ್ರಹವಿರಲಿ, ದುಸ್ಸಾಧನೆಯಿರಲಿ—'ಮಾಡಿಯೇ ಸಿದ್ಧ; ಮಾತಬಲ್ಲೆ' ಎಂಬ ಶಪಥ ಮತ್ತು ವಿಶ್ವಾಸನಿಯವರು ಮಾತ್ರವೇ ಗೆಲ್ಲುತ್ತಾರೆಂಬುದು ಸಣ್ಣ ದೊಡ್ಡ ಪ್ರತಿಯೊಂದು ಸಂಗತಿಯಲ್ಲೂ ಪ್ರತ್ಯಕ್ಷ ಕಂಡು ಬರುತ್ತಿರುವ ವಿಷಯ ಲೋಕಯುದ್ಧದಿಂದಾರಂಭಿಸಿ, ನ್ಯಕ್ತಿ ಜಗಳಗಳ ವರೆಗಿನ ಹೋರಾಟಗಳಾಗುತ್ತಿರುವದು ಅವುಗಳನ್ನು ಶಪಥ ಮತ್ತು ವಿಶ್ವಾಸಪೂರ್ವಕವಾಗಿ ಹೂಡುವವರಿರುವುದರಿಂದಲೇ; ಅಮಟ್ಟಿಗೆ ರಾಜಿಯಾಗದಿರುವುದು ಕೂಡಾ ಅಂತಹ ಪಂಥ ಮತ್ತು ಛಲವನೆಯ ಪ್ರಯತ್ನ ನಡೆಯದಿರುವುದರಿಂದಲೇ.

ಅಂತೂ ಎಲ್ಲವೂ ಮನಸ್ಸನ್ನೇ ಆಧರಿಸಿದೆ; ಮನೋಬಲವನ್ನಾಧರಿಸದೆ ನಿಲ್ಲುವಂತಹ ಅಥವಾ ಮನೋಬಲವನ್ನು ಜಯಿಸಬಲ್ಲಂತಹ ಜೀರೋಂದು ಬಲವೇ ಈ ಪ್ರಪಂಚದಲ್ಲಿಲ್ಲ ವರ್ತಮಾನ ಕರ್ತರಾದಬುಷಿಗಳು, ಚಾಣಾಕ್ಯಯೋಗ ಪ್ರವೀಣರಾದ ಅತಿರಥ ಮಹಾರಥರೇ ಮೊದಲಾದ ಪುರಾಣ ಪುರುಷರಿಂದಾರಂಭಿಸಿ, ಆಧುನಿಕ ಕಾಲದ ನಾಯಕರಿಂದ ಸಾಮಾನ್ಯರ ವರೆಗಿನ ಎಲ್ಲರ ಮಟ್ಟಿಗೂ ಈ ಮಾತು ಪೂರ್ಣ ಸತ್ಯ.

ಯುದ್ಧಪೀಡೆ ತಾಗಿದ ರಾಷ್ಟ್ರದ ಸೇನೆಯ ಮಾನಸಿಕ ಶಕ್ತಿ ಕುಸಿದರೆ, ಜನತೆ ಗಲಿಬಿಲಿಗೊಂಡರೆ, ಅ-ರಾಷ್ಟ್ರ ಮತ್ತೂ ಯುದ್ಧಗೆಲ್ಲುವ ಆಸೆಯಿಲ್ಲ; ಒಬ್ಬ ರೋಗಿ ಬದುಕುವ ಭಾವನೆಯನ್ನು ಪೂರ್ಣ ಕಳಕೊಂಡರೆ, ಆ ಮೇಲಾತ ಬದುಕಿ ಬದುವುದು ಕಷ್ಟ; ಕೆಲಸಗಾರ ಅಥವಾ ಭಾಷಣಗಾರ ಗಲಿಬಿಲಿಗೊಂಡರಾಯಿತು, ಮತ್ತೆ ಮುಂದುವರಿಸುವುದು ಪ್ರಯಾಸ. ಮನಸ್ಸು ಅಡಿಮೇಲಾಗಿ ಹೋದರೆ ವಾತಾವರಣ ಎಷ್ಟೇ ಅನುಕೂಲವಿದ್ದರೂ ವ್ಯರ್ಥ; ಮನಸ್ಸು ಅಚಲವಿದ್ದರೆ ಪರಿಸ್ಥಿತಿಯೆಷ್ಟೇ ಪ್ರತಿಕೂಲವಿದ್ದರೂ ಪ್ರತಿಬಿಂಬಾಲಾರದು. ಮನೋಬಲವೇ ಮಹಾಬಲ!

[ಎರಡನೇ ಪುಟ ನೋಡಿರಿ]

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connections, please consult us

ಕೊರಿಯ ಯುದ್ಧ

ಎರಡನೆಯ ಮಹಾಯುದ್ಧವು ಮುಗಿದ ಬಳಿಕ ಜಗತ್ತಿನಲ್ಲಿ ಅಲ್ಲಲ್ಲಿ ಸಣ್ಣ ಪುಟ್ಟ ಯುದ್ಧಗಳು ನಡೆಯುತ್ತಿದ್ದರೂ ಅವುಗಳಲ್ಲಿ ಯಾವುದೂ ಇಡೀ ಪ್ರಪಂಚವನ್ನು ಪೂರ್ಣ ರಾಹುವಾಗಿ ಆಕ್ರಮಿಸಿಕೊಳ್ಳುವ ಸಂಭವವು ಕಂಡುಬಂದಿರಲಿಲ್ಲ. ಆದರೆ ಈಗ ಕೊರಿಯಾ ಯುದ್ಧವು ಪ್ರಾರಂಭವಾಗಿ ಬೆಳೆಯುವ ಮತ್ತು ಬೆಳೆಯದಿರುವ ಸಂಭವವು 50-50 ಸಲಿಯಂತಿರುವ ಕೊರಿಯಾ ಯುದ್ಧದ ಕಡೆಗೆ ಸ್ವಾಭಾವಿಕವಾಗಿ ಲೋಕದ ದೃಷ್ಟಿಯೀಗ ಬಿದ್ದಿದೆ. ಒಂದು ಮೂಲೆಯ ಈ ಕಳಂಕವು ಇಡೀ ಪ್ರಪಂಚವನ್ನು ಪೂರ್ಣ ರಾಹುವಾಗಿ ಆಕ್ರಮಿಸಿಕೊಳ್ಳುವ ಸಂಭವವು ಅರಿವಾಹಿಯಷ್ಟಿದೆಯಾದರೆ, ಕೊರಿಯದ ಮಟ್ಟಿಗೆ ಕಮ್ಯೂನಿಸ್ಟರ ಲೈ ಮೇಲಾಗುವ ಸಂಭವವು ಸೇ. 65ರಷ್ಟಿದೆ. ಆದರೆ ಲೋಕ ಶಾಂತಿ ಮತ್ತು ಯುದ್ಧ ವಿಜಯ ಸಂಬಂಧದ ಇನ್ನೊಂದು ಅಂಶ ವಿಭಾಗಗಳನ್ನೂ ಪ್ರಯತ್ನ ಮೂಲಕ ಬದಲಾಯಿಸಬಹುದೆಂದಿಲ್ಲ. ಈ ಮಟ್ಟಿಗಿನ್ನೂ ಪೂರ್ಣ ನಿರಾಶೆಯುಂಟಾಗಿಲ್ಲ. ಪ್ರಸ್ತುತ ಕೊರಿಯಾ ಯುದ್ಧದ ಪ್ರಚಲಿತ ಸ್ಥಿತಿಗತಿ, ಮತ್ತು ಅದಂದಿ ಕೊರೆಯುವ ಕೆಲವು ವಿಶೇಷಗಳನ್ನಷ್ಟೇ ಇಲ್ಲಿ ಜ್ಞಾಪಿಸಲಾಗಿದೆ.

ಕಮ್ಯೂನಿಸ್ಟ್ ಮೇಲ್ಮೈ

ಎರಡು ವಾರಗಳ ಕೊರಿಯಾ ಯುದ್ಧವನ್ನು ಅವಲೋಕಿಸಿದಾಗ ಉತ್ತರ ಕೊರಿಯವ ಕಮ್ಯೂನಿಸ್ಟ್ ಸೇನೆಗಳು ಆಶ್ಚರ್ಯಕರ ವಿಜಯ ಗಳಿಸಿರುವುದು ಸುಸ್ಪಷ್ಟವಿದೆ. ಅಂತೆಯೇ ದಕ್ಷಿಣ ಕೊರಿಯದ ಕಡೆಯಿಂದ ಲೋಕ ಮಾರ್ದನಿಗೊಡುವ ಪ್ರಚಾರ ಗದ್ದಲಗಳು ಅಮೇರಿಕ ಮತ್ತು ಭದ್ರತಾ ಕೌನ್ಸಿಲ್ ಹಾಗೂ ಸಂಯುಕ್ತ ರಾಷ್ಟ್ರ ಕೂಟದ ಸದಸ್ಯ ರಾಷ್ಟ್ರಗಳಿಂದ ನಡೆಯುತ್ತಿರುವಾಗ ಉತ್ತರ ಕೊರಿಯದ ಕಡೆಯಿಂದ ಅಂತಹ ಡಂಗುರವಾವುದೂ ಇಲ್ಲದೆ ಕೆಲಸವಾಗುತ್ತಾ ಹೋಗುತ್ತಿದೆ ಯೆಂಬುದೂ ಮನವರಿಕೆಯಾಗುತ್ತಿದೆ.

ಮನುಷ್ಯರಹಿತ ನಿಸರ್ಗವಿದ್ದ ತಡೆಗಳು ಮಾತ್ರವಿರುತ್ತಿದ್ದರೂ ಎರಡು ವಾರಗಳಲ್ಲಿ ಎಷ್ಟು ಮುಂದೊತ್ತಲು ಸಾಧ್ಯವೋ ಅಷ್ಟು ಸ್ಥಳವನ್ನು ವಕ್ರಾವಧಿಯೊಳಗೆ ಉತ್ತರ ಕೊರಿಯದ ಸೇನೆಯಾಕ್ರಮಿಸಿಕೊಂಡಿತು; ಈ ಅವಧಿ ಸರೆಗೆ ಅದಕ್ಕಾವ ಗಣ್ಯ ಪ್ರತಿಬಂಧನೆಯೂ ಇರಲಿಲ್ಲವೆಂಬುದೇ ಇದರ ಅರ್ಥ. ಎರಡು ಕೊರಿಯಗಳ ಮಧ್ಯ ಸರಹದ್ದಾದ 38ನೇ ಸಮಾನಾಂತರ ರೇಖೆಗೆ ಅನತಿದೂರದಲ್ಲಿದ್ದ ದಕ್ಷಿಣ ಕೊರಿಯಾದ ರಾಜಧಾನಿ ಸೆವೋಲನ್ನು ಒಂದೆರಡೇ ದಿನಗಳಿಗೆ ಉ. ಕೊರಿಯ ಸೇನೆಗಳು ಆಕ್ರಮಿಸಿಕೊಂಡಿದ್ದವು. ದಕ್ಷಿಣ ಕೊರಿಯಾದ ಸೇನೆಯು ಹಿಸರೇಯಿದ್ದು ಹೆಲಸೆಯಿಂದ ಉಚ್ಚಿ ಹೋಯಿತೆನ್ನಲಾಗುವಂತೆ ಎರಡೇ ದಿನಗಳಲ್ಲಿ ಅವುಗಳನ್ನು ಚಲ್ಲಾಪಿಲ್ಲಿಗೊಳಿಸಿದ್ದುವು. ಸುವೋನಿನಂತಹ ಪ್ರಮುಖ ನಗರವನ್ನು ಮತ್ತು ಆಯಕಟ್ಟು ಸ್ಥಳಗಳನ್ನು ಹಿಡಿದುಕೊಂಡು ಈಗ ದ. ಕೊರಿಯದ ಇಂದಿನ ರಾಜಧಾನಿ ತಾಯಿಜನಿಗೆ ರಭಸದಿಂದ ಅವು ಮುಂದೊತ್ತಿವೆ. ಉ. ಕೊರಿಯದವರ ತೀವ್ರಗತಿಯ ಹೆಜ್ಜೆಯನ್ನು ಒಂದು ಬಾಣಯಾದರೂ ಹಿಂಬಗಿಸುವ ನಿಜ ಸಾಹಸ ಇದಿರು ಕಡೆಯಿಂದಾಗಲ್ಲ.

ಸಂಖ್ಯೆ ಮತ್ತು ಶಸ್ತ್ರಾಸ್ತ್ರಗಳಲ್ಲಿ ಉತ್ತರ ಕೊರಿಯದ ಸೇನೆಗಳು ಅತಿ ವೇಗೈಸ್ಯಾಗಿದ್ದುವು. ಅವುಗಳಿದಿರು ಏಕಾಕಿಯಾಗಿ ಮುಂದೆ ಹೋದ ದ. ಕೊರಿಯದ ಸೇನೆಗಳಿಗೆ ನುಚ್ಚು ನುರಿಯಾಗುವ ಹೊರತು ಬೇರೆ ವಿಧಿಯೆ ರಲಿಲ್ಲ. ಅಮೆರಿಕದ ಸೇನೆ ಬರುವಂಗಾತು ಸು ತಡವಾಗಿ ಹೋಯಿತ್ತೆಂಬುದೊಡನೆ ಅವಸರಸರದಿಂದ ಮುಂಗಡೆಯಲ್ಲಿ ನ್ಥಾಪಿಸಿಕೊಂಡ ವಿಮಾನ ನಿಲ್ದಾಣವು ವಿರೋಧಿಗಳ ಚಾತುರ್ಯ ಪೂರ್ಣ ಧಾಳಿಗೆ ಗ್ರಾಸವಾಯಿತು; ಪ್ರಥಮತಃ ಕಟ್ಟಿದ ಅಮೆರಿಕನ್ ಸೇನಾ-ವ್ಯೂಹಗಳೂ ಉತ್ತರ ತೊರಿಯದವರ ಭೇದಾಳಿ ಧಾಳಿಯ ಪಕ್ಕಕ್ಕುಳಿದು ಹೋಗಿ, ಸ್ವಸ್ಥಾನಕ್ಕೆ ನಿವಾರಣೆಗಾಗಿ ಹಿಂದೆಗೆಯಲ್ಪಟ್ಟವು. ಯುದ್ಧಾರಂಭವಾಗಿ ಎರಡು ವಾರಗಳಾಗುವುದರೊಳಗೆ ದಕ್ಷಿಣ ಕೊರಿಯದ ಮೂರನೇ ಒಂದಂಶವು ಉತ್ತರ ಕೊರಿಯದ ವಶವಾದುದಲ್ಲದೆ, ಅಲ್ಲಂದಲೂ ದಕ್ಷಿಣಕ್ಕೆ ಆಕ್ರಮಣ ಹೆಜ್ಜೆ ಚಾಚಿಕೊಂಡು ಬರುತ್ತಿರುವ ದೃಶ್ಯ ಕಂಡು ಬಂತು.

ಅಪಜಯದ ಈ ವಕ್ರಾವಧಿಯಲ್ಲಿ ಅಮೆರಿಕದ ಕಡೆಯಿಂದ ಕಂಡುಬಂದಿದ್ದ ಗಣ್ಯ ಕಾರ್ಯಗಳೆಂದರೆ ಉತ್ತರ ಕೊರಿಯದ ರಾಜಧಾನಿ, ಸರಬರಾಯಿ ರಸ್ತೆ ಮತ್ತು ತರ ಆಯಕಟ್ಟು ಸ್ಥಳಗಳ ಮೇಲೆ ನಡೆಸಿದ್ದ ಬಲಾಶ್ರಧಾಳಿಗಳು. ಆದರೆ ಭಾರತ ದಂತೆಯೇ ಕೊರಿಯದಲ್ಲೂ ಈಗ ಮಳೆಗಾಲದ ಯಾವನವಾದ್ದರಿಂದ ಆಕಾಶದ ಮೋಡವು ಅಮೆರಿಕಾನರ ಗಗನ ಹಾರಾಟಕ್ಕೂ ಸಹಜವಾಗಿ ಕವಿದಿದೆ. ಮಾತ್ರವಲ್ಲ; ನಿಲ್ದಾಣ ಸ್ಥಳಗಳು ಅನುಸಂಧಾನದಿಂದ ಉತ್ತರ ಕೊರಿಯನರ ಕೈವೇರಿ, ಈಗ ಅಮೆರಿಕಾನರು ಏಲಿಗೆ ಒಂದೇ ಒಂದು ಗಣ್ಯ ವಿಮಾನ ನಿಲ್ದಾಣವಳಿದಿದೆಯೆಂದು ತಿಳಿದು ಬಾಡುತ್ತಿದೆ. ಅನೇಕ ಎತ್ತು ಬ್ರಿಟಿಷ್ ಯುದ್ಧ ಹಡಗಗಳು ಜತೆಗೂಡಿ ಉತ್ತರ ಕೊರಿಯಾನರು ಕೆಲವು ಬೋಟುಗಳನ್ನು ಮುಳುಗಿಸಿಯೂ, ಬಂದರಗಳ ಮೇಲೆ ಧಾಳಿ ನಡೆಸಿಯೂ ತಮ್ಮ ಇರಸ್ತಿಕೆಯನ್ನು ಪ್ರದರ್ಶಿಸಿದೆಯಾದರೂ ಮಳೆಗಾಲದ ಪ್ರತಿಕೂಲ ಹವಾಮಾನವು ಈ ಮಟ್ಟಿಗೂ ತಡೆಯಾಗಿದೆ. ಕೊರಿಯದ ಮೇಲೆ ಅಮೆರಿಕವು ಸಮುದ್ರ ದಿಗ್ಬಂಧನ ಹಾಕಿದೆಯಾದರೂ ಅದೇನೂ ಕೂಡಲೇ ಬೇಯಿಸುವಂತಹದಲ್ಲ್ಲೂಲೆಯೆ' ಎಂಬುದೆ ಮುಚ್ಚಿಕೊಂಡು ಉತ್ತರ ಕೊರಿಯದ ಸೇನೆ ಹೆಚ್ಚು ಹಿಂದಿಡುವಂತಾಗುವ ಸಂದರ್ಭ ಆದಿಯು ಹದಿನೈದು ದಿನಗಳಲ್ಲಿ ಯಾರಿಂದಲೂ ಎಲ್ಲಿಯೂ ಒದಗಿದುದಿಲ್ಲ. ಸಭೆ ಕೂಟ, ಪತ್ರಗಳಲ್ಲಿ ನಾಯಕರ ಮಾತಿನ ಗದ್ದಲ, ರಣರಂಗಕ್ಕಿಂತ ದೂರದಲ್ಲಿ ಸೇನೆಗಳ ಸಂಚಾರ ಗಾಂಭೀರ್ಯದ ಹೊರತು ಬೇರೆ ಗಣ್ಯ ಕಾರ್ಯವಾವುದೂ ದಕ್ಷಿಣ ಕೊರಿಯದ ವತಿಯಿಂದ ನಡೆದುದಿಲ್ಲ.

ಕೊರಿಯದಲ್ಲಿ ಕಮ್ಯೂನಿಸ್ಟ್ ಸೇನೆಗಳ ಮುಂಧಾಳಿಯನ್ನು ತಡೆಟ್ಟಲಾಯಿತ, ಎಂಬ ವಾರ್ತೆ ಪ್ರಥಮ ಬಾರಿ ಕೇಳಿಬಂದುದು ಇದೇ ತಾ. 8ರಲ್ಲಿ. ರಣ ಮುಂಭಾಗದಿಂದ ಧಾವಿಸಿ ಬಂದು ಅವಸರಾವಸರದಿಂದ ತಡೆಗಟ್ಟಿ ನಿಂತವ್ಯೂಹ ಆಡಿಮೇಲಾಗಿ ಹೋದ ಮೇಲೆ ಹಿಂದಗೆದ ಅಮೆರಿಕದ ಸೇನೆ ಸುಸಜ್ಜಿತವಾಗಿ ತಾಯಿಜಾನಿಗೆ 38 ವೈಲು ಉತ್ತರಗಡೆಯಲ್ಲಿ ಪ್ರತಿಷ್ಠಿತವಾಗಿ ಮತ್ತು ಪ್ರತಿಧಾಳಿಗೆ ಅಣಿಯಾಗಿದೆ. ಆಕೆ ಮಿಡ್ಡಿಗನ್ನುಗಳ ನಾಶ್ತು ವಿಮಾನಗಳ ಮೂಲಕ ವೈರಿ ಮುಂಭಾಗವನ್ನು ಹುಡಿ ಹಾರಿಸುತ್ತಿರುವುದಕ್ಕಾಗಿ ಸಹಜವಾದ ಸಹಸ್ಯಾರು ಅಮೆರಿಕನ್ ಸೈನಿಕರು ಸಶಕ್ತ ವ್ಯೂಹ ಅಲ್ಲ ತಯಾರಾಗಿದೆ. ಇಡೀಯಲ್ಲೇ ಕೊರಿಯಾದ ಯುದ್ಧ ಗತಿಯ ಮುಖವನ್ನು ಬದಲಾಯಿಸಿ, ಕಮ್ಯೂನಿಸ್ಟರನ್ನು ಎರಿನ ಗಡಿಗೆರೆಯ ಹಿಂಭಾಗಕ್ಕಟ್ಟಬೇಕೆಂದು ಅಮೆರಿಕನರ ಸಂಕಲ್ಪ. ಇದ್ದಂದ ದಕ್ಷಿಣ ಕೊರಿಯದ ಮತ್ತಷ್ಟಿಂದ ದೊಂಗುಲಾಲ ಅಮೆರಿಕ ಮಿಕ್ಕ ಸಂಯುಕ್ತ ರಾಷ್ಟ್ರ ಕೂಟದ ವಿಜಯವಾಂಛಿಸುತ್ತಿರುವುದು.

ಪ್ರಥಮ ಸೋಲಿನ ಕಾರಣ

ಕೊರಿಯಾ ಧಾಳಿಯಾರಂಭಿಸಿದೊಡನೆ ಅಮೆರಿಕ ಮತ್ತಿತರ ಪ್ರತಿನಿಧಿಯಿಂದ ಭದ್ರತಾ ಕೌನ್ಸಿಲ್ ಮುಂಜಾವಗದಿಂದ ಕಾರ್ಯಕ್ರಮವ್ಯತ್ಯಾಸವಾದುದೆಂಬುದು ನಿಸ್ಸಂದೇಹ. ಕಳೆದ ವರುಷದಿಂದ್ದಲ್ಲ ಅಮೆರಿಕವನ್ನು ಪ್ರಶ್ನಿಸಿ ಕ್ಷಣಕ್ಕೆಳೆದ ಪ್ರಥಮ ಘಟನೆ ಸಲ್ಲ್ ಹೊರ್ಜನ ಧಾಳಿಯು ವೇಳೆ ಅಮೆರಿಕನರು ತೋರಿಸಿದ್ದ ಜಿಗುಪ್ಸವಷ ಬಲಸ್ಯಸ್ಥಿಗಳನ್ನು ಈ ಬಾರಿ ಕೊರಿಯದಲ್ಲಿ ಅವರು ಪ್ರದರ್ಶಿಸಿಲ್ಲವೆಂಬುದಕ್ಕೆ ನಿದರ್ಶನವೇ. ಅದೂ ಕೊರಿಯಾ ಯುದ್ಧ ಪೂರ್ವದೂತ್ಪತ್ತಿನ ದಿನಗಳಲ್ಲಿ ದಕ್ಷಿಣ ಕೊರಿಯ ಅಧಿವಾ ಅಮೆರಿಕವು ಕಣ್ಣು ತೆರೆಯದಿದ್ದ ದುಷ್ಪರಿಣಾಮವೇ ಅದಿ ಭಾಗದ ಪರಾಭವವನ್ನಲ್ಲದ್ದಾಯಿಲ್ಲ. ಉತ್ತರ ಕೊರಿಯಾದಂದ ದಕ್ಷಿಣ ಕೊರಿಯಕ್ಕೆ ಗಂಡಾಂತರ ತಪ್ಪಿದ್ದಿಲ್ಲವೆಂಬ ಎಚ್ಚರಿಕೆಯು, ಕಮ್ಯೂನಿಸ್ಟ್ ಪ್ರಭಾವವು ಲೋಕದ ಎಲ್ಲಾ ಕಡೆಗಳಲ್ಲೂ ಅಡ್ಡ ಬೀಳಿಯುವಂತೆಯೂ ಅಮೆರಿಕಕ್ಕೆದ್ದೇ ಇದ್ದಿತು ಕೊರಿಯಕ್ಕೆ ಶಸ್ತ್ರಾಸ್ತ್ರಗಳ ಸರಬರಾಯಿಗಾಗಿ ಹಣ ಸಹಾಯದ ಬೇಡಿಕೆಯನ್ನು ಮುಂದಿಡುವ ಸಂದರ್ಭದಲ್ಲಿ ಅಮೆರಿಕದ ಸಸ್ಪೆಟೆನ್ಸ್ಗಳೇ ಈ ಸಂಗತಿಯ ಸ್ಪಷ್ಟೀಕರಣವಾಗಿದ್ದಿತು ಆದರೂ ದಕ್ಷಿಣ ಕೊರಿಯಕ್ಕೆ ಸಂಕಷ್ಟ ಶಸ್ತ್ರಾಸ್ತ್ರಗಳ ಸರಬರಾಯಿ ಈ ವರೆಗೂ ಆದದ್ದಿಲ್ಲ

ತಾವು ತಮ್ಮ ಕಡೆಯವರಿಗಂದು ರವಾನಿಸಿದ ಶಸ್ತ್ರಾಸ್ತ್ರಗಳು ಕಮ್ಯೂನಿಸ್ಟರ ಕೈಗೆ ಬೀಳಬಹುದೆಂಬ ಅಮೆರಿಕಾನರ ಭಯವೇ ಈ ಸರಬರಾಯಿ ವಿಳಂಬಕ್ಕೆ ಕಾರಣವೆಂದು ತಿಳಿದುಬರುತ್ತದೆ. ಆಶ್ಚರ್ಯಕರ

[ನಂತೀ ಪುಟದಿಂದ ಮುಂದುವರಿಯುದು.]

ಸಾರ್ವಜನಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಂಗದಲ್ಲಾದರೂ ಸರಿಯೇ—ನಾಯಕರ ಇಲ್ಲವೇ ಜನತೆಯ ಮನೋಬಲ ಕುಗ್ಗಿಲ್ಲವೆಂದೂ ನಿರಾಶೆಗೆಡೆಯಿಲ್ಲ. ಆದಿನ್ನು ಸಾಧಾರಣವಾಗಿದ ಮಟ್ಟಿಕ್ಕೆ ಕಷ್ಟವೆಂದಾದರೆ, ಎಂತಹ ರಮ್ಯ ಸ್ಥಿತಿಯುಳಿದಿದ್ದರೂ ಭವಿಷ್ಯದ ಭವನೆಯಿಲ್ಲ. ಇದೇ ಮಾತು ವ್ಯಕ್ತಿಯ ಮಟ್ಟಿಗೂ. ವಸ್ತುಕ್ಕ ಒಬ್ಬ ಎಂತಹ ಅಧೋಗತಿಗೀಡಾಗಿದ್ದರೂ ವಸ್ತುನೋದ್ಯತೆಯಿಂದಿದ್ದಾನೆಂದರೆ, ಸೋಲಿನ ನಂತರ ಸೋಲನ್ನು ದಾಟುತ್ತಾ ಆತ ವಿಜಯದತ್ತ ಮುಟ್ಟಬಲ್ಲನು, ಅಥವಾ ಸೋಲನ್ನೇ ವಿಜಯವಾಗಿ ಮಾರ್ಪಡಿಸಬಲ್ಲನು ಎಂಬುದು ಖಂಡಿತ.

ಆದ್ದರಿಂದ ಇಂದಿನ ಜನಜೀವನ ರಂಗದಲ್ಲಿ ಕಂಡು ಬರುವ ಅಭಾವ, ಅಡಚಣೆ, ನಿರಾಶೆ, ನಿಂದೆಗಳೆಂತಹವಿದ್ದರೂ ಇವೆಲ್ಲವುಗಳನ್ನು ನಿವಾರಿಸಿ ನೋಲ್ಟಟ್ಟಕ್ಕೇರುವವು ಮತ್ತಾ ಸಂಬಂಧದ ತಂತಮ್ಮ ಪಾಲಿನ ಕರ್ತವ್ಯಗಳನ್ನು ತಪ್ಪದೆ ಮಾಡುವೆವು ಎಂಬ ಮನೋಬಲವು ಜನತೆಯಲ್ಲಿ ಮೂಡಬೇಕಾದುದೊಂದೇ ಮುಖ್ಯ. ಪ್ರತಿಯೊಬ್ಬನೂ ಸ್ವತಃ ತನ್ನಲ್ಲಿ ಆ ದನ್ನು ಮೂಡಿಸಿಕೊಳ್ಳಬೇಕಾದುದು ಅಗತ್ಯ.

Income Tax

Does this oppress you?

If so consult the undersigned. He will assist you in all matters relating to Income Tax assessments appeal & refunds. He can represent your case.

Fees- Moderate.

Office:-Railway Station Road, Hampankatta Post, S. K. Mangalore,

Dated, 21-6-50

H. Narasappa,
Income Tax Practitioner,
(Late of the Income Tax Dept.)

ಇನ್ ಕಮ್ ಟ್ಯಾಕ್ಸ್

ಇದರಿಂದ ನಿಮಗೆ ಬೇಜಾರಾಗಿರುವುದೇ?

ಹಾಗಾಗಿದ್ದರೆ ನನ್ನಿಂದ ಅನುಭವವನ್ನು ಪಡೆಯಿರಿ.

ಇನ್‌ಕಮ್‌ಟ್ಯಾಕ್ಸ್ ಅಸೆಸ್‌ಮೆಂಟ್ಸು, ಅಪೀಲು, ರಿಫಂಡು—ಇವುಗಳ 26 ವರುಷದ ಅನುಭವವು ನನಗಿರುವುದು. ನಾನು ನಿಮಗಾಗಿ ವ್ಯವಹರಿಸಬಹುದು.

ಫೀಸು — ಕಡಿಮೆ

ಆಫೀಸು —ರೈಲ್ವೆಸ್ಟೇಶನ್ ರೋಡ್, ಹಂಪನಕಟ್ಟೆ ಪೋಸ್ಟು, ದ. ಕ.

ಮಂಗಳೂರು)
21-6-50)

ಎಚ್. ನರಸಪ್ಪ, ಬಿ. ಎ.
ಇನ್‌ಕಮ್‌ಟ್ಯಾಕ್ಸ್ ಪ್ರೇಕ್‌ಟೀಶನರ್

ಪ್ರಮುಖ ವ್ಯವಹಾರ ಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ 1906

ಭಾರತದೊಳಗೆ **40** ಕ್ಕಿಂತಲೂ ಹೆಚ್ಚು ಶಾಖೆಗಳು

— ಅದರ ಸ್ಥಿತಿಗತಿ

ಹಾಗೂ ಶೋಚನೀಯ ಸಂಗತಿಯೆಂದರೆ ಪ್ರತ್ಯಕ್ಷ ಧಾಳಿ ಹೊಡೆತದ ನೋವಿನ ಮೂಲಕ ಹೊರಕ್ಕು, ಆ ಮೊದಲು ಉತ್ತರ ಕೊರಿಯದ ಇಷ್ಟು ಪ್ರಚಂಡ ಧಾಳಿಯ ವಾಸನೆಯೇ ಅಮೆರಿಕನ್ನರಿಗೆ ಬಡಿಯದಿದ್ದುದು!

ಇಂತಹ ಅಪಾಯಗಳನ್ನು ಸಕಾಲದಲ್ಲಿ ಗೊತ್ತು ಹಚ್ಚುವದಕ್ಕಾಗಿ ಪ್ರತಿಯೊಂದು ರಾಷ್ಟ್ರದ ವಶದಲ್ಲೂ 'ಚತುರ ತಾಇಲಾಖೆ'ಯಿದ್ದೇ ಇದೆ. ಟೈಗರ್‌ಯಾಹಿಯ ನೆರೆ ರಾಷ್ಟ್ರವೊಂದು ಇಷ್ಟು ಪ್ರಚಂಡ ಆಕ್ರಮಣ ಸಿದ್ಧತೆ ನಡೆಸಿರುವುದು ದಕ್ಷಿಣ ಕೊರಿಯದ ಚಾತುರಕಾ ವಿಭಾಗದವರಿಗೆ, ಅಥವಾ ಅಮೆರಿಕದ ಇಂತಹ ಬುದ್ಧಿವಂತ ಸೂಕ್ಷ್ಮ ಬುದ್ಧಿಗೆ ಹೊಳೆಯದಿದ್ದುದೇ ಸೋಜಿಗದ ವಿಷಯ. ಸಂಗತಿ ಮುಂದಾಗಿ ಗೊತ್ತಾಗುತ್ತಿದ್ದರೆ, ಹದಿನೈದು ದಿನಗಳ ನಂತರ ಅಮೆರಿಕದ ಸೇನೆ ದಕ್ಷಿಣ ಕೊರಿಯದ ನಡು ಮಧ್ಯದಲ್ಲಿ ನಡು ಬಿಗಿಯುವ ಬದಲಿಗೆ ಪ್ರಥಮ ದಿನ ೨೫ನೇ ಗಡಿ ಗೆರೆಯಲ್ಲೇ ಸೊಂಟ ಕಟ್ಟಿ ನಿಲ್ಲುತಿತ್ತು. ಈ ಅಚಾತುರ್ಯದ ದೆಸೆಯಿಂದಲೇ ಅದು ಭಾಗದ ಅತಿ ದೊಡ್ಡ ಪರಾಭವವನ್ನು ದಕ್ಷಿಣ ಕೊರಿಯ ಮತ್ತು ಅಮೆರಿಕದ ಸೇನೆ ಅನುಭವಿಸಬೇಕಾಯಿತು.

ಹೀಗೆ ಆರಂಭದಲ್ಲೇ ತಪ್ಪಿ ಬಿದ್ದುದರಿಂದ ಅರ್ಧ ಭಾಗದ ವರೆಗೂ ತಪ್ಪಿ ಬೀಳುವ ದುರ್ಗತಿಯೊದಗಿತು. ದಕ್ಷಿಣ ಕೊರಿಯದ ಸೇನೆಗಳು ಎಂಡೇ ದಿನಗಳಲ್ಲಿ ಪೂರ್ಣವಾಯ ವಾದಾಗ ಕಮ್ಯೂನಿಸ್ಟ್ ಸೇನೆ ಗದಿರಂಗ ಅಲ್ಲಿ ಉಳಿದುಕೊಂಡ ಅಮೆರಿಕಾ ಸೇನೆಗಳು ಶಸ್ತ್ರ ಮತ್ತು ಸಂಖ್ಯೆಯಲ್ಲಿ ವೈರಿಗಳಿಗಿಂತಕೀರಾ ಕಡಿಮೆಯವುಗಳಾಗಿದ್ದುವು. ಈಗ ಅತಿ ಹೆಚ್ಚಿನ ಸೇನೋಪಕರಣಗಳ ಸರಬರಾಯಿಯಾಗಿರುವುದರಿಂದಲೂ ವ್ಯವಸ್ಥಾಬದ್ಧವಾಗಿ ಕಡೆಗಟ್ಟಿ ನಿಲ್ಲುವ ರಂಗ ದೊರೆತಂತಿರುವುದರಿಂದಲೂ ಇದುವರೆಗೆ ಜಾಯಮಾನ್ಯ ಬಂದಿರುವ ಅಮೆರಿಕನ್ ಸೇನೆಗಳು ಇನ್ನು ಮುಂದೆ ವಿರುತ್ತಾ ಹೋಗಬಹುದೆಂಬ ನಿರೀಕ್ಷೆಯಿದೆ.

ಆದರೂ ಉತ್ತರ ಕೊರಿಯವು ಎರಡು ವಾರಗಳಲ್ಲಿ ಪಡೆದಂತಹ ಕ್ಷಿಪ್ರ ವಿಜಯವನ್ನು, ಇನ್ನು ಮುಂದಿನ ಎಂಡು ವಾರಗಳಲ್ಲಿ ಅಮೆರಿಕವು ಪಡೆಯಬಹುದೆಂದು ಕೊರಿಯದ ಸ್ಥಿತಿಗತಿಗಳನ್ನರಿತವರಾರೂ ನಿರೀಕ್ಷಿಸುತ್ತಿಲ್ಲ. ಕಾರಣವೆಂದರೆ, ಕಮ್ಯೂನಿಸ್ಟರಿಗೀ ವರೆಗೆ ಸಮಯ, ಸಂದರ್ಭವೆರಡೂ ಅನುಕೂಲವಾಗಿದ್ದಂತೆ ಇನ್ನು ಮುಂದೆ ಅಮೆರಿಕಾನ್ನರಿಗಾಗದು. ನಿಸರ್ಗಾನುಕೂಲತೆ ಮತ್ತು ಮನುಷ್ಯ ಯತ್ನ ಎರಡರಲ್ಲೂ ಕಮ್ಯೂನಿಸ್ಟರು ಮೇಲ್ಗೈಯ್ಯಾಗಿದ್ದಂತೆ ಇನ್ನು ಅಮೆರಿಕಾನ್ನರಾಗವಂತಿಲ್ಲ. ಸೇನೆ ಮತ್ತು ಯುದ್ಧೋಪಕರಣಗಳ ವಿಚಾರಗಳಲ್ಲಿ ಅಮೆರಿಕಾನ್ನರು ಈಗಲೇ ಸುಧಾರಿಸಿರಬಹುದು; ಆದರೆ ವಿಮಾನ, ಟೀಂಕು, ಸೇನೆಗಳ ಚಲನವಲನಕ್ಕೆನ್ನುತಿಬಂಧಕವೆನ್ನಿಸುವ ಮಳೆಗಾಲವಂತೂ ಕೊರಿಯದಲ್ಲಿ ಆಗೋಸ್ತು ಮಧ್ಯ ಭಾಗದ ವರೆಗೆ ಇದ್ದೇ ಇದೆ. ಅಲ್ಲಿ ವರೆಗಷ್ಟಕ್ಕೆ ಬೀಳುವ ಸುಮಾರು 40 ಇಂಚು ಮಳೆಯಲ್ಲಿ ಹೆಚ್ಚಿನಂಶ ಜುಲಾಯಿ ತಿಂಗಳಲ್ಲೇ ಬರುತ್ತದೆ. ಆಗೋಸ್ತು ಮಧ್ಯದ ವರೆಗೂ ನೆರೆ, ಕೊರೆ, ಮಳೇ ಹಾವಳಿಯಿದ್ದೇ ಇದೆ. ಕಮ್ಯೂನಿಸ್ಟ್ ಕೊರಿಯಕ್ಕೆ ಅದರೊತ್ತಿನ ಕಮ್ಯೂನಿಸ್ಟ್ ಚೈನಾ ಮತ್ತು ರಶ್ಯದ ಸಹಾಯವಿದೆಯೆಂಬುದು ಖಚಿತವಿರುವಾಗ, ಈ ಕಡೆಯಿಂದ ಅಮೆರಿಕದ ಆಥವ. ಸಂಯುಕ್ತ ರಾಷ್ಟ್ರ ಸಂಘದ ಬಲವು ಹೆಚ್ಚುತ್ತಾ ಹೋಗುವ ಪರಿಮಾಣಾನುಸಾರ ಆ ಕಡೆಯಿಂದ ಕಮ್ಯೂನಿಸ್ಟ್ ಕೊರಿಯನ್ನರೂ ತಮ್ಮ ಶಕ್ತಿ ಹೆಚ್ಚಿಸಿಕೊಳ್ಳುತ್ತಿರುವುದು ನಿರ್ವಿವಾದ. ಆದ್ದರಿಂದ ಮಳೆಗಾಲದ ತಡೆ ತೊಡಕುಗಳಿದ್ದಿರಲ್ಲೂ ಕ್ಷಿಪ್ರಗತಿಯಿಂದ ಧಾವಿಸಲಾಗುವಷ್ಟು ಶಕ್ಯವು ಅಮೆರಿಕಾನ್ನರಿಗೆ ಬರುವದು ಅಸಾಧ್ಯ.

ಹೀಗಾಗಿ, ವಿತ ಬಯಕೆಯಂತೆ ಎಲ್ಲವೂ ಸಂಭವಿಸುತ್ತಾ ಬಂದಲ್ಲಿ ಆಗೋಸ್ತು ಅಂತ್ಯ ಭಾಗದ ಸಮಾರಿಗೆ ಅಮೆರಿಕದ ಸೇನೆಯು ಪೂರ್ವ ನಿಶ್ಚಿತ ಗಡಿ 38ನೇ ಮಧ್ಯಾಂತರ ಗೆರೆಗೆ ಮುಂದೊತ್ತ ಬಹುದೆಂದೂ, ಇದಿರುವ ದಿಗಳಲ್ಲಿ ಶಕ್ತಿಯುಂಟೆಂದು ಮನವರಿಕೆಯಾದರೆ ನಾಶ, ರಶ್ಯವು ಸಂಧಾನಕ್ಕೊಲಿಯುವಂತಹದೆಂಬ ಮಿತ್ರ ರಾಷ್ಟ್ರಗಳ ಅಭಿವ.ತಾನುಸಾರವಾಗಿ ಆಗ ಮಾತ್ರ ಯಥಾರ್ಥ ಸಂಧಾನ ಪ್ರಯತ್ನ ನಡೆಯಬಹುದೆಂದೂ ನಿರೀಕ್ಷಿಸಬಹುದು. ಈ ನಡುವೆ ವಿಶೇಷಾನುಕೂಲತೆಗಳಿರುವ ಕಮ್ಯೂನಿಸ್ಟ್ ಕೊರಿಯದ ಶಕ್ತಿಯು ಯಾವಾವ ಮುಖದಿಂದ, ಹೇಗೆ ಅಭಿವೃದ್ಧಿಗೊಳ್ಳಬಹುದೆಂಬ ಕಡೆಗೆ ಇಲ್ಲಿ ಲಕ್ಷ್ಯಹರಿಸಿಲ್ಲ

ಈ ಯುದ್ಧದ ನ್ಯಾಯಾನ್ಯಾಯ

ದಕ್ಷಿಣ ಕೊರಿಯದ ಮೇಲೆ ಉತ್ತರ ಕೊರಿಯವು ಅತಿಕ್ರಮ ಆಕ್ರಮಣವನ್ನು ಸಂಭವಿಸಿದೆಯೆಂಬುದು ಸ್ಪಷ್ಟವಿರುವಾಗ ಕೊರಿಯ ಯುದ್ಧದಲ್ಲಿ ಕಮ್ಯೂನಿಸ್ಟ್ ಉತ್ತರ ಕೊರಿಯನೇ ಅನರ್ಥಾಧಿಯೆಂಬುದು ನಿಸ್ಸಂದೇಹ. ಆದರೆ ಒಂದು ವಿವಾದದಲ್ಲಿ ಒಂದು ಪಕ್ಷವು ಮೂಲ ತಪ್ಪುಗಾರನೆಂದಾದೊಡನೆ ಮತ್ತೊಂದು ಪಕ್ಷವು ಮಾಡಿದ್ದು ಮತ್ತು ಮಾಡುವಂತಹದೆಲ್ಲವೂ ಸರಿಯೆಂಬ ಅಭಿಪ್ರಾಯವಲ್ಲ. ಕಲಹ ನಿರತ ಪಕ್ಷಗಳೆರಡೂ ಅಪರಾಧಿಗಳಾಗಿರುವ ಸಂದರ್ಭಗಳಲ್ಲಿ; ಹೆಚ್ಚು ಕಡಿಮೆ ಯಿರಬಹುದಾದರೂ ಕೊರಿಯಾ ಹೋರಾಟದಲ್ಲಿ ಕಮ್ಯೂನಿಸ್ಟರು ಮತ್ತು ಅಮೇರಿಕ, ಇಕ್ಕೆಡೆಯವರೂ ಅಪರಾಧಿಗಳಿನ್ನ ಬಹುದು.

ಮೊದಲನೆಯದಾಗಿ, ಅಮೆರಿಕ–ರಶ್ಯಾಗಳ ಪ್ರೀತ್ಯರ್ಥವಾಗಿ ಆಗಿರುವ ಕೊರಿಯಾ ವಿಭಜನೆಯೇ ಈ ಯುದ್ಧದ ಮೂಲ ಹೇತು. ಯದ್ಧೋತ್ತರ ಮೈತ್ರೀ ಒಡಂಬಡಿಕೆಗಾಗಿ ರಶ್ಯವೂ ಈ ಪಾಲುಪಟ್ಟೆಯಲ್ಲಿ ಭಾಗಿಯಾಗಿದ್ದಿತೆಂಬುದು ನಿಜ; ಆದರೆ ಕೋರುವಿಕೆಯು ವಿಟ್ಟುಗಾದರೂ ಅಮೆರಿಕ ರಶ್ಯಗಳು ದಕ್ಷಿಣೋತ್ತರ ಕೊರಿಯಗಳಿಂದ ಕೈದೆಗೆದು, ಎಲ್ಲಿಯ ಜನರ ಗೇನೇ ಆಧಿಕಾರ ಬಿಟ್ಟು ಕೊಟ್ಟು ಮೇಲೆ ಅನ್ಯರ ಅನುಕೂಲತೆಗಳಿಗಾಗಿ ತುಂಡಾಗಿದ್ದ ತಮ್ಮ ದೇಶವು ಪುನ: ಒಂದಾಗಬೇಕೆಂಬ ಬಯಕೆ ಕೊರಿಯದ ಜನತೆಯಲ್ಲಿ ಮೂಡುವುದು ತಪ್ಪಲ್ಲ.

ಇಂತಹ ವಿಕೇಂದ್ರೀಕರಣ ವಾದವನ್ನು ಬಲವಾಗಿ ಹೂಡುತ್ತಾ ಬಂದವರು ಕಮ್ಯೂನಿಸ್ಟ್ ಉತ್ತರ ಕೊರಿಯದವರು. ಅವರ ಪುನರ್ನಿರ್ಮಾಣ ಪ್ರಯತ್ನವು ಅಖಿಲ ಕೊರಿಯವನ್ನುತಮ್ಮದನ್ನಾಗಿ ಮಾಡಿಕೊಳ್ಳುವ ಸ್ವಾರ್ಥಬುದ್ಧಿಯದಿರಬಹುದು; ವಿಕೇಂದ್ರೀಕರಣ ಸಾಧನೆಗಾಗಿ ಅವರು ಕೈಕೊಂಡ ವಿಧಾನವು ದೋಷಪೂರ್ಣವಿರಬಹುದು. ಆದರೆ ಮೂಲತ: ಇದ್ದಂತೆ ಅಖಿಲ ಕೊರಿಯವು ಏಕ ದೇಶವಾಗಿರಬೇಕು, ಮತ್ತದು ಕೊರಿಯದ ಜನತೆಯ ಪೂರ್ಣಾಧಿಕಾರದ್ದೇ ಇರಬೇಕು ಎಂಬ ನ್ಯಾಯೋಚಿತವಾದವನ್ನೇ ಕಮ್ಯೂನಿಸ್ಟ್ ಕೊರಿಯಾನರು ಮುಂದಿಟ್ಟಿದ್ದಾರೆಂಬುದನ್ನು ಮರೆಮಾಚಕೂಡದು.

ಇಂತಹ ವಿಕೇಂದ್ರೀಕರಣದಿಂದ ಕೊರಿಯದ ಅರ್ಧ ಭಾಗದ ತವ್ಕ ವರ್ಚಸ್ಸು ಉಜ್ಜಿಹೋಗಿ, ಅಖಿಲ ಕೊರಿಯವು ಅತಿ ಸುಲಭದಲ್ಲಿ ಕಮ್ಯೂನಿಸ್ಟ್ ಆಂಕೆಗೊಳಗಾಗಬಹುದೆಂಬ ಭೀತಿಯಿಂದಲೇ ಅಮೆರಿಕಾನ್ನರು ವಿಕೇಂದ್ರೀಕರಣ ವಿರುದ್ಧ ಕೈತ್ಯಗಳನ್ನು ಮಾಡುತ್ತಾ ಬಂದಿರುವುದರಿಂದ ಕೊರಿಯದಲ್ಲಿ ಉದ್ದೇಶ ಶುದ್ಧತೆಯು ಪೃಷ್ಠಿಯಿಂದ ಕಮ್ಯೂನಿಸ್ಟ್–ಅಮೆರಿಕಗಳೆರಡೂ ತಪ್ಪಿತಸ್ಥರೇ ಇರುವಾಗ, ತೋರುವಿಕೆಯ ವಿಟ್ಟುಗಾದರೂ ಕಮ್ಯೂನಿಸ್ಟರು ನ್ಯಾಯಬದ್ಧ ವಿಕೇಂದ್ರೀಕರಣದತ್ತ ತೋರಿಸುತ್ತಿದ್ದಾರೆ.

ಅದೇ ರೀತಿ ಕೊರಿಯಾ ಯುದ್ಧವನ್ನು ಹಿಂದುಗೊಳಿಸಿದವರು ವಿಶ್ವದ ಲೋಕಯುದ್ಧದ ಆಕಾಂಕ್ಷೆಗೆ ಬೆಳೆಯುವ ಅಪಾಯ ಭೀತಿ ಹುಟ್ಟುವಂತೆ ಮಾಡಿದವರು ಅಮೆರಿಕಾನ್ನರೇ. ಅನ್ಯಾಯದಿದಿರು ದುರ್ಬಲರನ್ನು ರಕ್ಷಿಸುವ ಹೊಣೆಹೊತ್ತ ನೋಟೆದ ಮೇಲಿನಿಂದ ಅಮೆರಿಕದ ಈ ವರ್ತನೆಯ ಶ್ಲಾಘನೀಯವಾದರೂ ರಶ್ಯದ ಮೇಲಿನ ದ್ವೇಷಾಸೂಯೆ ಮತ್ತು ಅನ್ಯಾದಲ್ಲಿ ಕಮ್ಯೂನಿಸ್ಟ್ ಪ್ರಭಾವ ಹರಡುವ ಕುರಿತು ತನಗಿರುವ ಅಸಮಾಧಾನದ ಮೇಲಿಂದಲ್ಲದೆ, ಬೇರಾವ ಉದಾತ್ತ ತತ್ವಕ್ಕಾಗಿಯೂ ಅಮೆರಿಕವು ಈ ಯುದ್ಧದಲ್ಲಿ ಇಷ್ಟೊಂದು ಮೈಹನಕ್ಕತ್ತು ವಹಿಸಿದುದಲ್ಲ.

ಎರಡು ಕೊರಿಯಗಳಿಂದಾಗುವುದ ಕ್ಕೆ ತತ್ವತಃ ಅಮೆರಿಕಾನ್ನರ ವಿರೋಧವಿಲ್ಲ. ಅಂದ ನೋಲೆ ಈ ತತ್ವವನ್ನೇ ವಸ್ತು ಸ್ಥಿತಿಯೆಂದು ಗಣಿಸಿ, ಎಲ್ಲಿಂವುದು ಅಖಂಡ ಕೊರಿಯವೆಂದು ನೆನೆಸಿಕೊಂಡರೆ ಈಗ ಅಲ್ಲಿ ನಡೆಯುತ್ತಿರುವದು ಕ್ಷಲ್ಲಿಯ ಹಕ್ಷಗಳೆಂಡರೊಳಗಿನ ಅಂತರ್ಯುದ್ಧವೇ ಹೊರತು, ಮಿಕ್ಯವರು ಸಹಾಯಕ್ಕೆ ಹೋಗಬೇಕಾದ ಅನ್ಯಾಕ್ರಮಣ ಹೋರಾಟವಲ್ಲ. ಜೈನದಲ್ಲಾದುದು, ಕೂಡಾ ಇಂತಹದೇ ಯುದ್ಧ. ಅಮೇರಿಕವು ಅದನ್ನು ಅಂತರ್ಯುದ್ಧವೆಂದೇ ಗಣಿಸಿ, ದೂರ ನಿಂತಿತಲ್ಲದೆ ಚಿಯಾಂಗ್ ಕೈಶೇಕ್‌ಗೆ ಬೆಂಬಲವಾಗಿ ತಾನು ಸ್ವತಃ ಯುದ್ಧಕ್ಕೆ ಹೋಗಿರಲಿಲ್ಲ.

ಈ ವರೆಗೂ ಸೋವಿಯೆಟ್ ರಶ್ಯವು ತಾನು ಉತ್ತರ ಕೊರಿಯದ ಬೆಂಬಲಕ್ಕೆ ದ್ದೇನೆಂದು ಮುಂದೆ ಬಂದಿಲ್ಲ. ಉತ್ತರ ಕೊರಿಯವು ಆಕ್ರಮಣಗಾರನೆಂದು ನಿರ್ಣಯಿಸಿ, ಅಂತಹ ಆಕ್ರಮಣವನ್ನು ತಡೆಗಟ್ಟುವ ಜವಾಬ್ದಾರಿಯುಳ್ಳ ಭದ್ರತಾ ಕೌನ್ಸಿಲು ಕೇಳಿಕೊಂಡ ಪ್ರಕಾರ, ಅದರ ಸದಸ್ಯತನದ ಹಕ್ಕಿನಿಂದ ಅಮೆರಿಕವು ದಕ್ಷಿಣ ಕೊರಿಯದ ಬೆಂಬಲಕ್ಕೆಹೋಗಿರುವುದರಿಂದ ಅಮೆರಿಕದ ವರ್ತನೆಗೆ ಸಮಜಾಯಿಷಿ ಬೇಕಾಗಿದೆಯೆಂಬುದೇ ನಿಜ. ಅಂತೆಯೇ ರಶ್ಯ ಕೂಡಾ, ತನ್ನದೇ ಆದ ಕಾರಣವನ್ನು ಮುಂದೊಡ್ಡಿ ಭದ್ರತಾ ಕೌನ್ಸಿಲಿನ ತೀರ್ಮಾನವು ತಪ್ಪೆಂದು ವಾದಿಸುತ್ತಾ ದೂರ ನಿಂತಿದೆ ಹೊರತು, ಭದ್ರತಾ ಕೌನ್ಸಿಲು ಅಪರಾಧಿಯೆಂದು ತೀರ್ಮಾನಿಸಿದವರಿಗೆ ಪ್ರತ್ಯಕ್ಷ ಬೆಂಬಲವಾಗುವ ಆಕ್ರಮ ವರ್ತನೆಯನ್ನೇನೂ ಕೈಕೊಂಡಿಲ್ಲ. ಹೀಗಾಗಿ ಅಮೆರಿಕದಂತೆಯೇ ರಶ್ಯದ ವರ್ತನೆ ಕೂಡಾ ಸಂಯುಕ್ತ ರಾಷ್ಟ್ರ ಕೂಟ ರಂಗದಲ್ಲೇ ನೇತಾಡುತ್ತಿದೆ ಹೊರತು ಪೂರ್ಣ ಕಡಿದು ಹೋಗಲ್ಲ.

ಭದ್ರತಾ ಕೌನ್ಸಿಲಿನ ತೀರ್ಮಾನವಾದ ಮೇಲೆ ಅದರ ಸದಸ್ಯತ್ವವಿರುವ ರಶ್ಯವು ಹೊರ ನಿಂತು ಅಕ್ಷೇಪಿಸುವುದು ಸಂಯಲ್ಲವೆನ್ನೋಣವೆ? ಕೊರಿಯಾ ಸಮಸ್ಯೆ ಸಂಬಂಧದ ಭದ್ರತಾ ಕೌನ್ಸಿಲ್ ಚರ್ಚೆಗಳಲ್ಲಾವುದರಲ್ಲೂ ರಶ್ಯವು ಭಾಗವಹಿಸಿರಲಿಲ್ಲ. ಮತ್ತೀ ಬಹಿಷ್ಕಾರವಾದರೂ ಕೊರಿಯದ ಸಮಸ್ಯೆಗೆ ಸಂಬಂಧವಾಗಿ ಪ ನ್ಯಾಯವಾದ ಬೇರೊಂದು ಕಾರಣಕ್ಕಾಗಿ ಕೆಲ ಕಾಲದಿಂದ ಕ್ರಮಪೂರ್ವಕ ನಡೆದು ಬಂದುದಾಗಿತ್ತು. ಭದ್ರತಾ ಕೌನ್ಸಿಲಿನ ಚೈನಿನದ ಪಾಲಿನ ಸದಸ್ಯ ಸ್ಥಾನವನ್ನು ಅಲ್ಲಿಯ ಕ

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.

Advocate & President, District Board, S. Kanara.

CHAIRMAN

ಜಪಾನ್‌ನಲ್ಲಿ ಸಂಸ್ಥಾನದ ಆಹಾರ ಸ್ಥಿತಿ

ಕಮ್ಯೂನಿಸ್ಟ್ ಸರಕಾರಕ್ಕೆ ಕೊಡಬೇಕಾಗಿರುವ ಸಾಮಾಜಿಕ ಸರಂಕ್ಷಣೆಗೆ ಇಟ್ಟಿರುವ ವರೆಗೂ ತಾನು ಆ ಕೌನ್ಸಿಲಿನ ಯಾವ ಸಭೆಯಲ್ಲೂ ಭಾಗವಹಿಸುವುದಿಲ್ಲವೆಂದು ಕೆಲವು ತಿಂಗಳುಗಳ ಮೊದಲೇ ಸ್ಪಷ್ಟವಾಗಿ ಪೂರ್ವಕ್ಕೆ ಹೊರಗೆ ಹೋಗಿದ್ದ ರಶ್ಯವು ಅಂದಿನಿಂದೀವರೆಗಿನ ಯಾವ ಸಭೆಗೂ ಹಾಜರಾಗಿರಲಿಲ್ಲ.

ಫ್ರೆಂಚ್ ಇಂಡಿಯದಲ್ಲಿ ಚಿಯಾಂಗ್ ಕೈಶೇಕರ ನಾಮಮಾತ್ರ ಸರಕಾರ ಕೂಡಾ ಇರದೆ, ಆಡಳಿತ ಪ್ರತಿಯೊಂದಿಂಚು ನೆಲದಲ್ಲೂ ಕಮ್ಯೂನಿಸ್ಟ್ ಸರಕಾರ ಸ್ಥಾಪನೆಗೊಂಡಿರುವಾಗ ಭದ್ರತಾ ಕೌನ್ಸಿಲ್ಲಲ್ಲಿ ಮಾತ್ರ ಚೈನದ ಖಾಲಿಸ ಪ್ರತಿನಿಧಿಯಾಗಿ ಚಿಯಾಂಗ್ ಕೈಶೇಕರ ಪ್ರತಿನಿಧಿಯನ್ನೇ ಅಮೆರಿಕ ಮೊದಲಾದ ರಾಷ್ಟ್ರಗಳು ಹುತೊಟ್ಟು ಇರಿಸಿಕೊಂಡಿರುವುದರಲ್ಲಿ ಯಾವ ನ್ಯಾಯವಿದೆಯೋ ಅರ್ಥವಾಗುವದಿಲ್ಲ. ಬದಲಿಗೆ ಕಮ್ಯೂನಿಸ್ಟ್ ಚೈನದ ಪ್ರತಿನಿಧಿ ಅಲ್ಲಿರಬೇಕೆಂದು ರಶ್ಯವು ವಾದಿಸುವುದರಲ್ಲಿ ಏನೆಸ್ಟಿದೆಯೆ?

ಈ ಸಂಬಂಧದ ನ್ಯಾಯದಾನ ಮಾಡುವ ಮೂಲಕ ರಶ್ಯವು ಭದ್ರತಾ ಕೌನ್ಸಿಲಿನ ಸಭೆಗಳಲ್ಲಿ ಸಹಭಾಗಿಯಾಗುವಂತೆ ಮಾಡುತಿದ್ದರೆ ಒಮ್ಮೆಗೇ ಕೊರಿಯಾ ಕೀರ್ಮಾನವಾಗಿ ತ್ತೆಂದು ಊಹಿಸುವುದು ಕಷ್ಟವಾದರೂ ಆ ಸಂಬಂಧದ ಸಂಧಾನ ಮಾತುಕತೆಗಳಿಗೆ ವಿಶೇಷಾನುಕೂಲತೆಗ ಕೊಡಗುತಿದ್ದುವು.

ನೆಹರೂ ಮಧ್ಯಸ್ಥಿಕೆಗೇನು?

ಮೇಲ್ಕಡ ನಮೂದಿಸಿರುವ ಸ್ಥಿತಿಗತಿ ಚಿತ್ರ ಮತ್ತು ನ್ಯಾಯಾನ್ಯಾಯಗಳ ತುಲನೆಯ ಮೇಲಿಂದ ಕೊರಿಯದ ಯುದ್ಧ ಸಂಬಂಧವಾಗಿ ನಿಷ್ಪಕ್ಷಪಾತಿ ಮಧ್ಯಸ್ಥಗಾರರ ಮೂಲಕ ರಾಜೀ ಕೀರ್ಮಾನವನ್ನು ಕಂಡುಕೊಳ್ಳುವ ಮಹತ್ಕಂಠಹ ಪ್ರಯತ್ನವುಕಾಲ ಮೀರಿರುವ ಮೊದಲು—ಈಗಲೇ—ಆಗಬೇಕಾದ ಅವಶ್ಯಕತೆ ಒಡೆದು ಕಾಣುತ್ತಿದೆ.

ಅನ್ಯಾದಿ ಬಂಡೆಡೆ ಹುಟ್ಟಿಕೊಂಡಿರುವ ಈ ಜಗಳದಲ್ಲಿ ಅಧುನಿಕ ಅನ್ಯಾದ ಅತಿ ಮುಖ್ಯ ರಾಷ್ಟ್ರ ಭಾರತವು ಇಂದಿನ ಅನ್ಯಾದ ಜನತೆಯ ಅನನ್ಯ ನಾಯಕ ಪಂಡಿತ ನೆಹರುಗಳ ಮೂಲಕ ಪ ಧ್ಯಸ್ಥಗಾರ ರಾತ್ರವಹಿಸಲು ಯೋಗ್ಯವಿದ್ದಎಂಬ ಅಭಿಪ್ರಾಯವು ಲೋಕದ ಹಲವಾರು ಗಳಿಂದ ಹೊರಬಿದ್ದಿದೆ. ಇಂತಹ ಮಧ್ಯಸ್ಥಿಕೆಯನ್ನು ತಾನು ನಡೆಸುವುದಾಗಿ ಭಾರತವು ಸ್ವತಃ ಮುಂದೆ ಬಂದಿದೆ, ಎಂಬ ಸುದ್ದಿಯೆದ್ದಿದ್ದಿತಾದರೂ, ಸಂಬಂಧಪಟ್ಟವರು ಕೇಳಿಕೊಂಡರೆ ಮಾತ್ರ ತಾವದಕ್ಕೆ ತಯಾರೆಂದು ಪಂಡಿತ ನೆಹರುಗಳು ಅದನ್ನು ತಿದ್ದಿದ್ದಾರೆ.

ಲೋಕ ಶಾಂತಿಯ ಆಶಾರೆ ಮತ್ತು ನ್ಯಾಯದ ಮೇಲೆ ಆಸಕ್ತಿಯಿರುವುದು ನಿಜವಾದರೆ, ಇಕ್ಕಡೆಯವರೂ ನೆಹರೂ ಮಧ್ಯಸ್ಥಿಕೆಯನ್ನು ಅಪೇಕ್ಷಿಸಬಾರದೇಕೆ? ಭದ್ರತಾ ಕೌನ್ಸಿಲಿನ ನಿರ್ಣಯವನ್ನು ಒಪ್ಪಿಕೊಂಡ ಒಂದು ರಾಷ್ಟ್ರದ ನಾಯಕ ಪಂಡಿತ ನೆಹರುಗಳಾದುದರಿಂದ ಅಮೆರಿಕಮತ್ತು ಹಿಂಬಾಲಕ ರಾಷ್ಟ್ರಗಳು ಈ ವ್ಯವಸ್ಥೆ ಯನ್ನಾಕ್ಷೇಪಿಸಲು ಕಾರಣವಿಲ್ಲ; ಆದರೆ ಭದ್ರತಾ ಕೌನ್ಸಿಲ್ ನಿರ್ಣಯವನ್ನು ಮನ್ನಾ ಬೆಳೆಸುವ್ಯಾಕೆ ಕನ್ಯಾಒಪ್ಪಿರಿಯಿಲ್ಲ ವೆಂದು ಸ್ವಿಜ್ಜಸಡಿಸಿರುವುದಕ್ಕಿಬ್ಬೆ, ಕೌನ್ಸಿಲ್ ಸದಸ್ಯತನವನ್ನು ಕಮ್ಯೂನಿಸ್ಟ್ ಚೈನಕ್ಕೆ ಬಿಟ್ಟುಕೊಟ್ಟು ರಶ್ಯವು ಅದರಲ್ಲಿ ಭಾಗವಹಿಸುವಂತೆ ಮಾಡಬೇಕೆಂದು ಒತ್ತಾಯಿಸಿರುವ ಪಂಡಿತ ನೆಹರುಗಳು ನ್ಯಾಯದ ಹೊಂಚು ಬೀಂಬಿದರ ಪಕ್ಷಪಾತಿಯೂ ಅಷ್ಟಿಬಂಬ ಸಮಾಧಾನವನ್ನು ರಶ್ಯಾ ಮತ್ತದರ ಹಿಂಬಲಕರಿಗರಲೇಬೇಕು. ಕೊರಿಯದ ಆಕ್ರಮಣಗಾರರನ್ನು ಖಂಡಿಸಿದರೂ, ಆಕ್ರಮಣದ ಹಿನ್ನೆಲೆಯಲ್ಲಿರಬಹುದಾದ ಯಾವ ನ್ಯಾಯವನ್ನಾದರೂ ಪಂಡಿತ ನೆಹರುಗಳು ನಿಸ್ಸಂಕೋಚವಾಗಿ ಎತ್ತಿ ಹಿಡಿಯಬಲ್ಲರೆಂಬುದು ಖಂಡಿತ.

ಅಂದ ಮೇಲೆ ಕಲಹ ಬೇಡವೆಂದಿದ್ದರೆ—ಎರಡು ಮಹಾ ಯುದ್ಧಗಳ ಅನಾಹುತಾವಶೇಷಗಳು ಇನ್ನೂ ಉಳಿದಿರುವ ಪ್ರಸಂಜವನ್ನು ಮುಂಜೇ ಮಹಾ ಪ್ರಳಯ ಕೆಂಡಕ್ಕೆ ಶಳ್ಳಬಾರದೆಂದಿದ್ದರೆ—ಕೊರಿಯಾ ಯುದ್ಧ ಕೀರ್ಮಾನವನ್ನು ಪಂಡಿತ ನೆಹರುಗಳ ಮಧ್ಯಸ್ಥಿಕೆಗೆ ಬಿಡಬೇಕು. ಈ ಸಾಧ್ಯಸ್ಥಿತಿಯು ಕೊನೆತ. ಯಾರೆಷ್ಟು ಅಸಕ್ತಿ ವಹಿಸುವರೆಂಬುದರ ಮೇಲಿಂದಲೇ ಲೋಕ ಶಾಂತಿ ಸುರಕ್ಷಿತತೆಯು ಸಂಬಂಧಪಟ್ಟವರಿಗೆಷ್ಟು ಆತುರವಿದೆ ಎಂಬುದನ್ನು ಗೊತ್ತುಹಚ್ಚಬಹುದು.

ಆಹಾರ ಮಂತ್ರಿ ಸ್ಥಾನವು ಅತ್ಯಂತ ಪ್ರಾಮುಖ್ಯವಾದುದೆಂಬುದು ನಿಜ. ಕೇಂದ್ರದಿಂದ ಸಂಸ್ಥಾನಗಳಿಗೆ ಆಹಾರ ಸರಬರಾಯಿಯಾಗುವ ಮುಖ್ಯ ಪ್ರಶ್ನೆಯಿರುವ ಈ ಕಾಲದಲ್ಲಿ ಕೇಂದ್ರದ ಆಹಾರ ಮಂತ್ರಿ ಸ್ಥಾನವು ವಿಶೇಷ ಗಣಿಸಿಯವಾದುದೆಂಬುದು ನಿಸ್ಸಂದೇಹ. ಆದರೆ ಆಹಾರದ ಪ್ರಶ್ನೆಯು ಮುಖ್ಯತಃ ಜೀವನ ಪ್ರಶ್ನೆಮತ್ತು ಆರ್ಥಿಕ ಪ್ರಶ್ನೆ. ರಾಜಕೀಯ ವಿಷಯುಗಳಲ್ಲಿರುವಂತಹ ಆಕರ್ಷಣೆಯು ಬದಲಿಗೆ ಮೌನ ಕಾರ್ಯ ಭಾಗವೇ ಇದ್ದಿ ಮುಖ್ಯವಾದುದು. ಹೀಗಿದ್ದರೂ ಪ್ರತಿಭಾಶಾಲಿ ಶ್ರೀ ಮುನ್ಷಿಗಳು ಆಹಾರದ ಪ್ರಶ್ನೆಗೆ ಕಾರ್ಯ ವ್ಯವಸ್ಥೆಗಳಂತೆಯೇ ರಾಜ್ಯ ಸ್ವಾಜಾರದ ಒಪ್ಪವನ್ನೂ ಕೊಡಲು ಶಕ್ತರಾಗಿದ್ದಾರೆ. ಹಿಂದಿನ ವರ್ಷಗಳಲ್ಲೂ ನಡೆದಿದ್ದ ಸಸಿ ಸಪ್ತಾಹಕ್ಕೆ 'ವನ ಮಹೋತ್ಸವ'ವೆಂಬ ನಾಮಕರಣ ಮಾಡಿ, ಈ ಬಾರಿ ಅದರ ಪ್ರಜಾಂವನ್ನು ಇಮ್ಮಡಿಗೊಳಿಸಿದ್ದಾರೆ. ಅದೇ ರೀತಿ ಆಹಾರೋತ್ಪಾದನಾ ಕ್ಷೇತ್ರದಲ್ಲೂ ಹೊಸಹೊಸ ಚೇತನವನ್ನು ತುಂಬಲು ಶ್ರೀ ಮುನ್ಷಿಗಳು ಪ್ರಯತ್ನಿಸುತ್ತಿದ್ದಾರೆ. ಈ ಮಂತ್ರ ಅಖಿಲ ಭಾರತದಲ್ಲಿ, ಆಹಾರಾಭಾವ ಅಧಿಕವಾಗಿರುವ ಭಾಗವೆಂದರೆ ಮದ್ರಾಸ್ ಸಂಸ್ಥಾನ. ಇಲ್ಲಿಯ ಸ್ಥಿತಿಗತಿಗಳನ್ನು ಖರೀಕಿಲಿಸಿ, ಧಾನ್ಯೀ ವ್ಯವಸ್ಥೆಯನ್ನು ನಿರೂಪಿಸುವ ಉದ್ದೇಶದಿಂದ ಶ್ರೀ ಮುನ್ಷಿಗಳು ಮದ್ರಾಸ್ ಮಂತ್ರಿಗಳೊಡನೆ ಸುದೀರ್ಘ ಹಾಗೂ ಸೂಕ್ಷ್ಮ ಪರ್ಯಾಲೋಚನೆ ನಡೆಸಿದ್ದರು.

ಮದ್ರಾಸಿನ ಧ್ಯೇಪ್ರಾಪ್ತಿಯತ್ನ

ತಾ. ೮ರಲ್ಲಿ ಮದ್ರಾಸಿಗೆ ಬಂದೊಡನೆ ಎರಡು ದಿನಗಳ ತನಕ ಮದ್ರಾಸ್ ಮಂತ್ರಿಗಳೊಡನೆ ಮತ್ತು ಆಹಾರ ಖಾತೆಯ ಪ್ರಮುಖಾಧಿಕಾರಿಗಳೊಡನೆ ಸವಿವರ ಪರ್ಯಾಲೋಚನೆ ನಡೆಸಿ, ಶ್ರೀ ಮುನ್ಷಿಗಳು ಆಹಾರ ಸ್ವಾವಲಂಬನಾ ಗುರಿ ಸಿದ್ಧಿಗಾಗಿ ಭಾರತ ಸರಕಾರವು ಕೈಕೊಂಡಿರುವ ಯೋಜನಾಂಗವಾಗಿ ಮದ್ರಾಸ್ ಸಂಸ್ಥಾನದ ವಾಲಿನ ಸಾರ್ವತ್ರಿಕ ಆಹಾರೋತ್ಪಾದನಾ ಯೋಜನೆಯ ಕ್ಷೇತ್ರವನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಮದ್ರಾಸ್ ಸಂಸ್ಥಾನದ ಆವರದ ಆವಶ್ಯಕತೆಯ ಬಗ್ಗೆ ಕೇಂದ್ರದ ಆಹಾರ ಮಂತ್ರಿಗಳ ಮುಂದೆ ಮದ್ರಾಸ್ ಮಂತ್ರಿಗಳಿಂದ ಇಡಲ್ಪಟ್ಟಿತು. ಸಂಸ್ಥಾನದ [illegible] ನಪಡೆಯ ಒಕ್ಕೀ ಅಂಶವನ್ನು 8 ಲಕ್ಷ ಟನ್ನುಗಳಿಂದ ಈಗ 7 ಲಕ್ಷ ಟನ್ನುಗಳಿಗೆ ಇಳಿಸಿರುವುದು ಎಂತಹ ಆತ್ಯಪ್ತಿಗೆ ಕಾರಣವಾಗಿದೆ, ಎಂಬುದನ್ನು ಪ್ರತ್ಯೇಕ ಹೇಳಬೇಕೆಂದಿಲ್ಲ. ಸಂಸ್ಥಾನದ ಈಗಿನ ಅನುಕೂಲತೆಗಳ ಮೇಲಿಂದ 7 ಲಕ್ಷ ಟನ್ನುಗಳಿಂತಾದರೂ ವಂಚನೆಯ ಕೂನತೆನಕ ಕಾಡಲಾಗುವುದು ಅಸಾಧ್ಯವೆಂದು, ತೋರುತ್ತದೆ. 8 ಲಕ್ಷ ಟನ್ನುಗಳಿಂತೆ 1950ನೇ ಮಾರ್ಚ್ಯದ ವರೆಗೆ ಸಂಸ್ಥಾನದಲ್ಲೆಲ್ಲಾ ವಿತರಣೆ ಮಾಡಿದರು, ಕಡೆವರ್ಷದಲ್ಲಿ ಅಕ್ಕಿಯೆಂದರೆ 169,000 ಟನ್ನುಗಳಷ್ಟು ಮದ್ರಾಸ್ ಸರಕಾರವು ಕೇಂದ್ರ ಆಹಾರ ಮಂತ್ರಿಗಳಿಗೆ ಈ ಸಂಬಂಧದ ಸರ್ವ ಸಂಗತಿಗಳನ್ನೂ ಮಂದಟ್ಟು ಪಡಿಸಿ, ಕೂನೆಯ ಪಕ್ಷ 169,000 ಟನ್ನುಗಳಷ್ಟು ಅಕ್ಕಿಯ ನ್ಯಾದರೂ ಮದ್ರಾಸ್ ಸಂಸ್ಥಾನಕ್ಕೆ ರವಾನಿಸಿ, 8 ಲಕ್ಷ ಟನ್ನು ಅಕ್ಕಿ ಹಸುಗಿಯನ್ನು ಪುನಃ ಊರ್ಜಿತಕ್ಕೆ ತಂದು ನರವಂಗಬೇಕೆಂದೂ, ಅದಕ್ಕೆ ಒದಲಾಗಿ ತವ್ಯವಾಲಿಗ ತೆಗದಟ್ಟಿರುವ 100,000 ಟನ್ನು ಗೋಧಿಯನ್ನೂ ಬಿಟ್ಟ ಬಿಡಲ್ಪಡತಕ್ಕವು ತಯಂದಿದ್ದವೆಂದೂ ನಿವೇದಿಸಿಕೊಂಡಿತು. ಶ್ರೀ ಮುನ್ಷಿ ಳು, ಈ ಸಂಬಂಧವಾಗಿ ಕೇಂದ್ರ ಸರಕಾರವು ಸಾಧ್ಯವಿದ್ದಷ್ಟನ್ನೆಲ್ಲಾ ಮಾಡುವದೆಂಬ ಅಶ್ವಾಸನೆಯನ್ನಿತ್ತಿದ್ದಾರೆ. ಆದರೆ ಮೇಲೆ ಮದ್ರಾಸಿನ ಸಚಿವಾಲಯದ ಮೈಲ್ಕಲ್ಲನದಲ್ಲಿ ಈ ಸಂಬಂಧದ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ "ಮದ್ರಾಸ್ ಸರಕಾರವು ಗೋದಿಯ ಅಂಶವನ್ನು ಬಿಟ್ಟರೂ, ಆದರ ಬದಲಿಗೆ ಕೊಡಲು ಅಕ್ಕಿಯೆಲ್ಲಿದೆ? ನಮ್ಮೊಡನೆ ಅಕ್ಕಿ ಇಲ್ಲವಾದ್ದರಿಂದ ಇನ್ನಷ್ಟು ಹಚ್ಚು ಗೋಧಿಯನ್ನೇ ಇತ್ತ ತಳ್ಳುವ ಪ್ರಯತ್ನಬಲ್ಲಿ ನಾನಿದ್ದೇನೆ" ಎಂದಿದ್ದಾರೆ ಶ್ರೀ ಮುನ್ಷಿ. ಪ್ರಭುತ್ವತಃ ಮದ್ರಾಸ್ ಸಂಸ್ಥಾನದ ಪಾಲಿಗೆ 1 ಮಿಲಿಯ ಟನ್ನು ಆಹಾರ ಧಾನ್ಯಗಳನ್ನು ಕೇಂದ್ರಾಡಳಿತೆಯು ಏರ್ಪಡಿಸಿಟ್ಟಿದ್ದರೂ, ಇಲ್ಲಿಯ ವಿಶೇಷಾಭಾವ ಸ್ಥಿತಿಯನ್ನು ಗಮನಿಸಿ ಕೊನೆಗದನ್ನು 1.೫ ಮಿಲಿಯ ಟನ್ನುಗಳಿಗೇರಿಸಲಾಗಿದೆ. ಆದರೆ ಆದರಲ್ಲಿ ಅಕ್ಕಿಯ ಪರಿಮಾಣವು ಸಾಕಷ್ಟಿಲ್ಲದಿರುವುದರಿಂದ ಮದ್ರಾಸಿನ 8 ಲಕ್ಷ ಟನ್ನು ಅಕ್ಕಿ ಹಸುಗೆಯನ್ನು ಉಳಿಸುವ ಆಧಾರ ಹೊರಬಿದ್ದಂತಾಗಿದೆ. ಶ್ರೀ ಮುನ್ಷಿಗಳೊಂದಿಗೆ ಮದ್ರಾಸಿಗೆ ಬಂದಿದ್ದು, ಇಲ್ಲಿಯ ಸ್ಥಿತಿ ಸುಧಾರಣೆಗೆ ತನ್ನಿಂದ ಸಾಧ್ಯವಿರುವ ಎಲ್ಲಾ ವ್ಯಯತ್ನಗಳನ್ನೂ ಕೇಂದ್ರ ಸರಕಾರವು ಮಾಡುತ್ತಿದೆ ಎಂಬುದನ್ನು ವಿವರಿಸಿ ಹೇಳಿದ ಭಾರತದ ಆಹಾರ ಶಾಖಾ ಡೈರೆಕ್ಟರ್ ಜನರಲ್ ಶ್ರೀ ಆರ್. ಯಸ್. ಕೃಷ್ಣಸ್ವಾಮಿಯವರು ನಾಗಪುರಕ್ಕೆ ಹೋಗಿ ಪ್ರಯತ್ನಿಸಿದುದರ ಫಲವಾಗಿ ಮಧ್ಯ ಪ್ರದೇಶ ಸರಕಾರವು 15000 ಟನ್ ಅಕ್ಕಿಯನ್ನು ಕೂಡಲೇ ಮದ್ರಾಸ್ ಸಂಸ್ಥಾನಕ್ಕೆ ರವಾನಿಸುವ ವ್ಯವಸ್ಥೆ ಕೈಕೊಂ

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಪಾತುಗಾರಿಕೆಯ ಪಾತುಗಳ ರೂಪದಲ್ಲಿಳಿದ ಭಟ್ಟಯಾಗಿ ಎದ್ದು ಕಾಣುವುದು.

400 ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ.ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಕೇಂದ್ರದ ಪ್ರತ್ಯಕ್ಷ ಬೆಂಬಲವೆಲ್ಲಿದೆ?

ಇದೆ. ಉತ್ತರ ಪ್ರದೇಶದಿಂದ ಮದ್ರಾಸ್ ರಾಜ್ಯಸ್ಥಾನಕ್ಕೆ-ಸರಬರಾಯಿಯಾಗುವ ಅಕ್ಕಿಯ ಧಾರಣೆಯು ಬಹಳ ಹೆಚ್ಚೆಂದು ಮದ್ರಾಸ್ ಸರಕಾರದ ದೂರಿದ್ದಿತು. ಆದರೆ ಭಾರತದ ಆಹಾರ ಮಂತ್ರಿ ಶ್ರೀ ಕೆ. ಎಮ್. ಮುನ್ಶಿಗಳು ಈ ಕುರಿತು ಸಮಾಧಾನ ಹೇಳುತ್ತಾ, ಉತ್ತರ ಪ್ರದೇಶವು ತನ್ನೊಡನೆ ನಡೆಸುವ ಆಕ್ಕೀ ವ್ಯಾಪಾರದಿಂದ ಲಾಭ ಹೊಡೆಯುವ ಉದ್ದೇಶ ವಿಲ್ಲವೆಂದಿದೆ, ಎಂಬ ಅಭಿಪ್ರಾಯವನ್ನು ಮದ್ರಾಸ್ ಕಟ್ಟಿಕೊಳ್ಳಬಾರದೆಂದೂ ಅಲ್ಲಿಯ ಜನರಿಗೆ ಧೈರ್ಯ ಹೇಳಿದ್ದಾರೆ. ಅಧಿಕ ಆಹಾರ ಉತ್ಪಾದನೆಗಾಗಿ ಮದ್ರಾಸ್ ಸರಕಾರವು ಸುಮಾರು 1 ಕೋಟಿ ರುಪಾಯಿ ವೆಚ್ಚದ ವಿವಿಧ ಯೋಜನೆಗಳನ್ನು ದೃಷ್ಟಿಪಥದಲ್ಲಿಟ್ಟುಕೊಂಡಿದ್ದು, ಆ ದಕ್ಕಾಗಿ ಕೇಂದ್ರ ಸರಕಾರದಿಂದ ಹಣ ಸಹಾಯವನ್ನು ಬೇಡಿದೆ. ಈ ಸಂಬಂಧದಲ್ಲೂ ಸಮಾಧಾನಕರ ಉತ್ತರವು ಭಾರತ ಸರಕಾರದಿಂದ ಬಂದೀತೆಂಬ ನಿರೀಕ್ಷೆಯಿಲ್ಲ.

ಕೇಂದ್ರವೇನಂತೆ?

ಆಹಾರ ಸಂಬಂಧವಾಗಿ ಮದ್ರಾಸ್ ಸಂಸ್ಥಾನದ ದೀರ್ಘಾವಧಿಯ ಮತ್ತು ಕ್ಷೇಪಾವಧಿಯ ಸಮಸ್ಯೆಗಳ ಸಾರರೂಪ ಹೀಗಿದೆ:—ದೀರ್ಘಾವಧಿ ವ್ಯವಸ್ಥೆಯ ವಿಷಯಕ್ಕೆ ಮದ್ರಾಸ್ ಸರಕಾರವು ತಾನಾಗಿ ಏನೋ ಯೋಜಿಸಿರುವ, ಅಥವಾ ಈಗ ಶ್ರೀ ಮುನ್ಶಿಗಳು ರೂಪಿಸಿರುವ ಅಧಿಕಾಹಾರೋತ್ಪಾದನಾ ಯೋಜನೆಯನ್ನು ಜಾರಿಯಲ್ಲಿಡಲು ಕೇಂದ್ರ ಸರಕಾರದ ಧನ ಸಹಾಯಬೇಕು. ಕ್ಷೇಪಾವಧಿ ಸಮಸ್ಯೆಗಳಿಗಾಗಿ 100000 ಟನ್ ಗೋದಿಯನ್ನು ವಜಾಪಡಿಸಿಯಾದರೂ 169000 ಟನ್ ಅಕ್ಕಿಯನ್ನು ಕೇಂದ್ರ ಸರಕಾರವು ಇತ್ತ ಕಳುಹಿಸಿಕೊಡಬೇಕು. ಇವೆರಡು ರೀತಿಯ ಸಹಾಯವು ಭಾರತ ಸರಕಾರದಿಂದ ದೊರೆತೆಲ್ಲಿ ಆಹಾರ ಸ್ವಾವಲಂಬನೆಯಲ್ಲಿ ಮದ್ರಾಸ್ ಸಂಸ್ಥಾನವು ವಿಜಯ ಸಾಧಿಸುವಂತೆಯೇ ಸದ್ಯದ ಹಸುಗೇ ಕಡಿತವನ್ನು ಭರ್ತಿ ಮಾಡಿಕೊಂಡು ಜನತಾ ಅತ್ಯಪ್ತಿಯನ್ನೂ ನಿವಾರಿಸಬಲ್ಲುದು. ಆದರೆ ಕೇಂದ್ರ ಸರಕಾರದಿಂದ ಇವೆರಡು ವಿಧದ ಸಹಾಯವೂ ಸದ್ಯಸ್ಥಿತಿಯಲ್ಲಿ ದೊರಕುವಂತಿಲ್ಲ. ಕೇಂದ್ರದ ಆಹಾರ ಮಂತ್ರಿ-ಸಾಕಷ್ಟು ಮೆದುಳು ಕಣಜ ಮಾತ್ರವಿರುವ ಮುನುಷ್ಯ-ಶ್ರೀ. ಕೆ. ಎಮ್. ಮುನ್ಶಿಗಳು ಮದ್ರಾಸಿಗೆ ಬಂದುದು ತನ್ನ ಬುದ್ಧಿ ಭಂಡಾರದ ಸಹಾಯವನ್ನು ಸಲಾಯಿಸುವುದಕ್ಕೆ ಮಾತ್ರವೆಂದು ತೋರುತ್ತಿದೆ. ಮದ್ರಾಸಿನ ಆಹಾರ ದುಸ್ಥಿತಿ ನಿವಾರಣೆಗಾಗಿ ಕೇಂದ್ರ ಸರಕಾರವು ತನ್ನಿಂದ ಸಾಧ್ಯವುಳ್ಳ ಸಹಾಯವನ್ನು ನೀಡುವ ಅತುರದಿಂದಿರುವುದು ನಿಸ್ಸಂಶಯ. ಬಿದರೂ ರಿಪ್ಪನ್ ದಕ್ಷಿಣ ಮೂಲೆಯ ಸಂಸ್ಥಾನವಾದ ಮದ್ರಾಸಿನ ಕಡೆಗೆ, ಅದರ ಸ್ಥಾನ ಮತ್ತು ವಿಸ್ತಾರಕ್ಕೆ ನ್ಯಾಯವಾದಲಕ್ಷ್ಯವನ್ನು ಭಾರತ ನ್ಯಾಯಕರು ಕೊಡುತ್ತಿಲ್ಲವೆಂಬ ಅಪೇಕ್ಷವು ಕೇಳಬರುತ್ತಿದೆ. ಸ್ಥಳಾಭಿವಾನ, ಪ್ರಾಂತ್ಯಾಭಿಮಾನಗಳ ಅತಿರಂಗ ಪ್ರದರ್ಶನವು ದೇಶ ನಾಯಕರಿಂದ ಖಂಡಿಸಲ್ಪಡುತ್ತಿದೆಯಾದರೂ, ಅದು ಕಾರ್ಯರಂಗದಲ್ಲಿ ನಿಜಕ್ಕೂ ಅಸ್ತಿತ್ವದಲ್ಲಿಲ್ಲವೇನೆ, ಎಂಬ ಪ್ರತೀತಿಯೇಳುತ್ತಿದೆ. ಈ ಬಾರಿಯ ಮದ್ರಾಸ್ ಪ್ರಾಂತ್ಯದ ಕಾಂಗ್ರೆಸ್ ಅಧಿವೇಶನ ಮೇಲೆ ತನ್ನ ಪ್ರಭುತ್ವವನ್ನು ಬೀರಲು, ಕೇಂದ್ರ ನ್ಯಾಯಕರಿಂದಾಗಿಲ್ಲವೆಂಬುದು ಅದಿಭಾಗದಿಂದಲೂ ಕಂಡು ಬಂದಿದೆ; ಇದಕ್ಕೆ ಕಾರಣ ಅವರ ಅಸಡ್ಡೆಯೋ ಅನಾನುಕೂಲತೆಯೋ, ಏಳಿದು ಬಂದಿಲ್ಲ. ಹೇಗಿದ್ದರೂ, ಸ್ವಾತಂತ್ರ್ಯ ಹೋರಾಟಗಳ ಕಾಲದಲ್ಲೂ, ಸ್ವತಂತ್ರ್ಯಾದಳಿತೆಯ ಈ ಕಾಲದಲ್ಲೂ ಉತ್ತರ ಭಾರತದ ಪ್ರಭಾವ ಕಡಿದು ಒಂದಪ್ಪ ದಕ್ಷಿಣ ಭಾರತದ ಚರ್ಚಸ್ಸು ಕೋರಿ ಬಂದಿಲ್ಲ. ಭಾರತ ರಾಷ್ಟ್ರ ದೇಹದಲ್ಲಿ ಉತ್ತರ ಭಾಗಕ್ಕಿರುವ ಹೃದಯದ ಮತ್ತು ದಕ್ಷಿಣ ಭಾಗಗಳಿಗೆ ಕಾಲಿನ ಸ್ಥಾನವೇ ಅಂತಿಸಿದಂತೀವರಿಗೂ ಎಂದರೆ ಅತಿಶಯೋಕ್ತಿಯಾಗದು. ಪ್ರಕೃತ ಸಹಜವಾದ ಮತ್ತು ಉತ್ತರದವರಿಂತಲೂ ಹೆಚ್ಚಾಗಿ ದಕ್ಷಿಣದವರ ವರ್ತನೆಯೇ ಕಾರಣವಾಗಿರುವ ಈ ತಾರತಮ್ಯ ಇಂದಾಗಿ ಉತ್ತರ ಭಾರತವನ್ನಾಗಲೀ ರಾಷ್ಟ್ರೀಯ ನಾಯಕರನ್ನಾಗಲೀ ದೂರುವುದು ಸಂಯುಕ್ತವಲ್ಲ. ಆದರಿಂದು ವಸ್ತುಸ್ಥಿತಿ; ಆಹಾರ ದಂತಹ ಜೀವನ ಮೂಲ ಸಮಸ್ಯೆಯ ಸಂಬಂಧದಲ್ಲೂ ಇಂತಹ ವ್ಯತ್ಯಾಸವುಳಿದು ಕೊಂಡಿರುವಾಗ, ಅದು ಸಹಜವಾಗಿ ಯಾತನೆಯನ್ನು ನಿರ್ಮಿಸಬಲ್ಲುದು. ಆಡಳಿತ ಮತ್ತು ಆಹಾರದಂತಹ ಪ್ರಶ್ನೆಗಳಲ್ಲಿ ಮದ್ರಾಸ್ ಸಂಸ್ಥಾನದ ಕಡೆಗೆ ಕೇಂದ್ರದ ಸಹಾಯ, ಸಲಹೆ ಮತ್ತು ಆಸಕ್ತಿ ಇಂದಿಗಿಂತ ಹೆಚ್ಚುವುದು ಅಗತ್ಯವೆಂಬುದು ನಿಸ್ಸಂದೇಹ.

ಮುನ್ಶಿಗಳ ಸಹಾಯ!

ಕೇಂದ್ರದ ಆಹಾರ ಸಚಿವ ಶ್ರೀ ಕನ್ಹಯ್ಯಾಲಾಲ್ ಮೇನಕಲಾಲ್ ಮುನ್ಶಿಗಳು ಪ್ರಸಿದ್ಧ ವಕೀಲ, ಅನಾಮಸ್ಯ ಶಾಸನ ಕಜ್ಜಾ, ಸಮರ್ಥ ಆಡಳಿತಗಾರ, ಸಾಹಿತ್ಯ, ಪತ್ರಿಕೋದ್ಯಮಿ, ವಾಗ್ಮಿ, ವೇದಾಂತಿ. ಮೆದುಳೇ ಮೂಲವಾಗಿರುವ ಇಷ್ಟೆಲ್ಲಾ ಯೋಗ್ಯತೆಗಳ ಅವರಲ್ಲಿರುವ ಸಂಮಾಣದಲ್ಲೇ ಹೃದಯ ಮೂಲವಾಗಿರುವ ವಿಶಾಲ ಮನೋವೃತ್ತಿ, ಉದಾತ್ತ ಧ್ಯೇಯಗಳೂ ಇವೆ ಎಂಬುದು ಅವರು ಕೇಂದ್ರ ಮಂತ್ರಿಯಾಗುವ ವರೆಗೆ ಪ್ರಕಾಶಗೊಂಡಿದಿಲ್ಲ ಈಗಿನ ಘನಸ್ಥಾನದಿಂದಲೂ ಎಲ್ಲಕ್ಕಿಂತ ಹೆಚ್ಚಾಗಿ ಚಾತುರ್ಯವನ್ನೇ ಅವರು ಪ್ರದರ್ಶಿಸುತ್ತಿರುವಂತೆ ಕಾಣುತ್ತಿದೆ. ಹೊಸ ಹೊಸ ವೃತ್ತ, ಮಹೋತ್ಸವ ಮತ್ತು ಹೆಸರುಗಳನ್ನು ಶೋಧಿಸುವುದರಲ್ಲೇ ಶ್ರೀ ಮುನ್ಶಿಗಳನ್ನು ಜಾಣ್ಮೆಯನ್ನು ಉಪಯೋಗಿಸುತಿದ್ದಾರೆ. ವನಗಳ ಅಧಿದೇವತೆ ಶ್ರೀ ಕೃಷ್ಣನೆನ್ನುತ್ತಾ ವನಮಹೋತ್ಸವವನ್ನು ಆಚರಿಸುವಂತೆ ಮಾಡಿದರು; ಈಗ ಭಾರತ ಜನತೆಯು ಪ್ರತಿ ಸೋಮವಾರವನ್ನು 'ಸೋಮ್ಯ ಕಿನ್ನವ ದಿನ'ವಾಗಿ ಆಚರಿಸಬೇಕೆಂದು ಉಪದೇಶಿಸಿದ್ದಾರೆ. "ನನಗೆ ಭಾರತೀಯ ಮಹಿಳೆಯರ ಮೇಲೆ ವಿಶ್ವಾಸವಿದೆ. ಅವರು ತಮ್ಮ ಶಕ್ತಿಯನ್ನು ಸಜ್ಜುಗೊಳಿಸಿ ಕಾರ್ಯಕ್ಕೆದ್ದರೆ, ವಾರಕೊಮ್ಮೆಂದು ದಿನವನ್ನು 'ಕಾಯಿಸಲ್ಯಗಳ ದಿನ'ವಾಗಿ ಆಚರಿಸುವದು ಅತಿ ಸುಲಭ ಜನರು ತಮ್ಮ ಆಹಾರ ವಿಧಾನಗಳನ್ನು ಬದಲಾಯಿಸಿಕೊಳ್ಳದಿದ್ದರೆ, ನಿಯಂತ್ರಣಗಳನ್ನು ರದ್ದುಪಡಿಸಲಾಗುವಷ್ಟು ಆಹಾರವನ್ನು ಬೆಳೆಸಲಾಗುವದು ಕಷ್ಟವೇ ಸರಿ. ನಿಯಂತ್ರಣಗಳು ಹೋಗಬೇಕೆಂಬ ಬಯಕೆಯಿದ್ದರೆ ಹೆಚ್ಚೆಚ್ಚು ಕಾಯಿಸಲ್ಯ ಹಣ್ಣು ಹಂಪಲು, ಗೆಡ್ಡೆ ಗೆಣಸುಗಳನ್ನು ತಿನ್ನುವ ಅಭ್ಯಾಸ ಮಾಡಬೇಕು. ಹಿಂದಿನ ಕಾಲಗಳಲ್ಲಿ ಉಪವಾಸ ಅಥವಾ ಫಲಸ ಧಾನ್ಯಗಳೇನೂ ಇಲ್ಲದ ತರಕಾರಿ ಆಹಾರವನ್ನೆಷ್ಟೇ ಸೇವಿಸುವ ಏಕಾದಶೀ ವ್ಯತಿರಿಕ್ತತೆಯ ಪದ್ಧತಿ ಜನರಲ್ಲಿದ್ದಿತು. ಆರ್ಥಿಕ ಸ್ಥಿತಿ ಸುಧಾರಣೆಗಾಗಿ ಮತ್ತು ದೇಶವನ್ನು ಬಲಶಾಲಿಯಾಗಿಮಾಡುವುದಕ್ಕಾಗಿ ಈ ಕಾಲದಲ್ಲೂ ಹಾಗೇಕೆ ಮಾಡಬಾರದೋ ತಿಳಿಯದು. ಅದ್ದರಿಂದ ನಾನೀಗ ಕೇಳಿಕೊಳ್ಳುವುದೇನೆಂದರೆ ವಾರದಲ್ಲಿ ಪ್ರತಿ ಸೋಮವಾರ ಫಲಸ್ಯ ಧಾನ್ಯಗಳನ್ನು ಬಿಟ್ಟು ಬೇರೇನು ತಿನ್ನಬಾರದೂ ತಿನ್ನುವ 'ಉಪವಾಸ ದಿನ'ವಾಗಿ ಆಚರಿಸಬೇಕು. ಆದಿತ್ಯವಾರ ದಿನ ತುಸು ಹೆಚ್ಚಿಗೆ ತಿನ್ನುವ ಅಭ್ಯಾಸವು ಜನರಿಗಿರುವುದರಿಂದಲೇ, ನಾನೀ ವ್ಯತಿರಿಕ್ತವಾಗಿ ಅದರ ಮಂಡಿನವನ್ನು ಆರಿಸಿದ್ದೇನೆ" ಎಂದು ಶ್ರೀ ಮುನ್ಶಿಗಳಂದಿದ್ದಾರೆ. ಮುನ್ಶಿಗಳಂತಹ ಮೇಲ್ಮಟ್ಟದ ಜೀವನ ನಡಿಸುವವರು, ವಾರಕ್ಕೊಂದು ದಿನ ಮಾತ್ರವಲ್ಲ-ವಾರದ ಆರು ದಿನಗಳಲ್ಲಿ ಧಾನ್ಯಾಹಾರಗಳ ಬದಲಿಗೆ ಪೌಷ್ಟಿಕ ಹಣ್ಣು ಹಂಪಲು

(ಒನೇ ಪುಟ ನೋಡಿರಿ)



ಆಸ್ತಮ

ಎಂದೆಂದಿಗೂ

ಹಿಮ್ಮೆಟ್ಟುವುದು.

ಪುರೋಹಿತ ಶ್ವಾಸಹಾರೀ ಔಷಧಿಯು ಕಳದ ಇಪ್ಪತ್ತೈದು ವರುಷಗಳಿಂದಲೂ ನಾನಿತ ವೈದ್ಯರಿಂದ ಅಸ್ತಮಕ್ಕೆ ರಾಮಬಾಣವೆಂದು ಹೊಗಳಾಡುದು.

ಪುರೋಹಿತ ಶ್ವಾಸಹಾರೀ ಔಷಧಿಯು

3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್ ಸೀಸೆಗಳಲ್ಲಿ ರೂ. 3-8-0, ರೂ. 6/- ಮತ್ತು ರೂ. 10/- ಕಿಮ್ಮತ್ತುಗಳಲ್ಲಿ ಎಲ್ಲಾ ಪ್ರಸಿದ್ಧ ಕೆನುಸ್ಥರಲ್ಲಿಯೂ ಮತ್ತು ವಿಶೇಷ ಕಾರ್ಖಾನೆ

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ (ಎಮ್. ಎಸ್. ಎಮ್. ರೈಲ್ವೆ)

ಯಲ್ಲಿಯೂ ದೊರೆಯುತ್ತೆ

ಪುರೋಹಿತ ಶ್ವಾಸಹಾರೀ

DR. PUROHIT PHARMACY, KOLHAPUR

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.,

(Established: 1934)

Chair man: Sri. M. C. T. M. Chidambaram Chattiyar

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
B. No. 142 MADRAS.

NOTICE.

ಉಡ್ಪಿ ಡಿ ಮು. ಕೋರ್ಟಿನಲ್ಲಿ

O. P. No 21 of 1950.

(1) ಶೇಷಿ-S. C. ಪುತ್ತನರ ವಿಧವೆ.

(2) ಅಕ್ಕನ (3) ಕಮಲ S. C. ಪುತ್ತನರು ಮಕ್ಕಳು. —ಅರ್ಜದಾರರು.

ಉಡ್ಪಿ ತಾಲೂಕು, ಪಡುಗ್ರಾಮದವರಲ್ಲರು ವಕರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಅರ್ಜಿ ನ್ಯಾಯಾಧಿಕರಣದ 1ನೇ ಅರ್ಜದಾರಳಾಗಿರುವ ಗಂಡ ವ 2, 3ನೇ ಅರ್ಜದಾರರ ತಂದೆ ಮಾಲಿ ಮೃತಪಟ್ಟ S.C ಪುತ್ತನರಿಗೆ East & West Insurance Co Ltd. Appollo Street, Fort Bombay, ಇದರ ನಂಬ್ರ 45775ನೇ ಪೋಲಿಸಿಯು ಬಾಬ್ತು ಬಂಬೇಕಾದ ಅವೇಜು ಮತ್ತು The Vijaya Bank Ltd (Kaup Branch) ನಂದ F. D. No. 47/48-49, ಮತ್ತು F. D. No. 70/48-49ನೇ ರಶೀದಿಗಳ ಬಾಬ್ತು ಬರತಕ್ಕ ಅವೇಜು ಸಹಾ ಸ್ವಲು ಪಡಿಯುವರೇ ಅರ್ಜದಾರರ ಬಗ್ಗೆ 1ನೇ ಅರ್ಜದಾರರು ಸರಿಗೆ Succesion Certificate ಕೊಡ ಹೇಳಿ ಅರ್ಜದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 26-7-50ಕ್ಕೆ ಇಟ್ಟುಕೊಳ್ಳವದರಿಂದ ಈ ಕುರಿತು ಆಕ್ಷೇಪ ಹೇಳತಕ್ಕವ ೨ನೆದ್ರಿ ದಿನ್ನ ಪೂರ್ವಾಹ್ನ ಘಂಟೆ 11ಕ್ಕೆ ತಪ್ಪದೆ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪಿಸಿಕೊಳ್ಳತಕ್ಕದ್ದು.

K. J. Ballal,
Vakil for Petitioners.

ಉಡ್ಪಿ, ತಾರೀಕು 4-7-50

THE
Canara Banking Corporation Ltd.
(Incorporated in India)
Estd: 1906
Head Office : **UDIPI, (S. I)**

Capital Authorised .... Rs. 25,00,000
Capital Issued, Subscribed & Paid up .... Rs. 20,00,000
Reserves .... Rs. 9,44,765

ಗುರುವಾರ ಉಡುಪಿ ೧೩-೭ ೧೯೫೦

ಸಮತಾವಾದಿ ಪಕ್ಷ

ಸಮತಾವಾದಿ ಪಕ್ಷದ ಎಂಟನೇ ವಾರ್ಷಿಕ ಸಮ್ಮೇಳನವು ಇದೇ ತಾ. 9 ಮತ್ತು 10ರಲ್ಲಿ ಮದ್ರಾಸಿನಲ್ಲಿ ಜರಗಿದೆ. ಕಳೆದ ವಾರ ಪ್ರಕಟವಾಗಿದ್ದ, ಈ ಪಕ್ಷದ ಎರಡು ವಾದಿಗಳಲ್ಲಿ ನಮ್ಮೂರಿನವರೂ ಆದ ಶ್ರೀಯುತ ಗುರಿ, ಘೋರಣೆ, ಕಾರ್ಯಕ್ರಮಗಳಿಗೆ ಸಂಬಂಧ ಪಟ್ಟ ನಿರ್ಣಯಗಳು ಸಮ್ಮೇಳನದಲ್ಲಾಗಿವೆ. ನಾವು ಈ ಮೊದಲೇ ಅಭಿಪ್ರಾಯ ಪಟ್ಟಿರುವಂತೆ ಸಮತಾವಾದಿ ಪಕ್ಷ ಎಟ್ಟುಕೊಂಡಿರುವ ನೋಟ ಮತ್ತು ಇಡಲು ನಿರ್ಧೈಸಿರುವ ಹೆಜ್ಜೆಗಳ ಕುರಿತು ಪ್ರಗತಿಶೀಲರು ಅಸ್ಪಷ್ಟತೆಯಿಲ್ಲ; ಆ ಪುಗಳಲ್ಲಿ ಹೆಚ್ಚು ಅಧಿಸಂ ಕಡಿಮೆ ಮಾಡಬೇಕೆಂದು ಸೂಚನೆಗಳಾಗಲಿ ಅಂಶವಾಗಲಿ ದೂ ತೋರುವದಿಲ್ಲ. ಆದರೆ ಆ ಪಕ್ಷದ ಸ್ಥಿತಿ ಗತಿ ಮತ್ತು ಕಾಲಗತಿಯನ್ನು ಗವನಿಸುವಾಗ ನನಗೆ ಸಮತಾವಾದಿ ಬಂಧುಗಳು, ಅಕಾಶದತ್ತ ನೋಡಿಕೊಂಡೇ ಹೆಜ್ಜೆಯಿಡುವ ಒಂದಿಲೆಗೆ, ಕಾಲಡಿ ನುಂಡಿ ನಡೆಯುವುದನ್ನು ಹೆಚ್ಚು ಹೆಚ್ಚಾಗಿ ಅಭ್ಯಾಸಿಸುವುದು ಅಗತ್ಯವೆಂಬುದನ್ನು ಒತ್ತಿ ಹೇಳಬೇಕಾಗುತ್ತದೆ. ನಿಜಕ್ಕೂ ಕಾರ್ಯ ರಂಗದತ್ತ ಸಾಗಿಪ್ಪು ಲಕ್ಷಣ ಕೊಡುತ್ತಿದ್ದರೆ, ಸಮತಾವಾದಿ ಪಕ್ಷದ ಸ್ಥಾನ ಮಾನವು ಇಪ್ಪರಲ್ಲೇ ಸಹಜವಾಗಿ ಮೇಲಂತಸ್ತಿಗೇರುತಿತ್ತು. ಜನತೆಗೆ ಸು ಪರಿಚಿತವಿರುವ ಕಾಂಗ್ರೆಸ್ ಧ್ಯೇಯ, ಘೋ ಣೆ, ಕಾರ್ಯಕ್ರಮಗಳಿಗಿಂತ ಪೂರ್ಣ ಭಿನ್ನವಾದುದಾವುದೂ ಸಮತಾವಾದಿ ಪಕ್ಷದೊಡನಿಲ್ಲ; 'ಇದೆ' ಎಂಬ ವಾದವು ಸಮತಾವಾದಿಗಳದಿರಬಹುದಾದರೂ ಜನ ಸಾಮಾನ್ಯರು ಸುಲಭದಲ್ಲಿ ಅರ್ಥ ಮಾಡಿಕೊಳ್ಳಲಾಗದ ವ್ಯತ್ಯಾಸವಂತೂ ಅವರಿಂದಲೇ ನಿಜಕ್ಕೂ ಇಲ್ಲ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅನಿರ್ಬಂಧಿತ ಜನತಾ ಸಂಘಟನ ಸಮತ್ವ ಪ್ರಚಾರಾವಕಾಶವಿದ್ದ ಏಕಮಾತ್ರ ರಾಜಕೀಯ ಪಕ್ಷ ವೆಂದರೆ ಕಾಂಗ್ರೆಸಿನ ನಂತರ ಸಮತಾವಾದಿ ಪಕ್ಷವೇ ಆದರೂ ಈ ಸುಸಂದರ್ಭದ ಪೂರ್ಣ ಉಪಯೋಗವನ್ನು ಸಮತಾವಾದಿ ಳ ವ್ಯಾಪಕಗೊಂಡಿಲ್ಲವೆನ್ನಬಹುದು. ತಮ್ಮ ಸಂಕಲ್ಪವಾಗಿರುವ ಭವ್ಯ ಕಟ್ಟಡಕ್ಕೆ ಅಸ್ತಿವಾರ ಹಾಕುವ ಶ್ರಮ ಪಡುವ ಬದಲಿಗೆ, ರವ್ಯ ಗಾಳಿಗೋಪುರ ರಾಕಾರದಿಂದ ಅದನ್ನು ಕಾಣುವುದರಲ್ಲಿ ತೃಪ್ತಿಪಡುವ ಸ್ವಭಾವನೇ ಇದಕ್ಕೆ ಕಾರಣ. 'ಸಮತಾವಾದಿ ರಾಜ್ಯ', 'ಸಮತಾವಾದಿ ಸಮಾಜ', 'ಕ್ರಾಂತಿಕಾರಿ ಸಮತಾವಾದ' 'ಪ್ರಜಾಸತ್ತಾ ಸಮತಾವಾದ' ಮುಂತಾದ ತತ್ವಗಳ ಪರನೆ ಮತ್ತವುಗಳ ಸಂಬಂಧದ ಸಂಕ್ಷಿಪ್ತ ವಿಚಾರ ವಿಮರ್ಶೆಗಳನ್ನು ತನ್ಮೊಗೆ ನಡೆಸತ್ತಿರುವಷ್ಟು ಒಲವಾಗಿ ಸಮತಾವಾದಿ ನಾಯಕರು ಜನತಾರಂಗದಲ್ಲಿ ಅವುಗಳಲ್ಲಾವುದನ್ನೂ ಪಡಿಮೂಡಿಸಲು ಪ್ರಯತ್ನಿಸುತ್ತಿಲ್ಲ. ಕ್ರಾಂತಿ ತತ್ವವೈಫಲ್ಯದಿಂದ ಶ್ರೀಮತಿ ಅರುಣ ಅಸಫ್ ಅಲಿ, ಮಾನವಿಯ ಲಕ್ಷಣಗಳ ಮೇಲಿನ ನಿಷ್ಠೆಯಿಂದ ಶ್ರೀ ಪಟ್ವರ್ಧನರಂತಹ ನಾಯಕರೇ ಈ ಪಕ್ಷದಿಂದ ದೂರವಾಗಲು ಬಗೆದಿರುವಂತ ಹೃತ್ತಾತ್ವಿಕ ಘರ್ಷಣೆಗಳು, ಇವರೆಲ್ಲರೂ ಈಗಲೂ ನೆಲ ಬಿಟ್ಟೇ ಇದ್ದಾರೆಂಬುದರ ನಿದರ್ಶನಗಳು ಸ್ವಚ್ಛ ಹಾಗೂ ಸ್ವಷ್ಟವಾದ ಗುರಿ ಮತ್ತು ಮನೋವೃತ್ತಿಯ ಒಂದು ರಾಜಕೀಯ ಪಕ್ಷಕ್ಕಿರಬೇಕಾದುದೇನೋ ಜಗತ್ಯ ಆದರೆ ಇಂತಹ ನೋಟ ಮತ್ತು ಭಾವನೆ ಮಾತ್ರ ಹೊರತು, ಅದಕ್ಕನುಗುಣವಾದ ಕಾರ್ಯವೇನೂ ಇಲ್ಲದೆ ಹೋದರೆ, ಅಂಧವರನ್ನೂ ಕವಿ, ಅಧ್ಯಾತ್ಮವಾದಿ, ಅಥವಾ ಪಂಡಿತ ಪಂಗ್ತಿಗೆ ಸೇರಿಸಬೇಕಾಗುತ್ತದೆ ಹೊರತು ರಾಜಕೀಯ ಕಾರ್ಯಕರ್ತರೆಂದು ಗಣಿಸಲಾಗುವದಿಲ್ಲ. ಕೇವಲ ತಾತ್ವಿಕನಷ್ಟೇ ಕಟ್ಟುಬೀಳುವ ಸ್ವತಂತ್ರವಿಡಿತೆಗಾಗಿ ಇರಲಿ—ಜನತಾ ಕ್ರಾಂತಿಗೆ ಪ್ರೇರಣೆ ಮತ್ತು ಬಂಬಲಕೊಡಬಲ್ಲ ಪ್ರಜಾಸತ್ತಾ ಸಮತಾವಾದಿ ಪಡಳಿತಕ್ಕಾಗಿಯೇ ಇರಲಿ—ಭಾರತದ ಸಮತಾವಾದಿ ಪಕ್ಷವು ಜನಮತವನ್ನು ಒಲಿಸಿ, ಬಹುಮತ ಪಡೆದು ಅಧಿಕಾರಕ್ಕೆ ಬರಬೇಕಾದುದು, ಮತ್ತು ಜನತಾ ಸಂಘಟನೆ ಮಾಡಬೇಕಾದುದು ಅನಿವಾರ್ಯ. ಸಮತಾವಾದಿ ನಾಯಕರು ಸಾಮಾನ್ಯರಿಗೆ ಅರಿವಾಗದ ತಾತ್ವಿಕ ಚರ್ಚೆಗಳನ್ನು ತನ್ಮೊಗೆ ನಡೆಸುತ್ತಾ ಹೋಗುವುದರಿಂದ ಕಾರ್ಯಪನ್ನೆಂದಿಗೂ ಸಾಧಿಸಲಾರರು. ತಮ್ಮ ಧ್ಯೇಯ, ಘೋರಣೆಗಳನ್ನು ಖಚಿತಪಡಿಸಿಕೊಂಡು, ಜನತೆಗೂ ಅವುಗಳನ್ನು ಮಂದಟ್ಟುಪಡಿಸುವ ಮೂಲಕ ಸ್ವಂತ ವ. ನೋಬಲವನ್ನು ಜನತಾ ಬೌದ್ಧಿಕ ಶಿಕ್ಷಣವೆರಡನ್ನೂ ಸಾಧಿಸುವ

ಸಮತಾವಾದಿಗಳಿಗಾದ ನಾಯಕ ನಷ್ಟ

ವ್ಯಕ್ತಿಯಲ್ಲ ಜನತೆ—ಎಂಬುದೇನೋ ನ್ಯಾಯ. ಆದರೂ ಯಾವುದೇ ಜನತೆ, ಪಕ್ಷ ಅಥವಾ ರಾಷ್ಟ್ರಕ್ಕೆ ನಾಯಕರ ವ್ಯಕ್ತಿಗತ ಯೋಗ್ಯತೆಗಳೂ ಆಧಾರವಾಗಿರುತ್ತವೆ. ರಾಷ್ಟ್ರಪಿತ ಗಾಂಧಿಜೀ ಮತ್ತು ಇಂದಿನ ನಾಯಕರಾದ ನೆಹರೂ, ಪಠೇಲರೇ ಇದಕ್ಕೆ ನಿದರ್ಶನ.

ಜಗತ್ತಿನಲ್ಲೇ ಜನತೆಯು ನಿತ್ಯ ಜೀವನದಲ್ಲಿ ಸ್ವತ್ಯಕ್ಷಾನುಭವಕ್ಕೆ ಬರುವ ಕಾರ್ಯ ಮತ್ತು ಸಂಘಟನೆಯನ್ನೂ ಅವರು ಮಾಡಬೇಕಾಗಿದೆ. ಚುನಾವಣೆಯಲ್ಲಿ ಗೆಲ್ಲುವುದೊಂದೇ ಸಮತಾವಾದಿಗಳ ಧ್ಯೇಯವಲ್ಲವಾದರೂ, ಅದಕ್ಕೂ ಅಡೆಯ ಸಂಘಟ್ಟನೆಗಳಿಗೆ ಹೋಗಬೇಕಾದರೂ ಕೂಡಾ ಚುನಾವಣಾವಿಜಯದ ಗಡಿ ದಾಟಬೇಕಾದುದು ಅಗತ್ಯ; ತಮ್ಮ ಉಚ್ಚಾದರ್ಶಗಳ ಗುರಿ ಮುಟ್ಟಲು ಇರುವ ಹಾದಿ ಇದೊಂದೇ ಜಿಲ್ಲವೆನ್ನುವ ಸಮತಾವಾದಿಗಳಂತೂ ಇರಬಹುದು; ಆದರೆ ಭಾರತದ ಸದ್ಯಸ್ಥಿತಿಯಲ್ಲಿ ಇದಕ್ಕಿಂತ ಸುಗಮವಾದ ಬೇರೊಂದು ಹಾದಿಯಿಲ್ಲವೆಂಬುದನ್ನು ಎಲ್ಲರೂ ಒಪ್ಪಲೇಬೇಕು. ಇಂದ ಮೇಲೆ ಭಾವೀ ಚುನಾವಣೆಯತ್ತ ದೃಷ್ಟಿಯಿಟ್ಟಾದರೂ ಸಮತಾವಾದಿಗಳು ಜನಮತ ತರಬೇತಿ ಮತ್ತು ಜನತಾ ಸಂಘಟನೆಗಿಳಿಯಲಾರರೆ? ಜನತಾರಾಜ್ಯ ಭಾರತ ನಾಗರಿಕರನ್ನಿ ಸುವಯೋಗ್ಯತೆಗಳು ಜನಸಾಮಾನ್ಯರಲ್ಲಿ ಇನ್ನೂ ಮೂಡದಿರುವದುಸ್ಥಿತಿ—ಕಾಂಗ್ರೆಸ್ ಕೊಟ್ಟಿದ್ದ ದಾಪ, ಭರವಸೆ ಮತ್ತು ಹುಟ್ಟಿಸಿದ್ದ ಆಶೆ, ನಿರೀಕ್ಷೆಗಳಲ್ಲಿ ಹೆಚ್ಚಿನವು ಫಲಿಸದದಿನೆಯಿಂದ, ಜನಸಾಮಾನ್ಯರಲ್ಲಿ ಹುಟ್ಟಿರುವ ಅತೃಪ್ತಿ—ಮಹಾ ಚುನಾವಣೆಗೆ ಇನ್ನೂ ಉಳಿದಿರುವ ಅವಧಿ, ಇವೆಲ್ಲವುಗಳೂ ಸಮತಾವಾದಿಗಳ ಪ್ರಚಾರ ಮತ್ತು ಸ್ವಭಾವ ವರ್ಧನೆಗೆ ಅನುಕೂಲವಿವೆ. ಸಮತಾವಾದಿಗಳು ಇಂತಹ ಸುಯೋಗವನ್ನು ಇನ್ನೂ ಕಳಕೊಳ್ಳುವರೇ ಕಾಂಗ್ರೆಸಿಗಿಂತ ತೀವ್ರಗಾಮಿ ಹೊರತು ಕಾಂಗ್ರೆಸಿನ ವಿರುದ್ಧಗಾಮಿಯಲ್ಲವಾದ್ದರಿಂದ ಸಮತಾವಾದಿ ಪಕ್ಷ ಚುನಾವಣೆಯಲ್ಲಿ ಗೆದ್ದು ಒಂದರೆ ದಿನಿಲು ಬೀಳುವವರು ಬಹಳ ಮಂದಿಯಿರಲಾರರು. ಪ್ರಶ್ನಾತೀತ ಬಹುಮತದ ಬಲದಿಂದ ಕಾಂಗ್ರೆಸ್ ಆಡಳಿತೆಯು ಕೆಲವೆಡಗಳಲ್ಲಿ ಮಂದ ಹೆಜ್ಜೆ, ತಪ್ಪು ಹೆಜ್ಜೆಗಳನ್ನಿಟ್ಟಿರುವುದು ಸ್ವಪ್ನವಿಲಾಸದಿಂದ ಮುಂದಿನ ಚುನಾವಣೆಯಲ್ಲಿ ಸಮತಾವಾದಿ ಪಕ್ಷವು ಸಶಕ್ತ ವಿರುದ್ಧ ಪಕ್ಷವಾಗಿ ಮೂಡಿ ಬರುವದಂತೂ ಸುವಜ್ಞಾರಿಗಳಿಂದಿಗೂ ಅನುಪೇಕ್ಷಿತ್ವವಲ್ಲ. ಮೊದಲನೇ ಮಟ್ಟದ್ದಲ್ಲವಾದರೆ, ಎರಡನೇ ವಿಧಾನದ ವಿಜಯವನ್ನಾ ಗಳಿಸಿದರೂ ಸಮತಾವಾದಿ ಪಕ್ಷವು ಪ್ರಗತಿ ಪಥದಲ್ಲಿ ದೊಡ್ಡ ಹೆಜ್ಜೆಯಿಟ್ಟಿಟ್ಟಂತಾಗುವದು. ಆ ಮೇಲಿನ ಕೆಲಸಕ್ಕಾಧಾರವಾಗುವದು. ಆದ್ದರಿಂದ, ಸಮತಾವಾದಿಗಳು ಕೇವಲ ಭಾವುಕರಂತೆ ವರ್ತಿಸದೆ, ಕಾರ್ಯಕ್ಷಕ್ತರಾಗಿ ಜನತೆಯ ನಡುವೆ ಕಂಡು ಬರಲಿ, ಎನ್ನುತ್ತೇವೆ.

ಭಾರತದ ಸಮತಾವಾದಿ ಪಕ್ಷವಂತೂ ಮುಖ್ಯತಃ ಕೆಲವೇ ಮಂದಿ ನಾಯಕರ ಯೋಗ್ಯತೆಯಿಂದಲೇ ಇಷ್ಟಾದರೂ ಪ್ರಕಾಶಕ್ಕೆ ಬಂದಿದೆ. ಉಜ್ವಲ ಪ್ರತಿಭೆ, ಪ್ರಗತಿಶೀಲತೆ, ಧೈರ್ಯ, ಸಾಹಸಗಳುಳ್ಳ ಬೆರಳೆಣಿಕೆಯ ಅಗ್ರಗಣ್ಯ ಕಾರ್ಯಕರ್ತರಿದ್ದ ದೆಸೆಯಿಂದಲೇ ಸಮತಾವಾದಿ ಪಕ್ಷವು ಗಣ್ಯ ಅಸ್ತಿತ್ವಗಳಿಸಿಕೊಳ್ಳಲು ಶಕ್ತವಾಗಿದೆ.

ಈ ಪಕ್ಷದ ನಾಯಕ ಪಂಗ್ತಿಯ ಗಣ್ಯ ಭಂಗವು ಇತ್ತೀಚೆಗೆ ಕುಸಿದು ಹೋದುದು ನಿಜಕ್ಕೂ ದೊಡ್ಡ ನಷ್ಟ. ಹೊಸತಾಗಿ ತುಂಬಿ ಬರುವ ವಿಶಾಲ ಸ್ಥಳವನ್ನು ಭಾಗ್ಯವು ಸಮತಾವಾದಿ ಪಕ್ಷಕ್ಕೆ ಒದಗಿಸಿದಾದರೂ, ಈಗ ತಾನೇ ಮೂರು ನಾಲ್ಕು ಮಂದಿ ನಾಯಕರ ಅಭಾವದಿಂದಾಗಿ ಖಾಲಿ ಬಿದ್ದಿರುವ ಸ್ಥಳಗಳು ಇನ್ನೂ ಎಷ್ಟೋ ತುಂಬುವದು ಅಸಂಭವ್ಯ.

ಮಹಾರಾಷ್ಟ್ರದ ಅದ್ವಿತೀಯ ಸಮತಾವಾದಿ ನಾಯಕ ಸಾನೆ ಗು.ರು.ಜೀ ಕಳೆದ ತಿಂಗಳಲ್ಲಿ ನಿಧನಗೊಂಡರು. ಗುರುಜೀಯ ಆದರ್ಶ ಜೀವನವು ಸಮತಾವಾದಿ ತತ್ವಗಳಿಗೆ ಸಮರ್ಪಿರಣೀಯತೆಯನ್ನು ದಂ ಕೆಸಿಕೊಡುವಲ್ಲಿ ಪ್ರತಿನಿಧಿ ಸ್ಥಾನವನ್ನಿ ರಂಜಿಸಿದ್ದಿತು. ಅಧ್ಯಯ್ಮಿಕತೆ, ದಯೆ, ಔದಾರ್ಯ, ಸಜ್ಜನಿಕೆ, ಧೈರ್ಯ ಮುಂತಾದ ಅಮೂಲ್ಯತೆಗಳಿಗೆ ಸಮತಾವಾದಿತ್ವವು ಆಶ್ರಯವಾಗಬಲ್ಲುದೆಂಬುದನ್ನು ಸಾನೆ ಗುರುಜೀ ತಿನ್ನ ಹೃತ್ಯೆಪ್ಪೆ ಜೀವನದಲ್ಲಿ ತೋರಿಸಿದ್ದರು. ಗಾಂಧಿತ್ವದ ಅಶ್ರಯದಲ್ಲಿ ತಮ್ಮ ಕಾರ್ಯಕಲಾಪಗಳನ್ನು ಮುಂದೊತ್ತಬೇಕೆಂಬ ಅಸಯಿಂದು ಸಮತಾವಂದಿಗಳಲ್ಲಾ ಮೂಡುವಂತಾಗಲು ಆ ವಿಧಾನವನ್ನು ಸ್ವತಃ ತನ್ನ ಜೀವನ ಪಾರ್ಗವಾಗಿ ಮಾಡಿಕೊಂಡಿದ್ದ ಸಾನೆ ಗುರುಜೀ ಇಲ್ಲದ ಹೋದುದು, ಸಮತಾವಾದಿ ಪಕ್ಷದ ಹ್ಯಾಮುಷ್ಮಿಕ ಉಜ್ಜೀವನವೇ ಕಳೆದುಹೋದಂತೆ!

ಕಾಮ್ರೇಡ್ ಮೆಹರಾಲಿಗಳು ಕಳೆದ ವಾರ ಬೊಂಬಾಯಿಯಲ್ಲಿ ಅವಸಾನ ಗೊಂಡರು. 'ಸಮತಾವಾದಿ ಪಕ್ಷದ ವ.ನಸ್ಸಾಕ್ಷಿ' ಯೆಂದು ಹಸರಾಗಿದ್ದ ಅತ್ಯಂತ ಪ್ರಭಾವಶಾಲೀ ನಾಯಕ ಇವರು. ಬೊಂಬಾಯಿ ಕೋರ್ಪರೇಶನಿನ ಮೇಯರ್ ಆಗಿದ್ದವರು; ಯುವಕ ಚಳವಳಿಗಳ ಪ್ರಚೋದಕರೂ ಮತ್ತು ನಾಯಕ ನಾಗಿದ್ದವರು. 'ಕ್ವಿಟ್ ಇಂಡಿಯಾ' ಚಳವಳಿಯ ಅಚೆಯು ಯೂಥ್. ಸಮತಾವಾದಿ ಪಕ್ಷದ ಮೂಲ ಸ್ಥಾಪಕರಲ್ಲೊಬ್ಬರು. ಅವರ ಅತ್ಯಾಶ್ಚರ್ಯ ಹಾಗೂ ನಿಸ್ವಾರ್ಥಂಕ ಜೀವನವು ಜೈಪ್ರಕಾಶರಂತೆ 'ಗಾಂಧಿಜೀಗೆರಿಡನೆಯದಾಗಿ ಸ್ಫೂರ್ತಿ ಕೊಡುತ್ತಾ ಚಿರಸ್ಮರಣೀಯ' ವಂದುದು. ಮದ್ರಾಸಿನಲ್ಲಿ ಈ ಬಾರಿ ನೆರೆದ ಸಮತಾವಾದಿ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದ ಮೆಹರಾಲಿಗಳು ಈ ಸಂಧಿಗ್ಧಾವಧಿಯಲ್ಲೇ ಹೋಟು ಹೋದುದುದಾವಂದ ಸಮತಾವಾದಿ ಪಕ್ಷದ ಒಂದು ಆಧಾರನೇ ತಪ್ಪಿ ಹೋಗಿತೆ.

ಶ್ರೀಮತಿ ಅರುಣ ಅಸಫ್‌ಅಲಿಗಳು ಸಮತಾವಾದಿ ಪಕ್ಷದ ಅಕಿ ವ್ಯಾಪಿತ ಕಾರ್ಯಕರ್ತರಲ್ಲೊಬ್ಬರು. 'ಕ್ವಿಟ್

ಇಂಡಿಯಾ' ಹೋಟಾಟದಲ್ಲಿ ಅನರುಷ್ಠಿಪ್ರದ ಶೀಸಿದ್ದ ಅಸಾಮಾನ್ಯ ಸಾಹಸಗಳು ಭಾರತೀಯರೆಲ್ಲರನ್ನೂ ಆಕರ್ಷಿಸಿದ್ದು ವೆ. ಕ್ರಾಂತಿ ಸ್ಫೂರ್ತಿ ಮತ್ತು ಛಿಟ್ಟತನ ತುಂಬಿರುವ ಮಹಿಳೆಯೀಕೆ. ಈಗ ಇವರು ಯುರೋಪು ಸಂಚಾರದಲ್ಲಿ ದ್ದಾರೆ. ಸವತಾವಾದಿ ಪಕ್ಷದ ಶಾಂತ, ದೃಢ ಧೋರಣೆಯ ಮೃದುತ್ವವು ತಮ್ಮ ಮುಂಚು ಧಾಳಿ ಧೋರಣೆಗೊಗ್ಗುವಡಿಲ್ಲ ವೆಂಬ ಕಾರಣದಿಂದ ಶ್ರೀಮತಿ ಅರುಣ ಪಕ್ಷ ತ್ಯಾಗ ಮಾಡಲಿಚ್ಛಿಸಿದಂತೆ ಕಾಣುತ್ತಿದೆ. ಹಾಗಾದಲ್ಲಿಹೋರಾಟ-ಮಧ್ಯದಲ್ಲೇ ತನ್ನ ಹೆಂಕ ಆಯುಧವು ಕೈಯಿಂದ ಜಾರಿ ಹೋದ ಸಿಸ್ಸಹಾಯಕತೆಯು ಸಮತಾವಾದಿ ಪಕ್ಷಕ್ಕೂ ದಗಿದಂತೆ!

ಶ್ರೀ. ಪಟ್ವರ್ಧನರು ಸಮತಾವಾದಿ ಪಕ್ಷದ ಸ್ಥಾಪಕರಲ್ಲೊಬ್ಬರು; ನೇಥಿವಿ ಮತ್ತು ಸಮರ್ಥ. ಪಕ್ಷವು ಸ್ವಚ್ಛೆ ದೃಷ್ಟಿ ಕೋನವನ್ನಿಟ್ಟುಕೊಳ್ಳಬೇಕು – ಎಂತಹ ಸಂದರ್ಭವೊದಿದರೂ ತತ್ವನಿಷ್ಠೆ ಬಿಡ ಬಾರದು, ಎಂಬ ಏಕಾಗ್ರತಕ ಬುದ್ಧಿಯ ವರು. ಸವ-ತಾವಾದಿ ಪಕ್ಷವೀಗ ಸಾಮಾ ಜಿಕ ಪುನರ್ನಿರ್ಮಾಣ ಮತ್ತು ತತ್ವಶಿ ದ್ಧತೆಗಿಂತ ಹೆಚ್ಚಿಗೆ, ರಾಜಕೀಯಾಧಿಕಾರ ಸಂಪಾದನೆಗೇ ನೇ ಕಟ್ಟು ಬಿದ್ದಿದೆ, ಎಂಬ ಕಾರಣದಿಂದ ಈ ಪಕ್ಷದ ಸಂಬಂಧವನ್ನೇ ಕಡಿದುಕೊಂಡಿದ್ದಾರೆ. ಶ್ರೀ ಜೈಪ್ರಕಾಶ ರೇ ಒಪ್ಪಿಕೊಂಡಂತೆ ಪಟ್ವರ್ಧನರ ಗೈರು ಹಾಜರಿಯಿಂದ ಸಮ.ತಾವಾದಿ ಪಕ್ಷವೊಂದು ಅಂದಾಜನ್ನಷ್ಟೇ ಕಟ್ಟಬಲ್ಲುದೆಂದೂ ಶ್ರೀ ಮುನ್ಸಿಗಳಂದಿದ್ದಾರೆ.

ಕೇಂದ್ರದ ಆಹಾರ ಮಂತ್ರಿಗಳು ಕೊಡುವ ಮತ್ತೊಂದು ಸಹಾಯವು ಮತ್ಸ್ಯ ರನ್ಯವಾದುದನ್ನಬೇಕು. ಫಿಲ್ಲಿಯಲ್ಲಿ 'ಪಾನಿವಾಲೆ ಮಹಾರಾಜ್' ಎಂದು ಜನ ರಂಜಿಸಿರುವ ಸನ್ಯಾಸಿಯೊಬ್ಬನಿದ್ದಾನೆ. ಈತನು ನಂಜಿನ ಅವತಾರವೆನ್ನಲಾಗುವಷ್ಟು ಮಹಾತ್ಮೆಯಿಂದ ನೀರಿರುವ ಸ್ಥಳವನ್ನು ಹೇಳಲಿಲ್ಲವಂತೆ. ಎಷ್ಟ ಕಿಣ್ವ ನೀರ ಬುಗ್ಗೆಯಿಲ್ಲವೆಂದು ಎಲ್ಲರೂ ಊಹಿಸಿದ್ದ ಸ್ಥಳ ದಲ್ಲಿ ಈತನು ನೀರನ್ನು ಕೋರಿಸಿಕೊಟ್ಟ ಪ್ರತ್ಯಕ್ಷಾನುಭವವಿದೆಯೆಂದು ಶ್ರೀ ಮುನ್ಸಿ ಗಳಂದಿದ್ದಾರೆ. ಮಣ್ಣ ಪದಂನ ಮೂಲ ಕ ಒಂಬೈಲು ಅಳದ ವರೆಗೂ ನೋ ಡಬಲ್ಲ ಯೋಗಿ ದೃಷ್ಟಿ ಈ ಮನುಷ್ಯನಿಗಿ ದಿಯಂತೆ. ಆತನೀಗ ಸರಕಾರೀ ಉಪಕಾ ರಣವಾಗಿದ್ದಾನೆ. ಪ್ರಕೃತ ಸೌಾಷ್ಟದ ಸಂಕಾರದ ಬೇಡಿಕೆಯಂತೆ ಅವನನ್ನು ಆ ತ್ತ ರವಾನಿಸಲಾಗಿದೆ. ವ.ದ್ರಾಸ್ ಸರ ಕಾರಕ್ಕೆ ಬೇಕಾದರೆ ಇಲ್ಲಗೂ ಕಳುಹಿ ಕೊಡಲಿದ್ದಾರೆ.ನೆಲದಡಿಯ ನೀರುಶೋಧ ನು ದೃಷ್ಟಿಯುಳ್ಳವರು ನಮ್ಮ ದೇಶದಲ್ಲಿ ಬಹಳ ವಿಂದಿ ಇರಬಹುದು; ಇಂಥವರ ಅಸಾಮಾನ್ಯ ಶಕ್ತಿಯ ಸ್ವಯೋಜನವನ್ನು ಈ ಕಾಲದಲ್ಲಿ ಪಡಕೊಳ್ಳುವದೂ ಸ್ವಭಾವ ವಿಕ. ಆದರೆ ಕೇಂದ್ರ ಸರಕಾರದ ಆಹಾ ರ ಮಂತ್ರಿಗಳಂಥವರು ಸಹಾಯ ಪಟ್ಟಯು ಇಂತಹ ಸಹಾಯಗಳನ್ನೂ ನೇರಿಸಿಕೊ ಳ್ಳುವಷ್ಟು ಸಂಕೋಚ ಸ್ವರೂಪದ್ದಿರುವು ದು ನಿಜಕ್ಕೂ ಆಶ್ಚರ್ಯಕರ!

ಅಂತೂ, ನಮ್ಮ ಇಂದಿನ ಸರ್ವ ಪೃಥ್ವಿ ಮ ಪ್ರಶ್ನೆಗಳಾಗಿರುವ ಆಹಾರಾಭಾವ ನಿವಾರಣೆ, ಆಹಾರ ಸ್ವಾವಲಂಬನೆಗಳ ಮೆಟ್ಟಿಗೂ ಅಗತ್ಯವುಳ್ಳ ಕಾರ್ಯಗಳಿಗಿಂತ ಹೆಚ್ಚಾಗಿ ಅಧಿಕ ಪ್ರಸಂಗಗಳೇ ಕಂಡು ಬರುತಿವೆ! ———

(ಜನೇ ಪುಟದಿಂದ ಮುಂದುವರಿದುದು)

ನಾರಾಯಣ, ರಾಮಮನೋಹರ ಲೋಹಿಯಾ, ಅಶೋಕ ಮೆಹತಾರಂತಹ ಒಂದು ಕೈ ಬೆರಳೆಣಿಕೆಯ ಧುರೀಣರಷ್ಟೇ ಈಗ ಉಳಿದು ಕಂಡುಬರುತಿದ್ದಾರೆ.

———

ಪ್ರಕಟಣೆ

ತಾ. 6-7-50ನೆ ದಿನದ ನವಯುಗ ಪತ್ರಿಕೆಯಲ್ಲಿ ಬಿಲ್ಲವರ ಸೇವಾ ಸಂಘದ ಪ್ರಕಟಣೆಯಂತೆ ತೋರುವ ಪತಾಯಿತಿ ಬಾಬಿನಲ್ಲಿ ಸದ್ರಿ ಪ್ರಕಟಣೆಯಲ್ಲಿ ತೋರುವ ಶುದ್ಧೀಕರಣ ವೆಂಬ ವಿಷಯವು ಸಂಘದ ಉದ್ದೇಶಗಳಿಗೆ ಒಳಪಟ್ಟಿದ್ದಲ್ಲವಾದ್ದರಿಂದ ಸದ್ರಿ ವಿಚಾರದಲ್ಲಿ ತೀರ್ಮಾನಿಸುವುದು ಸಂಘದ ಅಧಿಕಾರಕ್ಕೆ ಮಿಕ್ಕಿದ್ದೆಂದೂ ಹ್ಯಾಗಿದ್ದಾಗ್ಯೂ ಆ ಬಾಬಿನಲ್ಲಿ ತೀರ್ಮಾನಿಸಲು ವಿಶೇಷ ಸಭೆ ನೇರ ಬೇಕೆಂತೂ ತಾ.2-7-50ರಲ್ಲು ನಡೆದದ್ದಂತ ಹೇಳುವ ಸಭೆಗೆ ಆ ವಿಚಾರದಲ್ಲಿ ತೀರ್ಮಾ ನಿಸಲು ಅಧಿಕಾರವಿಂಲ್ಲವೆಂತೂ ಆದು ultra vires ಎಂತೂ ವಗೈರೆ ಕಾನೂನು ಸದ್ರಿ ಸಂಘದ ಸುಮಾರು 70 ಜನ ಸದಸ್ಯರು ದಸ್ಕತು ಬಾಕಿ ತಾ- 7-7 50ಲ್ಲಾ ಸಂಘದ ಕಾರ್ಯದರ್ಶಿಗಳ ಪರ ಆ ದಿವ್ಸ ಅಪರಾಹ್ನ ಗಂಟೆ ಒಂದರ ಮುಂಚಿತವಾಗಿಯೇ ಒಂದು ಅರ್ಜಿ ಕೊಟ್ಟಲ್ಲಿ ಅದನ್ನು ಅವರು ತೆಗೆದು ಕೊಂಡಿದ್ದಾರೆ. ಅದರೆ ಸದ್ರಿ ತಾ. 7-7-50 ನೆ ದಿವ್ಸ ಸಂಘದ ಭಜನಾ ಮಂದಿರದಲ್ಲಿ ಸೇರಿದ್ದೆಂಬ ಸಭೆಯಲ್ಲಿ ನೀತು ಮತ್ತು ನರ್ತ ಎಂಬವರನ್ನು ಶುದ್ಧೀಕರಣ ಮಾಡಿರುತ್ತ ದಾಗಿ ಕಾರ್ಯದರ್ಶಿ ನ ಅಧ್ಯಕ್ಷರು ಹೇಳಿ ಕೊಂಡು ಬಂದಾಗ್ಗೆ. ಹಾಗೆ ಶುದ್ಧೀಕರಣ ಮಾಡಿದ್ದಿದ್ದರೆ ಆದು ಸಿಂಧಿಗಾತಕ್ಕದ್ದಲ್ಲ, ನ ಆ ದಿವ್ಸ ಸೇರಿದ್ದೆಂತ ಹೇಳುವ ಸಭೆಯು ಅಧಿಕಾರಕ್ಕೆ ಮಿಕ್ಕಿದ್ದು ಪುತ್ತು ತಾ. 2-7-50ನೆ ದಿವ್ಸ ನಡೆದದ್ದೆಂತ ಹೇಳುವ ಸಭೆ ಗೆನೆರೆ ಗ್ರಾಮದ್ಯಮಾಡನಿಂದ ಬಾ೦ಬ್ಯ,ಬನ್ನಂಜೆ, ಕೊಡಂಕೂರು, ಅಂಬಲಪಾಡಿ, ಕಿದಿಯೂರು, ಕಪ್ಪೆಟ್ಟು, ಬಿಟ್ಟಾಡಿ, ನಿಟ್ಟೂರು, ಬುಜ್ಜಾರು, ಪುತ್ತೂರು ವಗೈರೆ ಊರುಗಳ ಗುಂಪಾರರು ಸಹ ಹಾಜರಿರಲಿಲ್ಲ.

P. Aithappa, ಸುತ್ತೂರು ಚಿನ್ನಸ್ವಾ
ಪೂಜಾರಿವರ್ಗ—ಪುತ್ತೂರು, ಉಡುಪಿ.

ಹಿಂದೂಕೋಡು ಮಸೂದೆ—
ಅಳಿಯಸಂತಾನಿಗರು.

ವಿಜ್ಞಾಪನೆ

ಭಾರತದ ಪಾರ್ಲಿಮೆಂಟು ಹಿಂದೂ ಕೋಡು ಕರಡನ್ನು ಚರ್ಚೆಗೆತ್ತಿ ಕೊಳ್ಳುವದು ಸಂಭವನೀಯ. ಹಿಂದೂಕೋಡು ಎಲ್ಲಾ ಹಿಂದುಗಳಿಗೂ ಲಗಾವಾಗಬೇಕೆಂದೇ ಈಗ ಸಸ್ತುತ ನಿರ್ಧರಿಸಲ್ಪಟ್ಟಿದೆ. ಮರುಮಕ್ಕತ್ತಾಯಂ ಮತ್ತು ಅಳಿಯಸಂತಾನ ಕಾನೂನುಗಳಿಗೊಳಪಟ್ಟಿರುವ ಜನರನ್ನು ಈ ಮಸೂದೆಯಿಂದ ಹೊರತು ಪಡಿಸುವ ಪ್ರಯತ್ನಗಳು ರೂಪುಗೊಳ್ಳದಿವೆ. ಹೀಗಾಗಿ ಸಾರ್ವತ್ರಿಕ ಹಿಂದೂ ಕೋಡಿನ ಒಳಗೇನೇ ಅಳಿಯ ಸಂತಾನ ಪದ್ಧತಿಯನ್ನೂ ಸಮೂಲೇಶಗೊಳಿಸುವುದು ಹಿತಕರವೇ ಎಂಬ ಸಂಬಂಧದ ಹಾದಿ, ದಂಡಿಕೆಗಳೆಲ್ಲವನ್ನೂ ನಾವೀಗ ಯೋಚಿಸ ಬೇಕಾಗಿದೆ. ಇದೇ ಉದ್ದೇಶದಿಂದ ಮದ್ರಾಸ್, ತಿರುವಾಂಕೂರು ಮತ್ತು ಕೊಚ್ಚಿ ಸರಕಾರಗಳ ಕಾನೂನು ಅಧಿಕಾರಿಗಳ ಸಮ್ಮೇಳನವೊಂದು ಇತ್ತೀಚೆಗೆ ತ್ರಿವೇಂದ್ರಮಿನಲ್ಲಿ ನೆರೆದಿದ್ದಿತು. ಸಾರ್ವತ್ರಿಕ ಹಿಂದೂ ಕೋಡಿಗೆ ಕೆಲವೊಂದು ತಿದ್ದುಪಡಿಗಳನ್ನು ತ್ರಿವೇಂದ್ರಮ್ ಸಮ್ಮೇಳನವು ಸೂಚಿಸಿದೆ. ಆದರೆ, ಅಳಿಯ ಸಂತಾನಿಗರಿಗೆ ಸಂಬಂಧಪಡುವ ಪಟ್ಟಿಗೆ ಅನ್ವಿ ಪಂಥಾಹ್ವರೆ ಮತ್ತು ವಾರಿಸ್ವಾಧಿಕೆಯ ಕುರಿತು ಯಾವ ನಿಯಮಗಳನ್ನೂ ಅವರೀವರೆಗೆ ತಯಾರಿಸಿಲ್ಲ ಸ್ಥಳೀಯ ಜನರ ಅಭಿಪ್ರಾಯಗಳನ್ನು ಕೇಳಿಕೊಂಡೇ ಆಗತ್ಯವುಳ್ಳ ವಿಧಾನಗಳನ್ನು ರಚಿಸಿಕೊಳ್ಳುವುದಕ್ಕಾಗಿ ಮದ್ರಾಸ್ ಸರಕಾರದ ಪ್ರತಿನಿಧಿಗಳು ಈ ಜಿಲ್ಲೆಗೆ ಭೇಟಿ ಕೊಡಲಿದ್ದಾರೆ. ಅಂತಹ ಕಾರ್ಯಕ್ರಮವೊಂದು ಕ್ಷೇತ್ರವನ್ನು ಮುಂದಾಗಿ ತಯಾರಿಸುವ ಉದ್ದೇಶದಿಂದ, ತಿದ್ದುಪಡಿಗಳ ಕರಡನ್ನು ಜಿಲ್ಲೆಯ ಬೇರೆಬೇರೆ ನಕಿಲ ಸಂಘಗಳಿಗೂ ಪ್ರತಿ ತಾಲೂಕಿನ ಕೆಲ ಮಂದಿ ಮಹನೀಯರಿಗೂ ನಾನು ರವಾನಿಸಿದ್ದೇನೆ. ಮತ್ತು ತಂತಮ್ಮ ತಾಲೂಕಿನ ಪ್ರತಿನಿಧಿಗಳ ಸಭೆ ಕರೆದು, ಅಲ್ಲಿಯ ಸೂಚನೆಗಳನ್ನು ಅದಷ್ಟು ಬೇಗನೇ ನನಗೆ ಕಳುಹಿಸಿಕೊಡಬೇಕೆಂದು ಅವರನ್ನು ವಿಜ್ಞಾಪಿಸಿಕೊಂಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳು ಕೆಲವೇ ದಿನಗಳೊಳಗೆ ಕೈ ಸೇರುವಹಾಗೆ ನೀರೀಕ್ಷಿಯಲ್ಲಿದ್ದೇನೆ.

ಅಳಿಯ ಸಂತಾನ ಕಾನೂನಾಗಿಗೊಳಪಟ್ಟವರೆಲ್ಲರ ಒಂದು ಸಮ್ಮೇಳನವನ್ನು ಇದೇ ತಾ. 20-7-1950ನೇ ಆದಾರಾಹ್ನ 4ಘಂಟೆಗೆ ಮಂಗಳೂರಿನ ಯಸ್. ಆರ್. ಎಸ್. ಹೋಟಿಲಿನಲ್ಲಿ ಕರೆಯಬೇಕೆಂದು ನಿರ್ಣಯಿಸಲ್ಪಟ್ಟಿದೆ. ಈ ಕುರಿತು ಆಸಕ್ತರಿಯರಾಗಿರುವವರೆಲ್ಲರೂ ಈ ಸಭೆಗೆ ಹಾಜರಾಗಬೇಕೆಂದು ವಿಜ್ಞಾಪನೆ. ಪ್ರತ್ಯೇಕವಾಗಿ ಆಮಂತ್ರಣವನ್ನು ಕಳುಹಿಸಲು ಅಸಾಧ್ಯವಾಗಿರುವುದರಿಂದ ಹಾಗೆಲ್ಲರೂ ಈ ಜಾಹೀರಾತಿನ್ನಿಯನ್ನೇ ಆಮಂತ್ರಣವೆಂದು ಗಣಿಸಿಕೊಳ್ಳಬೇಕೆಂದು ವಿನಂತಿ.

ಮದ್ರಾಸ್ ಸರಕಾರದ ಮಾನ್ಯ ಕಾನೂ ನುಮಂತ್ರಿ, ಮಾನ್ಯ ಟೇಶಾಯ ಮಂತ್ರಿ, ಸಿ ಯೋಜಿತ ಎಡ್ವೊಕೇಟ್ ಜನರಲ್ ಮತ್ತು ಕಾನೂನು ಕಾರ್ಯದರ್ಶಿಗಳು ಇದೇ ತಿಂಗಳ ತಾ. 22ರಲ್ಲಿ ಆಥವಾ ಆ ಸುಮಾರಿಗೆ ನಮ್ಮ ಜಿಲ್ಲೆಗೆಆಗಮಿಸಬಹುದೆಂದು ನನಗೆವಾರ್ತೆಯಿದೆ. ಆದ್ದರಿಂದ ಅವರು ಬರುವುದಕ್ಕೆ ಮುಂಚಿತವಾಗಿ ಸಮ್ಮೇಳನವನ್ನು ಸೇರಿಸುವದು ಅಗತ್ಯವೆನ್ನಿಸಿದೆ. ದಯವಿಟ್ಟು ಆ ಸಭೆಗೆ ಚಿತ್ತೈಸಿ ಸದ್ರಿ ವಿಷಯದ ಕುರಿತು ತಮ್ಮ ಅಮೂಲ್ಯಾಭಿಪ್ರಾಯಗಳನ್ನು ಕೊಡಬೇಕಾಗಿ ವಿನಂತಿ.

ಕೆ. ಎಸ್. ಹೆಗ್ಡೆ,
ಕಾರ್ಯದರ್ಶಿ,
ದ. ಕ. ಒಂಟರ ಯಾನೆ ನಾಡವರ ಸಂಘ.
ಮಂಗಳೂರು 11ನೇ ಜುಲಾಯಿ 1950.

———

ಉಡುಪಿ

ಮುನಿಸಿಪಲ್ ಸಭೆಯು ಇದೇ ತಾ. 8ರಲ್ಲು ಚೆಯರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ ಗತ ವರುಷದ ಆಡಳಿತ ಜರದಿ ಸ್ಥೀಕರಿಸುವ ಕಾಲದಲ್ಲಿ ಕಮಿಶನರ್ ಮೆನೇಜರ್, ಶಿಬಂಧಿಯ ಸಹಕಾರವನ್ನು ಅಭಿನಂದಿಸುವ ನಿರ್ಣಯವಾಯಿತು. ಬಾಲಿ ಜಾಗದ ಟೇಕ್ಸ್ ನಸೂಲಿ ಬಾಕಿಯಾದುದರ ಬಗ್ಗೆ ತುಂಬಾ ಚರ್ಚೆ ನಡೆದು ಅದರ ಕಾರಣ ಗಳನ್ನು ಪರಿಶೀಲಿಸುವರೆ ಒಂದು ಕಮಿಟಿಯ ನೇಮಕವಾಯಿತು. ಶ್ರೀ ಎ. ನಂಜುಂ ಡಾಧರಾಯರು ಮಾತ್ರ ಭಾಗವಹಿಸದೆ ತನ್ನ ಬೇಸರವನ್ನು ಪ್ರದರ್ಶಿಸಿದರು. ಸೌತ್ ಗಲ್ರ್ಸ್ ಮತ್ತು ನೋರ್ಥ್ ಮುನಿಸಿಪಲ್ ಶಾಲೆಗಳಿಗೆ ಒಬ್ಬೊಬ್ಬ ಉಪಾಧ್ಯಾಯರ ಇನ ಮುಂ ನೆಮ್ಕ್ಷನ್ ಮಾಡಲಾಯಿತು. ನಗರ ಕ್ಷೇತ್ರದ ಹ್ಯಾವೇ ರಸ್ತೆಗಳಿಗೆ ಎರಡು ಮೂರು ವರುಷಗಳೊಳಗಾಗಿ 'Surfacing' ಕೆಲಸವನ್ನು ಹ್ಯಾವೇ ಇಲಾಖೆಯವರೇ ಮಾಡುವುದಕ್ಕೆ ಒಪ್ಪಿಗೆ ಕೊಡಲಾಯಿತು. ಆ ಬಗ್ಗೆ ಖಾಲಿ ವರುಷದ ಬಜೆಗಾಗಿ ರೂಪಾಯಿ 3000 ಸೆಂಕ್ಷನ್ ಮಾಡಲಾಯಿತು.

ಶುದ್ಧೀಕರಣ—ಬಿಲ್ಲವ ಸೇವಾ ಸಂಘ ಉಡುಪಿ (ರಿಜಿಸ್ಟರ್ಡ್) ಇದರ ನೇತೃತ್ವದಲ್ಲಿ ಇದೇ ತಾ. 7ರಲ್ಲು ಸೀತು ಮತ್ತು ನರ್ಸಿ ಪೂಜಾರ್ತಿಯರ ಕುಟುಂಬವನ್ನು ಶುದ್ಧೀಕರಣ ಮಾಡಲಾಯಿತೆಂಬ ವಾರ್ತೆ ಬಂದಿದೆ.

ಮಂಗಳೂರು

ರಾಷ್ಟ್ರೀಯ ಉಳಿತಾಯ ಯೋಜನೆ—ದಕ್ಷಿಣ ಕನ್ನಡ ರಿ ಷ್ಟ್ರೀಯ ಸಮಿತಿಯ ಸಭೆಯು ಈಚೆಗೆ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದರ ಅಧ್ಯಕ್ಷತೆಯಲ್ಲಿ ಜರಗಿದಾಗ ಜಿಲ್ಲೆಯಲ್ಲಿ 14 ಮಂದಿ ವಿಜಂಟಂ ನೇಮಕ ಮಾಡಲಾಯಿತು, ಒಂದು ನೂರು ರೂಪಾಯಿ ವರೆಗೆ ರೂಪಾಯಿ ಏದರ ಮತ್ತು ರೂಪಾಯಿ ಪತ್ತರ ಸರ್ಟಿಫಿಕೇಟನ್ನು ಮಾರಿದವರಿಗೆ ಸೇಕಡಾ ಎರಡೂವರೆ ಕಮಿಶನ್ ಕೊಡಬೇಕೆಂದು ಭಾರತ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಶ್ರೀ ಖುಸಿದ್ ಲಾಲರು—ಕೆನರಾ ಚೇಂಬರ್ ಒಫ್ ಕೊಮರ್ಸ್‌ನಿಂದ ವಾರ್ಷಿಕೋತ್ಸವಕ್ಕೆ ಅಗ್ರಸ್ಥಾನ ವಹಿಸಲು ಬರಬೇಕೆಂದಿದ್ದವ ಎ ಅಸ್ವಸ್ಥತೆಯ ಕಾರಣದಿಂದ ಬೆಂಗಳೂರಿನಿಂದಲೇ ವಾಪಸು ಹೋದರೆಂದು ವಾರ್ತೆ. ಅದುದರಿಂದ ತಾ. 2ರಲ್ಲು ನಡೆಯಬೇಕಾಗಿದ್ದ ವಾರ್ಷಿಕೋತ್ಸವವನ್ನು ಮುಂದೆ ಹಾಕಲಾಯಿತು.

"ಅರುಣ" ಪತ್ರಿಕೆಯಿಂದ ಜಾಮೀನು—ಮಂಗಳೂರಿನಿಂದ ಹೊರಡುತ್ತಿರುವ "ಅರುಣ" ಪತ್ರಿಕೆಯ ಸಂಪಾದಕ ಮತ್ತು ಪ್ರಕಾಶಕರಾದ ಶ್ರೀ ಯು. ಶ್ರೀನಿವಾಸಭಟ್ಟರಿಂದ ಒಂದು ಸಾವಿರವನ್ನು ಆದನ್ನು ಮುದ್ರಿಸುವ ಜಯಭಾರತ ಪ್ರೆಸ್ಸಿನಿಂದ ಒಂದು ಸಾವಿರವನ್ನೂ ಜಾಮೀನು ಕೊಡಬೇಕೆಂದು ಮದ್ರಾಸು ಸರಕಾರವು ಆಜ್ಞೆ ಮಾಡಿದೆಯೆಂದೂ ಈ ಹಣವನ್ನು ಇದೇ ತಾ 18ರೊಳಗಾಗಿ ಕಟ್ಟಬೇಕೆಂದೂ ತಿಳಿದು ಬರುತ್ತದೆ. ಳೆದ ಫೆಬ್ರವರಿ ತಾ. 26ರ ಸಂಚಿಕೆಯಲ್ಲಿ ನೇಲಂ ಜೈಲಿನೊಳಗೆ ಗೋಳಿಬಾರು ನಡೆದ ಘಟನೆಯ ವಿಚಾರದಲ್ಲಿ ಬರೆದ ಲೇಖನಕ್ಕಾಗಿ ಈ ಆಜ್ಞೆಯೆಂದೂ ತಿಳಿದುಬರುತ್ತದೆ.

ಮದ್ರಾಸು ಸರಕಾರದಿಂದ
ಈಗತಾನೇ ಸಂಧಾನನೆ ಪಡೆದ
ಡಾಕ್ಟರ್ ಕೊರಡ್ಡುಲ್ ವೆಂಕಟ್ರಾಯರ
'ಮನೆ ಮದ್ದು'
(HOME REMEDIES)
೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿ ಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ: ರೂ. ೨
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ–
ನವಭಾರತ ಪುಸ್ತಕ ಭಂಡಾರ,
ಉಡುಪಿ.

ರಿಂದೂ ಕೋಡನ್ನು ಸಂರಕ್ಷಿಸಿ ಅಳಿಯ ಸಂತಾನಿಗಳಲ್ಲಿ ಹರಡಿ ಕೊಂಡಿರುವ ಭಿನ್ನಾಭಿಪ್ರಾಯಗಳು ಇವೆ. ಕೆಲವೊಂದು ಎಲ್ಲಾ ವಿಷಯಗಳಿಗೂ ಒಂದೇ ಕಾಯಿದೆಯಿದ್ದಲ್ಲಿ ಅಳಿಯ ಸಂತಾನಿಗರಿಗೆ ಪ್ರತ್ಯೇಕ ವಿಲೇವಾರಿಯಾಗುವುದು ಬೇಡ ಎಂದಿರುವವರು ಈಗ್ಗೆ ಜ್ಯಾರಿಯಲ್ಲಿರುವ ಅಳಿಯ ಸಂತಾನ 1949ನೇ ಮುದ್ರಾಸು ಮಸೂದೆಯು ಈಗ ತಾನೇ ಜ್ಯಾರಿಗೆ ಬಂದು ಅದರಿಂದ ಕೆಲವೆಡೆಗಳಲ್ಲಿ ವ್ಯವಸ್ಥೆಗಳಾದ್ದರಿಂದ ಈಗ ಅದನ್ನು ಬದಲಾಯಿಸುವುದು ಕಷ್ಟಕ್ಕೆ ನಿಲ್ಲುತ್ತದೆ, ಅದೇ ಕೆಲಸಮಯದ ಪರಿಗೆ ಮುಂದುವರಿಯಲಿ ಎಂಬವರು ಕೆಲವರು. ಇನ್ನು ಕೆಲವರು ಇನ್ನೆಲ್ಲಕ್ಕಿಂತಲೂ ಹಿಂದಿನ ಪದ್ಧತಿಗನುಗುಣವಾದ ಅಳಿಯ ಸಂತಾನ ಕಾಯಿದೆಯೇ ಉತ್ತಮವಿತ್ತೆನ್ನುವವರೂ ಇದ್ದಾರೆ. ಈ ಅಭಿಪ್ರಾಯಗಳಲ್ಲಿ ಸ್ವಾರ್ಥ ದೃಷ್ಟಿಯೂ ಸಂಕೋಚ ಭಾವನೆಯೂ ಇರಬಹುದು.

ಇವನ್ನು ಬಿಟ್ಟರೆ ಗತ ಪದ್ಧತಿಗನುಗುಣವಾದ ಅಳಿಯ ಕಟ್ಟನ್ನು ವಿಮರ್ಶಿಸಿ ನೋಡಿದಲ್ಲಿ ಅದು ಕಾಲಸ್ಥಿತಿಯ ಮಟ್ಟಿಗ್ಗೆ ರಿದೆ, ಬಹು ಪುರಾತನ ವಾಟ್ಟಿನದ್ದಾಗಿದ್ದು, ಪ್ರಕೃತಿಗೆ ವಿರೋಧವಾದ ಪ್ರೀತಿ ಭಾವನೆಯನ್ನು ಕಟ್ಟಿಕೊಟ್ಟು ತಂದೆಯಿಂದ ಹೆಂಡತಿ ಮಕ್ಕಳಿಗೆ ಆಸ್ತಿಪಾಸ್ತಿ ಸ್ವಾಭಾವಿಕವಾಗಿ ಬರುವ ಬಯಲು, ಆತನಆಸ್ತಿಪಾಸ್ತಿಗಳನ್ನುಆತನ ಸೊಸೆ ಅಳಿಯಂದಿರು ಅನುಭವಿಸುವಸ್ಥಿತಿ ಮಾಡಿರುತ್ತದೆ ಯಜಮಾನನ ಆಯುಷ್ಯವು ಯಾವಾಗ ಅಂತ್ಯವಾಗಿ ತಮಗೆ ಯಾವಾಗ ಯಜಮಾನಿಕೆಯ ಪ್ರಯೋಜನ ದೊರಕೀತೆಂಬ ದುರುದ್ದೇಶವುಯಾವಾಗಲೂ ತಲೆದೋರುತ್ತಿದೆ. ಗಂಡು ಮೊಂಬರ್ದೆ ಜೀವನವು ಹಿಂದೂ ವಿಧವೆಯರ ಜೀವನದಂತಿರುತ್ತದೆ. ಒಂದು ದೊಡ್ಡ ಕುಟುಂಬಕ್ಕೆ ಸೇರಿದ ವ್ಯಕ್ತಿಯು ಕುಟುಂಬದಸ್ಥಿತಿಯಗೌರವಬೀಡನೆಗೆಸಿಕೆ, ಬಿಕ್ಕ ಪುಟ್ಟ ವೃತ್ತಿಯನ್ನು ನೋಡದವನಾಗಿರುತ್ತಾನೆ. ಇದರಿಂದಾಗಿ ನಿರುದ್ಯೋಗದಲ್ಲಿದ್ದ ದುರ್ವಿನಸ್ಥರು ದುರ್ವರ್ತನಾವಲಂಬಿಗಳಾಗಿ ಆದರಿಂದ ಅನೇಕ ತರದ ಅನರ್ಥಗಳು ಬರುತ್ತವೆ. ಧಾರಾಳವಾದವರದಕ್ಷಿಣೆಯು ಪದ್ಧತಿಯುಳ್ಳ ಅಳಿಯ ಸಂತಾನಿಗರಲ್ಲಿ ಯಜಮಾನ ಪ್ರೇಮ ಭಾವವು ತನ್ನ ಹೆಂಡತಿ ಮಕ್ಕಳ ಕಡೆಗೆ ಮಾತ್ರ ಇದ್ದು, ಕುಟುಂಬದಲ್ಲಿ ಸ್ತ್ರಿಯಭಿರತರಾದ ಯುವತಿಯರನ್ನು ಅನೇಕ ಕಡೆಗಳಲ್ಲಿ ವಿವಾಹಾನಸ್ಥೆಯಿಲ್ಲದೆ ಬಸುದೀರ್ಘಸಮಯ ಳುಳಿಸಿಕೊಳ್ಳಿಸುವ ಶೋಚನೀಯಾವಸ್ಥೆಯುಇದ್ದೇಇರುತ್ತದೆ ನಿರಾಧಾರ ಜನರು ಒಂದೇ ಮನೆಯಲ್ಲಿರುತ್ತ ಮನ್ವಸ್ಥೆಯಿಲ್ಲದೆ, ಅನುಕೂಲತೆಯಿಲ್ಲದೆ, ಬೇರ್ಪಿಂಗುಗಳ ಮೂಡರಿಯಲ್ಲಿ ಇರುವ ವ್ಯವಸ್ಥೆ, ಅದರಿಂದ ಹುಟ್ಟುವ ಅನಾಗರೀಕತೆ ಮತ್ತು ಅನ್ಯವಸ್ಥೆ, ಕಿರೀ ಮೆಂಬರರ ಮತ್ತು ಯಜಮಾನರ ತಿಕ್ಕಾಟದಲ್ಲಿ ಅನೇಕ ಕಡೆಗಳಲ್ಲಿ ಕುಟುಂಬದ ಆಸ್ತಿಯು ಬಂಜರು ಬೀಳುವಿಕೆ, ಅದರ ನಷ್ಟ ಇದರ ತಿಕ್ಕಾಟಕ್ಕೆ ಸಿಕ್ಕಿದ ಒಕ್ಕಲುಗಳಿಗೆ ಕಷ್ಟಸಂಕಷ್ಟ, ಇನ್ನೇ ಮೊದಲಾದ ಅನೇಕ ಘೋರ ಕುಂದುಕೊರತೆಗಳು ನಮ್ಮ ಮುಂಚಿನ ಪದ್ಧತಿಯಅಳಿಯ ಸಂತಾನ ಕಾಯಿದೆಯಿಂದ ಕಾಣುತ್ತಿದ್ದುವು ಅದು ನಮಗೆ ಹೆಮ್ಮೆಯ ವಿಷಯವಲ್ಲ ಆದ್ದರಿಂದ ಅದು ತೊಲಗಲೇಬೇಕೆಂಬುದು ಸಹಜವಾದ ಮಾತು.

ಆದರೆ ಈಗ ಜ್ಯಾರಿಗೆ ಬಂದಿರುವ 1949 ನೇ ಮಸೂದೆಯನ್ನೇ ಏಕೆ ಕೆಲವು ಸಮಯ ವಾದರೂ ಅನುಸರಿಸಬಾರದು ಎಂಬುದೊಂದು ಪ್ರಶ್ನೆ. ಇದಕ್ಕೆ ಅವಕಾಶವಿಲ್ಲ, ನಾವು ಸಹಾ ಹಿಂದೂ ಕೋಡಿನಲ್ಲಿಯೇ ಅದಷ್ಟು ಮಟ್ಟಿಗೆಸಹಕರಿಸಿಕೊಂಡುಬರಬೇಕೆಂಬುದೇ ಸಹಜದಾಯಿದು. ಅದಲ್ಲದೆಈಗಜ್ಯಾರಿಯಲ್ಲಿರುವಸದ್ರಿ ಮಸೂದೆಯಾಎಲ್ಲಾ ವಿಷಯಗಳನ್ನು ಆವರಿಸಿಕೊಂಡಿದೆ, ಮುಂಚಿನ ಪದ್ಧತಿಯಲ್ಲಿ ಅಲ್ಪಸ್ವಲ್ಪ ತಿದ್ದುಪಡಿಯನ್ನು ಮಾಡಿಟ್ಟು, ಆವರಿಸಿಕೊಂಡಿರುವ ವಿಷಯಗಳಲ್ಲಿ ಯೂ ಕೂಡಾ ಭಿನ್ನಾಭಿಪ್ರಾಯಲ್ಲಿ ಒನ್ಸಷ್ಟೆ

ಹಿಂದೂ ಕೋಡು ಮತ್ತು ಅಳಿಯಸಂತಾನಿಗರು

ಎಕ್ಸ್‌ಕೇಟ್ ಬಿ. ಜಿ. ಬಿಟ್ಟಿ, ಲೈಬ್ರರಿ ಸ್ಕೂಲ್ ಹಿಲ್, ಮಂಗಳೂರು.

ತೆಯು ಒಕ್ಕಡೆಗಂದಾ ಅವಕಾಶಕೊಟ್ಟು, ಜಾರಿಗೆ ತರುವಾಗ ಅನೇಕ ರೀತಿಯ ತೊಂದರೆಯನ್ನೊಡ್ಡುತ್ತಿದೆ. ದೈನ್ಯಾತಕ್ಕಾಗಿ ಈ ಅಳ್ವು ಪತ್ರ ಸ್ವೀಕಾರದ ಪದ್ಧತಿಯಂದಲ್ಲಿ ಮೌನ ವಿದ್ದು ಹಳೆಯ ಪದ್ಧತಿಯಂತೆಯೇ ಆ ಮಟ್ಟಿಗೆ ಈಗಲೂ ನಡೆದು ಬರುತ್ತಿದೆ. ಆದರೆ ಇದು ಮಾಡಿದ ಮುಖ್ಯ ಬದಲಾವಣೆಗಳಾವುವೆಂದರೆ ಅಳಿಯ ಸಂತಾನಿಗರ ಮುದುವೆಯನ್ನು ಕಾನೂನು ಒಪ್ಪುವಂತೆಯೂ, ಕವರಿಗೆ ಪಾಲು ಕೇಳುವ ಅಧಿಕಾರವನ್ನು ಕೊಟ್ಟುದೂ. ಯಜಮಾನನಿಂದ ಲೆಕ್ಕಪತ್ರ ಪಡೆಯುವ ಕ್ರಮವನ್ನೂ ಜವಾಬ್ದಾರಿಯನ್ನೂ ಹೇಳಿದೆ ಅದರೂ ಸದ್ರಿ ನಿಬಂಧನೆಗಳಿಂದಸುಳ್ಳು ಟಿಕ್ಕ ಕೊಡಲಸ್ತಿದವುಳ್ಳ ಯಜಮಾನರಿಂದ ಎಪ್ಪರ ಮಟ್ಟಿಗೆ ತಪ್ಪಬಹುದೆಂಬುದು ಬಹಳ ಸಂದೇಹದ ವಿಷಯ ಕವರು ಎಂಬ ಶಬ್ದಕ್ಕೆ ಆಕ್ಟಿನ ಬಗ್ಗೆ ಒಂದು ಅರ್ಥವನ್ನೂ, ಪಾಲಿನ ಬಗ್ಗೆ ಇನ್ನೊಂದು ರೀತಿಯ ಅರ್ಥವನ್ನೂ ಕೊಟ್ಟಿರುತ್ತಾಂಬಾ ಗಡಿದಿಡಿಗೆ ಕಾಣವಾಗಿದೆ. ತಾಯಿಗೆಪಾಲು ಕೇಳುವ ಅಧಿಕಾರ ನೂತ್ರವೋ, ಪಾಲುಪಡೆಯುವ ಅಧಿಕಾರ ವಿದೆಯೋ ಎಂಬುದು ಸ್ಪಷ್ಟವಾಗಿ ಈ ಆಕ್ಟಿನಲ್ಲಿ ಕಂಡು ಬರುವುದಿಲ್ಲ. ಪಾಲು ಮಾಡುವಾಗ ಅರ್ಧವಾಸಿ ಕಲೆವಾರು, ಅರ್ಧವಾಸಿ ಕವಿಯವಾರು ಮೇರೆಗೆ ಮಾಡಬೇಕೆನ್ನುವ ವಾಚಕವು, ಪಾಲು ಎಣಿಕೆಗೆ ಹಾಕುವಾಗ ನಮ್ಮ ಈಗಿನ ಕುಟುಂಬದ ಸ್ಥಿತಿಯ್ಲಾ, ಇಂಗ್ಲಿಷಿನಲ್ಲಿ ಹೇಳುವ ಹಯರ್ ಮೆಥಮೆಟಿಕ್ಸ್‌ನ ಸಹಾಯ ಬೇಕಾಗಿ, ನಮ್ಮ ಕುಟುಂಬವ ಆಸ್ತಿಯನ್ನು 21399 ಪಾಲು ಮಾಡಿ, 19 ಪಾಲನ್ನು ವಾದಿರಾದ ನಮಗೆ ಕೊಡಿಸಿ ಎಂದುಕೇಳುವ ಪ್ರಸಂಗವು ಬಂದಿರುತ್ತದೆ. ಇದನ್ನುಯಾವ ಕೋರ್ಟುಗಳಾವ ಕವಿಶನರು ಯಾವ ರೀತಿಯಿಂದ ಮಾಡಬಹುದು? ಮಾಡಿದಲ್ಲಿ ಅದರಲ್ಲಿ ಬರಬಹುದಾದ ನ್ಯೂನತೆಯನ್ನು ತೋರಿಸಿ ಕೊಡಲು ಎಲ್ಲಿ ಸಾಧ್ಯ? ಈ ರೀತಿಯ ನಿಜವಾದ ಕಷ್ಟಗಳು ಬಂದೊದಗಿವೆ. ಶಬ್ದಾರ್ಥಗಳ ದೋಷದಿಂದ ಮತ್ತು ಸೋಣಿಸುವಿಕೆಯ ಕೊರತೆಯಿಂದ ಈ ರೀತಿಯ ಭಿನ್ನಾಭಿಪ್ರಾಯಗಳಿಗೆಅವಕಾಶವುಇತರ ವಿಷಯಗಳಲ್ಲೂ ಕಂಡುಬರುತ್ತಿದೆ. ಮುಖ್ಯ ತಃಗಂಡುಮೊಂಬರ ಸ್ಥಿತಿಯುಮುಂಚಿನಂತೆ ಹಿಂದೂಪಸಿದವೆಯರ ರೀತಿಯಲ್ಲಿಯೇ ಇದೆ. ಆನವರಿಗೆ ಇಚ್ಚಾನುಸಾರ ಪಾಲು ಕೇಳುವ ಅಧಿಕಾರವಿಲ್ಲ. ಅವರಿಗೆ ಏತಕ್ಕೆ ಪಾಲು ಕೊಡಬಾರದೆಂಬ ಪ್ರಶ್ನೆಯಲ್ಲಿ ತುಂಬಾ ಸಾಮರ್ಥ್ಯವಿದೆತ್ತದೆ.

ಹೀಗಿರುವಲ್ಲಿ ಒಂದೇ ಸವನೆ ಸಂಪೂರ್ಣ ಹಿಂದೂ ಕೋಡನ್ನೇ ವಿತಾಕ್ಷರಿಗಳಂತೆ ಅವಲಂಬಿಸಬಹುದೇ ಎಂಬದೊಂದು ಪ್ರಶ್ನೆ. ಎಲ್ಲರಿಗೂ ಏಕರೀತಿಯ ಕಾನೂನು ಇರುವುದು ಎಲ್ಲಾ ದೃಷ್ಟಿಯಿಂದಲೂ ಒಳ್ಳೆಯದು. ಆದರೆ ಬದಲಾವಣೆಗಳ ನೋವು ತಿಳಿದುಬರಬಾರದಾದರೆ ಬದಲಾವಣೆಗಳು ಅದಸ್ತು ಮಟ್ಟಿಗೆ Gradual ಆಂದರೆ ಹದರೀತಿಯಲ್ಲಿ ಮೆಲ್ಲ ಮೆಲ್ಲನೆ ಬರುವುದು ಉತ್ತಮ. ಈ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ಮರುಮಕ್ಕತ್ತಾಯಂ ಮತ್ತು ಅಳಿಯ ಸಂತಾನಿಗರಿಗೆಂದು ತಿರುವಾಂಕೂರಿನಲ್ಲಿತ್ತಿಯಾರಿಸಿಲ್ಪಟ್ಟ, ಇಲ್ಲೀಗ ನಾನಾಕಸ್ಟಿಡಿಕ್ಕೆ ಭಾಷಾಂತರಿಸಲಡಾಫ್ಟ್ ಹೊಸರ್ತಗಳು ಬೇಂ ಬಡಲ, ವರ್ಗಗಳನ್ನು ಇನ್ನು ಮುಂದಕ್ಕೆಮಾಡದಿದ್ದಲ್ಲಿ ಬಹುಮಟ್ಟಿಗೆ ಒಪ್ಪಬಹುದೆಂದು ನನಗೆ ಕಾಣುತ್ತದೆ. ಆದರೆ ಅಳಿಯ ಸಂತಾನಿಗರಿಗೆ ಲಗಾವಾಗುವ ಕೋಡಿನ 8ನೇ ಕೆಡ್ಯೂಲನ್ನು ನಾವು ಬಹು ಜಾಗರೂಕತೆಯಿಂದ ನೋಡಿದಲ್ಲಿ ೇ ಕಿದ್ದುಪಡಿಗಳನ್ನೇ ನಾವು ಕಳುಹಿಸಬಹುದೆಂದು ತೋರುತ್ತದೆ.

ಇದರ ಒಕ್ಕಡೆಗಳು ಹೆಚ್ಚಿನ ಮಟ್ಟಿಗೆ ಅನುಮಾನಕ್ಕೆ ಆಥವಾ ದ್ವಯರ್ಥಗಳಿಗೆ ಅಸ್ಪದವಿಲ್ಲದೆ ಸರಳೋಕ್ತಿಯಲ್ಲಿವೆ.

ಮಿತಾಕ್ಷರೀ ಕಾನೂನಾಗಿ ಇಂಡಿಯನ್ ಸೆಕ್ಷನ್ ಕಾನೂನಿಗೂ ನಮಗೂ ಉತ್ತಮ ಒಪ್ಪಂದವನ್ನು ನೋವಾಗದ ರೀತಿಯಲ್ಲಿ ಮಾಡುವಂತೆ ತೋರುತ್ತದೆ.

ಮಧುವೆಯ ವಿಷಯ, ಆದರ ವಿಚ್ಛೇದನದ ವಿಷಯ ಸಾಕಷ್ಟು ಯೋಗ್ಯ ಭದ್ರತೆಗಳನ್ನು ಏರ್ಪಡಿಸಿರುತ್ತಾರೆ. ರಾಜ್ಯೋತ್ಕ್ರ್ಷ ಮತ್ತು ಸಿವಿಲ್ ವಿವಾಹಕ್ಕೆ ಅತಂಕವಾರದಂತೆ ಮಾಡಿರುತ್ತಾರೆ.

ದತ್ತಸ್ವೀಕಾರದ ಮಟ್ಟಿಗೆ ಸ್ತ್ರೀ ಯೂ ಪುರುಷನನ್ನು ಆದರ ಕ್ರಮಕೊಟ್ಟು ಸ್ವೀಕರಿಸುವ ಅಧಿಕಾರ ಕೊಟ್ಟಿರುತ್ತಾರೆ.

ಕುಟುಂಬ ಮತ್ತು ಕವರುಗಳು ಮುಂಚಿನ ರೀತಿಯಲ್ಲಿ ಒಟ್ಟು ಹಕ್ಕಿನ ಆಸ್ತಿಯನ್ನು ಅನುಭವಿಸಿ ಇಟ್ಟುಕೊಳ್ಳುವ ಹಕ್ಕು ಎಂದಿನಂತಿದೆ.

ಯಜಮಾನನು ಲೆಕ್ಕಪತ್ರವಿಟ್ಟುಕೊಂಡು ಕರೇ ಮೆಂಬರರಿಗೆ ಹಕ್ಕುಪ್ರಕಾರ ತೋರಿಸಿ, ಸಕಲು ತಗೆಯುವ ಭದ್ರವಾದ ಏರ್ಪಾಟಿದೆ.

ಯಜಮಾನನ ವಿಕ್ರಯ, ಆಡವು, ಆಯವಾರು, ದೀರ್ಘಕಾಲದ ಗೇಣಿ ಕೊಡುವಿಕೆಗಳ ಬಗ್ಗೆ ಕುಟುಂಬದ ಹಿತದೃಷ್ಟಿ, ಅಗತ್ಯ ನಗ್ಯೆರೆಗಳನ್ನು ಮುಂದಿಟ್ಟುಕೊಂಡು ಸಾಕಷ್ಟು ಭದ್ರತೆಗಳನ್ನು ಸ್ವಚ್ಛವಾದ ಭಾಷೆಯಲ್ಲಿ ಚಂದ ರೀತಿಯಲ್ಲಿ ಕೊಟ್ಟಿರುತ್ತಾರೆ.

ಕುಟುಂಬದ ಸಾಲವನ್ನು ಯಾವಾಗ ಮಾತ್ರ ಕುಟುಂಬದ ವೇಲೆ ಹೊರಿಸಬಹುದು, ಕುಟುಂಬದ ಯಜಮಾನನು ಒಳಸಂಚಿನಿಂದ ಕುಟುಂಬದ ಮೇಲೆ ಪಡೆಯಬಹುದಾದ ಕೋರ್ಟು ಡಿಕ್ರಿಗಳನ್ನು ತಪ್ಪಿಸುವರೆ ಬೇಕಾದ ಭದ್ರತೆ ಇದರಲ್ಲೇ ನೋಡಲಾಗಿದೆ.

ಕುಟುಂಬದ ಆಡಳಿತೆ ಬಿಟ್ಟುಕೊಡುವ ವಿಧಾನ ಕೊಡಲ್ಪಟ್ಟಿದೆ.

ಪ್ರತಿ ಒಬ್ಬ ಪ್ರಾಯಸ್ಥ ಮೆಂಬರನಿಗೂ ತನ್ನ ಪಾಲನ್ನು ತಲೆವಾರು ಮೇರೆಗೆ ಪಡೆದು ಸ್ವತಂತ್ರಿಯಾಗಿ ಇಟ್ಟುಕೊಳ್ಳುವ ಅಧಿಕಾರ ವಿದೆ. ನಾವು ಮಾಡುವ 8ನೇ ಶೆಡ್ಯೂಲಿನಲ್ಲಿ ಇದ್ದೆಲ್ಲಿ ಗಂಡು ಮೆಂಬರನಿಗೆ ಎಬ್ಸಲ್ಯೂಟ್ ಆಗಿ ಸಿಕ್ಕತಕ್ಕ ಹಿಸೆಯನ್ನಾಗಲೀ, ತಲೆವಾರು ಹಕ್ಕನ್ನು ತೆಗೆದು ಗಣಿತಕ್ಕೂ ಆನುಕೂಲತೆಗೆ ಕೂಡಾ ವಿರೋಧವಿರುವ ಕವರ್ಸಾರು ಮತ್ತು ತಲೆವಾರು ಹಕ್ಕುಗಳನ್ನು ಒಟ್ಟುಮಾಡ ತಕ್ಕದ್ದಲ್ಲವೆಂದು ಕಾಣ-ಕ್ಕದೆ. ನಿಸ್ಸಂತಿ ಮತ್ತು ಸಂತಿ ಎಂಬ ವಾಡಕಗಳನ್ನು ಬಿಟ್ಟು ಬಿಟ್ಟು ನಮಗೆ ಬಂದ ಈ ಬ್ರೈಕ್ಟ್‌ನಲ್ಲಿ ಹೇಳಿದಂತೆ ಯಾಪುದೇ ಪ್ರಾಯಸ್ಥಮೆಂಬರಯಾ ಮೆಂಬರಳು ತನಗೆ ಬರತಕ್ಕ ಪಾಲನ್ನು ತನ್ನ ಕವರು ಯಾ ಕುಟುಂಬದಿಂದ ಕೇಳಲು ಆ ಹೇಳು ಎಂದಿರುವುದೇ ಉತ್ತಮವೆಂದು ವಿಶಾಲ ದೃಷ್ಟಿಯಿಂದಲೂ, ಹಿಂದೂಕೋಡು, ಮರುಮಕ್ಕತ್ತಾಯಂನವರ ಸೂಚನೆ ಮತ್ತು ನಮ್ಮೊಳಿಗೆ ಇರತಕ್ಕ ಒಡಂಬಡಿಕೆಯ ದೃಷ್ಟಿಯಿಂದಲೂ ಉತ್ತಮವೆಂದು ಕಾಣುತ್ತದೆ.

ಗಂಡ ಆಧವಾ ತಂದೆಯಿಂದ ಹೆಂಡ್ತಿ ಮಕ್ಕಳು ಇವರಿಗೆ ಯಾ ಇವರ ಪೈಕಿ ಯಾರೊಬ್ಬರಿಗಾದರೂ ವೀಲು, ಧರ್ಮಶಾಧನ ಮತ್ತು ಕ್ರಯದಿಂದ ಆಸ್ತಿ ಬಂದಲ್ಲಿ ಆಥವಾ ಆವರ ತಮ್ಮ ಅಭಿಪ್ರಾಯದಿಂದ ಆ ಮಟ್ಟಿನ ಅಭಿಪ್ರಾಯವನ್ನು ಸೂಚಿಸದಲ್ಲಿ, ಆಸ್ತಿಯು ಕವರಿಗೆ ಆಸ್ತಿಯಾಗುತ್ತದೋ ಪ್ರತ್ಯೇಕ ಹಿಸೆ ಪಡೆಯಬಹುದಾದ ಆಸ್ತಿಯಾಗುತ್ತದೋ ಎಂಬುದನ್ನು ಸ್ವಚ್ಛವಾಗಿ ಕಾಣಿಸಲಾಗಿದೆ.

ಇಂಡಿಯನ್ ಸಕ್ಸೆಷ್ಟನ್ ವಿಧಾನವನ್ನು ಪೋಲುವ ರೀತಿಯ ಸುಲಭ ರೀತಿಯ ವಿಲಿನ ಹಕ್ಕುಗಳ ಧಾರಣ ನಿಬಂಧನೆಯನ್ನು ನೀತಿ ಮತ್ತು ನ್ಯಾಯ ದೃಷ್ಟಿಯನ್ನು ಇಟ್ಟುಕೊಂಡು ಮಾಡಿರುತ್ತಾರೆ.

ಇಷ್ಟಲ್ಲಿ ಕುಟುಂಬದಲ್ಲಿ ವಾಸ್ತವ್ಯವಿದ್ದವನಿಗೆ ಕೂಡಾ ಪ್ರತ್ಯೇಕ ಜೀವನಾಶ್ರ ಹೊರಗಿದ್ದವನಂತೆ ಕೊಡತಕ್ಕದು ಎಂಬುದು ಸರಿತೋರುವುದಿಲ್ಲ. ಆಲ್ಲದೆ ಅಳಿಯ ಸಂತಾನಿಗರು ಎಂದರೆ ಅಳಿಯ ಕಟ್ಟನ್ನು ಆಚರಿಸುವವರಂದು ಎಲ್ಲಿದ್ದವರಿಗೂ ಲಗಾವಿರುವಂತೆ ಅಳ್ಳಡಿಕೆ ತಿದ್ದುಪಡಿಸಬೇಕು.

(ಮುಂದಿವರಿಯುವುದು)

ಪ್ರಕಟಣೆ

ಹಿಂದೂ ಕೋಡು ಮಸೂದೆ ಮತ್ತು ಅಳಿಯ ಸಂತಾನ ಕುಟುಂಬಗಳಿಗೆ ಲಗಾವಾಗುವ ಕುರಿತು ಪರ್ಯಾಲೋಚಿಸುವುದಕ್ಕಾಗಿ ಯಸ್. ಆರ್. ಯಸ್. ಹೋಮ್ ಹಳೇ ನಿವಾಸಿಕರ ಸಂಘದ ವತಿಯಿಂದ ಸಭೆಯೊಂದು ಇವೇ ತಾ 14-7-1950ನೇ ಆಪರಾಹ್ನ 6 ಘಂಟೆಗೆ ಕರಂಗಲ್ಪಾಡಿಯ ರಾಮಕೃಷ್ಣ ವಿದ್ಯಾರ್ಥಿ ಮಂದಿರದಲ್ಲಿ ಸೇರಲಿದೆ. ಅಳಿಯ ಸಂತಾನಿಗರೆಲ್ಲರೂ ಈ ಸಭೆಯಲ್ಲಿ ಭಾಗವಹಿಸಬೇಕೆಂದು ಆಮಂತ್ರಿಸುತ್ತೇವೆ.

ಕೆ. ಬಿ ಶೆಟ್ಟಿ,
ಕಾರ್ಯದರ್ಶಿ.
ಯಸ್. ಆರ್. ಯಸ್. ಹೋಮ್ ಹಳೇ ನಿವಾಸಿಕರ ಸಂಘ.
ಮಂಗಳೂರು 10ನೇ ಜುಲಾಯಿ 1950

ದಿ ಕಥೊಲಿಕ್ ಬ್ಯಾಂಕ್ ಲಿಮಿಟೆಡ್,

ಕಲ್ಯಾಣಪುರ

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಲ್ಲಿ ಬಿನ್ನಾಭರಣಗಳ ಈಡಿನ ಮೇಲೆ ಹರಡಿ ಸಾಲದ ಪೊಬಲಗನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದೆ ಯಿರುವುದರಿಂದ ಸದ್ರಿಯವರಿಗೆ ಕ್ರಮಪ್ರಕಾರ ರಿಜಿಸ್ಟ್ರಿ ನೋಟಿಸನ್ನು ಕಳುಹಿಸಿದ್ದಕ್ಕೆ ಸದ್ರಿ ಸಾಲದ ಬಗೆಲು, ಬಡ್ಡಿ ವಗೈರೆ ಏವೇಜನ್ನು ಕೊಡದೆ ಇನ್ನೂ ಬಾಕಿ ಇಟ್ಟುಕೊಂಡಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನೀವು ನಮ್ಮ ಬೇಂಕಿಗೆ ಸಲಿಸಲಿಕ್ಕಿರುವ ಅಸಲು, ಬಡ್ಡಿ, ನೋಟಿಸುಗಳ ಖರ್ಚು ವಗೈರೆ ಏವೇಜನ್ನು ಇದೇ ಜುಲ್ಯಾ ತಾ. 29 ಹಗಲು ಗಂಟೆ 12ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ದಿನದಲ್ಲಿ ಬೇಂಕಿನ ವರಾಂಡಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತಾ. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಆಸ್ತಿ ಮೊಬಲಗು
26/525	ಎಮ್. ಸುಂದರಿ ಶೆಟ್ಟಿ, ಕಥೊಲಿಕ್ ಬ್ಯಾಂಕ್, ಕಲ್ಯಾಣಪುರ.	35—0—0
26/515	ಅಕ್ಕು ಪೂಜಾರ್ತಿ, ನದಿಯ ಪೂಜಾರಿ ಮಗಳು, ತೆಂಕು ನಿಡೂರು, ಮಲ್ಪೆ ಪೋಸ್ಟು.	100—0—0
26/616	ಎಮ್. ಸುಂದರ್ ಶೆಟ್ಟಿ, ಕಥೊಲಿಕ್ ಬ್ಯಾಂಕ್, ಕಲ್ಯಾಣಪುರ.	85—0—0
20/882	ಬಿ. ಸುಂದರ್ ರಾವ್, ಕೃಷ್ಣಯ್ಯರ ಮಗ, ಪುತ್ತೂರು ಗ್ರಾಮ, ಕಲ್ಯಾಣಪುರ ಪೋಸ್ಟು.	50—0—0
26/883	ಎಮ್. ಜಕ್ಕಪ್ಪನೆ, ಗಣಪತಿ ಮೇಸ್ತ್ರರ ಮಗ, ಪಾಂಜೇಶ್ವರ ಮುನಿಸಿಪಲ್ ಹಾಯರ್ ಎಲಿಮೆಂಟರಿ ಶಾಲೆ, ಮಂಗಳೂರು.	35—0—0

Kallyanapur
Date 10-7-50.

S. Rebello,
Agent.

೧೯೪೯ರಲ್ಲಿ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

೧೯೪೯ರ ಬಿರುದಾವಳಿ [ಎಂ. ವಿ. ಹೆಗ್ಡೆ]	0	2	0
ಹೈದರಾಬಾದ್ ವಿಜಯ [ಯಕ್ಷಗಾನ] ,,	0	3	0
ನೆರೆಯಾಳು [ನೀಳ್ಗತೆ] ಕುಲಕರ್ಣಿ ದಿಂದುಮಾಧವ	0	4	0
ಗಾದೆಯ ಗಾಂಧಿ [ಸೂಕ್ಷ್ಮ ಪರಿಚಯ] ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಿಲಿನಲ್ಲಿ [ನೀಳ್ಗತೆ] ಪ. ಸು. ಭಟ್ಟ	0	3	0
ಬಲಿಪೀಠದಲ್ಲಿ [ನಾಟಕ] ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ [ಎಂ. ವಿ. ಹೆಗ್ಡೆ]	0	3	0
ನನ್ನ ಹೆಂಡತಿ [ಕತೆಗಳು] ಮಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ [ನೀಳ್ಗತೆ] ಗಿರಿಬಾಲೆ	0	3	0
ಸುಖದದಾರಿ [ವೈರಾಗ್ಯಶತಕ] ಕೆ. ಎ. ದೇವದಾಸ	0	3	0
ಕಾಲನೇ ಬದಲಾಗಿದೆ [ಕು. ಶಿ ಹರಿದಾಸ ಭಟ್ಟ]	0	3	0
ಸುಕಾಂತ [ಅನುವಾದಿತ ಕತೆ] ವೀ. ಜ- ಹಿತ್ತಲಮನಿ	0	3	0
ಪಂಚಮುಖಿ [5 ಪ್ರಬಂಧಗಳು] ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ [ನೀಳ್ಗತೆ] ಕೆ. ದೇವಕಿ	0	3	0
ಜನಸೇವೆಯ ನೋಗಿನಲ್ಲಿ! [ಕತೆ] ಕೆ. ಶಿವರಾಮ ಶೆಟ್ಟಿ	0	3	0
ನಾ ಕಂಡ ಅವಳು [ಕತೆ] ಶ್ರೀಪತಿ	0	3	0
ಶ್ರೀವೇಣಿ [ಪ್ರಬಂಧಗಳ ಸಂಗ್ರಹ]	0	3	0
ನಿಲುವಂಗಿ [ಕತೆ] ಎಸ್. ಸುಬ್ಬರಾಮಯ್ಯ, ಬಿ.ಎ.(ಆನರ್ಸ್)	0	3	0
ನರಸ-ವಿರಸ! [೪ ವಿನೋದ ಚಿತ್ರಗಳು]	0	3	0
ಹೃದಯೇಶ್ವರಿ [ಕಾದಂಬರಿ]	0	3	0
ವಿವಿಧ ವಿಷಯ ಕೋಶ ಭಾಗ ೨ [ವೈಜ್ಞಾನಿಕ ಸಂಗ್ರಹ]	0	6	0
ಕುಲವಿಲ್ಲದ ಹೆಣ್ಣು [ಪಿ.ವೆಂಕೋಬಾಚಾರ್ಯ ಬಿ.ಎ.,ಬಿ.ಟಿ.]	1	0	0
ಭಾಗ್ಯ ಲಕ್ಷ್ಮಿ [ನಾಟಕ] ಬೆಳ್ತಂಗಡಿ ಲಕ್ಷ್ಮಣರಾವ್	1	0	0
ಯುಗವಾಣಿ [ಕವನ ಸಂಗ್ರಹ] ಕು. ಶಿ. ಹರಿದಾಸಭಟ್ಟ	0	8	0
ಸ್ತ್ರೀ ಹೃದಯ— [ವಾಸಂತಿ ಪಡುಕೋಣೆ]	0	3	0
ದ್ವೇಷ- [ಶ್ರೀನಿವಾಸಮೂರ್ತಿ ಗೊರೂರು]	0	3	0
ಪ್ರಜಾಪ್ರಭುತ್ವವನ್ನು ಕುರಿತು [ಶಿವರಾಮ ಕಾರಂತರು]	0	4	0
ಆಧುನಿಕ ಭಾರತ [ಎಚ್. ಭೀಮರಾವ್]	0	4	0
ಭಾರತದ ಸಾಹಿತ್ಯ ಮತ್ತು ಕಲೆಗಳು [ವಿಶ್ವೇಶ್ವರ ಶರ್ಮ]	0	4	0
ಸ್ತ್ರೀ ಸ್ವಾತಂತ್ರ್ಯ ಬೇಕೆ? [ವೈದ್ಯ ವಿನಾಯಕರಾವ್]	0	3	0

೧೯೫೦ರಲ್ಲಿ ಈವರೆಗೆ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

ಹಂಬಲ [ಕೃಷ್ಣಮೂರ್ತಿ ಕೆತ್ತೂರ]	0	3	0
ನುಡಿ ಮುತ್ತುಗಳು [ಎಂ. ವಿ. ಹೆಗ್ಡೆ] ಮಾಲೆ ೧	0	3	0
,, ,, ಮಾಲೆ ೨	0	3	0
,, ,, ಮಾಲೆ ೩	0	3	0
ಕಲಾನಿಧಿಯ ದಿನಚರಿ [ಯಸ್ಸೆಲ್]	0	3	0
ತವರು ಪುನೆಯಿಂದ [ಸೌ ಶಾರದಾ ದೇವಿ]	0	3	0
ದೇವರ ನಾಮ ಮತ್ತು ಅದರ ಸಾಧನೆ [ಬಿ. ವಿ. ಶರ್ಮ]	0	3	0
ಎರಡು ಕತೆಗಳು	0	3	0
ಬಾಡಿಗೆಯ ಮನೆ ಮತ್ತು ಮುಸುಕು [ನಾಟಕಗಳು]	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ಭಾರತ ಚಿತ್ರದ ಅಂಜಿಚೀಟುಗಳು [ಟಿ.ಚಂದ್ರರಾಜ ಸೆಟ್ಟಿ]	0	3	0
ತ್ರಿಶೂಲ [ನಾಟಕ] ವಸುದೇವ್ ಭೂಪಾಲಂ	0	4	0
ಪುಸ್ತಕ ಪುರಾಣ [ಕು.ಶಿ ಹರಿದಾಸಭಟ್ಟ, ಬಿ ಎ (ಆನರ್ಸ್)]	0	4	0
ಹಳ್ಳಿಯಲ್ಲಿ ನಡೆದ ನಾಟಕ [ಕೆ ಎ. ದೇವದಾಸ, ಕರೋಮಣಿ]	0	2	0
ನೆರೆಯ ಗಾಂಧಾರ [ಸುಬ್ರಾವ್ ಕೃಷ್ಣ ಹೆಗಡೆ]	0	3	0
ಮಾತಿನಯುಗದ ಮಹಾ ಪ್ರಭಾವ [ವಿಶ್ವೇಶ್ವರ ಶರ್ಮ]	0	3	0
ವಿಜ್ಞಾನದ ಬೆಳವಣಿಗೆ [ಟಿ. ಚಂದ್ರರಾಜ ಸೆಟ್ಟಿ]	0	4	0
ಡಾ| ಹರ್ಡೀಕರ್ [ನಾಗೇಶ ರಾಮಚಂದ್ರ ದೇಸಾಯಿ]	0	4	0
ತೆಂಗಿನ ತವರು [ಯು ನಾರಾಯಣಭಟ್ಟ, ಕಾನಗೋಡು]	0	4	0
ಪ್ರಭಾ [ಕು. ಪದ್ಮಾ ಉಪಾಧ್ಯಾಯ]	0	3	0
ಪ್ರಾಯಶ್ಚಿತ್ತ [ಎಂ ಗೋವಿಂದರಾವ್, ಎಂ ಎ.]	0	2	0
ಶವಗಳ ಸಾಗಾಟ [ಪತ್ತೆದಾರಿ] ಸುಬ್ರಾವ್ ಕೃಷ್ಣ ಹೆಗಡೆ	0	8	0
ಸ್ವಪ್ನಲೋಕ [ಕಾರ್ತಿಕೇಯ]	0	4	0
ಮನೆಯ ಹೊರಗಿನ ಮಹಾಜೀವಗಳು [ಕು. ಶಿ ಭಟ್ಟ]	0	4	0
ಘಂಟಮಾರಾ [ಕು. ಶಿ. ಹರಿದಾಸ ಭಟ್ಟ] ಭಾಗ ೧	0	3	0
,, ,, ಭಾಗ ೨	0	3	0
,, ,, ಭಾಗ ೩	0	3	0
,, ,, ಭಾಗ ೪	0	4	0

ಸಿಗುವ ಸ್ಥಳ:— ಅಂತರಂಗ ಕಾರ್ಯಾಲಯ, ಉಡುಪಿ.
ಅಥವಾ ನವಯುಗ ಪ್ರೆಸ್, ಉಡುಪಿ

ಅಂತರರಾಷ್ಟ್ರೀಯ ರೇಡಿಯೋಲಜಿ ಕಾಂಗ್ರೆಸಿನ ಅಧಿಕೃತ ಪ್ರತಿನಿಧಿ
ಡಾ| ಕೆ. ಎಂ. ರೈ, ಎಫ್. ಆರ್. ಸಿ. ಯಸ್, ಡಿ ಎಮ್. ಆರ್.

ದ. ಕ. ಜಿಲ್ಲೆಯ ಪ್ರಸಿದ್ಧ ನಾಗರಿಕ ದಲ್ಲಿ ಜನಿಸಿದ್ದ ಶ್ರೀ ಕೆ. ಮಂಜುನಾಥ ರೈಗಳು ಮದ್ರಾಸ್ ಮೆಡಿಕಲ್ ಕಾಲೇಜು ಜೀವನ ವನ್ನು ಉಜ್ವಲ ರೀತಿಯಿಂದ ಮುಗಿಸಿದ ನಂತರ 1928ರಲ್ಲೇ ಡಾಕ್ಟರೇ ಉಪ್ಪನುಕ್ಕಿ ಳಿದ್ದರು. ಜಿಲ್ಲೆಗಳಲ್ಲೂ, ಮದ್ರಾಸಿನ ಮೆಡಿಕಲ್ ಕಾಲೇಜು ಮತ್ತು ಜನರಲ್ ಹೋಸ್ಪಿಟಲಿನಲ್ಲೂ ದುಡಿದ ನಂತರ, 1937 ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಸರಕಾರದಿಂದ ಇಂಗ್ಲಾಂಡಿಗೆ ಕಳುಹಲ್ಪಟ್ಟರು. ಅಲ್ಲಿ ಕೇವಲ ಐದು ತಿಂಗಳ ಅವಧಿಯ 'ಮೊದಲೇ ಎಫ್. ಆರ್. ಸಿ. ಯಸ್. ದಿಗ್ವಿಜಯಿಯಾಗಿ ಬಂದರು. ಇವರ ಈ ದಾಖಲೆಯನ್ನು ಸರಿಗಟ್ಟಬಲ್ಲ ವಾಖಲೆ ಯುಳ್ಳವರು ಮದ್ರಾಸ್ ಮೆಡಿಕಲ್ ಸರ್ವಿಸಿನಲ್ಲಿ ಬೇರಾರೂ ಇಲ್ಲವೆಂದು ನಂಬಲಾಗಿದೆ. ಎಫ್, ಆರ್. ಸಿ. ಯಸ್. ಪಾಸಾದ ಮೇಲೆ, ರೇಡಿಯೋಲಜಿ ಯಲ್ಲಿ ವಿಶೇಷಾಭ್ಯಾಸ ಹೊಂದುವುದಕ್ಕಾಗಿ ಲಂಡನ್ ವಿಶ್ವವಿದ್ಯಾಲಯಕ್ಕೆ ಸೇರಿ ಡಿ. ಎಮ್. ಆರ್. (ಲಂಡನ್) ಕೊನೆಯ ಪರೀಕ್ಷೆಯಲ್ಲಿ ಸರ್ವ ಪ್ರಥಮ ಬಂದು ಪಾಸಾದರು; ಈ ಮೂಲಕ ಮತ್ತೊಂದು ದಾಖಲೆ ನಿರ್ಮಿಸಿದರು. ಆ ಮೇಲೆ ಸವಿಸ್ತಾರ ಭೂಸಂಚಾರ ಮಾಡಿದುದಲ್ಲದೆ, ಕೇನ್ಸರ್ ಚಿಕಿತ್ಸಾತಜ್ಞತೆ ಯಲ್ಲಿ ಪ್ರಸಿದ್ಧರಾದ ಪ್ಯಾರಿಸ್ ಮತ್ತು ಬರ್ಲಿನಿನ ಪ್ರೊಫೆಸರುಗಳ ಕೈಕೆಳಗೆ ಕೆಲಕಾಲ ಕೆಲಸ ಮಾಡಿದ್ದರು. ಅಲ್ಲಿಂದ ಸ್ವದೇಶಕ್ಕೆ ಮರಳಿದ ಮೇಲೆ, 1938ರಲ್ಲಿ 'ಬರ್ನಾರ್ಡ್ ಇನ್‌ಸ್ಟಿಟ್ಯೂಟ್ ಆಫ್ ರೇಡಿಯೋಲಜಿ' (ಮದ್ರಾಸು ಸರಕಾರದ ಜನರಲ್ ಹೊಸ್ಪಿಟಲಿನ 'ಕ್ಷ' ಕಿರಣ ವಿಭಾಗ)ಯ ಪ್ರಥಮ ಹಿಂದೀ ಡೈರೆಕ್ಟರ್ ಮತ್ತು ರೇಡಿಯೋಲಜಿಯ ಪ್ರೊಫೆಸರ್ ಆಗಿ ನೇಮಕಗೊಂಡು ಈ ವರೆಗೂ ಆ ಸ್ಥಾನಾಪನ್ನರಾಗಿದ್ದಾರೆ.

'ಬರ್ನಾರ್ಡ್ ಇನ್‌ಸ್ಟಿಟ್ಯೂಟ್ ಆಫ್ ರೇಡಿಯೋಲಜಿ'ಯಿಂದಾಗಿರುವ ಕೆಲಸವನ್ನ ಹಲವು ಮಂದಿ ವಿದೇಶೀ ತಜ್ಞರ ಶ್ಲಾಘನೆ ಗಳಿಸಿದೆ; ಅದೀಗ ಅಸಲಿ ಭಾರತದಿಂದಷ್ಟೇ ಅಲ್ಲ, ಬರ್ಮಾ, ಮಲಯ, ಇಂಡೋನೇಶ್ಯಾ ಮತ್ತು ಸಿಲೋನುಗಳಂತಹ ನೆರೆಯ ರಾಷ್ಟ್ರಗಳಿಂದಲೂ ವಿದ್ಯಾರ್ಥಿಗಳನ್ನೂ ರೋಗಿಗಳನ್ನೂ ಆಕರ್ಷಿಸುತ್ತಿದ್ದು, ಪೌರ್ವಾತ್ಯ ದೇಶಗಳಲ್ಲೇ ಉತ್ತಮವಾದುದೆಂದು ಗಣಿಸಲ್ಪಟ್ಟಿದೆ. ರೇಡಿಯೋಲೋಜಿಕಲ್ ಕಾರ್ಯದಲ್ಲಿ ಕೆಲವೊಂದು ಕ್ಷೇತ್ರದಲ್ಲಿ ಡಾ| ರೈಗಳಿಂದಾಗಿರುವ ಕೆಲಸವು ಆಮೆರಿಕ ಮತ್ತು ಪ್ರಿಟನ್ನುಗಳಂತಹ ವಿದೇಶಗಳಿಂದಲೂ ಮನ್ನಣೆ ಗಳಿಸಿದೆ. ಡಾ| ರೈಗಳೀಗ ಜುಲಾಯಿ ತಾ. 23ರಿಂದ 29ರ ವರೆಗೆ ಲಂಡನ್ನಿನಲ್ಲಿ ನೇರಲಿರುವ ಅಂತರಾಷ್ಟ್ರೀಯ ರೇಡಿಯೋಲಜಿ ಕಾಂಗ್ರೆಸಿಗೂ, ತಾ. 15ರಿಂದ 22ರ ವರೆಗೆ ಪ್ಯಾರಿಸಿನಲ್ಲಿ ನೇರಲಿರುವ ಅಂತರಾಷ್ಟ್ರೀಯ ಕೇನ್ಸರ್ ಕಾಂಗ್ರೆಸಿಗೂ, 'ಭಾರತೀಯ ರೇಡಿಯೋಲೋಜಿಕಲ್ ಸಂಸ್ಥೆ'ಯ ಅಧಿಕೃತ ಪ್ರತಿನಿಧಿಯಾಗಿ ಮದ್ರಾಸು ಸರಕಾರದಪ್ರತಿನಿಧಿಯಾಗಿಯೂ ಆರಿಸಲ್ಪಟ್ಟಿದ್ದಾರೆ. ಇವೆರಡು ಸಮ್ಮೇಳನ ನಡೆಸಲ್ಪಟ್ಟ ನಂತರ ಇವರು ಇಂಗ್ಲಾಂಡು ಮತ್ತು ಇತರ ದೇಶಗಳಲ್ಲಿರುವ ಪ್ರಸಿದ್ಧ ಕೇನ್ಸರ್ ಚಿಕಿತ್ಸಾ ಕೇಂದ್ರಗಳನ್ನು ಸಂದರ್ಶಿಸಲಿದ್ದಾರೆ. ಇವೆಲ್ಲಾ ಸಂಚಾರ ಗಳಲ್ಲೂ ಡಾ. ರೈಗಳ ಸಮರ್ಥಸಹಧರ್ಮಿಣಿಯೂ ದ ಶ್ರೀಮತಿ ಎಂ. ಲಲಿತಾ ರೈಗಳು ತನ್ನೆ ಪತಿಯ ಜತೆಯಲ್ಲೇ ಇರುವರು.

ಡಾ| ರೈಗಳು 'ಇಂಡಿಯನ್ ಜರ್ನಲ್ ಆಫ್ ರೇಡಿಯೋಲಜಿ' ಪತ್ರಿಕೆಯ ಮುಖ್ಯ ಸಂಪಾದಕರಾಗಿಯೂ ಇದ್ದಾರೆ. ಇವರ ಸಂಪಾದಕತ್ವದಲ್ಲಿ ಈ ಪತ್ರಿಕೆಯು ಆತ್ಯಂತ ಗೌರವಾರ್ಹ ಶಾಸ್ತ್ರೀಯ ಪತ್ರಿಕೆಯೆಂಬ ಖಾಸ್ಯತೆ ಪಡೆದನ್ನು ಗಳಿಸಿಕೊಂಡಿದೆ.

ಡಾ| ರೈಗಳು ಇದೇ ತಾ. 6ರಲ್ಲಿ ಮದ್ರಾಸಿನಿಂದ ಜೋಂಬಾಯಿಗೆ ಹೊರಡುವಾಗ ವಿಮಾನ ನಿಲ್ದಾಣದಲ್ಲಿ ಅವರ ಸ್ನೇಹಿತರೂ ಬಂಧುಗಳೂ ಬಹು ಸಂಖ್ಯೆಯಲ್ಲಿ ನೆರೆದು ಬಂದಿದ್ದರು. ಮರುದಿನ ಜೋಂಬಾಯಿ ಯಿಂದ ಜಿನೆವಕ್ಕಾಗಿ ವಿಮಾನ ಹತ್ತಿದರು. ಪ್ಯಾರಿಸಿನಲ್ಲಿ ಆರನೇ ಅಂತರಾಷ್ಟ್ರೀಯ ಕೇನ್ಸರ್ ಕಾಂಗ್ರೆಸಿಗೂ, ಲಂಡನ್ನಿನಲ್ಲಿ ಆರನೇ ಅಂತರಾಷ್ಟ್ರೀಯ ರೇಡಿಯೋಲಜಿ ಕಾಂಗ್ರೆಸಿಗೂ ಹಾಜರಾದ ಮೇಲೆ ಕೇಂಬ್ರಿಡ್ಜ್, ಶೆಫೀಲ್ಡ್, ಎಡಿನ್‌ಬರ್ಗ್, ಗ್ಲಾಸ್ಗೊ, ಸ್ಟೋಕ್ ಜೋನರ್, ಕೋಪನ್‌ಹೇಗನ್, ಆಮ್‌ಸ್ಟರ್ಡಮ್, ಬ್ರುಸೆಲ್ಸ್, ಜಿನೆವ, ಬೋರ್ನೆ, ಬಸೆಲ್, ಝುರಿಚ್, ಲುಝರ್ನಾಯಿ ಮತ್ತು ಇಂಟರ್‌ಲೇಕನ್ ಮೊದಲಾದ ಸ್ವಿಟ್ಸರ್ಲೆಂಡಿನ ನಗರಗಳನ್ನು ನೋಡಿಕೊಂಡು, ಇಟಲಿಯ ಇತರ ಕೆಲವುಪದರ್ಶನೀಯ ಸ್ಥಳಗಳ ಸಮೇತ ರೋಮ್ ನಗರದ ವರೆಗೂ ಸಂಚಾರ ಮಾಡಿ ಬರಲಿದ್ದಾರೆ.

ಮಂಗಳೂರು

ಮಂಗಳೂರು ರೇಶನಿಂಗ್ ಆಫೀಸರರು ಈ ಮೂಲಕ ಸಮಸ್ತ ಜನತೆಗೆ ತಿಳಿಯಪಡಿಸುವುದೇನೆಂದರೆ— ಯಾರಾದರೂ ಈ ಮೊದಲು ಸುಳ್ಳು ರೇಶನ್ ಕಾರ್ಡುಗಳನ್ನು ಪಡೆದಿದ್ದರೆ ಅಥವಾ ಸುಳ್ಳು ಹೆಸರುಗಳನ್ನು ಸೇರಿಸಿದ್ದರೆ, ಅಂಥಾ ಕಾರ್ಡುಗಳನ್ನು ಇದೇ ಜುಲೈ 10ರಿಂದ ಆಗೋಸ್ತು 31ರ ಒಳಗೆ ಸಂಬಂಧಪಟ್ಟ ರೇಶನಿಂಗ್ ಆಫೀಸರರಿಗೆ ಒಪ್ಪಿಸಿದಲ್ಲಿ ಅಥವಾ ದುರಸ್ತಿಪಡಿಸಿಕೊಂಡಲ್ಲಿ ಅಂಥಾ ಕಾರ್ಡುದಾರರ ಮೇಲೆ ಏನೂಕೂಡಾ ಕ್ರಿಮಿನಲ್ ವ್ಯವಹಾರಣೆ ನಡೆಸೋದಾಗಲಿ ಅಥವಾ ದಿಲ್ಲ. ಸದ್ರಿ ವ್ಯವಧಿಯೊಳಗೆ ಅಂಥಾ ಕಾರ್ಡುಗಳನ್ನು ದುರಸ್ತಿಪಡಿಸದಿದ್ದಲ್ಲಿ ಸಂಬಂಧಪಟ್ಟ ಕಾರ್ಡುದಾರರ ಮೇಲೆ ಕಠಿಣ ವ್ಯವಹಾರ ನಡಿಸಲಾಗುವುದೆಂತು.

ಮಂಗಳೂರು— ದ. ಕ. ಜಿಲ್ಲಾ ಪದ್ಮಶಾಲಿ ಸಮಾಜ ಸೇವಾ ಸಂಘ, (ರಿಜಿಸ್ಟರ್ಡ್) ಮೊಂಬ್ಯಾ ವಿಜ್ಞಪ್ತಿ ಮಂಗಳೂರು— ಈ ಸಂಘದ ವಿದ್ಯಾನಿಧಿಯಿಂದ ಸಮಾಜದ ಬಡ ವಿದ್ಯಾರ್ಥಿಗಳಿಗೆ ಯೋಗ್ಯತಾನುಸಾರ ಸಹಾಯಧನ ಕೊಡಬೇಕಾಗಿ ತಾ. 2-7-50ರಲ್ಲಾ ಸೇರಿದ ಅಧಿಕಾರಿ ವರ್ಗದ ಸಭೆಯು ನಿರ್ಣಯಿಸಿರುತ್ತದೆ. ಜಿಲ್ಲೆಯ ಸಮಾಜ ಬಂಧುಗಳಲ್ಲಿ ಈ ರೀತಿ ಸಹಾಯದ ಅಪೇಕ್ಷೆಪಡುವವರು ಸಂಘದ ಮೇಲಿನ ವಿಳಾಸಕ್ಕೆ ಎರಡಾಣೆ ಪಸ್ಟಾಲು ಚೀಟು ಲಗ್ತೀಕರಿಸಿ ಅರ್ಜಿ ಫಾರ್ಮುಗಳಿಗಾಗಿ ಕೂಡಲೇ ಬರಕೊಳ್ಳ ತಕ್ಕದ್ದು. ಎಲ್ಲಾ ಅರ್ಜಿಗಳು ತಾ.31-7-50ರ ಒಳಗೆ ಸಂಘದ ಕಾರ್ಯದರ್ಶಿಯರಿಗೆ ತಲ್ಪ ತಕ್ಕದ್ದು. ನಂತರ ಬರುವ ಅರ್ಜಿಗಳನ್ನು ಮನ್ನಿಸೋದಾಗಲಿಕ್ಕಿಲ್ಲ. ಜಿಲ್ಲೆಯ ಎಲ್ಲ ಪದ್ಮಶಾಲಿ ಉಪ ಸಂಘಗಳ ಅಧ್ಯಕ್ಷರುಗಳು ಮತ್ತು ದೇವಸ್ಥಾನಗಳ ಮೊಕ್ತೇಸರರು ಆಯಾಯ ಸಂಘ ದ ದೇವಸ್ಥಾನಗಳ ಎಲ್ಲಾ ಸದಸ್ಯರಿಗೆ ಈ ವಿಷಯ ಜಾಹೀರುಮಾಡಬೇಕಾಗಿ ಕೋರಲಾಗಿದೆ ಎಂದು ಸಂಘದ ಜೊತೆ ಕಾರ್ಯದರ್ಶಿಯರು ತಿಳಿಸುತ್ತಾರೆ.



Approved form by the Gov. of M
Certificated by the Agents
Ltd.,
Cipher Code, S K.

ಚ ಕನ್ನಡ

ಕುಂಬಳೆ–ಕುಂಬಳೆ ಫ್ರೀಸ್ಕೂಲಿನಲ್ಲಿ ಜೂನ್ ತಿಂಗಳಲ್ಲಿ ನಡೆದ ಮಾಮ್ಮು ಕೆಲಸಗಳು:– 1 ಮೂರು ಬಾವಿಗಳ ಕೆಲಸವು ಮುಗಿಸಲ್ಪಟ್ಟಿತು. 2 ಬುಲ್‌ಗ್ರೇಡಿನ ಸಹಾಯದಿಂದ ಸಾಧಾರಣ 2 ಎಕ್ರೆ ನೆಲವನ್ನು ಸಮತಟ್ಟು ಮಾಡಲಾಯಿತು. 3 ಕುಂಬ್ಡಾಜೆ ಗ್ರಾಮದಲ್ಲಿ ಎಂಡನೇ ಬಾರಿ D. D. T. "ಸ್ಪ್ರೆ" ಮಾಡಲಾಯಿತು. 4 ಗುದಿ ಕೈಗಾರಿಕೆ ಲೆಕ್ಕಪತ್ರಗಳು ತೆರೆಯಲ್ಪಟ್ಟು ಉತ್ತಮ ರೀತಿಯ ಹಾಕ್ಷರಗಳನ್ನು ಮಾಡಲು ಬೇಕಾದ ವಿಶಾಮಡು ಮಾಡಲಾಯಿತು. 5 ಪೆರ್ಲಾಲ ಗ್ರಾಮದಲ್ಲಿ 9ಕೂರಗರಕಳುಟುಂಬಗಳಿಗೆ ಮನೆ ಕಟ್ಟಿಸಲು ಬೇಕಾದ ಸ್ಥಳವನ್ನು ಪ್ರತ್ಯೇಕಿಸಿದಲಾಗಿದೆ. ಮನೆ ಕಟ್ಟಿಸಲು ಸಹಾಯವಾಗಿ ಗ್ರಾಮ ಸೇವಾ ಸಂಘದವರು ಅವರಿಗೆ ಹಾರೆ ಮತ್ತು ಸ್ಪಿಕ್ಕಾಸುಗಳನ್ನು ಒದಗಿಸಿಕೊಟ್ಟಿದ್ದಾರೆ.

ಮಲ್ಕಿ ಮತ್ತು ಮಂಜೇಶ್ವರ ಫಿರ್ಕಾಗಳು–ಗ್ರಾಮಗಳ ಲೆಕ್ಕಪತ್ರಗಳನ್ನು ತಯಾರಾಗುತ್ತಿವೆ.ಕಲೆಕ್ಟರರಿಂದ ಸ್ಕ್ರಿಪ್ಟ್ ರಜನರಿಗ್ರಾಂಟಿನ ಕೆಲವು ಕೆಲಸಗಳು ನಿರ್ಣಯಿಸಲ್ಪಟ್ಟಿವೆ.

ಮಂಡ್ಯೂರು–ಇಲ್ಲಿಯ ಗೌಡ ಸಾರಸ್ವತ ಸಮಾಜದ ವೃಮುಖರೂ, ಜನಪ್ರೀತರೂ ಆದ ಶ್ರೀಯುತ ಅಜ್ಜಣ್ಣ ಕಮಿಶ್ರಾಯರ ವೃದ್ಧಾಪ್ಯದ 78ನೇ ವಯಸ್ಸಿನಲ್ಲಿ ತಾ. 26-6-50ನೇ ಸೋಮವಾರ ದಿವಂಗತರಾದರು. ಶ್ರೀಯುತರು ದಿವಂಗತರಾದ ವಾರ್ತೆ ತಿಳಿದೊಡನೆ, ದುಃಖಸೂಚಕವಾಗಿ, ಇಡೀ ಪೇಟೆಯ ಅಂಗಡಿ ವ, ಹೋಟೆಲುಗಳೂ ಮುಚ್ಚಿದ್ದುವು. ಮೃತರು ತುಂಬಾ ಉಪಕಾರಿಗಳಾಗಿದ್ದರು. ಹರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯೀಯಲಿ.

ಪೆರ್ಡೂರು—ಇದೇ ತಾ. 6-7-50 ನೇ ಗುರುವಾರ ಇಲ್ಲಿ "ವನ ಮಹೋತ್ಸವ" ವನ್ನು ಶ್ರೀ ಎ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೀ ಎ.ಪಿ. ಕಲ್ಯಾಣಯವರು ವನ ಮಹೋತ್ಸವವನ್ನು ಆಚರಿಸುವ ಉದ್ದೇಶ, ರೀತಿಯನ್ನು ವಿವರಿಸಿದರು. ಅಧ್ಯಕ್ಷರು ವನಮಹೋತ್ಸವದ ಮಹತ್ವವನ್ನು ವಿವರಿಸಿದರು, ಮಕ್ಕಳಿಗೆ ಪಂಚಕಜ್ಜಾಯವನ್ನು ಹಂಚಿದ ನಂತರ, ಜನಗಣಮನದೊಡನೆ ಸಭೆ ಚದುರಿತು. ಸಭೆಯಲ್ಲಿ ರೈತರನ್ನು ಹೆಚ್ಚಾಗಿ ಸಸಿನೆಡುವಂತೆಯೂ, ಲೆಕ್ಕ ವನ್ನು ಒಪ್ಪಿಸುವಂತೆಯೂ ಕೇಳಿಕೊಳ್ಳಲಾಯಿತು.

ಇಲ್ಲಿಯ ಬಿ. ಇ. ಎಂ. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ, ಈ ಸಾರಿ ಈ. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ 13ಜನರ ಪೈಕಿ 12ಜನರು ತೇರ್ಗಡೆಯಾಗಿರುವರು.(ಶೇ.92) ಇಬ್ಬರು ವಿದ್ಯಾರ್ಥಿಗಳು ಲೆಕ್ಕದಲ್ಲಿ ನೂರು ಮಕ್ಕಳು ತೆಗೆದಿದ್ದಾವರು ಮತ್ತು ಇಂಗ್ಲಿಷಿನ ಪ್ರಶ್ನಾಲಂಗಳಲ್ಲಿ ಎರಡು ಪೈಕಿ ಒಂದಕ್ಕೆ ಉತ್ತರಿಸಿ ವೀಕ್ಷಯಿಸಿದ್ದಾರೆ.

ತೆಕ್ಕಟ್ಟೆ—ಇದೇ ತಾ. 2ನೇ ಭಾನುವಾರ ಉಪಾಧ್ಯಾಯ ಇಚ್ಛೆಯ ಹಾಯರ್ ಎಲಿಮೆಂಟರಿ ಶಾಲಾ ವತಿಯಿಂದ ವನಮಹೋತ್ಸವ ಸಂಭ್ರಮದಿಂದ ಎಗ್ರಿಕಲ್ಚರಲ್ ಸ್ಪೆಶಲಿಸ್ಟ್ ಶ್ರೀ ಕುಂದಾಪುರದ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರವರುಗಳ ನೇತೃತ್ವದಲ್ಲಿ ವನಮಹೋತ್ಸವ ಸಮಾರಂಭವು ಜರಗಿತು. ಸಭಾಧ್ಯಕ್ಷತೆಯನ್ನು ಸ್ಥಳೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಟಿ. ಎಸ್. ನಾರಾಯಣರಾಯರು ವಹಿಸಿದ್ದರು. ಊರಪರವೂರ ರೈತಮಹನೀಯರ ಸೇರುವಿಕೆಯಿಂದ ಶಾಲಾ ಬಾಲಕರಿಂದ ಕೃಷಿಗೀತ ಹಾಡಿಸುತ್ತಾ ಬ್ಯಾಂಡುವಾದನದೊಂದಿಗೆ ಊರಿನಲ್ಲಿ ಪೆರವಣಿಗೆ ಹೋಗಿಬಂದು ಶಾಲಾ ವತಾವರಣದಲ್ಲಿ ಮತ್ತು ಆಸುಪಾಸು ಸಸಿಗಳನ್ನು ನೆಡಲಾಯಿತು. ನಂತರ ಕೂಡಿದ ಸಾರ್ವಜನಿಕ ಸಭೆಯಲ್ಲಿ ಎಗ್ರಿಕಲ್ಚರಲ್ ಆಫೀಸರರೂ ರೆವಿನ್ಯೂ ಇನ್ಸ್‌ಪೆಕ್ಟರರೂ ಕೃಷಿಸಂಬಂಧ ಅನುಭವಗಳನ್ನು ಸಭಿಕರ ಮನಮುಟ್ಟುವಂತೆ ವಿವರಿಸಿ ಸಲಹೆಕೊಟ್ಟ ನಂತರ, ಸಭಿಕ ರಲ್ಲಿ ಶ್ರೀಗಳಾದ ಗೋಪಾಲ ಶ್ಯಾನುಭಾಗ್, ಶಿವರಾಮಸೆಟ್ಟಿ, ಪರಿವಾಸ ಪಣಿಯಪ್ಪ ಭಟ್ಟರು, ಮಾಸ್ತರ್ ಗೋವಿಂದಸೆಟ್ಟಿರು ಸಮಯೋಚಿತ ಭಾಷಣ ಮಾಡಿದರು. ಸಿಹಿತಿಂಡಿ ಹಂಚಿದ ನಂತರ ಸಭಾ ವಿಸರ್ಜನೆ ಗೊಂಡಿತು.

ಮೂಡು ಪೆರಂಪಳ್ಳಿ–ಇಲ್ಲಿಯ ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ಜುಲ್ಯಾ ೫ನೇ ಗುರುವಾರ ೧೯೫೦ ವಿದ್ಯಾಭ್ಯಾಯಿನ ಸಮಸ್ತ ಪೆರ್ಲಾಲ್ಲಾ ಎಂಬಿ ಹೆಸರಿನಿಂದ ರಂಕ್ರಿ ಶಾಲೆಯು ಪ್ರಾರಂ. ಎಸ್. ಮಂಜುನಾಥ ತಿಂತ್ರಾಯರ ಆಧ್ಯಾಪಕತ್ವದಲ್ಲಿ ಪ್ರಾರಂಭವಾಗಿದೆ.

ಬೈಂದೂರು—ಸ್ಥಳೀಯ ಪ್ರಹಾಜನರು ರಚಿಸಿದ 'ವನಮಹೋತ್ಸವ ಕಮಿಟಿಯು ವರು' ಸಸಿ ನೆಡುವ ದಿನಾಚರಣೆಯನ್ನು ತಾ. 2-7-50ರಲ್ಲಿ ಬೋರ್ಡು ಹಿರಿಯ ಶಾಲಾ ವರಾಂಡದಲ್ಲಿ ಮಳೆಗಾಳಿಯನ್ನುದೆ ಬಯ ಪ್ರೀತಿಯಿಂದ ಕುಂದಾಪುರದಿಂದ ಬಂದ R. D. O. ಶ್ರೀ ಸಿ. ಎಸ್. ತಿಮ್ಮಪ್ಪ ಶೆಟ್ಟರವರ ಅಧ್ಯಕ್ಷತೆಯಲ್ಲಿ ಎಲ್ಲಿಡೆಯಲ್ಲೂ ಮೊದಲಿಗೆ ಆಲ್ಲಲ್ಲಿ ಸಸಿನೆಡುವ ಸಂಭ್ರಮ, ಇವು ಗಳಿಂದಾಗಿ ಬಹು ವಿಜೃಂಭಣೆಯಿಂದ ನರವೇರಿತು. ಅಧ್ಯಕ್ಷರು ಸರಳವಾದ ಅಜ್ಜರಿಗೂ ತಿಳಿಯುವ ತಿಳಿಗನ್ನಡದಲ್ಲಿ, ಸಂಕಲಿದ ವಿವಿಧೋದ್ದೇಶಗಳನ್ನು ತಿಳಿಸಿ, ಎಲ್ಲರೂ ಆಯಗಳ ಪ್ರಯೋಜನ ಪಡಯಬೇಕಾಗಿ ಹೇಳಿದರು. ತಾವು ಪಜ್ಜೆ ಗಿಡಗಳನ್ನು ನೆಟ್ಟು, ತಮ್ಮದೇ ಸಂಕಾಲ್ಪ ಯಥಾಶಕ್ತಿ ಸಹಾಯ ಮಾಡುವುದಾಗಿ ಸಭಿಕರು ಭಂಡಸಿಯಿತ್ತರು. ಧನ್ಯವಾದಾರ್ಪಣೆಯಾದ ಮೇಲೆ ಸಭೆಯು ಶಾಲಾ ಮಕ್ಕಳಿಗೆ ಮಿಠಾಯಿ ಹಂಚಿ ಮುಕ್ತಾಯಗೊಂಡಿತು.

ಫರಂಗಿಪೇಟೆ–ಇಲ್ಲಿಯ ಶ್ರೀ ರಾಮಾ ಹಾ. ಎ॥ ಶಾಲೆಯಲ್ಲಿ ತಾರೀಖು5-7-50ನೇ ಬುಧವಾರ ಶ್ರೀ ಎಸ್. ಯು. ಪರಶುರಾಮ ನಾಯರ್, ಮಂಗಳೂರು ರೆ. ಡಿ.ಆಫೀಸರ ರವರ ಅಧ್ಯಕ್ಷತೆಯಲ್ಲಿ "ವನಮಹೋತ್ಸವ" ದಿನಾಚರಣೆಯು ಜರಗಿಸಲ್ಪಟ್ಟಿತು. ಆ ದಿನ ಸಂಜೆ ಘಂಟೆ3-30ಕ್ಕೆ ವಿದ್ಯಾರ್ಥಿಗಳೂ ಊರವರೂ ಸೇರಿ ನೆಡುವ ಸಸಿಗಳ ಸಮೇತ ಊರಲ್ಲಿ ಮೆರವಣಿಗೆ ಬಂದು ಘಂಟೆ 5ಕ್ಕೆ ಸಭೆಸೇರಿ ಅಧ್ಯಕ್ಷರು ರಾಷ್ಟ್ರಧ್ವಜದ ಮಹತ್ವವನ್ನು ತಿಳಿಸಿ, ಧ್ವಜವನ್ನು ಅರಳಿಸಿದ ಬಳಿಕ ಶಾಲಾ ಮಕ್ಕಳಿಂದ ವಂದೇಮಾತರಂ ಹಾಡಲ್ಪಟ್ಟಿತು. ನೆರೆದಸಭಿಕರಲ್ಲಿ ಪುದುಬೋರ್ಡು ಶಾಲಾ ಹೆಡ್ಮಾಸ್ಟರ್ ಶ್ರೀ.ಯಸ್. ನರಸಿಂಹಯ್ಯನವರೂ ಸಬ್ರಿ ಶಾಲಾ ಸಹಾಯಧ್ಯಾಪಕರುಗಳಾದ ಶ್ರೀ.ಯಸ್- ಕೃಷ್ಣಭಟ್ರು, ಶ್ರೀ. ಎ. ಗುಮ್ಮಣ್ಣ ಶೆಟ್ರು,ಬಂಟ್ವಾಳ ಡಿ.ಇಂಡೀ ಲ್ಲಾ೦ರಾದ ಜನಬಿ ಬಿಮ್ಮಾ ಸಾಹೀಬರೂ, ಶ್ರೀ ವೈ ಗೋಪಾಲ್, ಬಿ.ಯು.ಎಲ್.ಟಿ ಮುಂಗಳೂರು ರೇಂಜಿನ ಶಾಲೆಗಳ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರರೂ ಆದಿನ ಸಭೆಯು ಬಂಧಿತು ಮಾತನಾಡಿದ ಬಳಿಕ ಅಧ್ಯಕ್ಷರು ತಮ್ಮ ಹೊಕ್ಕವಾದ ಮಾತುಗಳಿಂದ ಸುಂದಾಣ ಉಲ್ಲೇಖವಾದ ದೃಷ್ಟಾಂತಗಳ ಮೂಲಕ ಅನುಭವವನ್ನು ಕೂಟ್ಟ ಬಳಿಕ ಅಧ್ಯಕ್ಷರು ಸದ್ರಿ ಶಾಲಾ ವತಾವರಣದಲ್ಲಿಯೂ ಸ್ಥಳೀಯ ಮೊನಸ್ಮಿಯ ವತಾವರಣದಲ್ಲಿಯೂ ಹುಡು ಬೋರ್ಡು ಶಾಲಾ ವರಾಂಡದಲ್ಲಿಯೂ ಒಂದೊಂದು ತೆಂಗಿನ ಸಸಿಯನ್ನು ಸ್ವಹಸ್ತದಿಂದ ನಟ್ಟರು. ಉಳಿದ ಬಾಳೆ, ಮಾವು ಮೊದಲಾದ ಇತರ ಸಸಿಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ನೆಟ್ಟ ಬಳಿಕ ಶ್ರೀ ಎ. ನಾರಾಯಣ ಹೆಗ್ಡೆಯವರಿಂದ ಆಂದಿನ ಅಧ್ಯಕ್ಷರಿಗೂ ಆ ದಿನಾಚರಣೆಯನ್ನು ಜರಗಿಸಲು ಸಹಕರಿಸಿದವರಿಗೂ ವಂದನೆಗಳನ್ನರ್ಪಿಸಿದ ಬಳಿಕ ಜನಗಣಮನದೊಂದಿಗೆ ಸಭಾಂತ್ಯ ವಾಯಿತು.

ಸಾಲಿಗ್ರಾಮ–ಸ್ಥಳೀಯ ಪಂಚಾಯತ ಬೋರ್ಡಿನ ಸಂಯುಕ್ತಾಶ್ರಯದಲ್ಲಿರುವ ಎಲ್ಲಾ ಶಾಲೆಗಳಲ್ಲಿ ವನಮಹೋತ್ಸವವು ಉಡುಸಿ,ಶಾಲೂಕು ಉತ್ತರ ಶ್ರೇಣಿಯ ಪರೀಕ್ಷಾಧಿಕಾರಿ ಶ್ರೀ ಟಿ. ಎಲ್. ರಾವ್, ಬಿ.ಎ.ಎಲ್.ಟಿ., ಇವರ ಸನ್ನಿಧ್ಯದ ಅಧ್ಯಕ್ಷತೆಯಲ್ಲಿ ತಾ. 1ರಂದ 7ರ ವರೆಗೆ ಬಹು ವಿಜೃಂಭಣೆಯಿಂದ ಜರಗಿತ್ತು. ಶಾಲಾ ಮಕ್ಕಳ ಮತ್ತು ಸಾರ್ವಜನಿಕರಿಂದ ಕೂಡಿದ ಮಂಡಪಗೆಗಿಯಿಂದ ದೇವಸ್ಥಾನ, ಶಾಲಾ ವತಾವರಣಗಳಲ್ಲಿಯೂ, ಬಾಸಿಗ ಹಿತ್ತಲುಗಳಲ್ಲಿಯೂ, ತೆಂಗು, ಮಾವು, ಹಲಸು, ಗೇರು ಮತ್ತು ಗಾಳಿ ಸಸಿಗಳನ್ನು ಧಾರಳವಾಗಿ ನಡಿಸಲಾಯಿತು. ಪ್ರತಿ ಶಾಲೆಯಲ್ಲಿಯೂ ಸಾರ್ವಜನಿಕ ಸಭೆಗಳನ್ನು ಜರಿಗಿಸಿ, ವನ ಮಹೋತ್ಸವದ ಉದ್ದೇಶಗಳ ಕುರಿತು ತಿಳಿಸಿ ಸಸಿ ಸಂಪತ್ತನ್ನು ಹೆಚ್ಚಿಸುವ ಕುರಿತು ಸಹಕರಿಸಬೇಕಾಗಿ ಕೇಳಿಕೊಳ್ಳಲಾಯಿತು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹರಿದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯ.ವದು ಸ್ತ್ರೀಯರ ಬಳಿಕೆಂವು ಸೆರಗು ಹೋಗುತ್ತಿದ್ದರೆ, ಹೊಲಿಕ ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂಸ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂದಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಖಡೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹೆಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ ಡಾವಣಗೆರೆ: ಡಾವಣಗೆ-ರಿ ಪ್ರೆಸ್. ನಂಜುಡೇಸ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡಕ್ಕ ಮಾಲಕರ ವಿಳಾಸ.

ಕೇವಣಸಿದ್ಧಪ್ಪ ಹಾಲಪ್ಪ ಡಾವಣಗೆರಿ,

ಆಯುರ್ವೇದ ಔಷಧಾಲಯ. ಗದಗ-

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಆಲ್ಲದೆ ಸ್ತ್ರೀಯರ ಬಳಕೆ ಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ:: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಹೂಲಕರು:—ಹಾಲಪ್ಪಾ ಹಕೀರಪ್ಪಾ ಡಾವಣಗೆರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಶಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೆರಿ ಡಾವಣಗೆರಿ:—ಡಾವಣಗೆರಿ ಪ್ರೆಸ್ಸ್ ಆರ್ ಎಲ್ ಕವಲಜಾಣ ,ಕೆಮಿಸ್ಟ್, ಡಾವಣಗೆರಿ ಬ್ಯಾಡಗಿ



GD

ನಮ್ಮಲ್ಲಿ ಸಿಕ್ಕುತ್ತದೆ.

ಲಿಮಿಟೆಡ್

ತ್ರ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು,ಫಾಯಗಳು, ಬಾತುಕೊಳ್ಳುವುದು, ಚೇಳವಿಷವುಂತಾದವು, ಪಕ್ಷವಾತ,ಮೂಡಿಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷ್ನರಿಗಳು

ಪೊರೆಯುತ್ತವೆ.

ಬೆಲೆ. ರೂ. 5 0 0

ಸರಿಗನ್ನಡ ಅರ್ಥಕೋಶ 4 8 0

ನವಯುಗ ಪ್ರೆಸ್, ಉಡುಪಿ.

ಋತುಸ್ರಾವ ನಿಂತಿತು

'ಋತುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುತ್ತದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವುಯಿಲ್ಲ. ಸಾವಿರಾರು ಮಂದಿಗೆ ಪಾತ್ರಿ ಗುಣವಾಗಿದೆ—ಬೆಲ್ಲೆ ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.

ಆಹಾರದಲ್ಲಿ ಸ್ವಾವಲಂಬನೆ

ಹೆಚ್ಚು ಬೆಳೆಯುವ ಯೋಜನೆಗಳೇ

ಇಂದಿನ ಕಠಿಣ ಪರಿಸ್ಥಿತಿಯ ನಿವಾರಕಗಳು

ಈ ಆಹಾರ ಧಾನ್ಯ ಉಪಯೋಗಿಸಲ್ಪಡುವ ಪ್ರಮಾಣದಲ್ಲಿ ಪ್ರಜೆಗಳನ್ನು ಸಾಕುವ ಮನುಷ್ಯ ಉದ್ದೇಶದಿಂದಲೇ ಸಂಕಾರವು ಸ್ವಯಂಪೂರ್ಣತೆಯ ಯೋಜನೆಯನ್ನು ತಯಾರಿಸಿದುದಾಗಿದೆ. ಇದಲ್ಲದೆ ಈಗಿನ ಆಹಾರ ಪ್ರಮಾಣದಲ್ಲಿ ಕ್ರಮೇಣ ಏರುತ್ತಿರುವ ಜನ ಸಂಖ್ಯೆಗೆ ಆಹಾರ ಒದಗಿಸುವುದೂ ಈ ಯೋಜನೆಯಲ್ಲಿ ಆಡಕವಾಗಿದೆ. ಇಷ್ಟು ಮಾತ್ರವಲ್ಲದೆ 1951ರ ನಂತರ ಪರದೇಶಗಳಿಂದ ಆಹಾರವಸ್ತುಗಳನ್ನು ತರಿಸುವುದಿಲ್ಲ.

ಆದುದರಿಂದ ಆಹಾರೋತ್ಪತ್ತಿ ಬಳವಳದ ಯೋಜನೆಗಳನ್ನು ಈಗಿನ ಕಠಿಣ ಪರಿಸ್ಥಿತಿಯನ್ನು ನಿವಾರಿಸುವ ಉಪಾಯಗಳನ್ನಾಗಿ ತಿಳಿಯಬೇಕಾಗಿದೆ. ತ್ವರಿತದಲ್ಲಿ ಫಲಕೊಡುವ ಹಾಗೂ ಶಾಶ್ವತವಾಗಿರುವ ಉಪಾಯಗಳ ನ್ನೇ ಕೈಕೊಳ್ಳಬೇಕು. ಆಮದುಗಳನ್ನು ನಿಲ್ಲಿಸುವ ನಿರ್ದಿಷ್ಟ ಗುರಿಯಿಂದಾಗಿಯೇ ಧಾನ್ಯಗಳ ಉತ್ಪತ್ತಿಯ ಕಡೆಗೆ ಹೆಚ್ಚಿನ ಗಮನ ಕೊಡುವುದು.

ಅಧಿಕೋತ್ಪಾದಕ ಕೃಷಿ

ಯುದ್ಧ ಪೂರ್ವದಲ್ಲಿ ಹಿಂದುಸ್ಥಾನವು ಬರ್ಮಾ ದೇಶದಿಂದ ಅಕ್ಕಿ ಆಮದು ಮಾಡುತ್ತಿತ್ತಾದರೂ, ಜಪಾನೀಯರು ಬರ್ಮಾ ದೇಶವನ್ನು ಸ್ವಾಧೀನಪಡಿಸಿ ಆಹಾರ ಆಮದು ಒಮ್ಮೆಗೇ ನಿಂತು ಹೋದಾಗ ನಮ್ಮಲ್ಲಿ ಆಹಾರದ ಸಮಸ್ಯೆಯು ಕಠಿಣವಾಯಿತು. 1943 ರಿಂದ ಇದು ಹಿಂದುಸ್ಥಾನದ ಸಮಸ್ಯೆಗಳಲ್ಲಿ ಅತಿ ಪ್ರಾಮುಖ್ಯದ್ದಾಗಿದೆ. ಹಿಂದುಸ್ಥಾನ ಸರಕಾರವು 1943ರಲ್ಲಿಯೇ ಹೆಚ್ಚು ಆಹಾರ ಬೆಳೆಯುವ ಬಳವಳವನ್ನು ಪ್ರಾರಂಭಿಸಿತು. ಇದರ ಪ್ರಕಾರ ಅಧಿಕೋತ್ಪಾದಕ ಸಾಗುವಳಿಯ ಮೂಲಕವೂ ವ್ಯಾಪಾರ ಪೈರು ಬೆಳೆಯುವಲ್ಲಿ ಆಹಾರ ಪೈರು ಬೆಳೆಯುವುದರ ಮೂಲಕವೂ ಆಹಾರೋತ್ಪತ್ತಿಯನ್ನು ಹೆಚ್ಚಿಸುವ ಬಗ್ಗೆ ಪ್ರಚಾರಪತ್ರಿಕೆಯಲ್ಲಿ ಹಲವಾರು ಯೋಜನೆಗಳಿದ್ದುವು ಆದರೆ 1947ರ ವರೆಗೆ ಹೆಚ್ಚು ಆಹಾರ ಬೆಳೆಯುವ ಬಳವಳಕ್ಕೆ ಒಂದು ನಿರ್ದಿಷ್ಟ ಹಂಚಿಕೆಯಿರಲಿಲ್ಲ. 1947ರಲ್ಲಿ ಪ್ರತಿ ಸಂಸ್ಥಾನವೂ ಪ್ರಾಂತವೂ ಕನಿಷ್ಠಪಕ್ಷ ಇಂತಿಷ್ಟೇ ಹೆಚ್ಚಿಗೆ ಆಹಾರ ಉತ್ಪತ್ತಿ ಮಾಡಬೇಕೆಂದು ಗೊತ್ತುಪಡಿಸಲಾಯಿತು. ಇದು ವರ್ಷಗಳ ಯೋಜನೆ ಸ್ರಕಾರ ಪ್ರಾಂತಗಳು ಮೂರು ಮಿಲಿಯ ಟನ್ನುಗಳಷ್ಟೂ ಸಂಸ್ಥಾನಗಳು ಒಂದು ಮಿಲಿಯ ಟನ್ನುಗಳಷ್ಟೂ ಉತ್ಪತ್ತಿ ಮಾಡಬೇಕಾಗಿತ್ತು. 1951-52ರ ಅಂತ್ಯದೊಳಗೆ ಈ ೨ ವರ್ಷಗಳ ಯೋಜನೆಯು ಪೂರ್ತಿಯಾಗುವಂತೆ ನಿರೀಕ್ಷಿಸಲಾಗಿತ್ತು.

ಪರಿಷ್ಕೃತ ಯೋಜನೆ

ತನ್ನಷ್ಟೇ, ದೇಶದ ವಿಭಜನೆಯೂ ಹೆಚ್ಚಿಬ್ಬು ಆಹಾರ ಆಮದುಗಳೂ ನಮ್ಮ ವಿಜೇತೀ ಎಕ್ಸ್‌ಚೇಂಜ್ ಮೂಲಗಳನ್ನು ಭರದಿಂದ ಕೆಡಿಸಲಾರಂಭಿಸಿದವು. ಈ ರೀತಿಯಲ್ಲಿ ಪರದೇಶಗಳಿಂದ ಆಕ್ಷಧಿಕ ಪ್ರಮಾಣದಲ್ಲಿ ಆಹಾರ ವಸ್ತು ತರಿಸುತ್ತಾ ಬಂದರೆ ಹಿಂದುಸ್ಥಾನದ ಆರ್ಥಿಕ ವ್ಯವಸ್ಥೆ ಸಂಪೂರ್ಣ ನಾಶವಾಗಿ ಹೋಗುವುದೆಂದು ಹಿಂದುಸ್ಥಾನ ಸರಕಾರವು ಮನಗಂಡಿರುವುದರಿಂದ ಭಾರತ ಪ್ರಧಾನ ಮಂತ್ರಿಯವರು ಳಳದ ವರ್ಷ 1951ರೊಳಗೆ ಆಹಾರ ವಸ್ತುಗಳ ಆಮದು ರದ್ದಾಗಬೇಕೆಂದು ಸಾರಿದರು. ಆದರೊಳಗೆ ಆಹಾರದಲ್ಲಿ ಸಯದಲ್ಲಿ ಹಿಂದುಸ್ಥಾನವು ಸ್ವಯಂಪೂರ್ಣವಾಗಬೇಕೆಂದು ಏನಂತಿಸಿದರು. ಆದಕ್ಕನುಸಾರವಾಗಿ ಹಿಂದುಸ್ಥಾನ ಸರಕಾರವು ವಿವಿಧ ಸ್ಥಾಂತಿಕ ನಿತ್ತು ಸಂಸ್ಥಾನಿಕ ಸರಕಾರಗಳೊಡನೆ ಪರ್ಯಾಲೋಚಿಸಿ, ಆಹಾರೋತ್ಪತ್ತಿಯ ಕುರಿತು ಪರಿಷ್ಕೃತ ಕಾರ್ಯಕ್ರಮವನ್ನು ತಯಾರಿಸಿತು. 1947-48ನ್ನು ಮೂಲ ವರ್ಷವನ್ನಾಗಿ ತಿಳಿದುಕೊಂಡು, ಈಗಿನ ಆಹಾರ ವಿತರಣೆ ಪ್ರಮಾಣದಂತೆ 1952ರಲ್ಲಿ 4½-5 ಮಿಲಿಯ ಟನ್ನುಗಳಷ್ಟು ಆಹಾರ ಧಾನ್ಯ ಕಡಿಮೆಬೀಳಬಹುದೆಂದು ಅಂದಾಜು ಮಾಡಲಾಗಿದೆ.

ಸುಧಾರಿತ ಕೃಷಿಗೆ ಸಹಾಯ

ನಮ್ಮ ದೇಶದ ಒಟ್ಟು ಉತ್ಪತ್ತಿಯಲ್ಲಿ ಶೇಕಡ 10ರಷ್ಟಾಗುವ ಈ ಕೊಂತೆ ಪ್ರಮಾಣವನ್ನು ಭರ್ತಿಮಾಡುವ ಬಗ್ಗೆ ಹಿಂದುಸ್ಥಾನ ಸರಕಾರವು ಅನೇಕ ಆಹಾರೋತ್ಪತ್ತಿ ಯೋಜನೆಗಳನ್ನು ಪರಿಶೀಲಿಸಿರುತ್ತದೆ. ದೇಶದ ಇಂದಿನ ಪರಿಸ್ಥಿತಿ ಪ್ರಕಾರ ಅಂತಹ ಯೋಜನೆಗಳು ಅಲ್ಪ ಕಾಲಾವಧಿಯಪುಗಳಾಗ ಬೇಕಾಗಿವೆ. ಹಿಂದುಸ್ಥಾನದ ಫಸಲು ಯುರೋಪಿಯನ್, ಅಮೇರಿಕನ್ ದೇಶಗಳಂತಿರಲಿ, ಚೈನಾ, ಜಪಾನು ದೇಶಗಳ ಫಸಲಿಗಿಂತಲೂ ಕಡಿಮೆ. ಆದುದರಿಂದ ಹಿಂದುಸ್ಥಾನದಲ್ಲಿ ಉತ್ಪತ್ತಿ ಹೆಚ್ಚಿಸುವ ಅತಿ ಪ್ರೌಢ ಕ್ರಮಗಳೆಂದರೆ ಉತ್ತಮ ಕ್ರಮಗಳಲ್ಲಿ ಸಾಗುವಳಿ ಮಾಡಿ ಎಕರೆಯ ಫಸಲನ್ನು ಹೆಚ್ಚಿಸುವುದು. ಇವನ್ನು ಶಾಶ್ವತ, ಪುನರಾವರ್ತಕ ಎಂದು ಎರಡು ವರ್ಗಗಳಾಗಿ ವಿಗಂಡಿಸಬಹುದು. ಅನೇಕ ವರ್ಷಗಳವರೆಗೆ ಎಕರೆಗೆ ಹೆಚ್ಚಿಗೆ ಫಸಲು ಕೊಡುವುಗಳು ಶಾಶ್ವತ ಸುಧಾರಣೆಗಳು. ಎಂದರೆ—(ಅ) ಸಣ್ಣ ನೀರಾವರಿ ಕೆಲಸಗಳು, (ಆ) ಭೂಮಿ ಸುಧಾರಣಾ ಕೆಲಸಗಳು. ಎಕರೆಗೆ ಫಸಲು ಹೆಚ್ಚುತ್ತಾ ಹೋಗುವಂತೆ ವರ್ಷದಿಂದ ವರ್ಷಕ್ಕೆ ಕೆಲಸವನ್ನು ಮುಂದರಿಸುವುದು ಮತ್ತು ತೀವ್ರಗೊಳಿಸುವುದು. ಇವು ಪುನರಾವರ್ತಕ ಸುಧಾರಣೆಗಳು. ಈ ಪುನರಾವರ್ತಕ ಯೋಜನೆಗಳು ಮುಖ್ಯವಾಗಿ, (ಅ) ಉತ್ತಮ ಜಾತಿಯ ಬೀಜಗಳ ಉತ್ಪತ್ತಿ ಮತ್ತು ವಿತರಣೆ, (ಆ) ರಾಸಾಯನಿಕ ಗೊಬ್ಬರ ಮತ್ತು ಸೊಪ್ಪು ಗೊಬ್ಬರ ಹಾಕುವುದು, (ಇ) ಗದ್ದೆಗಳ ಕಸಕಡ್ಡಿ ಮತ್ತು ಪಟ್ಟಣಗಳ ಹೊಲಸುಗಳಿಂದ ಮಿಶ್ರಗೊಬ್ಬರ ತಯಾರಿಸಿ ಗದ್ದೆಗೆ ಹಾಕುವುದು, (ಈ) ಕಸಿಗಳ ರಕ್ಷಣೆ, ಇವುಗಳಿಗೆ ಸಂಬಂಧಿಸುತ್ತದೆ.

ಈ ಅಧಿಕೋತ್ಪಾದಕ ಸಾಗುವಳಿ ಕ್ರಮಗಳನ್ನು ಅನುಸರಿಸುವುದರಿಂದ ಪ್ರಾಂತಗಳೂ ಸಂಸ್ಥಾನಗಳೂ ಎಸ್ಟು ಹೆಚ್ಚಿಗೆ ಉತ್ಪತ್ತಿಯನ್ನು ಸಾಧಿಸಿಕೊಳ್ಳಬೇಕೆಂದು ಗೊತ್ತುಪಡಿಸಲಾಗಿದೆ. ಈ ವಿಷಯದಲ್ಲಿ ಆಯಾಯ ಸರಕಾರಗಳಿಗೆ ಅವುಗಳ ಉತ್ಪಾದಕ ಸಾಮರ್ಥ್ಯವನ್ನು ಎಣಿಸಿಕೊಳ್ಳಲು ಅವಕಾಶ ಕೊಡಲಾಗಿತ್ತು. ಈ ಪ್ರಮಾಣಗಳನ್ನು ಆಹಾರೋತ್ಪತ್ತಿಯ ಕಾರ್ಯಕ್ರಮಕ್ಕೆ ಬೇಕಾದ ಹಣ, ಜನ, ಅವಶ್ಯಕ ವಸ್ತುಗಳು ಪೂರ್ಣ ಜೊರಯುವಂತೆ ಭರವಸೆಯಿಂದ ಗೊತ್ತುಪಡಿಸಿದುದಾಗಿದೆ.

ಹೀಗೆ 1951ರ ಅಂತ್ಯದ ವರೆಗೆ ಪ್ರತಿ ಬೆಳೆಯ ಬಗ್ಗೆ ಕನಿಷ್ಠ ಮಿತಿಯ ಉತ್ಪತ್ತಿಯನ್ನು ತಯಾರಿಸಲಾಗಿದೆ. ಇವು ತಾತ್ಕಾಲಿಕವಾದುವುಗಳು. ಇವನ್ನು ಪರಿಷ್ಕರಿಸುವುದು ಅವಶ್ಯ. ಉದಾಹರಣೆಗಾಗಿ, ಒಳ್ಳೆಯ ಮಳೆ ಬಂದರೆ ಒಂದು ವರ್ಷದಲ್ಲಿ ಸುಳಿಯಲ್ಲದ ಇನ್ನೊಂದು ವರ್ಷಕ್ಕಿಂತ ಒಳ್ಳೆಯ ಫಸಲು ದೊರೆಯಬಹುದು. ಇದೇ ರೀತಿ ಈ ವರ್ಷದಂತೆ ಅಧಿಕ ಪರಿಸ್ಥಿತಿ ಕೆಟ್ಟ ಸಮಯ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳು ರೈತರಿಗೆ ಸಾಕಷ್ಟು ಆರ್ಥಿಕ ಸಹಾಯ ಕೊಡದುದರಿಂದ, ಸಾಕಷ್ಟು ನೌಕರರನ್ನು ನೇಮಿಸದುದರಿಂದ ಫಲವಾಗಿ ಫಸಲು ತಗ್ಗಬಹುದು. ಹೀಗಿರುವುದರಿಂದ ಅಧಿಕೋತ್ಪಾದಕ ಸಾಗುವಳಿ ಕಾರ್ಯಕ್ರಮವಂದಾಗಿ ಯಾವ ವರ್ಷದಲ್ಲಿ ಎಷ್ಟು ಹೆಚ್ಚಿಗೆ ಆಹಾರ ಧಾನ್ಯ ಬೆಳೆಯಬೇಕೆಂದು ಖಂಡಿತ ನಿರ್ಣಯಿಸಲು ಸಾಧ್ಯವಿಲ್ಲ.

ಬಂಜರು ಭೂಮಿ ಸುಧಾರಣೆ

ಬಂಜರು ಭೂಮಿಗಳನ್ನು ಸುಧಾರಿಸುವುದೂ ಅವುಗಳಲ್ಲಿ ಸಾಗುವಳಿ ಮಾಡುವುದೂ ಆಹಾರೋತ್ಪತ್ತಿ ಕಾರ್ಯಕ್ರಮದ ಇನ್ನೊಂದು ಭಾಗ. ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರ್, ಮಧ್ಯಭಾರತ, ವಿಂಧ್ಯಪ್ರದೇಶ ಮೊದಲಾದ ಕಡೆಗಳಲ್ಲಿ ಸಾಚಿತುಂಬಿದ ವಿಶಾಲ ಭೂಮಿಗಳಿವೆ. ಇವನ್ನು ಟ್ರಾಕ್ಟರ್‌ಗಳ ಮೂಲಕ ಸಾಗುವಳಿ ಯೋಗ್ಯವನ್ನಾಗಿ ಮಾಡಬಹುದು. ಉತ್ತರ ಪ್ರದೇಶದ ಗಂಗಾ ಬಿದಿರ್ ಎಂಬಲ್ಲಿಯೂ ಮಧ್ಯ ಪ್ರದೇಶದ ಸೊಗರ್ ಮತ್ತು ಹೊಶಂಗಾಬಾದ್ ಜಿಲ್ಲೆಗಳಲ್ಲಿಯೂ ಯಂತ್ರಗಳ ಸಹಾಯದಿಂದ ಬಂಜರು ಭೂಮಿ ಸುಧಾರಿಸಿ ಗಳಿಸಿದ ಅನುಭವವು ಅತಿ ಉತ್ತೇಜಕವಾಗಿದೆ. ಈ ಕೆಲಸವು ಅಮೇರಿಕದಿಂದ ಆಮದು ಮಾಡಿದ 375 ದೊಡ್ಡ ಟ್ರಾಕ್ಟರುಗಳ ಸಹಾಯದಿಂದ ನಡೆಯುವುದು.

ಹೀಗೆ ಅಧಿಕೋತ್ಪಾದಕ ಸಾಗುವಳಿಯ ಕಾರ್ಯಕ್ರಮದಿಂದ ಸಂಸ್ಥಾನಗಳಲ್ಲೆಲ್ಲಾ ನಮಗೆ ದೇಶಾದ ಹೆಚ್ಚಿಗೆ ಆಹಾರ ಉತ್ಪತ್ತಿಯಾಗುವುದೆಂದು ನಿರೀಕ್ಷಿಸಲಾಗಿದೆ. ಆದಕ್ಕಾಗಿ ಕೊಂತ ಪ್ರಮಾಣಗಳನ್ನು ಜಾಗ್ರತೆಯಿಂದ ಎಣಿಸಲಾಗಿದೆ. ಕೂಲಂಕುಷ ಹಂಚಿಕೆಗಳನ್ನು ತಯಾರಿಸಲಾಗಿದೆ. ಉತ್ಪಾದನೆ ಉಪಯೋಗಗಳೊಳಗಿನ ಅಂತರವು ಹೆಚ್ಚಿಲ್ಲ.

(ಮ. ಸ.)

ರೇಶನಿಂಗ್ ಪ್ರಕಟಣೆ

ತಮ್ಮ ಮೇಲೆ ರೇಶನ್ ಮೊಕದ್ದಮೆಯು ನಡಿಸಲಾದೀತು ಎಂಬ ಭಯದಿಂದ ಕೆಲವು ಕಾರ್ಡುದಾರರು ತಮ್ಮ ಮನೆಯಲ್ಲಿ ಇಲ್ಲದವರ ಯಾ ಮನೆಬಿಟ್ಟು ಹೋದವರ ಯಾ ಮೃತಪಟ್ಟವರ ರೇಶನ್ ಪದಾರ್ಥವನ್ನು ತಮ್ಮ ಕಾರ್ಡುಗಳಿಂದ ಕಡಿಮೆ ಮಾಡಿಸಲಿಲ್ಲ ವೆಂದೂ ಮತ್ತು ಅಂತಹ ತಪ್ಪಿತಸ್ಥರ ಮೇಲೆ ಮೊಕದ್ದಮೆ ಹೂಡುವುದಿಲ್ಲವೆಂಬ ಭಾವನೆಯನ್ನು ಸರಕಾರವು ಕೊಟ್ಟಲ್ಲಿ ತಮ್ಮ ತಪ್ಪುಗಳನ್ನು ಒಪ್ಪಿ ತಮ್ಮ ಕಾರ್ಡುಗಳನ್ನು ಸರಕಾರವು ಸೂಚಿಸಿದ ತಾರೀಕಿನ ಒಳಗೆ ತಿದ್ದುಪಡಿ ಮಾಡಿಸಿಕೊಳ್ಳಲೆಂದೂ ಮದ್ರಾಸ್ ಸಿವಿಲ್ ಸಪ್ಲೈಸ್ ಕಮಿಶನರರ ಸಮಕ್ಷಮಕ್ಕೆ ಪದೇ ಪದೇ ತಿಳಿದುಬಂದಿದೆ. ಈ ಮೇರೆಗೆ ಮದ್ರಾಸ್ ಸಿವಿಲ್‌ಸಪ್ಲೈಸ್ ಕಮಿಶನರರು ಎಲ್ಲಾ ಜನರಿಗೆ ಈ ಮೂಲಕ ಭಾವನೆ ಕೊಡುವುದೇನೆಂದರೆ ತಾರೀಕು 1-7-50ರಿಂದ ತಾರೀಕು 31-8-50ರ ವರೆಗೆ ಕಳ್ಳ ರೇಶನ್ ಕಾರ್ಡುಗಳನ್ನು ರೇಶನ್ ಆಫೀಸಿಗೆ ಸ್ವಬುದ್ಧಿಯಿಂದ ಮುಟ್ಟಿಸಿದಲ್ಲಿ ಮತ್ತು ಮನೆಯಲ್ಲಿ ಇಲ್ಲದವರ ಯಾ ಮನೆಬಿಟ್ಟು ಹೋದವರ ಯಾ ಮೃತಪಟ್ಟವರ ರೇಶನನ್ನು ಸ್ವಬುದ್ಧಿಯಿಂದ ಕಡಿಮೆ ಮಾಡಿಸಿದಲ್ಲಿ ಇಂತಹ ಕಾರ್ಡುದಾರರ ಮೇಲೆ ಯಾವತ್ತೂ ರೇಶನ್ ಮೊಕದ್ದಮೆಯನ್ನು ಹೂಡುವುದಿಲ್ಲ. ಆದರೆ ತಾರೀಕು 1-9-50ರಿಂದ ರೇಶನ್ ಕಾನೂನು ಕಾಯಿದೆಗಳನ್ನು ಉಲ್ಲಂಘಿಸಿದ್ದು ಕಂಡುಬಂದಲ್ಲಿ ಕಠಿಣ ಕಾರ್ಯಕ್ರಮವನ್ನು ಕೈಕೊಳ್ಳಲಾದೀತು. ಆದುದರಿಂದ ಸರ್ವರೂ ಈ ಸುಸಂದರ್ಭವನ್ನು ಉಪಯೋಗಿಸಿ ಕಳ್ಳಕಾರ್ಡುಗಳನ್ನು ರೇಶನ್ ಆಫೀಸಿಗೆ ಮುಟ್ಟಿಸಬೇಕಾಗಿಯೂ ಮತ್ತು ತಮ್ಮ ಕಾರ್ಡುಗಳನ್ನು ತಿದ್ದುಪಡಿ ಮಾಡಿಸಬೇಕಾಗಿ ವಿನಂತಿ. ಎಂದು ಸಂಬಂಧಪಟ್ಟ ಅಧಿಕಾರಿಗಳ ಪ್ರಕಟಣೆಯಿದೆ.

ತಾರಾನಾಥ ಆಯುರ್ವೇದ ವಿದ್ಯಾಪೀಠ

ಬಳ್ಳಾರಿ

ಈ ವಿದ್ಯಾಪೀಠವು ಎಂದಿನಂತೆ ಜುಲಾಯಿ 15ನೇ ತಾರೀಕಿಗೆ ತೆರೆಯಲ್ಪಡುವುದು. ಹೊಸತಾಗಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಅರ್ಜಿಗಳು ಆ ಮೊದಲು ವಿದ್ಯಾಪೀಠದ ಕಾರ್ಯಾಲಯಕ್ಕೆ ಮುಟ್ಟುತಕ್ಕದ್ದು. ವಿದ್ಯಾರ್ಥಿಗಳು ಕನಿಷ್ಠ ಮೆಟ್ರಿಕ್ ಪರೀಕ್ಷೆ ಪಾಸಾದವರಿರತಕ್ಕದ್ದು. ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಕುರಿತು ಅವರಿಗೆ ತಿಳಿಸಲಾಗುವುದು

ಬಳ್ಳಾರಿ,
30—6—50

ಕಾರ್ಯದರ್ಶಿ.

ಬಡಿಸುಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕಲಿದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಆದಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೋಪ್ರೈಟರ್:— ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ವರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

"ಯಾರು ಹೆಚ್ಚು ಯಾರು ಕಡಿಮೆ? ಕಡಿಮೆ, ಗಿಡಮೆ, ಹೆಚ್ಚು, ಗಿಚ್ಚು ಇದೆಲ್ಲ ಸೈಯೋಳಾಟ" ಹೀಗೆಂದು ಕ್ರೀರ್ಮಾ ಬೇಂದ್ರೆ ಕವಿಗಳು ಉನ್ಗಾರ ತೆಗೆದಿರುವರು. ಈ ಜಗತ್ತಿನಲ್ಲಿ ಇಂದಿನ ದಿನದ ಕೂಸನ್ನು, ಮುಂದಿನ ದಿನದ ಸಾಮ್ರಾಜ್ಞನನ್ನು ಆಳಲು ಸುಸಜ್ಜಿತ ರೀತಿಯಿಂದ, ಅಳಿಕೆಯ ಸಾಮರ್ಥ್ಯದಿಂದ ಬುದ್ಧಿ ಕಲಿಸುವವಳಾದ ತಾಯಿಯೇ ದೊಡ್ಡವಳು. ಈ ತಾಯಿಯೇ ಕಂಟುಂಬದಲ್ಲಿ ಸಮಾಜದಲ್ಲಿ, ದೇಶದಲ್ಲಿ, ಸರ್ವ ಶ್ರೇಷ್ಠಳು ಈ ತಾಯಿಯೇ ತಾನು ಮೊದಲು ಒಬ್ಬರಿಗೆ ಸೊಸೆಯಾಗಿ ಪುನಃ ತನ್ನ ಮಗನ ಹೆಂಡತಿಗೆ ಅತ್ತೆಯಾಗುವಳು. ಆದರೆ ಅತ್ತೆ ಸೊಸೆಯರು ಕುಟುಂಬದ ಅಧಿದೇವತೆಯರು ಎಂಬ ತಪ್ಪಿ ನಡೆದದ್ದಾದರೆ ಕುಟುಂಬದ ವಿಧಿ ಲಕ್ಷ್ಯಗಳಾಗುವದು. ಇವರು ಮನೆತನದಲ್ಲಿ ಒಬ್ಬರಿಗೊಬ್ಬರು ಒಲಿಯುತ್ತ ಹೋದರೆ ಭಾಗ್ಯದ ಲಕ್ಷ್ಮಿಯಾಗುವರು. ಒಲಿಯದಿದ್ದರೆ ಮಾರಿಯಾಗುವರು. ಒಳ್ಳೆ ನಾರಿಯರಾದ ಅತ್ತೆ ಸೊಸೆಯರು ಸ್ವರ್ಗ ಸುಖವನ್ನೇ ಮನೆಯಲ್ಲಿ ತಂದು ಇರಿಸಬಲ್ಲರು. ಒಲಿಯದಿದ್ದರೆ ಆ ಮನೆತನವನ್ನೇ ಸ್ಮಶಾನವನ್ನಾಗಿ ಮಾಡಬಲ್ಲರು. ಮುಖ್ಯವಾಗಿ ಈ ಲೇಖನದಲ್ಲಿ ಅತ್ತೆ ಸೊಸೆಯರಿಬ್ಬರ ಕುಂದು ಕೊರತೆಗಳನ್ನೂ ವಾದ ವಿವಾದಗಳನ್ನೂ ಎತ್ತಿ ತೋರಿಸಬೇಕಾಗಿದೆ.

ಅತ್ತೆ ಸೊಸೆಯರ ಜಗಳವು ಪೂರ್ವ ಕಾಲದಿಂದ ಬಂದಿದ್ದು. ಈ ಕಲಿಯುಗದಲ್ಲಿ ಯಂತೂ ಅದು ತೀರ ವಿಕೋಪಕ್ಕೆ ಹೋಗಿದೆ. ಅತ್ತೆಯಾದವಳು ತನ್ನ ಮನೆಯಲ್ಲಿ ತಾನೇ ಶ್ರೇಷ್ಠ ಳೆಂದೂ ಸೊಸೆ ತನ್ನ ಮಾತನ್ನು ಕೇಳಬೇಕೆಂದೂ ಪಾಡಿಸುವಳು. ಅತ್ತೆಯಳೇ ಸುಶೀಲಳೂ ಶೀಲವಂತಳೂ ಸಾಧ್ವಿಯೂ ಮತ್ತು ಸುಸಂಸ್ಕೃತಳೂ ಇದ್ದರೆ ನೆಟ್ಟಗೆ. ಅತಿಕ್ಷಿತಳಿದ್ದರೆ ವ್ಯರ್ಥವಾಗಿ ಸ್ವಾರ್ಥದಿಂದ ತನ್ನ ಪಟವನ್ನೇ ಸಾಧಿಸಿ ಸೊಸೆಯು ತನ್ನ ಮಾತನ್ನು ಕೇಳಲೇಬೇಕೆಂದೂ ತನ್ನಲ್ಲಿ ದೇವದತ್ತ ಅಧಿಕಾರವಿರುವದೆಂದೂ ನಾದಿಸಿದರೆ ಕೇಳುವರಾರು? ಹಾಗೆ ವಾದಿಸುತ್ತ ಹೋದರೆ ಆ ಮನೆತನದ ಅವನತಿಯು ಪ್ರಾರಂಭವಾಯಿತೆಂದೇ ತಿಳಿಯಬೇಕು. ಸೊಸೆಯು ಸುಶಿಕ್ಷಿತಳಿದ್ದರೆ ಒಂದು ನೇರೆ ತನ್ನ ಅತ್ತೆಯ ಸರಿಯಾದ ಮಾತು ಕೇಳಬಹುದು. ಆದರೆ ಸೊಸೆಯು ಅತಿಕ್ಷಿತಳಿದ್ದರೆ ಆವರಿಬ್ಬರಿಗೂ ಕೂಡುವ ಬಗೆ ಹೇಗೆ? ಸೊಕ್ಕಿನಿಂದ ತಾರುಣ್ಯದ ಮದದಿಂದ ದುರ್ಗುಣದಿಂದ ಕೂಡಿದವಳು ಅಗಿದ್ದರೆ ಆ ಮನೆತನದ ಹುಣ್ಣಿಮೆ ಮುಗಿಯಿತೆಂದು ತಿಳಿಯಬೇಕು. ಅಕೆಯು ತನ್ನ ಶೀಲವನ್ನು ಪುರುತು, ಕುಟುಂಬದ ಮುಂದಿನ ಸಮಾಜದ ಕಟ್ಟು ನಿಟ್ಟು, ರೀತಿ ನೀತಿಗಳನ್ನು ಮರೆತು ನಡೆದರೆ ಕುಟುಂಬವು ಶ್ರೀಭ್ರದಲ್ಲಿಯೇ ಹಾಳಾಗುವದು. ಸೊಸೆಯು ಅತ್ತೆಯು ಕೂಡ ವಿಧೇಯತನದಿಂದ ನಡೆಸುಕೊಳ್ಳುವದು ಮುಖ್ಯ ಕತ್ತ. ವ್ಯ. ಅತ್ತೆಯು ಸೊಸೆಯನ್ನು ಸಮತಾ ದೃಷ್ಟಿಯಿಂದ ತನ್ನ ಮಗು ಪಿಸಂತೆ ನೋಡುವದು ಪವಿತ್ರ ಕರ್ತವ್ಯವಾಗಿದೆ. ವಿನಾಕಾರಣವಾಗಿ ಮಗನ ಮಾತು ಕೇಳಿ ಅದಲ್ಲ, ದ್ರೌಪದಿ, ಸೀತಾ, ತಾರಾ, ನಂದೋದರಿಯರಂತೆ ವರ್ತಿಸಬೇಕು ಹೆಮ್ಮಡ್ಡಿ ಮಾಲ್ಲಮ್ಮರಂಥ ಸೊಸೆಯಿಂದಬೇಕು. ಶ್ರೇಷ್ಠ ಪತಿಗಳ ಪತ್ನಿಯಂತೆ ಅತ್ತೆಯಾಗಿರಬೇಕು. ಅತ್ತೆ ಸೊಸೆಯಿಬ್ಬರು ಎಲ್ಲ ರೀತಿಯಿಂದ ಸಾಮರಸ್ಯವಾಗಿ ನಡೆದದ್ದಾದರೆ ಆವರ ಮನೆತನವು ಲಕ್ಷ್ಮೈಸ್ವರ್ಯ ಸಂಪತ್ತಿನ ತವರುಮನೆಯಾಗುವದು. ಅದರೆ ಮಾಡುವದೇನು, ಎತ್ತ ಎರಿಗೆ ಎಳೆದರೆ ಕೋಣ ಕೆರೆಗೆ ಎಳೆಯುವದು' ಎಂಬ ಮಾತಿನಂತೆ ಅತ್ತೆ ಸೊಸೆಯರು ನಡೆದರೆ ಆ ಕುಟುಂಬದ ಪುಣ್ಯವು ತೀರಿತೆಂದೇ ತಿಳಿಯಬೇಕು. ಮೊದಲಿನ ಕಾಲದಲ್ಲಿ ಒಂದೊಂದು ಮನೆಯಲ್ಲಿ ೫೦-೬೦ ಜನರು ಕೂಡಿ ಇರುತ್ತಿದ್ದರು ಹಿರಿಯರಾದ ತಂದೆ ತಾಯಿಗಳೇ ಮುಖ್ಯಸ್ಥರಾಗಿ ಪ್ರಪಂಚವನ್ನು ಸಾಗಿಸುತ್ತಿದ್ದರು ಅದರೆ ಈಗೆದ್ದಿದೆ? ಎಲ್ಲರು ವಿಪರೀತ ಕುಟುಂಬದಲ್ಲಿ ಇಬ್ಬರು ಕೂಡಿ ಇರುವದು ಸದ ಅಪರೂಪವಾಗಿದೆ. ಪತಿಯು ಹೆಂಡತಿಯ ಮಾತನ್ನು ಕೇಳಿ ಹಿರಿಯರಲ್ಲಿ ಪೂಜ್ಯ ಭಕ್ತಿಯನ್ನು ಇಡದ ಮನಬಂದಂತೆ ವರ್ತಿಸುತ್ತಿದ್ದಾನೆ, ಅತ್ತೆಯು ಕುತಂತ್ರದಿಂದ ಅಜ್ಞಾನ ಮತ್ತು ಸ್ವಾರ್ಥದಿಂದ ಸೊಸೆಯ ಮೇಲೆ ಅನೇಕ ಆರೋಪಗಳನ್ನು ಹೊರಿಸಿ ಬೈಗಿಗೆ ಎಳೆಯುತ್ತಿದ್ದಾಳೆ. ಇಬ್ಬರೂ ಅಧಮರಂತೆ ವರ್ತಿಗಪತ್ತಿದಂ ಸಮಾಜವು ಸುಧಾರಿಸುವದೆಂತು? ಯಾವ ಮನೆತನದಲ್ಲಿ ಅತ್ತೆ ಸೊಸೆಯರಿಬ್ಬರು ಒಮ್ಮನಸ್ಸಿನಿಂದ, ಪ್ರಶಾಂತತೆಯಿಂದ ಸಮತೆಯಿಂದ, ಪ್ರಾಮಾಣಿಕತನದಿಂದ ನಡೆಯುವುದಿಲ್ಲವೋ ಅಂಥ ಮನೆತನವು ಎಂಗೂ ಮುಂದೆ ಬರದು. ಅತ್ತೆಯಾಗಲಿ, ಸೊಸೆಯಾಗಲಿ, ಮಹಾನುಭಾವಿಗಳಾದ ಬಸವಣ್ಣನವರು ಲೋಕದ ಜೊಂಕವನ್ನು ನೀವೇಕೆ ಅದ್ದುವಿರಯ್ಯಾ ನಿಮ್ಮ ನಿಮ್ಮ ತನುವ ತಿದ್ದಿ ಕೊಳ್ಳಿರಿ, ನಿಮ್ಮನಿಮ್ಮ ಮನವತಿದ್ದಿಕೊಳ್ಳಿರಿ" ಹೀಗೆಂದು ಆದಿದಂತೆ ಅತ್ತೆ ಸೊಸೆಯಂಬ್ಬರು ತಮ್ಮತಮ್ಮ ತಪ್ಪು ತಪ್ಪಿಗೆಗಳನ್ನು ತಿದ್ದಿಕೊಳ್ಳದ, ತನುವ ಮನವ ಸರಿಪಡಿಸಿಕೊಳ್ಳದ ನಡೆದರೆ ತಮ್ಮ ಕುಟುಂಬ ಸಮಾಜಗಳಿಗೆ ದ್ರೋಹ ಬಗೆದಂತಾಗುತ್ತದೆ.

ಅದುದರಿಂದ ಸೊಸೆಯುಬುಕನಾಸ ಮುಂಕ್ರಿಯು ಚಂದ್ರಾಜ್ಞೀಡನಿಗೆ ಉಪದೇಶಿಸಿದಂತೆ "ನೂತನ ತಾರುಣ್ಯ, ಅನುಪಮ ಸೌಂದರ್ಯ, ಅಲೌಕಿಕ ಸಾಮರ್ಥ್ಯ, ಜಗಜ್ಜಾಲ ಶ್ರೀಮಂತತನ" ಇವುಗಳಲ್ಲಿ ಯಾವುದೊಂದೂ ಮನುಷ್ಯನಲ್ಲಿದ್ದರೆ ಕೆಡಿಸದೆ ಬಡಪ್ಪುವಂಬ ಮಾತನ್ನು ಲಕ್ಷ್ಯದಲ್ಲಿಡಬೇಕು ತನ್ನ ಕಣ್ಣು, ಮನಸ್ಸು, ನಾಲಿಗೆಗಳನ್ನು ಅಂಕಿತದಲ್ಲಿ ಟ್ಟುಕೊಂಡು ಸಚ್ಚಾರಿಗಳನ್ನು ಗೆದ್ದು ಸತ್ವರಾಜಸ ತಾಮಸ ಗುಣಗಳನ್ನು ತಿಳಿದುಕೊಂಡು ಸುಪತಿವ್ರತೆಯಾಗಿ ಕುಟುಂಬ ಸಮಾಜ ಲೋಕ ಋಣಾಣ ಕಾರ್ಯಗಳಲ್ಲಿ ಮನಸ್ಸು ತೊಡಗಿಸಬೇಕು. ಮುಂದಿನ ಮಂಗುಗಳಿಗೆ ಆದರ್ಶ ಮಾತೆಯಾಗಬೇಕು. ಕುಟುಂಬದಲ್ಲಿ ತಾನೇ ಚಿಟ್ಟಿನವ ಳೆಂದೂ ಎಲ್ಲಾ ಪ್ರಪಂಚವು ತನ್ನಿಂದ ನಡಯುತ್ತದೆಂದೂ ತಿಳಿದು ನಡೆಂಗಬಾರದು. ಅತ್ತೆಯು ಸಹ ಮನೆತನದಲ್ಲಿ ತಾನೇ ಹೆಚ್ಚಿನ ಜ್ಞಾನವಂತಳೆಂದೂ ಎಲ್ಲಾ ತನ್ನ ಅಲ್ಲದ ಸಲ್ಲದ ಮಾತುಗಳನ್ನು ಕೇಳಬೇಕೆಂದೂ ಸೊಸೆಯು ತನ್ನ ಗುಲಾಮಳೆಂದೂ ತಿಳಿಯಬಾರದು. ಸೊಸೆಗ ಸಾಮೋಪಾಯದಿಂದ ಬುದ್ಧಿ ಹೇಳಿ ಛೇದ ಬುದ್ಧಿಯನ್ನು ಎಂದಿಗೆ ಅಳಯನ್ನು ಎಳೆ ಮನಸ್ಸಿನಿಂದ ನೋಡಬೇಕು. ಮಂದಿಯ ಅಲ್ಲದ ಹೊಲ್ಲದ ಸಲ್ಲದ ಮಾತುಗಳನ್ನು ಕೇಳಿ ಅವಾದಗಳನ್ನು ಹೊರಿಸಬಾರದು. ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳು ನೊದಲೇ ಅತಿಕ್ಷಿತರಿರುವದರಿಂದ ಇಂಥ ಅಪವಾದಗಳಿಗೆ ಹಿಡಿದು ದುರ್ಮಾರ್ಗಿಣಿಕ್ಕೆ ತುತ್ತಾಗುತ್ತಿದ್ದಾರೆ. ಕಾರಣ ಅಮಂಧತಿ, ಲೋಪಾಮುದ್ರಾ, ಶಾಂತಿ ಮುಂತಾದ ಸಾಧ್ವಿ ಸ್ತ್ರೀಯರು ಪವಿತ್ರ ವಾರ್ಗದಂತೆ ನಡೆಯಬೇಕು. ನಂ ಹಜ್ಜಿ ನೀ ಕಡಿಮ ಅನ್ನುವದರಲ್ಲಿ ಪಸಿದೆ ರೀತಿಯಿಂದ ನಡೆದವರೇ ಹಿರಿಯರು ಮತ್ತು ಹಜ್ಜಿನವರು, ಅನೀತಿಯಿಂದ ನಡೆದವರೇ ಕಡಿಮೆಯವರು. ಅದುದರಿಂದ ಅತ್ತೆ ಸೊಸೆಯಿಬ್ಬರು ಮೇಲೆ ಹೇಳಿದಂತೆ ನಡೆದರೆ ಇಂದಿನ ಕುಟುಂಬ ಸಮಾಜದಲ್ಲಿ ಆಗುವ ಅನಾಹುತಗಳು ಕಡಿಮೆಯಾಗುವವು.

(ಜ. ಶ.)

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಮಹಿಳಾ ಪುಟ

ಯಾರು ಹೆಚ್ಚು?—ಯಾರು ಕಡಿಮೆ?

ಅತ್ತೆಯೊ? ಸೊಸೆಯೊ?

ಲೇಖಕರು—ಶ್ರೀ. ಎಸ್. ಎಂ. ಸುಬೇದಾರ್, ಬೈಲಹೊಂಗಲ

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಪಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಬಾಣಂತಿಯರ ಸಲು ಬಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘ ವಾದ ಮಧುರದ್ರವ್ಯ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಸೂಚನೆಗೆ—ಡಾ॥ ಯಂ. ಪಿ. ಶಾಸ್ತ್ರೀ, ಯಲ್ ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ॥ ಐ ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



Highly perfumed and medicated, worth using daily by one and all keeps hair black and relieves head-ache etc.

REGD

TRADE MARK

Manufactured by:-

Swadeshi Oushadhi Bhandara (Regd)

KUNJAL P. O. Brahmavar, S. K.

ವಿವಿಧ ಪಾತ್ರೆಗಳು

ಯಾನತೂ, ವಿಧದ ಬೆಳ್ಳಿ ತಾಮ್ರ, ಕಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಂ ಅಗಿ ಯಾಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618

LICENCE No. 31
Licensed to Post
without Prepayment

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

Estd: 1921 ಸ್ಥಾಪನೆ

30ನೇ ವರ್ಷ
20—7—1950

FOUNDER:
Sri. A. B. Shetty
Minister for Agriculture
& Veterinary

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ನವಯುಗ WEEKLY UDIPI, S. K.
Post Box No. 22

ವರ್ಷ 30 ವಾರ 42

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 47

ಅನಿಶ್ಚಿತ ಮಾನ, ಮುಷ್ಟಿ.

ಮನುಷ್ಯ, ಸಂಗತಿ ಮತ್ತು ನ್ಯಾಯದ ರೂಪರೇಷೆ ಯಾವ ಕಾಲದಲ್ಲಿ ಹೇಗಾದೀತೆಂಬುದನ್ನು ಊಹಿಸುವುದು ಕಷ್ಟ. ಎಷ್ಟೇ ದೊಡ್ಡ ಸಂಗತಿ, ನ್ಯಾಯಾನ್ಯಾಯ ಮತ್ತು ದೊಡ್ಡ ಮನುಷ್ಯಾದರೂ ಅಲ್ಪ ವಿಷಯ ಮತ್ತು ಅಗಣ್ಯರಾಗಿ ಮಾರ್ಪಡಬಹುದು; ತೀರಾ ಸಣ್ಣ ಸಂಗತಿ ಮತ್ತು ಅಲ್ಪರು ಕೂಡಾ ಮಹತ್ವದ ವಿಷಯ ಮತ್ತು ಮಹಾ ಮನುಷ್ಯರಾಗಿ ಬೆಳೆಯಬಹುದು. ಅಂತೂ ಇವುಗಳಲ್ಲಾವುದಕ್ಕೂ ಶಾಶ್ವತ ಮತ್ತು ಸಮಾನ ಬೆಲೆಯೆಂಬುದಿಲ್ಲ. ಈ ಅನಿಶ್ಚಿತತೆಯಿರುವುದರಿಂದಲೇ ಅಲ್ಪರು ಹಾಗೂ ಅಗಣ್ಯರಾಗಿರುವವರಲ್ಲಿ ಕೂಡಾ ಭಾವೀ ಹಿಂಮೆಯ ಭರವಸೆ—ಶ್ರೀಮಂತರು ಹಾಗೂ ಗಣನೀಯರಾಗಿರುವವರಲ್ಲಿಯೂ ಭಾವೀ ಪತನದ ಭಯ:—ಇರುವಂತಾಗಿದೆ. ಇಷ್ಟಾದರೂ ಸಮಾನವಾದ ಮಟ್ಟದಲ್ಲಿ ಪ್ರಪಂಚದ ತೂಕವಿದೆ.

ಭೂಗೋಲದಲ್ಲಿ ಕೊರಿಯವು ಅಗಣ್ಯವಾದೊಂದು ಭಾಗ. ಜೈನಾ ನುತ್ತರ ಕಡೆಗಳಲ್ಲಾದರೂ ಯುದ್ಧಗಳೊಡನೆ ಹೋರಲಿಸುವಾಗಲೂ ಕೊರಿಯದ ಸಮರವು ಸಣ್ಣ ಸಂಗತಿಯೆಂದೇ ತೋರುವುದು. ಈ ದೃಷ್ಟಿಯಿಂದು ಸ್ಥಳೀಯ ಕಲಹವಾಗಿಯೇ ಅಂತ್ಯಗೊಳ್ಳುವದು ಅಪೇಕ್ಷಣೀಯ ಮತ್ತು ಸಂಭವನೀಯವಾದರೂ ಇದು ಲೋಕ ಮಹಾಯುದ್ಧವಾಗಿ ಬೆಳೆಯುವ ಅವಾಯ ಕೂಡಾ ಇದ್ದೇ ಇದೆ. ಅಲ್ಪತ್ವ ಮತ್ತು ಮಹತ್ವ, ಎಂದೂ ಇಷ್ಟೆ.

ಒಂದು ಕಾಲದಲ್ಲಿ ಬರ್ಮಾ ಕೂಡಾ ಭಾರತದ ಅಂಗವಾಗಿಯೇ ಇದ್ದು, ಇವೆರಡೂ ಏಕಾಡಳಿತೆಯೊಳಗಿದ್ದವು. ಬರ್ಮಾವನ್ನು ಪ್ರತ್ಯೇಕ ರಾಷ್ಟ್ರವಾಗಿ ವಿಂಗಡಿಸಿದುದನ್ನು ಮಹಾ ಘಟನೆಯೆಂದು ಗಣಿಸಿ, ಅಂಬೋಲನವೆಬ್ಬಿಸುವುದಾದರೆ ಎಬ್ಬಿಸಬಹುದಿತ್ತು. ಆದರೆ ಅದನ್ನು ಅಷ್ಟೊಂದು ಗಣಿಸದೇನೇ ಸ್ವಾಭಾವಿಕ ಸಣ್ಣ ಸಂಗತಿಯೆಂದು ಭಾವಿಸಿ, ಮೌನವಾಗಿ ವಿಭಜಿಸಿಕೊಳ್ಳಲಾಗಿದ್ದಿತು.

ಭಾರತವೇ ಆಗಿದ್ದ ಪಾಕಿಸ್ತಾನ್ ವಿಭಜನೆಗಾಗಿ ನಡೆದಿದ್ದ ಗೊಂದಲಗಳೊಡನೆ, ಪಾಕಿಸ್ತಾನವಾಗಿ ಹೋದ ಸಾಧುಕೃತಿಗಳನ್ನು ಹೋಲಿಸುವಾಗ ಇವೆಡರೊಳಗೆ ಮಹದಂತರವಿದ್ದುದು ಕಂಡು ಬರುತ್ತದೆ. ಆದಿಭಾಗದಲ್ಲಿ ಪಾಕಿಸ್ತಾನ್ ಪ್ರಶ್ನೆಯು ಅತಿ ದೊಡ್ಡದೆಂದು ಗಣಿಸಿದ್ದುದು ಮತ್ತು ಕೊನೆಯ ಭಾಗದಲ್ಲಿ ಅದನ್ನೇ ಸ್ವಾಭಾವಿಕ ಸಂಗತಿಯೆಂದು ಕಡೆಗಣಿಸಿದ್ದುದೇ ಇಂತಹ ನ್ಯತ್ಯಾಶಕ್ಕೆ ಕಾರಣ.

ಸ್ವಾತಂತ್ರ್ಯ ಚಿರವಳಿಗಳ ಕಾಲದಲ್ಲಿ ಕಾಂಗ್ರೆಸಿಗರ ಸ್ಪರ್ತಿಯೊಂದು ನಾದಾ ಮಾತುಗಳು ಕೂಡಾ ಬ್ರಿಟಿಷ್ ಸರಕಾರಕ್ಕೆ ಆಕ್ಷೇಪಣೀಯವಾಗಿತೋರಿ ಜೈಲು ದ್ವಾರಗಳನ್ನು ಆಗಲವಾಗಿ ತೆರೆಯಿಸಿದ್ದುವು; ಆದರೆ ಶಾಂತ ಸಂಘಟನೆ ಕಾಲದಲ್ಲಿ ಅವುಗಳಿಗಿಂತಲೂ ಬಿರುಸಿನ ಕಾಂಗ್ರೆಸ್ ವಾಣಿಗಳು ಆಲೋಚನಾರ್ಹವಾಗಿ ತೋರಿ ವೈಸರಾಯಿ ಭವನದ ಬಾಗಿಲನ್ನು ತೆರೆಯಿಸಿದ್ದುವು.

ಸಾಮಾನ್ಯ ಕಾಲದಲ್ಲಿ ಯಾರೂ ಯಾವ ಬೆಲೆಯೂ ಕೊಡದ ಸಾಮಾನ್ಯ ಕಮ್ಯೂನಿಸ್ಟನ ಒರಟು ಮಾತುಗಳು ಇಂದು ಅತನನ್ನು ಜೈಲೊಳಗಿಡಿಸುವಷ್ಟು ಬೆಲೆ ಬಾಳುತ್ತಿವೆ. ಒಮ್ಮೆ ಬಹಿಷ್ಕಾರ ಬೀಳುವಷ್ಟು ಗಣ್ಯ ವಿರೋಧಿಗಳಾಗಿ ತೋರಿದ್ದ ಆರ್. ಯಸ್. ಯಸ್. ನಂಥವರ ಕವಾಯತು ಈಗ ಯಾವ ಬೆಲೆಯೂ ಬಾಳದೆ, ಯಾರನ್ನೂ ಆಕರ್ಷಿಸದೆ ನಡೆಯುತ್ತಾ ಇದೆ.

ನಾವು ಸದ್ಭಾವನೆ ಕಟ್ಟಿ ಕೊಂಡವರು ನಮ್ಮ ಕುರಿತು ಎಂತಹ ಕಟು ವ್ಯಂಗ್ಯೋಕ್ತಿಗಳನ್ನಾಡಿದರೂ ಅದನ್ನು ಸರಸ ವಿನೋದವೆಂದೇ ಗಣಿಸಿಕೊಳ್ಳುವೆವೆ. ಆದರೆ ದ್ವೇಷ ಅಥವಾ ದುರ್ಭಾವನೆಯು ದ್ವಲ್ಲಿ ಒಬ್ಬನು ಸಹಜವಾಗಿ ಆಡುವ ಮಾತುಗಳಿಗೂ ಅನ್ಯಾರ್ಥ, ವಿಪರೀತಾರ್ಥಗಳನ್ನು ಕಟ್ಟಿಕೊಳ್ಳುವದಿದೆ.

ಹಿಟ್ಲರ್ ಗೋಡೆಗಳಿಗೆ ಬಣ್ಣ ಬಳಿಯುತ್ತಿದ್ದ ಕಾಲದಲ್ಲಿ, ಇಡೀ ಭೂಗೋಲಕ್ಕೇ ನೇರಕ್ಕ ವರ್ಣ ಬಳೆಯುವ 'ಫ್ಯುರಾರ್' ಅವನಾಗುವನೆಂದು ನೆನಸಿದವರಿಲ್ಲ. ಆತ 'ಫ್ಯೂರಾರ್' ಆಗಿದ್ದ ಉನ್ನತಿಯ ಕಾಲದಲ್ಲಿ ತರಗೆಲೆಯಂತೆ ಕರಟಿ ಹೋಗುವ ಅಂತ್ಯವು ಅವನಿಗೊದಗಬಹುದೆಂದು ಊಹಿಸಿದವರಲ್ಲ. ಯುದ್ಧಾನಂತರಾಧಿಗಳಾಗಿ ಸಾಶಕ್ಕೆ ಕಂಠವೊಡಿದ ಯುದ್ಧ ನಾಯಕರುಗಳ ಜೀವನದಲ್ಲೂ ಇದೇ ಮಾದರಿಯ ಅನಿರೀಕ್ಷಿತ ಏರುತಗ್ಗುಗಳದ್ದೇ ಇದ್ದುವು.

1947ನೇ ಆಗೋಸ್ತು 15ರ ಮಧ್ಯರಾತ್ರಿ ನೆಹ್ರೂ ಮೇಲೆ ಕೂಡಾ, ಹಿಂದೀ ಆಶ್ವತಂತ್ರ್ಯರು ತಮ್ಮ ಇಂದಿನ ಭವಿಷ್ಯವನ್ನು ಊಹಿಸಿದುದಿಲ್ಲ. ಜಮೀನ್ದಾರ್ ವರ್ಗವಾದರೂ ಹೀಗೆಯೇ. ದೃಢವಾಗಿ ಆದರಿಸಿ ನಿಲ್ಲುವಂತಹದೇನಾದರೂ ದೊರಕುತಿದ್ದರೆ ತಮ್ಮ ಸ್ಥಾನಮಾನಗಳಿಗೆ ಬಿದ್ದ ಈ ಹೊಡೆತವನ್ನು ಅವರು ಎಷ್ಟು ಮಹತ್ವದ್ದೆಂದು ಗಣಿಸುತಿದ್ದರೆಂಬುದನ್ನೂ, ಇಂದಿನ ಅಸಹಾಯ ಸ್ಥಿತಿಯಲ್ಲಿ ಅವರೀ ಮಾರ್ಪಾಟುವು ಸ್ವಾಭಾವಿಕವೆಂದು ಹೇಗೆ ಸಮಾಧಿಕೊಂಡಿರುವರೆಂಬುದನ್ನೂ ತುಲನಾತ್ಮಕವಾಗಿ ನೋಡಿದರೆ ಅಲ್ಪ—ಮಹತ್ವ ವ್ಯತ್ಯಾಸವಿರುವುದೆಲ್ಲಿ ಎಂಬುದನ್ನು ಗೊತ್ತು ಹಚ್ಚುವುದು ಎಂದೆಂದಿಗೂ ಆಸಾಧ್ಯವೆಂಬುದು ಮಂದಟ್ಟಾಗಲೇಬೇಕು.

ಒಬ್ಬನನ್ನು ಕೊಲೆಮಾಡಿದರೆ, ಜಖಂಗೊಳಿಸಿದರೆ ಅಥವಾ ದರೋಡೆ ಮಾಡಿದರೆ, ಇವುಗಳ ವಿಚಾರಣೆ ಮತ್ತು ಶಿಕ್ಷೆಗಳೊಡನೆ ಜಾತೀಯ ಗಲಭೆಗಳ ಸಂಬಂಧವಾಗಿ ನಡೆದಿದ್ದ ಸಾಮೂಹಿಕ ಕೊಲೆ, ಸುಲಿಗೆ, ದರೋಡೆಗಳನ್ನು ಮತ್ತು ವುಗಳಗಿದೆ ಪರಿಮಾಣದ ವಿಚಾರಣೆ ಮತ್ತು ದಂಡನೆಗಳಲ್ಲುದ್ದಿದ್ದುದನ್ನು ಹೋಲಿಸಿದಲ್ಲಿ, ಕಾನೂನು ಮತ್ತು ನ್ಯಾಯಪಾಲನೆ ಕೂಡಾ ಸಂದರ್ಭಾನುಸಾರ ಎಂತಹ ಮೌಲ್ಯ ವ್ಯತ್ಯಾಸ ಗೊಳ್ಳುತ್ತದೆ ಎಂಬುದನ್ನು ಅರಿಯಬಹುದು.

ವ್ಯಕ್ತಿ—ವ್ಯಕ್ತಿಗಳು ರಸ್ತೇ ಜಗಳ ನಡೆಸಿದರದು ತಕ್ಷೀರು. ರಾಷ್ಟ್ರ—ರಾಷ್ಟ್ರಗಳು ಬಹಿರಂಗ ಯುದ್ಧ ಪ್ರಕಟಿಸಿದರೆ ಅದರ ಸ್ವರೂಪ ಬೇರೆಯೇ. ತನ್ನ ವೇಲಾತ ಅನ್ಯಾಯವಾಗಿ ಏರಿ ಬಂದವನೆಂಬ ಕಾರಣದಿಂದಾದರೂ, ಒಬ್ಬನನ್ನು ಸದೆಬಡಿದರೆ ಅದು ಕಾನೂನುಬಾಹಿರ; ವರ್ತನೆಯೆನ್ನಿಸಿ, ಅಲ್ಲಿ ಮೊಕದ್ದಮೆ ಹುಟ್ಟುತ್ತದೆ; ಆದರೆ ಅತಿಕ್ರಮ ಪ್ರವೇಶ ಮಾಡಿತೆಂಬ ಕಾರಣದಿಂದ ಒಂದು ರಾಷ್ಟ್ರವನ್ನು ಬಗ್ಗುಬಡಿಯುವುದು ಸರ್ವ ಸಮ್ಮತ ಮತ್ತು ಕ್ರಮಬದ್ಧವಾಗುತ್ತದೆ.

ಹಸಿವು ಪೀಡೆಯೇ ಕಾರಣವಾಗಿ ಕೆಸಿಗಳವು ಮಾಡಿದ ದಂಡ್ರು ವಂಚಕನೊಬ್ಬನಿಗೆ ದಂಡನೆ. ಮತ್ತು ಅಪಮಾನವಿದ್ದದ್ದೇ; ಆದರೆ ಲಾಭೋದ್ದೇಶದಿಂದ, ಅನ್ಯರ ಕೆಸಿಗೆ ಸರುವಂತಹದನ್ನು ತನ್ನ ಭಂಡಾರಕ್ಕೆಸೆದುಕೊಳ್ಳುವ ವಂಚಕನು, ಅದೇ ಯೋಗ್ಯತೆಯ ಬಲದಿಂದ ಮತ್ತಷ್ಟು ಮಾನ್ಯನೇ ಆಗುತ್ತಾನೆ.

ಶ್ರೀಮಂತನೊಬ್ಬನ ಹೆಣ, ಸೊತ್ತು ಗಳನ್ನು ಸಲಿದು ಜೀರ್ಣಾಸ್ಪತ್ರೆ, ಶಿಕ್ಷಣಗೊಳಗಾದ ಬಡವನು ನೀತಿಬಾಹಿರ, ಸಮಾಜ ಕಂಟಕನೆಂದು ತಿರಸ್ಕೃತರಿಸಲ್ಪಡುತ್ತಿರುವಷ್ಟು, ಸಾರ್ವಜನಿಕರನ್ನು ವಂಚಿಸಿ ಕಳ್ಳ ಸಂತೆ ನಡೆಸಿದ ಆದರ್ಶಧಾರಿಯಾಗಿ ಜುಲ್ಮಾನೆ, ಶಿಕ್ಷೆಗಳಿಗೊಳಗಾದವರು ಹೀನರೀತಿ ಗಣಿಸಲ್ಪಡುತ್ತಿಲ್ಲ.

ಅನ್ಯರು ಮಾಡಿಟ್ಟುದನ್ನು, ಅವರ ಇಚ್ಛೆಗೆ ವಿರೋಧವಾಗಿ ಉಪಯೋಗಿಸು

(ಮೇಲೆ ಹುಟ್ಟು ನೋಡಿರಿ)

"ಬೇರೆ ಶಾಸ್ತ್ರಗಳನ್ನೆಲ್ಲೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು—ವಿ। ಹೊಸಕೆರೆ ಚಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವು ಪಾತುಗಾರಿಕೆಯ ನಾತುಗಳ ರೂಪದಲ್ಲಿಳಿದೆ—ಭಟ್ಟಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು
ಬುಕ್‌ವೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಭೂಗೋಲಕ್ಕೇನೇ ಬಾಯಿ ಹಾಕಿ ರಶ್ಯಾ-ಇಕ್ಕಡೆಯ ಬಲಾಬಲ ಎಲ್ಲೆಲ್ಲಿ ಹೇಗಿದೆ?

ರೈಲಿರಿಯದ ಯುದ್ಧಖೈದಿಗಳ 'ಮುಂದೇನಾಗುವುದೋ!' ಎಂಬ ಆತಂಕದಲ್ಲಿ ಇಡೀ ಪ್ರಪಂಚದಲ್ಲಿ ನಿರ್ಮಾಣವಾದ ಅಪಾಯಕಾರಿ ಜಾಗತಿಕ ಪರಿಸ್ಥಿತಿಯ ಬಗ್ಗೆ ಯಾವ ಮೂರನೇ ಜಾಗತಿಕ ಯುದ್ಧವಾಗಿ ಬೆಳೆಯಬಹುದೆಂಬ ಭೀತಿಗಳಿಗೆ ಕಾರಣವಿಲ್ಲವೆಂದು ಹೇಳುತ್ತಿದ್ದರೆ, ಲೋಕದ ವತ್ತು ಆಸ್ಥಾದ ಈ ಶಾಸ್ತ್ರ ತುದಿ ಚುಕ್ಕೆಯೊಂದರಲ್ಲಿ ನಡೆಯುತ್ತಿರುವ ಈ ಕಲಹಕ್ಕೆ ಇಷ್ಟೊಂದು ಪ್ರಾಮುಖ್ಯತೆಯಿರುತ್ತಿರಲಿಲ್ಲ. ದ್ವಿತೀಯ ಮಹಾ ಯುದ್ಧ ಮುಕ್ತಾಯದ ನಂತರ ರಶ್ಯಾ-ಅಮೆರಿಕಗಳೊಳಗೆ ಏಕ ಪ್ರಕಾರ ನಡೆಯುತ್ತಾ ಬಂದಿದ್ದ ಛಂಡಾ ಸಮರವು ಕೊರಿಯದಲ್ಲಿ ಬಿಸಿ ಹೋರಾಟವಾಗಿ ಸ್ಫೋಟಗೊಂಡಿರುವುದರಿಂದ ಅಬೆಂಕಿ ಲೋಕವ್ಯಾಪಿಯಾಗಬಹುದೆಂಬ ಭೀತಿಗೆ ಸಹಜಾವಕಾಶ ದೊರೆತಿದೆ. ಕೊರಿಯಾ ಘರ್ಷಣೆಯಂತಹ ಸ್ಥಳೀಯ ಕಾದಾಟಗಳು ಈ ಮೊದಲು ಅಲ್ಲಲ್ಲಿ ನಡೆದಿದ್ದರೂ, ಅವುಗಳಾವುವೂ ಹುಟ್ಟಿಸಿದ್ದಿಲ್ಲ ಇಂತಹ ಲೋಕಾತಂಕ ಭೀತಿಯನ್ನು ಕೊರಿಯದ ಯುದ್ಧವು ಹುಟ್ಟಿಸಲು ಬಲವಾದ ಕಾರಣವಿದೆ. ರಶ್ಯ ಮತ್ತು ಅಮೆರಿಕಗಳು ಈ ತನಕವೂ ಸ್ಥಳೀಯ ಘರ್ಷಣೆಗಳನ್ನು—ಛಾನಾನಾ ತಿಕ್ಕಾಟಗಳನ್ನು—ಪ್ರಭಾವ ವರ್ಧನಾ ಸ್ಪರ್ಧೆಗಳನ್ನು—ಸ್ವಪಾಳಯ ರಚನೆಗಳನ್ನು ಮಾಡುವ ಮೂಲಕ ಒಂದಕ್ಕೊಂದು ಇದಿರಾಗಿ ಈಗ ಶೀತಾ ಸಮೀಪಕ್ಕೆ ಬಂದಿವೆ; ಮುಖಾಮುಖಿ ಇದಿರಿಸಿ ನಿಂತಂತಿರುವಾಗಲೇ ಕೊರಿಯಾ ಯುದ್ಧ ಸ್ಫೋಟಗೊಂಡಿದೆ. ಅದೇ ಮೂಲವಾಗಿ ಇವೆರಡು ವೈರಿಗಳೊಳಗೆ ಮಹಾ ಹೋರಾಟವೇಳುವುದು ಸುಲಭ. ಈ ಸಂದರ್ಭದಲ್ಲಿ, ಇಕ್ಕಡೆಯವರ ವಿವಿಧ ರೂಪೀ ಚಲನವಲನಗಳ ದೆಸೆಯಿಂದ ಈ ದಿನ ಪ್ರಪಂಚದಸ್ಥಿತಿಗತಿ ಯಾವ ಆಕಾರಕ್ಕೆ ಬಂದಿದೆ ಎಂಬುದರ ಕಡೆಗೊಮ್ಮೆ ನೋಟ ಬೀರುವದು ಆಗತ್ಯ.

ಇಮ್ಮಡಿಸಿರುವ ಮುದ!

ದ್ವಿತೀಯ ಜಾಗತಿಕ ಯುದ್ಧ ಸ್ಫೋಟಗೊಂಡು ಹನ್ನೊಂದು ವರುಷ, ಅದು ಮುಗಿದು ಆರು ವರುಷ, ಇನ್ನೂ ಪೂರ್ಣವಾಗಿಲ್ಲ. ಇಷ್ಟರಲ್ಲೇ ಮೂರನೇ ಮಹಾ ಯುದ್ಧದ ಕೋಗೇ ಎಸಪಿ ಬರಪೆಟ್ಟಿದೆ. ಪ್ರಥಮ ಲೋಕ ಯುದ್ಧವಾಗಿ ಸೂರ್ಣ 25 ವರುಷಗಳು ಕಳೆದ ನಂತರವೇ ದ್ವಿತೀಯ ಮಹಾ ಯುದ್ಧ ವಾರಂಭಿಸಿದ್ದಿತು; ಕಾಲು ಶತಮಾನದ ಮಧ್ಯಾವಧಿಯಾದರೂ ಅವೆರಡಕ್ಕೂ ಳಗಿದ್ದಿತ್ತು. ಆದರೆ ಮೂರನೆಯದು ಅನ್ಯ ವಿಳಂಬವನ್ನೂ ಸಹಿಸುವದಿಲ್ಲವೆಂಬುದು ಸ್ಪಷ್ಟವಿರುವಾಗ, ಶಾಂತಿ ಮಂತ್ರದ ಇಷ್ಟೆಲ್ಲಾ ಕೃತಕೋಚ್ಚಾರಗಳಿರುವಂತೆಯೇ ಯುದ್ಧ ಮದ ಇಮ್ಮಡಿ ಬೆಳೆದಿದೆ, ಎಂದು ಸ್ಪಷ್ಟವಾಗುತ್ತಿದೆ. ಆಟಂ ಬೋಂಬು, ಹೈಡ್ರೋಜೆನ್ ಬೋಂಬುಗಳಂತಹ ನಾಲ್ಮಡಿ ಭೀಕರ ಯುದ್ಧೋಪಕರಣಗಳಾಗಿರುವಂತೆಯೇ, ಇನ್ನೊಂದು ಯುದ್ಧದತ್ತ ಧಾವಿಸುವ ಗತಿಯಲ್ಲಿಯೂ ನಾಲ್ಮಡಿ ವೇಗವುಂಟುದಂತಿದೆ. ಕಮ್ಯೂನಿಸಮಿನ ನಂ. 1 ನೇ ವೈರಿ ಹಿಟ್ಲರನು ತನ್ನ ಆವಸಾನದ ಕಾಲ ಸಮೀಪಿಸುತಿದ್ದಂತೆ ಹೇಳಿದ್ದ ಈ ಕೆಳಗಿನ ಭವಿಷ್ಯವು ಸತ್ಯವನ್ನಿಸುತ್ತಿದೆ:- "ಒಂದೊಮ್ಮೆ ನಾವು ಪತನಗೊಂಡರೂ ಕಮ್ಯೂನಿಸ್ಟ್ ರಶ್ಯದಿಂದ ಇಂಗ್ಲಾಂಡು, ಅಮೆರಿಕಗಳಿಗೆ ಉಳಿಗಾಲವಿಲ್ಲವೆಂದು ಸಾರಿ ಸಾರಿ ಹೇಳುತ್ತೇನೆ" ದ್ವಿತೀಯ ಮಹಾಯುದ್ಧದಲ್ಲಿ ಸಮಾನ ವೈರಿಯಾದ ಹಿಟ್ಲರನನ್ನು ಸೋಲಿಸುವುದಕ್ಕಾಗಿ ರಶ್ಯ ಮತ್ತು ಇಂಗ್ಲಾಂಡು, ಅಮೆರಿಕಗಳೊಳಗೆ ಆಪದ್ಬಾಂಧವ್ಯ ಮೂಡಿದ್ದೂ, ಈ ಮೈತ್ರಿಯ ಉದ್ದೇಶ ಸಾಧಿಸಿಹೋಡನೆಯೇ ಇಕ್ಕಡೆಯವರ ಮೂಲಭೂತ ದ್ವೇಷಾಸೂಯೆಗಳು ಪುನಃ ಕೆರಳಿ ನಿಂತವು; ಒಬ್ಬರನ್ನೊಬ್ಬರನ್ನು ಜಿಗುಪ್ಸೆ ಮತ್ತು ಸಂದೇಹದಿಂದಲೇ ನೋಡಹತ್ತಿದರು; ಆ ಮೊದಲಿನ ಮಾತ ಗಳನ್ನೇ ಆಡಹತ್ತಿದರು; ತದನುಗುಣ ಕಾರ್ಯಗಳನ್ನೇ ಮಾಡಹತ್ತಿದರು. ಪ್ರತಿಫಲವಾಗಿ ಪರಸ್ಪರ ವಿರುದ್ಧ ಪಾಳಯಗಳೆಂಡು ಹುಟ್ಟಿಕೊಂಡು ಲೋಕವಿಂದು ಮೂರನೇ ಮಹಾಯುದ್ಧದ ಸರಹದ್ದಿಗೊತ್ತಲ್ಪಟ್ಟಿದೆ. ಹಿಂದೆಂದೂ ಕಂಡರಿಯದ ಮಹಾ ಪ್ರಳಯಕ್ಕೇನೇ ದೂಡಲ್ಪಡುವದೆಂಬ ಭೀತಿ ಮೊಳೆತಿದೆ

ಕಮ್ಯೂನಿಸ್ಟ್ ಪ್ರಭಾವ

ಇಂತಹ ಮಹಾ ಘರ್ಷಣೆಗನುಕೂಲವಾದ ವಾತಾವರಣವೇ ಕಳದ ಮಹಾಯುದ್ಧಾಂತ್ಯದಿಂದ ನಿರ್ಮಾಣಗೊಳ್ಳುತ್ತಾ ಬಂದಿರುವುದನ್ನು ಲಕ್ಷ್ಯಿಸಬೇಕು. ಸಮರೋತ್ತರ ವ್ಯವಸ್ಥೆಗಳ ಮೂಲಕ ಕೊರಿಯಾದಂತಹ ಕೆಲವೆಡೆಗಳಲ್ಲಿ ರಶ್ಯಾ—ಅಮೆರಿಕಗಳಿಗೆ ಸಮಾನ ಸರಹದ್ದುಗಳು ನಿರ್ಮಾಣವಾಗಿದ್ದು, ಅಲ್ಲೆಲ್ಲಾ ಸ್ವತ್ಯಕ್ಷ ಘರ್ಷಣೆಗಳು ಆರಂಭದಿಂದಲೂ ನಡೆಯುತ್ತಲೇ ಬಂದಿವೆ. ಇಡೀ ಭೂಪ್ರಪಂಚದಲ್ಲಿ ತಂತಮ್ಮ ಹಿಡಿತ ಮತ್ತು ಪ್ರಭಾವವನ್ನು ಸ್ಥಾಪಿಸುವುದಕ್ಕಾಗಿ ಇವೆರಡು ಕಡೆಗಳವರೂ ಪ್ರತ್ಯಕ್ಷಾಪ್ರತ್ಯಕ್ಷ ಸ್ಪರ್ಧೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಈ ವ್ಯೋಲಾಟನೇ ಲೋಕಾಪಾಯದ ಮೂಲ ಹೇತು. ಒಂದು ರಾಜ್ಯದ ಮೇಲೆ ಮತ್ತೊಂದು ರಾಷ್ಟ್ರವು ತನ್ನ ರಾಜಕೀಯಾಧಿಕಾರ ಸ್ಥಾಪಿಸುವುದು ಅನ್ಯಾಯ ಹಾಗೂ ಅನಾದರಿಕ ವೆಂದು ಖಚಿತವಾಗಿರುವ ಕಾಲವಿದು. ಆದ್ದರಿಂದ ದ್ವಿತೀಯ ಮಹಾಯುದ್ಧದಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿ ನಿಜವಿಜಯವನ್ನು ಗಳಿಸಿಕೊಂಡು ಎತ್ತರ ಸ್ಥಾನಗಳಲ್ಲಿ ನಿಂತ ರಶ್ಯಾ ಮತ್ತು ಅಮೆರಿಕಗಳೆರಡೂ ತಂತಮ್ಮ ತತ್ವ ವಿಧಾನಗಳ ಸಂಬಂಧ ಸೂತ್ರಗಳ ಮೂಲಕವೇ ಲೋಕದ ಪ್ರತಿಯೊಂದು ದೇಶವನ್ನೂ ಹಿಡಿದುಕೊಳ್ಳಲು ಮುಂದಾದುವು. ಈ ಪೈಕಿ ಅಮೆರಿಕದ ಛಂಡಾಳಶಾಹೀ ಧೋರಣೆಯು, ಎಂತಹ ಮನೋಹರ ಒಪ್ಪವನ್ನು ಹುಟ್ಟಿಕೊಂಡರೂ ಯಾವುದೇ ರಾಷ್ಟ್ರದ ಒಂದಲ್ಲೊಂದು ವರ್ಗವನ್ನಷ್ಟೇ ಆಕರ್ಷಿಸುವಂತಹದಾಯಿತು ಹೊರತು, ಅತ್ಯಧಿಕ ಸಂಖ್ಯಾಕರಿರುವ ಜನಸಾಮಾನ್ಯರನ್ನು ಮೋಹಿಸಲಿಲ್ಲ. ಪಾಡಳಿತಿಗರ ಅಥವಾ ಸೂತ್ರಧಾರಿ ಹಸ್ತಗಳಿಗೆ, ಆಗತ್ಯವುಳ್ಳ ಸಹಾಯ, ಸಮಜಾಯಿಸುವಿಕೆಗಳನ್ನು ಕೊಡುವ ಮೂಲಕವೇ ಅಮೆರಿಕವು ತನ್ನ ಜೊಬಲಿಗರನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿದೆ. ಆದರೆ ಇದಿರುಗಡೆಯು ರಶ್ಯದ ಕಮ್ಯೂನಿಸಮೂ ಪ್ರತಿಯೊಂದು ದೇಶದ ಬಡವರಂದಾರಂಭಿಸಿ ಮಧ್ಯಮ ವರ್ಗದ ವರೆಗಿನ ಅತ್ಯಧಿಕ ಜನತೆಯ ನಡುವೆ ಸುಲಭದಲ್ಲಿ ವ್ಯಾಪಿಸಿಕೊಳ್ಳುವಂತಹದಿದೆ; ವ್ಯಾಪಿಸುತ್ತಾ ಬಂದಿದೆ. ಯುದ್ಧೋತ್ತರ ಅಭಾವ ಪೀಡಿತ ಜಗತ್ತಿನಲ್ಲಿ ರಶ್ಯಾವು ಇಂದು ಜಗತ್ತಿನಲ್ಲೆಲ್ಲಿಲ್ಲ. ಈ ರೀತಿಯ ಸಂಕಟದಲ್ಲಿರುವವರನ್ನು ಉದ್ಧರಿಸಲಿಕ್ಕಾಗಿ ಅಮೆರಿಕವು ಕೂಡುವೆನೆನ್ನುವ ಹಣ, ಉಪಕರಣಗಳ ಸಜ್ಜಾಯವು ತಾತ್ಕಾಲಿಕ ಶಮನ ಮಾತ್ರವಾಗಬಲ್ಲುದು; ಪ್ರಚಲಿತ ಅಧಿಕಾರಿಗಳಿಗೋ ಪ್ರಚಲಿತ ಸ್ಥಿತಿ ಭ್ರಷ್ಟರಿಗೋ ಆಶ್ರಯ ವಾಗಬಲ್ಲುದು. ಆದರೆ ಸಾವಾನ್ಯ ಜನರನ್ನು ಕಮ್ಯೂನಿಸ್ಟ್ ತತ್ವಾಂತರ್ಗತ 'ಸರ್ವಸಮಾನತಾ ಶ್ರಮಜೀವಿ ರಾಜ್ಯ' ವು ಎಳಕೊಳ್ಳುವಂತೆ ಮಾತ್ತಾವುದೂ ಆಕರ್ಷಿಸಲಾರದು. ಹೀಗಾಗಿ ಇಂದು, ಕಮ್ಯೂನಿಸಮ್ ಪ್ರಪಂಚವನ್ನೇ ಭರದಿಂದ ವ್ಯಾಪಿಸುತ್ತಾ ಬಂದಿದೆ; ಇದೇ ರೀತಿ ನಡೆದರೆ, ಯಾವ ಜಂಹೀರು ಯುದ್ಧವೂ ಇಲ್ಲದೆ ಇನ್ನು ಹತ್ತು ವರುಷಗಳೊಳಗೆ ಕಮ್ಯೂನಿಸವ್ ಲೋಕ ವಿಜಯಿಯಾಗಲಾರದೇ ಎಂಬ ಪ್ರಶ್ನೆಯೇಳುತ್ತಿದೆ. ಇದ್ದಲ್ಲೇ ಹುಟ್ಟಿಕೊಂಡು ಸ್ವಾಭಾವಿಕ ಬೆಳವಣಿಗೆ ಹೊಂದುತ್ತಿರುವ ಕಮ್ಯೂನಿಸಮಿನ ವಿರುದ್ಧವಾಗಿ ಅಕಾಶದಿಂದ ಇಳಿಸುವಂತಿರುವ ಅಮೆರಿಕದ ಸಹಾಯ, ಸಲಕರಣೆಗಳು ಮತ್ತು ಹಂಚಿಕೆಗಳು ಪಂಭವಗೊಳ್ಳುತ್ತಿರುವ ದೃಶ್ಯವು ಎಲ್ಲೆಲ್ಲೂ ಕಂಡು ಬರುತ್ತಿದೆ. ಈ ಪರಾಭವದ ಯಾತನೆಯಿಂದ ಕೆರಳಿದ ಅಮೆರಿಕದ ಮನಸ್ಸು, ಗಂಡಾಂತರ ನಿವಾರಣೆಗಾಗಿ ತನ್ನ ವಿರೋಧದ ಮೂಲ ನೆಲೆ ರಶ್ಯವನ್ನೇ ಅಬ್ಬರಬಡಿಯಲು ಆತುರಿಸಹತ್ತಿದೆ. ಇನ್ನೊಂದು ಮಹಾಯುದ್ಧದ ಹನ್ನೆಲೆಯಂತೆ ಕಾಣುತ್ತಿರುವ ಇಂದಿನ ಸ್ಥಿತಿಚಿತ್ರವಿದೇ.

ದ್ವಿವಾಳಯ ರೂಪ

ಈಗ ಇಡೀ ಭೂನಕಾಶೆಯನ್ನು ಕಣ್ಣು ಮುಂದಿಟ್ಟುಕೊಂಡು, ಸ್ಪಷ್ಟವಾಗಿ ರಂಗದಲ್ಲಿ ಇಕ್ಕಡೆಯವರಬಲಾಬಲ ಎಷ್ಟಿದೆ ಎಂಬುದನ್ನು ಅವಲೋಕಿಸಿದರೆ, ರಶ್ಯದ ಆಕ್ರಿಯತಾ ರಾಷ್ಟ್ರ ಪಾಳಯವು ತತ್ತು ಅಮೆರಿಕದ ಆಪದ್ಬಾಂಧವ್ಯದ ರಾಷ್ಟ್ರ ಗುಂಪುಗಳು ಪ್ರಪಂಚವನ್ನು ಸ್ಪಷ್ಟವಾಗಿ ಇಬ್ಭಾಗಿಸಿರುವುದೂ, ಇಕ್ಕಡೆಗೂ ಸೇರದೆ ತಟಸ್ಥರಾಗಿರುವ ಅಲ್ಪ ಸಂಖ್ಯಾಕ ರಾಷ್ಟ್ರಗಳ ಮೂರನೇ ಪಂಗಡ ಕೂಡಾ ಸಂದರ್ಭಾನುಗುಣವಾಗಿ ಒಂದಲ್ಲೊಂದು ಕಡೆಗೆ ಮಾಲಿಂಬ ಅದೃಷ್ಟಕ್ಕೊಳಗಾಗುವ ಸಂಭವವಿರುವುದೂ ಒಡೆದು ತೋರುತ್ತಿದೆ. ಭೂಗೋಲದ ವಾಯವ್ಯ ಮೂಲೆಯಿಂದಾರಂಭಿಸಿ ಪಶ್ಚಿಮ ವಿಭಾಗದಲ್ಲೆಲ್ಲಾ ಅಮೆರಿಕದ ಖಣ್ಣಿ ಮಿರುಗುತ್ತಿದ್ದು; ಕಾಲದ ದಕ್ಕೆ ಈಚೆ

(ಇನೇ ಪುಟದಿಂದ ಮುಂದುವರಿದುದು)

ವದು ಕಾನೂನಿಗೆ ವಿರೋಧವೆಂದಿದ್ದ ಮೇಲೆ, ಹಿರಿಯರು ಮಾಡಿಟ್ಟುದನ್ನು ಅವರ ಸಂಕಲ್ಪಕ್ಕೆ ವಿರೋಧವಾಗಿ ದುಂದುವ್ಯಯ ಮಾಡುವವರೆಲ್ಲರೂ ಕಾನೂನಿನ ದೃಷ್ಟಿಯಿಂದ ಅಪರಾಧಿಗಳಾಗಿರಬೇಕು; ಆದರೀಗ ಹಾಗಿಲ್ಲ

ಅಂತೂ, ಪ್ರಚಲಿತ ಸಾಮಾಜಿಕ, ರಾಜಕೀಯ, ಆರ್ಥಿಕ, ಪರಂಪರಾಗತ ಹಾಗೂ ಕಾಯಿದೇ ವ್ಯವಸ್ಥೆಗಳಲ್ಲಿ ಸರ್ವ ಸಮಾನವಾದುದು, ಶಾಶ್ವತವಾದುದು ಹಾಗೂ ಸಂದರ್ಭಾತೀತವಾದುದು ಯಾವುದೂ ಇಲ್ಲ. ಸ್ಥಿತಿಗತಿ ವ್ಯತ್ಯಾಸಗಳಿಗೂಳಗಾಗದ ನ್ಯಾಯ, ಕಾನೂನು, ಸಂಗತಿ ಮತ್ತು ವ್ಯಕ್ತಿ ಇಲ್ಲವೇ ಇಲ್ಲ.

ಎಲ್ಲವೂ ಮನೋವೃತ್ತಿ ಮತ್ತು ಮರ್ಜಿಯನ್ನೇ ಅವಲಂಬಿಸಿವೆ. ಸುಸಂಸ್ಕೃತ, ನಿಷ್ಕಲ್ಮಷ ಮನಸ್ಸು ಮತ್ತು ಕಾಲ, ಸಂದರ್ಭೋಚಿತವರ್ತನೆಯುಳ್ಳರೆ ಪ್ರಪಂಚದ ಇಂತಹ ಅನಿಶ್ಚಿತ, ಅಡಿಮೆಲ್ಲು ಆಗು ಹೋಗುಗಳೆಲ್ಲಾ ಸದಾ ಕಾಲ ನ್ಯಾಯವನ್ನೇ ಎತ್ತಿಹಿಡಿಯಬಹುದು; ವೈಕ್ತಿಕ ಮತ್ತು ಸಾಮೂಹಿಕವಾಗಿ ಮನೋಬಲ ಮತ್ತು ಶುದ್ಧತೆ ಮೂಡಬೇಕೆನ್ನುವುದು ಇಷ್ಟಕ್ಕಾಗಿಯೇ.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.
Advocate & President, District Board, S. Kanara.
CHAIRMAN

-ಅಮೆರಿಕ ನಡೆಸುತ್ತಿರುವ ಕಚ್ಚಾಟ! ಯಾವ ಕಡೆ ಎಂತಹ ಸ್ಫೋಟಕ್ಕೆಡೆಯಿದೆ?

ಈಶಾನ್ಯ ಮೂಲೆಯ ಜಪಾನಿಗೂ ಅದೇ ರಂಗು; ಶೀತ ಪೂರ್ವ ಕಡೆಯ ಕೆಲವು ದ್ವೀಪಗಳನ್ನೂ ಈ ಸಂಗ್ರಿಗೆ ಸೇರಿಸಬಹುದು. ಆದರೆ ಸ್ವತಂತ್ರ, ವರ್ಣರಂಜಿತ ಆಗ್ನೇಯ ಮತ್ತು ದಕ್ಷಿಣದ ಕೆಲವು ಭಾಗಗಳನ್ನು ಬಿಟ್ಟರೆ ಭೂಗೋಲದ ಮಧ್ಯಪೂರ್ವ ವಲಯದಲ್ಲೆಲ್ಲಾ ಕಮ್ಯೂನಿಸ್ಟ್ ಕಂಬಣ್ಣವು ಸ್ಪಷ್ಟವಾಗಿ ಹೊಳೆಯುತ್ತಿದೆ. ಅಂತೂ ಅಮೆರಿಕದ ಪಾಲಿನ ಪಶ್ಚಿಮ ವಾಯವ್ಯ ಪಾಳಯವೂ ರಶ್ಯದ ಪಾಲಿನ ಮಧ್ಯೆ ಪೂರ್ವ ಪಾಳಯವೂ ಪೂರ್ವ, ಆಗ್ನೇಯ ದಿಕ್ಕುಗಳ ಸ್ವಾಧೀನ ತೆಗೆದು ಈಗಷ್ಟೆಪೋಟ ನಡೆಸುತ್ತಿವೆ. ಈ ದೆಸೆಯಲ್ಲಿರುವಫೋರ್ಮೋಸಾ, ಫಿಲಿಪ್ಪಾಯಿನ್ಸ್,ಇಂಡೋಚೈನಾ,ಥೈಲೆಂಡ್, ಬರ್ಮಾ, ಭಾರತ, ಪಾಕಿಸ್ತಾನ್, ಇರಾನ್ ಮುಂತಾದುವುಗಳೇ ಈ ಕಾಲದಲ್ಲಿ ಮುಖ್ಯ ಅಪಾಯ ನೆಲೆಗಳಾಗಿ ಕಾಣುತ್ತಿವೆ. ಜರ್ಮನಿ, ಯುಗೊಸ್ಲೇವಿಯ, ಟರ್ಕಿಯಂತಹ ಪಶ್ಚಿಮ ಮತ್ತು ದಕ್ಷಿಣ ನೆಲೆಗಳ ಕುರಿತೂ ಅವೆಂಡೂ ಹೋರಾಟ ಪಾಳಯಗಳೊಳಗೆ ತಿಕ್ಕಾಟಗಳಿವೆ. ಹೀಗಾಗಿ ಇಡೀ ಭೂಖಂಡಕ್ಕೆ ಕಲಹ ರಾಹು ಸೋಂಕಿಕೊಂಡಿರುವ ಸಂಗತಿ ಸುಸ್ಪಷ್ಟ. ಆಸಿಯಾ ಖಂಡ ರಶ್ಯದ ವಿರುದ್ಧವಾಗಿ ಕಟ್ಟಿಕೊಂಡಿರುವ ಮಿಲಿಟರಿ ಸೂಡಿಯೆಂದರೆ ಉತ್ತರ ಅಟ್ಲಾಂಟಿಕ್ ಒಪ್ಪಂದ ಕರಾರಿಗೊಳಪಟ್ಟ ರಾಷ್ಟ್ರಗಳದ್ದೇ. ಈ ಕೂಟದಲ್ಲಿ ಅಲಸ್ಕ, ಕೆನಡಾ, ಅಮೆರಿಕ, ಗ್ರೀನ್‌ಲೇಂಡ್, ಬ್ರಿಟನ್, ನೋರ್ವೆ, ಡೆನ್ಮಾರ್ಕ್, ನೆದರ್‌ಲೇಂಡ್ಸ್, ಫ್ರಾನ್ಸ್, ಇಟಲಿ, ಪೋರ್ಚುಗಲ್, ಅಲ್ಬೇರಿಯಾ ಮೊದಲಾದ ರಾಷ್ಟ್ರಗಳವೆ. ರಶ್ಯದ ಪಾಳಯವೆಂದರೆ ಕಮ್ಯೂನಿಸ್ಟ್ ಆಡಳಿತೆಯಿರುವ ರಾಷ್ಟ್ರಗಳದ್ದು. ಈ ಪಾಳಯದೊಳಗೆ ರಶ್ಯ, ಜೈನ, ಪೋಲೆಂಡ್, ಹಂಗೇರಿ, ರುಮೇನಿಯ, ಬಲ್ಗೇರಿಯ ಮೊದಲಾದ ರಾಷ್ಟ್ರಗಳವೆ. ಇವುಗಳೊತ್ತಿನಲ್ಲೇ ಇದ್ದು, ರಶ್ಯದ ವಿರುದ್ಧ ಸಡ್ಡು ಹೊಡೆಯುತ್ತಾ, ಈಗ ಸ್ಟಾಲಿನರ ಕಣ್ಣಿಂದಿಂ ಕಾಸರಕನ ಕೋಲಾಗಿ ಅಲ್ಲಾಡುತ್ತಿರುವ ರಾಷ್ಟ್ರವೆಂದರೆ ಯುಗೊಸ್ಲೇವಿಯ ಭೂಗೋಲದ ಆಗ್ನೇಯ ಮತ್ತು ದಕ್ಷಿಣ ಮೂಲೆಯಲ್ಲಿರುವ, ಪೂರ್ವಪಶ್ಚಿಮ ವಿಭಾಗದಲ್ಲಿ ಪೂರ್ವ ವಿಭಾಗಕ್ಕೆ ಸೇರುವ ಭಾಂತದಂತಹ ಕೆಲವು ರಾಷ್ಟ್ರಗಳ ಮಟ್ಟಿಗೆ ರಶ್ಯ ಮತ್ತು ಅಮೆರಿಕಗಳು ಈ ತನಕ ಸಂಬಂಧ ಸಾಧನೆಯ ಪ್ರಯತ್ನವನ್ನಷ್ಟೇ ನಡಿಸುತ್ತಿವೆ ಕೊರತು ಪ್ರತ್ಯಕ್ಷ ಸ್ಪರ್ಶವಿಲ್ಲ. ಪ್ರತ್ಯಕ್ಷ ಕೈ ಚಾಚುವ ಅವಕಾಶವಾದರೋ ಒತ್ತಿನ ರಶ್ಯಕ್ಕಿರುವಂತೆ ದೂರದ ಅಮೆರಿಕಕ್ಕಿಲ್ಲ. ಭೂಪಟದಲ್ಲಿ ಈ ದಿನ ಪ್ರತ್ಯಕ್ಷ ರಶ್ಯದ ಅಂಕೆಯಲ್ಲಿರುವ ಸ್ಥಳವು ವಿಸ್ತಾರದ ಮಟ್ಟಿಗೆ ದೊಡ್ಡದಾದರೂ, ಕಮ್ಯೂ ಅಂಕೆಯೊಳಗಿರುವ ಸ್ಥಳವು ಸಂಪತ್ತು, ಸಮೃದ್ಧತೆ ಮತ್ತು ಆಯಕಟ್ಟಿನ ದೃಷ್ಟಿಯಿಂದ ಮುಖ್ಯವಾದುದೆಂಬ ಸಮಾಧಾನವು ಅಮೆರಿಕವಂಗಿರಬಹುದು ಅಂತೆಯೇ ಈಗ ಅಮೆರಿಕಾನ ಪ್ರಯತ್ನವಿರುವಂಚೆ ಈಶಾನ್ಯ, ಪೂರ್ವ, ಆಗ್ನೇಯ, ದಕ್ಷಿಣ ಸುತ್ತಿನ ತಟಸ್ಥ ರಾಷ್ಟ್ರಗಳೆಲ್ಲವನ್ನೂ ತಮ್ಮ ನೊಗಕ್ಕೆಪ್ರತ್ಯಕ್ಷವಾಗಿ ಸೇರಿಸಿಕೊಳ್ಳಲಾಗದಿದ್ದರೂ ತಮ್ಮ ಪಕ್ಷಪಾತಿಗಳಾಗಿ ಮಾರ್ಪಡಿಸಿಕೊಳ್ಳಲು ಸಾಧ್ಯವಾದರೆ, ರಶ್ಯನ್ ವಲಯವನ್ನು ಒಳಗಿಟ್ಟು ಲೋಕವ್ಯಾಪೀ ಚಕ್ರಬಂಧ ವ್ಯೂಹವನ್ನೇ ಅದರ ಸುತ್ತಲೂ ಅಮೆರಿಕವು ಕಟ್ಟಬಹುದಂತಾಗುವುದು. ಅದರೀ ಹೊತ್ತಿನಲ್ಲಿ ರಶ್ಯವೇನೂ ಸುಮ್ಮನಿಲ್ಲ. ಅದು ಈ ನಿಯೋಜಿತ ವ್ಯೂಹವನ್ನು ರೂಪುಗೊಳ್ಳುವ ಮೊದಲೇ ಛೇದಿಸಿ ಹಾಕುವ ಪ್ರಯತ್ನದಲ್ಲಿದೆ. ಕಮ್ಯೂನಿಸ್ಟ್ ಚಟುವಟಿಕೆಗಳು ನಾಲಿಗೆ ರಹಿತ ಕೆಂಡವಾಗಿ ಒಗಿಂದೊಳಗೆ ಸುಡುತ್ತಲೇ ಹೋಗುತ್ತಿರುವಾಗ, ಅಡ್ಡ ಬರುವ ಕೊಂಬೆಗಳನ್ನು ಕತ್ತರಿಸಿ ಅದಕ್ಕೆ ಹಾರುವ ಮೇಲ್ಗಡೆ ಕಡಿತಕ್ಕೂ ರಶ್ಯವು ತಯಾರು ಮಾಡತ್ತಲೇ ಇದೆ.

ರಶ್ಯದ ಸೇನಾ ಚಟುವಟಿಕೆ

ತನ್ನ ಇದಿರು ಕಡೆಯವರಿಗೆ ಕೊನೆಯವರೆಗೂ ಗುಟ್ಟು ದೊರೆಯದ ರೀತಿಯಲ್ಲಿ ಉತ್ತರ ಕೊರಿಯದಲ್ಲಿ ಅಚೀಯ ಧಾಳೀ ಸಿದ್ಧತೆಯನ್ನು ನಡೆಸಿದ್ದ ಕಮ್ಯೂನಿಸ್ಟರು ಯುದ್ಧ ಸಿದ್ಧತಾ ನಿಗೂಢತೆ ಮತ್ತು ಚಾತುರ್ಯದ ಕುರಿತು ಬೇರೆ ತಿಪ್ಪಾರಸು ಅನಗತ್ಯ. ಅಂತೆಯೇ ಅಮೆರಿಕನ್ ಪಾಳಯದ ಘೋಷಣೆ, ಘರ್ಜನೆಗಳಲ್ಲಿ ಕಂಡು ಬರುವಷ್ಟು ಜೀತನವು ಪ್ರತ್ಯಕ್ಷ ಕಾರ್ಯರಂಗದಲ್ಲಿಲ್ಲವೆಂಬುದಕ್ಕೆ ಧಾಳೀ ನಿರೀಕ್ಷೆಯಿದ್ದರೂ ದಕ್ಷಿಣ ಕೊರಿಯದಲ್ಲಿ ಸಕಾಲದಲ್ಲಿ ಸಿದ್ಧರಾಗದೆ, ತಡಮಾಡಿದ ನಿದರ್ಶನದಿಂದಲೇ ಅರಿಯಬಹುದು. ಈ ತನಕ ತಿಳಿದು ಬಂದಿರುವಂತೆ ಪ್ರಪಂಚದ ಯಾವ ಯಾವ ಕಡೆಯಲ್ಲಿ ಎಂತೆಂತಹ ಉದ್ದೇಶ ಸಾಧನೆಗಾಗಿ ಕಮ್ಯೂನಿಸ್ಟ್ ಸೇನೆಗಳ ಚಟುವಟಿಕೆ ನಡೆದಿದೆ ಎಂಬುದನ್ನು ಜಾಲಿಸಿಕೆನಲ್ಲಿ ಪ್ರಸ್ತಾಪಿಸಬಹುದು. ಜರ್ಮನಿಯ ರಾಜಧಾನಿ ಬರ್ಲಿನ್ ನಗರವು ಕೆಂಪು ಸೇನೆಗಳಿಂದ ಸುತ್ತುಗಟ್ಟಲ್ಪಟ್ಟಿದ್ದು, ಪಾಶ್ಚತ್ಯ ರಾಷ್ಟ್ರಗಳ ಪಾಲಿನ ಕ್ಷೇತ್ರದ ಮೇಲೆ, ರಶ್ಯದ ಒತ್ತಡ, ತಿಕ್ಕಾಟಗಳು ದೀರ್ಘಾವಧಿಯಿಂದ ನಡೆದೇ ಇವೆ ಪ್ರಾಡಾಖಾಡಿ ಯುದ್ಧ ಸೆಸ್ಪೋಟಗೊಂಡರೆ ಒಮ್ಮೆಗೆ ಎಲ್ಲವನ್ನೂ ಆಕ್ರಮಿಸಿಕೊಳ್ಳುವ ಅನುಕೂಲತೆ ಅಲ್ಲಿ ರಶ್ಯಕ್ಕಿದೆ. ಲೋಕ ಯುದ್ಧಾರಂಭಕ್ಕೆ ತಡವಾದರೂ ಬರ್ಲಿನ್ ಹೋರಾಟವು ಆದಕ್ಕೆ ಪೀಠಿಕೆಯಾಗಬಲ್ಲುದು. ತನ್ನಿದಿರು ಧುರಹೊಂಕಾರ ಕೊಡುತ್ತಿರುವ ಮಾರ್ಷಲ್ ಟಿಟೋನ ಯುಗೊಸ್ಲೇವಿಯ ಸರಹದ್ದುಗಳಲ್ಲಿ, ರಶ್ಯನ್ ಹಸ್ತಕ ರಾಷ್ಟ್ರಗಳಾದ ಹಂಗೇರಿ, ರುಮೇನಿಯ ಮತ್ತು ಬಲ್ಗೇರಿಯಗಳಲ್ಲಿ ಪ್ರಬಲ ಕೆಂಪು ಸೈನ್ಯವು ಆಣಿಯಾಗುತ್ತಿದೆ. ಈಸೇನೆ ಮನಸ್ಸುಗ್ಗುವ ಸಂದರ್ಭ ಬಂದರೆ ಮತ್ತೆ ಯುಗೊಸ್ಲೇವಿಯದ ಅದೃಷ್ಟ ಮುಗಿಯಲು ಹೆಚ್ಚು ದಿನ. ಹಿಡಿಯಲಾರದು. ಆದಕ್ಕೆತಾಗಿಕೊಂಡೇ ಅಮೆರಿಕನ್ ಪಾಳಯದ್ದಾಗಿರುವ ಇಟೆಲಿಯಿರುವುದರಿಂದ ಇಲ್ಲಿಯೂ ಲೋಕ ಯುದ್ಧವಾರಂಭಿಸಬಹುದು. ಆದರೆ ಅಲ್ಲಿಯ ಮಟ್ಟಿಗೆ ರಶ್ಯಕ್ಕಿರುವ ಅನುಕೂಲತೆಗಳೇ ಹೆಚ್ಚಿಗೆ. ಫ್ರಾನ್ಸಿನೆಯ ಇಂದಿನ ಮೂಲ ನೆಲೆಯಾಗಿರುವ ಪೂರ್ವ ದಿಕ್ಕಿಗೆ ಹೊರಳಿದರೆ ಸುಮಾರು 2 ಲಕ್ಷದಿಂದ 3 ಲಕ್ಷಗಳ ವರೆಗಿನ ಕೆಂಪು ಸೇನೆಗಳು ಚೈನವುತ್ತರವಲಯ ಮಂಚೂರಿಯದ ಪೂರ್ವ ಸರಹದ್ದಿಗೆ ಚಲಿಸಿವೆ ಎಂಬ ವಾರ್ತೆಯಿದೆ. ಈ ಕಡೆಯಲ್ಲಿರುವುದೇ ಕೊರಿಯ ಮತ್ತು ಇದಿರುಗಡೆ ಅಮೆರಿಕದ ಅಂಕೆಯಲ್ಲಿರುವ ಜಪಾನು. ಚೈನದ ಮಾಜೀ ಚಿಯಾಂಗ್ ಕೈಶೇಕರೀಗ ಓಡಿ ಹೋಗಿ ನಿಂತಿರುವ ಫೋರ್ಮೋಸಾ ದ್ವೀಪದ ಮೇಲೆ ಚೈನೀ ಕಮ್ಯೂನಿಸ್ಟ್ ಸೇನೆಗಳ ಪ್ರಚಂಡ ಧಾಳಿ ಸಿದ್ಧತೆಯ ವಾರ್ತೆಯಿದೆ. ಅದೇ ವಲಯದಲ್ಲಿರುವ ಫಿಲಿಪ್ಪಾಯಿನ್ಸ್ ದ್ವೀಪಗಳಲ್ಲಿ ಕಮ್ಯೂನಿಸ್ಟ್ ಗೆರಿಲ್ಲಾಗಳ ಚಟುವಟಿಕೆ ಅನಮ್ಯವಾಗಿ ಬೆಳೆದಿದೆ. ಇವೆರಡು ದ್ವೀಪ ವಲಯಗಳಿಗೆ ರಶ್ಯನೆಯ ಅಶ್ವಾಸನೆಯನ್ನು ಕೊಟ್ಟು ರಕ್ಷಣಾಬಲಗಳನ್ನು ಕೊಡಾ ಟ್ರುಮೇನರು ಕಳುಹಿರುವುದರಿಂದ ಕೊರಿಯಾ ಯುದ್ಧವು ಲೋಕ ಮಹಾ ದಾವಾಗ್ನಿಯಾಗಿ ಹೆಬ್ಬುವಂತೆ ಕೊರಿಯಾ ಕಿಡಿಯು ಈ ದ್ವೀಪಗಳಿಗಿಲ್ಲಿಂದ ಸಿಡಿದರಿಯಿತು. ಇತ್ತ ಜೈನದ ದಕ್ಷಿಣ ಪೂರ್ವಗಡೆಯ ಇಂಡೋಚೈನಾ ಸರಹದ್ದಿನತ್ತ ಸುಮಾರು 2 ಲಕ್ಷ ಕಮ್ಯೂನಿಸ್ಟ್ ಸೇನೆಗಳು ಮುಂಧಾಮಿಸಿ ಬಂದಿರುವ ವಾರ್ತೆಯಿದೆ. ಅದಕ್ಕೆ ತಾಗಿಕೊಂಡೇ ಆಕ್ಕೇ ವಲಯ ರಾಷ್ಟ್ರಗಳಾಗಿರುವ ಬರ್ಮಾ ಮತ್ತು ಥೈಲೇಂಡುಗಳಿವೆ. ಈ ಮೂರು ಸಣ್ಣ ತುಂಡುಗಳನ್ನು ಕಬಳಿಸಿಕೊಂಡರೆ, ಆ ಮೇಲಿನ ಹೆಜ್ಜೆಯಾಗಿ ದಬ್ಬರ್ ಸಂಪತ್ತುಳ್ಳ ಮಲಯದ ನೇಲೆ ಮತ್ತು ಎಣ್ಣೇ ಸಂಪತ್ತಿನ ಇಂಡೋನೇಶಿಯದ ಮೇಲೆ ಅದು ನೆಗೆಯಬಹುದು. ಸದ್ಯಸ್ಥಿತಿಯಲ್ಲಿ ಈ ರಾಷ್ಟ್ರಗಳ ರಕ್ಷಣೆಗಾಗಿ ಅಮೆರಿಕ ನೇತೃತ್ವದಲಾದ ರಾಷ್ಟ್ರಗಳಿಂದ,ಇಂದು ಕೊರಿಯದಲ್ಲಿ ಆದಷ್ಟು ಕೆಲಸ ಕೊಡಾ ಆಗಲಾರದೆಂಬುದಷ್ಟೆ ಸ್ಪಷ್ಟ. ಸಂಗತಿಯಿಲ್ಲಿಗೆ ಬಂದರೆ ಭಾರತದ ಉತ್ತರಪೂರ್ವಗಡಿಯಲ್ಲೆಲ್ಲಾ ಕಮ್ಯೂನಿಸ್ಟ್ ವಿಸ್ತಾರವಲಯ ಸ್ಥಾಪಿಸಲ್ಪಟ್ಟಂತಾಗುವದು. ಭಾರತವೆಷ್ಟೇ ಸಶಕ್ತವಿದ್ದರೂ ತೆರಳದ ಕೆಂಪು ಶರಧಿಯ ಪ್ರಚಂಡ ಅಲೆಗಳ ಬಾಯಿಗೇನೇ ಆದು ಬೀಳಬೇಕಾಗುವದು. ಇತ್ತ ಪಾಕಿಸ್ತಾನ್, ಅಫ್ಘಾನಿಸ್ತಾನಗಳಿಗೂ ಆತ್ತ ರಶ್ಯಕ್ಕೂ ತಾಗಿಕೊಂಡಿರುವ ಇರಾನಿನ ಎಣ್ಣೇ ಸಂಪತ್ತಿನ ಮೇಲೆ ದೃಷ್ಟಿಯಿಟ್ಟು ಸೋವಿಯೇಟ್ ಸೇನೆಗಳು ಮುಂದೊತ್ತಿರವ ಸುದ್ದಿಯೂ ಇರುವುದರಿಂದ ಅದೂ ಪ್ರತ್ಯಕ್ಷ ಫಲಿಸಿದರೆ ಭಾರತದ ತಲೆ ಭಾಗದಂತೆಯೇ ಎಡಬಲಗಳಲ್ಲೂ ಕಮ್ಯೂನಿಸ್ಟ್ ಶಕ್ತಿ ನಡುಗಟ್ಟಿ ನಿಂತಂತಾಗುವುದು. ದಕ್ಷಿಣದ ಪಾದದೆಡೆಯೊಂದನ್ನು ಬಿಟ್ಟು ಭಾರತವು ಸಂಪೂರ್ಣವಾಗಿ ಕಮ್ಯೂನಿಸ್ಟರಿಂದ ಆಕ್ರಮಿಸಲ್ಪಟ್ಟಂತಾಗುವುದು.

ಹೀಗಿದೆ ಇಂದಿನ ಪ್ರಪಂಚ ರೂಪು! ಈ ಸಂದರ್ಭದಲ್ಲಿ ಲೋಕ ಹಿತಚಿಂತಕರಿಲ್ಲರು, ಮುಖ್ಯವಾಗಿ ಪಾಳಯ ವ್ಯಾಮೋಹ ಕಟ್ಟಿಕೊಳ್ಳದೆ ಲೋಕ ಹಿತ ಚಿಂತನೆಯೊಂದನ್ನೇ ಕಟ್ಟಿಕೊಂಡಿರುವ ರಾಷ್ಟ್ರಗಳ ನಾಯಕ ಸ್ಥಾನದಲ್ಲಿರುವ ಭಾರತವು ಲೋಕಾಭ್ಯುದಯಕ್ಕಾಗಿ ವಿಶೇಷ ರೀತಿಯ ಪ್ರಯತ್ನಗಳನ್ನು ಕೈಗೊಳ್ಳುವುದು ಅಗತ್ಯವಲ್ಲವೆ?

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ಪ್ರಯತ್ನಶೀಲರಾದ ನಾವು ಜನಸಾಮಾನ್ಯರ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಹೊಂದಲಿಕ್ಕಾಗಲೀ ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

Approved form by the Gov. of Mysore
Certificated by the Agent of the Govt of Cl.oee & Indian

ಕೊರಿಯಾ ಸಮರ-

ಇಂದು ಇಡೀ ಸ್ವಪಂಜದ ಆಕರ್ಷಣ ವಿಷಯವಾಗಿರುವ ಕೊರಿಯದ ಯುದ್ಧವು ಅತಿ ರಭಸದಿಂದ ನಡೆದಿದೆ. ಯೋ ಕದ ಎಲ್ಲಾ ರಾಷ್ಟ್ರಗಳು ಹರಿದ್ವೇಷ ತಾಳಿ ಕೊಂಡಿರುವ ಮನೇ ಗುಂಪುಗಳಂತಿರುವಾಗ, ಅವುಗಳ ನಡುವೆ ಹುಟ್ಟಿಕೊಂಡ ಈ ಜಿಂಕೆ ನಂದಲೊಲ್ಲದೆ, ಸುತ್ತಲೂ ಕಿಡಿ ಹಾರಿಳುತ್ತಾ ಪ್ರಬಲಿಸುತ್ತಿರುವ ಭೃಶ್ಯವು ಎಲ್ಲರಲ್ಲೂ ದಿಗಿಲನ್ನು ಉಂಟುಮಾಡಿದೆ; ಎಲ್ಲರ ಲಕ್ಷ್ಯವನ್ನೂ ಆ ಕಡೆಗೆಳೆದಿದೆ. ಪ್ರಪಂಚದ ಭವಿಷ್ಯವೀ ಜಿಂಕೆಯಿಂದ ಜಿಂದು ಪಕ್ಷವೂ ಗೊಳ್ಳುವುದೇ ಅಥವಾ ಭಸ್ಮವಾಗುವುದೇ ಎಂಬ ಪ್ರಶ್ನೆಯೂಗ ಎದ್ದಿದೆ.

ಸಮರ ಸ್ಥಿತಿ

ಕೊರಿಯ ಯುದ್ಧದಲ್ಲಿ ನಿಶ್ಚಯವಾಗಿಯೂ ಕಮ್ಯೂನಿಸ್ಟರು ಗೆಲ್ಲುತ್ತಾ ಬರುತಿದ್ದಾರೆ ಅದಿಭಾಗದಲ್ಲಿ ತಯಾರಾಗಿಲ್ಲವೆಂಬ ಕಾರಣದಿಂದ ಅಮೆರಿಕಾನರು ಹಿಂದೆ ನಿಂತುದರಿಂದ ಉತ್ತರ ಕೊರಿಯದ ಸೇನೆಗಳು ಯಾವ ರೀತಿ ಮುಂದೊತ್ತಿದ್ದವೋ ಅದೇ ರೀತಿ, ಅಮೆರಿಕದ ಸೇನೆಗಳು ಇದಿರು ಬಿದ್ದ ನೇಲೂ ಉತ್ತರ ಕೊರಿಯದ ಸೇನೆಗಳು ಮುಂದೊತ್ತಿವೆ. ಸದ್ಯಸ್ಥಿತಿಯಲ್ಲಿ ಕಮ್ಯೂನಿಸ್ಟ್ ಸೇನೆಗಳಿದರು ಅಮೆರಿಕದ ಸೇನೆ ಗೆಲ್ಲುವ ಆಶೆ ಮುಗಿದಂತೆಯೇ. ಈ ಸ್ಥಿತಿಯನ್ನು ಬದಲಾಯಿಸಿ, ಗೆಲ್ಲಬಹುದೆನ್ನೋ ಣವೆ ಈ ಮಟ್ಟಿಗೂ ಕಮ್ಯೂನಿಸ್ಟರಿಗಲ್ಲಿ ಇವುವ ಅನುಕೂಲತೆಯಷ್ಟು ಅಮೆರಿಕಾನುಗಿಲ್ಲ. ಆದ್ದರಿಂದ ಕೊರಿಯಾ ಕ್ಷೇತ್ರದ ಮಟ್ಟಿಗೆ ಕಮ್ಯೂನಿಸ್ಟರು ಗೆದ್ದಂತೆಯೇ ಎಂದು ಭವಿಷ್ಯವಾಡಿದರದು ಹೆಚ್ಚಾಗದು. ಉತ್ತರಗಡಿಯಿಂದ ಮಯಾ ನ್ಯವಾಹದಂತೆ ದಕ್ಷಿಣ ಕ್ಷೆತ್ರವನ್ನು ಗ್ರಸಿದ್ದ ಕೆಂಪು ಸೇನೆಗೆ ತಡೆಗಟ್ಟು ಹಾಕಿ ಯುದ್ಧ ಮುಖವನ್ನು ತಿರುಗಿಸಿ ಬಿಡುವ ಉದ್ದೇಶದಿಂದ ಟೋಂಕು ಮತ್ತು ದೊಡ್ಡ ಗನ್ನುಗಳನ್ನು ಹೊಂದೊಡ್ಡಿ, ವಿಮಾನ ಮಾಡುಗಳಾಶ್ರಯದಲ್ಲಿ ಜನರಲ್ ಮೇಕರ್ಥರರು ಜೋನಾನ್ ವಲಯದಲ್ಲಿ ಮುಂ ಮುಂ ಹೋಗಂಟಕ್ಕೆ ತನ್ನ ಸೇನೆಯನ್ನು ಸಿದ್ಧಿಸಿದ್ದಾರೆ. ಅಲ್ಲಿ ನೈರೆ ಸಜಿಗಳನ್ನು ಬ್ರತಿಷ್ಠಪಿಸಿ, ಹಿಮ್ಮೆಟ್ಟಿಸಿ, ಹಿಂದೋಡಿಸುತ್ತಾ ಹೋಗಿ 38ನೇ ಗಡಿಗರೆಯು ಲಜಿಗೆ ಓಡಿಬೇಕೆಂದೂ ಅಮೇಲಲ್ಲಿಂದ ಉತ್ತರ ವಂಚಲಯ ವರೆಗೂ ಅಟ್ಟಿಕೊಂಡು ಹೋಗಬೇಕೆಂದೂ ಅಮೆರಿಕನರ ಸಂಕಲ್ಪವಿದ್ದಿರಬೇಕು. ಆದರೆ ಕಮ್ಯೂನಿಸ್ಟರು ಒಂದೇ ಹೊಡೆತದಿಂದ ಅಲ್ಲಿಯ ಅಮೆರಿಕಾನ ವ್ಯೂಹವನ್ನು ಮುರಿದು, ಅವರ ಭಾಗಗಳನ್ನು ಸುತ್ತುಗಟ್ಟಿ ವಷ್ಟೂ ಪೇಟ್ಟಿಯಾದರು. ವೈರಿಗಳ ಬಗಲೊಳಗೆ ಬಿದ್ದಲ್ಲಿಂದಲೂ ಹೆಚ್ಚಿನ ಹಾನಿಯಿಲ್ಲದೆ ನುಸುಳಿಕೊಂಡು ಜಾರಿ ಬಂದು ದನ್ನೇ ತಮ್ಮ ಪಾಲಿನ ವಿಜಯವೆಂದು ಹಗ್ಗಳಿಕೆಪಡುವ ಅದೃಷ್ಟ ಅಲ್ಲಿ ಅಮೆರಿಕಾನರಿಗೊದಗಿತು. ಆ ಮೇಲೆ ಮತ್ತೂ ಒಳಗಡೆಯಲ್ಲಿ ಚೋಂಚಿವನ್ ನಗರದಲ್ಲಿ ಅಮೆರಿಕನ್ ಸೇನೆ ಮತ್ತು ದೊಡ್ಡ ಟ್ಯಾಂಕು ದಳಗಳು ಎರಡನೇ ಬಾರಿ ಮಾರ್ಮಲೆತು ನಿಂತುವು. ಇದ್ದಯಾ ಕೆಂಪಣ್ಣ ದಳಗಳ ಕತ್ತೆಸಟ್ಟಿಗೇ ಹೊಡೆತದಿಂದ ಅವು ನುಜ್ಜುಗುಜ್ಜಾಗಿ ಹಿಂದೋಡಬೇಕಾಯಿತು. ಆ ಮೇಲಿನ ಕಥೆಯು ಇಮ್ಮೂ ಹೊಸ್ತಿಲಲ್ಲಿ ಕಥ್ಯಾಗ ಕೊಟ್ಟಿದೆ. ಪರಂಪರೆಯ ಶತ್ರುಸೈನ್ಯವೆಂದೇ ಭಾವಿಸಿದ್ದ ಟಾರಿಯ ಜನ್ಮನೆತ್ತ. ನಮ್ಮ ಜ್ಞೇಯವದೆ ಆದರೆ ಶತ್ರುಪಡೆಯಿರುವ ಕಡೆಗೆ ಹೊಳೆಮನ್ನು ಕೆಂಪು ಸೈನಿಕರು ದಾಟಬೇಕಾಗಿತ್ತು; ಇಲ್ಲಿ ಸೈನಿಕರ ಆತಂಕದ ಅಭ್ಯಾಯವಿದೆಯು ಅಮೆರಿಕಾನರು ವೈರಿಗಳನ್ನು ಸುಲಭವಲ್ಲಿ ಆತಂಕಿಸಬಹುದಿದ್ದಿತು. ಈ ಸನ್ನಿವೇಶ ನುಕೂಲತೆಯನ್ನು ಉಪಯೋಗಿಸಿಕೊಂಡೇ ಹೆಚ್ಚಿನ ಸೇನೋಪಕರಣಗಳನ್ನು ಕೂಡಿಕೊಂಡು ಅಮೆರಿಕನರು ಕುಮ್ಮೆ ಹೊಳೆಯ ಸೇತುವೆಯನ್ನು ಕಡಿದು ಹಾಕಿ ಈಚೆ ದಡದಿಂದ, ಇದಿರು ದಡವನ್ನು ಹುಡಿಗುಟ್ಟುವ ದೊಡ್ಡ ದೊಡ್ಡ ಗನ್ನುಗಳನ್ನು ಹಾರಿಸುತ್ತಾ ಮಹಾ ಪ್ರಯತ್ನವನ್ನೊಮ್ಮೆ ಮಾಡಿದ್ದರು. ತತ್ಪರಿಣಾಮವಾಗಿ ಒಂದೆರಡು ಕಡೆ ಸೇತುವೆ ರಚಿಸುವ ಕಮ್ಯೂನಿಸ್ಟ್ ಪ್ರಯತ್ನ ಕೂಡಾ ನಿಷ್ಫಲವಾಗಿದ್ದಿತು. ಇಡೀ ಕೊರಿಯಾ ಯುದ್ಧದಲ್ಲಿ ಆ ವರೆಗೂ ಕೆಂಪು ಸೇನೆ ತುಸು ತಡೆದು ನಿಂತುದೆಂದರೆ ಈ ಹೊಳೆ ಬದಿಯಲ್ಲೇ. ಆದರೂ ಒಂದೆಡೆಯಲ್ಲಿ ಸೇತುವೆ ರಚಿಸಿ ಹೊಳೆಯ ಈಚೆ ಬದಿಗೆ ನುಗ್ಗಿ ಬರುವ ಸಾಹಸದಲ್ಲಿ ಕೆಂಪು ಸೇನೆ ವಿಜಯಿಯಾಯಿತು. ಅವಂ ಹೊಳೆ ದಾಟದೊಡನೆಯೇ ಅಮೆರಿಕನ್ ಸೇನೆ ಇದ್ದಲ್ಲಿಂದ ಹಿಂದೇಯಿತು. ಈಗ ದಕ್ಷಿಣ ಕೊರಿಯದ ರಾಜಧಾನಿ ತಾಯಜಾನಿನ ಮೇಲೆಯೇ ಕೆಂಪು ಸೇನೆ ನುಗ್ಗಿದೆ. ಇದೇ ತಾ. 16 ರಲ್ಲಿ ಶತ್ರುಕ್ಷ್ಯ ತಾಯಜಾನಿನ ಮೇಲೆ ಕೆಂಪು ಸೇನಾ ಗುಂಡುಗಳು ಬೀಳಹತ್ತಿದ್ದು ಬೆನ್ನಲ್ಲೇ ಕೆಂಪು ಸೇನೆ ಹೋಗಿ ಬಿದ್ದಿದೆ. ಅದಕ್ಕೆ ಮೊದಲೇ ದಕ್ಷಿಣ ಕೊರಿಯದ ಸರಕಾರವು ಅಲ್ಲಿಂದ ದಕ್ಷಿಣ ಮೂಲೆಯ ಅನಾವ.ಧೇಯ ಸ್ಥಳವೊಂದಕ್ಕೆ ಥೇರೆ ಕಿತ್ತಾಯಿಗಿದೆ. ಕೆಂಪು ಸೇನೆ ಇದೇ ರೀತಿ ಮುಂದುಗಾಮಿಸುತ್ತಾ ಹೋದರೆ, ತನ್ನ ನೈರಿಗಳನ್ನು ದಕ್ಷಿಣ ಮೂಲೆಯ ವರೆಗೂ ಹಿಂತಳ್ಳುತ್ತಾ ಹೋಗಿ ಸಮುದ್ರಕ್ಕೆ ತಳ್ಳುವ ದಿನ ದೂರವಿರಲಾರದು. ಸಂಖ್ಯೆ ಮತ್ತು ಶಿಕ್ಷಾಸ್ತ್ರಗಳಲ್ಲಿ ಕಮ್ಯೂನಿಸ್ಟರು ಅಷ್ಟೂ ಮೇಲ್ಮೈಯಾಗಿದ್ದಾರೆಂಬುದು ಸ್ಪಷ್ಟ. ತಮ್ಮ ದ್ವಿತೀಯ ಸಂಗಾಭವದ ವೇಳೆ ಸಂಖ್ಯೆ ಮತ್ತು ಶಸ್ತ್ರದಲ್ಲಿ ವೈರಿಗಳು ತಮಗಿಂತ ನಾಲ್ಕು ಮತ್ತು ಐದು ಪಾಲು. ಹೆಚ್ಚಾಗಿದ್ದಾರೆಂದಿದ್ದ ಅಮೆರಿಕಾನರು ಕುಮ್ಮೆ ಹೊಳೇ ವಲಯದ ತೃತೀಯ ಸೋಲಿನ ನೇಳೆ ವಿರೋಧಿಗಳ ಬಲನಷ್ಟೆಂಬುದೇ ತಿಳಿದಲ್ಲವೆಂಬಷ್ಟು ದಿಗ್ಭ್ರಾಂತರಾಗಿದ್ದಾರೆ.

ಇನ್ನು ಮುಂದೆ

ಅಂತೂ ಉತ್ತರ ಕೊರಿಯದ ಸೇನೆಗಳು ಕೊರಿಯದ ದಕ್ಷಿಣ ತುದಿ ಮೂಲೆಯಲ್ಲಿ ಅಮೆರಿಕನ್ ಸೇನೆಗಳನ್ನು ಸಮುದ್ರಕ್ಕೆ ಳಿಸುವುದು ಸಂಭವನೀಯವೆಂದು ಇಂದಿನ ಯುದ್ಧ ಗತಿ ಸೂಚಿಸುತ್ತಿದೆ ಈ ಕೆಲಸವಾದರೋ ಕ್ಷಿಪ್ರ ತದಲ್ಲಿ ನಡೆಯುತ್ತಿದೆ. ಕಮ್ಯೂನಿಸ್ಟ್ ಅಥವಾ ಅಮೆರಿಕಗಳ ಪೈಕಿ ಯಾವ ಕಡೆಯವರೇ ಆದರೂ ಕ್ಷಿಪ್ರ ವಿಜಯ ಸಂಪಾದಿಸಿದರೆ ಮೂರನೇ ಮಹಾ ಯುದ್ಧ ವಾರಂಭಿಸದಂತೆಯೇ ಸರಿ, ಎಂದು ತಜ್ಞರ ಅಭಿಪ್ರಾಯ. ಬದಲಿಗೆ ಕೊರಿಯದ ಕೆಸರು ಗದ್ದೆ ಮತ್ತು ತೆರೆ ತೆರೆ ಗಳೆಡೆಯಲ್ಲಿ ಸಿಕ್ಕಿಕೊಂಡು ಯುದ್ಧವು ದೀರ್ಘ ಕಾಲ ಕೊಳೆಯುತ್ತಾ ಉಳಿದು ಕೊಂಡರೆ ಶಾಂತಿ ಸಂಧಾನ ಸಾಧನೆಗಾದರೂ ಕೂಲವೆಂಬ ಭಾವನೆಯಿದೆ. ಕಾರಣ ವಿಷ್ಟೆ; ಕೊರಿಯ ಯುದ್ಧಕ್ಕೀಗ ಅಮೆರಿಕಾನರು ಕೊಟ್ಟಿರುವ ಪ್ರಾಮುಖ್ಯತೆಯು ಮೇಲಿಂದ ಆದು ಅವರ ಸ್ಥಾನಮಾನದ ಪ್ರಶ್ನೆಯಾಗಿದೆ. ಅಲ್ಲಿ ಅಮೆರಿಕನರಿಗಾಗುವ ಸೋಲು ಒಂದು ಮಹಾ ಯುದ್ಧದಲ್ಲಾಗುವ ಸೋಲಿಗಿಷ್ಟೇ ಅಪಮಾನಕರವಾಗುವುದು. ಅಸ್ಯದಲ್ಲಿ ಮತ್ತು ಇಡೀ ಪ್ರಪಂಚದಲ್ಲಿ ಅಮೆರಿಕದ ಸ್ಥಾನಮಾನ ಕುಗ್ಗುವುದು. ದ್ವಿತೀಯ ಯುದ್ಧದ ಮಂಗಳಾಚರಣೆಯ ನಂತರ ತಮ್ಮ ಹೆಣ ಮತ್ತು ಸೇನಾಶಕ್ತಿಯು ಕುರಿತು ಅಮೆರಿಕಾನರಲ್ಲಿ ಮಿತ ನಿರಂದ ಹೆಗ್ಗಳಿಕೆ ಮತ್ತು ಹೆಮ್ಮೆ ವ್ಯಾಪಿಸಿಕೊಂಡಿದೆ. ಸೋವಿಯೆಟ್ ರಶ್ಯವನ್ನು ಈಗಲೇ ಹೋರಾಡಿ ಸದಬಡಿಯಬೇಕನ್ನುವ ಅತಿ ಗರ್ವಿಗಳ ಸಂಗಡ ಬೆಳೆಯುತ್ತಾ ಬಂದಿದೆ. ಈ ಗರ್ವಿಗರಿಗೆ ಕೊರಿಯದ ಪರಾಭವವು ವಜ್ರಾಘಾತವಾಗದಿರದು. ಚೀನಾದೊಡನೆ ಪ್ರತ್ಯಕ್ಷ ಯುದ್ಧಕ್ಕೇಳಬೇಕೆನ್ನುವ ಅಮೇರಿಕನ್ ಯುದ್ಧೋನ್ಮತ್ತರ ವಾದವು ಆಗ ಸರ್ವ ಮಾನ್ಯತೆ ಗಳಿಸಬಹುದು. ಮೇಲಾಗಿ ಬರುವ ನವಂಬರ ತಿಂಗಳಲ್ಲೇ ಅಮೆರಿಕದ ಚುನಾವಣೆ ನಡೆಯಲಿದೆ. ರಶ್ಯದ ರೋಗಕ್ಕೆ ತಕ್ಕ ಚಿಕಿತ್ಸೆ ಮಾಡಿದವರು ಮತ್ತು ಮಾಡುವವರು ಎಂಬ ನಂಬುಗೆಯನ್ನು ಹುಟ್ಟಿಸಲಾರದ ಪಕ್ಷವು ಅಲ್ಲಿ ಮತದಾರರ ಬೆಂಬಲ ಗಳಿಸಲಾರದು. ಹೀಗಾಗಿ ರಶ್ಯದ ಹಸ್ತಕ್ಷೇಪದ ಕಮ್ಯೂನಿಸ್ಟ್ ಕೊರಿಯಾನರಿದಿರು ಸೋತು ಸುಮ್ಮಗಿರಲು ಅಮೆರಿಕಕ್ಕೆ ಸಾಧ್ಯವೇ ಇಲ್ಲ. ಸಾಲದು ದಕ್ಕೆ ಕೊರಿಯದ ಸಮೀಪದಲ್ಲೇ ಇರುವ ಫೋರ್ಮೋಸಾ ದ್ವೀಪವನ್ನು ರಕ್ಷಿಸಿ ಕೊಡುವ ಪ್ರತ್ಯಕ್ಷ ಹೊಣೆಯನ್ನು ಅಮೆರಿಕ ಹೊತ್ತಿದೆ; ಅಮೆರಿಕದ 7ನೇ ಯುದ್ಧ ಹಡಗು ದಳವನ್ನು ಜನರಲ್ ಮೆಕಾರ್ಥರರು ಇಷ್ಟರಲ್ಲೇ ಫೋರ್ಮೋಸಾ ರಕ್ಷಣೆಗೆ ಬೀಳ್ಕೊಟ್ಟಿದ್ದಾರಲ್ಲದೆ, ವಿಮಾನಗಳ ರಕ್ಷಣಾ ವ್ಯವಸ್ಥೆಯನ್ನೂ ನಡೆಸಿದ್ದಾರೆ. ಕಮ್ಯೂನಿಸ್ಟ್ ಚೀನಾವೂ ಕೈಶೇಕ್‌ರಿಗೆ ಆಣ್ಣಾ ಹೊಡೆದಿರುವ ಫೋರ್ಮೋಸಾವನ್ನು ಅಕ್ರಮಿಸದೆ ತಾನೆಂದಿಗೂ ಬಿಡುವಂತಿಲ್ಲವೆಂದು ಜೈನೀ ಕಮ್ಯೂನಿಸ್ಟರಂತೂ ಶಪಥ ತೊಟ್ಟಾಗಿದೆ. ಅಲ್ಲಿ ಹೋರಾಟವೆಂಬುದು ಕಟ್ಟಿಟ್ಟ ನಿರ್ಣಯದಂತಿದೆ. ಕೊರಿಯಾದಂತೆಯೇ ಫೋರ್ಮೋಸಾದ ಯುದ್ಧದ ಮಟ್ಟಿಗೂ ಕಮ್ಯೂನಿಸ್ಟರಿಗಿರುವ ಅನುಕೂಲತೆಗಳೇ ಹೆಚ್ಚಿಗೆ. ಅತಿಗರ್ವಿ ಅಮೆರಿಕಕ್ಕೆ ಇಲ್ಲಿಯ ಅಪಜಯಗಳು ಅಸಹನೀಯವಾಗಿ ಅದು ಅಟಂಬೋಂಬು ಪ್ರಯೋಗಕ್ಕೆ ಮನಸ್ಸು ಮಾಡುವುದು ಅಸಂಭವವೆನ್ನಲಾಗುವುದಿಲ್ಲ. ತದ್ವಿರುದ್ಧವಾಗಿ ಒಂದೊನ್ಮೆಗೆ ಕೊರಿಯದಲ್ಲಿ ಅಮೆರಿಕಾನರೇ ಗೆಲ್ಲುತ್ತಾ ಹೋದರೆಂದು ಕಟ್ಟಕೊಳ್ಳೋಣ. ಆಗಲೂ ಚೀನಾ-ಅಮೆರಿಕ ಪ್ರತ್ಯಕ್ಷ ಯುದ್ಧವೇಳುವ ಅಪಾಯವಿದ್ದೇ ಇದೆ. ಉತ್ತರದ ಕೊರಿಯದ ಪಕ್ಷದಲ್ಲಿ ತಾನಿದ್ದೇನೆಂಬುದನ್ನು ರಶ್ಯವೀವರೆಗೂ ಒಪ್ಪಿಕೊಂಡಿಲ್ಲ. ತಾನು ಪ್ರತ್ಯಕ್ಷ ಮುಖ ತೋರಿಸದೇನೇ ಕೊರಿಯದ ಕೆಲಸವಾಗುವಂತಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ.

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯ ನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾಮೃತ
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಸೂಚನೆಗೆ—ಡಾ| ಯಂ. ಸಿ. ಶಾಸ್ತ್ರೀ, ಎಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ವಾಧಿಕಾರಿಗಳು:—ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

Notice

ಕುಂದಾಪುರ ಡಿ ಮು. ಕೋರ್ಟಿನಲ್ಲಿ
R. I. A. 539/50 O. S. 557/49

ಕಾಮಾಕ್ಷಿ ಯಾನೆ ರುಕ್ಮಿಣಿಅಮ್ಮ —ವಾದಿಳು.

ಅಬ್ದುಲ್ ಕಾದಿರ್ ಸಹಾ—ಪ್ರ. ರು. ವಾದಿಳ ಕಡೆಯಿಂದ ಈ ನೂಲ್ಕು ಜಾಹೀರು ಮಾಡಿಕೊಳ್ಳುವದೇನೆಂದ್ರೆ

5. ಪಾತಿಮು 6. ರಾಬಿಯು—ಹುಶೇನನ ಮಕ್ಕಳು. 11. ಹಸನ್ 12. ಕಾತಿಮ್ 13. ಹುಶೇನ್—ಅಲಿಮಕ್ಕಳು. ನಂಬ್ರ ನೇ ಶಿರೂರುಗ್ರಾಮ.

ಸದ್ರಿ ನಂಬ್ರದಲ್ಲಿ ಪ್ರಿಲಿಮಿನರಿ ಡಿಕ್ರಿ ದರ್ತ ಪ್ರಕಾರ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾದಿಳುಕೊಟ್ಟ ಅರ್ಜಿಯು ತಾ. 1-8-50ಕ್ಕೆ ಆಪೈರೆ ತನ್ಯಗೆ ಯಿರೋಣಾಗಿಯಿದೆ. ಆ ಕಾರಿತು ನಿಮ್ಮುದೇನಾದ್ರೂ ಆಕ್ಷೇಪವಿದ್ರೆ ಸದರಿದಿವ್ಸ ಮೇಲ್ಕಂಡ ಕೋರ್ಟು ಮುಂದೆ ಹಗಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷ ವಾಗಿ ತೀರ್ಮಾನಿಸಲ್ಪಡುವದೆಂದು ಸಂಗ್ತಿ ವಾದಿಳ ಕಡೆಯಿಂದ ತಿಳಿಯ ಪಡ್ಸಿದೆ.

G Sanjiva Rao.
Vakil for Plff.
Kundapur, Date : 3—7—50

-ನೆಹರೂ ಸಂದೇಶ.

ದ್ದರೆ, ರಶ್ಯವು ಕೊರಿಯದ ವರೆಗೂ ಈ ಯುದ್ಧದಲ್ಲಿ ಪ್ರತ್ಯಕ್ಷ ಭಾಗವಹಿಸಲಾರದು. ಅಮೆರಿಕವು ಅಲ್ಲಿ ಜಯಸಹಿತ್ತು, ಉತ್ತರಕೊರಿಯದ ಸೇನೆಗಳನ್ನು ಹಿಂದಕ್ಕಟ್ಟುತ್ತಾ ಹೋಗಿ 38ನೇ ಮಧ್ಯಾಂತರ ಗೆರೆಯ ಗಡಿ ದಾಟಿಸಿ, ಸುಮ್ಮನಾದರೆ ಸಂಗತ್ತಿ ಇಲ್ಲಿಗೆ ಅರಿವಾಸಿ ಥಂಡಾಗೊಳ್ಳಬಹುದು. ಆದರೆ ಅಮೆರಿಕನ್ ಸೇನೆಗಳು ಅಪಾಯ ನಿವಾರಣಾ ನೆವನದಿಂದ ಅಲ್ಲಿಂದಲೂ ಉತ್ತರಕ್ಕೆ ಮುನ್ನುಗ್ಗಿ ಕೊರಿಯದ ಪೂರ್ವೋತ್ತರ ಮೂಲೆಗೆ ಬಂದರೆ, ಅಲ್ಲಿ ಗುಂಡು ಹಾರಾಟ ಕೈಟಕುವಷ್ಟೇ ದೂರದಲ್ಲಿ ರಶ್ಯದ ಮಹಾ ಬಂದರಮ್ಮ ವ್ಲಾಡಿವೋಸ್ಟಕ್ ಇದೆ. ಅಮೆರಿಕನರು ಇಲ್ಲಿ ಬರುವ ವರೆಗೂ ರಶ್ಯವೆಂದಿಗೂ ಸುಮ್ಮಗಿರಲಾರದು. ಅಂತಹ ಸಂದರ್ಭ ಬಂದಲ್ಲಿ ರಶ್ಯವು ಕೈಯತ್ತುವುದು ಖಂಡಿತ. ಈ ರೀತಿ ಯಾವ ಕಡೆ ಗೆದ್ದರೂ ಕೊರಿಯದ ಯುದ್ಧ ದೊಡ್ಡದಾಗುವ ಅಪಾಯ ಇದ್ದೇ ಇದೆ. ಈಗಲಂತೂ ಕಮ್ಯೂನಿಸ್ಟರೇ ಗೆಲ್ಲುತ್ತಿರುವುದರಿಂದ ಈ ಅವಾಯವು ಮುಕ್ತುನ್ನು ಬಚಿತವಾಗಿ ಕಾಣುತ್ತಿದೆ.

ಇಕ್ಕಡೆಯ ಬಲ

ಕೊರಿಯಾ ಯುದ್ಧದಲ್ಲಿ ದಕ್ಷಿಣ ಕೊರಿಯದ ಪಕ್ಷವನ್ನು ಸಂಯುಕ್ತ ರಾಷ್ಟ್ರ ಸಂಘವೇ ವಹಿಸಿ, ಅಮೆರಿಕದ ಸೇನಾನಿ ಜನರಲ್ ಮೇಕಾರ್ಥರನನ್ನು ತನ್ನ ಸೇನಾನಾಯಕನಾಗಿ ಅದು ನೇಮಿಸಿಕೊಂಡಿದೆ. ಈ ಅಲ್ಲ ತಮ್ಮ ಕಡೆಯ ಸೇನಾಬಲ ಕಡಮೆಯಾಗುತ್ತಿರುವುದರಿಂದ ಸೇನೆಗಳನ್ನು ಕಳುಹಿಸಿ ಸಹಾಯ ಮಾಡಬೇಕೆಂದು ಸಂಯುಕ್ತ ರಾಷ್ಟ್ರ ಸಂಘದ ಮುಖ್ಯ ಕಾರ್ಯದರ್ಶಿ ಟ್ರಿಗ್ವಿಲೀಯವರು ಸಂಘದ ೫೨ ಸದಸ್ಯ ರಾಷ್ಟ್ರಗಳ ಪೈಕಿ ರಶ್ಯ ಮತ್ತದರ ಪಕ್ಷಪಾತಿ ರಾಷ್ಟ್ರಗಳನ್ನು ಬಿಟ್ಟು ಮಿಕ್ಕ 53 ರಾಷ್ಟ್ರಗಳನ್ನೂ ಕೇಳಿಕೊಂಡಿದ್ದಾರೆ. ಈ 53 ರಾಷ್ಟ್ರಗಳ ಪೈಕಿ ಹೆಚ್ಚಿನವು ಭಾರತ ಕಾಂಗ್ರೆಸಿನ ನಿರ್ಣಯಕ್ಕೆ ಈ ಮೊದಲೇ ಸಮ್ಮತಿ ಮತ್ತು ಸ್ವೀಕಾರವನ್ನು ಸೂಚಿಸಿರುವವಾದರೂ ನಾಲ್ಕೈದು ರಾಷ್ಟ್ರಗಳ ವಿನಹ ಬೇರಾವುದೂ ಇಂದಿನವರೆಗೆ ನಿಶ್ಚಿತ ಪ್ರತ್ಯಕ್ಷ ಸಹಾಯ ನೀಡಲು ಮುಂದೆ ಬಂದಿರಲಿಲ್ಲ. ಕಾದ ಮಜಾ ಯುದ್ಧದಲ್ಲಿ ಗಣ್ಯ ವಿಜಯವನ್ನು ಗಳಿಸಿದ್ದ, ಬ್ರಿಟನ್ ರಾಷ್ಟ್ರರ ಸೇನಾನಿತ್ವದಲ್ಲಿರುವ ಅಮೆರಿಕನ್ 8ನೇ ಮೂಲ ಬಲ ಕೊರಿಯಕ್ಕೆ ಬಂದಿದೆ. ಕೆಲವು ರಾಷ್ಟ್ರಗಳು ಸೇನೆ ಮತ್ತಿತರ ಸಹಾಯ ಕೊಡಲು ಮುಂದಾಗಿವೆ. ಆದರೆ ಅಮೆರಿಕದಿಂದ ಜಾಪಾನಿಗೆ ಮತ್ತಲ್ಲಿಂದ ಕೊರಿಯ ರಣರಂಗಕ್ಕೆ ಸೇನೆಗಳನ್ನು ಸಾಗಿಸಲು ಕಡಮೆಯೆಂದರೂ ಎಂಡು ವಾರಗಳು ಬೇಕು. ಇದೇ ರೀತಿ ಅನ್ಯ ದೇಶಗಳ ಸೇನೆಗಳು ಹೋಗುವದಕ್ಕೂ ವಿಳಂಬವಿದ್ದೇ ಇದೆ. ಮೇಲಾಗಿ ಇವು ಜಾಪಾನಿನಿಂದ ಹಡಗ ಅಥವಾ ವಿಮಾನ ಮೂಲಕ ಕೊರಿಯಕ್ಕಿಳಿಯಬೇಕು. ಸಮುದ್ರ ಮತ್ತು ಆಕಾಶದ ಮಟ್ಟಿಗೆ ಕೊರಿಯದಲ್ಲಿ ಈಗಲೂ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಗಳದೇ ವೈರ್ಚಿತ್ಯ. ಆದರೆ ಇದಿಂದ ಉತ್ತರ ಕೊರಿಯದ ಪ್ರಾಬಲ್ಯಕ್ಕಾವ ಗಣ್ಯ ಧಕ್ಕೆಯೂ ಬಿದ್ದಿಲ್ಲ. ಕೆಂಪು ಸೇನಾ ಚಲನೆಗೆ ಭೂಮಿಯು ಅನುಕೂಲತೆ ಪರಿಪೂರ್ಣವಿದೆ. ಕೊರಿಯದ ಪರ್ವತ ವಲಯಗಳು ಮತ್ತು ವಿಳೆಗಾಲದ ಹವಾಮಾನಗಳು ಅಮೆರಿಕಾನರ ಆಕಾಶ ಧಾಳಿಗೆ ಪ್ರಬಲತಂಕಗಳನ್ನೊಡ್ಡುತ್ತಿವೆ, ಕಮ್ಯೂನಿಸ್ಟ್ ಸೇನೆಗಳ ಧೈರ್ಯ, ಸಾಹಸ, ಶಿಸ್ತು ಮತ್ತು ಸಮರ ಕೌಶಲ್ಯಗಳು ಇದಿರು ಕಡೆಯವರನ್ನು ದಂಗುಬಡಿಸಿವೆ. ಸಂಖ್ಯೆ ಮತ್ತು ಶಸ್ತ್ರಾಸ್ತ್ರಗಳ ಮಟ್ಟಿಗೆ ಕಮ್ಯೂನಿಸ್ಟರು ವೈರಿ ಭಯಂಕರರಾಗಿ ಕಾಣುತ್ತಿದ್ದಾರೆ. ಕೂಡಲೇ ಮುಖಾಮುಖಿ ಯುದ್ಧಕ್ಕೊಡ್ಡಲಾಗುವ 60,000 ಸೈನಿಕರು ಜನರಲ್ ಮೇಕಾರ್ಥರರಿಗೆ ಜಪಾನಿನಲ್ಲಿದ್ದರಾದರೂ, ಅವರೆಲ್ಲರೂ ಯುದ್ಧಾನುಭವವಿಲ್ಲದ ತರುಣರು; ಮತ್ತು ದಂಡಲ್ಲಿರುವ ಅಧಿಕಾರಿಗಳೂ ಕೂಡಾ ಪಕ್ವ ಗೊಂಡವರಲ್ಲ. ಮೇಲಾಗಿ ಕೊರಿಯವು ಅವರಿಗೆ ಅಪರಿಚಿತ ಸರಸ್ಥಳ. ಇದಿರು ಕಡೆಯ ಉತ್ತರ ಕೊರಿಯನರ ವಶ ಕಳೆದುದು ವರುಷಗಳಲ್ಲಿ ಚಿಕ್ಕಾನೆಂದ ತರಬೇತಿ ಪಡೆದಿರುವ 125,000 ಮೂಲ ಸೈನಿಕರೇ ಇದ್ದಾರೆ. ಈ ಪೈಕಿ ಒಂದು ದಳವು, ಚೈನೀ ಕಮ್ಯೂನಿಸ್ಟ್ ಸೇನಾನಿತ್ವದಲ್ಲಿ ವಂಚೂರಿಯ ಮತ್ತು ಉತ್ತರ ಮಧ್ಯ ಚೈನದಲ್ಲಿ ಕಳೆದ ಮೂರು ವರುಷಗಳಲ್ಲೂ ಹೋರಾಡಿ, ಯುದ್ಧದ ಮತ್ತು ವಿಜಯದ ಪರಿಪಕ್ವಾನುಭವವುಳ್ಳದ್ದು ಎಂದು, ತಿಳಿದು ಬಂದಿದೆ. ಯಾವ ವಿಧದಲ್ಲೂ ನಿಸ್ಸಹಾಯಕತೆಯುಂಟಾಗದಂತೆ ಉತ್ತರ ಕೊರಿಯಕ್ಕೆ ತಾಗಿಕೊಂಡೇ ಕಮ್ಯೂನಿಸ್ಟ್ ಚೈನಾ ಮತ್ತದಕ್ಕೊತಾಗಿ ಸೋವಿಯೆಟ್ ರಶ್ಯಾ ಇದೆ. ಕೊರಿಯದ ಕಮ್ಯೂನಿಸ್ಟ್ ಸೈನಿಕರಿಂದರೇ ಸುವರಿಚಿತ ಸ್ವಂತ ರಾಜ್ಯದಲ್ಲೇ ಹೋರಾಡುತ್ತಿದ್ದಾರೆ. ಕಮ್ಯೂನಿಸ್ಟರು ಕಳದೈದು ವರುಷಗಳಲ್ಲಿ ನಡೆಸಿದ್ದ ಕೊರಿಯದ ಏಕೀಕರಣ ಪ್ರಯತ್ನವು ಉತ್ತರ ದಕ್ಷಿಣ ಭೇದವಿಲ್ಲದೆ ಅಖಿಲ ಕೊರಿಯದ ಜನತೆಗೇನೇ ಸರಿಯಾಗಿ ಮಂದಟ್ಟಾಗಿದೆ. ದಕ್ಷಿಣ ಕೊರಿಯದ ಸರಕಾರವನ್ನು 'ಅಮೆರಿಕದ ಗೊಂಬೆ' ಯೆಂದು ಜಿಗುಪ್ಸೆಯಿಂದ ಕಾಣುವವರೇ ಎಲ್ಲರೂ. ದಕ್ಷಿಣ ಕೊರಿಯದ ಹಲವು ಸೇನಾನಿಗಳು ಪಕ್ಷ ಬದಲಾಯಿಸಿ ಉತ್ತರ ಕೊರಿಯದ ಕಡೆಗೆ ಸೇರಿಕೊಂಡು ಯುದ್ಧ ಚಾಲನೆಗೆ ವಿಶೇಷ ನೆರವನ್ನೀಯುತ್ತಿದ್ದಾರೆ. ದಕ್ಷಿಣ ಕೊರಿಯದಲ್ಲಿ ಹಲವು ವರುಷಗಳಿದ್ದು ಪ್ರತ್ಯಕ್ಷಾನುಭವವುಳ್ಳ ಓರ್ವ ಅಮೆರಿಕನ್ ದಳಪತಿಯು "ಬಿಳಿ ಜನರೆಂದರೆ ದಕ್ಷಿಣ ಕೊರಿಯದ ಜನರು ಕೊಡಾ ಅಪಿಯಾಗಿ ದ್ವೇಷಿಸುತ್ತಾರೆ" ಎಂದಿದ್ದಾರೆ. ಮತ್ತೋರ್ವ ಅಮೆರಿಕನ್ ಸೇನಾಧಿಕಾರಿಯು ಈ ಕೆಳಗಿನ ಮತ್ತೊಂದು ಗುಟ್ಟನ್ನು ಹೊರಗೆಡಹಿ ವಂದ ಪ್ರತಿವಾದಗಳಿಗೆ ಅವ್ಕಾಶ ಕೊಟ್ಟಿದ್ದಾರೆ. "ದಕ್ಷಿಣ ಕೊರಿಯನೇ ಉತ್ತರ ಕೊರಿಯದ ಮೇಲೆ ಆಕ್ರಮಣ ನಡೆಸುವುದಕ್ಕಾಗಿ ಅಮೆರಿಕದಿಂದ ವಿಶೇಷ ಶಸ್ತ್ರಾಸ್ತ್ರಗಳ ಸಹಾಯವನ್ನು ಕೇಳಿದ್ದಿತು. ಈ ಉದ್ದೇಶವನ್ನು ಅರಿತ ಅಮೆರಿಕವು, ಅಂತಹ ಆಕ್ರಮಣವನ್ನು ನಡೆಯಗೊಡಬಾರದೆಂಬ ಇಚ್ಛೆಯಿಂದ ದಕ್ಷಿಣ ಕೊರಿಯಕ್ಕೆ ಶಸ್ತ್ರಾಸ್ತ್ರ ಕಳುಹಿಸಿರಲಿಲ್ಲ". ಯಾವುದು ಹೇಗಿದ್ದರೂ ಕೊರಿಯ ಯುದ್ಧದಲ್ಲಿ ಅಂತರಂಗ, ಬಹಿರಂಗ ಬಲ ವೆರಡರಲ್ಲೂ ಕಮ್ಯೂನಿಸ್ಟರೇ ಸ್ಪಷ್ಟವಾಗಿ ಮೇಲ್ಗೈ ಯಾಗಿದ್ದಾರೆ. ಬಿಡಿಸಿಕೊಳ್ಳಲಾರದ ಕತ್ತಿಯೊಳಗೆ ತಾವು ಕೈಪಾಕ ಸಿಕ್ಕಿಬಿದ್ದೆವೆಂಬ ಅಂತರಂಗ ಯಾತನೆಯು ಈಗ ತಾನೇ ಅಮೆರಿಕನರಿಗಾಗುತ್ತಿರಬೇಕು. ಅಮೆರಿಕವೀಗ ನಡೆಸುತ್ತಿರುವುದೊಂದು ಪರಿಮಾಣದ ಸೇನಾ ಸಂಗ್ರಹ, ಆಟಂ ಬೊಂಬು ತಯಾರಿ ಕಾರ್ಖಾನೆಗಳಂತಹ ಪ್ರಮುಖ ಕೇಂದ್ರಗಳನ್ನು ಧಾಳೀ ಭೀತಿಯಿಂದ ಚದರಿಸಿ ಹಾಕಹತ್ತಿರುವುದೇ ನೊದಲಾದ ಮಹಾ ಮಹಾ ಸಿದ್ಧತೆಗಳನ್ನು ಕಾಣುವಾಗ ಅದು ಪ್ರತ್ಯಕ್ಷ ಮಹಾಯುದ್ಧವನ್ನೇ ನಿರೀಕ್ಷಿಸುತ್ತಿರುವಂತಿದೆ. ಬ್ರಿಟನ್ ಮೊದಲಾದ ರಾಷ್ಟ್ರಗಳಲ್ಲೂ ಮಹಾ ಧಾಳಿ ನಿರೀಕ್ಷೆಯ ವಿಶೇಷ ರಕ್ಷಣಾ ವ್ಯವಸ್ಥೆಗಳಾಗಿವೆ.

ನೆಹರೂ ಸೂಚನೆ

ದ್ವಿಕೀಯ ಯುದ್ಧಾಂತ್ಯದ ಬಳಿಕ ಸ್ಪಷ್ಟ ಬೆಳಕನ್ನೆಂದಿಗೂ ಕಾಣದೆ ನೋಡಕವಿದುಕೊಂಡೇ ಇದ್ದ ಲೋಕಕ್ಕೇಗ, ಗಾಢಾಂಧಕಾರ ಕವಿಯ ಹತ್ತಿದೆ ಎಂಬುದು ಮೇಲಿನ ವಿದ್ಯಮಾನಗಳಿಂದ ಸುಸ್ಪಷ್ಟ. ಈ ಕತ್ತಲೆಯಲ್ಲಿ ಈಗ ತಾನೇ ಮೂಡಿ ತೋರುತ್ತಿರುವ ಒಂದು ಆಶಾಕಿರಣವೆಂದರೆ ಪಂಡಿತ ನೆಹರುಗಳ ಸಂಧಾನ ಸೂಚನೆ. ಕೊರಿಯ ಯುದ್ಧ ಸ್ಫೋಟಗೊಂಡಂದಿನಿಂದ ಅದರ ಕ್ಷಿಪ್ರ ಹಾಗೂ ಶಾಂತ ತೀರ್ಮಾನಕ್ಕಾಗಿ ಭಾರತ ಸರಕಾರವು ತನ್ನ ವಿದೇಶೀ ಸಂಬಂಧ ಮಾಧ್ಯಮಗಳ ಮೂಲಕ ಮೇಷೆನ್ಸ್ಫೀಲ್ಡ್, ವಾಷಿಂಗ್ಟನ್, ಲಂಡನ್ನುಗಳೊಡನೆ ಸೂಚನಾವ್ಯವಹಾರಗಳನ್ನು ನಡೆಸಿಕೊಂಡು ಬಂದಿದ್ದಿತು. ಇದೇ ಜುಲಾಯಿ ತಾ 12ರಲ್ಲಿ ಭಾರತದ ಪ್ರಧಾನ ಮಂತ್ರಿಗಳು ಈ ಸಂಬಂಧವಾಗಿ ಪ್ರಾಮುಖ್ಯ ಹೊಸಗೀ ಸಂದೇಶವೆನ್ನು ರಶ್ಯದ ಪ್ರಧಾನ ಮಂತ್ರಿ ಸ್ಟಾಲಿನ್ನರಿಗೂ, ಅಮೆರಿಕದ ಗೃಹಕಾರ್ಯದರ್ಶಿ ಡೀನ್ ಅಚೆಸನ್ನರಿಗೂ ರವಾನಿಸಿದ್ದರು. ಅದೇ ರೀತಿ ಬ್ರಿಟನಿನ ಪ್ರಧಾನ ಮಂತ್ರಿ ಕ್ಲೆಮೆಂಟ್ ಆಟ್ಲೀಗಳಿಗೂ ಒಂದು ಸೂಚನೆ ರವಾನಿಸಿದ್ದರು. ತಾ. 13ರಲ್ಲಿ ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ವಾಷಿಂಗ್ಟನಿನಲ್ಲಿ ಅಮೇರಿಕದ ಉಪಸಂಗ್ರಹ ಕಾರ್ಯದರ್ಶಿ ಮಿ. ಮಾಷಿಸೀಯವರ ಕೈಗೂ, ರಶ್ಯದಲ್ಲಿ ಭಾರತ ರಾಯಭಾರಿಯಾಗಿರುವ ಡಾ. ರಾಧಾ-

(ಬೇರು ಪುಟ ನೋಡಿರಿ.)

NOTICE

(Under Section 78 of the Madras District Municipalities Act 1920, as amended.)

The Municipal Council of Udipi, at its special meeting held on 13-7-50 has determined to levy profession tax for general purposes at the following rates with effect from 1-4-50. The Municipal Council will consider Objections, if any, to the proposal received within one moth from the date of publication of this notice.

No.	Half yearly income				Rate		
I	More than Rs. 15000				78	2	0
II	do	Rs. 12000 but not more than Rs. 15000			62	8	0
III	do	Rs 9000	do	Rs. 12000	46	14	0
IV	do	Rs. 6000	do	Rs. 9000	31	4	0
V	do	Rs. 4800	do	Rs. 6000	15	10	0
VI	do	Rs. 3000	do	Rs 4800	7	8	0
VII	do	Rs. 1800	do	Rs. 3000	3	12	0
VIII	do	Rs. 1200	do	Rs. 1800	2	8	0
IX	do	Rs. 600	do	Rs. 1200	1	4	0
X	do	Rs. 300	do	Rs. 600	0	10	0

Subject to the sanction of the Government the Council also proposes to levy with effect from 1-4-50 an education tax at 20% of the profession tax levied for the general purposes.

Note: This Notice cancells the notice dated 16-6-50 published on 22-6-50.

(Sd.) V. Balagangadharan,
Commissioner.

THE
Canara Banking Corporation Ltd.
(Incorporated in India)
Estd: 1906.
Head Office : UDIPI, (S. I)

Capital Authorised .... Rs. 25,00,000
Capital Issued, Subscribed &
Paid up .... Rs. 20,00,000
Reserves .... Rs. 9,44,765

ಪ್ರಜಾಮತ
ಗುರುವಾರ ಉಡುಪಿ ೨೦-೭ ೧೯೫೦

ಕಾಶ್ಮೀರ

ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಮುಖ್ಯ ವಿವಾದವಾಗಿ ಈಗಲೂ ಉಳಿದು ಕೊಂಡಿರುವ ಕಾಶ್ಮೀರದ ಪ್ರಶ್ನೆಯು ತೀರ್ಮಾನ ಹೊಂದುವ ವರೆಗೂ ಇವೆರಡು ರಾಷ್ಟ್ರಗಳ ನಡುವೆ ಶಾಶ್ವತ ಶಾಂತಿ ಮತ್ತು ಮೈತ್ರಿ ಸ್ಥಾಪನೆಯಾಯಿತೆಂದು ಕಟ್ಟಿಕೊಳ್ಳಲಾಗುವದಿಲ್ಲವೆಂಬುದು ಸ್ಪಷ್ಟವಿದ್ದೂ, ಅಲ್ಪ ಸಂಖ್ಯಾಕರ ಸಂಬಂಧದ ಒಡಂಬಡಿಕೆ ಮತ್ತಾನಂತರ ಭಾರತ ಪಾಕಿಸ್ತಾನಗಳೊಳಗಾಗುತ್ತಾ ಬಂದ ಸ್ನೇಹ ಸಂಬಂಧಗಳ ಮೇಲಿಂದ ಕಾಶ್ಮೀರದ ವಿವಾದ ಕೂಡಾ ಅದೇ ರೀತಿ ಶಾಂತ ತೀರ್ಮಾನ ಹೊಂದೀತೆಂಬ ಆಶೆ ಮೊಳೆತಿದೆ ಹೊರತು, ಸ್ಥಿತಿ ಪೂರ್ಣ ಬದಲಾಗಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಶಾಂತಿ ದೂತನಾಗಿ ಬಂದಿರುವ ಸರ್. ಓವೆನ್ ಡಿಕ್ಸನರು, ಕಾಶ್ಮೀರ ಮಧ್ಯಸ್ಥಿಕೇ ಸಂಬಂಧದ ಪರಿಶೀಲನಾ ಪೀಠಿಕೆಯನ್ನು ಮುಗಿಸಿಕೊಂಡು ನೆಹರು-ಲಿಯಾಖತರ ಮುಖಾಮುಖಿ ಸರ್ಯಾಲೋಚನಾ ಕೂಟವನ್ನೇಗ ಕರೆದಿದ್ದಾರೆ. ಸರ್. ಡಿಕ್ಸನರು ಹಾಜರಿದ್ದೇ ಭಾರತ-ಪಾಕಿಸ್ತಾನ್ ಪ್ರಧಾನಿಗಳು ಈ ದಿನ (ತಾ. 20) ಢಿಲ್ಲಿಯಲ್ಲಿ ಕಾಶ್ಮೀರ ಸಂಬಂಧದ ಮಾತುಕತೆ ನಡೆಸುವರೆಂದು ಗೊತ್ತಾಗಿದೆ. ಇಕ್ಕಟ್ಟಿನ ನ್ಯಾಯಕರು ಕಾಶ್ಮೀರ ವಿವಾದದ ಸಂಬಂಧವಾಗಿ ನಿಶ್ಚಯಾತ್ಮಕ ಮಾತುಕತೆ ನಡೆಸುವುದು ಇದೇ ನೆಹರು, ಭಾರತವು ಲೋಡ್ರ್ ವೌಂಟ್ ಬೇಟನರನ್ನು ಗವರ್ನರ್ ಜನರಲ್ ಆಗಿ ಇಟ್ಟುಕೊಂಡಿದ್ದ ಆ ಕಾಲದಲ್ಲೂ ಮೈ ಭಾರತ-ಪಾಕಿಸ್ತಾನ್ ಪ್ರಧಾನಿಗಳು ಕಾಶ್ಮೀರ ಸಂಬಂಧವಾಗಿ ಚರ್ಚಿಸಿದ್ದುದೂ, ಅಲ್ಪ ಸಂಖ್ಯಾಕರ ಸಂಬಂಧದ ಒಪ್ಪಂದಕ್ಕಾಗಿ ವಿ. ಲಿಯಾಖತರು ಕಳದ ಎಪ್ರಿಲ್‌ನಲ್ಲಿ ಢಿಲ್ಲಿಗೆ ಬಂದಿದ್ದಾಗ ಮಹ್ಮದ್ ಅಲಿ ಕುರಿತು ಮಾತುಕತೆಯಾಗಿದ್ದುದೂ ಈ ಸಂದರ್ಭದಲ್ಲಿ ನೆನಪಾಗುತ್ತಿದೆ. ಆದರೆ ಆವೆರಡೂ ಅಂದಾಜು ತಳಿಯುವ ಪ್ರಸ್ತಾಪಗಳಂತಿದ್ದುವು ಹೊರತು ನಿಶ್ಚಯಾತ್ಮಕವಾಗಿರಲಿಲ್ಲ. ಭದ್ರತಾ ಕೌನ್ಸಿಲಿನ ಪ್ರತಿನಿಧಿ ಸರ್. ಡಿನ್ನನರೇ ಕರೆದಿರುವ ಈ ಬಾರಿಯ ಸಮ್ಮೇಳನವು ಕಾಶ್ಮೀರ ವಿವಾದವನ್ನು ಮುಕ್ತಾಯ ಗೊಳಿಸುವ ಉದ್ದೇಶದಿಂದಿರುವುದರಿಂದ ಸ್ಪಷ್ಟ ಹಾಗೂ ಕೊನೆಯ ತೀರ್ಮಾನವನ್ನಿಲ್ಲಿ ನಿರೀಕ್ಷಿಸಬಹುದು. ಇದೇ ಸಂದರ್ಭದಲ್ಲಿ, ಢಿಲ್ಲೀ ಒಡಂಬಡಿಕೆಯ ಕಾರ್ಯ ರೀತಿ, ಭಾರತ ಪಾಕಿಸ್ತಾನ್ ವ್ಯಾಪಾರ ಸಂಬಂಧ, ಮತ್ತಿತರ ಹೊಕ್ಕು ಬಳಕೆಗಳ ಕುರಿತೂ ನೆಹರೂ ಲಿಯಾಖತರು ಪರ್ಯಾಲೋಚಿಸಲಿರುವರೆಂದು ಗೊತ್ತಾಗಿದೆ. ಭಾರತ-ಪಾಕಿಸ್ತಾನಗಳ ಈ ನಾಯಕರಿಬ್ಬರೂ-ಇವೆರಡು ದೇಶಗಳೊಳಗೆ ಈಗ ಇರುವ ಸಂಬಂಧ-ಲೋಕದ ಇಂದಿನ ಸ್ಥಿತಿಗತಿ-ಎಲ್ಲವೂ ಸಂಧಾನ ಸಾಧನೆಗನುಕೂಲವಿವೆ; ಸ್ವಪರ ಹಿತದ ಮೇಲೆ ದೃಷ್ಟಿಯಿಟ್ಟು, ಇವೆರಡು ರಾಷ್ಟ್ರಗಳು ಸಂಪೂರ್ಣ ಹಾಗೂ ಶಾಶ್ವತ ಮೈತ್ರಿ ಕಟ್ಟಿಕೊಳ್ಳುವುದು ಈ ಕಾಲದಲ್ಲಿ ಅತ್ಯಗತ್ಯ. ಆದ್ದರಿಂದ ಈಗ ತಾನೇ ಆರಂಭಿಸಿರುವ ನೆಹರೂ ಲಿಯಾಖತ್ ಮಾತುಕತೆಯು ಪೂರ್ಣ ವಿಜಯಗೊಳ್ಳುವುದೆಂಬ ಆಸೆಯನ್ನೂ, ಹಾಗಾಗಲೇಬೇಕೆಂಬ ಆಗ್ರಹವನ್ನೂ ಎಲ್ಲರೂ ಕಟ್ಟಿಕೊಳ್ಳಬೇಕಾದುದು ಸ್ವಾಭಾವಿಕ.

ಪುಟಾರಾಂಪ್ಟೆ, ಆಸೆ, ಆಕುರಗಳಲ್ಲಿಂತ ಹ.ಮಾಧುರ್ಯವಿದ್ದರೂ ವಸ್ತುತಃ ಕಾಶ್ಮೀರ ವಿವಾದವು ಇಲಭದಲ್ಲಿ ಬಿಡಿಸಲುಂದ ಒಗಟಾಗಿಯೇ ಇವೆ, ಎಂಬುದನ್ನು ಮರೆಯಲಾಗುವುದಿಲ್ಲ. ಈ ಸಂಬಂಧವಾಗಿ ಒಂದು ಕಡೆಯು ಭಾರತ ಮತ್ತು ಕಾಶ್ಮೀರ ಸರಕಾರಗಳೆ, ಇದಿರುಕಡೆಯು ಪಾಕಿಸ್ತಾನ್ ಸರಕಾರದ ವಾದ ಪ್ರತಿವಾದಗಳೇನೆಂಬುದು ಸ್ಪಷ್ಟವಾಗಿರುವ ಸಂಗತಿ. ಇಕ್ಕಟ್ಟಿದೆಗೂ ಸಮ್ಮತವಾಗುವ ಒಂದು ತೀರ್ಮಾನವನ್ನು, ಕೇವಲ ಸ್ವಸಾಮರ್ಥ್ಯದಿಂದ ಶೋಧಿಸಬಲ್ಲವರಾರೂ ಇರಲಾರರು. ಕಾಶ್ಮೀರಕ್ಕಾಗಿ ಲಭವಾ ತಮ್ಮೊಳಗಿನ ಇನ್ನಾವುದೇ ಪ್ರಶ್ನೆಗಾಗಿ ತಾವೆಂದಿಗೂ ಶಸ್ತ್ರಾಸ್ತ್ರವಿದಿಲ್ಲವೆಂಬ ಪ್ರತಿಜ್ಞೆಯನ್ನು ಇಕ್ಕಾಡೆಯವರೂ ಧೃಢಿಸಿ, ಶಾಂತ ತೀರ್ಮಾನಕ್ಕಾಗಿ ಪರಸ್ಪರ ಕೊಟ್ಟು ಪಡೆಯುವ ಧೋರಣೆ ವಹಿಸಿದರೇನೇ ಒಂದು ಒಡಂಬಡಿಕೆಗೆ ಬರಲು ಸಾಧ್ಯ. ಅತ್ಯಾಸೆಯತೆಯಿದ್ದಲ್ಲಿ ಅಭಿಮಾನದ ಪ್ರಶ್ನೆಯೇಳುವದಿಲ್ಲ; ಹೊಂದಾಣಿಕೆ ಅವಾಯವಿದಿರಲ್ಲಿ ಅಂತಃಕಲಹ ವಾಯವಾಗಲೇಬೇಕು. ಕಾಶ್ಮೀರದ ಕಲಹದಲ್ಲಿ ಎಲ್ಲಕ್ಕಿಂತ ಹೆಚ್ಚಿನ ನ್ಯಾಯೋಚಿತವಾದ ದೃಷ್ಟಿಕೋನವೇನೆಂದರೆ ತಾಂ ಬಿದ್ದುದರಿಂದ ಭಾರತ ಸ್ವತಂತ್ರವಾಗಲು ಕೈಗೆ ಆಗ ಬೆಳೆದು ಬಂದಿರುವ ಲಕ್ಷಣಯುತೆಯು ಅಂತಹದನ್ನು ನಿವಾರಿಸಬಲ್ಲದು. ಕೊರಿಯಾ ಯುದ್ಧ ಮತ್ತು ಅಸ್ಸಾಮಿನ ಕಡೆಗೆ ರಶ್ಯಾ ಅಮೆರಿಕಗಳು ಇಟ್ಟಿರುವ ಕಣ್ಣು ಹಾಗೂ ಹೆಜ್ಜೆಗಳು ಭಾರತ ಪಾಕಿಸ್ತಾನವೆರಡರ ಪಾಲಿಗೂ ಒಂದಲ್ಲೊಂದು ದಿನ ಗಂಡಾಂತರವನ್ನು ತರುವಂತಹದೆಂಬುದು ಸ್ಪಷ್ಟವಿರವಾಗಿ ಈ ಹೊರಾಪಾಯದ ಇದಿರಲ್ಲಿ ಇವೆರಡು ರಾಷ್ಟ್ರಗಳು ಒಂದಾಗಲೇಬೇಕು. ಇಂತಹ ವಿಶಾಲ ದೃಷ್ಟಿಯಿಂದ ಕಾಶ್ಮೀರ ವಿವಾದವನ್ನು ನೋಡಿದರೇನೇ ಸಾರ್ಥಕವಾದೀತಲ್ಲದೆ, ಆ ಒಡಂಬಡಿಕೆಯನ್ನು ಎಸಕೆಸಳವಾಗಿ ಬಿಡಿಸಿಕೊಳ್ಳಲು ಕುಳಿತರೆ ಯಾರಿಂದಲೂ ಬಿಡಿಸಲಾರದಂತೆ ತಡಬಡಿಪು ಉದರೊಳಗಿದೆ, ಎಂಬುದನ್ನು ಮರೆಯಬಾರದು.

ಕಾಶ್ಮೀರ ಸಂಬಂಧದ ಭಾರತ ಪಾಕಿಸ್ತಾನ್ ವಿವಾದ ಸ್ವರೂಪ ಹೀಗಿದ್ದರೆ, ಕಾಶ್ಮೀರದ ನಾಯಕತ್ವದ ವ್ಯವಹಾರಗಳು ಕೂಡಾ ಸಂಪೂರ್ಣ ಸಂತೆಯಾತೀತವಾಗಿಲ್ಲ. ಶೇಕ್ ಅಬ್ದುಲ್ಲಾರ ಅವೇಳೆ ನಾಯಕತ್ವ-ಪಾಕಿಸ್ತಾನ್ ಧಾಳಿಗಾಂರಿದರು ಅವರು ತೊಟ್ಟಿರುವ ಅಚಲ ಶಪಥ-ಭಾರತದ ಕಡೆಗೆ ಅವರಿಗಿರವ ವಿಶ್ವಾಸ ಮತ್ತು ನಿಷ್ಠೆ-ಸ್ಪಶ್ನಾತೀತವಿರಬಹುದು. ಹೀಗಿದ್ದರೂ ಕಾಶ್ಮೀರ ನಾಯಕತ್ವದ ಕಡೆಗೆ ಭಾರತವು ವಿಮರ್ಶಾತ್ಮಕ ದೃಷ್ಟಿ ಬೀರಬೇಕಾದ ಸಂದರ್ಭಗಳೊದಗಿದ್ದುವು ಎಂಬುದನ್ನು ಅಲ್ಲಗಳೆಯಲಾಗದಿದ್ದು. ಇದೇ ಜುಲಾಯಿ ತಾ. 1ರ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲೇ, ಜಮ್ಮು ಮತ್ತು ಕಾಶ್ಮೀರ ಸರಕಾರವು ಜಾಹೀರು ಮಾಡಿರುವ ಭೂಮಾಲಕತ್ವ ಸಂಬಂಧದ ಕ್ರಾಂತಿಕಾರೀ ಸುಧಾರಣೆಯು ಅಂತಹದೇ ಇದೆ. 125 ಎಕ್ರೆ ಗಳಿಗೆ ಮಿಕ್ಕಿ ಆಸ್ತಿಗಳುಳ್ಳವರ ಸ್ವಂತಕ್ಕಾಗಿ 20 ಎಕ್ರೆಗಳನ್ನು ಮಾತ್ರ ಬಿಟ್ಟು, ಉಳಿದವುಗಳನ್ನು ರಸಗೊಂಡು ಸ್ವಸಾಬೇಸಾಯ ಮಾಡುತ್ತಿರುವವರಿಗೇನೇ ಆವುಗಳ ಮಾಲಕತ್ವವನ್ನು ಒಪ್ಪಿಸುವಂತಹ ಮಹಾ ಮಾರ್ಪಾಟನ್ನು ಶೇಕ್ ಅಬ್ದುಲ್ಲಾ ಸಾರಿದ್ದಾರೆ ಭೂತತಿದ ವಿವಿಧ ಸಂಸ್ಥಾನಗಳಲ್ಲಿ ಜವಿನ್ಸಾರ್ ಪದ್ಧತಿ ಬರ್ಖಾಸ್ತುಗೊಂಡಿದೆಯಾದರೂ, ಹಾಗೆ ಸ್ವಾಧೀನ ಪಡಿಸಿಕೊಂಡ ಭೂಮಿಗಳಿಗೆ ರಾಜ್ಯ ಘೋಷಣೆಯಲ್ಲೇ ನಷ್ಟಮೂಡಿಸಲ್ಪಟ್ಟಿರುವಂತೆ ಪರಿಹಾರ ಕೊಡುವ ಕ್ರಮವನ್ನೂ ಪ್ರತಿಯೊಂದು ಸಂಸ್ಥಾನವೂ ಅನುಕರಿಸಿದ. ಕಾಶ್ಮೀರವು ಅಂತಹ ಪ್ರತಿಫಲ ಕೊಡುವದಿಲ್ಲ. ಭಾರತದ ಮದ್ರಾಸ್, ಉತ್ತರ ಪ್ರದೇಶ, ಬಿಹಾರ್, ಮಧ್ಯ ಪ್ರದೇಶ, ಪಶ್ಚಿಮ ಬಂಗಾಳ, ಒರಿಸ್ಸಾ, ಅಸ್ಸಾಮು-ಈ 7 ಸಂಸ್ಥಾನಗಳ 170 ಮಿಲಿಯ ಎಕ್ರೆ ಗಳಿಗೂ ಮಿಕ್ಕಿದ ಜವಿನ್ದಾರಿಗಳನ್ನು ಸ್ವಾಧೀನ ಪಡಿಸಿಕೊಂಡ ಬಗ್ಗೆ, ಅವುಗಳ ಜವಿನ್ದಾರರಿಗೆ ಪರಿಹಾರವಾಗಿ ಭಾರತವು ಸುಮಾರು 414 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿರುವಾಗ, ಕಾಶ್ಮೀರವು ತನ್ನಲ್ಲಿಯ ಭೂಮಾಲಕತ್ವ ರದ್ದತಿಗಾಗಿ ಒಂದೇ ಒಂದು ಪೈ ಪರಿಹಾರ ಕೊಡುವಂತಿಲ್ಲ. "ಕಾಶ್ಮೀರದ ಜನರಲ್ಲಿ ಸೇಡಾ 96 ಪಸ್ತು ಮಂದಿ ಒಂದಲ್ಲೊಂದು ವಿಧದ ಭೋಸುಗಾರರು. ಭೂಮಿಯುಳ್ಳವ ಅವರಿಗೇನೇ ಭೂಮಿಯ ಒಡೆತನವನ್ನು ಬಿಟ್ಟು ಕೊಡುವುದು ಅಗತ್ಯ. ಕಾಶ್ಮೀರದ ನೇಗಿಲಯೋಗಿ ಒಡೆತನವಿರುವುದರಿಂದ, ಈ ಬಸ್ತುಗಳಿಗಾಗಿ ಭೂಮ್ಯಾಲಿಕರಿಗೆ ಪರಿಹಾರ ಕೊಡುವ ಸ್ಥಿತಿಯಲ್ಲಿ ಅವನಿಲ್ಲ" ಎಂಬ ಶೇಕ್ ಅಬ್ದುಲ್ಲಾರ ಸರಳ ಮಾತು ಸುಲಭದಲ್ಲಿ ಅರ್ಥವಾಗುವಂತಹದೇ. ಭಾರತದಲ್ಲಿ ಸಮತಾವಾದಿಗಳು ವಾದಿಸುತ್ತಿರುವುದನ್ನೇ ಶೇಕ್ ಅಬ್ದುಲ್ಲರು ಕಾಶ್ಮೀರದಲ್ಲಿ ಸಾಧಿಸಿದ್ದಾರೆ. 96 ಮಂದಿಯನ್ನು ಸಂತೋಷಪಡಿಸುವುದಕ್ಕಾಗಿ 4 ಮಂದಿಯನ್ನು ಸಂತಾಪಕ್ಕೀಡು ಮಾಡುವುದು ತಪ್ಪೆಂದು ಯಾರೂ ಹೇಳಲಾರರು. ಕಾಶ್ಮೀರ ಭವಿಷ್ಯದ ತೀರ್ಮಾನವು ಜನಮತಕ್ಕೊಪ್ಪಿಸಲ್ಪಡುವ ಸಂಭವವಿರುವುದರಿಂದಲೂ ಶೇಕ್ ಅಬ್ದುಲ್ಲರಿಗಿದು ಅತ್ಯಗತ್ಯವನ್ನಿಸಿರಬೇಕು! ಆದರೆ ಇಲ್ಲಿ ಮೂಡುವ ಸ್ಪಶ್ನೆ ಅದಲ್ಲ. ಭಾರತ-ಕಾಶ್ಮೀರಗಳೊಳಗಿನ ಸಂಬಂಧಕ್ಕೂ ಸಂಬಂಧಿಸುವ ಈ ದೊಡ್ಡ ಹೆಜ್ಜೆಯನ್ನು ಇಡುವಾಗ ಶೇಕ್ ಅಬ್ದುಲ್ಲರು ಆಗತ್ಯವುಳ್ಳ-ಯೋಚನೆಗಳೆಲ್ಲವನ್ನೂ ಮಾಡಿದ್ದಿರೇ, ಎಂಬುದು ಇಲ್ಲಿ ಮುಖ್ಯವಾಗಿ ಯೋಚಿಸಬೇಕಾದ ವಿಷಯ. ಕಾಶ್ಮೀರದ ಭವಿಷ್ಯವಿನ್ನೂ ನಿಶ್ಚೈಸಲ್ಪಡದಿರುವುದರಿಂದ, ಅಲ್ಲಿ ಕ್ರಮಬದ್ಧ ಜನಪ್ರತಿನಿಧಿ ಸರಕಾರವೀವರೆಗೂ ರಚಿಸಲ್ಪಟ್ಟಿಲ್ಲ; ಮಿಕ್ಕ ಸಂಸ್ಥಾನಗಳಂತೆ ಕಾಶ್ಮೀರವನ್ನೂ ಭಾರತ ರಾಜ್ಯಶಾಸನದೊಳಗೆ ಸಂಪೂರ್ಣವಾಗಿ ಸೇರಿಸಿಕೊಳ್ಳಲಾಗಿಲ್ಲ. ರಕ್ಷಣೆ, ಸಂಚಾರಿ ವಾರ್ತಾಪ್ರಚಾರ ಮತ್ತು ವಿದೇಶ ಸಂಬಂಧಗಳಿಂದ ಮೂರೇ ಗೊತ್ತುಸುಗಳು ಈ ತನಕ ಕಾಶ್ಮೀರವನ್ನು ಭಾರತದೊಂದಿಗೆ ಜೋಡಿಸಿಟ್ಟಿವೆ. ಭಾರತದ ಜನತಾ ರಾಜ್ಯ ಶಾಸನದಲ್ಲಿ ಕಾಶ್ಮೀರಕ್ಕಾಗಿಯೇ ಸೇರಿಸಲ್ಪಟ್ಟಿರುವ ಅಧ್ಯಾಯದಲ್ಲಿ "ಕ್ರಮಬದ್ಧ ಚುನಾಯಿತ ಶಾಸನ ಸಭೆಯು ಅಸ್ತಿತ್ವದಲ್ಲಿ ಬರುವ ವರೆಗೆ, ಮಂತ್ರಿ ಮಂಡಲಿಯು ಸಲಹೆಯಂತೆ ರಾಷ್ಟ್ರಪತಿಯವರು ಜಮ್ಮು ಮತ್ತು ಕಾಶ್ಮೀರದ ಮಹಾರಾಜರನ್ನೇ ಕಾಶ್ಮೀರದ ಸರಕಾರವೆಂದು ಗುರುತಿಸಿಕ್ಕಿದ್ದಾರೆ" ಎಂಬ ಉಲ್ಲೇಖವಿದೆ. ಈ ತಾತ್ಕಾಲಿಕ ವಿಧಾನಗಂತಾದರೂ ಶೇಕ್ ಅಬ್ದುಲ್ಲರು ತನ್ನ ಭೂಸುಧಾರಣಾ ಸೂತ್ರಗಳನ್ನು ಕಾಶೀದ ಈಗಿನ ಶಿರಸ್ಸಾಗಿರುವ ಯುವರಾಜರ ಮುಂದೆ ಇಟ್ಟಿಲ್ಲ. ಸಂಗತಿಗಳ ಸ್ವಷ್ಟೀಕರಣಕ್ಕಾಗಿ ಭಾರತ ಸರಕಾರದ ಕಾಶ್ಮೀರ ವಿಭಾಗದ ಕಾರ್ಯದರ್ಶಿಗಳೀಗ ಶ್ರೀನಗರಕ್ಕೆ ಹೋಗಿದ್ದಾರೆ. ಹಿಂದೊಮ್ಮೆ ಶೇಕ್ ಅಬ್ದುಲ್ಲಾ 'ಯಾವ ಕಡೆಗೂ ಸೇರದ ಸ್ವತಂತ್ರ ಕಾಶ್ಮೀರ'ವನ್ನು ಕನವರಿಸಿದೆಂದು ಪ್ರಂಟವಾಗಿದ್ದ ಘಟನೆಯು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತಿದೆ. ಇವೆಲ್ಲಾ ವಿದ್ಯಮಾನಗಳ ಮೇಲಿಂದ ಹಿಂದೀ ತೆರಿಗೆದಾರರ ಹಣ ಮತ್ತು ಭಾರತದ ಜನ ನಷ್ಟವನ್ನು ಲೆಕ್ಕಿಸದೆ, ಅಕ್ರಮಣದ ವಡೆಯಿಂದ ಕಾಶ್ಮೀರವನ್ನು ಹೊರಗೆಳೆಯಲು ಭಾರತ ಸರಕಾರವು ಪಟ್ಟ ಶ್ರಮವು ಅನಾವ್ರಯವಾಯಿತೇಬ ಸಂಕಾಪಕ್ಕೆಡೆ ದೊರೆಯಬಹುದೇ, ಎಂಬ ಸಂದೇಹ ಮೂಡುತ್ತಿದೆ. ಹೇಗಿದ್ದರೂ ನ್ಯಾಯ ಬಾಳಲಿ-ಭಾರತ ಸರಕಾರವು ಕಾಶ್ಮೀರದ ತೀರ್ಮಾನ ಮತ್ತು ವ್ಯವಸ್ಥೆಯ ಕುರಿತು ವಿಶೇಷ ಮುಂಜಾಗ್ರತೆ ಹಾಗೂ ದೃಢತೆಯನ್ನು ತೋರಿಸಲಿ, ಎಂದೀ ಸಂದರ್ಭದಲ್ಲಿ ಹಾರೈಸಬೇಕಾಗಿದೆ.

ನೆಹರೂ ಸೂಚನೆಗೆ ಸ್ಟಾಲಿನರ ಒಪ್ಪಿಗೆ!

(ನಿನ್ನೇ ಪುಟದಿಂದ ಮುಂದುವರಿದುದು)

ರಾಧಾಕೃಷ್ಣನ್ ಮೋಸ್ಕೋದಲ್ಲಿ ಸೋವಿಯೆಟ್ ಉಪ ವಿದೇಶ ಮಂತ್ರಿ ಎಮ್. ಗ್ರೋಮ್ಯೆಕೋ ಅವರ ಕೈಗೂ ನೆಹರೂ ಸಂದೇಶವನ್ನೊಪ್ಪಿಸಿದರು. ಸಂಯುಕ್ತ ರಾಷ್ಟ್ರ ಸಂಘವನ್ನು ಸರ್ವಪ್ರಭಾವೀ ಉಪಕರಣವಾಗಿ ಮಾರ್ಪಡಿಸಿ ಕೊರಿಯಾ ಯುದ್ಧವನ್ನು ಸ್ಥಳೀಯ-ಹೋರಾಟವಾಗಿ ಇಳಿಸಿ ಶಾಂತಿ ತೀರ್ಮಾನ ಹೊಂದಬೇಕೆಂಬ ವಿಶ್ವಾಸವನ್ನು ವ್ಯಕ್ತಪಡಿಸಿ, ಹಾಗಾಗುವಂತೆ ಮಾಡಲು ರಶ್ಯ ಮತ್ತು ಕಮ್ಯೂನಿಸ್ಟ್ ಚೈನವನ್ನು ಭದ್ರತಾ ಕೌನ್ಸಿಲಿನೊಳಗೆ ಬರ ಮಾಡಿಕೊಳ್ಳುವ ಸೂಚನೆಯು ಪಂಡಿತ ನೆಹರುಗಳದೆಂದು ನಿರ್ಧಾರವಾಗಿ ಊಹಿಸಲ್ಪಟ್ಟಿದೆ. ಇಕ್ಕಡೆಯವರೂ ಆಹ್ವಾನಿಸದಲ್ಲಿ ಕಾನಾ. ಸಂಬಂಧದ ಮಧ್ಯಸ್ಥಿಕೆಗೆ ತಯಾರಿರುವ ಧಾನವೆಯನ್ನು ಪಂಡಿತ ನೆಹರು ಸೂಚಿಸಿದಂತಿದೆ. ನೆಹರೂ ಸಂದೇಶಕ್ಕೆ ಮಾರ್ಶಲ್ ಸ್ಟಾಲಿನರ ಉತ್ತರವನ್ನು ಗ್ರೋಮ್ಯೆಕೋರವರು ತಾ. 15ರಲ್ಲೇ ಡಾ|| ರಾಧಾಕೃಷ್ಣನವರಿಗೆ ಕೊಟ್ಟರು; ರಾಯಭಾರಿ ರಾಧಾಕೃಷ್ಣನ್ ಅದನ್ನು ಭಾರತ ಪ್ರಧಾನಿಗಳಿಗೆ ರವಾನಿಸಿದ್ದರು. ಅದು ಅಲ್ಲಿಹಾಜರಾದಿನಲ್ಲಿದ್ದ ಪಂಡಿತ ನೆಹರುಗಳಿಗೆ ತಾ. 16ರಲ್ಲಿ ಮುಟ್ಟಿದೆ. ಪಂಡಿತಜೀ ತಾ. 17ರಲ್ಲಿ ಕಾಶ್ಮೀರಕ್ಕೆ ಹೋಗಿ ಅಲ್ಲಿಯ ವಿಶ್ವವಿದ್ಯಾಲಯದ ಪದವೀದಾನ ಭಾಷಣವಿತ್ತು, ತಾ. 18ರಲ್ಲಿ ಡಿಲ್ಲಿಗೆ ವಾಪಸಿಯಿದ್ದಾರೆ. ತನ್ನಿಂದ ನೆಹರೂ ಸಂದೇಶವನ್ನು ಬರಮಾಡಿಕೊಳ್ಳುವುದರಲ್ಲಿ ಮತ್ಸರದಲ್ಲಿ ಉತ್ಸಾಹ ಕೊಡುವುದರಲ್ಲಿ ರಶ್ಯಾ ಸರಕಾರ ತೋರಿಸಿದ ಸಮುಚಿತತೆಯನ್ನು ಡಾ|| ರಾಧಾಕೃಷ್ಣನ್ರು ಶ್ಲಾಘಿಸಿದ್ದಾರೆ. ಪಂಡಿತನೆಹರುಗಳು ಬ್ರಿಟಿಷ್ ಪ್ರಧಾನಿ ಅಟ್ಲಿಗಳಿಗೆ ಕಳುಹಿದ್ದ ಸಂದೇಶವನ್ನು ಲಂಡನಿನಲ್ಲಿರುವ ಭಾರತ ಕಚೇರಿಯವರು 40ಮೈಲು ದೂರದ ಬಕ್ಕಿಂಗ್ಹಾಮ್ ಶಯರಿನಲ್ಲಿದ್ದ ಅಟ್ಲಿಗಳಿಗೆ ವಿಶೇಷ ದೂತರ ಮೂಲಕ ತಾ. 15ರಲ್ಲಿ ರವಾನಿಸಿದ್ದಾರೆ.

ಬಂದ ಉತ್ತರ

ಪ್ರಧಾನಿ ನೆಹರುಗಳ ಸಂದೇಶಕ್ಕೆ ಸ್ಟಾಲಿನರಿಂದ ದೊರೆತ ಸ್ವಾಗತ ಮತ್ತು ಟ್ರುಮೇನ್ ಅಟ್ಲಿಗಳು ವಹಿಸಿರುವ ಸಾವಧಾನತೆ ನಿಜಕ್ಕೂ ಆಶ್ಚರ್ಯವನ್ನು ನಿರ್ಮಿಸಿದೆ. ಮೋಸ್ಕೋದಲ್ಲಿರುವ ಭಾರತ ರಾಯಭಾರಿಯನ್ನು ರಶ್ಯದ ಉಪವಿದೇಶಾಂಗ ಮಂತ್ರಿ ಬರವಾಡಿಕೊಂಡ ಕ್ಷಿಪ್ರಗತಿ-ಅವರೊಪ್ಪಿಸಿದ ನೆಹರೂ ಸಂದೇಶವು ಕೈಗೆ ಬಂದ 48 ತಾಸಿನೊಳಗೆ ಸ್ಟಾಲಿನರದಕ್ಕೆ ಉತ್ತರ ಕೊಟ್ಟ ರೀತಿ--ಅತ್ಯಂತ ಸನ್ಮಾನಕ ಹಾಗೂ ಸವಧಾನಕರವಿದ್ದುವು. ನೆಹರೂ ಸಂದೇಶ ಮತ್ತು ಸ್ಟಾಲಿನರ ಉತ್ತರವನ್ನು ಅನುಮತಿ ವಿನಹ ತಾ. 18ರಲ್ಲಿ ರಶ್ಯವು ಪ್ರಕಟಿಸಿ ಬಿಟ್ಟಿಯು ಮಾತ್ರ ಆಶ್ಚರ್ಯಣೀಯ ವರ್ತನೆ. ಭದ್ರತಾ ಕೌನ್ಸಿಲಿನ ಮೂಲಕ ಕೊರಿಯಾ ಘರ್ಷಣೆಯನ್ನು ಕ್ಷಿಪ್ರದಲ್ಲೇ ಇತ್ಯರ್ಧಿಸಿಕೊಳ್ಳುವುದು ಪರಮಾವಧಿ ಅಗತ್ಯವೆಂಬ ಪಂಡಿತ ನೆಹರುಗಳ ಸೂಚನೆಗೆ ಸ್ಟಾಲಿನರು ಒಪ್ಪಿಗೆಯಿತ್ತಿದ್ದಾರೆ; ಆ ಭದ್ರತಾ ಕೌನ್ಸಿಲಿನಲ್ಲಿ ಕಮ್ಯೂನಿಸ್ಟ್ ಚೈನಕ್ಕೆ ಪ್ರಾತಿನಿಧ್ಯ ವಿರಬೇಕೆಂದು ಪಂಡಿತ ನೆಹರುಗಳು ಸೂಚಿಸಿದ್ದ ಶರ್ತವನ್ನೇ ಅವರು ಮುಂದೊಡ್ಡಿದ್ದಾರೆ. ಸ್ಟಾಲಿನರಿಂದ ಬಂದ ಉತ್ತರದ ಅಭಿಪ್ರಾಯಗಳನ್ನು ಕೂಡಾ ಪಂಡಿತ ನೆಹರುಗಳು ಇದೇ ತಾ. 17ರಲ್ಲಿ ಅಧ್ಯಕ್ಷ ಟ್ರುಮೇನ್ ಮತ್ತು ಪ್ರಧಾನಿ ಅಟ್ಲಿಗಳಿಗೆ ಕಳುಹಿದ್ದರು. ಎಲ್ಲರ ಉತ್ತರಗಳೂ ಕೈ ಸೇರಿದ ಮೇಲೆ ಪ್ರಕಟಣೆಗೆ ಕೊಡುವ ಉದ್ದೇಶವು ನೆಹರುಗಳದಿದ್ದಿತಾದರೂ ರಶ್ಯ ತಡ ಮಾಡಲಿಲ್ಲ. ಮೂವರಿಗೂ ಒಂದೇ ದಿನ ಕಳುಹಿದ್ದ ಸಂದೇಶಗಳಿಗೆ ಒಬ್ಬನಿಂದ ಉತ್ತರ ಬಂದು, ಆ ಉತ್ತರವನ್ನು ನುತ್ತಿ ಬ್ಬರಿಗೆ ಕಳುಹುವ ವರಗೂ ಮೂಲ ಸೂಚನೆಗೆ ಅವರಬ್ಬರ ಉತ್ತರವೇ ಬಂದಿಲ್ಲ. ಮೇಲಾಗಿ ಪಂಡಿತ ನೆಹರುಗಳ ಸೂಚನೆಯು ಅಮೆರಿಕದಲ್ಲಿ ಯಾವ ಉತ್ಸಾಹವನ್ನೂ ನಿರ್ಮಿಸಿಲ್ಲವೆಂದೂ, ಅಮೆರಿಕಾನರ ನಿರುತ್ಸಾಹವನ್ನು ಕಂಡ ಮೇಲೆ ಆ ಸಂಬಂಧವಾಗಿ ಬ್ರಿಟಿಷರಲ್ಲಿ ಪ್ರಥಮತಃ ತೋರಿ ಬಂದಿದ್ದ ಹುರುಪು ಕೂಡಾ ಅರಿ ಹೋಗಿದೆಯೆಂದೂ ತಿಳಿದು ಬಂದಿದೆ ಇದಕ್ಕೆ ಕಾರಣವೆಂದರೆ ಕೊರಿಯ ಯುದ್ಧದಲ್ಲಿ ಈ ವಾಕಯಕ್ಕಾಗಿರುವ ಸೋಲು. ಕಮ್ಯೂನಿಸ್ಟ್ ಚೈನಕ್ಕೆ ಭದ್ರತಾ ಕೌನ್ಸಿಲಿನಲ್ಲಿ ಸ್ಥಾನ ದೊರೆಯದಂತೆ ಹಠ ಹಿಡಿದು ಸಾಧಿಸಿ ವಾತಾವರಣವನ್ನು ಕದಡಿಸಿದವರು ಅಮೆರಿಕಾನರೇ. ಆದರೂ ಈ ಮೊದಲುದರಿಂ ಕಮ್ಯೂನಿಸ್ಟ್ ಚೈನವು ಭದ್ರತಾ ಕೌನ್ಸಿಲಿನೊಳಗೆ ಪ್ರವೇಶಿಸಬಾರದೆಂದು ತಾವು ಅಂತಹ ಆಗ್ರಹವನ್ನು ಡಾ|| ರಾಧಾಕೃಷ್ಣನರು ಶ್ಲಾಘಿಸಿದ್ದಾರೆ. ಪಂಡಿತನೆಹರುಗಳು ಬ್ರಿಟಿಷ್ ಪ್ರಧಾನಿ ಅಟ್ಲಿಗಳಿಗೆ ಕಳುಹಿದ್ದ ಸಂದೇಶವನ್ನು ಲಂಡನಿನಲ್ಲಿರುವ ಭಾರತ ಕಚೇರಿಯವರು 40ಮೈಲು ದೂರದ ಬಕ್ಕಿಂಗ್ಹಾಮ್ ಶಯರಿನಲ್ಲಿದ್ದ ಅಟ್ಲಿಗಳಿಗೆ ವಿಶೇಷ ದೂತರ ಮೂಲಕ ತಾ. 15ರಲ್ಲಿ ರವಾನಿಸಿದ್ದಾರೆ.

ಈ ಸಂಗತಿಗಳ ಮೇಲಿಂದ ಇಂಗ್ಲಾಂಡು ಅಮೆರಿಕಗಳ ತಮ್ಮ ಒಣಹೆಗ್ಗಳಿಕೆ ಮತ್ತು ದುರಭಿಮಾನಕ್ಕೆ ಕೊಡುವಂತಹ ಪ್ರಾಮುಖ್ಯತೆಯನ್ನು ಲೋಕ ಶಾಂತಿ ಮತ್ತು ನ್ಯಾಯಕ್ಕೆ ಕೊಡುತ್ತಿಲ್ಲವೆಂಬುದು ಸ್ಪಷ್ಟವಲ್ಲವೆ? ಪ್ರಥಮತಃ ತಾವು ಜಗಳ ಗೆದ್ದು ಕೊಳ್ಳಬೇಕು, ಆ ಮೇಲಿದರ ಇತ್ಯರ್ಥವನ್ನು ನಂತಹ ಧಾನೆಯು ಸಂಧಾನಕ್ಕನು ಕೂಲವೆಂದು ಹೇಳಬಹುದೆ? ಅಮೆರಿಕ, ಬ್ರಿಟನುಗಳ ಇಂತಹ ಅತಿರೇಕಾಭಿಮಾನದ ದೆಸೆಯಿಂದ ಕೊರಿಯಾ ಯುದ್ಧವು ಲೋಕ ಯುದ್ಧವಾಗಿ ಬೆಳೆಯಬಹುದೆಂಬ ಭಯವೇ ಹೆಚ್ಚುತ್ತಿದೆ. ಕೊರಿಯ ಮತ್ತು ಕಮೀಪದ ಇತರ ವಲಯಗಳಲ್ಲಿ ಅವು ರಶ್ಯವನ್ನು ಸೋಲಿಳುವುದು ಸುಲಭದ ಕೆಲಸವೇನೂ ಅಲ್ಲವಾದ್ದರಿಂದ ಅವೆರಿಕವು ಆಟಂ ಬೋಂಬು ಪ್ರಯೋಗಕ್ಕೆ ಮುಂದಾಗಬಹುದೆಂದೂ ಊಹಿಸಬೇಕಾಗಿದೆ. ಈ ಮಟ್ಟಗಾದರೂ ರಶ್ಯವೇನೂ ಅಸಹಾಯ ಸ್ಥಿತಿಯಲ್ಲಿಲ್ಲ. ಇಂದ ಮೇಲೆ ತಮ್ಮ ಘೋಷಣೆಯ ರಮ್ಯ ಮಸುಕಿನೊಳಗೆ ಇಂತಹ ಕಲ್ಮಷ ಮನೋವೃತ್ತಿಯ ಕೃತ್ಯವನ್ನು ಅಡಗಿಸಿಟ್ಟುಕೊಂಡವರನ್ನೂ ಲೋಕೋದ್ಧಾರಕರೆನ್ನಬೇಕೆ? ಆ ಕಡೆಯಿಂದ ರಶ್ಯವಾದರೂ ನೆಹರುಗಳೊಡನೆ ಸ್ಟಾಲಿನರು ನಡೆಸಿದ್ದ ಸಂದೇಶ ವ್ಯವಹಾರಗಳನ್ನು ನೆಹರೂ ಸಮ್ಮತಿ ವಿನಹ ಪ್ರಕಟಿಸಿಬಿಟ್ಟುದರ ಗುಟ್ಟೇನಿರಬಹುದು? ತಾನು ಸಂಧಾನಕ್ಕನುಕೂಲ ಮನೋವೃತ್ತಿಯನ್ನನಂದು ಲೋಕದಿದಿರು ತೋರಿಸಿ ಕೊಳ್ಳುವದೊಂದೇ ಹೊರತು ಸಂಧಾನ ಕಾರ್ಯಕ್ಕನುಕೂಲವಾಗಬೇಕೆಂಬ ಇಚ್ಛೆ ಅದಕ್ಕೂ ಇಲ್ಲವೆಂಬ ಅರ್ಥವಾಗುವದಲ್ಲವೆ? ಅಂತೂ ಇಕ್ಕಡೆಯವರೂ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ ಹೊರತು ನ್ಯಾಯವನ್ನೆತ್ತಿ ಹಿಡಿಯಲು ಸಿದ್ಧರಿಲ್ಲ!

ಕಟಪಾಡಿ—ಇಲ್ಲಿಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಬಾಬು ಯಾನೆ ಮಂಜುನಾಥ ಕಮ್ತಿಯವರು ಇದೇ ತಾ. 16ನೇ ಆದಿತ್ಯವಾರ ದಿನ ಬೆಳಿಗ್ಗೆ ಮಂಡಳಿಯಲ್ಲಿನಲ್ಲಿ ತಮ್ಮ 87ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸುವಲ್ಲಿ ವಿಷಾದಪಡುತ್ತೇವೆ. ಶ್ರೀಯುತರು ಶ್ರೀಮಂತಿಕೆ ಮತ್ತು ತಮ್ಮ ತಡೆಯದ ಗುಣ ನಡತೆಗಳಿಂದ ಪ್ರಸಿದ್ಧರಾಗಿದ್ದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ-
ತಾರೀಕು 20—7—50ರಿಂದ
ಇಂಗ್ಲಿಷ್ ಸಾಹಸಚಿತ್ರ
ಜಂಗಲ್ ಡೆವಿಲ್ಸ್
ಆನಂತರ: ವಾಹಿನಿಯವರ ತೆಲುಗು ಚಿತ್ರ ಸ್ವರ್ಗ ಸೀಮ
ನಾಗಯ್ಯ, ಜಯಮ್ಮ, ಭಾನುಮತಿ

ಉಡುಪಿ

ಮುನ್ಸಿಪಲ್ ಕೌನ್ಸಿಲಿನ ಸ್ಪೆಶಲ್ ಸಭೆಗಳೆರಡು— ಇದೇ ತಾ. 18ರಲ್ಲಿ ಚೆಯರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದವು. ಕಳಪ ಎಸ್ಪ್ರೆಸ್ ತಿಂಗಳಿಂದ ವೃತ್ತಿತೆರಿಗೆ ವರವನ್ನು ಸರಕಾರದ ಸೂಚನೆಯಂತೆ ತಿದ್ದುಪಡಿ ಮಾಡಲಾಯಿತು. ಎರಡನೆ ಸಭೆಯಲ್ಲಿ ಶ್ರೀಮತಿ ಲೀಲಾಬಾಯಿ ಕಾಮತರು ಲೈಬ್ರೆರಿ ಸಮಿತಿಗೆ ಈ ಕೌನ್ಸಿಲಿನ ಪ್ರತಿನಿಧಿಯಾಗಿ ಆರಿಸಲ್ಪಟ್ಟರು.

ಕಾಂಗ್ರೆಸ್ ಪಂಚಾಯತರ ಸಭೆ— ಮುನ್ಸಿಪಲ್ ಕ್ಷೇತ್ರಜೊಳಗಿನ ಕಾಂಗ್ರೆಸ್ ಪಂಚಾಯತರ ಸಭೆಯು ಇದೇ ತಾ. 14ರಲ್ಲಿ ಶ್ರೀ ಕೆ. ನರಹರಿ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಇಲೆಕ್ಟ್ರಿಕ್ ಕಂಪನಿಯು ಈ ತಿಂಗಳಿಂದ ಇಲೆಕ್ಟ್ರಿಕ್ ಪವರ್ ಸಪ್ಲೈ ವರವನ್ನು ಸೇಕಡಾ ಜಾಸ್ತಿ ಮಾಡಿದುದನ್ನು ಸಭೆಯು ಸರ್ವಾನುಮತದಿಂದ ಖಂಡಿಸಲಾಯಿತು. ತಾ. 15ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮಹಾಜನ ಸಭೆಯೊಂದು ಶ್ರೀ ಆರ್. ಶೆಣೈ ಅಧ್ಯಕ್ಷತೆಯಲ್ಲಿ ಜರಗಿತು. ಅಲ್ಲಿಯೂ ನಿಷೇಧ ಸೂಚಕ ನಿರ್ಣಯವಾಯಿತು.

'ಕಿರಣ'ದ ಉದ್ಘಾಟನೆ— ಹೊಸ ಮಾಸಪತ್ರಿಕೆ 'ಕಿರಣ'ದ ಉದ್ಘಾಟನೋತ್ಸವವು ತಾ. 16ನೇ ಆದರಾತ್ರಿ 'ಕಿರಣ' ಕಾರ್ಯಾಲಯದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮನ್ಯಾರುಗಳಾದ ಮುನ್ಸಿ ಕೆ. ಸಿ. ರೆಡ್ಡಿ, ಯಸ್.ಕೆ. ಪಾಟೀಲ್ ಮಿತ್ರತರಿಂದ ಬಂದಿದ್ದ ಶುಭಸಂದೇಶಗಳನ್ನು ಕಿರಣದ ಸಂಪಾದಕ ಪ್ರಕಾಶಕರಾದ ಶ್ರೀ ಯು. ಆರ್. ರಾಯರು ಓದಿ ಹೇಳಿದರು. ನವೋದಿತ ಪತ್ರಿಕೆಗೆ ಶುಭವನ್ನು ಹಾರೈಸಿ ಮತ್ತು ಸಂದರ್ಭೋಚಿತವಾದ ಹಿತ ಬೋಧೆಗಳನ್ನಿತ್ತು ಶ್ರೀಗಳಾದ ಕು.ಶಿ. ಹರಿದಾಸಭಟ್ಟ, ಎನ್. ಎಸ್. ಸೆಟ್ಟಿ, ಉ. ಕೃಷ್ಣರಾವ್, ಎಂ. ವಿ. ಹೆಗ್ಡೆ ಇವರು ಮಾತನಾಡಿದರು. ಸಂಪಾದಕರ ನಿವೇದನೆಯಾದ ಮೇಲೆ ಅಧ್ಯಕ್ಷ ಶ್ರೀ ಪೈಗಳು ಉಪಯುಕ್ತ ಸೂಚನೆಗಳೊಂದಿಗೆ ಕಿರಣವು ದಿನಪತ್ರಿಕೆಯಾಗಿ ಅಭಿವೃದ್ಧಿಗೊಳ್ಳಲೆಂದು ಹಾರೈಸಿ ಭಾಷಣವಿತ್ತರು. ಧನ್ಯವಾದ, ಉಪಾಹಾರಗಳಾಗಿ ಸಮಾರಂಭವು ಕೊನೆಗೊಂಡಿತು.

Notice

ಕುಂದಾಪುರ ದಿವಿನ್ಯೂ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ-

H. R. C. O. No. 21/1950

ಕೆ. ಪುಂಡಲೀಕ ಕುಡ್ವಾ— —ಅರ್ಜಿದಾರರು

ಮತ್ತು

1. ಗೋಪಾಲ ಕಿಣಿ, ಮಹಾಬಲ ಕಿಣಿಯರ ವ.ಗ.

2. ರತ್ನ ಯಾನೆ ಶಾಂತ ಬಾಯಿ, 1ನೇಯವನ ಹೆಂಡ್ತಿ, ಕಾರ್ಕಳ ತಸಬಾ ಪೇಟೆಯವ್ರರುವರು:— —ಎದುರುದಾರರು.

ಮೇಲ್ಕಂಡ ವ್ಯವಹಾರಗಳಲ್ಲಿ ಅರ್ಜಿದಾರನು ಎದುರಿದಾರಸ್ವಾಧೀನ ಬಾಡಿಗೆ ಹಕ್ಕಿನ ಮೇಲೆ ಇರುವ ಮನೆ ಕಟ್ಟಡ್ಕೀಣ ಪುನರೆಯನ್ನು ಸ್ವಾಧೀನತೆ ಕೇಳಿ ದಾಖಲು ಮಾಡಿದ ನೋಟ್ಲಂಡ ಆರ್ಜಿಯು ಇದೇ ತಾ. 28-7-1950 ರಲ್ಲು ಕಾರ್ಕಳ ಮೊಕ್ಕಾಂನಲ್ಲಿ ತನ್ನ ಬಗ್ಗೆ ಯಿಟ್ಟಿರುವುದರಿಂದ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಎದ್ರಿರು ಕೋರ್ಟಿನ ಮುಂದೆ ಹಾಜರಾಗಿ ಉದಪರಸಲಿಕ್ಕೆ ತಪ್ಪಿದಪೆ ಎದ್ರಿರ ಪರ್ಕೋಕ್ಕದಿಪ್ಪ ಸದ್ರಿ ಆರ್ಜಿಯು ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ಕೋರ್ಟಿನ ಹುಕುಂ ಪ್ರಕಾರ ತಿಳಿಸೋಕಾಗಿದೆ.

K. Venkatesha Pai,
ಅರ್ಜಿದಾರನ ಕಡೆ ವಕೀಲ.

ಕಾರ್ಕಳ, ತಾ 18 7 1950.

ಮಂಗಳೂರು

ಸಕ್ಕರೆ ದರ ನಿರ್ಣಯ— ದ. ಕ. ಜಿಲ್ಲಾ ಕಲೆಕ್ಟರರು ಒಂದು ಸ್ವತಂತ್ರತೆಯನ್ನು ಹೊರಡಿಸುತ್ತ ನೆಲ್ಲಿಕುಪ್ಪಲಿನ (ಗ್ರೇಡ್ ಇ. 27) ಸಕ್ಕರೆಗೆ ಚಿಲ್ಲರೆ ಮಾರಾಟದ ಬಗ್ಗೆ ರತ್ತು ಒಂದರ ಕ್ರಯವನ್ನು ಈ ರೀತಿಯಾಗಿ ನಿರ್ಧರಿಸಿರುವರು. ಮಂಗಳೂರು ಕೇಂದ್ರದಲ್ಲಿ 0-7-1; ಬಂಟ್ವಾಳ, ಮೂಲ್ಕಿ, ಮೂಡಬಿದ್ರೆಯಲ್ಲಿ 0-7-3; ಕಾರ್ಕಳ, ಪುತ್ತೂರು, ಹೊಸದುರ್ಗ, ಬೆಳ್ತಂಗಡಿಯಲ್ಲಿ 0-7-4; ಉಡುಪಿಯಲ್ಲಿ 0-7-5 ಮತ್ತು ಕುಂದಾಪುರದಲ್ಲಿ 0-7-6ನೈ.

ಜಿಲ್ಲೆಯಲ್ಲಿ ರಸಾಯನಿಕ ಗೊಬ್ಬರ ವಿತರಣೆ— ಈ ಜಿಲ್ಲೆಯಲ್ಲಿ ಕೃಷಿಕರಿಗೆ ಭತ್ತದ ಸಾಗುವಳಿ ಬಗ್ಗೆ ರಸಾಯನಿಕ ಗೊಬ್ಬರವನ್ನು ಒದಗಿಸುವರೆ, ದಕ್ಷಿಣ ಕನ್ನಡ ಸೆಂಟ್ರಲ್ ಸಹಕಾರಿ ಹೋಲ್‌ಸೇಲ್ ಸ್ಟೋರ್ಸ್‌ರವು ಸಂಘವು ಈ ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ಸಬ್ ಡಿಪೋಗಳನ್ನು ತೆರೆದಿರುತ್ತದೆ.

1 ಮಂಗಳೂರು ತಾಲೂಕು-ಮಂಗಳೂರು ಬಂಡರ ಆಫೀಸು ಮತ್ತು ಮೂಲ್ಕಿ; 2. ಕುಂದಾಪುರ ತಾಲೂಕು-ಕುಂದಾಪುರ 3. ಉಡುಪಿ ತಾಲೂಕು-ಉಡುಪಿ ಮತ್ತು ಬ್ರಹ್ಮಾವರ; 4. ಕಾರ್ಕಳ ತಾಲೂಕು-ಕಾರ್ಕಳ ಮತ್ತು ಮೂಡಬಿದ್ರೆ; 5. ಪುತ್ತೂರು ತಾಲೂಕು-ಪುತ್ತೂರು ಮತ್ತು ಬೆಳ್ತಂಗಡಿ; 6. ಕಾಸರಗೋಡು ತಾಲೂಕು-ಕಾಸರಗೋಡು ಮತ್ತು ಕುಂಬಳೆ.

ಕೃಷಿಕರು ಭತ್ತದ ಸಾಗುವಳಿ ಬಗ್ಗೆ ಕರಾರಿಗೆ ಬೇಕಾದ ರಸಾಯನಿಕ ಗೊಬ್ಬರವನ್ನು ಮೇಲೆ ಹೇಳಿದ ಕೇಂದ್ರಗಳಿಂದ ಪಡೆಕೊಳ್ಳಬಹುದು ಹಾಗೆ ಪಡೆಕೊಳ್ಳುವ ಮೊದಲು ಪ್ರತಿ ದಿನೋನಿನಲ್ಲಿ ನಿಗದಿಪಡಿಸಿದ ಫಾರಿಂನಲ್ಲಿ ಯಾ ಬೇರೆ ಕಾಗದದಲ್ಲಿ ಸ್ವಿನ್ರ್ಜಬುಗೂ ಕಂದು ಅರ್ಜಿಯನ್ನು ತಯಾರಿಸಿ ಆಯಾ ಡಿಪೋ ಮೆನೇಜರರಿಗೆ ಕೊಡಬೇಕು. ಸದ್ರಿ ಅರ್ಜಿಯಲ್ಲಿ 1 ಕೃಷಿಕನ ಹೆಸರು 2 ಗ್ರಾಮ 3 ತಾಲೂಕು 4 ಪಟ್ಟಾನಂಬ್ರ 5 ಸರ್ವೇನಂಬ್ರ 6 ಭೂಮಿಯ ವಿಸ್ತೀರ್ಣ 7 ಬೇಕಾದ ಗೊಬ್ಬರ ಇವಿಷ್ಟು ವಿವರಗಳನ್ನು ಸ್ಪಷ್ಟ ನಮೂದಿಸ ಬೇಕು ಹೆಚ್ಚಿನ ಮಾಹಿತಿಯನ್ನು ಅಪೇಕ್ಷಿಸುವವರು ಮೇಲೆ ಸೂಚಿಸಿದ ಕೇಂದ್ರಗಳ ಡಿಪೋ ಮೆನೇಜರರಿಂದ ಪಡೆಯಬಹುದಾಗಿ ಸಹಕಾರಿ ಸಂಘಗಳ ಡಿಸ್ಟ್ರಿಬ್ಯೂಟರ್ ರಿಜಿಸ್ಟ್ರಾರ್ ಶ್ರೀ ಎಸ್. ಕೃಷ್ಣಯ್ಯ ಸೆಟ್ಟಿರು ತಿಳಿಸುತ್ತಾರೆ.

ಸುಂಗಳೂರಲ್ಲಿ ವಿಮಾನನಿಲ್ದಾಣ ಸ್ಥಳದ ಸಂಜೂರಾತಿ— ಮಂಗಳೂರಿನಿಂದ ಎಂಟು ಮೈಲು ದೂರದಲ್ಲಿ ಬಜಪೆಯ ಸಮೀಪದಲ್ಲಿರುವ ಸ್ಥಳವೊಂದನ್ನು ವಿಮಾನ ನಿಲ್ದಾಣಕ್ಕಾಗಿ ಈ ಮೊದಲು ಆರಿಸಲಾಗಿತ್ತು. ಆ ಸ್ಥಳವನ್ನು ತನಿಖೆ ಮಾಡಿ ಅದನ್ನು ಮಂಜೂರು ಮಾಡುವುದಕ್ಕಾಗಿ ವಿಮಾನ ಖಾತೆಯ ಉಚ್ಚಾಧಿಕಾರಿಗಳಾದ ಶ್ರೀ ಕೆ. ಎಸ್. ಶಹಾ ಮತ್ತು ಶ್ರೀ ಎಸ್. ಎಲ್. ನಂದಾರವರು ಮದ್ರಾಸಿನ ವಿಮಾನ ಖಾತೆಯ ಉಚ್ಚಾಧಿಕಾರಿ ಶ್ರೀ ಬಿ. ಮುತ್ತುಚ್ಚಿನ್ನಾರ್‌ನ ರೊಂದಿಗೆ ಇದೇ ತಾ 12ರಲ್ಲು ಇಲ್ಲಿಗೆ ದಯ ಮಾಡಿಸಿದ್ದರು. ಮರುದಿನ ಅವರು ಆ ಸ್ಥಳಕ್ಕೆ ಭೇಟಿ ಕೊಟ್ಟು ಅದನ್ನು ಮಂಜೂರು ಮಾಡಿದರೆಂದು ತಿಳಿದುಬರುತ್ತದೆ. ಈ ವಿಷಯದ ಅವರು ಮೈಸೂರಿಗೆ ಪ್ರಯಾಣ ಬೆಳೆಸಿದರು.

ತೆಂಗಿನಕಾಯಿ ಮತ್ತು ಕೊಪ್ಪರಿಕ ಸ್ಟೋರ್ಕೀಪಿಂಗ್ ಸೊಸೈಟಿ— ಮದ್ರಾಸು ಸರಕಾರಿನ ದಕ್ಷಿಣ ಕನ್ನಡದಲ್ಲಿ ತೆಂಗಿನ ಕಾಯಿ ಮತ್ತು ಅಡಿಕೆಯ ಮಾರ್ಕೆಟಿಂಗ್ ಸೊಸೈಟಿಯೊಂದನ್ನು ಮಂಗಳೂರಿನಲ್ಲಿ ಸ್ಥಾಪಿಸಿದೆ. ಶ್ರೀಗಳಾದ ರಂಗನಾಥ ಪೂಂಜ, ಎನ್. ಶಂಕರಭಟ್, ಜಿ. ಕೆ. ಗೋವಿಂದ ಭಟ್, ನಾರಾಯಣ ಮಲ್ಯ, ಸೈಲೂರು ಲಕ್ಷ್ಮಿನಾರಾಯಣರಾವ್, ಕೆ. ನಾರಾಯಣ ಭಟ್, ದಾವಾ ಹಾಜಿ ಇಬ್ರಾಹಿಮ್, ಶೇಷಗಿರಿ ಶೇಟ್, ಎ. ಬಿ. ಸೋನ್ಸ್, ಕುಂಳಾ ಕುಮಾರನ್ ನಾಯರ್ ಮತ್ತು ಅಡಿಕೆಯ ಮಾರ್ಕೆಟಿಂಗ್ ಸೊಸೈಟಿಯ ಸದಸ್ಯರು.

ಕಲೆಕ್ಟರರ ಪತ್ರಿಕಾ ನಂದಿ— 1. ಆಂಧ್ರ ನೆರೆಹಾವಳಿ ನಿವಾರಣಾ ನಿಧಿಗೆ ಜೂನ್ ಅಂತ್ಯದೊಳಗೆ ಸಂಗ್ರಹವಾದ ಒಟ್ಟು ಮೊಬಲಗು ರೂ. 20,865-7-6. 2. ಕೆರೆಯ ದುರಸ್ತಿಗಾಗಿ ಕುಂದಾಪುರ ತಾಲೂಕಿನ ಹಾಲಾಡಿ, ಹಾರ್ದಳ್ಳಿ, ಮಂದಳ್ಳಿ ಗ್ರಾಮಗಳಲ್ಲಿರುವ ಕೆರೆಗಳಿಗಾಗಿ ರೂ 2,500 ಮಂಜೂರು ಮಾಡಲಾಯಿತು. ಈ ವರೆಗಾದ 58 ಕೆಲಸಗಳಿಗೆ ಒಟ್ಟು ರೂಪಾಯಿ 1,11,765 ಮಂಜೂರಾಗಿದೆ. 3. ಬಂಕಿಯ ಆಕಸ್ಮಾತದಿಂದ ಸಂಕಷ್ಟಗೊಳಗಾದ ಕಾರ್ಕಳ ತಾಲೂಕಿನ ದಾಸಾನಾಯ್ಕ ಮತ್ತು ಸೋಮು ಎಂಬವರಿಗೆ ರೂಪಾಯಿ ಇಪ್ಪತ್ತರಂತೆ ಕಲೆಕ್ಟರರ ನಿಧಿಯಿಂದ ಸಹಾಯ ಮಾಡಲಾಗಿದೆ.

Notice.

ಉಡುಪಿ ಜಿ ಮ್ಯು ಕೋರ್ಟ್‌ನಲ್ಲಿ
O. P. No 22/1950

ಸುಂಕ್ಕಿ ಸೆಟ್ಟಿ—ದರಣಿ ಶಿವರಾಮ ಸೆಟ್ಟಿ ತಾಯಿ—ವ-ಲಕ್ಷ್ಮಿ ಸೆಟ್ಟಿ ಹೆಂಡತಿ. ಉಡುಪಿ ತಾಲೂಕು ಜೆ ಗ್ರಾಮದ ಪಾರ್ಕಳ.

—ಅರ್ಜಿದಾರರು.

ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ—

ಮೇಲ್ಕಂಡ ಅರ್ಜಿ ವ್ಯವಹಾರಣೆಯಲ್ಲಿ-ಅರ್ಜಿದಾರಳ ಮಗ-ತಾ. 27-5-50ರಲ್ಲಿ ಮೃತಪಟ್ಟ ಶಿವರಾಮ ಸೆಟ್ಟಿ ಎಂಬವನು ದಿವಾರ್ಡನ್ ಇನ್‌ಕ್ಯೂರೆನ್ಸ್ ಕಂಪನಿ, ಲಿಮಿಟೆಡ್ ನಲ್ಲಿ ಪಡೆದ ನಂ. 23892ನೇ ಪೊಲಿಸಿ ಬಾಬ್ತು ರೂಪಾಯಿ 1000/-ನ್ನು ವ್ಯಸಲು ಪಡಿಯುವರೆ ಸದ್ರಿ ಸ್ಯಕ್ತನ ವಾರೀಸುದಾರಳಾದ ಅರ್ಜಿದಾರಳೇ ಮುಖ್ಯ ವಾರೀಸುದಾರಳೆಂತಲೂ ಆ ಬಗ್ಗೆ ಅರ್ಜಿದಾರಳ ಹೆಸರಿಗೆ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಪ್ರತಿಗೈರೆ ಸಂಸ್ಥಿಗಳನ್ನು ಕಾಣಿಸಿ ಅರ್ಜಿದಾರಳು ಅರ್ಜಿಕೊಟ್ಟಿರುವುದರಿಂದ ಈ ಕುರಿತು ಆಕ್ಷೇಪ ಉಳ್ಳವರು ಸದ್ರಿ ಅರ್ಜಿ ತನ್ನಿಗೆಯಿಟ್ಟ ತಾ. 2-8-50ನೇ ದಿವಸ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟ್ ಮುಂದೆ ಹಾಜ್ರಾಗಿ ಜ್ಞಾಪಿಸಲು ಮಾಡಿಕೊಳ್ಳಲಿಕ್ಕಿದ್ದು.

B Hiranna Hegde,
Advocate for Petitioner.
ಉಡುಪಿ, ತಾ. 14-7-50.

ನೋಟೀಸು.

ಕಾರ್ಕಳ ಡಿ. ಮು ಕೋರ್ಟ್‌ನಲ್ಲಿ
O. P. ನಂಬ್ರ 18/1950

ಅನ್ಯತಮತಿ ಶೆಟ್ಟಿ—ಅರ್ಜಿದಾರಳು.

ಮಾರಿಯಮ್ಮ ಯಾನೆ ಯಶೋದ ಶೆಟ್ಟಿ—ಚಂದ್ರರಾಜ ಸೆಟ್ಟಿ ಸೊನೆ- ಕಾರ್ಕಳ ತಾಲ್ಲೂಕಿಂತ್ಯ ಗ್ರಾಮದ ಮೂಡಬಿದ್ರೆ ಜೈನಪೇಟೆ ಕೆರೆಬಸ್ತಿ ಬಳಿಯಲ್ಲಿರುವವಳು. —ಎದ್ರಿಗಳು ಇವರೆಗೆ

ಸದ್ರಿ ಎದ್ರಿಗಳಿಗೆ ಮತ್ತು ಸಂಬಂಧಪಟ್ಟ ಇತರರಿಗೆ ಈ ಮೂಲಕ ತಿಳುಹಿಸುವುದೇನೆಂದರೆ—

ಹಾಲಿ ವ್ಯವಹಾರ್ಯರಾದ ಚಂದ್ರರಾಜ ಸೆಟ್ಟಿಗೆ ಮಂಗಳೂರು ಎಸ್. ಕೆ. ಸೆಂಟ್ರಲ್ ಕೋಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ ಲಿಮಿಟೆಡ್ ಸಂಸ್ಥೆಯಲ್ಲಿರುತ್ತಿದ್ದ ರೂಪಾಯಿ 50-0-0 ಮೌಲ್ಯದ ಒಂದು ಪಾಲಿನ ಹಣವನ್ನು ವಸೂಲು ಮಾಡುವರೆ ತಾನು ಹಕ್ಕುದಾರಳೆಂತ ತನ್ನ ಹೆಸರಿಗೆ ಪಾರ್ಟಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ಸದ್ರಿ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 8-8-1950ಕ್ಕೆ ಸದ್ರಿ ಕೋರ್ಟ್‌ನಲ್ಲಿ ನೋಟೀಸು ಬಗ್ಗೆ ಇಟ್ಟದ್ದು. ಆಪಾದಿತರಿಂದ ಸಂಬಂಧಪಟ್ಟವರು ಸದ್ರಿ ಕೋರ್ಟಿನಲ್ಲಿ ಸದ್ರಿ ದಿನ ಮಧ್ಯಾಹ್ನ 11 ಗಂಟೆಗೆ ಸ್ವತಹಾ ಅಥವಾ ನಕೀಲರ ಮುಖಾಂತ್ರ ಹಾಜ್ರಾಗಿ ತಮ್ಮ ಆಕ್ಷೇಪಣೆಗಳನ್ನು ಜ್ಞಾಪಿಸಲು ಮಾಡಿಕೊಳ್ಳಲಿಕ್ಕತಪ್ಪಿದರೆ ಸದ್ರಿ ವ್ಯವಹಾರಣೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(ಕೋರ್ಟು ಹುಕುಂ ಪ್ರಕಾರ)
ಎಂ. ಎಸ್. ಅಧಿಕಾರಿ,
ಅರ್ಜಿದಾರಳ ಕಡೆ ವಕೀಲ.

ಕಾರ್ಕಳ, ತಾರೀಕು 11-7-1950.

The Catholic Bank Ltd., Udipi.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಮೇಲ್ಕಾಣಿಸಿದ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲನ್ನಾಗಲೀ ಯಾ ಅದಕ್ಕಾಗುವ ಬಡ್ಡಿಯನ್ನಾಗಲೀ ಕೊಡದೇಯಿರುವುದರಿಂದಲೂ, ಅಲ್ಲದೆ ಕ್ರಮ ಪ್ರಕಾರ ರಿಜಿಸ್ಟರ್ಡ್ ನೋಟೀಸು ಕೊಟ್ಟಲ್ಲಿ 1, 2, 7, 9 ಮತ್ತು 17ನೇ ಆಸಾಮಿಗಳು ಆ ಎಡ್ರೆಸಿನಲ್ಲಿಲ್ಲವೆಂದು ಕೊಟ್ಟ ರಿಜಿಸ್ಟರ್ಡ್ ನೋಟೀಸು ಹಿಂದೆ ಬಂದಿರುವುದರಿಂದಲೂ, ಉಳಿದ ಆಸಾಮಿಗಳು ರಿಜಿಸ್ಟರ್ಡ್ ನೋಟೀಸು ಪಡಕೊಂಡು ಸಹಾ ಸುಮ್ಮನೇಯಿರುವುದರಿಂದಲೂ ಸದರೀಯವರಿಗೆ ಯಾ ಸದರೀಯವರ ವಾರೀಸುದಾರರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ ಸದರೀಯವರು ಈಡಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 22ನೇ ಶನಿವಾರದೊಳಗೆ ಅಸಲು, ಬಡ್ಡಿ, ನೋಟೀಸಿನ ಖರ್ಚು ವಗೈರೆ ಎಲ್ಲಾ ಮೊಬಲಗನ್ನು ಕೊಟ್ಟು ಬಿಡಿಸಿ ಕೊಳ್ಳದೇಯಿದ್ದಲ್ಲಿ ಸದರೀಯವರು ಈಡಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 26ನೇ ಬುಧವಾರ ಗಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಬ್ಯಾಂಕಿನ ಪಕಾರದಲ್ಲಿ ಬಹಿರಂಗವಾಗಿ ಏಲಂ ಮಾಡುವುದು.

S. No.	Date	J. L. No	Name and address of the borrower	Principal Amount
1	18-1-1950	26/143	ಕೃಷ್ಣ ಶೇಟ್, ನಾಗಪ್ಪ ಶೇಟರ ಮಗ, ತೆಂಕನೇಟೆ, ಉಡುಪಿ.	80 0 0
2	19-9-1949	25/513	ಚಂದು ಪೂಜಾರಿ, ಕೂಕ್ರು ಪೂಜಾರಿಯ ಅಳಿಯ, ಕುಂಜಗುಡ್ಡೆ, ಅಂಬಲಪಾಡಿ, ಉಡುಪಿ	20 0 0
3	21-2-1949	24/1411	P. M. ಪಸೆನ್, ಮುಸಿಸಿಪಲ್ ಹಿಂದುಸ್ಥಾನಿ ಶಾಲೆಯ ಹೆಡ್ ಮಾಸ್ತರ್, ಉಡುಪಿ	30 0 0
4	25-5-1949	24/2024	B. ಇಬ್ರಾಹಿಮ್ ಸಹೇಬ್, ಬೆಲ್ ಕಲೆಕ್ಟರ್, ಉಡುಪಿ ಮುನಿಸಿಪಾಲಿಟಿ, ಉಡುಪಿ.	25 0 0
5	17-10-1949	25/735	— Do —	30 0 0
6	31-5-1949	24/2078	— Do —	25 0 0
7	24-1-1950	26/187	ದಾಮೋದರ ಸೆಟ್ಟಿಗಾರ, ಪೋಂಕ್ಕ ಸೆಟ್ಟಿಗಾರನ ಮಗ, ಉದಿಯಾವರ, ಉಡುಪಿ	60 0 0
8	4-8-1949	24/1511	ಯುಸುಫ್ ಸಹೇಬ್, ರುಸ್ತುಮ್ ಸಹೇಬರ ಮಗ, ಕಲ್ಸಂಕ, ಉಡುಪಿ	40 0 0
9	28-1-1950	26/210	ರಾಮಣ್ಣ ಶೈ, ಸಿದ್ದಣ್ಣ ಶೈಗಳ ಮಗ, ಕಾಮ.	80 0 0
10	19-4-1948	23/1466	ಜೀಂಕ್ರ ಉಸ್ತರ, ಜಲ್ಲೆ ಉಸ್ತರನ ಮಗ, ಕಾಡ್‌ಬೆಟ್ಟು, ಉಡುಪಿ.	13 0 0
11	12-5-1948	23/1606	ಕೃಷ್ಣಯ್ಯ ಸೆಟ್ಟಿ, ನಂದ್ಯಪ್ಪ ಸೆಟ್ಟರ ಅಳಿಯ, ಕೊರಂಕ್ರಪಾಡಿ, ಕೆಮ್ತೂರು, ಉದಿಯಾವರ P. O.	150 0 0
12	14-5-1948	23/1626	ರಾಮರಾಯ ಸೆಟ್ಟಿ, ವಕೀರೆ ಯಾನೆ ಮೋನಪ್ಪ ಸೆಟ್ಟಿ ಅಳಿಯ, ಅಜಕಾರ P O, ಕಾರ್ಕಳ ತಾಲೂಕು.	190 0 0
13	17-5-1948	23/1625	K. ಸುಬ್ಬಣ್ಣ ಬಟ್ಟ, ಅಣ್ಣಯ್ಯ ಬಟ್ಟ ಮಗ, ಬನ್ನಂಜೆ, ಉಡುಪಿ P O	100 0 0
14	17-5-1948	23/1642	A. ವಾಮನ ಕೆಣೆ, ಬಾಬ ಕೆಣೆಯಗ ಮಗ, ಮರ್ಚೆಂಟ್ ಮಲ್ಪೆ P.O.	200 0 0
15	22-5-1948	23/1674	K. ವೆಂಕಟೇಶ ಬಟ್, ಅನಂತ ಬಟ್ಟರ ಮಗ, ಕಲ್ಯಾಣಪುರ P O.	25 0 0
16	24-5-1948	24/1652	ಶ್ರೀನಿವಾಸ ಮಲ್ಯ, ಅನಂತಯ್ಯ ಮಲ್ಯರ ಮಗ, ಬರಮ್‌ಗುಡ್ಡೆ, ಉಡುಪಿ P. O.	80 0 0
17	28-6-1948	23/1932	ಪ್ರಾಪ ಪೂಜಾರಿ, ತವುಡ ಪೂಜಾರಿಯ ಅಳಿಯ, ಕಪ್ಪೆಟ್ಟು ಉಡುಪಿP.O	15 0 0

ಉಡುಪಿ,
ತಾ. 18-7-1950.

(Sd). V. Andrade,
AGENT.

'ಅಂತರಂಗ'ಕ್ಕೆ
6 ರೂಪಾಯಿ
ಚಂದಾ ಕೊಟ್ಟು
ಒಂದೇ ವರ್ಷದಲ್ಲಿ
50 ಪುಸ್ತಕಗಳನ್ನು ಪಡೆಯಿರಿ.
'ಅಂತರಂಗ' ಉಡುಪಿ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶ್ರೀ ತೂಬಗೆರೆ ನಂಜಪ್ಪನವರ ನೆತ್ತಿಯ ಪ್ರಬಂಧ ಸ್ಪರ್ಧೆ-೧೯೫೦

ವೀರಶೈವ ಸಾಹಿತ್ಯ ಸಂಸ್ಕೃತಿ ಮತ್ತು ಇತಿಹಾಸಗಳಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಈ ಸ್ಪರ್ಧೆ ಏರ್ಪಟ್ಟಿದೆ. ಪ್ರಬಂಧಕ್ಕೆ ವಿಷಯ: ನಿಜಗುಣ ಶಿವಯೋಗಿಗಳು ಮತ್ತು ಅವರ ಕೃತಿಗಳು

ನಿಯಮಾವಳಿಗಳು: ೧. ಪ್ರಬಂಧ ವಿದ್ವತ್‌ಪೂರ್ಣವಾಗಿ ಸಂಶೋಧನಾತ್ಮಕವಾಗಿ ಪ್ರಮಾಣಗಳನ್ನು ತಿಳಿಸಿ ಕನ್ನಡದಲ್ಲಿ ಬರೆದುದಾಗಿ ಇರಬೇಕು; ಪ್ರಬಂಧಕಾರರ ಸ್ವಂತ ಕೃತಿಯಾಗಿರಬೇಕು. ಇದುವರೆಗೆ ಅಚ್ಚಾಗಿರಬಾರದು. ೨. ಪ್ರಬಂಧ ಫುಲ್‌ಸ್ಕ್ಯಾಪ್ ಆಕಾರದ ೫೫-೬೦ ಪುಟಗಳ ಪರಿಮಿತಿಯಲ್ಲಿರಬೇಕು; ಅದನ್ನು ಕಾಗದದ ಒಂದೇ ಪಕ್ಕದಲ್ಲಿ ಶಾಯಿಯಲ್ಲಿ ಸ್ಪಷ್ಟಾಕ್ಷರಗಳಲ್ಲಿ ಬರೆದಿರಬೇಕು. ೩. ೧೯೫೦ನೆಯ ಸೆಪ್ಟೆಂಬರ್ ೩೦ನೆಯ ತಾರೀಖಿನೊಳಗಾಗಿ ಪ್ರಬಂಧ ಪರಿಷತ್ತಿನ ಕಚೇರಿಗೆ ತಲುಪಿರಬೇಕು. ೪. ಅತ್ಯುತ್ತಮವೆಂದು ಪರೀಕ್ಷಾ ಸಮಿತಿ ತೀರ್ಮಾನಿಸಿದ ಪ್ರಬಂಧಕ್ಕೆ ಎಪ್ಪತ್ತೈದು ರೂಪಾಯಿಗಳ ಒಂದೇ ಒಂದು ನಗದು ಬಹುಮಾನವನ್ನು ಕೊಡಲಾಗುವುದು. ೫. ಬಹುಮಾನ ಪಡೆದ ಪ್ರಬಂಧವನ್ನು ನೊಡಲು ಮುದ್ರಿಸಿಕೊಳ್ಳುವ ಹಕ್ಕು ಪರಿಷತ್ತಿಗೆ ಸೇರಿರುತ್ತದೆ, ಆ ಪ್ರಬಂಧದ ಸರ್ವ ಸ್ವಾಮ್ಯವೂ ಪರಿಷತ್ತಿಗೆ ಸೇರಿರುತ್ತದೆ. ಆದರೆ ಪರಿಷತ್ತು ಪ್ರಕಟಿಸಿದ ನಂತರ ಪ್ರಬಂಧಕಾರರಾಗಿ ಇತರರಾಗಲಿ ಬಳಸಿಕೊಳ್ಳಲು ಆಪೇಕ್ಷಿಸಿದ್ದಲ್ಲಿ ಪರಿಷತ್ತು ಉಚಿತವಾಗಿ ಅಪ್ಪಣೆ ಕೊಡಬಹುದು. ೬. ಸ್ಪರ್ಧೆಗೆ ಬಂದ ಪ್ರಬಂಧಗಳು ಬಹುಮಾನಕ್ಕೆ ತಕ್ಕಷ್ಟು ಯೋಗ್ಯತೆ ಪಡೆಯದೆ ಇದ್ದರೆ ಬಹುಮಾನವನ್ನು ಕೊಡದೆ ನಿಲ್ಲಿಸುವ ಅಧಿಕಾರ ಪರಿಷತ್ತಿಗೆ ಇರುತ್ತದೆ. ೭. ಸ್ಪರ್ಧೆಯಲ್ಲಿ ಭಾಗಿಗಳಾಗಲು ಆಪೇಕ್ಷಿಸುವವರು ಪ್ರಬಂಧದೊಂದಿಗೆ ಒಂದು ರೂಪಾಯಿ ಪ್ರವೇಶಧನವನ್ನು ಕಳಿಸಿ ಕೊಡಬೇಕು. ಈ ಮೊಬಲಗನ್ನು ಯಾವ ಕಾರಣದಿಂದಾಗಲಿ ಹಿಂದಿರುಗಿಸುವುದಿಲ್ಲ. ೮. ಬಹುಮಾನವನ್ನು ಪರಿಷತ್ತಿನ ಸಮ್ಮೇಳನದ ಕಾಲದಲ್ಲಾಗಲಿ, ವಸಂತ ಸಾಹಿತ್ಯೋತ್ಸವ ಕಾಲದಲ್ಲಾಗಲಿ ಕೊಡಲಾಗುತ್ತದೆ. ೯. ಸ್ಪರ್ಧೆಯಲ್ಲಿ ಬಹುಮಾನ ದೊರೆಯದೇ ಹೋದ ಪ್ರಬಂಧಗಳನ್ನು ಹಿಂದಕ್ಕೆ ಪಡೆಯಬೇಕಾದರೆ ಸ್ಪರ್ಧಿಗಳು ತಕ್ಕಷ್ಟು ಅಂಚೆಯ ವೆಚ್ಚವನ್ನು ಮುಂದಾಗಿ ಪರಿಷತ್ತಿಗೆ ಕಳಿಸಬೇಕು. ಸ್ಪರ್ಧೆಗೆ ಸಂಬಂಧಿಸಿದ ಪತ್ರವ್ಯವಹಾರವನ್ನು ಪರಿಷತ್ತಿನ ಕಾರ್ಯದರ್ಶಿಗಳೊಂದಿಗೆ ನಡೆಸತಕ್ಕದ್ದು ಎಂದು ಶ್ರೀ ಎಂ. ಎ. ನರಸಿಂಹಾಚಾರ್ಯ, ಕಾರ್ಯದರ್ಶಿ ಅವರು ತಿಳಿಸುತ್ತಾರೆ.

THE PANGAL NAYAK BANK, LIMITED, UDIPI.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡುಪಿ.

ನೋಟೀಸು.

ಈ ಕೆಳಗೆ ಹೆಸರು ಕೊಡಲಾಗಿರುವವರು ಈ ಬೇಂಕಿನ ಉಡುಪಿ ಆಫೀಸಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಅಸ್ಸಲು ಮತ್ತು ಅವುಗಳ ಮೇಲಣ ಬಡ್ಡಿ ಹಣ ಬೇಂಕಿಗೆ ವ್ಯಾದೆಗೆ ವಸೂಲು ಬಾರದೆ ಇದ್ದ ಕಾರಣ ಆವರಿಗೆ ಕಳುಹಿಸಿದ ಟಪ್ಪಾಲು ರಿಜಿಸ್ಟ್ರಿ ನೋಟೀಸುಗಳು "ಸದ್ರಿಯವರು ಮೃತಪಟ್ಟಿರುತ್ತಾರೆ ಯಾ ಊರಿನಲ್ಲಿ ಇಲ್ಲ" ಎಂಬ ಇತ್ಯಾದಿ ಸಬಬುಗಳಿಂದ ಹಿಂತಿರುಗಿ ಬಂದಿರುವುದರಿಂದಲೂ ಸದ್ರಿ ಮೃತರ ವಾರಸುದಾರರು ಹಕ್ಕುಸ್ಥಾಪಿಸಿ ಕೋರ್ಟಿನಿಂದ ಸರ್ಟಿಫಿಕೇಟು ಪಡೆದು ಸದ್ರಿ ಸಾಲಗಳ ಅಸ್ಸಲು ಪಣ ವ ಈ ವರೆಗಿನ ಬಡ್ಡಿ ಬೇಂಕಿಗೆ ಸಲ್ಯಾಸಿ ನಗದಾಗಿಸಿಕೊಂಡು ಹೋಗದೆ ಇರುವುದರಿಂದಲೂ ಈ ಮೂಲಕ ಪ್ರಕಟಿಸೋಣಾಗುವ ದೇನೆಂದರೆ—

ಸದ್ರಿ ಸಾಲಗಳ ಬಾಬ್ತು ಬಹಾ ಸಮಸ್ತ ಅಸ್ಸಲು ಬಡ್ಡಿ ಅನೇಜುಗಳು ನೋಟೀಸುಗಳ ಖರ್ಚು ಸಹಿತ ತಾರೀಕು 31-7-50ರ ಒಳಗೆ ಬೇಂಕಿಗೆ ಠೂಡಾ ವಸೂಲು ಬಾರದೆ ಇದ್ದರೆ ಸದ್ರಿ ಸಾಲಗಳ ಭದ್ರತೆ ಬಗ್ಗೆ ಸದ್ರಿಯವರು ಬೇಂಕಿನಲ್ಲಿ ಒತ್ತೆ ಇಟ್ಟ ನಗದಾಗಿಸಿದ ತಾರೀಕು 8-8-1950ನೇ ಮಂಗಳವಾರ ಯಾ ಅನಂತರ ಬೇಂಕಿಗೆ ಯುಕ್ತತೋರುವ ದಿವಸ ಮಧ್ಯಾಹ್ನ 12 ಘಂಟೆಗೆ ಪ್ರತ್ಯೇಕ ನೋಟೀಸು ಕೊಡದೇನೇ ಬೇಂಕಿನ ಉಡುಪಿ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡಲಾದೀತು. ಏಲಂ ಆದೇ ದಿವಸ ಪೂರ್ಣವಾಗದೆ ಇದ್ದರೆ ಆನಂತರ ಬೇಂಕಿಗೆ ಯುಕ್ತತೋರುವ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಮುಂದುವರಿಸಲಾದೀತು.

ಜಂ. ನಂ.	ಸಾಲದನಂಬ್ರ ಮತ್ತು ತಾರೀಕು	ಹೆಸರು ವತ್ತು ವಿಳಾಸ.	ಬಾಕಿ ಮೊಬಲಗು (30-6-1950ರ ವರೆಗಿನ ಬಡ್ಡಿ ಸಮೇತ) ರೂ. ಆ. ಪೈ
1	409/47 9-8-47	ಮಹಾಬಲ ಶೆಟ್ಟಿ, ನಾಗಯ್ಯ ಶೆಟ್ಟಿ ಆಳಿಯ, ಉದಪಾಡಿ ಹೊಸಮನೆ, ಪೆರ್ಡೂರು ಗ್ರಾಮ, ಪೆರ್ಡೂರು, ದ. ಕ.	251- 6-10
2	451/47 26-8-47	ಕೆ. ಗೋಪಾಲ P. C. No. 154, ಪೋಲೀಸ್ ಸ್ಟೇಶನ್, ಉಡುಪಿ ದ. ಕ.	22-15-11
3	533/47 23-9-47	ಕೆ. ಜಗನ್ನಾಥ ಶೆಟ್ಟಿ, ಕೆ. ಮೋನಪ್ಪ ಶೆಟ್ಟಿ ಆಳಿಯ, L. F. ಕಂಟ್ರಾಕ್ಟರ್, ಹಿರಿಯಡ್ಕ, ದ. ಕ.	1153-11- 3
4	30/48 12-1-48	ಮೊಣ್ಣ ಶೆಟ್ಟಿ, ಸೂರಶೆಟ್ಟಿ ಆಳಿಯ, ಕಿದಿಯೂರು ಗ್ರಾಮ, ಕಡೇಕಾರ್, ದ. ಕ.	239- 6- 2
5	568/48 29-7-48	ಶೀನಶೆಟ್ಟಿ, ರಾಮಯ್ಯ ಶೆಟ್ಟಿ ಆಳಿಯ, ಬಳಕಾಡು, ಉಡುಪಿ ದ ಕ.	269- 1- 2
6	780/48 30-9-48	ದಿ. ಶೀನಶೆಟ್ಟಿ, ಕಾಳುಶೆಟ್ಟಿ ಆಳಿಯ, ಕೋಟ್ಯರಸ್ತೆ, ಉಡುಪಿ, ದ. ಕ	31- 6- 7
7	490/49 18-6-49	ಶೇಕ್ ಇಬ್ರಾಹಿಮ್ ಸಾಹೇಬ್, ದಾವುದ್ ಸಾಹೇಬರ ಮಗ, ನೂಡಪ್ಪಾಡಿಬೂರು ಗ್ರಾಮ, ಉಡುಪಿ ದ. ಕ.	125- 3-11

ಉಡುಪಿ,
ತಾ. 15-7-1950

K. B. Kamath,
Agent

ದಕ್ಷಿಣ ಕನ್ನಡ.

ಪಲಿಮಾರು— ಈ ಕೇಂದ್ರದಲ್ಲಿ ವನ ಮಹೋತ್ಸವವು ತಾ. 7ನೇ ಶುಕ್ರವಾರ ಬಹಳ ವಿಜೃಂಭಣೆಯಿಂದ ಜರಗಿತು. ಸ್ಥಳೀಯ ಡೋ! ಡಾ। ಎಲಿಮೆಂಟರಿ ಶಾಲೆಯು ಹೊಲಿನಲ್ಲಿ ಡಾ। ಕುಮಾರನ್ ನಂದಿಮಾರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಸಸಿ ದಿನಾಚರಣೆಯ ಮಹತ್ವದ ಕುರಿತು ಭಾಷಣಗಳು ಜರಗಿ, ಸಭೆಯಲ್ಲಿದ್ದವರೆಲ್ಲರೂ ತಮ್ಮ ತಮ್ಮ ಮನೆಯ ವಠಾರದಲ್ಲಿ ಸಸಿಗಳನ್ನು ನೆಟ್ಟು ಅವುಗಳನ್ನು ಸಂರಕ್ಷಣೆ ಮಾಡಬೇಕೆಂದು ಸರ್ವರೂ ನಿರ್ಧರಿಸಿ ಜನಗಣಮನದೊಂದಿಗೆ ಸಭೆ ಕೊನೆಗೊಂಡಿತು. ಈ ಸುಮುಹೂರ್ತದಲ್ಲಿ ಶಾಲಾ ಮೈದಾನದಲ್ಲಿ ಕೆಲವು ಸಸಿಗಳು ನಡಲ್ಪಟ್ಟುವು.

ಹೆತ್ತೂರು:— ದಿನಾಂಕ 12-7-50 ರಂದು ಹೆತ್ತೂರಿನಲ್ಲಿ ವಿಶ್ವಕರ್ಮಸೇವಾ ಸಮಿತಿಯ ಉದ್ಘಾಟನೆಯನ್ನು ಶ್ರೀಯುತ ರಾವ್ ಬಾಳ, ಅವಂ ನೇತೃತ್ವದಲ್ಲಿ ಅತಿ ವಿಜೃಂಭಣೆಯಲ್ಲಿ ನೆರವೇರಿತು. ಅನೇಕ ಚಿಟ್ಟ ಸಂದೇಶಗಳು ಪ್ರತಿಷ್ಠಿತ ಮಹಾಭಿಮಾನಿಗಳಿಂದಲೂ ಪತ್ರಕಾಸಂದಾಕರಿಂದಲೂ ಬಂದಿದ್ದುವು. ಹೆತ್ತೂರಿನಲ್ಲಿ ಇದೀಗ ನವೀನ ಸಂಸ್ಥೆಯಾದ ಕಾರಣ ಉತ್ಸುಕತೆಯಿಂದ ದೂರ ಮಲೆನಾಡಿನ ಅನೇಕರು ಸಭೆಗೆ ನೆರೆದಿದ್ದರು. ಅಂದಿನ ಕಾರ್ಯಕಲಾಪಗಳು ಯಶಸ್ವಿಯಾಗಿ ಮುಕ್ತಾಯವಾಯಿತು.

ಬನ್ನಾಡಿ: ತಾ 1ರಿಂದ7-7-'50ರವರೆಗೆ ವನ ಮಹೋತ್ಸವಾಚರಣೆಯನ್ನು ಸ್ಥಾಬರ ಕಟ್ಟೆ ಕೇಂದ್ರದಲ್ಲಿ ಯಶಸ್ವಿಯಾಗಿ ಬಲು ವಿಜೃಂಭಣೆಯಿಂದ ಆಚರಿಸಲಾಯಿತು. ಶ್ರೀ ಗಳಾದ ಸುಬ್ಬಣ್ಣ ಹೆಗ್ಡೆ, ಬನ್ನಾಡಿ ವಿಟ್ಟಲ ಶೆಟ್ಟಿ, ಕೊಳ್ಕೆಬೈಲು, ರೆವಿನ್ಯೂ ಇನ್ಸ್‌ಪೆಕ್ಟರ್ ಕೋಟಿ, ವಿಟ್ಠಲ ಹೆಗ್ಡೆ, ಸ್ಥಾಬರಕಟ್ಟೆ, ಪರಮಹಂಸ, ವಿವೇಕಾನಂದ, ಮತ್ತು ಸ್ಥಾಬರ ಕಟ್ಟೆ ಶಾಲಾ ಉಪಾಧ್ಯಾಪಕ ವೃಂದ ಉದ್ಘಾಟನೋತ್ಸವ ರೇಂಜಿನ ದಿ. ಇನ್ಸ್‌ಪೆಕ್ಟರ್ ಮುಂತಾದವರ ಉತ್ಸಾಹ ಪ್ರಚಾರದ ಸತ್ಫಲವಾಗಿ ಈ ವಾರಾದಲ್ಲಿ ಸುಮಾರು 10,000 ಕ್ಕೂ ಮಿಕ್ಕಿ ವಿವಿಧ ಜಾತಿಯ ಸಸಿಗಳನ್ನು ನಡಲಾಯಿತು.

Notice

ಉಡುಪಿ ಡಿ ಮು॥ ಕೋರ್ಟಿನಲ್ಲಿ

ಕ್ರಮನಂಬ್ರ 185/1950

ಗಿರಿಯಮ್ಮ ಸೆಟ್ಟಿ—ವಾದಿಳು.

ಮತ್ತು

ಲಿಂಗಮ್ಮ ಹೆಗ್ಗಡ್ತಿ — ಶ್ರೀನಿವಾಸಹೆಗ್ಡೆರ ಸೊಸೆ. ಉಡ್ಡಿತಾಲ್ಲ್ಕು ಶಿವಗ್ರಾಮ ಮಾಣಿಬೆಟ್ಟು ಅಂಚೆ—ಪ್ರತಿವಾದಿಳು.

ಇವರೊಳಿಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ:-

ಆ್ಯತ ಸಪಕೆಗೆ ಎಂಬವನೆ ಪ್ರತಿವಾದಿಳು ತಾ. 6-4-47ರಲ್ಲು ರೂಪ್ಯಾ 600-0-0 ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಅಸಲು ರೂಪಾಯಿ 600/— ಕ ಅದರ ಮೇಲಣ ತಾ-10-1-48ರ ಲಾಗ್ಯಾತಿನ ಬಡ್ಡಿಯನ್ನು ಕಡಾ ಅಸಲು ಮಾಡುವ ಸದ್ರಿ ಆ್ಯತು ಸಪಕೆಗನ ಹಕ್ಕನ್ನು ವಾದಿಳು ಟ್ರಾನ್ಸ್‌ಫರ್ ಪಡದಂತೆ ವಾದಿಳಿಗೆ ಬರತಕ್ಕ ಅಸಲು ಬಡ್ಡಿ ಅನೆಜನ್ನು ಅಸಲು ಕೇಳಿ ವಾದಿಳು ದಾಕಲ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 2-8-50ಕ್ಕೆ ಯಿಟ್ಟಿನೆ. ಪ್ರತಿವಾದಿಗೆ ಸದ್ರಿ ವ್ಯಾಜ್ಯದಲ್ಲಿ ಉದಪರಿಸಂಪದಿದ್ದಲ್ಲಿ ಸದ್ರಿ ತಾ. 2-8-50ನೇ ದಿವ್ಸ ಬೆಳಿಗ್ಯೆ 10 ಘಂಟೆನೆ ಮೇಲ್ಕಂಡ ಕೋರ್ಟು ಮುಂದೆ ಪ್ರತಿವಾದಿಳು ಸ್ವತಹಾ ಯ ವಕೀಲರ ಮುಖಾಂತರ ಹಾಜರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಶಿವ್ಯಾನೂಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

—ಉಡುಪಿ } D V Acharya
ತಾ. 14-7-50 } Vakil for Plff.

ಪ್ರಕಟಣೆ

ತಾ. 13-7-1950ನೇ ಗುರುವಿಕೆಯಲ್ಲಿ ತೋರುವ ಹೆಸರಿನ ಪಿ. ಬತಪ್ಪ, ಪುತ್ತೂರು. ಚಿನ್ನಪ್ಪು ಪೂಜಾರಿ ಮಗ, ಪುತ್ತೂರು, ಉಡುಪು. ಇವನ ಪ್ರಕಟಣೆಯು ಕುದ್ದು ಸುಳ್ಳಿನ ಕಂತೆಯಾಗಿರುತ್ತದೆ. ಬಿಲ್ಲವರ ಸೇವಾ ಸಂಘದ ಮಂದಿರದಲ್ಲಿ ಸಭೆಯು 2-30 ಗಂಟೆಯ ನಂತರ ಸೇರುವುದರಿಂದ ಆದರ ಮೊದಲು ಮಂದಿರದ ಬಾಗಿಲು ತೆರೆಯುವದಾಗಲೀ ಕಾರ್ಯದರ್ಶಿಯವರು ಸಂಘದ ಮಂದಿರಕ್ಕೆ ಬರುವದಾಗಲೀ ಇಲ್ಲ. ಆದ್ದರಿಂದ ತಾ. 7-7-1950ನೇ ದಿವಸ ಅಪರಾಹ್ನ ಗಂಟೆ ಒಂದರ ಮುಂಚಿತವಾಗಿ ಸುಮಾರು 70 ಸದಸ್ಯರು ಸಹಿ ಹಾಕಿದ ಒಂದು ಅರ್ಜಿ ಕಾರ್ಯದರ್ಶಿಯವತ್ತಲ್ಲಿ ಕೊಟ್ಟಿರುತ್ತೇನೆ. ಅದು ಅವರು ತೆಗೆದುಕೊಂಡಿದ್ದರೆಂಬ ಸುಳ್ಳಿನಕಂತೆಯು ಅವನ ಹೇಳಿಕೆಯನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಗುತ್ತದೆ. ಬಿಲ್ಲವರ ಸೇವಾ ಸಂಘದ ಗೌರವ ಕಾರ್ಯದರ್ಶಿಯಾದ ನನ್ನಲ್ಲಿಯಾ ಮೇಲಿನ ತಾರೀಕು ವರೆಗೆ ಯಾವುದೊಂದು ತರದ ಅರ್ಜಿಯು ಈ ವಿ. ಅತಪ್ಪ ಪುತ್ತೂರುನಿಂದಾಗಲೀ ಬೇರೆಯಂವರಿಂದಾಗಲೀ ಬಂದಿದ್ದಿಲ್ಲ.

ಆಲ್ಲದೆ ಇಂಥಾ ಆಪಪ್ರಚಾರಗಳಿಗೆ ಬಲಿ ಬಿದ್ದು ಸದ್ರಿಯವನು ಯಾ ಅವನ ಪ್ರಚೋದಕರು ಕೂಡಿ ಸದ್ರಿ ಸಂಘದ ಹೆಸರಿನಲ್ಲಿ ವಂತಿಗೆಗಳನ್ನು ವಸೂಲು ಮಾಡುತ್ತಾರಾಗಿಯೂ ತಿಳಿದುಬರುತ್ತದೆ. ಸದ್ರಿ ಸಂಘದ ಗೌರವ ಕಾರ್ಯದರ್ಶಿಯ ಕೈಬರಹದ ಪತ್ರವು ವಿನಹ ಯಾರೂ ಯಾವ ತರದ ವಂತಿಗೆ ವ ಸಹಾಯಧನ ವಗೈರೆ ಕೊಟ್ಟಲ್ಲಿ ಸಂಘವು ಜವಾಬ್ದಾರಿಯಲ್ಲವೆಂದು ಈ ಮೂಲಕ ಮಹಾಜನರಿಗೆ ತಿಳಿಸೋಣಾಗುತ್ತದೆ.

(Sd.) ಕೆ. ಯನ್. ಸುವರ್ಣ,
ಗೌರವ ಕಾರ್ಯದರ್ಶಿ ಬಿಲ್ಲವರ ಸೇವಾ ಸಂಘ (ರಿಜಿಸ್ಟರ್ಡ್) ಉಡುಪಿ

ಅಂತರಂಗಕ್ಕೆ ಚಂದಾದಾರರಾಗಿರಿ

ಅಸ್ತಮ

ಎಂದೆಂದಿಗೂ ಹಿಮ್ಮೆಟ್ಟುವುದು.

ಪುರೋಹಿತ ಶ್ವಾಸಹಾರೀ ಔಷಧಿಯು ಕಳದ ಇಪ್ಪತ್ತೈದು ವರುಷಗಳಿಂದಲೂ ನೂರಿತ ವೈದ್ಯರಿಂದ ಅಸ್ತಮಕ್ಕೆ ರಾಮಬಾಣವೆಂದು ಹೆಸರಾಗಿದೆ.

ಪುರೋಹಿತ ಶ್ವಾಸಹಾರೀ ಔಷಧಿಯು

3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್ ಸೀಸೆಗಳಲ್ಲಿ ರೂ. 3-8-0, ರೂ. 6/- ಮತ್ತು ರೂ. 10/- ಕಿಮ್ಮತ್ತುಗಳಲ್ಲಿ ಎಲ್ಲಾ ಪ್ರಸಿದ್ಧ ಕೆಮಿಸ್ಟರಲ್ಲಿಯೂ ಮತ್ತು ಔಷಧ ಕಾರ್ಖಾನೆ

ಡಾ। ಪುರೋಹಿತ ಫಾರ್ಮಸಿ, ಕೊಲ್ಲಾಪುರ (ಎಮ್. ಎಸ್. ಎಮ್., ರೈಲ್ವೆ) ಯಲ್ಲಿಯೂ ದೊರೆಯುತ್ತದೆ.



ಪುರೋಹಿತ ಶ್ವಾಸಹಾರೀ
DR. PUROHIT PHARMACY, KOLHAPUR

ದ. ಕನ್ನಡ

ಕುರುಕಾಲು— ತಾ 29-6-50ರಲ್ಲು ಶ್ರೀ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಉಡ್ಪಿ ತಾಲೂಕು ರೂರಲ್ ವೆಲ್‌ಫೇರ್ ಆಫೀಸರರಾದ ಶ್ರೀ. ಇ. ಕಣ್ಣನ್ ನಾಯರರ ಅಧ್ಯಕ್ಷತೆಯಲ್ಲಿ ಕುರುಕಾಲು ಗ್ರಾಮಸ್ಥರ ಮಹಾ ಸಭೆಯು ಜರಗಿತು. ಈ ಸಭೆಯಲ್ಲಿ ಪಂಚಾಯತ ಬೋರ್ಡು, ಕೋಪರೇಟಿವ್ ಸೊಸ್ಯಾಟಿ, ಗ್ರಾಮಾಭಿವೃದ್ಧಿ ಸಂಘ-ಇವುಗಳ ಸಂಚಾಲಕರು ಹಾಜರಿದ್ದು ಕುರುಕಾಲು ಗ್ರಾಮದಲ್ಲಿ ಗತ ವರ್ಷಗಳಂತೆ ತಾ. 1-7-50ರಿಂದ 7 7 50ರ ವರೆಗೆ ಪ್ರತಿ ಮನೆಯವರು ಗಿಡ ಮರಗಳನ್ನು ನೆಡಬೇಕಾಗಿಯೂ ಪಗ್ಗೆಯ ನಿರ್ಣಯಿಸಿ ಸನ್ನೂರಂಭ-ನ-ಸಸಿ ಸಪ್ತಾಹದ ಯಾವತ್ತೂ ಕಾರ್ಯಕ್ರಮಗಳನ್ನು ವ್ಯವಸ್ಥಿತ ರೀತಿಯಿಂದ ಜರಗಿಸುವ ಬಗ್ಗೆ ಕುರುಕಾಲು ಗ್ರಾಮ ಸಂಘವನ್ನೇ ವನ ಮಹೋತ್ಸವ ಕಮಿಟಿಯನ್ನಾಗಿ ನೇಮಿಸಲಾಯ್ತು.

ತಾ. 5-7 50ನೇ ಆದರವಾರ ಬೆಂಟೆ 2ಕ್ಕೆ ನಿಯಮಿತ ಅಧ್ಯಕ್ಷರೂ ಕುರುಕಾಲು ಪರೇಲ್ ಶ್ರೀ. ಕೆ. ಚಂದಯ್ಯ ಶೆಟ್ಟರೂ ಮತ್ತು ಗ್ರಾಮಸ್ಥರೂ, ಕುಂಜಾರು-ನ-ಕುರುಕಾಲು ಶಾಲೆಗಳ ಅಧ್ಯಾಪಕರೂ, ಬಾಲೆಯ ಸಸಿಗಳನ್ನು ಹಿಡಿದುಕೊಂಡ, ಸಸಿ ನೆಡೋಣದ ಹಾಡುಗಳನ್ನು ಹಾಡುತಿದ್ದ ನೂರಾರು ವಿದ್ಯಾರ್ಥಿಗಳೊಂದಿಗೆ ಎಂಡು ಶಾಲೆಗಳಿಂದ ಪ್ರತ್ಯಪ್ರತ್ಯೇಕ ನೆರವಣಿಗೆ ಹೊರಟು ಕುರುಕಾಲು ಗ್ರಾಮದ ಪಂಕರಪುರ ರಸ್ತೆಯಲ್ಲಿ ಒಟ್ಟಾಗಿ ಕಲೆತು ಆ ಬಳಿಕ ಒಂದೇ ಮೆರವಣಿಗೆಯಾಗಿ ಕುಂಜಾರು ಹಾಯರ್ ಎಲಿಮೆಂಟರಿ ಶಾಲೆಯ ವರಾಂಡೆಗೆ ಒಂದು ಕೋಪರೇಟಿವ್ ಸೊಸ್ಯಾಟಿ ಕಟ್ಟೋಣದ ಕಂಪೌಂಡಿನಲ್ಲಿ ಅಧ್ಯಕ್ಷರೂ, ಗ್ರಾಮ ಪರೇಲರೂ, ಇತರ ಮುಂದಾಳುಗಳೂ ಸೇರಿ ಒಂದೊಂದು ಸಸಿ ಮಾನಿನ ಗಿಡಗಳನ್ನು ನೆಟ್ಟ ಬಳಿಕ ಕುಂಜಾರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕಣ್ಣನ್ ನಾಯರರ ನೇತೃತ್ವದಲ್ಲಿ ಸಭೆ ಜರಗಿತು.

ಸದ್ರಿ ಸಭೆಯಲ್ಲಿ ಗಾಮ ಸಂಘದ ಪ್ರಸಿಡೆಂಟರಾದ ಶ್ರೀ. ಕೆ. ಗಣಪಯ್ಯ ಶೆಟ್ಟಿಗಿದ ಸಸಿಗಳ ನೆಡೋಣದ ಉದ್ದೇಶಗಳನ್ನು ವಿವರಿಸಿ 1948ನೇ ಇಸ್ವಿಯ ಸಸಿ ಸಪ್ತಾಹದಲ್ಲಿ ನಮ್ಮ ಗ್ರಾಮದಲ್ಲಿ 7000ಕ್ಕೆ ವಿಕ್ಕಿಯೂ, 1949ನೇ ಇಸ್ವಿಯ ಸಸಿ ಸಪ್ತಾಹದಲ್ಲಿ 11,000ಕ್ಕೆ ವಿಕ್ಕಿಯೂ ಗಿದ ಮರಗಳನ್ನು ನೆಟ್ಟ ವಿಚಾರವನ್ನು ಸ್ಮರಿಸಿಗೆ ರಂದು ಈ ವರ್ಷದಲ್ಲಿ ಕಳೆದ ವರುಷಕ್ಕಿಂತಲೂ ಹೆಚ್ಚು ಗಿಡಗಳನ್ನು ನೆಡಬೇಕೆಂತಲೂ ಆ ವ್ಯಕ್ತಿ ಬೇಸಾಯವು ಮುಗಿಯುವ್ದರಿಂದ ಸಸಿ ಸಪ್ತಾಹದ ಈ ಒಂದು ವಾರದಲ್ಲಿಯೇ ಗತ ವರ್ಷದ ಆದೇಶಾನುಸಿಗೆ ಮಿಕ್ಕಿ ಗಿದ ಮರಗಳನ್ನು ನೆಡಬೇಕೆಂದೂ ವಿನಂತಿಸಿಗೆಂದೂ, ಗ್ರಾಮ ಸಂಘದ ವೈಸ್ ಪ್ರೆಸಿಡೆಂಟರೂ ಶ್ರೀ ಕೆ. ನಾರಾಯಣ ಆಚಾರ್ಯರೂ ಎಂತಿಮ ಮಹೋತ್ಸವದ ಮಹತ್ಕಾರ್ಯವು ಕುರುಕಾಲು ವಿಷಯಿ ಸಿ ಭಾಷಣ ಮಾಡಿದರು. ಆ ಬಳಿಕ ಅಧ್ಯಕ್ಷರು ಕುರುಕಾಲು ಗ್ರಾಮವು ಸಾಮಾನ್ಯ ಹಳ್ಳಿಯಾಗಿದ್ದರೂ ಐಕ್ಯತೆಯಲ್ಲಿಯೂ, ಕಾರ್ಯ ಸಾಧನೆಯಲ್ಲಿಯೂ, ಗಿದ ಮರಗಳನ್ನು ನೆಡುವ ಉತ್ಸಾಹದಲ್ಲಿಯೂ ಇಡೀ ಜಿಲ್ಲೆಯಲ್ಲಿ ಯೋಗ್ಯ ಸ್ಥಾನ ಪಡೆದುದು ಗ್ರಾಮಕ್ಕೆ ಹೆಗ್ಗಳಿಕೆಯೆಂತಲೂ, ಜಾಲ್ತಿ ವರುಷದಲ್ಲಿಯೂ ಹಿಂದಿನ ವರ್ಷಗಳಿಗಿಂತ ಗಿಡವಾರಿ ಗಳನ್ನು ನೆಡುವುದರಲ್ಲಿ ಹಿಂದುಳಿಯಲಿಕ್ಕಿಲ್ಲ ವೆಂತಲೂ ವಗೈರೆ ಸುರಸ ಭಾಷಣವನ್ನು ಇಂಗ್ಲಿಷ್ ಭಾಷೆಯಲ್ಲಿತ್ತರು. ಅಧ್ಯಕ್ಷರ ಭಾಷಣವನ್ನು ಹೆಡ್ಮಾಸ್ಟರ್ ಶ್ರೀ ಕೆ. ವಾಸು ಶೆಟ್ಟರು ಕನ್ನಡಕ್ಕೆ ಭಾಷಾಂತರಿಸಿದ್ದಲ್ಲದೆ, ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನು ತ್ತರು ಆ ಬಳಿಕ ಜನ ಗಣ-ಮನ ಗೀತೆ ಹಾಡಲ್ಪಟ್ಟು ಮಕ್ಕಳಿಗೆ ಕಿಂಡಿ ಜೊಣಿ, ಸಿಹಿಗಾಳಿಗೆ ಇಂದಿನವರು ಉಪಯೋಗಗಳಾದ ಬಳಿಕ ಸಭೆ ಮುಕ್ತಾಯಗೊಳ್ಳಿತು.

ತಾ 9-7-50ನೇ ಆದಿತ್ಯವಾರ ಬೆಳಿಗ್ಗೆ ಕುರುಕಾಲು ಗ್ರಾಮದ ಪ್ರಕಾಶನಿಗೆ ಸುತ್ತಲಿನ ಸಸಿ ಸಪ್ತಾಹದಲ್ಲಿ ನೆಟ್ಟ ಗಿಡಮರಗಳ ಬಾಳೇರುಮಾಣ ಯನ್ನು ತೆಗೆಯಲು ಒಟ್ಟು ನೆಟ್ಟ ಜುಮ್ಲಾ ಸಸಿಗಳು 5812ಎಂದು ವಿದಿತವಾಯ್ತು. ಗ್ರಾಮದಲ್ಲಿ ಶ್ರೀಗಳಾದ ಕುರುಕಾಲು ಗಣಪಯ್ಯ ಶೆಟ್ಟರು 1325, ಪಂಕರಪುರ ಶಾಸಿ ಸಾಹೇದರು 225, ಬಗ್ಗೆಡಿಕಲ್ ನಂದ್ಯಪ್ಪ ಶೆಟ್ಟರು 215 ಸಸಿಗಳಂತೆ ಅತ್ಯಧಿಕ ಸಸಿಗಳನ್ನು ನೆಟ್ಟ ರುವರಾಗಿ ಕುರುಕಾಲು ಗ್ರಾಮ ಸಂಘದ ಅಧ್ಯಕ್ಷ ಶ್ರೀ ಕೆ. ಗಣಪಯ್ಯ ಶೆಟ್ಟರು ವರದಿ ಕಳುಹಿಸಿರುತ್ತಾರೆ.

ಕುಂಬಳೆ— ವನಮಹೋತ್ಸವ ಉದ್ಘಾಟನಾ ದಿವಸವಾದ ತಾ. ೧೫ರಂದು ಇಲ್ಲಿನ ಎಚ್. ಇ. ಶಾಲೆಯಲ್ಲಿ ಸಾರ್ವಜನಿಕ ಸಭೆಯು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಎಂ. ಪ್ರಭಾಕರ ಜೋಷಿಯವರ ಅಧ್ಯಕ್ಷತೆಯ ಲ್ಲಿ ಜರಗಿತು. ಸಸಿನೆಡುವ ಆವಶ್ಯಕತೆಯನ್ನು ಮತ್ತು ಜನರು ಕೈಕೊಳ್ಳಬೇಕಾದ ಕೆಲಸಗಳ ನ್ನು ಸೂಚಿಸಿ, ಶ್ರೀಯುತರಾದ ಬಿ. ಸಿ. ಭಂಡಾರಿ, ಬಿ. ಮಾಧವ ಪೈ, ಎಂ. ರಾಮಕೃಷ್ಣ ರಾವ್ ಮುಂತಾದವರು ಭಾಷಣಗೈದ್ದರು. ಕಳೆದ ಒಂದು ವಾರದಲ್ಲಿ ಇಲ್ಲಿ ಹಲವು ಮಹನೀಯರು ಈ ಕೆಲಸವನ್ನು ನಾಜೂಕಾಗಿ ನಡೆಸಿರುವರು.

ಇಲ್ಲಿನ ಪ್ರೊವಿಜಿನ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಎ. ಟಿ ರಾಮಗನವರೂ ಅವರ ತಿ ಬಂದಿಯವರೂ ಕೂಡಿ ತಾ. ೬ರಂದು ಮೈ ತಿ ಗ್ರಾಮದ ರುಜಾರಿ ಸೋಡ ಎಂಬವರಿಂದ ೧೫ ಗಾಲನ್ ಬೆಲ್ಲದ ವಾಷನ್ನೂ, ೭೬ ಡ್ರಾಂ ಭಟ್ಟಿಯಲ್ಲಿ ತಯಾರಿಸಿದ್ದ ಶರಾಬನ್ನೂ ಹಿಡಿದಿರುವರು.

ಮಾಯಿಪಾಡಿ ಬೇಸಿಕ್ ತರಬೇತಿ ಶಾಲೆಯಲ್ಲಿ ಬುನಾದಿ ತರಬೇತಿ ಹೊಂದುತ್ತಿದ್ದ ಉಪಾಧ್ಯಾಯರುಗಳ ಬಿಡುಗಡೆ ತಾ. ೧೫ರಂದಾಯಿತು. ಅಂದು ಮುಖ್ಯೋಪಾಧ್ಯಾಯ ಶ್ರೀ ರಾಮಕೃಷ್ಣರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಜೆಲ್ಲಾ ಬೋರ್ಡು ಮೆಂಬರ ಶ್ರೀ ಬಿ. ದೇವಪ್ಪ ಅಳ್ವರೂ ಮತ್ತಿತರರೂ ಉಪಾಧ್ಯಾಯರ ಜವಾಬ್ದಾರಿಕೆಯನ್ನು ಎತ್ತಿ ಹೇಳಿ ಭಾಷಣವಿತ್ತರು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಕಿಂಡಿನಸು, ಇವುಗಳ ರುಚಿಯಬಗ್ಗೆ ಹೇಳಬೇಕೆ?

ಪ್ರೊಪ್ರಾಟರ್:— ಕೆ. ವೆಂಕಟ್ರಮಣಭಟ್ಟರ್.

For up-to-date Lodging & Boarding

ROYAL MAHAL,

UDIPI, S. Kanara.

— ಮಕ್ಕಳನ್ನು ಹಡೆಯುವುದು ಸಾಕು —

ಆಕಸ್ಮಿಕ ಸ್ತ್ರೀಯರಿಗೆ ಬರ್ಥ್ ಕಂಟ್ರೋಲ್ ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿಕೋಗ್ಯ, ಪ್ರಬರದೋಗ, ಬೊಲಿಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗಂಟೆಗೆ ಮಧ್ಯಾಹ್ನ ೧ಕ್ಕೆ ೧ಗಂಟೆಗೆ, ಸಂಜೆಗೆ ೧ಗಂಟೆಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಬೆಲೆ:—ಹೆರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಸ್ಟೆ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜೆಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಬಾಸಲ್ ಸ್ಟೋರ್ಸ್ ಧಾರವಾಡಕರ ವಿಜಾಪುರ ಸಂಜುಡೇಶ್ವರ ಮೂರ್ತಿ ಹಾವಣಗೇರಿ ಹಾವಣಗೇರಿ:—ಹಾವಣಗೇರಿ ಫ್ರೆಸ್ಸ್ ಅಂಡ್ ಎಕ್ಸ್ ಕಮಲಾಪುರ ಕೆಮಿಸ್ಟ್, ಹಾವೇರಿ ಬ್ಯಾಡಗಿ

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



Highly perfumed and medicated, worth using daily by one and all keeps hair black and relieves headache etc.

REGD. TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No 279/1949.

R. I. A. 322/50.

೧. ಅಬ್ದುಲ್ಲ —ವಾದಿ, ಅರ್ಜಿದಾರ.

ಬೀ ಪಾತುಮ್ಮ ಸಹಾ—ಪ್ರತಿವಾದಿರು, ಪ್ಲೀ ಪಾಂಟೆಂಟುಮ.

2. ಮಹಂಮ್ಮದ ಬ್ಯಾರಿ 6 ದ್ವೈಸದಿ 7 ಮ್ಯೊದಿಂ ಕುಂಭ 8. ಮೂಸೆ ಬ್ಯಾರಿ, ಪರಂಗಿ ಮಾವುತ್ತುರ್ತಿ ಆಜೋಕ್ರೆ ಬ್ಯಾರಿಯ ಮಕ್ಕಳು. 2 ಮತ್ತು 8ನೇ ಯವರು ಕಾಸರಗೋಡು ತಾಲೂಕು ಪೆರಂಬಳೆ ಗ್ರಾಮದಲ್ಲಿಯೂ 6-7ನೇಯವರು ತೆಕ್ಕಿಲ್ ಗ್ರಾಮದಲ್ಲಿ ಸಹಾ ಯರಿರುವರು.

ಪ್ರಿಲಿಮಿನರಿ ಡಿಕ್ರಿಗೆ ಅನುಸರ್ಸಿ ಫೈನಲ್ ಡಿಕ್ರಿ ಬಗ್ಗೆ ಅರ್ಜಿದಾರನು ಮಾಡಿದ ಸದ್ರಿ ಅರ್ಜಿಯು ತಾ 3-8-50ಕ್ಕೆ ಯಿಟ್ಟಿರುವ ಸಂಗ್ತಿ ತಿಳಿಸಿಯದೆ.

(Sd) **B S Kakkillaya,**
Advocate for Petitioner.
Kasaragod. 14-7-50.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

S. C 119/1950.

U. B ಅನಂತಕೃಷ್ಣರಾವ್ —ವಾದಿ.

ಮತ್ತು

ರಘುನಾಥ ಪ್ರಭು-ಪದ್ಮನಾಭ ಪ್ರಭುಗಳ ಮಗ-ಉಡ್ಪಿ ತಾಲ್ಲೂ ಶಿವಳ್ಳಿ ಗ್ರಾಮದ ಕಲ್ಯಾಣಪುರ —ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನೀವು ವಾದಿಗೆ ತಾರೀಕು 8-7-1936ರಲ್ಲು ಬರಕೊಟ್ಟ ಜಾಲಗೇಣಿ ಎದುನ್ನಾದಿ ಆಧಾರದ ಮೇಲೆ ಅನುಭವಿಸಿಕೊಂಡು ಬರುತ್ತಿರುವ ಆಸ್ತಿ ಬಾಬ್ತು ಕಳದ ಸರ್ವಜಿತ್ತು ಸರ್ವಧಾರಿ ಮತ್ತು ನಿರೋಧಿ ಸಂವತ್ಸರಗಳ ಗೇಣಿ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾರೀಕು 28-7-1950ಕ್ಕೆ ಯಿಟ್ಟಿದೆ. ಉದಾಹರಿಸುವಂಥಾದ್ದಿದ್ದರೆ ಆ ದಿವ್ಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ಕೀರ್ಮಾನಿಸಲ್ಪಡುವದು.

K. Ramakrishna Rao,
Vakil for Plaintiff.
ಉಡ್ಪಿ, ತಾ. 13—7—1950.

Notice.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 163/50

ಮಹಾಬಲ ಹೆಗ್ಗಡೆ —ವಾದಿ.

ಮತ್ತು

ಚಂದಯ್ಯ ಹೆಗ್ಗಡೆ-ಕೊಲ್ಲು ಹೆಗ್ಗಡ್ತಿಯರ ಮಗ, ಉಡ್ಪಿ ತಾಲ್ಲೂ ಕುತ್ಕೈಹಳ್ಳಿ ಗ್ರಾಮದ ದಲ್ಲಿಯಿರುವವ —ಪ್ರತಿವಾದಿ.

ಇವರೊಳಗೆ

ಮೇಲ್ಕಂಡ ದಾವೆಯ ವಾದಿಯು ಪ್ಲೇಂಟು ನಿವೃತ್ತಿಗೋಸ್ಕರ ದಾಕಲು ಮಾಡಿದ ಸದ್ರಿ ನಂಬ್ರವು ತಾರೀಕು 9-8-1950ಕ್ಕೆ ತಪ್ಪಿಗೆ ಯಿಡೋಣಾಗಿಯಿದೆ. ಆದುದರಿಂದ ಈ ಬಾದಿನಲ್ಲಿ ನಿಮ್ಮ ಆಕ್ಷೇಪಣೆಯೇನಾದರೂ ಯಿದ್ರೆ ಸದ್ರಿ ತಾರೀಕು 9-8-50ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಪೂರ್ವಾಹ್ನ 11 ಗಂಟೆಗೆ ತಪ್ಪದೆ ಹಾಜರಾಗಕ್ಕದ್ದು. ಈ ಬಗ್ಗೆ ತಪ್ಪಿದರೆ ಸದ್ರಿ ನಂಬ್ರವು ನಿಮ್ಮ ಯೆಕ್ಸಪಾರ್ಟೆಯಿಂದ ಕೀರ್ಮಾನಿಸಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. J. Ballal,
Vakil for Plaintiff.
Udipi, Dated 13-7-50.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಹಿಂದೂ ಕೋಡು ಶೀಘ್ರದಲ್ಲಿ ಜಾರಿಗೆ ಬರಲಿರುವುದು. ಅದಕ್ಕೆರುವ ವಿರೋಧತ್ವ ನಿವಾರಣೆಗಾಗಿ, ವಿರೋಧ ಪಕ್ಷದವರ ಯಾವತ್ತು ಆಕ್ಷೇಪಗಳನ್ನೂ ತಿಳಿದು ಆ ದನ್ನು ಆದಷ್ಟು ಮಟ್ಟಿಗೆ ಹಿಂದೂ ಕೋಡಿನಲ್ಲಿ ಸೇರಿಸಿ, ವಿರೋಧ ಪಕ್ಷದವರನ್ನು ಖಷಿಮಟ್ಟಿಗೆ ಸಮಾಧಾನಪಡಿಸಿರುವರು. ಎಲ್ಲಾ ಹಿಂದುಗಳಿಗೂ ಆದಷ್ಟುಮಟ್ಟಿಗೆ ಹೆಚ್ಚಿನ ಪರಿಭೇದವಿಲ್ಲದೆ, ಒಂದೇ ರೀತಿಯ ಕಾಯಿದೆಯನ್ನು ತರಬೇಕೆಂಬುದು ಈ ಹಿಂದೂ ಕೋಡಿನ ಗಂಭೀರ ಉದ್ದೇಶವಿರುತ್ತದೆ. ಈ ಸಂದರ್ಭದಲ್ಲಿ ಪ್ರಧಿತ ಮೇರಿಗಿನ - ಜಾನೂನನ್ನು ಅನುಸರಿಸುವ ಮರುಮಕ್ಕತ್ತಾಯಂ, ಅಳಿಯ ಸಂತಾನಿಗರು, ಮತ್ತು ತಿರುವಾಂಕೂರು ನಾಯರ್ ಆಕ್ಟ್, ಕೊಚ್ಚಿನ್ ನಾಯರ್ ಆಕ್ಟ್ ವಗೈರೆಗೆ ಒಳಪಟ್ಟವರ ಪ್ರತಿನಿಧಿಯವರನ್ನು, ಹಿಂದೂ ಕೋಡು ರಚನಾತ್ಮಕರು ಉದ್ದೇಶಿಸಿ, ಆವರನ್ನು ಹಿಂದೂ ಕೋಡಿನಿಂದ ವಿರಹಿತಪಡಿಸಲಿಕ್ಕೆ ಸಾಧ್ಯವಿಲ್ಲವೆಂದು, ಅವರಿಗೆ ಒಂದೇ ಸವನೆ ಹೆಚ್ಚಿನ ಮಾರ್ಪಾಟವು ಬಾರದಂತೆ ಯಾವ ತಿದ್ದುಪಡಿಗಳಿಂದ ಹಿಂದೂ ಕೋಡನ್ನು ಸೇರಿಕೊಳ್ಳಬಹುದೆಂಬ ಅನುಕೂಲತೆಯ ಬಗ್ಗೆ ಅವರೇ ತಮಗಾಗುವ ಒಂದು ತಿದ್ದುಪಡಿಯ ಡ್ರೇಫ್ಟನ್ನು ಒಮ್ಮತದಿಂದ ಮದ್ರಾಸು ಸರಕಾರದ ಮುಖೇನ ಕೊಟ್ಟಲ್ಲಿ ಅದನ್ನು ಶೋಧಿಸಿ ಸ್ವೀಕರಿಸಲಾಗುವುದು ಎಂಬ ಭರವಸೆಯಿದ್ದಂತೆ ತೋರುತ್ತಿದೆ.

ಇದಕ್ಕಾಗಿ ತಿರುವಾಂಕೂರಿನಲ್ಲಿ ಜರಗಿದ ಸಭೆಯಲ್ಲಿ ಈ ವಿಷಯಗಳನ್ನು ಚರ್ಚಿಸಿ ಈ ಮೇಲೆ ಹೇಳಿದ ಪದ್ಧತಿಯ ಜನರಿಗೆ ಅಗಬಹುದೆಂದಾದ ಒಂದು "ಡ್ರೇಫ್ಟ್ ತಿದ್ದುಪಡಿಯು" ಇತ್ತೀಚೆಗೆ ಕೈಸೇರಿದೆ. ಅದಕ್ಕೆ ಅಳಿಯ ಸಂತಾನಿಗರನೇಕರ ಒಪ್ಪಿಗೆ ಮತ್ತು ಬೆಂಬಲ ಇಪ್ಪರಲ್ಲೀ ಇದ್ದಂತೆ ಕಾಣುತ್ತದೆ.

ಸದ್ರಿ ಡ್ರೇಫ್ಟಿನಲ್ಲಿ ಅಳಿಯ ಸಂತಾನಿಗರ ಮಟ್ಟಿಗೂ ಅವರೊಳಗೂ ಇರುವ ಸಾಮಾನ್ಯ ಏಕ ರೀತಿಯ ಎಲ್ಲಾ ವಿಷಯಗಳನ್ನೂ ಮುಟ್ಟಿ, ಅಳಿಯ ಸಂತಾನಿಗರ ಕುಟುಂಬ ಮತ್ತು ಕವರುಗಳಲ್ಲಿ ಯಾವ ರೀತಿಯಲ್ಲಿ ನಾಲಾಗಬೇಕು ಎಂಬ ವಿಷಯವನ್ನು ಮಾತ್ರ ಅಳಿಯ ಸಂತಾನಿಗರ

ಹಿಂದೂ ಕೋಡೂ, ಅಳಿಯಸಂತಾನಿಗರೂ

ಎಡ್ವಕೇಟ್ ಬಿ. ಬಿ. ಶೆಟ್ಟಿ, ಲೈಟ್ ಹೌಸ್ ಹಿಲ್, ಮಂಗಳೂರು.

ದ ಸಮಗ್ರತೆಗೆ ಬಿಟ್ಟು ಆ ಬಗ್ಗೆ ಕೋಡಿನ 8ನೇ ಶೆಡ್ಯೂಲನ್ನು ತಯಾರಿಸುವ ಕೆಲಸವನ್ನು ಸಮಗ್ರತೆಗೆ ಬಿಟ್ಟಿರುತ್ತಾರೆ.

ಜನ ಅಭಿಪ್ರಾಯವನ್ನು ಸಂಗ್ರಹಿಸುವುದೇ ಸವಯವು ಬಹಳ ಸಂಕೋಚವಾಗಿರುವುದು. ಈ ಡ್ರೇಫ್ಟ್ ಕೋಡನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಪ್ರಚಾರಗೊಳಿಸಿ ವಿವಿಧ ದೃಷ್ಟಿಯಿಂದ ಬರತಕ್ಕ ಯಾವತ್ತು ಅಭಿಪ್ರಾಯದ ಆದಾಯವನ್ನು ಪಡೆದು ಸಾಧ್ಯವಿದ್ದಷ್ಟು ಮಟ್ಟಿಗೆ ಯುಕ್ತ ತಿದ್ದುಪಡಿಗಳನ್ನೂ, ಆ ಪಾಲಿನ ಬಾಬ್ತು ಪ್ರಸಾಪಿಸುವ ಕೋಡಿನ ಎಂಟನೆಯ ಶೆಡ್ಯೂಲನ್ನು ಮಾಡುವ ಘನವಾದ ಉದ್ದೇಶವನ್ನು ಇಟ್ಟುಕೊಂಡಿರುವಿವು.

ಈ ಡ್ರೇಫ್ಟ್, ಇಂಗ್ಲಿಷ್ ಭಾಷೆಯಲ್ಲಿದ್ದು ಇವತ್ತು ನಿನ್ನೆ ಎಂಬ ರೀತಿಯಲ್ಲಿ ನಮ್ಮ ಕೈಸೇರಿದ್ದು, ಜನಸಾಮಾನ್ಯರಲ್ಲಿ ಆ ದನ್ನು ತಿಳಿದು ಬರುವಂತೆ ಮಾಡಿ ಆದರಲ್ಲಿ ಬೇಕಾಗುವ ತಿದ್ದುಪಡಿಗಳನ್ನು ತಯಾರಿಸುವರೇ ಮತ್ತು ಶೆಡ್ಯೂಲು ತಯಾರಿಸುವರೇ, ಜನ ಅಭಿಪ್ರಾಯವನ್ನು ಪಡೆಯುವ ಉದ್ದಿಶ್ಯ, ಆದನ್ನು ಆದಷ್ಟು ಮಟ್ಟಿಗೆ ಶ್ರೀಂಕಡದಲ್ಲಿ ಕನ್ನಡದಲ್ಲಿ ತರ್ಜಮೆ ಮಾಡಿ ಅಳಿಯ ಸಂತಾನಿಗರ ಮುಂದೂ, ಆವರ ಹಿತಚಿಂತಕರ ಮುಂದೂ ಇಟ್ಟಿರುತ್ತದೆ. ಜಿಲ್ಲೆಯ ಕನ್ನಡ ಪತ್ರಿಕೆಗಳು ಈ ಪ್ರಚಾರಕ್ಕೆ ತುಂಬಾ ಆಸ್ಪದವನ್ನು ಕೊಡವು ಎಂದು ಊಹಿಸಲಾಗಿದೆ.

ಅಳಿಯ ಸಂತಾನಿಗರಾದ ನಮ್ಮ ಅಭಿಪ್ರಾಯವನ್ನು ನಮ್ಮ ಮುಂದಾಳುಗಳ ಮುಖೇನ ತಿಳಿಕೊಳ್ಳುವರೇ ಮದ್ರಾಸು ಸರಕಾರದ ಮದ್ರಾಸು ಕಾಯಿದೆ ಮಂತ್ರಿ, ಮದ್ರಾಸು ಎಡ್ವಕೇಟ್ ಜನರಲ್ ವಗೈರೆಯವರುಳ್ಳ ಒಂದು ಕಮಿಟಿಯು ಸದ್ಯದಲ್ಲೇ ಮಂಗಳೂರಿಗೆ ಬರಲಾಗುವುದು. ಆ ಮುಂಚಿ ಆದಷ್ಟು ಮಟ್ಟಿಗೆ . ವಿವೇಕನ, ಸಂಕೋಚ ಸ್ವಾರ್ಥ ದೃಷ್ಟಿಯಿಲ್ಲದ ಅಭಿಪ್ರಾಯಗಳನ್ನು ಗಳಿಸಿ ಇದೇ ತಿಂಗಳ ತಾ. 17ರಲ್ಲು ಗಂಟೆ 7ಕ್ಕೆ ಮಂಗಳೂರು ಬಂಟರ ಯಾನೆ ನಾಡವರ ಹೋಸ್ಪೇಲಿನಲ್ಲಿ ಆದರ ಹಳೇಬೋರ್ಡರರ ಸಂಘದ ನೇತೃತ್ವದಲ್ಲಿ ಆಂತಕ ಅಭಿಪ್ರಾಯಗಳನ್ನು ಶೋಧಿಸಿ ಬೇಕಾದ ತಿದ್ದುಪಡಿಗಳನ್ನು ಮತ್ತು 8ನೇ ಶೆಡ್ಯೂಲನ್ನು ತಯಾರಿಸುವ ಏರ್ಪಾಟನ್ನು ಮಾಡಿ, ಮದ್ರಾಸು ಸರಕಾರದ ಕಮಿಟಿಯ ಮುಂದೆ ಅದನ್ನಿಡುವ ವ್ಯವಸ್ಥೆ ಮಾಡಲಾಗುವುದು.

ಬಹು ಕಾಲ ಬಾಳಿ ಬರುವ ಶಾಶ್ವತ ರೀತಿಯ ಒಂದು ಕಾನೂನು ಬರಲಿದ್ದು ನಮ್ಮ ಜಿಲ್ಲೆಯ ಅನೇಕ ನಿವಾಸಿಕರ ಇರವಿನ ಮಾರ್ಪಾಟಿಕ್ಕೂ ಅಸ್ಪದವಿರುವ ಈ ವಿಚಾರದಲ್ಲಿ ಜನತೆಯು ಇದರೊಂದಿಗೆ ಪ್ರಚಾರಿಸಿರುವ ಡ್ರೇಫ್ಟ್ ಕೂಡಲೇ ವಿಕೆಯ ಕನ್ನಡ ತರ್ಜಮೆಯನ್ನು ಓದಿ ಜೀರ್ಣಿಸಿ, ತಮ್ಮ ಉತ್ತಮ ಮತ್ತು ಅಮೂಲ್ಯವಾದ ಅಭಿಪ್ರಾಯದ ಲಾಭವನ್ನು ಕೊಟ್ಟು ಸಹಕರಿಸಬೇಕಿರುತ್ತದೆ. ಅಭಿಪ್ರಾಯಗಳನ್ನು S. R. S. Home old Boarders Association ಸೆಕ್ರೆಟರಿ, ಮಂಗಳೂರು ಇವರಿಗೆ ಕಳುಹಿಸತಕ್ಕದ್ದು.

ಹಿಂದೂ ಕೋಡಿನ ಹೊಸ ಕೂಡುವಿಕೆಗಳು

A

ಮೊದಲನೆ ಭಾಗದ ಮೂರನೆ ಕ್ಲೂಸಿಗೆ ಸೇರಿಸತಕ್ಕ ವಿಷಯಗಳು.

(a) "ಮರುಮಕ್ಕತ್ತಾಯಂ ಕಾಯಿದೆ" ಅಂದರೆ ಈ ಕೋಡು (ಅಂದರೆ ಹಿಂದೂ ಕೋಡು) ಜ್ಯಾರಿಗೆ ಬಾರದಿದ್ದರೆ ಮುಂಚೆ ಆದಷ್ಟು ಮಟ್ಟಿಗೆ . ವಿವೇಕನ, ಸಂಕೋಚ ಸ್ವಾರ್ಥ ದೃಷ್ಟಿಯಿಲ್ಲದ ಅಭಿಪ್ರಾಯಗಳನ್ನು ಗಳಿಸಿ ಇದೇ ತಿಂಗಳ ತಾ. 17ರಲ್ಲು ಗಂಟೆ 7ಕ್ಕೆ ಮಂಗಳೂರು ಬಂಟರ ಯಾನೆ ನಾಡವರ ಹೋಸ್ಪೇಲಿನಲ್ಲಿ ಆದರ ಹಳೇಬೋರ್ಡರರ ಸಂಘದ ನೇತೃತ್ವದಲ್ಲಿ ಆಂತಕ ಅಭಿಪ್ರಾಯಗಳನ್ನು ಶೋಧಿಸಿ ಬೇಕಾದ ತಿದ್ದುಪಡಿಗಳನ್ನು ಮತ್ತು 8ನೇ ಶೆಡ್ಯೂಲನ್ನು ತಯಾರಿಸುವ ಏರ್ಪಾಟನ್ನು ಮಾಡಿ, ಮದ್ರಾಸು ಸರಕಾರದ ಕಮಿಟಿಯ ಮುಂದೆ ಅದನ್ನಿಡುವ ವ್ಯವಸ್ಥೆ ಮಾಡಲಾಗುವುದು.

ಬಹು ಕಾಲ ಬಾಳಿ ಬರುವ ಶಾಶ್ವತ ರೀತಿಯ ಒಂದು ಕಾನೂನು ಬರಲಿದ್ದು ನಮ್ಮ ಜಿಲ್ಲೆಯ ಅನೇಕ ನಿವಾಸಿಕರ ಇರವಿನ ಮಾರ್ಪಾಟಿಕ್ಕೂ ಅಸ್ಪದವಿರುವ ಈ ವಿಚಾರದಲ್ಲಿ ಜನತೆಯು ಇದರೊಂದಿಗೆ ಪ್ರಚಾರಿಸಿರುವ ಡ್ರೇಫ್ಟ್ ಕೂಡಲೇ ವಿಕೆಯ ಕನ್ನಡ ತರ್ಜಮೆಯನ್ನು ಓದಿ ಜೀರ್ಣಿಸಿ, ತಮ್ಮ ಉತ್ತಮ ಮತ್ತು ಅಮೂಲ್ಯವಾದ ಅಭಿಪ್ರಾಯದ ಲಾಭವನ್ನು ಕೊಟ್ಟು ಸಹಕರಿಸಬೇಕಿರುತ್ತದೆ. ಅಭಿಪ್ರಾಯಗಳನ್ನು S. R. S. Home old Boarders Association ಸೆಕ್ರೆಟರಿ, ಮಂಗಳೂರು ಇವರಿಗೆ ಕಳುಹಿಸತಕ್ಕದ್ದು.

i) ಯಾರು 1932ನೇ ಮದ್ರಾಸು ಮರುಮಕ್ಕತ್ತಾಯಂ ಆಕ್ಟು, ತಿರುವಾಂಕೂರು ನಾಯರ್ ಆಕ್ಟು, ತಿರುವಾಂಕೂರು ಇಳವೀ ಆಕ್ಟು, ನೆಂಜಿನಾಡು ನೆಲೀಲೆ ಆಕ್ಟು, ತಿರುವಾಂಕೂರು ಕ್ಷತ್ರಿಯ ಆಕ್ಟು, ತಿರುವಾಂಕೂರು ಕೈಷ್ಣವಕ ಮರುಮಕ್ಕತ್ತಾಯೀ ಆಕ್ಟು, ಕೊಚ್ಚಿನ್ ತೀಯಾ ಆಕ್ಟು, ಕೊಚಿನ್ ನಾಯರ್ ಆಕ್ಟು, ಅಥವಾ ಕೊಚ್ಚಿನ್ ಮರುಮಕ್ಕತ್ತಾಯೀ ಆಕ್ಟನ್ನು ಅನುಸರಿಸುವವರಾಗಿದ್ದಾರೋ ಅವರು,

ಅಥವಾ

ii) ಅಳಿಯ ಸಂತಾನಿಗರ ಹೊರತು, ತಿರುವಾಂಕೂರು, ಕೊಚ್ಚಿನ್ ಅಥವಾ ಮದ್ರಾಸು ಸ್ಟೇಟಿನಲ್ಲಿ ಧಾರಾಳವಾಗಿ ನಾಸ್ತವಿಕರಾಗಿರುವ, ಈ ಹಿಂದೂ ಕೋಡು ಜಾರಿಗೆ ಬಾರದಿದ್ದರೆ ತಮ್ಮ ವಾರಿಸು ಹಕ್ಕನ್ನು ಸ್ತ್ರೀ ಸಂತತಿಗನುಗುಣವಾಗಿ ಅನುಸರಿಸಿ ಬರುವ ಯಾವದೇ ಜಾತಿಯವರಾಗಿದ್ದರೂ ಆವರು;

(b) "ಅಳಿಯ ಸಂತಾನ ಕಾನೂನು" ಅಂದರೆ ಈ ಕೋಡು ಜ್ಯಾರಿಗೆ ಬಾರದಿದ್ದರೆ ಯಾರು, 1949ನೇ ಮದ್ರಾಸು ಅಳಿಯ ಸಂತಾನ ಆಕ್ಟಿಗೆ [1949ನೇ ಮದ್ರಾಸು ಆಕ್ಟು 9]ಒಳಪಟ್ಟಿದ್ದಾರೋ ಅವರು ಆಚರಿಸುವ ಕಾಯಿದೆ.

(c) "ತವಸಿ" ಎಂಬ ಶಬ್ದವು ಸ್ತ್ರೀಯನ್ನುದ್ದೇಶಿಸಿ ಹೇಳಿದಲ್ಲಿ, ಯಾರು ಈ ಕೋಡು ಜ್ಯಾರಿಗೆ ಬಾರದಿದ್ದಲ್ಲಿ ಮರುಮಕ್ಕತ್ತಾಯಂ ಕಾಯಿದೆಗೆ ಒಳಪಡುತ್ತಿದ್ದರೋ, ಅಂಥವರಲ್ಲಿ ಸ್ತ್ರೀಯನ್ನು ಉದ್ದೇಶಿಸಿ ಹೇಳಿದ್ದಲ್ಲಿ ಸದ್ರಿ ಸ್ತ್ರೀ, ಅವಳ ಯಾವತ್ತು ಮಕ್ಕಳು ಮತ್ತು ಅವಳ ಕೆಳಗೆ ಸ್ತ್ರೀ ಭಾಗದಲ್ಲಿ ಉದ್ಭವಿಸುವ ಸಾರ್ವತ್ರಿಕರು ಎಂದು.

"ತವಸಿ" ಎಂಬುದನ್ನು ಪುರುಷನನ್ನು ಉದ್ದೇಶಿಸಿ ಹೇಳಿದ್ದಲ್ಲಿ ಯಾವಾತನು ಈ ಕೋಡು ಜ್ಯಾರಿಗೆ ಬಾರದಿದ್ದಲ್ಲಿ ಮರುಮಕ್ಕತ್ತಾಯಂ ಕಾಯಿದೆಯನ್ನು ಅನುಸರಿಸುತ್ತಿದ್ದನೋ ಅತನ ತಾಯಿಯು "ತವಸಿ" ಎಂದು.

(d) "ತರ್ವಾಡ್" ಎಂದರೆ ಈ ಕೋಡು ಜ್ಯಾರಿಗೆ ಬಾರದಿದ್ದರೆ ಮರುಮಕ್ಕತ್ತಾಯಂ ಕಾನೂನಿಗೆ ಒಳಪಟ್ಟಿದ್ದು, ಒಟ್ಟು ಆಸ್ತಿಯಲ್ಲಿ ಸಮಪಿ ಹಕ್ಕುಳ್ಳ ಒಟ್ಟು ಸಂಸಾರಿಕರಾಗಿ ಸೇರಿ ಬಾಳುವ ಜನರ ಕೂಟ

(e) "ಯಿಲ್ಲಮ್" ಅಂದರೆ ಒಂದು ಆಸ್ತಿಯಲ್ಲಿ ಹಕ್ಕುಳ್ಳ ನಂಬೂದರಿ ಒಟ್ಟು ಸಂಸಾರಕ್ಕೆ ಸೇರಿದ ಜನರ ಕೂಟ

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಜೀವವಿಮೆಗಾಗಿ
ವಿಚಾರಿಸಿರಿ
ದಿ ನೂ ಗಾರ್ಡಿಯನ್ ಒಫ್ ಇಂಡಿಯಾ
ಶ ಲ್ಯಾಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.
(ಸ್ಥಾಪನೆ: 1934)
ಜೆಯರ್‌ಮೆನ್: ಶ್ರೀ. ಎಮ್. ಸಿಟಿ ಎಸ್ವರ್ ಚಿದಂಬರವಸ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಆದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು, ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲ್ಯಾಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142 ಮದ್ರಾಸು.

ಅಮೃತಾಂಜನ
ತಲೆವೇದನೆ, ತಿರೋವೇದನೆ, ಉಳುಕು ಉತ್ತಿಗೆ, ಭುಜ ಪಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ.

REGD
ಉಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K

"ಮನೆ" ಎಂಬುದೂ ಇದೇ ಶಬ್ದಾರ್ಥವನ್ನು ಒಳಗೊಂಡಿದೆ.

(f) "ಕವರು" ಎಂಬ ಶಬ್ದವು, ಈ ಕೋಡು ಜ್ಯಾರಿಗೆ ಬಾರದಿದ್ದಲ್ಲಿ ಯಾರು ಅಳಿಯ ಸಂತಾನ ಕಾನೂನನ್ನಾಚರಿಸುತ್ತಿದ್ದರೋ ಅಂಥವರಲ್ಲಿ, ಸ್ತ್ರೀಯನ್ನು ದ್ದೇಶಿಸಿ ಹೇಳಿದಲ್ಲಿ, ಸದ್ರಿ ಸ್ತ್ರೀ, ಅವಳ ಮಕ್ಕಳು ಮತ್ತು ಅವಳ ಕೆಳಗೆ ಸ್ತ್ರೀಯಲ್ಲಿ ಉದ್ಭವಿಸಿಕೊಂಡು ಬರುವವರು ಎಂದರ್ಥ.

"ಕವರು" ಎಂಬ ಶಬ್ದವು ಈ ಮೇಲಿನ ಸಂದರ್ಭದಲ್ಲಿ ಪುರುಷನನ್ನು ಉದ್ದೇಶಿಸಿ ಹೇಳಿದಲ್ಲಿ ಸದ್ರಿ ಪುರುಷನ ತಾಯಿಯ ಕವರು ಎಂದು ತಿಳಿಯತಕ್ಕದ್ದು.

(g) "ಕುಟುಂಬ" ಎಂದರೆ ಈ ಕೋಡು ಜ್ಯಾರಿಗೆ ಬಾರದಿದ್ದರೆ ಯಾರು ಅಳಿಯ ಸಂತಾನ ಕಾಯಿದೆಯನ್ನು ಅನುಸರಿಸಿ ಬರುತ್ತಿದ್ದರೋ ಅಂಥವರಲ್ಲಿ ಒಂದೇ ಆಸ್ತಿಯಲ್ಲಿ ಸಮಷ್ಠಿ ಹಕ್ಕಿರುವ ಒಟ್ಟು ಸಂಸಾರವಾಗಿರುವ ಜನರ ಕೂಟ

(h) "ಕಾರ್ನವನ್" ಎಂದರೆ ತರ್ವಾಡ್ ಅಥವಾ ತವಸಿಗಳಲ್ಲಿ ಅಡಳಿತೆಯ ಹಕ್ಕು ನೆಲಸಿ ಉಳ್ಳ ಅತ್ಯಂತ ಹಿರಿಯ ಪುರುಷ ಮೆಂಬರ, ಅಥವಾ ಅಂತಹ ಪುರುಷ ಮೆಂಬರನು ಇಲ್ಲದೇ ಹೋದಲ್ಲಿ ಅಂತಹ ಹಕ್ಕು ನೆಲೆಸಿ ಉಳ್ಳ ಸ್ತ್ರಾಯಭೂತಳಾದ ಅತ್ಯಂತ ಸ್ತ್ರೀ ಮೆಂಬರಳು, ಅಥವಾ ಪದ್ಧತಿ ಮೇರೆಗಾಗಲೀ, ಸಂತಾನನ ಆಜ್ಞಾಪಣೆಯ ಮೇರೆಗಾಗಲೀ, ಕಂಟ್ರಾಕ್ಟ್ ಮೇರೆಗಾಗಲೀ, ಕೋರ್ಟು ಡಿಕ್ರಿ ವಿಧಿ ಮೇರೆಗಾಗಲೀ ಅಥವಾ ಇನ್ನಾವ ರೀತಿಯಿಂದಲಾದರೂ ಅಂತಹ ಅಡಳಿತೆಯ ಹಕ್ಕು ಇತರ ಯಾವುದೇ ವ್ಯಕ್ತಿಯಲ್ಲಿ ಅಥವಾ ವ್ಯಕ್ತಿಗಳಲ್ಲಿ ನೆಲೆಸಿದ್ದರೆ, ಅಂತಹ ವ್ಯಕ್ತಿ ಅಥವಾ ವ್ಯಕ್ತಿಗಳು.

i) "ಯಜಮಾನ" ನೆಂದರೆ ಕುಟುಂಬ ಅಥವಾ ಕವರಿನಲ್ಲಿ ಆದರ ಆಸ್ತಿಯ ಅಡಳಿತೆಯನ್ನು ನೋಡುವ ಹಕ್ಕು ನೆಲೆಸಿರುವ ಅತ್ಯಂತ ಒರೆ ಸ್ತ್ರೀ, ಯಾ ಪುರುಷ, ಅಥವಾ ಅಂತಹ ಅಡಳಿತೆಯ ಹಕ್ಕು ಪದ್ಧತಿಯ ಮೇರೆಗಾಗಲೀ, ಸಂಸಾರದ ಅಜರಾಮರ ಮೇರೆಗಾಗಲೀ, ಕಂಟ್ರಾಕ್ಟ್ ಮೇರೆಗಾಗಲೀ ಡಿಕ್ರಿ ವಿಧಿ ಮೇರೆಗಾಗಲೀ ಅಥವಾ ಇನ್ನಾವ ರೀತಿಯಿಂದಾಗಲೀ ನೆಲೆಸಿರುವ ಇತರ ಮೆಂಬರಿ ಅಥವಾ ಮೆಂಬರರು.

B

1. ಎರಡನೇ ಭಾಗದ 9ನೇ ಕ್ಲಾಸ್ (ಅಥವಾ ಶರ್ತ) ದಲ್ಲಿ "ಸಮರ್ಥ ಜಿ' ಒಂದಿಯಳ್ಳಿ ಕೋರ್ಟಿನಿಂದ ರದ್ದಿಸಲ್ಪಟ್ಟಿ" ಎಂಬುದರ ಬದಲು "ಈ ಕೋಡು ಜಾರಿಗೆ ಬಾರದಿದ್ದಲ್ಲಿ ಅಥವಾ ಅದಕ್ಕಿಂತ ಮುಂಚೆ ಈ ಕೋಡಿನ ಪ್ರಾರಂಭ-ಗಾಗುವ ಮೊಲು ಆಗ ಜ್ಯಾರಿಯಲ್ಲಿರುವ ಶಾಸನವನ್ನು, ಪದ್ಧತಿ ಅಥವಾ ಪಾಡಿಕೆಯನ್ನನುಸರಿಸಿ" ಎಂಬ ಶಬ್ದಗಳನ್ನು ತಿದ್ದಿಕೊಳ್ಳತಕ್ಕದ್ದು.

2 ಎರಡನೇ ಭಾಗದ 26-A ಕ್ಲಾಸನ್ನು ಬಿಟ್ಟುಬಿಡತಕ್ಕದ್ದು; ಮತ್ತು 30 ನೇ ಕ್ಲಾಸಿನ ನ್ಯೂವಿಸೊ (ಕೆಳ ಶರ್ತದಲ್ಲಿ) Sec ಅಂದರೆ ಸೆಕ್ಷನ್ 26-A ಎಂಬುದರ ಬದಲು "IVನೇ ಅಧ್ಯಾಯ (chapter)" ಎಂದು ತಿದ್ದಿಕೊಳ್ಳತಕ್ಕದ್ದು.

3 ಎರಡನೇ ಭಾಗದಲ್ಲಿ IVನೇ ಅಧ್ಯಾಯದ ಬದಲು ಈ ಕೆಳಗಿನ ಅಧ್ಯಾಯವನ್ನು ಓದಿಕೊಳ್ಳಿ.

IVನೇ ಅಧ್ಯಾಯ

ಮರುಮಕ್ಕತ್ತಾಯಂ ಅಥವಾ ಅಳಿಯಸಂತಾನ ಸ್ತ್ರೀಯಳ ವಿವಾಹದ ಕುರಿತು ವಿಧಿಸಿದ ಶರ್ತಗಳು

49 (1) ಈ ಕೆಳಗೆ ನಮೂದಿಸಿದ ಶರ್ತಗಳು ಕೂಡಿಬಂದಲ್ಲಿ, ಈ ಕೋಡು ಜಾರಿಗೆ ಬಾರದಿರುತ್ತಿದ್ದರೆ ಯಾವ ಸ್ತ್ರೀಯು ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ಕಾಯಿದೆಗೆ ಒಳಪಟ್ಟಿದ್ದರೋ ಆಕೆ ಒಳಗೂ, ಅಂತಹ ಕಾಯಿದೆಗೆ ಒಳಪಡಲಿ, ಸಡಪೆತರಬಹುದಾದ ಯಾವುದೇ ಹಿಂದುವಿನ ಒಳಗೂ ವಿವಾಹವೆಂಬ ನೆರವೇರಬಹುದು. ಅನುಸರಿಸತಕ್ಕ ಶರ್ತಗಳು ಯಾವುವೆಂದರೆ:-

i) ದಂಪತಿಯಾಗತಕ್ಕ ಯಾವನೊಬ್ಬ ಯಾ ಯಾವಳೊಬ್ಬಳಿಗೂ ಇತರ ವಿವಾಹಿತ ಪ್ರಣಯಿ ಯಾ ಪ್ರಣಯಿನಿಯಿರಕೂಡದು.

ii) ವಿವಾಹ ಸಂಬಂಧಕ್ಕೆ ಆಕ್ಷೇಪಕರವಾದ ಸಂಬಂಧಿಕರಾಗಿರಬಾರದು.

iii) ಇಕ್ಕಡೆಯವರೂ ವಿವಾಹ ಸಮಯದಲ್ಲಿ ಹುಚ್ಚರು ಅಥವಾ ಹುಚ್ಚುತನ ಮೂಸಿಯು ಶುದ್ಧ ಮೂಢ ಬುದ್ಧಿಯವರಾಬಾರದು.

iv) ವರನಿಗೆ ಹದಿನೈದು ವರುಷವೂ ವಧುವಿಗೆ ಹದಿನಾಲ್ಕು ವರುಷವೂ ತುಂಬಿ ಆ ಸಮಯದಲ್ಲಿ ಇರಬೇಕು.

v) ವಧುವಿಗೆ ವಿವಾಹವು ತಡವಾದ ವಿಷಯ ಸಮಯ ತುಂಬದಿದ್ದಲ್ಲಿ ಅವಳ ಗಾರ್ಡಿಯಾನನ ಅಥವಾ ಗಾರ್ಡಿಯಾನಳ ಒಪ್ಪಿಗೆಯನ್ನು ಪಡೆದಿರಬೇಕು.

(2) ಈ ಕೋಡು ಜಾರಿಗೆ ಬಂದ ನಂತರ ಯಾವ ಎರಡು ಕಡೆಯವರಲ್ಲಿ ಉಪ ಸೆಕ್ಷನ್ (sub sec)(1) ಕ್ಲೌಸ್ i ಮತ್ತು iir ಅಕ್ಷೇಪಕ್ಕೆ ಒಳಗಾಗದೆ ಇತರ ಕ್ಲೌಸುಗಳಿಗೆ ವಿರೋಧವಾಗಿ ವಿವಾಹವಾದಲ್ಲಿ, ಅಂತಹ ವಿವಾಹವನ್ನು 50-C. ಸೆಕ್ಷನಿನಲ್ಲಿ ಹೇಳಿದ ಪ್ರಕಾರ ಅಳಿಸಿ ತೆಗೆಯಬಹುದು. ಹಾಗೆ ಅಳಿಸಿ ತೆಗೆಯುವ ತನಕ ಅದು ಸಿಂಧುವಾದ ವಿವಾಹವೆಂದು ಪರಿಗಣಿಸಲ್ಪಟ್ಟು ಅತನ ಜನಿಸುವ ಮಕ್ಕಳು ಎಂದಿಗೂ ಅವರ ತಂದೆತಾಯಿಗಳ ಕ್ರಮಪ್ರಕಾರ ನ್ಯಾಯವಾದ ಮಕ್ಕಳೆಂದು ಎಣಿಸಲ್ಪಡುವರು.

(4) ಈ ಸೆಕ್ಷನಿನಲ್ಲಿ ಹೇಳಲ್ಪಡುವ ಯಾವುದೊಂದು ವಿಷಯವೂ, ಈ ಕೋಡು ಜಾರಿಗೆ ಬಾರದಿದ್ದರೆ ಮರುಮಕ್ಕತ್ತಾಯಂ ಕಾನೂನನ್ನು ಅನುಸರಿಸುತ್ತಿದ್ದ, ಯಾವುದೇ ನಂಬೂದರೀ ಸ್ತ್ರೀಯವಿವಾಹಕ್ಕೆ ಲಗಾನಾಗತಕ್ಕದ್ದಲ್ಲ.

50 (1) 49ನೇ ಸೆಕ್ಷನಿನ ಸಬ್ ಸೆಕ್ಷನ್ (1)ರಲ್ಲಿ ಹೇಳಲ್ಪಡುವ ಪ್ರತಿಯೊಂದು ವಿವಾಹವೂ ವಿವಾಹಿತರಾಗುವ ಇಕ್ಕಡೆಯವರ ಯಾವುದೇ ಜಾತಿ ವಿವಾಜಿಯ ನಿಯಮ ಮತ್ತು ಕ್ರಮಗಳು ಇದ್ದಲ್ಲಿ ಅವನ್ನು ಅನುಸರಿಸಿ ಬಹಿರಂಗವಾಗಿ ನಡೆಸತಕ್ಕದ್ದು.

ಆದರೆ ಅಂತಹ ಯಾವುದೇ ವಿವಾಹವೂ ಅಂತಹ ವಿವಾಹ ಸಮಯದ ಕ್ರಮಗಳ ನ್ಯಾನತೆಯ ದೆಸೆಯಿಂದ ಮಾತ್ರ ಅಸಿಂಧುವೆಂದು ಎಣಿಸಲ್ಪಡಲಾರದು.

(2)(a)ಅಂತಹ ಪ್ರಾಯೊಂದು ಮದುವೆಯ ನೋಟೀಸನ್ನೂ, ಅಂತಹ ಪ್ರತಿಯೊಬ್ಬ ವ್ಯಕ್ತಿಯೂ, ನಿಯಮಿಸಲ್ಪಡುವ ಅಧಿಕಾರಿಗೆ, ನಿಯಮಿತ ವಿಧಾನದಿಂದ, ನಿಯಮಿತ ಸಮಯದೊಳಗೆ ಕೊಡತಕ್ಕದ್ದು.

(b) ಪೋಟಿನ(a) ಕ್ಲೌಸಿನಲ್ಲಿ ಕೆಳಗಿನ ವಿಧಾನದಲ್ಲಿ ನೋಟೀಸು ಯಾರಿಂದಾದರೂ ಕೊಡಲು ತಪ್ಪಿದಲ್ಲಿ ಅತನು ರೂಪಾಯಿ 50/-ಕ್ಕೆ ಮಿಕ್ಕದ ಜುಲ್ಮಾನೆಗೆ ಒಳಗಾಗುವನು; ಆದರೆ ಅಂತಹ ನೋಟೀಸನ್ನು ಕೊಡಲು ತಪ್ಪಿದ ಮಾತ್ರದಿಂದ ಅಂತಹ ಮದುವೆಯು ಅಸಿಂಧುವೆಂದು ಎಣಿಸಲಾಗದು, ಅಥವಾ ಅಂತಹ ವಿವಾಹಿತರು, ಯಾ ಅವರಲ್ಲಿ ಜನಿಸುವವರ ಕಾನೂನು ಮೇರೆಗಿನ ಹಕ್ಕಿಗೆ ಒಡಕನ್ನು ತರಲಾರದು.

ಅಂತಹ ವಿವಾಹದಲ್ಲಿ ಗಾರ್ಡಿಯಾನ್‌ಶಿಪ್

50-A. ಸೆಕ್ಷನ್ 49, ಸಬ್ ಸೆಕ್ಷನ್ (1) ಕ್ಲಾಸ್ (v)ರ ಮೇರೆಗೆ ಗಾರ್ಡಿಯಾನನ ಒಪ್ಪಿಗೆಯು ಮದುವೆಗೆ ಅವಶ್ಯವಾಗಿ ತೋರಿಬಂದಲ್ಲಿ, ಅಂತಹ ಒಪ್ಪಿಗೆಯನ್ನು ಕೊಡಲು ಹಕ್ಕುದಾರರಾದ ಜನರು ಈ ಕೆಳಗೆ ಅನುಕ್ರಮವಾಗಿ ವಿವರಿಸಿದವರಿರಬೇಕು, ಯಾರೆಂದರೆ:-

1) ತಂದೆ.

2) ತಾಯಿ

3) ಸಂಪೂರ್ಣ ಸಹೋದರೆ, ಬೇರೆ ಬೇರೆ ತಂದೆಯಿಂದ ಒಂದೇ ತಾಯಿಯಲ್ಲಿ ಹುಟ್ಟಿದ ಸಹೋದರ, ಅಥವಾ ಬೇರೆ ಬೇರೆ ತಾಯಿಯಿಂದ ಒಂದೇ ತಂದೆಯಲ್ಲಿ ಜನಿಸಿದ ಸಹೋದರ, ಇವರ ಪೈಕಿ ಮೊದಲನೆ ತರಗತಿಯವನು; ನಂತರದ ತರಗತಿಯವನಿಗಿಂತ ಸ್ವೀಕರಿಸಲ್ಪಡುತ್ತಾನೆ. ಮತ್ತು ಒಂದೇ ತರಗತಿಯ ಇಬ್ಬರು ಸಹೋದರರು ಇದ್ದಲ್ಲಿ ಹಿರಿಯವನೇ ಸ್ವೀಕರಿಸಲ್ಪಡುತ್ತಾನೆ.

4) ಸೋದರ ವಾವನು ಮೇಲೆ 3ನೇ ಕಲಮಿನಲ್ಲಿ ಹೇಳಿದ ಸ್ವೀಕೃತಿ ನಿಬಂಧನೆಗಳಿಗನುಸರಿಸಿ.

5) ಇತರ ಯಾವ ಸಂಬಂಧಿಕನೂ ಹತ್ತಿರದ ಸಂಬಂಧಿಕನು ದೊರಕದನಿಗಿಂತ ಮೊದಲಾಗಿ ಸ್ವೀಕೃತನಾಗುತ್ತಾನೆ. ಒಂದೇ ರೀತಿಯ ಸಂಬಂಧಿಕರಲ್ಲಿ ಮೇಲೆ (3)ನೇ ಕಲಮಿನಲ್ಲಿ ಹೇಳಿದ ಸ್ವೀಕೃತ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

(ಮುಂದುವರಿಯುವುದು.)

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿಯಲ್ಲಿಯೂ ದೊರೆಯುತ್ತವೆ.

ಕೆಲ್ಲಂಜೆ ವ್ಯಾಸರಾಯ್ಯ,
ರಥಬೀದಿ, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳೊಳಗೆ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುಕ್ಕು ಶಾಖವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಪು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಆರ್ಥಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೊಂಬು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಾಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮಜ್ಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂಜೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರಾ, ಕೇಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ಮಾಲಿಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೆರೆ,
ಆಯುರ್ವೇದ ಔಷಧಾಲಯ. ಗದಗ-

ಬಹುಮಸ್ಯಾವ ನಿಂತಿತು

'ಕಾಮಾಲಾ' ದಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಮತ್ತುಸ್ರಾವವಾಗುವುದು, ಹಸೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧೆಗಳೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ: ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MIS. P. DEVEE, F. DS. (N. J.)
Tollygunge CALCUTTA.
ಸ್ವಾಕಿಸ್ವರು: ಶಂಕರಂಪಿಪಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3010 Estd: 1921 ಸ್ಥಾಪನೆ 27-7-1950

LICENCE No. 31
Licensed to Post without Prepayment

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
ತಿಂಗಳಿಗೆ ರೂ. 3-0-0
ಒಡಿ ಪ್ರತಿಗೆ ರೂ. 0-2-0

FOUNDER:
Sri. A. B. Shetty
Minister for Agriculture & Veterinary

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಸ್ವಯಮುಮ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೪೮

NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 48

ನುಷ್ಯನಿಗಿಂತ ಸಂಗತಿ ಮುಖ್ಯವೆಂ
ಬೋಧನೆಯೇನೋ ಇದೆ. "ಅವರು
ನ್ನು ಅಗಲಿ ಹೋದರೂ ಅವರು
ಕೆಟ್ಟ ಸೂತ್ರಗಳು ಚಿರಕಾಲವೂ ಉ
ಕೊಳ್ಳುವವು" ಎಂಬ ಉದ್ಗಾರವು
ಹಾನಾಯಕರ ಮರಣದ ವೇಳೆ ಸರ್ವ
ಮಾನ್ಯವೆಂದುದೇ. ಆದರೆ ಕಾರ್ಯ
ನ ಹೆಸರು ಮಾತ್ರ ಶಾಶ್ವತವಾಗಿ
ಳಿದುಕೊಳ್ಳುವಂತಹದು ಹೊರತು ಆ
ಕಾರ್ಯವಲ್ಲವೆಂಬುದಕ್ಕೇನೇ ನಿದ
ಗಳು ದೊರೆತಿವೆ.

ಕಾಲವು ಸದಾ ಬದಲಾವಣೆಗೊಳ್ಳು
ಹದು. ಒಂದು ಕಾಲಕ್ಕಾದುದು
ತ್ತೊಂದು ಕಾಲಕ್ಕಾಗುವದಿಲ್ಲ.
ಕಾಲವೂ ಶಾಶ್ವತವಾಗಿ ಬೆಳಿ
ಕೊಳ್ಳಬಲ್ಲಂತಹ ಕಾರ್ಯಕ್ರಮ
ಗಳೇ ಇಲ್ಲವೇ ಇಲ್ಲ, ಆದರೆ ಕಾಲವು
ತಪ್ಪಿನಲ್ಲ. ಕಾಲಾನುಗುಣ ಕಾರ್ಯ
ಡಿ ಸಂದು ಹೋದವನ ಆಂತಹ ಕಾ
ರ್ಯವನ್ನು ಮಾರ್ಪಟಿತ ಕಾಲವು ಎಂ
ದಿಗೂ ಉಳಿಸಿಕೊಳ್ಳುವಂತಿಲ್ಲವಾದರೂ
ದೊಪ್ಪೆ ಶಸ್ಯವಷ್ಟಾಗಿದ್ದ ಆ ಕಾರ್ಯ
ನ ಸ್ಮರಣೆಯನ್ನು ಮಾತ್ರ ಅದು ಸ
ಕಾಲ ಇಟ್ಟುರುತ್ತದೆ. ಯಾವನೋ ಒಬ್ಬ
ಶಕ್ತಿ, ಯೋಗ್ಯತೆಗಳು ಮಾತ್ರ ಶಾ
ತ—ಅವನ ಕಾರ್ಯಕಲಾಪಗಳೆಲ್ಲವೂ
ತಾತ್ಕಾಲಿಕವೆಂಬುದೇ ಇದರ ತಾ
ರ್ಯ.

ಕ್ರೈಸ್ತ ಭಕ್ತರ ಸಂಖ್ಯೆಯೇ ಇಂದು
ಸಂಚದಲ್ಲಿ ಹೆಚ್ಚಿಗೆ. "ಒಂದು ಕೆನ್ನೆಗೆ
ಹೊಡೆದವನಿಗೆ ಮತ್ತೊಂದು ಕೆನ್ನೆಯನ್ನು
ತೋರಿಸು" ಎಂದಿದ್ದ ಆ ಮಹಾತ್ಮನ
ಬೋಧನೆ ಮತ್ತು ಕಾರ್ಯ ರೀತಿಗಳನ್ನು
ಯೆತು ಕ್ರೈಸ್ತ ಭಕ್ತರೇ ಎಡರು ವಾಳ
ುಗಳಾಗಿ ನಿಂತು ಕಳದ ಮಹಾಯುದ್ಧ
ಲ್ಲಿ ಹೋರಾಡಿದ್ದರು; ಲೋಕಕ್ಕೆ ಆನಾ
ತವನ್ನು ನಿರ್ಮಿಸಿದ್ದರು. ಕ್ರೈಸ್ತ ಬೋ
ನೆಗಳನ್ನು ಮರೆತಿದ್ದರೂ ಕ್ರೈಸ್ತ ಧ್ಯಾ
ಯೆಂದೂ ಏಕಪ್ರಕಾರ ಉಳಿದುಕೊಂ
ಡಿ.

ಆ ಮೇಲಿನ ಅಹಿಂಸಾ ಪ್ರವಾದಿ ಮ
ಹಾತ್ಮಾ ಬುದ್ಧನ ಸಮಾನ ಭಕ್ತರಾದ ಜಪಾನ್-ಜೈನಗಳು ಏಳೆಂಟು ಪಂಗಡಗಳ
ವರೆಗೂ ಹೋರಾಡಿಕೊಂಡಿದ್ದುವು. ಬು
ದ್ಧ ಗುರುವಿನ ನೀತಿಸೂತ್ರಗಳು ಇಂದು
ಮೂಲೆ ಪಾಲಾಗಿರುವವಾದರೂ ಬುದ್ಧ
ಮಂದಿರಗಳು, ಬುದ್ಧಾರಾಧನೆಗಳು
ಉಳಿದುಕೊಂಡಿವೆ.

ಜಗತ್ತಿನ ಮೂರನೇ ಅಹಿಂಸಾವಾ
ರ್ಯ ಮಹಾತ್ಮ ಗಾಂಧಿಯವರ ಹೆಸರು
ಕೇಳಬಾರದ ಎಡೆಯೇ ಇಲ್ಲ. ಆದರೆ ಗಾಂ

ಎಲ್ಲಾ ವಿಧದ ಆರ್ಥಿಕ, ಸಾಮಾಜಿಕ
ಸಮಾನತೆಗಳ ಮೂಲ ಗುರು ಕಾರ್ಲ್
ಮಾರ್ಕ್ಸ್‌ನ ಮೂಲ ಸೂತ್ರಗಳಿಗೆ ಅಕ್ಷರ
ಶಃ ಅನ್ವಯಿಸುವ ಸಮತಾವಾದವಿಂದು ಎ
ಲ್ಲಿಯೂ ಇರದೆ, ಕಾಲಾನುಗುಣ ಪರಿವ
ರ್ತನೆಗಳನ್ನೊಳಗೊಂಡಿರುವ ಸಮತಾವಾದಿ
ರಾಜ್ಯಭಾರಗಳೇ ಕೆಲವೆಡೆಗಳಲ್ಲವೆ.
ಸೋವಿಯೆಟ್ ರಶ್ಯದ ಜನಕ ಲೆನಿನರು
ಯೋಜಿಸಿದ್ದ ಮಾದರಿಯ ಅಂತರ್ರಾಷ್ಟ್ರೀ
ಯ ಕಮ್ಯೂನಿಸಮ್ ಇಂದು ರಶ್ಯದಲ್ಲಿ ನಿ
ಜರೂಪದಿಂದಿರದೆ ರಾಷ್ಟ್ರೀಯತಾ ಪ್ರಾಬಲ್ಯ

ಚಿರಂಜೀವಿಯಾವುದು?

ಧೀಜಿಯ ಬೋಧನೆಗಳು, ಗಾಂಧೀ ತತ್ವ
ಗಳು, ಗಾಂಧೀ ವಿಧಾಯಕ ಕಾರ್ಯಕ್ರ
ಮಗಳು ಸತ್ಯಕ್ಕೂ ಇಂದು ಜೀ
ವಂತವಾಗಿಲ್ಲ. ಗಾಂಧೀ ಸೂತ್ರಗಳಿಗಿಂತ
ಭಿನ್ನವಾದ— ಕೆಲವು ಸಂದರ್ಭಗಳಲ್ಲಿ
ಗಾಂಧೀ ತತ್ವಗಳಿಗೆ ಬದ್ಧ ವಿರೋಧವಾದ
—ಕಾರ್ಯಕ್ರಮಗಳನ್ನು ಜಾರಿಗೆ ತರು
ವಾಗ ಕೂಡಾ ಗಾಂಧಿಜೀಯ ಹೆಸರು
ಮಾತ್ರ ಅತ್ಯಂತ ಗೌರವದಿಂದ ಪರಿಪಲ್ಲ
ಡುತ್ತಿರುವುದನ್ನು ಕಾಣುವಾಗ, ಕಾಲ
ಬಾಧೆಗೊಳಗಾಗದ ಚಿರಸ್ಥಾಯಿಯೆಂದರೆ
ವ್ಯಕ್ತಿಯೇ ಹೊರತ. ವಿಷಯವಲ್ಲವೆಂಬು
ದು ಸ್ಪಷ್ಟವಾಗುತ್ತಿದೆ.

ಇಂದು ಹಿಟ್ಲರನ ಹೆಸರು ಮತ್ತವನ
ಸ್ಪರ್ಧಾವದ ಪರಿಚಯವು ಲೋಕಕ್ಕಿರುವ
ಷ್ಟು ಆತನ ನಾಜೀ ತತ್ವಗಳ ಗುಟ್ಟು ತಿ
ಳಿದಿಲ್ಲ. ನಾಜೀಶಾಹಿಯು ಅಂದೆಯೂ ಉಳಿ
ಯದ ರೀತಿಯಲ್ಲಿ ಮತ್ತದು ಇನ್ನೆಂದಿ
ಗೂ ಮೊಳೆಯದ ವಿಧಾನದಲ್ಲಿ ನಿರ್ಮೂಲಿ
ಸಿಬಿಟ್ಟವರಿಗೆ ಹಿಟ್ಲರನ ಹೆಸರನ್ನೇ ಪ್ರ
ಪಂಚದ ಚಿತ್ತಪಟದಿಂದ ಉಜ್ಜಿ ತೆಗೆಯ
ಲು ಸಾಧ್ಯವಿಲ್ಲ. ಓರ್ವನ ಕೆಲಸವೆಲ್ಲ
ಹೋಗುವಂತಹದು— ಹೆಸರು ಮಾತ್ರ
ಉಳಿದುಕೊಳ್ಳುವಂತಹದಿದೆ.

ಖ್ಯತೆಯು ಬದಲಾವಣೆಗೊಂಡಿದೆ ಈ
ಗುರು ಮತ್ತು ನಾಯಕನ ಹೆಸರಿನಿಂದಲೇ
ಭಿನ್ನರೂಪೀ ಸಮತಾವಾದಗಳು ಇಂದು
ಪ್ರಪಂಚದಲ್ಲಿ ಕಂಡುಬರುತ್ತಿವೆ;
ಕೇಳಬರುತ್ತಿವೆ.

ಹಿಂದೂ ಪುರಾಣಪುರುಷರ ಮತ್ತು ಧರ್ಮ
ಗುರುಗಳ ಹೆಸರಿನಿಂದ, ಅವರ ಬೋಧನೆ
ಗಳಿಗೆ ವ್ಯತಿರಿಕ್ತವಾದ ಮತ್ತು ಪೂರ್ಣವಿ
ರೋಧವಾದ ಆಚರಣೆಗಳು ಈ ದಿನ ಜಾತಿ
ಯಲ್ಲಿರುವದನ್ನೂ ಮೂಲ ಕ್ರಮನಿಯ
ಮಗಳು ಮರೆತೇಹೋಗಿರುವುದನ್ನೂ ನೋ
ಡಬಹುದು.

ಎನ್ನೋ ಊರು, ಸ್ಥಳ, ಮತ್ತು ಮ
ನೆಗಳಿಗೆ ಕೂಡಾ ಅವುಗಳ ಮೂಲಪುರು
ಷಂ ಹೆಸರುಗಳೇ ಉಳಿದುಕೊಂಡು ಸದಾ
ಉಚ್ಚರಿಸಲ್ಪಡುತ್ತಿರುವವಾದರೂ ಅವರ
ವೈಶಿಷ್ಟ್ಯವಾವುದೂ ಈಗ ಉಳಿದುಕೊಂ
ಡಿಲ್ಲವಾದ್ದರಿಂದ ಹೆಸರಿನ ಮೂಲವಾವು
ದೆಂಬುದೇ ಗೊತ್ತಾಗದಂತಾಗಿದೆ. ತುದಿ
ಗೊಂದೆಯಂತಿರುವ ಹೆಸರುಮಾತ್ರ ಉಳಿ
ದುಕೊಂಡು ಆದರೆ ಕಾಂಡಭಾಗವಾದ ಕಾ
ರ್ಯವೆಲ್ಲವೂ ಕಾಲಪ್ರವಾಹದಲ್ಲಿ ಕ್ರಮಶಃ
ಕೊಳೆತೋ ಸೆಳೆಯಲ್ಪಟ್ಟೋ ಹೋಗಿಬಿ
ಡುತ್ತವೆ.

ಯಾವುದೇ ಸಂಸ್ಥೆ, ಶಕ್ತಿ, ಅಥವಾ ವ್ಯ
ಕ್ತಿಯಾದರೂ ಕಾಲಾನುಗುಣವಾಗಿ ತಮ್ಮ
ಧೋರಣೆ ಹಾಗೂ ಕಾರ್ಯಕ್ರಮಗಳನ್ನು
ಬದಲಾಯಿಸಿಕೊಳ್ಳಲೇ ಬೇಕಾಗುತ್ತದೆ;
ಬದಲಾಯಿಸುವದಿದೆ. ಅಚ್ಚರ ಘಟನೆಗಳ
ಈ ಸ್ಥಿರ ಪ್ರಪಂಚದಲ್ಲಿ ಸರ್ವಕಾಲಕ್ಕೂ
ಅನ್ವಯಿಸಬಲ್ಲ ವಿಧಾನವೆಂಬುದಿಲ್ಲ. ಕಾಲ
ವು ಬದಲಾವಣೆ ತೀಲುತ್ತಿದೆ.

ಕಾಲ ಮತ್ತು ಪ್ರಪಂಚದಲ್ಲಿ ಎಂತಹ
ಬದಲಾವಣೆ ಮತ್ತೆ ಅಸ್ಥಿರತೆ ಕೋರಿಬಂ
ದರೂ, ಭಿನ್ನ ಹಾಗೂ ವಿವಿಧ
ವರ್ಣಗಳಿಂದ ಪ್ರಕಾಶಿಸುತ್ತಾ ಅಂತ್ಯರಹಿ
ತವಾಗಿಯೇ ಪ್ರಪಂಚವಿದೆ. ಮೇರೆರಹಿತ
ಕಾಲಚಕ್ರ ಉರುಳುತ್ತಲೇ ಇದೆ.
ಅದೇ ರೀತಿ ಕಾರ್ಯಕಲಾಪಗಳು
ಅಸ್ಥಿರವಿದ್ದು ಬದಲಾಗುತ್ತಾ ಹೋ
ಗತಿದ್ದರೂ ಅವುಗಳೊಳಗಿನಸ್ಥ ಸಾರ
ವಾಗಿರುವ ಸತ್ಯ, ನ್ಯಾಯ, ಜ್ಞಾನ, ಶಕ್ತಿ
ಗಳು ಚಿರಂಜೀವಿಗಳೆವೆ. ಅದ್ದರಿಂದಲೆ ಈ
ಯೋಗ್ಯತೆಗಳಿದ್ದವರು ಚಿರಸ್ಮರಣೀಯರಾ
ಗುತ್ತಾರೆ.

ಈ ಮೂಲವನ್ನರಿಯದೆ ತಾತ್ಕಾಲಿಕ
ಆಗುಹೋಗುಗಳೇ ಸರ್ವಸ್ವವೆಂಬಂತೆ, ಅ
ವ್ಯಾಗಳಿಗೇನೇ ಪೂರ್ಣ ಪ್ರಾಮುಖ್ಯತೆಯ
ನ್ನು ಕೊಟ್ಟು ಸ್ವಾರ್ಥ, ದುರಭಿಲಾಷೆ,
ಅನ್ಯಾಯಾಕ್ರಮಣ ಬುದ್ಧಿ ಮುಂತಾದು
ವುಗಳನ್ನು ತೋರಿಸುವವರು, ಈ ಅಶಾ
ಶ್ವತ ಕಾರ್ಯಗಳೊಂದಿಗೆ ತಾವೂ ನಿ
ರ್ಮೂಲವಾಗುತ್ತಾರೆ. ಪ್ರಾಪಂಚಿಕ ಬಾ
ಳುವೆಯ ಮೇಲು—ಕೀಳು ವ್ಯತ್ಯಾಸವಿರು
ವುದು ಈ ಅಸ್ತಿವಾರದ ಮೇಲೆಯೇ.

ಕಾಲ ಮತ್ತು ಪ್ರಪಂಚದಷ್ಟೇ ಶಾಶ್ವ
ತವಾಗಿ, ಸದಾಕಾಲದ ತಿರುಳಾಗಿ ಉಳಿದು
ಕೊಳ್ಳಬಲ್ಲ ಸತ್ಯ, ನ್ಯಾಯ, ಶಕ್ತಿ, ಯೋ
ಗ್ಯತೆಗಳ ಪಾಲನೆ ಮತ್ತವುಗಳ ಭಕ್ತನಾಗಿ
ಪ್ರಥಮ ಲಕ್ಷ್ಯ ಕೊಡಬೇಕಾದುದೇ
ನಿಜ ಮಾನವನ ಕರ್ತವ್ಯ, ಅಂದಭವಿಸುವ
ರಾಜ್ಯವೇ 'ರಾಮರಾಜ್ಯ' 'ಸತ್ಯಲೋಕ'
'ಭೂಸ್ವರ್ಗ'.

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connections, please consult us.

ಕೊರಿಯಾ ಸಂಬಂಧ ನೆಹರೂ ಸಂದೇಶ

ಕೊರಿಯಾ ಯುದ್ಧದ ಶಾಂತ ತೀರ್ಮಾನಕ್ಕಾಗಿ ಭಾರತದ ಪ್ರಧಾನಿ ಪಂಡಿತ ನೆಹರುಗಳು ರಶ್ಯದ ಪ್ರಧಾನಿ ಮಾರ್ಷಲ್ ಸ್ಟಾಲಿನರಿಗೆ ಮತ್ತು ಅಮೆರಿಕದ ಗೃಹಕಾರ್ಯದರ್ಶಿ ಮಿ. ಡೀನ್ ಆಚೆಸನ್ ಹಾಗೂ ಬ್ರಿಟನಿನ ಪ್ರಧಾನಿ ಮಿ. ಆಟ್ಲಿಯವರಿಗೆ ಕಳುಹಿದ್ದ ಸಂದೇಶವು, ಜಗಳವಿರೋಧಿ ನಿಷ್ಪಕ್ಷಪಾತಿಯೊಬ್ಬನ ಸಂಧಾನ ಸೂಜನೆಯಾಗಿದ್ದರೆ, ಅದಕ್ಕೆ ಕೂಡಲೇ ಒಪ್ಪಿಗೆ ಕೊಟ್ಟ ರಶ್ಯವು ಸಂಧಾನಪ್ರೇಮಿಯಾಗಿಯೂ, ಆಕ್ಸ್‌ಫೀವಗಳನ್ನು ಮುಂದೊಡ್ಡಿದ ಅಮೆರಿಕ, ಬ್ರಿಟನುಗಳು ಜಗಳಗಂಟೇ ಸ್ವಭಾವದವುಗಳಾಗಿಯೂ ಲೋಕಕ್ಕೆ ತೋರಿಬಂದಿವೆ. ಈ ಸೂಚನೆ ಮತ್ತದಕ್ಕೆ ಪ್ರತ್ಯುತ್ತರಗಳನ್ನು ಕೊಟ್ಟು ಪಡೆದ ಮೂರು ಕಡೆಯ ವರೂ ಇಂದಿನ ಪ್ರಪಂಚದ ಮೂರು ವಾಲಯಗಳ ಯಥಾರ್ಥ ಪ್ರತಿನಿಧಿಗಳಿದ್ದು ಈ ತ್ರಿಕೋನದ ಯಾವ ಗೆರೆ ಸೇಗಿದೆ ಎಂಬ ಸ್ಪಷ್ಟ ಪರಿಚಯವು ಈ ಬಾರಿ ಆಯಿತೆನ್ನಬೇಕು. ನೆಹರೂ ಸಂದೇಶ ವ್ಯವಹಾರ ಮತ್ತದಕ್ಕೆ ಬಂದ ಉತ್ತರ ಹಾಗೂ ಪ್ರತಿಕ್ರಿಯೆಗಳ ಸಾರ ಇಲ್ಲಿದೆ.

ನೆಹರೂ ಸಂದೇಶ

ಕೊರಿಯಾ ಯುದ್ಧ ಸಂಬಂಧವಾಗಿ ರಶ್ಯಾ, ಅಮೆರಿಕಗಳೆರಡಕ್ಕೂ ಪಂಡಿತ ನೆಹರು ಒಂದೇ ಒಕ್ಕಣೆಯ ಪತ್ರ ರವಾನಿಸಿದ್ದರು. ಬ್ರಿಟನು, ಭಾರತದಂತೆಯೇ ಕಾಮನ್‌ವೆಲ್ತ್ ರಾಷ್ಟ್ರಕೂಟದ ಸದಸ್ಯ ರಾಷ್ಟ್ರವಿರುವುದರಿಂದ ಪಂಡಿತ ನೆಹರುಗಳು ಮಿ. ಆಟ್ಲಿಗಳೊಡನೆ ತಪ್ಪೀ ಸೂಚನೆಯ ಕುರಿತು ಮುಂದಾಗಿ ಆಲೋಚನಾ ಬಳಕೆ ನಡೆಸಿದ್ದರಲ್ಲದೆ, ಸ್ಪಷ್ಟ ಸೂಚನೆಯನ್ನೂ ಕಳುಹಿದ್ದರು. ವಾಷಿಂಗ್‌ಟನ್ನಿಗೆ ಜುಲಾಯಿ ತಾ. 12ರಲ್ಲೂ ಮೋಸ್ಕೊವಿಗೆ ಜುಲಾಯಿ ತಾ. 13ರಲ್ಲೂ ತಲ್ಪಿದ ನೆಹರೂ ಸಂದೇಶದ ರೂಪ ಹೀಗಿದೆ:–

"ತಮ್ಮ ವಿದೇಶ ಸಂಬಂಧ ವ್ಯವಹಾರ ಮಂತ್ರಿಯೊಡನೆ ತಾನು ನಡೆಸಿದ್ದ ಮಾತುಕತೆಗಳಲ್ಲಿ ಕೊರಿಯಾ ಘರ್ಷಣೆಯ ಕುರಿತು ಭಾರತದ ಧೋರಣೆಯೇನೆಂಬುದನ್ನು ನಮ್ಮ ರಾಯಭಾರಿಯು ವಿವರಿಸಿದ್ದಾರೆ.

ಘರ್ಷಣೆಯನ್ನು ಸ್ಥಳೀಯವಾಗಿಡುವುದು ಮತ್ತು ಜೈನೀ ಜನತಾ ಸರಕಾರದ ಪೂರ್ವಪ್ರತಿನಿಧಿಯು ತನ್ನ ಸ್ಥಾನಕ್ಕೆ ಬರುವಂತೆ ಮತ್ತು, ರಶ್ಯವು ಪಿಡಿದೊಳಗೆ ಹಿಂತಿರುಗುವಂತೆ ಭದ್ರತಾ ಕೌನ್ಸಿಲಿನ ಇಂದಿನ ಬಿಕ್ಕಟ್ಟನ್ನು ನಿವಾರಿಸಿ ಆ ಮೂಲಕ ಪೌರ್ವ ಶಾಂತ ತೀರ್ಮಾನವೊಂದಕ್ಕೆ ಅನುವು ಮಾಡಿಕೊಡುವುದು ಮತ್ತು ಆ ಕೌನ್ಸಿಲ್ ಚೌಕಟ್ಟಿನೊಳಗಡೆ ಅಥವಾ ಅನಧಿಕಾರೀ ಸಂಬಂಧದ ಮೂಲಕ ಕೌನ್ಸಿಲಿನ ಹೊರಗಡೆ ರಶ್ಯ, ಅಮೆರಿಕ, ಬ್ರಿಟನುಗಳು ಇತರ ಶಾಂತಿಯುತ ರಾಷ್ಟ್ರಗಳ ಸಹಾಯ ಮತ್ತು ಸಹಕಾರದೊಂದಿಗೆ ಘರ್ಷಣೆಯ ನಿವಾರಣೆ ಮತ್ತು ಕೊರಿಯಾ ಸಮಸ್ಯೆಯ ಕೊನೆಯ ತೀರ್ಮಾನದ ಅನ್ವೇಷಣೆಯೊಂದನ್ನು ಕಂಡುಕೊಳ್ಳುವಂತೆ ಘಾಡುವದು–ಇದೇ ಭಾರತದ ಧ್ಯೇಯವಾಗಿದೆ. ಶಾಂತಿಯನ್ನು ಎತ್ತಿ ಹಿಡಿಯಬೇಕು. ಮತ್ತೊಮ್ಮೂಲಕ ಸಂಯುಕ್ತ ರಾಷ್ಟ್ರ ಕೂಟದ ಐಕ್ಯತಾ ಸ್ವರೂಪವನ್ನು ಉಳಿಸಿಕೊಳ್ಳಬೇಕು ಎಂಬ ಕುರಿತು ಯುವರ್ ಎಕ್ಸ್‌ಲೆನ್ಸಿಗಳಿಗೆ ವೈಯಕ್ತಿಕವಾಗಿ ಬಿಂದ ನೋಟ ಪೂರ್ಣವಿಶ್ವಾಸವಿದ್ದು, ಮಾನವನ ಜನ್ಮಾಂಗದ ಕಲ್ಯಾಣವೇ ಅವಲಂಬಿಸಿ ನಿಂತಿರುವ ಸಮಸ್ಯೆ ಗುರಿಯ ಸಿದ್ಧಿಗಾಗಿ ತ್ರಾ ಪ್ರ ಕ ನ್ನು ಶೀ ನ ವಾ ದ ಅಧಿಕಾರ ಮತ್ತು ವರ್ಚಸ್ಸನ್ನು ಉಪಯೋಗಿಸಬೇಕೆಂದು ತಮ್ಮನ್ನು ಪಾಪಗಿಯಾಗಿ ಕೇಳಿಕೊಳ್ಳುವ ಸಾಹಸವನ್ನು ನಾನಿಲ್ಲಿ ಕೈಕೊಂಡಿದ್ದೇನೆ. ಯುವರ್ ಎಕ್ಸ್‌ಲೆನ್ಸಿಗಳೇ, ನನ್ನ ವಿಶೇಷ ಗೌರವಾರ್ಪಣೆಗಳು".

ಸ್ಟಾಲಿನರ ಉತ್ತರ

ನೆಹರೂ ಸಂದೇಶ ಮುಟ್ಟಿದ ಎರಡನೇ ದಿನವೇ ಸ್ಟಾಲಿನರು ಕೊಟ್ಟ ಉತ್ತರದ ಸಾರಾಂಶ:–

"ತಮ್ಮ ಶಾಂತಿಯುತ ಕಾರ್ಯ ನೇತೃತ್ವವನ್ನು ನಾನು ಸ್ವಾಗತಿಸುತ್ತೇನೆ. ಜೈನಾ ಜನತಾ ಸರಕಾರದ ಪ್ರತಿನಿಧಿ ಸಮೇತ ಐದು ಮಹಾರಾಷ್ಟ್ರಗಳ ಅನಿವಾರ್ಯ ಸಹಭಾಗಿತ್ವವುಳ್ಳ ಭದ್ರತಾ ಕೌನ್ಸಿಲಿನ ಮೂಲಕ ಕೊರಿಯಾ ಪ್ರಶ್ನೆಯ ಶಾಂತ ವ್ಯವಸ್ಥಾ ವಿಧಾನವು ಕ್ಷಿಪ್ರದಲ್ಲಾಗಬೇಕೆಂಬ ತಮ್ಮ ಅಭಿಪ್ರಾಯದೊಂದಿಗೆ ನಾನೂ ಸಹವರ್ತಿಯಾಗಿದ್ದೇನೆ. ಕೊರಿಯಾ ಪ್ರಶ್ನೆಯ ಶೀಘ್ರ ತೀರ್ಮಾನಕ್ಕಾಗಿ ಕೊರಿಯಾ ಜನತೆಯ ಪ್ರತಿನಿಧಿಗಳ ಹೇಳಿಕೆಗಳನ್ನು ಭದ್ರತಾ ಕೌನ್ಸಿಲಿನಲ್ಲಿ ಕೇಳಿಕೊಳ್ಳುವದು ಹಿತವೆಂದು ನನ್ನ ನಂಬುಗೆ. ಗೌರವಾರ್ಪಣೆಗಳು, ಜೆ. ವಿ. ಸ್ಟಾಲಿನ್, ಸೋವಿಯೆಟ್ ಯೂನಿಯನಿನ ಪ್ರಧಾನ ಮಂತ್ರಿ".

ಸ್ಟಾಲಿನರ ಮೇಲಿನ ಪತ್ರವು ಕೈಸೇರಿದೊಡನೆ ಜುಲಾಯಿ ತಾ. 16ರಲ್ಲಿ ಪಂಡಿತ ನೆಹರುಗಳು ಸ್ಟಾಲಿನರಿಗೆ ತಿಳಿಸಿದರು: "ಯುವರ್ ಎಕ್ಸೆಲ್ಲೆನ್ಸಿಗಳ ತ್ವರ್ಯ ಹಾಗೂ ಪ್ರೋತ್ಸಾಹನೀಯ ಉತ್ತರಕ್ಕಾಗಿ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ನಾನೀಗಲೇ ಸಂಬಂಧಪಟ್ಟ ಇತರ ಸರಕಾರಗಳೊಡನೆ ಈ ಸಂಬಂಧದ ವ್ಯವಹಾರದಲ್ಲಿದ್ದು ತಮಗೆ ಆ ಕುರಿತು ಕ್ಷಿಪ್ರದಲ್ಲೇ ಇನ್ನೊಮ್ಮೆ ತಿಳಿಸುವೆನೆಂಬ ಆಯಿಂದಿದ್ದೇನೆ".

ಆಚೆಸನರ ಉತ್ತರ

ಜುಲಾಯಿ ತಾ. 12ರ ಪಂಡಿತ ನೆಹರುಗಳ ಪತ್ರಕ್ಕೆ ತಾ. 18ರಲ್ಲಿ ಅಮೆರಿಕ ಗೃಹಕಾರ್ಯದರ್ಶಿಯರು ರವಾನಿಸಿದ ಉತ್ತರದ ಸಾರ:–

"ನನ್ನ ಪ್ರೀತಿಯ ಶ್ರೀಯುತ ಪ್ರಧಾನ ಮಂತ್ರಿಗಳೇ, ನಾನು ಜುಲಾಯಿ ತಾ. 13ರಲ್ಲಿ ತಮ್ಮ ಘನ ರಾಯಭಾರಿಯ ಮೂಲಕ ಪಡೆದ ಆ ಸಂದೇಶವನ್ನು ಓದಿತ್ತು. ಆನಂತರ ತಮ್ಮ ಅಂತಹದೇ ಪತ್ರವು ಪ್ರಧಾನಿ ಸ್ಟಾಲಿನರಿಂದ ಬಂದಿದ್ದು, ತಾ. ತಾ. 17ರಲ್ಲಿ ಇತ್ತ ವರ್ಗಾಯಿಸಿದ್ದ ಉತ್ತರವನ್ನು ರವಾನಿಸುವುದರಲ್ಲಿ ಯುವರ್ ಎಕ್ಸೆಲ್ಲೆನ್ಸಿಗಳಿಗೆ ಪ್ರೇರಣೆಯಾಗಿದ್ದ ಉಚ್ಚ ಉದ್ದೇಶವನ್ನು ನಾನು ಗಾಢವಾಗಿ ಗೌರವಿಸುತ್ತೇನೆ. ಆಧ್ಯಕ್ಷರು ಮತ್ತು ನಾನು ಈ ಸೂಚನೆಗಳನ್ನು ಅತಿ ಹೆಚ್ಚಿನ ಯೋಜನೆಯೊಂದಿಗೆ ಪರಿಶೀಲಿಸಿದ್ದೇವೆ.

ಲೋಕ ಶಾಂತಿಯ ರಕ್ಷಣೆಗೆ ಸಹಾಯವಾಗಬೇಕೆಂಬುದು ಅಮೆರಿಕದ ವಿದೇಶ ಸಂಬಂಧ ಧೋರಣೆಯ ಮುಖ್ಯ ಮೂಲಭೂತ ಉದ್ದೇಶಗಳಲ್ಲೊಂದು. ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ರಕ್ಷಣೆ ಹಾಗೂ ಮರುಸಂಸ್ಥಾಪನೆ ಮಾಡಬಲ್ಲ ಅತ್ಯಂತ ಪರಿಣಾಮಕಾರೀ ಕ್ರಮವೆನ್ನುವುದು ಉಪಕರಣವೆಂದರೆ ಸಂಯುಕ್ತ ರಾಷ್ಟ್ರ ಕೂಟವೆಂಬ ದೃಢಾಭಿಪ್ರಾಯವು ಅಮೆರಿಕ ಸರಕಾರದ್ದಿದೆ. ಆದ್ದರಿಂದ ಸಂಯುಕ್ತ ರಾಷ್ಟ್ರ ಕೂಟವನ್ನು ರಕ್ಷಿಸಿ ಕೊಳ್ಳುವದಕ್ಕೆ ಮತ್ತು ಬಲಪಡಿಸುವುದಕ್ಕೆ ನ್ಯಾಯಬದ್ಧವಾದ ಹಾಗೂ ಸಾಧ್ಯವಿರುವ ಎಲ್ಲವನ್ನೂ ಮಾಡಬೇಕೆಂಬ ಆತುರವು ಅಮೆರಿಕದ್ದಿದೆ. ಕೊರಿಯದ ಮೇಲಿನ ಸಶಸ್ತ್ರ ಧಾಳಿಯನ್ನು ಹಿಮ್ಮೆಟ್ಟಿಸಿ, ಆ ಕ್ಷೇತ್ರದಲ್ಲಿ ಅಂತರ್‌ರಾಷ್ಟ್ರೀಯ ಶಾಂತಿ ವನ್ನು ಭದ್ರತೆಯನ್ನು ಸ್ಥಾಪಿಸಬೇಕೆಂಬ ಸಂಯುಕ್ತ ರಾಷ್ಟ್ರ ಕೂಟದ ನಿರ್ಧಾರವನ್ನು ನಮಗೆ ಸಾಧ್ಯವಿರುವ ಸರ್ವ ವಿಧಾನಗಳಿಂದ ಸಮರ್ಥಿಸಬೇಕೆಂಬುದೇ ಕೊರಿಯದ ಸಂಬಂಧದಲ್ಲಿ ಅಮೆರಿಕದ ಸರಕಾರ ಮತ್ತು ಜನತೆ ಕಟ್ಟಿಕೊಂಡಿರುವ ಉದ್ದೇಶ. ಸಂಯುಕ್ತ ರಾಷ್ಟ್ರಕೂಟದ ಭದ್ರತಾ ಕೌನ್ಸಿಲಿನ ನಿರ್ಣಯಕ್ಕನುಸಾರವಾಗಿ ಆ ಕ್ರಮಣವನ್ನು ಕೊರಿಯದ ಸರಹದ್ದು ಮೀರಿದಂತೆ ಪ್ರತಿಬಂಧಿಸುವ ಮತ್ತು ಅದನ್ನು ಅಲ್ಲಿಯೇ ಮುಗಿಸಿಬಿಡುವ ಅಪೇಕ್ಷೆ ನಮ್ಮದಿದೆ.

ಈ ಆಕ್ರಮಣ ಮತ್ತು ಅದರೊಡನೆ ಸಂಯುಕ್ತರಾಷ್ಟ್ರಕೂಟವು ಜಯಶೀಲವಾಗಿ ವ್ಯವಹರಿಸಬೇಕಾದ ಸಂಗತಿಗಳಲ್ಲಿ ಅಪಾಯಕವಾಗಿರುವ ಪ್ರಶ್ನೆಗಳಲ್ಲಿ ಅಖಿಲ ಜಗತ್ತಿನ ಕಾನೂನು ನಿಷ್ಠ ಸರಕಾರಗಳ ಮತ್ತು ಜನತೆಯ ಪ್ರಾಮುಖ್ಯ ಪಂಥವಡಗಿಕೊಂಡಿದೆ, ಎಂಬ ಸಂಗತಿಯು ನಮಗೆ ಗಾಢವಾಗಿ ಮನವರಿಕೆಯಾಗಿದೆ ಸಂಯುಕ್ತ

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು, ದ.ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಜಾನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಆಸ್ಲು-ವ-ಬದ್ಧ ಯಾವುದನ್ನೂ ಈ ತನಕವು ಕೊಡದೆ ಇರುವುದರಿಂದಲೂ, ಕೆಲವರು ಮೃರಪಟ್ಟಿರುವರೆಂದು ನೋಟೀಸು ವಾಪಸು ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟಿರುವ ಚಿನ್ನಾಭರಣಗಳನ್ನು ಇದೇ ಆಗೋಸ್ತು ತಿಂಗಳ ತಾರೀಕು 12ನೇ ರನಿವಾರ ಮಧ್ಯಾಹ್ನ ಗಂಟೆ 2 ಕ್ಕೆ ಯೂ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಬೇಂಕಿನ ವಹಿವಾಟಲ್ಲಿ ಹರಾಜು ನೂಡಲಾಗುವುದು. ತಿಳಿದಿರಲಿ.

ಸಾಲದ ಜಂಜ್ಯಾ ನಂಬ್ರ	ಹೆಸರು ಮತ್ತು ವಿಳಾಸ.	ಅಸಲು ಮೊಬಲಗು ರೂ.	ಆ.	ಪೈ.
732/45–6	ದಾನೆ ರಾಮಯ್ಯಕೃಷ್ಣ ಸೇರುಗಾರ್, ವೆಂಕಟ್ರಮಣ ಸೇರುಗಾರರ ಮಗ, ಬಾಡಬೈಂದೂರು ಗ್ರಾಮ, ಬೈಂದೂರು	7	0	0
736/45–6	ಬಿ. ರಾಮಪ್ಪಯ್ಯ, ನಾಗಮ್ಮನ ಮಗ, ಬಂಕೇಶ್ವರ, ಬೈಂದೂರು.	20	0	0
817/45–6	ಶ್ರೀಮತಿ ಕಲ್ಯಾಣಿ ಅಮ್ಮ, ನಾಗಮ್ಮನ ಮಗಳು, ಸೊನೆಗಾರ ಕೇರಿ, ಬೈಂದೂರು.	0	0	0
534/46–7	ಹೊನ್ನಯ್ಯನ ಮಲ್ಲಯ್ಯ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಕೋಟೆಬಾಗಿಲು, ಪಡುವರಿ.	8	0	0
579/46–7	ಪಿ. ಎ. ನಾರಾಯಣ ಶೆಟ್ಟಿ, ಲಿಂಗ್ಯ ಶೆಟ್ಟಿರ ಅಳಿಯ, ಅಂತಯ್ಯ ಶೆಟ್ಟರ ಮನೆ, ಪಡುವರಿ.	42	0	0
662/46–7	ವಾನಯ್ಯನ ವೆಂಕಟ್ರಮಣ ಸೇರುಗಾರ, ಶೇಷಯ್ಯ ಸೇರುಗಾರರ ಮಗ, ಕೋಟೆಬಾಗಿಲು, ಪಡುವರಿ.	8	0	0
375/47–8	ಜನಾಬ್ ಸಿಂಗೇರಿ ಅಲ್ಲಿ ಸಾಹೇಬ್, ಮಹಮ್ಮದ್ ಮಿರಾಸಾಹೇಬರ ಮಗ, ಮುಸಲ್ಮಾನಕೇರಿ, ಬೈಂದೂರು.	22	0	0
777/47–8	ಕೃಷ್ಣಪ್ಪ ಶೆಟ್ಟಿ, ಮಂಜಯ್ಯ ಶೆಟ್ಟಿರ ಅಳಿಯ, ಅರಕಲ್ಲುಮನೆ, ಉಪ್ಪುಂದ.	65	0	0
859/47–8	ಹನುಮಂತ ಸೇಟ್, ನಾರಾಯಣ ಸೇಟರ ಮಗ, ದೊಂಬೆ, ಪಡುವರಿ.	7	0	0
893/47–8	ವೆಂಕ್ಟ ಮೊಗೇರ, ಹೊಳಿನ ಹಿತ್ಲು ಸುಬ್ಬನ ಅಳಿಯ, ಪಡುವರಿ.	20	0	0
1152/47–8	ವಾಮಯ್ಯನ ವೆಂಕಟ್ರಮಣ ಸೇರುಗಾರ, ಶೇಷಯ್ಯ ಸೇರುಗಾರರ ಮಗ, ಕೋಟೆಬಾಗಿಲು, ಪಡುವರಿ.	15	0	0
336/47–8	ಕೊಕ್ಕನ ತಿಮ್ಮಪ್ಪ ಸೇರುಗಾರ, ಪರಮೇಶ್ವರ ಸೇರುಗಾರರ ಮಗ, ಮುಯ್ಯಾಡಿ, ಬೈಂದೂರು.	20	0	0
790/49–9	ಕೊಕ್ಕನ ತಿಮ್ಮಪ್ಪ ಸೇರುಗಾರ, ಪರಮೇಶ್ವರ ಸೇರುಗಾರರ ಮಗ, ಮುಯ್ಯಾಡಿ, ಬೈಂದೂರು.	40	0	0
559/48–9	ಮುದೂರು, ಬಿಲ್ಲವ ಸಂಕಯ್ಯನ ಅಳಿಯ, ದೊಡ್ಡ ಮನೆ, ಉಪ್ಪುಂದ.	50	0	0
1153/48–9	ಕೊಕ್ಕನ ತಿಮ್ಮಪ್ಪ ಸೇರುಗಾರ, ಪರಮೇಶ್ವರ ಸೇರುಗಾರರ ಮಗ, ಮುಯ್ಯಾಡಿ, ಬೈಂದೂರು.	12	0	0

ಬೈಂದೂರು, 19-7-1950

ಎಚ್. ರಾಜೀವ ಶೆಟ್ಟಿ, ಏಜಂಟ್.

ಸ್ಟಾಲಿನರ ಸ್ವೀಕಾರ ಅಮೆರಿಕದ ನಕಾರ

ರಾಷ್ಟ್ರಕೂಟದ ಸಣ್ಣ ಅಲ್ಪಸಂಖ್ಯಾಕ ಪಂಗಡವೊಂದು ಘೋಷಣಾಪತ್ರವನ್ನು ತಮ್ಮ ಮೇಲೆ ಬೀಳುವ ಕರ್ತವ್ಯಭಾರ ನಿರ್ವಹಣಕ್ಕೆ ತಪ್ಪದಿರುತ್ತಿದ್ದರೆ, ಮತ್ತು ಆಕ್ರಮಣಗಳನ್ನು ತಡೆಗಟ್ಟಲು ಮತ್ತು ನಿಲ್ಲಿಸಲು ತಮ್ಮ ಅಧಿಕಾರ ಹಾಗೂ ವರ್ಚಸ್ಸನ್ನು ವಿನಿಯೋಗಿಸಲು ನಿರಾಕರಿಸದಿರುತ್ತಿದ್ದರೆ ಶಾಂತಿಯ ಪುನರುತ್ಥಾನವೆಂದೋ ಆಗಿ ಹೋಗುತ್ತಿತ್ತು ಮತ್ತು ಸಂಯುಕ್ತರಾಷ್ಟ್ರ ಕೂಟದ ಪರವಾಗಿ ಹೋರಾಡುತ್ತಿರುವವರ ಪ್ರಾಣಗಳುಳಿಯುತ್ತಿದ್ದುವು ಎಂಬ ಯಾತನಾತ್ಮಕ ತಿಳಿವು ನಮಗುಂಟಾಗುತ್ತಿದೆ. ಅವು ತಮ್ಮ ಹಕ್ಕು ಬಾಧ್ಯತೆಗಳನ್ನು ಅಂಗೀಕರಿಸಿಕೊಂಡರೆ ಮತ್ತಾ ಕರ್ತವ್ಯಾನುಸಾರವಾಗಿ ತಮ್ಮ ಅಧಿಕಾರ ಹಾಗೂ ವರ್ಚಸ್ಸನ್ನು ಉಪಯೋಗಿಸಿದರೆ ನಾಳೆಯೇ ಶಾಂತಿಯ ಮರುಸ್ಥಾಪನೆಯಾಗುವುದು.

ಶಾಂತಿ ಭಂಗ ಅಥವಾ ಆಕ್ರಮಣ ವರ್ತನೆಯೆಂಬುದು ಸಂಯುಕ್ತರಾಷ್ಟ್ರ ಕೂಟವು ಇದಿರಿಸಬೇಕಾಗಿರುವ ಅತ್ಯಂತ ಗಂಭೀರ ವಿಷಯ. ಉತ್ತರ ಕೊರಿಯದ ಆಕ್ರಮಣ ನಿವಾರಣೆಯು, ಸಂಯುಕ್ತ ರಾಷ್ಟ್ರ ಕೂಟದ ಮುಂದೆ ಜೀವಂತವಿರುವ ಇತರ ಪ್ರಶ್ನೆಗಳ ತೀರ್ಮಾನಕ್ಕೆ ಯಾವ ವಿಧದಿಂದಾದರೂ ಸಂಬಂಧಪಡಬಲ್ಲುದೆಂದು ನಾವು ನೆನಸುವುದಿಲ್ಲ.

ಸ್ವತಃ ಸೋವಿಯೆಟ್ ಸರಕಾರದ ನಿರ್ಧಾರ ವಿನಹ, ಸಂಯುಕ್ತ ರಾಷ್ಟ್ರಸಂಘದ ಕಾರ್ಯದಲ್ಲಿ ಸೋವಿಯೆಟ್ ರಶ್ಯವು ಭಾಗಿಯಾಗುವರೆ ಯಾವಕಾಲದಲ್ಲೂ ಯಾವುದೊಂದು ಆತಂಕವೂ ಇದ್ದಿಲ್ಲ. ಶಾಂತಿ ರಕ್ಷಣೆಗಾಗಿ ಗಂಭೀರಕಾರ್ಯ ಮಾಡುವ ಯೋಗ್ಯತೆ ಮತ್ತು ಮನಸ್ಸು ತನಗಿದೆ ಎಂಬುದನ್ನು ಭದ್ರತಾ ಕೌನ್ಸಿಲು ಪ್ರದರ್ಶಿಸಿದೆ.

ನಮ್ಮ ಅಭಿಪ್ರಾಯ ಪ್ರಕಾರ, ಸಂಯುಕ್ತರಾಷ್ಟ್ರ ಸಂಘದ ಜೈನಾದ ಪಾಲಿನ ಸ್ಥಾನಕ್ಕಾಗಿ ಸ್ಪರ್ಧಿಸುತ್ತಿರುವ ವಾದಿ ಪ್ರತಿವಾದಿ ಸರಕಾರಗಳೊಳಗಿನ ನಿರ್ಣಯವು ಸ್ವತಃ ಸಂಯುಕ್ತ ರಾಷ್ಟ್ರ ಸಂಘದ ಯೋಗ್ಯತಾನುಸಾರ ಆಕ್ಷೇಯೇ ಆಗತಕ್ಕಂತಹುದಿದೆ. ಪ್ರಸ್ತುತ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯರೊಳಗೇನೇ ವಿಶೇಷ ಭಿನ್ನಾಭಿಪ್ರಾಯವಿರುವ ಪ್ರಶ್ನೆಯಿದು. ಆ ಸಂಬಂಧದ ನಿರ್ಣಯವು ಬೇಕಾಯಿದೇಶಿದ ಆಕ್ರಮಣದ ಮೂಲಕ ಅಥವಾ ಸಂಯುಕ್ತ ರಾಷ್ಟ್ರ ಸಂಘದ ಮೇಲೆ ಬೇರಾವುದೇ ರೀತಿಯ ಒತ್ತಾಯ ಅಥವಾ ಪೀಡೆ ಹೇರುವ ಮೂಲಕ ಅಜ್ಞಾಪಿಸಲ್ಪಡಬಾರದೆಂಬುದನ್ನು ತಾವು ಒಪ್ಪುವಿರೆಂಬುದನ್ನು ನಾನು ಬಲ್ಲೆ.

ಭದ್ರತಾ ಕೌನ್ಸಿಲಿನ ತಾರತಮ್ಯಗಳು ಗಣವಾಗಿ ಕೊರಿಯದಲ್ಲಿ ಕ್ಷಿಪ್ರ ಶಾಂತಿ ಸ್ಥಾಪನೆ ಮಾಡಬೇಕೆಂಬ ನಮ್ಮ ಆಗ್ರಹದ ಬಯಕೆಯೊಂದಿಗೆ ಯುವರ್ ಎಕ್ಸೆಲ್ಲೆನ್ಸಿಗಳು ಸಹಭಾಗಿಗಳಾಗಿರುವಿರೆಂಬುದು ನನಗೆ ಗೊತ್ತಿದೆ. ಭೂಲೋಕದ ಜನರ ನಡುವಿನಿಂದ ಧಾಳ ಭೀತಿಯನ್ನು ಶಾಶ್ವತವಾಗಿ ಎತ್ತಿ ಹಾಕಲಾಗುವ ಒಂದು ವಿಧಾನವನ್ನು ಸಂಯುಕ್ತ ರಾಷ್ಟ್ರ ಕೂಟದಲ್ಲಿಯೇ ಸಂಸ್ಥಾಪಿಸುವುದಕ್ಕಾಗಿ ತಮ್ಮೊಂದಿಗೆ ಹಾಗೂ ತಮ್ಮ ಇನ್ನ ರಾಷ್ಟ್ರಪ್ರತಿನಿಧಿಗಳೊಂದಿಗೆ ದುಡಿಯಲು ನಮಗಿರುವ ಆತುರದ ಕುರಿತು ನಾನೀ ಮೂಲಕ ತಮಗೆ ಭರವಸೆ ಕೊಡುತ್ತೇನೆ".

ನೆಹರೂ ಪ್ರತ್ಯುತ್ತರ

ಅಮೆರಿಕದ ಗೃಹ ಕಾರ್ಯದರ್ಶಿಯ ಮೇಲಿನ ಉತ್ತರಕ್ಕೆ ಪ್ರತಿಯಾಗಿ ಜುಲಾಯಿ ತಾ. 19ರಲ್ಲಿ ಪಂಡಿತ ನೆಹರುಗಳು ಕಳುಹಿಸಿದ ಪ್ರತ್ಯುತ್ತರದ ಸಾರಃ—

"ನನ್ನ ಪ್ರೀತಿಯ ಶ್ರೀಮಾನ್ ಗೃಹ ಕಾರ್ಯದರ್ಶಿಗಳೇ,

ತಮ್ಮ ರಾಯಭಾರಿಯು ಕಳದ ರಾತ್ರಿ ನನಗೆ ಒಪ್ಪಿಸಿದ ತಮ್ಮ ಪತ್ರಕ್ಕಾಗಿ ಕೃತಜ್ಞನಿದ್ದೇನೆ. ಜುಲಾಯಿ ತಾ. 13ರ ನನ್ನ ಸಂದೇಶ ಮತ್ತು ಅಂತಹುದೇ ನನ್ನ ಸಂದೇಶಕ್ಕೆ ಸ್ಟಾಲಿನರಿಂದ ಬಂದಿದ್ದ ಉತ್ತರವನ್ನು ನಮೂದಿಸಿದ್ದ ಪತ್ರದ ಕುರಿತು ತಾವುಗಳು ಕೊಟ್ಟ ಪರ್ಯಾಲೋಚನೆಗಾಗಿ ನಾನು ಅಧ್ಯಕ್ಷ ಟ್ರುಮೇನರಿಗೂ ತಮಗೂ ಕೃತಜ್ಞನಿದ್ದೇನೆ. ಅಮೆರಿಕದ ಅತ್ಯಂತ ಮೂಲಭೂತ ವಿದೇಶೀ ಸಂಬಂಧೋದ್ದೇಶಗಳಲ್ಲಿ ಲೋಕ ಶಾಂತಿ ರಕ್ಷಣೆಗೆ ನೇರವಾಗುವದೊಂದೆಂಬುದನ್ನೂ ಅಂತರ್ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ರಕ್ಷಣೆ ಮತ್ತು ಮರುಸ್ಥಾಪನೆಗಿರುವ ಅನನ್ಯ ಅತಿ ಪರಿಣಾಮಕಾರೀ ಉಪಕರಣಗಳಲ್ಲಿ ಸಂಯುಕ್ತ ರಾಷ್ಟ್ರ ಕೂಟವು ಒಂದೆಂದು ಅಮೇರಿಕ ಸರಕಾರದ ದೃಢಾಭಿಮತವಿದೆಯೆಂಬುದನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಯುವರ್ ಎಕ್ಸೆಲ್ಲೆನ್ಸಿಗಳಿಗೆ ಮನವರಿಕೆಯಿರಬೇಕಾದಂತೆ, ಶಾಂತಿ ಪಾಲನೆ ಮತ್ತು ಸಂಯುಕ್ತ ರಾಷ್ಟ್ರ ಕೂಟಕ್ಕೆ ಬೆಂಬಲವೆಂಬುದು ಭಾರತ ಸರಕಾರದ ಅವಿಚ್ಛಿನ್ನ ಧೋರಣೆಯಾಗಿದೆ.

ಜೈನದ ಜನತಾ ಸರಕಾರಕ್ಕೆ ಕೌನ್ಸಿಲಿನಲ್ಲಿ ಸ್ಥಾನ ಕೊಡುವ ಮೂಲಕ, ಮತ್ತೆ ದಕ್ಕೆ ರಕ್ಷಾಕವಚ ಮರಳಿ ಬರುವಂತೆ ಮಾಡುವ ಮೂಲಕ ಭದ್ರತಾ ಕೌನ್ಸಿಲಿನ ಪ್ರಜಲಿತ ಬಿಕ್ಕಟ್ಟನ್ನು ನಿವಾರಿಸುವ ಸಂಬಂಧದ ನನ್ನ ಸೂಚನೆಯಾದದ್ದೋ ಈ ಘೋರ ಜೆಯನ್ನು ಸಾರ್ಥಕಪಡಿಸುವದಕ್ಕಾಗಿಯೇ ಹೊರತು ಅದನ್ನು ದುರ್ಬಲಗೊಳಿಸಲಿಕ್ಕಲ್ಲ ಭದ್ರತಾ ಕೌನ್ಸಿಲು ಕೊರಿಯಾ ಸಂಬಂಧವಾಗಿ ಜೂನ್ ತಾ. 25 ಮತ್ತು 27ರಲ್ಲಿ ಅಂಗೀಕರಿಸಿದ ಠರಾವುಗಳಿಗೆ ವ್ಯತಿರಿಕ್ತ ಕೊಡುವಾಗ ನನ್ನಲ್ಲಿದ್ದ ಉದ್ದೇಶವೆಂದರೆ, ಆಕ್ರಮಣವನ್ನು ಪ್ರತಿಬಿಳಿಸುವುದರಲ್ಲಿ ಸಂಯುಕ್ತ ರಾಷ್ಟ್ರ ಸಂಘವನ್ನು ಬಲಪಡಿಸಬೇಕೆಂಬುದೇ. 1949ನೇ ದಶಂಬರ್ 30ರಲ್ಲೇ ಭಾರತ ಸರಕಾರವು ಜೈನದ ಜನತಾ ಸರಕಾರಕ್ಕೆ ಮನ್ನಣೆ ಕೊಟ್ಟಿರುವುದರಿಂದ, ಸಂಯುಕ್ತ ರಾಷ್ಟ್ರ ಕೂಟದ ವಿವಿಧಾಂಗಗಳೊಳಗೆ ಮತ್ತು ಏಜನ್ಸಿಗಳೊಳಗೆ ಅದರ ಪ್ರತಿನಿಧಿಗಳು ಸ್ವತೇತಿಯುವಂತೆ ಮಾಡುವದು ನಮ್ಮ ಆದ್ಯ ಕರ್ತವ್ಯವಿದೆ. ನಮ್ಮ ಈಗಿನ ಸೂಚನೆಯು ಆ ಪ್ರಯತ್ನದ ಪುನರವತಾರ. ಕೊರಿಯ ಸಮಸ್ಯೆಯ ಶಾಂತ ತೀರ್ಮಾನಕ್ಕೆ ಯೋಗ್ಯವಾದ ವಾತಾವರಣವನ್ನದು ನಿರ್ಮಿಸಬಲ್ಲುದೆಂಬ ಆಸೆಯಿಂದ ನಾತ್ತು ಸ್ವತಃ ಉದಾರ ಗುಣ ಲಕ್ಷಣಗಳ ಮೇಲಿಂದ ಈ ಸೂಚನೆಯನ್ನು ಕೂಡಲಾಯಿತು ಜೈನ ಕ್ಕೆಗ ಪ್ರವೇಶ ಕೊಟ್ಟರೆ ಆಕ್ರಮಣಕ್ಕೆ ಪ್ರೋತ್ಸಾಹ ಕೊಟ್ಟಂತಾಗುವದೆಂದು ನಾನು ನೆನಸುವದಿಲ್ಲ. ಯುವರ್ ಎಕ್ಸೆಲ್ಲೆನ್ಸಿಗಳ ಈ ಪತ್ರ ಮತ್ತು ನನ್ನ ಉತ್ತರವನ್ನು ಮಾರ್ಶಲ್ ಸ್ಟಾಲಿನರಿಗೆ ಮುಟ್ಟಿಸುವಂತೆ ಮೋನ್ಯೋದ್ದೇಶವಿರುವ ನಮ್ಮ ರಾಯಭಾರಿಯನ್ನು ಕೇಳಿಕೊಂಡಿದ್ದೇನೆ. ನಮ್ಮೆಲ್ಲರೊಳಗಿನ ಸಂದೇಶ ವ್ಯವಹಾರಗಳೆಲ್ಲವನ್ನೂ ನಾಳೆ (ಜುಲಾಯಿ 20) ಪೂರ್ವಾಹ್ನ 9 ತಾಸಿಗೆ ಪ್ರಕಟಿಸುವ ವ್ಯವಸ್ಥೆಯಾಗಿದೆ. ದಯವಿಟ್ಟು ನನ್ನ ಅತಿ ಹೆಚ್ಚಿನ ಗೌರವಾರ್ಪಣೆಗಳನ್ನು ಸ್ವೀಕರಿಸೋಣಾಗಲಿ".

ಜುಲಾಯಿ ತಾ. 19ರಲ್ಲೇ ಮಾರ್ಶಲ್ ಸ್ಟಾಲಿನರಿಗೆ ಪಂಡಿತ ನೆಹರುಗಳು ಕಳುಹಿಸಿದ್ದ ಕಟ್ಟಕಡೆಯ ಸಂದೇಶ:— "ಜುಲಾಯಿ ತಾ. 18ರ ನನ್ನ ಸಂದೇಶಕ್ಕೆ ಅಮೆರಿಕದ ಗೃಹಕಾರ್ಯದರ್ಶಿಗಳಿಂದ ಬಂದಿದ್ದ ಉತ್ತರವನ್ನೂ ಮತ್ತದಕ್ಕೇ ದಿನ ನಾನವರಿಗೆ ಕಳುಹಿಸಿದ ಉತ್ತರವನ್ನೂ ಯುವರ್ ಎಕ್ಸೆಲ್ಲೆನ್ಸಿಗಳಿಗೆ ಕಳುಹಿಸುವ ಸುಯೋಗ ನನಗೊದಗಿದೆ. ಅಶುದ್ಧ ಜ್ಞಾನದ ದೆಸೆಯಿಂದ ಹುಟ್ಟಿಕೊಳ್ಳಬಹುದಾದ ತಪ್ಪು ನಿರೀಕ್ಷೆಗಳನ್ನು ನಿವಾರಿಸುವುದಕ್ಕಾಗಿ ಮಿ. ಡೀನ್ ಆಚೆಸನರಿಗೆ ನಾನಿತ್ತ ಉತ್ತರದಲ್ಲಿ ಗಣಿಸಲ್ಪಟ್ಟಿರುವ ಪತ್ರವ್ಯವಹಾರಗಳನ್ನು ಪತ್ರಿಕಾ ಪ್ರಕಟಣೆಗೆ ಕೊಡುವ ವ್ಯವಸ್ಥೆಯಾಗಿದೆ. ಇದಕ್ಕೆ ತಮ್ಮ ಸಮ್ಮತಿಯೆಂದು ನಂಬುತ್ತೇನೆ. ಗೌರವ ಪೂರ್ವಕವಾಗಿ— ಜವಾಹರಲಾಲ ನೆಹರೂ".

ವಿಚಾರಾರ್ಹ ಅಂಶ

ನೇರಿನ ಅಭಿಪ್ರಾಯ ಬದಲಾವಣೆಗಳ ದೆಸೆಯಿಂದ ವಿಶೇಷ ಆಕರ್ಷಣೀಯ ಭಾವನೆಗಳು ಲೋಕದ ಜನಮತದಲ್ಲಿ ಮೊಳೆಯುವಂತಾಗಿದೆ. ಬೇರಾವುದರಲ್ಲಿ ಸ್ವತಂತ್ರ ಅಥವಾ ಪ್ರತಿ ಪಕ್ಷವಾಗಿಯೆ ರೂ ಪ್ರಚಾರದ ಮಟ್ಟಿಗೆ ಅಮೆರಿಕ ಬ್ರಿಟನ ಗಳ ಕ್ಷೇತ್ರವೇ ಆಗಿದ್ದ ಪ್ರಪಂಚದ ಜೈನ ಭಾಗಗಳ ಜನತೆಯ ಮನಸ್ಸಿನ ಮೇಲೆ ಪಂಡಿತ ನೆಹರುಗಳ ಸಂಧಾನ ವ್ಯವಹಾರವು ಹೊಸ ಪರಿಣಾಮವನ್ನುಂಟು ಮಾಡಿದೆ, ಎಂಬುದು ನಿರ್ವಿವಾದ. ಇಂತಹ ಸೂಚನೆಯೊಂದನ್ನು ಮುಂದಿಟ್ಟುದಕ್ಕಾಗಿ ಪಂಡಿತ ನೆಹರುಗಳನ್ನು ಸ್ಟಾಲಿನರು ಅಂತಃಕರಣಪೂರ್ವಕ ಅಭಿನಂದಿಸುತ್ತಿರಬಹುದು; ಟ್ರುಮೇನ್ ಆಟ್ಲಿಗಳು ಒಳಗಿಂದೊಳಗೆ ಶಪಿಸುತ್ತಿರಬಹುದು ಸಂಧಾನದ ಕಡೆಗೆ ರಶ್ಯದ ಅನುಕೂಲ

The Canara Industrial & Banking Syndicate Ltd

ದಿ ಕೆನರಾ ಇಂಡಸ್ಟ್ರಿಯಲ್ ಏಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಮೂಡಬಿದರೆ.

ನೋಟೀಸು.

ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಸಿಂಡಿಕೇಟಿನಿಂದ ಆಭರಣಗಳ ಈಡಿನ ಮೇಲೆ ಪಡಕೊಂಡ ರೂಪ್ಯಾ ವ ಅದರ ಮೇಲಣ ಬಡ್ಡಿ ಕೂಡಾ ವಸೂಲು ಕೊಡಬೇಕಾಗಿ ಅನೇಕ ದಫೆಯಿಂದ ತಿಳಿಸಿದರೂ ಕೊಟ್ಟು ತೀರಿಸದೆ ಇದ್ದುದರಿಂದ ಸದರಿ ಐಸಲು, ಅದರ ಮೇಲಣ ಬಡ್ಡಿ, ಬಡ್ಡಿಯ ಬಡ್ಡಿ ಮತ್ತು ನೋಟೀಸುಗಳ ಖರ್ಚು ಸಹ ಬಜಾ ಆ್ಯಕ್ಷನಿಗೆ ಸದರಿ ಈಡಿಟ್ಟ ನಗಗಳನ್ನು ತಾರೀಕು 29-7-50ನೇ ಶನಿವಾರ ಮಧ್ಯಾಹ್ನ 2 ಘಂಟೆಗೆ ಸರಿಯಾಗಿ ಸಿಂಡಿಕೇಟ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಸದರಿ ಏಲಂನಿಂದ ಹುಟ್ಟಬಂದ ಆ್ಯವಜನಲ್ಲಿ ಏಲಂ ಖರ್ಚು ಕಳೆದು ಬಾಕಿ ಉಳಿಯುವ ಆ್ಯವಜನ್ನು ಸದ್ರಿಯವರ ಲೆಕ್ಕಕ್ಕೆ ಜಮಾಮಾಡಿ, ನಂತರ ಅವರ ಮೇಲೆ ಇನ್ನೂ ಬಾಕಿ ಆಗಬಹುದಾದ ಆ್ಯವಜಿಗೆ ಆಗತ್ಕವೆಳ್ಳ ಆ್ಯವಜರನ್ನೆ ನಡಿಸೋದಾದೀತು. ಆ ಸಂಬಂಧ ಸಿಂಡಿಕೇಟಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟ ತೆಲಿಕ್ಕೆ ಕೂಡಾ ಅವರು ಜವಾಬ್ದಾರರಾಗಿರತಕ್ಕದ್ದು.

ಲೋನಾ ನಂಬ್ರ	ಹಣಪಡಕೊಂಡವರ ಹೆಸರು	ಪಡಕೊಂಡ ಹಣ.
53/47	ಲಿಂಗಪ್ಪ ಪೂಜಾರಿ, ಪಾಂಡಿ ಪೂಜಾರಿ ಆಳಿಯ, ರಂಜಾಳ ಗ್ರಾಮ, ಕಾರ್ಕಳ ತಾಲ್ಲೂ.	11-0-0
170/48	ಗಿಲ್‌ಬರ್ಟ್ ಪೀರೇರಾ, ಮಾರ್ಸೆಲ್ ಪೀರೇರರ ಮಗ, ವೇಣೂರು ಗ್ರಾಮ	70-0-0
428/49	ನರಸಿಂಗರಾವ್ ಅಂಕೋಲೇಕಾರ್, ಆನಂದರಾಯರ ಮಗ, ಫೋರೆಕ್ಟ್ ಕಂಟ್ರಾಕ್ಟರ್, ಮೂಡಬಿದ್ರೆ.	1700-0-0

ಮೂಡಬಿದರೆ,)
ತಾ. 18-7-1950)

K. P. Shenoy,
Agent.

ನೋಟಿಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

1. ಪದ್ಮಾವತಿಅಮ್ಮ, 2. ಕೃಷ್ಣ ಮೂರ್ತಿ (ವ್ಯಾಸರು). ಗಾ. ತಾಯಿ.

1ನೇ ಅರ್ಜಿದಾರರು —ಅರ್ಜಿದಾರರ

ಇವರೊಳಗೆ

ಮೇಲ್ಕಂಡ ವ್ಯವಹರಣೆಯು 1ನೇ ಅರ್ಜಿದಾರಳಿ ಗಂಡ 2ನೇ ಅರ್ಜಿದಾರನ ತಂದೆ ಮೃತ ಅನಂತಪದ್ಮನಾಭ ಉಸ್ರಾಡ್ಕರು. Mysore Provident Insurance Co, Ltd., Bangalore, Policy No. 2-1198/30-5-47ನೇಗೆ ರೂಪ್ಯಾ 500-ಕ್ಕೆ ಮಾಡಿದ ಇನ್ಶೂರು ಹಣ ಮತ್ತು ಬೋನಸ್ಸು ಕೂಡಾ ಕಡಿಯಲಿಕ್ಕೆ ಅರ್ಹರಾಗಿ ಸದ್ರಿ ಆ್ಯವಜು ಕಡಿಯುವಲಿಕ್ಕೆ ಸರ್ಟಿಫಿಕೆಟು ಕೊಡಬೇಕಾಗಿ ಕೊಟ್ಟ ಸದ್ರಿ ಅರ್ಜಿಯು ತಾ. 12-8-50ಕ್ಕೆ ತಕ್ಕಗೆ ಇಟ್ಟಿರುವುದರಿಂದ ಆಕ್ಷೇಪ ಹೇಳುವವರು ಆ ದಿನ ಸದ್ರಿ ಕೊರ್ಟು ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Petitioners.
Dated 22-7-50 Udipi.

ಮನೋವೃತ್ತಿ ಮತ್ತು ಅಮೆರಿಕದ ನ್ಯಾಶನಲ್ ಪುನೋವೃತ್ತಿಯು ಬೆಳಕಿಗೆ ಬಿದ್ದು ತೋರುವಂತಾದುದು ನೆಹರೂ ಸರಚನೆಯ ದೆಸೆಯಿಂದಲೇ.

ಉತ್ತರ ಕೊರಿಯವಕ್ಕು ಆಕ್ರಮಣಗಾರನೆಂದು ನಿರ್ಧರಿಸಿ, ಅದರ ಧಾಳಯನ್ನು ತಡಗಟ್ಟಲು ನಡುಬಿಗಿಯುವ ಭದ್ರತಾ ಕೌನ್ಸಿಲಿನ ನಿರ್ಣಯಗಳಿಗೆ ಮೂರ್ತ ನುಮೋದನೆ ಕೊಟ್ಟದ್ದ ಭಾರತವು ಈ ಮ್ಯೂನಿಸ್ಟರ ಆಥವಾ ರಶ್ಯದ ಪಕ್ಷಪಾತಿಯಲ್ಲವೆಂಬುದು ಸ್ವತಃ ಸಿದ್ಧ ಆದರೂ ಶಾಂತಿ ನಿಷ್ಠೆಯಿಂದ, ನಿರ್ಲಿಪ್ತ ಮನಸ್ಸಿನ ಯೋಚನೆ ನಡೆಸಿದಾಗ ಪಂಡಿತಜೀಗೆ ತೋರಿ ಬಂದ ನ್ಯಾಯವನ್ನವರು ಬೇರೂವುದನ್ನೂ ಗಣಿಸದೆ ಮುಂದಿಟ್ಟರು ಆದು ಯಾರಾರಿ ನೈತಿಕ ಬಲವನ್ನ ಎಚ್ಚೆತ್ತು ಕುಗ್ಗಿಸಬಹುದು ಆಥವಾ ವೃದ್ಧಿಸಬಹುದು ಎಂಬ ಚಿಂತನೆಯನ್ನು ಪಂಡಿತ ನೆಹರುಗಳು ಮಾಡಿರಲಿಲ್ಲ– ನಿಜವಾದ ನ್ಯಾಯಾಧೀಶನೊಬ್ಬನು ಎಷ್ಟಕ್ಕೂ ಮಾಡಬಾರದಾದ ಚಿಂತೆಯದು! ಇದರಿಂದಾಗಿ ಸ್ಟಾಲಿನರ ಮುಖವರಳಿ ಟ್ರೂಮನ್ನರ ಮುಖ ಭಂಗವಾಯಿತೆಂದಾದರೆ, ಅದಕ್ಕೆ ಅವರವರ ಕರ್ಮಗಳೇ ಕಾರಣ ಹೊರತು ನೆಹರುಗಳ ಕರ್ತವ್ಯ ಪಾಲನೆಯಲ್ಲ. ಚೈನದ ಜನರಲಿಸನೋ ಚಿಯಾಂಗ್ ಕೈಶೇಕರೊಡನೆ ಗಾಢ ಅನುಸಗೀನ್ನೆಹವಿದ್ದರೂ ನೆಹರೂ ಸರಕಾರವು ವಾಸ್ತವಿಕತೆಯ ಕಡೆಗೆ ಲಕ್ಷ್ಯ ಕೊಟ್ಟು ಚೈನದ ಕಮ್ಯೂನಿಸ್ಟ್ ಚೈನಕ್ಕೆ ಮನ್ನಣೆ ಕೊಟ್ಟದ್ದುದನ್ನು ಮರೆಯಬಾರದು. ಇವೆಲ್ಲಾ ವರ್ತನೆಗಳು ಅಂತರ್ರಾಷ್ಟ್ರೀಯ ವ್ಯವಹಾರದಲ್ಲಿ ಭಾರತ ಸರಕಾರವು ವಹಿಸಿರುವ ನ್ಯಾಯ ನಿಷ್ಠುರತೆಯ ದ್ಯೋತಕಗಳು ಹೊರತು ಬೇರಲ್ಲ.

ದೂರದರ್ಶಿ ಹಾಗೂ ಸ್ವಕಾರ್ಯ ವೀರ ಸ್ಟಾಲಿನರಾದರೋ ನೆಹರೂ ಸೂಚನೆಗೆ ಕೂಡಲೇ ಒಪ್ಪಿಗೆ ಕೊಡಲು ಕಾರಣಗಳಿವೆ. ವೆ. ಚುಟುಕಿನಲ್ಲಿ ಹೇಳುವದಾದರೆ ಕೊರಿಯಾ ಯುದ್ಧದ ಯಾವ ಹೊಣೆಯನ್ನೂ ಪ್ರತ್ಯಕ್ಷವಾಗಿ ಹೊತ್ತುಕೊಂಡಿರದ ತನಗೆ, ಆ ದರ ವಿಚಾರಣಾ ಕರ್ತವ್ಯದಲ್ಲಿ ಬ್ಯನಾಗುವ ಸ್ಥಾನ ದೊರೆಯಬಹುದು ಹೊರತು ಕೊರಿಯ ಆಳಗವನ್ನು ಶಿಕ್ಷಿಸುವ ಪ್ರತ್ಯಕ್ಷ ಕಾರ್ಯಭಾರ ತನ್ನ ವೇಲೆ ಬೀಳುವಂತಿಲ್ಲ ವೆಂಬುದನ್ನು ಅವರು ಬಲ್ಲರು. ಕೊರಿಯಾ ಸಮರವು ತನ್ನದಲ್ಲವಾಗಿರುವಾಗಲೇ ಭದ್ರತಾ ಕೌನ್ಸಿಲಿನ ಚೈನದ ಸ್ಥಾನವು ತನ್ನ ಕಡೆಯ ಶಕ್ತಿಯನ್ನಿಸ್ಟ್ ಪರಕಾರ ದ್ವಾರುವುದು ಮತ್ತಿವುಮೂಲಕ ತಾನು ಪಂಥ ಗೆದ್ದು ಹುಡಿ ಭದ್ರತಾ ಕೌನ್ಸಿಲಿಗೆ ಹೋಗುವಂತಾಗುವದು ಸಾ ಬಿಸಿಲಿಗೆ ಲಗತ್ಯ ಬೇಕಾಗಿರುವ ರಂಗಿ.

ಉತ್ತರ ಕೊರಿಯದ ಆಕ್ರಮಣವನ್ನು ಹಿಂದೆಗೆಯಲು ರಶ್ಯವು ತನ್ನ ವರ್ಚಸ್ಸನ್ನು ಉಪಯೋಗಿಸಬೇಕೆಂದು ಸಂಸ್ಥಾ ದಾಯ ಮಾಲನೆಗೆಂಬಂತೆ ಬ್ರಿಟನ್ ಅಮೆರಿಕಗಳು ಮೊನ್ನೆಯೋದಲ್ಲಿರುವ ತಮ್ಮ ರಾಯಭಾರಿಗಳ ಮೂಲಕ ಕೇಳಿಕೊಂಡುದಕ್ಕೆ ಉತ್ತರರೂಪವಾಗಿ ರಶ್ಯಾ ಸರಕಾರ ಹೊರಗೆಡಹಿದ ಅಂತರಾರ್ಥ ಕೂಡಾ ಲಬೇ ಆಗತ್ತು.

ಪರಿಸ್ಥಿತಿ ಮತ್ತು ನ್ಯಾಯವೇ ಹಾಗಿದ್ದುದರಿಂದ ಕೊರಿಯ ಕಲಹ ಸಂಬಂಧದ ನೆಹರೂ ಸಂಧಾನ ಸೂಚನೆಯು ನ್ಯಾಲಿನಂಗನ.ಕೂಲವಾಗಿತ್ತೆಂಬುದು ನಿಜ. ಆದರೆ ಆದಕ್ಕಾಗಿ ಕುದಿಯುತ್ತಿರುವ ಸ್ಟಾಲಿನರ ಭಾಗ್ಯವನ್ನೆಲ್ಲದೆ ಸ್ವತಃ ಸ್ಟಾಲಿನ್ರನ್ನಾಗಲೀ, ನೆಹರುಗಳ ನ್ಯಾಯವನ್ನಲ್ಲದೆ ನೆಹರುಗಳನ್ನಾಗಲೀ ದೂಲೆಡಿಯುಲ್ಲ.

ಕಮ್ಯೂನಿಸ್ಟ್ ಚೈನಕ್ಕೆ ಭದ್ರತಾ ಕೌನ್ಸಿಲಿನಲ್ಲಿ ಸ್ಥಾನ ಕೊಡುವ ಪ್ರಶ್ನೆಗೂ ಕೊರಿಯದ ಘರ್ಷಣೆಗೂ ಗಂಟು ಹಾಕಬಾರದು; ಉತ್ತರ ಕೊರಿಯವು ದಕ್ಷಿಣ ಕೊರಿಯದ ಮೇಲೆ ಮಾಡಿರುವ ಆಕ್ರಮಣ ರೋಗಕ್ಕೆ, ಭದ್ರತಾ ಕೌನ್ಸಿಲಿನಲ್ಲಿ ಕೆಂಪ ಚೈನಕ್ಕೆ ಸ್ಥಾನ ಕೊಡುವದೊಂದು ಚಿಕಿತ್ಸೆಯಲ್ಲ; ತಮ್ಮ ಹಕ್ಕಿನ ಗಡಿದಾಟಿ ಅಕ್ರಮ ಪ್ರವೇಶ ಮಾಡಿರುವ ಉತ್ತರ ಕೊರಿಯದವರನ್ನು ಹಿಂದೆ ಕಳುಹಿಸುವ ಆಥವಾ ಒಮ್ಮೆಟ್ಟಿಸುವ ಸೂಲಕ ಅಲ್ಲಿಯೇ ಆ ಸಂಬಂಧದ ನ್ಯಾಯ ಪಾಲನೆಯಾಗಬೇಕಾನಿರೆ, ಭದ್ರತಾ ಕೌನ್ಸಿಲಿನ ಚೈನದ ಸ್ಥಾನ ತೀರ್ಮಾನವು ಸಂಯುಕ್ತ ರಾಷ್ಟ್ರ ಸಂಘದಲ್ಲಾಗುವ ಮೂಲಕ ಇಲ್ಲಿಯೇ ಈ ಸಂಬಂಧದ ನ್ಯಾಯಪಾಲನೆಯಾಗಬೇಕು ಹೊರತು ಅದಕ್ಕೆ ಇದರಲ್ಲಿ ಒಳಿದೇ ನೇರನಿವೆಲ್ಲೂ ಏನೂ ಸಾಧನ ಅವಿನಾಭಾವ ಸಂಬಂಧವಿಲ್ಲ ಎಂದು ಭಾರತ ಪ್ರತಿನಿಧಿ ಕೃಷ್ಣ ಮೆನನ್ ಅವರು ಹೇಳಿದ್ದು ಸರಿಯಾಗಿಯೇ ಇದೆ.

ಮೇಲಿನ ಘಟನೆಗಳೆಲ್ಲ ಕರ್ತೃಶಕ್ತಿಗಳಾಗಿ ತೋರಿ ಬಂದರೂ, ಉತ್ತರ ಕೊರಿಯದ ಅನ್ಯಾಯ ನಿವಾರಣೆಗಾಗಿ ಜರ್ಜರಿಸಿದ್ದು ಅನಸರದಿಂದ ನಡುಬಿಗಿದ ಸಂಯುಕ್ತ ರಾಷ್ಟ್ರ ಸಂಘವು ಚೈನದ ಸ್ಥಾನದ ಕುರಿತು ತನ್ನಲ್ಲೇ ಆಗಿರುವ ತಪ್ಪನ್ನು ತಿದ್ದಿಕೊಳ್ಳಲು ತಯಾರಿಲ್ಲವೇಕೆ? ಕೊರಿಯಾ ಯುದ್ಧದಲ್ಲಿ ಧರ್ಮಯುದ್ಧದಂತೆ ಭದ್ರತಾ ಕೌನ್ಸಿಲನ್ನು ತನ್ನೊಂದಿಗೆಳೆದುಕೊಂಡ ಅಮೆರಿಕವು ಕೆಂಪು ಚೈನಕ್ಕೆ ಸ್ಥಾನ ಕೊಡುವುದರಲ್ಲೂ ಆ ಕೌನ್ಸಿಲನ್ನು ಹುರಿದುಂಬಿಸಬಾರದೇಕೆ? ಕೇವಲ ಕ್ರಮ ಶಾಸನವನ್ನೇ ಆಧರಿಸುವುದಾದರೆ ಮೂಲತಃ ಒಂದೇ ಆಗಿದ್ದ, ಮತ್ತು ನ್ಯಾಯಬದ್ಧವಾಗಿ ಒಂದುಗೂಡಲೇಬೇಕಾಗಿರುವ ಕೊರಿಯದ ಎರಡು ಪಾಳಯಗಳ ಅಂತರ್ಯುದ್ಧದೊಳಗೆ ಅಮೆರಿಕವು ಇಷ್ಟು ಮೆಹನತೆ ತಂದ ತಲೆ ಹಾಕಿದುದೇಕೆ?

ಭದ್ರತಾ ಕೌನ್ಸಿಲಿನಿಂದ 'ಆಕ್ರಮಣಗಾರ' ಎಂದು ತೀರ್ಮಾನಗೊಂಡ ಉತ್ತರ ಕೊರಿಯದ ಪ್ರತ್ಯಕ್ಷ ಬೆಂಬಲಕ್ಕೇನೂ ಹೋಗದೆ, ಆ ಸಂಬಂಧವಾಗಿ ಅಮೆರಿಕದಂತಹ ರಾಷ್ಟ್ರಗಳೊಡನೆ ಭಿನ್ನಾಭಿಪ್ರಾಯವಿದ್ದರೂ ಭದ್ರತಾ ಕೌನ್ಸಿಲಿನಲ್ಲಿ ನ್ಯಾಯ ಶೋಧನೆ ಮಾಡಲು ಒಪ್ಪಿಗೆ ಸೂಚಿಸಿ, ಅಂತಹ ಪರ್ಯಾಲೋಚನೆಗನುಕೂಲವಾಗುವಂತೆ ಕೌನ್ಸಿಲ್ ಪ್ರವೇಶಿಸಲು ತನಗೀಗ ಇರುವ ಆತಂಕವನ್ನು ನಿವಾರಿಸಬೇಕೆಂದು ರಶ್ಯವು ಕೇಳುವುದರಲ್ಲಿ ತಪ್ಪೇ ನಿದೆ?

ಕೊರಿಯದಲ್ಲಿ ಏಕಪ್ರಕಾರ ಸೋಲು ತಿನ್ನುತ್ತಿರುವ ಅಮೆರಿಕವು, ಈ ಅವನಾನವಧಿಯಲ್ಲೇ ರಶ್ಯದ ಕೇಳಿಕೆಗಳನ್ನು ಮಾನ್ಯಮಾಡಿಕೊಂಡರೆ, ಸೋತು ಹಾದಿಗೆ ಬಂದ ಅಭಿಮಾನಭಂಗವು ತನಗಾಗುವದೆಂಬುದರಿಂದಲೇ ಅದೀರತಿಯ ಒಣ ವೈರಾಗ್ಯವನ್ನು ತೋರಿಸುತ್ತಿದೆ! ಲೋಕ ಶಾಂತಿ ರಕ್ಷಕರೆಂದು ತಪ್ಪು ಹೆಸರನ್ನು ತಾವೇ ಪಟ್ಟಿಕಟ್ಟಿಕೊಂಡವರು ಕೈಕೊಳ್ಳಬಹುದಾದ ಧೋರಣೆ ಇದಲ್ಲ. ಕಳದ ಮಹಾ ಯುದ್ಧದಲ್ಲಿ ಸಾಮ್ರಾಜ್ಯಾಂಗೋಪಾಂಗಗಳಂತೆಯೇ ಜೆಂಗೋಲ ಬಲವನ್ನೂ ಕಳಕೊಂಡಿರುವ ಬ್ರಿಟನಿಗಂತೂ ಅವೆರದ ಹೆಗಲನ್ನಾಥರಿಸಿ, ಅದರ ಹೆಜ್ಜೆಯ ಮೇಲೆ ಹೆಜ್ಜೆಯಿಡುವ ಹೊರತು ಬೇರೆ ಗತಿಯಿಲ್ಲ ಇನಾಲದುದರಿಂದಲೆ "ಇಂಗ್ಲಿಷ್ ಮಾತಾಡುವ ರಾಷ್ಟ್ರಗಳಾದ ನಾವಿಬ್ಬರೂ ಒಂದೇ" ಎಂಬ ನ್ಯಾಭಿಮಾನದ ಮಾತು ಕೇಳಿ ಬರುತ್ತಿದೆ. "ಹಾಗಾದರೆ ನಾವು ಅನ್ಯಾದವರೆಲ್ಲ ಒಂದೇ" ಎಂದು ಈ ಕಡೆಯಿಂದ ಉತ್ತರಿಸಿದಂತಾಗದೆ?

ಇದೀಗ ಅಮೆರಿಕ, ಬ್ರಿಟನುಗಳ– ಜಾಗತಿಕ ಶಾಂತಿ ಮತ್ತು ಭದ್ರತೆಯ ರಕ್ಷಕರೆಂಬ ಬಿಲ್ಲೆ ಹಚ್ಚಿಕೊಂಡವುಗಳ– ವರ್ತನೆ! ಇಂತಹ ರಕ್ಷಕರ ಕೈಯಿಂದ ಲೋಕವನ್ನು ರಕ್ಷಿಸಿಕೊಳ್ಳುವವರು— ಈ ಡಾಕ್ಟರರ ಕೈಯಿಂದ ರೋಗಿಯನ್ನು ತಪ್ಪಿಸಿ ಉಳಿಸುವವರು— ಬೇಕಾಗಿದ್ದಾರೆ!

ಆಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಳುಕ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು,ಕಾಯಗಳು, ಬಾತುಕೊಳ್ಳುವುದು, ಬೇಳವಿಪಮುಂತಾದವು, ಪಕ್ಷವಾತ,ಮೂಡಿವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD

ಹುಳುಕಡ್ಡಿ,ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಆಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ— ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾಪಕಸ್ಥರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.

Advocate & President, District Board, S. Kanara.

CHAIRMAN

ಕಾಶ್ಮೀರದ ತೀರ್ಪಿಗಾಗಿ ತ್ರಿಮೂರ್ತಿ ಮಾತುಕತೆ.

ಕಾಶ್ಮೀರ ವಿವಾದ ಸಂಬಂಧವಾಗಿ ಕೊನೆಯ ತೀರ್ಮಾನವೊಂದನ್ನು ಪಡೆಯಲು ಮಧ್ಯಸ್ಥಗಾರ ಸರ್ ಓವೆನ್ ಡಿಕ್ಸನರು ಕರೆದಂತೆ ಮತ್ತವರು ಹಾಜರಾದ್ದ ನೆಹರೂ-ಲಿಯಾಖತ್ ಮಾತುಕತೆಯು ಜುಲಾಯಿ ತಾ. 20ರಲ್ಲಿ ನವಢಿಲ್ಲಿಯಲ್ಲಿ ಆರಂಭಿಸಿದೆ. ಬಹುತೇಕವಾಗಿ ಕಳೆದೊಂದು ವಾರದಿಂದ ಸಂಜೆ ಮುಂಜಾನೆ ಈ ತ್ರಿಮೂರ್ತಿ ಕೂಟ ನಡೆದಿರುವುದರಿಂದ ವಿಷಯವು ಅಂತಿಮಾರದೆ ಪರ್ಯಾಲೋಚಿಸಲ್ಪಡುತ್ತಿದೆ, ಎಂಬ ಅಕೆಗೆಡೆದೊರೆತಿದೆ. ಮಾತುಕತೆಯೇನೋ ಅತ್ಯಂತ ಗುಪ್ತವಾಗಿದೆ. ಆದರೆ ಮೂಲಾಧಾರವೇ ಈಸಿದ್ದರೆ ಅಡಿಪಿಟ್ಟು ಸಮಯು ಬೆಳೆಯುಕ್ತರಲಿಲ್ಲ. ಅಲ್ಪ ಸಂಖ್ಯಾಕರ ಒಡಂಬಡಿಕೆಯ ಸಂಬಂಧವಾಗಿ ಕಳದ ಎಪ್ರಿಲಿನಲ್ಲಿ ನೆಹರೂಲಿಯಾಖತರು ನಡೆಸಿದ್ದ ಮಾತುಕತೆಗಳು ಕೂಡಾ ಹೀಗೆಯೇ ಗುಟ್ಟಾಗಿ ಸುದೀರ್ಘವಾಗಿ ನಡೆದಿದ್ದುದರಿಂದ, ಈ ಬಾರಿಯ ಪರ್ಯಾಲೋಚನೆಯೂ ಕೊನೆಗೆ ಅದೇ ಮಾದರಿಯ ವಿಜಯವನ್ನು ಗಳಿಸಬಲ್ಲುದೆಂಬ ಅಕೆಗೆಡೆಯಿದೆ. ಒಂದೊಮ್ಮೆಗೆ ಹಾಗಾಗದೆ ಹೋದರೂ, ಪದ್ಯಸ್ಥಿತಿಯಲ್ಲಿ ಕಾಶ್ಮೀರ ರಾಜೀ ಸಂಬಂಧದ ಪರಾಭವವನ್ನು ಒಪ್ಪಿಕೊಂಡು, ಜನತೆಯಲ್ಲಿ ನಿರಾಶೆ ಮತ್ತು ಹುಸಿ ನಿರೀಕ್ಷೆಗಳನ್ನು ಹುಟ್ಟಿಸಲು ಇಕ್ಕುಡೆಯ ಸರಕಾರಗಳೂ ತಯಾರಾಗಿರಲಾರವು; ಅಂತಹ ಕೆಡುಪು ವಾತಾವರಣವೆದ್ದಲ್ಲಿ ಕೇವಲ ಸದ್ಭಾವನೆಯ ಸ್ನೇಹ ಆಧರಿಸಿರುವ ಢಿಲ್ಲೀ ಒಪ್ಪಂದ ಕೂಡಾ ತೇಜೋಹೀನವಾಗಬಹುದು. ಆದ್ದರಿಂದ ಈ ಬಾರಿಯ ಮಾತುಕತೆಯು ಒಂದೊಮ್ಮೆಗೆ ಫಲಿಸದೆ ಹೋದರೂ ಅದನ್ನು ಕಾರಾಚಿಗೆ ವರ್ಗಾಯಿಸಿಟ್ಟೊಪ್ಪಿ, ಇನ್ನೊಂದು ಅವಧಿಗೆ ಮುಂದುವರಿಟ್ಟೋ ಜನರ ಲಕ್ಷ್ಯವನ್ನು ಹೂಂಕ್ಯಾಯ್ದಿಡಬಹುದು. ಹೊರತು ಕಡಿಸಲಾರರು. ಕಾಶ್ಮೀರ ದಂತೆಯೇ ಭಾರತ — ಪಾಕಿಸ್ತಾನಗಳೊಳಗಿನ ಇತರ ವಿವಾದಾಂಶಗಳೂ ಅಲ್ಲಿ ಚರ್ಚಿಸಲ್ಪಡಲಿವೆಯಾದ್ದರಿಂದ ಢಿಲ್ಲೀ ಮಾತುಕತೆಗಳಿಗೆ ವಿಶೇಷ ಪ್ರಾಮುಖ್ಯತೆಯಿದೆ.

ಲಿಯಾಖತರೇ ಆಗಮನ

ಅಮೇರಿಕಾ ಸಂಚಾರವನ್ನು ಮುಗಿಸಿಕೊಂಡು ಲಂಡನ್ ಮಾರ್ಗವಾಗಿ ಇತ್ತೀಚೆಗೆ ತಾನೇ ಕರಾಚಿಗೆ ಬಂದಿದ್ದ ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರು ಸರ್ ಡಿಕ್ಸನರು ಮಾಡಿಟ್ಟ ವ್ಯವಸ್ಥೆಗಾಗಿ ಇದೇ ತಾ. 20ನೇ ಪೂರ್ವಾಹ್ನ ಢಿಲ್ಲಿಯ ಪಾಲಾಮ್ ವಿಮಾನ ನಿಲ್ದಾಣದಲ್ಲಿಳಿಯುವಾಗ ಜಡಿಮಳೆ ಸುರಿಯುತಿತ್ತು. ಅವರೊಂದಿಗೆ ಪಾಕಿಸ್ತಾನ್ ಸರಕಾರದ ಸೆಕ್ರೆಟರಿ ಜನರಲ್ ಮಹಮ್ಮದ್ ಅಲಿ ಮತ್ತು ಕಾಶ್ಮೀರ ಸಂಬಂಧ ಖಾತೆಯ ಜಕೆಕಾರ್ಯದರ್ಶಿ ಮಹಮ್ಮದ್ ಅಯಾಬರೂ ಬಂದಿದ್ದರು. ನಿಲ್ದಾಣದಲ್ಲಿ ಭಾರತಾಧ್ಯಕ್ಷರ ಸೇನಾ ಕಾರ್ಯದರ್ಶಿ ಮತ್ತು ಕಾಮನ್‌ವೆಲ್ತ್ ರಾಜ್ಯಗಳ ರಾಜಕೀಯ ವ್ಯವಹಾರ ಸಂಬಂಧೀ ಪ್ರತಿನಿಧಿಗಳು ಸ್ವಾಗತಕ್ಕೆ ತಯಾರಾಗಿದ್ದರು. ಪ್ರಧಾನಿ ಪಂಡಿತ ನೆಹರುಗಳು ಅಲ್ಲಿ ಸಿದ್ಧರಿದ್ದು ಮಿ. ಲಿಯಾಖತರನ್ನು ಬರಮಾಡಿಕೊಂಡರು. ಪದ್ಧತಿಪ್ರಕಾರ ಪರಿಚಯಗಳಾಗಿ ಭಾರತ ವಿಮಾನದಳದ ಗೌರವ ರಕ್ಷೆಯನ್ನು ಮಿ. ಲಿಯಾಖತರು ಸ್ವೀಕರಿಸಿದರು. ನಿಲ್ದಾಣದಲ್ಲಿ ಸಂಸ್ಥಾನಾಯಾನುಸಾರ ತಯಾರಿದ್ದ ಪತ್ರಿಕಾ ವರದಿಗಾರರ ಪ್ರಶ್ನೆಗಳಿಗೆ, ಮಿ. ಲಿಯಾಖತರು ಸರಸ, ವ್ಯಂಗ್ಯ ಹಾಗೂ ಹಾಸ್ಯಕೆಯು ಉತ್ತರಗಳನ್ನಿತ್ತರು. "ಢಿಲ್ಲೀ ಸನ್ನೀಲನದ ವಿಜಯದ ಕುರಿತು ನಿಮಗೆ ವಿಶ್ವಾಸವಿದೆಯೆ?" ಎಂದೊಂದು ಪರೀಕ್ಷಾತ್ಮಕ ಪ್ರಶ್ನೆ ಬಂತು. ನಾವು ಪ್ರತಿಯೊಂದನ್ನೂ ತೀರ್ಮಾನಿಸಿಕೊಳ್ಳುವ ಆಶೆಯಿಂದಿದ್ದೇವೆ. ಮಳೆ ಬರುವುದು ಯಾವಾಗಲೂ ಶುಭ ಶಕುನವೇ ಡಿ!" ಎಂದು ಮಿ. ಲಿಯಾಖತರು ಉತ್ತರ ಕೊಟ್ಟರು. "ಕಾಶ್ಮೀರದ ಪ್ರಶ್ನೆಯು ನಿಮ್ಮ ಕಾಶ್ಮೀರ ಸಂಬಂಧದ ಸಂಧಾನಕ್ಕೆಯ ವೇಲೆಗೆನಾದರೂ ಪರಿಣಾಮ ಮಾಡೀತೇ?" ಎಂದು ಪ್ರಶ್ನಿಸಲ್ಪಟ್ಟಾಗ "ಕಾಶ್ಮೀರ ಮತ್ತು ಕಾಶ್ಮೀರವು ಒಂದಕ್ಕೊಂದು ಬಹಳ ದೂರದಲ್ಲಿವೆ, ಲೋಕದ ಪ್ರತಿಯೊಂದು ವಿದ್ಯಮಾನವೂ ಮತ್ತೊಂದರ ಮೇಲೆ ಒಂದಲ್ಲೊಂದು ರೀತಿಯ ಪರಿಣಾಮ ಮಾಡುವಂತಹದೇ" ಎಂದು ಉತ್ತರಿಸಿದರು. "ಢಿಲ್ಲೀ ಒಪ್ಪಂದವು ಅತ್ಯವಶ್ಯವಾಗಿ ರೀತಿಯಿಂದ ಕಾರ್ಯಕಾರಿಯಾಗುತ್ತಿದೆ. ಸತ್ಯವು ಬಣ್ಣಗಳದ ಪತ್ರಿಕೆಗಳ ಕೆಲವೋಮ್ಮೆ ವದಂತಿಗಳ ಕುರಿತೂ ಕೆಲವು ಬೇಜವಾಬ್ದಾರಿ ನಾಯಕರ ಭಾಷಣಗಳ ಕುರಿತೂ ನಾನು ದೂರು ಕೊಟ್ಟಿದ್ದೇನೆ. ಢಿಲ್ಲೀ ಒಪ್ಪಂದದ ನಂತರ ಪಾಕಿಸ್ತಾನ್ ಪತ್ರಿಕೆಗಳು ಸುಧಾರಿಸಿವೆ" ಎಂದು ಮಿ. ಲಿಯಾಖತರಂದರು. ಕಾಶ್ಮೀರದಂತೆಯೆ ಭಾರತ ಪಾಕಿಸ್ತಾನಗಳೊಳಗಿನ ಇತರ ಸಂಗತಿಗಳನ್ನೂ ತಾವು ಪರ್ಯಾಲೋಚಿಸಲಿರುವೆವೆಂಬುದನ್ನು ಒಪ್ಪಿಕೊಂಡು, ಢಿಲ್ಲಿಯಲ್ಲಿ ತಾನೆಷ್ಟು ದಿನ ನಿಲ್ಲಬೇಕಾಗುವುದೋ ಖಂಡಿತ ಹೇಳುವುದಸಾಧ್ಯವೆಂದರು. ಒಬ್ಬ ಪತ್ರಿಕೋದ್ಯಮಿ ಮಿ. ಲಿಯಾಖತರ ಅಮೆರಿಕಾ ಸಂಚಾರ ಹೇಗಿತ್ತು ಎಂದು ಪ್ರಶ್ನಿಸಿದಾಗ "ಅತ್ಯಂತ ವಿನೋಹರ ಮತ್ತು ಬೋಧನಾತ್ಮಕವಿದ್ದಿತು." ಎಂಬ ಉತ್ತರ ಬಂತು "ಅನೇಕರಿಂದಿಂದ ನೀವೇನನ್ನು ತಂದಿರಿ?" ಎಂದು ಸನ್ನಲು ಬಂತು; "ನನ್ನನ್ನು ನಾನು ವರಿಳಿ ತಂದೆ" ಎಂಬ ಉತ್ತರಕೊಟ್ಟು ಮಿ. ಲಿಯಾಖತರು ನಗೆಯನ್ನೆಬ್ಬಿಸಿದರು. ಢಿಲ್ಲಿಯಲ್ಲಿಳಿದ ಈ ಸಂದರ್ಭದಲ್ಲಿ ಹೊರತು, ಅನ್ಯಲಿನ ಕೆಲವು ದಿನಗಳವರೆಗೂ ಮಿ. ಲಿಯಾಖತರು, ಬಹಿರಂಗವಾಗಿ ಬಾಯಿ ಬಿಟ್ಟಿರಲಿಲ್ಲ; ಗುಪ್ತ ಮಾತುಕತೆಯಲ್ಲೇ ತಲ್ಲೀನರಾಗಿದ್ದರು.

ಢಿಲ್ಲೀ ಮಾತುಕತೆ.

ಮಿ. ಲಿಯಾಖತರು ಬಂದ ದಿನವೇ ಢಿಲ್ಲೀ ಮಾತುಕತೆಗಳು ಆರಂಭಿಸಿದುವು. ತಾ. 20ನೇ ಅಪರಾಹ್ನ ಸರ್. ಡಿಕ್ಸನ್, ಪಂಡಿತ ನೆಹರು, ಮಿ. ಲಿಯಾಖತ್ ಅಲೀ ಖಾನರು ಎರಡೂವರೆ ತಾಸು ಮಾತುಕತೆ ನಡೆಸಿದರು. ಆ ವೇಲೆ ವಿದೇಶ ಸಂಬಂಧದ ಮಂತ್ರಿ ಮಂಡಲಿಯ ಉಪ ಸಮಿತಿಯ ಮುಂದೆ ಪಂಡಿತ ನೆಹರು ಗಳು ಅಂದು ನಡೆದ ಮಾತುಕತೆಗಳನ್ನು ನಿವೇದಿಸಿಕೊಂಡರು. ನೆಹರು, ವಲ್ಲಭಾಯಿ, ರಾಜಗೋಪಾಲಾಚಾರಿ, ಗೋಪಾಲಸ್ವಾಮಿ ಅಯ್ಯಂಗಾರರು ಸಮಿತಿಯಲ್ಲಿ ಸದಸ್ಯರಾಗಿರುವ ಸಮಿತಿಯಂದು. ಅಂದೂ ಸರ್. ಡಿಕ್ಸನರಿಗೂ, ಭಾರತ ಪಾಕಿಸ್ತಾನಗಳ ಪ್ರಧಾನಿಗಳಿಗೂ ಅಧ್ಯಕ್ಷ ರಾಜೇಂದ್ರ ಪ್ರಸಾದರ ಔತಣ ಸತ್ಕಾರವಾಯಿತು. ರಾತ್ರಿ ಮಿ. ಲಿಯಾಖತರಿಗೆ ಪಂಡಿತ ನೆಹರುಗಳಲ್ಲಿ ಔತಣ ನಡೆಯಿತು.

ತಾ. 21ರಲ್ಲಿ ಪೂರ್ವಾಹ್ನ 3 ತಾಸು, ಅಪರಾಹ್ನ 2 ತಾಸು ಡಿಕ್ಸನ್-ನೆಹರೂ-ಲಿಯಾಖತ್ ಸಂಧಾನಣೆ ನಡೆಯಿತು. ಕಡೆಗೆ ನೆಹರುಗಳು ತನ್ನ ಕೆಲವು ಅನಿಯಾಯಿಗಳ ಮುಂದೆ ಸಂಗತಿ ನಿವೇದನೆ ಮಾಡಿದರು, ಅಂದು ಢಿಲ್ಲಿಯಲ್ಲಿರುವ ಪಾಕಿಸ್ತಾನ್ ಹೈಕಮಿಶನರರು ಭಾರತದ ಮಂತ್ರಿಗಳು ಮತ್ತು ವಿದೇಶಿ ರಾಯಭಾರಿಗಳು ಹಾಗೂ ಪ್ರಮುಖ ಅಧಿಕಾರಿಗಳನ್ನು ಆಮಂತ್ರಿಸಿ ಮಿ. ಲಿಯಾಖತರು ಔತಣ ಸತ್ಕಾರ ಕೂಟವಿತ್ತರು.

ತಾ. 22ನೇ ಪೂರ್ವಾಹ್ನ ಪುನಃ 2½ ತಾಸು ಅಪರಾಹ್ನ 2½ ತಾಸು ತ್ರಿಮೂರ್ತಿ ಸಂಧಾನಣೆ ನಡೆಯಿತು. ಅಂದು ರಾತ್ರಿ ಅಧ್ಯಕ್ಷ ಪ್ರಸಾದರು ಪ್ರಮುಖ ಅತಿಥಿ ಕೂಟದ ಪಡುವೆ ಮಿ. ಲಿಯಾಖತ್ ಅಲೀಖಾನರಿಗೆ ಸಂಭ್ರಮದ ಬೀಳ್ಕೊಡುಗೆ ಯನ್ನಿತ್ತರು.

ತಾ. 23ರಲ್ಲಿ ಪೂರ್ವಾಹ್ನ ಪುನಃ 1 ತಾಸು 50ನಿಮಿಷ ಅಪರಾಹ್ನ.....ಆಂತೆಯೇ ಪ್ರತಿ ದಿನ.....ಲಿಯಾಖತ್—ನೆಹರೂ-ಡಿಕ್ಸನ್ ಮಾತುಕತೆ ನಡೆದಿದೆ

ಕಾಶ್ಮೀರ ಸಂಬಂಧದ ಚರ್ಚೆಯ ವೇಳೆ ಅಗತ್ಯವುಳ್ಳ ಸಲಹೆಗಳನ್ನು ಕೊಡುವದಕ್ಕಾಗಿ ಕಾಶ್ಮೀರದ ಪ್ರಧಾನ ಮಂತ್ರಿ ಶೇಕ್ ಅಬ್ದುಲ್ಲರು ಮಾತುಕತೆಯ ಆದಿಭಾಗದಲ್ಲೇ ಢಿಲ್ಲಿಗೆ ಬಂದಿದ್ದು ನಿಂತಿದ್ದಾರೆ. ಪಂಡಿತ ನೆಹರುಗಳು ಪ್ರತಿಬಾರಿಯ ಕೂಟದ ವೃತ್ತಾಂತವನ್ನು ತನ್ನ ಅನುಯಾಯೀ ಮಂತ್ರಿಗಳ ಮುಂದಿಟ್ಟಂತೆಯೆ, ಅಗತ್ಯ ಬಿದ್ದಾಗಲೆಲ್ಲಾ ಶೇಕ್ ಅಬ್ದುಲ್ಲಾರಿಗೆ ಸಂಗತಿಗಳನ್ನು ತಿಳಿಸಿ, ಅವರ ಅಭಿಮತಗಳನ್ನು ಕೇಳಿಕೊಳ್ಳುತಿದ್ದಾರೆ. ಇದೇ ಸಂದರ್ಭದಲ್ಲಿ ಕಾಶ್ಮೀರದ ಭೂಸುಧಾರಣೆ ಮೊದಲಾದ ಇತರ ವಿಷಯಗಳೂ ಶೇಕ್ ಅಬ್ದುಲ್ಲಾರೊಡನೆ ಚರ್ಚಿಸಲ್ಪಟ್ಟುವೆಂದು ತಿಳಿದುಬಂದಿದೆ. ಆಂತೆಯೇ ಪಶ್ಚಿಮ ಬಂಗಾಳದ ನ್ಯಾಯಖಾತೆಯ ಮಂತ್ರಿ ನಿಹಾರೇಂದು ದತ್ತರು ಮತ್ತಾ ಸರಕಾರದ ಕಾರ್ಯದರ್ಶಿಗಳು ಮಾತುಕತೆಯ ಆರಂಭ ದಿನಗಳಲ್ಲೇ ಢಿಲ್ಲಿಗೆ ಬಂದಿದ್ದರಲ್ಲದೆ, ಪಶ್ಚಿಮ ಬಂಗಾಳದ ಪ್ರಧಾನ ಮಂತ್ರಿ ಡಾ| ಬಿ. ಸಿ. ರೋಯಿಗಳು ತಾ. 23ರಲ್ಲಿ ಢಿಲ್ಲಿಗಾಗಮಿಸಿದ್ದಾರೆ. ಅಲ್ಪ ಸಂಖ್ಯಾಕರ ಸಂಬಂಧದ ಢಿಲ್ಲೀ ಒಪ್ಪಂದದ ಕುರಿತು ಇವರೊಡನೆ ವಿಚಾರ ವಿನಿಮಯ ನಡೆಸುವ ಆಂಶವಿರುವುದರಿಂದಲೇ ಇವರನ್ನು ಕರೆಸಲಾಗಿದೆ. ಸಂಭಾಷಣೆಯು ತಾನು ಮತ್ತು ಚಲನವಲನಗಳನ್ನು ಮಾತ್ರ ತಿಳಿಸುವ ಸರಕಾರೀ ಪ್ರಕಟಣೆಗಳು ಸರದಿ ಪ್ರಕಾರ ಹೊರಹೊಮ್ಮುತ್ತವೆಯಲ್ಲದೆ, ಬೇರಾವ ಒಳಗುಟ್ಟೂ ಸ್ವಲ್ಪವೂ ಹೊರ ಬೀಳುತ್ತಿಲ್ಲ. ಆಗಾಗ ಪಂಡಿತ ನೆಹರುಗಳು ಸಂಬಂಧಪಟ್ಟ ತನ್ನ ಅನುಯಾಯಿಗಳಿಗೆ ಸಂಗತಿಗಳನ್ನು ತಿಳಿಸುತ್ತಾ, ಆಗತ್ಯವುಳ್ಳ ಅಲೋಚನೆಗಳನ್ನು ಪಡೆಯುತಿದ್ದಾರಂದರೂ, ಮೂಲ ಮಾತುಕತೆಯು ಕೋಣೆಯಲ್ಲಿ ಡಿಕ್ಸನ್-ಲಿಯಾಖತ್-ನೆಹರುಗಳಲ್ಲದೆ ಸುಳಿಯದೆಯವರಿಲ್ಲ.

ಅನುಕೂಲ ವಾತಾವರಣ

ಭಾರತ ಪಾಕಿಸ್ತಾನಗಳೊಳಗೆ ಕಾಶ್ಮೀರದ ಸಂಬಂಧವಾಗಿ ಅಕ್ಷರಾಕ್ಷರ ಭಿನ್ನಾಭಿಪ್ರಾಯಗಳವೆಯೆಂಬುದು ಈ ವರೆಗಿನ ಎಲ್ಲಾ ಸಂಧಾನ ಪ್ರಯತ್ನಗಳ ಸಂದರ್ಭದಲ್ಲೂ ಸ್ಪಷ್ಟವಾಗಿರುವ ಸಂಗತಿ. ಆ ಭಿನ್ನಾಭಿಪ್ರಾಯ ಗಳಲ್ಲಾವುದೂ ಈ ತನಕ ನಿವಾರಣೆಗೊಂಡಿಲ್ಲ. ಈ ರೀತಿ ಕಾಶ್ಮೀರ ಪ್ರಶ್ನೆಯು ಹಿಂದಿನಂತೆಯೇ ಈಗಲೂ ಅಭೇದ್ಯವಾಗಿಯೇ ಉಳಿದು

[೭ನೇ ಪುಟ ನೋಡಿರಿ]

'ಅಂತರಂಗ'ಕ್ಕೆ
೬ ರೂಪಾಯಿ
ಚಂದಾ ಕೊಟ್ಟು
ಒಂದೇ ವರ್ಷದಲ್ಲಿ
50 ಪುಸ್ತಕಗಳನ್ನು ಪಡೆಯಿರಿ.
'ಅಂತರಂಗ' ಉಡುಪಿ.



ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ
'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ತಮ್ಮ ಮೃದು ವಿಶ್ವಾಸ ಪಾತ್ರ
ಕನರಾ ಬ್ಯಾಂಕ್
ಸ್ಥಾಪಿತ 1906
ಭಾರತದೊಳಗೆ 40 ಕ್ಕಿಂತಲೂ ಹೆಚ್ಚು ಶಾಖೆಗಳು

ಮದ್ರಾಸು ಸರಕಾರದಿಂದ ಈಗತಾನೇ ಸಂಧಾನಿಸಿ ಪಡೆದ ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ
'ಮನೆ ಮದ್ದು'
(HOME REMEDIES)
೨೦೦ ಕಾಜಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ಸಿರುವ ಪುಸ್ತಕ. ಬೆಲೆ: ರೂ. ೨
ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

THE
Canara Banking Corporation Ltd.
(Incorporated in India)
Estd: 1906.
Head Office : **UDIPI, (S. I)**

Capital Authorised .... Rs. 25,00,000
Capital Issued, Subscribed &
Paid up .... Rs. 20,00,000
Reserves .... Rs 9,44,765

ನವಯುಗ
ಗುರುವಾರ ಉಡುಪಿ ೨೭-೭-೧೯೫೦

ಕಮ್ಯೂನಿಸ್ಟ್ ಪಕ್ಷ

ಭಾರತದ ಕಮ್ಯೂನಿಸ್ಟ್ ಪಕ್ಷವು ತನ್ನ ಇದು ವರೆಗಿನ ಹಿಂಸಾತ್ಮಕ ಮತ್ತು ಧ್ವಂಸಾತ್ಮಕ ಧೋರಣೆಯನ್ನು ಬಿಟ್ಟು "ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹಳ್ಳೀ ಸುಧಾರಣೆ"ಯ ಹೊಸ ಚಳವಳಿ ಹೂಡುವ ನವೀನ ಧೋರಣೆ ಸ್ವೀಕರಿಸಿದೆ, ಎಂಬ ಪ್ರಕಟಣೆಯು ಜುಲಾಯಿ ತಾ. 19ರಲ್ಲಿ ಮುಂಬಾಯಿಯ ಕಮ್ಯೂನಿಸ್ಟ್ ಮುಖ್ಯ ಕಾರ್ಯಾಲಯದಿಂದ ಹೊರಟಿದೆ. "ಈ ಹೊಸ ಧೋರಣೆಯು ಜೈನಿದ ರಾಷ್ಟ್ರೀಯ ಸ್ವತಂತ್ರ್ಯ ಚಳವಳಿದ ಅನುಭವವನ್ನು ಆಧರಿಸಿ ನಿಲ್ಲಲಿದೆ. ಜೈನವು ಅಂಗೀಕರಿಸಿದ್ದು, ಆಗ್ನೇಯ ಅಸ್ಯಾದ ರಾಷ್ಟ್ರಗಳೇ ಗ ಅನುಕರಿಸುತ್ತಿರುವ ಈ ಹಾದಿಯೇ ಭಾರತದ ಜನತೆಯು ಮುಂದೆ ಇರುವ ಏಕ ಮಾತ್ರ ನಿಜಹಾದಿ" ಎಂದು ಆ ಪ್ರಕಟಣೆಯಲ್ಲಿದೆ. ಹಾನಿಕರ ಎಡಪಕ್ಷೀಯ ಧೋರಣೆ ವಹಿಸಿದ ತನ್ನ ಹಳೇ 'ಪೋಲಿಟ್ ಬ್ಯೂರೋ'ವನ್ನು ಮತ್ತು ದರ ಕೃತಿಗಳನ್ನು ಬಖಿರಸ್ತುಗೊಳಿಸಿ, ಹೊಸ ಧೋರಣೆಗನುಗುಣವಾದ ಹೊಸ 'ಪೊಲಿಟ್ ಬ್ಯೂರೋ'ವನ್ನು ಕಮ್ಯೂನಿಸ್ಟ್ ಪಕ್ಷ ರಚಿಸಿಕೊಂಡಿದೆ. ಎಡಪಕ್ಷೀಯ ಸಾಹಸೀ ಧೋರಣೆ ವಹಿಸಿದ್ದ ಶ್ರೀ. ಬಿ. ಟಿ. ರಣದಿವೆಯರವನ್ನು ಪಕ್ಷದ ಮುಖ್ಯ ಕಾರ್ಯದರ್ಶಿ ಸ್ಥಾನದಿಂದ ಕೆಳಗೆದು ಹಾಕಿ ಕೃಷಿಕ ಸುಧಾರಣಾ ಚಳವಳಿದ ಹುರಿಯ ರ್ತರಾದ ಅಂಧ್ರ ಕಮ್ಯೂನಿಸ್ಟ್ ನಾಯಕ ಶ್ರೀ. ರಾಜೇಶ್ವರ ರಾಯರನ್ನು ಆ ಸ್ಥಾನಕ್ಕೆ ನೇಮಿಸಿಕೊಳ್ಳಲಾಗಿದೆ. ಕಮ್ಯೂನಿಸ್ಟ್ ಪಕ್ಷದ ಮನೋವೃತ್ತಿ ಮಾರ್ಪಾಟಿನ್ನ ಸೂಚಿಸುವ ಈ ಜಾಹೀರಾತಿನ ಮೇಲಿಂದ ಆ ಪಕ್ಷವು ತನ್ನ ಇದುವರೆಗಿನ ಭಯೋತ್ಪಾದಕ ಮತ್ತು ಹಿಂಸಾತ್ಮಕ ಆಚರಣೆಗಳನ್ನು ಬಿಟ್ಟು ವಿಧಾಯಕ ಸಂಘಟನೆಗಳಿಯಿತು ಎಂಬ ಭಾವನೆ ಮೊಳೆಯ ಬೇಕು; ಕಮ್ಯೂನಿಸ್ಟರ ಉಗ್ರಾವತಾರ ಮುಗಿದು ಶಾಂತಾವತಾರ ಆರಂಭಿಸಿತೆಂದು ನಿನೆಸಬೇಕು. ಆದರೆ ವಸ್ತುಸ್ಥಿತಿ ಹಾಗಲ್ಲವೆಂಬುದಕ್ಕೆ ಆಧಾರಗಳು ದೊರೆತಿವೆ. ಭಿನ್ನರಂಗವಾಗಿ ಶಸ್ತ್ರ ಸನ್ಯಾಸ ವೇಶದಿಂದ ತೋರಿಸಿಕೊಳ್ಳಲು ಈಗ ಮುಂದಾಗಿರುವ ಈ ಪಕ್ಷವು ಗುಪ್ತವಾಗಿ ತನ್ನ ಮೊದಲಿನ ಹಿಂಸಾತ್ಮಕ ಕಾರ್ಯಗಳನ್ನೇ ಮುಂದೊತ್ತುವ ಯೋಜನೆಯನ್ನು ಹಾಕಿಕೊಂಡಿದೆಯೆಂಬುದು ಪ್ರಕಾಶಕ್ಕೆ ಬಿದ್ದಿದೆ. ಜನತೆಯ ಕಣ್ಣಿಗೆ ಮಣ್ಣೆರಚಿವದಕ್ಕಾಗಿ ಹೊರಟಿರುವ ಧೋರಣೆ ಬದಲಾವಣೆಯ ಬಹಿರಂಗ ಪ್ರಕಟಣೆಯಲ್ಲಿ ನಮೂದಿಸಲ್ಪಟ್ಟಿರುವ 'ಜೈನೀ ಹಾದಿ' ಯೆಂದರೇನು, ಎಂಬುದನ್ನು ಸ್ಪಷ್ಟೀಕರಿಸುವ ಗುಪ್ತ ಸರ್ಕಿಲಾರುಗಳು ಪಕ್ಷದ ಸದಸ್ಯರಿಗೂ ಹಿತ ಚಿಂತಕರಿಗೂ ಕಮ್ಯೂನಿಸ್ಟ್ ಪಕ್ಷದ ಹೊಸ ಕೇಂದ್ರ ಸಮಿತಿಯಿಂದ ಹೊರಟಿವೆ. ಈ ಗುಪ್ತಾಜ್ಞೆಯು ಸೂಚಿಸುತ್ತಿರುವ ಹಾದಿಯೇ ಬೇರೆ. "ಜೈನೀ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿ ವಿಧಾನದನ್ನಪ್ಪಿಯ ಎರಡು ವಿಭಾಗಗಳಿರಬೇಕು. ರೈತರ, ಬುದ್ಧಿಜೀವಿಗಳ, ನಿಯಂತ್ರಣ ಇತ್ಯಾದಿಗಳ ಭಾರದಿಂದ ಅತ್ಯಪ್ರಯೋಗಿರುವ ವರ ಸಂಯುಕ್ತ ಹಾಗೂ ಸಶಕ್ತ ರಾಷ್ಟ್ರೀಯ ಮುಖಪತ್ರವನ್ನು ರಚಿಸಿಕೊಂಡು ಅಂಗ್ಲೋ ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಮತ್ತು ಹಾಗೂ ಅವರ ಸ್ವದೇಶೀಯ ಏಜಂಟರುಗಳನ್ನು ಹೃತಭಟಿಸುವುದು ಒಂದನೆಯದು; ಇಡೀ ರಾಷ್ಟ್ರದಲ್ಲಿ ಅಧಿಕಾರವನ್ನು ಕಸಗೊಳ್ಳಲು ಗುವಂತೆ ಸಶಸ್ತ್ರ ಗೊರಿಲ್ಲಾ ಯುದ್ಧಗಳನ್ನು ಹೂಡುವುದು, ಸ್ವತಂತ್ರ ರಣ್ಯಗಳನ್ನು ಮತ್ತು ಸ್ವತಂತ್ರ ಸೇನೆಗಳನ್ನು ಕಟ್ಟಿಕೊಳ್ಳುವುದು ಎರಡನೆಯ ಹಾಗೂ ಅವಶ್ಯಕ ವಿಭಾಗ. ಈ ಸಶಸ್ತ್ರ ಹೋರಾಟವು ಹಳ್ಳೀ ರೈತರ ಒಂಡಾಯಿಕೆ ಹೊಂದಿಕೆಯಾಗಿ ಮತ್ತದರೊಡನೆ ಸಮ್ಮಿಳಿತವಾಗಿಯೇ ನಡೆಯಬೇಕು. ಆ ವಿನಹ ಸರಕ್ಷ ಹೋರಾಟವನ್ನು ಸಂಘಟಿಸುವುದು ಅಸಾಧ್ಯವೇ ಸರಿ. ಕ್ರಾಂತಿ ಚಳವಳವನ್ನು ಉಳಿಸಿಕೊಂಡು, ಇಡೀ ರಾಷ್ಟ್ರ ವ್ಯಾಪಿಯಾಗುವಂತೆ ಅದನ್ನು ಬೆಳೆಸುತ್ತಾ ಹೋಗುವುದು ಈ ವಿಧಾನಗಳಂದಲೇ. ಸಶಸ್ತ್ರ ಗೊರಿಲ್ಲಾ ಯುದ್ಧಗಳನ್ನು ಕೂಡಿಯೇ ನವ್ಮ ಹಕ್ಕುವು ಬಲಶಾಲಿಯಾಗಬೇಕು ಮತ್ತು ವ್ಯಾಪಿಸಬೇಕು"-- ಎಂದು ಕಮ್ಯೂನಿಸ್ಟ್ ಪಕ್ಷದ ಗುಪ್ತ ಸರ್ಕಿಲಾರು ತಿಳಿಸಿದೆ. ಈ ಎರಡು ನಾಲಿಗೆಗಳ— ಸ್ವಪರವಂಚಕ ಧೋರಣೆಯ— ಕಮ್ಯೂನಿಸ್ಟ್ ಪಕ್ಷವು ಎಂದಿನಂತೆ ಹಿಂಸಾತ್ಮಕ ಹೋರಾಟಕ್ಕೇನೇ ವ್ಯಾವಲ್ಯತೆಯನ್ನು ಕೊಟ್ಟು, ಜನ ಜಾಹೀರು ರಂಗದಲ್ಲೂ ಅದಕ್ಕೆ ಬೆಂಬಲ ದೊರಕಿಸಿಕೊಳ್ಳುವುದಕ್ಕಾಗಿ ಮತ್ತದರ ಕುರೂಪವನ್ನು ಮರೆ ಮಾಡಿಡುವುದಕ್ಕಾಗಿ ಶಸ್ತ್ರ ತ್ಯಾಗದ ನಾಟಕವನ್ನಾಡುತ್ತಿದೆ ಎಂಬುದು ಸ್ಪಷ್ಟವಾಗಿ ತೋರಿಬರುತ್ತಿದೆ. ಕಾರ್ಯದರ್ಶಿ ಶ್ರೀ ಪಿ. ಸಿ ಜೋಶಿಯವರ ನೇತೃತ್ವದಲ್ಲಿ 1948ರ ವರೆಗೆ ಕಮ್ಯೂನಿಸ್ಟ್ ಪಕ್ಷವು ನೆಹರೂ ಸರಕಾರಕ್ಕೆ ಬೆಂಬಲ ಕೊಡುತ್ತಾ ಬಂದಿತ್ತು. 1948ನೇ ಮಾರ್ಚಿಯಲ್ಲಿ ಕಲ್ಕತ್ತೆಯಲ್ಲಿ ಜರಗಿದ ಕಮ್ಯೂನಿಸ್ಟ್ ಪಕ್ಷದ ಕಾಂಗ್ರೆಸ್. ಇಂತಹ ವ್ಯಾದು ಧೋರಣೆಗಾಗಿಯೇ ಶ್ರೀ ಜೋಶಿಯವರನ್ನು ತಳ್ಳಿಹಾಕಿ ಶ್ರೀ ಬಿ. ಟಿ. ರಣದಿವೆಯರನ್ನು ಕಾರ್ಯದರ್ಶಿ ಸ್ಥಾನಕ್ಕೇರಿಸಿಕೊಂಡಿದ್ದಿತು. ಇವರ ನಾಯಕತ್ವದ ಅವಧಿಯು ಕೇವಲ ಧ್ವಂಸಾತ್ಮಕ ಆಂದೋಲನದ ಕಾಲವಾಗಿದ್ದಿತು. ಮುಷ್ಕರ, ಉಪವಾಸ, ದಂಗೆ ದರೋಡೆ, ರೈಲು ತಪ್ಪಿದ ಇತ್ಯಾದಿ ಅನಾಹುತಕಾರೀ ಘಟನೆಗಳು ಸಂಭವಿಸಿದುದು ಈ ಅವಧಿಯಲ್ಲೇ. ಈಗ ಶ್ರೀ ರಣದಿವೆಯರನ್ನು ಕಿತ್ತುಹಾಕಿ ಆಂಧ್ರದ ಶ್ರೀ ರಾಜೇಶ್ವರ ರಾಯರನ್ನು ನಾಯಕ ಸ್ಥಾನಕ್ಕೇರಿಸಿಕೊಳ್ಳಲಾಗಿದೆ. ಜೋಶಿಯವರ ನಿನೆಯ, ರಣದಿವೆಯವರ ಕಠೋರತೆ, ಇವರೆಡೂ ರಾಜೇಶ್ವರ ರಾಯರ ನೇತೃತ್ವದೊಳಗೆ ಸೇರಿಕೊಂಡಿರುತ್ತದೆ. ಕಮ್ಯೂನಿಸ್ಟ್ ಪಕ್ಷವು ಗುಪ್ತ ಸರ್ಕಿಲಾರಿನಲ್ಲಿಯಂತೆಯೇ ಬಹಿರಂಗ ವಂಚನೆಯನ್ನು ನಡೆಸುವುದಕ್ಕೂ ಮುಂದೆ ಬಂತು, ಎಂಬುದೊಂದಲ್ಲದೆ ಬೇರಾವ ಅರ್ಥವೂ ಅದರ ಈ ಹೊಸ ವೇಶಕ್ಕಿಲ್ಲ. ಈ ಹೊಸ ವಿದ್ಯಮಾನವು ಭಾರತ ಸರಕಾರದ ಮೇಲಾವ ವರಾಮವನ್ನೂ ಉಂಟು ಮಾಡಿಲ್ಲ; ಕಮ್ಯೂನಿಸ್ಟ್ ಪಕ್ಷದ ಕಡೆಗಿನ ಅದರ ಧೋರಣೆಯು ಯಥಾಸ್ಥಿತಿಯಲ್ಲಿಯೇ ಕಾರವಿದೆ. ಭಾವೀ ಚುನಾವಣೆಯತ್ತ ನೋಟವಿಟ್ಟುಕೊಂಡು, ಅಥವಾ ಅನ್ಯ ಉದ್ದೇಶಗಳನ್ನು ಕಟ್ಟಿಕೊಂಡು, ಸಂವಿಧಾನ ಸಾಧಕರಂತೆ ವರ್ತಿಸಿ ಬರುವ ಇಂತಹ ಪಕ್ಷವಂಗಡ ಅಥವಾ ವ್ಯಕ್ತಿಗಳ ಬಲವರ್ಧನೆಗೆ ಜಾರಿ ಬೀಳದ ಎಚ್ಚರಿಕೆಯನ್ನು ಜನತೆ ವಹಿಸಬೇಕಾದುದು ಅಗತ್ಯ.

ಕೊಸರಿದವರು

ಲೋಕ ಯುದ್ಧವಾಗಿ ಬೆಳೆಯುವ ಭೀತಿ ಬೀರುತ್ತಿರುವ ಕೊರಿಯಾ ಯುದ್ಧಸಂತಹ ವಿಶೇಷ ವಿದ್ಯಮಾನವಿರುವಾಗ ಆ ಹೋರಾಟಕ್ಕೆ ಒಂದಲ್ಲೊಂದು ವಿಧದಲ್ಲಿ ಸಂಬಂಧಪಡುವವರೆಲ್ಲಾ ಹೊಸ ವ್ಯಸಿದ್ಧಿಪಡೆಯತಕ್ಕವರೇ. ಆದರೆ ಇಂತಹ ಕೀರ್ತಿಯಲ್ಲೂ ವ್ಯತ್ಯಾಸಗಳಿರುವುದು ಸ್ವಾಭಾವಿಕ. ಕೆಲವರು ಸತ್ಕಾರ್ಯಗಳನ್ನು ಮಾಡಿ, ಇನ್ನು ಕೆಲವರು ದುಷ್ಕಾರ್ಯಗಳಿಗಾಗಿ ಹೆಸರು ಗಳಿಸುತ್ತಾರೆ. ಸ್ವಯತಃ ಕಾರ್ಯ ಸಾಧಿಸಿ ಗಂಭೀರ ಕೀರ್ತಿಯನ್ನು ಗಳಿಸುವವರಂತೆಯೇ ಬಹಳ ಮಾತಾಡಿ ಲಘು ಯಶಸ್ಸನ್ನು ಸಂಪಾದಿಸಿಕೊಳ್ಳುವವರೂ ಇದ್ದಾರೆ. ಲೌಕಿಕ ನಿರ್ವಿಸಿ--ಅಧಿಕ ಪ್ರಸಂಗ ಪ್ರದರ್ಶಿಸಿ— ಅಂತೂ ಯಾವುದೇ ರೀತಿಯಿಂದ ಅಸಾಮಾನ್ಯರೆನ್ನಿಸಿ, ಸುದ್ದಿಯು ಕೊಡುವವರು ಬಹಳ ಮಂದಿ. ಈ ದಿನಗಳಲ್ಲಿ ಯಶೋವಂಕರಾಗಿರುವ ಕೆಲವರ ಪ್ರಸ್ತಾಪವನ್ನಿಲ್ಲಿ ಮಾಡಲಂಗಿದೆ:-

ಉಚ್ಚ ಧ್ಯೇಯಕ್ಕಾಗಿ

ಲೋಕದ ಶಾಂತಿ ಮತ್ತು ಭದ್ರತಾ ಪಾಲನೆ, ಮರು ಸಂಪಾದನೆಗಾಗಿ ಕೊರಿಯಾ ಯುದ್ಧ ಸಂಬಂಧದ ಸಂಧಾನ ವಿಧಾನವೊಂದನ್ನು ಮುಂದಿಟ್ಟು ಪಂಡಿತ ನೆಹರುಗಳು ಈಗ ಪಡೆದಿರುವ ಕೀರ್ತಿಯು ನಿಜಕ್ಕೂ ಅಸಾಮಾನ್ಯವಾದುದು. ಈ ಮಟ್ಟಿಗವರ ಉಚ್ಚ ಧ್ಯೇಯವನ್ನು ಕೊಂಡಾಡದ ಪಕ್ಷವೇ ಇಲ್ಲ. ಕೊರಿಯ ಸಂಬಂಧದ ನೆಹರೂ ಸೂಚನೆಯನ್ನು ಗಣ್ಯದ ಸ್ವಾಲಿನರಂತೂ ಅಮೂಲಾಗ್ರವಾಗಿ ಒಪ್ಪಿಕೊಂಡಿದ್ದಾರಾದರೆ, ಅಮೆರಿಕದ ಆಚೆಸನ್ ಮತ್ತು ಬ್ರಿಟನಿನ ಅಟ್ಲಿಗಳು ಸೂಚನಾ ವಿಧಾನಕ್ಕೊಪ್ಪದಿದ್ದರೂ "ಈ ಸೂಚನೆಗೆ ಪ್ರೇರಕವಾದ ತಮ್ಮ ಶುಭೋದ್ದೇಶವನ್ನು ವಿಶೇಷವಾಗಿ ಗೌರವಿಸುತ್ತೇವೆ" ಎಂದಿದ್ದಾರೆ. ಮೇಲಾಗಿ ಲೋಕ ಪೂಜ್ಯ ಪಂಡಿತ ನೆಹರುಗಳ ಸಂಧಾನ ಯತ್ನವನ್ನು ಶ್ಲಾಘಿಸಿ, ಅವರಾ ಪ್ರಯತ್ನವನ್ನು ಜಸ್ಟಿಕ್ಕೆನೇ ನಿಶ್ಚಿಸದೆ ಮುಂದೊತ್ತಬೇಕೆಂದು ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುವ ಅಗಣಿತ ಪತ್ರಗಳು ವಾಷಿಂಗ್ಟನಿನಲ್ಲಿರುವ ಹಿಂದೀ ರಾಯಭಾರಿ ಕಚೇರಿಗೆ ಅವಿರಾಮವಾಗಿ ಬರುತ್ತಿವೆ. "ಕೊರಿಯದಿಂದ ಅಮೆರಿಕದ ಸೈನ್ಯವು ಹಿಂದೆಗೆಯಬೇಕು" ಎಂಬ ಸೂಚನೆಯೊಂದನ್ನು ಬ್ರಿಟಿಷ್ ಪಾರ್ಲಿಮೆಂಟಿನ ಕೆಲವು ಕೂಲಿಗಾರ ಸದಸ್ಯರೇ ತಯಾರಿಸಿದ್ದಾರಲ್ಲದೆ ನೆಹರೂ ವ್ಯವಹಾರದಿಂದ ಅವರ ಖಂಡನ ಮತ್ತು ಅಭಿವಾಸ್ಯ ಮತ್ತಷ್ಟು ಬಲಗೊಳ್ಳುವಂತಾಗಿದೆ. ಆಕ್ಷೇಪಿಗಳ ರಾಷ್ಟ್ರಗಳಲ್ಲೇ ಪಂಡಿತ ನೆಹರುಗಳ ಅಭಿವಾಸ್ಯಕ್ಕೆಂತಹ ಅನುಮೋದನೆಗಳು ದೊರೆತಿರುವಾಗ ಇಡೀ ಸ್ವಸಂಚದ ಅತ್ಯಧಿಕ ಜನತೆಯು ಪಂಡಿತಜೀಯ ಪ್ರಯತ್ನವನ್ನು ಹೃತ್ಪೂರ್ವಕ ಸ್ವಾಗತಿಸುತ್ತಿರುವಂತೂ ಸ್ವಾಭಾವಿಕ. ಪಂಡಿತ ನೆಹರುಗಳು ಈಗ ಅಖಿಲ ಪ್ರಪಂಚದ ಅಗ್ರಗಣ್ಯ ನ್ಯಾಯಕರ್ತನಾಗಿ ತೋರುತಿದ್ದಾರೆ

ಸುದೈವಿಗಳು

ಮಾರ್ಕಲ್ ಸ್ವಾಲಿನರು ಕಡಿಮೆ ಮಾತಾಡಿ, ಮಹತ್ಕಾರ್ಯ ಸಾಧಿಸಿಕೊಳ್ಳುವುದರಲ್ಲಿ ಹೆಸರಾಗಿರುವಂತೆಯೇ, ಅತ್ಯಂತ ಗುಪ್ತದೈವೀ ನಾಯಕನೆಂದೂ ಗಣಿಸಲ್ಪಟ್ಟಿದ್ದಾರೆ. ನೆಹರೂ ಸಂಧಾನ ಸೂಚನೆಯು ಸ್ವಾಲಿನರ ಸಹಿಯೆಗೊಂದು ಸಿದರ್ಶನ. ಅವರ ಸುಮ್ಮಗೆ ಉಳಿತಂತೆಯೇ, ಅವರೇನೂ ಶಾಂತಿ ವಿರೋಧಿಗಳಲ್ಲ- ಸಂಧಾನತೀತರಲ್ಲವೆಂಬುದನ್ನು ಲೋಕಕ್ಕೆ ವಂದಟ್ಟು ಪಡಿಸಿ, ಅಮೆರಿಕನರು ಮಾಡಿದ್ದ ಅಪಪ್ರಚಾರಗಳ ಜೆಲೆ ಕಡಿಸಿವ ಉಸ್ತಾದರವನ್ನು ಸ್ವಾಲಿನರಿಗೆ ನೆಹರೂ ಸೂಚನೆ ಮಾಡಿದೆ. ಮತ್ತೊಬ್ಬ ಸುದೈವಿಯೆಂದರೆ ಬೆಲ್ಜಿಯಮಿನ ರಾಜಾ ಲಿಯೊಪೋಲ್ಡರು. ಬೆಲ್ಜಿಯಮಿನಿಂದ ಅಟ್ಟಲ್ಪಟ್ಟು ಕಡಂರು ವರುಷಗಳಲ್ಲಿ ವರ್ದಾತೀಯಾಗಿ ಅಡ್ಡಾಡುತಿದ್ದ ರಾಜಾ ಲಿಯೊಪೋಲ್ಡರನ್ನು ಮರಳಿ ಸಿಂಹಾಸನಕ್ಕೇರಿಸಿಕೊಳ್ಳುವ ನಿರ್ಧಾರವನ್ನು ಬೆಲ್ಜಿಯಮ್ ಪಾರ್ಲಿಮೆಂಟು ಮಾಡಿತು. ಈ ಕುರಿತು ಅಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದು ಅದಕ್ಕಾಗಿಯೇ ಸ

ರಕಾರಗಳು ಹುಟ್ಟಿಸಿಯುತ್ತಿದ್ದರೂ ಕೊನೆಗೀ ನಿರ್ಧಾರವಾಗಿ ರಾಜಾ ಲಿಯೊಪೋಲ್ಡರೀಗ ಬೆಲ್ಜಿಯಂ ಸಿಂಹಾಸನದಲ್ಲಿ ರಾಜಿಸುತ್ತಿದ್ದಾರೆ. ಕೆಂಪು ಸಮುದ್ರದಿಂದ ಪರ್ಶಿಯನ್ ಕಂದರದ ವರೆಗೆ ವ್ಯಾಪಿಸಿರುವ ನಾವುದೀ ಅರೇಬಿಯದ ಅತ್ಯಂತ ಪ್ರಧಾನ ವಶಃಲಿ ರಾಜ ಇಬ್ನ್ ನಾವುದರ ಅಲ್ಲಿಕೆಯ ಸುವರ್ಣೋತ್ಸವವೀಗ ಅಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗುತ್ತಿದೆ. ತನ್ನ ರಾಷ್ಟ್ರ ಮತ್ತು ಧರ್ಮಕ್ಕಾಗಿ ಚರಿತ್ರಾರ್ಹ ನೋರಾಟ ಮತ್ತು ಸುಧಾರಣೆಗಳನ್ನು ಹೂಡಿ ಆಸ್ಥಾದಲ್ಲಿ ಹೆಸರು ಕೇಳಿರುವ ಸುದೈವಿಗಳಲ್ಲಿ ಇವರೊಬ್ಬರು.

ಮಾತುಮಲ್ಲರು

ಕೊರಿಯದಲ್ಲಿ ಉತ್ತರ ಕೊರಿಯದ ಸೇನೆಗಳು, ಅಮೆರಿಕದ ಸೇನೆಗಳನ್ನು ಸಮುದ್ರಕ್ಕೆಳಿಸುವ ದಕ್ಷಿಣ ಕರಾವಳಿಯನ್ನು ಮುಟ್ಟಲು ಇನ್ನು 35 ಮೈಲುಗಳು ಮಾತ್ರವುಳಿದಿವೆಯೆಂಬ ವಾರ್ತೆಯು ಇದೇ ತಾ. 24ರಲ್ಲಿ ಬಂದಿರುವಾಗ, "ಉತ್ತರ ಕೊರಿಯದ ಸೇನೆಗಳು ವಿಜಯದ ಸಂಯೋಗವನ್ನಿನ್ನು ಕಳಕೊಂಡಾಯಿತು. ಅವರ ಹಂಚಿಕೆಗಳೆಲ್ಲವೂ ತಪ್ಪಿಹೋಗಿ, ಇನ್ನವರ ಅದೃಷ್ಟವೇ ಬದಲಾಗಲಿದೆ" ಎಂದು ತಾ. 20ರಲ್ಲೇ ಹೇಳಿದ್ದ ಜನರಲ್ ಮೆಕಾರ್ಥರ್ರಂ ಹೇಸಿಮಾತುಮಲ್ಲರೆಂದು ಇಷ್ಟರಲ್ಲೇ ಹೆಸರು ಗಳಿಸಹತ್ತಿದ್ದಾರೆ. ಕೊರಿಯಾ ಯುದ್ಧ ಸಹಾಯಕ್ಕಾಗಿ ಮುನಃ 10,000,000,000 ಡೋಲರುಗಳನ್ನು ಕಾಂಗ್ರೆಸ್ಸಿನಿಂದ ಕೇಳಿ, ಈ ವರುಷದ ಆಮೆರಿಕದ ಸೇನಾವೆಚ್ಚವನ್ನು ಸುಮಾರು 40,000 ಮಿಲಿಯ ಡೋಲರುಗಳಿಗೇರಿಸಿದ ಅಮೆರಿಕಾಧ್ಯಕ್ಷ ಟ್ರುಮೇನರು ಧನಕುಬೇರನೆಂಬ ಕೀರ್ತಿ ಮುಂಡಾಸಿಗೀಗ ಹೊಸ ಝುಲ್ಲರಿಯನ್ನು ಇಳಿಸಿಕೊಂಡಿದ್ದಾರೆ. ಆಹಾರ ಸ್ಥಿತಿಯ ಸಂಬಂಧವಾಗಿ ಆಸಾಮಾನ್ಯ ತತ್ಪ ಬೋಧನೆ ಮಾಡುತ್ತಿರುವ ಭಾರತದ ಆಹಾರ ಮಂತ್ರಿ ಶ್ರೀ. ಕೆ. ಎಮ್. ಮುನ್ಶಿಗಳೂ ಇನ್ನು ವಾಚಾಳೀ ಕೀರ್ತಿ ಗಳಿಸುವಂತಿದೆ. "ಆಹಾರಾಭಾವವಿರುವ ಮದ್ರಾಸು, ಬೊಂಬಾಯಿ, ಪಶ್ಚಿಮ ಬಂಗಾಳ, ಹೈದರಾಬಾದುಗಳು ಧಾನ್ಯ ಸಂಗ್ರಹಕ್ಕಾಗಿ ಒಳ್ಳೇ ರೀತಿಯಿಂದ ದುಡಿಯುತ್ತಿರುವಾಗ, ಉತ್ತರ ಪ್ರದೇಶ, ಮಧ್ಯಪ್ರದೇಶ ಪೂರ್ವ ಪಂಜಾಬು ಗಳಂತಹ ಧಾನ್ಯ ಉಳಿತಾಯ ವಿರುವ ಸಂಸ್ಥಾನಗಳು ನಾಮಮಾತ್ರ ಸಂಗ್ರಹ ಮಾಡಿತ್ತಿವೆ. ಎಲ್ಲೆಡೆಗೂ ಸಾಕಾಗುವಷ್ಟು ಆಹಾರವಿಲ್ಲವೆನ್ನುವುದು ತಪ್ಪು. ವಿತರಣೆ ಸಂಯೋಜ್ಯವಾಗದಿರುವುದೇ ಇಂದಿನ ಸಂಕಷ್ಟಗಳು ಮತ್ತು ಅಭಾವಗಳು ಹುಟ್ಟಿಕೊಂಡಿವೆ" ಎಂದು ಶ್ರೀ. ಮುನ್ಶಿಗಳ ಇದೇ ತಾ. 28ರಲ್ಲಿ ಬೊಂಬಾಯಿಯಲ್ಲುಂದಿದ್ದರು. ನಿಜವಿರಬೇಕು. ಆದರೆ ಭಾರತದ ಆಹಾರ ಮಂತ್ರಿಗಳು ವಿತರಣೆಯನ್ನು ಸರಿಗೊಳಿಸುವ ಕೆಲಸ ಮಾಡಬೇಕಲ್ಲದೆ, ಹೀಗೆ ಆಡುತ್ತಾ ಹೋದರೆ ಅವಂಗೆ ಮಾತುಗಾರನೆಂಬ ಕೀರ್ತಿ ದೊರಕೀತು ಹೊರತು ಜನರಿಗೆ ಧಾನ್ಯ ದೊರೆಯಲಾರದು. ಅಂತೂ ಹೆಸರು ಗಳಿಸುವ ಹಾದಿಗಳು ಹಲವಿನಿ!

(ಹಿನೇ ಪುಟದಿಂದ ಮುಂದೆಂದದುದು.)

ಕೊಂಡಿದೆಯಾದರೂ ಅದನ್ನು ಅಲ್ಲಿಯೇ ಅರಗಿಸಿಕೊಳ್ಳುವಂತಹ ಅನುಕೂಲ ವಾತಾವರಣವು ಮಿಕ್ಕೆಲ್ಲಾ ವಿಧಾನಗಳ ಮಟ್ಟಿಗೂ ಈಗ ನಿರ್ಮಾಣಗೊಂಡಂತಿದೆ. ಈ ಬಾರಿ ಸರ್. ಡಿಕ್ಸನರು ಯಾವ ಕಾರ್ಯಸೂಚಿಯನ್ನೂ ತಯಾರಿಸದೇನೇ ನೆಹರೂ ಲಿಯಾಖತರನ್ನು ಒಟ್ಟುಗೂಡಿಸಲು ಶಕ್ತರಾಗಿದ್ದಾರೆ. ಹೀಗೆ ಒಟ್ಟಾಗಿ ಚರ್ಚೆಗೆ ಕುಳಿತಲ್ಲಿ ಪರಸ್ಪರ ವಿಶ್ವಾಸಾದೇರಗಳಿಂದ ವಿಚಾರ ವಿನಿಮಯ ನಡೆಸುವಷ್ಟು ಸಾಹಾರ್ದತೆ ನೆಹರೂ-ಲಿಯಾಖತರೊಳಗಿನೆ. ಲೀಗ್ ಗೊಂಬಲಗಳ ವೇಳೆ ಮಿ. ಲಿಯಾಖತರು ಎಂತಹ ಕಠೋರ, ಒರಟು ಮನುಷ್ಯನಾಗಿ ತೋರಿದ್ದರೂ ಅವರು ಜನ್ಮತಃ ಸಂಧಾನಪ್ರೇಮಿ ಮತ್ತು ಸೌಮ್ಯ ಸ್ವಭಾವದವರು. ಅಮೆರಿಕದ ಅದರೋಷಚಾರಗಳಲ್ಲಿ ಮುಳುಗಿ ತೇಲಿ ತನ್ನ ಹೃದಯವನ್ನು ಮತ್ತಷ್ಟು ಥಂಡಾಗೊಳಿಸಿಕೊಂಡೇ ಅವರು ಬಂದಿರಬೇಕು. ಹಂಡಿತ ನೆಹರೂಗಳಂತೂ ಅತ್ಯುಚ್ಚನಾಯಕನೆಂಬ ವ್ಯಾಪಂಚಿಕ ಕೀರ್ತಿಯನ್ನು ಇಷ್ಟರಲ್ಲೇ ಗಳಿಸಿಕೊಂಡವರು. ಕೊರಿಯಾ ವ್ಯಾಜ್ಯದಲ್ಲಿ ರಕ್ಯಾ —ಅಮೆರಿಕ ವಾದಿ ಪ್ರತಿವಾದಿಗಳ ನಡುವಿನ ನ್ಯಾಯಾಧೀಶ ಪೀಠಕ್ಕೇರುವ ಅರ್ಹತೆಯನ್ನು ಪ್ರದರ್ಶಿಸಿರುವ ಅವರೇ ಕಾಶ್ಮೀರ ದಾವೆಯಲ್ಲಿ ವಾದಿಯಾಗಿ ನಿಲ್ಲುವದೆಂದಿಗೂ ಭೂಷಣವಲ್ಲ; ಲೋಕಕ್ಕೆ ಬೆಳಕನ್ನು ಬೀರಬಲ್ಲ ಈ ದೀಪದಡಿಯಲ್ಲೇ ಕಾಶ್ಮೀರದ ಕತ್ತಲೆಯಿಳಿದ ಕೊಂಡಿರುವುದು ಹೆಗ್ಗಳಕೆಯ ವಿಷಯವಲ್ಲ. ಮೇಲಾಗಿ ಕೊರಿಯಾ ಯುದ್ಧವು ಜಾಗತಿಕ ಮಹಾ ಸಮರವಾಗಿ ಬೆಳೆಯುವ ಅಪಾಹಾಯವೆಂತೂ ದಿನದಿಂದ ದಿನಕ್ಕೆ ಸಮೀಪಿಸುತ್ತಾ ಇದೆ. ಹೀಗಿದ್ದರೂ ಅಂತಹ ಯುದ್ಧವು ನವೋದಿತ ಸ್ವತಂತ್ರ ರಾಷ್ಟ್ರಗಳಾಗಿರುವ ಭಾರತ ಪಾಕಿಸ್ತಾನವೆರಡಕ್ಕೂ ಸಮಾನ ಗಂಡಾಂತರವನ್ನೊಡ್ಡಬಲ್ಲುದು. ಜೀವನ ಮರಣದ ಪ್ರಶ್ನೆಯೇಳುವ ಅಂತಹ ವಿಶೇಷ ಸನ್ನಿವೇಶಗಳಲ್ಲಿ ಭಾರತ ಪಾಕಿಸ್ತಾನಗಳು ಪರಸ್ಪರ ಒಂದೇ ಆಗಿ ವರ್ತಿಸದಿದ್ದರೆ ಎರಡೂ ತಲತಲಾಂತರಗಳವರೆಗೆ ತಲೆಯೆತ್ತಲಾರದ ಜಡ್ಡುಗತಿಗೀಡಾಗುವ ದುರಾದೃಷ್ಟ ಇದ್ದೇ ಇದೆ. ಇವೆಲ್ಲವುಗಳ ಮೇಲಿಂದ ಈ ಬಾರಿಯ ಥಿಲ್ಲೀ ಮಾತುಕತೆ ಯಶಸ್ವಿಯಾಗಬಹುದೆಂಬ ಆಶೆ ಕಟ್ಟಿಕೊಳ್ಳಬಹುದು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಮ್ಮ ಕನಸಿನ ರಾಮರಾಜ್ಯವಿಂದು ನೆನಸಾಗಬೇಕಾದರೆ, ಈಗ ನಗುತ್ತಿರುವ ರಾವಣರನ್ನೇಕರ ಕೊಲೆಯಾಗಬೇಕು-ಅದಕ್ಕಾಗಿ!

ರಾಮಬಾಣ

[ಪ್ರಕಾಶಚಿತ್ರ]

ಪ್ರೇಮಅದೀಬ್, ರೋಚನಾಸನಾರ್ಥ್, ಚಂದ್ರಮೋಹನ್, ಉಮಾಕಾಂತ್ ಮೊದಲಾದವರು.

ಬರುವಚಿತ್ರ ಚಾಲಿಬುಕ್ ಸವಾರ್

The Udipi Bank Ltd, Udipi.

ಜಪ್ತಿಯೋರ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನ ಪಡುಬಿದ್ರೆ ಬ್ರಾಂಚಿನಲ್ಲಿ ಆಡಿಟ್ಟ ನಗದಗಳ ಯೀಡಿನ ಮೇಲೆ ಪಡಕೊಂಡ ಸಾಲಗಳ ಬಾಬ್ತು, ಅಸಲು ಅವೇಜು, ಬಡ್ಡಿ ಪ, ಯಿತರ ಖರ್ಚುಗಳನ್ನು ಕ್ಲೃಪ್ತ ವ್ಯಾದೆಗೆ ಸಲಾಯಿಸದೆ ಇದ್ದುದರಿಂದ, ಅವರಿಗೆ ದಿಟ್ಟ ರಜಿಸ್ತ್ರಿ ನೋಟೀಸುಗಳು ಜ್ಯಾರಿಯಾದರೂ, ಅವೇಜು ವಸೂಲು ಕೊಡದೆಯಿದ್ದುದರಿಂದಲೂ, ಸದರಿ ಲೋನುಗಳ ಬಾಬ್ತು ಈಡಿಟ್ಟ ನಗದಗಳನ್ನು ಇದೇ ಬರುವ ತಾರೀಕು 5-8-50ನೇ ಶನಿವಾರ ಹಗಲು ಗಂಟೆ 11ಕ್ಕೆ ಬ್ಯಾಂಕಿನ ಉಡ್ಡಿ ಆಫೀಸಿನ ವರಾಂಡದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವದೇ ಕಾರಣದಿಂದಲಾದರೂ ಏಲಂ ಅದೇ ದಿವಸ ಮಾಡಲು ಅನುಕೂಲವಾಗದಿದ್ದರೆ ಬ್ಯಾಂಕಿಗೆ ಯುಕ್ತಕಂಡ ದಿನಕ್ಕೆ ಪುನಃ ನೋಟೀಸು ಕೊಡದೇನೇ ಮುಂದರಿಸಲಾಗುವುದು.

ಸಂಖ್ಯೆ	J. L. ಲೋನು ನಂಬ್ರ	ಹೆಸರು ಮತ್ತು ವಿಳಾಸ.	ಅಸಲು ಅವೇಜು
1	34/49	ಗುಂಡಿಲಾಡಿ ಶೀನ ಶೆಟ್ಟಿ, ರಾಮ ಶೆಟ್ಟಿಯರ ಅಳಿಯ, ಮೂಡು ಗುಂಡಿಲಾಡಿಮನೆ, ಪಡುಬಿದ್ರೆ.	55 0 0
2	79/49	ವಿ. ಯಮ್. ಪೆಂಡನ್, ಕಾಡಿಪಟ್ಣ, ಪಡುಬಿದ್ರೆ.	40 0 0
3	80/49	ವಿಠ್ಠಲರಾವ್, ಆನಂತಯ್ಯನವರ ಮಗ, ಕಳಚೂರು ಗ್ರಾಮ, ಎಲ್ಲೂರು ಪೋಸ್ಟು.	20 0 0
4	153/49	ಬಿ.ಕೆ. ರಾಮಚಂದ್ರಯ್ಯ, ಟೈಲರ್ ಕೃಷ್ಣಪ್ಪಯ್ಯನವರ ಮಗ, ಬೆಂಗ್ರೆ, ಪಡುಬಿದ್ರೆ.	65 0 0
5	160/49	ಎ. ಟಿ. ಶಿವಣ್ಣ ಶೆಟ್ಟಿ, ದೂಜ ಶೆಟ್ಟಿಯರ ಮಗ, ಅಬ್ಬಾಡಿ, ಪಡುಬಿದ್ರೆ [ಬಾಕಿಯುರುವ ಅವೇಜು]	170 0 0
6	177/49	ಕೆ. ಯಲ್. ರಾಮೋದರರಾವ್, ಲಕ್ಷ್ಮಿನಾರಾಯಣ ಕುಂಡಿತ್ತಾಯರ ಮಗ, ಕುಂಜೂರು, ಎಲ್ಲೂರು ಪೋಸ್ಟು.	25 0 0
7	202/49	ಕೆ.ಯಲ್. ರಾಮೋದರ ರಾವ್, ಲಕ್ಷ್ಮಿನಾರಾಯಣ ಕುಂಡಿತ್ತಾಯರ ಮಗ, ಕುಂಜೂರು, ಎಲ್ಲೂರು ಪೋಸ್ಟು.	15 0 0
8	275/49	ಸಿ. ಶೀನಶೆಟ್ಟಿ, ಆಜ್ಞಣ್ಣ ಶೆಟ್ಟಿಯರ ಅಳಿಯ, ಮಗ ನಾಡಮನೆ, ಪಾಡಬೆಟ್ಟು ಗ್ರಾಮ, ಪಡುಬಿದ್ರೆ.	30 0 0

UDIPI
Date 25-7-50

C Narayana Kamath,
AGENT,

ಉಡುಪಿ

ಕರೆಂಟ್ ಚಾರ್ಜನ್ನು – ಸ್ಥಳೀಯ ಇಲೆಕ್ಟ್ರಿಕ್ ಕಂಪೆನಿಯವರು ವಿಧಿಸುತ್ತಾ ಬಂದು ಈಗ ಯುನಿಟಿಗೆ 0-12-0 ಮಾಡಲಿದ್ದಾರೆಂದು ತಿಳಿದು ಬರುತ್ತದೆ. ಇದರಿಂದ ಇಲೆಕ್ಟ್ರಿಸಿಟಿ ಉಪಯೋಗಿಸುವವರು ತೀರಾ ಆಸಮಾಧಾನಗೊಂಡಿದ್ದಾರೆ. ಇಂತಹ ದರವು ಜಗತ್ತಿನಲ್ಲೆಯೇ ಇರಲಾರದೆಂದೂ ಹೀಗೆ ವಿಸುವುದು ಅನ್ಯಾಯವೆಂದೂ ಪತ್ರಿಕಾದಾರರೊಬ್ಬರು ಬರೆಯುತ್ತಾರೆ.

ವಾರ್ಷಿಕೋತ್ಸವ:— ಉಡುಪಿ ಕಲಾನ್ಯಂದದ ವಾರ್ಷಿಕೋತ್ಸವವು ಇದೇ ತಾ. 15 ಮತ್ತು 16ರಲ್ಲು ಶ್ರೀ ಚಂದ್ರೇಶ್ವರ ದೇವಳದ ಮಹಡಿಯಲ್ಲಿ ಜರಗಿತು. ಶ್ರೀ ಪೇಜಾವರ ಮಠದ ಸ್ವಾಮಿಗಳವರು ಉತ್ಸವದ ಉದ್ಘಾಟನೆಯನ್ನು ಮಾಡಿದರು. ಶ್ರೀಗಳಾದ ಕೆ. ಪರಮಾನಂದ ಭಟ್ಟರ ಹಾಸ್ಯಪ್ರಾಣ ಮತ್ತು ಶ್ರೀ ಶ್ರೀನಿವಾಸ ಭಟ್ಟರ ಕನ್ನಡ ಸಂಸ್ಕೃತಿಯ ಕುರಿತು ಭಾಷಣವಾದ ನಂತರ ಅಧ್ಯಕ್ಷರು ಕನ್ನಡ ಕಾದಂಬರಿಗಳ ಕುರಿತು ಉಪನ್ಯಾಸ ಮಾಡಿದರು. ಎರಡನೆ ದಿವಸದ ಕಾರ್ಯಕ್ರಮವು ಶ್ರೀ. ಆರ್. ಎಸ್. ಸುಬ್ರಮಣ್ಯಂ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ವಿ. ಎನ್. ಕುಡ್ವ:— ರೆವಿನ್ಯೂ ಡೋರ್ಡಿನ ಮೆಂಬರರಾದ ಶ್ರೀ ವಿ. ಎನ್. ಕುಡ್ವಾ ಅವರು ತಾ 17ರಲ್ಲು ಉಡುಪಿಗೆ ಬಂದಿದ್ದು ಕ್ರಿಶ್ಚಿಯನ್ ಹ್ಯಾಸ್ಟೂಲನ್ನು ಸಂದರ್ಶಿಸಿ ಅಲ್ಲಿ ಹಳೆ ವಿದ್ಯಾರ್ಥಿ ಸಂಘದವರಿಂದ ಉಪಚರಿಸಲ್ಪಟ್ಟರು. ಮಧ್ಯಾಹ್ನ ಶ್ರೀ ಕೊಟ್ಟಾರ್ ಪದ್ಮನಾಭಯ್ಯನವರ ಆತಿಥ್ಯವನ್ನು ಸ್ವೀಕರಿಸಿದರು. ಸಂಜೆ ಆಜ್ಜರಕಾಡಿನಲ್ಲಿ ವನ ಮಹೋತ್ಸವ ನಡೆಸಿದರು.

ಮ.ಏಸಿಪಾಲಿಟಿಯ ಸ್ಪೆಶಲ್ ಸಭೆಯು ಇವೇ ತಾ 24ರಲ್ಲು ಚೆಯರ್ ಮೇನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಇಲೆಕ್ಟ್ರಿಸಿಟಿ ಕೊರ್ಪೊರೇಶನವರು ಈ ಕಿಂಗಳಿಂದ ದುಬಾರಿ ದರವನ್ನು ಏರಿಸುವರೆ ಮಾಡಿದ ಯೋಜನೆಯನ್ನು ಬಲವಾಗಿ ನಿಷೇಧಿಸಲಾಯಿತು. ಕಂಪೆನಿಯು ತನ್ನ ವಿಧಾರವನ್ನು ಬದಲಾಯಿಸದಿದ್ದರೆ ಇಲೆಕ್ಟ್ರಿಕ್ ದೀಪಗಳ ಕಂಟ್ರಾಕ್ಟನ್ನೇ ರದ್ದು ಮಾಡಬೇಕಾದ ಸಂದರ್ಭ ಬಂದೀತೆಂದು ಕಂಪೆನಿಯ ಆವಗಾಹನೆಗೆ ತರಲಾಯಿತು. ಕಂಪೆನಿಯನ್ನು ಸ್ವಾಧೀನಪಡಿಸಿಕೊಳ್ಳುವಂತೆಯೂ ಜೋಗದಿಂದ ವಿದ್ಯುತ್ ಸಿಗುವ ಏರ್ಪಾಡನ್ನು ಬೇಗನೆ ಮಾಡುವಂತೆಯೂ ಮದ್ರಾಸು ಸರಕಾರವನ್ನು ಕೇಳಿಕೊಳ್ಳಲಾಯಿತು. ಇಲೆಕ್ಟ್ರಿಕ್ ಕಂಪೆನಿಯ ಹೊಸವರ್ಜಿಯ ಕುರಿತು ಜನತೆಯ ಅಭಿಪ್ರಾಯವನ್ನು ಸಂಗ್ರಹಿಸುವರೆ ಒಂದು ಸಾರ್ವಜನಿಕ ಸಭೆಯನ್ನು ಜರಗಿಸುವಂತೆ ಚೆಯರ್‌ಮೆನರಿಗೆ ಅಧಿಕಾರವೀಯಲಾಯಿತು. ಸದ್ಯದ ಪರಿಸ್ಥಿತಿಯಲ್ಲಿ ಇಲೆಕ್ಟ್ರಿಕ್ ದೀಪಗಳೇ ಬೇಡವೆಂಬ ಸೊಲ್ಲು ಅಲ್ಲಲ್ಲಿ ಕೇಳಬರುತ್ತಿದೆ.

ಹೊಸವಾರಪತ್ರಿಕೆ:— "ನಿವೇದನೆ" ಎಂಬ ನಾಮಧೇಯದಿಂದ ಹೊಸತಾಗಿ ಜನ್ಮತಾಳಿದ ಸಮಾಜವಾದೀ ಪಕ್ಷದ ಮಾಸಪತ್ರಿಕೆಯ ಪ್ರಥಮ ಸಂಚಿಕೆಯನ್ನು ಶ್ರೀ ಕು. ಹರದಾಸಭಟ್ಟರು ಇದೇ ತಾ 24ರಲ್ಲು ಸಂಜೆ ಉದ್ಘಾಟಿಸಿದರು. ಸಭಿಕರು ಕುಳಿತನ್ನು ಹಾರೈಸಿ ಮಾತಾಡಿದ ಮೇಲೆ ಪತ್ರಿಕೆಯ ಸಂಪಾದಕ ಶ್ರೀ ಎನ್. ವಿಠಲದಾಸರು ಧನ್ಯವಾದಗಳನ್ನರ್ಪಿಸಿದರು.

ವಿದಾಯ ಸತ್ಕಾರ:— ಮಣಿಪಾಲ್ಯಾಗಂಧಿ ಮೆಮೋರಿಯಲ್ ಕಾಲೇಜಿನ 'ಕಾಮನ್ಸ್' ಮತ್ತು 'ಎಕೌಂಟಿಸ್ಸಿ'ಯ ಲೆಕ್ಚರರ್ ಆಗಿದ್ದು ನಿವೃತ್ತಿ ಹೊಂದಿರುವ ಶ್ರೀ ಯಚ್. ಯನ್. ರಾವ್, ಬಿ.ಕೋಮ್. ರವರಿಗೆ, ಆ ಕಾಲೇಜಿನ ವಿದ್ಯಾರ್ಥಿಗಳು ಪ್ರಿನ್ಸಿಪಾಲ್ ಶ್ರೀ ಯಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಇದೇ ತಾ. 21ರಲ್ಲು ಮಾನಪತ್ರವಿತ್ತು ಗೌರವಿಸಿದರು. ಈ ಸಂದರ್ಭದಲ್ಲಿ ಭಾಷಣಗಳು ಮತ್ತು ಉಪಾಹಾರವಿದ್ದಿತ್ತು.

ಧರ್ಮಸ್ಥಳ

ಸುರತ್ಕಲ್-ಕಟೀಲ ತಾ. 21-7-50 ನೇ ಶುಕ್ರವಾರ ಸಂಜೆ ೪ ಘಂಟೆಗೆ ಮಂಜಾಸ್ ಸಂಸ್ಥೆಯವರಿಂದ ಮಾನ್ಯ ಶ್ರೀ ಕೆ ಮಾಧವಮೇನನ್ ಇವರು ಶ್ರೀಮತಿ ಕುಟ್ಟಿಯಮ್ಮಾಳ್ ಎಂ.ಎಲ್.ಎ. ಮತ್ತು ಡಾ। ಯು. ಪಿ. ಮುಲ್ಕ ಎಂ.ಎಲ್.ಎ. ಇವರೊಂದಿಗೆ ಇಲ್ಲಿಯ ವಿದ್ಯಾದಾಯಿನೀ ಹ್ಯಾಸ್ಕೂಲ್‌ನ್ನು ಸಂದರ್ಶಿಸಿ, ಶಾಲಾವ್ಯವಸ್ಥೆಯನ್ನು ಕಂಡು ಹರ್ಷಿತರಾದುದಲ್ಲದೆ ವಿದ್ಯಾರ್ಥಿಸಂಸ್ಥೆಯ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ, ವಿದ್ಯಾರ್ಥಿಗಳು ವ್ಯಾಸಂಗ ನಿಷ್ಠರಾಗಬೇಕೆಂದೂ, ವಿದ್ಯಾರ್ಥಿ ಸಂಸ್ಥೆಗಳ ಕಾರ್ಯಕ್ರಮಗಳಿಂದ ಉತ್ತಮ ಪ್ರಜೆಗಳಾಗಲು ಬೇಕಾದ ಅನುಭವ ಪ್ರಯೋಜನಗಳನ್ನು ಪಡೆಯಬೇಕೆಂದೂ ಬೋಧಿಸಿದರು. ಧನ್ಯವಾದಾರ್ಪಣೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಕುಂದಾಪುರ—ಕಾನೂನು ಮತ್ತು ವಿದ್ಯಾಖಾತೆಗಳ ಮಂತ್ರಿ ಶ್ರೀ ಮಾಧವ ಮೆನನ್ ಮತ್ತು ಅವರ ಪತ್ನಿ ಶ್ರೀಮತಿ ಕುಟ್ಟಿಯಮ್ಮಾಳ್ ಅಮ್ಮ ಇವರು ತಾ. 20-7-50 ನೇ ಗುರುವಾರ ಬೆಳಗ್ಗೆ ಘಂಟೆ 11ಕ್ಕೆ ಸರಿಯಾಗಿ ಕುಂದಾಪುರಕ್ಕೆ ಬಿಜಯಂಗೈದರು. ಕುಂದಾಪುರ ಟೌ. ಬೋರ್ಡ್ ಯಲ್ಲಿ ಅವರನ್ನು ಊರಮಂದಿಯರೂ, ಕಾಂಗ್ರೆಸ್ಸಿಗರೂ, ಸ್ಥಳೀಯ ಉದ್ಯೋಗಸ್ಥರೂ ಹೂಮಾಲೆಗಳನ್ನು ಹಿಸಿ ಸ್ವಾಗತವನ್ನಿತ್ತರು. ಮಂತ್ರಿಗಳು ಬೋರ್ಡು ಹಾಯರ್ ಎಲಿಮೆಂಟರಿ ಹುಡುಗಿಯರ ಶಾಲೆ, ಬೋರ್ಡು ಬಾಲಕರ ಶಾಲೆ, ಬಿ.ಆರ್. ರಾವ್ಸ್ ಶಾಲೆ, ರೋಮನ್ ಕೆಥೋಲಿಕ್ ಹ್ಯಾಯರ್ ಎಲಿಮೆಂಟರಿ ಶಾಲೆ, ಸೈಂಟ್ ಜೋಸೆಫ್ ಕಾನ್‌ವೆಂಟ್ ಕುಂದಾಪುರ; ಬೋರ್ಡು ಹೈಸ್ಕೂಲು ಕೋಟೇಶ್ವರ ಮತ್ತು ವಿವೇಕ ಹೈಸ್ಕೂಲು, ಕೋಟ ಮುಂತಾದ ಶಾಲೆಗಳನ್ನು ಸಂದರ್ಶಿಸಿದರು. ಸಂಜೆ 4 ಘಂಟೆಗೆ ಕುಂದಾಪುರ ಬಾರ್ ಅಸೋಸಿಯೇಶನ್‌ನವರು ಮಂತ್ರಿಗಳಿಗೆ ಉಪಾಹಾರ ವನ್ನಿತ್ತು ಮಾನಪತ್ರ ಸಮರ್ಪಣೆ ಮಾಡಿದರು. ಸಂಜೆ ಘಂಟೆ 5ಕ್ಕೆ ಸ್ಥಳೀಯ ಆರ್.ಸಿ. ಶಾಲೆಯಲ್ಲಿ ಸಾರ್ವಜನಿಕ ಸಭೆಯು ಡಾ. ಯು. ಪಿ. ಮುಲ್ಕ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರೆಯಿತು. ಪ್ರಥಮವಾಗಿ ಕಾಂಗ್ರೆಸ್ಸು ಕಾರ್ಯಾಲಯದ ಶ್ರೀ ಎಮ್. ಎಮ್. ಹೆಗ್ಡೆಯವರು ಮಂತ್ರಿಗಳ ಮತ್ತು ಅವರ ಪತ್ನಿಯವರ ಹಿರಿಮೆಯ ಮಾತುಗಳನ್ನಾಡಿ ಸ್ವಾಗತಿಸಿದರು. ಶ್ರೀಮತಿ ಕುಟ್ಟಿಯಮ್ಮಾಳ್ ಅಮ್ಮನವರಿಗೆ ಕಾಂಗ್ರೆಸ್ಸಿಗರ ಪರವಾಗಿ ಪುರಭೆಯ ಅಧ್ಯಕ್ಷರಾದ ಶ್ರೀ ಕೆ. ಗೋಪಾಲಕೃಷ್ಣ ಅಡಿಗರು ಮಾನಪತ್ರವನ್ನು ಸಮರ್ಪಿಸಿದರು. ಆ ಸೋಲೆ ಮಂತ್ರಿಗಳು ಸರಕಾರದ ಆರ್ಥಿಕ ಪರಿಸ್ಥಿತಿ ಮತ್ತು ಯೋಜನೆಗಳ ವಿಚಾರದಲ್ಲಿ ವಿಪುಲವಾದ ಭಾಷಣ ಮಾಡಿದರು. ಅಸ್ಪಷ್ಟರ ಭಾಷಣದ ತರುವಾಯ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು. ಸಾರ್ವಜನಿಕ ಸಭೆಯಲ್ಲಿ ಸ್ಥಳೀಯ ಕಾಂಗ್ರೆಸ್ಸು ಕಮಿಟಿ ಮತ್ತು ಕುಂದಾಪುರ ಬೋರ್ಡು ಎಲಿಮೆಂಟರಿ ಶಾಲಾ ಉಪಾಧ್ಯಾಯರ ಯೂನಿಯನ್ನಿನವರು ಮಾನಪತ್ರಗಳನ್ನು ಮಂತ್ರಿಗಳಿಗೆ ಅರ್ಪಿಸಿದರು. ತಾ 21-7-50ರ ಬೆಳಗ್ಗೆ ಘಂಟೆ 8ಕ್ಕೆ ಮಂತ್ರಿಗಳು ಕುಂದಾಪುರದಿಂದ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ತೆರಳಿದರು.

ಕೋಟೇಶ್ವರ ತಾ 13:- ಕೋಟೇಶ್ವರ ಹ್ಯಾಸ್ಕೂಲ್ ಮತ್ತು ಹಾಯರ್ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳ ಪರವಾಗಿ ಭೋಜನ ಮತ್ತು ವಸತಿಗೃಹವೊಂದರ ಉದ್ಘಾಟನಾ ಸಮಾರಂಭವು ಡಿ. ಬೋ. ಮೆಂಬರರಾದ ಶ್ರೀ ಎತ್ತರೆ ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಬೀಜಾಡಿ ಶಾನುಭೋಗ ವಿಠಲ ಶೆಡ್ತಿ ಪ್ರೌಢಶಾಲೆಯದಿಂದ ಜರಗಿತು. ನೆರೆದ ಮಹಾಜನರುದ್ದಿಶ್ಯ ಕುಂದಾಪುರ ರೇಂಜಿನ ಇನ್ಸ್‌ಪೆಕ್ಟರು ಶ್ರೀ ಟಿ.ಶಂಕರರಾಯರು ವಕೀಲ ಶ್ರೀ ಎಮ್. ಎಮ್. ಹೆಗ್ಡೆರು, ಹೈಸ್ಕೂಲ್ ಕಮಿಟಿಯ ಅಧ್ಯಕ್ಷರಾದ ಶ್ರೀ ಕೆ.ಶೀ ಕಾಂಚನಮಖಿತಾಳರು, ವಿದ್ಯಾರ್ಥಿಭವನದ ಆಗೃತ್ಯ ನಡೆಸುವ ರೀತಿ ಪಡೆಯಲೇ ಬೇಕಾದ ಶಿಸ್ತು, ಸಂಘಟನೆಯ, ಕುರಿತು ಭಾಷಣಗಳನ್ನು ಮಾಡಿದರು ರಾಷ್ಟ್ರಗೀತೆಯಾದ ಬಳಿಕ ಚಿಕ್ಕ ಉಪಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ನಂದಿಕೂರು:- ಇದೇ ತಿಂಗಳ ತಾ. 19ನೇ ಬುಧವಾರ ದಿನ ಪೋಸ್ಟಲ್ ಇನಸೆಕ್ಟರರ ನೇತೃತ್ವದಲ್ಲಿ ಹೊಸ ಪೋಸ್ಟಾಪೀಸೊಂದು ತೆರೆಯಲ್ಪಟ್ಟಿತ್ತು. ಪೂರ್ವಾಹ್ನ ಗಂಟೆ 10ಕ್ಕೆ ನಂದಿಕೂರು ಬೋ. ಎ. ಶಾಲಾವಠಾರದಲ್ಲಿ ಶ್ರೀ. ವೈ. ಶಾಂತಿರಾಜಯ್ಯ ಇವರ ಅಧ್ಯಕ್ಷತೆಯಲ್ಲಿ ಊರವರ ಸಭೆಗಳು ಗ್ರಾಮಾಂತರಗಳಲ್ಲಿ ಅಂಚೆ ಅಫೀಸು ಆವಶ್ಯಕತೆಯ ಕುರಿತು ಸಭೆಗಳಲ್ಲಿ ಜರಗಿ ಮಾತನಾಡಿದ ಬಳಿಕ ಪೋಸ್ಟಲ್ ಇನ್ಸ್‌ಪೆಕ್ಟರು ಅಫೀಸನ್ನು ತೆರೆದು ಶ್ರೀ. ಕೆ. ವಾಸು ಸೆಟ್ಟಿ ಬ್ರಾಂಚ್ ಪೋಸ್ಟ್ ಮಾಸ್ಟರರ ನೇಮಕ ಹೊಂದಿದುದನ್ನು ಜ್ಞಾಪಿಸಿದರು ಮತ್ತು ಪಡೆದ ಬಳಿಕ ಹೆ.ಮಾ. ಶ್ರೀ ವೈ. ಸೀತಾರಾಮಯ್ಯ ಸಭಿಕರಿಗೆ ಧನ್ಯವಾದಗಳನ್ನಿತ್ತರು.

ಉದಿಯಾವರ:- ಇಲ್ಲಿಯ ಸೈಂಟ್ ಕ್ಲೇವಿಯರ್ ಹಾಗೂ ಎ. ಶಾಲೆಯಲ್ಲಿ ಇಂದ ಎಂಟನೆ ತರಗತಿಗತಿಗಳಿಗೆ ಕಥೋಲಿಕ ರೇತರರನ್ನು ತೆಗೆದುಕೊಳ್ಳಬಾರದೆಂಬ ಭೂಂಧವನ್ನು ಕಳದ ಜೂನ್ ತಿಂಗಳಾ ಧದಿಂದ ತೆಗೆದುಹಾಕಲಾಗಿದೆ ಎಂದು ದುಬರುತ್ತದೆ.

ಸಾಲಿಗ್ರಾಮ:-ಇದೇ ತಾ. 2ನೇ ಶ್ರೀವಾಣಿ ವಿಲಾಸಿನೀ ಸಂಸ್ಕೃತ ಪಾಠಶಾಲೆಯ ೨೯ನೆ ವರ್ಧಂತ್ಯುತ್ಸವ ಮತ್ತು ಶಾಕಪಿಟಯ ತನೇವರ್ಷದ ಅಧಿವೇಶನ ಕೂಡ ಉಡ್ಡಿ ತಾಲೂಕಿನ ಉತ್ತರ ಶ್ರೇಯ ಪಂಕ್ತಾಧಿಕಾರಿಗಳಾದ ಶ್ರೀ ಟಿ. ಯೋರಾವ್ B. A. L. T. ಇವರ ಮಾನ್ಯಧ್ಯಕ್ಷತೆಯಲ್ಲಿ ಜರಗಿತು. ಬಂಗಿಲೆಯಂಗಳ ಗೀತೆಯು ಹಾಡಲ್ಪಟ್ಟ ಮೆಕಾರ್ಯದರ್ಶಿಗಳು ಸ್ವಾಗತ ಭಾಷಣವನ್ನಿತ್ತ ಅಧ್ಯಕ್ಷರನ್ನಾರಿಸಿ ಗತವರ್ಷದ ವರದಿ ನ್ನೋದಿದರು. ನಂತರ ಸಭಿಕರ ಭಾಷಣದ ಮೇಲೆ ಶಾಲಾ ಬಾಲಕರು ವೀಣೇಸಂತವಿಜಯ ಸಂಸ್ಕೃತ ನಾಟಕವನ್ನೂ ಒಂಚಿಕ್ಕ ಪ್ರಹಸನವನ್ನೂ ರಂಗಭೂಮಿಯಲಿ ಅಭಿನಯಿಸಿದರು. ಅಧ್ಯಕ್ಷ ಭಾಷಣದ ತರ ಲಾಲ್ಯ ವಿದ್ಯಾರ್ಥಿಗಳಿಗೆ ಬಹುಮಾನ ಹಂಚಲಾಯಿತು. ಕಾರ್ಯದರ್ಶಿಗಳು ಧನವಾದವನ್ನರ್ಪಿಸಿದ ನಂತರ ಸರಸ್ವತೀ ಪೂಜಾ ಪ್ರಸಾದ ಹಂಚುವಿಕೆಯಿಂದ ಸಭೆಯು ಮುಕ್ತಾಯವಾಯಿತು.

ಆಲೆವೂರು—ಇಲ್ಲಿಯ ಮೂಡಲೆವೂರು ಎಲಿಮೆಂಟರಿ ಶಾಲೆಗೆ ಗ್ರಾಮಸ್ಥರು ಮತ್ತು ಪಂಪೂರ ವಿದ್ಯಾಭಿಮಾನಿಗಳ ಸಹಾಯದಿಂದ ಕಟ್ಟಿಸಿದ ನೂತನ ಕಟ್ಟಡದ ಪ್ರವೇಶೋತ್ಸವವು ತಾ. 7-7-50ನೇ ಶುಕ್ರವಾರ ಉಡ್ಪಿ ನೋರ್ತ್ ರೇಂಜಿನ ಜೂನಿಯರ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಶ್ರೀ ಎಮ್. ರಾಮಚಂದ್ರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಸ್ವಾಗತ, ವರದಿವಾಚನ, ಸಭಿಕ ಭಾಷಣ, ಅಧ್ಯಕ್ಷರ ಭಾಷಣ, ಧನ್ಯವಾದ, ಮಂಗಲವಾದೊಡನೆ ವಿದ್ಯಾರ್ಥಿಗಳಿಗೂ ನೆರೆದ ಸಭಿಕರಿಗೂ ಸಂಚಕಜ್ಜಾಯ ಮತ್ತು ಬಾಳೆಹಣ್ಣು ಹಂಚಲಾಯಿತು. ಕಟ್ಟಡ ನಿರ್ಮಾಣ ಸಮಿತಿಯ ಕಾರ್ಯದರ್ಶಿ ಶ್ರೀ ನಾರಾಯಣ ನಾಯ್ಕರು ಸದ್ರಿ ಶಾಲೆಯ ಕಟ್ಟಡಕ್ಕೆ ದುಡಿದಿರುವುದು ಸ್ತುತ್ಯ.

Notice

ಕುಂದಾಪುರ ಡಿ. ಮು. ಕೋರ್ಟ್‌ನಲ್ಲಿ

O S. 263/1950

ವಾದಿ. ಟಿ. ಶ್ರೀನಿವಾಸಾಚಾರ್.

ಪ್ರತಿವಾದಿರು 1. ಇಬ್ರಾಹಿಮ್ ಸಾಹೇಬ.
2. ಇಸಮೈಲ್ ಸಾಹೇಬ,
3. ಕಾಂಞಹಮ್ಮದ್ ಸಾಹೇಬ

ಕುಂದಾಪುರ ತಾಲ್ಲೂ ಕುಂದಾಪುರ ಕಸ್ಬಾ ಕೋಡಿಯಲ್ಲಿರುವ ಚಿಯ್ಯಬ್ಬ ಸಾಹೇಬರ ಮಕ್ಕಳು 1ನೇ ಪ್ರತಿವಾದಿ ಇಬ್ರಾಹಿಮ್ ಸಾಹೇಬ 1, 2ನೇ ಪ್ರತಿವಾದಿ ಇಸಾಕ್ ಸಾಹೇಬ 1, 3ನೇ ಪ್ರತಿವಾದಿ ಕುಂಞಹಮ್ಮದ್ ಸಾಹೇಬ 1. ಕೂಡಾ 3ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಂದ ವಾದಿಗೆ ಕಳೆದ ವ್ಯಯ ಸಂವತ್ಸರದ ಆದಿಲಗ್ನಾತಿನ ಮೂಲಗೇಣಿ ಬಾಕಿಯನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾವ್ದು ಮಾಡಿದ ಮೇಲಿನ ದಾವೆಯು ತಾ. 4-8-50ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಕಾರಿತು ಅಕ್ಷೇಪಣೆಗಳೇನಾದರೂ ಇದ್ದಲ್ಲಿ ಸದ್ರಿ ದಿವ್ಸಮೇಲಿನ ಕೋರ್ಟ್ ಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಞಾಪಿಸಲು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S Parameshwariah
Advocate for Pleff.
Date 16-7-1950 Coondapoor

BUY INDIANI ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



Highly perfumed and medicated, worth using daily by one and all keeps hair black and relieves headache etc.

RLGD. TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.

— ಮಕ್ಕಳನ್ನು ಹಡೆಯುವುದು ಸಾಕು —

ಆರೋಕ್ಯ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬೆಳೆ ಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—**ಹಾಲಪ್ಪಾ ಫಕೀರಪ್ಪಾ ಡಾವಣಗೇರಿ**

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಧಾರವಾಡ, —ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಧಾರವಾಡ ಸಿದ್ಧಲಿಂಗಪ್ಪ ಭಾವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರಿಸ್ಸ್ ಆರ್ ಎಲ್ ಕವಲಿದಾಸ, ಕೆಮಿಸ್ಟ್, ಹಾವೇರಿ ಬ್ಯಾಡಗಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಂದಿರಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ಬೈರ್ಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ಸೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಶುದ್ಧತೆಸನ, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

(ಕಳದ ಸಂಚಕೆಯಿಂದ ಮುಂದುವರಿಯುದು)

ವಿವರ ಸೂಚನೆ: ಮೇಲಿನ (5) ನೇ ಕಲಂಮಿನಲ್ಲಿ ಹೇಳಿದ ಈರ್ವರು ಸಿಂಮಂಧಿಕರ ಪೈಕಿ ಯಾರು ಹತ್ತರದನೆ ಎಂದು ನಿರ್ಧರಿಸುವಲ್ಲಿ, ಆ ಪೈಕಿ ಯಾವ ತನು ಮೈನರಳ ಆಸ್ತಿಯನ್ನು ಅವಳು ಅನುಸರಿಸುವ ಈ ಕೋಡಿನಲ್ಲಿ ಹೇಳಿದ ವಾರಿಸು ಹಕ್ಕು ನಿಬಂಧನೆಗಳ ಮೇರೆಗೆ, ಮೊದಲು ಪಡೆಯಲು ಅರ್ಹನೋ ಅಂಥವನು.

ದಂಪತಿಸುಖ ಕೊಡಿಸುವರೇ ಅಥವಾ ದಾಂಪತ್ಯ ವಿರಹಿತಕ್ಕೆ ದಾವಾ ಅತಂಕ

50-B Sec. 49 (1)ರಲ್ಲಿ ತೋರುವ ವಿವಾಹಿತರ ಪೈಕಿ ಯಾರೊಬ್ಬರಿಗೂ ಯಾವ ಕೋರ್ಟಿಗೂ ದಾಂಪತ್ಯ ಸುಖ ಕೊಡಿಸುವರೇ ಅಥವಾ ಕಾನೂನು ದೃಷ್ಟಿಯಿಂದ ದಂಪತಿಗಳನ್ನು ಬೇರ್ಪಡಿಸುವರೇ ಅಥವಾ ವಿರಹಿತಕ್ಕೆ ದಾವಾ ಅಥವಾ ಅರ್ಜಿ ಸ್ವೀಕರಿಸಿಕೊಳ್ಳುವರೇ ಹಕ್ಕಿರ ಕೂಡದು.

ಮದುವೆಯನ್ನು ಅಳಿಸುವ ಯಾ ವಿಚ್ಛೇದಿಸುವ ವಿಧಾನಗಳು

50-C ಸೆಕ್ಷನ್ 49 (1)ರ ಮೇರೆಗೆ ಆದ ಮದುವೆಯು ಈ ಕೆಳಗಿನ ವೇರೆಗೆ ವಿಚ್ಛೇದಿಸ ಅಥವಾ ಅಳಸಬಹುದು.

(a) ವಿವಾಹಿತರು ಮಾಡತಕ್ಕ ರಿಜಿಸ್ಟ್ರಿ ಪತ್ರ ಮೇರೆಗೆ. ಅಥವಾ

(b) ಸೆಕ್ಷನ್ 50 Dಯ ಮೇರೆಗೆ ಕೋರ್ಟಿನವರು ಕೊಡಬಹುದಾದ ಹುಕುಂ ಮೇರೆಗೆ.

ಆದರೆ ವಿವಾಹಿತಳಾದ ಸ್ತ್ರೀಯು ಹದಿನಾರು ವರುಷಗಳನ್ನು ಪೂರೈಸದಿದ್ದರೆ ಅವಳು ಪೂರೈಸುವ ತನಕ ವಿವಾಹ ವಿರದ್ದಾಗತಕ್ಕದ್ದಲ್ಲ.

ಕೋರ್ಟಿಗೆ ರದ್ದತಿಯ ಬಗ್ಗೆ ಅರ್ಜಿ

50-D (1) ಒಬ್ಬ ಗಂಡ ಯಾ ಹೆಂಡತಿಯು ತಮ್ಮ ವಿವಾಹವು ಯಾವ ಜಿಲ್ಲಾ ಕೋರ್ಟಿನ ಜಿರ್ಸ್ಡಿಬಂದಿಯೊಳಗೆ ಜರಗಿರುವದೋ ಅಂತಹ ಜಿಲ್ಲಾ ಕೋರ್ಟಿಗೆ ಅಥವಾ ಯಾವ ಜಿಲ್ಲಾ ಕೋರ್ಟು ಜರ್‌ಬಂದಿಯೊಳಗೆ ವಿವಾಹಿತರು ವಾಸ್ತವಿಸಿಕೊಂಡು ಬರುತ್ತಾರೋ ಅಥವಾ ಕೊನೆಗೆ ವಾಸ್ತವಿಸಿ ಬಂದಿದ್ದರೋ ಅಂತಹ ಜಿಲ್ಲಾ ಕೋರ್ಟಿಗೆ, ಸೆಕ್ಷನ್ 49, ಸಬ್ ಸೆಕ್ಷನ್ (1)ರ ಪ್ರಕಾರ ನಿರ್ವೇದ ತಮ್ಮ ವಿವಾಹವನ್ನು ರದ್ದು ಪಡಿಸುವರೇ ಅರ್ಜಿಕೊಡಬಹುದು.

(2) ಅಂತಹ ಅರ್ಜಿಯು ವಿವಾಹವಾದ ಸ್ಥಳ, ತಾರೀಕು, ವಿವಾಹಿತಳಿಗೆ ಒಪ್ಪಿಗೆ ಕೊಟ್ಟ ಗಾರ್ಡಿಯಾನರಿದ್ದರೆ ಅಂಥವನ ಹೆಸರು ಮತ್ತು ವಿಳಾಸವನ್ನು ಕೊಡತಕ್ಕದ್ದು.

(3) ಅಂತಹ ಅರ್ಜಿಯ ಪ್ರತಿಯನ್ನು ಅರ್ಜಿದಾರ ವ ದಾವಾ ಖರ್ಚಿನಿಂದ ಎದ್ರಿಯ ಮೇಲೆ ಜ್ಯಾರಿಮಾಡತಕ್ಕದ್ದು.

(4) ಅರ್ಜಿದಾರನ ಸಲಹೆಯ ಮೇರೆಗೆ, ಅಂತಹ ಸಲಹೆಯು ಅರ್ಜಿ ಪ್ರತಿಯು ಮೇಲೆ ಹೇಳಿದಂತೆ ಜ್ಯಾರಿಯಾದ ತಾರೀಕಿನಿಂದ ಆರು ತಿಂಗಳ ನಂತರ ಮತ್ತು ಒಂದು ವರ್ಷದ ಒಳಗೆ ಬಂದಲ್ಲಿ ಮತ್ತು ಆ ಸಮಯದೊಳಗೆ ಅರ್ಜಿಯನ್ನು ಹಿಂದಕ್ಕೆ ತೆಗೆದುಕೊಳ್ಳದಿದ್ದಲ್ಲಿ, ಕೋರ್ಟು ತನಗೆ ಉಚಿತ ತೋರುವ ತನ್ನಿಯ ನಿಶಿ

ಹಿಂದೂ ಕೋಡೂ, ಅಳಿಯಸಂತಾನಿಗರೂ

ಎಡ್ವಕೇಟ್ ಬಿ. ಬಿ. ಶೆಟ್ಟಿ, ಲೈಟ್ ಹೌಸ್ ಹಿಲ್, ಮಂಗಳೂರು.

ಸೆಕ್ಷನ್ 49 (1)ರ ಮೇರೆಗೆ ವಿವಾಹವು ಜರಗಿದೆ ಎಂಬ ಮಟ್ಟಿಗೆ ಮತ್ತು ಆ ಸಬ್ ಸೆಕ್ಷನಿನ ಕ್ಲೌಸ್ (i) ಮತ್ತು (ii) ರಲ್ಲಿ ಹೇಳಿದ ಎರಡು ಶರ್ತಗಳನ್ನು ಆ ವಿವಾಹವು ನೆರವೇರಿಸಿದೆ ಎಂಬುದಾಗಿ ತೃಪ್ತಿಪಟ್ಟಲ್ಲಿ ತನ್ನ ಬರಹ ಮೂಲಕ ಹುಕುಂ ನಿತಿ ಅಂತಹ ಮದುವೆಯನ್ನು ರದ್ದೆಂದು ಉಚ್ಚರಿಸತಕ್ಕದ್ದು.

ಮದುವೆ ರದ್ದತಿಯು ಜ್ಯಾರಿಗೆ ಬರುವ ತಾರೀಕು ಮತ್ತು ಅದರ ಪರಿಣಾಮ.

50-E ವಿವಾಹ ರದ್ದತಿಯು ಸೆಕ್ಷನ್ 50-C ಕ್ಲಾಸ್ (a)ಯಲ್ಲಿ ಹೇಳಿದ ರಜಿಸ್ಟ್ರಿ ಪತ್ರದ ತಾರೀಕಿನಿಂದ ಅಥವಾ ಸೆಕ್ಷನ್ 50-D ಸಬ್ ಸೆಕ್ಷನ್ (4)ರಲ್ಲಿ ಹೇಳಿದ ಪ್ರಕಾರದ ಹುಕುಂ ತಾರೀಕು ಲಾಲ್ಯಾತು, ಜಾರಿಗೆ ಬರತಕ್ಕದ್ದಿರುತ್ತದೆ. ಆ ನಂತರ ಆ ವಿವಾಹದ ಇಕ್ಕಡೆಯವರು, ಈ ಭಾಗದ ಶರ್ತಗಳಿಗೊಳಪಟ್ಟು ಪುನರ್‌ವಿವಾಹವಾಗುವ ಹಕ್ಕುಳ್ಳವರಿರುತ್ತಾರೆ.

ವಿವಾಹದ ಆಸಿಂಧು ಸೂಚನೆ

50-F ಸೆಕ್ಷನ್ 49 ಸಬ್ ಸೆಕ್ಷನ್ 2 ಮೇರೆಗೆ ಆಸಿಂಧುವಾದ ಯಾವದೇ ವಿವಾಹವನ್ನು, ಯಾರೊಬ್ಬ ವಿವಾಹಿತ, ವಿವಾಹಿತಳ ಅರ್ಜಿ ಮೇರೆಗೆ, ಯಾವ ಡಿಸ್ಟ್ರಿಕ್ಟ್ ಕೋರ್ಟು ಚಿಕ್ಕಬಂದಿಯೊಳಗೆ ಅಂತಹ ವಿವಾಹವು ನೆಲವೇರಿರುವುದೋ, ಅಥವಾ ವಿವಾಹಿತರು ವಾಸ್ತವಿಸಿಕೊಂಡು ಬರುವರೋ, ಅಥವಾ ಅಜೈರಿಗೆ ಒಟ್ಟು ವಾಸ್ತವಿಸಿಕೊಂಡಿದ್ದರೋ ಅಂತಹ ಡಿಸ್ಟ್ರಿಕ್ಟ್ ಕೋರ್ಟು ತನ್ನ ಡಿಕ್ರಿ ಮೇರೆಗೆ ಆಸಿಂಧುವೆಂದು ಮಾಡಬಹುದು.

10ರಿಂದ 13ರ ವರೆಗಿನ ಅಧ್ಯಾಯಗಳ ಮದುವೆಯ ಮಟ್ಟಿನ ಲಗಾವು

50-G ಈ ಕೆಳಗೆ ಹೇಳುವ I ರಿಂದ IIIನೇ ವರೆಗಿನ ಅಧ್ಯಾಯಗಳು, ಅಗತ್ಯವುಳ್ಳ ಬದಲಾವಣೆಗಳಿಗೆ ಒಳಪಟ್ಟು, ಸೆಕ್ಷನ್ 49 (I)ರಲ್ಲಿ ಹೇಳುವ ಮದುವೆಗಳಿಗೆ ಲಗಾವಾಗುವುದು.

5ನೇ ಸೆಕ್ಷನಿನ ಕ್ಲೌಸ್ (b) ಮತ್ತು ಸದ್ರಿ ಸೆಕ್ಷನಿನ ಕ್ಲೌಸ್ (f)ಗೆ ಲಗಾವಾಗುವ ವಿವರ; ಸೆಕ್ಷನ್ 9, 26ನೇ ಸೆಕ್ಷನಿನ 2, 3, 4,ನೇ ಸಬ್ ಸೆಕ್ಷನ್‌ಗಳು, ಸೆಕ್ಷನ್ 26-B, 38 ಮತ್ತು 39ನೇ ಸೆಕ್ಷನುಗಳು, 40ನೇ ಸೆಕ್ಷನಿನ 2ನೇ ಸಬ್ ಸೆಕ್ಷನ್; ಮತ್ತು 42, 45, 46, 47, ಮತ್ತು 48ನೇ ಸೆಕ್ಷನುಗಳು.

2. Iರಿಂ IIIನೇ ಅಧ್ಯಾಯಗಳಲ್ಲಿ ಹೇಳುವ ಇತರ ಶರ್ತಗಳು ಸೆಕ್ಷನ್ 49 (1)ರಲ್ಲಿ ಹೇಳುವ ವಿವಾಹಕ್ಕೆ ಲಗಾವಾಗುವುದಿಲ್ಲ.

ಈ ಜ್ಯಾರಿಯಲ್ಲಿರುವ ಮದುವೆ ಮತ್ತು ಅದಕ್ಕೆ ಬೇಕಾಗುವ ನಿರ್ಣಯಗಳು

50-H (1) ಈ ಕೋಡು ಜಾರಿಗೆ ಬರುವ ಮೊದಲು ವಿವಾಹದ ಸಮಯ ಮುಗುಮಕ್ಕತ್ತಾಯಂ ಅಥವಾ ಅಳಿಯ ಕಟ್ಟನ್ನಾ ಚರಿಸುತ್ತಿದ್ದ ಸ್ತ್ರೀಯ ಒಳಗೂ ಮತ್ತು ಒಬ್ಬ ಹಿಂದೂವಿನ ಒಳಗೂ ಸಿಂಧುವಾಗಿ ಈ ಕೋಡು ಜ್ಯಾರಿಗೆ ಬರುವ ವೇಳೆ ನಡೆದು ಬರುವ ವಿವಾಹವು ಹಾಗೆಯೇ ಸಿಂಧುವಾಗಿ ನಡೆದುಬರುವುದು; ಅಲ್ಲದೆ 50-B, 50-C, 50-D, 50-E, 50-Gನೇ ಸೆಕ್ಷನುಗಳು ಹೇಗೆ ಸೆಕ್ಷನ್ 49 (1)ರ ಪ್ರಕಾರ ಆಗುವ ವಿವಾಹಗಳಿಗೆ ಲಗಾವಾಗುವುವೋ ಅದೇ ರೀತಿಯಲ್ಲಿ ಮುಂಚಿನ ಮೇಲಿನ ವಿವಾಹಗಳಿಗೂ ಲಗಾವಾಗುವುವು.

(2) ವಿಷಯ ಸುಖಕ್ಕಾಗಿ 'ಮರುಮಕ್ಕತ್ತಾಯಂ ಕಾನೂನು" ಕಲ್ಪ ವಿವರದ (2)ನೇ ಕ್ಲೌಸಿನಲ್ಲಿ ಹೇಳಲ್ಪಟ್ಟ ಯಾವುದೇ ಜಾತಿಯ ಸ್ತ್ರೀಯು, ಆ ಕಾನೂನಿಗೆ ಸೇರಿದ ಅಥವಾ ಸೇರದ ಯಾವುದೇ ಒಬ್ಬ ಹಿಂದುವಿನೊಡನೆ ಒಟ್ಟಾಗಿ ಸೇರಿದ್ದಲ್ಲಿ, ಮತ್ತು ಅಂತಹ ಜೋಡನೆಯು ಬಹಿರಂಗವಾಗಿ ಈ ಕೋಡು ಜಾರಿಗೆ ಬರುವ ಮೊದಲು ಯಾವುದೇ ಪಕ್ಷೀಯರ, ಜಾತಿ ರಿವಾಜಿಗನುಗುಣವಾಗಿ ಆಚರಿಸಲ್ಪಟ್ಟಿದ್ದರೆ, ಮತ್ತು ಹಾಗೆ ಒಟ್ಟು ಸೇರಿ ಬಂದ ವ್ಯಕ್ತಿಗಳು ಅವರ ಜಾತಿ, ಅಥವಾ ಅವರ ಪೈಕಿ ಯಾವನೊಬ್ಬನ ಅಥವಾ ಯಾವ ಕೊಬ್ಬಳ ಜಾತಿ ಪದ್ಧತಿ ಯಾ ರಿವಾಜು ಮೇರೆಗೆ ವಿವಸಯಸುಖಕ್ಕೆ ಅವರೊಳಗೆ ಆತಂಕವಿಲ್ಲದಿದ್ದರೆ, ಅದು ಯಾವ ಸಂದರ್ಭದಲ್ಲಿಯೂ (1ನೇ ಸಬ್ ಸೆಕ್ಷನ್‌ನ್ನು ಕೂಡಾ ಒಳಗೊಂಡು) ಯಾವ ಕಾಲಕ್ಕೂ ಸಿಂಧು ಮತ್ತು ನ್ಯಾಯವಾದ ಮದುವೆಯೆನಿಸುವುದು.

ಆದರೆ ಈ ಮೇಲಿನ ವಾರಾದಲ್ಲಿ ಹೇಳಿದ ವಿಷಯಗಳು ಯಿಕ್ಕಡೆಯವರ ಜಾತಿ ಪದ್ಧತಿ ಅಥವಾ ಯಾವನೊಬ್ಬ ಅಥವಾ ಒಬ್ಬಳ ಜಾತಿಪದ್ಧತಿ ರಿವಾಜು ಮೇರೆಗೆ ಈ ಕೋಡು ಜಾರಿಗೆ ಬರುವ ಮೊದಲು ರದ್ದತಿ ಪಡಿಸಿಕೊಂಡ ವಿವಾಹಗಳನ್ನು ಪುನರ್‌ಜೀವಗೊಳಿಸತಕ್ಕದ್ದಲ್ಲ. ಅಂದರೆ ಅಂತಹ ರದ್ದತಿಯು ಊರ್ಜಿತವಿರತಕ್ಕದ್ದು.

ಈ ಕೋಡು ಜ್ಯಾರಿಗೆ ಬರುವ ಮೊದಲಿನ ವಿವಾಹಗಳನ್ನು ರದ್ದತಿ ಪಡಿಸುವ ವಿಧಾನ

50-I ಈ ಕೋಡು ಜ್ಯಾರಿಗೆ ಬರುವ ಮೊದಲು ಅಳಿಯ ಸಂತಾನ ಅಥವಾ ಮರುಮಕ್ಕತ್ತಾಯಂ ಕಾಯದೆಯನ್ನ ನುಸರಿಸಿ ಬರುವ ಸ್ತ್ರೀಯೊಳಗೂ ಮತ್ತು ಒಬ್ಬ ಹಿಂದುವಿನೊಳಗೂ ಆದ ವಿವಾಹವು, ಸದ್ರಿ ವಿವಾಹಿತರಲ್ಲಿ ಯಾರೊಬ್ಬರಿಗಾದರೂ ಅಂತಹ ವಿವಾಹದ ಸಮಯ, ಇತರ ವಿವಾಹಿತ ಪ್ರಣಯಿ ಯಾ ಪ್ರಣಯಿನಿ (ಗಂಡ ಯಾ ಹೆಂಡತಿ) ಇದ್ದದ್ದಾಗಿ ತೋರಿಬಂದರೆ, ಅಥವಾ ವಿವಾಹಿತರು ವಿವಾಹಕ್ಕೆ ಅಕ್ಷೇಪಕರ

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ: ಕೆ. ಎಸ್. ರಾವ್. ರೋಡು, ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ: "ಯುನ್ಯಾಟೆಡ್ ಇಂಡಿಯಾ ಲ್ಯಾಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142 ಮದ್ರಾಸು.

"ಬೇರೆ ಶಾಸ್ತ್ರಗಳನ್ನೆಹ್ಯೋದಿದರೇನು? ಗೀತೆಯನ್ನು ಜೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು-ದಿ। ಹೊಸಕೆರೆ ಪಿಪಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಭಟ್ಟಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಹಾಗೆ ಸಂಸ್ಕೃತಿಕರಿಸಲು ಅಂತಹ ಯಾವ ಆಪತ್ತಿಕೆ ಯೂ ಕೊಟ್ಟಿಲ್ಲ ಯಾ (ಬ) ಇಸ್ಲಾಮರನುಸರಿಸುವ ಜನರನ್ನು ಲಿಪಿಪಡಿಸಲು ಯಾ ವಿವಾಹ ನೋಂದಣಿ ಯಂತಹ ವಿವಾಹವು ಆಸಿಂಧುವೆಂದಿದ್ದರೆ, ಯಾವ ಜಿಲ್ಲಾ ಕೋರ್ಟು ಮೂಲ ಸಿವಿಲ್ ಜಕ್ರಿ ಬಂದಿಯೊಳಗೆ ಮಧವೆಯಾಗಿರೆನ್ನೊ ಆಥವಾ ವಿವಾಹಿತರು ವಾಸ್ತವಿಸಿ ಬರಲಾತ್ತಾರೋ ಆಥವಾ ವಿವಾಹಿತರು ಕೊನೆಗೆ ವಾಸಿಸಿ ಕೊಂಡಿದ್ದರೊ, ಅಂತಹ ಜಿಲ್ಲಾ ಕೋರ್ಟಿನವರು ತಮ್ಮ ಡಿಕ್ರಿ ವಿಧಿ ಮೇರೆಗೆ ಅಂತಹ ವಿವಾಹವನ್ನು ಅಸಿಂಧುವೆಂದು ಮಾಡಬಹುದು.

ಶಾಸ್ತ್ರೋಕ್ತ ಮತ್ತು ಸಿವಿಲ್ ವಿವಾಹಗಳ ವಿರಹಿತ

50-J (1) ಈ ಆಧ್ಯಾಯದಲ್ಲಿ ಹೇಳಿದ ವಿಷಯಗಳು ಈ ಕೆಳಗೆ ವಿವರಿಸಿದ ವಿವಾಹಗಳಿಗೆ ಬಧ್ಧೀಕರಂಠತಕ್ಕದ್ದಲ್ಲ–

(a) ಒಂದನೇ ಆಧ್ಯಾಯದಲ್ಲಿ ಹೇಳಿದ ಶರ್ತಗಳಿಗನುಗುಣವಾಗಿ ಇಶ್ಯಡೆಯವರೋಗೆ ನೆರವೇರಿದ ಶಾಸ್ತ್ರೋಕ್ತ ವಿವಾಹಗಳು ಅಂತಹ ವಿವಾಹಗಳು, ಒಂದು ನೇ ಕೆ ಸ್ತ್ರೀ ಪಕ್ಷವು (ಆದರೆ ಎರಡೂ ಪಕ್ಷವೂ ಅಲ್ಲ) ಈ ಕೋಡು ಜ್ಯಾರಿಗೆ ಬಾರದಿದ್ದಗೆ ಮರುಮಕ್ಕತ್ತಾಯಂ ಆಥವಾ ಅಳಿಯ ಸಂತಾನ ಕಾನೂನನ್ನು ಅನುಸರಿಸುತ್ತಿದ್ದರೂ ಒಂದನೇ ಆಧ್ಯಾಯದಲ್ಲಿ ಹೇಳಿದಮೇರೆಗೆ ಶಾಸ್ತ್ರೋಕ್ತ ವಿವಾಹವಾಗಿ ಬಹುದು.

(b) ಸ್ತ್ರೀ ಪಕ್ಷವು ಆಥವಾ ಎರಡು ಪಕ್ಷಗಳೂ, ಈ ಕೋಡು ಜ್ಯಾರಿಗೆ ಬಾರದಿದ್ದರೆ, ಮರುಮಕ್ಕತ್ತಾಯಂ ಆಥವಾ ಅಳಿಯ ಸಂತಾನ ಕಾನೂನನ್ನಾಚರಿಸುತ್ತಿದ್ದರೆ ಕೂಡಾ ಅಂಥವರೊಳಗೆ ಕೂಡಾ ಒಂದನೇ ಆಧ್ಯಾಯದ ಶರ್ತಗಳಿಗನುಗುಣವಾಗಿ ನೆರವೇರಿಸಿದ ಸಿವಿಲ್ ವಿವಾಹ.

(2) ಈ ರೀತಿಯಲ್ಲಿ ಮದುವೆಯಾದಲ್ಲಿ ಈ ಆಧ್ಯಾಯ ಹೊರತು I, II, III ನೇ ಆಧ್ಯಾಯಗಳಲ್ಲಿ ಹೇಳಿದ ಶರ್ತಗಳು ಲಗಾಮಾಗುವುವು.

(3) ಈ ಕೋಡು ಜ್ಯಾರಿಗೆ ಬಾರದಿದ್ದಲ್ಲಿ, ಮರುಮಕ್ಕತ್ತಾಯಂ ಆಥವಾ ಅಳಿಯ ಸಂತಾನ ಕಾನೂನನ್ನಾಚರಿಸುವ ಸ್ತ್ರೀಯೊಳಗೂ ಹಿಂದ ವಿನೋಳಗೂ ಆದ ವಿವಾಹವು ಆಗ ಜ್ಯಾರಿಯಲ್ಲಿದ್ದ ಆಥವಾ ನಂತರ ಜ್ಯಾರಿಗೆ ಬಂದ ಕಾನೂನಿನ ದೆಸೆಯಿಂದ ಆಥವಾ ಸೆಕ್ಷನ್ 50 ಳಲ್ಲಿ ಸೆಕ್ಷನ್ (2) ಮೇರೆಗೆ ಸಿಂಧುವಾಗಿದ್ದರೆ, ಸಾವು ಆಥವಾ ಇನ್ನಾವ ಕಾರಣದಿಂದಲೇ ಆಗಲೀ ಆಥವಾ ಈ ಕೋಡು ಜ್ಯಾರಿಗೆ ಬರುವ ಮೊದಲು ಆಥವಾ ನಂತರವೇ ಆಗಲಿ, ಅಂತಹ ವಿವಾಹ ರದ್ದತಿ ಯಾ ವಿಚ್ಛೇದನವಾದಲ್ಲಿ, ಅಂತಹ ವಿವಾಹದ ದೆಸೆಯಿಂದ ಹುಟ್ಟಿದವ ಕ್ಕಳ ಅವರಲ್ಲಿ ಹುಟ್ಟುವ ಸಂತತಿಯವರ ಕಾನೂನು ಮೇರೆಗಿನ ಹಕ್ಕು ಯಾ ಸ್ಥಾನಗಳನ್ನು ಯಾವ ರೀತಿಯಿಂದಲೂ ಭಾದಿಸತಕ್ಕದ್ದಲ್ಲ.

Vನೇ ಆಧ್ಯಾಯ

51 Savings clause

C. Part III ದತ್ತು ಸ್ವೀಕಾರ.

ಈ ಕೆಳಗಿನ ಕ್ಲೊಸನ್ನು ಈ ಭಾಗದಲ್ಲಿ ಸೇರಿಸಿಕೊಳ್ಳಿ:-

ಈ ಭಾಗದಲ್ಲಿ ಹೇಳುವ ಯಾವುದೊಂದು ವಿಷಯವೂ ಈ ಕೋಡು ಪಾಸಾಗದಿದ್ದರೆ ಮರುಮಕ್ಕತ್ತಾಯಂ ಆಥವಾ ಅಳಿಯ ಸಂತಾನವನ್ನು ಆಚರಿಸುತ್ತಿದ್ದ ವ್ಯಕ್ತಿಯು, ಒಂದು ಗಂಡನ್ನಾಗಲೀ ಹೆಣ್ಣನ್ನಾಗಲೀ ಆತನು ಈ ಕೋಡು ಜ್ಯಾರಿಗೆ ಬರುವ ಮುಂಚೆ ಅಪ್ತರಿಸುತ್ತಿದ್ದ ಕಾನೂನು, ಪದ್ಧತಿ, ರಿವಾಜು ಮೇರೆಗೆ ಸ್ವೀಕರಿಸುವುದಕ್ಕೆ ಆತಂಕಿಸ ಕೂಡದು.

ಪದರೆ ಅಂತಹ ದತ್ತು ಸ್ವೀಕಾರವು ದತ್ತು ಸ್ವೀಕರಿಸಿ ಕೊಳ್ಳುವವನಿಂದ ರಜಿಸ್ತ್ರಿ ಪತ್ರ ಮುಖೇನ ಮಾಡಿಕೊಳ್ಳದ್ದಿದ್ದಲ್ಲಿ ಅಂತಹ ದತ್ತು ಸ್ವೀಕಾರವು ಸಿಂಧುವಲ್ಲ.

D

1. 5ನೇ ಭಾಗದಲ್ಲಿ, 90ನೇ ಕ್ಲೊಸನ್ನು ಈ ರೀತಿ ಬರೆಯತಕ್ಕದ್ದು–

90 ಈ ಕೋಡಿನಲ್ಲಿ ಹೇಳುವ ಯಾವ ವಿಷಯವೂ ಈ ಕೆಳಗೆ ಹೇಳುವುದಕ್ಕೆ ಬದ್ಧೀಕೃತವಲ್ಲ–

(a) ಪದ್ಧತಿ ಪ್ರಕಾರದ ವಾರೀಸು ಕ್ರಮದಂಗೆ, ಆಥವಾ ಕೊಡುವಿಕ ಪತ್ರಗಳ ಶರ್ತ ಪ್ರಕಾರ, ಅಥವಾ ಯಾವುದೇ ಅಕ್ಟ ವೇರೆಗೆ ಒಂದೇ ಒಟ್ಟು ವಾರೀಸು ದಾರನಿಗೆ ಬರತಕ್ಕ ಸ್ಥಿರಾಸ್ತಿ. ಆಥವಾ

(b) ಒಂದು ಮಯಾದೆಯ ಸ್ಥಾನಕ್ಕೆ ಸಮ್ಮಂಧ ಪಟ್ಟ ಸ್ಥಿರಾಸ್ತಿ ಇದ್ದು ಕಾಲಕ್ರಿಂದ ಕಾಲಕ್ಕೆ ಒಂದೇ ವ್ಯಕ್ತಿಯು ಕಾನೂನು, ಪದ್ಧತಿ ವ ರಿವಾಜು ಮೇರೆಗೆ ತಿರುವಾಂಕೂರು, ಕೊಚ್ಚಿನ್ ಸ್ಟೇಟು ಗಳಲ್ಲಿಯೂ ಆಥವಾ ಮದ್ರಾಸು ಸಂಸ್ಥಾನದ ಮಲಬಾರು, ದಕ್ಷಿಣ ಕನ್ನಡ ಮತ್ತು ನೀಲಗಿರಿಸ್ ಜಿಲ್ಲೆಗಳಲ್ಲಿ ಅನುಭವಿಸಿ ಬರುವ ಸ್ಥಿರಾಸ್ತಿಗೆ

(c) ತಿರುವಾಂಕೂರು, ಕೊಚ್ಚಿನ್ ಸ್ಟೇಟುಗಳ ಎದಪಳ್ಳಿ, ಪೂಣ್‌ಜೇರ್, ಮತ್ತು ಕಲ್ಲಿ ಮಾನೂರು ಅಸ್ತಿಗಳಿಗೆ

3. Vನೇ ಭಾಗಕ್ಕೆ ಈ ಕ್ಲೊಸನ್ನು ಸೇರಿಸಿಕೊಳ್ಳಿ:-

ಈಗಿರುವ ತರುವಾಡ್ ವಗೈರೆಗಳು ಮುಂದಕ್ಕೂ ಜಾಳಿಬರಬೇಕು

90-A ಈ ಕೋಡು ಜ್ಯಾರಿಗೆ ಬರುವ ಮೊದಲು ಅಂದರೆ ಜ್ಯಾರಿಗೆ ಬರುವ ಸಮಯ, ಯಾವುದ ದರೂ ಅಸ್ತಿಯು ಯಾವುದೇ ಒಂದು ತರವಾಡು, ತವಸಿ, ಇಲ್ಲಮ್ ಆಥವಾ ಕುಟುಂಬ ಆಥವಾ ಕವರಿನ ಎಲ್ಲಾ ಮೆಂಬರರಿಂದ ಒಟ್ಟು ಹಕ್ಕು ಸ್ವಾಧೀನತೆಯಲ್ಲಿ ಇತ್ತೋ ಅಂತಹ ಆಸ್ತಿಯು ಮುಂದಕ್ಕೂ ಆ ಂತಹ ತರವಾಡು, ತವಸಿ, ಯಿಲ್ಲವ್, ಕುಟುಂಬ ಆಥವಾ ಕವರುಗಳ ಪ್ರತ್ಯೇಕ ಮೆಂಬರುಗಳ ಒಟ್ಟು ಸ್ವಾಧೀನ ಮತ್ತು ಹಕ್ಕಿನಲ್ಲಿಂ ತಕ್ಕದ್ದು.

ಆದರೆ ಆ ಆಸ್ತಿಯು ಈ ಕೋಡಿನಲ್ಲಿ ಏರ್ಪಡಿಸುವ ಶರ್ತಗಳಿಗನುಸಾರವಾಗಿ ವಿಭಂಗಿಸಲು ಯಾ ಪಾಲು ಕೇಳಲು ಅರ್ಹವಾಗಿರುತ್ತದೆ.

ಶಬ್ದಾರ್ಥ

90-B ಈ ಕೆಳಗಿನ ಶರ್ತಗಳಲ್ಲಿ "ಒಟ್ಟು ಸಂಸಾರ" ಆಥವಾ "ಸಂಸಾರ" ವೆಂದರೆ ಒಂದು ತರವಾಡು ಆಥವಾ ತವಸಿ, ಯಿಲ್ಲಮ್, ಕುಟುಂಬ ಆಥವಾ "ಕವರು" ಎಂದರ್ಥ. ಅಂತೆಯೇ "ಮೆನೆಜರ್" ಎಂದರೆ ತರವಾಡಿನ ತವಸಿ ಆಥವಾ ಇಲ್ಲಮ್‌ನ ಕಾರ್ನವನ್ ಆಥವಾ ಕುಟುಂಬ ಆಥವಾ ಕವರಿನ ಯಜಮಾನನೆಂದರ್ಥ.

ಲೆಕ್ಕಪತ್ರ

90-C ಒಟ್ಟು ಕುಟುಂಬದ ಯಜಮಾನನು ನಿಜವಾದ ಸರಿಯಾಗಿ ಕುಟುಂಬದ ಹುಟ್ಟು ವೆಚ್ಚಗಳ ಲೆಕ್ಕವನ್ನಿಡತಕ್ಕದ್ದು ಮತ್ತು ಕುಟುಂಬದ ಪ್ರತಿ ಒಬ್ಬ ಮೆಂಬರನಿಗೂ ಪ್ರತಿ ಇಸವಿಯ ಮಾರ್ಚ್ ತಾ. 31ಕ್ಕೆ ಆಂತ್ಯವಾಗುವ ಪ್ರತಿ ವರ್ಷದ ಲೆಕ್ಕವನ್ನೂ ಪ್ರತೀ ಇಸವಿಯ ಮೇ ತಿಂಗಳಲ್ಲಿ ಕುಟುಂಬದ ಮನೆಯಲ್ಲಿ ಯಾವುದೇ ಸಮಯದಲ್ಲಿ ಪರಿಶೀಲಿಸಿ ಶೋಧಿಸಿ ಅದರ ನಕಲನ್ನೂ ಆಥವಾ ಬೇಕಾದ ಅಂಶದ ನಕಲನ್ನು ತೆಗೆಯುವ ಹಕ್ಕಿರತಕ್ಕದ್ದು.

(ಮುಂದುವರಿಯುವುದು)

ಅಂತರಂಗಕ್ಕೆ
ಚಂದಾದಾರರಾಗಿರಿ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯ ನಿಗೂ ರಿಯಂ ಆಗಿ ಯಾಚಿಲ್ಲರೆಯಾಗಿಯೂ ದೊರೆಯುತ್ತವೆ.

ತಲ್ಲಾಜೆ ವ್ಯಾಸರಾಯರ್,
ಗಣಪತಿ, ಉಡುಪಿ.

ಮೆತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪು ಮುತುಸ್ರಾವವಾಗಿ ವೈದ್ಯ, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ–ಬೆಲೆ; ರೂ 3-; ಸ್ಪೆಶ್ಯಲ್ ರೂ. 5; ಅತಿಶಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

MIS. P. DEVEE, F DS. (N. J.)
Tollygunge CALCUTTA
ಸ್ತ್ರೀರೋಗ ವಿಶೇಷಾಂಕವನ್ನು ನುಂಗಳೂರು



ದ ಮ್ಮು ಹೋದರೆ ತಿರುಗಿ ಬಾರದು

ಕಳೆದ ೨೮ ವರ್ಷದಿಮ್ಮಗೆ ಪ್ರಸಿದ್ಧ ಡಾಕ್ಟರರ ಔಷಧದ ಉಪಾಯ

ಪುರೋಹಿತ-ಶ್ವಾಸಹಾರಿ

ಇದು ಕ್ಷಯ, ದಮ್ಮು, ಕೆಮ್ಮು, ಪಿನಸ, ಕಫ, ಎದೆನೋವು, ಶೀತಜ್ವರ, ಪಾರಶ್ವವಾಯು ಮುಂತಾದ ಸಕಲ ಶ್ವಾಸಕೋಶದ ಇಲ್ಲವೇ ಎದೆಯ ವ್ಯಾಧಿಗಳಿಗೆ ಅಮೃತ ಸಮಾನ.

ಪುರೋಹಿತ ಔಷಧಾಲಯ
ಕುಂದಾಪುರ (ಮೈಸೂರು)

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೬ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ನ್ಯಾಯಂಟೇ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಪತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,...ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಗು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೂರಿ, ಆರ್ಥಾಂಗ ವಾಯು ನಡುನೋವು. ಇದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕ-ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯನಾಗದಿದ್ದರೆ, ಮೂತ್ರ ಉರಿದುಬ್ಬುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಪಾಲ್ಯ, ಕಂಬುಳಕಾಯಿ, ಬೈಹೆಣ್ಣು ಬಿಡಬೇಕು.

ಬಾಟ್ಲಿ ೧ಕ್ಕೆ ರೂ. ಪೋಸ್ಟ್ ಚಾರ್ಜ್ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೆರೆ. ಡಾವಣಗೆರೆ ಪ್ರೆಸ್. ನಂಜುಡೇಶ್ವರ ವರ್ಕಿ ಡಾವಣಗೆರೆ.

ಸಕ್ರಮ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೆರೆ,
ಆಯುರ್ವೇದ ಔಷಧಾಲಯ, ಗದಗ-

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd. No. M. 3618

LICENCE No. 31
Licensed to Post
without Prepayment

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

Estd: 1921 ಸ್ಥಾಪನೆ

ನವಯುಗ

30ನೇ ವರ್ಷ
3—8—1950

FOUNDER:
Sri A. B. Shetty
Minister for Agriculture
& Veterinary

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೪೯

NAVAYUGA WEEKLY
Post Box No. 22
UDIPI, S. K.

ಮದ್ರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 3(
No. 49

ಸ್ವರಂಗೆ ಉಪದೇಶಿಕ ಬಹುದು; ಆದರೆ ಅದನ್ನು ಸ್ವತಃ ಆಚರಿಸುವುದು ಅಸಾಧ್ಯ ಆದ್ದರಿಂದಲೇ ಕಾಲಡಿಯಲ್ಲಿ ಕುಂಬಳ ಕಾಯಿಯಿದ್ದರೂ ಅನ್ಯರ ಸಾಸಿವೆಕಾಳಿನತ್ತ ಕೈ ತೋರಿಸುವ ಹವ್ಯಾಸವುಳಿದು ಕೊಂಡಿದೆ.

ಅಸ್ಸಾಮಿನ ತಮ್ಮ ಸ್ನಾನವಾನವನ್ನೇ ತಪ್ಪಿಸಿ ಹಾಕುವ ಯುದ್ಧ ಕೊರಿಯದಲ್ಲಿ ಆರಂಭವಾದ ಮರುದಿನವೇ ಅಮೆರಿಕ ಮತ್ತು ಅದರ ನೇತೃತ್ವದಲ್ಲಿ ಭದ್ರತಾ ಕೌನ್ಸಿಲು ಉತ್ತರ ಕೊರಿಯವನ್ನು ಆಕ್ರಮಣಗಾರನೆಂದು ತೀರ್ಮಾನಿಸಿತು; ಆದರೆ ಕಾಶ್ಮೀರದಲ್ಲಿ ಇಂತಹ ಯುದ್ಧ ನಾರಂಭಿಸಿ ಸುಮಾರು ಎರಡೂವರೆ ವರುಷಗಳು ಕಳೆದರೂ ಅದು ಬೇರೆಯವರೊಡಗಿದ ತಂಟೆ ಯಾದುದರಿಂದ ಇಲ್ಲಿಯ ಆಕ್ರಮಣಗಾರ ರಿಂಥವರೇ ಎಂದು ಗೊತ್ತುಹಚ್ಚಲು ಅಮೆರಿಕ ಬ್ರಿಟನು ಅಥವಾ ಭದ್ರತಾ ಕೌನ್ಸಿಲಿಗಾಗಿಲ್ಲ.

ಕೊರಿಯಾ ಆಕ್ರಮಣದ ಕುರಿತು ತೀರ್ಮಾನಕೊಡುವ ಮೊದಲು ಭದ್ರತಾ ಕೌನ್ಸಿಲಿಗೆ ದಕ್ಷಿಣ ಕೊರಿಯದಿಂದ ದೂರು ಬಂದುದಾಗಲೀ ಉತ್ತರ ಕೊರಿಯದ ಅಥವಾ ಅಖಿಲ ಕೊರಿಯಾ ಜನತೆಯ ವಾದಗಳೇನೆಂಬುದನ್ನು ಕೇಳಿ ಕೊಂಡು ದಾಗಲೀ ಇಲ್ಲ. ಆದರೆ ಕಾಶ್ಮೀರದ ಸಂಬಂಧವಾಗಿ ಭಾರತ ಸರಕಾರವು ದೂರು ಕೊಟ್ಟದ್ದು, ಭಾರತ ಪಾಕಿಸ್ತಾನಗಳೆರಡರ ವಾದ ಪ್ರತಿವಾದಗಳೂ ಮುಂದೆ ಬಂದಿದ್ದು, ಪಾಕಿಸ್ತಾನವು ತಾನು ಕಾಶ್ಮೀರದ ಮೇಲೆ ಆಕ್ರಮಣ ಸೇನೆ ಕಳಿಹಿರುವೆನೆಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದರೂ ಭದ್ರತಾ ಕೌನ್ಸಿಲಿಗೆ ಪಾಕಿಸ್ತಾನವನ್ನು ಆಕ್ರಮಣಾಧಿಪತಿಯೆಂದು ತೀರ್ಮಾನಿಸಲು ಇದುವರೆಗಾಗಿಲ್ಲ.

'ಮುಂದಾಗಿ ಆಕ್ರಮಣಗಾರರು ಹಿಂದೆಗೆದುಕೊಳ್ಳಬೇಕು; ಆನಂತರವೇ ಮಿಕ್ಕ ವಿಷಯಗಳ ಚರ್ಚೆ' ಎಂದೀಗ ಕೊರಿಯಾ ಸಂಬಂಧದಲ್ಲಿ ತೀರ್ಪು ಕೊಟ್ಟಿರುವ ಭದ್ರತಾ ಕೌನ್ಸಿಲು ಕಾಶ್ಮೀರದ ಆಕ್ರಮಣಗಾರರ ಮಟ್ಟಿಗೂ ಅದೇ ತೀರ್ಪನ್ನು ಕೊಡದೆ, ಪಾಕಿಸ್ತಾನಕ್ಕೂ ನ್ಯಾಯವಾದಿ ಭಾರತಕ್ಕೂ ಸಮಾನ ಸ್ಥಾನ ಕೊಟ್ಟಿದೆ.

ಯುದ್ಧ ನಡೆದಿರುವಾಗಲೇ ಕಾಶ್ಮೀರ ಸಮಸ್ಯೆಯ ತೀರ್ಮಾನ ವಿಧಾನಗಳ ಶೋಧನೆಗಳಾಗಿ ಕಾಶ್ಮೀರದ ಭವಿಷ್ಯವನ್ನು ಅಲ್ಲಿಯ ಜನಮತ ನಿರ್ಧಾರಕ್ಕೆ ಒಪ್ಪಿಸಬೇಕೆಂಬ ಸಂಕಲ್ಪವಾಗಿದೆ. ಐಕ್ಯತಾ ವಾದವಿರುವ ಕೊರಿಯದ ಭವಿಷ್ಯವನ್ನೂ ಇದೇ ರೀತಿ ಅಲ್ಲಿಯ ಜನಮತದ ತೀರ್ಮಾನಕ್ಕೆ ಬಿಡಲು ಅನೇಕ ಮತ್ತಿತರ ಹಿಂಬಾಲಕ ರಾಷ್ಟ್ರಗಳು ತಯಾರಿರಲಾರವು.

ಅನ್ಯರಿಗಾಗಿ ಆದುವ ತತ್ವಗಳನ್ನು ಸ್ವತಃ ಆಚರಣೆಯಲ್ಲಿ ತೋರಿಸಲು ಯಾರಿಂದಲೂ ಆಗುತ್ತಿಲ್ಲ ಎಂಬುದಕ್ಕೆ ಇತರ ಜೀವಂತ ನಿದರ್ಶನಗಳು ಪ್ರಾಪಂಚಿಕ ರಾಷ್ಟ್ರೀಯ, ಸಾಮಾಜಿಕ ಹಾಗೂ ಖಾಸಗೀ ಜೀವನದಲ್ಲಿಯೂ ಬೇಕಾದಷ್ಟು ದೊರೆಯುತ್ತಿವೆ.

ಕಮ್ಯೂನಿಸ್ಟರು ಲೋಕದಲ್ಲೆಲ್ಲಾ ಹಾಕುತ್ತಿರುವ ಒತ್ತಡ, ಜುಲುಮೆಗಳ ಕುರಿತು ಕಂಠೋಕ್ತ ಖಂಡನೆ ಮಾಡುತ್ತಿರುವ ಅಮೆರಿಕಾನರು, ಜೈನದಲ್ಲಿಲ್ಲಿಯೂ ಚಿಯಾಂಗ್ ಕೈಶೇಕ್ ಆಡಳಿತೆಯಿಲ್ಲವಾದರೂ ಜೈನದ ಪರವಾಗಿ ಚಿಯಾಂಗ್ ಸರಕಾರದ ಪ್ರತಿನಿಧಿಯನ್ನೇ ಭದ್ರತಾ ಕೌನ್ಸಿಲಿನಲ್ಲಿ ಕಾರಣವಿನಹಾ ಇಟ್ಟುಕೊಂಡು ಜೈನದ ಮೇಲೆ ಒತ್ತಾಯ ಅಥವಾ ಜುಲುಮೆಯನ್ನೇ ಹೇರಿದ್ದಾರೆ.

ಸರ್ವ ಸಮಾನತೆಗಾಗಿ ತಾನಿರುವೆನೆಂದು ಸಾರುತ್ತಿರುವ—ಅಂಗ್ಲೋ ಅಮೆರಿಕಾನ ಸಂಬಂಧವಾದ ಪರಕೀಯ ವರ್ಚಸ್ಸನ್ನು ಖಂಡಿಸುತ್ತಿರುವ—ಸೋವಿಯೆಟ್ ರಶ್ಯವು ಅನ್ಯರ ಮೇಲೆ ತನ್ನ ಮೇಲ್ಮೆಯನ್ನು ಹೇರುವುದಕ್ಕಾಗಿ—ತನ್ನ ವರ್ಚಸ್ಸನ್ನು ಬೀರುವದಕ್ಕಾಗಿ ಎಂತಹೆ ಒತ್ತಡವನ್ನು ಹಾಕುತ್ತಿದೆ ಎಂಬುದಕ್ಕೆ ಯುಗೋಸ್ಲೋವಿಯದ ಮೇಲೆ ಅದು ಬೀರಿರುವ ಬೆದರಿಕೆಯೇ ನಿದರ್ಶನ.

ಭಿನ್ನ ಭಾಷೆ, ಭಿನ್ನ ಸಂಸ್ಕೃತಿ, ಭಿನ್ನ ಭೂಭಾಗಗಳಲ್ಲಿ ಬೆರೆಯವರು ತಾವು, ಎಂಬ ಕಾರಣವನ್ನು ಮುಂದೊಡ್ಡಿ ಅಖಂಡ ಭಾರತದಿಂದ ಪಾಕಿಸ್ತಾನವಾಗಿ ಪ್ರತ್ಯೇಕಗೊಂಡವರು, ಇದು ಅಂತಹ ಕಾರಣಗಳನ್ನೆ ಮುಂದಿಟ್ಟು ಸ್ವರಾಜ್ಯಸ್ಥಾನ ಕೇಳುತ್ತಿರುವವರ ಇದಿರು ಎಂತಹ ಕಾರ್ಯಾಚರಣೆ ಕೈಗೊಂಡಿದ್ದಾರೆಂಬುದನ್ನು ಕಾಣಬಹುದು.

ಸರಕಾರವು ತಮ್ಮನ್ನೇ ಮೂಸಪಾತ್ರೆತೆ ದಬ್ಬಾಳಿಕೆ ಕೈಗೊಂಡಿದೆ, ಎಂದೂ ದೂರುತ್ತಿರುವ ಕಮ್ಯೂನಿಸ್ಟರು ಅಮಾನುಷ ಕೊಲೆ, ದರೋಡೆ, ಹಿಂಸಾ ಕೃತ್ಯಗಳ ಹೆಸರು ಹೋಗಿದ್ದಾರೆ.

ಬ್ರಿಟಿಷ್ ಆಡಳಿತೆಯ ಕಾಲದಲ್ಲಿ ಕಾನೂನು ಭಕ್ಷಣೆಗೆ ಹೆಸರು ಹೋದವರು ಇಂದು ಕಾನೂನು ರಕ್ಷಣೆಯು ಪ್ರಸಿದ್ಧಿಗೆ ತರುತ್ತಾರೆ. ಅಂದು ಅಸಹಕಾರ, ಸತ್ಯಾಗ್ರಹ ಇತ್ಯಾದಿ ಪ್ರತಿಬಂಧಕಾಚರಣೆಗಳನ್ನು ಕಲಿಸಿದವರು, ಇಂದು ಅಂತಹ ಆಚರಣೆಗಳಲ್ಲಿರುವ ಬೇಜವಾಬ್ದಾರಿತನವನ್ನು ಬೋಧಿಸುತಿದ್ದಾರೆ.

ಸಮಾಜದ ದುರ್ನಡತೆಗಳನ್ನು ತಿದ್ದಿ ಉದ್ಧರಿಸುವುದಕ್ಕಾಗಿ—ತಿಷ್ಯವರ್ಗಕ್ಕೆ ಆದರ್ಶ ಪ್ರಾಯರಾಗಿ-ಧರ್ಮದ ರಕ್ಷಣೆಗಾಗಿ ಇರುವ ಧರ್ಮಗುರುಗಳು ಸ್ವತಃ ಮಾಡಿರುವ ಅನಾಚಾರಗಳೀಗ ಸರ್ವಶ್ರುತವಿವೆ.

ತನಗೆ ಯಾರಿಂದಾದರೂ ಯಾವುದೇ ವಿಧದ ಅನ್ಯಾಯ, ಅಪಕಾರಗಳಾಗಬಾರದೆಂಬ ಅತುರ ಮತ್ತು ಜಾಗರೂಕತೆಯಿರುವಂತೆ, ತಾನು ಯಾರಿಗಾದರೂ ಅನ್ಯಾಯವಾಗಲಾರ ಮಾಡಬಾರದೆಂಬ ಮನಸ್ಸಿನಿಂದ ಮತ್ತು ಜಾಗರೂಕತೆಯಿಂದ ಇರುವವರು ಅತ್ಯಪೂರ್ವ.

ಲೋಕನಾಯಕ, ರಾಷ್ಟ್ರನಾಯಕರಂದಿರ್ಪಿನಿ, ಸ್ಥಳೀಯ ಅಧಿಕಾರಿಗಳು ಮತ್ತು ಸಾಮಾನ್ಯ ಜನರ ವರೆಗಿನ ಎಲ್ಲರಿಗೂ ಅವರವರ ಕರ್ತವ್ಯ ಮತ್ತು ಹೊಣೆಗಾರಿಕೆಗಳ ಪಾಠವನ್ನು ಕಲಿಸಿಕೊಡುತ್ತಿರುವ ಪತ್ರಿಕೆಗಳೆಲ್ಲಕ್ಕಿಸ್ಸಂತ ಜವಾಬ್ದಾರಿ ಮತ್ತು ಕರ್ತವ್ಯ ಜ್ಞಾನ ಸಾಕಷ್ಟಿದೆ ಎನ್ನಲಾಗುವದಿಲ್ಲ.

ಆಂತೂ ಪರರದಾಗಲಬೇಕೆಂದು ಬಯಸುವಂತಹದನ್ನೇ ತನ್ನದನ್ನಾಗಿ ಮಾಡಿಕೊಳ್ಳುವಷ್ಟು ಉದಾರ; ಮಾಡಿಕೊಳ್ಳಲಾಗುವದೂ ಅಸಾಧ್ಯ.

✤ ಸ್ವ-ಪರ ಭೇದ ✤

ಉತ್ತರ ಕೊರಿಯದ ಆಕ್ರಮಣವನ್ನು ನಿಷೇಧಿಸಿ, ಅದರ ವಿರುದ್ಧ ಹೋರಾಡಲು ಸೇನೆ ಕಳುಹುವುದನ್ನು ಕೂಡಾ ಈಗ ಯೋಚಿಸುತ್ತಿರುವ ಪಾಕಿಸ್ತಾನವು ಕಾಶ್ಮೀರದ ಆಕ್ರಮಣ ಕೈಗೊಂಡಿದ್ದಿತು; ಆಲ್ಲಿಗೆ ಆಕ್ರಮಣ ಸೇನೆ ಕಳುಹಿದ್ದಿತು.

ಇನ್ನೆಲ್ಲವೂ ತನಗೊಂದು, ಅನ್ಯರಿಗೆ ಬೇರೊಂದು ನ್ಯಾಯ, ಎಂಬುದಕ್ಕೆ ನಿದರ್ಶನಗಳು. ಅದೇ ರೀತಿ ಭಾರತಕ್ಕಾದರೂ ಅನ್ಯರಿಗೆ ಉಪದೇಶಿಸುವುದನ್ನೇ ತನ್ನ ಮಟ್ಟಿಗೂ ಅಂಗೀಕರಿಸಿಕೊಳ್ಳೋಣವೆಂದರೆ ವಿರುದ್ಧ ವಿದ್ಯಮಾನಗಳ ಒತ್ತಡದಿಂದ ಅಸಾಧ್ಯವಾಗಿದೆ ಎಂಬುದನ್ನು ಒಪ್ಪಬೇಕು.

ಕೊರಿಯಾ ದಾವೆಯ ಸಂಬಂಧವಾಗಿ ರಶ್ಯ ಮತ್ತು ಅಮೆರಿಕ, ಬ್ರಿಟನುಗಳ ನಡುವೆ ನ್ಯಾಯಾಧೀಶನಾಗಿ ನಿಲ್ಲುವ ಯೋಗ್ಯತೆಯನ್ನು ಪ್ರದರ್ಶಿಸಿ, ಜ್ಞಾನಗೌರವವನ್ನು ಗಳಿಸಿರುವ ಪಂಡಿತ ನೆಹರು ಗಳು ಕಾಶ್ಮೀರ ನ್ಯಾಯ್ಯದಲ್ಲಿ ವಾದಿಯಾಗಿ ನಿಂತಿದ್ದಾರೆ. ವಾದಿಯೊಳಗಿಯೇ ಇನ್ನೂ ಉಳಿದುಕೊಳ್ಳುವಂತಾಗಿದೆ.

"ಬೇರೆ ಶಾಸ್ತ್ರಗಳನ್ನೆಹ್ಹೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕ್ಲೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು—ಡಿ। ಬೊಸಕೆರೆ ಜಿದಂಬಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಭಟ್ಟಿಯಾಗಿ ಎದ್ದು ಕಾಣುವುದು.

400 ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಅಚ್ಚರಿಯ ಕಾಶ್ಮೀರ ಬಿಕ್ಕಟ್ಟು — ೨

ಕಾಶ್ಮೀರ ವಿವಾದವು ಶೀಘ್ರವಾಗಿ ಹೊಂದುಳ್ಳದು ಎಂಬ ಪ್ರಯತ್ನವೇನೂ ಮತ್ತೊಮ್ಮೆ ಜರ್ಜಿತವಾಯಿತು. ಜುಲಾಯಿ ತಾ. 20ರಂದ 21ನೇ ಸರಿಗೆ ನ್ಯೂಯಿಲ್ಲಿಯಲ್ಲಿ, ಭದ್ರತಾ ಕೌನ್ಸಿಲಿನ ಪ್ರತಿನಿಧಿಯಾಗಿ ಮಧ್ಯಸ್ಥಗಾರ ಸರ್. ಓವೆನ್ ಡಿಕ್ಸನರ ಹಾಜರಿಯೊಡನೆ, ನಡೆದಿದ್ದ ಭಾರತ ಮತ್ತು ಪಾಕಿಸ್ತಾನ್ ಪ್ರಧಾನ ಮಂತ್ರಿಗಳ ಸಮ್ಮೇಳನವು ಒಂದು ತೀರ್ಮಾನಕ್ಕೆ ಬರಲಿಲ್ಲ. ಕೆಲವು ಸೂಕ್ಷ್ಮ ಹಾಗೂ ತೀಕ್ಷ್ಣ ಭಿನ್ನಾಭಿಪ್ರಾಯಗಳ ಗವಕಾಶವಿತ್ತಿರುವ ಕಾಶ್ಮೀರ ಸಮಸ್ಯೆಯನ್ನು ಹೇಗೆ ಎಳೆದರೂ, ಇಕ್ಕಡೆಗೂ ಸಮ್ಮತವಾಗುವ ನಡು ಹಾದಿಗೆ ತರುವುದು ಅತ್ಯಂತ ಕಷ್ಟವೆಂಬುದು ಪುನಃ ಸ್ಪಷ್ಟವಾಗಿದೆ.

ಕೊನೆಯ ಪ್ರಕಟಣೆ

ಐದು ದಿನಗಳ ಪರ್ಯಾಲೋಚನೆಯ ನಂತರ ತಾ. 24ನೇ ಅಪರಾಹ್ನ ನವಢಿಲ್ಲಿಯಿಂದ ಹೊರಬಿದ್ದ ಜತೆ ಪ್ರಕಟಣೆ: ''ಭಾರತ ಪಾಕಿಸ್ತಾನಗಳ ಪ್ರಧಾನ ಮಂತ್ರಿಗಳು ಮತ್ತು ಸರ್. ಓವೆನ್ ಡಿಕ್ಸನರು ಈ ದಿನ ಅಪರಾಹ್ನ 5 ತಾಸಿಗೆ ಪುನಃ ಒಟ್ಟಾದರು. ಜುಲಾಯಿ ತಾ. 20ರಲ್ಲಿ ಆರಂಭಿಸಿ ನಡೆದಿದ್ದ ಸಮ್ಮೇಳನದಲ್ಲಿ ಕೆಲವೊಂದು ಮೂಲ ಸೂತ್ರಗಳನ್ನು ಆಧರಿಸಿ, ಕಾಶ್ಮೀರ ಸಮಸ್ಯೆಯ ಪರ್ಯಾಲೋಚನೆ ನಡೆಯಿತು; ಮತ್ತು ಮೂಲ ಸೂತ್ರಗಳನ್ನು ಲಗ್ಗೀಕರಿಸಲು ಸಾಧ್ಯವುಳ್ಳ ವಿವಿಧ ವಿಧಾನಗಳೂ ಸಂಪೂರ್ಣವಾಗಿ ಚರ್ಚಿಸಲ್ಪಟ್ಟವು. ಚರ್ಚೆಯ ಸಂದರ್ಭದಲ್ಲಿ ಕೆಲವೊಂದು ಪ್ರತ್ಯೇಕ ವಿಷಯಗಳು ಮುಂದೆ ಬಂದುದರಿಂದ ಅವುಗಳಿಗಾಗಿ ಪುನಃ ಪರಿಶೀಲನೆ ನಡಿಸುವ ಅವಶ್ಯಕತೆಯೊದಗಿದೆ. ಪ್ರಧಾನ ಮಂತ್ರಿಗಳ ಇನ್ನೊಂದು ಕೂಟವು ಕರಾಚಿಯಲ್ಲಿ ಸೇರಬೇಕೆಂಬ ಸೂಚನೆ ಬಂತು; ಇನ್ನೊಂದು ದಿನ ಕರಾಚಿಯಲ್ಲಿ ಪ್ರಧಾನ ಮಂತ್ರಿಗಳು ಸೇರತಕ್ಕದ್ದೆಂದು ಗೊತ್ತಾಗಿದೆ". ಮೇಲಿನ ಸರ್ವಸಾಮಾನ್ಯ ಅಭಿಪ್ರಾಯಶ್ಚಿಂತ ವಿರಳವಾದ ಮತ್ತು ಸ್ಪಷ್ಟವಾದ ವಾರ್ತೆ ಢಿಲ್ಲೀ ಸಮ್ಮೇಳನದ ಕುರಿತು ಅಧಿಕೃತವಾಗಿ ಹೊಂಬಿದ್ದಿಲ್ಲ; ಅತ್ಯಂತ ಗುಪ್ತವಾಗಿ ನಡೆದಿದ್ದ ಆ ಮಾತುಕತೆಗಳ ಕುರಿತು ಸರಿಯಾದ ಅಂದಾಜು ಕಟ್ಟುವದು ಕೂಡಾ ಅಸಾಧ್ಯ. ಆದರೆ ಸ್ಪಷ್ಟವಾಗಿ ಊಹಿಸಲಾಗುವ ಒಂದು ವಿಷಯವೆಂದರೆ ಕಾಶ್ಮೀರ ತೀರ್ಮಾನದ ಸಂಬಂಧವಾಗಿ ಯಾವವಿಧದ ಹೃಗತಿಯೂ ಆಗದೆ,ಎಲ್ಲವೂ ಇದ್ದಂತಿದೆ ಎಂಬ.ದೇ. ಆಗೋಸ್ತು ೫ಂಗಳ್ಳಿ ನೆಹರು, ಲಿಯಾಖತರು ಮತ್ತೊಮ್ಮೆ ಕರಾಚಿಯಲ್ಲಿ ಕೂಡಲಿರುವರೆಂಬ ಅಶಕ್ತಿರಣವೊಂದಲ್ಲವಾದರೆ ಕಾಶ್ಮೀರ ಪ್ರಶ್ನೆಯಕಡೆಗೆ ಪುನಃ ಪೂರ್ಣ ಕತ್ತಲೆಕವಿಯುತೆಂದೇ ಹೇಳಬಹುದಿದ್ದಿತು. ಆ ಬಾರಿ ಅಲ್ಪ ಸಂಖ್ಯಾಕರ ಸಂಬಂಧದ ಒಡಂಬಡಿಕೆಗಾಗಿಯೂ ಪ್ರಧಮಃ ಢಿಲ್ಲಿಯಲ್ಲಿ ಅಮೇಲೆ ಕರಾಚಿಯಲ್ಲಿ ನೆಹರೂ ಲಿಯಾಖತ್ ಸಮ್ಮೇಳನ ಸೇರಿದ್ದಿತು. ಆದರೆ ಮೊದಲ ಬಾಗಿಯ ಸಮ್ಮೇಳನದಲ್ಲಿಯೇ 'ಢಿಲ್ಲೀ ಒಪ್ಪಂದ'ವಾಗಿದ್ದು ಎರಡನೇ ಸಮ್ಮೇಳನದಲ್ಲಿ ಅದಕ್ಕನುಮೋದನೆಯಷ್ಟೇ ದೊರೆದಿದ್ದಿತು. ಈ ಬಾರಿ ಮೊದಲನೆಯದೇ ಖಂಡಿತವಾಗಿರುವಾಗ ಎರಡನೆಯದೂ ಅದನ್ನೆ ಅನುಸರಿಸಬಹುದೆಂದು ಈಗ ನಿರೀಕ್ಷಿಸಬಾರದಾದರೂ, ಹೆಚ್ಚಿನ ಆತಿಗವಕಾಶ ಕಾಣುವದಿಲ್ಲ. ನಾವು ಕಳದ ವಾರದಲ್ಲೇ ಊಹಿಸಿದ್ದಂತೆ, ಈಗಿನ ಶಾಂತ ವಾತಾವರಣದಲ್ಲಿ ಜನತೆಯಲ್ಲಿ ನಿರಂಶೆ ಮತ್ತು ಉದ್ವೇಗವನ್ನು ನಿರ್ಮಿಸಬಾರದೆಂಬ ಇಚ್ಛೆಯಿಂದಲೇ ಸಮ್ಮೇಳನವನ್ನು ಕರಾಚಿಗೆ ಮತ್ತು ಇನ್ನೊಂದು ದಿನಕ್ಕೆ ವರ್ಗಾಯಿಸಿಟ್ಟುದಾಗಿರಬೇಕು.

ಅಡ್ಡ ಬಂದುದಾವುದು?

ಕಾಶ್ಮೀರ ಸಂಬಂಧದ ಹಳೇ ವಿಘ್ನವೇ ಈ ಬಾರಿಯೂ ಅಡ್ಡಬಂತೆಂದು ನಂಬಲಾಗಿದೆ. ಅದೆಂದರೆ ಜನಮತ ಸಂಗ್ರಹದ ಪೂರ್ವ ತಯಾರಿಯ ಸ್ವರೂಪ. ಕಾಶ್ಮೀರವು ಭಾರತದೊಂದಿಗೇನೇ ಸೇರಿಕೊಂಡಿರಬೇಕೇ ಅಥವಾ ಪಾಕಿಸ್ತಾನಕ್ಕೆ ಸೇರಬೇಕೇ ಎಂಬ ಭವಿಷ್ಯವನ್ನು ಅಲ್ಲಿಯ ಜನರ ವೋಟು ತೆಗೆದೇ ನಿರ್ಧರಿಸಬಹುದೆಂಬುದನ್ನು ಪ್ರಜಾಸತ್ತಾ ತತ್ವಗಳನ್ವಯ ಭಾರತವೇ ಸೂಚಿಸಿದ್ದಿತು; ಪಾಕಿಸ್ತಾನವೂ ಅದಕ್ಕೊಪ್ಪಿಸಿಕೊಂಡುದರಿಂದ ಭದ್ರತಾ ಕೌನ್ಸಿಲು ಕಾಶ್ಮೀರ ಭವಿಷ್ಯ ನಿರ್ಣಯದ ಯೋಗ್ಯ ವಿಧಾನವಿದು ಎಂದು ತೀರ್ಮಾನಿಸಿದ್ದಿತು. ಇಂತಹ ಜನಮತ ಸಂಗ್ರಹವು ಅಡ್ಡಿ ಆತಂಕ, ಜುಲುಮೆಗಳಿಲ್ಲದೆ ಸ್ವೇಚ್ಛೆಯದಾಗಿ ನಡೆಯುವಂತೆ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದಲ್ಲಿ ಶಾಂತ ವಾತಾವರಣವಿರಬೇಕೆಂಬುದು ನಿರ್ವಿವಾದ. ಅಂತಹ ವಾತಾವರಣದ ನಿರ್ಮಾಣಕ್ಕಾಗಿ ಭದ್ರತಾ ಕೌನ್ಸಿಲು ಮಾಡಿರುವ ನಿರ್ಣಯವು, ಪ್ರಥಮತಃ ಪಾಕಿಸ್ತಾನದ ಸೇನೆಗಳು, ಆಮೇಲೆ ಪಾಕಿಸ್ತಾನ ಪ್ರಜೆಗಳು ಮತ್ತು ಗುಡ್ಡಗಾಡಿನವರು ಕಾಶ್ಮೀರದಿಂದ ಹೋಗತಕ್ಕದ್ದೆಂದೂ, ಆ ನಂತರ ಕಾಶ್ಮೀರದವರೇ ಆಗಿರುವ ಬಂಡಾಯಗಾರರ 'ಆಝಾದ್ ಕಾಶ್ಮೀರ' ಸೈನ್ಯದ ನಿಶ್ಶಸ್ತ್ರೀಕರಣ ಮತ್ತು ಬರ್ಖಾಸ್ತು, ನಡೆಯಬೇಕೆಂದೂ ಸೂಚಿಸಿದೆ. ಈ ಸೂಚನೆಯಂತೆ ವ್ಯವಸ್ಥೆಗಳನ್ನು ಮಾಡುವದಕ್ಕಾಗಿಯೇ ಆ ಬಾರಿ 'ಕಾಶ್ಮೀರ ಕಮಿಶನು' ಬಂದಿದ್ದಿತು; ಆದು ತನ್ನ ಕಾರ್ಯದಲ್ಲಿ ಪರಿಭ್ರಮಣಗೊಂಡು ದರಿಂದ ಮಧ್ಯಸ್ಥಗಾರರಾಗಿ ಸರ್. ಡಿಕ್ಸನರು ಬಂದಿದ್ದಾರೆ. ಕಾಶ್ಮೀರ ಕಮಿಶನು ಸೋತುಬಕ್ಕೂ ಸರ್. ಡಿಕ್ಸನರಿಂದ ಈ ಬಾರಿ ಸಂಧಾನ ಮಾಡಲಾಗದಿದ್ದುದಕ್ಕೆ ಮುಖ್ಯ ಕಾರಣವೆಂದರೆ ಪಾಕಿಸ್ತಾನವು ಭದ್ರತಾ ಕೌನ್ಸಿಲಿನ ಸೂಚನೆಯಂತೆ ಕಾಶ್ಮೀರದಿಂದ ತನ್ನ ಸೇನೆಯನ್ನು ಮುಂದಾಗಿ ಹಿಂದಿಗೆಯಲೊಪ್ಪದಿರುವುದು. ತನ್ನ ಸೈನ್ಯಗಳೊಂದಿಗೇನೇ ಭಾರತದ ಸೈನ್ಯವೂ ಕಾಶ್ಮೀರದಿಂದ ಹಿಂದೆಗೆಯಲ್ಪಡಬೇಕೆಂದು ಪಾಕಿಸ್ತಾನವು ಧಲತೊಟ್ಟು ವಾದಿಸುತ್ತಿದೆ. ಭಾರತವು ಅದಕ್ಕೆಂದಿಗೂ ಒಪ್ಪಿಕೊಳ್ಳುವಂತಿಲ್ಲ. ಕಳದ ಬಾರಿ ಕಾಶ್ಮೀರ ಕಮಿಶನಿನವರೂ ನೆಹರೂ ಲಿಯಾಖತ್ ಸಮ್ಮೇಳನವೊಂದನ್ನು ಕರೆದಿದ್ದರು. ಆ ಸಮ್ಮೇಳನದ ಕಾರ್ಯಕ್ರಮದಲ್ಲಿ ಸೇನೆಯನ್ನು ಹಿಂತೆಗೆಯುವ ವಿಷಯವನ್ನು ಸೇರಿಸಿದ್ದುದರಿಂದ ಆ ಕುರಿತು ಭಾರತ-ಪಾಕಿಸ್ತಾನಗಳೊಳಗೆ ಕೂಡಿಬಾರದೆ ಭಿನ್ನಾಭಿಪ್ರಾಯ ತೋರಿ ಬಂದು ಕೊನೆಗಾ ಸಮ್ಮೇಳನವೇ ಸೇರದಂತಾಗಿದ್ದಿತು. ಈ ಬಾರಿ ಸರ್. ಓವೆನ್ ಡಿಕ್ಸನರು ಯಾವ ಕಾರ್ಯ ಸೂಚಿಯನ್ನೂ ತಯಾರಿಸದೇನೇ ನೆಹರೂ ಲಿಯಾಖತರನ್ನು ಜತೆಸಮ್ಮೇಳನಕ್ಕಾಮಂತ್ರಿಸುವ ಬುದ್ಧಿವಂತಿಕೆ ಪ್ರದರ್ಶಿಸಿದುದರಿಂದ ಅವರು ಸಮ್ಮೇಳನವನ್ನು ಸೇರಿಸಲು ಶಕ್ತರಾದರು. ಆದರೆ ಆ ಬಾರಿ ಕಾರ್ಯಕ್ರಮ ಪತ್ರಿಕೆಯಲ್ಲಿ ಹುಟ್ಟಿದ್ದ ಬಿಕ್ಕಟ್ಟೇ ಈ ಬಾರಿ ಸಮ್ಮೇಳನದ ಮೇಜಿನ ಮೇಲೆ ಹುಟ್ಟಿಕೊಂಡಿತು. ಸಮ್ಮೇಳನ ವಿಫಲವಾಯಿತು.

ಕಲಹದ ಮೂಲರೂಪ

ಕಾಶ್ಮೀರದ ಸಂಬಂಧವಾಗಿ ಭಾರತ ಸರಕಾರದ ಸ್ಪಷ್ಟ ಹಾಗೂ ನ್ಯಾಯಪೂರ್ಣ ಧೋರಣೆಯನ್ನು ಮತ್ತು ಅದರ ವಾದವೆಷ್ಟು ಸತ್ಯವಾದುದೆಂಬುದನ್ನು ಅರಿತುಕೊಳ್ಳಿಬೇಕಾದುದು ಜಗತ್ತು. ಸ್ವತಂತ್ರ ಭಾರತದ ಮತ್ತು ಪಾಕಿಸ್ತಾನದ ಜನನವಾದ 1947ನೆ ಇಸವಿಯ ಅಂತ್ಯ ಭಾಗದಲ್ಲಿ, ಆ ತನಕ ಯಾವ ಕಡೆಗೂ ಸೇರದಿದ್ದ ಕಾಶ್ಮೀರ ಸಂಸ್ಥಾನದ ಮೇಲೆ ಪಾಕಿಸ್ತಾನದ ಹಸ್ತಕರಾದ ಗುಡ್ಡಗಾಡು ಜನರು ಏಕಾಏಕಿ ಧಾಳಿಯಾರಂಭಿಸಿದ್ದರು.ಕೂಡಲೇ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಮಹಾರಾಜರು ತನ್ನ ಸಂಸ್ಥಾನವನ್ನು ಭಾರತದೊಂದಿಗೆ ಜೋಡಣೆಗೊಳಿಸಿದೆನೆಂದು ಸಾರಿ, ಸಹಾಯಕ್ಕೆ ಬರುವಂತೆ ಭಾರತವನ್ನು ಬೇಡಿಕೊಂಡರು. ಆದರೆ ಭಾರತ ಸರಕಾರವು ತನ್ನ ತತ್ವಾನುಸಾರವಾಗಿ ಸಂಸ್ಥಾನವು ರಾಜರದಲ್ಲ, ಪ್ರಜೆಗಳದೆನ್ನುತ್ತಾ ಜನಪ್ರತಿನಿಧಿ ಶೇಕ್ ಅಬ್ದುಲ್ಲಾರಿಗೆ ಅಧಿಕಾರ ಕೊಡಿಸಿ, ಅವರ ಮೂಲಕ ಜೋಡಣೆ ಮತ್ತು ಸಹಾಯ ಯಾಚನೆ ಆದನಂತರವೇ ಕಾಶ್ಮೀರವನ್ನು ಮಿಕ್ಕ ಸಂಸ್ಥಾನಗಳ ಪ್ರಾದರಿಯಲ್ಲಿ ತನ್ನದನ್ನಾಗಿ ಮಾಡಿಕೊಂಡು ಆಲ್ಲಿಗೆ ಸೇನೆ ರವಾನಿಸಿದ್ದಿತು. ಆ ಮೇಲೆ ಆಕ್ರಮಣಗಾರರಿಗೆ ಪಾಕಿಸ್ತಾನದ ಪ್ರೋರಣೆ, ಸಹಾಯಗಳಷ್ಟೇ ಬಯಸಿತ್ತಿದ್ದುದಲ್ಲ, ಪ್ರತ್ಯಕ್ಷ ಪಾಕಿಸ್ತಾನ್ ಸೇನೆಯೇ ಕಾಶ್ಮೀರರಂಗಭೂಮಿಗೆ ಕಂಡು ಬಂದುದರಿಂದ ಭಾರತವು ಪಾಕಿಸ್ತಾನದ ಮೇಲೆ ಬೇಳುವುದು ನ್ಯಾಯ ಮತ್ತು ಸಾಧ್ಯವಿದ್ದಿತು. ಆದರೂ ಶಾಂತಿಪ್ರೇಮಿಯಾದ ಭಾರತ ಸರಕಾರವು ಪಾಕಿಸ್ತಾನದ ಈ ವರ್ತನೆಗಾಗಿ ಭದ್ರತಾ ಕೌನ್ಸಿಲಿಗೆ ದೂರುಕೊಟ್ಟಿತು. ಪ್ರಥಮತಃ ಪಾಕಿಸ್ತಾನವು ತುಮುಲಕೃತ್ಯಗಳಣದ ಸಹಭಾಗಿಯಲ್ಲವೆಂದು ಅಲ್ಲಗಳೆದರೂ ಕೊನೆಗೆ ತನ್ನ ಸೇನೆಗಳು ಅಲ್ಲಿರುವವೆಂಬುದನ್ನು ಒಪ್ಪಿಕೊಂಡಿತು. ಭದ್ರತಾ ಕೌನ್ಸಿಲು ಮೊದಲೇ ಗೊತ್ತುಹಚ್ಚಲು ಸಾಧ್ಯವಿದ್ದರೂ ಹಾಗೆ ಮಾಡದೆ ಬಟ್ಟುದಪ್ಪೇ ಅಲ್ಲ; ಸ್ವತಃ ಪಾಕಿಸ್ತಾನವು ತನ್ನ ಆಕ್ರಮಣವರ್ತನೆಯನ್ನು ಒಪ್ಪಿಕೊಂಡ ಮೇಲಾದರೂ ಪಾಕಿಸ್ತಾನವನ್ನು ಅಪರಾಧಿಯೆಂದು ಗಣಿಸಲಿಲ್ಲ. ನ್ಯಾಯವೊಂದೇ ಎಂದಾಗುತ್ತಿದ್ದರೆ ಇಂದು,''ಎಲ್ಲಕ್ಕಿಂತ ಪ್ರಥಮತಃ ಧಾಳಿಗಾರರು ಮೊದಲಿದ್ದ ಗಡಿಗೇನೇ ಹಿಂದೆ ಹೋಗಬೇಕು'' ಎಂದು ಉತ್ತರ ಕೊರಿಯಕ್ಕೆ ಕೊಟ್ಟಂಥ ಆಜ್ಞೆಯನ್ನು ಭದ್ರತಾ ಕೌನ್ಸಿಲು ಪಾಕಿಸ್ತಾನಕ್ಕೆ ಅಂದೇ ಕೊಡಬೇಕಿದ್ದಿತು. ಆದರೆ ಹಾಗೇನೂ ಮಾಡದೆ ಭದ್ರತಾ ಕೌನ್ಸಿಲು ಭಾಂತ ಮತ್ತು ಪಾಕಿಸ್ತಾನಗಳೆರಡನ್ನೂ ಸಮಾನತೆಯಿಂದ ಕಾಣುತ್ತಾ ಬಂದಿದೆ. ಹೀಗಿದ್ದರೂ ಭಾರತವು ಕಾಶ್ಮೀರ ಕಲಹದ ನ್ಯಾಯೋಚಿತ ಹಾಗೂ ಶಾಂತ ತೀರ್ಮಾನವೊಂದರ ಕಡೆಗೆನೇ ದೃಷ್ಟಿಯಿಟ್ಟು ಎಲ್ಲವನ್ನೂ ಸಹಿಸಿಕೊಂಡು ಬಂದಿದೆ. ಶಾಂತ ತೀರ್ಮಾನಕ್ಕಾಗಿ, ಮೂಲ ನ್ಯಾಯಕ್ಕೆ ವ್ಯತಿರಿಕ್ತವಾಗದ ತ್ಯಾಗಗಳನ್ನು ಒಂದರ ಒಳಿಕೊಂದರಂತೆ ಮಾಡುತ್ತಾ ಬಂದಿದೆ ಈ ನ್ಯಾಯವಂದಿರಕ್ಕೆ ಅಸ್ತಿವಾರವಾಗಿರುವ ''ಜನಮತ ಸಂಗ್ರಹಕ್ಕನುಕೂಲವಾದ ಶಾಂತ ವಾತಾವರಣ'' ನಿರ್ಮಿಸಲೇಬೇಕೆಂಬ ಶರ್ತವನ್ನು ಸಡಲಿಸಲು ಮಾತ್ರ ಭಾರತವು ತಯಾರಿಲ್ಲ. ಅದಕ್ಕೂ ತಯಾರಾಗುತ್ತಿದ್ದರೆ, ಆ ತ್ಯಾಗವು ನ್ಯಾಯದ ಪಲನಿಗಾಗಿ ಅನ್ನಿಸದೆ, ಅನ್ಯಾಯವನ್ನೇ ಮೇಲು ಕೈಕ್ಕುತ್ತಿತ್ತು!

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಹುಬ್ಬಳ್ಳಿ ಮಂಗಳೂರು.

ಕಳದ ಮುವತ್ತೆಂಟು ವರುಷಗಳಿಂದ ವಿವಿಧ ಕ್ಷೇತ್ರದಲ್ಲಿ ಸತತ ದುಡಿವವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

—ಇದರ ನ್ಯಾಯಾನ್ಯಾಯ ಹೇಗಿದೆ?

ಭಾರತದ ವಾದ

ಈ ಹನ್ನೆರೆಡಗುಣವಾಗಿ ಭಾರತ ವೀಗ ವಾದಿಸುತ್ತಿರುವುದಿಷ್ಟೆ: ಕಾಶ್ಮೀರವು ಭಾರತದೊಂದಿಗೆ ಕೃಯಬದ್ಧವಾಗಿ ಮತ್ತು ಸಂಪೂರ್ಣವಾಗಿ ಜೋಡಣೆಗೊಂಡಿರುವ ಸಂಸ್ಥಾನ. ದಕ್ಷಿಣ ಕೊರಿಯಕ್ಕೆ ಅಮೆರಿಕವೀಗ ಸಹಾಯಕ್ಕೆ ಹೋಗಿರುವುದು ತನ್ನ ಅನುಯಾಯಿ ರಾಷ್ಟ್ರವೊಂದರ ರಕ್ಷಣೆಗಾಗಿ ಇರುವಾಗ, ಭಾರತವು ಕಾಶ್ಮೀರಕ್ಕೆ ಹೋಗಿರುವುದು ತನ್ನದೇ ಆದೊಂದು ಭಾಗದ ರಕ್ಷಣೆಗಾಗಿ; ಸ್ವರಕ್ಷಣೆಗಾಗಿ. ಈ ರೀತಿ ಸಂಪೂರ್ಣವಾಗಿ ಜೋಡಣೆಗೊಂಡಿರುವ ಕಾಶ್ಮೀರದ ಭವಿಷ್ಯವನ್ನು ಜನಮತದ ತೀರ್ಮಾನಕ್ಕೆ ಬಿಡಲು ಭಾರತವು ಮುಂದೆ ಬಂದುದು ಸ್ವೇಚ್ಛೆಯಿಂದಲೇ; ಈ ಕುರಿತು ಭಾರತವನ್ನು ಒತ್ತಾಯಿಸುವ ಅಧಿಕಾರ ಯಾರಿಗೂ ಇಲ್ಲ. ಜನಮತ ಸಂಗ್ರಹದ ಕೊಡುಗೆಯನ್ನು ಭಾರತವು ಕಾಶ್ಮೀರದ ಜನತೆಯ ಮುಂದಿಟ್ಟಿದೆ ಹೊರತು ಪಾಕಿಸ್ತಾನದ ಮುಂದಿಟ್ಟಲ್ಲ ಆದ್ದರಿಂದ ಸಂಪೂರ್ಣವಾಗಿ ಭಾರತದ ಹೊಣೆಗಾರಿಕೆಯಾಗಿರುವ ಕಾಶ್ಮೀರದ ಜನಮತ ಸಂಗ್ರಹದ ಕುರಿತು, ತಟಿಯೆತ್ತುವ ಅವಶ್ಯಕತೆ ಪಾಕಿಸ್ತಾನಕ್ಕಿಲ್ಲ ಕಾಶ್ಮೀರ ಸಂಬಂಧವಾಗಿ ಅಕ್ರಮಾಕ್ರಮಗಾರನೆಂಬುದಕ್ಕಿಂತ ಭಿನ್ನವಾದ ಯಾವ ಸ್ಥಾನವೂ ಭಾರತದ ದೃಷ್ಟಿಯಲ್ಲಿ ಪಾಕಿಸ್ತಾನಕ್ಕಿಲ್ಲ. ಈ ಅಕ್ರಮಣದ ವಿರುದ್ಧವಾಗಿಯೇ ಭಾರತವು ಭದ್ರತಾ ಕೌನ್ಸಿಲಿನಲ್ಲಿ ದೂರನ್ನು ಕೊಟ್ಟಿದ್ದು, ಕೇವಲ ಅಕ್ಷರ ಮಟ್ಟಿನ ನ್ಯಾಯವನ್ನು ಬಯಸುತ್ತಿದೆ. ತಾನು ಕಾಶ್ಮೀರದ ಅಕ್ರಮಣಗಾರನಷ್ಟೇ ಅಲ್ಲ, ಅದರ ಹಕ್ಕುದಾರನೆಂದು ವಾದಿಸುತ್ತಿರುವ ಪಾಕಿಸ್ತಾನವು, ಕಾಶ್ಮೀರದ ಮೇಲೆ ಕಾಶ್ಮೀರದ ಪ್ರಜೆಗಳ ಹಕ್ಕಿಂಬ ತತ್ವಾನುಸಾರವಾಗಿ ಅಲ್ಲಿಯ ಜನಮತ ಸಂಗ್ರಹವನ್ನು ಮಾಡಲಾಗುವಂತೆ ತನ್ನ ಸೈನ್ಯವನ್ನು ಹಿಂದೆಗೆದು ಶಾಂತಿಸ್ಥಿತಿ ನಿರ್ಮಾಣಕ್ಕೆ ನೆರವಾಗಲಿ. ಕಾಶ್ಮೀರದ ಒಳಗಿನ ಮತ್ತು ಹೊರಗಿನ ರಕ್ಷಣಾ ಜವಾಬ್ದಾರಿಯು ಭಾರತ ಸರಕಾರದ್ದೆಂಬುದನ್ನು ಭದ್ರತಾ ಕೌನ್ಸಿಲು ಮತ್ತು ಕಾಶ್ಮೀರ ಕವಿ ಶೇಖ್ ಅಬ್ದುಲ್ಲಾ ಕೂಡಾ ಸ್ಪಷ್ಟವಾಗಿ ಒಪ್ಪಿಕೊಂಡಿರುವಾಗ ಭಾರತ ಸೈನ್ಯವೂ ತನ್ನ ಸೈನ್ಯಗಳೊಂದಿಗೇನೇ ಹಿಂದೆಗೆಯತಕ್ಕದ್ದೆಂಬ ಪಾಕಿಸ್ತಾನದ ವಾದಕ್ಕರ್ಥವಿಲ್ಲ ಕೊರಿಯದ ಯುದ್ಧದ ಈ ಕಾಲದಲ್ಲಂತೂ ರಕ್ಷಣೆಯ ದೃಷ್ಟಿಯಿಂದ ಕಾಶ್ಮೀರದ ರಕ್ಷಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕಾದುದು ಅತ್ಯಗತ್ಯ—ಇಂತಹ ನ್ಯಾಯ ಪೂರ್ಣ ಹಾಗೂ ಪ್ರಾಮುಖ್ಯಾಂಶಗಳು. ಭಾರತ ಸರಕಾರದ ವಾದ ಸರಣಿಯಲ್ಲಿ ಕಂಡು ಬರುತ್ತಿವೆ. ಪಾಕಿಸ್ತಾನವೀ ಮಟ್ಟಿಗೆ ಸಂಪೂರ್ಣ ವಿರುದ್ಧವಿರುವ ವಾದಗಳನ್ನೇ ಹೂಡುತ್ತಿದೆ. ಭಾರತ—ಪಾಕಿಸ್ತಾನಗಳು ಪೂರ್ವ ಪಶ್ಚಿಮದಷ್ಟು ದೂರದಲ್ಲವೆ ಆದರೂ ಕಾಶ್ಮೀರದಲ್ಲಿ ಇನ್ನೆಂದಿಗೂ ಶಸ್ತ್ರವಿಶ್ರಾಂತಿಯೆಂಬ ಶಪಥವನ್ನು ಇವೆಂಡು ರಾಷ್ಟ್ರಗಳೂ ಈಗ ತೊಟ್ಟಂತಿದೆ.

ಮುಂದೇನು?

ಇಂದ ಮೇಲೆ ಕಾಶ್ಮೀರದಲ್ಲಿ ಭಾರತ ಮತ್ತು ಪಾಕಿಸ್ತಾನದ ಸೇನೆಗಳು ಇಕ್ಕೆಡೆಯಲ್ಲೂ ಯುದ್ಧ ಸಿದ್ಧರಾಗಿ, ಶಸ್ತ್ರ ಕೆಳಗಿಟ್ಟು ಈಗಿನಂತೆ ಸದಾಕಾಲವೂ ನಿಂತಿರಬೇಕೆ? ಹಾಗೆ ನಿಂತುಕೊಂಡಿರಲು ಸಾಧ್ಯವೆ? ಹೀಗಿರುವುದರಿಂದ ಭಾರತ ಪಾಕಿಸ್ತಾನವೆರಡಕ್ಕೂ ಯುದ್ಧಾವಧಿಯ ಅತಿ ಹೆಚ್ಚಿನ ವೆಚ್ಚ ಭಾರವೆಂತೂ ಬೀಳುತ್ತಿದೆ; ಭವಿಷ್ಯದ ನಿರ್ಣಯವಿಲ್ಲದೆ ಧಾರತ ಮತ್ತು ಪಾಕಿಸ್ತಾನಗಳಲ್ಲಿ ಸಂದೇಹ, ಅನಿಶ್ಚಿತತೆ ಕೂಡಾ ನಿಂತಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಕಾಶ್ಮೀರದೊಳಗೆ ಯಾವ ಸುರಕ್ಷಿತಾಭಾವನೆಯೂ ಇರದೆ ಗಲಿಬಿಲಿಯೇ ವ್ಯಾಪಿಸಿರಬೇಕಾಗುತ್ತದೆ. ಕೊರಿಯಾ ಯುದ್ಧಾಗ್ನಿಯು ದೊಡ್ಡ ದಾವಾಗ್ನಿಯಾಗಿ ಹಬ್ಬದಿರಲಿ, ಒಳಗಿಂದೊಳಗೆ ಧಗಧಗಿಸುತ್ತಲೇ ಇರುವ ಕಾಶ್ಮೀರದ ವಿವಾದವೂ ಅದೇ ವಾದರಿಯಲ್ಲಿ ಸುಲಭದಲ್ಲಿ ಪ್ರಜ್ವಲಿಸಬಲ್ಲುದು. ಆದ್ದರಿಂದ ಕಾಶ್ಮೀರ ವಿವಾದವನ್ನು ಇಂದಿನ ಸ್ಥಿತಿಯಲ್ಲೇ ದೀರ್ಘಾವಧಿ ಇರಗೊಡಿಸುವುದು ಇಕ್ಕೆಡೆಯವರಿಗೂ ಹಿತಕರವಲ್ಲ. ಆದರೆ ನ್ಯಾಯವಾವ ಕಡೆಗಿದ್ದರೂ ಛಲದ ಮಟ್ಟಿಗೆ ಇಕ್ಕೆಡೆಯವರೂ ಸಮಾನರಂತಿದ್ದಾರೆ. ಇಲ್ಲೀಗ ಮಧ್ಯಸ್ಥಗಾರನಾಗಿ ಬಂದಿರುವ ಸರ್ ಡಿಕ್ಸನರ ಜವಾಬ್ದಾರಿ ದೊಡ್ಡದಿದೆ. ಕಾಶ್ಮೀರ ಸಂಬಂಧದ ಮಾತುಕತೆಯನ್ನು ಕರಾಚಿಗೆ ಮುಂದುವರಿಸಿಟ್ಟಿರುವುದರಿಂದ, ಅದೊಂದು ಕೆಲಸವನ್ನಿನ್ನು ಮುಗಿಸಿಕೊಳ್ಳದೆ ನಿರ್ವಾಹವಿಲ್ಲ. ಆಗೋಸ್ತಿನಲ್ಲೇ ಸರ್. ಡಿಕ್ಸನರು ಭದ್ರತಾ ಕೌನ್ಸಿಲಿಗೆ ವರದಿಯೊಪ್ಪಿಸಬೇಕೆಂಬ ಶರ್ತವೂ ಇದೆ. ಥಿಲ್ಲೀ ನರ್ಯಾಲೋಚನೆಗಳ ವೇಳೆ ಸರ್. ಡಿಕ್ಸನರು ಬಹುತೇಕವಾಗಿ ಅಲಿಸುತ್ತಾ ಕುಳಿತಿದ್ದರು ಹೊರತು ಸ್ಪಷ್ಟ ಸೂಚನೆಗಳನ್ನು ಮುಂದಿಟ್ಟಿರಲಿಲ್ಲವೆಂದು ಊಹಿಸಲಾಗಿದೆ. ಅಸ್ಪೃಶ್ಯತೆಯದ ನುರಿತ ನ್ಯಾಯಾಧೀಶರಿರುವ ಅವರಿಗೆ ಕಾಶ್ಮೀರ ವಿವಾದದೊಳಗೆ ಹುದುಗಿಕೊಂಡಿರುವ ನ್ಯಾಯವು ಇಷ್ಟರಲ್ಲೇ ಗೋಚರಕ್ಕೆ ಬಂದಿರಬಹುದು. ಅವರನ್ನು ತಡಮಾಡದೆ ಕರಾಚಿ ಸಮ್ಮೇಳನವನ್ನು ಮುಗಿಸಿಕೊಳ್ಳಬೇಕು. ಆಗಲೂ ಭಾರತ—ಪಾಕಿಸ್ತಾನಗಳು ಒಮ್ಮತಕ್ಕೆ ಬಾರದಿದ್ದಲ್ಲಿ ತನ್ನ ಪಾಲಿನ ಕೆಲಸ ಮಾಡಲು ಸರ್. ಡಿಕ್ಸನರು ಮುಂದಾಗಬೇಕು. ಜನಮತ ಸಂಗ್ರಹದ ವ್ಯವಸ್ಥೆ ಮಾತ್ರವಲ್ಲ—ಅದಕ್ಕಿಂತ ಭಿನ್ನವಾದ ಬೇರೆ ವಿಧಾನಗಳು ಹೊಳೆದರೂ ಹಾಗೆ ವರ್ತಿಸುವ ಅಧಿಕಾರವನ್ನು ಭದ್ರತಾ ಕೌನ್ಸಿಲು ಸರ್. ಡಿಕ್ಸನರಿಗಿತ್ತಿದೆ. ಆದ್ದರಿಂದ ಅವರೀಗ ತನಗೆ ಪ್ರಯೋಗಾನುಕೂಲ ತೋರುವ ಎಲ್ಲ ಉಪಕರಣಗಳಿಂದಲೂ ಕಾಶ್ಮೀರದ ಕಗ್ಗಂಟನ್ನು ಬಿಡಿಸುವ ಪ್ರಯತ್ನಗಳನ್ನು ಇಲ್ಲಿ ಮಾಡಬೇಕ; ಎಲ್ಲವೂ ನಿರರ್ಥಕವಾದಲ್ಲಿ ತನ್ನ ತೀರ್ಮಾನವಿಂತಹದೇ ಎಂಬುದನ್ನು ಭದ್ರತಾ ಕೌನ್ಸಿಲಿಗೆ ವರದಿ ಮಾಡಬೇಕು. ಅಂತೂ ಇನ್ನು ಮುಂದಿನ ಕರ್ತವ್ಯಭಾರ ಸರ್. ಓವೆನ್ ಡಿಕ್ಸನರದಿದೆ.

ಅವಜ್ಞಾಚಾರವೇಕೆ?

ತ್ವರ್ಯದಲ್ಲಿ ತೀರ್ಮಾನ ಹುಡುಕಬೇಕಾಗಿರುವ ಈ ಸಂದರ್ಭದಲ್ಲೇ ಪರಿಸ್ಥಿತಿಯನ್ನು ಹಾಳು ಮಾಡುವ ಅಪಪ್ರಚಾರಗಳು, ಬ್ರಿಟನ್,ಅಮೆರಿಕ ಮತ್ತು ಪಾಕಿಸ್ತಾನೀ ಪತ್ರಿಕೆಗಳಿಂದಾಗಹತ್ತಿರುವುದು ನಿಜಕ್ಕೂ ಶೋಚನೀಯವಿದೆ. ಕೊರಿಯದ ಕುರಿತು ಶಾಂತಿ ಸೂಚನೆಯನ್ನು ರವಾನಿಸಿ, ತಮ್ಮ ಕೊಳಕು ಬಯಲಿಗೆ ಬೀಳುವಂತಾಗಲು ಕಾರಣರಾದ ಪಂಡಿತ ನೆಹರುಗಳ ಮೇಲೆ ಸೇಡು ತೀರಿಸಿಕೊಳ್ಳುವ ಬಯಕೆಯಿಂದಲೋ ಎಂಬಂತೆ "ಕೊರಿಯದ ಕುರಿತು ಮಧ್ಯಸ್ಥಿಕೆ ವಹಿಸಲು ಮುಂದೆ ಬಂದಿರುವ ಪಂಡಿತ ನೆಹರುಗಳು ಕಾಶ್ಮೀರದ ಸಂಬಂಧವಾಗಿ ತನ್ನ ಕಾಲಡಿಯನ್ನೇನೋಡಿಕೊಳ್ಳದಿರುವುದು ಸರಿಯೆ?" ಎಂಬ ಆರ್ಥದಲ್ಲಿ ಬ್ರಿಟಿಷ್ ಮತ್ತು ಅಮೆರಿಕದ ಪತ್ರಿಕೆಗಳು ಟೀಕಿಸಿವೆ. ನಿದರ್ಶನಕ್ಕಾಗಿ 'ನ್ಯೂಯೋರ್ಕ್ ಟೈಮ್ಸ್' ಪತ್ರಿಕೆ "ಕಾಶ್ಮೀರದಲ್ಲಿ ಪಂಡಿತ ನೆಹರುಗಳ ಮನೆ ಬಾಗಿಲಲ್ಲೇ ಅವರು ಮಾಡಬೇಕಾದುದು ಬಿದ್ದು ಕೊಂಡಿದೆ. ಭಾರತದ ಪಾಲಿಗದು ಕೊರಿಯದ ಸಮಸ್ಯೆಗಿಂತಲೂ ಮುಖ್ಯವಾದುದು. ಕಾಶ್ಮೀರವನ್ನು ವಿಭಜಿಸಬೇಕೆಂಬ ಇಚ್ಛೆಯಿಂದ ಅಲ್ಲಿಯ ಜನಮತ ಸಂಗ್ರಹ ವ್ಯವಸ್ಥೆಗೆ ಭಾರತವು ಅಡ್ಡಗಾಲಿಡುತ್ತಿದೆ" ಎಂದು ಆರೋಪಿಸಿದೆ. ವಿದೇಶೀ ಪತ್ರಿಕೆಗಳ ಇಂತಹ ವಾದಗಳನ್ನೇ ಮುಂದೊಡ್ಡಿ ಪಾಕಿಸ್ತಾನದ ಮುಸುಕುದಂತಿರುವ 'ಡಾನ್' ಪತ್ರಿಕೆ ಬರೆದಿದೆ: "ಕೊರಿಯಾ ವಿದ್ಯಮಾನವು ಕಾಶ್ಮೀರದ ಮೇಲೆ ಸ್ಪಷ್ಟಬಿಂಬಿಸಿರುವ ಕುರಿತು ನಾವು ಪಂಡಿತ ನೆಹರುಗಳಿಗೆ ಗೌರವಪೂರ್ವಕ ಒಂದು ಮಾತು ಹೇಳಲಿಚ್ಛಿಸುತ್ತೇವೆ. ಕೊರಿಯಾ ಸಂಬಂಧದ ತನ್ನ ರಾಜೀ ಸೂಚನೆ ಮತ್ತು ಕಾಶ್ಮೀರದಲ್ಲಿ ತಾನೇ ಒಂದು ಪಕ್ಷವಾಗಿರುವ ಕ್ರಿತು ವಿದೇಶೀ ಪತ್ರಿಕೆಗಳಲ್ಲಿ ಬಂದಿರುವ ಸಂಗತಿಗಳು ಅವರ ಅವಗಾಹನೆಗೆ ಬಾರದಿರಲಿಕ್ಕಿಲ್ಲ. ಸಂಯುಕ್ತ ರಾಷ್ಟ್ರಸಂಘದ ಮಧ್ಯಸ್ಥಿಕೇ ಪ್ರಯತ್ನ ವಿದ್ದರೂ ಕಾಶ್ಮೀರದ ಸಂಬಂಧವಾಗಿ ಪಾಕಿಸ್ತಾನದೊಡನಿರುವ ಜಗಳವನ್ನು ಇತ್ಯರ್ಥಿಸಿಕೊಳ್ಳಲಾಗಲಿಲ್ಲವೆಂಬುದು, ಪರಕೀಯರ ಸಂಬಂಧದ ಸಧ್ಯಸ್ಥಿಕೇ ಪ್ರಯತ್ನ ನಡಿಸುವ ಭಾರತದ ದುರ್ಬಲಾಂಶವಾಗಿ ನಿಂತಿದೆ. ಪಾಕಿಸ್ತಾನವಿ ಸ್ವತಃ ಆಕ್ರಮಣಕ್ಕೆ ಬಲಿಬಿದ್ದು, ಸಂಯುಕ್ತರಾಷ್ಟ್ರ ಸಂಘದ ಮೂಲಕ ಕಾಶ್ಮೀರ ಸಂಬಂಧವಾಗಿ ಒಂದು ಶಾಂತಿತೀರ್ಮಾನ ಹೊಂದಬೇಕೆಂದು ಈಗಲೂ ಒದ್ದಾಡುತ್ತಿದೆ. ಅದಕ್ಕೆ ಇತರ ಆಕ್ರಮಣಗಳ ಭೀತಿ ಕೂಡಾ ತಾಗಿದ್ದ ಸಂದರ್ಭಗಳದ್ದುವು." ಬ್ರಿಟನ್, ಅಮೆರಿಕ ಮತ್ತು ಪಾಕಿಸ್ತಾನ್ ಪತ್ರಿಕೆಗಳ ಈ ಅಣಕಾಟಗಳಲ್ಲಿ ಎಂತಹ ಆತ್ಮವಂಚನೆ ತುಂಬಿದೆ ಎಂಬುದನ್ನು ಮೇಲ್ಕಂಡೆಯ ಸ್ಪಷ್ಟೀಕರಣಗಳಿಂದಲೇ ಅರಿಯಬಹುದು. ಯಾವ ಶಾಂತಿ ಪ್ರೇಮದಿಂದ ಕೊರಿಯ ಸಂಬಂಧದ ಸೂಚನೆಗಳನ್ನು ಪಂಡಿತ ನೆಹರುಗಳು ಮುಂದಿಟ್ಟಿದ್ದರೋ ಅದೇ ಶಾಂತಿ ಪ್ರೇಮದಿಂದ ಕಾಶ್ಮೀರ ಸಂಬಂಧವಾಗಿ ಎಂತಹ ಔದಾರ್ಯ ಮತ್ತು ಸಹನೆಯನ್ನು ಅವರು ತೋರಿಸುತ್ತಾ ಬಂದಿರುವರೆಂಬುದು ಮೇಲಿನ ವಿದ್ಯಮಾನಗಳಿಂದ ಸ್ಪಷ್ಟವಿದೆ. ಹೀಗಿದ್ದೂ ಉದ್ದೇಶಪೂರ್ವಕವಾಗಿ ಅವರನ್ನು ವಿರೋಧಿಸುತ್ತಿರುವವರು ಆತ್ಮವಂಚನೆಯೊಂದಿಗೆ ಶಾಂತಿಭಂಗವನ್ನೂ ಮಾಡುತಿದ್ದಾರೆ; ವಾತಾವರಣವನ್ನು ಕೆಡಿಸುತಿದ್ದಾರೆ.

For Life Assurance

CUNSULT

THE NEW GUARDIAN OF INDIA

LIFE ASSURANCE Co. LTD.

(Established: 1934)

Chair man: Sri. M. C. T. M. Chidambaram Chattiyar

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
B. No. 142 MADRAS.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. P. No. 59/50

ಕಮಲಾ ಬಾಯಿ —ಅರ್ಜಿದಾರಳು.

ಮತ್ತು

ಸುನಂದಾಬಾಯಿ —ಪ್ರತಿವಾದಿಯಳು.

ಇವರೊಳಗೆ

ವ್ಯತಿರಿಕ್ತ ಪೋಲೀಸ್ ಕಾನಸ್ಟೇಬಲ್ ನಾಗಪ್ಪನವರ ಸಂಬಳದ ಬಾಬ್ತು ರೂ.40/- ನ್ನು ಪಡೆಯುವರೆ ಸರ್ಟಿಫಿಕೇಟು ಸಿಕ್ಕಬೇಕಾಗಿ ಅವರ ಹೆಂಡ್ತಿ ದಾಕ್ಲು ಮಾಡಿದ ಅರ್ಜಿಯು ತಾ. 14-8-50ಕ್ಕೆ ತಕ್ಕಂಗೆ ಇತ್ಯರುವುದರಿಂದ ಆಕ್ಷೇಪ ಇದ್ದವರು ಆ ದಿವ್ಸ ಸದ್ರಿ ಕೋರ್ಟಿನಲ್ಲಿ ಹಾಜ್ರಾಗಿ ಹೇಳಿಕೊಳ್ಳದಿದ್ದಲ್ಲಿ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court.)

K Kamalaksha Rao,
Advocate for Petr.

Kasaragod, 27-7-50.

ಕೊರಿಯದ ತೆಂಕು ತುದಿಗೆ ಕಮ್ಯೂನಿಸ್ಟರ ದೌಡು!

ಸೈನ್ಯೀಯ ಸಮರ ಕೌನ್ಸಿಲ್ ಆ ಸಂಬಂಧದ ಪ್ರಮುಖ ನಿರ್ಣಯಗಳನ್ನು ಇಂದು ಸಹಜವಾಗಿ ಲೋಕ ಸ್ವಯಂ ಘೋಷಿತ ಗತಿಸಿದೆ. ಆಜ್ಞಾಪಕ ಅಧಿಕಾರಿಯಲ್ಲಿ ಇದೇ ಮಾದರಿಯ ಇತರ ಘರ್ಷಣೆಗಳೇಳುವ ಸ್ಪಷ್ಟ ಚಿಹ್ನೆಗಳೂ ಕಾಣಿಸಕತ್ತಿವೆ. ಫೋರ್ಮೋಸಾ, ಇಂಡೋ ಚೈನಾದಂತಹ ಕ್ಷೇತ್ರಗಳ ಕಡೆಗೆ ಯುದ್ಧಾಗ್ನಿ ಇಷ್ಟರಲ್ಲೇ ಚಾಚಹತ್ತಿದೆ ಅಂತೂ ಆ ವಲಯವೆಲ್ಲಾ ಧಗಧಗಿಸಿ, ತನ್ನ ಪಾಲಿನ ಎಲ್ಲಾ ಕೆಲಸಗಳು ಅಲ್ಲಿ ಆಗುತ್ತಾ ಹೋಗುವಾಗ ತಾನು ಜಾಗತಿಕರಂಗದಲ್ಲಿ ನಿರ್ದೋಷಿಯಾಗಿ ತೋರಿಸಿಕೊಳ್ಳುವುದರೊಂದಿಗೆ, ಇದಿರು ವಾದಿಗಳಿಗೆ ವ್ಯವಹಾರಾಂತಂಕಗಳನ್ನೂ ಒಡ್ಡಬೇಕೆಂಬ ಇಚ್ಛೆಯಿಂದ ರಶ್ಯವು ಭದ್ರತಾ ಕೌನ್ಸಿಲ್ ಪ್ರವೇಶದಂತಹ ಹೊಸ ಹೆಜ್ಜೆಯಿಡುತ್ತಿರುವುದು ಕಂಡುಬರುತ್ತಿದೆ. ರಶ್ಯಾ ಪಾಳಯದ ಪ್ರತ್ಯಕ್ಷ ಕಾರ್ಯಾಚರಣೆಗಳು– ಅಮೆರಿಕ ಪಂಗಡದ ಅದ್ಭುತ ಸಿದ್ಧತೆಗಳು– ಸಂಯುಕ್ತ ರಾಷ್ಟ್ರಕೂಟದ ಲ್ಲೂ ವಾದ ಹೋರಾಟಗಳು– ಮುಂತಾದ ಅತ ವಿಶೇಷ ಘಟನೆಗಳನ್ನು ಕಾಣುವಾಗ, ಇವೆಲ್ಲವೂ ಮಹಾ ಯುದ್ಧವಾಗಿ ಸ್ಫೋಟಗೊಳ್ಳುವ ಸಂಭವ ಹೆಚ್ಚಿನ್ನ ಬೇಕು. ಅಮೆರಿಕ–ರಶ್ಯಾ ದ್ವಿಪಾಳಯಗಳ ನಡುವೆ ಕೆಲಕಾಲದಿಂದ ನಡೆದಿದ್ದ ಥಂಡಾ ಸಮರವು, ನಿಲ್ಲದಿದ್ದರೂ ಅದೇ ರೂಪದಲ್ಲಿ ದೀರ್ಘಾವಧಿಯಲ್ಲಿದುಕೊಂಡೀ ಕೆಂದಿದ್ದು ಅತಿ ಕೂಡಾ ಕಳೆದುಹೋಗಿ ಪ್ರತ್ಯಕ್ಷ ಸಮರದತ್ತ ಪ್ರಪಂಚವೀಗ ತೀವ್ರ ಗತಿಯಿಂದ ಧಾವಿಸುತ್ತಿದೆ. ಶಾಮಾನ್ಯರೀತಿಯ ಶಾಂತಿ ಪ್ರಯತ್ನವಾವುದೇ ಆದರೂ ಈ ಮಹಾಬೆಂಕಿಯ ಮೇಲೆ ಬೀಳುವ ತುಂತುರುಗೋವಾದಿ ನಿರರ್ಥಕವಾಗುವುದು ಖಂಡಿತ ಬೂದಿಯೊಳಗಿನ ಕೆಂಡವಾಗಿದ್ದುದು, ಅಲ್ಲಲ್ಲಿ ನಾಲಿಗೆ ಚಾಚುವಷ್ಟು ಎದ್ದು ಜ್ವಲಿಸುತ್ತಿರುವ ಈ ಕಾಲದಲ್ಲೇ ಶಾಂತಿ ಪ್ರಯತ್ನದ ದೊಡ್ಡ ಧಾರೆಗಳ ನ್ನಿಳಿಸಿ ನಂದಿಸಬಲ್ಲ ಅಗ್ನಿಶಾಮಕ ದಳ ಪ್ರೇಕ್ಷಕರಿಗೆ ಯಾಗ್ಯಾಗದೆ ಪ್ರೇಕ್ಷಕರೆ ಇಲ್ಲಾ ಬೆಂಕಿ ಮತ್ತಾರ್ನೆಯನಾಗಿ ಸರ್ವತ್ರ ವ್ಯಾಪಿ ವಿಸ್ತರಿಸುವ ಕಾಲ ದೂರವಿಲ್ಲ ಅದರೆ ಎಲ್ಲಿದೆ ಅಂತಹ ಶಮನ ಪ್ರಯತ್ನ?

ಕೊರಿಯಾ ಸಮರ

ಜುಲಾಯಿ ತಿಂಗಳಾಂತ್ಯ ಭಾಗದಲ್ಲಿ ಕೊರಿಯದ ಸಮರವು, ಸಂಯುಕ್ತ ರಾಷ್ಟ್ರ ಸಂಘದ ಮತ್ತು ಅಮೆರಿಕದ ಪಾಲಿಗೆ ಅತ್ಯಂತ ವಿಷಮಾವಸ್ಥೆಯನ್ನು ತಂದೊಡ್ಡಿದೆ, ಎನ್ನಬಹುದು. ಸುಮಾರು ಐದು ವಾರಗಳ ಹೋರಾಟದಲ್ಲಿ ಉತ್ತರ ಕೊರಿಯದವರು ಏಕ ಪ್ರಕಾರ ಮುಂದೊತ್ತುತ್ತಾ ಬಂದು ಈಗ ತೀರಾ ದಕ್ಷಿಣ ಭಾಗಕ್ಕೆ ಬಂದಿದ್ದಾರೆ. ದಕ್ಷಿಣ ಕೊರಿಯದ ಎಂಟರಲ್ಲಿ ಏಳಂಶವು ಇದಿರಾವಾದಿಗಳ ಹಸ್ತಗತವಾಗಿ, ಕೇವಲ ಒಂದಂಶವಷ್ಟೇ ದಕ್ಷಿಣ ಕೊರಿಯದ್ದಾಗಿ ಉಳಿದುಕೊಂಡಿದೆ. ಕಳದ ಒಂದೆರಡು ವಾರಗಳ ನಡುವೆ, ಅಲ್ಲಿ ಸುದೃಢ ರಕ್ಷಣಾವ್ಯೂಹಗಳನ್ನು ಕಟ್ಟಿ ನಿಂತ ಅಮೆರಿಕಾನಂಗೆ ತಮ್ಮ ಸಿದ್ಧತೆಯ ಅವಧಿಯನ್ನು ಹೊತ್ತಾದರೂ ಪ್ರತಿಭಟಿಸಿ ನಿಲ್ಲಲಿಕ್ಕಾಗದೆ ಹಿಮ್ಮೆಟ್ಟಬೇಕಾಗಿ ಬಂದಿದ್ದಿತು. ಮೂಲ ರಾಜಧಾನಿಯಿಂದ ಯುದ್ಧಾರಂಭದಲ್ಲೇ ದಕ್ಷಿಣಕ್ಕೋಡಿ, ಟಾಯಿಜಾನಿನಲ್ಲಿ ಠೇರೆ ಹೂಡಿದ್ದ ದಕ್ಷಿಣ ಕೊರಿಯಾ ಸರಕಾರವು ಅದೂ ವೈರಿಗಳ ವಶವಾದ ಮೇಲೆ ಈಗ ಪ್ರಾಯಶಃ ಸಮುದ್ರಕ್ಕೆಳಕುಯುವ ಸಿದ್ಧತೆಯಿಂದಲೇ ದಕ್ಷಿಣ ತುದಿ ಮೂಲೆಯ ಎಲ್ಲಿಯೋ ಆಡಗಿಕೊಂಡಿರಬೇಕು. ಇತ್ತೀಚಿನ ದಿನಗಳಲ್ಲಿ ಅಮೆರಿಕಾನರು ಬಹುತೇಕವಾಗಿ, ಎಲ್ಲಾ ಯುದ್ಧ ಮುಖಗಳಲ್ಲೂ ಸರ್ವಶಕ್ತಿಯಿಂದ ಪ್ರತಿಭಟನೆ ಕೊಟ್ಟಿದ್ದರು; ಆದರೂ ಹಿಟ್ಟಿನ ಸೇನಾ ಸರಬರಾಯಿಯಾಗಿವ ವರೆಗೆ ಕಾಲಹರಣಮಾಡುವ ಗುಣವಿಲ್ಲದ್ದಿತು ಹೊರತು, ವಿಜಯ ಸಾಧನೆಗಾಗಿ ಇರಲಿಲ್ಲ. ಬ್ರಿಟನ್ನು, ಆಸ್ಟ್ರೇಲಿಯ ಮತ್ತಿತರ ರಾಷ್ಟ್ರಗಳು ಕೊರಿಯಕ್ಕೆ ಕಾಲ್ಬಲಗಳನ್ನು ಕಳುಹಿಸುವ ನಿರ್ಧಾರ ಮಾಡಿವೆ; ಇನ್ನು ಕೆಲವು ರಾಷ್ಟ್ರಗಳು ಅಂತಹ ನಿರ್ಧಾರಕ್ಕೆ ಬರುವುದರಲ್ಲಿವೆ. ಅದರೆ ಇವರ ಈ ಶೃಂಗಾರಕ್ಕೆ ಮೊದಲೇ ಅಲ್ಲಿ ಸೂರೆ ಮುಗಿದು ಹೋಗುವದೋ ಎಂಬ ಭೀತಿ ಮೂಡುವಷ್ಟು ಕೊರಿಯದಲ್ಲಿ ಕಮ್ಯೂನಿಸ್ಟ್ ಸೈನಿಕರ ರಭಸವೇರಿದೆ. ಮಿತ್ರಪಕ್ಷಿಗಳ ದಕ್ಷಿಣ ಕೊರಿಯದಲ್ಲಿರುವ ಅಮೆರಿಕ ಸೈನಿಕರ ಸರಬರಾಯಿ ನಿರಂತರವಾಗಿ ಮೂಲ ಎದೆಗುಂದಿಗೆಯಂತಿರುವ ಪುಸಾನ್ ಬಂದರದ ಕಡೆಗೆ ಈಗ ಕಮ್ಯೂನಿಸ್ಟರಿಂದುತ್ತಿರುವ ದಾಳಿ ಸಫಲವಾದರೆ ದಕ್ಷಿಣ ಕೊರಿಯದ ಉಸಿರೇ ಕಟ್ಟಿಹೋಗುವದೆ. ದಕ್ಷಿಣ ಕೊರಿಯದಲ್ಲಿರುವ ಅಮೆರಿಕ ಮಿತ್ರರಾಷ್ಟ್ರಗಳ ಸೇನೆಗಳಿಗೆ ಎಲ್ಲಾ ವಿಧದ ಸರಬರಾಯಿಗಳಾಗುತ್ತಿರುವುದು ಪುಸಾನ್ ಬಂದರವೊಂದರ ಮೂಲಕವೇ. ಅದು ಕಮ್ಯೂನಿಸ್ಟರ ಬಗಲೊಳಗಾದರೆ ದಕ್ಷಿಣ ಕೊರಿಯದ ಜೀವನಾಡಿಯೇ ಕುಂತುಹೋಗುವದು. ಜನರಲ್ ಮೇಕರ್ಥರರನ್ನು ಕ್ತರುವಂತೆ ಕಮ್ಯೂನಿಸ್ಟ್ ಸೇನೆ ಮತ್ತು ಉಪಕರಣಗಳ ಇದಿರಲ್ಲಿ, ಸಂಯುಕ್ತ ರಾಷ್ಟ್ರ ಸಂಘದ ಸೇನೋಪಕರಣಗಳು ಯಿದ್ದು, ಹೆಚ್ಚಿನ ಸರಬರಾಯಿ ಇಲದಿಂದಲೇ ಬಾಳುವ ಅನೆ ಕಟ್ಟಿಕೊಂಡಿರುವಾಗ ಆ ಸರಬರಾಯಿ ಕೇಂದ್ರವೇ ಕೈಬಿಟ್ಟರೆ, ಮತ್ತಲ್ಲಿ ದಕ್ಷಿಣ ಕೊರಿಯ ಮತ್ತದರ ಸಹಾಯಕರೆಲ್ಲರಿಗೂ ಸತನವೊಂದೇ ಗತಿ! ಕಳದ ಯುದ್ಧದಲ್ಲಿ ಫ್ರಾನ್ಸಿನವಲ್ಲಿ ಬ್ರಿಟಿಷ್ ಸೇನೆಗಳು ನಡೆಸಿದ್ದ ಡಂಕರ್ಕ್ ಪಲಾಯನದಂತಹ ಓಟವನ್ನೇ ಸಾಧ್ಯವಾದರೆ ದಕ್ಷಿಣ ಕೊರಿಯದಲ್ಲಿ ಅಮೆರಿಕಾನರು ಕೈಕೊಳ್ಳಬೇಕು; ಇಲ್ಲವಾದರೆ ಅಲ್ಲೇ ನಿರ್ನಾಮ ಹೊಂದಬೇಕು. ಆದರೆ ಕೊರಿಯದ ಯುದ್ಧ ಸ್ಥಿತಿ ಮಾರ್ಷಡಿ ಸಬಲ್ಲ ಸಮರ್ಥ ದಳ ವೆಂಬ ವಿಶ್ವಾಸಕ್ಕೆ ಕಾರ್ಯಕರ್ತವಾಗಿ ದಕ್ಷಿಣ ಕೊರಿಯಕ್ಕೆ ಬಂದಿದ್ದ ಅಮೆರಿಕದ 8ನೇ ಸೈನ್ಯದ ಸೇನಾನಿ ಲೆ. ಜ. ವಾಲ್ಟನ್ ವಾಕರರು ರಣ ಮುಖದಲ್ಲಿ ತನ್ನ ಸೈನಿಕರನ್ನುದ್ದೇಶಿಸಿ ಗಂಭೀರ ವಾಣಿಯಿಂದಾಡಿದ್ದರು: "ಇಲ್ಲ; ಕೊರಿಯಾದ ಡಂಕರ್ಕ್ ನಡೆಯಲಾರದು; ಕೊನೆಯ ಮನುಷ್ಯರ್ತದಲ್ಲಿ ಕೊರಿಯದಿಂದ ಪಲಾಯನ ಮಾಡುವಂತಿಲ್ಲ. ಅಮೆರಿಕನ್ ಸೇನೆಗಳು ಎದೆಗೊಟ್ಟು ನಿಲ್ಲಬೇಕು ಇಲ್ಲವೇ ಸಾಯಬೇಕು. ಪುಸಾನಿನೊಳಗೆ ಕಮ್ಯೂನಿಸ್ಟರೆಲ್ಲಿಯಾದರೂ ನುಗ್ಗಿದರೆಂದರೆ, ಚರಿತ್ರೆಯಲ್ಲೆಂದೂ ನಡೆಯದಂತಹ ರೀತಿಯಲ್ಲಿ ಅಮೆರಿಕಾನರ ಧ್ವಂಸ ನಡೆದೀತು." ಕೆಲವೇ ದಿನಗಳ ಮೊದಲು ಜನರಲ್ ಮೇಕರ್ಥರರು ಭದ್ರತಾ ಕೌನ್ಸಿಲಿಗೊಪ್ಪಿಸಿದ ಯುದ್ಧ ವರದಿಯಲ್ಲಿ, ಕಮ್ಯೂನಿಸ್ಟರು ಸಂಖ್ಯೆಯಲ್ಲಿ ಅತ್ಯಂತ ಮೇಲ್ಗೈಯ್ಯಾಗಿದ್ದರೂ ಅವರು ವಿಜಯ ಸಂದರ್ಭವನ್ನು ಕಳಕೊಂಡಿದ್ದಾರೆಂದೂ, ಕಾಲಹರಣ ಮಾಡುವ ಹೋರಾಟದಲ್ಲಿ ಅಮೆರಿಕನ್ ಸೇನೆಗಳು ಅಲ್ಪ ನಷ್ಟದಿಂದ ಸಾಕಷ್ಟನ್ನು ಸಾಧಿಸಿನೆಯೆಂದೂ ದಕ್ಷಿಣ ಕೊರಿಯದ ತಮ್ಮ ಸ್ಥಾನವು ಸುಭದ್ರವಾಗಿದ್ದು, ಕೊನೆಯ ವಿಜಯದ ಸ್ಪಷ್ಟ ಭರವಸೆಯಿದೆ ಎಂದೂ ತಿಳಿಸಿದ್ದರು. ಮೇಕರ್ಥರರು ಮೊನ್ನೆ ತಾನೇ ಕೊರಿಯ ಯುದ್ಧ ರಂಗಕ್ಕೆ ಆಕಸ್ಮಾತ್ ಹಾರಿಬಂದು, ಪ್ರತ್ಯಕ್ಷ ಪರಿಶೀಲನೆ ನಡಿಸಿ ಹೋದ ದಿನವೇ "ನನ್ನ ಜೀವಮಾನದಲ್ಲಿ ಹಿಂದೆಂದೂ ಇದ್ದಿರದಷ್ಟು ವಿಜಯದ ಭರವಸೆ ಕೊರಿಯಾ ಯುದ್ಧದ ಮಟ್ಟಿಗೀಗ ನನ್ನಲ್ಲಿದೆ" ಎಂದು ಎದೆ ತಟ್ಟಿ ಕೊಂಡಿದ್ದರು. ಆದರೂ ಇಂದಿನ ಸ್ಥಿತಿ ಹೀಗೇಕೆ? ಮಹೇಂದ್ರಜಾಲದಂತಹ ಕೌತುಕವೊಂದನ್ನು ನಿರ್ಮಿಸಿ, ಕೊರಿಯಾ ಸಮರಗೆದ್ದು ಜನರಲ್ ಮೇಕರ್ಥರರು ಲೋಕವನ್ನು ಬೆರಗುಗೊಳಿಸಲಿರುವರೆ?

ಲೋಕಾಪಾಯ ಸೂಚನೆ

ಕೊರಿಯಾ ಯುದ್ಧವು ಇಂತಹ ವಿಷಮ ಅಂತಸ್ಥಿಗೇರಿರುವ ಈ ಕಾಲದಲ್ಲಿ, ತಾತ್ಕಾಲಿಕವಾಗಿಯಾದರೂ ಕೊರಿಯ ದಿಂದಿಗೇನೇ ಘರ್ಷಣೆಯು ನಿಂತೀತೆಂ ಹೊಸ ವಿದ್ಯಮಾನಗಳೇಳುತ್ತಿವೆ. ಕಮ್ಯೂನಿಸ್ಟ್ ಕೊರಿಯದ ಸರದಿ ಮುಗಿಯುವ ಕಾಲ ಸಮೀಪಿಸುತ್ತವೆನ್ನುವಾಗಲೇ ಕಮ್ಯೂನಿಸ್ಟ್ ಜೈನವು ತನ್ನ ಪಾಲಿನ ಆಟವನ್ನಾಡುವ ಲಕ್ಷಣಗಳು ಕಾಣಿಸಕತ್ತಿವೆ. ಅಲ್ಲಿಯೂ ಇಲ್ಲಿಯೂ ಅಮೆರಿಕಾನರೇ ಅವರ ಇದಿರಾಳಿಗಳು. ಜೈನೀ ಕಮ್ಯೂನಿಸ್ಟರೋಡಿಸಿರುವ ಚಿಯಾಂಗ್ ಕೈಶೇಕರಿಗೆ ತಳವೂರಿರುವ ಫೋರ್ಮೋಸಾ ದ್ವೀಪದ ರಕ್ಷಣೆಯ ಹೊಣೆಯನ್ನು ಅಮೆರಿಕವು ಹೊತ್ತು, ಅದರ ಸುಭದ್ರ ಪಹರೆಗಾಗಿ ಪ್ರಬಲ ನೌಕಾಪಡೆ ಮತ್ತು ವಿಮಾನ ದಳಗಳನ್ನಿಟ್ಟಿದೆ; ಜೈನೀ ಕಮ್ಯೂನಿಸ್ಟರಂತೂ ಫೋರ್ಮೋಸವನ್ನು ಆಕ್ರಮಿಸಿಕೊಂಡೇ ಸಿದ್ಧವೆಂದು ಭೀಷ್ಮಪ್ರತಿಜ್ಞೆ ಕೊಟ್ಟಿದ್ದಾರೆ. ಫೋರ್ಮೋಸದ ರಕ್ಷಣಾ ದ್ವಾರಗಳಂತಿರುವ ಕೆನ್ಮೆನ್ ದ್ವೀಪಗಳ ಮೇಲೆ ಕಮ್ಯೂನಿಸ್ಟರು ಆಗಾಗ ಗುಂಡು ಹಾರಿಸುತ್ತಿದ್ದು, ಆ ದ್ವೀಪಗಳ ಆಕ್ರಮಣಕ್ಕಿದು ಪೀಠಿಕೆಯೆಂದು ನಂಬಲಾಗಿದೆ. ಅಲ್ಲಿ ತಳವೂರಿದ ನಂತರದ ಕಮ್ಯೂನಿಸ್ಟ್ ಹೆಜ್ಜೆಯೇ ಫೋರ್ಮೋಸದ ಮೇಲೆ, ಎಂಬುದು ಖಂಡಿತ. ನೌಕೆ ಮತ್ತು ವಿಮಾನಗಳ ಮಟ್ಟಿಗೆ ಕೊರಿಯ ಪರಿಸ್ಥಿತಿಯೇ ಫೋರ್ಮೋಸಾ ವಲಯದಲ್ಲಿಯೂ ಅಮೆರಿಕಾನರು ಸಶಕ್ತರಿದ್ದರೂ, ನೆಲ ಹೋರಾಟದ ಮಟ್ಟಿಗೆ ಅಲ್ಲಿಯಂತೆ ಇಲ್ಲಿಯೂ ಕಮ್ಯೂನಿಸ್ಟರಿದಿರು ಅವರು ದುರ್ಬಲರಾಗಿ ತೋರಬಹುದು. ಅಮೆರಿಕದ ಸಮುದ್ರ ಪಹರೆಯು ಸಂಕಲದಲ್ಲಿ ಒದಗಿರುವುದರಿಂದ, ಫೊರ್ಮೋಸದ ಆಕ್ರಮಣವಾರಂಭಿಸಲು ಕಷ್ಟವಾದರೂ, ಆರಂಭಿಸಿದ ಮೇಲೆ ಫೋರ್ಮೋಸವನ್ನೆಳೆದುಕೊಳ್ಳುವದೂ ಕಷ್ಟವೇ ಈ ದ್ವೀಪದ ರಕ್ಷಣೆಯಲ್ಲೂ ಇಂಗ್ಲಾಂಡು ಅಮೆರಿಕದ ಜತೆಗೂಡುವದೆಂದು ಊಹಿಸಬಹುದು. ಕೃಮಬದ್ಧವಾಗಿ ಫೋರ್ಮೋಸವು ಈಗಲೂ ಜಾಪಾನಿನ ಅಂಗವಾಗಿದೆ, ಎಂದು ಬ್ರಿಟಿಷ್

ಆಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು,ಕಾಯಗಳು, ಬಾತುಕೊಳ್ಳುವುದು, ಚೇಳಿಷವುಂತಾದವು, ಪಕ್ಷವಾತ,ಮೊದಲಾದ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ಸಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. No. 302/1950.
R. I. A. 595/1950.

ದೇವಿದಾಸ ರಾವ ಕೂಡಾ —ವಾದಿಯು.
ಮತ್ತು
ಗಾರಿ ಹೆಂಗ್ಸು ಕೂಡಾ —ಪ್ರತಿವಾದಿರು.

1ನೇ ಪ್ರತಿವಾದಿ ಗಾರಿಹೆಂಗ್ಸು–ಅಕ್ಕಮ್ಮನ ಮಗಳು, 5) ಕುಸ್ತಾ, 6) ಅಣ್ಣಪ್ಪ, 7) ಶೇನಾ, ಸೂರು ಹೆಂಗ್ಸಿನ ಮಕ್ಕಳು 10) ಬಚ್ಚಾ 11) ನಾರಾಯಣ, ವೀರು ಮಗ.

ಕುಂದಾಪುರ ತಾಲೂಕು ಹೆಮ್ಮಾಡಿ ಗ್ರಾಮದಲ್ಲಿರುವವರು.

ವಾದಿರು ಗೇಣಿ ಬಾಕಿ ಬಗ್ಗೆ ಮಾಡಿದ ಮೇಲೆ ಕಾಣಿಸಿದ ದಾನೆ, ವ, ಸದ್ರಿ ದಾವೆಯಲ್ಲಿ ಪ್ರತಿವಾದಿರ ಬಾಬ್ತು ಸ್ಥಿರ ಆಸ್ತಿಯನ್ನು ಜಪ್ತಿ ಮಾಡಿಸಬೇಕಾಗಿ ಕೊಟ್ಟ ಅರ್ಜಿ ಕೂಡಾ ತಾ. 16-8-1950ಕ್ಕೆ ತನ್ನ ಬಗ್ಗೆ ಯಿಟ್ಟಿದೆಂ ಕಲೂ ಆ ದಿನ ಮೇಲೆ ಕಾಣಿಸಿದ ಪ್ರತಿವಾದಿರು ಸ್ವತಹಾ ಯಾ ವಕೀಲರ ಪರಿಮುಖ ಹಗಲು 10 ಘಂಟೆಗೆ ಹಾಜ್ರು ಆಗಲಿಕ್ಕೆ ತಪ್ಪಿದ್ದಲ್ಲಿ ಸದ್ರಿ ದಾವೆಯು ಅವರ ಪರೋಕ್ಷದಲ್ಲಿ ಇತ್ಯರ್ಥವಾಗುವುದೆಂದೂ ಸಹಾ ಸದ್ರಿ 1-5ರಿಂದ 7-10-11ನೇ ಪ್ರತಿವಾದಿಗೆ ಈ ಮಾಲ್ಯ ತಿಳಿಸೋಣಾಗುತ್ತದೆ.

G. Sanjiva Rao,
Vakil for Plffs.

ಭದ್ರತಾ ಕೌನ್ಸಿಲಿನೊಳಗೆ ರಶ್ಯದ ಮರು ಪ್ರವೇಶ!

ಪ್ರಧಾನಿ ಮಿ. ಆಟ್ಲಿಗಳಿಂದಿರುವುದರಿಂದ ಜಾಪಾನಿನ ರಕ್ಷಣಾ ಹೊಣೆ ಹೊತ್ತಿರುವ ಅಮೆರಿಕವು ಫೋರ್ಮೋಸದ ರಕ್ಷಣಾ ಜವಾಬ್ದಾರಿ ವಹಿಸಿರುವುದು ನ್ಯಾಯವೆಂದೇ ಬ್ರಿಟನಿನ ಅಭಿಪ್ರಾಯವಿರುವಂತಿದೆ. ಆದರೆ ತಮಗೆ ಫೋರ್ಮೋಸದ ಮೇಲೆ ಸ್ಥಳಾಥಿಲಾಷೆಯೇನೂ ಇಲ್ಲವೆಂಬುದನ್ನು ಕಮ್ಯೂನಿಸ್ಟ್ ಚೈನಕ್ಕೆ ತಿಳಿಸುವ ಮಧ್ಯಸ್ಥಿಕೆ ವಹಿಸಬೇಕೆಂದು ಅಮೆರಿಕ ಸರಕಾರವು ಭಾರತ ಸರಕಾರವನ್ನು ಕೇಳಿಕೊಂಡಿದೆಯೆಂದು ತಿಳಿದು ಬಂದಿದೆ. ಅತ್ತ ಚೈನದೊತ್ತಿನಲ್ಲಿದ್ದು, ಕಮ್ಯೂನಿಸ್ಟ್ ವೀಟೋ ಮಿನ್ ಯೋಧರು ಬಂಡಾಯಕ್ಕೆ ಕೆಲಕಾಲದಿಂದ ಹೆಸರುಗಿರುವ, ಫ್ರೆಂಚ್ ಅಂಕೆಯಲ್ಲಿರುವ ಇಂಡೋಚೈನದ ವೇಲೆ ವ್ಯವಸ್ಥಿತ ಧಾಳಿಯಾರಂಭವಾಗುವ ಲಕ್ಷಣಗಳು ಈಗ ಕಾಣಿಸುತ್ತಿವೆ. ಇಂಡೋಚೈನಕ್ಕೆ ತಾಗಿಕೊಂಡಿರುವ ಚೈನದ ಯುನಾನ್ ಪ್ರಾಂತ್ಯದಲ್ಲಿ ಕಮ್ಯೂನಿಸ್ಟ್ ಸೇನಾನಿ ಜೆನ್ ಕೆಂಗರು, ಇಂಡೋಚೈನದ ಮೇಲಿನ ಧಾಳಿಗಾಗಿ 20 ಸಾವಿರ ವೀಟ್ ಮಿನ್ ಯೋಧರನ್ನು ತರಬೇತಿ ಮಾಡ ಲಾರಂಭಿಸಿದ್ದಾರೆ. ಈ ತರಬೇತಿ ಮುಗಿದು, ಚುಮುಮಾನವೂ ಅನುಕೂಲವಾಗುವಾಗ ಬರುವ ದಶಂಬರ ಸುವಾರಿಗೆ ಕೊರಿಯದಲ್ಲಿ ನಡೆಸಿದಂತೆಯೇ ಇಂಡೋಚೈನದಲ್ಲೂ ಕಮ್ಯೂನಿಸ್ಟರು ಆಕ್ರಮಣ ತೊಡಗುವರೆಂದು ನಂಬಲಾಗಿದೆ. ಆದ್ದರಿಂದ ಕ್ಷಿಪ್ರದಲ್ಲೇ ಅಮೆರಿಕದ ಸೇನಾ ಸಹಾಯವು ಮುಖ್ಯವಾಗಿ ಟೇಂಕುಗಳು ತಪುಗೊದಗಬೇಕೆಂದು ಫ್ರೆಂಚರು ಈಗಲೇ ಮೊಡಿಯಿಡಲಾರಂಭಿಸಿದ್ದಾರೆ. ಈ ರೀತಿ ಗಂಡಾಂತರವು ಒಂದೆಡೆಯಿಂದ. ಇನ್ನೊಂದೆಡೆಗೆ ಹಬ್ಬುತ್ತಾ ಹೋಗುವಾಗ, ನಡುಮಧ್ಯದಲ್ಲೇ ಅದು ಲೋಕ ವ್ಯಾಪಿಯುದ್ಧವಾಗಿ ರೂಪಾಂತರಗೊಳ್ಳುವ ಸಂಭವವಂತೂ ಇದ್ದದ್ದೇ. ಈ ಸಂಬಂಧವಾದ ಲೋಕ ಪ್ರಮಾದವೊಂದರ ಫಿರ್ಯಾದಿಯೆದ್ದಿತು. ಬೇರಾವ ವಿಧಾನದಿಂದಲೂ ಕೊರಿಯಾ ಯುದ್ಧ ಗೆಲ್ಲುವ ಭರವಸೆಯಿಲ್ಲದಿರುವುದರಿಂದ ಅಮೆರಿಕವು ಅಲ್ಲಿ ಆಟಂ ಬೋಂಬನ್ನು ಚಿಲ್ಲಬಹುದೇ ಎಂಬ ಭೀತಿ ವ್ಯಾಪಿಸಿದ್ದಿತು. ಅಮೆರಿಂದ ಕೆಲವು ಅತಿ ಗರ್ವಿ ತಲೆತಿರುಕರು ಆಟಂ ಪ್ರಯೋಗದ ಸೂಚನೆಗಳನ್ನು ಕೂಡಾ ಕೊಟ್ಟಿದ್ದರು. ಈ ಸೂಚನೆ ಮಾತ್ರದಿಂದ ರಾಷ್ಟ್ರ ಭೇದವಿಲ್ಲದೆ ಲೋಕದ ಎಲ್ಲಾ ಸುವಿಚಾರಿಗಳಲ್ಲೂ ಎಂತಹ ಮರುಕವುಂಟಾಗಿದ್ದಿತೆಂಬುದನ್ನು ಪ್ರತ್ಯೇಕ ಕೇಳಬೇಕೆಂದಿಲ್ಲ. ರಶ್ಯದ ಪ್ರೇರಣೆಯಂತೆ ಆಟಂ ಬೋಂಬು ಪ್ರಯೋಗದ ನಿಷೇಧಾರ್ಥವಾಗಿ ಲೋಕದ ಜನತೆಯು ಮನವಿಯೊಂದು ತಯಾರಾಗುತಿದ್ದು, ಅದಕ್ಕೆ 14 ಕೋಟಿಯಷ್ಟು ಜನರ ಸಹಿ ಬಿದ್ದಿದೆ ಎಂದು ತಿಳಿದುಬರುತ್ತದೆ. ಹಿಂದೊಂದು ಸಂದರ್ಭದಲ್ಲಿ "ಶಾಂತಿ ರಕ್ಷಣೆಗಾಗಿ ಆಟಂ ಬೋಂಬನ್ನು ಪ್ರಯೋಗಿಸಬೇಕಾಗಿ ಬಂದರೆ ನಾನದಕ್ಕೂ ಹಿಂದಿರಿಯಲಾರೆ" ಎಂದಿದ್ದ ಅಮೆರಿಕಾಧ್ಯಕ್ಷ ಟ್ರುಮೇನರು ಕಳದ ವಾರ ಪತ್ರಿಕಾ ಸಮ್ಮೇಳನದ ಮುಂದೆ ಅಭಿಪ್ರಾಯ ನೀಡೆದನ್ನೆ ಮಾಡುತ್ತಾ "ಕೊರಿಯದಲ್ಲಿ ಆಟಂ ಬೋಂಬನ್ನು ಉಪಯೋಗಿಸುವ ಆಲೋಚನೆಯನ್ನು ನಾನು ಮಾಡುತ್ತಿಲ್ಲ"ವೆಂದು ಆಶ್ವಾಸನೆ ಕೊಟ್ಟರೂವುದು ಅನಂದದ ಸಂಗತಿ. "ಇಲ್ಲ"ಎಂಬ ಈ ಮಾತು ಕೊರಿಯದ ಮಟ್ಟಿಗೆ ಮಾತ್ರವಿದ್ದರೂ, ಎಂತಹ ಸಂದರ್ಭದಲ್ಲೇ ಆದರೂ ಆ ಪ್ರಳಯ ಚೆಂಡಿನೊಡನಾಡಲು ಮನಸ್ಸು ಮಾಡುವವರ ಕಡೆಗೆ ಪ್ರಪಂಚವು ತೀವ್ರ ಜಿಗುಪ್ಸೆಗೊಳ್ಳುವದೆಂಬುದಂತೂ ಖಂಡಿತ.

ರಶ್ಯದ ಹೊಸ ಧೋರಣೆ

ಈ ನಡುವೆ ರಶ್ಯವೊಂದು ಆಶ್ಚರ್ಯವನ್ನು ನಿರ್ಮಿಸಿದೆ; ಭದ್ರತಾ ಕೌನ್ಸಿಲಿನ ಆಗೋಸ್ತು ಸಭೆಯಲ್ಲಿ ತಾನು ಭಾಗವಹಿಸುವೆನೆಂದು ಅಕಸ್ಮಾತ್ತಾಗಿ ತಿಳಿಸಿ, ಹೊಸ ವಾತಾವರಣವನ್ನು ನಿರ್ಮಿಸಿದೆ. ಸುಮಾರು ಏಳು ತಿಂಗಳುಗಳಿಂದ ಸಂಯುಕ್ತ ರಾಷ್ಟ್ರಸಂಘದ ಎಲ್ಲಾ ಸಮಿತಿ ಸಭೆಗಳನ್ನೂ ಬಹಿಷ್ಕರಿಸಿ, ಅವುಗಳ ನಿರ್ಣಯಗಳೆಲ್ಲವನ್ನೂ ಅಸಿಂಧುವೆಂದು ಸಾರಿ, ಅದು ಬಿಕ್ಕಟ್ಟನ್ನು ನಿರ್ಮಿಸಿದ್ದಿತ.. ಅದ್ದರಿಂದಲೇ, ರಶ್ಯದ ಮಿತ್ರಪ್ರತೀಕ್ಷ್ಯನುಕೂಲ ಮಾಡಿಕೊಡುವ ಶರವು ಪಂಡಿತ ನಿಹರುಗಳ ಶಾಂತಿ ಸೂಚನೆಯಲ್ಲಿದ್ದಿತು. ಪರ್ಯಾಯ ಪ್ರಕಾರ ಭದ್ರತಾ ಕೌನ್ಸಿಲಿನ ಆಗೋಸ್ತು ಅಧಿವೇಶನದ ಅಧ್ಯಕ್ಷ ಸ್ಥಾನದ ಹಕ್ಕು ರಶ್ಯದ್ದಿದೆ. ಇದೇ ಜುಲಾಯಿ ತಾ. 27ರಲ್ಲಿ ಭದ್ರತಾ ಕೌನ್ಸಿಲಿನಲ್ಲಿ ರಶ್ಯದ ಪ್ರತಿನಿಧಿಯಾಗಿರುವ ಜಾಕೋಬ್ ಮಾಲಿಕರು ಭದ್ರತಾ ಕೌನ್ಸಿಲಿನ ಕಾರ್ಯದರ್ಶಿ ಟ್ರಿಗ್ವಿಲೀಗಳಿಗೆ ಫೋನ್ ಮಾಡಿದರು: "ಸ್ಥಾಪಿತ ನಿಯಮಗಳಿಗನುಸಾರವಾಗಿ, ನಾನು ಈ ಆಗೋಸ್ತು ಭದ್ರತಾಕೌನ್ಸಿಲಿನ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳುತ್ತಿದ್ದೇನೆಂದೂ, ಆಗೋಸ್ತು ತಾ.1ನೇ ದಿನ ತಾನು 19-00ಕ್ಕೆ ಕೌನ್ಸಿಲಿನ ಸಧಾದಿನವನ್ನು ನಿಶ್ಚಯಿಸಿದ್ದೇನೆಂದೂ ನಿಮಗೆ ತಿಳಿಸುವುದು ಅಗತ್ಯವಿದೆ. ಭದ್ರತಾ ಕೌನ್ಸಿಲಿನ ಎಲ್ಲಾ ಸದಸ್ಯರಿಗೂ ಈ ದಿನ ನಿಶ್ಚಯದ ನೋಟೀಸು ಕೊಡಬೇಕೆಂದು ವಿಜ್ಞಾಪನೆ. ಕಾರ್ಯಕ್ರಮವನ್ನು ಹಿಂದಿನಿಂದ ತಿಳಿಸಲಾಗುವುದು". ಕಮ್ಯೂನಿಸ್ಟ್ ಚೈನಕ್ಕೆ ಸ್ಥಾನ ದೊರೆಯದೆ, ತಾನು ಭದ್ರತಾ ಕೌನ್ಸಿಲಿನೊಳಗೆ ಕಾಲಿಡುವಂತಿಲ್ಲವೆಂಬ ಶಪಥಕ್ಕೊಟ್ಟು ಕಳದ ಜನವರಿ ತಾ. 13ರಿಂದ ಅದನ್ನು ಸಂಪೂರ್ಣ ಬಹಿಷ್ಕರಿಸುತ್ತಾ ಬಂದಿರುವ ರಶ್ಯವು,ಶತ್ರನ್ನೆ ಶಪಥವೀಡೇರದೇನೇ ತಾನಾಗಿ ಅದರೊಳಗೆ ಪ್ರವೇಶಿಸಿದುದು ತಮಗಾದ ವ್ಯವಹಾರ ವಿಜಯವೆಂದು ಪಾಶ್ಚಾತ್ಯ ರಾಷ್ಟ್ರಗಳು ಒಂದಿಂಚು ಹಿಗ್ಗಿದಂತಿದೆ; ಆದರೀ ಪ್ರವೇಶವು ಕೊರಿಯದ ಸಂಬಂಧವಾಗಿ ತೆಂಟೆ ನಿರ್ಮಿಸುವ ಉದ್ದೇಶದ್ದಿರುವುದಿಂದ ಇನ್ನಾವ ಗಲಿಬಿಲಿಯನ್ನಿ ದಿರಿಸಬೇಕಾಗುವುದೋ ಎಂದು, ಅವು ಎರಡಿಂಚು ತಗ್ಗಿವೆ. ಕಳದ ಜನವರಿ 10ರ ಭದ್ರತಾ ಕೌನ್ಸಿಲಿನ ಸಭೆಯಲ್ಲಿ ರಶ್ಯನ್ ಪ್ರತಿನಿಧಿ ಜಾಕೋಬ್ ಮಾಲಿಕರು "ಈ ಸಭೆಯಲ್ಲಿ ಅಧಾರವಿನಹ ಮುಂಡಿಸಿರುವ ಚೈನದ ರಾಷ್ಟ್ರೀಯ ಸರಕಾರದ ಪ್ರತಿನಿಧಿಯನ್ನು ತೆಗೆದೊಗೆಯುವ ಯೋಗ್ಯ ಏರ್ಪಾಡು ನಡೆಯದಿದ್ದರೆ ಸೋವಿಯೆಟ್ ರಶ್ಯವು ಇದರ ಕೆಲಸಗಳಲ್ಲಿ ಭಾಗವಹಿಸುವಂತಿಲ್ಲ" ಎಂದು ಸಾರಿದ್ದರು. ಚೈನೀ ರಾಷ್ಟ್ರೀಯ ಸರಕಾರದ ಪ್ರತಿನಿಧಿಯನ್ನು ಹೊರತಳ್ಳಬೇಕೆಂಬ ಸೂಚನೆಯನ್ನು ರಶ್ಯದ ಪ್ರತಿನಿಧಿಯು ಮುಂತಂದಾಗ ಜನವರಿ 12 ಮತ್ತು 13ರಲ್ಲಿ ಭದ್ರತಾ ಕೌನ್ಸಿಲಿನಲ್ಲಿ ಆ ಸಂಬಂಧದ ಚರ್ಚೆ ನಡೆದು ಅದನ್ನು ಮತಕ್ಕೆ ಹಾಕಲಾಯಿತು. ಅಮೆರಿಕ, ಫ್ರಾನ್ಸ್, ರಾಷ್ಟ್ರೀಯ ಚೈನಾ, ಕ್ಯೂಬಾ, ಎಕ್ವೋದರ್, ಈಜಿಪ್ಟ್, ಈ ಆರು ರಾಷ್ಟ್ರಗಳು ರಶ್ಯನ ಸೂಚನೆಗೆ ವಿರೋಧವಾಗಿಯೂ ರಶ್ಯಾ, ಭಾರತ, ಯುಗೊಸ್ಲೇವಿಯ, ಈ ಮೂರು ರಾಷ್ಟ್ರಗಳು ಅನುಕೂಲವಾಗಿಯೂ ಮತ ಕೊಟ್ಟುದರಿಂದ ಅದು ಬಿದ್ದು ಹೋಯಿತು. ಬ್ರಿಟನು ಮತ್ತು ನೋರ್ವೆ ತಾವಿಸ್ಥಕ್ಕೆ ವಹಿಸಿದ್ದುವು. ಆ ಕೂಡಲೇ ರಶ್ಯ ಪ್ರತಿನಿಧಿಯು ತಾನು ಮೊದಲೇ ಸಾರಿರುವಂತೆ ಚೈನೀ ರಾಷ್ಟ್ರೀಯ ಪ್ರತಿನಿಧಿ ಅಲ್ಲಿರುವ ವರೆಗೆ ಭದ್ರತಾ ಕೌನ್ಸಿಲ್ ಸಭೆಯಲ್ಲಿ ಭಾಗ ವಹಿಸುವಂತಿಲ್ಲವೆಂದೂ ತನ್ನ ಗೈರು ಹಾಜರಿಯಲ್ಲಿ ಆಗುವ ಕೌನ್ಸಿಲಿನ ಯಾವ ನಿರ್ಣಯವೂ ತನ್ನನ್ನು ಬದ್ಧರಿಕರಿಸಲಾರದೆಂದೂ ಒತ್ತಿ ಹೇಳಿ ಹೊರಬಿದ್ದವರು ಈ ವರೆಗೂ ಹೊರಗೇ ನೇ ಇದ್ದರು. ಈಗಲೂ ಪರಿಸ್ಥಿತಿ ಹಿಂದಿನಂತಿದೆಯಾದರೂ ರಶ್ಯವು ತನ್ನ ಶಪಥವನ್ನು ತಾನೇ ಹೊಲಿದುಕೊಂಡು ಒಳಗೆ ಪ್ರವೇಶಿಸುವ ಗಾಟ್ಸ್ಕೇನ್ನು ಎಂಬ ಪ್ರಶ್ನೆ ಎದ್ದಿದೆ. ಆ ಪ್ರಕಾರದ ತಿರಸ್ಕಾರಪ್ರದರ್ಶನೆಯಿಂದ ಆಡಿಗೆ ಬಿಚ್ಚಿ ಪಂಡಿತ ನೆಹರುಗಳ ಶಾಂತಿ ಸೂಚನೆಯು ಅಮರ ನೀತಿಯನ್ನೊಳಗೊಂಡಿರುವುದರಿಂದ, ರಶ್ಯದ ಭದ್ರತಾ ಕೌನ್ಸಿಲ್ ಪ್ರವೇಶದ ಮೂಲಕ ಅದು ಅಲ್ಲಿ ಪುನಃ ತಲೆಯೆತ್ತಬಹುದೆಂದು ನಿರೀಕ್ಷಿಸಲಾಗಿದೆ. ನೆಹರೂ ಸೂಚನೆಯಂತೆ ಕಮ್ಯೂನಿಸ್ಟ್ ಚೈನಕ್ಕೆ ಕೂಡಲೇ ಸ್ಥಾನ ಮಾಡಿಕೊಡಬೇಕು– ಕೊರಿಯದಲ್ಲಿ ಆಕ್ರಮಣಗಾರರು ಯಾರು ಎಂಬ ಕುರಿತು ಉತ್ತರ ಕೊರಿಯದ ವಾದವೇನೆಂಬುದನ್ನು ಕೇಳಿಕೊಳ್ಳಬೇಕು, ಎಂದು ರಶ್ಯವು ಭದ್ರತಾ ಕೌನ್ಸಿಲಿನಲ್ಲಿ ಸೂಚನೆ ಮುಂದಿಡಬಹುದು. ಅದು ಫಲಿಸದೆ ಹೋದರೆ ಕೊರಿಯದ ಸಂಬಂಧವಾಗಿ ಭದ್ರತಾ ಕೌನ್ಸಿಲು ಇನ್ನಾವ ಕಾರ್ಯವನ್ನೂ ಕೈಕೊಳ್ಳದಂತೆ ರಶ್ಯವು ತನ್ನ ವಿಶೇಷ ವಾತಾಧಿಕಾರವನ್ನು ಉಪಯೋಗಿಸಬಹುದು. ಹಕ್ಕು ಪ್ರಕಾರ ಅಧ್ಯಕ್ಷ ಸ್ಥಾನವನ್ನೇರುವ ಜಾಕೋಬ್ ಮಾಲಿಕರು ರಾಷ್ಟ್ರೀಯ ಚೈನದ ಪ್ರತಿನಿಧಿಯು ಅಲ್ಲಿರುವುದು ಕಾಯದೇ ವಿರುದ್ಧವೆಂದು ಅಧ್ಯಕ್ಷಾಜ್ಞೆ ಕೊಡಬಹುದು. ಆಗ ಭದ್ರತಾ ಕೌನ್ಸಿಲ್ ತನ್ನೀ ಆಜ್ಞೆಯನ್ನು ತಿರಸ್ಕರಿಸುವುದೋ ನೋಡೋಣವೆಂಬ ನಿರೀಕ್ಷೆಯಿದಿರಬಹುದು. ಇಂತಹ ಅಧ್ಯಕ್ಷಾಜ್ಞೆಯ ಸಂಬಂಧವಾಗಿ ಆಗತ್ಯ ಬೀಳುವ ಏಳು ಮತಗಳು ಭದ್ರತಾ ಕೌನ್ಸಿಲಿನಲ್ಲಿ ದೊರೆಯುಬಹುದೋ ಎಂಬ ಕುರಿತು ಅನುಮಾನವಿದೆ. ಅಂತೂ ಕೊರಿಯ ಯುದ್ಧ–ನೆಹರೂ ಸೂಚನೆ–ತನ್ನ ಅಧ್ಯಕ್ಷ ಪಟ್ಟದ ಸಂದರ್ಭ ಇವೆಲ್ಲವುಗಳ ಮೇಲಿಂದ ರಶ್ಯವು ಪುನಃ ಭದ್ರತಾ ಕೌನ್ಸಿಲಿನಿ ಬಲ್ಲ ಸಂಕಲ್ಪ ಮಾಡಿದೆ. ಆ ಸಂಬಂಧವಾಗಿ ಕಾರ್ಯದರ್ಶಿಗೆ ಕೊಟ್ಟ ಸೂಚನೆಗಿಂತ ಹೆಚ್ಚಿನದಾವುದೂ ರಶ್ಯನ ಕಡೆಯಿಂದ ಕೇಳಿಬಂದಿಲ್ಲ; ಆದರ ಇದಿರುವಾದಿಗಳು ಗೂಢ ಪರ್ಯಾಲೋಚನೆ ನಡೆಸಿ, ಭದ್ರತಾ ಕೌನ್ಸಿಲಿನಲ್ಲಿ ರಶ್ಯದ ಯಾವುದೇ ಹೆಜ್ಜೆಗಾದರೂ ಅಡ್ಡಗಾಲಿಡುವ ಸಿದ್ಧತೆ ಮಾಡಿದ್ದಾರೆ. ಇದೇ ತಾ 1ನೇ ಮಂಗಳವಾರ ಆಲ್ಲಿಯ ಎಳೆದಾಟವಾರಂಭಿಸಿರಬೇಕು. ಸಂಯುಕ್ತ ರಾಷ್ಟ್ರ ಸಂಘದ ಚರಿತ್ರೆಯಲ್ಲೇ ಇದಪ್ಪ ಕಠೋರವಾದ ಹಾಗೂ ತೀಕ್ಷ್ಣವಾದ ವಾಗ್ವಾದವು ಆಗೋಸ್ತು 1ರ ಭದ್ರತಾ ಕೌನ್ಸಿಲಿನಲ್ಲಿ ಆರಂಭಿಸಿದಂತಿದೆ. ಚಿಯಾಂಗರ ರಾಷ್ಟ್ರೀಯ ಚೈನಾ ಪ್ರತಿನಿಧಿಯನ್ನು ಹೊರತಳ್ಳುವುದು– ಕಮ್ಯೂನಿಸ್ಟ್ ಚೈನಾ ಪ್ರತಿನಿಧಿಯನ್ನು ಸೇರಿಸಿಕೊಳ್ಳುವುದು–ಕೊರಿಯಾ ಸಂಬಂಧದ ಭದ್ರತಾ ಕೌನ್ಸಿಲಿನ ನಿರ್ಣಯವನ್ನು ತಳ್ಳಿ ಹಾಕುವುದು–ಅಮೆರಿಕ ಪಾಳಯದ ಪ್ರತಿನಿಧಿಗಳು ಮತ್ತು ಯಾವ ಪಾಳಯಕ್ಕೂ ಸೇರದ ತಟಸ್ಥ ಪ್ರತಿನಿಧಿಗಳೊಳಗೆ ಬಿರುಕನ್ನು ನಿರ್ಮಿಸುವುದು– ಈ ಚಮತ್ಕಾರೀ ಯೋಜನೆಯಿಂದ ರಶ್ಯದ ಜಾಕೋಬ್ ಮಾಲಿಕರು ಭದ್ರತಾ ಕೌನ್ಸಿಲಿನ ಅಧ್ಯಕ್ಷತೆ ವಹಿಸಿದ್ದಾರೆ; ಈ ವಾದದ ಪ್ರಸಿದ್ಧ ಪುರುಷರಾಗಿ ಅವರೇ ರಾಜ್ಯ ನ ಸಂದರ್ಭದಲ್ಲಿ!

Sri Ramakrishna Theatre Limited.
UDIPI. S INDIA.

NOTICE

The Register of members and Transfer Books of the Company will remain closed from Sunday the 20th August, 1950 to Sunday the 3rd September, 1950, both days inclusive.

S. R. Bldgs;
UDIPI,
1-8-1950.

Sd. A. Janardhan Alse,
Managing Director.

THE
Canara Banking Corporation Ltd.
(Incorporated in India)
Estd: 1906.
Head Office : **UDIPI, (S. I.)**

Capital Authorised .... Rs. 25,00,000
Capital Issued, Subscribed & Paid up .... Rs. 20,00,000
Reserves .... Rs. 9,44,765

ಗುರುವಾರ, ಉಡುಪಿ, ೩-೮-೧೯೫೦

ಮುಂದೇನು?

ಕಳದ ಮಹಾಯುದ್ಧ ಕಾಲದಲ್ಲಿ, ಮತ್ತದು ಮುಗಿದಂದಿನಿಂದ ಈ ವರೆಗೂ 'ಲೋಕ ಶಾಂತಿ ಸುರಕ್ಷೆತೆಯ ಮರು ಸ್ಥಾಪನೆ ಮತ್ತು ರಕ್ಷಣೆಯ ಕುರಿತು ಎಲ್ಲಾ ಕಡೆಗಳಿಂದಲೂ–ಮುಖ್ಯತಃ ಸಶಕ್ತ ರಾಷ್ಟ್ರಗಳಿಂದ-ಕೇಳಿ ಬಂದಿರುವ ಮಧುರ ಆಶ್ವಾಸನೆಗಳಿಂದಿಗೆ, ಇಂದು ನಡೆದಿರುವ ಸಮುರ ಕೋಲಾಹಲವನ್ನು ತಡಲನೆ ಮಾಡಿ ನೋಡಿ.ವಾಗ ಯಾರ ಯಾವಮಾತುಕತೆಗಳ ಮೇಲೂ ನಂಬಿಕೆಯಿಡುವುದಸಾಧ್ಯವೆಂಬುದು ಸ್ಪಷ್ಟವಾಗುತ್ತಿದೆ. ಪ್ರಥಮ ಮತ್ತು ದ್ವಿತೀಯ ಮಹಾ ಯುದ್ಧಗಳ ನಡುವೆ ಸಮಾರ. ಇಪ್ಪತ್ತೈದು ವರುಷಗಳ ಅಂತರವಿದ್ದಿತಾದರೂ ದ್ವಿತೀಯ ಮತ್ತು ತೃತೀಯ ಯುದ್ಧಗಳ ನಡುವೆ ಐದು ವರುಷಾವಧಿ ಮಾತ್ರವೇನೋ ಎಂಬ ಭೀತಿಯೆದ್ದಿದೆ. ಕೊರಿಯಾ ಯುಧ್ಧದ ಪ್ರಚಲಿತ ಸ್ಥಿತಿಗತಿ ಮತ್ತು ಭಾವೀ ಸಂಭವಗಳು– ಇತರ ಕಡೆಗಳಲ್ಲಿರುವ ಘರ್ಷಣಾ ಬೇತೆ-ಗಳು ಮತ್ತು ಆಗುತ್ತಿರುವ ಸಿದ್ಧತೆಗಳು—ಸಮರ ಸನ್ನದ್ಧ ಪಾಠಯಗಳೊಳಗೆ ನಡೆಯುತ್ತಿರುವ ವಾದ ಪ್ರತಿವಾದಗಳು ಸರ್ವ ಕ್ರುತಿಸಿರುವುದರಿಂದ, ಇಲ್ಲಿ ಅವುಗಳ ಮರುವರ್ಣನೆ ಅನಗತ್ಯ. ಇಕ್ಕಡೆಯವರೂ ಶಾಂತಿಸಾಧನಾ ಗುರಿಯನ್ನು ಮುಂದೊಡ್ಡಿ ಖಡ್ಗ ಝಳಪಿಸುವುದರಲ್ಲೇ ಇದ್ದಾರೆಂಬುದೇ ಇವೆಲ್ಲಾ ಘಟನೆಗಳ ಮೇಲಿಂದ ಸ್ಪಷ್ಟವಾಗುತ್ತಿರುವ ವಿಷಯ. 'ಶಾಂತಿ ಸ್ಥಾಪನೆಗಾಗಿ ಅಟಂ ಬೋಂಬು ಪ್ರಯೋಗ' ಎನ್ನುವಂತಹ ಪರಮಾವಧಿ ಅಸಂಬಧ ಮಾತು ಕೇಳಿ ಬರುತ್ತಿರುವಾಗ, ಪ್ರತಿಯೊಂದು ಕಡೆಯವರೂ ತಮ್ಮ ವೈರಿಗಳನ್ನೇ 'ಅಶಾಂತಿ' ಯೆಂದು ಗಣಿಸಿದ್ದಾರೆಂಬ ಅರ್ಥವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಯ.ಥ.ರ್ಥ ಲೋಕ ಶಾಂತಿಯ ಆತುರವುಳ್ಳ ಪಂಡಿತ ನೆಹರುಗಂಥಂಥವರು ನಿಜಕ್ಕೂ ಅಸಹಾಯಕರಾಗಿದ್ದಾರೆ. ಈ ಸರಿಸ್ಥಿತಿಯ ಅರ್ಥವೇನು? ಹೀಗಾದಲ್ಲಿ ಮುಂದೇನು? ಎಂಬ ಪ್ರಶ್ನೆಗಳೇಳುತ್ತಿವೆ. ಹಿಂದಿಗಿಂತ ಕ್ಲಿಷ್ಟಾವಸ್ಥಿತಿಯಲ್ಲಿ, ಹಿಂದೆಂದೂ ಆಗಿರದಂತಹ ಪ್ರಳಯ ಸದೃಶ ಮಹಾ ಅನಾಹುತವನ್ನು ಸಿರ್ಮಿಸಲು ಲೋಕವೀಚಾರಿ ತಯಾರಾಗಿದೆ, ಎನ್ನುವಾಗ ಕಳೆದೆರಡು ಮಹಾ ಯುದ್ಧಗಳು ಕಲಿಸಿದ ಪಾಠವಾವುದು, ಎಂಬ ಕುರಿತು ಸಂದೇಹವುಳಿದಿಲ್ಲ. ಆ ಯುದ್ಧಗಳು ಶಾಂತಿಯ ಆವಶ್ಯಕತೆಯನ್ನು ಮನಗಾಣಿಸದೆ ಸಮರದ ಹುರುಪು, ಅನುಭವಗಳನ್ನು ಹೆಚ್ಚಿಸಿದುವೆಂಬುದು ಸ್ಪಷ್ಟವಾಗಿದೆ. ಯುದ್ಧವು ನಷ್ಟದಾಯಿಯಲ್ಲ– ಲಾಭದಾಯಿಯೆಂಬ ಆಶೆಯೊಂದಲ್ಲವಾದರೆ, ಈ ಉದ್ಯೋಗಕ್ಕೆ ಮತ್ತೆತ್ತಿ ಮ್ಮೆ ಇಷ್ಟೊಂದು ಅವಸರದಿಂದ ಯಾರೇಕೆ ಕೈಯಿಕ್ಕಬೇಕು? ಆದರೆ ಕಳದ ಮಹಾ ಯುದ್ಧದ ದುಷ್ಪರಿಣಾಮಗಳನ್ನು ಈಗಲೂ ಅನುಭವಿಸುತ್ತಿರುವ ಲೋಕದ ಜನಸಾಮಾನ್ಯರಿಗೆ ಮತ್ತೊಮ್ಮೆ ಆ ಕುಣಿಕೆಗೆ ಥಮುಕುವ ಮನಸ್ಸಾಗದೆ, ಎಂದು ಹೇಳುವುದಾದರೂ ಹೇಗೆ? ಈ ಯದ್ವಾತದ್ವಾಗಳ ಮೇಲಿಂದ ಒಂದು ಭಿನ್ನತೆ ಸ್ಪಷ್ಟವಾಗಿ ತೋರಿ ಸ್ತಿದೆ–ಲೋಕ ಘಟನೆಗಳ ಸಂಚಿ ಲಕರಾಗಿರುವವರು, ಲೋಕದ ಜನಸಾಮಾನ್ಯರ ಭಾವನೆಗನುಗುಣವಾಗಿ ವರ್ತಿಸುತ್ತಿಲ್ಲ; ಮಾನವ ಜಾಂಗಕ್ಕೆ ಬೇಕಾಗಿರುವುದು ಅಳುವ ವರ್ಗಕ್ಕೆ ಬೇಕಾಗಿಲ್ಲ. ಮಾನವ ಜನಾಂಗಕ್ಕಾಗಿ ಶಾಂತಿಯಂತ್ರದ ಕಪಟ ಹರನಿ ನಡೆಸುತ್ತಿರುವವರೇ, ಸ್ವಪಕ್ಷ ತಮ್ಮ ಹಾಗೂ ತಮ್ಮ ವರ್ಗದ ಸ್ಥಾನ, ಮಾನ, ಧನ, ವರ್ಚಸ್ಸು, ಅಧಿಕಾರಗಳ ಸಾಧ್ಯತೆಗಾಗಿ ಯುದ್ಧ ತಯಾರ್ಯಗಳಲ್ಲಿ ನಿರತರಾಗಿದ್ದಾರೆ. ಹೀಗಾಗಿ ಮಧುರಾಲಾಪಗಳಿಗನುಗುಣವಾದ ಹೆಜ್ಜೆಯಿಡುತ್ತಾ ಪ್ರಪಂಚವಿಂದು ಅಪಾಯದ್ವಾರದತ್ತ ದೂಡಲ್ಪಡುತ್ತಿದೆ. ಇಂತಹ ವಂಚನೆಯು ಮುಖ್ಯಭಾಗವಾಗಿರುವ ಇಂದಿನ ವಾತಾವರಣದಲ್ಲಿ, ಯಾರು, ಯಾವುದೇ ಮಾತುಕೃತಿಗಳ ಮೇಲಾದರೂ ವಿಶ್ವಾಸವಿಡುವುದು ತಪ್ಪು. ಸ್ವಪರ ವಂಚನೆಯೇ ಇಂದಿನ ಜಾಗತಿಕ ರಾಜಕಾರಣ ಜೀವಾಳ. ನ್ಯಾಯದಾನದ ಮಟ್ಟಿಗೂ ತನಗೊಂದು ಇತರರಿಗಿನ್ನೊಂದು, ಎಂಬ ವ್ಯತ್ಯಾಸವಿದ್ದೇ ಇದೆ ಎಂಬುದಕ್ಕೆ ಬಹು ತೇಕವಾಗಿ ಒಂದೇ ಸ್ವರೂಪದ್ದಿದ್ದರೂ ಕಾಶ್ಮೀರ ಮತ್ತು ಕೊರಿಯಾ ಆಕ್ರಮಣಗಳ ಕುರಿತು ಅಮೆರಿಕದ ವಂದಾಳುತನದಲ್ಲಿ ಭದ್ರತಾ ಕೌನ್ಸಿಲು ವಹಿಸಿರುವ ಭಿನ್ನ ಧೋರಣೆಯೇ ನಿದರ್ಶನ. ಸಂದರ್ಭ ಸಾಧನೆಗಾಗಿ, ತನ್ನ ಎದೆ ಬಿಲ್ಲೆಯನ್ನು ಹಾನೇ ಕಾಲಡಿಗೆ ಹಾಕಿ ನಲ್ಲುವುದು ಕೂಡಾ ಇಂದಿನ ರಾಜ ಕಾರಣದಲ್ಲಿ ಹೇಗೆ ಮಾನ್ಯ ನಿಯಮವಲ್ಲವೆಂಬುದಕ್ಕೆ, ರಷ್ಯವೀಗ ತನ್ನ ತಿರಸ್ಕೃತನ್ನು ಹಾನೇ ಕುಳಿದುಕೊಂಡು ಭದ್ರತಾ ಕೌನ್ಸಿಲು ಪ್ರವೇಶಿಸಿರುವ ಹ ವ್ಯಾಸವನ್ನು ನೋಡಬಹುದು. ಅಂತೂ ಅಪರಿವರ್ನೆದೆ. ಪಕ್ಷ ಭೇದವಿಲ್ಲದೆ, ಎಲ್ಲರೂ ಸ್ವಾರ್ಥಸಾಧಕರು; ಸ್ವಕಾರ್ಯ ಜಾಣರು; ಈ ಸಾಧನೆ ಮತ್ತು ಜಾಣ್ಮೆಯು ಲೋಕವನ್ನೇ ರಾಹುವಾಗಿ ಆಕ್ರಮಿಸಿಕೊಳ್ಳುವಂತಿದ್ದರೂ ಕೂಡಾ ಸ್ವಭಾವ ಬಿಡಲೊಲ್ಲದವರು!

ಇಂತಹ ಸ್ಥಿತಿಯಲ್ಲಿ ಲೋಕದ ಭವ್ಯ ಭವಿಷ್ಯಕ್ಕಾಗಿ ಮಾಡಬೇಕಾದುದೇನು, ಎಂದು ಚಿಂತಿಸುವುದು, ಲೋಕ ಹಿತದ ಯತಾರ್ಥ ಭಿಲಾಷಿಗಳ ಕರ್ತವ್ಯ ವಿದೆ. ಜನಸಾಮಾನ್ಯರ ಅಭಿಮತಗಳನ್ನು ಅಂಶ ಬಿಡದೆ ಪ್ರತಿನಿಧಿಸುವ ಸರಕಾರಗಳೇ ಲೋಕದ ಎಲ್ಲೆಡೆಗಳಲ್ಲೂ ಇರುತ್ತಿದ್ದರೆ, ಮೇಲಾಟ ವತ್ತು, ಭಿನ್ನತೆಗಳೆಲ್ಲವೂ ಮಾಯವಾಗಿ 'ಏಕ ಜಗತ್ತು' ಸುಗಮ ನಿರ್ಮಾಣಗೊಳ್ಳುತ್ತಿತ್ತು. ಆದರೆ, ಅಂತಹ ಅಧಿಕಾರ ಶುದ್ಧೀಕರಣವಾಗುವ ವರೆಗೆ ಕಾಯಲಾಗದ ಬೋಕಾರತ್ತೇ ಈಗ ಎದ್ದಿದೆ. ಆದನ್ನು ನಿವಾರಿಸಿ, ಪ್ರಪಂಚವನ್ನಿ ರಕ್ಷಿಸಿಕೆಳುವ ಪ್ರಥಮ ಚಿಕಿತ್ಸೆಯು ಈಗ ಅವಸರದಲ್ಲಾಗಬೇಕಾಗಿದೆ; ಮೂಲ ತಃ ಯಾವುದನ್ನೂ ಬದಲಾಯಿಸಲಾಗದಂತಹ, ಯಾರನ್ನು ಕಿದ್ದುವುದೂ ಅಸಾಧ್ಯವಾಗಿರುವಂತಹ ಇಂದಿನ ಸ್ಥಿತಿಯಲ್ಲಿ, ಇದ್ದಲ್ಲೇ ನ್ಯಾಯವನ್ನೆತ್ತಿ ಹಿಡಿದು, ಎಲ್ಲಾ ಗಲಭೆಗಳನ್ನೂ ಅಲ್ಲಿಂದಲ್ಲಿಗೆ ಶಮನಿಸುವ ಕ್ಷಿಪ್ರ ವ್ಯವಸ್ಥೆಯೊಂದು ಬೇಕಾಗಿದೆ. ಇಂತಹ ವ್ಯವಸ್ಥೆಗಾಗಿ ಸರ್ವಸಮ್ಮತ ಮಾಧ್ಯಮವೊಂದಿರಬೇಕಾದುದು ಆಗತ್ಯ. ರಕ್ಷದ ಸವೇತ ಸರ್ವ ರಾಷ್ಟ್ರಗಳಿಂದಲೂ ಮಾನ್ಯತೆ ಗಳಿಸಿರುವ ಸಂಯುಕ್ತ ರಾಷ್ಟ್ರ ಸಂಘವನ್ನು ಅಂತಹ ವರಿಣಾಮಕಾರೀ ಮಾಧ್ಯಮವಾಗಿ ಇರಿಸಿಕೊಳ್ಳಬೇಕಾದುದೇ ಈ ಕಾಲದ ಪ್ರಥಮಾವಶ್ಯಕತೆ; ಹಾಗಾಗಬೇಕಾದರೆ ಮುಂದಾಗಿ ಆ ಸಂಘದಲ್ಲಿದ್ದಿರುವ ಬಿಕ್ಕಟ್ಟನ್ನು ಬಿಡಿಸಿಕೊಳ್ಳಬೇಕು ಕೊರಿಯಾ ಕಲಹ ಸಂಬಂಧವಾಗಿ ಪಂಡಿತ ನೆಹರುಗಳು ಕೊಟ್ಟಿದ್ದ ಸೂಚನೆಯು ಅಂಶಗಳು ಆ ಬಿಕ್ಕಟ್ಟು ನಿವಾರಣೆಗಾಗಿಯೇ ಇದ್ದುವು. ಅನಾರಣ್ಯೆತವಾಗಿ ಭದ್ರತಾ ಕೌನ್ಸಿಲನ್ನು ಪ್ರವೇಶಿಸುವ ಮೂಲಕ ರಷ್ಯವು ನೆಹರೂ ಸೂಚನೆಯ ಒಂದಂಶವು ಜಾರಿಗೆ ಬರುವಂತೆ ಮಾಡಿದುದಷ್ಟೇ ಅಲ್ಲ— ಮತ್ತೊಂದು ಅಂಶವನ್ನೂ ಭದ್ರತಾ ಕೌನ್ಸಿಲಿನ ಮುಂದೊಡ್ಡಿದಂದು ನಿರೀಕ್ಷಿಸಲಾಗಿದೆ. ಭದ್ರತಾ ಕೌನ್ಸಿಲಿನಲ್ಲಿ ಸಶಕ್ತಭಾಗಿಯಾಗುವಾಗ ರಷ್ಯವು ಕಟ್ಟಿಕೊಂಡಿರುವ ಉದ್ದೇಶವಾವುದೇ ಇರಲಿ— ಯಾರಿಂದ ವಂದೆ ಬಂದರೂ ಒಂದು ನ್ಯಾಯವು ನ್ಯಾಯವೇ ಎಂಬುದನ್ನು ಮರೆಯಬಾರದು; ಸರ್ವ ಸಮಾನ ಹಿತಕ್ಕಾಗಿ ಸ್ವಾರ್ಥ ತ್ಯಾಗವಾಗುತ್ತಾ ಬಂದ ದಾಖಲೆಯಾವುದೂ ರಷ್ಯದ ಇದಿರು ಪಕ್ಷದಲ್ಲಿ ಕೂಡಾ ಇಲ್ಲ. ಆಂದ ಮೇಲೆ ಪರಸ್ಪರ ಆರೋಪ ಮತ್ತು ಅನುಮಾನಗಳನ್ನೇ ಮುಂದೊಡ್ಡುವ ಬದಲಿಗೆ ಕದಡು ವಾತಾವರಣದಲ್ಲೂ ನ್ಯಾಯಕೋಧನೆಗಾಗಿ ಯತ್ನಿಸುವ ಧೋರಣೆಯನ್ನು ಇಕ್ಕಡೆಯವರೂ ವಹಿಸಬೇಕು. ಅಂತಹ ನ್ಯಾಯವು ತಮ್ಮ ಸ್ವಾರ್ಥ ಮತ್ತು ಅಭಿಮಾನಕ್ಕೆಂತಹ ಧಕ್ಕೆಯನ್ನು ಕೊಟ್ಟರೂ ಲೋಕ ಶಾಂತಿಗಾಗಿ ಅದನ್ನೊಪ್ಪಿಕೊಳ್ಳುವ ಬುದ್ಧಿ ಸಂಬಂಧ ಪಟ್ಟ ಸರ್ವರಲ್ಲೂ ಮೂಡಬೇಕು ನ್ಯಾಯೋಚಿತ ತೀರ್ಮಾನವನ್ನು ಗರ್ಭದಲ್ಲಿ ಇಟ್ಟುಕೊಂಡಿರದ ಕಲಹವೇ ಪ್ರಪಂಚದಲ್ಲಿಲ್ಲ. ಈ ಬುದ್ಧಿ ಇದ್ದರೆ, ಲೋಕಾಪಾಯ ಹೇತುಗಳಾಗಿರುವ ಎಲ್ಲಾ ವಾದಗಳೂ ಒಂದರ ಬಳಿಕೊಂದರಂತೆ ತೀರ್ಮಾನ ಹೊಂದಬಲ್ಲುವು; ಪ್ರಾಪಂಚಿಕ ಶಾಂತಿ ಮತ್ತು ಭದ್ರತೆಯು ಮರುಸ್ಥಾಪನೆಯಾಗಬಲ್ಲುದು; ಲೋಕಕ್ಕೆ ಭವ್ಯ ಭವಿಷ್ಯವೊದಗಬಲ್ಲುದು; ಇಂದಿನ ಗಲಿಬಿಲಿಗಳೆಲ್ಲವೂ ಶಾಂತಿ ಸುಧೆಯನ್ನು ಮೇಲ್ತರುವ ಮಂಧನಗಳಾಗುವವೆಂದು ನಾವೀ ಸಂದರ್ಭದಲ್ಲಿ ನಿರೀಕ್ಷಿಸಬಹುದೆ?

ಸೂಚನೆ

ನಾವು ವರ್ಷಕ್ಕೊಂದು ವಾರ ರಜೆ ಪಡೆಯುವ ಪದ್ಧತಿಯಂತೆ ಬರುವ ವಾರದ (10–8–50) ಸಂಚಿಕೆಯನ್ನು ನಿಲ್ಲಿಸಲಾಗಿದೆ. (ಸಂ. ನ.)

ಉಡುಪಿ.

ಮುನಿಸಿಪಲ್ ಸಭೆಯು— ಕಳದ ತಾ. 29ರಲ್ಲು ಶ್ರೀ ಯು. ವಾಸುದೇವ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಾಲಿಟಿಯೊಳಗಿನ ಹ್ಯಾವೇ ರಸ್ತೆಗಳು ನಾಡು ರಸ್ತಿಯಿದ್ದು ಕಲ್ಸಂಕ-ಕುಂಜಿಬೆಟ್ಟು ರಸ್ತೆಯು ತೀರಾ ಕೆಟ್ಟಿ ಹೋಗಿರುವುದರಿಂದ ಆ ವುಗಳ ದುರಸ್ತಿಯಾಗಬೇಕಾದ ಅವಶ್ಯಕತೆಯನ್ನು ಶ್ರೀ ಎ. ಮುಂಜುನಾಥರಾಯರು ಸಭಾರಂಭದಲ್ಲಿ ಸೂಚಿಸಿದುದು ಮಾನ್ಯವಾಯಿತು. ಮದ್ರಾಸು ಮುಂತ್ರಿ ಶ್ರೀ ಎವ್ಹಿ.ಭಕ್ತವತ್ಸಲಂ ಮತ್ತು ಹ್ಯಾವೇ ಬಂದನೆ ನಂಬ್ರ ಅಧಿಕಾರಿಗಳೂ ತೀವ್ರ ನಿಗಾ ಕೊಡುವಂತೆ ನಿರ್ಣಯವನ್ನು ಅವರೆಲ್ಲರಿಗೆ ಕಳುಹಿಸಬೇಕೆಂದಾಯಿತು. ಸರಕಾರದಿಂದ ಖಡೆದ ಸಾಲದ ಬಾಬ್ತು ರೂಪಾಯಿ 13,407-15-6ನ್ನು ಚಿಕ್ಕ ವ್ಯಾಧಿಯ ರೀವದಾತಿಯಾಗಿರಬೇಕೆಂದಾಯಿತು ಮುನಿಸಿಪಲ್ ಲೈಬ್ರರಿಗೆ ರೂಪಾಯಿ 150/-ಗ್ರಾಂಟು ಪಡೆಯುವರೆ ಸರಕಾರಕ್ಕೆ ಅರ್ಜಿ ಮಾಡುವುದೆಂದಾಯಿತು. ಮುನಿಸಿಪಲ್ ಕ್ಷೇತ್ರದ ವಯಸ್ಕರ ಶಿಕ್ಷಣ ತರಗತಿ ಪೆಚ್ಚಕ್ಕಾಗಿ ತಿಂಗಳಿಗೆ ರೂ. 12/-ರಂತೆ ಒಂದು ವರ್ಷದ ಖರ್ಚು ಸೆಂಕ್ಷನ್ ಮಾಡಲಾಯಿತು.

ಸ್ವಾತಂತ್ರ್ಯ ದಿನಾಚರಣೆ ಸ್ಮಾರಕ ವಿದ್ಯಾರ್ಥಿವೇತನ ಫಂಡಿನಿಂದ ಕೊಡೋಣಾಗುವ ವೇತನಕ್ಕೆ ಬಡ ವಿದ್ಯಾರ್ಥಿ ಯೋಗ್ಯತೆ ಪರೀಕ್ಷಾ ಬೋರ್ಡಿಗೆ ಸ್ಥಳೀಯ ಹ್ಯಾಸ್ಯಾಲಂಗಳ ಹೆಡ್‌ಟೀಚರರನ್ನೂ ಶ್ರೀ ಪುಂಡಲೀಕ ಶೆಟ್ಟಿಯವರನ್ನು ಆರಿಸಲಾಯಿತು. ಉಡುಪಿ ಫಿರೀಸ್ ಇನ್ಸ್‌ಪೆಕ್ಟರು ತನ್ನ ಆಫೀಸು ಸೂಚನಾ ಬೋರ್ಡನ್ನು ಮುನಿಸಿಪಲ್ ಲೈಬ್ರೆರಿ ಕಂಪೌಂಡಿನಲ್ಲಿ ಹಾಕಲು ಅನುಮತಿ ಕೊಡಲಾಯಿತು. ಅಜ್ಜರಕಾಡು ಟೌನ್ ಪ್ಲಾನಿಂಗ್ ಯೋಜನೆಯ ಇತ್ಯರ್ಥವನ್ನು ಮುಂದಿನ ಸಭೆಗೆ ಬಾಕಿಯಿಡಲಾಯಿತು. ವನಸ್ಪತಿ ತುಪ್ಪ ನಿಷೇಧ ಸೂಚಕ ಕಾನೂನಿಗೆ ಬೆಂಬಲಕೊಡುವ ನಿರ್ಣಯವಾಯಿತು. ಶ್ರೀ ಲಕ್ಷ್ಮಣಬಲ್ಲಾಳ್, ಶಿರಿಬೀಡು, ಇವರು ಮುನಿಸಿಪಲ್ ಲೈಬ್ರೆರಿಗೆ ಕೊಪರೇಟಿವ್ ಸೊಸೈಟಿ ಆಕ್ಟ್ ಮತ್ತು ಮೆನ್ಮೊವಲ್ಗಳನ್ನು ಉಚಿತವಾಗಿ ಕೊಟ್ಟ ಬಗ್ಗೆ ಅವರಿಗೆ ಉಪಕಾರ ಸ್ಮರಿಸಲಾಯಿತು. ವಿದ್ಯಾ ತೆರಿಗೆಯನ್ನೇರಿಸಬೇಕೆಂಬ ಸರಕಾರದ ಸೂಚನೆಯ ಪರಿಶೀಲನೆಯನ್ನು ಮುಂದಿನ ಸಭೆಗೆ ಬಾಕಿಯಿಡಲಾಯಿತು.

---

* ಪ್ರಾಮುಖ್ಯ ಘಟನೆ *

ತ್ರಿವೆಂ ಅರಸು ವರುತಗಳ ಅಜ್ಞಾತವಾಸವನ್ನು ಮುಗಿಸಿಕೊಂಡು ಜುಲಾಯಿ ತಾ. 22ರಲ್ಲಿ ಸ್ವದೇಶಕ್ಕೆ ಮರಳಿ ಸಿಂಹಾಸನಕ್ಕೇರಿದ ರಾಜಾ ಲಿಯೊಪೋಲ್ಡರ ಸಿಂಹಾಸನ ತ್ಯಾಗಕ್ಕಾಗಿ ಅವರು ಖಂಡ ಮರುದಿನದಿಂದಲೇ ಬೆಲ್ಜಿಯಮಿನಲ್ಲಿ ಪ್ರಚಂಡ ಆಂದೋಲನವೆದ್ದಿದೆ ಲಿಯೋಪೋಲ್ಡರಿಗನು ಕೂಲವಿರುವ ಕಥೋಲಿಕ್ ಪಕ್ಷದ ಸಮಬಲ ಸಮಿತಾವಾದಿ ಪಕ್ಷವು ಲಿಯೋಪೋಲ್ಡ್ ರಾಜತ್ವಕ್ಕೆ ಬದ್ಧ ವಿರೋಧವಿದೆ. ಸಾರ್ವತ್ರಿಕ ಮುಷ್ಕರ, 'ಲಿಯೊಪೋಲ್ಡರು ಗಲ್ಲಿಗೇರಲಿ' ಮುಂತಾದ ನಿಷೇಧ ಘೋಷಣೆಗಳೊಂದಿಗೆ ವಿರುದ್ಧ ಮೆರವಣಿಗೆ, ಸಭೆ ಮತ್ತು ಖಾಡಾಖಾಡಿ ಹೋರಾಟ ಹೀಗೂ ಬೋಂಬು ಸಿಡಿತಗಳು. ಬೆಲ್ಜಿಯಮಿನಲ್ಲಿ ನಡೆದಿವೆ. ಇಡೀ ಬೆಲ್ಜಿಯಮ್ ಅಲ್ಲೋಲ ಕಲ್ಲೋಲವಾಗುತ್ತಿದೆ. ವಿರೋಧ ಪ್ರದರ್ಶಕರು ರಾಜಧಾನಿಗೂ ನುಗ್ಗಿ ಬರುವರೆಂಬ ಭೀತಿಯಿಂದ ರಾಜಧಾನಿ ಬ್ರುಸೆಲ್ಸ್ ನಗರದ ಎಲ್ಲಾ ದ್ವಾರಗಳನ್ನೂ ಮುಚ್ಚಿಬಿಟ್ಟು ಹೊರಗಿನ ಸಂಬಂಧವನ್ನೆ ಕಡಿದುಕೊಳ್ಳಬೇಕಾಗಿ ಬಂದಿದೆ. ಜರ್ಮನಿಯು ಅಕ್ರಮಣ ಕಾರ್ಯಕ್ಕೆ ನೇಮಿಸಿದ್ದ ಬೆಲ್ಜಿಯಮ್ ಸೇನೆಗಳೆಲ್ಲವನ್ನೂ ಈಗ ಬೆಲ್ಜಿಯಮ್ ವ್ಯವಸ್ಥಾ ಧ್ವಜೆಗಳಾಗಿ ಹಿಂದೆ ಕರೆಯಿಸಿಕೊಂಡಿದ್ದಾರೆ. ಒಂದೇ ರಾಜಾ ಲಿಯೊಪೋಲ್ಡರನ್ನು ಸಿಂಹಾಸನ ತ್ಯಾಗ ಮಾಡಿಸಬೇಕು; ಕಲ್ಲಾಲೇ ಅಂತರ್ಯುದ್ಧವನ್ನು ಇದಿರಿಸಬೇಕು ಎಂಬ ಯುದ್ಧಾಹ್ವಾನವನ್ನು ಸೋಶಿಯಲಿಸ್ಟ್ ನಾಯಕರು ಮಂತ್ರಿಮಂಡಲಕ್ಕೆ ಕೊಟ್ಟುದರಿಂದ, ಮಂತ್ರಿ ಮಂಡಳಿಯೀಗ ಒಂದು ಇಡೀ ರಾತ್ರಿ ಪರ್ಯಾಲೋಚನೆ ನಡೆಸಿದೆ. ತನ್ನ ದೆಸೆಯಿಂದಾಗಿ ರಾಷ್ಟ್ರದಲ್ಲಿ ಅಂತರ್ಯುದ್ಧ ನಡೆಯುವುದನ್ನು ತಪ್ಪಿಸುವುದಕ್ಕಾಗಿ ರಾಜಾ ಲಿಯೊಪೋಲ್ಡರು ತನ್ನ ಅಧಿಕಾರವನ್ನು ಪುತ್ರ ಬಾಡೂಲಿನರಿಗೆ ಬಿಟ್ಟುಕೊಡುವ ಸಂಕಲ್ಪ ಮಾಡಿದಂತಿದೆ. ಕೇವಲ ಹತ್ತು ದಿನ ಹೊತ್ತ ಬೆಲ್ಜಿಯಮ್ ಕಿರೀಟವನ್ನು ಇದೇ ತಾ. 1ರಲ್ಲೇ ಲಿಯೊಪೋಲ್ಡರು ಕೆಳಗಿಟ್ಟರೆ ಬೇಕು.

ಉಡುಪಿ

ಸ್ಥಳೀಯ ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕೋರ್ಪರೇಶನ್ ಸಂಸ್ಥೆಯವರು ವಿದ್ಯುಚ್ಛಕ್ತಿಯ ಉಪಯೋಗದ ಮೇಲೆ ಹಾಕಿರುವ ಶೇಕಡಾ 100ರಷ್ಟರ ಅಧಿಕ ಬೆಲೆಯು ಸಾರ್ವರಿಗೂ ಮನನವಿರುವ ವಿಷಯ. ಈ ವಿಚಾರದಲ್ಲಿ ವಿದ್ಯುಚ್ಛಕ್ತಿ ಉಪಯೋಗಿಸುವವರಿಗುಂಟಾದ ಸಂಕಷ್ಟನಿವಾರಣೆಗಾಗಿ ಕಾರ್ಯಕಾರಿ ಮಂಡಳಿಯೊಂದನ್ನು ತಾ. 15-7-1950ರಲ್ಲಿ ಉಡುಪಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ನಿರ್ಮಿಸಿರುವುದೂ ನಿಮಗೆಲ್ಲರಿಗೂ ತಿಳಿದ ವಿಷಯವೆ.

ಕಾರ್ಯಕಾರಿ ಮಂಡಳಿಯವರು ಪರಿಸ್ಥಿತಿಯನ್ನು ವಿಮರ್ಶಿಸಿ, ಪರ್ಯಾಲೋಚಿಸಿ ಈ ಅನ್ಯಾಯದ ಕುರಿತು ಮಹಾಜನರ ಪರವಾಗಿ ಬಂದು ಸಿವಿಲ್ ಮೊಕದ್ದಮೆಯನ್ನು ಹೂಡಿ ಕಂಪೆನಿಯವರು ಈ ಅಧಿಕ ಬೆಲೆಯನ್ನೆವ ಸೂಲು ಮಾಡದಂತೆ ಕಡೆಯನ್ನು ಹಾಕಬೇಕೆಂದು ನಿರ್ಣಯಿಸಿರುವರು. ಅದು ಅಂತೆಯೇ ಅಗಲು ನ್ಯಾಯಬದ್ಧ ಸಾಕಷ್ಟು ಕಾರಣಗಳಿವೆ.

ಯಾವುದಾದರೂ ಕಾರಣದಿಂದ ಕೋರ್ಟಿನಿಂದ ತ್ವರ್ಯಾದ ತಡೆಯನ್ನು ಹಾಕಿಸಲು ಆ ನಾನುಕೂಲವಿರುವ ಸಂದರ್ಭದಲ್ಲಿ, ವಿದ್ಯುಚ್ಛಕ್ತಿಯ ಉಪಯೋಗಿಕರು ಈ ಕೆಳಗೆ ಸೂಚಿಸಿದಂತೆ ನಡೆದುಕೊಳ್ಳಬೇಕಾಗಿ ವಿನಂತಿ.

1 ಜುಲ್ಯಾ ತಿಂಗಳ ಬಿಲ್ ಕಂಪೆನಿಯಿಂದ ಜಾರಿಯಾದೊಡನೆ ಅದನ್ನು ಕೊಡದೆ ಕಂಪೆನಿಯ ಕಾನೂನಿಗೆ ಸರಿಯಾಗಿ ಇರುವ ಒಂದು ತಿಂಗಳ ಅವಧಿಯೊಳಗೆ ಸಾವಕಾಶವಾಗಿ ಕೊಡುವುದು.

2 ಅಥವಾ ಕಂಪೆನಿಯಿಂದ ದೊರಿಯಬಹುದಾದ ರಿಯಾಯಿತಿ (rebate) ನಸ್ಯವಾಗಬಹುದೆಂಬ ಅಭಿಸ್ರಾಯವಿದ್ದರೆ, ಬಿಲ್ಲಿನ ಹಣ ಪಾವತಿಮಾಡುವಾಗ ಅವರವರ ನಿರೀಧವನ್ನು ಸ್ಪಷ್ಟಪಡಿಸಿ ಹಣ ಸಲಾಯಿಸುವುದು.

ಸೂಚನೆ:—ಕೋರ್ಟಿನಿಂದ ನಮ್ಮ ಬೇಡಿಕೆ ಪೂರ್ಣಕೆಯಾದಲ್ಲಿ ಜುಲ್ಯಾ ತಿಂಗಳಿನಿಂದ ಯುನಿಟ್ ಒಂದರ ಆರು ಆಣೆಯಂತೆ ಮಾತ್ರ ಕೊಟ್ಟರೆ ತೀರಿತೆಂಬುದನ್ನು ಮರೆಯಬಾರದು; ಈ ವಿಷಯದಲ್ಲಿ ಆಲ್ಯಾದ ಪ್ರಗತಿಯನ್ನು ನಿರೀಕ್ಷಿಸಿರಿ.)

3 ಅನಾವಶ್ಯಕ ಅಥವಾ ಅಗತ್ಯವಿರುವ ದೀಪ ಅಥವಾ ಇಸ್ತ್ರಿತರ ವಿದ್ಯುಚ್ಛಕ್ತಿಯಿಂದ ಎಡಿಯುವ ಸಲಕರಣೆಗಳನ್ನು ನಂನ್ಯಾ ಮಾಡುವುದು.

4 ಸಾಧ್ಯವಿರುವ ಎಲ್ಲ ಕಡೆಗಳಲ್ಲೂ 40 ಪವರಿನ ಮೇಲ್ಪಟ್ಟ ಬಲ್ಬುಗಳ ಬದಲಿಗೆ ಕಮ್ಮಿ ಪವರಿನ ಬಲ್ಬುಗಳನ್ನೇ ಉಪಯೋಗಿಸುವುದು.

5. ಜೋಗಿನಿಂದ ಸರಬರಾಯಿಯಾಗುವಂತೆ, ಸ್ಥಳೀಯ ಕಂಪೆನಿಯನ್ನು ಸರಕಾರದ ವರು ಪಡಕೊಂಡು ಇಲ್ಲಿಯ ಅತ್ಯಸ್ತಿಕರವಾದ ಸರಬರಾಯಿಯನ್ನು ಜೋಗಲಾಡಿಸುವಂತೆ ಸರಕಾರವನ್ನು ಅನುಕೂಲವಿರುವವರೆಲ್ಲ ಆಗಿಂದಾಗ್ಗೆ ಬರಕೊಳ್ಳುವುದು ಮತ್ತು ಅಂತಹ ಪತ್ರಗಳ ಒಂದು ನಕಲನ್ನು ಕಾರ್ಯಕಾರಿ ಮಂಡಳಿಯ ಅವಗಾಹನೆ ಬಗ್ಗೆ ಕಳುಹಿಸುವುದು.

6. ವಿದ್ಯುಚ್ಛಕ್ತಿಯನ್ನು ಉಪಯೋಗಿಸುವ ಪ್ರತಿಯೊಬ್ಬರೂ ತಮ್ಮ ತಮ್ಮ ಅಭಿಪ್ರಾಯ, ಸೂಚನೆ ಹಾಗೂ ಕಷ್ಟ ಸಂಕಷ್ಟಗಳ ನ್ನು ಕಾರ್ಯಕಾರಿ ಮಂಡಳಿಗೆ ತಿಳಿಸುತ್ತ ಈ ಮಂಡಳಿಯಿಂದ ಜನತೆಗೆ ಯೋಗ್ಯ ಪ್ರಯೋಜನ ಉಂಟಾಗುವಂತೆ ನೆರವಾಗುವುದು.

ಸಾರ್ವಜನಿಕ ಸಭೆಯಲ್ಲಿ ನಿರ್ಣಯಿಸಿದಂತೆ ವಿದ್ಯುಚ್ಛಕ್ತಿ ಉಪಯೋಗಕರ ಕಷ್ಟಗಳ ನಿವಾರಣೆಗಾಗಿ, ಸಂಘಟನೆಗಾಗಿ ಮತ್ತು ಅವರ ಉದ್ದೇಶ ಪೂರೈಕೆಗಾಗಿ "ವಿದ್ಯುಚ್ಛಕ್ತಿ ಉಪಯೋಗಕರ ಸಂಘ"ವನ್ನು ಸ್ಥಾಪಿಸಲು ಕಾರ್ಯಕಾರಿ ಮಂಡಳಿಯು ಕೈನೀಡಲಿದೆ. ಆಗ ಮಹಾಜನರೆಲ್ಲರೂ ತಮ್ಮ ಸಹಕಾರವನ್ನು ಪ್ರದರ್ಶಿಸುವುದಲ್ಲದೆ ಕಾರ್ಯಕಾರೀ ಮಂಡಳಿಯವರು ಕೈಗೊಳ್ಳುವ ಸಕಲ ಕಾರ್ಯಗಳಲ್ಲೂ ನೆರವಾಗುವರೆಂಬ ದೃಢ ವಿಶ್ವಾಸವಿದೆ. ಆಷ್ಟಲ್ಲದೆ, ಸದ್ಯದಲ್ಲಿಯೇ ನಗರ ಸಭಾಧ್ಯಕ್ಷರು ಅಧಿಕ ಬೆಲೆ ಕೊಟ್ಟು ಬೀದಿಯ ದೀಪವಿಡುವ ಅಗತ್ಯವಿದೆಯೇ, ಅಥವ ಹೊರಿಯನ್ನು ನಗರ ಸಭೆಯು ಹೊರಲು ಸಾಧ್ಯವಿಲ್ಲದಿರುವಾಗ ಜನರು ಇನ್ನೂ ಹೆಚ್ಚಿಗೆ ತೆರಿಗೆ ಕೊಡಲು ಸಿದ್ಧರಿರುವರೇ ಎಂಬ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸಲು ಒಂದು ಸಾರ್ವಜನಿಕ ಮಹಾಸಭೆಯನ್ನು ಕರೆಯಲಿರುವರು. ಆಗ ಮಹಾಜನರೆಲ್ಲರೂ ಬಂದು ಸಮ್ಮತಿಯಿಂದ ವಿದ್ಯುಚ್ಛಕ್ತಿಯ ಮೇಲೆ ವಿಂಸಿದ ಅಧಿಕ ಬೆಲೆಯ ನೋಲಣ ನಿಷೇಧವನ್ನು ಸೂಚಿಸಿ ತಮ್ಮ ನಿರ್ದಾಕ್ಷಿಣ್ಯ ಮತವನ್ನು ನಗರಾಧ್ಯಕ್ಷರಿಗೆ ಕೊಡಬೇಕೆಂದು ಕಾರ್ಯಕಾರೀ ಮಂಡಳಿಯ ಶ್ರೀಗಳಾದ ಆರ್. ಫರ್ನಾಂಡಿಸ್, ಕೆ. ನರಹರಿ ಕಾಮತ್, ಎ.ಜನಾರ್ಧನ ಅಲ್ಸೆಯವರ ವಿನಂತಿಯಿದೆ.

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ಟು ತಿಂಗಳ ಅಂತ್ಯಕ್ಕೆ 'ನವಯುಗ'ದ 30ನೇ ವರ್ಷವು ಕೊನೆಗೊಂಡು ಸಪ್ಟಂಬರ ತಿಂಗಳಿಂದ ಹೊಸ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿಯು ಮುಗಿಯುವ ನಮ್ಮ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು (ಹಿಂದಿನ ಬಾಕಿ ಇದ್ದವರು ಆದನ್ನು ಸಹ) ದಯವಾಡಿ ಕಳುಹಿಸಿ ಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ಹೊಸ ಚಂದಾದಾರರಾಗಿ ಪ್ರೋತ್ಸಾಹಿಸುವವರಿಗೂ ಇದೀಗ ಸುಸಂದರ್ಭವಾಗಿದೆ. ವಾರ್ಷಿಕ ಚಂದಾ ರೂ. 5-4-0 (ಅಂಚೆವೆಚ್ಚ ಸೇರಿ) ಆಗಿರುತ್ತದೆ.

ಮೆನೇಜರ್, ನವಯುಗ, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು 4-8-50ಕ್ಕೆ ವಾರಮೌಂಟಿನವರ ವರ್ಣರಂಜಿತ ಚಿತ್ರ:

ಅನ್ ಕೊಂಕರ್ಡ್

ಅನಂತರ: ಅತ್ಯುತ್ತಮ ಸಾಹಸಚಿತ್ರ

ಚಾಬುಕ್ ಸವಾರ್

ನೋಟೀಸು

ಉಡುಪಿ ಮುನಿಸಿಪಲ್ ಲೋರಿಗಳಿಗೆ ಟಾಯರ್ ಟ್ಯೂಬ್ ಮತ್ತು ಇತರ ಸಾಮಗ್ರಿಗಳನ್ನು ಒದಗಿಸುವ ಬಗ್ಗೆ "ಕೊಟೇಶನ್"ಗಳನ್ನು ಮುನಿಸಿಪಲ್ ಕಮಿಶನರ ವರೆಬಳಿ ತಾ. 12-8-1950ನೇ ಅಪರಾಹ್ನ ಘಂಟೆ 4ರ ಒಳಗೆ ಬಂದು ಸೇರುವಂತೆ ಈಮೂಲಕ ಆಹ್ವಾನಿಸೋಣಾಗುತ್ತದೆ. ಹೆಚ್ಚಿನ ಮಾಹಿತಿ ಬಗ್ಗೆ ಆಫೀಸು ಸಮಯದಲ್ಲಿ ಬಂದು ವಿಚಾರಿಸಬಹುದು.

32×6	ಸ್ಯಾಜಿನ ಟಾಯರು	ಪ್ರತಿ ಒಂದಕ್ಕೆ ದರ
32×6	ಟ್ಯೂಬು	ಪ್ರತಿ ಒಂದಕ್ಕೆ ದರ
30×5	ಸ್ಯಾಜಿನ ಟಾಯರು	ಪ್ರತಿ ಒಂದಕ್ಕೆ ದರ
30×5	ಟ್ಯೂಬು	ಪ್ರತಿ ಒಂದಕ್ಕೆ ದರ

ಮುನಿಸಿಪಲ್ ಆಫೀಸು, ಉಡುಪಿ, ತಾ. 1-8-1950 } ಕಮಿಷನರ (ಸಹಿ)

ನೋಟೀಸು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 479/1949

No R. I. A 541-542/1950

ಅರ್ಜಿದಾರರ—ಸೂರಪ್ಪಯ್ಯ ಕಾರಂತ. ವಾಸಿ ಶೇಷ ಕಾರಂತನ ಮಗ, ಅನಂತಪುರ ಜಿಲ್ಲಾ ಕದ್ರಿ ಜ್ಯೋರಾಮ ವಿಲಾಸ ಕಾಫಿಕ್ಲಬ್‌ನ ಲ್ಲಿರುವವನು, ರಹಿತ Post Kadri.

5ನೇ ಪ್ರತಿವಾದಿ ವಿ. ನರಸಪ್ಪ ನಾವಡ್ಯಗಣಪಯ್ಯ ನಾವಡರ ಮಗ, ಶ್ರೀ ವಿದ್ಯಾಲಕ್ಷ್ಮಿ ನಿವಾಸ ಕಾಫಿಕ್ಲಬ್ ಸುಬ್ರಾಂ ಶೆಟ್ಟಿ ರೋಡ್, ಬಸವನಗುಡಿ ಬೆಂಗಳೂರು ಸಿಟಿ Post Basavanagudi ರಹಿತ,

ಸದ್ರಿ ಅರ್ಜಿದಾರನು ತನ್ನನ್ನು ಸಸ್ಪಿಮೆಂಟ್ 2ನೆ ನಾದಿಸ್ಥಾನದಲ್ಲಿ ನೇಮಿಸಿಕೊಂಡು ಫೈನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅರ್ಜಿಗಳು ತಾರೀಕು 19-8-1950ಕ್ಕೆ ಇಟ್ಟಿರುತ್ತವೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದಲ್ಲಿ ಸದ್ರಿ ದಿವ್ಸ ಪೂರ್ವಾಹ್ನ ಗಂಟೆ 11ಕ್ಕೆ ಮೊಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತ್ರಹಾಜರ್ರಾಗಿ ಜಾಹೀರು ನೂಡತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಸದ್ರಿ ಅರ್ಜಿಯನ್ನು ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸೋಣಾದೀತೆಂತ ಈ ಮೂಲಕ ತಿಳಿಸಿಸಿರುತ್ತದೆ.

(Sd) U. Mahabala Hebbar
Advocate for Petitioner

ಮೊಕ್ಕಾಂ: ಕುಂದಾಪುರ, ತಾ. 29-7-1950

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. C. No. 386/50

ವಾದಿ—ಸುಬ್ರಾಯ ಕುಡ್ವ

ಪ್ರತಿವಾದಿ—ನಾಗಪ್ಪ ಭಂಡಾರಿ

ಪ್ರತಿವಾದಿ ನಾಗಪ್ಪ ಭಂಡಾರಿ, ಪಡುಮನೆ ನಾಕಾಬಳ್ಳಿ ಗ್ರಾಮ, ಕುಂದಾಪುರ ತಾಲ್ಲೂ ನಿವಾಸಿಯಾದ ನಿಮ್ಮ ಮೇಲೆ, ಕುಂದಾಪುರ ತಾಲ್ಲೂ ನಾಕಾಬಳ್ಳಿ ಗ್ರಾಮದಲ್ಲಿರುವವ.....

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಪ್ರತಿವಾದಿಯು ವಾದಿಯಿಂದ ರುಸ್ಯಾ 100 ನ್ನು ಪಡಕೊಂಡು ತಾರೀಕು 28-4-1944 ರಲ್ಲು ಬರಕೊಟ್ಟ ಡಿವಾಂಡು ನೋಟಿನಲ್ಲಿ ಆ ಸು ಬಡ್ಡಿ ಕೂಡಾ ವಿನೇಜುಗಳನ್ನು ಬರಮಾಡಿಕೊಳ್ಳುವರೆ, ವಾದಿಯು ಸದ್ರಿ ಪ್ರತಿವಾದಿಯಮೇಲೆ ದಾಕ್ಲು ಮಾಡಿದ ಮೇಲಿನ ಪಾಸೆಯು ತಾರೀಕು 11-8-50ಕ್ಕೆ ತನ್ನಗೆಇಟ್ಟಿರುತ್ತಾದೆ. ಆ ಕಾರಣ ನಿವಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಎಕ್ಸ್‌ಪಾರ್ಟಿಯಾಂದ ಪಾಸೆಯನ್ನು ತೀರ್ಮಾನಿಸಲಾಗುತ್ತದೆಂದು ಕಂಗಡಿ ಕೋರ್ಟು ಹುಕುಂ ಸ್ವಕಾರ ಈ ಮೂಲಕ ತಿಳಿಸೋಣಾಗುತ್ತದೆ.

S. S Kolkebail
Advocate for Plaintiffs

Coondapoor, Date 25-7-50

Approved form by the Gov. of Mysor
Certificated by the Agent of the Govt of Clyone & Indian.

ಮಂಗಳೂರು

ಆಗೋಸ್ತು ಹೆಚ್ಚಿನೈದು:—ಮಂಗಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಈ ತಿಂಗಳ ತಾ 15ರಲ್ಲು ಬೆಳ್ಳಿಗ್ಗೆ ೪ ಗಂಟೆಗೆ ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಲೆಕ್ಟರರಿಂದ ಧ್ವಜಾರೋಹಣ, ಬಳಿಕ ಸರಸ್ವತಿ ಹೋಲೀಸ್ ದಳದವರಿಂದ 'ಮಾರ್ಚ್ ಫಾಸ್ಟ್' ಮತ್ತು ವಂದನೆ ಮೊದಲಾದ ಕಾರ್ಯಕ್ರಮಗಳಿಂದ ಜರಗಲಿರುವುದು.

ದಂತಚಿಕಿತ್ಸೆ:—ಮಂಗಳೂರು ಸರಕಾರೀ ಆಸ್ಪತ್ರೆಯಲ್ಲಿ ದಂತ ಚಿಕಿತ್ಸಾ ವಿಭಾಗ ತೆರೆಯಲ್ಪಟ್ಟಿದೆ. ಡಾ। ಎ. ಟಿ. ರೈ ಅವರು ಈ ವಿಭಾಗದ ಸರ್ಜನರಾಗಿರುವರು. ಈ ಧರ್ಮಾರ್ಥ ದಂತಚಿಕಿತ್ಸೆಯ ಪ್ರಯೋಜನವನ್ನು ಎಲ್ಲರೂ ಪಡೆಯಲು ಅನುಕೂಲವಿದೆ.

ಕರ್ನಾಟಕ ಸಂಘದ ಉದ್ಘಾಟನೆ: ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದ ಉದ್ಘಾಟನೆಯು ಬಿ. ಟಿ. ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಶ್ರೀ ಪಡುಕೋಣೆ ರಮಾನಂದ ರಾಯರಿಂದ ಈಚೆಗೆ ಜರಗಿಸಲ್ಪಟ್ಟಿತು. ಅಂದಿನ ಸಮಾರಂಭಕ್ಕೆ ಶ್ರೀ ಟಿ. ಗೋಪಾಲಕೃಷ್ಣ ಭಟ್ಟರು ಅಧ್ಯಕ್ಷರಾಗಿದ್ದರು.

ಶ್ರೀ ಕೋ ಶಿವರಾಯ ಕಾರಂತರು:—ಕಳೆದ ತಾ. 27ರಲ್ಲು ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ 'ಸತ್ಯಜಿ' ಯಾಗುವ ಬಗೆ ಹೇಗೆಂಬ ವಿಚಾರದಲ್ಲಿ ಭಾಷಣವಿತ್ತರು.

ಗುರುಕಂಬಳ:—ಇದೇ ತಿಂಗಳ ತಾ. 8ಮತ್ತು 9ರಲ್ಲು ಗುರುಕಂಬಳ ಅನ್ನಾರು ದ್ವಿನ್ಸ್‌ವಲಿಯವರ ಉರುಸು ಎಂಬ ಕಲಸ ನೆರವೇರಲಿರುವುದು.

ಜಿಲ್ಲೆಯಲ್ಲಿ ಆಹಾರದ ಅಭಾವ:—ಕಳದ ತಿಂಗಳ ತಾ. 21ರಲ್ಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದ ಜಿಲ್ಲಾ ಆಹಾರ ಸಮಿತಿಯ ಸಭೆಯಲ್ಲಿ ಜಿಲ್ಲೆಯ ಆಹಾರ ವಸ್ತುಗಳ ವಾಸ್ತವಿಕ ಕುರಿತು ಪರಿಶೀಲಿಸಲಾಯಿತು. ಹೊರಗಿನಿಂದ ಅಕ್ಕಿ ಬಾರದಿದ್ದರೆ ಜಿಲ್ಲೆಯ ಆಹಾರ ಪರಿಸ್ಥಿತಿ ಚಿಂತಾ ಜನಕ ಸ್ಥಿತಿಗೆ ಬರುವುದು ಸ್ವಯಂ ಸಿದ್ಧವೆಂದೇ ಅಭಿಪ್ರಾಯಪಡಲಾಯಿತು. ಪೈಲೆಸೆಟ್ಟಿ ಪಾರ್ಟಿಯವರಿಗೆ ಅಕ್ಕಿ ಕೊಡಿಸುವುದು ಸೂಕ್ತವೆಂಬ ಭರವಸಾದಯಿಗೆಂಟ್ ಅದರೆ ಕಳ್ಳ ಜನರು ಗೋಧಿಯನ್ನು ಉಪಯೋಗಿಸುವುದಿಲ್ಲವೆಂದು ಅಧಿಕಾರಿಗಳು ಅಭಿಪ್ರಾಯಪಟ್ಟರು.

ಸಕ್ಕರೆ:—ಈಗ ಸಕ್ಕರೆಯ ಪರಿಸ್ಥಿತಿ ಸುಧಾರಿಸಿರುವುದರಿಂದ ಈ ಮೊದಲು ತಲಾ ಒಂದರ 8 ತೊಲೆ ಮತ್ತು 10 ತೊಲೆ ಸಿಕ್ಕುವವರಿಗೆ ಈ ತಿಂಗಳಾರಂಭದಿಂದ ಕ್ರಮವಾಗಿ 10 ತೊಲೆ ಮತ್ತು 12½ತೊಲೆ ಯಂತೆ ಸಿಕ್ಕುವುದು.

ಬಳಿಕ ಆಹಾರೋತ್ಪಾದನಾ ಸಮಿತಿಯ ಸಭೆ ಜರಗಿತು. ಜಿಲ್ಲೆಯಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸುವ ವಿಚಾರದಲ್ಲಿ ಉಪಸಮಿತಿಯು ಕೊಟ್ಟ ಸೂಚನೆಗಳನ್ನು ಸರಕಾರದ ಮುಂದಿಡಬೇಕೆಂದಾಯಿತು, ಪಂಪು ಸೆಟ್ಟುಗಳ ಉಪಯೋಗ ಹೆಚ್ಚಾಗುವಂತೆ ಸರಕಾರದ ಪ್ರೋತ್ಸಾಹ ಕೇಳುವುದೆಂದಾಯಿತು.

ಗೋಧಿಯನ್ನು ಅಕ್ಕಿಯೊಂದಿಗೆನೇ ಕೊಂಡು ಹೋಗಬೇಕೆಂಬ ನಿಯಮವು ಈ ವರೆಗಿತ್ತಾದರೂ ಇನ್ನು ಮುಂದೆ ರೇಶನ್ ಅಂಗಡಿಯಲ್ಲಿ ಗೋಧಿಯಿಲ್ಲದಿದ್ದರೆ ಅಕ್ಕಿ ಮಾತ್ರ ಕೊಂಡು ಹೋಗಿ ಗೋಧಿಯನ್ನು ಮತ್ತೊಂದು ದಿನವು ಕೊಂಡು ಹೋಗ ಬಹುದೆಂದಾಗಿದೆ.

ಕೆರೆ ಬಾವಿಗಳ ದುರಸ್ತಿ:—ಈ ಯೋಜನೆಯಂತೆ ಜಿಲ್ಲೆಯಲ್ಲಿ ಈ ತನಕ 62 ಕೆಲಸಗಳಿಗಾಗಿ ರೂ. 1,06 300 ಮಂಜೂರಾಗಿದೆ. ಜಿಲ್ಲೆಯಲ್ಲಿ ನೀರಾವರಿ ಯೋಜನೆಯ ಕೆಲಸಗಳಲ್ಲಿ 'ಕ್ಲಾಟ್ರಾಕ್ಟರು'ಗಳ ಆಧಾವದಿಂದಾಗಿ ಕುಂಟುತ್ತಾ ನಡೆಯುತ್ತಿದೆ ಎಂದು ಜಿಲ್ಲಾ ಕಲೆಕ್ಟರರು ತಮ್ಮ ಪತ್ರಿಕಾ ಪ್ರತಿನಿಧಿಗಳ ಭೇಟಿಯು ವೇಳೆಯಲ್ಲಿ ತಿಳಿಸಿದರು. ಅಲ್ಲದೆ ಆಂಧ್ರ ನೆರೆ ಹಾವಳಿಯ ಸಹಾಯ ನಿಧಿಗೆ ಜಿಲ್ಲೆಯಿಂದ ಕಳದ ತಿಂಗಳ ತಾ. 15ರ ವರೆಗೆ ರೂ. 22,643—11—6 ವಸೂಲಾಗಿದೆಯೆಂದೂ ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಪಡುತೋನ್ಸೆ ಗ್ರಾಮದ ಬಸವ ಎಂಬವರಿಗೂ ಅರ್ತಾಡಿ ಗ್ರಾಮದ ಅಚ್ಚಪ್ಪ ಬ್ಯಾರಿ ಎಂಬವರಿಗೂ ರೂ 20/ರಂತೆ ನಾಲ್ವತ್ತು ರೂಪಾಯಿ ಸಹಾಯ ನೀಡಲಾಯಿತೆಂದೂ ತಿಳಿಸಿದರು.

ಇತ್ತೀಚೆಗೆ ಕುಂದಾಪುರ ತಾಲೂಕಿನ ಹೇರೂರು ಗ್ರಾಮದ ಕೆರೆಯು ದುರಸ್ತಿಗಾಗಿ ರೂ. 1520, ಉಡುಪಿ ತಾಲೂಕಿನ ಕೊಡವೂರು ಗ್ರಾಮದ ಕೆರೆಗಾಗಿ ರೂ. 1460, ಗಿಳಿಯಾರು ಗ್ರಾಮದ ಕೆರೆಗಾಗಿ ರೂ. 425, ಮತ್ತು ಮಾಣಿಯೂರು ಗ್ರಾಮದ ಕೆರೆಗಾಗಿ ರೂ. 1100, ಮಂಜೂರಾಗಿದೆ.

ಡಿ ಕ· ಜಿಲ್ಲಾ ಭಿವೃದ್ಧಿ ಸಮಿತಿ ಸಭೆಯು ಈಚೆಗೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದಾಗ ಜಿಲ್ಲೆಯಲ್ಲಿಯ ಹರಿಜನ ಅಭಿವೃದ್ಧಿಗಾಗಿ ಹಲವು ನಿರ್ಣಯಗಳಾಗಿ ಸರಕಾರವನ್ನು ಕೇಳಿಕೊಳ್ಳುವುದೆಂದಾಯಿತು.

ಮುದ್ರಾಸು ಸರಕಾರವು ಹರಿಜನರಿಗಾಗಿ ಪ್ರತ್ಯೇಕಿಸಿಟ್ಟ ಒಂದು ಕೋಟಿ ರೂಪಾಯಿಂದ ಈ ಜಿಲ್ಲೆಯ ಕುಂಬಳೆ ಫಿರ್ಕದ 80 ಹರಿಜನ ಕುಟುಂಬಗಳಿಗಾಗಿ ಮನೆ ಕಟ್ಟಲು ರೂಪಾಯಿ 15,000, ಜಿಲ್ಲೆಯ ಇತರ ಹರಿಜನ ಮನೆಗಳಿಗೆ ಮತ್ತು ಕೃಷಿ ಸಾಹಿತ್ಯಗಳಿಗಾಗಿ ರೂಪಾಯಿ ಒಂದು ಲಕ್ಷವನ್ನೂ ಕುಂದಾಪುರ, ಉಡುಪಿ, ಕಾಸರಗೋಡು ಹರಿಜನ ವಿದ್ಯಾರ್ಥಿ ನಿಲಯದ ಕಟ್ಟಡಗಳಿಗಾಗಿ ರೂ.4,000ವನ್ನೂ ಕೇಳುವುದೆಂದು ಶ್ರೀ ವೆಂಕಪ್ಪನವರ ಸೂಚನೆಯು ಅಂಗೀಕರಿಸಲ್ಪಟ್ಟಿತು. ಅಲ್ಲದೆ ಗುಡಿಕೈಗಾರಿಕೆಗಳ ಸಹಕಾರ ಸಂಘವನ್ನೇರ್ಪಡಿಸಬೇಕೆಂದೂ ನಿರ್ಣಯವಾಯಿತು. ಜಿಲ್ಲೆಯಲ್ಲಿ ಇಬ್ಬರು ಹರಿಜನ ಪ್ರತಿನಿಧಿಗಳನ್ನು ನೇಮಕಮಾಡಬೇಕು, ಅವರ ಸಂಬಳ ರೂಪಾಯಿ 100 ಮತ್ತು ಪ್ರಯಾಣ ಭತ್ತೆ ಕೊಡಿರಬೇಕು ಎಂಬಿತ್ಯಾದಿ ಇನ್ನೂ ಕೆಲವು ನಿರ್ಣಯಗಳಾದುವು.

ಆಳಿಯ ಸಂತಾನ ಮತ್ತು ಹಿಂದೂ ಕೋಡು:—ದ ಕ. ಜಿಲ್ಲೆಯ ಆಳಿಯ ಸಂತಾನಿಗರ ಸಭೆಯೊಂದು ಕಳದ ತಾ. 22ರಲ್ಲು ಸಂಜೆ ಜಿಲ್ಲಾ ಬೋರ್ಡು ಸಭಾ ಭವನದಲ್ಲಿ ನೇರಿತು. ಈ ಸಭೆಗೆ ಮುಂತ್ರಿಗಳಾದ ಶ್ರೀ ಕೆ. ಮಾಧವ ಮೆನೋನ್ ಮತ್ತು ಶ್ರೀ ಎ. ಬಿ. ಶೆಟ್ಟಿ, ಮುದ್ರಾಸು ಸರಕಾರದ ಎದ್ದೊಕೇಟ್ ಜನರಲ್ ಶ್ರೀ ಕುಟ್ಟಿ ಕೃಷ್ಣ ಮೆನೋನ್ ಮತ್ತು ಕಾಯಿದೆ ಸೆಕ್ರೆಟರಿ ಶ್ರೀ ರಾಜಗೋಪಾಲನ್, ಅವರೂ ಬಂದಿದ್ದರು.

ಶ್ರೀಗಳಾದ ಮೆನೋನ್ ಮತ್ತು ಕುಟ್ಟಿ ಕೃಷ್ಣ ಮೆನೋನರು ಹಿಂದೂ ಕೋಡನ್ನು ಆಳಿಯ ಸಂತಾನಿಗರಿಗೆ ಅನ್ವಯಿಸುವುದರಿಂದ ಆಗುವ ಪರಿಣಾಮಗಳನ್ನು ವಿವರಿಸಿದರಲ್ಲದೆ ತಿರುವಾಂಕೂರು ಮತ್ತು ಕೊಚ್ಚಿ ಸರಕಾರಗಳ ಶಾಸನತಜ್ಞರು ತಿರುವನಂತಪುರದಲ್ಲಿ ನೇರಿ ಮರುಮಕ್ಕತ್ತಾಯಂ ಪದ್ಧತಿಯವರು ಸೂಚಿಸಿದ ತಿದ್ದುಪಡಿಗಳನ್ನೂ ತಿಳಿಸಿದರು. ಅದಲ್ಲದೆ ಆಳಿಯ ಸಂತಾನಿಗರ ಪರವಾಗಿ ಮುದ್ರಾಸು ಸರಕಾರವು ತಯಾರಿಸಿದ ಸೂಚನೆಗಳನ್ನು ಸಭೆಯ ಮುಂದಿಟ್ಟರು. ಹಿಂದೂ ಕೋಡಿನ 87ನೆ ಸೆಕ್ಷನಿನಂತೆ, ಆ ಕಾನೂನು ಜಾರಿಯಾದ ದಿನವೇ ಅವಿಭಕ್ತವಾಗಿರುವ ಹಿಂದೂ ಕುಟುಂಬವು ಆಳಿಯ ಸಂತಾನ ಕಾಯಿದೆಯಂತೆ ಪಾಲಾಗಬೇಕು. ಆ ಮೇಲಿನ ಕಲೆಮಾರಿನ ವಿಭಜನೆಗಳು ತಲೆ ಬಾರು ಮತ್ತು ಇಚ್ಛಾನುಸಾರವಿರಬೇಕೆಂಬುದೇ ಆ ಎಲ್ಲಾ ಸೂಚನೆಗಳ ಮುಖ್ಯ ಸಾರ.

ಬಡಗಬೆಟ್ಟು:- ವಸಂತಮಹೋತ್ಸವದ ಸಲುವಾಗಿ ಶ್ರೀ ಬಿ. ಚಂದ್ರಶೇಖರ ಹೆಗ್ಡೆಯವರ ನೇತೃತ್ವದಲ್ಲಿ ಪರ್ಕಾಲದಿಂದ ಬಡಗಬೆಟ್ಟು ವರೆಗೆ ಎರಡು ಮೈಲುದ್ದ ರಸ್ತೆಯ ಇಕ್ಕೆಡೆಗಳಲ್ಲೂ ಕಳದ ವಾರ ಸಸಿಗಳನ್ನು ನೆಡಲಾಗಿದೆ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ನೋಟೀಸು

ಕಾರ್ಕಳ ಡಿ ಮು. ಕೋರ್ಟಿನಲ್ಲಿ
S. C. S. No. 146/1950
K. ಸುಮನಸಾ ಬಲ್ಲಾ —ವಾದಿಳು.
ಅನಸೂಯ್ಮ ಸಹಾ —ಪ್ರತಿವಾದಿರೆ.

ಸದ್ರಿ ದಾವೆಯ 4ನೇ ಪ್ರತಿವಾದಿಳು, ಬೀಡಿಯವ್ವ, ಬುಡೇಳೆ ಅಬ್ದುಲ್ ಖಾದ್ರಿ ಬ್ಯಾರಿಗಳ ವಿಧವೆ; ಮಂಗ್ಳೂರು ತಾಲೂಕು ತೋಕೂರು ಗ್ರಾಮದಲ್ಲಿರುವವಳು, ಇವಳಿಗೆ ಕೋರ್ಟು ಹುಕುಂ ಪ್ರಕಾರ ಈ ಚೂಲಕ ತಿಳಿಯಪಡಿಸುವದೇನೆಂದರೆ—

ಸದ್ರಿ ವಾದಿಳಿಗೆ ತಾ. 7-1-1901ನೇ ರಿಜಿಸ್ಟ್ರಿ ಮೂಲಗೇಣಿ ಚೀಟು ಪ್ರಕಾರ ಪ್ರತಿವಾದಿಂದ ಕಳದ ವಿರೋಧಿ ಸಂವತ್ಸರದ ಫಾಲ್ಗುಣ ಬಹುಳ 30ಕ್ಕೆ ಬರತಕ್ಕ ಮೂಲ ಗೇಣಿ ಗೇಣಿ ಬಾಕಿ ಮತ್ತು ಬಡ್ಡಿ ಕೂಡಾ ಬರತಕ್ಕ ರೂ. 219-0-0ಕ್ಕೆ ಪ್ರತಿವಾದಿಳು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ದಾವೆಯು 4ನೇ ಪ್ರತಿವಾದಿಳ ಹಾಜರಿ ಬಗ್ಗೆ ತಾರೀಕು 30-8-1950ಕ್ಕೆ ಇಟ್ಟಿದೆ. ಆದ್ದರಿಂದ ಸದ್ರಿ ದಾವೆಯಲ್ಲಿ 4ನೇ ಪ್ರತಿವಾದಿಳು ಉದಹರಿಸುವದು ಇದ್ರೆ ಸದ್ರಿ ತಾ 30-8-1950ನೇ ದಿವಸ ಬೇಗ್ಗೆ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಅವಳ ಸಹಕನೆಗಳನ್ನು ಹೇಳಿ ಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ 4ನೇ ಪ್ರತಿವಾದಿಳನ್ನು ಶಿವ್ಯನೂದಿ ವಾದಿಳ ಗುಣಕ್ಕೆ ಸದ್ರಿ ದಾವೆಯು ತೀರ್ಮಾನಿಸಲ್ಪಡುತ್ತದೆ, ಎಂಬ ಸಂಗತಿ ಈ ಮೂಲಕ ತಿಳಿಸಿಯದೆ.

H. K. Gopalkrishna Rao,
Vakil for Plaintiff
Karkala, 31-7-1950

ನೋಟಾರು ಕಾರನ್ನು ಕೊಂಡುಕೊಳ್ಳಲು ಸಾಧ್ಯವಿದೆಯೇ—

ಮೂವತ್ತು ವರುಷಗಳ ತನಕ ಅದನ್ನು ಉಪಯೋಗಿಸಿದ ನಂತರ ಕೊಟ್ಟ ಹಣವನ್ನು ಮರಳಿ ಪಡೆಯುವ ಶರ್ತದ ಮೇಲೆ

30 ವರುಷಗಳ ಅವಧಿಗೆ ಬಾಡಿಗೆಚೀಟು ಮಾಡಿ ಮನೆಯನ್ನು ಪಡೆಯಲಾಹಿರಾ—

ಕೊಟ್ಟ ಬಾಡಿಗೆ ಹಣವು ಮನೆ ಬಿಡುವಾಗ ವಾಪಾಸು ಸಿಕ್ಕುವ ಶರ್ತದ ಮೇಲೆ!

ನಿಮ್ಮಿಂದ ಅಸಾಧ್ಯ

ಆದರೂ ಶಕ್ಯವಿದೆ

ಜೀವವಿಮೆಯ ರಕ್ಷಣೆಯನ್ನು ನಿಮಗಾಗಿಯೂ ನಿಮ್ಮ ಕುಟುಂಬಕ್ಕಾಗಿಯೂ ವರುಷದಿಂದ ವರುಷಕ್ಕೆ ಪಡೆದು ನೀವು ಕೊಟ್ಟ ಚಿಕ್ಕಾಸು ಲೆಖ್ಖಾಚಾರವಲ್ಲದೆ ಇನ್ನೂ ಹೆಚ್ಚು ಹಣವು ನಿಯಮಿತ ಅವಧಿಯಾಂತ್ಯದಲ್ಲಿ ನಿಮಗೆ ಸಿಗುವುದು

THE CANARA MUTUAL ASSURANCE COMPANY LTD.
Estd: 1935 H. O. UDIPI
ದಿ ಕೆನೆರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಸ್ಥಾಪನೆ: 1935 - ಪ್ರಧಾನ ಕಚೇರಿ: ಉಡುಪಿ

Notice

ಉಡ್ಪಿ ಡಿ ಮು ಕೋರ್ಟಿನಲ್ಲಿ
O. S. No. 219 of 1950
R I. A. No 879 of 1950

1) ಸೀತಂಮ ಹೆಗ್ಗಡ್ತಿ—ಅಂಪಾಜೆ ಹೆಗ್ಗಡ್ತಿಯರ ಮಗಳು,

2) ರಾಮುಂಜಹೆಗ್ಗಡೆ, 3) ಪದ್ಮಾವತಿ]ನೇ ವಾದಿಯಳ ಮಕ್ಕಳು.

4) ನೇತ್ರಾವತಿ, 5) ಲೀಲಾವತಿ, 6) ಜಯಶ್ರೀವತಿ, 7) ರತ್ನಾವತಿ. ಮ್ಯೂನರರು.]ನೇ ವಾದಿಯಳ ಮಕ್ಕಳು, ಕ್ಷೇಮು ಚಿಂತಕಳು]ನೇ ವಾದಿಳು. ಕಾರ್ಕಳ ತಾಲ್ಲು ಮುದ್ರಾಡಿ ಗ್ರಾಮದಲ್ಲಿರುವವರು. —ವಾದಿಳು.

ಮತ್ತು

ಚಂದಯ್ಯಹೆಗ್ಗಡೆ, ಕೊಲ್ಲೂ ಹೆಗ್ಗಡ್ತಿಯರ ಮಗ, ಉಡ್ಪಿ ತಾಲೂಕು ಕುಕ್ಕೆಹಳ್ಳಿ ಗ್ರಾಮದಲ್ಲಿಯರಿವವರು. —ಪ್ರತಿವಾದಿ.

ಯಿವರೊಳಗೆ

ಮೇಲ್ಕಂಡ ವಾದಿಯು ವಾದಿರು ಪ್ಲೇಂಟು ನಿವೃತ್ತಿ ಬಗ್ಗೆ ದಾಕಲು ಮಾಡಿದ ಸದ್ರಿ ದಾವೆಯ ತಪ್ಪಿಯು 28-8-1950ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತಪ್ಪಿ ಬಗ್ಗೆ ಇಷೋಸ್ಟಾಗಿಯದೆ. ಆದುದರಿಂದ ಆ ದಾವೆಯಲ್ಲಿ ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಸದ್ರಿ ನಂಬ್ರ ತಪ್ಪಿಗೆ ಪಟ್ಟಿ ತಾರೀಕು 28 8-1950ನೇ ಶುಕ್ರವಾರ ಗಂಟೆಗೆ ತಪ್ಪದೆ ಹಾಜರಾಗಿ ಚ್ಯಾಹೀರು ಮಾಡಿಕೊಳ್ಳಲಿಕ್ಕೆ ತಪ್ಪದರೆ ಸದ್ರಿ ನಂಬ್ರವು ನಿಮ್ಮ ಯೆಕ್ಪಾರ್ಟಿಯಿಂದ ತೀರ್ಮಾನಿಸಲಾಗುವುದು, ಎಂಬ ಸಂಗತಿ ಈ ಮೂಲಕ ತಿಳಿಸೋಕಾಗಿಯದೆ.

K. J. Ballal
Vakil for Plaintiff
Udipi, Dated 1-8-1950

೧೯೪೯ರಲ್ಲಿ ಪ್ರಕಟಿವಾದ 'ಅಂತರಂಗ'ದ ಪ್ರಕಟಣೆಗಳು

೧೯೪೯ರ ಬಿರುದಾವಳಿ [ಎಂ. ವಿ. ಹೆಗ್ಡೆ]	0	2	0
ಹೈದರಾಬಾದ್ ವಿಜಯ [ಯಕ್ಷಗಾನ] ,,	0	3	0
ಸೆರೆಯಾಳು [ನೀಳ್ಗತೆ] ಕುಲಕರ್ಣಿ ಬಿಂದುಮಾಧವ	0	4	0
ಗಾದೆಯ ಗಾಂಧಿ [ಸೂಕ್ಷ್ಮಪರಿಚಯ] ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಿಲಿನಲ್ಲಿ [ನೀಳ್ಗತೆ] ಹ. ಸು. ಭಟ್ಟ	0	3	0
ಬಲಿಪೀಠದಲ್ಲಿ [ನಾಟಕ] ಆರ್. ಕಲ್ಯಾಣಮ್ಮ	0	3	0
ಆಗಲಿದ ಅಕ್ಕ ಸರೋಜಿನಿ [ಎಂ. ವಿ. ಹೆಗ್ಡೆ]	0	3	0
ನನ್ನ ಹೆಂಡತಿ [ಕತೆಗಳು] ಮಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ [ನೀಳ್ಗತೆ] ಗಿರಿಬಾಲೆ	0	3	0
ಸುಖದದಾರಿ [ವೈರಾಗ್ಯಶತಕ] ಕೆ. ಎ. ದೇವದಾಸ	0	3	0
ಕಾಲವೇ ಬದಲಾಗಿದೆ [ಕು. ಶಿ ಹರಿದಾಸ ಭಟ್ಟ]	0	3	0
ಸುಕಾಂತ [ಅನುವಾದಿತ ಕತೆ] ವೀ. ಜ. ಹಿತ್ತಲಮನಿ	0	3	0
ಪಂಚಮುಖಿ [5 ಪ್ರಬಂಧಗಳು] ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ [ನೀಳ್ಗತೆ] ಕೆ. ದೇವಕಿ	0	3	0
ಜನಸೇವೆಯ ಸೋಗಿನಲ್ಲಿ! [ಕತೆ] ಕೆ. ಶಿವರಾಮು ಶೆಟ್ಟಿ	0	3	0
ನಾ ಕಂಡ ಅವಳು [ಕತೆ] ಶ್ರೀಪತಿ	0	3	0
ತ್ರಿವೇಣಿ [ಪ್ರಬಂಧಗಳ ಸಂಗ್ರಹ]	0	3	0
ಏಲುವಂಗಿ [ಕತೆ] ಎಸ್. ಸುಬ್ಬರಾಮಯ್ಯ, ಬಿ ಎ. (ಆನರ್ಸ್)	0	3	0
ಸರಸ-ವಿರಸ! [೪ ವಿನೋದ ಚಿತ್ರಗಳು]	0	3	0
ಹೃದಯೇಶ್ವರಿ [ಕಾದಂಬರಿ]	0	3	0
ವಿವಿಧ ವಿಶಯ ಕೋಶ ಭಾಗ ೨ [ವೈಜ್ಞಾನಿಕ ಸಂಗ್ರಹ]	0	6	0
ಕುಲವಿಲ್ಲದ ಹೆಣ್ಣು [ಪಿ. ವೆಂಕೋಬಾಚಾರ್ಯ ಬಿ.ಎ., ಬಿ.ಟಿ.]	1	0	0
ಭಾಗ್ಯ ಲಕ್ಷ್ಮಿ [ನಾಟಕ] ಬೆಳ್ತಂಗಡಿ ಲಕ್ಷ್ಮಣರಾವ್	1	0	0
ಯುಗವಾಣಿ [ಕವನ ಸಂಗ್ರಹ] ಕು. ಶಿ. ಹರಿದಾಸಭಟ್ಟ	0	8	0
ಸ್ತ್ರೀ ಹೃದಯ— [ವಾಸಂತಿ ಪಡುಕೋಣೆ]	0	3	0
ದ್ವೇಷ- [ಶ್ರೀನಿವಾಸಮೂರ್ತಿ ಗೊರೂರು]	0	3	0
ಪ್ರಜಾಪ್ರತ್ವವನ್ನು ಕುರಿತು [ಶಿವರಾಮ ಕಾರಂತರು]	0	4	0
ಆಧುನಿಕ ಭಾರತ [ಎಚ್. ಭೀಮರಾವ್]	0	4	0
ಭಾರತದ ಸಾಹಿತ್ಯ ಮತ್ತು ಕಲೆಗಳು [ವಿಶ್ವೇಶ್ವರ ಶರ್ಮ]	0	4	0
ಸ್ತ್ರೀ ಸ್ವಾತಂತ್ರ್ಯ ಬೇಕೆ? [ವೈದ್ಯ ವಿನಾಯಕರಾವ್]	0	3	0

೧೯೫೦ರಲ್ಲಿ ಈವರೆಗೆ ಪ್ರಕಟಿವಾದ 'ಅಂತರಂಗ'ದ ಪ್ರಕಟಣೆಗಳು

ಹಂಬಲ [ಕೃಷ್ಣಮೂರ್ತಿ ಕಿತ್ತೂರ]	0	3	0
ನುಡಿ ಮುತ್ತುಗಳು [ಎಂ. ವಿ. ಹೆಗ್ಡೆ] ಮಾಲೆ ೧	0	3	0
,, ,, ಮಾಲೆ ೨	0	3	0
,, ,, ಮಾಲೆ ೩	0	3	0
ಕಲಾವಿದನ ದಿನಚರಿ [ಯಸ್ಸೆಲ್]	0	3	0
ತವರು ಮನೆಯಿಂದ [ಸೌ ಶಾರದಾ ದೇವಿ]	0	3	0
ದೇವರ ನಾಮ ಮತ್ತು ಅದರ ಸಾಧನೆ [ಬಿ. ವಿ. ಶರ್ಮ]	0	3	0
ಎರಡು ಕತೆಗಳು	0	3	0
ಬಾಡಿಗೆಯ ಮನೆ ಮತ್ತು ಮುಸುಕು [ನಾಟಕಗಳು]	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ಭಾರತ ಚಿತ್ರದ ಅಂಚೆಚೀಟುಗಳು [ಟಿ ಚಂದ್ರರಾಜ ಸೆಟ್ಟಿ]	0	3	0
ತ್ರಿಶೂಲ [ನಾಟಕ] ವಸುದೇವ್ ಭೂಪಾಲಂ	0	4	0
ಪುಸ್ತಕ ಪುರಾಣ [ಕು. ಶಿ ಹರಿದಾಸಭಟ್ಟ, ಬಿ ಎ (ಆನರ್ಸ್)]	0	4	0
ಹಳ್ಳಿಯಲ್ಲಿ ನಡೆದ ನಾಟಿಕ [ಕೆ ಎ. ದೇವದಾಸ, ಶಿರೋಮಣಿ]	0	2	0
ನೆರೆಯ ಗಾಂಧಾರ [ಸುಬ್ರಾವ್ ಕೃಷ್ಣ ಹೆಗಡೆ]	0	3	0
ಮಾತಿನಯುಗದ ಮಹಾ ಪ್ರಭಾವ [ವಿಶ್ವೇಶ್ವರ ಶರ್ಮ]	0	3	0
ವಿಜ್ಞಾನದ ಜೀವಣಿಗೆ [ಟ. ಚಂದ್ರರಾಜ ಸೆಟ್ಟಿ]	0	4	0
ಡಾ! ಹರ್ಡೀಕರ್ [ನಾಗೇಶ ರಾಮಚಂದ್ರ ದೇಸಾಯಿ]	0	4	0
ತೆಂಗಿನ ತವರು [ಯು ನಾರಾಯಣಭಟ್ಟ, ಕಾನಗೋಡು]	0	4	0
ಪ್ರಭಾ [ಕು. ಪದ್ಮಾ ಉಡುಪಿ]	0	3	0
ವ್ಯಾಯಶ್ಚಿತ್ತ [ಎಂ ಗೋವಿಂದರಾವ್, ಎಂ ಎ.]	0	2	0
ಶವಗಳ ನಾಗಾಟ [ಪತ್ತೆದಾರಿ] ಸುಬ್ರಾವ್ ಕೃಷ್ಣ ಹೆಗಡೆ	0	8	0
ಸ್ವಪ್ನಲೋಕ [ಕಾರ್ತಿಕೇಯ]	0	4	0
ಮನೆಯ ಹೊರಗಿನ ಮಹಾಜೀವಗಳು [ಕು. ಶಿ ಭಟ್ಟ]	0	4	0
ಘಂಟಮಾರಾ [ಕು. ಶಿ. ಹರಿದಾಸ ಭಟ್ಟ] ಭಾಗ ೧	0	3	0
,, ,, ಭಾಗ ೨	0	3	0
,, ,, ಭಾಗ ೩	0	3	0
,, ,, ಭಾಗ ೪	0	4	0

ಸಿಗುವ ಸ್ಥಳ:—ಅಂತರಂಗ ಕಾರ್ಯಾಲಯ, ಉಡುಪಿ.
ಅಥವಾ ನವಯುಗ ಪ್ರೆಸ್, ಉಡುಪಿ

— ಸ್ವೀಕಾರ ವಿಮರ್ಶೆ —

೧ ಪ್ರಜಾತಂತ್ರದ ಹೆದ್ದಾರೀ ಲೇ ಖಕರ್: ಶ್ರೀ ಕು. ಶಿ. ಹರಿದಾಸ ಭಟ್ಟರು, ಬಿ ಎ. (Hon's) ಪ್ರಕಾಶಕರು. ಕಲ್ಯಾಣಪ್ರಿ ಪ್ರೆಸ್, ಲಿಮಿಟೆಡ್, ಉಡುಪಿ.

ಈ ಪುಸ್ತಕದ ಶರಡನ್ನು, ಮಾನ್ಯ ಮಿತ್ರ ರು ಅಚ್ಚಿನ ಮನೆ ಕಾಣುವ ಮೊದಲೇ ನನಗೆ ಕೊಟ್ಟಿದ್ದರು. ಇದನ್ನು ಲೆಕ್ಕಮಾಡಿ ಮೂರು ಬಾರಿ ಓದಿದರೂ ಜೀರ್ಣವಾಗದ ಸ್ವಲ್ಪ ವಿಷಯ ಗಂಭೀರವಾಗಿ ಕಂಡಿತು. ಆಗಲೇ ನಾನು ಹೇಳಿದೆ 'ಇಮ್ಮ ಕೃತ ಅಮೂಲ್ಯವೇನೋ ಹೌದು; ಆದರೆ ಜನಪ್ರೀತವಲ್ಲ!" ಎಂದು. ಮಾನ್ಯ ವಿ. ಸೀ. ಯವರು, 'ಇಂತಹ ಪುಸ್ತಕವನ್ನು ನಮ್ಮ ಜನ ಇನ್ನೂ ಬಯಸರು. ವೆಚ್ಚಮಾಡಿ ಆಚ್ಚಾದ ಪುಸ್ತಕವನ್ನು ಪುಕ್ಕಟೆ ಕೊಟ್ಟರೂ ಸ್ವೀಕರಿಸರು...ಬರೆಯ ಬಲ್ಲವರು ಬರೆಯಲು ಮಾತ್ರ ಹಿಂಜರಿಯಬಾರದು...ಮನಸ್ಸಿನ ವಿಕ್ಷಾಸ್ಥ, ಲೋಕ ಪ್ರಯೋಜನಾಕಾಂಕ್ಷೆ... ಇವು ಯಾವ ನಾಡದಲ್ಲಿಯೂ ಮುಖ್ಯವಾದ ಅಂಶವೇ" ಎಂದು ತಮ್ಮ ನಾಲ್ಕು ಮಾತಿನಲ್ಲಿ ಪುಸ್ತಕಗಳ ಕುರಿತು ಹೇಳಿಯಾಗಿದೆ.

ಟಿ. ವಿ. ವಿ. ಯಂತಹ ಒಂದು ಯತ್ನ ನಮ್ಮ ದೇಶದಲ್ಲಾದರೆ ದೇಶದ ಜನ ಕೊಂ ಡಾಡಾದರೂ ಸುಧಾರಿಸ ಬಹುದೋ ಏನೋ! ನದಿ, ಭೂಮಿ, ಅರಣ್ಯ ಸಂಪತ್ತುಗಳ ಸ ಮೃದ್ಧಿ ದೇಶ ನಮ್ಮದಾದರೂ ಅದರ ಸದು ಪಯೋಗದ ಮಾರ್ಗವಿನ್ನೂ ನಡೆದಿಲ್ಲ. ವಿ ಪುಲವಾಗಿ ಬೆಳೆಯುತ್ತಿರುವ ಜನಸಂಖ್ಯೆ ಯೊಂದಿಗೆ ದಾರಿದ್ರ್ಯ-ಬಡತನ-ದೌರ್ಭಾಸನ ಗಳೂ ಕೂಡಾ ಬೆಳೆಯುತ್ತಿವೆ. ಇದಕ್ಕೆ ಪರಿ ಹಾರ ರೂಪವಾಗಿ ನನ್ನ ಪ್ರಜಾ ಸರಕಾರವು ಬೋಧಿಸುತ್ತಿರುವುದು 'ಸಸಿ ನಡಿರಿ' 'ವನ ಮಹೋತ್ಸವನ್ನಾಚರಿಸಿರಿ' 'ಹೆಚ್ಚು ಆಹಾರ ವನ್ನು ಬೆಳೆಸಿರಿ' ಎನ್ನುವ ಪ್ರಚಾರವನ್ನು ಮಾತ್ರ. ಇದರಿಂದ ನಮ್ಮ ಜನಕ್ಕೆ ಪೊಟ್ಟಿ ತುಂಬದು! ಜ್ಞಾನ ಬೆಳೆಯದು.

ಸಂಯುಕ್ತ ಅಮೆರಿಕದ ಟೆನಸಿ ಕಣಿವೆ ಯ ಪ್ರದೇಶದಲ್ಲಿ ನೂಡುತ್ತಿರುವ ಪ್ರಯೋ ಗವಾದ ಟಿ. ವಿ. ವಿ. ದೇಶದ ,,ಸಂಪತ್ತನ್ನು ಸಮೃದ್ಧಿ ಗೊಳಿಸಲಕ್ಕಾಗಿ ಕೋಲಿಸಿರುವ ಉತ್ತಮ ಅದರ್ಶವಾಗಿರುತ್ತದೆ. ಪ್ರಕೃತಿದ ತ್ವವಾದ ನದೀ, ಭೂಮಿ, ಗಳನ್ನು ಸಳಗಿಸಿ ಕೊಂಡು ಆಹಾರ್ಯ ವಿದ್ಯುತ್ತು, ಖನಿಜವಸ್ತು, ಮುಂತಾದವುಗಳನ್ನು ಪಡೆಯುವ ಈ ವಿಜ್ಞಾನ ಜಗತ್ತಿಗೇ ಅದರ್ಶವಾದುದು. ಈ ಪ್ರಯೋ ಗವನ್ನು ಹಿಂದುಸ್ತಾನದ ಬಳಕೆಯಲ್ಲಿ ತಂದರೆ 'ರಾಮರಾಜ್ಯ'ವಾದೀತೋ ಏನೋ! ಎನುವ ಕಲ್ಪನೆ ಈ ಟಿ ವಿ. ವಿ. ಯನ್ನು ಅಭ್ಯಾಸಿಸುವದರಿಂದ ನಮಗರ್ಥವಾ ಗುತ್ತದೆ.

ಮೊದಲಿನಿಂದ ತುದಿಯವರೆಗೂ 'ಟಿ. ವಿ. ವಿ.' ಯೋಜನೆಯ ಕಾರ್ಯದಕ್ಷತೆಯು ನ್ನೂ-ಆಸ್ಥಿನ ಜನ ಜೀವನಪಟ್ಟನ್ನು ಅತೀ ಉತ್ಸುಕತೆಯಿಂದ ಬರೆದಿದ್ದಾರೆ ಭಟ್ಟರು. ದೇಶದ ಪ್ರಗತಿಯನ್ನು ಬಯಸುವ ಯಾವನೊಬ್ಬ ಪ್ರಜೆಗೂ ಇದನ್ನು ಕಂಡು ನನ್ನೂ ದೇಶದಲ್ಲಿ ಇಂತಹದೊಂದು ಪ್ರಯೋ ಗವಿದ್ದರೆ ಎಷ್ಟು ಅನುಕೂಲ! ಎಂದು ತೋಚದಿರದು. ಟಿ ವಿ. ವಿ. ಯ ಕುರಿತು ಆಚಲವಾದ ಶ್ರದ್ಧೆಯಿಂದ ಬರೆದುದರ ಪರಿ ಣಾಮವಾಗಿಯೋ ಏನೋ ಕೆಲವು ಕಡೆ ಲೇಖಕರ ಬೆನ್ನು ಹಿಡಿಯುವುದು ತುಸು ಕಸ್ಟವೆನಿಸುತ್ತದೆ. ಅಂದರೆ ವಿಚಾರದ ಬೆನ್ನು ಹಿಡಿದು ಬಲುಮೆಯಿಂದ ಹೋಗುವ ಬೇಳೆ ಲೇಖಕರು ಅಭಿಪ್ರಾಯಕ್ಕೇನೇ ಹೆಚ್ಚು ಪ್ರಾ ಶಸ್ತ್ಯ ಕೊಟ್ಟರುವ ಪ್ರಯುಕ್ತ ವೈಲಿಯಲ್ಲಿ ಕೊಂಚ ಬಿಗುವು ಕಾಣುವುದು! ಇದು ದೋ ಷವಲ್ಲ; ಇಂತಹ ತಾತ್ವಿಕ ವಿಚಾರಗಳಲ್ಲಿ ಅನಿವಾರ್ಯ!

ನದಾ ಬೌದ್ಧಿಕ ಜಾಗೂ ವಿಚಾರಾತ್ಮಕ ಬರಹಗಳನ್ನು ಬರೆಯುವವರಲ್ಲೇ ವಿಶ್ವಸ ವನ್ನಿಟ್ಟು ಕೊಂಡಿರುವ ಶ್ರೀ ಭಟ್ಟರಲ್ಲಿ ಅಳ ವಾದ ಅಧ್ಯಾಸದ ಅನುಭವವಿದೆ. ಕನ್ನಡದಲ್ಲಿ ಈ ಬಗೆಯ ವೈಜ್ಞಾನಿಕ-ಪುಸ್ತಕಗಳು ತೀರ ವಿರಳ. ಜನ ಇಚ್ಚಿಸಲಿ; ಇಚ್ಚಿಸದಿರಲಿ ಈ ದಿಶೆಯಲ್ಲಿ ಇಂತಹ ಕೃತಿಗಳು ಪ್ರಕಟಗೊಳ್ಳುವುದರಿಂದ ಮುಂದಕ್ಕಾದರೂ ಅದರ ಪ್ರಯೋಜನವನ್ನು ಜನ ಪಡೆದಾರು; ಪಡೆಯ ಬೇಕು. ಬರೆದು ಮುಗಿಯುವದಷ್ಟು ವಿ ಚಾರ ಲಹರಿಗಳು ಮಾನ್ಯ ಮಿತ್ರರಲ್ಲಿವೆ. ಇಂತಹ ಸದಿಚ್ಛೆಯನ್ನು ಪ್ರಕಟಗೊಳಿಸಲು ಕನ್ನಡ ಜನದ ಒಲವಿನೊಂದಿಗೆ ಪ್ರಕಾಶಕರ ಒಲವೂ ಅವಶ್ಯವಾಗಿದೆ. 'ಪ್ರಜಾತಂತ್ರದ ಹೆದ್ದಾರಿ' ಯಂತಹ ಅತ್ಯಮೂಲ್ಯ ಕೃತಿಗಳು ಇನ್ನೂ ಪ್ರಕಟಗೊಂಡು, ಜನದ ಜ್ಞಾನದ ನ್ನು ದೇಶದ ಜಾಗೃತಿಯ ಕಡೆಗೆಳೆಯುವಂ ತಾಗಲೆಂದು ಹಾರೈಸುತ್ತೇನೆ.

೨ ವಿಮರ್ಶಕ (ಕನ್ನಡ ಮಾಸಪತ್ರಿಕೆ) ಉಡುಪಿ. ಸಂಪಾದಕರು: ಎನ್. ವಿಟ್ಠಲ ದಾಸ್. ವಾರ್ಷಿಕ ಚಂದಾ ರೂ. 3-0-0 ಬಿಡಿಸಂಚಿಕೆ ೦-೪-೦

ಹೊಸತಾಗಿ ಹುಟ್ಟುವ ಪತ್ರಿಕೆಗಳೆಂದರೆ ಎಲ್ಲರೂ ಮೂಗು ಮುರಿಯುವವರೇ. ಪತ್ರಿ ಕೆಹೊರಡಿಸುವದೂ, ಇಟ್ಟಿ ಬಂದ ಹಾಗೆ ಬರೆ ಯುವದೂ, ಮತ್ತೆ ನಿಲ್ಲಿಸುವುದೂ, ಈಚೆಗೆ ಜನ್ಮತಾಳಿದ ಪತ್ರಿಕೆಗಳ ಜನ್ಮ ಸಿದ್ಧ ಹಕ್ಕಾಗಿ ದೆ. 'ವಿಮರ್ಶಕ' ಹೊಸ ಪತ್ರಿಕೆಯಾದರೂ ವಿಚಾರವಂತ ಸಂಪಾದಕರ ನೇತೃತ್ವದಲ್ಲಿ ಉ ತ್ತಮ ರಾಜಕೀಯ ಪತ್ರಿಕೆಯಾಗುವ ಪೂ ರ್ವ ಚಿಹ್ನೆ ಇಲ್ಲಿ ಕಾಣುತ್ತಿದೆ' ಕರ್ನಾಟಕ ದಲ್ಲಿ ರಾಜಕೀಯಕ್ಕಾಗಿಯೆ ವೀಸಲಾಗಿಟ್ಟ ಪತ್ರಿಕೆಯೊಂದು ಇಲ್ಲವೆಂದು ಹೇಳ ಬೇಕು. 'ವಿಮರ್ಶಕ'ದ ಮೊದಲನೆ ಯ ಸಂಚಿಕೆ ಉತ್ತಮ ವಿಚಾರಾತ್ಮಕ ಬರಹ ಗಳಿಂದ ಕೂಡಿರುತ್ತದೆ. ಇದೇ ಆದರ್ಶ ದಿಂದ ಮುಂದುವರಿದು ಲೋಕದ ನ್ಯಾಯ ವನ್ನು ವಿಮರ್ಶೆಮಾಡುವ ನಿಜವಾದ 'ವಿಮ ರ್ಶಕ'ನಾಗಲೆಂದು ಹಾರೈಸುತ್ತೇವೆ.

೩ ಕಿರಣ (ಕನ್ನಡ ಮಾಸಪತ್ರಿಕೆ) ಉಡುಪಿ ಸಂಪಾದಕರು ಮತ್ತು ಪ್ರಕಾಶಕರು. ಶ್ರೀ ಯು. ಆರ್. ರಾಯರು. ವಾ. ಚಂದಾ ರೂ. 3-12-0 ಬಿಡಿಸಂಚಿಕೆ. 0-4-0

ಪ್ರಗತಿ ಶೀಲವೆಂದು ಮುದ್ರಿಯೆತ್ತಿ ಕೊಂಡು ಹೊರಬಂದ ಈ ಪತ್ರಿಕೆಯಲ್ಲಿ ಶ್ರೀ. ಎಂ. ವಿ. ಹೆಗ್ಡೆಯವರ 'ಪತ್ರಿಕಾ ಸ್ವಾತಂ-ಮಾನ-ಮಟ್ಟ' ಎಂಬ ಬರಹವೂ, ಶ್ರೀ ಕು. ಶಿ. ಯವರ 'ಪಶಿಯದಸಂಪತ್ತು', ಲೇಖನವೂ ಉ ತ್ತಮವೂ, ವಿಚಾರಾತ್ಮಕವೂ, ಆಗಿರುತ್ತವೆ.

— ಎಸ್ಸೆಲ್

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 168/1950

ಶೇಕ್ ಮೆಹಂಮದ್ ಯಬ್ರಾಹಿಂ ಸ್ವಾಬ —ವಾದಿ.

ಮತ್ತು

ರಾಮದಾಸ ಶೇಟ್ —ಪ್ರತಿವಾದ್ಯಿ

ಯವರೊಳಗೆ

ಸದ್ರಿ ವಾದಿಯು ಪ್ರತಿವಾದಿ ಮೇಲೆ ಮಾಡಿದ ಸದ್ರಿ ವ್ಯಾಜ್ಯವು ಪ್ರತಿವಾದಿ ನೋ ಟೀಸು ಬಗ್ಗೆ ತಾ. 21-8-1950ಕ್ಕೆ ಇಟ್ಟಿರುವ ದ್ರಿಂದ ಆ ದಿವ್ಸ ಪ್ರತಿವಾದಿಯು ತನ್ನ ಆಕ್ಷೇಪ ಯಿದ್ದಲ್ಲಿ ಸದ್ರಿ ಕೋರ್ಟು ಮುಂದೆ 10 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Plaintiff.
Dated 31-7-50, Udipi.

(ಕಳದ ಸಂಚಿಕೆಯಿಂದ ಮುಂದುವರಿಯುವದು)

ಕೃಷಿ, ಅಭಿವೃದ್ಧಿ, ಮತ್ತು ಗೇಣಿಗೆ ಕೊಟ್ಟವುಗಳ ಸಿಂಧುತ್ವ

90-D. (1) ಒಂದು ಒಟ್ಟು ಕುಟುಂಬದ ಆಸ್ತಿಯು ವಿಕ್ರಯ, ಆರುವಾರು ಯಾ ಭೋಗ್ಯಾದಿ ಅಥವಾ 12 ವರುಷಕ್ಕೆ ಮೇಲ್ಪಟ್ಟು ಅವಧಿಯು ಯಾವುದೇ ವಿಧದ ಗೇಣಿಚೀಟುಗಳೂ ಕುಟುಂಬದ ಮೇಲೆ ಕುಟುಂಬ ಯಜಮಾನನು ಕುಟುಂಬದ ಗರ್ಜು ಅಥವಾ ಲಾಭಕ್ಕೆ ಪ್ರತಿಫಲ ಪಡೆದು, ಕುಟುಂಬದ ಪ್ರಾಯಸ್ಥ ಮೆಂಬರರ ಪೈಕಿ ಅಧಿಕ ಪ್ರಾಯಸ್ಥ ಮೆಂಬರರಿಂದ ಒಪ್ಪಿಗೆ ಪಡದ ವಿನಹಾ ಮಾಡಿ ಕೊಟ್ಟಲ್ಲಿ, ಅದು ಕುಟುಂಬದ ಮೇಲೆ ಬದ್ಧೀಕೃತವಾಗ ತಕ್ಕದ್ದಲ್ಲ.

(2) ಹನ್ನೆರಡು ವರುಷಕ್ಕೆ ಮೇಲ್ಪಡದ ಅವಧಿಯೊಳಗೆ, ಯಾವದೇ ಆರು ವಾರು ಯಾ ಭೋಗ್ಯಾದಿಯಾಗಲೀ, ಇಡೀಯಂದಲಾಗಲೀ ಅಂಶವಾಗಿಯಾಗಲೀ ಹಿಂದೆ ಕೊಡುವ ಶರ್ತದ ಮೇಲೆ ಮುಂಗೇಣಿ ಗೇಣಿಗೆ ಕೊಟ್ಟು ಒಟ್ಟು ಕುಟುಂಬದ ಆಸ್ತಿಯ ಆರುವಾರು ಯಾ ಭೋಗ್ಯಾದಿ ಅಡವು ಯಾ ವಕ್ಕಲುತನವು ಕುಟುಂಬ ಯಜಮಾನನು ಪ್ರತಿಫಲ ಪಡದದ್ದಾಗಿದ್ದು ಕುಟುಂಬದ ಗರ್ಜು ಅಥವಾ ಲಾಭಕ್ಕೆ ಕೊಟ್ಟಿದ್ದಿರಬೇಕು. ಅಂತಹ ಸಂದರ್ಭದಲ್ಲಿ ಮಾತ್ರ ಅವು ಕುಟುಂಬದ ಮೇಲೆ ಬದ್ಧೀಕೃತವಾಗಿರುವುವು.

(3) ಆದರೆ ಇದರಲ್ಲಿ ಹೇಳಿದ ವಿಷಯಗಳು ಯಜಮಾನನಿಗೆ ತನ್ನ ಯಜಮಾನಿಕೆಯ ಕೆಲಸ ನೋಡುವಾಗ 12 ವರುಷಗಳಿಗೆ ಮೇಲ್ಪಡದ ಅವಧಿಯೊಳಗೆ ಯಾವುದೇ [ಏಷ್ಟಷ್ಟಾದರೂ ಮುಂಗಡ ವಿಲ್ಲದ] ಒಕ್ಕಲಿತನವನ್ನು ಕೊಡುವ ಅಧಿಕಾರವನ್ನಾಗಲೀ ಅಥವಾ ಜ್ಯಾರಿಯಲ್ಲಿರುವ ಕಾನೂನನ್ನು ಮುಂದರಿಸುವ ಅಧಿಕಾರವನ್ನಾಗಲೀ ಕಮ್ಮಿ ಗೊಳಿಸಲಾರದು.

ಕಾಲಿ ಅಡವು ಮತ್ತು ಸಾಲಗಳ ಸಿಂಧುತ್ವ

90-E ಕುಟುಂಬದ ಮೇಲೆ ಕಾಲಿ (ಅಂದರೆ ಆಸ್ತಿ ನ್ಯಾಥೀನತೆ ತೆರವಿ ನೂಡವ) ಅಡವು, ಯಾ ಇತರ ಸಾಲವು ಯಜಮಾನನೇ ಕುಟುಂಬದ ಗರ್ಜಿನ ಬಗ್ಗೆ ಆ ಸಾಲ ಯಾ ಅಡವನ್ನು ಮಾಡಿದ್ದಲ್ಲಿ ಬದ್ಧೀಕೃತವಲ್ಲ.

ಕುಟುಂಬದ ಮೇಲೆ ಡಿಕ್ರಿಯು ಯಾವಾಗ ಲಗಾವು

90-F ಒಂದು ತರವಾಡ್ ಯಾ ತವಸಿಯ ಮೇಲೆ ಒಂದು ಡಿಕ್ರಿಯು ಲಗಾವಾಬೇಕಾದರೆ ಅದನ್ನು ಕಾರ್‌ನವನಿನ ಮೇಲೆ ಮತ್ತು ಕಾರ್‌ನವನ್ ಸ್ಥಾನಕ್ಕೆ ಬರತಕ್ಕ ಸಂತತಿಯ ವ್ಯಕ್ತಿಯ ಮೇಲೂ ಪಡದಿರತಕ್ಕದ್ದು.

ಆದರೆ ಈ ಸೆಕ್ಷನ್ನು ಈ ಕೋಡು ಜ್ಯಾರಿಗೆ ಬರುವ ಮೊದಲು ಮದ್ರಾಸು ಸ್ಟೇಟಿನಲ್ಲಿ ದಾಖಲಾದ ಯಾವುದೇ ದಾವೆಯ ಯಾವುದೇ ಡಿಕ್ರಿಗೆ (ಈ ಕೋಡು ಜ್ಯಾರಿಗೆ ಬರುವ ಮೊದಲಾಗಲೀ ನಂತರದ್ದಾಗಲೀ) ಲಗಾವಾಗ ತಕ್ಕದ್ದಲ್ಲ.

ಆದರೆ...(ಇದು ಕೊಚ್ಚಿನ್ ತಿರುವಾಂಕೂರು ಪ್ರಾಂತ್ಯಗಳಿಗೆ ಮಾತ್ರ ಲಗಾವಾದ್ದರಿಂದ ಇಲ್ಲಿ ಕೊಡಲಿಲ್ಲ)

ಹಿಂಡೂ ಕೋಡ್ಸ್ಸಾ ಅಳಿಯಸಂತಾನಿಗರೂ

ವಿದ್ವೆಕೇಟ್ ಬಿ. ಬಿ. ಕಿಣ್ಣಿ ಬೈಟ್‌ಕೊಸ್ ಹಿಲ್, ಮಂಗಳೂರು

ಕುಟುಂಬದ ಸಂಬಂಧರ ಪೋಷಣೆ

90-G ಕುಟುಂಬದ ಪ್ರತಿಯೊಬ್ಬ ಮೆಂಬರನೂ ಕುಟುಂಬದ ವಾಸ್ತವ್ಯವಿಕೊಂಡು ಬಂಲಿ, ಅಥವಾ ಬಾರದೆ ಇರಲಿ, ಕುಟುಂಬದ ಸ್ಥಿತಿಗತಿಗನುಸಾರವಾಗಿ ಪ್ರತ್ಯೇಕ ಜೀವನಾಂಶವನ್ನು ಹೊಂದುವರೇ ಹಕ್ಕುದಾರರಿರುತ್ತಾನೆ.

ಕುಟುಂಬದ ಯಜಮಾನಿಕೆ ಬಿಡುವಿಕೆ

90-H ಯಾವ ಮೆನೆಜರನೂ ರಿಜಿಸ್ಟ್ರಿ ಪತ್ರಮುಖೇನ ತನ್ನ ಮೆನೆಜ್‌ಮೆಂಟಿನ ಹಕ್ಕನ್ನು ಬಿಟ್ಟು ಬಿಡಬಹುದು.

ಪಾಲು

90-I (1) ಈ ಸೆಕ್ಷನ್ನಿನ ಶರ್ತಗಳಿಗೆ ಒಳಪಟ್ಟು ಒಟ್ಟು ಸಂಸಾರದ ಯಾವ ನೊಬ್ಬ ಮೆಂಬರ ಅಥವಾ ಮೆಂಬರಳು ತನ್ನ ಕುಟುಂಬದ ಆಸ್ತಿಯಲ್ಲಿರುವ ಪಾಲನ್ನು ಕೇಳಿ ಕುಟುಂಬದಿಂದ ಹೊರಹೋಗಬಹುದು

ಈ ಕೋಡು ಜಾರಿಗೆ ಬರುವ ಸಮಯ Impartible Tarwad ಅಥವಾ ಅಖಂಡ ತರ್‌ವಾಡ್ ಎನಿಸಿಕೊಂಡು ಕುಟುಂಬವಿದ್ದರೂ, ಒಟ್ಟು ಕುಟುಂಬಕ್ಕೆ ಸೇರಿದ ಯಾವತ್ತು ಆಸ್ತಿಗಳೂ ಲಾಂದರೆ 90 ನೇ ಸೆಕ್ಷನಿಗೆ ಒಳಗಾಗದ ಆಸ್ತಿಗಳು. ಈ ಸಬ್ ಸೆಕ್ಷನಿನ ಬಗ್ಗೆ ಪಾಲಾಗತಕ್ಕ ಆಸ್ತಿ ಎನಿಸಿಕೊಳ್ಳುವುವು.

(2) ಅಂತಹ ಪ್ರಾಯಸ್ಥ ವೆಂಬರನು, ಒಂದು ತರವಾಡು, ತವಸಿ, ಅಥವಾ ಯಿಲ್ಲಮಿಗೆ ಸೇರಿದವನಿದ್ದರೆ, ಆ ತವಸಿ, ತರುವಾಡು ಅಥವಾ ಯಿಲ್ಲಮ್ ಮೆಂಬರೊಳಗೆ ತಲೆವಾರು ಪಾಲು ಮಾಡಿದಲ್ಲಿ ಎಷ್ಟು ಅಂಶವು ಬರುತ್ತದೋ ಅಷ್ಟು ಅಂಶದ ಆಸ್ತಿಗೆ ಆತ ಹಕ್ಕುದಾರನಿರುತ್ತಾನೆ.

(3) ಕವರು ಅಥವಾ ಕುಟುಂಬದಲ್ಲಿ ಅಂತಹ ಪ್ರಾಯಸ್ಥ ಮೆಂಬರನು ಪಡೆಯತಕ್ಕ ಹಿಸೆಯು ಎಂಟನೇ ಶೆಡ್ಯೂಲಿನಲ್ಲಿ ನಮೂದಿಸಿದ ಶರ್ತಗಳಿಗನುಸಂಸಿ ದೊರೆಯತಕ್ಕ ಹಿಸೆಯಾಗಿರತ್ತದೆ.

(4) (a) ಯಿಲ್ಲಮಿನ ಸ್ತ್ರೀ ಮೆಂಬರಳು ಆವಳ ಗಂಡನು ಕೂಡಾ ಆದೇ ಯಿಲ್ಲಮಿನ ಮೆಂಬರನಾಗಿದ್ದಲ್ಲಿ, ತನ್ನ ಹಿಸೆಯನ್ನು ಕೇಳಿ ಯಿಲ್ಲಮಿನಿಂದ ಹೊರ ಹೋಗುವ ಅಧಿಕಾರವು ಸದ್ರಿ ಸ್ತ್ರೀಗೆ ಯಿರತಕ್ಕದ್ದಲ್ಲ.

(b) ಯಿಲ್ಲಮಿನ ಬಾಬ್ತು ಗಂಡ ಸರ ಬಾಬ್ತು ಹೆಚ್ಚಿನ ವಿಲೆವಾರಿ.

(c) ಗಂಡನು ಮೃತವಟ್ಟ ಯಿಲ್ಲಂ ಸ್ತ್ರೀಯಳ ಬಾಬ್ತು ಹೆಚ್ಚಿನ ವಿಲೆವಾರಿ.

(d) ಒಂದು ತರವಾಡು, ತವಸಿ, ಕುಟುಂಬ ಅಥವಾ ಕವರಿನಲ್ಲಿ, ತನ್ನ ಹಿಸೆಯನ್ನು ಸಬ್ ಸೆಕ್ಷನ್ (1)ರ ಮೇರೆಗೆ ಕೇಳತಕ್ಕ ಸ್ತ್ರೀಗೆ, ಅದರಲ್ಲಿ ತನ್ನ ಮೈನರು ಮಕ್ಕಳು ಅಥವಾ ತನ್ನೂಂಟಲಕ ಉದ್ಭವಿಸುವ ಯಾವತ್ತು ಕೆಳಸಂತತಿಯ ಮೈನರರ ಬಾಬ್ತು, ತನ್ನಿಂದ ಮೇಲ್ಬಾಗದಲ್ಲಿ ಇತರ ಹತ್ತಿರದ ಕುಟುಂಬದ ಪ್ರಾಯಸ್ಥ ಸ್ತ್ರೀಯು ಇಲ್ಲದೆ ಹೋದಲ್ಲಿ, ಂಂತಹ ಪ್ರತಿಯೊಬ್ಬ ಮೈನರನ ಬಾಬ್ತು ಸಬ್ ಸೆಕ್ಷನ್ (2)ರ ಮೇರೆಗೆ ಅಥವಾ ಎಂಟನೇ ಶೆಡ್ಯೂಲು ಮೇರೆಗೆ ಎಣಿಸತಕ್ಕ ಪಾಲನ್ನು ಕೇಳಿ ಪಡೆಯುವ ಹಕ್ಕುಸ್ವಾತಂತ್ರ್ಯವಿರುತ್ತದೆ.

ಗಂಡ ಅಥವಾ ತಂದೆಯಿಂದ ಬಂದ ಆಸ್ತಿ.

90-J ಒಬ್ಬ ವ್ಯಕ್ತಿಯು ಮರಣ ಶಾಸನದ ಮುಖೇನ, ಅಥವಾ ದಾನಪತ್ರ ಮುಖೇನ, ಅಥವಾ ಸೀದಾ ವಿಕ್ರಯದಲ್ಲಿ ತನ್ನ ಹೆಂಡ್ತಿಯ ಹೆಸರಲ್ಲಿ ಮಾಡಿಕೊಟ್ಟಿದ್ದು ಅಥವಾ ಪಡದದ್ದಾದರೆ, ಅಥವಾ ತನ್ನ ಹೆಂಡ್ತಿ ಮತ್ತು ಆಕೆಯ ಒಂದು ಅಥವಾ ಹೆಚ್ಚಿನ ಮಕ್ಕಳ ಹೆಸರಲ್ಲಿ ಅಥವಾ ತನ್ನ ಒಂದು ಹೆಂಡ್ತಿಯು ಯಾವತ್ತು ಮಕ್ಕಳ ಹೆಸರಲ್ಲಿ ಕೊಟ್ಟದ್ದು ಯಾ ಪಡದದ್ದಾದರೆ, ಅಂತಹ ಆಸ್ತಿಯಲ್ಲಿ, ಮರಣಶಾಸನ, ದಾನಪತ್ರ, ಕೃಯ-ಚೀಟು, ಅಥವಾ ಶಾರ್ಟಗಳ ವರ್ತನೆಯಲ್ಲಿ ವಿರೋಧಾಭಿಪ್ರಾಯವು ತೋರಿಬಾರದಿದ್ದಲ್ಲಿ, ಸಮಾನ ರೀತಿಯ ಪಾಲು ಅಂತಹ ಹೆಂಡತಿಗೂ ಮತ್ತು ಆಕೆಯಲ್ಲಿ ಜನಿಸಿದ ಮತ್ತು ಪಾಲಾಗುವ ಮೊದಲು ಜನಿಸುವ ಪ್ರತಿಯೊಂದು ಮಗುವಿಗೂ ದೊರಕತಕ್ಕದ್ದು. ಅಂತಹ ಸಂದರ್ಭದಲ್ಲಿ ಪಾಲಿನ ಮೊದಲು ಸಾಯುವ ಹೆಂಡ್ತಿ ಯಾ ಮಗುವಿನ ಪಾಲು ಅಂತಹ ಹೆಂಡ್ತಿಯಾ ಮಗುವಿನ ವಾರಿಸುದಾರರಿಗೆ, ಅಂತಹ ಹೆಂಡ್ತಿ ಯಾ ಮಗುವು ವೀಲು ವಗೈರೆ ಮಾಡದೆ ಅವಸಾನ ಹೊಂದಿದರೆ ಯಾವ ರೀತಿಯಲ್ಲಿ ಹೋಗಬೇಕೋ ಆ ರೀತಿಯಲ್ಲಿ ಸೇರುವುದು.

ಆದರೆ ಈ ಕೋಡು ಜಾರಿಗೆ ಬರುವ ಮುಂಚೆ ಅಂತಹ ಆಸ್ತಿಯು ಹೆಂಡ್ತಿಯ ತವಸಿಯಲ್ಲಿ ತವಸಿಯ ಆಸ್ತಿಯಾ ಯಾವತ್ತೂ ಗುಣಾಗಳಿಂದ ಆದರೆ ಪಾಲಾಗುವ ಸಂದರ್ಭದಲ್ಲಿ ತರವಾಡು ಮೇರೆಗೆ ಹಕ್ಕು ಕೇಳುವ ಅಧಿಕಾರದ ಮೇರೆಗೆ ನೆಲೆಸಿದ್ದಲ್ಲಿ ಈ ಸೆಕ್ಷನ್ನು ಲಗಾವಾಗತಕ್ಕದ್ದಲ್ಲ.

E

1. VIIನೇ ಭಾಗದಲ್ಲಿ 105Aರಿಂದ 105 Gನ ವರೆಗಿನ ಕ್ಲೌಸುಗಳಿಗೆ ಈ ಕೆಳಗಿನವುಗಳನ್ನು ಓದಿಕೊಳ್ಳಬೇಕು.

ಕೆಲವು ಕೇಸುಗಳಿಗೆ ಬೇಕಾಗುವ ಸ್ಪೆಶಲ್ ಶರ್ತಗಳು.

ಮರುಮಕ್ಕತ್ತಾಯಂ ಯಾ ಅಳಿಯ ಸಂತಾನ ಗಂಡಸಿನಿಂದ ವಾರಿಸು ಹಕ್ಕು ಬರುವ ವಿಧಾನದ ತಿದ್ದುಪಡಿ

105-A ಈ ಕೋಡು ಜ್ಯಾರಿಗೆ ಬಾರದಿದ್ದರೆ ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನ ಕಾಯಿದೆಯನ್ನನುಸರಿಸುವ ಗಂಡಸಿನ ಪ್ರತ್ಯೇಕ ವಾ ಸ್ವಾರ್ಜಿತದ ಆಸ್ತಿಯು ಈ ಭಾಗದಲ್ಲಿ ಇತರ ವಿಷಯವನ್ನು ಹೇಳಿದ್ದರೂ, ಆತನು ಮರಣಶಾಸನ ವಿನ

ಗೊನೋರಿಯಾ ಪರಮಾಪರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಚ್ಚುಚ್ಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಾಪಾಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರಿ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರ, ಕೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೧ ಆಣೆ

ವಿಜೆಂಟರು:—ಗದಗ:—ನಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆ ರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೆರೆ,

ಆಯುರ್ವೇದ ಔಷಧಾಲಯ, ಗದಗ-

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ವೈದಿಕ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಆದಿಗೆ,ಶಿಂಡಿತನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

ಹಾ ಸತ್ತಲ್ಲಿ ಸೆಕ್ಷನ್ 105C ರಿಂದ 1ರಲ್ಲಿ ಹೇಳಿದ ನಿಯಮಗಳಿಗೆ ಅನುಸರಿಸಿ ಹೋಗತಕ್ಕದ್ದು.

ಲೀನಿಯಲ್ ಡಿಸೆಂಡೆಂಟ್ ಎಂದರೆ

105-I 105Cರಿಂದ 105-J ಮತ್ತು 109Aಮತ್ತು 109B ಸೆಕ್ಷನ್ ಗಳಲ್ಲಿ ಯಾವನೊಬ್ಬ ವ್ಯಕ್ತಿಯ ಕುರಿತು "ಲಿನಿಯಲ್ ಡಿಸೆಂಡೆಂಟ್" (ಅವನ ಯಾ ಅವಳ ಮೂಲಕದ ಕೆಳ ಉದ್ಭವಿತರು) ಎಂದರೆ ಆ ವ್ಯಕ್ತಿಯ ಸ್ತ್ರೀ ಶಾಖೆಯಲ್ಲಾಗಲೀ ಪುರುಷ ಶಾಖೆಯಲ್ಲಾಗಲೀ, ಕೆಳ ಉದ್ಭವಿತರು ಅಥವಾ ಸ್ತ್ರೀ ಶಾಖೆಯ ಅಥವಾ ಪುರುಷಶಾಖೆಯಲ್ಲಿ ಬರುವ ಹಂಗಡ ಯಾ ಪಕ್ಷ ದವರು. ಇದರಲ್ಲಿ ಆ ವ್ಯಕ್ತಿಯ ಯಾವುದೇ ಮಗುವೂ ಸೇರಿ ಬರುವುದು.

ಒಂದು ಲೀನಿಯಲ್ ಡಿಸೆಂಡೆಂಟಿ ನಿದ್ದಲ್ಲಿ ಆಸ್ತಿಯು ಬರುವ ಕ್ರಮ

105-C ಮರಣಶಾಸನವಿಲ್ಲದೆ ಸತ್ತ ವ್ಯಕ್ತಿಯು, ತನ್ನ ಲೀನಿಯಲ್ ಡಿಸೆಂಡೆಂಟ್ ನ್ನೊಬ್ಬನನ್ನು ಅಥವಾ ಹೆಚ್ಚಿನವರನ್ನು ಬಿಟ್ಟಿದ್ದರೆ, ಮತ್ತು ಆತನ ತಾಯಿ ಅಥವಾ ವಿಧವೆ ಅಥವಾ ವಿಧವೆಯರನ್ನು ಅಥವಾ ತಾಯಿ ಮತ್ತು ವಿಧವೆ ಅಥವಾ ವಿಧವೆಯರನ್ನು ಬಿಟ್ಟು ಮೃತಪಟ್ಟಿದ್ದರೆ, ಮೃತನ ಯಾವ ಕ್ರಮ ಆಸ್ತಿಯೂ ಅವರೆಲ್ಲರಿಗೂ ಸೇರತಕ್ಕದ್ದು.

ತಾಯಿ ಮತ್ತು ವಿಧವೆಯಿಲ್ಲದಿದ್ದಲ್ಲಿ, ಆತನ ಯಾವತ್ತೂ ಆಸ್ತಿಯೂ ಆತನ "ಲೀನಿಯಲ್ ಡಿಸೆಂಡೆಂಟ್ ಅಥವಾ ಡಿಸೆಂಡೆಂಟರಲ್ಲಿ" ಸೇರಿರತಕ್ಕದ್ದು.

S. 105-D. ಸೆಕ್ಷನ್ 105Cಲ್ಲಿ ಹೇಳಿದ ವಾರೀಸುದಾರರೊಳಗೆ ಆಸ್ತಿಯನ್ನು ಹಂಚಿ ಹಾಕತಕ್ಕ ವಿಧಾನವು ಈ ಕೆಳಗಿನ ನಿಯಮಗಳನ್ನ ನುಸರಿಸಿ ಹೋಗತಕ್ಕದ್ದು:-

(1) ಪ್ರತಿಯೊಂದು ಮಗುವು (ಮಗ ಯಾ ಮಗಳಿರಲಿ) ಏಕರೀತಿಯ ಒಂದು ಪಾಲಿಗೆ ಹಕ್ಕುದಾರಳಿರುವಳು.

(2) ಮರಣ ಶಾಸನವಿಲ್ಲದ ಮೃತನಿಗಿಂತ ಮೊದಲೇ ಅತನ ಒಂದು ಮಗುವು ತೀರಿ ಹೋಗಿದ್ದರೆ, 5ನೇ ಕ್ಲೊಸಿನ ಶರ್ತಗಳಿಗೆ ಒಳಪಟ್ಟು, ಅಂತಹ ತೀರಿ ಹೋದ ಮಗುವಿನ "ಲೀನಿಯಲ್ ಡಿಸೆಂಡೆಂಟ್ಸ್" ಆ ಮಗುವು ಜೀವಂತವಾಗಿರುತ್ತಿದ್ದರೆ (ಮಗ ಯಾ ಮಗಳು) ಆ ಮಗುವು ಪಡೆಯುತ್ತಿದ್ದಾಗಿದ್ದ ಹಿಸ್ಸೆಗೆ ಹಕ್ಕುದಾರರಿರುವರು.

(3) ಮರಣ ಶಾಸನವಿಲ್ಲದ ಮೃತನ ಮೃತ ಮಗುವಿನಲ್ಲಿ ಹುಟ್ಟಿದ ಮೊಮ್ಮಕ್ಕಳು, ಸಮಾನತ್ವ ಪಾಲಿನಲ್ಲಿ ಆ ಮೃತ ಮಗುವು ಮೃತನ ನಂತರ ಜೀವಿಸುತ್ತಿದ್ದರೆ ಪಡೆಯುತ್ತಿತ್ತೋ ಆದನ್ನು ಪಡೆಯಲು ಹಕ್ಕುದಾರರಿರುವರು.

ಆದರೆ ಅಂತಹ ಮೊಮ್ಮಗುವು ಕೂಡ ಮರಣ ಶಾಸನ ವಿನಹಾ ಸಾಯುವ ವ್ಯಕ್ತಿಯನ್ನು ಮರಣದ ಮುಂಚಿತವೇ ಮೃತ ಪಟ್ಟಿದ್ದರೆ, 5ನೇ ಕ್ಲೊಸಿನ ಶರ್ತಗಳಿಗೆ ಒಳಪಟ್ಟು, ಅಂತಹ ಮೊಮ್ಮಗ.ವಿನ "ಲೀನಿಯಲ್ ಡಿಸೆಂಡೆಂಟ್ಸ್" ಅಂತಹ ಮೊಮ್ಮಗುವು ಮರಣ ಶಾಸನ ರಹಿತನಾಗಿ ಸಾಯುವವನ ನಂತರ ಇರುತ್ತಿದ್ದರೆ ಪಡೆಯಬಹುದಾಗಿದ್ದ ಪಾಲನ್ನು ಪಡೆಯುವರೇ ಹಕ್ಕುದಾರರಿರುವರು.

(4) ಅದೇ ರೀತಿಯಲ್ಲಿ ಆಸ್ತಿಯು ಮರಣ ಶಾಸನರಹಿತನಾಗಿ ಸಾಯುವ, ಆದ ಕ್ಕಿಂತಲೂ ದೂರದ ಜೀವಂತರಾಗಿರುವ ಲೀನಿಯಲ್ ಡಿಸೆಂಡೆಂಟ್ಸರಲ್ಲಿ ಹೋಗುವುದು.

(5) ಮರಣ ಶಾಸನರಹಿತನಾಗಿ ಸಾಯುವ ವ್ಯಕ್ತಿಯ ಒಂದು ಮಗು, ಮೊಮ್ಮಗು ಅಥವಾ ಇತರ ಲೀನಿಯಲ್ ಡಿಸೆಂಡೆಂಟರ,ಡಿಸೆಂಡೆಂಟರರ್ಯು(ಅಂದರೆ ಆನಂತರ ಅವರಿಂದ ಬರತ್ಯಕ್ಕವರು) ಅಂತಹ ಮೃತನ ಆಸ್ತಿಯಲ್ಲಿ ಯಾವುದೇ ಪಾಲಿಗೆ ಅಂತಹ ಮೃತನು ಸಾಯುವ ವೇಳೆ ಆತನ ಮಗು, ಮೊಮ್ಮಗು ಆಥವಾ ಇತರ ಲೀನೀಯಲ್ ಡಿಸೆಂಡೆಂಟ್ ಜೀವಂತರಾಗಿದ್ದರೆ, ಆರ್ಹರಲ್ಲ.

(6) ಮರಣ ಶಾಸನ ವಿನಹಾ ಸಾಯುವ ಮೃತನ ವಿಧವೆ ಆಥವಾ ವಿಧವೆಯರು ಇದ್ದಲ್ಲಿ ಯಾವತ್ತು ವಿಧವೆಯರೂ ಒಟ್ಟಿಗೆ ಅಂತಹ ಮೃತನ ಒಂದು ಮಗುವಿನ ಹಿಸ್ಸೆಗೆ ಸಮಾನವಾದ ಒಂದು ಹಿಸ್ಸೆಯನ್ನು ಪಡೆಯಲು ಆರ್ಹರಿರುವರು, ಮತ್ತು ಮೃತನಿಗೆ ಒಂದಕ್ಕಿಂತ ಜಾಸ್ತಿ ವಿಧವೆಯರಿದ್ದ ಪಕ್ಷದಲ್ಲಿ ಅವರಿಗೆ ಆ ರೀತಿ ಬಂದ ಪಾಲನ್ನು ಅವರೊಳಗೆ ಸರಿಯಾಗಿ ಏಕರೀತಿಯ ಪಾಲು ಮಾಡಿ ಪಡೆಯತಕ್ಕದ್ದು.

(7) ತಾಯಿಗೆ ಒಂದು ಮಗುವಿಗೆ ಮೃತನಿಂದ ಯಾ ಳಿಂದ ಬರತಕ್ಕ ಪಾಲಿನಷ್ಟೆ ಪಾಲು ಸಿಗತಕ್ಕದ್ದು.

ಲೀನಿಯಲ್ ಡಿಸೆಂಡೆಂಟಿರಿಲ್ಲದೆ ವಿಧವೆ ಮತ್ತು ತಾಯಿ ಮಾತ್ರ ಇದ್ದಲ್ಲಿ ಆಸ್ತಿ ಸರಿಯುವ ವಿಧಾನ. ದೃಷ್ಟಾಂತಗಳು (ಕ್ಲಥ ಆಧಾರದಿಂದ ಕೊಟ್ಟಿಲ್ಲ.)

105-E. ಮರಣ ಶಾಸನರಹಿತ ಮೃತನು ತನ್ನ ಲೀನಿಯಲ್ ಡಿಸೆಂಡೆಂಟ್ಸ್ ರಿಲ್ಲದೆ ತನ್ನ ತಾಯಿ ಮತ್ತು ವಿಧವೆ ಯಾ ವಿಧವೆಯರನ್ನು ಬಿಟ್ಟು ಸತ್ತಿದ್ದರೆ ಅವನ ಹಕ್ಕಿನ ಆಸ್ತಿಯ ಸರೀ ಅರ್ಧಾಂಶವು ತಾಯಿಗೂ ಸರೀ ಅರ್ಧಾಂಶವು ವಿಧವೆಯೂ ವಿಧವೆಯರಿಗೂ ಹೋಗತಕ್ಕದ್ದು. ವಿಧವೆಯರು ಸದ್ರಿ ಸಮಾ ಹಾಗೆ ಬರುವ ಅರ್ಧಾಂಶವನ್ನು ತಮ್ಮೊಳಗೆ ಸರಿಯಾದ ಏಕರೀತಿಯ ಪಾಲನ್ನು ಮಾಡಿಕೊಳ್ಳುವರೇ ಹಕ್ಕುದಾರರಿರುವರು. ವಿಧವೆಯಿಲ್ಲದೆ ಹೋದಲ್ಲಿ ಅಂತಹ ಮೃತನ ಯಾವತ್ತು ಆಸ್ತಿಯೂ ಆತನ ತಾಯಿಯನ್ನು ಸೇರತಕ್ಕದ್ದು.

ತಾಯಿಯಿಲ್ಲದೆ ತಾಯಿಯ ಲೀನಿಯಲ್ ಡಿಸೆಂಡೆಂಟ್ ಮತ್ತು ವಿಧವೆಯಿದ್ದಲ್ಲಿ ಆಸ್ತಿ ಹೇಗೆ ಸರಿಯಬೇಕು

105 F. ಮರಣ ಶಾಸನ ವಿನಹಾ ಸಾಯುವ ಮೃತನು ತನ್ನ ತಾಯಿಯನ್ನು ಮತ್ತು ಲೀನಿಯರ್ ಡಿಸೆಂಡೆಂಟರನ್ನೂ ಕಳಕೊಂಡು ಯಾ ಇಲ್ಲದೆನೇ ಸತ್ತಿದ್ದರೆ, ಮತ್ತು ಹಾಗೆ ಸಾಯುವಾಗ ತನ್ನ ವಿಧವೆ ಆಥವಾ ವಿಧವೆಯರನ್ನೂ ಮತ್ತು ತನ್ನ ತಾಯಿಯ "ಲೀನಿಯಲ್ ಡಿಸೆಂಡೆಂಟರನ್ನೂ" ಬಿಟ್ಟು ಸತ್ತಿದ್ದರೆ, ಅಂತಹ ಮೃತನ ಸಮಾ ಅರ್ಧಾಂಶ ಆಸ್ತಿಯು ಮೃತನ ವಿಧವೆಯರೊಳಗೆ ಸರಿಸಮಾನವಾದ ಪಾಲಿನ ಹಕ್ಕಿನ ಮೇಲೂ, ಇನ್ನೊಂದು ಅರ್ಧಾಂಶ ಆಸ್ತಿಯು ತಾಯಿಯ "ಲೀನಿಯಲ್ ಡಿಸೆಂಡೆಂಟ್ಸ್"ರಿಗೂ ಹೋಗತಕ್ಕದ್ದು.

ಅಂತಹ ತಾಯಿಯ "ಲೀನಿಯಲ್ ಡಿಸೆಂಡೆಂಟ್ಸ್" ಇಲ್ಲದೆ ಹೋದಲ್ಲಿ ಎಲ್ಲಾ ಆಸ್ತಿಯೂ ವಿಧವೆ ಯಾ ವಿಧವೆಯರಿಗೆ ಹೋಗತಕ್ಕದ್ದು. ಅಂತೆಯೇ ವಿಧವೆಯಿಲ್ಲದೆ ಹೋದ ಪಕ್ಷದಲ್ಲಿ ಯಾವತ್ತು ಆಸ್ತಿಯೂ ತಾಯಿಯ ಲೀನಿಯಲ್ ಡಿಸೆಂಡೆಂಟ್ಸರಿಗೆ ಹೋಗತಕ್ಕದ್ದು.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.
Advocate & President, District Board, S. Kanara.
CHAIRMAN

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೀಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಷ್ಟ ಚಾರ್ಜು ೧೫ ಆಣೆ.

ಗುಣಾಕರು:—**ಹಾಲಪ್ಪಾ ಭಕೇರಪ್ಪಾ ಡಾವಣಗೇರಿ**

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಶಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ಡಾವಣಗೆರೆ ಜಾವಣಗೆರೆ:—ಡಾವಣಗೆರೆ ಪ್ರೆಸ್ಸ್ ಆರ್ ಎಲ್ ಕವಲಾಡಾ ,ಕೆಮಿಸ್ಟ್, ಹಾವೇರಿ ಬ್ಯಾಡಗಿ

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL



ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ ಕಾಮ್ಯ ಹಿತ್ತಾಳೆ, ಕಂಚು, ಪೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿ ದರದಲ್ಲಿ ಆಗಿ ಯಾ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿತ್ತು ಋತುಸ್ರಾವವಾಗುವುದು, ಹಸಿರಾಗಿ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಪನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.

ಸ್ವಾತಿಸ್ವರು: ಶಹಾಕಂಪೆನಿ, ಮಂಗಳೂರು

ತಾಯಿಯ ತಾಯಿ ಅಥವಾ ಅವಳ ಕೆಳಸಂತತಿ ಅಥವಾ ತಂದೆಯಿದ್ದಲ್ಲಿ ಹೇಗೆ ಆಸ್ತಿಯು ಹೋಗತಕ್ಕದ್ದು.

105-G. ಅಂತಹ ಮೃತನು ಸೆಕ್ಷನ್ 105 C, 105 E ಮತ್ತು 105 F ರಲ್ಲಿ ಹೇಳಿದ ಯಾವುದೊಂದು ವಾರಿಸುದಾರರೂ ಇದೆ ತೀರಿ ಹೋಗಿ, ತನ್ನ ತಂದೆ ಮತ್ತು ತಾಯಿಯ ತಾಯಿ ಅಥವಾ ಆಕೆಯ "ಲೀನಿಯಲ್ ಡಿಸೆಂಡೆಂಟ್" ಅಥವಾ "ಡಿಸೆಂಡೆಂಟ್"ನ್ನು ತನ್ನ ನಂತರ ಬಿಟ್ಟಿದ್ದರೆ, ಮೃತನ ಸಮಾ ಅರ್ಧಾಂಶ ಆಸ್ತಿಯು ಅವನ ತಂದೆಗೂ, ಮಿಕ್ಕುಳಿದ ಅರ್ಧಾಂಶ ತಾಯಿಯ ತಾಯಿಗೂ, ಅಥವಾ ಅವಳಿಲ್ಲದೆ ಹೋದಲ್ಲಿ ಅವಳ "ಲೀನಿಯಲ್ ಡಿಸೆಂಡೆಂಟ್" ಅಥವಾ "ಡಿಸೆಂಡೆಂಟ್ಸ್" ಸೇರತಕ್ಕದ್ದು.

ಅಂತಹ ಲೀನಿಯಲ್ ಡಿಸೆಂಡೆಂಟನು, ಅಥವಾ ಡಿಸೆಂಡೆಂಟ್ಸರು ತಾಯಿಯ ತಾಯಿಗೆ ಇಲ್ಲದೆ ಹೋದಲ್ಲಿ ಮೃತನ ಯಾವತ್ತು ಆಸ್ತಿಯೂ ಅವನ ತಂದೆಯನ್ನು ಸೇರತಕ್ಕದ್ದು. ತಂದೆಯು ಇಲ್ಲದೆ ಹೋದಲ್ಲಿ ಯಾವತ್ತು ಆಸ್ತಿಯು ಮೃತನ ತಾಯಿಯು ತಾಯಿಯನ್ನಾಗಲೀ, ಅಥವಾ ಆ ಕೆಯ ಲೀನಿಯಲ್ ಡಿಸೆಂಡೆಂಟ್ಸ್‌ನ್ನಾಗಲೀ ಅಥವಾ ಆಕೆಯ ಡಿಸೆಂಡೆಂಟ್ಸ್‌ನ್ನಾಗಲೀ ಒಂದರ ನಂತರ ಒಂದರಂತೆ ಸೇರಿಕೊಂಡು ಬರತಕ್ಕದ್ದು.

ಇತರ ಸಂದರ್ಭಗಳಲ್ಲಿ ಯಾವ ರೀತಿಯಲ್ಲಿ ಆಸ್ತಿಯು ಸರಿದು ಬರಬೇಕು

S. 105-H ಅಂತಹ ಮೃತನು ಸೆಕ್ಷನ್ 105-C, 105-E, 105-F ಮತ್ತು 105-G ಗಳಲ್ಲಿ ಹೇಳಿದ, ಯಾವುದೊಂದು ವಾರಿಸ್ದಾರರಿಲ್ಲದೆ ಮೃತ ಪಟ್ಟಲ್ಲಿ ಮೃತನ ಯಾವತ್ತು ಆಸ್ತಿಯೂ ಮೃತನ ತಾಯಿಯ, ತಾಯಿಯ ತಾಯಿಗೆ ಸೇರತಕ್ಕದ್ದು; ಅವಳು ಇಲ್ಲದೆ ಹೋದ ಪಕ್ಷದಲ್ಲಿ ಅವಳ ಲೀನಿಯಲ್ ಡಿಸೆಂಡೆಂಟ್ ಅಥವಾ ಡಿಸೆಂಡೆಂಟರಲ್ಲಿ ಸೇರತಕ್ಕದ್ದು. ಅಂತಹ ಡಿಸೆಂಡೆಂಟರು ಕೂಡಾ ಇಲ್ಲದೆ ಹೋದಲ್ಲಿ ಅಂತಹ ಮೃತನ ಯಾವತ್ತು ಆಸ್ತಿಯು ಅವನ ಮೇಲ್ಭಾಗದ ಸ್ತ್ರೀ ಬಂಧುವಿನ ಇನ್ನೂ ದೂರದ ಸ್ತ್ರೀಗೆ ಹೋಗತಕ್ಕದ್ದು. ಅಂತಹ ಸ್ತ್ರೀಯು ಈ ಮೊದಲೇ ಹೋಗದಿದ್ದ ಅಂತಹ ಸ್ತ್ರೀಯ "ಲೀನಿಯಲ್ ಡಿಸೆಂಡೆಂಟ್" ಅಥವಾ "ಡಿಸೆಂಡೆಂಟ್ಸ್"ರಿಗೆ ಹೋಗತಕ್ಕದ್ದು. ಹೀಗೆ ಹೋಗಿರುವಾಗ ಹತ್ತರದ ಮೃತನ್ನ ವೇಲ್ಭಾಗದ ವ್ಯಕ್ತಿ ಮತ್ತು ಆ ವ್ಯಕ್ತಿಯ ಡಿಸೆಂಡೆಂಟರು, ದೂರದ ಎಸೆಂಡೆಂಟರನ್ನು ಮತ್ತು ಅವರ ಡಿಸೆಂಡೆಂಟರನ್ನು ವಿರಹಿತ ಪಡಿಸುತ್ತಾ ಹೋಗುತ್ತಾರೆ.

ತಾಯಿಯ ಲೀನಿಯಲ್ ಡಿಸೆಂಡೆಂಟ್ಸ್ ಅಥವಾ ಮೇಲ್ಭಾಗದವರೊಳಗೆ ವಿತರಣೆಯ ಕ್ರಮ

S. 105-I ಅಂತಹ ಮೃತನ ಆಸ್ತಿ ಅಥವಾ ಅದರಲ್ಲಿಯ ಹಿಸೆಯಲ್ಲಿ ಎರಡು ಯಾ ಜಾಸ್ತಿ ಮೃತನ ತಾಯಿಯ ಲೀನಿಯಲ್ ಡಿಸೆಂಡೆಂಟರು ಅಥವಾ ಇತರ ಎಸೆಂಡೆಂಟರು ಈ ಮುಂಚಿನ ಸೆಕ್ಷನ್ ಮೇರೆಗೆ ಹಕ್ಕುದಾರರಿದ್ದಲ್ಲಿ, ಅವರೊಳಗಿನ ವಿತರಣೆಯು, ತಾಯಿ ಅಥವಾ ಆಕೆಯ ಮೇಲ್ಭಾಗ (ascendants)ದವರು ಅಂತಹ ಆಸ್ತಿಯ ಯಾ ಹಿಸೆಯ ಬಾಬ್ತು ಮರಣ ಶಾಸನವಿಲ್ಲದೆ ಮೃತ ಪಟ್ಟಿರುವರೋ ಎಂಬಂತೆ, ಅಂದರೆ ಆಕೆಯ ನಂತರ ಮೇಲೆ ಹೇಳಿದ ಕೆಳಭಾಗದವರು (decendants)ನ್ನು ಬಿಟ್ಟು ಮೃತ ಪಟ್ಟರವರೋ ಎಂಬಂತೆ 105-C ಸೆಕ್ಷನ್‌ನ ಕ್ಲೌಸ್ (1) ರಿಂದ (5) ನೇ ವರೆಗಿನದರಲ್ಲಿ ಕೊಠಾರುವ ನಿಯಮಕ್ಕನುಸರಿಸಿ ಹೋಗಬೇಕು.

105-J. ನಂಬೂದರಿ ವಾರೀಸು ಕ್ರಮ-ಇಲ್ಲಿ ಬಿಟ್ಟಿದೆ.

VIIನೇ ಭಾಗದಲ್ಲಿ, 109Aಕ್ಲೌಸಿಗೆ, ಈ ಕೆಳಗಿನ ಕ್ಲಾಸನ್ನು ಓದಿ ಕೊಳ್ಳಬೇಕು:-

"109A ಈ ಭಾಗದಲ್ಲಿ ಏನು ಹೇಳಿರಬಹುದಿದ್ದರೂ, ಈ ಕೋಡು ಜ್ಯಾರಿಗೆ ಬಾರದಲ್ಲಿ ಮರುಮಕ್ಕತ್ತಾಯಂ ಅಥವಾ ಅಳಿಯ ಸಂತಾನದ ಕಾಯ್ದೆಯನ್ನು ಅನುಸರಿಸಿ ಹೋಗುತ್ತಿದ್ದ ಒಬ್ಬ ಸ್ತ್ರೀಯು ಸ್ವಂತ ಅಧ್ಯಾಯ ಪ್ರತ್ಯೇಕದ ಆಸ್ತಿಯನ್ನು, ಆಕೆಯು ಬಹಿರ ವೆಟ್ಟಿಗೆ ಏಲು ವೈರೆ ಮಾಡಿಸದೆ ಮೃತ ಪಟ್ಟಿದ್ದಾದರೆ, ಈ ಕೆಳಗೆ ಹೇಳಿದ ರೀತಿಯಲ್ಲಿ ಈ ಕೆಳಗೆ ಹೇಳಿದ ನಿಯಮಾನುಸರಿಸಿ ಹೋಗತಕ್ಕದ್ದಿರುತ್ತದೆ. ಹೇಗೆಂದರೆ.

1) ಅಂತಹ ಮೃತಳು ತನ್ನ ನಂತರ ಒಬ್ಬ ಲೀನಿಯಲ್-ಡಿಸೆಂಡೆಂಟ್, ಅಥವಾ ಡಿಸೆಂಡೆಂಟರನ್ನು ಬಿಟ್ಟಿದ್ದರೆ, ಆಕೆಯ ಅಂತಹ ಯಾವತ್ತು ಆಸ್ತಿಯೂ 105 C ಸೆಕ್ಷನಿನ ಕ್ಲೌಸ್ 10ರಿಂದ 5ನ್ನು ಅನುಸರಿಸಿ ಅಂತಹ ಡಿಸೆಂಡೆಟ್ ಅಥವಾ ಡಿಸೆಂಡೆಂಟರನ್ನು ಸೇರತಕ್ಕದ್ದು.

2) ಅಂತಹ ಮೃತಳ ಲೀನಿಯಲ್ ಡಿಸೆಂಡೆಂಟ್ ಇಲ್ಲದೆ ಹೋದಲ್ಲಿ, ಮೃತಳ ಯಾವತ್ತು ಆಸ್ತಿಯೂ, ಆಕೆಯ ತಾಯಿಯನ್ನು ಸೇರತಕ್ಕದ್ದು, ಅವಳು ಇಲ್ಲದೆ ಹೋದಲ್ಲಿ ಅವಳ ಲೀನಿಯಲ್ ಡಿಸೆಂಡೆಂಟ್ ಅಥವಾ ಡಿಸೆಂಡೆಂಟರಲ್ಲಿ ಸೇರತಕ್ಕದ್ದು.

3) ಅಂತಹ ಮೃತಳು ತನ್ನ ನಂತರ ತನ್ನ ಯಾ ತನ್ನ ತಾಯಿಯ ಯಾವ ಲೀನಿಯಲ್ ಡಿಸೆಂಡೆಂಟನ್ನೂ ಬಿಡದೆ, ತನ್ನ ಗಂಡ ಮತ್ತು ತನ್ನ ತಾಯಿಯ ತಾಯಿಯನ್ನು ಅಥವಾ ಆಕೆಯ ಲೀನಿಯಲ್ ಡಿಸೆಂಡೆಂಟ್ ಅಥವಾ ಡಿಸೆಂಡೆಂಟರನ್ನು ಬಿಟ್ಟು ಮೃತಪಟ್ಟಲ್ಲಿ ಆಕೆಯ ಅರ್ಧಾಂಶ ಆಸ್ತಿಯು ಗಂಡನಿಗೂ, ಮಿಕ್ಕ ಅರ್ಧಾಂಶದ ಆಸ್ತಿಯು ಆಕೆಯ ತಾಯಿಯ ತಾಯಿಗೆ, ಆಕೆ ಇಲ್ಲದಿದ್ದಲ್ಲಿ ಆಕೆಯ ಲೀನಿಯಲ್ ಡಿಸೆಂಡೆಂಟ್ ಅಥವಾ ಡಿಸೆಂಡೆಂಟರಿಗೆ ಸೇರತಕ್ಕದ್ದು.

4) ಅಂತಹ ಮೃತಳ ತಾಯಿಯ ತಾಯಿ ಅಥವಾ ಆಕೆಯ ಲೀನಿಯಲ್ ಡಿಸೆಂಡೆಂಟರಿಲ್ಲದೆ ಹೋದಲ್ಲಿ ಮೃತಳ ಯಾವತ್ತು ಆಸ್ತಿಯೂ ವೃತಳ ಗಂಡನನ್ನು ಸೇರತಕ್ಕದ್ದು. ಗಂಡನು ಇಲ್ಲದಿದ್ದಲ್ಲಿ ಮೃತಳ ಸರ್ವ ಆಸ್ತಿಯೂ ಮೃತಳ ತಾಯಿಯ ತಾಯಿ ಅಥವಾ ಅವಳ ಡಿಸೆಂಡೆಂಟ್ಸರಲ್ಲಿ ಸಂದರ್ಭಕ್ಕನುಸರಿಸಿ ಸೇರಿ ಬಂತಕ್ಕದ್ದು.

5) ಅಂತಹ ಮೃತಳು ಈ ಮೇಲೆ ಹೇಳಿದ ಯಾವುದೇ ವಾರಸುದಾರರನ್ನು ಇಟ್ಟುಕೊಳ್ಳದೆ ಮೃತ ಪಟ್ಟದ್ದಲ್ಲಿ, ಅವಳ ಯಾವತ್ತು ಆಸ್ತಿಯೂ, ಅವಳ ತಾಯಿಯ ತಾಯಿಯ ತಾಯಿಗೂ ಅಥವಾ ಅವಳಿಲ್ಲದೆ ಹೋದಲ್ಲಿ ಅವಳು ಲೀನಿಯಲ್ ಡಿಸೆಂಡೆಂಟ್ ಅಥವಾ ಡಿಸೆಂಡೆಂಟರಲ್ಲಿ ಸೇರತಕ್ಕದ್ದು. ಅಂತಹ ಡಿಸೆಂಡೆಂಟರು ಕೂಡಾ ಇಲ್ಲದೆ ಹೋದಲ್ಲಿ, ಸ್ತ್ರೀ ಲೈನಿನಲ್ಲಿ ದೂರದಿಂದ ಇರಬಹುದಾದ ಮೇಲ್ಭಾಗದ ಸ್ತ್ರೀಗೂ, ಅವಳೂ ಇಲ್ಲದಿದ್ದಲ್ಲಿ ಅವಳ ಲೀನಿಯಲ್ ಡಿಸೆಂಡೆಂಟ್ ಅಥವಾ ಡಿಸೆಂಡೆಂಟರಲ್ಲಿ ಸೇರತಕ್ಕದ್ದು, ಅಂದರೆ ಅವಳ ಸಮೀಪದ ಮೇಲ್ಭಾಗದ ಮತ್ತು ಕೆಳಭಾಗದವರು, ದೂರದ ಮೇಲ್ಭಾಗದವರು ಮತ್ತು ಕೆಳಭಾಗದವರನ್ನು ವಿರಹಿತಪಡಿಸಿ, ಸೇರತಕ್ಕದ್ದು.

6) ಅಂತಹ ಮೃತಳ ಆಸ್ತಿಯ ಆಸ್ತಿಯ ಹಿಸೆಗೆ, ಅವಳ ತಾಯಿಯ ಎರಡು ಯಾ ಅಧಿಕ ಲೀನಿಯಲ್ ಡಿಸೆಂಡೆಂಟ್ಸ್ ಅಥವಾ ಎಸೆಂಡೆಂಟರು ಹಿಂದಿನ ಕ್ಲೌಸ್ ಮೇರೆಗೆ ಹಕ್ಕುದಾರರಿದ್ದರೆ, ಅಂತಹ ವಿತರಣೆಯು ಸೆಕ್ಷನ್ 105 C, ಕ್ಲೌಸ್ 10ರಿಂದ 5ರ ವರೆಗಿನದರಲ್ಲಿ ಹೇಳಿದ ನಿಯಮಗಳಿಗನುಸರಿಸಿ, ತಾಯಿ ಅಥವಾ ಇತರ ಮೇಲ್ಭಾಗದವರು ಅಂತಹ ಆಸ್ತಿಯ ಹಿಸೆಯ ಬಾಬ್ತು ಮರಣ ಶಾಸನ ವಿನಹ ವೃತಪಟ್ಟು ಆ ವೃತಕಾಲದಲ್ಲಿ ಮೇರೆ ಹೇಳಿದ ಕೆಳಭಾಗದವರನ್ನು ಮಾತ್ರ ಬಿಟ್ಟು ಮೃತಹೊಂದಿದ್ದಾರೋ ಎಂಬಂತೆ ನಡೆಯತಕ್ಕದ್ದು.

ಮದ್ರಾಸು ಸರಕಾರದಿಂದ
ಈಗತಾನೇ ಸಂಭಾವನೆ ಪಡೆದ
ಡಾಕ್ಟರ್ ಕೊರಡ್ಡಲ್ ನಂಕಟ್ಟಾಯರ
'ಮನೆ ಮದ್ದು'
(HOME REMEDIES)
೨೦೦ ತಾಜಾ ಲೆಗಳಿಗೆ ಮನೆಯಲ್ಲೇ ನೋಡಿ ಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ ರೂ. ೨
ಪ್ರತಿಗಳು ನವಯುಗ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವಕೀಲರಿಗೆ— ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಕ್ಷೀದಿ ಪುಸ್ತಕಗಳನ್ನು,
ಫಾರ್ಮುಗಳು, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kela Nambiar,
Vaidya

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,
ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಆಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ ಶಾಸ್ತ್ರೀ, ಎಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಅಂತರಂಗಕ್ಕೆ ಚಂದಾದಾರರಾಗಿರಿ



ದ ಮ್ಮು ಹೋದರೆ ತಿರುಗಿ ಬಾರದು
ಕಳೆದ ೨೮ ವರ್ಷದಮ್ಮಿಗೆ ಪ್ರಸಿದ್ಧ ಡಾಕ್ಟರರ ಔಷಧದ ಉಪಾಯ
ಪುರೋಹಿತ-ಶ್ವಾಸಹಾರಿ
ಕೆ. ಟಿ. ಸಿ., ಬೆಂಗಳಾಕಂಗದಲ್ಲಿ ೩೫, ೬೦೦, ರೂ. ಕಮ್ಮಿನ್ಸ್, ಭಾರತದಲ್ಲಿ ಎಲ್ಲಾ ಕಡೆ
ಮಾರಾಟಕ್ಕೆ ಸಿಗುತ್ತದೆ
ಇಲ್ಲದೇ ಮಾಡಿ-ವಿವರಕ್ಕೆ.
ಡಿ. ಪುರೋಹಿತ ಫಾರ್ಮಸಿ
ಕೊಲ್ಹಾಪುರ. (ಬೆಸ್ಟ್ ಫಾರ್ಮ ಸಿ)

EDITED, PRINTED & PUBLISHED BY K. H SHETTY AT THE NAVAYUGA PRESS, UDUPI, S.INDIA

Regd No M 3618

17-8-1950

Estd. 1921 ಸ್ಥಾಪನೆ.

LICENCE No. 31
Licensed to Post without Prepayment

ಸ್ವರಾಜ್ಯ ಸಂಚಿಕೆ

Founder Sri A. B. Shetty,
Minister for Agriculture & Veterinary.

ವರ್ಷ ೩೦
ವಾರ ೫೦

NAVAYUGA
WEEKLY

UDIPI, S. K.
POST BOX NO. 22

Vol. 30
No 51



ಸ್ವರಾಜ್ಯದ ನಾಲ್ಕನೇ ವರುಷ ಮತ್ತು ನಾವು.

ಶ್ರೀಗೋಷ್ಠು, ೫೫, ಮಂಗಳವಾರ, ೧೯೫೦ರಲ್ಲಿ ಭಾರತ ಸ್ವರಾಜ್ಯಕ್ಕೆ ಮೂರು ವರುಷ ತುಂಬಿ ನಾಲ್ಕನೇ ವರುಷ ಹಿಡಿಯಿತು. ಮೂರು ಗಡಿದಾಟಿ ಈಚೆಕಡೆಗೆ ಹೆಜ್ಜೆಯಿಟ್ಟಿರುವ ಈ ಮಹೂರ್ತದಲ್ಲಿ, ಕಾಲೀಕನಕ ತುಳಿದು ಬಂದಿರುವ ಕ್ಷೇತ್ರದತ್ತ ಹಿಂದೊಮ್ಮೆ, ಇನ್ನು ತುಳಿಯಲಿರುವ ಹಾದಿಯ ಕಡೆಗೆ ಮುಂದೊಮ್ಮೆ ನೋಡಿ ಕೊಳ್ಳುವದು ಸ್ವತಂತ್ರ ಜನತಾ ರಾಜ್ಯ ಭಾರತದ ಪ್ರಜೆಗಳ ಕರ್ತವ್ಯ

ಸ್ವಾತಂತ್ರ್ಯದ ಜನನದೊಂದಿಗೆ ಜನಿಸಿದ್ದ ಎಲ್ಲಾ ವಿಧದ ಗೊಂದಲಗಳೂ ಶಾಂತವಾಗಿ, ಸರ್ವಸಮಸ್ಯೆಗಳೂ ತೀರ್ಮಾನ ಅಥವಾ ತಾತ್ಕಾಲಿಕ ಶಮನಗೊಂಡು ಮೂರನೇ ವರ್ಷಾಂತ್ಯದಲ್ಲಿ ಹೆಚ್ಚಿನಂಶ ಶಾಂತ ವಾತಾವರಣ ನಿರ್ಮಾಣಗೊಂಡಿದೆ, ಎಂಬುದು ಕೂಡಲೇ ಮನಸಿಗೆ ಬರಿಕೆಯಾಗುವ ಸಂಗತಿ.

ಆತಿ ಭೀಕರ ಜಾತೀಯ ಗೊಂದಲಗಳೆದ್ದಿದ್ದುವು; ಅವೀಗ ಇಲ್ಲ ಆರ್. ಯಸ್. ಯಸ್. ಚಳವಳಿ, ರಾಷ್ಟ್ರವ್ಯಾಪಿ ಮತ್ತು ಸ್ಥಳೀಯ ಮುಖ್ಯರಗಳ ಉಪಟಳ ಒಳಗಾಗಿದ್ದುವು, ಅಂತಹವೀಗ ಇಲ್ಲ. ಕಮ್ಯೂನಿಸ್ಟ್ ಹಾವಳಿ ಆರಂಭದಲ್ಲಿ ಬರಲಿರುವ ಸಂಭವ ಕಂಡು ಬರುತಿತ್ತು, ಈಗ ಅದು ನಿಯಂತ್ರಣ ಸಾಧ್ಯವನ್ನಾಸಿದೆ ಆಶ್ರಿತ ರಾಜ್ಯಗಳ ಸಮಸ್ಯೆ ಬಹಳ ದೊಡ್ಡದಿದ್ದಿತು; ಕೆಲವಂಶ ಕಣ್ಣಿಗಾಗಿರುವ ಕಾಶ್ಮೀರ ವಿವಾದವೊಂದನ್ನು ಬಿಟ್ಟರೆ ಮಿಕ್ಕವೆಲ್ಲವೂ ಈಗ ಪೂರ್ಣ ಬಗೆ ಹರಿದಿವೆ.

ಅಂತೂ ಸ್ವಾತಂತ್ರ್ಯದೊಂದಿಗೆ ಎದ್ದಿದ್ದ ತೊಡಕು, ಒಡಕುಗಳೆಲ್ಲವೂ ಮೂರು ವರುಷಗಳೊಳಗೆ ಮುಗಿದು ಹೋದುವು, ಮುಚ್ಚಲ್ಪಟ್ಟುವು ನೆಡುವಾಗಲೇ ಹುಳ ಹಿಡಿದಿದ್ದ ಮತ್ತು ಬೇಲಿಯಿರದಿದ್ದ ಸ್ವಾತಂತ್ರ್ಯ ಸಸಿ, ಮೂರು ವರುಷಗಳಲ್ಲಿ ಫಲ ಬಡದಿದ್ದರೂ ಹುಳನ ಬಾಧೆ ನಿವಾರಣೆಯಾಗಿ, ಭದ್ರ ಬೇಲಿಯೊಳಗಿದ್ದು ಬೆಳೆಯಹತ್ತಿದೆ. ಹುಟ್ಟುವಾಗಲೇ ಬಲವಾದ ಬಾಲಗ್ರಹ ಪೀಡೆ ತುಗಿದ್ದ ಸ್ವರಾಜ್ಯ ಶಿಶು ಈ ಮೂರು ವರುಷಗಳಲ್ಲಿ ಓಡಲಾರಂಭಿಸಿದ್ದರೂ ಬಾಧೆ ನಿವಾರಣೆಗೊಂಡು, ಹೆಜ್ಜೆಯಿಡಲಾರಂಭಿಸಿದೆ ಸಮಾಧಾನಕರ.

ಆಗಿರುವುದಿಷ್ಟಾದರೆ, ಆಗಲು ಉಳಿದಿರುವುದು ಇನ್ನೆಷ್ಟೋ ಆಹಾರಾಭಾವ ನಿವಾರಣೆ ಮತ್ತು ಜೀವನ ವೆಚ್ಚದ ಇಳಿತ ಸ್ಪೆಷ್ಟಾವಶ್ಯತೆಗಳು. ಆರ್ಥಿಕ, ಸಾಮಾಜಿಕ ಸಮಾನತೆಗಳ ಸದಂಶಾಲಕ್ಕಾಗಿ ಸಾಧಿಸಲ್ಪಡಬೇಕಾದವುಗಳು

ಸ್ಪೆಷ್ಟಾವಶ್ಯತೆಗಳ ಮಟ್ಟಿಗೆ 1951ರೊಳಗೆಗೆ ಆಹಾರ ಸ್ವಾವಲಂಬನೆಯೆಂಬ ಗುರಿಯಿಟ್ಟುಕೊಂಡು ಅಧಿತೀವ್ರೋತ್ಪನ್ನ ಮತ್ತು ಧಾರಣೀ ನಿಯಂತ್ರಣದ ತ್ವರ್ಯ ಪ್ರಯತ್ನಗಳಾಗುತ್ತಿವೆ ಶಾಶ್ವತ ವ್ಯವಸ್ಥೆಗಳಮಟ್ಟಿಗೆ ಸದೃದವಾದ ಹಾಗೂ ದೂರದೃಷ್ಟಿಯ ಸಾಹಸಗಳೇ ನಡೆಯಬೇಕಾಗಿರುವದರಿಂದ, ತದನುಗುಣವಾದ ಸಾವಧಾನತೆ ಕಂಡುಬರುವುದು ಅಕ್ಷಮ್ಯವಲ್ಲ

ನಾವು ಹಿಂದೆ ಹಾಕಿ ಬಂದುದು ಮೂರೇ ವರುಷಗಳನ್ನು; ನಮ್ಮ ಮುಂದಿರುವುದು ನೂರಾರು ವರುಷ. ಚಿರಕಾಲದ ಭವ್ಯ ಭವಿಷ್ಯ ಕಟ್ಟಡವೇರಿಸುವವರು, ಅದರ ಆಸ್ತಿವಾರ ಭದ್ರತೆಗಾಗಿ ಮೂರು ವರುಷಗಳನ್ನು ಹೂಳಿಕೊಂಡುದು ತಪ್ಪಲ್ಲ ನೂರಾರು ಮಟಿಗಳ ಮಹಾಚರಿತ್ರೆ ಬರೆಯಲಿಕ್ಕಿರುವವರು ಅದರ ಪೀಠಿಕೆಗೆ ಮೂರು ಪುಟಗಳನ್ನು ಕೊಟ್ಟಬದು ಹೆಚ್ಚಲ್ಲ.

ಒಟ್ಟಿನ ಮೇಲೆ ಕಳದ ಮೂರು ವರುಷಗಳಲ್ಲಾಗಿರುವ ಪ್ರಗತಿ ಸಮಾಧಾನಕರ. ನಮ್ಮ ಮತಲಬನ್ನು ನಾವು ನೋಡಿಕೊಳ್ಳಬಲ್ಲೆವು, ನಾವು ಆಳಬಲ್ಲೆವು, ಎಂಬುದನ್ನು ಈ ಮೂರು ವರುಷಗಳಲ್ಲಿ ನಾವು ಸಿದ್ಧ ಮಾಡಿ ತೋರಿಸಿದ್ದೇವೆ ಗಂಡಾಂತರದ ಮೂಟೆಯೊಳಗೆ ಕಟ್ಟಿಕೊಟ್ಟ ಸ್ವರಾಜ್ಯವು ಅನ್ನಸುಭವೀ ಭಾರತೀಯರ ಪಾಲಿಗೆ, ಮಗುವಿನ ತಲೆಯ ಮೇಲೆ ಹೇರಿದ ಮಣ ಭಾರದಂತಾಗುವದೆಂದು, ಆ ಹೊರೆಯಿಳಿಸಿದ ಬ್ರಿಟಿಷರಿಂದಾರಂಭಿಸಿ ಪ್ರಾಯಶಃ ಹೆಚ್ಚಿನ ಎಲ್ಲರಲ್ಲೂ ಇದ್ದಂಸಿ ರೀಕ್ಷೆಯನ್ನು ನಾವು ಹುಸಿಗೊಳಿಸಿದೆವು.

ಹೌದು, ನಾವು! ಸ್ವತಂತ್ರ ಜನರಾಜ್ಯ ಕರ. ನಮ್ಮ ಮತಲಬನ್ನು ನಾವು ನೋಡಿಕೊಳ್ಳಬಲ್ಲೆವು, ನಾವು ಆಳಬಲ್ಲೆವು, ಎಂಬುದನ್ನು ಈ ಮೂರು ವರುಷಗಳಲ್ಲಿ ನಾವು ಸಿದ್ಧ ಮಾಡಿ ತೋರಿಸಿದ್ದೇವೆ ಗಂಡಾಂತರದ ಮೂಟೆಯೊಳಗೆ ಕಟ್ಟಿಕೊಟ್ಟ ಸ್ವರಾಜ್ಯವು ಅನ್ನಸುಭವೀ ಭಾರತೀಯರ ಪಾಲಿಗೆ, ಮಗುವಿನ ತಲೆಯ ಮೇಲೆ ಹೇರಿದ ಮಣ ಭಾರದಂತಾಗುವದೆಂದು, ಆ ಹೊರೆಯಿಳಿಸಿದ ಬ್ರಿಟಿಷರಿಂದಾರಂಭಿಸಿ ಪ್ರಾಯಶಃ ಹೆಚ್ಚಿನ ಎಲ್ಲರಲ್ಲೂ ಇದ್ದಂಸಿ ರೀಕ್ಷೆಯನ್ನು ನಾವು ಹುಸಿಗೊಳಿಸಿದೆವು.

ಹೌದು, ನಾವು! ಸ್ವತಂತ್ರ ಜನರಾಜ್ಯ ಭಾರತವು ಸರ್ವರ ಸಮಬಾಲಿನ ಹಕ್ಕು ಬಾಧ್ಯತೆಗಳದ್ದಿರುವುದರಿಂದ, ಈ ರಾಜ್ಯದ ಆಗುಹೋಗುಗಳೆಲ್ಲವೂ ನಮ್ಮವು. ಜಾತಿ, ಧರ್ಮ, ವರ್ಗ, ಲಿಂಗ ಭೇದವಾವುದೂ ಇರಕೂಡದೆಂದಿರುವ ಈ ಭಾರತದಲ್ಲಿರಾಜ್ಯ ಭಾರಮಾಡುವ ನಾಯಕರು ಮತ್ತು ಮಾಡಿಸುವ ಜನತೆಯೆಂಬ ಸ್ಥಿತಿ ನೃತ್ಯಾಸವೊಂದೇ ಇರಬೇಕು. ಇರುವ ಈ ವರ್ಗಗಳಪೈಕೆ ಯಾವುದು ತನ್ನ ಪಾಲಿನ ಕರ್ತವ್ಯವನ್ನು ನಾಜೂಕಾಗಿ ನಿರ್ವಹಿಸಿದೆ?

ಜನತೆಯೆನೋ ನಾಯಕರನ್ನು ದೂರು ತ್ತಿರಬಹುದು. ಆದರೆ ಅಮೂಲಾಗ್ರವಾಗಿ ಮತ್ತು ಎಲ್ಲಕ್ಕೂ ನಾಯಕರನ್ನೇ ದೂಷಿಸುವುದಾದರೆ, ಜನತಾ ರಾಜ್ಯವೆ ಜನತೆಯದೆಂಬುದನ್ನು ಜನತೆಯೇ ಅಲ್ಲಗಳೆದಂತಾಗುವುದು; ಅದು ಕೆಲ ಮಂದಿ ನಾಯಕರದೆಂಬುದನ್ನು ಜನತೆಯೇ ಒಪ್ಪಿಕೊಂಡಂತಾಗುವುದು.

ದೂಷಣೆಗಳಂತಹವಿದ್ದರೂ ಹೃದಯತಃ ಇಂದಿನ ನಾಯಕ್ವದ ಕಡೆಗೆ ವಿಶ್ವಾಸವಿಟ್ಟಿರುವುದೊಂದೇ ಸ್ವಾತಂತ್ರ್ಯದ ಸಾರ್ಥಕತೆಯ ಮಟ್ಟಿಗೆ ಜನತೆಯೆಂದಾಗಿರುವ ಕಾರ್ಯಾಂಶವೆನ್ನಬೇಕು ಮಿಕ್ಕ ಅಂಶಗಳು ಸ್ವತಃ ನಾಯಕರಿಂದಲೇ ತುಂಬಿ ಒಂದುವು.

ಸ್ವರಾಜ್ಯಾಧಿಕಾರದಲ್ಲಿ ನಾಯಕರು ಪ್ರದರ್ಶಿಸಿದಂತಹ ಯೋಗ್ಯತೆಯನ್ನು ಜನತೆಯೂ ಪ್ರದರ್ಶಿಸುತಿದ್ದರೆ, ಇಂದಿನಂತೆ ನಾವು 'ಆಳಬಲ್ಲೆವು' ಎಂಬುದನ್ನು ಮಾತ್ರವಲ್ಲ-ಲೋಕಕ್ಕೆ ನಾವು 'ಆದರ್ಶವಾಗಬಲ್ಲೆವು' ಎಂಬುದನ್ನೂ ಇಷ್ಟರಲ್ಲಿಯೇ ತೋರಿಸಬಹುದಿದ್ದಿತು. ಯಾಕೆ, ಈಡೆ ಕೂಡಾ ಟ್ರುಮೇನ್ ಸ್ಟಾಲಿನರಿಗೆ ಬುದ್ಧಿ ಹೇಳುವಂತಹ ಯೋಗ್ಯತೆಯು ಖಂಡಿತ ನೆಹರುಗಳದಾಗಿಲ್ಲವೆ? ಆದೇ ರೀತಿ ಸ್ವತಂತ್ರ ಭಾರತೀಯರು, ಸ್ವತಂತ್ರ ರಾಷ್ಟ್ರಗಳ ಜನತೆಗೆ ಆದರ್ಶವಾಗುವಂತೆ ನಡೆದುಕೊಂಡುದಿಲ್ಲೆ?

ಸ್ವರಾಜ್ಯಾನಂತರ ಮಾತ್ರವಲ್ಲ; ಸ್ವರಾಜ್ಯ ಸಾಧನೆಯಲ್ಲಾದರೂ ನಾಯಕರು ಮುಂದೆ ಹೋದುದಕ್ಕನುಗುಣವಾಗಿ ಜನತೆ ಮುಂದೆ ಹೋದದ್ದಿಲ್ಲವೆಂಬ ಸ್ಮರಣೆಯೀಗ ಬರುತ್ತಿದೆ. ಸ್ವರಾಜ್ಯಾಡಳಿತ

ಆದ್ದರಿಂದ ನಾಲ್ಕನೇ ಆಗೋಸ್ತು 15ರ ಒತ್ತಿನ ದಿವಸಗಳಲ್ಲಿ ಪ್ರತಿಯೊಬ್ಬನೂ ತನ್ನಲ್ಲಿರುವ ದೋಷ, ದೌರ್ಬಲ್ಯಗಳನ್ನು ನಿವಾರಿಸಿಕೊಂಡು ಸ್ವತಂತ್ರ ಜನತಾರಾಜ್ಯ ಭಾರತದ ಯೋಗ್ಯ ಪ್ರಜೆಯಾಗುವೆನೆಂದು ಶಪಥ ತೊಡಲಿ.

॥ ಜೈ ಹಿಂದ್ ॥

ನಾಸಿಕ್ ಕಾಂಗ್ರೆಸಿನ ಅಧ್ಯಕ್ಷ ಗಾದಿ-

ಪ್ರಸಿದ್ಧ ಜೊತ್ಪ್ರ ನಾಸಿಕ್ ದಲ್ಲಿ ಸೆಪ್ಟೆಂಬರ್ 12ನೆ ತಾರೀಖಿನ ಕಾಂಗ್ರೆಸ್ ಮಹಾಸಮಿತಿಯ ಅಧ್ಯಕ್ಷಸ್ಥಾನ ರು ಎಂಬ ಪ್ರಶ್ನೆಯೀಗ ಎದ್ದಿದೆ. ನಿಶ್ಚಯವಾಗಿ ಯಾವ ಹೆಸರನ್ನೂ ಹೇಳಲಿಕ್ಕಾಗದ ಸ್ಥಿತಿಯೇ ಉಳಿದುಕೊಂಡಿದೆ. ಅಧ್ಯಕ್ಷ ಸ್ಥಾನಕ್ಕೆ ನಾಮ ಪತ್ರ ದಾಖಲ್ಮಾಡುವ ಕೊನೆಯ ತಾರೀಕು ಆಗೋಸ್ಟು 8 ನಾಮ ಪತ್ರಗಳನ್ನು ಹಿಂದೆಗೆಯುವ ಕೊನೆಯ ಅವಧಿ ಆಗೋಸ್ಟು 18 ಸ್ಪರ್ಧೆಯಿದ್ದಲ್ಲಿ ಚುನಾವಣಾ ದಿನ ಆಗೋಸ್ಟು 26. ಈ ವರೆಗೆ ಏಳು ಹೆಸರುಗಳು ಸೂಚಿಸಲ್ಪಟ್ಟಿದ್ದು, ಆ ಪೈಕಿ ಯಾವುದರ ಸಂದರ್ಭ ಹೆಚ್ಚಿಗೆ, ಎಂದು ಊಹಿಸಲಿಕ್ಕಾಗದ ಒಂದು ವಿಲಕ್ಷಣ ಗಲಿಬಿಲಿ ವಾತಾವರಣವೇ ಈಗ ವ್ಯಾಪಿಸಿಕೊಂಡಿದೆ. ಸ್ಪರ್ಧೆಯಿಲ್ಲದೆ ಅಧ್ಯಕ್ಷನ ಆರಿಸುವಿಕೆಯಾಗಬೇಕೆಂದು ಕಾಂಗ್ರೆಸ್ ಅಧಿನಾಯಕರ ಪ್ರಯತ್ನವಿರುವುದರಿಂದ ಇದೇ ತಾ. 18ರಲ್ಲಿ ಒಂದೇ ಒಂದು ಹೆಸರು ಉಳಿದುಕೊಳ್ಳಬಹುದೆಂಬ ನಿರೀಕ್ಷೆಯಿದೆ. ಒಂದೊಮ್ಮೆಗೆ ಆಗಲೂ ಒಂದಕ್ಕಿಂತ ಹೆಚ್ಚು ಹೆಸರುಗಳು ಉಳಿದುಕೊಂಡರೂ, ಸಂಪ್ರದಾಯ ಪ್ರಕಾರ ಕಾಂಗ್ರೆಸ್ ಅಧಿನಾಯಕರ ಮೆಚ್ಚುಗೆಯ ಅಭ್ಯರ್ಥಿಯೇ ಗೆದ್ದು ಬರುವುದು ಸಂಭವನೀಯ.

ಏಳು ಹೆಸರುಗಳು

ಆಗೋಸ್ಟು 8ರ ವರೆಗೆ ಅ. ಭಾ. ಕಾಂಗ್ರೆಸಿನ ಮುಖ್ಯ ಕಚೇರಿಗೆ ಮ.ಟ್ಟಿರುವ ನಾಮ ಪತ್ರಗಳು

1 ಪಂಡಿತ ಜವಾಹರಲಾಲ ನೆಹರು—ಸೂಚಕರು: ಉತ್ತರ ಪ್ರದೇಶದ ಅ. ಭಾ. ಕಾಂ ಸಮಿತಿ ಸದಸ್ಯರು.

2. ಶ್ರೀ. ಶಂಕರ ರಾವ್ ದೇವೋ—ಸೂಚಕರು: ಧಿಲ್ಲಿ, ಮಹಾರಾಷ್ಟ್ರ ಮತ್ತು ಕೇರಳದ ಸದಸ್ಯರು.

3. ಆಚಾರ್ಯ ಜೆ. ಬಿ. ಕೃಪಲಾನಿ—ಸೂಚಕರು: ಉತ್ತರ ಪ್ರದೇಶ ಮತ್ತು ಧಿಲ್ಲಿಯ ಸದಸ್ಯರು.

4. ಶ್ರೀ. ಪುರುಷೋತ್ತಮದಾಸ ಥಂಡನ್—ಸೂಚಕರು ಉತ್ತರ ಪ್ರದೇಶದ ಸದಸ್ಯರು.

5. ಪ್ರೊಫೆಸರ್ ಎನ್. ಜಿ. ರಂಗ—ಸೂಚಕರು: ಪಂಜಾಬ್ ಸದಸ್ಯರು.

6. ಸೇಟ್ ಗೋವಿಂದ ದಾಸ್—ಸೂಚಕರ : ಮಹಾ ಕೋಸಲದ ಸದಸ್ಯರು.

7. ಶ್ರೀ ಯಸ್. ಕೆ. ಪಾಟೀಲ್—ಸೂಚಕರು: ಬೊಂಬಾಯಿ ಸದಸ್ಯರು.

ಕಾಂಗ್ರೆಸ್ ಅಧ್ಯಕ್ಷೆ ಚುನಾವಣೆಯ ಮತದಾರ ವರ್ಗವಾಗಿರುವ ಅ. ಭಾ. ಕಾಂ. ಸಮಿತಿ ಸದಸ್ಯರಿಂದ ನಾಮ ಪತ್ರ ಸಮೂಹದಲ್ಲಿ ಹೊಂದಿರುವ ಮೇಲಿನ ಏಳು ಮಂದಿಯಲ್ಲದೆ, ಶ್ರೀ ಸಿ. ರಾಜಗೋಪಾಲಾಚಾರ್ಯರು ಈ ಸ್ಥಾನ ಸ್ವೀಕಾರಕ್ಕಾಗಿ ಪಂಡಿತ ನೆಹರುಗಳಿಂದ ಆಹ್ವಾನಿಸಲ್ಪಟ್ಟಿದ್ದರೆಂದು ತಿಳಿದುಬಂದಿದೆ. ಒಟ್ಟಿನ ಮೇಲೆ ಈ ಬಾರಿಯ ಅಧ್ಯಕ್ಷ ಚುನಾವಣೆಯು ಒಂದು ಮುಖ್ಯವಿಶೇಷವೆನ್ನಿಸಿದೆ.

ಪಂಡಿತ ನೆಹರು

ಸಚ್ಚಿತ ಉಮೇದ್ವಾರಿಗಳ ಪೈಕಿ ಪಂಡಿತ ನೆಹರುಗಳು ಅಧ್ಯಕ್ಷಸ್ಥಾನ ಸ್ವೀಕರಿಸಲೊಪ್ಪುವುದಾದಲ್ಲಿ ಮಿಕ್ಕ ಆರು ಹೆಸರುಗಳೂ ಹಿಂಪಡೆಯಲ್ಪಡುವಸಂಭವ ವಿರುವಾದ ಸ್ವತಂತ್ರ ಭಾರತದ ಆಧ್ಯವಾ ಕಾಂಗ್ರೆಸಿನ ಯಾವ ಆಗ್ರಗಣ್ಯ ಸ್ಥಾನವಾದರೂ ನೆಹರುವಿಗೆ ಅಸಾಧ್ಯವಾಗಿ ಇನ್ನೊಬ್ಬರಿಗೆ ಹೋಗಬೇಕೇ ವಿನಹ ನೆಹರುವಿಗಿದಿರಾಗಿ ಅಲ್ಲ. ಕಾಂಗ್ರೆಸ್ ಸರಕಾರ ಮತ್ತು ಸಂಸ್ಥೆಯ ನಡುವೆ ತೀಕ್ಷ್ಣ ಭಿನ್ನಾಭಿಪ್ರಾಯಗಳು ಬಂದಿರುವ ಸಂದರ್ಭಗಳಿರುವುದರಿಂದ, ಅವೆರಡರೊಳಗೆ ಏಕಮುಖ ಏಕಧೋರಣೆ ನಿರ್ಮಾಣಗೊಳ್ಳಬೇಕಾದರೆ ಸರಕಾರೀ ನಾಯಕನಾಗಿರುವವನೇ ಸಂಸ್ಥೆಯ ಅಧ್ಯಕ್ಷನಾಗಿಯೂ ಇರುವುದು ಅಗತ್ಯ. ಆದ್ದರಿಂದ ಪ್ರಧಾನ ಮಂತ್ರಿ ಪಂಡಿತ ಜೀ ಅಧ್ಯಕ್ಷನಾಗಿರುವದು ಜನತೆಯು ವಿಶ್ವಾಸಕ್ಕೂ ಭಾವೀ ಕಾರ್ಯಕ್ಕೂ ಅನುಕೂಲ.ಆದರೆ ಇಂದಿನ ಅಧಿಕಾರಜಾಲನಕಾರ್ಯಗಳೇ ಅಸಹ್ಯ ಹೊರೆಯಾಗಿ ಬಳಲುತ್ತಿರುವ ಪಂಡಿತ ನೆಹರುಗಳು ಕಾಂಗ್ರೆಸ್ ಅಧ್ಯಕ್ಷತನದ ಜವಾಬ್ದಾರಿಯನ್ನೂ ಹೊತ್ತುಕೊಳ್ಳಲು ಸಿದ್ಧರಿಲ್ಲವೆಂದು ತಿಳಿದುಬಂದಿದೆ. ಸರಕಾರೀ ಸ್ಥಾನ ಬಿಟ್ಟು, ಸಂಸ್ಥೆಯ ಸೀಕ್ಕೆ ಬನ್ನಿ, ಎಂದು ನೆಹರುಗಳನ್ನು ಆಹ್ವಾನಿಸಲು ರಾಷ್ಟ್ರವೀಗ ತಯಾರಿಲ್ಲ. ಆದರೆ ಸ್ವತಂತ್ರ ಭಾರತದ ಆಡಳಿತೆಯಲ್ಲಿ ಸರಕಾರೀ ನಾಯಕತ್ವ ಮತ್ತು ಕಾಂಗ್ರೆಸ್ ನಾಯಕತ್ವಗಳ ನಡುವೆ ಒಳ ಘರ್ಷಣೆ ಬಂದ ಕಟು ಅನುಭವವು ಪಂಡಿತ ನೆಹರುಗಳಿಗಿದೆ. ಮತ್ತದು ಬಾಯಿ ಬಿಡಲಾಗದ ಒಳಸ್ಥಿತಿವಿದ್ದು ಯಾತನೆ ಮತ್ತು ಒಳಕುದಿಯೆರಡನ್ನು ನಿರ್ಮಿಸುವಂತಹದಿರುವುದರಿಂದ ತಾವಲ್ಲ ವಾದರೂ ತಮಗನುಕೂಲ ವಾದೀ ವ್ಯವಸ್ಥೆಯನ್ನು ಕಾಂಗ್ರೆಸ್ ಅಧ್ಯಕ್ಷನಾಗಿರಬೇಕೆಂದು ಆಸೆ ಪಂಡಿತ ನೆಹರುಗಳಿಗಿದೆ. ಆದ್ದರಿಂದಲೇ ಅವರು ರಾಜಾಜಿಯನ್ನು ಈ ಸ್ಥಾನದ ಅಂಗೀಕಾರಕ್ಕಾಗಿ ಒತ್ತಾಯಿಸಿದ್ದರೆಂದು ತಿಳಿದುಬರುತ್ತದೆ. ಆದರೆ ಆಚಾರ್ಯರು ಆ ಹೊರೆಹೊರಲು ಹಿಂಜರಿಯುತ್ತಾರಂತೆ.

ಶ್ರೀ. ದೇವೋ

ಶ್ರೀ ಶಂಕರರಾವ ದೇವೋ ಕೆಲವು ವರುಷಗಳಿಂದ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಕೆಲಸಮಾಡುತ್ತಾ ಬಂದಿರುವವರು. ಅವರ ಸೇವಾ ದಾಖಲೆ ಮತ್ತು ಬುದ್ಧಿ ಶಕ್ತಿ, ಹೆಚ್ಚಿನದು. ಆದರೆ ಈ ಅವಧಿಯ ಮಟ್ಟಿಗೆ ಅಖಿಲ ರಾಷ್ಟ್ರದ ಸರ್ವ ಪ್ರಥಮ ಗೌರವಕ್ಕರ್ಹವಾಗುವ ಘನವ್ಯಕ್ತಿತ್ವವು ದ್ದುತೋರುವ ಪ್ರಭಾವ ದೇವೋರಲ್ಲಿಲ್ಲ. ಹೀಗಾಗಿ ಕೆಲವು ವರ್ಷಗಳಿಂದ ಕ್ಷೀಣಸ್ವರ ಅಧಃ ಅರ್ಧಸ್ವರದಿಂದ ಅಧ್ಯಕ್ಷಗಾದಿಗೆಶಂಕರರಾವ್ ದೇವೋರ ಹೆಸರು ಕೇಳಿಬರುತ್ತಿಲ್ಲವೇ ಇದೆ. ಆದರೂ ಯಾವ ಭಾರಿಯೂ ಅದು ಮಿಕ್ಕೆಲ್ಲವನ್ನೂ ಹಿಂದೆ ಹಾಕಿ ಮುಂದೆ ಬಂದುದಾಗಲೀ ಸ್ವತ್ಯಪ್ಪ ಸ್ಪರ್ಧೆಗೆ ಬಿದ್ದುದಾಗಲೀ ಇಲ್ಲ ಈ ವರುಷವೇ ಅದು ತುಸು ಗಟ್ಟಿ ಸ್ವರದಿಂದ ಕೇಳಿ ಬಂದುದು. ಆದರೂ ಮಿಕ್ಕ ಪ್ರಬಲಸ್ಪರ್ಧಿಗಳ ನಡುವೆ, ಇವರು ಈ ಬಾರಿಯೂ ಅಷ್ಟೊಂದು ಮುಂಭಾಗದಲ್ಲಿ ಕಾಣಿಸುತ್ತಿಲ್ಲ. ಕಾಂಗ್ರೆಸ್ ಕಾರ್ಯದರ್ಶಿ ಪದವಿಯ ಸ್ಪರ್ಶಕ್ಕಿಂತ ಹೆಚ್ಚಿನ ಕೀರ್ತಿಯನ್ನೇನೂ ಇವರು ಗಳಿಸದಿರುವುದು ಇದಕ್ಕೊಂದು ಕಾರಣವಾಗಿರಬಹುದು.; ಈಗ ಕೆಳಮಟ್ಟಕ್ಕೆಳಿದಿದೆ, ಎಂದು ಖಚಿತವಾಗಿರುವ ಕಾಂಗ್ರೆಸಿನ ಪ್ರಜಾಲಿತ ಸ್ಥಿತಿಯನ್ನು ಎತ್ತಿ ಹಿಡಿಯುವ ಕಾರ್ಯದರ್ಶಿ ಸ್ಥಾನದಲ್ಲಿ ಅವರಿರುವುದು ಮತ್ತೊಂದು ಕಾರಣವಾಗಿರಬಹುದು. ಶ್ರೀ. ದೇವೋ ಅಧ್ಯಕ್ಷವಾದಲ್ಲಿ ನಾವು ಹೊಸ ಕೇನನ್ನೂ ನೀರೀಕ್ಷಿಸಲಿಗುವದಿಲ್ಲ; ಕಾಂಗ್ರೆಸಿನಲ್ಲಿ ನವಜೀವನ ತೋರಿ ಬರಬೇಕಾದುದು ಈ ಕಾಲದಲ್ಲಿ ಅಗತ್ಯವಾದುದೆಂದ ಶ್ರೀ ದೇವೋರಿಗೆ ಅಧ್ಯಕ್ಷ ಗಾದಿಯ ಸುಯೋಗವಿರುವಂತೆ ತೋರುವುದಿಲ್ಲ.

ಆಚಾರ್ಯ ಕೃಪಲಾನಿ

ನೇಮಿತ ಉಮೇದ್ವಾರಿಗಳ ಪೈಕಿ, ಪೈ ಶಿಷ್ಟ್ಯವೆದ್ದು ತೋರುವ ಒಬ್ಬಬ್ಬರಲ್ಲಿ ಆಚಾರ್ಯ ಜೆ. ಬಿ ಕೃಪಲಾನಿಯೊಬ್ಬರು. ಸ್ವರಾಜ್ಯಾಪೇಕ್ಷೆಯ ಅದಿ ಭಾಗದಲ್ಲಿ ಕಾಂಗ್ರೆಸ್ ಅಧ್ಯಕ್ಷತನ ಇವರದಾಗಿದ್ದಿತು. ಆದರೆ ಅಧಿಕಾರ ಚಾಲಕ ಕಾಂಗ್ರೆಸ್ ನಾಯಕರ ವರ್ತನೆ ಸರಿ ಬೀಳದ ದೆಸೆಯಿಂದ ಪದಲೇ ಆಚಾರ್ಯರು ಆದಕ್ಕರ್ಧದಲ್ಲೇ ರಾಜೀನಾಮೆ ಯಿತ್ತಿದ್ದರು. ಕೃಪಲಾನಿಗಳ ಧೋರಣೆಯೆಂತಹದೇ ಎಂದು ತೋರಿಸೋಣವೆಂದರಾಗುವದಿಲ್ಲ; ಆದರೆ ತಪ್ಪುಗಳನ್ನು ಕೋರಿಸಿ ಕೊಡುವ ಮಟ್ಟಿಗೆ, ಅವರೆಂದೂ ತಪ್ಪಿ ಬಿದ್ದುದಿಲ್ಲ. ಕಾಂಗ್ರೆಸ್ ಅಧಿನಾಯಕರೊಂದಿಗೆ ಮತಭೇದ ಒಂದು, ಅವನು ಇದ್ದಲ್ಲಿಂದ ಒಂದು ಅಂತಸ್ಸು ಕೆಳಗಳಿಯಬೇಕಾಗಿ ಬಂದರೂ, ಅಂತಹ ಸಂದರ್ಭಗಳಲ್ಲಿ ಮಿಕ್ಕವರು ಗಲಿಬಿಲಿಗೊಂಡಂತೆ ಆಚಾರ್ಯ ಕೃಪಲಾನಿಗೊಂದಲದಲ್ಲಿ ಬಿದ್ದುದಿಲ್ಲ. ತಾನು ಹಿಂದೆದೂರ, ನಿಲ್ಲಬೇಕಾಗಿ ಬಂದಾಗಲೂ,ಸ್ವಸ್ಥ ನಿಶ್ಚಿತತಾ ಭಾವನೆಯಿಂದ ಉರಿಳಾಡುವ ಬದಲು, ಆಜೇಯ ಆತ್ಮವಿಶ್ವಾಸವನ್ನೇ ಕಟ್ಟಿಕೊಂಡು ಸಂದರ್ಭ ನೋಡಿ ನಾಯತ್ವದ ಕಡೆಗೆ ನಂಜುಕಾರುವ ಯೋಗ್ಯತೆ ಕೃಪಲಾನಿಗಳಲ್ಲಿದೆ. ಆಚಾರ್ಯ ಕೃಪಲಾನಿಗಳ ಅಧ್ಯಕ್ಷತೆಯು ಸರಕಾರದ ಮತ್ತು ಕಾಂಗ್ರೆಸಿನ ಅಧಿನಾಯಕರಾಗಿರುವವರಿಗೆ ಒಗ್ಗಲಾರದೆಂದು ಊಹಿಸಬಹುದು. ಕೃಪಲಾನಿಗಳ ಟೀಕಾಸ್ತ್ರ ಅತ್ಯಂತ ಹರಿತವಾದುದು; ಎರಡು ಬಾಯಿಗಳುಳ್ಳದ್ದು. ಈಗಿನ ಅಧ್ಯಕ್ಷ ಡಾ ಪಟ್ಟಾಭಿಗಳ ಮರ್ಜಿ ಕೂಡಾ ಅಧಿನಾಯಕವರ್ಗಕ್ಕೆ ಪೂರ್ಣಾಸಮ್ಮತವಾಗಿರಲು ಕಾರಣವಿಲ್ಲ ಆದರೆ ಸ್ವಹಿತಕಾರಿ ವ್ಯವಹಾರಾ ಜಾಣೆಯೇ ಮುಖ್ಯಗುಣವಾಗಿರುವ ಡಾ ಪಟ್ಟಾಭಿಗಳು 'ಗಟ್ಟನ್ನ' ಉಳಿಸಿಕೊಳ್ಳಲು ತನ್ನನ್ನು ತಾನೇ ಒತ್ತೆಟ್ಟು ಕೊಳ್ಳಬಲ್ಲರು. ಆಚಾರ್ಯ ಕೃಪಲಾನಿಗಳಿಂದ ಅದಾಗದು ತನ್ನಾತ್ಮವನ್ನು ತಾನೇ ವಂಚಿಸಿಕೊಂಡು, ಗಳಿಸುವಂತಹದಾವುದೂ ಇವರೆಗೆ ಬೀಕಾಗಿಲ್ಲ. ತನ್ನ ಧೋರಣೆಗಿಂತ ಅಧಿಕವಾಗಿ, ಆಮು ಯಾವ ವ್ಯಕ್ತಿಯನ್ನೂ ಅಂಧಾಧಿಸಲು ತಯಾರಿಲ್ಲ. ಅದರಿಲ್ಲಿ ಅವರ ಧೋರಣೆಯ ನೀಟೀಕಾರವಾವುದೂ ತೋರಿಬಾರದೆ,ಅಲ್ಲಲ್ಲಿ ಅದು ಸಂದು ಕಡಿದು ಕೋದಂತಿದುವುದೇ ಕೃಪಲಾನಿಗಳ ಸ್ವಭಾವವಿಶೇಷ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಆಶ್ಚರ್ಯ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ವಿಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನತಾಂಗದ ಶ್ರೀಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಆಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ತಮ್ಮವ್ಯವ್ಯಧ ವಿಶ್ವಾಸಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ 1906

ಭಾರತದೊಳಗೆ 40 ಕ್ಕಂತಲೂ ಹೆಚ್ಚು ಶಾಖೆಗಳು

Wanted

One T. T. C. Sec. Grade Teacher to work as Headmaster in the newly opened Higher Ele. School Salary and Dearness allowance as per District Board Scale.

apply to

The manager,

aided Higher Ele. School

P. O. Yelluru, S. K

Station:- Yelluru

Date:- 9—8—50

ನಾಯಕರೊಳಗೆ ನಡೆದಿರುವ ಸ್ಪರ್ಧೆ

ಮಂದಟ್ಟಾಗದಿರಲು ಕಾರಣ, ಇಂತಹ ವ್ಯಕ್ತಿ–ಕಾಂಗ್ರೆಸ್ ಅಧಿನಾಯಕರ ಧೋರಣೆ ಸರಿಬೀಳದ ನಾಯಕ–ಹೋದ ಬಾರಿ ತನ್ನ ರಾಜೀನಾಮೆಗೆ ಹೇತುವಾದ ಕಾರಣಗಳು ಇನ್ನಷ್ಟು ಒಲಿತು ಈಗಲೂ ಉಳಿದಿದ್ದರೂ ಕೂಡಾ—ಈ ಬಾರಿ ಪುನಃ ಉಮೇದ್ವಾರನಾಗಿರುವುದು ತುಸು ವಿಶೇಷವಾಗಿ ಕಾಣುತ್ತಿದೆ. ಪ್ರಾಯಶಃ ಇದೇ ತಾ. 18ರೊಳಗೆ ಉಮೇದ್ವಾರಿಕೆ ಹಿಂತೆಗೆಯುವವರಲ್ಲಿ ಆಚಾರ್ಯ ಕೃಪಲಾನಿಗಳು ಮೊದಲಿಗರಾಗುತ್ತಾರೆ. ಇಲ್ಲವೇ, ಆವರ ಚೀಟು ಮೇಲೆ ಬೀಳುವ ಸಂಭವವಿಂಬೇಕು.

ಶ್ರೀ ಧಂಡನ್

ಶ್ರೀ ಪುರುಷೋತ್ತಮದಾಸ ಧಂಡನರು ವಿಶಿಷ್ಟ ವ್ಯಕ್ತಿತ್ವವುಳ್ಳ ಮತ್ತೊಬ್ಬ ಹುರಿಯಾಳು. ಉತ್ತರ ಪ್ರದೇಶದ ಎಸೆಂಬ್ಲಿ ಅಧ್ಯಕ್ಷನಾಗಿದ್ದ ಇವರು ತನ್ನಾ ಪದವಿಗೆ ರಾಜಿನಾಮೆಯೊಪ್ಪಿಸಿ, ಇದೇ ತಾ.11 ರಿಂದ್ದನಿವೃತ್ತಿಗೊಂಡಿದ್ದಾರೆ. ಕಳದ ಬಾರಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಡಾ।ಪಟ್ಟಾಭಿಗೊಡನೆ ಸ್ಪರ್ಧಿಸಿದವರಿವರು. ಅಸ್ಪರ್ಧೆಯಲ್ಲಿ ಗೆಲ್ಲುವಷ್ಟು ಬಹುಮತವನ್ನಿವರು ಪಡೆಯದೆ ಹೋದರೂ ದೇಶವಿವರ ಕಡೆಗಿಟ್ಟರುವ ಗೌರವವನ್ನು ಸೂಚಿಸುವಷ್ಟು ಬೆಂಬಲ ದೊರೆತ್ತಿದ್ದಿತು. ಆಚಾರ್ಯ ಕೃಪಲಾನಿಗಳು, ಕಾಂಗ್ರೆಸ್ ಸಂಸ್ಥೆಯ ನಿಶ್ಚಿತ ಧೋರಣೆ ಮತ್ತು ಕಾಂಗ್ರೆಸ್ ನಾಯಕರ ಪ್ರಜಲಿತ ವರ್ತನೆಗಳೊಳಗಿರುವ ಅಂತರದ ಕುರಿತೇ ಉಗ್ರ ಟೀಕೆ ಮಾಡುವವರ; ಅವರ ತೀಕ್ಷ್ಣ ದೃಷ್ಟಿಯು ಕಚ್ಚಾಗಿ ಅಷ್ಟೇ ರಂಗದ ಮೇಲೆ. ಆದರೆ ಶ್ರೀ ಧಂಡನ್ ದೇಶದ ವಾತಾವರಣಕ್ಕನುಗುಣವಾಗಿ ಕಾಂಗ್ರೆಸ್ ಸಂಸ್ಥೆಯ ಧೋರಣೆಯೇ ಒಂದೆಡೆಗೆ ಒಂದಷ್ಟು ಮಾಲಬೇಕೆಂಬಆಗ್ರಹವುಳ್ಳವರು. ಆವರ ನ್ಯಾಯ ನಿಷ್ಠುರತೆಯು ಎಂತಹ ಸಂದರ್ಭದಲ್ಲಾದರೂ ಅಚಲವಾದುದು; ಅವರ ನೈತಿಕ ಬಲವು ಎಂದೆಂದಿಗೂ ಆಜೇಯವಾದ್ದು. ದೇಶ ವಿಭಜನೆಯಿಂದಾಗಿರುವ ಹಾನಿಯು, ಮುಖ್ಯವಾಗಿ ನಿಸ್ಪಹಾಯಕ ನಿರಾಶ್ರಿತರ ಶೋಚನೀಯ ಸ್ಥಿತಿಯು ಧಂಡನರ ಹೃದಯವನ್ನು ಜ್ವಾಲಾಮುಖಿಯಾಗಿ ಎಪರ್ಪಡಿಸಿದೆ; ಜ್ವಾಲಾರಸಗಳ ಪ್ರಬಾಹವನ್ನೇ ಹರಿಯಿಸಿದೆ. ನವ ಪ್ರಾಲೀ ಅತ್ಯಾಚಾರದ ವೇಳೆ ಅಗಿನ ಲೀಗ್ ಪ್ರಧಾನಿ ವಿ. ಸ.ಹ್ರವರ್ದಿಗಳ ಮುಖದಿದಿರು ಛಡ್ಜನೆಕೊಡವ ಎದೆಗಾರಿಕೆಯನ್ನಿವರು ತೋರಿಸಿದ್ದರು- ಇತ್ತೀಚೆಗೆ ನವಢಿಲ್ಲಿಯಲ್ಲಿ ಸೇರಿದ ಅಖಿಲ ಭಾರತ ನಿರಾಶ್ರಿತರ ಸಮ್ಮೇಳನದ ಅಧ್ಯಕ್ಷತೆ ವಹಿಸಿ, 'ಇನ್ನು ನಾಲ್ಕು ತಿಂಗಳುಗಳೊಳಗೆ ನಮ್ಮ ಬೇಡಿಕೆಗಳಿಗೆ ಸರಕಾರವು ಸಾಕಷ್ಟು ಲಕ್ಷ್ಯ ಕೊಡದೆ ಹೋದರೆ ನಾವು ಅಗತ್ಯ ಬೀಳುವ ಕಾರ್ಯಕ್ಕೆ ಕೈಯಿಕ್ಕುತ್ತೇವೆ' ಎಂಬ ಜೆದರಿಕೆ ಜಾಕಿಸಿದ್ದರು.

ಒಂದು ನ್ಯಾಯ ಸಾಧನೆಗಾಗಿ ಇಂತಹ ಹಟತೊತೊಡುವುದು ಶ್ರೀ ಪುರುಷೋತ್ತಮ ಧಂಡನರಿಗೆ ಮೆಚ್ಚುಗೆಯಾಗುವಷ್ಟು ಕಾಂಗ್ರೆಸ್ ಗಾಡಿಯೇನಾ ಆಕರ್ಷಣೀಯವಾಗಿ ಕಾಣುವದಿಲ್ಲ. ಪ್ರದರ್ಶನ ಗಾಂಧೀರ್ಯ–ಪಾಸಗೀ ಸಲ್ಲಾಪವೆಂಬ ಸ್ವಪರ ಭೇದವಿಲ್ಲದೆ, ಅಚಲ ನೈತಿಕ ಬಲತೋರಿ ಸಬಲ್ಲ ಕೆಲವೇ ಮಂದಿ ಕಾಂಗ್ರೆಸಿಗರಲ್ಲಿ ಶ್ರೀ ಧಂಡನ್ ಮೊದಲಿಗರೆನ್ನಬೇಕು. ಕಳದ ಬಾರಿಯ ಅಧ್ಯಕ್ಷ ಸ್ಪರ್ಧೆಯಲ್ಲಿ ಸರ್ದಾರ್ ಹಶೇಲರಂಥವರ ಒಲವು ಇರವ ಕಡೆಗೆ ನೂಲಿದ್ದಿತೆಂಬ ಸುದ್ದಿಯಿದ್ದಿತಾದರೂ ಶ್ರೀ ಧಂಡನರೇ ಬಾರಿ ಅರಿಸಲ್ಪಡುವುದು ಕಾಂಗ್ರೆಸ್ ಅಧಿನಾಯಕರಿಗೆ ಹಿಡಿಸುವ ಘಟನೆಯೆನ್ನುವುದು ಅಸಾಧ್ಯ. ಒಂದೊಮ್ಮೆ ಗೆ ಇವರು ಅರಿಸಲ್ಪಟ್ಟರೆ, ಕಾಂಗ್ರೆಸಿನೊಳಗಡೆ ಹೊಸಚಟುವಟಿಕೆಗಳನ್ನು ನಾವು ನಿರೀಕ್ಷಿಸಬಹುದು.

ಪ್ರೊ ಫೆಸರ್ ರಂಗ

ಆಂಧ್ರದ ಪಟ್ಟಾಭಿಯ ಳಿಯುವ ಗಾದಿಗೆ ಮತ್ತೊಬ್ಬ ಆಂಧ್ರದವರು, ಹಾಗೂ ವೈದಲಿನವ ಇದಿರುವಾದಿ ಪ್ರೊ. ಎನ್. ಜ. ರಂಗರು ಏರುವಂತಾಗುವ ಸೂಚನೆಯೂ ಮುಂಡಿ ಬಂದಿದೆ. ಪ್ರೊ ರಂಗ ಆಂಧ್ರದ ಶ್ರೀ ಟಿ. ಪ್ರಕಾಶಮರ ಸಹವರ್ತಿಯಾಗಿ ದ್ದು, ತೆಲುಗರಲ್ಲಿ ಅತಿ ಹೆಚ್ಚಿನವರ ವಿಶ್ವಾಸಕ್ಕೆಪಾತ್ರರಾಗಿರುವವರು; ಪ್ರಕಾಶಮರಂತೆಯೆ ಜನಸ್ಪ್ರೀತರಾಗಿರುವವರು. ಮಾತ್ರವಲ್ಲ, ಬುದ್ಧಿಬಲ ಮತ್ತು ನೈಪಹಾರ್ಯ ಕಾರ್ಯಚಾತುರ್ಯದಲ್ಲಿಯೂ ರೈತ ಸಂಘಟನೆಯಂತಹ ಶಕ್ತಿ ಸಿರ್ಮಾಪಕ ಕಾರ್ಯಗಳಲ್ಲಿಯೂ ಇಂದಿನ ಆಂಧ್ರಲ್ಲೆಲ್ಲಾ ಮೊದಲಿಗರು. ಆದರೂ ಇವರನ್ನೂ ಅಖಿಲ ಭಾರತದ ಪರಿಚಿತನ ಪಂಗ್ತಿಯಲ್ಲಿ ಇದ್ದಾರೆ ಹೊರತು ಪ್ರಭಾವೀ ವ್ಯಕ್ತಿಗೇರಿಲ್ಲ. ಇವರ ಹೆಸರನ್ನು ಕಾಂಗ್ರೆಸ್ ಅಧ್ಯಕ್ಷಗಾದಿಯ ಇದಿರು ಹಿಡಿದು ನೋಡುವಾಗ, ಅವನ್ನು ಗಟ್ಟಾ ತುಂಬಿಕೊಳ್ಳುವಷ್ಟು ಇದು ಭಾರವಾಗುವುದ್ದಾಗಿ ಕಾಣುವದಿಲ್ಲ. ಆದ್ದರಿಂದ ಪ್ರೊ. ರಂಗರಿಗೆ ಈ ಬಾರಿ ಪೀಠ ನೇರುವ ಸುಯೋಗವಿರಲಾರದು.

ಸೇಟ್ ಗೋವಿಂದ ದಾಸ್

ಈಗ ಮುಂದೆ ಬಂದಿರುವ ಹೆಸರುಗಳ ಪೈಕಿ ಎಲ್ಲಕ್ಕಿಂತ ಕಡಿಮೆ ಸುಯೋಗವಿರುವ ಹೆಸರೆಂದರೆ ಇದು. ಸೇಟ್ ಗೋವಿಂದ ದಾಸರು ನಿಷ್ಠಾವಂತ ಕಾಂಗ್ರೆಸಿಗ. ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆವಾಸ ಮತ್ತು ಕಷ್ಟನಷ್ಟಗಳನ್ನು ಅನುಭವಿಸಿದವರು. ಭಾರತದ ವಾರ್ಲಿಮೆಂಟಿನ ಸದಸ್ಯರು. ಧನವಿದ್ವಾಂಸ; ಸಹೃದಯಿ. ಕಲವು ಅಮೂಲ್ಯ ಗ್ರಂಥಗಳನ್ನು ಬರೆದು ಈ ಕ್ಷೇತ್ರದಲ್ಲಿ ಕಾಂಗ್ರೆಸಿಗರ ಪೈಕಿ ನೇಲ್ಪಂಕ್ತಿಯಲ್ಲಿದ್ದಾರೆ. ಆದರೆ ಅಖಿಲರಾಷ್ಟ್ರದ ಅತಿರಥರು ಗೌರವಾದರಗಳ ಬಿಲ್ಲೆ ಹಚ್ಚಿಕೊಂಡವರೇ ಏರಬೇಕಾಗಿರುವ ಕಾಂಗ್ರೆಸ್ ಅಧ್ಯಕ್ಷಪೀಠಕ್ಕೆ ಹೇಳಿಸಿದಷ್ಟು ಇವರ ಕೀರ್ತಿ ವಿಕಾಸಗೊಂಡಿಲ್ಲ. ಇವರು ಅರಿಸಲ್ಪಡುವುದು ಅಸಂಭವ.

ಶ್ರೀ ಪಾಟೇಲ್

ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕವಿಟಿಯ ಅಧ್ಯಕ್ಷ ಮತ್ತು ಬೊಂಬಾಯಿ ಮೇಯರಂತಹ ಗೌರವಾದರಗಳಿರುವ ಶ್ರೀ ಯಸ್- ಕೆ. ಪಾಟೇಲರು ಅಧ್ಯಕ್ಷರಾಗುವುದು, ಕಾಂಗ್ರೆಸ್ ಮುಷ್ಠಿಯನ್ನು ಇನ್ನೂ ಬಿಗಿದುಕೊಳ್ಳಬೇಕೆಂದು ಒಯಸುವ ಕೆಲವೇ ಮಂದಿಗಲ್ಲದೆ, ಬೇರಾರಿಗೂ ಬೇಕಾಗದು- ಅಲ್ಪಾವಧಿಯೊಳಗೆ ಸಾದಾ ಜೀವನದಿಂದ ಶ್ರೀಮಂತಿಕೇ ಗರಿಗೆ— ಆನುಯಾಯಿತ್ವದಿಂದ ಆಜ್ಞಾಧಿಕಾರಕ್ಕೆ— ಏರಿರುವ ಶ್ರೀ ಯಸ್- ಕೆ. ಪಾಟೇಲರು, ಯಾರು ಏನೇ ದರೂ ಈ ಕಾಲದಲ್ಲಿ ನೇಲ್ಪಂಗ್ತಿಯಾಗಿ ನಿಲ್ಲುವ ಜನ ಅಲ್ಲವೇ ಅಲ್ಲ- ಅವರ ಕಾರ್ಯಶಕ್ತಿ ಅಸಾಮಾನ್ಯವಾದುದು- ಪ್ರಜಲಿತ ಸ್ಥಿತಿಶಕ್ತಿಯೂ ಹಾಗೆಯೇ- ತನ್ನ ಪಾಲಿನ ಕಾಂಗ್ರೆಸ್ ಕಾರ್ಯಗಳನ್ನು ಏಕಾಗ್ರತೆಯಿಂದ ಮತ್ತು ಅಸಾಮಾನ್ಯ ಚಾಣಾಕ್ಷತೆಯಿಂದ ಸಾಧಿಸುವುದರಲ್ಲೂ, ಕಾಂಗ್ರೆಸ್ ವಿರೋಧೀ ಶಕ್ತಿಗಳನ್ನು ವಜ್ರಹಸ್ತದಿಂದ ದಮನಿಸುವುದರಲ್ಲೂ ಶ್ರೀ ಪಾಟೇಲರು ಸರ್ದಾರ್ ವಲ್ಲಭಾಯಿಗಳ ದ್ವಿಪ್ರತಿಯಂತಿರುವರು- ಈ ದೃಷ್ಟಿಕೋನವಿದ್ದವರಿಗೆ ಕಾಂಗ್ರೆಸಿನೊಳಗಡೆಯಲ್ಲಿ ಅಭಿರುಚಿ ವಿಕಾಸಗೊಳ್ಳುವುದು ಕೂಡಾ ಕಾಂಗ್ರೆಸ್ ನಿಯಮ ದ್ರೋಹವಾಗಿ ತೋರುವುದು ಸ್ವಾಭಾವಿಕ. ಕಾಂಗ್ರೆಸಿಗರಲ್ಲಿ ಈಗ ಕಂಡುಬರುತ್ತಿರುವ ಅಧಿಕಾರ ಲಾಲಸೆ, ಸ್ವಾರ್ಥಚಿಂತನೆ, ಸಂಕುಚಿತ ಉಗ್ರಭೋರಣೆ ಖಂಡನೀಯವೆಂದಾದರೆ, ಶ್ರೀ ಯಸ್ ಕೆ. ಪಾಟೇಲರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾರೋಪಿಸಲ್ಪಡುವುದು ಅನಪೇಕ್ಷಣೀಯ- ಹಾಗಾಗುವ ಸಂಭವವೂ ತೀರಾ ಕಡಿವೆ.

ರಾಜಾಜಿ

ನಾಮ ಪತ್ರಮೂಲಕ ಹೆಸರು ಮುಂದೆ ಬಂದುದು ಕಾಣಿಸುತ್ತಿಲ್ಲವಾದರೂ ಪಂಡಿತ ನೆಹರುಗಳ ಅಭಿಪ್ರಾಯದ ಮೂಲಕ ಅಧ್ಯಕ್ಷಸ್ಥಾನಕ್ಕಾಗಿ ಕೇಳಿಬಂದಿರುವ ಮತ್ತೊಂದು ಹೆಸರು ಶ್ರೀ ಸಿ. ರಾಜಗೋಪಾಲಾಚಾರಿಗಳದು- ಕಾರ್ಯಬಾಹುಳ್ಯದ ದೆಸೆಯಿಂದಾಗಿ ತನ್ನಿಂದ ಮೊರೆಲಾಗದಿದ್ದರೂ ತನ್ನ ಪರವಾಗಿ ನೆಹರೂಗಳು ಸೂಚಿಸಿದ್ದ ಹೆಸರೆಂಬುದರಿಂದ ರಾಜಾಜಿಗೆ ನಿಜಕ್ಕೂ ಈ ಬಾರಿ ಪೀಠವೇರುವ ಅನುಕೂಲತೆ ಯಿದ್ದಿತು- ಮೇಲಾಗಿ ಸ್ವತಂತ್ರ ಭಾರತದ ಪ್ರಥಮ ಮತ್ತು ಏಕಮಾತ್ರ ಹಿಂದೀ ಗವರ್ನರ್ ಜನರಲ್ ಆಗಿದ್ದವರು ರಾಜಾಜಿ. ಈ ರೀತಿ ಒಂದು ರಾಷ್ಟ್ರದ ಶಿರಸ್ಸಾಗಿದ್ದ ಆವರಿಗೆ ಅರಾಷ್ಟ್ರಾಧಿಕಾರ ನಿರ್ವಹಿಸುತ್ತಿರುವ ಸಂಸ್ಥೆಯ ಶಿರಸ್ಸಾಗುವ ಸಂದರ್ಭವನ್ನೊದಗಿಸಿಕೊಡುವದು ಸಮಂಜಸವಿದೆ- ಇಂತಹ ವ್ಯಕ್ತಿಗೆ ಪೀಠ ಬಿಟ್ಟಕೊಡುವ ಕುರಿತು ಅಸೂಯೆ ಪಡುವವರೂ ಬಹಳಮಂದಿಯಿರಲಾರರು. ಕಾಂಗ್ರೆಸಿನ ಸೇವೆ ಗಾಂಧೀಜಿಯ ಅನುಯಾಯಿತ್ವ, ಅನ್ಯಾದೃಶ ಸೂಕ್ಷ್ಮ ಬುದ್ಧಿ ಮತ್ತ ದೂರದೃಷ್ಟಿ, ಹಿಂತನ, ಪಂಡಿತ ನೆಹರುಗಳ ಅಕ್ಕೀಯ ಬಯಕೆ ಇಷ್ಟೆಲ್ಲಾ ಇರುವ ರಾಜಾಜಿ ಈ ಬಾರಿ ಅಧ್ಯಕ್ಷಸ್ಥಾನ ಕೈರುತಿದ್ದರೆ, ಎಲ್ಲವೂ ಸುಗವಾಗೊಳ್ಳುತ್ತಿತ್ತ- ಘನತೆಗೂ ಕಾರ್ಯಾನುಕೂಲತೆಗೂ ಸರಿಬೀಳುತ್ತಿತ್ತು. ಪ್ರಸ್ತುತ ಕೇಂದ್ರ ಮಂಡಲಿಯಲ್ಲಿ ಪಾತಕೇತರ ಮಂತ್ರಿತ್ವವಷ್ಟೇ ಇರುವ ರಾಜಾಜಿಗೆ ಕಾಂಗ್ರೆಸ್ ಅಧ್ಯಕ್ಷತನವನ್ನು ನಿರ್ವಹಿಸುವುದೂ ಸಾಧ್ಯವಿಶ್ವಕ- ಆದರೂ ಆದೇಕೋ ರಾಜಾಜಿಯೇ ಆ ಸ್ಥಾನ ಸ್ವೀಕರಿಸ್ಕೊಪ್ಪುವದಿಲ್ಲವೆಂದು ತಿಳಿದು ಬಂದಿದೆ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊದಿವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಜೀವವಿಮೆಗಾಗಿ

ವಿಚಾರಿಸಿರಿ

ದಿನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಶ ಲ್ಯಾಫ್ ಇನ್ಯೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಜೆಯರ್‌ಮೆನ್: ಶ್ರೀ. ಎನ್. ಪಿಟಿ ಎಸ್. ಚಿದಂಬರನ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಆಂತೆಯೇ ಜದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹೆಂವೆನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನ್ಯಾಟಿಪ್ ಇಂಡಿಯಾ ಬ್ಯಾಪ್ ಬಿಲ್ಡಿಂಗ್ ಪೋಸ್ಟ್ ಬಾಕ್ಸ್ ನಂಬ್ರ 142
ಮದ್ರಾಸು.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವಕೀಲರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ಬೇರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ವಿಚಾರಾಭಿವ್ಯಕ್ತಿ ಸಂಗತಿ

ಕಾಂಗ್ರೆಸಿನ ಹೊಸ ಘಟಸಂವಿಧಾನವಾಗಿ, ಈ ಬಾರಿ ಆರಿಸಲ್ಪಡುವ ಎಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಮತ್ತು ಅಧಿಕಾರಿಗಳಿಗೆ ಮೂರು ವರುಷಗಳ ಅವಧಿಯಿರುತ್ತದೆ. ಕಾಂಗ್ರೆಸಿನ ಆರಂಭದಿಂದೀ ವರೆಗೂ ವರುಷಾವಧಿ ಚುನಾವಣೆಯಂದಿದ್ದುದು ಈ ಸಲದಿಂದ ಮೂರು ವರುಷಾವಧಿಯದಾಗಿರುವುದರಿಂದ, ಅಧ್ಯಕ್ಷನನ್ನಾರಿಸುವಾಗ ಮುಮ್ಮಡಿ ಯೋಜನೆ ಮಾಡಬೇಕಾಗಿಬಂದಿದೆ. ರಾಷ್ಟ್ರನಾಯಕರಿಗೆ ಅಧವಾ ರಾಷ್ಟ್ರಕಾರ್ಯಗಳಿಗೆ ಅಪಚ್ಯಾಯಂದು ಕೂಡಿ ಬಾರದ ಅಧ್ಯಕ್ಷನು ಯಾವ ಕಾರಣದಿಂದಾದರೂ ಆಲ್ಲಿದ್ದರೆ, ಆ ಮೂಲಕ ಏಳುವ ಘರ್ಷಣೆಗಳು ಹೊಂಗೆ ತೋರಿ ಬಾಂದೆಂಬುದಕ್ಕಾಗಿ, ಹನ್ನೆರಡು ತಿಂಗಳ ಮಟ್ಟಿಗೆ ಅತ್ಮ ಸಂಯಮನ ಮಾಡಿಕೊಳ್ಳುವ ವಾಡಿಕೆಯು ಈತನಕವಿದ್ದಿತು- ಆದರೆ ಅಂತಹ ಅತ್ಮದಮನದಿಂದ ೨೬ ತಿಂಗಳವರೆಗೂ ಕೈತದಲು ನಿಲ್ಲುವುದೇನೂ ಸುಲಭವಲ್ಲ- ಆದ್ದರಿಂದ ಈಬಾರಿ ಆರಿಸುವಾಗಲೇ ಜಾಗರೂಕತೆ ವಹಿಸುವ ಅವಶ್ಯಬಿದ್ದಿದೆ-

ಉಮೇದ್ವಾರೀ ಪಟ್ಟಯಷ್ಟು ತನ್ನ ಹೆಸರು ಕೊನೆಯ ದಿನದವರೆಗೆ ಉಳಿದುಕೊಂಡರೆ, ಮಿಕ್ಕ ಪರಿಪೀಲನೆಗಳಿಗೆ ಅತಂಕವಾದೀತೆಂಬ ನಿರೀಕ್ಷೆಯಿಂದ ಪಂಡಿತನೆಹರುಗಳು "ನಾನು ಪ್ರಧಾನ ಮಂತ್ರಿಯಾಗಿರುವವರೆಗೆ ಕಾಂಗ್ರೆಸ್ ಅಧ್ಯಕ್ಷನಾಗುವದಿಲ್ಲ, ಎಂದು ಸಂಕಲ್ಪಿಸಿದ್ದೇನೆ" ಎಷ್ಟುತ್ತಾ ಮುಂದಾಗಿ ತನ್ನ ಹೆಸರನ್ನು ಹಿಂದೆಗೆದುಕೊಂಡಿದ್ದಾರೆ. ನೆಹರೂ ಬಯಕೆಯಂದೆಂದು ಕೇಳಿಬಂದಿದ್ದ ರಾಜಾಜಿಯ ಹೆಸರು ಅಧಿಕೃತವಾಗಿ ಮುಂದೆ ಬಂದುದಿಲ್ಲವಾದ್ದರಿಂದ, ಇವರೂ ರಂಗದಿಂದ ಹೊರಗಾಗಿದ್ದಾರೆ-ಉಳಿದವರ ವೈಕೆ ವಿಕ್ಕೆಲ್ಲೂ ಒಂದೆರಡು ಕೃಪಲಾನಿ, ಧೆಂಡನ್ ಮತ್ತು ಶಂಕರ ದಾಸ್ ದೇವೋ ಸ್ಪರ್ಧಿಸಿ ಕೊಳ್ಳುವ ಸಂದರ್ಭ ಬರಬಹುದೆಂದು ನಿರೀಕ್ಷಿಸಲಾಗಿದೆ-

ಆಗಿದ್ದರೂ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಆರಿಸುವಿಕೆಯು ಈಗ ನಡೆದಿರುವ ಸ್ಪರ್ಧೆಯು ಹಲವು ಚಿಂತನೆಗಳಿಗೆಡೆಯಿತ್ತಿದೆ. ರಾಷ್ಟ್ರದ ಅಗ್ರಗಣ್ಯ ನಾಯಕರಲ್ಲಿ ಅವಿರೋಧವಾಗಿ, ವರುಷಕೊಬ್ಬರಂತೆ ಆರಿಸಲ್ಪಡುವ ಕ್ರಮ ಹೋಗಿ ಎರಡನೇ ಪಂಕ್ತಿಯ ದುಂದಾವರಿಗಳು ತಮ್ಮೊಳಗೆ ಸ್ಪರ್ಧಿಸಿಕೊಳ್ಳುವ ಮಟ್ಟಕ್ಕೆ ಈ ಸ್ಥಾನ ವಿಳಿಯುತು—ಸ್ವರಾಜ್ಯಾಡಳಿತೆಯಲ್ಲಿ ಕಾಂಗ್ರೆಸಿಗರು ಮಿಕ್ಕುನ್ಯಾನವಾನಗಳ ಮಟ್ಟಿಗೆ ತೋರಿಸುತ್ತಿರುವ ನ್ವಾರ್ಥ, ಸಂಕುಚಿತ ಧೋರಣೆಯುನ್ನೇ ಅಧ್ಯಕ್ಷಗಾದಿಯ ಆರಿತೂ ತೋರಿಸಹತ್ತಿದ್ದಾರೆ-ಎಂಬುದು ಇಲ್ಲಿ ಮುಖ್ಯವಾಗಿ ಎದ್ದು ತೋರುವ ಸಂಗತಿ-

ಸ್ವತಃ ಕಾಂಗ್ರೆಸ್ ಸಂಸ್ಥೆಯೇ ಈಗ ಸ್ಥಾನಮಾನಗಳ ಮಟ್ಟಿಗೆ ಕೆಂದುಗೊಂಡಿದೆ- ಸ್ವಾತಂತ್ರ್ಯ ಹೋರಾಟಗಳ ವೇಳೆ ಪರಕೀಯರಾಡಳಿತೆಯದಿರು ಜನತೆಯ ಪರವಾಗಿ ಕಾರ್ಯಭಾರ ನಿರ್ವಹಿಸುವ ಹೊಣೆಯು ಈ ಸಂಸ್ಥೆಯ ಮೇಲಿದ್ದಿತು; ಈಗ ಅದು ಸ್ವತಂತ್ರ ಸರಕಾರದ ಕಡೆಗೆ ವರ್ಗಾಯಿಸಲ್ಪಟ್ಟಿರುವುದರಿಂದ ಸಂಸ್ಥೆಯಲ್ಲಿದ್ದ ಪ್ರಾಮುಖ್ಯ ಜನತಾ ನಾಯಕರೂ ಆ ಕಡೆಗೆ ವರ್ಗ ಹೊಂದಿದ್ದಾರೆ- ಇಲ್ಲಿ ಸಂಸ್ಥೆಯ ಕಾರ್ಯಭಾರ ತಗ್ಗಿದುದಕ್ಕನುಗುಣವಾಗಿ ಅದರ ನಾಯಕತ್ವದ ಘನತೆಯೂ ಕುಗ್ಗಿದೆ.

ಆದರೆ ಕಾರ್ಯಕರ್ತನಾದ ಪ್ರೌಢಪುತ್ರನಿಗೆ ತಕ್ಕು ಸಲಹೆಕೊಡುವ ಮತ್ತು ಆರೈಕೆ ನೋಡುವ ಸ್ಥಾನದಲ್ಲಿರುವ ಮಾತೆಯಂತೆ ತನ್ನ ಸರಕಾರಕ್ಕೆ ಹಿತೋಪದೇಶವೀಯುವ ಹಳ್ಳು ಕಾಂಗ್ರೆಸ್ ಸಂಸ್ಥೆಯದಾಗಿ ಇಂದೂ ಇದೆ- ಈ ಹಿರಿಯ ಸ್ಥಾನಕ್ಕನುಗುಣವಾದ ಹಿರಿಮೆಯು ಕಾಂಗ್ರೆಸಿನಲ್ಲಿ ಕಂಡು ಬಂದರೇನೇ ಜವಾಬ್ದಾರಿ ಹೊತ್ತ ಹಿರಿಮನ ಮತ್ತು ಆಪ್ತಾಯಸ್ಥ ಕಿರಿಮಕ್ಕಳ ನಡುವಿನ ಮಾತೆಯಂತೆ, ಅದು ಸರಕಾರ ಮತ್ತು ಜನತೆಯ ನಡುವಿನ ಮಾಧ್ಯಮವಾಗಿ ನಿಲ್ಲಬಲ್ಲುದು. ನ್ವಾರ್ಥ ಮತ್ತು ದರಭಿಮಾನಗಳ ದೆಸೆಯಿಂದ ಲವರೊಳಗೆ ನಡೆಯುವ ಸ್ಪರ್ಧೆಯೂ ಈ ಹಿರಿಮೆಯನ್ನು ತಗ್ಗಿಸುವಂತಹದು.

ಆದ್ದರಿಂದ ಈ ಬಾರಿಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಆರಿಸುವಿಕೆಯು ಅನಗತ್ಯ ಕಹಿ ಕಲ್ಮಷವಾವುದೂ ಇಲ್ಲದೆ ಘನತೆ ಮತ್ತು ತತ್ವಗಳಗನುಗುಣವಾಗಿ ನಡೆಯುವದೆಂದು ನಿರೀಕ್ಷಿಸೋಣ-

ಮೂರು ವರ್ಷಾವಧಿಯ

1947ನೇ ಆಗೋಸ್ತು 15 ಹಿಡಿಯುವ ಮಧ್ಯರಾತ್ರಿ ಕಳೆದು ಪ್ರಥಮ ನಿಮಿಷದಲ್ಲಿ ಭಾರತವು ಸ್ವತಂತ್ರವಾಗಿದ್ದಿತು; 1950ನೇ ಆಗೋಸ್ತು 15 ಹಿಡಿಯುವ ರಾತ್ರಿ 12 ಘಂಟೆಗೆ ಸ್ವತಂತ್ರ ಭಾರತಕ್ಕೆ ಮೂರು ವರುಷ ಪೂರ್ಣ ತುಂಬಿ, ನಂತರದ ಕ್ಷಣದಿಂದ ನಾಲ್ಕನೇ ವರುಷ ಹಿಡಿಯುತ್ತದೆ. ಸುಮಾರು ಎರಡು ನೂರು ವರುಷಗಳಿಂದ ಪರದಾಸ್ಯದಲ್ಲಿದ್ದ ದೇಶದ ಸ್ಥಿತಿಗತಿಗೂ ಕಳೆದ ಮೂರು ವರುಷಗಳ ಆಗುಗೋಗುಗಳಿಗೂ ಅಜಗಜಾಂತರವಿದೆ ಎಂಬುದು ಸುಸ್ಪಷ್ಟ- ಸ್ಥಿತಿಯೇನೋ ಪೂರ್ಣ ಬದಲಾವಣೆಗೊಂಡಿದೆ. ಇದು ಪ್ರಗತಿಯೋ ಅವನತಿಯೋ ಎಂಬ ಪ್ರಶ್ನೆ ಬಂದರೆ ನಿಜಕ್ಕೂ ಪ್ರಗತಿ ಎಂದು ಉತ್ತರಿಸಬಹುದು- ಆದರೆ ಇಂದಿನ ಸ್ಥಿತಿಯಲ್ಲಿ ಇದು ಅಕ್ಷೇಪಾತೀತ ಉತ್ತಮವಾಗದು. ಸ್ವಾಧೀನಿಂದ ಮೂರು ವರುಷಗಳಲ್ಲಿ ನಾವು ಪ್ರಗತಿ ಹೊಂದಿದ್ದೇವೆ, ಎಂಬುದು ಎಲ್ಲರ ನಿಷ್ಪನ್ನ ಭವದ ಸಂಗತಿಯಾಗಿರಬೇಕಿದ್ದಿತು. ಆದರೆ ಹಾಗಿರುವ ಬದಲಿಗೆ ನಾವೀಗ ಪ್ರಗತಿಹೊಂದಿದ್ದೇವೆ, ಎಂಬುದನ್ನು ಕೂಡಾ ಜನಸಾಮಾನ್ಯರಿಗೆ ಪ್ರಯಾಸಪಟ್ಟು ಬೋಧಿಸಿಯೇ ಕಲಿಸಿಕೊಡಬೇಕಾದ ಸ್ಥಿತಿಯನ್ನುಳಿದುಕೊಂಡಿದೆ. ಹೀಗಾದಿಲು ಕಾರಣವೇನು?

ಏರು-ತಗ್ಗು

ಒಂದಿಡಿ ಶತ್ಲಘನೀಯ ಪ್ರಗತಿಪಡೆದಿರುವಾಗಲೇ ಇನ್ನೊಂದೆಡೆ ಶೋಚನೀಯ ದುಸ್ಥಿತಿಯುಳಿದುಕೊಂಡಿರುವುದೇ ಇಂದಿನ ಪರಿಸ್ಥಿತಿಗೆ ಕಾರಣ. ಕಾಲು ಕುಳಿಯತ್ತ ಜಾರುತ್ತಿರುವಾಗಲೇ ತೋಳು ಅತಿ ಮುಂಭಾಗಕ್ಕೆ ಚಾಚಿರುವ ವ್ಯಂಗ್ಯ ಚಿತ್ರವಾಗಿ ಸ್ವತಂತ್ರ ಭಾರತದ ತ್ರಿವಾರ್ಷಿಕ ರೂಪವನ್ನು ಬಿಡಿಸಿಡಬಹುದು. ರಾಜಕೀಯವಾಗಿ ಅದು ಪಡೆದಿರುವ ಪ್ರಗತಿ ಅಸಾಮಾನ್ಯವಾದುದು; ಜನಸಾಮಾನ್ಯರ ನಿತ್ಯ ಜೀವನಸ್ಥಿತಿ ಸಧರಣೆಯ ಅರ್ಥಿಕರಂಗದಲ್ಲಿ ಅದು ಗಳಿಸಿರುವ ದುಸ್ಥಿತಿಯೂ ಹೆಚ್ಚಿನದೇ. ಅಲ್ಲಿ ಅಷ್ಟು ಮುಂದಕ್ಕೆ ಚಾಚಿದವರು ಇಲ್ಲಿ ಇಷ್ಟೂ ಕುಗ್ಗಿ ಹೋಗಿರುವ ದೃಶ್ಯ ಕಾಣುತ್ತಿದೆ. ಸಮಾನತಾವಾದದ ಈ ಕಾಲದಲ್ಲಿ ಸ್ವತಂತ್ರ ಭಾರತದ ಪ್ರಚಲಿತ ಗತಿಯು ತುದಿಬುಡಗಳೊಳಗೆಗೇನೇ ಸಾಮ್ಯತೆಯಿಲ್ಲದಿರುವ ವೈಚಿತ್ರ್ಯ ತೋರಬರುತ್ತಿದೆ ಒಂದು ರೀತಿಗಾಗಿ ಕುಗ್ಗಿದಷ್ಟೆ ಇನ್ನೊಂದು ವಿಧಾನಕ್ಕಾಗಿ ಕುಗ್ಗಲಿಕ್ಕಿದೆ. ಅನ್ನವಾಗ- ಅದರಲ್ಲೂ ಇವೆರಡು ವಿಧಾನಗಳೊಳಗೆ ಸಮತಾಂತರವಿರಬೇಕಾದುದು ಅಗತ್ಯವಿರುವಾಗ—ನಾವು ತೂಕ ತಪ್ಪಿಲ್ಲವೇ ಎಂಬ ಪ್ರಶ್ನೆಯೇಳುತ್ತಿದೆ. ಮನೆಯಲ್ಲಿ ದಾರಿದ್ರ್ಯವಿದ್ದೂ ಮರ್ಜಿಯಲ್ಲಿ ಶ್ರೀಮಂತಿಕೆ ಪ್ರದರ್ಶಿಸುವ ಧಂಬಾಚಾರಿಗಳ ಪಂಗ್ತಿಗೆ ಭಾರತ ಸೇರುತ್ತಿದೆಯೇ ಎಂಬ ವಿಚಾರ ಮೂಡುತ್ತದೆ. ಒಳಗೆ ಟೊಳ್ಳಾಗಿದ್ದರೆ, ತೊಗಟೆಯೆಷ್ಟೇ ಗಟ್ಟಿಯಿದ್ದರೂ ಅದು ಸುದೃಢವಲ್ಲ; ಒಳಗಡೆ ಜನಜೀವನದಲ್ಲಿ ಅತ್ಯಪ್ತಿಯಿರುವಾಗ, ರಾಜಕೀಯವಾಗಿ ಎಂತಹ ಪ್ರಗತಿಪಡೆದೂ ಅಲ್ಲಿ ಸುಂಕ್ಷೇತೆಯಿರದು. ಆದ್ದರಿಂದ ಈ ಕುರಿತೇ ಸ್ವವಿಮರ್ಶೆ ಮಾಡಿಕೊಳ್ಳುವುದು ಅಗತ್ಯ. ಪ್ರಥಮತಃ ನಾವು ಆಲೋಚನೆ ಮುಂದೆ ಹೋಗಿರುವ ಆ ಕುದಿ ಮತ್ತು ತೀರಾ ಹಿಂದೆ ಬಿದ್ದಿರುವ ಈ ಜಡ, ಇವೆರಡರ ಕಡೆಗೂ ಒಮ್ಮೆ ನೋಡಿಕೊಳ್ಳೋಣ.

ರಾಜಕೀಯ ಪ್ರಗತಿ

ರಾಜಕೀಯತೆ: ಸ್ವತಂತ್ರ ಭಾರತವು ಸರ್ವ ವಿಧಾನದಿಂದಲೂ ಸಾಕಷ್ಟು ಮುಂದೊಪ್ಪಿದೆ. ಕಾಶ್ಮೀರ ವಿವಾದವೊಂದನ್ನು ಬಿಟ್ಟರೆ, ಸ್ವತಂತ್ರ ರಾಜ್ಯಭಾರವು ಮಾಡಬೇಕಾಗಿ ಬಿಟ್ಟಿರುವ ಗಣ್ಯ ರಾಜಕೀಯ ಕಲಸವಾವುದೂ ಪ್ರಕೃತ ಕಂಡು ಬರುವದಿಲ್ಲ- ನೇಲಾಗಿ ಮೂಢೀ ವರುಷಾವಧಿಯ ಸ್ವತಂತ್ರ ರಾಷ್ಟ್ರವೊಂದು ಅಂತರ್ರಾಷ್ಟ್ರೀಯ ರಂಗದಲ್ಲಿ, ಎಂತಹ ಪ್ರತಿಷ್ಠೆಗಳಿಸಲು ಸಾಧ್ಯವೋ ಅಂತ ಪರಮಾವಧಿಗೆ ಭಾರತವು ಇಷ್ಟರಲ್ಲೇ ಮುಟ್ಟಿರುವುದು ವಿಶೇಷ. ಭಾರತದ ಒಳಗಡೆ ಈ

The Pangat Nayak Bank Ltd., Katapadi S. K.

ದಿ ಪಾಂಗಾಳಿ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ, ದ.ಕ

Notice (ನೋಟೀಸು)

ಸದರೀ ಬೇಂಕಿನಿಂದ ಕೆ. ವಾಸುದೇವ ಆಚಾರಿ ಮಗ ಜನಾರ್ಧನ ಆಚಾರಿ, ಕೋಟೆ ಗ್ರಾಮದಲ್ಲಿರುವನವರು, ಕಟಪಾಡಿ, ದ. ಕ. ಇವರು ಚಿನ್ನಾಭರಣ ಅಡವಿನ ಮೇಲೆ ಲೋನು ನಂಬ್ರ 127/48, 189/48, 447/48, 479/48, 574/48, 606/48, 833/48, 947/48, 1246/48, 1279/48, 1455/48, 1566/48, 1718/48, 1769/48, 1823/48, 1847/48, 1865/48, 1879/48, 1880/48, 2120/48, 2201/48, 2254/48, 2333/48, ಮತ್ತು 1847/49ನೇ ಪ್ರಕಾರ ನಾಲ ಪದಕೊಂಡ ಆ್ಯಪೇಜನ್ನು ಸಲ್ಯಾಸಿ ಸದ್ರಿ ನಗದುಗಳನ್ನು ಬಿಡಿಸಿ ಕೊಂಡುಹೋಗಬೇಕಾಗಿ ರಿಜಿಸ್ಟ್ರಿ ನೋಟೀಸು ಮೂಲಕ ತಿಳಿಸಿದ್ದಾಗ್ಯೂ ಸಹಾ ಆ ಪ್ರಕಾರ ಬಿಡಿಸಿ ಕೊಂಡುಹೋಗದಿರುವುದರಿಂದ, ಸದ್ರಿ ನಗದುಗಳನ್ನು ಇದೇ ತಾರೀಕು 26-8-1950ನೇ ಶನಿವಾರ ಅಪರಾಹ್ನ ಘಂಟೆ 1ಕ್ಕೆ ಸದ್ರಿ ಬೇಂಕಿನ ಕಟಪಾಡಿ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ತಿಳಿದಿರಲಿ.

Office of the Bank, Katapadi, 10-8-50.

C. Vasantha Shenoy,
AGENT.

NOTICE.

Applications are invited from candidates who are eligible for the University course and from those who have completed the S. S. L. C. with Chemistry or Physics as optional subjects in the school final class for undergoing training as compounders at Government Headquarters Hospital, Mangalore. The duration of the training will be one year from 1-10-50. The candidates shall not be less than 18 years or more than 27 years of age.

2. Selected candidates will be paid stipends at Rs. 20/- (twenty) each per mensem for the first nine months and at Rs. 25/-(twenty five) each per month for the next three months from the District Board funds.

3. Applications containing full details regarding date of birth, caste, place of residence with the Education qualification certificates in original should reach the President, District Board, S. K. on or before 15-8-1950.

S. K. District Board Office, Mangalore, dated 26-7-50. S/31—7—50.

(Sd) **K. SANJIVA SHETTY,**
For President Dt. Bd. S. K.

ಮುಖ್ಯ ಸಿಂಕಗಳು

ಗ, ಅಡಿಗೆ ಬಿದ್ದು ಮಣ್ಣು ಪಾಲಾಗಿರುವ ಸಮಸ್ಯೆಗಳಲ್ಲಿ ಒಂದೊಂದನ್ನೇ ಎತ್ತಿ ನೋಡುತ್ತಾ ಬಂದರೆ ಪ್ರತಿಯೊಂದೂ ಎಳೇ ಸ್ವಾತಂತ್ರ್ಯವನ್ನೆ ಜಜ್ಜಿ ಹಾಕುವಷ್ಟು ಭಾರವಾಗಿರುತ್ತದೆ. ವಿಸ್ತಾರದ ದೃಷ್ಟಿಗೆ ಪಾಕಿಸ್ತಾನಕ್ಕಿಂತಲೂ ದೊಡ್ಡದಾಗುವ ಮತ್ತು ಪ್ರತ್ಯೇಕತಾ ವೈಶಿಷ್ಟ್ಯದಲ್ಲಿ ಪಾಕಿಸ್ತಾನಕ್ಕೆ ಸಂಪೂರ್ಣವಾದ ಅಶ್ರಿತರಾಜರ ವಲಯವು ಸ್ವತಂತ್ರ ಭಾರತದ ಒಳಗಡೆಯಲ್ಲಿದ್ದಿತು. ಅದನ್ನು ರಕ್ತ ರಹಿತ ಮತ್ತು ಕಾರಿಣ್ಯರಹಿತ ಕ್ರಾಂತಿಯಿಂದ ಅಖಂಡ ಭಾರತದೊಂದಿಗೆ ಸಮಾವೇಶಗೊಳಿಸಿಕೊಂಡ ರೀತಿಯು ಕೌತುಕಾನಂದದಾಯಿಯಾಗಿದ್ದುದು. ವ್ಯವಹಾರ ರಂಗದಲ್ಲಿ ಇದಿರಿಸಿ ಅಲ್ಲೇ ನೋತು ಶಣ್ಣಾಗದ ತಿರುವಾಂಕೂರು—ರಣರಂಗದಲ್ಲಿ ಇದಿರಿಸಿ ಸದೆಬಡಿಯಲ್ಪಟ್ಟ ಹೈದರಾಬಾದು—ಬಗಲೊಳಗಿದ್ದುಕೊಂದೇ ಚಿವುಟಿ ಪರೀಕ್ಷಿಸಿದ ಭೋಪಾಲ—ಹೋರಾಟಕ್ಕೆ ನಡುಬಿಗಿವಂತೆ ತೋರಿಸಿಕೊಂಡು ಓಟಕ್ಕಿತ್ತ ಜುನಾಗಡ್—ಅಂತೂ ತಮ್ಮ ಸ್ಥಿತಿಗನುಸಾರವಾಗಿ ಎಲ್ಲಾ ವಿಧದ ಪ್ರತಿಕೂಲಾಟಗಳನ್ನೂ ಸಂಸ್ಥಾನಗಳು ಆಡಿದ್ದುವು. ಯಾವ ಆಟಕ್ಕಾದರೂ ಸರಿಯಾದ ರಂಗ ದೊರೆಯುವ ಮೊದಲೇ ಅವಲ್ಲವನ್ನೂ ಮುಕ್ತಾಯಗೊಳಿಸಲಾಯಿತು. ಭಾರತ ವಾಕಿಸ್ತಾನಗಳೆಂಬಗಾಗಿಯ ವ್ಯವಸ್ಥೆ—ಕಮ್ಯುನಿಸ್ಟ್, ಆರ್. ಯಸ್. ಯಸ್. ನಂತಹ ಪ್ರತಿಗಾಮೀ ಪಕ್ಷಿಗಳನ್ನು ಹತೋಟಿಗೆ ತಂದುಕೊಂಡ ಮತ್ತು ತರುತ್ತಿರುವ ವಿಧಾನ—ಸಣ್ಣ, ದೊಡ್ಡ ಮುಷ್ಕರಗಳೇ ಮೊದಲಾದುವುಗಳಿಗೂ ಧಾನ್ಯದೊರೆಯದಂತೆ ವಾತಾವರಣವನ್ನು ಕುದ್ದಿಗದಿಕೆಗೊಂಡ ಬಗೆ—ಜಾತೀಯ ಗೊಂದಲಗಳ ನಿವಾರಣೆ- ಇವೆಲ್ಲವೂ ಕೊಂಡಾಟಕ್ಕೆ ಬರುವವುಗಳೇ.

ಜಾಗತಿಕ ರಂಗದಲ್ಲಿ

ಸ್ವತಂತ್ರ ಭಾರತವು ಅಂತರ್ರಾಷ್ಟ್ರೀಯ ರಂಗದಲ್ಲಿ ಗಳಿಸಿರುವ ಸ್ಥಾನಮಾನಗಳಂತೂ ಅತ್ಯುತ್ಕರ್ಷಣೀಯವಾದವುಗಳಿವೆ. ಸಂಯುಕ್ತ ರಾಷ್ಟ್ರ ಸಂಘದ ವಿವಿಧ ಸಮಿತಿಗಳಲ್ಲಿ ಮೊದಲಿನಿಂದಲೂ ಸ್ಥಾನಗಳಿಸುತ್ತಾ ಬಂದ ಭಾರತವು ಈ ವರ್ಷ ಭದ್ರತಾ ಕೌನ್ಸಿಲಿನ ಸದಸ್ಯತ್ವವನ್ನೂ ಸಂಪಾದಿಸಿದೆ. ವ್ಯಾಪಾರ ವಿಷಯಗಳಿಗೆ ಜಾಗತಿಕ ಹಾಗೂ ಸ್ವಂತ ಸ್ವತ್ಸಿಗಳಾಗಿ ಜರ್ಚೆಗಳ ವೇಳೆ ಭಾರತದ ಉಚ್ಚ ಧ್ಯೇಯ, ವಿಶಾಲ ಧೋರಣೆ ಮತ್ತು ಧೃನತೆ ಇವನ್ನು ಯಥಾವತ್ತಾಗಿ ಪ್ರತಿನಿಧಿಸಬಲ್ಲ ಸರ್. ಎ ರಾಮಸ್ವಾಮಿ ಮುದಲಿಯಾರ್, ಸರ್ ಜಾಜ್‌ವಾಯ್, ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಮೊದಲಾದವರು ಸರದಿ ಪ್ರಕಾರ ಆಕ್ಷಿದ್ದರು. ಈಗ ಸರ್. ಬಿ. ಯನ್. ರಾಯರು ಭದ್ರತಾ ಕೌನ್ಸಿಲಿನ ಸದಸ್ಯರಾಗಿದ್ದಾರೆ. ಕೊರಿಯಾ ಸಮರ ಸಂಬಂಧದ ಕಾರ್ಯಾಚರಣೆಯ ವೇಳೆ ಅದರ ಅಧ್ಯಕ್ಷ ಹೊಣೆಯನ್ನೂ ನಿರ್ವಹಿಸಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಕೊರಿಯಾ ಸಂಬಂಧವಾಗಿ ಪಂಡಿತ ನೆಹರು ಗಳು ಅಮೆರಿಕ, ಬ್ರಿಟನ್ ಮತ್ತು ರಷ್ಯಗಳಿಗೆ ಕೊಟ್ಟ ಶಾಂತಿ ಸೂಚನೆಯು ಅಕಲಹದ ಒಂದು ಪಕ್ಷದವರಿಂದ ಅಪೂರ್ವವಾದರೂ ಅಂತರ್ರಾಷ್ಟ್ರೀಯ ರಂಗದಲ್ಲಿ ಅದರ ಪ್ರಭಾವವಿಗಲೂ ತೋರಿಬರುತ್ತಿದೆ. ಹಲವು ತಿಂಗಳುಗಳಿಂದ ಭದ್ರತಾ ಕೌನ್ಸಿಲು ಮತ್ತು ಸಂಯುಕ್ತ ರಾಷ್ಟ್ರ ಸಂಘದ ಇತರ ಕಾರ್ಯಕಲಾಪಗಳಲ್ಲವನ್ನೂ ಒಹಿಸ್ಕರಿಸಿದ್ದ ರಷ್ಯವು ಅಕಸ್ಮಾತ್ ಅದರಲ್ಲಿ ಭಾಗಿಯಾಗಲು ನೆಹರೂ ಸೂಚನೆಯೂ ಒಂದು ಕಾರಣ. ಸ್ಟಾಲಿನರು ಕೊಡೇ ನಮ್ಯತಿಸಿದ್ದು ಮಾತ್ರವಲ್ಲ, ಅವರ ಪ್ರತಿನಿಧಿಯೀಗ ಭದ್ರತಾ ಕೌನ್ಸಿಲಿನಲ್ಲಿ ಅಧಿಕರಿಸಿರುವುದೂ ನೆಹರುಗಳ ಶರ್ತಗಳನ್ನೆ; ಟ್ರುಮನ್-ನೆರು ನಕಾರಬಂದರೂ ಅಸೂಚನೆಗೆ ಪ್ರೋಜೆಯಾಗಿದ್ದ ಯುಥಾರ್ಥತೆಗೆ ಮನ್ನಣೆ ಸೂಚಿಸದಿರಲು ಆ ಕಡೆಯವರಿಗೂ ಅಸಾಧ್ಯವಾಗಿದ್ದಿತು ಲೋಕದ ದ್ವಿಪಾಲಯಗಳೊಳಗಿನ ಕಚ್ಚಾಟದಲ್ಲಿ ಭಾರತವು ಎಂತಹ ಘೆದರುಧೃಷ್ಟಿಕ್ಕೇ ಸ್ಥಾನವನ್ನು ವಹಿಸಲಿದೆ ಮತ್ತು ವಹಿಸಬಲ್ಲದು ಎಂಬುದು ಈ ಮೂಲಕ ಸ್ಪಷ್ಟಂಚಕ್ಕೇನೇ ಮನವರಿಕೆಯಾಗಿದೆ. ಸ್ವತಂತ್ರ ಭಾರತದ ಪ್ರಧಾನ ಮಂತ್ರಿಗಳು ಇಷ್ಟರಲ್ಲೇ ಗಳಿಸಿರುವ ಲೋಕೋಚ್ಚ ನಾಗರಿಕ ಸ್ಥಾನ-ಸ್ವತಂತ್ರ ಭಾರತದ ಅತಿ ಪುರಾತನ ಸಂಸ್ಕೃತಿ ಸಭ್ಯತೆ ಮತ್ತು ಹಿರಿತನ-ಇವೆಲ್ಲವೂ ಪ್ರಪಂಚದ ಯಾವುದೇ ರಾಷ್ಟ್ರಕ್ಕಾದರೂ ಭೂಷಣವ್ಯಾಯವಿನೆ. ಸ್ಪರ್ಧಾನಿ ಪಂಡಿತಜೀ ಅಮೆರಿಕ, ಇಂಡೋನೇಶಿಯ, ಬರ್ಮ, ಸಿಂಗಾಪುರಂಗಳಲ್ಲಿ ಗಳಿಸಿದ ಗೌರವವೆ-ಲೋಕದ ಯಾವ ಮೂಲೆಗೆ ಹೋದರೂ ಅವರಿಗೆ ಕಾದಿರುವ ಸ್ವಾಗತವು-ಸ್ವತಃ ಅವರ ವ್ಯಕ್ತಿತ್ವ ಮತ್ತು ಭಾರತದ ವೈಶಿಷ್ಟ್ಯ ಲೋಕಾಮೋಘವಾದವುಗಳೆಂಬುದನ್ನು ತೋರಿಸುವಂತಹವಿವೆ. ವಿದೇಶಗಳೊಡನೆ ಸ್ವತಂತ್ರ ಭಾರತವಿಟ್ಟಿರುವ ಸಂಬಂಧ ಮತ್ತು ರಾಯಭಾರೀ ಕಚೇರಿಗಳು ಹಾಗೂ ಮಾಡಿಕೊಂಡಿರುವ ಕರಾರುಗಳು, ಒಪ್ಪಂದಗಳು ಈ ದೇಶದ ಸ್ಥಾನಮಾನಗಳಿಂತಹವೆಂಬುದನ್ನು ವಿದಿತಪಡಿಸುವವುಗಳೇ. ಅಂತೂ ಮೂರು ವರುಷಗಳ ಸ್ವಾತಂತ್ರ್ಯಕೆಯಿಂದ ಭಾರತವು ರಾಜಕೀಯತಃ ಗಳಿಸಿರುವ ಶ್ರೀಮತ್ತೆ ಮತ್ತು ಯಶಸ್ಸು ಆತ್ಯಸೋಪಾದವಾದವುಗಳು; ಅತ್ಯಂತ ಪರಾಮರ್ಶಕಾರಿಗಳು.

ಒಳಗಿನ ಸ್ಥಿತಿ

ರಾಜಕೀಯವಾಗಿ ಒಳಗೂ ಹೊರಗೂ ಇಂತಹ ಪ್ರಭಾವ ಗಳಿಸಿರುವ ಭಾರತವು ಆರ್ಥಿಕರಂಗದಲ್ಲಿ ಗಣ್ಯವಾದುದೇನನ್ನೂ ಸಾಧಿಸಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕಾಗಿ ಆಶ್ರಿತರಾಜ್ಯಗಳನ್ನಾಸ್ಥಾನಕ್ಕೆರ್ಮಾನದಂತಹ ರಾಜಕೀಯ ಜಟಿಲ ಸಮಸ್ಯೆಗಳೆ, ಜಾತೀಯತಾ ಗೊಂದಲದಂತಹ ಹೇಯಾಚರಣೆಗಳು ಸ್ವರಾಜ್ಯ ಸ್ಥಾಪನೆಯಾದ ವಿಘಾನದ ದೆಸೆಯಿಂದ ಹುಟ್ಟಿದವುಗಳು. ಅವುಗಳೀಲಬೇಕು ಮತ್ತವುಗಳ ನಿವಾರಣೆಯಾಗಬೇಕೂ ಎಂಬ ಕರ್ತವ್ಯನ್ನೂ ಸ್ವತಂತ್ರಭಾರತಕ್ಕೆ ಲಗಾಮಾಗಿ ಇರುವಂತಹದಲ್ಲ. ಚರ್ಚೆಲ್ಲಂತಹ ಭಾರತ ಸ್ವಾತಂತ್ರ್ಯ ದ್ರೋಹಿಗಳು, ಸ್ವರಾಜ್ಯ ದಾನಕ್ಕೆ ಮನಸ್ಸಿಲ್ಲದಾಗ ಆ ಕಾಲದಲ್ಲಿ, ಇಂತಹ ಗಂಡಾಂತರಗಳೇಳಲಿವೆ ಎಂಬ ಭವಿಷ್ಯವನ್ನು ನೆವನಕ್ಕಾಗಿ ಹೇಳುವಿದ್ದಿತು. "ಆಪ ಭಾರದಲ್ಲಿ ಅನಾಹತಗಳು ಕೆಲವಂದ ತೋರಿ ಒರಬಹುದಾದರೂ ಅವಿಲ್ಲವನ್ನೂ ಶೌರ್ಯದಲ್ಲೇ ಇತ್ಯರ್ಥ ಪಡಿಸಿಕೊಂಡು ವ್ಯವಸ್ಥೆಗೆ ಬರಲು ಭಾಮಿಗೆ ಗೊತ್ತಿದೆ." ಎಂದು ಗಾಂಧಿಜೀ ಆ ಕಾಲದಲ್ಲಿ ಉತ್ತರಿಸಿದ್ದರು. ಬ್ರಿಟಿಷರು ಅಧಿಕಾರ ಬಿಟ್ಟು ಕೊಟ್ಟ ರೀತಿ ಭೀತಿಗಳ ದೆಸೆಯಿಂದ ಚರ್ಚೆಲ್ಲರಂಥವರ ಭವಿಷ್ಯವು ಸತ್ಯವಾದಂತೆಯೇ, ಭಾರತ ಮಹಾತ್ಮೆಯ ಬಲದಿಂದ ಗಾಂಧಿಯಾಡಿದ್ದ ಭವಿಷ್ಯವೂ ಸತ್ಯವಾಗಿದೆ. ಆದರೆ ಇವೆಂದು ಸ್ಥಿತಿಗಳೂ ಇಷ್ಟಡೆಯವರ ನಿರೀಕ್ಷೆಗಳಾಗಿದ್ದುವಷ್ಟೆ. ಸ್ವಾತಂತ್ರ್ಯವು ಜನ ಸಾಮಾನ್ಯರ ಆರ್ಥಿಕ ಸಾಮಾಜಿಕ ಸ್ಥಿತಿ ಸುಧಾರಣೆಗಾಗಿಯೇ ಸಾಧಿಸಲ್ಪಡುವಂತಹದೆಂದು ಆ ಕಾಲದಲ್ಲಿ ಒತ್ತಿ ಹೇಳಲಾಗಿದ್ದಿತು; ಅದನ್ನೇ ಸಂಕಲ್ಪವಾಗಿ ಒಟ್ಟುಕೂಡಿಸಲಾಗಿದ್ದಿತು. ಆದರೆ ನಿಜಕ್ಕೂ ಆ ಸಂಕಲ್ಪ ಈವರೆಗೆ ಈಡೇರಿಲ್ಲ. ಪ್ರಬಲಿತ ಸಾಮಾಜಿಕಾರ್ಥಿಕ ಅಸ್ತಿವಾರವನ್ನೇ ಅಡಿಮೇಲು ಮಾಡಿ, ಅಮೂಲಾಗ್ರವಾಗಿ ಹೊಸ ಶಕ

(ಎನೇ ಪುಟ ನೋಡಿರಿ)

THE CANARA MUTUAL ASSURANCE COMPANY LIMITED

H. O. UDIPI. Estd: 1935

Hunger Knows No Holiday.

Parental love will make tremendous efforts and face terrible sufferings to satisfy the hunger of the young. This is Nature's plan to supply the need of the helpless and to enable life to march on. To complete this plan the continuance of the parent's life is necessary.

But humanlife is frail and uncertain. Life insurance is the only certain provider of the comforts of home, education and of a fair chance in life for our Children

T. R. A. Pai

Managing Director

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.

Advocate & President, District Board, S. Kanara.

CHAIRMAN

Approved form by the Gov. of Mysore
Certificated by the Agents of the Govt.

THE
Canara Banking Corporation Ltd.
(Incorporated in India.)
Estd: 1906.
Head Office : **UDIPI, (S. I.)**

Capital Authorised .... Rs. 25,00,000
Capital Issued, Subscribed & Paid up .... Rs. 20,00,000
Reserves .... Rs. 9,44,765



ಗುರುವಾರ, ಉಡುಪಿ, ೧೬-೮-೧೯೫೦

ಆಹಾರ ಬೊಬ್ಬೆ.

ಸ್ವತಂತ್ರತೆಗಳಿಕೆಗೆ ಮೂರು ವರುಷ ಕಳೆದು ನಾಲ್ಕನೇ ವರುಷ ಹಿಡಿದಿರುವ ಸುಸಂದರ್ಭದಲ್ಲಿ ಜೈಕಾರಗಳಿಗಿಂತ ಅಧಿಕವಾಗಿ ಆಹಾರ ಬೊಬ್ಬೆ ಕೇಳಿ ಬರುತ್ತಿರುವುದು ಅತ್ಯಂತ ಶೋಚನೀಯ. ದೇಶದ ಕೆಲವೆಡೆಗಳಿಂದ ಕೇಳಿ ಬರುತ್ತಿರುವ ಆಹಾರಾಭಾವ– ಬಿಸಾರಿನಲ್ಲಿ ಉದಂಗ್ನಿಯಿಂದ ಕೆಲವು ಮರಣಗಳಾಗಿರುವುದೂ ಕರೀಕರತೆಗೇದಿರುವ ಆಹಾರ ಕೊರತೆ– ಮದ್ರಾಸ್ ಸಂಸ್ಥಾನದಲ್ಲಿ ಅಕ್ಕಿಯ ಪರಿಮಾಣ ಅರ್ಧಕ್ಕಿಗೆ ತಗ್ಗಿದುದಲ್ಲದೆ ಸಕ್ಕಿಣ ಕನ್ನಡದ ಕೆಲವು ಕಳ್ಳೀ ಸ್ಟೋರ್‌ಗಳು ಕೆಲವು ದಿನಗಳಿಂದ ಖಾಲಿಯಾಗಿರುವ ಸುದ್ದಿ– ಇವೆಲ್ಲವೂ ಸ್ವಾತಂತ್ರ್ಯ ದಿನದ ಮಹತ್ವವನ್ನು ಕೆಡಿಸಿವೆ. ಈ ಬಾರಿಯ ಆಗೋಸ್ತು ೧೫ನ್ನು ಸ್ವಾತಂತ್ರ್ಯದ ಮೂಲನೇ ವರ್ಧಂತಿ ದಿನವೆಂದು ಸ್ಮರಣ ಮಾಡುವ ಬದಲಿಗೆ ಸಕ್ಕಿಣ ಕನ್ನಡದ ಕಳ್ಳಿಗರು ಉಸವಾಸದ ಮೂರನೇ– ನಾಲ್ಕನೇ–ದಿನವೆಂದು ಕುದಿವ ಹೊಟ್ಟೆ, ಬೆಂದ ಹೃದಯದಿಂದ ನೆನಸಬೇಕಾಗಿ ಬಂತು. ಸ್ವರಾಜ್ಯದ ನಾಲ್ಕನೇ ವರುಷಾರಂಭದಲ್ಲಿಯೂ ಈ ದುಸ್ಥಿತಿಯೇ, ಎಂಬ ಪ್ರಶ್ನೆಗೆ ಸಮಾಧಾನಕರ ಉತ್ತರ ಕೊಡುವುದು ಸುಲಭವಲ್ಲ. ಉತ್ತರಿಸಲು ಪ್ರಯತ್ನಿಸಬಹುದು; ಹೊಣೆಹೊತ್ತವರು ಅಂತಹ ಸಾಹಸಕ್ಕೆ ಕೈಯಿಕ್ಕಿರುವುದೂ ಕಂಡು ಬರುತ್ತದೆ. ಆದರೆ ಎಂತಹ ಮತ್ತ ಎಷ್ಟು ಕಾರಣಗಳನ್ನು ತಂಬಿಸಿಯಾದರೂ ಹಸಿದ ಹೊಟ್ಟೆಯನ್ನು ತಣಿಸುವುದು ಅಸಾಧ್ಯ. ಯಾವ ಕಾರಣದಿಂದಾದರೂ ದಿವಸದಲ್ಲಿ ಮೂರು ಹೊತ್ತಿದ್ದುದು ಒಪ್ಪೊತ್ತಿಗೆ– ಮೂರನೇ ಒಂದಂಶಕ್ಕೆ–ಇಳಿದ ಆಹಾರವನ್ನಕೂಡಾ ಕೆಲವು ದಿನಗಳ ಮಟ್ಟಿಗೆ ಮನ್ನಾ ಪಡಿಸುವದೆಂದು ರೇನು, ಎಂಬುದೇ ಈಗ ಸಾರ್ವಜನಿಕರ ಆಗ್ರಹದ ಪ್ರಶ್ನೆ. ವಾರಕ್ಕೊಂದು ದಿನ ಸ್ವಯಂಪ್ರೇರಣೆಯಿಂದ ಧಾನ್ಯಾಹಾರ ತ್ಯಾಗ ಮಾಡಬೇಕೆಂದು, ಮೊದಲೇ ಅರೆ ಹೊಟ್ಟೆಯಿಂದಿರುವ ಜನತೆಗೆ ಬೋಧಿಸುವುದು ಎಷ್ಟು ಕಷ್ಟದ ಕೆಲಸವೆಂಬುದು ಶ್ರೀ. ಕೆ. ಎಮ್. ಮುನ್ಷಿಗಳಂಥವರಿಗೆ ಗೊತ್ತಿದೆ; ಆದ್ದರಿಂದಲೇ ಅವರು ಏಕದೇಶ ಮಹಾತ್ಮೆಯನ್ನು ವರ್ಣಿಸಿ, ತದ್ಗತಿಲೆ ಮೆದ್ದ ಮುನಿಗಳ ಪಶಪಂಗ್ತಿಯತ್ತ ಕೈ ತೋರಿಸಿ, ಜನತೆಯನ್ನು ಸಮಜಾಯಿಸಲು ನೋಡಿದ್ದರು. ಆದರೆ ಯಾವ ಬೋಧನೆ ಅಥವಾ ಸೂರ್ವ ಸೂಚನೆಯೂ ಇಲ್ಲದ ಮೂರು ನಾಲ್ಕು ಏಕಾದಶಿಗಳನ್ನು ಒಟ್ಟಿಗೆ ಆಚರಿಸುವ ಅನಿವಾರ್ಯ ತಪಸ್ಸು ಕಡ್ಡಾಯವಾಗಿ, ಜನತೆಯ ಮೇಲೇ ಹೇರಲ್ಪಟ್ಟುದಕ್ಕಾಗಿ ಯಾರು ಯಾವ ಸಮಾಧಾನ ಹೇಳಬಲ್ಲರು? ಬಹುಧಾನ್ಯಗಳ ಉತ್ಪನ್ನ, ಸಂಗ್ರಹ, ಅವುಡು, ವೆಚ್ಚ ಮುಂತಾದುವುಗಳ ಕುರಿತು ಮದ್ರಾಸ್ ಸಂಸ್ಥಾನವು ಮುಂದಿಟ್ಟಿರುವ ಪರಿಶೋಧನೆಯಿಂದಲಿ ನರಿಯನೆ, ಎನ್ನಬಹುದಾದ ಆಯವ್ಯಯಪಟ್ಟಿಯು ಜನತೆಯ ಹೊಟ್ಟೆಗೆ ಬಿಗಿದುಕೊಳ್ಳಲಾಗುವ ನಡುಪಟ್ಟಿಯಾಗಬಲ್ಲುದೆ? ಆಗತ್ಯವಾಗಿ ಆಗಬೇಕೆಂದು ತೋರಿಸಿದ ಯಾವುದೇ ಪತ್ರಿಯಲ್ಲಿ ವಿಜ್ಞಾನಚ್ಚಿದರೂ 'ಅದು ಜೀವನ ಮರಣದ ಪ್ರಶ್ನೆ'ಯೆನ್ನುತ್ತಿತ್ತು. ತತ್ಪ ಕಾರ್ಯಾಚರಣೆಗೆ ಕೈಕೊಳ್ಳಲು ನಮ್ಮ ಸಂಸ್ಕಾರಕ್ಕೆ ತಿಳಿದಿದೆ ಆದರೆ ಜೀವನ ಮರಣದ ವಿಷಯವೆಂಬುದು ಮೂಲ ಹೆಸರೇ ಆಗಿರುವ ಆಹಾರದ ಮಟ್ಟಿಗೆ ಇಂತಹ ಅವ್ಯವಸ್ಥೆಯೆಂದರೇನನ್ನಬೇಕು? ಅದೂ ಆಹಾರೋತ್ಪಾದಕಾಂದ ಕಳ್ಳಿಗರ ಪಾಲಿಗೇನ!

ಹಸುಗೇ ಪರಿಮಾಣದಲ್ಲಿ ಏಳು ಪರ್ಸೆಂಟ್ ಇದ್ದ ಅಕ್ಕಿಯ ಅಂತ ಆಬು ಪರ್ಸೆಂಟಿಗೆ ತಗ್ಗಿದುದರಿಂದ ಜನತೆಯಲ್ಲಿ ಎಂತಹ ವೇದನೆಯಿದೆ, ಎಂಬುದನ್ನು ಇಲ್ಲಿ ವರ್ಣಿಸುವ ಅಗತ್ಯವಿಲ್ಲ. ಆರೋನ್ಸ್ ಸಡಿಯು ಶಮಬದ್ಧ ಹಸುಗೇ ಕ್ಷೇತ್ರಗಳಲ್ಲಿರುವ ಪಟ್ಟಿಣಗಳಲ್ಲಿ ಕಳದ ಆದಿತ್ಯವಾರದಿಂದ ಜಾರಿಯಲ್ಲಿದೆಯಾದರೆ ಕಳ್ಳಿಗರಲ್ಲಿಯೂ ಕೆಲವರಿಗೆ ಮೊದಲೇ ಇಂತಹ ಕಡಿತ ಕಂಡುಬಂದಿದೆ. ಇತ್ತೀಚೆಗಿನ ಕೆಲವು ವಾರಗಳಿಂದ ಗ್ರಾಮಗಳಲ್ಲಿ ನಿಶ್ಚಿತ ಪರಿಮಾಣದಷ್ಟು ಅಕ್ಕಿ ಮತ್ತಿತರ ಧಾನ್ಯಗಳ ವಿತರಣೆಯೂ ಆಗುತ್ತಿರಲಿಲ್ಲ. ಈಗಂತೂ ಹಲವು ಕಳ್ಳೀ ಸ್ಟೋರುಗಳು ಕೆಲವು ದಿನಗಳಿಂದ ಗುಡಿ ಸಿಟ್ಟಂತೆ ಖಾಲಿಯಾಗಿವೆ, ಎಂಬ ರೋದನ ಕೇಳಿಬರುತ್ತಿದೆ. ಇದೇಕೆ ಹೀಗೆ? ಹಳ್ಳಿಗಂಗೇಕೆ ಈ ಶಿಕ್ಷೆ? ಎಂಬುದೇ ಇಲ್ಲಿಯ ಪ್ರಶ್ನೆ. ಊಟದ ಮತ್ತು ಕಳ್ಳ ಸಂತೆಯ ಅಕ್ಕಿಯಿರುವವರು ಹಳ್ಳಿಗರಲ್ಲಿ ಕೆಲವರಿರಬಹುದು. ಅಂತಹ ಕೆಲವೇ ಮಂದಿಯನ್ನು ಗ್ರಾಮ-ಕೈಲ್ಲ ನ್ಯಾಯ ಪ್ರಕಾರ ಧಾನ್ಯ ವಿತರಣೆ ಮಾಡುವ ಸ್ಟೋರುಗಳಿಂದು ಶ್ರೀ. ಕೆ. ಎಮ್. ಮುನ್ಷಿಗಳಂಥವರಿಗೆ ಗೊತ್ತಿದೆ; ಆದ್ದರಿಂದಲೇ ಅವರು ಏಕದೇಶ ಮಹಾತ್ಮೆಯನ್ನು ವರ್ಣಿಸಿ, ತದ್ಗತಿಲೆ ಮೆದ್ದ ಮುನಿಗಳ ಪಶಪಂಗ್ತಿಯತ್ತ ಕೈ ತೋರಿಸಿ, ಜನತೆಯನ್ನು ಸಮಜಾಯಿಸಲು ನೋಡಿದ್ದರು. ಆದರೆ ಯಾವ ಬೋಧನೆ ಅಥವಾ ಸೂರ್ವ ಸೂಚನೆಯೂ ಇಲ್ಲದ ಮೂರು ನಾಲ್ಕು ಏಕಾದಶಿಗಳನ್ನು ಒಟ್ಟಿಗೆ ಆಚರಿಸುವ ಅನಿವಾರ್ಯ ತಪಸ್ಸು ಕಡ್ಡಾಯವಾಗಿ, ಜನತೆಯ ಮೇಲೇ ಹೇರಲ್ಪಟ್ಟುದಕ್ಕಾಗಿ ಯಾರು ಯಾವ ಸಮಾಧಾನ ಹೇಳಬಲ್ಲರು? ಬಹುಧಾನ್ಯಗಳ ಉತ್ಪನ್ನ, ಸಂಗ್ರಹ, ಅವುಡು, ವೆಚ್ಚ ಮುಂತಾದುವುಗಳ ಕುರಿತು ಮದ್ರಾಸ್ ಸಂಸ್ಥಾನವು ಮುಂದಿಟ್ಟಿರುವ ಪರಿಶೋಧನೆಯಿಂದಲಿ ನರಿಯನೆ, ಎನ್ನಬಹುದಾದ ಆಯವ್ಯಯಪಟ್ಟಿಯು ಜನತೆಯ ಹೊಟ್ಟೆಗೆ ಬಿಗಿದುಕೊಳ್ಳಲಾಗುವ ನಡುಪಟ್ಟಿಯಾಗಬಲ್ಲುದೆ? ಆಗತ್ಯವಾಗಿ ಆಗಬೇಕೆಂದು ತೋರಿಸಿದ ಯಾವುದೇ ಪತ್ರಿಯಲ್ಲಿ ವಿಜ್ಞಾನಚ್ಚಿದರೂ 'ಅದು ಜೀವನ ಮರಣದ ಪ್ರಶ್ನೆ'ಯೆನ್ನುತ್ತಿತ್ತು. ತತ್ಪ ಕಾರ್ಯಾಚರಣೆಗೆ ಕೈಕೊಳ್ಳಲು ನಮ್ಮ ಸಂಸ್ಕಾರಕ್ಕೆ ತಿಳಿದಿದೆ ಆದರೆ ಜೀವನ ಮರಣದ ವಿಷಯವೆಂಬುದು ಮೂಲ ಹೆಸರೇ ಆಗಿರುವ ಆಹಾರದ ಮಟ್ಟಿಗೆ ಇಂತಹ ಅವ್ಯವಸ್ಥೆಯೆಂದರೇನನ್ನಬೇಕು? ಅದೂ ಆಹಾರೋತ್ಪಾದಕಾಂದ ಕಳ್ಳಿಗರ ಪಾಲಿಗೇನ!

ಸುದ್ದಿಪಿಟಿ

ಮುನಿಸಿಪಿಲ್ ಕೌನ್ಸಿಲು ಸಭೆಯು:— ಇವೇ ತಾ. 12ರಲ್ಲು ವೈಸ್ ಚೆಯರ್‌ಮೆನ್ ಶ್ರೀ ಎ. ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಮುನೀದಿ ರಸ್ತೆ ಮತ್ತು ಮಾರುತಿವೀಥಿಕಾ ರಸ್ತೆಗಳನ್ನು ಧೂಳು ಹಾರದ ಬಾಕಿಗಳನ್ನಾಗಿ ಮಾಡುವರಿತಗಲುವ ಖರ್ಚನ್ನು ನುಡ್ರಾಸು ಸರಕಾರದಿಂದ ಅರ್ಧಾಂಶ ಸಾಲನಾಗಿಯೂ ಅರ್ಧಾಂಶ ಗ್ರಾಂಟು ರೂಪದಲ್ಲೂ ಪಡೆಯಬೇಕೆಂದಾಯಿತು. ಎಡ್ಯುಕೇಶನ್ ಟೀಕ್ಸನ್ನು ಏರಿಸಬೇಕೆಂಬ ಸರಕಾರಿ ಸೂಚನೆಗೆ ಕೌನ್ಸಿಲಿನ ಒಪ್ಪಿಗೆ ದೊರೆಯಲಿಲ್ಲ. ಗಾಂಧಿ ಮೆನೋರಿಯಲ್ ಕಾಲೇಜಿಗೆ ಕೊಡಲು ನಿರ್ಧರಿಸಿದ ಸಹಾಯ ಧನ ಒಂದು ಸಾವಿರ ರೂಪಾಯಿಯಲ್ಲಿ ಈವರೆಗೆ ಇನ್ನೂರ ಐವತ್ತು ರೂಪಾಯಿಗಳನ್ನು ಕೊಡಬಹುದೆಂದಾಯಿತು. ಶಿವಳ್ಳಿ ಗ್ರಾಮದ ಕಾಂಜಿಬಿಟ್ಟು ಸಮೀಪದ ಸ್ಥಳವನ್ನು ಗಾಡಿಎತ್ತಿನ ಶೀಲ್ಡಾಣಕ್ಕಾಗಿ ಉಪಯೋಗಿಸಬೇಕಾಗಿರುವುದರಿಂದ್ ಆ ಸ್ಥಳವನ್ನು ಹರಜನರಿಗೆ ಕೊಡಲು ಸಾಧ್ಯವಿಲ್ಲವೆಂದು ತಹಶೀಲ್ದಾರರಿಗೆ ತಿಳಿಸಬೇಕೆಂದಾಯಿತು. ಅಜ್ಜರಕಾಡು ಟೌನ್‌ಪ್ಲಾನಿಂಗ್ ಯೋಜನೆಯ ತೀರ್ಮಾನವನ್ನು ಮುಂದಿನ ಸಭೆಗೆ ಬಾಕಿಯಿಡಲಾಯಿತು, ಅಬ್ಬಾರಣ್ಯ ಕೇಂದ್ರದಲ್ಲಿ ಪೆಟ್ರೊಮೇಕ್ಸ್ ದೀಪವನ್ನಿಡುವರೆ ಕೌನ್ಸಿಲಿನ ಒಪ್ಪಿಗೆ ದೊರೆಯಿತು. ಒಂದು ವರುಷದೊಳಗಿನ ಬಡ ಮಕ್ಕಳಿಗೆ ಧರ್ಮಾರ್ಥ ಹಾಲನ್ನೀಯುವರೆ ಐನೂರು ರೂಪಾಯಿ ಸೆಂಕ್ಷನ್ ಮಾಡಲಾಯಿತು.

ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ:— ಆಗೋಸ್ತ್ 15ರಂದು ಮುಂಜಾನೆ ಉಡುಪಿಯ ಸಾರ್ವಜನಿಕರು, ಶಾಲಾವಿದ್ಯಾರ್ಥಿನಿಯರು, ಪೋಲೀಸರು ಮತ್ತು ಸರಕಾರೀ ಹಾಗೂ ಕಾಂಗ್ರೆಸ್ ಅಧಿಕಾರಿಗಳೇ ಮೊದಲಾದವರಿದ್ದ ಪ್ರಭಾತ ಮೆರವಣಿಗೆಯು ಆನೆ ಮತ್ತಿತರ ಸಂಭ್ರಮಗಳಿಂದ ರಥಬೀದಿಯಿಂದ ಹೊರಟು ಗಾಂಧೀ ಮೈದಾನಿಗೆ ಮುಟ್ಟಿತು. ಅಲ್ಲಿ ಶ್ರೀ ಸಿ. ಮಂಜುನಾಥ ನಾಯಕರಿಂದ ರಾಷ್ಟ್ರಧ್ವಜಾರೋಹಣ, ಜಾತಾತ್ಮರಿಗಾಗಿ ಮೌನ ಪ್ರಾರ್ಥನೆ, ಶ್ರೀ ಟಿ. ಎ. ಪೈಗಳ ಭಾಷಣ, ಇತ್ಯಾದಿಗಳಾದುವು.

ಎಂ. ಜಿ. ಎಮರ್. ಕಾಲೇಜು:— ಮಹಾತ್ಮಗಾಂಧೀ ಸ್ಮಾರಕ ಕಲಾಶಾಲೆಯಲ್ಲಿ ಪೂರ್ವಾಹ್ನ ಧ್ವಜವಂದನೆ ಜಂಗಿ, ಪ್ರಿನ್ಸಿಪಾಲ್ ಶ್ರೀ ಯಜ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಸಭೆ ನೇರಿತು. ಅದಿನದ ಮಹತ್ವ, ಜನತೆಯ ಕರ್ತವ್ಯ ಇತ್ಯಾದಿಗಳ ಕುರಿತು ಪ್ರೊಫೆಸರರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಷಣಗಳಾದುವು. ಸಾಯಂಕಾಲ, ಸ್ವತಂತ್ರಭಾರತ ಜನಜೀವನದ ಸದ್ಯ ಸ್ಥಿತಿಯನ್ನು ಚಿತ್ರಿಸುವ 'ಸರ್ವಾಪರಾಧಿ' ಎಂಬ ನಾಟಕ 'ಕೊರಿಯಾ ಯುದ್ಧ' ಎಂಬ ಯಕ್ಷಗಾನ ಪ್ರಹಸನ ಮುತ್ತಿತರ ವಿವಿಧ ವಿನೋದಾವಳಿಗಳು ಕಾಲೇಜು ವಿದ್ಯಾರ್ಥಿಗಳಿಂದ ಯಶಸ್ವಿಯಾಗಿ ಅಭಿನಯಿಸಲ್ಪಟ್ಟುವು. ಈ ಸಂದರ್ಭದಲ್ಲಿ ಮಹಾತ್ಮಾಗಾಂಧಿಯವರ ದೇಹಾರ್ಧವಿಗ್ರಹ(bust)ವನ್ನು ದಾನಿ ಸುಂದರರಾವು ಪೈಗಳು ಅನಾವರಣ ಮಾಡಿದರು.

ಕಲಾಸ್ಪಂದದಲ್ಲಿ:—ಸ್ವರಾಜ್ಯ ದಿನಾಚರಣಾ ಸಭೆಯು ಆ ಪ್ರಾಪ್ತ ಶ್ರೀ ಚಂದ್ರೇಶ್ವರ ದೇವಾಲಯ ಮೈದಾನದಲ್ಲಿ ಶ್ರೀ ಎಂ. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೇರಿತು. ಕವಿತಾಪಾಠನ ನಡೆದು ಸ್ವರಾಜ್ಯಾದರ್ಶತೆಯ ಸದ್ಯಸ್ಥಿತಿ, ಜನತೆಯ ಹೊಣೆ ಇತ್ಯಾದಿಗಳ ಕುರಿತು ವ್ಯಂದರ ಕೆಲವು ಸದಸ್ಯರು ಭಾಷಣಗಳನ್ನಿತ್ತರು.

ಬೋರ್ಡಿಂಗ್ ಹೈಸ್ಕೂಲಿನಲ್ಲಿ:— ಮುಂಜಾನೆ ೯ಮುಖ್ಯೋಪಾಧ್ಯಾಯ ಶ್ರೀ ಕೆ. ಸಂಜೀವ ಶೆಟ್ಟರ ಹಸ್ತದಿಂದ ಧ್ವಜಾರೋಹಣ ಸಮಾರಂಭ ಜರಗಿತು.

ಮಲ್ಪೆ ಬಂದರಕ್ಕೆ ಕಾಂಕ್ರೀಟ್ ಕಟ್ಟೆ:— ಮಲ್ಪೆ ಬಂದರದಲ್ಲಿ ಮೀನುಗಾರರ ಸೌಕರ್ಯಕ್ಕಾಗಿ ಮದ್ರಾಸು ಸರಕಾರವು ಮೂವತ್ತು ಸಾವಿರ ರೂಪಾಯಿ ಖರ್ಚಿನಿಂದ ಒಂದು ಕಾಂಕ್ರೀಟ್ ಕಟ್ಟೆಯನ್ನು ಕಟ್ಟಿಸಲು ನಿರ್ಧರಿಸಿದೆ. ಬಂದರದ ಮೀನುಗಾರ ಕೆಡ್ಡನ್ನು ದೊಡ್ಡದು ಮಾಡಲು ಸಹ ಆಲೋಚಿಸಿಯಿದೆ. ಬಂದರದಲ್ಲಿ ವರ್ಷಿಯುವ ಸುಂಕದ ದರವನ್ನು ಎಷ್ಟರವರೆಟ್ಟಿಗೆ ಜಾಸ್ತಿಮಾಡಿದರೆ ಕೆಡ್ ವಿಸ್ತರಣದ ಖರ್ಚನ್ನು ಭರ್ತಿಮಾಡಿಕೊಳ್ಳಲು ಶಕ್ಯವಿದೆ ಎಂಬುದನ್ನು ವಿಮರ್ಶಿಸಿ ವರದಿ ಮಾಡಲು ಖಾಸಗಿಕ ಪೋರ್ಟ್ ಆಫೀಸರರನ್ನು ನುಡ್ರಾಸು ಸರಕಾರವು ಕೇಳಿಕೊಂಡಿದೆ.

(೫ನೇ ಪುಟದಿಂದ ಮುಂದರಿದುದು)

ಕಟ್ಟನ್ನು ಹಾಕಿಕೊಳ್ಳಲು ಇದುವರೆಗೂ ಇಲ್ಲ ವೆಂಬುದು ಮೂರು ವರ್ಷಾವಧಿಯ ಈ ಸಂದರ್ಭದಲ್ಲಿ ಏಳುವಂತಹ ದೂರಲ್ಲ. ಸರ್ವಲಕ್ಷ್ಯ ಮತ್ತು ಶಕ್ತಿಯನ್ನು ಕೊಡ ಬೇಕಾಗಬಹುದಾದ ಅಂತಹ ಕ್ರಾಂತಿಕಾರೀ ಬದಲಾವಣೆಯನ್ನು ಶಕ್ತಿ ಮತ್ತು ಲಕ್ಷ್ಯವನ್ನು ತಮ್ಮೆಡೆಗೆಳೆದ. ಕೊಳ್ಳುವ ಇತರ ಅವಸರದ ಸಂಗತಿಗಳಿರುವಾಗಲೇ ಸಾಧಿಸಿ ಮುಗಿಸಿಕೊಳ್ಳಬೇಕೆಂದಿತೆಂದು ಯಾರೂ ಹೇಳಲಾರರು. ಆದರೆ ಜನ ಸಾಮಾನ್ಯರ ಇಂದಿನ ಅಸಾಮಾನ್ಯ ಪ್ರತ್ಯಾಡಚಣೆಗಳು ಇಂದೇ ನಿವಾರಿಸಲ್ಪಡ ತಕ್ಕವುಗಳೇ. ಜನತೆಯ ಅನುದಿನದ ಕಷ್ಟ ನಷ್ಟ ನಿವಾರಣಾ ಕಾರ್ಯಗಳು ಅಪ್ರತಿಹತ ಜ್ಯಗಳ ಸ್ಥಾನ ನಿರ್ಣಯಕ್ಕಿಂತ ಕೂಲೂ ಕ್ಷಿಪ್ರವಾಗಿ ಆ ಬೇಕಾಗಿದ್ದವುಗಳು. ಆದರೆ ಅಲ್ಲಿ ಪಡೆದ ರಾಜಕೀಯ ವಿಜಯ ದಂತಹ ಆರ್ಥಿಕ ಜಯವನ್ನು ಇಲ್ಲಿ ಈ ವರಗೂ ಪಡೆಯಲಾಗಿಲ್ಲ. ಜನ ಸಾಮಾನ್ಯರ ನಿತ್ಯ ಜೀವನದಲ್ಲಿ ಅನುಭವಕ್ಕೆ ಬಂದಂಥ ಗಣ್ಯ ಅನುಕೂಲತೆಯೂ ಈವರಗೂ ಸಾಧಿಸಲ್ಪಟ್ಟಿಲ್ಲ. ಬದಲಿ. ನಿತ್ಯೋಪಯೋಗಿ ಸಾಮಾಗ್ರಿಗಳ ಧಾರಣೆ ಹಚ್ಚಳ, ಕಳ್ಳ ಸಂತೆ ಹಾವಳಿ, ಲಂಚಗುಳಿತನ, ಸಡಲು ಆಡಳಿತ ಮುಂತಾದುವುಗಳು ನಿಜಕ್ಕೂ ಹೆಚ್ಚಿವೆ. ರೂಢಿಯಾದ ಸಂಬಂಧದ ನಿಹರು ಎತ್ತಲೆಯಿಂದ ಹಿಂದೀಯರು ಅಭಿಮಾನ ಪಡಬಹುದು; ಶ್ರವಣ ಸುಖವನ್ನು ಸಾಧಿಸಬಹುದು. ಆದರೆ ಕಳ್ಳಸಂತೆ ಹಾವಳಿಯ ಅಥವುಗಳನ್ನು ಕವಲೇ ಜನಗಳಲ್ಲಿ ಶ್ವಾಸಸ್ಥಾಂತಿಯೂ ಹೆಚ್ಚಾಗಿ ಬಿಡುತ್ತಿರುವ ಸಬ್ಬಸರಿಸುಂ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 261/1950

ದಿ ಉಡುಪಿ ಬೇಂಕ್ ಲಿಮಿಟೆಡ್, ಉಡುಪಿ-ಇವರ ಕಡೆಯಿಂದ ಮನೇಜರ್ ಯು. ವಾಸುದೇವ ಪ್ರಭು

—ವಾದಿ

ಮತ್ತು

1. M. ಜಯಂತ್ ರಾವ್, M. ಸದಾಶಿವ ರಾಯರ ಮಗ—

2. A. ತಾರಾನಾಥ್ ರಾವ್- ಆರೂರು ಆನಂದ್ರಾಯರ ಮಗ - ಉಡುಪಿ ತಾಲೂಕು ಪುತ್ತೂರು ಗ್ರಾಮ

—ಪ್ರತಿವಾದಿರ್

ಸದರಿ ಪ್ರತಿವಾದಿರಿಗೆ—

2ನೇ ಪ್ರತಿವಾದಿಯು 1ನೇ ಪ್ರತಿವಾದಿ ಪೆ ಸರಿನಲ್ಲಿ ತಾರೀಕು 8-4-1950ರಲ್ಲಿ ರೂಪಾಯಿ 838-0-0ಕ್ಕೆ ಕೊಟ್ಟಿರುವಾ 1ನೇ ಪ್ರತಿವಾದಿಯು ವಾದಿ ಬೇಂಕಿನಲ್ಲಿ ಡಿಸ್ಕೌಂಟ್ ಮಾಡಿ ಹಣ ಪಡೆದ ಚಕ್ಕು ಸದರಿ ನಿಂದಿಕೇಟ್ ಬ್ಯಾಂಕಿನಿಂದ dishonour ಆಗಿ ವಾಪಾಸು ಬಂದಿದ್ರಿಂದ ಆ ಬಾಬ್ತು ಪ್ರತಿವಾದಿರಿಂದ ವಾದಿ ಬೇಂಕಿಗೆ ಬರಬೇ ಆಸಲು ಬಡ್ಡಿ ಕೂಡಾ ರೂಪ್ಯಾ 811-8-9ಕ್ಕೆ ವಾದಿಯು ಪ್ರತಿವಾದಿರ ಮೇಲೆ ನೂರಿದ ಸದರಿ ವ್ಯಾಜ್ಯವು ತಾರೀಕು 31-8-1950ಕ್ಕೆ ಪ್ರಥಮ ತನಪಿ ಬಗ್ಗೆ ಯಿಜೋಣಾಗಿಯದೆ. ಆ ದಿವಸ ಪ್ರತಿವಾದಿ ಸ್ವತಹ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗದಿದ್ರೆ—ಪ್ರತಿವಾದಿರ ಗೈರ್ ಹಾಜರಿಯಾಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೊದು ಈ ಮೂಲಕ ತಿಳಿಯಪಡಿಸಿ ಕೋಣಾಗಿಯದೆ.

M. Damoder Kamath
Advocate for Plff.

ಉಡುಪಿ ಪಿ. ಕನ್ನಡ
ತಾರೀಕು 14—8—1950

ದಿಗೆ ಪ್ರತ್ಯಕ್ಷಿ ಸೇವಿಕೆಗಳ್ಳುತಿದ್ದಾರೆ. ಆದ್ದರಿಂದ ಜನತೆಗೆ ಸ್ವಾತಂತ್ರ್ಯವು ಏಹಿಗಿಂತ ಹೆಚ್ಚಿಗೆ ಕಷ್ಟವನ್ನೇ ಕೊಟ್ಟಿದೆ.

ಆಹಾರ ರಾಜ್ಯಾಪ

ಸ್ವಾತಂತ್ರ್ಯ ಬಿಂಬವನ್ನು ರೂಪು ವಾಗಿ ಅಕ್ರಮಿಸಿಕೊಂಡು ಆದರ ಪ್ರಕಾಶವನ್ನು ಪೂರ್ಣ ಮಬ್ಬು ಗೊಳಿಸಿರುವ ಆಪತ್ತೆಂದರೆ ಆಹಾರಾಭಾವ. ಸ್ವಾತಂತ್ರ್ಯದ ತೃತೀಯ ವರ್ಧಂತಿಯ ವೇಳೆ ಅದ. ತಳೆದಿರುವ ಭಾಯೆಯಂತೂ ಎಲ್ಲಾ ಸಹೃದಯರುಗಳಲ್ಲೂ ಕತ್ತಲೆಯನ್ನು ಕವಿಯಿಸುವಂತಹದಿದೆ. ಪ್ರಾಯಶಃ ಭಾರತಕ್ಕೇಗ ಎಂದು ಸ್ವಾತಂತ್ರ್ಯ ದಿನಗಳು ದೊರೆತುದರಿಂದಾಗಿರಬೇಕು- ಈ ಬಾರಿಯ ಆಗೋಸ್ತು ಹದಿನೈದರ ಆಚರಣೆಯು ಸಧ್ಯವಿದ್ದಷ್ಟು ಸಾದಾ ರೀತಿಯಿಂದಲೇ ನಡೆದಿದೆ. 'ಭಾರತ ವಿಭಜನೆ' ಸ್ವಾತಂತ್ರ್ಯದ ದಿನ ಜನವರಿ 26 ಇದೆ. ಒಂದು ರಾಷ್ಟ್ರಕ್ಕೆ ಎರಡು ಸ್ವಾತಂತ್ರ್ಯ ದಿನಗಳಿಲ್ಲ. 'ಜನತಾ ರಾಜ್ಯ' ಸ್ಥಾಪನೆಗೆ ಮೂಲ ಮತ್ತು ಆಧಾರವಾದ ಸ್ವಾಂಶ್ಯವನ್ನು ತಂದ ಆಗೋಸ್ತು 15ಕ್ಕಂತಿ, ಜನವರಿ 26 ದೊಡ್ಡದೆಂದು ಗಣಿಸಿದರೆ ತಾಯಿಗಿಂತ ಹಬ್ಬಿನ ಮನ್ನಣೆಯನ್ನು ಮಗುವಿಗೆ ಕೊಟ್ಟಂತಾಗುವುದೇನೋ ನಿಜ. ಆದರೆ ನ್ಯಾಯ ಪ್ರಕಾರ ತಾಯಿಗಿಂತ ಅಧಿಕವಾಗಿ ಪೂತ್ರಿಯನ್ನು ಮನ್ನಸಬೇಕಾಗಿ ಬರುವ ಸಂದರ್ಭಗಳೂ ಇವೆ. ಆಗೋಸ್ತು 15 ತಂದ ಸ್ವರ ಜ್ಯವು ಸಂಪೂರ್ಣವಾಗಿ ಹಿಂದೀಯರ ಕಲ್ಪನೆಯದಲ್ಲ; ಅನಪೇಕ್ಷಿತವಾದ ಮತ್ತು ಅನಾಹ್ವತಕಾರೀ ದುರ್ಘಟನೆಗಳನ್ನೂ ಅದು ನಿರ್ಮಿಸಿದ್ದಿತು. ಆದರೆ ಜನವರಿ 26ರಲ್ಲಿ ಉಸ್ತಿತ್ವದಲ್ಲಿ ಬಂದ ಜನತಾ ರಾಜ್ಯವು ಅಮೂಲಾಗ್ರವಾಗಿ ಭಾರತೀಯರ ಕೃತಿ; ಅದು ಜಗತಿಗೆ ಬಂದ ದೆಸೆಯಿಂದಾಗಿಯೇ ಉದ್ಭವಿಸಿದ್ದ ಅನಾಹುತವಾವುದೂ ಇಲ್ಲ. ಆದ್ದರಿಂದ ಆದೇ ಮುಖ್ಯವಾಗಿ ನಮ್ಮದೆಂದು ಭಾವಿಸಿಕೊಳ್ಳೋಣೆಂಬ, ಧೋರಣೆಯಿಂದಲೇ ಈ ಬಾರಿಯ ಆಗೋಸ್ತು 15ರ ಸಂಭ್ರಮವನ್ನು ಕಡಿಮೆ ಮಾಡಿದುದಾಗಿರಬೇಕು. ಹೀಗೆ ಸಂತೋಷ ಪ್ರದರ್ಶನ ಶಕ್ತಿಗುರಿವಾಗಲೇ ಆನಿವಾರ್ಯವಾಗಿ ಅತಿರೇಕ ದೃಶ್ಯ ಪ್ರದರ್ಶಿಸಬೇಕಾದ ಸ್ಥಿತಿಯು ಆಡಾಂಧಾನ್ಯಗಳ ಕೊರತೆಯಿಂದಾಗಿ ಕಂಡುಬರುತ್ತಿದೆ. ಇದು ಮನುಷ್ಯ ನಿರ್ಮಿತ ಆಪತ್ತಲ್ಲವೆಂಬ ಮಾತು ಬೇರೆ ಸಾಧನವ ನಿರ್ಮಿತ ಪಡೆ ತೊಡಕುಗಳಲ್ಲದೆ, ಕಾಲ-ನ ಗುಣ ಸಂಕಷ್ಟಗಳು ತಮ್ಮ ಹಿಡಿತಕ್ಕೆ ಬರಲಾರವು, ಎಂದು ಹೇಳಿ ಮತ್ತೂ ಆಸ್ಥಿರುವ ಹಕ್ಕು ಯಾವ ಸರ್ಕಾರಕ್ಕೂ ಇಲ್ಲ. ಕೊಪ ತಕ್ಷಷ್ಟ ಹಿಡಿದುಕೊಂಡಿದ್ದೇನೆ-ಶನ್ನೂ ಹಿಡಿಯುವುದಂಲ್ಲದ್ದೇನೆ-ಎಂದೇನೋ ವಾದಿಸಬಹುದು. ಆದರೆ ಅರೋಪಿಸಿದ ಮತ್ತು ಅರೋಪದಿಂದ ಕಪ್ಪಿಸಿಕೊಳ್ಳುವ ರಾಜಕೀಯ ಜೆಂಡಾಟದ ಪ್ರಶ್ನೆಯಲ್ಲ- ಸಾರ್ವಜನಿಕರ ಹೊಟ್ಟೆಯ ಉರಿಗುಂಡು. ಇಂತಹ ಆಪತ್ತನ್ನು ಈವರೆಗೆ ನಿವಾರಿಸಿಕೊಳ್ಳದಿರುವುದರ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸುವದು ಕೂಡಾ ಈ ಸಂದರ್ಭದಲ್ಲಿ ಅನುಚಿತ. ಸರಕಾರಗಳ ಮತ್ತು ಈ ಮಟ್ಟಿಗೆ ಅನುಕೂಲವಂತರಾಗಿರುವ ಎಲ್ಲರ ಲಕ್ಷ್ಯ, ಶಕ್ತಿ, ಸಾಕಾರ್ಯಗಳು ಈ ಮಹಾಸತ್ತಿನ ನಿವಾರಣೆಗೆ ವ್ಯಯವಾಗಬೇಕು. ಸ್ವತಂತ್ರ ಭಾರತದಲ್ಲಿ ಆ ಯೋಗ್ಯತೆಯೂ ಇದೆ, ಎಂದು ತೋರಿಬಾರದಿದ್ದರೆ, ಮಿಕ್ಕ ಎಲ್ಲ ವುಗಳ ಬಿಟ್ಟಿಯೂ ಸದ್ಯಸ್ಥಿತಿಯಲ್ಲಿ ಅಷ್ಟಷ್ಟೆ!

ಉಡುಪಿ

ನಿಧನ ವಾರ್ತೆ:— ಸ್ಥಳೀಯ ಮಹಾರಾಷ್ಟ್ರ ಎಜೆಕ್ಯೂಟೀವಿನ ಏಜೆಂಟ್ ಶ್ರೀ. ಕೆ.ವಿ. ಆರ್. ಕಾಮತರ ತಂದೆ ಶ್ರೀ ಕಜ್ಜೆ ಪಾಸುದೇವ ಕಾಮತರು ಇಂದೇ ತಾ. 4ರಲ್ಲು ಬೆಳಿಗ್ಗೆ ಉಡುಪಿಯಲ್ಲಿ ತಮ್ಮ 69ನೆ ವಯಸ್ಸಿನಲ್ಲಿ ದೈವಾಧೀನರಾದರು. ದಿವಂಗತರು ನಾಲ್ಕೂರ ಗ್ರಾಮದ ಪಟೇಲರಿದ್ದು ಸಚ್ಚರಿತ್ರರೂ, ಧರ್ಮಾಭಿಮಾನಿಗಳೂ, ಆಸ್ತಿಕ ಸ್ವಭಾವದವರೂ ಆಗಿದ್ದು ಜನಪ್ರೀತರಾಗಿದ್ದರು. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ಬಂಧು ಬಳಗದವರೊಡನೆ ಸಹಸಂತಾಪವನ್ನು ನೂಬಿಸುತ್ತೇವೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

Romeo Juliet

ತಾರೀಕು 18-8-1950ರಿಂದ

"ರೊಮಿಯೊ ಜ್ಯೂಲಿಟ್"

ನಿರೀಕ್ಷಿಸಿ: ಪವಳಕ್ಕೋಡಿ. ರಾಣಾ ಪ್ರತಾಪ್, ಸತೀತುಳಸಿ, ಕಮಲಾ

Sri Ramakrishna Theatre Limited.
UDIPI. S INDIA.

NOTICE

Please take notice that pursuant to Sec. 144(6) of the Indian Companies Act, Sri M. L Bhandary, a share-holder of the Company, has given notice of his intention to nominate Sri U. Varadaraj Nayak, B A.,A C.A., Chartered Accountant, Mangalore, as Auditor of the Company for the year ending 30-6-1951, at the Company to be held on 27-8-1950.

S. R. Bldgs; UDIPI, 14-8-1950.

Sd. A. Janardhan Alse,
Managing Director.

ಇಲೆಕ್ಟ್ರಿಕ್ ಕಂಪೆನಿಯ ಮೇ

ವಿಲ್ ವ್ಯಾಜ್ಯ- ಹೈಕೋರ್ಟು ಮು
ಕೋರ್ಟಿನಲ್ಲಿ ವಿದ್ಯುತ್ ಉಪಯೋಗ
ವರ ಕಡೆಯಿಂದ ಮಾ ಕೆ. ಎಲ್. ಪ
ಶ್ರೀಗಳಾಚಾರ್ ಆಂಡ್ ಆರ್. ಕುಂಜೂರ
ತ್ತು ಪದ್ಮನಾಭ ತೀಟ್ ಬ್ಯಾರಿಸ್ಟರರು ಉ
ಇಲೆಕ್ಟ್ರಿಕ್ ಸಪ್ಲೈ ಕೂರ್ಪರೇಶನಿನ
ಸಿವಿಲ್ ವ್ಯಾಜ್ಯ ಪಾಸುಲು ಮಾಡಿರು
ಚಾಲ್ತಿ ಕರೆಂಟ್ ದರವನ್ನು 100% ಏ
ದುದೇ ಈ ದಾವೆಗೆ ಮೂಲ ಹೇತುವಾ
ತಿದೆ. ಜಲ್ಯಾ ತಿಂಗಳ ಕರೆಂಟ್ ಸರಬರ
ಬಾಬ್ತು ಕೊಟ್ಟಷ್ಟನ್ನು ಹಣವನ್ನು ಕಂಪೆ
ಯಿಂದ ಸ್ವೀಕರಿಸಲಾಗುತ್ತಿದೆ.

NOTICE.

ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಬಂಟರ ಯಾನೆ ನಾಡವರ ವಿದ್ಯಾನು ಸಂಘ'ತಿರ್ವ ಇದರ ಮಹಾಸಭೆಯು ಬರುವ ತಾ 27—8—'50ನೇ ಆ ವಾರ ಸಾಯಂಕಾಲ ಘಂಟೆ 3ಕ್ಕೆ ಯಾಗಿ ತಿರ್ವ ಶ್ರೀ ನಿತ್ಯಾನಂದಸದನ ಜರಗಲಿರುವುದು. ತತ್ಸಂಬಂಧ ಮೇಣಿಸಿದ ನಮ್ಮ ಸಂಘದ ಎಲ್ಲಾ ಸದಸ ಆ ದಿವಸ ತಪ್ಪದೆ ಹಾಜರಿರಬೇಕಾಗಿ ಮೂಲಕ ತಿಳಿಸೋಣಾಗುತ್ತದೆ.

K. Muddu Shet
ಅಧ್ಯಕ್ಷ.

ತಿರ್ವ,
12-8-50

ನೋಟೀಸು

ಉಡುಪಿ ಡಿ. ಮು. ಕೋರ್ಟಿನ

S. C. ನಂಬ್ರ 259/19

ದೇವಗಳ ವೆಂಕಟಕೃಷ್ಣಯ್ಯ —ವಾ
ಮತ್ತಿ

ವಿ. ಮುಖ್ಯಪ್ರಾಣನ್ ಪೋಕಿ, ಕಳ
ಪಾಸುದೇವಯ್ಯನವರ ಮಗ, ಉಡುಪಿ
ಲ್ಲು ಕೋಟೆಗ್ರಾಮದಲ್ಲಿರುವವ. ಹಾಲಿ
ವಾಂಕೂರು ಸಂಸ್ಥಾನದ ನಾಗರ್‌ಕೋವಿ
ಕ್ಷೆಯಲ್ಲಿ ಕಾಳಿಮೋಟೆಲ್‌ಯಿಟ್ಟು ಕೊ
ರುತ್ತಾರೆ. ನಾಗರ್‌ಕೋವಿಲ್ ಪೋಲ್ಟು.

—ಪ್ರತಿವಾ

ಇವರೊಳಗೆ

ವಾದಿಗೆ ಪ್ರತಿವಾದಿಯು ತಾರೀಕು 7-1947ರಲ್ಲಿ ರಕ್ಷೀದಿ ಬರಕೊಟ್ಟು ವಾದಿಯು ಪ್ರತಿವಾದಿಯು ಪಡದ ರೂಪ್ಯಾ 100-0 ಮತ್ತು ಆದರ ಮೇಲಣ ಬಡ್ಡಿ ಕೂಡಾ ರೂ ಪ್ಯಾ 116-7-6ನ್ನು ಬರಮಾಡಿಕೊಳ್ಳುವಂತೆ ದಿಯು ಪ್ರತಿವಾದಿಯು ಮೇಲೆ ನಾಡಿರು ಈ ದಾವೆಯು ತಾರೀಕು 6-9-1950ಕ್ಕೆ ಇಟ್ಟಿರುತ್ತದೆ. ಸದ್ರಿ ತಾರೀಕು 6-9-1950 ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿಯು ಸ್ವತಹಾ ವ ಪಕೀಲ ಮುಖಾಂತ್ರ ಹಾಜ್ರಾಗಿ ಉದಪರಿಸಲಿಕ್ಕೆ ದೈ ಈ ದಾವೆಯನ್ನು ಆತನ ಗೈರುಹಾಜ್ರಿ ಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂ ಈ ಮೂಲಕ ತಿಳಿಸೋಣಾ ಎತ್ತದೆ.

V. R. Kidyur,
Advocate for Plaintiff.

ಉಡುಪಿ, ತಾರೀಕು 12 ಆಗೋಸ್ತು 1950.

1951ನೇ ವರ್ಷದ E S. L. C

ಪರೀಕ್ಷೆಯ ಕನ್ನಡ ಪಾಠಪುಸ್ತಕದ
ಪ್ರಪ್ಪಡೆಯು ಈ ತಿಂಗಳೊಳಗಾಗಿ
ಪ್ರಕಟವಾಗುವುದು.
ಕಳದ ವರ್ಷಗಳಿಗಿಂತಲೂ ಉತ್ತಮ
ರೀತಿಯಲ್ಲಿ ಬರೆಯಲಾಗಿದೆ
ಗ್ರಾಹಕರು ಬರೆದುಕೊಳ್ಳುವುದು

ಡಿ. ವಿ. ಹೊಳ್ಳ ವಿದ್ವಾನ
ಕುಂದಾಪುರ.

ಸ್ಕೂಲ್ ಬುಕ್ ಕಂಪೆನಿ,
ರಥಬೀದಿ, ಮಂಗಳೂರು

ಮಂಗಳೂರು

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಯೂನಿಯನ್ನಿನ ಉದ್ಘಾಟನಾ ಸಮಾರಂಭವನ್ನು ಕಳದ ತಾ 30ರಲ್ಲು ಶ್ರೀ ಬಿ. ವೈಕುಂಠ ಬಾಳಿಗರು ನೆರವೇರಿಸಿದರು. ಶ್ರೀ ಬಿ. ಬಿ. ಶೆಟ್ಟಿಯ ಸಮಾರಂಭದ ಅಧ್ಯಕ್ಷ ಸ್ಥಾನ ವಹಿಸಿದ್ದರು. ಯೂನಿಯನ್ನಿನ ಜತೆ ಕಾರ್ಯದರ್ಶಿಗಳಾದ ಶ್ರೀ ಬಿ ಸುಂದರ ಶೆಟ್ಟಿ ಮತ್ತು ಕೆ. ಕೃಷ್ಣಯ್ಯ ಹೆಗ್ಡೆಯರು ಹುಟ್ಟಿನ ಹಾರಗಳನ್ನು ಅರ್ಪಿಸಿದರು. ಅಧ್ಯಕ್ಷರೂ ಉದ್ಘಾಟಕರೂ, ವಿದ್ಯಾರ್ಥಿಗಳು ತಮ್ಮ ನಡತೆ

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫಕೋರ್ಟ ನಲ್ಲಿ.

O. S. 608/1947
R. E. P. 17/50

ಲಕ್ಷ್ಮೀಅಮ್ಮ ಕೂಡಾ —ಅರ್ಜಿದಾರರು
ಮತ್ತು
ಕೊರಗ ಕೂಡಾ —ರೆಸಾಂಡೆಂಟ್ಸು
ಇವರೊಳಗೆ

R1 ಕೊರಗ, ಬೋಳ್ಳಿಯ ಮಗ ವ ತೀಯರ್ ಆಸ್ಪೆ, ಆಳಿಯ, ಕಾಸರಗೋಡು ತಾಲೂಕು ಬೇಳೂರು ಗ್ರಾಮದ ಆಕ್ಟಿಲಡು ಕರ ಎಂಬಲ್ಲರುವವನಿಗು—ಇವನಿಗೆ—

2ನೇ ಅರ್ಜಿದಾರನಿಂದ 1ನೇ ಅರ್ಜಿದಾರ ರಿಗಾದ ದಿಕ್ರಿ ಮೇಲ್ಪೀಟು ಮಂಜೂರು ಮಾಡಿ ರೆಸಾಂಡೆಂಟ್ಸು ಬಾಬ್ತುಸ್ಥಿರಾಸ್ತಿ ಜಪ್ತಿ ಏಲಂ ಮಾಡಿಸಲು ಅರ್ಜಿಯು ಬಗ್ಗೆ ಅರ್ಜಿದಾರರು ದಾಕಲು ಮಾಡಿದ ಮೇಲ್ಕಂಡ ಅಮ್ಮಜ್ಯಾರಿ ಅರ್ಜಿಯು ತಾ. 26-8-50ಕ್ಕೆ ಇಟ್ಟಿರುತ್ತದೆ.

ಸದ್ರಿ ತಾರೀಕಿಗೆ 1ನೇ ರೆಸಾಂಡೆಂಟನು ಮೇಲ್ಕಂಡಾ ಕೋರ್ಟು ಮುಂದೆ ಹಾಜ್ರಾಗು ದರೆ ತಪ್ಪಿದರೆ ಆತನ ಗೈರಹಾಜರಿಯಿಂದ ಸದ್ರಿ ಅಮ್ಮಜ್ಯಾರಿ ಅರ್ಜಿಯನ್ನು ತೀರ್ಮಾನಿ ಸಲ್ಪಡುವುದೆಂಬ ಸಂಗತಿ ಈ ಮೂಲಕ ತಿಳಿ ಸೋಣವಾಗಿಯದೆ.

(ಎಂತ ಕೋರ್ಟಿಗೆ ಹುಕುಂ ಸ್ವಕಾರಿ)

B. S. Kakkilaya,
Advocate for petitioners.

Kasaragod, 8-8-50

ನೋಟೀಸು

ಕುಂದಾಪುರ ಡಿ. ಮುನ್ಸಿ. ಕೋರ್ಟಿನಲ್ಲಿ

O. P. No- 66/1950

ಅರ್ಜಿದಾರ ಕುಂಗುಬ್ಯಾ, ದೇವರಾಮ ಪೂಜಾರಿ ಸಿಧನೆ, ಕುಂದಾಪುರ ತಾಲೂಕು ಬಡೇರ ಬೊಬರಿ ಗ್ರಾಮದ ತಲ್ಲಾರ್ರ ಪೂಜಾರಿ ಸಾನೆಯಲ್ಲಿರುವವನು. post Coondapur; ಬೀನಾಯಗಾರಳು -ಎದ್ರಿರು ಬಿಲ್ಲಿಗ.

ಈ ಮೂಲಕ ಸರ್ವ ಜನರಿಗೆ ತಿಳಿಯ ಪಡಿಸುವದೇನೆಂದ್ರೆ.

ಅರ್ಜಿದಾರಳು ತನ್ನ ಗಂಡ ಹಾಲಿ ಮೃತ ದೇವರಾಮ ಪೂಜಾರಿಗೆ ಬರ್ಮರ್ ಲಲ್ ಓಯಿಲ್ ಸ್ಟೋರೇಜು ಮತ್ತು ಡಿಸ್ಟ್ರಿಬ್ಯೂ ಟಿಂಗ್, ಕೋಸಿಫ್ ಇಂಡಿಯಾ ಲಿಮಿಟೆಡ್ ಇದರಲ್ಲಿ ಲೇಬರ್ ಪ್ರೊವಿಡೆಂಟ್ ಫಂಡ್ ಬಾಬ್ತು ಬಂತಕ್ಕ ಹಣ ವ 1949ನೇ ಇಸವಿ ಮಾರ್ಚಿಗೆ ಸಿಕ್ಕತಕ್ಕ ಸಂಬಳ ವ 1947-1948ನೇ ಇಸವಿಗಳಿಗೆ ಸಿಕ್ಕತಕ್ಕ ಬೋನಸ್ ಬಾಬ್ತು ಕೂಡಾ ಬಹ ರೂ. 343-11-6ನ್ನು ಪಡಕೊಳ್ಳುವರೆ ತಾನು ಹಕ್ಕು ದಾರಳೆಂತಲೂ ಆ ಬಗ್ಗೆ ತನಗೆ ಸರ್ಟಿಫಿಕೇಟು ಕೊಡಬೇಕಾಗಿಯೂ ಅರ್ಜದಾರಳು ಮೇಲಿನ ಅರ್ಜಿ ದಾಕಲು ಮಾಡಿರುತ್ತಾಳೆ. ಸದ್ರಿ ಅರ್ಜಿ ಮೇಲ್ಕಂಡ ಕೋರ್ಟಿನಲ್ಲಿ ತಾ. 29-8-1950ಕ್ಕೆ ತನ್ನಿಗೆ ಇಟ್ಟಿರುತ್ತದೆಂದು ಈ ಮೂಲಕ ತಿಳಿಸಿರುತ್ತದೆ.

M. M. Hebbar,
Advocate for Petitioner

ಕುಂದಾಪುರ, ತಾ 10-8-1950-

ಯನ್ನು ಹೊಗೆ ಸುಣ್ಣಾಬಿಜೆಕ್ಷನಿನಿಯೆಂಟ್ ಒದನ್ನು ಗಾಜಿನೇ ನಾರಿನ ಕಾರ್ಯದರ್ಶಿಗಳ ಧನ್ಯವಾದಾರ್ಪಣೆಯೊಂದಿಗೆ ಸಭೆಯರಿ ಭವು ಮುಕ್ತಾಯಗೊಂಡಿತು.

ವೆನಸ್ಪಮೋತ್ಸವ ಅಜಪಿ ಜೆಟ್ಟಿ ಳಿ:- ವನಸ್ಪಮೋತ್ಸವವನ್ನು ಮತ್ತು ಮುಂಗಡಗಳನ್ನು ನೆಡುವ ಲವಧಿಯನ್ನು ಇದೇ ಅ ಗೋಸ್ತು ತಿಂಗಳ ತಾ 31ರ ವರೆಗೆ ಮುಂದರಿ ಸಲಾಗಿದೆ. ಈ ಅವಧಿಯಲ್ಲಿ ನೆಟ್ಟ ಮರಗಿಡ ಗಳ ಸಂಖ್ಯೆಯು ಕೂಡಾ ಸಾರೋಪ ವಿತ ರಣೆಯ ಲೆಕ್ಕುಕ್ಕೆ ಜಮಾ ಬರಕೊಳ್ಳುವುವಾಗಿ ಜಿಲ್ಲಾ ಕಲೆಕ್ಟರರ ಪ್ರಕಟಣೆಯೊಂದು ಹೊ ರಟಿದೆ.

ಕುಂಬಳೆ ಫಿರ್ಕಾದಲ್ಲಿ ಜುಲಾಯಿ ತಿಂಗಳಲ್ಲಿ ಜರಗಿದ ಕಾರ್ಯಗಳ ಮುಖ್ಯಾಂಶ ಸಾರಕ್ಕೆ ಮತ್ತು ಟೈಕುಂಜೆಯಲ್ಲಿಯ ಕಲ್ಲಿನ ಆಕೆಟ್ಟುಗಳ ಕೆಲಸವು ಪೂರ್ಣವಾಯಿತು. ಈ ಕೆಲಸದ ಖರ್ಚನ್ನು ಅಯಾಯ ವರ್ಗ ದಾರರೇ ವಹಿಸಿದ್ದಾರೆ. ವನಮಹೋತ್ಸವದ ನಿಮಿತ್ತ ಒಂದು ಲಕ್ಷಕ್ಕಿಂತ ಹೆಚ್ಚು ಗಿಡಗಳು ನೆಡಲ್ಪಟ್ಟವು. 60000 ಗಿಡಗಳನ್ನು ಜಂಗ್ಲಿ ಮತ್ತು ಕೃಷಿ ಇಲಾಖೆಯವರು ಒದಗಿಸಿ ಕೊ ಟ್ಟಿರುವರು. ಬೋರ್ಡು ಎಲಿಮೆಂಟ ರಿ ಶಾಲೆಗಳು ಬುನಾದಿ ಶಾಲೆಗಳಾಗಿ ಮಾರ್ಪ ಟ್ಟವು. ಪೆರ್ಲಾದ ಮಹಾಜ್ಮಾ ಗಾಂಧಿಸ್ಮಾರಕ ರೇಡಿಯೋ ಉದ್ಘಾಟನೆಯನ್ನು ಜಲ್ಲಾ ಕಲೆ ಕ್ಟರ್ ಜನಾಬ ಸಯ್ಯಾದ್ ಅಹಮ್ಮದ್ ಅವ ರು ನೆರವೇರಿಸಿದರು.

ಮಂಜೇಶ್ವರ ಮತ್ತು ಮೂಲ್ಕಿ ಫಿರ್ಕಾಗಳೆಲ್ಲೂ ಗ್ರಾಮ ಸೇವಾ ಸಂಘಗಳು ಸ್ಥಾಪಿಸ ಲ್ಪಟ್ಟವು. ಮೂಲ್ಕಿಯ 12ಗ್ರಾಮಗಳಲ್ಲಿ ಗ್ರಾಮ ಕೈಗಾರಿಕೆ ಅಭಿವೃದ್ಧಿಗೆಯಲಾಯಿತು.

ಸಹಕಾರಿ ಸಂಘಗಳ ಮೂಲಕ ಆ ಹಾರೋತ್ಪಾದನೆ ದ. ಕ ಜಿಲ್ಲಾ ಸಹ ಕಾರಿ ಕಾರ್ಯಕರ್ತರಿಗಳ ಸುಪರ್ ವೈಜರರ ಯೂ ನಿಯನ್ ಪ್ರತಿನಿಧಿಗಳ ಪರಿಸತ್ತೊಂದು ಈಚೆಗೆ ಸೆಂಟ್ರಲ್ ಬೇಂಕಿನ ಕಟ್ಟಡದಲ್ಲಿ ಸೆಂಟ್ರಲ್ ಬೇಂಕಿನ ಅಧ್ಯಕ್ಷ ಶ್ರೀ ಮೊಳಹಳ್ಳಿ ಶಿವರಾ ಯರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾ ಸು ಸರಕಾರದ ಹೊಸಯೋಜನೆಯಂತೆ ದ. ಕ. ಜಿಲ್ಲೆಯ ಸಹಕಾರಿ ಸಂಘಗಳ ಮೂಲಕ ಆಹಾರೋತ್ಪಾದನೆಯನ್ನು ಹೇಗೆ ಯಶಸ್ವಿ ಯಾಗಿ ಮಾಡಬಹುದೆಂಬ ವಿಷಯದಲ್ಲಿ ವಿಚಾ ರವಿನಿಮಯ ನಡೆಯಿತು. ಜಿಲ್ಲಾ ಕಲೆಕ್ಟರರು ಪರಿಸತ್ತನ್ನು ಕರೆಯುತ್ತಾದಕ್ಷಿಣಕನ್ನಡದಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸಬೇಕೆಂದ ರು.

ಜಲ್ಲಾ ಪ್ರೋಡಿಸೆಕ್ಷನ್ ಕಾಪರೇಟಿವ್ ಬ್ಯಾಂಕ್ ಮಂಗಳೂರಿನ ಸೆಕ್ರಿಲಿನ ಸಭೆಸ್ಯಾರು ಶ್ರೀ ಕೆ. ಗೋಪಾಲಕೃಷ್ಣ ಅಸ್ರಣ್ಣ ತಮ್ಮ ಸಹದ್ಯೋ ಕೆನಕ್ಕೆ ರಾಜಿನಾಮೆ ಕೊಟ್ಟ್ದರಿಂದ ಖಾಲಿ ಯಾದ ಲವನ ಸ್ಥಾನದಲ್ಲಿ ಶ್ರೀಮತಿ ವಾರಿಜ ತಳ್ಳಾರರು ಪ್ರತಿಕಕ್ಷಿಗಳಿಲ್ಲದೆ ಜುನಾಯಿಸ ಲ್ಪಟ್ಟರುವರು.

ಮೋಟಾರು ಅವಘಡ ಇದೇ ತಾ. 5ರಲ್ಲು ಮಧ್ಯಾಹ್ನ ಕಬ್ರಿಕಡಯಿಂದ ಸ್ವಾಕ ಲಿನಲ್ಲಿ ಒಬ್ಬಕ್ತಿದ್ದ ಗಣಪತಿ ಭಟ್ಟ ಎಂಬ ವಿ ದ್ಯಾರ್ಥಿಯು ಸ್ವಾಕಲ್ ಶೇಡಿಗುಡ್ಡೆಯ ಬೀ ಡಿ ಕಾರಖಾನೆಯ ಎದುರಲ್ಲಿ ಎದುರುಗಡೆ ಯಿಂದ ಬರುವ ಮೋಟಾರ್ ವಾಹನಿಗೆಯಾಗಿ ಅ ವಘಡವಾಯಿತು. ವಿದಾರ್ಥಿಗೆ ವಿಶೇಷ ಪೆ ಟ್ಟಾಗಿದ್ದು ಆಸ್ಪತ್ರೆಗೊಯ್ಯಲಾಯಿತು. ಈಗ ಗುಣವಾಯು ಹೊಂದುತ್ತಿದ್ದಾನೆ. ಡ್ರೈವರ್ ಎ. ಎಮ್. ರಾಮಯ್ಯನ ಬಂಧನವಾಗಿ ಜಾ ಮೀನಿನ ಮೇಲ ಬಿಡಲಾಗಿದೆ.

ಇದೇ ತಾ 11ರಲ್ಲು ಕೆನರಾ ಹೈಸ್ಕೂಲಿನ ಬ ಳಿಯಲ್ಲಿ ಒಂದು ಕಾರು ವಿದ್ಯಾರ್ಥಿ ಯೊಬ್ಬ ನಿಗೆ ತಾಗಿ ಆತನು ಳಗಾಯಳಿ ಜಖಂ ಆಯಿ ತೆಂದೂ, ಕೂಡಲೇ ಆತನನ್ನು ಡಾ। ಗಿರಿಧರ ರಾಯರ ಆಸ್ಪತ್ರೆಗೊಯ್ದರೆಂದೂ ತಿಳಿದು ಬರುತ್ತದೆ.

ಜಿಲ್ಲಾ ವಾಣಿಜ್ಯ ಸಂಘವು ಕೇಂದ್ರ ಖಾರ್ಜಿ ಮೆಂಟಿನಲ್ಲಿ ಪಂಡಿತ ಭಾಗೀವಂತರು ತರಲಿ ರುವ ನನಸ್ಪತಿ ನಿಷೇಧ ಮಸೂದೆಗೆ ತನ್ನ ವಿ ರೋಧವನ್ನು ಮದ್ರಾಸು ಡೆವಲಪ್‌ಮೆಂಟ್ ಮಂತೆಯ ಕಾರ್ಯದರ್ಶಿಗೂ ಕೇಂದ್ರ ಸರಕಾ ರದ ಆಹಾರಮಂತ್ರಿಗೂ ಕಳುಹಿಸಿ ಕೊಟ್ಟಿದೆ. ವನಸ್ಪತಿ ದುಷ್ಪರಿಣಾಮಗಳ ದೃಷ್ಟಿಯಿಂದ ಯಾವ ರೀತಿಯ ದೋಷವುಳ್ಳದ್ದಲ್ಲವೆಂದೂ ಆದರಿಂದ ಜನತೆಯ ನೈತಿಕ ಪತನವಾಗುವಂ ತಿಲ್ಲವೆಂದೂ ಈ ವಿರೋಧ ಪತ್ರದಲ್ಲಿ ಹೇಳ ಲಾಗಿದೆ.

ಲೇಬರ್ ಕಮಿಶನರ್ ಶ್ರೀ ಸಿ. ಜೆ. ರೆಡ್ಡಿಯವರು ಇದೇ ತಾ. 5ರಲ್ಲು ಮಂಗಳೂ ರಿಗೆ ಬಂದು ಇಲ್ಲಿಯ ಕೆಲವು ಮೂಲಿಕ ರನ್ನೂ ಮಜೂರರನ್ನೂ ಕಂಡು ವಿಚಾರ ವಿನಿಮಯ ಮಾಡಿರುವರು. ತಾ. 7ರಲ್ಲು ವಾಣಿಜ್ಯ ಸಂಘಕ್ಕೆ ಭೇಟಿ ಕೊಟ್ಟು ಇವಲಿ ಅಂಗಡಿ ಕೆಲಸಗಾರರ ಮನಸೂಡೆ ಮತ್ತು ಗಿರಣಿ ಮನಸೂಡೆಗಳನ್ನು ವಿವರಿಸಿ ದರು

ಹಂಜು ಕೆಲಸಗಾರರಿಗೆ ಬೋನಸ್:- ಹಂಜು ಕಾರ್ಖಾನೆಯ ಮಾಲಿಕರ ಸಂಘದ ಸಭೆಯು ಈಚೆಗೆ ಜರಗಿದಾಗ ಹಂಚಿನ ಮ ಜೂರರಿಗೆ 1949-50ನೆ ವರ್ಷದ ಬಾಬ್ತು ಬೋನಸ್ ಕೊಡುವ ನಿರ್ಧಾರ ಮಾಡಿದೆ. ಆ ವು ಮೂಲ ಸಂಬಳದ ಸೇಕಡಾ 25ರಷ್ಟು ಕೊಡುವುದೆಂದಾಗಿದೆ. ಇದು ಮಜೂರರ ಮೂರು ತಿಂಗಳ ಸಂಬಳದಷ್ಟಾಗುವುದು.

ಜಿಲ್ಲಾ ಬೋರ್ಡು ಸಭೆಯು ಇದೇ ತಾ. 18ರಲ್ಲು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಜರಗುವುದು.

ಕುಂದಾಪುರ ಡಿ ಎಮ್. ಕೋರ್ಟಿನಲ್ಲು

O. S. 326/50

N-S- ಪರಮೇಶ್ವರಯ್ಯ, ರಿಸೀವರ್, —ವಾದಿ
ಶಿವರಾಮ ಶೆಟ್ಟಿ. —ಪ್ರತಿವಾದಿ

ವಾದಿ ಕಡೆಯಿಂದ ಈ ಮೂಲಕ ತಿಳಿಯ ಪಡಿಸುವದೇನೆಂದ್ರೆ,

ಶಿವರಾಮಶೆಟ್ಟಿ—ವೈಲಮನೆ ಮುತ್ತಯ್ಯ ಶೆಟ್ಟಿ ಆಳಿಯ, ಉಡ್ಪಿ ತಾಲ್ಲ್ಕು ಕಿರಿಯಾಡಿ ಗ್ರಾಮ.

ವಾದಿಗೆ ಪ್ರತಿವಾದಿಯಿಂದ ಬರತಕ್ಕ ವಿ ರೋಧಿ ಸಂಗ ಚಾಲಗೇಣ ಗೇಣಿ ರೂ. 411-2-4ಕ್ಕೆ ವಾಡಿದ ದಾನೆಯು ತಾ. 21-8-50ಕ್ಕೆ ಆಬೈರೆ ತನ್ನಿಗ್ಗೆ ಇಟ್ಟಿದೆ. ಆ ಕಾ ರಣ ನಿಮ್ಮಾದೇನಾದರೂ ಉದಾಹರಣೆ ಇದ್ದೆ ಸದ್ರಿ ದಿವಸ ಹಗಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನ ಸಲ್ಪಡುವದೆಂಬ ಸಂಗ್ತಿ ಈ ಮೂಲಕ ವಾದಿ ಕಡೆಯಿಂದ ತಿಳಿಯ ಪಡಿಸಿದೆ.

G. Sanjiva Rao, B.A.B.L.
Vakil for plff.

Kundapur, Date 3-8-50

ಅಂತರಂಗಕ್ಕೆ ಚೆಂದಾದಾರರಾಗಿರಿ

ವಿವಿಧ ಪಾತ್ರೆಗಳು



ಯಾವತ್ತೂ ವಿಧ ದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗ ಳ ವಿವಿಧ ಪಾತ್ರೆ ಗಳೂ ಸಾಮಾನು ಗಳೂ ರಿಪೇರಿ ಆಗಿ ಯೂ ಜಿಲ್ಲೆರಿಯಾಗಿಯೂ ಮೊರೆಯಂತ್ಪವೆ.

ಶಲ್ಕಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಉಡುಪಿಗೆ ಹೋಗಬೇಕಾ! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಹಿಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಗೆ, ತಿಂದಿನಿನನು, ಇವುಗಳ ರುಚಿಯಾ ಹೇಳಬೇಕೆ?
ಪ್ರೊಪ್ರಾಟರ್:— ಕೆ. ವೆಂಕಟ್ರಮಣಭಟ್ಟ್.
For up-to-date Lodging & Boarding
ROYAL MAHAL,
UDIPI, S. Kanara.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾ ಯವಾದ ಬಡ್ಡಿಯಿಂದಲೂ, ಸಾಲ ದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧ ಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K.

ದಕ್ಷಿಣ ಕನ್ನಡ

ಕಂಭದಕೋಣ ಸಹಕಾರಿ ಸಂಘದ ಆಡಳಿತಕ್ಕೆ ಚಳಕಟ್ಟೆ ಜೇರಂಜಾಲ ರಿಟೈಲ್ ಡಿಪೋದಲ್ಲಿ ತಾ 25-7-50ರಿಂದ 9-8-50ರ ವರೆಗೆ 5 ಚೀಲ ಅಕ್ಕಿ 1 ಚೀಲ ಗೋದಿ ಮಾತ್ರ ಬಂದಿದೆಯಂತೆ. ಕಾರ್ಡುದಾರರಿಗೆ ಸರಿಯಾಗಿ ರೇಶನ್ ಸಿಕ್ಕದೆ ಜನರು ಬಹಳ ಕಂಗಾಲಾಗಿದ್ದಾರೆ. ಹಸಿವೆಯ ಬಾಧೆ ತಾಳಲಾರದೆ ಸಿಕ್ಕಿದ್ದನ್ನು ಕಿಂಡು ಎಷ್ಟೋ ಮನೆಯಲ್ಲಿ ಕಾಯಿಲೆ ಪ್ರಾರಂಭವಾಗಿದೆಯಂತೆ ಸಂಬಂಧ ಪಟ್ಟ ಅಧಿಕಾರಿಗಳು ಕೂಡ್ಲೆ— ಈ ಕಡೆ ಲಕ್ಷ್ಯಕೊಡುವರೆ?

ಕಡಂದಲೆ:—ಸ್ಥಳೀಯ ವಯಸ್ಕರ ಶಿಕ್ಷಣಶಾಲಾ ಕಮಿಟಿಯ ವಿಶೇಷ ಸಭೆಯೊಂದು ಶ್ರೀ. ಕೆ. ಬಾಬುರಾಯರ ಅಧ್ಯಕ್ಷತೆಯಲ್ಲಿ ತಾ 8—8—50ರಲ್ಲಿ ಜರಗಿತು. ಶ್ರೀಗಳಾದ ಎಸ್. ಕ್ಯಾಮರಾಯ ಶೆಟ್ಟಿ, ಕೆ. ಎಸ್. ಶೆಟ್ಟಿ, ಪಿ. ಎಸ್. ಶೆಟ್ಟಿ, ಇವರ ಸಂದರ್ಭೋಚಿತ ಭಾಷಣಗಳಾದ ಮೇಲೆ ಅಧ್ಯಕ್ಷರು ಶಾಲಾ ವಿಳ್ಯೆಯನ್ನು ಕೋರಿ ಮಾತನಾಡಿದರು. ಲಘು ಉಪಾಹಾರ ದೊಂದಿಗೆ ಸಭಾಂತ್ಯವಾಯಿತು.

ಪೆರಂಪಳ್ಳಿ:—ಶ್ರೀ ಪಿ.ಯ್ ನ್.ರಾಮರಾಯರ ವ್ಯವಸ್ಥಾಪಕತ್ವದಲ್ಲಿ ; ಇದೇ ತಾ. 11ರಲ್ಲಿ ಉಡ್ಪಿಯ ಯಕ್ಷಗಾನ ಸಂಘ ಮತ್ತು ಶ್ರೀ ಕೇಷಗಿರಿ ಭಾಗವತರೇ ಮೊದಲಾದ ಕಲಾವಿದರ ಕೂಡುಬಾಕೆಯಿಂದ ಕರ್ಣಾರ್ಜುನಕಾಳಗ ಮತ್ತು ಅಂಗದ ಸಂಧಾನ ಎಂಬ ಯಕ್ಷಗಾನ ಕೂಟ ಜರಗಿತು.

ಚುನಾವಣೆ:-ದಕ್ಷಿಣಕನ್ನಡಾ ಜಿಲ್ಲಾ ಲೈಬ್ರೆರಿ ಸಮಿತಿಗೆ, ಉಡ್ಪಿತಾಲೂಕು ಪಂಚಾಯತ ಬೋರ್ಡುಗಳ ಪ್ರತಿನಿಧಿಯಾಗಿ, ಒಬ್ಬ ಮೆಂಬರರನ್ನು ಚುನಾಯಿಸುವ ಬಗ್ಗೆ, ಉಡ್ಪಿತಾಲೂಕು ಪಂಚಾಯತ ಬೋರ್ಡು ಪ್ರೆಸಿಡೆಂಟುಮಗಳ ಸಭೆಯೊಂದು ತಾ 2—8—50ನೇ ಆಪರಾಹ್ನ ೪ಂಟೆ 1ಕ್ಕೆ, ಉಡ್ಪಿಬೋರ್ಡು ಹ್ಯಾಸ್ಕೂಲಿನಲ್ಲಿ ಕಾರ್ಯರ್ಶಿ ದಿಪ್ಪಂಚಾಯತ ಆಫೀಸರ ಅಧ್ಯಕ್ಷತೆಯಲ್ಲಿ ಜರಗಿತು. ಚುನಾವಣೆಯಲ್ಲಿ ಪ್ರಥಮತಃ ಸ್ಪರ್ಧೆಯು ಇರುವದಾಗಿ ಕಂಡುಬಂದರೂ, ನೆರೆದ ಸಭಿಕರ ಸಹಕಾರದಿಂದ ಕುದುರುಕಾಲು ಪಂಚಾಯತಬೋರ್ಡು ಪ್ರೆಸಿಡೆಂಟರಾದ ಶ್ರೀ. ಕುದುರುಕಾಲು ಗಣಪಯ್ಯ ಶೆಟ್ರು ಸರ್ವ ಲೈಬ್ರೆರಿ ಸಮಿತಿಗೆ ಮೆಂಬರರಾಗಿ ಸರ್ವಸಮ್ಮತದಿಂದ ಆರಿಸಲ್ಪಟ್ಟರು.

ಮೂಲ್ಕಿ:—ದಿನಾಂಕ ತ. 29-7-50 ರಂದು "ನವಜೀವನ" ತ್ರೈಮಾಸಿಕ ನೂತನ ಪತ್ರಿಕೆಯ ಉದ್ಘಾಟನಾ ಸಮಾರಂಭವು ಮೂಲ್ಕಿ ಬಿಲ್ಲವ ಸಮಾಜಸೇವಾ ಸಂಘದಲ್ಲಿ ಶ್ರೀಯುತ ವಿಟ್ಠಪ್ಪ B. A. L. T. ಇವರ ಅಧ್ಯಕ್ಷತೆಯಲ್ಲಿ ಜರಗಿತು. ನೆರೆದ ಸಭಿಕರಲ್ಲಿ ಶ್ರೀ ಆನಂತಯ್ಯ ಮಾಸ್ತರು, ಶ್ರೀ ಕೂಕ್ಯ ಮಾಸ್ತರ್ ಮೊದಲಾದವರು ಪತ್ರಿಕೆಯ ಯಶಸ್ಸಿನವನ್ನು ಕೋರಿ ಭಾಷಣ ಮಾಡಿದ ಬಳಿಕ ಸಂಪಾದಕರು ಪತ್ರಿಕೆಯ ಉದ್ದೇಶವನ್ನು ವಿವರಿಸಿದರು. ಅಧ್ಯಕ್ಷರು ಪತ್ರಿಕೆಯು ಆದರ್ಶವಾಗಿರಬೇಕೆಂದರು. ಲಘುಫಲಾಹಾರ ಆದ ಬಳಿಕ ಸಭೆ ಮುಕ್ತಯವಾಯಿತು.

ಕೋಟೇಶ್ವರ—ತಾ.೧—೮—೫೦ರಂದು ಹಳೇ ವಿದ್ಯಾರ್ಥಿ ಸಂಘ ಮತ್ತು ಹೈಸ್ಕೂಲು ಸಮಿತಿಯ ಆಶ್ರಯದಲ್ಲಿ ಶಾಲಾ ಪರಿಸರದಲ್ಲಿ ತಿಲಕ ದಿನಾಚರಣೆ, ಹೈಸ್ಕೂಲು ಸ್ಥಾಪನಾ ದಿನಾಚರಣೆ ಮತ್ತು ಹ. ವಿ. ಸಂಘದ ಸ್ಥಾಪಕರಾದ ದಿ ಶ್ರೀ ಎಸ್. ಅರ್. ಎರ್ಮಾಳ್, ಬಿ. ಎ.,ಎಲ್.ಟಿ. ಇವರ ದಿನಾಚರಣೆ ಮತ್ತು ತೈಲಚಿತ್ರ ಅನಾವರಣ ಮಹೋತ್ಸವಗಳು ಮುಖ್ಯೋಪಾಧ್ಯಾಯ ಶ್ರೀ ಟಿ. ಶಂಕರರಾವ್. ಬಿ ಎ, ಎಲ್. ಟಿ ಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಕುಂದಾಪುರ ಆರ್.ಡಿ. ಹಿ. ತಿಮ್ಮಪ್ಪಶೆಟ್ಟಿ, ಬಿ. ಎ, ಇವರು ಸಂದರ್ಭೋಚಿತ ಮಾತನಾಡಿ ರಜತನುಂದಿರದಲ್ಲಿ ದಿ ಎರ್ಮಾಳರ ತೈಲ ಚಿತ್ರದ ಅನಾವರಣವನ್ನೆಸಗಿದರು. ಶ್ರೀ ಶಿರೋಮಣಿ ಕೆ.ಗೋವಿಂದ ಉಪಾಧ್ಯಾಯರು ಶ್ರೀ ಕೆ. ನಾರಾಣಪ್ಪ ಹೆಬ್ಬಾರ್ ಮುಂತಾದವರು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಸಮಿತಿಯಿಂದ ಇಂತಹ ಸಮಾರಂಭಗಳ ಅವಶ್ಯಕತೆ ಮತ್ತು ಪ್ರಯೋಜನಗಳನ್ನು ವಿವರಿಸಿದರು ಎರ್ಮಾಳರ ಗುಣಕಥನ ಮಾಡಿದರು ಶ್ರೀ ವಿದ್ವಾನ್ ಡಿ. ಎಸ್. ಹತ್ತಾರರಿಂದ ಆಳಿನಂದನೆ ನಡೆದು ರಾಷ್ಟ್ರಗೀತೆ.ಲಘೂಪಾಹಾರದೊಂದಿಗೆ ಸಭೆಯು ಜಯವಾಯಿತು. ಈ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಸಿಹಿತಿಂಡಿ ಹಂಚಲು ದಿ ಎರ್ಮಾಳರ ಹಿರಿಯರು ಉದಾರತೆಯಿಂದ ಸಂಪೂರ್ಣ ನೆರವಾದುದು ಸ್ತುತ್ಯ.

ಹಿಂದೂಕೋಡು ಮುನೂದೆ ಮತ್ತು ಅಳಿಯ ಸಂತಾನಿಗರು:—ಕುಂದಾಪುರ ತಾಲೂಕು ಅಳಿಯ ಸಂತಾನಿಗರ ಸಭೆಯು ತಾ 30-7-50ರಲ್ಲಿ ಕುಂದಾಪುರ ಶ್ಲಬ್ಬಿನಲ್ಲಿ ಶ್ರಿ. ಬಿ. ಶಿವರಾಮ ಶೆಟ್ರು ವಕೀಲ್ ಇವರ ಅಧಿಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಸಭಾಧ್ಯಕ್ಷರು ಸಭೆಯ ಉದ್ದೇಶ. ಹಿಂದೂಕೋಡಿನ ಅವಶ್ಯಕತೆ, ಆದರಲ್ಲಿರುವ ಜನರ ಆದರ ಅದು ಅಳಿಯ ಸಂತಾನಿಗರಿಗೆ ಅನ್ವಯಿಸುವುದರಿಂದ ಆಗಬಹುದಾದ ಬದಲಾವಣೆ, ಮತ್ತು ಬೇರೆ ತಾಲೂಕಿನ ಅಳಿಯ ಸಂತಾನಿಗರ ಅಭಿಪ್ರಾಯ. ಮುಂತಾದವುಗಳನ್ನು ವಿವರಿಸಿದರು ಅನಂತರ ಸಭೆಯಲ್ಲಿ ವಿಶಯಗಳ ಮೇಲೆ ವಿಶೇಷ ಚರ್ಚೆ ನಡೆದು ಕೊನೆಗೆ ಹಿಂದೂಕೋಡು ಮುನೂದೆಯ ಅಳಿಯ ಸಂತಾನಿಗರಿಗೂ ಅನ್ವಯಿಸುವಂತಾಗಬೇಕೆಂದು ಸ್ವಾಗತೀಕರಿಸಲಾಯಿತು ಅಳಿಯ ಸಂತಾನಿಗರ ಕುಟುಂಬದ ಆಸ್ತಿಯು ಕುಟುಂಬದ ಎಲ್ಲ ಸದಸ್ಯರಿಗೂ ಸಮಾನವಾಗಿ ಹಂಚಲ್ಪಡಬೇಕೆಂಬ ಅಭಿಪ್ರಾಯವು ಸಭೆಯಲ್ಲಿ ವ್ಯಕ್ತವಾಯಿತು. ಈ ವಿಷಯವು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಬರಲು ಇಚ್ಛಿಸಿ ಸಭೆಯು ವಿಸರ್ಜನೆಯಾಯಿತು.

ಕೊಲ್ಲೂರು ಜಾತ್ರೆ:—ಇದೇ ತಾ ೮ರಲ್ಲು ಅತ್ಯಂತ ಯಶಸ್ವಿಯಾಗಿ ಜರಗಿತು. ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್, ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ಕೆ. ಎಸ್. ಹೆಗ್ಡೆ, ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಜಿಲ್ಲಾ ಸಪ್ಲೈ ಆಫೀಸರ್, ಜಿಲ್ಲಾ ವೆಟರ್ನರಿ ಸರ್ಜನ್ ಜಿಲ್ಲಾ ಎಗ್ರಿಕಲ್ಚರಲ್ ಆಫೀಸರ್ ಮೊದಲಾದವರು ಮಂಗಳೂರಿಂದ ಆಗಮಿಸಿದ್ದರು ; ಕ್ಷೇತ್ರದ ಸುಪರಿಂಟೆಂಡೆಂಟ್ ಶ್ರೀ ಜಿಂಜಮಿನರು ಸ್ವಾಗತವಿತ್ತರು. ಕಲೆಕ್ಟರ್ ಮತ್ತು ಪಾರ್ಟಿಯವರು ಕ್ಷೇತ್ರದಲ್ಲಿಯು ಹೊಸ ಬಾವಿ, ದೋಣಿ ಮತ್ತು ರಾಗಿಬೆಳೆಸುವ ಸ್ಥಳಗಳನ್ನು ಸಂದರ್ಶಿಸಿದರು. ಕಲೆಕ್ಟರವರು ಇತರರೊಂದೊಂದು ಗಿಡವನ್ನು ನೆಟ್ಟರು ; ಗ್ರಾಮಸ್ಥರೂ ಕೂಡಾ ಹಲವು ಹಣ್ಣುಹಂಪಲುಗಳ ಗಿಡಗಳನ್ನು ನೆಟ್ಟರು ಜಿಲ್ಲಾ ಕಲೆಕ್ಟರರು ಗ್ರಾಮಸ್ಥರ ಹಾಲಹಪಾಲೆಗಳನ್ನು ಪರಾಂಬರಿಸಿದ ನಂತರ ಡಾ. ಕೆ.ಬಾಳಪ್ಪ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಹೊಸಬಟ್ಟಾಲು ಕಟ್ಟಿಗೆಳ ಸ್ಥಾಪನೆ:—ತಾಲೂಕಿನ ಪುತ್ತೂರು, ಮಂಗಳೂರು ತಾಲೂಕಿನ ನಂದಿಕೂರು ಮತ್ತು ಕೆಳಕಾಯು, ಉಡುಪಿ ತಾಲೂಕಿನ ಗುಂಡಿನೆ , ಕುಂದಾಪುರ ತಾಲೂಕಿನ ಕೆರ್ಗಾಲ್ ಮತ್ತು ಉಪ್ಪಿನ ಕುದ್ರು ಕೇಂದ್ರಗಳಲ್ಲಿ ಹೊಸತಾಗಿ ಅಂಚೆಮನೆಗಳು ತೆರೆಯಲ್ಪಟ್ಟಿವೆ.

ಕುಂಬಳೆ ಇದೇ ತಾ 5ರಲ್ಲು ಶ್ರೀ ಕೆ. ಪಿ. ಕುಂಞಿಕಣ್ಣನವರ ಅಧ್ಯಕ್ಷತೆಯಲ್ಲಿ ಮದ್ರಾಸಿಗೆ ವರ್ಗವಾಗಿ ಹೋಗಲಿರುವ ಸೆಂಟ್ರಲ್ ಎಕ್ಸೈಸ್ ಇನ್ಸ್‌ಪೆಕ್ಟರ್ ಶ್ರೀ ಇ. ಸಿ. ಶ್ರೀಧರನವರಿಗೆ ಬೀಳ್ಕೊಡುವ ಸತ್ಕಾರ ಕೂಟವನಡೆಯಿತು.

ಇದೇ ತಾ 12ರಿಂದ ಗ್ರಾಮೋದ್ಯೋಗಸ್ಥರ ಮತ್ತು ರೈತರ ಕೃಷಿಪರಿಶೀಲನಾ ಶಿಬಿರಕ್ಕೆ ಕ್ಲಾಸುಗಳು ತೆರೆಯಲ್ಪಟ್ಟಿವೆ.

ಉಪಾಧ್ಯಾಯ ಕೇಂದ್ರದ ಸಭೆಯು ತಾ. 12ರಲ್ಲು ಶ್ರೀ ಶಿವರಾಮ ಗೌಡರ ಅಧ್ಯಕ್ಷತೆಯಲ್ಲಿ ನಡೆದು ಕಾರ್ಯದರ್ಶಿಗಳಾದ ಶ್ರೀ ಕೆ. ಸುಬ್ಬಣ್ಣ ಅಡಿಗರ ಮಗ, ಹಾಲಿ ಕೊಲ್ಲೂರಿನಲ್ಲಿರುವವರ.

ಆರ್ಜದಾರನೆ ಕರೆಯಿಂದ ಈ ಮೂಲ್ಕ ತಿಳಿಯಪಡಿಸುವದೇನೆಂದರೆ, ಸದ್ರಿ ಡಿಕ್ರಿಯು ಕೃನು ಸ್ಟಾಂಪಿಗೆ ಟ್ರಾನ್ಸಫರ್ ಇಂಡೋಕೆಂತ ಆರ್ಜದಾರ ಕೊಟ್ಟ ಅರ್ಜಿಯು ತಾ. 25—8—50ಕ್ಕೆ ಆಪ್ಪೆರೆ ತನ್ಕೆಯಿಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದೆ ಸದ್ರಿ ದಿವ್ಸ ಹಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಕತಿಳಿಯಪಡ್ಸಿದೆ.

C. Sanjiva Rao,
Vakil for Petr.
Kundapur Date 5—8—50

BUY INDIAN! ENCOURAGE INDIAN INDUSTRY!

ಅಮಲಕೇ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



Highly perfumed and medicated, worth using daily by one and all keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.

ಪ್ರಕಟಣೆ

ಉಡುಪಿ ಶ್ರೀ ಶೀರೂರು ಮಠದ ಆಫೀಸು

ಉಡುಪಿ ಶ್ರೀ ಶೀರೂರು ಮಠದ ಮೇನೇಜರ್ P ಶ್ರೀಪತಿ ಆಚಾರ್ಯರು ಈ ಮೂಲಕ ಎಲ್ಲಾ ಜನರಿಗೆ ತಿಳಿಯ ಪಡಿಸುವದೇನಂದರೆ–

ಉಡ್ಪಿ ಶ್ರೀ ಶೀರೂರು ಮಠದ ಮೂಲಿಜೆಕ್ಕಿನ ಜಾಬ್ತು ತಿನಳ್ಳಿ ಕಸಬಾ ಗ್ರಾಮದ ಈ ಕೆಳಗೆ ವಿವರಿಸಿದ ಸರ್ವೆ ನಂಬ್ರಗಳಲ್ಲಿ ಇರುವ ಕಟ್ಟಿಗೆಗೆ ಉಪಯೋಗ ವಾಗದ ಮರಗಳನ್ನು ತಾರೀಕು 30-8-1950ಕ್ಕೆ ಉಡ್ಪಿ ಶ್ರೀ ಶೀರೂರು ಮಠದ ಆಫೀಸಿನಲ್ಲಿ ಪಬ್ಲಿಕ್ ಏಲಂ ಮಾಡಲಾಗುತ್ತದೆ.

ಆಗತ್ಯ ಉಳ್ಳವರು ಆ ದಿವಸ ಹಾಜರಾಗಬೇಕಾಗಿ ತಿಳಿಸೋಣಾಗುತ್ತದೆ. ಏಲಂ ಆಗುವ ಶರ್ತಗಳು ಗಂಟೆ 11ರಿಂದ 4ರ ವರೆಗೆ ಉಡ್ಪಿ ಮಠದ ಆಫೀಸಿನಲ್ಲಿ ೧೯ಳದಲ್ಲಿ ತಿಳಿಸುತ್ತದೆ.

ಸರ್ವೆ ನಂಬ್ರ.	ಸ. ಡಿ. ನಂ.	
59	.	ಕುಂಡೇಲ ಕಾಡು ರಸ್ತೆ ಕೆಂಕು ಬದಿ
61	1	ಕುಂಡೇಲ ಕಾಡು ರಸ್ತೆಯ ಬಡಗು ಬದಿ
62	15	Do
63	22	"

ಸೊಕ್ಕಾಂ:- ಉಡ್ಪಿ
ತಾರೀಕು:- 28-7-1950.

ನೋಟೀಸು

ಉಡ್ಪಿ ಡಿ. ಮು- ಕೋರ್ಟಿನಲ್ಲಿ
O. P. No. 26/1950

ಟಿ. ನರಸಿಂಹ ಕಿಣಿ, ತೋನ್ಸೆ ಶ್ರೀನಿವಾಸ ಕಿಣಿಯವರ ಮಗ, ಮೂಡು ತೋನ್ಸೆ ಗ್ರಾಮ, —ಅರ್ಜದಾರ

ತನ್ನ ಮಗ ಟಿ. ಸಾರೇಂದ್ರ ಕಿಣಿಯು ತಾ. 24-11-49ರಲ್ಲು ವೀಲು ವಗೈರೆ ಮಾಡದೆ, ನುದುವೆಯಾಗದೆ ಮೃತಪಟ್ಟ ಕಾರಣ, ಸದ್ರಿಯವರಿಗೆ ಹೊರಗಿನಿಂದ ಬರತಕ್ಕ ಯಾವತ್ತೂ ಹಣಗಳಿಗೆ ತಾನು ಹಕ್ಕುದಾರನೆಂತಲೂ ಆ ಕುರಿತು ವಸೂಲು ಮಾಡುವರೆ ತನಗೆ ಒಂದು ಸರ್ಟಿಫಿಕೇಟು ಕೊಡ ಬೇಕಾಗಿ ಮನವಿಮಾಡಿ ಕೊಟ್ಟ ಮೇಲ್ಕಾಣಿಸಿದ ಅರ್ಜಿಯು ತಾ. 26-8-50ರಲ್ಲು ಇಟ್ಟಿರುವುದರಿಂದ, ಆ ಕುರಿತು ಆಕ್ಷೇಪವುಳ್ಳವರು ಸದ್ರಿ ಕೋರ್ಟು ಮುಂದೆ ಸದ್ರಿ ತಾರೀಕು ಹಗಲು ಘಂಟೆ 10ಕ್ಕೆ ಹಾಜರಾಗಿ ಆಕ್ಷೇಪಗಳನ್ನು ಜ್ಞಾಪೀರು ಮಾಡಿ ಕೊಳ್ಳಬಹುದಂತೆ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

(By order of court)

R. Vittal Nayak,
Vakil for petitioner.
Udipi, 5-8-50

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
S. E. A. 144/50
S. C. 116/48

ಶ್ರೀನಿವಾಸಕೊಡಂಜ. —ಅರ್ಜದಾರ
ಶೇಷಪ್ಪಯ್ಯ. —ಎದ್ರಿ

ಶೇಷಪ್ಪಯ್ಯ, ಕುದ್ರು ಸುಬ್ಬಜ್ಜಿ ಅಡಿಗಳ ಮಗ, ಹಾಲಿ ಕೊಲ್ಲೂರ್ನಲ್ಲಿರುವವರ.

ಹೊಸ ಹಿಂದೂ ಕಾನೂನು ಮತ್ತು ಅಳಿಯ ಸಂತಾನ

[ಶ್ರೀ. ಕೆ. ಜಿ. ಜಿನರಾಜ ಜೈನ್ ಎಡ್ವೋಕೇಟ್]

— ಕಾರ್ಕಳ —

ಹೊಸ ಹಿಂದೂ ಕಾನೂನಿನ ಜೊತೆಗೆ ಅಳಿಯ ಸಂತಾನ ಕಾನೂನನ್ನೂ ಸೇರಿಸಿರುವ ವಿಚಾರದಲ್ಲಿ ಅಳಿಯಕಟ್ಟು ಆಚರಿಸಿ ಬರುವವರಲ್ಲಿ ಕಳವಳ ಉಂಟಾಗಿದೆ.

2 ನಮ್ಮ ದೇಶದಲ್ಲಿ ಬೇರೆ ಬೇರೆ ಕಡೆಗಳಲ್ಲಿ ವಿವಿಧ ಕಾನೂನುಗಳು ಜಾರಿಯಲ್ಲಿರುತ್ತಿದ್ದು ಅವುಗಳನ್ನು ಎಲ್ಲಾ ಒಟ್ಟು ಸೇರಿಸುವ ಮತ್ತು ಹಿಂದೂ ಕಾನೂನನ್ನು ಅನುಸಂಸುವವರಲ್ಲಿ ಹೆಂಗಸರಿಗೆ ಇರುವ ಕಷ್ಟ ಶರಂಪರೆಗಳನ್ನು ಕಮ್ಮಿ ಮಾಡುವ ಯೋಜನೆಯು ಬಹಳ ಸಮಯದಿಂದ ನಮ್ಮ ಕೇಂದ್ರ ಸರಕಾರಕ್ಕಿತ್ತು. ಇದು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರೂಪ ತಾಳಿಕೊಂಡಿದ್ದು ಕಳದ 1948ರಲ್ಲಿ ಈಗಿನ ಹಿಂದೂ ಕೋಡಿನ ರೂಪ ವಹಿಸಿತು. ಅದಕ್ಕೆ ಸಂಬಂಧಪಟ್ಟ ಕಮಿಟಿಯು ತಾ. 12-8-1948ರಲ್ಲಿ ಈ ಮಸೂದೆಯನ್ನು ಕೇಂದ್ರ ಎಸೆಂಬ್ಲಿ ಮುಂದೆ ಇಟ್ಟಿತ. ಆ ವರೆಗೆ ಹಿಂದೂ ಕೋಡು ವ.ಸೂದೆಯಲ್ಲಿ ಅಳಿಯಸಂತಾನ ಮತ್ತು ಮಲಬಾರ್ ಕಾನೂನುಗಳು ವಿರಹಿತಪಟ್ಟಿದ್ದು, ಆ ವಿರಹಿತ ಪಡಿಸುವ 94ನೇ ನೆಕ್ಕನ್ನು ಬದಲಾವಣೆ ಮಾಡಿ ಅವುಗಳನ್ನೂ ಕೂಡ ನಿರ್ಮೂಲಮಾಡಿ ಅವುಗಳ ಆಸ್ತಿಯಾಯಿಗಳಿಗೆ ಮುಂದಕ್ಕೆ ಹಿಂದೂ ಕೋಡು ಲಗಾವು ಆಗಬೇಕಾಗಿ ಸಂಬಂಧಪಟ್ಟ ಕಮಿಟಿಯು ರಿಪೋರ್ಟು ಮಾಡಿತ್ತು. ಆ ಕಮಿಟಿಯಲ್ಲಿ ಅಳಿಯಸಂತಾನ ಕಾನೂನು ತಿಳಿದ ಯಾ ಸಂಬಂಧಪಟ್ಟವರು ಯಾರೂ ಇರಲಿಲ್ಲ.

3 ಸದ್ರಿ ಕೋಡಿನಲ್ಲಿ ಹಿಂದೂ ಜೈಂಟು ಕುಟುಂಬವನ್ನು ನಾಶಪಡಿಸಿದ ಉದ್ದಿಶ್ಯ ಕಂಡುಬಂದಾಗ ಉತ್ತರ ದೇಶದವರು ಎದುರಾಡಿದರು. ಆ ಕಾರಣದಿಂದ ಈ ಮಸೂದೆಯು ಮುಂದರಿಸಲಾಗಿ ಈ ವರ್ಷ ಸಪ್ಟಂಬ್ರ ತಿಂಗಳಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಚರ್ಚಿಸಲಾಗುವುದು ಗಿತಿಳಿದುಬಂದಿತ್ತದೆ.

4 ಈಗಿನ ರೂಪದಲ್ಲಿ ಹಿಂದೂಕೋಡು ಮಸೂದೆಯು ಭೂಮಿಗಳಿಗೆ ಸಂಬಂಧವಿಲ್ಲವೆಂಬುದಾಗಿ ಕಂಡುಬಂದರೂ, ಮತ್ತು ಸದ್ರಿ ಭೂಮಿಯು ಕೋಡಿನಲ್ಲಿ ವಿರಹಿತ ಪಡಿಸಿದ್ದರೂ, ಅವನ್ನು ಬದಲಾಯಿಸಿ ಭೂಮಿಗಳಿಗೂ ಸಂಬಂಧಿಸುವ ಯೋಜನೆಯು ಮುಂದುಸುವುದರಲ್ಲಿ ಸಂಶಯವಿಲ್ಲ

5 ದೇಶದಲ್ಲಿ ಏಕತ್ವ ಮತ್ತು ಸಮಾನತ್ವವು ಬೆಳೆಸಬೇಕಾಗಿ ಈ ಕೋಡಿನ ಉದ್ದಿಶ್ಯವಿರುವುದಾಗಿ ಹೇಳಲಾಗುತ್ತದೆ. ಈಗಿನ ಸಂಸ್ಥಿತಿಯಲ್ಲಿ ದೇಶದಲ್ಲಿ ನಾನಾ ಭಾಷಗಳೂ, ನಡವಳಿಕೆಗಳೂ ಇರುತ್ತಿದ್ದು ದೇಶದ ಉನ್ನತಿಗೆ ಹಾನಿಯಾಗಿರುವುದಾಗಿ ಕೆಲವರ ಭಾವನೆ. ಅನೇಕ ವರ್ಷಗಳಿಂದ ದೇಶದಲ್ಲಿ ಒಂದೇ ಕ್ರಿಮಿನಲ್ ಪೆನಲ್ ಕೋಡು, ಪ್ರೊಸಿಡಿಂಗ್ಸ್ ಕೋಡುಗಳು ಇನ್ನಿತರ ಅನೇಕ ಕೋಡುಗಳು ಇದ್ದರೂ ಸಮಾನತ್ವವು ಕಂಡುಬಾರದಿರುವುದರಿಂದ ಒಂದೇ ಫಟನೆ ಸಂಪಾದಿಸಿದ ನಂತರ ಒಂದೇ ಸಿವಿಲ್ ಕೋಡು ಹುರಿದುದು ಯೋಗ್ಯವೆಂದು ವಾದಿಸುವುದೂ ಉಂಟು. ಇಳತ್ತೆ, ತೂಕಗಳ ವಿಚಾರಗಳಲ್ಲಿ ಕೂಡ ನಮ್ಮಲ್ಲಿ ಸಮಾನತೆ ಇಲ್ಲ ಹೀಗಿರುವಲ್ಲಿ ಒಂದೇ ಸಿವಿಲ್ ಕೋಡಿನಿಂದ ಸಮಾನತೆಯನ್ನು ಯಾವ ರೀತಿಯಿಂದ ಹೊಂದಬಹುದೆಂಬುದು ತಿಳಿಯುವುದಿಲ್ಲ. ದೇಶದಲ್ಲಿ ವಿವಿಧ ರೀತಿಯ ಕಟ್ಟುಗಳು ಅನೇಕ ಶತಮಾನಗಳಿಂದ ಜಾರಿಯಲ್ಲಿರುತ್ತಿದ್ದು ಈ ಎಲ್ಲಾ ಕಟ್ಟುಗಳಲ್ಲಿಯೂ ಜೈಂಟು ಕುಟುಂಬ ವಿರುವುದು ಕಾಣಬಹುದು. ಈ ಜೈಂಟು ಕುಟುಂಬ ಎಂಬ ಭಾವನೆ ಇನ್ನೆಲ್ಲಿಯೂ ಭೂಲೋಕದಲ್ಲಿ ಇಲ್ಲವಾದರೂ ಅದರಿಂದ ಹಿಂದೂಸ್ಥಾನಕ್ಕೆ ಹಾನಿಯಿಲ್ಲದೆ ಪ್ರಯೋಜನ ಸಿಕ್ಕಿರುವುದಾಗಿ ಅನೇಕರ ವಾದವಿರುತ್ತದೆ. ಅದಕ್ಕೆ ಈಗ ಕೊಡಲಿ ಇಡುವುದು ಯೋಗ್ಯವಲ್ಲವೆಂಬುದು ಅನೇಕರ ಬಲವಾದ ವಾದವಿರುವುದು ಕೊಂಗ್ರೆಸ್ ಮುಖಂಡರಲ್ಲಿಯೇ ಈ ವಾದ ವಿವಾದಗಳು ನಡೆಯುತ್ತಿವೆ. ಹಿಂದೂ ಕೋಡಿನ ಇನ್ನೊಂದು ಧ್ಯೇಯವೆಂದರೆ ಜಾತಿಗಳನ್ನು ನಾಶಪಡಿಸುವುದು. ಯೂರೋಪ್ರು, ಅಮೇರಿಕ, ಆಫ್ರಿಕಗಳಲ್ಲಿ ಒಂದೇ ಸಿವಿಲ್ ಕೋಡು ಇದ್ದರೂ ಒಂದಲ್ಲದಿದ್ದರೆ ಇನ್ನೊಂದು ಶ್ರೇಣಿಯ ಜಾತಿ ಪಂಥಗಳು ಕಂಡುಬರುತ್ತಿರುವಲ್ಲಿ ಒಂದೇ ಹಿಂದೂ ಕೋಡಿನಿಂದ ಜಾತಿ, ಪಂಥಗಳನ್ನು ನಾಶಗೊಳಿಸಬಹುದೆಂಬ ವಾದವಲ್ಲಿ ಹುರುಳಿಲ್ಲ.

6 ಈ ವಿಚಾರಗಳು ಹೇಗಿದ್ದರೂ ಈಗ ದೇಶದಲ್ಲಿ ಕಂಡುಬರುವ ವಿವಿಧ ಕಟ್ಟುಗಳನ್ನು ಒಂದೇ ಕೋಡಿನಲ್ಲಿ ಯಾವ ರೀತಿಯಲ್ಲಿ ಜೋಡಿಸಬಹುದೆಂಬದನ್ನು ಸ್ವಲ್ಪ ವಿಚಾರಿಸುವಾದು ಈ ಸಂದರ್ಭದಲ್ಲಿ ಅಗತ್ಯವಿರುವುದಲ್ಲವೆ? ಈ ಸಂದರ್ಭದಲ್ಲಿ ಹಿಂದೂ ಕಾನೂನಿಗೂ ಅಳಿಯಸಂತಾನ ಕಟ್ಟಿಗೂ ಇರುವ ಭೇದಗಳನ್ನು ವಿಚಾರಿಸುವ.

ಹಿಂದೂ ಕಾನೂನು— ಅಳಿಯ ಸಂತಾನ ಕಟ್ಟು

(ಈ ಕೆಳಗಿನ ಪ್ರತಿಯೊಂದು ಪೂರ್ವದಲ್ಲಿಯೂ ಹಿಂದೂ ಕಾನೂನಿನ ಮತ್ತು ಅಳಿಯಸಂತಾನ ಕಟ್ಟಿನ ಕ್ರಮ ವಿಧಾನಗಳನ್ನು ಸೂಚಿಸುತ್ತದೆ.)

1 ಎಲ್ಲಾ ಹಕ್ಕುಬಾಧ್ಯತೆಗಳು ಮದುವೆಯಿಂದ ಹುಟ್ಟುವವು.

ಮದುವೆ ಎಂದರೆ ಬರೇ ಕಂಟ್ರಾಕ್ಟು. ಯಾವ ಹಕ್ಕುಬಾಧ್ಯತೆಗಳೂ ಇದರ ಮೇಲೆ ಹೊಂದಿಕೊಂಡಿಲ್ಲ.

2 ವ್ಯತಿಹಟ್ಟ ಆಸ್ತಿನಿಗೆ ಪಿಂಡಕೊಡುವ ಹಕ್ಕಿನಿಂದ ಆಸ್ತಿಗೆ ಹಕ್ಕು ಬರುತ್ತದೆ

ಮೃತಪಟ್ಟವರಿಗೆ ಪಿಂಡಕೊಡುವ ವಿಧಾನಗಳು ಇಲ್ಲ. ಆಸ್ತಿಯಲ್ಲಿ ಹಕ್ಕು ಅದರ ಮೇಲೆ ಹೊಂದಿಕೊಂಡು ಇರುವುದಿಲ್ಲ.

3 ಸಪಿಂಡ, ಸಮಾನೋದಕ, ಬಂಧುಗಳು ಇತ್ಯಾದಿ ಒಬ್ಬರ ನಂತರ ಒಬ್ಬರು ಹಕ್ಕುದಾರರು.

ಅಂಧಾ ಜಾತಿಯ ಸರಣಿಗಳು ಇಲ್ಲ. ಹೊಸತಾಗಿ ಅಂಧವರನ್ನು ಅಳಿಯಸಂತಾನದವರೆಗೆ ಸೇರಿಸಿದರೆ, ಇದ್ದ ಕುಟುಂಬವು ಇನ್ನೂ ದೊಡ್ಡದಾಗಿ ಅನರ್ಥವಾಗುವುದು.

4 ಗಂಡಸಿನಿಂದಲೇ ಮತ್ತು ಅವನ ಮುಖಾಂತ್ರ ಆಸ್ತಿಗಳಲ್ಲಿ ಹಕ್ಕು ಬರುತ್ತದೆ. ಹೆಂಗಸರಿಗೆ ನಿಜಹಕ್ಕು ಇರುವುದಿಲ್ಲ.

ಗಂಡಸರೂ ಹೆಂಗಸರೂ ವಿಕ ಪ್ರಕಾರವ ಹಕ್ಕುಳ್ಳವರಾಗಿದ್ದು ಮೂಲ ಸ್ತ್ರೀಗೆ ಸಂಬಂಧಿಸಿ ಕೊಂಡವರಾಗಿರುತ್ತಾರೆ.

5 ಗಂಡು ಮಕ್ಕಳು ಮಾತ್ರ ತಂದೆಯ ಆಸ್ತಿಗೆ ಹಕ್ಕುದಾರರು. ಹೆಣ್ಣು ಮಕ್ಕಳಿಗೆ ಮತ್ತು ಹೆಂಡ್ತಿಗೆ ಆಸ್ತಿಯಲ್ಲಿ ಹಕ್ಕಿಲ್ಲ. ಜೀವನ ನಡಿಸಿಕೊಳ್ಳಬಹುದು.

ತಂದೆಯ ಆಸ್ತಿಯಲ್ಲಿ ಮಕ್ಕಳಿಗೆ ಹಕ್ಕಿಲ್ಲ. ತಾಯಿಯ ಮತ್ತು ಅವರ ಮೂಲ ಸ್ತ್ರೀಯ ಆಸ್ತಿಯಲ್ಲಿ ಸಮಾನವಾದ ಹಕ್ಕು ಎಲ್ಲರಿಗೂ ಇದೆ. ತಾಯಿಯ ಅಳಿಯದ ಮಕ್ಕಳಿಗೂ ಸಮಾನ ಹಕ್ಕಿದೆ.

6 ವಿಧಾನವು ಪೂರ್ವ ಅಗಾಯ್ತು ಜಾರಿಯಲ್ಲಿದ್ದು, ಭಾಗ ಪ್ರಕಾರ ಪಾಲು ಆಗಬೇಕಾಗಿ ಕಾಯ್ದೆಯಿದೆ.

ಅಳಿಯಸಂತಾನ ಕಟ್ಟಿನ ಕ್ರಮ ವಿಧಾನಗಳನ್ನು ಸೂಚಿಸುತ್ತದೆ.)

1 ಎಲ್ಲಾ ಹಕ್ಕುಬಾಧ್ಯತೆಗಳು ಮದುವೆಯಿಂದ ಹುಟ್ಟುವವು.

ಮದುವೆ ಎಂದರೆ ಬರೇ ಕಂಟ್ರಾಕ್ಟು. ಯಾವ ಹಕ್ಕುಬಾಧ್ಯತೆಗಳೂ ಇದರ ಮೇಲೆ ಹೊಂದಿಕೊಂಡಿಲ್ಲ.

2 ವ್ಯತಿಹಟ್ಟ ಆಸ್ತಿನಿಗೆ ಪಿಂಡಕೊಡುವ ಹಕ್ಕಿನಿಂದ ಆಸ್ತಿಗೆ ಹಕ್ಕು ಬರುತ್ತದೆ

ಮೃತಪಟ್ಟವರಿಗೆ ಪಿಂಡಕೊಡುವ ವಿಧಾನಗಳು ಇಲ್ಲ. ಆಸ್ತಿಯಲ್ಲಿ ಹಕ್ಕು ಅದರ ಮೇಲೆ ಹೊಂದಿಕೊಂಡು ಇರುವುದಿಲ್ಲ.

3 ಸಪಿಂಡ, ಸಮಾನೋದಕ, ಬಂಧುಗಳು ಇತ್ಯಾದಿ ಒಬ್ಬರ ನಂತರ ಒಬ್ಬರು ಹಕ್ಕುದಾರರು.

ಅಂಧಾ ಜಾತಿಯ ಸರಣಿಗಳು ಇಲ್ಲ. ಹೊಸತಾಗಿ ಅಂಧವರನ್ನು ಅಳಿಯಸಂತಾನದವರೆಗೆ ಸೇರಿಸಿದರೆ, ಇದ್ದ ಕುಟುಂಬವು ಇನ್ನೂ ದೊಡ್ಡದಾಗಿ ಅನರ್ಥವಾಗುವುದು.

4 ಗಂಡಸಿನಿಂದಲೇ ಮತ್ತು ಅವನ ಮುಖಾಂತ್ರ ಆಸ್ತಿಗಳಲ್ಲಿ ಹಕ್ಕು ಬರುತ್ತದೆ. ಹೆಂಗಸರಿಗೆ ನಿಜಹಕ್ಕು ಇರುವುದಿಲ್ಲ.

ಗಂಡಸರೂ ಹೆಂಗಸರೂ ವಿಕ ಪ್ರಕಾರವ ಹಕ್ಕುಳ್ಳವರಾಗಿದ್ದು ಮೂಲ ಸ್ತ್ರೀಗೆ ಸಂಬಂಧಿಸಿ ಕೊಂಡವರಾಗಿರುತ್ತಾರೆ.

5 ಗಂಡು ಮಕ್ಕಳು ಮಾತ್ರ ತಂದೆಯ ಆಸ್ತಿಗೆ ಹಕ್ಕುದಾರರು. ಹೆಣ್ಣು ಮಕ್ಕಳಿಗೆ ಮತ್ತು ಹೆಂಡ್ತಿಗೆ ಆಸ್ತಿಯಲ್ಲಿ ಹಕ್ಕಿಲ್ಲ. ಜೀವನ ನಡಿಸಿಕೊಳ್ಳಬಹುದು.

ತಂದೆಯ ಆಸ್ತಿಯಲ್ಲಿ ಮಕ್ಕಳಿಗೆ ಹಕ್ಕಿಲ್ಲ. ತಾಯಿಯ ಮತ್ತು ಅವರ ಮೂಲ ಸ್ತ್ರೀಯ ಆಸ್ತಿಯಲ್ಲಿ ಸಮಾನವಾದ ಹಕ್ಕು ಎಲ್ಲರಿಗೂ ಇದೆ. ತಾಯಿಯ ಅಳಿಯದ ಮಕ್ಕಳಿಗೂ ಸಮಾನ ಹಕ್ಕಿದೆ.

6 ವಿಧಾನವು ಪೂರ್ವ ಅಗಾಯ್ತು ಜಾರಿಯಲ್ಲಿದ್ದು, ಭಾಗ ಪ್ರಕಾರ ಪಾಲು ಆಗಬೇಕಾಗಿ ಕಾಯ್ದೆಯಿದೆ.

7 ಗಂಡಸರೇ ಸೇರಿ ಆಸ್ತಿ ವಾರಾಟ ಮಾಡಬಹುದು.

ಎಲ್ಲರೂ ಸೇರಬೇಕು. ಕಾರಣ ಗಂಡಸರೂ ಹೆಂಗಸರೂ ಸಮಾನ ಹಕ್ಕುದಾರರು.

8 ಹಿರೇ ಗಂಡಸನೇ ಮೆನೇಜರ್ ಆಗಬಹುದು.

ಹಿರೇ ಹೆಂಗಸು ಯಾ ಗಂಡಸು ಯಜಮಾನಿಕೆ ನಡಿಸಬಹುದು.

9 ಮದುವೆ ಎಂದರೆ ಒಂದು ಧರ್ಮ ಸಂಸ್ಥೆ.

ಮದುವೆ ಎಂದರೆ ಬರೇ ಕಂಟ್ರಾಕ್ಟು. ಧರ್ಮದ ಸುಳಿವೇ ಇಲ್ಲ.

10 ಮದುವೆ ವಿಚ್ಛೇದನವು ಧರ್ಮಕ್ಕೆ ವಿರೋಧ

ಮನಸ್ಸು ಮಾಡಿದರೆ ಕೂಡಲೇ ಬೇರೆಯಾಗಬಹುದು.

11 ಹೆಂಗಸರ ಆಸ್ತಿ, ವಿಧವೆಯರ ಆಸ್ತಿ, ಸ್ತ್ರೀಧನ ವಗೈರೆ ಅಪೂರ್ಣ ಹಕ್ಕುಗಳು ಕಾಣುವವು.

ಅಂಥಾ ಅಪೂರ್ಣ ಆಸ್ತಿಗಳೇ ಇಲ್ಲ. ಸ್ತ್ರೀಯರು ಯಾವಾಗಲೂ ಸಂಪೂರ್ಣ ಹಕ್ಕುದಾರರು.

12 ಗಂಡನನ್ನು ಬಿಟ್ಟು ಹೆಂಡ್ತಿಯ ಮಕ್ಕಳಿಗೆ ಗಂಡನ ಆಸ್ತಿಯಲ್ಲಿ ಹಕ್ಕು ಹೋಗುವುದಿಲ್ಲ. ಇದು ಈಗಿನ ಕೋಡಿನಲ್ಲಿ ಊರ್ಜಿತ ಇಟ್ಟಿರುತ್ತದ.

ಅಂಧಾ ಹಕ್ಕುಗಳು ಹಿಂದೆ ಇರಲಿಲ್ಲ. ಈಗ ಹೊಸತಾಗಿ ಸ್ಥಾಪಿಸಿದರೆ ಯಾವ ಆಸ್ತಿಯಿಂದ ಪಾಲು ಕೊಡುವುದು? ಈ ಗಂಡಸರಿಗೆ ಇಂಥ ಜೀವಮಾನದ ಆಸ್ತಿಯಿಂದ ಕೊಡುವುದಾದರೆ ಇದರ ಪರಿಣಾಮ ಹ್ಯಾಗಾದೀತ?

13 ಕಡೇ ಮೆಂಬಾನು ಯಾವಾಗಲೂ ಗಂಡಸೇ ಇರಬೇಕು.

ಕಡೇ ಮೆಂಬರನು ಗಂಡಸೂ ಆಗಬಹುದು ಹೆಂಗಸೂ ಆಗಬಹುದು

14 ಹುಡುಗನನ್ನು ಮಾತ್ರ ದತ್ತ ಪಡಿಯತಕ್ಕದ್ದು.

ಸಾಮಾನ್ಯವಾಗಿ ಹೆಂಡಗಿಯನ್ನು ದತ್ತ ಪಡಿಯುವುದು.

15 ಒಬ್ಬನಿಗಿಂತ ಹೆಚ್ಚು ದತ್ತ ಪಡಕೊಳ್ಳಬಾದ.

ಎಷ್ಟು ಜನರನ್ನೂ, ದತ್ತ ಸ್ವೀಕಾರ ಮಾಡಿ ಕೊಳ್ಳಬಹುದು.

16 ಹೆಂಗಸು ಅಧಿಕಾರ ವಿಸಹ ದತ್ತ ಪಡಕೊಳ್ಳಬಾದ.

ಯಾರ ಅಧಿಕಾರವೂ ಬೇಕಿಲ್ಲ. ಎಲ್ಲರೂ ಸೇರಿ ದತ್ತ ಸ್ವೀಕಾರ ಮಾಡಿಕೊಳ್ಳಬಹುದು.

17 ದತ್ತ ಕೊಡುವವನಿಗೂ ತೆಗೆದು ಕೊಳ್ಳುವವನಿಗೂ ಕೆಲವು ಯೋಗ್ಯತೆಗಳು ಬೇಕು. ಇವು ಈಗಿನ ಹಿಂದೂ ಕೋಡಿನಲ್ಲಿಯೂ ಕಾಣುವವು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೬ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹರದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುಕ್ಕು ಳಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂವು ಸೆರಗು ಹೋಗುತ್ತಿದ್ದರೆ, ಬೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸಿಮೆಣಸಾಕಾಯಿ, ಕಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹೆಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಅಂಥಾ ಯೋಗ್ಯತೆಗಳು ಬೇಕಿಲ್ಲ. ಯಾರನ್ನೂ ದತ್ತ ಸ್ವೀಕಾರ ಮಾಡಿಕೊಳ್ಳಬಹುದು.

18 ತಂದೆಯ ಸಾಲ ತೀರಿಸುವುದು ಮಗನ ಕರ್ತವ್ಯ.

ಅಂಥಾ ಕಟ್ಟು ಇಲ್ಲ.

19 ಯಾವಾಗಲೂ ಮಗ ಹುಟ್ಟಿಬೇಕೆಂಬ ಆಸೆ.

ಯಾವಾಗಲೂ ಮಗಳು ಹುಟ್ಟಿಬೇಕೆಂಬ ಆಶೆ.

20 ಹೆಂಗಸರ ಹಕ್ಕು ಬಾಧ್ಯತೆಗಳು ಭದ್ರಪಡಿಸಬೇಕಾದ್ದು ಅಗತ್ಯ ಕಾಣುತ್ತದೆ.

ಅಂಥಾ ಯಾವ ಆವಶ್ಯಕತೆಗಳೂ ಇಲ್ಲ ಈ ಹೆಂಗಸರ ಸ್ಥಾನಕ್ಕೆ ಹಿಂದೂ ಹೆಂಗಸರು ಯಾವ ಕಾಲದಲ್ಲಿಯೂ ಬರುವ ಹಾಗಿಲ್ಲ.

ಈ ಕೆಲವು ಪ್ರಾಮುಖ್ಯವಾದ ಭೇದಗಳಿವೆ. ಸಮಾನತೆಯು ಯಾವ ಸಂದರ್ಭದಲ್ಲಿಯೂ ಕಾಣುವುದಿಲ್ಲ. ಹೀಗಿರುವಲ್ಲಿ ಈ ಎರಡೂ ವಿಧದ ಅನ್ಯಾಯಿಗಳನ್ನು ಬಲಾತ್ಕಾರದಿಂದ ಈಗಿನ ಹಿಂದೂಕೋಡಿನ ಒಳಗೆ ತರುವುದು ಅನಾಹುತಕ್ಕೆ ಕಾರಣವಾಗುತ್ತದೆ. ಹಿಂದೂ ಕೋಡಿನ ಸಿಲೆಕ್ಟ್ ಕಮಿಟಿಯಲ್ಲಿ ಅಳಿಯಸಂತಾನ ಅನುಯಾಯಿಗಳು ಯಾರೂ ಇರಲಿಲ್ಲ. ಇತರರು ತಿಳಿದೂ ಹಿಂದೆ ವಿರಹಿತಗೊಳಿಸಲ್ಪಟ್ಟಿದ್ದ ಅಳಿಯ ಸಂತಾನಿಗನ್ನು ಹಿಂದೂಕೋಡಿಗೆ ಸೇರಿಸಲ್ಪಟ್ಟಿದ್ದರೆ ಅದರ ಕಾರಣವೇನು ರಜಹದೆಂದು ತಿಳಿಯಲಾಗುವುದಿಲ್ಲ.

ಇದರ ಅನಾಹುತಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಲಾಗುವುದು.

ಹಿಂದೂ ಕೋಡಿನ ಸೆಕ್ಷನ್ ನಂಬ್ರ ಮತ್ತು
ಅವುಗಳಿಂದಾಗುವ ಅನಾಹುತಗಳು
ಯಾ ತೊಂದರೆಗಳು.

3(iii) ಆರ್ಥ ರಕ್ತ ಅನ್ನತಮ್ಮಂದಿರು ಬೇರೆ ಬೇರೆ ಸಂದರ್ಭಗಳಲ್ಲಿ ಹಕ್ಕು ಸಂಪಾದಿಸುತ್ತಾರೆ.

ಅಂಥಾ ಸಂಬಂಧಿಗಳು ಈಗ ಯಾವ ಹಕ್ಕೂ ಪಡಿಯುವುದಿಲ್ಲ. ಅವರು ಯಾರೆಂದು ಕಂಡುಹಿಡಿಯುವುದೂ,ಅಲ್ಲವೆಂದು ವಾದಿಸುವುದೂ ಬಹಳ ಕಷ್ಟ.

3(viii) ಮಗನೆಂದರೆ ದತ್ತದ ಮಗ ಕೂಡಾ ಅಂತ.

ದತ್ತದ ಮಗನೆಂಬುದೇ ಇಲ್ಲ. ದತ್ತದ ಅಳಿಯ ಯಾ ಸೊಸೆ ಎಂತ ಕರೆಯಲ್ಪಡುತ್ತಾರೆ.

4 ಹಿಂದೂ ಕೋಡಿಗಿಂತ ಮುಂಚಿನ ಯಾವ ಪ್ರಕಾರದ ರಿವಾಜು ಇನ್ನು ಮುಂದೆ ಜಾರಿಯಲ್ಲಿರಕೂಡದು.

ಅಳಿಯ ಸಂತಾನಿಗರು ಯಾವಾಗಲೂ ಹಿಂದೂ ಧರ್ಮಶಾಸ್ತ್ರ ಪ್ರಕಾರ,ಮದುವೆ, ದತ್ತ ವಗೈರೆ ನಡಿಸಿದ್ದಿಲ್ಲ. ಅವರ ಅಳಿಯ ಸಂತಾನ ರಿವಾಜು ಒಂದೇ ಸವನೆ ಬದಲಾಯಿಸುವುದು ಅನಾಧ್ಯದ ಮಾತು.

5ರಿಂದ 9ರ ವರೇಗೆ- ಸಪಿಂಡರ ಒಳಗೆ ಮತ್ತು ಕೆಲವು ಸಂಮಂಧಿಕರ ಒಳಗೆ ಮದುವೆಯಾಗ ಕೂಡದು. ಇವು ಹಿಂದೂ ಕಾನೂನು ಪ್ರಕಾರ ಮತ್ತು ಶಾಸ್ತ್ರ ಪ್ರಕಾರವೂ ನಿಶ್ಚಯಿಸಿದ್ದು.

ಅಳಿಯ ಸಂತಾನದವರಿಗೆ ಸಪಿಂಡ ಸಗೋತ್ರ ಎಂತ ಇಲ್ಲ. ಬಳಿ ವಾಡಿಕೆಯಲ್ಲಿರುವುದು. ಯಾವ ಬಳಿಯವರಿಗೆ ಯಾವ ಗೋತ್ರ? ಯಾರು ನಿಶ್ಚಿಸುವದು?

ಮದುವೆ ಹಿಂದೂ ಶಾಸ್ತ್ರ ರೀತಿಯಲ್ಲಿ ಮಾಡತಕ್ಕದ್ದು. ಸಪ್ತಪದಿ ವಗೈರೆ.

ಮದುವೆ ರೀತಿ ಒಂದೇ ಸವನೆ ಬದಲಾಯಿಸಿದರೆ ಮತ್ತು ಹಿಂದೂ ಧರ್ಮಶಾಸ್ತ್ರ ರೀತಿಯಾಗಬೇಕಾಗಿ ನಿಶ್ಚಯಿಸಿದರೆ ಬಹಳ ತೊಂದರೆ ಯಾಗುವುದು.

9ರಿಂದ 24ರ ವರೇಗೆ-ಮದುವೆ ಆಗುವ ಕ್ರಮ, ರೀತಿ, ರಿಜಿಸ್ಟ್ರಿ ವಗೈರೆ.

ಈ ಎಲ್ಲಾ ವಿಷಯಗಳನ್ನು ಅಳಿಯ ಸಂತಾನಿಗರಿಗೆ ಸಂಮಂಧಿಸಿದರೆ, ಅವರಲ್ಲಿ ಮದುವೆ ಅಸಹ್ಯವಾದೀತು. ಅಳಿಯ ಸಂತಾನ ಕಾನೂನಿನ 4ನೇ ಕಲಮಿನಲ್ಲಿ ಕಾಯುವ ರೀತಿಗಳೇ ಅವರ ವಿಚ್ಛಿಗೆ ಸಾಕಾಗುತ್ತವೆ ನಂಬಿಕೆಯಿಲ್ಲದ ಶಾಸ್ತ್ರ ರೀತಿಗಳು ಅವರಿಗೆ ಯಾತಕ್ಕೆ?

28 ಮತ್ತು 29 ಕಾನೂನಿಗೆ ವಿರಹಿತ ವಟ್ಟೆ ಮದುವೆಗಳು ರದ್ದು.

ಹಿಂದೂ ಮದುವೆ ಕಾನೂನುಗಳು ಅಳಿಯ ಸಂತಾನಿಗರಿಗೆ ಸಂಮಂಧಿಸಿದರೆ ಅವರಲ್ಲಿ ನಡೆಯುವ ಅನೇಕ, ಶೇಕಡಾ 95 ಮದುವೆಗಳು ರದ್ದಾಗುವುವು

30 ಗಂಡ ವಗ್ಗು ಹೆಂಡ್ತಿ ಯಾವಾಗಲಾದರೂ ಹಿಂದೂ ಜಾತಿಯಿಂದ ಹೊರಗೆ ಹೋದರೆ ಮದುವೆ ರದ್ದು.

ಹಿಂದೂ ಜಾತಿಯೆಂದರೆ ಯಾವದು? ಎಲ್ಲಿಯೂ ವಿವರಿಸಲಿಲ್ಲ. ಈ ಕಾನೂನು ಹಿಂದೂ ಶಾಸ್ತ್ರಕ್ಕೆ ಅನುಸರಿಸಿ ಹಿಂದೂ ಧರ್ಮ ಅನುಯಾಯಿಗಳಿಗೆ ಮಾಡಿದ್ದು. ಅಳಿಯ ಸಂತಾನಿಗರಿಗೆ ಲಗಾವು ಮಾಡಿದರೆ ಅನರ್ಥವಾಗುವುದು.

31ರಿಂದ 38ರ ವರೇಗೆ-ಈ ಸಂಬಂಧಗಳು ಹೆಂಡ್ತಿಯನ್ನು ಕೋರ್ಟು ಮೂಲಕ ಸ್ವಾಧೀನಪಡಿಸಿಕೊಳ್ಳುವುದು, ಮದುವೆ ರದ್ದು ಮಾಡಿಸಿಕೊಳ್ಳುವದು ವಗೈರೆಗೆ ಸರಕಾರಣಗಳು ಕೊಡಬೇಕು.

1949ನೇ ಅಳಿಯ ಸಂತಾನ ಕಾನೂನಿನ ಮೇರೇಗೆ ಹೆಂಡ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವ ವಿಧಾನಗಳಲ್ಲ. ಬೇಕಾಗಿಲ್ಲ. ಮಾಮವೆ ರದ್ದತಿ ಕ್ರಮವು ಸುಲಭ ರೀತಿಯಲ್ಲಿದೆ. ಯಾವ ತಪ್ಪಿಯೂ ಅಗತ್ಯವಿಲ್ಲ. ಕಾರಣಗಳು ಬೇಕಾಗಿಲ್ಲ.

52 ರಿಂದ 66ರ ವರಿಗಿನ ಕಲಮುಗಳು ದತ್ತ ಸ್ವೀಕಾರಕ್ಕೆ ಸಂಬಂಧಪಟ್ಟವುಗಳು, ಹಿಂದೂಶಾಸ್ತ್ರಗಳ ರೀತಿಗಳಿಗೆ ಅನುಸಾರವಾಗಿ ತಯಾರಾದವು.

ಅಳಿಯ ಸಂತಾನಿಗರೀಗೆ ಯಾವ ಸಂಬಂಧವೂ ಇಲ್ಲ. ಇವು ಜಾರಿಗೆ ಬಂದರೆ ಅನರ್ಥವಾಗಿ, ಯಾರ ಆಸ್ತಿಪಾಸ್ತಿಗಳು ಯಾರ್ಯಾರಿಗೆ ಹೋಗುವುವು.

69, 72 ದತ್ತ ತೆಗೆದುಕೊಂಡವರು ಅವರ ಆಸ್ತಿಗಳನ್ನು ಬೇರೆ ವಿಲೆವಾರಿ ಮಾಡಬಹುದು.

ದತ್ತಮಾಡಿದ ನಂತರ, ದತ್ತಕ್ಕೆ ಹೋದವರು ಕುಟುಂಬದವರಂತೆ ಇರಬೇಕಾದ್ದು ನಿಯಮ. ಇದರಿಂದ ದತ್ತಕ್ಕೆ ಹೋದಲ್ಲಿ ದತ್ತಕ್ಕೆ ಹೋದವರಿಗೆ ಬಹಳ ನಷ್ಟ ಸಂಭವಿಸುವುದು.

ವಿಧವೆ ಅಥವಾ ಗಂಡಸು ಮಾತ್ರ ದತ್ತ ತೆಗೆದುಕೊಳ್ಳತಕ್ಕದ್ದು.

ಇದ ಅನಾನುಕೂಲ. ಈಗ ಇರುವಂತೆ ಎಲ್ಲರೂ ಸೇರಿ ದತ್ತಕ್ಕೆ ತೆಗೆದುಕೊಳ್ಳಬೇಕು.

87 ಅವಿಭಕ್ತ ಕುಟುಂಬವು ಹಿಂದೂ ಕೋಡು ಪಾಸಾದ ಕೂಡಲೆ ಅದಕ್ಕೆ ಸಂಬಂಧಪಟ್ಟ ಪ್ರತಿ ಒಬ್ಬನೂ ಬೇರೆ ಬೇರೆ ಎಂದು ಪರಿಗಣಿಸಲ್ಪಟ್ಟು ಅವರವರಿಗೆ ಹಿಸ್ಸೆಗೆ ಹಕ್ಕುದಾರರಾಗಿರತಕ್ಕದ್ದು.

ಇದು ಕೇವಲ ಹಿಂದೂ ಕಾನೂನನ್ನು ಅನುಸರಿಸಿ ತಯಾರಾದದ್ದು. ಅಳಿಯಸಂತಾನದಲ್ಲಿ ವ್ಯಕ್ತಿಗತ ಪಾಲು ಸಿಕ್ಕುವುದಿಲ್ಲ. ಯಾಗೆ ಕೊಡಿಸುವುದಾದರೂ, ಅವನ ಪಾಲೆತ್ತು? ಯಾವ ರೀತಿ ಪಾಲು ಮಾಡುವುದು? ವಗೈರೆ ವಿಷಯಗಳು ಸ್ಪಷ್ಟವಿಲ್ಲ.

92, 106, 107, ಮತ್ತು 109 ಹಿಂದೂ ಸ್ತ್ರೀಯರ ಆಸ್ತಿ ಯಾವ ರೀತಿ ಮುಂದಕ್ಕೆ ಯಾರಿಗೆ ಸಿಕ್ಕಬೇಕು ಎಂಬ ವಿಚಾರ.

ಈ ಎಲ್ಲಾ ಪ್ರಕರಣಗಳನ್ನು ಅಳಿಯಸಂತಾನದವರಿಗೆ ಲಗಾವು ಮಾಡುವುದು ಅನುಚಿತ. 1949ನೇ ಅಳಿಯಸಂತಾನ ಆಕ್ಟಿನ ನಂಬ್ರ 25ನೇ ಪ್ರಕರಣವು ಇದಕ್ಕೆಂತ ಯೋಗ್ಯವಾಗಿದೆ.

97. ಆಸ್ತಿಟರು, ಕೋಸ್ತ್ಯೆಟರು (ಸಪಿಂಡ, ಭಿನ್ನಪಿಂಡ) ವಗೈರೆ ಸಂತಾನಿಗರು, ಅವರ ಹೆಕ್ಕುಬಾಧ್ಯತೆಗಳು.

(ಮುಂದರಿಯುವುದು)

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕ್ತಗು, ವ್ರದರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರಿವಿನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯ ೬—೦—೦. ಪೋಸ್ಟ ಚಾರ್ಜು ೧॥ ಆಣೆ.

ಸಾಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಲಿಂಬಿಟರು:—ಹುಬ್ಳಿ ಧಾರವಾಡ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಬಾಳ್ವ ಸಿದ್ಧಲಿಂಗಸ್ವ ಧಾರವಾಡಕರು ವಿಜಾಪುರ ಸಂಜುಡೇಸ್ವರ ಮೂರ್ತಿ ಹಾವಣಗೇರಿ ಪಾವಣಗೇರಿ:—ಪಾವಣಗೇರಿ ಪ್ರೆಸ್ಸ್ ಆಫ್ ಎಲ್ ಕವಲಾಪುರ ,ಕೆಮಿಸ್ಟ್ರಿ ಜಾವೇರಿ ಬ್ಯಾಡಿಗಿ

ಖೆತುಸ್ರಾವ ನಿಂತಿತು

'ಕುಮಾರ' ಬಿಲ್ಲೆಗಳನ್ನು ಉಪಯೋಗಿಸಿದಂತೆ ಪದಪದ್ದು ಖೆತುಸ್ರಾವವಾಗುತ್ತಿದ್ದು, ಶಕ್ತಿಯೂ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ: ರೂ 3-; ಸ್ಪೆಶಲ್ ರೂ. 5-; ಅಧಿಕಾರಿಕ ಸ್ಪೆಶಲ್ ರೂ. 8-[ನಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.
ಸ್ವಾಕಸ್ವರು ಔಷಧ ಕಂಪೆನಿ,ಮಂಗಳೂರು

Notice

In the Court of the District Munsif of Udipi.
R. I. A. No. 885/1950
O. S. No. 358/50.
Between:-
1. Dr. K. Laxminarayana Aithala
2. Kunjoor Ramachandra Rao
3. U. Padmanabha Shet Raiker,
on behalf of themselves and the Consumers of Electric Energy supplied by the 1st defendant. —Plaintiffs.
and
1. The Udipi Electric Supply Corporation Ltd., represented by its Managing Agents The Mechelec Engineering Co., Ltd., represented by its Managing Director sri K. V. Subba Rao
2. Resident Engineer, The Udipi Electric Supply Corporation Ltd; represented by Sri S. G. K. Shenoy. —Defendants.

To,

All whom it may concern and in particular to all the consumers of Electric Energy Supplied by the 1st defendant.

The Plaintiffs have filed the above suit for restraining the defendants by means of a permanent injunction not to include the sent per cent surcharge permitted by the Government of Madras in G. O. Rt. No. 664 dated 12-6-50 in the Bills of July, 1950 onwards and not to collect the said Surcharge and for other reliefs and in the said suit the plaintiffs have also filed an application Registered as R. I. A. 885/50 praying for permission to file and conduct the said suit on behalf of all the consumers of Electric Energy supplied by the 1st defendant. The said application stands posted to 29th August 1950 at 10 A. M. and all persons concerned may appear in person or by Pleader duly instructed on the said date before the said court to show cause against the application, failing wherein, the said application will be heard and determined exparte.

Counsel for Plaintiffs.
(Sd) P. Padmanabha Rao
(Sd) B. Vasudeva Rao
(Sd) N. V. Kamath
Camp: Udipi
Dated:- 10-8-50

ಅವನತಿಯ ಹಾದಿಯಲ್ಲಿ

(ಲೇಖಕ:-ಶ್ರೀ ಕಿರ್ಲಾಯ ಲಕ್ಷ್ಮೀನಾರಾಯಣ ಅಡ್ಕ)

ಒಂದೇ ಒಂದು ಮೂಲ ವಿಚಾರ ಬೇರೆ ಬೇರೆ ಸ್ಥಳ, ಕಾಲ, ಘಟನೆಗಳಲ್ಲಿ ಮೂಡಿ ಬರುವಾಗ ಬೇರೆ ಬೇರೆ ವೇಷಪಡೆಯಬಲ್ಲುದು. ಬಾಹ್ಯ ವೇಷವನ್ನು ಕಳಚಿ ಕಂಡರೆ ಸತ್ಯದ ಅರಿವಾದರೂ, ಮೇಲಿಂದ ಮೇಲೆ ಕಾಣುವಾಗ ಅದು ಬೇರೆಯಾಗಿಯೇ ಕಂಡು ಬಂದು ನಮ್ಮನ್ನು ಮೋಸಗೊಳಿಸುತ್ತದೆ. ಹೊಸತು ಯಾವುದೇ ಅದರೂ ತಲೆಯೆತ್ತಿದ ಕೂಡಲೇ ಜನ ಅದರ ಹೊಸತನಕ್ಕೆ ಮರುಳಾಗುಂಡು ಅದರೆಡೆಗೆ ಹಾರಿ ಬೀಳುತ್ತಾರೆ. ಅದರಲ್ಲೂ ಒಂದು ಸಾಮೂಹಿಕ ವಿಚಾರವಾದರೆ ಜನ ಅದನ್ನು ತೀಕ್ಷ್ಣ ದೃಷ್ಟಿಯಿಂದ ನಿರೀಕ್ಷಿಸಿ ಸ್ವೀಕರಿಸುವ ಬದಲು 'ಪರಸೆಯೊಡನೆ ಗೋವಿಂದ' ಹಾಕಿ ಅಪ್ಪಿಕೊಳ್ಳುವ ಅಭ್ಯಾಸಕ್ಕೆ ಅಂಟಿಕೊಂಡಿದ್ದಾರೆ.

ಮೇಲಿನ ಸತ್ಯದ ಪ್ರಯೋಜನವನ್ನು ಸ್ವಾರ್ಥ ಸಾಧಕರು ಹಲವಾರು ಬಗೆಯಿಂದ ಪಡೆದುಕೊಳ್ಳುತ್ತಾರೆ. ತಮ್ಮ ಸ್ವಾರ್ಥಿ ವಿಚಾರಗಳನ್ನು ಬೇರೆ ಬೇರೆ ಸ್ಥಳ, ಕಾಲ, ಘಟನೆಗಳಿಗೆಯಲ್ಲಿ ಕುರುಕಿಸಿ ಬೇರೆ ಬೇರೆ ವೇಷದಿಂದ ಸಮೂಹದ ನುಂಡಿತಂದು, ವ್ಯಕ್ತಿಯ ಸ್ವಾರ್ಥದ ಸಾಧನವಾದ ಆ ವಿಚಾರವನ್ನು ಸಮಾಜದ ಉನ್ನತಿಯ ಹಾದಿಯೆಂದು ಪ್ರಚಾರ ಮಾಡುತ್ತಾರೆ. ಗುಟ್ಟುನರಿಕ ಇನ್ನೂ ಕೆಲಸ್ವಾರ್ಥಿಗಳು ಜತೆಗೂಡಿ ಆ ವಾದವನ್ನು ಪುಷ್ಟೀಕರಿಸಿ ತಮ್ಮ ಬೇಳೆಯನ್ನೂ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹೀಗೆ ಆ ವಾದವನ್ನು ಎತ್ತಿ ಹಿಡಿಯಲು ಸ್ವಾರ್ಥಿಗಳ ಒಂದು ಪಂಗಡವೇ ಸಿದ್ಧವಾಗುತ್ತದೆ. ಒಂದು ವಿಚಾರದ ಕುರಿತು ಹಲವಾರು ಮಂದಿ ಪ್ರಚಾರ ಮಾಡುತ್ತಿರುವಾಗ ಗುಟ್ಟುನರಿಯದ ಜನಸಾಮಾನ್ಯರು ಹಿಂದಾ ಮುಂದು ಯೋಚಿಸದೆ ಕಣ್ಣು ಮುಚ್ಚಿ ಆ ವಿಚಾರಕ್ಕೆ ಅಂಟಿಕೊಳ್ಳುತ್ತಾರೆ. ಆದರೆ ಅದೊಡನೆಯೇ ಸಮಾಜದ ನಾಡಿಯೊಳಗೆ ವಿಷಕೀಟವೊಂದು ಪ್ರವೇಶಿಸಿತು ಎಂಬುದನ್ನು ಜನ ತಿಳಿಯುವುದಿಲ್ಲ. ಮೊದಲು ಚಿಕ್ಕ ರೂಪದಲ್ಲಿ ಕಾಣಿಸಿಕೊಂಡ ಈ ರೋಗ ಮೆಲ್ಲಮೆಲ್ಲನೆ ಬಲಿತು ಸಮಾಜದ ಎಲ್ಲಾ ನಾಡಿಗಳನ್ನೂ ವಿಷಭರಿತಗೊಳಿಸಿ ಬಿಡುತ್ತದೆ. ಇಂದು ದೇಶದ ರಾಜಕೀಯ ಕ್ಷೇತ್ರದಲ್ಲಿಯೆ ದೃಷ್ಟಿ ಕ್ಷೀಣಿಸಿದರೆ ಮೇಲಿನ ರೀತಿಯ-ಸಿಸ್ವಾರ್ಥಿಗಳ ವೇಷ ಧರಿಸಿ ಪಂಥಾಹ್ವದ ಪ್ರಚಾರ ಮಾಡಿ ದೇಶದ ಪ್ರಗತಿ ಪಥದಲ್ಲಿ ಕಲ್ಲು ಹಾಕುವ ಹಿತ ಶತ್ರುಗಳ ಬಳಗವೇ ಬೆಳೆಯುತ್ತಿರುವುದು ಕಂಡು ಬರುತ್ತದೆ.

ಗೊತ್ತು ಗುರಿಯಿಲ್ಲದೆ ಅಲೆಯುವ ಮಂದಿಯ ಮನಸ್ಸು ಲೋಭಮೋಹಗಳಿಗೆ ಬಲಿ ಬೀಳುವುದರಲ್ಲಿ ಆಶ್ಚರ್ಯವಿಲ್ಲ. ವ್ಯಕ್ತಿ ಒಂದು ನಿಶ್ಚಿತ ಹಾದಿಯಿಂದ ನಿರ್ದಿಷ್ಟ ಗುರಿಯೆಡೆಗೆ ಆತ್ಮಾಹಿದಿಂದ ನಡೆಯುತ್ತಿರುವ ವೇಳೆ ಮನಸ್ಸು ಗುರಿಯನ್ನು ಸೇರುವ ಚಿಂತೆ ಚಿಂತನೆಗಳಲ್ಲೇ ಕನ್ಮಯವಾಗಿರುತ್ತದೆ. ಮನಸ್ಸಿನ ವಿಕಾಗ್ರತೆಯು ಎದುರು ಲೋಭ ಮೋಹಗಳೂ ಸೋಲುತ್ತವೆ. ಆದೂ ಗುರಿಯೆಡೆಗೆ ಹೋರಾಟದಿಂದಲೇ ಮುನ್ನುಗ್ಗುವ ಕೇಂದಿರುವ ಸಂದರ್ಭದಲ್ಲಿ ಭೋಗ ವಿಲಾಸಗಳನ್ನು ಧಿಕ್ಕರಿಸಿ ನಡೆಯುವವರಲ್ಲೇ ಪುಮ್ಮಸವಿರುತ್ತದೆ; ಆತುಲಾನಂದವಿರುತ್ತದೆ. ಹಿಂದೆ-ಸ್ವಾತಂತ್ರ್ಯ ದೊರಕುವ ಮೊದಲು ನಮ್ಮ ದೇಶದ ರಾಜಕೀಯ ರಂಗಕ್ಕೆ ಕಿದು ದುಡಿಯುವ ಮಂದಿಗೆ ವೈಯುಕ್ತಿಕವಾಗಿಯೂ ಸಾಂಘಿಕವಾಗಿಯೂ ಒಂದು ನಿರ್ದಿಷ್ಟ ಗುರಿಯಿತ್ತು; ಅದು ಸಂಪೂರ್ಣ ಸ್ವಾತಂತ್ರ್ಯ. ನಿಶ್ಚಿತ ಹಾದಿಯಿತ್ತು, ಅದು ಹೋರಾಟ. ಇಂದು ನಾವು ಅಂದು ನಿಶ್ಚಯಿಸಿದ ಗುರಿಯನ್ನು ಸೇರಿದ್ದೇವೆ. ಸ್ವತಂತ್ರರಾಗಿದ್ದೇವೆ. ಆದರೆ ಅಂದು ನಿಶ್ಚಯಿಸಿದ ಗುರಿಯೇ ನಮ್ಮ ಕೊನೆಯ ಗುರಿಯಲ್ಲ; ಅಂತಿಮ ಘಟ್ಟವಲ್ಲ. ಇಂದು ನಾವು ಸೇರಿರುವುದು ದೇವ ಮಂದಿರದ ಹೆಬ್ಬಾಗಿಲನ್ನು ಮಾತ್ರ. ಪಡೆದಿರುವುದು ಅದರ ಪಹರೆಯ ಅಧಿಕಾರವನ್ನಷ್ಟೇ. ದೇವ ಮೂರ್ತಿ ಇನ್ನೂ ಮುಂದಿದೆ. ಅದರ ದರ್ಶನ ವಿನ್ನೂ ನವುಗಾಗಿಲ್ಲ. ನಾವು ಸೇರಬೇಕಾಗಿರುವ ಅಂತಿಮ ಮತ್ತು ಪರಮ ಶ್ರೇಷ್ಠ ಗುರಿ "ಸರ್ವೋದಯ". ಅದೇ ಮಹಾತ್ಮರ ಕನಸಿನ "ರಾಮರಾಜ್ಯ". ಅದೇ ಬೈಬಲಿನ "ಭೂಮಿಯ ಮೇಲೆ ದೇವರ ರಾಜ್ಯ."

ಆದರೆ ಇಂದು ನಮ್ಮ ರಾಜಕೀಯ ಕಾರ್ಯಕರ್ತರಲ್ಲಿ ಹಚ್ಚಿನವರ ದೃಷ್ಟಿಯೆತ್ತ ಹರಿದಿಲ್ಲ. ಅವರು ಅಂದಿನ ಗುರಿಯೇ ಕೊನೆಯೆಂದು ಬಗೆದಿದ್ದಾರೆ. ಅದನ್ನು ಸೇರಿಯಾದ ಕೂಡಲೇ ತಮ್ಮ ಹೊಣೆ ತೀರಿತೆಂದು ತಿಳಿದಿದ್ದಾರೆ. ಮಾತ್ರವಲ್ಲ, ಸಿಕ್ಕಿದ ಸ್ವಾತಂತ್ರ್ಯದ ಫಲವನ್ನು ಭೋಗಿಸುವುದು ತಮ್ಮ ಹಕ್ಕು ಎಂಬ ಹುಚ್ಚು ಕಲ್ಪನೆಗೆ ಬಲಿ ಬಿದ್ದಿದ್ದಾರೆ. ಪರಿಣಾಮವಾಗಿ ಅವರ ಗೊತ್ತು ಗುರಿಯೆಲ್ಲವೂ ಮನಸ್ಸಿನ ಜೇಲಿನ ಪ್ರವಾಹದೊಡನೆ ಹುಲ್ಲುಕಡ್ಡಿಯಂತೆ ತೇಲಿ ಹೋಗುತ್ತಿವೆ. ವ್ಯಕ್ತಿಯ ಗತಿ ಹೀಗಾದರೆ, ಸಂಘಶಕ್ತಿ ನಡೆದಿದೆ ಎಂದು ನೋಡ ಹೋದರೆ ಅದೂ ಇದೇ ಹಾದಿ ತುಳಿಯುತ್ತಿದೆ ಎಂದು ಹೇಳಬಹುದು ಅದರೆ ಇದರಲ್ಲಿ ಆಶ್ಚರ್ಯವಿಲ್ಲ ಏಕೆಂದರೆ ವ್ಯಕ್ತಿಗಳ ಸಮೂಹವೇ ಸಂಘ ವಷ್ಟೇ? ಇಂದಿನ ವರೆಗೆ ಕಾರ್ಯಕರ್ತರಿಗೆ ಹಾದಿ ತೋರಿಸಿ ಸ್ವಾತಂತ್ರ್ಯ ಮಂದಿರದ ಹೆಬ್ಬಾಗಿಲವರೆಗೆ ನಡೆಯಿಸಿಕೊಂಡು ಬಂದ ಸಂಸ್ಥೆ ಇಂದು ಗುರಿಯೊಂದನ್ನು ನಿಶ್ಚಯಿಸದೆ ಸ್ವಸ್ಥಿತ ಹಾದಿಯೊಂದನ್ನು ಯಾತಕೂಡದೆ ಹೆಬ್ಬಾಗಿಲ ಪಹರೆ-ಅಳುವ ಅಧಿಕಾರ ತಮ್ಮಲ್ಲೇ ಭದ್ರವಾಗಿ ಉಳಿಯುವಂತೆ ಹೆಣಗುವುದರಲ್ಲೇ ತನ್ನ ಶಕ್ತಿ ಸವಸ್ವನನ್ನೂ ವ್ಯಯಿಸುತ್ತಿದೆಯೋ ಎಂಬ ಸಂದೇಹ ಮೂಡಿ ಬರುತ್ತಿದೆ.

ಐಶ್ವರ್ಯ ಮತ್ತು ಅಧಿಕಾರ ಇವೆರಡು ಮಾನವರ ಮೇಲೆ ಮೋಹಜಾಲವನ್ನು ಎಸೆದು ಬಹು ಬೇಗನೆ ಅವರನ್ನು ತಮ್ಮ ಬಲೆಯಲ್ಲಿ ಹಿಡಿಯುತ್ತವೆ. ಇವುಗಳ ಬಲೆಯಿಂದ ತಪ್ಪಿಸಿಕೊಳ್ಳಲು ಮಾನವರ ಅಂತರಿಕ ಶಕ್ತಿ ಹಿರಿದಾಗಿರಬೇಕು; ಅಥವಾ ಅವುಗಳೆಡೆಗೆ ನೋಡಲೆಡೆಯಿರದಷ್ಟು ಕೆಲಸ ಕಾರ್ಯಗಳಲ್ಲಿ ತನ್ಮಯರಾಗಿರಬೇಕು. ಆದರೂ ಇಲ್ಲದಿದ್ದರೆ ಎಂಥವನಿಗೂ ಅವುಗಳ ಬಲೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಇಂದಿನ ರಾಜಕೀಯ ಕ್ಷೇತ್ರದಲ್ಲಿ ಅವೆರಡರ ಪ್ರಾಬಲ್ಯವೇ ಎದ್ದು ಕಾಣುತ್ತಿದೆ. ಹೆಚ್ಚಿನ ರಾಜಕೀಯ ಕಾರ್ಯಕರ್ತರು ಅವುಗಳ ಬಲೆಯಲ್ಲಿ ಸಿಲುಕಿರುವುದು ನಿಶ್ಚಯವಾಗಿ ಕಂಡು ಬರುತ್ತಿದೆ. ಒಂದು ಕಾಲದಲ್ಲಿ, ದೇಶದ ರಾಜಕೀಯಕ್ಕೆ ಧುಮುಕಿ ಹುಮ್ಮಸ್ಸಿನಿಂದ ಹೋರಾಡಿದವರೂ ಇಂದು ಅಧಿಕಾರ, ಐಶ್ವರ್ಯಗಳಿಗಾಗಿ ಹಡಪಡಿಸುತ್ತಿರುವುದನ್ನು ಕಾಣುವಾಗ ಮಾನವನ ಮನಸ್ಸಿನ ದುರ್ಬಲತೆಯು ಅರಿವಾಗುತ್ತಿದೆ "ಎನಸ್ಸು ಚಂಚಲ ಈ ಮನಸ್ಸು?" ಎನ್ನಿಸುತ್ತದೆ. ತನ್ನ ಸರ್ವಸ್ವವನ್ನೂ ನೀಗಿ ನಿಸ್ವಾರ್ಥಿಯೆನಿಸಿ, ಗುರಿಯೆಡೆಗೆ ಅಚಲ ಆತ್ಮವಿಶ್ವಾಸದಿಂದ ನಡೆದು ಧ್ಯೇಯವಾದಿಯೆನಿಸಿ, ತನ್ನ ಪ್ರಾಣವನ್ನೇ ಸ್ವಾತಂತ್ರ್ಯ ಸಂಗ್ರಾಮದ ಬಲಿಪೀಠಕ್ಕೆ ಅರ್ಪಿಸಲು ಮುಂದಾದ ವ್ಯಕ್ತಿಗಳೇ ಇಂದು ಅಧಿಕಾರ ಐಶ್ವರ್ಯಗಳಿಗಾಗಿ ತಮ್ಮಲ್ಲೇ ಹೊದೆದಾಡುತ್ತಿರುವುದನ್ನು ಕಾಣುವಾಗ ಮೇಲಿನ ಅರಿವು ಬಲಗೊಳ್ಳುತ್ತದೆ. ಉನ್ನತಿಯ ತಿರುಬೆದೆಗೆ ಕದಿದಾದ ಹಾದಿ ಹಿಡಿದು ಸಾಗಿದ ವ್ಯಕ್ತಿ ಒಮ್ಮೆ ಕಾಲು ತಪ್ಪಿ ಕೆಳಕಡೆಯ ತಿರುಬೆದೆಗೆ ಜಾರಿಹತ್ತಿದರೆ ಸರಿ, ಯುಂಬೆ ಅವನನ್ನಾವುದೂ ತಡೆಯುವುದಿಲ್ಲ ಅಳವಾದ ಅಂದರದ ಕೊನೆಯ ಮಟ್ಟಕ್ಕೆ ಇಳಿದೇ ತೀರುತ್ತಾನೆ. "ತಾನಾಗಿ ಶ್ರಮಿಸಿ ಹತ್ತಬೇಕಾಗಿಲ್ಲ. ಆದಾಗಿ ಇಳಿಯುತ್ತಿರುತ್ತದೆ!" ಎಂಬ ಹುಚ್ಚು ಸುಖವನ್ನು ಕೆಲವೆ ಕೂಡಾ ಜೊತೆಯಲ್ಲಿರುತ್ತದೆ!

ಇಂದು ನಮ್ಮ ಹೆಚ್ಚಿನ ರಾಜಕೀಯ ಕಾರ್ಯಕರ್ತರ ಹೃದಯದಲ್ಲೊಂದು ಅದ್ಭುತ ಬದಲಾವಣೆ ಜರಿಗಿದೆ. ಅಲ್ಲಿ ಹೊಸತಾಗಿ ಒಳಿತು ಸೇರಿ ಸಂಚಯವಾಗುವ ಬದಲು ಹಿಂದೆ ಸಂಗ್ರಹವಾಗಿದ್ದುದು ಕೂಡಾ ಕಾಲ್ದೆಗೆಯ ಹತ್ತಿದೆ. ಅಂದು ಹೋರಾಟದ ಕಾವಿನಲ್ಲಿ ಹುಸ್ಪವಾಗಿದ್ದ ನಾನೆನಿಗಳೆಲ್ಲ ಇಂದು ಮೆಲ್ಲ ಮೆಲ್ಲನೆ ತಲೆಯೆತ್ತ ಹತ್ತಿವೆ. ಪರಿಣಾಮವಾಗಿ ನೈತಿಕ ದೃಷ್ಟಿಯಿಂದ ಬಾಳು ಬೀಳಿನೆಡೆಗೆ ಸರಿಯಹತ್ತಿದೆ. ಆದುದರಿಂದಲೇ ಕಾರ್ಯಕರ್ತರು ಅಂದು ಯಾವ ಸ್ವಾರ್ಥಿ ವಿಚಾರಗಳನ್ನು-ಸಮಾಜ ಘಾತಕ ಕಾರ್ಯಗಳನ್ನು ಕಂಡು ಸಿಡಿಮಿಡಿಗೊಂಡು ಬಿದ್ದು ದೂರೀಕರಿಸಲು ಯತ್ನಿಸುತ್ತಿದ್ದರೋ ಇಂದು ಅದನ್ನೇ ಸ್ವಾಗತಿಸುತ್ತಿರುವುದು ಕಂಡು ಬರುತ್ತಿದೆ. ದೇಶಕ್ಕಾಗಿ ತಮ್ಮನ್ನೇ ಬಲಿಕೊಡಲು ಸಿದ್ಧರಿದ್ದವರೇ ತಮಗಾಗಿ ದೇಶವನ್ನೇ ಆಪತ್ತಿಗೆ ನೂಕಲು ಸಿದ್ಧರಾಗುತ್ತಿದ್ದಾರೆ. ಅಂದು ನಿಸ್ವಾರ್ಥದೆದುರು ಸಲ್ಲದುದು ಇಂದು ಸ್ವಾರ್ಥದೆದುರು ಸಲ್ಲುತ್ತದೆ. ಹಗಲಲ್ಲಿ ಹಾವೆಂದು ಛೀಗೆಳೆದು ದೂರ ಸರಿಸಿದುದನ್ನೇ ರಾತ್ರೆ ಹಗ್ಗವೆಂದು ಪ್ರಚಾರ ಮಾಡಿ 'ಕೊಳ್ಳಿ'ದನ್ನು ತ್ತಿದ್ದಾರೆ! ಮೋಹದ ಮಬ್ಬೇ ಅಂತಹುದು.

ಆದರೆ ಅಂದು ಬಹಿರಂಗವಾಗಿ ಸಲ್ಲದೆಂದು ಘೋಷಿಸಿದುದನ್ನೇ ಇಂದು ಸಲ್ಲುವುದೆಂದು ಪ್ರಚಾರ ಮಾಡುತ್ತಿದ್ದರೆ ಅವರ ಅಂತರಂಗದಲ್ಲಿ ಬಣ್ಣ ಬದಲಾಯಿದು ಬಯಲಾಗಲಿಕ್ಕಿಲ್ಲವೇ? ಆಗ ಮುಂದಿ ಅವರ ವಾದವನ್ನು ಪುಷ್ಟೀಕರಿಸುವ ಬದಲು ಛೀಹಾಕಲಿಕ್ಕಿಲ್ಲವೇ? ಜನ ಅವರ ಬೆನ್ನ ಹಿಂದೆ ನಡೆಯುವ ಬದಲು ಎದುರು ನಿಂತು ತಡೆಗಟ್ಟಲಿಕ್ಕಿಲ್ಲವೇ? ಇದಕ್ಕಾಗಿಯೇ ಹಿಂದೆ ಸಲ್ಲದೆಂದ ವಿಚಾರವನ್ನೇ ಇಂದಿನ ಸಯಜ ಘಟನೆಗಳಿಜೆಯಲ್ಲಿ ಕುರುಕಿಸಿ ಸಮಾಜದ ಮುಂದೆ ತರುತ್ತಾರೆ. ಆದು ಹೊಸ ವೇಷದಿಂದ ತಲೆಯೆತ್ತುತ್ತಿರುವಾಗಲೇ ಜನರ ಹಿತವನ್ನೂ ದೇಶದ ಉನ್ನತಿಯನ್ನೂ ಜೊತೆಯಾಗಿಯೇ ಸಾಧಿಸಲು ಸಾಧನವಿದೆಂದು ಪ್ರಚಾರಕ್ಕೆ ತ್ರಾರಂಭಿಸುತ್ತಾರೆ. ಜನ ಹಿಂದು ಮುಂದು ನೋಡದೆ ನಂಬಿ ಆ ವಿಚಾರಕ್ಕೆ ಅಂಟಿಕೊಳ್ಳುತ್ತಾರೆ. ಸ್ವಾರ್ಥಿಗಳ ಬೇಳೆ ಬೇಯುತ್ತದೆ. ಆದರೆ ಸಮಾಜದ ಪ್ರಗತಿ ..?

ಈ ರೀತಿಯಾಗಿ ಇಂದು ನಮ್ಮ ದೇಶದ ರಾಜಕೀಯ ಕ್ಷೇತ್ರದಲ್ಲಿ ಒಂದು ವಿಷಮ ವಾತಾವರಣವು ತಲೆಯತ್ತುತ್ತಿದೆ. ಸ್ವಾರ್ಥಿಗಳು ನಿಸ್ವಾರ್ಥಿಗಳ ಸೋಗಿನಲ್ಲಿ ಸಮಾಜ ಘಾತಕ ವಿಚಾರಗಳನ್ನು ಸಮಾಜೋನ್ನತಿಯ ದಂದು ಪ್ರಚಾರ ಮಾಡಿ ದೇಶದ ಪ್ರಗತಿಯ ಪಾದಿಯಲ್ಲಿ ತೊದರನ್ನು ತಂದೊಡ್ಡುತ್ತಿವ್ದಾರೆ ಅಂದು ನಿಸ್ವಾರ್ಥದ ಹಾದಿ ಹಿಡಿದವ್ದ ಮಂದಿಯೇ ಇಂದು ಸ್ವಾರ್ಥದ ಬೆನ್ನ ಹಿಡಿದಿದ್ದಾರೆ. ರಾಜಕೀಯ ಕಾರ್ಯಕರ್ತರಲ್ಲಿ ಹೆಚ್ಚಿನವರ ಮನೋರಥ ಅವನತಿಯ ಹಾದಿಯಲ್ಲಿ ಪಯಣ ಹೊರಟಿದೆ. ಇದರ ಕೊನೆಯೆಲ್ಲಿ?

"ಬೇರೆ ಶಾಸ್ತ್ರಗಳನ್ನೆ ಹ್ಯೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು-ವಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಲಿದ ಭಟ್ಟಿಯಾಗಿ ಎದ್ದು ಕಾಣುವುದು.

400 ಕ್ಕೂ ಮಿಕ್ಕ ಪುಟಗಳು ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

THE UNITED KARNATAK INSURANCE COMPANY, LTD., DHARWAR.

Established: 1929.

Offers their valuable service to the public of India in making their sweet home, always happy.
[For good investments and valuable connection, please consult us.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

ಪತ್ರಿಕೆ No. R. 3010 — 24—8—1950 — Estd. 1921 ಸ್ಥಾಪನೆ.

LICENCE No. 31
Licensed to Post without Prepayment

Founder: Sri A. B. Shetty,
Minister for Agriculture & Veterinary.

ನವಯುಗ

ವರ್ಷ ೩೦ ವಾರ ೫೨

NAVAYUGA
WEEKLY

UDIPI, S. K.
POST BOX NO. 22

Vol. 30
No. 52

ಸ್ವಯಂ ಶೈಶಿಷ್ಟ್ಯ ವಲ್ಲಿದೆ?

ಕಾಲಾನುಗುಣವಾಗಿ ಧೋರಣೆ, ವರ್ತನೆಗಳನ್ನು ಮಾರ್ಪಡಿಸಿಕೊಳ್ಳಲಾರದ ಜಡಜೀವಿಗಳು ಎಂದೂ ಜಯಶೀಲ ರಾಜಕಾರಣಿಗಳಾಗುವದಿಲ್ಲ. ಇಂತಹ ಸಮಯೋಚಿತ ಬದಲಾವಣೆಯು ವ್ಯಕ್ತಿಗತ ವ್ಯವಹಾರಗಳಲ್ಲಿ ಕೂಡಾ ಅಗತ್ಯವೇ.

ಅಮೂಲಾಗ್ರವಾಗಿ ಮತ್ತು ಸರ್ವ ಸಂದರ್ಭಗಳಲ್ಲಿಯೂ ಸತ್ಯ ಮತ್ತು ಅಹಿಂಸೆಯನ್ನೇ ಅವಲಂಬಿಸಿದ್ದ ಮಹಾತ್ಮಾ ಗಾಂಧಿಯವರು ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಆಗಾಗ ಹೂಡುತ್ತಿದ್ದ ಚಳವಳಿಗಳು ಕಾಲಾನುಗುಣವಾಗಿ ಭಿನ್ನರೂಪದಲ್ಲಿದ್ದುವು ಹೊರತು ಏಕವ್ಯಕಾರವಿರಲಿಲ್ಲ.

ಸುಮಾರು ಎರಡು ಶತಮಾನಗಳ ವರೆಗೆ ಭಾರತವನ್ನು ಹಿಡಿದುಕೊಂಡಿದ್ದ ಬ್ರಿಟಿಷರಿಗೆ, ಅದನ್ನು ತಾವು ಬಿಟ್ಟು ಕೊಡಲೇಕಾದ ಕಾಲ ಬಂದಿದೆ ಎಂಬುದು ಮನವರಿಕೆಯಾದೊಡನೆ, ಪ್ರತ್ಯಕ್ಷದೊಡ್ಡಲ್ಪಡುವ ವರೆಗೆ ಕಾಯದೆ ಅವರು ಸ್ವೇಚ್ಛೆಯಿಂದ ಹೊರಟು ಹೋದರು-

ಕಮ್ಯೂನಿಸ್ಟ್ ಚೈನಕ್ಕೆ ಸ್ವಾತಂತ್ರ್ಯ ದೊರೆಯುವ ವರೆಗೆ ತಾನು ಭದ್ರತಾಕೌನ್ಸಿಲಿನೊಳಗೆ ಕಾಲಿಡುವಂತಿಲ್ಲವೆಂದು ಜಗಜ್ಜಾಹೀರಾಗಿ ಪ್ರತಿಜ್ಞೆಮಾಡಿ ಹಲವು ತಿಂಗಳುಗಳ ವರೆಗೆ ದೂರನಿಂತಿದ್ದ ರಷ್ಯಾ ಸರಕಾರವು ಹೊಸ ಸಂದರ್ಭವೊದಗಿಸಿದೊಡನೆ ಒಂದೇ ಕಾರಣದಿಂದ ತನ್ನ ಪ್ರತಿಜ್ಞೆಯನ್ನು ತಾನೇ ಮುರಿದುಕೊಂಡು ಭದ್ರತಾ ಕೌನ್ಸಿಲು ಸೇರಿದೆ.

ಪೂರ್ವಾಪರ ವಿಚಾರ, ಸೂಕ್ಷ್ಮದೃಷ್ಟಿ, ಪ್ರಗತಿಶೀಲತೆಯಿರುವ ರಾಜಕಾರಣದಲ್ಲಿ ಸಂದರ್ಭೋಚಿತ ಧೋರಣೆಯು ಅತ್ಯಗತ್ಯವಾದುದು. ಹೊಸ ಪರಿಸ್ಥಿತಿಗನುಸಾರವಾಗಿ ಧೋರಣೆಯನ್ನು ಮಾರ್ಪಡಿಸಿಕೊಳ್ಳುವುದು ಕಾರ್ಯ ಸಾಧಕರಲ್ಲಿರಬೇಕಾದ ಮುಖ್ಯಗುಣ.

ಆದರೆ ಸ್ವತಂತ್ರ ಭಾರತದ ನಾಯಕರಲ್ಲಿ— ನಾಯಕರಿಗಿಂತಲೂ ಹೆಚ್ಚಾಗಿ ಜನಸಾಮಾನ್ಯರಲ್ಲಿ— ಈ ಮುಖ್ಯಗುಣದ ಕೊರತೆ ಕಂಡುಬರುತ್ತಿದೆ. ಭಾರತಕ್ಕೀಗ ದೊರೆತಿರುವ ಸ್ವಾತಂತ್ರ್ಯವು ಮಾನ ಮತ್ತು ಸ್ಥಿತಗತಿಗಳು ತೀರಾ ನವೀನವಾದವುಗಳು. ಆದರೆ ಭಾರತೀಯರು ಮಾತ್ರ ಹೆಚ್ಚಾಗಿ ಹಳೇ ಧೋರಣೆ, ವರ್ತನೆ ಮತ್ತು ಮನೋವೃತ್ತಿಯನ್ನೇ ಕಟ್ಟಿಕೊಂಡಿದ್ದಾರೆ.

ಹೊಸ ಪರಿಸ್ಥಿತಿಯಲ್ಲೂ ಹಳೇ ಮನೋವೃತ್ತಿ, ಸ್ವಂತ ಕಾರ್ಯದಲ್ಲೂ ಪರರ ಅನುಕರಣೆ ಇದ್ದರೆ ಅಲ್ಲಿ ವಿಲಕ್ಷಣಾಕಾರ, ವಿಚಿತ್ರ ಸ್ವರೂಪ ತೋರಿಬರುವುದು ಸ್ವಾಭಾವಿಕ. ಭಾರತೆ ವಾತಾವರಣವು ಇಂದು ಸಹಜವಾಗಿ ಹಾಗಾಗಿದೆ.

ನಿದರ್ಶನಕ್ಕಾಗಿ, ಪ್ರಥಮತೆ ಸರಕಾರೀ ನಾಯಕರ ಮನೋವೃತ್ತಿಯನ್ನೇ ನೋಡೋಣ. ಅವರು ಬ್ರಿಟಿಷ್ ಆಡಳಿತೇ ಕಾಲದ ಅಧಿಕಾರಿಗಳ ಮರ್ಜಿಯನ್ನೂ ಆ ಕಾಲದ ತಮ್ಮ ಮನೋವೃತ್ತಿಯನ್ನೂ ತುಗಲೂ ಅವಲಂಬಿಸಿರುವಂತಿದೆ.

ಜನತೆಯ ಸ್ಥಿತಿ ಮತ್ತು ಬಯಕೆಯೆಂತಹದಿದ್ದರೂ, ಅದನ್ನು ಗಣಿಸದೆ, "ಎಲ್ಲವೂ ಸರಿಯಿದೆ" ಎಂದು ಸಾರುತ್ತಾ ಸ್ವೇಚ್ಛೆಯಿಂದ ವರ್ತಿಸುವುದು ಬ್ರಿಟಿಷ್ ನೌಕರಶಾಹಿಯ ಸಂಪ್ರದಾಯವಿದ್ದಿತು. ಇಂದು ದೇಶದ ಹಲವೆಡೆಗಳಲ್ಲಿ ಆಹಾರ ಬೊಬ್ಬೆ ಕೇಳಿಬರುತ್ತಿದ್ದರೂ ಆಹಾರಮಂತ್ರಿಶ್ರೀ ಮುನ್ಶಿಗಳೆಂದಾರಂಭಿಸಿ ಸಾಮಾನ್ಯ ಅಧಿಕಾರಿಯ ವರೆಗಿನ ಎಲ್ಲರೂ ಅದೇ ಮರ್ಜಿಯನ್ನವಲಂಬಿಸಿ ಸ್ವಸಮಾಧಾನದಿಂದಿದ್ದಾರೆ.

ಆಡಳಿತಾಧಿಕಾರಿಗಳು ಆಂದೋಲನ ನಾಯಕರಂತೆ ಪ್ರಚಾರಾತ್ಮಕ ಭಾಷಣಗಳನ್ನಿಯುವ ಸಂಪ್ರದಾಯ ಕಡಿಮೆ. ಆದರೆ ಪಂಡಿತ ನೆಹರು ಮತ್ತಿತರ ಧುರೀಣರಲ್ಲಿ ಗತಕಾಲದ ಸ್ವಾತಂತ್ರ್ಯಾಂದೋಲನ ಭಾಷಣದ ಅಭರುಚಿಯೇ ಈಗಲೂ ನೆಲೆನಿಂತಿರುವಂತೆ ಕಾಣುತ್ತಿದೆ.

ತಾವು ಈ ಪ್ರಪಂಚಾಡಳಿತೆಯ ಅನುಭವವುಳ್ಳವರು ಮತ್ತು ಭಾರತೀಯರು ಆ ಮಟ್ಟಿಗೆ ತೀರಾ ಅಪಕ್ವಬುದ್ಧಿಯವರು ಎಂಬ ಲೇಂಕಾರವನ್ನು ಕಟ್ಟಿಕೊಂಡು ಬ್ರಿಟಿಷ್ ಆಡಳಿತೆಗಾರರು ಹಿಂದೀ ಜನಮತವನ್ನು ಹಿಂಜಳಿದ್ದರೆ, ತಾವೇನೇ ಮಾಡಿದರೂ ಅಡಿದರೂ ಭಾರತೀಯ ಜನಸಾಮಾನ್ಯರ ವಿಶ್ವಾಸವನ್ನು ತಮ್ಮನೇಲೆ ಅಚಲವಾಗಿದೆ ಎಂಬ ಅತಿರೇಕಾಭಿಮಾನದಿಂದ ಸ್ವತಂತ್ರ ಭಾರತದ ನಾಯಕರು ಜನಮತವನ್ನು ಶಿರಸಾವಹಿಸಿಕೊಂಡಿರುವ ಬದಲಿಗೆ ಬೆನ್ನಿಗನ್ನೇ ಕಟ್ಟಿಕೊಂಡಿದ್ದಾರೆ.

'ಭಾರತ ಜನತಾರಾಜ್ಯ ಶಾಸನ ಈಗ ಜಾರಿಯಲ್ಲಿದೆಯಾದರೂ ಸರಕಾರೀ ಆಡಳಿತ ಯಂತ್ರದ ಆಕಾರ, ವಿಧಾನ, ಭಾಷೆ, ಭಾವನೆ, ಎಲ್ಲವೂ ಬ್ರಿಟಿಷ್‌ಕಾಲದ ಮಾದರಿಯಲ್ಲೇ ಇವೆಯೆಂಬುದು ಸರ್ವ ವಿಧಾನದಿಂದಲೂ ಮನವರಿಕೆಯಾಗುತ್ತಿದೆ.

ಕೇಂದ್ರಾಧಿಕಾರವು ಬ್ರಿಟಿಷರ ಕೈಯಲ್ಲಿದ್ದು ಪ್ರಾಂತಿಕ ಸ್ವಾಯತ್ತೆಯಷ್ಟೇ ದೊರೆತಿದ್ದ ಮಧ್ಯಾವಧಿಯ ಆರ್ಧ ಸ್ವರಾಜ್ಯ ಕಾಲದಲ್ಲಿ ಕಾಂಗ್ರೆಸ್ ಮಂತ್ರಿಗಳು ತಮ್ಮ ಸಂಬಳ ಮಟ್ಟವಿಂದಾರಂಭಿಸಿ ತಮ್ಮ ನಿಷ್ಠೆಯವರೆಗಿನ ಎಲ್ಲದರಲ್ಲೂ ತೋರಿಸಿದ್ದ ಕಾಂಗ್ರೆಸ್ ಮನೋವೃತ್ತಿಯನ್ನು ಸಂಪೂರ್ಣ ಸ್ವಾಧಿಕಾರ ದೊರೆತ ನಂತರ ತೋರಿಸುತ್ತಿಲ್ಲ. ತಿ ತನಕ ಕಾಂಗ್ರೆಸ್ ನಿರ್ಜಯಿದ್ದ ಸ್ಥಾನಗಳಲ್ಲೆಲ್ಲಾ ಆ ಮೇಲೆ ಬ್ರಿಟಿಷ್ ನಿರ್ಜಯೇ ಸ್ಥಾಪನೆಗೊಂಡಿದೆ.

ಕಾಂಗ್ರೆಸಿನ ವಿರುದ್ಧ ಪಕ್ಷಗಳು ಮತ್ತು ಜನಸಾಮಾನ್ಯರು ಕೂಡಾ ಆ ಕಾಲದ ಧೋರಣೆ ಭಾವನೆಗಳನ್ನೇ ಈ ಕಾಲದಲ್ಲೂ ಪ್ರದರ್ಶಿಸುತಿದ್ದಾರೆ. ಅಂದಿನ ಪ್ರತಿಯೊಂದು ಲೋಪದೋಷಗಳನ್ನೂ ಬ್ರಿಟಿಷ್ ಆಡಳಿತೆಯು ತಲೆಯ ಮೇಲೆ ಹೇರುತಿದ್ದ ಕಾಂಗ್ರೆಸಿಗರ ಮಾದರಿಯಲ್ಲೇ ಇಂದಿನ ಪ್ರತಿಯೊಂದು ಕಷ್ಟ ನಷ್ಟಗಳಿಗೂ, ಕಾಂಗ್ರೆಸ್ ಆಡಳಿತೆಯನ್ನು ಹೊಣೆಮಾಡುವ ಪರಿಪಾಠವನ್ನು ವಿರುದ್ಧ ಪಕ್ಷಗಳಿಟ್ಟು ಕೊಂಡಿವೆ.

ಜನತಾರಾಜ್ಯ ಸ್ಥಾಪನೆಯಾಗಿದೆಯಾದರೂ, ಈ ಮಟ್ಟಿಗೆ ಸ್ವರೂಪಭೇದವನ್ನರಿಯದವರಾಗಿ, ರಾಜ್ಯದ ಎಲ್ಲಾ ಅಗುಹೋಗುಗಳಿಗೂ ಆಡಳಿತೆಗಾರರೇ ಹೊಣೆಯೆಂಬ ಮೊದಲಿನ ಭಾವನೆಯನ್ನೇ ಕಟ್ಟಿಕೊಂಡು ಸರಕಾರೀ ವಿಧಾನಗಳನ್ನು ಟೀಕಿಸುವುದೊಂದನ್ನಲ್ಲದೆ ಬೇರೇನನ್ನೂ ಮಾಡದ ಚಟವು ಜನತೆಯಲ್ಲಿ ವ್ಯಾಪಿಸಿಕೊಂಡಿದೆ.

ನಮ್ಮ ರಾಷ್ಟ್ರದ ಮೇಲೆ ನಮ್ಮ ಅಧಿಕಾರ— ನಮ್ಮದೇ ಆಗಿರುವ ರಾಜ್ಯ ಶಾಸನ— ನಮ್ಮ ಪಾಲಿಗೆ ಬಂದಿದೆಯಾದರೂ ಎಲ್ಲಿಯೂ ನಮ್ಮ ವೈಶಿಷ್ಟ್ಯವೆದ್ದು ತೋರುತ್ತಿಲ್ಲ. ನಮ್ಮ ಮರ್ಜಿ ಮತ್ತು ಮನೋವೃತ್ತಿ, ಇಂದೂ ನಮ್ಮವಾಗಿಲ್ಲ. ಇಂದಿನ ಸರಕಾರೀ ನಾಯಕರು ಹಿಂದಿನ ಪರಕೀಯ ಸರಕಾರೀ ಶ್ರೀಯಕರಿಂದ- ಇಂದಿನ ಸಮತಾವಾದಿಗಳಂಥವರು ಅಂದಿನ ಕಾಂಗ್ರೆಸಿಗರಿಂದ- ಇಂದಿನ ವಿಮರ್ಶಕ ಜನತೆ ಅಂದಿನ ವಿಮರ್ಶಾ ವಿಧಾನಗಳಿಂದ—ಮರ್ಜಿ ಮತ್ತು ಮನೋವೃತ್ತಿಯನ್ನು ಎರವಿಗೆ ಪಡೆಕೊಂಡು ಬಳಸುತಿದ್ದಾರೆ ಹೊಸಕಾಲ, ಸ್ವಾತಂತ್ರ್ಯ ಸ್ಥಿತಿಗನುಸಾರವಾದ ಸ್ವಂತ ವೈಶಿಷ್ಟ್ಯವನ್ನು ಎತ್ತಿಯೂ ಯಾರೂ ಸಾಕಷ್ಟು ಪ್ರದರ್ಶಿಸುವುದು ಕಂಡುಬರುತ್ತಿಲ್ಲ.

ರಾಷ್ಟ್ರದ ಅಧಿಕಾರವು ಬ್ರಿಟಿಷರಿಂದ ಭಾರತೀಯರಿಗೆ ಕೈಬದಲಾವಣೆಯಾಗಿ ಒಂದಿರುವಂತೆಯೇ, ಎಲ್ಲಾ ಗುಣನಡತೆಗಳೂ

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಶ್ರೀ ಗೀತೆಯ ಪೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು—ನಿ। ಹೊಸಕೆರೆ ಚಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲವೆಷ್ಟೆ ಇದೆಯೋ ಅದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಸೊಗಸುಗಳ ರೂಪದಲ್ಲಿಲಿದೆ ಛಟ್ಟಿಯಾಗಿ ಎದ್ದು ಕಾಣುವುದು.

400 ಕ್ಕೂ ಮಿಕ್ಕ ಪುಟಗಳು ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ವೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಸ್ಟೋರ್ಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ದೇಶದ ಪರಿಸ್ಥಿತಿ—

ರಾಷ್ಟ್ರಪಿತ ಗಾಂಧಿಜೀಯ ಆಧುನಿಕ ಭಾರತವನ್ನು ಕಡೆದ ಶಿಲ್ಪಿಯು—ಕಳೆದ ಗಳಲ್ಲಿ ಈಗ ಹೆಚ್ಚಿನವು ಪ್ರದರ್ಶನಗಳಲ್ಲಿ ಮಾತ್ರ ಉಳಿದಿವೆ. ಇನ್ನು ಕೆಲವು ಪ್ರತಿಕೂಲ ಪರಿಸ್ಥಿತಿಯಲ್ಲಿವೆ. ಬಹುದರೂ ಕೆಲವು ಪ್ರತ್ಯಕ್ಷ ಜೀವನದಲ್ಲಿವೆ, ಎಂಬುದನ್ನು ಒಪ್ಪಬೇಕು. ಗಾಂಧೀಜೀಯ ಸತ್ಯ, ಅಹಿಂಸೆ ಮತ್ತು ವಿಧಾಯಕಕಾರ್ಯ ಕ್ರಮಗಳೇ ಪ್ರದರ್ಶನೋಪಕರಣಗಳಾಗಿ ಉಳಿದು ಕೊಂಡಂತಿವೆ. ಅವರು ಕಲಿಸಿದ ಅಸಹಕಾರ, ಸತ್ಯಾಗ್ರಹದಂತಹ ಸಾಧನೆಗಳು ಸಣ್ಣಪುಟ್ಟ ಸಂಗತಿಗಳಿಗಾಗಿ ಮತ್ತು ಗಾಂಧೀ ತತ್ವ ವಿರೋಧಿಗಳಿಂದೀಗಯದ್ವಾತದ್ವಾ ಪ್ರಯೋಗದಲ್ಲಿರುವುದು ಕಾಣಿಸುತ್ತಿದೆ. ಆದರೆ ಮಹಾತ್ಮಾಗಾಂಧಿಯವರು, ನಿರ್ಮಿಸಿಟ್ಟಿರುವ ಕೆಲವು ನಾಯಕರು ಈಗಲೂ ಉಳಿದು ಕೊಂಡಿದ್ದಾರೆ;

(ಮೊದಲನೇ ಪುಟದಿಂದ)

ತನ್ನವರು ಪರರು, ಎಂಬ ಭೇದವಿಲ್ಲದೆ ಒಬ್ಬಬಂದಿನ್ನೊಬ್ಬರಿಗೆ ವರ್ಗಾಯಿಸಲ್ಪಟ್ಟು ಉಳಿದುಕೊಂಡಿರುವುದು ಕಾಣಿಸುತ್ತಿದೆ. ಹೀಗಾಗಿ, ರಾಷ್ಟ್ರದ ಸ್ಥಿತಿಗತಿಗಳು ಬದಲಾಯಿಸಿವೆ ಎಂಬುದು ಸತ್ಯವಾದರೂ, ಜಾಗೆ ಎಲ್ಲವೂ ಬದಲಾಯಿಸಿರುವುದೇ ಹೊರತು ಆಪೈಕೆ ನಾಶವಾಗಬೇಕಾದವುಗಳು ನಾಶವಾಗಿಲ್ಲ–ಅಲ್ಲಿ ಹೊಸತಾಗಿ ಹುಟ್ಟಬೇಕಾದವುಗಳು ಹುಟ್ಟಲ್ಲ.

ಈ ಬದಲಾವಣೆಯಲ್ಲಿ ಕೂಡಾ ಕೆಲವೆಡೆ ಅನುಚಿತ ಸ್ಥಾನಗಳಿಗೇನೇ ವರ್ಗಾವರ್ಗಿಗಳಾಗಿವೆ. ಉದಾ:– ಅಂದಿನ ಬ್ರಿಟಿಷ್ ಅಧಿಕಾರಿಗಳ ಮರ್ಜಿ ಇಂದಿನ ಕಾಂಗ್ರೆಸ್ ಅಧಿಕಾರಿಗಳ ಕಡೆಗೆ, ಅಂದಿನ ಕಾಂಗ್ರೆಸ್ ಅಂದೋಲನಗಾರರ ಮನೋವೃತ್ತಿ ಇಂದಿನ ಕಾಂಗ್ರೆಸ್ ವಿರೋಧಿಗಳ ಕಡೆಗೆ ವರ್ಗಾಯಿಸಲ್ಪಟ್ಟಿರುವುದು!

ಪರಕೀಯರಿದ್ದ ಸ್ಥಾನಗಳಲ್ಲಿ, ಅದೇ ಮಾದರಿಯಲ್ಲಿ ಸ್ವಕೀಯರು ಬಂದುನಿಂತ ಮಾತ್ರಕ್ಕೆ ಸ್ವಾಧಿಕಾರ ಸಫಲ ಹೊಂದಲಾರದು. ಸ್ಥಾನಾಕ್ರಮಣದ ಮಟ್ಟಿಗೆ ತೋರಿಸಿದ ಪ್ರಖರ ಬೇಧವನ್ನೇ ಪದ್ಧತಿ ಮತ್ತು ಮನೋವೃತ್ತಿಯ ಮಟ್ಟಿಗೂ ಕಟ್ಟಿಕೊಳ್ಳಬೇಕು; ಪರಕೀಯರದಾಗಿದ್ದ ಸ್ಥಾನದಂತೆಯೇ ಪರಕೀಯರ ಮನೋವೃತ್ತಿಯನ್ನೂ ತನ್ನದನ್ನಾಗಿ ಮಾಡಿಕೊಳ್ಳುವನಸು, ನಟನಂತೆ ಕಾಣಿಸಿಯಾನು ಹೊರತು ನಿಜಮನುಷ್ಯನಾಗಿ ತೋರಲಾರ. ಗೂರುತು ಅಂಕಿತಗಳನ್ನು ಬದಲಾಯಿಸಿಕೊಂಡು ಪರರ ಒಂದು ಸೊತ್ತನ್ನು ತನ್ನದನ್ನಾಗಿ ಮಾಡಿಕೊಳ್ಳುವ 'ತನ್ನ ತನ್ನ' ಎಂಬುದಿರದವನ ಸ್ಥಿತಿಯು ಸ್ವತಂತ್ರ ಭಾರತದ ನಾಯಕ ವರ್ಗಕ್ಕಾಗಲೀ, ಪಕ್ಷ ಪಂಗಡಗಳಿಗಾಗಲೀ, ಜನ ಸಾಮಾನ್ಯರಿಗಾಗಲೀ ಸರ್ವಥಾ ಬೇಡ.

'ಜನತಾರಾಜ್ಯ ಭಾರತದ ಜನತೆಯಲ್ಲಿ ಸ್ವಂತ ವೈಶಿಷ್ಟ್ಯ, ಸ್ವಾಭಿಮಾನ, ಸ್ವಪರಜ್ಞಾನ, ಸ್ವಾವಲಂಬನೆ ಮೊಳೆತರೆ ಈ ಬುಡವನ್ನನುಸರಿಸಿ, ತುದಿಯವರೆಗಿನ ಎಲ್ಲದರಲ್ಲೂ ಸ್ವಂತ ಬಣ್ಣನೇ ಮೂಡಿ ತೋರಲಿದೆ. ಆದ್ದರಿಂದ ಜನ ಸಾಮಾನ್ಯ ಕಾಲೋಚಿತವಾಗಿ ತಮ್ಮನ್ನು ತಾವರಿತ ಕೊಳ್ಳಬೇಕು.

ಜವರಿ ೨೬ನೆಯಿಂದಿಗೆ ಗಾಂಧೀ ಪ್ರೇರಿತ ಕೇವಲಂಪ್ರಥಮರಿಗೂ ಈಗಲೂ ಜೀವಿಸಿಕೆಗೆ ಬಾಯಬಂತಾಗಿದೆ. ಜಪ್ರತಿಕೆಯನ್ನು ಹಾದಿಹಿಡಿಸುವುದಕ್ಕಾಗಿ ಗಾಂಧೀ ಜೀ ಕಟ್ಟಿಸಿಟ್ಟ ಪ್ರೋಧನಾ ವಿಧಾನಗಳು ಇವು ಈ ಶಿಪ್ರಗಲ್ಲಿ ಈ ಕಾಲದಲ್ಲೂ ಉಳಿದು ಕೊಂಡಿವೆ. ರಾಷ್ಟ್ರದ ಇಂದಿನ ನಿರಾಶೆ, ನಿಸ್ಸಹಾಯಕತೆಗಳ ನಡುವೆ ಆಶಾಕಿರಣಗಳಾಗಿ ಇಂತಹ ಪ್ರೋಧನೆಗಳು ಆಗಾಗ ಮಿಂದೆ ಬರುತ್ತಲೇ ಇವೆ. ಪಸ್ತುಸ್ಥಿತಿ ಮತ್ತು ಧುರೀಣರ ಫನೋಪದೇಶಗಳನ್ನು ತುಲನೆ ಮಾಡಿ ನೋಡುವಾಗ "ಎಲ್ಲವೂ ಮಾತಿನಲ್ಲೇ— ಕೃತಿಯಲ್ಲಿಲ್ಲ" ಎಂದು ಉದ್ಗರಿಸ ಬೇಕಾಗುತ್ತದಾದರೂ, ದುಃಖ ವಿರುವಾಗ ಸಮಾಧಾನ ಹೇಳುವ, ಮೈ ಬೇಯುತ್ತಿರುವಾಗ ತಂಗಾಳಿಯಾಗಿ ಬೀಸುವ ಶಮನೋಪಕಾರ ಈ ಮಾತುಗಳಿಂದಾಗುವದೆಂಬುದನ್ನು ಅಲ್ಲಗಳೆಯುವಂತಿಲ್ಲ. ರಾಷ್ಟ್ರದ ಇಂದಿನ ಅಪಾರ ದುಸ್ಥಿತಿ, ಜನತೆಯ ಅಜ್ಞಾನ ಮತ್ತು ಜಾಡ್ಯ ಮನೋವೃತ್ತಿ, ಸಾರ್ವತ್ರಿಕ ಚಾಂಚಲ್ಯ ಹಾಗೂ ಅಸಮಾಧಾನಗಳ ನಡುವೆ ಭರವಸೆ ನಿರ್ಮಿಸುತ್ತಿರುವವುಗಳೆಂದರೆ ಗಾಂಧೀ ಅನಯಾಯಿಗಳಿಂದ ಕೆಲವಂದಿ ನಾಯಕರ ಆಶಾದಾಯಿ ಹಾಗೂ ಮಾರ್ಗದರ್ಶಿ ಮಾತುಗಳೇ. ಸ್ವಾತಂತ್ರ್ಯದ ಕೃತೀಯ ವರ್ಷಾಂತಿ ಸಂದರ್ಭದಲ್ಲಿ ಮತ್ತಾ ಮೇಲೆ ಸಮಯೋಚಿತವಾಗಿ ಮುಂದಾಳುಗಳು ಕೊಟ್ಟ ಕೆಲವು ಉಪದೇಶಗಳ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

೦೦ ೦೦ ೦೦

ಸ್ವರಾಜ್ಯದ ಮೂರನೇ ವರ್ಷಾಂತಿ ದಿನ ಆಗೋಸ್ತು 15ರಲ್ಲಿ ರಾಷ್ಟ್ರಧ್ವಜ ಬಾಬು ರಾಜೇಂದ್ರ ಪ್ರಸಾದರು ಬರೆದು ಕಳುಹಿದ ಸಂದೇಶ ಮತ್ತು ಆದಿನ ರಾತ್ರಿ ರಾಷ್ಟ್ರಕ್ಕಿತ್ತ ಆಕಾಶವಾಣಿ ಉಪದೇಶದಲ್ಲಿ ಅಂದಿದ್ದ ಕೆಲವು ಅಮೂಲ್ಯ ವಾಣಿಗಳು: "ಭಾರತೀಯ ಜನತೆ ತಾವಾಗಿ ಸ್ಥಾಪಿಸಿಕೊಂಡಿರುವ ಫನವಾದ ಪ್ರಜಾಸತ್ತಾ ಜನತಾ ರಾಜ್ಯದ ಕುರಿತು ಹೆಗ್ಗಳಿಕೆಯಿಂದಿರಬೇಕು. ಮತ್ತು ಭಾರತಾಭ್ಯುದಯಕ್ಕೆ ಕಾರಣವೆಂದು ತೋರುವ ಯಾವುದೇ ಕಾರ್ಯಕ್ರಮ ಪನ್ನಾದರೂ ತಿರಸಾಪಹಿಸಿ ಕೊಳ್ಳುವದಕ್ಕೂ ಅದನ್ನು ದುರ್ಬಲಗೊಳಿಸುವ ಅಥವಾ ಕೆಡಿಸಾಕುವ ಯಾವುದೇ ಕೃತ್ಯವನ್ನಾದರೂ ರಾಜ್ಯ ಜ್ರೋಹವೆಂದು ಗಣಿಸುವುದಕ್ಕೂ ಸಿದ್ಧರಿರಬೇಕು. ಪ್ರಾಯುಕ್ತರೆಲ್ಲರಿಗೂ ಮತ್ತು ಧಿಕಾರವನ್ನಿತ್ತಿರುವ ರಾಜ್ಯ ಶಾಸನದ ನ್ಯಾಯ ಆಡಳಿತೆಯಲ್ಲಿ ಭಾಗವಹಿಸುವ, ಮತ್ತದರ ಘೋಷಣೆಯನ್ನು ರೂಪಿಸುವ ಮತ್ತು ಭವಿಷ್ಯಕ್ಕಾಕಾರ ಕೊಡುವ ಸಂದರ್ಭವು ರಾಷ್ಟ್ರದ ಪ್ರತಿಯೊಬ್ಬ ನಾಗರಿಕನಿಗೂ ಬಂದಿದೆ. ಯಥಾರ್ಥ ಸಂಕಲ್ಪಗಳಾವುವಿದ್ದರೂ ಅವುಗಳನ್ನು ನಿವಾರಿಸಿಕೊಳ್ಳುವ ಶಾಸನಬದ್ಧ ಶಮನೋಪಾಯಗಳು ಸರ್ವರ ಪಾಲಿಗೂ ಈಗ ದೊರೆತಿವೆ ಎಂಬುದು ಖಂಡಿತ. ಈ ಅನುಕೂಲತೆಯ ಪೂರ್ಣೋಪಯೋಗವನ್ನು ಜನತೆ ಪಡಕೊಳ್ಳುವದೆಂದೂ ತದ್ವಿರುದ್ಧವಾಗಿ ಭ್ರಾಂತ ಜನತಾ ರಾಜ್ಯದ ವಿರುದ್ಧ ನಡೆಯವ ಎಲ್ಲಾ ವಿಧದ ಅಧವಾ ಯಾವುದೇ ಸಂಗಡದ ಬಲಪ್ರಯೋಗವನ್ನಾದರೂ ಜನತೆಯು ಪ್ರತಿಭಟಿಸುವದಂದೂ ನಿರೀಕ್ಷಿಸಬೇಕಾಗಿದೆ. ನೈತಿಕ ಮೌಲ್ಯವಿರುವ ಸರಿಯಾದ ಮತ್ತು ಯಥಾರ್ಥವಾದ ಹಾದಿಯನ್ನು ದೃಢವಾಗಿ ಅವಲಂಬಿಸುವ ಮೂಲಕವೇ ನವ್ಯ ರಾಷ್ಟ್ರವು ಪ್ರಗತಿ ಹೊಂದಬಲ್ಲದೆಂಬುದನ್ನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ನವ್ಯ ಸಮಾಜವಏಂದು ಅನುಭವಿಸುತ್ತಿರುವ ಬಹುಮುಖಿ ಸಂಕಟಗಳಿಗೆ ಸಂಕುಚಿತ ಸ್ವಾರ್ಥವೇ ಕಾರಣ; ಈ ಸ್ವಾರ್ಥವಾದರೋ ಹಲವು ಆಕಾರಗಳಲ್ಲಿ ಕಾಣಿಸುತ್ತಿದೆ- ಅದನ್ನು ಇದಿಂಸಿ ಹೋರಾಡಿ ನಿರ್ಮೂಲಿಸಬೇಕು, ಮತ್ತು ಶುದ್ಧ ಜೀವನ ಮಟ್ಟವನ್ನು ಹಾಕಿಕೊಂಡು ವ್ಯವಹಾರದಲ್ಲಿ ಅವನ್ನು ಅನುಸರಿಸಬೇಕು. ಅದು ಸುಲಭದಲ್ಲಿ ಪತ್ತೆಹಚ್ಚಲಾಗದ ಸುಲಿಗೇ ರೂಪದಲ್ಲಿರಲಿ ಅಥವಾ ಸಣ್ಣ ದೊಡ್ಡ ಪರಿಮಾಣದ ಕಳ್ಳಸಂತೆ, ಲಂಚ, ದಗಾಖೋರತನ, ಮುಂತಾದ ಕರೋಣಾಕಾರದಿಂದಲೇ ತೋರಿ ಬರಲಿ– ಇಲ್ಲವೇ ಜಾತಿ, ಸಮಾಜ ಅಧವಾ ಪ್ರಾಂತಿಕ ಸ್ವರ್ಥಯಂತಹ ಬಾಹ್ಯ ಸಾಂದರ್ಯಾಕಾರದಲ್ಲೇ ಇರಲಿ–ಅದನ್ನು ಸಂಕುಚಿತ ಸ್ವಾರ್ಥವೆಂದೇ ಗಣಿಸಿ ನಿವಾರಿಸಿಬಿಡಬೇಕು. ನವೀನ ಹಾಗೂ ಉತ್ತಮ ಭಾರತ ನಿರ್ಮಾಣದ ಫನ ಕರ್ತವ್ಯದಲ್ಲಿ ತನ್ಮೆಯರಾಗೋಣ. ನವ್ಯ ಇಂದಿನ ಸಂಕಷ್ಟಗಳೇನೋ ದೊಡ್ಡವು ಮತ್ತು ಒತ್ತಡದ್ದಿವೆ. ಆದರವು ನಮ್ಮನ್ನು ತಲ್ಲಣಗೊಳಿಸಬಾರದು; ಬಗ್ಗಿಸಕೂಡದು. ನಮ್ಮ ನೈತಿಕ, ಬೌದ್ಧಿಕ ಹಾಗೂ ದೈಹಿಕ ಶಕ್ತಿಗೆ ಅಂದ ಸವಾಲಾಹ್ವಾನಗಳೆಂದು ಅವುಗಳನ್ನು ಗಣಿಸಬೇಕು. ಸಂಹಾದಿ ಹಿಡಿದರೇನೇ ನಾವಿವುಗಳನ್ನು ಎದುರಿಸಬಲ್ಲೆವು. ರಾಜಕೀಯ ರಂಗದಲ್ಲಿ ನಾವು ವಿಶೇಷ ಪ್ರಗತಿ ಗಳಿಸಿರುವೆವಾದರೂ ಅಭಾವಗಳನ್ನು ಮತ್ತು ಆರ್ಥಿಕ ಅನಾನುಕೂಲತೆಗಳನ್ನು ನಿವಾರಿಸಿಕೊಳ್ಳುವ ಕ್ಷೇತ್ರದಲ್ಲಿ ನಮ್ಮ ಪಾಖಲೆಯೇನೂ ಸಮಾಧಾನಕರವಾಗಿಲ್ಲ. ಈ ರಂಗದಲ್ಲಿ ತೀರಾ ಮಂದಗತಿಯ ಕಂಟು ಹೆಜ್ಜೆ ನಮ್ಮದು. ಸಮಸ್ಯೆಗಳ ನಿಕಟ ಪರಿಚಯ–ಆಳ ಒಳನೋಟ—ಶೋಧನಾತ್ಮಕ ಆತ್ಮವಿಮರ್ಶೆ, ಈ ಕಾಲದ ಆತ್ಯಾವಶ್ಯತೆಗಳು ಅತಿಹೆಚ್ಚಿನ ಅಪತ್ಯ ಹಾಗೂ ಅಗ್ನಿಪರೀಕ್ಷೆಯಂತಹ ಸಂದರ್ಭಗಳಲ್ಲಿ ಕೂಡಾ ನೀತಿ ಮೌಲ್ಯತೆಗೆ ಗಚ್ಚಾಅಂಟಿಕೊಂಡಿದ್ದರೆ ಮನುಷ್ಯನು ತನ್ನ ಸಂಕಷ್ಟಗಳಿಂದ ಪಾರಾಗ ಬಲ್ಲನೆಂಬುದೇ ಸತ್ಯಸ್ಥಿತಿ. ಪವಿತ್ರ ಗ್ರಂಥಗಳ ಹಾಗೂ ಭೌತಿಕಚರಿತ್ರೆಯ ಸಾವಿರಾರು ಕಥೆಗಳಲ್ಲವರ್ಣಿಸಲ್ಪಟ್ಟಿರುವ ಸತ್ಯವೆಂದರೆ ಇದು. ಇದೇ ರಾಷ್ಟ್ರಪಿತನ ಬೋಧನೆಗಳ ಸಾರ"

೦೦ ೦೦ ೦೦

ಆಗೋಸ್ತು 15ನೇ ಮುಂಜಾನೆ ಢಿಲ್ಲಿಯ ಚಿರಿತ್ರೋಲ್ಲೇಖಿತ ಕೆಂಪು ಕೋಟೆಯ ಮೇಲೆ ಸುಮಾರು 10 ಲಕ್ಷ ಜನ ತೆಂದದ ನಡುವೆ 31 ತೋಪುಗಳ ಹಾರಾಟದೊಂದಿಗೆ ರಾಷ್ಟ್ರಧ್ವಜವನ್ನು ಆರೋಹಣ ಮಾಡಿದ ನಂತರ ಪ್ರಧಾನಿ ಪಂಡಿತ ನೆಹರುಗಳು ಅನೇಶ ಪೂರ್ಣ ಭಾಷಣವಿಯುಕ್ತ್ಯಾ ಹೇಳಿದರು: "ಕಳದ ಮೂರು ವರುಷಗಳಲ್ಲಿ ನಾವು ಹಲವುಬಾರಿ

For Life Assurance

CUNSULT

THE NEW GUARDIAN OF INDIA

LIFE ASSURANCE Co. LTD.,

(Established: 1934)

Chair man: Sri. M. C. T. M. Chidambaram Chattiyar

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
B. No. 142 MADRAS.

ನೋಟೀಸು

ಕುಂದಾಪುರ ಡಿ. ಮುನ್ಸಿ. ಕೋರ್ಟಿನಲ್ಲಿ

S. C 423/1950

ರಂಗಯ್ಯ ಉಡ್ಪ— ವಾದಿ.

ಬಡಿಯ ಯಾನೆ ವೆಂಕ್ಯಯ್ಯ ಸೆಟ್ಟಿ

—ಪ್ರತಿವಾದಿ.

ಕುಂದಾಪುರ ತಾಲ್ಲೂ ಆಂಪಾರು ಗ್ರಾಮದಲ್ಲಿರುವ ಕ್ಯಾನಕಟ್ಟು ಮೇಲ್ಮನೆ ವೆಂಕಮ್ಮ ಸೆಡ್ತಿ ಮಗ ಬಡಿಯ ಯಾನೆ ವೆಂಕ್ಯಯ್ಯ ಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿಯು ವಾದಿಗೆ ತಾ. 9-6-47 ರಲ್ಲು ರೂ. 211—8—0ಕ್ಕೆ ಬರೆಕೊಟ್ಟ ಡಿವಾಂಡು ನೋಟಿನ ಅಸ್ಸು ಬಡ್ಡಿ ಹಣಗಳನ್ನು ಬರಮಾಡಿ ಕೊಳ್ಳುವರೆ ನಾವಿಯನ್ನು ಪ್ರತಿವಾದಿಯ ಮೇಲೆ ಬಾಖ್ಲು ಮಾಡಿದ ಮೇಲಿನ ದಾವೆಯು ತಾ. 28-8-1950ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯ ಪಡಿಸಿರುತ್ತದೆ.

N. S. Parameshwariah,
Advocate for Plff.

Coondapoor, Date. 13-8-50

—ಯುಕ್ತ ಸಲಹೆಗಳು

ಎಡವಿದ್ದೇವೆ; ಬಿದ್ದುದಿದೆ. ಆದರೆ ಕೂಡಲೇ ಎದ್ದು ಮುಂದೊತ್ತಿದ್ದೇವೆ. ಒಂದು ರಾಷ್ಟ್ರದ ಚರಿತ್ರೆಯಲ್ಲಿ ಜಯಾಪಜಯ, ಎಡಕ್ಕೊ ಸ್ಥಾನವಿದೆ. ತೊಂದರೆಗಳನ್ನು ಉತ್ಸಾಹಪೂರ್ವಕ ಸಹಿಸಿಕೊಳ್ಳುವ ವಿಧಾನವನ್ನು ರಿಯದ ರಾಷ್ಟ್ರವು ಮುಂದೊತ್ತಲಾರದು. ಪ್ರತಿಕೂಲ ವಿದ್ಯಮಾನಗಳಿದಿರು ಎದೆ ಕಳಕೊಳ್ಳುವ ರಾಷ್ಟ್ರವು ಒಂದು ದುರ್ಬಲ ರಾಷ್ಟ್ರವಾಗುವದು. ಕಳದ ಮೂರು ವರುಷಗಳಲ್ಲಿ ನಾವು ಹಲವು ಬಾರಿ ಕಠೋರ ಪರೀಕ್ಷೆಗೊಳಗಾಗಿದ್ದೆವು. ಸಂದರ್ಭವಶಾತ್ ನಾವು ಪರಾಭವಗೊಂಡುದಿರಬಹುದು. ಆದರೆಂದೂ ಸೋತು ಸುಮ್ಮಗಾದುದಿಲ್ಲ. ಸ್ವಾತಂತ್ರ್ಯವು ತಮ್ಮ ಮೇಲೆ ಹೇರಿರುವ ಹೊಣೆಗಾರಿಕೆಗಳನ್ನು ಭಾರತೀಯ ಸ್ತ್ರೀ ಪುರುಷರೆಲ್ಲರೂ ಸರಿಯಾಗಿ ಮನವರಿಕೆ ಮಾಡಿಕೊಂಡು ಅದಕ್ಕನುಗುಣವಾಗಿ ಜೀವನ ನಿರ್ವಹಿಸಬೇಕು. ಜನತೆಗೆ ಈ ಹೊಣೆಗಾರಿಕೆಯು ವಂಡಬ್ಬಾಗದೆ ಹೋದರೆ ಆವರಿಗೆ ಸ್ವರಾಜ್ಯವೇ ಆರ್ಥವಾಗಿಲ್ಲವೆಂದಾಗುವದು. ಒಳಗಡೆಯಿಂದ ಅಥವಾ ಹೊಂಗಡೆಯಿಂದ ಬೀಳುವ ಅಪಾಯಗಳಿದಿರಲ್ಲಿ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಅವರು ಅಸಮರ್ಥರೆಂದಾಗುವುದು. ರಾಷ್ಟ್ರವನ್ನು ಇಂದು ಇದಿರಿಸಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವುದರಲ್ಲಿ ತಮ್ಮದಾಗಿರುವ ಕರ್ತವ್ಯಭಾರವನ್ನು ಜನತೆ ಮರೆಯಬಾರದು. ತಮ್ಮ ಪ್ರತಿಯೊಂದು ವಿಷಯಕ್ಕಾಗಿಯೂ ಅವರು ಕೇವಲ ಸರಕಾರದ ಕಡೆಗೇನೇ ನೋಡಬಾರದು. ಜನತೆಯ ಪ್ರತ್ಯಕ್ಷ ಹಾಗೂ ಸಂತೋಷ ಪೂರ್ವಕ ಸಹಕಾರ ವಿಸಹ ಪ್ರಪಂಚದ ಯಾವ ಸರಕಾರವೂ ಇದನ್ನು ಸಾಧಿಸುವಂತಿಲ್ಲ ಬರುವ ವರುಷ ನಾವೀ ಸಮಸ್ಯೆಗಳನ್ನು ಸುದೃಢವಾಗಿ ಇದಿರಿಸಬೇಕು. ನಾವು ಅವುಗಳಿಗೆ ಸ್ವಾಗತವನ್ನು ಕೂಡಾ ಕೊಡಬೇಕು; ಬರಮಾಡಿಕೊಂಡು ಅನುಕ್ರಮವಾಗಿ ನಿರ್ಮೂಲಿಸಬೇಕು."

೦೦ ೦೦ ೦೧

ಉಪಪ್ರಧಾನಿ ಸರ್ದಾರ್ ಪಟೇಲರು ಇದೇ ಆಗೋಸ್ಟು 15ರ ನೂರನೇ ಸ್ವರಾಜ್ಯ ವರ್ಧಂತಿ ಸಂದರ್ಭದಲ್ಲಿ ರಾಷ್ಟ್ರಕ್ಕೆತ್ತ ಸಂದೇಶದ ಸಾರಾಂಶ "ಸಾರ್ವಕಾಲಿಕ ವಧಿಯ ಕಳದ ಮೂರು ವರುಷಗಳ ಘೋರ ನೆಗಳ ಕಡೆಗೆ ನನ್ನ ಮನಸ್ಸು ಓಡಿದಂತೆ ಕೃತಜ್ಞತಾಭಾವನೆ ಮತ್ತು ಆತ್ಮ ಸಮಾಧಾನ ಮೂಡುತ್ತಿದೆ. ನಾವು ದಾಟಿಬಂದ ಅವಧಿಯಲ್ಲಿ ಎದ್ದಿದ್ದ ಹಲವು ಗಂಡಾಂತರಗಳಿಂದ ರಾಷ್ಟ್ರವನ್ನು ಸುರಕ್ಷಿತವಾಗಿ ಪಾರು ಮಾಡಿ ನಡೆಯಿಸಿ ತಂದುದಕ್ಕಾಗಿ ಭಗವಂತನಿಗೆ ನಾವು ಕೃತಜ್ಞರಿರಬೇಕು. ಒಟ್ಟಿನ ಮೇಲೆ ನಮ್ಮ ಹಾದಿಯಲ್ಲೊದಗಿದ್ದ ಹಲವು ಕಂಟಕಗಳನ್ನು ಮತ್ತು ಪರೀಕ್ಷೆಗಳನ್ನು ನಾವು ಗೆದ್ದು ಬಂದೆವು ಎಂಬ ಸಮಾಧಾನ ನಮಗಿದೆ. ನಮ್ಮೀ ವಿಜಯದ ಕುರಿತು ಭಿನ್ನ ಮನೋವೃತ್ತಿಗಳು ತೋರಿ ಬರುವುದು ಸ್ವತಃ ಸಿದ್ಧ. ಕೆಲವರು ನಾವು ಅಧಿಕಾರಗಳಲ್ಲಿ ನಿಂತಿರುವುದನ್ನೇ ಒಂದು ಅಚ್ಚರ್ಯಾದ್ಭುತವೆಂದು ಕರೆಯ ಬಹುದು. ಇನ್ನು ಕಲವರು ನಾವು ಇಂಥನರಿದ್ದರೂ ರಾಷ್ಟ್ರವು ಒಂದು ಹೀನ ದುರ್ದೈವದಿಂದ ಖಾರಿಯಿತು ಎನ್ನಬಹುದು. ಬಹುಶಃ ಹಲವರು, ಕಂಟಕಗಳೊಡನೆ ಹೋರಳಾಡಿಕೊಂಡಿರುವವರೆಂಬ ಹೆಸರನ್ನು ನಮಗೆ ದಾನವಾಡಬಹುದು. ನಾವು, ಸರಕಾರವಂತೂ, ನಮ್ಮಲ್ಲ ಲೋಪ ದೋಷಗಳಿದ್ದರೂ, ತನ್ನ ಹಾದಿಯಲ್ಲಿ ಹಲವು ಬಂಡೆದಿನ್ನೆಗಳ ನಡುವಿನಿಂದ ರಾಷ್ಟ್ರ ನೌಕೆಯು ಸುರಕ್ಷಿತವಾಗಿ ದಾಟಿ ಬಂತು ಎಂದು ನಿಜಕ್ಕೂ ಹೆಗ್ಗಳಿಕೆಯೊಡನೆ ಹೇಳಬಲ್ಲವು. ಯಾರ ಅಭಿಪ್ರಾಯ ಹೇಗಿದ್ದರೂ ಒಂದು ವಿಷಯದ ಕುರಿತು ನನ್ನ ಅಭಿಪ್ರಾಯ ದೃಢವಾಗಿದೆ. ಅದೆಂದರೆ ನಾವು ಗೆದ್ದು ಬಂದಿದ್ದರೆ ನಮ್ಮೀ ಪ್ರಯತ್ನಗಳು ಯಾವ ದಿಕ್ಕಿಗೇನೇ ಮುಖ ಮಾಡಿದ್ದರೂ, ಅದು ಕೇವಲ ನಮ್ಮ ಅಂತರಿಕ ಪ್ರಯತ್ನದಿಂದಲೇ ಎಂಬುದು ಹೊರಾಡಳಿತೆಯ ಮಟ್ಟಿಗಾದರಲಿ, ಒಳಾಡಳಿತೆಯ ಬ್ಲೇ ಇರಲಿ, ನಾವು ನಮ್ಮನ್ನೇ ಅವಲಂಬಿಸಿದ್ದೆವಲ್ಲದೆ ಅನ್ಯಥಾ ಇಲ್ಲ. ಈ ಸ್ವಾವಲಂಬನಾ ಬಲದಿಂದಲೇ ಒಳಗಡೆಯ ಸುವ್ಯವಸ್ಥೆ ಮತ್ತು ಹೊರಗಿನ ಘನತೆಯನ್ನು ಗಳಿಸಿಕೊಳ್ಳಲು ನಾವು ಶಕ್ತರಾದೆವು. ಈ ದಿನ, ನನ್ನಲ್ಲಿ ಭವಿಷ್ಯದ ಕುರಿತು ಭರವಸೆಯಿರುವುದಾದರೆ, ಅದಕ್ಕೆ ಈ ಸ್ವಾವಲಂಬನಾ ಹುರುಪೇ ಆಧ್ಯವಾರ. ಈಗ ನನ್ನಲ್ಲೆದ್ದಿರುವ ಒಂದು ದಿಗಿಲು ಹಾಗೂ ಆತುರವನ್ನು ನಾನು ಬಹಿರಂಗ ಪಡಿಸದಿದ್ದಕ್ಕೆ ಅತ್ಮವಂಚನೆ ಮಾಡಿಕೊಂಡಂತಾಗುವದು. ನಮ್ಮ ಅಡಳಿತೆ ಹಾಗೂ ಸಾರ್ವಜನಿಕ ಆಗುಹೋಗುಗಳಲ್ಲಿ ಕಂಡು ಬರುತ್ತಿರುವ ಕೆಲವು ಭಾವನೆಗಳು ಮತ್ತು ಘಟನೆಗಳು ನನ್ನ ಹೃದಯದಲ್ಲಿ ದುಃಖ ಮತ್ತು ಅಶಾಂತಿಯ ಅಲೆಗಳನ್ನು ಎಬ್ಬಿಸುತ್ತಿವೆ. ಬಲಿದಾನದ ಮಹ ವೀರಾಧ್ಯಾಯವನ್ನು, ನಿಸ್ವಾರ್ಥೀ ಮಹಾ ಸಾಹಸಗಳನ್ನು, ತ್ಯಾಗ ಮತ್ತು ಏಕ್ಯತೆಯ ಮಹೋತ್ಸವಗಳನ್ನು ಕಾಲವು ಬರಲ್ಲೇ ತನ್ನ ಸಾರ್ವಜನಿಕ ಜೀವನದ ಹೆಚ್ಚು ಭಾಗವನ್ನು ವ್ಯಯಿಸಿದ್ದವ ನೊಬ್ಬನು ಈಗ ಆ ಗತಕಾಲವನ್ನು ಅಣಕಿಸುತ್ತಿರುವ ನಟನೆಗಳನ್ನು ತನ್ನ ಕಣ್ಣೆದುರಿಂದೆ ಕಾಣಬೇಕಾಗಿ ಬರುವಾಗ, ಅವನ ಭಾವನೆ ಎಂತಹದಿದ್ದೀತೆಂಬುದು ರಾಷ್ಟ್ರಕ್ಕೆ ಮನವರಿಕೆಯಾದೀತು. ನಮ್ಮ ಸಾರ್ವಜನಿಕ ಜೀವನವು ಕೊಳಕು ನೀರಿನ ಹೊಂಡದೊಳಗೆ ಮುಳುಗುತ್ತಿರುವಂತೆ ಕಾಣುತ್ತಿದೆ. ಸುಧಾರಣೆಗಳ ಸಾಧ್ಯತೆಯ ಸಂಬಂಧದ ನಿರಾಶೆ ಮತ್ತು ಸಂದೇಹಗಳಿಂದ ನಮ್ಮ ಮನಸ್ಸಾಕ್ಷಿ ಕೆದಡಿಹೋದಂತಿದೆ. ಚರಿತ್ರೆಯ ಅಥವಾ ಜನುಭವದ ಪ್ರಯೋಜನವನ್ನು ನಾವು ಪಡಕೊಳ್ಳುತ್ತಿರುವಂತೆ ಕಾಣುವದಿಲ್ಲ. ಕಾಲವೆಂಬ ಕುದುರೆಯೇಲು ನಮ್ಮ ನಡುವಿನ ಸಮೃದ್ಧ ಬೆಳೆಯನ್ನು ಕಶ್ಚರಿಸಿ ತಿಗೆದು, ನಮ್ಮು ವಾರಿಗೆ ಬರಿಯ ಒಣ ಹುಲ್ಲನ್ನಷ್ಟೇ ಬಿಡುತ್ತಿರುವುದನ್ನು ನಾವು ನಿಸ್ಸಹಾಯಕರಾಗಿ ನೋಡತ್ತಾ ನಿಂತಿದ್ದೇವೆ. ನಾವು ಅಗಣ್ಯ ವಿಷಯಗಳಿಗಾಗಿ ಅತಿಹೆಚ್ಚು ಸಮಯವನ್ನೂ ಗಣ್ಯ ಸಂಗತಿಗಳಿಗಾಗಿ ತೀರಾ ಅಲ್ಪಕಾಲವನ್ನೂ ಕೊಡುವುತ್ತಿರುವಂತೆ ಕಾಣುತ್ತಿದೆ. ಕಾರ್ಯಾಚರಣೆಯು ಅತ್ಯಾವಶ್ಯಕವಿರುವ ಕಾಲದಲ್ಲಿ ನಾವು ಮಾತಾಡುವುದರಲ್ಲೇ ಇದ್ದೇವೆ. ಪರರ ಆಚರಣೆಯ ಕುರಿತು ನಾವು ಕಟುವಿಮರ್ಶಕರಾಗಿ ಮನೆವಾದರೂ, ನಮ್ಮ ದೆಂಬುದು ಯಾವುದೂ ಇಲ್ಲ. ನಾವು ನಡೆಯುವುದಕ್ಕೆನ್ನೂ ಕಲಿಯದಿರುವಾಗಲೇ, ಭೇತಾಳ ಹೆಜ್ಜೆಯಿಟ್ಟು ಅನ್ಯರನ್ನು ಹಿಂದಿಹಾಕುವ ಪ್ರಯತ್ನದಲ್ಲಿದ್ದೇವೆ, ಸ್ವತಂತ್ರಂರಾಷ್ಟ್ರವಾಗಿ ನಾವು ಮೂರನೇ ಮೈಲುಕಲ್ಲನ್ನು ದಾಟಿ ಬಂದಿರುವ ಈ ಮುಹೂರ್ತದಲ್ಲಿ ನಾನು ಒಳಗಡೆಯ ಕತ್ತಲೇ ಕಡೆಗೆ ಕೂಧನಾ ಪ್ರಕಾಶ ಜೆಲ್ಲಿದಾದಕ್ಕಾಗಿ ದೇಶಬಂಧುಗಳು ನನ್ನನ್ನು ಕ್ಷಮಿಸುವರೆಂದು ನಂಬುತ್ತೆನೆ. ಸಮಯವೇ ಅತ್ಯಮೂಲ್ಯವಾಗಿರುವ ಗಡಿಗೆ ನಾನೀಗ ನನ್ನ ಜೀವಮಾನದಲ್ಲಿ ಬಂದಿದ್ದೇನೆ. ನನ್ನ ರಾಷ್ಟ್ರವು ಫಿನ್ನವಂತವಾಗಿರಬೇಕು ಮತ್ತು ಸ್ವಾತಂತ್ರ್ಯದ ಉತ್ಸವ ಸಂಭದ್ರ ಆಸ್ತಿವಾರವನ್ನು ಹಾಕಿಕೊಳ್ಳಬೇಕು, ಎಂಬ ಅಭಿಲಾಷೆಯನ್ನು ಕಿತ್ತೊಗೆಯುವ ನನ್ನ ವ್ಯಾಯಕ್ಕಾಗಿಲ್ಲ. ನನ್ನ ದೈಹಿಕ ದೌರ್ಬಲ್ಯವು ನನ್ನ ಮಾತೃಭೂಮಿಯ ಶಾಂತಿ, ಪ್ರಗತಿ, ಭದ್ರತೆ ವೃದ್ಧಿಗಾಗಿ ಸರ್ವಶಕ್ತಿಯಿಂದ ದುಡಿಯಬೇಕೆಂಬ ಆತುರವನ್ನು ಮಬ್ಬುಗೊಳಿಸಿಲ್ಲ. ಆದರೆ "ಕಾಲನೆಂಬ ಪಕ್ಷಿಗೆ ಇನ್ನು ಹಾರಲು ಉಳಿದಿರುವುದು ಸ್ವಲ್ಪ ದೂರ ಮಾತ್ರ- ಲೋ! ಅದು ರೆಕ್ಕೆ ಬಿಚ್ಚಿ ಆಯಿತ." ಆದ್ದರಿಂದ ಹೃದಯಾಂತರಾಳದಿಂದ ಮತ್ತು ಹಾರ್ದಿಕವಾಗಿ, ಹಾಗೂ ಪ್ರಾಯಬಲದ ಮೇಲಿಂದ ಈ ಅವಕಾಶ ದಿನದಲ್ಲಿ ನಾನು ನನ್ನ ದೇಶಬಂಧುಗಳನ್ನು ವಿಜ್ಞಾಪಿಸಿ ಕೊಳ್ಳುತ್ತಿದ್ದೇನೆ-ಅವರು ತಮ್ಮ ಒಳಗಡೆ ಮತ್ತು ಸುತ್ತಲೂ ನೋಡುತ್ತಿರುವುದನ್ನು ತಮ್ಮಲ್ಲಿ ಪ್ರತಿಬಿಂಬಿಸಿಕೊಳ್ಳಲಿ; ಆತ್ಮನಿರೀಕ್ಷಣಾಬಲದಿಂದ ಬರುವ ಶಕ್ತಿ, ಮತ್ತು ವಿಶ್ವಾಸದೊಡನೆ, ರಾಷ್ಟ್ರದ ಭವಿಷ್ಯದ ಕುರಿತು ತಮ್ಮ ಈ ಡೆಕ್ಕೇಸೇವಕನು ಇನ್ನೂ ಕಟ್ಟಿ ಕೊಂಡಿರುವ ಆಸೆ ಭರವಸೆಗಳನ್ನು ಅವರೂ ಕಟ್ಟಿಕೊಳ್ಳಲಿ"

೦೦ ೦೦ ೦೦

ವ್ಯಾಸ್ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಇದೇ ತಾ. 18ರಲ್ಲಿ ಭಾಷಣವಿಯುತ್ತಾ ಶ್ರೀಮಾನ್ ಗೋವಿಂದರಾಜುಲು ನಾಯಿಡುಗಳು ಸುಶಿಕ್ಷಿತವರ್ಗಕ್ಕೆತ್ತ ಈ ಕೆಳಗಿನ ಉಪದೇಶವು ಮನವನೀಯವಿದೆ "ನವಯುಗದ ನಾಯಕತ್ವವು ವಿದ್ಯಾವಂತ ಜನರ ಕೈಯಿಂದ ತಪ್ಪಿಹೋಗುತ್ತದಾದರೆ ಅದು ಹೃಥಮ ವರ್ಗದ ಮಧಾ ಗಂಡಾಂತರವಸ್ಸುವುದೇ ಸರಿ. ಗುರಿಯನ್ನು ನಿರ್ಧರಿಸುವುದು ಮತ್ತು ಕಾರ್ಯ ವಿಧಾನವನ್ನು ರೂಪಿಸುವುದು, ಇವೆರಡರಲ್ಲೂ ನೀವು ನಿಮ್ಮ ಹಕ್ಕಿನ ಸ್ಥಾನವನ್ನು ಸ್ವೀಕರಿಸಿಕೊಳ್ಳಬೇಕು ಭ್ರಾಂತಿವೇಶ ಕಣಿವೆಗಳನ್ನೂ ಜನ ತಂಡದ ಹುಚ್ಚಾಟವನ್ನೂ ತಪ್ಪಿಸಿಕೊಳ್ಳಲು ನೀವು ಸಮರ್ಥರಿರಬೇಕು. ನಮ್ಮ ವ್ಯವಹಾರಗಳನ್ನು ನಿಷ್ಪ ಅತ್ಯುಚ್ಚ ತತ್ವಗಳಿಗೆ ಒಂದು ಹೆಜ್ಜೆ ಸಮಾಪಕ್ಕೆ ತರುವ ಸಹಾಯವಾಗಬೇಕು ನಿಮ್ಮಿಂದಲೇ. ನಾವು ಸಾಮಾಜಿಕ ಗಲಿಬಿಲಿಯ ನಡುವೆ ಈಗ ಇದ್ದೇವೆ. ನಮ್ಮ ವರ್ತನಾ ವಿಧಾನಗಳು ಪರಿಶೋಧನೆಗೂ ಪಂಥಾಹ್ವಾನಕ್ಕೂ ಒಳಗಾಗಿವೆ. ಸಂಸ್ಕೃತಿಯ ಹೊಸವಾದಿಯನ್ನು ರೂಪಿಸುವ ನೀತಿತತ್ವಗಳ ಕಡೆಗೇನೇ ನೆಟ್ಟ ದೃಷ್ಟಿಯಿಂದ ಇದ್ದಲ್ಲಿ ನಾವು ಅವಕ್ಕಾಗಿ ಅಸಮಾಧಾನ ಪಡಬೇಕೆಂದಿಲ್ಲ. ಇದು ನಮ್ಮನ್ನು ಮತ್ತು ಉಳಿದ ಪ್ರಪಂಚವನ್ನು ನಾಗರಿಕತೆಯ ಒಂದು ಭೀತ

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 306/50.

ತೀಪಪ್ಪ ತೆಡ್ತಿ —ವಾದಿ.
ತೀಜಪ್ಪ ಹೆಗ್ಡೆ ಕೂಡಾ— ಪ್ರತಿವಾದಿರು.

ಕುಂದಾಪುರ ತಾಲ್ಲು ಮೊಳಹಳ್ಳಿ ಗ್ರಾಮದಲ್ಲಿರುವ ಕ್ಯೂಕಾಡಿ ತೀಜಪ್ಪ ಶೆಟ್ಟರ ಮಗಳು ಲಕ್ಷ್ಮಿ ಶೆಡ್ತಿರಿಗೆ (5ನೇ ಪ್ರತಿವಾದಿ) ಈ ಮೂಲ್ಕ ತಿಳಿಯಪಡಿಸುವುದೇನೆಂದರೆ:—

ವಾದಿಳು ದಾವಾ ಆಸ್ತಿ ಸ್ವಾಧೀನತೆ ಹುಟ್ಟುವಳ್ಳಿ ನಗ್ಗೆರೆ ನಿವೃತ್ತಿ ಕೇಳಿ ಜರಗಿಸಿದ ಮೇಲಣ ದಾವೆ ತಾ 6-9-50ಕ್ಕೆ ತನ್ನಿಗೆ ಇಜೋಣಾಗಿದೆ. ಆ ಬಾಬಿನಲ್ಲಿ 5ನೇ ಪ್ರತಿವಾದಿಳ ಕಡೆಯಿಂದ ಉದಾಸವಣೆ ಇದ್ದಲ್ಲಿ ಸದ್ರಿ ತಾರೀಕಿನಲ್ಲಿ ಕೋರ್ಟು ಮುಂದೆ ಜ್ಞಾಪೀರು ಸೂಡಿಕೊಳ್ಳತಕ್ಕದ್ದೆಂದು ಸಂಗತಿ ಈ ಮೂಲ್ಕ ತಿಳಿಸೋಣಾಗಿದೆ.

(By orden of the court)
A. N. Rao.
Advocate for Plaintiff
Coondapur, Date 17-8-50

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶರ್ಗು, ಸ್ಪರದರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯೆ:—ಹುರಿವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೮—೦—೦. ಪೋಸ್ಟ ಚಾರ್ಜು ೧೫ ಆಣೆ.

ಮಾಲಕರು:—ಜಾಲಪ್ಪಾ ಫಕೀರಪ್ಪಾ ಹಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಪ್ರಕಾಶಕರು:—ಹುಬ್ಬಳ್ಳಿ ಭಾರ್ಮಸಿ,—ಹುಬ್ಬಳ್ಳಿ, ಗದಗ್ ಬಾಗಲಕೋಟೆ ಧಾರವಾಡ ವಿಜಾಪುರ—
ಮಾನಪ್ಪ ಸಿದ್ಧಲಿಂಗಪ್ಪ ಫಾರಪಾಡಿಳರ ವಿಜಾಪುರ ನಂಜುಂಡೇಶ್ವರ ಮುದ್ರಿತ ಹಾವಣಗೇರಿ
ಹಾವಣಗೇರಿ:—ಹಾವಣಗೇರಿ ಪ್ರೆಸ್ಸ್ ಲಿ. ಎಲ್ ಎಂ. ಕೆ ಮಲ್ಲಪ್ಪಾ, ಕೆಮಿಸ್ಟ್, ಹಾವೇರಿ ಬ್ಯಾಡಗಿ

ಸ್ತು ಮೇಲಕ್ಕೇರಿಸ ಬಲ್ಲುದು. ಹೀಗಿರುವ ಬದಲಿಗೆ ನಾವಾ ಚಂಚಲರಾದರೆ, ಅಥವಾ ತಮ್ಮ ಮೋಹಾಳುತನಕ್ಕೆ ಶಕ್ಯಂತೆ ನಮ್ಮನ್ನು ಉಪದೇಶಿಸುವವರ, ಇಲ್ಲವೇ ಹಲವು ಶತಮಾನಗಳ ಮೊದಲು ನಮ್ಮ ಪೂರ್ವಜರು ಅನುಕರಿಸಿದ್ದರಿಂದ ಕಾರಣ ದಿಂದ ವರ್ತನಾವಿಧಾನಗಳ ಹಳೇರೀತಿಗಳನ್ನು ಮನರುತ್ಥಾನ ಗೊಳಿಸಲಿಚ್ಛಿಸುವವರ ಮಾತಿಗೆ ಕಿವಿಗೊಟ್ಟರೆ ನಮ್ಮೀ ಸಾಮಾಜಿಕ ಅವಾಂತರವು ಮುಂದುವರಿಯುವುದು ಮತ್ತು ಇನ್ನೂ ಕೆಳ ಮಟ್ಟಕ್ಕೆ ನಮ್ಮನ್ನೆದು ಇಳಿಸುವುದು."

೦೦ ೦೦ ೦೦

ಅಧ್ಯಕ್ಷ ರಾಜೇಂದ್ರ ಪ್ರಸಾದರ ಪತ್ನಿ ಶ್ರೀಮತಿ ರಾಜವಂಶಸ್ಥೆ ವಿಯವರು ಅಧ್ಯಕ್ಷೆಯಾಗಿ ಅಹಾರ ಮಂತ್ರಿ ಶ್ರೀ ಮುನ್ಷಿಯವರ ಶತ್ನಿ ಶ್ರೀಮತಿ ಲೀಲಾವತಿ ಮುನ್ಷಿ ಮತ್ತು ಪ್ರಧಾನಿ ನೆಹರುಗಳ ಪುತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಉಪಾಧ್ಯಕ್ಷೆಯರಾಗಿ 'ಅಖಿಲ ಭಾರತ ಮಹಿಳಾ ಆಹಾರ ಸಮಿತಿ'ಯೊಂದು ರಚಿಸಲ್ಪಟ್ಟಿದೆ. ಸದ್ಯದ ಆಹಾರ ಬಿಕ್ಕಟ್ಟನ ನಿವಾರಣೆಗಾಗಿ ಈ ಸಮಿತಿಯ ಇಬ್ಬರು ಉಪಾಧ್ಯಕ್ಷೆಯರು ಭಾರತದ ಮಹಿಳಾ ವರ್ಗದೊಡನೆ ಮಾಡಿಕೊಂಡಿರುವ ಈ ಕೆಳಗಿನ ವಿಜ್ಞಾಪನೆಯು ಅನುಕರಣೀಯವಿದೆ: "ಅಸ್ಪಷ್ಟವಲ್ಲಗ ಕಡಮೆ ಬಿದ್ದಿರುವ ಆಹಾರಾಂಶವೆಂದರೆ ಸೇಕಡಾ 10ರಷ್ಟು. ನಾವು, ಮಹಿಳೆಯರು ಮನಸ್ಸುಮಾಡಿದರೆ, ಊಟಾಹಾರಗಳನ್ನು ತೆಗೆದುಕೊಳ್ಳುವ ಮೂಲಕ ಈಗಿನ ಆಹಾರಾಭ್ಯಾಸವನ್ನು ಬದಲಾಯಿಸುವ ಸಣ್ಣ ಹೆಜ್ಜೆಯೊಂದನ್ನಿಟ್ಟು ಈ ಕೊರತೆಯನ್ನು ಸುಲಭದಲ್ಲಿ ನಿವಾರಿಸಿಬಿಡಬಲ್ಲೆವು. ವಾರದ ಒಬ್ಬೊಂದು ದಿನವನ್ನು—ಸೋಮವಾರವೆನ್ನಿ—ದವಸಧಾನ್ಯಗಳಿಲ್ಲದ ಊಟದ ದಿನವಾಗಿ ಎಲ್ಲ ಮಹಿಳೆಯರೂ ಆಚರಿಸಿದರೆ ಈ ಸಮಸ್ಯೆ ನಿವಾರಣೆಯಲ್ಲಿ ಬಹು ದೊಡ್ಡ ಕೆಲಸವಾಗಿ ಬಿಡುವುದು. ಮನೆಯಲ್ಲಿ ಮತ್ತು ಸಹಭೋಜಿಕೂಟಗಳಲ್ಲಿ ಆಗುವ ಅಹಾರ ಅನಾವ್ಯಯವನ್ನು ನಿಲ್ಲಿಸಿಕೊಳ್ಳಬೇಕು. ಸಾನೆಯಲ್ಲಿ ಉಳಿತಾಯವಿರುವಾಗ ರೇಶನ್ ಅಂಗಡಿಗಳಿಂದ ನಾವು ಹೆಚ್ಚಿಗೆ ಕೊಂಡುಕೊಳ್ಳಬೇಕಾದುದು. ದೊಡ್ಡ ಪಟ್ಟಣಗಳಲ್ಲಿ ವಿಸಹ ರಾಷ್ಟ್ರದ ಮಿಕ್ಕ ಎಲ್ಲಾ ಕಡೆಗಳಲ್ಲಿರುವ ಹೆಚ್ಚಿನ ಮನೆಗಳಿಗೆ ತಾಗಿಕೊಂಡು ತುಂಡು ಸ್ಥಳವಿದ್ದೇ ಇರುತ್ತದೆ. ಅಂತಹ ಪ್ರತಿಯೊಂದು ಸ್ಥಳದಲ್ಲೂ ತರಕಾರಿಗಳತ್ಪನ್ನ ಬೆಳೆಯಿಸುವುದು ಸುಲಭ. ಇಂತಹ ಸ್ಥಳಗಳ ಪೂರ್ಣೋತ್ಪಯೋಗ ಪಡಕೊಳ್ಳಲು ಎಲ್ಲಾ ಮಹಿಳೆಯರೂ ಪ್ರಯತ್ನಿಸಿದರೆ ಮಿಲಿಯಾವಧಿ ಪೌಂಡು ಕಾಯಿಪಲ್ಯಗಳು ಬೆಳೆಯಬಲ್ಲವು. ಅಂತಹ ಸ್ಥಳವಿಲ್ಲದವರು ಒಕ್ಕಗಳಲ್ಲಿ ಮತ್ತು ಪೆಟ್ಟಿಗೆಗಳಲ್ಲಿ ಬೆಳೆಸಬಹುದು. ಈ ದಿನದ ಅತಿದೊಡ್ಡ ಕಂಟಕವೆಂದರೆ ಕಳ್ಳಸಂತೆ ಕಾಟ. ರಾಷ್ಟ್ರದಲ್ಲಿ ಬೆಳೆದು ಬಂದಿರುವ ಅತಿದೊಡ್ಡ ಆರ್ಥಿಕ ಸಾಮಾಜಿಕ ಪಾಪವೆಂದರೆ ಇದೇ. ಇದನ್ನು ನಿಲ್ಲಿಸಲು ಪ್ರಯತ್ನ ಪಟ್ಟಷ್ಟು ಇದು ಬೆಳೆಯುತ್ತಾ ಹೋಗುತ್ತಿರುವಂತೆ ಕಾಣುತ್ತಿದೆ. ದಂಡನೆಗಳು ಕಳ್ಳ ಸಂತೆಗಾರರ ಮೇಲೆ ಗಣ್ಯ ಪರಿಣಾಮವನ್ನೇನನ್ನೂ ಮಾಡುವಂತಿಲ್ಲವೆನ್ನಬಹುದು. ಆದರೆ ಯಾವ ಕಾಲಕ್ಕೂ ಯಾವುದನ್ನೂ ಕಳ್ಳ ಸಂತೆಯಿಂದ ತೆಗೆದುಕೊಳ್ಳಲಾರೆವು ಮತ್ತಿತರರನ್ನು ಹಾಗೆ ಮಾಡಲು ಬಿಡಲಾರೆವು ಎಂಬ ಶಪಥ ಧರಿಸಿ ಮಹಿಳೆಯರಿಂದನ್ನು ನಿಲ್ಲಿಸಿ ಬಿಡಬಲ್ಲರು. ನಿರಂಕೆಗಳಲ್ಲದೆ ಹೋದರೆ ಕಳ್ಳ ಸಂತೆ ನಡೆಯದು. ಸ್ವಾತಂತ್ರ್ಯ ಸಂಪಾದನಾ ಹೋರಾಟದಲ್ಲಿ ಗಾಂಧೀಜೀ ವಿಶ್ವಾಸವಿಟ್ಟಿದ್ದುದು ಮಹಿಳೆಯರ ಮೇಲೆ. ಅವರ ಬೋಧನೆಯಾಗಿದ್ದ ಸ್ವಾವಲಂಬನೆ ಮತ್ತು ಸ್ವಸಹಾಯ ತತ್ವಗಳನ್ನು ನಿಸ್ಕೆಯಿಂದ ಶಿರಸಾವಹಿಸಿ, ವಿದೇಶೀ ಆಹಾರಗಳಿದಿರು ಸ್ವಾತಂತ್ರ್ಯಗಳಿಸಿಕೊಳ್ಳೋಣ".

ಕೊರಿಯದಲ್ಲಿ ಮಾರಣಾಂತಿಕ ಹೋರಾಟ!

ಕೊರಿಯದಲ್ಲಿ ಅಗ್ನಿಕುಂಡವಾಗಿ ಧಗಧಗಿಸುತ್ತಿರುವಾಗ ಮೊದಲೇ ಭಸಿಗೊಂಡಿದ್ದ ಪ್ರಾಪಂಚಿಕ ವಾತಾವರಣವು ಈ ಬೆಸಿಯಿಂದ ಮತ್ತಷ್ಟು ಕಾದು ಕೆಂಡವಾಗಿರುವುದಾದರೂ ಇತ್ತೀಚೆಗಿನ ದಿನಗಳಲ್ಲಿ ಆ ಜ್ವಾಲೆಯಲ್ಲಿ ಹೊಸ ನಾಲಿಗೆಯೇನೂ ಕಾಣಿಸಿಲ್ಲ. ಕೊರಿಯಾ ರಣರಂಗದಲ್ಲಿ ಸಂಯುಕ್ತ ರಾಷ್ಟ್ರಗಳ ಸೇನೆಗಳೀಗ ಮುಂದಾಳಿಯನ್ನಾರಂಭಿಸಿದ್ದು ಯುದ್ಧಗತಿ ಬದಲಾಯಿಸಿದ ಲಕ್ಷಣಗಳು ಕಂಡುಬರುತ್ತಿವೆ. ಮತ್ತೆಲ್ಲಾ ವಿದ್ಯಮಾನಗಳೂ ಹೆಚ್ಚಿನಂಶ ಯಥಾಸ್ಥಿಯಲ್ಲಿವೆ. ಕ್ಷೇಪ್ಯದಲ್ಲೇ ಮತ್ತೊಂದು ಮಹಾಯುದ್ಧವೆಂಬ ಭೀತಿಗಾಧಾರವಾಗಿದ್ದ ಕಾರಣಗಳಾವುವೂ ಈತನಕ ಕಳೆದು ಹೋಗಿಲ್ಲ. ಆದರೆ ಕೊರಿಯಾ ಸಮರವು ಅಲ್ಲಿಯೇ ದೀರ್ಘಕಾಲ ಕೊಳೆಯುಹ್ತಾ, ಉಳಿದು ಕೊಳ್ಳುವುದು ಲೋಕ ಯದ್ಧಾವಾಯದ ರಭಸವನ್ನು ತಗ್ಗಿಸಲು ಅನುಕೂಲ. ಸುಲಭದಲ್ಲಿ ಗೆಲ್ಲುವುದು ಯಾರಿಗಾದರೂ ಕಷ್ಟವೆಂಬಂತಹ ಸ್ಥಿತಿಯು ಇತ್ತೀಚೆಗಿನ ದಿನಗಳಲ್ಲಿ ಕೊರಿಯ ರಂಗದಲ್ಲಿರುವುದರಿಂದ ಲೋಕಹಿತಚಿಂತಕರು ಅದಕ್ಕಾಗಿ ತುಸು ಸಮಧಾನ ಪಡಬಹುದು. ಈ ದುರ್ಭಾಗ್ಯವು ಒಂದು ತೀರ್ಮಾನಗೊಂಡು ಅದನ್ನನುಸರಿಸಿ ಲೋಕದ ಇಕ್ಕಡೆಯವರೆಗಿನ ಎಲ್ಲಾ ವಿದ್ಯಾನಗಳೂ ಇತ್ಯರ್ಥ ಹೊಂದುವಂತಾದರೆ ಕೊರಿಯಾ ಯುದ್ಧ ಮಂಥನವು ಶಾಂತಿಯಮೃತವನ್ನೆ ತಂದ ಸತ್ಕಾರ್ಯವನ್ನಿಸೀತು. ಅಂತಹ ಪುಣ್ಯ ಕೃತ್ಯವೇನೋ ನಡೆದಿದೆ; ಭಾರತವೇ ಇದರಲ್ಲಿ ಮುಂದಾಗಿದೆ. ಹೇಗಾಗುವುದೋ ನೋಡಲಿಕ್ಕಿದೆ.

ಕೊರಿಯಾ ಸಮರ

ಅಗೋಸ್ತು ಆರಂಭದ ವರೆಗೆ ಏಕ ಪ್ರಕಾರ ಮುಂದಾಳಿಸುತ್ತಾ ಬಂದಿದ್ದ ಕಮ್ಯೂನಿಸ್ಟ್ ಸೇನೆಗಳಿಗೆ ಕೊರಿಯದ ಕೊನೆಯ ಗುರಿಯಾಗಿದ್ದು ದೆಂದರೆ ಪುಸಾನ್ ಬಂದರ. ಅಮೆರಿಕಾನರ ನಾಲಿಗುಳಿದಿದ್ದ ಏಕ ಮಾತ್ರ ಸರಬರಾಯಿ ಕೇಂದ್ರವಾಗಿರುವ ಆಸ್ಟ್ರೇಯ ಮೂಲಯ ಪುಸಾನನ್ನು ಕೆಂಪು ಸೇನೆಯು ವಶ ಪಡಿಸಿಕೊಳ್ಳುತಿದ್ದರೆ ಕೊರಿಯವನ್ನು ಪೂರ್ತಿ ಗೆದ್ದಂತಾಗುತಿತ್ತು. ಆ ಬಂದರ ವಶೀಕರಣದೊಂದಿಗೆ ಅಮೆರಿಕನ್ ಸೇನೆಗಳ ಹಿಮ್ಮೆಟ್ಟಿಸುವುದು ಮತ್ತು ಪಲಾಯನ ನಡೆದು ಹೋಗುತ್ತಿತ್ತು. ಆದ್ದರಿಂದಲೇ ಅಗೋಸ್ತು ಮೊದಲನೇ ವಾರವು ಕೊರಿಯಾ ಯುದ್ಧದ ಮಂಗಳಾವಧಿಯೆಂದು ನಿರೀಕ್ಷಿಸಲಾಗಿತ್ತು. ಆದರೆ ತಮ್ಮನ್ನಾ ಮೂಲೆಗೆ ತಳ್ಳಿಕೊಂಡು ಬಂದ ದುರ್ವಿಧಿಯು, ಅಲ್ಲಿ ತಮ್ಮ ಪಾಲಿನ ಮಹಾ ಕುಳಿಯನ್ನೇ ನಿರ್ಮಿಸಿಟ್ಟಿದೆ, ಎಂಬುದನ್ನರಿತ ಸಂಯುಕ್ತ ರಾಷ್ಟ್ರಕೂಟದ ಸೈನಿಕರು ಅಲ್ಲಿಯೇ ಜೀವನ-ಮರಣದ ಹೋರಾಟವನ್ನು ಮಾಡಲಾರಂಭಿಸಿದರು. ಆ ಮೇರಿಕೇತರ ರಾಷ್ಟ್ರಗಳ ಸೇನೆಗಳು ಮತ್ತು ಶಸ್ತ್ರೋಪಕರಣಗಳು ಕೊನೆಯ ಮಹಾಹೋರ್ತದಲ್ಲಿ ಸಾಕಷ್ಟು ಪರಿಮಾಣದಲ್ಲಿ ಬಂದೊದಗಿದುದರಿಂದಲೇ ದಕ್ಷಿಣ ಕೊರಿಯವರು ಸಶಕ್ತ ಪ್ರತಿಭಟನೆ ಕೊಡಲಾರಂಭಿಸಿ, ಕೆಲವು ಯುದ್ಧ ಮುಖಗಳಲ್ಲಿ ಮುಂಧಾಳಿಗಳನ್ನೂ ಆರಂಭಿಸಿದರು. ಇದಕ್ಕನುಗುಣವಾಗಿ ಆ ಕಡೆಯಿಂದ ಕೆಂಪು ಸೈನಿಕರೂ ವಿಶೇಷ ರೀತಿಯ ಸಂಘಟನೆ ಮಾಡಿಕೊಂಡು ಮುನ್ನುಗ್ಗಹತ್ತಿದರು. ಹೀಗಾಗಿ ಕೆಲವು ದಿನಗಳ ವರೆಗೆ ಬೇರೆ ಬೇರೆ ದಿಕ್ಕುಗಳಲ್ಲಿ ಒಮ್ಮೆ ಆ ಕಡೆಯವರು, ಮತ್ತೊಮ್ಮೆ ಈ ಕಡೆಯವರು ಮುಂಧಾಳಿ ನಡೆಯಹತ್ತಿತು. ಈ ದೂಡಾಟಗಳ ಮಧ್ಯದಲ್ಲೇ ಒಮ್ಮೆ ಕಮ್ಯೂನಿಸ್ಟರು ಪೌಡಿನಿದಿರು ದಕ್ಷಿಣ ಕೊರಿಯದವರ ರಕ್ಷಣಾಕೋಟೆ ಮುರಿದು ಬಿದ್ದು, ಟಾಯಿಜೂವಿನಲ್ಲಿದ್ದ ದಕ್ಷಿಣ ಕೊರಿಯಾ ಸರಕಾರವು ಅಲ್ಲಿಂದ ಬಿಡಾರ ಕಿತ್ತು ಪುಸಾನ್ ಬಂದರಕ್ಕೋಡಬೇಕಾಯಿತು. ಆದರೆ ಅಗೋಸ್ತು 16ರಲ್ಲಿ ಅಮೆರಿಕಾನರ ಪಾಲಿಗೆ ಕಾರ್ಗತ್ತಲೆಯಂತಿದ್ದ ವಾತಾವರಣವು ಬದಲಾಗಿ ಕಾ. 19 ರಿಂದ ಆ ಸ್ಥಾನದ ಎಲ್ಲಾ ರಣರಂಗಗಳಲ್ಲೂ ಸಂಯುಕ್ತ ರಾಷ್ಟ್ರಗಳ ಸೇನೆಗಳು ಮುಂಧಾಳಿಯಿಡಹತ್ತಿರುವ ವಾರ್ತೆ ಬಂದಿದೆ. ಅಲ್ಲಿಯ ಅತ್ಯಂತ ಅಯಕಟ್ಟು ಸ್ಥಳವಾದ ನಾಕ್ಡಾಂಗ್ ಹೊಳೆ ಬದಿಯ ಏರಾ ನೆಲೆಯು ಕಡೆಗೆ ಏರಿಬಂದ ಕಮ್ಯೂನಿಸ್ಟರನ್ನು ಸಸಬಡದ ವಿಜಯ ಘೋಷ ಅಮೆರಿಕಾನರ ಕಡೆಯಿಂದ ಕೇಳಿ ಬಂದಿದೆ. ಕೊರಿಯಾ ಯುದ್ಧಾರಂಭದಿಂದ ಈ ತನಕ ಇದೇ ಪ್ರಥಮ ಬಾರಿ ಯುದ್ಧದ ಎಲ್ಲಾ ಮುಖಗಳಲ್ಲೂ ಸಂಯುಕ್ತ ರಾಷ್ಟ್ರ ಸೇನೆಗಳು ಮುಂದೊತ್ತಿರುವ ಸುದ್ದಿಯಿದೆ. ಆದರೆ ಕಮ್ಯೂನಿಸ್ಟ್ ಸೇನೆಗಳು ತಾವಾಗಿ ನಾಲ್ಕು ಮೈಲು ಹಿಂತೆಗೆದು ನಿಂತುದರಿಂದ ಹೀಗಾಗಿದೆ ಹೊರತು ಕಮ್ಯೂನಿಸ್ಟ್ ಸೇನೆಗಳೊಡನೆ ಬಾಡಾಹಾಡಿ ಹೋರಾಡಿ ಓಡಿಸಿದುದರಿಂದಲ್ಲ. ಆದ್ದರಿಂದ ಅವೆರಿಕಾನರ ಇಂದಿನ ಗತಿಯನ್ನು ಸುದೃಢ ಪ್ರಗತಿಯೆಂದು ಕಟ್ಟಿಕೊಳ್ಳಲಾಗುವುದಿಲ್ಲ. ಕೆಂಪು ಸೇನೆಗಳು ಯಾವ ಹೆಂಚಕೆಯಲ್ಲಿವೆ, ಅವುಗಳ ಸ್ಥಿತಿಯೇನು, ಎಂಬ ಸರಿಯಾದ ಗುಟ್ಟು ಇನ್ನೂ ದೊರೆತಿಲ್ಲವಾದ್ದರಿಂದ ಮುಂದೇನು ಎಂಬುದನ್ನು ನಿರೀಕ್ಷಿಸಬೇಕಾಗಿದೆ.

ಭದ್ರತಾ ಕೌನ್ಸಿಲಿನಲ್ಲಿ

ಕೊರಿಯಾ ಸಂಬಂಧದ ಪರ್ಯಾಲೋಚನೆಗೆ ಹೊಸ ರೂಪ ಕೊಡುವುದಕ್ಕಾಗಿಯೇ ತನ್ನ ಒಹಷಾರವನ್ನು ತಾನೇ ರದ್ದು ಪಡಿಸಿಕೊಂಡು ತನ್ನ ಹಕ್ಕಿನದಾದ ಭದ್ರತಾ ಕೌನ್ಸಿಲಿನ ಅಗೋಸ್ತು ತಿಂಗಳ ಅಧ್ಯಕ್ಷ ತನವನ್ನು ರಶ್ಯವು ವಹಿಸಿಕೊಂಡಿದ್ದಿತು. ರಶ್ಯದ ಪ್ರತಿನಿಧಿ ಎಮ್. ಮಾಲಿಕರು ಅಗೋಸ್ತು ತಿಂಗಳ ಆದಿಭಾಗದಲ್ಲೇ ಭದ್ರತಾ ಕೌನ್ಸಿಲಿನ ಅಧ್ಯಕ್ಷ ಪೀಠವಹಿಸಿ ಅಲ್ಲಿ ಹೊಸ ಬಿಸಿ ವಾತಾವರಣವನ್ನು ನಿರ್ಮಿಸಿದ್ದರು. ಜೈನಾದ ಕಮ್ಯೂನಿಸ್ಟ್ ಸರಕಾರಕ್ಕೆ ಭದ್ರತಾ ಕೌನ್ಸಿಲಿನ ಸದಸ್ಯತ್ವವೀಯಬೇಕು-ಜೈನೀ ರಾಷ್ಟ್ರೀಯ ಸರಕಾರದ ಪ್ರತಿನಿಧಿಯನ್ನು ಕೌನ್ಸಿಲಿನಿಂದ ಹೊರತಳ್ಳಬೇಕು-ಕೊರಿಯಾ ಯುದ್ಧ ಸಂಬಂಧವಾಗಿ ಉತ್ತರ ಕೊರಿಯಾ ಸರಕಾರದ ಪ್ರತಿನಿಧಿಯನ್ನು ಆಮಂತ್ರಿಸಿ ಅಭಿಪ್ರಾಯ ಕೇಳಬೇಕು.- ಮುಂತಾದ ಸೂಚನೆಗಳನ್ನು ಎಮ್. ಮಾಲಿಕರು ಮುಂದಿಟ್ಟಿದ್ದರೂ ಬಹುಮತವಿಲ್ಲದ ದೆಸೆಯಿಂದ ಅವೆಲ್ಲವೂ ಬಿದ್ದು ಹೋಗಿವೆ. ಜೈನಾ ಪ್ರಾತಿನಿಧ್ಯದ ಸಂಬಂಧದಲ್ಲಿ ತನ್ನ ಘೋರತೆಗನುಸಾರವಾಗಿ ಭಾರತವು ರಶ್ಯದ ಸೂಚನೆಗೆ ಬೆಂಬಲ ಕೊಟ್ಟಿದ್ದಿತು. ರಶ್ಯಾ ಮತ್ತು ಅಮೆರಿಕ ಹೊರತು ಉಳಿದ ಹಿಂಬಾಲಕ ರಾಷ್ಟ್ರಗಳ ಪ್ರತಿನಿಧಿಗಳೊಳಗೆ ಭದ್ರತಾ ಕೌನ್ಸಿಲಿನಲ್ಲಿ ಬಿಸಿಬಿಸಿ ವಾಗ್ವಾದಗಳಾಗಿದ್ದವು. ವಾತಾವರಣವು ಗಂ

Sri Ramakrishna Theatre Limited.
UDIPI, S INDIA.

NOTICE

Please take notice that pursuant to Sec. 144(6) of the Indian Companies Act, Sri M. L. Bhandary, a share-holder of the Company, has given notice of his intention to nominate Sri U. Varadaraj Nayak, B.A.,A C.A., Chartered Accountant, Mangalore, as Auditor of the Company for the year ending 30-6-1951, at the Ordinary General Meeting of the Company to be held on 27-8-1950.

S. R. Bldgs; UDIPI, 14-8-1950.

A. Janardhan Alse,
Managing Director.

ಅಸ್ಸಾಮಿನಲ್ಲಿ ಅತಿ ಭೀಕರ ಭೂಕಂಪ!

ಭೀರತೆಯ ತುತ್ತ ತುದಿಗೇರಿದ್ದಿತು. ಕ ಠೋರ ಭನ್ನಾಭಿಪ್ರಾಯಗಳ ದೆಸೆಯಿಂದ ಆಗೋಸ್ಟು ತಿಂಗಳ ಈ ವರೆಗಿನ ಲೌನ್ಸಿಲ್ ಸಭೆಯಲ್ಲಿ ಕೇವಲ ಖಂಡನೆ, ಧಿಕ್ಕಾರಗಳ ಹೊರತು ನಿರ್ಣಯವಾವುದೂ ಆಗದಂತಾಗಿದೆ. ಇದೇ ತಾ. 22ರಲ್ಲಿ ಭದ್ರತಾ ಕೌನ್ಸಿಲಿನ ಸಭೆ ಪುನಃ ಆರಂಭಿಸಿದೆ. ರಶ್ಯದ ಎವ್ಗ್. ಮಾಲಿಕರ ಅಧ್ಯಕ್ಷತೆಯಲ್ಲಿ ಇನ್ನಾ ಕಾನ್ಸಿಲು ಕೇವಲ ವೀಕ್ಷಣೆಯ ನಡೆಯುವಂತ ಹದು. ಈ ಅವಧಿಯು ಗೊಂದಲದಲ್ಲೇ ಕಳೆದು ಹೋದರೆ ಆ ಮೇಲೆ ರಶ್ಯವೇನು ಮಾಡುವದೆಂಬ ನಿಶ್ಚಯವಿಲ್ಲ. ಇಕ್ಕಡೆಯವರೊಳಗೆ ಸಂಧಾನ ಸಾಧಿಸಲಾಗುವ ಸಂದರ್ಭವಂತೂ ಆ ಮೇಲೆ ತೀರಾಕಡಿಮೆಯಾಗುವುದು ಖಂಡಿತ. ಇದನ್ನು ಲಿಪ್ಮೈಸಿ, ಭಾರತವೇ ಪುನಃ ಈ ಸಂಬಂಧದ ಮುಂದಾಳುತನ ವಹಿಸಿದೆ. ಭದ್ರತಾ ಕೌನ್ಸಿಲಿನಲ್ಲಿ ಭಾರತದ ಪ್ರತಿನಿಧಿಯಾಗಿರುವ ಸರ್ ಬಿ. ಎನ್. ರಾಯರು, ಈ ಸಂಬಂಧದ ಒಂದು ಮಾಧ್ಯಮಿಕ ಸೂಚನೆಯನ್ನು ಮುಂದೆತರಲಿದ್ದಾರೆ. ಭದ್ರತಾ ಕೌನ್ಸಿಲಿನ ಅಶಾಶ್ವತ ಸದಸ್ಯರಾಷ್ಟ್ರಗಳಾಗಿರುವ ನೋರ್ವೆ, ಕ್ಯೂಬಾ, ಎಕ್ವೋದರ್, ಯುಗೋಸ್ಲೇವಿಯ, ಈಜಿಪ್ಟ್ ಮತ್ತು ಭಾರತ ಈ ಆರು ರಾಷ್ಟ್ರಗಳ ಪ್ರತಿನಿಧಿಗಳು ಒಂದು ಕಮಿಶನ್ನಾಗಿ ನಿಂತು ಕೊರಿಯಾ ಯುದ್ಧ ಸಂಬಂಧದ ರಾಜೀತೀರ್ಮಾನಗಳನ್ನು ಭದ್ರತಾ ಕೌನ್ಸಿಲಿಗೆ ಶಿಫಾರಸು ಮಾಡತಕ್ಕದ್ದೆಂಬುದೇ ಸರ್. ರಾಯರ ಹಂಚಿಕೆ. ಈ ಪ್ರಯತ್ನಕ್ಕೆ ಶಾಶ್ವತ ಸದಸ್ಯ ರಾಷ್ಟ್ರಗಳ ಪೈಕೆ ಫ್ರಾನ್ಸ್ಸು ತನ ಅನುಮೋದನೆಯನ್ನು ಕೊಟ್ಟಿದೆ. ಮಿಕ್ಕ ಪ್ರಮುಖ ರಾಷ್ಟ್ರಗಳೆಲ್ಲವೂ ತಾಟಸ್ಥ್ಯವಹಿಸಿವೆ. ರಶ್ಯಾ ಮತ್ತು ಅಮೆರಿಕ ಪಂಡಡಗಳ ಧೋರಣೆಯು ನೊದಲಿನಂತೆಯೇ ಇರುವುದರಿಂದ, ಭದ್ರತಾ ಕೌನ್ಸಿಲಿನ ಹಿಂದಿನ ನಿರ್ಣಯಕ್ಕನುಸಾರವಾಗಿ ಉತ್ತರ ಕೊರಿಯದ ಸೇನೆಗಳು ಪ್ರಥಮತಃ ಹಳೇ ಸರಹದ್ದುನಡಿಯ ಹಿಂದೆ ಹೋಗಿ ಕೊಳ್ಳಬೇಕೆಂದು ಅಮೆರಿಕದ ಛಲವಾದರೆ ರಾಷ್ಟ್ರೀಯ ಜೈನಾಸರಕಾರದ ಪ್ರತಿನಿಧಿಯನ್ನು ತಳ್ಳಿಹಾಕಿ ಕೆಂಪು ಜೈನಾ ಸರಕಾರದ ಪ್ರತಿನಿಧಿಗೆ ಸ್ಥಾನ ಕೊಡಬೇಕಲ್ಲದೆ, ಉತ್ತರ ಕೊರಿಯದವರ ವಾದವನ್ನು ಕೇಳಿಕೊಳ್ಳಬೇಕೆಂದು ರಶ್ಯದ ಹಠವಿದೆ. ಆದ್ದರಿಂದ ಸೆರ್. ಬಿ. ಎನ್. ರಾಯರ ಸಂಧಾನ ಹಂಚಿಕೆಯು ಜಯಶೀಲವಾಗುವ ಸಂಭವವಿಲ್ಲವಾದರೂ, ಅದರ ಹೊರತು ಬೇಗೆ ಶಾಂತಿ ಪ್ರಯತ್ನವಾವುದೂ ಕಂಡುಬರುತ್ತಿಲ್ಲ.

ಇತರ ಘಟನೆಗಳು

ಯುರೋಪು ರಾಷ್ಟ್ರಗಳ ಎನೆಂಬ್ಲಿ ಸಭೆಯಲ್ಲಿ, ಯುರೋಪು ಸೇನೆಯೊಂದನ್ನು ನಿರ್ಮಿಸಿಕೊಳ್ಳಬೇಕೆಂದು ಮಿ. ಚರ್ಚಿಲ್ಲರು ಮುಂದಿಟ್ಟ ಸೂಚನೆಯು 89 ಅನುಕೂಲ ಮತ್ತು 5 ಪ್ರತಿಕೂಲ ಮತಗಳಿಂದ ಮಂಜೂರಾಗಿದೆ. ಯುರೋಪಿನ ಒಕ್ಕಟ್ಟಿಗಾಗಿ ಅಲ್ಲಿಯ 15 ರಾಷ್ಟ್ರಗಳು ಸದಸ್ಯರಾಗಿ ನಿರ್ಮಿಸಿಕೊಂಡಿರುವ ಸಭೆಯಿದು. ಇನ್ನೀ ಸೂಚನೆಯು ಎನೆಂಬ್ಲಿಯು ಮೇಲ್ಮನೆ ಯಾಗಿರುವ ಮಂತ್ರಿ ಕೂಟದ ಪರಿಶೀಲನೆಗೊಪ್ಪಿಸಲ್ಪಟ್ಟು ತಂತಮ್ಮ ರಾಷ್ಟ್ರೀಯ ಪಾರ್ಲಿಮೆಂಟಿಗೆ ಅದನ್ನು ಒಪ್ಪಿಸುವ ಸಂಬಂಧದ ನಿರ್ಣಯವು ಅಲ್ಲಿಯೇ ಆಗಬೇಕಾಗಿದೆ. ಕಮ್ಯೂನಿಸಮಿನ ವಿರುದ್ಧ ಯುರೋಪನ್ನು ಸೇನಾ ಒಕ್ಕಟ್ಟಾಗಿ ಬಿಗಿಯುವುದೇ ಚರ್ಚಿಲ್ ಸೂಚನೆಯ ಉದ್ದೇಶ.

16 ವಿಭಾಗಗಳ ಸಂಯುಕ್ತ ಕೂಟವಾಗಿದ್ದ ಇಂಡೋನೇಶಿಯವನ್ನು 'ಎಲ್ಲರಿಗೂ ಏಕ ಸರಕಾರ'ವಾಗಿ ಸಮಾವೇಶಗೊಳಿಸಿಕೊಳ್ಳಲಾಗಿದೆ. ಡಚ್ ನ್ಯೂ ಗಿನಿಯವು ತಮ್ಮ ಹಕ್ಕಿನದೆಂದು ಇಂಡೋನೇಶಿಯನರು ಸಾರಿದ್ದಾರೆ. ಈ ಕುರಿತು ವಾದ ವಿವಾದಗಳು ನಡೆದಿವೆ.

ಬರ್ಮಾದಲ್ಲಿ ಯುದ್ಧವಿನ್ನೂ ಪೂರ್ತಿ ನಿಂತಿಲ್ಲವಾದರೂ ಕರೆನ್ ಬಂಡಾಯಗಾರರ ನಾಯಕನು ಹೋರಾಟ ರಂಗದಲ್ಲಿ ಕೊಲ್ಲಲ್ಪಟ್ಟಿದ್ದಾನೆ. ಮಲಯದಲ್ಲಿಯೂ ಬ್ರಿಟಿಷ್ ಸೇನೆ ಮತ್ತು ಬ್ರಿಟಿಷ್ ಸೂತ್ರದ ಗೊಂಬೆ ಮಲಯಾ ಸರಕಾರದ ಸೇನೆ ಗಳಿದಿರು ಕಮ್ಯೂನಿಸ್ಟ್ ಗೊರಿಲ್ಲಾ ಹಾವಳಿ ನಡೆದಿದೆ. ಬ್ರಿಟಿಷರು ಇಲ್ಲಿಯ ಹೋರಾಟಕ್ಕಾಗಿ ಅಮೆರಿಕದ ಸಹಾಯ ಯಾಚನೆ ಮಾಡಿದ್ದಾರೆ.

ಭಾರತದ ಒತ್ತಿನಲ್ಲಿರುವ ಟಬೇಟಿನ ಮೇಲೆ ಚೈನದ ಸೇನೆಗಳು ನುಗ್ಗಿ ಬರಹತ್ತಿವೆ, ಎಂಬ ವಾರ್ತೆಯೆದ್ದಿದ್ದಿತಾದರೂ ಈ ತನಕ ಅಂತಹ ಆಕ್ರಮಣ ನಡೆದಿಲ್ಲ. ಟಬೇಟಿನಲ್ಲಿರುವ ವಿದೇಶೀ ರಾಯಭಾರಿಯೆಂದರೆ ಭಾರತದೊಬ್ಬರೇ. ಭಾರತ ಮತ್ತು ಇಂಗ್ಲಾಂಡು ಟಬೇಟಿನ ಮೇಲೆ ಚೈನ ಕೈರುವ ಮಂಡಲಾಧಿಕಾರವನ್ನು ಒಪ್ಪಿ ಕೊಂಡಿವೆ. ಅಮೆರಿಕಾ ವರ್ಚಸ್ಸಿನಿಂದ ಟಿಬೇಟನ್ನು ಮುಕ್ತಗೊಳಿಸುವ ತಮ್ಮ ನಿರ್ಧಾರವನ್ನು ಚೈನೀ ರಾಷ್ಟ್ರನಾಯಕರು ಸಾರಿದ್ದಾರೆ. ಈ ಕುರಿತು ಚೈನವು ಕಾನೂನುಬದ್ಧ ಕಠೋರಾಚರಣೆಗಿಳಿಯದೆ, ಉದಾರ ಧೋರಣೆಯಿಂದ ವರ್ತಿಸಬೇಕೆಂದು ಭಾರತ ಸರಕಾರವು ಚೈನಾಸರಕಾರವನ್ನು ಮೇಲಿಂದಮೇಲೆ ಕೇಳಿಕೊಂಡಿದೆ.

ಲಿಯೋ ಪೋಲ್ಡರ ರಾಜನಾಮೆ ಪ್ರಸಿದ್ಧಿಯ ಬೆಲ್ಜಿಯಮಿನಲ್ಲಿ ಕಮ್ಯೂನಿಸ್ಟ್ ಪಕ್ಷನಾಯಕ ಜ್ಯೂಲಿಯೆನ್ ಲಾಹಾಟರ ಕೊಲೆಯಾದುದರ ನಿಮಿತ್ತವಾಗಿ ಅಲ್ಲಿಯ ಪ್ರಾಮುಖ್ಯ ಉದ್ದಿಮೇ ಸ್ಥೈತ್ರ ಲೀಜೆಯ ಕೆಲಸಗಾರರೆಲ್ಲರೂ ಪ್ರಚಂಡ ಮುಷ್ಕರ ಹೂಡಿದ್ದಾರೆ. 'ಈ ಕೊಲೆಗಾಗಿ ವಹಿಶ್ಚಿಬ್ಬ ಪ್ರಾಣಕೊಡಬೇಕು' ಎಂದು ಅಲ್ಲಿಯ ಕಮ್ಯೂನಿಸ್ಟ್ ಪಕ್ಷ ಪ್ರತಿಜ್ಞೆ ಕೊಟ್ಟಿದೆ. ಲಾಹಾಟರ ಕೊಲೆಗಾರರನ್ನು ಬೇಟೆಯಾಡಿ ಅಶ್ವಗ್ರ ಶಿಕ್ಷೆಕೊಡಲಾಗುವದೆಂದೂ ಎಲ್ಲರೂ ಶಾಂತಿಯಿಂದಿರಬೇಕೆಂದೂ ಬೆಲ್ಜಿಯಮಿನಲ್ಲಿ ಇತ್ತೀಚೆಗೆ ಸ್ಥಾಪನೆಗೊಂಡ ಸರಕಾರದ ಪ್ರಧಾನ ವಂತ್ರಿಗಳು ಕೇಳಿಕೊಂಡಿದ್ದಾರೆ.

ಪಾಕಿಸ್ತಾನದ ಕರಾಚಿ ನಗರ ಸಭೆಯವರು ಒಂದು ಗೋರಿಯನ್ನು ತೆಗೆಸಿದರೆಂಬ ಕಾರಣಕ್ಕಾಗಿ ಉದ್ರೇಕಗೊಂಡ ಜನಸಂದಣಿ ನಗರ ಸಭಾಭವನದತ್ತ ಏರಿ ಬಂದು ಪೋಲೀಸರ ಲಾಠೀ ಜಾರ್ಜಿಗೆ ಪ್ರತಿ ಲಾಠೀಚಾರ್ಜು ಮಾಡಿದರೆಂದೂ, ಆದರೆ 144ನೇ ಸೆಕ್ಷನ್ ಜಾರಿಯಾಗಿ ಕಣ್ಣೀರ ಹೆಡೆಯ ಬೋಂಬುಗಳನ್ನು ಒಗೆದೊಡನೆ ಎಲ್ಲರೂ ಚಲ್ಲಾಪಿಲ್ಲಿಯಾದರೆಂದೂ ತಿಳಿದು ಬಂದಿದೆ.

ಭಾರತದ ದುರ್ಘಟನೆಗಳು

ಆಗೋಸ್ಟು ತಿಂಗಳಲ್ಲಿ ಭಾರತದ ಕೆಲವೆಡೆ ಅಸಾಮಾನ್ಯದುರಂತ ಹಾಗೂ ದುರ್ಘಟನೆಗಳು ಸಂಭವಿಸಿದುವು. ಆಗೋಸ್ಟು 13ರಲ್ಲಿ ಉತ್ತರ ಪ್ರದೇಶದ ಕಾಶಿಗೆ ಸಮೀಪದಲ್ಲಿ ದುರ್ಗಾವತಿ ಮತ್ತು ಕರ್ಮನಾಶಾಗಳ ನಡುನೆಳದಲ್ಲಿ ನಡೆದ ರೈಲ್ವೇ ಅಪಘಾತವು ಅವಘಡ ಚರಿತ್ರೆಯಲ್ಲೇ ಅತಿದೊಡ್ಡದೆನ್ನಬಹುದು. ಆಗಲೇ 23 ಹೆಣಗಳನ್ನು ಹೆಕ್ಕಲಾಯಿತಲ್ಲದೆ 200 ಕ್ಕೂ ಮಿಕ್ಕಿದ ಜಖಂಗೊಂಡವರು ದೊರೆತರು. ತಾ. 12ನೇ ಅಪರಾಹ್ನ 1 ತಾಸಿಗೆ ಹೌರಾದಿಂದ ಹೊರಟು ತಾ 13ನೇ ಅಪರಾಹ್ನ 4 ತಾಸಿಗೆ ಢಿಲ್ಲಿಗೆ ಸೇರಲಿದ್ದ ಈಸ್ಟ್ ಇಂಡಿಯಾ ರೈಲ್ವೆಯ ತುಫಾನ್ ಮೈಲು ಮೇಲ್ಗಡೆ ನ ಮೂರಿಸಿದ ಸ್ಥಳದಲ್ಲಿರುವ ಸಣ್ಣ ಸಂಕ ವೊಂದಕ್ಕೆ ಮಧ್ಯರಾತ್ರಿ ಹೊತ್ತಿಗೆ ಬಂದಾಗ, ಅಲ್ಲಿ ಮೊದಲೇ ಕಂಬಿತಪ್ಪಿ ಹೋಗಿದ್ದ ಗುಡ್ಸ್ ಟ್ರೈನಿಗೆ ಢಿಕ್ಕಿ ಹೊಡೆಯಿತು. ತತ್ಪರಿಣಾಮವಾಗಿ ತುಫಾನ್ ಎಕ್ಸ್‌ಪ್ರೆಸ್ಸಿನ ಎಂಜಿನ್, ಮತ್ತು 4ನಾಡಿಗಳು ಕಳಚಿ 20 ಅಡಿ ಕೆಳಗೆ ನಾಲ್ಕಡಿ ಆಳದ ನೀರಿಗೆ ಬಿದ್ದುವು. ಎರಡು ಬಂಡಿಗಳು ಮತ್ತು ಸಾಮಾನು ಗಾಡಿ ದೂರಕ್ಕೆ ಸಿಡಿದು ಹೋದುವು. ಇವುಗಳಲ್ಲಿದ್ದವರು ಸಜ್ಜು ಗುಜ್ಜಾಗುವ ಆಥವಾ ತೀವ್ರ ಜಖಮಿಗೊಳಗಾಗುವ ದುರ್ವಿಧಿಗೀಡಾದರು. ಕೆಲವು ಹೆಣಗಳು ನಜ್ಜುಗುಜ್ಜಿನಿಂದ ಗುರುತಿಗೆ ಸಿಕ್ಕಿ ಹೋಗಿರುವುದರಿಂದ ಸತ್ತವರ ಸಂಖ್ಯೆಯನ್ನು ಕೂಡಲೇ ಸರಿಯಾಗಿ ಗೊತ್ತುಹಚ್ಚಲಾಗಿಲ್ಲ. ತುಫಾನ್ ಎಕ್ಸ್‌ಪ್ರೆಸ್ ಢಿಕ್ಕಿ ಹೊಡೆದ ಗುಡ್ಸ್ ಟ್ರೈನಲ್ಲಿ ಕಂಬಿತಪ್ಪಿ ಅಲ್ಲಿ ಬಿದ್ದಿದ್ದರ ಬೇಕಾದರೆ ಕಂಬಿಕೀಳುವ ದಗಾಖೋರತನವನ್ನೆ ಯಾರೋ ನಡಿಸಿರಬೇಕೆಂದು ಸಂಬ ಲಾಗಿದೆ. ವಿಚಾರಣೆ ನಡೆಯುತ್ತಿದೆ.

ತಾ. 15ನೇ ರಾತ್ರಿಯಲ್ಲಾರಂಭಿಸಿ, ತಾ. 20ರವರೆಗೂ, ಆಗಾಗ ಪೂರ್ವ ಭಾರತದ ಅಸ್ಸಾಮು, ಬಂಗಾಳ, ಬಿಹಾರ್ ಮತ್ತು ಉತ್ತರ ಪ್ರದೇಶದ ಕೆಲವಡೆಗಳಲ್ಲಿ ನಡೆದಿದ್ದ ಭೂಕಂಪಗಳು ಆಧುನಿಕ ಕಾಲದಲ್ಲೇ ಅತಿಭೀಕರ ಸ್ವರೂಪದವುಗಳಿದ್ದುವೆಂದು ತಿಳಿದು ಬಂದಿದೆ. ಪೂರ್ವ ಟಬೇಟಿನಲ್ಲೂ ಈ ಭೂಕಂಪವು ಕಠೋರ ರೂಪದಲ್ಲಿ ನಡೆದಿದ್ದಿತು. ಅತಿರಭಸದ ಕಂಪನ ಮತ್ತು ಅತಿರೇಕ ಹಾನಿಯಾಗಿರುವುದೆಂದರೆ ಉತ್ತರ ಅಸ್ಸಾಮಿನಲ್ಲಿ, ಲೋಕದಲ್ಲಿ ಈ ವರೆಗೆ ನಡೆದಿರುವ ಅತಿ ದೊಡ್ಡ 5 ಭೂಕಂಪಗಳಲ್ಲಿ ಈ ಬಾರಿಯ ಅಸ್ಸಾಮು ಕಂಪನವೊಂದೆಂದು ಗಣಿಸಲಾಗಿದೆ. 1897ರಲ್ಲೊಮ್ಮೆ ಅಸ್ಸಾಮಿನಲ್ಲೇ ನಡೆದಿದ್ದ ಮಹಾ ಭೂಕಂಪನ ನಂತರ ಭಾರತದಲ್ಲಿ ಇಷ್ಟು ದೊಡ್ಡ ನೆಲನಡುಕ ಈ ವರೆಗಾದುದಿಲ್ಲ. 1934ರಲ್ಲಾಗಿದ್ದ ಬಿಹಾರಿನ ಅತಿ ದೊಡ್ಡ

(೭ನೇ ಪುಟ ನೋಡಿರಿ)

The Canara Mutual Assurance Co., Ltd.

ESTD: 1935. H. O. UDIPI.

Some Salient Straws.

1. A purely mutual Company where the policyholders are the only shareholders and receive the entire profits.
2. Economic management; Low Expense Ratio.
3. Bonus declared right from the inception of the Company.
4. Life Fund exceeds Rs. 52 lakhs.
5. Steady growth in business and popularity.

T. R. A. Pai,
Managing Director.

ನೋಟೀಸು

ಕಾಸರಗೋಡು ಪಿ. ಮುನ್ಸೀಫ್ ಕೋರ್ಟಿನಲ್ಲಿ

ಕ್ರಮನಂಬ್ರ 136/1950

ಉಮ್ಮಲಮ ಸಹಾ ವಾದಿರು.

ಮರಿಯುಮ್ಮ ಸಹಾ ಪ್ರತಿವಾದಿರು

6ನೇ ಪ್ರತಿವಾದಿ ಅಬ್ದುಲ್ಲ ರಹಿಮಾನ್. ಪಕ್ಕಿ ಹಾಜಿ ಅಬ್ದುಲ್ಲ ಬ್ಯಾರಿ ಮಗ, ಕಾಸರಗೋಡು ತಾಲೂಕು ಅಡ್ಕತಬೈಲು ಗ್ರಾಮದವನಿರುವವ.

ವಾದಿರು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲ್ಕಂಡ ರದಂಮ್ಮನ್ ವ್ಯಾಜ್ಯವು ತಾ. 2-9-1950ಕ್ಕೆ ತಪ್ಪಿಗೆಇಟ್ಟಿರುವ ಸಂಗಿ 6ನೇ ಪ್ರತಿವಾದಿಗೆ ಈ ಮೂಲಕ ತಿಳಿಸೋಡಾಗುತ್ತದೆ.

Sd. P. Ahmad,
Advocate for Plff.

ಕಾಸರಗೋಡು, 19-8-50

THE
Canara Banking Corporation Ltd.
(Incorporated in India.)
Estd: 1906.
Head Office : **UDIPI, (S. I.)**

Capital Authorised .... Rs. 25,00,000
Capital Issued, Subscribed & Paid up .... Rs. 20,00,000
Reserves .... Rs. 9,44,765

ಗುರುವಾರ, ಉಡುಪಿ, ೩೪-೮-೧೯೫೦

ಜನತಾ ಜವಾಬ್ದಾರಿ

ತೃತೀಯ ಸ್ವಾತಂತ್ರ್ಯ ವರ್ಧಂತಿ ಸಂದರ್ಭದಲ್ಲಿ ಭಾರತದ ಅಧ್ಯಕ್ಷ, ಪ್ರಧಾನಿ ಮುಖ್ಯ ಉಪ ಪ್ರಧಾನಿಗಳು ರಾಷ್ಟ್ರದ ನಾಡೀಬಡಿತವನ್ನು ನೋಡಿಕೊಂಡೇ ತಕ್ಕ ಸಲಹೆಗಳನ್ನಿತ್ತಿದ್ದಾರೆ. ಜನತೆಯೊಡನೆ ಹೊಕ್ಕ ಬಳಕೆಯನ್ನಿಟ್ಟುಕೊಂಡು ಜನ ಮನೋವೃತ್ತಿಯ ನಿಕಟ ಪರಿಜಯವುಳ್ಳ ವರು ಅಧಿಕಾರ ಸ್ಥಾನದಲ್ಲಿದ್ದರೆ, ಎಂತಹ ಅತ್ಮೀಯ ಹಿತೋಪದೇಶ ದೊರೆಯುವ ದೆಂಬುದಕ್ಕೆ ಈ ತ್ರಿನಾಯಕರ ಸಂದೇಶ ಗಳೇ ನಿದರ್ಶನ. ದೇಶದ ಇಂದಿನ ಜನ ಜೀವನದ ಸರ್ವೆದೆಗಳಲ್ಲಿ ವಿವಿಧ ರೂಪ ದಿಂದ ಹೆಪ್ಪಡಿರುವ ವಿಷದ ಮೂಲ ಗುಳಿಗೆ ಯೇ ಸಂಕುಚಿತ ಸ್ವಾರ್ಥನೆಂಬುದು ಮಂ ದಬುದ್ಧಿಗಿರುವ ಡಾ॥ ರಾಜೇಂದ್ರ ಪ್ರಸಾ ದರು ಅದನ್ನು ನಿವಾರಿಸಿಕೊಳ್ಳುವಂತೆ ಆಗ್ರಹಿಸಿದ ವಿಜ್ಞಾಪನೆ ಮಾಡಿಕೊಂಡಿ ದ್ದಾರೆ. ಕೆಲವು ತಿಂಗಳ ಕೆಳಗೆ ತೆಗೆದುಕೊಂಡ ಜನತೆಯಲ್ಲಿ ಹೆಪ್ಪಡಿಯುವ ನಿರಾಶೆ ಮತ್ತು ಗಲಿಬಿಲಿಯನ್ನೂ ಜನರ ಕಾರ್ಯ ವಿಮು ಖತೆಯನ್ನೂ ಮನಗಂಡ ಪಂಡಿತ ನೆಹರುಗಳು, ವಿರುತಗ್ಗುಗಳ ಪ್ರತಿಯೊಂದು ರಾಷ್ಟ್ರ ಜೀವನದಲ್ಲೂ ಇರುವಂತಹವೆಂ ದೂ, ಎಲ್ಲಕ್ಕೂ ಸರಕಾರದ ಕಡೆಗೇನೇ ಕತ್ತುನೀಡಿ ನಿಂತುಕೊಳ್ಳದೆ ಸರಕಾರದೊ ಡನೆ ಕಾರ್ಯತಃ ಸಹಕರಿಸಬೇಕೆಂದೂ, ಈ ಸ್ವಂತ ಹೊಣೆಗಾರಿಕೆಯನ್ನರಿಯದ ಜನತೆಯು ಸ್ವರಾಜ್ಯದ ಅರ್ಥವನ್ನೇ ಅರಿತಿಲ್ಲವೆಂದೂ ಒತ್ತಿ ಹೇಳಿದ್ದಾರೆ. ಸರ್ದಾರ್ ಪಟೇಲರಂತೂ ಜನತೆಯ ಹೃದಯದೊಳಗೆ ತನ್ನ ಅಂತಃಕರಣವನ್ನು ಹೊಗಿಸಿ ಯಾದರೂ ಅದನ್ನು ಶುದ್ಧೀಕರಿಸಲು ಪ್ರಯತ್ನಿಸಿದಂತಿದೆ. ತನಗಿನ್ನು ಹೆಚ್ಚುಕಾಲ ಬಾಳಲಿಕ್ಕಿಲ್ಲವೆಂಬುದನ್ನು ನೆನಪು ಮಾಡಿ ಕೊಟ್ಟು, ಮಹಾ ಮಹಾ ಬಲಿದಾನಗಳನ್ನು, ಧೀರ ವೀರ ಕೃತಿಗಳನ್ನು, ಅಭೇದ್ಯ ಐಕ್ಯತೆ ಸಂಘಟನೆಗಳನ್ನು ಕಂಡಿದ್ದ ತನಗೆ ತನ್ನಾಯುಷ್ಯದ ಕೊನೆಯ ಅಂಕದಲ್ಲಿ ಕಾಣಬಾರದುದನ್ನು ಕಾಣುವ ದುರ್ವಿಧಿಯೊದಗಿತೇ, ಎಂಬ ವ್ಯ ಥೆಯನ್ನು ಸರ್ದಾರರು ಹೇಳಿಕೊಂಡ ರೀತಿಯು ಎಂತಹ ಹೃದಯ ಕಲಾಟವನ್ನಾದರೂ ಒಮ್ಮೆ ತೆರೆಯುವಂತಹದೇ. ಕೆಲಸ ಮಾಡಬೇಕಾದ ಹೊತ್ತಿನಲ್ಲಿ ಮಾತಾ ಡುತ್ತಾ ನಿಂತುಕೊಂಡ ವ. ನೆಯವರನ್ನು ಎಚ್ಚರಿಸುವ ಯಜಮಾನನಂತೆ— ಅಲ್ಪ ಮಹತ್ತಿನ ಭೇದವನ್ನರಿಯದೆ ಕಿರಿದನ್ನು ಹಿರಿದಾಗಿ, ಹಿರಿದನ್ನು ಕಿರಿದಾಗಿ ಗಣಿಸುತ್ತಿರುವ ಅಜ್ಞಾನಿಗಳಿಗೆ ತಿಳುವಳಿಕೆ ಕೊಡುವ ಹಿರಿಯ ನಂತೆ— ಸರ್ದಾರ್ ಪಟೇಲರೂಡಿಸುವ ಮಾತುಗಳು ಮರೆಯಲಾಗುವಂತಹವಲ್ಲ.

ಪ್ರಸಾದ್, ನೆಹರು, ಪಟೇಲರು, ತಮ್ಮ ದೇಶಬಂಧುಗಳಿಗೀಕಾಲದಲ್ಲಿ ಆಗತ್ಯವಾಗಿ ಹೇಳಲೇ ಬೇಕಾದುದನ್ನು ಯೋಗ್ಯ ಸಂದರ್ಭ ನೋಡಿ ಹೇಳಿದ್ದಾರೆ. ಇವರಿಗೆ ಮತ್ತು ಇವರ ಕೆಳಗಿನ ಆಡಳಿತಗಳಿಗೆ ಜನತೆಯೂ ಹೇಳತಕ್ಕ ಮಾತುಗಳಿವೆ; ಹೇಳಲೇ ಬೇಕು. ಹಾಗೆ ಯಾವ ಸಂದರ್ಭದಲ್ಲೂ ಯಾರಿಂದಲೂ ಹೇಳಿಸಿಕೊಳ್ಳುವಂತಹದಾವುದೂ ತಮ್ಮಿಂದಾಗಿಲ್ಲವೆಂದು ಈ ನಾಯಕರಾದರೂ ಹೇಳುತ್ತಿಲ್ಲ. ನೆಹರೂ, ಪಟೇಲರಾಬ್ಬರೂ ತಾವೆಷ್ಟು ಬಾರಿ ಮುಗ್ಗರಿಸಿದ್ದರೂ, ಎಂತಹ ಟೀಕೆಗಳಿಗಾಸ್ಪದವಿತ್ತಿದ್ದರೂ ತುಲನಾತ್ಮಕವಾಗಿ ತೃಪ್ತಿಕರ ನಿಜಯ ಗಳಿಸಿದ್ದೇವೆ, ಎಂಬ ಅತ್ಮ ಸಮಾಧಾನ ಸ್ಪಷ್ಟವಾಗಿ ಪ್ರದರ್ಶಿಸಿದ್ದಾರೆ. ಇದು ಕೇವಲ ಬೂಟಾಟಿಕೆಯೆಂದು ಅವರ ವಿರೋಧಿಗಳು ಕೂಡಾ ಹೇಳಲಾರರು. ನೆಹರೂ, ಪಟೇಲರನ್ನು ಇದೀಂವಾದಿಗಳೆಂದು ಗಣಿಸಿ, ಅವರ ಹೆಗ್ಗಳಿಕೆಗೆ ಪ್ರಳಯಾಗಿ "ನಾವೂ ಸಮಾಧಾನಕರವಾಗಿ ಕರ್ತವ್ಯ ನಿರ್ವಹಿಸಿದ್ದೇವೆ" ಎಂದು ಜನತೆ ಹೇಳಿಕೊಳ್ಳುವಂತೆಯೆ? ನಿಜಕ್ಕೂ ಇಲ್ಲ. ಈ ನಾಯಕರು ಮಾಡಿರುವಂತಹದೆಲ್ಲವೂ ಜನತೆಯ ಪರವಾಗಿ, ಜನತಾ ವಿಶ್ವಾಸ ಬಲದಿಂದಲೇ ಆದ್ದರಿಂದ ಜನತೆ ಮತ್ತು ನಾಯಕರ ನಡುವೆ ಸ್ವಪರ ಭೇದವಿಲ್ಲವೆಂಬ ಮಾತು ಬೇರೆ. ಏನಿಲ್ಲೆಂದರೂ ಮಾಡಿಸುವ ಮತ್ತು ಮಾಡುವ ಧನಿ— ಕೂಲಿಗಾರರೊಳಗಿರುವ ಅಂತರ ಮತ್ತು ಭಿನ್ನ ಹೊಣೆಗಾರಿಕೆಗಳಾದರೂ ಸಾರ್ವಜನಿಕರು ಮತ್ತು ಸಾರ್ವಜನಿಕ ಪ್ರತಿನಿಧಿಗಳ ನಡುವೆ ಇದ್ದೇ ಇದೆ. ಮಾಡಿಸುವವನ ತಿಳುವಳಿಕೆ ಮತ್ತು ಯೋಗ್ಯತೆಗೆ ಮಿಕ್ಕಿದುದು, ಮಾಡುವವನ ಸ್ವಂತ ಚಾತುರ್ಯ ಮತ್ತು ಸ್ವಾಮರ್ಥ್ಯ ದಿಂದ ನಡೆಯುವುದು ಧನಿತನದ ಭಿನ್ನತೆಗೆ ಕುಂದು. ಈ ದಿನ ಭಾರತದ ಜನತೆಯಲ್ಲಿ ಅಂತಹ ಕೊರತೆ ಕಂಡು ಬರುತ್ತಿದೆ ಎಂಬುದನ್ನು ಒಪ್ಪಬೇಕು. ಈ ಅಯೋಗ್ಯತೆ ಯುಳಿದಿರುವ ವರೆಗೆ 'ಜನತಾ ರಾಜ್ಯ'ವು ಪೂರ್ಣ ಸಾರ್ಥಕವಾಗಿ ವಂತಿಲ್ಲ. ಮೇಲಾಗಿ ಪ್ರಾಯಾಧಿಕ್ಯ ಮತ್ತು ಅನಾರೋಗ್ಯದ ದೆಸೆಯಿಂದ ಕುಗ್ಗಿಹೋಗಿರುವ ಸರ್ದಾರರು ನೆನಪು ಮಾಡಿಕೊಟ್ಟಂತೆ ನಮ್ಮೀ ಯೋಗ್ಯ ಕಾರ್ಯಕರ್ತರು ರಾಷ್ಟ್ರವಿರುವ ವರೆಗೆ ಉಳಿದುಕೊಳ್ಳುವರೇನೂ ಇಲ್ಲ. ಅವರಿರುವಾಗಲೇ ಬಂದಿರುವ 'ಜನತೆಯು ತಲೆಯ ಮೇಲೆ ಜನತೆಯದೇ ಕೈ'ಯೆನ್ನುವಂತಹ ಹೊಣೆಗಾರಿಕೆಹೀನ್ನು ಯೋಗ್ಯ ರೀತಿಯಿಂದ ನಿರ್ವಹಿಸುವ ಗುಣ ನಡತೆಗಳನ್ನು ಜನರು ಸಂಪಾದಿಸಿಕೊಳ್ಳಬೇಕು. ಬೇರೆಯವುದು ಹೇಗಿದ್ದರೂ, ಸರ್ವರಿಗೂ ಸಮಾನ ಹಕ್ಕು ಬಾಧ್ಯತೆಗಳನ್ನಿತ್ತಿರುವ ಜನತಾ ರಾಜ್ಯದ ಹಿತ ಸಂಬಂಧಗಳು ನೆಲವೇ ಮಂದಿ ನಾಯಕರನ್ನು ಆವಲಂಬಿಸಿರಕೂಡದೆಂಬುದು ಬಿಂಡಿತ. ಆದ್ದರಿಂದ ರಾಷ್ಟ್ರ ನಾಯಕರ ಹಿತೋಪದೇಶಗಳಿಗನುಸರಣವಾಗಿ ಭಾರತೀಯರೆಲ್ಲರೂ ಅತ್ಮ ನಿರೀಕ್ಷಣೆ ಮಾಡಿಕೊಂಡು, ದೇಶದೊಡೆತನದ ಯೋಗ್ಯತೆ, ಭಿನ್ನತೆಗಳನ್ನು ಸ್ವತಃ ಗಳಿಸಿಕೊಳ್ಳಬೇಕಾದುದು ಅಗತ್ಯವೆಂದು ಮತ್ತೊಮ್ಮೆ ಹೇಳಬೇಕಾಗಿದೆ.

ನವಯುಗದ ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳ ಅಂತ್ಯಕ್ಕೆ ನವಯುಗದ ೩೧ನೆ ವರ್ಷವು ಅಂತ್ಯವಾಗಿ ಸಪ್ಟಂಬರಿಂದ ಹೊಸ ವರುಷವು ಆರಂಭವಾಗುವುದು. ಈ ಅವಧಿಗೆ ಚಂದಾಹಣ ನಂಗಿಯವರು ದಯಮಾಡಿ ತಮ್ಮ ಚಾಲ್ತಿ ಚಂದಾಹಣ ಮತ್ತು ಬಾಕಿಯಿದ್ದರೆ ಅದನ್ನು ಸಮೇತ ಆದಷ್ಟು ಶೀಘ್ರ ಕಳುಹಿಸುವಂತೆ ಈ ಮೂಲಕ ವಿನಂತಿಸಲಾಗಿದೆ. ವಿ. ಪಿ. ಮಾಡಿದರೆ ಆರಾಣೆ ಜಾಸ್ತಿ ಬೀಳುವುದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣವನ್ನು ಈ ತಿಂಗಳ ಅಂತ್ಯದೊಳಗಾದರೂ ಮನಿಯಾರ್ಡರ್ ಮಾಡುವಂತೆ ಅಪೇಕ್ಷಿಸುತ್ತೇವೆ ಅಂತೂ ಈ ತಿಂಗಳೊಳಗೆ ಚಂದಾಹಣ ಬಾರದಿದ್ದಲ್ಲಿ ಸಪ್ಟಂಬರ ತಿಂಗಳ ಪ್ರಾರಂಭದಲ್ಲಿ ಬಾಕಿನಿಲ್ಲುವ ಹಣಕ್ಕೆ ಪತ್ರಿಕೆಯನ್ನು ವಿ. ಪಿ. ಮಾಡಲಾಗುವುದು. ಅದನ್ನು ಸಾದರದಿಂದ ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿಯೂ ವಿನಂತಿ.

ಮೆನೇಜರ್.

ಉಡುಪಿ

ವಿದ್ಯುಚ್ಛಕ್ತಿ ದರ ಕಡಿತಕ್ಕಾಗಿ ಮನವಿ— ಉಡುಪಿ ಪೌರಸಮಿತಿಯ ಪ್ರತಿನಿಧಿಗಳು ಬೀದಿ ದೀಪಗಳನ್ನು ಉಂಟುಮಾಡುವ ವಿದ್ಯುಚ್ಛಕ್ತಿಯ ದರವನ್ನು ಕಡಿಮೆ ಮಾಡಬೇಕೆಂಬ ವಿಷಯದಲ್ಲಿ ಉಡುಪಿ ನಾಗರಿಕರ ಅಭಿಪ್ರಾಯವನ್ನು ತಿಳಿಯುವುದಕ್ಕೋಸ್ಕರ ಮುನಿಸಿಪಲ್ ಚೆಯರ್‌ಮೆನ್ ಶ್ರೀ ಯು. ಎಸ್. ನಾಯ್ಕರು ಕಳೆದ ಆದಿತ್ಯವಾರ ಸಂಜೆ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು ಹಾಲಿನಲ್ಲಿ ಮಹಾಜನ ಸಭೆಯೊಂದನ್ನು ಕರೆದಿದ್ದರು. ಸಭೆಯಲ್ಲಿ ಈ ಕುರಿತು ಸವಿವರ ಚರ್ಚೆ ಮತ್ತು ಪರ್ಯಾಲೋಚನೆಗಳಾದುವು. ಉಡುಪಿ ಇಲೆಕ್ಟ್ರಿಕ್ ಸಪ್ಲ್ಯೈ ಕೊರ್ಪರೇಶನ್‌ನವರು ಕರೆಂಟ್ ಚಾರ್ಜನ್ನು ಏರಿಸಿದುದು ನ್ಯಾಯವಲ್ಲ, ದೊರೆಯುವ ಬೆಳಕೂ ತೃಪ್ತಿಕರವಾಗಿಲ್ಲ. ಆದುದರಿಂದ ಮುನಿಸಿಪಾಲಿಟಿಯು ಆದಕ್ಕಾಗಿ ಹೊಸ ತೆರಿಗೆಯನ್ನು ಜನತೆಯ ಮೇಲೆ ಹೇರುವುದು ಅನಗತ್ಯವಾದುದರಿಂದ ರಸ್ತೆ ವಿದ್ಯುದ್ದೀಪಗಳನ್ನು ರದ್ದುಗೊಳಿಸಬಹುದಾಗಿ ಸಭೆಯ ಅಭಿಪ್ರಾಯವಾಯ್ತು. ಮದ್ರಾಸು ಸರಕಾರವು ಕಂಪೆನಿಯನ್ನು ಸ್ವಾಧೀನಪಡಿಸಿಕೊಂಡು ದರವನ್ನು ಇಳಿಸಿ ಯೋಗ್ಯ ಕೆರೆಂಟನ್ನು ಕೊಡುವಂತೆ ಮುನಿಸಿಪಾಲಿಟಿಯು ಸರಕಾರವನ್ನು ಒತ್ತಾಯಿಸಬೇಕು. ಸರಕಾರಕ್ಕೆ ಹಣದ ಅಳವಟಿಯಲ್ಲಿ ಉಡುಪಿಯು ನುಣ್ಣಾಜನರು ಗಾಲಕೊಡಲು ಸಿದ್ಧರಿರುವರು ಎಂದು ಸರಕಾರದ ಗಮನಕ್ಕೆ ತರಲಾಯಿತು. ಜೋಗಿಗರ ಪಿಡ್ಡುತ್ಪನ್ನಿಸಿ ಬೇಗನೆ ಈ ಜಿಲ್ಲೆಗೆ ಸಿಗುವಂತೆ ತಕ್ಕ ವ್ಯವಸ್ಥೆಯಾಗ ಬೇಕೆಂದೂ ಅಪೇಕ್ಷಿಸಲಾಯಿತು. ನಗರಸಭೆಯ ಕಡೆಯಿಂದ ಒಬ್ಬ ಪ್ರತಿನಿಧಿಯನ್ನು ಮದ್ರಾಸು ಸರಕಾರಕ್ಕೆ ವಿದ್ಯಮಾನಗಳನ್ನು ತಿಳಿಸುವರೆ ಕಳುಹಿಸಬೇಕೆಂಬ ಸೂಚನೆಯಾಯಿತು. ಸಭಾಧ್ಯಕ್ಷ ಶ್ರೀ ನಾಯ್ಕರು ಮಹಾಜನ ನಿರ್ಧಾರವನ್ನು ಸಾ. 26ರಲ್ಲು ಜರಗುವ ಕಾನ್ಸಿಲ್ ಸಭೆಯ ಮುಂದಿಡುವೆನಾಗಿ ತಿಳಿಸಿದರು. ಬರುವತಿಂಗಳ ರಂಭದಿಂದ ಬೀದಿ ವಿದ್ಯುದ್ದೀಪಗಳನ್ನು ಮುನ್ನಾ ಮಾಡುವ ಸಂಭವವಿದೆಯೆಂದು ಎಚ್ಚರಿಸಿದರು. ಧ್ಯೇಯ ಸಾಧನೆಗಾಗಿ ಮುನಿಗಳ ವಿದ್ಯುದ್ದೀಪಗಳನ್ನೂ ನಿಲ್ಲಿಸಿಕೊಂಡು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಕೇಳಿಕೊಳ್ಳಲಾಗಿದೆ.

ಉಡುಪಿ ಪರ್ಯಾಯ ವಸ್ತುಪ್ರದರ್ಶನದ ಆಯವ್ಯಯ— ಕಳದ ಜನವರಿಯಲ್ಲಿ ಉಡುಪಿಯಲ್ಲಿ ಜರಗಿಸಲ್ಪಟ್ಟ ಪರ್ಯಾಯ ವಸ್ತುಪ್ರದರ್ಶನದಲ್ಲಿ ರೂಪಾಯಿ 38,512-14-8 ಜಮೆಯಾಗಿದ್ದು ರೂಪಾಯಿ 14,332-14-5ಕ್ಕೆ ಖರ್ಚಾಗಿತ್ತು. ಉಳಿದ ರೂಪಾಯಿ 24,180-0-3ನ್ನು ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ನಿಧಿಗೆ ಕೊಡಲಾಗಿದೆ ಎಂದು ಗೌರವ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಉಡುಪಿ ನಗರಾಡಳಿತ ವಿಮರ್ಶೆ— 1949-50ನೆ ವರ್ಷದ ಉಡುಪಿ ಮುನಿಸಿಪಾಲಿಟಿಯ ಆಡಳಿತ ವರದಿಯನ್ನು ವಿಮರ್ಶಿಸುತ್ತಾ ಜಿಲ್ಲಾ ಕಲೆಕ್ಟರರು ಮುನಿಸಿಪಲ್ ಚೆಯರ್‌ಮೆನ್, ಸದಸ್ಯರು ಮತ್ತು ಕಛೇರಿ ನರ್ ಇವರೊಳಗೆ ಪರಸ್ಪರ ಮೈತ್ರಿಯಿಂದ್ದೂ ಉಡಳಿತದಲ್ಲಿ ನಗರ ವಾಸಿಗಳಿಗೆ ನಂಬಿಕೆಯಿತ್ತಿರುವುದೂ ಹೇಳಿರುವರು. ಟೀಕ್ಷ್ಣ ನಸಾಲಿ ಕೆಲಸ ಚಲೋದಿದ್ದು ಆಡಳಿತ ಉತ್ತಮವಾದಿದೆಯೆಂದು ಸಾಬಿಸಿರುವರು. ನಗರದಲ್ಲಿ ಸಾಂಕ್ರಾಮಿಕ ರೋಗಗಳು ಕಲಿದೋರಲಿಲ್ಲ. ಬೇಸಿಗೆ ಕಾಲದಲ್ಲಿ ಪ್ರವಾಹ ರಸ್ತೆಗಳಿಗೆ ನೀರು ಹಾಕಲಾಗುತ್ತು. ವಾರ ಸಂತೆಯೊಂದಿಗೆ ಅನುದಿನದ ಕಾಳಾಂಗ ಸಂತೆ ವನಿರ್ಮಿಟು ತೆರೆಯುವುದು ಅವಶ್ಯಕ. ಮುನಿಸಿಪಲ್ ರೇಡಿಯೊ, ಪಾರ್ಕು, ಆಟವಾಡುವ ಸ್ಥಳ ಇತ್ಯಾದಿ ಜನಾಕರ್ಷಣೀಯವಿವೆ. ಸ್ವೀಪಾಸ್ರ್ಮಣಗಳ ಸಂಖ್ಯೆ ಕಡಿಮೆ ಮಾಡುವುದಲ್ಲದೆ ಆದಾಯ ಇಳಿಕ್ಕೆಯ ಕೂಡಾ ಬೇಗನೆ ಆಗಬೇಕಾಗಿದೆ. ಕಸಾಯಿಖಾನೆ, ಪ್ರಯಾಣಿಕರ ಬಂಗ್ಲೆ ಇತ್ಯಾದಿ ಜಿಲ್ಲಾ ಟವಾಗಿರಿಸಲ್ಪಟ್ಟಿವೆ ಎಂದಿವೆಯಂ.

ಎಂ. ಜಿ. ಎಂ ಕೋಲೇಜ್, ಉಡುಪಿ— ತಾ॥ 18-8-50ರಂದು ರಾ.ಸ್ವ. ಕೃಷ್ಣ ಮಿಶ್ಯನರಿ ಶ್ರೀ ರಂಗಾನಂದಜೀ ಮತ್ತು ಶ್ರೀ ಸರ್ವಜ್ಞಾನಜಿಯವರು ಈ ಕಾಲೇಜಿಗೆ ಭೇಟಿಯಿತ್ತು ಶ್ರೀ ರಂಗಾನಂದಜೀಯವರು ರಾಮಕೃಷ್ಣ ವಿಶ್ವಾಸನ ಕುರಿತು ಭಾಷಣವಿತ್ತರು.

ತಾ॥ 19-8-50ರಂದು ಕಾಲೇಜ್ ಯೂನಿಯನ್ನಿನ ಉದ್ಘಾಟನಾ ಸಮಾರಂಭವು ಡಾ॥ ಟಿ. ಮೊಧವಪೈಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಉದ್ಘಾ ಮುನಿಸಿಪಾಲಿಟಿಯ ಜನಪ್ರಿಯ ಕಮಿಶನರ್ ಶ್ರೀ ಬಾಲಗಂಗಾಧರ ಮೆನನ್‌ರವರು ಉನ್ನಾಟನಾಭಾಷಣವನ್ನು ಮಾಡಿದರು. ಶಾಂತಿನಿಕೇತನದ ಕುರಿತು ಸುರಸವಾಗಿ ವರ್ಣಿಸಿದರು. ಶ್ರೀ ಕು. ಶಿ. ಹರಿದಾಸಭಟ್ಟರ ಸ್ವಾಗತಭಾಷಣ, ಯೂನಿಯನ್ ಕಾರ್ಯದರ್ಶಿ ಶ್ರೀ ದೇವಿಸ್ ಸಿಕ್ವೇರರ ಧನ್ಯವಾದಗಳಿತ್ತವು.

ಭಜನಾ ಸಪ್ತಾಹ: ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಭಜನಾ ಸಪ್ತಾಹವು ತಾ. 18ರಲ್ಲು ಸ್ವಾರಂಭವಾಗಿದೆ.

ಮಹಾನಕ್ಷತ್ರ ಪ್ರಾಣಿ: ಅಪ್ಪೊಂದು ತೃಪ್ತಿಕರವಾಗಿ ಸುರಿಯುತ್ತಿಲ್ಲ.

ಕಡೇಕಾರು— ಮಹಾಗಣಪತಿ ಎಲಿಮೆಂಟರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನೋತ್ಸವವು ಪ್ರಭಾತಫೇರಿ, ಧ್ವಜವಂದನೆ, ಮಕ್ಕಳಿಗೆ ಸಿಹಿತಿಂಡಿ ಹಂಚುವಿಕೆ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

(ಹಿನ್ನೇ ಪುಟದಿಂದ)

ಭೂಕಂಪವಾಗಲೀ 1935ರಲ್ಲಿ ನಡೆದು ಸುಮಾರು 35000 ಜನರನ್ನು ಬಲಿಪಡೆದಿದ್ದ ಕ್ವೆಟ್ಟಾ ಭೂಕಂಪವಾಗಲೀ ಮೊನ್ನೆ ನಡೆದ ಅಸ್ಸಾಮ್ ಭೂಕಂಪದಷ್ಟು ಭಯಂಕರವಾಗಿರಲಿಲ್ಲ. ವಿಶೇಷ ಹಾನಿಗೀಡಾದ ಅಸ್ಸಾಮಿನ ಕೆಲವು ಭಾಗಗಳಲ್ಲೇ 2000ಕ್ಕೆ ಮಿಕ್ಕಿದ ಮನೆಗಳು ಸಂಪೂರ್ಣ ನುಚ್ಚುನೂರಿಯಾಗಿ, ಇನ್ನೆಷ್ಟೋ ಸಾವಿರ ಮನೆಗಳು ಹಾಳಾದ ವಾರ್ತೆಗಳಿವೆ. ಸಕ್ಕರ ಸಂಖ್ಯೆ ತುಲನಾತ್ಮಕವಾಗಿ ಕೀಳಾಗಿ ಕಡಿಮೆಯೆಂದು ಕೇವಲ 30ರ ಒಳಗಿನ ಲೆಕ್ಕಕೊಡಲಾಗುತ್ತಿದೆಯಾದರೂ ಅದು ಎಷ್ಟೋ ಸಾವಿರದಿಳಾಗಬಹುದೆಂದು ನಂಬಲಾಗಿದೆ. ರಸ್ತೆಗಳು, ರೈಲ್ವೆ ಗಳು, ತಂತಿ, ಟೆಲಿಫೋನು ಮುಂತಾದು ವೆಲ್ಲವೂ ಕಡಿದುಹೋಗಿ ಅಡಿಮೇಲಾಗಿವೆ. ಕೆಲವು ಕಡೆಗಳಂದ ಹೃದ್ರಾವಕ ದುರ್ವಾರ್ತೆಗಳು ಬಂದಿವೆ. ಡಾರ್ಜಿಲಿಂಗ್ ಬಳಿಯ ಒಂದೆಡೆ ರಸ್ತೆಯ ಬಿಸೇರಿ ಕೆಲಸದಲ್ಲಿದ್ದ ಹಲವರು, ಅಲ್ಲೇ ಸಜೀವವಾಗಿ ಹೂಣಿದು ಹೋದರೆಂಬ ಸುದ್ದಿಯಿದೆ. ಮನೆ ಮಾಡು ಗೋಡೆಗಳು ತರಗೆಲೆಗಳಂತೆ ಹಾರಿ, ಜನರು ಬೀಳುವಾಗ ಅವುಗಳಡಿಯಲ್ಲಿ ಜೀವಂತ ಹೂಳಲ್ಪಟ್ಟವರೆಷ್ಟೋ! ಭೌಗೋಳಿಕ ಅಡಿಮೇಲುಗಳ ಆದ್ಭುತ ಘಟನೆಗಳೆಷ್ಟೋ ಕಂಡುಬಂದಿವೆ. ಅಲ್ಲಯ ಬ್ರಹ್ಮಪುತ್ರಾ ಹೊಳೆಯ ನೀರು ಕಪ್ಪಾಗಿ ದುರ್ವಾಸನೆ ಕೊಡುತ್ತಾ ಂಭಸದಿಂದ ಉಕ್ಕಹತ್ತಿತು. ಹೊಳೆಯಲ್ಲೊಂದೆಡೆ ಮೀನು ಹಿಡಿಯುತ್ತಿದ್ದ 20 ಮಂದಿ ಬೆಸ್ತರ ಪೈಕಿ ಜೆದಿ ನೆಂಟು ಮಂದಿ ಭೂಕಂಪದ ದೆಸೆಯಿಂದ ಅಕಸ್ಮಾತ್ತಾ ಅಡಿಗೆ ಹೋದವರು ಮತ್ತೆ ಕಾಣಿಸಿದ್ದೇ ಇಲ್ಲ. ಹಿಬ್ರು ಮತ್ತಿತರ ಹೊಳೆಗಳಲ್ಲಿ ಇದೇ ರೀತಿ ಪ್ರಳಯ ನೆರೆಯೇರಿದೆ. ಈ ರೀತಿ ಎಲ್ಲಾ ಹೊಳೆಗಳಲ್ಲೂ ಮಹಾಪೂರ ಬಂದಿರುವಾಗ, ಪಕ್ಕದ ಪರ್ವತಗಳು ಜರಿದು ಬಿದ್ದು ಸೊವಾನ್ನಿಂರ ಹೊಳೆಯಂಥಗಳು ಪೂರ್ಣ ಮುಚ್ಚಿ ಹೋದ ನಿದರ್ಶನಗಳೂ ಕಂಡು ಬಂದಿವೆ. ಅಸ್ಸಾಮಿನಲ್ಲಿ ಬೆಳೆ, ಉದ್ಯೋಗ ವ್ಯಾತ್ತಿತರ ವಿಭಾಗಗಳಿಗಾದ ಹಾನಿಯೆಷ್ಟು ಎಂಬ ಪೂರ್ಣ ವಿವರವಿನ್ನೂ ಗೊತ್ತಾಗಿಲ್ಲ. ಸಹಸ್ರ ಸಂಖ್ಯೆಯ ಜನರು ಸರ್ವಸ್ವವನ್ನೂ ಕಳಕೊಂಡು ನಿರ್ಗತಿಕರಾಗಿದ್ದಾರೆ. ಸರಕಾರೀ ಸಹಾಯ ವ್ಯವಸ್ಥೆಗಳು ಭರದಿಂದ ನಡೆದಿವೆ- ಅಖಿಲ ರಾಷ್ಟ್ರದ ಜನತೆಯು ತಮ್ಮ ದುರ್ದೈವೀ ದೇಶ ಬಂಧುಗಳಿಗೆ ಶಕ್ತಿ ಮೀರಿ ಸರ್ವ ಸಹಾಯ ಸಲ್ಲಿಸಬೇಕಾದದ್ದೂ ಅಗತ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಆಹಾರ ದುಸ್ಥಿತಿ

ರಾಷ್ಟ್ರದ ಇಂದಿನ ಆಹಾರ ದುಸ್ಥಿತಿಯನ್ನು ನಿವಾರಿಸಲು ಅತ್ಯವಸರದ ಪರಿಣಾಮಕಾರೀ ಕಾರ್ಯ ಕೈಕೊಳ್ಳುವದರ ಯೋಜನೆಗಾಗಿ ಎಲ್ಲಾ ಸಂಸ್ಥಾನಗಳ ಪ್ರಧಾನ ಮಂತ್ರಿಗಳ ಮತ್ತು ಆಹಾರ ಮಂತ್ರಿಗಳ ಸಮ್ಮೇಳನವು ಇದೇ ತಾ. 19 ರಿಂದ, ಡಿಲ್ಲಿಯಲ್ಲಿ ಜರಗಿತು. ಪ್ರಧಾನ ನೆಹರು, ಉಪ ಪ್ರಧಾನಿ ಪಟೇಲ್, ಆಹಾರ ಮಂತ್ರಿ ಮುನ್ಶಿಗಳು ಇದರಲ್ಲಿ ಭಾಗವಹಿಸಿದ್ದರು. ಯುದ್ಧ ವಾತಾವರಣಕ್ಕನುಗುಣವಾದ ಕ್ಷಿಪ್ರತೆ ಮತ್ತು ಂಭಸದಿಂದ ವಿಹಾರ ಧಾನ್ಯಗಳ ಉತ್ಪನ್ನ ಮತ್ತು ಸಂಗ್ರಹ ನಡೆಯತಕ್ಕುದ್ದೆಂದು ಅಲ್ಲಿ ನಿರ್ಣಯವಾಯಿತಲ್ಲದೆ, ರಾಷ್ಟ್ರದ ವಿವಿಧ ಸಂಸ್ಥಾನಗಳಲ್ಲಿ ಸರಿಸಮ ಹಾಗೂ ತಿಖಂಡ ಆಹಾರ ಧೋರಣೆಯಿರುವಂತೆ ಕೇಂದ್ರ ಸರಕಾರದ ದಿಗ್ದರ್ಶನವಿರಬೇಕೆಂದಾಯಿತು.

ಕಾಂಗ್ರೆಸ್ ಚುನಾವಣೆ

ಸೆಪ್ಟೆಂಬರ್ ತಾ. 20 ಮತ್ತು 21 ರಲ್ಲಿ ನಾಸಿಕದಲ್ಲಿ ನೇರಲಿರುವ ಕಾಂಗ್ರೆಸ್ ಮಹಾಧಿನೇಶನದ ಅಧ್ಯಕ್ಷ ಗಾದಿಗೆ, ನಾವು ಕಳದವಾರದಲ್ಲಿ ಊಹಿಸಿದ್ದಂತೆ ಶ್ರೀ ಶಂಕರ ರಾವ್ ದೇವ್, ಶ್ರೀ ಪುರುಷೋತ್ತಮ ದಾಸ ಥಂಡನ್, ಆಚಾರ್ಯ ಕೃಪಲಾನಿ ಈ ಮೂವರೊಳಗೆ ಇದೇ ತಾ. 29ರಲ್ಲಿ ಚುನಾವಣೆ ನಡೆಯಲಿದೆ. ದಾಖಲಾಗಿದ್ದ ನಿಳು ನಾಮಪತ್ರಗಳ ಪೈಕಿ ಮುಂದಾಗಿ ಪಂಡಿತ ನೆಹರು ಆ ಮೇಲೆ ಅನುಕ್ರಮವಾಗಿ ಸೇಠ್ ಗೋವಿಂದದಾಸ್, ಯುಸ್. ಕೆ. ಪಾಟೇಲ್, ಯನ್. ಜಿ ರಂಗ ಉಮೇದಾರಿಕೆ ಹಿಂದೆಗೆದು ಕೊಂಡರು.

ಮುಖ್ಯ ವಿಷಯಗಳು

ಬೊಂಬಾಯಿಯ ಆರಿವೇ ಗಿರಣಿ ಕೆಲಸಗಾರರು ಕಳದ ಒಂದು ವಾರದಿ ಮುಷ್ಕರ ಹೂಡಿ ಗಿರಣಿಗಳೆಲ್ಲಾ ನಿಂ ಹೋಗಿವೆ. ಇದು ಸರಿಸುಮಾರಾದ ಪ್ರೇರಣೆಯು ಮುಷ್ಕರವಿದ್ದು 115,0 ಕೆಲಸಗಾರರ ಪೈಕಿ 7,000 ಮಂದಿ ಕ್ರ ಕೆಲಸಕ್ಕೆ ಹಾಜರಾಗುತ್ತಿದ್ದಾರೆ.

ಕರಾಚಿಯಲ್ಲಿ ಕೋಮಿನ ಮಾತು ನಡಿಸಿ ಫಲಬಾರದೆ ಕಾಶ್ಮೀರ ಮಧ್ಯ ಗಾರ ಸರ್ ಡಿಕ್ಸೆನರು ಇದೇ ತಾ 22 "ಭಾರತಪಾಕಿಸ್ಥಾನಗಳ ನಡುವೆ ಕಾಶ್ಮಿ ಸಂಬಂಧದಲ್ಲಿರುವ ಭಿನ್ನಾಭಿಪ್ರಾಯ ನ್ನು ಂದು ಗೂಡಿಸುವ ಪ್ರಸ್ತಸಂಭ ಕಾಣುವುದಿಲ್ಲ, ನಾನಿನ್ನು ಇಲ್ಲಿದ್ದು ಲವಲ್ಲ" ಎಂಬ ಹೇಳಿಕೆ ಕೊಟ್ ಹೊಂಟೆದ್ದಾರೆ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಮೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಅಮೃತಾಂಜನ

ತಲೆವೇದನೆ, ತಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಶೀತಜಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ,ಸೊಡಿವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD.
ಹುಳುಕಡ್ಡಿ ಮದ್ದುನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ದಿ. ವಿಜಯಾ ಬ್ಯಾಂಕ್, ಲಿಮಿಟೆಡ್ ಕುಂದಾಪುರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಆಸಲು ವಾ ಬಡ್ಡಿ ಸಮೇತ ಬಹಳ ಕಾಲದಿಂದ ಬಾಕಿ ಮಾಡಿಕೊಂಡಿದ್ದು, ಸದ್ರಿಯವರಿಗೆ ಕ್ರಮದಂತೆ ನೋಟೀಸು ವಾ ರಿಜಿಸ್ಟ್ರಿನೋಟೀಸು ಕೊಟ್ಟಾಗ್ಯೂ ಬೇಂಕಿಗೆ ಸಲತಕ್ಕ ಆಸಲು ವಾ ಬಡ್ಡಿಯನ್ನೂ ಇನ್ನೂ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರು ಬೇಂಕಿಗೆ ಸಲತಕ್ಕ ಆಸಲು, ಬಡ್ಡಿ ವಾ ಇತರ ಖರ್ಚುಗಳನ್ನು ಕೂಡಾ ತಾರೀಕು 31 8-'50ರ ವಳಗೆ ಬೇಂಕಿಗೆ ಸಲಾಯಿಸಿ ಲೋನುಗಳನ್ನು ಬಿಡಿಸುವರೆ ತಪ್ಪಿದ್ದಲ್ಲಿ ತಾರೀಕು 9-9-'50ನೇ ಶನಿವಾರ ಹಗಲು ಗಂಟೆ ೨ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತತೋರುವ ಇತರ ಯಾವುದೇ ದಿನಗಳಲ್ಲಿ ಬೇಂಕಿನ ವರಾಂದಲ್ಲಿ ಲೋನಿನ ಆಭರಣಗಳನ್ನು ಬಹಿರಂಗವಾಗಿ ಏಲಂ ಮಾಡೋಣಾಗುವುದು. ತಿಳಿದಿರಲಿ.

ಸಾಲದನಂಬ್ರ	ಹೆಸರು ಮತ್ತು ವಿಳಾಸ.	ಸಾಲದ ಮೊಬಲಗು
270/6-7	ಕೆ. ಸುಂದರರಾಮ ಶೇಟ್,ಅನಂತ ಶೇಟರ ಮಗ, ಚಿನಿವಾರ, ಕುಂದಾಪುರ.	60-0-0
167/7-8	ಮಂಜಯ್ಯ ಶೆಟ್ಟಿ.ಚಂದಯ್ಯ ಶೆಟ್ಟ ಮಗ,ಮಂಡಾಡಿಮಕ್ಕಿ,ಹಲ್ನಾಡುಗ್ರಾಮ.ಪೋಸ್ಟು ಕಂಡ್ಲೂರು	20-0-0
920/7-8	ಕೆ ಕೆಂಚ, ಸೋಮನ ಅಳಿಯ, ಕುಂದಾಪುರ	10-0-0
223/8-9	ಕೆ ಪಾಂಡುರಂಗ ಶ್ಯಾನುಭಾಗ,ವೇಕ್ಸಿನೇಟರ್, ಕುಂದಾಪುರ.	55-0-0
622/8-9	ಕೆ. ನರಶಿಂಹಶೇಟ್, ಪುತ್ತು ಯಾನೆ ನಾರಾಯಣಶೇಟರ ಮಗ, ಚಿನಿವಾರ, ಕುಂದಾಪುರ.	850-0-0
623/8-9	ಕೆ. ನರಶಿಂಹಶೇಟ್, ಪುತ್ತು ಯಾನೆ ನಾರಾಯಣಶೇಟರ ಮಗ. ಚಿನಿವಾರ, ಕುಂದಾಪುರ.	150-0-0
753/8-9	ಪಾಂಡುರಂಗ ಶ್ಯಾನುಭಾಗ, ವೇಕ್ಸಿನೇಟರ್,ಕುಂದಾಪುರ.	110-0-0

ಕುಂದಾಪುರ
21-8-50

K. Nandyappa Shetty,
AGENT, Coondapur.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಮೃತುಸ್ರಾವ ನಿಂತಿತು

'ಆಯುವಾರ್' ಬಿಲ್ಲೆಗಳನು ಉಪಯೋಗಿಸಿದರೆ ಹದಿವಪ್ಪ ಋತುಸ್ರಾವವಾಗುವುದು, ಹಲವಿಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಲಾಗುವುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪ. ಹೆಸ್ಸೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.

ESTD. 1926
CROWN RUBBER STAMP CO.
RUBBER STAMPS ENGRAVERS
BALMATTA ROAD :: MANGALORE, S.K.

Approved form by the Gov. of Mysore
Certificated by the Agent of the Govt of
Clyone & Indian.

ದ ಮ್ಮು ಹೋದರೆ ತಿರುಗಿ ಬಾರದು

ಕಳೆದ ೨೮ ವರ್ಷದಮ್ಮಿಗೆ ಪ್ರಸಿದ್ಧ ಡಾಕ್ಟರರ ಔಷಧದ ಉಪಾಯ

ಪುರೋಹಿತ-ಶ್ವಾಸಹಾರಿ

ಸಿ, ಟಿ, ಗಿಡಿ, ಬಿಂಯ್ಯಾಕಿಂಗರಲ್ಲಿ ೪೫, ೬, ೧೦, ರೂ. ಕಿಮ್ಮತ್ತಿನ ಭಾರತದಲ್ಲಿ ಎಲ್ಲಾ ಕಡೆ ಮಾರಾಟಕ್ಕೆ ಸಿಗುತ್ತದೆ

ಇಜ್ಜನೇ ವೈದ್ಯನವರಿಂದ

ಡಿ. ಪುರೋಹಿತ ಅಂಡ್ ಸನ್ಸ್
ಕೊಲ್ಹಾಪುರ (ಎಸ್ ಎಮ್. ಸಿ.)

ನವಯುಗ ವಾರಪತ್ರಿಕೆಯನ್ನು ತಪ್ಪದೆ ಓದಿರಿ.

ಮಂಗಳೂರು

ನೀರಾವರಿ ಕಾಮಗಾರಿಗಳ ಸಭೆ:- ಅರ್ಥ ವರುಷಕ್ಕೊಮ್ಮೆನೆರೆದು ಬರುವ ನೀರಾವರಿಕಾಮಗಾರಿಗಳ ಸಭೆಯು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀಸಿ ರೇಷಗಿರಿಪ್ರಭುಗಳ ನಿಧನಕ್ಕೆ ಮತ್ತು ಸೂಚಿಸಲಾಯಿತು. ಕಲೆಕ್ಟರರು ಈ ವರೆಗಿನ ಕಾರ್ಯಗಳ ವರದಿ ಒಪ್ಪಿಸಿದರು. ಈ ತನಕ ಮಂಜೂರಾದ ಏಳು ಕಾಮಗಾರಿಗಳಲ್ಲಿ ಮೂರು ಪೂರ್ಣವಾಗಿದೆ. ಉಳಿದ ಹೊಸ ಕಾಮಗಾರಿಗಳ ಚರ್ಚೆಯೂ ನಡೆಯಿತು.

ಪತ್ರಿಕಾ ಪರಿಷತ್ತಿನಲ್ಲಿ ಜಿಲ್ಲಾ ಕಲೆಕ್ಟರರು ಸೂಚಿಸಿದ ಕೆರೆಗಳ ಅಭಿವೃದ್ಧಿ ಯೋಜನೆ:- ಕುಂದಾಪುರ ತಾಲೂಕಿನ ಸಿದ್ಧಾಪುರ ಗ್ರಾಮಕ್ಕೆ ರೂಪಾಯಿ 8265. ಒಕ್ಕಾಡಿ ಗ್ರಾಮಕ್ಕೆ ರೂ. 675 ಮತ್ತು ರೂ 810. ಪಾಂಡೇರ್ ಗ್ರಾಮಕ್ಕೆ ರೂ 720. ಈವರೆಗಿನ ಒಟ್ಟು 67 ಕೆಲಸಗಳಿಗೆ ಒಟ್ಟು ರೂ. 1,17,250. ಆವರೆ, ಕಂಟ್ರಾಕ್ಟರುಗಳ ಅಭಾವದಿಂದ ಈ ಕೆಲಸಗಳು ಕುಂಟುತ್ತಿವೆ.

ಫಲಿಮಾರು ಆಜಕಬ್ಬಿಗೆ ಸರಕಾರವು ಎರಡು ಲಕ್ಷ ರೂಪಾಯಿ ಮಂಜೂರುಮಾಡಿದೆ ಇದರಿಂದ 700 ಎಕ್ರೆ ಭೂಮಿಗೆ ನೀರು ಒದಗಬಹುದು. ಬಾವಿ ಯೋಜನೆಯಂತೆ ಈಗರೇ ರೂ.17,160 ರೈತರಿಗೆ ಹಂಚಲಾಗಿದೆ. ರೈತರಿಗೆ ರಸಾಯನಿಕ ಗೊಬ್ಬರ ಕೂಡಾ ಹಂಚಲಾಗಿದೆ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. 39/1950

ಕಮಲ, V. ಗೋವಿಂದ ಕೃಷ್ಣ ಶೆಟ್ಟಿಯ ವಿಧವೆ, ಪ್ರಾಯ ಸುಮಾರು 30 ವರ್ಷ, ನಿಷ್ಠ್ವೈಸ್ ಸಂಚಾಯತ್ ಬೋರ್ಡು, ಪುತ್ತೂರು, ಪುತ್ತೂರು ಕಸ್ಬೆಯ ನೆಲ್ಲಿಕಟ್ಟೆ ಎಂಬಲ್ಲಿ.

ಅರ್ಜಿದಾರಳು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದ್ರೆ:

ಪುತ್ತೂರು ತಾಲ್ಲೂ ನಿಟ್ಟೆ ಗ್ರಾಮದ ವೈ ತ ವಿ. ಗೋಪಾಲಕೃಷ್ಣ ಶೆಟ್ಟಿಯು ದಿ. ಯು ನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಮದ್ರಾಸಿನ ಪೊಲೀಸಿ ನಂಬ್ರ 1332 ನೆಗೆ ಇರುವ ರೂಪ್ಯಾ 500 ಪ ಪ್ರೊಫಿಟ್ಸ್ ಸಮೇತ ಪಡಕೊಳ್ಳುವಲೇ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತ ಅತನ ವಾರಿಸದಾರಳಾದ ಮೇಲ್ಕಂಡ ಅರ್ಜಿದಾರಳು ಮೇಲಿನ ಅರ್ಜಿ ದಾಕಲು ಮಾಡಿರುವುದಾಳೆ ಸದ್ರಿ ಅರ್ಜಿಯು ತಾ. 7-9-50ನೇ ಥಾಜ್ಯಾತಾ ಬಗ್ಗೆ ವ್ಯಾಪೆ ಇರುವುದರಿಂದ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವಲ್ಲಿ ಯಾ ರಿಗಾದ್ರು ಆಕ್ಷೇಪಣ ಇದ್ದರೆ ಮೇಲ್ಕಂಡ ಕೋರ್ಟಿನಲ್ಲಿ ವ್ಯಾಪೆ ದಿವ್ಸ ಬೆಳಿಗ್ಗೆ 11 ಗಂಟೆಗೆ ಹಾಜ್ಯಾಗಿ ಉದಾಹರಿಸಿಕೊಳ್ಳತಕ್ಕದ್ದೆಂತ ಕೋರ್ಟ್ ಹುಕುಂ ಮೇರೆಗೆ ಈ ಮೂಲಕ ತಿಳಿಸೋಣಾಗಿದೆ.

K. N. Rai,
Advocate for Petitioner.

ಪುತ್ತೂರು, 18-8-50

ನೋಟೀಸು

ಮೂಲ್ಕಿ ಆಸ್ಪತ್ರಿ ಬಡ ಫಂಡಿನ ಮೆಂಬರರ ವರ್ಷಾವಧಿ ಮಹಾಸಭೆಯು ಇದೇ ತಾ. 27ನೆಯ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಆಸ್ಪತ್ರಿ ಕಟ್ಟಿದದಲ್ಲಿ ಜರಗುವದು. ಎಲ್ಲರೂ ಬಂದು ಸಹಕರಿಸುವಂತೆ ವಿನಂತಿ ಇದೆ.

ಬಳಲೋಗಿಗಳ ಕಟ್ಟಿದವು ಪೂರ್ತಿಯಾಗುತ್ತಿರುವೆಯೆಂದು ತಿಳಿಸಲು ಸಂತೋಷ ಪಡುವ.

ಎಮ್. ಆರ್. ಪೂಂಜ,
ಅಧ್ಯಕ್ಷ.

ಮೂಲ್ಕಿ ಆಸ್ಪತ್ರಿ ಬಡರೋಗಿ ಫಂಡ್.
ಮೂಲ್ಕಿ, 18-8-1950 ೮

ದ. ಕ. ಜಿ ಲ್ಲಾ ವೈದ್ಯಸಂಘದ ಆಡಳಿತ ಮಂಡಳಿಯು ಸಭೆಯಿಂ ತಾ ತ್ಕಾಲಿಕ ಕೂಡ್ಡಿ ಸಂಘದ ವ್ಯವಸ್ಥಾಪಕರೊಬ್ಬರು ವೈದ್ಯಕೀಯ ವಿಷಯವಲ್ಲದ ಕುಂಬ ಬಾಬಿಗೆದರೂ ಆದ ಶ್ರೀ ಪಿ. ವೆಂಕಟ್ರಮಣ ಭಟ್ಟರ ಆಕಾಲ ನಿಧನಕ್ಕೂ ಮತ್ತು ಸ. ಬೋರ್ಡಿನ ಪಶ್ಚಿಮ ವಲಯ ಸದಸ್ಯರಾಗಿದ್ದ ಶ್ರೀ ಎನ್. ಕೆ. ವೈದ್ಯರ ನಿಧನಕ್ಕೂ ಶೋಕವನ್ನು ಸೂಚಿಸಿ, ಮೃತರ ಆತ್ಮಗಳಿಗೆ ಚಿರಶಾಂತಿಯನ್ನು ಕೋರಲಾಯಿತು.

ಸ್ವಾತಂತ್ರ್ಯ ದಿನಾಚರಣೆಯು ತಾ 15ರಲ್ಲಿ ಉತ್ಸಾಹದಿಂದ ಆಚರಿಸಲ್ಪಟ್ಟಿತು. ಆದಿನ ಬೆಳಿಗ್ಗೆ ಪ್ರಭಾತ ಫೇರಿಯು ನಗರದ ಪ್ರಮುಖ ಸ್ಥಳಗಳಲ್ಲಿ ನಡೆದು. ಎಂಟು ತಾಸಿಗೆ ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಲೆಕ್ಟರರಿಂದ ಧ್ವಜಾರೋಹಣವಾಯಿತು. ಶಾಲಾ ಕಾಲೇಜುಗಳಲ್ಲೂ ಧ್ವಜ ವಂದನೆಗಳಾದುವು. ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆರು ಧ್ವಜಾರೋಹಣವನ್ನು ನಾಂಗಗೊಳಿಸಿದರು. ಸಾರ್ವಜನಿಕ ಸಭೆಯು ಕೇಂದ್ರ ಮೈದಾನದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷೆ ಶ್ರೀ. ಬಿ. ನಂಜಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ. ನೆಟ್ಟಿ, ಎಮ್. ಗಿರಿಯಪ್ಪ, ಕೆ. ರಾಮಕೃಷ್ಣ ನಾಯಡ, ಎನ್. ಎಸ್. ಕಿಲ್ಲೆ, ಸುಬ್ಬಣ್ಣ ಶೆಟ್ಟಿ ಮೊದಲಾದವರು ಮಾತನಾಡುತ್ತಾ ಜನರು ಕಾಂಗ್ರೆಸ್ ಸರಕಾರವನ್ನು ಟೀಕಿಸುವಾಗ ತಮ್ಮನ್ನು ಮರೆಯುವುದು ಉಚಿತವಲ್ಲವೆಂದೂ ನೌಕರಶಾಹಿಯು ಇನ್ನೂ ರಾಷ್ಟ್ರೀಯ ಭಾವನೆಯಿಂದ ತುಂಬಿಲ್ಲವೆಂದೂ, ಕಳ್ಳಸಂತೆ ಮಾಡುವವರು ಜನಸಂಕಷ್ಟವನ್ನು ಇತರರು ಬದುಕುವಂತಾದರೂ ವರ್ತಿಸಬೇಕೆಂದೂ, ನುಡಿದ್ರಾಸು ಸರಕಾರವು ರಾಷ್ಟ್ರಭಾಷೆಯನ್ನು ಕಡೆಗಣಿಸುತ್ತಿರುವುದು ಯುಕ್ತವಲ್ಲವೆಂದೂ ಹೇಳಿದರು. ಸಮಾರಂಭದಲ್ಲಿ ಸ್ವಾತಂತ್ರ್ಯೋತ್ಸವದ ಸಂಬಂಧವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆಲ್ಲಾಗಾಗಿ ವಿವಿಧ ಸ್ಪರ್ಧಾತ್ಮಕ ವಿಷಯಗಳಿಗೆ ಸ್ಥಿ ಗೆದ್ದವರಿಗೆ ಬಹುಮಾನ ವಿತರಣೆಯಾಯಿತು.

ಡೈಲ್ಯ ರಿಜನಲ್ ಎಜ್ಯುಕೇಶನಲ್ ಕಾನ್ಫರೆನ್ಸ್ ಯು ಸಭೆಯು ತಾ. 17ನೇ ಗುರುವಾರ ಬೆಳಿಗ್ಗೆ ವಾಚನಲ್ಲಿ ಸಂಘದ ಕಚೇರಿಯಲ್ಲಿ ಜರಗಿದಾಗ ರೈತ್ಯಕಡೆಯಿಂದ ಪ್ರತಿನಿಧಿಯಾಗಿ ಬಂದಿರುವ ಟ್ರೈಫಿಕ್ ಅಸಿಸ್ಟಾಂಟ್ ಸಂಪರಿಟೆಂಡೆಂಟ್, ಕಲ್ಲಿಕೋಟೆ ಆವರು ರೈತ್ಯ ಜೋರ್ಡಿನ ಮುಂದಿರುವ ಹಲವಾರು ಕೇಳ್ಕೆಗೆಳಿಗೆ ಸಮರ್ಪಕವಾದ ಉತ್ತರವಿತ್ತರು.

ಕರ್ನಾಟಕ ಸಂಘದ ಉದ್ಘಾಟನಾ: ಎಸ್. ಆರ್. ಎಸ್. ಹೋಮಿನ ಕರ್ನಾಟಕ ಸಂಘದ ಉದ್ಘಾಟನಾ ಸಮಾರಂಭವು ಇದೇ ತಾ 13ರಲ್ಲಾ ನಡಿಕೆರೆಯ ಸೆಶನ್ಸ್ ಜಡ್ಜ್ ಶ್ರೀ ಮುದ್ದಪ್ಪನವರಿಂದ ಜರಗಿಸಲ್ಪಟ್ಟಿತು. ನಡಿಕೆರೆಯ ಮುನ್ಸಿಫ್ ಮೆಜಿಸ್ಟ್ರೇಟ್ ಶ್ರೀ ಸುಬ್ಬಯ್ಯನವರು ಕರ್ನಾಟಕ ಪ್ರಾಂತಂಜನೆ ವಿಷಯ ಭಾಷಣವಿತ್ತರು. ಸಂಘದ ಕಾರ್ಯದರ್ಶಿಯಾದ ಶ್ರೀ. ಸುಂದರ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಧ್ವಜಾರೋಹಣ:- ಮಂಗಳೂರಿನ ಎಡಿಶನಲ್ ಸೆಶನ್ಸ್ ಜಡ್ಜರಾದ ಶ್ರೀ ಸದಾಶಿವಯ್ಯನವರು ತಾ 15ರಲ್ಲಿ ಎಸ್. ಆರ್. ಎಸ್- ಹೋಮಿನಲ್ಲಿ ಧ್ವಜಾರೋಹಣ ಸಮಾರಂಭ ನೆರವೇರಿಸಿದರು. ಭವನದ ಸುಪರಿಂಟೆಂಡೆಂಟ್ ಶ್ರೀ ಬಿ. ಬಿ. ನೆಟ್ಟಿರು ಕಾಲೋಚಿತ ಭಾಷಣವಿತ್ತರು.

ಲೇವಾದೇವಿ ರದ್ದತಿ:- ದ. ಕ. ಜಿಲ್ಲೆಯಲ್ಲಿ ಈತನಕ ಮೊಗವೀರ ಬಂಧುಗಳು ಅಕ್ಕಿಯನ್ನ ಭತ್ತವನ್ನು ಕೊಂಡುಕೊಂಡು ಆ ಬಗ್ಗೆ ಮಿತಾನುಗಳನ್ನು ನೂರುವಂಯಾಯತಿ ಪಡೆದಿದ್ದರು. ಆದರೆ ಈ ಲೇವಾದೇವಿ ವಿಯಾಯತಿಯನ್ನು ಜಿಲ್ಲಾಕಲೆಕ್ಟರರು ರದ್ದು ಮಾಡಿರುವರು. ಇನ್ನುಮುಂದೆ ಅಂತಹ ನಿದರ್ಶನಗಳು ತೋರಿಬಂದಲ್ಲಿ ಆಹಾರ ಧಾನ್ಯ ನಿಯಂತ್ರಣ ಕಾನೂನಿನಂತೆ ತಕ್ಕ ಪ್ರಾಯಶ್ಚಿತ್ತಕ್ಕೊಳಗಾಗಬೇಕಾಗುವುದು

ತೀರ್ಪು ಜಿಲ್ಲಾ ಕಲೆಕ್ಟರರು ಜಾಹೀರು ಪಡಿಸಬೇಕಿದೆ.

ಚಕ್ಷಿಣ ಕನ್ನಡ

ಹೆಜವಮಾಜಿ ಕೋಡಿ— ಸ್ಥಳೀಯ ಗವರ್ನಮೆಂಟ್ ಫಿಶ್ಕರೀಸ್ ಹಾ. ಎ. ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಬಾರಕೂರು ಯೋಬಳಿಯ ಅಧ್ಯಕ್ಷರಾಗೂ ದ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಉಪಾಧ್ಯಕ್ಷರೂ ಆದ ಶ್ರೀ ಯಜ್ಞ. ದುಗ್ಗಪ್ಪ ನಾರಾಯಣರವರ ಅಧ್ಯಕ್ಷತೆಯಲ್ಲಿ ಜರಗಿತು.

ಪೆರ್ಡೂರು— ದಕ್ಷಿಣ ಕನ್ನಡ ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿಯ ಉಡುಪಿ ಬ್ರಾಂಚಿನ ಸಭೆಯನ್ನು ಇದೇ ಬರುವ 3-9-1950ನೇ ಆದಿತ್ಯವಾರ ಪೂರ್ವಾಹ್ನ ಘಂಟೆ 9ಕ್ಕೆ ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಸ್ಥಾನದ ಗೋಪುರದಲ್ಲಿ ಜರಗಿಸುವುದಾಗಿ ನಿಶ್ಚಯಿಸಿರುತ್ತದೆ. ಆ ಪ್ರಯುಕ್ತ ಸರ್ವ ಸ್ವಜಾತಿ ಬಂಧುಗಳೂ ನಿಶ್ಚಿತ ಸಮಯಕ್ಕೆ ಚಿತ್ತೈಸಬೇಕಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಉಜ್ರೆಯಲ್ಲಿ ಬೇಸಿಕ್ ಟ್ರೈನಿಂಗ್ ಶಾಲೆಯು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ, ಎಂ. ಎಲ್. ಸಿ. ಯವರಿಂದ ಶ್ರೀ ಸಿದ್ಧವನ ಗುರುಕುಲದಲ್ಲಿ ತಾ 29-8-50ರಲ್ಲಿ ತೆರೆಯಲ್ಪಡುವುದು. ಈ ಜೂನಿಯರ್ ಬೇಸಿಕ್ ಟ್ರೈನಿಂಗ್ ಶಾಲೆಗೆ ಸೇರಲಿಚ್ಛಿಸುವವರು ತಾ 28ನೇ ಸಂಜೆ ಉಜ್ರೆ ಗುರುಕುಲದಲ್ಲಿ ಹಾಜರಿರಬೇಕಾಗಿದೆ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಸ್ಮಾಲ್‌ಕಾಸ್ ನಂಬ್ರ 244/1950

ತಾಳ್ತಮನೆ ಕೋಚಪ್ಪ ಶೆ ವಾದಿ.
ಕಾಂಞಂಡ್ಡಿ ರೈ, ಸುಳಿಯಾಳ ರಾಮಪ್ಪ ರೈಗಳ ಆಳಿಯ, ಪುತ್ತೂರು ತಾಲೂಕು ನಿಡ್ಪಳ್ಳಿ ಗ್ರಾಮ. ಪ್ರತಿವಾದಿರು.

ಪ್ರತಿವಾದಿಯು ದಾವಾ ಆವಾರ್ಡ ಹಕ್ಕಿನ ಪರಾಭಾರೆ ಹೊಂದಿದ ಪ್ರಕಾರ ಆತನಿಂದ ವಾದಿಗೆ ಬಹು ದಾವಾ ಆವಾರ್ಡದ ಶರಹ ಪ್ರಕಾರದೆ ಎರಡು ವರ್ಷಗಳ ರೂ. 1251-3-0ಕ್ಕೆ ವಾದಿಯು ದಾವಾ ಮಾಡಿ ಆದರ ನೋಟೀಸಿನ ಕನ್ಸಿ ವ್ಯಾದೆ ತಾ. 6-9-50ಕ್ಕೆ ಇಟ್ಟಿರುತ್ತದೆ.ಆದ್ರಿಂದ ಪ್ರತಿವಾದಿಯು ಆವ್ಯಾದೆ ದಿನ ಈ ಕೋರ್ಟ್ ಮುಂದೆ 11 ಘಂಟೆಗೆ ತಪ್ಪದೆ ಹಾಜ್ಯಾಗಿ ವಾದಾದರೂ ಆಕ್ಷೇಪಗಳು ಹೇಳುವದಿದ್ದರೆ ಸ್ವತಹ ಯಾ ವಕೀಲರು ಮುಖಾಂತ್ರ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಆತನನ್ನು ಶಿಕ್ಷಾಯ ಎಂತ ಮಾಡಿ ಈ ದಾವೆಯ ಮುಂದಿನ ತನ್ಸಿಯಿಂದ ತೀರ್ಮಾನಿಸೋಣಾಕ್ಕಾಗಿದೆ. ಎಂತ ಈ ಕೋರ್ಟಿನವರ ಹುಕುಂ ಮೇರೆಗೆ ಈ ನೋಟೀಸು ಮಾಡಿಸಿಯಿದೆ.

B. Ramachandra Rao, M A.B L.
Pleader for Plaintiff.

Puttur, S.K. Date 14-8-1950

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವೂ ದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD

Highly perfumed and medicated, worth using daily by one and all keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾಮೃತ
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ವಾಕಿಸ್ವರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಬೇಕಾಗಿದ್ದಾರೆ

ಬೆಳ್ಳೆ ಚರ್ಚ್ ಹಾ. ಎ. ಶಾಲೆಗೆ-
ಇಬ್ಬರು ಸೆಕೆಂಡರಿ ಗ್ರೇಡು ತರ ಬೇತಾದ ಉಪಾಧ್ಯಾಯರು ಮತ್ತು ಒಬ್ಬರು ಕನ್ನಡ ಪಂಡಿತರು.

ಕೆಳಗಿನ ವಿಳಾಸಕ್ಕೆ ಬರೆಯಿರಿ:

ಕರೆಸ್ಪೊಂಡೆಂಟ್,
ಬೆಳ್ಳೆ ಚರ್ಚ್ ಹಾ. ಎ. ಶಾಲೆ,
ಮೂಡುಬೆಳ್ಳೆ ಪೋಸ್ಟು,
ದ. ಕನ್ನಡ.

ದಕ್ಷಿಣ ಕನ್ನಡ

ಪುತ್ತೂರು:- ಬೆಳ್ತಂಗಡಿ, ಕೆಲ್ಲೂರು ಬಂಗಾಡಿ ರಸ್ತೆಯು ಕಳಪೆ ಫಲ್ಪವಾಯಿಲ್ಲೂಮ್ಮೆ ದುರಸ್ತಿಯಾಗಿದ್ದರೂ ಈಗ ಪೂರ್ಣ ಹಾಳಾಗಿ, ಕುಳಿಬಿದ್ದು ಸಂಚಾರಕ್ಕೆ ತೀರಾ ಅಸಾಧ್ಯವಾಗಿದೆ. ಕಳಪೆ ಬಾಯಿಯ ದುರಸ್ತಿಯು ಅಪೂರ್ಣವಿದ್ದುದರಿಂದಲೇ ಇಂತಹ ದುಸ್ಥಿತಿಯೊದಗಿತು, ಇದೇ ರಸ್ತೆಗೆ ಹೊಂದಿಕೆಯಾಗಿರುವ 5ನೇ ಮೈಲುಕಲ್ಲಿನಿಂದ ತಿರುಗುವ ನಾಪೂರು ಬಂಗ್ಲೆರಸ್ತೆಯು ದುರಸ್ತಿಯಾಗದೆ ಏಳೆಂಟು ವರುಷಗಳಿಂದಿ ಅದಂತೂ ಸಂಪೂರ್ಣ ಕೆಟ್ಟು ಹೋಗಿದೆ. ಈ ಕಡೆಗೆ ಜಿಲ್ಲಾ ಬೋರ್ಡಿನವರು ಕೂಡಲೇ ಲಕ್ಷ್ಯಕೊಟ್ಟು ಅಗತ್ಯ ವುಳ್ಳ ಕಾರ್ಯ ಕೈಕೊಳ್ಳಬೇಕಾಗಿ ಸಾರ್ವಜನಿಕರ ಪರವಾಗಿ ಶ್ರೀ ಬಿ. ನಾರಾಯಣ ಶೇಕರು ವಿಜ್ಞಾಪಿಸಿಕೊಳ್ಳುತ್ತಾರೆ.

ವಾರ್ಷಿಕ ಮಹಾ ಸಭೆ:- ಉಡುಪಿ ಕಲಾವ್ಯಂದದ ಮಹಾಸಭೆಯು ಇದೇ ತಾ. 13೦ಲ್ಲಾ ಶ್ರೀ ಪಿ. ಎಸ್. ಶ್ರೀಧರಮಂತ್ರಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಚಾಲ್ತಿ ವರುಷಕ್ಕೆ ಕಾರ್ಯಕಾರಿ ಮಂಡಲಿಯ ಚುನಾವಣೆ ನಡೆದು ಶ್ರೀಗಳಾದ ಕೆ. ಯಾಧವ ಶರಣಾಯ್, ವಾದಿರಾಜ ಆಚಾರ್ಯ, ಹರಿದಾಸ ಉಪಾಧ್ಯಾಯ, ಜನಾರ್ಧನ ಆಚಾರ್ಯ, ಸದಾಶಿವ ಐತಾಳರು ಕ್ರಮವಾಗಿ ಅಧ್ಯಕ್ಷ ಉಪಾಧ್ಯಕ್ಷ, ಕಾರ್ಯದರ್ಶಿ, ಜತೆಕಾಯ. ದರ್ಶಿ,ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು 'ಕಾವ ಮತ್ತು ಜಾಣ' ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಕಲಾವ್ಯಂದದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ಕಳದೆರಡು ವರುಷಗಳಿಂದ ಲೂ ಕೊಡದಿದ್ದುಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ವರ್ತನೆಯನ್ನು ಖಂಡಿಸಲಾಯಿತು.

ಬೇಕಲ್ಕಾಡಿ—ತಾ15೦ರಂದು ಶ್ರೀ ಮಜಿ ಶ ಸಾವುಗರಿಂದ ಸಂಪೂರ್ಣ ರಾಮಾಯಣ ಪರಿಕಥೆ ಜರಗುತ್ತಿದೆ.

ಆರು ಬಸ್ಸ್‌ಆಕ್ಸಿ:- ತಾ. 13೦ರಿಂದ ಆಕ್ಸಿ ರೇಶನ್ ಮಿತಿಯನ್ನು ಆರು ಔನ್ಸಿಗೆ ಇಳಿಸಲಾಗಿದೆ. ಬಾಕಿ 6 ಔನ್ಸ್‌ಗೋಧಿ ಅಥವಾ ಜೋಳದ ರೂಪದಲ್ಲಿ ವಿತರಣೆಯಾಗುತ್ತಿರುವುದು. ಹಲ್ಲಿವಲಯಗಳಲ್ಲಿ ಆಕ್ಕಿಯಿಲ್ಲವಾಗಿ ದೂರು ಕೇಳಿ ಬರುತ್ತಿದೆ. ಕೆಲವೆಡೆ 'ಸೊಜಂಕು' ಸೊಪ್ಪನ್ನು ಬೇಯಿಸಿತಿನ್ನುವ ದೈನ್ಯಾವಂತಗಳೂ ಇಲ್ಲವೆಂದಲ್ಲ

ಬೇಳೂರು—ತಾ. 15-8-50ರಲ್ಲು ಸ್ವಾತಂತ್ರ್ಯ ದಿನಾಚರಣೆಯು ಇಲ್ಲಿಯು ಬೋರ್ಡು ಶಾಲೆಯಲ್ಲಿ ಶ್ರೀ ಎನ್. ಎಸ್. ಬೇಳೂರ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ವಲಯದಲ್ಲಿ ಸನಿಗಳನ್ನು ನಡಸಲಾಯಿತು. ನೇದಿವರಿಗೆ ಸಿಹಿಕಿಂಡಿ ಹಂಚಲಾಯಿತು.

ಮಡಂತ್ಯಾರು—ಇಲ್ಲಿಯು ಹಾಯರ್ ಎಲಿಮೆಂಟರಿ ಶಾಲಾ ವಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಇಲ್ಲಿಯ ಸಹಾಯಕ ಗುರುಗಳ ಅಧ್ಯಕ್ಷತೆಯಲ್ಲಿ ಜರಗಿ ಹಲವು ಮಹಪ್ರೀಯರ ಭಾಷಣ, ಸಿಹಿಕಿಂಡಿ ವಿತರಣೆ ಮೊದಲಾದ ಕಾರ್ಯಕ್ರಮಗಳಾದುವು.

ಪೆರ್ಡೂರು— 'ಸ್ವಾತಂತ್ರ್ಯ ದಿನಾಚರಣೆ' ಸಂಬಂಧ ಬೆಳಗ್ಗೆ ಶಾಲಾ ಜಾಲಕರ ಮೆರವಣಿಗೆಯಾದನಂತರ, A P. T. ಶಾಲೆಯಲ್ಲಿ ಶ್ರೀ ಮಂಜುನಾಥ ಆಚಾರ್ಯರೂ, B. E. M, ಶಾಲೆಯಲ್ಲಿ ಶ್ರೀ A. ಕೃಷ್ಣಯ್ಯ ಹೆಗ್ಗಡೆಯವರೂ, ದೇವಸ್ಥಾನದ ಮುಂಭಾಗದಲ್ಲಿ ಶ್ರೀ K. ನಾರಾಯಣಸೆಟ್ಟಿಯವರೂ ಧ್ವಜವನ್ನೆರಸಿದರು. ಶ್ರೀ A. K. ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಭೆಜರಗಿ, ಶ್ರೀ A. P. ಕಲ್ಯಾಣಿಯವರೂ, ಅಧ್ಯಕ್ಷರೂ ಭಾಷಣವಿತ್ತರು.

ಕೆಂಜೂರು ಬೈದೆಬೆಟ್ಟು—ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಜೊಸೂರು ಕೃಷ್ಣ ಕಾಮಕರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೆಂಜೂರು ಮಹಾಬಲಶೆಟ್ರಿ ಭಾಷಣವಾಯಿತು.

ಬೆಳ್ಳೆ—ಸ್ವಾತಂತ್ರ್ಯದಿನ ತಾ.15ರಲ್ಲಿ ಪ್ರಾತಃಕಾಲ ಗ್ರಾಮಮೆರವಣಿಗೆ ನಡೆದು ಬೋರ್ಡು ಶಾಲಾ ಮುಂಭಾಗದಲ್ಲಿ ಶ್ಯಾನುಭಾಗ ಶ್ರೀ ನರಸಿಂಹ ಮಂಜರಿಂದ ಧ್ವಜಾರೋಹಣ, ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ಕೆ. ಗೋಪಾಲಕೃಷ್ಣ ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಶ್ರೀಗಳಾದ ಬಿ. ಲಕ್ಷ್ಮೀನಾರಾಯಣ ರಾವ್, ಬಿ. ಕೃಷ್ಣರಾಯ ಶೆಣೈ, ಲಕ್ಷ್ಮಿನಾರಾಯಣ ಭಟ್ಟ, ಬಿ. ರಾಜಗೋಪಾಲಾಚಾರ್ಯರ ಭಾಷಣ, ಮುಖ್ಯೋಪಾಧ್ಯಾಯ ಶ್ರೀ ಎಸ್. ಕೃಷ್ಣಯ್ಯ ಹೆಗ್ಡೆಯರ ಧನ್ಯವಾದಗಳಾದುವು. ಸಿಹಿಕಿಂಡಿ ವಿತರಣೆ ನಡೆಯಿತು.

ಕುಂಜೂರು—ಕೊಲೆ ಮೊಕದ್ದಮೆಯೊಂದರಲ್ಲಿ ಸೆಶನ್ಸ್‌ಕೋರ್ಟಿನಲ್ಲಿ ಮೊದಲಿನವರಿಗೆ 4 ವರುಷ ಕಠಿಣಸಜೆ ಮತ್ತು ಉಳಿದ ನಾಲ್ವರಿಗೆ ತಲಾ 3 ವರುಷಗಳಂತೆ ಕಠಿಣ ಸಜೆ ವಿಧಿಸಲ್ಪಟ್ಟಿದ್ದ ಶ್ರೀಗಳಾದ ಭಟ್ಟಾಕಂಕರಕಟ್ಟೆ, ಜಗನ್ನಾಥಶೆಟ್ಟಿ, ವೇಣುಗೋಪಾಲ ಹೆಗ್ಡೆ, ಹೇಮಚಂದ್ರ ಹೆಗ್ಡೆ, ಉಮೇಶ ಹೆಗ್ಡೆ ಇವರ ಪರವಾಗಿ ಮದ್ರಾಸ್ ಹೈಕೋರ್ಟಿನಲ್ಲಿ ನಡೆದ ಅಪ್ಪೀಲಿನಿಂದ ಇವರೆಲ್ಲರೂ ಬಿಡುಗಡೆಹೊಂದಿದ್ದಾರೆಂದು ತಿಳಿದುಬಂದಿದೆ. ಮೊದಲನೆಯವರು ಇದುವರೆಗನುಭವಿಸಿದ್ದ ಶಿಕ್ಷೆಯನ್ನಷ್ಟೇ ಕಾಯಂಗೊಳಿಸಿ, ಉಳಿದ ನಾಲ್ವರು ನರಪರಾಧಿಗಳೆಂದು ತೀರ್ಮಾನವಾಗಿದೆ.

ಕುದ್ರುಕೆರೆ—ತಾ. 15ನೇ ಮುಂಜಾನೆ ಬೋರ್ಡು ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರಿಂದ ಧ್ವಜಾರೋಹಣ, ಆಮೇಲೆ ಪ್ರಭಾತ ಮೆರವಣಿಗೆ, ಶಾಲೆಯಲ್ಲಿ ಶ್ರೀ ಆನಂದಸೆಟ್ಟಿ, ಕದಿಯೂರರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಅಲ್ಲಿಯೇ 'ಜಾಳಾಜಿ ಕಬ್‌ಪೇಕ' ಎಂಬ ಮಂದಿಕ ಸ್ಥಾಪನೆಯಾಗಿ ಅದರ ಚಾಲಕರು ಆರಿಸಲ್ಪಟ್ಟರು. ಸಿಹಿತಿಂಡಿ ವಿತರಣೆಯಾಯಿತು.

ಅಲಿವೂರು—ತಾ. 15ನೇ ಪೂರ್ವಾಹ್ನ ಪಂಚಾಯತ ಬೋರ್ಡು ಆಫೀಸಿನಲ್ಲಿ ಧ್ವಜವಂದನೆ, ಮಧ್ಯಾಹ್ನ ಗ್ರಾಮಮೆರವಣಿಗೆಯಾಗಿ ಶ್ರೀ ಎ. ಬದರಿನಾರಾಯಣಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀಗಳಾದ ರಾಮಶೆಟ್ಟಿ, ಸರ್ವೋತ್ತಮ ಶೆಟ್ಟಿ, ಡಾ। ಪಿ. ರಾಮಚಂದ್ರರಾವ್ ಇವರ ಭಾಷಣ, ಶಾಲಾ ಮೆನೇಜರರ ಧನ್ಯವಾದ ಇತ್ಯಾದಿಗಳಾದುವು. ಶ್ರೀ ಎ. ಸರ್ವೋತ್ತಮ ಕಿಣಿಯರಿಂದ ಲಾಡು ಮತ್ತು ಶ್ರೀಗಳಾದ ಎ. ರಾಮಪ್ಪಯ್ಯ, ಎ. ಬಾಬು ಸಹೋದರರಿಂದ ಬಾಳೆಹಣ್ಣು ಹಂಚಲ್ಪಟ್ಟುವು. ಪಂಚಾಯತ ಬೋರ್ಡು ವ್ಯಯಿಸಿದುದು 10 ರೂ. ಎಂದು ತಳಿಸಲಾಗಿದೆ.

ಕುಂಬಳೆ—ತಾ.15ರಲ್ಲು ಸ್ವಾತಂತ್ರ್ಯ ದಿನೋತ್ಸವದ ಸಲುವಾಗಿ ಪಂಚಾಯತಬೋರ್ಡು ಆಫೀಸಿನಲ್ಲಿ ಶ್ರೀ ಇ. ಚಿಕ್ಕಪ್ಪ ಭಂಡಾರಿಗಳು ರಾಷ್ಟ್ರ ಧ್ವಜಾರೋಹಣ ನಡೆಸಿದರು. ಬೋರ್ಡು ಶಾಲೆಯಲ್ಲಿ ಶ್ರೀ ಶಿವರಾಮ ಗೌಡರು ರಾಷ್ಟ್ರಪತಾಕೆಯನ್ನು ಹಾರಿಸಿದರು. ಮಕ್ಕಳಿಗೆ ಸಿಹಿಹಂಚಲಾಯಿತು.

ಕುಂದಾಪುರ—ಇಲ್ಲಿ ಕಳದ 3 ವಾರಗಳಿಂದ ದೈನಂದಿನ ರೇಶನ್ ಹಂಚುತಿದ್ದರೇ ಹೊರತು ವಾರದ ರೇಶನ್ನನ್ನು ಹಂಚುವರೆ ಆಹಾರಧಾನ್ಯದ ಅಭಾವದಿಂದ ಆಗುತ್ತಿರಲಿಲ್ಲ. ಈ ವಾರಗಳಲ್ಲಿ ಕೆಲವು ದಿನ ಬರೇ ಜೋಳ ಮತ್ತು ಗೋದಿ ಹಂಚಿದ್ದುಂಟು. ಇನ್ನು ಕೆಲವು ದಿನ ರೇಶನ್ನೇ ಕೊಡದಿದ್ದುದು ಸಹಾ ಉಂಟು.

ಬೆಳ್ಳಾರೆ—ಹೈಸ್ಕೂಲ್ ಕಮಿಟಿ ಸಭೆಯು ಇದೇ ತಾ.6ರಲ್ಲು ಶ್ರೀ ಬಿ. ನಾರಾಯಣ ಶೇಕರ ಅಧ್ಯಕ್ಷತೆಯಲ್ಲಿ ಜರಗಿ, ಉಪಸಮಿತಿಯ ರಚನೆಯಾಗಿ ಹಣಸಂಗ್ರಹ ಹಾಗೂ ಕಟ್ಟಡವನ್ನು ರಭಸದಿಂದ ಪ್ರಾರಂಭಿಸುವ ಕಾರ್ಯಕ್ರಮಗಳು ನಿಶ್ಚಯಿಸಲ್ಪಟ್ಟವ.

ಪೆರ್ಕಾಳ—ಸ್ವಾತಂತ್ರ್ಯದಿನ ಆಗೋಸ್ತು ತಾ.15ರಂದು ಇಲ್ಲಿ ಮುಂಜಾನೆ ಶಾಲಾ ಮಕ್ಕಳಿಂದ ಧ್ವಜವಂದನೆ, ಡಾ। ಗಿರಿಧರರಾಯರಿಂದ ಧ್ವಜಾರೋಹಣ ನಡೆಯಿತು. ಅಪರಾಹ್ನ ಶ್ರೀ ರಘುನಾಥ ಹೆಗ್ಡೆ, ಎಮ್. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆನೇರಿ ಡಾ। ಗಿರಿಧರರಾವ್, ಡಾ। ಕೆ ಪ್ಪಾಯ, ಡಾ। ಎಸ್. ಬಿ. ಎಸ್. ಹೆಗ್ಡೆ, ಶ್ರೀ ರಾಜೀವ ಕೋಟಿಯಾನರ ಭಾಷಣಗಳಾದುವು. ಶ್ರೀ ಕೆ. ಆನಂದ ಹೆಗ್ಡೆಯವರಿಂದ ಧನ್ಯವಾದವಾಗಿ ಮಕ್ಕಳಿಗೆ ಸಿಹಿಕಿಂಡಿ ಹಂಚಲಾಯಿತು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 317/1950

ಶ್ರೀ ನಿಧಿವೇಶ ತೀರ್ಥ ಸ್ವಾಮಿಯರು, ಉಡುಪಿ ಶ್ರೀಆದಮಾರು ಮಠದ ಅಧಿಪತಿಗಳು, ಇವರ ಬಗ್ಗೆ ಇವರ ಜನರಲ್ ಪವರ್ ಆಫ್ ಎಟೋರ್ನಿದಾರ, ಪಿ. ಶ್ರೀಪತಿ ರಾವ್.
—ವಾದಿರು

ಮತ್ತು

1 ಪಿ. ವಾಸುದೇವ ನಾಯಕ್
2 ಪಿ. ರಾಧಾಕೃಷ್ಣ ನಾಯಕ್, ಪೆರಂಪಳ್ಳಿ ನಾರಾಯಣ ನಾಯಕರ ಮಕ್ಕಳು. ಉಡುಪಿ ತಾಲೂಕು ನಂಬ್ರ 76ನೇ ಬಡಗ ಬೆಟ್ಟು ಗ್ರಾಮ. ಹಾಲಿ C/o William Printing Press, 42 Mint Back Road, Bombay No. 1 ಎಂಬಲ್ಲಿರುತ್ತಾರೆ. —ಪ್ರತಿವಾದಿರು

ಇವರೊಳಗೆ

ವಾದಿರ ಮಂಡಕ್ಕೆ ಪ್ರತಿವಾದಿರ ತಂದೆ ಈಗ ಮೃತಪಟ್ಟಿರುವ ಪೆರಂಕಿಲು ನಾರಾಯಣ ನಾಯ್ಕರು ತಾ. 24-8-1939ರಲ್ಲಿ ಚಾಲಗೇಣ ಎಬ್ರಸುದಿ ಬರಕೊಟ್ಟು ಅವರು ಮೃತಪಡುವವರೆಗೆ ಅವರು ಆ ಅವರು ಮೃತಪಟ್ಟ ನಂತ್ರ ಅವರ ಮಕ್ಕಳಾದ ಪ್ರತಿವಾದಿರು ಸಹಾ ಚಾಲಗೇಣಿಗೆ ಅನುಭವಿಸಿ ಬಂದ ದಾವಾ ಆಸ್ತಿ ಸ್ವಾಧೀನತೆ, ಗೇಣಿ ಬಾಕಿ, ಹುಟ್ಟುವಳಿ ವಗೈರೆ ವಿವೃತ್ತಿ ಕೇಳಿ ವಾದಿರು ಮಾಡಿರುವ ಈ ದಾವೆಯು ತಾರೀಕು 20-9-1950ಕ್ಕೆ ಇಟ್ಟುದುತ್ತದೆ. ಸದ್ರಿ ತಾರೀಕು 20-9-1950 ನೇ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ನೀಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿರು ಸ್ವತಾಹಾ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸಲಿಕ್ಕೆ ತಪ್ಪಿದ್ದೆ ಈ ದಾವೆಯನ್ನು ಸದ್ರಿ ಪ್ರತಿವಾದಿರ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾಗುವದು ಎಂಬ ಸಂಗ್ತಿ ಈ ನೂಲಕ ತಿಳಿಸೋಹಾಗಿಯದೆ.

V. R. Kidyur
Advocate for Plaintiff.

ಉಡುಪಿ, ತಾ. 22-8-1950

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.
Advocate & President, District Board, S. Kanara.
CHAIRMAN

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಆತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಕರ್, ಶಯನ ಇವೆಲ್ಲವು ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ಸೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಕಿಂದಿತಿನಸು, ಇವುಗಳ ರುಚಿಯುಚಿ ಹೇಳಬೇಕೆ?

ಪ್ರೊಪ್ರಾಟರ್:—ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
O. S. 608/1947 R. E. P. 17/50

ಲಕ್ಷ್ಮಿ ಅಮ್ಮ ಕೊಡಾ—ಅರ್ಜಿದಾರ್ರು

ಮತ್ತು

ಕೊರಗ ಕೂಡಾ—ರೆಸ್ಪಾಂಡೆಂಟ್ರು,

ಇವರೊಳಗೆ

R 1 ಕೊರಗ, ಟೋಯಿಚ್ಚಿ ಮಗ ವಕೀಯನ್ ಅಪ್ಪ ಆಳಿಯ, ಕಾಸರಗೋಡು ತಾಲೂಕು ಬೇಳೂರು ಗ್ರಾಮದ ಆಕ್ಕಿಲಡುಕಂ ಎಂಬಲ್ಲಿರುವವರು—ಯವರಿಗೆ

2ನೇ ಅರ್ಜಿದಾರನಿಂದ 1ನೇ ಅರ್ಜಿದಾರಳಿಗಾದ ದಿಕ್ರಿ ಮೇಲ್ಕೋಟು ವ ಜಂಗಮರುಮಾಡಿ ರೆಸ್ಪಾಂಡೆಂಟ್ರ ಬಾಬ್ತು ಸ್ಥಿರಾಸ್ತಿ ಜಪ್ತಿ ಯೇ ಲಂನಿಂದ ದಿಕ್ರಿ ಐವಜು ವಸ್ತು ಬಗ್ಗೆ ಅರ್ಜಿದಾರರು ದಾಕ್ಲು ಮಾಡಿದ ಮೇಲ್ಕಂಡ ಅಮ್ಜಾ ಜ್ಞಾರಿ ಅರ್ಜಿಯು ತಾ. 7-9-50ಕ್ಕೆ ಇಟ್ಟುರುತ್ತದೆ. ಸದ್ರಿ ತಾರೀಕಿಗೆ 1ನೇ ರೆಸ್ಪಾಂಡೆಂಟನ್ನು ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗುವರೆ ತಪ್ಪಿದರೆ ಆತನ ಗೈರು ಹಾಜರಿಯಿಂದ ಸದ್ರಿ ಅಮ್ಜಾಜ್ಞಾರಿ ಅರ್ಜಿಯನ್ನು ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸೋಹಾಗಿಯದೆ.

(ಎಂತ ಕೋರ್ಟು ಹುಕುಂ ಪ್ರಕಾರ)
B. S. Kakkilaya
Advocate for Petitioners
Kasaragod 16-8-50

ಸ್ವೀಕಾರ ವಿಮರ್ಶೆ

ಹೊಸಲು ದಾಟದ ಹೆಣ್ಣು

ಲೇಖಕರು ಶ್ರೀ ಅ. ನ. ಕೃಷ್ಣರಾಯರು.

ಪ್ರಕಾಶಕರು ಆನಂದ್ ಬ್ರದರ್ಸ್, ಬೆಂಗಳೂರು—೨ ಬೆಲೆ ರೂ. ೩—೦೫—೦

ವೆಂಕಪ್ಪಯ್ಯನವರಿಗೆ ಸುಭದ್ರೆಯನ್ನು ಬಿಟ್ಟರೆ ಬೇರೆ ಮಕ್ಕಳಿಲ್ಲ. ನರಸಮ್ಮನಿಗೂ ಸುಭದ್ರೆಯ ಇಂಗಿತವನ್ನು ಪೂರೈಸುವದರಲ್ಲೇ ಒಂದು ಬಗೆಯ ತೃಪ್ತಿ. ಒಬ್ಬಳೇ ಮಗಳೆಂಬ ಮೋಹದಿಂದ ಬೆಳೆದ ಸುಭದ್ರೆಗೆ ಎಲ್ಲದರಲ್ಲೂ ಸ್ವಾತಂತ್ರ್ಯ! ಕಾಲೇಜು ತೀರಿ, ಕ್ರೀಡಾರಂಗದಿಂದ ತಿರುಗಿ ಮನೆಗೆ ಬರುವಾಗ ತಾಸು ಎಂಟಾದರೂ ಅದು ಅನಿವಾರ್ಯವೆಂದು ನರಸಮ್ಮ ವಾದಿಸುತ್ತಾರೆ. ವೆಂಕಪ್ಪಯ್ಯನವರಿಗೆ ಮಗಳ ಶೀಲದಲ್ಲಿ ಸಹನೆಯಿಲ್ಲದಿದ್ದರೂ ಹೆಂಡತಿಯ ತೀರ್ಮಾನದ ಮುಂದೆ ಅವರ ಕೈ ಬಾಡವೇನೂ ನಡೆಯುತ್ತಿರಲಿಲ್ಲ! ಅಂತಹ ಗಂಡು ಬೀರಿ ಹೆಣ್ಣೇ ರಂಗಣ್ಣನಂತಹ ಮಹಾ ಸಾಧು ವ್ಯಾಜಿಯ ಗೃಹಿಣಿ ರಂಗಣ್ಣ ಗ್ರಾಜು ವೇಟಾಗಿ ಮಾಸ್ತರಿಕೆಯನ್ನು ಮಾಡುತಿದ್ದ. ಸುಭದ್ರೆಗೆ ಈ ಸಂಬಂಧ ಏನೂ ಇಷ್ಟವಿರಲಿಲ್ಲ ಅಂತಲೆ ಆವಳು ಸ್ನೇಹಿತರಿಗಿಂತ ಹೆಚ್ಚಾಗಿ ಅತನನ್ನು ಕಾಣುತ್ತಿರಲಿಲ್ಲ.

ಸೂರಪ್ಪನವರಿಗೂ ಶ್ರೀನಿವಾಸನೊಬ್ಬನೇ ಮಗ ತಾಯಿ ಗೌರಮ್ಮನ ಪಾಡನ್ನು ನೆನೆದ ಅತನಿಗೆ ಅಂದಿನಿಂದಲೇ ಮೊದಲಿಂದಲೂ ಅನಾದರ. ಸೂರಪ್ಪಯ್ಯನವರು ಗಣ್ಯನಕೇಲರಾಗಿದ್ದು, ತನ್ನ ಪಕಾಲತನ್ನು ವೆಂಕಪ್ಪಯ್ಯನ ಮುಖಾಂತರವೇ ಹೂರೈಸುತಿದ್ದರು. ಹಂದಾರೀತಿಯಲ್ಲಿ ವೆಂಕಪ್ಪಯ್ಯನವರ ಸಂಸಾರದ ಬೆಳಕೇ ಇವರಾಗಿದ್ದರೆನಬಹುದು. ಸುಭದ್ರೆ ಕಾಲೇಜಿನ ಮತ್ತು ಬೇರೆ ಬೇರೆ ಚಟುವಟಿಕೆಗಳಲ್ಲಿ ಶ್ರೀನಿವಾಸ ಮೂರ್ತಿಯ ಕಾರ್ಯದಕ್ಷತೆಯನ್ನು ತಂದು ಅವನನ್ನು ತನ್ನವನನ್ನಾಗಿ ಮಾಡಿಕೊಳ್ಳಬೇಕೆಂದು ಬಯಸಿದಳು. ಶ್ರೀನಿವಾಸ ಆದರ್ಶ ವ್ಯಕ್ತಿ, ಸುಭದ್ರೆಯ ಎಲ್ಲ ವಿಚಾರವೂ ಅತನನಿಗೆ ತಿಳಿದಿದ್ದರೂ ಪ್ರಯತ್ನಕ್ಕೆ ಅವಳೇ ಮೇಲ್ ಹಿಂದಿಳ್ಳು. ಕನಕಂವನು ತೋರಲಿಲ್ಲ. ರಂಗಣ್ಣ ಪ್ರಸ್ತ ಪೂರೈಸಬೇಕೆಂದು ವೆಂಕಪ್ಪಯ್ಯನವರಿಗೆ ಪದೇ ಪದೇ ಬರೆಯುವುದೂ ಸುಭದ್ರೆಯ ಹಿಂದು ಪೂರ್ತಿ ಮುಗಿಯಲಂದು ಉತ್ತರಿಸುವುದೂ ನಡೆದೇ ಯಿತ್ತು. ಕೊನೆಗೊಂದು ದಿನ ರಂಗಣ್ಣನನ್ನು ಬೆಂಗಳೂರಿಗೆ ಬರಮಾಡಿಕೊಂಡು ಪ್ರಸ್ತಪದ ರಾತ್ರಿ ಮುಗಿಸಿ ಅವನ ಜೀವನಕ್ಕೆ ಬೇರೂರಿಯುವ ಏರ್ಪಾಡನ್ನು ತೋರಿಸಿದರು ಸೂರಪ್ಪಯ್ಯನವರು. ಶ್ರೀನಿವಾಸ ಎರಿ ಎಸ್. ಸಿ. ಗಾಗಿ ಮುಂಬಯಿಗೆ ಹೋದ ಅಲ್ಲಿ ಅವನ ಒಲವಲ್ಲಿ ಕಾರ್ಮಿಕರ ಕಡೆಗೆ ಹರಿಯಿತು! ಕಾರ್ಮಿಕರ ನಾಯಕನಾಗುತ್ತಾನೆ. ಇತ್ತ ಸೂರಪ್ಪಯ್ಯನವರು ಬೀಸಿದ ಬಲೆಗೆ ಸುಭದ್ರೆ ಸಿಕ್ಕುತ್ತಾಳೆ. ಬಂಧುಗಳಿಗೂ ಊರಿಗೂ—ಕ್ಕೆ ಹಿಡಿದ ಗಂಡನಿಗೂ ಸೂರಪ್ಪಯ್ಯನ ಹಾಗೂ ಸುಭದ್ರೆಯ ಸಂಬಂಧ ತಿಳಿದರೂ ಹಣದ ವಚ್ಚಸ್ಸಿನಿಂದ ಎಲ್ಲರೂ ಅಸಹಾಯಕರೇ. ಶ್ರೀನಿವಾಸನಿಗೂ ಈ ವಿಚಾರದಿಂದ ತಾಯಿ ಪಾಡಿಗೆ ಳಜ್ಜೀಸಲು ಬಂಸು! ಗೌರಮ್ಮನುಹಾಸಾಧ್ವಿ, ಶ್ರೀನಿವಾಸ ತಂದೆಯ ದೋಷಕ್ಕೆ ವಿರುದ್ಧನಾಗಿ ಮನೆ ಬಿಡುತ್ತಾನ, ಕಾರ್ಮಿಕರ ಸಂಘಟನೆಯಲ್ಲಿ ಮುಖ್ಯನಾಗಿ ಗುಂಡಿಗಾಯು ತಿಯಾಗುತ್ತಾನೆ! ಮತ್ತೆ ಸೂರಪ್ಪಯ್ಯನವರ ಸಂಸಾರದಲ್ಲಿ ನೂತನ ಪರಿವರ್ತನೆಯಾಗುತ್ತದ ಇದು 'ಹೊಸಲು ದಾಟದ ಹೆಣ್ಣಿ'ನ ಕಥೆ.

ಇಡಿಯ ಕಾದಂಬರಿಯಲ್ಲಿ ಶ್ರೀನಿವಾಸನ ತಾಯಿ ಗೌರಮ್ಮನವರ ಪಾತ್ರ ಕಿರಿದಾಗಿ ಕಂದರೂ ಹಿರಿಗುಣದಿಂದ ಕೂಡಿದ್ದಾಗಿರುತ್ತದೆ. ಸುಭದ್ರೆ ವಿದ್ಯಾವಂತಳಾಗಿದ್ದು ಹೀಗೆ ಅತಿ ತ್ಕಿಕ ಮಾರ್ಗವನ್ನು ನುಸರಿಸುವುದೇ—ವಿದ್ಯೆಕಲಿತ ಪೆಣ್ಣು ಮಕ್ಕಳ ಕಾಡು ಇನ್ಯೆಯೆ—ಎನುವ ಪ್ರಶ್ನೆ ಮೂಡುತ್ತದೆ ಆದರೆಇದು ಸುಭದ್ರೆಯ ತಪ್ಪಲ್ಲ. ಆಕೆ ತಿಳಿವಿಗೆ ಬರುವ ಮುನ್ನೆ ತನ್ನ ಜೀವನಕ್ಕಡಿಯ ಜಾರು ಹೊಡಲು ಒಳ್ಳಿಯ ಪೂರ್ವಾಗಿ ಅವನ ಭಾವಿಪತ್ನಿ ವಿಶ್ವಪ್ರಿಯೆ ದೇವನೊಬ್ಬನನ್ನು ಕುತ್ತಿಗೆಗೆ ಕಟ್ಟಿಬಿಟ್ಟಿರುವ ಹಿರಿಯಂಗದವರಂ ಸುಹಾರಾಗಿ! ನನ್ನ ಅಭಿರುಚಿಗೆ ಒಲವಿಲ್ಲ—ಅನುಕೂಲನಿಲ್ಲ ಬೂತಾಗಾಗಿಲ್ಲದೆ ಆಕೆಯಲ್ಲಿ ಶಾಂತಿ ಸುಖಗಳಿಲ್ಲ ತಪ್ಪುವಾಂಯನ್ನು ಹಿಡಿಯುತ್ತಾಳೆ ಸ್ತ್ರೀ ಶ್ರೀನುಂತಿಕೆಯನ್ನಷ್ಟೇ ನೋಡಿಕೊಂಡು ವರನನ್ನು ಆರಿಸುಕುವ ಹಿರಿಯರು ಮುಂದೆ ಬರಬಹುದಾದ ಅವತ್ತನ್ನು ಊಹಿಸಲಾರರು ಶ್ರೀಮಂತರು ಹಣದ ಬಲಶ್ಯಾರದಿಂದ ಎಸ್ಟು ಜೀವಗಳನ್ನು ತಮ್ಮ ಸ್ವೇಚ್ಛಾಚಾರಕ್ಕೆ ಬಲಿಗೊಳ್ಳುತ್ತಾರೆಂಬುದು ಗೌರಮ್ಮ, ರಂಗಣ್ಣನವರ ಪಾತ್ರಗಳಿಂದ ನಾವು ತಿಳಿಯಬಹುದು. ಶ್ರೀನಿವಾಸನ ಪಾತ್ರಪೋಷಣೆ ಮೊದಲಿನಿಂದಲೂ ಬಂದು ಬಗೆಯ ಆತ್ಮಪ್ತಿ—ಅಸಂತೋಷದಿಂದಲೇ ಮುಂದೆ ಸಾಗುತ್ತದೆ ಮನೆಯಲ್ಲಿಯೂ ಅರಾಜಕತೆಯೇ ಆಡಕ್ಕೆ ಮೂಲವಿನ್ನತೇಕೆ. ಅವನ ಜೀವನ ಕ್ರಾಂತಿಗಾಗಿಯೇ ರೂಪಗೊಂಡಹಾಗಿದೆ. ಆ ನ ಕೃಷ್ಣರಾಯರ ಈಚೀಚಿನ ಕಾದಂಬರಿಗಳಲ್ಲೆಲ್ಲ ಈ ರೀತಿಯ ಒಂದು ಪಾತ್ರ ಸೃಷ್ಟಿ ಕಂಡುಬರುತ್ತದೆ. ಕಾದಂಬರಿಯಲ್ಲಿ ಶ್ರೀನಿವಾಸನ ಮಾತು ಬಂದಾಗಲೆಲ್ಲ ಕೊಂಚ ಏರಸ ತಾಣುತ್ತದೆ ಸೂರಪಯ್ಯನವರ ಧೂರ್ತಮನೋವೃತ್ತಿಯಿಂದ ಹಣ್ಣಾದ ಗೌರಮ್ಮನ ಗನ ಅಂತ್ಯದಿಂದ ತನ್ನ ಆಸೆಯನ್ನೂ ನೀಗಿಕೊಳ್ಳುತ್ತಾಳೆ ಅಂದರೆ ಆಕೆಯ ಬದುಕಿನ ಬಾಣಲೆಯಲ್ಲಿ ಹಾಕಿದ್ದ ಎಲ್ಲವೂ ಸಿಡಿದು ಹೋಗಿ ಬರೀ ಹೊಗೆಯಾಗಿದ್ದ ಸಂಜೆಕ ಶ್ರೀನಿವಾಸನಾಗಿ—ಸಾಗುತ್ತಾನೆ.

ಗೌರಮ್ಮ ಸಾಯಿಸಿದ ಹೆಣ್ಣು' ಹಂಗಾಗಿಸಿದ ಕಾದಂಬರಿ ಎನ್ನಲಾಗುವುದಿಲ್ಲ. ಇದು ಸಮಸ್ಯಾತ್ಮಕ ಕಾದಂಬರಿ ಇಂತಹ ವ್ಯಕ್ತಿಗಳು ತೀರಾ ಕಾಲ್ಪನಿಕವಲ್ಲವೇ! ಅಸ್ವಾಭಾವಿಕವಲ್ಲವೇ? ಎಂದು ಮೂಗು ಮುರಿಯುವವರಿದ್ದಾರೆ ಕಾರಣ, ಈ ದಿಶೆಯಲ್ಲಿಯ ಕಾದಂಬರಿ ಕೊಂಚ ಕಡಿಮೆ. ಈ ಬಗೆಯ ದಾರುಣವಾದ ಸಂಸಾರಗಳೆಷ್ಟೋ ನಮ್ಮಲ್ಲಿನೆ. ತೆರೆಯ ಮರೆಯಲ್ಲಾಗುವ ಅನ್ಯಾಯವನ್ನು ಚಿತ್ರಿಸುವ ಕಾದಂಬರಿ ಇರುವುದಿಲ್ಲ. ಹೊಸಲು ದಾಟಿದ ಹೆಣ್ಣು ಆ ಕೆಲಸವನ್ನು ಮಾಡಿಯಿದೆ. ಹೆಣ್ಣಿನ ಬದುಕಿನ ನಾನಾ ಮುಖದ ಚಿತ್ರಣ ಇಲ್ಲದೆ ಗಂಡಸು ತೋರುವ ಸ್ವಾರ್ಥ—ಅಹಂಕಾರದ ಸಪ್ಪಸೀಕರಿದೆ ಮುಗ್ಧಬಾಡ್ಯೆಯಿಂದ ಕೊನೆಯ ತನಕವೂ ನಮ್ಮ ಮನವನ್ನು ಸೆಳೆಯುವ ಶ್ರೀ ಅ. ನ. ಕೃಷ್ಣರಾಯರ ಮಾತುಗಾರಿಕೆ ಇಲ್ಲಿಯೂ ಸಫಲವಾಗಿದೆ.

—ಎಸ್ಸೆಲ್

ಅಂತರಂಗಕ್ಕೆ ಚಂದಾದಾರರಾಗಿರಿ

"ಅದಕ್ಕೆ ನೀನು ಬೆಲೆಕ್ಕಾಗಿ ಬ್ರೂಕ್ ಬಾಂಡ್ ಚಹವನ್ನೇ ಒತ್ತಿಕೊಳುವೆ ಎಂಬುದನ್ನು ನನಗೆ ತಿಳಿಸು"

"ನಾನು ಅದನ್ನು ಬೆಲೆಕ್ಕಾಗಿ ಕೊಂಡು ಕೊಳ್ಳುವೆನೆಂದರೆ ಅದು ನನ್ನ ಹಣಕ್ಕೆ ಉತ್ತಮ ಪ್ರತಿಫಲವನ್ನು ಕೊಡುತ್ತದೆ. ಒಂದು 2 ಔನ್ಸ್ ಪೊಟ್ಟಣದಲ್ಲಿ 30 ಕಪ್ಪುಗಳಿಗಾಗುವಷ್ಟು ಚಹವನ್ನು ಮಾಡಬಹುದು ಅಷ್ಟಲ್ಲದೆ ಬ್ರೂಕ್ ಬಾಂಡ್ ಚಹದ ಶುದ್ಧತೆ ಮತ್ತು ಗುಣದ ಬಗ್ಗೆ ನನಗೆ ಯಾವಾಗಲೂ ನಂಬಿಕೆ ಇದೆ"

ಬ್ರೂಕ್ ಬಾಂಡ್ ಚಹಾ

BB/SO/LOT/105

ನೋಟೀಸು

ಉಡ್ಪಿ ಡಿ ಮು. ಕೋರ್ಟಿನಲ್ಲಿ—

O- P. No 27/1950.

1. ಲೀವಿಯೂ ಅಂಮಂಣ— ಜೋಸೆಫ್ ಅಂಮಂಣರ ವಿಧವೆ
2. ಜೇವ್ಸ ಅಂಮಂಣ
3 ಜೋರ್ಜ ಅಂಮಂಣ,
4. ಸಾಮುವೇಲ ಅಂಮಂಣ
—ಯೋಸೆಫ್ ಅಂಮಂಣರ ಮಕ್ಕಳು.
5. ವಿಲಿಯಮ್ ಅಂಮಂಣ.
6. ನೇಕ್ಸ್ ಅಂಬ್ರೋ.
7. ರೋಜ ಅಂಮಂಣ
8. ನೇನ್ಸಿ ಅಂಮಂಣ
9. ಶಾರದಾ ಅಂಮಂಣ

—8 ಮತ್ತು 9ನೆಯವರು ಮೈನರ್ರು—ಗಾರ್ಡಿಯನ್ ಆಜ್ಞ 1ನೇ ಅರ್ಜಿದಾರಳು.

5 ರಿಂದ 9ನೇ ವರೆಗಿನವರು ದಾನ ಅಂಮಂಣರ ಮಕ್ಕಳು ವ, ಯೋಸೆಫ್ ಅಂಮಂಣರ ಮೊಮ್ಮಕ್ಕಳು

1ರಿಂದ 5 ಮತ್ತು 7ರಿಂದ 9ನೇ ಯವರು ಕೊಡವೂರು ಗ್ರಾಮದಲ್ಲಿಯೂ. 6ನೇ ಯವರು ಅವರ ಗಂಡ— D'Awblev, Thyabhji Building, II Floor, Room No 19, Moreland Road, Bombay 8 ಎಂಬಲ್ಲಿ ವಾಸ್ತವ್ಯರುವವರು.

—ಅರ್ಜಿದಾರರು.

1ನೇ ಅರ್ಜಿದಾರಳ ಮಗಳು ಆ 2, 3, 4 ನೇ ಅರ್ಜಿದಾರರ ಸಹೋದರಿ ಮತ್ತು 5 ರಿಂದ 9ನೇ ಅರ್ಜಿದಾರರ ದೊಡ್ಡ ತಾಯಿ ಮೃತ ವಿಕ್ಟೋರಿಯಾ ಅಮ್ಮಣ್ಣಿ ಯಾನೆ ವಿಕ್ಟೋಬ್ಯಾಯನವರು ತಾ 18-8 49ರಲ್ಲು ಮೃತಪಟ್ಟದ್ದಾಗಿದ್ದು ಸದ್ರಿ ಮೃತಳ ಬಾಬ್ತು ದಿ. ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ಲಿಮಿಟೆಡ್, ಉಡ್ಪಿ ಮತ್ತು ಮಲ್ಪೆ ಬ್ರೆಂಚ್ ಈ ಸಂಸ್ಥೆಗಳಲ್ಲಿಯೂ, ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಬ್ರೆಂಚ್-ಗಿರಗಾಂವ್, ಬೂಂಬ್ಯಾ ಈ ಸಂಸ್ಥೆಯಲ್ಲಿಯೂ ಫಿಕ್ಸೆಡ್ ಡಿಪೊಜಿಟ್ ಮತ್ತು ಸೇವಿಂಗ್ಸ್ ಬ್ಯಾಂಕ್ ಡೆಪೊಜಿಟನಲ್ಲಿಟ್ಟ ಮತ್ತು ಮಲ್ಪೆ ಪೋಸ್ಟಾಫೀಸಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಎಕೌಂಟಿನಲ್ಲಿಟ್ಟ ಒಟ್ಟು ಐವಜು ರೂ 26, 912 8-0ನ್ನು ಪಡೆಯುವರೇ ಸದ್ರಿ ವಿಕ್ಟೋರಿಯಾ ಅಂಮಂಣ ಯಾನೆ ವಿಕ್ಟೋಬ್ಯಾಯನವರ ಪಾರೀಸುದಾರರಾದ ಅರ್ಜಿದಾರರು ಮೇಲ್ಕಂಡ ಅರ್ಜಿದಾಖಲು ಮಾಡಿ ಸದ್ರಿ ಎಲ್ಲಾ ಅರ್ಜಿದಾರರ ಪರವಾಗಿ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲುಮಾಡಿದ ಮೇಲಿನ ಅರ್ಜಿಯು ತಾ 6 9-1950ಕ್ಕೆ ತನಿಪಿ ಬಗ್ಗೆ ಇತ್ಯರ್ಥಾಗಿಯದೆ. ಆಕ್ಷೇಪ ಹೇಳತಕ್ಕವರು ಮೇಲ್ಕಂಡ ಕೋರ್ಟು ಮುಂದೆ ತಾ 6—9 -50ರಲ್ಲ ಪೂರ್ವಾಹ್ನ ಘಂಟೆ 10ಕ್ಕೆ ಹಾಜರಾಗಿ ಮನವಿ ಸಾಡಿ ಕೊಳ್ಳಬೇಕು ತಪ್ಪಿದರೆ ಸದರಿ ಅರ್ಜಿಯನ್ನು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

Gr itian C- Rego
Vakil For Petitioners.

ಉಡ್ಪಿ, ತಾರೀಕು 16-9-1950,

ವಿವಿಧ ಪಾತ್ರೆಗಳು

ಯಾವತ್ತೂ ವಿಧವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಿಯಾಯಿತಿ ದರದಲ್ಲಿ ಯಾಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,

ಮಾನವ ಚೇತನವೂ ಕಾಲಪ್ರವಾಹವೂ

ಲೇಖಕ:- ಶ್ರೀ ವಿರ್ಯ ಲಕ್ಷ್ಮೀನಾರಾಯಣ ಆಳ್ವ.

ಕೌಲದ್ದು ಒಂದು ಅವ್ಯಾಹತ ಪ್ರವಾಹ. ಅದು ತನಗೆ ಅಸ್ತಿತ್ವವನ್ನಿತ್ತ ಮಾನವನನ್ನೇ ಹಿಂದಿಕ್ಕಿ ಹರಿಯಲು ತವಕಿಸುತ್ತದೆ. ಆದರೆ ಮಾನವನು ಕೂಡಾ ಹಿಂದೆ ಬಿದ್ದಿಲ್ಲ. ಚೇತನ ಜೀವಿಯಾದ ಆತ ತನ್ನನ್ನು ಹಿಂದಿಕ್ಕಲು ಪ್ರಯತ್ನಿಸುತ್ತಿರುವ ಕಾಲವನ್ನೇ ಮಿಂಚಿ ಹಾರಲು ಹಾತೊರೆಯುತ್ತಾನೆ! ಹೀಗೆ ಕಾಲ ಮತ್ತು ಮಾನವನ ಈ ಹೋರಾಟವು ಚಿರಂತನವಾದುದು, ನಿರಂತರವಾದುದು; ಆದರೆ ಮಾನವನಿಗೆ ಕಾಲಕ್ಕಿದ್ದಂತೆ ಸ್ವತಂತ್ರವಿಲ್ಲ, ಮುಕ್ತ ಮಾರ್ಗವಿಲ್ಲ. ಆತನನ್ನು ಜಡವು ಬಂಧಿಸಿರುತ್ತದೆ; ಲೋಭ ಮೋಹಗಳು ಜಗ್ಗುತ್ತಿರುತ್ತವೆ; ಆತನ ಮಾರ್ಗದಲ್ಲಿ ಅನೇಕ ಅಡೆತಡೆಗಳಿವೆ. ಆತನು ಕಾಲವನ್ನು ಮಿಂಚಿ ಹಾರಬೇಕಾದರೆ ಆತನ ಚೇತನವು ಸಚೇತನಗೊಂಡು ಈ ಬಂಧನಗಳನ್ನು ಹರಿದು ಅಡೆತಡೆಗಳನ್ನು ಒಡೆದು ಮುನ್ನುಗ್ಗದೆ ಛಿದ್ರವಾಗಬಲ್ಲದು. ಆಗ ಮಾತ್ರ ಆತನ ಚೇತನವು ಪೂರ್ಣತೆ ಪಡೆಯಬಲ್ಲುದು. ಪೂರ್ಣತೆ ಪಡೆದ ಮಾನವ ಚೇತನದ ಒಟದ ವೇಗ ಅತುಲನೀಯವಾದುದು; ಉಪಮಾತೀತವಾದುದು; ಕಲ್ಪನೆಗೆ ನಿಲುಕದ್ದು. ಅದರೆದುರು ಕಾಲಕ್ಕೆ ಸೋಲೊಪ್ಪಿಕೊಳ್ಳುವ ಹೊರತು ಬೇರೆ ಮಾರ್ಗವಿಲ್ಲ. ಆ ಸ್ಥಿತಿಯಲ್ಲಿ ಮಾನವ ಚೇತನವು ತಾನೇ ಜಾನಾಗಿ ಮೆರೆದು ಜಗತ್ತಿನ ಸರ್ವಶಕ್ತಿಗಳನ್ನೂ ಹಿಂದಿನಿಂದ ನಡೆಯಿಸಿಕೊಂಡು ಹೋಗಬಲ್ಲ ದಿವ್ಯ ಚೇತನವಾಗಿರುತ್ತದೆ.

ಹೀಗೆ ನಾವು ಕಾಲವನ್ನು ಮೀರಿ ಹರಿಯಬೇಕಾದರೆ ನಮ್ಮ ಗತಿಯು ಅರಿವು ನಮುಗಾಗಬೇಕಾಗಿದೆ. ಅದಕ್ಕಾಗಿ ಲೋಕವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿರುವುದರ ಜೊತೆಗೆ ನಮ್ಮ ಅಂತರಂಗವನ್ನು ಕಾಣಬಲ್ಲ ಶಕ್ತಿ ನಮ್ಮಲ್ಲಿ ಬೆಳೆಯಬೇಕಾಗಿದೆ; ಆತ್ಮ ನಿರೀಕ್ಷಣೆಯಿಂದೆಗೆ ನಮ್ಮ ದೃಷ್ಟಿ ಹರಿಯಬೇಕಾಗಿದೆ. ನಮ್ಮ ಅಂತರಂಗದಲ್ಲಿ ಜರಗುತ್ತಿರುವ ತುಮುಲ ಯುದ್ಧವನ್ನು ಪ್ರೇಕ್ಷಕನಂತೆ ದೂರವಾಗಿ ನಿಂತು ನಿರೀಕ್ಷಿಸುವ ಕಲೆಯು ಕರಗತವಾಗ ಬೇಕು. ಇದಕ್ಕಾಗಿ ವಿಚಾರ ವಿವೇಚನೆಗಳ ಕುಲುಮೆಯಲ್ಲಿ ಮನಸ್ಸನ್ನು ಕರಗಿಸಿ ಕರಗಿಸಿ ಶುದ್ಧೀಕರಿಸುತ್ತಿರಬೇಕು. ನಮ್ಮ ಗತಿಯ ಅರಿವು ಮಾತ್ರ ನಮಗಾದರೆ ಸಾಲದು. ಜತೆಗೆ ಕುಂಠಿತವಾದ ವೇಗವನ್ನು ತೀವ್ರಗೊಳಿಸಲು ಅತುಲ ಆತ್ಮದಾರ್ಢ್ಯ ಬೇಕು. ಏನು ಬಂದರೂ ಎದುರಿಸಿ ಮುನ್ನುಗ್ಗುವ ಧೈರ್ಯೋತ್ಸಾಹಗಳು ಬೇಕು. ಹೀಗೆ ಆತ್ಮ ನಿರೀಕ್ಷಣೆಯ ಅಭ್ಯಾಸ ಮತ್ತು ನಿಜದ ಕಡೆಗೆ ಮುನ್ನುಗ್ಗುವ ಆತ್ಮದಾರ್ಢ್ಯ ಇವೆರಡಿದ್ದರೆ ಮಾತ್ರ ಮಾನವ ತನ್ನನ್ನು ಕಟ್ಟಿದ ಕಟ್ಟುಗಳನ್ನು ಕುಟ್ಟಿ ಪುಡಿಗೈದು ಹಾದಿಯಲ್ಲಿನ ಅಡೆತಡೆಗಳನ್ನೆಲ್ಲಿ ಒಡೆದು ದೂರೀಕರಿಸಿ ಕಾಲವನ್ನು ಹಿಂದಿಕ್ಕಿ ಧೀಂಕಿಡಬಲ್ಲ; ಕಾಲವೇ ತನ್ನನ್ನು ಅನುಸರಿಸುವಂತೆ ಮಾಡಲು ಸಮರ್ಥನಾಗಬಲ್ಲ!

ಕಾಲದ ಹಿಂದುಳಿಯುವುದೆಂದರೆ ಪಂಪರೆಯ ಸೆರೆಯಲ್ಲಿ ಸಿಲುಕುವುದು; ಗತಕಾಲದ ವರ್ಥಹೀನ ಮತ್ತು ಅನರ್ಥಕಾರಿ ಪೊರೆಯನ್ನು ಹೊತ್ತುಕೊಳ್ಳುವುದು; ಮತಿಯನ್ನು ಶಕ್ತಿಗೆ ಬಲಿಕೊಡುವುದು; ಒಟ್ಟಿನ ಮೇಲೆ ಜೀವನ್ಮರಣವಾಗಿ ಬಾಳುವುದು.

ಕೆಲವು ಮಂದಿ ಇದ್ದಾರೆ. ಅವರಲ್ಲಿ ಜಗತ್ತಿನ್ನು ಕಾಣುವ ಅಭ್ಯಾಸವೂ ಇರುವುದಿಲ್ಲ. ತಮ್ಮನ್ನು ನಿರೀಕ್ಷಿಸಿಕೊಳ್ಳುವ ಶಕ್ತಿಯೂ ಇರುವುದಿಲ್ಲ. ಅಂತರಾಳದಲ್ಲಿ ಮುನ್ನುಗ್ಗುವ ಹುಮ್ಮಸ ಶೂನ್ಯವೇ ಸರಿ. ಇದ್ದರೂ ಅದು ಪಶು ಸಾಹಸ. ಅದರಿಂದ ಕೆಡುಕಲ್ಲದೆ ಒಳಿತನ್ನು ಆಶಿಸುವುದು ಹುಚ್ಚುತನ. ಅವರು ಒಂದು ದೃಷ್ಟಿಯಿಂದ ಜೀವನ್ಮೃತರು. ಅದ್ದರಿಂದ ಅವರ ವಿಚಾರ ಇಲ್ಲಿ ಅಗತ್ಯವಿಲ್ಲ.

ಇನ್ನೊಂದು ತರದ ಜನರಿರುತ್ತಾರೆ. ಅವರಲ್ಲಿ ವಿಚಾರಶೀಲತೆಯೇನೋ ಇರುತ್ತದೆ. ಆದರೆ ಅವನ್ನು ಅವರು ಉದಾಸೀನತೆಯ ವ್ಯಾಧಿಯಲ್ಲಿ ಮುಲಗಿಸಿ ಬಿಟ್ಟಿರುತ್ತಾರೆ. ಭಾವನೆಯು ಹೊರ ಹೊರಿಯನ್ನು ಹೇರಿಕೊಂಡು ನಿಜಜೀವನದಿಂದ ವಿಮುಖರಾಗುತ್ತಾರೆ. ಮತ್ತು "ಬಾಳು ಹೀಗೆಯೇ ಸಾಗಲಾರದೇ? ಇಂದಿನ ವರೆಗೆ ಸಾಗಿಲ್ಲವೇ? ಮುಂದೆ ಹೊಸಹಾದಿ ತುಳಿದು ನಾವೇನು ಮಹಾಕಾರ್ಯ ಮಾಡಲಿಕ್ಕಿದೆ?" ಎಂಬಿತ್ಯಾದಿ ಅಸಂಬದ್ಧ ಸ್ಪಷ್ಟೆಗಳನ್ನು ತಮಗೆ ತಾವೇ ಹಾಕಿಕೊಂಡು ತಮ್ಮನ್ನು ತಾವೇ ಸಂತೈಸುತ್ತಿರುತ್ತಾರೆ. ಪಾಪ! ಅವರ ಇಡೀ ಮೂಲ ಅಲಸಿಗತನ; ಹುಮ್ಮಸದ ಶೂನ್ಯತೆ. ಅದ್ದರಿಂದ ಅವರು ಹೊಸಹಾದಿ ತುಳಿಯುವ ಸಾಹಸ ಮಾಡದೆ ಇದ್ದಲ್ಲೇ ಕುಳಿತಿರುತ್ತಾರೆ. ನಡೆದರೆ ಎದಡುವ ಸಂಭವ ಉಂಟಲ್ಲೇ! ಇವರು ತಮ್ಮ ಚೇತನವನ್ನು ಜಡದೊಳಗೆ ನುಲಗಿಸಿಬಿಡುತ್ತಾರೆ ಒಂದು ದೃಷ್ಟಿಯಿಂದ ಚಿತ್ರಹಿಂಸೆಕೊಟ್ಟು ಕೊಲೆಮಾಡುತ್ತಾರೆ! ಆದರೆ ಅವರು ಒಂದುದಿನ ತಮ್ಮ ಅವಿವೇಕಕ್ಕಾಗಿ ಆಕ್ರ ಮಹಾದೇವಿ ಹೇಳಿದಂತೆ "ತೆರೆದ ಹುಳು ತನ್ನ ಸ್ವೇಹದೊಳು ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾನತೆರ್ನಂತೆ, ಮನಬಂದುದ ಬಯಸಿ ಬೇಯುತಿರುವೆನಯ್ಯಾ" ಎಂದು ಪ್ರತಿಪಸಲಿಕ್ಕಿದೆ; ಗೋಳಿದಲಿಕ್ಕಿದೆ.

ಈ ಮಾನಸಿಕ ಉದಾಸೀನತೆ ನಮ್ಮಲ್ಲಿ ಬಹಳ ಬೆಳೆದು ಒಂದು ಮಹಾರೋಗವಾಗಿ ಪರಿಣಮಿಸಿದೆ. ಇಂದು ನಾವು ಯೊಸದನ್ನು ಹುಡುಕಾಡುವ ಬದಲು ಸಾರಹೀನ ಹಳೆಯದನ್ನೇ ಮೆಲುಕು ಹಾಕುತಿದ್ದೇವೆ. ಅರ್ಥಹೀನ ಹಳೇ ಮನೋಭಾವನೆಗೆ ಅಂಟಿಕೊಂಡು ಇಂದಿನ ಅಬಲತೆಯನ್ನು ನೋವನ್ನು ಹಿಂದಿನ ಸಬಲತೆಯನ್ನು ನೆನೆಯುವುದರಲ್ಲಿ ತುಂಬು ತಿದ್ದೇವೆ. ಹೀಗೆ ಸರ್ವಸಾಮಾನ್ಯ ನಮ್ಮ ಸಾಹಸಶೂನ್ಯತೆಯಿಂದ ಹಿಂದಿನ ವಿಚಾರಕ್ರಮಗಳಿಗೇ ಅಂಟಿಕೊಂಡುದುದರಿಂದಾಗಿ ನಮ್ಮಲ್ಲಿ ದೇಶಕಾಲಾತೀತವಾದ ಘಟ್ಟಿಯೊಡನೆ ಕಾಲದೊಡನೆ ಪರಿವರ್ತನೆ ಹೊಂದಬೇಕಾಗಿದ್ದ ಗತಕಾಲದ ಜಳ್ಳು ಸೇರಿದೆ. ಆ ಜಳ್ಳನ್ನು ಬಿಡಬೇಕೆಂಬ ಅರಿವೂ ನಮಗಿಲ್ಲ; ಇಚ್ಛೆಯೂ ಇಲ್ಲ. ಕಾರಣ ಕಾಲದ ಒಟವನ್ನು ನಾವು ಗಮನಿಸಿಲ್ಲ. ಅದನ್ನು ಕಾಣುವ ನಮ್ಮ ಕಣ್ಣನ್ನು ಅಲಸಿಗತನದ ನಂಜು ಮುಸುಕಿದೆ. ಹಿಂದಿನ ಹಲವಾರು ಆಚಾರ ವಿಚಾರಗಳು ಇಂದು ಅರ್ಥಶೂನ್ಯ ಮತ್ತು ಅನರ್ಥಕಾರಿಗಳಾಗಿವೆ. ಅದ್ದರಿಂದ ಅವು ತ್ಯಾಜ್ಯ. ಅಂತೆಯೇ ಇಂದಿನ ನೂರಾರು ಆಚಾರ ವಿಚಾರಗಳು ಮುಂದೆ ತ್ಯಾಜ್ಯವಾಗುತ್ತವೆ. ಈ ಬೆಳಕಿನಷ್ಟು ಸ್ಪಷ್ಟವಾದ ಸತ್ಯವನ್ನರಿಯದನ ಕುರುಡ್ಡ. ಇದಕ್ಕೆ ಸರಿಯಾಗಿ ನಡೆಯಲಾರದ ಜಿಳ್ಳನವ.ಮೇಲಿನ ಸತ್ಯವನ್ನರಿತು ನಮ್ಮಲ್ಲಿರುವ ನೂರಾರು ಗತಕಾಲದ ಆಚಾರವಿಚಾರಗಳನ್ನು ತೊರೆದು, ಕೊಳೆದು ಸಶಕ್ತರಾಗಿ, ಪುನೀತರಾಗಿ ಮುನ್ನುಗ್ಗುವ ಬದಲು ಇನ್ನೂ ಇನ್ನೂ ಅದಕ್ಕೆ ಅಂಟಿಕೊಳ್ಳಬಯಸುತ್ತಿದ್ದೇವೆ. ಒಟ್ಟಿನ ಮೇಲೆ ಇಂದು ನಾವು ಗತಕಾಲದ ಗೋರಿಯಲ್ಲಿ ಸತ್ತ ಶವಗಳಂತೆ ಜೀವಿಸುತ್ತಿದ್ದೇವೆ.

ಮಾನವನ ಆಚಾರ ವಿಚಾರಗಳನ್ನು ಎರಡು ಪಂಗಡಗಳಾಗಿ ವಿಂಗಡಿಸಲುಹುದು, ಒಂದು ಕಾಲ ದೇಶಾತೀತವಾದ ಚಿರನೂತನ ಸತ್ಯಕ್ಕೆ ಸಂಬಂಧ ಪಟ್ಟುದು. ಇನ್ನೊಂದು ಕಾಲ ದೇಶಗಳ ಪರಿಮಿತಿಯಿಂದ ಪರಿವರ್ತನೆ ಗೊಳ್ಳುತ್ತಿರುವ ಪರಿವರ್ತನ ಸತ್ಯಕ್ಕೆ ಸಂಬಂಧಪಟ್ಟುದು. ಈ ಎರಡೂ ಒಂದು ಪ್ರಮಾಣದಲ್ಲಿ ಮಾನವನಲ್ಲಿ ಸೇರಿರಲೇ ಬೇಕು. ಯಾವುದೇ ಒಂದರಿಂದ ಎಂದೂ ಮಾನವನು ಪೂರ್ಣನಾಗಲಾರ. ಈ ಎರಡರ ಸಮನ್ವಯವೇ- ಸುಂದರ ಸಮರಸವೇ ಮಾನವ. ಹೀಗೆ ಕಾಲಪ್ರವಾಹದೊಡನೆ ಪರಿವರ್ತನೆಹೊಂದುತ್ತಿರುವ ಸತ್ಯವು ನಮ್ಮಲ್ಲಿ ಇರಲೇ ಬೇಕಾದುದರಿಂದ ನಾವು ಕಾಲದ ಗತಿಯನ್ನು ಅರಿತುಕೊಂಡು ಅದರ ಜೊತೆಗೆ ಹೆಜ್ಜೆ ಹಾಕಲೇ ಬೇಕಾಗಿದೆ.

ಒಂದು ಕುಂದು ಸಾಮಾನ್ಯ ಬಲ್ಲವರೆನಿಸಿಕೊಳ್ಳುವವರಲ್ಲೂ ನಾವು ಕಾಣುತ್ತೇವೆ ಅವರು ಹಲಕಾಲ ಕಾಲದ ಜೊತೆಗೆ ಹೆಜ್ಜೆಯಿಕ್ಕುತ್ತಿದ್ದು ಮುಂದೆ ಅದರಿಂದ ಹಿಂದುಳಿಯುತ್ತಾರೆ. ಇದು ವಯಸ್ಸಿನ ಗುಣವಿದ್ದರೂ ಇರಬಹುದು. ಆದರೂ ಅದರೆಡೆಯಿಂದಲೂ ಮಾನಸಿಕ ಉದಾಸೀನತೆಯ ಹಪೆಕಿಳ್ಳುತ್ತಿರುವುದನ್ನು ಕಾಣಬಹುದಾಗಿದೆ.

ಕಾಲದ ಜೊತೆಗೆ ಸಾಗ ಬಯಸುವವರು ಸದಾ ಜಾಗೃತ ಚಿತ್ತರಾಗಿರಬೇಕಾಗುತ್ತದೆ; ಬಿಡುಗಣ್ಣರಾಗಿರಬೇಕಾಗುತ್ತದೆ. ಒಂದುಕ್ಷಣ ಕಣ್ಣು ಕುಗುರಿದರೂ ಅವರು ಕಾಲದಿಂದ ಹಿಂದೆ ಬಿದ್ದಂತೆಯೇ ಸರಿ. ಏಕೆಂದರೆ ಕಾಲಕ್ಕೆ ನೋಹ ಮಮತೆಗಳಿಲ್ಲ. ಇನಿತು ಕಾಲ ನನ್ನೊಡನೆಯೇ ಸಾಗಿರುವ ಸಂಗಾತಿ ದನೆದು ನಿಂತಿರುವ ಅತನಿಗಾಗಿ ಕೊಂಚವಾದರೂ ಕಾದಿರಬೇಕೆಂಬ ಸುಹೃದಯತೆ ಅದಕ್ಕಿಲ್ಲ! ಅದು ಆ ನಿಸ್ಸಾಹಾಯ ಸಂಗಾತಿಯನ್ನು ಹಿಂದೆ ಬಿಟ್ಟು ಮುಂದೆ ಓಡಿಯೇ ಬಿಡುತ್ತದೆ. ಅಯ್ಯೋ ದೇವ್ಯಾ ನಿನ್ನಂತೆಯೇ ಕಲ್ಲೂ ಹೃದಯಿಯದು! ನಿರ್ಮರ ನಿರ್ದಿಕಾರಿಯದು!

ಇನ್ನು ಕೆಲಮಂದಿಯಿದ್ದಾರೆ, ಅವರು ಕಾಲಕಾಲ ಕಾಲದೊಡನೆ ನಡೆದು ಪ್ರಗತಿಶೀಲರೆಂದು ಕರೆಯಿಸಿಕೊಳ್ಳುತ್ತಾರೆ. ಮುಂದೆ ತಮ್ಮ ಈ ಪ್ರಗತಿಶೀಲತೆಗೆ ತಮ್ಮಲ್ಲಿ ತಾನೇ ಹೆಮ್ಮೆ ಪಟ್ಟುಕೊಂಡು, ತನ್ನು ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುತ್ತಾರೆ. ಹೆಮ್ಮೆಯಲ್ಲಿಯೇ ಮುಳುಗೇಳುತ್ತಿರುವ ಅವರಿಗೆ ತನ್ನು ನಡೆಯೆಡೆಗೆ ಗಮನವೇ ಇರುವುದಿಲ್ಲ. ಇಷ್ಟಾದರೆ ಸರಿ. ಕಾಲ ಆ ಹೆಮ್ಮೆಯ ಪರ್ವತವನ್ನು ತುಳಿದು ಹಿಂದಿಕ್ಕಿ ಮುಂದೋಡಿ ಬಿಡುತ್ತದೆ. ಆ ದಕ್ಕೆ ಸೊಕ್ಕನ್ನು ತುಳಿದೇ ತೀರಬೇಕೆಂಬ ಜಪಲತೆ! ಅದ್ದರಿಂದ ಯಾವ ಮೋಹ, ಲೋಭ, ಅಹಂಕಾರಗಳಿಗೂ ನಾವು ಕಟ್ಟುಬೀಳದೆ ಅನಿರತ ಕ್ರಿಯಾಶೀಲರಾಗಿ ಕಾಲದೊಡನೆ ಹೆಜ್ಜೆ ಹಾಕಿದರೆ ನೂತ್ರ ನಮ್ಮ ಚೇತನಕ್ಕೆ ಬೆಲೆ ಮತ್ತು ಸಾರ್ಥಕತೆ ಇಲ್ಲದಿದ್ದರೆ ನಮ್ಮ ಚೇತನ ಮೃತಚೇತನ, ಜಡಕ್ಕೆ ಸಮ.

ಕೆಲಕಾಲ ಕಾಲದೊಡನೆ ಓಡಿದ ವ್ಯಕ್ತಿ ಒಂದರೆ ಕ್ಷಣ ಆಯಾಸ ಕಳೆಯಲೆಂದು ಕುಳಿತರೆ ಆತನಲ್ಲಿ ಒಂದು ವಿಚಿತ್ರ ಪರಿವರ್ತನೆ ಜರಗುವ ಸಂಭವವಿದೆ. ಒಂದು ಕ್ಷಣದಲ್ಲಿ ಚೇತರಿಸುವೆನೆಂದು ಬಗಿದ ಆವನು ಕೊನೆಯ ವರೆಗೂ ಚೇತರಿಸದಿರುವ ಭಯವಿದೆ. ಕೊನೆಯಿಲ್ಲದ ಆಯಾಸವೊಂದು ಆತನನ್ನು ಆವರಿಸಬಹುದು. ಮಾನಸಿಕ ದೌರ್ಬಲ್ಯ ಒಂದರ ಸೆರೆಯಲ್ಲಿ ಸಿಲುಕಿ ನಿಸ್ಸಾಹಾಯನಾಗಿ ಬಿಡಬಹುದು. ಮುಂದೆ ಮುಂದೆ ಓಡುತ್ತಿರುವ ಆಯಾಸಕ್ಕಿಂತ ಹಿಂದೆ ಕುಳಿತಿರುವ ನಿರಾಯಾಸವೇ ನೆಲೆಲು ಎಂಬ ಹುಚ್ಚುತ್ಕಲ್ಪನೆ ಆತನನ್ನು ಆವರಿಸುತ್ತದೆ. ಶ್ರಮದಿಂದ ಗೆದ್ದು ಕೀರ್ತಿಗಳಿಸುವುದಕ್ಕಿಂತ ಗೇಯದೆ ಸುಖವಾಗಿ ಕುಳಿತು ಆನಾಮಧೇಯನಾಗಿರುವುದು ಒಳಿತೆಂಬ ಒಂದುಜಾಡ್ಯ ಆತನಿಗೆ ಅಂಟಿಕೊಳ್ಳುತ್ತದೆ. ಇಲ್ಲೇ ಚೇತನ ಜೀವಿಯಾದ ಮಾನವ ಜಡದತ್ತ ಸರಿಯು ಹತ್ತುತ್ತಾನೆ. ಚೇತನಕ್ಕೆ ಆಯಾಸವಿಲ್ಲ. ಅದು ಚಿರನಪೋಲ್ಲಾಸದಿಂದ ತುಂಬಿರುವುದು. ಅದು ನಿಂತಿರುವುದಿಲ್ಲ. ಸದಾ ಹರಿಯುತ್ತಿರುತ್ತದೆ. ಹರಿಯದೆ ನಿಲ್ಲುವುದು ಜಡತ್ವದ ಲಕ್ಷಣ. ಚೇತನವು ಸದಾ ಬೆಳೆಯುತ್ತಿರುತ್ತದೆ. ಬೆಳೆಯದಿರುವುದು ಅಳಿಯುವ ಚಿಹ್ನೆ.

ಕಾಲದೊಡನೆ ಜಿಜ್ಞಿಹಾಕಲಿಚ್ಛಿಸುವ ಧೀಮಂತನಿಗೆ ಆದೊಂದು ಕಷ್ಟಕಾರ್ಯವಲ್ಲ. ಮೊದಮೊದಲು ಸ್ವಲ್ಪ ಕಸ್ಟವಾದರೂ ಮೆಲ್ಲ ಮೆಲ್ಲನೇ ಅದೊಂದು ಅಭ್ಯಾಸವಾಗಿ ಬಿಡುತ್ತದೆ ಕೊನೆಗೆ ಅದು ನಮಗೆ ತಿಳಿಯದಂತೆಯೇ ಜನರಿಗೆ ಗೊತ್ತಿಲ್ಲದಂತೆಯೇ ಜರಗಹತ್ತುತ್ತದೆ ಅಷ್ಟು ಸೂಕ್ಷ್ಮವಾಗಿ ಆ ಕ್ರಿಯೆ ಸಾಗುತ್ತದೆ. ಕ್ಷಣಬಿಡದೆ ಚಲಿಸುತ್ತಿರುವ ಗಡಿಯಾರದ ಮುಳ್ಳು ನಮಗೆ ನಿಂತಿರುವಂತೆಯೇ ಕಾಣುತ್ತದೆ. ಆದರೆ ಅದು ಘಟ್ಟಿಕ್ಕೆ ಬಂದಾಗ ಮಾತ್ರ ಗಂಟೆ ಬಡಿದು ತನ್ನ ಚಲಿಸುವಿಕೆಯನ್ನು ತಿಳಿಸುತ್ತದೆ. ಹಾಗೆಯೇ ನಮ್ಮಲ್ಲಿ ಜರಗುತ್ತಿರುವ ಪರಿವರ್ತನೆಗಳು ಸಹಾ. ಅದು ಒಂದು ಘಟ್ಟಿಕ್ಕೆ ಬಂದಾಗ ಮಾತ್ರ ಅದರ ಅರಿವಾಗುತ್ತದೆ. ಆದರೆ ಬಹಳ ಸೂಕ್ಷ್ಮ ಮತಿಯಾದ ಆತ್ಮನಿರೀಕ್ಷಕನು ಮಾತ್ರ ಅಂತರಾಗದಲ್ಲಿ ಜರಗುತ್ತಿರುವ ಈ ಬದಲಾವಣೆಗಳನ್ನು ಮುಬ್ಬು ಮಬ್ಬಾಗಿ ಕಾಣಬಲ್ಲ.

ಮಾನವ ಚೇತನದ ಪ್ರಗತಿಯೇ- ವಿಕಾಸವೇ ಆತನನ್ನು ಪ್ರಬುದ್ಧತ್ವದಿಂದ ಮಾನವತ್ವಕ್ಕೆ ತಂದು ನಿಲ್ಲಿಸಿದೆ. ಆದೇ ಮುಂದೆ ಆತನನ್ನು ದೇವತ್ವದೆಡೆಗೆ ಸಾಗಿಸ ಬಲ್ಲುದು. ನಿತ್ಯ ವಿಕಾಸಗೊಳ್ಳಲು ಚಡಪಡಿಸುತ್ತಿರುವ ಆ ಚೇತನವನ್ನು ಯಾವ ಬಂಧನಗಳಿಂದಲೂ ಕಟ್ಟಿ ಹಾಕದೆ ವಿಕಾಸವಾಗಗೊಡುವುದರಲ್ಲೇ ನಮ್ಮ ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸಬೇಕಾಗಿದೆ. ನನ್ನ ಹಿಂದಿನ ಕವನ ಒಂದರಲ್ಲಿ ನಾನು ಬರೆದ "ವ್ಯಕ್ತಿ ಕಾಲಗಳೆಂದರತುಲ ಸಮರದ ರವವು ಉಳಿಯ ಮೊರೆಯುತಲಿಹುದು ನಡೆಮುಂದೆ! ಮುಂದೆ!" ಎಂಬುದೇ ನಮ್ಮ ಗಾಯತ್ರಿಯಾಗ ಬೇಕಾಗಿದೆ. ಆಗವಾತ್ರ ನಾವು ಕಾಲವನ್ನೂ ಮಿಂಚಿ ಧೀಂಕಿಡಬಲ್ಲೆವು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಕರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಕದೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಳಿಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಜು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಋತುಶಕ್ತಿ ಗರ್ಭಕೋಶ ನಾಶಕೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನಹುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಟೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ದಾಖ್ಲಿ ಇಲ್ಲೆ ಶರೂ. ಪೋಸ್ಟ ಚಾರ್ಜ ೪ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಜೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

(ಕಳೆದ ಸಂಚಿಕೆಯಿಂದ ಮುಂದಕ್ಕೆ ಮುಂದುವರಿದುದು)

97. ಆಸ್ತೀಟರು, ಕೋಗ್ನೇಟರು (ಸಪಿಂಡ, ಭಿನ್ನಪಿಂಡ) ವಸ್ಯೆರೆ ಸಂತಾನಿಗರು, ಅವರ ಹಕ್ಕುಬಾಧ್ಯತೆಗಳು

ಅಳಿಯ ಸಂತಾನಿಗರಿಗೆ ಸಪಿಂಡ ವಸ್ಯೆರೆ ಬಂಧುಗಳೇ ಇಲ್ಲ. ಆಸ್ತಿಗಳಲ್ಲಿ ಇವರಿಗೆ ಹಕ್ಕೆಲ್ಲ. ಇದ್ದವರ ಹಕ್ಕುಗಳನ್ನು ನಾಶಪಡಿಸಿ, ಹಕ್ಕಿಲ್ಲದಿದ್ದವರಿಗೆ ಹಕ್ಕು ಸ್ಥಾಪಿಸುವುದು ನಮ್ಮ ಘಟನೆಗೆ ವಿರೋಧ; ಅನ್ಯಾಯ.

98–105 ಹಿಂದೂ ಶಾಸ್ತ್ರದ ರೀತಿಯಲ್ಲಿ ಯಾರಿಗೆ ಯಾವ ಯಾವ ಸಂದರ್ಭಗಳಲ್ಲಿ ಆಸ್ತಿಗಳಲ್ಲಿ ಹಕ್ಕು ಬರುವುದು ವಸ್ಯೆರೆ ವಿಚಾರಗಳು.

ಈ ಪ್ರಕರಣಗಳಲ್ಲಿ ಸೇರುವವರಿಗೆ ಅಳಿಯ ಸಂತಾನ ಕಾನೂನು ಪ್ರಕಾರ ಯಾವ ಹಕ್ಕೂ ಇಲ್ಲ. ಇದ್ದವರ ಹಕ್ಕು ನಾಶ ಮಾಡಿ ಅವರಿಗೆ ಗೆರಟೆ ಮತ್ತು ಕೋಲು ಕೊಟ್ಟು, ಹಕ್ಕಿಲ್ಲದವರಿಗೆ ಆಸ್ತಿಗಳನ್ನು ಧರ್ಮಾರ್ಥ ಕೊಡುವುದು ಯಾವ ನ್ಯಾಯ?

ಈ ಮೇಲೆ ವಿವರಿಸಿದ ಮತ್ತು ಇನ್ನೂ ಅನೇಕ ಕಾರಣಗಳಿಂದ ಈಗ ಇರುವಂತೆ ಹಿಂದೂ ಕೋಡನ್ನು ಅಳಿಯ ಸಂತಾನದವರಿಗೆ ಅನ್ವಯಿಸುವದರಲ್ಲಿ ಯಾವ ನ್ಯಾಯವೂ ಇಲ್ಲ ಅಲ್ಲದೆ ಹಾಗೆ ಮಾಡಿದರೆ ಅವರ ಕುಟುಂಬಗಳು ನಿಸ್ಸಂತಾನವಾಗುವವು. ಹಿಂದೂ ಮನು ಧರ್ಮ ಶಾಸ್ತ್ರ ಅವರಿಗೆ ತಿಳಿಯದು. ಹಿಂದೂ ಕೋಡು ಅವರನ್ನು ಜಡಿ ಮೇಲು ತಲೆ, ಕೆಳಗೆ ಮಾಡಿ ಆನಾಹುತ ತರುವುದರಲ್ಲಿ ಯಾವ ಸಂಶಯವೂ ಇಲ್ಲ. ಕೆಲವು ಅಳಿಯಕಟ್ಟಿಗೆ ಸಂಮಂಧಿಸಿದವರು ಈ ವಿಚಾರಗಳನ್ನು ತಿಳಿಯದೆ, ಸ್ವಪ್ನಪಡಿಸದೆ ದೊಡ್ಡ ದೊಡ್ಡ ಸಭೆಗಳಲ್ಲಿ ರಂಪಾಟಗಳನ್ನು ಪಾಸು ಮಾಡಿಸಿ ಹಿಂದೂ ಕೋಡಿಗೆ ಅಪಾಯ್ತಣವನ್ನು ಕೊಡುವುದು ನೋಡಿದರೆ ಆಶ್ಚರ್ಯವೆನಿಸುತ್ತದೆ. ಅಂಥವರನ್ನು ವಿಚಾರಿಸಿದಲ್ಲಿ ಅವರು ವಿಷಯಗಳನ್ನು ತಿಳಿಯದೆ, ಅನುಭವ ಮಾಡಿಕೊಳ್ಳದೆ ಮುಂದರಿಸಿದ್ದಾಗಿ ಕಂಡು ಬರುತ್ತದೆ.

8. ಕೇಂದ್ರ ಸರಕಾರದ ಕಡೆಯಿಂದ ಡಾ। ಅಂಬೇಡ್ಕರರು ತಿರುವಾಂಕೂರಿಗೆ ಹೋಗಿ ಅಲ್ಲಿಯವರ ಕೂಡೆ ವಿಚಾರ ವಿನಿಮಯ ಮಾಡಿದ ನಂತರ ಅಲ್ಲಿಯವರು ಮರುಮಕ್ಕತ್ತಾಯ ಕಾನೂನನ್ನು ಹಿಂದೂ ಕೋಡಿಗೆ ಸೇರಿಸುವುದಾದಲ್ಲಿ ಕೆಲವು ಬದಲಾವಣೆಗಳನ್ನೂ, 8ನೇ ಸೆಡ್ಯೂಲನ್ನೂ ಅವರ ಬಗ್ಗೆ ಪ್ರತ್ಯೇಕ ಮಾಡಬೇಕಾಗಿ ಆ ಬಾಬತ್ತಿನಲ್ಲಿ ಒಂದು ನಕಲನ್ನು ತಯಾರಿಸಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಮದ್ರಾಸ್ ಸರಕಾರದವರು ಈ ನಕಲನ್ನು ಇಲ್ಲಿ ಕೆಲವರಿಗೆ ಕೊಟ್ಟು ಅವರ ಅಭಿಪ್ರಾಯ ಕೇಳಿಕೊಂಡಿದ್ದಾರೆ. ಆ ಪ್ರಯುಕ್ತ ಮಂಗಳೂರಲ್ಲಿ ತಾ. 20-7-50ರಲ್ಲಿ ಮತ್ತು ತಾ. 23-7-50ರಲ್ಲು ಎರಡು ಸಭೆಗಳು ನಡೆದವು. ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ತಾ. 20ರಲ್ಲು ನಡೆದ ಸಭೆಯಲ್ಲಿ, ಅಳಿಯ ಸಂತಾನ ಅನುಯಾಯಿಗಳಲ್ಲಿ ಅವಿಭಕ್ತ ಕುಟುಂಬವಿರಬೇಕಾಗಿ

ಹೊಸ ಹಿಂದೂ ಕೋಡಿನಲ್ಲಿ ಮುಚ್ಚು ಅಳಿಯ ಸಂತಾನ

[ಶ್ರೀ ಕ ಬಿ. ಜಿನರಾಜ ಹೆಗ್ಡೆ, ಎಮ್ಮೆಕೆಟ]

ಯೂ, ಹಿಂದೂ ಕೋಡಿನಲ್ಲಿ ಮದ್ರಾಸಿನ 1949ನೇ ಇಸವಿಯ ಅಳಿಸಂತಾನ ಆಕ್ಟನ್ನು ಸೇರಿಸಬಹುದಾಗಿಯೂ, ಅವರೂ ಸಾಧ್ಯವಿಲ್ಲದಿದ್ದಲ್ಲಿ ತಲೆಮಾರು ಪ್ರಕಾರ ಸಂಪೂರ್ಣ ಹಕ್ಕಿನೊಡನೆ ಪಾಲು ಮಾಡಿ ಪ್ರತ್ಯೇಕ ಸಿಗುವಂತೆ ಕಾನೂನು ಮಾಡತಕ್ಕದ್ದೆಂಬುದಾಗಿ ಮೊದಲಾದ ಇತ್ಯರ್ಥಗಳು ಬಹುಮತದಿಂದ ನಿಶ್ಚಯವಾದುವು. ತಾ. 23-7-50ರಲ್ಲು ಡಿಬೇಟಿನಲ್ಲಿ ಮಾನ್ಯ ಶ್ರೀ. ಎ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ನಡೆದು ವಿಟಿಂಗಿನಲ್ಲಿ ಮದ್ರಾಸ್ ಸರಕಾರದ ಕಡೆಯಿಂದ ಅಳಿಯ ಸಂತಾನದವರಿಗೆ ತಾವು ಮಾಡಬಹುದಾದ ಒಂದು ಪ್ರಕರಣವನ್ನು ಮುಂದಿಟ್ಟು ಆ ಬಾಬತ್ತಿನಲ್ಲಿ ವೈತ್ಯಾಸಗಳು ಬೇಕಾದರೆ ಅವರಿಗೆ ತಿಳಿಸಬೇಕಾಗಿ ಸೂಚಿಸಿದರು. ಹಿಂದೂ ಕುಟುಂಬಗಳಲ್ಲಿ ಅವಿಭಕ್ತ ಕುಟುಂಬಗಳು ಉಳಿಯುವುವು. ಅಳಿಯ ಸಂತಾನದವರಲ್ಲಿ ಕೂಡ ಅವಿಭಕ್ತ ಕುಟುಂಬಗಳು ಉಳಿಯುವಂತೆ ಸೂಚಿಸಬಹುದಾಗಿ ಸರಕಾರದ ಹೇಳಿಕೆಯಿತ್ತು. ಈವರೆಗೆ ನಡೆದ ಎಲ್ಲಾ ವಿಚಾರಗಳನ್ನು ಯೋಚಿಸುವಾಗ ಹಿಂದೂ ಕೋಡಿನಲ್ಲಿ ಒಂದು ಹೊಸರೂಪದ ಅವಿಭಕ್ತ ಕುಟುಂಬಗಳು ಉಳಿಯುವಂತೆ ಕಾಣುತ್ತಿದೆ. ಹೀಗಿರುವಾಗ ಅಳಿಯ ಸಂತಾನದವರಲ್ಲಿಯೂ ಹೊಸರೂಪದ ಕುಟುಂಬ ಯಾಕೆ ಇರಗೊಳಿಸಬಾರದು? ಅವುಗಳನ್ನು ಈಗಲೇ ನಾಶಪಡಿಸುವ ಕಾರಣವೇನು? ಇಲೆಕ್ಯನೇ ಕಾರಣವಿರಬಹುದೆ?

9 ಕಾರಣಗಳು ಏನೇ ಇರಬಹುದು. ಇರಲಿ, ಮದ್ರಾಸ್ ಸರಕಾರದವರು ಸೂಚಿಸಿದ ಹೊಸ ಪ್ರಕರಣವು ಸರಿಯಾದದ್ದಲ್ಲ 1949ನೇ ಅಕ್ಟೋಬರ್ ಈ ಹೊಸ ಪ್ರಕರಣಕ್ಕೂ ಅನೇಕ ವ್ಯತ್ಯಾಸಗಳು ಕಾಣುತ್ತಿವೆ. ಹಿಂದೂ ಕೋಡಿನಲ್ಲಿ ಅಳಿಯ ಸಂತಾನ ಆಕ್ಟನ್ನು ಇದ್ದಂತೆ ಸೇರಿಸಿಕೊಳ್ಳಬಹುದು. ಈಗಿನ ಹಿಂದೂ ಕೋಡು ಲಗಾವು ಮಾಡುವುದು ಅನುಚಿತ.

10 ಈ ಎಲ್ಲಾ ವಿಚಾರಗಳನ್ನು ಸ್ಪಷ್ಟವಾಗಿ ಡಾ। ಅಂಬೇಡ್ಕರರಿಗೆ ನಾನು ತಿಳಿಸಿದ್ದೇನೆ. ಆ ಎಲ್ಲಾ ವಿಚಾರಗಳು ಹಿಂದೂ ಕೋಡು ಮಸೂದೆಗೆ ಅಪೈರಿ ಕೊನೆಕೊಡುವ ವೇಳೆ ಖಂಡಿತವಾಗಿಯೂ ಯೋಚಿಸಲಾಗುವುದೆಂದು ಭರವಸೆ ಕೊಟ್ಟಿರುತ್ತಾರೆ. ಅಳಿಯ ಸಂತಾನ ಅನುಯಾಯಿಗಳು ಈ ಎಲ್ಲಾ ವಿಚಾರಗಳನ್ನು ಯೋಚಿಸಿ ತಮಗೆ ಹಿಂದೂ ಕೋಡು ಲಗಾವು ಮಾಡುವುದು ಉಚಿತವೋ ಅನುಚಿತವೋ ಏನೆಂಬುದನ್ನು ಅಗತ್ಯ ವಿಚಾರಿಸಿಕೊಳ್ಳಬೇಕು.

ಹಿಂದೂ ಕೋಡಿಗೆ, ಅಳಿಯ ಸಂತಾನಿಗರಿಗಾಗಿ ಮದ್ರಾಸು ಸರಕಾರದಿಂದ ಸೂಚಿಸಲ್ಪಟ್ಟಿದ್ದು, ತಾ. 23-7-50ರಲ್ಲಿ ನುಂಗಳೂರಲ್ಲಿ ಸೇರಿದ್ದ ಅಳಿಯ ಸಂತಾನಿಗರ ಸಭೆಯ ಮುಂದೆ ಇಡಲ್ಪಟ್ಟ ತಿದ್ದುಪಡಿ.

ಸೆಕ್ಷನ್ 90-1.

(1) ಈ ಕೋಡು ಜಾರಿಗೆ ಬರುವ ಹೊತ್ತಿನಲ್ಲಿ ಒಂದು ಕುಟುಂಬದ ಸರ್ವ ಸಮಾನ ಹಿರಿಯಳು ಜೀವಂತವಿಲ್ಲದೆ, ಅಥವಾ ಕುಟುಂಬದ ಮೆಂಬರಳಾಗಿರದೆ, ಸಂದರ್ಭದಲ್ಲಿ, ಅಂತಹ ಕುಟುಂಬವು ಕವರುಗಳಾಗಿ ವಿಭಾಗಿಸಲ್ಪಡುವಂತಿದ್ದರೆ ಕುಟುಂಬದ ಆಸ್ತಿಯಲ್ಲಿ ಪ್ರತಿಯೊಂದು ಕವರಿನ ಪಾಲು ಮತ್ತದರ ಹಕ್ಕು ಸಂಬಂಧಗಳ ರೀತಿಯ 1949ನೇ ಮದ್ರಾಸ್ ಅಳಿಯ ಸಂತಾನಕಾನೂನಿನ ಸೆಕ್ಷನ್ 36ರಪ್ರಕರಣಗಳಿಗನುಗುಣವಾಗಿಯೇ ನಿರ್ಧರಿಸಲ್ಪಡತಕ್ಕದ್ದು.

(2) 1949ನೇ ಮದ್ರಾಸ್ ಅಳಿಯ ಸಂತಾನ ಕಾನೂನಿನನ್ವಯ, ಅಥವಾ ಆ ಕಾನೂನಿನೊಂದಿಗಿನ ಅರ್ಥನಿರೂಪಣಾ ಸಬ್ ಸೆಕ್ಷನು (1) ಅನ್ವಯ, ಕುಟುಂಬದ ಆಸ್ತಿಗಳಲ್ಲಿ ಕೇವಲ ಜೀವಾಂತ್ಯದ ವರಿಗಿನ ಹಕ್ಕು ಬಾಧ್ಯತೆಗಳನ್ನಷ್ಟೇ ವಡೆದಿರುವರೆವ ಯಾವುದೇ ಕವರಿನ ಅಂತಹ ಜೀವಾವಧಿ ಹಕ್ಕು ಬಾಧ್ಯತೆಯು—ಕುಟುಂಬದಿಂದ ವಿಭಜಿಸಲ್ಪಟ್ಟಿದ್ದ ಅಥವಾ ವಿಭಜಿಸಲು ಬದ್ಧವಾಗಿರುವ, ಅಥವಾ ಅಂತಹ ಯಾವುದೇ ಕವರು ತನ್ನೊಳಗೂ ಒಳ ವಿಧಾಗವಾಗಿರುವ ಉಳಿದ ಕವರುಗಳಲ್ಲಿ ಯಾವುದರಲ್ಲೂ 30 ವರುಷ ವ್ಯಾಯ ಪೂರ್ಣವಾಗದ ಸ್ತ್ರೀ ಮೆಂಬರಳಾರೂ ಇಲ್ಲದೆ ಹೋದರೆ, ಸಂಪೂರ್ಣ ಹಕ್ಕಾಗಿ ಬೆಳೆಯುವಂತಹದಿದೆ.

(3) ಮದ್ರಾಸ್ ಅಳಿಯ ಸಂತಾನ ಕಾನೂನು 1949, ಇದರ ಮೇರೆಗಾಗಲೀ, ಅಥವಾ ಆ ಕಾನೂನಿನೊಂದಿಗಿನ ಭಾವನಿರೂಪಕ ಸಬ್ ಸೆಕ್ಷನ್ (1) ರಂತಾಗಲೀ ಆಸ್ತಿಯಲ್ಲಿ ಕೇವಲ ಜೀವಾವಧಿ ಹಕ್ಕು ಬಾಧ್ಯತೆಯನ್ನು ಒಂದು ಕವರು ಪಡೆದಿದ್ದು, ಸಬ್ ಸೆಕ್ಷನ್ (2) ರನ್ವಯ ಆ ಹಕ್ಕು ಬಾಧ್ಯತೆಗಳು ಸಂಪೂರ್ಣ ಹಕ್ಕಾಗುವಂತಿರದಿದ್ದಲ್ಲಿ, ಆ ಕವರಿನ ಕೊನೆಯ ಮೆಂಬರನ ಮರಣಾನಂತರ ಆ ಕವರಿನ ಆಸ್ತಿಗಳು, 30 ವರುಷ ವ್ಯಾಯ ತುಂಬಿದ ಸ್ತ್ರೀ ಮೆಂಬರಳಿರುವ ಸಮೀಪದ ಕವರಿಗೂ, ಅಂತಹ ಕವರುಗಳು ಎರಡು ಅಥವಾ ಹೆಚ್ಚಿಗೆಯಿದ್ದು, ಎಲ್ಲವೂ ಸಮಾನ ಸಮೀಪವಂಗಿದ್ದಲ್ಲಿ, ಅವುಗಳೊಳಗೆ ಸರಿಸಮ ಪಾಲಾಗಿಯೂ ಹೋಗತಕ್ಕದ್ದು.

(4) ಈ ಕೋಡು ಜಾರಿಗೆ ಬಂದ ನಂತರ, ಸೆಕ್ಷನ್ 90-1ರ ಸಬ್ ಸೆಕ್ಷನ್ (1)ರ ಮೇರೆಗೆ ಒಂದು ಕವರಿನ ಅಥವಾ ಕುಟುಂಬದ ವ್ಯಾಯಸ್ಥ ಮೆಂಬರನು ಅಥವಾ ಮೆಂಬರಳು ಪಾಲು ಕೇಳುವುದಾದರೆ ಅವನು ಅಥವಾ ಅವಳು—

(a) ಕವರಿನ ಎಲ್ಲಾ ಮೆಂಬರರೊಳಗೆ ಆಗ ತಲೆವಾರು ಪಾಲಾದರೆ ಒಬ್ಬನಿಗೆ ಸಿಗುವ ಬೀಳುವುದೋ ಸ್ವತ್ತು ಹಕ್ಕನ್ನು ಪಡೆಯಲು ಹಕ್ಕುದಾರರಿದ್ದಾರೆ. ಮತ್ತು

(b) ಸಂಬಂಧಪಟ್ಟ ಕವರಿಗೆ ಆಸ್ತಿಗಳಲ್ಲಿ ಪೂರ್ಣ ಹಕ್ಕು ಇದೆಯೋ ಅಥವಾ ಜೀವಾವಧಿ ಹಕ್ಕು ಮಾತ್ರವೋ ಎಂಬುದನ್ನು ಅನುಸರಿಸಿ, ಅಂದರೆ ಮಾದರಿಯ ಸಂಪೂರ್ಣ ಅಥವಾ ಜೀವಾವಧಿ ಹಕ್ಕು ಬಾಧ್ಯತೆಗಳನ್ನು ಅವನು ಅಥವಾ ಅವಳು ಪಡೆಯತಕ್ಕದ್ದು.

ಆದರೆ, ಅಂತಹ ಆಸ್ತಿಗಳ ಮೇಲಿನ ಕವರಿನ ಜೀವಾವಧಿ ಹಕ್ಕು ಬಾಧ್ಯತೆಗಳು ಸಂಪೂರ್ಣ ಹಕ್ಕಾಗಿ ಮಾರ್ಪಟ್ಟಲ್ಲಿ, ಕವರು ಅದೇ ರೀತಿ ಆಸ್ತಿತ್ವದಲ್ಲಿದ್ದಲ್ಲ. ಕೇವಲ ಜೀವಾವಧಿ ಹಕ್ಕಿನ ಅಂತಹ ಪಾಲನ್ನು ಪಡಕೊಂಡ ವ್ಯಾಯಸ್ಥ ಮೆಂಬರನ ಹಕ್ಕು ಬಾಧ್ಯತೆಗಳು ಪರಿಪೂರ್ಣಾಧಿಕಾರವಾಗಿ ವಿಸ್ತಾರಹೊಂದತಕ್ಕದ್ದು.

* English Made Easy *

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪ ಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ರೂ. 1-8-0 ಮಾತ್ರ

ಸರ್ವಭಾರತ ಪುಸ್ತಕ ಭಂಡಾರ, ಉಡುಪಿ.

EDITED, PRINTED & PUBLISHED BY K. H SHETTY AT THE NAVAYUGA PRESS, UDIPI, S.INDIA

Regd. No. M. 3618 | 31—8—1950 | Estd 1921 ಸ್ಥಾಪನೆ.

LICENCE No. 31
Licensed to Post without Prepayment

Founder Sri A. B Shetty,
Minister for Agriculture & Veterinary.

ವರ್ಷ ೩೦ ವಾರ ೫೨A | NAVAYUGA WEEKLY | UDIPI, S. K. POST BOX NO. 22 | Vol. 30 No 52A

ಗಡಿಮೀರದಂತೆ-ಕಡಿವಾಣವಿರಲಿ!

ಸರ್ವ ಸಾಮಾನ್ಯವಾಗಿ ಮನುಷ್ಯನ ತೃಪ್ತಿ ಮತ್ತು ಅತೃಪ್ತಿ, ಇವೆರಡಕ್ಕೂ ಮಿತಿಯೆಂಬುದಿಲ್ಲ. ಜೀವನದಲ್ಲಿ ಯಾವುದೇ ವಿಧಾನದಿಂದ ಎಂತಹ ಔನ್ನತ್ಯವನ್ನು ಗಳಿಸಿದರೂ, ಅದು ಸಾಕಷ್ಟಾಯಿತು ಅನ್ನಿಸುವಂತಿಲ್ಲ; ಅದೇರೀತಿ, ಬವಣೆ ಇಳಿಜಾರಿದರೂ ಸಂತಾಪ ಪಡುವದಂತೂ ಇದ್ದದ್ದೇ.

ಮನುಷ್ಯನ ಆಹಾರ, ಪೋಷಾಕಿನಿಂದಾರಂಭಿಸಿ, ಅತಿಥ ಅಭ್ಯಾಗತರ ಪ್ರತಿಯೊಂದು ವಿಷಯದಲ್ಲೂ 'ಒಬ್ಬನ ಗಿಂತಿಷ್ಟು' ಎಂಬ ಇತಿಮಿತಿಯಿದ್ದೇ ಇರುತ್ತದೆ. ಅಂತಹ ನಿಯಂತ್ರಣ ಆಧುನಿಕ ಸಮಸ್ಯೆಗೇ ಕ್ರಮವಿಲ್ಲದಿರುವುದೆಂದರೆ ಸುಖ ದುಃಖಗಳ ಮಟ್ಟಿಗೆ ಮಾತ್ರ.

ಬೇರಾವುದರಲ್ಲಿ ಎತಹ ಸಮತಾ ವ್ಯವಸ್ಥೆ ಇಂದಾರೂ ಸುಖ ದುಃಖಗಳ ಮಟ್ಟಿಗೆ ಅದು ಅಸಾಧ್ಯವಾದ್ದರಿಂದಲೇ, ಒಂದು ಹದಮಿತಿಯಲ್ಲದೆ ಜನರು ಅವುಗಳನ್ನು ಅನುಭೋಗಿಸುತಿದ್ದಾರೆ. ಎಷ್ಟು ದೊರೆತರೂ ತೃಪ್ತಿ ಪಡದವರೂ ಮತ್ತು ಕೇವಲ ಅಲ್ಪಾಂಶ ಕಡಿಮೆ ಬಿದ್ದುದಕ್ಕೂ ಅತಿರೇಕ ಅತೃಪ್ತಿ ಪಡುವವರು ತುಂಬಿ ಹೋಗಿದ್ದಾರೆ.

ಶ್ರೀಮಂತಿಕೆಗೇರಿದರೂ ಮತ್ತೂ ಧನಿಕನಾಗಬೇಕೆಂಬ ಹಂಬಲವನ್ನು ಕಟ್ಟಿಕೊಂಡವರು ಹಣ-ತುಂಬುತ್ತಾ ಬಂದ ಹರಿಮಾಣಕ್ಕನುಸರಿಸಿ ಹಣದ ಆಸೆ ಹೆಚ್ಚುತ್ತಾ ಹೋಗುವವರು—ಎಲ್ಲೂ ಬಿಲ್ಲಾ, ದಾಲ್ಮಿಯಾರಂಥವರು ಕೂಡಾ ತಮ್ಮ ಭಂಡವಾಳ ಹೆಚ್ಚಿಸುವುದರಲ್ಲಿದ್ದಾರೆ ಹೊರತು ಬೇರಿಲ್ಲ

ರಾಜ್ಯದ ಅಥವಾ ಭೂಮ್ಯಾಕಾಕ್ಷೆಗಳು ಕೂಡಾ ಹೀಗೆಯೇ- ಎಷ್ಟು ದೇಶಗಳನ್ನು ಗೆದ್ದುಕೊಂಡರೂ ಮತ್ತೂ ಗೆಲ್ಲಬೇಕೆಂಬ ಆಶೆಯಿಂದಲೇ ಅಂದಿನ ನೆಪೋಲಿಯನ್ ಮತ್ತು ಹೊನ್ನೆಯ ಹಿಟ್ಲರ್ ಥರಾದವರು ಆಸ್ತಿವಾಸ್ತಿಗಳನ್ನು ಕೂಡ ಜಾಕಿದವರು ಮತ್ತೂ ಯಾರ ಭೂಮಿ ಹರಿಜಿಗಿದೆ, ಎಂದು ಎಂದೆಂದಿನವರೆಗೂ ಹೊಂಚು ಹಾಕುತ್ತಲೇ ಇರುತ್ತಾರೆ

ಕೀರ್ತಿಯ ಮಾತು ಕೂಡಾ ಇದಕ್ಕಿಂತ ಭಿನ್ನವಾಗಿಲ್ಲ. ಲೋಕವ್ಯಾಪೀ ಯಶಸ್ಸನು ಗಳಿಸಿದವರು ನುತ್ತೂ ಮತ್ತೂ ಅದನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸುತ್ತಾರೆ ಹೊರತು, ಯಾವುದಾದರೊಂದು ಗಡಿಯಲ್ಲಿ ತಟಸ್ಥರಾಗುವದೆಂದಿಲ್ಲ. ಜಗದ್ವಂದ್ಯ ಮಹಾತ್ಮಾ ಗಾಂಧಿಜಿಯವರು ಕೂಡಾ ತಾನಿನ್ನೂ ಅಪೂರ್ಣನೆನ್ನುತ್ತಾ ಸುತ್ತೂ ಹೆಚ್ಚಿನ ಕೀರ್ತಿ ಸಂಪಾದನೆಯಲ್ಲೇ ನಿರತರಿದ್ದರು.

ಅಭಿವೃದ್ಧಿಯು ಮಟ್ಟಿಗೆ ಹೇಗೋ ಅವನತಿಯ ಮಟ್ಟಿಗೂ ಹಾಗೆಯೇ. ಇಲ್ಲಿಯಾದರೂ ಎಲ್ಲರಿಗಾಗುವ ಒಂದು ಮಟ್ಟವನ್ನು ನಿರ್ಣಯಿಸೋಣವೆಂದರಾಗುವದಿಲ್ಲ.

ಒಬ್ಬನು ಚೂರೀತಿವಿತಕ್ಕೀಡಾಗಿ ಯಾತನೆಯನ್ನಭವಿಸುತಿದ್ದರೆ, ಮತ್ತೊಬ್ಬನು ಮುಳ್ಳು ನಾಟಿದರೂ ನರಳುತ್ತಾನೆ. ಮಗು ತೀರಿಹೋದ ದುಃಖವನ್ನನುಭವಿಸುವವಳೊಬ್ಬಳಿದ್ದರೆ, ಅಂತಹ ದುಃಖಕ್ಕವಕಾಶವಿಲ್ಲದವಳು ಮಗು ದೂರ ಹೋದುದಕ್ಕಾಗಿ ಕೋಕಿಸುವವಳಿದೆ. ಹಲವು ದಿನಗಳ ನಿರಾಹಾರದಿಂದ ಸಾಯುವವರಂಬಹುದಾದರೆ, ಒಂದಾನ್ನ ಅಕ್ಕಿ ಕಡಿಮೆಯಾದುದಕ್ಕಾಗಿಯೇ ಬಹಳ ನೋಯುವವರಿದ್ದಾರೆ.

ದಿನ ನಿರ್ವಹಣಕ್ಕೆ ಚಿಕ್ಕಾಸಿಲ್ಲವೆಂಬ ದುಃಖವಿರುವವರಂತೆಯೇ ತನ್ನ ಐದಂಕಿಗಳ ಆದಾಯದಲ್ಲಿ ನೂರರ ಅಂಬೆ ಕಡಿಮೆ ಬಿದ್ದುದಕ್ಕಾಗಿ ದುಃಖ ಪಡುವವರಿಗೇನೂ ಕೊರತೆಯಿಲ್ಲ. ಬಹುರಂಗ ತಾಡನದಿಂದ ಮಾನ ಹೋಯಿತೆಂದು ನೊಂದುಕೊಳ್ಳುವವರಂತೆಯೇ, ತನಗೆಗೊಬ್ಬ ಬಗ್ಗಿ ಕೈಮುಗಿಯದ ಕಾರಣದಿಂದ ಮರ್ಯಾದೆಗೆ ಕುಂದು ಬಂತೆಂದು ಕುದಿಯುವವರೂ ಇದ್ದಾರೆ.

ಅಂತೂ ಇವೆಲ್ಲಾ ಏರು ತಗ್ಗುಗಳಿಗೆ ಕನಿಷ್ಠ ಅಥವಾ ಪರಮಾವಧಿಯ ಮಿತಿಯೆಂಬುದಿಲ್ಲವೇ ಇಲ್ಲ. ಈ ಸಮಾನತಾ ನಿಯಮವಿಲ್ಲದ್ದರಿಂದಲೇ ಸುಖ ದುಃಖಗಳು ಜನತೆಯ ನಡುವೆ ಯಥಾತ್ವತಥ್ವ ವಿತರಣೆ ಗೊಳ್ಳುತ್ತಿವೆ. ಅವುಗಳ ಅನುಭೋಗದಲ್ಲಾದರೂ ಹೆಚ್ಚು ಕಡಿಮೆಯು ತಾರತಮ್ಯವಾದರೆ ಎಲ್ಲರಲ್ಲೂ ಏಕ ಪ್ರಕಾರ ವಿರದಂತಾಗಿದೆ.

ಸಾಮಾನ್ಯ ಮಾನವ ಸ್ವಭಾವವೇ ಹೀಗಿದೆ, ಎಂದ ಮೇಲೆ, ಸಂಸ್ಕಾರ, ಅನುಭವ, ಸಹನೆ, ತುಲನೆ ಮುಂತಾದ ಅಮೂಲ್ಯ ತೆಗಳನ್ನು ಹೆಚ್ಚಿಸಿಕೊಂಡೇ ಒಂದು ಸಮಮಟ್ಟಕ್ಕೆ ಜನ ಮನೋಗತಿ ಬರಬೇಕಾಗಿದೆ.

ಭಾರತದ ಸಾರ್ವಜನಿಕ ಮನೋವೃತ್ತಿ ಇಂದು ಆ ಮಟ್ಟಕ್ಕೆ ಬಂದಿಲ್ಲವಾದ್ದರಿಂದಲೇ ಸ್ವತಂತ್ರಾಡಳಿತೆಯ ಕುಂತು ಹೆಚ್ಚಿನವರಲ್ಲಿ ಅತಿರೇಕ ಹಾಗೂ ಅನುಚಿತ ಪರಿಮಾಣದ ಅತೃಪ್ತಿವ್ಯಾಪಿಸಿ ಹೋಗಿದ್ದು ಇನ್ನು ಕೆಲವರಲ್ಲಿ ಮಿತಿಮೀರಿದ ಹೆಗ್ಗಳಿಕೆ ತುಂಬಿಕೊಂಡಿದೆ

ಈ ರೀತಿ ಇಕ್ಕಡೆಗಳ ಸಂಹಪದ್ದುಗಳನ್ನು ದಾಟುವ ಅತೃಪ್ತಿ ಮತ್ತು ಆತ್ಮ ಸಮಾಧಾನಗಳನ್ನು ಹಿಂದಕ್ಕೆಳೆಸುಕೊಳ್ಳುವ ಕಡಿವಾಣಗಳು ಅಲ್ಲಲ್ಲೇ ಬೀಳಬೇಕಾದುದು ಜಗತ್ಯ. ಪರಿಸ್ಥಿತಿಯಲ್ಲಿ ಈ ಸಂಕೋಚಾತಿರೇಕ ಸ್ವಭಾವ ಬಲ್ಯಗಳನ್ನು ಪೂರ್ಣ ಕತ್ತರಿಸಿಕೊಳ್ಳುವವರೆಗಂತಲೂ ಗಡಿಮೀರಿದವಲ್ಲಂದೆ ಒಳಗದೆಗೆಳೆದುಕೊಳ್ಳುವುದು ಸುಲಭ ಅದು ಹೇಗೆ?

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ವಿ। ಹೊಸಕೆರೆ ಶಿವಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲಿ ಇರುವುದಲ್ಲದೆ ಮೂಲದಲ್ಲಿ ಸಂಜೆವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ಒಪದಲ್ಲಿಳಿದ ಭಟ್ಟಿಯಾಗಿ ಎದ್ದು ಕಾಣುವುದು

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಒಕ್ಕ್‌ಪೋಸ್ಟಿನಿಂದ ಕಳಿಸಲಾಗುವುದು

ಪ್ರತಿಗಳು ಸಿಗುವ ಮುಖ್ಯ ಸ್ಥಳ—

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ

THE UNITED KARNATAK INSURANCE COMPANY, LTD., DHARWAR.
Established 1929

Offers their valuable service to the public of India in making their sweet home, always happy.
For good investments and valuable connections, please consult us.

ಸ್ವತಂತ್ರಾಡಳಿತೆಯಲ್ಲಿ ಇದುವರೆಗಾದ ಪ್ರಗತಿ ತೀರಾ ಕಡಿಮೆಯೆಂಬ ಆಕ್ಷೇಪಿಯಿರುವವರು, ನಾಳೆ ತಾವಾದರೂ ಅಂತಹ ಪ್ರಗತಿ ಸಾಧಿಸಲಾಗುವಂತಹ ಶಾಂತ ವಾತಾವರಣ ನಿರ್ಮಾಣಗೊಂಡಿದೆಯ ಲ್ಲಾ ಎಂದು ಸಮಾಧಾನ ಪಡಬೇಕು. ಬದಲಿಗೆ ಪಾಕಿಸ್ತಾನದಂತಹ ರಾಜಸ್ತಾನವನ್ನು ನಿರ್ಮಿಸುವ ಗೊಂದಲವಾಗಿ ಅಶ್ರಿತ ರಾಜ್ಯಗಳ ಸಮಸ್ಯೆ ಬೆಳೆಯುತಿದ್ದರೆ—ಒಂಗಾಳ,ವಂಜಾಬುಗಳಲ್ಲಾದ ಅಂದಿನ ಜಾತೀಯ ಗಲಭೆಗಳು ಮಿಕ್ಕ ಪ್ರಾಂತ್ಯಗಳಿಗೂ ವ್ಯಾಪಿಸಿಕೊಂಡು ಈ ವರೆಗೂ ಮುಂದುವರಿಯುತಿದ್ದರೆ-ಈಗ ಎಂತಹ ಸ್ಥಿತಿಯು ಇರುತ್ತಿತ್ತು ಎಂಬುದನ್ನು ನೆನಸಿಕೊಳ್ಳಬೇಕು.

ಅಡ ಒಳ್ಳತೆಸ್ಪು ಎಂಬುದೊಂದನ್ನೇ ಲೆಕ್ಕಹಾಕುವ ಬದಲಿಗೆ, ಆಗದೆ ತಪ್ಪಿ ಹೋದ ಕೆಡುಕೆಸ್ಪು ಎಂಬುದನ್ನೂ ಗಣಿಸಿಕೊಳ್ಳಬೇಕು. ಈಗಿನ ರಾಷ್ಟ್ರನಾಯಕರಲ್ಲಿ ಇಂತಹ ದೋಸಗಳಿವೆ ಎಂಬುದರ ಕಡೆಗೆ ಮಾತ್ರ ಕೈತೋರಿಸದೆ ಆ ನಾಯಕರು ಅಲ್ಲಿರದಿದ್ದ ಪಕ್ಷದಲ್ಲಿ ಇಂದು ಆ ಸ್ಥಾನ ಹೇಗಾಗುತಿತ್ತು ಮತ್ತು ಎಂಥವರಾಗುತಿತ್ತು ಎಂಬ ಕಂಪವನೀಯತೆಯ ಕಡೆಗೂ ಒಮ್ಮೆ ಇಣಿಕಿಕೊಳ್ಳಬೇಕು.

ಕಾಶ್ಮೀರದಂತಹ ವಿವಾದಗಳ ಕುರಿತು ನಾರಿತವು ವಹಿಸಿರವ ಧೋರಣೆಯಲ್ಲಿ ಕೇಡಿಕನವನ್ನು ಕಾಣುವವರು, ಇಲ್ಲಿಯಂತೆ ಇಕ್ಕಡೀ ತುಂಡು ರಾಷ್ಟ್ರಗಳಾಗಿರುವ ಕೊರಿಯದ ಎರಡು ಭಾಗಗಳವರು ಉದ್ರೇಕ ರ್ತನೆ ವಹಿಸಿದುದರ ಪರಿಣಾಮವಾಗಿಯೇ ಕೊರಿಯಎಂದು ಯಾವರೀತಿ ಪ್ರ ರಂಚದ ಎರಡು ರಾಷ್ಟ್ರ ಪಾಕಯಗಳ ಕೋರಾಟರೂಪಗಳಾಗಿ ಸರಿಣಾಮಿಸಿದೆ ಎಂ ಎಂದನ್ನು ನೋಡಿಕೊಳ್ಳ ಬೇಕು

ಆಹಾರ ಧಾನ್ಯಗಳ ಲೆಲವಂಶ ಕಡಿಮೆ ಸಕ್ಕುತ್ತಿರುವ ಕಾರಣಕ್ಕಾಗಿ ಇಂದಿನ ಆಡಳಿತೆಯನ್ನು ವಿಮಿಮೀರಿ ಟೀಕಿಸುತ್ತಿರುವವರು, 60ಲಕ್ಷ ಮಂದಿಯನ್ನು ಬಲಿಪಡೆದ ಅಂದಿನ ಬಂಗಾಳದ ಬಂಗಾಳವನ್ನೂ, ಕಮ್ಯೂನಿಸ್ಟ್ ಅಡಳಿತೆಯಲ್ಲೇ ಲಕ್ಷಾವಧಿ ಪ್ರಾಣಗಳನ್ನು ಒಲಪಡೆಯುತ್ತಿರುವ ಇಂದಿನ ಚೀನಾ ಬರಗಾಲವನ್ನೂ ನೆನಸಿಕೊಂಡೇ, ಇಂದಿನ ಸ್ವತಂತ್ರ ಕಳಿಕೆಯಿಲ್ಲವಾಗಿದ್ದರೆ ಭಾರತದ ಹಲವಡೆಗಳಲ್ಲಿ ಅಂದಿನ ಬಂಗಾಳ, ಆಥವಾ ಇಂದಿ ಚೀನದಂತಾಗುತ್ತಿರಲಿಲ್ಲವೇ ಎಂದು ರೀಕ್ಷಿಸಿ ನೋಡಬೇಕು.

ಪಕ್ಷ ಪಂಗಡಗಳ ಗೊಂದಲಗಳಿಂದ ಮಗೆ ಹಾನಿಯಾಯಿತೆನ್ನುವವರು-ಕೆಲವ ಂದಾಗುತ್ತಿರುವ ಸೂರೆ, ಸುಲಿಗೆಗಳ ದಿಸೆ ಿಂದ ತಾವು ಹೀಗಾದೆವೆನ್ನುವವರು—ಂಗಾಳ, ಪಂಜಾಬು, ಸಿಂಧ್, ಗಡಿನಾ ು ಪ್ರಾಂತ್ಯಗಳ ಜಾತೀಯ ಗೊಂದಲಗ ಿಂದ ವಾಸ್ತವತೆತ್ತವರನ್ನೂ ನಿರಾಶ್ರಿತರಾದ ರನ್ನೂ ಸ್ಮರಿಸಿಕೊಂಡು, ಅವರ ಗತಿ ಮಗೊದಗದಂತಿದ್ದರೆ ತಾವೇನು ಮಾಡಬೇ ತ್ತು, ಎಂದು ಊಹಿಸಿಕೊಳ್ಳುವುದು ಾಗತ್ಯ.

ತಮ್ಮ ನಿತ್ಯ ಜೀವನ ಸ್ಥಿತಿ ಸುಧಾರಿ ಲ್ಲ, ಸ್ವೋದಿನ ಆಕ್ಕಿಯ ಅರ್ಧಾಷಾರವು ುನ್ನವ ದುರ್ಗತಿ ತಪ್ಪಿಲ್ಲ, ಎಂದು ಮರು ುವವರು ತಾವು ಇಷ್ಟವಿಲ್ಲದೆಯೇ ಹೀಗ ೃತ್ತಿರುವಾಗ, ಅಸ್ಸಾಮಿನ ಅತಿ ಭೀಕರ

ಭಾರತದಲ್ಲಿ ಜನತಾರಾಜ್ಯ ಸ್ಥಾಪನೆಗೊಳ್ಳುವಾಗ ಅಲ್ಲೊಂದು ಅಧ್ಯಕ್ಷಗಾದಿ ಮೂಡಿ ನಿಂತಿತು—ಅದುವರೆಗೆ ಗವರ್ನರ್ ಜನರಲ್ ಸೀರವಾಗಿದ್ದುದ್ದು, ಆ ಮುಹೂರ್ತದಲ್ಲಿ ಅಧ್ಯಕ್ಷ ಸಿಂಹಾಸನವಾಯಿತು. ಈ ಪ್ರಗತಿಗೆ ತಕ್ಕ ವ್ಯಕ್ತಿಯೂ ಇದ್ದುದರಿಂದ ಆ ಗದಿಯು ತನ್ನ ಸ್ವಂತ ಘನತೆಯ ಂತೆಯೇ, ಏರುವ ವ್ಯಕ್ತಿಯ ತೇಜಸ್ಸಿನಿಂದಲೂ ವಿಶೇಷ ಪ್ರಭೆ ಕೊಡುವಂತಾಗಿದೆ. ಭಾರತ ಜನತಾರಾಜ್ಯದ ಪ್ರಥಮ ಅಧ್ಯಕ್ಷನಾಗಿ ಡಾ। ರಾಜೇಂದ್ರ

ಭೂಕಂಪದ ದೆಸೆಯಿಂದ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು, ವಿಮಾನಗಳ ಮೂಲಕ ಆಹಾರ ಧಾನ್ಯಗಳನ್ನು ಪಡೆದು ಜೀವ ಹಿಡಿದುಕೊಳ್ಳಬೇಕಾಗಿ ಬಂದಿರುವ ಲಕ್ಷಾವಧಿ ದೇಶಬಂಧುಗಳನ್ನೆನೆನ್ನಬೇಕು, ಎಂಬುದನ್ನೊಮ್ಮೆ ಜ್ಞಾಪಿಸಬೇಕು.

ತಮ್ಮ ಮನೆತನಕ್ಕೆ ಮೊದಲಿದ್ದ ಆಸ್ತಿ ಪಾಸ್ತಿಗಳೇಗ ಇಲ್ಲವೆಂದು ಶೋಕಿಸುವವರು, ಆಥವಾ ಹೊಸ ಹಿಂದೂ ಕೋಡಿನಂತಹ ಶಾಸನಗಳು ತಮ್ಮ ಪರಿಂಪರಾಗತ ಆಸ್ತಿಗಳನ್ನು ತಂದಿರಿಸಿಹ ಕಿಹಾಳುಮಾಡುವವೆಂದು ಹೆದರುವವರು, ಪಂಪಾರಂಪರ್ಯವಾಗಿ ವೆರಿದಾಡಿ ಒಂದಿದ್ದ ತಮಗಿಂತ ದೊಡ್ಡವರಾದ ಜಮೀನ್ದಾರರು ಸ್ಥಿತಿಯೇಗ ವಿಸಾಗಿವೆ ಎಂಬುದನ್ನೂ, ಆ ಜಮೀನ್ದಾರರು ರಿತ್ರ ರಾಜಗತಿ ಎಲ್ಲಿಗೆ ಬಂದಿದೆಯೆಂಬುದನ್ನೂ, ಆ ಆಶ್ರಿತರಾಜರು ಭೂಲೋಕವನ್ನಾಳುತಿದ್ದ ಬ್ರಿಟಿಷ್ ರಾಜರ ಸ್ಥಾನವೆಸ್ಪು ಮಾರುಟೋಗಿದೆಯೆಂಬುದನ್ನೂ ಕ್ರಮಶಃ ನೋಡಿಕೊಂಡರಾಯಿತು.

ಇದೇ ರೀತಿ ಯಾವುದೇ ವಿಭಾಗದಲ್ಲಿ ತಾನು ದೊಡ್ಡವನು ಎಂಬ ಹೆಮ್ಮೆ ಮೂಡಿದಾಗ, ತನಗಿಂತಲೂ ದೊಡ್ಡವರಾಗಿರುವವರತ್ತ ನೋಡಿ ತಗ್ಗಬೇಕು; ತಾನು ಬಡವನು ಎಂಬ ಸ್ವನಿಕೃಷ್ಟತಾ ಭಾವನೆ ಮೂಡಿದಾಗ ತನಗಿಂತಲೂ ಹೀನಸ್ಥಿತಿಯಲ್ಲಿರುವವರನ್ನು ಸ್ಮರಿಸಿ ಹಿಗ್ಗಬೇಕು. ಸುಖಕ್ಕಾಗಿ ಹಿಗ್ಗದೆ, ಕೃತ್ಯಕ್ಕಾಗಿ ಕುಗ್ಗದೆ ಇರುವ ನಿರ್ವಿಕಾರ ಹೃದಯ ಮೂಡುವವರೆಗೆ—ಅಂತಹ ಸಮಾನತಾ ಭಾವನೆಯು ಸಂವಾದನಾ ತರಬೇತಿಯಾಗಿ—ಕೆಳಮೊಗವಾದಲ್ಲಿ ನೆಲ ಹಿಡಿದವರನ್ನು ನೋಡಿ, ಮೇಲ್ಮೊಗವಾದಾಗ ಆಕಾಕೆಶ್ಯರಿದವರನ್ನು ಕಂಡು, ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವುದನ್ನು ಅಭ್ಯಾಸಿಸಬೇಕು ಈ ಅಭ್ಯಾಸ ಮೂಡಲಿ.

ಅಧ್ಯಕ್ಷೆ ಶ್ರೀಮತಿ ಪದ್ಮಜಾ ನಾಯ್ಡು

ರಾಜೇಂದ್ರ ಪ್ರಸಾದ್—

ಪ್ರಸಾದರು ನವಢಿಲ್ಲಿಯ ಸರಕಾರೀ ಭವನದಲ್ಲಿ ಪೀರವೇಂದ ಜನವರಿ 26ನೇ ತಾರೀಕು ಭಾರತ ಚರಿತ್ರೆಯಲ್ಲಿ ಸ್ವರ್ಣಾಕ್ಷರಗಳ ದಿನ; ಪೂರ್ಣ ಸಾರ್ಥಕ ದಿನ; ಮಹಾ ಸುದಿನ. ಸ್ವತಂತ್ರ ಭಾರತದ ಪ್ರಥಮ ಹಿಂದೀ ಗವರ್ನರ್ ಜನರಲನಾಗುವ ಸುಯೋಗವು ರಾಜಾಜಿಯನಾಗಿತ್ತು; ಪ್ರಥಮ ಅಧ್ಯಕ್ಷನಾಗುವ ಸೌಭಾಗ್ಯ ಬಾಬು ರಾಜೇಂದ್ರ ಪ್ರಸಾದರದಾಯಿತು; ಇವರಿಡೂ ಮಧ್ಯವರ್ತಿಯ ಅರಿಸುವಿಕೆಗಳು. ಆ ದ್ವರಿಂದ ಜನತಾರಾಜ್ಯ ಶಾಸನದನ್ವಯ ಮಹಾಚುನಾವಣೆಗಳಾಗಿ, ಆ ಮೂಲಕ ಕ್ರಮಬದ್ಧವಾಗಿ ಆರಿಸಲ್ಪಡುವ ಮುಂದಿನ ಆಧ್ಯಕ್ಷನಿಗೂ ಒಂದು ನವೀನತೆಯು ಪ್ರಾಧಾನ್ಯವಿದ್ದೇ ಇದೆ ಈಗ ನಾವು—ಜನತಾರಾಜ್ಯ ಭಾರತದ ಹೊಣೆಗಾರ ನಾಗರಿಕರು—ಪ್ರಥಮಾಧ್ಯಕ್ಷನ ಆಡಳಿತೆಯಲ್ಲಿದ್ದೇವೆ. ಈ ಕಾಲದ ಜನರನ್ನು ಭಾಗ್ಯಶಾಲಿಗಳೆಂದು ಭಾವೀ ಜನಾಂಗ ನೆನಸಬಹುದು. ಒಂದೆರಡು ಸಂಗತಿಗಳಲ್ಲಲ್ಲ, ಹಲವು ವಿಧಾನಗಳಿಂದ ನಾವು ಪುಣ್ಯಾತ್ಮರಾಗಿ ನಮ್ಮ ಭಾವೀ ಸಂತತಿಯ ದೃಷ್ಟಿಗೆ ತೋರಲಿದ್ದೇವೆ. ಲೋಕೈಕ ಮಹಾತ್ಮಾಗಾಂಧಿಜೀಯು ಕಾಲದಲ್ಲೇ ಬಾಳಿದ್ದ ಭಾಗ್ಯ ನಮ್ಮದು; ದ್ವಿತೀಯ ಮಹಾಯುದ್ಧವನ್ನು ಕಂಡ ಅಪೂರ್ವ ಅನುಭವ ನಮ್ಮದು; ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಸರ್ವಮಾನವಧಿತ್ಯಾಗ ಮತ್ತು ಧೈರ್ಯಸ್ಥೈರ್ಯಗಳನ್ನು ಪ್ರದರ್ಶಿಸುವ ಸುಯೋಗವೊದಗಿದ್ದುದು ನಮಗೆ; ಬ್ರಿಟಿಷರು ಗಂಟುಮೂಟೆ ಕಟ್ಟಿ ಹೊರಡುವುದನ್ನು ಕಾಣುವ ಸುಕೃತ ನಮ್ಮದು; ನೆಹರೂ ಪ್ರಧಾನತ್ವದ ಆಡಳಿಯಲ್ಲಿ ಬದುಕುವ ಸುಕಾಲ ನಮ್ಮ ಪಾಲಿಗೆ; ಜನತಾರಾಜ್ಯ ಸ್ಥಾಪನೆಯನ್ನು ಕಾಣುವ ಮತ್ತು ಪ್ರಥಮ ಅಧ್ಯಕ್ಷ ರಾಜೇಂದ್ರ ಪ್ರಸಾದರ ಪ್ರಜೆಗಳಾಗಿ ಬೀಮಿಸುವ ಪುಣ್ಯ ನಮ್ಮದು.....

ರಾಜೇಂದ್ರರ ಬಾಲ್ಯ

ಡಾ। ರಾಜೇಂದ್ರ ಪ್ರಸಾದರಿಗೀಗ 66 ವರುಷ ಪ್ರಾಯ. ಬಿಹಾರಿನ ಸರ್ಜಿಲ್ಲೆಯಲ್ಲಿ ತೀರದಾಯಿ ಎಂಬ ಹಳ್ಳಿಯಲ್ಲಿ 1884ನೇ ಇಸವಿ ದಶಂಬರ್ ತಾ 3ರಲ್ಲಿ ರಾಜೇಂದ್ರರ ಜನನವಾಯಿತು. ಎಷ್ಟೋ ತಲೆಗಳಿಗೆ ಹಿಂದಿನ ಇವರ ಹಿರಿಯರು ಜೀವನ ನಿರ್ವಹಣದ ಹಾದಿ ಹುಡುಕುತ್ತಾ ಆ ಹಳ್ಳಿಗೆ ಬಂದಿದ್ದರಂತೆ. ಜಾತಿಯಲ್ಲಿ ಕಾಯಸ್ಥರಿವರು. ಕಾಯಸ್ಥರೇ ಹೆಚ್ಚಾಗಿ ಹಾಗಂತೆ—ವಿದ್ವಾಂಸರು, ಆದರೆ ಕೈಯಲ್ಲಿ ಕಾಸಿಲ್ಲದರುವ. ಹೊಟ್ಟೆಪಾಡಿಗಾಗಿ ದೇಶ ಸಂಚಾರಿಗಳಾಗಿ ಬಂದಿದ್ದ ರಾಜೇಂದ್ರರ ಪೂರ್ವಜರನ್ನು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಸಲುವಾಗಿ ತೀರದಾಯಿ ಹಳ್ಳಿಯವರು ಅಲ್ಲೇ ನಿಲ್ಲಿಸಿಕೊಂಡರು- ಕೊನೆಗೆ ಅವರಲ್ಲೊಬ್ಬನಿಗೆ ಹತ್ನಾರಾಜರಲ್ಲೊಂದು ಹುದ್ದೆ ದೊರಕಿದ್ದಿತು; ಆದಿವರ ಸಂತತಿ ಪಾರಂಪರ್ಯವಾಗಿ ಹಲವು ತಲೆಮಾರುಗಳ ವರೆಗೂ ಉಳಿದುಕೊಂಡಿದ್ದಿತು.

ರಾಜೇಂದ್ರ ಬಾಬುಗಳು ತಂದೆತಾಯಿಗಳ ಕಿರಿ ಮಗ. ಓರ್ವ ಅಣ್ಣ ಮತ್ತು ಮೂವರು ಅಕ್ಕಂದಿರು ಇವರಿಗಿದ್ದರು. ಅವರು ರಾಮಾಯಣ ಕಲಿಯಬಯಸುವುದರೊಂದಿಗೆ ತನ್ನ ವಿದ್ಯಾಭ್ಯಾಸವನ್ನು ಆರಂಭಿಸಿದರೆನ್ನಬಹುದು. ಇವರ ತಾಯಿ ಅದರ್ಶ ಹಿಂದೂ ಮಹಿಳೆ; ಪೂರ್ಣ ಬೆಳಗಾಗುವ ಮೊದಲೇ ಎದ್ದು ರಾಮಾಯಣದ ಪದ್ಯಗಳನ್ನು ಪಠಿಸುವ ಅಭ್ಯಾಸ ಈ ಮಾತೆಗಿದ್ದಿತ. ರಾಜೇಂದ್ರರು ಆಗ ಕೂಡಾ ಅತಿ ಮುಂಜಾನೆ ಏಳುತಿದ್ದರು; ನಾಲ್ಕು ತಾಸು ಹೊಡೆಯುವಾಗಲೇ ಎದ್ದು, ರಾಮಾಯಣದ ಪದ್ಯಗಳನ್ನು ಹಾಡುವಂತೆ ಈ ಮಗ ತಾಯಿಯನ್ನು ಪೀಡಿಸುತಿದ್ದ; ರಾಜೇಂದ್ರರು ಬಾಲ್ಯದಲ್ಲಿ ತನ್ನ ಮುಂಜಾನೆಯ ತಿಂಡಿಯಾಗಿ ತಾಯಿಯಿಂದ ಕೇಳುತ್ತಿದ್ದುದು ಆ ಮಧುರ ಕಾವ್ಯದ ಚರಣಗಳನ್ನ್! ಈ ರೀತಿ ಬಾಲ್ಯದಲ್ಲೇ ಹಿಂದೂ ಧರ್ಮ ಬ.ಗ್ಗೆಯನ್ನು ಚೀಸುತ್ತಾ ಬೆಳೆದವರಿವರು. ಈಗ ಕೇಳಲು ವಿಲಕ್ಷಣವಾಗಿ ತೋರಿತ – ರಾಜೇಂ

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಂದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಆಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

—ಜೀವನ ಮತ್ತು ವ್ಯಕ್ತಿತ್ವ

ದ್ರರ ಶ್ರಮಬದ್ಧ ವಿದ್ಯಾಭ್ಯಾಸ ಪ್ರಾರಂಭವಾದುದು ಮುಸ್ಲಿಂ ನರ್ಸೆಲ್ಲಿಯೊಬ್ಬರ ಕೈಕೆಳಗೆ. ಈ ಗುರುಅ'ಕಾರ ಕಲಿಸಲಾರಂಭಿಸಿದುದು ಪರ್ಶಿಯನ್ ಭಾಷೆಯಲ್ಲಿ. ಆ ಕಾಲದಲ್ಲಿ ಪರ್ಶಿಯನ್ ಭಾಷೆಯಂದಲೇ ತಮ್ಮ ಮಕ್ಕಳ ಶಿಕ್ಷಣವನ್ನಾರಂಭಿಸುವ ಸಂಪ್ರದಾಯವು ಮುಸಲ್ಮಾನರಂತೆಯೇ ಹಿಂದುಗಳದೂ ಆಗಿತ್ತು. ಮೊಗಲರ ಕಾಲದಲ್ಲಿ ಮತ್ತು ಬ್ರಿಟಿಷ್ ಆಡಳಿತೆಯ ಆದಿ ಭಾಗದಲ್ಲಿ ಕೋರ್ಟು ಭಾಷೆಯಾಗಿ ಪರ್ಶಿಯನ್ ಇದ್ದುದೇ ಈ ಸಂಪ್ರದಾಯಕ್ಕೆ ಕಾರಣವಿರಬಹುದು. ಮೌಲ್ವೀ ಗುರು ವಿನ ಕೈಕೆಳಗೆ, ಪರ್ಶಿಯನ್ ಭಾಷೆಯ ಅಲ್ಪಸ್ವಲ್ಪ ಜ್ಞಾನವನ್ನು ರಾಜೇಂದ್ರ ಪ್ರಸಾದರು ಸಂಪಾದಿಸಿಕೊಂಡರು. ಆ ಭಾಷಾ ಜ್ಞಾನವೀಗ ಕೆಲವಂಶ ಹೆಚ್ಚಾಗಿರಬಹುದು.

ಪ್ರೌಢ ಶಿಕ್ಷಣ

ತಮ್ಮ ಹುಡುಗ ವಕೀಲನಾಗಬೇಕೆಂದು ಇವರ ಹಿರಿಯರ ಬಯಕೆಯಿದ್ದಿತು. ಆದ್ದರಿಂದ, ಇಂಗ್ಲಿಷ್ ಕಲಿಯುವುದಕ್ಕಾಗಿ ರಾಜೇಂದ್ರರನ್ನು ಚಾಪ್ರಾಕ್ಕೆ ಕಳುಹಿಸಲಾಯಿತು. ಮನಸ್ಸಿಟ್ಟು ಕಲಿಯುವವ ಮತ್ತು ಅತ್ಯಂತ ಪ್ರತಭಾವಂತನೆಂಬುದರಿಂದ, ಈ ವಿದ್ಯಾರ್ಥಿ ಅಲ್ಲಿಯ ಅಧ್ಯಾಪಕರೆಲ್ಲರಿಗೂ ಅತೀವ ಮೆಚ್ಚುಗೆಯವನಾದ. ಅಧ್ಯಾಪಕರ ಒಲವು ಮತ್ತ ನಿರೀಕ್ಷೆ ಸುಳ್ಳಾಗಲಿಲ್ಲ. ಕಲ್ಕತ್ತಾ ಯುನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ರಾಜೇಂದ್ರ ಪ್ರಸಾದರು ಸರ್ವ ಪ್ರಥಮ ಬಂದರು; ಆ ತನಕ ಬಿಹಾರಿನ ಬೇರಾವ ಹುಡುಗನೂ ಗೆದ್ದುಕೊಳ್ಳದ ಸ್ಥಾನವಿದು. ತನ್ನ ಈ ಪರೀಕ್ಷಾ ವಿಜಯವನ್ನು ತಾನು ನಿರೀಕ್ಷಿಸಿರಲಿಲ್ಲವೆಂದು ಡಾ। ರಾಜೇಂದ್ರರು ತನ್ನ ಆತ್ಮಕಥೆಯಲ್ಲಿ ಬರೆದಿದ್ದಾರೆ. ಉಬ್ಬು ತಲೆಯ ವಿದ್ಯಾರ್ಥಿಯೊಬ್ಬನ ಪಾಲಿಗೆ ಇಂತಹ ಅನಿರೀಕ್ಷಿತ ಪರೀಕ್ಷಾ ವಿಜಯವು ಅಕಸ್ಮಾತ್ ನಿಧಿ ದೊರೆತಂತೆ. ಆದರೆ ರಾಜೇಂದ್ರರು ಅಂತಹ ತರಗತಿಯ ವಿದ್ಯಾರ್ಥಿಯಾಗಿರಲಿಲ್ಲ. ಅಕಸ್ಮಾತ್ ದೊರೆತ ಸ್ವತಂತ್ರಾಡಳಿತೆಯನ್ನು ದಕ್ಕಿಸಿಕೊಳ್ಳಲು ತಕ್ಕ ಯೋಗ್ಯತೆಯನ್ನು ತಾವು ಎಂದೆಂದಿಗೂ ಪ್ರದರ್ಶಿಸಬೇಕೆಂಬ ಆತುರವು ಇಂದಿನ ನಾಯಕ ಸ್ಥಾನದಲ್ಲಿರುವಂತೆಯೇ, ಈ ಅನಿರೀಕ್ಷಿತ ಪ್ರಥಮ ತರಗತೀ ವಿಜಯವನ್ನು ಎಂದೆಂದಿಗೂ ಕಾಯ್ದುಕೊಳ್ಳಬೇಕೆಂಬ ಅಭಿಲಾಷೆಯು ರಾಜೇಂದ್ರರಲ್ಲಿ ಮೊಳೆಯಿತು. ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿನಲ್ಲಿ 'ಇಂಟರ್‌ಮಿಡಿಯೇಟ್' ಕರಗತಿಗೆ ಸೇರಿ, 'ಗಣಿತ ಶಾಸ್ತ್ರದೊಂದಿಗೆ 'ಪದಾರ್ಥ ವಿಜ್ಞಾನ ಶಾಸ್ತ್ರ' ಮತ್ತು 'ರಸಾಯನ, ಶಾಸ್ತ್ರ'ಗಳನ್ನೂ ಅಭ್ಯಾಸಿಸಿದರು. ಪ್ರಥಮತಃ ಗಣಿತ ಶಾಸ್ತ್ರಾಭ್ಯಾಸದ ಕುರಿತು ಅವರಲ್ಲಿ ಬಹಳ ಅನುಕಂಪವಿದ್ದಿತಾದರೂ, ಅದರಲ್ಲೇ ನೂರರಲ್ಲಿ 99 ಗುಣಗಳನ್ನು ಪಡೆಯುವ ಪ್ರಜ್ಞೆ ಜಯತೀಲರಾದರು. ತತ್ಪರಿಣಾಮವಾಗಿ ಮೆಟ್ರಿಕ್ಯುಲೇಶನ್‌ನಂತೆ ಇಂಟರ್‌ಮಿಡಿಯೇಟ್ ಪರೀಕ್ಷೆಯಲ್ಲೂ ಪ್ರಥಮ ಬಂದರು. ಆವರು ವಿಜ್ಞಾನ ಶಾಸ್ತ್ರವನ್ನು ಅಭ್ಯಾಸಿಸಿ ವೈಜ್ಞಾನಿಕರಾಗಬಹುದಿದ್ದಿತು. ಆದರೆ ಆಗಿನ ಪರಿಸ್ಥಿತಿಯು ಅವರ ಜೀವನದ ಮುಖವನ್ನು ಅಲ್ಲಿಂದ ತಪ್ಪಿಸಿ ವಕಾಲತು ಕಲಿಯುವತ್ತ ತಿರುಗಿಸಿತೆನ್ನಬೇಕು, ಆ ಕಾಲದಲ್ಲಿ ಅವರ ಕುಟುಂಬದ ಸ್ಥಿತಿ ಹಾಗಾಗಿದ್ದಿತು. ಮನೆಯ ಆ ಸ್ತಿಪಾಸ್ತಿಗಳ ಮೇಲ್ವಿಚಾರಣೆ ನೋಡಲು ರಾಜೇಂದ್ರರ ತಂದೆಯಿಂದಾಗುತ್ತಿರಲಿಲ್ಲವಾದ್ದರಿಂದ ರಾಜೇಂದ್ರರ ವಿದ್ಯಾಭ್ಯಾಸವನ್ನು ಸ್ವಲ್ಪ ವಿರಮಿಸಬೇಕಾಯಿತು. ಇತರ ಪ್ರತಿಕೂಲ ವಿದ್ಯಮಾನಗಳೂ ಇದಿರುಬಿದ್ದವು. ಕಲ್ಕತ್ತದ ಹವಾಮಾನವು ಇವರ ಪ್ರಕೃತಿಗೆ ಒಗ್ಗುತ್ತಿರಲಿಲ್ಲ. ರಾಷ್ಟ್ರದ ರಾಜಕೀಯ ವಾತಾವರಣ ಕೂಡಾ ಗಲಿಬಿಲಿಗೊಂಡಿದ್ದಿತು. ಬಂಗಾಳಾ ವಿಭಜನೆಯ ವಿರುದ್ಧ ಅಲ್ಲಿ ಪ್ರಚಂಡ ಚಳವಳಿಯೆದ್ದಿದ್ದ ಅವಧಿಯದು. ಇಷ್ಟೆಲ್ಲಾ ಪ್ರತಿಕೂಲಗಳೆದೆಯಲ್ಲೂ ರಾಜೇಂದ್ರರು ಬಿ. ಎ. ಪರೀಕ್ಷೆಯಲ್ಲಿ ಕೂಡಾ ಪ್ರಥಮಸ್ಥಾನ ಗಳಿಸಿಕೊಂಡರು.

ಕುಟುಂಬ ರಕ್ಷಣೆ

ಆದರೆ ಪರೀಕ್ಷೆಗಳಲ್ಲಿ ಅನನ್ಯ ವಿಜಯ ಗಳಿಸುವ ನೈಪುಣ್ಯವೊಂದು ರಾಜೇಂದ್ರರಲ್ಲಿ ಮತ್ತೆ ಉಳಿಯಲಿಲ್ಲ. ಆವರ ಆತ್ಮವು ಜೊತೆ ಶೋಧನೆಗಾರಂಭಿಸಿತು. ಬಂಗಾಳಿ ವಿದ್ವಾಂಸ ಸತೀಶಚಂದ್ರ ಮುಖರ್ಜಿಯವರಿಂದ ಸ್ಥಾಪಿಸಲ್ಪಟ್ಟ 'ದ್ವಾನ್ ಸೊಸೈಟಿ' ಗವರು ಸೇರಿಕೊಂಡರು. ಅಲ್ಲಿಂದ ನೂತನ ಜೀವನವನ್ನು ಪ್ರಾರಂಭಿಸಿದರೆನ್ನಬಹುದು. ತರುಣರಲ್ಲಿ 'ಜ್ಞಾನ' ನೈತಿಕತೆ ಮತ್ತು ವಿಶೇಷತಃ ದೇಶಭಕ್ತಿಯನ್ನು ವೃದ್ಧಿಸುವದೇ ಈ ಸಂಸ್ಥೆಯ ಉದ್ದೇಶವಾಗಿತ್ತು. ಈ ರೀತಿ ಯಾಂತ್ರಿಕ ಶಿಕ್ಷಣ ಪ್ರಪಂಚದ ಜಡಬಲಿಗೆ ಸುಸಜ್ಜರ್ಕಿ ಜಗತ್ತಿನ ಸಂಬಂಧವನ್ನು ಕೊಳ್ಳಲಾರಂಭಿಸಿದ ಮೇಲೆ ಡಾ.ಪ್ರಸಾದರಲ್ಲಿ ಪರೀಕ್ಷಾ ಸ್ಪರ್ಧೆಯು ವೇಷ್ಟಹ ಮಾಯವಾಗಿ ಯೋಗಿಕ ಸ್ಫುರಣೆಗಳೇಳಹತ್ತಿದುವು; ತನ್ನ ಮನೆಯಲ್ಲಿ ಸರಿಯಾಗಿ ಯೋಗಾಭ್ಯಾಸ ಮಾಡಲು ಆಗದೆ ಹೋದರೂ ಇವರ ಜೀವನದಲ್ಲಲ್ಲದು ಹಾಸು ಹೊಕ್ಕಾಗಿ ಸೇರಿಕೊಂಡು ಕ್ರಮಶಃ ಬೆಳೆಯುತ್ತಾ ಬಂತು. ತತ್ಪರಿಣಾಮವಾಗಿ ಬಿಡುವಿನ ವಿದ್ಯಾರ್ಥಿ ಸಂಘಟನಾ ಕಾರ್ಯಕ್ಕೆ ಇವರು ಕೈಯಿಕ್ಕಿದರು. ಡಾ। ರಾಜೇಂದ್ರರು ಮಾಡಿದ ಪ್ರಥಮ ಸಾರ್ವಜನಿಕ ಕಾರ್ಯವಿದು; ಇದರಲ್ಲವರು ವಿಶೇಷ ಜಯಗಳಿಸಿದರು; ಮೊದಲ ವ್ಯಾಪಾರವೇ ಫಲದಾಯಕವಾಯಿತು. ಆದರವರು ಆ ಕಾಲದಲ್ಲಿ ತನ್ನ ಪೂರ್ಣ ಜೀವನವನ್ನು ರಾಷ್ಟ್ರಸೇವೆಗೆ ಮುಡಿಪಾಗಿ ಇಡುವ ಸ್ಥಿತಿಯಲ್ಲಿರಲಿಲ್ಲ. ಆದ್ದರಿಂದಲೇ ಮಾನ್ಯ ಗೋಖಲೆಯವರು 'ದೇಶಸೇವೋದ್ಯಮ ಕೈಗೆಳ್ಳುವಿರಾ' ಎಂದು ಪ್ರಶ್ನಿಸಿದಾಗ ಇವರು ನಕಾರಾತ್ಮಕ ಉತ್ತರ ಕೊಟ್ಟಿದ್ದರು. ತನ್ನ ಅತ್ಯಡ ಉದ್ಧಾರ ಸಾಧನೆಗಾಗಿ ಕುಟುಂಬವನ್ನು ಅಲಕ್ಷಿಸಲು ಅವರು ತಯಾರಿರಲಿಲ್ಲ. ಎಳೇ ವಯಸ್ಸಿಯಲ್ಲೇ ಮದುವೆಯಾಗಿದ್ದ ರಾಜನ್ ಬಾಬುಗಳು ಆ ಹೊತ್ತಿನಲ್ಲಿ ಎರಡು ಮಕ್ಕಳ ತಂದೆಯೂ ಆಗಿದ್ದರು. ಅವರ ಕುಟುಂಬವಾದರೋ ಆಗ ಅತ್ಯಂತ ಆರ್ಥಿಕ ಆಪತ್ಪರಿಸ್ಥಿತಿಯಲ್ಲಿದ್ದಿತು. ಪ್ರಸಾದಬಾಬುಗಳು ಸಮಯವಾರು ಖಾಸಗೀ ಅಧ್ಯಾಪಕರನ್ನು ನಡೆಸಿ ದಿನ ತೆಗೆಯಿಸಬೇಕಾಗಿತ್ತು. ಹಾಗೂ ಹೀಗೆಸಿ ಹೈಕೋರ್ಟು ವಕೀಲರಾದರು. ಅದರ ಆರಂಭದಿಂದಲೇ ವಿಶೇಷಾದಾಯ ವಿಜಯಗಳನ್ನು ಸಂಪಾದಿಸಹತ್ತಿದರು. ಈ ತರುಣವಕೀಲನ ಪ್ರೌಢಿಮೆಗೆ ಮನಸೋತ ಸರ್ ಆಶುತೋಷ್ ಮುಖರ್ಜಿಗಳು ಕಲ್ಕತ್ತದ ಆ ಕಾಲೇಜಿನಲ್ಲಿ ಆ ಪ್ರೊಫೆಸರಂತಿಗುವಂತೆ ಇವರನ್ನು ಕೇಳಿ ಕೊಂಡಾಗ ಇವರೂ ಒಪ್ಪಿಕೊಂಡರು. ಅದಾಗಿ ಕೆಲಕಾಲದಲ್ಲೇ ರಾಜೇಂದ್ರರ ಬಿಹಾರಿನ ರಾಜಧಾನಿ ಪಾಟ್ನಾದಲ್ಲಿ ಒಂದು ಹೈಕೋರ್ಟು ಸ್ಥಾಪನೆಯಾದುದರಿಂದ ರಾಜೇಂದ್ರರು ಕಲ್ಕತ್ತದಿಂದ ಪಾಟ್ನಾಕ್ಕೆ ಬಂದು ನೆಲಸಿದರು; ಅಲ್ಲಿಯ ಪ್ರಮುಖ ವಕೀಲನಾದರು.

ಗಾಂಧೀಶಿಷ್ಯ

ಆದರೆ ಭವಿಷ್ಯ ಗರ್ಭದಲ್ಲಿ ಯಾರ ಪಾಲಿಗೇನು ತುಂಬಿರುವುದೆಂಬುದು ಊಹಾತೀತ ವಿಷಯ. ತಾನು ಹೀಗಾಗಬೇಕು ಎಂಬ ಓರ್ವನ ಸಂಕಲ್ಪಕ್ಕೂ ಅತೀತವಾಗಿ ಕಾಲವು ಮಾಡಿರುವ ಹೊಂಚಿಕೆಗೂ ಎಷ್ಟೋ ವೇಳೆ ಅಜಗಜಾಂತರವಿರುತ್ತದೆ. ಬಾಬು ರಾಜೇಂದ್ರ ಪ್ರಸಾದರ ಜೀವಿತವು ಇದಕ್ಕೊಂದು ದೊಡ್ಡ ನಿದರ್ಶನ. ಪಾಟ್ನಾ ಹೈಕೋರ್ಟಿನ ಅತಿಪ್ರಸಿದ್ಧ ವಕೀಲನಾಗಿ ರಾಜೇಂದ್ರ ಬಾಬುಗಳು ಮೆರೆದಾಡುತ್ತಿದ್ದ ಕಾಲದಲ್ಲೇ ಚಂಪಕ್ಷಿಣಾಫ್ರಿಕದಲ್ಲಿ ಹಿಂದೀಯರ ಸಂಕಷ್ಟಗಳ ವಿರುದ್ಧ ಹೋರಾಡಿ ಗಾಂಧಿಜೀ ಧಾರಾಶಕ್ತಿ ಮೆರೆದಿದ್ದರು. ಆಗ ಕೋಟಗಾರರ ದಬ್ಬಾಳಿಕೆಯಂತ್ರದಡಿಯಲ್ಲಿ ಬಿಹಾರಿನ ನಿಸ್ಸಹಾಯಕ ರೈತರು ನಜ್ಜುಗುಜ್ಜಾಗುತ್ತಿದ್ದರು. ಹೆಗಲಲ್ಲಿ ಕುಟುಂಬ ಪೋಷಣೆಯ ಭಾರವಿದ್ದರೂ ಹೃದಯದಲ್ಲಿ ಅನಾಥರಕ್ಷಣಾಬಡಿತವಿದ್ದೇ ಇದ್ದವಕೀಲ್ ರಾಜೇಂದ್ರರು ಬಿಹಾರ್ ರೈತರ ಕಷ್ಟನಿವಾರಣೆಗೆ ಬರುವಂತೆ ದೀನ ಬಂಧು ಗಾಂಧಿಯವರನ್ನು ಆಮಂತ್ರಿಸಿದರು. ಆ ಮಂತ್ರಣವನ್ನು ಅಂಗೀಕರಿಸಿ ಬಿಹಾರಿಗೆ ಬಂದ ಗಾಂಧಿಜೀ, ಅಲ್ಲಿ ನೆಲಕಚ್ಚಿಕ್ಕಲ್ಪಟ್ಟಿದ್ದ ರೈತರು ತಲೆಯೆತ್ತುವಂತೆ ಮಾಡಿದುದಷ್ಟೇ ಅಲ್ಲ—ರಾಜೇಂದ್ರರ ಜೀವನದಲ್ಲೇ ಮಹತ್ತಾದ ಕ್ರಾಂತಿಯನ್ನು ಉಂಟುಮಾಡಿದರು. ಅಲ್ಲಿಯ ಚಂಪಾರಣ್ಯ ಸತ್ಯಾಗ್ರಹವು ಭಾರತದ ಚರಿತ್ರೆಯಲ್ಲಿ—ಅದರಲ್ಲೂ ಸ್ವಾತಂತ್ರ್ಯಹೋರಾಟ ವಿಭಾಗದಲ್ಲಿ—ಅತಿ ಗಣ್ಯವಾದ ಒಂದು ಅಧ್ಯಾಯ. ರಾಜೇಂದ್ರರ ಹೃದಯದಲ್ಲಿ ಆ ವರೆಗೂ ಅರೆ ಮರೆಯಾಗಿ ಹುಗಿದುಕೊಂಡಿದ್ದ ದೇಶಪ್ರೇಮ, ಸ್ವಾಭಿಮಾನ, ಸೇವಾ ನಿಷ್ಠೆಗಳನ್ನು ಜೊರಗೆಳೆಯುವ ಕೈ ದೊರೆತಂತಾಯಿತು — ಗಾಂಧೀಜಿಯ ಶುದ್ಧಾಂತಃಕರಣ ಮತ್ತು ಸೇವಾಜೀವನವು ರಾಜೇಂದ್ರರನ್ನು ಯಾವರೀತಿ ಆಕರ್ಷಿಸಿಕೊಂಡಿತೆಂದರೆ ಅಂದು ಅವರ ಅನುಯಾ

Parent's Proud Privilege.

Is there a better shrine before which a father and mother may kneel than that of a sleeping child? To grow up sympathetically with a child, to hold its love and confidence, to be a companion and playmate and to guarantee his future with plans ensuring that he will have every chance of a happy and prosperous life. This is a goal towards which every parent can strive with the greatest happiness.

We have various plans that will Ensure Your Children's Happiness.

The Canara Mutual Assurance Co. Ltd.

ESTD: **1935.** H. O. **UDIPI.**

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. No 71/1950

ಆರ್ಜಿದಾರ ಸರಸ್ವತಿ ಅಮ್ಮ, ಸ್ವಾಕಂಬಳ ರಾಮಕೃಷ್ಣ ಭಟ್ಟರ ವಿಧವೆ ಮತ್ತು ಸುಬ್ಬಣ್ಣ ಜೋಯಿಸರ ಮಗಳು. ಕುಂದಾಪುರ ತಾಲ್ಲೂಕು ಬಸ್ರೂರು ಗ್ರಾಮದಲ್ಲಿರುವವಳು. ಮನೆ ನಾರ್ತೇಕನದಿನವಳು Post Basrur —ವಿದ್ರಿಯಿಲ್ಲಾ

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದ್ರೆ

ಆರ್ಜಿದಾರಳು ತನ್ನ ಗಂಡ ಹಾಲಿ ಮೃತ ಸ್ವಾಕಂಬಳ ರಾಮಕೃಷ್ಣ ಭಟ್ಟರಿಗೆ ದಿ. ಎಸ್ತ್ರಿ ಕಲ್ಯರ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್ ಕುಂದಾಪುರ ಯಾ ಬೇಂಕಿನಲ್ಲಿ ಫಿಕ್ಸೆಡ್ ಡಿಪೋಜೀಟು ನಂಬ್ರ 1570/4-6-1945 ನೇಗೆ ಡಿಪೋಜೀಟು ಮಾಡಿದ ಬಾಬ್ತು ಬಡಾ ರೂಪಾಯಿ 125-0-0 ಬಡ್ಡಿ ಬಾಬ್ತು ಬಡಾ ರೂ 9-6-0 ಸಹಾ ರೂಪಾಯಿ 134-6-0 ನ್ನೂ ಪಡಕೊಳ್ಳುವರೆ ತಾನು ಹಕ್ಕುದಾರಳೆಂತಲೂ ಆ ಬಗ್ಗೆ ತನಗೆ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಆರ್ಜಿದಾರಳು ಮೇಲಿನ ಆರ್ಜಿದಾಕಲು ಮಾಡಿರುತ್ತಾಳೆ. ಸದ್ರಿ ಆರ್ಜಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 13-9-1950ಕ್ಕೆ ತನ್ನಗೆ ಯಿಟ್ಟರುತ್ತದೆಂತ ಈ ಮೂಲಕ ತಿಳಿಸಿರುತ್ತದೆ.

M. M Hebbar
Advocate For Petitioner
ಮೊಕ್ತಾರ ಕುಂದಾಪುರ, ತಾ 25-8-1950

ಯಿಯಾಗಿ ಸೇರಿಕೊಂಡ ಇವರು ಇಂದಿನ ವರೆಗೂ ಯಾವ ಸಂದರ್ಭದಲ್ಲೂ ಪ್ರತಿಮಾಪಲ್ಲದೆ ನಿಷ್ಠಾವಂತ ಗಾಂಧೀ ವಾದಿಯಾಗಿದ್ದಾರೆ. ಓರ್ವ ಮನುಷ್ಯ ಮತ್ತೊಬ್ಬ ವ್ಯಕ್ತಿಯನ್ನು ವಶವಡಿಸಿಕೊಳ್ಳುವ ಬಹು ವಿಧದ ವಶೀಕರಣ ಮಹಾತ್ಮೆಗಳನ್ನು ಮತ್ತು ಕಥೆಗಳನ್ನು ನಾವು ಕೇಳಿರಬಹುದು. ಆದರೆ ಯಾವ ಸಂದರ್ಭದಲ್ಲೂ ಬಿಡಿಸಲಾರದ ರೀತಿಯಲ್ಲಿ ಗಾಂಧೀಜೀ ಡಾ| ರಾಜೇಂದ್ರಪ್ರಸಾದರನ್ನು ವಶೀಕರಿಸಿಕೊಂಡುದಕ್ಕೆ ಸಮಾನವಾದುದು ಬೇರೆಯಿಲ್ಲವಾದು. ಮಹಾತ್ಮಾ ಗಾಂಧಿಯವರು ಅಸಹಕಾರ ಚಳವಳಿ ಹೂಡಿದೊಡನೆ ತನ್ನ ವಕಾಲತನ್ನು ಬಿಟ್ಟು, ಕುಟುಂಬದ ಹೊಣೆಯನ್ನು ಕೂಡಾ ಹೊತ್ತು ಹಾಕಿ ಬಾಬು ರಾಜೇಂದ್ರ ಪ್ರಸಾದರು ಅದರಲ್ಲಿ ಭುಮುಃ ಕೆದರಿ, ಆ ಮೇಲೆ ನಡೆದ ಪ್ರತಿ ಬಾರಿಯ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಡಾ| ಪ್ರಸಾದರು ಮುಖ್ಯ ನೇತಾರರಿಗಳಲ್ಲೊಬ್ಬರಾಗಿ ಹೋರಾಡಿದರು. ಮೇಲಿಂದ ಮೇಲೆ ಹಲವು ಬಾರಿ ಕಾರಾಗೃಹವನ್ನು ಅನುಭವಿಸಿದ್ದರು. ಕಾಂಗ್ರೆಸ್ ಅಧ್ಯಕ್ಷ ಗಾದಿಗೇರಿದ್ದಂಲ್ಲದೆ, ಸಂದರ್ಭವಶಾತ್ ಮಧ್ಯಾವಧಿಯಲ್ಲಿ ಆ ಪೀಠ ಖಾಲಿ ಬಿದ್ದಾಗಲೆಲ್ಲಾ ಅವಿರೋಧಿ ಡಾ| ಪ್ರಸಾದರ ಕೊಡೆಗೇನೇ ಎಲ್ಲರೂ ಕೈ ತೋರಿಸುವದಿದ್ದಿತು. ಕಾಂಗ್ರೆಸಿಗೆ ಹೊಸ ಜೀವ ಬಂದಂದಿನಿಂದ ಡಾ| ರಾಜೇಂದ್ರರಷ್ಟಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೆಂಬುದಿರಲಿಲ್ಲ.

ಅಗ್ರಪೀಠಕ್ಕೆ

ಸ್ವಾತಂತ್ರ್ಯ ಪ್ರಾಪ್ತಿಯ ದಿನಬಂತು, ಪ್ರಧಮತಃ ರಚನೆಗೊಂಡಿದ್ದ ಮಧ್ಯಾವಧಿ ಕೇಂದ್ರ ಮಂತ್ರಿಮಂಡಲದಲ್ಲಿ ಡಾ| ರಾಜೇಂದ್ರರು ಆಹಾರ ಮತ್ತು ಬೇಸಾಯ ಮಂತ್ರಿಯಾದರು. ನ್ಯಾಯವಾದಿ ಮತ್ತು ನಿಷ್ಪಕ್ಷಪಾತಿಯೆಂದು ಸರ್ವರ ಗೌರವ ಕ್ಕಪಾತ್ರನಾದ ಅಗ್ರಗಣ್ಯನಿಗೇನೇ ಜೇಳಿಸಿದಂತಹ ಘಟನಾ ಸಮಿತಿ ಅಧ್ಯಕ್ಷಸ್ಥಾನವು ಇವರ ಪಾಲಿಗೆ ಬಂತು. ಸ್ವತಂತ್ರ ಭಾರತದ ಹೊಸ ಶಾಸನ ರಚನೆಯ ಜವಾಬ್ದಾರಿಗಳನ್ನು ತಯಾರಿಸಿದ ಆ ಮೂರು ವರ್ಷಗಳ ಅವಧಿಯಲ್ಲಿ ಅಧ್ಯಕ್ಷ ಡಾ| ರಾಜೇಂದ್ರ ಪ್ರಸಾದರು ತೋರಿಸಿದ್ದ ಧೈರ್ಯತೆ, ನ್ಯಾಯ ನಿಸ್ಪಾರತೆ, ನಿಷ್ಪಕ್ಷಪಾತತ್ವ, ಜಾತ್ಯುರ್ಯ ಮತ್ತು ವಿವೇಚನೆ ಸರ್ವರ ಕೊಂಡಾಟಗಳಿಸಿವೆ. ಘಟನಾ ನಿರ್ಮಾಣ ಕೆಲಸವಾಗಿ ಘಟನಾ ಜಾರಿ ಮುಹೂರ್ತ ಬಂದಾಗ ಆಗ ಇದ್ದ ಇವರನ್ನೇ ಈಗಲೂ ಆ ಧ್ಯಕ್ಷನಾಗಿ ಆರಿಸಿಕೊಳ್ಳಲಾಯಿತು. ತಳಹೃದಯ, ವಿಶಾಲ ಜ್ಞಾನ ಮತ್ತು ಉಚ್ಚ ತತ್ವಗಳನ್ನು ತುಂಬಿಕೊಂಡ ಮೆದುಳು, ಕರ್ಮಯೋಗಿತ್ವ—ಇವೇ ಅಧ್ಯಕ್ಷ ರಾಜೇಂದ್ರರ ಜೀವನದ ಮೂಲ ಸೂತ್ರಗಳು ಉಚ್ಚ ಹಿಂದೀ ಸಂಸ್ಕೃತಿ ಮತ್ತು ಬ್ರಿಟಿಷ್ ವಿದ್ವಜ್ಜನಾಶಕ್ತಿ, ಪೌರ್ವಾತ್ಯ ತಿಳಿಮನಸ್ಸು ಮತ್ತು ಪಾಶ್ಚಾತ್ಯ ವ್ಯವಹಾರ ಜ್ಞಾನ, ಪುರಾತನ ಕಾಲದ ನ್ಯಾಯನಿಷ್ಠೆ ಮತ್ತು ಅಧುನಿಕ ಚುರುಕು ಮನೋವೃತ್ತಿ— ಹೀಗೆ ಸರ್ವದೆಯ ಆಮೂಲ್ಯತೆಗಳೂ ಅಧ್ಯಕ್ಷ ರಾಜೇಂದ್ರರಲ್ಲಿ ಮಿಲನಗೊಂಡಿವೆ. ಕುಟುಂಬ ಪೋಷಣೆಗಾಗಿ ಬಾಸಣಿಗೆ ಕಲಿಸುವಿಕೆ ಮಾಡಬೇಕಾಗಿದ್ದ ಸಾದಾ ಮನುಷ್ಯ ಇಂದು ಅಖಿಲ ಭಾರತದ ತಿರಸ್ಕಾರಿ ಧಾಜಿಸುತ್ತಿರುವುದು ತನ್ನೀ ಅಮೂಲ್ಯ ಗುಣಗಳ ಪ್ರಯೋಗ ಬಲದಿಂದಲೇ. ಭಾರತದ ಆಧಿಕಾರ ಚುಕ್ಕಾಣಿಯನ್ನು ಇವರ ಹೆಸರು ಮುದ್ರೆ ಬಿದ್ದೇ. ಇಂದು 35 ಕೋಟಿ ಭಾರತೀಯರು ಇವರ ಪ್ರಜೆಗಳು.

ಅಧ್ಯಕ್ಷ ದಿನಚರಿ

ನವಢಿಲ್ಲಿಯ ಅಧ್ಯಕ್ಷ ಭವನದಲ್ಲಿ ಡಾ| ರಾಜೇಂದ್ರ ಪ್ರಸಾದರ ದೈನಿಕ ವ್ಯವಹಾರವು ಮುಂಜಾನೆ 4 ತಾಸಿಗೆ ಆರಂಭಿಸುತ್ತದೆ. ಘಂಟೆ ನಾಲ್ಕಕ್ಕೆ ಎದ್ದು ಒಂದೋ ಯೋಗ ವ್ಯಾಯಾಮ ಮಾಡುತ್ತಾರೆ; ಇಲ್ಲವೇ ಮೊಎಲ್ ಗಾರ್ಡನಿನಲ್ಲಿ ಸಂಚಾರ ಕೈಕೊಳ್ಳುತ್ತಾರೆ. ಆ ಮೇಲೆ ಸುಮಾರು ಒಂದು ತಾಸು ಚರಕದಿಂದ ನೂಲು ತೆಗೆಯುವ ಕೆಲಸ. ಡಾ| ರಾಜೇಂದ್ರರು ನೂಲುವುದರಲ್ಲಿ ಅತಿ ನಿಷ್ಣಾತರಿದ್ದಾರೆ. ತನ್ನ ಪೋಷಾಕುಗಳಿಗೆ ಬೇಕಾಗುವ ನಾಜೂಕಿನ ನೂಲನ್ನು ಸ್ವತಃ ತೆಗೆಯುತ್ತಾರೆ. ಪ್ರಸಿದ್ಧ ಗ್ರಂಥಕರ್ತರಿವರ ಡಾ| ರಾಜೇಂದ್ರ ಪ್ರಸಾದರ ಹೆಚ್ಚಿನ ಕೃತಿಗಳು ಅವರ ಸೂಕ್ಷ್ಮ ದಾಂಕ್ಯಾಗಿ ಚಿಂಕಾ ತಿರುಗಿಸುವುದರಲ್ಲಿ ಪಳಗುನಾಗಿದ್ದಾಗಲೇ ತನ್ನ ಕಾರ್ಯದರ್ಶಿಗಳಿಗೆ ಹೇಳಿ ಬರೆಯಿಸಿದವುಗಳೆಂದರೆ, ಕತೆ, ಕವಿತೆಗಳ ಲೇಖನ ಸ್ಪರ್ಧೆಗಾಗಿ ವಿಶ್ವಾಂತ ಸ್ಥಳದಲ್ಲೋ ಸಮುದ್ರ ತೀರ, ಅಥವಾ ಗುಡ್ಡ ತಪ್ಪಲುಗಳಲ್ಲೋ ಕುಳಿತು ಕೆಲಸ ಮಾಡಬೇಕಾಗುವ ಲೇಖನ ಕರಗಳನ್ನು ಆ ಶ್ಚರ್ಯ ಕರವಾಗಿ ಗಟಬಹುದು. ನೂಲವ ಕಾರ್ಯಕ್ರಮವಾದ ಮೇಲೆ ಸ್ನಾನ ನಂತರ ಮುಂಜಾವಿನ ಪ್ರಾರ್ಥನೆ. ಪ್ರಾಣಾಯಾಮ. ಹಿಂದು ಮತ್ತು ಧಾರ್ಮಿಕ ಬುದ್ಧಿಯ ಮನುಷ್ಯನಾಗಿರುವ ರಾಜೇಂದ್ರರು ಪ್ರತಿದಿನ 45 ನಿಮಿಷಗಳ ವರೆಗೂ ಗೀತಾಪಠಣ ಮಾಡುತ್ತಾರೆ. ಆದಾದ ನಂತರ ದೈನಿಕ ವರ್ತಮಾನ ಪತ್ರಿಕೆಗಳನ್ನು ನೋಡಿ ಹಾಲು, ಹಣ್ಣುಗಳು ಮುಂಜಾನೆಯ ಫಲಾಹಾರ ಸ್ವೀಕಾರ. ಮತ್ತೆ ಬಂದು ಕುಳಿತವರು ಫೈಲುಗಳನ್ನೂ ತನ್ನ ಸರಕಾರದಿಂದ ಬಂದ ವರದಿಗಳನ್ನೂ ನೋಡುತ್ತಾರೆ, ಇಲ್ಲಿಂದ ಸುಮಾರು 9-30ತಾಸಿಗೆ ಸಂದರ್ಶಕರ ಭೇಟಿಯಾರಂಭಿಸಿದರೆ ಬಹುಬೇಕಮಾಗಿ ಅಪರಾಹ್ನ 1 ತಾಸಿನವರೆಗೂ ಇದೇ ಕೆಲಸ. ಈ ಸಂಭಾಷಣೆಗಳು ಅವರ ಲಭೀಸು ಕೋಣೆಯಲ್ಲಿ ನಡೆಯುತ್ತವೆ. ಆ ಮೇಲೆ ಮಧ್ಯಾಹ್ನದ ಊಟ. ಅಧ್ಯಕ್ಷರು ರಾಷ್ಟ್ರನ ಗಣ್ಯ ಅಥಿತಿಗಳೊಡನೆ ಔತಣಕ್ಕೆ ಕುಳಿತ್ತು ಕೊಳ್ಳುವ ಸಂದರ್ಭಗಳು ಬಹಳ; ಅಂತಹ ಅಥಿತಿಗಳಿಲ್ಲದಿದ್ದರೆ ತನ್ನ ಕುಟುಂಬದ ಜತೆಯಲ್ಲೇ ಕುಳಿತು ಊಟ ಮಾಡುವುದು ಅವರ ಸಂಪ್ರದಾಯ. ಚಪಾತಿಗಳು, ಎರಡು ಅಥವಾ ಮೂರು ಬಗೆಯ ಬೇಯಿಸಿದ ತರಕಾರಿಗಳು, ಅನ್ನ ಮತ್ತು ತೋವೆ, ಒಂದು ಕಪ್ ಹಾಲು, ಇಷ್ಟೇ ಅವರ ಊಟ. ಯಾವುದೇ ತಿಂಡಿಯ ಮೇಲೆ ವಿಶೇಷ ಪ್ರೀತಿ ಎಂಬುದು ಇವರಿಗಿಲ್ಲ. ಇವರಿಗೆ ಸ್ವಂತ ಅಡುಗೆ ವ್ಯವಸ್ಥೆಯಿಲ್ಲ. ಅಡಿಗೆಗೆ ಪ್ರತ್ಯೇಕ ಜನವಿದೆ. ಕೇವಲ ಸಸ್ಯಾಹಾರವಿದ್ದು ಆಹಾರ ತಯಾರಿಯಲ್ಲಿ ಮಾತ್ರ ಒಂದಂಶ ಬಿಟ್ಟರೆ ಆಹಾರ ಸ್ವೀಕಾರ ವಿಧಾನದಲ್ಲಿ ಸಂಪೂರ್ಣವಾಗಿ ಹಿಂದೀಯ ಮರ್ಜಿಯನ್ನೇ ಅನುಕರಿಸುತ್ತಾರೆ. ವಿಶೇಷವೆಂದರೆ ಮೇಜಿನಲ್ಲಿ ಉಣ್ಣುವ ಮತ್ತು ಉಜ್ಜುಗರವಸ್ತ್ರವನ್ನು ಉಪಯೋಗಿಸುವ ಅಭ್ಯಾಸ ತಮಗಿಷ್ಟ ಬಂದರೆ ಊಟದ ಕವಲು ಮುಳ್ಳುಗಳನ್ನೂ, ಅಧವಾ ಚಾಕುರಿಗಳನ್ನೂ ಇವರು ಉಪಯೋಗಿಸುವುದಿಲ್ಲ. ಮುಂಜಾವಿನ ತಿಂಡಿಗಳಲ್ಲಿ ಇವರ ಆಹಾರ ಬಳಕಲ್ಪಡುತ್ತದೆ; ಪಿಂಗಾಣಿ ಗಳನ್ನು ಉಪಯೋಗಿಸುವುದು ಅಪರೂಪ. ಯಾವ ವಿಧದ ಜಾತಿಜಟವೂ ಅವರಿಗಿಲ್ಲ. ಒಂದು ಅಭ್ಯಾಸವಾಗಿ ಚಹಾ ಅಥವಾ ಕಾಫಿಯನ್ನು ಕೊಡಾ ಕೊಡಿಯುವುದಿಲ್ಲ. ಮಧ್ಯಾಹ್ನದ ಊಟವಾದೊಡನೆ ಮಲಗುತ್ತಾರೆ. ಡಾಗೆ ವಿಶ್ರಮಿಸಿದವರು ಸುಮಾರು 3-30ಕ್ಕೆ ಏಳುತ್ತಾರೆ. ಅನಂತರೇ ಪ್ರಾಮುಖ್ಯ ಸರಕಾರೀ ಕಾರ್ಯಗಳ ನಿರ್ವಹಣೆ. ಸರಕಾರೀ ಮತ್ತು ಖಾಸಗೀ ಕಾಗದ ಪತ್ರಗಳನ್ನು ಅಧ್ಯಕ್ಷರು ಹಕೀಲಿಸುವುದು ಈ ಹೊತ್ತಿನಲ್ಲೇ. ಸರಕಾರದ ಆಧಿಕಾರಾಧಾರ ವಿಳವಣಿಗೆಯ ಯೋಜನೆಗನುಸಾರವಾಗಿ ತನ್ನ ದಾಯಾದಿಯ ಕುಟುಂಬ ಸ್ಥಳವನ್ನು ತನಗೆ ಕೊಡಿಸಕಕ್ಕದ್ದೆಂದು ರಾಷ್ಟ್ರಾಧ್ಯಕ್ಷರಿಗೆ ಅರ್ಜಿ ಒರೆಯಲಾ ಅಧ್ಯಾಸ ಬಂದಿರುವ ಜನತಾ ರಾಜ್ಯದ ಹೊಣೆಗಾರ ಜನರು, ತನ್ಮಂತಹ ಅರ್ಜಿಯು ಅಧ್ಯಕ್ಷರ ಅವಗಾಹನೆಗೆ ಬರುವಂತಿದ್ದರೆ ಅದು ಸುಮಾರು ಅಪರಾಹ್ನ 3-30ಯಿಂದ 4-30ತಾಸಿನ ಒಳಗೆ ಎಂದು ತಿಳಿದಿರಬೇಕು! ಆ ಮೇಲೊಮ್ಮೆ ಹಾಲು, ಹಣ್ಣುಗಳ ಸಾದಾ ಫಲಾಹಾರ ತೆಗೆದುಕೊಂಡು 4-30ತಾಸಿಗೆ ಪುನಃ ಸರಕಾರೀ ಕೆಲಸಗಳಿಗೆ ಗಮನ ಕೊಡುತ್ತಾರೆ; ಅಥವಾ ಸಂದರ್ಶಕರಿಗೆ ಭೇಟಿಕೊಡುತ್ತಾರೆ. ವಿವಿಧವರ್ಗದ ಜನರನ್ನು ಅಧ್ಯಕ್ಷರು ಚಹಕ್ಕಾಮಂತ್ರಿಸುವದಿದೆ. ಅದು ಹೆಚ್ಚಾಗಿ ಅಪರಾಹ್ನ 6ತಾಸಿನ ನಂತರವೇ. ಇಂತಹ ಚಹಾಕೂಟಗಳಲ್ಲಿ ತನ್ನ ಅಧಿತಿಗಳೊಂದಿಗೆ ಸಲಗೆಯಿಂದ ಬೆರೆತು, ಸನಾಜದ ಎಲ್ಲಾ ವಿಧದ ಅಭಿಮತಗಳನ್ನೂ ಈ ಮೂಲಕ ಅನರು ತಿಳಿದುಕೊಳ್ಳುವದಿದೆ ಆ ಮೇಲೆ ತನ್ನ ಬಂಡಿಯಲ್ಲಿ ಕುಳಿತುಕೊಂಡು ಸಂಚಾರಕ್ಕೆ ಹೊರಡುತ್ತಾರೆ. ಆದರೆ ಈ ಸಂಜೇ ವಿಹಾರ ಕೂಡಾ ತನ್ನ ಜನತೆಯ ಕಲ್ಯಾಣ ಸಾಧನೆಗೇನೇ ವಿನಿಯೋಗ ಹೊಂದುವ ಸಂದರ್ಭ ಹೆಚ್ಚಿಗೆ. ಪಾಕಿಸ್ತಾನದಿಂದ ಓಡಿ ಬಂದಿರುವ ನಿರಾಶ್ರಿತರ ಜೀವನ ವ್ಯವಸ್ಥೆ ಹೇಗಿದೆ, ಎಂಬುದರ ಪರೀಕ್ಷಣೆಗಾಗಿ ಅವರೇ ಸವಾರಿ ಬಿಡುವುದಿದೆ. ಆ ಪ್ಲಿಂದ ಮರಳಿದವರು ಕೆಲಹೊತ್ತು ಮೊಗಲ್ ಗಾರ್ಡನುಗಳಲ್ಲ ಕಳಿತುಕೊಂಡು ತನ್ನ ಮೊಮ್ಮಕ್ಕಳನ್ನು ಆಡಿಸುತ್ತಾರೆ. ರಾತ್ರಿ 8 ಅಥವಾ 8-30 ತಾಸಿಗೆ ಮಧ್ಯಾಹ್ನದೂಟದ ಮಾದರಿಯ ರಾತ್ರೀಭೋಜನ ತೀರಿಸಿ, ಮಲಗುತ್ತಾರೆ.

ಸಾದಾ ವರ್ತನೆ

ಅಧ್ಯಕ್ಷರ ಅತಿನದಂತೆಯೇ ವಸನ ಕೂಡಾ ಸಾದಾ ರೀತಿಯದು: ಹಿಂದೀ ಮರ್ಜಿಯದಿದೆ. ಸರಕಾರೀ ಕಾರ್ಯನಿರ್ವಹಣ ಸಂದರ್ಭಗಳಲ್ಲಿ, ಅಧ್ಯಕ್ಷರು ಪೈಜಾಮ ಮತ್ತು ಅಚ್ಕಿನ್ ಕೋಟ್ಟು ಕೊಳ್ಳುತ್ತಾರಾದರೂ ಬೇರೆಲ್ಲಾ ಸಂದರ್ಭಗಳಲ್ಲೂ ಧೋತಿ ಮತ್ತು ಕುರ್ತಾ ದಿಂದಿರುವುದರಲ್ಲೇ ಅವರಿಗೆ ಆನಂದ. ಅವರು ಸತತ ಖಾಧಿಧಾರಿಗಳೆಂದು ಬೇರೆ ಹೇಳಬೇಕಾಗಿಲ್ಲ. ಆದರಲ್ಲಿ ಕೂಡಾ ಸಿಲ್ಕ್ ಅಥವಾ ಮಸ್ಲಿನ್ ಅರಿವೆ ಯೋಗಿಸಲಾಗಿದೆಯಿಲ್ಲ. ಕಂದು ಭಾರ್ಜನುಸಾರವಾಗಿ ಇಂತಹ ಅತಿ ಸಾಧೋಕರಣ ಖಾದಿಯನ್ನು ಉಡುವುದೇ ನೋ ಇದೆ ಅವರ ಕುಟುಂಬದ ಎಲ್ಲರೂ ಸದಾ ಖಾದಿಧಾರಿಗಳೇ. ಅಧ್ಯಕ್ಷರ ಕೋಣೆ, ವಸತಿಗಳು ಸಹಜವಾಗಿ ಕಲಾಪೂರ್ಣ ಶೃಂಗಾರದಿಂದಿವೆ. ಅಧ್ಯಕ್ಷ ಪ್ರಸಾದರಲ್ಲಿ ವಿನೋದ ವಿಹಾರ ಲಾಲಸೆಗಳಿರುವುದು ಅತಿ ಕಡಿಮೆ. ಮಕ್ಕಳೊಡನೆ ಆಡುವದೆಂದರೆ ಅವರಿಗೆ ಇಷ್ಟುದಿನಪ್ರತಿ ಕೆಲಹೊತ್ತನ್ನು ತನ್ನ ಮೊಮ್ಮಕ್ಕಳೊಡನೆ ಆಡುವುದರಲ್ಲಿ ಕಳೆಯುತ್ತಾರೆ. ಜೆಸ್ ಆಟ ನೋಡುವ ಚಟ ಹಿಂದೆ ಇವರಲ್ಲಿದ್ದಿತು. ಆದರೀಗ ಇಂತಹುದಕ್ಕೆ ಸಮಯವಿಲ್ಲ. ಪರಮತ ಸಹಿಷ್ಣುತೆಯು ಪರಿಪೂರ್ಣವಿರುವ ಹಿಂದೂ ಧರ್ಮಕ್ಕನುಸಾರವಾಗಿ, ಯಥಾರ್ಥಾನುಕರಣೆಯಿದ್ದರೆ ಎಲ್ಲಾ ಧರ್ಮಗಳೂ ದೇವರ ಕಡೆಗೇನೇ ಸಾಗುತ್ತಿವೆ ಎಂಬ ನಂಬಿಕೆಯಿರುವ ಮನುಷ್ಯ ಡಾ| ರಾಜೇಂದ್ರರು. ಆದ್ದರಿಂದಲೇ ಸ್ವಧರ್ಮದಂತೆ ಪ್ರತಿಯೊಂದು ಪರಧರ್ಮದ ಮೇಲೂ ಇವರಿಗೆ ಗೌರವವಿದೆ. ಬಿಹಾರಿನ ವೆಬಸ್ಲಿವ್ ಮಹಾನುಭಾವ ಮಶರುಲ್ ಹಕ್ಕರ ಮೇಲೆ ಅತಿಶಯ ಭಕ್ತಿ ವಿಶ್ವಾಸಗಳುಳ್ಳವರು ಡಾ| ರಾಜೇಂದ್ರರು. ಎಲ್ಲಕ್ಕಿಂತ ಹೆಚ್ಚಾಗಿ ಇವರು ಸೇವಾಜೀವಿ. ನಮ್ಮಲ್ಲಿ ಅತ್ಯಧಿಕ ಸಂಖ್ಯಾಕರ ಮಟ್ಟಿಗೆ ನಾಲಗೇತುದಿಯಲ್ಲಿ, ನಾಮ ಮಾತ್ರ ಕಾರ್ಯಗಳಲ್ಲಿ, ಹೆಚ್ಚೆಂದರೆ ಕಾರ್ಯದಲ್ಲಿ ಮಾತ್ರವಿರುವ ಜನತಾ ಸೇವೆಯು ಡಾ| ರಾಜೇಂದ್ರರ ಮಟ್ಟಿಗೆ ಜೀವದ ಉಸಿರಿನಂತಿದೆ. ಜನಸೇವೆ ವಿನಹಾ ಬಾಳುವೆಯಿಲ್ಲವೆಂಬಂತಿರುವ ಮನುಷ್ಯನಿವರು. ನಿರ್ಲಿಪ್ತ ಬುದ್ಧಿಯ ಜನಸೇವೆಯ ಮೂಲಕವೇ ಆತ್ಮೋದ್ಧಾರ ಮತ್ತು ಆತ್ಮಶುದ್ಧಿಯೆಂಬ ಗಾಂಧೀವಾದವನ್ನು ತನ್ನ ಜೀವನ ವಿಧಾನವಾಗಿ ಮಾಡಿಕೊಂಡವರು. ಈದ ಬಾರಿಯ ಬಿಹಾರ್ ಭೂಕಂಪದನೇಳೆ ದುಃಖಿತರನ್ನು ಸಂತೈಸಲು ಅಹರ್ನಿಶಿ ಒದ್ದಾಡಿದ್ದ ಡಾ| ರಾಜೇಂದ್ರ ಪ್ರಸಾದರ ಸ್ಮರಣೆಯು ಈಗಿನ ಅಸ್ವಾಸ್ಥ್ಯ ಭೂಕಂಪ ಪೀಡಿತರಿಗೆ ಬಂದಿರಬೇಕು. ಅಂತೆಯೇ ಬಿಹಾರ್ ಕಂಪದ ಕುರಿತು "ಇದು ನಮ್ಮ ಪಾಪಗಳಿಗೆ ದೊರೆತ ಶಿಕ್ಷೆ"ಎಂದು ಹೇಳಿದ್ದ ತನ್ನ ಗುರುಗಾಂಧೀಜಿಯ ಮಾತನ್ನು ಸ್ಮರಿಸಿಕೊಳ್ಳುತ್ತಾ ಅಧ್ಯಕ್ಷ ಪ್ರಸಾದರಿಗೆ, ತನ್ನಾಡಳಿತೆಯಲ್ಲಿ ಅಂತಹ ಪಾಪ ನಡೆದುದೇನು ಎಂದು ಅನ್ವಾಸ್ಯ ಭೂಕಂಪದ ಕುರಿತು ಚಿಂತಿಸುತ್ತಿರಬಹುದು. ರಾಷ್ಟ್ರದ ಪಾಪದ ಮೊತ್ತ ಹೇಗಿದ್ದರೂ ಜನತಾಂರಾಜ್ಯ ಭಾರತದ ಸುಕೃತ ಮತ್ತು ನೌಘಾಗ್ಯಗಳ ಸೈಕಿ ಯೋಗ್ಯ ಅಧ್ಯಕ್ಷನನ್ನಾರಿಸಿಕೊಂಡುದು ಒಂದು ಎಂಬುದಂತೂ ಖಂಡಿತ.

[ಆಧಾರದಿಂದ]

ತಿದ್ದುಪಡಿ

ಕಳದ ತಾ 24-8-50ರ ನಮ್ಮ ಸಂಚಿಕೆಯಲ್ಲಿಯ 10ನೆ ಪುಟದಲ್ಲಿ ಪ್ರಕಟವಾದ ಉಡುಪಿ ಡಿ ಮುನ್ಸಿಫ್ ಕೋರ್ಟಿನ ನಂಬ್ರ O. P. 27/1950ನೇ ನೋಟೀಸಿನಲ್ಲಿ D. Awblev ಎಂಬುದನ್ನು D. Ambler ಎಂಬದಾಗಿಯೂ, ತಾರೀಕು 16-9-1950 ಎಂಬುದನ್ನು ತಾ. 16-8-1950 ಎಂಬದಾಗಿಯೂ ತಿದ್ದಿ ಓದಬೇಕಾಗಿದೆ.

ಸಂ। ನ.

ಕಾಶ್ಮೀರ ಸಂಧಾನ ಮುರಿದುದೆಲ್ಲಿ?

ಕಾಶ್ಮೀರದ ಸಂಧಾನ ಪ್ರಯತ್ನವು ಮತ್ತೊಮ್ಮೆ ಪರಾಭವಗೊಂಡಿತು. ಈ ವಿವಾದದ ಮಧ್ಯಸ್ಥಗಾರನಾಗಿ ಭದ್ರತಾ ಕೌನ್ಸಿಲಿನಿಂದ ನೇಮಕಗೊಂಡಿದ್ದ ನಾಲ್ಕು ವಾರಗಳ ತನಕ ಇಲ್ಲಿದ್ದು ಪ್ರಯತ್ನಿಸಿದ ಸರ್. ಓವೆನ್ ಡಿಕ್ಸನರು ತನ್ನಿಂದೇ ಕೆಲಸವಾಗುವಂತಿಲ್ಲವೆನ್ನುತ್ತಾ ತನ್ನ ಸಿಬ್ಬಂದಿಯೊಂದಿಗೆ ಆಗೋಸ್ಟು ತಾ. 28ರಲ್ಲಿ ಕರಾಚಿಯಿಂದ ಲಂಡನಿಗೆ ಹಾರಿ, ಅಲ್ಲಿಂದ ಸಂಯುಕ್ತ ರಾಷ್ಟ್ರ ಸಂಘದ ಕಾರ್ಯಾಲಯ ಲೇಕ್ ಸಕ್ಸೆಸಿಗೆ ಹೊರಟು ಹೋಗಿದ್ದಾರೆ. ಪ್ರಥಮತಃ ದಿಲ್ಲಿ, ಕರಾಚಿ ಮತ್ತು ಕಾಶ್ಮೀರಕ್ಕೆ ಹೋಗಿ ಎಲ್ಲಾ ಸ್ಥಿತಿಗತಿಗಳ ಪ್ರತ್ಯಕ್ಷ ಪರೀಕ್ಷಣೆ ನಡೆಸಿದ ಸರ್. ಡಿಕ್ಸನರು, ಆ ಮೇಲೆ ಇಕ್ಕಡೆಯ ನಾಯಕರೊಡನೆ ಆ ಸಂಬಂಧದ ಮಾತುಕತೆಯಾರಂಭಿಸಿ ಕೊನೆಗೆ ದಿಲ್ಲಿಯಲ್ಲಿ ನೆಹರೂ ಲಿಯಾಖತ್ ಸಮ್ಮೇಳನವನ್ನೂ ಕೂಡಿಸಿದ್ದರು. ಆ ಕೂಟವು ಒಂದು ತೀರ್ಮಾನಕ್ಕೆ ಬಾರದೆ ಮುಂದಿನ ಮಾತುಕತೆಗಾಗಿ ಪಂಡಿತ ನೆಹರುಗಳು ಕರಾಚಿಗೆ ಹೋಗುವರೆಂದು ಆ ಸಂದರ್ಭದಲ್ಲಿ ಪ್ರಕಟವಾಗಿದ್ದಿತು. ಆದರೆ ಆದರ ಬದಲಿಗೆ ಸರ್. ಡಿಕ್ಸನರೇ ಕರಾಚಿಗೆ ಹೋಗಿ ಕೊನೆಯ ಮಾತುಕತೆ ನಡೆಸಿದರು. ಕೊನೆಯವರೆಗೂ ಇಕ್ಕಡೆಯವರನ್ನು ಒಂದುಗೂಡಿಸುವ ವಿಧಾನವೇ ಹೊಳೆಯದಿದ್ದುದರಿಂದ, ತನ್ನ ಕೆಲಸಕ್ಕೆ ಆಗೋಸ್ಟು 15 ರೊಳಗಿನ ಅವಧಿ ದೊರೆತಿದ್ದ ಡಿಕ್ಸನರು ಅಲ್ಲಗೇ ಎಲ್ಲವನ್ನೂ ನಿಲ್ಲಿಸಿ, ಹೊರಟು ಹೋದರು.

ಸಂಧಾನ ಮುರಿದುದು ಹೇಗೆ?

ಸರ್. ಓವೆನ್ ಡಿಕ್ಸನರನ್ನು ಸಂಧಾನಕ್ಕೆ ಮುಂದೂಡಿದ ಭದ್ರತಾ ಕೌನ್ಸಿಲ್ ನಿರ್ಣಯದಲ್ಲಿದ್ದ ಮೂಲ ವಿಷಯವೆಂದರೆ– ಅಖಿಲ ಕಾಶ್ಮೀರದಲ್ಲಿ ನಿಷ್ಪಕ್ಷಪಾತ ಸ್ವತಂತ್ರ ಜನಮತ ಸಂಗ್ರಹ ನಡೆಸಲಾಗುವಂತೆ ಭಾರತ ಮತ್ತು ಪಾಕಿಸ್ತಾನಗಳೊಳಗೆ ಒಂದು ಒಪ್ಪಂದ ಸಾಧಿಸಬೇಕೆಂಬುದೇ. ಈ ಕಾರ್ಯಸಾಧನೆಯ ಮಟ್ಟಿಗೆ ಮುಖ್ಯಸಮಸ್ಯೆಯಾಗಿದ್ದುದೆಂದರೆ ಆಲ್ಲಯ ಸೇನಾವಿಸರ್ಜನೆ. ದಿಲ್ಲಿಯಲ್ಲಿ ನಡೆದಿದ್ದ ಇಕ್ಕಡೆಯ ಪ್ರಧಾನಿಗಳ ಕೂಟದಲ್ಲಿ ಸರ್ ಓವೆನ್ ಚರ್ಚೆಗಿಟ್ಟುದು ಸೇನಾಬರ್ಖಾಸ್ತಿನ ಪ್ರಶ್ನೆಯನ್ನು. ಈ ಕುರಿತು ಭಾರತ ಮತ್ತು ಪಾಕಿಸ್ತಾನಗಳೆರಡೂ ತಂತಮ್ಮ ಪೂರ್ವ ನಿಶ್ಚಿತವಾದ ನೆಲೆ ಬಿಟ್ಟು ಒಂದಿಂಚು ಅಲುಗಾಡಲು ಒಪ್ಪದುದರಿಂದಲೇ ದಿಲ್ಲೀ ಮಾತುಕತೆ ಫಲಸಿಂಚಿಲ್ಲಿ. ಈ ರೀತಿ ಜಮ್ಮು ಮತ್ತು ಕಾಶ್ಮೀರದ ಬೇರೆ ಬೇರೆ ಭಾಗಗಲ್ಲಿರುವ ಭಾರತ ಮತ್ತು ಪಾಕಿಸ್ತಾನ ಕಡೆಯ ಸೇನೆಗಳನ್ನು ಬರ್ಖಾಸ್ತು ಗೊಳಿಸುವ ಅಥವಾ ಸಂಖ್ಯೆ ತಗ್ಗಿಸುವ ಸಂಬಂಧದ ವಿವಾದಗಳನ್ನು ಒಂದುಗೂಡಿಸುವುದು ಅಸಾಧ್ಯವೆಂದು ಖಚಿತವಾದ ಮೇಲೆ ಸರ್. ಡಿಕ್ಸನರ ತಲೆಯಲ್ಲಿ ಹೊಸ ಯೋಜನೆ ಮೂಡಿತು. ಅಕ್ಕಪಕ್ಕದ ಇಂತಹ ಸ್ಥಳಗಳ ಸ್ಪರ್ಶಕ್ಕೆ ಬೀಗದೆ ಕಾಶ್ಮೀರದ ಜೀವಾಳವಾಗಿರುವ ಕಂದರವಲಯದಲ್ಲಿ ಮತಗಣನೆಮಾಡಿ, ಆದರ ಹರಿಣಾಮವನ್ನು ನೋಡುವ ಬಯಕೆ ಅವರಿಗಾಯಿತು. ಕೊನೆಗೆ ದಿಲ್ಲಿಯಲ್ಲಿ ಆವರೀ ಸೂಚನೆಯನ್ನು ಮುಂಬಟ್ಟಾಗ ಪಂಡಿತ ನೆಹರುಗಳು ಸ್ಪಷ್ಟವಾಗಿ ಹೇಳಿದ್ದರು: "ನಮಗಿದರಲ್ಲಿ ಮೆಚ್ಚುಗೆಯಿಲ್ಲ; ಇದು ಹಲವು ವಿಧದ ಟೀಕೆಗಳಿಗೊಳಗಾಗಬಹುದು. ಆದರೂ ಯಾವುದಾದರೊಂದು ಇತ್ಯರ್ಥಕ್ಕನು ಕೂಲವಾಗುವಂತಿದ್ದರೆ ನಾವದನ್ನು ಪರ್ಯಾಲೋಚಿಸಲು ತಯಾರಿದ್ದೇವೆ. ಆದರೂ ಒಂದು ಶರ್ತವಿದೆ. ನಾವೀಸೂಚನೆಯನ್ನು ಸ್ಥೂಲರೂಪದಿಂದ ನೋಡಬೇಕಾದರೂ ಪಾಕಿಸ್ತಾನವೂ ಇದರ ಪರ್ಯಾಲೋಚನೆಗೆ ಸಿದ್ಧವಿದೆ ಎಂಬುದು ಪಂಡಿತವಾಗಿ ಕೊಳ್ಳಬೇಕು. ಏಕೆಂದರೆ ಕಾನಾವುದನ್ನೂ ಮುಂದಾಗಿ ಸೂಚಿಸದೆ, ನಾವೇನು ಹೇಳುತ್ತೀವೆಂಬುದನ್ನು ಕೇಳಿಕೊಂಡು ಆ ಮೇಲೆ ಅದರ ವಿರುದ್ಧವಾದಿಸುವ ಚಟುವಟಿಕೆ ಪಾಕಿಸ್ತಾನದವರಲ್ಲಿ ಗಚ್ಚಾ ಅಂಟಿಕೊಂಡಿದೆ" ಇವ್ವನ್ನು ಕೇಳಿಕೊಂಡು ಕೊನೆಯದಾಗಿ ಕರಾಚಿಗೆ ಹೋದ ಡಿಕ್ಸನರು, ಈಗ ಇರುವಂತೆಯೇ ಕಾಶ್ಮೀರ ಕಂದರದಲ್ಲಿ ಮಾತ್ರ ಮತಸಂಗ್ರಹ ಮಾಡುವುದಕ್ಕೆ ಪಾಕಿಸ್ತಾನದ ಒಪ್ಪಿಗೆಯಿಲ್ಲವೆಂದು ಅಲ್ಲಿಂದಲೇ ಭಾರತ ಸರಕಾರಕ್ಕೆ ತಿಳಿಸಿದರು. ಮತ್ತೊಂದು ಆಶ್ಚರ್ಯಕರ ಪ್ರಶ್ನೆ ಛಡಾಯಿಸಿದರು: "ಈ ಮತಗಣನೆಗಾಗಿ ಸದ್ಯದ ಜಮ್ಮು ಮತ್ತು ಕಾಶ್ಮೀರ ಸರಕಾರದ ಆಧಿಕಾರವನ್ನು ಸಂಯುಕ್ತ ರಾಷ್ಟ್ರ ಸಂಘದ ಸುಪರ್ದಿಗೆ ಬಿಟ್ಟು ಕೊಡಲು ತಯಾರಿರುವಿರಾ?" ಈ ವಿಲಕ್ಷಣ ಸೂಚನೆಯು ಮುಳ್ಳಿನಂತೆ ಚುಚ್ಚಿದುದರಿಂದ "ಅದೆಂದಿಗೂ ಸಾಧ್ಯವಿಲ್ಲ" ಎಂದು ಪಂಡಿತ ನೆಹರುಗಳ ಉತ್ತರ ಹೋಯಿತು. ಅಲ್ಲಿಗೆ ಡಿಕ್ಸನರ ಸಂಧಾನಾವತಾರ ಮುಗಿದು ಅವರು ಹೊರಟು ಹೋದರು.

ಇದರ ಗುಟ್ಟೇನು?

ಮತಸಂಗ್ರಹದ ಪ್ರಶ್ನೆಯಾಗಿ ಡಿಕ್ಸನರ ತುದೀ ಸೂಚನೆಯಾಗಿ ಮುಂದೆ ಬಂದ ಕಾಶ್ಮೀರ ಕಂದರವೆಂಬುದು ಶೇಕ್ ಅಬ್ದುಲ್ಲಾರ ಅಡಳಿತೆಯೊಳಗಿರುವ ಕಾಶ್ಮೀರದ ಹೃದಯ ಪ್ರದೇಶ; ಮಿಕ್ಕ ಭಾಗಗಳು ಗುಡ್ಡಗಾಡು, ಬಂಜರು ಕ್ಷೇತ್ರಗಳಾಗಿರುವಾಗ ಕಾಶ್ಮೀರದ ಸಿರಿಸಂಪತ್ತು, ಉದ್ಯಮಗಳ ಕೇಂದ್ರ ನೆಲೆಯಾಗಿ ಈ ಕಂದರವಿದೆ. ಕಾಶ್ಮೀರದ ಒಟ್ಟು ಜನಸಂಖ್ಯೆ 40 ಲಕ್ಷಗಳ ಪೈಕೆ 16 ಲಕ್ಷ ಜನರು ಈ ಭಾಯಲು ಪ್ರದೇಶದಲ್ಲೇ ವಾಸಿಸುತ್ತಿದ್ದಾರೆ. ಈ ಪೈಕೆ 2 ಲಕ್ಷ ಮಂದಿ ಮುಸ್ಲಿಮೇತರರು. ಶೇಕ್ ಅಬ್ದುಲ್ಲಾರ ವರ್ಚಸ್ಸು ಇಲ್ಲಿ ಅತಿಯಾಗಿರುವುದರಿಂದ, 2 ಲಕ್ಷ ಮುಸ್ಲಿಮೇತರರಂತೂ ಪಾಕಿಸ್ತಾನಕ್ಕೆ ಮತ ಕೊಡುವಂತಿಲ್ಲ; ಮುಸ್ಲಿಮರಲ್ಲೇ ಶೇಕಡಾ 60ಕ್ಕೂ ಮಿಕ್ಕಿದವರ ಮತ ದೊರೆತೇ ತನಗಲ್ಲಿ ವಿಜಯ ಲಭಿಸಬೇಕಾದ್ದರಿಂದ, ಅಷ್ಟು ಸಿಕ್ಕೀತೆಂಬ ಭರವಸೆ ಪಾಕಿಸ್ತಾನಕ್ಕಿಲ್ಲ. ಆದ್ದರಿಂದ ಶೇಕ್ ಅಬ್ದುಲ್ಲರ ಸರಕಾರವನ್ನು ಅಲ್ಲಿಂದ ಎತ್ತಿಹಾಕಿ ಸಂಯುಕ್ತ ರಾಷ್ಟ್ರ ಸಂಘದ ಅಧಿಕಾರ ಸ್ಥಾಪಿಸಿದರೆ, ಧರ್ಮ ಭ್ರಾಂತಿಯ ರಂಪಾಟೆಬ್ಬಿಸಿ ಅತ್ಯಧಿಕ ಸಂಖ್ಯಾಕ ಮುಸ್ಲಿಮರ ತಲೆ ತಿರುಗಿಸಬಹುದೆಂಬ ಆಲೆಯಿಂದ ಪಾಕಿಸ್ತಾನವು ಡಿಕ್ಸನರ ಬಾಯಿಯಿಂದ ಆ ವಿಚಿತ್ರ ಸೂಚನೆಯನ್ನು ಹೊರಡಿಸಿದ್ದಾಗಿರಬೇಕು. ಬದಲಿಗೆ ಅಖಿಲ ಕಾಶ್ಮೀರದ ಸಾರ್ವತ್ರಿಕ ಮತಗಣನೆಯನ್ನು ಯಾಚಿಸುವಾಗ ಪಾಕಿಸ್ತಾನಕ್ಕೆ ಭರವಸೆಯಿರಲು ಕಾರಣ ವಿದೆ. ಸದ್ಯ ಪಾಕಿಸ್ತಾನ್ ಸೈನಿಕರ ವಶದಲ್ಲಿ ಕಾಶ್ಮೀರದ ಗಿಲ್ಗಿಟ್, ಪೂಂಚ್, ಮಿರ್ಪುರ ಮತ್ತಿತರ ಪ್ರದೇಶಗಳಿದ್ದು ಇಲ್ಲೆಲ್ಲಾ 12 ಲಕ್ಷಕ್ಕೂ ಮಿಕ್ಕು ಮುಸ್ಲಿಮರಿದ್ದಾರೆ. ಇದಕ್ಕೆ ಪ್ರತಿಯಾಗಿ ಭಾರತದ ಸೇನೆಯ ವಶವಿರುವ ಜಮ್ಮು ಮೊದಲಾದ ಕ್ಷೇತ್ರಗಳಲ್ಲಿ ಸುಮಾರು 9 ಲಕ್ಷ ಮುಸ್ಲಿಮೇತರರಿದ್ದಾರೆ. ಇಲ್ಲಿಯ 9 ಲಕ್ಷವನ್ನು ಅಲ್ಲಿಯ 12 ಲಕ್ಷದಿಂದ ವಜಾಮಾಡಿ 3 ಲಕ್ಷ ಹೆಚ್ಚಿಗೆ ಸಿಕ್ಕುವಾಗ ಕಂದರದ 14 ಲಕ್ಷ ಮುಸ್ಲಿಮರ್ 2 ಲಕ್ಷ ಮುಸ್ಲಿಮೇತರರ ಸೈಕೆ ತಮಗೆ ಸನಾನ್ಯಾಂಶ ದೊರೆತರೂ ತಾವು ಗೆಲ್ಲಬಹುದೆಂಬ ಆಶೆ ಪಾಕಿಸ್ತಾನಕ್ಕಿದ್ದಿದೆ. ಆದರೆ ಇಕ್ಕಡೆಯು ಸೇನೆಗಳ ವಶವಿರುವ ಸ್ಥಳಗಳನ್ನು ಇದ್ದಂತಿರಗೊಡಿಸುವುದೆಂದ ಮೇಲೆ, ಕಾಶ್ಮೀರ ಕಂದರದ ಕಾಶ್ಮೀರಾಧಿಕಾರವನ್ನು ಬರ್ಖಾಸ್ತು ಮಾಡಬೇಕೆಂಬ ಸೂಚನೆಯು ನಿಜಕ್ಕೂ ಪಕ್ಷಪಾತತನದ್ದು ಹೀಗಿದ್ದೂ ಮಿ. ಲಿಯಾಖತ್ ಅಲೀಖಾನರು "ಸರ್. ಡಿಕ್ಸನರ ಸಂಧಾನ ಯತ್ನ ಮುರಿದೂ ಹೋದುದರ ಸಂಪೂರ್ಣ ಜವಾಬ್ದಾರಿ ಭಾರತ ಸರಕಾದ್ದು" ಎಂದು ಆರೋಪಿಸಿದ್ದಾರೆ. ಇದನ್ನು ಆಲ್ಲಗಳೆಯುತ್ತಾ ಪಂಡಿತ ನೆಹರುಗಳು "ಆ ಜವಾಬ್ದಾರಿಯು ನೂರಕ್ಕೆ ನೂರರಷ್ಟೂ ಪಾಕಿಸ್ತಾನ್ದೇ" ಎನ್ನುತ್ತಾ ಕಾಶ್ಮೀರ ಸರಕಾರದ ಹೆಸ್ಸನ್ನು ಕಡಿಮೆ ಮಾಡುವ ಯಾವ ಒಪ್ಪಂದಕ್ಕೂ ತಾವು ಸಿದ್ಧರಿಲ್ಲವೆಂದೂ, ಅಲ್ಲಿ ಅಶ್ರಣಾಗಾರ ನಿರುವ ಪಾಕಿಸ್ತಾನಕ್ಕೆ ಮತಸಂಗ್ರಹದ ಕುರಿತು ತುಟಿಯೆತ್ತುವ ಅಧಿಕಾರವಿಲ್ಲವೆಂದೂ ಕಾಶ್ಮೀರ ರಕ್ಷಣೆಯನ್ನು ಸಡಲಿಸಲು ತಾವೆಂದಿಗೂ ತಯಾರಿಲ್ಲವೆಂದೂ ಸ್ಪಷ್ಟ ಪಡಿಸಿದ್ದಾರೆ. ಶೇಕ್ ಅಬ್ದುಲ್ಲರು ಪಂಡಿತ ನೆಹರುಗಳ ವಾದವನ್ನು ಅಕ್ಷರಶಃ ಸಮರ್ಥಿಸಿ "ಕಾಶ್ಮೀರದ ಭವಿಷ್ಯವು ನೆಹರುಗಳ ಕೈಯಲ್ಲಿ ಭದ್ರವಾಗಿದೆ" ಎಂದಿದ್ದಾರೆ.

ಗಾಲಾ ಮಾರಾಟ

ತಾಜಾ ಸ್ವಿಸ್ ರಿಸ್ಟ್‌ವಾಚುಗಳು ಆಶ್ಚರ್ಯಕರ ಅಲ್ಪ ಬೆಲೆಯಲ್ಲಿ ಮಾರಾಟ ಮಾಡಲಾಗುವುವು. ಜಿಲ್ಲರೆ ವ್ಯಾಪಾರಿಗಳಿಗೆ ಅಪೂರ್ವ ಸುಸಂಧಿ!

ಆರ್ಡರುಗಳನ್ನು ಕೊಟ್ಟ ಗಿರಾಕಿಗಳಿಗೆ ಚಲೋ ಬಹುಮಾನಗಳನ್ನು ಧರ್ಮಾರ್ಥ ಕೊಡಲಾಗುವುದು ವಿವಿಧ ಜಾತಿಯ ಫೌಂಟನ್ ಪೇನುಗಳು ಸಹಾ ಮಾರಾಟಕ್ಕೆ ಸಿಗುತ್ತವೆ.

ಸವಿವರ ಕ್ಯಾಟಲಾಗಿಗೆ ಇಂದೇ ಬರೆಯಿರಿ.

Swiss Agencies (India)
Post Box No. 6626,

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಮೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಪು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಆರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಿಟು ಗರ್ವಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಳೀದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸಿಕಾಳ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೦ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಪೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ನೋಟೀಸು

ಕುಂಬಾಪುರ ಡಿ. ಮು. ಕೋರ್ಟಿನಲ್ಲಿ
S. C. 373/50

ವೆಂಕಪ್ಪ ಸಟ್ಟಿ —ವಾದಿ
ಅಣ್ಣಯ್ಯ ಹಾಂಡ, ಚಕ್ಕ ಹಾಂಡನ ಆಳಿಯ, ಕುಂಬಾಪುರ ತಾಲ್ಲೂ ಬೇಳೂರು ಗ್ರಾಮದ ನೆಲ್ಲಬೆಟ್ಟು :—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಯಿಂದ ಬರತಕ್ಕ ತಾರೀಕು 1-6-47ರಲ್ಲಿ ಬರಕೊಟ್ಟ ದಿವಾಣಂತು ನೋಟಿನ ಬಾಬ್ತು ಉಲ್ಲು ಬಡ್ಡಿವಗೈರೆ ವ್ಯಲು ಕುರಿತು ದಾಕ್ಲು ಮಾಡಿದ ಮೇಲಿನ ವಾದಿಯು ತಾರೀಕು 6-9-1950ಕ್ಕೆ ತನ್ನಿಗೆ ಬಿಟ್ಟಿರುತ್ತಾರೆ. ಆ ಕುರಿತು ಸದ್ರಿ ಪ್ರತಿವಾದಿಯದೇನಾದ್ರು ಅಕ್ಷೇಪಣೆಗಳಿದ್ದರೆ, ಆ ತಾರೀಕಿಗೆ ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜವಾಬ್ದಾರಿ ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ದಾವೆಯನ್ನು ತೀರ್ಮಾನಿಸಲಾಗುತ್ತದೆಂದು ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ.

S. S. Kotkebail
Advocate For Plaintiff
ಕುಂಬಾಪುರ, 22-8-50

THE
Canara Banking Corporation Ltd.
(Incorporated in India)
Estd: 1906.
Head Office : **UDIPI, (S. I.)**

Capital Authorised .... Rs. 25,00,000
Capital Issued, Subscribed & Paid up .... Rs. 20,00,000
Reserves .... Rs. 9,44,765

ಗುರುವಾರ, ಉಡುಪಿ, ೩೦-೪-೧೯೫೦

ಸ್ವವಿಷಯ

ಈ ಸಂಚಿಕೆಯೊಂದಿಗೆ 'ನವಯುಗ'ದ 30ನೆಯ ವರ್ಷ ಮುಗಿಯುವುದು; ಬರುವ ಸಂಚಿಕೆಯಿಂದ 31ನೇ ವರುಷ. ನವಯುಗವು ದಶಮಾನದ ಮೂರನೇ ಗಡಿಯನ್ನು ದಾಟುತ್ತಾ ಮುಂದೆ ನೋಡುತ್ತಿರುವ ಸಂದರ್ಭವಿದು. ಮೂರನೇ ಸಂಪುಟದಲ್ಲಿ–ಮೂರನೇ ಸಂಚಿಕೆಯೊಂದಿಗೆ–ನಮು ಕ್ಯಾಯಿಗೊಳ್ಳುವ ಅಲ್ಪಾಯುಷ್ಯ ಪುಟ್ಟ ವು ಕನ್ನಡ ಪತ್ರಿಕಾ ಪ್ರಪಂಚದಲ್ಲಿ ರುವಾಗ, 30ನೇ ಸಂಪುಟವನ್ನು ಮುಂಗಿಸಿಕೊಂಡು ಚಿರಕಾಲದ ಸೇವೆ ಗಾಗಿ ಹೆಜ್ಜೆ ಮುಂದಿಡುತ್ತಿರುವ ನವ್ಮಲ್ಲಿ ಸಮಾಧಾನ ವತ್ತು ಅಭಿಮಾನ ಮೂಡು ವುದು ಸ್ವಾಭಾವಿಕ. ದೇಶವ್ಯಾಪೀ ಪ್ರಭಲ ಸ್ವರಾಜ್ಯಾಂದೋಲನದೊಂದಿಗೇನೇ ಅಖಂ ಭಿಸಿ, ರಾಷ್ಟ್ರ ಜೀವನದ ಸ್ಥಿತಿಗತಿ ನುತ್ತು ಏಂತಹಗ್ಗಗಳನ್ನು ಪನ್ನಜೀವನದಲ್ಲೂ ಯ ಭಾವ್ಯತೆ ಬಂಬಿಸುತ್ತಿ ಬಂಪನವಯಗದ ಸ್ಥಿತಿಯು ಈಗ ಕೂಡಾ ದೇಷಸ್ಥಿತಿಯ ನ್ನೇ ಹೋಲುತ್ತಿದೆ; ಸ್ವಾಭಾವಿಕ ಪಡೆ ತೊಡಕುಗಳಿದ್ದರೂ ಸುದ್ಯಧ ಅಸ್ತಿತ್ವ ಗ ಳಿಸಿ, ಪ್ರಗತಿಯಿತ್ತ ಮುಖಮಾಡಿ ನಿಲ್ಲ ಲು ಅದು ಸಮರ್ಥವಾಗಿದೆ. ಕಳದ ಯಾ ವತ್ತ್ ವರುಷಗಳ ಜನಜೀವನದಲ್ಲ, ಆದ ರಲ್ಲೂ ಪತ್ರಿಕಾಂಗದಲ್ಲಿ, ಇದ್ದ ಒತ್ತಡ– ಎತ್ತ್ಯಾಡಗಳ ಕಡಗೊಮ್ಮೆ ದೃಷ್ಟಿ ಬೀರು ವರು ನಾವು ದಾಟಿ ಬಂದ ಸುದೀರ್ಘ ದಾರಿಯಲ್ಲಿ ಎಂತಹ ಪರೀಕ್ಷೆ ಕೊಡಬೇ ಕಾದ್ದಿತೆಂಬುದನ್ನು ಊಹಿಸಬಲ್ಲರು. ಈ ಕಲ್ಲು ಕಂಟಿ, ಏರು ತಗ್ಗುಗಳ ಪಥದಲ್ಲಿ ಎಲ್ಲಯಾದರೂ ಬಿದ್ದು ನಡು ಮುರಿದುಳಾ ಳಿದ ರೀತಿ ನವ್ಮನ್ನು ಸಡೆಯಿಸಿ ತಂದ ಸರ್ವರನ್ನೂ ಈ ಸಂದರ್ಭದಲ್ಲಿ ಕೃತಜ್ಞತೆ ಯೊಡನೆ ಸ್ಮರಿಸುತ್ತೇವೆ.

ಕಳದ ವರ್ಷವಂತೂ ಜನಜೀವನ ದಂತೆಯೇ ನವಯುಗದ ಜೀವ ಮಾನದಲ್ಲೂ ವಿಶೇಷ ಕವ್ಟದ ಅವಧಿ. ಆದಿಧಾಡದ ಒಂದೆಡೆಯ ಎಂಗಳು ಗಳನ್ನು ಬಿಟ್ಟರೆ, ವರುಷವಿಡೀ ಪತ್ರಿಕೆಯ ಸಂಪಾದಕ–ವ್ಯವಸ್ಥಾಪಕರು ಕಾಯಿಲೆಯ ಲ್ಲೇ ಇದ್ದರು, ಜತೆಯಲ್ಲಿ ಕೆಲವು ಅನಿ ವರ್ಯ ತೊಂದರೆಗಳು ಕೂಡಾ ಒದಗಿ ದ್ದುವು. ಹೀಗಾಗಿ, ನವಯುಗವು ನೆನಸಿ ದ್ದಂದು ಬೇರೆ, ಕಾಲವು ತಂದೊಡ್ಡಿದುದು ಪ್ರತ್ಯೇಕ, ಎನ್ನುವಂತಾಯಿತು. ಮಾಡ ಬೇಕೆಂದಿದ್ದ ಸುಧಾರಣೆಗಳನ್ನು ಮಾಡಲಾಗಲಿಲ್ಲ. ನಾವು ಮೊದಲೇ ಹೇಳಿ ರುವಂತೆ, ರಾಷ್ಟ್ರ ಜೀವನವನ್ನು ಪ್ರತಿಬಿಂ ಬಿಸುತ್ತಾ ಬಂದಿದ್ದ ನವಯುಗ ಜೀವನದ ಈ ಅವಧಿ ಕೂಡಾ ಅದಕ್ಕತೀತವಾದುದಾ ಗಲಿಲ್ಲ; ಇಲ್ಲಿಯೂ ರಾಷ್ಟ್ರಜೀವನದ ಪ್ರತಿ ಛಾಯೆ ಕವಿದಿದ್ದಿತು. ಸಂಪಾದಕ–ಪ್ರಕಾ ಶಕರು ಮೂರು ತಿಂಗಳಕಾಲ ಚಿಕಿತ್ಸೆಗಾಗಿ ಮದ್ರಾಸಿಗೆ ಹೋಗಿದ್ದ ಅವಧಿಯಲ್ಲಿ ವಿವಿಧ ವರ್ಗದ ಗ್ರಾಹಕರ ವಾಲಿಗೆ ಕೆಲವು ಅನಾ ನುಕೂಲತೆಗಳೊದಗಿರಬಹುದು. ಏನಿಲ್ಲೆಂ ದರೂ ಅಪರಿಹಾರ್ಯ ತೊಂದರೆಗಳನ್ನು ಅನುಭವಿಸುವ ಅಭ್ಯಾಸವು ನಮ್ಮ ಜನತೆಗೆ ಇಷ್ಟಂಲ್ಲೇ ಆಗಿದೆ. ಈ ಅನುಭವವನ್ನು ಒಂದಂಶ ನವುಗಾಗಿ ಯೂ ಉಯೋಗಿಸಿಕೊಳ್ಳಿರೆನ್ನುವಾಗ ನಾವು ಅಳುಕಬೇಕಾಗುತ್ತದಾದರೂ ಅನಿ ವಾರ್ಯವಾದ ಆ ತೊಂದರೆಗಳಿಗಾಗಿ ಎಲ್ಲ ರೂ ನಮ್ಮನ್ನು ಕ್ಷಮಿಸುವರೆಂಬ ನಂಬು ತ್ತೇವೆ.

ಇನ-ವರೆಗಿನ ಮಾತು ಹೀಗಾಯಿತು. ಮುಂದೆ ಇನ್ನಷ್ಟು ಸಾರ್ಥಕ ರೀತಿಯಿಂದ ದುಡಿಯಬೇಕೆಂದು ಸಂಕಲ್ಪಿಸಿದ್ದೇವೆ. ಜ ನಜಾಗ್ರತಿಯನ್ನು ಉಂಟು ಮಾಡುವುದರ ಲ್ಲಿ– ವಿಷಯ, ವ್ಯಕ್ತಿ, ಸಂದರ್ಭಗಳ ಪರಿ ಚಯ ಕೊಡುವುದರಲ್ಲಿ– ಬುದ್ಧಿಕರಣ ಮತ್ತು ಪ್ರಗತಿ ನಿರೀಕ್ಷೆ ಮಾಡುವುದರ ಲ್ಲಿ–ನವಯುಗದ ನೋಟ ಮತ್ತು ಮಟ್ಟ ಎಂತಹದೆಂಬುದು ನಾನೇ ಹೇಳಿಕೊಳ್ಳುವಂ ತಹ ವಿಷಯವಲ್ಲ; ವಾಚಕರ ಅನುಭವದ ಲ್ಲಿರುವ, ಮತ್ತು ಅವರೇ ಬೆಲೆ ಕಟ್ಟಬೇ ಕಾದ ಸಂಗತಿಯದು. ಜನತೆಯು ಅಭಿ ಪ್ರಾಯ ಹೇಗಿದ್ದರೂ ನಾವು ಸಲ್ಲಿಸುವ ಸೇವೆಯು ಅಪೂರ್ಣವೆಂಬ ಆತ್ಮಸ್ತಿ ನಮ್ಮಲ್ಲಂತೂ ಇದ್ದದ್ದೇ. ಜನಜೀವನದ ವಿವಿಧ ವಿಭಾಗಗಳ ಅಭಾವಾತೀರಗಳ ನರಿಚಯ ಮಾಡಿಕೊಡಬಲ್ಲ ಪತ್ರಿಕೆಗೆ ಸ್ವತಃ ತನ್ನಲ್ಲಿರುವ ಲೋಪದೋಷಗಳ ಗುರುತಿಸಾರ್ಥವಿಲ್ಲವೆಂದಲ್ಲ. ದೀರ್ಘಾವಧಿ ಯಿಂದ ಜನತಾ ಸಂಪರ್ಕವನ್ನಿಟ್ಟುಕೊಂ ಡಿರುವ–ಬಹುವಿಧ ಪರೀಕ್ಷೆಗಳಲ್ಲಿ ಗೆದ್ದು ಬಂದಿರುವ–ಒಳನೋಟ ಬೀರಿ ತಿರುಳನ್ನೇ ಕಾಣುವ–ಅನುಭವ, ಅಭ್ಯಾಸಗಳು ಸ್ವ ಯಂಜೀತನಗಳವೆ. ಯಾವ ಪ್ರೇರಣೆ ಅಧವಾ ಒತ್ತಡವಿಲ್ಲದೆಯೂ ಸ್ವತಃ ಜಾಲಿ ನಲ್ಲಿರುವಂಥವುಗಳಿವು. ಈ ಸ್ಫೂರಣೆಗಳು

ಅಸ್ಸಾಮಿನ ಭೂಕಂಪದಿಂದ ಏದೆ ನಡುಗುತ್ತಿಲ್ಲವೆ?

ಅಸ್ಸಾಮು ಮತ್ತಿತರ ಅನುಪಾನು ಭಾಗಗಳಲ್ಲಿ ಕಳೆದ ತಾ. 15ರಲ್ಲಿ ಆರಂಭಿ ಸಿದ್ದ ಅತಿ ಭೀಕರ ಭೂಕಂಪವು ಈ ವರೆ ಗೂ ಹೂರ್ಣ ನಿಂತಿಲ್ಲೆನ್ನಲಾದ ದುರಂತ ದಿಂದ ಅನುಕಂಪಗೊಳ್ಳದ ಹೃದಯವಿರ ಲಾರದು. ಉತ್ತರ ಅಸ್ಸಾಮು ಭಾಗವು ಪ್ರಕೃತಿ ಪ್ರಕೋಪದಿಂದ ಅಡಿಮೇಲಾಗಿ ಹೋಗಿ, ಹೊರಗಿನ ಪ್ರಪಂಚದೊಂದಿ ಗಿದ್ದ ಸಂಬಂಧವನ್ನು ಕಡಿದುಕೊಂಡು ರುದ್ರ ಭೂಮಿಯಂತಿರುವಾಗ ಆಳ್ಗಿ ಪ್ರಾಣ ಮತ್ತು ಸೊತ್ತುಗಳಿಗಾದ ಹಾನಿಯೆ ನ್ನು ಎಂಬ ಸರಿಯಾದ ಅಂದಾಜು ಕಟ್ಟಲು ಬರುವದಿಲ್ಲ. ಕೆಲವು ತೊಳೆಗಳಲ್ಲಿ ಪ್ರಳಯ ನೆರೆಯೇರಿದಂತೆಯೇ ಕೆಲವು ಹೊಳೆಗಳು ಪೂರ್ಣ ಬತ್ತಿಹೋಗಿರುವ–ಜನ ಜಾನುವಾರು ಮರಮಟ್ಟುಗಳ ನ ಮೇತ ತುಂಡು ದ್ವೀಪಗಳೇ ಪಾತಾಳಗತ ವಾಗಿ ಅದೃಶ್ಯವಾಗಿರುವ– ಫಲಭರಿತ ಪ್ರ ದೇಶವಾಗಿದ್ದ 500 ಚದರ ಮೈಲುಷ್ಟು ವಿಸ್ತಾರ ಭೂಮಿಯು ಪ್ರಳಯ ಸರೋವ ರವಾಗಿ ಹೋಗಿ, ಅದರಲ್ಲಿ ಅಲ್ಲಲ್ಲಿ ಜನ ಜಾನುವಾರುಗಳ ತಲೆಗಳು ತೇಲುತ್ತಿರುವ –ಭೀಕರಾತಿ ಭೀಕರ ಘಟನೆಗಳ ದೃಶ್ಯ ಕಣ್ಣ ಮುಂದೆ ಬಂದು ನೆಲ್ಲ ಜುಮ್ಮೆನ್ನುತ್ತಿದೆ. ಸಾವಿರದಷ್ಟು ಹಳ್ಳಿಗಳು ನಾಶವಾಗಿ, ಲ ಕ್ಷಕ್ಕೂ ಮಿಕ್ಕಿ ಮನೆಗಳು ಮಣ್ಣಾಪಾಲಾ ಗಿ, 50-60 ಲಕ್ಷ ಮಂದಿ ನಿರಾಶ್ರಿತರಾಗಿ ದ್ದಾರೆನ್ನುವಾಗ ಇದೆಂತಹ ಹೃದ್ರಾವಕ ಪರಿಸ್ಥಿತಿಯೆಂಬುದನ್ನು ವರ್ಣಿಸುವುದು ಕೂಡಾ ಅಸಹ್ಯ. ಒಮ್ಮೆ ಮಹಾಕಂಪನ ಕ್ಕಾಗಿ ಕೆಳಕಿದ ಭೂಮಿಯು ಶಾಂತವಾ ಗುವ ವರೆಗೂ ಆಗಾಗ ನಡುಕವುಂಟಾಗು ವ ಸಂಪ್ರದಾಯದಂತೆ, ಭೂಕಂಪವಾರಂ ಭಿಸಿದ ಎರಡು ವಾರಗಳ ನಂತರವೂ ನ ಡುಕದ ಸುದ್ದಿ ಬರುತ್ತಲೇ ಇದೆ. ಈ ದಿನ ಗಳಲ್ಲಿ ಕೆಲವೆಡೆ 60 ಬಾರಿಗೂ ಮಿಕ್ಕಿ ಭೂಕಂಪವಾಯಿತೆನ್ನುವಾಗ, ಯಾವ ವಾ ಪದ ಫಲವಾಗಿ ಭೂದೇವಿಗಿಂತಹ ಛಳಿ ಜ್ವರ ಹಿಡಿಯಿತೋ, ಎಂದು ಬುದ್ಧಿ ನಿಸಬೇಕಾಗುತ್ತದೆ! ಬೇರಾವ ಹಾದಿಯೂ ಉಳಿಯದಿರುವುದರಿಂದ ಅನಾಹುತ ಪೀಡಿತ ಸ್ಥಳಗಳಲ್ಲಿ ರುವ ದುರ್ದೈವಿಗಳಿಗಾಗಿ 'ಪೆರಚ್ಯೂಟ್' ಮೂಲಕ ಆಹಾರ ಧಾನ್ಯಗಳನ್ನು ಇಳಿಸು ತಿದ್ದ ವಿಮಾನಗಳು ಕೂಡಾ ಮಬ್ಬು ಕವಿ ದ ಆಕಾಶದ ದೆಸೆಯಿಂದ ಹಿಂದಿರಿದು ನಿಲ್ಲ ಬೇಕಾದ ಸಂದರ್ಭಗಳೊದಗಿದ್ದುವು ಅಂ ತೂ ಅಸ್ಸಾಮು ಭೂಕಂಪದ ಹಾವಳಿಯು ವರ್ಣನಾತೀತ; ಅಲ್ಲಿಗೆ ಆತಿ ದೂರದಲ್ಲಿರು ವ ನಾವುಸ್ವತಃ ಅನುಭವಿಸುತ್ತಿರುವ ಆಸ್ತಿ ನಷ್ಟಗಳಿಗಿಂತಲೂ ಹೆಚ್ಚಿನ ಯಾತನೆಯ ನ್ನು ಶ್ರವಣ ಮಾತ್ರದಿಂದ ಉಂಟುಮಾ ಡುವಷ್ಟೂ ಭಯಂಕರವದು! ಬೋಂಬು ಧಾಳಿ, ನೆರೆ, ಬಿರುಗಾಳಿಹಾವಳಿ, ಆಹಾರಾ ಭಾವ, ಮುಂತಾದ ಎಲ್ಲಾ ವಿಧದ ಆಪ ತ್ತುಗಳೂ ತುತ್ತ ತುದಿಗೇರಿ ಎಲ್ಲವೂ ಒಂ ದೇ ಕಡೆ ಸಂಗ್ರಹಿಸಿಕೊಂಡರೆ ಆಗುವ ಅನಾ ಹುತವೇ ಇಂದು ಅಸ್ಸಾಮಿನಲ್ಲಾಗಿದೆ!

ಸ್ವರಾಜ್ಯಪ್ರಾಪ್ತಿಯ ನಂತರ ಭಾರತ ವಿವರೆಗೆ ಅನುಭವಿಸಿರುವ ಮನುಷ್ಯ ನಿರ್ಮಿತ ಮತ್ತು ನಿಸರ್ಗಜನ್ಯ ಗಂಡಾಂತರ ಗಳ ಸುದೀರ್ಘ ಪಟ್ಟಿಯನ್ನೇ ತಯಾರಿಸಬಹುದು. ಅಸ್ಸಾಮು ದುರಂತ ವಂತೂ 'ಹೀಗೇಕಾಯಿತು?' ಎಂದು ಯಾರನ್ನೂ ಪ್ರಶ್ನಿಸಲಿಕ್ಕಾಗದಂತಹ ಪ್ರ ಗತಿಯ ಕೈವಾಡ; 'ದೈವಚಿತ್ರ'. ಸ್ವರಾ ಜ್ಯ ಸ್ಥಾಪನೆಯಾದ 'ಮಂಹೋರ್ತ' ಕೆಟ್ಟ ದಿದ್ದು ದರಿಂದಲ್ಲ– ಸ್ವರಾಜ್ಯಾಡಳಿತೆಯ ಕಾರ್ಯಕಲಾಪಗಳು ಹಾಳಿದ್ದುದರಿಂದ ಲ್ಲ– ಕೇವಲ ಕಾಲ ಮಹಾತ್ಮೆ ಮತ್ತು ಪ್ರಕೃತಿಯ ದುಡುಕುತನದಿಂದ ಸ್ವತಂತ್ರ ಭಾರತವು ಅನುಭವಿಸಿದ ಕಷ್ಟನಷ್ಟಗಳ ಹೊರೆ ಇಷ್ಟರಲ್ಲೇ ಬಹಳ ದೊಡ್ಡದಾಯಿ ತು. ಕಳದ ಮೂರೇ ವರುಷಗಳಲ್ಲಿ ಇಂತ ಹ ಹಲವು ಅಗ್ನಿಪರೀಕ್ಷೆಗಳು ನಡೆದು ಹೋದುವು. ಸ್ವಾತಂತ್ರ್ಯದ ಆದಿಭಾಗದ ಲ್ಲಿ ಸ್ವಾಭಾವಿಕವೆನ್ನ ಬಹುದಾದ ಅಜ್ಞಾ ನ, ಸ್ವಾರ್ಥ, ಸಂಕುಚಿತತೆ, ದ್ವೇಷಾಸೂ ಯೆ, ಮಹತ್ವಾಕಾಂಕ್ಷೆ ಮೊದಲಾದವುಗ ಳ ಪರಿಣಾಮವಾಗಿ ರಾಷ್ಟ್ರವನ್ನನುಭವಿಸಿದ– ಅನುಭವಿಸುತ್ತಿರುವ– ದುಸ್ಥಿತಿಗಳಂತೂ ಪ್ರತ್ಯೇಕವವೆ; ಸ್ವರಾಜ್ಯಾಡಳಿತೆಯು ಮೊ ದಲ ಭಾಗದಲ್ಲಿ ಅನಿವಾರ್ಯವಿರುವ ಅಡ್ಡಿ ಆಡಚಣೆಗಳು ಬೇರಿವೆ. ಇವೆಲ್ಲಾ ಸ್ಥಿತಿಗತಿಗಳ ಕಡೆಗೊಮ್ಮೆ ನೋ ಡಿಕೊಂಡರೆ ಇಷ್ಟನ್ನೂ ಸಹಿಸಿಕೊಳ್ಳಲು ಭಂಡತೇಯರಲ್ಲಿ—ಮುಖ್ಯವಾಗಿ ಆಡಳಿತ ಗಾರರಲ್ಲಿ—ಅಭೇದ್ಯ ಧೈರ್ಯ ಸ್ಥೈರ್ಯ ವಿರಬೇಕಾದುದು ಮತ್ತು ಜನತೆಯಲ್ಲಿ ಒ ಕ್ಕಟ್ಟಿರಬೇಕಾದುದು ಆತ್ಮಗತ್ಯವೆಂದು ಯಾರಿಗೂ ಹೇಳಿದೀತು. ಒಂದು ಸ್ವ ತಂತ್ರ ರಾಷ್ಟ್ರವು ಯಾವ ಸಂದರ್ಭದಲ್ಲಿ ಎಂತಹ ಗಂಡಾಂತರವನ್ನು ಇದಿರಿಸಬೇ ಕಾಗುವುದೋ ಊಹಿಸುವುದು ಅಸಾಧ್ಯ. ಅದು ಪ್ರಕೃತಿಜನ್ಯವಿರಬಹುದು, ಕಾಲವು ತಂದುದಾಗಿರಬಹುದು, ಹೊರಗಿನ ವೈರಿ ಗಳಿಂದ ಬರಬಹುದು, ಒಳಗಿನ ಘಾತುಕ ರಿಂದೇಳಬಹುದು—ಎಂತಹದಿದ್ದರೂ ಅ ದನ್ನಿದಿರಿಸಿ ನಿವಾರಿಸುವ ಶಕ್ತಿ ಯೋಗ್ಯತೆ ಗಳು ಸ್ವತಂತ್ರ ಜನತೆಯಲ್ಲಿರಬೇಕಾದುದು ಅಗತ್ಯ. ಭಾರತೀಯರಲ್ಲಿ ಅವು ಇವೆಯೇ ಎಂಬುದನ್ನು ಆದಿಭಾದದಲ್ಲಿ ಪರೀಕ್ಷಿಸಿ

ಸಾಂರವಾಗಿ 'ನವಯುಗ'ದಲ್ಲಿ ಕೆಲವು ಹೊಸ ಸುಧಾರಣೆಗಳನ್ನು ಮಾಡಬೇಕೆಂದು ನಿಶ್ಚಿ ಸಿದ್ದೇವೆ. ಹಾಗಾಗುವಂತೆ ಸರ್ವರೂ, ಇ ನ್ನಷ್ಟು ಹೆಚ್ಚಿನ ಪ್ರೋತ್ಸಾಹ, ಸಹಕಾರ್ ಬೆಂಬಲ ಕೂಡಬೇಕೆಂದು ವಿಜ್ಞಾಪಿಸಿಕೊ ಳ್ಳುತ್ತೇವೆ.

ನಮ್ಮೊಡನೆ ಸಹಕರಿಸಿದ, ಸಹಕರಿಸುತ್ತಿ ರುವ ಚಂದಾದಾರರು, ಜಾಹೀರಾತುದಾ ರರು, ಬಾತ್ಮೀದಾರರು, ಲೇಖಕರೇ ಮೊದ ಲಾದ ಎಲ್ಲರ ಉಪಕಾರಗಳನ್ನೂ ಈ ಸಂ ದರ್ಭದಲ್ಲಿ ಕೃತಜ್ಞತಾಪೂರ್ವಕ ಜ್ಞಾಪಿಸಿ ಕೊಳ್ಳುತ್ತೇವೆ. ಮುಂದೆ ಇವೆಲ್ಲವೂ ಇನ್ನ ಷ್ಟು ಪಾಲು ಬೆಳೆದು, ನವಯುಗವನ್ನು ಜನತಾ ಸೇವೆಯ ಸರ್ವೋತ್ತಮ ಉಪಕ ರಣವಾಗುವಂತೆ ಮಾಡುವೆವೆಂದು ಪೂರ್ಣ ವಿಶ್ವಾಸದಿಂದ ನಿರೀಕ್ಷಿಸುತ್ತಿ ದ್ದೇವೆ.

ಬಿಡೋಣವೆಂದೇ ಈ ಗಂಡಾಂತರಗಳು ಒಂದರ ಬೆನ್ನು ಹಿಡಿದು ಇನ್ನೊಂದರಂತೆ ಮುಂದಾಗುತ್ತಿವೆ, ಎಂದು ನೆನಸಬೇಕು; ಈ ಪಂಥಾಹ್ವಾನವನ್ನು ಸ್ವತಂತ್ರ ಭಾರತೀಯರು ಎದೆಗಾರಿಕೆಯಿಂದ ಸ್ವೀಕರಿಸಬೇಕು. ಕಷ್ಟನಿಷ್ಠುರಗಳೊಡನೆ ಹೋರಾಡತಕ್ಕ ಸ್ವತಂತ್ರ ರಾಷ್ಟ್ರ ಯೋಧರಾಗಿ ಅರಿಸಲ್ಪಟ್ಟ ಕೂಡಲೇ ಆ ಹೋರಾಟದ ತರಬೇತಿ ದೊರೆಯುವುದು ಸಂಪ್ರದಾಯ–ಅದರಂತೆ ಸ್ವರಾಜ್ಯದಾದಿಧಾಗದಲ್ಲೇ ಆನಾಹುತಗಳು ಒದಗಿದುವೆಂದು ನೆನಸಿಕೊಳ್ಳಬೇಕು. ಆಸ್ಸಾಮಿನ ನಿರಾಶ್ರಿತರಿಗಾಗಿ ಶಕ್ತಿ ಮೀರಿ ಸಹಾಯ ಪಲ್ಲಿಸಬೇಕೆಂದು ರಾಷ್ಟ್ರಾಧ್ಯಕ್ಷ, ಪ್ರಧಾನಿ, ಉಪಪ್ರಧಾನಿ ಮೊದಲಾದವರ ಆಗ್ರಹದ ವಿನಂತಿ ಹೊರಟಿದೆ; ಎಲ್ಲೆಲ್ಲೂ ಸಹಾಯ ಸಂಗ್ರಹವಾಗುತ್ತಿದೆ. ಆ ಹಾರ ಸಂಕಷ್ಟ ನಿವಾರಣೆಯ ಮಟ್ಟಿಗೆ ಅಭಾವ ವಿರುವ ಸಂಖ್ಯಾನಗಳಿಗೆ ನೆರವೀಯುವುದರಲ್ಲಿ ಹಿಂದೆಬಿದ್ದ ಉಳಿತಾಯದ ಸಂಸ್ಥಾನಗಳು ಕೋರಲಿರುವಂತಹ ಅಯೋಗ್ಯತೆಯನ್ನು ಅಸ್ಸಾಮು ಪೀಡಾನಿವಾರಣೆಯ ಮಟ್ಟಿಗಾದರೂ ಯಾರೂ ತೋರಿಸಬಾರದು. ಒಂದೌನ್ಸು ಆಹಾರ ಕಡಿಮೆಯಾದಲ್ಲಿ, ಒಂದು ದಿನ ಸ್ಕೂಲಿಗು ಮುಚ್ಚಿಕೊಂಡಿದ್ದರೆ, ತಮಗಾಗುತ್ತಿರುವ ಸಂಕಟದ ಮಾನದಿಂದಲೇ ಅಸ್ಸಾಮಿನ ದುರ್ದೈವಿ ಬಂಧು-ಭಗಿನಿಯರ ಇಂದಿನ ಸಂಕಷ್ಟವನ್ನು ಅಳೆದುನೋಡಿ ಎಲ್ಲರೂ ಈ ಮಟ್ಟಿಗೆ ಮಾನುಷ್ಯರಂತೆ ವರ್ತಿಸಲಿ; ಯಾರ ಅಪರಾಧವೂ ಇಲ್ಲದೆ, ಯಾವ ಪರಿಹಾರ ಹಂಚಿಕೆಗೂ ಸಿಗದೆ, ನಿಸರ್ಗಬದ್ಧವಾಗಿ ಸಂಭವಿಸಿದ ಗಂಡಾಂತರಕ್ಕೆ ಬಲಿಬಿದ್ದ ದೇಶಬಂಧುಗಳ ಯಾತನೆಯನ್ನು ಅಖಿಲ ಭಾರತೀಯರು ತಮ್ಮದನ್ನಾಗಿ ಮಾಡಿ ಹಂಚಿಕೊಂಡು ಮುಗಿಸಿ, ಆ ಮೂಲಕ ಮಾನುಷತ್ವವನ್ನೂ ಅಖಂಡ ದೇಶಪ್ರೇಮವನ್ನೂ ಪ್ರದರ್ಶಿಸಲಿ. ಭಾರತವು ಇಂತಹ ಅಗ್ನಿಪರೀಕ್ಷೆಗಳಿಂದ ಪಾರಾಗಿ ಅಭಿವೃದ್ಧಿ ಪಥ ಹಿಡಿಯಲಿ.

ನವಯುಗದ ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ಟು ತಿಂಗಳ ಅಂತ್ಯಕ್ಕೆ ನವಯುಗದ 30ನೆ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ ಹೊಸ ವರುಷವು ಆರಂಭವಾಗುವುದು. ಈ ಅವಧಿಗೆ ಚಂದಾಹಣ ಮುಗಿಯುವವರು ದಯಮಾಡಿ ತಮ್ಮ ಚಾಲ್ತಿ ಚಂದಾಹಣ ಮತ್ತು ಬಾಕಿಯಿದ್ದರೆ ಅದನ್ನು ಸಮೇತ ಅದಷ್ಟುತ್ವರ್ಯ ಕಳುಹಿಸುವಂತೆ ಈ ಮೂಲಕ ವಿನಂತಿಸಲಾಗಿದೆ. ವಿ. ಪಿ. ಮಾಡಿದರೆ ಆರಾಣೆ ಜಾಸ್ತಿ ಬೀಳುವುದರಿಂದ ಎಲ್ಲರೂ ತಮ್ಮ ತಮ್ಮ ಚಂದಾ ಹಣವನ್ನು ಮನಿಯೊರ್ಡರ್ ಮಾಡುವಂತೆ ಅಪೇಕ್ಷಿಸುತ್ತೇವೆ. ಅಂತೂ ಈ ತಿಂಗಳೊಳಗೆ ಚಂದಾಹಣ ಬಾರದಿದ್ದಲ್ಲಿ ಸಪ್ಟಂಬರ ತಿಂಗಳ ಪತ್ರಿಕಾರಂಭದಲ್ಲಿ ಬಾಕಿನಿಲ್ಲುವ ಹಣಕ್ಕೆ ಪತ್ರಿಕೆಯನ್ನು ವಿ. ಪಿ. ಮಾಡಲಾಗುವುದು. ಆಗಸ್ಸು ಸಾದರದಿಂದ ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿಯೂ ವಿನಂತಿ.

ಮೆ ನೇಜರ್.

ಉಡುಪಿಯಲ್ಲಿ ಇಲೆಕ್ಟ್ರಿಕ್ ಸತ್ಯಾಗ್ರಹ!

ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕೋ ಪರೇಶನ್ನಿನವರು 'ಕರೆಂಟ್' ಪವನ್ನು ನೂರಕ್ಕೆ ನೂರರಷ್ಟೂ ಏರಿಸಿದುದರ ನಿಷೇಧಾರ್ಥವಾಗಿ ಮತ್ತೊಂದಾಣೆಯು ಅಗಹನೀಯವಾಗಿ, ಉಡುಪಿ ನಾಗರಿಕರ ಬೇಡಿಕೆಗನುಸಾರವಾಗಿಯೇ ಉಡುಪೀ ನಗರದ ರಸ್ತೇ ವಿದ್ಯುದ್ದೀಪಗಳನ್ನು ಇದೇ ಸೆಪ್ಟೆಂಬರ್ ತಾ. 1ರಿಂದ ನಿಲ್ಲಿಸಿಬಿಡಬೇಕೆಂದು ನಗರ ಸಭೆಯು ನಿರ್ಧರಿಸಿದೆ. ಈಗಿನ ಕರ ಭಾರಗಳಿಂದಲೇ ಮುಗ್ಗರಿಸುತ್ತಿರುವ ತಮಗೆ ವಿದ್ಯುದ್ದೀಪಕ್ಕಾಗಿ ಇನ್ನುಮಿಂಗೆ ತೆರುವ ಸಾಮರ್ಥ್ಯ ಮತ್ತು ಮನಸ್ಸು ಇಲ್ಲವೆಂಬುದರಿಂದ, ಅನಾನುಕೂಲವಾಗುವಂತಿದ್ದರೂ ರಸ್ತೇ ವಿದ್ಯುದ್ದೀಪಗಳನ್ನು ನಿಲ್ಲಿಸಬೇಕೆಂದು ಉಡುಪಿ ಸಾರ್ವಜನಿಕರೇ ಆಗ್ರಹದಿಂದ ಕೇಳಿಕೊಳ್ಳಬೇಕಾದರೆ, ಇಲೆಕ್ಟ್ರಿಕ್ ಕಂಪೆನಿಯವರು ಹೇರಿರುವ 'ಸರ್‌ಚಾರ್ಜ್' ಎನ್ನು ಅನ್ಯಾಯದ್ದಿದೆ ಮತ್ತು ಅತಿರೇಕವಿದೆ ಎಂಬುದನ್ನು ಸುಲಭದಲ್ಲಿ ಊಹಿಸಬಹುದು. ಮಂಗಳೂರಿನಿಂದಾರಂಭಿಸಿ ಎಲ್ಲೂ ಈ ವರುಷ 'ಕರೆಂಟ್' ಧಾರಣೆ ತಗ್ಗಿರುವಾಗ, ಪ್ಲಾಯಶಃ ಲೋಕದಲ್ಲೆಲ್ಲಿಯೂ ಇರದಷ್ಟು ಹೆಚ್ಚು ಧಾರಣೆ ಪಾಕೆ ವಸೂಲು ಮಾಡಬಹುದೆಂಬ ಉಡುಪಿ ಇಲೆಕ್ಟ್ರಿಕ್ ಕಂಪೆನಿಯವರ ಧೈರ್ಯವು ಈ ಕಾಲದ ಆಶ್ಚರ್ಯಗಳಲ್ಲೊಂದು! ಇದರ ಕಡು ಪರಿಣಾಮಗಳನ್ನು ಆ ಕಂಪೆನಿಯು ಇಷ್ಟರಲ್ಲೇ ಅನುಭವಿಸಹತ್ತಿದೆ. ಮನೆ ಮನೆಗಳ ವಿದ್ಯುದ್ದೀಪ ಉಪಯೋಗವು ಕಳದ ತಿಂಗಳಲ್ಲಿ ಸುಮಾರು 2000 ಯುನಿಟ್‌ಗಳಷ್ಟು ಕಡಮೆಯಾಗಿರುವುದರಿಂದ ತಿಂಗಳಿಗೆ ಸುಮಾರು 1000 ರೂಪಾಯಿಗೆ ಖುಶ್ಕಿ ಈ ಮೂಲಕವೇ ನಷ್ಟವಾಗಬಹುದು. ರಸ್ತೇ ಇಲೆಕ್ಟ್ರಿಕ್ ದೀಪಗಳು ನಾಳೆಯಿಂದ ನಿಂತುಹೋಗುವಾಗ ಅದೂ ತಿಂಗಳಿಗೆ ಸುಮಾರು 1000 ರೂಪಾಯಿಗಳ ನಷ್ಟವನ್ನು ತಂದೊಡ್ಡಲಿದೆ. ಈ ರೀತಿ ಈಗ ಬಂದುನಿಂತಿರುವ ಪರಿಸ್ಥಿತಿಯ ಮೇಲಿಂದಲೇ ವರುಷಕ್ಕೆ ಸುಮಾರು 24000 ರೂಪಾಯಿಗಳ ನಷ್ಟವಾದರೂ ಇಲೆಕ್ಟ್ರಿಕ್ ಕಂಪೆನಿಯ ಉತ್ಪತ್ತಿಯಲ್ಲಿ ನಾಲ್ಕನೇ ಒಂದಂಶ ಕಳೆದು ಹೋದಂತಾಗುವದೆಂದು ಅಂದಾಜು ಮಾಡಲಾಗಿದೆ. ಆದರೆ ಕಂಪೆನಿಯು ಕ್ಷಿಪ್ರದಲ್ಲೇ ಸರಿ ದಾರಿಗೆ ಬಾರದಿದ್ದಲ್ಲಿ ಜನತೆಯ ಅಸಹಕಾರವು ಇಷ್ಟರಲ್ಲೇ ನಿಲ್ಲದೆ, ಪೂರ್ಣಾಕಾರಗೊಳ್ಳುವದಂತೂ ಖಂಡಿತ. ಉಡುಪಿ ತೆರಿಗೆದಾರರ ಪರವಾಗಿ ಈ ಸಂಬಂಧ ನಡೆದಿರುವ ಒಂದು ವ್ಯಾಜ್ಯವು ಉಡುಪಿ ಡಿ. ಮು. ಕೋರ್ಟಿನಲ್ಲಿದೆ. ಮುನ್ಸಿಪಾಲಿಟಿಯು ತಂತಿ ಮತ್ತು ಸೂಜನೆಗಳು ಮತ್ತು ಪ್ಯಾಸ್ ಸರಕಾರಕ್ಕೆ ಹೋಗಿವೆ; ನಗರ ಸಭೆಯ ಶಿಷ್ಟ ಮಂಡಲಿಯೂ ಅತ್ತ ತೆರಳಿದೆ. ಕರತೆರಿಗೆಗಳ ಭಾರ ತಲೆಯಲ್ಲಿ, ಆಹಾರಾಭಾವದ ಜೊಂಕಿ ಹೊಟ್ಟೆಯಲ್ಲಿ, ಹೆಚ್ಚಿದ ದೆಡೆಯಿಂದ ಜನರು ತಲೆ ತಿರಗಿ ಮುಗ್ಗರಿಸಿ ಬೀಳುತ್ತಿರುವಷ್ಟು, ನೊಡಲೇ ತೀರಾ ಮನಕಾಗಿರುವ ರಸ್ತೇ ವಿದ್ಯುದ್ದೀಪಗಳು ಇಲ್ಲದೆ ಹೋದ ದೆಸೆಯಿಂದೇನೂ ಕಾಲು ಜಾರಿ ಬೀಳುವಂತಿಲ್ಲವೆಂಬ ಉದ್ಗಾರವು ಜನತೆಯಿಂದ ಕೇಳಿಬರುತ್ತಿದೆ.

ಮುಷ್ಕರ, ಸತ್ಯಾಗ್ರಹಗಳ ಈ ತಾಲದಲ್ಲಿ ಶಾಂತಸ್ವಭಾವದ ಉಡುಪಿ ನಾಗರಿಕರು ನಿರ್ವಾಹವಿಲ್ಲದೆ ಹೊಸರೀತಿಯ ಸತ್ಯಾಗ್ರಹವೊಂದನ್ನು ಹೂಡಬೇಕಾಗಿ ಬಂತು; ಜನರ ಸಹಕಾರವೊಂದೆರೆ ಬಲದಿಂದಲೇ ಬಾಳಬೇಕಾಗಿರುವ ವಿದ್ಯುಚ್ಛಕ್ತಿ ಸರಬರಾಯಿ ಕಂಪೆನಿಯಂತಹ ಸಂಸ್ಥೆಯು ಜನತೆಯ ಕ್ರೋಧಾಗ್ನಿಯೊಡನೆ ಆಟವಾಡಲು ತಯಾರಾಗುವುದು ಅತ್ಯಂತ ಶೋಚನೀಯ. ನಾಗರಿಕರನ್ನು ಸಂಕಟಕ್ಕೀಡುಮಾಡಿದರೂ, ತಮ್ಮ ಉತ್ಪಾದನೆ ಹೆಚ್ಚುವ ಸಂಭವವಿರುವುದರಿಂದ ಇಲೆಕ್ಟ್ರಿಕ್ ಕಂಪೆನಿಯು ಇಂತಹ ಘೋರಣೆ ವಹಿಸಿತೆನ್ನೋಣವೆ ತದ್ವಿರುದ್ಧ ಪ್ರತಿಫಲವನ್ನೇ ಈ ಕಂಪೆನಿಗಂಟ್ಟಿಸಬೇಕೆಂದು ಉಡುಪಿ ಸಾರ್ವಜನಿಕರು ತಯಾರಾಗಿರುವುದು ಪ್ರತ್ಯಕ್ಷ ಕಾಣಿಸುತ್ತಿದೆ. ಎಷ್ಟೋ ವರುಷಗಳಿಂದ ಉಡುಪೀ ರಸ್ತೇಗಳನ್ನು ಶಕ್ತ್ಯಾನುಸಾರವಾದರೂ ಬೆಳಗಿಸುತ್ತಿದ್ದ ವಿದ್ಯುದ್ದೀಪಗಳು, ನಂ. ೆ ಒಂದನೇ ತಾರೀಕಿಗೆ ಪೂರ್ಣ ನಿಂತು ಹೋಗುವುದೆಂದರೆ, ಆ ಕರೆಂಟ್ ಕಂಪೆನೀ ಕಡೆಗಿನ ಸಾರ್ವಜನಿಕ ಸಹಾನುಭೂತಿಯ ಬತ್ತಿಯೇ ಸಂಪೂರ್ಣ ನಂದಿಹೋದಂತೆ! ಉಡುಪಿಯ ಈ ವಿಶೇಷ ವಿದ್ಯಮಾನದ ಕಡೆಗೆ ಕೂಡಲೇ ಗಮನಕೊಡಬೇಕಾದುದು ಸರಕಾರದ ಕರ್ತವ್ಯವಿದೆ; ಅದಕ್ಕೂ ಮುಂದಾಗಿ ಉಡುಪಿ ಇಲೆಕ್ಟ್ರಿಕ್ ಸರಬರಾಯಿ ಕಂಪೆನಿಯವರು ಜನಮತದಂತೆ ವರ್ತಿಸಲು ಮುಂದೆ ಬರುವುದು ಅವರಿಗೇನೇ ಹಿತಕರವೆಂದು ಒತ್ತಿಹೇಳಬೇಕಾಗಿದೆ.

'ನಾಗಂಳ'

ಟೆಂಡರ್ ನೋಟೀಸು

ಉಡುಪಿ ತಾಲೂಕು ಕಚೇರಿಯ ಬಳಿಯಲ್ಲಿ ಒಂದು ಸಿಟಿ ಬಸ್ ಸ್ಟೋಪನ್ನು ನಿರ್ಮಿಸುವ ಸಲುವಾಗಿ ಮೊಹರು ಮಾಡಿದ ಟೆಂಡರುಗಳು ಉಡುಪಿ ಮುನಿಸಿಪಾಲಿಟಿಯ ಕಮಿಶನರವರ ಆಫೀಸಿನಲ್ಲಿ ಇದೇ ಬರುವ ತಾ 9—9—1950ನೇ ದಿನ ಸಾಯಂಕಾಲ ಘಂಟೆ 3ರ ವರೆಗೆ ತೆಗೆದುಕೊಳ್ಳಲಾಗುವುವು. ಹೆಚ್ಚಿನ ಮಾಹಿತಿಯ ಬಗ್ಗೆ ಮುನಿಸಿಪಾಲಿಟಿಯ ಆಫೀಸಿನಲ್ಲಿ ಆಫೀಸು ಸಮಯ ವಿಚಾರಿಸಿ ತಿಳಿಯಬಹುದು.

ಮುನಿಸಿಪಲ್ ಆಫೀಸು, ಉಡುಪಿ.
ತಾ. 30-8-1950.

ವಿ. ಬಾಲಗಂಗಾಧರನ್,
(ಕಮ್ಮಿಶನರ್)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ತಾರೀಕು 29—8—1950ರಿಂದ
ಚಿಮಿನಿಯವರ **"ಜ್ಞಾನ ಸುಂದರಿ"**
ಕನ್ನಾಂಬ, ಎಮ್. ಕೆ. ರಾಧ, ವರಲಕ್ಷ್ಮಿ ಮತ್ತಿನ್ನಿತರರು.
ಬರುವ ಚಿತ್ರ "ವಾಲಿ ಸುಗ್ರೀವ" (ತೆಲುಗು)

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.
Advocate & President, District Board, S. Kanara.
CHAIRMAN

ಕೊರಿಯಾ ವಾರ್ತೆ

ಕೊರಿಯಾ ಯುದ್ಧದಲ್ಲಿ ಕಳದ ಎರಡು ಮೂರು ವಾರಗಳಲ್ಲಿ ಆ ಕಡೆ ಈ ಕಡೆಯ ಸಂಸಮಾನ ದೂಡಾಟಗಳಾಗುತಿದ್ದು, ಕೊನೆಯ ವಾರ್ತೆಯಂತೆ ಕಮ್ಯೂನಿಸ್ಟ್ ಸೇನೆಗಳು ಸರ್ವ ಸಿದ್ಧತೆಯಿಂದ ಸರ್ವತೋಮುಖ ಪ್ರಚಂಡ ಧಾಳಿಯನ್ನಾರಂಭಿಸಿವೆ.

ಭದ್ರತಾ ಸಮಿತಿ ಸಭೆಯಲ್ಲಿ ಕೊರಿಯಾ ಸಂಬಂಧದ ರಶ್ಯಾ ಮತ್ತು ಅಮೆರಿಕೆಗಳ ನಡುನಿನ ವಿವಾದ ಬೆಳೆದಿದೆ. ಕೊರಿಯಾ ಸರಹದ್ದಿನಲ್ಲಿರುವ ತನ್ನ ವ್ಲದೇಶವಾದ ಮಂಚೂರಿಯದ ವಿಮಾನ ನಿಲ್ದಾಣ ಮತ್ತು ರೈಲ್ವೇ ನಿಲ್ದಾಣಗಳ ಮೇಲೆ ಅಮೆರಿಕ ಮತ್ತು ಇಂಗ್ಲಾಂಡುಗಳು ವಿಮಾನಧಾಳಿ ನಡೆಸಿದುವೆಂದು ಚೈನಾ ಕಮ್ಯೂನಿಸ್ಟ್ ಸರಕಾರವು ಆರೋಪಿಸಿದೆ. ರಶ್ಯದ ವಿರುದ್ಧ ಅಮೆರಿಕ ಮತ್ತದರ ಮಿತ್ರ ರಾಷ್ಟ್ರಗಳ ಸಶಸ್ತ್ರೀಕರಣಕ್ಕಾಗಿ 16,771,384,479 ಡೋಲರುಗಳನ್ನು ಮೀಸಲಿಡುವ ಅಮೆರಿಕದ 'ಎಮರ್ಜೆನ್ಸಿ ಬಿಲ್' ಪ್ರತಿನಿಧಿಸಭೆಯಲ್ಲಿ ಮಂಜೂರಾಯಿತು.

ಮಂಗಳೂರು

ಜಿಲ್ಲಾ ಬೊರ್ಡಿನ ವರದಿ:-ದ. ಕ. ಜಿಲ್ಲಾ ಬೋರ್ಡಿನ 1949-50ರ ಆಡಳಿತ ವರದಿಯು ತಾ 18-8-50ರಲ್ಲಿ ಜರಗಿದ ಜಿಲ್ಲಾ ಬೋರ್ಡಿನ ಸಭೆಯಲ್ಲಿ ಮಂಜೂರಾಗಿದೆ. ಆರಂಭದ ಶಿಲ್ಕು ರೂ. 251012, ಆದಾಯ ರೂ. 8,95,331, ವೆಚ್ಚ ರೂ. 10,03,985, ಉಳಿತಾಯ ರೂ. 1,42,438 ಆಗಿದೆ.

ಬೋರ್ಡಿನಲ್ಲಿ ಒಟ್ಟು 44 ಮೆಂಬರರಿದ್ದಾರೆ. ಇವರಲ್ಲಿ 33 ಸಕ್ಷಗಳಿಂದ ಬಂದ ವರು 33 ಮತ್ತು 11 ರಿಜರ್ವ್ ಸೀಟ್‌ಗಳಿಂದ ಬಂದವರು 11

ಜಿಲ್ಲಾ ಬೋರ್ಡಿಗೆ 760 ಮೈಲು ಜಿಲ್ಲಾರಿ ರಸ್ತೆಯಿದ್ದು ಇದರ ದುರಸ್ತಿಗೆ ರೂ. 2,20826, ರಸ್ತೆಗೆ ಜಲ್ಲಿ ಹಾಕುವ ಹಾಗೂ ಸಂಕ ಕಟ್ಟುವ ಮೊದಲಾದ ಹತ್ತು ಕೆಲಸಗಳಿಗೆ ರೂ- 69,817-11-2, ಸಣ್ಣ ಪುಟ್ಟ ಮೇಂಟಿನೆನ್ಸಿಗಾಗಿ ರೂ. 21,318 ವಿಚಾರಿಸಲಾಗಿರುತ್ತದೆ. ಜಿಲ್ಲೆಯಲ್ಲಿ ಸಾಕಷ್ಟು ರಸ್ತೆಗಳಿಲ್ಲವೆಂಬ ದನ್ನು ವರದಿಯಲ್ಲಿ ಸೂಚಿಸಿರುತ್ತದೆ. ಬೋರ್ಡು ಸಿಬಂದಿ ವೆಚ್ಚವು ರೂ 48,566/-

ಬೋರ್ಡಿನ 60 ಪ್ರಯಾಣಿಕರ ಬಂಗ್ಲೆಗಳ ಬಗ್ಗೆ ರೂ. 26,565 ವೆಚ್ಚವಾಗಿದೆ.

ಪ್ರಾಥಮಿಕ ಶಾಲೆಗಳಲ್ಲಿ 43,887 ಗಂಡು, 25,957 ಹೆಣ್ಣು ವಾಕ್ಯಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಜಿಲ್ಲಾ ಬೋರ್ಡಿನ ಕ್ಷೇತ್ರದೊಳಗೆ ಶಾಲೆಗೆ ಹೋಗುವ ಪ್ರಾಯದ ಅಂದಾಜು ಮಕ್ಕಳ ಸಂಖ್ಯೆ 2,25,462 ಎಂದು ತಿಳಿಯಲಾಗಿದೆ. 81 ಕಷ್ಟಾಯ ಶಿಕ್ಷಣಕೇಂದ್ರಗಳಿವೆ. ಇದರ ಖರ್ಚನ್ನು ಸರಕಾರವೇ ವಹಿಸಿರುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಧರ್ಮಾರ್ಥ ಶಿಕ್ಷಣ ಕೊಡಲಾಗುತ್ತಿದ- ಒಟ್ಟು 565 ಎಲಿಮೆಂಟರಿ ಶಾಲೆಗಳಿವೆ, ಅವುಗಳಲ್ಲಿ 69,838 ವಿದ್ಯಾರ್ಥಿಗಳಿದ್ದಾರೆ. 24 ಹೊಸ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಪಂಡಿ ವರ್ಷದಲ್ಲಿ 5000 ದಷ್ಟು ವಿದ್ಯಾರ್ಥಿಗಳ ಸಂಖ್ಯೆ ಬೆಳೆದಿದೆ.

ಎಲಿಮೆಂಟರಿ ಶಾಲೆಗಳಲ್ಲಿ 1975 ಉಪಾಧ್ಯಾಯರಿದ್ದಾರೆ. ವಿವಿಧ ಕೈಗಾರಿಕೆಗಳನ್ನು ಕಲಿಸಲಿಕ್ಕಾಗಿ 40 ಅಧ್ಯಾಪಕರಿರುವರು. ಎಲಿಮೆಂಟರಿ ಶಾಲೆಗಳ ಖರ್ಚು ರೂ-14,75,690 ಆಗಿರುತ್ತದೆ.

ಜಿಲ್ಲೆಯಲ್ಲಿ ಬೋರ್ಡಿನ ಕೈಕೆಳಗೆ 8 ಹೈಸ್ಕೂಲುಗಳಿವೆ. (ಒಟ್ಟು 50 ಹೈಸ್ಕೂಲುಗಳಲ್ಲಿ) 15,975 ಗಂಡು, 3688 ಹೆಣ್ಣು ಪುಸ್ತಕಗಳು ಓದುತ್ತಿದ್ದಾರೆ. ಕೋಟೇಶ್ವರದಲ್ಲಿ ಸೂತನವಾಗಿ ಹೈಸ್ಕೂಲು ತೆರೆಯಲ್ಪಟ್ಟಿದೆ ಹೈಸ್ಕೂಲುಗಳಖರ್ಚು ರೂ-2,46,660 ಇರುತ್ತದೆ

ಬೋರ್ಡಿನ ಕೈಕೆಳಗೆ 40 ಆಸ್ಪತ್ರೆಗಳಿವೆ. 3 ಕೇಂದ್ರಗಳಲ್ಲಿ ಅಯುರ್ವೇದ ಆಸ್ಪತ್ರೆಗಳನ್ನು ತೆರೆದಿರುತ್ತದೆ. ಕಾರ್ಕಳದ ಆಸ್ಪತ್ರೆಯ ಖರ್ಚನ್ನು ಬೋರ್ಡೇ ನೋಡಿಕೊಂಡಿದೆ. 52 ಸೂಲಗಿತ್ತಿಯರು ಬೇರೆ ಬೇರೆ ಕಡೆಗಳಲ್ಲಿದ್ದಾರೆ ಆರೋಗ್ಯ ಖಾತೆಯ ವೆಚ್ಚವು ರೂ- 12,749 ಆಗಿದೆ

ವನಮಹೋತ್ಸವ ಬಹುಮಾನ ಗಣನೆಯಲ್ಲಿ ಅಡಿಕೆಮರಗಳಿಗೆ ಸ್ಥಾನ ವನಮಹೋತ್ಸವದ ನಿಮಿತ್ತ ನಿರ್ದೇಶಿಸಲ್ಪಟ್ಟ ಬಹುಮಾನ ಗಣನೆಗೆ ಈ ಮೊದಲು ಸೂಚಿಸಿದ ಮಂಗಿಡಗಳಲ್ಲದೆ ಅಡಿಕೆ ಮರಗಳನ್ನು ನೆಟ್ಟ ಸಂಖ್ಯೆಯನ್ನು ಲೆಕ್ಕಿಸಲಾಗುವುದೆಂದು ಜಿಲ್ಲಾ ಕಲೆಕ್ಟರರ ಪ್ರಕಟಣೆಯೊಂದು ಹೊರಟಿದೆ.

ಜಿಲ್ಲಾ ಆಹಾರ ಸಮಿತಿಯ ಇತ್ತೀಚೆಗೆ ಜರಗಿದ ಸಭೆಯಲ್ಲಿ ಆಹಾರ ಕೊರತೆಯ ಈ ಕಾಲದಲ್ಲಿ ಸಿಹಿ ಕೆಳ್ಳನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಸರಕಾರ ಮಾಡಿಸಬೇಕೆನ್ನುವ ಶ್ರೀಮತಿ ಮೇರಿ ಫ್ರಿಟ್ಸ್‌ರವರ ಸೂಚನೆಯ ಕುರಿತು ವಿಶೇಷ ಚರ್ಚೆ ನಡೆದು, ಕೊನೆಗದು ಸರ್ವಾನುಮತದಿಂದ ಮಂಜೂರಾಯಿತು. (ಸಹಕಾರಿ ಸಂಘಗಳ ಮೂಲಕ ಸಿಹಿಕಳ್ಳನ್ನು ವಿತರಣೆ ಮಾಡಿಸ ಬೇಕೆನ್ನುವ ಸೂಚನೆಯೊಂದಿಗೆ ಈ ಠರಾವನ್ನು ಸರಕಾರಕ್ಕೆ ಕಳುಹಿಸಲಾಗಿದೆ.) ಈ ಚರ್ಚೆಯಲ್ಲಿ ಡಾ! ಯು. ಪಿ. ಮಲ್ಯ, ಶ್ರೀ ಕೆ. ಆರ್. ಕಾಂತ, ಶ್ರೀ ಎಲ್. ಪಿ. ಶಾಯಸ್, ಜಿನರಾಜ ಹೆಗ್ಡೆ, ಮೊದಲಾದವರು ಭಾಗವಹಿಸಿದ್ದರು.

ತಾ 24ರಲ್ಲಿದ್ದಂತೆ ನಮ್ಮ ಜಿಲ್ಲೆಗೆ 1500 ಟನ್ ಅಕ್ಕಿ ಬಂದಿರುತ್ತದೆ. (ಇದರಲ್ಲಿ ತಾಡಪಳ್ಳಿಯಿಂದ ಬಂದ 800 ಟನ್ ಅಕ್ಕಿ ಸೇರಿದೆ) ಮಧ್ಯ ಪ್ರದೇಶದಿಂದ 3700 ಮತ್ತು ತಾಡಪಳ್ಳಿಯಿಂದ 100ಟನ್ ಅಕ್ಕಿ ಇಷ್ಟರಲ್ಲಿ ಇಲ್ಲಿಗೆ ಹೊಂಟಿರುತ್ತದೆ, ಮಧ್ಯ ಪ್ರದೇಶದಿಂದ 4880, ಕೋಕನಾಡಿನಿಂದ 1000, ತಾಡಪಳ್ಳಿಯಿಂದ 1625 ಟನ್ ಅಕ್ಕಿ ಇನ್ನೂ ಇಲ್ಲಿಗೆ ಬರಲಿದೆ, ಇದೆಲ್ಲಾ ಇಲ್ಲಿಗೆ ಬಂದು ಮುಟ್ಟಿದರ ನಮ್ಮ ಜಿಲ್ಲೆಯ ಆಹಾರ ಪರಿಸ್ಥಿತಿಯು ಸುಧಾರಿಸಲ್ಪಡುವುದೆಂದು ಜಿಲ್ಲಾ ಸರಬರಾಯಿ ಅಧಿಕಾರಿಯವರು ವಿವರಿಸಿದರು.

ಅವಧಿಯ ಮೊದಲೇ ರೈತರು ತಮ್ಮ ಉಪಯೋಗದ ಸಲುವಾಗಿ ಬಿಟ್ಟ ಅಕ್ಕಿಯನ್ನು ಮುನಿಸಿಪಲ್ಟಿಲ್ಲಿ ಅವರಿಗೆ ರೇಶನ್ ಕಾರ್ಡಿಗೆ ಳನ್ನು ಕೊಡಲಾಗುವುದಿಲ್ಲವೆಂದು ಜಿಲ್ಲಾ ಕಲೆಕ್ಟರರು ತಿಳಿಸಿರುತ್ತಾರೆ.

ಉಡುಪಿ

ಮುನಿಸಿಪಾಲಿಟಿಗೆ ವಿಶೇಷ ಸಭೆಯು ಆಗಸ್ಟ್ ತಾ. 20ರಲ್ಲಿ ಜೆಯರ್ ಮನ್ ಶ್ರೀ ಮಾಧವ ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಪ್ಟಂಬರ್ ತಿಂಗಳ ಪ್ರಾರಂಭದಿಂದ ಮುನಿಸಿಪಲ್ ಕ್ಷೇತ್ರದಲ್ಲಿಯೂ ಇಲೆಕ್ಟ್ರಿಕ್ ದೀಪಗಳನ್ನು ಅಂದ್ದುಗೊಳಿಸಬೇಕೆಂದೂ, ಆ ಸಂಬಂಧ ಮುನಿಸಿಪಾಲಿಟಿಗೂ ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕೊರ್ಪರೇಶನ್‌ಗೂ ಇರುವ ವಿದ್ಯುತ್ ದೀಪದೀಪಗಳ ಕಂಟ್ರಾಕ್ಟನ್ನು ಈ ತಿಂಗಳಾಖ್ಯಂದಿಂದ ಮುನ್ಸಾಗೊಳಿಸುವಂತೆಯೂ ನಿರ್ಣಯಿಸಲಾಯಿತು. ವಿದ್ಯುದ್ದೀಪಗಳ ಬದಲಿಗೆ ಪೆಟ್ರೊಮೆಕ್ಸ್ ಪ ಇತರ ಚಿಮಿಣಿಎಣ್ಣೆ ದೀಪಗಳನ್ನು ಉಂಡಿಸಬೇಕೆಂದಾಯಿತ್ತು.

ಬಳಿಕ ಸಾಮಾನ್ಯಸಭೆಯು ಜರಗಿತು. ತಾಲೂಕು ಕಚೇರಿ ಬಳಿಯಲ್ಲಿ ಬಸ್ ಪ್ಯಾಸೆಂಜರುಗಳು ನಿಲ್ಲಲು ಅನುಕೂಲವಾಗುವಂತಹ ಶೆಡ್ ಕಟ್ಟಿಸಲು ರೂ. 1400/-ನ್ನು ಪಕೇಲ್ ಶ್ರೀ ಪಿ. ವಿ. ಆಚಾರ್ಯರು ಮುನಿಸಿಪಾಲಿಟಿಗೆ ಕೊಟ್ಟ ಬಗ್ಗೆ ಅವರನ್ನು ಅಧಿನಂದಿಸಲಾಯಿತು. ಅಜ್ಜರಕಾಡು ಟೌನ್ ಪ್ಲಾನಿಂಗ್ ಸ್ಕೀಮಿನ ಖರೀದಿಗಳು ಮುಂದೂಡಲ್ಪಟ್ಟಿರುವುದರಿಂದ ಸ್ಕೀಮಿನ ಅಡಿಯಲ್ಲಿ ಆಯ್ಕೆಯಾಗಿರುವ ಜಾಗಗಳ ಮಾಲಕರು ಕಟ್ಟಡ ಕಟ್ಟಲು ಪರವಾನಿಗೆ ಕೇಳಿದಾಗ ಅವರಿಗೆ ಪರವಾನಿಗೆ ಕೊಡಲು ಸಭೆಯು ನಿರ್ಣಯಿಸಿತು.

ಗವರ್ನರರ ಆಗಮನ— ಮದರಾಸಿನ ಗವರ್ನರರಾದ ಭಾವನಗಡದ ಮಹಾರಾಜರು ಬರುವ ಆಗ್ಟೋಬರ್ ತಿಂಗಳ ಪ್ರಥಮ ವಾರದಲ್ಲಿ ನಮ್ಮ ಜಿಲ್ಲೆಗೆ ಬರಲಿರುವ ರೆಂದು ತಿಳಿದುಬರುತ್ತದೆ. ಜಿಲ್ಲಾ ಬೋರ್ಡಿನವರೂ, ನಗರ ಸಭೆಯವರೂ ಮಾನಪತ್ರಗಳನ್ನು ಕೊಡಲಿರುವರೆಂದೂ ಗೊತ್ತಾಗಿದೆ.

ಉಪಾಧ್ಯಕ್ಷರ ಆಯ್ಕೆ ಮುನಿಸಿಪಾಲಿಟಿಯ ಉಪಾಧ್ಯಕ್ಷರಾಗಿ ಶ್ರೀ ಕೆ. ಸುಬ್ಬರಾಯ ಕಾಮತ್ ಆಯ್ಕೆಯಾಗಿದ್ದಾರೆ. ಶ್ರೀಯುತರು ಈ ಹಿಂದೆ ಈ ಹುದ್ದೆಯನ್ನು ಅಲಂಕರಿಸಿದ್ದರು.

ವರ್ಧಂತಿ ಸಭೆ—ಶ್ರೀ ಕಾಣಿಯೂರು ಮಠದ ಕಿರಿಯ ಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ ಶ್ರೀ ವಾಗ್ವಿಲಾಸಿನಿ ಸಭೆಯ ವರ್ಧಂತಿ ಸಮಾರಂಭವು ಕಳೆದ ಶುಕ್ರವಾರ ಶ್ರೀ ಕೃಷ್ಣ ಮಠದ ಜಂದ್ರಶಾಲೆಯಲ್ಲಿ ಶ್ರೀ ಪುತ್ತಿಗೆ ಮಠದ ಹಿರಿಯ ಸ್ವಾಮಿಗಳ ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಭಂಡಾರಕೇರಿ ಮಠದ ಸ್ವಾಮಿಗಳವರು ಸಭೆಯನ್ನು ಉದ್ಘಾಟನಾ ಮಾಡಿದರು, ಶ್ರೀ ಪೇಜಾವರರು ಶ್ರೀ ಅದಮಾರು ಸ್ವಾಮಿಗಳವರೇ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಕಾಲೇಜು ವರ್ಧಂತಿ:- ಸಂಸ್ಕೃತ ಕಾಲೇಜಿನ ವರ್ಧಂತಿಯು ತಾ 29ರಲ್ಲಿ ಪರ್ಯಾಯ ಶ್ರೀ ಕಾಣಿಯೂರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಅಂಗಿಧಾರಣೆ ಬಗ್ಗೆ ಚಳವಳ:- ಸಂಸ್ಕೃತ ಕಾಲೇಜಿನಲ್ಲಿ ಈ ವರೆಗೆ ನಡೆದು ಬಂದಂತೆ ಪಂಚೆವಸ್ತ್ರ, ಶಾಲುಧಾರಣ ಮಾಡಿಕೊಂಡು ಕಾಲೇಜಿಗೆ ಬರುವ ಪದ್ಧತಿಯಲ್ಲಿ ಸುಧಾರಣೆಯಾಗಬೇಕೆಂದೂ, ಶರ್ಟು ಹಾಕಿಕೊಂಡು ಬರುವ ಸೌಕರ್ಯ ದೊರೆಯಬೇಕೆಂದೂ, ವಿದ್ಯಾರ್ಥಿಗಳು ಚಳವಳ ಪ್ರಾರಂಭಿಸಿರುವರೆಂದೂ ಕಾಲೇಜು ಸ್ಥಾಪಕರಾದ ಧರ್ಮಾಧಿಕಾರಿಗಳು ಈ ಸುಧಾರಣೆಗೆ ಮನ್ನಣೆ ಕೊಡಲು ತಯಾರಿಲ್ಲವೆಂದೂ ತಿಳಿದುಬರುತ್ತದೆ.

ಉಪನ್ಯಾಸ—ಫ್ಲೈಟ್ ಲೆಫ್ಟನೆಂಟ್ ಶ್ರೀ ಯು. ಆರ್. ಆಚಾರ್ಯರು ಇದೇ ತಾ. 25ರಲ್ಲಿ ಎಮ್. ಜಿ. ಎಮ್. ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಶ್ರೀ ಯಜ್ಞ ಸುಂದರರಾಯಂ ಅಧ್ಯಕ್ಷತೆಯಲ್ಲಿ 'ಹೈಡ್ರೋಜನ್ ಬೋಂಬ್'ನ ವಿಷಯವಾಗಿ ಮನನೀಯ ಭಾಷಣವಿತ್ತರು.

ನಿಧನ ವಾರ್ತೆಗಳು

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಕಾರಾಗೃಹವನ್ನು ಅನುಭವಿಸಿದ್ದ ಕಾಂಗ್ರೆಸ್ ಧುರೀಣ, ಶಾಂತ ಸ್ವಭಾವಿ, ಮತ್ತು ಸಾದಾ ನಡತೆಯವರಾಗಿದ್ದ ಶ್ರೀ ಟಿ. ಕೇಶವ ಪೈಗಳು ಕೆಲವು ಕಾಲದಿಂದ ಖಾಹಿಲೆಪೀಡಿತರಾಗಿದ್ದು ಇತ್ತೀಚೆಗೆ ದಿವಂಗತರಾದರೆನ್ನಲು ವಿಷಾದಿಸುತ್ತೇವೆ.

ಮಟ್ಟು 'ಮೊಳದ್ದಮೆ'ಯಲ್ಲಿ ಅವಾದಿತರಾಗಿದ್ದು ಬಿಡುಗಡೆಗೊಂಡಿದ್ದ ಮತ್ತು 'ಕಾಂಚಾರಿ'ಯಾಗಿ ಹೆಸರುಗಳಿಸಿದ್ದ ಮಟ್ಟು ಶ್ರೀ ಚಂದ್ರಯ್ಯನವರು ಹೃದಯಸ್ತಂಭನಗೊಂಡು ವಿಧಿವಶರಾದುದು ಕೋದನೀಯ.

ಉಡುಪಿ ತಾಲೂಕು ಕೊರಂಗ್ರಪಾಡಿ ಹರೇಲರಾಗಿದ್ದು ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗಿದ್ದ ಶ್ರೀ ಕೆ. ಜಗನ್ನಾಥ ಶೆಟ್ಟರು ದಿವಂಗತರಾದುದು ವಿಷಾದಕರ.

ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿನ್ನು ಸ್ನಾನ, ಊಟ, ಉಪಹಾರ, ಬೈರೆಕ್, ಶಯನ ಇವೆಲ್ಲಿ ಉತ್ತಮ ವ್ಯವಸ್ಥೆ ಕರೆದರೆ ಹಿಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರಾಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಒಳಿತು, ಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕೆ:—ಹರಿವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦. ಪೋಸ್ಟ್ ಚಾರ್ಜು ೧೯ ಆಣೆ.

ಪೂರೈಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಜಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾಲಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸು ಆರ್ ಎಲ್ ಕಮಲಾಪುರ ,ಕೆಮಿಸ್ಟ್, ಹಾವೇರಿ ಬ್ಯಾಡಗಿ

ಜೀವವಿಮೆಗಾಗಿ

ವಿಚಾರಿಸಿರಿ

ನೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ: ಕೇಂದ್ರ ಕಾರ್ಯಾಲಯ:

ಕೆ. ಎಸ್. ರಾವ್. ರೋಡು, "ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142

ಹೆಂಪನಕಟ್ಟೆ, ಮಂಗಳೂರು. ಮದ್ರಾಸು.

೧೯೪೯ರಲ್ಲಿ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

೧೯೪೯ರ ಬಿರುದಾವಳಿ [ಎಂ. ವಿ. ಹೆಗ್ಡೆ]	0	2	0
ಹೈದರಾಬಾದ್ ವಿಜಯ [ಯಕ್ಷಗಾನ] ,,	0	3	0
ನೆರೆಯಾಳು [ನೀಳ್ಗತೆ] ಕುಲಕರ್ಣಿ ಬಿಂದುಮಾಧವ	0	4	0
ಗಾಂಧಿ [ಸೂಕ್ಷ್ಮಪರಿಚಯ]ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಿಲಿನಲ್ಲಿ[ನೀಳ್ಗತೆ] ಪ. ಸು. ಭಟ್ಟ	0	3	0
ಬಲಿಪೀಠದಲ್ಲಿ [ನಾಟಕ] ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ [ಎಂ. ವಿ. ಹೆಗ್ಡೆ]	0	3	0
ನನ್ನ ಹೆಂಡತಿ[ಕತೆಗಳು]ಮಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ [ನೀಳ್ಗತೆ] ಗಿರಿಬಾಲೆ	0	3	0
ಸುಖದವಾರಿ [ವೈರಾಗ್ಯಶತಕ] ಕೆ. ಎ. ದೇವದಾಸ	0	3	0
ಕಾಲವೇ ಬದಲಾಗಿದೆ [ಕು. ಶಿ ಹರಿದಾಸ ಭಟ್ಟ]	0	3	0
ಸುಕಾಂತ [ಅನುವಾದಿತ ಕತೆ] ವೀ. ಚ- ಹಿತ್ತಲಮನಿ	0	3	0
ಪಂಚಮುಖಿ [5 ಪ್ರಬಂಧಗಳು] ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ [ನೀಳ್ಗತೆ] ಕೆ. ದೇವಕಿ	0	3	0
ಜನಸೇವೆಯ ಸೋಗಿನಲ್ಲಿ! [ಕತೆ] ಕೆ. ಶಿವರಾಮ ಶೆಟ್ಟಿ	0	3	0
ನಾ ಕಂಡ ಅವಳು [ಕತೆ] ಶ್ರೀಪತಿ	0	3	0
ತ್ರಿವೇಣಿ [ಪ್ರಬಂಧಗಳ ಸಂಗ್ರಹ]	0	3	0
ನಿಲುವಂಗಿ [ಕತೆ]ಎಸ್.ಸುಬ್ಬರಾಮಯ್ಯ, ಬಿ.ಎ.(ಆನರ್ಸ್)	0	3	0
ಸರಸ-ವಿರಸ! [೪ ವಿನೋದ ಚಿತ್ರಗಳು]	0	3	0
ಹೃದಯೇಶ್ವರಿ [ಕಾದಂಬರಿ]	0	3	0
ವಿವಿಧ ವಿಷಯ ಕೋಶ ಭಾಗ ೨ [ವೈಜ್ಞಾನಿಕ ಸಂಗ್ರಹ]	0	6	0
ಕುಲವಿಲ್ಲದ ಹೆಣ್ಣು[ಪಿ.ವೆಂಕೋಬಾಚಾರ್ಯ ಬಿ.ಎ.,ಬಿ.ಟಿ.]	1	0	0
ಧಾರ್ಮ್ಯ ಲಕ್ಷ್ಮಿ [ನಾಟಕ] ಬೆಳ್ಳಂಗಡಿ ಲಕ್ಷ್ಮಣರಾವ್	1	0	0
ಯುಗವಾಣಿ [ಕವನ ಸಂಗ್ರಹ] ಕು. ಶಿ. ಹರಿದಾಸಭಟ್ಟ	0	8	0
ಶ್ರೀ ಹೃದಯ— [ವಾಸಂತಿ ಪಡುಕೋಣೆ]	0	3	0
ದ್ವೇಷ- [ಶ್ರೀನಿವಾಸಮೂರ್ತಿ ಗೊರೂರು]	0	3	0
ಪ್ರಜಾಸ್ವಾತ್ಯನ್ನು ಕುರಿತು [ಶಿವರಾಮ ಕಾರಂತರು]	0	4	0
ಆಧುನಿಕ ಭಾರತ [ಎಜ್. ಭೀಮರಾವ್]	0	4	0
ಭಾರತದ ಸಾಹಿತ್ಯ ಮತ್ತು ಕಲೆಗಳು [ವಿಸ್ಮೇಶ್ವರ ಶರ್ಮ]	0	4	0
ಸ್ತ್ರೀ ಸ್ವಾತಂತ್ರ್ಯ ಬೇಕೆ? [ವೈದ್ಯ ವಿನಾಯಕರಾವ್]	0	3	0

೧೯೫೦ರಲ್ಲಿ ಈವರೆಗೆ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

ಹಂಬಲ [ಕೃಷ್ಣಮೂರ್ತಿ ಕಿತ್ತೂರ]	0	3	0
ನುಡಿ ಮುತ್ತುಗಳು [ಎಂ. ವಿ. ಹೆಗ್ಡೆ] ಮಾಲೆ ೧	0	3	0
,, ,, ಮಾಲೆ ೨	0	3	0
,, ,, ಮಾಲೆ ೩	0	3	0
ಕಲಾವಿದನ ದಿನಚರಿ [ಯಸ್ಸೆಲ್]	0	3	0
ಶವರು ಮನೆಯಿಂದ [ಸೌ॥ ಶಾರದಾ ದೇವಿ]	0	3	0
ದೇವರ ನಾಮ ಮತ್ತು ಅದರ ಸಾಧನೆ [ಬಿ. ವಿ. ಶರ್ಮ]	0	3	0
ಎರಡು ಕತೆಗಳು	0	3	0
ಬಾಡಿಗೆಯ ಮನೆ ಮತ್ತು ಮುಸುಕು [ನಾಟಕಗಳು]	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ಭಾರತ ಚಿತ್ರದ ಆಂಜೆಟೋಟುಗಳು [ಟಿ.ಚಂದ್ರರಾಜ ಸೆಟ್ಟಿ]	0	3	0
ಕ್ರಿಶೂಲ [ನಾಟಕ] ವಸುದೇವ್ ಭೂವಾಲಂ	0	4	0
ಪುಸ್ತಕ ಪುರಾಣ [ಕು.ಶಿ ಹರಿದಾಸಭಟ್ಟ, ಬಿ ಎ (ಆನರ್ಸ್)]	0	4	0
ಹಳ್ಳಿಯಲ್ಲಿ ನಡೆದ ನಾಟಕ[ಕೆ ಎ. ದೇವದಾಸ,ಶಿರೋಮಣಿ]	0	2	0
ನೆರೆಯ ಗಾಂಧಾರ [ಸುಬ್ರಾವ್ ಕೃಷ್ಣ ಹೆಗಡೆ]	0	3	0
ಮಾತಿನಯುಗದ ಮಹಾ ಪ್ರಭಾವ [ವಿಸ್ಮೇಶ್ವರ ಶರ್ಮ]	0	3	0
ವಿಜ್ಞಾನದ ಬೆಳವಣಿಗೆ [ಟಿ. ಚಂದ್ರರಾಜ ಸೆಟ್ಟಿ]	0	4	0
ಡಾ॥ ಹರ್ದೀಕರ್ [ನಾಗೇಶ ರಾಮಚಂದ್ರ ದೇಸಾಯಿ]	0	4	0
ತೆಂಗಿನ ತವರು [ಯು. ನಾರಾಯಣಭಟ್ಟ, ಕಾನಗೋಡು]	0	4	0
ಪ್ರಭಾ [ಕು. ಪದ್ಮಾ ಉಡುಪಿ]	0	3	0
ಪ್ರಾಯಶ್ಚಿತ್ತ [ಎಂ ಗೋವಿಂದರಾವ್, ಎಂ. ಎ.]	0	2	0
ಶವಗಳ ಸಾಗಾಟ [ಪತ್ತೆದಾರಿ] ಸುಬ್ರಾವ್ ಕೃಷ್ಣ ಹೆಗಡೆ	0	8	0
ಸ್ವಪ್ನಲೋಕ [ಕಾರ್ತಿಕೇಯ]	0	4	0
ಮನೆಯ ಹೊರಗಿನ ಮಹಾಜೀವಗಳು [ಕು. ಶಿ ಭಟ್ಟ]	0	4	0
ಘಂಟಮಾರಾ [ಕು. ಶಿ. ಹರಿದಾಸ ಭಟ್ಟ] ಭಾಗ ೧	0	3	0
,, ,, ಭಾಗ ೨	0	3	0
,, ,, ಭಾಗ ೩	0	3	0
,, ,, ಭಾಗ ೪	0	4	0

ಸಿಗುವ ಸ್ಥಳ:—ಅಂತರಂಗ ಕಾರ್ಯಾಲಯ, ಉಡುಪಿ.
ಅಥವಾ ನವಯುಗ ಪ್ರೆಸ್, ಉಡುಪಿ

ದಕ್ಷಿಣ ಕನ್ನಡ

ಕಂಬಳೂರು:—ಸ್ಥಳೀಯ ಪಂಚಾಯತ ಬೋರ್ಡಿನ ಪರವಾಗಿ ಪ್ರಾಥಮಿಕ ಮೂಲ ವಿದ್ಯಾಭ್ಯಾಸ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನೆರವೇರಿಸಲ್ಪಟ್ಟಿತು. ಅಂದು ಗ್ರಾಮವು ನೈರ್ಮಲ್ಯಕ್ಕಾಗಿ ಮಾಯಿಪ್ಪಾಡಿ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯ ಮುಖ್ಯ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳೊಂದಿಗೆ ಬಂದಿದ್ದರು.

ಶ್ರೀ ದೇವಪ್ಪಾಳ್ವರು ಧ್ವಜಾರೋಹಣ ಮಾಡಿ, ಸರಸ ಭಾಷಣವಿತ್ತರು.

ಫರಂಗಿಪೇಟೆ—ಇಫ್ಲಯ. ಶ್ರೀ ರಾಮಾ ಹಾ. ಎ. ಶಾಲೆಯಲ್ಲಿ ತಾ 15ರಲ್ಲು ಸ್ವಾತಂತ್ರ್ಯೋತ್ಸವ ಆಚರಿಸಲ್ಪಟ್ಟಿತು. ಶ್ರೀ ಕೆ. ಎ. ಗೋವಿಂದ ಭಟ್ ಸುತ್ತು ಇತರ ಸಹಾಯಕ ಅಧ್ಯಾಪಕರೂ ಭಾಷಣ ಮಾಡಿದ ಬಳಿಕ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ಮುದ್ರಾಡಿ:—ಕೆಲವು ದಿನಗಳಿಂದ ಹಲ ವಾರು ಜಾನುವಾರುಗಳನ್ನು ನಾಶಮಾಡಿ ರುವ ದೊಡ್ಡ ಸೆಬ್ಬುಲಿಯೊಂದನ್ನು, ಮುದ್ರಾಡಿ ಶ್ರೀ ಹೆರಿಯ ಪೂಜಾರಿಯವರು 19-8-50ರಲ್ಲು ಗುಂಡಿನಿಂದ ಕೊಂದಿ ೨ ವರು. ತಾ. 24-8-50ರಲ್ಲಿ ಶ್ರೀ ಮುದ್ರಾಡಿ ಮನ್ಸ ಶೆಟ್ರು 10ಫೀಟು ಅಂತರದಲ್ಲಿ ನೆಲ ದಲ್ಲಿ ನಿಂತು ಇದಿರಾಗಿ ಬರುತ್ತಿದ್ದ ಇನ್ನೊಂದು ಹೆಬ್ಬುಲಿಯನ್ನು ಕೊಂದಿರುವುದು ತುಂಬಾ ಸ್ತುತ್ಯಕರವಾಗಿದೆ.

ಕಿನ್ನಿಗೋಳಿ:—ಸ್ಥಳೀಯ ಕರ್ನಾಟಕ ಸಂಘದವತಿಯಿಂದ ಸ್ವಾತಂತ್ರ್ಯ ದಿನಾಚರಣೆಯು ಸಾರ್ವಜನಿಕವಾಗಿ ವಿಜೃಂಭಣೆಯಿಂದ ನೆರವೇರಿಸಲಾಯಿತು. ಬೇಂಜ್‌ಕೋರ್ಟು ಮೈದಾನದಲ್ಲಿ ಶ್ರೀ ಎ. ಟಿ. ಶೆಟ್ಟಿ, ಬಿ. ಎ. ಬಿ. ಟಿ ಯವರ ಅಧ್ಯಕ್ಷತೆಯಲ್ಲಿ ಸಭೆಜರಗಿ.- ಅದರಲ್ಲಿ ಶ್ರೀ ಕೆ. ಗುರುರಾಜ ಉಡುಪರು ಬಿ. ಎಸ್. ಸಿ, ಶ್ರೀ ಬಿ. ಗೋವಿಂದ್ರಾಯರು, ಬಿ. ಎ. ಬಿ. ಟಿ. ಎಲ್. ಶ್ರೀ ಭೋಜ ಶೆಟ್ಟಿ, ಜನಾರ್ದನ ರಾವ್, ಪಾಸ್ಟರ್ ಸಿಕ್ವೇರ, ನೂರುಲ್ಲಾ ಸಾಹೇಬ್ ಮೊದಲಾದವರ ಭಾಷಣಗಳಾದ ಬಳಿಕ ಅಧ್ಯಕ್ಷರ ಭಾಷಣವಾಗಿ ಧನ್ಯವಾದದೊಂದಿಗೆ ಮಿಠಾಯಿ ಹಂಚಿದನಂತರ ಕಾರ್ಯಕ್ರಮವು ಮುಕ್ತಾಯವಾಯಿತು.

ಕೆಲ್ಯಾಣಪುರ:— ಸ್ಥಳೀಯ ಹಿ. ಹಾ. ಎ. ಶಾಲಾ ಪರಾರದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮಗಳು ಶ್ರೀ ಟಿ. ಸುರೇಂದ್ರನಾಥ ಪೈಗಳ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿ ನಂತರ ಮಕ್ಕಳಿಗೆ ಸಿಹಿಉಂಡಿಗಳ ವಿತರಣೆಮಾಡಲಾಯಿತು.

ಮುಂಡ್ಕೂರು:— ಇಲ್ಲಿನ ಸಂಕಲಕರಿಯ ಎಯಿಡೆಡ್ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕೊಡಂಕೂರು ವೀರಪ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿ ಪಲವರ ಭಾಷಣಗಳಾದವು. ಸಂಜೆ ಬೋರ್ಡುಶಾಲಾ ವತಾರದಲ್ಲಿ ಧ್ವಜವಂದನೆ,ಸಭೆ,ಭಾಷಣಗಳಿದ್ದುವು.

ಉಚ್ಚಾಯರ:— ಸ್ಥಳೀಯ ಸೈಂಟ್ ಫ್ರಾನ್ಸಿಸ್ ಕ್ಸೇವಿಯರ್ ಹಾಯರ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯ ವೃಂದದವರು ಸ್ಥಳೀಯ ಇಗರ್ಜಿಯಿಂದ ನಿವೃತ್ತಿ ಹೊಂದಿ ಹೋಗುವ ಶಾಲಾ ಮೆನೇಜರ್ ರೆ। ಫಾ। ಸಿ. ಫೆರ್ನಾಂಡೀಸರನ್ನು ಬೀಳ್ಕೊಡಲು ಇದೇ ತಾ-25ರಲ್ಲು ಸತ್ಕಾರಕೂಟವೊಂದನ್ನು ಶ್ರೀ ಬಿ.ಎಸ್. ಪರೇಲರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಅಧ್ಯಾಪಕ ಮತ್ತು ಮಕ್ಕಳ ಕಡೆಯಿಂದ ಮಾನಪತ್ರಗಳು ಅರ್ಪಿಸಲಾದನಂತರ ಶ್ರೀಗಳಾದ ಯು. ಪಿ. ಮೇಸ್ತ, ನರಸಿಂಪ ಕಾಮತ್, ಎಸ್.ಜೆ.ಸಿ. ಪ್ರೇರ, ಕೆ.ಎಲ್.ಪುರಾಣಿಕ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಲಘು ಉಪಾಹಾರ, ಭಾವಚಿತ್ರಗಳಾದನಂತರ ಮುಖ್ಯೋಪಾಧ್ಯಾಯ ವಿ। ಎಸ್. ಫೆರ್ನಾಂಡೀಸರು ಧನ್ಯವಾದಗಳನ್ನರ್ಪಿಸಿದರು.

ಮರ್ಕೆ:— ಎಯ್ಡೆಡ್ ಎಲಿಮೆಂಟರಿ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವವು ಶ್ರೀ M-ವೆಂಕಟಾಚಲಭಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಕುರ್ಕಾಲು:—ಶ್ರೀ ಗಣಪತಿ ಎಲಿಮೆಂಟರಿ ಶಾಲೆಯಲ್ಲಿ "ಸ್ವಾತಂತ್ರ್ಯ ದಿನಾಚರಣೆ" ಯು ಪಟೇಲ್ ಶ್ರೀ ಚಂದಯ್ಯ ಶೆಟ್ಟರ ನೇತೃತ್ವದಲ್ಲಿ ಜರಗಿ ಭಾಷಣಗಳಾದ ನಂತರ ಮಕ್ಕಳಿಗೆ ತಿಂಡಿ ಹಂಚಲಾಯಿತು.

ಸ್ವಾಬರಕಟ್ಟೆ:— ಸ್ಥಳೀಯ ಬೋ| ಹಾ ಎ. ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವವು ಜರಗಿತು. ಕೇಂದ್ರ ಕಾಂಗ್ರೆಸ್ ಸಮಿತಿ ಅಧೀನದಲ್ಲಿ ಶ್ರೀ ಕಂದಾವರ ಸಂಜೀವ ಹೆಗ್ಡೆಗರ ಅಧ್ಯಕ್ಷತೆಯಲ್ಲಿ ಸಭೆಜರಗಿ ಕಾರ್ಯಕ್ರಮಗಳಾದುವು.

ಮದ್ರಾಸು

ಮದ್ರಾಸು ಕರ್ನಾಟಕ ಸಂಘದ ಆಶ್ರಯದಲ್ಲಿ:— ತಾ. 13ರಲ್ಲು ಕಾಮಾರಿಯಾದ ಶ್ರೀಮತಿ, ಮೋಹಿನಿಯರೂ ಕುಮಾರಿ ಸುಬ್ರಹ್ಮಣ್ಯಂ ಮೊದಲಾದವರೂ ಭರತನಾಟ್ಯ ಮತ್ತು ವಿವಿಧ ನೃತ್ಯಗಳನ್ನು ಅಭಿನಯಿಸಿದರು. ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಶ್ರೀ ಪಿ. ಎಸ್ ವಿಶ್ವನಾಥ ಅಯ್ಯರ್, ಆವರು ವಹಿಸಿದ್ದರು. ಶ್ರೀ ಕೆ. ತಿರುಮಲೇಶ್ವರ ಶರ್ಮರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಅಭಿನಯಗಾರರಿಗೆ ರಜತ ಪಾತ್ರೆಯ ಸಾರಿತೋಷಗಳನ್ನಿತ್ತಿಯಲಾಯಿತು.

ತಾ 15ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಮಾನ್ಯ ಮಂತ್ರಿ ಶ್ರೀ ಎಚ್. ಸೀತಾರಾಮ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಜರಗಿತು.

ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನ ಕನ್ನಡ ಸಂಘದ— ಆರಂಭೋತ್ಸವ ಭಾಷಣವನ್ನು ತಾ. 5ರಲ್ಲಿ ಡಾ। ಯು. ಪಿ ಮಲ್ಯ, ಎಂ. ಎಲ್, ಎ. ರವರ ಅಧ್ಯಕ್ಷತೆಯಲ್ಲಿ ಶ್ರೀ ಎನ್. ಎಸ್. ಕಿಲ್ಲೆಯವರು ನೆರವೇರಿಸಿದ್ದಾರೆ.

ಮುಂಬಯಿ

ಉತ್ತರ ಮುಂಬಯಿ ಹೋಟೇಲ್ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ತಾ 22-8-50ಕ್ಕೆ ಸಂಘದ ಅಧ್ಯಕ್ಷ ಪಾಧವನವರ ಅಧ್ಯಕ್ಷತೆಯಲ್ಲಿ ಜರಗಿ ಎರಡು ವರೆ ಲಕ್ಷ ಮಿಲ್ಲು ಕೆಲಸಗಾರರ ಅನಿರ್ದಿಷ್ಟ ಅವಧಿಯ ಸಂಪಿಗೆ ಹೋಟೇಲ್‌ಕೆಲಸಗಾರರು ತಮ್ಮ ಸಹಾನುಭೂತಿಯನ್ನು ತೋರಿಸಬೇಕೆಂದು ನಿಶ್ಚಯಿಸಲಾಯಿತು.

ವಿವಿಧ ಪಾತ್ರೆಗಳು



ಯಾವಕ್ಕೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಿಯಾಯಿತಿ ದರದಲ್ಲಿ ಯಾಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಿಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

1951ನೇ ವರ್ಷದ E. S. L. C.

ಪರೀಕ್ಷೆಯ ಕನ್ನಡ ಪಾಠಪುಸ್ತಕದ ಟಿಪ್ಪಣಿಯು ಈ ತಿಂಗಳೊಳಗಾಗಿ ಪ್ರಕಟವಾಗುವುದು.

ಕಳದ ವರ್ಷಗಳಿಗಿಂತಲೂ ಉತ್ತಮ ರೀತಿಯಲ್ಲಿ ಬರೆಯಲಾಗಿದೆ.

ಗ್ರಾಹಕರು ಬರೆದುಕೊಳ್ಳುವುದು

ಡಿ. ವಿ. ಹೊಳ್ಳ. ವಿದ್ಯಾನ್ಸ್
ಕುಂದಾಪುರ.
ಸ್ಕೂಲ್ ಬುಕ್ ಕಂಪೆನಿ,
ರಥಬೀದಿ, ಮಂಗಳೂರು.

ಯುದ್ಧದಿಂದ ಯುದ್ಧಕ್ಕೆ ಪ್ರಾಗುವರ್ಗ!

[ಸಿ. ಎಚ್. ಲಿಟ್ಟ್.]

ಭೂಲೋಕಲ್ಲಲ್ಲಾ ಪ್ರಜಾಮತ ಸರ ಕಾರಗಳನ್ನು ರಕ್ಷಿಸಿ ಊರ್ಜಿತಗೊಳಿಸುವ ಧ್ಯೇಯದಿಂದ ಕಾದುವದಾಗಿ ಕಳದ ಒಂದನೇ ಮಹಾಯುದ್ಧದ ಸಮಯ ಮಿತ್ರರಾಷ್ಟ್ರಗ ವರು ಸಾರಿದ್ದರು. ಆನೇಕದಲ್ಲಿ ಆಗಿನ ಅಧ್ಯ ಕ್ಷರಾದ ವಿಲ್ಸನರು ತಮ್ಮ ಹದಿನಾಲ್ಕು ನಿರ್ಣ ಯಗಳನ್ನು ಸಾರಿ ಎಲ್ಲಾ ರಾಷ್ಟ್ರಗಳಿಂದ ಕೂ ಡಿದ ಒಂದು ಜನಾಂಗ ಸಭೆಯನ್ನು ಸ್ಥಾಪಿಸ ಬೇಕೆಂದು ಘೋಷಿಸಿದ್ದರು. ಯುದ್ಧವು ಮುಗಿದೊಡನೆಯೇ ಮಿತ್ರರಾಷ್ಟ್ರಗಳು ವಿಲ್ಸನರ ತತ್ವ ಮತ್ತು ರಣಾವುಗಳನ್ನೆಲ್ಲಾ ಬದಿಗೊತ್ತಿ ಸೋತು ಸೋತುಹೋದ ರಾಷ್ಟ್ರಗಳನ್ನು ತಲೆ ಎತ್ತದಂತೆ ಮಾಡಬೇಕೆಂದು ದ್ವೇಷ ಮತ್ತು ಅಸೂಯೆಯಿಂದ ಬಹುತರದ ಕರಿಣ. ಕರ್ತ ಗಳುಳ್ಳ ವರ್ಸೇಲಿಯಾ ಒಪ್ಪಂದವನ್ನು ಹೊರಿ ಸಿದವು.ಜನಾಂಗಸಭೆಯ ಆಶ್ರಯದಿಂದ ಸೋ ತುಹೋದ ರಾಷ್ಟ್ರಗಳ ಮನಸಾಹತುಗಳನ್ನು ತ ಮ್ಮೊಳಗೆ ಯುಕ್ತಕಂಡಂತೆ ಹಂಚಿಕೊಂಡು ಸ್ವಾರ್ಥಸಾಧನೆಯಿಂದ ಜನಾಂಗ ಸಭೆಯನ್ನು ಮಿತ್ರರಾಷ್ಟ್ರಗಳದ್ದೇ ಆದ ಒಂದು ಬಳಕೂಟ ಮಾಪರ್ಟ್ಟಿತು. ಇವರ ದ್ವೇಷ ಮತ್ತು ಅಸೂ ಯೆಯನ್ನು ಸಹಿಸಲಾರದ ಜರ್ಮನಿ, ಜಪಾ ನು ಮತ್ತು ಇಟೆಲಿ, ಇವುಗಳು ಜನಾಂಗ ಸಭೆಗೆ ತಿಲಾಂಜಲಿಯನ್ನಿತ್ತು ಹೊರಬಂದು ಹೊಸ ಘೋರಣೆ ನುತ್ತಾ ರಾಜ್ಯ ಘಟನೆಯ ಕಾರ್ಯಕ್ರಮ ಕೈಗೊಂಡು ತಮ್ಮ ರಾಷ್ಟ್ರಗ ಳನ್ನು ಬಲಿಷ್ಠಪಡಿಸಿ ತಮಗಾದ ಅಪಮಾನ ನುತ್ತು ಅನ್ಯಾಯದ ಸೇಡು ತೀರಿಸಿಕೊಳ್ಳಲು ಎರಡನೇ ಮಹಾಯುದ್ಧವನ್ನು ಹೂಡಿದುವು. ಈ ರೀತಿಯಲ್ಲಿ ಜನಾಂಗ ಸಭೆಗೆ ಒಂದು ಒದ್ದೆ ಬ್ಲಾಟಿಂಗ್ ಕಾಗದದಲ್ಲಿ ಹಿಡಿಯಲಾ ರದಷ್ಟು ಗಟ್ಟಿ ವಸ್ತ್ರಗಳನ್ನು ಸುತ್ತಿಕಟ್ಟಿ ದಂತಾಗಿ ಒಡೆದುಹೋಗುವಿತು.

ಲೋಕದ ಮುಂದಾಳುಗಳು ಚರಿತ್ರೆಯಿಂ ದ ಯಾವ ಪಾಠವನ್ನೂ ಹೊಸತಾಗಿ ಕಲಿಯ ಲಿಲ್ಲ ಮತ್ತು ತಾವು ಕಲಿತದ್ದನ್ನು ಮರೆ ಯಲೇ ಇಲ್ಲ. ಅಲ್ಲಲ್ಲಿ ಮಹಾ ವ್ಯಕ್ತಿಗಳ ವಿರೋಧ ಸ್ವರಗಳು ಕೇಳಿಬರುತ್ತಿದ್ದರೂ ಅವು ನಡು ಅರಣ್ಯದ ರೋದನದಂತಾಗಿವೆ. ಎರಡನೇ ಮಹಾಯುದ್ಧವನ್ನು ಸರ್ವಾ ಗೆದ್ದ ರೂ ತಮ್ಮಲ್ಲಿರುವ ಹಿಂದಿನ ದೋಷಗಳನ್ನು ತಿಲಾಂಶವಾದರೂ ಸರಿಪಡಿಸಿಕೊಳ್ಳಲಿಲ್ಲ. ಸೋತುಹೋದ ರಾಷ್ಟ್ರಗಳ ಮೇಲೆ ದ್ವೇಷ, ವೈಷಮ್ಯ ಮತ್ತು ಅಸೂಯೆಯನ್ನು ಬಿಡಲೇ ಇಲ್ಲ. ಇನ್ನುಮುಂದೆ ಯುದ್ಧವಿಚಾರಿಯಿಂದ ರಾಷ್ಟ್ರಗಳ ಕಲಹಪಟ್ಟನ್ನು ತೀರ್ಮಾನ ನೂಡಿ ಕೊಳ್ಳುವದನ್ನು ಬಿಟ್ಟು ನ್ಯಾಯುಕ್ತ ರಾಷ್ಟ್ರ ಸಭೆಯ ತೀರ್ಮಾನದಂತೆ ನಡೆಯುವದೆಂಬ ಒಂದು ಸಂಘವನ್ನು ಸ್ಥಾಪಿಸಿದರೂ ಬಲಿಷ್ಠ ರಾಷ್ಟ್ರ ಇದು ರಾಷ್ಟ್ರಗಳ ಅಂಕೆಯೊಳಗದನ್ನು ಇಟ್ಟುಕೊಂಡಿವೆ. ಮಾತ್ರವಲ್ಲ. ಇವರೊಳಗೆ ಜೆಜ್ಞಾಸ ಬಂದಾಗ ಇತರ ರಾಷ್ಟ್ರಗಳನ್ನು ತಮ್ಮ ರಾಜಕೀಯ ಚದುರಂಗ ಆಟದಲ್ಲಿ ತಮಗೆ ಬೇಕಾದಂತ ಉಪಯೋಗಿಸಲು ಪ್ರ ಯತ್ನ ಮಾಡುತ್ತಿವೆ.

ಕಳದ ಎರಡನೇ ಮಹಾಯುದ್ಧದ ಸಮ ಯ ಲೋಕದಲ್ಲಿ ಇನ್ನು ಮುಂದೆ ಶಾಂತಿಯು ನೆಲೆಯಾಗಬೇಕೆಂಬ ಆಶೆಯಿಂದ ಅಧ್ಯಕ್ಷ ರೂಸವೆಲ್ಟರು ನಾಲ್ಕುತರದ ಸ್ವತಂತ್ರ ವ ಮೂಲ ಹಕ್ಕು ಪ್ರತಿ ಜನಾಂಗಕ್ಕೂ ಇವೆ ಯೆಂದು ಒಂದು ಅಟ್ಲಾಂಟಿಕ್ ಘೋಷಣೆ ಯನ್ನು ಹೊರಡಿಸಿದರು. ಇದಕ್ಕೆ ಎಲ್ಲಾ ರಾ ಷ್ಟ್ರಗಳ ಅನುಮೋದನೆ ಇರುವದಾದರೂ ಈ ಘೋಷಣೆಯು ಅಟ್ಲಾಂಟಿಕ್ ಅಥವಾ ಪಾ ಶ್ಚಾತ್ಯ ದೇಶಗಳಿಗೆ ಸಂಬಂಧಿಸಿದ್ದು ಹೊರ್ತು ವಸಾಹತುಗಳಿಗೆ, ಅಸ್ಯಾ ಖಂಡದ ಜನರಿಗೆ ಮತ್ತು ಹಿಂದುಳಿದ ಜನಾಂಗಕ್ಕೆ ಲಗಾವಾಗ ತತ್ವದಲ್ಲಿವೆಂತ ಸಾನಾಜ್ಯಶಾಹಿ ರಾಷ್ಟ್ರಗಳ ಪರವಾಗಿ ಚರ್ಚಿಲ್ಲರು ಕೂಡಲೇ ಒಂದು ಹೇ ಳಿಕೆ ಕೊಟ್ಟು ಈ ಜನರನ್ನೆಲ್ಲಾ ಉದ್ವೇಗಗೊ ಳಿಸಿ ತಳಮಳ ಮಾಡಿದರು. ಸಾನಾಜ್ಯಶಾಹಿ ರಾಷ್ಟ್ರಗಳ ಭದ್ರಮುಷ್ಟಿಯ ಹಿಡಿತ ವನ್ನು ಸಡಲಿಸುವುದಕ್ಕಾಗಿ ಅಸ್ಯಾ ಖಂಡದಲ್ಲಿ ತುಂಬಾ ಜಳವಳ ನಡೆಯಬೇಕಾಯಿತು.

ಅಮೇರಿಕದವರು ಮತ್ತು ರಷ್ಯದವರು ಕೊರಿಯ ದೇಶದಲ್ಲಿ ತಮ್ಮ ತಮ್ಮ ವರ್ಚಸ್ಸ ನ್ನು ದೀರಬೇಕೆಂಬ ಕುತೂಹಲದಿಂದ ಸ್ಪರ್ಧಿ ಸಿ ಆ ದೇಶವನ್ನು ಎರಡು ಭಾಗವಾಗುವಂತೆ ಮಾಡಿದರು. ಸುನೂರು ನಲವತ್ತು ವರುಷ ಗಳ ವರೆಗೆ ಜಾಪಾನರ ಬಂಧನದಲ್ಲಿದ್ದವರಿ ಕೊರಿಯನರು. ತಮಗೆ ಸ್ವಾತಂತ್ರ್ಯ ಸಿಕ್ಕಿತು ಎಂಬ ಆವೇಶ ಸಂತೋಷವು ಮಣ್ಣು ಪಾಲಾಯಿತು. ಎರಡು ಕಡೆಯವರೊಳಗೆ ಅಂತಃಕಲಹ ತಂದೊಡ್ಡಿ ಯುದ್ಧಪ್ರಾರಂಭ ವಾಗಿದೆ. ಕೊರಿಯವು ಈ ಯುದ್ಧದಿಂದ ನಾ ಶವಾಗುವದು. ಈ ಯುದ್ಧವು ಹದಗೆಟ್ಟರೆ ಮೂರನೇ ಮಹಾಯುದ್ಧವಾಗಿ ಭೂಲೋಕ ತುಂಬಾ ಹರಡಬಹುದು. ಈಗಲೇ ಕೆಲ ವು ರಾಷ್ಟ್ರಗಳು ಯುದ್ಧಸನ್ನಾಹಕ್ಕೆ ತೊಡಗಿ ರುವವು.

ಕಳದ ಎರಡನೇ ಮಹಾಯುದ್ಧದ ಸಮ ಯ ರಕ್ಷದ ವಿದೇಶಮಂತ್ರಿ ಮೊಲೊಟೋ ರವರು ಒಂದು ಪ್ರಕಟಿಸಿ ಹೊರಡಿಸಿದ್ದರು. ಅದರಲ್ಲಿ ಕೊಮ್ಯುನಿಸ್ಟ್ ತತ್ವವು ತಮಗಾಗಿ ಮ್ಮಸ್ಸಿಗೆ ಹೊರ್ತು ಲೋಕದಲ್ಲೆಲ್ಲಾ ಪ್ರಚಾ ರವಾಗಿ ಹರಡಲಿಕ್ಕಿಲ್ಲವೆಂತಲೂ ಬೇರೆ ತತ್ವ ಗಳನ್ನು ಅನುಸರಿಸಿ ನಡೆಯುವ ಜನಾಂಗಕ್ಕೆ ತಾವು ವಿರೋಧಿಗಳಲ್ಲ ಮತ್ತು ಅವರೊಡನೆ ಸ ಹಕರಿಸಿನಡೆಯಲು ಸದಾ ಸಿದ್ಧರಿದ್ದೇವೆಂತಲೂ ಸಾರಿದ್ದರು. ಯುದ್ಧವು ಮುಗಿದ ತರುವಾಯ ಪೂರ್ವ ಯುರೋಪಿನ ಚಿಕ್ಕರಾಷ್ಟ್ರಗಳು ಅವರ ತತ್ವಗಳನ್ನನುಸರಿಸಿ ಹಂಗೀಳರಾದ ಮೇಲೆ ಮತ್ತು ಅಟಂ ಬೋಂದಿನ ಅಂತ ರ್ಯ ಮತ್ತು ಗುಟ್ಟು ತಿಳಿದನಂತರ ಅವರ ಹಿಂದಿನ ಜೀಳಿಕೆಯನ್ನು ತಿರುಗಾಮಾಡಿ ತ ಮ್ಮ ತತ್ವನೇ ಶ್ರೇಷ್ಠವಾದದ್ದು ಅದನ್ನು ಲೋ ಕದಲ್ಲೆಲ್ಲಾ ಹರಡುವದೇ ತಮ್ಮ ಧ್ಯೇಯ ವೆಂದು ಪ್ರಕಟಣೆ ಹೊರಡಿಸಿದರು.

ಇದನ್ನು ತಡೆಗಟ್ಟುವುದಕ್ಕಾಗಿ ಅಮೇರಿಕ ದವರು ಅಟ್ಲಾಂಟಿಕ್ ರಾಷ್ಟ್ರಗಳ ಒಂದು ಕೂಟವನ್ನೇರ್ಪಡಿಸಿ ಆ ಕೂಟದ ಮೆಂಬರ ರಾಷ್ಟ್ರಗಳಿಗೆ ರಕ್ಷಣೆಯ ಬಗ್ಗೆ ತುಂಬಾ ಯು ದ್ಧ ಸಾಮಗ್ರಿಗಳನ್ನೂ ಮತ್ತಿತರ ಸಹಾಯ ವನ್ನು ಮಾಡುತ್ತೇವೆಂಕ ಆಶ್ವಾಸನೆ ಇತ್ತರು. ರಕ್ಷದವರ ಉಗ್ರಧೋರಣೆಯಿಂದ ತುಂಬಾ ಭೀತಿಪಟ್ಟು ಭೂಲೋಕದ ಎಲ್ಲಾ ಕಡೆಗಳಲ್ಲಿ ಸೈನ್ಯ, ನೌಕಾ ಮತ್ತು ವಿಮಾನ ನಿರ್ಮಾಣ ಗ ಳನ್ನು ಸ್ಥಾಪಿಸಿ ಗ್ರೀಸ್, ಟರ್ಕಿ, ಪರ್ಷಿಯಾ ಯುಗೋಸ್ಲಾವಿಯಾ ಮತ್ತು ಅಸ್ಯಾ ಖಂಡ ತ ಕೆಲವು ರಾಷ್ಟ್ರಗಳಿಗೆ ರಕ್ಷಣೆಯ ಬಗ್ಗೆ ಪಕ್ಕ ಅ ನಲವತ್ತು ಕೊಡುವೆನೆಂದು ಭರವಸೆ ಕೊಟ್ಟರು.

ಇದರಿಂದಾಗಿ ರಕ್ಷದವರು ತಮ್ಮನ್ನು ಸಾ ಮ್ರಾಜ್ಯಶಾಹಿ ರಾಷ್ಟ್ರಗಳು ಸುತ್ತುಗಟ್ಟಿ ದಿ ಗ್ಬಂಧನ ಮಾಡುವದರಲ್ಲಿದ್ದಾರೆಂದು ಭಯ ಪಟ್ಟು ಚೈನದವರಿಗೆ ತುಂಬಾ ಸಹಾಯ ಮಾ ಡಿಅಲ್ಲಿಯ ಸರಕಾರವನ್ನು ಉರುಳಿಸಿದರು. ಮತ್ತು ಉತ್ತರಕೊರಿಯದವರನ್ನು ಚೆನ್ನಾಗಿ ತರಬೇತಿ ಮಾಡಿ ಯುದ್ಧಸಾಮಗ್ರಿಗಳನ್ನು ಕೊಟ್ಟು ದಕ್ಷಿಣ ಕೊರಿಯದವರ ಮೇಲೆ ದಂಡೆತ್ತಿ ಹೋಗುವಂತೆ ಮಾಡಿದರು.

ಜರ್ಮನಿಯಲ್ಲಿಯೂ ಇದೇರೀತಿ ಕಲಹದ ಬೀಜವನ್ನೇ ಬಿತ್ತಿರುವರು. ಜರ್ಮನಿಯನ್ನು ಎರಡು ತುಂಡುಗಳನ್ನಾಗಿ ಮಾಡಿ ನಾಜಿ ತತ್ವ ವನ್ನು ನಿರ್ಮೂಲಗೊಳಿಸುವ ಯೋಜನೆ ಯಿಂದ ಅಲ್ಲಿ ಯುದ್ಧಸಾಮಗ್ರಿಗಳನ್ನು ತ ಯಾರಿಸದಂತೆ ಮಾಡುವ ನೆವದಿಂದ ಅವರ ದೊಡ್ಡ ಕೈಗಾರಿಕೆಗಳನ್ನು ಸ್ಥಳಾಂತರಿಸಿದರು; ಅಥವಾ ನಾಶ ಮಾಡಿದರು. ಹೀಗೆ ಮಾಡು ವಾಗ ಇದರಿಟ್ಟಿಗೆ ಶಾಂತಸ್ವಭಾವದ ಚಿಕ್ಕ ಗುಡಿ ಕೈಗಾರಿಕೆಗಳನ್ನೂ ಕಿತ್ತೊಗೆದರು. ವಿ ಚಾರಿಸುವದಾದರೆ ಇದು ದ್ವೇಷಪೂರಿತವಾಗಿ ಮಾಡಿದ್ದಾಗಿ ಕಾಣುತ್ತದೆ. ಇದರಿಂದ ಲಕ್ಷೋ ಪಲಕ್ಷ ಜನರಿಗೆ ಉದ್ಯೋಗವಿಲ್ಲದಂತಾಗಿ ಅಲೆ ಡಾಡುವರು. ಇದರಿಂದ ಜರ್ಮನರ ಆರ್ಥಿಕ ಸ್ಥಿತಿಯೇ ಹಾಳಾಗಿ, ಇನ್ನುಮುಂದೆ ವ್ಯಾಪಾರದಲ್ಲಿ ಸಾಮ್ರಾಜ್ಯಶಾಹಿ ರಾಷ್ಟ್ರಗಳೊಡನೆ ಸ್ಪರ್ಧಿಸದಂತಾಗಿದೆ. ನಾಜಿಗಳ ಮುಖಂಡ ರನ್ನು ನ್ಯೂರೆಂಬರ್ಗ್ ಕೋರ್ಟಿನಲ್ಲಿ ವಿಚಾ ರಣೆಗೆ ಗುರಿಪಡಿಸಿ ಅನೇಕರನ್ನು ಶಿಕ್ಷಿಸಿದರು. ಕೆಲವರನ್ನು ಗಲ್ಲಿಗೇರಿಸಿದರು ಮತ್ತು ಮಿಲಿ ಯಗಟ್ಟಿ ಜನರಿಗೆ ತಾವು ನಿರಪರಾಧಿಗಳೆಂತ ಮೊದಲಾಗಿ ರುಜುಪಡಿಸಬೇಕೆಂಬ ಶರ್ತವನು ತಂದೊಡ್ಡಿದರು. ಹೀಗಾ ಮತ್ತು ಜಿನೇವಾ ಕನ್‌ವೆನ್ಶನ್ನಿನಲ್ಲಿ ಸ್ಥಾಪಿಸಿ ರೂಢಿಯಾಗಿ ಬಂ ದ ಆಂತರ್‌ರಾಷ್ಟ್ರೀಯ ಕಾನೂನುಗಳನ್ನೆಲ್ಲಾ ಅಲ್ಲಗಳೆದು ರದ್ದುಗೊಳಿಸಿದರು.

ಈ ವಿಷಹಾ ಇತ್ತೀಚೆಗೆ ಅಮೇರಿಕದವರು ಫೊರ್ಮೊಕೇಸಿದಲ್ಲಿ ತತ್ಪರಿಸುವ ಚಿಯಾಂಗ್ ಕೈಶೇಕ ಸರಕಾರಕ್ಕೆ ಸಹಾಯ ಮಾಡುವ ಧಾರ ಹೊತ್ತಿರುವರು. ಇಂಡೋ ಚೈನಕ್ಕೆ ಸ ಹಾ ಬೆಂಬಲಕೊಡುವದಾಗಿ ಭರವಸೆ ಕೊಟ್ಟ ರುವರು. ಇದನ್ನೆಲ್ಲಾ ನೋಟುವಾಗ ಬಿತ್ತಿರು ವ ಮೂರನೇ ಯುದ್ಧದ ಬೀಜವು ಎಲ್ಲಿ ಮೊ ಳಕೆ ಬರುವದೆಂದು ತಿಳಿಯುವುದಿಲ್ಲ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇ ತ್ರ ಸ್ವಾಸ್ಥಕ್ಕೂ ಅ ತ್ಯಂತ ಹಿತಾವಹವಾ ದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD



Highly perfumed and medicated, worth using daily by one and all keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯ ನ್ನು ನಿರ್ಣೈಸಿ ತಯಾ ರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌ ಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸು ಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಎಲ್. ವಿ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ವಾಕಿಸ್ವರು:—ಡಾ॥ ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾ ಯವಾದ ಬಡ್ಡಿಯಿಂದಲೂ, ಸಾಲ ದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧ ಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ— ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಖೆತುಸ್ರಾವ ನಿಂತಿತು

'ಕುಮಾರಾ' ಬಿಲ್ಲೆಗಳನು ಉಪಯೋಗಿಸಿದರೆ ಹಡಬಟ್ಟು ಖುತುಸ್ರಾವವಾಗುವುದು. ಜಕೋಟಿಗೆ ಬರುವುದು, ತಿ ಔಷಧ ಸೇವನೆಯಿಂದ ತೀವ್ರ ಗುಣಹೊಂದಬ ಹುದು, ಯಾವ ಬಾಧೆಯೂ ಇಲ್ಲ. ಸಾವಿ ರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾರಿಣಿ ಸ್ಪೆಶಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F DS. (N. J.)
Tollygunge CALCUTTA
ಸ್ವಾಕಿಸ್ವರು ಸಹಾ ಕಂಪನಿ, ಮಂಗಳೂರು

ವನಿತಾ ವಿಭಾಗ

ಸ್ತ್ರೀ-ಸೌಂದರ್ಯೋಪಾಸಕಿ

(ಶ್ರೀಮತಿ ವಿನುಲಮ್ಮ)

ಹೆಣ್ಣಿಗೂ ಸೌಂದರ್ಯಕ್ಕೂ ಒಂದು ರೀತಿಯ ನಂಟು ಎಂದೇ ಹೇಳಬೇಕು. ಆದರೆಲ್ಲೂ ದುರದೃಷ್ಟದಿಂದ ಸುಂದರಿಯರಾಗಿ ಹುಟ್ಟದ ಹೆಂಗಸಿಗಂತೂ ಸೌಂದರ್ಯ ಒಂದು ಉನ್ನತ ಆದರ್ಶ. ಅದನ್ನು ಸಾಧಿಸುವುದಕ್ಕೆ ಅವಳು ಪಡುವ ಯತ್ನಕ್ಕೆ ಕೊನೆ ಮೊದಲಿಲ್ಲ. ಕೊನೆಗೆ ಅದು ಸಿಗದಿದ್ದರೂ ಕನ್ನಡಿಯ ಮುಂದೆ ಮುಖದ ಬೈರೂಪ ನೋಡಿ ತಾನೇ ಸುಂದರಿಯೆಂದು ಒಳಗೊಳಗೇ ಹಿಗ್ಗುವುದಂತೂ ಸರ್ವೇಸಾಮಾನ್ಯ.

ಮಾನವ ವರ್ಗ ಈ ಜಗತ್ಕಿನಲ್ಲಿ ಮೂಡಿದಂದಿನಿಂದ ಸ್ತ್ರೀ ಸೌಂದರ್ಯೋಪಾಸಕಿಯಾಗಿದ್ದಾಳೆಂದು ಹೇಳಬಹುದು. ಆದರಲ್ಲೂ ತನ್ನ ರೂಪಕ್ಕೆ ಕಳೆ ಹಚ್ಚಿ ಪೋಷಿಸಬೇಕೆಂದು ಅವಳಿಗೆ ಮತಿಯಿಲ್ಲದೆ ಉತ್ಸಾಹ. ಸೌಂದರ್ಯದ ಬೊಂಬೆಯಾಗಿ, ಮುದ್ದೆಯಾಗಿ, ಉತ್ಸಾಹದಿಂದ ನಲಿಯಬೇಕೆಂದರೆ ಅವಳಿಗೆ ಸತತ ಆಸಕ್ತಿ.

ಹೆಣ್ಣು ಆಭರಣಗಳನ್ನು ಧರಿಸಿ, ತರತರ ಹೆಯ ಹೊಸ ಉಡಿಗೆ ತೊಡಿಗೆ ತೊಟ್ಟು ಹೊಸ ಸೌಂದರ್ಯ ಪಡೆದು ಪುರುಷರನ್ನು ಮರುಳು ಮಾಡುವುದುಂಟು. ಈ ಸೌಂದರ್ಯ ಸಾಧನೆಗಳು ಬಹಳ ಮಂದಿ ಸ್ತ್ರೀಯರ ಕುರೂಪವನ್ನು ಬಚ್ಚಿಡಲು ಯತ್ನಿಸುವುದೇ ಸಾಮಾನ್ಯ. ಆದರೂ ಸುಂದರಿಯರಲಿ, ಕುರೂಪಿಯರಲ್ಲಿ ಹೆಣ್ಣಿನ ಹೃದಯ ಎಂದೆಂದೂ ಸೊಬಗನ್ನು ಅರಸುತ್ತದೆ ಎಂದು ಹೇಳುವುದು ನಿರ್ವಿವಾದ.

ಪಾಶ್ಚಾತ್ಯ ಮಹಿಳೆಯರ ಬೆಡಗು, ಬಿನ್ನಾಣ

ಇತ್ತೀಚೆಗೆ ಮಹಿಳೆಯರೂ ಕಾಲಸ್ಥಿತಿಗನುಗುಣವಾಗಿ ತಮ್ಮ ರೂಪಕ್ಕೆ ಮೆರಗು ಕೊಡುವ ರೀತಿಯನ್ನೂ ಬದಲಾಯಿಸಿಕೊಂಡಿದ್ದಾರೆ. ಅಮೇರಿಕದ ಮಹಿಳೆಯರ ಸೌಂದರ್ಯ ವೈರೂಪಗಳಂತೂ ವಿಲಕ್ಷಣವಾದುವು. ಹುಬ್ಬಿಗೆ ಬಣ್ಣ ಹಚ್ಚಿಕೊಳ್ಳುವುದು, ರೆಪ್ಪೆಗಳಿಗೆ ಕ್ರೀಮು ಹಾಕಿಕೊಳ್ಳುವುದು, ಅವುಗಳಿಂದ ಅವರ ಕಣ್ಣು ಬೆಳಕು ಹುರುಪುರ ಮನವನ್ನು ಆಕರ್ಷಿಸುವುದೆಂದು ಅವರು ಬಗೆಯುತ್ತಾರೆ. ತುಟಿಗೆ "ಲಿಪ್‌ಸ್ಟಿಕ್" ಹಚ್ಚಿಕೊಳ್ಳುವುದು, ಮುಖಕ್ಕೆ ಪೌಡರ್, ಸ್ನೋ ಮತ್ತಿತರ ಭೋಗ ವಸ್ತುಗಳನ್ನು ಬಳಿದುಕೊಳ್ಳುವುದೂ ಒಂದು ರೀತಿ. ಇದರಿಂದ ಆ ದೇಶದಲ್ಲಿ ಈ ವಸ್ತುಗಳ ತಯಾರಿಕೆ ದೊಡ್ಡ ಕೈಗಾರಿಕೆಗಳಾಗಿ ಬೆಳೆದುಬಿಟ್ಟಿವೆ. ಈ ಮಹಿಳೆಯರ ಕೃತಕ ಸೌಂದರ್ಯ ಜೀವನವನ್ನು ಗಮನಿಸುವುದರಿಂದ ಪ್ರಾಚೀನ ಕಾಲದಲ್ಲಿ ಬೇರೆ ಬೇರೆ ದೇಶಗಳಲ್ಲಿ ಸ್ತ್ರೀಯರು ಬಳಸುತಿದ್ದ ಸೌಂದರ್ಯ ಸಾಧನಗಳ ನೆನಪು ಬರುತ್ತದೆ.

ಈಜಿಪ್ತಿನ ರಾಣಿ ನೆಫರ್‌ಟಟಿ ೩೦೦೦ ವರ್ಷಗಳ ಹಿಂದೆ ತನ್ನ ಕಣ್ಣಿಗೆ ಬಣ್ಣ ಹಚ್ಚಿಕೊಳ್ಳುತಿದ್ದಳು.

ಭಾರತದ ಮಹಿಳೆಯರು...

ಭಾರತದಲ್ಲಿ ಕೂಡ ಸ್ತ್ರೀಯರು ತಮ್ಮ ಮುಖಶ್ರೀಯನ್ನು ಬೆಳಗಿಸಲು ಅರಿಶಿನ, ಕುಂಕುಮ ಇವೇ ಮೊದಲಾದ ವಸ್ತುಗಳನ್ನು ಬಳಸುತ್ತಾರೆ. ಭಾರತದ ಮಹಿಳೆಯರು ತಮ್ಮ ಕಣ್ಣಿನ ಅಂದ ಹೆಚ್ಚಿಸಿಕೊಳ್ಳುವುದಕ್ಕೆ ಕವಿ, ಮೂಗು, ಕಾಲು, ಕೈ, ಸೊಂಟ, ಕಂಠ, ಇವುಗಳ ಬಿಂದವನ್ನು ಹೆಚ್ಚಿಸುವುದಕ್ಕೆ ಬಳಸುವ ಆಭರಣ ಮತ್ತಿತರ ವಸ್ತುಗಳನ್ನು ನೋಡಿದರೆ ಅವರು ಹುಟ್ಟಿನಿಂದಲೆ ಸೌಂದರ್ಯೋಪಾಸಕಿಯರೆನ್ನುವುದರಲ್ಲಿ ಸಂಶಯ ಕೈಡೆಯೆ ಇಲ್ಲ. ಅವರು-ಅದರಲ್ಲೂ ಮಹಾರಾಷ್ಟ್ರದ ಮತ್ತು ಸಿಂಧಿ ಯುವತಿಯರು ಕಣ್ಣಿಗೆ ಕಾಡಿಗೆ ಹಚ್ಚಿಕೊಂಡಿರುವಾಗ ಅವರ ನ್ನೊಮ್ಮೆ ನೋಡಿ ಮನಸಾರೆ ಮೆಚ್ಚಬೇಕು. ಬಂಗಾಳಿ ಹುಡುಗಿಯರು ಅಷ್ಟಾಗಿ ಕಣ್ಣಿನ ಸೌಂದರ್ಯ ಹೆಚ್ಚಿಸಿಕೊಳ್ಳಲು ಬಾಹ್ಯ ಸಾಧನಗಳನ್ನು ಬಳಸುವುದಿಲ್ಲ. ಆದರೆ ಅವರ ಆಕರ್ಷಕ ಸಹಜ ಸೌಂದರ್ಯದಿಂದ ಮಿಂಚಿನ ಸಳಿಬಳಕನ್ನು ಚೆಲ್ಲಿ ಆಕರ್ಷಿಸುವುದು. ಮಹಾರಾಷ್ಟ್ರದ ಹುಡುಗಿಯರು ಚೆಲ್ಲಾಟದ ಚಪಲರೆಯರೆಂದೆ ಹೇಳಬೇಕು. ತಮಿಳು ದೇಶದ ಮಹಿಳೆ ಸಾಮಾನ್ಯವಾಗಿ ಸ್ಥೂಲ ಶರೀರಳಾದರೂ ನಡ್ಡಾಣ, ವಿಧವಿಧದ ಚಿನ್ನಪಾಭರಣಗಳು ಇವುಗಳನ್ನು ಧರಿಸಿ ಸುಂದರಿಯಾಗಿ ತೋರಲು ಯತ್ನಿಸುತ್ತಾಳೆ. ಒಟ್ಟಿನಲ್ಲಿ ಭಾರತದ ಮಹಿಳೆಯರು ಪಾಚೀನಕಾಲದಿಂದಲೂ ಸೌಂದರ್ಯೋಪಾಸಕಿಯರು. ಬರಿಬಣ್ಣ, ಬಡವೆ, ಕಪ್ಪು ಕಾಡಿಗೆ ಹಚ್ಚಿಕೊಂಡರೆ ಅವರು ಸುಂದರಿಯರಾಹಂತೆ ಎಂಬ ಅರ್ಥವಲ್ಲ. ಆದರೂ ದೇವರು ಕೊಟ್ಟಿರುವ ಶರೀರಕ್ಕೆ (ಅದು ಸುಂದರವಾಗಿಲ್ಲದಿರಬಹುದು) ಕಳೆ ಕಟ್ಟುವ ಸಹಾಯಕ ವಸ್ತುಗಳನ್ನು ಬಳಸುವುದು ತಪ್ಪಲ್ಲವೆಂದು ಅವರು ಭಾವಿಸಿದ್ದಾರೆ. ಮಹಿಳೆಯರು ಈ ತತ್ವವನ್ನು ಒಪ್ಪಲೇ ಬೇಕು. ಆದರೆ ಮನೆಯಲ್ಲಿ ಪೌಡರ್ ಇದೆಯೆಂದು ಮುಸಿಬಣ್ಣದ ಹೆಣ್ಣು, ಮುಖಕ್ಕೆ ಸುಣ್ಣ ಬಳಿದಂತೆ ಬಳಿದುಕೊಂಡು ಪುರುಷನ ಮುಂದೆ ಫ್ಯಾಸ್ಸಿಡ್ರೆಸ್ ಮ್ಯಗ ಮಾತ್ರ ಆಗಬಾರದು.

(ಚಿತ್ರಗುಪ್ತ)

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S. C. No. 82/50

ಅಹಮದ್ ಕುನ್ನಿಲ್ —ಪಾದಿ.

ಫೊನಿಪಾಸ್ ಬೆನಾರ್ಡ ಲಯಿಸ್ —ಪ್ರತಿವಾದಿ

ಯವರೊಳಗೆ ತ್ತಾ 24-8-50

ಸದ್ರಿ ಪ್ರತಿವಾದಿಗೆ—

ನೀವು ಬರಕೊಟ್ಟ ಬಾಡಿಗೇ ಚೀಟು ಪ್ರಕಾರ ಬರತಕ್ಕ ಬಾಡಿಗೆಯನ್ನು ವ್ಯಲು ಮಾಡುವರೆ ಮೇಲ್ಕಂಡ ವ್ಯಾಜ್ಯವನ್ನು ವಾದಿಯು ದಾಕ್ಲು ಮಾಡಿದ್ದಾನೆ. ಆದ್ರಿಂದ ಸದ್ರಿ ವ್ಯಾಜ್ಯವು ತ್ತಾ 12-9-50ಕ್ಕೆ ತನ್ನಿಯ ಬಗ್ಗೆ ಇಟ್ಟಿರುತ್ತದೆ. ಆದ್ರಿಂದ ಆದಿವ್ಲ 11ಗಂಟೆಗೆ ನೀವು ನಕೀಲರ ಮುಖಾಂತ್ರವಾಗಲೀ ಖುದ್ದಾಗಲೀ ಹಾಜ್ರಾಗದಿದ್ದೆ ಪಕ್ಷದ್ದಲ್ಲಿ ನಿಮ್ಮನ್ನು ಎಕ್ಸಪಾರ್ಟೆ ಮಾಡಿ ತೀರ್ಪುಕೊಡೋ ಹಾದೀತು ಎಂತ-ಈ ಮೂಲಕ ತಿಳಿಸೋಣಾಗಿದೆ.

G. Abdulla
Advocate for Plaintiff.
Kasaragod: 24-8-50

ನೋಟೀಸು

ಕಾಸರಗೋಡು ಡಿ ಮು. ಕೋರ್ಟಿನಲ್ಲಿ

O S No. 342/1946

ಸಬ್‌ಕೋರ್ಟು A S No. 53/1949

R E. F. No 113/1950

B. ಅಬ್ದುಲ್ಲ ಬ್ಯಾರಿ—ಪ್ರತಿವಾದಿ, ಅರ್ಜಿದಾರ ಮತ್ತು

ಇಚ್ಲಂಗೋಡು ರಾಮಯ್ಯಶೆಟ್ಟಿ, ಚಿತ್ತಮೊಗ್ರು ಬಟ್ಟುರಾಯ ಭಂಡಾರಿಗಳ ಮಮ್ಮಗ-ಕಾಸರಗೋಡು ತಾಲೂಕು ಇಚ್ಲಂಗೋಡು ಗ್ರಾಮದ ಚಿತ್ತಮೊಗ್ರ ಎಂಬಲ್ಲಿರುವವಾ —ವಾದಿ ರೆಸ್‌ಪೊಂಡೆಂಟ್.

ಮೇಲ್ಕಂಡ ಮಿಕ್ಕಿ ಪ್ರಕಾರ ರೆಸ್‌ಪೊಂಡೆಂಟಿನಿಂದ ಬರತಕ್ಕ ಕೋರ್ಟು ಖರ್ಚಿನ ಹಣ ವಸೂಲಿ ಕುರಿತು ರೆಸ್‌ಪೊಂಡೆಂಟಿಗೆ ವಾರಾಂಟು ಕೊಟ್ಟು ಹಿಡತರ್ಸಿ ಹಣಕೊಡಿಸ ಬೇಕಾಗಿ ದಾಕ್ಲು ಮಾಡಿದ ಸದರೀ ಅಮಲ್ ಜ್ಯಾರಿಯು ತಾರೀಕು 16-9-1950ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತಸ್ಕಿಗೆ ಇಟ್ಟಿದೆ. ಆ ಕುರಿತು ರೆಸ್‌ಪೊಂಡೆಂಟಿನ ಆಕ್ಷೇಪವಿದ್ದಲ್ಲಿ ಸದರೀ ತಾರೀಕಿನಲ್ಲು ಜ್ಯಾಹೀರು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯಿದೆ.

M. Anantha Krishna Rao
ಅರ್ಜಿದಾರನ ಎಡ್ವಕೇಟ್
ಕಾಸರಗೋಡು ತಾ 25-8-50

"ಅಂಥಹ ನೀನು ಪತಕ್ಕಾಗಿ ಬ್ರೂಕ್ ಬಾಂಡ್ ಚಹವನ್ನೇ ಕೊಳ್ಳಿಕೇಳುವೆ, ಎಂಬುದನ್ನು ನನಗೆ ತಿಳಿಸು"

"ನಾನು ಅವನ್ನು ಪತಕ್ಕಾಗಿ ಕೊಂದು ಕೊಳ್ಳುವೆನೆಂದರೆ ಅದು ನನ್ನ ಹಣಕ್ಕೆ ಉತ್ತಮ ಸ್ಪತಫಲವನ್ನು ಕೊಡುತ್ತದೆ. ಒಂದು 2 ಔನ್ಸ್ ಪ್ಯಾಕ್ಟನ್ನದಲ್ಲಿ 30 ಕಪ್ಪುಗಳಿಗಾಗುವಷ್ಟು ಚಹವನ್ನು ಮಾಡಬಹುದು. ಇಷ್ಟಲ್ಲದೆ ಬ್ರೂಕ್ ಬಾಂಡ್ ಚಹಪ್ಪ ರುಚ್ಚಿತ ಮತ್ತು ಗುಣವ ಜನ್ಯ ನನಗೆ ಯಾವಾಗಲೂ ನಂಬಿಕೆ ಇದೆ."

ಬ್ರೂಕ್ ಬಾಂಡ್ ಟೀ

BB/50/LOF/105

ತವ್ಯ ದೃಢ ಬಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ 1906

ಭಾರತದೊಳಗೆ 40 ಕ್ಕಿಂತಲೂ ಹೆಚ್ಚು ಶಾಖೆಗಳು

ಅಮೃತಾಂಜನ

ತಲೆವೇದನೆ, ತಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಹಾಯಗಳು, ಬಾತುಕೊಳ್ಳುವಿಕೆ, ಚೇಳಿನವಿಷಮುಂತಾದವು, ಪಕ್ಷವಾತ, ಮೊಡಿನೆ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧಾಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.
ದೊಂಬಾಯಿ ಮತ್ತು ಕಲ್ಕತ್ತ.



Approved form by the Gov. of Mysore
Certificated by the Agent of the Govt of Clyone & Indian.

ವರ್ಧಂತಿ

ಸತ್ಯ ಧರ್ಮ ಅಹಿಂಸಾದಿ ಸದ್ಗುಣಗಳ ಮೂರ್ತಿ ಮಹಾತ್ಮಾಗಾಂಧಿಜಿಯವರ ನಾಯಕತ್ವದಲ್ಲಿ ಭಾರತಾಂಬೆಯು ಪರದಾಸ್ಯ ಬಂಧನದಿಂದ ಮುಕ್ತಳಾಗಿ ೧೫ನೇ ಆಗೋಸ್ತು ೧೯೪೭ರಲ್ಲಿ ಭಾರತ ಸ್ವಾತಂತ್ರ್ಯಶಿಶುವಿಗೆ ಜನ್ಮವಿತ್ತು ತನ್ನಯಾವತ್ತು ಪುತ್ರರಿಗೆ ಅನಂದ ದೀರಿದಳು. ಇದೇ ಭಾರತದ ಸುದಿನ. ಇದಕ್ಕೂ ವಿಶ್ವೆದ್ಯಸಂತೋಷದ ದಿನವು ಭಾರತೀಯರ ಇನ್ನೊಂದಿರದ ಕಾರಣ ಇದೇ ಭಾರತೀಯರ ಮನದಲ್ಲಿ ಆಚ್ಚಳಿಯದೆ ಇರತಕ್ಕ ಸ್ಮರಣಾ ಪವಿತ್ರ ದಿನ. ಮೇಲಾಗಿ ನಮ್ಮ ಯಾವತ್ತು ಕುಂದು ಕೊರತೆಗಳನ್ನು ನೀಡಾಡಿ ರಾಷ್ಟ್ರಪಿತನ ಆಜ್ಞೆಯಂತೆ ಅನಂದದಿ ಆಚರಿಸೆ ಆತುರದಿ ಅಪ್ಪಿಕೊಂಬ ಪವಿತ್ರ ವರ್ಧಂತಿ ದಿನ. ಇಂತು ಇದೇ ಆಗೋಸ್ತು ೧೫ಕ್ಕೆ ವತ್ಸರ ಮೂರನುಳಿದು ನಾಲ್ಕರೊಳು ಕಾಲಿಡತಕ್ಕ ಭಾರತ ಸ್ವತಂತ್ರ ಸ್ವರಾಜ್ಯ ಶಿಶುವಿನ ಪರವಾಗಿ ವಿಚಾರದಿಂದಾಚರಿಸೆ ಸಕಲರು ಸಂತಸದಿ ಸಂಕಲ್ಪಿಪ ತೃತೀಯ ವರ್ಧಂತ್ಯೋತ್ಸವದ ಪವಿತ್ರ ಪರ್ವದಿನ.

ಈ ಶಿಶುವು ಜನಿಸಿದ ಅಲ್ಪಾವಧಿಯಲ್ಲೇ ಪ್ರಬಲ ರಾಷ್ಟ್ರಗಳಿಗೂ ಕಷ್ಟಸಾಧ್ಯವಾದ ಹಿಂದೂಸ್ಥಾನ ಪಾಕಿಸ್ತಾನಗಳ ನಡುವೆ ಸ್ಥಾನಾಂತರ ಹೊಂದಿದ ಲಕ್ಷಾಂತರ ಜನರ ಅಸನ ವಸನ ವಸತಿಗಳ ಭಯಂಕರ ಸಮಸ್ಯೆಯನ್ನು ನೀಗಿದ ಬೇಗೆಯನ್ನು ಕಳೆಯುತ್ತಿರುವಲ್ಲಿ ದಾತೀಯ ಐಕ್ಯತೆಗಾಗಿ ತನ್ನ ಪವಿತ್ರ ದೇಜನನ್ನೇ ಮುಡುಪಾಗಿಟ್ಟ ಜನಕ ಪೂಜ್ಯ ಬಾಪೂಜಿಯನ್ನು ೧೯೪೮ ಜನವರಿ ೩೦ರಲ್ಲಿ ಕಳಕೊಂಡು ತನ್ನ ಶೋಕಸಾಗರದಲ್ಲಿ ಇಡೀ ವಿಶ್ವವನ್ನೇ ತೇಲಾಡಿಸಿತು. ಅದರೂ ಜ್ಞಾನಿಗಳಂತೆ ಎದೆಗುಂದದೆ ಪಿತನ ಧ್ಯೇಯವಾಕ್ಯದಂತೆ ಹಿಂದೂ ಮುಸಲ್ಮಾನ ಐಕ್ಯತೆ ಮೂಲವಾಗಿ ಜಾತಿಯ ಗೊಂದಲ ನಿವಾರಿಸಿ ಜನತಾ ರಾಜ್ಯಶಾಸನ ಜಾರಿಗೆ ತಂದಿತು. ಸುಮಾರು ೫೫೦ಕ್ಕೆ ಸ್ವಿಮೀಲ್ಪಟ್ಟ ಆತ್ಮಕ ರಾಜ್ಯಗಳನ್ನು ಸತ್ಯ, ಧರ್ಮ, ಅಹಿಂಸೆ, ಪ್ರೇಮಾದಿಗಳ ಮೂಲಕ ತನ್ನ ಅಂಕಿತಕ್ಕೆ ತಂದು ಅನುಕೂಲಕ್ಕೆ ತಕ್ಕಂತೆ ಕೇಂದ್ರೀಕರಿಸಿ ಸಮಾನ ನೆರ ಖಾದ ಸ್ಥಾಪಿಸಿತು. ಮುಷ್ಟಿ ಬಲಿಗೆ ಕುಗ್ಗದ ವೈದರಿಣಾವನ್ನು ಹುಟ್ಟಿ ನಿರ್ಭಕ ಶಿಷ್ಯನೆನಿಸಿ ಸಾಧನಾ ರೀತ್ಯಾ ರಕ್ಷಿಸಿ ಇತರ ಅಪ್ರತಿರಾಜ್ಯಗಳಂತೆ ನಮುನ ಸ್ಥಾನವನ್ನೇ ಗೊಟ್ಟಿತು. ಉಳಿದ ಕಾಶ್ಮೀರವೊಂದನ್ನು ತನ್ನ ಬಶ್ವಕಿಕೆಯಲ್ಲಿಟ್ಟುಕೊಂಡು ಉಪೃವಿಸಿದ ವಿಪಾದವನ್ನು ಪ್ರೇಮಾದರದಿ ತೀರ್ಮಾನಿಸಲು ಭಾರತ ಪಾಕಿಸ್ತಾನಗಳ ಒಪ್ಪಂದ ಮಾಡಿತು. ಗುರಿ ಮುಟ್ಟುವ ಅಸೆಯನ್ನೂ ಕಾಳಿತು. ಕೋಮನ್‌ವೆಲ್ತ್ ರಾಷ್ಟ್ರಕೂಟದ ಸ್ಥಾನಮಾನಗಳನ್ನು ತನಗಾಗಿ ಬದಲಾಯಿಸಿ ಅದರಲ್ಲಿ ಸೇರಿ ಅದರ ಪ್ರಯೋಜನ ಹಾಗೂ ಪೂರ್ಣಸ್ವತಂತ್ರತೆಯ ಪ್ರತಿಜ್ಞೆಗಳಿಸಿ ವಸಾಹತು ರಾಜ್ಯವಾಗಿದ್ದ ಭಾರತವು ಇಂದು ಸಂಪೂರ್ಣ ಸ್ವತಂತ್ರರಾಜ್ಯವಾಗಿ ಬೆಳೆಯುತಿದು. ನ್ಯಾಯವಾದ ಹಕ್ಕಿಗಾಗಿ ಬ್ರಿಟನಿನೊಂದಿಗೆ ಧರ್ಮಕ್ಕೆ ಕಟ್ಟುವಿದನ್ನು ಯಾಚಿಸುತ್ತಿದ್ದ ಭಾರತವು ಕೇವಲ ಮೂರು ವರುಷಗಳ ಅವಧಿಯಲ್ಲಿ ರಕ್ತ ಆಮೇರಿಕ ಬ್ರಿಟನುಗಳಂತಹ ಪ್ರಬಲರಾಷ್ಟ್ರಗಳಿಗೆ ಬುದ್ಧಿಹೇಳುವಷ್ಟು ಧೈರ್ಯಪಾಗೂ ಮೇಲ್ಪೆಯನ್ನು ಹೊಂದಿ ಇದೀ ವಿಶ್ವವನ್ನೇ ಆಚ್ಚರಿಗೊಳಿಸಿತು.

ವಸ್ತುತಃ ಹೀಗಿದ್ದರೂ ಇನ್ನೂ ಅನೇಕ ಕುಂದುಕೊರತೆಗಳು ಹಾಗೂ ಗಂಡಾಂತರಗಳು ಇದ್ದೇ ಇವೆ. ಮಾನವನ ದೇಹದಯಾವ ಅಂಗಕ್ಕೆ ಕೊರುತೆಯುಂಟಾದರೂ ನೋವು ಸರಿಸಮಾನ ಸಹಜವಾದಂತೆ. ಇಡೀ ವಿಶ್ವದ ಅವಘಾಗಕ್ಕೆ ಅವಾವ ಕಷ್ಟಸಂಭವಿಸಿದರೂ ಆದರ ಪರಿಣಾಮವನ್ನು ಇಡೀ ಪ್ರಪಂಚವೇ ಅನುಭವಿಸಬೇಕಾಗುವುದು ಶುಚಿತ್ವವನ್ನು ಮಾಡಹೊರಡುವ ಮನುಷ್ಯನು ಪ್ರತಿಭವಂತೆ ತನ್ನ ದೇಹ, ಕನ್ನ ಮನೆ, ತನ್ನ ನೆರೆ ಕರೆ ಹೀಗೆ ಮುಂದರಿವ ತೆರ ಶುದ್ಧೀಕರಿಸು ಮನೋವಾಕ್ ಕಾರ್ಯಗಳನ್ನು ಲೋಕದಾದ್ಯಂತ ಮಾಡಬೇಕಾದರೂ ಕಾರ್ಯತಃ ನಮ್ಮ ದೇಶಕ್ಕೆ ಅಂದರೆ ಸ್ವಾತಂತ್ರ್ಯ ಶಿಶುವಿಗೆ ವ್ಯಾಪಿಸಿರಬೇಕಾದ ಶೋಷಣಿಪ್ಪಟ್ಟ ಕೊಳೆಯನ್ನು ಕೃತಕತಃ ಸೇದೋಡಿ ಆಂತರಿಕ ಬಾಹ್ಯ ಪಲ್ಲಿಗಳಿಂದಿಗೆ ಇದನಂತರ ಅನ್ನಾವ್ಯಗಳ ವಿಚಾರ ಮುಂದರಿಯಬೇಕಾಗಿದಂತೆ ಆರ್ಥಿಕ ಸಾಮಾಜಿಕ ಸರಿಸಮಾನತಿ ಐಕ್ಯತೆ ಭಾಷಾವಾರು ಪ್ರಾಂತರಚನೆ, ಸ್ವಾವಲಂಬನಾದಿ ಸ್ವಾತಂತ್ರ್ಯ ಸಂರಕ್ಷಣೆ ವಿದ್ಯೆಯಾದಿ ಉದ್ದಿನೆಗಳ ಉತ್ತೀರ್ಣತೆ ಇತ್ಯಾದಿ ಆಗಬೇಕಾದದ್ದು ಪೂರ್ಣ ಆಗಿಲ್ಲವಾಗಿ ಕೆಲವಾತುರ ಪಡುವುದು ಸಮಂಜಸವಾದರೂ ಅದಕ್ಕೂ ಮಿಗಿಲಾಗಿ ಭಯಂಕರವಾದ ಆಹಾರ ಸಮಸ್ಯೆಯು ಎಲ್ಲೆಲ್ಲೂ ಭೀಕರತೆಯಿಪರಮಾವಧಿಯನ್ನು ಮುಟ್ಟಿರುವುದರಿಂದ ಹಸಿವೆಯಿಂದ ಕಂಗೆಟ್ಟು ಯಾಚಿಸ ಆಗಂತುಕನಿಗೆ ಅಶನವ ನಿತ್ತು ನಿಜಾರಿಪ ಧರ್ಮದಂತೆ ಅತ್ಯತ್ಪಪ್ರಿಯ ಆಹಾರದ ಅಭಾವವನ್ನು ಹೂರೈಸಿ ಮುಂದೆ ಒಂದೊಂದೇ ಆವಂಧಿಸಿಬೇಕಲ್ಲದೆ ಪೂರ್ಣ ಒಂದೊಮ್ಮೆಗೆ ಕೈಕೊಂಡಲ್ಲಿ ಅರ್ಧಮರ್ಧ ಹಾಗೂ ಶಕ್ತಿಮೀರಿ ಹೇಂದಲ್ಲಿ ಹೊತ್ತವನಿಗಾಗುವ ಗತಿಯಂತಿತು ಈ ಸ್ವಾತಂತ್ರ್ಯ ಶಿಶುವಿನ ಶಕ್ತಿ ನೋಡಿ ಹೆಚ್ಚಿನ ಬೆಂಬಲ ಇತ್ತು ಶಕ್ತಿ ಬಂದಂತೆಲ್ಲಾ ಹೆಚ್ಚೆಚ್ಚು ಹೊರಸುತ್ತಾ ತನ್ನೊಲಕ ನಮ್ಮ ಯಾವತ್ತೂ ಧ್ಯೇಯ ಮಾತ್ರವಲ್ಲ, ಇಚ್ಛಾಪೂರ್ಣಕೆ ಮಾಡಿಕೊಳ್ಳಬೇಕಲ್ಲದೆ ಆತ್ಮತಾಂದಿಂದ ಆನರ್ಥಕ್ಕೆ ಎಡೆಗೊಡಬಾರದೆಂಬುದೇ ನನ್ನ ಹಾರೈಕೆ!

ಇಂತು ಈ ಶಿಶುವು ಮುಮ್ಮುತ್ತ ಆಹಾರ ಸಮಸ್ಯಾದಿ ವ್ಯಾಧಿಗಳಿಂದ ನರಳುತ್ತಿರುವಲ್ಲಿ ಉಪ್ಪವಿಸಿದ ಕೊಮ್ಯುನಿಸ್ಟ್ ಎಂಬ ವೈಷಕ್ಕೆ ರೋಗವರಿತು ಮದ್ದು ಮಾಡುವುದು ಕರ್ತವ್ಯವಾದಂತೆ ವೃಣ ವೃದ್ಧಿಯ ಆಹಾರ ಸಮಸ್ಯೆಯನ್ನು ಇದಿರಿಸಲು ಅದರ ಉತ್ಪಾದನಾ ಕಾರ್ಯದಲ್ಲಿ ಪ್ರತಿಯೊಬ್ಬ ಭಾರತೀಯನು ತನ್ನ ತನುಮನಧನದಿಂದ ಸಹಕರಿಸದೆ ಹೋದರೆ ಕರ್ತವ್ಯಭ್ರಷ್ಟರಾಗುವೆವು. ಅಲ್ಲದೆ ಹೆಚ್ಚಾದ ಹಣ್ಣು ಹಂಪಲುಗಳನ್ನಿತ್ತು ತಮ್ಮ ಪಾಲಿನ ಕರ್ತವ್ಯ ಪಾಲಿಪ ತರುಲತೆಗಳಿಗಿಂತಲೂ ಹೀನಾರ್ಯರಾಗುವೆವು ಈ ನಾರ್ಯಜವನ್ನು ನಾವು ಹೊಂದ ಬೇಡವೇ!

ಅಂಥ ಬಳಿಕ ಮೇಲ್ಕಂಡ ವ್ಯಾಧಿ ಹಾಗೂ ವೃಣವನ್ನು ತಕ್ಕ ಚಿಕಿತ್ಸಾಮೂಲಕ ಕಳೆದು ತದನಂತರ ಶಿಶುವಿಗೆ ಪ್ರಚಂಡ ಶ್ರೀಮದ್ಭಾವದ ಸಮಾನ ವಿದ್ಯೆಯಾದಿ ಉದ್ದಿನೆಗಳ ಮೂಲಕ ಜ್ಞಾನ ಹಾಗೂ ಅರ್ಥಕಾಭಿವೃದ್ಧಿಯೆಂಬ ಋಣಿಗೆ ತೊಡಗಿಗಳನ್ನು ತೊಡಸಿ, ಸತ್ಯ, ಧರ್ಮ, ಅಹಿಂಸಾದಿ ಸದ್ಗುಣಗಳೆಂಬ ಆಹಾರ ಭೂಂಜಿಸಿ, ತನ್ನಂತ ಪಂಂಬಾಚರಿಪ ಚಿನ್ನವ ತೊಡಿಸಿ, ವಸ್ತುತಃ ಪಂಚಭೂತಗಳು ಪಂಸ್ಪರ ವೃತ್ತಸ್ಥ ಗುಣಕರ್ಮ ಸ್ವಭಾವಗಳುಳ್ಳವಾದೂ ತಂತಮ್ಮ ಸಹಜ ಗುಣಗಳನ್ನು ಬಡದೆ ಅದಂತಾ ಐಕ್ಯತೆಯಲ್ಲಿ ದೇಶ ಪ ಸೂಂಧಿಸುವಲ್ಲೋ ಅಂತಯೇ ಅಯಾಯ ರಾಷ್ಟ್ರಗಳ ಭಾಷಾದಿ ಆಚಾರವಿಚಾರಗಳು ಅದಂತಾ ಬೇರೆಬೇರ ತೆರನಾಗಿಯುಂಟುಮಾಡುವಂತಾ ತಮ್ಮ ಧರ್ಮಗಳ ಬಡದ ಐಕ್ಯತೆಯೂಳು ಎಲ್ಲವೂಂಬ ದೇಶವ ಕಾಂತಿಗಡಿದು ವಿಶ್ವರಾತಿಂಬ ಪಲ್ಲಂಗದೊಳು ಪವಡಿಸಿ ಅದರ ಸೌಂದರ್ಯದ ಸವಿಯೂಟವನುಣಲು, ಮಹಾತ್ಮಾಜೀ, ಪಂಡಿತ ನಹರು, ನೇತಾಜಿ, ಸುಭಾಸ್, ಬಾಬುರಾಜೇಂದ್ರ ಪ್ರಸಾದ್, ಮೌಲಾನಾ ಆಜಾದ್, ಚಕ್ರವರ್ತಿ ರಾಜಾಜಿ, ಪಟ್ಟಿ ಭಾಯಿ ಪರ್ಟೇಲ್, ವಿಜಯಲಕ್ಷ್ಮಿ ಪಂಡಿತ್ ರಾಜಕುಮಾರಿ ಅಮೃತ್‌ಕೌರ್ ನೂಮದಲಾದ ಪ್ರಭೃತಿಗಳಂತ ವನಸುಸ್ಥವನ್ನು ಪಡದು ಮಾನವರೆಂಬ ಹೆಸರು ಸಾರ್ಥಕಗೊಳಿಸೆ ಮಾನವ ಕರ್ತವ್ಯವಂತು ಆದರಂತಾಚರಿಸಲು ಈ ತೃತೀಯ ವರ್ಧಂತಿಯು ದಿವಸದಿಂದಲಾದರೂ ಆರಂಭಿಸೋಣ ಎಂಬುದೇ ನನ್ನ ಬೇಡಿಕೆ! ಅಲ್ಲದೆ ಭಗವಂತನು ನಮಗಲ್ಲರಿಗೂ ಸದ್ಬುದ್ಧಿಯನ್ನು ಇತ್ತು ಕಾಪಾಡಲೆಂದು ಅತನಲ್ಲಿ ನನ್ನೆ ಅನನ್ಯ ಪ್ರಾರ್ಥನೆಗಳು.

ಜೈ ಹಿಂದ್!

ಯು. ಯನ್. ರಾವ್, ಅಡೂರು.

NOTICE

In the Court of the Subordinate Judge of South Kanara.

R. E. P. No. 79/1950
in O. S No. 162/1948

Between

B. Doomappa —Petitioner (Plaintiff)

and

B. Devaki Bai—Respondent (Defendant)

To,

B. Devaki Bai, wife of Mangalore Jarappa, residing in Boloor, village of Mangalore Town, S. K.

Please take notice that the above execution petition against you is posted for 7-9-1950 for sale notice. You are hereby requested to appear on the above said date and file your objections if any. Otherwise the petition will proceeded with in your absence.

B. L. N. Rai,
Advocate for Petitioner.

Mangalore, 22-8-1950.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

* English Made Easy *

ಸುಲಭವಿದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತನ್ಮುಷ್ಟಿಕ್ಕೆ ಕಾವೇ ಇಂಗ್ಲಿಷ್ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪ ಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ರೂ. 1-8-0 ಮಾತ್ರ

ಸರ್ವಭಾರತ ಪುಸ್ತಕ ಭಂಡಾರ, ಉಡುಪಿ.

ಬ್ರೂಕ್ ಬೋಂಡ್ ಇಂಡಿಯಾ ಲಿಮಿಟೆಡ್ - ಸುವರ್ಣಮಹೋತ್ಸವ.

ಹಿಂದೂಸ್ಥಾನದ ಸ್ವಮುಖ ಚಹಾ ಕಂಪೆನಿಗಳಲ್ಲೊಂದಾದ ಬ್ರೂಕ್ ಬೊಂಡ್, ಇಂಡಿಯಾ, ಲಿಮಿಟೆಡ್, ಸಂಸ್ಥೆಯು ಈಚೆಗೆ ತಿಂಗಳಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆತ್ಯಂತ ವಿಜೃಂಭಣೆಯಿಂದ ನಂವತ್ಸರಿಸಿತು.

ಈ ಕಂಪೆನಿಯು ಕಲಕತ್ತದ ಆದೊಂದು ಗಲ್ಲಿಯಲ್ಲಿ ಜನ್ಮತಾಳಿದುದು ಇಂದು ಇಡೀ ಹಿಂದೂಸ್ಥಾನದಲ್ಲೆ ಪ್ರಖ್ಯಾತಿಯನ್ನು ಪಡೆದು ಎಲ್ಲಿ ನೋಡಿದರಲ್ಲಿ ಈ ಕಂಪೆನಿಯ ಚಹಾ ಕಟ್ಟುಗಳೇ ನೂರು ಗಟ್ಟಲೆಯಲ್ಲಿ ಗ್ರಾಹಕರಿಗೆ ವಿತರಣೆ ಯಾಗುತ್ತಿವೆ. ವಿತರಣ ಹಾಗೂ ಪ್ರಚಾರ ಒಂದಿಯಂತೂ ಎಲ್ಲೆಲ್ಲಿಯೂ ಜನಾಕರ್ಷಣ ವಿಯವುದು ಮಾತ್ರವಲ್ಲದೆ ಚಿಲ್ಲರೆ ವಿಕ್ರಯದ ವಿಷೋಗಕ್ಕೆ ಸರಪಣಿಯೂ ಇದೆ.

ಹಿಂದೀಯಂನ್ನು ಉಚ್ಚ ಅಧಿಕಾರದಲ್ಲಿ ಟ್ಟ ಕಂಪೆನಿಗಳಲ್ಲಿ ಈ ಸಂಸ್ಥೆಗೆ ಪ್ರಥಮ ಸ್ಥಾನ ಸಲ್ಲುವುದು. ಇಬ್ಬರು ಹಿಂದೀಯರು ಈ ಕಂಪೆನಿಯ ಸೇಲ್ಸ್‌ಮನ್ ಆಗಿದ್ದವರು ಈ ದಿನ ಬೋರ್ಡಿನ ಡೈರೆಕ್ಟರ್ ಪದವಿಯಲ್ಲಿ ವಿರಾಜಿಸುತ್ತಿರುವರು.

ಕಂಪೆನಿಯು ಸುವರ್ಣ ಮಹೋತ್ಸವವು ಕಲಕತ್ತ, ನಾಗಪುರ, ಕೊಯಮುತ್ತೂರು, ಘಾಟ್ಕೋಪರ್ ಮೊದಲಾದ ಶಾಖಾಕಚೇರಿಗಳಲ್ಲೂ ಆಚರಿಸಲ್ಪಟ್ಟಿತು. ಈ ಕಂಪೆನಿಯ ಪ್ರತಿಯೋರ್ವ ನೌಕರನಿಗೂ ವಿಶೇಷ ಬೋನಸ್ ಕೊಡಲಾಯಿತು ಸುವರ್ಣ ಮಹೋತ್ಸವದ ವೈಶಿಷ್ಟ್ಯ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

ಕಮ್ಯೂನಿಸ್ಟ್ ಚೈನದ ಚೀನ

ಕೇವಲ ದೋಷಗಳನ್ನು ಹೆಕ್ಕುವವರು ರಣಹದ್ದುಗಳಂತೆ; ರಾಜಹಂಸಗಳಂತಲ್ಲ. ತಮ್ಮ ಆಭಿರುಚಿಗೆ ತಕ್ಕಂತೆ ರೌದ್ರ ವಾತಾವರಣವನ್ನೇ ಬಯಸಿಯಾರು ಹೊರತು, ಆದು ಶಾಂತ ಸರೋವರದಂತಿರುವುದನ್ನು ಅಪೇಕ್ಷಿಸಲಾರರು.

ಅಸ್ಸಿನ್ ಭೂಕಂಪದಂತಹ ಅನಾಹುತವು ಯಾರಲ್ಲಾದರೂ ವಿಕಟಾನಂದವನ್ನು ನಿರ್ಮಿಸಿರುವುದಾದರೆ, ಅದಕ್ಕೂ ಧರ್ಮದೋಷದಂತಹ ಕಾರಣ ಕೊಡಬಲ್ಲ ಟೀಕಾಕಾರರಲ್ಲಿ ಮಾತ್ರ. ತಮ್ಮಿಂದಾದುದೆಂಬುದು ಬೇರೆಯೂ ಇರದ ದೆಸೆಯಿಂದ ತಮ್ಮ ಶಾಪ ತಟ್ಟಿತು, ತಾವಾಡಿದ ಭವಿಷ್ಯ ಫಲಿಸಿತು, ಎಂದು ಅಸ್ಸಿನ್ ಗಂಡಾಂತರದ ಕಡೆಗೆ ಬೈಕೋರಿಸುವವರಿರಬಹುದು.

ಆಹಾರಾಭಾವಕ್ಕಾಗಿ ಈಗಿನ ಅಧಿಕಾರೀ ಪಕ್ಷವನ್ನು ಕಠೋರವಾಗಿ ಟೀಕಿಸುವ ವಿರುದ್ಧ ಪಕ್ಷಗಳಲ್ಲಾವುದೂ, ಈ ಟೀಕೆಗಳನ್ನಲ್ಲದೆ, ಆ ಅಭಾವ ನಿವಾರಣೆಗಾಗಿ ಬೇರೇನನ್ನೂ ಮಾಡದವುಗಳೆಂಬುದನ್ನು ನುರಿಯಬಾರದು. ಇಂದಿನ ಆಹಾರ ದುಸ್ಥಿತಿ ನಿವಾರಣೆಗೊಂಡರೆ, ತಮ್ಮ ವಿರೋಧಿ ಪಕ್ಷವನ್ನು ಆರೋಪಿಸುವ ಸಂದರ್ಭವೇ ತಮಗೆ ತಪ್ಪಿಹೋದೀತೆಂಬ ವಿಲಕ್ಷಣಾಸಕ್ತಿ ಇಂಥವರಲ್ಲಿದೆ.

ಕೆಸರೆರಚಿ ತೊಳೆಯಬಹುದೆ?

ಸರ್ವಸಾಮಾನ್ಯವಾಗಿ ಬೇರೊಬ್ಬನ ದುರ್ವರ್ತನೆ, ದುಂದುಗಾರಿಕೆ, ಇಕ್ಕಾದಿಗಳ ಕುರಿತು ಕಠಿಣ ಟೀಕೆ ನಡಿಸುವವರು, ಅಂತಹ ಕೆಟ್ಟ ಮನುಷ್ಯನಿಂತ ತಾವು ಸಂಧ್ರಾವಿತರೂ ಎಂಬ ಹೃಶಂಸೆಯನ್ನು ಮತ್ತು ಆತ್ಮಗತ ಹೆಗ್ಗಳಿಕೆಯನ್ನು ಪಡೆಯುವುದಕ್ಕಾಗಿಯೇ ಅದನ್ನು ಮಾಡುತಿದ್ದಾರಲ್ಲದೆ, ದುರ್ಮಾರ್ಗಾವಲಂಬಿಯನ್ನು ಸುಧಾರಿಸುವ ಧ್ಯೇಯದಿಂದಲ್ಲ.

ಸಾಹಿತ್ಯ, ಸಂಗೀತ ಆಥವಾ ಇತರ ಯಾವುದೇ ಕಲೆಯ ಸಂಬಂಧವಾಗಿ ಅನ್ಯರನ್ನು ಟೀಕಿಸುವವರ ಆಂತರಾಳದಲ್ಲಿ ಮುಖ್ಯತಃ ತಾನು ಅದಕ್ಕಿಂತ ಮೇಲ್ಮಟ್ಟದ ಕಲಾಕಾರನೆಂಬುದನ್ನು ಕೋರಿಸುವ ಹೆಮ್ಮೆಯಡಗಿದೆ ಹೊರತು ಸಂಬಂಧಪಟ್ಟ ಕಲೆಯನ್ನು ತಿದ್ದುವ ಪರೋಪಕಾರ ಬುದ್ಧಿ ಅಥವಾ ಕಲಾಸೇವೇಚ್ಛೆ ಒಳಗಿಲ್ಲ.

ಭಂಡವಾಳಶಾಹೀ ಪದ್ಧತಿಯನ್ನು—ಇಂದಿನ ಆರ್ಥಿಕ ಅಸಮಾನತೆಯನ್ನು—ಖಂಡಿಸುತ್ತಿರುವ ಎಲ್ಲರಲ್ಲೂ ಸರ್ವ ಸಮಾನತಾ ಮನೋವೃತ್ತಿಯಿರಲಾರದು; ತಾವೂ ಭಂಡವಾಳಗಾರರಾಗಲಿಲ್ಲವೆಂಬ ಸ್ವಾರ್ಥಪೂರಿತ ಅತೃಪ್ತಿಯಿಂದ ಕೆಲವರು—ಭಂಡವಾಳಶಾಹಿಯ ಖಂಡನೆಯೇ ಈಗಿನ ಉಗ್ರಗಾಮಿಗಳ ಸಹಜ ಅಂತಸ್ಸೆಂಬಧಾವನೆಯಿಂದಹೆಲವರು—ಅಂತಹಿ ಖಂಡನಾರ್ಯೋಧಗಾಗಿದ್ದಾರೆ.

ಶ್ರಮಜೀವಿಗಳ ಅನಾಗರಿಕ ವರ್ತನೆ, ಒರಟು ಮಾತುಕೃತಿಗಳನ್ನು ಹೀನೈಸುತ್ತಿರುವ ಧನಿವರ್ಗದಲ್ಲಿ, ಕೆಲಸಗಾರರಲ್ಲಿ ಉಚ್ಚ ನಾಗರಿಕತೆ ಮೂಡ ಬೇಕೆಂಬ ಬಯಕೆ ಸರ್ವಥಾ ಇಲ್ಲ. ಬದಲಿಗೆ, ತಮ್ಮ ಸುಲಿಗೆಗೊಂದು ನೆವನವಾಗುವಂತೆ, ಮಜೂರರ ಮೇಲೆದಂಡನೀತಿಯ ಪ್ರಯೋಗ ನಡೆಯುವಂತೆ, ಶ್ರಮಜೀವಿಗಳು ಸದಾಕಾಲ ಅಂತಹ ಒರಟು ಮನುಷ್ಯರಾಗಿರಬೇಕೆಂದೇ ಆವರ ಗೂಢಾಂತರ್ಯವಿರುತ್ತದೆ.

ಅದೇ ರೀತಿ ಧನಿಕ—ಮಜೂರ ಸ್ಥಿತಿಗತಿ ವ್ಯತ್ಯಾಸಗಳಿಗಾಗಿ ಹಂತ ವಾಗಾಚ್ಛಣ ಳನ್ನು ಛಡಾಯಿಸುತ್ತಿರುವ ಕೆಲವು ಮಜೂರ ಮುಖಂಡರಿಗಾದರೂ, ಆರ್ಥಿಕ ಭೇದಗಳು ಇಂದೇ ಅಳಿದು ಹೋದರಾಗುತೆಂಬ ಸಹಜಾಭಿಲಾಷೆಯಿರುವಂತೆ ಅಂತಹ ಸಮಾನತಾ ಸ್ಥಾಪನೆಯಾದ ತಮ್ಮ ನಾಯಕತ್ವಕ್ಕೆ ಮತ್ತೆ ಸ್ಥಾನವಿಲ್ಲವೆಂಬುದೇ ಕಾರಣ.

ಲೋಕದಲ್ಲೆಲ್ಲಾ ಶಾಂತಿ, ಭದ್ರತೆ ಸಮಾನತೆ ಸ್ಥಾಪಿಸುವವರು ತಾವು ಎಂದು ಅಮೆರಿಕಾನರ ಹೃದಯೈತ ಮನೋವೃತ್ತಿಯ ಹಿನ್ನೆಲೆಯಲ್ಲಿ, ಪ್ರಂಚದಲ್ಲಿಂತಹ ಅಶಾಂತಿ, ಅಸುರಕ್ಷಿತತೆ, ಅಸಾಮಾನತೆಯಿರುವುದರಿಂದಲೇ ಒಂದು ಗುಂಪು ರಾಷ್ಟ್ರಗಳ ನಾಯಕತ್ವ ತಮಗೆ ದೊರೆತಿರುವುದಲ್ಲದೆ, ಸರ್ವಸಮಾನತೆಯಿರುತಿದ್ದರೆ ತಮ್ಮ ಸ್ಥಾನವೂ ಮಿಕ್ಕ ರಾಷ್ಟ್ರಗಳಂತೆ ಆಗಿ ತಗ್ಗುತಿದ್ದಿತೆಂಬ ಆತ್ಮ ಸಮಾಧಾನವೊಂದು ಇದ್ದೇ ಇದೆ.

ರಾಜಕಾರಣಿಗಳಿರಲಿ, ಧಾರ್ಮಿಕ ಗುರು, ಪುರೋಹಿತ, ಉಪದೇಶಿಗಳಿಂದ ಲಿ—ತಾವು ಬೋಧಿಸುವ ಮಟ್ಟಕ್ಕೆ ಜನರು ಯೇರಿದರೆ ತಮ್ಮೀ ಬೋಧಕಸ್ಥಾನ ಕುಸಿದು ಹೋಗುವದೆಂಬ ಒಳಭೀತಿ ಅಂತರಾಳದಲ್ಲಿದ್ದೇ ಇದೆ.

ಕೇವಲ ಟೀಕೆಯೊಂದರ ಹೊರತು ಬೇರಾವುದೂ ಇಲ್ಲದಿರುವ ಸ್ಥಿತಿ ಆಥವಾ ಯೋಗ್ಯತೆಯು ಅಂಥವರ ಟೀಕೆಗೊಳಗಾದವುಗಳಿಗಿಂತಲೂ ಕಡಿಮೆಯದೆಂದು ಖಚಿತವಾಗಿ ಕಟ್ಟಿಕೊಳ್ಳಬಹುದು; ಆಂಥವರು ಒಂದು ನೆಲೆಗೆ ನಿಲ್ಲಿಸುವ ಟೀಕಾ ಸೂತ್ರವಿದೆಯೆನ್ನೆ—ಆದ ಆ ನೆಲೆಯನ್ನು ಹುಡಿದೆಳೆಯಲು ಹಾತೊರೆಯಾಶವಾಗಿರದೆ, ಅದನ್ನಾ ಧರಿಸಿಕೊಂಡ ತಾವು ಸ್ವತಃ ಆ ನೆಲೆಗೆ ಮುಟ್ಟಬೇಕೆಂದು ನಿಕ್ಕಿಸಿದ ಹಗ್ಗವೆನ್ನಬಹುದು. ವಿಮರ್ಶೆ ಗೀಡಾದ ಆ ನೆಲೆಗಿಂತಲೂ ವಿಮರ್ಶಕನ ಸ್ಥಾನ ಹೀನದ್ದಿರುವುದರಿಂದಲೇ ಇಂತಹ ವಿಮರ್ಶಾಸೂತ್ರ.

ಕೇವಲ ಟೀಕೆಯನ್ನಲ್ಲದೆ, ಅನ್ಯಥಾ ಅರಿಯದವನು ಟೀಕಾಕಾರ ಮತ್ತು ಮನುಜ್ಞಾಕಾರ; ಆದರೆ ಮನುಷ್ಯನಲ್ಲ! ಪರೂಪ ಪಡೆದೇ ಮಾನುಷತ್ವವಲ್ಲವಾದ್ದರಿಂದ ದೂಷಕನು ನಿಜ ಮನುಷ್ಯನಲ್ಲ.

* English Made Easy *

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕುಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ
ತನ್ನಿಷ್ಟಕ್ಕೆ ತಾನೇ ಇಂಗ್ಲಿಷ್ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪ ಸ್ವಲ್ಪ ಬರುವವರು ಜೆನ್ನಾಗಿ ಕಲಿತುಕೊಳ್ಳಬಹುದು.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ
ಪ್ರಯೋಜನಕಾರಿ

ಬೆಲೆ ರೂ. 1-8-0 ಮಾತ್ರ

ನವಭಾರತ ಪುಸ್ತಕ ಭಂಡಾರ, ಉಡುಪಿ.

THE UNITED KARNATAK INSURANCE COMPANY, LTD., DHARWAR.
Established: 1929

Offers their valuable service to the public of India in making their sweet home, always happy.
For good investments and valuable connections, please consult us.

Registered for Agriculture & Veterinary

ನವಯುಗ

ವರ್ಷ ೩೧ ವಾರ ೧ | NAVAYUGA WEEKLY | POST BOX NO. 27 UDIPI, S. K. | Vol. 31 No. 1

ಇಂದು, ಪ್ರತಿಯೊಬ್ಬ ಭಾರತೀಯನೂ ಕಾಯಿದೇ ವಿರುದ್ಧ ವರ್ತನೆಗಾಗಿ ಕಾರಾಗೃಹದಲ್ಲಿರಲು ಬದ್ಧನಿದ್ದಾನೆ; ಕಾರಣವೆಂದರೆ ಸದ್ಯ ಅಸ್ತಿತ್ವದಲ್ಲಿರುವ ಜನತಾ ರಾಜ್ಯ ಶಾಸನಾನುಗುಣವಾದ ಸರ್ವಸಮಾನತೆಯನ್ನು ಮತ್ತು ಹಕ್ಕು ಹೊಣೆಗಾರಿಕೆಗಳನ್ನು ತಮ್ಮ ನಿತ್ಯ ಜೀವನದಲ್ಲಿ ನಿರಯಾಗಿ ಪಾಲಿಸುವವರಿಲ್ಲ.

ಇಂದು, ಭಾರತೀಯರೆಲ್ಲರೂ ಒಂದೋ ಕಳ್ಳಸಂತೇ ವ್ಯಾಪಾರಕ್ಕಾಗಿ, ಇಲ್ಲವೇ ಕಳ್ಳಸಂತೆಯ ನಿರಾಶ್ರಿತಗಳಾದುದಕ್ಕಾಗಿ ಮರಣ ದಂಡನೆ ಅಥವಾ ಜೀವಾವಧಿ ಸಜೆ ಗೀಡಾಗ ಬೇಕಾಗುತ್ತದೆ; ಯಾಕೆಂದರೆ, 'ಬ್ಲೇಕ್ ಮಾರ್ಕೆಟ್' ಮಾಡುವವರನ್ನು ಗಲ್ಲಿಗೇರಿಸಿ' ಎಂಬ ಅಭಿಪ್ರಾಯವನ್ನು ಪಂಡಿತ ನೆಹರುಗಳು ಹಿಂದೊಮ್ಮೆ ಸೂಚಿಸಿದ್ದರು. ಕಳ್ಳ ವ್ಯಾಪಾರ ಮಾಡುವವರನ್ನು ಪಾತಿಗೇಟೇ ಕೊಡುವಾಗ ಕಳ್ಳಮಾಲುಗಳನ್ನು ಕೊಂಡು ಕೊಳ್ಳುವವರಿಗೆ ಕಠಿಣ ಸಜೆಯನ್ನಾದರೂ ವಿಧಿಸಬೇಕಾಗುತ್ತದೆ ಪ್ರಕೃತ ಇವೆರಡು ವರ್ಗಗಳಲ್ಲಿ ಒಂದಕ್ಕೆ ಸೇರದ ಭಾರತೀಯರು ಯಾರಿರುವರೋ!

ಇಂದು, ಬಹುತೇಕವಾಗಿ ಎಲ್ಲಾ ಭಾರತೀಯರು ಕೊಲೆಗಾಗಿ ಪತ್ತು ಕೊಲೆಯ ಪ್ರೇರಣೆಗಾಗಿ ಇರುವ ವಿವಿಧ ವರ್ಗದ ದಂಡನೆಗಳನ್ನು ಅನುಭವಿಸಬೇಕನ್ನಿಸುತ್ತದೆ; ಕಾರಣವೆಂದರೆ ಜಾತೀಯತಾ ಭ್ರಾಂತಿ, ಅವೇಶಗಳಿಂದ ಪ್ರತ್ಯಕ್ಷ ಕೊಲೆ ಸುಲಿಗೆಗಳನ್ನು ಮಾಡಿರುವವರು ಕೆಲವರು—ಅಂತಹ ಅತ್ಯಾಚಾರಗಳಿಗೆ ಪ್ರೇರಣೆಯಾಗಿರುವ ಜಾತೀಯತಾ ಭ್ರಾಂತಿಯನ್ನು ಒಂದಲ್ಲೊಂದು ವಿಧಾನದಿಂದ, ಹೆಚ್ಚುಕಡಿಮೆ ಪರಿಮಾಣದಿಂದ ಕಟ್ಟಿಕೊಂಡವರು ಹೆಚ್ಚಿನಂಶ ಎಲ್ಲರೂ.

ಇಂದು, ಭಾರತೀಯರಲ್ಲಿ ಬಹು ಅಂಶ ಎಲ್ಲರೂ ಅಕ್ರಮಣಕ್ಕಾಗಿ ದಂಡಿಸಲ್ಪಡಲು ಅರ್ಹರಾದ್ದಾರೆ. ಯಾಕೆಂದರೆ, ಅನ್ಯರ ಹಕ್ಕಿನ ಸ್ಥಾನಮಾನಗಳ ಅಕ್ರಮಣಗಳಿಂದಾಂಭಿಸಿ, ತನಗಗತ್ಯವಿರದ ಹರಕೆಯ ವಿಷಯಗಳಲ್ಲಿ ತಲೆ ಹೊಗಿಸುವ ವರೆಗಿನ ವಿವಿಧ ಮಾದರಿಯ ಪರಾಕ್ರಮಣಗಳನ್ನು ನಡೆಸದವರಿಲ್ಲ.

ಇಂದು, ಹಿಂದೀಯರೆಲ್ಲಿ ಅತ್ಯಧಿಕ ಸಂಖ್ಯಾಕರು ವಿದೇಶಿಯರೆಂದು ಅಧಃಪರ ಕೀಯರಾಗಿ ಗಣಿಸಲ್ಪಟ್ಟು ದೇಶಾಂತರ ಹೊಂದಲು ಅಥವಾ ಇಲ್ಲಿ ವಿದೇಶಿಯರಿಗೆ ದೊರೆಯುವಂತಹ ಅತಿಥ್ಯವನ್ನಷ್ಟೇ ಪಡೆಯಲು ಬದ್ಧರನ್ನಿಸುತ್ತಾರೆ, ಕಾರಣವೆಂದರೆ ದೇಶೀಯರನ್ನಿಸದೇಕಾದರೆ ಅಗತ್ಯವಾಗಿ ಇರಬೇಕಾಗಿರುವ ದೇಶ ಪ್ರೇಮ, ನಾಗರಿಕ ಹಕ್ಕು ಭಾಧ್ಯತೆಗಳ ಜ್ಞಾನವು ಮುಂತಾದುವು ಹೆಚ್ಚಿನವರಲ್ಲಿಲ್ಲ.

ಇಂದು, ಭಾರತಕ್ಕೇವರೆಗೆ ಸ್ವಾತಂತ್ರ್ಯವೇ ದೊರೆತಿಲ್ಲವೆಂದು ಬಾವಿಸಬೇಕಾಗಿ ಬರ್ಕಾಸ್ತುಗೊಂಡು ಎಲ್ಲದರಲ್ಲೂ ಸ್ವದೇಶಿ ಮಟ್ಟ ಬರುವುದೇ ಬಂಧನ ವಿಮೋಚನೆ" ಯೆಂದು ಈ ಮೊದಲು ಅರ್ಥ ಕಟ್ಟಿದ್ದಂತೆ ಈವರೆಗಾಗಿಲ್ಲ.

ಇಂದೂ, ಮೂಲ ಭಾರತವು ಇಬ್ಭಾಗವಾಗಿ ಭಾರತ ಮತ್ತು ಪಾಕಿಸ್ತಾನ, ಎಂಬೆರಡು ರಾಷ್ಟ್ರಗಳು ನಿರ್ಮಾಣಗೊಂಡಿರುವುದೇ ಸಾಳ್ಳೆನ್ನ ಬೇಕಾಗುತ್ತದೆ. ಕಾರಣವೆಂ

ಆದರ್ಶದಂತೆ ಅಳೆದರೆ—

ತ್ತದೆ; ಯಾಕೆಂದರೆ 'ಬಡವರ ಉದ್ಧಾರ, ಆರ್ಥಿಕ ಸಾಮಾಜಿಕ ಸಮಾನತಾ ಸ್ಥಾಪನೆ, ಜನಜೀವನ ಮಟ್ಟವನ್ನು ಸೇಲೇರಿಸುವುದೇ ಸ್ವಾತಂತ್ರ್ಯ'ವೆಂದು ಇದರ ಸಾಧನೆಯ ವೇಳೆ ಘೋಷಿಸಿದ್ದಂತೆ ಈ ವರೆಗೇನೂ ಆಗಿಲ್ಲ

ಇಂದು, ಬ್ರಿಟಿಷರ ಗುಲಾಮಗಿರಿಯಿಂದ ಭಾರತ ಬಿಡುಗಡೆಗೊಂಡಿಲ್ಲನೆಂದೇ ನೆನಸಬೇಕಾಗುತ್ತದೆ; ಕಾರಣವೆಂದರೆ "ಬಿಳಿ ಜನರ ಸ್ಥಾನಗಳಲ್ಲಿ ನಮ್ಮ ಜನರನ್ನು ವಿರಿಸಿಕೊಳ್ಳುವುದೇ ಬಿಡುಗಡೆಯಾಗಲಾರದು. ಬ್ರಿಟಿಷ್ ಆಡಳಿತ ವಿಧಾನ, ಇಂಗ್ಲಿಷ್ ಭಾಷೆ, ಸಂಸ್ಕೃತಿ, ಮರ್ಜಿಗಳೆಲ್ಲವು ದರೆ ಇವೆರಡು ಪ್ರಜಾಸತ್ತಾ ರಾಷ್ಟ್ರಗಳಲ್ಲೂ ಒಂದು ದೇಶದ ಪ್ರಜೆಗಳ ಒಂದು ಭಾಗವನ್ನು ರಕ್ಷಣೆಗಾಗಿ ಮತ್ತೊಂದು ದೇಶದತ್ತ ನೋಡುತ್ತಿರುವುದೂ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಜನರವ್ಯವಸ್ಥೆ ನಡೆದಿರುವುದೂ ಉಳಿದುಕೊಂಡಿದ್ದು, ಇವೆರಡು ತುಂಡುಗಳು ಬೇರೆ ಬೇರೆಯಾಗಿಲ್ಲವೆಂಬುದನ್ನು ಸೂಚಿಸುತ್ತಿವೆ

ಇಂದು, ಪಾಕಿಸ್ತಾನವಾದರೂ ಜಾತಿ, ಮತ, ಸಂಸ್ಕೃತಿ, ಭಾಷೆ, ಸಂಪ್ರದಾಯಗಳನ್ನಾಧರಿಸಿ ಪ್ರತ್ಯೇಕತೆಯನ್ನೆತ್ತಿ ಹಿಡಿಯುವ ರಾಷ್ಟ್ರವಲ್ಲವೆನ್ನಬೇಕಾಗುತ್ತದೆ. ಏಕೆಂದರೆ ಈ ಭಿನ್ನತೆಗಳ ಮೇಲಿಂದ ಪ್ರತ್ಯೇಕತೆ ಯಾಚಿಸುತ್ತಿರುವ ಗಡಿನಾಡಿನ ಪರಾಣಗಿದನ್ನು ಕೊಡಲೂ ಪಾಕಿಸ್ತಾನವು ನಿರಾಕರಿಸುತ್ತಿದೆಯಲ್ಲದೆ, ಕಾಶ್ಮೀರವನ್ನು ಈ ಪ್ರತ್ಯೇಕತಾತತ್ವವನ್ನನುಸರಿಸಿ, ವಿಂಗಡಿಸುವುದಕ್ಕೂ ಅದು ನಕಾರ ಸೂಚಿಸಿದೆ.

ಇಂದು, ಮಹಾತ್ಮಾ ಗಾಂಧಿಯವರು ಈ ಯುಗದಲ್ಲಿ ಹುಟ್ಟಲೇ ಇಲ್ಲವೆಂದು ನೆನಸಬೇಕಾಗುತ್ತದೆ; ಯಾಕೆಂದರೆ ತ್ರೇಕ್ಕಾದ್ವಾಪರಯುಗಗಳ ರಾಮ, ಕೃಷ್ಣರಿಗೆ ಸರಿಸಮಾನರೆಂತೆ ಪ್ರತಿಯೊಂದು ಸಂದರ್ಭದಲ್ಲೂ ಗಾಂಧೀ ನಾಮ ಪರಸೆ ಮಾಡುವವರು ಕಂಡು ಬರುತ್ತಿದ್ದಾರೆ ಹೊರತು ಗಾಂಧೀ ಕಾರ್ಯಕ್ರಮಗಳೇನೂ ಜೀವಂತವಾಗಿಲ್ಲ.

ಇಂದು, ಈ ರಾಷ್ಟ್ರದಲ್ಲಿ ಬ್ರಿಟಿಷರೆಂಬವರು ಮಾತ್ರ ಕಲಿಸುವವರಾಗಿದ್ದರಲ್ಲದೆ, ಕಾಂಗ್ರೆಸಿಗರೆಂಬವರು ವಸ್ತ್ರ ವ್ಯಾಪಾರಿಗಳಾಗಿ ಮಾತ್ರ ಇದ್ದರೇ ಹೊರತು ಎನನ್ನೂ ಕಲಿಸಿದ್ದಲ್ಲವನ್ನಿಸುತ್ತದೆ; ಯಾಕೆಂದರೆ ಬ್ರಿಟಿಷರು ಕಲಿಸಿದ್ದ ಅಧಿಕಾರ ಲಾಲಸೆ, ಜಾತೀಯ ಸ್ವರ್ಥೆ, ಅಡಳಿತವಿಧಾನ, ಸ್ವಾರ್ಥಸಾಧನೆಗಳು ಮಾತ್ರ ಇಂದು ಎಲ್ಲೆಲ್ಲೂ ಎಲ್ಲರಲ್ಲೂ ತುಂಬಿಕೊಂಡಿರುವಾಗ, ಕಾಂಗ್ರೆಸಿನ ಖಾದೀ ವಸ್ತ್ರ ಟೋಪಿಗಳ ಹೊರತು ಬೇರೇನೂ ಉಳಿದಿಲ್ಲ

ಇಂದು ಸ್ವಾಲಿಸರು ಭಾರತೀಯನಲ್ಲವೆಂದಾಗಲೀ, ಛತ್ರಪತಿ ಶಿವಾಜಿಯು ಈ ಕಾಲದಲ್ಲಿಲ್ಲವೆಂದಾಗಲೀ ನೆನೆಸುವುದು ತಪ್ಪನ್ನಿಸುತ್ತದೆ- ಕಾರಣವೆಂದರೆ ಇವರಿಬ್ಬರ ದಂಡುಗಳು ಭಾರತದಲ್ಲೀಗಲೂ ಹಾಲಿನಲ್ಲಿವೆ.

ಇಂದು, ಭಾರತವು ರೈತ್ವಾರೀ ದೇಶವೆಂಬುದನ್ನು ಒಪ್ಪಿಕೊಳ್ಳುವುದು ಅಸಾಧ್ಯವಾಗುತ್ತದೆ: ಯಾಕೆಂದರೆ ಮುಖ್ಯ ಉದ್ದಿಮೇ ರಾಷ್ಟ್ರವಾಗಿದ್ದು, ಆಹಾರಕ್ಕಾಗಿ ಸಾಮಾನ್ಯ ಕಾಲದಲ್ಲೂ ಅನ್ಯರಾಷ್ಟ್ರಗಳನ್ನು ಅವಲಂಬಿಸಿರಬೇಕಾಗಿದ್ದ ಇಂಗ್ಲಾಂಡು ಯುದ್ಧಕಾಲದಲ್ಲಿ ತನಗೆ ಬೇಕಾಗುವಷ್ಟು ಆಹಾರವನ್ನು ತನ್ನಲ್ಲೇ ನಿರ್ಮಿಸಿಕೊಳ್ಳಲು ಶಕ್ತವಾಗಿದ್ದರೂ ಭಾರತವೀ ವರೆಗೂ ಆಹಾರಾಭಾವದಿಂದ ಒದ್ದಾಡುತ್ತಿದೆ.

ಇಂದು ಈ ರೀತಿ ಯಾವ ದೃಷ್ಟಿಯಿಂದ ನೋಡಿದರೂ ನಾವು ಇರಬೇಕಾದಂತಿಲ್ಲ. ಮಾನುಷತ್ವದ ವಿಧಿ ನಿಯಮಗಳಿಗನುಗುಣವಾಗಿ ನಾವು ಮನುಷ್ಯರಾಗಿಲ್ಲ ಸ್ವತಂತ್ರ ಜನತಾ ರಾಜ್ಯದ ಶಾಸನ, ಹಕ್ಕು ಸಂಬಂಧ, ಹೊಣೆಗಾರಿಕೆಗಳಿಗನುಸಾರವಾಗಿ ನಾವು ಸ್ವತಂತ್ರರಲ್ಲ. ಅಂತೂ ನಾವು ನಾವೇ ಆಗಿಲ್ಲ.

ಬೇರೆ ಯಾವುದೂ ಬೇಡ—ಎಲ್ಲದರಲ್ಲೂ ನಾವು ಇರಬೇಕಾದಂತಿರುವುದನ್ನು ಕಲಿಯೋಣ.

* English Made Easy *

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತನ್ನಷ್ಟಕ್ಕೆ ತಾನೇ ಇಂಗ್ಲಿಷ್ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪ ಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ರೂ. 1-8-0 ಮಾತ್ರ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಮ್ಯೂನಿಸ್ಟ್ ಚೈನದ ನೇತಾ —

ಕಮ್ಯೂನಿಸ್ಟ್ ಚೈನಾ– ಇದೀ ಸ್ವಚ್ಛಂದ ನಾಲ್ಕನೇ ಒಂದಂಶದಷ್ಟನ್ನು ತನ್ನಲ್ಲಿಟ್ಟುಕೊಂಡಿರುವ ರಾಷ್ಟ್ರ ಈ ದಿನ ಲೋಕದ ಪಾಲಿನ ಯಃಕ್ಷ ಪ್ರಶ್ನೆ ಅಥವಾ ನಾಂತಿಗೆ ಪ್ರಥಮ ರೂಪ ದೊರೆಯಬೇಕಾಗಿರುವ ಕ್ಷೇತ್ರ ಲೋಕದಲ್ಲೇ ಅತಿ ಹೆಚ್ಚಿನ ಅಧಾನ. ಪ್ರಭಾವ, ಎರಡಕ್ಕೂ ಈ ದಿನ ಪ್ರದರ್ಶಿಸುತ್ತಿರುವ ಈ ಕಂಯು ಚೈನಾದ ನಾಯಕ ಮಾವೋ ಟ್ಸೆ–ಟುಂಗ್. ಅಧುನಿಕ ಜಗತ್ತಿನಲ್ಲಿ, ಈ ವ ಸುಸ್ಥಿನಷ್ಟು, ಅಧಿಕ ಸಂಖ್ಯಾಕ ಜನರ ಅಧಿನಾಯಕತ್ವ ಪಡಿಸಿರುವನವನು ಗುತ್ತಿಲ್ಲವೆನ್ನಿಸಿ, ಆಧುನಿಕ ಕಾಲದಲ್ಲಿ ಇವನಷ್ಟು ಪ್ರಿಪ್ರಭಾವಿಯಿಂದ ಪಾತಾಳದಿಂದ ಆಕಾಶಕ್ಕೇರಿದವನೂ ಮತ್ತೊಬ್ಬನಿಲ್ಲ; ಇಂದು ಇವನ ಮಿ.ವಾನದಲೆತೆಯ ಮರ್ಜಿಯು ಕಡೆಗ ಲಕ್ಷ್ಯ ಹೊಡಬೇಕಾಗಿ ಬಂದಷ್ಟು ಇನ್ನೊಬ್ಬರ ಕಡೆಗೆ ನೋಡುವ ಪರ್ಜಿಯಲ್ಲಿ ಕಮ್ಯೂನಿಸ್ಟ್ ಚೈನಾ ಮತ್ತಿದರು ನಾಯಕ ಮಾವೋ ಗಳಿರುವ ಸ್ಥಾನವನ್ನಂತಗಳಂತಹುದು; ಇವ್ಯ ನಾಟಿಯಾಗುವಂತಹವು ಮತ್ತೊಬ್ಬರಿಲ್ಲ.

ಚೈನದ ವಿಶೇಷಸ್ಥಾನ

ಜಗತ್ತಿನಲ್ಲೇ ಅತಿದೊಡ್ಡ ರಾಷ್ಟ್ರವಿರುವ ಚೈನವನ್ನು ಒಂದೇ ಪಗಡೆದೊಳಗೆ ಮಾವೋ ಟ್ಸೆ–ಟುಂಗರ ಕಮ್ಯೂನಿಸ್ಟ್‌ಸೇನೆಗಳು ವಶಪಡಿಸಿಕೊಂಡಿರುವ ಲೋಕದ ಪ್ರತಿಯೊಂದು ಅನಾಮಾನ್ಯ ಘಟನೆಯು ಕೇಂದ್ರ ನೆಲೆಯೇ ಅದಾಗಿ ಮಾರ್ಪಟ್ಟಿದೆ. ಲೋಕದ ಎಲ್ಲೆಲ್ಲೂ ಇರುವ ಅಹಾರಾಭಾವವು ಪರಮಾವಧಿ ಸುಟ್ಟಿಕ್ಕೇರಿ ಲಕ್ಷಾವಧಿ ಮಂದಿಯನ್ನು ಬಲಿಪಡೆಯುಂದುದು ಚೈನದಲ್ಲಿ; ಪ್ರಪಂಚದಲ್ಲೀಗಲೂ ಸಮರ ಹಾವಳಿ ಕುಯಿಹುಗಳು ಸರ್ವತ್ರ ಕಂಡುಬರುತ್ತಿರುವ ಒಂದು ರಾಷ್ಟ್ರವಿದ ಯಾದರೆ ಅದು ಚೈನಾ; ಲೋಕ ಯುದ್ಧ ಕ್ಕೆ ಹೇತುವಾಗಬಹುದೆಂಬ ಭೀತಿಗಳನ್ನು ಬೆವಿತ್ತಿರುವ ಕೊರಿಯಾ ಯುದ್ಧಕ್ಕೆ ಅಂತಹ ಪ್ರಾಮುಖ್ಯತೆ ಬಂದುದು ಒಟ್ಟಿನಲ್ಲಿ ಕಮ್ಯೂನಿಸ್ಟ್ ಚೈನವಿಂವುದರಿಂದಲೇ. ಕೊರಿಯಾ ಯುದ್ಧ ಮತ್ತು ಮಂಚೂರಿಯೇ ಜಾನವಿಕ ಸನುರಗಳ ನಡುವೆ ಸೇತುವೆ ನಿರ್ಮಾಣ ಮಾಡಬೇಕು ಘೋರ್ಮೋಸದ ಮೇಲೆ ಬೀಳುವ ಮೂಲಕ ಚೈನವೇ. ಭದ್ರತಾ ಕೌನ್ಸಿಲನ್ನು ರಷ್ಯನ್ ಬಹಿಷ್ಕರಿಸಿ, ಅಂತರ್ರಾಷ್ಟ್ರೀಯ ಬಿಕ್ಕಟ್ಟು ಉಂಟಾದುದು ಚೈನದ ಸ್ವಾನಕ್ಕಗಿಯೆ; ಆ ಮೇಲೆ ರಷ್ಯದ ಎನ್ ಜಾಕೋಬ್ ಮಾಲಿಕರು ಭದ್ರತಾ ಕೌನ್ಸಿಲಿನಲ್ಲಿಗೆ ಬಂದು ಮಟ್ಟಿಯಾಗಿ ಮಂಡೂಡ್ಡಿದುದು ಚೈನದ ಪ್ರಶ್ನೆಯನ್ನೇ. ಇತ್ತ ಭಾರತವಾದರೋ ತನ್ನ ಸರಹದ್ದಿನಾಜೆಯಲ್ಲಿ ಪನ್ನವಾಲಿಗೆ ಹೊಸತೇನು ಕಾದಿದೆ ಎಂದು ಲಂಡನದಿಂದ ಇಣುಕಹೇಕಾದುದು ಚೈನದ ಕಡೆಗೇನೆ. ಆನ್ಯಾದ ಎಲ್ಲಾ ರಾಷ್ಟ್ರಗಳು– ಮುಖ್ಯವಾಗಿ, ಟಿಬೇಟ್, ಬರ್ಮಾ, ಮಲಯಾ, ಇಂಡೋ ಚೈನಾಗಳು–ತಮ್ಮ ಭವಿಷ್ಯದ ಕುರಿತು ವಿಶೇಷ ಚಿಂತೆ ನಡಸುವಂತಾಗಿರುವುದು ಚೈನಾದ ದೆಸೆಯಿಂದ. ಆನ್ಯಾ ಖಂಡಕ್ಕೆ ಮತ್ತಾಮೂಲಕ ಅಖಿಲ ಜಗತ್ತಿಗೆ ಯಾವ ವಿಧಿ ಬರಿದಿದೆಯೋ ಎಂದು ಎಲ್ಲರಲ್ಲೂ ಎದ್ದಿರುವ ಆತಂಕಕ್ಕೆ ಕಾರಣ ಚೈನಾ. ಇಪ್ಪತ್ತೆಲ್ಲಾ ಗಲಿಬಿಲಿಗೆ ಹೇತುವಾಗಿದ್ದರೂ ಸ್ವಾಲಿನರ ರಹಸ್ಯದ ಕುರಿತು ಕೇವಲ ಪೆದಂಕೆಯನ್ನು ಕಟ್ಟಿಕೊಂಡಿರುವಂತೆ ಮಾವೋನ ಚೈನದ ಕುರಿತು ಭೀತಿಯೊಂದನ್ನೇ ಯಾರೂ ಕಟ್ಟಿಕೊಂಡಿಲ್ಲ ನೂರ್ಕಾಲ್ ಸ್ಟಾಲಿನರಂತೆ ಮಾವೋ ಟ್ಸೆ–ಟುಂಗರು ವ್ಯಕ್ತಿಪೂರಾತೀತ ನೆಂಬ ಅಭಿಪ್ರಾಯ ಯಾರಲ್ಲೂ ಇಲ್ಲ. ಸ್ಟಾಲಿನರನ್ನು ಸಂಧಿಸುವುದು ಸಸೆದು ನೋಡುವ ವಸ್ತುವಾಗಿಯೆ ಎಂಬ ಭೀತಿಯಿದೆ; ಆದರೆ ಮಾವೋರೊಡನೆ ಕೊಡಕೊಂಡ ನಡೆಸಬಹುದೆಂಬ ಧೈರ್ಯವಿದೆ. ಆದ್ದರಿಂದಲೇ ಟಿಬೇಟಿನತ್ತ ಜೈನೀ ಕಮ್ಯೂನಿಸ್ಟ್ ಸೇನೆಗಳು ನುಗ್ಗಿ ಬಂದನೆಂಬ ಸುದ್ದಿ ಬಂದರೂ ಭಾರತ ಸರಕಾರದನ್ನು ಎಂಬಲ್ಲ. "ಟಿಬೇಟಿನ ಮೇಲೆ ತಾನಸಬದ್ಧ ಮೇಲ್ಮೆಯನ್ನು ನಿಜವಿದ್ದರೂ ಯಾಂತ್ರಿಕವಾಗಿ ಕಾರ್ಯಕ್ಷಕಯಿಸಿ ಮುಯುದಾಗಿ ಬರಿಸಿನಿ" ಎಂದು ವಿನಂಬಿಸಿ ಶೈಲಾನುಸಾರವಾದುದಾಗಿ ಮಾವೋ ಜೊರ ನಡಕಾರನ್ನೆ ತೋರಿಂಗರು; ಮಾವೋ ಟ್ಸೆ–ಟುಂಗ್ ಆದಿಕಾರಕ್ಕೆ ಬಂದಾದನ್ನು ಲೆಕ್ಕಿಸಿದರೆ ಕಮ್ಯೂನಿಸ್ಟ್ ಚೈನಲ್ಲಿ ಮಂಚ್ಚಿ ಲಸ್ಸಾರುವ ಕಮ್ಯೂನಿಸ್ಟ್ ನಲ್ಲಿ ಎಂಬ ಪಾನವಹಿದುದು ಅಮೆರಿಕಾನರು ಅವನನ್ನು ಒಲಿಸಿಕೊಳ್ಳುವ ಪ್ರಚಾರ ಮತ್ತು ಪ್ರಯತ್ನಗಳನ್ನು ಕೂಡಾ ಮಾಡಿದ್ದರು. ಮಾವೊ ಟ್ಸೆ–ಟುಂಗ್‌ರಲ್ಲಿ ಸ್ವಾಲಿನರಲ್ಲಿರದ ಕೆಲವು ಅಮೂಲ್ಯ ಗುಣಗಳಿರುವುದರಿಂದಲೇ ಕಮ್ಯೂನಿಸ್ಟ್ ರಷ್ಯದ ನಾಯಕನೊಡನೆ ಎಳಿವ ನಿಶ್ಚಯ ರೂಪದ ಕರೋರತೆ ಕಮ್ಯೂನಿಸ್ಟ್ ಚೈನದ ನಾಯಕನ ಸ್ವಡೆಯಿಂದ ಬಿಟ್ಟುನದಿಲ್ಲ. ಅದೀರೀತಿ ಚೈನಾದಂತಹ ಅತಿ ವಿಸ್ತಾರ ರಾಷ್ಟ್ರವನ್ನಲ್ಲಿ ಒಂದೇ ವರುಷದೊಳಗೆ ಯಾಂಗ್ ಕೈಶೇಕರನ್ನು ಸೋಲಿಸುವ ಮಿಂಚು ವಿಜಯವನ್ನು ಸಾಧಿಸಿಟ್ಸೆ–ಟುಂಗ ಗಳಸಬೇಕಾದರೆ, ಜಿಯಾಂಗ್ ಯಾವುದೇ ಒಂದು ಅಮೂಲ್ಯ ಗುಣದ ಅಭಾವವೂ ಮಾವೋರಲ್ಲಿ ಆ ಗುಣದ ನಮೃದ್ಧಿಯೂ ಇರದೇಕು; ಇದೆ.

ಮಾವೋ ಜೀವನ

ಮಾವೋನ ಜೀವನ ಚಿತ್ರವನ್ನು ತಾರೀಖು ವಾರಾಂಗಿ, ಸವಿವರವಾಗಿ ಕೊಡುವುದು ಅಸಾಧ್ಯ. ಅತನ ಚೈನದೊಂದು ಬಡರೈತ ಕುಟುಂಬದಲ್ಲಿ ಚಾಂಗ್ಶಾ ಎಂಬಲ್ಲಿ ಅಧವಾ ಅದರ ನೆರೆಕೆರೆಯಲ್ಲಿ ಹುಟ್ಟಿರಬೇಕು. ಬನ್ಮತಃ ಕವಿ, ಲೇಖಕ ಸಮಾಜಾಯಿಸುವಿಕೆಗಿಂತ ಹೆಚ್ಚಾಗಿ ಪ್ರತಿಭಟನೆಯ ಸ್ವಭಾವಿ, ಎಂಬುದು ಅವನ ಬಾಲ್ಯದಿಂದಲೆ ಗೊತ್ತಿರವಾಗಿತ್ತು. ಮನೋಮಂಥನದಲ್ಲಿ ಕಲ್ಪನೆಗಳನ್ನು ತುಂಬಿಸಿಟ್ಟು ಬೇಗನಾಕೆ ಕೊಂಡಿರುವ ವಿದ್ವತ್ತನ್ನು ಮತ್ತು ವಿರುದ್ಧ ಶಕ್ತಿಹಿಡಿದು ಬಿಡುಸು ಕಾರ್ಯಗಳನ್ನು ಕೈಕೊಳ್ಳುವ ಎದೆಗಾರಿಕೆಯನ್ನು ಈತ ತನ್ನ ಹೆದಿನೈದನೆಯ ವಸ್ಸಾಯದಲ್ಲೇ ತೋರಿಸಲು ಆರಂಭಿಸಿದ್ದ. ಓದಿ ಓದಿ ಹಣ್ಣುಹಣ್ಣಾಗಿದ್ದರೂ ಆಳಿರುಚಿ ಮೊಂಡಾಗದ ಸುಸ್ತಕ ಪ್ರೇಮಿ ಮಡುಗನಾಗಿದ್ದ, ಚಾಂಗ್ಶಾದ ಲೈಬ್ರೆರಿಯಲ್ಲಿದ್ದ ಪುಸ್ತಕ ಮೂಲವುದನ್ನೂ ಈತ ಬಿಟ್ಟುದಿಲ್ಲ ಒಂದು ದಿನವೀಡೀ ಚೆಂಗ್ ರಾಜವಂಶಾವಳಿಯ "ಕೆಂಪು ಕಣಿವೆಯ ಕನಸು" ಎಂಬ ಕಾದಂಬರಿಯನ್ನೋದುವುದರಲ್ಲಿ ಮಗ್ನನಾಗಿದ್ದರೆ, ಮರುದಿನವೀಡೀ ಪುಂತನ ಚೈನದ ಸರ್ವಶಸ್ಯ ಮಾನ್ಯ ಸೇನಾವಿಚಾರಿ ಸನ್‌ವೂ ಇವರ ಕೈತಿಗಳನ್ನು ನೋಡುವುದರಲ್ಲಿ ಕಳೆಯುತ್ತಿದ್ದ. ಅಗಲೇ ಅವನು ಎಡೆಬಿಡದೆ ಕವಿತೆಗಳನ್ನು ಕಟ್ಟುತ್ತಿದ್ದ; ಅವೆಲ್ಲವುಗಳಲ್ಲೂ ಕ್ರಾಂತಿರವಿನ ಗುತ್ತಿದ್ದಿತು. ಮಾವೋರ ಸೇನಾ ತಂತ್ರಜ್ಞಾನವೆಲ್ಲಾ ಹೆಚ್ಚಾಗಿ ಪುಸ್ತಕಾನ್ಯಾಸದಿಂದಲೇಬಂದಿದೆ. ಚಾಂಗ್ಶಾದ ಶಾಲೆಯಲ್ಲಿ ಹಗುಗ ಮಾವೋ ಕಲಿಯುತ್ತಿದ್ದಾಗಲೇ ತನ್ನ ಶಾಲಾ ಕಟ್ಟಡವನ್ನ ಅತ್ಯಮಿಸಿಕೊಳ್ಳಲು ಬಂದ ಸೋಲ್ಜರ ಮೇಲೆ ಒಂದು ಧಾಳಯನ್ನೇತ ನಡೆಸಿದ್ದ. ಅದರೆ ಆಗ ಈ ಧಾಳೀ ನಾಯಕತ್ವವನ್ನು "ಪ ಹುಗುನ ವೈರ್ಯನೇ" ಎಂಬ ಉದ್ಗಾರವನ್ನಷ್ಟೇ ಹೊಡಿಸಿದ್ದಿತಲ್ಲದೆ, ಒಂದೇದಿನ ಮಹಾ ಸೇನಾನಿಯಾಗುವ ಪೂರ್ವ ಚಿಹ್ನೆಯಿದು, ಎಂಬ ಭವಿಷ್ಯವನ್ನಾಕಾಲದಲ್ಲಿ ಹೇಳಿದವರಿಲ್ಲ. ಶಾಲಾ ದಿನಗಳಾದ ಮೇಲೆ ಮಾವೋ ಕೆಲಕಾಲವನ್ನು ಊದ್ದಿಮೇ ನಗರ ಮಹಾತಿನಲ್ಲಿ ಅತ್ಯಂತ ದರಿದ್ರಾವಸ್ಥೆಯಲ್ಲಿ ದೂಡಿದ್ದ; ಈ ಕಷ್ಟಕಾಲದಲ್ಲೇ ಈತನು ಕಲಿತುಕೊಂಡುದು ಹೆಚ್ಚಿಗೆ. ಆಗಲೂ ಬಹಳವಾಗಿ ಓದುವ ಚಟವೇನೋ ಇವರಲ್ಲಿದ್ದಿತಿದರೂ, ಉದ್ದಿಮೇ ಪ್ರಭುಗಳನ್ನು ಒಂದಿಸಲು ಆವರು ಆರಂಭಿಸಿದುದು ಈ ಕಾಲದಲ್ಲೇ. ಸಾಬೂನು ಕಾರ್ಖಾನೆಯೊಲ್ಲಿ ಒಸಗಾರನಾಗಿ ಸೇರಿಕೊಳ್ಳುವ ಸಂಕಲ್ಪವೊಮ್ಮೆ ಆವರಲ್ಲಾಗ ಮೂಡಿದ್ದಿತ್ತು. ಅಂತಿಮ ಅಬಯಕೆಯೇ ಪ್ರತಿಫಲಿಸಿಗೊಟ್ಟಿತೇನೋ ಎಂಬಂತೆ, ತಾನು ಚೈನದ ಪ್ರಮುಖ ಧಿಪತಿಯಾಗಿ ಪೆಕಿಂಗ್‌ನಲ್ಲಿ ಸೀರವೇರಿದೊಡನೆಯೇ, ನಾಜೋಕೆನ ಪ್ರಾಚೀನ ಕಲಾಕೃತಿಗಳು ಕಡೆಯಲ್ಪಡುತಿದ್ದ ಬೀದಿಗಳು ಕೂಡಲೇ ಸೋಪುಕಯಾರ - ಕಾರ್ಖಾನೆಗಳಾಗಿ ಮಾರ್ಪಡಬೇಕೆಂದು ಮಾವೋ ಆಜ್ಞೆ ಹೊರಡಿಸಿದ್ದರು. ಪುಹಾನ್ ಹಿಡಿಸದೆ, ಸೆಕೆಂಗ್ ವಿಶ್ವವಿದ್ಯಾಲಯಕ್ಕೆ ಸೇರಿಕೊಳ್ಳುವ ಮನಸ್ಸು ಮಾವೋ ಇವರಿಗಾಯಿತು. ಆದರೆ ವಿಶ್ವವಿದ್ಯಾಲಯದ ಸಂಬಳ ಕೊಡುವ ಅನುಕೂಲತೆ ಇನ್ನುಗಲಿಲ್ಲವಾದ್ದರಿಂದ, ಲೈಬ್ರೆರಿಯನ್ ಕೆಲಸಕ್ಕೆ ಸೇರಿಕೊಂಡರು. ಚೈನದ ಮಹಾ ವಿದ್ವಾಂಸ ಚೆನ್ ತು ಹು ಸಹ್ಯ, ಇವರ ಸಂಪರ್ಕ ಮಾವೋರಿಗಾದುದು ಇಲ್ಲಿಯೇ. ಈ ವಿದ್ವಾಂಸ ಮಾವೋರ ಜೀವನದಲ್ಲಿ ಮಹತ್ತಾದ ಪರಿಣಾಮವನ್ನು ಉಂಟು ಮಾಡಿದರು. ತನ್ನೀ ಶಿಷ್ಯನ ಕುರಿತು ಚೆನ್‌ಟು–ಹುಸ್ಸು ಆವರು ಕೊನೆಗೆ ಹೇಳಿದ್ದರು: "ನನ್ನ ನಿಷ್ಕೆಲ್ಲಾ ವಿದ್ಯಾರ್ಥಿಗಳಿಂತ ಈತ ಸಂಪೂರ್ಣ ಭಿನ್ನವಾಗಿದ್ದ. ನಾವು ಪ್ರಸ್ತಾಪಿಸಲು ಪ್ರಯತ್ನಿಸುತ್ತಿರುವ ಚೈನದ ಹೊಸ ನಾಗರಿಕತೆಯ ಕಡೆಗೆ ಈತನ ಯ ಥಾರ್ಥ ಗಮನವಿದ್ದಿತು. ಇದ ನ ಮಗೆ ವಿಶೇಷ ಅನುಕೂಲವಾಗಿದ್ದಿ[illegible]

THE CANARA MUTUAL ASSURANCE COMPANY LIMITED

H. O. UDIPI. Estd: 1935

Hunger Knows No Holiday.

Parental love will make tremendous efforts and face terrible sufferings to satisfy the hunger of its young. This is Nature's plan to supply the need of the helpless and to enable life to march on. To complete this plan the continuance of the parent's life is necessary.

But human life is frail and uncertain. Life insurance is the only certain provider of the comforts of home, education and of a fair chance in life for our Children

T. R. A. Pai

Managing Director.

ಅಮೃತಾಂಜನ

ತಲೆವೇದನೆ, ಶಿರೋನೋವನೆ, ಉಳುಕು ಸುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಕೆಮ್ಮುಗಳು, ಬಾತುಕೊಳ್ಳುವುದು, ಚೇಳಿವಿಷಮುಂತಾದವು, ಹಲ್ಲುವಾತ, ಮೊಣಕಾಲು, ಮೊದಲಾದ ಎಲ್ಲಾ ನೋಗಳಿಗೂ ಸಿದ್ಧೌಷಧ

REGD

ಹುರುಳಿದ್ದಿ ಮದ್ದುನನ್ನಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಕೊಂಬಾಯಿ ಮತ್ತು ಕಲ್ಕತ್ತ.

— ಅಸಾಮಾನ್ಯ ಮಾವೊ ಟ್ಸೆ-ಟುಂಗ್

ಈತ ಪೂರ್ಣಮನಸ್ಸಿಟ್ಟು ಬರೆಯುತ್ತಿದ್ದ; ಮತ್ತಷ್ಟನಲ್ಲಿ ಅಮೋಘ ಶೈಲಿ ಸಾಮರ್ಥ್ಯ ವಿದ್ದಿತು." ಜೆನ್‌ಟಿಟ ಹುಸ್ಲುರವರ 'ಲಾಜೆಯುನೆಸ್ಸಿ' ಪತ್ರಿಕೆಯಲ್ಲಿ ಮಾವೋಟ್ಸೆ-ಟುಂಗರು ನಿವಿಧ ವಿಷಯಗಳ ಮೇಲೆ ಅಮೋಘ ಲೇಖನಗಳನ್ನು ಬರೆದಿದ್ದರು. ಪೆಕಿಂಗ್ ಯುನಿವರ್ಸಿಟಿಯಲ್ಲಿ ಸ್ಥಾನಕಳಕೊಂಡ ವಿದ್ಯಾರ್ಥಿಗಳೆಲ್ಲರ ಪರಿಚಯವೂ ಮಾವೋರಿಗಿದ್ದಿತು. ಇಂತಹ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಅತ್ಯಂತ ಬಡವರಿದ್ದರು; ಬಿಡುವಿನ ಸಮಯದಲ್ಲಿ ರಿಕ್ಷಾ ಎಳೆದು ಜೀವನ ದೂಡುತ್ತಿದ್ದವರೂ ಅ ಪೈಕಿ ಇದ್ದರು. ಈ ವರ್ಗದವರ ನಿದ್ರಿತ ಜ್ವಾಲಾಮುಖಿಯಂತಹ ಹೃದಯದ ಪರಿಚಯ ಮಾವೋರವರಿಗಾಗಿದ್ದಿತು. ಅಂತೆಯೇ ಹೃದ್ರಾವಕ ದರಿದ್ರಾವಸ್ಥೆಗೀಡಾಗಿದ್ದ ಸಣಕಾಸಾಗ್ನಿಯೊಂದಿಗೆ, ಪ್ರಥಮ ಮಹಾಯುದ್ಧಾನಂತರ ಜೈನಕ್ಕೊದಗಿದ್ದ ದುರವಸ್ಥೆಗಾಗಿ ಕ್ರೋಧಾಗ್ನಿಯೂ ಮಿಲನ ಗೊಂಡು ಕುದಿತಾಂತಃಕರಣದಿಂದಿದ್ದ ಜೈನೀ ಬುದ್ದಿವಂತರು ಹಲವರ ಪರಿಚಯವೂ ಮಾವೋಟ್ಸೆ-ಟುಂಗರಿಗಾಗಿದ್ದಿತು. ಮೊದಲನೇ ಮಹಾಯುದ್ಧದಲ್ಲಿ ಜೈನವು ಮಿತ್ರ ರಾಷ್ಟ್ರಗಳ ಪಕ್ಷದಲ್ಲಲ್ಲದ್ದು ನೋಡಿದ್ದರೂ ಆ ಯುದ್ಧಾನಂತರ ನಡೆದ 'ವರ್ಸೇಲ್ಸ್' ಒಪ್ಪಂದ ಪ್ರಕಾರ ಜೈನದ ಶಾಂಟುಂಗ್ ಪ್ರಾಂತ್ಯದ ಅಯಕಟ್ಟಿನ ಸ್ಥಿಳಗಳನ್ನು ಜಪಾನಿಗೆ ಬಿಟ್ಟುಕೊಡಬೇಕಾಗಿ ಬಂದಿದ್ದಿತು. ಈ ಕುರಿತು ತವಗಾದ ದ್ರೋಹಕ್ಕಾಗಿ ಜೈನೀ ತಜ್ಞರೆಲ್ಲರೂ ಕುದಿಯುತ್ತಿದ್ದರು. ವರ್ಸೇಲ್ಸ್ ಒಪ್ಪಂದದಲ್ಲಿ ಅಮೇರಿಕದ ಕೈವಾಡವು ಮುಖ್ಯವಾಗಿದ್ದುದರಿಂದ ಈ ದೆಸೆಯಿಂದಲೇ ಜೈನೀಯರಿಗೆ ಅಮೇರಿಕದ ಸೇಲಿ ಕಹಿಭಾವನೆ ಮೊಳೆತು ಬೇರೂರಿಕೊಂಡಿತು. ಆ ಮೇಲಾದರೂ ಜೈನಾಬಸ್ಥಿತಿ ಸುಧಾರಣೆಗಾಗಿ ಅಮೆರಿಕನೀನಾಡದೆ ತಿರಸ್ಕಾರದಿಂದ ಕಾಣುತ್ತಾ ಬಂದುದರಿಂದ, ಅಮೆರಿಕದ ಕಡೆಗೆ ಸ್ವಾಭಾವಿಕ ಕರೋರ ಭಾವನೆ ಹುಟ್ಟಸುವ ಪ್ರಚಾರಗಳು ಅಂದೇ ಪೆಕಿಂಗ್‌ನಲ್ಲಾರಂಭಿಸಿದುವು. 1949ರಲ್ಲಿ ಜೈನಾದಲ್ಲಿ ಸಂಪೂರ್ಣ ಹೊತು ಹೋದ ಅಮೆರಿಕದ ವರ್ಚಸ್ಸಿಗೆ, ಈ ರೀತಿ ಸುಮಾರು 30ವರು ಷಗಳ ಮೊದಲೇ ಗುದ್ದಲಿ ಬೀಳಹತ್ತಿದ್ದಿತು. ಜೈನೀ ಜನಸಾಮಾನ್ಯರ ದುಸ್ಥಿತಿಯ ಪ್ರತ್ಯಕ್ಷಾನುಭವ ಮಾಡಿಕೊಂಡು ಮತ್ತು ಸ್ವತಃ ಅನುಭವಿಸಿ ತಿಳಿದ-ಹುಟ್ಟು ಪ್ರತಿಭೆ ಮತ್ತು ವಿದ್ವತ್ತುಗಳ ಜತೆಗೆ ಬಹಳ ಓದಿ ಕಲಿತುಕೊಂಡ-ಜನ್ಮತಃ ಧೀರನಾಗಿದ್ದು ಬರೋಬ್ಬರಿ ರಾಷ್ಟ್ರದ ವಿದ್ಯಮಾನಗಳ ಮೇಲಿಂದ ವಿಶೇಷ ಸ್ಫೂರ್ತಿಯನ್ನು ಗಳಿಸಿಕೊಂಡ -ಮಾವೋಟ್ಸೆಟುಂಗರು ತನ್ನ 35ನೇ ವಯಸ್ಸಿನಲ್ಲೇ, ಕಮ್ಯೂನಿಸ್ಟ್ ಪಕ್ಷದ ಅಧ್ಯಕ್ಷ ಗಾದಿಗೇರಿದ್ದರು. ಅಂದಿನಿಂದ ವರು ಕಮ್ಯೂನಿಸ್ಟ್ ಸೇನೆಯನ್ನು ಅತಿ ಪ್ರಬಲವಾಗಿ ಸಂಘಟಿಸಿ, ಜಾಪಾನ್ ಆಕ್ರಮಣದನಂತರ ಜೈನಕ್ಕೊದಗಿದ್ದ ದುರವಸ್ಥೆಗಾಗಿ ಕ್ರೋಧಾಗ್ನಿಯೂ ಮಿಲನ ಗೊಂಡು ಕುದಿತಾಂತಃಕರಣದಿಂದಿದ್ದ ಜೈನೀ ಬುದ್ದಿವಂತರು ಹಲವರ ಪರಿಚಯವೂ ಮಾವೋಟ್ಸೆ-ಟುಂಗರಿಗಾಗಿದ್ದಿತು. ಮೊದಲನೇ ಮಹಾಯುದ್ಧದಲ್ಲಿ ಜೈನವು ಮಿತ್ರ ರಾಷ್ಟ್ರಗಳ ಪಕ್ಷದಲ್ಲಲ್ಲದ್ದು ನೋಡಿದ್ದರೂ ಆ ಯುದ್ಧಾನಂತರ ನಡೆದ 'ವರ್ಸೇಲ್ಸ್' ಒಪ್ಪಂದ ಪ್ರಕಾರ ಜೈನದ ಶಾಂಟುಂಗ್ ಪ್ರಾಂತ್ಯದ ಅಯಕಟ್ಟಿನ ಸ್ಥಿಳಗಳನ್ನು ಜಾ

ನಾಸಿಕ ಕಾಂಗ್ರೆಸ್ ಅಧ್ಯಕ್ಷ

ಬಾಬು ಪುರುಷೋತ್ತಮದಾಸ ಠಂಡನರು ನಾಸಿಕದ 55ನೇ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷರೆಂದು ಆರಿಸಲ್ಪಟ್ಟಿದ್ದಾರೆ. ಶ್ರೀ ಪುರುಷೋತ್ತಮ ದಾಸ ಠಂಡನರಿಗೆ 1306, ಆಚಾರ್ಯ ಕೃಪಲಾನಿಗಳಿಗೆ 1092, ಶ್ರೀ ಶಂಕರ ರಾವ್ ದೇವೋರಿಗೆ 202 ಮತಗಳು ದೊರೆತಿದ್ದುವು. ಜುಮ್ಲಾ ಬಿದ್ದಿದ್ದ 2618 ಮತಗಳ ಪೈಕಿ 18 ಮತಗಳು ಹಾಳಾಗಿದ್ದುವು. ಮಿಕ್ಕಿಬ್ಬರು ಪ್ರತಿ ಸ್ಪರ್ಧಿಗಳಿಗಿಂತ ಬಹುಮತ ಪಡೆದುದಲ್ಲದೆ, ಆರಿಸಲ್ಪಡಬೇಕಾದರಿ ಬಿದ್ದ ಜುನ್ನಾ ಮತಗಳ ಪೈಕಿ ಅರಿವಾಸಿಗೂ ಮಿಕ್ಕಿ ದೊರೆಯಬೇಕೆಂಬ ಶರ್ತಾನುಸಾರವಾಗಿಯೂ ಶ್ರೀ ಠಂಡನರು ಗೆದ್ದು ಬಂದು ನಾಸಿಕ ಕಾಂಗ್ರೆಸಿನ ಅಧ್ಯಕ್ಷರಾಗಿ ನಿಶ್ಚಯಿಸಲ್ಪಟ್ಟಿದ್ದಾರೆ.

ತ್ರಿಮೂರ್ತಿ ಸ್ಪರ್ಧೆ

ನಾಮಪತ್ರ ದಾಖಲಾಗಿದ್ದ 8 ಮಂದಿ ಹುರಿಯಾಳುಗಳ ಪೈಕಿ ಮಿಕ್ಕೆಲ್ಲರೂ ಹಿಂದೆಗೆದು ಠಂಡನ್–ಕೃಪಲಾನಿ– ದೇವೋರವರೂ ಸ್ಪರ್ಧೆಗುಳಿದುಕೊಂಡ ಮೇಲೆ ಉಮೇದ್ವಾರಿಗಳ ಪರವಾಗಿ ಮತಸಂಗ್ರಹಕಾರ್ಯ ಭರದಿಂದ ನಡೆದಿದ್ದಿತು. ಆಚಾರ್ಯ ಕೃಪಲಾನಿ ಮತ್ತು ಶ್ರೀ ಶಂಕರ ದೇವೋರು ಪ್ರಚಾರ ರೂಪೀ ವಾಗ್ವಾದಗಳನ್ನೂ ನಡೆಯಿಸಿದ್ದರು. ಆಗೋಸ್ತು ತಾ. 29ರಲ್ಲಿ ಅಖಿಲ ಭಾರತದ 24 ಕಾಂಗ್ರೆಸ್ ಪ್ರಾಂತ್ಯಗಳ 2800 ಮಂದಿ ಕಾಂಗ್ರೆಸ್ ಪ್ರತಿನಿಧಿಗಳ ಪೈಕಿ 2618 ಮಂದಿ ಮತದಾನ ಮಾಡಿದ್ದರು. ಶ್ರೀ ಮುನ್ಶಿಗಳಂಥವರು ಈ ಮತಪಾನ ಕಾರ್ಯಗಿಯೇ ವಿಮಾನ ಮೂಲಕ ಥಿಲ್ಲಿಯಿಂದ ಬೊಂಬಾಯಿಗೆ ಹಾತಿದ್ದರು. ನೆಹರು, ವಲ್ಲಭಾಯಿಗಳೂ ಮಾತ್ರ ಮತ ಕೊಟ್ಟರಲಿಲ್ಲ.

ಸೆಪ್ಟಂಬರ್ ತಾ. 1ರಲ್ಲಿ ಗಣನೆ ಮಾಡಲಾಗುವಂತೆ ಎಲ್ಲಾ ಪ್ರಾಂತ್ಯಗಳ ಮತ ಪೆಟ್ಟಿಗೆಗಳೂ ಆ ದಿನದೊಳಗೆ ನವಥಿಲ್ಲಿಯ ಕಾಂಗ್ರೆಸ್ ಮುಖ್ಯ ಕಾರ್ಯಾಲಯಕ್ಕೆ ಮುಟ್ಟಬೇಕೆಂದು ಸೂಚಿಸಲಾಗಿದ್ದಿತು. ಕರ್ನಾಟಕ ವೊಂದಂ ಪೆಟ್ಟಿಗೆ ಮಾತ್ರ ನಿಶ್ಚಿತ ದಿನ ಬಂದಿರಲಿಲ್ಲ. ಈ ಜುನಾವಣೆಯ 'ರಿಟರ್ನಿಂಗ್ ಆಫೀಸರ್' ಆಗಿದ್ದ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಕಲಾ ವೆಂಕಟರಾಯರು ಮೊವರು ಉಮೇದ್ವಾರಿಗಳ ಏಜಂಟರ ಸಮ್ಮುಖದಲ್ಲಿ ತಾ. 1ನೇ ಸೂರ್ಯಾಸ್ತ 11 ತಾಸಿಗೆ ಮತಗಣನೆಗಾರಂಭಿಸಿದರು. ಕರ್ನಾಟಕದ 60 ವೋಟುಗಳನ್ನು ಬಿಟ್ಟು ಮಿಕ್ಕೆಲ್ಲವನ್ನೂ ಅಂದೇ ಲೆಕ್ಕಿಸಿದ್ದು–ಫಲಿತಾಂಶದ ಸ್ಪಷ್ಟ ಅಂದಾಜು ಆ ದಿನವೇ ಆಗಿದ್ದಿತಾದರೂ ರಿಟರ್ನಿಂಗ್ ಆಫೀಸರರು ಅಂಕೆ ಸಂಖ್ಯೆಗಳನ್ನು ಆಗಲೇ ತಿಳಿಸಲು ಫಾರಂ ಕರಿಸಿದ್ದರು. ಹೀಗಾಗಿ ಶ್ರೀ ದೇವೋರ ಸ್ಪಬಲ ಪರಾಜಯವು ಅಲ್ಲಿಯೇ ಸಿದ್ಧವಾದಂತೆ ಠಂಡನ್–ಕೃಪಲಾನಿಗಳ ಪೈಕಿ ಯಾರು ಎಂಬ ಕುರಿತು ಒಮ್ಮತವಿರಲಿಲ್ಲ. ಠಂಡನರಿಗೆ ಬಹುಮತ ದೊರೆತರೂ ಬಿದ್ದ ವೋಟುಗಳ ಅರಿವಾಸಿಯಷ್ಟನ್ನು ಅವರು ಪಡೆದಿರಲಾರರೆಂದ್ದರಿಂದ, ದೇವೋರಿಗೆ ಬಿದ್ದ ವೋಟುಗಳಲ್ಲಿ ಕೃಪಲಾನಿ ಠಂಡನರ ಪೈಕಿ ಎರಡನೇ ಸ್ಥಾನವಾರಿಗೆ ದೊರೆತಿದೆ, ಎಂಬುದನ್ನು ಗಣಿಸಿ ನಿಶ್ಚೈಸಬೇಕಾದೀತೆಂಬ ಬಲವಾದ ಸಂದೇಹವೆದ್ದಿದ್ದಿತು. ಆದರೆ ಕರ್ನಾಟಕದ ಮತ ಪೆಟ್ಟಿಗೆಗಳೂ ಬಂದು ಮರುದಿನ ಎಲ್ಲವನ್ನೂ ಒಟ್ಟು ಮಾಡಿ ಹುನಃ ಹೊಸತಾಗಿ ಲೆಕ್ಕ ಮಾಡುವಾಗ ಮೇಲ್ಗಡೆ ನಮೂದಿಸಿದ ಸ್ಪಷ್ಟ ವ್ಯತ್ಯಾಸಗಳು ತೋರಿ ಬಂದು ಶ್ರೀ. ಠಂಡನರು ನಿಸ್ಸಂದೇಹವಾಗಿ ಗೆದ್ದಿರುವುದು ಕಂಡು ಬಂತು ವಿವಿಧ ಪ್ರಾಂತ್ಯಗಳ ಮತಪೆಟ್ಟಿಗೆಗಳ ಬಣ್ಣ, ಆಕಾರ ಮತ್ತು ತರಗತಿಗಳಲ್ಲಿ ವೈವಿಧ್ಯವಿದ್ದಿತು. ಸಿಗರೇಟು ಡಬ್ಬಿಗಳಲ್ಲಿ, ಚಿಮಣೀ ಎಣ್ಣೆ ಅಥವಾ ವನಸ್ಪತೀ ಡಬ್ಬಿಗಳಲ್ಲಿ, ವಿವಿಧಾಕಾರದ ಪೆಟ್ಟಿಗೆಗಳಲ್ಲಿ ಅವು ಬಂದಿದ್ದುವು; ಸಾಲದುದಕ್ಕೆ ಒಂದು ಪ್ರಾಂತ್ಯದವರು ಕೆಂಬಣ್ಣದ ಒಂದು ಟಪ್ಪಾಲು ಪೆಟ್ಟಿಗೆಯೊಳಗೆ ಮತಗಳನ್ನು ತುಂಬಿಸಿ ಕಳುಹಿಸಿದ್ದರು. ಶ್ರೀ. ಕಲಾ ವೆಂಕಟರಾಯರು ಈ ಟಪ್ಪಾಲು ಪೆಟ್ಟಿಗೆಯತ್ತ ಕೈ ತೋರಿಸಿ, ಆಚಾರ್ಯ ಕೃಪಲಾನಿಗಳ ಪ್ರತಿನಿಧಿಗಳಲ್ಲೊಬ್ಬನಾಗಿ ಅಲ್ಲಿದ್ದ ಸಂಚಾರ ವಹಿವಾಟು ಖಾತೆಯ ಉಪಮಂತ್ರಿ ಶ್ರೀ. ಕುರ್ಡಿ ವಲಾಲರೊಡನೆ ವಿನೋದವಾಡಿದರು: "ನೋಡಿ, ಇದ್ದಿದೆ ನಿಮಗೊಂದು ಕಾಣಿಕೆ". ಈ ಮಾತು ಕೇಳಿ ಎಲ್ಲರೂ ನಗೆಯಾಡಿದಾಗ "ಆವರಿದನ್ನು ಸಂಪಾದಿಸಿಕೊಂಡುದಾದರೂ ಎಲ್ಲಿಂದ?" ಎಂದು ಶ್ರೀ ಕರ್ಶಿದ್‌ಲಾಲರು ಆಶ್ಚರ್ಯಗೊಂಡರು. ಮೊದಲ ವಿನಂದ ಊಹಿಗನುಸಾರವಾದ ಕೃಪಾಲನಿ–ಠಂಡನರೊಳಗಿನ ಸರಿ–ವಿಗಲು ವಿಜಯ ಫಲಿತಾಂಶದ ದಿಸೆಯಿಂದ ನವಥಿಲ್ಲಿಯಲ್ಲಿ ಕೇಂದ್ರೀಕೃತವಾಗಿದ್ದ ಕಾಂಗ್ರೆಸ್ ವಾತಾವರಣದಲ್ಲೂ, ದೇಶದಲ್ಲೂ ಒಂದು ವಿಧದ ಆತುರವೆದ್ದಿದ್ದಿತು. ಆದ್ದರಿಂದ ಸ್ಪಷ್ಟ ಫಲಿತಾಂಶವನ್ನು ಅರಿಯಲು ಸುಗ್ಗಿ ಬರುವವರ ಒತ್ತಡ ನಿವಾರಣೆಗಾಗಿ ನವಥಿಲ್ಲಿಯ ಕಾಂಗ್ರೆಸ್ ಕಾರ್ಯಾಲಯದ ಮುತ್ಸದ್ದಿಯೊಬ್ಬರು ಠಂಡನ್, ಕೃಪಲಾನಿಗಳು ಟೆಲಿಫೋನ್ ಮೂಲಕ ತಿಳಿಸಿದಂತೆ, ಮತ್ತು ಹಾಜರಿದ್ದ ಇಕ್ಕಡೆಯ ಪ್ರತಿನಿಧಿಗಳೂ ಅಪೇಕ್ಷಿಸಿದಂತೆ ಮತಗಣನೆಯ ಸ್ಥಳಕ್ಕೆ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶ ಕೊಟ್ಟರಲಿಲ್ಲ. ಎರಡೂ ಕಡೆಯವರ ಕೇಳಿಕೆ ಪ್ರಕಾರ ಪುನಃ ಎಲ್ಲವನ್ನೂ ಹೊಸತಾಗಿ ಗಣನೆ ಮತ್ತು ಪರಿಶೋಧನೆ ನಡಿಸಿ ಮುಗಿಯೊಡನೆ ಚುನಾವಣಾಧಿಕಾರಿ ಶ್ರೀ. ಕಲಾ ವೆಂಕಟ ರಾಯರು ಸಂಬಂಧಪಟ್ಟ ಅಂಕೆಸಂಖ್ಯೆಗಳನ್ನು ಮುಂದಿಟ್ಟು ಶ್ರೀ. ಠಂಡನರು ಆಯಲ್ಪಟ್ಟರೆಂದು ಘೋಷಿಸಿದರು. ಆಗಲೇ ಶ್ರೀ. ಠಂಡನರಿಗೆ ರಾಯರು ತಂತಿ ಬಿಟ್ಟರು: "ಹಾಕಲ್ಪಟ್ಟ ಸಿಂಧುವಾದ ಮತಗಳ ಜುಮ್ಲಾ ಸಂಖ್ಯೆಯಲ್ಲಿ ನಿಮಗೆ ಅರಿವಾಸಿಗೂ ಮಿಕ್ಕಿ ದೊರೆತಿರುವುದರಿಂದ, ನೀವು ಭಾರತ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವಿರೆಂದು ನಾತ್ಮ ಘೋಷಿಸುತ್ತೇನೆ. ನನ್ನ ಹೃತ್ಪೂರ್ವಕ ಅಭಿವಂದನೆಗಳು". ಚುನಾಯಿತ ಅಧ್ಯಕ್ಷರನ್ನು ಅನಂತರ ಅಭಿನಂದಿಸಿದವರಲ್ಲಿ ಮೊದಲಿಗರು ಆಚಾರ್ಯ ಕೃಪಲಾನಿಗಳೇ. "ಅಭಿವಂದನೆಗಳು ಮತ್ತು ಶುಭಾಶಯಗಳು–ಕೃಪಾಲನಿ" ಎಂಬ ತಂತಿಯು ತನ್ನ ತಲೆಗೆ ಅಧ್ಯಕ್ಷ ಮಕುಟವೇರಿದ ಸುದ್ದಿಯ ಜೊತ್ತಲ್ಲೇ ಠಂಡನರ ಕೈಸೇರಿದ್ದಿತು. ಶ್ರೀ. ಠಂಡನರಿಗೀಗ ಅಭಿವಂದನೆ, ಶುಭಾಶಯಾಂಕ್ಷೆ, ಸಹಕಾರ ಭರವಸೆಗಳ ತಂತಿ, ಪತ್ರಗಳು ಬರುತ್ತಿವೆ. ಸಂತೋಷ ಭೇಟಿಗಳಾಗುತ್ತಿವೆ. ತಾನಾರಿಸಲ್ಪಟ್ಟೊಡನೆ ಶ್ರೀ. ಠಂಡನರಂದರು: "ನಾನು ಕೇ

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿ ದರದಲ್ಲಿ ಯಾಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಂಜೆ ವ್ಯಾಸರಾಯರ್,
ಉಡುಪಿ.

For Life Assurance
CUNSULT
THE NEW GUARDIAN OF INDIA
LIFE ASSURANCE Co. LTD.
(Established: 1934)
Chairman: Sri. M. C. T. M. Chidambaram Chattiyar
A Policy in this progressive Life Office is a good investment; its Agency is a valuable business connection.
MANGALORE BRANCH:
K S. R. Road,
Hampankatta, Mangalore.
HEAD OFFICE:
United India Life Building,
R. No. 140 MADRAS

ತಲೆಯು ಇಂದು ಅಖಿಲ ಜೈನದ ಅಧಿಕಾರ ಮಕುಟ ಹೊತ್ತು ರಾಜಿಸುತ್ತಿದೆ.

ಮಾವೋ ಮತ್ತು ಸ್ಟಾಲಿನ್

ಮಾವೋ ಇತ್ತೀಚೆಗೆ ಮೋಸ್ಕೋವಿಗೆ ಹೋಗಿ ಸ್ಟಾಲಿನರೊಡನೆ ನೂತಾಡಿ ಬಂದಿದ್ದಾರೆ. ಸ್ವಭಾವ ಮತ್ತು ಸಂಸ್ಕಾರದಲ್ಲಿ ಸ್ಟಾಲಿನರಿಗೂ ಮಾವೋತ್ಸೆ-ಟುಂಗರಿಗೂ ದಕ್ಷಿಣೋತ್ತರ ವ್ಯತ್ಯಾಸವಿದೆ. ಸ್ಟಾಲಿನ ರಲ್ಲಿರುವುದು ರಣಹದ್ದಿನಂತೆ ಹೊಂಚು ಹಾಕಿ, ರಭಸದಿಂದ ಎರಗುವಷ್ಟೇ ಯೋಗ್ಯತೆ. ಮಾವೋತ್ಸೆ-ಟುಂಗರೋ ರೈತೆ ಬಿಚ್ಚಿ ವಿಶಾಲ ಭಾವನಾಕಾಶದಲ್ಲಿ ಹಾರಾಡಬಲ್ಲ ಪಕ್ಷಿ; ಕಲೆ, ಸಾಹಿತ್ಯ, ಸುಸಂಸ್ಕೃತಿ, ಇಂಥವುಗಳ ಹೆಸರಿದ್ದ ಪಂಗ್ತಿಯಲ್ಲಿ 'ಸ್ಟಾಲಿನ್' ನಾಮವನ್ನು ಸೇರಿಸಲು ಬರುವದಿಲ್ಲ. ಆದರೆ ಮಾವೋರ ಹೆಸರಿನ ಬದಲಿಗೆ ಸಾಹಿತ್ಯ ಸಂಬಂಧದ ಬಿರುದನ್ನು ಮೂಡಿಸಿದರೂ ಅರ್ಥವಾಗಬಲ್ಲುದು. ಸ್ಟಾಲಿನರು ಯುಕ್ತಿ ಪ್ರಧಾನಿ; ಪುಟ್ಟಿನ ಮನುಷ್ಯ; ಲೋಕಕ್ಕೊಂದು ಸಮಸ್ಯೆ. ಮಾವೋ ಖಾಡಾಖಾಡಿ ಮನುಷ್ಯ; ಸರಳ ಮಾತಿನವರು; ಎಲ್ಲಾ ಉಪಕರಣಗಳೊಡನೆ ಮುಂಭಾಗದಲ್ಲೇ ಕಾಣಿಸಿಕೊಳ್ಳುವವರು. ಹೀಗಿದ್ದರೂ ಒಂದು ಮಾತು ನಿಜ. ಕಮ್ಯೂನಿಸ್ಟ್ ರಶ್ಯಾ ಮತ್ತು ಚೈನಾಗಳು ಒಂದನ್ನೊಂದು ಆಗಲಿರುವುದು ಅಸಾಧ್ಯ-ಸ್ಟಾಲಿನ್ ಮತ್ತು ಮಾವೋರ ಮುಖಗಳು ವಿರುದ್ಧ ದಿಕ್ಕುಗಳಿಗೆ ತಿರುಗುವುದು ಅಸಂಭವ. ಮಾವೊ ಮತ್ತೊಬ್ಬ ಮಾರ್ಷಲ್ ಟಿಟೋ ಆವಾನೆಂದು ಅಮೇರಿಕನರು ಆಶಿಸುವುದು ವ್ಯರ್ಥ. ಬದಲಿಗೆ ಅಮೆರಿಕದಂತಹ ಕಮ್ಯೂನಿಸಮಿನ ಕಡು ವೈರಿಗಳು ಸ್ಟಾಲಿನರಿಗಿಂತ ಹೆಚ್ಚಾಗಿ ಮಾವೋತ್ಸೆ-ಟುಂಗರಿಗೆ ಹೆದರಬೇಕಾಗಿದೆ. ಒಂದನೆಯದಾಗಿ ಈ ನಾಯಕನನ್ನು ಇದಿರಿಸಿ, ಅಥವಾ ಕಣ್ಣು ತಪ್ಪಿಸಿ, ದೂರದ ಅಸ್ಯಾದಲ್ಲಿನ್ನು ತಮ್ಮಾಟವಾಡುವದು ಅಮೆರಿಕಕ್ಕೆ ಅಸಾಧ್ಯ. ಎರಡನೆಯದಾಗಿ ಸ್ಟಾಲಿನರಿಗೆ ಗಂಥಗಳಾಳಿಯೇ ಸೋಂಕಿರದ ವಿದ್ವತ್ತು, ಸುಸಂಸ್ಕೃತಿ ಮಾವೋರಲ್ಲಿರುವುದರಿಂದ 'ಕಮ್ಯೂನಿಸ್ಮರೆಂದರೆ ಕೊರಡು ಬರಡು ಕಾಶುರುಷರು' ಎಂಬ ಜಗುಪ್ಸೆ ಮೊಳೆಯಿಸುವ ಅಪ ಪ್ರಚಾರ ನಡೆಸುವುದಕ್ಕಾಗಿ ಅಮೆರಿಕಾನರಿಗಿವರೊಂದು ದೊಡ್ಡ ಅಡಂಕ. ಆದರೆ ಮಾವೋರ ತಲೆ ಇಷ್ಟು ತುಂಬಿಕೊಂಡಿದ್ದರೂ ಅವರ ಕಾಲೀಗ ಕೆಸರಿನಲ್ಲಿ ಹೂತು ಹೋಗಿದೆ. ಕಳೆದ ಹೆಕ್ಕು ಹದಿನೈದು ವರುಷಗಳಿಂದಲೂ ಜಾಪಾನ್ ಯುದ್ಧ, ಅಂತರ್ಯುದ್ಧಗಳಲ್ಲೇ ನಿರತವಿದ್ದ ದುರ್ದೈವೀ ಮತ್ತು ದಂದ್ರ ರಾಷ್ಟ್ರ ಚೈನ ಇಂದು ಆರ್ಥಿಕ ದೃಷ್ಟಿಯಿಂದ ರಸಾತಳಕ್ಕಿಳಿದಿದೆ. ಅದನ್ನು ಮಾವೋತ್ಸೆ-ಟುಂಗರು ಹೇಗೆ ಮೇಲೆತ್ತುವರೋ! ಜಗ್ಗಿದ ಭುಜ-ಜೈನೀ ವಿದ್ವಾಂಸರಿಗನುಗುಣವಾದ ವಿರಿಕೆಯ ಸ್ವರ-ಜೈನಾ ರಾಷ್ಟ್ರಪಿತ ಸನ್ಯಾಯೆಟ್‌ಸನರ ಮುದಿ ಪ್ರಾಯದ ಭಾವಚಿತ್ರವನ್ನೇ ಹೋಲುವ ಆಕಾರ-ಉಳ್ಳ ಈ ಮನುಷ್ಯನ ಕಡೆಗೆ ಪ್ರಪಂಚ ಕಪ್ಪೆತ್ತಿ ನೋಡುತ್ತಿದೆ.

ನವಯುಗ ವಾರಪತ್ರಿಕೆಯನ್ನು ತಪ್ಪದೆ ಓದಿರಿ

ಪುರುಷೋತ್ತಮದಾಸ ಥಂಡನ್

ಳಿಕೊಳ್ಳಬೇಡೀ ನೆನ್ನ ಪರವಾಗಿ ಕೆಲಸ ಮಾಡಿ, ನನ್ನ ಮೇಲೆ ವಿಶ್ವಾಸವನ್ನು ವ್ಯಕ್ತಪಡಿಸಿದ ಎಲ್ಲಾ ಮಿತ್ರರಿಗೂ ಕೃತಜ್ಞನಿದ್ದೇನೆ. ಈ ನಂಬಿಕೆಗೆ ನಾನು ಯೋಗ್ಯನೆನ್ನಿಸುವಂತೆ ಪ್ರಯತ್ನಿಸುವೆ".

ಈ ಬಾರಿಯ ವೈಶಿಷ್ಟ್ಯ

ಆಧುನಿಕ ರಾಜರ್ಷಿಯಂತಿರುವ ಶ್ರೀ ಪುರುಷೋತ್ತಮದಾಸ ಥಂಡನರ ವ್ಯಕ್ತಿಗತ ಶುದ್ಧತೆ ಮತ್ತು ಪ್ರಭಾವವು ಅತ್ಯಜ್ವಲ ರೂಪದಾಗೂ ಸರ್ವಮಾನ್ಯವಿರುವುದರಿಂದ ಈ ಕುರಿತು ಪ್ರತಿ ಮಾತಿಲ್ಲ. ಆದರೆ ದೇಶ ವಿಭಜನೆಯ ಕುರಿತು ಯಾವ ಸಂದರ್ಭದಲ್ಲೂ ಒಂದಿಷ್ಟು ಮೊಂಡಾಗದ ತೀಕ್ಷ್ಣಣ ವಿರೋಧವನ್ನು ಕಟ್ಟಿಕೊಂಡಿರುವ-ತನ್ನೇ ಮನಸ್ಸಾಕ್ಷಿಯನ್ನು ವಂಚಿಸುವ ಮಾತಂತಿರಲಿ, ಒಂದಿಷ್ಟು ಸಮಜಾಯಿಸಿಯಾದರೂ ಹೊಂದಿಕೊಂಡು ಹೋಗುವದನ್ನೆಂದಿಗೂ ಒಪ್ಪದ--ಈ ತ್ಯಜೇಯ ಹೃದಯದ ನಾಯಕ ಸದ್ಯ ಸ್ಥಿತಿಯಲ್ಲಿ ಕಾಂಗ್ರೆಸ್‌ನ್ನು ಹೇಗೆ ಮತ್ತೆಲ್ಲಿ ವರೆಗೆ ನಡೆಯಿಸುವರೋ ನೋಡಲಿಕ್ಕಿದೆ. ಎಂತಹ ಕಟ್ಟುಗ್ರ ಹಿಂದೂ ಅಭಿಮಾನಿಯಲ್ಲೂ ಇರದ ರಾಷ್ಟ್ರ ವಿಭಜನಾ ದ್ವೇಶವು ಶ್ರೀ ಥಂಡನರಲ್ಲಿರುವುದರಿಂದ, ಅವರು ಹಿಂದೂ ಮಹಾಸಭಾ ಮನೋವೃತ್ತಿಯವರೆಂಬ ತಪ್ಪಭಿಪ್ರಾಯವು ಮೂಡಿದೆ. ಆದರೆ, ತನ್ನದೊಂದು ಕೆಣ್ಣಣ ತಪ್ಪು ಮಾಡಿದರೂ ಅದನ್ನು ಕೆಸ್ತು ಹಾಕಬೇಕೆಂಬ ಮಾದರಿಯ ನ್ಯಾಯ ನಿಷ್ಠುರತೆಯು ಹೊರತು, ಜಾತ್ಯಂಧತೆಯೆಂಬುದಿವರಲ್ಲಿಲ್ಲ. ದೇಶವಿಭಜನೆಯು ಅನ್ಯಾಯವೆಂಬುದು ಅವರ ಮನಸ್ಸಿನಲ್ಲಿ ಬೇರೂರಿ ನಿಂತುದರಿಂದ ಅವರದರ ಜೀರ ವಿರೋಧಿ. ಯಾವ ಹಿತಸಾಧನೆಗಾದರೂ ಆ ಪಾಪಕೂಪಕ್ಕೆ ಸಂಧಾನಕ್ಕೆ ಬರಲೊಲ್ಲೆ, ಎನ್ನುವವರು. ಈ ದೆಸೆಯಿಂದಲೇ ಪಂಡಿತ ನೆಹರುಗಳ ಅಪೇಕ್ಷೆಯ ಜನ ಇವರಲ್ಲ; ಆದ್ದರಿಂದ ಈಗಿನ ಪ್ರಧಾನ ಮಂತ್ರಿಯೇ ಬೇಕೆಂದಿದ್ದರೆ ಅವರಿಗಾಗುವ ಅಧ್ಯಕ್ಷನನ್ನು ಕೂಡ ಬೇಕು ಎಂಬ ವಾದವು ಶ್ರೀ. ಥಂಡನರ ವಿಜಯದಿಂದ ಸೋತುಹೋಗಿದೆ ಅದರೆ ಪಂಡಿತ ನೆಹರುಗಳು 'ಉಮೇದ್ವಾರಿಗಳ ಪೈಕಿ ತಾನು ಮೆಚ್ಚುವದಿಂ ಥವನನ್ನು' ಎಂದು ಪ್ರತ್ಯಕ್ಷಾಪ್ರತ್ಯಕ್ಷ ವಾಗಿ ಯಾರನ್ನೂ ಸೂಚಿಸಿದ್ದಿಲ್ಲ. ಸರ್ದಾರ್ ವಲ್ಲಭಾಯಿಗಳ ಮೆಚ್ಚುಗೆಯವರು ಶ್ರೀ ಥಂಡನರೆನ್ನಬಹುದು ಈ ಕುರಿತು ಸರ್ದಾರರು ಬಾಯಿಬಿಡುವ ಅಜಾತುರ್ಯವನ್ನು ಮಾಡಿಲ್ಲವಾದರೂ ಅವರ ಅಭಿಮತಾನುಸಾರ ಕೆಲಸ ನಡೆದಿದ್ದಿತೆಂಬುದನ್ನು ಊಹಿಸಬಹುದು. ವಲ್ಲಭಾಯಿಗಳ ಮಾತೇ ಶಾಸನವಾಗಿರುವ ಬೊಂಬಾಯಿ, ಗುಜರಾತುಗಳಲ್ಲಿ ಶ್ರೀ ಥಂಡನರಿಗೆ ಅತ್ಯಧಿಕ ಮತ ದೊರೆತಿದ್ದಿತು. ಆಂಧ್ರದಲ್ಲಿದ್ದ ವಿವಾದದ ದೆಸೆಯಿಂದ ಅಲ್ಲೀ ನರಿಗೆ ಪ್ರತಿನಿಧಿಗಳ ಚುನಾವಣೆಯೇ ನಡೆಯದಿರುವುದರಿಂದ, ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಆ ಪ್ರಾಂತ್ಯ ಭಾಗವಹಿಸದಂತಾಗಿತ್ತು. ತಮಿಳುನಾಡು, ಕರ್ನಾಟಕ, ಮೊದಲಾದ ದಕ್ಷಿಣ ಭಾರತದ ಭಾಗಗಳಲ್ಲಿ ಆಚಾರ್ಯ ಕೃಪಲಾನಿಗಳಿಗೇನೇ ಅಧಿಕ ಮತ ದೊರೆತಿರುವಾಗ ಉತ್ತರ ಭಾರತದ ಪ್ರಾಂತ್ಯಗಳಲ್ಲಿ ಕೃಪಲಾನಿ-ಥಂಡನರು ಬಹುತೇಕವಾಗಿ ಸರಿಮಿಗಿಲು ಬಂದಿದ್ದರು. ಇವೆಲ್ಲವನ್ನೂ ಪರಿತೀಲಿಸುವಾಗ ಸರ್ದಾರ್ ವಲ್ಲಭಾಯಿಗಳ ಕೈವಾಡದೊಂದಿಗೆ, ಕಾಂಗ್ರೆಸಿಗರಲ್ಲಿ ಸುಗಿದುಕೊಂಡಿರುವ ರಾಷ್ಟ್ರ ವಿಭಜನಾ ವಿರೋಧ ಭಾವನೆಯೂ ಮೇಲೆದ್ದು ಕೆಲಸಮಾಡಿ ಥಂಡನರ ವಿಜಯವನ್ನು ಸಾಧಿಸಿದಂತೆ ತೋರುತ್ತಿದೆ ಕಾಂಗ್ರೆಸನ್ನು ತತ್ವನಿಷ್ಠೆ-ನಿಷ್ಠುರತೆಯಿಂದ ಮುನ್ನಡೆಸಬೇಕೆಂಬ ಭಾವನೆಯು ಕೃಪಲಾನಿಗಳ ಕಡೆಯಿಂದ ಕೆಲಸ ಮಾಡಿ ಸೋತರೂ ಬಹುತೇಕವಾಗಿ ಸರಿಸಮಾನ ಮಟ್ಟಕ್ಕೆ ಬಂದಿದ್ದಿತು. ಥಂಡನರ ಕಡೆಯಿಂದ ವಲ್ಲಭಾಯಿಗಳ ವರ್ಚಸ್ಸು ಬಿದ್ದಂತೆ ಕೃಪಲಾನಿಗಳ ಕಡೆಯಿಂದ ನೆಹರೂ ಧ್ವನಿ ಚಿಹ್ನೆ ತೋರಿಬರುತಿದ್ದರೂ ಆಚಾರ್ಯ ಕೃಪಲಾನಿಗಳು ಗೆಲ್ಲಬಹುದಿದ್ದಿತು. ಥಂಡನ್--ಕೃಪಲಾನಿಗಳೆಂಬ ಎರಡು ವ್ಯಾಘ್ರಗಳ ನಡುವೆ ಮಾರ್ಜಾಲನಂತಿದ್ದ ಶ್ರೀ ದೇಪ್ರೋ ಕೃಪಲಾನಿಗಳ ಪಾಲಿನ ಕೆಲವಂಶವನ್ನು ತಿನ್ನದಿರುತಿದ್ದರೂ ವಿಜಯ ಕೃಪಲಾನಿಗಳದಾಗುತಿತ್ತು. ಕಾಂಗ್ರೆಸಿನ ಪ್ರಚಲಿತ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವ್‌ರೋ ಕೇವಲ 202 ಮತಗಳನ್ನು ಪಡೆದು, ಭದ್ರಕಾರಣ ಕಟ್ಟುವ ಸಂಪ್ರದಾಯವಿರುತಿದ್ದರೆ, ಅದು ಮುಟ್ಟುಗೋಲಾಗಿ ಹೋಗುವ ಮಾದರಿಯ ಪ್ರಬಲ ಪರಿಭವವನ್ನು ಪಡೆದಿರುವುದನ್ನು ಕಾಣುವಾಗ ಕಾಂಗ್ರೆಸ್ ಈಗ ಇದ್ದಂತಿರುವುದು ದೇಶಕ್ಕೆ ಎಷ್ಟಕ್ಕೂ ಬೇಕಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಕಾಂಗ್ರೆಸಿನ 52 ವರುಷಗಳ ಚರಿತ್ರೆಯಲ್ಲಿ ಸರ್ವಾನುಮತದಿಂದ ಅಧ್ಯಕ್ಷನನ್ನಾರಿಸುವ ಸಂಪ್ರದಾಯವು ಮುಂದುವರಿದೀಗ ನಾಲ್ಕನೇ ಬಾರಿ. ಪ್ರಥಮದ್ದಿಂದರಿ ಬಾಬು ಸುಭಾಸ್ ಚಂದ್ರ ಬೋಸ್ ವಶ್ತು ಡಾ। ಪಟ್ಟಾಭಿಗಳೊಳಗೆ ನಡೆದಿದ್ದ ಅಂದಿನ ವಿಶೇಷ ಉದ್ವೇಗದಾಯೀ ಸ್ಪರ್ಧೆ; ಎರಡನೆಯದು ಮೌಲಾನಾ ಅಬುಲ್ ಕಲಾಮ್ ಆಜಾದ್ ಮತ್ತು ಎಮ್. ಎನ್. ರೋಯಿಗಳೊಳಗೆ ನಡೆದಿದ್ದಿತು, ಮೂರನೆಯದಾಗಿ ಕಳೆದ ವರುಷ ಪಟ್ಟಾಭಿ ಮತ್ತು ಶ್ರೀ. ಥಂಡನರೊಳಗೆ. ನಾಲ್ಕನೆಯದಾದ ಈ ಬಾರಿಯ ಸ್ಪರ್ಧೆಯಲ್ಲಿ ಇಬ್ಬರ ಬದಲಿಗೆ ಮೂವರು ಸ್ಪರ್ಧಿಸಿಕೊಂಡರು. ಪ್ರಥಮ ಸ್ಪರ್ಧೆಯಲ್ಲಿ ಸೋತಿದ್ದ ಪಟ್ಟಾಭಿಗಳು, ಎರಡನೇ ಬಾರಿ ನಿಂತಾಗ ಗೆದ್ದಿದ್ದರು; ಆಂತೆಯೇ ಹೋದ ವರುಷ ಸೋತಿದ್ದ ಥಂಡನ್ ಈ ವರುಷ ಗೆದ್ದರು; ಈ ದೃಷ್ಟಿಯಿಂದ ಈ ಬಾರಿ ಸೋತ ಕೃಪಲಾನಿಗಳಿಗೆ ಮುಂದಿನ ಬಾರಿ ವಿಜಯ ಖಂಡಿತವೇನೋ! ಅಂತೂ ಸರ್ವಾನುಮತದ ಆಯ್ಕೆ ಎಂದಿದ್ದ ಕಾಂಗ್ರೆಸ್ ಅಧ್ಯಕ್ಷ ಗಾದಿಗೆ ಇಬ್ಬಿಬ್ಬರೂ ಮೇಲಾಡಿಕೊಳ್ಳುವ ಅಭ್ಯಾಸ ಈ ಮೊದಲೇ ಬಂದಿದ್ದಿತಾದರೆ ಈ ವರುಷ ಹೋರಾಡಿಕೊಳ್ಳುವವರು ಮೂವರಾದರು. ಇನ್ನು ಮುಂದೆ ಈ ಸಂಖ್ಯೆಯು ಬೆಳೆದು, ಕಾಂಗ್ರೆಸ್ ಅಧ್ಯಕ್ಷ ಸ್ಥಾನವೂ ಖಾಲಿ ಬಿದ್ದ ಒಂದು ನೌಕರೀ ಸ್ಥಾನದ ದರ್ಜೆಗಿಳಿದೀತೇ? ಕಾಂಗ್ರೆಸ್ ಸವಿತೆಗಳ ಮತ್ತು ಆವುಗಳ ಅಧಿಕಾರಿಗಳ ಅವಧಿಯು ಮೂರು ವರ್ಷವೆಂದು ಹೊಸ ಕಾಂಗ್ರೆಸ್ ಘಟನೆಯಲ್ಲಡೆಯಾದರೂ ಕಾಂಗ್ರೆಸ್ ಅಧ್ಯಕ್ಷನಿಗೂ ಅಷ್ಟೇ ಅವಧಿಯೆಂದೇನೂ ಉಲ್ಲೇಖಿಸಲ್ಪಟ್ಟಿಲ್ಲ. ಕಾಂಗ್ರೆಸ್ ಮಹಾಧಿವೇಶನವನ್ನೇ ವರುಷಂಪ್ರತಿ ಸೇರಿಸಬೇಕೆಂಬ ನಿಯಮವದರಲ್ಲಿರುವುದಂದಂ, ಅಧ್ಯಕ್ಷ ಪೀಠವೂ ವರುಷಕ್ಕೊಮ್ಮೆ ಪುನರಾಲೋಚಿಸಲ್ಪಡುವಂತಹದಿದೆ, ಎಂದು ತಿಳಿದುಬಂದಿದೆ.

ಶ್ರೀ. ಪಿ. ಡಿ. ಥಂಡನ್

ನಿಯೋಜಿತಾಧ್ಯಕ್ಷ ಶ್ರೀ. ಪುರುಷೋತ್ತಮದಾಸ ಥಂಡನರು ಉತ್ತರ ಪ್ರದೇಶದ ಅಲಹಾಬಾದಿನಲ್ಲಿ 1882ರಲ್ಲಿ ಜನಿಸಿದವರು, 68 ವರುಷ ವ್ಯಾಯದ ಬಳಿಕ ಹೃದಯಾಘಾತದಿಂದ ಅಲಹಾಬಾದಿನ ಮೈರ್ ಸೆಂಟ್ರಲ್ ಮುಸ್ಲೀಂ-ವರ್ನಾಕ್ಯುಲರ್ ಹೈಸ್ಕೂಲಿನಲ್ಲಿ ಆ ಮೇಲೆ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಮತ್ತು ಮುಯಿರ್ ಸೆಂಟ್ರಲ್ ಕಾಲೇಜುಗಳಲ್ಲಿ ಕಲಿತು ಬಿ. ಎ ಆಗಿ ಎಲ್. ಎಲ್. ಬಿ. ಡಿಗ್ರಿ ಗಳಿಸಿ, ಎಡ್ವೋಕೇಟರಾದರು. ಸರ್. ತೇಜ ಬಹದೂರ್ ಸಪ್ರುಗಳ ಸಹಾಯಕ ವಕೀಲನಾಗಿ ಕೆಲಸ ಮಾಡಿದ್ದರು. 1914ರಿಂದ 1919ರ ವರೆಗೆ ಭಾರತ ಸಂಸ್ಥಾನದ ಸಮರ್ಥ ಕಾನೂನು-ಸಲಹೆಗಾರನಾಗಿ ಕಾರ್ಯನಿರ್ವಹಿಸಿದ್ದು, ಆ ಮೇಲೆ ಅಲ್ಲಹಾಬಾದ ನಗರಸಭೆಯ ಅಧ್ಯಕ್ಷನಾದರು. ಆಗಿನ ವರ ಸೇವೆಯ ಸ್ಮಾರಕವಾಗಿ ಅಲಹಾಬಾದ್ ಮುನ್ಸಿಪಾಲಿಟಿಯು ಹೆಸರಿಟ್ಟಿರುವ ಪುರುಷೋತ್ತಮದಾಸ ಥಂಡನ್ ಪಾರ್ಕ್ ಹಿಂದು ಅಲ್ಲಿದೆ. 1899ರಲ್ಲೇ ಶ್ರೀ ಥಂಡನರು ಕಾಂಗ್ರೆಸಿಗೆ ಸೇರಿದ್ದರು; 1916ರಲ್ಲಿ ಆದರ ಓರ್ವ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದರು. ಅಖಂಡ ರಾಷ್ಟ್ರೀಯತೆಯ ಅಜನ್ಮ ಪ್ರೇಮಿಯಾಗಿರುವ ಇವರು 1916ರಲ್ಲೇ ಪ್ರತ್ಯೇಕ ಮತದಾನ ಪದ್ಧತಿಯನ್ನು ವಿರೋಧಿಸಿದ್ದರು. ತನ್ನ ವಿರೋಧವನ್ನು ಬಿಡುವುದರಲ್ಲೂ ಮಿಕ್ಕ ಅಗ್ರಗಣ್ಯ ಕಾಂಗ್ರೆಸ್ ನಾಯಕರಿಗಿಂತ ಇವರು ಒಂದೆರಡು ವರುಷಗಳಿಗೆ ಮೊದಲಿಗರಾದ್ದಾರೆ. 1919ರ ರೌಲೆಟ್ ಆಕ್ಟಿನ ವಿರುದ್ಧಾಂದೋಲನದಲ್ಲಿ ಸೇರಿಕೊಳ್ಳಲು ಕಾಲತಡ ಬಿಟ್ಟು ಸತ್ಯಾಗ್ರಹ ಚಳವಳಿಗೆ ಧುಮುಕಿದರು. 1921ರಲ್ಲಿ ಅಸಹಕಾರ ಯೋಧ ಥಂಡನರಿಗೆ ಪ್ರಥಮ ಬಾರಿ ಜೈಲು ವರುಷ ಸಜೆಯಾಯಿತು. ಬಿಡುಗಡೆಯಾಗಿ ಬಂದೊಡನೆ ಸಂಯುಕ್ತ ಪ್ರಾಂತ್ಯ ಕಾಂಗ್ರೆಸಿನ ನಾಯಕತ್ವ ಸಹಿಸಿಕೊಂಡರು. 1923ರಲ್ಲಿ ಮೊತ್ತ ಮೊದಲನೆಯ ಮತ್ತು 1948ರಲ್ಲಿ ಕೊನೆಯ ಸಲ ಇವರು ಸಂಯುಕ್ತ ಪ್ರಾಂತ್ಯ ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು. 1921ರಿಂದ 1929ರ ವರೆಗೆ ಅಸಹಕಾರಿನ ಜಾಬ್ ನೇಶನಲ್ ಬೇಂಕಿನ ಜನರಲ್ ಮೇನೇಜರರಾಗಿದ್ದು ಹಣಕಾಸಿನ ಲೆಕ್ಕಾಚಾರಣೆಯನ್ನೂ ಪ್ರದರ್ಶಿಸಿದ್ದರು. ಅಸಹಕಾರ ಲಜಪತ ರೈಗಳಿಂದ ಸ್ಥಾಪಿಸಲ್ಪಟ್ಟ 'ಜನತಾ ಸೇವಕ ಸಂಘ'ದ ಅಧ್ಯಕ್ಷನಾಗಿ 1929ರಲ್ಲಿ ಅದನ್ನು ಸೇರಿದ್ದರು. 1930ರ ಕಾಯ್ದೆ ಭಂಗ ಚಳವಳದಲ್ಲಿ ಅಗ್ರಭಾಗವಹಿಸಿ ಜಾರಿ ಜೈಲಿಗಟ್ಟಲ್ಪಟ್ಟರು. 1932ರಲ್ಲೇ 'ಕೇಂದ್ರ ಕೆಸಾನ್ ಸಂಘ'ವನ್ನು ಸ್ವತಃ ಸ್ಥಾಪಿಸಿ 1932ರಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ ನಡೆದ ಗೇಣಿ ನಿರಾಕರಣ ಹೋರಾಟದ ಪ್ರಮುಖ ಸೇನಾನಿತ್ವ ವಹಿಸಿದ್ದರು. 1937ರಲ್ಲಿ ಸಂಯುಕ್ತ ಪ್ರಾಂತ್ಯ ಲೆಜಿಸ್ಲೇಟಿವ್ ಎಸೆಂಬ್ಲಿಯ ಸದಸ್ಯರಾಗಿ ಆಯ್ಕೆಯಾಗಿ ಅದರ ಅಧ್ಯಕ್ಷನಾಗಿ ಆರಿಸಲ್ಪಟ್ಟರು. ಆ ಪ್ರಾರಂಭವಾದೊಡನೆ ಸ್ವಾತಂತ್ರ್ಯ ಸಂಗ್ರಾಮ ಚಳವಳದಲ್ಲಿ ಸೇರಿಕೊಂಡು 1942ರಲ್ಲಿ ಸುಮಾರು ಒಂದು ವರುಷ, 1945ರ ಕ್ವಿಟ್ ಇಂಡಿಯಾ ಚಳವಳದಲ್ಲಿ ಎರಡು ವರುಷಗಳಿಗೂ ಮಿಕ್ಕಿ ಸ್ಥಾನಬದ್ಧರಾಗಿಯಲ್ಲಿದ್ದರು. 1946ರಲ್ಲಿ ಕಾಂಗ್ರೆಸ್ ಪ್ರಾಂತಿಕ ಸರ್ಕಾರಗಳನ್ನು ನಡೆಯಿಸಿತ್ತು; ಥಂಡನರೂ ಸಂಯುಕ್ತ ಪ್ರಾಂತ್ಯ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧ್ಯಕ್ಷಸ್ಥಾನವನ್ನು ಪುನಃ ಸ್ವೀಕರಿಸಿಕೊಂಡರು; ಅದೇ ವರುಷ ಫೆಬ್ರವರಿಯಲ್ಲಿ ಸಮಿತಿಯ ಸದಸ್ಯನೂ ಆದರು. ಈ ಸಲ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಗಳು

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore**

Branches: City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanbangad & Mercara.

B. Manjaya Hegde

Advocate & President, District Board, S. Kanara

CHAIRMAN

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,

Moolky, S. K.

THE
Canara Banking Corporation Ltd.
(Incorporated in India)
Estd: 1906.
Head Office : UDIPI, (S. I.)

Capital Authorised .... Rs. 25,00,000
Capital Issued, Subscribed &
Paid up .... Rs. 20,00,000
Reserves .... Rs. 9,44,765

ಭಾನುವಾರ, ಉಡುಪಿ, ೬-೯-೧೯೬೦

ಧಾರಣೇ ಹೆಚ್ಚಳ

ಆಹಾರ ಪರಿಸ್ಥಿತಿ ಸುಧಾರಿಸಿ, ಅವಶ್ಯ ಸಾಮಾನ್ಯಗಳ ಬೆಲೆ ತಗ್ಗುತಿದ್ದರೆ, ಭಾರತದ ಜನತೆಯ ಜೀವನ ಸಂಕಷ್ಟವು ಒಮ್ಮೆಗೆ ನಿವಾರಣೆಗೊಳ್ಳುತಿತ್ತು; ಜನಸಾಮಾನ್ಯರು ಶಾಂತಿಯುಸಿರನ್ನು ಬಿಡುವಂತಾಗುತಿತ್ತು; ನ್ಯಾಯೋಚಿತ ಆತೃಪ್ತಿಯಿಂದೋಲನಗಳಾವುವೂ ಏಳದಂತಾಗುತಿತ್ತು. ಬೊಂಬಾಯಿಯ ಗಿರಣೀ ಮಜೂರ ಪ್ರಚಂಡ ಮುಷ್ಕರವೀಗ ನಡೆದಿದೆ; ರೈಲ್ವೇ ನೌಕರರು ಅಂಚೇ ನೌಕರರೇ ಮೊದಲಾದವರ ಸಂಬಳ, ಭತ್ತೆ ಸಂಬಂಧದ ಬೇಡಿಕೆಗಳು ಮುಂದೆ ಬಂದಿವೆ. ಯಾವ ಜಾತಿಯ, ಯಾವುದೇ ವರ್ಗದ ನೌಕರ ! ಇರಲಿ– ಯಾವ ವಿಧಾನದಿಂದ ಜೀವ ನಿರ್ವಹಿಸುವವರೇ ಇರಲಿ– ಮಧ್ಯಮ ವರ್ಗದ ಕೆಳ ತರಗತಿಯ ಜನರಲ್ಲಿ ಯಾರ ಜೀವನವೂ ಸುಗಮವಾಗಿಲ್ಲ; ಸುಖಕರವಿಲ್ಲ. ಈ ಸಂಬಂಧದ ತಮ್ಮ ಅತೃಪ್ತಿಯ ಅಭಿವ್ಯಕ್ತಿ ಸಂಘಟಿತರೂಪದಿಂದ ಪ್ರದರ್ಶಿಸುವ ಪ್ರಯತ್ನಕ್ಕೂ ಅನೇಕ ಮತ್ತು ಆಗ್ರಹ ಕೆಲವರ ಮೇಲಿವೆ, ಉಳಿದವರಿಗಂತಹದಿಲ್ಲದ ದೆಸೆಯಿಂದ, ಅಂಥವರು ತಮ್ಮೊಳಗೇನೇ ಕುಮ್ಮುತ್ತಿರಬಹುದು. ಅಂತೂ ಜನಸಾಮಾನ್ಯರೆಲ್ಲರೂ ಅತೃಪ್ತರೇ ಇರುವುದರಿಂದ ದೇಶದ ವಾತಾವರಣವು ತತ್ಪ್ರತಿರೂಪಿಯಾಗಿದೆ; ಕದಡಿ ಹೋಗಿದೆ; ಈ ದೆಸೆಯಿಂದಲೇ ಸ್ವತಂತ್ರಾಡಳಿತೆಯು ಅಪವಾದಕ್ಕೊಳಗಾಗಿದೆ. ಇದು ಎಷ್ಟರ ಮಟ್ಟಿಗೆ ಸಮರ್ಥನೀಯವೋ ಹೇಳುವದಸಾಧ್ಯ. ಆಹಾರಾಭಾವ ನಿವಾರಣೆಗಾಗಿ ಸರಕಾರವು ಹಾಡುತ್ತಿರುವ ವ್ಯಯತ್ನವು ಸಂಪೂರ್ಣ ನಿರ್ಪಕವಲ್ಲವೆಂಬ ಅತೃಪ್ತಿ ವ್ಯಾಪಿಸಿದೆ; ಆದರೆ ಈ ಕಡೆಗೆ ಬಿದ್ದಷ್ಟು ಸರಕಾರೀ ಲಕ್ಷ ಕೂಡಾ ಸಾಮಾನ್ಯಗಳ ಧಾರಣೆ ತಗ್ಗಿಸುವ ಕಡೆಗೆ ಬಿದ್ದಿಲ್ಲ. ಬೆಲೆಯೇರದಂತೆ ನಿಯಂತ್ರಿಸುವ ಮತ್ತು ಕಳ್ಳ ಸಂತೆಯನ್ನು ನಿರ್ಮೂಲಿಸುವ ಹೆಸರು ಹಾಕಿಕೊಂಡು ಸರಕಾರವೇನೋ ಶಾಸನಗಳನ್ನು ಜಾರಿಗೆ ಶಾಸನಗಳನ್ನು ಮತ್ತು ಅಧಿಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲದಿರುತ್ತಿದ್ದರೆ ಇಂತಹ ಪರಿಸ್ಥಿತಿಯು ಇದ್ದುದಕ್ಕಿಂತಲೂ ಇನ್ನಷ್ಟು ಹದಗೆಡುತಿತ್ತೆಂಬುದನ್ನು ಊಹಿಸುವುದಸಾಧ್ಯವಾದರೂ, ಇವುಗಳಿಂದ ದೇಸೆಯಿಂದಾಗಿ ಸ್ಥಿತಿಯೇನೂ ಸುಧಾರಿಸಿಲ್ಲವೆಂಬುದಂತೂ ಖಂಡಿತ. ಸ್ವಾರ್ಥ, ಲಾಭ, ಲಾಲಸೆಗಳಿಗೆ ಸ್ವಯಂ ನಿಯಂತ್ರಣ ಹಾಕಿಕೊಳ್ಳುವ ಮಟ್ಟಕ್ಕೆ ಜನತೆಯ ನೈತಿಕ ಬಲವೇರದಿದ್ದಲ್ಲಿ, ಎಂತಹ ಶಾಸನದಿಂದಲೂ ಕೆಲಸವಾಗದೆಂಬುದೇನೋ ನಿಜ. ಅಧಿಕ ಧಾರಣೆಯಂತಹ ಅಪರಾಧವನ್ನು ಶಿಕ್ಷಿಸುವ ಶಾಸನ ಬಂದ ಆ ಶಾಸನವನ್ನು ವಿವಿಧ ರೀತಿಯಿಂದ ವಂಚಿಸುವ ಹೊಸ ಹೊಸ ಉಪಾಯಗಳು ನಡೆಯುತ್ತಿವೆ. ಕೊರಿಯಾ ಯುದ್ಧವಾರಂಭಿಸಿದ್ದೇ ತಡ–ತಾಮ್ರ, ಹಿತ್ತಾಳೆ, ಸೈಕಲ್ ಟಯರು, ಟ್ಯೂಬ್, ಎಲೆಕ್ಟ್ರಿಕ್ ಬಲ್ಬು, ರಬ್ಬರು, ಸೋಡಾ, ಕಾಗದ, ಇತ್ಯಾದಿ ಹಲವು ಸಾಮಾನ್ಯಗಳ ಬೆಲೆಯು ಅಕಾರಣವಾಗಿ ಒಮ್ಮೆಗೇ ಏರಿಬಿಟ್ಟಿದೆ. ಆದ್ದರಿಂದಲೇ ಈ ಪೈಕಿ ಕೆಲವು ಸಾಮಾನುಗಳ ಬೆಲೆಯನ್ನು, ಕೊರಿಯಾ ಯುದ್ಧಾರಂಭಿಸುವ ಮೊದಲಿನ 1950ನೇ ಜೂನ್ 15 ರಲ್ಲಿದ್ದ ಮಟ್ಟಕ್ಕೇನೇ ಇಳಿಸುವ ವಿಶೇಷ ಶಾಸನವನ್ನು ಇದೇ ತಾ. 2ರಲ್ಲಿ ಭಾರತ ಸರಕಾರ ಹೊರಡಿಸಿದೆ. ಇಂತಹ ನಿಯಂತ್ರಣ ಕಾನೂನುಗಳು ಅಗತ್ಯ ಬೇಕಾಗಿರುವಂತೆಯೇ, ಅವುಗಳ ಉಲ್ಲಂಘನೆಯು ಎಲ್ಲಿಯೂ ನಡೆಯದಂತೆ ನೋಡುವ ಕರಿಣ ವ್ಯವಸ್ಥೆಯಿರಬೇಕಾದುದು ಮುಖ್ಯ. ಕೊರಿಯಾಯುದ್ಧ ನೆವನದಿಂದ, ಏರಿದ ಆದೊಂದು ವರ್ಗದ ಸಾಮಾನುಗಳ ಬೆಲೆಯನ್ನು ತಗ್ಗಿಸುವುದಕ್ಕಿಂತಲೂ ಸಾಮಾನ್ಯ ಜನರೆಲ್ಲರ ನಿತ್ಯೋಪಯೋಗಕ್ಕೆ ಬೀಳುವ ಎಲ್ಲಾ ಸಾಮಾನ್ಯಗಳ ಬೆಲೆಯನ್ನೂ ತಗ್ಗಿಸಬೇಕಾದುದೇ ಆಗತ್ಯ. ಎಲ್ಲಾ ವಿಧದ ಮುಷ್ಕರ ಮನೋನೃತ್ತಿಗಳನ್ನೂ, ಸಾರ್ವಜನಿಕ ಆತೃಪ್ತಿಯನ್ನೂ ಮೂಲತಃ ನಿವಾರಿಸಿ, ಗೃಹಶಾಂತಿಯನ್ನು ನಿರ್ಮಿಸಲಾಗುವಂತೆ ಸರಕಾರವು ತನ್ನ ಸರ್ವಶಕ್ತಿಯ ಧಾರವನ್ನು ಹಾಕಿಯಾದರೂ ಧಾರಣೆಯನ್ನೆಳೆ ಕುಗ್ಗಿಸತ್ತಿಲ್ಲವೋ ತಿಳಿಯದು. ಜೀವನಾವಶ್ಯ ಸಾಮಾನ್ಯಗಳ ಧಾರಣೇ ಮಟ್ಟವನ್ನು ತಗ್ಗಿಸುವ ಮೂಲಕವೇ ಜನತೆಯ ಜೀವನ ಮಟ್ಟವನ್ನು ಏರಿಸಬೇಕಲ್ಲದೆ ಸದ್ಯಕ್ಕೆ ಅನ್ಯಥಾ ಅನಾಥ್ಯೆ. ಇಂತಹ ಸುಧಾರಣೆ ತರಲು ಎಂತಹ ಆರ್ಥಿಕ ಅಡಚಣೆ ಮತ್ತು ಸಮಸ್ಯೆಗಳಿದ್ದರೂ, ಎಂತಹ ಅದ್ಭುತಸಾಹಸ ಬೇಕಾಗಿದ್ದರೂ, ಇದು ರಾಷ್ಟ್ರದ ಜನತೆಯ ಜೀವನದ ಪ್ರಶ್ನೆಯಿದ್ದು ಆ ಮೂಲಕ ಒಂದು ಅಡಳಿತೆಯ ಅಳಿವು–ಉಳಿವಿನ ಪ್ರಶ್ನೆಯೂ ಆಗಿರುವುದರಿಂದ ಸರಕಾರವು ತನ್ನ ಪೂರ್ಣ ಲಕ್ಷ್ಯ ಮತ್ತು ಶಕ್ತಿಯನ್ನು ಈ ಕಡೆಗೆ ಕೊಡಬೇಕಾದುದು ಆತ್ಯಗತ್ಯ.

ಜಾಗತಿಕ ರಂಗ

ಕೊರಿಯಾ ಯುದ್ಧದ ಎಲ್ಲಾ ಮುಖಗಳಲ್ಲೂ ಉತ್ತರ ಕೊರಿಯಾ–ದಕ್ಷಿಣ ಕೊರಿಯಾ ಸೇನೆಗಳೊಳಗೆ ಅತಿ ಬಿರುಸಿನ ಮುಖಾಮುಖಿ ಹೋರಾಟ ನಡೆದಿದೆ. ಹಲವು ಬಾರಿ ಹಿಂದು ಮುಂದಾದ ಕೆಂಪು ಸೇನೆ–ಅಮೆರಿಕ ಸೇನೆಗಳೊಳಗಿನ ದೂಡಾಟದಲ್ಲಿ ಈಗ ಪುನಃ ಕಮ್ಯೂನಿಸ್ಟರ ಕೈಯೇ ಮೇಲಾಗಿ ಆಯಕಟ್ಟಿನ ನಗರ ತಾಯಿಗೂವಿನ ಮೇಲೆ ಅವರ ಧಾಳಿ ನಡೆದಿದೆ.

ಕಮ್ಯೂನಿಸ್ಟ್ ಅಭಾಯವನ್ನು ಇದಿರಿಸುವ ಶಕ್ತಿ ಹೊಂದುವಂತೆ ಮಿತ್ರ ರಾಷ್ಟ್ರಗಳಿಗೆ ಸಹಾಯನಲ್ಲಿಸಲು ಅಮೆರಿಕದ ಆರ್ಥಿಕ ದಾನಗಳು ಒಂದರ ಬಳಿಕೊಂದರಂತೆ ಮಂಜೂರಾಗುತ್ತಿವೆ. ಆದರೂ ಚೈನೀ ಕಮ್ಯೂನಿಸ್ಟರನ್ನು ಸಮಜಾಯಿಸುವ ಆತುರವು ಅಮೆರಿಕಕ್ಕಿರುವಂತಿದೆ. ಕೊರಿಯಾ ಯುದ್ಧ ಮುಗಿದ ಕೂಡಲೇ ಫೋರ್ಮೋಸ ದ ರಕ್ಷಣೆಗಾಗಿ ತಾವಿಟ್ಟಿರುವ ನೌಕಾಪಡೆಯನ್ನು ಹಿಂದೆಗೆಯುವೆವೆಂದು ಅಧ್ಯಕ್ಷ ಟ್ರುಮೇನರು ಆಶ್ವಾಸನೆಯಿತ್ತಿದ್ದಾರೆ. ಇಂಡೋ ಚೈನದಲ್ಲಿ ಕಮ್ಯೂನಿಸ್ಟ್ ವೀಟ್‌ಮಿನ್ ಆಡಳಿತೆಯನ್ನು ಒಕ್ಕೂಟಿಬರ್ ಸುಮಾರಿಗೆ ಅಲ್ಲಿಯ ಫ್ರೆಂಚ್ ಮತ್ತು ವೀಟ್‌ನಾಮ್ ಸೇನೆಗಳ ಮೇಲೆ ಧಾಳ ನಡೆಸಬಹುದೆಂಬ ಭೀತಿಯಿಂದ ಅಮೆರಿಕದ ಶಸ್ತ್ರೋಪಕರಣಗಳನ್ನು ತುಂಬಿಕೊಂಡ ಹಡಗುಗಳು ಅತ್ತ ಸಾಗುತ್ತಿವೆ.

ಭದ್ರತಾ ಕೌನ್ಸಿಲಿನಲ್ಲಿ ಕೊರಿಯಾ ಸಂಬಂಧದ ಚರ್ಚೆಗಳಿಗೆಲ್ಲೂ ನಡೆದಿವೆ. ಭಾರತದ ಪ್ರತಿನಿಧಿ ತರಲಿಚ್ಛಿಸಿದ ಸಂಧಾನ ಸೂತ್ರಗಳಿಗೆ ಸಂಬಂಧಪಟ್ಟವರಿಂದ ತಕ್ಕ ಸ್ವಾಗತ ದೊರೆತಿಲ್ಲ. ಉತ್ತರ ಕೊರಿಯದ ಪ್ರತಿನಿಧಿಯನ್ನು ಭದ್ರತಾ ಕೌನ್ಸಿಲಿಗಾ ಹ್ವಾನಿಸಬೇಕೆಂಬ ರಶ್ಯದ ಸೂಚನೆಗೆ ಭಾರತವೂ ಸದ್ಯ ಸ್ಥಿತಿಯಲ್ಲಿ ತನ್ನ ವಿರೋಧವನ್ನು ಸೂಚಿಸಿದುದರಿಂದ ರಶ್ಯದ ವಿಸ್ತೋ ಮಲಿಕರು ಭಾರತದ ಧೋರಣೆಯನ್ನು ಟೀಕಿಸಿದ್ದಾರೆ. ಜಪಾನಿನ ಅಮೇರಿಕಾಡಳಿತೆಯನ್ನು ಆಡಿಮೇಲು ಮಾಡಲು, ಒಳಗಡೆಯಲ್ಲೇ ಕಮ್ಯೂನಿಸ್ಟ್ ಕ್ರಾಂತಿಯೇಳುವ ಸಂಭವ ಕಂಡುಬರುತ್ತಿದೆ. ಜಪಾನಿನ ಉತ್ತರಗಡೆಯಲ್ಲಿದ್ದು ರಶ್ಯದ ವಶವಿರುವ ಸಿಬಿರಿಯಾ ಪ್ರದೇಶದಲ್ಲಿ ಸೋವಿಯೇಟರಿಂದ ತರಬೇತಿ ಪಡೆದಿರುವ ಸೇನೆಗಳು ಈ ಅಂತರ್ಯುದ್ಧಕ್ಕೆ ಸಿದ್ಧವಾಗಿರುವ ವಾರ್ತೆಯಿದೆ. ಟೋಕಿಯೋ ಮತ್ತಿತರ ಜಪಾನ್ ನಗರಗಳಲ್ಲೂ ಕಮ್ಯೂನಿಸ್ಟ್ ಅಂದೋಲನದ ವಾಸನೆ ಬರಹತ್ತಿದೆ.

ದಕ್ಷಿಣಾಫ್ರಿಕವು ತನ್ನ ಅಧೀನ ಭಾಗವೆನ್ನಿತ್ತಿರುವ ನೈಋತ್ಯಾಫ್ರಿಕವನ್ನು ಸಂಯುಕ್ತ ರಾಷ್ಟ್ರ ಸಂಘದ 'ಟ್ರಸ್ಟೀಶಿಪ್' ಗೊಳಪಡಿಸಬೇಕು ಎಂಬ ನ್ಯಾಯೋಚಿತ ಬೇಡಿಕೆಯನ್ನು ಅಂತರರಾಷ್ಟ್ರೀಯ ಕೋರ್ಟು ಇತ್ತೀಚೆಗೆ ಈ ವಾದಕ್ಕನುಕೂಲವಾದ ತೀರ್ಮಾನ ಕೊಟ್ಟಿದ್ದರೂ, ಆದರೆ ದಕ್ಷಿಣಾಫ್ರಿಕದ ಮಲಾನ್ ಸರಕಾರವು ಈ ತೀರ್ಪಿಗೆ ಸ್ವಷ್ಟ ನಕಾರ ಸೂಚಿಸಿದೆ. ಇತ್ತೀಚೆಗೆ ನೈಋತ್ಯಾಫ್ರಿಕದಲ್ಲಿ ನಡೆದ ಚುನಾವಣೆಯಲ್ಲಿ ಅಲ್ಪ ಸಂಖ್ಯಾಕ ಬಿಳಿ ಜನರಿಗೆ ಮಾತ್ರ ಮತಾಧಿಕಾರವಿದ್ದು, ಬಹುಸಂಖ್ಯಾಕ ಮೂಲ ನಿವಾಸಿಗಳ ಅಭಿಮತ ಪ್ರಕಟನೆಗಾವ ಅವಕಾಶವೂ ಇಲ್ಲದ್ದರಿಂದ ಡಾ| ಮಲನರ ಪಕ್ಷಕ್ಕೇನೇ ವಿಜಯ ದೊರೆತಿದೆ. ಹೀಗಾಗಿ ದಕ್ಷಿಣಾಫ್ರಿಕ ಪಾರ್ಲಿಮೆಂಟಿನಲ್ಲಿ ಸ್ವಾವಲಂಬಿ ಬಹುಮತ ದೊರೆತಿರುವ ಡಾ| ಮಲನರ ಹಿಂದೀಯರೇ ಮೊದಲಾದ ಶ್ವೇತವರ್ಣೀಕರ ಮೇಲೆ ಇನ್ನೂ ಕರಿಣ ಶಾಸನಗಳನ್ನು ಹೊರಿಸಬಹುದೆಂಬ ಭೀತಿಯೆದ್ದಿದೆ.

oo oo

ಅಸ್ಸಾಮಿನಲ್ಲಿ ಇತ್ತೀಚೆಗಿನವರೆಗೂ ಭೂಕಂಪವಾಗುತ್ತಲೇ ಇರುವ ಹೃದ್ರಾವಕ ವಾರ್ತೆಗಳಿದ್ದುವು. ಮೊನ್ನೆಯಿಂದ ಈ ದುರ್ವಾರ್ತೆಯಿಲ್ಲ. ಆಗಿರುವ ನಷ್ಟ ಮತ್ತು ಹಾನಿಗಳು ಕೋಟಿ–ಲಕ್ಷ—ಸಹಸ್ರ ಸಂಖ್ಯೆಗಳಲ್ಲಿದ್ದು ಈವರೆಗೆ ಸರಿಯಾದ ಅಂದಾಜು ದೊರೆತಿಲ್ಲ. ಪ್ರಧಾನಿ ಪಂಡಿತ ನೆಹರುಗಳು ಇದೇ ತಾ. 4ರಲ್ಲಿ ಅಸ್ಸಾಮಿಗೆ ಹೋಗಿದ್ದಾರೆ.

ಬೊಂಬಾಯಿಯ ಸುಮಾರು 2ಲಕ್ಷ ಗಿರಣಿ ಮಜೂರರು ಆಗೋಸ್ತು ತಾ 14 ರಲ್ಲಿ ಹೂಡಿದ್ದ ಮುಷ್ಕರವು ಈವರೆಗೂ ಸಾಗಿದೆ– ಇವರೊಡನೆ ಸಹಾನುಭೂತಿ ಪ್ರದರ್ಶಿಸುವುದಕ್ಕಾಗಿ ತಾ 31ರಲ್ಲಿ ಬೊಂಬಾಯಿಯ ಎಲ್ಲಾ ವರ್ಗದ ಮಜೂರರೂ ಒಂದು ದಿನದ ಮುಷ್ಕರ ಹೂಡಬೇಕೆಂದು ಸಮಾಜವಾದಿಗಳು ಮಾಡಿದ ಪ್ರಯತ್ನ ಮಾತ್ರ ಫಲಿಸಲಿಲ್ಲ.

ನವಯುಗದ ಚಂದಾದಾರಳಲ್ಲಿ ವಿನಂತಿ

ಕಳದ ಆಗೋಸ್ತು ತಿಂಗಳ ಅಂತ್ಯಕ್ಕೆ ನವಯುಗದ 30ನೆ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ ಹೊಸ ವರುಷವು ಆರಂಭವಾಗಿದೆ. ಈ ಅವಧಿಗೆ ಚಂದಾ ಹಣ ಮುಗಿಯುವವರು ದಯಮಾಡಿ ತಮ್ಮ ಚಾಲ್ತಿ ಚಂದಾಹಣ ಮತ್ತು ಬಾಕಿಯಿದ್ದರೆ ಅದನ್ನು ಸಮೇತ ಅದಷ್ಟುಶ್ವರ್ಯ ಕಳುಹಿಸುವಂತೆ ಈ ಮೂಲಕ ವಿನಂತಿಸಲಾಗಿದೆ. ವಿ. ಪಿ. ಮಾಡಿದರೆ ಆರಾಣೆ ಜಾಸ್ತಿ ಬೀಳುವುದರಿಂದ ಎಲ್ಲರೂ ತಮ್ಮ ತಮ್ಮ ಚಂದಾ ಹಣವನ್ನು ಮನಿಯಾರ್ಡರ್ ಮಾಡುವಂತೆ ಅನೇಕ್ಷಿಸುತ್ತೇವೆ. ಅಂತೂ ಸಕಾಲದಲ್ಲಿ ಚಂದಾಹಣ ಬಾರದಿದ್ದಲ್ಲಿ ಸಪ್ಟಂಬರ ತಿಂಗಳ ಪ್ರಾರಂಭದಲ್ಲಿ ಬಾತಿನಿಲ್ಲುವ ಹಣಕ್ಕೆ ಪತ್ರಿಕೆಯನ್ನು ವಿ ಪಿ ಮಾಡಲಾಗುವುದು. ಅದನ್ನು ಸಾದರದಿಂದ ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿಯೂ ವಿನಂತಿ

ಮೆನೇಜರ್.

ಗಾಲಾ ಮಾರಾಟ

ತಾಜಾ ಸ್ವಿಸ್ ರಿಸ್ಟ್‌ವಾಚುಗಳು ಆಶ್ಚರ್ಯಕರ ಅಲ್ಪ ಬೆಲೆಯಲ್ಲಿ ಮಾರಾಟ ಮಾಡಲಾಗುವುವು. ಚಿಲ್ಲರೆ ವ್ಯಾಪಾರಿಗಳಿಗೆ ಅಪೂರ್ವ ಸುಸಂಧಿ!

ಆರ್ಡರುಗಳನ್ನು ಕೊಟ್ಟು ಗಿರಾಕಿಗಳಿಗೆ ಚಿಲ್ಲರೆ ಬಹುಮಾನಗಳನ್ನು ಧರ್ಮಾರ್ಥ ಕೊಡಲಾಗುವುದು ವಿವಿಧ ಜಾತಿಯ ಫೌಂಟನ್ ಪೇನುಗಳು ಸಹಾ ಮಾರಾಟಕ್ಕೆ ಸಿಗುತ್ತವೆ.

ಸವಿವರ ಕ್ಯಾಟಲಾಗಿಗೆ ಇಂದೇ ಬರೆಯಿರಿ.

Swiss Agencies (India)
Post Box No. 6626,
BOMBAY 19.

[ಗತಸಂಚಿಕೆಯಿಂದ]

ಪಕ್ಷಾಗಳೇ ಎಸೆಂಬ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಜೀಯತ್ತಿದ್ದರು. ಹಿಂದಿಯಲ್ಲಿ ಸುಪ್ರಸಿದ್ಧ ವಿದ್ವಾಂಸನಿರುವ ಶ್ರೀ ಥಂಡನರು, ಹಂದೀ ಸಾಹಿತ್ಯ ಸಮ್ಮೇಳನದ ಸಂಸ್ಥಾಪಕರಲ್ಲೊಬ್ಬರು 1910ರಲ್ಲಿ ಅದರ ಪ್ರಥಮ ಕಾರ್ಯದರ್ಶಿಯಾಗಿದ್ದರಲ್ಲದೆ, 1923ರಲ್ಲಿ ಈ ಸಮ್ಮೇಳನದ 13ನೇ ಮಹಾಧಿವೇಶನದ ಅಧ್ಯಕ್ಷತೆಯನ್ನೂ ವಹಿಸಿದ್ದರು. ಈ ಬಾರಿ ದೇಶ ಸೇವೆಗಾಗಿ ಭಾರತೀಯರಿಗೆ ದೊರೆಯುವ ಅತ್ಯುಚ್ಚ ಗೌರವ ಕಾಂಗ್ರೆಸ್ ಅಧ್ಯಕ್ಷ ಮಕುಟ ಇವರ ತಲೆಗೆ ಬಂದಿದೆ. ದೇಶ ವಿಭಜನೆಗೆ ಕಣ್ಣು ಒಪ್ಪಿಗೆ ಕೊಡಲು 1947ನೇ ಜೂನ್ ತಿಂಗಳಲ್ಲಿ ಸೇರಿದ್ದ ಅ ಭಾ. ಕಾಂ. ಸಮಿತಿ ಸಭೆಯಲ್ಲಿ ದೇಶ ವಿಭಜನಾ ನಿರ್ಣಯವನ್ನು ಖಂಡತುಂಡ ಮಾತುಗಳಿಂದ ವಿರೋಧಿಸಿದ ಅಗ್ರಗಣ್ಯ ನಾಯಕ ಶ್ರೀ ಥಂಡನ್; ಇತ್ತೀಚೆಗೆ ಅಪೆಲ ಭಾರತ ನಿರಾಶ್ರಿತ ಸಮ್ಮೇಳನದಲ್ಲಿ ಅಧ್ಯಕ್ಷನಾಗಿ ಅದೇ ಭಾವನೆಯನ್ನು ಪ್ರಕಟಿಸಿದ್ದರು. ಈ ಧೋರಣೆಯು ಈಗಲೂ ಶ್ರೀ ಪುರುಷೋತ್ತಮದಾಸ ಥಂಡನರಲ್ಲಿ ಅಚಲವಾಗಿದೆ. ಈ ಮಟ್ಟಿಗೆ ಸದ್ಯದ ನೆಹರೂ ಧೋರಣೆಯು ಅಧ್ಯಕ್ಷ ಥಂಡನರ ಸುದೃಢ ಧೋರಣೆಯು ಸ್ಪರ್ಧಿಸಿಕೊಳ್ಳುವಂತಹ ಸಂದರ್ಭವನ್ನೇ ತಪ್ಪಿಸಿ ಹಾಕುವ ಚಾತುರ್ಯವಿದ್ದರಾಯಿತು – ಇಲ್ಲವಾದರೆ ಹಿಂದೋ ಪ್ರಧಾನಿ ನೆಹರು, ಅಧ್ಯಕ್ಷ ಥಂಡನ್ ರಾಜೀ ಕೊಡುವ ಸಂದರ್ಭವೊದಗಬಹುದು. ಅಂತಹ ವಿಶೇಷ ವಿದ್ಯಮಾನವೊದಗಿದರೆ ಶ್ರೀ ಥಂಡನರೇ ಕೆಳಗಿಳಿಯಬೇಕಾಗುವುದು ಸಂಭವನೀಯ ಮತ್ತು ನ್ಯಾಯ ಕೊಡಿ. "ಕಾಂಗ್ರೆಸು ತನ್ನ ದೊಂದು ಸಂಪ್ರದಾಯವನ್ನು ನಿರ್ಮಿಸಿಟ್ಟುಕೊಂಡಿದೆ. ಅದನ್ನು ಯಾರೂ ತಾನೇ ದಾಟಬಲ್ಲರು? ಆ ನಿರ್ದೇಶದಂತೆ ಅಜರಾಜಲು ಅಧ್ಯಕ್ಷನಾದವನು ಬದ್ಧನಿದ್ದಾನೆ. ಪ್ರತ್ಯೇಕ ವಿಷಯಗಳ ಸಂಬಂಧದ ತೀರ್ಮಾನಗಳ ಅವು ಮುಂದೆ ಬಂದಾಗಲೇ ಆಗುವಂತಹವಿವೆ" ಎಂದು ಕಾಂಗ್ರೆಸ್ ಸಂಪ್ರದಾಯ ನಿಷ್ಠೆಯೆನ್ನು ಪ್ರದರ್ಶಿಸಿರುವ ಶ್ರೀ ಥಂಡನರ ಮೇಲೆ ಸಭ್ಯ ಮೂರ್ಣ ಭರವಸೆಯಿಡೋಣ.

ಉಡುಪಿ

ಮುನಿಸಿಪಲ್ ಕೌನ್ಸಿಲಿನ ಅರ್ಜಂಟ್ ಸಭೆಯು—

ಕಳೆದ ತಾ. 31ರಲ್ಲು ಚೆಯರ್‌ಮೆನ್ ಶ್ರೀ ಯು ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ವೃತ್ತಿ ತೆರಿಗೆ ಮತ್ತು ವಿದ್ಯಾ ತೆರಿಗೆಯ ಪರಗಳನ್ನು ಸರಕಾರದ ಸೂಚನೆಯಂತೆ ಜಾಸ್ತಿ ಮಾಡುವ ಕುರಿತು ಜನರಿಂದ ಅಕ್ಷೇಪಗಳು ಬಾರದಿದ್ದುದರಿಂದ ಈ ಹೊಸಲು ನಿರ್ಧರಿಸಿದ ದರವನ್ನೇ ಜಾರಿಯಂ ಮಾಡುವುದೆಂದಾಯಿತು.

ಕರ್ನಾಟಕ ಸಂಘದ ಮಹಾ ಸಭೆ

ಯು—ಇದೇ ತಾ. 3ರಲ್ಲು ಸಂಜೆ ಮೊಡರ್ನ್ ಹಾ ಎ| ಶಾಲೆಯಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ.ಶಂಕರನಾರಾಯಣ ಉಪಾಧ್ಯಾಯರಿಂದ ವರದಿ ವಾಚನವಾದನಂತರ ಹೊಸ ವರ್ಷಕ್ಕೆ ಕಾರ್ಯವಾಹೀ ಸಮಿತಿಯ ಸದಸ್ಯರ ಚುನಾವಣೆ ನಡೆಯಿತು. ಶ್ರೀಗಳಾದ ಡಾ ಕೆ. ಎಲ್. ಪತಾಳ್, ಡಾ. ಪಿ. ಆರ್. ಕೊಡಪ್ಪಲ್, ಕು. ಶಿ. ಹರಿದಾಸ ಭಟ್, ಪುಂಡಲೀಕ ಶಣೈ, ಎಸ್. ಎಲ್. ನಾರಾಯಣ ಭಟ್, ಪಿ. ಕೆ. ಆಚಾರ್ಯ, ಶ್ರೀಪತಿ ಆಚಾರ್, ಕೆ. ಶಂಕರ ನಾರಾಯಣ ಉಪಾಧ್ಯಾಯ, ಯು ಪಿ.ಶೀನ ಶೆಟ್ಟಿ, ಕೆ. ಆನಂದ ಶೆಟ್ಟಿ, ಜನಾರ್ದನ ಆಚಾರ್ ಮತ್ತು ಕೆ.ಜಗನ್ನಾಥ ನಾಯಕರು ಆರಿಸಲ್ಪಟ್ಟರು.

ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿದ್ದ ಶ್ರೀಗಳಾದ ಎನ್. ರಾಜಗೋಪಾಲ ಕೃಷ್ಣ ರಾವ್ ಮತ್ತು ಪಿ. ಎನ್. ಪ್ರಭುಗಳು ವೈದ್ಯಾಧ್ಯಕ್ಷದ ನಿಮಿತ್ತ ಕಾರ್ಯವಾಹೀ ಸಮಿತಿಯಿಂದ ಬಿಡುಗಡೆ ಮಾಡಬೇಕೆಂದು ಅಪೇಕ್ಷಿಸಿದುದರಿಂದ ಆವರಿಬ್ಬರೂ ಈ ತನಕ ಸಂಘಕ್ಕೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ, ಧನ್ಯವಾದಗಳನ್ನರ್ಪಿಸಲಾಯಿತು.

Notice.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 386/1950

ವಾದಿ —ಜಗನ್ನಾಥ ಶೆಟ್ಟಿ

ಪ್ರತಿವಾದಿರು—ಅಕ್ಕಯ್ಯ ಶೆಟ್ಟಿ ಕೊಡಾ.

ಪ್ರತಿವಾದಿರು 1 ಅಕ್ಕಯ್ಯ ಶೆಟ್ಟಿ, ಯರು ಕೋಣೆ ಅಬ್ಬಕ್ಕ ಶೆಟ್ಟರ ಮಗಳು 3 ಪದಾವತಿ ಶೆಟ್ಟಿ, 4 ರುದ್ರಮ್ಮ ಶೆಟ್ಟಿ, 5 ಸೂರಪ್ಪ ಸೆಟ್ಟಿ, 7 ಮ್ಯಾನರ ಶೇಶಪ್ಪ ಸೆಟ್ಟಿ, 1ನೇ ಪ್ರತಿವಾದಿ ಅಕ್ಕಯ್ಯ ಶೆಟ್ಟರ ಮಕ್ಕಳು- ಕುಂದಾಪುರ ತಾಲ್ಲೂ ಕಾಲ್ಕೋಡು ಗ್ರಾಮ, Post Byndoor. 4ನೇ ಪ್ರತಿವಾದಿ ಉಡ್ಡಿ, ತಾಲ್ಲೂ ಬಿಲ್ಲಾಡಿ ಗ್ರಾಮ.

ಇವರಿಗೆ—

ವಾದಿಯು ಕೃಯದ ಹಕ್ಕಿನ ಬಾಬ್ತು ಕೈ ಪೇಕಿನ A ಶೆಡ್ಯೂಲ್ ಆಸ್ತಿಯು ವಿರೋಧಿ ಸಂಗರದ ಗೇಣಜಾಕ ಬಗ್ಗೂ ಆಸ್ತಿ ಸ್ವಾಧೀನ ತೆಗೂ ಕೂಡಾ ವಾದಿಯು ಪ್ರತಿವಾದಿರ ಮೇಲೆ ಸದ್ರಿ ದಾವಾ ದಾಖಲು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 18-9-1950ನೇ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜ್ರು ಆಗಿ ಜ್ಞಾಪೀರುಮಾಡಿಕೊಳ್ಳಕ್ಕಲ್ಲದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು, ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋ ಜಾಗುತ್ತದೆ.

K. Raghunatha Shenai,
Pleader for Plaintiff
Coondapoor, 4-9-1950

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬೆಳಕ್ಕರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗಿಗುಳಿಗೆ ಮಧ್ಯಾಹ್ನಕ್ಕೆ ಗಿಗುಳಿಗೆ, ಸಂಜೆಗೆ ಗಿಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೀನಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಹಳೇರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ವಿವರಂದೆನು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—
ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಹಾವಣಗೇರಿ
ಹಾವಣಗೇರಿ:—ಹಾವಣಗೇರಿ ಪ್ರೆಸ್ಸ್ ಆಫ್ ಎಲ್ ಕಮಲಾಪುರ ಕೆಮಿಸ್ಟ್, ಹಾವೇರಿ ಬ್ಯಾಂಕಿನ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಪವಳಕೊಡಿಯು ಪುರುಷದ್ವೇಷಿ; ಅರ್ಜುನನು ಪವಳಕೊಡಿಯ ಪ್ರಣಯಾಭಿಲಾಷಿ; ಈ ಕಾರ್ಯ ಕೈಗೂಡಬೇಕಾದರೆ ನೀವು ನೋಡಬೇಕು,

ತಾರೀಕು 7—8—1950ರಿಂದ

ಪವಳಕೊಡಿ

ಟಿ. ಆರ್. ರಾಜಕುಮಾರಿ, ಮಹಾಲಿಂಗಂ, ಕೃಷ್ಣನ್, ಮಧುರಂ ಮತ್ತು ಲಲಿತ ಪದ್ಮಿನಿಯರು.

ಬರುವ ಚಿತ್ರ ಪ್ರಭುಕಾ ಘರ್
ಖುರ್ಶಿದ್, ಸುಲೋಚನಾ ಚಟರ್ಜಿ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕೆಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ' ಈ ತೈಲವು ಸರ್ವದೇಶಗಳ ಪ್ರಸಿದ್ಧ ದಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೆ ಕಿತ್ತು ಬಿಡುವಂತೆ ಶುದ್ಧ ಪ್ರಕೃತಿ ನಿಡಸಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಟ್ಟಾಗಿದೆ. ವಿಷಮಜ್ವರ, ಸಿತ್ತಜ್ವರ, ನಿಮೋನಿಯಾ ಶೀತಜ್ವರ ಮತ್ತು ಮಲೇರಿಯಾ ಜ್ವರಗಳಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಎನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹಾಗ್ನಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಹುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿಗಾವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ತಿಳಿಸೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಗಿರಲಿ ಅಥವಾ ನೆಗಡಿ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವುದು. ಹಲ್ಲುನೋವು, ಮಕ್ಕಳಕೊಪ್ಪಿನೋವು, ಕಿವಿಗಳ ಉಸಬ್ರವ್ಯ ಹೆಂಗಸರ ಮುಟ್ಟಾಗುವಕಾಲದ ಅಕ್ರಮಗಳು, ಹೊಟ್ಟೆ ನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು—ವಾನಿಂಗ್ ಟಿಲ್ಲಿ ಆಯಿಲ್ ಸೀಸೆ 1ಕ್ಕೆ ರೂ. 2-8-0 ವಿ.ಪಿ. ಚೇರ್ಜ್. ಡಜನ್ ಸೀಸೆಗಳಿಗೆ ವಿ.ಪಿ. ಸಹಿತ ರೂ.30-0-0- ವಾನಿಂಗ್ ಟಿಲ್ಲಿ ಕೆಮ್ಮಲ್ ಸೀಸೆ 1ಕ್ಕೆ 3-8-0 ವಿ.ಪಿ.ಚೇರ್ಜ್. ಡಜನ್ ಕೆಮ್ಮಲುಗಳಿಗೆ ರೂ. 42-0-0 ವಿ.ಪಿ. ಸಹಿತ. ವಾನಿಂಗ್ ಟಿಲ್ಲಿ ಪ್ರಪಲ್ ಬಾಟ್ಲಿ 1ಕ್ಕೆ ರೂ. 5-0-0 ವಿ.ಪಿ. ಚೇರ್ಜ್. ಒಂದು ಡಜನ್ ಪ್ರಪಲ್ ಬಾಟ್ಲಿಗಳಿಗೆ ರೂ. 60-0-0- ವಿ.ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ. 1-8-0. ಡಜನ್ ಸೀಸೆಗಳಿಗೆ ರೂ. 18. ವಿ.ಪಿ ಮೂಲಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ಏಳ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ; ಎಲ್ಲ ನಿಧದ ಕಠಿಣ ರೋಗಗಳನ್ನು ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಮನೆಯಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಯೆಂದು ರಾಮನಾದಿನ ಅಯ್ಯರ್‌ದಿಕ್ಷಿ ವೈದ್ಯರಾದ ಪಿ. ವೆಂಕಟಿಸುಬ್ಬಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀನೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-
ದಾಹಾನು ರೋಡು, ಬಿ. ಬಿ. ಎಂಡ್ ಸಿ. ಐ. ರೈಲ್ವೆ-

The Exlipse Distributing Agency.
Dahanu Road, B. B. & C I. Rly,

ಬೊಂಬಾಯಿ ಸ್ಟಾಕಿಸ್ಟರು:—ಲಿಕ್ಕಿವಾಲಾ ಲಿಮಿಟೆಡ್, 25, ಹಿಲ್ಡ್ ಹನ.ಮೂನ್‌ಲೇನ್, ಬೊಂಬಾಯಿ 2.

ವಾರ ಭವಿಷ್ಯ

ತಾರೀಕು 7-9-1950ರಿಂ ತಾ. 13-9-1950ರ ವರೆಗೆ

ಮೇಷ—ಅಧಿ ವ್ಯಾಧಿಗಳಿಂದ ಮುಕ್ತ ಾಗುವಿರಿ. ಸಮಾಜದಲ್ಲಿ ಸ್ಥಾನಮಾನಗಳು ಧಿಸುವುವು. ಸಮುದ್ಯಮದಿಂದ ಅಧಿಕ ಲಾಭ ೂಂದುವ ಯೋಗವಿದೆ. ಆದರೆ ಗೃಹಕೃತ್ಯ ಚಾರದಲ್ಲಿ ನೆಮ್ಮದಿಯಿಲ್ಲವು. ನೇತ್ರೋದರ ೀಡೆಗಳೂ ಆಕಸ್ಮಾತ್ ಕಾಣಿಸಿವೆ. ವಾರದ ದ್ಯಂತ ದಿನಗಳಲ್ಲಿ ಗೃಹಸುಖ, ಧನಲಾಭ, ಜಯಗಳು ಲಭಿಸುವವು.

ವೃಷಭ—ಅಲ್ಪಯಾನದಿಂದ ಮಹೆ ೈರ್ಯವನ್ನು ಸಾಧಿಸುವಿರಾದರೂ ಶ್ರಮಕ್ಕೆ ಕ್ಕ ಫಲ ಸಿಗಲಾರದು. ಶತ್ರು ಜನರು ರಣು ಬಂದರೂ ಹೆಂಡತಿ ಮಕ್ಕಳು ಶ್ರೆ ಷ್ಠಾಲರಾಗಿ ವರ್ತಿಸುವರು. ಕೈಯಲ್ಲಿನ ಕಾ ು ಬಾಯಿಗೆ ಬರಲಿಲ್ಲವೆಂಬಂತೆ ಕೆಲವೊಂ ು ಕಾರ್ಯಗಳಲ್ಲಿ ನಿಮ್ಮ ನೀಕ್ಷೆಯು ವ್ಯ ರ್ಥವಾದೀತು. ತಾ 8—9 ಇದ್ದುದರಲ್ಲಿ ುತ್ಯಮ.

ಮಿಥುನ—ಇಂದೀಗ ಅದೃಷ್ಟಶಾಲಿ ೆಂದರೆ ನೀವೇ ಸರಿ. ಯಾವ ಭಾಗದಲ್ಲಿ ೂಡಿದರೂ ಕುಂದು ಕೊರತೆಗಳು ಕಾಣಿ ಲಾರವು. ಆತ್ಮೀಯರಿಂದ ಅಧಿಕವಾದ ಸ್ಪ ೂಜನ ಪಡೆವಿರಿ. ಹಲವಾರು ತೆರದಿಂದ ನಾಗಮವಾಗಲಿದೆ. ಇಷ್ಟಿದ್ದರೂ ಮಕ್ಕಳ ಲುವಾದ ಪೀಡೆಯು ನಿಮ್ಮನ್ನು ಪೀಡಿಸ ುವೆ. ತಾ. 7, 10, 11, 12 ಈ ದಿನಗಳಲ್ಲಿ ೂಡಿಗ ಲಾಭ ವಿಜಯಗಳಿವೆ.

ಕರ್ಕಾಟಕ—ವಿಪತ್ಪರಂಪರೆಗಳು ಮುದ್ರದಲೆಗಳಂತೆ ಮೇಲಿಂದ ಮೇಲೆ ಬರು ವೆ. ಉದರ ಶೂಲೆ, ಕಫ, ಜ್ವರಾದಿಗಳು ಡಾ ಪೀಡಿಸಲಿವೆ. ಅಲ್ಪರ ಸಹವಾಸದಿಂದ ಮಾನಕ್ಕೆ ಹಾನಿಯುಂಟಾದೀತು. ಆರ್ಥಿಕ ುರವಸ್ಥೆಯಿಂದಾಗಿ ಜನರ ಅಪಹಾಸ್ಯಕ್ಕೆ ುಪಯಾಗುವ ಸಂಭವಿದೆ. ತಾ. 7, 10, 11, 12 ಈ ದಿನಗಳಲ್ಲಿ ಅನಿಷ್ಟಗಳು ಕಾಣಿ ಸಲಿರುವುದರಿಂದ ಜಾಗರೂಕರಾಗಿರಿ.

ಸಿಂಹ—ಧನಲಾಭ ಪತಿಯು ಉಚ್ಚ ನಾಗಿದ್ದು ವಿಕ್ರಮ ಸ್ಥಾನದಲ್ಲಿ ತತ್ಕಾರಕ ನಾದ ಅಂಗಾರಕನು ಭಾಗ್ಯಪನಾಗಿ ಕುಳಿ ತಿದ್ದು ಗುರುವು ಪೂರ್ಣ ದೃಷ್ಟಿಯಿಂದ ನಿಮ್ಮ ರಾಶಿಯನ್ನು ನೋಡುತ್ತಿರುವುದು ದೊಡ್ಡ ಸುಯೋಗವೆನ್ನಬೇಕಾಗಿದೆ. ಯಾವ ಭಾಗದ ಲ್ಲೂ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದಿ ಡಲಾರಿರಿ. ತಾ 7, 11, 12 ಸರ್ವೋತ್ಕೃಷ್ಟಗಳ ರುವುದರಿಂದ ಕಾರ್ಯ ಪ್ರವೃತ್ತರಾಗಿ ಇಷ್ಟಾ ರ್ಥವನ್ನು ಪಡೆಯಿರಿ.

ಕನ್ಯಾ—ಎಷ್ಟೇ ದುಡಿಯಲಿ ನಾಯಂ ಕಾಲದಲ್ಲಿ ಕೈಯಲ್ಲಿ ಕಾಸಿರಲಾರದು. ಉತ್ಪ ತ್ತಿಯ ಮುಮ್ಮುಡಿ ಖರ್ಚುಗಳು ಮುಂ ದಾಗಿ ಪ್ರಾಪ್ತವಾಗುವವು. ಸಿತ್ಕೋಷ್ಣ ವಿಕಾ ದಿಂದ ಅರೋಗ್ಯವು ಕೆಟ್ಟೀತು. ಕೆಲವೊಮ್ಮೆ ಜನತೆಯ ಅವಹೇಳನಕ್ಕೂ ಗುರಿಯಾಗುವ ಪ್ರಸಂಗವು ಬಂದೀತು. ತಾ. 7, 8, 9, 13 ಂಚಿದುತ್ತಮ.

ತುಲಾ—ನಿಮ್ಮ ಲಾಭಸ್ಥಾನದಲ್ಲಿ ಗೃ ಹಕ್ಕಧಿರಿಯಾದ ಕಾರಣ ಆದಾಯ ಟೆ ನ್ನಾಗಿರುವದಾದರೂ ಸದ್ಯದಲ್ಲೇ ಏಳೂವರೆ ಶನಿಯ ಪೀಡೆಗೆ ಸಿಲುಕಲಿರುವಿರಾದ ಕಾರ ಣ ಬಹಳ ಜಾಗರೂಕರಾಗಿರಿ. ಗೃಹತಾಪತ್ರ ಯ ಗಳಿಂದ ಮುಕ್ತರಾದ ನಿಮಗೆ ಸಂಸಾರ ಸುಖವು ಉತ್ತಮವಿರುವುದು. ದಿನದಿಂದ ದಿನಕ್ಕೆ ಖರ್ಚಿನ ಭಾಗವು ಹೆಚ್ಚಲಿರುವುದ ರಿಂದ ಹಣದ ವಿಚಾರದಲ್ಲಿ ನಿಗಾ ಇರಿ. ವಾರ ದ ಅರ್ಧಂತ ದಿನಗಳು ಕ್ಷೇಮಕರವಲ್ಲವು

ವೃಶ್ಚಿಕ—ಆಸ್ಪೆಷ್ಟ ವರ್ಗದವರಿಂ ದುಂಟಾದ ಮನಃಕ್ಲೇಶವು ದಿನದಿಂದ ದಿನಕ್ಕೆ ಹೆಚ್ಚಲಿದೆ. ಸ್ತ್ರೀ ಜನರಿಂದ ಕಲಹ ಪಿಶ್ಟ ಪಿಕಾರದಿಂದ ನಿವ್ರಾಭಂಗ ದುಃಸ್ವಪ್ನಗಳು ಕಾಣಿಸಬಹುದು. ಖರ್ಚಿಗೆ ತಕ್ಕ ಉತ್ಪತ್ತಿ ಇರೋಣದರಿಂದ ಹಣದ ಮುಗ್ಗಟ್ಟು ಕಾಣಿ ಸದು ವಾರಾರ್ಧದ 4 ದಿನಗಳಲ್ಲಿ ಇಷ್ಟ ಸಿದ್ಧಿ, ನಾನಾ ವಿಧ ರಾಭಗಳಿವೆ.

ಧನು—ಕೈ ಕೆಳರಾದರೆ ಬಾಯಿ ಮೊ ಸರಾದೀತೆಂಬಂತೆ ನಿಮ್ಮ ಪ್ರಯತ್ನಕ್ಕೆ ಉಚಿ ತವಾದ ಫಲವು ಸಿಕ್ಕಿಯೇ ತೀರುವುದು. ಸಂ ಸಾರವು ಸುಖವಾಗಿರುವುದು. ಕೆಲವೊಂದು ಕಾರ್ಯಗಳನ್ನು ವಿಘ್ನಗಳ ಬೆದರಿಕೆಯಿಂದ ಮಧ್ಯಕ್ಕೆ ಕೈ ಬಿಡಬೇಕಾದ ಪ್ರಸಂಗವೊದ ಗುವದು ಹಣದ ಲೇವಾದೇವಿ ನಿಮಿತ್ತ ಕಲಹವುಂಟಾಗಲಿದೆ. ವಾರದ ಅರ್ಧಂತ ದಿನ ಗಳು ಸಿಕರವಿವೆ.

ಮಕರ—ಅಲಸ್ಯದಿಂದ ಶ ಮ ಯ ವನ್ನು ವ್ಯರ್ಥ ಹಾಳು ಮಾಡಬೇಡಿರಿ. ಉದ್ಯೋಗದಲ್ಲಿ ಒಳ್ಳೆ ಯಶಸ್ಸಿದೆ. ವಿರೋ ಧಿಗಳ ಪೀಡೆಯು ಹೆಚ್ಚೀತು. ದೇಹಾ ರೋಗ್ಯಕ್ಕೂ ಧಕ್ಕೆಯಿದೆ. ಮನೆಯಾಕೆ ಯೊಡನೆ ಕಲಹವಾದೀತು. ಸಾಮಾಜಿಕ ಕಾರ್ಯಗಳಲ್ಲಿ ವಿಜಯವಿರುವದು. ವಾರಾದಿ ಯ 3 ದಿನಗಳಲ್ಲಿ ಸ್ತ್ರೀ ಧನ, ಸುಖ, ಲಾಭ ಗಳ ಯೋಗವಿರುವುದು.

ಕುಂಭ—ದೈವವು ಪ್ರತಿಕೂಲ ವಾಗಿರುವುದು. ನಿಮ್ಮ ಸಂಕಲ್ಪಗಳೆಂದೂ ಕಾರ್ಯ ರೂಪಕ್ಕೆ ಬರಲಾವು. ಧಾತು ದೌರ್ಬಲ್ಯದಿಂದಾಗಿ ದೇಹದಲ್ಲಿ ನಿಶ್ಶಕ್ತಿ ಹೆಚ್ಚಲಿದೆ. ಮನೋರೋಗವು ಅಧಿಕವಾ ಗುತ್ತಾ ಹೋಗುವುದು. ಆದರೂ ಆನಿರೀ ಕ್ಷಿತವಾದ ಹಣದ ಲಾಭದ ಯೋಗವಿದೆ. ತಾ. 8, 9, 10, 11, 12 ಇವು ಅನುಕೂಲ ವಿವೆ.

ಮೀನ—ಇಷ್ಟಕ್ಕಿಂತ ದ್ವಿಗುಣ ಆಸಿ ಪ್ಪವುಂಟಾದೀತು. ದೇಹಾಲಸ್ಯ, ಮನೋ ರೋಗಗಳು ಸದಾ ಪೀಡಿಸುವವು. ಅಕಸ್ಮಿಕ ಪ್ರವಾಸದಿಂದಾಗಿ ಅಪ್ಪ ನಷ್ಟಗಳುಂಟಾಗು ವವು. ವಿರೋಧಿಗಳಿಂದಾಗಿ ಧನ ಮಾನ ಗಳಿಗೆ ಧಕ್ಕೆಯಿದೆ. ಆದರೂ ಜನತೆಯ ಬೆಂ ಬಲವು ಚೆನ್ನಾಗಿರುವ ಕಾರಣ ಅರಂಭಿಸಿದ ಕಾರ್ಯಗಳನ್ನು ಕೊನೆಗಾಣಿಸುವಿರಿ. ಗೃಹ ಸುಖವು ಉತ್ತಮವಿರುವುದು. ತಾ. 8, 9 ಮಾತ್ರ ಕಂಚಿದು-ತ್ತಮವಿವೆ.

ಮಂಗಳೂರು

ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಧರ್ಮಾರ್ಥ ಅಧ್ಯಾಪಕೀಯ ತರಬೇತಿ ಜಿ ಯ ಪ್ರಾರಂಭೋತ್ಸವ.

ಮದ್ರಾಸು ಸರಕಾರದ ವಿದ್ಯಾ ಇಲಾಖೆ ಯ ಸುಧಾರಿಸಿದ ಶಿಕ್ಷಣಕ್ರಮಕ್ಕನುಕೂಲ ವಾಗಿ ಹೈಸ್ಕೂಲಿನ Vಫೋರ್ಮಿನಲ್ಲಿ ಏಚ್ಛಿಕ ವಾಗಿ ಅಧ್ಯಾಪಕೀಯ ಶಿಕ್ಷಣ (Teaching Practice)ವನ್ನು ಕೊಡುವ ವಿಷಾರಿಗೆನು ಗುಣವಾಗಿ ಇಡೀ ಕ್ರಾಂತ್ಯದಲ್ಲಿ ಸಾಮಾನ್ಯ ಜಿಲ್ಲೆಗೆ ಒಂದರಂತೆ 25 ಶಾಲೆಗಳನ್ನು ಆಡ ಕ್ಕಾಗಿ ಸರಕಾರದವರು ಆರಿಸಿಕೊಂದಿರು ವರು. ಆದರಲ್ಲಿ ನಮ್ಮ ಜಿಲ್ಲೆಗೆ ಹುಡುಗರ ಗಾಗಿ ಸ್ಥಳೀಯ ಗಣಪತಿ ಹೈಸ್ಕೂಲನ್ನು ಆರಿ ಸಿರುವರು. ಆದರ ಪ್ರಾರಂಭೋತ್ಸವವು ಇದೇ ತಿಂಗಳ ತಾ 1ರಲ್ಲು ಸ್ಥಳೀಯ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಪಡುಕೋಣೆ ರಮಾನಂದ ರಾಯರಿಂದ, ಶ್ರೀ ಜಿ. ಸೋ ಮಶೇಖರ ರಾವ್ ಬಿ. ಎ. ಬಿ. ಎಲ್, ಇವ ರ ಅಧ್ಯಕ್ಷತೆಯಲ್ಲಿ ಜರಗಿತು.

ಈ ಶಿಕ್ಷಣವು Vಫೋರ್ಮಿನಲ್ಲಿ ಪ್ರಾರಂಭ ವಾಗಲಿದ್ದು ಈ ವರ್ಷದಮಟ್ಟಿಗೆ Vಫೋರ್ ಮಿನಲ್ಲಿ ಈಗಾಗಲೇ ಪ್ರಾರಂಭವಾಗಿರುವ ಈ ಕ್ಲಾಸಿಗೆ ಈಗಲೂ ವರ್ಷದ ಮಧ್ಯದಲ್ಲಿಯೂ ಪ್ರವೇಶ ದೊರಕುವುದು. ಅಂತೆಯೆ ವಿದ್ಯಾರ್ಥಿಗಳಿಗೆ ಶಾಲಾ ಸಂಬಳವಿಲ್ಲ- ಮಾ ತ್ರವಲ್ಲ ಅವರಿಗೆ ತಿಂಗಳೊಂದಕ್ಕೆ Vಫೋರ್ ಮಿನಲ್ಲಿ ರೂ. 5/ರಂತೆಯೂ VIಫೋರ್ ಮಿನಲ್ಲಿ ರೂ 7/-ರಂತೆಯೂ ಧನ ಸಹಾ ಯವು ಸರಕಾರದವರಿಂದ ಕೊಡಲಾಗುವು ದು ಈ ವರ್ಷ Vಫೋರ್ಮಿನಲ್ಲಿರುವ ವಿ ದ್ಯಾರ್ಥಿಗಳು ಈ ಸಂದರ್ಭವನ್ನು ಕಳೆದು ಕೊಳ್ಳದೆ ನಮ್ಮ ಜಿಲ್ಲೆಯ ಎಲ್ಲ ಶಾಲೆಗಳ ಮಕ್ಕಳೂ ಇದರ ಸಂಪೂರ್ಣ ಉಪಯುಕ್ತತೆ ಯನ್ನು ಪಡೆಯುವರೆಂದು ಅಶಿಸಲಾಗಿದೆ.

ಕೆನರಾ ಮೋಟರ್ ಕೆಲಸಗಾರರ ಸಂಘದ ಸಭೆಯು ಕಳದ ಆ. 27ರಲ್ಲು

ಶ್ರೀ ಇ. ಕೊಟ್ಟೈನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಿ. ಡಿ. ಮೆಲ್ಲೊ ಮತ್ತು ಎನ್. ಎಸ್. ಧಾಮಣ್ಣಪ್ಪರಾಯರು ಕಳೆದ ಮೋಟಾರ್ ಮುಷ್ಕರದ ನಂತರದ ವಿಚಾರಗಳನ್ನೂ ಮುಷ್ಕರದ ಪರಿ ಸ್ಥಿತಿಯನ್ನೂ ವಿವರಿಸಿದರು. ನಂತರ ಎನಾರ್ಡ್ ಸಂಪೂರ್ಣ ಸಿಗಬೇಕು. ಪರಿಸ್ಥಿತಿಯ ಒತ್ತಾಯದಿಂದ ನಿರುದ್ಯೋಗಿಗಳಾದ ಕೆಲಸ ಗಾರರಿಗೆ ಕೆಲಸ ದೊರೆಯಬೇಕು. ಜಿಲ್ಲೆಯ ಮೋಟಾರ್ ಕೆಲಸಗಾರರ ಸಂಘಗಳನ್ನು ಐಕ್ಯಗೊಳಿಸಬೇಕು ಇತ್ಯಾದಿ ನಿರ್ಣಯ ಗಳಾದುವು.

ಜಿಲ್ಲಾ ಪಾನನಿರೋಧ ಸಲಹಾ ಸಮಿತಿ ಸಭೆಯು ಕಳದ ತಾ. 25ರಲ್ಲು

ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಜುಲಾಯಿ ತಿಂಗಳಲ್ಲಿ ಜಿಲ್ಲೆಯಲ್ಲಿ 77ತ್ಕ್ಷೀರು ಗಳ ಪತ್ತೆಯಾಗಿವೆಯೆಂದೂ ಅವುಗಳಲ್ಲಿ 44 ಕಳ್ಳಾಟಿಕೆಯ ಮದ್ಯತಯಾರಿ ಮತ್ತು 25 ಕುಡುಕರನ್ನದ್ದೆಂದೂ ಜಿಲ್ಲಾ ಪಾನನಿರೋಧ ಅಧಿಕಾರಿಗಳು ತಿಳಿಸಿದರು.

ಭರವಸ್ತಾವ ನಿಂತಿತು

(ಕುಮಾರ್ ಜಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಭರವಸ್ತಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣವಾಗುವುದು ಹುದು, ಯಾವ ಭಯವೂಯಿಲ್ಲ. ಸಾವಿ ರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಹಿನ್ನೆರಡಾಣೆ ಪ್ರತ್ಯೇಕ.]

Mrs P. DEVEE, F. DS. (N. Tollygunge CALCUTTA

ಸ್ವಾತಿಶ್ವರಿ ಶಾಖಾ ಕಂಪೆನಿ, ಮಂ..

Notice

ಉಡು. ಪಿ. ಡಿ. ಮು. ಕೋರ್ಟ್‌ನಲ್ಲಿ

O. P. No. 31/1950

1 ರಾಮದಾಸ ಕಾಮತ್, ಅರ್ಬಿಟ್ರು ಪದ್ಮನಾಭ ಕಮ್ತಿಯರ ಮಗ, 2, ಸದಾನಂ ದ ಕಾಮತ್, 3, ರಘುರಾಮ ಕಾಮತ್, 4. ಕೃಷ್ಣ ಕಾಮತ್—ಮ್ಯಾನರರು. ಅರ್ಬಿ ಟ್ರು ಪದ್ಮನಾಭ ಕಮ್ತಿಯರ ಮಗಂದಿರು. ಪ್ಪೇಮ ಚಿಂತಕ ಹಿರೀ ಸಹೋದರ ಒಂದನೇ ಅರ್ಜಿದಾರ. ಉಡುಪಿ ತಾಲೂಕು ಪೆಜಮಂ ಗೂರು ಗ್ರಾಮದ ಕೊಕ್ಕರ್ಣೆಯಲ್ಲಿರುವ ವರು —ಅರ್ಜಿದಾರರು-

ಅರ್ಜಿದಾರರ ತಂದೆ ಮೃತ ಅರ್ಬಿಟ್ರು ಪದ್ಮನಾಭ ಕಮ್ತಿಯರ ಬಾಬ್ತು The Bombay Life Assurance Company Ltd Bombay ಈ ಕಂಪೆನಿಯಿಂದ 46718ನೇ Policy ಬಾಬ್ತು ಬರತಕ್ಕ ರೂ. 503-11-0ನ್ನು ವಸೂಲು ಪಡಿಯುವರೆ Succession Certificate ನ್ನು ಅರ್ಜಿ ದಾರರಿಗೆ ಕೊಡಿಸಬೇಕಾಗಿ ವಗೈರೆ ಅಂಶಕ್ಕಿ ಸಿ ದಾಖಲು ಮಾಡಿದ ಮೇಲ್ಕಂಡ ಅರ್ಜಿ ಯು ತಾ. 27-9-1950ಕ್ಕೆ ಇಡೋಣಾಗಿ ಯದೆ. ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ತನಕ ದಿವಸ ಬೆಳಗ್ಗೆ 11 ಗಂಟೆಗೆ ಕೋರ್ಟು ಮುಂದೆ ಆಕ್ಷೇಪ ಜ್ಞಾಪೀರು ಮಾಡತಕ್ಕದ್ದು.

[By order of the Court]
K. Varadaraya Pai
Advocate for Petitioners.
Udipi, Dated 4-9-1950.

The Pangal Nayak Bank Ltd., Katapadi, S. K.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್,
ಕಟಪಾಡಿ, ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣ ಗಳ ಅಡವಿನ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ, ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮ ಪ್ರಕಾರ ನೋಟೀಸು ವ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ ಬಾಕಿ ಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ಟ್ರಿ ನೋಟೀಸು ಬೇಂಕಿಗೆ ಕೊಟ್ಟ ವಿಳಾಸದಲ್ಲಿ ಇಲ್ಲ ವೆಂದು ವಾಪಾಸು ಬಂದಿರುವುದರಿಂದಲೂ ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಪೂರಾ ಐವೇಜುಗಳನ್ನು ತಾರೀಕು 14-9-1950ನೇ ಗುರುವಾರದ ಒಳಗೆ ಸಲ್ಯಾಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಅಡವಿಟ್ಟ ಎಲ್ಲಾ ಚಿನ್ನಾಭರಣ ಗಳನ್ನು ಇದೇ ತಾರೀಕು 22-9-1950ನೇ ಶುಕ್ರವಾರ ಮಧ್ಯಾಹ್ನ ಸುಂಟೆ 4ಕ್ಕೆ ಯಾ ಬೇಂಕಿಗೆ ಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ತಿಳಿದಿರಲಿ.

ಲೋನು ನಂಬ್ರ.	ಈಡಿಟ್ಟವರ ಹೆಸರು ವ ವಿಳಾಸ
1413/47	ಕೆ. ಏ. ಕುಮಾರಯ್ಯ, ಇಸ್ರಾಯೆಲ್ ಕರ್ಕಡರ ಮಗ, ಉಪದೇಶಿ, ಬಾಸೆಲ್ ವಿ ಶ್ವನ್ ಪಾದೂರು, ದ ಕ
1637/47	ಮರಿಯಣ್ಣ ಕಾಸ್ತಲಿನಾ, ಅಂತೋನಿ ಕಾಸ್ತಲೀನರ ಮಗ, ಬೆಳ್ಳೆ ಗ್ರಾಮ, ಮೂಡುಬೆಳ್ಳೆ ಪೋಸ್ಟ್, ದ ಕ.
1770/47	ನತ್ತೆಲ್ ಡೆಸಾ, ಫ್ರಾನ್ಸಿಸ್ ಡಿ' ಸೋಜರ ಹೆಂಡತಿ, ಕುರ್ಕಾಲು ಗ್ರಾಮ, ಶಂಕರ ಪುರ ಪೋಸ್ಟ್, ದ ಕ.
50/48	ನಾಗಯ್ಯಾಚಾರಿ, ನಕ್ರಾಚಾರ್ಯರ ಮಗ, ಕೋಟೆ ಗ್ರಾಮ, ಕಟಪಾಡಿ ಪೋಸ್ಟ್, ದ. ಕ.
616/48	ಅಬ್ದುಲ್ ಖಾದ್ರಿ ಸಾಹೇಬ್, ಯಾಕೂಬ್ ಸಾಹೇಬರ ಮಗ, ಜೋಕಟ್ಟೆ, ಎಣಗುಡ್ಡೆ ಗ್ರಾಮ, ಕಟಪಾಡಿ ಪೋಸ್ಟ್, ದ.ಕ.
1151/48	ಮುದ್ದು ಪೂಜಾರಿ, ಕರಿಯ ಪೂಜಾರಿಯರ ಮಗ, ಕುರ್ಕಾಲು ಗ್ರಾಮ, ಕುಂಜಾರುಗಿರಿ ಪೋಸ್ಟ್, ದ ಕ.
1909/48	ವೈ. ಶಂಕರ ಪೂಜಾರಿ, ವೈ. ಮೋಂಕ್ರ ಪೂಜಾರಿಯರ ಅಳಿಯ, ಎಣಗುಡ್ಡೆ ಗ್ರಾಮ, ಕಟಪಾಡಿ ಪೋಸ್ಟ್, ದ. ಕ-
2184/48	ತಿಮ್ಮ ಸೆಟ್ಟಿ, ನಾಗಪ್ಪ ಸೆಟ್ಟಿ ಅಳಿಯ, ಬೆಳ್ಳೆಗ್ರಾಮ, ಮೂಡು ಬೆಳ್ಳೆ ಪೋಸ್ಟ್, ದ ಕ-
2247/48	ಕೆ. ಶ್ರೀನಿವಾಸ ಕಮ್ತಿ, ಕೆ. ರಾಘವೇಂದ್ರ ಕಮ್ತಿರ ಮಗ, ಮರ್ಚಂಟ್, ಕಟಪಾಡಿ ಪೋಸ್ಟ್, ದ ಕ

Office of the Bank Katapadi, S. K.
Dated 1st. September, 1950.

P. S Nayak,
(Agent.)

ರಸನಿಮಿಷ

ಡೆಹರಾಡೂನಿನ ಅಡವಿ ಸಂಶೋಧನಾ ಸಂಸ್ಥೆಯವರು ತುಳಸಿ ಗಿಡದಿಂದ ಕರ್ಪೂರ ತಯಾರಿಸುವ ಯೋಚನೆಯಲ್ಲಿದ್ದಾರೆ.

—ಚೀನೀ ಜನ ಫೋರ್ಮೋಸಾ ಮೇಲೆ ಧಾಳಮಾಡಿದಾಗ ಹಿಂದೂಸ್ಥಾನಕ್ಕೆ ಕರ್ಪೂರದ ಆವಶ್ಯಕ ಕೊರತೆ ಆಗಬಹುದೆಂಬ ದೂರಾಲೋಚನೆಯಿಂದ ಅಲ್ಲ ತಾನ? (ಪ್ರಪಂಚದ ಕರ್ಪೂರ ತಯಾರಿಸುವ ದೇಶಗಳಲ್ಲಿ ಫೊರ್ಮೋಸಾ ಒಂದಾಗಿದೆ).

೦೦

"ಭೂಗರ್ಭ ಮತ್ತು ಭೂಕಂಪ ವಿಜ್ಞಾನ ರೀತ್ಯಾ ಭಾರತದಲ್ಲಿ ಆಸಾಮ್-ಅತ್ಯಂತ ಅಸ್ಥಿರವಾದ ಪ್ರದೇಶ. ಹಿಮಾಲಯದಷ್ಟು ದೊಡ್ಡ ಪರ್ವತ ಹೊರುವ ತ್ರಾಣ ಈ ಬಲಹೀನ ಪ್ರದೇಶಕ್ಕೆ ಇಲ್ಲ."

(ಭಾರತೀಯ ಭೂಗರ್ಭ ಉಪದೇಶಕ ಮಾಡಿಯಾ ಅವರ ಹೇಳಿಕೆ)

—ಮಹಾನುಭಾವರೇ, ನಿಮಗೀ ಸಂಗತಿ ಇಷ್ಟು ವಿಳಂಬವಾಗಿ ತಿಳಿದುದು ತುಂಬಾ ಶೋಚನೀಯ! ಈ ನಿಮ್ಮ ಹೇಳಿಕೆ ಭಾರತೀಯ ನಿರಾಶ್ರಿತ ಸಮಸ್ಯೆಯನ್ನು ಇನ್ನಷ್ಟು ಬಲಪಡಿಸಿದರೆ?..... ನಿಮ್ಮ ಗತಿ?

೦೦

ಮದರಾಸು ಪ್ರಾಂತ್ಯಕ್ಕೆ ತುಂಬಾ ಅಕ್ಕಿ ಬರುತ್ತಾ ಇದೆ

—ವೇಸರಿನಲ್ಲಿ.

೦೦

ಭೂಕಂಪಿತರ ನೆರವಿಗಾಗಿ ಕೊಡುವ ದೇಣಿಗೆಯ ಮೇಲೆ ಉತ್ಪನ್ನಕರ ಹೇರುವುದಿಲ್ಲ. (ಸರಕಾರಿ ಆಶ್ವಾಸನೆ)

—ದುಡ್ಡಿದ್ದವರಿಗೆ ಉತ್ಪನ್ನಕರ ತಪ್ಪಿಸಲು ಒಂದು ಉಪಾಯ ಸಿಕ್ಕಿತಲ್ಲ?

೦೦

ಮದರಾಸು ಆಂಜೆ ಜಾತೀಯರು ನಗರದಲ್ಲಿ ರಿಕ್ಷಾ ಜೆರೆಯುವ ಆಂಜೆಮನೆ ನಿಲ್ಲಿಸುತ್ತಾರಂತೆ.

—ವಿಹಿಗಳ ಬೆಂದೆದೆಗೆ ತಣ್ಣೀರು ಹೊಯ್ದುಂತಾಯಿತು.

೦೦

ಚೀನಕ್ಕೆ ಇನ್ನೊಮ್ಮೆ 'ಸ್ವಾತಂತ್ರ್ಯ ದಾನ' ಮಾಡದೇಕೆಂಬ ಅಮೇರಿಕನ್ ಮಹೋದ್ಯಮವನ್ನು ಚಿಯಾಂಗ ಕೈಶೇಕರಿಗೆ ಒಂದು ಕೇಂದ್ರಸ್ಥಾನವಿರುವುದಂತೆ.

(ನ್ಯೂಯಾರ್ಕ ಟೈಮ್ಸ)

—ಫೊರ್ಮೋಸಾ ಉಳಿಯಲಿ. ಆ ಮೇಲೆ ಜಗಲಿ ಹಾರಿದವ ಗಗನ ಹಾರಲಿ!

೦೦

ಪುಟ್ಟ ಪುಟ್ಟ ಬಂದರುಗಳ ಸಮಿಷ್ಟಿಗೆ ಕೇಂದ್ರ ಸರಕಾರ ಒಂದು ಸಮಿತಿ ವಿರಚಿಸುವುದರಲ್ಲಿದೆ (ಸುದ್ದಿ)

—ನಮ್ಮ ಮಲ್ಪೆಯ ಭಾಗ್ಯ ಇನ್ನಾದರೂ ಖುಲಾಯಿಸೀತೆ?

೦೦

ಪಂಡಿತ ನೆಹರೂ ರಶಿಯಾ-ಅಮೇರಿಕೆಗಳ ನಡುವೆ ಸಂಧಾನಕ್ಕೆ ಯೋಗ್ಯರು (ಸರ್ವಾನುಮತ)

—ಕೋಣನೆರಡುಂ ಹೋರೆ ಗಿಡುವಿಂಗೆ ಮಿಕ್ಕೆಂಟ ಕ್ಕೋಣೆಯೊಳಗಿನ ಗಾದೆ ಸುಳ್ಳಾಗುವುದೆ?

೦೦

ಮಂಗಳೂರು ಬಸವನ ಗುಡಿಯ ಬಳಿ 30 ವರ್ಷ ವಯಸ್ಸಿನ ಮನುಷ್ಯನೊಬ್ಬ ನೇಣು ಹಾಕಿಕೊಂಡು ಸತ್ತನಂತೆ.

—ವರ್ಷ ನುಖ್ಯವಲ್ಲ. ಯಾರಿಗೂ ಸಾಧ್ಯವಾಗುವ ಕಾರ್ಯ ಇದು

೦೦

ಭೂಕಂಪದ ದೆಸೆಯಿಂದಾಗಿ ಹಿಮಾಲಯ ಇನ್ನಷ್ಟು ಎತ್ತರಕ್ಕೆ ಬೆಳೆದಿದೆಯಂತೆ.

—ಅಬ್ಬಾ ಅದರ ಸಂತೋಷವೆ!

೦೦

ನದಿಗಳಲ್ಲೆಲ್ಲ ನೀರಿನ ಉಬ್ಬರ.

—ಮನುಷ್ಯನ ಅಲ್ಪತೆಯನ್ನು ಕಂಡು ಉಲ್ಲಾಸವೆ?

೦೦

ಶೀಘ್ರವಾಗಿ ಔದ್ಯೋಗೀಕರಣಕ್ಕೆ ಪ್ರವರ್ತಿಸಿದರೆ ಆಪಾಯವುಂಟೆಂದು ಒಂದು ಬ್ರಿಟಿಷ ತಜ್ಞ ಸಮಿತಿ ಎಚ್ಚರಿಸಿದೆ

—ಯಾರಿಗೆ ಅಪಾಯ?

೦೦

ಯುದ್ಧ ವ್ಯಯಕ್ಕಾಗಿ ೧೭೦೦ ಮಿಲಿಯ ಡಾಲರು ದಯಪಾಲಿಸಿದ ಜಗದ್ದೋದ್ಧಾರ ಟ್ರೂಮನ್ ಹಿಂದುಳಿದ ರಾಷ್ಟ್ರಗಳಿಗೆ ೨೪ ಮಿಲಿಯ ಕೊಡುತ್ತಾರಂತೆ.

—ಈ ೭೪ ಮಿಲಿಯ ಹಿಂದೆ ಬರಬೇಕಾದರೆ ಆ ೧೭೦೦ ಮಿಲಿಯ ಪರ್ಜಾಗಿ ಬೇಕು.

೦೦

ಒಂದು ಚಿತ್ರದಲ್ಲಿ ನಾಹು ಮೋದಕ್ ತಮಿಳು ಮಾತಾಡುತ್ತಾನೆ.

—ದ್ರಾವಿಡ ನಕ್ಷತ್ರದವರು ಇನ್ನಾದರೂ ಹಿಂದಿ ಕಲಿಯಬಾರದೆ?

೦೦

ಇಟಲಿಯ ಪಿಸಾ ನಗರದ ಮಾಲುನ ಗೋಪುರ ವರ್ಷಕ್ಕೆ ಮುಕ್ಕಾಲಿಂಚಿನಂತೆ ಕುಸಿಯುತ್ತಿದೆಯಂತೆ.

—ಕಟ್ಟಿದವನ ಉದ್ದೇಶ ಅದೇ ಇರಬೇಕು. ಇಲ್ಲವಾದರೆ ನೆಟ್ಟಗೆ ಕಟ್ಟಬಾರದಿತ್ತೆ?

೦೦

ಜರ್ಮನಿಯಲ್ಲಿ ಆಶಾವಾದಿಗಳನ್ನೂ ನಿರಾಶಾವಾದಿಗಳನ್ನೂ ಸುಲಭದಲ್ಲಿ ಗುರುತಿಸಬಹುದು. ಇಂಗ್ಲಿಷ್ ಭಾಷೆ ಕಲಿಯುವವರು ಮೊದಲನೆಯ ಪಂಗಡಕ್ಕೂ, ರಶಿಯನ್ ಕಲಿಯುವವರು ಎರಡನೆಯ ಪಂಗಡಕ್ಕೂ ಸೇರುತ್ತಾರೆ. (ರೀಡರ್ಸ ಡೈಜೆಸ್ಟ್).

—ಕುಶಿ.

ದಕ್ಷಿಣ ಕನ್ನಡ

ಹಿರಿಯಡ್ಕ:- ತಾ 27-8-50ರಲ್ಲಿ ಸ್ಥಳೀಯ ಆರ್ಯಸಮಾಜ ಮಂದಿರದಲ್ಲಿ ಉಪಾಕರ್ಮ ಶಮಸಾರಂಭವು ಪಂಡಿತ್ ರುದ್ರದೇವಜೀ ಶಾಸ್ತ್ರಿ ಬಿ. ಎ. ಇವರ ಪೌರೋಹಿತ್ಯದಲ್ಲಿ ನೆರವೇರಿತು

ತಾ. 26 8-50ರಲ್ಲಿ ಸ್ಥಳೀಯ "ಹಿಂದೀ ಪ್ರೇಮಿ ಮಂಡಲ"ದ ವತಿಯಿಂದ ದ್ವಿತೀಯ ಹಿಂದಿ ಪರೀಕ್ಷೆಸ್, ಶ್ರೀ ಎಚ್. ಕೆ. ಅನಂತಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರಿಂದ ಗತಸಭಾ ವರದಿವಾಚನವಾದ ಬಳಿಕ, ಶ್ರೀ ಪಂಡಿತ್ ರುದ್ರ ದೇವ ಜೀ ಶಾಸ್ತ್ರಿಯವರು ಸ್ವತಂತ್ರ ಭಾರತದಲ್ಲಿ ನಮ್ಮ ಕರ್ತವ್ಯ ಎಂಬ ಕುರಿತು ಭಾಷಣ ವಿತ್ತರು.

ಇನ್ನಂಜೆ:- ರಾಷ್ಟ್ರ ಸೇವಾ ಸಮಿತಿಯ ಕಾರ್ಯಕಾರೀ ಮಂಡಳಿಯ ಸಭೆಯು ತಾ. 27-8-1950ರಲ್ಲಿ ಡಾ. ಯು. ಶೇಷರಾಯರ ಅಧ್ಯಕ್ಷತೆಯಲ್ಲಿ ಜರಗಿ, ಸ್ವಂತ ಕಟ್ಟಡಕ್ಕಾಗಿ ನಿಧಿ ಸಂಗ್ರಹಿಸುವುದೇ ಮೊದಲಾದ ನಿರ್ಣಯಗಳಾದುವು.

ಬಜಕ್ಕೂರು:- ತಾ 26-8-50ರಲ್ಲಿ ಇಲ್ಲಿಯ ಯಕ್ಷಗಾನ ಸಂಘದ ವಾರ್ಷಿಕ ಕೂಟವು ಕೂಡಿತ್ತು. ಇಂದಿನ ಕೂಟದಲ್ಲಿ "ರಾಜಸೂಯ" ಎಂಬ ಕಥಾಭಾಗವು ಜನಾದರಣೀಯವಾಗಿ ಹಾಡುವಿಕೆ, ಅರ್ಥ ಜೇಳುವಿಕೆಯಿಂದ ನಿವರಿಸಲ್ಪಟ್ಟಿತು.

ಮಂಜೆಪುರ:- ತಾ. 28-8-50ರಲ್ಲಿ ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿಯವರ ಜನ್ಮ ದಿನಾಚರಣೆಯನ್ನು ಮಂಜೆಪುರ ಬಿಲ್ಲವ ಯೂನಿಯನಿನ ನೇತೃತ್ವದಲ್ಲಿ ಜರುಗಿಸಲಾಯಿತು. ವಿಜ್ರಂಭಣೆಯ ಮೆರವಣಿಗೆಯಾಗಿ ರಾತ್ರಿ ಭಜನೆಯಾದನಂತರ ಸಭೆ ಜರಗಿತು. ಶ್ರೀಯುತ. ಸುಬ್ಬನವರು ಮತ್ತು ಶ್ರೀಯುತ. ಬಿ. ಗಿರಿಯಪ್ಪನವರು ಗುರು ಸ್ವಾಮಿಯ ಮಹಾತ್ಮೆಯನ್ನೂ ಅವರು ಮಾಡಿದ ಲೋಕೋದ್ಧಾರವನ್ನೂ ವಿವರಿಸಿದರು. ಶ್ರೀ ಯಂ. ಬೆರ್ಮು ಸುವರ್ಣ, ಶ್ರೀ ಯಂ. ಅಂಗರ ಮತ್ತು ಶ್ರೀ ಯಂ. ಪೂವಪ್ಪ ಇವರು ಗುರು ಸ್ವಾಮಿಯವರ ಜೀವನ ಚರಿತ್ರೆಯನ್ನು ವಿವರಿಸಿದರು. ಪುರಜನರೆಲ್ಲರೂ ಜಾತಿ ಮತಭೇದವಿಲ್ಲದೆ, ಈ ಸಮಾರಂಭಕ್ಕೆ ಕಿಕ್ಕಿಂದು ನೆರೆದಿದ್ದರು.

ಹಂಗಾರ ಕಟ್ಟ:- ಸ್ಥಳೀಯ ಬೈಹಿಂದ್ ಪುಸ್ತಕ ಭಂಡಾರದ ಚತುರ್ಥ ವಾರ್ಷಿಕೋತ್ಸವವು ಕಳದ ತಾ. 30ರಲ್ಲಿ ಡಾಯು. ಎಸ್. ಕಲ್ಲೂರರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಗಳಾದ ಲಕ್ಷ್ಮೀನಾರಾಯಣ ಕೆದಲಾಯರು, ಆನಂದರಾಮ ಉಡುಪರು, ರಾಮ ಮಾಸ್ತರರು, ಕಮಲಾಕ್ಷ ಪಡಿಯಾರರು, ಮತ್ತು ಪಾಣೆ ಮಂಗಳೂರು ವಿಠಲ ರಾಯರು ಸಂದರ್ಭೋಚಿತವಾಗಿ ಮಾತಾಡಿದರು.

ಬೈಂಡೂರು:- ಈ ಕೇಂದ್ರದ ಮಹಾಜನರು ಈಚೆಗೆ ಎದ್ದರೆ ಪಂಚಾಯತ ಬೋರ್ಡಿನ ಆಫೀಸಿನಲ್ಲಿ ಆತ್ಮವಸರದಲ್ಲಿ ಸಭೆಸೇರಿ ಆಹಾರಾಭಾವದ ಕುರಿತು ವಿಚಾರ ವಿನಿಮಯ ನಡೆಸಿ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳುವರೆ ಜನತಾ ಶ್ರಮನಿಧಿ ಕಮಿಟಿಯನ್ನು ಸ್ಥಾಪಿಸಿತು. ಈ ಕಮಿಟಿಗೆ ಶ್ರೀಗಳಾದ ಎತ್ತಿನಕೃಷ್ಣಪ್ಪ ಸೆಟ್ಟಿ, ಪ್ರೆಸಿಡೆಂಟ್, ಜನಾಬ್ ಮಾಡ ಉಸುರ ಸಾಹೇಬ್, ಉಪಾಧ್ಯಕ್ಷ, ಡಿ. ಆರ್. ಕುಂಬಳೆ ಮತ್ತು ಡಿ. ಆರ್. ನಾಯಕ್, ಜತಕಾರ್ಯದರ್ಶಿಗಳು ಮತ್ತು ವಾಸುದೇವ ಹೊಳ್ಳ, ಈ. ಡಿ. ವಿಲಿಯಮ್ಸ್, ಖಾಜಿ ಜುಫ್ರಿ ಸಾಹೇಬ್, ಪಿ. ಸುಬ್ಬಣ್ಣ ಸೆಟ್ಟಿ, ಎಚ್. ವೆಂಕಟ್ರಮಣ ಶೇರೆಗಾರ್, ಬಿ. ಸುಬ್ಬಣ್ಣ ಸೆಟ್ಟಿ, ರೆ. ಫಾ ಎಮ್ ಜಿ. ವಾಸರು ಸದಸ್ಯರಾಗಿ ಆರಿಸಲ್ಪಟ್ಟರು.

ಅನಾವಶ್ಯಕ ವಿಳಂಬ, ಕೊಂದರೆಗಳನ್ನು ನೀಗುವರೆ ಇನ್ನು ಮುಂದೆ ಮಂಗಳೂರು ಡಿಪೋದಿಂದ ನೇರವಾ ಬೈಂದೂರು ಡಿಪೋವಿಗೆ ಆಹಾರಧಾನ್ಯಗಳನ್ನು ಕಳುಹಿಸಬೇಕೆನ್ನುವ, ಮುಂಬಯಿ ಭ್ರಾಂತ್ಯದ ಪ್ರದೇಶಗಳಿಂದ ಈ ಜಿಲ್ಲೆಗೆ ರಾಗಿ ಕರುವರೆ ಅದರ ಮೇಲಿರುವ ಸಾಗಾಟ ನಿರ್ಬಂಧವನ್ನು ಸಡಿಲಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಮೂಲ್ಕಿ:- ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಕಳದ ತಾ 27ರಲ್ಲಿ ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿಯವರ ಜನ್ಮ ದಿನಾಚರಣೆಯು, ಶ್ರೀ. ಕೆ. ವಿಟ್ಟಿಸ್ವ, B. A. L. T. ಯವರ ಅಧ್ಯಕ್ಷತೆಯಲ್ಲಿ ಬಹು ವಿಜ್ರಂಭಣೆಯಿಂದ ಜರಗಿತು. ಮೆರವಣಿಗೆಯಾದ ಮೇಲೆ ಅಧ್ಯಕ್ಷರ ಜನಾಜವಣೆಯಾಗಿ ಶ್ರೀ ಗುರು ಚರಿತ್ರೆಯನ್ನು ಸಂಘದ ಗೌರವ ಕಾರ್ಯದರ್ಶಿಯವರು ಜೇಳಿದ ಮೇಲೆ ನೆರೆದ ಸಭಿಕರಲ್ಲಿ ಶ್ರೀ ಕೆ.ಬಾಬು ಶೆಟ್ರು,ಶ್ರೀ ಹರಿದಾಸ್ ಮಾಧವ ರಾವ್, ಮೊದಲಾದವರ ಭಾಷಣವಾಗಿ ಅಧ್ಯಕ್ಷರು ತನ್ನು ಭೋದದಪರ ಭಾಷಣವಿತ್ತರು.

ಬಡಗಬೆಟ್ಟು:- ಉಡುಪಿ ತಾಲೂಕು ಬಡಗಬೆಟ್ಟು ಗ್ರಾಮದಲ್ಲಿ ಆಗೋಸ್ತು ತಾ. 30ರಲ್ಲಿ ಬ್ರಾಂಚ್ ಪೋಸ್ಟಾಫೀಸೊಂದು ಉಡುಪಿ ಪೋಸ್ಟಲ್ ಇನ್‌ಸ್ಪೆಕ್ಟರ್ ಅವರಿಂದ ತೆರೆಯಲ್ಪಟ್ಟಿದೆ.

ಶೋಚನೀಯ ನಿಧನ-ಪೆರ್ಡೂರಿನ ಪ್ರಸಿದ್ಧ ಪಳ್ಳಿ ಮನೆತನದ ಶ್ರೀ ರಘುರಾಮ ಕುಂದ ಹೆಗಡೆಯವರು ಆಕಸ್ಮಿಕ ಕಾಯಿಲೆಯಿಂದ ಇದೇ ತಾ 1-9-50ರಂದು ಅಕಾಲ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ದೇಶ ಪ್ರೇಮಿಗಳೂ ನಿಷ್ಠಾವಂತ ಕಾಂಗ್ರೆಸಿಗರೂ, ಧ್ಯೇಯವಾದಿಗಳೂ, ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸದಸ್ಯರೂ, ಜನಪ್ರೀತ ಗ್ರಾಮ ಮುಂದಾಳುಗಳಲ್ಲೊಬ್ಬರೂ ಆಗಿದ್ದರು. ಇವರ ವಯ್ಯ ಬರೇ 36ವರ್ಷಗಳು. ಇವರ ಶೋಚನೀಯ ಅಗಲುವಿಕೆಯಿಂದ ಅಪಾರ ದುಃಖಕ್ಕೀಡಾದ ಅವರ ಆತ್ಮೀಯರೆಲ್ಲರಿಗೆ ಮನಶ್ಯಾಂತಿಯನ್ನೂ ಮೃತರ ಆತ್ಮಕ್ಕೆ ಚಿರ ಶಾಂತಿಯನ್ನೂ ಕೋರುತ್ತೇನೆ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬದವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಇವರ
ನವಜೀವನಾಮೃ
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ವಿ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾಕಿಸ್ವರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ತವ್ಯ ದೃಢ ವಿಶ್ವಾಸ ಪಾತ್ರ
ಕೆನರಾ ಬ್ಯಾಂಕ್
ಲಿಮಿಟೆಡ್
ಸ್ಥಾಪಿತ 1906
ಭಾರತದೊಳಗೆ 40 ಕ್ಕಂತಲೂ ಹೆಚ್ಚು ಶಾಖೆಗಳು

ಶ್ರೀ ಕೊರಡ್ಡಲ್ ಶ್ರೀನಿವಾಸರಾಯರ
ಬೆಲೆ: ೧—೮—೦
ಸುಲಭದಲ್ಲಿ ಇಂಗ್ಲಿಷ್

ಹಿಂದೂ ಕೋಡಿನ ಮುಖ್ಯ ಬದಲಾವಣೆಗಳು

[ಶ್ರೀ ಬಿ. ಬಿ. ಲೆಟ್ಟ್, ಎಡ್ವಕೇಟ್, ಲೈಟ್ ಹೌಸ್ ಹಿಲ್, ಮಂಗಳೂರು]

ಹೊಸ ಕಾಯಿದೆಯು ಬಂದನಂತರ ಹಿಂದುಗಳಲ್ಲಿ ಯಾವ ಬದಲು, ಕಾಯಿದೆಯು ತರುವ ಮೊದಲು ಆದರಲ್ಲಿ ಯಾವ ಉದ್ದೇಶ ಗಳು ಆಡಕವಾಗಿವೆ, ಅವನ್ನು ಅನ್ವಯಿಸು ವದರಿಂದ ಜನಜೀವನವು ಯಾವ ರೀತಿಯ ಸಾರ್ವಾಟಿಕ್ಕೆ ಒಳಗಾಗುವುದು, ಜನರ ಹಿ ತಿತ ದೃಷ್ಟಿಯಿಂದ ಅದನ್ನು ಯಾವ ರೀತಿ ಯಲ್ಲಿ ರೂಪಿಸಬೇಕೆಂಬ ಉದ್ದೇಶವನ್ನು ಸೂ ಸಿ, ಜನಾಭಿಪ್ರಾಯವನ್ನು ನಮ್ಮ ಮುಂದಾ ಗಿಸಿಗೆ ಸಕಾಲದಲ್ಲಿ ತಿಳಿಸುವಂತೆ ಮಾಡು ಕರ್ತವ್ಯವು ನಮ್ಮದಿದೆ. ಈ ಕರ್ತವ್ಯದ ತೆಗೆ ನಾವು ಸಕಾಲದಲ್ಲಿ ಗಮನಕೊಡದೆ, ಇತರ ಯಾರನ್ನಾದರೂ ದೂರುತ್ತಾ ತಿರುಗು ವುದರಿಂದ ಪ್ರಯೋಜನವಿಲ್ಲ. ಅಲ್ಲದೆ ಪ್ರಜಾ ಭುತ್ವದ ರೀತಿನೀತಿಗೆ ಅದು ವಿರೋಧ ವಾಗಿ ಆಗುತ್ತದೆ.

ಶೀಘ್ರದಲ್ಲೇ ಜಾರಿಗೆ ಬರಲಿರುವ ಹಿಂದೂ ಕೋಡು ದೀರ್ಘಕಾಲ ಬಾಳಿಬರಬಹುದಾದ ಹತ್ತಾದ ಒಂದು ಕಾನೂನು ಆಗಿದ್ದು, ಹ ಲವು ವಿಷಯಗಳಲ್ಲಿ, ಅಲ್ಲಲ್ಲಿ ಬೇರೆ ಬೇರೆ ತಿ ಪನ್ನತಿಯ ಟೀಕೆಗಳಿಗೆ ಒಳಪಟ್ಟಿರುತ್ತ ಹಿಂದೂ ಕೋಡಿನಲ್ಲಿ ಬರಲಿರುವ ಮುಖ್ಯ ಲಾವಡೆಗಳು ನವಿಗೆ ಈವರೆಗೆಕಂಡುಬಂ ತೆ, ಸ್ಕೂಲ ರೂಪದಲ್ಲಿ ಮುಖ್ಯವಾಗಿ ಈ ನಿಂತಿವೆ. ವಿಸ್ತಾರವಾಗಿ ಈ ಲೇಖನ ಡೇಳುವರೆ ಅವಕಾಶವಿಲ್ಲದ್ದರಿಂದ ಸಂ ರವಾಗಿ ಸೂಚಿಸಿರುತ್ತೇನೆ. ವಿಷಯವ ಸಾಧ್ಯವಿದ್ದಷ್ಟು ನುಟ್ಟಿಗೆ ತಿಳಿದು ಸಮಾ ಂತದೃಷ್ಟಿಯಿಂದ ನೂತನ ಸಲಹೆಗಳನ್ನು ಲದಲ್ಲಿ ಕಳುಹಿಸಿ ಕೊಡುವರೇ ನಮ್ಮ ಿಗೆ ಅವಕಾಶ ದೊರೆಯಲೆಂಬ ಉದ್ದೇಶ ತ ಮಾತ್ರ ಬದಲಾವಣೆಗಳನ್ನು ಬಹುಮ ಇಲ್ಲಿ ಸೂಚಿಸಿರುತ್ತದೆ.

ಮುಸಲ್ಮಾನ್, ಕ್ರಿಶ್ಚಿಯನ್, ಪಾರ್ಸಿ ರಾ ಜೀವು ಅಲ್ಲದೆಯಿರುವ ಜನಾಂತ್ತರಿಗೂ ಂದೂ ಕೋಡು ಲಗಾವಾಗುವಂತಿದೆ.

ಎಲ್ಲಾ ಹಿಂದೂಗಳೂ ಪರಿಬೇ ಲ್ಲದೆ ಒಂದೇ ರೀತಿಯ ಕಾನೂನ ಅನುಸರಿಸಬೇಕೆಂಬುದು ಈ ೀದಿನ ಧಾರಾಳ ಉದ್ದೇಶವಿರು

Impartible estatesಗಳ ಮತ್ತು ರಡು ಜಿಲ್ಲರೆ ವಿಷಯಗಳ ಹೊರತು ತ್ತು, ವ ರೂಢಿಯಲ್ಲಿ ಆಚರಿಸಿ ಬರುವ ಎದೆಗಳನ್ನು ತೆಗೆದುಹಾಕಿರುತ್ತದೆ. ಇದ ಾಗಿ ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ರಿಬರುವ ಆಳಿಯ ಸಂತಾನ ಕಾನೂನಿಗೆ ವರೇಗೆ ಪ್ರತ್ಯೇಕ ಅವಕಾಶ ದೊರೆ

ಈ ಕೋಡಿನಲ್ಲಿ ಕುರಿತಾಗಿ ಉಷ್ಣರಿ ದಿದ್ದಲ್ಲಿ ಪುರಾತನ ಗ್ರಂಥಗಳಿಗಾಗಲೀ, ಷ್ಟಚರಿಬಬುವ ನಿಬಂಧನೆಗಳಿಗಾಗಲೀ ನ್ನು ರೂಪದ ಪುರಾತನ ಪದ್ಧತಿಗಳ ೀ, ಹಿಂದೂಗಳ ಮೇಲೆ ಈ ಮುಂಚೆ ೃತವಾದ ಇತರ ಯಾವ ಕಾನೂನು ಾಗಲೀ ಅವಕಾಶವಿರುವುದಿಲ್ಲ.

ಈ ಕೋಡು ಹಿಂದುಗಳಲ್ಲಿ ವಿತಾಕ್ಷರ ಲ್ಲಿ ಮುಖ್ಯತಃ ಇರುವ ಗಂಡಸರ ಮು ಖಾಂತರ ಕೆಲವು ತಲೆಗಳ ವರೇಗೆ ಉಳಿದು ಬರುವ ಕೋಪಾರ್ಸನರ್‌ರಿ ಎಂಬ ಜತೆ ಕುಟುಂಬವನ್ನೂ **rule of survivorship** ಅಂದರೆ ಒಂದು ಗುಂಪಿನವರಲ್ಲಿ ಒಬ್ಬನು ಯಾ ಕೆಲವರು ತೀರಿಹೋದರೆ ಆ ಗುಂಪಿನ ಉಳಿಕ್ಕವರಿಗೆ ಮೃತರ ಹಕ್ಕು ಬರುವ ಇಷ್ಟರ ವರೇಗಿನ ಕಾನೂನನ್ನೂ ತೆಗೆದುಹಾಕುವ ಉದ್ದೇಶವನ್ನು ಇ ಟ್ಟುಕೊಂಡಿರುತ್ತದೆ. ಇದರ ಬದಲಿಗೆ ಬಂಗಾಳದತ್ತ ಕಡೆ ಆಚರಿಸಿ ಬರುವ ಹಿಂದು ಗಳ ದಾಯಭಾಗ ಪದ್ಧತಿಯ ಪ್ರಕಾರ tenancy-in-common ಅಂದರೆ ಪ್ರತಿ ಒಬ್ಬ ನಲ್ಲಿಯೂ ಪ್ರತ್ಯಪ್ರತ್ಯೇಕ ಸಂಪೂರ್ಣ ತಲೆ ವಾರು ಹಕ್ಕು ಸ್ಥಾಪಿಸಿ ಅವನ ಸ್ವೇಚ್ಛಾನು ಸಾರದ ವಿಲೆವಾರಿಗೆ, ವಿಲೆವಾರಿ ನೂಡದೆ ಮೃ ತನಾದಲ್ಲಿ ಅತನ ಏರೀಸುವಾರರಾಗಿ ಕೋರಿ ಬರುವವನಿಗೆ ಪಡಿಯುವ ಹಕ್ಕನ್ನು ಸ್ಥಾಪಿ ಸುವ ಉದ್ದೇಶವನ್ನಿಟ್ಟುಕೊಂಡಿದೆ. (ಈ ಕುರಿತು ಹಿಂದೂ ಆಚಾರ್ಯರು, ಸನ್ಯಾಸಿಗಳು ಮ.ಇತರ ಹಿಂದುಗಳು ಉತ್ತರ ಹಿಂದೂ ಸ್ಥಾನದಲ್ಲಿ ನಡೆಯಿಸಿದ ಜಳಕಲದ ನಿಮಿತ್ತ ಬಹು ವಿಂಗ ರೂಪದಲ್ಲಿ ಜತೆ ಕುಟುಂಬಕ್ಕೆ ಆವಕಾಶ ಕೊಡಬೇಕೆಂದು ಅಧಿಕಾರಿಗಳು ಅಭಿಪ್ರಾಯಪಟ್ಟಿರುವಂತೆ ತೋರುತ್ತದೆ.)

6 **ವಾರಿಸುದಾರರನ್ನು ಈ ಕೋ ದು ನೇಮಿಸುವಾಗ** ವಿತಾಕ್ಷರದಂತೆ (consanguinity ಅಂದರೆ ಧಾರಾಳವಾಗಿ ರಕ್ತಸಂಬಂಧವೆಂದು ಹೇಳಬಹುದು) ಆಧ್ಯ ವಾ ದಾಯಭಾಗದಂತೆ ಧಾರ್ಮಿಕ ಸಾಮರ್ಥ್ಯ (religious efficacy) ಪ್ರಕಾರ ನಿರ್ಣಯಿ ಸನೆ, ಮನುಷ್ಯನ ಸ್ವಾಭಾವಿಕ ಪ್ರೇಮ ಕ್ಕನುಸರಿಸಿ (according to natural love and effection) ಪ್ರಕಾರ ವಿರ್ಪಡಿಸಿರುತ್ತಾರೆ.

7 **ಯಾವನೊಬ್ಬ ಹಿಂದುವಿಗೂ ಆತನ ಹಿರಿಯನ ಆಸ್ತಿಯಲ್ಲಿ ಜನ್ಮ ಸಿದ್ಧ ಹಕ್ಕಿರಕೂಡದು.** (right to property by birth) ಎಂಬ ಉ ದ್ದೇಶವನ್ನಿಟ್ಟುಕೊಂಡಂತೆ ತೋರುತ್ತದೆ.

8 (a) **ಸ್ತ್ರೀಯರುಗಳಿಗೆ ಬರತಕ್ಕ ಯಾವತ್ತು ಆಸ್ತಿಯಲ್ಲಿ ಸಂಪೂ ರ್ಣ ಇಚ್ಛಾನುಸಾರ ಹಕ್ಕುಸ್ಥಾಪಿಸು ತ್ತದೆ** (ಯಾರಾದರೂ ಶರ್ತಗಳನ್ನೇರ್ಪಡಿ ಸಿಕೊಟ್ಟಲ್ಲಿ ಆ ಶರ್ತಗಳಿಗೆ ಅವಕಾಶ ಉಂ ಟು.) ಮಗಳಿಗೆ ಮಗನಂತೆಯೇ ಒಂದು ಪಾಲು ಕೊಡೋಸ್ಕಾಗುತ್ತದೆ. ವಿಧವೆಗೆ ಮ ಗನಷ್ಟೇ ಹಕ್ಕು.

(b) ಸ್ತ್ರೀಯಲ್ಲಿ ಆಸ್ತಿಯು ಆಕೆಯ ವಾ ರೀಸುದಾರರಾಗಿ ಕೋಡಿನಲ್ಲಿ ಹೋಸಿದವ ರಿಗೆ ಆದರಲ್ಲಿ ಹೇಳಿದ ಪ್ರಕಾರ ಹೋಗು ತ್ತದೆ.

(c) ಸ್ತ್ರೀಯಲ್ಲಿಗೆ ಮದುವೆಯ ಸಮಯ ದಲ್ಲಿ ಕೊಡತಕ್ಕ **ವರದಕ್ಷಿಣೆಯು ಆಕೆ ಯ ಧನವೆಂದೇ ಎಣಿಸಲ್ಪಟ್ಟು, ಆ ಧನವನ್ನು ಪಡೆವಾತನು ಅದರ ರಕ್ಷಕ (trustee) ನಾಗಿ ಮಾತ್ರ ಇದ್ದು ಪ್ರಾಯ ಬರುತ್ತಲೇ ಅವಳಿಗೆ ಅದ ನ್ನು ತೆರತಕ್ಕದ್ದು.**

9 **ಹಿಂದುವು ಶಾಸ್ತ್ರೋಕ್ತ ದೃಷ್ಟಿ ಯಿಂದ ಆತನ ಮೃತ ತಂದೆಯ ನ್ಯಾ ಯವಾದ ಸಾಲವನ್ನು ತೆರುವರೇ ಬ ದ್ಧನೆಂಬ ಕಾನೂನನ್ನು ಈ ಕೋಡು ತೆಗೆದುಹಾಕುತ್ತದೆ.**

10 **ಮದುವೆ**

(a) **ವಿಕಪತ್ನಿ, ವಿಕಪತಿ ಆಚರಣೆ ಯನ್ನು ಮಾತ್ರ ಈ ಕೋಡು ಜ್ಯಾ ರಿಯಲ್ಲಿಡುತ್ತದೆ.** ಇದಕ್ಕೆ ವ್ಯತಿರಿಕ್ತ ವಾಗಿ ಜೀವಂತದಲ್ಲಿ ವಿಕಪತಿಯಿದ್ದಲ್ಲಿ ಅಧಿಕ ಪ ತಿ ಪತ್ನಿಯನ್ನು ಮಾಡಿಕೊಂಡಲ್ಲಿ ಇದು ಶಿ ಕ್ಷೆಗೆ ಒಳಪಡಿಸುತ್ತದೆ.

(b) ಮದುವೆಯನ್ನು ಶಾಸ್ತ್ರೋಕ್ತ ಮ ದುವೆ (Sacramental marriage) ಮತ್ತು ಸಿವಿಲ್ ವಿವಾಹವೆಂದು ಎರಡು ಕರ ಗತಿಯನ್ನು ಮಾಡಿಯಿದೆ.

ಇವುಗಳ ಬಾಬ್ತು ರಿಜಿಸ್ಟ್ರಿಗಳನ್ನು ಇಡು ವ ವಿಧಾನವು ಮಾಡುತ್ತದೆ. ಸಿವಿಲ್ ಮದು ವೆಯ ಕುರಿತು ಆಕ್ಷೇಪ ಎತ್ತುವ, ಆ ಬಾಬ್ತು ತೀರ್ಮಾನ ಪಡಿಯುವ ಹಕ್ಕನ್ನು ಕೊಡುತ್ತದೆ.

ಮದುವೆಗೆ ಅಗತ್ಯವಿದ್ದಲ್ಲಿ ಗಾರ್ಡಿಯನ್ ಶಿಪ್ ಬೇಕೆಂದು ಹೇಳಿರುತ್ತದೆ.

ವಿವಾಹವು (ಕಾನೂನು ರಕ್ತ ಸಂಬಂಧದ ಅಂತರಾಯದಿಂದ) ಮೂಲದಲ್ಲೇ ಆಸಿಂಧು ವಾಗಿಬಹುದು. ಯಾವ ಪಕ್ಷದವರಾದರೂ ಇಚ್ಛಿಸಿದರೆ ಆದರಲ್ಲಿ ಕಾಣಿಸಿದ ಸಂದರ್ಭದಲ್ಲಿ (ಮೋಜ್ಜಿತನ ಇತ್ಯಾದಿ ರೀತಿ ಅದರಲ್ಲಿ ಉಚ್ಚರಿಸಿದ ಕಾರಣಗಳಲ್ಲಿ) ಅಸಿಂಧು ಮಾಡಿಕೊಳ್ಳ ಬಹುದು.

ದಾಂಪತ್ಯ ಸುಖವನ್ನು ಕೋರ್ಟು ಮು ಖೇನ ಕೇಳುವ ಅಧಿಕಾರ, ಕೋರ್ಟು ಮು ಖೇನ ವಿವಾಹ ವಿಚ್ಛೇದನ ಅಥವಾ ದಂಪತಿ ಗಳನ್ನು ವೇರ್ಪಡಿಸುವಿಕೆ ಹಕ್ಕು ಪಡಿಯುವಿ ಕೆಯನ್ನು ಕೊಡುಪುದರಲ್ಲಿದೆ.

11 **ಮುಕ್ಕಳ ಸ್ವಾಧೀನತೆ:**- ಗಾರ್ಡಿ ಯನ್ ಶಿಪ್ (ಸ್ವಾಭಾವಿಕ ದತ್ತದ ಮಕ್ಕಳ ವೀಲ್ ಮುಖೇನ) ಕುರಿತು ಕಾನೂನನ್ನು ನಿರ್ಮಾಣಿಸಿರುತ್ತದೆ. ಮೈನರನ ಭದ್ರತೆಯ ಬಗ್ಗೆ ಸಾಕಷ್ಟು ಕಾನೂನನ್ನು ನಿರ್ಪಡಿಸಿರು ತ್ತದೆ.

12 **ದತ್ತಸ್ವೀಕಾರ:**- ಸ್ವಂತ ಮಗನನ್ನು ನ್ಯಾಯ ಸ್ವೀಕರಿಸುವ ಶಕ್ತಿ ಭದ್ರಂ ತೆ ಕಾನೂನ್ತನ್ನದೆ. **ಪ್ರಸ್ತುತ ಹಿಂದೂಕರದೆ ಯಾವತ್ತು ದತ್ತ ಸ್ವೀಕಾರವನ್ನು ತೆಗೆದು ಹಾಕಿದೆ** ಶಾಸ್ತ್ರೋಕ್ತ ದೃಷ್ಟಿಯನ್ನಾಗಲೀ ಪುನ್ಯಾಪೇಕ್ಷೆಯನ್ನಾಗ ಲೀ ಎಂದಿನಂತೆ ಆಧರಿಸಿ ಹಿಡಿಯದೆ ಲೌಕಿಕ ದೃಷ್ಟಿಯಿಂದ ದತ್ತ ಸ್ವೀಕಾರವನ್ನು ಮಾಡಿ ಸುತ್ತದೆ. ದತ್ತದಿಂದಾಗಿ ಒಬ್ಬನಲ್ಲಿ ನೆಲಸಿ ಬಂದ ಹಕ್ಕು ಹೋಗತಕ್ಕದ್ದಲ್ಲವೆಂದು ಮಾ ಡುತ್ತದೆ. (No divesting). ದತ್ತಕ್ಕೆ ಕೊಡುವ ಕ್ರಮ, ಕೊಡುವವನ್ಗರ್ಹತೆ, ಪಡೆಯುವವನ ಅರ್ಹತೆ, ದತ್ತೀಕರಿಸಲ್ಪಡುವ ವನ ಹಕ್ಕು ಸಂಬಂಧದ ಕುರಿತು ತಿದ್ದು ಪಡಿಗಳನ್ನು ಮಾಡಿರುತ್ತದೆ. ದತ್ತ ಸ್ವೀಕಾರದ ರಿಜಿಸ್ಟ್ರಿಯನ್ನು ಇಡುವ ವಿರ್ಪಾಟನ್ನು ಮಾಡುತ್ತದೆ. ವಿಧವೆಯರಿಗೂ ಹೆಂಡತಿಗೂ ದತ್ತ ಸ್ವೀಕಾರ ಮಾಡುವಾದರಲ್ಲಿ ಮುಂಚಿಗಿಂ ಕ ಅಧಿಕ ಹಕ್ಕು ಯಿರಗೊಡಿಸುವಂತೆ ತೋ ರುತ್ತದೆ. ಈ ಕೋಡಿನಲ್ಲಿ ದತ್ತ ಸ್ವೀಕಾರದ ಕುರಿತು ಹೇಳಿದ ವಿಷಯಗಳನ್ನು ನೋಡು ವಾಗ ಇಷ್ಟರ ವರೆಗೆ ಇರುವ ದತ್ತ ಸ್ವೀಕಾರ ರೂಪಗಳಲ್ಲಿ "ದತ್ತಕರೂಪ"ವನ್ನು ಮಹತ್ವ ಇಟ್ಟಂತೆ ಕಾಣುತ್ತದೆ.

13 **ಮರಣ ಶಾಸನವಿಲ್ಲದೆ ಸತ್ತಲ್ಲಿ, ವಾ ರೀಸು ಹಕ್ಕು ಸರಿಯುವ ನೂತನ ಕ್ರಮ,** ಸಿಗತಕ್ಕ ಹಿಸೆಯ ವಿವರ ಕೊಟ್ಟಿದೆ. ಸ್ತ್ರೀ ಯು ಮಕ್ಕಳು ಮತ್ತು ಗಂಡನಿದ್ದು ಸತ್ತರೆ ಅವರೊಳಗಾಗಲಕ್ಕ ಮೃತ ಸ್ತ್ರೀಯಲ್ಲ ಆ ಸ್ತಿಯ ವಿಭಾಗ ಕ್ರಮ. ಗಂಡ ಮಕ್ಕಳಿ ಲ್ಲದೆ ಸತ್ತಲ್ಲಿ ತಂದೆ ತಾಯಿ ಬಗ್ಗೆಗೆ ಸರಿಯ ವಿಧಾನ ಹೇಳಲ್ಪಟ್ಟಿದೆ.

14 **ಸನ್ಯಾಸಿಯಾದರೆ ಆಸ್ತಿಯು ಮೃತನ ಆಸ್ತಿಯಂತೆ ಹೋಗಬೇಕು.** ಸನ್ಯಾಸಿಯಾಗಿ ಗಳಿಸಿದ ಆಸ್ತಿ ಸನ್ಯಾಸಕ್ಕೆ ಸಂಬಂಧ ಪಟ್ಟವರಲ್ಲಿ ಯಾವ ರೀತಿ ಹೋಗುತ್ತದೆಂದು ತಿಳಿಸಿ ರುತ್ತದೆ.

15 ಗರ್ಭನಲ್ಲಿದ್ದ ಮಗುವನ್ನು ಜನಿಸಿದ ಮಗುವಿನಂತೆ, ಮೃತನ ಆಸ್ತಿಯ ಪಾಲಿನ ಮಟ್ಟಿಗೆ ಎಣಿಸಲಾಗುತ್ತದೆ.

16 ಆಸ್ತಿಗೆ ಹಕ್ಕು ನಿರ್ಧರಿಸುವಲ್ಲಿ, ವಿಳ ಕಾಲದಲ್ಲಿ ಇಬ್ಬರು ವಿಳ ರೀತಿಯ ವಾರಿಸು ದಾರರು ಮೃತ ಪಟ್ಟಿದ್ದಲ್ಲಿ ಹಿರಿಯವನು ನೊ ವೆಲು ಸತ್ತವನೆಂದೂ ಕಿರಿಯವನು ನಂತರ ಸತ್ತವನೆಂದೂ ಎಣಿಸೋಣಾಗುತ್ತದೆ.

17 ಸನ್ಯಾಸಿಯಾದವನು, ಆ ಧ ರ್ಮ ವರ್ತನೆಯು ಹೆಂಡತಿ, ಆದರಲ್ಲಿ ಹೇಳಿದ ಕೆಲವು ತರಗತಿಯ ವಿಧವೆಯರು ಪುನರ್ವಿವಾಹಿತ ರಾದರೆ ಅಥವಾ ಆಸ್ತಿಗೋಸ್ಕರ ಇನ್ನೊಬ್ಬ ಹಕ್ಕುದಾರನನ್ನು ಕೊಂದಾತನು ವಾರೀಸು ದಾರರಾಗಲು ಅನರ್ಹರು ಎಂದು ಬರು ವುದು.

18 ಹೆಂಡ್ತಿ, ಮೃತ ಮಗನ ವಿಧವಾಹೆಂ ಡತಿ, ಮಕ್ಕಳ ಮತ್ತು ವೃದ್ಧ ತಂದೆತಾಯಿ ಗಳ ಸಂರಕ್ಷಣೆಯ ವಿಳವಾರಿ ಹೇಳಿರುತ್ತದೆ. ಗಂಡನ ಕೂಡೆ ಸ್ಥಿತಿಯಿಲ್ಲದೆ, ಹೆಂಡತಿಯ ಕೂಡೆ ಸ್ಥಿತಿಯಿದ್ದರೆ ಅವಳ ಕೃಪವಾದ ಅಥ ವಾ ಅಕ್ರಮವಾದ ಮಕ್ಕಳ ಸಂಧಾರಣಾ ಧಾರವನ್ನು ಅವಳಲ್ಲೇ ಇರಿಸಲಾಗಿದೆ. ಮೃತ ನ, ಕೋಡಿನಲ್ಲಿ ನಮೂದಿಸಿದ ಸಂಬಂಧಿಕರ ಪೋಷಣೆಧಾರಕ್ಕೆ ಒಳಪಟ್ಟು ವಾರೀಸುದಾರ ರಿಗೆ ಹಕ್ಕು ಬರಕಕ್ಕದ್ದಿರುತ್ತದೆ. ಪೋಷಣೆಗೆ ಕೊಡಿಸತಕ್ಕ ವಿಲೆವಾರಿಯನ್ನು ಕೋರ್ಟಿನ ವರ ನಿರ್ಧಾರಕ್ಕೆ ಬಿಡುತ್ತದೆ.

ಈ ವಿಷಯಗಳನ್ನು ಗಮನಕ್ಕೆ ತೆಗೆದು ಕೊಂಡು, ಹೆಚ್ಚಿನ ವಿಚಾರವನ್ನು ಪಡೆದು ನಮ್ಮ ಪ್ರಾಂತ್ಯದ ಜನಮತವು ಯಾವುದೇ ವಿಷಯದಲ್ಲಿ ಬೇರೆ ರೀತಿಯಿದ್ದರೆ ಸಕಾಲದಲ್ಲಿ ಕ್ರಮಪ್ರಕಾರದಲ್ಲಿ ಸಂಬಂಧಪಟ್ಟ ಅಧಿಕಾರಿ ಗಳಿಗೆ ತಿಳಿಯಪಡಿಸಿ, ಬೇಕಾದ ಬದಲಾವಣೆ ಗಳನ್ನು ಈಗಲೇ ಮಾಡಿಸುವುದು ಉಚಿತ ವಲ್ಲವೇ?

oved form by the Gov. of Mysore
ficated by the Agent of the Govt of
e & Indian.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಯ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

೧೯೪೯ರಲ್ಲಿ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

೧೫೪೯ರ ಬರುಡಾಗಳೆ [ಎಂ. ವಿ. ಹೆಗ್ಡೆ]	0	2	0
ಹೈದರಾಬಾದ್ ವಿಜಯ [ಯಕ್ಷಗಾನ] ,,	0	3	0
ಸೆರೆಯಾಳು [ನೀಳ್ಗತೆ] ಕುಲಕರ್ಣಿ ದಿಂದುಮಾಧವ	0	4	0
ಗಾಡೆಯ ಗಾಂಧಿ [ಸೂಕ್ಷ್ಮಪರಿಚಯ]ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಿಲಿನಲ್ಲಿ[ನೀಳ್ಗತೆ] ಹ. ಸು. ಭಟ್ಟ	0	3	0
ಬಲಿಪೀಠದಲ್ಲಿ [ನಾಟಕ] ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ [ಎಂ. ವಿ. ಹೆಗ್ಡೆ]	0	3	0
ನನ್ನ ಹೆಂಡತಿ[ಕತೆಗಳು]ಮಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ [ನೀಳ್ಗತೆ] ಗಿರಿಬಾಲೆ	0	3	0
ಸುಖದಪಾರಿ [ವೈರಾಗ್ಯಶತಕ] ಕೆ. ಎ. ದೇವದಾಸ	0	3	0
ಕಾಲವೇ ಬದಲಾಗಿದೆ [ಕು. ಶಿ ಹರಿದಾಸ ಭಟ್ಟ]	0	3	0
ಸುಕಾಂತ [ಅನುವಾದಿತ ಕತೆ] ವೀ. ಚ. ಹಿತ್ತಲಮನಿ	0	3	0
ಪಂಚಮುಖಿ [5 ಪ್ರಬಂಧೆಗಳು] ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ [ನೀಳ್ಗತೆ] ಕೆ. ದೇವಕಿ	0	3	0
ಜನಸೇವೆಯ ಸೋಗಿನಲ್ಲಿ! [ಕತೆ] ಕೆ. ಶಿವರಾಮು ಶೆಟ್ಟಿ	0	3	0
ನಾ ಕಂಡ ಅವಳು [ಕತೆ] ಶ್ರೀಪತಿ	0	3	0
ತ್ರಿವೇಣಿ [ಪ್ರಬಂಧಗಳ ಸಂಗ್ರಹ]	0	3	0
ನಿಲುವಂಗಿ [ಕತೆ]ಎಸ್.ಸುಬ್ಬರಾಮಯ್ಯ, ಬಿ.ಎ.(ಆನರ್ಸ್)	0	3	0
ಸರಸ-ವಿರಸ! [೪ ವಿನೋದ ಚಿತ್ರಗಳು]	0	3	0
ಹೃದಯೇಶ್ವರಿ [ಕಾದಂಬರಿ]	0	3	0
ವಿವಿಧ ವಿಷಯ ಕೋಶ ಭಾಗ ೨ [ವೈಜ್ಞಾನಿಕ ಸಂಗ್ರಹ]	0	6	0
ಕುಲವಿಲ್ಲದ ಹೆಣ್ಣು[ಪಿ.ವೆಂಕೋಬಾಚಾರ್ಯ ಬಿ.ಎ,ಬಿ.ಟಿ.]	1	0	0
ಭಾಗ್ಯ ಲಕ್ಷ್ಮಿ [ನಾಟಕ] ಬೆಳ್ಮಂಗಡಿ ಲಕ್ಷ್ಮಣರಾವ್	1	0	0
ಯುಗವಾಣಿ [ಕವನ ಸಂಗ್ರಹ] ಕು. ಶಿ. ಹರಿದಾಸಭಟ್ಟ	0	8	0
ಶ್ರೀ ಹೃದಯ— [ವಾಸಂತಿ ಪಡುಕೋಣೆ]	0	3	0
ದ್ವೇಷ- [ಶ್ರೀನಿವಾಸಮೂರ್ತಿ ಸೊರೂರು]	0	3	0
ಪ್ರಜಾಪ್ರಭುತ್ವವನ್ನು ಕುರಿತು [ತಿಪರರಾಮ ಕಾರಂತರು]	0	4	0
ಆಧುನಿಕ ಭಾರತ [ಎಚ್. ಭೀಮರಾವ್]	0	4	0
ಭಾರತದ ಸಾಹಿತ್ಯ ಮತ್ತು ಕಲೆಗಳು [ವಿಶ್ವೇಶ್ವರ ಶರ್ಮ]	0	4	0
ಶ್ರೀ ಸ್ವಾತಂತ್ರ್ಯ ಬೇಕೆ? [ವೈದ್ಯ ವಿನಾಯಕರಾವ್]	0	3	0

೧೯೫೦ರಲ್ಲಿ ಈವರೆಗೆ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

ಹಂಬಲ [ಕೃಷ್ಣಮೂರ್ತಿ ಕೆತ್ತೂರ]		0	3	0
ನುಡಿ ಮುತ್ತುಗಳು [ಎಂ. ವಿ. ಹೆಗ್ಡೆ]	ಮಾಲೆ ೧	0	3	0
,, ,,	ಮಾಲೆ ೨	0	3	0
,, ,,	ಮಾಲೆ ೩	0	3	0
ಕಲಾವಿದನ ದಿನಚರಿ [ಯಸ್ಪೆಲ್]		0	3	0
ತವರು ಮನೆಯಿಂದ [ಸೌ ಶಾರದಾ ದೇವಿ]		0	3	0
ದೇವರ ನಾಮ ಮತ್ತು ಅದರ ಸಾಧನೆ [ಬಿ. ವಿ. ಶರ್ಮ]		0	3	0
ಎರಡು ಕತೆಗಳು		0	3	0
ಬಾಡಿಗೆಯ ಮನೆ ಮತ್ತು ಮುಸುಕು [ನಾಟಕಗಳು]		0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು		0	4	0
ಭಾರತ ಚಿತ್ರದ ಅಂಚೆಚೀಟುಗಳು [ಟಿ ಚಂದ್ರರಾಜ ಸೆಟ್ಟಿ]		0	3	0
ತ್ರಿಶೂಲ [ನಾಟಕ] ವಸುದೇವ್ ಭೂಪಾಲಂ		0	4	0
ಪುಸ್ತಕ ಪುರಾಣ [ಕು ಶಿ. ಹರಿದಾಸಭಟ್ಟ, ಬಿ.ಎ (ಆನರ್ಸ್)]		0	4	0
ಹಳ್ಳಿಯಲ್ಲಿ ನಡೆದ ನಾಟಕ[ಕೆ ಎ. ದೇವದಾಸ,ಶಿರೋಮಣಿ]		0	2	0
ನೆರೆಯ ಗಾಂಧಾರ [ಸುಬ್ರಾವ್ ಕೃಷ್ಣ ಹೆಗಡೆ]		0	3	0
ಮಾತಿನಯುಗದ ಮಹಾ ಪ್ರಭಾವ [ವಿಶ್ವೇಶ್ವರ ಶರ್ಮ]		0	3	0
ವಿಜ್ಞಾನದ ಬೆಳವಣಿಗೆ [ಟಿ. ಚಂದ್ರರಾಜ ಸೆಟ್ಟಿ]		0	4	0
ಹಾ| ಹರ್ಡೀಕರ್ [ನಾಗೇಶ ರಾಮಚಂದ್ರ ದೇಸಾಯಿ]		0	4	0
ತೆಂಗಿನ ತವರು [ಯು. ನಾರಾಯಣಭಟ್ಟ, ಕಾನಗೋಡು]		0	4	0
ಪ್ರಭಾ [ಕು. ಪದ್ಮಾ ಉಡುಪಿ]		0	3	0
ಪ್ರಾಯಶ್ಚಿತ್ತ [ಎಂ ಗೋವಿಂದರಾವ್, ಎಂ ಎ.]		0	2	0
ಶವಗಳ ಸಾಗಾಟ [ಪತ್ತೆದಾರಿ] ಸುಬ್ರಾವ್ ಕೃಷ್ಣ ಹೆಗಡೆ		0	8	0
ಸ್ವಪ್ನಲೋಕ [ಕಾರ್ತಿಕೇಯ]		0	4	0
ಮನೆಯ ಹೊರಗಿನ ಮಹಾಜೀವಗಳು [ಕು ಶಿ ಭಟ್ಟ]		0	4	0
ಘಂಟಮಾರಾ [ಕು. ಶಿ. ಹರಿದಾಸ ಭಟ್ಟ]	ಭಾಗ ೧	0	3	0
,, ,,	ಭಾಗ ೨	0	3	0
,, ,,	ಭಾಗ ೩	0	3	0
,, ,,	ಭಾಗ ೪	0	4	0

ಸಿಗುವ ಸ್ಥಳ:—ಅಂತರಂಗ ಕಾರ್ಯಾಲಯ, ಉಡುಪಿ.
ಅಥವಾ ಸವಯುಗ ಪ್ರೆಸ್, ಉಡುಪಿ.

ಜನಮತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಗಂಡಾಂತರ

ಆಹಾರದ ಕೊರತೆಯ ನಿವಾರಣೆಗಾಗಿ ಆಹಾರ ಸಂಗ್ರಹಣವು ಅನಿವಾರ್ಯವಾದುದರಿಂದ ರೈತರಿಂದ ಆಹಾರವನ್ನು ಸಂಗ್ರಹಿಸುವುದು ಕೃಷಿಪ್ರಾಪ್ತವೆನಿಸಬಹುದಾದರೂ ಅದನ್ನು ನ್ಯಾಯರೀತಿಗನುಸರಿಸಿ ಸಂಗ್ರಹಿಸದೆ, ಪ್ರತಿ ಊರು, ಗ್ರಾಮ, ತಾಲೂಕು ಮತ್ತು ಜಿಲ್ಲೆಗಳಲ್ಲಿ ಸಂಭವಿಸಬಹುದಾದ ಆಹಾರದ ಕೊರತೆಯು ಕುರಿತು ಸರಿಯಾದ ಮುನ್ನೋಟವಿಲ್ಲದೆ, ಸ್ಥಳೀಯ ಅಭಾವದ ಸತ್ಯಸ್ಥಿತಿಯನ್ನು ಅರಿತು ಕೊಳ್ಳದೆ ನಡೆಸಿದ ನಿರ್ಯಾತದಿಂದ ದ. ಕ. ಜಿಲ್ಲೆಯು ಹಿಂದೆಂದೂ ಅನುಭವಿಸದ ಆಹಾರದ ಗಂಡಾಂತರವನ್ನು ಎದುರಿಸ ಬೇಕಾಗಿಬಂತೆನ್ನಬಹುದು.

ನಿಶ್ಚಿತ ಕಾರ್ಯಯೋಜನೆಯ, ಸಮರ್ಪಕವಾದ ಕಾರ್ಯಾನೀತಿ, ವ್ಯವಹಾರ ವಿಜ್ಞಪ್ತಿಯ ಮತ್ತು ಆಹಾರ ಸಂರಕ್ಷಣಾಕ್ರಮದ ಅನುಭವ, ಇವೆಲ್ಲವುಗಳ ಕೊರತೆಯಿರುವುದರಿಂದಲೂ ಆಹಾರ ನಿಯಂತ್ರಣ, ಸಂಗ್ರಹಣ ಮತ್ತು ವಿತರಣಗಳಲ್ಲಿ ಅವಶ್ಯವಿರದ ಕಪ್ಪನಪ್ಪಗಳಿಗೆ ಸರಕಾರವು ಜವಬ್ದಾರಿಯಾಗಿರಬೇಕಾಗಿದೆ. ಇದರಿಂದಾಗಿ ಜನತೆಯು ಯಾರನ್ನು ಅನ್ನದಾತಾರೆಂದು ತಿಳಿಯಬೇಕೋ ಗೊತ್ತಾಗುವದಿಲ್ಲ. ಆದುದರಿಂದಲೇ ಜನರು ಗುಪ್ತಸುಪ್ತವಾಗಿ ಕಳ್ಳಸಂತೆಯ ಅಭಿವೃದ್ಧಿಗಳೂ, ಪ್ರೋತ್ಸಾಹಕರೂ ಆಗಿದ್ದಾರೆಂದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಬೇರೆಯವರಿಗೆ ಉಪಕಾರವಾಗುವಂತಿದ್ದರೆ ಆಹಾರದ ಬಡಿಗೆ ಕೇನುವಿನ ಸೊಪ್ಪು, ಕೇನೆಗೆಡ್ಡೆ, ಹುಳುವಿನ ಗೆಡ್ಡೆ ಮೊದಲಾದುವುಗಳನ್ನು ತಿನ್ನುವುದರಿಂದ ಜೀವನವನ್ನು ಉಳಿಸಿ ಕೊಳ್ಳುವುದು ಸಾಧ್ಯವಿದೆಯೆಂದು ಹಳ್ಳಿಯ ಹೆಚ್ಚಿನ ಮಂದಿಯು ಅನುಭವ ಕೊಡಬಲ್ಲವರಾಗುತ್ತಾರೆ. ಆದರೆ ಆದು ಅವರ ಆರೋಗ್ಯವನ್ನು ಕಾಪಾಡಲಿ ಎಂದು ದೇವರನ್ನೇ ಮರೆಹೋಗಬೇಕು.

ಯಾವ ವಿಧಾನದಿಂದಲೂ ಆಹಾರವನ್ನಾಗಲೀ ಆಹಾರದ ಬದಲಿಗೆ ಬೇರೆ ವಸ್ತುಗಳನ್ನಾಗಲೀ ಒದಗಿಸಿ ಕೊಳ್ಳಲಾಗದವರು ಇಂದು ಊರಿನಲ್ಲಿಲ್ಲ. ಕೆಲವು ರೈತರು ಗಟ್ಟಿವನ್ನು ಹತ್ತಿ ಭದ್ರವಾಗಿ ಕುಳಿತವರು ಇನ್ನು ಬರುವುದು ಕೊಯಿಲಾಗುವ ಸಮಯದಲ್ಲಿಯೇ. ಆಸ್ಪರವರಿಗೆ ಅವರ ಆಹಾರೋತ್ಪಾದನೆಯ ಹೆಚ್ಚಿನ ಅಂಶವು ಕಾಡು ಪ್ರಾಣಿಗಳಿಂದ ನಾಶವಾಗದಂತೆ ದೈವ ಭೂತಕ್ಕೋ, ದೇವರಿಗೋ ಹರಕೆ ಹೊತ್ತು ತಮ್ಮ ದೈನ ಪ್ರಾಣರಕ್ಷಣೆಯನ್ನು ದೈವ,ಭೂತಗಳ ಪಾಲಿಗೆ ಬಿಟ್ಟು, ಸ್ವಂತಜೀವ ರಕ್ಷಣೆಗಾಗಿ ಅವರು ಗಟ್ಟಿ ಹತ್ತುತ್ತಾರೆ. ಇಂದು ಉಳಿಸಿಕೊಂಡ ಜೀವವು ಮುಂದಿನ ವರುಷವೂ ಉಳಿಯಬಾರದೆಂಬ ಹಂಬಲವು ಅವರಲ್ಲಿ ಇದ್ದೇ ಇದೆ.

ಹಳ್ಳಿಯ ಹಲವಾರು ಕಡೆಗಳಲ್ಲಿ ಸಣ್ಣ ಸಣ್ಣ ಆಕ್ಕಿಯ ಕಳವುಗಳೂ, ಗಾಟಿಯ ಮುಖಾಂತರ ಕಳ್ಳಾಟಕೆಯಿಂದ ಬರುವ ಆಹಾರಾಯತದ ತಕ್ಷೀರುಗಳೂ, ಆಹಾರದ ಗಂಡಾಂತರವನ್ನು ಪ್ರತ್ಯಕ್ಷವಾಗಿ ಸಾರುವವುಗಳಿವೆ. ಇಂತಹ ತಕ್ಷೀರುಗಳು ಹೊಟ್ಟೇಬಟ್ಟೆಯ ಪ್ರಧಾನವನ್ನು ಅನುಭವಿಸಿದವರ ದೃಷ್ಟಿಯಲ್ಲಿ ಅನಿವಾರ್ಯ.

ಆಹಾರವನ್ನು ಬೆಳೆಯಿಸಿ ಎಂದು ಅದೆಷ್ಟು ವಿನಂತಿಸಿಕೊಂಡರೂ ಸರಕಾರದ ಕಾರ್ಯ ಘೋರಣೆಯನ್ನು ಕಂಡ ಯಾವ ರೈತಶಿಗಾದರೂ ಕೊಂಗ್ರೆಸ್ ಸಂಸ್ಥೆಯಲ್ಲಾಗಲೀ ಸರಕಾರದ ಮೇಲಾಗಲೀ ವಿಶ್ವಾಸ ಬೆಳೆಯುವುದೇನು ಪೂರ್ವ ಸುಳ್ಳಕೆದಿಂದ ತೊರತು ಸದ್ಯ ಸ್ಥಿತಿಯಿಂದ ಅಸಾಧ್ಯ. ಒಬ್ಬ ರೈತನು ಮುಡಿ ಒಂದರ ೫ ಸೇರು, ಪದಿನಾಲ್ಕು (ಸೇರು ಒಂದರ ೫, 0-5-4) ದರದಲ್ಲಿ ಸ್ಟೋರಿಗೆ ಅಕ್ಕಿಯನ್ನು ಒಪ್ಪಿಸಿದರೂ, ಅವನಿಗೆ ಆಹಾರದ [ಕೊರತೆಯು ಬಂದಾಗ ನಾಲ್ಕಾರು ಮೈಲುದೂರವಾದರೂ ಪ್ರಯಾಣ ಬೆಳೆದುಸಿ ತಲಾ ಒಂದರ ೬ ಔನ್ಸು (೫ ಪಾವು) ಅಕ್ಕಿಯನ್ನಾದರೂ ಸೇರು ಒಂದರ 0-7-6 ಯಿಂದ 0-8-6 ಯ ವರೆಗೆ ತೆತ್ತು ಆಪ್ಪದಿಂದಲೇ ತನ್ನ ಜೀವನವನ್ನು ಸಾಗಿಸಬೇಕು. ಅದೂ ವಾರವಾರಕ್ಕೆ ಅಕ್ಕಿಸಿಗಲಾರದಾದರೆ ಭಾರತದ ಪೂಜ್ಯ ಮತ್ತು ಗೌರವಯುತ ವ್ಯಕ್ತಿಯಾದ ರೈತನು ಉಣ್ಣದೆ ಉಪವಾಸ ಕುಳಿತಿರ ಬೇಕಾಗಿಯಿದೆ ಎಂದರೆ ಇದನ್ನು ಯಾರು ಸಹಿಸಬೇಕು?

ಜಿಲ್ಲೆಯ ಹಲವು ಹಳ್ಳಿಯ ಮೂಲೆ ಮೂಲೆಯ ಜನರು ಮುನ್ಸಿಯವರ ಪ್ರತಿತೋಸವಾಸದ ಅಮೂಲ್ಯ ತತ್ವವನ್ನಾಗಲೀ ಯಾವದೇ ಪ್ರಚಾರದ ಮತ್ತು ವಿನಂತಿಯ ಕರೆಯನ್ನಾಗಲೀ ಕೇಳುವ ಮೊದಲೇ ಆದನ್ನು ಅಭ್ಯಾಸಿಸಿದ್ದಾರೆ ಮದ್ರಾಸ್ ಸರಕಾರವು ಪ್ರಾಂತ್ಯದ ತುತ್ತತುದಿಯ ಜಿಲ್ಲೆಯ ಮೇಲೆ ಸಾಕಷ್ಟು ದೃಷ್ಟಿ ವ್ಯಸರಣ ಮಾಡದಿರುವುದು ವಿಷಾದಕರವಿರುತ್ತದೆ.

ಅಧಿವಾಸನದಿಂದ ಹೇಳಿಕೊಳ್ಳುವಂತಹ ನಮ್ಮ ಜಿಲ್ಲೆಯವರೇ ಆದ ಕೃಷಿಮಂತ್ರಿ ಮಾನ್ಯ ಎ. ಬಿ. ಶೆಟ್ಟರಿದ್ದಾರೆ; ಪ್ರಧಾನಿ ಪ್ರತಿನಿಧಿಗಳಿದ್ದಾರೆ. ಸಮರ್ಥ ಜಿಲ್ಲಾ ಕೊಂಗ್ರೆಸ್ ಸಮಿತಿಯಿದೆ. ಇಷ್ಟೆಲ್ಲಾ ಇದ್ದೂ ಜನರು ನಿರುಪಾಯರಾಗಿ, ನಿಧಾನವಾಗಿ ಸಾಯಬೇಕೇ! ಜನತೆಯು ಬೆಂಬಲಿಸಿ ಕಳುಹಿಸಿದ ಮಂತ್ರಿ ಪ್ರತಿನಿಧಿಗಳು, ಜನತೆಯ ಅದರದಿಂದ ಬೆಳೆದು ಬಂದ ಕೊಂಗ್ರೆಸ್ ಸಂಸ್ಥೆಯು, ಜನತೆಗಾಗಿ ಮಾಡಲಿರುವ ಕರ್ತವ್ಯವನ್ನು ಮಾಡಲು ಹಿಂಜರಿಯುತ್ತಿವೆಯೇ? ಹಾಗಾದರೆ ಇಂದಿನ ಘೋರಸ್ಥಿತಿಯ ನಿವಾರಣೆಯು ಯಾರಿಂದಾಗತಕ್ಕದ್ದೆಂದು ಅವರು ಸೂಚಿಸಬಹುದೇ?

ಮಾ. ನಾ. ರಾ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಟ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all keeps hair black and relieves headache etc.

TRADE MARK

Manufactured by:-

❖ ಜನತೆ ಕಂಗೆಡದ ರೀತಿ —

ಭಾರತದ ಇಂದಿನ ಸ್ಥಿತಿಗತಿಗಳ ಆಸ್ತಿವಾರದಲ್ಲಿ ಭವಿಷ್ಯ ಮಂದಿರವನ್ನೇರಿಸುವ ಚಿತ್ರವನ್ನು ಕಲ್ಪಿಸಿಕೊಳ್ಳುವವರ ಕಣ್ಣು ಮಂಜಾಗುವಂತೆ ನಿಜಕ್ಕೂ ಕತ್ತಲೆಕವಿಯುವುದು; ಭಾವೀ ಜನಾಂಗದ ಭವಿಷ್ಯ ಅಂಧಕಾರ, ಎಂಬ ಭಯಮೂಡಬಹುದು. ಸ್ವಾತಂತ್ರ್ಯ ದೊರೆತಿರುವುದರಿಂದ ಅದನ್ನು ಆನುಭೋಗಿಸುವ ಕುರಿತು ವಿವಿಧ ರೀತಿಯ ಮೇಲಾಟಗಳೇಗ ನಡೆಯುತ್ತಿವೆ. ಸ್ವಾತಂತ್ರ್ಯ ಸಾಧನೆಯಕಡೆಗೆ ಏಕಮುಖವಾಗಿ ಹರಿದಿದ್ದ ಜನತಾ ಲಕ್ಷ್ಯವು, ಆ ದು ಕೈಸೇರಿದ ಮೇಲೆ ಅದನ್ನು ಹಂಚಿತಿನ್ನುವ ಆತುರದಿಂದ ಒಡೆದು ಶತಛಿದ್ರವಾಗಿ ಹೋಗಿದೆ. ಗೊನೆ ಕೈಗೆಟಕುವವರೆಗೆ ಎಲ್ಲರೂ ಒಂದಾಗಿ ಪ್ರಯತ್ನಿಸಿದ್ದರೂ, ಆದು ದೊರೆಯುತೆಂದೊಡನೆಯೆ, ಒಬ್ಬರನ್ನೊಬ್ಬರು ದೂಡಿ ಒಬ್ಬರಿಂದೊಬ್ಬರು ಕಸಗೊಂಡು ರಂಪಾಟ ನಡೆಸುವ ಮಕ್ಕಳ ಸ್ಥಿತಿಯು ಸದ್ಯ ಸ್ವತಂತ್ರ ಭಾರತೀಯರದು. ಸ್ವಾತಂತ್ರ್ಯಸಾಧನೆ ಸಂಪಾದನೆಗಾಗಿ— ಸ್ವಕಾರ್ಯ ಸಾಧನೆಗಾಗಿ— ತಮಗಾಗದವರನ್ನು ದಮನಿಸುವುದಕ್ಕಾಗಿ— ಜಾತಿ, ಮತ, ಪ್ರಾಂತ್ಯ, ಮುಂತಾದುವುಗಳ ಹಿತಸಾಧನೆಗಾಗಿ—ಅನುಕೂಲತೆಯುದ್ದವರೆಲ್ಲಾ ಆಡಳಿತ ಯಂತ್ರದ ಸಂದು ಕೇಲುಗಳನ್ನು ತಿರುಗಿಸುವ ಮೂಲಕವೇ ಪ್ರಯತ್ನಿಸಹತ್ತಿದ್ದಾರೆ; ಮೇಲಿನ ಮಂತ್ರಿಗಳಿಂದಾರಂಭಿಸಿಕೆಳಗಿನ ನೌಕರನವರೆಗಿನ ಎಲ್ಲರೂ ಈ ಕಾಲದಲ್ಲಿ ಪಕ್ಷ, ಪಂಥ, ಜಾತಿ, ವ್ಯಕ್ತಿಗಳ ಕಡೆಗೆ ನೋಡಿ ಕೆಲಸ ಮಾಡುವುದು ಅಧಿಕವೋ, ರಾಜ್ಯ ಶಾಸನ ಆಥವಾ ಕ್ರಮನಿಯಮಗಳನ್ನು ಆಧರಿಸಿ ಕಾರ್ಯ ಸಾಗಿಸುವುದು ಹೆಚ್ಚಿಗೆಯೋ ಎಂದು ಪ್ರಶ್ನಿಸುವಂತಾಗಿದೆ. ಬ್ರಿಟಿಷ್ ಆಡಳಿತ ಮತ್ತು ಬ್ರಿಟಿಷ್ ನೌಕರರಿರುವಾಗ ಎದ್ದಿದ್ದ ಸಂಕಟಗಳ ವರ್ಗ ಬೇರೆ; ಅವರಿಗಿಲ್ಲಿ 'ಅತ್ಮೀಯತೆ' ಎಂಬುದಿರಲಿಲ್ಲ. ಆದ್ದರಿಂದ ಯಾವುದೇ ವಿಧದ ಸಂಬಂಧವನ್ನಾದರೂ ಗಣಿಸಿ ತಮ್ಮ ಪಾಲಿನ ಅಧಿಕಾರ ಚಾಲು ಮಾಡುವ ಅವಶ್ಯಕತೆ ಅವರಿಗಿರಲಿಲ್ಲ. ಹೀಗಾಗಿ ತಂತಮ್ಮ ವ್ಯಕ್ತಿಗತ ಸಂಬಂಧಗಳನ್ನು ನೋಡಿ ಕೆಲಸ ಮಾಡುತಿದ್ದಾರೆಂಬ ಆರೋಪವೂ ಬ್ರಿಟಿಷ್ ಅಧಿಕಾರಿಗಳಿಗೆ ತಟ್ಟುತ್ತಿರಲಿಲ್ಲ; ಈಗಿನ ಅಗ್ರಪಂಕ್ತಿಯ ಅಧಿಕಾರಿಗಳು ಕೂಡಾ ಜನತೆಯ ನಡುವಿನಿಂದ, ತಂತಮ್ಮ ಸಂಬಂಧಿಕರ ತೆಕ್ಕೆಗಳೆಡೆಯಿಂದ, ಆ ಪೀಠಗಳಿಗೇರಿದವರು. ಮಾನವ ಸಹಜ ಆತ್ಮೀಯತೆ ಯಾವುದೂ ಇಂಥವರಿಗಿರಲಾರದೆನ್ನುವದು ತಪ್ಪು; ಈ ಆತ್ಮೀಯ ಭಾವನೆಯು ಅಧಿಕಾರ ನಿರ್ವಹಣಾ ಕಾರ್ಯಗಳಲ್ಲಾವ ರೀತಿಯಿಂದಲೂ ತೋರಿ ಬರಲಾರದೆನ್ನುವುದೂ ಅಸ್ವಾಭಾವಿಕ. ಅಂತಹ ಪಕ್ಷಪಾತ ದೃಷ್ಟಿಯಿಂದ ಕೆಲಸವಾಗದ ಸಂದರ್ಭಗಳಲ್ಲಿ ಕೂಡಾ, ಅಧಿಕಾರ ಸ್ಥಾನದಲ್ಲಿರುವವರು ಪಕ್ಷವನ್ನೋ ಸಂಬಂಧಿಕರನ್ನೋ ಕಟ್ಟಿಕೊಂಡಿರುವ ದುರ್ದೈವ ಬಲದಿಂದಲೇ ಪಕ್ಷಪಾತದ ಆರೋಪಕ್ಕೊಳಗಾಗುವದಿದೆ. ಈ ರೀತಿ ಕದಡಿ ಹೋಗಿರುವ ವಾತಾವರಣದಲ್ಲಿ ನಿಷ್ಪಕ್ಷಪಾತತೆ, ನ್ಯಾಯ ನಿಷ್ಠುರತೆಗಳಿಗಾಗಿ ಈಗ ಬ್ರಿಟಿಷರ ಸ್ಮರಣೆಯಾಗುತ್ತಿದೆ ಎಂದರೂ ಹೆಚ್ಚಲ್ಲ. ಅದೂ ಪರಕೀಯರ ಉಪಕಾರ ಸ್ಮರಣೆಯಾಗುತ್ತಿರುವುದು ಹೆಚ್ಚಾಗಿ ಸಾಮಾನ್ಯ ಜನರಿಗೇನೇ. ಸಾಯಂಕಾಲದ ಊಟ ಮತ್ತು 'ಟಾನಿಕ್' ಆಗಿದ್ದ ಹೆಂಡದ ನೆನಪು ಈ ಆಹಾರಾಧಾಯಗಳದಲ್ಲಿ ಮೇಲಿಂದ ಮೇಲೆ ಆಗುತ್ತಿರುವಂತೆಯೇ, ಹಂಗು ದಾಕ್ಷಿಣ್ಯವಿಲ್ಲದೆ ಕಾನೂನು ಕ್ರಮಗಳನ್ನು ಪಾಲಿಸುತ್ತಿದ್ದ ಬ್ರಿಟಿಷ್ ಅಧಿಕಾರಿಗಳ ಜ್ಞಾಪಕವೂ ಪ್ರತಿಷ್ಠಾವಂತರ ಕೆಲಸವಾಗುತ್ತಿರುವ ಈ ಪಕ್ಷಪಾತಿಯುಗದಪ್ಪ ಬಡವರಿಗಾಗುತ್ತಿದೆ! ಆಗದಿದ್ದೀತೆ? ಒಂದೆರಡು ಸೇರು ಅಕ್ಕಿಯ ತಪ್ಪಿಗೆಗಾಗಿ ಅನಘಾಯಕ ಬಡವನೊಬ್ಬನು ಶಿಕ್ಷಿಸಲ್ಪಡುತ್ತಿರುವಾಗ, ಒಂದೆರಡು ಲೋಡು ಅಕ್ಕಿಗಳ ಅನರಾಧ ಮಾಡಿಯೂ ಮಂತ್ರಿಗಳತನಕ ಪ್ರಯತ್ನಿಸಿ ಶ್ರೀಮಂತನೊಬ್ಬನು ನಿರಪರಾಧಿಯಾಗಿ ಮೆರೆದಾಡಲು ಸಾಧ್ಯವೆಂದು ಕಾಣಿಸಹತ್ತಿರುವ ಈ ಕಾಲದಲ್ಲಿ ಜಡವನಿಗೆ ವರಕೀಯರ ಸ್ಮರಣೆಬಾರದೆ ಹೋದೀತೆ? ಇಂತಹ ಕೆಲವೇ ಅನ್ಯಾಯಗಳು ನಡೆದರೂ, ನಡೆಯುವುದೆಲ್ಲವೂ ಅನ್ಯಾಯವೇ ಎಂಬ ಭಾವನೆ ಜನತೆಯಲ್ಲಿ ಹುಟ್ಟುವುದು ಸಹಜವಲ್ಲವೆ?

ಈ ಮನೋಮಟ್ಟ

ಭಾರತೀಯ ಜನ ಮನೋವೃತ್ತಿಯೇ ಪ್ರಕೃತ ಈ ಮಟ್ಟದಲ್ಲಿದೆ; ಅತ್ಯಧಿಕ ಸಂಖ್ಯಾಕರು ಬಡವರು ಮತ್ತು ಅಶಿಕ್ಷಿತರು. ದಾರಿದ್ರ್ಯವಿದ್ದಲ್ಲಿ ಹೊಟ್ಟೇ ಪಾಡಿಗಾಗಿ ಸಹಜವಾಗಿ ಹುಟ್ಟಿಕೊಳ್ಳುವ ಆಶೆ ಮತ್ತು ದಾಸ್ಯವು ವಿದ್ಯೆ, ಬುದ್ಧಿ ಹೀನತೆಯ ದೆಸೆಯಿಂದ ಜೀವನ ನಿರ್ವಹಣಾ ಉಪಕರಣಗಳಾಗಿಯೇ ಉಳಿದುಕೊಳ್ಳುತ್ತವೆ; ವಂಶ ಪಾರಂಪರ್ಯವಾಗಿ ಪರದಾಸ್ಯದಲ್ಲಿದ್ದು ಸ್ವಾಧೀನತೆ, ಸ್ವಾವಲಂಬನೆಯ ವಾಸನೆಯು ಪರಿಚಯವೇ ಇಲ್ಲದವರು ಹೊಸಕಾಲಿ ಬೀಸಿದ ಸ್ವಾತಂತ್ರ್ಯ ಗಂಧದ ಅಂದಾಜು ಹಿಡಿಯುವುದಕ್ಕೂ ಸಮಯ ಬೇಕಾಗುತ್ತದೆ. ಬಹು ಸಂಖ್ಯಾಕರ ಸ್ಥಿತಿ ಹೀಗಿರುವಾಗ, ಈ ದುಸ್ಥಿತಿಯನ್ನು ತಮಗನುಕೂಲವಾಗಿ ಉಪಯೋಗಿಸಿಕೊಳ್ಳಲು ಅಗತ್ಯವಿರುವ ಮನೋವೃತ್ತಿಯನ್ನೇ ಅಲ್ಪಸಂಖ್ಯಾಕ ಶ್ರೀಮಂತರು ಹಾಗೂ ಪ್ರತಿಷ್ಠಾವಂತರು ಕಟ್ಟಿಕೊಂಡಿರುತ್ತಾರೆ. ಇದು ರಾಷ್ಟ್ರದ ಜನತೆಯ ಯಥಾರ್ಥ ಸ್ಥಿತಿಮತಿ ಚಿತ್ರ. ಈ ಪರಿಸ್ಥಿತಿಗೆ ಪೂರ್ಣಭಿನ್ನವಾದ—ಜನತಾ ಸ್ವಾತಂತ್ರ್ಯದ ಮೂಲ ತತ್ವ ನಿಯಾಮಗಳಿಗನುಗುಣವಾದ—ಮನೋವೃತ್ತಿ ಮತ್ತು ಕ್ರಮವಿಧಾನಗಳು ಸ್ವತಂತ್ರಾನಂತರದಲ್ಲಿ ತಲೆದೋರಬೇಕಿದ್ದಿತು. ಆದರೆ ದುರ್ದೈವವಶಾತ್ ಇಂದು ಹಾಗಿಲ್ಲ; ಆಡಳಿತ ವಿಧಾನವು ಪರಿಸ್ಥಿತಿಯ ಪ್ರತಿಬಿಂಬವಾಗಿ ಉಳಿದುಕೊಂಡಿದೆ; ಆ ಮೂಲಕ ಇಂದಿನ ದುಸ್ಥಿತಿಗೆ ಶಾಶ್ವತ ಮತ್ತು ಅಧಿಕೃತರೂಪವನ್ನೆದು ಕೊಟ್ಟಂತಿದೆ; ಇದೇ ಈಗಿನ ಮಹಾ ಪ್ರಮಾದ. ಇಲ್ಲಿ, ಈ ಸ್ಥಿತಿಯನ್ನು ಬದಲಾಯಿಸುವ ಶಕ್ತಿ ಎಲ್ಲಿ ಹುಟ್ಟಬೇಕು? ಸ್ವತಂತ್ರಾಡಳಿತೆಯಲ್ಲೇ ಆದು ತೋರಿಬರಬೇಕೆದ್ದಿತು-ಆದರೆ ಆಡಳಿತೆಯು ಜನಪ್ರತಿನಿಧಿತ್ವವನ್ನು ವಹಿಸಿರುವುದಷ್ಟೇ ಅಲ್ಲ, ಈ ದುಸ್ಥಿತಿಯನ್ನು ಯಥಾವತ್ ಪ್ರತಿನಿಧಿಸುತ್ತಲೇ ಇದೆ. ಜನತೆಯು ಮಧ್ಯದಲ್ಲೇ ಮೂರಾ ಪಾಟಿ ಕ್ಯಾನಿ ಕ್ರಾಂತಿಯೆಬ್ಬಿಸಬಹುದೆ?— ಸ್ವತಂತ್ರಾಧಿಕಾರದ ಪಾಲಿನದಾಗಿರುವ ಕಾರ್ಯವನ್ನು ತಾನು ಕೈಕೊಂಡ ಅಧಿಕ ಪ್ರಸಂಗ ಜನತೆಯದನ್ನು ಸುತ್ತಿದೆ. ಇವರಡಕ್ಕಿಂತಲೂ ಭಿನ್ನವಾದ ಮತ್ತು ನ್ಯಾಯೋಚಿತವಾದ ರೀತಿಯೊಂದಿದೆ. ಅದೆಂದರೆ ತಮ್ಮ ಪ್ರತಿನಿಧಿ ಮತ್ತು ತಮಗೆ ಹೊಣೆಯಾಗಿರುವ ಆಡಳಿತೆಯ ಮೂಲಕ, ತಮ್ಮ ಅಭಿಮತ ಬಲದಿಂದ ಜನತೆಯು ಈ ಸುಧಾರಣೆಯನ್ನು ಮಾಡಿಸುವುದು. ಆದರೆ ಮೊದಲೇ ಹೇಳಿರುವಂತೆ ಅಜ್ಞಾನ ಮತ್ತು ದಾರಿದ್ರ್ಯದ ದೆಸೆಯಿಂದಾಗಿ ಅಂತಹ ಯೋಗ್ಯತೆಯನ್ನು ಜನಸಾಮಾನ್ಯರು ಇನ್ನು ಕಾಣೇ ಗಳಿಸಿಕೊಳ್ಳಬೇಕು. ಹೀಗಾಗಿ ಸದ್ಯ ಸ್ಥಿತಿಯಲ್ಲಿ ಜನತೆಯ ಪಾಲಿಗೆಳಕಿರುವುದೇ ಸಂತಾಸದಿಂದ ಕುದಿಯುವದು— ಬರಬಾರದುದನ್ನು ಆಹ್ವಾನಿಸುವುದು— ಬೇಡವಾದುದನ್ನು ನೆನಸುವುದು— ಇಷ್ಟೆ!

ಬ್ರಿಟಿಷ್ ಆಡಳಿತೆಯ ಕಾಲದಿಂದೀಚರೆಗೂ ಜನಸಾಮಾನ್ಯರ ಮನೋಮಟ್ಟವು ಇದಕ್ಕಿಂತ ಮೇಲೇರಿದ್ದ ಕಾಲವೇನೂ ಇರಲಿಲ್ಲ. ಆದರೆ ಇಂತಹ ಸ್ಥಿತಿಯನ್ನು ಪರಿವರ್ತಿಸುವ ಅಥವಾ ತಾತ್ಕಾಲಿಕವಾಗಿ ಮರೆತು ಬಿಟ್ಟು ಮುಂದೆ ಬರುವಂತೆ ಮಾಡುವ ವಿಶೇಷ ಘಟನೆಗಳು ನಡೆದಿದ್ದುವು; ರಾಷ್ಟ್ರದ ಸ್ವಾತಂತ್ರ್ಯ ಹೋರಾಟ, ಸ್ವಾತಂತ್ರ್ಯ ಪ್ರಾಪ್ತಿ, ಜಾತೀಯತಾ ಗೊಂದಲಗಳು, ಹೈದರಾಬಾದ್ ಕ್ರಿಯಾಚರಣೆ, ಇಂತಹ ಅಸಾಮಾನ್ಯ ವಿದ್ಯಮಾನಗಳು ಜನತೆಯಲ್ಲಿ ನವಚೇತನ ಮತ್ತು ಒಮ್ಮತವನ್ನು ಆ ಸಂದರ್ಭಗಳಿಗನುಸಾರವಾಗಿ ಆಗೊಮ್ಮೆ ಮೂಡಿಸಿದ್ದುವು; ಆದರೆ ಅಂತಹ ವಿಶೇಷಾಚರಣೆಗಳೇ ಯಾವ ರಾಷ್ಟ್ರದ ಪಾಲಿಗೂ ನಿತ್ಯಾಹ್ನಿಕಗಳಾಗುವಂತಿಲ್ಲ ವಿಶೇಷ ಸಂದರ್ಭಗಳ ಕಡೆಗೆ ಎಲ್ಲರ ಲಕ್ಷ್ಯವೆಳೆಯಲ್ಪಡದಿದ್ದ ಪಕ್ಷ ಅಲ್ಲಿ ಎಲ್ಲಾ ಪರಸ್ಪರ ಮೇಲಾಟ, ಕಚ್ಚಾಟಗಳನ್ನು ನಡೆಸುವುದೊಂದೇ ಧೀರತೇಯರಿಗೆ ಗೊತ್ತೆಂದಾದರೆ, ಆ ರೊಂದು ಸ್ವತಂತ್ರ ಜನಾಂಗವನ್ನು ಸಲಹಲಾರದು, ಅಥವಾ ಸ್ವಾತಂತ್ರ್ಯ ಸಾಧನೆಯಂತಹ ಪರ್ವಕಾಲದ ವಿಶೇಷೋಪಕರಣಗಳನ್ನೇ ಸದಾಕಾಲ ಬಳಸುವ ಅಭ್ಯಾಸವುಳಿದುಕೊಂಡರೆ, ಅವು ಸ್ವಘಾತಕ ಮಾಡಬಲ್ಲುವು. ಸ್ವತಂತ್ರ ರಾಷ್ಟ್ರದ ಪ್ರಜೆಗಳು ಹೇಗಿರತಕ್ಕುದ್ದೋ ಹಾಗಿರುವುದೊಂದೇ ಭಾರತೀಯರ ಇಂದಿನ ಕರ್ತವ್ಯವಾಗಿದೆ ಹೊರತು ಹಿಂದಿನಂತಿರಲೂ ಬಾರದು, ಹಿಂದೆಂದೂ ಇರದಿರೀತಿಯಲ್ಲಿ ಸ್ವಾರ್ಥ, ದುರಭಿಮಾನ, ದುರಾಕಾಂಕ್ಷೆಗಳನ್ನು ಕಟ್ಟಿಕೊಳ್ಳಲೂಬಾರದು.

ಕ್ರಮಶಃ ಸುಧಾರಿನೋಣ

ಅಜ್ಞಾನ, ಧೀರ್ಘಾವಧಿಯ ದಾಸ್ಯ ಮತ್ತು ದಾರಿದ್ರ್ಯಕ್ಕನುಗುಣವಾದ ಹೀನ ಮನೋವೃತ್ತಿಯೇ ಇಂದು ಜನತೆಯುದಾಗಿದೆ. ಎನ್ನುವಾಗ ಆ ದುಸ್ಥಿತಿಗಳನ್ನು ನಿವಾರಿಸಿಯೇ ಈ ಮನೋಮಟ್ಟವನ್ನು ಮೇಲೆತ್ತಬೇಕೋ, ಅಥವಾ ಮನೋಮಟ್ಟವನ್ನು ಸುಧಾರಿಸುವ ಮೂಲಕವೇ ದುಸ್ಥಿತಿ ನಿವಾರಣೆಯೋ ಎಂಬ ಪ್ರಶ್ನೆಯೇಳಲಿಕ್ಕುದೆ; 'ಹುಚ್ಚು ಬಾಡೆ ಮದುವೆಯಾಗದು—ಮದುವೆಯಾಗದೆ ಹುಚ್ಚು ಬಿಡದು' ಎಂಬಂತಹ ಸನುಸ್ಯೆಯದು. ಅದೂ ಸತ್ಯ; ಇದೂ ಹೌದು. ಈ ಪೈಕಿ ಯಾವುದು' ಎಂದು ವಿಚಾರಿಸಿ ನಿಂತುಬಿಡುವುದಕ್ಕಿಂತ ಎರಡು ವಿಧಾನಗಳಿಂದಲೂ ಕ್ರಮಶಃ ಸುಧಾರಿಸುವುದೊಂದೇ ಮಾರ್ಗವಲ್ಲವೆ? ಇವೆರಡಾಲ್ಲವೂ ಒಮ್ಮೆಗೇ ಆಗುವಂತಹ ಸುಧಾರಣೆಯಲ್ಲ. ಒಂದಾದ್ದನ್ನೇ ಲೆಯೇ ವಹಿಸಿಕೊಂದು ಕೈ ತೊಡಗುವ ಅಡಚಣೆಯೂ ಇಲ್ಲಲ್ಲ. ಆಡಳಿತ ಯಂತ್ರವನ್ನು ಒತ್ತಟ್ಟಿಗಿಟ್ಟು ಜನತೆ ಸ್ವೇಚ್ಛೆಯಿಂದ ಸಾಧನೆಗಿಳಿಯಲಾದರೆ, ಜನತೆಯು ಮತ್ತೆ ಮತ್ತು

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.
Advocate & President, District Board, S. Kanara.
CHAIRMAN



Approved form by the Gov. of Mysore
Certificated by the Agent of the Govt of Clyone & Indian.

---ಇಷ್ಟಾದರೂ ಮಾಡಬಾರದೆ?

ಸುಧಾರಣೆಯು ಪೈಕಿ ಅದು ಮುಂದಾಗಬೇಕೋ ಇದು ಮುಂದೋ ಎಂಬ ವಿಚಾರವೆಯೇ ಉತ್ಪತ್ತಿ. ಆದರೆ ಅಡಳಿತ ಮತ್ತು ಜನತೆ ಸಹಕರಿಸಿ ಸಾಧಿಸುವುದಾದರೆ ಒಂದೆಡೆಯಲ್ಲಿ ಆರ್ಥಿಕ ಸಾಮಾಜಿಕ ವೈಷಮ್ಯದಿಂದ ಸ್ಥಿತಿಸುಧಾರಣೆಯನ್ನು ಸಾಧಿಸುವಂತೆಯೇ ಇನ್ನೊಂದೆಡೆಯಿಂದ ಜನತೆಯ ಯೋಗ್ಯತೆಯನ್ನೂ ವೃದ್ಧಿಸುತ್ತಾ ಹೋಗಬಹುದು. ಆದರೆಲ್ಲಾ ಇವುಗಳಲ್ಲೊಂದನ್ನು ಒಮ್ಮೆಗೇ ಒತ್ತಾಯಪೂರ್ವಕ, ಪೂರ್ಣ ಅಡಿಮೇಲು ಮಾಡುವದಾದರೆ, ಆಪೈಕಿ ಮತ್ತೊಂದನ್ನು ಆಗೊಮ್ಮೆ ಕಡೆಗಣಿಸಬೇಕಾದೀತು; ಅಂಶತಃ ಮತ್ತು ಕ್ರಮ ಹಾಗೂ ಶಾಸನಾನುಗುಣವಾಗಿ ಸುಧಾರಿಸುವುದಾದರೆ, ಜನತೆಯ ಆರ್ಥಿಕಸ್ಥಿತಿ ಮತ್ತು ಆಧ್ಯತಾ ಮಟ್ಟವೆರಡನ್ನೂ ಜತೆಯಲ್ಲೇ ಸರಕಾರ ಮತ್ತು ಜನತೆ ಜತೆಗೂಡಿಯೇ ಸುಧಾರಿಸಬಹುದು:- ಭೂಮಿ, ಹಣ ಕಾಸು, ಉದ್ಯಮ ವ್ಯವಹಾರ ಇತ್ಯಾದಿಗಳಲ್ಲಿ ತಲತಲಾಂತರದಿಂದಿರುವ ಭಂಡವಾಳ---ದಾರಿದ್ರ್ಯವ್ಯತ್ಯಾಸವನ್ನೇ ನಿರ್ಮೂಲಿಸುವ ಶಾಶ್ವತ ರೂಪೀ ಸುಧಾರಣೆಯು, ಆದಕ್ಕನುಗುಣವಾದ ಸಾವಧಾನತೆಯಿಂದ ಮತ್ತು ದೃಢವಾಗಿಯೇ ಸಾಗಲಿ; ಆದರೆ ಪ್ರಚಲಿತ ಸ್ಥಿತಿಗತಿಗಳಲ್ಲಾದರೂ ಧನಿಕರ ಕಡೆಗೆ ಒಲವು, ಬಡವರಿಗೆ ಒವೆಯೆಂಬಂತಹ ಯಾವ ಪಕ್ಷಪಾತವೂ ತೋರಿಬಾರದಿರಲಿ. ವರ್ಚಸ್ಸು ಮತ್ತು ಕಾಯಾನುಕೂಲತೆಯಿರುವವರ ಮೇಲಿನ ಹೆಂಗು, ದಾಕ್ಷಿಣ್ಯಾಗಳಿಂದಾಗಿ, ಕಾನೂನು ಶಸ್ತ್ರವು ಅಂಥವರಿದಿರು ಒರೆಯೊಳಗಡಗಿಕೊಂಡಿರುವುದೂ, ನಿಸ್ಸಹಾಯಕ ಬಡವರಿಗಿದಿರಾಗಿ ಮಾತ್ರ ಅದು ಸಣ್ಣ ಸುಟ್ಟ ಕಾರಣಗಳಿಗಾಗಿಯೂ ಝಳಪಿಸಲ್ಪಡುವುದೂ ಹಲವು ನಿದರ್ಶನಗಳ ಮೂಲಕ ತೋರಿ ಬರುತ್ತಿದೆ. ಲಾಭಖೋರ ಧನಿಕ ವರ್ಗದ ವಿರುದ್ಧ ವಿಸುವ ಕಳ್ಳ ಸಂತೇ ನಿರ್ಮೂಲನ ಶಾಸನಗಳಂತಹವು ಪರಿಣಾಮಕರ ರೀತಿಯಿಂದ ಜಾರಿಯಲ್ಲಿಲ್ಲದ ದೆಸೆಯಿಂದಲೇ ಧನಿಕರು ಮಹಾಧನಿಕರಾಗಿ ಏರುತ್ತಿರುವಾಗ ಬಡವರು ತೀರಾ ದರಿದ್ರರಾಗಿ ತಗ್ಗುತ್ತಿದ್ದಾರೆ. ಆರ್ಥಿಕ ಅಸಾಮಾನ್ಯತೆ, ಬಡಜನ ಸಂಕಷ್ಟಗಳು ಪ್ರಚಲಿತ ಸ್ಥಿತಿಗಿಂತಲೂ ಹಾಗಾಗದಂತೆ ನೋಡಿಕೊಳ್ಳುವುದಕ್ಕೂ ಇದು ಕಾಲವಲ್ಲವೆಂದು ಅಧಿಕಾರದೆಲ್ಲರುನವರು ಹೇಳಲಾರರಲ್ಲವೆ? ಹೊಸತಾಗಿ ಎದ್ದ ಜಾತೀಯ ಮಹಾ ಗೊಂದಲಗಳನ್ನು ನಿವಾರಿಸಿ, ಸಾಮಾನ್ಯ ಸ್ಥಿತಿಯನ್ನು ನಿರ್ಮಿಸಿದ ಮಾದರಿಯಲ್ಲಾದರೂ, ಕಳ್ಳ ಸಂತೇ ಮಹಾವಟಾರಗಳಂತಹ ಧನಲಾಲಸೆಗಳನ್ನು ಕಠೋರ ರೀತಿಯಿಂದ ದಮನಿಸಬಾರದೆ? ಆಹಾರ ಮತ್ತು ಜೀವನಾವಶ್ಯ ಸಾಮಾಗ್ರಿಗಳ ಅಭಾವನಿರುವ ಈ ಕಷ್ಟಕಾಲದಲ್ಲಿ ಅಪ್ರತ್ಯಕ್ಷವಾಗಿ ಹಲವು ಮರಣಗಳಿಗೆ ಕಾರಣವಾಗುವ ಕಳ್ಳ ವ್ಯಾಪಾರವನ್ನು ಕೊಲೆಗೆ ಸಮಾನವಾದ ತಕ್ಷೇರೆಂದು ಗಣಿಸಿ, ಆದಕ್ಕನುಗುಣವಾದ ಕಠೋರ ಶಿಕ್ಷೆಯನ್ನು ಕಲಮಂದಿ ಲಾಭಖೋರರಿಗೆ ವಿಧಿಸಿ, ಪರಿಣಾಮವನ್ನು ಪರೀಕ್ಷಿಸಬಾರದೇಕೆ? ಬದಲಿಗೆ ಸಹಸ್ರಗಟ್ಟಲೆ ರೂಪಾಯಿ ಗಳಿಸುವ ಕಳ್ಳ ವ್ಯಾಪಾರದ ಲಾಭದಲ್ಲೊಂದಂಶವನ್ನು ತಾನೂ ಪಡಕೊಳ್ಳುವ ಮಾದರಿಯ ನೂರಾರು ರೂಪಾಯಿಗಳ ಜುಲ್ಮಾನೆಯನ್ನಷ್ಟೇ ವಿಧಿಸುವ ಈ ಅಲ್ಪ ನಷ್ಟಕ್ಕೆ ಹೆದರಿ ಕಳ್ಳಸಂತೇ ವಾಲರು ಆ ವ್ಯಾಪಾರ ಬಿಟ್ಟುಬಿಟ್ಟಾರೆ? ಅದೇ ರೀತಿ, ಯಾವ ವಿಧದ ವಿಯಾಯತಿಯೇ ಇರಲಿ—ಅದನ್ನು ಪಡಕೊಳ್ಳುವವರು ಧನಿಕರು; ಎಂತಹ ಶಾಸನಬದ್ಧ ತಡೆತೊಡಕುಗಳೇ ಇರಲಿ—ಅದನ್ನು ದಾಟಬಲ್ಲ ಅನುಕಲತೆಯಿರುವುದು ಧನಿಕರಿಗೆ; ಯಾವ ಸಣ್ಣ ದೊಡ್ಡ ಕಾರ್ಯವೇ ಇರಲಿ—ಅದಾಗ ಬೇಕು ಧನಿಕರಿಂದ ಅಥವಾ ಧನ ಇಲ್ಲವೇ ಧನಿಕರ ನೆರವಿನಿಂದ, ಎಂಬಂತಹ ಸ್ಥಿತಿಯಿರುವಾಗ "ಇದು ಧನಿಕರ ರಾಜ್ಯ" ಎಂದೊಬ್ಬ ಬಡವ ಉದ್ಗರಿಸಬೇಕಾದರೂ "ಮೋಸ್ಕೋದ ಪ್ರೇರಣೆ ಬೇಕೆ? ಕಾಣುವ ಕಣ್ಣಿದ್ದರೆ ಸಾಲದೆ? ಸದ್ಯಕ್ಕೆ ಈ ವರ್ಗದ ಶ್ರೀಮಂತ ಪಕ್ಷಪಾತತೆಯಾದರೂ ಸಮೂಲ ನಾಶವಾಗಬೇಕು. ಸ್ವತಂತ್ರಾಡಳಿತೆಯು ಕಾನೂನು ಮತ್ತು ನ್ಯಾಯಕ್ಕಾದರೂ ಕುಬೇರ ಕುಚೇಲ ಭೇದವಿಲ್ಲವೆಂಬುದು ಸಾಮಾನ್ಯ ಜನರೆಲ್ಲರಿಗೂ ಸ್ವತಃ ಅನುಭವಕ್ಕೆ ಬರಬೇಕು. ತಾವು ಅಸಹಾಯಕರೆಂಬೊಂದೇ ಕಾರಣಕ್ಕಾಗಿ, ರಾಷ್ಟ್ರದಯಾವುದೇ ಹಕ್ಕು, ಸಂದರ್ಭ, ಅನುಕೂಲತೆಗಳೂ ತಮಗೆ ತಪ್ಪಿ ಹೋಗಲಾರವೆಂಬ ವಿಶ್ವಾಸ ಜನರಲ್ಲಿ ಮೊಳೆಯಬೇಕು. ಇದನ್ನೇ ನಾಯತ್ತಿರನ್ನ, ಶಾಸನಗಳೇನೊ ರಾಜ್ಯಘಟನೆಯಲ್ಲಿವೆ. ಆದರೆ ಆ ಶಾಸನಗಳು ಇಂದು ಜನಜೀವನದ ಅಗುಹೋಗುಗಳ ಮೇಲೆ ಅಧಿಕಾರ ನಡೆಸುತ್ತಿಲ್ಲ; ಅವುಗಳನ್ನು ಅಸ್ತಿತ್ವದಲ್ಲಿ ತರುವುದಕ್ಕೂ ಅವಕಾಶವಿಲ್ಲ ಅಥವಾ ಅವಧಿ ಬಂದಿಲ್ಲ, ಎಂದು ಹೇಳುವುದು ಅಸಾಧ್ಯ ಕಾನೆ?

ಸ್ವಾರ್ಥಶಮನ ತರಬೇತಿ

ಇನ್ನು ಸ್ವಾರ್ಥ ಅಥವಾ ದುರಭಿಮಾನಗಳನ್ನು ಕ್ರಮಶಃ ಸನಿಯಿಸುವ ವಿಧಾನದತ್ತ ನೋಡೋಣ. ಒಮ್ಮೆಗೇ ಆರ್ಥಿಕ ಸಾಮಾಜಿಕ ಸಮಾನತೆಯನ್ನು ಸಾಧಿಸುವುದಕ್ಕಿಂತಲೂ ಸಹಸ್ರಪಾಲು ಕಠಿಣವೆಂದರೆ ಜನಸಾಮಾನ್ಯರೆಲ್ಲರೂ ಮಹಾತ್ಮಾ ಗಾಂಧಿಯವರ ಮಟ್ಟಕ್ಕೇರಬೇಕೆಂಬ ಯೋಚನೆ. ಸ್ವಾರ್ಥ ಅಥವಾ ಸ್ವಾಭಿಮಾನದ ಅಂಶ ಮಾತ್ರವೂ ಎಲ್ಲಿಯೂ ತೋರಿಬರದಂತೆ ಮಾಡುವೆವೆಂದರೆ ಈಗಾಗದು. ಅದಕ್ಕೊಂದು ಮಿತಿ ಬೇಕು. ಅದು ಆಪಾಯಕರ ಅಥವಾ ಅತಿರೇಕದ ಮಟ್ಟಕ್ಕೇರಬಾರದು. ಸ್ವಾಭಿಮಾನ, ಸ್ವಜನಾಭಿಮಾನ, ಸ್ವಪ್ರಾಂತಾಭಿಮಾನ, ಸ್ವಸ್ವಾಮ್ಯಾಭಿಮಾನ, ಸ್ವದೇಶಾಭಿಮಾನ, ಇವು ಒಂದಲ್ಲೊಂದು ಪರಿಮಾಣದಲ್ಲಿ ಇಲ್ಲದವರ್ಯಾರಿದ್ದಾರೆ? ಅಖಿಲ ಮಾನವ ಜನಾಂಗದ ಮೇಲಿನ ಚಿತ್ಕೀಯತೆಯ ರೂಪದ ಅಂಗೋಪಾಂಗಗಳಾಗಿ ಇವೆಲ್ಲವೂ ಮಹಾತ್ಮಾ ಗಾಂಧಿಯವರಲ್ಲೂ ಸಮ್ಮಿಳಿತವಾಗಿದ್ದುವು. ಸ್ವಾರ್ಥವಿಲ್ಲ, ಅಭಿಮಾನವಿಲ್ಲ, ಎನ್ನುವ ಯಾರಲ್ಲೇ ಆದರೂ ದುಸ್ವಾರ್ಥ ಮತ್ತು ದುರಭಿಮಾನವಿಲ್ಲವೆನ್ನಬೇಕೇ ಹೊರತು, ಅವು ವಿಶಾಲತಃ ಇಲ್ಲವೆಂದರೆ ಮಾನುಷತ್ವವೇ ಇಲ್ಲವೆಂಬ ಅರ್ಥವಾದೀತು! ನಮ್ಮಲ್ಲಿಂದು ಹೀಯವರ್ಗದ ಸ್ವಾರ್ಥ, ಸಂಕುಚಿತ ಅಭಿಮಾನಗಳ ತಾಂಡವ ನಡೆದಿವೆ. ಜವು ಖಾಸಗೀ ವ್ಯವಹಾರಗಳ ಮೂಲಕ, ವ್ಯಕ್ತಿಗತ ಸ್ವಾರ್ಥಸಾಧನೆಗಳಿಗಾಗಿ, ಜನಜೀವನದ ಸರ್ವರಂಗಗಳಲ್ಲೂ ವಿವಿಧ ರೂಪದಿಂದ ತೋರಿಬರುತ್ತಿರುವಂತೆಯೇ ಸಾಮೂಹಿಕ ಹಾಗೂ ವಿಶಾಲಾಕಾರದಿಂದಲೂ ಕಾಣಿಸುತ್ತಿವೆ. ಮತ ಸ್ವಾರ್ಥ, ಜಾತಿ ಸ್ವಾರ್ಥಗಳಿಂದ ನಡೆದಿದ್ದ, ನಡೆಯಿರುವ ಸಂಘಟನಾ ಕಾರ್ಯಗಳು ಮತ್ತು ಗೊಂದಲಗಳು ಕೆಲವಿವೆ. ಪ್ರಾಂತ್ಯಾಭಿಮಾನವು ಮಿತಿಮೀರಿ ನಡೆದಿದ್ದ ಕೆಲವು ಆಂದೋಲನಗಳ ನೆನಪು ಜನತೆಗಿದೆ; ಅಂತೆಯೇ ರಾಷ್ಟ್ರೀಯ ಹಾಗೂ ಪ್ರಾಂತೀಯ ಕ್ಷೇತ್ರಗಳ ಕಾರ್ಯಕಲಾಪಗಳು, ನೇಮಕಗಳು, ಚುನಾವಣೆಗಳೇ ಮೊದಲಾದುವುಗಳಲ್ಲೂ ಸ್ವಪ್ರಾಂತ್ಯಾಭಿಮಾನ, ಸ್ವಜನಾಭಿಮಾನದ ಲೇಪಗಳನ್ನು ಗುರುತಿಸಬಹುದು. ನಿದರ್ಶನಕ್ಕಾಗಿ: ಸ್ವತಂತ್ರ ಭಾರತದ ಗವರ್ನರ್ ಜನರಲ್ ಆಗಿದ್ದ ರಾಜಾಜಿಯನ್ನೇ ಜನತಾರಾಜ್ಯ ಭಾರತದ ಪ್ರಥಮಾಧ್ಯಕ್ಷನಾಗಿ ಆರಿಸಿಕೊಳ್ಳಬೇಕೆಂಬ ಬಯಕೆ ಪಂಡಿತ ನೆಹರೂಗಳಂಥವರಿದ್ದೆರೂ, ಉತ್ತರಗಡೆಯ ಕೆಲವರ ಪ್ರಾಂತ್ಯಾಭಿಮಾನವು ಅದಕ್ಕೆ ಅಡ್ಡ ಬಂತೆಂಬ ವಾರ್ತೆಯಿದ್ದಿತ್ತು. ಈ ಬಾರಿಯ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಕೂಡಾ ಪ್ರಾಂತ್ಯಾಭಿಮಾನವು ಕೆಲಸ ಮಾಡಿದ್ದಿತೆಂಬುದನ್ನು ಊಹಿಸಬಹುದು; ಕೇಂದ್ರ ಆಹಾರ ಮಂತ್ರಿ ಶ್ರೀ ಕೆ. ಎಮ್- ಮುನ್ಶಿಗಳು ಜಾಹೀರು ಮಾಡಿರುವಂತೆ ಆಹಾರಧಾನ್ಯ ನಿವಾರಣಾ ಕಾರ್ಯದಕ್ಷಿ ಪ್ರಾಂತೀಯ ಸ್ವಾರ್ಥವನ್ನು ಬಿಡಲೊಲ್ಲದ ಕೆಲವು ಪ್ರಾಂತ್ಯಗಳಿವೆ. ಆಹಾರ ಧಾನ್ಯಗಳ ಅಭಾವವಿರುವ ಪ್ರಾಂತ್ಯಗಳಿಗೆ ಸರಬರಾಯಿ ಪಡಿಸುವುದಕ್ಕಾಗಿ ತಮ್ಮ ಒಳಗಡೆಯಲ್ಲಿ ಅವುಗಳನ್ನು ಸಂಗ್ರಹಿಸಿಕೊಳ್ಳುವ ಕಾರ್ಯದಲ್ಲಿ ಧಾನ್ಯದ ಉಳಿತಾಯವಿರುವ ಪ್ರಾಂತ್ಯಗಳು ಉದ್ದೇಶ ಪೂರ್ವಕ ಔದಾಸೀನ್ಯ ತೋರಿವೆ. ಸಿಪ್ ಸ್ಥಾನ, ದ್ರಾವಿಡ ಸ್ಥಾನದಂತಹ ಬೇಡಿಕೆಗಳಿವೆ. ಕಮ್ಯೂನಲ್ ಎವಾರ್ಡಿನಂತಹ ವಿಷಯಗಳಲ್ಲಿ ಮದ್ರಾಸ್ ಸಂಬ್ರಾನ್ಸ್ ಬ್ರಾಹ್ಮಣ--ಬ್ರಾಹ್ಮಣೇತರರಲ್ಲಿದ್ದಿರುವ ದ್ವೇಷ ಸರ್ವಶ್ರುತವಿದೆ ಭಾಷಾವಾರು ಪ್ರಾಂತ್ಯ ರಚನಾ ಸಂಬಂಧವಾಗಿ ತಮಿಳು ಆಂಧ್ರರೊಳಗೆ, ಕರ್ನಾಟಕ ಮತ್ತು ಆಂಧ್ರ, ತಮಿಳರ ನಡುವೆ, ಗುಜರಾತಿ ಮಹಾರಾಷ್ಟ್ರೀಯರೊಳಗೆ ಕಡೆದಿರುವ ಅಭಿಪ್ರಾಯ ಘರ್ಷಣೆಗಳೂ ದೊಡ್ಡವೇ. ಇವೆಲ್ಲಾ ವಿಧಾನಗಳಲ್ಲೂ ನ್ಯಾಯದ ಎಲ್ಲೆಮೀರಿದೆಯೋ ಇಲ್ಲವೋ ಎಂದು ನೋಡಿಕೊಂಡೇ ಅದು ದುರಭಿಮಾನವೋ ಸಹಜಾಭಿಮಾನವೋ ಎಂಬುದನ್ನು ಗೊತ್ತುಹಚ್ಚಬೇಕು. ತನ್ನ ಪಾಲಿನದಾಗಿರುವ ಮತ್ತು ಸಂದರ್ಭೋಚಿತವಿರುವ ಹಕ್ಕು ಬಾಧ್ಯತೆಗಳನ್ನು ಗಳಿಸಿಕೊಳ್ಳುವ ಮಟ್ಟಿಗೆ ತೋರಿ ಬಂದರದು ಸಹಜಾಭಿಮಾನ. ಪರರ ನಾಲನ್ನು ಅಕ್ರಮವಾಸಿಕೊಳ್ಳುವಷ್ಟು ಮತ್ತು ಪ್ರಸಂಗೋಚಿತವಾಗಿರದ ಮಟ್ಟಿಕ್ಕೇರಿದರದು ದುರಭಿಮಾನ. ಇಂತಹ ವರ್ಗದ ಅಭಿಮಾನಗಳು ಯಾರಲ್ಲಿ ಮೂಡುವವೋ ಅವರೆಲ್ಲರೂ, ಉಚ್ಚನೀಚವರ್ಗಗಳ ಪೈಕಿ ತಮ್ಮ ಅಭಿಮಾನವು ಯಾವ ದರ್ಜೆಯಂಬುದನ್ನು ಸ್ವತಃ ತಿಳಿದುಕೊಳ್ಳಬಲ್ಲರು. ಈ ತಿಳಿವಳಿಕೆಗನುಸಾರವಾಗಿ ವರ್ತಿಸುವ ನಿರ್ಧಾರವನ್ನು ತಾಳುವವನ್ನೂ ಸಹನೆ, ಸಂಯಮವಾದರೂ ಜನತೆಯ ಇಂದಿನ ಸ್ಥಿತಿಯಲ್ಲಿರುವುದು ಬೇಡವೆ? ಅಂತಹ ವಿಶಧೋರಣೆವಹಿಸುವುದನ್ನು ಅಭ್ಯಾಸಿಸುವುದೂ ಅಸಾಧ್ಯವೆ? ಅಭಿಮಾನವಿರಬೇಕು ಹೊರತು ದುರಭಿಮಾನವಲ್ಲ, ಎಂಬ ಮಾತು ಪಕ್ಷ ಪಂಗಡಗಳ ಮಟ್ಟಿಗೂ ಲಗಾವಾಗುವಂತಹದು. ಸಹಜಾಭಿಮಾನವು ಸ್ವಸ್ಥ ಸ್ಥಿತಿಯನ್ನು ಅವಲಂಬಿಸಿರುತ್ತಾದ್ದರಿಂದ ಸಾಮ್ಯವಾಗಿ ತೋರಿದರೂ ಸಫಲವಾಗುವಂತಹದಿದೆ; ಅದರೆ ದುರಭಿಮಾನವು ಭ್ರಾಂತಿಗಗನಕ್ಕೆ ಹಾರುವಂಶ ಹದಾದ್ದರಿಂದ ನಡುಮಟಂದು ಕೊಳ್ಳುವ ದುರ್ದೈವಿಯಿದೆ. ಇಂತಹ ದುರಭಿಮಾನವನ್ನು ಸ್ವಹಿತ ದೃಷ್ಟಿಯಿಂದ ಸ್ವತಃ ದಮನಿಸಿಕೊಳ್ಳುವ ಬುದ್ಧಿ ಜನತೆಯಲ್ಲಿ ಮೂಡಬೇಕು; ಅಂತಹ ದುರಭಿಮಾನಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುವ ಧೋರಣೆಯನ್ನು ಅಡಳಿತೆ ವಹಿಸಬೇಕು. ಆ ಮೂಲಕ ಅಪಶಾಸ್ತ್ರವುದೂ ನಿರ್ಮಾಣಗೊಳ್ಳದಂತಾಗಿ ಯಥಾಸ್ಥಿತಿ ಸ್ಥಾಪನೆಯಾಗಬೇಕು. ಮತ್ತೀ ತಳಕಟ್ಟನ್ನಾಧರಿಸಿಯೇ ಸರ್ವಸಮಾನತೆ ಮತ್ತು ಪ್ರಗತಿ ಮುಂದಿರಬೇಕು.

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಶ್ರೀ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

(ಸ್ಥಾಪನೆ: 1934)

ಜೆಯರ್‌ಮೆನ್: ಶ್ರೀ. ಎಸ್. ಸಿಟಿ. ಎಸ್. ಚಿದಂಬರವೆ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನಿವರ್ಸಲ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟ್ ಬಾಕ್ಸ್ ನಂಬ್ರ 142
ಮದ್ರಾಸು

ಅಸ್ಸಾಮ್ ಮತ್ತಿತರ ಅನಾಹುತ! —

ಜಪಾನ್ ಬಿರುಗಾಳಿ—ಭೂಕಂಪ ಹಾವಳಿ—ಸುಬಾಂಸಿರಿ ಪ್ರಳಯ —

ಇತ್ತೀಚಿಗಿನ ಕಾಲವು, ಮಿಕ್ಕೆಲ್ಲಕ್ಕಿಂತ ಹೆಚ್ಚಾಗಿ ಪ್ರಕೃತಿಜನ್ಯ ಗಂಡಾಂತರಗಳ ಕಾಲ. ಅಸ್ಸಾಮು ಆ ಕಡೆಯಲ್ಲಿ ಕಳೆದ ಸುಮಾರು ಒಂದು ತಿಂಗಳಿಂದಾ ಗುತ್ತಿರುವ ಭೂಕಂಪದ ಮತ್ತು ನೆರೆಯ ಹಾವಳಿಗಳನ್ನು ನೋಡುವಾಗ, ಮತ್ತು ಇದೇ ಅವಧಿಯಲ್ಲಿ ಜಾಪಾನಿನಲ್ಲಾದ ಬಿರುಗಾಳಿ ಅನಾಹುತವನ್ನೂ ಜ್ಞಾಪಿಸುವಾಗ, "ಕಲಿಯುಗಾಂತ್ಯದಲ್ಲಿ ಭೂಕಂಪ, ಪ್ರಳಯ ಇತ್ಯಾದಿ ಅನಾಹುತಗಳ ಮೂಲಕ ಪ್ರಪಂಚ ನಾಶವಾಗುವುದು" ಎಂಬ ಭವಿಷ್ಯವನ್ನು ನಂಬುವವರಿಗೆ ಅವಧಿ ಸಮೀಪಿತೇ ಎಂಬ ಸಂದೇಹ ಮೂಡಬಹುದು. ದೀರ್ಘಾವಧಿಯಿಂದ ಆಹಾರಾಭಾವವನ್ನು ಅನುಭವಿಸಿ ಕಭ್ಯಾಸವಾದಂತೆ– ಶಲಾಂತರಗಳಿಂದಿರುವುದರಿಂದಾಗಿ ಇದು ಅನಿವಾರ್ಯ ಮತ್ತು ಸ್ವಾಭಾವಿಕವೆಂಬ ಭಾವನೆಯು ಆರ್ಥಿಕ ಅಸ್ತವ್ಯಸ್ತತೆಯ ಕುಂತೀಗಳ ಹುಟ್ಟುರುವಂತೆ–ಹೊಳೆ ಮಧ್ಯದ ತಗ್ಗು 'ಕುದುರು'ಗಳಲ್ಲಿ ವಾಸಿಸುವ ಜನರಿಗೆ ಮಳೆಗಾಲದಲ್ಲಿ ವರುಷಂಪ್ರತಿ ಬೇರೆ ಬಲಯಗಳಿಗೆ ಬಿಡಾರ ಹೋಗುವ ಕ್ರಮ ಬಂದಿರುವಂತೆ – ದೀರ್ಘಾವಧಿಯ ಅಸ್ಸಾಮು ಅನಾಹುತ ಪರಂಪರೆಗಳೂ ಸ್ವಾಭಾವಿಕತೆಯ ಮಟ್ಟಕ್ಕೆಳಿಯುವವೋ ಎಂಬ ಭೀತಿಯೇಳುತ್ತಿದೆ. ಜನ ಸಾಮಾನ್ಯರು ತರಬೇತಿಯ ಬಲದಿಂದ ಎಂತಹದನ್ನಾದರೂ ಕಲಿತುಕೊಳ್ಳುತ್ತಾರೆ; ಸಂಪ್ರದಾಯಾನುಸಾರವಾಗಿ ಯಾವುದನ್ನಾದರೂ ಸಹಿಸಿಕೊಳ್ಳುತ್ತಾರೆ. ಒಳ್ಳೆಯದಿರಲಿ, ಕೆಟ್ಟದಿರಲಿ, ಪರಿಜಯವಾದುದಕ್ಕಿಂತ ಭಿನ್ನವಾದುದು ಮುಂದೆ ಬಂದರೆ ಪ್ರಥಮತಃ ಅದರ ಗುರುತು ಹತ್ತುವುದು ಕೂಡಾ ಜನರಿಗೆ ಕಷ್ಟವಾಗುತ್ತದೆ ನಿದರ್ಶನಕ್ಕಾಗಿ ಇದೇ ತಾ. 8ರಲ್ಲಿ ಸಿಂಗಾಪುರದ ಓರ್ವ ಸಿನೆಮಾ ನಟಗೊದಗಿದ ಒಂದು ಘಟನೆಯತ್ತ ನೋಡಬಹುದು. ಮಲಯಾ ನಟ ಸರವಾಕ್ ಸಿಂಗಾಪುರದ ಜನಪ್ರಿಯ ನಟಿ ಮೊಸ್ಸಿ ಆಕೆ ಬುಖಿತ್–ತಿಮಾ ರಸ್ತೆಯಲ್ಲಿ ರಭಸದಿಂದ ಕಾರು ಬಿಡುತಿದ್ದಾಗ ನಿಯಂತ್ರಣ ತಪ್ಪಿ ಇಸ್ಪತ್ತೆದ ತಗ್ಗಿಗೆ ಬಿದ್ದುಬಿಟ್ಟಳು. ಬಿದ್ದುದಾದರೂ ಮಳೆಗಾಲದ ಶುಂಬು ನೀರಿದ್ದ ಒಂದು ತೊರೆಗೆ. ಹಲವು ಜನರು ನಿಂತುಕೊಂಡು ಈ ದೃಶ್ಯವನ್ನು ನೋಡುತಿದ್ದರು; ಆದರೆ ಈ ಪ್ರಾಣಾಪತ್ತಿನ ವೇಳೆ ಅವಳಿಗಾರೂ ಸಹಾಯಕರಾಗಿ ಹೋಗಲಿಲ್ಲ. ಕಾರಣವೆಂದರೆ ಯಾವುದೋ ಚಲಚ್ಚಿತ್ರಕ್ಕಾಗಿ ಆಕೆ ಈ ನಟನೆ ಮಾಡುತಿದ್ದಾಳೆಂದೇ ಅವರ ಊಹೆ. ಕಾರು ಅವಘಡ, ಕಣಿವೇ ಹಾರಾಟದಂತಹ ದೃಶ್ಯಗಳು ಸಿನೆಮಾಗಳಲ್ಲಿರಬೇಕಾಗುತ್ತದೆ. ಈ ಪ್ರಸಿದ್ಧ ನಟಿ ಅಮ್ಮಾ ಸಹಜವಾಗಿ ಅಭಿನಯಿಸುವಾಗ, ತಾವು ಅದನ್ನಾತಂಕಿಸುವ ಅನ್ಯಾಯ ಮಾಡಬಾರದು; ನಟನೆಯೆಂಬುದನ್ನರಿಯದೆ, ದೃಶ್ಯವೆತ್ತುವ ಕೆಲಸಕ್ಕೆ ಅಡ್ಡಿ ತಂದೊಡ್ಡಿದ್ದ ಕೆಡ್ಡಂದಾದ ಪ್ರಮಾದ ಕಥೆಗಳನ್ನು ಅವರೂ ಕೇಳಿರಬೇಕು ಆದ್ದರಿಂದ ಪ್ರೇಕ್ಷಕರೆಲ್ಲರೂ ಸ್ವಸ್ಥ ನಿಂತಿದ್ದರು. ಕೊನೆಗೆ ಈ ಅವಘಡಕ್ಕೀಡಾದವರ ಪೈಕಿ ಒಬ್ಬನು 'ಇದು ನಟನೆಯಲ್ಲ–ನಿಜಕ್ಕೂ ಒದಗಿರುವ ಅಪಾಯ" ಎಂದು ಅಬ್ಬಿಂದಲೇ ಕೂಗಿ ಹೇಳಿದ ಮೇಲೆಯೇ ಜನರು ಧಾವಿಸಿ ಅವರೆಲ್ಲರನ್ನೂ ಉಳಿಸಿದರು. ಕ್ರಮ ಪ್ರಕಾರ ಅಲ್ಲಿಂದ ಪೊಲೀಸ್ ಸ್ಟೇಶನಿಗೆ ಹೋದಾಗ ಅಲ್ಲಿಯೂ ಇದೇ ಪ್ರಮಾದ ನಡೆಯಿತು. ಚಿತ್ರದಲ್ಲಿ ಆವಘಡ ದೃಶ್ಯವನ್ನು ಮುಗಿಸಿಕೊಂಡು, ಆಮೇಲಿನ ದೃಶ್ಯಕ್ಕಾಗಿಯೇ ನಟಿ ಸರವಾಕ್ ಇತ್ಯಂಬಂದಳೆಂದು ಪೋಲಿಸ್ ಅಧಿಕಾರಿಗಳು ಭಾವಿಸಿದರು. ಅವರೆಲ್ಲೊಬ್ಬನಂತೂ "ಬಬಿತ್ತಿಮಾ ನಟನೆಗೆ ಸುಸ್ವಾಗತ; ಒಂದು ಹಾಡು ಆಗಲಿ ಸರವಾಕ್" ಎಂದು ಸ್ವಾಗತಿಸುವ ಅಭ್ಯಾಸದ ಪ್ರಭಾವವಿಷ್ಟಿದೆ! ಕೆಲವು ವಾರಗಳಿಂದಲೂ ಅಸ್ಸಾಮಿನಲ್ಲಿ ನಡೆದೇ ಇರುವ ಅನಾಹುತಗಳು ಸ್ವಾಭಾವಿಕತೆಯ ಮಟ್ಟಕ್ಕೆಳಿಯುವವೇ ಎಂಬ ಭೀತಿಯೀಗ ಎದ್ದಿದೆ! ಈ ದುಷ್ಕಾಲದಲ್ಲಿ ನೈಸರ್ಗಿಕ ಅನಾಹುತಗಳು ಒಂದರ ಬಳಿಕೊಂದರಂತೆ ನಡೆದಿವೆ.

ಜಾಪಾನ್ ಬಿರುಗಾಳಿ

ಕಳೆದ ವಾರಾದಿಯಲ್ಲಿ ಜಾಪಾನ್ ಮತ್ತು ಅಂಟಿಗುವಾ ಮೊದಲಾದ ದ್ವೀಪಗಳಿಗಾಗಿರುವ ಬಿರುಗಾಳಿ ಹಾವಳಿಯು ಅದ್ಭುತವಾದುದು. ಬ್ರಿಟಿಷ್ ವೆಸ್ಟ್ ಇಂಡೀಸ್ ದ್ವೀಪ ಅಂಟಿಗುವಾ, ಬರ್ಬುಡಾ ಫ್ಲೋರಿಡಾ ಮೊದಲಾದ ದ್ವೀಪಗಳಲ್ಲಿ ತಾಸಿಗೆ 160 ವೈಲುಗಳ ವೇಗದಿಂದ ಬೀಸಿದ ಬಿರುಗಾಳಿಯು ಮನೆಗಳನ್ನು ಉರುಳಿಸಿ, ರಸ್ತೆ, ರೈಲ್ವೆ, ಸರಂಜಾಮ ಪಥಗಳನ್ನು ಧ್ವಂಸ ಮಾಡಿ, ಅಡಾರ ಸರಬರಾಯಿಗಳನ್ನು ಅಡಿಮೇಲು ಮಾಡಿ ಹಾಕಿದ್ದಿತು. ಎಲ್ಲವುಗಳ ಅಂದಾಜು ದೊರೆಯದಿದ್ದರೂ ಕನಿಷ್ಠ ಪಕ್ಷ ಒಂದು ಮಿಲಿಯ ಡೋಲರುಗಳ ನಷ್ಟವು ಆಲ್ಲಿ ಆಗಿರಬೇಕೆಂದು ಊಹಿಸಲಾಗಿದೆ ಮುಳುಗಿ ಹೋಗಿ ಅಥವಾ ಪಡಕ್ಕಪ್ಪಳಿಸಲ್ಪಟ್ಟು ಈ ದ್ವೀಪ ವಲಯದ ಸಮುದ್ರದಲ್ಲಿದ್ದ ಹಡಗುಗಳೆಲ್ಲವೂ ಮಾಯವಾಗಿದ್ದುವು ಆದರೊತ್ತಿನ ಜಾಪಾನಿನಲ್ಲಿ ಬಿರುಗಾಳಿ ಮಾಡಿದ ಹಾವಳಿಯಂತೂ ಅತಿ ಹೆಚ್ಚಿನದು. ಬಿರುಗಾಳಿಗೆ ಹೆಸರಾದ ಜಾಪಾನಿನಲ್ಲಿ ಕಳದ ಹದಿನಾರು ವರುಷಗಳಂದಾಗದಂತಹ ಮಹಾ ಅನಾಹುತವನ್ನು, ತಂಬಿಸಲಾಗದ ನಷ್ಟವನ್ನು, ಈ ಬಾರಿಯ ಬಿರುಗಾಳಿ ಮಾಡಿದ್ದಿತು. ತುಫಾನ್ ಬೀಸಿದ ವಾರ್ತೆಯೊಂದಿಗೇನೇ ಬಂದ ಸುದ್ದಿಯಂತೆ ಕಡಿಮೆಯೆಂದರೂ 250 ಮಂದಿ ಮಡಿದು, ಎರಡು ಮೂರುಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ ಆದರೆ ಎಲ್ಲವೂ ತಿಳಿದು ಬರುವಾಗ ಈ ಸಂಖ್ಯೆಗಳು ಎಷ್ಟೋವಾಲು ಹೆಚ್ಚಾಗಿರಬಹುದು. ಜಪಾನಿನ ಕೆಲವು ಜನಪ್ರಿಬಿಡ ನಗರಗಳಲ್ಲಿ 12,000ಕ್ಕೂ ಮೇಲ್ಪಟ್ಟು ಮನೆಗಳು ಪೂರ್ಣನಾಶವಾಗಿ, 22,000ಕ್ಕೂ ಮಿಕ್ಕಿ ಅರ್ಧ ನಿವಾತಗೊಂಡು, 7,77,000 ಕ್ಕೂ ಮಿಕ್ಕಿ ನೆರೆ ನೀರಪಾಲಾದುವೆಂದು ತಿಳಿದುಬಂದಿದೆ ಪೂರ್ಣನಾಶವಾದ ಅಥವಾ ಹಾಳಾದ ಹಡಗುಗಳ ಸಂಖ್ಯೆಯೇ 700ರಷ್ಟಿದೆ. ಒಕಾಕಾ ಜಿಲ್ಲೆಯೊಂದರಲ್ಲೇ ಟೆಲಿಫೋನ್ ಮತ್ತು ಟೆಲಿಗ್ರಾಮ್ ಲೈನುಗಳಿಗಾದ ಹಾನಿಯು 6,00,000 ಪೌಂಡುಗಳಷ್ಟಾಗಬಹುದೆಂದು ಸಂಬಂಧಪಟ್ಟ ಅಧಿಕಾರಿಗಳ ಪ್ರಕಟಣೆಯಿದೆ. ಮಿಕಯಾ ಮಾಲಎಂಬಲ್ಲಿದ್ದ 700 ವರುಷಗಳ ಮೊದಲಿನ ಸುಪ್ರಸಿದ್ಧ ಟಾಹೆಟೋ ಪಗೋಡವು ನಾಶವಾಯೆ ತಲ್ಲದೆ, ಒಸಾಕಾ ಎಂಬಲ್ಲಿಯು ಸುವರ್ಣ ಭದ್ರವಂಟಪ, ಹಳೇ ಆರಮನೆಯು ಸೀಕಾಟಲ್ ಭದ್ರವಂಟಿಕ, ಮೊದಲಾದ ಬರಿಕ್ಕಾರ್ಹ ಕಟ್ಟಡಗಳು ನಾಚ್ಚುನುರಿಯಾಗಿವೆ. ಆ ದಿನನೇ ಅಮೆರಿಕದತ್ತ ಪ್ರಯಾಣ ಮಾಡಲು ನಿಶ್ಚೈಸಿದ್ದ 6345 ಟನ್ ಭಾರದ 'ಪಟ್ಸುಹಾರು ಮಾರು' ಎಂಬ ದೊಡ್ಡ ಹಡಗವು ಅಡಿ ತಪ್ಪಿ ಬಂಡೆಗೆ ಬಡಿಯಲ್ಪಟ್ಟು ದೊಡ್ಡ ತೂತು ಬಿದ್ದು ಮುಳುಗಿ ಹೋಯಿತು. ಟೋಯಮ ವಲಯದ ಆಹಾರ ಧಾನ್ಯಗಳ ಫಸ್ಟವೇ 295,000,000 ಯೆನ್‌ಗಳಷ್ಟಗಬಹುದೆಂದು ಅಲ್ಲಿಯ ಅಧಿಕಾರಿಗಳು ಅಂದಾಜು ಕಟ್ಟಿದ್ದಾರೆ. ಅಂತೂ ಅಸ್ಸಾಮೊಂದು ರಾಷ್ಟ್ರ ಭಾರತವು ಭೂಕಂಪ ಮತ್ತು ನೆರೆಯ ಅನಾಹುತವನ್ನು ಅನುಭವಿಸುತ್ತಿರುವಾಗ ಮತ್ತೊಂದು ರಾಷ್ಟ್ರ ಜಾಪಾನು ಬಿರುಗಾಳಿ ಗಂಡಾಂತರಕ್ಕೀಡಾಯಿತು.

ಉತ್ತರ ಭಾರತದ ಅನಾಹುತ

ಅಸ್ಸಾಮಿನ ಕೆಲವೆಡೆಗಳಲ್ಲಿ ಕಂಪನಗಳಿಗೆಡುವುದು ಇನ್ನೂ ನಿಂತಿಲ್ಲ. ಆದರೆ ಇತ್ತೀಚಿಗಿನ ದಿನಗಳಲ್ಲಿ ಅಸಾರ ಹಾನಿಯನ್ನು ಉಂಟು ಮಾಡಿರುವುದೆಂದರೆ ಭೂಕಂಪೋತ್ಪತ್ತ ವಮಹಾಪೂರಗಳೆನ್ನಬಹುದು. ಅಸ್ಸಾಮ್, ಪಂಜಾಬು ಕಡೆಯ ಕೆಲವ ಹೊಳೆಗಳು ಇತ್ತೀಚೆಗೆ ಪ್ರಳಯ ನೆರೆಗಾಗಿ ಪ್ರಸಿದ್ಧಿ ಪಡೆದಿವೆ ಆ ಪೈಕಿ ಸಬಾನ್ಸರಿ, ಬ್ರಹ್ಮಪುತ್ರ ನದಿ ನದಿಗಳು ಸುಪ್ರಸಿದ್ಧ ಮಿಸೆ ಸುಬಾಂಸಿರಿ ಹೊಳೆಗೆ ಕಟ್ಟು ಹಾಕಿ ಅದನ್ನೊಡೆಯುವ ಮೂಲಕ ಪ್ರಕೃತಿಯು ನಾನವ ಧ್ವಂಸದ ಆಟವನ್ನೇ ಆಡಿದೆ. ಸುಮಾರು 800 ಮಂದಿ ಈ ಪ್ರಳಯದ ಪಾಲಾಗಿ ಜೀವನ ಮುಗಿಸಿಕೊಂಡರೆಂದು ತಿಳಿದು ಬಂತ್ತಿದೆ ಭೂಕಂಪದ ಆದಿಭಾಗದಲ್ಲಿ ನೆರೆ ಹಾವಳೀ ದುಷ್ಕೃತ್ಯಗಳಿಸಿದ್ದ ಬ್ರಹ್ಮಪುತ್ರಾ ನದಿಯು ಮಧ್ಯದಲ್ಲಿ ಕೆಲವು ದಿನ ಇಳಿಯು ಹತ್ತಿ, ಭಾರವಸಿಗಾಸ್ಪದವಿತ್ತಿದ್ದಿತು. ಆದರೀಗ ಅದು ಪುನಃ ಏಳುತ್ತಾ ಬರುವ ವಾರ್ತೆಯಿದೆ- ಆತ್ತ ನಾಕಿಸ್ತಾನದ ರವಿ ಹೊಳೆಯಲ್ಲೂ ಅಭೂತಪೂರ್ವ ನೆರೆಯೇರುತಿದ್ದು ಲಾಹೋರಿನ ಹೆಚ್ಚಿನ ಭಾಗವು ಇಪ್ಪರಲ್ಲೇ ನೀರು ಪಾಲಾಗಿರುವ ವಾರ್ತೆಯಿದೆ. 24 ತಾಸುಗಳೊಳಗೆ ಆರಡಿಗಳಿಗೂ ಮಿಕ್ಕಿ ನೀರೇರಿದುದರಿಂದ ಜನ ದಿಗಲಗೊಂಡು, ಜಲನಾನುಕೂಲತೆಯಿಲ್ಲದೆ ಮರಗಳ ತುದಿಗೇರಿ ಕುಳಿತುಕೊಳ್ಳಬೇಕಾಯಿತು. ಮಧ್ಯಭರತದ ನೆಮನ್ ಹೊಳೆಯಲ್ಲಿ ಪ್ರವಾಹವೇರಿ, ಬಲವಾದ ಹೊಯ್ಲು ಇದ್ದಾಗಲೇ ಹೆಚ್ಚಾಗಿ ಹೆಂಗಸರು ಮಕ್ಕಳಿದ್ದ 20 ಮಂದಿಯನ್ನು ತುಂಬಿಸಿ, ಅದನ್ನು ನಾಟುವ ನಾವಿಕಕ್ಕೆಳಿದ ಡ್ರೈವರನ ಎವೆಗಾರಿಕೆಯ ಫಲವಾಗಿ ಆ ಯಾನವು ಮುಳುಗಿ ಹೋದ ವಾರ್ತೆಯಿದೆ. ಒಳಗಿದ್ದವರ ಪೈಕಿ 8 ಮಂದಿ ಈಜಾಡಿ ದಡ ಸೇರಿದರು. ಚಿಕ್ಕ ಹುಡುಗಿಯೊಬ್ಬಳು ಪ್ರವಾಹದಿಂದ ಒಂದು ಮೈಲು ದೂರದ ವರೆಗೂ ಕೊಚ್ಚಿ ಹೋಗಿ ಸುದೈವವಶಾತ್ ಅಲ್ಲಿ ಸಿಕ್ಕಿದ ಕೊಂಬೆಯೊಂದನ್ನು ಹಿಡಿದುಕೊಂಡು ಉಳಿದಳು; ಆಕೆಯೂ ಹೋದಳೆಂದು ಕಟ್ಟಿಕೊಂಡಿದ್ದಾಗ, ಮರುದಿನ ಕಾಣಲು ಸಿಕ್ಕಿ ಬದುಕಿದಳು. ಮಿಕ್ಕ ಹನ್ನೊಂದು ಮಂದಿಯೂ ಮುಳುಗಿ ಹೋಗಿದ್ದಾರೆ. ಭೂ

WANTED

ಹೆಯರ್ ಗ್ರೇಡ್ ತರಬೇತಾದ
ಉಪಾಧ್ಯಾಯರು,
ಉಪಾಧ್ಯಾಯಿನಿಯರು
ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ–

ಮೆನೇಜರ್,
ದಂಡತೀರ್ಥ ಏಡೆಡ್,
ಪ್ರೋಸ್ಟು, ಕಾಸ್ಪು.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್

(ಸ್ಥಾಪನೆ. 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ ್ಚಿಕಾರ್ ಬ್ರದರ್ಸ್, ಲಿಮಿಟೆಡ್, ಉಡುಪಿ.

ಇವರ ಶಾಖಾ ಕಚೇರಿಗಳು..

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈಂಟು ವರುಷಗಳಿಂದ ವಿವಿಧ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿವಿಧ ಮಾದರಿಕಾಗಲೀ, ಪ್ರಾತಿನಿಧ್ಯ ಪತ್ರಿಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಆಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

— ಜಲ ನೆಲ ಗಾಳಿ ರೈಲ್ವೇ ಅಪಾಯ!

— ದುರ್ದೈವಿಗಳ ದುರಂತ ಕಥೆ—ಹಾಹಾಕಾರ—ಢಾಕ್ಯಾ ಅವಘಡ.

ಕಂಪ ಮತ್ತು ನೆರೆಯ ಅವಾಂತರಕ್ಕೊಳಗಾದ ಅಸ್ಸಾಮಿನಲ್ಲಂತೂ ಹಲವು ವಿಧದ ಹೃದ್ರಾವಕ ವಾರ್ತೆಗಳು ಬರುತ್ತಲೇ ಇವೆ. ಕೇವಲ ಕಂಪದ ದೆಸೆಯಿಂದ ಭೂಮಿಗಾದ ಷ್ಟು ಹಾನಿಯು, ಜನರ ಪ್ರಾಣಕ್ಕಾಗಿ ಲ್ಲ; ಕೆಲವು ಅತಿಶಯೋಕ್ತಿಯ ಅಂಕೆಸಂ ಖ್ಯೆಗಳಷ್ಟು ಜನರೇನೂ ಸತ್ತಿಲ್ಲನೆಂಬ ಸ ಮಾಧಾನೋಕ್ತಿ. ಕೇಳಿಬರುತ್ತಿದೆಯಾದ ರೂ ಉತ್ತರ ಅಸ್ಸಾಮು ಆಡಿಮೇಲಾಗಿ ಹೋಗಿದೆ, ತಲತಲಾಂತರಗಳ ಸ್ಥಿತಿಗತಿ ಗಳನ್ನೆದು ಅಸ್ತವ್ಯಸ್ತವಾಡಿದೆ; ಎಂಬು ದಂತೂ ಖಂಡಿತ.

ಸುಬಾಂಸಿರಿ ಪ್ರಳಯ

ಇವೆಲ್ಲಾ ಹಾವಳಿಗಳ ಪೈಕಿ ಸುಬಾನ್ಸಿರಿ ಹೊಳೆಯ ನೆರೆಯಿಂದಾದ ಜನನಾಶವು ಅತಿಹೆಚ್ಚಿನದು. ಆಗೋಸ್ತು 15ನೇ ರಾತ್ರಿಯಲ್ಲಿ ದುಲಾಂಗ್ ಮುಖ್ ಎಂಬಲ್ಲಿಗೆ ಕೆಲವು ಮೈಲು ದೂರದಲ್ಲಿದ್ದ ಒಂದು ದೊಡ್ಡ ಗುಡ್ಡವು ಭೂಕಂಪದಿಂದಾಗಿ ಬು ಡಸಮೇತ ಜರಿದು ಸುಬಾಂಸಿರಿ ಹೊಳೆಗೆ ಅಡ್ಡಕಟ್ಟಾಗಿ ಬಿದ್ದಿದ್ದಿತು; ಈ ದೆಸೆಯಿಂ ದ ಅದಂ ವೆಲ್ಲಡೆಯ ಊರೂರುಗಳೆಲ್ಲವೂ ಮಹಾ ಸರೋವರವಾಗಿ ಜಲಡೊಳಗಾಗಿದ್ದುವು. ಕೂಡಲೇ ಈ ತಡೆಗಟ್ಟಿನ ಕೆಳಪ್ರದೇಶದ ಚಾ ತೋಟದ ಮೆನೇಜರರು ಊರಿಬಿಟ್ಟಿರಲಿಲ್ಲ, ತಮ್ಮ ತೋಟಗಳನ್ನೂ ಖಾಲಿ ಮಾಡಿಸಿ, ಎಲ್ಲಿ ವಾಸಿಸುವುದು ಅಪಾಯಕರವೆಂಬ ಎಚ್ಚರಿಕೆಯನ್ನು ಎಲ್ಲರಿಗೂ ಕೊಟ್ಟಿದ್ದರು. ಕೃಷ್ಣೇಣಿ ಆ ಭಾಗದಲ್ಲಿ ಹೊಳೆಯೆಂಬ ಣಗುತ್ತಾ ಬಂತು; ಸುಬಾನ್ಸಿರಿಯ ಜನ್ಮಾ ರಭ್ಯದಿಂದ ಇದೀಗಪ್ರಥಮ ಬಾರಿಯಂಬಂ ತೆ ಅದನ್ನು ಕಾಲ್ನಡೆಯಲ್ಲೇ ದಾಟಲಾಗುವ ಸುಯೋಗವೊದಗಿತೆಂಬ ನೋಹವೊಂದು ಆ ಭಾಗದ ಗುಡ್ಡಗಾಡು ಜನರಿಗೆ ತಾಗಿ ಕೊಂಡಿತು. ಊರುಬಿಟ್ಟು ಹೋದವರು ಒಬ್ಬೊಬ್ಬರಾಗಿ ಮರಳಿ ಬರಹತ್ತಿದರು; ಅಲ್ಲಲ್ಲಿ ತಗ್ಗಿನಲ್ಲಿ ನಿಂತಿದ್ದ ನೀರಿನಲ್ಲಿ ಸಣ್ಣ ದೊಡ್ಡ ಮೀನುಗಳು ಫಲಾಯಾಸವಾಗಿ ಕೈಗೆಸಿಗುತ್ತಿದ್ದವೆ; ತಮ್ಮ ಅವರೆಗಿನ ಸಂತಾ ನ ಪರಂಪರೆಯವರಿಗಾಗಲೂ ಸುಬಾನ್ಸಿರಿ ಹೊಳೆಯು ಹೀಗೆ ಮೈಬಿಟ್ಟುಕೊಟ್ಟದಿಲ್ಲ. ಇಂತಹ ಸುಸಂದರ್ಭವನ್ನು ನದಾಪಯೋಗಿಸಿಕೊಳ್ಳದೆ ದೂರವಿಂಲು ಅಲ್ಲಿಯ ಗುಡ್ಡಗಾಡು ಜನರಿಂದಾಗಲಿಲ್ಲ; ಅತ್ತ ಮೇಲ್ಗಡೆಯಲ್ಲಿ ಬಿದ್ದಿದ್ದ ದಂಡೆಯನ್ನು ತಮ್ಮ ಪಾಲಿನ ಪ್ರವಾಹ ವ್ಯತ್ಯಾಯ ನೆಕ್ಕುತ್ತಿದೆ ಎಂಬುದನ್ನು ತವರು ಊಹಿಸಲೇ ಇಲ್ಲ- ಸರ; ಸುಬಾನ್ಸಿರಿಯು ತನಗೆ ಬಿದ್ದಿದ್ದ ತಡೆಯನ್ನು ನಡು ರಾತ್ರಿಯಲ್ಲೇ ಭೇದಿಸಿ ಇಪ್ಪತ್ತಡಿ ಆಳದ ನೀರಿನೊಂದಿಗೆ ಅತ್ಯಂತ ರಭಸದಿಂದ ಕೆಳಗೆ ಧುಮುಕಿ ಬಂದಳು; ಕೆಳವಲಯದ ತನ್ನೆ ರಡೂ ಬದಿಗಳ ಸುಮಾರು ನೂರುಗ್ರಾ ಮಗಳ 800 ಮಂದಿಯ ಪ್ರಾಣಗಳೊ ಡನೆ, ತನ್ನದಿರು ಒಕ್ಕಿದ ಎಲ್ಲವನ್ನೂ ಕೊ ಚ್ಚಿಕೊಂಡು ಹೋದಳು. ಅದು ಹಿಮಾ ಲಯ ಪ್ರದೇಶ; ಕಾಡುಮೃಗಗಳ ನಿವಾಸ ಸ್ಥಾ ನ. ಆ ಹೊಳೆಯಲ್ಲಿ ಕೇಳಿಯಾಡುವ ದೊಡ್ಡ ದೊಡ್ಡ ಮೊಸಳೆಗಳಿಗೆ ವಿಶೇಷ ಶಕ್ತಿ. ನೆರೆ ನೀರಿನಲ್ಲಿ ಹುಲಿಗಳು, ಆನೆಗಳು, ಜಂಕೆಗಳ ಮಂಗಗಳ ಶವಗಳ ನಡುವೆ ತಮ್ಮ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡ ತಂಗಸರ ಹೆಣಗಳೂ ತೇಲಿಬರುತಿದ್ದ ದೃಶ್ಯವು ಕಣ್ಣನ್ನೂ ಹೃದಯವನ್ನೂ ಒಡೆಯುವಂತಹದಿದ್ದಿತು. ಮಾನವನು, ಎಲ್ಲಕ್ಕಿಂತ ಪ್ರಿಯವಾದ ತನ್ನ ಪ್ರಾಣಕ್ಕಾಗಿ ಪಡುವ ಒದ್ದಾಟವೆಂಥಹ ದೆಂಬುದನ್ನು ವನಮುಟ್ಟಿಸುವ ಎಷ್ಟೋ ದುರಂತ ಕಥೆಗಳು ಕೇಳಿಬರುತ್ತಿವೆ. ಒಬ್ಬ ಹೆಣ್ಣುಮಗುವಿನ ಹೆಂಡಗ. ಉತ್ತರ ಲಕಿಂಪುರದ ತೀರಾ ಉತ್ತರ ಗಡೆಯ ಒಂದೆಡೆಯಲ್ಲಿದ್ದವ. ನೀರ ಪ್ರವಾಹ ರಭಸ ಶಬ್ದಕ್ಕೆ ರಾತ್ರಿ ಹತ್ತುಘಂಟೆಗೆ ನಿದ್ರಾಭಂಗವಾಗಿ ಹೌಹಾರಿ ನಿಂತ; ನಿಂತ ದ್ದೇ ಮೊಣಕಾಲುದ್ದ ನೀರಲ್ಲಿ. ಇದೇನು, ಎಂದು ಆತ ಚಿಂತಿಸುವಷ್ಟರಲ್ಲೇ ನೀರು ಎದೆವರೆಗೇರಿದ್ದಿತು. ಆತ ಕೂಡಲೇ ಈ ಜಾಡಿಕೊಂಡು ಮನೇಬಾಗಿಲು ದಾಟಿ ಬಂದು ಒಂದು ಮರವನ್ನು ಹಿಡಿದುಕೊಂ ಡ. ಆದರೆ ಕೆಲವೇ ಮಿನಿಟುಗಳೊಳಗೆ ಆ ಮರವೂ ಮಗುಚಿಬಿದ್ದು ಪ್ರವಾಹದೊಂ ದಿಗೆ ಹೋಗಿಬಿಟ್ಟಿತು; ಹುಡುಗ ಪುನಃ ರಭಸದಿಂದ ನೆಲೆಯಲ್ಪಟ್ಟು ಮುಂದೋ ದಂತೆ ಪುಣ್ಯವಶಾತ್ ದೊಡ್ಡ ಮುಂದೊಂದ ರ ಗೆಲ್ಲ. ಅವನ ಕೈಗೆ ಸಿಕ್ಕಿಕೊಂಡಿತು; ಹೇಗೂ ಬದುಕಿಕೊಂಡೆ. ಒಮ್ಮೆಗೇ ವಿಧಿ ಬಂದ ನೆರೆಯು ಮೂರು ತಾಸುಗಳೊಳಗೆ ವಿರಪಕ್ಕೇ ಶ್ವರ್ಯದಲ್ಲಿ ಇಳಿದರೂ ಪುನಃ ನಿಧಾನವಾಗಿ ವಿರಹೆತ್ತಿತು. ಇತ್ತೀಚೆಗಿ ನವರೆಗೂ ಇಳಿಮೊಗವಾಗಿಲ್ಲ. ತಮ್ಮ ಸ್ವಾ ಇವು ನೆರೆನೀರಬಾಯಿಗೆ ಸಿಗದಂತೆ ಎತ್ತ ರದ ಪರ್ವತಗಳನ್ನು ಹತ್ತಿ ಉಳಿದು ಕೊಂ ಡವರಿಗಾದರೂ ಆಲ್ಲೇ ಕೊಳೆತು ಅಥವಾ ಒಣಗಿ ಸಾಯವ ದುರ್ವಿಧಿ ಕಾಯುತ್ತಿದೆ; ಆಹಾರಿಲ್ಲರೂ ಅಲ್ಲಿದ್ದ ಆಹಾರ ತರಕಾರಿಗಳ ಮ್ಮ ಇಷ್ಟರಲ್ಲೇ ತಿಂದು ಮುಗಿಸಿದ್ದಾರೆ; ಕೆಲವರ ಮೈಯಲ್ಲಿ ಒಂದು ಚಿಂದಿ ವಸ್ತ್ರ ಕೂಡಾ ಇಲ್ಲ; ನಿರಾಹಾರ ಮತ್ತು ಮಳೆ ಬಿಸಿಲುಗಳ ಹಾವಳಿಯಿಂದ ಅವರ ದೇಹ ಕೃಶಿಯುತ್ತಿದೆ. ಅವರನ್ನು ಹೊಳೆದಾಟಿಸಿ ಇತ್ತ ಕರೋಣವೆಂದರೆ ಸುಬಾನ್ಸಿರಿ ನದಿ ಯಲ್ಲೀಗ ಇರುವ ಹೊಯ್ದಾಸ್ಪದ ಅಸಾಧ್ಯ. ಸ್ವಿಮ್ಮೆ ಬೋಟುಗಳು ಕೂಡಾ ಈಗ ಈ ಪ್ರವಾಹಕ್ಕಡ್ಡಹೋಗುವಂತಿಲ್ಲ, ಅಂತಹ ಸಾಹಸ ಮಾಡಿದ ಎರಡು ಬೋಟುಗಳ್ಳ ಮುಳುಗಿಹೋದುದು ಉಳಿದವಂಗೆಲ್ಲಾ ಸ್ಪಷ್ಟ ಎಚ್ಚರಿಕೆಯಾಗಿ ದೆ. ಒಂದು ಏಳು ಮಂದಿ ಜನರನ್ನು ತುಂಬಿ ಕೊಂಡಿದ್ದಿತು; ಮತ್ತೊಂದರಲ್ಲಿ ಜನ ರಿಷ್ಟಿದ್ದರೆಂಬ ಸಂಖ್ಯೆ ದೊರಕಿಲ್ಲವಾದರೂ 20 ಮಣ ಅಕ್ಕಿಯಿದ್ದಿತ್ತ. ಯಾವುದೂ ಆ ಜೇ ದಡ ಸೇರಲಿಲ್ಲ. ಉತ್ತರ ಲಕಿಂಪುರ್ ವಲಯದಲ್ಲ ನೆರೆಯಹಾವಳಿ ಈರೀತಿ ನಡೆ ದಿರುವಂತೆಯೇ ಪ್ರತಿದಿನ ಸರಾಸರಿ ಮೂ ರು ಅಥವಾ ಆರು ಬಾರಿ ಸ್ಥೂಕಂಪ ನಡೆದೇ ಇದೆ.ಯುಗಾಂತ್ಯವನ್ನೇ ನೆನಪಿಗೆ ತರುವ ಈ ಗಂಡಾಂತರಗಳ ನಡುವೆ ಸಿಕ್ಕಿಕೊಂಡ ಜನತೆಯ ಪರಿಸ್ಥಿತಿಯು ಹೇಗಿದ್ದೀತೆಂಬು ದನ್ನು ಊಹಿಸಬಹುದು. ಇಲ್ಲಿಗಿಂತ ಕಡಿ ಮೆ ಪರಿಮಾಣದ ನರೆ ಅನಾಹುತಕ್ಕೇಡಾ ದ ಸ್ಥಳಗಳಿಂದಲೂ ಹಲವು ರೀತಿಯ ಹೃದ್ರಾವಕ ಕಥೆಗಳು ಕೇಳಿ ಬರುತ್ತಿವೆ. ಲಖೀಂಪುರ ವಲಯದ ರವಿ ಹೊಳೆ ಬದಿಯ ಶಹದಾರಾ ಮತ್ತು ಮಿತ್ರಿಶಾದಲ್ಲಿ 12 ಮಂದಿ ಹಾವು ಕಚ್ಚಿ ಸತ್ತಿದ್ದಾರೆಂಬ ವಾರ್ತೆಯಿದೆ; ನೀರಿನ ಅಪಾಯದಿಂದ ಪಾರಾಗಲು ಮಸುಸ್ಯರೂ ತೇಲಿಕೊಂಡು ಬಂದ ಈ ವಿಷಜಂತುಗಳೂ ಒಂದೆಡೆ ಜಮೆಯಾಗಿ ಪ ದುರ್ದೈವಕ್ಕೊಳಗಾದುದೇ ಇಂತಹ ಮರಣಗಳಿಗೆ ಕಾರಣ. ನೆರೆ ನೀರಿನಲ್ಲಿ ಒಳಿದುತೊಂಡು ಬಂದ ಹದಿನೈದೂ ಮಂದಿ ವ್ಯಾಪಾರಿಗಳಿಂದ ಒಂದು ಮರವನ್ನು ಹತ್ತುವಾಗ, ಯಾರೆಯೇ ಸೆಳೆಯಲ್ಪಟ್ಟು ಒಂದು ಮರ ದ ಶುದಿಯನ್ನು ಮೆಡಲೇ ಸುತ್ತು ಹಾಕಿ ಕುಳಿತಿದ್ದ ದೊಡ್ಡ ಸರ್ಪವೊಂದು ಅವ ರಲ್ಲೊಬ್ಬನನ್ನು ಕಚ್ಚಿ ಕೊಂದು ಹಾಕಿ ತು; ಕೆಲವೇ ಮಿನಿಟುಗಳೊಳಗೆ ಸಡಾಯು ವೊದಗಿ ಅವರೆಲ್ಲಂದ ಪಾರಾಗದಿರುತ್ತಿದ್ದ ರೆ, ತನ್ನ ಜೀವದ ಜೋಪಾನವಾ ಆತುರದಲ್ಲಿದ್ದ ಆ ಸರ್ಪವು ಯಾರನ್ನೂ ಉಳಿಯಗೊಡುತ್ತಿರಲಿಲ್ಲ. ಒಂದೆರಡು ದಿನ ಗಳ ವರೆಗೂ ಮರದ ಗಲ್ಲುಗಳನ್ನು ಆಪ್ಪಿ ಹಿಡಿದೇ ಬದುಕಿದ್ದ ನೂರಾರು ಮಂದಿಯ ಕಪಿಕಂಜಯ ಕಥೆಗಳನ್ನು, ಮುಳುಗುವ ವನು ಹುಲ್ಲು ಕಡ್ಡಿಯನ್ನು ಆಧರಿಸಿ ನಿಲ್ಲಲು ನೋಡುವಂತಹ ಹೃದ್ರಾವಕ ಘಟನೆ ಗಳನ್ನು, ಈ ಬಾರಿಯ ಅಸಾಮಾನ್ಯ ಜಲ ಪ್ರಳಯವು ನಿರ್ಮಿಸಿದೆ.

ಒಟ್ಟಿನ ಮೇಲೆ ಭೂಕಂಪದಿಂದ ಅಸ್ತ ವ್ಯಸ್ತಲ್ಪಟ್ಟ ಉತ್ತರ ಅಸ್ಸಾಮಿನ ಆಕಾ ರವೇ ಬದಲಾಗಿದೆ. ಅತ್ತ ಭೇಟಿ ಕೊಟ್ಟು, 'ಎದೆಗಳಕ್ಕೊಳ್ಳಬೇಡಿ;ಸ್ವಾವಲಂಬಿಗಳಾಗಿ' ಎಂದ ಹಂಡಿತ ನೆಹರುಗಳ ಉಪದೇಶಾ ನುಸಾರವಾಗಿ ಇಲ್ಲಿಯ ಜನರು ಚಿಂತೆ ಬಿ ಟ್ಟು ತಂತಮ್ಮ ಕರ್ತವ್ಯ ಮಾಡುವ ಪ್ರಯತ್ನದಲ್ಲಿದ್ದಾರೆ. ಆಕ್ಷೀಗ ಅತ್ಯಂತ ತೊಡಕಿನದಾಗಿರುವುದೆಂದರೆ ಆಹಾರ ವಿತರಣಾ ವ್ಯವಸ್ಥೆ. ಅಸ್ಸಾಮು ಆಹಾರ ಧಾನ್ಯ ಗಳ ಉಳಿತಾಯವುಳ್ಳ ನಾಸ್ಥಾನ್ಯ; ಆದರೆ ಈ ದೆಸೆಯಿಂದಲೇ ಉತ್ಪಾದಕರಿಂದ ಸಾ ಕಷ್ಟು ಧಾನ್ಯ ಸಂಗ್ರಹಿಸಿಕೊಂಡಿರಲಿಲ್ಲ. ಮೇಲಾಗಿ ಸಂಜೆಯಾ ಪಕ್ಷಗಳೆಲ್ಲಾ ಕ ಡಿದು ಹೋಗಿ ವಿತರಣೆಗೆ ಅತಂಕವಾಗಿದೆ. ಭಾರತದ ಕಲ್ಲಿದ್ದಲಿಗೆ ಪ್ರತಿಯಾಗಿ ಪಾಕಿ ಸ್ತಾನವು 10000 ಟನ್ ಅಕ್ಕಿಯನ್ನು ಅಸ್ಸಾಮಿಗೆ ಕೂಡಲೊಪ್ಪಿದೆ. ಆಮಿಲ ಭಾ ರತದಿಂದ ಸರ್ವ ವಿಧದ ಸಡಾಯ ಹೋ ಗುತ್ತಿದೆ. ಒಂದು ಸುದೈವವೆಂದರೆ ಅಪ್ಪೂ ಹಾಳಾದ ಆ ಭಾಗದಲ್ಲಿ ಸಾರ್ವತ್ರಿಕ ಅಂ ಟು ರೋಗವೇನೂ ಹುಟ್ಟಿಕೊಳ್ಳದಿರುವು ದು. ಅಸ್ಸಾಮಿನ ಹಾನಿ ಮತ್ತು ಯಾತ ನೆಯನ್ನು ವಜಾ ಪಡಿಸುವ ಮನುಷ್ಯ ಸಾ ಧ್ಯ ಪ್ರಯತ್ನಗಳೀಗ ನಡೆಯುತ್ತಿವೆ.

ಢಾಕ್ಯಾ ರೈಲು ಅವಘಡ

ಭೂಕಂಪ ನೆರೆ ಬಿರುಗಾಳಿ ಗಂಡಾಂ ತರಗಳು ಸಾಕಾಗವೆಂದೋ ಏನೋ— ಇದೇ ತಾ. 8ನೇ ರಾತ್ರಿ ಢಾಕ್ಯಾಕ್ಕೆ 40ಮೈಲು ದೂರದಲ್ಲಿ ರೈಲು ಅವಘಡವಾಗಿ 50 ಮಂದಿ ಸತ್ತು ಮಾಲ್ಕೈವತ್ತು ಮಂದಿ ಜ ಖಂಗೊಂಡ ವಾರ್ತೆ ಬಂದಿದೆ. ತಾ. 8ನೇ ರಾತ್ರಿ ಢಾಕ್ಯಾ ಸ್ಟೇಶನ್‌ನಿಂದ ಹೊರಟಿದ್ದ '106 ಡೌನ್' ಚಿತ್ತಗಾಂಗ್ ಎಕ್ಸ್‌ಪ್ರೆ ಸ್' ಅಲ್ಲಿಂದ 40 ಮೈಲು ದೂರದಲ್ಲಿ ಮ ಧ್ಯ ರಾತ್ರಿ ಕಳೆಯುವಾಗ ಸಂಕವೊಂದ ನ್ನು ದಾಟುತಿದ್ದಿತ್ತು; ಅಲ್ಲೇ ಆದರ ಇಂ ಜಿನ ಮತ್ತಿದಲ್ಲಿ ತಾಗಿದ್ದ ಎರಡು ಗಾಡಿ ಗಳು ತಪ್ಪಿ ಹೋಗಿ ಇಪ್ಪತ್ತಡಿ ಕೆಳಗೆ ಒಂಭತ್ತಡಿಯಷ್ಟು ನೀರಿರುವ ಹೊಳೆಗೆ ಬಿದ್ದು ಬಿಟ್ಟುವು; ಮೂರನೇ ಬಂಡಿಯು ಮೇಲಿನಿಂದ ತಪ್ಪಿದರೂ ಹೊಳೆಗೆ ಬೀಳದೆ ನದೀ ದಂಡೆಯಲ್ಲೆ ತ್ರಿಶಂಕುವಿನಂತೆ ನಿಂ ತುಕೊಂಡಿದೆ. ಕೆಲವು ರೈಲ್ವೇ ತಳಗಳ ನ್ನೂ ಸಂದು ಕೀಲುಗಳನ್ನೂ ಕಪ್ಪಿಸಿ ಹಾಕಿರುವುದು ಕಂಡುಬಂದಿರುವುದರಿಂದ, ಇದು ಯಾರೋ ದಗಾಖೋರರ ಕೃತ್ಯ ವೆಂದು ನಂಬಲಾಗಿದೆ.

ಅಂತೂ ದುರಂತಗಳನ್ನನುಭವಿಸಿ,ವ, ದಂತಕಥೆಗಳನ್ನು ಕೇಳುವ, ಸಂತಾಪ ಭಾಗಿಗಳಾಗುವ ದುರ್ದಿನಗಳಿವು. ಈ ಅ ನಾಹುತಾಧ್ಯಾಯ ಇಲ್ಲಿಗೆ ಮುಕ್ತಾಯ ಗೊಳ್ಳಲಿ.

The Canara Mutual Assurance Co., Ltd.

ESTD: 1935 H O UDIPI.

Some Salient Straws.

1. A purely mutual Company where the policyholders are the only shareholders and receive the entire profits.
2. Economic management; Low Expense Ratio.
3. Bonus declared right from the inception of the Company.
4. Life Fund exceeds Rs. 52 lakhs.
5. Steady growth in business and popularity.

T. R. A. Pai,
Managing Director.

THE

Canara Banking Corporation Ltd.

(Incorporated in India)

Estd: 1906

Head Office : **UDIPI**, (S. I.)

Capital Authorised .... Rs. 25,00,000
Capital Issued, Subscribed &
Paid up .... Rs. 20,00,000
Reserves .... Rs. 9,44,765

ಗುರುವಾರ, ಉಡುಪಿ, ೧೪-೯-೧೯೫೦

ಕಾಳಸಂತೆ ನಿರ್ಮೂಲನ

—(೪) ಆದರೆ ತಾಂಡನ್ ವಿಜಯದ ನಡುವೆ ಭಾರ್ಗವರು ಕೃಪಾಲಾನಿಯವರ ಪಾಲಿನ ೧೦೦೦ ಮತಗಳನ್ನು ಮರೆತಿದ್ದಾರೆ. ಸುಮಾರು ನೂರಕ್ಕೆ ಳಜನರ ತಾಂಡನ್ ಬೇಡ ಎಂದಿದ್ದಾರೆನ್ನುವುದು ಅವರ ವಿಜಯದ ಕ್ಷಣವೇ ತಿಳಿದುಬರುವಾಗ ಐಕ್ಯ ಎಲ್ಲಿಂದ ಬಂತು? ತಿಳಿವು ಯಾರಿಗೆ ಬೇಕು?

(೫) ಅಪ್ಪು ಅಕಾಸ್ಮಾತ್ತಾಗಿ ಸಮಸ್ಯೆ ನೀಗಲು ತಾಂಡನ್ ಅವರು ಜೊಂಬಾಟ ದವರೇನು?

—(೬) ಭಾಪ್, ಹೆರ್ಡೀಕರ ಭಾವು! ಆದುವಾಕ್ತರ ಮೇರೆ ಮೀರಿದರೂ ಇಂದಿನ ಇಪ್ಪತ್ತರ ತರುಣರನ್ನು ನಾಚಿಸುವ ಚಿರಯೌವನನೆ, ಧನ್ಯ! ಧನ್ಯ!

—(೭) 'ಚಾರಿತ್ರಿಕ' ಆಗದಿದ್ದೀತೆ. ಪಟ್ಟಾಭಿ ಕಾಂಗ್ರೆಸಿನ ಚರಿತ್ರೆಯಲ್ಲಿ ದಾಖಲೆ ಮಾಡದೆ ಇದ್ದಾರೆ?

೦೦ ೦೦ ೦೦

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾರತದ ಬಿ. ಎನ್. ರಾಯರು ಹೇಳಿದ ಪ್ರತಿಯೊಂದು ಶಬ್ದಕ್ಕೂ ಬ್ರಿಟಿಷ ಪ್ರತಿನಿಧಿ ಜೆಬ್ ಅವರ ಒಪ್ಪಿಗೆ ಇದೆಯಂತೆ.

ರಸನಿಮಿಷ

— ಒಂದು ಕಾಲ ಇತ್ತು—ನಾವು ಪ್ರಜಾತಂತ್ರವೆಂದರೆ ಬ್ರಿಟಿಷರು 'ಕ್ಯಾಂಡಿ' ಎಂಬರ್ಥವನ್ನೂ, ನಾವು 'ಸಾಮ್ರಾಜ್ಯವಾದ' ಎಂದರೆ ಆದು 'ಅಡಳಿತೆಯ ಮಾರ್ಗದ ಶಿಕ್ಷಣ'ವೆಂದೂ ಬ್ರಿಟಿಷರು ತಿಳಿಯುತ್ತಿದ್ದ ದುಷ್ಕಾಲ. ಆದೀಗ ಆತಿದೂರ ಸರಿದು ನಾವು 'ಹೂಂ' ಎಂದಾಗ ಅವರು 'ಹೂಂ' ಎನ್ನುವುದೂ, ಅವರು 'ಹಾಂ' ಎಂದಾಗ ನಾವೂ 'ಹಾಂ' ಎನ್ನುವುದೂ ರೂಢಿಯಾಗಿದೆ. ಪರಿವರ್ತನರಾದುದು ಯಾರು? ನಾವೋ, ಅವರೋ? ಅವರೋ ನಾವೋ?

೦೦ ೦೦ ೦೦

ಜಪಾನಿನಲ್ಲಿ ಕಮ್ಯೂನಿಷ್ಟರ ಹಾವಳಿ ಅತೀರೇಕವಾಗಿದೆ (ಸುದ್ದಿ)

—ಅವರನ್ನು ಸೆರೆಮನೆಯಿಂದ ಅಂದು ಬಿಡುಗಡೆ ಮಾಡಿದ ಮೆಕಾರ್ಥರರಿಗೆ ಯಾವ ಸನ್ಮಾನ ಮಾಡೋಣ? ಸಂ. ರಾ. ಸೈನ್ಯದ ಧುರೀಣತ್ವ ಸಾಕಾದೀತೆ?

೦೦ ೦೦ ೦೦

ಮುಂಬಯಿಯ ಸರ್ಜನರುಗಳು ಹೃದಯದ ಶಸ್ತ್ರಚಿಕಿತ್ಸೆಯಲ್ಲಿ ಯಶಸ್ವಿಗಳಾಗಿದ್ದಾರೆ?

—ಸುಲಭದಲ್ಲಿ ಹೃದಯ ಪರಿವರ್ತನೆ ಮಾಡಬಹುದಾಗಿರುವಾಗ ಟ್ರೂಮನ್—ಸ್ಟಾಲಿನ್ನರನ್ನೇಕೆ ಒಮ್ಮೆ ಪರೀಕ್ಷಿಸಬಾರದು? 'ಆವನ ಹೃದಯ ಇವನಿಗಿಟ್ಟು ಇವನ ಹೃದಯ ಆವನಿಗಿಟ್ಟು' ನೋಡ ಬಯಸ ಬಾರದೆ?

೦೦ ೦೦ ೦೦

ಬ್ರಿಟನ್ನಿನ ವಾಣಿಜ್ಯ ಇಲಾಖೆಯಪರು ಮಿಸ್ಟರ್....ರನ್ನು ಸೈಪ್ರಸ್ಸಿನ ಗವರ್ನರುಗಿರಿಯಿಂದ ಸ್ವಾಜಲೆಂಡ್ ಬಸುಟೋಲೆಂಡಗಳ ಒಡೆಯರಾಗಿ ಮಾಡಿದ್ದಾರೆ. (ಸುದ್ದಿ)

—ಈ ಎಲ್ಲಾ ನಾಗರಿಕ ದೇಶಗಳನ್ನು ಯಾವ ಭೂಪರದಲ್ಲಿ ಗುರುತಿಸಬಹುದು?

೦೦ ೦೦ ೦೦

ಯು. ಎನ್. ಸೈನ್ಯಗಳಿಗೆ ಶೀಘ್ರ ಸಹಾಯ ಅತ್ಯಾವಶ್ಯಕ (ಮೆಕಾರ್ಥರ್ ವರದಿ)

—ಇಂಗ್ಲಿಷ್ ಭಾಷೆಯಲ್ಲಿ 'ಎಸ್' ಮತ್ತು 'ಎಸ್'ಗೆ ಬಹಳ ದೂರ ಇದೆಯೆ?

೦೦ ೦೦ ೦೦

ಅಂಬಾಲಾದಿಂದ ದಿಲ್ಲಿಗೆ ಬರುವ ರೈಲ್ವೇರ ಮೆಯಿಲಿಗೆ ಅಪಘಾತವಾಯಿತಂತೆ?

—ಇದು ಈ ವರ್ಷದ ಎಪ್ಪತ್ತನೆಯ ಅಪಘಾತ? ನೂರೊಂದನೆಯದೋ, ಸಾವಿರದ ಮೇಲಿನದೋ?

೦೦ ೦೦ ೦೦

"ದಕ್ಷಿಣ ಭಾರತದಲ್ಲಿ ಒಂದು ಉಕ್ಕಿನ ಕಾರ್ಖಾನೆ ಅವಶ್ಯವಾಗಿ ಸ್ಥಾಪಿಸಬೇಕು." (ಮದರಾಸು ಎಸೆಂಬ್ಲಿ ಭಾಷಣ?)

—ಮೈಸೂರು ದಕ್ಷಿಣ ಭಾರತದಿಂದ ಸಿಡಿದು ಹೋದದ್ದು ಯಾವಾಗ?

೦೦ ೦೦ ೦೦

ಸಂಯುಕ್ತರಾಷ್ಟ್ರದಲ್ಲಿ ಉದ್ಯೋಗಸ್ಥರ ಸಂಖ್ಯೆ ಹೆಸ್ಸ ಸಾಲೇರ್ಸ್ ಪಾಕಿ ಕೊಟ್ಟ ಅರುವತ್ತು ಸಾವಿರದ ಪುಟ್ಟ ಮುಟ್ಟ ಮೇಲಕ್ಕೆ ಪುಟಿದಿರುವುದಂತೆ.

—ಆವರಲ್ಲಿ ಕೋರಿಯಕ್ಕೆ ಹೋದವರನ್ನೂ ಸೇರಿಸಲಾಗಿದೆ.

೦೦ ೦೦ ೦೦

ಬೆಲ್ಜಿಯಮಿನಲ್ಲಿ ಸಾರ್ವತ್ರಿಕ ಸೈನ್ಯ ಭರ್ತಿ: ಫ್ರಾನ್ಸಿನ ಪುನಃ ಶಸ್ತ್ರೀಕರಣ: ರಶಿಯದ ದೆದರಿಕೆಯನ್ನೋಡಿಸಲು ಬ್ರಿಟಿನ್ನಿನ ಸನ್ನದ್ಧತೆ: ಒಂದೊಂದಾಗಿ ಯೂರೋಪಿನಲ್ಲಿ ಶಾಂತಿರಕ್ಷಣೆಯ ಕೆಲಸ ಸುಸೂತ್ರವಾಗಿ ಜರಗುತ್ತಾ ಇರುವುದೂ ನಾವು ಹೋದ ಮೇಲೆ ಬದುಕುವವರಿಗೆ ಈಗಲೇ ಸಂತೋಷ ತಂದು ಕೊಟ್ಟೀತೆ?

—ಕುಶಿ.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಕಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುದೋದಿತ ಔಷಧಗಳಲ್ಲಿ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.

ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಆತ್ಯಗತ್ಯವಾಗಿದೆ' ಈ ತೈಲವು ಸರ್ವದೇಶಗಳ ಪ್ರಸಿದ್ಧ ವೈದ್ಯರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ವಿಕಹ್ಯಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುದೋದಿ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೆ ಕಿತ್ತು ಬಿಡುವಂತೆ ಕುದ್ದ ಪಕೃತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಕಂಪನಿಯಿಂದ ತಯಾರಿಸಲ್ಪಡುತ್ತಿದೆ. ವಿಷಮಜ್ವರ, ಪಿತ್ತಜ್ವರ, ನಿರ್ಮೋನಿಯ ಶೀತಜ್ವರ ಮತ್ತು ನುಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೆಯಿಲ್ಲ. ಮೂತ್ರಕೋಶ, ಬಡುಮೂತ್ರ,-ಸೋ ಮೂತ್ರ, ಅನ್ನಕೋಶ, ಕಲಿತೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ವಾತ್ಸರ್ಯವಾಯು, ವಾತರೋಗ, ಪಕ್ಷವಾತ, ಗೂದಲು ಕ್ಷಯ, ಮೇಹಸ್ಫೋಥಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಕಿಡಿಸಿದ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ಚೂರು ಚೂರಾಗಿ ಮೂತ್ರಕೋಶದಲ್ಲಿನ ಕಿಲ್ಲೆಷ್ಟವಾದ ಬೇನೆಯು ರಸ್ತಚಿಕಿತ್ಸೆ ಇಲ್ಲದೇನೇ ನಿರಾಯಾಸವಾದಂದಲೇ ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುದೋದಿತ ಔಷಧಿ'ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ತೆಗೆದಿಯಿಂದಲೇ ಆಗಿರಲಿ, ಜ್ವರದಿಂದಲೇ ಆಗಿರಲಿ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ರಾತ್ರಿಗುಣವಾಗುವುದು. ಪಲ್ಲುನೋವು, ಮಕ್ಕಳಹೊಟ್ಟೆನೋವು, ಕಿವಿಗಳ ಉಪದ್ರವ,ಹೊಂಗಸರ ಮುಟ್ಟಿಗುವಜಕಾಲದ ಅಕ್ರಮಗಳು,ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪರೋಗಕ್ಕಮ ಪ್ರತಿಯೊಂದು ಬಾಟ್ಲಿ ಜೊಳಗೆ ಸುತ್ತಿದೆ. ಕಿಮ್ಮತ್ತು—ವಾನಿಂಗ್ ಟಿಲ್ಲಿ ಆಯಿಲ್ ಶೀಸೆ Iಕ್ಕೆ ರೂ. 2-8-0 ವಿ.ಪಿ. ಚೇರ್ಜ್. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0- ವಾನಿಂಗ್ ಟಿಲ್ಲಿ ಕೆಪ್ಸುಲ್ ಶೀಸೆ Iಕ್ಕೆ 3-8-0 ವಿ.ಪಿ.ಚೇರ್ಜ್. ಡಜನ್ ಕೆಪ್ಸುಲುಗಳಿಗೆ ರೂ. 42-0-0 ವಿ.ಪಿ. ಸಹಿತ. ವಾನಿಂಗ್ ಟಿಲ್ಲಿ ಡ್ರೈಪರ್ ಬಾಟ್ಲಿ Iಕ್ಕೆ ರೂ. 5-0-0 ವಿ.ಪಿ. ಚೇರ್ಜ್. ಎಂದು ಡಜನ್ ಡ್ರಪರ್‌ಬಾಟ್ಲಿಗಳಿಗೆ ರೂ- 60-0-0- ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ Iಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ.ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ ಈ ತೈಲವು ಪ್ರತಿಯೊಬ್ಬರ ಎಲ್ಲ ಕೀಲಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ. ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-
ದಾಹಾನು ರೋಡು, ಬಿ. ಬಿ- ಎಂಡ್ ಸಿ- ಐ. ರೈಲ್ವೆ-

The Eclipse Distributing Agency.
Dahanu Road, B. B. & C I. Rly,

ಬೊಂಬಾಯಿ ಸ್ಟಾಕಿಸ್ಟರು:—ಅಲ್ಕಾವಾಲಾ ಲಿಮಿಟೆಡ್, 25, ಓಲ್ಡ್ ಹನಿಮೂನ್‌ಲೇನ್, ಬೊಂಬಾಯಿ 2.

ಒಂದು ದೇಶದ ಅವಶ್ಯಕತೆಗಳಲ್ಲಿ ಆಹಾರವು ಅತಿಪ್ರಮುಖವಾದುದು. ನಾವಿನ ಜನರು ವಿವಿಧ ಚಟುವಟಿಕೆಗಳಲ್ಲಿ ತೊಡಗುವ ಮುನ್ನ ಹೊಟ್ಟೆಯುರಿಯು ತಣಿಯಬೇಕು. ಎಲ್ಲಕ್ಕೂ ಅನ್ನವೇ ಮೇಲು ಲೋಕಕ್ಕೆ.

ಆಹಾರವು ಭೂಮಿಯಿಂದ ಬರಬೇಕಷ್ಟೆ. ಅದನ್ನು ಸಮತಟ್ಟು ಮಾಡಿ, ಅದನ್ನು ಉತ್ತು ಬಿತ್ತು, ಪೈರು ಬೆಳೆಯಿಸಿ ತನಗೂ ಇತರರಿಗೂ ಒದಗಿಸುವವನೇ ಅನ್ನದಾತ. ಅವನೇ ದೇಶದ ಜೀವಾಳ. ಅನ್ನವಿಲ್ಲದಿದ್ದರೆ ಯಾವ ಕೆಲಸವೂ ಸಾಗದು.

ನಮ್ಮಲ್ಲಿರುವ ಕೃಷಿಕ ದೇಶ ಶೇ. 75 ಜನರು ಇಂದೂ ಕೃಷಿಕರಾಗಿರುವವರು ಇಂತಹ "ಕೃಷಿಕ ದೇಶದಲ್ಲೇ ಆಹಾರ ತುಟ್ಟಿ" ಎಂದರೆ ಎಂತಹ ಸೋಜಿಗ! ಇಂತಿಷ್ಟೆ ನಮ್ಮ ಕೃಷಿ ಉದ್ಯಮದ ಅಸಮರ್ಪಕತೆಗಳೂ ಅಯೋಗ್ಯ ಪದ್ಧತಿಗಳೂ ಕಾರಣವಾಗಿವೆ. ಈಗಿನ ಮಂತ್ರಿಮಂಡಿನ ದೃಷ್ಟಿಯಲ್ಲಿ ನೋಡುವುದಾದರೆ ಕೃಷಿ ಉದ್ಯಮವು ಎಷ್ಟು ಪ್ರಾಮುಖ್ಯವಾದುದೆಂದು ಯಾರಿಗೂ ಮನದಟ್ಟಾಗದೆ ಹೋಗದು. ಕೃಷಿಕರೆ ನಮ್ಮ ದೇಶದ ಪಂಚಾಂಗ ಎಂದು ದೃಷ್ಟವಾಗಿ ಹೇಳಬಹುದು.

ಭೂ ಪದ್ಧತಿಗಳಲ್ಲಿ ಜಮೀನುದಾರಿ ಪದ್ಧತಿ ಮತ್ತು ರೈತವಾರಿ ಪದ್ಧತಿಗಳೆಂಬ ಎರಡು ಪ್ರಾಮುಖ್ಯ ಪದ್ಧತಿಗಳು ನಮ್ಮ ಪ್ರಾಂತದಲ್ಲಿವೆ. ಈ ಎರಡು ಪದ್ಧತಿಗಳೂ "ಕೃಷಿಯು ಒಂದು ರಾಷ್ಟ್ರೀಯ ಉದ್ಯಮ" ಎಂಬ ವಾದಕ್ಕೆ ಸಂಪೂರ್ಣ ವಿರುದ್ಧಗಳಾಗಿವೆ. ಈವರೆಗೆ ಕೃಷಿಯೂ ರಾಷ್ಟ್ರೀಯವು ಉದ್ಯಮ ಎಂದು ಇಲ್ಲಿ ಆಳಿದ ಬ್ರಿಟಿಷರು ಇಟ್ಟು ಕೊಳ್ಳದುದರಿಂದಲೇ ಇಂದು ನಾವು ಆಹಾರದ ಮುಗ್ಗಟ್ಟಿನಲ್ಲಿದ್ದೇವೆ.

ಕಾಂಗ್ರೆಸು ಸರಕಾರವು ಜಮೀನುದಾರಿಗಳನ್ನು ರದ್ದು ಗೊಳಿಸಿದುದರಿಂದ ಇನ್ನಾವ ಪದ್ಧತಿಯು ಪ್ರಸ್ತಾಪವು ಅನ್ಯೊಂದು ಅಗತ್ಯವಲ್ಲವಾದರೂ ಇನ್ನುಳಿದ ರೈತವಾರಿ ಪದ್ಧತಿಯಾದರೆ ಸ್ವಲ್ಪ ಪರಾಮರಿಸಬಹುದು.

ಬ್ರಿಟಿಷರು ಬರುವ ಮೊದಲು ನಮ್ಮಿಂ ಪವಿತ್ರ ನಾಡಿನಲ್ಲಿ ಕೃಷಿಕರು ಉತ್ತು ಬಿತ್ತಿ ಸುಖ ಸಂತೋಷದಿದ್ದರು. 'ರಾಜಪಾಲ'ನ್ನು ಆರಿಸಿಗೆ ಸಲಾಯಿಸಿದ ತರುವಾಯ ರೈತರಿಗೆ ಯಾರಿಂದಲೂ, ಯಾವ ತೊಂದರೆಗಳೂ ಬರುತಿದ್ದಿದ್ದಿಲ್ಲ. ಕಂಪೆನಿ ಆಳಿಕೆತ ಬಂಪುದೇ ತಡ, ತಮ್ಮರು ರೈತರನ್ನು ಕಡೆಗಣಿಸಿ ತೀರ್ವೆಗಾಗಿ ಭೂಮಿಗಳನ್ನು ಏಲಂ ಹಾಕಲಾರಂಭಿಸಿದರು. ಇದರಿಂದ ತಾಡ್ಡಿದ್ದ ಕೆಲವೇ ಜನರಿಗೂ ಸರಕಾರಕ್ಕೂ ಸಂಬಂಧ ಬೆಳೆಯಿತಲ್ಲದೆ ಉಳುವ ರೈತನನ್ನು ಲೆಕ್ಕುವವರೇ ಇಲ್ಲವಾದರು. ಕಂಪೆನಿ ವ್ಯಾಪಾರಿ ಸರಕಾರಕ್ಕೆ ತೀರ್ವೆ ಬೇಕಾಗಿತ್ತಲ್ಲದೆ ರೈತರ ಸ್ಥಿತಿಗತಿ ಅವರಿಗೆ ಬೇಡವಾಗಿತ್ತು. ಪರುವಾಯ "ಏಲಂ ಪದ್ಧತಿ"ಯು ರದ್ದಾಗಲು ಪಟಿಸಿಕೊಂಡಿದ್ದ ಕೆಲವೇ ಕುಬೇರಪುತ್ರರು ಭೂ ಒಡೆಯರಾಗಿ 'ಜಮೀನುದಾರ'ರೆನಿಸಿಕೊಂಡರು. ಕಂಪೆನಿ ರಾಜ್ಯವು ವಿಸ್ತಾರವಾದಂತೆ ತೀರ್ವೆ ವಸೂಲಿಗೆ "ರೈತವಾರಿ ಪದ್ಧತಿ" ಎಂಬ ಇನ್ನೊಂದು ಪದ್ಧತಿ ಜಾರಿತು. ಇದೂ ನೇರವಾಗಿ ರೈತನೊಡನೆ ಸಂಬಂಧವಿರಿಸದೆ ಕೆಲವೇ ಜನರೊಡನೆ ಸಂಪರ್ಕವನ್ನು ಇರಿಸಿತು. ಜಮೀನ್ದಾರಿಯೂ ರೈತವಾರಿಯೂ ಆಳ್ವಿಕೆಯಂತೆ ಮಧ್ಯವರ್ತಿಗಳನ್ನು ಬೆಳೆಯಿಸಿದುವಲ್ಲದೆ, ರೈತನಿಗೆ ಯಾವ ಪ್ರಯೋಜನವನ್ನೂ ತಾರದೆ ಹೋದುವು. ತೀರ್ವೆ ವಸೂಲಿಯನ್ನು ಮಾಡುತ್ತಿದ್ದ ಈ ವರ್ಗಗಳು ತೀರ್ವೆಯನ್ನೂ ತಾವು ವಸೂಲಿ ಮಾಡಿದುದಕ್ಕೆ ಪ್ರತಿಫಲವನ್ನೂ ರೈತರ ಮೇಲೆ ಹೇರಲಾರಂಭಿಸಿದುವು. ಕೊನೆಕೊನೆಗೆ ಒಂದು ಪಾಲು ತೀರ್ವೆಯಾದರೆ ಇಂದು ಹದಿನೈದು ಪಾಲು ಗೇಣಿಯಾಗಿರುತ್ತದೆ. ರೈತರಿಗೆ ಭೂಮಾಲಿಕರೇ ಸರಕಾರ ಎನ್ನುವಷ್ಟರಿಗೆ ಬಂತು ಈಗಿನ ಕಾಲದಲ್ಲಿ ಪರಿಸ್ಥಿತಿ.

ಹಿಂದಿನ ಕಾಲದಲ್ಲಿ ಈ ಪದ್ಧತಿಗಳು ರೈತರ ಮೇಲೆ ಆಕ್ರೋಶ ಅಪಕ್ರೋಶಗಳಿಲ್ಲ. ಕಾರಣ ಆಗ ಭೂಮಿಗಾಗಿ ಮೇಲಾಟವಿಂಬಿಲ್ಲ. ಕೇಣಿ ಸರಾಗ ಬಂದು ಪಕ್ಕಲು ನಿಲ್ಲುವುದೇ ಕಷ್ಟವಾದ ಆ ಕಾಲದಲ್ಲಿ ಭೂ ಮಾಲಿಕರು ಜಾಲಗೇಣಿ ರೈತರ ಕಲ್ಲಿಗೆ ಹೋಗುತ್ತಿರಲಿಲ್ಲ. ಹಳ್ಳಿಯಲ್ಲಿ ವಾಸಿಸುತ್ತಿದ್ದ ಭೂಮಾಲಿಕರಿಗೆ ಒಂದಲ್ಲ ಒಂದು ರೀತಿಯಲ್ಲಿ ಈ ರೈತರ ಸಹಕಾರ ಬೇಕಿತ್ತು. ರಕ್ಷಣೆಯೂ ಆಗಬೇಕಿತ್ತು.

ಕ್ರಮೇಣ ಜನಸಂಖ್ಯೆ ತೀವ್ರವಾಗಿ ಏರುತ್ತಾ ಬಂದಂತೆ ಭೂಮಿಗಾಗಿ ಮೇಲಾಟ ಆರಂಭವಾಯಿತು. ಸರಕಾರಕ್ಕೂ ಉಳುವ ರೈತನಿಗಿಂತ ತೀರ್ವೆ ವಸೂಲು ಮಾಡುವ ಭೂಮಾಲಿಕನೇ ಬೇಕಾಗಿದ್ದನು. ಕಾನೂನುಗಳೂ ಅಂತೆಯೇ ಇದ್ದುವು. (ಈಗಲೂ ಹಾಗೆಯೇ ಇವೆ.)

ರೈತವಾರಿಯಲ್ಲಿ ಶೇ. 85 ರಷ್ಟಿರುವ ಜಾಲಗೇಣಿ ರೈತರ ಇಂದಿನ ನೀತಿ ನೋಜೋಣ. ಭೂಮಾಲಿಕರು ಜಾಲಗೇಣಿಯವರಿಂದ ಬರಿಳ್ಳುಕ ಕ ರಾ ರೊಂ ದಿ ದೆ. ಇದಕ್ಕೆ **"ಜಾಲಗೇಣಿ ಎದುರ್ಸುಡಿ"** ಎನ್ನುವರು. ಉಳುವ ರೈತನನ್ನು ಸಂಪೂರ್ಣ ಗುಲಾಮನನ್ನಾಗಿ ಮಾಡುವರೆ, ಇಲಿಯನು ಪಿಡಿಯುವ ಜೋನದ್ದು. ಇಂತಹ ಕರಾರಿನಲ್ಲಿ ಬಿದ್ದವನಿಗೆ ಮತ್ತೆ ಬರವಸೆ ಇಲ್ಲ. ಇದರಲ್ಲಿ ಎಂತಹ ಶರತ್ತುಗಳಿವೆ? ರೈತನು ಭೂಮಿಯಲ್ಲಿ ಹೂಡಿ ಕೃತವನ್ನೂ ಮಾಡಬಾರದು, ಮಾಡಿದಲ್ಲಿ ಅದು ಭೂಮಾಲಿಕನ ಸೊತ್ತಾಗುವುದು. ವರ್ಷಾಂತ್ಯಕ್ಕೆ ಯೊಲವನ್ನು ಪ್ರತಿ ಫಲವಿಲ್ಲದೆ ಬಿಟ್ಟುಕೊಡಬೇಕು ಬಿಟ್ಟುಬೇಗಾರಿಗಳನ್ನು ಮಾಡಿ ಹೊರೆ, ಕಾಣಿಕೆಗಳನ್ನು ಸಲಾಯಿಸಿ ಧನಿಗೆ ಆನುವೃತನಾಗಿ ನಡಕೊಳ್ಳಬೇಕು; ಆರ್ಥಾತ್ ಧನಿಯ ಸಂಪೂರ್ಣ ಪ್ರತ್ಯಕ್ಷ ಸಾಮಂತ್ಯ ಗುಲಾಮನಾಗಿರಬೇಕು.

ಈಗ ಗೇಣಿ ಎಷ್ಟೆಂದು ನೋಜೋಣ. ಈಗ ಭೂಮಾಲಿಕನಿಗೆ ಎಕೆ ಗೆ 100ರಿಂದ 300 ರೂಗಳವರೆಗೆ ಗೇಣಿ ಜೋಗುತ್ತಿದೆ. ತೀರ್ವೆಯೂ ರೈತರಿಂದಲೇ ಬರುತ್ತದೆ. ಭೂಮಾಲಿಕನು ಇಷ್ಟು ಪ್ರತಿಫಲಕ್ಕೆ ಸರಕಾರಕ್ಕೆ ಒಂದೇ ಒಂದು ಕಾಸು ತೆರುವುದಿಲ್ಲ. ಭೂಮಾಲಿಕರು ಇಷ್ಟು ಪ್ರತಿಫಲ ಪಡೆಯಲು ಏನು ಕಷ್ಟಪಟ್ಟಿದ್ದಾರೆ? ಈಗಿರುವ ಕೂಲಿಗಳನ್ನು ಅವರು, ಅವರ ಆಜ್ಞಾದಿರು ಕಾರ್ಖಾನೆಗಳಂತೆ ನಿರ್ಮಾಣ ಮಾಡಿ ರೈತರಿಗೆ ಬಿಟ್ಟುದಿದಿಯೇ? ಹಿಂದಿನ ಜಾಲಪಲ್ಲಿ ಆಪ್ಪು ಗೇಣಿ ಇತ್ತೇ? ಈಗಿನ ಗೇಣಿಯ 1/10 ಆರಂಭದಲ್ಲಾದರೂ ಇತ್ತೇ? ಒಬ್ಬನಾ 10 ಸಾವಿರ ರೂಪ್ಯಾಗೆ ಆಸ್ತಿಯೊಂದನ್ನು ಪಡಕೊಂಡರೆ ಅದು ರಾಷ್ಟ್ರೀಯ ದೃಷ್ಟಿಯಿಂದ ದೇವಹಣತಿಯಾಯ್ತೆ?(Investment)ಇಲ್ಲಿ 10 ಸಾವಿರ ರೂಪ್ಯಾಗೆ ಆಸ್ತಿ ಕೊಂಡವನು ಆ ಮೇಲೆ ಒಂದೇ ಒಂದು ಕಾಸನ್ನು ಕೃಷಿ ಅಭಿವೃದ್ಧಿಗೆ ಬರ್ದು ಮಾಡುವ ಸ್ಥಿತಿಯಲ್ಲಿಲ್ಲ. ಅಂತಹ ಆಗತ್ಯವಾದೂ ಏನು? ಅಂತಹ ಹಣವಿದ್ದರೆ ಇನ್ನೊಂದು ಆಸ್ತಿಯನ್ನು ಪಡಕೊಳ್ಳಬಹುದು. ಅವನು ಆಸ್ತಿಯನ್ನು ಅಭಿವೃದ್ಧಿ ಪಡಿಸಲಿಕ್ಕೆ ಕೊಂಚು ಕೊಂಚು ದಲ್ಲಾ ಅಂತಹ ಆಸ್ತಿಯಲ್ಲಿರುವ ರೈತರನ್ನು ನಿರಾಂತಕವಾಗಿ ಸುಲಿಯುವ ಹಕ್ಕಿಗಾಗಿ ಕೊಂಡು ಕೊಂಡುವಾಗಿರುತ್ತದೆ.

ಹೊರೆ, ಹುಲ್ಲು, ಸೌದೆ, ತುಪ್ಪ, ತೆಂಗಿನ ಕಾಯಿ, ಹಾಲು, ತರಕಾರಿ, (ಕೆಲವು ಕಡೆ ಕೋಳಿ ಸಹ) ಇವೆಲ್ಲವೂ ಭೂ ಮಾಲಿಕನಿಗೆ ಸಿಗಬೇಕು; ಬಿಟ್ಟು ಮಾಡಬೇಕು ಇವು ನಳಲ್ಲಿ ಒಂದು ಲೋಪವಾದರೆ ಮನೆಗೆ ಬಿತ್ತು ಬಾಗಿಲು; "ಳೆದ್ದಿ". ಆ ಮೇಲೆ ಆರಂಭವಾಯಿತು ಕಾಳಗ, ಹೀಗಿದ್ದರೂ ಗೇಣಿ ಸಲಾಯಿಸಿದ ಬಗ್ಗೆ ರಶೀದಿಯಾದರೂ ಸಿಗುವುದಿದೆಯೇ? ನಾನು ಕಂಡ ನೂರಾರು ವಕ್ಕಲುಗಳಿಗೆ ರಶೀದಿಯೇ ಇಲ್ಲ. ಇದರಿಂದ ಗೇಣಿ ಸಲಾಯಿಸಿದ ರೈತನ ಮೇಲೂ ಮೂರು ವರುಷದ ಗೇಣಿಗೆ ರಶೀದಿ ಇಲ್ಲದುದರಿಂದ ಪ್ಯಾಜ್ಯ ದಾಖಲು ಮಾಡಬಹುದು. ಜೆಲ್ಲೆಯ ವರ್ತಮಾನ ಪತ್ರಿಕೆಗಳಲ್ಲಿ ಎಡೆ ಬಿಡದೆ ಪ್ರಕಟವಾಗುವ ಕೋರ್ಟು ಜಾಹೀರಾತುಗಳೇ ಇದಕ್ಕೆ ಸಾಕ್ಷ್ಯಯಾಗಬಲ್ಲುವು. ಹೀಗೆ ಒಂದಲ್ಲ ಒಂದು ರೀತಿಯಿಂದ ಭೂಮಾಲಿಕರು ರೈತ ಸಮಾಜವನ್ನು ತಮ್ಮ ಹಕೋಟೆಯಲ್ಲಿಟ್ಟು ಅವರನ್ನು ಆಸ್ವತಂತ್ರರನ್ನಾಗಿ ಮಾಡಿಬಿಟ್ಟಿದ್ದಾರೆ. ಎಲ್ಲೆಲ್ಲೂ ಈ ಒಳಪಾತಳಿಯತನಗಳು ಉಳಿದುಕೊಂಡಿವೆ.

ಇಷ್ಟು ಲಕ್ಷಾಂತರ ರೈತರನ್ನು, ಹಲವು ವರುಷಗಳಿಂದ ಯಾವ ಅಭಿವೃದ್ಧಿಯೂ ಮಾಡದಂತೆ ತಡೆದಿಟ್ಟಿರುವುದರಿಂದ ಇಂದು ಎಲ್ಲೆಲ್ಲೂ ಕ್ಷಾಮ ಭೀತಿ ಕಾಡಿಸುತ್ತಿದೆ. ಪತ್ತಿಪ್ಪತ್ತು ವರುಷಗಳ ಹಿಂದೆ ಭೂ ಸುಧಾರಣೆ ನಡೆಯಿಸಿ, ಬರ್ಮಾ ಅಕ್ಕಿಯನ್ನು ಪಡೆಯಿದಿದ್ದರೆ ಇಂದಿಗೆ ಎಂದೋ ನಾವು ಆಹಾರ ಸ್ವಾವಲಂಬಿಗಳಾಗಿರಿತ್ತಿದ್ದೆವು.

ಇಂದು ನಾವು ಸ್ವಾತಂತ್ರ್ಯಗಳಿಸಿ ಮೂರು ವರುಷಗಳು ಸರಿದುವು ಆದರೆ ರೈತನಿಗೇನು? ಆತನನ್ನೂ ದ್ವಿಪದ ಜಾಲದಲ್ಲಿದ್ದಂತೆಯೇ ಇದ್ದಾನಲ್ಲದೆ ಅಪಕ್ಕಿಂತಲೂ ಹೀನ ಸ್ಥಿತಿಯಲ್ಲಿದ್ದಾನೆ. ಎಷ್ಟೊಕರೆ ಗೇಣಿ ಏರಿದೆ. ಭೂ ಒಡೆತನವು ರೈತನಿಗೆ ಸಿಗದೆ ಯಾವ ಸುಧಾರಣೆಯೂ, ಯೋಜನೆಯೂ ಆಗಲ್ಲಿ ಬುಬ್ಬಾಹವನ್ನೂ ಹುರುಪನ್ನೂ ಪುಟ್ಟಿಸವು ರೈತನಂತಹ ಒಬ್ಬ ಸಾಗರಿಕನು ತನಗೆ ಸಮಾಜದಲಿ ಸ್ಥಾಕರ್ತೃಪೂ, ಕಾರ್ಯಾಂಪಸಕಿಯೂ ಇರಬೇಕೆಂದು ಅರಿಸಬಾರದೇ? ಹಾಗೆ ಇರಬೇಡವೇ?

ಕಾಂಗ್ರೆಸಿನಿಂದಾಗಿ ಎಲ್ಲೆಡೆಗೂ ಜಾಸಿಘಾರಣೆಗಳು ನಡೆಯುತ್ತಿವೆ. ಏನಿಲ್ಲವೆಂದಾಗಲಿ ರದ್ದುಗೊಳಿಸಿವೆ. ರೈತರು ಜಮೀನುದಾರಿಗಳಿಂದ ಬಿಡುಗಡೆಗೊಂಡಿದ್ದಾರೆ. ಆದರೆ ಇವೆಲ್ಲವೂ ಇವೇಟಿಗೆ ಪರಿಪೂರ್ಣವಾಗಿಲ್ಲ. ಇನ್ನೂ ಕೆಲವು ಕೆಲಸಗಳು ಆಗಬೇಕಾಗಿವೆ.

1 ಒಂದೇ ಬೆಳೆ ಬೆಳೆಯುವ ಗದ್ದೆಗಳಿಗೆ ಉತ್ಪನ್ನದ 1/5ಕ್ಕಿಂತ, ಎರಡು ಬೆಳೆಯ ಗದ್ದೆಗಳಿಗೆ ಉತ್ಪನ್ನದ ½ಕ್ಕಿಂತ ಹೆಚ್ಚಿನ ಗೇಣಿ ಇರಬಾರದು

2 ತೀರ್ವೆಯನ್ನು ಭೂಮಾಲಿಕ ಮತ್ತು ರೈತ ಸರಿಪಾಲಿನಲ್ಲಿ ತೆರಬೇಕು. ಭೂತೀರ್ವೆಯನ್ನು ಈಗಲೇ 25./. ವರಿಸಿ ಸರಕಾರದ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸಬೇಕು.

3 ಗೇಣಿಯಲ್ಲದೆ ಬೇರೆ ಯಾವ ಹಕ್ಕೂ ಪ್ರತಿಫಲವೂ ಭೂಮಾಲಿಕನಿಗಿಲ್ಲ.

4 ತನ್ನ ಆಧಿಕಾರಿಗಳ ಮೂಲಕ ಸರಕಾರವೇ ಈರೀತಿ ಗೇಣಿ ನಿಶ್ಚಯಿಸಬೇಕು.

5 ಣಿ ಸಲಾಯಿಸಿದ ರೈತನನ್ನು ಎಂದೂ ಭೂಮಿಯಿಂದ ಹೊರಹಾಕಬಾರದು.

6 ಗೇಣಿಯ ಹಣವನ್ನು ಅಕ್ಕಿ ಸಲಾಯಿಸಿದ ದಿನಗಳಿಂದಲೇ ಭೂಮಾಲಿಕರು ಪಡೆಯ ಬೇಕು. ರಶೀದಿಕೊಡಬೇಕು,

7 ಜಾಲಗೇಣಿಯವಸಿಗೆ ತನ್ನ ಹಿಡುವಳಿಯ ಪಟ್ಟಿ ಸಿಗಬೇಕು.

8 ಹೊಸ ಗದ್ದೆಗಳನ್ನು ಮಾಡಿದಲ್ಲಿ, ಯಾವ ರೈತನನ್ನೂ ಮಾಡಿದಲ್ಲಿ ತೀರ್ವೆ ಮಾಫಿಯಾಗಬೇಕು. ಗೇಣಿಯು ಸುಲಿವೇ ಇರಬಾರದು.

9 ಕೃಷಿ ಕೂಲಿಗಳಿಗೆ ಕಾಯಂ ನಿಲ್ಲುವ ವಸತಿ ಹಕ್ಕು ಮತ್ತು ಮನೆಯಂಸುತ್ತು ½ ಯಾ ½ ಎಕ್ರೆ ಸ್ಥಳಗಳಿಗೆ ಬೇಕು. ಇದರಿಂದ ನ್ಯಾಯವಾದ ಕೂಲಿ ಸಿಕ್ಕಿ ಹಂಗು ತಪ್ಪುವುದು.

ಸರಕಾರವು ಭೂಸುಧಾರಣೆಯ ತರುವಾಯ ತೀವ್ರ ಕೃಷಿ ಅಭಿವೃದ್ಧಿಗೆ ಎರಡನೇ ಹೆಜ್ಜೆ ತೆಗೆದು ಕೊಳ್ಳಬೇಕಾದ:—

i ತಾಲೂಕಿಗೊಂದು ಮಾದರಿ ಕೃಷಿಕ್ಷೇತ್ರವಿರಬೇಕು.

ii ಪ್ರತಿಮನೆಯನ್ನೂ ಸಂಚರಿಸಿ ಅಲ್ಲಿಂ ಬಹುದಾದ ಬಾಲಿ ಸ್ಥಳಗಳನ್ನು ಕೃಷಿಮಾಡುವಂತೆ ಒತ್ತಾಯಿಸಬೇಕು. ಎರಡನೇ ವರುಷವು ಅವನ್ನು ಸಂದರ್ಶಿಸಬೇಕು.

iii ಅಗಾಗ ಗ್ರಾಮಾಧಿಕಾರಿಗಳಲ್ಲೂ ಗ್ರಾಮ ಕೇಂದ್ರದಲ್ಲೂ ರೈತರ ಸಭೆಗಳಿದ್ದು ಈಗಿನ ಅವಶ್ಯಕತೆಗಳನ್ನು ವಿಚಾರಿಸಬೇಕು.

iV ಸರಕಾರವೂ ರೈತನೂ ಸಂಬಂಧ ಬೆಳೆಸಬೇಕು.

V ಕೃಷ್ಯುತ್ಪಾದನವನ್ನು ಹೆಚ್ಚಿ ಮಾರಿಯು ಬೇಕು.

ಸ್ವರಾಜ್ಯ ಸ್ಥಾಪನೆಯ ನಂತರ ಮದರಾಸು ಸರಕಾರವು ಈ ರೀತಿ ರೈತರನ್ನು ಭೂಮಾಲಿಕರ ಸ್ವಾರ್ಥಕ್ಕೆ ಬಲಿಕೊಡುವುದು ನ್ಯಾಯವಲ್ಲ. ಜನತಾ ಸರಕಾರವು ಎಂದೂ ರೈತರನ್ನು ಕೈ ಬಿಡಬಾರದು. ಹಾಗಾದರೆ ರೈತನಿಗೆ ಸರಕಾರವೇ ಇಲ್ಲದಂತಾಗುವುದು. ಇಂದೇ ಭೂಸುಧಾರಣೆಯಾಗಬೇಕು. ಇಂದೇ ರೈತ ಸ್ವಾತಂತ್ರ್ಯಸಿಗಬೇಕು. ಇಲ್ಲವಾದರೆ ರೈತರು ಬೇರೆ ಹಕ್ಕುಗಳಿಗೆ ಬಲಿಬೀಳುವರು. ಇಲ್ಲವೇ ನಿರಾಕರಣಗುವರು. ಭೂಸುಧಾರಣೆಯು ಸುಧಾರಣೆಗಳ ಶೇ. 75 ಆಗಿದ್ದು ಅತ್ಯುತ್ತಮ ಮಾನಸಿಕ, ಆರ್ಥಿಕ, ಸಾಮಾಜಿಕ, ರಾಷ್ಟ್ರೀಯ ಸುಧಾರಣೆಯಾಗಿವೆ ಇದರಿಂದ ಭೂಸುಧಾರಣೆಯು ಅನಿವಾರ್ಯವಾದುದೆಂದು ದೇಶಪ್ರೇಮಿಗಳಿಗೆ ಮಂದಟ್ಟಾಗದೆ ಹೋದೀತೆ?

—ಎಂ ಡಿ' ಸೋಜ

ಜನಮತ

ಭೂ ಸುಧಾರಣೆಯು ಅನಿವಾರ್ಯವಾದುದು

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು
ಜೆನ್ನಾಗಿ ಓದಬೇಕು"—(ನರಾಹ ಪುರಾಣ)

ಶ್ರೀ ಗೀತೆಯು ಶ್ರೀಗನ್ನಡ ಪದ್ಯ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಜನುವಾದ)

ಅನುವಾದಕರು-ದಿ। ಹೊಸಕೆರೆ ಬಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲಿ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಭಟ್ಟಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.

ಒಂದು ರೂಹಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

LICENCE No. 31
Licensed to Post without Prepayment

31ನೇ ವರ್ಷ

Founder Sri A. B. Shetty,
Minister for Agriculture & Veterinary

ವರ್ಷ ೩೧
ವಾರ ೩

NAVAYUGA
WEEKLY

POST BOX NO. 22
UDIPI, S. K.

Vol. 31
No 3

ಯಾರನ್ನೆ ಆಗಲಿ, ಯಾವುದನ್ನೇ ಇರಲಿ, ಖಂಡಿಸುವುದೊಂದನ್ನಲ್ಲದೆ ಮತ್ತೊಂದನ್ನರಿಯದವರು ಕೆಲವು ಮಂದಿ, ಇದಕ್ಕೆ ಪ್ರತಿಯಾಗಿ ಎಲ್ಲರಿಂದಲೂ ಮೆಚ್ಚಿಗೆ ಗಳಿಸಬೇಕೆಂಬ ಹಂಬಲ ಕಟ್ಟಿಕೊಂಡವರು ಬೇರೆ ಕೆಲವರು. ಎಲ್ಲಾ ದಿಕ್ಕುಗಳಿಗೂ ಕಚೇರಿಯ ಬೋರ್ಡಿನಂತೆ ಇರಬೇಕೆ? ಎಲ್ಲಾ ದಿಶೆಗಳಿಗೂ ಸಿಹಿಕಾರುವ ಎರಡೆಯವರೂ ಯಾವುದನ್ನೂ ನಿರ್ಮಿಸಿದವರಿಲ್ಲ.

'ಎಲ್ಲರನ್ನೂ ಮೆಚ್ಚಿಸಲು ಪ್ರಯತ್ನಿಸುವುದು ಹುಚ್ಚುತನ' ವೈವಿಧ್ಯ ವಿನಹಾ ಲೋಕವಿಲ್ಲ. ಮನುಷ್ಯ—ಮನುಷ್ಯರೊಳಗೆ ಅಗತ್ಯವಾಗಿ ಇರಬೇಕಾದ ಅದೊಂದು ಮಟ್ಟದ ಅರಿಕೆ, ಸಾಮಾಜಿಕ ಸಮಾನತೆಯನ್ನು ಪರಿಪೂರ್ಣಗೊಳಿಸುವುದೇ ಪ್ರಯಾಸದ್ದಿದೆ; ಅಭಿರುಚಿ, ಅಸಕ್ತಿ ಸಮಾನತೆಯನ್ನು ನಿರ್ಮಿಸುವ ದಂತೂ ಅಸಾಧ್ಯ. ಅಂದಮೇಲೆ ಸರ್ವರ ಅಭಿರುಚಿಗೂ ಸಮಾನವಾಗಿ ಒಪ್ಪಿಗೆಯಾಗುವಂತಹದಾವುದೂ ಪ್ರಪಂಚದಲ್ಲಿರಲಾರದು; ಹಾಗೆ ಎಲ್ಲರ ಒಪ್ಪಿಗೆ ಗಳಿಸಬೇಕೆಂಬ ಭ್ರಾಂತಿ ಕಟ್ಟಿಕೊಂಡವರೂ ಈ ಪ್ರಪಂಚದಲ್ಲಿರದೆ, ಭ್ರಾಂತಿಲೋಕದಲ್ಲಿ ವಿಹರಿಸುತಿದ್ದಾರೆಂದೇ ಅರ್ಥ.

ಒಂದೆಡೆಯ ಖಂಡನೆ, ಮತ್ತೊಂದೆಡೆಯ ಶ್ಲಾಘನೆ, ಇವೆರಡನ್ನೂ ಯಾರು ಹೆಚ್ಚು ಪರಿಮಾಣದಲ್ಲಿ ಅನುಭೋಗಿಸುತ್ತಾರೋ ಅವರೇ ಮಹಾಮನುಷ್ಯರು. ಇವೆರಡೂ ಕಡೆಯ ಇರುವ ಪರಿಮಾಣಕನುಸಾರವಾಗಿ ವ್ಯಕ್ತಿಗಳು ಸಣ್ಣವ-ಪ್ಪರನ್ನಿಸುತ್ತಾರೆ ನಿಂದೆ, ಅಥವಾ ಶ್ಲಾಘನೆಯ ಪೈಕಿ ಒಂದಕ್ಕೆ ಮಾತ್ರ ಪಾತ್ರನಾಗುವ ಮನುಜನಿಲ್ಲ; ವಿಷಯವಿಲ್ಲ

ಮಹಾತ್ಮಾಗಾಂಧಿಯವರು ಮಾನವಾಗ್ರೇಸರ ಸ್ಥಾನಕ್ಕೇರಿದವರು, ಪೂಜ್ಯರು ಮೇಲಿನ ಗೌರವದವ್ವೇ ಬಲವಾಗಿ ಅವರ ಮೇಲೆ ದ್ವೇಷವೂ ಇದ್ದಿತೆಂಬುದಕ್ಕೆ ಅವರ ಅಯಷ್ಕಾಂತ್ಯ ಘಟನೆಯೇ ನಿದರ್ಶನ.

ದೇಶ ರಕ್ಷಣೆಯ ಭಾರಹೊತ್ತಿರುವವರ ದೇಹರಕ್ಷಣೆಗಾಗಿ ವೈಗಾವಲಿದ್ದೇ ಇರಬೇಕಾಗುತ್ತದೆ; ಅವರಿಂದ ರಕ್ಷಿಸಲ್ಪಡುವವರುವಂತೆಯೇ ಶಿಕ್ಷಿಸಲ್ಪಡುವವರೂ ಇದ್ದಾರೆ—ಅವರ ಉಪಕಾರ ಶ್ಲಾಘನೆಯಿರುವಷ್ಟೇ ಬಲವಾಗಿ ಪ್ರತೀಕಾರ ಚಿಂತನೆಯೂ ಇದೆ—ಎಂದರ್ಥ.

ರಾಷ್ಟ್ರವಿಭಜನೆಯಿಂದಾಗಿ, ಭಾರತ ನಿರ್ಮಾಣ ಕಾರ್ಯಕ್ಕನುಕೂಲವಾಯಿತೆಂಬ ಭಾವನೆಯೊಂದೆಡೆ ಇದೆಯಾದರೆ ಈ ವಿಭಾಗದಿಂದ ಸರ್ವನಾಶವಾಯಿತೆಂಬ ಅಳಿವಾಯ ಇನ್ನೊಂದೆಡೆ ಇದ್ದೇ ಇದೆ.

ಒಂದು ರಾಷ್ಟ್ರದ ಜನಕನೆಂದು ಹೆಸರು ಕೇಳಿರುವಂತೆಯೇ ಮಿ ಜಿನ್ನರು 'ಅಖಂಡ ದೇಶದ ಮೃತ್ಯು' ಎಂಬ ಅಪವಾದವನ್ನೂ ಕೇಳಿದ್ದಾರೆ.

ಈಗಿನ ಲೋಕಕ್ಷೀಣೇ ಸದ್ದಾರಿ ತೋರಿಸಬಲ್ಲ ಅಧ್ಯನೆಂಬ ಹೆಸರು ಕೇಳಿರುವ ಪಂಡಿತ ನೆಹರುಗಳು 'ಸ್ವತಃ ಯಾವುದನ್ನೂ ಮಾಡಲಾರದವರು' 'ಅನ್ಯರ ಕೈಗೊಂಬೆ', ಎಂಬ ಅಪವಾದಕ್ಕೊಳಗಾಗಿದ್ದಾರೆ.

ಹುಳಾಗಿದೆ, ಎಂಬ ತೆಗಳಿಕೆಯೂ ಬೇಕಾದಷ್ಟಿದೆ

ಕಾಶ್ಮೀರ ರಜ್ಯದ ಕಾರ್ಯ, ದುರಾಚರಣೆಗಳನ್ನು ಖಂಡಿಸುವವರಿದ್ದಾರೆ, ಅತನ ಧೈರ್ಯ, ಸಂಘಟನಾಶಕ್ತಿಯನ್ನು ಶ್ಲಾಘಿಸುವವರೂ ಇದ್ದಾರೆ

ಪಾಕಿಸ್ತಾನೀಧಿ, ಜವಿ-ನ್ನಾರೀ ಬರ್ಬಾಸ್ತು ಮೊದಲಾದ ಸರಕಾರೀ ಕೃತ್ಯಗಳು ಹಲವರಿಂದ ಸ್ತುತಿಸಲ್ಪಡುತ್ತಿರುವಾಗ, ಬೇರೆ ಕೆಲವರಿಂದ ನಿಂದಿಸಲ್ಪಡುತ್ತಿವೆ

ಸರ್ವಸಮ್ಮತವೆಂಬುದಿಲ್ಲ!

'ಕಾಶ್ಮೀರದ ಹಲಿ' ಎಂದು ಈ ಕಡೆಯಿಂದ ಕೊಂಡಾಟಕ್ಕೊಳಗಾಗಿರುವ ಶೇಕ್ ಅಬ್ದುಲ್ಲಾ 'ತಾವು ಬೇಟೆಯಾಡಬೇಕಾದ ವ್ಯಕ್ತಿ' ಎಂದು ಆ ಕಡೆಯಿಂದ ಕೊಲೆಯಾಟಕ್ಕೆಡಾಗಿದ್ದಾರೆ.

ಸ್ವಾತಂತ್ರ್ಯದ ಮೂರು ವರುಷಗಳು ಸಂಸ್ಥಾನೀ ಸಮಸ್ಯೆಯ ನಿರ್ವಾಣ, ಜಾತೀಯ ಗೊಂದಲ ಶಮನ, ಅಂತರ್ರಾಷ್ಟ್ರೀಯ ಖ್ಯಾತಿ ಸಂಪಾದನೆ, ಇತ್ಯಾದಿಗಳ ಮೂಲಕ ಪೂರ್ಣ ಸಾರ್ಥಕವಾದುದೆಂಬ ಹೊಗಳಿಕೆಯಿರುವಂತೆಯೇ, ಆಹಾರಾಭಾವ, ಸಾಮಾಗ್ರಿಗಳ ವೌಲ್ಯಾಧಿಕ್ಯ, ಲಂಚದಗಂಬೋರತನಗಳ ವ್ಯಾಪನೆ ಮೊದಲಾದವುಗಳ ಮೂಲಕ ಪರಿಸ್ಥಿತಿ ಪೂರ್ಣ ಆಹಾರ ನಿಯಂತ್ರಣದಿಂದ ಆಹಾರ ಗೊಂದಲವಿಸ್ತಾರದೂ ಕಡಿಮೆಯಾಯಿತೆಂದು ಸಮಾಧಾನಪಡುವವರು ಕೆಲವರಾದರೆ, ಈ ನಿಯಂತ್ರಣ ಬಂದೇ ಕೆಲಸಂತೇ ವ್ಯಾಪಾರ ವೃದ್ಧಿಸಿತೆನ್ನುವವರು ಹಲವರು.

ವಿರುದ್ಧಸ್ವರವೇ ಕೇಳಿಬಾರದ ರಾಜ್ಯ, ಜನತೆ, ಊರು, ಮನೆ ಅಡಳಿತೆ, ಎಲ್ಲಿಯಾಬರೂ ಇದ್ದರೆ, ಅಂಥವುಗಳ ವಿರೋಧಭಾ ರೂಪಗೊಳ್ಳದಂತಹ ಅಂಕುಶವಿರುವುದರಿಂದಾಗಿಯೇ ಹಾಗಿದೆ ಹೊರತು, ವಿರುದ್ಧಾಭಿಪ್ರಾಯವೇ ಅಲ್ಲಿಲ್ಲವೆಂದು ಭಾವಿಸಬಾರದು ಅಭಿಪ್ರಾಯ ಪ್ರಕಟಣೆಗೆ ಎಡೆಯಿರುವಲ್ಲಿಶ್ಲಾಘನೆಯಂತೆಯೇ ದೂಷಣೆಯೂ ಮುಂದೆಬರಲು ಬದ್ಧವಿದೆ.

ನ್ಯಾಯಾನ್ಯಾಯ, ಸತ್ಯ ಸುಳ್ಳು, ಉಚ್ಚನೀಚ ಭಿನ್ನತೆಗಳು ಈ ಪ್ರಪಂಚದಲ್ಲಿರುವ ವರೆಗೂ ಲೋಕದ ಪ್ರತಿಯೊಂದು ವಿಷಯ ಮತ್ತು ವ್ಯಕ್ತಿಯ ಕುರಿತೂ ಭಿನ್ನಾಭಿಪ್ರಾಯವಿರಲೇ ಬೇಕು. ಇಂತಹ ಜಗತ್ಪ್ರಸಿದ್ಧಿಯನ್ನಲ್ಲಿ ಅವಿರೋಧಿಯಾಗಿ, ಸರ್ವಸಮ್ಮತವಾಗಿ ಬಾಳಬೇಕೆಂದು ಇಚ್ಛಿಸುವುದು ಭ್ರಮೆಯೇ ಸರಿ

'ಸರ್ವಾನುಮತ ತಿರ್ಮಾನ' 'ಅವಿರೋಧ ಆಯ್ಕೆ' ಮುಂತಾದುವೆಗಳು ಕಂಡು ಬರುತ್ತಿರುವವೇನೋ ನಿಜ. ಯಾವುದೇ ಸ್ಥಾನ ಅಥವಾ ತೀರ್ಮಾನವು ಸರ್ವ ಸಮ್ಮತವಾಗಿ ಕಂಡು ಬಂದಲ್ಲಿ, ಅದೊಂದು ಸ್ಪರ್ಧಿಸಲಾಗುವ ವಿಷಯವೇ ಅಲ್ಲವೆಂಬಂತಹ ತಿರ್ಮಾನದ ಭಾವವನ್ನು ಇಟ್ಟುಕೊಂಡ ವಿರುದ್ಧಗಾಮಿಗಳು ಅಲ್ಲಿದ್ದಾರೆಂದೇ ತಿಳಿದುಕೊಳ್ಳಬಹುದು.

ಅಂತೂ, ಮಾನವ ಜಗತ್ತು, ಮನುಷ್ಯ ಅಭಿರುಚಿ, ಭಿನ್ನರೂಪಿ. ಎಲ್ಲಕ್ಕೂ ವಿಶ ಪ್ರಕಾರ ಹೊಂದಿಕೆಯಾಗುವಂತಹ ದೊಂದಿಲ್ಲ. ಅಂದ ಮೇಲೆ ಲೋಕದಲ್ಲೇ ಇಲ್ಲದುದನ್ನು ಎಟಕುವ ಪ್ರಯತ್ನ ಯಾರೂ ಮಾಡಬಾರದು—ಎಲ್ಲರನ್ನೂ ಮೆಚ್ಚಿಸಲು ನೋಡಬಾರದು.

ಯಾವುದು ಸತ್ಯ, ಯಾವುದು ಸುಳ್ಳು ಎಂಬ ಮಟ್ಟಿಗೂ ಭಿನ್ನಾಭಿಪ್ರಾಯಗಳಿರುವುದರಿಂದ ಇಂತಹ ಸಂದರ್ಭದಲ್ಲಿ ತನ್ನ ಮನಸ್ಸಾಕ್ಷಿ ಮತ್ತು ವಿವೇಚನಾ ಬುದ್ಧಿಯ ತೀರ್ಮಾನವನ್ನೇ ಅವಲಂಬಿಸಬೇಕು.

ಹಾಗಿದ್ದರೆ ಆದು ನ್ಯಾಯಸಮ್ಮತ ಹೊರತು ಸರ್ವಸಮ್ಮತವಲ್ಲ; ಸರ್ವಾನುಮತವೆಂಬುದಿಲ್ಲವೇ ಇಲ್ಲ. ಸರ್ವಸಮ್ಮತಿಯದ ಗುರಿಯೆಂಬುದಿಲ್ಲ ವಾದರಿಂದಲೇ ಲೋಕದಲ್ಲಿ ಪ್ರಗತಿನಾಧಿಸಿ ಮುಂಗಿಯತೆಂದಲ್ಲ; ಒಂದು ಸಂಗತಿ ಅಥವಾ ವ್ಯಕ್ತಿ ಸಂಪೂರ್ಣತೆಯನ್ನು ಪಡೆಯುವದೆಂದಿಲ್ಲವೇ ಇಲ್ಲ.

ಒಬ್ಬನು ಸತ್ಕಾರ್ಯಗಳನ್ನು ಹೊರತು ದುಷ್ಕಾರ್ಯಗಳನ್ನೇ ಮಾಡದ ಉತ್ತಮನೆನಿಸಿಕೊಳ್ಳಬಹುದು; ಆತನಿಂದ ತನಗಾವ ಅನ್ಯಾಯ ವಾಗದಿದ್ದರೂ ಆತನ ಉಚ್ಚೈಷ್ಟತೆಗಾಗಿ ಮತ್ಸರಿಸುವವರಿಂದಬಹುದಾದ್ದರಿಂದ, ಅವನೂ ಸರ್ವಜನ ಪ್ರಿಯನೆನ್ನಿಸಿಕೊಳ್ಳಲಾರ ಒಂದು ವಿಷಯದಲ್ಲಿ ಉತ್ತಮವಿರಬಹುದು; ಆದರೆ ಆದಕ್ಕೆ ಸಂಬಂಧಪಟ್ಟ ವಿಷಯ ಸಂಗತಿಗಳೂ ಅಷ್ಟೇ ಉತ್ತಮವಾಗಿರದ ದೆಸೆಯಿಂದ ಅದೂ ಬೆಲೆಬಾಳದೆ ಹೋಗಬಹುದು. ಪ್ರಪಂಚ ವಿಡೀ ಸರ್ವೋತ್ತಮವಾಗುವಂತಿಲ್ಲವಾದ್ದರಿಂದ ಸರ್ವ ಸಮ್ಮತವೆಂಬುದಿಲ್ಲ

ಆದ್ದರಿಂದ ಎಲ್ಲರನ್ನೂ ಮೆಚ್ಚಿಸುವ ಭ್ರಮೆಯಿರಬಾರದು; ಅಸಮ್ಮತಿ ಅಥವಾ ವಿರೋಧವಿದೆ ಎಂಬೊಂದೇ ಕಾರಣದಿಂದ, ಉತ್ಕೃಷ್ಟತೆಯನ್ನು ಅಲ್ಲಗಳೆಯಬಾರದು. ಎಲ್ಲವುಗಳ ವಿಚಾರಕ್ಕೆ ಕಳುವಳಿಕೆಯೇ ಬೇಕು

* English Made Easy *
ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪ ಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ರೂ. 1-8-0 ಮಾತ್ರ

ಸಂಪೂರ್ಣ ಪುಸ್ತಕ ಭಂಡಾರ, ಉಡುಪಿ

ನಾಸಿಕ ಕಾಂಗ್ರೆಸಿನ ಹಿಂದೆ

ಶ್ರೀ ಪುರುಷೋತ್ತಮದಾಸ ಠಂಡನರು ಕಾಂಗ್ರೆಸ್ ಅಧ್ಯಕ್ಷನಾಗಿ ಆರಿಸಲ್ಪಟ್ಟಿ ರುವರೆಂಬ ಸುದ್ದಿಯು ಹೊರಬಿದ್ದಾಗ ಅನೇಕರಿಗೆ ಆಶ್ಚರ್ಯವಾಯಿತು. ಅವರು ಕಾಂಗ್ರೆಸ್ ಸಂಸ್ಥೆಗೆ ಸೇರಿದ್ದು ಇತ್ತೀಚೆಗೆ

—ನೆಹರೂ ಹಿಡಿದಿರುವ ದೀವಿಗೆ!

ಒಮ್ಮೆಗೇ ಕಳವಳಗುಚಿ ಹಾಕಲು ಪ್ರಯತ್ನಿಸಿ ಪ್ರಗತಿಯನ್ನು ತಡೆಗಟ್ಟುವ ಗೊಂದಲ ಮತ್ತು ಕಷ್ಟನಷ್ಟಗಳನ್ನು ನಿವಾರಿಸಿ ಸ್ಥಿತಿಗತಿಗನುಸಾರವಾಗಿ ಯಥಾರ್ಥ ಸಹಕಾರೀ ಕಾಮನ್‌ವೆಲ್ತ್ ಸ್ಥಾಪನೆಯ ಬಗ್ಗೆ ಸೇರುವ ಧೋರಣೆ ಅರ್ಧಿಕ ಕ್ಷೇತ್ರದಲ್ಲಿ ನಮ್ಮದಿದೆ ದೇಶಾಭಿಮಾನಿಗಳಿಗೆ ಭೂಮ್ಯಾಲಕತ್ವವನ್ನು ವರ್ಗಾಯಿಸಿ ವೈವಸಾಯಿಕ ಸರಕಾರಿ ವಿಧಾನವನ್ನು ಅಭಿವೃದ್ಧಿಕ್ಕೆ ತರುವ ಗುರಿಯನ್ನಿಟ್ಟುಕೊಂಡಿದ್ದೇವೆ; ಇದಕ್ಕೆ ಕಾಂಗ್ರೆಸಿನ ಸಮ್ಮತಿ ದೊರೆಯತಕ್ಕದ್ದು—ದೇಶ ವಿಭಜನಾನಂತರ ಜಾತೀಯತಾ ಮತ್ತಿತರ ಹಳೇ ಕ್ರಿಯಾತ್ಮಕ ಭಾವನೆಗಳು ವ್ಯಾಪಿಸಿವೆ ಆನೊದಲು ಬಹಿರಂಗವಾಗಿ ಜಾತೀಯತೆಯನ್ನು ಸಾರಲಳುಕುತಿದ್ದ ಸಂಘಸಂಸ್ಥೆಗಳೀಗ ಜಾಹೀರಾಗಿ ಆ ಕೆಲಸ ಮಾಡಲು ಎದೆಗೊಂಡಿವೆ; ಈ ಜಾತೀಯ ತಾಸಕ್ಕರ್ತಿ ಮತ್ತು ಇತರ ಹಳೇ ಮನೋವೃತ್ತಿಗಳು ನಿಧಾನವಾಗಿ ಕಾಂಗ್ರೆಸನ್ನಾಕ್ರಮಿಸಿಕೊಳ್ಳತ್ತಾ ಬಂದಿದೆಯಲ್ಲದೆ, ಕೆಲವೊಮ್ಮೆ ಸರಕಾರೀ ಧೋರಣೆಯ ಮೇಲೂ ತಮ್ಮ ಪ್ರಭಾವ ಬೀರುತ್ತಿವೆ; ಅಧ್ಯಕ್ಷ ಚುನಾವಣೆಯ ಸಂಬಂಧವಾಗಿ ಜಾತೀಯ ಮತ್ತಿತರಹ ಇತರ ವರ್ಗದ ಪತ್ರಿಕೆಗಳು ಪ್ರಕಟಿಸಿರುವ ಅಭಿಪ್ರಾಯಗಳೇ ಇದಕ್ಕೆ ನಿದರ್ಶನ ಈ ಅಪಾಯಕರ ಬೆಳವಣಿಗೆಯ ಕಡೆಗೆ ನಾವು ಕಣ್ಣುಮುಚ್ಚಿ ಕೂರಲು ಸಾಧ್ಯವಿಲ್ಲ ನೆರೆಯ ರಾಷ್ಟ್ರ ಪಾಕಿಸ್ತಾನದಲ್ಲಿರುವ ಅತ್ಯಗ್ರ ಜಾತೀಯತೆಯ ಪ್ರತಿಛಾಯೆ ಇದಾಗಿರಬಹುದು. ವಿಭಜನಾ ಸಂಬಂಧದ ಹಲವು ವಿವಾದ ಮತ್ತು ಘರ್ಷಣೆಗಳು ದುರ್ದೈವವಶಾತ್ ಪಾಕಿಸ್ತಾನದೊಡನೆ ನಮಗಿನ್ನೂ ಇವೆಯಾದರೂ, ಅವೆಲ್ಲವನ್ನೂ ಶುದ್ಧ ರಾಜಕೀಯ ದೃಷ್ಟಿಯಿಂದ ಕಾಣಬೇಕಲ್ಲದೆ. ಜಾತೀಯತೆಯ ಲವಮಾತ್ರವನ್ನಾದರೂ ಅದರೊಳಗೆ ತುರುಕಿಸಕೂಡದ; ಪಾಕಿಸ್ತಾನದೊಡನೆ ನಾವು ಮಾಡಿಕೊಂಡಿರುವ ಎಪ್ರಿಲ್ ಒಪ್ಪಂದವು ನಿರ್ಣಯಗಳ ಸಮೂಹ ಮಾತ್ರವಾಗಿರದೆ, ಕಾಂಗ್ರೆಸ್ ಸಂಪ್ರದಾಯಕ್ಕೂ ನಮ್ಮ ಹಿತಕ್ಕೂ ಅಗತ್ಯವಿರುವ ಒಂದು ಹೊಸಜೀವನವನ್ನೇ ತುಂಬಿಕೊಂಡಿದೆ, ಎಂದು ನನ್ನ ಅಭಿಮತ. ನಾನು ದುಡಿಯುವ ಪ್ರತಿಯೊಂದು ಕ್ಷೇತ್ರದಲ್ಲೂ ನನ್ನ ಸರ್ವ ಶಕ್ತಿಯಿಂದ ಈ ಧೋರಣೆಯನ್ನು ಮುಂದೊಯ್ದಲು ನೋಡುತ್ತೇನೆ. ನಮ್ಮದಿದು ಜಾತ್ಯಾತೀತ ರಾಷ್ಟ್ರವೆಂದು ಮೇಲಿಂದ ಮೇಲೆ ನಾವು ಘೋಷಿಸಿದ್ದೇವೆ; ಆಧುನಿಕ ಜಗತ್ತಿನಲ್ಲಿ ಭಾರತದಂತಹ ರಾಷ್ಟ್ರವು ಜಾತ್ಯಾತೀತ ರಾಷ್ಟ್ರವಾಗಿರಬೇಕಾದುದು ಎಲ್ಲಾ ದೃಷ್ಟಿಯಿಂದಲೂ ಅಗತ್ಯ. ಪಾಕಿಸ್ತಾನದೊಡನೆ ನಮಗಿರುವ ಜಗಳದ ದೆಸೆಯಿಂದ ಎಪ್ರಿಲ್‌ನೇಳೆ ನಾವಿದನ್ನು ಮರೆತೇ ಬಿಟ್ಟುಪಾಕಿಸ್ತಾನದ ಜಾತೀಯತಾ ಭೂತವನ್ನು ನಾವೂ ಅವಾಹನೆ ಮಾಡಿಕೊಳ್ಳಲು ನೋಡುತಿದ್ದೇವೆ. ಪಾಕಿಸ್ತಾನವು ಮಾಡಲಿ, (ಮಾಡುತ್ತಿಲ್ಲ) ಮಾಡದೇನೆ ಇರಲಿ, ನಾವೆಂತೂ ಭಾರತದ ಎಲ್ಲಾ ಜಾತಿಮತಗಳವರನ್ನು ನಿಸ್ಪಕ್ಷಪಾತತೆಯಿಂದ ಕಂಡು ಎಲ್ಲರಿಗೂ ಸಂಪೂರ್ಣ ಸಮಾನ ಸಂದರ್ಭವಕಾಶ, ಹಕ್ಕು ಬಾಧ್ಯತೆಗಳನ್ನೂ ದಕ್ಕಿಸಿ ಕೊಡಬೇಕು; ಈ ಧೋರಣೆಗೆ ಕಾಂಗ್ರೆಸಿನ ಅಸಂದಿಗ್ಧ ಅನುಮತಿ ದೊರೆಯಬೇಕು.— ಅಧಿಕಾರ ದಾಹವು ಕಾಂಗ್ರೆಸಿನಲ್ಲೀಗ ತುಂಬಿ ಹೋಗಿರುವ ಪಾವಿತ್ರಚಿರಣೆಗಳಿಗೆಲ್ಲಾ ಮುಖ್ಯ ಹೇತು. ತಮಗೆ ಅಧಿಕಾರ ತಮ್ಮವರಿಗೆ ಭಾವೀ ಮಹಾ ಚುನಾವಣೆಯಲ್ಲಿ ಸ್ಥಾನ ಸಂಪಾದಿಸಿಕೊಳ್ಳುವದನ್ನು ದೃಷ್ಟಿನಥದಲ್ಲಿಟ್ಟುಕೊಂಡೇ ಕಾಂಗ್ರೆಸ್ ಸಮಿತಿಯ ಎಲ್ಲಾ ಚುನಾವಣೆಗಳಾಗಿವೆ ಎಂಬುದು ಸ್ಪಷ್ಟ; ಈ ರೀತಿ ಕಾಂಗ್ರೆಸು ತನ್ನ ಪಾಲಿನ ನ್ಯಾಯೋಚಿತ ಮೂಲ ಕರ್ತವ್ಯಗಳನ್ನು ಮರೆತು ಭಾವೀ ಮಹಾ ಚುನಾವಣೆಯ ಸ್ಪಷ್ಟಬಲ್ಲೇ ಲೀನವಾಗಿದೆ. ಆದ್ದರಿಂದ ಈ ಚುನಾವಣಾ ಸಂಬಂಧದ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಸಂಸ್ಥೆಯ ಮೂಲಭೂತ ಕಾರ್ಯಕಲಾಪಗಳಿಂದ ಪ್ರತ್ಯೇಕಿಸಿ ಇಡುವ ವ್ಯವಸ್ಥೆಯಾಗಬೇಕು; ಈ ಕುರಿತು ಕಾಂಗ್ರೆಸು ಒಂದು ನಿರ್ಧಾರಕ್ಕೆ ಬರಬೇಕು'—ಪಂಡಿತ ನೆಹರುಗಳ ಹೃದಯ ನಿವೇದನೆಯಲ್ಲಿ ಬಂದಿರುವ ಅಂಶಗಳಿವು.

ಮುಂದೇನು?

ಮೇಲ್ಕಂಡ ಸಮೂದಿಸಿರುವ ತನ್ನ ಧೋರಣೆಯ ಮೇಲೆ ಅರ್ಧಾತ್ ತನ್ನ ಮೇಲೆ ನಾಸಿಕ ಕಾಂಗ್ರೆಸು ಸ್ವಪ್ರವಿಶ್ವಾಸವನ್ನು ವ್ಯಕ್ತಪಡಿಸಬೇಕೆಂದು ಪಂಡಿತ ನೆಹರುಗಳು ಸಕಾಲದಲ್ಲಿ ಕೇಳಿಕೊಂಡಿರುವರೆಂದ ಮೇಲೆ "ನೀವಿಶ್ವಾಸವನ್ನು ಮಾಡಲಾರಿರಾದರೆ ನಾನಿಲ್ಲಿ ಇರಲಾರೆ" ಎಂದು ತನ್ನ ಶ್ರದ್ಧಾಸಹುದ್ದೆಯತ್ತ ಕೈತೋರಿಸಿಯೇ ಕಾಂಗ್ರೆಸಿಗರ ಮನೋಭಾವವನ್ನು ಅರಿಯಲು ಪ್ರಯತ್ನಿಸಿದ್ದಾರೆಂಬುದು ಸ್ಪಷ್ಟ; ಒಂದೋ ತನ್ನನ್ನು ಮುಂದೊಡ್ಡಿರುವ ಕಾಂಗ್ರೆಸು ತನ್ನ ಬೆನ್ನ ಹಿಂದೆ ಸಾಲುತಪ್ಪದೆ ನಿಂತಿರಬೇಕು;ಇಲ್ಲವೇ ತಾನು ಆ ಅನ್ಯಸ್ಥಸ್ಥಾನಿನ ಮುಂಭಾಗದಿಂದ ತಪ್ಪಿಸಿಕೊಳ್ಳಬೇಕು, ಎಂಬ ನಿಶ್ಚಯ ಭಾವನೆಯಿಂದಲೇ ಪ್ರಧಾನಿ ಪಂಡಿತ ಜವಾಹರ್‌ಲಾಲರು ಈ ಪರೀಕ್ಷಾಪ್ರಶ್ನೆಗಳನ್ನು ಹಾಕಿದ್ದಾರೆ. ಪಂಡಿತ ನೆಹರುಗಳಿದಿರು ಕಾಂಗ್ರೆಸನ್ನು ಇಂತಹ ಪರೀಕ್ಷೆಗೆಳೆದ ಸಂದರ್ಭದ ನಾಯಕ ಶ್ರೀ ಪುರುಷೋತ್ತಮದಾಸ ಥಂಡನರು "ಪಂಡಿತ ನೆಹರುಗಳ ಮೇಲೆ ವಿಶ್ವಾಸವ್ಯಕ್ತ ಮಾಡುವ ಅವಶ್ಯಕತೆಯೇ ನನ್ನ ಮಟ್ಟಿಗಿಲ್ಲ ಆಂತಹ ಸೂಚನೆ ಮುಂದೆ ಬಂದಲ್ಲಿ ನಾನದಕ್ಕೆ ಪೂರ್ಣಾನುಕೂಲನಿರುವೆ. ಹಿಂದೂ ಮಹಾಸಭೆಗೂ ನನಗೂ ಯಾವ ಸಂಬಂಧವೂ ಇಲ್ಲ. ಪಂಡಿತ ನೆಹರುಗಳ ಜತೆಯಲ್ಲೇ 1923ರಲ್ಲೊಮ್ಮೆ ಹಿಂದೂ ಮಹಾಸಭಾಧಿವೇಶನಕ್ಕೆ ನಾನು ಹೋದ್ದುದಿದೆ ಹೊರತು, ಆ ಮೇಲೆ ಅಕ್ಷರಶುಳಿದುದಿಲ್ಲ ನನ್ನ ಅಂಸುವಿಕೆಯಿಂದ ಹಿಂದೂ ಮಹಾಸಭೆಯುಂಧನರು ಸಂತೋಷಗೊಂಡರೆ ಅದಕ್ಕೆ ಹೊಣೆ ನಾನಲ್ಲ ಪಂಡಿತ ನೆಹರುಗಳು ಸವಿವರವಾಗಿ ತನ್ನ ಕಾರ್ಯಸೂಚನೆಗಳನ್ನು ಕೊಡುತಿದ್ದರೆ ಪ್ರತ್ಯೇಕ ಉತ್ತರ ಕೊಡಬಹುದಿದ್ದಿತು' ಎಂದಿದ್ದಾರೆ. ನೆಹರೂ ಧೋರಣೆಗೆ ವಿರುದ್ಧ ಹೆಜ್ಜೆಯಿಡುವ ಎದೆಗಾರಿಕೆಯನ್ನು ಶ್ರೀ ಪುರುಷೋತ್ತಮದಾಸ ಥಂಡನರು ಮಹಿಳಾರಕ್ಷಿಂಬ ಭುವನೇಶ್ವರಿಯೇ ಆವರ ಮಾತುಗಳಿಂದ ಹುಟ್ಟುತ್ತಿದೆ; ಆದರೆ ನೆಹರುಗಳ ಅಜಾತುರ್ಯ ಆಥನಾ ಅಧಿಕಪ್ರಸಂಗವನ್ನು ಕಂಡಂಪೈಅವ್ಯಕ್ತ ಅಣಕಾಟದೊಡನೆಯೇ ಶ್ರೀಥಂಡನರು ನೆಹರೂ ಕೇಳಿಕೆಯನ್ನು ಕಂಡಿದ್ದಾರೆನ್ನುವುದು ಸ್ಪಷ್ಟವಾಗುತ್ತಿದೆ. ನೆಹರೂ ಹೇಳಿಕೆ ಹೊರಡುವ ಮೇಳೆ ಗುಪ್ತ ಸ್ಥಳದಲ್ಲಿ ಕುಳಿತು ತನ್ನ ಭಾಷಣವನ್ನು ಬರೆಯುತಿದ್ದ ಥಂಡನರ ಅಧ್ಯಕ್ಷೋಪನ್ಯಾಸದಲ್ಲಿ ನೆಹರೂ ಸೂಚನೆಗಳಲ್ಲಿದ್ದ ಎಲ್ಲಾ ಧೋರಣೆಗಳಿಗೂ ಮುಂದಾಗಿ ಸಮರ್ಥನೆ ಬಂದಿದ್ದಿತೆಂದು ಆ ಭಾಷಣವನ್ನು ತಯಾರೀಮೇಳೆಯಲ್ಲೇ ಅಂತಿದ್ದ ಉತ್ತರ ಪ್ರದೇಶದ ಮಂತ್ರಿವರ್ಗದ ಅಭಿಪ್ರಾಯವಿದೆ ತಾನು ಅಧ್ಯಕ್ಷನಾಗಿ ಆರಿಗಲ್ಪಟ್ಟೊಡನೆಯೇ ಶ್ರೀ ಪುರುಷೋತ್ತಮದಾಸ ಥಂಡನರು ಢಿಲ್ಲಿಗೆ ಹೋಗಿ ಸರ್ದಾರ್ ವಲ್ಲಭಾಯಿ, ಪಂಡಿತ ನೆಹರು ಮೊದಲಾದವರೊಡನೆ ವಿಚಾರ ವಿನಿಮಯ ನಡೆಸಿ ಬಂದಿದ್ದರು. ಆ ಮೇಲೆ ತನ್ನ ಅಧ್ಯಕ್ಷ ಭಾಷಣ ತಯಾರಿಗಾಗಿ ಲಕ್ನೋವಿಗೆ ಹತ್ತು ಮೈಲು ದೂರದ ಹಳ್ಳಿಗೆ ತಾ. 9ರಲ್ಲಿ ಹೋಗಿ ಆರು ದಿನ ಏಕಾಂತದಲ್ಲಿದ್ದು ಬರೆದು ತಾ. 14ಲ್ಲೇ ಮರಳಿ ಲಕ್ನೋವಿಗೆ ಬಂದಿದ್ದರು; ರಾಷ್ಟ್ರದ ವಿವಿಧ ಭಾಗಗಳ ಕಾಂಗ್ರೆಸ್ ಪ್ರತಿನಿಧಿಗಳಿಗೆ ನಾಸಿಕಕ್ಕೆ ಹೊರಡುವ ಸಿದ್ಧತೆಯಲ್ಲಿರುವಾಗ, ಮತ್ತು ನಾಸಿಕ ಕಾಂಗ್ರೆಸ್ ಅಧ್ಯಕ್ಷರಿಗೆ ಅಧ್ಯಕ್ಷ ಭಾಷಣ ಬರೆಯುತಿದ್ದಾಗ ಪಂಡಿತ ನೆಹರುಗಳ ಸೂಚನೆ ಕೈಸೇರಿದಂತಾಯಿತು. ಇನ್ನು ನಾಸಿಕದ ನಿರ್ಧಾರವೇನು, ಎಂಬುದನ್ನು ನೋಡಲಿಕ್ಕಿದೆ ನಾಸಿಕಾಧಿವೇಶನದ ನಂತರ ಸ್ಥಿತಿಗತಿ ಯಥಾಪ್ರಕಾರವಿರಬಹುದು, ಅಥವಾ ಇನ್ನೂ ಕಳತೆಯದಾಗಿ ತೀಗಿನ ಭಯಂಭೀತಿ ನಿರೀಕ್ಷೆ ಸತ್ಯವಾಗಿಬಹುದು—ಆದರೆ ನಾಸಿಕ ಕಾಂಗ್ರೆಸಿನಲ್ಲಿ ನೆಹರುಗಳ ಧೋರಣೆಗೆ ಪೂರ್ಣ ಜಂಬಲ ದೊರೆಯುವದೆಂಬುದು ನಿಸ್ಸಂದೇಹ; ಅದು ಕೇವಲ ಬಾವನಾ ಸಂಬಂಧ ಸೂಚನೆಯಾದ್ದರಿಂದ ಅಧ್ಯಕ್ಷ ಥಂಡನರೇ ನೆಹರೂ ಸಮರ್ಥನೆಯ ಮುಂದಾಳಾಗಬಹುದು; ಆ

(ಆನೇ ಪುಟ ನೋಡಿರಿ)

ಬ್ರೂಕ್ ಬಾಂಡ್ ಬೆಂಬಲ

ವನ್ನೇ ನೀವು ಬೆತಕ್ಕೆ

ಒತ್ತಿ ಕೇಳಬೇಕೆಂಬುದಕ್ಕೆ

5

ಕಾರಣಗಳು

1. ಅದು ಮಲಿನವಾಗದ ದಾಗೆ ಪ್ಲೊಟ್ಟಗಳಲ್ಲಿ ಕಟ್ಟ ನೊಪರು ಮಾಡಲ್ಪಟ್ಟಿರುತ್ತದೆ
2. ಬ್ರೂಕ್ ಬಾಂಡ್ ಎಂಬ ಹೆಸರೇ ಅದರ ಗುಣದ ಬರವನೆ
3. ಶೀಘ್ರವಾಗಿ ಫಲಪ್ರವಿಕೆಯು ಅದರ ಪೂರ್ಣ ಶುದ್ಧತೆಯನ್ನು ನಿಶ್ಚಯಿಸುತ್ತದೆ
4. ಬ್ರೂಕ್ ಬಾಂಡ್ ಚಹಗಳು ಇತರ ಬೆರಕೆ ಸದಾರ್ಥಗಳಿಂದ ದೂರವಾಗಿನೆಯೆಂಬ ಬರವನೆಯನ್ನು ಕೊಡುತ್ತವೆ.
5. ಉತ್ತಮ ಕಾಸ್ತ್ರೀಯ ನಿಯಂತ್ರಣವು ಉತ್ತಮ ರುಚಿಯನ್ನು ನಿರ್ಣಯಿಸುತ್ತದೆ.

BB 50/LOT/104

ಕೊರಿಯ ಜಯಶ್ರೀ ತೆಂಕು ದಿಕ್ಕಿಗೆ!

ಕಳೆದ ದಿನಗಳ ಜಾಗತಿಕ ಆಗುಹೋಗುಗಳ ನೈಕೆ ಕೊರಿಯಾ ಯುದ್ಧದ ಅದೃಷ್ಟವೇ ಬದಲಾಯಿಸಿರುವ ಘಟನೆಯೂ ಅತ್ಯಂತ ಮಹತ್ವಾದುದು; ಕೊರಿಯಾ ಆಕ್ರಮಣಾರಂಭದಿಂದಲೂ ಕಮ್ಯೂನಿಸ್ಟ ವಿಡಿಗಿದ್ದ ಮೇಲುಗೈ ಮೊನ್ನೆಯಿಂದ ಸ್ಪಷ್ಟವಾಗಿ ಸಂಯುಕ್ತ ರಾಷ್ಟ್ರಗಳ ಸೇನೆಗಳ ದಾಗಿದೆ. ಈ ವಿಶೇಷ ವಿದ್ಯಮಾನವು ಇಡೀ ಪ್ರಪಂಚದ ಮಾನಸಿಕ ಮತ್ತು ರಾಜಕೀಯ ರಂಗದಲ್ಲಿ ಮಹತ್ತಾದ ಬದಲಾವಣೆಗಳನ್ನು ನಿರ್ಮಿಸಿದೆ. ಭಾರತದ ಪಾಲಿಗೆ, ನಾನಿಸಲ್ಲಿ ಕಾಂಗ್ರೆಸ್ ಇಡುವ ಹೆಜ್ಜೆಯಾವುದೆಂಬ ಕಡೆಗೇನೆ ಈಗ ಜಿಚ್ಚಿನ ಗಮನ ಬಿದ್ದಿದೆ. ಒಟ್ಟಿನ ಮೇಲೆ ವಾತಾವರಣದಲ್ಲೊಂದು ಹೊಸ ಚೇತನ ಮೂಡಿದೆ.

ಕೊರಿಯಾ ಸಮರ

ಸುಮಾರು ಎರಡೂವರೆ ತಿಂಗಳ ಮೊದಲು ದಕ್ಷಿಣ ಕೊರಿಯದ ಮೇಲೆ ಉತ್ತರ ಕೊರಿಯದ ಕಮ್ಯೂನಿಸ್ಟ್ ಸೇನೆಗಳು ಮಿಂಚುಧಾಳಿ ನಡಿಸಿದಾಗ ಹಿಂದೆ ಬೀಳುತ್ತಾ ಬಂದ ದಕ್ಷಿಣ ಕೊರಿಯದ ಮತ್ತು ಅಮೆರಿಕದ ಸೇನೆಗಳು ದ. ಕೊರಿಯದ ತೆಂಕು ಮೂಲೆ ಪುಸಾನ್ ಬಂದರು ಕ್ಷೇತ್ರದ ವರೆಗೂ ಹಿಂದೂಡಲ್ಪಟ್ಟಿದ್ದುವು; ಆ ವರೆಗೆ ಬಹುತೇಕವಾಗಿ ಮಿತ್ರರಾಷ್ಟ್ರಗಳಿಂದ ಮಾನಸಿಕ ಸಹಾನುಭೂತಿ ಮತ್ತು ಬ್ರಿಟನ್ನಿನಂತಹ ಒಂದೆರಡು ರಾಷ್ಟ್ರಗಳಿಂದ ನೌಕಾಪಡೆಯ ಬೆಂಬಲ ಮಾತ್ರ ದಕ್ಷಿಣ ಕೊರಿಯಕ್ಕೆ ದೊರೆತಿದ್ದರೂ ಕೊನೆಯ ಭಾಗದ ವಿಷಮಾವಸ್ಥೆಯ ವೇಳೆ ಇತರ ರಾಷ್ಟ್ರಗಳ ಕಾಲ್ದಳಗಳೂ ಬಂದು ಸೇರಿಕೊಂಡವು. ಹೀಗಾಗಿ ಮಿತ್ರರಾಷ್ಟ್ರದ ಸೇನೆಗಳು ಸಮುದ್ರಕ್ಕೆಳಿಯುವಾಗ, ಒಳಗಡೆ ಕೆಲವು ಆಯಕಟ್ಟು ಸ್ಥಳಗಳ ಮೇಲೆ ಅವರ ಗಾಳಿ ಕೊಡೆ ಸೈನಿಕರೂ ಇಳಿದು ಅಗತ್ಯ ಬೀಳುವ ನೆಲೆಗಳನ್ನು ಹಿಡಿದು ಕೊಂಡು ಎಲ್ಲರೂ ಸಿಯೋಲ್ ನಗರಾಭಿಮುಖವಾಗಿ ನುಗ್ಗಹತ್ತಿದ್ದಾರೆ. ಇತ್ತ ಪುಸಾನ್ ಮುಂಭಾಗದ ತೆಯಿಗೂ ಕ್ಷೇತ್ರದಲ್ಲಿ ಅದು ವರೆಗೆ ದೂಡಾಟದಲ್ಲಿದ್ದು ಹಿಂತಳ್ಳಲ್ಪಟ್ಟಿದ್ದ ಅಮೆರಿಕ ವಿಶೇಷ ಮಿತ್ರ ಸೇನೆಗಳೂ ಇದೇ ಹೊತ್ತಿನಲ್ಲಿ ತಮ್ಮ ರಕ್ಷಣಾ ಕೋಟೆಯನ್ನು ಒಡೆದು ಕೊಂಡು, ಸಿಯೋಲ್ ಮುಟ್ಟಲಿಕ್ಕಾಗಿ ಇಂಚೋನಿನಿಂದ ಹೊರಟಿರುವ ಮಹಾ ಸೇನೆಯನ್ನು ಕೂಡಿಕೊಳ್ಳಲು ಮುಂಧಾವಿಸುತ್ತಿವೆ. ಇಂಚೋನಿನಿಂದ ಹೊರಟ ತಮ್ಮ ಪಾಲಿನ ಮೃತ್ಯ ದಳವನ್ನು ಇದಿರಿಸುವುದಕ್ಕಾಗಿ, ಅಥವಾ ಆ ಕಡೆಯ ಇಂಚೋನ್ ಸಿಯೋಲ್ ವಲಯದ ಮತ್ತೀಕಡೆಯ ತೆಯಿಗೂ ವಲಯದ ವಿರೋಧಿ ಸೇನೆಗಳ ನಟ್ಟ ನಡುವೆ ಕತ್ತರಿಯಲ್ಲಿ ಸಿಕ್ಕಿಕೊಂಡಂತಾಗುವ ಅಪಾಯವನ್ನು ತಪ್ಪಿಸುವದಕ್ಕಾಗಿ, ಒಳಗಡೆಯ ರಣರಂಗಗಳಿಂದ ಕಮ್ಯೂನಿಸ್ಟ್ ಸೇನೆಗಳು ಹಿಂದೆಗೆಯಹತ್ತಿದುದರಿಂದ ತೆಯಿಗೂ ವಲಯದ ದ. ಕೊರಿಯಾ ಕಡೆಯ ದಳದಿಕ್ಕೆಲ್ಲವೂ ಒಂದೇ ಸವನೆ ಮುನ್ನುಗ್ಗಿ ಇಂಚೋನ್ ವಲಯದ ದಳಗಳೊಡನೆ ಸೇರಿಕೊಳ್ಳಲು ಸಮೀಪದಲ್ಲಿ ಸಮುದ್ರ ದಂಡೆಯಲ್ಲಿರುವ ಇಂಚಾನ್‌ನಲ್ಲಿ ಸುಮಾರು 266 ಹಡಗುಗಳಲ್ಲಿ ಸುಸಜ್ಜಿತ ಮಿತ್ರ ರಾಷ್ಟ್ರೀಯ ಸೇನೆಗಳಿಳಿಯುವಾಗ, ಒಳಗಡೆ ಕೆಲವು ಆಯಕಟ್ಟು ಸ್ಥಳಗಳ ಮೇಲೆ ಅವರ ಗಾಳಿ ಕೊಡೆ ಸೈನಿಕರೂ ಇಳಿದು ಅಗತ್ಯ ಬೀಳುವ ನೆಲೆಗಳನ್ನು ಹಿಡಿದು ಕೊಂಡು ಎಲ್ಲರೂ ಸಿಯೋಲ್ ನಗರಾಭಿಮುಖವಾಗಿ ನುಗ್ಗಹತ್ತಿದ್ದಾರೆ. ಇತ್ತ ಪುಸಾನ್ ಮುಂಭಾಗದ ತೆಯಿಗೂ ಕ್ಷೇತ್ರದಲ್ಲಿ ಅದು ವರೆಗೆ ದೂಡಾಟದಲ್ಲಿದ್ದು ಹಿಂತಳ್ಳಲ್ಪಟ್ಟಿದ್ದ ಅಮೆರಿಕ ವಿಶೇಷ ಮಿತ್ರ ಸೇನೆಗಳೂ ಇದೇ ಹೊತ್ತಿನಲ್ಲಿ ತಮ್ಮ ರಕ್ಷಣಾ ಕೋಟೆಯನ್ನು ಒಡೆದು ಕೊಂಡು, ಸಿಯೋಲ್ ಮುಟ್ಟಲಿಕ್ಕಾಗಿ ಇಂಚೋನಿನಿಂದ ಹೊರಟಿರುವ ಮಹಾ ಸೇನೆಯನ್ನು ಕೂಡಿಕೊಳ್ಳಲು ಮುಂಧಾವಿಸುತ್ತಿವೆ. ಇಂಚೋನಿನಿಂದ ಹೊರಟ ತಮ್ಮ ಪಾಲಿನ ಮೃತ್ಯ ದಳವನ್ನು ಇದಿರಿಸುವುದಕ್ಕಾಗಿ, ಅಥವಾ ಆ ಕಡೆಯ ಇಂಚೋನ್ ಸಿಯೋಲ್ ವಲಯದ ಮತ್ತೀಕಡೆಯ ತೆಯಿಗೂ ವಲಯದ ವಿರೋಧಿ ಸೇನೆಗಳ ನಟ್ಟ ನಡುವೆ ಕತ್ತರಿಯಲ್ಲಿ ಸಿಕ್ಕಿಕೊಂಡಂತಾಗುವ ಅಪಾಯವನ್ನು ತಪ್ಪಿಸುವದಕ್ಕಾಗಿ, ಒಳಗಡೆಯ ರಣರಂಗಗಳಿಂದ ಕಮ್ಯೂನಿಸ್ಟ್ ಸೇನೆಗಳು ಹಿಂದೆಗೆಯಹತ್ತಿದುದರಿಂದ ತೆಯಿಗೂ ವಲಯದ ದ. ಕೊರಿಯಾ ಕಡೆಯ ದಳದಿಕ್ಕೆಲ್ಲವೂ ಒಂದೇ ಸವನೆ ಮುನ್ನುಗ್ಗಿ ಇಂಚೋನ್ ವಲಯದ ದಳಗಳೊಡನೆ ಸೇರಿಕೊಳ್ಳಲು ಸಮೀಪದಲ್ಲಿ ಸಮುದ್ರ ದಂಡೆಯಲ್ಲಿರುವ ಇಂಚಾನ್‌ನಲ್ಲಿ ಸುಮಾರು 266 ಹಡಗುಗಳಲ್ಲಿ ಸುಸಜ್ಜಿತ ಮಿತ್ರ ರಾಷ್ಟ್ರೀಯ ಸೇನೆಗಳಿಳಿಯುವಾಗ, ಒಳಗಡೆ ಕೆಲವು ಆಯಕಟ್ಟು ಸ್ಥಳಗಳ ಮೇಲೆ ಅವರ ಗಾಳಿ ಕೊಡೆ ಸೈನಿಕರೂ ಇಳಿದು ಅಗತ್ಯ ಬೀಳುವ ನೆಲೆಗಳನ್ನು ಹಿಡಿದು ಕೊಂಡು ಎಲ್ಲರೂ ಸಿಯೋಲ್ ನಗರಾಭಿಮುಖವಾಗಿ ನುಗ್ಗಹತ್ತಿದ್ದಾರೆ. ಇತ್ತ ಪುಸಾನ್ ಮುಂಭಾಗದ ತೆಯಿಗೂ ಕ್ಷೇತ್ರದಲ್ಲಿ ಅದು ವರೆಗೆ ದೂಡಾಟದಲ್ಲಿದ್ದು ಹಿಂತಳ್ಳಲ್ಪಟ್ಟಿದ್ದ ಅಮೆರಿಕ ವಿಶೇಷ ಮಿತ್ರ ಸೇನೆಗಳೂ ಇದೇ ಹೊತ್ತಿನಲ್ಲಿ ತಮ್ಮ ರಕ್ಷಣಾ ಕೋಟೆಯನ್ನು ಒಡೆದು ಕೊಂಡು, ಸಿಯೋಲ್ ಮುಟ್ಟಲಿಕ್ಕಾಗಿ ಇಂಚೋನಿನಿಂದ ಹೊರಟಿರುವ ಮಹಾ ಸೇನೆಯನ್ನು ಕೂಡಿಕೊಳ್ಳಲು ಮುಂಧಾವಿಸುತ್ತಿವೆ. ಇಂಚೋನಿನಿಂದ ಹೊರಟ ತಮ್ಮ ಪಾಲಿನ ಮೃತ್ಯ ದಳವನ್ನು ಇದಿರಿಸುವುದಕ್ಕಾಗಿ, ಅಥವಾ ಆ ಕಡೆಯ ಇಂಚೋನ್ ಸಿಯೋಲ್ ವಲಯದ ಮತ್ತೀಕಡೆಯ ತೆಯಿಗೂ ವಲಯದ ವಿರೋಧಿ ಸೇನೆಗಳ ನಟ್ಟ ನಡುವೆ ಕತ್ತರಿಯಲ್ಲಿ ಸಿಕ್ಕಿಕೊಂಡಂತಾಗುವ ಅಪಾಯವನ್ನು ತಪ್ಪಿಸುವದಕ್ಕಾಗಿ, ಒಳಗಡೆಯ ರಣರಂಗಗಳಿಂದ ಕಮ್ಯೂನಿಸ್ಟ್ ಸೇನೆಗಳು ಹಿಂದೆಗೆಯಹತ್ತಿದುದರಿಂದ ತೆಯಿಗೂ ವಲಯದ ದ. ಕೊರಿಯಾ ಕಡೆಯ ದಳದಿಕ್ಕೆಲ್ಲವೂ ಒಂದೇ ಸವನೆ ಮುನ್ನುಗ್ಗಿ ಇಂಚೋನ್ ವಲಯದ ದಳಗಳೊಡನೆ ಸೇರಿಕೊಳ್ಳಲು ನುಕೂಲವಾಗಿದೆ. ಈ ರೀತಿ ಇದು ವರೆಗಿನ ಯುದ್ಧ ಸ್ಥಿತಿ ಈಗ ಸಂಪೂರ್ಣ ಅಡಿಮೇಲಾಗಿದೆ. ಎರಡು ತಿಂಗಳ ಪ್ರಯತ್ನದ ಫಲವಾಗಿ ದಕ್ಷಿಣ ಕೊರಿಯದ ತೆಂಕು ಮೂಲೆಗೆ ಬಂದಿದ್ದ ಯುದ್ಧವು 'ಅಂಬಾರಿಗೆ ವರುಷ ದೊಣ್ಣೆಗೆ ನಿಮಿಷ' ಎಂಬಂತೆ ಇಂಚೋನ್ ಸೇನಾ ತಳಿಕೆಯೊಂದರ ದೆಸೆಯಿಂದ ಪೂರ್ಣ ಹಾಳಾಗಿ ಅಕಸ್ಮಾತ್ ಉತ್ತರ ಮೂಲೆಗೆ ವರ್ಗಾಯಿಸಲ್ಪಟ್ಟಿತು. ಕೈಕೈ ಹೋರಾಟ ನಡಿಸುತ್ತಿದ್ದಲ್ಲೇ ಅಕಸ್ಮಾತ್ತಾಗಿ ಇದಿರುವಾದಿಯ ಜಳ್ಳೆಗೆ ತಿವಿಯುವ ಚಮತ್ಕಾರಿಕ ಸಾಹಸವನ್ನು ಜನರಲ್ ಮೆಕಾರ್ಥರರು ತೋರಿಸಿದರು; ಥಳತಾಯಿತರನ್ನೋಡಿಸಿಕೊಂಡು ತಾನು ರಾಜ್ಯ ಬಿಟ್ಟು ದೂರದ ವರೆಗೂ ಹೋಗಿದ್ದಾಗ, ಥಳತಾಯಿತರು ಇತ್ತ ತನ್ನ ಬೆಂಗಡೆಯಲ್ಲಿ ರಾಜ್ಯಾಡೊಳಗೇನೇ ನುಗ್ಗಿದ ಗೊಂದಲದಲ್ಲೀಗ ಉತ್ತರಕೊರಿಯಾನರು ಬಿದ್ದರು; ಕಮ್ಯೂನಿಸ್ಟ್ ಸೇನೆಗಳ ಹಿಂಗಡೆಯ ಸರಂಜಾಮು ಪಥಗಳ ಮೇಲೆಲ್ಲಾ ಕರೋರ ಬೋಂಬು ಧಾಳ ನಡೆಸಿ, ಅಮೆರಿಕನ್ ವಿಮಾನಗಳೂ ಈ ಸ್ಥಿತಿ ನಿರ್ಮಾಣಕ್ಕೆ ವಿಶೇಷವೇನಿ ನೆರವಾಗಿದ್ದುವು. ಅಲ್ಲಿಯ ಸವಬದ್ರವನ್ನು ತಮ್ಮ ಅಂಕೆಯೊಳಗಿಟ್ಟುಕೊಂಡಿದ್ದುದರ ಪೂರ್ಣ ಉಪಯೋಗವೇನೂ ಸಂಯುಕ್ತರಾಷ್ಟ್ರಗಳಿಗೆ ದೊರೆಯಿತು. ಯುದ್ಧದ ಆದಿಭಾಗದಲ್ಲಿ ಅಮೆರಿಕಾನರು ಎಂತಹ ಅಕಸ್ಮಿಕ ಗಂಡಾಂತರದ ಅಸಹಾಯಕತೆಗೊಳಗಾಗಿದ್ದರೋ ಅದೇ ಮಾದರಿಯ ಅಪಕ್ಷೇಗ ಉತ್ತರ ಕೊರಿಯದ ಕಮ್ಯೂನಿಸ್ಟರಿಗೊದಗಿದೆ. ಅವರೀ ಪರಿಸ್ಥಿತಿಯನ್ನು ಹೇಗೆ ಇದಿರಿಸುವರೋ ನೋಡಲಿಕ್ಕಿದೆ. ಸಂಯುಕ್ತರಾಷ್ಟ್ರದ ಸೇನೆಗಳನ್ನು ಏಕಸ್ಪರಾರ ಮುಂದೊತ್ತ ಹತ್ತಿದರೆ ಅದೆಲ್ಲಿ ವರೆಗೆ? ಮಧ್ಯಾಂತರ ಗೆರೆಯ ವರೆಗೆ ಮಾತ್ರವೇ ಅಥವಾ ಉತ್ತರ ಕೊರಿಯದ ಆ ಮೂಲೆ ವರೆಗೂ ನುಗ್ಗಿಹೋಗುವವೆ? ಕಮ್ಯೂನಿಸ್ಟರಿಗೆ ಪ್ರತಿಕಾರವಾಡಿಯೇ ಸಿದ್ಧವೆಂದು ಏಕದಂ ಉತ್ತರಾಭಿಮುಖವಾಗಿ ಅಮೆರಿಕಾನರು ಮತ್ತವಂ ಬೆಂಬಲಿಗರು ಧಾವಿಸಹತ್ತಿದರೆ, ಅಲ್ಲಿ ಗಡಿ ಸಮೀಪದ ತನ್ನ ವ್ಲಾಡಿವೋಸ್ಟಕ್ ಬಂದರ ದ್ವಾರದಲ್ಲಿ ಎಲ್ಲವನ್ನೂ ನಿಂತುನೋಡುತ್ತಿರುವ ರಶ್ಯ ಆಗಲೂ ಸುಮ್ಮಾಗಿದ್ದೀತೆ? ಮೊದಲುದ ಪ್ರಶ್ನೆಗಳೇಳುತ್ತವೆ.

(ಇನೇ ಪುಟದಿಂದ)

ಮೇಲೆ ಜೇಗೆಂಬುದನ್ನು ಮಾತ್ರಪ್ರಾಯಶಃ ಪ್ರತಿಯೊಂದು ಕಾರ್ಯದ ಪ್ರತ್ಯಕ್ಷ ಚಾಲನೆಯ ವೇಳೆ ಕಾಂಗ್ರೆಸ್ ಅಧ್ಯಕ್ಷ ಮತ್ತು ಪ್ರಧಾನ ಮಂತ್ರಿಗಳ ನಡುವಿನ ಒಳ ವ್ಯವಹಾರಗಳಿಂದಲೇ ತಿಳಿಯಬೇಕಾದೀತು; ಅಲ್ಲಿ ಆಂತರಂಗಿಕ ಘರ್ಷಣೆಗಳೆದ್ದು ಇಬ್ಬರಲ್ಲೊಬ್ಬರು ನ್ಯಾನಬಡುವ ವಿಶೇಷ ಸಂದರ್ಭವೆದ್ದರೆ ಮಾತ್ರವೇ ಜನತೆಯನ್ನು ಆ ಕಡೆಗೆ ನೋಡಬೇಕು. ನಾನಿಸಕ ಕಾಂಗ್ರೆಸಿನಲ್ಲೇ ವಿಶೇಷ ಚರ್ಚೆಗೊಳಗಾಗಬಹುದಾದ ಸೂಚನೆಯೊಂದು ನೆಹರೂ ಹೇಳಿಕೆಯಲ್ಲಿ ಬಂದಿದೆ. ಅದೆಂದರೆ ಇಡುವರೆಗಿನ ನಿರೀಕ್ಷೆಯಂತೆ ಭಾವೀ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿಗಳನ್ನು ಆರಿಸುವ ಜವಾಬ್ದಾರಿಯನ್ನು ಕಾಂಗ್ರೆಸ್ ಸಮಿತಿಗಳಿಗೇ ಬಿಡದೆ, ಆದಕ್ಕಾಗಿ ಪ್ರತ್ಯೇಕ ಸಮಿತಿಯೊಂದನ್ನು ರಚಿಸಿಕೊಳ್ಳಬೇಕೆಂಬ ಸೂಚನೆ. ಇದು ಮಾನ್ಯವಾದರೆ, ದೇಶದಲ್ಲೆಲ್ಲಾ ವ್ಯಾಪಿಸಿರುವ ಹಲವು ವಿಧದ ಆಸೆ, ಏರಿಳಿತ, ಹಂಚಿಕೆಗಳಿಗೆ ಕುದಿಸೀರೆರೆದಂತಾಗುವದು; ಈ ಸೂಚನೆಯ ಭವಿಷ್ಯ ಹೇಗಾಗುವದೆಂಬುದನ್ನು ನೋಡಲಿಕ್ಕಿದೆ.

ಇದೇ ತಾ 16ರಲ್ಲಿ ಅಧ್ಯಕ್ಷ ಮೇರವಣಿಗೆಯೊಡನೆ ನಾಸಿಕದ 56ನೇ ಕಾಂಗ್ರೆಸ್ ಮಹಾಧಿವೇಶನ ಕಾರ್ಯಕ್ರಮಗಳಾರಂಭಿಸಿವೆ. ತಾ 16 ಮತ್ತು 17ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಸಭೆಗಳು, ತಾ 18 ಮತ್ತು 19ರಲ್ಲಿ ವಿಷಯನಿಯಾಮಕ ಸಮಿತಿಸಭೆಗಳು, ತಾ 20 ಮತ್ತು 21ರಲ್ಲಿ ಕಾಂಗ್ರೆಸಿನ ಜಾಹೀರುಮಹಾಧಿವೇಶನಗಳು ನಡೆಯುವವು; ಎಸ್ಸು ಪ್ರದರ್ಶನ ಮತ್ತಿತರ ವಿಭಾಗಗಳಿವೆ. ಅಖಿಲ ರಾಷ್ಟ್ರದ ಲಕ್ಷ್ಯವನ್ನೀಗ ನಾಸಿಕವೇದಿಯಕೊಂಡಿದೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಕಛೇರಿ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಅವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.

Advocate & President, District Board, S. Kanara.

CHAIRMAN

ಪ್ರಿಂಟಿಂಗ್ ಪ್ರೆಸ್ ಮಾರಾಟಕ್ಕಿದೆ-

ಕುಂದಾಪುರ ಆಸಪಯಲ್ಲಿ ಶ್ರೀ ಮಾತಾ ಯುನೈಟೆಡ್ ಕಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಏಜನ್ಸಿಸ್ ಲಿಮಿಟೆಡ್, ಕುಂದಾಪುರ, ಇದರ ಜಾಬ್ತು ಒಳ್ಳೇ ಸ್ಥಿತಿಯಲ್ಲಿರುವ ಮತ್ತು ಪ್ರೆಸ್ ನಜಿಯಸ್ಸಾಗಿ ಬೇಕಾಗುವ ಎಲ್ಲಾ ಸಾಮಾನುಗಳು ಇರುವ ಲಕ್ಷ್ಮೀನರಸಿಂಹ ಪ್ರೆಸ್ಸನ್ನು ಕುಂದಾಪುರ ಡಿ. ಮು. ಕೋರ್ಟಿನ R. E. P. 555/49 ನೇ ಅಮಲ್ ಜ್ಯಾರಿಯಲ್ಲಿ ನೇಮಕಕಟ್ಟ ರಿಸೀವರರು ತಾ. 14-10-50 ಮಧ್ಯಾಹ್ನ ಘಂಟೆ 2ಕ್ಕೆ ಪ್ರೆಸ್ಸಿನ ವಕಾರದಲ್ಲಿ ಕೋರ್ಟು ಹುಕುಂ ಪ್ರಕಾರ ಬಹಿರಂಗವಾಗಿ ಏಲಂ ಮಾಡುತ್ತಾರೆ ಬೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಕಾಗದಿಸಿದವರಿಂದ ತಿಳಿಯಿರಿ.

N. S. Parameshwariah,
Advocate-Receiver
Kundapoor S. K.

ಕುಂದಾಪುರ, 13-9-50

ಭಾರತದೊಳಗಿನ ವಿದ್ಯಮಾನಗಳು

ಅತ್ಯ ಕೊರಿಯಾ ರಣರಂಗದ ಸ್ಥಿತಿಯೀ ರೀತಿ ಅಡಿಮೇಲಾಗಿರುವಾಗ ಇತ್ತ ಭದ್ರತಾ ಕೌನ್ಸಿಲು ಸಭೆಯಲ್ಲಿ ಆ ಸಂಬಂಧದ ಚರ್ಚೆಗಳೇನೋ ನಡೆದೇ ಇವೆ. ಅಮೆರಿಕದ ವಿಮಾನಗಳು ತಮ್ಮ ಮಂಚೂರಿಯದ ಮೇಲೆ ಧಾಳಿ ನಡೆಸಿದುವೆಂಬ ಕಮ್ಯೂನಿಸ್ಟ್ ಚೈನದ ದೂರು ಭದ್ರತಾ ಕೌನ್ಸಿಲಿನ ಮಂದಿನ್ನ, ಈ ಸಂಬಂಧದ ಚರ್ಚೆಯಮೇಲೆ ಕಮ್ಯೂನಿಸ್ಟ್ ಚೈನದ ಪ್ರತಿನಿಧಿಯನ್ನು ಭದ್ರತಾ ಕೌನ್ಸಿಲಿಗಾ ಮಂತ್ರಿಸಿಕೊಳ್ಳಬೇಕೆಂಬ ರಶ್ಯದ ಸೂಚನೆಗೆ ಬ್ರಿಟನ್, ಫ್ರೌನ್ಸ್, ರಶ್ಯ, ಯುಗೋಸ್ಲೇವಿಯ, ನೋರ್ವೆ, ಭಾರತ, ಈ ಆರು ರಾಷ್ಟ್ರಗಳ ಮತ ದೊರೆತಿದ್ದರೂ ಆ ಗತ್ಯವ್ಯಳ್ಳ ಏಳು ಮತಗಳು ದೊರೆಯದೆ, ಅಮೆರಿಕ, ರಾಷ್ಟ್ರೀಯ ಚೈನ ಮತ್ತು ಕ್ಯಬಾಗಳ ವಿರೋಧಾನುಸಾರ ಅದು ಬಿದ್ದು ಹೋಗಿದೆ. ಬರುವ ವಾರದಲ್ಲಿ ಸಂಯುಕ್ತ ರಾಷ್ಟ್ರಸಂಘದ ಮಹಾಸಭೆ ಸೇರಲಿದೆ. ಆ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಪಾಕಿಸ್ತಾನದ ಸರ್. ಝುಫರುಲ್ಲಖಾನ್ ಮತ್ತು ಇಂಡೋನೇಸ್ ಆಂಟೆರೂಮರು ಉಮೆದ್ವಾರಿಗಳಾಗಿದ್ದಾರೆ. ಬ್ರಿಟನು ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳ ಮತ್ತು ಅರಬ್ ರಾಷ್ಟ್ರಗಳೇ ಮೊದಲಾದುವುಗಳ ಒಲವು ಸರ್. ಝುಫರುಲ್ಲರ ಕಡೆಗಿದ್ದು ಅವಂಗೇನೇ ಬಹುಮತ ದೊರೆಯುವ ಸಂಭವವಿದೆ.

ಪ್ರಥಮ ಮಹಾ ಯುದ್ಧ ಕಾಲದಿಂದಲೂ ಲೋಕಪ್ರಸಿದ್ಧರಿದ್ದು, ದೀರ್ಘಾವಧಿ ದಕ್ಷಿಣಾಫ್ರಿಕದ ಆಡಳಿತೆ ನಿರ್ವಹಿಸಿದ್ದ ಫೀಲ್ಡ್ ಮಾರ್ಷಲ್ ಸ್ಮಟ್ಸರು ತನ್ನ 80ನೇ ವಯಸ್ಸಿನಲ್ಲಿ ಹೃದಯ ಸ್ತಂಭನದಿಂದ ನಿಧನಗೊಂಡರು. ಗಾಂಧಿಜೀ ದಕ್ಷಿಣಾಫ್ರಿಕದಲ್ಲಿ ಸತ್ಯಾಗ್ರಹ ಸಮರ ಹೂಡಿದ್ದಾಗ ಅಲ್ಲಿಯ ಸರಕಾರೀ ನಾಯಕನಾಗಿದ್ದ ಜನರಲ್ ಸ್ಮಟ್ಸರು ಗಾಂಧಿಜೀಯೊಡನೊಂದು ಒಪ್ಪಂದ ಮಾಡಿಕೊಂಡಿದ್ದರಲ್ಲದೆ ಗಾಂಧಿಜೀಯ ಮಿತ್ರರಾಗಿದ್ದರು. ಸ್ಮಟ್ಸರು ದ. ಆಫ್ರಿಕದ ಇಂದಿನ ಪ್ರಧಾನ ಡಾ| ಮಲನ್‌ರಷ್ಟು ಅನ್ಯ ಜನಾಂಗ ದ್ವೇಷಿಯಾಗಿರದೆ, ಸಹೃದಯೀ ನಾಗರಿಕ ಮತ್ತು ಹಿರಿಯ ಗುಣಗಳುಳ್ಳ ಹಿರಿಯನೆಂದು ಕೇರ್ತಿ ಗಳಿಸಿದ್ದರು. ಅವರ ನಿಧನಕ್ಕಾಗಿ ಭಾರತೀಯ ನಾಯಕರು ಮತ್ತು ಜಾಗತಿಕ ಮುತ್ಸದ್ದಿಗಳೆಲ್ಲರೂ ದುಃಖ ಸೂಚಿಸಿದ್ದಾರೆ.

ಭಾರತದಲ್ಲಿ

ಅಸ್ಸಾಮಿನಲ್ಲಿ ಭೂಕಂಪೋತ್ಕರ ನೆರೆ ಹಾವಳಿಯಪ್ಪೇ ಉಳಿದು ಕೊಂಡಿಪ್ಪನ್ನುವಾಗ, ತಾ 13ರಲ್ಲಿ ಆಲ್ಲಿಯ ದಿಬ್ರುಗಾರಿನಲ್ಲಿ ಪುನಃ ಅತಿಭಯಪದ ಭೂಕಂಪವಾಗಿ ಅಲ್ಲಿದ್ದ ಇಗರ್ಜಿ ಮತ್ತಿತರ ಕಟ್ಟಡಗಳು ನೆಲಸಮವಾದ ವಾರ್ತೆಯಿದೆ. ಮೊನ್ನೆಯ ಭೂಕಂಪವು ಕೇವಲ 90 ಸೆಕುಂದ ನಡೆಯಿ ತಾದರೂ ಆಗೋಸ್ತು ತಾ 15ರಲ್ಲಿ 4 ಮಿನಿಟುಗಳ ವರೆಗಾದ ಕಂಪಕ್ಕಿಂತ ಬಿರುಸಿನದಿತ್ತೆಂದು ತಿಳಿದುಬರುತ್ತದೆ. ಶಿಲ್ಲೋಂಗ್ ಮೊದಲಾದ ಕಡೆಗಳಲ್ಲೂ ತಾ 17ರಲ್ಲಿ ಎರಡು-ಮೂರು ಬಾರಿ ಕಂಪಗಳಾಗಿವೆ. ವಿಮಾನಗಳ ಮೂಲಕ ಆಹಾರವಿಳಿಸುವ ಸೇನೆಗಳ ಮೂಲಕ ವ್ಯವಸ್ಥೆ ಮಾಡುವ ವಿಶೇಷ ವಿಧಾನಗಳಿಂದ ಅಲ್ಲಿಯ ಹಾವಳಿ ನಿವಾರಣಾ ಕಾರ್ಯಗಳಾಗುತ್ತಿವೆ

ಸುವಾರು ಒಂದು ತಿಂಗಳಿಗೂ ಮಿಕ್ಕಿ ನಡೆದಿರುವ ಬೊಂಬಾಯಿಯ ಅರಮನೆ ಗಿರಣಿ ಮಜೂರರ ಮುಷ್ಕರವು ಇನ್ನೂ ನಿಂತಿಲ್ಲ. ಆದರೆ ಸಂಪಿನ ರಭಸವೀಗ ಕ್ರಮಶಃ ಕುಗ್ಗುತ್ತಾ ಬರಹತ್ತಿದೆ; ಮುಜೂರ ವರ್ಗ ಅಂಶಾಂಕವಾಗಿ ಕೆಲಸಕ್ಕೆ ಹಾಜರಾಗಹತ್ತಿದೆಯೆಂದೂ 17 ಗಿರಣಿಗಳು ಇಪ್ಪತ್ತರಲ್ಲೇ ಪುನಃ ಕೆಲಸವನ್ನಾರಂಭಿಸಿವೆಯೆಂದೂ ತಿಳಿದು ಬರುತ್ತದೆ. ಈ ತಿಂಗಳ ವಧ್ಯಾನ್ಹದ ವರೆಗೆ ಬೊಂಬಾಯಿಯ ಈ ಪ್ರಚಂಡ ಮುಷ್ಕರದ ದೆಸೆಯಿಂದ 108,000,000 ಗಜಗಳಷ್ಟೂ ವಿಕ್ಕಿ ಆರಂವೆಗಳು ರಾಷ್ಟ್ರದ ಪಾಲಿಗೆ ಕಳೆದು ಹೋದುವು; 28 ವಿಲಿಯ ಪೌಂಡುಗಳಷ್ಟು ನೂಲುಗಳ ನಷ್ಟವಾಯಿತು. ಮಜೂರರು ಕಮಿಗೆ ದೊರೆಯತಕ್ಕ 2 ಕೋಟಿ ರೂಪಾಯಿ ಲಭ್ಯತ್ವನ್ನು ಕಳಕೊಳ್ಳುವಾಗ ಗಿರಣಿ ಮಾಲಕರ ಪಾಲಿನ 90 ಲಕ್ಷ ರೂಪಾಯಿಗಳಷ್ಟು ಲಾಭಾಂಶ ಕಳೆದು ಹೋಯಿತು. ನಾಸಿಕ ಕಾಂಗ್ರೆಸಿಗೆ ಹೊರಟ ನೆಹರುಗಳು ಬೊಂಬಾಯಿಗೆ ಬಂದಾಗ ಮುಷ್ಕರನಿರತ ಗಿರಣಿ ಮಜೂರರಿಗೆ ಭಾಷಣ ಕೊರಬೇಕೆಂದು ಬೊಂಬಾಯಿಯ ಸಮತಾವಾದಿ ಕೆಲಸಗಾರ ಸಂಘವು ಕೇಳಿಕೊಂಡಾಗ ಪಂಡಿತ ನೆಹರುಗಳು "ಬೊಂಬಾಯಿ ಮುಷ್ಕರದ ಪ್ರಶ್ನೆಯು ಬೊಂಬಾಯಿ ಸರಕಾರದ ಹೊಣೆಗಾರಿಕೆಯಿರುವುದರಿಂದ ನಾನಿದರಲ್ಲಿ ಕೈ ಹಾಕಲಿಚ್ಛಿಸುವುದಿಲ್ಲ" ಎಂದು ನಿರಾಕರಿಸಿದ್ದರು. ಜೊಂಬಾಯಿಯ 'ವಿದ್ಯಾರ್ಥಿ ರಾಷ್ಟ್ರೀಯ ಸಂಘ'ದ ಸದಸ್ಯೇತರನನ್ನು ಉದ್ದೇಶಿಸುತ್ತಾ ಪಂಡಿತ ನೆಹರುಗಳು "ವಿದ್ಯಾರ್ಥಿಗಳು ರಾಜಕೀಯ ಪಕ್ಷ ಪಂಗಡಗಳಿಗೆ ಕಟ್ಟುಬೀಳದೆ, ತಮ್ಮ ಮುಂದಿರುವ ಮಹಾಕರ್ತವ್ಯಗಳ ನಿರ್ವಹಣಕ್ಕನುಗುಣವಾದ ಯೋಗ್ಯತೆಗಳನ್ನು ಗಳಿಸಿಕೊಳ್ಳಬೇಕು" ಎಂದು ಉಪದೇಶಿಸಿದರು.

ಹೈದರಾಬಾದಿನ ರಝಾಕರ್ ನಾಯಕ ಕಾಸಿಮ್‌ರಜ್ವಿ ಮತ್ತಿತರರ ಮೇಲೆ ವಿಶೇಷ ನ್ಯಾಯಮಂಡಳಿಯ ಮುಂದೆ ಕೆಲಕಾಲದಿಂದ ನಡೆಯುತ್ತಿದ್ದ ಶೀಘ್ರ ವಿಚಾರಣೆ ಕೊಲೆಮೊಕದ್ದಮೆಯ ತೀರ್ಪು ಕಳದ ತಾ. 11ರಲ್ಲಾಯಿತು. ಆಪಾದಿತರಾದ ರಜ್ವಿ, ಮುನಿಮ್ ಖಾನ್, ಮೋಹಿನುದ್ದೀನರಿಗೆ ಜೀವಾವಧಿ ಕಠಿಣ ಸಜೆ ವಿಧಿಸಲ್ಪಟ್ಟಿದೆ ಅಂತೆಯೇ ಬೀಬೀನಗರ ಧಕಾಯತಿ ಮೊಕದ್ದಮೆಯಲ್ಲೂ ರಜ್ವಿ ಮತ್ತವನ ಕೆಲವು ಸಹಾಯಕ ರಜಕಾರರಿಗೆ ವಿವಿಧ ವಾಯಿದೆಗಳ ಶಿಕ್ಷೆಗಳ ತೀರ್ಪಾಗಿವೆ.

"ಯುದ್ಧವಿಲ್ಲ"ವೆಂದು ಜಾಹೀರು ಮಾಡುವ ಕುರಿತು ಮಿತ್ತಿತರ ಭಾರತ–ಪಾಕಿಸ್ತಾನ್ ವಿವಾದಗಳ ಕುರಿತು ಪಂಡಿತ ನೆಹರು ಮತ್ತು ಮಿ. ಲಿಯಾಖತ್‌ಅಲಿಖಾನರೊಳಗೆ ಪತ್ರ ವ್ಯವಹಾರಗಳು ನಡೆಯುತ್ತಿದ್ದು, ಅವು ಸದ್ಯದಲ್ಲೇ ಪ್ರಕಟಗೊಳ್ಳಬಹುದು.

ಕಾಶ್ಮೀರದ ಹಲವು ಸ್ಥಳಗಳನ್ನಾಕ್ರಮಿಸಿಕೊಂಡು ನಿಂತಿರುವ ಪಾಕಿಸ್ತಾನದ ಹಸ್ತಕ 'ಆಝಾದ್ ಕಾಶ್ಮೀರ' ನಾಮಾಂಕಿತ ಬಂಡುಗಾರ ಪಡೆಯದಲ್ಲೇ ಉಂಟಾಗಿದ್ದ ಸರ್ದಾರ್ ಇಬ್ರಾಹಿಮ್ ಮತ್ತ ಚೌಧರಿ ಗುಲಾಮ್ ಅಬ್ಬಾಸರ ದ್ವಿವಾಳಯದಳೊಳಗೆ ಹೊಡೆದಾಟಗಳು ರಂಭಿಸಿ, ಅಬ್ಬಾಸರ ಬೆಂಬಲಕ್ಕೆ ಪಾಕಿಸ್ತಾನದ ಸೇನೆ ಬರಬೇಕಾಯಿತು. ಕೇವಲ ಆಬ್ದುಲ್ಲಾರು ಜಾರಿಗೆ ತಂದ ಭೂಸುಧಾರಣೆಯಿಂತಹ ಜನಪ್ರಿಯ ಹೊಸ ವ್ಯವಸ್ಥೆಯನ್ನು ತಾರದುದರಿಂದಲೂ, ದೀರ್ಘಾವಧಿ ಸುವ್ಯವಸ್ಥಿತರಾಜಕೀಯ ಬಂದುದರಿಂದಲೂ ಆ ಚಕ್ರವರ್ತಿಯಂತೆ ಶೀಲರು ತಮ್ಮೊಳಗೇನೇ ಎರಡು ತಂಡಗಳಾಗಿ ಹೊಡೆದಾಡಿಕೊಳ್ಳಹತ್ತಿದ್ದಾರೆ.

ಈಗ ನಡೆಯುತ್ತಿರುವ ನಾಸಿಕ ಕಾಂಗ್ರೆಸಿಗೆ ಅಧ್ಯಕ್ಷ ರಾಜೇಂದ್ರ ಪ್ರಸಾದರೆ, ಬ್ಬರ ಹೊರತು ಅಗ್ರಗಣ್ಯ ಕಾಂಗ್ರೆಸ್ ನಾಯಕರೆಲ್ಲರೂ ಹಾಜರಾಗಿದ್ದಾರೆ; ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತ ವಿಷಯನಿಯಾಮಕ ಸಮಿತಿಗಳ ಸಭೆಗಳಾಗಿ ಪ್ರಮುಖ್ಯ ಗೊತ್ತವಳಿಗಳು ನಡೆದಿವೆ.

ಮದ್ರಾಸ್ ಸಂಸ್ಥಾನ

ಶ್ರೀ ಒಮಂದೂರರ ಪ್ರಧಾನಿತ್ವದಲ್ಲಿ ಮದ್ರಾಸ್ ಎಸೆಂಬ್ಲಿಯ ಮುಂದಿಡಲ್ಪಟ್ಟ ಪರಿಶೀಲನೆಗಾಗಿ 'ಸಿಲೆಕ್ಟ್ ಕಮಿಟಿ'ಗೂಡಿ ಸಲ್ಪಟ್ಟಿದ್ದ 'ಹಿಂದೂ ಎಂಡೋಮೆಂಟ್ಸ್' ಗಳ ಮಸೂದೆ'ಯ ಸಿಲೆಕ್ಟ್ ಕಮಿಟಿಯು ಸೂಚಿಸಿದ್ದ ತಿದ್ದುಪಡಿಗಳನ್ನು ಹೊಂದಿ ತಾ. 11ರಲ್ಲಿ ಮದ್ರಾಸ್ ಎಸೆಂಬ್ಲಿಯ ಮುಂದೆ ಪ್ರಸ್ತಾಪಿಸಲಾಯಿಂದು, ಈಗ ಸವಿವರವಾಗಿ ಚರ್ಚಿಸಲ್ಪಡುತ್ತಿದೆ. ಜನತಾರಾಜ್ಯ ಭಾರತದ ಹೊಸ ರಾಜ್ಯಾಂಗ ಶಾಸನಕ್ಕನುಗುಣವಾಗಿ, ಅದರಲ್ಲಿ ಬದಲಾವಣೆ ಮಾಡಲು ಮಸೂದೆಯನ್ನು ಸಂಸತ್ ಮೊದಲಿನ ಸಿಲೆಕ್ಟ್ ಕಮಿಟಿಗೇನೇ ಒಪ್ಪಿಸಬೇಕೆಂಬ ಸೂಕ್ತ ವರಗಳನ್ನು ಈ ಮಸೂದೆಯಿಂದ ಹೊರಗಿಡಬೇಕೆಂಬ, ಮತ್ತಿತರ ಹಲವು ತಿದ್ದುಪಡಿ ಸೂಚನೆಗಳು ಮತ್ತು ಅಭಿಪ್ರಾಯಗಳು ಮುಂದೆ ಬಂದಿವೆ; ಇವೆಲ್ಲೇ ಸಾಕಷ್ಟು ಪರಿಶೀಲನೆಗೊಂಡಿರುವ ಮತ್ತು ಒಂದೆರಡು ವರುಷಗಳಿಂದ ಸಾರ್ವಜನಿಕರ ಮುಂದಿರುವ ಈ ಮಸೂದೆಯನ್ನು ಮಂಜೂರು ಮಾಡಿಕೊಳ್ಳುವ ಆತುರವೀಗ ಸರಕಾರಕ್ಕುಂಟಾಗಿದೆ.

ಯಾವುದೇ ದೇವಸ್ಥಾನ ಮತ್ತಿತರ ಸುವಾಸುಗಳಲ್ಲಿ ಪ್ರಾಣಿ, ಪಕ್ಷಿ ಬಲಿಯನ್ನು ನಿಷೇಧಿಸುವ ಮತ್ತು ಅಂತಹ ಬಲಿ ಕೊಡುವವರಿಗೆ ಹಾಗೂ ಅದಕ್ಕೆ ಸಹಾಯಕರಾಗುವವರಿಗೆ 300 ರೂಪಾಯಿಗಳ ಜುಲ್ಮಾನೆಯನ್ನೂ, ಈ ರಕ್ತಾಹುತಿ ನಡೆಯಲು ಬಿಡುವ ದೇವಸ್ಥಾನದ ಮತ್ತಿತರ ಮಂದಿರಗಳ ಮಾಲಕರಿಗೆ 3 ತಿಂಗಳ ಸಜೆ ಅಥವಾ 300 ರೂಪಾಯಿ ಜುಲ್ಮಾನೆ ಇವೆರಡನ್ನೂ ವಿಧಿಸುವ 'ಮದ್ರಾಸ್ ಸಂಸ್ಥಾನದ ಹಿಂದೂ ದೇವಾಲಯಗಳಲ್ಲಿ ಅಥವಾ ಅದರ ಸುತ್ತುವಲಯದಲ್ಲಿ ಪ್ರಾಣಿಗಳ ಮತ್ತು ಪಕ್ಷಿಗಳ ಬಲಿಯನ್ನು ನಿಷೇಧಿಸುವ ಮಸೂದೆ' ಮದ್ರಾಸ್ ಎಸೆಂಬ್ಲಿಯಲ್ಲಿ ಇದೇ ತಾ. 14ರಲ್ಲಿ ಮಂಜೂರಾಯಿತು. ಇನ್ನು 'ಫೋರ್ಟ್‌ಸೈಂಟ್ ಜೋರ್ಜ್ ಗಝೆಟ್'ನಲ್ಲಿ ಪ್ರಕಟವಾಗಿ ಅದರಲ್ಲಿ ನಮೂದಿಸಲ್ಪಡುವ ತಾರೀಕಿನಿಂದ ಈ ಶಾಸನವು ಜಾರಿಯಲ್ಲಿರುವುದು. ಈ ಕಾನೂನಿನಂತೆ ದೇವಸ್ಥಾನಗಳಲ್ಲಿ ಮತ್ತು ಯಾವುದೇ ದೇವಸ್ಥಾನವನ್ನು ಉದ್ದೇಶಿಸಿ ಅದರ ಆವರಣಗಳಲ್ಲಿ ಪ್ರಾಣಿ ಅಥವಾ ಪಕ್ಷಿಗಳ ಬಲಿನಡೆಸುವುದು ಕಠಿಣವಾಗುವುದು.

ಮದ್ರಾಸ್ ಎಸೆಂಬ್ಲಿಯಲ್ಲೀಗ, ಅಧಿಕಾರಾರೋಢನ್ನಕ್ಕೆ ಸಂಬಂಧಿಸಿದ ಮತ್ತು ಇತರ ಕೆಲವು ಪ್ರಾಮುಖ್ಯ ವಿಷಯಗಳ ಕುರಿತೂ ಪ್ರಶ್ನೋತ್ತರ ನಡೆದು ಚರ್ಚೆಗಳಾಗಿವೆ; ಆಗುತ್ತಿವೆ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar.
Vaidya

BUY INDIAN! ENCOURAGE INDIAN INDUSTRY!
ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all keeps hair black and relieves headache etc.

REGD TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

WANTED

Applications are invited for the post of a Head Clerk in the office of the Executive officer, Sri Krishnapur Math Udipi, on a scale of pay of Rs. 60-3-90 plus a dearness allowance of Rs. 21/- p. m. The candidate should have been declared eligible for University course of studies, and must have experience in Book-keeping, accounts, and correspondence.

Udipi, 6-9-50. } (Sd) **A. K. Rao,** Executive officer.

THE
Canara Banking Corporation Ltd.
(Incorporated in India.)
Estd: 1906.
Head Office : **UDIPI, (S. I.)**

Capital Authorised .... Rs. 25,00,000
Capital Issued, Subscribed & Paid up .... Rs. 20,00,000
Reserves .... Rs. 9,44,765

ಗುರುವಾರ, ಉಡುಪಿ, ೨೧-೯-೧೯೫೦

ರಕ್ತಾಹುತಿ ನಿಷೇಧ

'ಮದ್ರಾಸ್ ಸಂಸ್ಥಾನದ ಹಿಂದೂ ದೇವಾಲಯಗಳಲ್ಲಿ ಅಥವಾ ಅವುಗಳ ಆಶ್ರಯಕ್ಕಗಳಲ್ಲಿ ಪ್ರಾಣಿಗಳ ಮತ್ತು ಪಕ್ಷಿಗಳ ಬಲಿಯನ್ನು ನಿಷೇಧಿಸುವ ಮಸೂದೆ' ಯು ಇದೇ ತಾ. 14ರ ಮದ್ರಾಸ್ ಎ ಸೆಂಬ್ಲಿ ಸಭೆಯಲ್ಲಿ ಮಂಜೂರಾಗಿದೆ. ಇನ್ನಿದು 'ಫೋರ್ಟ್‌ಸೈಂಟ್ ಜೋರ್ಜ್ ಗೆಝೆಟ್'ನಲ್ಲಿ ಪ್ರಕಟಗೊಂಡು, ಅದರಲ್ಲಿ ನಮೂದಿಸಲ್ಪಡುವ ತಾರೀಕಿನಿಂದ ಕಾನೂನಾಗಿ ಜಾರಿಗೆ ಬರಲಿದೆ. ಈ ಶಾಸನವು ಅಸ್ತಿತ್ವಕ್ಕೆ ಬಂದ ಮೇಲೆ ಪಕ್ಷಿ ಅಥವಾ ಪ್ರಾಣಿಯನ್ನು ದೇವಸ್ಥಾನದ ಮುಂದೆ ಕಡಿಯುವವರ', ಅಥವಾ ಅಂತಹ ಬಲಿಯನ್ನು ಆಜ್ಞಾಪಿಸುವವರು ಇಲ್ಲವೇ ಇತರ ರೀತಿಯಿಂದ ಅದರಲ್ಲಿ ಭಾಗವಹಿಸುವವರು 300 ರೂಪಾಯಿಗಳ ವರೆಗಿನ ಜುಲ್ಮಾನೆಗೊಳಗಾಗಲು ಬದ್ಧರಿದ್ದಾರೆ. ಪ್ರಾಣಿ ಪಕ್ಷಿ ಬಲಿ ನಡೆಯುವ ದೇವಸ್ಥಾನ ಭೂಮಿ ಅಥವಾ ಕಟ್ಟಡಗಳ ಒಡೆಯರು ಮೂರು ತಿಂಗಳ ವರೆಗಿನ ಸಜೆ ಅಥವಾ 300 ರೂ. ಗಳ ವರೆಗಿನ ಜುಲ್ಮಾನೆ, ಇಲ್ಲವೇ ಇವೆರಡಕ್ಕೂ ಒಳಗಾಗಬೇಕಾಗುವದು. ಇಂತಹ ಸಂದರ್ಭಗಳಲ್ಲಿ ದೇವಾಲಯಗಳ ನೌಕರರು ಮತ್ತು ಪೂಜಾವಿಧಿಯೋಗ ಇತ್ಯಾದಿಗಳ ಹಕ್ಕುದಾರರು ಮೂರು ತಿಂಗಳುಗಳ ವರೆಗಿನ ಸಾದಾ ಸಜೆ ಮತ್ತು 300 ರೂ.ಗಳ ವರೆಗಿನ ಜುಲ್ಮಾನೆಗಳಿಗೆ ಅರ್ಹರು. "ಯಾವುದೇ ಧಾರ್ಮಿಕ ಸಂಪ್ರದಾಯ ಅಥವಾ ಸಮಾರಂಭಕ್ಕೆ ಸಂಬಂಧಿಸಿ, ಯಾವುದೇ ಧರ್ಮ ಅಥವಾ ದೇವರ ಹೆಸರಿನಿಂದ, ಸಾರ್ವಜನಿಕ ಅಥವಾ ಖಾಸಗಿಯ ಪೂಜೆ, ಪ್ರಾರ್ಥನೆಗಳ ಯಾವುದೇ ಸ್ಥಳದಲ್ಲಿ, ಯಾವುದೊಂದು ಪ್ರಾಣಿ ಅಥವಾ ಪಕ್ಷಿಯ ಬಲಿ ನಡೆಯತಕ್ಕದ್ದಲ್ಲ" ಎಂದು ಈ ಮಸೂದೆಯನ್ನು ಸರ್ವವ್ಯಾಪಿಯಾಡುವ ಉದ್ದೇಶದಿಂದ ಮುಂದೆಬಂದ ತಿದ್ದುಪಡಿ ಸೂಚನೆಯು ಮದ್ರಾಸ್ ಎ ಸೆಂಬ್ಲಿಯಲ್ಲಿ ಬಿದ್ದು ಹೋಯಿತು. ದೇವಸ್ಥಾನ ಮತ್ತದರ ಸುತ್ತುವಲಯದಲ್ಲಿ ರಕ್ತಹುತಿ ನಡೆಯುವುದನ್ನು ಮಾತ್ರ ಈ ಮಸೂದೆಯು ತಡೆಗಟ್ಟುತ್ತಿದೆ. ದೇವಸ್ಥಾನದ್ದಿರಲಿ, ಬೇರೆಯೇ ಇರಲಿ. ಸರ್ವಸಾಮಾನ್ಯವಾಗಿ ದೇವಸ್ಥಾನದ ಪೂಜೆ ಸನಾರಂಭಗಳಿಗೆ ಸಂಬಂಧಪಟ್ಟ, ಸಮೀಪದ ಎಲ್ಲ ಕಟ್ಟಡ ಮತ್ತು ಸ್ಥಳಗಳ ಮಟ್ಟಿಗೂ ಈ ಕಾನೂನು ಲಗಾಮಾಗುತ್ತದೆ. ದೇವಸ್ಥಾನದ ಆವರಣ ಮತ್ತು ಅಕ್ಕಪಕ್ಕ ಸ್ಥಳವೆನ್ನುವಾಗ, ಅದೆಷ್ಟು ದೂರದ ವರೆಗೆಂಬ ಸ್ಪಷ್ಟ ವಿವರ ಕಂಡು ಬರುವುದಿಲ್ಲ. ಅಂತೂ ಯಾವುದೇ ದೇವಸ್ಥಾನದಲ್ಲಿ ಕೋಳಿ, ಕುರಿ, ಕೋಣ ಇತ್ಯಾದಿಗಳ ರಕ್ತಾಹುತಿಯನ್ನು ನಡೆಯಿದಂತೆ ಮಾಡುವುದೇ ಈ ಮಸೂದೆಯ ಉದ್ದೇಶ. ದೇವಸ್ಥಾನಲ್ಲಿ ಕೂಡದೆಂದಾದರೆ, ಅದಕ್ಕಿಂತ ಹತ್ತು ಮಾರು ದೂರದಲ್ಲಿ ಅದೇ ದೇವರನ್ನು ಉದ್ದೇಶಿಸಿ ತಲೆಕಡಿಯುವ ಹವ್ಯಾಸಬರಬಾರದೆಂಬುದಕ್ಕಾಗಿಯೇ ದೇವಸ್ಥಾನದ 'ಆಸುಪಾಸು'ಗಳನ್ನೂ ಸೇರಿಸಿಕೊಳ್ಳಲಾಗಿದೆ.

ದೇವಸ್ಥಾನಗಳಲ್ಲಿ ಪ್ರಾಣಿಪಕ್ಷಿ ಬಲಿ ನಡೆಯುವುದನ್ನು ಈ ಶಾಸನವು ನಿಲ್ಲಿಸಬಲ್ಲಿದು ಹೊರತು ಪ್ರಾಣಿಪಕ್ಷಿ ಬಲಿಯನ್ನೇ ಬೇಡಾಯಿದೇ ತೀರಗೊಳಿಸಿಲ್ಲ ವೆಂಬುದು ಈ ಮೂಲಕ ಸ್ಪಷ್ಟ. 'ದೇವಸ್ಥಾನಗಳು' ಎನ್ನುವಾಗ 'ಭೂತದಗುಡಿ'ಗಳಂತಹವೂ ಅದರೊಳಗೆ ಬಂದುವೆಂದು ಕಟ್ಟಿಕೊಂಡರೂ ಇತರ ಕಾನೂನುಗಳ ಮಾದರಿಯಲ್ಲಿ ಈ ಶಾಸನವೂ ಮಾದ ಪ್ರತಿವಾದಗಳಿಗಾಸ್ಪದವೀಯುತ್ತಿದೆ. ಮನೇ ದೈವ, ಭೂತಗಳ ಗುಡಿಗಳವೆ; ಇವುಗಳಲ್ಲಿ ಸಂಪ್ರದಾಯಾನುಸಾರ ರಕ್ತಾಹುತಿ ನಡೆಯುತ್ತಿದೆ. ಇದು ವರೆಗೆ ತಳೆದು ಬಂದ ಮೇರೆಗೆ ಇಂತಹ ಖಾಸಗೀ ಗುಡಿಗಳಿದಿನ ಪಕ್ಷಿ ಪ್ರಾಣಿ ಬಲಿಯನ್ನು ಈ ಶಾಸನವು ನಿಷೇಧಿಸುವುದೋ ಇಲ್ಲವೋ ಎಂಬ ವಿವಾದಾಸ್ಪದ ವಿಷಯ ಖಾಸಗಿಯಿಂಲಿ, ಸಾರ್ವಜನಿಕರಿಲಿ, ಮಾಡು ಇರುವ ಎಲ್ಲಾ ದೈವ, ದೇವ ಮಂದಿರಗಳೂ ಈ ಮಸೂದೆಯಲ್ಲಿ ಉಲ್ಲೇಖಿಸಲ್ಪಟ್ಟಿರುವ 'ದೇವಸ್ಥಾನ'ಗಳಾಗಿಯೇ ಗಣಿಸಲ್ಪಟ್ಟು, ಅವೆಲ್ಲವುಗಳ ರಕ್ತಾಹುತಿಯೂ ನಿಷೇಧಿಸಲ್ಪಟ್ಟಿತೆಂದು ಕಟ್ಟಿಕೊಂಡರೂ ಕೆಲಸ ಅಪೂರ್ಣವೆಂಬುದು ಖಂಡಿತ. ನಿದರ್ಶನಕ್ಕಾಗಿ ದ. ಕ. ಜಿಲ್ಲೆಯ ಪರಿಸ್ಥಿತಿಯನ್ನೇ ತೋರಿಸಬಹುದು. ಸಹಸ್ರಾರು ಕೋಳಿ ಮತ್ತು ಕುರಿಗಳ ಬಲಿ ಪಡೆಯುವ "ಮಾರಿಪೂಜೆ"ಗಾಗಿ ಇಲ್ಲಿಯ ಕೆಲವು ಮಾರಿಗುಡಿಗಳು ಪ್ರಸಿದ್ಧವಿವೆ; ಇವುಗಳ ಮತ್ತು ಇತರ ಸಣ್ಣ ಮಟ್ಟಿನ ಮಾರಿಗುಡಿ, ದೇವಿಮಂದಿರಗಳೆಲ್ಲವುಗಳ ಪ್ರಾಣಿ ಬಲಿಯೂ ಈ ಹೊಸ ಶಾಸನದನ್ವಯ ನಿಲ್ಲಿಸಲ್ಪಡುತ್ತೇಯೇ? ಅವರೀ ಜಿಲ್ಲೆಯಲ್ಲಿ ಅಂತಹ "ಪ್ರಾಣಿಹತ್ಯೆ" ಗಳಷ್ಟಿದ ಗ್ರಾಮ ಗ್ರಾಮಗಳಲ್ಲಿ "ಮಾರಿ ಓಡಿಸುವ" ಕಂಪ್ಲೆದಾಯವಿದೆ; ಊರ ಜನರೊಂದಾಗಿ ಮಾರೀ ಮೆರವಣಿಗೆ ಹೊರಟು ನಿಶ್ಚಿತ ಗಡಿಯಲ್ಲಿ ಕೋಳಿ ಮತ್ತು ಪ್ರಾಣಿಗಳನ್ನು ಕಡಿಯುತ್ತಾರೆ; ಇಂತಹ ಬಲಿಗಳನ್ನು ಈ ಶಾಸನವು ಪ್ರತಿಬಂಧಿಸುವದಿಲ್ಲ. ಮರದಡಿಯ ದೆವ್ವ, ಗಾಡಿಯಕಲ್ಲು ದೆವ್ವಗಳಿಗೆ ರಕ್ತ ಬಲಿಕೊಡದಂತೆಯೂ ಈ ಶಾಸನ ತಡೆಯುವದಿಲ್ಲ ಅಂದಮೇಲೆ ಇದುವರೆಗೆ ದೇವಿ ಗುಡಿಗಳಿದಂ 'ಮಾರಿ ಪೂಜೆ' ನಡೆಸುತಿದ್ದವರೂ ಇನ್ನು ಮುಂದೆ 'ಮಾರಿಯೋಡಿಸಿ' ತಮ್ಮಪಾಲಿನ ಬಲಿಯನ್ನು ಅ ಮೂಲಕ ಸಂದಾಯಿಸಲು ಮನಸ್ಸು ಮಾಡಿಯಾರು. 'ದೇವಾಲಯ ಮತ್ತದರ ಆಸುಪಾಸುಗಳಲ್ಲಿ' ಮಾತ್ರ ಪ್ರಾಣಿ ಬಲಿ ಕೂಡದೆಂದಿರುವಾಗ, ಕಾನೂನಿನ್ವಯ ನಿಷೇಧಿಸಲ್ಪಡುವ ವರಾವರವನ್ನು ಬಿಟ್ಟು, ದೂರದಲ್ಲಿ ಪಕ್ಷಿ ಪ್ರಾಣಿಗಳನ್ನು ಕಡಿಯುವ ವ್ಯವಸ್ಥೆ ಕೂಡಾ ಬರಬಹುದು; ಹಾಗಾದಲ್ಲಿ ದೇವಾಲಯಕ್ಕೆ ಬಂದು ಕಾಣಿಕೆ, ಪೂಜೆಗಳನ್ನೊಪ್ಪಿಸಿ ದೂರ ಹೋಗಿ ಕೋಳಿ, ಕುರಿ ಕಡಿಯಿಸಿಕೊಳ್ಳುವ ಹೊಸ ಸಂಪ್ರದಾಯ ಬರಬಹುದೇ ಹೊರತು ರಕ್ತಾಹುತಿ ನಿಲ್ಲದು. ಇವೆಲ್ಲಾ ವಿದ್ಯಮಾನಗಳ ಮೇಲಿಂದ, ನವ ಶಾಸನವು ದೇವಾಲಯಗಳ ಪ್ರಾಣಿಬಲಿ ಕಲಂಕವನ್ನು ನಿವಾರಿಸುವ ಉಪಕಾರಿಯೆಂಬುದೇನೋ ನಿಜವಾದರೂ ಪ್ರಾಣಿಬಲಿಯನ್ನೇ ನಿಲ್ಲಿಸುವಂತಹದಲ್ಲವೆಂಬುದು ಖಂಡಿತ; ರಕ್ತಾಹುತಿಯನ್ನಿದು ಕೆಲವಂಶ ಕಡಿಮೆ ಮಾಡಬಹುದೇ ಎಂಬುದು ಕೂಡಾ ಸಂಶೋಹರ. ದೇವಾಲಯಗಳ ಶಾಸನ ಪೂಜೆಯನ್ನು ನಿಲ್ಲಿಸಲು ಮುಂದಾದುದಕ್ಕಾಗಿ ಮದ್ರಾಸ್ ಸರಕಾರವನ್ನು ಅಭಿನಂದಿಸುವಾಗ,ದೈವ ದೇವರುಗಳಿಗಾಗಿ ಅಥವಾ ಧಾರ್ಮಿಕಾಚರಣೆಗಾಗಿ ಯಾವ ವಿಧದ ರಕ್ತಾಹುತಿಯೂ ಎಲ್ಲಿಯೂ ನಡೆಯದಂತೆ ತಡೆ ಹಾಕುತಿದ್ದರೆ, ಈ ಸತ್ಕಾರ್ಯ ಪೂರ್ಣಕಾರಗೊಳ್ಳುತಿತ್ತು ಎಂಬ ನಿರೀಕ್ಷೆಯೊಂದು ಉಳಿಯುತಿದೆಂಬುದನ್ನಜ್ಞಾಪಿಸಬೇಕಾಗಿದೆ. ಮದ್ರಾಸ್ ಸರಕಾರವು ಈಗ ಮಂಜೂರು ಮಾಡಿಕೊಂಡಿರುವ ಮಸೂದೆಯು, ಈ ಭಾಗದಲ್ಲಿಟ್ಟ ಪ್ರಥಮ ಹೆಜ್ಜೆಯೆಂದೂ ಈ ಸದ್ಭಾವನೆಯು ಕ್ರಮಶಃ ಪೂರ್ಣಗೊಳ್ಳುವದೆಂದೂ ನಂಬುತ್ತೇವೆ.

ಪಕ್ಷಿ, ಪ್ರಾಣಿ ಬಲಿಗಳನ್ನು ನಿಷೇಧಿಸುವಂತೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ವವ್ಯಾಪಿಯಿರುವ 'ಕೋಳೀಜೂಜು' ನ್ನೂ ತಕ್ಷಣರಾಗಿ ಮಾಡುವ ಶಾಸನ ಬರಬೇಕಾದುದು ಅಗತ್ಯವಿದೆ. ಅಧುನಿಕ ಕಾಲದ ದ್ಯೂತಾಸಕ್ತಿ ಮತ್ತು ಹಳೇ ಯುಗದ ಬರ್ಬರ ಮನೋವೃತ್ತಿಯನ್ನು ದ. ಕ. ಜಿಲ್ಲೆಯ ಹಳ್ಳೀ ಜನತೆಯಲ್ಲಿ ಊರ್ಜಿತದಲ್ಲಿಟ್ಟಿರುವ ಕಾರಣಗಳಲ್ಲಿ ಕೋಳೀ ಅಂಕವು ಮುಖ್ಯವಾದುದು. ಇತರ ಸಾಮೂಹಿಕ ಕೂಡಾಟ, ಸಹಜ ಸ್ಪರ್ಧೆ ಮತ್ತು ಮನೋರಂಜನೆಗೆ ಅವಕಾಶವಿಂದ ಹಳ್ಳಿಗರಿಗೆ ಇಂತಹ 'ಅಂಕ'ಗಳು ಅಗತ್ಯವೆಂಬ ವಾದವು ಮುಂದೆ ಬರಬಹುದು. ಆದರೆ, ಯಾವ ವಿಧದ ರಕ್ತಕೇಳಿಯೂ ಈ ಕಾಲದ ಸುಸ್ಪರ್ಧೆ ಅಥವಾ ವಿನೋದ ಕಾಲಕ್ಷೇಪಕ್ಕೆ ಸಲ್ಲಿಸಲು ಯೋಗ್ಯವಲ್ಲ. ಜತೆಯಲ್ಲಿ 'ಋಣ ಕಟ್ಟುವ' ಜುಗಾರಿಯೂ ಇರುವಾಗ ಹಳ್ಳಿಗರ ನೈತಿಕ, ವಾಸನಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಕೆಳಮಟ್ಟಕ್ಕೆ ತಳ್ಳುವ ದುಶ್ಚಟವಿದು, ಎಂಬುದು ನಿಸ್ಸಂದೇಹ. ಇದರಬದಲಿಗೆ ದೈಹಿಕ,ವಾಸನಿಕ ಶಕ್ತಿವರ್ಧಕ ಸ್ಪರ್ಧೆಗಳನ್ನು ಹಳ್ಳಿಗಳಲ್ಲಿ ನಿರ್ಮಿಸಲು ಸಾಧ್ಯವಿಲ್ಲವೆ? ಯಾಕಿಲ್ಲ? 'ಓಟದ ಸ್ಪರ್ಧೆ' 'ಮಲ್ಲಯುದ್ಧ'ಗಳನ್ನೇ ವರ್ಧಿಸಬಹುದು; ಅಂಕಕ್ಕಾಗಿ ಕೋಳಿಗಳನ್ನು ಸಾಕುವ ಬದಲಿಗೆ ಈ ಮಾದರಿಯ ಸ್ಪರ್ಧೆಗಳಿಗಾಗಿ ಯುವಕರನ್ನು ಪೋಷಿಸಬಹುದು; ತರಬೇತಿ ಕೊಡಬಹುದು; ಜಟ್ಟಿಕಾಳಗ, ಓಟಮೇಲಾಟದಂಥವುಗಳನ್ನು ಆ ಕರ್ಷಣೀಯವಾಗುವಂತೆ ಜರಗಿಸಿ, ಇಂದಿನ 'ಕೋಳಿಅಂಕ'ಗಳ ಸ್ಥಾನಕ್ಕೆ ಅವುಗಳನ್ನಿಸಿ ತರುವುದೇನೂ ಕಷ್ಟವಲ್ಲ. ಹೀಗಾದಲ್ಲಿ ಹಳ್ಳಿಜನತೆಗೆ ಹುರುಪು ಮತ್ತು ವಿನೋದವನ್ನು ಕೊಡುವ ಸಾಮೂಹಿಕ ಸಮಾರಂಭಗಳಾದಂತೆಯೇ, ಈ ಕಾಲದಲ್ಲಿ ಅಗತ್ಯವಿರುವ ಯುವ ಜನಾಂಗದ ದೈಹಿಕ ಶಕ್ತಿವರ್ಧನೆಯನ್ನೂ ಮಾಡಿದಂತಾಗುವುದು; ಆದ್ದರಿಂದ ಮುಂದಾಗಿ ಕೋಳೀ ಅಂಕದಂತಹ ಗ್ರಾಮಜಗದೆಗಳಿಗೆ ಶಾಸನಬದ್ಧ ತಡೆಬೀಳಬೇಕಾದುದು ಅಗತ್ಯ. ಸರಕಾರದ ಲಕ್ಷ್ಯವೀಕಡೆಗೆ ಹೊರಳುವದೆಂದು ನಂಬುತ್ತೇವೆ;ಅದಕ್ಕಾಮುಂದಾಗಿ ಜನತಾಹಿತಚಿಂತಕರೆಲ್ಲರೂ, ಇಂತಹ ಸುಧಾರಣೆಗನುಕೂಲವಾಗುವ ಮಾತಾವರಣವನ್ನು ಕಳ್ಳಿಗಳಲ್ಲಿ ನಿರ್ಮಿಸುವದಕ್ಕೂ ಈ ಸಂಬಂಧದ ಶಾಸನವನ್ನು ಆಜ್ಞಾಪಿಸುವುದಕ್ಕೂ ತಯಾರಾಗಬೇಕೆಂದು ಕೇಳಿಕೊಳ್ಳುತ್ತೇವೆ.

ನೋಟೀಸು
ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. P No. 44/1950

I ಗುಡ್ಡಪ್ಪ ರೈ, 2 ದೇವಕಿ-ಅಂಗರ ಹೆಂಗಸಿನ ಮಕ್ಕಳು, ಪುತ್ತೂರು ತಾಲೂಕು ಪುತ್ತೂರುಕ್ಕಜಾ ಗ್ರಾಮದಲ್ಲಿರುವವರು.
—ಅರ್ಜಿದಾರರು

ಅರ್ಜಿದಾರರ ಸಹೋದರ ಮೃತ ಸೂತಪ್ಪಿ ಪುಟ್ಟು S. K. ರೈಯ ಬಾಪ್ತು ನಿಸ್ಸನ್ ಯಿನ್ ಕ್ಯಾರೆನ್ಸ್ ಕಂಪೆನಿಯ ಪೊಲಿಸಿ ನಂ. 67641ನೇಗೆ ಯಾರುವ ರೂಪಾ 1000/ ವನ್ನು ಪಡಕೊಳ್ಳುವರೆ ಸರ್ಟಿಫಿಕೇಟು ಕೊಡಿಸಬೇಕೆಂತ ಸದ್ರಿ ಅರ್ಜಿದಾರರು ಮೇಲ್ಕಂಡ ಅರ್ಜಿದಾಕ್ಲು ಮಾಡಿರುತ್ತಾರೆ. ಸದ್ರಿಯವರಿಗೆ ಹಾಗೆ ಸರ್ಟಿಫಿಕೇಟು ಕೊಡುವಲ್ಲಿ ಯಾರಿಗಾದರೂ ಏನಾದರೂ ಆಕ್ಷೇಪಣೆಯಿದ್ದಲ್ಲಿ ಸದ್ರಿ ಅರ್ಜಿಯ ತಾರೀಕು ಮೊದಲಾದ ತಾ. 28-9-1950 ನೇ ದಿನ ಬೆಳಿಗ್ಗೆ 11ಗಂಟೆಗೆ ಮೇಲ್ಕಂಡ ಕೋರ್ಟುಮುಂದೆ ಹಾಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗ್ಯದೆ

(Sd) N. V Kolathaya
Pleader for Petitioners.
Puthur Date 18-9-50

WANTED

A lady Sec Grade Trd. Teacher with homecraft Training. Pay & D. A according to scales prescribed for local board schools
Apply before 30-9-50.

Correspondent
S. V. S High School,
Katapadi.

ಉಡುಪಿ

ಭೂಕಂಪ ನಿಧಿಗೆ ಸಹಾಯ ಈ ಸ್ವಾಮು ಭೂಕಂಪ ನಿಧಿಯ ಸಹಾಯಾರ್ಥವಾಗಿ ಶ್ರೀ ಅಧಮಾರು ಮನೆದ ಸ್ವಾಮಿಗಳವರು ಇನ್ನೂರ ಐವತ್ತು ರೂಪಾಯಿಗಳನ್ನು ಪಂಡಿತ ನೆಹರೂರವರಿಗೆ ತಂತಿ ಮನಿಯಾರ್ಡರ್ ಮಾಡಿರುತ್ತಾರೆ.

ತಾರಾಮಂಡಲ:— ಉಡುಪಿಯಲ್ಲಿ ಇತ್ತೀಚೆಗೆ ಸ್ಥಾಪಿತವಾದ "ತಾರಾಮಂಡಲ" ದ ಶ್ರೀ ಕೃಷ್ಣಾಷ್ಟಮಿ ಸಲುವಾಗಿ ತಾ 4ನೇ ರಾತ್ರಿ ಶ್ರೀ ಎಸ್. ಕೆ.ಎಸ್. ರಾಯರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆಯೊಂದು ಜರಗಿ ಶ್ರೀಗಳವರಿ ಕೆ. ವಿ. ಆಚಾರ್ಯ, ಕೆ. ಪದ್ಮನಾಭ ಭಟ್ ಮತ್ತು ಕುವಾರ ಸ್ವಾಮಿ ಇವರು ಉಪನ್ಯಾಸಗಳಾದುವು.

ಮರಿಪೀರದಲೆ:—ಯಸ್. ವಿ. ಟಿ. ಯಸ್, ಎಲಿಮೆಂಟರಿ ಶಾಲೆ (ಪಡಯಾಡಿ) ಯ ಶ್ರೀರಾಮ ಮರಿಪೀರದಲೆದ ಉದ್ಘಾಟನೆಯು ತಾ 7-9-50ರಲ್ಲಿ ಶ್ರೀ ಕೆ. ಮಂಜುನಾಥ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಯಾದವ ಸಂಗಾಯರು ಸ್ವಸ್ತಿವಾಚನವನ್ನು ಮಾಡಿದರು.

ತಿದ್ದುಪಡಿ

ತಾರೀಕು 14-9-1950ನೇ ನವಯುಗದ 7ನೇ ಪುಟದ 1 ಮತ್ತು 2ನೇ ಕಲಂಗಳಲ್ಲಿ ಮಾರ್ಸೆಲ್ ಸಿಲ್ವಾ, ಪೇದ್ರು ಸಿಲ್ವಾ, ಜೋಸೆಫ್ ಸಿಲ್ವಾ ಇವರುಗಳು ಪ್ರಕಟಿಸಿದ ನೋಟೀಸಿನಲ್ಲಿ ಸಂಬಂಧಪಟ್ಟವರು ಈ ಕೆಳಗಿನ ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕಾಗಿ ಕೋರಿದೆ.

೧) ಮನವೇಲು ಸಿಲ್ವರಿ ತಂದೆಯ ಹೆಸರು ಅಂತೋನಿ ಸಿಲ್ವಾ ಎಂತ ಆಗಬೇಕು. ಪರಾಮೋಶಿಯಿಂದ ತಂದೆಯ ಹೆಸರಿನ ಬಗ್ಗೆ ಆಜ್ಞನ ಹೆಸರು ಕಾಡಿಸಿದೆ.

೨) ಸದ್ರಿ ನೋಟೀಸು ಕೊಟ್ಟವರ ಚಾಯಿಯ ಹೆಸರಿನಲ್ಲಿ ಸದ್ರಿ ನೋಟೀಸಿನ 11ನೇ ಏಟಂ ಮಾತ್ರ ಕಾಣಿಸಿದ್ದು ಪರಾಮೋಶಿಯಿಂದಾಗಿದೆ. ಅದರ ಜತೆಗೆ ಏಟಂ 12, 13, 14, 15ನೇ ಏಟಂಗಳಾಗಿ ವಾಂಬಳ್ಳಿ ಗ್ರಾಮದ ಸ. ನಂ. 163/3 ಮತ್ತು 4ನೇ ಸರ್ವೆ ಡಿವಿಜನ್‌ಗಳೂ ಹಾರಾಡಿ ಗ್ರಾಮದ ಸ ನ. 28/2D ಮತ್ತು 2E ಸರ್ವೆ ಡಿವಿಜನುಗಳೂ ಸೇರಿಸಲ್ಪಡಬೇಕು. ಸದ್ರಿ 12ರಿಂದ 15 ಏಟಂಗಳ ಆಸ್ತಿಗಳಲ್ಲಿ ಮನವೇಲು ಸಿಲ್ವರಿಗೂ ಆವರ ಗಂಡು ಮಕ್ಕಳಾದ ಈ ನೋಟೀಸು ಕೊಟ್ಟವರಿಗೂ ಸಮಸ್ತಿ ಎಂದರೆ ಜ್ಯಾಂಟ್ ಹಕ್ಕು ಇರುತ್ತದೆ.

(ಸಹಿ) 1. **ಮಾರ್ಸೆಲ್ ಡಿ ಸಿಲ್ವ**
2 **ಪೇದ್ರು ಸಿಲ್ವ**
3. **J. D'Silva**

Udipi, 18-9-50.

ಇಲೆಕ್ಟ್ರಿಕ್ ಕರೆಂಟ್ ಚಾರ್ಜು ಜಾಸಿ, ಮಾಡಿದುದರ ಕ್ರಿತು ನಾಗರಿಕರ ಕಡೆಯಿಂದ ಸ್ಥಳೀಯ ಮುನ್ಸಿಫ್ ಕೋರ್ಟಿನಲ್ಲಿ ದಾಖಲು ಮಾಡಲಾದ ಸಿವಿಲ್ ವ್ಯಾಜ್ಯದಲ್ಲಿ ಇಲೆಕ್ಟ್ರಿಕ್ ಕಂಪೆನಿಗೆ ಗುಣವಾಗಿ ತೀರ್ಪು ಕೊಡಲಾಗಿದೆ ಎಂದೂ ಈ ಕುರಿತು ಅಪೀಲು ನೆಡೆಯಲಿರುವುದೆಂದೂ ತಿಳಿದು ಬರುತ್ತದೆ.

ಇಲೆಕ್ಟ್ರಿಕ್ ಕಂಪೆನಿಯ ಕಡೆಯಿಂದ ಯೋಗ್ಯ ಕರೆಂಟ್ ಸರಬರಾಯಿ ಆಗದಿರುವ ಬಗ್ಗೆಯೂ 24ತಾಸು ಕರೆಂಟ್ ದೊರೆಯದ ಬಗ್ಗೆಯೂ ನಾಗರೀಕರ ಕಡೆಯಿಂದ ಇನ್ನೊಂದು ಸಿವಿಲ್ ವ್ಯಾಜ್ಯ ಕಂಪೆನಿಯ ಮೇಲೆ ಹೂಡಲಾಗುತ್ತಿದೆಯೂ ವರ್ತಮಾನವಿದೆ.

ಸೆಂಟ್ರಲ್ ವಾರ್ಡ್ ಟೌನ್ ಪ್ಲಾನಿಂಗ್ ಕಮಿಟಿ ಸಭೆಯು ತಾ. 18ರಲ್ಲಿ ಕಾರ್ಯಾಧಿಕಾರಿ ಮೂಳಿಗೆಯವರ್ಲಿ ಡಾ। ಕೆ. ಎನ್. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಈ ವಾರ್ಡಿನ ಟೌನ್ ಪ್ಲಾನಿಂಗ್ ಯೋಜನೆಯ ಕುರಿತಾದ ಸೌಕರ್ಯ ಟೀಕ್ಕನ್ನು ನಗರಸಭೆಯು ಪರಾಮರ್ಶಿಸಿ ಮಾಡಿದಂತೆ ತಡೆಯಾಜ್ಞೆ ಕೆಂದು ಮದ್ರಾಸು ಸರಕಾರಕ್ಕೆ ತಂತೀ ಮೂಲಕ ತಿಳಿಸಬೇಕೆನ್ನುವ ನಿರ್ಣಯವಾಯಿತು

ಸಾಂಕ್ರಾಮಿಕ ರೋಗ— ನಗರದ ಸುತ್ತಮುತ್ತಲಿನ ವಲಯಗಳಲ್ಲಾ ಟೈಫಾಯಿಡ್ ಜ್ವರವು ದಿನೇ ದಿನೇ ಜಾಸ್ತಿಯಾಗುತ್ತಲಿದೆ. ಕೆಲವು ಕಡೆ ಮರಣಗಳಾದ ವಾರ್ತೆಯೂ ಬರುತ್ತಿದೆ. ನಗರಸಭೆಯ ಕಡೆಯಿಂದ ಇನಾಕ್ಯುಲೇಶನ್ ಕಾರ್ಯಕ್ರಮವು ಕೈಕೊಳ್ಳಲಾಗಿದೆ.

ಶೋಚನೀಯ ನಿಧನ

ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲಿನ ಆಧ್ಯಾಪಿಕೆ ಶ್ರೀಮತಿ ಎ. ಗುಲ್ಲಾಬಿಯವರು ತಾ. 18-9-50ರಂದು ವಿಷಮ ಜ್ವರದಿಂದ ಆಕಾಲ ಮರಣಕ್ಕೆ ಶರಣಾದರೆಂದು ತಿಳಿಸಲು ವಿಷಾದವನ್ನಿಸುತ್ತದೆ. ಶ್ರೀಮತಿಯವರು ಕೇವಲ 22ವರ್ಷ ವಯಸ್ಸಿನವರಾಗಿದ್ದು ಸಜ್ಜನರೂ, ಸರಳ ಸ್ವಭಾವದವರೂ, ಕರ್ತವ್ಯಶೀಲರೂ, ಆಗಿದ್ದರು. ಆವರ ನಿಧನದಿಂದುಂಟಾದ ಶೋಕ ಸೂಚನಾರ್ಥವಾಗಿ ಕಟಪಾಡಿ ಶ್ರೀ ವೆಂ ಸ್ವಾ ಹಾಯರ್ ಎಲಿಮೆಂಟರಿ ಮತ್ತು ಹ್ಯಾಸ್ಕೂಲುಗಳು ಅಂದು ಮುಚ್ಚಲ್ಪಟ್ಟಿದ್ದುವು. ದಿವಂಗತೆಯರ ಮಾತಾಪಿತ ಮತ್ತು ಸಂಬಂಧಿಕರಿಗುಂಟಾದ ಅಪಾರ ಶೋಕದಲ್ಲಿ ನಾವೂ ಸಯಭಾಗಿಗಳಾಗಿರುವುದಲ್ಲದೆ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಕನ್ನಡದಲ್ಲಿ ಕೆಲವು ಪುಸ್ತಕಗಳನ್ನು ಬರೆದವರೂ ಸಜ್ಜನ ಹಾಗೂ ಸಾತ್ವಿಕ ಬುದ್ಧಿಯವರೂ ಆಗಿದ್ದ, ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯ ಮಾಜಿ ಮುಖ್ಯಾಧ್ಯಾಪಕ ಶ್ರೀ ಕೆ. ಪಿ. ರಾಮಕೃಷ್ಣಯ್ಯನವರು ಕನ್ನಡ 61ನೇ ವಯಸ್ಸಿನಲ್ಲಿ ಇಪೇ ತಾ. 19ರಲ್ಲಿ ದಿವಂಗತರಾದರೆನ್ನಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿಕೋರಿ, ಆವರ ಸಂಬಂಧಿಕರಿಗೆ ಸಮಾಧಾನವನ್ನು ಸೂಚಿಸುತ್ತೇವೆ.

ಮನನೀಯ ವಿಚಾರ

"ಕಾಂಗ್ರೆಸ್ಸನ್ನು ಬಲಪಡಿಸುವ ಹಾದಿ, ವಿಧಾನಗಳನ್ನು ಚಿಂತಿಸಿರಿ. ಕಾಂಗ್ರೆಸ್ಸು ಇಂದಿನ ದುರ್ಬಲ ಸ್ಥಿತಿಯಲ್ಲೇ ಮುಂದುವರಿಯಬೇಕೋ ಅಥವಾ, ಭವಿಷ್ಯ ಕಾರ್ಯಕರ್ತರಿಗಳನ್ನು ಇದಿರಿಸಲಾಗುವಂತೆ ಅದನ್ನು ಬಲಪಡಿಸಿ ಹೊಸ ಚೀನ ಕಲೆದ ಸ್ಸು ತುಂಬಿಸುವದು ಅಗತ್ಯವೋ ಎಂಬುದನ್ನು ನಿರ್ಧರಿಸುವುದು ಕಾಂಗ್ರೆಸಿಗರನ್ನು ಸೇರಿದೆ"—ನಾಸಿಕ ಕಾಂಗ್ರೆಸಿನ ವಿಷಯನಿಯಾವಳಿ ಸಮಿತಿ ಸಭೆಯಲ್ಲಿ ಅಧ್ಯಕ್ಷಗಾದಿಗೇರಿದೊಡನೆ ಆಧ್ಯಕ್ಷ ಢಂಡನರು.

"ಕಾಂಗ್ರೆಸ್ ಅಧ್ಯಕ್ಷ ಸ್ಥಾನವೆಂಬುದು ಹಕ್ಕುರಹಿತ ಜವಾಬ್ದಾರಿ, ಸಂಯೋಗರಹಿತ ನಿರೀಕ್ಷೆ, ಅಧಿಕಾರರಹಿತ ಗೌರವವಿರುವ ಒಂದು ಸ್ಥಾನ" ತನ್ನ ಅಧ್ಯಕ್ಷ ಪಟ್ಟವನ್ನು ಶ್ರೀ ಢಂಡನರಿಗೆ ಬಿಟ್ಟು ಕೊಡುವಾಗ ಡಾ। ಪಟ್ಟಾಭಿ

"ಜಾತೀಯತಾ ಅಥವಾ ಪ್ರತ್ಯೇಕತಾ ಭಾವನೆಯನ್ನು ಸಂಪೂರ್ಣ ನಿವಾರಿಸಬೇಕಾದುದು ಕಾಂಗ್ರೆಸಿನ ಘೋಷಿತ ತತ್ವಗಳ ಮೇಲಿಂದ ಮಾತ್ರವಲ್ಲ, ನಮ್ಮ ಹಿತಸಾಧನೆಗೆ ಮತ್ತೆಲ್ಲಾ ದೃಷ್ಟಿಯಿಂದಲೂ ಅತ್ಯಗತ್ಯವೆಂದು ನನ್ನ ದೃಢಾಭಿಪ್ರಾಯ; ಈ ಅಭಿಪ್ರಾಯಾನುಸಾರವಾಗಿ ನನ್ನ ಸರ್ವಶಕ್ತಿಯಿಂದ ನಾನು ಕಾಲಿಡುವ ಎಲ್ಲಾ ರಂಗಗಳಲ್ಲೂ ದುಡಿಯುವೆನೆಂಬ ಶಪಥ ತೊಟ್ಟಿದ್ದೇನೆ"—ನಾಸಿಕ ಕಾಂಗ್ರೆಸಿನ ವಿಷಯ ನಿಯಾಮಕ ಸಮಿತೀಸಭೆಯಮುಂದೆ ಭಾರತ ಪಾಕಿಸ್ಥಾನ್ ಸಂಬಂಧ ಮತ್ತು ಜಾತೀಯತಾ ಪ್ರಶ್ನೆಯ ಕುರಿತಾದ ಸೂಚನೆಯನ್ನು ಮುಂದಿಟ್ಟು ಪುನಃ ನೆಹರು.

ಕಾರಣವೆಂದರೆ ಕಾಂಗ್ರೆಸ್ ಅಧ್ಯಕ್ಷೆ ಗಾದಿಯೇನೂ ಸರ್ವಾಧಿಕಾರೀ ಹುದ್ದೆಯಲ್ಲ. ಕಾಂಗ್ರೆಸ್ ಧ್ಯೇಯ, ಧೋರಣೆ, ತಕ್ಷ ಮತ್ತು ನಿಬಂಧನೆಗಳನ್ನು ಉಲ್ಲಂಘಿ ಸುವ ಅಥವಾ ಸ್ವೇಚ್ಛೆಯಿಂದ ಅವುಗಳನ್ನು ಬದಲಾಯಿಸಿಕೊಳ್ಳುವ ಅಧಿಕಾರ ಆದರ ಅಧ್ಯಕ್ಷನಿಗಿಲ್ಲ, ಕಾಂಗ್ರೆಸಿನ ನಿಯಮ ನಿಬಂಧನೆಗಳಿಗೆ ಒಳಪಟ್ಟೇ ತನ್ನ ಶಕ್ತಿ, ಯೋಗ್ಯತೆಗನುಸಾರವಾಗಿ ತನ್ನ ಅಭಿಮ ತವನ್ನು ಮುಂದೊತ್ತುವಷ್ಟೇ ಅವಕಾಶ ಕಾಂಗ್ರೆಸ್ ಅಧ್ಯಕ್ಷನಿಗೆ ಹೊರತು ಹೆಚ್ಚಿಗಿಲ್ಲ.

ಭಾರತವು ಶಾಸನಬದ್ಧವಾಗಿ 'ಜಾತ್ಯತೀತ ಜನತಾ ರಾಷ್ಟ್ರ'ವಾಗಿದೆ. ಆದರ ಈ ಸ್ವರೂಪವನ್ನು ವಿರೋಧಪಗೊಳಿಸಲು ಪ್ರಯತ್ನಿಸುವ ಯಾವುದೇ ಪಕ್ಷ ಅಥವಾ ಸಂಸ್ಥೆಯಾದರೂ ರಾಷ್ಟ್ರ ದ್ರೋಹಿಯನ್ನು ಬೇರೆ ಯಾವ ದೇಶದಲ್ಲಿರಲಿ ಬದ್ಧವಿದೆ; ಕಾಂಗ್ರೆಸೊಂದು ಇದ ಕ್ಕಪವಾದವಾಗುವಂತಿಲ್ಲ. ಮೇಲಾಗಿ ಕಾಂಗ್ರೆಸ್ ಸರಕಾರದ ಸೂತ್ರಧಾರಿತ್ವದ ಲ್ಲಿ ಕಾಂಗ್ರೆಸಿಗರೇ ಬಹು ಸಂಖ್ಯಾಕರಿದ್ದ 'ಫೆಟೆನ ಸಮಿತಿ'ಯಲ್ಲಿ ರೂಪಿಸಲ್ಪಟ್ಟಿ ದ್ದ ಮತ್ತು ಸ್ವತಃ ಕಾಂಗ್ರೆಸ್ ಸಂಸ್ಥೆಯು ಈ ಮೊದಲೇ ತನ್ನ ಅನುಮತಿಯನ್ನಿತ್ತಿ ದ್ದ 'ರಾಜ್ಯಾಂಗ ಶಾಸನ'ದಲ್ಲಿ ಸಮಸೂದಿಸ ಲ್ಪಟ್ಟಿರುವ ಅಂಗಗಳನ್ನು ಯಾವ ಕಾರಣದಿಂದಾದರೂ ಕಾಂಗ್ರೆಸು ವಿರೋ ಧಿಸಲೆಡೆಯಿಲ್ಲ.

ಈ ರೀತಿ 'ಭಾರತವು ಜಾತ್ಯಾತೀತ ಜ ನತಾ ರಾಷ್ಟ್ರ'ವೆಂಬುದು ಭಾರತವೊಂದು ಸ್ವತಂತ್ರ ರಾಷ್ಟ್ರವೆನ್ನುವಷ್ಟೇ ಮೂಲಭೂ ತ ವಿಷಯವಾಗಿರುವಾಗ ಶ್ರೀ ಧಂಡನರ ಅಧ್ಯಕ್ಷತೆಯು ಅದನ್ನು ಮಾರ್ಪಡಿಸೀತು ಎಂದಾಗಲಿ ನಿರೀಕ್ಷಿಸಿರಲಾರರು; ಬಾರ ತವನ್ನು ಹಿಂದೂ ರಾಜ್ಯವೆಂದು ಘೋಷಿ ಸುವ ಬೇಕಾಯಿದೇತೀರ ವರ್ತನೆಯು ಶ್ರೀ ಧಂಡನರಿಂದಾಗಬಹುದೆಂದು ಎಂತಹ ಹಿಡ್ಡರೂ ನೆನಸಿರಲಾರರು. ಸರ್ವಸಮಾನ ತಾ ಜನತಾ ರಾಜ್ಯವನ್ನು ಒಪ್ಪಿಕೊಂಡ ನೇಲೆ, ಇದ್ದ ಸ್ಥಿತಿಯಲ್ಲೇ ಹಿಂದೂ ಅ ಭಿ ಮಾ ನ, ಮುಸ್ಲಿಂ ದ್ವೇಷ ದಂತಹ ಜಾತೀಯ ಪಕ್ಷಪಾತತೆಯ ನ್ನು ತೋರಿಸುವ ಚಿತ್ಕನಂಜನೆಯು ನ್ಯಾ ಯನಿಷ್ಠರಿ ಶ್ರೀ ಧಂಡನರಿಂದಾಗಬಹು ದೆಂದೂ ಸಂಗತಿಯರಿತವರು ಊಹಿಸು ವಂತಿರಲಿಲ್ಲ. ಇಂತಹ ನಿರಾಧಾರ ಆಶ ಗಳನ್ನು ಕಟ್ಟಿಕೊಳ್ಳುವನ್ನು ಅಜ್ಞಾನವು ಲವಮಾತ್ರ ರಾಜಕೀಯ ಜ್ಞಾನವುಳ್ಳ ಯಾರಲ್ಲೂ ಇರಲಾರದು.

ಶ್ರೀ ಧಂಡನರ ಅಧ್ಯಕ್ಷತೆಯು ಗೊಂದ ಲವನ್ನು ನಿರ್ಮಿಸಬಹುದೇ ಎಂಬ ಭೀತಿ ಯು ಕಾಂಗ್ರೆಸಿಗರಲ್ಲೂ ಆಶೆಯು ಕಾಂಗ್ರೆ ಸ್ ವಿರೋಧಿಗಳಲ್ಲೂ ಮೊಳೆತ ಕಾರಣಗ ಳೆಲ್ಲವೂ ಕಾಂಗ್ರೆಸಿನಧ್ಯೇಯ, ಧೋರಣೆ, ಶಿಸ್ತುನಿಯಮ, ನಿಬಂಧನೆಗಳ ಚೌಕಟ್ಟಿ ನೊಳಧಾಗವನ್ನೇ ಆಧರಿಸಿ ನಿಂತಿದ್ದು ವು. ಕಾಂಗ್ರೆಸಿನ ಶಾಸನ, ಮ ತ್ತು ಸಂಪ್ರದಾಯಗಳನ್ನು ಆಧರಿಸಿನಿಂತು, ಅದರ ಈವರೆಗಿನ ವರ್ತನೆಗಳಿಗೂ ಅನು ಮೋದನೆ ಸೂಚಿಸಿ, "ಆದರೆ ಪಾಕಿಸ್ತಾನ ವು ಭಾರತದ ಕಡೆಗಿನ ತನ್ನ ಕರ್ತವ್ಯವ ನ್ನು ಪಾಲಿಸಲಿಲ್ಲ—ಭಾರತೀಯ ಮುಸ್ಲಿ ಮರು ಸ್ವತಂತ್ರ ಭಾರತದ ಪ್ರಜಾಪ್ರ ಭಾಕ್ಕಾರಿಗನುಸಾರವಾಗಿ ವರ್ತಿಸಿಲ್ಲ—ಪಾಕಿಸ್ತಾನದಿಂದೋಡಿ ಬಂದಿರುವ ನಿರಾ ಶ್ರಿತರಿಗೆ ದೊರೆಯ ಬೇಕಾದುದು ದೊರೆ ತಿಲ್ಲ" ಮುಂತಾದ ಆಕ್ಷೇಪಗಳನ್ನು ಎಲ್ಲ ಕ್ಕಿಂತ ಹಿರಿದು ಗೊಳಿಸುವ ಅಥವಾ ಕಾಂ ಗ್ರೆಸಿನ ನಿಶ್ಚಿತಧ್ಯೇಯ, ಧೋರಣೆ ಮತ್ತು ಪ್ರಚಲಿತ ವರ್ತನೆಗಳೊಳಗೆ ಭಿನ್ನತೆಯ ನ್ನು ಆರೋಪಿಸುವ ದಾಪಿಯಿಂದ ಶ್ರೀ ಧಂಡನರು ಹಿಂದೂ ಮಹಾಸಭಾ ವಾದ ವನ್ನು ಮುನ್ನಡೆಸುವರೆಂಬ ನೀರೀಕ್ಷೆಯೇ ಜಾತೀಯವಾದಿಗಳಲ್ಲಿದ್ದುದು; ಇಂತಹ ಸಾಹಸಕ್ಕೆಳಿಯಲು ಸಾಧ್ಯವೂ ಇದ್ದಿತು.

ಜಾಗಾಗುತ್ತಿದ್ದಲ್ಲಿ ಕಾಂಗ್ರೆಸಿನ ಲ್ಲಿ ಒಡಕು ಹುಟ್ಟುತಿತ್ತಿತು; ಪ್ರಧಾ ನಿ ಪಂಡಿತ ನೆಹರು ಅಥವಾ ಅಧ್ಯಕ್ಷೆ ಶ್ರೀ ಧಂಡನ್, ಇವರಿಬ್ಬರಲ್ಲಿ ಒಬ್ಬರು ರಾಜೀ

ಬ್ರುಕ್ ಬಾಂಡ್ ಚಹಾ

ವನ್ನೇ ನೀವು ಬಿತಕ್ಕೆ ಒತ್ತಿ ಕೇಳಬೇಕೆಂಬುದಕ್ಕೆ



ಕಾರಣಗಳು

1. ಅದು ಸುಲಿನವಾಗದ ಹಾಗೆ ಪೊಟ್ಟಣಗಳಲ್ಲಿ ಕಟ್ಟಿ ಮೊಹರು ಮಾಡ ಲ್ಪಟ್ಟಿರುತ್ತದೆ.
2. ಬ್ರೂಕ್ ಬಾಂಡ್ ಎಂಬ ಹೆಸರೇ ಅದರ ಗುಣದ ಭರವಸೆ.
3. ಶಿಸ್ತಿನಿಂದ ತಲವುವಿಕೆಯು ಅದರ ಪೂರ್ಣ ಶುದ್ಧತೆಯನ್ನು ನಿಶ್ಚಯಿಸುತ್ತದೆ.
4. ಬ್ರೂಕ್ ಬಾಂಡ್ ಚಹಗಳು ಇತರ ಬೆರೆಕೆ ಪದಾರ್ಥಗಳಿಂದ ದೂರವಾಗಿನೆಯೆಂಬ ಭರವಸೆಯನ್ನು ಕೊಡುತ್ತವೆ.
5. ಉತ್ತಮ ಶಾಸ್ತ್ರೀಯ ಮಿರ್ಪಣವು ಉತ್ತಮ ರುಚಿಯನ್ನು ನಿರ್ಣಯಿಸುತ್ತದೆ.

ED/BOI/107/106

ನಾಮೆ ಕೊಡುವ ಪರಿಸ್ಥಿತಿಯುಬ್ಬವಿಸುತಿದ್ದಿತೆಂಬುದು ಸ್ಪಷ್ಟ; ಅಂತಹ ಬಿಕ್ಕಟ್ಟು ಒದಗುತಿದ್ದರೆ ಥಂಡನರೇ ರಾಜಿಕೊಡುಬೇಕಾಗುತಿದ್ದತು ಹೊರತು ನೆಹರುಗಳಲ್ಲವೆಂಬುದು ಮತ್ತಷ್ಟು ಸ್ಪಷ್ಟ. ಕಾಂಗ್ರೆಸು ನೆಹರುಗಳ ಪ್ರತಿವಾದಿಯೆಂಬುದಕ್ಕಾಗಿ ಶ್ರೀ ಥಂಡನರನ್ನು ಅಧ್ಯಕ್ಷಗಾದಿಗೆ ಏರಿಸಿಕೊಳ್ಳಲಿ, ಅವರು ದೀರ್ಘಾವಧಿಯಿಂದ ಕಾಂಗ್ರೆಸಿಗೆ ಸಲ್ಲಿಸಿರುವ ಸೇವೆಯೊಂದನ್ನೇ ಜ್ಞಾಪಿಸಿ ಹಾಗೆ ಮಾಡಿದ್ದಿತು. ಇಂತಹ ಕಾಂಗ್ರೆಸಿಗೆ ನೆಹರೂ ನಾಯಕತ್ವದಲ್ಲಿರುವ ವಿಶ್ವಾಸವು ಯಾವ ಸಂದರ್ಭದಲ್ಲಾದೂ ಪ್ರಶ್ನಾತೀತವಿದ್ದು, ಈ ಬಾರಿಯ ಅಧ್ಯಕ್ಷನ ಆರಿಸುವಿಕೆ ಯಂಬುದು ಆ ನಂತರದ ಮತ್ತೊಪ್ಪು ಶ್ನೆಯಿದ್ದ ವಿಷಯವಿರುವುದರಿಂದ, ಇವೆಲ್ಲವನ್ನೂ ತೂಗಿನೋಡಿ ಅಧ್ಯಕ್ಷ ಥಂಡನರು ನೆಹರುಗಳ ಸಮರ್ಥಕರಾದುದು ಸ್ವಾಭಾವಿಕ ಮತ್ತು ಕಾಲೋಚಿತ.

ವಿಚಾರಾರ್ಹ ಅಂಶಗಳು

ತನ್ನ ಧೋರಣೆಗೆ ಪೂರ್ವಾನುಮೋದನೆ ದೊರೆಯಬೇಕೆಂದು ಪಂಡಿತ ನೆಹರುಗಳು ಕಾಂಗ್ರೆಸ್ ಅಧಿವೇಶನ ಪೂರ್ವದಲ್ಲಿ ಮತ್ತು, "ನನ್ನ ನಾಯಕತ್ವವು ಬೇಡವೆಂದಿದ್ದರೆ ಟಿಳಿಸೋಣಾಗಲಿ, ಸಂತೋಷದಿಂದ ಹೊರಡುತ್ತೇನೆ" ಎಂದು ಕಾಂಗ್ರೆಸ್ ಅಧಿವೇಶನದಲ್ಲಿ ಮೇಲಿಂದ ಮೇಲೆ ಪಂಥಾಹ್ವಾನ ಕೊಟ್ಟುದರಿಂದಲೇ ಹೀಗೆ ನಡುಬಾಗಿದ ನೆಹರುವಿನಿದಿರು ಶ್ರೀ ಥಂಡನರೂ ಕಾಂಗ್ರೆಸ್ಸು "ನೀವು ಮಾಡಿದ್ದೆಲ್ಲಾ ಸೈ!" ಎನ್ನಬೇಕಾಯಿತು.

ನೆಹರುಗಳ ಪಂಥಾಹ್ವಾನ ಬರುವ ಮೊದಲೇ ಶ್ರೀ ಥಂಡನರು ನೆಹರೂ ಸಮರ್ಥನೆಯನ್ನು ಸಂಕಲ್ಪಿಸಿದ್ದರೆಂಬ ವಾಸವು ಕೆಲವಂಶ ನಿಜವಿರಬಹುದಾದರೂ, ತಾನೇ ಅಧ್ಯಕ್ಷನಾಗಿ ಆರಿಸಲ್ಪಟ್ಟೊಡನೆ ಟಿಳ್ಳಿಗೆ ಹೋಗಿ ವಜ್ಜಭಾಯಿ, ನೆಹರುಗಳೊಡನೆ ಪರ್ಯಾಲೋಚಿಸಿದುದರ ಪರಿಣಾಮವು ಅಧ್ಯಕ್ಷ ಥಂಡನರ ಕಾಂಗ್ರೆಸ್ ಸಂಪ್ರದಾಯ ಪಾಲನೆಗೆ ಕಾರಣವಾಯಿತೆಂಬುದಲ್ಲಿಯಿಲ್ಲ.

ಅಂದು ಗಾಂಧಿಜೀಯ ಪ್ರಾಣವು ಪ್ರಿಯವಾಗಿದ್ದಂತೆ ಇಂದು ನೆಹರೂ ನಾಯಕತ್ವವು ರಾಷ್ಟ್ರಕ್ಕೆ ಅತ್ಯಂತ ಪ್ರೀತಿಯದಿವುದರಿಂದ, ಆಗ ಗಾಂಧಿಜೀ ಅನಶನ ಕೈಗೊಂಡಾಗ ಎದ್ದಮಾದರಿಯಲ್ಲೇ ಈ "ನೆಹರೂ ನಾಯಕತ್ವ ಉಳಿಯ ಬೇಕೋ ಅಳಿಯ ಬೇಕೋ" ಎಂಬ ಪ್ರಶ್ನೆ ಮುಂದೆಬಂದಾಗ ಕಾಂಗ್ರೆಸ್ ಮತ್ತು ದೇಶವು ಮಿಕ್ಕೆಲ್ಲವನ್ನೂ ಬೇರೆಲ್ಲಿಂದನ್ನೂ ಕಡೆಗಣಿಸಿ ಅದು ಉಳಿಯಬೇಕು ಎನ್ನುವುದು ಖಂಡಿತ.

ಆದ್ದರಿಂದ ತನ್ನ ಹೃದಯದೊತ್ತಡಕ್ಕೆ ನು ಸಾರವಾಗಿ ಅಥವಾ ವಿದ್ಯಮಾನಗಳ ಒತ್ತಡಕ್ಕೊಳಗಾಗಿ ಅಧ್ಯಕ್ಷ ಥಂಡನರು ನೆಹರೂ ಪಂಥಕ್ಕೆ ಶರಣನ್ನು ಬೇಕಾಯಿತು.

ನಾವು ಹಿಂದಿನ ಸಂಚಿಕೆಗಳಲ್ಲೇ ಹೇಳಿರುವಂತೆ ಥಂಡನರ ಈ ಧೋರಣೆಯು ಅಂತಃಕರಣಪೂರ್ವಕವೋ ಅನಿರ್ವಾಹವಾಗಿಯೋ ಎಂಬುದನ್ನು ಪರೀಕ್ಷಿಸುವ ಸಂದರ್ಭಗಳು ಇನ್ನು ಬರಬಹುದು. ಕಾಂಗ್ರೆಸ್ ಸರಕಾರದ ಶಿರಸ್ಸಾಗಿರುವ ಪಂಡಿತ ನೆಹರು ಮತ್ತು ಕಾಂಗ್ರೆಸ್ ಸಂಸ್ಥೆಯ ಶಿರಸ್ಸಾಗಿರುವ ಶ್ರೀ ಥಂಡನರೊಳಗಿನ ಮುಂದಿನ ಏಟಾಟು ಸಂಬಂಧಗಳು ಹೇಗೆ ನಿಲ್ಲುವವೆಂಬುದನ್ನು ನೋಡಲಿಕ್ಕಿದೆ.

ಅಂತಹ ಒಂದು ಮಹಾ ಸಂದರ್ಭವು ಮೂಲದಲ್ಲೇ ಒದಗಿದೆ. ಶ್ರೀ. ಥಂಡನರ ಕಾರ್ಯಕಾರೀ ಸಮಿತಿಯ ಸದಸ್ಯನಾಗಲು ಪಂಡಿತ ನೆಹರುಗಳು ನಿರಾಕರಿಸಿದ್ದಾರೆಂಬ ವಾರ್ತೆಯಿದೆ. ಮೌಲಾನಾ ಆಝಾದರಂತಹ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಅಂದಿನಿಂದೀ ವರೆಗೂ ಸದಸ್ಯರಾಗಿದ್ದ ಬೇರೆ ಕೆಲವರೂ ನೆಹರುಗಳಿಗೆ ಅನುಕಂಪಲು ತಯ್ಯಾರಾದಂತಿದೆ. ತನ್ನ ಅಭಿಮತ ಕೇಳಿ ಸಮಿತಿಗೆ ಸದಸ್ಯರನ್ನು ಆರಿಸಿಕೊಳ್ಳುವುದಾದರೆ ಇವರೆಲ್ಲಾ ಆದರಲ್ಲಿ ಸೇರಬಹುದೆಂಬ ಶರ್ತವನ್ನು ಪಂಡಿತ ನೆಹರುಗಳು ಮುಂದೊಡ್ಡಿದ್ದಾರೆಂದೂ ಸುದ್ದಿ.

ಪಂಡಿತ ನೆಹರುಗಳೇ ಇರದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಕಲ್ಪನೆ ಕೂಡಾ ಅಸಾಧ್ಯವನ್ನಿಸುತ್ತದೆ. ಅಂತಹದೊಂದು ಸಮಿತಿ ರಚನೆಗೊಂಡರೆ ರಾಷ್ಟ್ರದ ದೃಷ್ಟಿಯಲ್ಲಿ ಅದಕ್ಕಿದ್ದ ಘನತೆ ಕಳೆದು ಹೋಗಬಹುದು. ಆದ್ದರಿಂದ ಈ ಸಂಬಂಧದ ಪಂಡಿತ ನೆಹರುಗಳ ಶರ್ತಕ್ಕೆ ಶ್ರೀ ಥಂಡನರೊಪ್ಪಿದರೂ ಅದೂ ಅನಿವಾರ್ಯವಾಗಿಯೇ ಎಂದು ಕಟ್ಟಿಕೊಳ್ಳಬಾರದೆಂದಿಲ್ಲ; ಆದರೆ ಆ ಮೇಲಿನ ಸ್ಥಿತಿಯೊಂದು ಸಂದರ್ಭದಲ್ಲೂ ಅನಿವಾರ್ಯವಾಗಿ ಅಧ್ಯಕ್ಷ ಥಂಡನರು ಪ್ರಧಾನ ನೆಹರುಗಳ ಅಭಿಮತಾನುಯಾಯಿಯಾಗಿಯೇ ಇರಬೇಕಾಗುವುದಾದ್ದರಿಂದ ಈ ಮಟ್ಟಿಗೆ ನೆಹರೂ ಅಭಿಮತಕ್ಕೊಪ್ಪಿ ಕಾರ್ಯಕಾರೀ ಸಮಿತಿಯಲ್ಲಿ ಅವರನ್ನು ಸೇರಿಸಿಕೊಂಡರೆಂದಾದರೆ ಮುಂದೆ ಥಂಡನರ ಅವಧಿ ಹೊಸತೇನೂ ಇಲ್ಲದೆ ಯಥಾಪ್ರಕಾರ ಕಳದು ಹೋಗುವದಂತೂ ಖಂಡಿತ; ಅಂತ ಯೇತರ ವಿಷಯಕ್ಕೆ ಥಂಡನರು ಕಾಂಗ್ರೆಸ್ ಅಧ್ಯಕ್ಷ ಥಂಡನರು ಕಾಂಗ್ರೆಸ್ ಅಧ್ಯಕ್ಷ ಥಂಡನರು ಕೊನೆಯ ವರೆಗೂ ನೆಹರುಗಳಿಗೆ ಪೂರಣಾನುಕೂಲರಾಗಿರುವರೆಂಬುದು ಸ್ಪಷ್ಟ.

ಒಟ್ಟಿನಲ್ಲಿ ಪಂಡಿತ ನೆಹರುಗಳ ಸಾಮೂಹಿಕ ಗದ್ದಲದಲ್ಲಿ ಮಾತ್ರ ಉಪಯೋಗವಿಲ್ಲದೆ ಶ್ರೀ ಥಂಡನರು ಜಾಹೀರಾಗಿ ನೆಹರೂ ಸಮರ್ಥಕರಾದುದೆಂದಾದರೆ, ಆ ಘಾದಿ ಬಿಟ್ಟು ಹೋಗುವ ಸಂದರ್ಭ ಅವರಿಗೀಗ ದೊರೆತಿದೆ. ಕಾರ್ಯಕಾರೀ ಸಮಿತಿಗೆ ಸದಸ್ಯರನ್ನು ಆರಿಸಿಕೊಳ್ಳುವುದು ಅಧ್ಯಕ್ಷರ ಏಟ್ಟಿಕ ವಿಷಯವಿರುವುದರಿಂದ ನೆಹರುಗಳಿಗೆ ಅವರು ಬಯಸಿರುವ ಪ್ರಾಮುಖ್ಯತೆಯನ್ನು ಕೊಡದೆ ಶ್ರೀ ಥಂಡನರು ತನ್ನ ಹುದಿಯನ್ನೇ ಹಿಡಿಯಬಹುದು. ಈ ಬಾರಿಯ ಕಾರ್ಯಕಾರೀ ಸಮಿತಿಯ ರಚನೆಯಿಂದ ಈ ಸಂಗತಿಯು ಪೂರ್ಣ ಪರೀಕ್ಷೆಯಾಗಲಿದೆ.

ನೆಹರುಗಳಲ್ಲದ ಮತ್ತು ನೆಹರೂ ಅಭಿಮತಕ್ಕೆ ವಿರೋಧವಾದ ಒಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನು ರಚಿಸಿಕೊಳ್ಳುವುದು, ಅಂದು ಗಾಂಧಿಜೀಯು ಅಭಿಪ್ರಾಯಕ್ಕೆ ವಿರೋಧವಾಗಿ ಸಮಿತಿ ರಚಿಸಿಕೊಳ್ಳಲು ಶ್ರೀ. ಸುಭಾಸ್ ಬಾಬುಗಳಿಗೆ ಅಸಾಧ್ಯವಾದಷ್ಟೇ ಶ್ರೀ ಥಂಡನರಿಗೂ ಅಸಾಧ್ಯ. ಒಂದೊಮ್ಮೆ ಆ ಸಾಹಸದಲ್ಲಿ ಅವರು ವಿಜಯಗೊಂಡರೂ ಅಂತಹ ಸಮಿತಿಯನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅನುಕರಿಸುವುದು ಅಸಂಭವ. ಇಂತಹ ಅಸ್ವವ್ಯಸ್ತತೆಗೆ ಅವಕಾಶ ಕೊಡಬಾರದೆಂದು ಶ್ರೀ ಥಂಡನರು ಈ ಮಟ್ಟಿಗೂ ನೆಹರೂ ಅಭಿಮತಕ್ಕೆ ನೇ ಸೈಗುಟ್ಟಿದರೆ, ಹೊಸಲೇ ಹೇಳಿರುವಂತೆ ಮತ್ತೆ ಥಂಡನರಿಂದಾಗಿ ಎಂದಿಗೂ ಸಮಸ್ಯೆಯುಂಟಾಗದಿಲ್ಲ.

ಕೇವಲ ಕಾಂಗ್ರೆಸ್ ಅಧ್ಯಕ್ಷತನದ ಬಲದಿಂದ ಒಬ್ಬನು ಜನತೆಯ ಲಕ್ಷ್ಯವನ್ನು ತನ್ನ ಕಡೆಗೆ ಆಕರ್ಷಿಸಿಕೊಳ್ಳುವುದೆಂದರೆ ಜಾಹೀರು ಅಧಿವೇಶನದಲ್ಲಿ ಮಾತ್ರ. ರಾಷ್ಟ್ರವೀಕ್ಷಣೆಗೆ ವಿಶಾಲವಾಗಿ ಕಣ್ಣು ಕೆರೆಯುವುದು ಮಹಾಧಿವೇಶನ ಸಂದರ್ಭದಲ್ಲೇ.

ಆದ್ದರಿಂದ ಈ ಸಂಬಂಧದ ತರ್ಕ, ಕುತರ್ಕಗಳನ್ನು ಇಲ್ಲಿಗೇ ಮುಗಿಸಿಕೊಳ್ಳುವುದುತ್ತಮ. ಕಾಂಗ್ರೆಸಿನ ಲೋಪ ದೋಷಗಳನ್ನ ವಿಚಾರಿಸಿ, ಅದರಲ್ಲಿ ನವಚೇತನವನ್ನು ನಿರ್ಮಿಸುವ ಕುರಿತು ನಾಸಿಕದಲ್ಲಾಗಿರುವ ನಿರ್ಧಾರಗಳ ಕಡೆಗೆ ಕಾಂಗ್ರೆಸಿಗರೆಲ್ಲರೂ ಲಕ್ಷ್ಯ ಹರಿಸಬೇಕಾದುದು ಅಗತ್ಯ.

ಸ್ವೀವಿಸಿಗಾಗಿ

ವಿಚಾರಿಸಿರಿ

ನೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ, ಲಿಮಿಟೆಡ್.
(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಟಿ. ಎಮ್. ಬಿದಂಬರಮ್ ಚೆಟ್ಟಿಯಾರ್

ಪ್ರಗತಿ ಸಥದಲ್ಲಿರುವ ಈ ವಿಮಾ ಸಂಸ್ಥೆಯ ಪಾಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜೆನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡ್ಸು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನ್ಯಾಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

BUY INDIAN! ENCOURAGE INDIAN INDUSTRY!
ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾಗುವುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ವಿಂಧಾಮೋದಿತ ಉತ್ಕೃಷ್ಟ ವೈದ್ಯಕೀಯ ಕೇಶವರ್ಧಕ ತೈಲ.

Highly perfumed and medicated, worth using daily by one and all keeps hair black and relieves headache etc.

REGD. TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ವೈಕ್ಕ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಖಂಡಿತನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ನಾಸಿಕದ ಕಾರ್ಯಕಲಾಪ

ಕಾಂಗ್ರೆಸಿನ ಜಾಹೀರು ಮಹಾಧಿವೇಶನವೆಂಬುದು ರಾಷ್ಟ್ರದ ಪಾಲಿಗೆ ಒಂದು ದೊಡ್ಡ ಜನಜಾತ್ರೆ ಮತ್ತು ರಾಷ್ಟ್ರೀಯ ಮಹೋತ್ಸವ. ಜನಸಂದಣಿಯು ಮಟ್ಟಿಗೆ ಭಾರತದ ಹೆಸರಾಂತ ಕೂಟಗಳಿಗಿದು ಸಮಾನವಾದುದು; ರಾಷ್ಟ್ರೀಯ ವಿಚಾರ ವಿಮರ್ಶೆ ಮತ್ತು ನಿರ್ಧಾರಗಳ ಮಟ್ಟಿಗೆ ಅಖಿಲ ಭಾರತದಲ್ಲಿ ಅನನ್ಯವಾದುದು. ಬೀಗಾಗಿ ಸರ್ವ ಸಾಮಾನ್ಯವಾಗಿ ವರುಷಕ್ಕೊಮ್ಮೆ ನೆರೆಯುವ ಕಾಂಗ್ರೆಸ್ ಮಹಾಧಿವೇಶನವು ರಾಷ್ಟ್ರದ ಮೂಲೆ ಮೂಲೆಗಳಿಂದಲೂ ಸಾಧ್ಯವಿದ್ದಷ್ಟು ಜನರನ್ನು ಬರಮಾಡಿಕೊಳ್ಳುತ್ತದೆ; ರಾಷ್ಟ್ರದ ಎಲ್ಲರ ಲಕ್ಷವನ್ನಂತೂ ಹೆಳೆದೇ ತೀರುತ್ತದೆ. ರಾಷ್ಟ್ರ ನಾಯಕರೆಲ್ಲರ ದರ್ಶನ ಲಾಭವನ್ನು ಒಂದೇ ಬಾರಿ ಪಡಕೊಳ್ಳುವ ಲವಲವಿಕೆಯಿರುವವರಿಗೆ ಕಾಂಗ್ರೆಸ್ ಮಹಾಧಿವೇಶನವು ಸಂಪ್ರದಾಯಬದ್ಧ ವಿಕ ಮಾತ್ರ ಸುಯೋಗ. ಪ್ರಾಮುಖ್ಯ ರಾಜಕೀಯ ವಿಷಯಗಳೆಲ್ಲವುಗಳ ಚರ್ಚೆಗಳನ್ನೂ ಧೀರೋದಾತ್ತ ಭಾಷಣಗಳನ್ನೂ ಕೇಳುವ ಬಾಯಾರಿಕೆಯೂ ಇಲ್ಲಿಯೇ ತಣಿಯ ಬೇಕು. ರಾಷ್ಟ್ರೀಯತಾ ದ್ಯೋತಕಗಳ ವಿವಿಧಾಂಗಗಳನ್ನು ಕಾಣುವ–ರಾಷ್ಟ್ರಾಭಿಮಾನದ ಪ್ರಭಾವವನ್ನರಿಯುವ–ಸುಸಂದರ್ಭವಿದು. ಜನತಾಹೃದಯದಲ್ಲಿ ಯಾವ ಧೋರಣವಿಗೆಂತಹ ಸ್ಥಾನವಿದೆಯೆಂಬುದು ಅಲ್ಲಿಯ ಭೇಟಿ ಕುತೂಹಲ, ಮಾತು ಮನ್ನಣೆಗಳ ಮೇಲಿಂದ ತಿಳಿದುಬರುತ್ತದೆ. 56ನೇ ಕಾಂಗ್ರೆಸಿನ ಜಾಹೀರು ಅಧಿವೇಶನವು ನಾಸಿಕದಲ್ಲಿ ಇದೇ ತಾ. 20 ಮತ್ತು 21ರಲ್ಲಿ ಜರಗಿತು. ಅದರ ಪೂರ್ವ ಪೀಠಿಕೆಯಾಗಿ ಕಾರ್ಯಕಾರೀ ಸಮಿತಿ ಮತ್ತು ವಿಷಯ ನಿಯಾಮಕ ಸಮಿತಿ ಸಭೆಗಳು ತಾ. 16 ರಿಂದ ತಾ. 21ರ ವರೆಗೆ ನಡೆದಿದ್ದುವು.

ಸಮಿತೀ ಸಭೆಗಳಲ್ಲಿ–

ಹಲವು ದಿನಗಳ ಮತ್ತು ಅಧಿಕ ಸಂಖ್ಯೆಯ ಜನರ ಪರಿಶ್ರಮದ ಫಲವಾಗಿ ನಾಸಿಕದಲ್ಲಿ ಕಾಂಗ್ರೆಸ್ ಅಧಿವೇಶನ ವಲಯ 'ಗಾಂಧೀನಗರ'ವು ಕಲೆ, ಸೌಂದರ್ಯ ಮತ್ತು ಸರ್ವಾನುಕೂಲತೆಗಳನ್ನೊಳಗೊಂಡ ಒಂದು ಚೆಕ್ಕ ಹೊಸ ನಗರವಾಗಿ ಮೂಡಿದ್ದಿತು. ಸೆಪ್ಟೆಂಬರ್ ತಾ. 16ರಲ್ಲಿ ಅಧ್ಯಕ್ಷರು ಆಗಮನದೊಡನೆ ಅಧಿವೇಶನ ಸಂಭ್ರಮಗಳು ಆರಂಭವಾದುವು. ಅಂದು ಪೂರ್ವಾಹ್ನ ರೈಲಿನಲ್ಲಿ ಆಗಮಿಸಿದ ಅಧ್ಯಕ್ಷ ಧಂಡನರನ್ನು ನಿಲ್ದಾಣದಿಂದ ಅಕರ್ಷಣೀಯ ಮೆರವಣಿಗೆಯಿಂದೊಯ್ಯಲಾಯಿತು. ಬೆಳ್ಳಿಬಣ್ಣ ಕೂಟ್ಟದ್ದ ಮುಂದುಗಡೆ ತಿರುಗುವ ಅಶೋಕ ಚಕ್ರವಿದ್ದ ದೊಡ್ಡ ಮೋಟಾರು ಬಂಡಿಯಲ್ಲಿ ರಾಷ್ಟ್ರಧ್ವಜದ ಬುಡದಲ್ಲಿಟ್ಟದ್ದ ತನ್ನ ಆಸನಕ್ಕೆ ಹತ್ತಲು ಆ ಮೊದಲೇ ಬಿದ್ದಿದ್ದ ಪುಷ್ಪಹಾರಗಳ ಭಾರವನ್ನು ಅಧ್ಯಕ್ಷರು ಇಳಿಸಿಕೊಳ್ಳಬೇಕಾಯಿತು. ಮುಂಭಾಗದಲ್ಲಿ ಆನೆ, ಬೇಂಡು, ಸ್ವಯಂಸೇವಕ ಸೇವಿತೆಯರಿಂದ ಹಿಂಭಾಗದಲ್ಲಿ ಮಂತ್ರಿ ಪ್ರಮುಖರ ಕಾರುಗಳ ಸಾಲಿನಿಂದ, ಸಂಭ್ರಮದ ಹಾಗೂ ದೊಡ್ಡ ಮೆರವಣಿಗೆ ಹೊರಟಿದ್ದಿತು; ಆಗಲೇ ಬಲವಾದ ಗಾಳಿಮಳೆ ಬಡಿಯುತಿದ್ದರೂ ಹಿಂಡುಗುತ್ತ ನಿಂತು, ಮರವಾಡುಗಳನ್ನೇರಿ ಪುಷ್ಪವೃಷ್ಟಿ ಸುರಿಯುತ್ತಾ ಜೈಕಾರಗಳನ್ನು ಹಾಕುತ್ತಿದ್ದ ಜನಸಂದಣಿ ದೊಡ್ಡದಿದ್ದಿತು. ಆಂದೇ ಅಪರಾಹ್ನ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆ; ಜಾಹೀರು ಮಹಾಧಿವೇಶನದ ಮುಂದೆಬರುವ ನಿರ್ಣಯಗಳ ಮೂಲ ಕಾಂಗ್ರೆಸ್ ಕಾರ್ಯಕಾರೀಸಮಿತಿ,ಇಲ್ಲಿ ಸೂಚಿಸಲ್ಪಟ್ಟವುಗಳು, ವಿಷಯನಿಯಾಮಕ ಸಮಿತಿಯಲ್ಲಿ ಸವಿವರ ಪರ್ಯಾಲೋಚನೆಗೊಳಗಾಗಿ ಅಧಿವೇಶನದ ಮುಂಬರುವ ನಿರ್ಣಯಗಳಾಗಿ ರೂಪು ಗೊಳ್ಳಬೇಕು. ಅ ಭಾ. ಕಾಂಗ್ರೆಸ್ ಸಮಿತಿಯೇ ವಿಷಯನಿಯಾಮಕ ಸಮಿತಿಯಾಗಿ ಮಾರ್ಪಡುತ್ತದೆ. ತಾ 16, 17, ಮತ್ತು 18ನೇ ಮುಂಜಾನೆ ಕಾರ್ಯಕಾರೀ ಸಮಿತಿ ಸಭೆಗಳಾದುವು ತಾ. 18ನೇ ಅಪರಾಹ್ನ ವಿಷಯ ನಿಯಾಮಕ ಸಮಿತಿಯು ಸಭಾರಂಭ. ಪ್ರಚಲಿತಾಧ್ಯಕ್ಷನು ನಿಯೋಜಿತಾಧ್ಯಕ್ಷನಿಗೆ ಪೀಠವನ್ನು ಒಪ್ಪಿಸಿಕೊಡುವುದು ಇಲ್ಲಿಯೇ. ಸರ್ವಸಾಮಾನ್ಯವಾಗಿ ಎಲ್ಲಾ ಧುರೀಣರ ಮತ್ತು ರಾಷ್ಟ್ರದ ಎಲ್ಲಾ ಭಾಗಗಳ ಪ್ರತಿನಿಧಿಗಳ ಕೂಡುವಿಕೆಯಿರುವ ವಿಷಯನಿಯಾಮಕ ಸಮಿತಿಸಭೆಯೇ ಮಹಾಧಿವೇಶನದ ತಿರುಳಾಗಿದೆ ಜಾತ್ರೆ ಸಂದಣಿಯಂತೆ ನೆರೆಯುವ ಜಾಹೀರುಅಧಿವೇಶನದಲ್ಲಿ 'ಗುಂಪಿನೊಡನೆ ಗೋವಿಂದಾ' ಹಾಕುವ ಲಾಲಸೆಯು ಸ್ವಾಭಾವಿಕ ವಿರುವಾಗ ಕೂಲಂಕುಷ ವಿಷಯ ವಿಮರ್ಶೆ ನಡೆಯುವುದೂ ವಿಷಯ ನಿಯಾಮಕ ಸಮಿತಿಯಲ್ಲೇ. ಈ ಸಮಿತಿಯು ರೂಪಿಸಿದುದನ್ನು ಅಧಿವೇಶನವು ಅಲ್ಲುಗಳೆದ ನಿದರ್ಶನವು ಸ್ವಾರಸ್ಯಜನಕ; ಕಾಂಗ್ರೆಸ್ ಚರಿತ್ರೆಯಲ್ಲೇ ಇಲ್ಲ ಕಲಾಪೂರ್ಣವಾಗಿ ಹಾಗೂ ವಿಶಿಷ್ಟ ಸಂಭ್ರಮದೊಡನೆ ರಚಿಸಲ್ಪಟ್ಟದ್ದ ವಿಷಯ ನಿಯಾಮಕ ಸಭಾ ಮಂದಿರದಲ್ಲಿ ಆ ಸಭೆ ನಡೆದ ರೀತ್ಯವು ಅತ್ಯಂತ ಪ್ರೇಕ್ಷಣೀಯವಿದ್ದಿತು. ಪ್ರಚಲಿತಾಧ್ಯಕ್ಷ ಡಾ| ಪಟ್ಟಾಭಿಗಳು ವಿದಾಯ ಭಾಷಣವಿತ್ತು ನಿಯೋಜಿತಾಧ್ಯಕ್ಷ ಶ್ರೀ ಧಂಡನರಿಗೆ ಗಾದಿಯನ್ನು ಬಿಟ್ಟುಕೊಟ್ಟೊಡನೆ, ಕಾಂಗ್ರೆಸನ್ನು ಶುದ್ಧೀಕರಿಸುವ ವಿಶ್ವ ಬಲಪಡಿಸುವ ಕುರಿತು ಶ್ರೀ. ಧಂಡನರ ಮನ್ಮಾತುಗಳಾದುವು ಆ ಮೇಲೆ ಸೂಚನೆಗಳ ಸರ್ಯಾಲೋಚನೆಗಾರಂಭ. ಅಂದಿನಿಂದ, ಕಾಂಗ್ರೆಸ್ ಅಧಿವೇಶನ ಮುಗಿದ ತಾ. 21ರ ವರೆಗಿನ ನಾಲ್ಕು ದಿನಗಳಲ್ಲೂ ವಿಷಯ ನಿಯಾಮಕ ಸಮಿತಿ ಸಭೆಗಳು ನಡೆದುವು; ಪ್ರಾಮುಖ್ಯ ನಿರ್ಣಯಗಳಾದುವು. ದೇಶವಿದೇಶ ಸಂಬಂಧದ ಎಲ್ಲಾ ರಂಗಗಳ ನೆಹರೂ ಸರ್ಕಾರೀ ಧೋರಣೆಗೆ ಪೂರ್ಣ ಬೆಂಬಲ ಕೊಡುವ ಕಡೆಗೇನೇ ಎಲ್ಲಾ ನಿರ್ಣಯಗಳೂ ನುಸು ಮಾಡಿದ್ದುವು. ಯಾವ ರಾಷ್ಟ್ರ ಸಾಳಿಯಕ್ಕೂ ಕಟ್ಟುಬೀಳದೆ ನ್ಯಾಯವನ್ನೆತ್ತಿಹಿಡಿಯುವ ವಿದೇಶ ಸಂಬಂಧಿ ಧೋರಣೆ—ನೆಹರೂ ಕಲ್ಪನೆಯ ಅರ್ಧಾಕಪ್ರಗತಿ ನಿರ್ದೇಶಗಳಲ್ಲಿ "ಕಲ್ಯಾಣದಾಯೀ ರಾಷ್ಟ್ರ"ರಚನೆ—ಪಾಕಿಸ್ತಾನ್ ಧೋರಣೆಯನ್ನು ಅಲಕ್ಷಿಸಿ ಜಾತೀಯತೆಯನ್ನು ಸಮೂಲ ನಾಶ ಮಾಡಿಕೊಳ್ಳುವದಕ್ಕೆ ಮತ್ತು ಅಲ್ಪಸಂಖ್ಯಾಕರ ಸಂಬಂಧದ ಭಾರತ ಪಾಕಿಸ್ತಾನ್ ಒಪ್ಪಂದಕ್ಕೆ ಅನುಮೋದನೆ–ಮುಂತಾದ ನಿರ್ಧಾರಗಳೇ ಪ್ರಾಮುಖ್ಯವಾದವುಗಳು. ಈ ನಿರ್ಣಯಗಳ ಪೈಕಿ ಒಂದೆರಡನ್ನು ತಾನೇ ಮುಂದಿಟ್ಟು ಪಂಡಿತ ನೆಹರುಗಳು ಮಾಡಿದ್ದ ಭಾಷಣಗಳು ಆತ್ಯುಜ್ವಲವಿದ್ದುವು' ಎಲ್ಲವೂ ಸರ್ವಾನುಮತದಿಂದ, ಇಲ್ಲವೇ 325 ಸದಸ್ಯರಿದ್ದ ವಿಷಯ ನಿಯಾಮಕ ಸಮಿತಿಯಲ್ಲಿ ಕೇವಲ 3 ಮಂದಿಯ ವಿರೋಧದಿಂದ ಮಂಜೂರಾಯುವು.

ಜಾಹೀರು ಅಧಿವೇಶನದಲ್ಲಿ–

ಈ ಬಾರಿಯ ಜಾಹೀರು ಅಧಿವೇಶನ ಮಂದಿರವೂ ಮಿತ ಸಂಖ್ಯೆಯ ಜನರನ್ನು ಹಿಡಿಸುವಂತಿದ್ದು, ಹಿಂದಿನ ಅಧಿವೇಶನಗಳನ್ನು ಕಂಡಿದ್ದವರಿಗೆ ನಿಯಂತ್ರಣ ಯುಗವನ್ನು ನೆನಪಿಗೆ ತರುತಿದ್ದಿತು; 15000 ಜನರನ್ನು ಹಿಡಿಯುವ ಸಭಾ ಮಂದಿರವು ಕೆಕ್ಕಿರಿದು ತುಂಬಿದ್ದಿತು; ಹೊರಗಡೆ ಅಸಂಖ್ಯಾಕ ಜನರು ಒಳ ಹೋಗುವ ನಾಯಕರ ದರ್ಶನಾಕಾಂಕ್ಷಿಗಳಾಗಿ ನೆರೆದಿದ್ದರು. ಧುರೀಣರಾಗಮಿಸುವಾಗ ಜನರ ಒತ್ತಡವನ್ನು ತಡೆಗಟ್ಟುವುದು 600ಕ್ಕೂ ಮಿಕ್ಕಿ ಇದ್ದ ದೇಶ ಸೇವಕ ಸೇವಿಕೆಯರಿಗೂ ಪೋಲೀಸರಿಗೂ ಪರಮಾವಧಿ ಸಾಹಸದ ಮಾತಾಗಿದ್ದಿತು. ಸಭಾಂಗಣದೊಳಗಿನ ಎಲ್ಲಾ ವಿಧದ ವ್ಯವಸ್ಥೆಗಳೂ ನಾಜೂಕಾಗಿದ್ದುವು ಪ್ರಭುಮತಃ ಇತರ ಧುರೀಣರೊಡನೆ ಅಧ್ಯಕ್ಷರು ಮೆರವಣಿಗೆಯಿಂದ ಬಂದು ಸಭಾಂಗಣ ಪ್ರವೇಶ—ಆ ಮೇಲೆ ರಾಷ್ಟ್ರಗೀತೆ—ನಂತರ ಸ್ವಾಗತಾಧ್ಯಕ್ಷ ಶ್ರೀ ಬಿ. ಯಸ್. ಹಿರೆ, ಅವರ ಸ್ವಾಗತ ಭಾಷಣನಡೆದು ಅಧ್ಯಕ್ಷರು ಭಾಷಣವಿತ್ತರು. "ಭಾರತ ರಾಜ್ಯಭಿಷ್ಟನೆಯು ಯಾವುದೇ ಧರ್ಮಗ್ರಂಥವನ್ನು ಆಧರಿಸಿರದೆ, ಎಲ್ಲಾ ಪ್ರಜೆಗಳಿಗೂ ಸಮಾನ ಹಕ್ಕು ಬಾಧ್ಯತೆಗಳನ್ನಿತ್ತಿದೆ. ಇದು ನಮ್ಮ ಸದಾಶಯ ಮತ್ತು ದೂರದೃಷ್ಟಿಯ ದ್ಯೋತಕ. ಈ ದೇಶದಲ್ಲಿ ಹಿಂದೂ ಸರಕಾರ ಸ್ಥಾಪಿಸುವ ಭಾವನೆ ಕೆಲವು ಹಿಂದುಗಳವ; ಚುನಾವಣೆಗಳನ್ನೇಕೆ ಇಂತಹ ಟೊಪ್ಪಿಗಳೇಳಬಹುದು; ಈ ವಾದದರಿಯೋಚನೆಗೂಡಾ ಅಂಕಿಅಕ್ಕ ಆಕ್ಷೇಪಿಗಳನ್ನೆಬ್ಬಿಸಬಹುದು. ಈ ವಿಷಯದಲ್ಲಿ ನಾವು ಪಾಕಿಸ್ತಾನದಿಂದ ಕಲಿಯುವಂತಹದೇನೂ ಇಲ್ಲ." ಎಂಬಂತಹ ಸ್ಪಷ್ಟವಾಣಿಗಳಿಂದ ತನ್ನ ಮೇಲಿದ್ದ ಸಂದೇಹಗಳೆಲ್ಲವನ್ನೂ ಧೂಡಿಸಲ್ಪಡುವಂತೆ ಮಾಡಿದರು. ನೆಹರುಗಳ ವಿದೇಶ ಧೋರಣೆಯನ್ನು ಸಮರ್ಥಿಸಿ, ಕಾಶ್ಮೀರದಲ್ಲಿ ಪಾಕಿಸ್ತಾನವು ಆಕ್ರಮಣಕಾರನೆಂಬುದನ್ನು ಖಚಿತಪಡಿಸಿದರು. ನಿರಾಶ್ರಿತರ ಸಮಸ್ಯೆ, ಲೋಕೈಕ ಸಂಕಾರ, ದೇಶದ ವಿಶೇಷತಃ ಹಳ್ಳಿಗಳ ಆರ್ಥಿಕಸ್ಥಿತಿ, ಜಾತಿ, ಸ್ವದೇಶಿ, ಸಾರ್ವಜನಿಕಾರ್ಥಿಕ ಯೋಜನೆ, ಮುಂತಾದ ಎಲ್ಲಾ ವಿಷಯಗಳೂ ಧಂಡನರ ಅಧ್ಯಕ್ಷ ಭಾಷಣದಲ್ಲಿ ವಿವರವಾಗಿ ಬಂದಿದ್ದವು. ಆ ಮೇಲೆ ವಿಷಯನಿಯಾಮಕ ಸಮಿತಿಯಲ್ಲಾಗಿದ್ದ ನಿರ್ಣಯಗಳೆಲ್ಲವೂ ಅಂದು ಮತ್ತು ಮರುದಿನ ಅನುಕ್ರಮವಾಗಿ ಮುಂದೆ ಬಂದು ಅತ್ಯುತ್ಸಾಹದಿಂದ ಮಂಜೂರಾದುವು. ವಿದೇಶಸಂಬಂಧ, ಭಾರತ ಪಾಕಿಸ್ತಾನ್ ಒಪ್ಪಂದ ಮತ್ತು ಜಾತೀಯತಾ ಭಾವನಿವಾರಣಾ ಸಂಬಂಧದ ನಿರ್ಣಯಗಳ ಮೇಲೆ ಪಂಡಿತ ನೆಹರುಗಳು ಹೃದಯಸ್ಪರ್ಶಿ ಭಾಷಣಗಳನ್ನಿತ್ತಿದ್ದರು. ತಾ 21ರಲ್ಲಿ ಕಾಂಗ್ರೆಸ್ ಮಹಾಧಿವೇಶನದ ಕಾರ್ಯಕಲಾಪಗಳು ಮುಗಿದುವು. ಕೊನೆಯಲ್ಲಿ ಕಾಂಗ್ರೆಸ್ ನಿರ್ಣಯಗಳನ್ನು ಅನುಕಂಸುವಂತೆ ಪಂಡಿತ ನೆಹರುಗಳ ಮತ್ತು ಅಧ್ಯಕ್ಷ ಧಂಡನರ ಭೋಧಪ್ರದ ಭಾಷಣಗಳದ್ದವು. ಮಹಾ ಪ್ರದರ್ಶನ, ನಿದ್ಯಾರ್ಥಿ ಸಮ್ಮೇಳನ, ಮಹಾರಾಷ್ಟ್ರಯುವಕ ಸಮ್ಮೇಳನ, ಧ್ವಜವಂದನೆ ಇತ್ಯಾದಿ ಪ್ರೇಕ್ಷಣೀಯ ಸಮಾರಂಭಗಳೂ ಆ ದಿನಗಳಲ್ಲಿ ಗಾಂಧಿನಗರವಲ್ಲಾಗಿದ್ದುವು. ನೆಹರು ವಲ್ಲಭಾಯಿ, ಮತ್ತು ಧಂಡನರಂತಹ ನಾಯಕರು ಈ ಸಂದರ್ಭದಲ್ಲಿ ಬಾಷಣಗಳನ್ನಿತ್ತಿದ್ದರು. ರಾಷ್ಟ್ರದ ಪಾಲಿನ ಒಂದು ಮಹಾಯೋಗವು ಜಯಶೀಲವಾಗಿ ಮುಗಿದಂತೆ ನಾಸಿಕ ಕಾಂಗ್ರೆಸ್ ಅಧಿವೇಶನವು ಮುಕ್ತಾಯಗೊಂಡಿತು.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್

(ಸ್ಥಾಪನೆ: 1908)

ಆತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ

ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್, ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್,

ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮುವತ್ತೈಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ಮುಡಿನವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನವ್ಯ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ

ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಟೀಲ: ೧—೪—೦

ಶ್ರೀ ಕೊರಡ್ಡಲ್ ಶ್ರೀನಿವಾಸರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

THE
Canara Banking Corporation Ltd.
(Incorporated in India)
Estd. 1906
Head Office · **UDIPI, (S. I.)**

Capital Authorised .... Rs 25,00,000
Capital Issued, Subscribed &
Paid up .... Rs 20,00,000
Reserves .... Rs. 9,44,765

ಗುರುವಾರ, ಉಡುಪಿ, ೨೮-೯-೧೯೫೦

ಗೊಬ್ಬರ ಸಪ್ತಾಹ

ಗಾಂಧಿಜೀಯ ಜನ್ಮದಿನ ಒಕ್ಟೋಬರ್ ತಾ 2ರಿಂದ ತಾ 8ರವರೆಗಿನ ಒಂದು ವಾರವು ಹಲವು ವರುಷಗಳಿಂದ 'ಗಾಂಧೀ ಜಯಂತಿ'ಗೆ ಅಧವಾ ಮಹಾತ್ಮಾ ಗಾಂಧಿಯವರೇ ಸೂಚಿಸಿದ್ದಂತೆ 'ಚರಕಾಜಯಂತಿ'ಗೆ ಮೀಸಲಿದೆ. ಈ ವರುಷ ಈ ಗಾಂಧೀ ಸಪ್ತಾಹದಲ್ಲೇ 'ಗೊಬ್ಬರ ಸಪ್ತಾಹ'ವನ್ನು ಇಡೀ ಸಂಸ್ಥಾನದಲ್ಲಿ ಆಚರಿಸುವ ವ್ಯವಸ್ಥೆಯನ್ನು ಮದ್ರಾಸ್ ಸರಕಾರವು ಕೈಕೊಂಡಿದೆ. ವ್ಯರ್ಥವಾಗುತ್ತಿರುವ ಕಸಕಲ್ಮಷಗಳು, ಗೊಬ್ಬರವಾಗಿ ಉಪಯೋಗಕ್ಕೆ ಬೀಳುವಂತೆ, ಎಲ್ಲೆಲ್ಲೂ ಮಾದರೀ ಹೊಂಡಗಳನ್ನು ತಯಾರಿಸಿ ಅವುಗಳಲ್ಲಿ ಕಲ್ಮಷಾದಿಗಳನ್ನು ತುಂಬಿಸುವ ಕಾರ್ಯಕ್ರಮವೇ ಗೊಬ್ಬರ ಸಪ್ತಾಹದಲ್ಲಿ ಮುಖ್ಯವಾದುದು. ಇಂತಹ ಗೊಬ್ಬರ ತಯಾರಿಯು ಅವಶ್ಯಕತೆಯಿದು ಜನರಿಗೆ ಸರಿಯಾಗಿ ಮಂದಟ್ಟಾಗುವಂತೆ ಮೆರವಣಿಗೆ, ಸಭೆ, ಭಾಷಣ, ಪ್ರದರ್ಶನ ಇತ್ಯಾದಿಗಳೂ ಈ ವಾರದಲ್ಲಿ ಎಲ್ಲೆಲ್ಲೂ ನಡೆಯುವುದು ಕಾರ್ಯಕ್ರಮವಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ನಿರ್ದೇಶನಾನುಸಾರವಾಗಿ ತಾಲೂಕು, ಫಿರ್ಕಾ, ಗ್ರಾಮಗ್ರಾಮಗಳಲ್ಲಿ ಈ ಸಪ್ತಾಹಾಚರಣೆಯ ವ್ಯವಸ್ಥೆಗಳಾಗುತ್ತಿವೆ, ಎಂದು ತಿಳಿದುಬಂದಿದೆ.

ಕೃಷಿಪ್ರಧಾನ ರಾಷ್ಟ್ರವಾಗಿದ್ದೂ, ಆಹಾರಾಭಾವಕ್ಕೀಡಾಗಿರುವ ಮತ್ತು ಬರುವ ವರುಷಾಂತ್ಯದೊಳಗೆ ಆಹಾರ ಸ್ವಾವಲಂಬಿಯಾಗಬೇಕೆಂಬ ಶಪಥ ಕೊಟ್ಟಿರುವ ಭಾರತದಲ್ಲಿ 'ವನ ಮಹೋತ್ಸವ' 'ಗೊಬ್ಬರ ಸಪ್ತಾಹ'ದಂತಹ ಆಚರಣೆಗಳ ಆವಶ್ಯಕತೆಯನ್ನು ಪ್ರತ್ಯೇಕ ವರ್ಣಿಸಬೇಕೆಂದಿಲ್ಲ. ಗಾಂಧಿಜಿಯೇ ಸೂಚಿಸಿದ್ದಂತೆ ವಿಧಾಯಕ ಕಾರ್ಯ ನಡೆಯಬೇಕಾಗಿರುವ ಈ 'ಚರಕಾ ಸಪ್ತಾಹ'ದಲ್ಲಿ, ಊರ ಕೊಳೆಕಸಗಳನ್ನು ಗುಡಿಸಿ ತೆಗೆಯುವ ಗ್ರಾಮ ಸೈನ್ಯ ಮಾಲ್ಯವೊಂದೆಡೆಯಿಂದಾಗುವಾಗಲೇ, ಇನ್ನೊಂದೆಡೆ ಆ ಕಲ್ಮಶಗಳನ್ನು ಸಂಗ್ರಹಿಸಿಡುವ ಮೂಲಕ ಗೊಬ್ಬರಾಭಿವೃದ್ಧಿಯೂ ಆಗುವುದರಿಂದ ಈರೀತಿ ಇವೆರಡಿಫಲ ದೊರಕಿಸುವ ಈ ಆಚರಣೆಯು ಸಮಂಜಸವಾದುದೆನ್ನಲಡ್ಡಿಯಿಲ್ಲ. ಆದರೆ "ಈ ಮಟ್ಟಿಗೂ ಇಷ್ಟೇ ಏನು?" ಎಂಬ ಪ್ರಶ್ನೆ ಹುಟ್ಟುತ್ತಿದೆ ಮಾದರಿಡಗಳ ಅಥವಾ ಗೊಬ್ಬರದ ಪ್ರಯೋಜನಗಳನ್ನು ಶ್ರಮಜೀವಿ ಹಳ್ಳಿಗರು ಅನ್ನರ ಉಪನ್ಯಾಸಗಳಿಂದ ಅರಿತುಕೊಳ್ಳಬೇಕೆಂದಿಲ್ಲ; ಅಧಿಕಾರಿಗಳು ಮತ್ತು ಇತರ ಕಾರ್ಯಕ್ಷೇತ್ರಗಳಲ್ಲಿರುವ ಮಿಕ್ಕವರು ಗೊಬ್ಬರದಂತಹ ಸಾಗುವಳಿಸಂಬಂಧದ ಅನುಭವಗಳನ್ನು ಹಳ್ಳಿಗರಿಂದ ಕಲಿತುಕೊಳ್ಳಲಿಕ್ಕಿದೆ ಹೊರತು ಅವರಿಗೆ ಕಲಿಸಲಿಕ್ಕಿಲ್ಲ. ಗೊಬ್ಬರಕ್ಕಾಗುವ ಸೆಗಣಿ, ಬೂದಿ, ಕೆಸರು, ಕೊಳೆ, ಹೊಲಸು ಇತ್ಯಾದಿ ಎಲ್ಲಿದ್ದರೂ ಹೆಕ್ಕಿ ತಂದು ತನ್ನ ಗೊಬ್ಬರ ರಾಸಿಗೋ ಗದ್ದೆ, ಸಸಿಗಳ ಒಡಕ್ಕೋ ಜೆಲ್ಲುವ ಅಭ್ಯಾಸವು ಹಳ್ಳೀ ರೈತನಿದೆ, ಎಂಬುದು ಹಳ್ಳಿಯ ಅನುಭವವಿದ್ದವರಿಗೆಲ್ಲಾ ಗೊತ್ತಿರುವ ಸಂಗತಿ. ಗೊಬ್ಬರ ಹೊಂಡಗಳು ಹೇಗಿರಬೇಕೆಂಬ ಅಳತೇ ಸಂಬಂಧದ ಅಜ್ಞಾನವೇನೋ ರೈತರಲ್ಲಿರಬಹುದು. ಆದರೆ ಈ ಗೊಬ್ಬರ ಸಪ್ತಾಹದಲ್ಲಿ ರೈತರಿಗೆಲ್ಲಾ ಮಾದರೀ ಹೊಂಡದ ಪಾರ ದೊರೆಯುವದೆಂದಾಗಲೀ, ಈ ಹೊಂಡಗಳು ರೈತರಿಗೆ ತಿಳಿದಿರುವ ಗೊಬ್ಬರ ಸಂಗ್ರಹ ವಿಧಾನಗಳಿಗಿಂತ ಉತ್ತಮವಾದವುಗಳೆಂದಾಗಲೀ ಊಹಿಸಲಾಗುವದಿಲ್ಲ. ಮುಖ್ಯ. ಈ ಸಪ್ತಾಹಕ್ಕಿರುವುದು ಪ್ರಚಾರ ಪ್ರಾಮುಖ್ಯತೆಯೊಂದೇ; ಆರ್ಥಿಕವಾಗಿ ಕುಳಿಗೆ ಬಿದ್ದಿರುವಂತೆಯೇ ದೈಹಿಕವಾಗಿಯೂ ಗೊಬ್ಬರ, ಕೆಸರಿನಲ್ಲೇ ಹೊರಳಾಡುತ್ತಿರುವ ಶ್ರಮಜೀವಿ ರೈತರ ಮಟ್ಟಿಗೆ ಇಂತಹ ಪ್ರಚಾರದ ಆವಶ್ಯಕತೆ ಅಲ್ಪವು. ರೈತೇತರರಲ್ಲಿ ಮತ್ತು ಪೇಟೆ ಪಟ್ಟಗಳವರಲ್ಲಿ ಅಧಿಕಾಹಾರೋತ್ಪನ್ನ ಸಂಬಂಧದ ಅಭಿರುಚಿ ಮತ್ತು ಅನುಭವವನ್ನು ಹುಟ್ಟಿಸುವುದಕ್ಕಾಗಿ ಈ ಆಚರಣೆಯೆಂದಾದರೆ, ಇದೆಷ್ಟರ ಮಟ್ಟಿಗೆ ಸಫಲವಾಗುವುದೋ ತಿಳಿಯದು. ಅಧಿಕಾಹಾರೋತ್ಪತ್ತಿ ಸಂಬಂಧದ ಸಂಸ್ಥಾನ ವ್ಯಾಪೀ 'ಕಾರ್ಯಕ್ರಮ'ವೊಂದನ್ನು ಜಾರಿಗೆ ತಂದಿವೆಂಬ ಆತ್ಮಸಮಾಧಾನ ಸರಕಾರಕ್ಕೆ—ಇದೊಂದು ವಾರದ ಮಟ್ಟಿಗೆ ಗೊಬ್ಬರದ ವಾಸನೆ ನೋಡಿದ ಅಧಿನಾ ಸಭೆ, ಭಾಷಣಗಳನ್ನು ಜರಗಿಸಿದ ಕೀರ್ತಿ ಪ್ರಭಾವಶಾಲಿಗಳಾದ ಕೆಲವರ ಪಾಲಿಗೆ—ಇಷ್ಟೇ ಈ ಗೊಬ್ಬರ ಸಪ್ತಾಹದ ಮುಖ್ಯ ಪರಿಣಾಮಗಳೇನೊ! ಹೀಗಿದ್ದರೂ ಗೊಬ್ಬರದಂತಹ ವಿಷಯಗಳಿಗೆ ಇಂತಹ ಗೌರವಾರ್ಹ ಸ್ಥಾನ ದೊರೆಯುವುದರಿಂದ ಅನ್ಯ ಕ್ಷೇತ್ರಗಳಿಗೆ ಪ್ರೇರಣಾಮಗಳಾಗಬಹುದು. ಹಳ್ಳಿಗರಾದರೂ ಈ ಸಂಬಂಧದ ತಮ್ಮ ದೈನಂದಿನ ಕಾರ್ಯಗಳನ್ನು ಈ ವಾರದಲ್ಲಿ ಇಮ್ಮಡಿ ಮುಮ್ಮಡಿಗೊಳಿಸಬಹುದು; ಆದರಿಂದ, ತಮಗಭ್ಯಾಸವಾಗಿರುವ ರಾಜಕೀಯ ದಿನಾಚರಣೆಗಳ ಮಾದರಿಯಲ್ಲಿ ಗೊಬ್ಬರ ಸಪ್ತಾಹದಂಧವುಗಳನ್ನು ಆಚರಿಸುವುದರಿಂದಲೇ ತೃಪ್ತರಾಗದೆ, ಸಾಗುವಳೀ ಗಾರರಿಗತ್ಯವಶ್ಯವಿರುವ ಸಹಾಯ ಮತ್ತು ಸಲಕರಣೆಗಳನ್ನೊದಗಿಸುವ ಕಾರ್ಯಕ್ಕೆ ಕೈಹಾಕಬೇಕೆಂದು ಸರಕಾರವನ್ನು ಕೇಳಿಕೊಳ್ಳುವಾಗಲೇ, ಪ್ರದರ್ಶನರೂಪೀ 'ಗೊಬ್ಬರ ಸಪ್ತಾಹ'ವನ್ನಾದರೂ ಸಾರ್ಥಪ್ಪ ಪರಿಣಾಮಕಾರಿಯಾಗಿ ಮಾಡುವ ಅವಕಾಶವು ಜನತೆಗಿರುವುದರಿಂದ ಎಲ್ಲರೂ ಇದನ್ನು ಸಾರ್ಥಕ ರೀತಿಯಿಂದ ಆಚರಿಸಬೇಕೆಂದು ಜನತೆಯನ್ನೂ ವಿಜ್ಞಾಪಿಸಿಕೊಳ್ಳುತ್ತೇವೆ.

ಜಾಗತಿಕ ಸ್ಪರ್ಧಾರಂಗ

ಕೊರಿಯಾ ಸಮರವು ಬಿರುಸಾಗಿ ಸಾಗಿದೆ. ದಕ್ಷಿಣರಣರಂಗದ ಸಂಯುಕ್ತ ರಾಷ್ಟ್ರಗಳ ಸೇನೆಗಳು ಮತ್ತು ಉತ್ತರ ಗಡೆ ಸಿಯೋಲ್ ಬಳಿ ಇಳಿದಿದ್ದ ಸಂ. ರಾ. ದಳಗಳು ಮುಂಧಾವಿಸುತ್ತಾ ಬಂದ ಈಗ ಅವೆರಡರ ಮಧ್ಯಾಂತರವು 60 ಮೈಲುಗಳಿಗಿಂತಲೂ ಕಡಿಮೆಯಾಗಿದೆ, ಎಂದು ತಿಳಿದುಬಂದಿದೆ. ಈ ದ್ವಿಮುಖೀಧಾಳಿಯೇ ಕೊರಿಯದ ಕಮ್ಯೂನಿಸ್ಟರ ಶ್ರಧಾವನ್ನು ಕತ್ತರಿಸಲು ಪ್ರಕೃತ ಸಂಯುಕ್ತ ರಾಷ್ಟ್ರ ಸೇನೆಗಳು ಜಾಚಿರುವ ಕತ್ತರಿ. ಆದರೆ ಸಿಯೋಲ್ ಸಮೀಪದ ಧಾಳಿಯು ಆಕಸ್ಮಿಕಾಪಾಯವಾಗಿ ಬಡಿಬಾಗ, ಒಮ್ಮೆ ಸತ್ವಗುಂದಿದಂತೆ ತೋರಿದ್ದ ಕಮ್ಯೂನಿಸ್ಟರು ಧೃತಿಗೆಡದೆ, ಶಕ್ತಿಗುಂದದೆ ಪ್ರಬಲ ಪ್ರತಿಭಟನೆ ಕೊಡುತಿದ್ದಾರೆ; ಕಮ್ಯೂನಿಸ್ಟರ ಈ ವಿರೋಧವು ದಿನ ಹೋದಂತೆ ಬಲಗೊಳ್ಳುತ್ತಿದೆ. ಎಂತಹ ಕಂಟಕಗಳಿಗೀಡಾದರೂ ಎದೆ ಕಳಕೊಳ್ಳದೆ ಹೋರಾಡುವ ಸಾಹಸ ಮತ್ತು ಕೌಶಲ್ಯ ಹಾಗೂ ಅನುಕೂಲತೆಗಳು ಕಮ್ಯೂನಿಸ್ಟರಿಗಿವೆ. ತತ್ಪರಿಣಾಮವಾಗಿ ಕಮ್ಯೂನಿಸ್ಟರ ಕೈಯಲ್ಲಿರುವ ದಕ್ಷಿಣ ಕೊರಿಯದ ಹಳೇ ರಾಜಧಾನಿ ಸಿಯೋಲ್ ಪಟ್ಟಣವು ನಿನ್ನೇ ಕ್ಷಿಪಿಸಪ್ಪ ಸುಲಭದಲ್ಲಿ ಸಂಯುಕ್ತ ರಾಷ್ಟ್ರ ಸೇನೆಗಳ ಹಸ್ತಗತವಾಗಿಲವರೆಂಬುದು ಸ್ಪಷ್ಟವಾಗಿದೆ.

ಂಂ ಂಂ ಂಂ

ಸೌಂಯುಕ್ತ ರಾಷ್ಟ್ರ ಸೇನೆಗಳ ಮುಖ್ಯ ಸೇನಾಧಿಪತ್ಯವು ಲೇಕ್ ಸಕ್ಸೆಸ್‌ನಲ್ಲಿ ಇಲ್ಲೇ ತಾ. 1ನೆಲ್ಲಿ ಆರಂಭಿಸಿದೆ. ಪ್ರಪಂಚದ ೨೪ ರಾಷ್ಟ್ರಗಳು ಸದಸ್ಯರಾಗಿರುವ ಈ ಲೋಕ ಸಂಘದ ಮಹಾಸಭೆಯು ಆರಂಭದಲ್ಲಿ, ಆ ವರೆಗೆ ಅದರ ಅಧ್ಯಕ್ಷರಾಗಿದ್ದ ಜನರಲ್ ರೋಮುಲೋರವರು ಆರಂಭ ಭಾಷಣವೀಯುತ್ತಾ "ಜನರು ಶಾಂತಿಗಾಗಿ ಮತ್ತು ಸಂಯುಕ್ತ ರಾಷ್ಟ್ರ ಸಂಘಕ್ಕಾಗಿ ಸಾಯುತ್ತಿರುವಾಗ ಇಲ್ಲಿ ಕೇವಲ ಬಾಯಿಮಾತುಗಳು ಸಾಕಾಗಲಾರವು." ಎಂದು ಒತ್ತಿ ಹೇಳಿ ಸಂಯುಕ್ತ ರಾಷ್ಟ್ರಗಳಿಗೆ ಕರ್ತವ್ಯ ಪ್ರೇರಣೆ ಕೊಟ್ಟರು. ಅದರ ಬೆನ್ನಲ್ಲಿ ಮತ್ತು ಈ ಬಾರಿಯ ಸಂಯುಕ್ತ ರಾಷ್ಟ್ರ ಸಂಘದ ಮಹಾಸಭೆಯ ಪ್ರಥಮ ಪರ್ಯಾಲೋಚನೆಯಾಗಿ ಮುಂದೆ ಬಂದುದೆಂದರೆ ಸಂಯುಕ್ತ ರಾಷ್ಟ್ರಸಂಘದಲ್ಲಿ ಕಮ್ಯೂನಿಸ್ಟ್ ಚೈನಕ್ಕೆ ಸ್ಥಾನ ಕೊಡಬೇಕೆಂಬ ಭಾರತದ ಸೂಚನೆ. ಭಾರತದ ಪ್ರತಿನಿಧಿ ಸರ್. ಬಿ. ಎನ್. ರಾಯರು ಕೆಂಪು ಚೈನಕ್ಕೆ ಪ್ರಾತಿನಿಧ್ಯಕೊಡುವ ಆವಶ್ಯಕತೆಯನ್ನು ಮನಗಾಣಿಸಿ ಮಾತಾಡಿದೊಡನೆ, ಅಮೆರಿಕದ ಗೃಹ ಕಾರ್ಯದರ್ಶಿ ಏ. ಆಚಿಸೆನರು ಅದನ್ನು ವಿರೋಧಿಸಿದರು. ಸರ್. ಬಿ ಎನ್. ರಾಯರ ಸೂಚನೆಗೆ 16 ಅನುಕೂಲ ಮತ್ತು 38 ಪ್ರತಿಕೂಲ ಮತಗಳು ದೊರೆತು ಅದು ಬಿದ್ದುಹೋಯಿತು. ಬ್ರಿಟನು, ಫ್ರಾನ್ಸ್, ಬರ್ಮ, ಯುಗೊಸ್ಲೇವಿಯ ಮತ್ತು ಸೋವಿಯಟ್ ಪಾಳಯದ ರಾಷ್ಟ್ರಗಳು ಹಾಗೂ ಸ್ಕೇಂಡಿನೇವಿಯಾ ರಾಷ್ಟ್ರಗಳು ಭಾರತದ ಸೂಚನೆಗೆ ಅನುಕೂಲವಾಗಿ ಮತಕೊಟ್ಟಿದ್ದವು. 10 ರಾಷ್ಟ್ರಗಳು ತಾಟಸ್ಥ್ಯ ವಹಿಸಿದ್ದುವು; ಅಮೆರಿಕದ ಮುಂವಾಳುತ್ವದಲ್ಲಿ ಉಳಿದ ರಾಷ್ಟ್ರಗಳು ವಿರೋಧ ಮತವಿತ್ತಿದ್ದುವು. ಕೂಡಲೇ ರಶ್ಯಾದ ವಿತಿನ್ಸ್ಕಿಯವರು "ಸಂಯುಕ್ತ ರಾಷ್ಟ್ರ ಸಂಘದ ಮಹಾ ಎಸೆಂಬ್ಲಿಯ ಈ ನಿರ್ಣಯವು ಬೇಕಾಯಿದೇಕೀರ ಮತ್ತು ತಪ್ಪು" ಎಂದರು. ಚೈನಾ ಪ್ರಾತಿನಿಧ್ಯದ ಪ್ರಶ್ನೆಯನ್ನು ಪರ್ಯಾಲೋಚಿಸಲು 9 ಮಂದಿಯುಳ್ಳ ಸಮಿತಿಯೊಂದನ್ನು ರಚಿಸಬೇಕೆಂಬ ಸೂಚನೆಯು ಕೆನಡಾದ ಪ್ರತಿನಿಧಿಯಿಂದ ಮುಂದೆಬಂದು ಮುಂದೂ ರಾಯಿತು. ಈ ಒಂಭತ್ತು ಜನರಲ್ಲಿ ಆರ್ಯಮಂದಿ ಭಾರತದ ಸೂಚನೆಗೆ ವಿರುದ್ಧ ಮತ ಕೊಟ್ಟವರಾಗುವುದರಿಂದ ಈ ಸಮಿತಿಯ ನಿರ್ಣಯವೂ ಮಾದರಿಯದಾಗಬಹುದೆಂಬುದನ್ನು ಈಗಲೇ ಊಹಿಸಬಹುದು; ಆದರೆ 'ಪದ್ಧತಿ'ಯಲ್ಲಿ ಕಮ್ಯೂನಿಸ್ಟ್ ಚೈನಕ್ಕೆ ಸಂಯುಕ್ತರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯಕೊಡುವುದಕ್ಕೆ ಅಮೆರಿಕದ ಬದ್ಧವಿರೋಧ ಹೊರತು, ಚೈನದ ಒಂದಿಂಬು ನೆಲದಲ್ಲೂ ಅಧಿಕಾರವಿರದ ಚಿಯಾಂಗ್ ಕೈಶೇಕರ ಪ್ರತಿನಿಧಿಯನ್ನು ಸದಾಕಾಲವೂ ಇರಿಸಿಕೊಳ್ಳುವ ಅಪಹಾಸ್ಯಕರ ಧೋರಣೆ ಅಮೆರಿಕದ್ದಲ್ಲವೆಂದು ತಿಳಿದುಬಂದಿದೆ. ಚಿಯಾಂಗ್ ಕೈಶೇಕರ ಪ್ರತಿನಿಧಿಯನ್ನು ಹೊರತಕ್ಕೆ ಬೇಕೆಂದು ಕೊನೆಗೊಮ್ಮೆ ಮುಂದೆ

ಖಂಡ ರಶ್ಯದ ಸೂಚನೆಯೂ ಸಂಯುಕ್ತ ರಾಷ್ಟ್ರ ಸಂಘದಲ್ಲಿ 6 ಅನುಕೂಲ 41 ಪ್ರತಿಕೂಲ ಮತ ದೊರೆತು ಬಿದ್ದು ಹೋಗಿದೆ. ಟೆಡಿಟಾಂಗ್ ಕೈಶೇಕರ ರಾಷ್ಟ್ರೀಯ ಸರಕಾರದ ಈಗಿನ ನೆಲೆಯಾಗಿರುವ ಫೋರ್ಮೋಸಾ ಸಂಬಂಧದ ಚರ್ಚೆಯನ್ನೂ ಅಮೆರಿಕವು ಬಯಸುತ್ತಿದೆ ಮತ್ತು ಚೈನಾ ಫೋರ್ಮೋಸಾ ಪ್ರಶ್ನೆಗಳು ಜತೆಯಲ್ಲೇ ಪರ್ಯಾಲೋಚಿಸಲ್ಪಡಬೇಕೆಂದು ಇಟ್ಟಿಸುತ್ತಿದೆ. ಚೈನಾದ ಪ್ರಾತಿನಿಧ್ಯವು ಕಮ್ಯೂನಿಸ್ಟ್ ಸರಕಾರದ ಹಕ್ಕಿನದೆಂಬ ವಸ್ತುಸ್ಥಿತಿಯು ಎಲ್ಲರಿಗೂ ಮಂದಟ್ಟಾಗಿರುವುದಾದರೂ ಸದ್ಯಸ್ಥಿತಿಯಲ್ಲಿ ತನ್ನ ಪ್ರತಿಷ್ಠೆ ಮತ್ತು ಅನುಕೂಲತೆಗಾಗಿ ಅದನ್ನಾಕ್ಷೇಪಿಸುತ್ತಿರುವ ಅಮೆರಿಕವು, ನ ದ್ದಿತು. ಆದರೆ ಸಣ್ಣಹುಟ್ಟರಾಷ್ಟ್ರಗಳಾ ನಿದ್ದರೂ ಸಂಯುಕ್ತ ರಾಷ್ಟ್ರಸಂಘದಲ್ಲಿ ತಲೆವಾರು ಪ್ರಾತಿನಿಧ್ಯವಿರುವ ಲೇಟಿನ್ ಅಮೆರಿಕಾ ರಾಷ್ಟ್ರಗಳು ಕೊನೆಯ ಮುಹೂರ್ತದಲ್ಲಿ ಎಸ್. ಎಂ ಟಿ ಝೂ ಮುರ ಕಡೆಗೆ ನೇತಾಡಿದುದರಿಂದ ಸಂ. ಸ್ಥಳಾಭಾವದ

ರಸನಿಮಿಷ

"ಸೋವಿಯಟ್ ಮಕ್ಕಳು ಸೋವಿಯಟ್ ಜನತೆಯ ಮಹಾನಾಯಕರುಗಳಾದ ಲೀ ಲೆನಿನ್ ಮತ್ತು ಜೇ ವಿ ಸ್ಟಾಲಿನ್ ಕುರಿತು ಹೆಚ್ಚು ಹೆಚ್ಚು ಸಂಗತಿ ತಿಳಿಯಲಾಶಿಸುತ್ತಿವೆ, ಸೋವಿಯಟ್ ಜನತೆಯ ರಚನಾತ್ಮಕ ಪರಿಶ್ರಮದ ಕುರಿತಾಗಿಯೂ, ಅಲ್ಲಿನ ಪಟ್ಟಣ್ಯಾಗಿರಣಿ, ಇತ್ಯಾದಿಗಳ ಕುರಿತಾಗಿಯೂ ಬರೆದ ಪುಸ್ತಕಗಳನ್ನು ಇಚ್ಛಿಸುತ್ತಾರೆ; ಸೋವಿಯಟ್ ಪಿತೃಭೂಮಿಯ ವಿಜ್ಞಾನಿಗಳು, ವೈಮಾನಿಕರು ಶೈತರು, ನಾವಿಕರು, ದುಡಿಮೆಗಾರರು ಮೊಲಾದವರ ಜೀವನಾಂಶದ ವಿವರಗಳ ಬಗ್ಗೆ ಈ ಮಕ್ಕಳಿಗೆ ತುಂಬಾ ಕುತೂಹಲ; ಜನತಾ ಪ್ರಜಾಪ್ರಭುತ್ವಗಳನ್ನಿಸುವ ಜೆಕೊಸ್ಲೊವಾಕಿಯಾ, ಪೋಲೆಂಡ್ ಆದಿ ದೇಶಗಳ ಮೇಲೆ ಮಕ್ಕಳಿಗೆ ತುಂಬಾ ಅಭಿರುಚಿ. ಇತ್ತೀಚೆಗಂತೂ ಚೀನೀ ಕ್ರಾಂತಿ, ಚೀನೀ ಜನಜೀವನದ ಬಗ್ಗೆಯೂ ಅವರ ಕುತೂಹಲ ವಿಶೇಷ ರೀತಿಯಲ್ಲಿ ಕೆರಳಿದೆ." (ಟಾಸ್ ಸುದ್ದಿ)

—ಅಬ್ಬಾ ಮಕ್ಕಳೇ! ಎಲ್ಲ 'ಕ್ರೆಮ್ಲಿನ್'ನ ಲ್ಲೇ ಹುಟ್ಟುತ್ತವೇನು?

೦೦ ೦೦

ಮಿಂಡ್ ಲಾಯರ್ ಅಲ್ಲಿಯವರು ಆರೋಗ್ಯ, ವೈಯಕ್ತಿಕ ಮತ್ತು ವೃತ್ತಿಪರವಾದ ಕಾರಣಗಳಿಂದ ಯುರೋಪಿಗೆ ಹೊರಡುತ್ತಾರಂತೆ. (ಕರಾಚಿ ಸುದ್ದಿ)

—ಯುರೋಪಿನಲ್ಲಿ ಇವರ ವೃತ್ತಿಯವರೇನು ಕಡಮೆಯಾಗಿದ್ದಾರೆಯೆ? ಗೂಂಡರು ಅಲ್ಲೂ ಇದ್ದಾರೆಂದು ನಾವು ಕೇಳಿದ್ದೇನೆ.

೦೦ ೦೦

ಖಾಸಗಿ ಸಂಸ್ಥೆಗಳು ಪ್ರದಾನ ಮಾಡುವ ಉಪಾಧಿಗಳ ಬಗ್ಗೆ ಒಂದು ವಿಚಾರಣಾ ಸಮಿತಿ ನೇಮಕವಾಗುವುದಂತೆ

—ವಿಚಾರದರುಗಳು ಹುಷಾರಾಗಿರಬೇಕಾಯಿತು. ಆ ಮೇಲೆ; ವಿಶ್ವವಿದ್ಯಾಲಯಗಳಲ್ಲಿ ಡಿಗ್ರಿ ಸಂಪಾದಿಸುವ ಕ್ರಿಕ್ರವನ್ನೆಲ್ಲ ವಿಚಾರಿಸಲಿಕ್ಕೂ ಒಂದು ಸಮಿತಿ ಬರಲಿ.

೦೦ ೦೦

ಆರರಿಂದ ಹದಿನೆಂಟರ ವರೆಗಿನ ಮಕ್ಕಳು ತಂದೆ ತಾಯಿಗಳಿಲ್ಲದೆ ರಾತ್ರಿಯ ವೇಷಾವೆಗೆ ಬರಬಾರದೆಂದು ಪ್ರಯಾಗದಲ್ಲಿ ಒಂದು ಆಜ್ಞೆ ಹೊರಟಿದೆ.

—ಉಡುಪಿಯಲ್ಲಿ ಇಲೆಕ್ಟ್ರಿಕ್ ಸತ್ಯಾಗ್ರಹದ ಮೇಲೆ ತಂದೆ ತಾಯಿಗಳಿಗೂ ಕಷ್ಟವಾಗುತ್ತೆ.

೦೦ ೦೦

ಆರಾಮಿನ ಎಲ್ಲ ಸಲುವಳಿಯುಳ್ಳ ಸ್ವಿಸ್ ಫ್ಲೈಟ್ ಡಬ್ಬಿಗಳು ಇಂಡಿಯನ್ ರೇಲ್ವೆಗಳಿಗೆ ಬರುತ್ತಾವಂತೆ.

—ನಮ್ಮ ಆಸಂಖ್ಯಾಕ ದುರ್ಭಿಕ್ಷನಿಗಳಲ್ಲಿ ಅವುಗಳ ಲೋಹಕವಚದ ಸತ್ತ್ವ ಪರೀಕ್ಷೆ ಮಾಡಬೇಕೆಂದು ಸ್ವಿಸ್ ಯಾತ್ರಿಕರ ಇಚ್ಛೆ ಇರುವುದಿಲ್ಲವಂತೆ.

೦೦ ೦೦

ಬಂಗಾಳದ ಸುಂದರವನವೆಂಬ ಜವುಗು ನೆಲವನ್ನು ಯಾರೂ ಭೂಮಾಲಿಕರು ಕೊಂಡುಕೊಳ್ಳದ ಹಾಗೆ ಬಂಗಾಳ ಸರಕಾರ ಐವತ್ತು ಕೋಟಿ ರೂಪಾಯಿಯ ಯೋಜನೆಯೊಂದನ್ನು ಸೃಷ್ಟಿಸಿದೆ.

—ಯೋಜನೆಯು ಸೃಷ್ಟಿಯಾಯ್ತು ದೊಡ್ಡದಲ್ಲ. ರೂಪಾಯಿಯು ಸೃಷ್ಟಿ, ಗೌಡಬಂಗಾಳಿಯಿಂದಾಗುತ್ತಿದೆಯೆ?

೦೦ ೦೦

ಸ್ವಾಲಿನ್ನರು ನಂಯುಕ್ತ ರಾಷ್ಟ್ರದ ಯೋಶ್ತಿಕರ ಕೆಲಸವನ್ನು ಪ್ರಶಂಸಿಸಿ, ಅವರನ್ನೇ ಆರಿಸುತ್ತಾರಂತ

—ಅಲ್ಲಿನ ತಾಂತ್ರಿಕ ಶಕುನಿಗಳಿಗೆ ಮಾತ್ರ ಅವರ ಆಕ್ಷೇಪ.

೦೦ ೦೦

ಪಾಕಿಸ್ತಾನದ ಪೂರ್ವ ಬಂಗಾಳ ಪ್ರಾಂತ್ಯದಲ್ಲಿ ಉಪಾಧ್ಯಾಯರುಗಳ ತಲಬು ಹೆಚ್ಚಿಸಿ, ಪೋಲೀಸು ಸಾರ್ಜಂಟರ ತಲಬನ್ನು ಕಡಿಮೆ ಮಾಡಿದ್ದಾರಂತೆ,

—ಕೆಲವು ವಿಷಯಗಳಲ್ಲಿ ಪಾಕಿಸ್ತಾನದ ಧೋರಣೆ ಅನುಕರಣೀಯವಾಗಿದೆ. ಇದು ಒಂದು.

೦೦ ೦೦

ಅಮೆರೀಕದ ಪ್ರಗತಿಶೀಲ ಪಕ್ಷದಿಂದ ಸಿಡಿದು ಹೋದ ಸಿಡಿಲು ಮರಿ ಹೆನ್ರಿ ವಾಲ್ಲೇಸ್ 'ಸ್ಯಾಲಿನ್ನರು ಬಹಳ ಅತಿರೇಕವಾಗಿ ಮುಂದುವರಿದಿದ್ದಾರೆ' ಎಂದು ಆಕ್ಷೇಪ ಎತ್ತಿದ್ದಾರೆ.

—ಅದರೆ ವಾಲ್ಲೇಸರ ಅನಾಥವಾದ ಪುರೋಗಾಮಿ ಧೋರಣೆಯನ್ನು ತುಂಬಿಕೊಳ್ಳುವ ಯೋಗ್ಯತೆ ಅಮೆರೀಕದ ಯಾವ ಪಕ್ಷಕ್ಕೂ ಇಲ್ಲದಿರುವುದು ಕೋಜನೀಯ.

೦೦ ೦೦

ನಲ್ವತ್ತಮೂರು ದೇಶಗಳ ಬಾಟಾ ಬೂಟ್ಸ್ ಕಂಪನಿಯ ಪ್ರತಿನಿಧಿಗಳು ಪೀರಿಸಿನಲ್ಲಿ ಯುಕ್ತರಾಷ್ಟ್ರದ ಜನರಲ್ ಎಸೆಂಬ್ಲಿಯ ಸಮಯವೇ ಒಂದು ಪ್ರತಿಸ್ಪರ್ಧಿ ಸಮ್ಮೇಳನ ಜರಗಿಸುತ್ತಾರಂತೆ,

—ಬಾಟಾ ಸಮ್ಮೇಳನದವರಿಗೆ ಒಂದು ವಿಮಾನವು ಉದ್ದೇಶವಾದರೂ ಇದೆ—ಬೂಟು ಮಾರುವುದು—ಎಂಬುದರಿಂದ ಯುಕ್ತರಾಷ್ಟ್ರ ಸಮ್ಮೇಳನಕ್ಕಿಂತಲೂ ಇದು ನಿಶ್ಚಿತ ಯಶಸ್ಸನ್ನು ಸಂಪಾದಿಸುವುದರಲ್ಲಿ ಸಂದೇಹವಿಲ್ಲ.

೦೦ ೦೦

'ಇಂಡಿಯ ಇಸ್ರಯೇಲ ರಾಷ್ಟ್ರಕ್ಕೆ ಮನ್ನಣೆ ಕೊಟ್ಟಿತು', ಎಂಬ ಶೀರ್ಷನಾಮದ ಕೆಳಗೆಯೆ ಇಂಡಿಯ ಯು. ರಾ. ಸಂಘದಲ್ಲಿ ಆರಬ ರಾಷ್ಟ್ರಗಳ ಬೆಂಬಲಕ್ಕೆ ನಿಲ್ಲುವುದೆ ಎಂಬ ಆಪ್ರೇಷೊಡ್ಡಿ ಶಿರೋನಾಮ.

—ಇದು ನಮ್ಮ ಪೀಠಿಕೆಯು ಧೋರಣೆಯ ವಿರೋಧಾಭಾಸವಲ್ಲವಂತೆ!

೦೦ ೦೦

ಒಬ್ಬರು ದಾನಿಗಳು ಅಸಾಮಿಗೆ ದಾನ ಕೊಟ್ಟ ಸುದ್ದಿಯನ್ನು ಬರೆದು ಅಚ್ಚಡಿಯಲ್ಲಿ ಉಳಿದವರು ಏಸ್ಟು ಕೊಟ್ಟಿದ್ದಾರೆ? ಎಂದು ಒಂದು ಉಡುಪಿಯ ಪತ್ರಿಕೆ ರೇಗಾಟಿ ಎಬ್ಬಿಸಿದೆ.

—ಅಡದೆಯೆ ಮಾಡುವನು ರೂಢಿಯೊಳಗುತ್ತಮನು ಎಂಬ ಸರಜ್ಞ ವಚನ ಈ ಸಂದರ್ಭದಲ್ಲಿ ಸಾಧುವಾಗಿದೆ.

೦೦ ೦೦

ಸೇರ್ ದಾಲ್ಮಿಯಾ ಅವರನ್ನು ವಿಕ್-ದಿನ್ ಕಾ ಸುಲ್ತಾನ್ ನೂಡಿದರೆ ಅವರು ಮೂಡಬ ಹುದಾದ ಸುಧಾರನೆಯ ಕೆಲವು ಆಂಶಗಳು-

(೧) ಭಾರತ ಸರಕಾರದ ಗೋಭಕ್ಷ್ಯಜಾತಿ ಭಾಗದ ಬದಲು ಗೋರಕ್ಷಣಾ ವಿಭಾಗವನ್ನು ತೆರೆಯುವುದು. ಸೆಕ್ಯಿಟೇರಿಯಟ್ಟಿನ ಒಳಗೆ ಒಂದು ಜಾನುವಾರು ಸಂರಕ್ಷಣೆ ಕೇಂದ್ರವನ್ನು ಸ್ಥಾಪಿಸುವುದು.

(೨) ಪಂಡಾ ಮಹೋಪಾಧ್ಯಾಯರೊಬ್ಬರಿಗೆ ಪ್ರಧಾನ ಮಂತ್ರಿ ಪದವಿಯನ್ನು ಒಪ್ಪಿಸುವುದು.

(೩) ನವಜೆಜಿಲಿಯಲ್ಲಿ ಸತ್ಕಾರ ಕೂಟಗಳ ಬದಲು ದಿನಂಪ್ರತಿ ಹೋಮ ಹವನಾದಿಗಳು, ಯಜ್ಞಾದಿಗಳೂ ನಡೆಯುವಂತೆ ಆದೇಶಿಸುವುದು

(೪) ದಕ್ಷಿಣ ಭಾರತಕ್ಕೆ ಅಚ್ಚ ಹಿಂದಿಯ ಒಂದು ರಘುರಾಮವಾತವನ್ನು ಅಟ್ಟಿ ಅಲ್ಲಿನ ಹಿಂದುಸ್ತಾನೀ ಪ್ರಚಾರ ಸಭೆಯ ಬೋರ್ಡನ್ನು 'ಹಿಂದೀ' ಆಗಿ ಮಾರ್ಪಡಿಸುವುದು.

(೫) ಮರುದಿನ ದಾಲ್ಮಿಯಾ ಸುಲ್ತಾನರೇ ಸ್ವತಃ ಧರ್ಮವಿಜಯಕ್ಕಾಗಿ ವಾಯುಮಾರ್ಗದಲ್ಲಿ ಭೂಸಂಚಾರಕ್ಕೆ ಹೊರಡುವುದು.

—ಎಂದು ಮುಂತಾಗಿ ಮೊನ್ನೆ ಒಬ್ಬ ತಲೆಹೋಕ ಜೋಳಿದನಂತೆ

—ಅವರು ಮಂಳುವಾಗ ಪರಿಶುದ್ಧ ಭಾರತ ಅವತರಿಸಿ ಮೂರು ದಿನ ಆಗಿರುತ್ತದೆ.

೦೦ ೦೦

ಇಂಡಿಯನ್ನರು ಇಂಡಿಯಾಕ್ಕೆ ಹೋದರೆ, ಆಫ್ರಿಕದವರು ಅವರು ಬಂದ ಮಧ್ಯ ಆಫ್ರಿಕಕ್ಕೆ ಹೋಗಬೇಕು. ಅಂತೆಯೇ ಐರೋಪ್ಯರು ಅವರ ತವರುಮನೆ ವಿಲಾಯತಿಗೆ ಹೋಗಬೇಕಾದೀತು. (—ಒಂದು ಭಾಷಣ)

—ತರ್ಕ ಶುದ್ಧವಾಗಿದೆ.

೦೦ ೦೦

ಮುರಂತದ ಸೋಂಕು ಇನ್ನೂ ತಗಲದ ಬಾಳುವೆ—ಎಂಬುದೇ ಯೌವನದ ಗಹನತಮ ಪರಿಭಾಷೆ. (ಡೈಜೆಸ್ಟ್ ಹೆದ್)

—ಕುತಿ

ಮದ್ಯಾಸು— 15—9—50ನೆಯ ಕರ್ನಾಟಕ ಸಂಘದಲ್ಲಿ ಜಾ॥ ಪಲ್ ಸಂ. ವಿಶ್ವೇಶ್ವರಯ್ಯನವರ ತೊಂಬತ್ತನೆಯ ಜನ್ಮ ದಿನೋತ್ಸವವನ್ನು ಶ್ರೀ ಎಂ. ಶಾಮಯ್ಯಪ್ಪಟ್ಟರ ಅಧ್ಯಕ್ಷತೆಯಲ್ಲಿ ಅಚರಿಸಲಾಯಿತು. ಶ್ರೀ ಎಚ್. ಎಸ್. ಕೃಷ್ಣಸ್ವಾಮಿ ಅವರು ಭಾಷಣಮಾಡುತ್ತಾ ವಿಶ್ವೇಶ್ವರಯ್ಯನವರ ನಿಯಮಬದ್ಧ ಹಾಗೂ ಸಾದಾ ಜೀವನವಿಚಾರ, ಅವರು ವಿಧ್ಯಾಭ್ಯಾಸಕಾಲದಿಂ ಪಟ್ಟ ಶ್ರಮ, ದೇಶದ ಬೇರೆ ಬೇರೆ ಭಾಗಗಳಲ್ಲಿ ಮಾಡಿದ ದೇಶಸೇವೆ, ಮೈಸೂರಿನಲ್ಲಿ ದಿವಾನರಾಗಿದ್ದಾಗ ರೈತರು, ಶ್ರಮಜೀವಿಗಳ ಪ್ರೇಮಾಂಶಪಾದಿಸಿದ ಬಗೆ, ಅಪ್ಪರು-ಸಂಬಂಧಿಗಳು- ಪರಕೀಯರು- ಬ್ರಾಹ್ಮಣ ಅಬ್ರಾಹ್ಮಣರು- ಬಡವ ಬಲ್ಲಿದರು ಕನ್ನಡಿಗ ಕನ್ನಡೇತರರು ಎಂಬ ಭೇದಭಾವವಿಲ್ಲದೆಎಲ್ಲರಲ್ಲೂ ಸಮರೀತಿಯಿಂದಿದ್ದ ಅದರ್ಶ ನಡತೆ, ಮೈಸೂರಿನ ಅಬಿವೃದ್ಧಿಗೆ ಪ್ರತಿದಿನ ಪರಿಶ್ರಮಿಸಿದ ರೀತಿ ಅನಾಸ್ಪೃಷ್ಟವಾಗಿ ಪ್ರತಿಕ್ಷಣವೂ ಸಾರ್ವಜನಿಕ ಕಾರ್ಯ ಕ್ಷೇತ್ರದಲ್ಲಿ ಮತ್ತು ಈಗ ಭಾರತಕ್ಕೆ ಸಚಿವರಾಗಿ ನೀವೆ ಆತ್ಯಾವಶ್ಯಕ ಕುರಿತು ಸಭಿಕರಿಗೆ ಶ್ರೀಯುತರ ಶ್ರೇಯಸ್ಸು ಬಯಸಿ ಭಾಷಣವನ್ನು ಮುಗಿಸಿ ಮಾಡಲಾಯಿತು.

ತಮ್ಮ ದೃಢ ವಿಶ್ವಾಸದ ಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ 1906 — ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು

ಏನತ್ತು ಸದಸ್ಯಕ್ಕೆ ಕುಟುಂಬದ ಬ್ಯಾಂಕರುಗಳು ಎಂದು ಕೋಟಿಗೂ ಮಿಗಿಲಾದ ನಿಧಿಗಳು.

The Pangal Nayak Bank Ltd., Udipi.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ.

ನೋಟಿಸು

ಈ ಕೆಳಗೆ ಹೆಸರು ತೋರುವವರು ಈ ಬೇಂಕಿನ ಉಡುಪಿ ಆಫೀಸಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಅಸ್ಸಲು ಮತ್ತು ಅವುಗಳ ಮೇಲಣ ಬಡ್ಡಿ ಹಣ ಬೇಂಕಿಗೆ ಬ್ಯಾದೆಗೆ ವಸೂಲು ಬಾರದೆ ಇದ್ದ ಕಾರಣ ಅವರಿಗೆ ಕಳುಹಿಸಿದ ರಿಜಿಸ್ಟ್ರಿ ನೋಟೀಸುಗಳು ಕೆಲವರಿಗೆ ತಲುಪದೆ ಕಾರಣಾಂತರಗಳಿಂದ ಹಿಂದೆ ಬಂದಿರುವುದರಿಂದಲೂ ಇನ್ನು ಕೆಲವರಿಗೆ ನೋಟೀಸುಗಳು ಜಾರಿಯಾಗಿಯೂ ಅಸ್ಸಲು ಹಣ, ಪ, ಈ ವರೆಗಿನ ಬಡ್ಡಿ ಬೇಂಕಿಗೆ ಸಲ್ಲಾಸಿ ನಗದುಗಳನ್ನು ಈ ವರೆಗೂ ಬಿಡಿಸಿಕೊಂಡು ಹೋಗದೆ ಇರುವುದರಿಂದಲೂ ಈ ಮೂಲಕ ಪ್ರಕಟಿಸೋಣಾಗುವದೇನೆಂದರೆ:-

ಸದ್ರಿ ಸಾಲಗಳ ಬಾಬ್ತು ಬಹಾ ಸಮಸ್ತ ಅಸ್ಸಲು, ಬಡ್ಡಿ ವಗೈರೆ ಅವೇಜುಗಳು ನೋಟೀಸುಗಳ ಖರ್ಚು ಸಹಿತ ತಾ 6-10-1950ರ ವರಿಗೆ ಬೇಂಕಿಗೆ ಭಾಡಾ ವಸೂಲು ಬಾರದೆ ಇದ್ದರೆ ಸದ್ರಿ ಸಾಲಗಳ ಭದ್ರತೆ ಬಗ್ಗೆ ಸದ್ರಿಯವರು ಒತ್ತೆ ಇಟ್ಟ ನಗದುಗಳನ್ನು ತಾ. 7-10-1950ನೇ ಶನಿವಾರ ಅಪರಾಹ್ನ ಘಂಟೆ 1-30ಕ್ಕೆ, ಯಾ, ಆನಂತರ ಬೇಂಕಿಗೆ ಯುಕ್ತ ತೋರುವ ದಿವಸಗಳಲ್ಲಿ ಪ್ರತ್ಯೇಕ ನೋಟಿಸು ಕೂಡದೇನೆ ಬೇಂಕಿನ ಉಡುಪಿ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡಲಾದೀತು. ಏಲಂ ಆದೇ ದಿವಸ ಪೂರ್ಣವಾಗದಿದ್ದರೆ ಆನಂತರ ಬೇಂಕಿಗೆ ಯುಕ್ತತೋರುವ ದಿವಸಗಳಲ್ಲಿ ಪುನಃ ನೋಟೀಸು ಕೂಡದೇನೆ ಮುಂದುವರಿಸಲಾದೀತು. ತಿಳಿದಿರಲಿ.

ಕ್ರಮ ಸಂಖ್ಯೆ	ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಬಾಕಿ ಹೊರಬಲಸು 30-6-50 ವರೆಗಿನ ಸ ಬಡ್ಡಿ ಸಮೇತ ರೂ.	ಅ.	ಪೈ.
1	376/47	ಜನಾಬು ಮುಸೇನ್ ಅಬ್ದುಸಾಲಿ, ಅಬ್ದುಸಾಲಿ ಸಾಹೇಬರ ಮಗ, ಉಡುಪಿ.	154	8	11
2	217/47	ಶ್ರೀ. ಎಮ್ ಸುಬ್ಬರಾವ್, P. C. 363 ತಾಲೂಕು ಆಫೀಸು, ಉಡುಪಿ	13	13	2
3	130/47	ಶ್ರೀ. ಸಾ. ಜೆನಿ ಯಾನೆ ಸುಲೋಚನಾ ಬಾಯಿ, ಶ್ರೀ ಡಿ. ಶ್ರೀಧರ ರಾಯರ ಹೆಂಡತಿ, ತಾಲೂಕು ಆಫೀಸು ಬಳಿ, ಉಡುಪಿ	1816	6	9
4	560/47	ಶ್ರೀ. ಲಿಯೊ ಫೆರ್ನಾಂಡಿಸ್, ಬಸ್ಟ್ಯಾಂವ್ ಫೆರ್ನಾಂಡಿಸರ ಮಗ, ಉಡಿಯಾವರ.	52	7	11
5	35/48	ಜನಾಬ ಶೇಕ್ ಇಸೀಮ್ ಸಾಹೇಬ, ಶೇಕ್ ಹಸನ್ ಸಾಹೇಬರ ಮಗ, ಕೊಡವೂರು ಗ್ರಾಮ, ಉಡುಪಿ,	46	7	7
6	389, 137/49 683, 875/49	ಶ್ರೀ. ಯು ಸಾಂತಪ್ಪ ಶೇಟ್, ನಾಗಪ್ಪ ಶೇಟರ ಮಗ, ಜುವೆಲರ್, ತೆಂಕಪೇಟೆ, ಉಡುಪಿ.	715	0	9
7	521/48	ಜನಾಬ್ ಇಸ್ಮಾಯಿಲ್ ಸಾಹೇಬ್, ಶಾಬು ಸಾಹೇಬರ ಮಗ, ಕಟ್ಟೀರಿ ವ್ಯಾಪಾರಸ್ಥ, ಉದಿಯಾವರ.	29	9	3
8	949/48	ಶ್ರೀ ಕೆ. ವಾಸುದೇವ ನಾಯಕ್, ಅಂಪ ನಾಯಕರ ಮಗ, ಕಟಪಾಡಿ, ಪ. ಕ.	112	9	10
9	212/48	ಶ್ರೀ. ಎಮ್. ಆಯ್ಯಪ್ಪಾಚಾರ್, P. C. 740, ಪೋಲೀಸ್ ಸ್ಟೇಶನ್. ಉಡುಪಿ.	30	4	5
10	276/48	ಶ್ರೀ. ಶೇಕ್ ಸಾಬ್ಜನ್ ಸಾಹೇಬ್, ಅಬ್ದುಲ್ ಖಾದರ್ ಸಾಹೇಬರ ಮಗ, ಪೊಲ ಕಾಡು, ಉಡ್ಪಿ, ಪ. ಕ.	107	9	8
11	322/48 ಮತ್ತು 321/48	ಶ್ರೀ. ಯು. ಶ್ರೀನಿವಾಸರಾಯರು, ಪ್ರೊಪ್ರೈಟರ್, ಉದಿಯಾವರ ಕೇಫೆ, ಉಡುಪಿ, ಪ. ಕ.	108	12	1

Office of the Bank
UDIPI
Dated 20th Sep. 1950.

K. R. Kamath,
Agent.

ವಾರ ಭವಿಷ್ಯ

ತಾರೀಕು 28-9-1950ರಿಂದ ತಾ. 4-10-1950ರ ವರೆಗೆ.

ಮೇಷ—ಅನಿಷ್ಟ ಸ್ಥಾನವಾದ ಅಷ್ಟಮಕ್ಕೆ ಅಂಗಾರಕನು ಬಂದನೆಂದು ನೀವು ನಿರಾಶರಾಗಬೇಡಿ. ಈ ವಾರದಲ್ಲಿ ನಿಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದಲ್ಲದೆ ಆರೋಗ್ಯವು ಉತ್ತಮವಾಗುವದು. ಗೃಹ ಸೌಖ್ಯವು ತೃಪ್ತಿಕರವಾಗಿ ಲಭಿಸಲಿದೆ. ಆದರೂ ಮನೆಯ ಜನರಲ್ಲಿ ಭೇದ ಬುದ್ಧಿಯಿಂದಾಗಿ ಕಲಹವಾಗಲಿದೆ. ತಾ. 30, 1, 2ರಲ್ಲಿ ನಿರೋಧಿಗಳಿಂದ ಧನಪ್ರಾಪ್ತಿಗಳಿಗೆ ಧೈರ್ಯಯುಂಟಾಗುವ ಸಂಭವವಿದೆ. ಜಾಗ್ರತೆ.

ವೃಷಭ—ಬಂಧುವರ್ಗದವರೆ ಮತ್ತು ಮಿತ್ರಜನರ ಸಹಾಯ ಸಹಕಾರಗಳು ನಿಮಗೆ ಚೆನ್ನಾಗಿಯಿದ್ದರೂ ಇಷ್ಟಕ್ಕಿಂತ ದ್ವಿಗುಣವಾಗಿ ಅನಿಷ್ಟಗಳು ಕಾಡಿಸುವವು. ಜನತೆಯಲ್ಲಿ ವ್ಯರ್ಥಕಲಹವಾಗಲಿದೆ. ಪರಸ್ತ್ರೀಯರಿಪು ಮಾಯವಾಗುವದು. ಆರೋಗ್ಯಕ್ಕೂ ಕೊಂಚಧೃತಿಗಲೀತು. ಆದರೂ ನಿಮ್ಮ ಆರ್ಥಿಕಭಾಗವು ಉತ್ತಮವಿರುವುದರಿಂದ ವಿರೋಧಿ ಜನರು ಬಿದಿರಿಗೆ ಸೊಪ್ಪುಹಾಕುವಿರಿ. ತಾ-28, 29, 3, 4, ಈ ದಿನಗಳಲ್ಲಿ ಕಾರ್ಯಕ್ಕೆ ವಿಘ್ನಗಳೂ ಅತಿವ್ಯಯವೂ ಕಾಣಿಸೀತು.

ಮಿಥುನ:—ನಿಮ್ಮ ಸಾಹಸಕ್ಕೆ ಸರಿಯಾಗಿ ದೈವವೂ ನಿಮಗನುಕೂಲವಿರುವುದರಿಂದ ಬಹುಮಟ್ಟಿನ ನಿಮ್ಮ ಮನೋರಥಗಳು ಈಡೇರಲಿವೆ. ವ್ಯಾಪಾರಿ ವರ್ಗದವರಿಗೆ ಉತ್ತಮವಾದ ಫಲ ದೊರೆಯುವದು. ಕೆಲವೊಮ್ಮೆ ಅಧಿಕಾರಿ ಜನರ ಕೋಪಕ್ಕೆ ಬಲಿಯಾಗಬೇಕಾದೀತು. ಮಾತ್ರವಲ್ಲ ಹಿಡಿದ ಕಾರ್ಯವನ್ನು ಕೊನೆಮುಟ್ಟಿಸುವನೆಕ ನಿಮ್ಮಮನಸ್ಸು ಸ್ಥಿರವಾಗಿರದು. ತಾ. 30,1.2 ಈ ದಿನಗಳಲ್ಲಿ ನಿರೀಕ್ಷೆಗಿಂತ ಅಧಿಕ ವ್ಯಯವಾದೀತು.

ಕರ್ಕಟ—ನಿಮ್ಮ ಭಾಗ್ಯಕ್ಕೆ ಈ ಕಾಲವು ಅತ್ಯನುಕೂಲವಿದೆ. ಯಾವ ಕಾರ್ಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವ ಪರಿಸ್ಥಿತಿಯೊದಗದು. ಪ್ರಬಲರಾದ ಶತ್ರುಗಳನ್ನೂ ನುರ್ದಿಸುವಿರಿ. ನಿರೀಕ್ಷೆಗಿಂತಲೂ ಅಧಿಕವಾದ ಫಲವು ಲಭಿಸುವದು. ಸಂಸಾರಿಕ ಚಿಂತೆ, ಪರ್ಯಟನ, ದೇಹಾಲಸ್ಯಗಳು ವಾರಾಂತ್ಯದ 2 ದಿನಗಳಲ್ಲಿ ಕಾಣಿಸಬಹುದು.

ಸಿಂಹ—ನಿಮ್ಮ ಉದ್ಯಮದಲ್ಲಿ ಫಲವು ಉತ್ತಮವಿದ್ದರೂ ಕೈಯು ಸದಾ ಬರಿದಾಗಿರುವುದು. ಆಪ್ತೇಷ್ಟರಲ್ಲೂ ಕೂಡ ಅವಿಶ್ವಾಸ ಹುಟ್ಟಲಿದೆ. ನಿಷ್ಕಾರಣವಾಗಿ ಹಲವರೊಡನೆ ಕಲಹವಾಗುವದು. ರಾಜಕೀಯ ಕ್ಷೇತ್ರದಲ್ಲಿ ಪರಾಜಯವಾದೀತು. ಅಧಿಕಾರಿವರ್ಗದವರಿಗೂ ವರ್ಣಿಗ ಜನರಿಗೂ ಕಾಲವು ಬಹುಮಟ್ಟಿಗೆ ಚೆನ್ನಾಗಿದೆ. ವಾರಾಂತ್ಯದ 5 ದಿನಗಳಲ್ಲಿ ಬಂಧುಗಳ ವಮಿತ್ರರ ಸಮಾಗಮ ಸಂತೋಷಲಾಭಗಳಿವೆ.

ಕನ್ಯಾ—ಧೈರ್ಯ ಸಾಹಸಗಳಲ್ಲಿ ನೀವು ಅದ್ವಿತೀಯರಿರುವಿರಾದರೂ ದೈವವು ಮಾತ್ರ ನಿಮಗೆ ಪ್ರತಿಕೂಲವಾಗಿರುವುದು. ಆದಕಾರಣ ಪರಿಶ್ರಮಕ್ಕೆ ತಕ್ಕ ಫಲವನ್ನು ಪಡೆಯಲಾರಿ. ವಿದ್ಯೋಪಜೀವಿಗಳಿಗೂ ವಿದ್ಯಾರ್ಥಿಗಳಿಗೂ ವಿಘ್ನವಿದ್ದೂರಗಳು ದಿನ ದಿನಕ್ಕೆ ಜಾಸ್ತಿಯವು. ಮನೋವ್ಯಥೆಯು ಅಧಿಕವಾದೀತು. ಆದರೂ ವಾರಾಂತ್ಯದ 2ದಿನಗಳಲ್ಲಿ ಇಷ್ಟಾರ್ಥವನ್ನು ಪಡೆವಿರಿ.

ತುಲಾ—ನಿಸರ್ಗತಃ ಶುಭಂಕರವಾದ ಬುಧ ಗುರು ಶುಕ್ರರ ಅನುಗ್ರಹವು ನಿಮಗೆ ದೊರೆತಿದೆ. ಸದುದ್ಯಮದಲ್ಲಿ ನಿಮಗೆ ವಿಜಯವು ನಿಶ್ಚಯೇ ತೀರುವುದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗಿ ಗೃಹಸುಖವನ್ನನುಭವಿಸುವಿರಿ. ಕೆಲವೊಮ್ಮೆ ಹಿತ್ತೋಷ್ಣವಿಕಾರದಿಂದ ದೇಹಾಲಸ್ಯವು ಕಾಡೀತು. ವಾರಾಂತ್ಯದ 5 ದಿನಗಳಲ್ಲಿ ಅಧಿಕಾರಿಗಳಿಂದ ಭೀತಿ, ಉದರರೋಗ ಇತ್ಯಾದಿಗಳು ಕಾಣಿಸಬಹುದು.

ವೃಶ್ಚಿಕ—ಕಾಲವು ಅನುಕೂಲಪರಿಸ್ಥಿತಿಗೆ ಬಂದಿದೆ. ನೀವು ಆರಂಭಿಸಿದ ಪ್ರತಿಯೊಂದು ಕಾರ್ಯಗಳೂ ನಿರಾತಂಕವಾಗಿ ಕೊನೆಗಾಣುವವಲ್ಲದೆ ನಿರೀಕ್ಷೆಗಿಂತಲೂ ಅಧಿಕವಾದ ಫಲವನ್ನೀಯುವವು. ವೈಕ್ಸಾರೋಹ್ಯ, ಸೈಕಲ್ ಪ್ರಯಾಣ ಇತ್ಯಾದಿಗಳನ್ನು ಸದ್ಯಕ್ಕೆ ಕೈಬಿಡಿರಿ. ಅಪಾಯ ಸಂಭವಿಸುವ ಯೋಗವಿದೆ. ವಾರಾಂತ್ಯದ 5 ದಿನಗಳಲ್ಲಿ ಸ್ಥಾನವಾನ ವಿಜಯಗಳು ಲಭಿಸುವವು.

ಧನು—ಕುರುವಿನ ಮೇಲೊಂದು ಬೊಕ್ಕೆ ಎದ್ದಿತೆಂಬ ಗಾದೆಯಂತೆ ಮೊದಲೇ ಆರ್ಥಿಕ ದಿಕ್ಕಟ್ಟು ಗೃಹಶಾಪತ್ಯದಲ್ಲಿ ಸಿಲುಕಿದ್ದ ನಿಮಗೆ ಇಂದು ಬೇರೆ ಆರೋಗ್ಯವು ಕೆಡುವ ಸಂಭವವಿದೆ. ಹೆಚ್ಚಿನ ಕಾರ್ಯಗಳು ವಿಘ್ನಗಳಿಂದಾಗಿ ಕಡೆದುನಿಲ್ಲುವವು, ಅತ್ಮೀಯರಿಂದ ವಂಚಿತರಾಗುವಿರಿ. ನಿಕ್ಕಸಿಕ್ಕವರೊಡನೆ ಕಲಹವಾದೀತು. ಶನಿವಾರದ ಕೊನೆಯ 5 ದಿನಗಳಲ್ಲಿ ಹೆಚ್ಚಿನ ಅಪಾಯಗಳು ಕಾಣಿಕೊಳ್ಳಲಾರವು.

ಮಕರ—ನಿಮ್ಮ ಇಷ್ಟಾರ್ಥಗಳನ್ನು ನೆರವೇರಿಸಲು ಈವಾರವು ಶಕ್ತವಾಗಿದೆ. ರಾಜಕೀಯದಲ್ಲೂ ಸಮಾಜದಲ್ಲೂ ಒಳ್ಳೇ ಕೀರ್ತಿಯನ್ನು ಸಂಪಾದಿಸುವಿರಿ. ಬಹುವಿಧದಿಂದ ಹಣವು ಬಂದುಸೇರಲಿದೆ. ದೇಹ ಮನಸ್ಸುಗಳಿಗೆ ಸುಖಶಾಂತಿಗಳನು ಲಭಿಸುವವು. ಬಂಧುಮಿತ್ರರ ಸಮಾಗಮವಾಗುವದು. ವಾರಾಂತ್ಯದ 2 ದಿನಗಳು ಅತ್ಯಂತ ಯಶಃಪ್ರದಗಳಾಗಿವೆ.

ಕುಂಭ—ರಾಮೇಶ್ವರಕ್ಕೆ ಹೋದರೂ ಶನೈಶ್ಚರನು ಬಿಡನೆಂಬಂತೆ ಈತನಕ ಸಪ್ತಮ ಸ್ಥಾನವನ್ನಾಶ್ರೈಸಿದ್ದ ಶನಿಯು ಅನಿಷ್ಟದಾಯಿಯಾದ ಅಷ್ಟಮಕ್ಕೆ ಬಂದಿರುವನು. ಅನಿರೀಕ್ಷಿತವಾದ ಕಷ್ಟನಷ್ಟಗಳೂ ದೇಹಾಲಸ್ಯವೂ ಹೆಂಡತಿಮಕ್ಕಳ ವಿರಹವೂ ಪ್ರಾಪ್ತಿಯಾಗುವದು. ವ್ಯಾಪಾರೀವ್ಯಯಹೊಂದಿ ನ್ಯೂನಿಧು ಮಿಕ್ಕಾವ ಜನಕೆಗೂ ಈ ವಾರವು ಸುಖಕರವಾಗಿರಲಾರದು. ತಾ. 28. 29 ಸ್ವಲ್ಪ ಆಪಾಯಗಳಿಗಿವೆ.

ಮೀನ—ನಿಮ್ಮ ದುರ್ದೈವವು ಅಧಿಕವಾಗಿ ಪೀಡಿಸುತ್ತದೆ. ಆಕಸ್ಮಿಕ ಪ್ರಯಾಣ ತನ್ನಿಮಿತ್ತ ಕಷ್ಟನಷ್ಟಗಳು ಸಂಭವಿಸುವವು. ಜಡದ ಮೈಗ್ಗಟ್ಟು ಹೇಳಿತೀರದು. ಮನೋರೋಗದಿಂದಾಗಿ ದೇಹಾರೋಗ್ಯವು ಕೆಡುವದು. ಸ್ತ್ರೀಯರಿಂದ ಪೀಡೆಗಳೂ ಅಪವಾದಗಳೂ ಪ್ರಾಪ್ತವಾಗಲಿವೆ. ಕೆಲವೊಮ್ಮೆ ಸಂಸಾರದಲ್ಲೂ ವಿರಕ್ತಿ ತೋರೀತು. ತಾ. 30. 1. 2 ಈ ದಿನಗಳು ಇದ್ದುದರಲ್ಲಿ ಶ್ರೇಯಸ್ಕರ ಗಳಾಗಿವೆ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೇಗ್ಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕೆ:—ಹರವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦. ಪೋಸ್ಟೇಜ್ ಚಾರ್ಜು ೧೫ ಆಣೆ.

ಮೂಲಕರು:—ಶಾಲಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ವಿಜಂದಿರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಚಾನಸ್ಸ ಸಿದ್ಧಲಿಂಗಪ್ಪ ಧಾರವಾಡಳರ ವಿಜಾಪುರ ನಂಜುಡೇಸ್ವರ ಮೂರ್ತಿ ಹಾವಣಗೇರಿ ಹಾವಣಗೇರಿ:—ಹಾವಣಗೆರಿ ಪ್ರೆಸ್ಸ್, ಆರ್ ಎಲ್ ಶೆಟ್ಟಿಲಾಜ್ ಕೆಮಿಸ್ಟ್, ಹಾವೇರಿ ಬ್ಯಾಡಗಿ



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.

ನಮ್ಮ ವಾನಿಂಗ್ ಟಿಲ್ಲಿ ಹರ್ಬಲ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ' ಈ ತೈಲವು ಸರ್ವದೇಶಗಳ ಪ್ರಸಿದ್ಧ ವೈದ್ಯರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ವಿಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೆ ಕಿತ್ತು ಪಿಡುವಂತೆ ರುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಸಿತ್ತಜ್ವರ, ನಿರೋಣಿಯ ಶೀತಜ್ವರ ಮತ್ತು ಮಲೇರಿಯ ಜ್ವರಗಳಾದಿ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಪ್ಲಷಯ, ಮೇಹಪ್ಯಾಧಿ, ಅಜೀರ್ಣ, ಮಾಟ್ಟಿನ ಅಕ್ಕಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುರಾರಿ ಮೂತ್ರಕೋಶದಲ್ಲಿನ ಕಲ್ಲೆನ್ನುವ ಮಾತೇ ಇಲ್ಲದಂತೆ ಕರಗಿಹೋಗುವವು. ಇದೇನಾ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ'ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಗಿರಲಿ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಬಿಂದೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವುದು. ಹಲ್ಲುನೋವು, ಮಕ್ಕಳಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟುಗುವಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು-ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ.ಪಿ. ಬೇರೆ. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0- ವಾನಿಂಗ್ ಟಿಲ್ಲಿ ಕೆಮ್ಮಲ್ ಶೀಸೆ 1ಕ್ಕೆ 3-8-0 ವಿ.ಪಿ. ಬೇರೆ. ಡಜನ್ ಕೆಮ್ಮಲುಗಳಿಗೆ ರೂ. 42 0-0 ವಿ.ಪಿ ಸಹಿತ. ವಾನಿಂಗ್ ಟಿಲ್ಲಿ ಡ್ರಿಕರ್ ಬಾಟ್ಲಿ 1ಕ್ಕೆ ರೂ. 5-0-0 ವಿ.ಪಿ. ಬೇರೆ. ಒಂದು ಡಜನ್ ಡ್ರಿಪರ್ ಬಾಟ್ಲಿಗಳಿಗೆ ರೂ. 60-0-0- ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ. 1-8-0. ಡಜನ್ ಸೀಸೆಗಳಿಗೆ ರೂ. 18. ವಿ.ಪಿ ಮಾಳ್ಕ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ಏಳು ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ: ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾವಸಾಹಿನ ಆಯುರ್ವೇದಿಕ್ ವೈದ್ಯರಾದ ಪಿ.ವೆಂಕಟರಮಣಯ್ಯನವರು ಬರೆಯುತ್ತಾರೆ. ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-
ದಾಹಾನು ರೋಡು, ಬಿ. ಬಿ- ಎಂಡ್ ಸಿ. ಐ. ರೈಲ್ವೆ-

The Eclipse Distributing Agency.
Dahanu Road, B. B. & C I Rly,

ಬೊಂಬಾಯಿ ಸ್ಟಾಕಿಸ್ಟರು:—ಲಕ್ಷ್ಮಿವಾಲಾ ಲಿಮಿಟೆಡ್, 25, ಹಿಲ್ ಹನುಮಾನ್‌ಲೇನ್, ಬೊಂಬಾಯಿ 2-

ವಿಷದ ಹಾವುಗಳ ಕಡಿತ

ಲೇಖಕ: ಶ್ರೀ ಕೆ. ಗುರುರಾಜ ಉಡುಪ, ಬಿ. ಎಸ್. ಸಿ., ಫಿಸ್ಸಿಶೋಧಿ.

ವಿಷದ ಹಾವು ಕಡಿತದಿಂದ ಹಳ್ಳಿಗಳಲ್ಲಿ ಸಾಯುವವರು ಎಷ್ಟೋ ಮಂದಿ ಇದ್ದಾರೆ. ಅದಕ್ಕೆ ಸರಿಯಾದ ಚಿಕಿತ್ಸೆ ತಕ್ಕ ಸಮಯದಲ್ಲಿ ಆಗದಿರುವುದೇ ಇದಕ್ಕೆ ಕಾರಣ. ಆಧುನಿಕ ವೈದ್ಯಕೀಯ ವಿದ್ಯೆಯ ಅವಿಷ್ಕಾರವಾದ ಮೇಲೂ ಸಹ ಇಂತಹ ವಿಷದ ಹಾವುಗಳ ಕಡಿತದಿಂದ ಆಗುವ ಮರಣವನ್ನು ನೆನಪಿಗೆ ಕರುವಾಗ ಆ ವಿದ್ಯೆಯ ಸಂಪೂರ್ಣ ಸಹಾಯ ನಮ್ಮ ಹಳ್ಳಿಗರಿಗೆ ಸಿಗುವುದಿಲ್ಲವೆಂದೇ ಅರ್ಥ ಮಾಡಿಕೊಳ್ಳಬೇಕಾಗುವುದು. ಏಕೆಂದರೆ ಮೈಲು ದೂರದ ಪಟ್ಟಣಗಳಿಗೆ ಹೋಗಿ ಅಲ್ಲಿನ ವೈದ್ಯರ ಸಹಾಯವನ್ನು ಪಡೆಯುವ ವಿಷಯುಕ್ತ ರಕ್ತವನ್ನು ಹೊರ ಹಾಯಿಸಿಕೊಳ್ಳುವ ಮೊದಲೇ ಹಾವು ಕಚ್ಚಿದಾತ ವಿಷವೇರಿ ಸಾಯುವ ಸಂದರ್ಭಗಳು ಎಷ್ಟೋ ಇವೆ. ಹಾವುಗಳೇ ತಮ್ಮ ದೇಹದ ಕಡಿ ಜಿಗೆ ವಾಸಿಸಲು ಅಯೋಗ್ಯವಾದ ಏರೋಸ್ಫೇರಿ ಗಂತೂ ಈ ವಿಷದ ಹಾವುಗಳು, ಅವುಗಳ ಕಡಿತದಿಂದಾಗುವ ಮರಣ ಇದರ ಅರ್ಥವೇ ತಿಳಿಯುವುದಿಲ್ಲ. ನಮ್ಮ ಭಾರತದಲ್ಲಿ ಹಿಂದಿನ ಕಾಲದಿಂದಲೂ ಪ್ರಚಲಿತವಿರುವ ಆಯುರ್ವೇದದಲ್ಲಂತೂ ಈ ಹಾವುಗಳ ಕಡಿತಕ್ಕೆ ಉತ್ತಮ ಚಿಕಿತ್ಸಾಕ್ರಮಗಳು ಹೇಳಲ್ಪಟ್ಟಿವೆ. ಅದೂ ಅಲ್ಲದೆ ಹಲವು ಮಂತ್ರಶಕ್ತಿಯಿಂದ ಈ ವಿಷದ ಹಾವುಗಳ ಕಡಿತದಿಂದ ದೇಹದಲ್ಲಿರುವ ವಿಷವನ್ನು ಹೊರತೆಗೆಯುವ ವಿಧಾನಗಳೂ ನಮ್ಮ ಹಳ್ಳಿಗಳಲ್ಲಿನ ಪಲವು ತಾಂತ್ರಿಕರಿಗೆ, ಹಲವು ಹಳೆಯ ವೈದ್ಯರಿಗೆ ಗೊತ್ತು. ಆದರೆ ಇಂತಹ ಅಮೂಲ್ಯ ಮಂತ್ರ ಶಕ್ತಿಯನ್ನು ಅಂತಹ ತಾಂತ್ರಿಕರು ತಮ್ಮ ಉತ್ತರಾಧಿಕಾರಿಗಳಿಗೆ ಹೇಳಿ ಕೊಡದಿದ್ದಲ್ಲಿ ಅದು ಅವರ ಬೆನ್ನ ಹಿಂದೆಯೇ ಪಾತಾಳವಾಗುವುದು. ಹೀಗೆ ನಮ್ಮ ಸುತ್ತು ಮುತ್ತಲ ಹಳ್ಳಿಗಳಲ್ಲಿ ಪ್ರಚಲಿತವಿರುವ ಇಂತಹ ವಿಷದ ಹಾವುಗಳ ಕಡಿತದ ಚಿಕಿತ್ಸಾಕ್ರಮವನ್ನು ವಿವರಿಸಿ ಹೇಳುವುದು ಈ ಲೇಖನದ ಉದ್ದೇಶವಾಗಿದೆ.

ಈ ವಿಷದ ಹಾವು ಕಡಿತಕ್ಕೆ ನಾವು ಮಾಡುವ ಪ್ರಥಮ ಚಿಕಿತ್ಸೆಯಂತೂ ಬಹು ಸುಲಭವಾದುದು ಮತ್ತು ಎಲ್ಲರೂ ಅಗತ್ಯ ತಿಳಿದುಕೊಳ್ಳಬೇಕಾಗುವುದು. ಕಡಿದೊಡನೆಯೇ ಗಾಯದ ಮೇಲ್ಭಾಗದಲ್ಲೂ ಕೆಳಭಾಗದಲ್ಲೂ ಗಾಯದಿಂದ ಮೂರು ನಾಲ್ಕು ಇಂಚು ದೂರದಲ್ಲಿ ಗಟ್ಟಿಯಾದ ಟ್ವೈನ್ ನೂಲಿನಿಂದಾಗಲೀ, ಸಪುರವಾದ ಹುರಿಹಗ್ಗದಿಂದಾಗಲೀ ಗಟ್ಟಿಯಾದ ಕಟ್ಟನ್ನು ಹಾಕಬೇಕು. ಆ ಮೇಲೆ ಜೂರಿಯ ಸಹಾಯದಿಂದ ಗಾಯವನ್ನು ದೊಡ್ಡದು ಮಾಡಿ ಅದರಿಂದ ಅದಷ್ಟು ವಿಷಯುಕ್ತ ರಕ್ತವನ್ನು ಹೊರ ಹರಿಯ ಗೊಡಬೇಕು. ಆ ಮೇಲೆ ಪೊಟೇಶಿಯಮ್ ಪರ್ಮಾಂಗನೆಟ್ ಎಂಬ ರಸಾಯನಿಕ ವಸ್ತು ವಿನ ದಪ್ಪನಾದ ದ್ರಾವಣವನ್ನು ನೂಡಿ ಅದರಿಂದ ಆ ಗಾಯವನ್ನು ಚೆನ್ನಾಗಿ ತೊಳೆಯ ಬೇಕು ಇಷ್ಟು ಚಿಕಿತ್ಸೆ ಮಾಡಿದ ಮೇಲೆ ವೈದ್ಯಕೀಯ ಸಹಾಯವನ್ನು ಪಡೆಯಲು ಹೋಗಬೇಕು.

ನಮ್ಮೂರಲ್ಲಿ ಒಂದು ಬೂತದ ಗುಡಿಯಿದೆ. ಆ ಗುಡಿಯ ಹತ್ತಿರವಿರುವ ಬಾವಿಯೊಂದರಲ್ಲಿರುವ ನೀರು ಈ ವಿಷದ ಹಾವು ಕಡಿತಕ್ಕೆ ಒಂದು ಉತ್ತಮ ಮದ್ದಾಗಿದೆ. ಊರ ಸುತ್ತಲಲ್ಲಿ ಎಲ್ಲಿ ಇಂತಹ ಹಾವು ಕಡಿದ ಕೂಡಲೇ ಅಂತಹ ವ್ಯಕ್ತಿ ಈ ಗುಡಿಯ 'ಕೊಡಮಂತಾಯ' ಎಂಬ ಬೂತದ ಸ್ಮರಣೆ ಮಾಡಿಕೊಂಡು ಪತ್ರಂಪಿದ್ದ ಜಾಗದಲ್ಲಿರುವ ಸ್ವಲ್ಪ ಮಣ್ಣನ್ನು ಹಾಕಿಕೊಳ್ಳಬೇಕು. ಹೀಗೆ ಅಂತಹ ವ್ಯಕ್ತಿಯನ್ನು ಆಗಾಡಿಗೆ ಕರಬೇಕು. ಆಲ್ಲಿನ ಪೂಜಾರಿಗಳು ಇದೇ ಬಾವಿಯ ನೀರಿನಲ್ಲಿ ಗಂಧವನ್ನು ಅರೆದು ಅವನಿಗೆ ಕುಡಿಯಲು ಕೊಡುವರು. ಆತನು ವಿಷವನ್ನು ಕಾರುವನು. ಆ ಮೇಲೆ ಏಳು ದಿನಗಳ ವರೆಗೆ ಅವನು ಅಲ್ಲಿಯೇ ಇದ್ದು ಪ್ರತಿ ದಿನವೂ ಮೂರು ಹೊತ್ತು ಆ ಗಂಧವನ್ನು ಹೊಟ್ಟೆಗೆ ತೆಗೆದುಕೊಂಡು ಆ ಗಾಯಕ್ಕೂ ಹಚ್ಚಬೇಕು. ಹೀಗೆ ಮಾಡಿದಲ್ಲಿ ಎಂತಹ ವಿಷ ಜಂತುಗಳ ಕಡಿತವೂ ಗುಣವಾಗುವುದು. ನೂರಾರು ಮಂದಿ ಹೀಗೆ ಗುಣ ಹೊಂದಿ ಈ 'ಕೊಡಮಂತಾಯ'ನ ಭಕ್ತ ವರ್ಗದಲ್ಲಿ ಸೇರಿದ್ದಾರೆ ಆದರೆ ಹೀಗೆ ಈ ಚಿಕಿತ್ಸೆಯನ್ನು ಮಾಡುತ್ತಿದ್ದಂತೆ ಅಂತಹವನು ಬೇರೆ ಮದ್ದನ್ನು ತೆಗೆದು ಕೊಂಡರೆ ಮಾತ್ರ ಈ ವ್ಯಕ್ತಿಯ ಕತೆ ಮುಗಿದಂತೆಯೇ. ಹೀಗೆ ಈ ಚಿಕಿತ್ಸೆಯನ್ನು ಮಾಡುತ್ತಿದ್ದಂತೆ 'ಕೊಡಮಂತಾಯ'ನಲ್ಲಿ ಅಚಲ ಶ್ರದ್ಧೆ, ಭಕ್ತಿ ಹಾಗೂ ಚಿಕಿತ್ಸೆಯಲ್ಲಿ ಅಪೂರ್ವ ವಿಶ್ವಾಸವೂ ಅತ್ಯಗತ್ಯವಾಗಿದೆ. ಹೀಗೆ ಈ ಬಾವಿಯ ನೀರಿನಲ್ಲಿ ಯಾವುದೋ ಒಂದು ವಿಷಹಾರಿಣಿ ಶಕ್ತಿ ಇದೆ ಎಂದು ವ್ಯಕ್ತವಾಗುವುದು.

ನನ್ನುಳ್ಳಿ ಇನ್ನು ಹಲವು ತಾಂತ್ರಿಕರು ಮಾಡುವ ಈ ವಿಷ ಕಡಿತಕ್ಕೆ ಚಿಕಿತ್ಸೆಯಂತೂ ತುಂಬಾ ವಿಚಿತ್ರವಾಗಿದೆ. ಒಬ್ಬನಲ್ಲಿ ಒಂದು ಮಂತ್ರದ ಕೋಲು ಇನ್ನೊಂದು ಮಂತ್ರದ ಕಲ್ಲು. ವಿಷದ ಹಾವು ಕಡಿದಲ್ಲಿಗೆ ಹೋಗಿ ಆತ ಕನ್ನ ಮಂತ್ರಶಕ್ತಿಯ ಸಹಾಯದಿಂದ ಆದೇ ಹಾವನ್ನು ಹಿಂದೆ ಕರಿಸುವನು. ಅದು ಈತನ ಮಂತ್ರ ಶಕ್ತಿಯ ಪರಿಣಾಮವಾಗಿ ಆದೇ ಹಿಂದಿನ ಗಾಯಕ್ಕೆ ಕಚ್ಚಿ ವಿಷವನ್ನು ಹೀರಿಕೊಳ್ಳುವುದು. ಆ ಮೇಲೆ ದಿಟ್ಟಿಸಿ ಹೋಗುವುದು. ವಿಷದ ಪರಿಣಾಮವು ಸಂಪೂರ್ಣವಾಗಿ ಈ ರೀತಿ ಹಿಂದೆ ತೆಗೆದುಕೊಳ್ಳಲ್ಪಡುವುದು ಆ ಹಾವಿನಿಂದ. ಹೀಗಿನ ಮಂತ್ರ ಶಕ್ತಿಯಿಂದ ಕಾಷ್ಟದಲ್ಲಿಟ್ಟ ಹಲವು ಹೆಣಗಳನ್ನು ಹಿಂದೆ ತೆಗೆದು ಗುಣ ಪಡಿಸಿದ ಕತೆಯನ್ನು ನಮ್ಮ ಹಳ್ಳಿಗರು ಇಂದೂ ಹೇಳುತ್ತಿದ್ದಾರೆ. ಇದೇನು ಕಟ್ಟುಕತೆಯಲ್ಲ. ಹಳೆಯವರು ಕಣ್ಣಾರೆ ಕಂಡ ಸಂಗತಿ. ಆದರೆ ಈ ರೀತಿಯ ಶಕ್ತಿಯು ನಮ್ಮ ಹಳ್ಳಿಗಳಲ್ಲಿ ಈಗ ತೀವ್ರವಾಗಿ ಮಾಯವಾಗುತ್ತಿದೆ. ಕಾರಣ ಅಂತಹವರು ತಮ್ಮ ನಂತರನವರಿಗೆ ಇಂತಹ ಮಂತ್ರಗಳನ್ನು ಉಪದೇಶಿಸದುದರಿಂದ. ಇದರ ಇನ್ನೊಂದು ವಿಚಾರ. ಇಂತಹ ಮಾಂತ್ರಿಕರು ತಮ್ಮ ಲಾಭಕ್ಕಾಗಿ ಹಣವನ್ನು ಗಳಿಸುವ ಉದ್ದೇಶದಿಂದ, ಲೋಭದಿಂದ ಆದನ್ನು ಪ್ರಯೋಗಿಸಿದರೆ ಮಾತ್ರ ಪರಿಣಾಮವು ಶೂನ್ಯ. ಬದಲು ಅದನ್ನು ಅವರು ಲೋಕ ಕಲ್ಯಾಣದ ದೃಷ್ಟಿಯಿಂದ, ಪರೋಪಕಾರ ಬುದ್ಧಿಯಿಂದ ಮಾಡಿದರೆ ಮಾತ್ರ ಈ ಚಿಕಿತ್ಸೆ ಫಲಿಸೀತು.

ಇನ್ನು ಹಲವು ವೈದ್ಯರು ಮಾಡುವ ಚಿಕಿತ್ಸೆಯಂತೂ ತುಂಬಾ ಭಯಂಕರವಾಗಿ ತೋರುವುದು. ವಿಷಹಾರಕವಾದ ಒಂದು ತೆರನಾದ ಮದ್ದನ್ನು ತಮ್ಮ ಬಾಯಲ್ಲಿಟ್ಟುಕೊಂಡು ಅವರು ಆ ಗಾಯವನ್ನು ದೊಡ್ಡದು ಮಾಡಿ ಅದರಿಂದ ವಿಷಯುಕ್ತ ರಕ್ತವನ್ನು ಹೀರಿ ಹೊರಗೆ ಉಗುಳುವರು. ಹೀಗೆ ಸಂಪೂರ್ಣವಾಗಿ ಆ ವ್ಯಕ್ತಿಯ ಗಾಯದಿಂದ ವಿಷವನ್ನು ಹೀರಿರುವೆ ವಿಷಮುಕ್ತನೆಂದು ಕಣ್ಣಾರೆ ಕಂಡ ನಂತರ ವೈದ್ಯನು ಕೆಲವು ಔಷಧಿಯನ್ನು ಹಾಲಿನಲ್ಲಿ ಮುಳುಗಿಸುವನು. ಹೀಗೆ ಆತನ ಬಾಯಿಯನ್ನು ಸ್ವಚ್ಛ ಮಾಡಿಕೊಳ್ಳುವನು. ಈ ವಿಷಯುಕ್ತ ರಕ್ತದ ಭಯ ಆತನಿಗೆ ಗೊತ್ತು. ಅಂತಹ ರಕ್ತವು ಬಾಯಿಯು ಮುಗಿಯುವ ವರೆಗೆ ಅವನು ಹೀರುವನು. ಇಂತಹ ವೈದ್ಯರು ಸಹ ಹೀಗೆ ರಕ್ತವನ್ನು ಹೀರುವಾಗ ಗರುಡ ಮಂತ್ರವೆಂಬ ಒಂದು ಮಂತ್ರವನ್ನು ಜಪಿಸುತ್ತಿರುತ್ತಾರೆ.

ಹೀಗಿರುವ ವಿಷಪೂರಿತ ಹಾವುಗಳು ಮುಖ್ಯವಾಗಿ ನಾಗರ ಹಾವು, ಕನ್ನಡಿ ಹಾವು ಮತ್ತು ಕಟ್ಟಿನ ಹಾವು. ಈ ಕಟ್ಟಿನ ಹಾವಿನ ಕಡಿತಕ್ಕೆ ಒಂದು ರೀತಿಯ ವಿಶೇಷ ಚಿಕಿತ್ಸೆಯು ನಮ್ಮ ಹಳ್ಳಿಗರಲ್ಲಿ ಪ್ರಚಾರದಲ್ಲಿದೆ. ಹಾವು ಕಡಿದ ಕೂಡಲೇ ಮಾಡಿದ ಯಾವುದಾದರೊಂದು ಬೇಮು ಆಥವಾ ಕೊಲೆಗೆ ಬೈಹುಲ್ಲಿನ ಏಳು ಕಟ್ಟಗಳನ್ನು ಹಾಕಿ ಅದನ್ನು ಪರಿತವಾದ ಕತ್ತಿಯ ಸಹಾಯದಿಂದ ಎಲ್ಲ ಕಟ್ಟನ್ನು ಒಮ್ಮೆಲೇ ಕಡಿದು ಮಾಡಿದ ಮೇಲೆ ವ್ಯಕ್ತಿಗೆ ವಿಷವನ್ನು ಕಾರಲಿಕ್ಕಾಗಿ ಸಾಸಿವೆಯನ್ನು ಪುಡಿಮಾಡಿ ಬಿಸಿ ನೀರಿಗೆ ಹಾಕಿ ಕೊಡಬೇಕು. ಅದನ್ನು ಕುಡಿದ ಕೂಡಲೇ ವಿಷವು ಕಾರಿ ಹೋಗುವುದು; ವ್ಯಕ್ತಿಯು ಸುಖಿಯಾಗುವನು.

ಇನ್ನೊಂದು ಬಹು ಸುಲಭವಾದ ಉಪಾಯವನ್ನು ಈ ವಿಷಕ್ಕೆ ಹೇಳುತ್ತಾರೆ. ಯಾವ ವಿಷದ ಹಾವು ನಮಗೆ ಕಚ್ಚಿದೋ ಅದನು ತಿರುಗಿ ಕೂಡಲೇ ನಾವು ಕಚ್ಚಿದರೆ ವಿಷದ ಪರಿಣಾಮವೇ ಇಲ್ಲದಂತಾಗುವುದು. ಆದರೆ ಇದನ್ನು ಸಾಧಿಸಿದವರು ಮಾತ್ರ ಕಡಿಮೆ. ಕಾರಣ ಹೀಗೆ ಕಚ್ಚುವುದು ತೀರ ಅಸಹ್ಯವು ಮಾತ್ರವಲ್ಲದೆ ಆ ಹಾವು ಸಿಗುವುದೂ ದುರ್ಲಭ.

ಮೇಲೆ ಹೇಳಿದ ಪ್ರಯೋಗಗಳು ನಮ್ಮ ಹಳ್ಳಿಗಳಲ್ಲಿ ಪ್ರಚಾರದಿದ್ದು ಅದರಿಂದ ಜನರು ತುಂಬಾ ಕ್ಷಯೋಜನವನ್ನು ಪಡೆಯುತ್ತಾ ಇದ್ದಾರೆ ಮತ್ತು ವಿಷದ ಹಾವುಗಳ ಹಾವಳಿಯಿಂದ ಕಕ್ಷುಸಿಕೊಳ್ಳುತ್ತಿದ್ದಾರೆ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ ಜಿನ್ಸು ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳು ಸಾಮಾನು ಗಳೂ ರೆಡಿ ಮೇಡ್ ಆಗಿ ಯಾವಲ್ಲಿಲ್ಲವೋ ಅಲ್ಲಿಯೂ ದೊರೆಯುವಂತೆ

ಕೆಲ್ಟಾಜೆ ವ್ಯಾಸರಾಜಾಚಾರ್ಯ,
ರಥಬೀದಿ, ಉಡುಪಿ.

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K.

ಗೊನೋರಿಯಾ ಹರಿವಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟಿ
ಶರೀರದಿಂದ ಕೇವ ಬರುತ್ತಿದ್ದರೆ, ಧೋತರಕ್ಕೆ ಹರದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂಗಲೆಕ್ಕೆ ಸರಿಯದಿದ್ದರೆ, ಶರೀರದ ಸುಕ್ಕು ಛಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋವು ಮೊದಲಾದ ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕ ಟು ಗರ್ಭಿಯಿಂದ ಗರ್ಭಕೋಶ ನಾತಕೊಂದಿದ್ದರೆ, ಸರಿಯಾಗಿ ಳೆದಿಯಾಗದಿದ್ದರೆ, ಮಾತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮಾಸ್ಸ, ಕೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.
ಬಾಟ್ಲಿ ೦ಕ್ಕೆ ಕರೂ. ಪೋಸ್ಟ ಚಾರ್ಜ ಆಣೆ
ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರಿ.
ಪತ್ರವ್ಯವಹಾರ ಮಾಡತಕ್ಕ ನಾಲಕರ ವಿಳಾಸ.
ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ-

ESTD. 1926
CROWN RUBBER STAMP Co.
RUBBER STAMPS ENGRAVERS
CALCUTTA MADRAS MANGALORE-S.K
Approved form by the Gov. of Mysor
Certificated by the Agent of the Govt o
Clyone & Indian.

ಮುತ್ತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಡತಪ್ಪು ಮುತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಮಾತ್ರೆ ಗುಣವಾಗಿದೆ—ಬೆಲೆ: ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ ಹಸ್ಸೆರಡಾಡೆ ಪ್ರತ್ಯೇಕ.]
Mrs P. DEVEE, F. DS. (N. J.)
Tollygunge CALCUTTA.
ಸ್ವಾಕಿಸ್ಥರು ಶಂಕರಂಪೆನ್ಸ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.